ಪ್ರಬುದ್ಧ ಕರ್ನಾಟಕ

ಪ್ರಬುದ್ಧ ಕರ್ನಾಟಕ

೯ ೧-೪ ೧೯೨೭-೨೮
(೨೧-೨೪)

೧೦ ೧, ೨, ೩, ೩A, ೪ ೧೯೨೮-೨೯
(೨೫-೨೮)

ಪ್ರಬುದ್ಧ

ಕರ್ಣಾಟಕ

ಪ್ರಭವ ಸಂವತ್ಸರ —೩೧— ೧೯ ವಿನಾಯಕನ ಸಂಚಿಕೆ

ಸಂಪುಟ ೯] ವಿಷಯಸೂಚಿಕೆ. [ಸಂಚಿಕೆ ೧

ಬೆಂಗಳೂರು
ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ
೧೯೨೭

All Rights Reserv

ಸಂಘ

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ).

ವಾರ್ಷಿಕಚಂದಾ (ಅಂಚೆವೆಚ್ಚ ಸೇರಿ)	ಆಶ್ರಯದಾತರಿಗೆ	ರೂ. ೧೦—೦—೦
	ಪೋಷಕರಿಗೆ	ರೂ. ೩—೬—೦
	ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳಿಗೆ	ರೂ. ೨—೮—೦
	ಚಂದಾದಾರರಿಗೆ	ರೂ. ೨—೦—೦

ಕಾರ್ಯದರ್ಶಿ,

ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯರೂಪವಾಗಿ ಬರುತ್ತಿರುವ ಪತ್ರಿಕೆಗಳು.

ಬೆಂಗಳೂರು:—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ವಿಶ್ವಕರ್ಣಾಟಕ, ಒಕ್ಕಲಿಗರ ಪತ್ರಿಕೆ, ಸರಸ್ವತಿ, ಮಿಥಿಕ್ ಸೊಸೈಟಿ ಪತ್ರಿಕೆ, ರಂಗಭೂಮಿ.

ಮೈಸೂರು:—ಸಾಧ್ವಿ, ಮಧ್ವಸಿದ್ಧಾಂತ ಪ್ರಕಾಶಿನೀ, ವಿಶ್ವಬಂಧು.

ತುಮಕೂರು:—ಸ್ಕೂಲ್ ಫೋಕ್.

ನಂಜನಗೂಡು:—ಸನ್ಮಾರ್ಗದರ್ಶಿ.

ಚಾಮರಾಜನಗರ:—ಕಾದಂಬರೀ ಸಂಗ್ರಹ.

ವಾಡ:—ಕರ್ಣಾಟಕ ವೃತ್ತ ಮತ್ತು ಧನಂಜಯ, ಕರ್ಮವೀರ,
ರ್ಣಾಟಕ ವಿದ್ಯಾಶಾಲಾ ಪತ್ರಿಕೆ.

ಸುಧಾರಕ, ಪ್ರಬೋಧ.

ಕಲ್ಪಲತಾ ಗ್ರಂಥಮಾಲಾ.

ಧಚಂದ್ರಿಕೆ.

ನ್ನಡ ಸಹಕಾರ.

ರೇಮ.

—ಕನ್ನಡಿಗ.

ಸುವಾಸಿನೀ, ಸುಬೋಧಕ ಗ್ರಂಥಮಾಲಾ.

ಹಿ.

ಸಂತ.

ಸ್ಟೂಡೆಂಟ್ಸ್ ಮ್ಯಾಗಸೀನ್, ಲೋಕಪಾವನ,

ಪ್ರಬುದ್ಧ ಕರ್ಣಾಟಕ

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
619
ಬೆಂಗಳೂರು-19

ಸಂಪುಟ ೧೦

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘ

೧೯೨೯

eg 11759-60

ವಿ ಷ ಯ ಸೂ ಚಿ ಕೆ

ಪತ್ರಿಕೆ— ಕರ್ನಾಟಕ ನವಜೀವನ— ಸತ್ಯಾಗ್ರಹ— ಅಖಿಲ ಕರ್ಣಾಟಕ ಪ್ರಥಮ ಹಿಂದೀ ಪ್ರಚಾರ ಸಮ್ಮೇಳನದ ಭಾಷಣಗಳು ಮತ್ತು ಕಾರ್ಯ ವಿವರಣೆ—ಕರ್ಣಾಟಕ ಸಂಕ್ಷೇಪ ರಾಮಾಯಣಂ—ರಾಣೀ ಮೃಣಾಳಿನಿ—ಅಳಿಲ ಸೇವೆ— ರಾಜಭಕ್ತಿ ಅಥವಾ ಮೈಸೂರು ಮಾಣಿಕ್ಯ— ರಾಮಚಂದ್ರ— ಸುಖಲತಾ— ಕಾಳಿದಾಸ ಮಹಾಕವಿಯು ಶೃಂಗಾರ ರಸವನ್ನು ಚಿತ್ರಿಸಿರುವ ಬಗೆ–ತತ್ತ್ವಶುದ್ಧಿ– ಶ್ರೀ ಶಂಕರ ಭಾಷ್ಯ ಸಹಿತ ಮುಂಡಕೋಪನಿಷತ್ತು— ಶುಕ್ಲ ಯಜುರ್ವೇದದ ಸಂಹಿತೆ ಅಥವಾ ಈಶಾವಾಸ್ಯೋಪನಿಷತ್ತು— ವಾಗ್ದೇವೀ ಸ್ತೋತ್ರ— ಹರಿ ಶರಣಾಷ್ಟಕ—ಅಧ್ಯಾತ್ಮ ಗೀತಾವಳಿ.

೬. ವಸ್ತುಕೋಶ.

(i) ವಿನಾಯಕನ ಸಂಚಿಕೆಗೆ ಪುರೋಭಿವೃದ್ಧಿ—ಕರ್ಣಾಟಕ ಸಂಘಗಳು ಮತ್ತು ಪತ್ರಿಕೆಗಳು— ಹೊಸ ಕನ್ನಡ ಗ್ರಂಥಗಳ ಪ್ರಚಾರ— ಮುದ್ದಣ ಸ್ವರ್ಣಪದಕ— ವೀಣೆಯ ಹುಚ್ಚು.

(ii) ಕರ್ಣಾಟಕ ಸಂಘದಲ್ಲಿ ಈಚೆಗೆ ನಡೆದ ಕಾರ್ಯಗಳು— ಮೈಸೂರು ಮತ್ತು ಕನ್ನಡ— ಲಕ್ಷ್ಮೀಶನ ಕಾಲ ಮತ್ತು ಸ್ಥಳ— ಹೆಚ್ಚು ಸಂಚಿಕೆ.

(iii) ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕವಿಗಳ ಸಮ್ಮೇಳನ— ಇತರ ಕಾರ್ಯಗಳು— ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ.

(iv) ಕರ್ಣಾಟಕ ಸಂಘದ ಕಾರ್ಯಗಳು—ಅಶ್ವತ್ಥಾಮರ್— ಸಂಘದ ದಾತೃಗಳು ಮತ್ತು ಪೋಷಕರು.

ಬಿ. ಎಂ. ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಚಿತ್ರಗಳು





ಶ್ರೀ

ಕೃಷ್ಣರಾಜ ರಜತಮಹೋತ್ಸವ ಪ್ರಗಾಥ

೧

ಕಾಯಿ, ತಾಯಿ, ಕೃಪೆಯ ತೋರಿ
ನಮ್ಮ ಕೃಷ್ಣನ;
ಬೆಳ್ಳಿಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ.
ಏಳು, ವಾಣಿ, ವೀಣೆದಾಳು,
ಅಮೃತವಾಣಿಯಿಂದ ಹೇಳು
ಪುಣ್ಯದರಸು, ಧರ್ಮದಾಳು,
ದೊರೆಯ ಕೃಷ್ಣನ.
ಹೊನ್ನನಡೆಯ, ಹೊನ್ನನುಡಿಯ,
ಕನ್ನಡಿಗರ ವಯಿರಮುಡಿಯ,
ಒಡೆಯ ಕೃಷ್ಣನ.

೨

ಏನು ಲಲಿತಾದ್ರಿಯಲಿ ಬೆಳಕುಗಳುಷೆಗೆ ಕಾಂತಿಯನೀವುವು !
ಮೇಲಕೇರುವ ಬೆಳಕದಾವುದು ? ಇಳಿವ ಬೆಳಕುಗಳಾವುವು ?
ಆವ ದೇವಿಯರಿವರು ಮೂವರು ?—ಕನ್ನಡದ ಸಿರಿಯೊಬ್ಬಳು.
ಅಕ್ಕತಂಗಿಯರಂತೆ ತಬ್ಬುತ, ಕಡಲ ರಾಣಿಯದೊಬ್ಬಳು,
ಶ್ರೀಭರತಮಾತೆಯದೊಬ್ಬಳು :
ತನ್ನ ಮಕ್ಕಳ ಬೀರಗನಸುಗಳುಬ್ಬುತಿರೆ ನಸುನಗುವಳು ;
ಭರತಮಾತೆ ! ಪ್ರೇಮಮಾತೆ !
ಮಹಿಮೆಯಲಿ ಕಳೆ ಮಿಗುವಳು.
ಗೌರಿಯೋಲಗದಿಂದ ಬಂದಳು, ಪೂರ್ಣಕುಂಭವ ತಂದಳು ;
ದೂರ ವಿನಯದಿ ನಿಂದ ಕನ್ನಡಹೆಣ್ಣ ಬಳಿಯಲಿ ನಿಂದಳು ;
ಕಳಶವಿತ್ತಿಂತೆಂದಳು—
"ಬಾಳು, ಕನ್ನಡದರಸಿ, ಗೌರಿಯ ಕೃಪೆಯ ಸುಧೆಯನು ಚೆಲ್ಲಿಸು.
ಕೃಷ್ಣರಾಜನ ಕೀರ್ತಿ ಹಬ್ಬಿದ ಚೆಲುವುನಾಡನು ಗೆಲ್ಲಿಸು.
ಕೃಷ್ಣರಾಜನ ಸಿರಿಯ ಮುಡಿಯಲಿ ಸಕಲಭಾಗ್ಯವ ಸಲ್ಲಿಸು.
ತನ್ನ ಬಾಳನು ನಾಡ ಮೇಲ್ಮೆಗೆ ಮುಡಿಪುಕಟ್ಟಿದ ಧೀರನು.
ತನ್ನ ಗುರಿಯನು ಬಿಡದೆ ಕೊಳುವನು, ಆತ್ಮಗುಣದಲಿ ವೀರನು.
ಹೋಗು, ಸೊಬಗಿಯೆ, ಬಾಳು"—ಎಂದಳು.
ಬಳಿಯ ಕೆಳದಿಯ ಕೈಯ ಕೊಂಡಳು ;
ಮುಗಿಲ ಮರೆಯಲಿ ಸಂದಳು.

೩

ಮಂಗಳ ಮಸಗಿತು ಮೈಸೂರರಮನೆ ; ಸಿಂಗರವಾಯಿತು ಮೈಸೂರು.
ಕೃಷ್ಣನ ವೈಭವವೆಲ್ಲವ ತೋರುವ, ಸಾರುವ, ಮೀರುವ ಮೈಸೂರು,
ನಾಲ್ಮಡಿ ಕೃಷ್ಣನ ಮೈಸೂರು.
ಬೆಟ್ಟವೊ, ಕೆರೆಯೋ, ಬೀದಿಯೊ, ಬನವೋ, ಮನೆಯೋ, ಮಹಲೋ, ಎಲ್ಲೆಲ್ಲು,
ದಟ್ಟಗೆ ಕೂಡುವ, ಭಕ್ತಿಯನಾಡುವ, ಹರ್ಷವ ತೋಡುವ ಸವಿಸೊಲ್ಲು,
ನಾಲ್ಮಡಿ ಕೃಷ್ಣನ ಸವಿಸೊಲ್ಲು.
ಎಳೆಯರು ನಾಡಿನ ಬೆಳೆಸಿರಿಮೊಳೆಗಳು, ಆಡಿ, ಪಾಡಿ, ಕುಣಿಕುಣಿದಾಡಿ,

ಓದುವ ಹೆಣ್ಗಳು ಗಂಡುಗಳುಲಿವರು, ಸಸಿಯನು ನೆಡುವರು, ಕೊಂಡಾಡಿ,
ನಾಲ್ಮಡಿ ಕೃಷ್ಣನ ಕೊಂಡಾಡಿ.
ಅರಿವನು ಹರಡುವ, ಸಿರಿಯನು ಬೆಳಸುವ, ಪರಿಪರಿ ಕೃಷಿಯನು ರೂಡಿಸುವ,
ತನ್ನೊಂದೊಲುಮೆಗೆ ಮರುಗಿಸಿ ಹಲಬಗೆ ನಾಡಿಗರೊಂದೆನೆ ಕೂಡಿಸುವ,
ಆಡುವ, ಹಾಡುವ, ಬರೆಯುವ, ಕೊರೆಯುವ, ಕಟ್ಟುವ ಕಳೆಗಳ ಹೂಡಿಸುವ,
ಹೊಸ ಹೊಸ ತೆರದಲಿ ಮನವನು ಮುಟ್ಟುವ ಕವಿಗಳಿಗುತ್ಸವಮಾಡಿಸುವ,
ಪ್ರೇಮದ ಸ್ವಾಮಿಗೆ, ಕೃಷ್ಣಗೆ, ಹಿರಿಯರು ಬಿನ್ನಹಗೈವರು ತಲೆಬಾಗಿ,
ನೆಚ್ಚಿನ ಮೆಚ್ಚಿನ ಬಿನ್ನಹ ಕರಗಿಸೆ, ಹೃದಯವನೆರೆವನು ಮುಡಿಪಾಗಿ,
ನಾಲ್ಮಡಿ ಕೃಷ್ಣನ ಮುಡಿಪಾಗಿ.
ಕನ್ನಡದೇವಿಯ ಬಯಕೆಯ ಕಳಶದ ಸುಧೆ ಸುರಿದೆತ್ತಲು ಚೆನ್ನಾಯ್ತು ;
ಪ್ರೇಮದ ಸ್ವಾಮಿಯ ಕೃಷ್ಣನ ಭಕ್ತಿಯ ರಸ ಹರಿದೆತ್ತಲು ಹೊನ್ನಾಯ್ತು.
ಮಂಗಳಮಯವಾಯಿತು ನಾಡು ;
ಸಿಂಗರದಾ ಕನ್ನಡನಾಡು.
ಪಡುಗಡಲಿನ ತೆರೆ ಮುದ್ದಾಡುವ ಕರೆ, ಹೊಳೆ ಹಾಲಿಳಿಯುವ ಘಟ್ಟದೆರೆ,
ಪಂಪನ ರನ್ನನ ಪುಟವಿಡಿಸಿದ ಕಡೆ, ಹಂಪೆಯ ತಾಂಡವವಾಡಿದೆಡೆ,
ಹೊಯ್ಸಳರೆತ್ತಲು ಕಡೆಯಿಸಿ ನಿಲಿಸಿದ ಗುಡಿಗಳ ಸೊಬಗಿನ ಕಣ್ಣ ಸೆಳೆ,
ಜಲಜಲನುಕ್ಕುವ ಕಾಲುವೆ ಬಯಲಲಿ ಪಚ್ಚೆಯ ಪಯಿರಿನ ತುಂಬುಬೆಳೆ—
ಮಂಗಳಮಯ ತಾನೆತ್ತಲು ನಾಡು,
ಸಿಂಗರದಾ ಸಿರಿಗನ್ನಡನಾಡು,
ಅತ್ತಲು, ತಾನೆತ್ತೆತ್ತಲು, ಒಮ್ಮನ, ಒಕ್ಕೊರಲಾಗುತ ಜನ ಕೂಡಿ,
ನಿರ್ಮಲಚಿತ್ತನ, ಪುಣ್ಯಚರಿತ್ರನ, ಕೃಷ್ಣನ ಹರಸುತ ಜನ ಹಾಡಿ,
ಜಯ, ಜಯ ಎಂಬರು, ಬೆಳೆ ಬಾಳೆಂಬರು,
ನಿನ್ನದು ಕನ್ನಡದೆದೆಯೊಲವೆಂಬರು—
ಮಂಗಳ ಮಸಗಿತು ಮೈಸೂರರಮನೆ ; ಧನ್ಯತೆ ಪಡೆಯಿತು ಮೈಸೂರು,
ಕನ್ನಡನಾಡಿನ ಮನ್ನಣೆ ಪಡೆಯಿತು ನಾಲ್ಮಡಿ ಕೃಷ್ಣನ ಮೈಸೂರು.


೪

ಎಂತೆನ್ನ ಬಗೆ ಹಾರುವುದು ನೆನೆದು ಸಂದು
ಮೈಸೂರ ಮೊತ್ತಮೊದಲೊಸಗೆ ಬೆಳೆದಂದು !

ಸೆರೆಯಿಟ್ಟು ಕಾಡಿದಾ ಖೂಳನನು ಕೊಂದು,
ಅರಸರರಸಿಯರೆಲ್ಲ ಹರಸುತಿರೆ, ಬಂದು,
ಕೈಹಿಡಿದ ರಾಣಿಯನು ನಗುತ ಕರೆತಂದು,
ಮುದ್ದಾದ ಮೈಸೂರ ತಾವರೆಯ ತಂದು,
ದೇವಿ ಚಾಮುಂಡಾಂಬೆಯೆದಿರಿನಲಿ ನಿಂದು,
ಕೈಮುಗಿದು ಬೇಡಿದನು ಯದುರಾಯನಂದು :—
"ಕಾಯಿ, ತಾಯಿ, ಕೃಪೆಯ ತೋರಿ,
ನಿನ್ನ ಮಗನನು ;
ನಲುಗಿ, ನಿನ್ನ ನೆರಳ ಸೇರಿ
ನಲಿವ ಹೆಣ್ಣನು.
ಧರ್ಮದೊಲವ ನಮಗೆ ನೀಡು,
ಸತ್ಯ ನಿಲಿಸುವಂತೆ ಮಾಡು,
ಹಿರಿಯ ಮೈತ್ರಿಗಳನು ಕೂಡು,
ಕರುಣದಿಂದ ಬಿಡದೆ ನೋಡು,
ಕಾಯಿ, ತಾಯಿ, ನಮ್ಮ ನಾಡು,
ನಮ್ಮ ಮನೆಯನು,
ನಡಸಿ, ಬೆಳಸಿ, ಹಿರಿದುಮಾಡು
ನಮ್ಮ ಮನೆಯನು."

೫

ಇಂತೆಂದು ಬೇಡಿದನು ಮೈಸೂರ ಮನೆತನದ ಮೊದಲಿಗನು ಬಾಗಿ,
ಮನಮುಳುಗಿ ಭಕ್ತಿಯಲಿ. ಚಿತ್ರದಾಳುಗಳಂತೆ ನಿಶ್ಶಬ್ದವಾಗಿ,
ಮೂಡುವಚ್ಚರಿಹದವ ಹಾರುತ್ತ, ಸಭೆಯೆಲ್ಲ, ಎವೆಹೊಯ್ಯದಲ್ಲಿ
ನಿಂದಿಹುದು. ಅಹ! ಅಲುಗಿತಭಯಹಸ್ತದ ಹೂವು ; ಸಿಡಿದು ಮುಡಿಯಲ್ಲಿ
ನೆಲಸಿದುದು, ಯದುರಾಯಮಕುಟದಲಿ, ದೇವಿಕೆರೆ ಸಂಪಗೆಯದೊಂದು.
ಕೂಗಿದಳು ನೆರವಿಯಲಿ ಮುತ್ತೈದೆ, ಬೆದರಿದಳು ಮೈಮೇಲೆ ಬಂದು,
ಕೆದರಿದಳು ಬಿರಿದಲೆಯ ನರೆನವಿರ, ಬಿರುಬಿರನೆ ಕಣ್ತಿರುಹಿ, ನಕ್ಕು,
ಕದಡುಬಗೆ ತಿಳಿಯಾಗಿ, ದೂರದೆಸೆ ಬಳಿಯಾಗಿ, ಮುಂದಹುದ ಹೊಕ್ಕು,
ನುಡಿದಳವಳಂದು—



ಹಣ್ಮುದುಕಿ ನೋಟವನು ನುಡಿದಳವಳಂದು—
ಗಿರಿಯ ನೆತ್ತಿಯ ಮೇಲೆ ಗಂಭೀರಘೋಷದಲಿ ಗುಂಪಿನಲಿ ಬಂದು
ಮಳೆ ಕುಡಿವ ಹಕ್ಕಿವೊಲು ಕುಡಿಯುತಿರೆ ಕನ್ನಡದ ಕಲಿಗಳಾ ಸಿರಿಯ,
ಪಾವನದ ಮುತ್ತೈದೆ ಸವಿಗರೆದು ನುಡಿದಳಾ ಮೈಸೂರ ಸಿರಿಯು,
ಕನ್ನಡದ ನಾಡ ಸಿರಿಯು.

೬

" ಮೆಚ್ಚಿದೆನು, ಮೆಚ್ಚಿದೆನು, ವಿನಯನಿಧಿ ; ನನ್ನೊಲುಮೆಗುವರಿ, ಈ ಅರಸಿ,
ಚಿಕ್ಕದೇವಾಂಬೆಯನು ದುಃಖವಾವರಿಸುತಿರೆ, ಆದ ನಿನ್ನ ಕರಸಿ,
ಪರಿಹರಿಸಿ, ರಾಜ್ಯವನು ನಿನ್ನ ತೋಳಿನಲಿರಿಸಿ ಕಾಯುವೆನು, ಬಾಳು.
ಕೃಷ್ಣದೇವನ ಕುಲದ ನೆಲದರಿಕೆಯಾಳಿಕೆಯ ಹೆಮ್ಮೆಯಿಂದಾಳು.
ನಿನ್ನ ಮಕ್ಕಳ ಸಾಲು ಕುಡಿಯೊಡೆದು ಹಬ್ಬುವುದು, ಬೆಳಗುವುದು ಬೀಡು ;
ಕಡೆಗಾಣದಂತೆಂತು ನಿಮಿರುವುದು ಯಾದವರ ಸಂತಾನ, ನೋಡು ;
ಕರ್ಣಾಟಚಕ್ರವರ್ತಿಗಳು, ಹೊಳೆಹೊಳೆಯುತಿಹರೆಂತು ಹೆಸರಾಂತು !
ರಾಜೊಡೆಯ, ನರಸಿಹ್ಮ, ಚಿಕದೇವ, ಮುಮ್ಮಡಿಯ ಕೃಷ್ಣೇಂದ್ರನಿಂತು,
ಹೊಸಯುಗದ ಚಾಮೇಂದ್ರ—ಹಿರಿಯರೆಲ್ಲರ ಪುಣ್ಯ ಫಲಿಸಿ ಬಂದಂತೆ,
ನಿರ್ಮಲದ ಗಗನದಲಿ ನೆಲಸಿ ಶಾಂತಿಯೊಳಿರುವ ಚಂದ್ರನೆಂಬಂತೆ,
ನಾಲ್ಮಡಿಯ ಶ್ರೀ ಕೃಷ್ಣ—ಶ್ರೀ ಕೃಷ್ಣ—ಸಾಕೆನಿತು ಮಾತಿನಿತು ಸಾಕು.
ಪರಮತೇಜಸ್ವಿಗಳು, ರಣಧೀರರಪ್ರತಿಮವೀರರಾಗಿದ್ದು,
ಚಕ್ರವನು ತಡೆಯಿಲ್ಲದೋಡಿಸುತ, ಆಡುತ್ತ ದುರ್ಗಗಳ ಗೆದ್ದು,
ಯುದ್ಧಕಾನಂದಿಸರು ; ಕತ್ತಿಹೊಳಪನು ಚಿನ್ನದೊರೆಯೊಳಗೆ ಮರಸಿ,
ತೊಡವೆನಿಸಿ ಮಡಗಿಹರು, ಶಾಂತಿಯಲಿ ಮನಸೋತು ಸಾತ್ವಿಕವನರಸಿ.
ಸೌಮ್ಯಮೂರ್ತಿಗಳವರು, ಸಾಧುಗಳು, ಪ್ರೇಮಿಗಳು, ಭಕ್ತಿಬೋಧಕರು,
ಕಾವ್ಯರಸಿಕರು, ಗಾನಕೌಶಲರು, ಕಲ್ಯಾಣಕಾರ್ಯಸಾಧಕರು.
ಗುರುಗಳನು ಹಲವರನು ಸೇವಿಸುತ, ಧರ್ಮಸಾರವನು ಕಡೆಯುವರು
ಸ್ವಾಮಿಭಕ್ತಿಯೊಳೆರಡನೆನಿಸದೆಯೆ, ತಮ್ಮೊಡೆಯತನವ ನಡೆಯುವರು.
ಬ್ರಹ್ಮದಲಿ, ಕ್ಷಾತ್ರದಲಿ, ನೀತಿಯಲಿ, ನೆರೆ ಪಳಗಿ ಮೈಮೆವೆತ್ತಿಹರು.
ಒಮ್ಮೆ ನಾಡನು ತಿರುಗಿ ಹಳ್ಳಿಗರ ನೆಮ್ಮದಿಯ ನೇರ್ಪಡಿಸುತಿಹರು.
ಒಮ್ಮೆ ಹೊಳಲನು ಮೆರೆದು ಮಿತ್ರರಾಜರ ಬರಿಸಿ ಸುಖಗೊಳಿಸುತಿಹರು.

ಹೊಳೆಗಳನು ತಡೆಗಟ್ಟಿ ಬೆಂದ ಕಾಡನು ಬೆಳಸಿ ಹಸುರೆರಚುತಿಹರು.
ಬೆಟ್ಟದಲಿ ವಿಹರಿಸುತ ಜಾತ್ರೆಗಳ ಸಂಭ್ರಮಕೆ ಸಡಗರಿಸುತಿಹರು.
ಜ್ಞಾನಿಗಳ ಗೋಷ್ಠಿಯಲಿ ಕೇಳುವರು, ಬರಸುವರು, ತಾವೆ ಬರೆಯುವರು.
ಪ್ರಜೆಗಳೊಲುಮೆಯ ಸೆಳೆದು, ರಾಜರಲಿ ಗಣ್ಯತೆಯ ಪಡೆದು ಮೆರೆಯುವರು.

ಮೈಸೂರರಸರ ಮೊದಲಿಗ, ನೋಡು,
ಇಂತಹ ದೊರೆಗಳ ಸೇರಿದ ನಾಡು,
ಸಿಂಗರದಾ ಸಿರಿಗನ್ನಡನಾಡು,
ಮಂಗಳಮಯದಾ ನನ್ನೀ ನಾಡು,
ಕೆಂದದು, ಕುಂದದು, ಕೊರಗದು, ನೋಡು,
ಮೈಸೂರರಸರ ಅರಮನೆ, ನೋಡು
ಉರಿ ಕೊಳೆ ಸಗ್ಗದೆ ಶಿಲೆಯಲಿ ಬೀಡು
ಉರಿಯನೆ ಹೊದೆಯುತ ನಗುವುದು ನೋಡು,
ಹೊಳೆವುದು, ಬೆಳೆವುದು, ಸೆಳೆವುದು, ನೋಡು,
ಸುಖದಲಿ ನೆರೆದಾ ಜನವನು ನೋಡು.
ನಾಲ್ಮಡಿ ಕೃಷ್ಣನ ಹರಸುವರು ;
ಆತನ ಸುಖದಲಿ ಬೆರಸುವರು ;
ಇಂತಹ ಜನವನು, ನಾಡನು, ದೊರೆಯನು
ನಾನೆಂದೆಂದೂ ಹರಸುವೆನು,
ನಾನೆಂದೆಂದೂ ಕಾಯುವೆನು,
ಕಾಯುವೆನು.''

೭

ಕಾಯಿ, ತಾಯಿ, ಗೌರಿದೇವಿ, ಕೃಷ್ಣರಾಜನ !
ಬೆಳ್ಳಿಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ.
ಕನ್ನಡಿಗರ ವಯಿರಮುಡಿಯ ರಾಯ ಕೃಷ್ಣನ !

ಶ್ರೀ.

ಗ್ರೀಕ್ ನಾಟಕದಲ್ಲಿ ಕನ್ನಡ ಮಾತು

ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಯ ಮೊದಲನೆಯ ಸಂಪುಟದ ಅವತರಣಿಕೆಯಲ್ಲಿ (ಪುಟ ೭) ಕನ್ನಡ ಭಾಷೆಯ ಪ್ರಾಚೀನತೆಯ ಮೇಲೆ ಬರೆಯುತ್ತ "ಕೆಳಗಣ ಈಜಿಪ್ಟಿನಲ್ಲಿಯ ಆಕ್ಸಿರಿಂಕಸ್ ಎಂಬ ಸ್ಥಳದಲ್ಲಿ ದೊರೆತ, ಕ್ರಿಸ್ತಶಕ ಎರಡನೆಯ ಶತಮಾನದಲ್ಲಿ ರಚಿತನಾದ, ಒಂದು ಗ್ರೀಕ್ ನಾಟಕದಲ್ಲಿ ಕೆಲವು ಕನ್ನಡ ಶಬ್ದಗಳು ದೊರೆಯುತ್ತವೆ" ಎಂದು ಹೇಳಿ, "ಡಾಕ್ಟರ್ ಹುಲ್ಷ್ ಎಂಬ ಪಂಡಿತನು ಆ ನಾಟಕದ ಕೆಲವು ವಾಕ್ಯಗಳನ್ನು ಈ ರೀತಿಯಾಗಿ ಒದುತ್ತಾನೆ—ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ; ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೇರೆತ್ತುವೆನ್. *Mysore Archælogical Report 1904*" ಎಂದು ಅದಕ್ಕೆ ಒಂದು ಟಿಪ್ಪಣವನ್ನು ಕೊಟ್ಟಿದ್ದಾರಷ್ಟೆ. ಮೈಸೂರು ಶಾಸನದ ಇಲಾಖೆಯ ಅಧ್ಯಕ್ಷರಾದ ಡಾ. ಶಾಮಶಾಸ್ತ್ರಿಗಳವರು ತಮ್ಮ ೧೯೧೫-೧೬ ನೆಯ ಸಂವತ್ಸರದ ವರದಿಯಲ್ಲಿ ಈ ಗ್ರೀಕ್ ನಾಟಕದ (ಇಂಗ್ಲೀಷ್ ಭಾಷಾಂತರದ) ಮೂಲವನ್ನು ಸಮಗ್ರವಾಗಿ ಕೊಟ್ಟು ಅದರಲ್ಲಿ ಅಲ್ಲಲ್ಲಿ ಬರುವ ಅಜ್ಞಾತಭಾಷೆಯ ಮಾತುಗಳಿಗೆ ವಿವರಣವನ್ನು ಪ್ರಕಟಿಸಿರುತ್ತಾರೆ. ಇದರಿಂದ ಕನ್ನಡ ಭಾಷೆಯ ಚರಿತ್ರೆಯಲ್ಲಿ ಆಸಕ್ತಿಯುಳ್ಳವರೆಲ್ಲರಿಗೂ ತುಂಬ ಉಪಕಾರವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ. ಡಾ. ಶಾಸ್ತ್ರಿಗಳವರು ಡಾ. ಹುಲ್ಷ್‌ರಂತೆಯೇ ಇದರಲ್ಲಿ ಬರುವ ಭಾಷೆಯು ಕನ್ನಡವಾಗಿರಬೇಕೆಂದು ಅಭಿಪ್ರಾಯಪಟ್ಟು ಅದಕ್ಕೆ ಕೆಲವು ಕಾರಣಗಳನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಮತ್ತೆ ಕೆಲವು ಪ್ರಸಿದ್ಧವಿದ್ವಾಂಸರು ಹೇಳಿರುವ ಅಭಿಪ್ರಾಯಸೂಚನಾದಿಗಳನ್ನೂ ಪ್ರಕಟಿಸಿದ್ದಾರೆ. ಈ ಭಾಗಗಳು ಕನ್ನಡ ಮಾತಿನಲ್ಲಿ ಕುತೂಹಲವೂ ಆಸಕ್ತಿಯೂ ಇರುವವರಿಗೆ ಸ್ವಾರಸ್ಯವಾಗಿರುವುದರಿಂದ ಅವುಗಳನ್ನು ಮೇಲೆ ಹೇಳಿದ ವರದಿಯಿಂದ ತೆಗೆದು ಇಲ್ಲಿ ಕೊಟ್ಟಿರುತ್ತೇವೆ.

ಎರಡನೆಯ ಶತಮಾನದ ಕನ್ನಡದ ಸ್ವರೂಪವು ಹೇಗಿತ್ತೆಂಬುದನ್ನು ಯಾರೂ ನಿಷ್ಕೃಷ್ಟವಾಗಿ ಅರಿಯರು; ಅದರಲ್ಲಿಯೂ ಜನಸಾಮಾನ್ಯದಲ್ಲಿ ಬಳಕೆಯಾಗಿದ್ದಿರಬಹುದಾದ ಅದರ ಸ್ವರೂಪವನ್ನು ಊಹಿಸುವುದು ಕಷ್ಟ. ಅಲ್ಲದೆ ಈ ನಾಟಕದ ವಿಷಯವು ದಕ್ಷಿಣ ಹಿಂದೂಸ್ಥಾನದ ಪಶ್ಚಿಮ ತೀರದಲ್ಲಿ ನಡೆದ ಸಂಗತಿ

ಯಾಗಿದ್ದರೆ, ಅದರಲ್ಲಿ ಉಪಯುಕ್ತವಾಗಿರುವ ಅಜ್ಞಾತಭಾಷೆಯು ಕನ್ನಡ ಹೇಗೋ ಹಾಗೇ ಮಲೆಯಾಳವೋ ತುಳುವೋ ಕೊಂಕಣಿಯೋ ಮಹಾರಾಷ್ಟ್ರಿಯೋ ಆಗಿದ್ದರೂ ಆಗಿರಬಹುದು. ಆದ್ದರಿಂದ ಕನ್ನಡಿಗರು, ವಿಶೇಷವಾಗಿ ಪಶ್ಚಿಮ ತೀರದಲ್ಲಿರುವ ಕನ್ನಡಿಗರು, ಇದನ್ನು ವಿಮರ್ಶೆಮಾಡತಕ್ಕದ್ದಾಗಿದೆ. ನಾವು ಇದು ನಮ್ಮದೆಂದು ಹೇಳುವುದರ ಜೊತೆಗೆ ಇತರರು ಇದು ನಮ್ಮದಲ್ಲವೆಂದು ಹೇಳಿದರೆ ನಮ್ಮ ಹಕ್ಕು ಇನ್ನೂ ದೃಢಪಡುವುದಲ್ಲವೇ ?

A GREEK FARCE WITH OLD KANNADA PASSAGES

2nd Century A. D.

So far back as 1899, excavations were carried out at the instance of Biblical Archæological association at Oxyrhynchus in Egypt and a large find of papyri was made. Bernard P. Grenfell and Arthur S. Hunt with the assistance of several scholars edited and published in 1903 the second century texts of this find with translation and critical notes in English in their Third Volume entitled "The Oxyrhynchus Papyri Part III". Among the new classical fragments contained in the Papyri is found a Greek Farce with some passages in an unknown language. The word "Malpinaik" used in the play in the sense of "a chief of Malpi" a harbour near Udipi in South Canara goes to show that Malpi in the West Coast is the scene of the play.

From the tenor of the dialogue in the play it appears that a Greek lady called Charition fell into the hands of the king of this region. With a view to get her released a party of the Greeks arrives at this place and after making the king and his party drunk with wine effects its escape with Charition.

The characters of the play are (1) Charition, a Greek lady, denoted by A who may be regarded as the heroine of the Drama. Whatever might be the language which is made use of along with Greek in the play, she seems to be familiar with it so as to carry on conversation with the king of the country and his party; (2) the king of the country, called Basileus, who seems to be familiar with elements of the Greek tongue; (3) the buffoon B, a Greek personality, who, being a fresh arrival, is ignorant of the king's language and imitates it only to provoke the people; (4) C, the brother of the Greek lady; (5) D, the Captain of the ship, brought thither to take away Charition; (6) F, a Greek personality, (7 & 8) G. & H, two more Greek

characters acquainted with the king's language; and (9) the party of the king denoted by the word "All".

The language of the play is mainly Greek coupled with a few passages in the language of the king of the country. What the second language is can be indisputably determined from the few words the sense of which is easily ascertained from the context or from their explanatory Greek sentences immediately following. In line 210, for example, the buffoon says addressing Charition "will you then to the river Psolichus" To this the lady replies "As you like." From this it may be presumed that she started for the river. Whereupon the women followers of the king denoted by "all" say "Minei" which in Kanarese means "bath". By using the word "minei" (—mîna) the women followers seem to say that Charition was going to the river for a bath. Again in Line 39 Col. ii, the women followers say "Ai arminthi" which in Kanarese means "well, who has bathed (in the river)" As the buffoon says immediately after this "They also have run away to the Psolichus" the expression (ârmindai) may be taken to mean that with the exception of those who have already bathed, the rest may go to the river with the lady. From this it is also clear that lady Charition was attended upon by a body-guard of women.

Again in Lines 59, 61, and 64 are found the words *brathis*, *brathi*, and *bradis* which C interprets to the buffoon as meaning "let us draw lots for the shares". If these words are to be taken to mean drawing lots for shares they must be taken to be the contracted forms of bere+athisu (=bére+âdisu), bere+athi—(bêre+âdi), and bere+adis—(bêre+âdisu). Of these the first and the last words are the same and mean "cause each to play separately". The second means "play separately". The play referred to here is no other than dice-play. The word *paktei* used in Line 62 seems to be a contracted form of *Pagade* a Kanarese word meaning dice.

Attention may be drawn here to the interpretation given by Dr. Hultzsch to the word "bradis" (J. R. A. S. 1904, P. 399). Taking into consideration the translation of this word made in the Greek language by C to the buffoon, Dr. Hultzsch took the word "bradis" to be a contracted form of the Kannada words "bêre âdisu" meaning "cause them to play separately".

Again "pomensi" is a modification of "ponnenisi" which means in Kannada "having counted the gold". Thus if allowance is made for the omission, mutilation, and elision of vowels made intentionally in some places and owing to ignorance and inability to correctly pronounce the foreign words in other places and also for the errors committed by successive scribes in copying the piece, and if the correct forms are thus guessed and inferred from what is meant to be expressed by the speakers, we can assure ourselves that the language to which the words mîna (bath), mindai (bathed) and pagade (dice) belong can be no other than Kannada........

No such etymological speculation is indulged in suggesting probable correct forms and in interpreting the passages in accordance with the history of the people of those days. With this belief an attempt is made here to interpret as far as possible the Kannada passages and words found in the Greek Farce.

The main points on which the play is based are (1) the payment of *terage* or *teramâna*, ransom for the release of the Greek lady ; (2) the play of *Paktei* or pagade to determine the shares due to each of the Indian chiefs and (3) *pâna*, drinking of wine given to the party in order to render them unconscious. The other Kannada passages found in the play are more or less explanatory of these three important points. So far as the interpretation of the main points is concerned, I presume that my interpretation is right. But with regard to the meaning of subsidiary passages, other interpretations in keeping with the main points may be possible.

The plot seems to have been based upon an historical fact of a Greek lady called Charition falling for reasons unknown into the hands of the king or kings (Indon promoi-L. 90 Col. iii) of Malpi near Udipi and of the arrival at this place at some later date of a Greek party to effect her release by paying some ransom (*Terage* or *Teramâna*, Lines 70-73 Col. ii) as mentioned in the play. The plot seems to consist of an arrangement made by the Greeks for a feast with plenty of wine (*habede*—habbede—habbada ede, Line 82 Col. iii) given to the Indian chiefs before departure and of their escape with the lady after making the king and his people fully drunk.

The whole piece consisting of the editors' English translation of the Greek portion and transliteration in Roman characters of the Kannada passages is here reproduced with a tentative rendering of old Kannada in modern Kannada and its probable interpretation :—

F. Lady Charition, rejoice with me at my escape !
A. Great are the gods.
B. What gods, fool (?) [1]

A. Cease, fellow.
F. Wait for me here and I will go and bring the ship to anchor.
A. Go ; for see, here come their women from the chase.
B. Oh ! What huge bows they have !

A woman. Kraunou[2]
Another. Lalle[3]

---

1 Observe the insulting word used by the buffoon : What gods, Hindu or Greek ?

2 ಕರೆವನೋ ? Does he call ?

3 ಲಲ್ಲೇ. (He is) coaxing.

Another. Laitalianta Lalle[4]

Another. Kotakos anab iosara[5]

B. Hail !

All. Laspathia[6]

B. Ah ! Lady, help !

A. Alemaka[7]

All. Alemaka[8]

B. By Athena, there is no (harm) from us.

A. Wretch, they took you for an enemy and nearly shot you.

B. I am always in misfortune. Will you then...... to the river Psolichus[9] ?

A. As you like. (Drums).

All. Minei[10]

F. Lady Charition, I see the wind is rising, so that we may cross the Indian Ocean and escape. So enter and fetch your property, and if you can, carry off one of the offerings to the Goddess.

A. Prudence, fellow ! Those in need of salvation must not accompany their petitions to the gods with sacrilege. For how will the gods listen to men, who try to win mercy with wickedness ?

B. Don't you touch ; I will fetch it.

F. Fetch your own things then.

A. I do not need them either, but only to see my father's face.

F. Enter then ; and do you serve them........ and give them their wine strong, for here they come.

---

4 ಲೆ ಎನ್ನುತ ಲೆ ಎನ್ನುತ ಲಲ್ಲೆ.=he is coaxing by saying (le and le,) a word usually used in addressing a woman.

5 ಕೊಡಗೂಸಿನ ಬಯ್ಯು ಸರ, an insulting word of the baffoon to the maiden (Kodagusu, evidently the Greek lady).

6 ಲೆಸು, ಬಡಿಯು=well, beat him.

7 and 8 ಅಲ್ಲೆಮ್ಮಕ್ಕ=not my sister. She says " It is not an insulting sound, my sister."

9 Start, then.

10 ಮಿಾಣ? for bath?

B. I think they are the daughters of swine : these too I will get rid of (Drums..............).

All. Ai arminthi (Drums)[11]

B. They also have run away to the Psolichus.

C. Yes ; but let us get ready, if we are to escape.

B. Lady Charition, get ready, if you can take under your arm one of the offerings to the goddess.

A. Hush ! Those in need of salvation must not accompany their petitions to the gods with sacrilege. For how will they listen to the prayers of those who are about to gain mercy by wickedness ? The property of the goddess must remain sacred.

B. Don't you touch ; I will carry it.

A. Don't be silly, but if they come serve them the wine neat.

B. But if they will not drink it so ?

C. Fool, in these regions wine is not for sale. Consequently if they get hold of this kind of thing, they will drink it neat against their will (?)

B. I'll serve them lees and all.

C. Here they come having bathed with.......... (Drums).

King. Brathis[12]

All. Brathis.

B. What do they say ?

C. Let us draw lots for the shares, he says.

B. Yes, let us.

---

11 ಆಯ್‌ ಅರ್‌ ಮಿಂದೆ=who has bathed (among you), meaning that those who have not bathed may follow her to the river.

12 ಬೇರೆ ಆಡಿಸು=cause them to play at dice, each separately. The casting of a die is to ascertain whether the player should have his share of feast or gold or not.

King. Stoukepairomellokoroke[13]

B. Back, accursed wretch ![14]

King. Brathie (Drums)[15] Bere konzei damun petrekio[16] paktei kortames bere ialer o de pomenzi petrekio[17] damut kinze paxei zebes lolo bia bradis kottos[18]

All. Kottos.

B. May you be kicked by 'Kottos.'

King. Zopit (Drums)[19]

B. What do they say ?

C. Give them a drink, quick.

B. Are you afraid to speak then ? Hail, thou whose days prosper ! (Drums).

---

13 ತೊಯ್ಗೆ ಪಾಯಿರೊ ಮೆಲ್ಲೋಗರಕ್ಕೆ=for the boiled pulses, rush and for the purpose of getting the sauce. As the eighteenth Greek letter sigma is usually prefixed to words beginning with a consonant, especially before m and t, here sigma is prefixed to T in touke. This explains the word skal instead of Kal in Line 70 Col. (ii). See Liddell and Scott's Greek—English Lexicon.

14 The buffoon is provoked at the rush of the party.

15 Bere, athi ಬೇರೆ, ಆಡಿ=play separately.

16 ಬೇರೆ ಕೊಂಡು ಮುನ್ನ ಬೇತಿರೇಕೆಯೊ ?=why do you cringe, before it is separately poured to you ?

17 ಪಗಡೆಯ ಕೋರುತಂ ಈಸು ಬೇರೆ ಎಲ್ಲರಾಡೆ ಪೊನ್ನೆಣಿಸಿ ಬೇತಿರೇಕೆಯೊ ?=Though you have been hoping this much through casting the die each after counting the gold at stake, why do you still cringe ?

18 ತಮ್ಮತ್ತಕೆ ಎಣಿಸಿ ಪಗಡೆಯ ಈಸೆ ಬೆಸದೊಲವಿಯ ಬೇರೆ ಆಡಿಸು ಕೊತ್ತು ಓಸ.=Cause each of them to play, each having counted his own (share) and each casting the die loved for odd (number) and chop off the whole (of sauce).

The omission and elision of vowels and change of consonants requires no explanation. This is entirely due to the difficulty of pronunciation of Kannada words by the Greeks.

Pakte=ಪಗಡೆ.

Paske or pakse, pakte, ಪಗಡೆ

Since ξ -sk according to Liddell and Scott and sigma was sometimes changed into t, as prasso into pratto. (Manual of Comparative Philology by Giles, P. 115).

19 ಹೋ ಬಿತ್ತು = Oh it fell. The king means that the die fell with odd number, when he cast it.

King. Zeisoukormosede (Drums)[20]
B. Ah ! Not if I know it.
C. It is watery ; put in some wine (Much drumming)
G. Skalmakata bapteiragoumi [21] [22]
H. Tougoummi[23] nekelekethro[24]
G. Eitou belle trachoupteragoumi[25]
B. Ah ! None of your disgusting ways ! Stop ! (Drums) Ah ! What are you doing ?
H. Trachountermana[26]
G. Boullitikaloumbai[27] platagoulda bi........[28]
B. Apuleukasar (drums)[29]
King. Chorbonorbothorba[30] toumionaxiz[31] despitplatagoulda bi.......[32]

---

20 ಹೊಯಿಸಿಕೊಳ್ ಮೋಸದ=have it poured into your vessel by cheating.

21 ಕಳ್ ಮಕಾ ತಾ, ಬಾ=O Son, come and give the wine (Kal).

22 ಒಪ್ಪುತೆರಕೆ ಅವಂ ಈ. For the ransom agreed upon, give them (wine).

23 ತೊಯ್ಯ ಅವಂ ಈ=Give them (wine) along with the boiled pulse. The plural number here indicates the number of drams.

24 ನೀ ಕೇಳೀಕೆ ಎತ್ತುರೆ=You ask them why. Raise up (your cups).

25 ಆಯಿತೊ ಬೆಳ್‌ದ್ರಾಕ್ಷಾ ಒಪ್ಪುತೆರಕೆ ಅವಂ ಈ=Is it over ? then the white wine ; give them (wine) for the ransom agreed upon.

Here ξ is equivalent for sk : See Liddell and Scott's Greek-English Lexicon P. 1596.

26 ತ್ರಾಸ್ಕ ವುಂ ತೆರವಾನ=wine is the ransom. Traskavum=drakshavum.

27 ಬಾ ಓಳಿತು ಈ ಕಳ್ ಉಂಬಯು=Come ; you drink this good wine.

28 ಪಾಲ್ (=ಬಾಳ್) ತಗುಳ್ದ ಪಯು=you get life.

Mr. L. Rice, retired Director of Archaeology in Mysore suggests that platagoulda may be a Greek word meaning 'to clap hands.'

29 ಆ ಪುಳಿ ಕಸರ್=This is the sour sediment of the wine.

30 ಕೋರುವನ್ ಒರ್ವನ್ ದೊರೆವನ್=One who desires will appear.

31 ತಾವನೀವೊನ್=he will give you a place.

32 ಆಕ್ಸಿ ದೇಶ ಬಿಟ್ಟು ಬಾಳ್ ತಗುಳ್ದ ಪಯು=having left the country of Axih (Oxyrhyncus) you will get life.

seo sarachis[33] (Drums) oradosatur[34]
Ouamesare[35] sumpsaradara ei ia da.... ....[36]

B. Martha marithouma edmaimai maitho
thamouna martha marithouma (Drums.)[37]
.........................tun[38]

King. Malpiniak ouroukoukoubi karako........ra[39]

All. Aba[40]

King. Zabede[41]za biligidoumba[42]

All. Aba oun.

King. Pan oum bretikateman ouam bre thououeni[43]

All. Panoumbretikate manouam bretou oueni
Parakoum bretikate ma noum bret ouou eni[44]

---

33 ಶಿವ ಶರಕಿಸು=O, Siva, bestow care on us.

34 ಒಲ್ದು ಒಸೆ ತೋರ್=Kindly show love to us.

35 Oumesare. This is obscure. There seems to be a village called Somesvara near Malpi.

36 ಸುಂಪಸರದ ಆರ ಎಯ್ದು=Go to the river of the place called Sumpsara or Umpsara. The Greek word Psolichus signifying the name of a river seems to be a contraction of Sumpsaradaru, the river of Sumpsara.

37 This is obscure Mr. Bhaskarananda Saltore, a Mangalorian friend of mine, says that these words are uttered by the buffoon imitating the sounds of the drums.
The following meaning is also suggested by him. Mardam aridevu ; mayada maime ; mayada adan unna ; mardam aridevamma.—We learnt a medicine ; this is the power of Maya ; Eat this of Maya ; We learnt medicine. But I doubt it.

38 ಟಣ್ : an imitation of the sound of drums.

39 ಮಲ್ಪಿನಾಯಕ್ ಅವರ ಅವ್ವಗೆ ಕರದುಕೊಳ್=O Malpinaik, Chief of Malpi ; the rest is obscure.
The repetition of ouka, etc., is due to wine.

40 ಅಬಬ್ಬ : a word of exclamation.

41 ಹಬ್ಬಡೆ—ಹಬ್ಬದ ಎಡೆ=the dish of a feast.

42 ಹಬೆಡೆಗೆ ಇದನ್ ಉಣ್ ಬಾ=Come, eat this for a dish of a feast.

43 ಪಾನವಂ ಬೇರೆ ಎತ್ತಿಕ್ಕದೆ ಮಾನವಂ ಬೇರೆ ಎತ್ತೌ ಅವ್ವೆ ನೀ=Without the distribution of drink to us separately, you divide shares of ransom (mana), O madam.

44 ಪರಕೆಯುಂ ಬೇರೆ ಎತ್ತಿಕ್ಕದೆ ಮಾನವಂ ಬೇರೆತ್ತೌ ಅವ್ವೆ ನೀ=without setting a side our blessings you divide shares of ransom, O madam.

olusadizaparda piskou piskate man[45] arei man ridaou[46] oupatei......a.[47] (Five drummings).

King. A boundless barbaric dance I lead, O goddess [moon.
With wild measure and barbaric step ;
Ye Indian chiefs, bring the drum of mystic [sound.
The frenzied Seric step (Much drumming and [beating)

All. Orkis.[48]

B. What do they say again ?

C. He says, dance.

B. Just like living men. (Drums).

C. Throw him down and bind him with the sacred girdles (Much drumming. Finale).

B. They are now heavy with drink.

C. Good ; Charition, come out here.

A. Come, brother quickly ; is all ready ?

C. Yes all : the boat is at anchor close by ; Why do you linger ? Helmsman, I bid you bring the ship alongside here at once.

D. Wait till I give him the word.

B. Are you talking again, you bungler ? Let us leave him outside to kiss the ship's bottom.

C. Are you all aboard ?

All. Aboard.

A. O unhappy me ! A great trembling seizes my wretched body. Be propitious, lady goddess ! Save thy hand-maiden !

---

45 ಒಲಿಸದೆ ಇರ್ಪರ ತಪ್ಪಿಸಿಕೊಳಿ ಒಪ್ಪಿಸಿಕ್ಕೃತೆ ಎಮ್ಮೃಕ=unable as we are to win your regard, you may go away with our free consent.

46 ಅರೆಮ್ಮೃನ್ನರ್=Who are there like ourselves ?

47 ಇದು ಒಪ್ಪಿತೆ=is this to your satisfaction ?

48 ಒರಗಿಸು=support him (the king). This seems to have been said when the king was stumbling due to intoxication. This word C seems to have mistaken for a Greek word of almost similar pronunciation and interpreted it to mean "Dance."

The Purport of the Greek Farce

One of the women forming the king's party asks another whether the buffoon is calling. Another woman replies that he is coaxing her. A third woman adds that he is not only coaxing but also addressing her by using the word 'le' 'le' which is however a vulgar term of address. Accordingly, a fourth woman says that the word is an insult to kodagûsu, the Greek lady. Meanwhile the buffoon uses the word, 'charite, hail' which the Indian women mistake for his coaxing call to Charition whose Indian name seems to have been 'Chaireite or Châremma.' (Line 16, col i). This along with his use of the vulgar term 'le' irritates the women-folk. Forthwith they take up their bows and arrows to shoot him saying "well, strike him." The buffoon is frightened and appeals to Charition for help. Accordingly she interferes saying that he was not insulting. The women-folk draw the attention of each other among themselves by repeating the phrase 'not, my elder sister'. Then the buffoon asks the lady to go to the river Psolichus for being ready to escape, as previously arranged. She starts and the king's women-folk consider that she is going to the river for a bath (mîna) and ask such among themselves as have not yet bathed to accompany the lady to the river. Meanwhile one of the Greeks asks the lady to carry off some of the jewels of the Hindu Goddess whom she seems to have feigned to be worshipping in order to escape from the overtures of the king for marriage. She refuses to take any of the jewels of the Goddess and says that her seeing her father's face is dearer to her than the jewelry of the Goddess. Now the Captain of the ship draws attention of the buffoon to the approaching party of the king and asks him whether he will take up the task of serving them wine to make them drunk and senseless so as to give the Greeks an opportunity to escape unscathed. The buffoon consents and hopes to

wait for the departure of all the women of the second batch also (daughters of swine) to the river. But he doubts whether the Indians would ever drink such a thing as wine, though as C says it is rare in India.

Meanwhile the king and his party assemble on the spot after taking their bath with a view to take up their respective shares as determined by casting the dice (Pakte —pagade) marked with odd and even numbers, any odd number (Besa) being taken as a sign for winning the share. Accordingly the king asks the buffoon to cause the chiefs to cast the dice to determine their respective shares and tells the chiefs to go for their refreshment (Mellôgara). But the chiefs hurry on for their shares without casting the die and receive a rebuff from the buffoon. The king intervenes and remonstrates with them for their hurry to take up the share before it is duly allotted (Hoyyada mun) and asks them why they impatiently cringed for their shares, though they had hoped to win their shares by casting the dice, each declaring the amount of his due (Ponnenisi) and tells the buffoon, to cause each of the chiefs to cast the dice, regarding the odd number as a sign for success. Then the king's party ask the buffoon to go on with his work and the buffoon not understanding their speech insults them in Greek, by saying that they might receive a kick from Kottos. Immediately the king throws the dice and seeing their fall with an odd number says "Ho bit—bildattu—fell", thereby claiming his share. But failing to understand what the king said, the buffoon asks C to explain it to him. C, however, tells the buffoon to quickly give them wine without caring to interpret the king's speech. And the buffoon asks him whether he was afraid to interpret it and proceeds to serve them wine, by exclaiming "Hail thou whose days prosper".

Being now interrupted from their proceeding to cast the dice and take up their shares the king and his party go to partake of the wine readily brought before them;

The king tells his party that so far as wine is concerned there is no allotment of a fixed quantity and that therefore they may avail themselves of any quantity of wine, even by deception (môsade). But the buffoon who seems to have been somehow or other familiar with the word *môsa* says that he will be careful so as not to be deceived.

Immediately the buffoon serves the wine. But seeing its diluted appearance, C tells the buffoon to give them strong wine, while G. says to the buffoon to give them wine as a kind of ransom agreed upon. (Terake avam î and trâkavun teramâna).

Neither the king nor his party seem to have caught the meaning of what G. & H. said. But the buffoon who was in the conspiracy seems to have caught the significance of it and being disgusted with their careless talk, asked them to stop their talk, warning them of its danger. Still being perhaps sure of the effects of wine on the king and his party H. goes on saying that wine is the ransom. But G. however diverts the attention of the king by telling him to drink wine and prosper (bâl taguldapai) and the buffoon says that he is ready to give even the sour sediment of wine contained at the bottom of the vessel.

Though the king promised to release the Greek lady by taking ransom, he exhibits now, perhaps due to the effects of wine, his love to Charition by saying that a man, *i.e.*, himself who desires to have her is at her disposal and asks whether she will like to prosper in his country after she has long left Oxyrhyncus. He appeals to Malpinâik and Sêo to make the lady return from the river. The king's speech here is incoherent, due to the drinking of wine and is obscure.

The king at last talks to himself thinking of the lady who is gone to the temple and asks her to divide at least the ransom though she has neither distributed the wine nor received the blessings of the chiefs by distributing the ransom and says that as he has failed to win her regard,

she may leave him behind and depart, obtaining his free consent.

Then the Indians fully drunk begin to dance with their heads reeling. At this juncture the Greeks take to their legs and embark on their ship in the river.

A distinguished savant of the Mysore University interprets the Farce as follows.—

Two points are clear.—(1) The Greek party have crossed the Indian ocean and landed on the coast and they plan to rescue the lady. They had escaped being wrecked in a storm or more probably captured by pirates but they had some escapade. (2) They planned to make the Indian king and his followers drunk and then to carry away the lady.

Of the Greeks the four most prominent characters are the lady, (A). her brother (C), the buffoon (B) and the captain of the ship (D). The lady and her brother know the country, the language, and manners of the people. Whether her brother had come in the vessel is not certain, but it is probable.

The scene opens with a visit of the captain of the vessel to the lady in front of the temple of the Moon-goddess. Before this the Greeks had probably seen the king and talked about the lady's release. But this is not certain. One batch of women armed with bows (and arrows) is coming in from the chase; the king and the Indian chiefs have already returned from the chase and gone to bathe in the river Psolichus and the lady and her brother are expecting them back.

The buffoon is seen by the party of women and excites their hostility. The lady saves him. These women evidently had not seen him before. The buffoon manages to send the party of women away to the Psolichus. The captain asks the lady to enter the temple and bring away one of the offerings (jewellery) to the goddess, but the lady condemns this as a sacrilege.

At this time another party of women arrive from the hunt; they are also sent away to the Psolichus for a bath.

Now the lady enters the temple to make ready for the escape; it being arranged that on the return of the king's party from the bath, the buffoon is to serve the wine neat and strong. " (Do you serve them ?)—" addressed to the buffoon.

It should be noted that from this point onward, *i.e.*, all through the feasting and drinking, the lady keeps herself aloof in the temple, where she was a hand-maiden of the goddess. The lady enters the temple immediately after saying, "(they come, serve them the wine neat)."

Now appear the king and the Indian chiefs. The king's first utterance is "Brathis," and the Chiefs repeat "Brathis." If this is Kannada speech, (and the previous use of "Minei" "Ai arminthei" by the Indian women establishes this as highly probable), this "Brathis" may stand for "bêre âdisu" meaning cause each to play separately, *i.e.*, "let each play" or as the lady's brother explained to the buffoon.— "let us draw lots for the shares." Thus after the chase and the bath in the river comes the dice-playing. But shares of what? The word 'pomenzi' seems to stand for 'ponnenisi' (Having counted the gold) and in that case some gold was at stake. If this is correct, was it the usual stake? One suggestion is that it was ransom money for the lady and had been offered by the Greek party (or the lady's brother). In that case, we can see 'terage' in 'oupteragaumi' and 'termana' in 'trachountermana' both terage and teramâna in Kannada standing for ransom. But the objection to this view is, that if they had brought gold for ransom, the Greek party would certainly refer to it in the conversation about the booty (the jewellery and other things the lady was asked to bring with her), but they are entirely silent both when they are plotting the escape and after the drinking scene when they are going aboard. A better interpretation would be to

treat the wine itself as a sort of ransom playfully offered by the brother (it is he who says "give them a drink quick"). (H), evidently an Indian chief, says—"Tougoummi" which may stand for "Toyige avam î" give them (wine) as an addition for the sauce.

Then the passage will be constructed thus :—

G. Skalmakatabaptiragoumi : ("O son, come and give the wine," this is addressed to the buffoon).

H. Tougoummi : give (wine) as an addition for the sauce.

G. Eitobelle trachoupteragoumi : (it is over,—now the white wine—give them wine as a ransom agreed upon).

(Here they fall upon the wine).

B. Ah ! none of your disgusting ways. Stop ! ah ! what are you doing ?

H. Trachountermana (wine is the ransom) : 'don't you see wine is a ransom.'

(Jokingly said or to induce the Greek to pour the wine).

It may be noted here that they used sauce and some dish along with the wine. The word *Z*abede may be taken for 'habbede' (a dish). There seems to be a reference to sauce in the word 'mellogarake.' The phrase 'Zopit' may be taken for 'hô bittu' 'it fell' (referring to the throw of dice.)

The buffoon's words, 'Martha, marithouma, etc., may be only an imitation of the sound of the drum, as suggested by Mr. Bhaskarananda Saltore. The king's speech in Greek "A boundless barbaric dance I lead, O goddess moon," would seem to show that the king could speak Greek. But probably the king actually spoke in the Indian language, and the speech as we have it is only a Greek rendering for the benefit of the audience at the Greek theatre. Various reasons may be urged in favour of this view. The king was addressing the Indian chiefs, who could not possibly follow this high-flown Greek verse ; neither could the king

himself be equal to this composition. The words 'barbaric' 'Selene' (for Goddess moon) 'Indian chiefs' would be explicable in a Greek rendering of the king's own native speech, but would be very inappropriate in the mouth of an Indian king addressing tribal chiefs under him. This is further confirmed by the fact that the buffoon immediately asks what do they all say again ? (Here they must include the 'king and 'all') and the lady's brother who could follow Kannada replies.—' He says dance' when 'he' must refer to the king. And this question and answer would be quite out of place, if the king had spoken in Greek.

It is after this when the king and the chiefs are heavy with drink, and the king is thrown down, that the lady's brother calls her out of the temple—good Charition, come out here.

And the lady is anxious to go aboard. "Come, brother, quickly," "is all ready ?" And the brother answers. "Yes, all." "The boat is at anchor close by." There is no reference to the gold of the lady's ransom, just as there is none to any jewellery of the temple. If these had been there, or were being taken away, there would be bound to be a reference. The stage play for the purpose of the audience would make this necessary, evidently as there was no gold for ransom.

If the Greeks' gold had been counted or spread out before, it must have been collected before the departure of the Greeks. Nothing was done. There was a playful talk of the wine as a sort of ransom for the lady, that was all. It may be noted that the lady calls herself a hand-maiden of the goddess (evidently the moon goddess of the temple.) She had probably attached herself as a sort of vestal virgin and was in custody of the temple offerings and this might have been a sanctuary which protected her honour. She is very grateful to the goddess for this protection. She longs to see her father's face, and she is not only affectionate but honourable and pious. It is not clear whether the

brother came with the party in the vessel, or had stayed on in the country after the lady's—capture. But the buffoon had come in the ship, and the captain must have somehow bungled and got into a scrape perhaps with pirates or when landing on the coast. And the buffoon calls him a bungler.

As regards the women's conversation beginning 'Kraunou' it is to be noticed that in first draft in Col. I :—

We have the Captain saying—rejoice with me, etc.,

the brother—"lalei ba.........." referring to talking or prattling perhaps of the buffoon,

then z (an Indian)—leanda,

then—a line omitted, perhaps something said by the buffoon, pointing to, 'autas' 'these women.'

This must have been an insulting gesture (the buffoon calls the women later on, 'daughters of swine').

The women here wanted to shoot (this was acted on the stage.)

Then comes 'alemmaka' probably said by Charition, meaning—'Not so, he is our man.'

This first draft was replaced by the more elaborate passage in the text as we have it.

Now in this text—we have first the buffoon saying 'What huge bows they have ?"

Here he must have pointed to the women (autas' as in the first draft) with some gesture.

One woman noticing this says—Kraunou, Does he call ?

Another woman—Lalle—he caresses. (*i.e.*, she mistakes it for a caressing, gesture.) Here 'lalle' in Kannada means 'caresses.' The only difficulty about this interpretation is that 'lalle' and "le, le" would then be Sanskritic like Pânam (if it means drink).

Another woman– Laitalianta lalle- (*i.e.*, he caresses, by saying 'le,' 'le').

Now the buffoon may have in addition to the gesture, with which he pointed to the women, actually used the Greek word 'lalei's or 'laleis' as the brother had used it

the moment before, rebuking the prattling of the captain (as he rebukes the Captain in line 102 saying "laleis pali," dost thou talk or prattle again).

And the Indian women mistook it for an insulting gesture, and for "le, le" addressed to them. Then another woman says Kotakos (or Kouakos), etc.

Then the buffoon addresses the woman chaireite, hail.

And the women make as if to shoot or beat him ("laspathia").

Then the buffoon cries out to the lady for help.

And the lady says—alemaka, or alemmaka (as in the first draft) meaning—Not so, he is our man, *i.e.*, no enemy, he means no harm.

.. ..

Before concluding the Report it seems desirable to briefly refer to the opinions received from Oriental Scholars on the interpretation of the Greek Farce published in this report. Dr. Eugen Hultzsch, the retired Ephigraphist of Madras, is of opinion that the present interpretation of the whole Farce goes to confirm him in his view that the unknown language in the play is Kannada and that it is sure to interest scholars both in India and Europe. Mr. B. L. Rice, the pioneer of Mysore Archæology, whose knowledge of Kannada language and literature and its cognate dialects is indisputable has written a number of letters stating that the conclusions arrived at in the Report regarding the location of the spot and the language of the play "are justified." He has besides made some valuable suggestions regarding the meaning of some words, both Greek and Kannada, and about the heroine's character. Some of the suggestions have been adopted consistently with sense of the play made out. The king's speech is so interpreted as to cast no slur on the character of Charition who, thanks for the prevailing religious sentiments of the times, had as a vestal vergin

a safe asylum in the temple of the (moon ?) goddess on the bank of the river.

Dr. L. D. Barnett has however, expressed his doubts about the identity of the language with Kannada. The reasons for his doubts are, as stated by him in his article on the alleged Kanarese speeches in the Oxyrhynchus Papyri published in the Journal of Egyptain Archæology, Vol. XII, Parts I and II, April 1926 as follows :—

I. The identified words should have no features of mediæval or modern language.

II. The interpretation must make good sense and be natural and unforced.

III. The interpreter shall not unduly alter the text.

Dr. Barnett has applied these criteria against the attempt of Dr. Hultzsch at identifying the unknown language of the play with Kannada by tracing some words to that language.

The only interpretation that is common to both Dr. Hultzsch and myself is that of the word *Bradis*. Like myself Dr. Hultzsch has identified this word with Kan. bêrâdisu meaning 'make them play separately.' Against this Dr. Barnett says "This is wrong. Âdisu is 2nd person singular, causal imperative of the root âdu, play, act, and thus means 'do thou put into play, set into activity, or the like'. 'Bêr' is properly a substantive meaning separation or difference. Whether bêrâdisu could signify 'make (us) play separately' seems to me rather doubtful : the natural meaning, I think, would be 'put into play a change or difference.' But even admitting the former interpretation is possible, we must recognize that the resultant sense is very far from Greek, and is also nonsense, for if the actors are to play, they cannot play separately but must play together." Dr. Hultzsch is not at all wrong. Bêrâdisu is a compound of bêre+âdisu with 'e' after 'r' elided in Sandhi. Bêre is an adverb meaning separately, and it is not the word bêr, a substantive mean-

ing separation or difference, as supposed by Dr. Barnett. Bêre+âdisu—bêrâdisu, means 'cause us or them to play separately.' As the play consists in casting a die (pakte—pagade) marked with even and odd numbers in order to win the stake on seeing its fall with odd number (besa) on the upper surface, the actors had to play separately, *i.e.*, severally, but not together, as imagined by Dr. Barnett. Hence it is not far from the explanation in Greek; nor is it non-sense.

As to the elision of 'e' between 'b' and 'r' and of 'u' after 's,'..............................It is nothing but the ignorance of the foreigner to correctly pronounce the word and understand its formation and meaning. Serangapatam for Srîrangapattana and Chitaldrug for Chitradurga are other living examples of the same type. This explains the objections raised against the identification in the light of the Doctor's last two criteria, The objection made in the light of the first criterion is however strong. According to this, the identification of 'Zabede' with 'habbede' seems to be wrong, in as much as 'h' in the place of 'p' in old Kannada is unusual. It is however possible that the Greek might have pronounced 'p' and 'r' also as 'z,' as for example 'izpara' for 'irpara'; for this is not philological change, but a change due to inability to pronounce the sound. Even admitting that such changes are unwarranted we may hit upon other appropriate words with which it may be equated. It is therefore unreasonable to regard the entire interpretation as wrong simply because the identification does not satisfy the first criterion in the case of a word or two. It is hoped that in the light of the present explanation Dr. Barnett will reconsider my interpretation and see whether it is not justifiable rather than ingenious, as he was pleased to term it.

Again the remarks made by Dr. L. D. Barnett that the passages in question may be gibberish do not seem

to be justifiable. If they were gibberish, it would not have been possible for others to repeat them. Besides the repetition of some words by other actors in the farce, the passage pânavam, etc., is repeated by all the king's followers.

The observations made by the distinguished Savant of the Mysore University are all based upon the interpretation I supplied to him of the Kannada words in the Farce. He did not want the note to be published. But considering the value of his criticisms, I published it without his consent and on my own responsibility. In a subsequent note, he writes :—

Ransom money for the lady, and dice-throwing by the Indian Cheifs for sharing in the ransom, are, in view of the text, both not very probable. And a ransom would be superfluous in the actual plot. What is more likely is that the chiefs of the hunting party were sharing or apportioning the game (or their food) after the hunt. The Greek text does not necessarily mean drawing of lots, far less, dice-throwing ; and the word Kottôs, if it is Kannada, might mean roast meat, and the Chiefs, crying 'Kottos' might be pointing to the roasted animal. In that case, the buffoon's imprecation "may you be kicked by Kottos" though nothing unusual in the idiom, would be specially apposite. But all this is very uncertain. What is morally certain is that the Indians were feasting and drinking, and the interpretation of the text might profitably be sought in that direction. The buffoon's remark, "none of your disgusting ways ! stop !" probably refers to an attempt of an Indian Chief to grab the wine with his greasy fingers (they would be eating with their fingers). It may be added that the language of the text may be Proto-Kannada or Proto-Dravidian.



ಭೋಗನಂದೀಶ್ವರ ದೇವಾಲಯದ ಉತ್ತರಮುಖ.



ನಂದಿಯ ಭೋಗನಂದೀಶ್ವರ ದೇವಾಲಯ.

ಎರಡನೆಯ ಅಧ್ಯಾಯ.

ದೇವನಹಳ್ಳಿ ತಾಲ್ಲೂಕು ಗಂಗವಾರದ ದೇವಸ್ಥಾನವು ಈಗ ದೊರೆತಿರುವ ದ್ರಾವಿಡರೀತಿಯ ಕಟ್ಟಡಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾಗಿರುವಂತೆ ತೋರುತ್ತದೆ. ಈ ದೇವಸ್ಥಾನಕ್ಕೆ ದತ್ತಿಯನ್ನು ಬಿಟ್ಟುಕೊಟ್ಟದ್ದನ್ನು ತಿಳಿಸುವ ಸುಮಾರು ಎಂಟನೆಯ ಶತಮಾನದ ಆದಿಯ ಒಂದು ಶಾಸನವಿರುವುದರಿಂದ ಈ ಕಟ್ಟಡವು ಕೊನೆಯ ಪಕ್ಷ ಆ ಕಾಲದಲ್ಲಾದರೂ ಇದ್ದಿರಬೇಕು. ಇಲ್ಲಿಯ ದೇವರಿಗೆ "ತಬ್ಬಲೇಶ್ವರ"ನೆಂದು ಹೆಸರು. ಶಾಸನಗಳಲ್ಲಿ ಮಾತ್ರ ಇದನ್ನು "ಸೋಮೇಶ್ವರ"ನೆಂದು ಕರೆದಿದೆ.

ಈಗ ಈ ದೇವಾಲಯವು ಪಾಳುಬಿದ್ದು ಹೋಗಿದೆ; ಮೊದಲಿನ ಕಟ್ಟಡದಲ್ಲಿ ಉಳಿದಿರುವುದು ಎಲ್ಲೋ ಅಲ್ಪ ಸ್ವಲ್ಪ; ಪ್ರಾಕಾರದ ಒಳಗಿರುವ ಒಂದು ಸಿಂಹ ಸ್ತಂಭ, ಅದರ ಎಡಕ್ಕೆ ಇರುವ ಒಂದು ಪಾಳುಮಂಟಪ. ಮಿಕ್ಕಭಾಗವೆಲ್ಲಾ ಈಚಿಗೆ ಎಂದೋ ಜೀರ್ಣೋದ್ಧಾರಮಾಡಿದ್ದು.

ಬೆಂಗಳೂರಿನಿಂದ ಉತ್ತರಕ್ಕೆ ಸುಮಾರು ಮುವ್ವತ್ತಾರು ಮೈಲಿ ದೂರದಲ್ಲಿ ನಂದಿದುರ್ಗದ ಕಿಬ್ಬಿಯಲ್ಲಿರುವ 'ನಂದಿ' ಗ್ರಾಮದ ಭೋಗನಂದೀಶ್ವರ ದೇವಾಲಯವು ನಮ್ಮ ಸಂಸ್ಥಾನದೊಳಗೆ ಈ ರೀತಿಯಲ್ಲಿ ಕಟ್ಟಿದ ದೇವಸ್ಥಾನಗಳಲ್ಲೆಲ್ಲಾ ಬಹು ವಿಸ್ತಾರವೂ ವಿಭೂಷಿತವೂ ಆದ ಕಟ್ಟಡ. ಗಂಗವಾರದ ಪಾಳನ್ನು ಬಿಟ್ಟರೆ ಇದನ್ನೇ ಪ್ರಾಚೀನತಮವೆಂದು ಹೇಳಬಹುದು.

ನಂದಿಯು ಈಗ ಒಂದು ಸಣ್ಣ ಗ್ರಾಮವಾಗಿರುವುದಾದರೂ ಒಂದಾನೊಂದು ಕಾಲದಲ್ಲಿ ಅದು ಪ್ರವರ್ಧಮಾನವಾದ ಪಟ್ಟಣವಾಗಿತ್ತು; ದುರ್ಗಕ್ಕೂ ಯುದ್ಧಾದಿಗಳ ದೃಷ್ಟಿಯಿಂದ ಹೆಚ್ಚಾದ ಪ್ರಾಶಸ್ತ್ಯವಿತ್ತು. ಆದ್ದರಿಂದ ಈ ಊರು ಮತ್ತು ದುರ್ಗಗಳು ನಮ್ಮ ದೇಶದ ಪ್ರಾಚೀನೇತಿಹಾಸದಲ್ಲಿ ಆಗಾಗ್ಗೆ ದೃಷ್ಟಿಗೆ ಬೀಳುತ್ತಲೇ ಇರುತ್ತವೆ. ಈ ದೇವಾಲಯದ ವಿಚಾರವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಆಗಿನಕಾಲದ ಚರಿತ್ರೆಯನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬೇಕು.

ಚರಿತ್ರೆಗೆ ಗೊತ್ತಿರುವಹಾಗೆ, ಸುಮಾರು ಕ್ರಿ. ಶ. ಎರಡನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ ಮೈಸೂರಿನ ಬಹುಭಾಗವನ್ನು ಆಳುತ್ತಿದ್ದವರು ಗಂಗರು. ಅವರಿಗೆ "ನಂದಗಿರಿನಾಥ" ವೆಂಬ ಬಿರುದು ಇತ್ತು. ಎಂಟನೆಯ

ಶತಮಾನದ ಕೊನೆಯಲ್ಲಿ ಗಂಗರು ರಾಷ್ಟ್ರಕೂಟರಿಗೆ ಅಧೀನರಾದರು. ಪಾಲಾರ್ ನದಿಯ ಪೂರ್ವಪ್ರಾಂತದಲ್ಲಿ ಆಳುತ್ತಿದ್ದ ಬಾಣರು ಕೆಲವುವೇಳೆ ಗಂಗರಿಗೂ ಮತ್ತೆ ಕೆಲವುವೇಳೆ ರಾಷ್ಟ್ರಕೂಟರಿಗೂ ಅಧೀನರಾಗಿದ್ದ ಸಾಮಂತರಾಜರಾಗಿದ್ದರು. ಇವರಂತೆಯೇ ನೊಲಂಬರೂ, ಈ ಕಾಲದಲ್ಲಿ, ಗಂಗರಿಗೋ ರಾಷ್ಟ್ರಕೂಟರಿಗೋ ಅಧೀನರಾಗಿದ್ದುಕೊಂಡು ಚಿತ್ರದುರ್ಗ ಡಿಸ್ಟ್ರಿಕ್ಟಿನ ಪ್ರದೇಶವನ್ನೆಲ್ಲಾ ಆಳುತ್ತಿದ್ದರು.

ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಚೋಳರು ಗಂಗರನ್ನು ಜಯಿಸಿ ಈ ಪ್ರದೇಶವನ್ನು ನಿಗಿರಿಲಿ ಚೋಳಮಂಡಲವೆಂದು ಕರೆದರು.

ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ, ಗಂಗವಂಶೀಯರೆಂದು ಹೇಳಿಕೊಳ್ಳುತ್ತ, ಚೋಳರ ಬಿರುದಾವಳಿಗಳನ್ನು ಧರಿಸಿಕೊಳ್ಳುತ್ತ ಇದ್ದ ಒಂದು ರಾಜವಂಶದವರು ಈ ಕಾಲದಲ್ಲಿ ಪ್ರಬಲರಾಗಿದ್ದ ಹೊಯಿಸಳರಿಗೆ ಅಧೀನರಾಗಿದ್ದುಕೊಂಡು ಕೋಲಾರದ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ಭಾಗಗಳನ್ನು ಆಳುತ್ತಿದ್ದರು.

ಸುಮಾರು ಕ್ರಿ. ಶ. ೧೧೧೭ ರಲ್ಲಿ ಹೊಯಿಸಳರು ಚೋಳರನ್ನು ಓಡಿಸಿಬಿಟ್ಟರು; ಹೊಯಿಸಳ ರಾಜನಾದ ಸೋಮೇಶ್ವರನ ಮರಣಾನಂತರ (೧೨೫೪) ಕೋಲಾರ ಡಿಸ್ಟ್ರಿಕ್ಟು ಅವನ ಮಗನಾದ ರಾಮನಾಥನ ಕೈಗೆ ಬಂತು.

ಹದಿನೈದರಿಂದ ಹದಿನೆಂಟನೆಯ ಶತಮಾನದವರೆಗೆ ನಂದಿಯು ವಿಜಯನಗರದ ಅರಸರ ಅಧೀನವಾಗಿ ಆವತಿಯ ಪಾಳೆಯಗಾರರಿಂದ ಆಳಲ್ಪಡುತ್ತಿತ್ತು.

ಸುಮಾರು ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ಬಿಜಾಪುರದ ಸುಲ್ತಾನನು ಈ ಪ್ರಾಂತವನ್ನು ಜಯಿಸಿ ನಂದಿಯನ್ನು ಶಿವಾಜಿಯ ತಂದೆಯಾದ ಷಾಜಿಗೆ ಜಹಗೀರಿಯಾಗಿ ಕೊಟ್ಟುಬಿಟ್ಟನು.

ಔರಂಗಸೇಬನ ಆಳಿಕೆಯಲ್ಲಿ, ಮೈಸೂರು ದೇಶವು ಮೊಗಲರ ಸ್ವಾಧೀನವಾಯಿತು. ಸುಮಾರು ಹದಿನೆಂಟನೆಯ ಶತಮಾನದ ಮಧ್ಯಕಾಲದ ಹೊತ್ತಿಗೆ ಕೋಲಾರದ ಡಿಸ್ಟ್ರಿಕ್ಟು ಹೈದರಾಲಿಯ ವಶವಾಯಿತು. ದುರ್ಗದ ಮೇಲ್ಭಾಗದಲ್ಲಿ ಉದ್ದಕ್ಕೂ ಈಗ ಪಾಳುಪಾಳಾಗಿ ನಿಂತಿರುವ ದೊಡ್ಡ ಕೋಟೆಯು ಅವನೂ ಅವನ ಮಗ ಟಿಪ್ಪೂಸುಲ್ತಾನನೂ ಕಟ್ಟಿಸಿದ್ದು. ಟಿಪ್ಪುವು ನಂದಿಯ ಊರನ್ನು ವಿಸ್ತರಿಸಿ ಅದರಲ್ಲಿ ಅರಮನೆಯನ್ನೂ ಪೇಟೆಯನ್ನೂ ಕಟ್ಟಿಸಿದನು.

೧೭೯೧ ರಲ್ಲಿ ಬ್ರಿಟಿಷರು ಈ ದುರ್ಗವನ್ನು ಹಿಡಿದುಕೊಂಡು ಮಾರನೆವರ್ಷ ಟಿಪ್ಪುವಿಗೆ ಕೊಟ್ಟುಬಿಟ್ಟರು. ಅವನ ಮರಣಾನಂತರ ಅದು ಮೈಸೂರು ಸಂಸ್ಥಾನಕ್ಕೇ ಸೇರಿ ಶ್ರೀ ಕೃಷ್ಣರಾಜಒಡೆಯರವರ ವಶಕ್ಕೆ ಬಂತು.

ಇಲ್ಲಿರುವ ಭೋಗನಂದೀಶ್ವರ ದೇವಾಲಯವು ಕ್ರಿ. ಶ. ೮೦೧ ನೆಯ ಇಸವಿಯದು. ಇದನ್ನು ಹಿಂದೆ ಹೇಳಿದ ಬಾಣರಸರಲ್ಲಿ ಒಬ್ಬನಾದ ಬಾಣವಿದ್ಯಾಧರನ ಹೆಂಡತಿ ರತ್ನಾವಳಿ ಎಂಬಾಕೆಯು ಕಟ್ಟಿಸಿದಳೆಂದು ಹೇಳುತ್ತಾರೆ. ಆಗಿನಿಂದ ನಂದಿ ಗ್ರಾಮವು ಅನುಭವಿಸಿದ ಕಷ್ಟನಿಷ್ಠುರಗಳನ್ನೆಲ್ಲಾ ಈ ದೇವಸ್ಥಾನವೂ, ಅನುಭವಿಸಿದೆ. ಆಯಾಕಾಲದ ಒಂದೊಂದು ಅನುಭವಕ್ಕೂ ಈಗ ನಿದರ್ಶನವಿದೆ.

ಈ ದೇವಾಲಯವು ಹಳೇಬೀಡಿನ ಹೊಯಿಸಳೇಶ್ವರ ದೇವಾಲಯದ ಹಾಗೆ ಒಂದರ ಮಗ್ಗುಲಲ್ಲಿ ಒಂದರಂತೆ ಎರಡು ಗರ್ಭಗೃಹಗಳುಳ್ಳ ಜೋಡಿ ಕಟ್ಟಡ. ಇದು ಪೂರ್ವಾಭಿಮುಖವಾಗಿಯೂ ಪ್ರಾಕಾರ, ಮಹಾದ್ವಾರ, ಮುಖಮಂಟಪ, ಪಾತಾಳಾಂಕಣ, ಪುಷ್ಕರಿಣಿ ಮುಂತಾದವುಗಳಿಂದ ಒಡಗೂಡಿ ವಿಸ್ತಾರವಾಗಿಯೂ ಇದೆ. ಉತ್ತರ ಗೃಹದಲ್ಲಿ ಭೋಗನಂದೀಶ್ವರನೂ ದಕ್ಷಿಣ ಗೃಹದಲ್ಲಿ ಅರುಣಾಚಲೇಶ್ವರನೂ ಇವೆ. ದೇವೀ ವಿಗ್ರಹಗಳಿಗೆ—ಕ್ರಮವಾಗಿ—ಪ್ರಸನ್ನಪಾರ್ವತಿ ಮತ್ತು ಅಪೀತ ಕುಚಾಂಬಾ ಎಂದು ಹೆಸರು.

ಈ ಕಟ್ಟಡದಲ್ಲಿ ಎರಡು ಗರ್ಭಗೃಹಗಳಿರುವಂತೆಯೇ ಎರಡು ಸುಕನಾಸಿಗಳೂ ಎರಡು ನವರಂಗಗಳೂ ಈ ನವರಂಗಗಳ ಒಂದೊಂದರ ಮುಂದೂ ಒಡೊಂದರಂತೆ ಎರಡು ಬಯಲಾದ ನಂದಿಮಂಟಪಗಳೂ ಇವೆ. ಎರಡು ನವರಂಗಗಳನ್ನೂ ಸೇರಿಸುವಂತೆ ಮಧ್ಯೆ ಒಂದು ಗೋಡೆ ಇದೆ. ಈ ಗೋಡೆಯ ಮುಂದೆ ದೇವಾಲಯದ ಉತ್ಸವಮೂರ್ತಿಗಳನ್ನು ಇಡುವುದಕ್ಕೆ ಒಂದು ಸಣ್ಣ ಗೃಹವೂ, ಒಂದು ಚೌಕವಾದ ಮತ್ತು ಚಿಕ್ಕ ರಂಗಮಂಟಪವೂ ಇವೆ. ಇದರ ಮುಂದೆ ಎರಡು ನಂದಿಮಂಟಪಗಳನ್ನು ಸೇರಿಸಿದ ಹಾಗೆ, ಅದೇ ಸಾಲಿನಲ್ಲಿ, ಮತ್ತೊಂದು ಮಂಟಪವಿದೆ. ಇದನ್ನು "ಮುಖಮಂಟಪ" ವೆನ್ನಬಹುದು. ಇದಕ್ಕೂ ಮುಂದೆ, ಸ್ವಲ್ಪ ತಗ್ಗಿನಲ್ಲಿ, ಒಂದು "ಪಾತಾಳಾಂಕಣ" ವಿದೆ. ಅಮ್ಮನವರ ಗುಡಿಗಳು ಸ್ವಾಮಿಯ ಗುಡಿಯ ಹಿಂದೆ ಇವೆ. ಇವೆಲ್ಲವುಗಳನ್ನೂ ಒಳಕೊಂಡು ಒಂದು ಅಂಗಳವೂ ಸುತ್ತಲೂ ಕೈಸಾಲೆಯೂ ಇದೆ. ಪ್ರಾಕಾರದ ಉತ್ತರ ಗೋಡೆಯ ಮಧ್ಯೆ ಒಂದು ದ್ವಾರವಿದೆ. ಇದರಿಂದ ಹೊರಕ್ಕೆ ಹೋದರೆ ಸುತ್ತಲೂ ಕೈಸಾಲೆ ಇರುವ ಮತ್ತೊಂದು ಅಂಗಳವು ಸಿಕ್ಕುತ್ತದೆ. ಈ ಅಂಗಳದಲ್ಲಿ ಎರಡು ಮಂಟಪಗಳಿವೆ. ಒಂದು ದೊಡ್ಡದು, ಇನ್ನೊಂದು ಸಣ್ಣದು. ಈ ಎರಡನೆಯ ಮಂಟಪದ ಉತ್ತರ ಬಾಗಿಲಿನಿಂದ ಹೋದರೆ ಪುನಃ ಮೂರನೆಯದಾದ ಇನ್ನೊಂದು ಅಂಗಳವು ಸಿಕ್ಕುತ್ತದೆ. ಇದರ ಮಧ್ಯೆ ಒಂದು ಸುಂದರವಾದ ಕೊಳವಿದೆ. ಇದಕ್ಕೆ ಕೆತ್ತಿ ಹದಮಾಡಿದ ಕಲ್ಲುಗಳಿಂದ ಮಾಡಿದ ಮೆಟ್ಟಲುಗಳಿವೆ.


ದೇವಾಲಯದ ಮುಂದೆ ಪೂರ್ವಕಡೆ ಮಹಾದ್ವಾರವಿದೆ. ಈ ಮಹಾದ್ವಾರದ ಬಲಗಡೆ ಕೆತ್ತನೆ ಕಂಬಗಳುಳ್ಳ "ಪರ್ವತ್ತೆಮಂಟಪ" ವೆಂಬ ಒಂದು ಸೊಗಸಾದ ಮಂಟಪವಿದೆ. ಇದರ ಹತ್ತಿರ ವೀರಭದ್ರ ಮತ್ತು ವೆಂಕಟರಮಣಸ್ವಾಮಿಯ ದೇವಾಲಯಗಳೂ ತೊಟ್ಟಿತೀರ್ಥ (ಅಥವಾ ಗಾರೇಕೊಳ) ಎಂಬ ಒಂದು ಸಣ್ಣ ಕೊಳವೂ ಇವೆ. ಮಹಾದ್ವಾರದ ಮುಂಭಾಗದಲ್ಲಿ ಸುಮಾರು ೩೫೩ ಗಜ ಉದ್ದವೂ ೧೪೬ ಗಜ ಅಗಲವೂ ಇರುವ ಒಂದು ಅಂಗಳವೂ ಆದರ ಸುತ್ತಲೂ ಬಯಲಾದ ಕೈಸಾಲೆಯೂ ಇವೆ. ಇದಕ್ಕೆ ಮೂರು ಬಾಗಿಲುಗಳಿವೆ. ಇದು ಜಾತ್ರೆಯ ಕಾಲದಲ್ಲಿ ಬಂದು ಇಳಿದುಕೊಳ್ಳುವ ಭಕ್ತಾದಿಗಳಿಗಾಗಿ ಕಟ್ಟಿದ್ದಾಗಿ ತೋರುತ್ತದೆ.

ಮೇಲಣ ವಿವರಣೆಯಿಂದ ಈ ದೇವಸ್ಥಾನವು ಎಷ್ಟು ವಿಸ್ತಾರವಾದದ್ದೆಂಬುದು ಗೊತ್ತಾಗುತ್ತದೆ. ಆದರೆ ದೇವಸ್ಥಾನವನ್ನು ಪ್ರತಿಷ್ಠಿಸಿದ ರಾಣಿ ರತ್ನಾವಳಿಯೇನೋ ಭೋಗನಂದೀಶ್ವರ ದೇವಾಲಯವನ್ನು ಮಾತ್ರ ಕಟ್ಟಿಸಿ ಕ್ರಿ. ಶ. ೮೧೦ ರಲ್ಲಿ ಆದನ್ನು ನಡೆಸಿಕೊಂಡು ಬರುವುದಕ್ಕಾಗಿ ದತ್ತಿಯನ್ನು ಬಿಟ್ಟಳು. ಸುಮಾರು ಕ್ರಿ. ಶ. ೮೮೦ ರಲ್ಲಿ 'ಪಲ್ಲವ ಕುಲತಿಳಕ ನೊಳಂಬಾಧಿರಾಜಂ ರಾಜ್ಯಂಗೆಯ್ಯುತ್ತಿರೆ', 'ಐನೂರ್ವಾಚಾರಿಯ ಮಗ ಪಳಿಯಣನೆಂಬವನು ಗುಡಿಯ ಮೇಲೆ ಗೋಪುರವನ್ನು ಕಟ್ಟಿದನು. ದಕ್ಷಿಣಕಡೆಯ ದೇವಾಲಯವೂ ಆದರ ಮೇಲಣ ಗೋಪುರವೂ ಹತ್ತನೆಯ ಶತಮಾನದಲ್ಲಿ ಕಟ್ಟಿಸಿದವುಗಳು. ನವರಂಗಗಳ ಮುಂದಿರುವ ನಂದಿಮಂಟಪಗಳು ಹನ್ನೊಂದನೆಯ ಶತಮಾನದವೆಂದು ಹೇಳುತ್ತಾರೆ. ಮಿಕ್ಕ ಭಾಗಗಳೆಲ್ಲಾ ವಿಜಯನಗರದ ರಾಜರ ಕಾಲದಲ್ಲೋ ಅಥವಾ ಇನ್ನೂ ಈಚೆಗೋ ಕಟ್ಟಿದವುಗಳು.

ಭೋಗನಂದೀಶ್ವರ ದೇವಾಲಯದಲ್ಲಿ ಒಂದು ಗರ್ಭಗೃಹ, ಒಂದು ಸುಕನಾಸಿ ಮತ್ತು ಒಂದು ನವರಂಗ ಈ ಭಾಗಗಳಿವೆ. ಈಚೆಗೆ ನವರಂಗದ ಅಂಕಣಗಳಲ್ಲಿ ಒಂದನ್ನು ಕಿತ್ತು ಒಳಗೆ ಬೆಳಕುಬರುವುದಕ್ಕೋಸ್ಕರ ಗವಾಕ್ಷಿಯನ್ನು ಇಟ್ಟಿದ್ದಾರೆ. ಈ ನವರಂಗದ ಮಧ್ಯೆ ಇರುವ ನಾಲ್ಕು ಕಂಬಗಳ ನಾಲ್ಕು ಮುಖಗಳಲ್ಲಿಯೂ ವಿಗ್ರಹಾದಿಗಳು ಕೆತ್ತಲ್ಪಟ್ಟಿವೆ. ಭುವನೇಶ್ವರಿಯಲ್ಲಿ ಸುತ್ತಲೂ ಅಷ್ಟದಿಕ್ಪಾಲಕರ ವಿಗ್ರಹಗಳೂ ಮಧ್ಯದ ಫಲಕದಲ್ಲಿ ಪಾರ್ವತೀಪರಮೇಶ್ವರ ವಿಗ್ರಹವೂ ಇವೆ. ನವರಂಗದಲ್ಲಿ ಸುಮಾರು ಮೂರು ಅಡಿ ಎತ್ತರವಾಗಿ ಧ್ಯಾನಾಸನದಲ್ಲಿ ಬರಿಯ ತಲೆಯನ್ನು ಬಿಟ್ಟುಕೊಂಡು ಕುಳಿತಿರುವ ಒಂದು ವಿಗ್ರಹವಿದೆ. ಇದು ಚೋಳರಾಜನ



ಭೋಗನಂದೀಶ್ವರ ದೇವಾಲಯದ ಶಿಖರ.



ಉಮಾಮಹೇಶ್ವರ ದೇವಾಲಯದ ಹಿಂದೆ ಇರುವ ಪರದೆಗೋಡೆ

ವಿಗ್ರಹವೆಂದು ಹೇಳುತ್ತಾರೆ; ಆದರೆ ಯಾವ ಚೋಳರಾಜನೆಂಬುದು ಗೊತ್ತಾಗುವುದಿಲ್ಲ. ಇದಲ್ಲದೆ ಎರಡು ಕೈಗಳಲ್ಲೂ ಕಮಲಗಳನ್ನು ಹಿಡಿದುಕೊಂಡಿರುವ ಒಂದು ಸೂರ್ಯವಿಗ್ರಹವೂ ಇದೆ. ಗರ್ಭಗೃಹದ ಮೇಲೆ ಕಗ್ಗಲ್ಲಿನಿಂದ ಮಾಡಿದ ಸುಂದರಾಕಾರದ ಒಂದು ಗೋಪುರವೂ ಅದರ ಮೇಲೆ ಕರಿಯ ಕಲ್ಲಿನಲ್ಲಿ ಮಾಡಿದ ಒಂದು ಕಲಶವೂ ಇವೆ; ನಾಲ್ಕು ಮೂಲೆಯಲ್ಲಿಯೂ ಕರಿಯ ಕಲ್ಲಿನಿಂದ ಮಾಡಿದ ನಂದಿಗಳನ್ನು ಇಟ್ಟಿದೆ. ಗೋಪುರದ ನಾಲ್ಕು ಕಡೆಯ ಗೂಡುಗಳ ಮುಂದುಗಡೆ ಸುಮಾರು ಮೂರು ಮೂರು ಅಡಿ ಎತ್ತರವಾದ ನಾಲ್ಕು ಕರಿಯ ಕಲ್ಲಿನ ವಿಗ್ರಹಗಳಿವೆ. ಇವುಗಳಲ್ಲಿ ಪೂರ್ವದಿಕ್ಕಿನದು ಮೇಲಿನ ಎರಡು ಕೈಗಳಲ್ಲಿ ಅಂಕುಶ ಮತ್ತು ಹರಿಣಗಳನ್ನು ಹಿಡಿದುಕೊಂಡಿದೆ. ಕೆಳಗಿನ ಬಲಗೈಯನ್ನು ಪಕ್ಕದಲ್ಲಿರುವ ನಂದಿಯ ಬೆನ್ನಿನಮೇಲೆ ಇಟ್ಟುಕೊಂಡಿದೆ. ಎಡಗಯ್ಯು ಸೊಂಟದ ಮೇಲಿದೆ. ದಕ್ಷಿಣದಿಕ್ಕಿನದು ಮೇಲಿನ ಎರಡು ಕೈಗಳಲ್ಲಿ ತ್ರಿಶೂಲ ಕಪಾಲಗಳನ್ನು ಹಿಡಿದುಕೊಂಡಿದೆ; ಕೆಳಗಿನ ಬಲಗೈ ಅಭಯಮುದ್ರೆಯಲ್ಲಿದೆ; ಎಡಗೈ ಸೊಂಟದ ಮೇಲಿದೆ; ಈ ಮೂರ್ತಿಯ ಹಿಂದೆ ಪ್ರಭಾವಳಿ ಇದೆ. ಪಶ್ಚಿಮದಿಕ್ಕಿನದು ಮೂರು ತಲೆಯುಳ್ಳ ಮೂರ್ತಿ. ಇದರ ಮೇಲಿನ ಕೈಗಳಲ್ಲಿ ಚಕ್ರ ಕಮಂಡುಲುಗಳೂ, ಕೆಳಗಿನ ಬಲಗೈಯಲ್ಲಿ ಅಕ್ಷಮಾಲೆಯೂ ಇವೆ; ಎಡಗೈಯನ್ನು ಸೊಂಟದ ಮೇಲೆ ಇಟ್ಟುಕೊಂಡಿದೆ. ಉತ್ತರದಿಕ್ಕಿನದು ಮೇಲಿನ ಕೈಗಳಲ್ಲಿ ಶಂಖ ಚಕ್ರಗಳನ್ನೂ ಕೆಳಗಿನ ಕೈಗಳಲ್ಲಿ ಪದ್ಮಫಲಗಳನ್ನೂ ಹಿಡಿದುಕೊಂಡಿದೆ. ಇದರ ಎಡಪಕ್ಕದಲ್ಲಿ ಒಂದು ಹೆಣ್ಣು ವಿಗ್ರಹವೂ ಬಲಗಡೆ ಗಂಡು ವಿಗ್ರಹವೂ ಇವೆ.

ದಕ್ಷಿಣ ದೇವಾಲಯವು ಉತ್ತರ ದೇವಾಲಯದಂತೆಯೇ ಇದೆ. ಇದರಲ್ಲಿಯೂ ಗರ್ಭಗೃಹ ಸುಕನಾಸಿ ನವರಂಗಗಳೂ ಮುಂದೆ ಒಂದೇ ನಂದಿಮಂಟಪವೂ ಇವೆ. ಹಿಂದೆಯೇ ತಿಳಿಸಿರುವಂತೆ ಇಲ್ಲಿರುವ ಲಿಂಗಕ್ಕೆ ಅರುಣಾಚಲೇಶ್ವರನೆಂದು ಹೆಸರು. ಇದು ಮೊದಲು ವಿಷ್ಣುದೇವಾಲಯವಾಗಿ ಅದರಲ್ಲಿ ಶ್ರೀನಿವಾಸ ವಿಗ್ರಹವಿತ್ತೆಂದೂ ಅದು ಈಚೆಗೆ ಎಂದೋ ನಾಶವಾಗಿ ಅದರ ಸ್ಥಾನದಲ್ಲಿ ಲಿಂಗವು ಬಂತೆಂದೂ ಸ್ಥಳಿಕರಲ್ಲಿ ಒಂದು ಹೇಳಿಕೆಯಿದೆ. ಆ ವಿಷ್ಣುದೇವರಿಗಾಗಿ ಬಿಟ್ಟ ಒಂದು ಇನಾಮತಿ ಜಮೀನು ಈಗಲೂ ಅದರ ಹೆಸರಿನಲ್ಲಿಯೇ ಇರುವುದಾಗಿ ಹೇಳುತ್ತಾರೆ.

ನವರಂಗದ ಕಂಬಗಳು ಅಚಿತ್ರಿತವಾಗಿಯೂ, ಭುವನೇಶ್ವರಿಯು ಎರಡೇ ಎರಡು ದಿಕ್ಪಾಲಕರ ವಿಗ್ರಹಗಳುಳ್ಳದ್ದಾಗಿಯೂ ಇವೆ. ಇದನ್ನು ನೋಡಿದರೆ, ಈ ಭಾಗವು ಕಡವಿ ಕಟ್ಟಿದ್ದೆಂದು ಅನುಮಾನ ಹುಟ್ಟುತ್ತದೆ. ದಕ್ಷಿಣದೇವಾಲಯಕ್ಕೂ

ಉತ್ತರದಕ್ಕಿರುವಂತೆಯೇ ಮೇಲೆ ಕಲ್ಲಿನಿಂದ ಮಾಡಿದ ಗೋಪುರವಿದೆ; ಆದರೆ ಇದರ ಮೇಲ್ಭಾಗ ಮಾತ್ರ ಗಾರೆಹಾಕಿ ಈಚೆಗೆ ಕಟ್ಟಿದ್ದಾಗಿದೆ. ಈ ಗುಡಿಯ ನವರಂಗ ದಲ್ಲಿ ಸುಮಾರು ಮೂರು ಅಡಿ ಎತ್ತರವುಳ್ಳ ಒಂದು ವಿಚಿತ್ರವಾದ ಗಣಪತಿ ವಿಗ್ರಹ ವಿದೆ; ಇದಕ್ಕೆ ಸಿಂಹದ ಮುಖವೂ ತೆಳ್ಳಗಿರುವ ಒಂದು ಸೊಂಡಿಲೂ ಇವೆ.

ಈ ಗುಡಿಗಳ ಗೋಡೆಯ ಹೊರಮುಖದಲ್ಲಿ ಸಣ್ಣ ಕಂಬಗಳೂ ಗೋಪುರ ಗಳೂ ಕೊರೆದು ಮಾಡಿದ ರಂಧ್ರಗಳುಳ್ಳ ಕಿಟಿಕಿಗಳೂ ಅಲ್ಲಲ್ಲೇ ಕೆಲವು ವಿಗ್ರಹ ಗಳೂ ಇವೆ. ಬುಡದಲ್ಲಿ ಪ್ರಾಯಿಕವಾಗಿ ಆನೆ, ಯಾಳಿ, ಸಿಂಹಗಳನ್ನು ಬರೆಸಿ ಕೆತ್ತಿದ ಬೇಲುಗಳಿವೆ.

ಉತ್ತರ ದಕ್ಷಿಣದ ಎರಡು ನವರಂಗಗಳ ಹಿಂಗೋಡೆಗಳನ್ನೂ ಸೇರಿಸಿ ಕೊಂಡು ಎರಡು ದೇವಾಲಯಗಳ ಮಧ್ಯೆ ಪರದೆಯಂತೆ ಒಂದು ಗೋಡೆಯಿದೆ. ಇದ ರಲ್ಲಿ ಕೊರೆದು ಮಾಡಿದ ಜಾಲಂದ್ರದ ಎರಡು ಕಿಟಿಕಿಗಳಿವೆ. ಈ ಗೋಡೆಯು ಚಿತ್ರಿತ ವಾದ ಅರೆಗಂಬಗಳಿಂದ ಫಲಕಗಳಾಗಿ ವಿಭಾಗಿಸಲ್ಪಟ್ಟು, ಈ ಫಲಕಗಳಲ್ಲಿ ಎರಡು ಸಾಲು ವಿಗ್ರಹಗಳಿವೆ. ಮೇಲಿನ ಸಾಲಿನಲ್ಲಿ ಮಧ್ಯೆ ಪಾರ್ವತಿ ವಿಗ್ರಹವೂ ಎರಡು ಕಡೆಯೂ ಪರಿಚಾರಿಕೆಯರ ಮೂರ್ತಿಗಳೂ ಇವೆ. ಅಡಿಯ ಸಾಲಿನಲ್ಲಿ ಮಧ್ಯೆ ನಿಂತಿ ರುವ ವಿಘ್ನೇಶ್ವರ ವಿಗ್ರಹವೂ ಪಾರ್ಶ್ವಗಳಲ್ಲಿ ಕಾಲಭೈರವ ಮತ್ತು ಋಷಿಗಳ ವಿಗ್ರಹ ಗಳೂ ಇವೆ. ಈ ಪರದೆ ಗೋಡೆಯ ಮೇಲ್ಭಾಗದಲ್ಲಿ ನಾನಾ ಬಣ್ಣಗಳಲ್ಲಿರುವ ಸಣ್ಣ ನಂದಿ ವಿಗ್ರಹಗಳೂ ಅವುಗಳು ಹೊತ್ತುಕೊಂಡಿರುವ ಸಿಂಹ ಲಲಾಟಗಳ ಸಾಲೂ ಇವೆ. ಕೆಳಭಾಗದಲ್ಲಿ ಯಾಳಿಗಳು ಸಿಂಹಗಳು ಮತ್ತು ಆನೆಗಳು ಕೆತ್ತ ಲ್ಪಟ್ಟಿವೆ.

ಎರಡು ದೇವಾಲಯಗಳ ಮಧ್ಯೆ, ಈ ಪರದೆ ಗೋಡೆಯ ಮುಂದೆ, ಒಂದು ಸಣ್ಣ ಗುಡಿ ಇದೆ. ಇದಕ್ಕೆ ಉಮಾಮಹೇಶ್ವರಿಯ ಗುಡಿ ಎಂದು ಹೆಸರು. ಇದನ್ನು ಭೋಗನಂದೀಶ್ವರ ಉತ್ಸವವಿಗ್ರಹಗಳನ್ನು ಇಡುವುದಕ್ಕೆ ಉಪಯೋಗಿಸುತ್ತಿದ್ದಾರೆ. ಪ್ರದಕ್ಷಿಣೆ ಮಾಡುವವರ ಸೌಕರ್ಯಕ್ಕಾಗಿ ಈ ಗುಡಿಯ ಸುತ್ತಲೂ ಸುಮಾರು ಎರಡು ಅಡಿಯಷ್ಟು ಜಾಗವನ್ನು ಬಿಟ್ಟಿದ್ದಾರೆ. ಗೋಡೆಗಳ ಹೊರಮುಖದಲ್ಲಿ ಉದ್ದಕ್ಕೂ ಸುಮಾರು ಎರಡು ಅಡಿ ಎತ್ತರವಾದ ಬೇಲು ಇದೆ. ಇದರೊಳಗೆ ಗಿರಿಜಾ ಕಲ್ಯಾಣವೂ ಮೇಲ್ಗಡೆ ಒಂದು ಸಣ್ಣ ಹಂಸ ಪಂಕ್ತಿಯೂ ಕೆತ್ತಲ್ಪಟ್ಟಿವೆ.

ಉಮಾಮಹೇಶ್ವರ ಗುಡಿಯ ಮುಂದಿರುವ ರಂಗಮಂಟಪ ಅಥವಾ "ಕಲ್ಯಾಣ ಮಂಟಪ"ವು ಬಲು ಸೊಗಸಾದ ಕಲಾಕುಶಲತೆಯನ್ನು ಒಳಗೊಂಡದ್ದಾಗಿದೆ. ಈ

ದೇವಸ್ಥಾನದಲ್ಲೆಲ್ಲಾ ಇದೇ ಬಹು ಸ್ವಾರಸ್ಯವಾಗಿರುವ ಭಾಗ. ನಮ್ಮ ಸಂಸ್ಥಾನ ದಲ್ಲಿರುವ ದ್ರಾವಿಡರೀತಿಯ ಮತ್ತಾವ ದೇವಾಲಯದಲ್ಲೂ ಈ ಕೈವಾಡವೂ ನಯ ಗೆಲಸವೂ ಕಂಡುಬರುವುದಿಲ್ಲ. ಇದನ್ನು ಕಟ್ಟಿರುವುದು ಕರಿಯ ಕಲ್ಲಿನಲ್ಲಿ; ಕಂಬಗಳು ಬುಡದಿಂದ ತುದಿಯವರೆಗೆ ಕೆತ್ತನೆಯ ಕೆಲಸ ಮಾಡಿದವುಗಳಾಗಿವೆ. ಹಕ್ಕಿ ಮೃಗ ಲತೆ ಮತ್ತು ಮೂರ್ತಿಗಳು ಅಂದವಾಗಿ ಕೆತ್ತಿ ಬಿಡಿಸಲ್ಪಟ್ಟಿವೆ; ಈ ಮಂಟಪದೊಳ ಗಾಗಿ, ಹುಡುಕಿದರೂ, ಕೆತ್ತದೆ ಇರುವ ಜಾಗವು ಒಂದು ಅಂಗೈ ಅಗಲದಷ್ಟೂ ಸಿಕ್ಕುವ ಹಾಗಿಲ್ಲ. ಪ್ರತಿಯೊಂದು ಕಂಬದಲ್ಲಿಯೂ ಎರಡು ಮುಮ್ಮೊಗಗಳಲ್ಲಿ ಸುಮಾರು ಎರಡೂವರೆ ಅಡಿಯಷ್ಟು ಎತ್ತರವಾದ ಸ್ತ್ರೀಮೂರ್ತಿಗಳೂ, ಮಿಕ್ಕ ಎರಡು ಕಡೆ ಕಲಶಗಳೂ ಅವುಗಳಲ್ಲಿ ಲತೆಗಳೂ ಆ ಲತೆಗಳ ಮೇಲೆ ನಾನಾರೀತಿಗಳಲ್ಲಿ ಕುಳಿ ತಿರುವ ಹಕ್ಕಿಪಕ್ಷಿಗಳೂ ಇವೆ. ಸ್ತ್ರೀಮೂರ್ತಿಗಳ ಮಧ್ಯೆ ಪೂರ್ತಿಯಾಗಿ ಕೆತ್ತಿ ಕೆಲಸ ಮಾಡಿದ ಮತ್ತೊಂದು ಸಣ್ಣ ಕಂಬವಿದೆ. ಇವೆಲ್ಲವುಗಳೂ ಒಂದೇ ಕಲ್ಲಿನಲ್ಲಿ ಕೆತ್ತಿ ಮಾಡಿದವುಗಳಾಗಿವೆ. ಈ ಮಂಟಪದ ಯಾವ ಭಾಗವನ್ನು ತೆಗೆದುಕೊಂಡರೂ ಚಿತ್ರ ಕೆಲಸವೇ! ಇದನ್ನು ತಕ್ಕಂತೆ ವರ್ಣಿಸುವುದೆಂದರೆ ಅಸಾಧ್ಯವಾದ ಕೆಲಸ. ಇಲ್ಲಿಯ ಕೆತ್ತನೆಯಲ್ಲಿ ಪಕ್ಷಿಯು ಮುಖ್ಯ ವಸ್ತು''—ಕಂಬದಮೇಲೆ ಹಕ್ಕಿಗಳು; ಬೋದಿಗೆ ಮೇಲೆ ಹಕ್ಕಿಗಳು, ಭುವನೇಶ್ವರಿಯಲ್ಲಿ ಹಕ್ಕಿಗಳು; ಎಲ್ಲೆಲ್ಲಿ ನೋಡಿದರೂ ಹಕ್ಕಿಗಳೆ! ಯಾವುದಾದರೂ ಒಂದು ಭಾಗದಲ್ಲೆಲ್ಲಾ ಹೀಗೆ ಒಂದೇ ವಸ್ತುವನ್ನು ತುಂಬಿಬಿಟ್ಟಿರು ವುದು ಹೊಯಿಸಳ ರೀತಿಯಲ್ಲಿ ಕಂಡುಬರುವುದಿಲ್ಲ.

ಕಂಬಗಳ ಮೇಲೆ ಇರುವ ಭುವನೇಶ್ವರಿಯು ಸುಮಾರು ಐದು ಅಡಿ ಆಳವಾ ಗಿದೆ. ಇದರೊಳಗೆ ಒಂದು ಸಾಲಿನಲ್ಲಿ ವಾದ್ಯಗಳನ್ನು ಹಿಡಿದುಕೊಂಡು ನರ್ತಿಸು ತ್ತಿರುವ ವಿಗ್ರಹಗಳೂ, ಇನ್ನೊಂದರಲ್ಲಿ ಒಂದರಪಕ್ಕದಲ್ಲಿ ಒಂದರಂತೆ ಅಷ್ಟ ದಿಕ್ಪಾಲ ಕರು ಮತ್ತು ಶಿವಮೂರ್ತಿಗಳೂ ಇವೆ. ಮಧ್ಯದಲ್ಲಿ ಮೇಲಿನಿಂದ ಜೋತುಬಿದ್ದಿರುವ ಕಮಲವನ್ನು ನಾಲ್ಕು ಗಿಣಿಗಳು ಧರಿಸಿಕೊಂಡಿವೆ. ತೊಲೆಗಳ ಒಳಮುಖದಲ್ಲಿ ಈ ವಿಗ್ರಹಗಳು ಕೆತ್ತಲ್ಪಟ್ಟಿವೆ:—ಪಶ್ಚಿಮದಕಡೆ, ಗೌರೀಶಂಕರರು; ಉತ್ತರದಕಡೆ ಲಕ್ಷ್ಮೀನಾರಾಯಣರು; ಪೂರ್ವದಕಡೆ ಸ್ವಾಹಾದೇವಿಯೊಡನೆ ಇರುವ (ಎರಡು ತಲೆಯುಳ್ಳ) ಯಜ್ಞೇಶ್ವರ; ದಕ್ಷಿಣಕ್ಕೆ ಸರಸ್ವತಿ ಮತ್ತು ಬ್ರಹ್ಮ.

ಇದರ ಮುಂದೆ ಇರುವ ಮುಖಮಂಟಪದಲ್ಲಿ ಹನ್ನೆರಡು ಕರಿಯಕಲ್ಲಿನ ಕಂಬ ಗಳಿವೆ; ಇವುಗಳನ್ನು ನಯಮಾಡಿ ಸುತ್ತಲೂ ಚಿತ್ರಕೆಲಸಮಾಡಿದೆ. ಇವುಗಳೊಳಗೆ ಎಂಟರ ಮುಮ್ಮೊಖದಲ್ಲಿ ಸುಮಾರು ಮೂರುವರೆ ಅಡಿ ಎತ್ತರವಾಗಿ ನಿಂತಿರುವ ಸ್ತ್ರೀ

ವಿಗ್ರಹವಿದೆ. ಈ ವಿಗ್ರಹಗಳು ಅಂಗಾಂಗ ಸಾಮಂಜಸ್ಯ, ಆಕಾರ ಸೌಂದರ್ಯ, ಸ್ಪಷ್ಟವಾದ ರೂಪರೇಖೆಗಳು—ಇವೆಲ್ಲಾ ಚೆನ್ನಾಗಿವೆ. ಕಂಬಗಳ ಬುಡದ ಫಲಕಗಳಲ್ಲಿ ಪ್ರಾಯಿಕವಾಗಿ ಸಿಂಹಗಳೇ ಕೆತ್ತಲ್ಪಟ್ಟಿವೆ. ಮಿಕ್ಕ ಫಲಕಗಳಲ್ಲಿ ಕೆತ್ತಿರುವ ವಿಗ್ರಹಗಳು ಯಾವುವೆಂದರೆ—ಯೋಗನಾರಸಿಂಹ, ಮತ್ಸ್ಯಾವತಾರ, ವರಾಹಾವತಾರ, ನಟರಾಜ, ತಾಂಡವಗಣಪತಿ, ಬ್ರಹ್ಮ, ಸೈಕತಲಿಂಗವನ್ನು ಕೀಳುತ್ತಿರುವ ಆಂಜನೇಯ, ರಾಮಲಕ್ಷ್ಮಣರು, ಕಾಲಭೈರವ, ಉಮಾಮಹೇಶ್ವರ, ಪರಶುರಾಮ. ಕಂಬಗಳ ಮೇಲೆ ಮಂಟಪದ ನಾಲ್ಕು ಕಡೆಗಳಲ್ಲಿಯೂ ಒಂದು ಚಿತ್ರಪಟ್ಟಿಕೆ ಇದೆ. ಇದರಲ್ಲಿ ಪಾರ್ವತೀಪರಮೇಶ್ವರರು, ಪರಿವಾರ ದೇವತೆಗಳು, ಸಪ್ತಋಷಿಗಳು, ಸೂರ್ಯ, ತಾಂಡವೇಶ್ವರ ಮತ್ತು ಅವನ ಗಾಯಕ ಪರಿವಾರ, ಈ ಪರಿವಾರದಲ್ಲಿ ಬ್ರಹ್ಮವಿಷ್ಣುಗಳು. ಮುಖಮಂಟಪದ ಜಗಲಿಯಲ್ಲಿ ಕೆಳಗಡೆ ಆನೆಯ ಸಾಲು ಇದೆ. ಈ ಮಂಟಪವನ್ನು ನೋಡಿದರೆ ಈಚಿನದಾಗಿ ಕಾಣುತ್ತದೆ. ಅದನ್ನು ಸುಮಾರು ವಿಜಯನಗರದವರ ಕಾಲದಲ್ಲಿ ಕಟ್ಟಿರಬಹುದು.

ಈ ಮುಖಮಂಟಪದ ಮುಂದೆ ಇರುವ ಪಾತಾಳಾಂಕಣದ ಸುತ್ತಲೂ ಒಂದು ಬಯಲಾದ ಕೈಸಾಲೆ ಮಂಟಪವಿದೆ. ಇದನ್ನು ಚಿತ್ರಕೆಲಸಮಾಡಿದ ಜಗಲಿಯ ಮೇಲೆ ಕಟ್ಟಿದೆ. ಇದಕ್ಕೆ ಉತ್ತರ ಪೂರ್ವ ದಕ್ಷಿಣ ಈ ಮೂರು ಕಡೆಗಳಲ್ಲಿ ಹೋಗುವುದಕ್ಕೆ ಬಾಗಿಲುಗಳಿವೆ.

ಕಲ್ಲನ್ನು ಕೊರೆದುಮಾಡಿರುವ ಅನೇಕ ಕಿಟಿಕಿಗಳು ಈ ದೇವಸ್ಥಾನದ ಒಂದು ವಿಶೇಷಾಂಶವೆಂದು ಹೇಳಬಹುದು. ಇವುಗಳಿಂದ ಈ ಕಟ್ಟಡದಲ್ಲಿ ಒಂದೊಂದು ಭಾಗವು ಒಂದೊಂದು ಕಾಲದಲ್ಲಿ ಕಟ್ಟಿದ್ದೆಂದು ಗೊತ್ತಾಗುವಂತಿದೆ. ಎಲ್ಲಾ ಒಟ್ಟು ಇಂಥ ಕಿಟಿಕಿಗಳು ಉತ್ತರದ ಗುಡಿಯಲ್ಲಿ ನಾಲ್ಕು, ದಕ್ಷಿಣದ ಗುಡಿಯಲ್ಲಿ ನಾಲ್ಕು, ಇವೆರಡರ ಮಧ್ಯೆ ಇರುವ ಪರದೆಗೋಡೆಯಲ್ಲಿ ನಾಲ್ಕು—ಈರೀತಿಯಾಗಿ ಹತ್ತು ಇವೆ. ಇವು ದ್ರಾವಿಡರೀತಿಯ ಮಿಕ್ಕ ದೇವಾಲಯಗಳಲ್ಲಿ ಇರುವ ಜಾಲಂಧ್ರದ ಕಿಟಿಕಿಗಳಂತಿಲ್ಲ. ಇವುಗಳೊಂದೊಂದರಲ್ಲಿಯೂ ಸುಂದರವಾದ ಒಂದು ಅಥವಾ ಹೆಚ್ಚು ವಿಗ್ರಹಗಳಿದ್ದು, ಮಿಕ್ಕ ಜಾಗದಲ್ಲಿ, ಬೆಳಕು ಬರುವುದಕ್ಕೋಸ್ಕರ ರಂಧ್ರಗಳಿರುತ್ತವೆ. ಇವುಗಳಲ್ಲಿ, ಒಂದರೊಳಗೆ ತಾಂಡವೇಶ್ವರನೂ, ಎರಡರಲ್ಲಿ ಲತೆಗಳು ಮತ್ತು ನರ್ತಕಿಯರೂ, ಮೂರು ಬಳ್ಳಿಯ ಸುರುಳಿಗಳಲ್ಲಿಯೂ ಒಬ್ಬೊಬ್ಬ ಗಾಯಕನೂ ಇವೆ. ಮತ್ತೆರಡರಲ್ಲಿ ಲತೆಗಳೂ ನಾನಾ ಭಂಗಿಗಳಲ್ಲಿರುವ ವಾಮನರೂ ಇವೆ; ಒಂದರಲ್ಲಿ ನವಿಲಿನ ಮೇಲೆ ಕುಳಿತಿರುವ ಸುಬ್ರಹ್ಮಣ್ಯ ವಿಗ್ರಹವಿದೆ. ಮತ್ತೊಂದರಲ್ಲ ಕೋಣನ



ನಂದಿದೇವಾಲಯದಲ್ಲಿರುವ ಒಂದು ಕಲ್ಲಿನಜಲಮಾರ್ಗ.



ಅರುಣಾಚಲದೇವಾಲಯದಲ್ಲಿರುವ ಒಂದು ಜಾಲಂದ್ರದ ಕಿಟಿಕಿ.



ನಂದಿದೇವಾಲಯದಲ್ಲಿರುವ ಮುಖಮಂಟಪ ಮತ್ತು ಕಲ್ಲಿನ ಛತ್ರಿ.

ಮೇಲೆ ನಿಂತಿರುವ ಮಹಿಷಾಸುರ ಮರ್ದಿನಿಯ ವಿಗ್ರಹವಿದೆ. ಪರದೆ ಗೋಡೆಯ ಎರಡು ಕಿಟಿಕಿಗಳಲ್ಲಿ ಯಾಳಿಗಳ ಮೇಲೆ ನಿಂತಿರುವ ಪುರುಷವಿಗ್ರಹಗಳಿವೆ. ಇವೆಲ್ಲವೂ ಶುದ್ಧವಾಗಿಯೂ ಗಡುಸಾಗಿಯೂ ಇದ್ದರೂ ಒಂದೊಂದಕ್ಕೆ ಸ್ವಲ್ಪಸ್ವಲ್ಪ ವ್ಯತ್ಯಾಸ ವಿದ್ದೇ ಇರುತ್ತದೆ. ಈ ವ್ಯತ್ಯಾಸದ ಮೇಲೆ ಇಂಥಿಂಥವು ಇಂಥಿಂಥ ಕಾಲಕ್ಕೆ ಸೇರಿದ ವೆಂದು ಸ್ಥೂಲವಾಗಿ ಹೇಳಬಹುದು. ಹೇಗೆಂದರೆ, ಮಹಿಷಾಸುರಮರ್ದಿನಿಯ ಭಾವವೂ ಮಾಟವೂ 'ಚೋಳ' ವೆಂಬುದು ಸ್ಪಷ್ಟವಾಗಿದೆ.

ಅಮ್ಮನವರ ಗುಡಿಗಳು ಸ್ವಾಮಿಯ ಗುಡಿಯ ಹಿಂದೆ ಇವೆ—ಒಂದು ಪರದೆ ಗೋಡೆಯ ಎದುರಿಗೂ, ಇನ್ನೊಂದು ಪ್ರಾಕಾರಕ್ಕೆ ಸೇರಿದ ಹಾಗೆ ಸ್ವಲ್ಪ ಎಡಕ್ಕೂ ಇವೆ. ಪ್ರಸನ್ನ ಪಾರ್ವತೀ ವಿಗ್ರಹವು ಸುಮಾರು ಐದು ಅಡಿ ಎತ್ತರ ವಿರುವ ಸುಂದರ ಮೂರ್ತಿ. ಈ ಎರಡು ಗುಡಿಗಳ ಗೋಡೆಯ ಹೊರಮುಖದಲ್ಲಿಯೂ ಉಮಾಮಹೇಶ್ವರ ದೇವಾಲಯದಲ್ಲಿರುವಂತೆಯೇ, ಗಿರಿಜಾಕಲ್ಯಾಣವು ದೊಡ್ಡದೊಡ್ಡ ವಿಗ್ರಹಗಳಲ್ಲಿ ಕೆತ್ತಲ್ಪಟ್ಟಿದೆ.

ಪ್ರಧಾನ ದೇವಾಲಯದ ಉತ್ತರಕ್ಕೆ ಇರುವ ಎರಡನೆಯ ಪ್ರಾಕಾರದಲ್ಲಿ ಎರಡು ಮಂಟಪಗಳಿವೆ.—ಇವುಗಳಲ್ಲಿ ಒಂದಕ್ಕೆ ಅಲಂಕಾರ ಕೆಲಸವು ಹೆಚ್ಚು; ಇದಕ್ಕೆ "ವಸಂತಮಂಟಪ" ವೆಂದು ಹೆಸರು. ಇದಕ್ಕೆ ಹದಿನಾರು ಕಂಬಗಳಿವೆ; ಅವುಗಳಲ್ಲಿ ಕೊನೆಯವುಗಳಲ್ಲಿ ಮೂರು ಮೂರು ಸಣ್ಣ ಕಂಬಗಳೂ, ಮಧ್ಯದವುಗಳಲ್ಲಿ ಯಾಳಿಗಳೂ ಸಿಂಹಗಳೂ ಸವಾರರೂ ಇವೆ. ಇದರ ಎದುರಿಗೆ ನಾಲ್ಕು ಕಂಬದ ಇನ್ನೊಂದು ಮಂಟಪವಿದೆ. ಇದು ಸಣ್ಣದಾದರೂ ಎತ್ತರವಾಗಿದೆ. ಇದಕ್ಕೆ ತುಲಾ ಭಾರಮಂಟಪವೆಂದು ಹೆಸರು.

ಮೂರನೆಯ ಪ್ರಾಕಾರದ ಮಧ್ಯದಲ್ಲಿ—ಎರಡನೆಯದರಿಂದ ಉತ್ತರಕ್ಕೆ— "ಶೃಂಗಿತೀರ್ಥ" ವೆಂಬ ಚೌಕವಾದ ಒಂದು ದೊಡ್ಡ ಕೊಳವಿದೆ; ಇದರ ಕಟ್ಟಡವು ಚೆನ್ನಾಗಿದೆ; ದಕ್ಷಿಣಪಿನಾಕಿನೀ ನದಿಯು ಇಲ್ಲಿಂದ ಹುಟ್ಟುತ್ತದೆಂದು ಹೇಳುತ್ತಾರೆ.

ಮಹಾದ್ವಾರವು ಹದಿನಾರು ಅಡಿ ಎತ್ತರವೂ ಸುಮಾರು ಎಂಟು ಅಡಿ ಅಗಲವೂ ಆಗಿದೆ. ಇದಕ್ಕೆ ಎರಡು ಬಾಗಿಲುವಾಡಗಳಿವೆ. ಇವೆರಡಕ್ಕೂ ದ್ವಾರ ಪಾಲಕ ವಿಗ್ರಹಗಳೂ ಲತೆಯನ್ನು ಹಿಡಿದುಕೊಂಡಿರುವ ಸ್ತ್ರೀವಿಗ್ರಹಗಳೂ ಇವೆ.

ಈ ಕಟ್ಟಡವು ನಾನಾಕಾಲಗಳ ರೀತಿಯನ್ನು ಅನುಸರಿಸಿ ಕಟ್ಟಿದ್ದಾದರೂ, ಒಟ್ಟಿನಮೇಲೆ ಎಲ್ಲವೂ ಹೊಂದಿಕೊಂಡು ಸುಂದರವಾಗಿದೆ. ಕಟ್ಟಡಕ್ಕೆ ಮೇಲಿಂದ

ಮೇಲೆ ಹೊಸಹೊಸ ಭಾಗಗಳನ್ನು ಸೇರಿಸಿ ಕಟ್ಟುತ್ತ ಬಂದರೆ ಹೀಗೆ ಹೊಂದಿಕೊಳ್ಳು ವುದು ಅಪರೂಪ; ಇದು ಇತರ ಅನೇಕ ಕಡೆಗಳಲ್ಲಿ ನಿದರ್ಶನಕ್ಕೆ ಬಂದಿದೆ; ಅಂಥ ಕಡೆಗಳಲ್ಲಿ ಮೂಲ ಕಟ್ಟಡದ ಸೌಂದರ್ಯವು ಹೆಚ್ಚುವುದಕ್ಕೆ ಬದಲು ಹೋಗಿಬಿಟ್ಟಿರು ತ್ತದೆ. ಆದರೆ ಇಲ್ಲಿ ಹಾಗಿಲ್ಲ. ದೇವಾಲಯದ ಆಯಾಭಾಗಗಳೆಲ್ಲಾ ಹೊಂದಿಕೆ ಯಿಂದ ಸೇರಿ ಒಂದು ಸುಂದರವಾದ ಕಟ್ಟಡವಾಗಿ ಕಂಗೊಳಿಸುತ್ತಿದೆ. ದ್ರಾವಿಡ ರೀತಿಯ ದೇವಾಲಯಕ್ಕೆ ಉತ್ತಮವಾದ ಉದಾಹರಣೆ ಬೇಕಾದರೆ ಈ ದೇವಾಲಯ ವನ್ನು ನೋಡಬೇಕು !



ಹೇಮಕೂಟ ಬೆಟ್ಟದಮೇಲೆ ಇರುವ ದೇವಸ್ಥಾನಗಳು ಮತ್ತು ಶ್ರೀವಿರೂಪಾಕ್ಷದೇವಾಲಯ.

ಪಂಪಾಯಾತ್ರೆ.

ಹಂಪೆಯು ಪುಣ್ಯಕ್ಷೇತ್ರ; ಈ ಪುಣ್ಯಸ್ಥಳದಲ್ಲಿ ಇಷ್ಟು ಚೇಳು ಮೊಂಡರಕಪ್ಪೆಗಳು ಏಕಿವೆಯೊ ಆ ಪಂಪಾಪತಿಗೇ ಗೊತ್ತು. ಮೊಳದುದ್ದ ಮೊಂಡರಕಪ್ಪೆ, ಗೇಣುದ್ದ ಚೇಳುಗಳೆ? ಈ ಜನರಿಗೆ ಭಯವೇ ಇಲ್ಲ ವೇನೊ? ಅವರಿಗಂತೂ ಅದು ಸಾಮಾನ್ಯವಾಗಿಹೋಗಿದೆ. ಹೊಸದಾಗಿ ಅಲ್ಲಿಗೆ ಆ ದಿನ ತಾನೆ ಹೋಗಿದ್ದ ನಮಗೆ ಮೈಯೆಲ್ಲ ಬೈರಿಗೆ ಹಿಡಿದಂತೆ ಆಗಿಹೋಗಿತ್ತು. ಏಕಪ್ಪ ಇಲ್ಲಿಗೆ ಬಂದೆವು? ಕಾಮಲಾಪುರದ ಬಂಗಲೆ ಯಲ್ಲಿ ಇಳಿದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅನಿಷ್ಟವೇನಾ ದರೂ ಸಂಭವಿಸಿದರೆ ಗತಿಯೇನು? ಇವನನ್ನು ಬೇರೆ ಜೊತೆಯಲ್ಲಿ ಕರೆದು ಕೊಂಡು ಬಂದೆವಲ್ಲ—ಎಂದು ನನ್ನ ಜೊತೆಯವರು ಪಶ್ಚಾತ್ತಾಪ ಪಡುವು ದಕ್ಕೆ ಆರಂಭಿಸಿಬಿಟ್ಟಿದ್ದರು. ಅಲ್ಲಿದ್ದವರು, 'ಭಯವಿಲ್ಲ ಸ್ವಾಮಿ; ಒಂದೆ, ಮನಸ್ಸಿನಲ್ಲಿ ಮಲಗಿಕೊಳ್ಳಿ; ಪಂಪಪ್ಪನ್ನ ನಂಬಿ ನಿದ್ದೆಹೋಗಿ, ಅವು ಏನು ಮಾಡುತಾವೆ?' ಎಂದರು. ನಮಗೆ ಧೈರ್ಯವಿಲ್ಲ; ಜೀವದಲ್ಲಿ ಜೀವವಿಲ್ಲ. ಇಳಿದುಕೊಂಡಿದ್ದ ಚಿಕ್ಕಮನೆಯಿಂದ ಹಾಸುಗೆ ಬಟ್ಟೆಗಳನ್ನೆಲ್ಲ ಹೊರಗೆ ತೆಗೆದುಹಾಕಿ, ಬಟ್ಟೆಬಟ್ಟೆಯನ್ನೂ, ಕೋಟುಗಳ ಜೇಬುಗಳನ್ನೂ, ರುಮಾಲುಗಳ ಸಂದಿಪದರಗಳನ್ನೂ, ಮಡಿಪೆಟ್ಟಿಗೆಪಾರಾಯಣಪುಸ್ತಕಗಳ ಚೀಲವನ್ನೂ, ಒಂದೊಂದನ್ನಾಗಿ ಕೊಡವಿ, ಒದರಿ, ಚೇಳುಹಾವುಗಳಾ ವುವೂ ಇಲ್ಲವೆಂದು ನಿಶ್ಚಯಮಾಡಿಕೊಂಡು, ಎಲ್ಲವನ್ನೂ ಹೊತ್ತುಕೊಂಡು ದೇವಸ್ಥಾನದ ಒಳಮಂಟಪಕ್ಕೆ ತೆಗೆದುಕೊಂಡುಹೋಗಿ, ದೊಡ್ಡದೊಂದು ದೀಪದ ಬೆಳಕಿನಲ್ಲಿ ಒಬ್ಬರು ಕಾವಲು ಕುಳಿತೆವು. ಎದೆಯಲ್ಲಿ ಪುಕ ಪುಕ ಎಂದು ಭಯ. ದೀಪವಿದೆ; ಪಂಪಾಪತಿಯ ಅತಿನಿಕಟಸಾನ್ನಿಧ್ಯದಲ್ಲಿ ದ್ದೇವೆ; ಅವನು ನಡೆಸಿದಂತಾಗಲಿ ಎಂದು ಸಮಾಧಾನವನ್ನೂ ಧೈರ್ಯ ವನ್ನೂ ಹೇಳಿಕೊಂಡು ಮಲಗಬಾರದೆ? ಉಹುಂ. ಎಲ್ಲರೂ ಊಟಮಾಡೀ

ಹಾಸುಗೆಗಳನ್ನು ಒಬ್ಬರ ಪಕ್ಕದಲ್ಲಿ ಒಬ್ಬರು ಒತ್ತಾಗಿ ಹಾಸಿ ಮಲಗಿಕೊಂಡೆವು. ನಡುನಡುವೆ ಹೆಚ್ಚಾಗಿ ಜಾಗ ಬಿಡಕೂಡದೆಂದು ಕರಾರು ನಡೆದಿತ್ತು. ಆ ಒಪ್ಪಂದದಮೇರೆಗೆ ಒತ್ತೊತ್ತಾಗಿ ಮಲಗಿದೆವು. ನಮ್ಮ ಐವರ ತಲೆ ಭಾಗಗಳಿಗೆ ಮಧ್ಯೆ ದೀಪವೊಂದು ಉರಿಯುತ್ತಿತ್ತು. ಅದು ಹಾಗೆಯೇ ರಾತ್ರಿಯೆಲ್ಲ ಉರಿಯುತ್ತಿರಬೇಕೆಂದು ನಿರ್ಣಯಿತವಾಗಿತ್ತು. ಪಂಪಾಪತಿ ಹರಿಹರೇಶ್ವರನ ದಿವ್ಯ ಸನ್ನಿಧಿಯಲ್ಲಿ ಕೂಡ ಅಷ್ಟು ಪ್ರಕಾಶಮಾನವಾದ ' ಅಖಂಡದೀಪ ' ಇತ್ತೋ ಇಲ್ಲವೊ ತಿಳಿಯದು. ನಾವಂತೂ ಮೊದಲೆ ಎಚ್ಚರದಿಂದ ಇರಬೇಕೆಂದೂ, ಅಕಸ್ಮಾತ್ ಅನಿಷ್ಟ ಸಂಭವಿಸಿದರೆ ಏನು ಮಾಡಬೇಕೆಂದೂ ಷರತ್ತುಗಳನ್ನು ಮಾಡಿಕೊಂಡೇ ಇದ್ದೆವಲ್ಲ. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಕದಲುಮೆದಲದೆ, ಮುತ್ತಿಬರುವ ವಿಷಪ್ರಾಣಿಗಳ ಯೋಚನೆಯನ್ನು ಮನಸ್ಸಿನಿಂದ ಸರ್ವಪ್ರಯತ್ನದಿಂದಲೂ ದೂರಮಾಡುತ್ತ, ಸುಮಾರು ಕಾಲುಗಂಟೆಯ ಕಾಲ ಹಾಗೆಯೇ ಕಳೆದೆವು. ಥಟಕ್ಕನೆ ಮೂರ್ತಿಗಳು ಅಂಬಿನಂತೆ ಮೇಲಕ್ಕೆಗರಿ ನಿಂತು ಷರಟುಪಂಚೆಗಳನ್ನು ಕೊಡವಿಕೊಂಡರು. ಹಾಸುಗೆ ಬಟ್ಟೆಗಳನ್ನು ಕಾಲಿನಿಂದ ಒದೆದು, ಚೆಲ್ಲಾಡಿ, ನಮ್ಮ ಕಡೆ ಬಂದು ಎಲ್ಲರನ್ನೂ ಎಬ್ಬಿಸಿಬಿಟ್ಟರು. " ಏಳ್ರಿ ; ಏನೋ ಮೇಲೆಬಿತ್ತು ; ಹರಿದುಹೋಯಿತು ; ಮೈಯೆಲ್ಲ ತಣ್ಣಗಾದಂತಾಯಿತು " ಎಂದರು. ಅಧಿಕಾರಿಯ ಜೋಡಿನ ಸಪ್ಪಳವನ್ನು ಕೇಳಿ ತೂಕಡಿಸುವ ಗುಮಾಸ್ತರು ಬೆಚ್ಚಿಬಿದ್ದು ಏಳುವಂತೆ ಎಲ್ಲರೂ ಎದ್ದು ಬಟ್ಟೆಗಳಿಂದ ದೂರ ಸರಿದು ನಿಂತೆವು. ದೀಪವನ್ನು ಮೇಲೆತ್ತಿ ಒಬ್ಬರು ಹಿಡಿದುಕೊಂಡರು. ನಾವು ಮೂವರು ಸುಮ್ಮನೆ ಕಕ್ಕಾಬಿಕ್ಕಿಯಾಗಿ ನೋಡುತ್ತ ಕಿಂಕರ್ತವ್ಯಮೂಢರಾಗಿ ನಿಂತೆವು ; ನನ್ನ ಮೈಗೂದಲು ನಿಮಿರಿನಿಂತವು ; ಯಜಮಾನರು ಹತ್ತಿರವಿದ್ದ ಒಂದು ಗುಜ್ಜುಗೋಲನ್ನು ಹಿಡಿದುಕೊಂಡು ಬಂದರು. ಅದೇನೊ ಎಲ್ಲಿ ಹೋಯಿತೊ ಎಂದು ನಾಲ್ಕೂಕಡೆ ಹುಡುಕುವುದಕ್ಕೆ ಮೊದಲಾಯಿತು. ಯಾರಿಗೂ ಹಾಸುಗೆಗಳ ಹತ್ತಿರ

ಹೋಗಿ ಅವುಗಳನ್ನು ಮುಟ್ಟುವುದಕ್ಕೆ ಮಾತ್ರ ಧೈರ್ಯ ಇಲ್ಲ. ಯಜಮಾನರೇ ಮುಂದೆಬಂದರು; "ಬೇಡಿಸಾರ್, ಸ್ವಲ್ಪತಾಳಿ, ಏನೋ ಹೇಗೋ" ಎಂದು ನಾವು ನಾಲ್ವರೂ ಹೇಳಲು ಅವರು ಹಿಂದೆ ಸರಿದು ನಿಲ್ಲಬೇಕಾಯಿತು. ನಮ್ಮ ಈ ದುಸ್ಥಿತಿಯ ಹುಚ್ಚು ಸಂಭ್ರಮವನ್ನು ದೂರದಿಂದ ನೋಡಿದ ಬೈರಾಗಿ ಚೆನ್ನಯ್ಯನು ಅಲ್ಲಿಗೆ ಬಂದು ಎಲ್ಲವನ್ನೂ ಹುಡುಕಿದನು. ಎಲ್ಲಿಯೂ ಯಾವುದೂ ಕಾಣಲಿಲ್ಲ. ಹಾಸುಗೆಗಳನ್ನೆಲ್ಲ ಪುನಃ ಕೊಡವಲು, ಕತ್ತಲೆಯಲ್ಲಿ ಜಾಗ್ರತೆ ಜಾಗ್ರತೆಯಾಗಿ ನನ್ನಕಡೆಯೇ ಕಪ್ಪಗೆ ಹರಿದುಬರುತ್ತಿರುವ ಪ್ರಾಣಿಯೊಂದು ಕಾಣಿಸಿತು. ಚೆನ್ನಯ್ಯನು ನೋಡಿದನು. ಅದು ಚೇಳೂ ಅಲ್ಲ, ಹಾವೂ ಅಲ್ಲ: "ಏನು ಸ್ವಾಮಿ, ನಿಮಗೇಕೆ ಇಷ್ಟು ಗಾಬರಿ? ಜೇಡರ ಹುಳ ಬಂದರೆ ಹೀಗೆ ಹುಚ್ಚು ಕುಣಿತ ಷುರು ಮಾಡಿಬಿಟ್ಟಿದ್ದೀರಲ್ಲ" ಎಂದು ಚಪ್ಪಾಳೆ ಹೊಡೆದುಕೊಂಡು ಮೊಳಕಾಲು ಬಡಿದುಕೊಂಡು ನಗುವುದಕ್ಕೆ ಪ್ರಾರಂಭಿಸಿದನು. ಬೇರೊಂದು ಸಮಯದಲ್ಲಿ ಯಾರಾದರೂ ಈ ರೀತಿ ಮಾತನಾಡಿದ್ದರೆ ಅವರಿಗೆ ಗ್ರಹಚಾರ ಬಿಡಿಸಿಬಿಡುತ್ತಿದ್ದೆವು. ಇತರರಿಗೆ ಗ್ರಹಚಾರ ಬಿಡಿಸುವ ವಿಷಯದಲ್ಲಿ ನಮ್ಮಲ್ಲಿ ಯಾರಿಗೆ ಯಾರೂ ಕಡಿಮೆಯಾದವರಲ್ಲ. ನಮಗೆ ಆಗ ಕೋಪಬಂದರೂ ಅದನ್ನು ನುಂಗಿಕೊಂಡು ಅವನ ಜೊತೆಯಲ್ಲಿ—ವೀರಾಳುಗಳು—ನಾವೂ ನಗುತ್ತ ನಿಂತೆವು. ರಾಯರು ಇದ್ದವರು, "ಮೂರ್ತಿ, ಒಳ್ಳೆಯ ಕೆಲಸ ಕೊಟ್ಟಿರಿ ಕಣ್ರಿ; ಎಂಥ ದಿಗಲು ಹಚ್ಚಿಬಿಟ್ಟಿರಿ" ಎಂದರು. ಮೂರ್ತಿಗಳು "ನಾನೇನು ಸಾರ್ ಮಾಡಲಿ; ಏನೋ ಮೇಲೆ ಬಿತ್ತು; ಎಷ್ಟೋ ಹೊತ್ತು ನೋಡೋಣ ಎಂದು ಸುಮ್ಮನೆ ಇದ್ದೆ; ಮುಲ ಮುಲ ಎಂದು ಮೈಮೇಲೆ ಹರಿಯಿತು. ಆಮೇಲೆ ಇದೇನು ಬಂತಪ್ಪ ಗ್ರಹಚಾರ ಇಲ್ಲಿ ಮಲಗಿಕೊಂಡಿದ್ದರೂನೂ ಎಂದುಕೊಂಡವನು ಎದ್ದು ಬಿಟ್ಟೆ. ಈ ಜೇಡರ ಹುಳು ಆಗೋ ಹೊತ್ತಿಗೆ ಸರಿಹೋಯಿತೆ! ಇನ್ನೇನಾದರೂ ಆಗಿದ್ದಿದ್ದರೆ? ಈ ಹುಳು ತಾನೇ ನೋಡಿ ಸಾರ್, ಅಷ್ಟು

ದೊಡ್ಡದನ್ನು ಎಲ್ಲಿಯೂ ನೋಡಿಲ್ಲ ನಾನು, ಎಂದರು. ಯಜಮಾನರು "ಎಲ್ಲರೂ ಸರಿಯೆ ಬಿಡಿ, ಅಸಹಾಯ ಶೂರರು. ನಮಗೆಲ್ಲ ಇಷ್ಟು ಧೈರ್ಯ ಇರುವ ಹೊತ್ತಿಗೇ ನಮ್ಮ ದೇಶೋದ್ಧಾರಕಾರ್ಯ ಈ ಗತಿಗೆ ಬಂದದ್ದು" ಇತ್ಯಾದಿಯಾಗಿ ಒಂದು ದೊಡ್ಡ ಉಪನ್ಯಾಸವನ್ನೆ ಕೊಟ್ಟು ಬಿಟ್ಟರು. ಇಷ್ಟಾದಮೇಲೂ ನಮ್ಮ ಕಷ್ಟನಿವಾರಣೆಯಾಗಲಿಲ್ಲ; ನಮ್ಮ ಪಿರಿಕಿತನ ದೂರವಾಗಲಿಲ್ಲ.

"ಹಾಸುಗೆ ಗೀಸುಗೆ ಹಾಗೇ ಇರಲಿ, ಸಾರ್, ನೀವು ಯಾರು ಏನು ಬೇಕಾದರೂ ಮಾಡಿಕೊಳ್ಳಿ; ನಾನಂತೂ ಮಲಗಿಕೊಳ್ಳುವುದಿಲ್ಲ." ಎಂದು ವೆಂಕಟೇಶಯ್ಯನವರು ಹೇಳಿಬಿಟ್ಟರು.

ಯಜ—ಇನ್ನೇನು ಮಾಡುತ್ತೀರಿ, ಆದರೆ?

ವೆಂ—ಹೀಗೇ ಕೂತುಕೊಂಡೋ, ನಿಂತುಕೊಂಡೋ, ರಾತ್ರಿ ದಬ್ಬುತ್ತೇನೆ.

(ನಮಗೆ ನಕ್ಕುನಕ್ಕು ಸಾಕಾಯಿತು.)

ರಾಯರು—ನನಗೂ ಹಾಗೇ ತೋರುತ್ತೆ, ಸಾರ್; ದೇವರು ಗೀವರು ಎಲ್ಲ ಸಾಕು. ಚೇಳಿನ ಕೊಂಡಿಯ ದರುಶನದಿಂದಲೆ ಮುಕ್ತಿಬಂದು ಬಿಟ್ಟಿತು. ಬೆಳಗಾಗುತ್ತಲು ಇಲ್ಲಿಂದ ಹೊರಟು ಊರಿಗೆ ಹೋಗಿ ಬಿಡೋಣ; ಇಲ್ಲಿರುವುದಕ್ಕೆ ನನ್ನಕೈಲಿ ಸುತರಾಂ ಆಗುವುದಿಲ್ಲ. ಬೆಳಗ್ಗೆ ನೋಡಿದ್ದೇ ಸಾಕು. ಈಗಲೆ ಮೂಟೆಕಟ್ಟಿ ಹೊರಡು ಅಂದರೂ ನಾನು ಸಿದ್ಧ.

ಆಗ ಸುಮಾರು ನಮ್ಮಲ್ಲಿ ಎಲ್ಲರಿಗೂ, ವಿಶೇಷವಾಗಿ ಐವರಲ್ಲಿ ಮೂವರಿಗೆ, ಅದೇ ಭಾವನೆ—ಒಳಗೆ ಮನಸ್ಸಿನಲ್ಲಿ; ಆದರೆ "ಇಷ್ಟು ದೂರ ಬಂದು ಪಂಪಾಸರೋವರ, ವಿಟ್ಠಲಸ್ವಾಮಿ ಗುಡಿ, ಇವುಗಳನ್ನು ನೋಡಿ ಕೊಂಡು ಹೋಗದಿದ್ದರೆ ಏನಪ್ಪ" ಎಂದು ಮುಂತಾಗಿ ಮಾತು ಬೆಳೆ ಯಲು "ಬೆಳಗಾಗಲಿ; ಯಾವುದೊಂದೂ ತೀರ್ಮಾನಮಾಡೋಣ. ಈಗ ಸಮಯ ಚೆನ್ನಾಗಿಲ್ಲ" ಎಂದು ಎಲ್ಲರೂ ಮನಸ್ಸು ಬಿಗಿಹಿಡಿದು

ಪುನಃ ಹಾಗೂ ಹೀಗೂ ಧೈರ್ಯಮಾಡಿ ಮಲಗಿಕೊಂಡೆವು. ಭಯದ ತೀವ್ರತೆಯು ಕಡಿಮೆಯಾಗಿ, ಅದು ಮರೆತುಹೋಗುವಂತೆ ಏನೇನೋ ಬೇರೆ ಪ್ರಸ್ತಾಪಗಳನ್ನೆತ್ತಿ ಮಾತನಾಡುತ್ತ ಒಬ್ಬೊಬ್ಬರಾಗಿ ನಿದ್ರಾವಶರಾದೆವು. ನಾನಂತೂ "ಕೋಳಾಲಮ್ಮ" ನಿಗೆ ಹರಸಿಕೊಂಡು ನಿರ್ಭಯದಿಂದ ನಿದ್ರೆಮಾಡಿದೆ. ಮಧ್ಯಾಹ್ನದ ಸುತ್ತುವಿಕೆಯಿಂದ ಆಯಾಸವಾಗಿದ್ದುದರಿಂದ ಎಲ್ಲರಿಗೂ ಚೆನ್ನಾಗಿಯೇ ನಿದ್ರೆಹತ್ತಿತೆಂದು ಹೇಳಬೇಕು. ಮುಖ್ಯ ಪಂಪಾಪತಿಯ ಅನುಗ್ರಹ; ಯಾರಿಗೂ ವಿಷಪುಚ್ಛದಂಶನವಾಗಲಿಲ್ಲ...

ಬೆಳಗ್ಗೆ ಏಳುವ ಹೊತ್ತಿಗೆ ಏಳು ಗಂಟೆಗಳ ಮೇಲಾಗಿತ್ತು. ರಾತ್ರಿಯೆಲ್ಲ ಬಲವಾಗಿ ಮಳೆ ಬಂದಿದ್ದುದರ ಪ್ರಜ್ಞೆಯೇ ನಮ್ಮಲ್ಲಿ ಯಾರಿಗೂ ಇಲ್ಲ. ಎದ್ದವರು ಸ್ನಾನಾದಿಗಳನ್ನು ತೀರಿಸಿಕೊಂಡು ಬರುವೆವೆಂದು ನದಿಯಕಡೆ ಹೋಗಿ ನೋಡಿದರೆ ನದಿಯು ೫-೬ ಅಡಿಗಳಷ್ಟು ಮೇಲೆ ಬಂದಿತ್ತು. ಪ್ರವಾಹ ಇನ್ನೂ ಹೆಚ್ಚುತ್ತಲೇ, ನದಿಯ ದಡವು ಕುಸಿದು ಬೀಳುತ್ತಲೇ ಇತ್ತು. ಪ್ರವಾಹದ ಜೋರು ಜಾಸ್ತಿಯಾಗಿದ್ದುದರಿಂದ ಯಾರೂ ಅಲ್ಲಿ ಸ್ನಾನಮಾಡದೆ, ದೇವಸ್ಥಾನದ ಒಳಗಣ ಭಾವಿಯಲ್ಲಿಯೇ ಸ್ನಾನಾಚಮನಗಳನ್ನು ತೀರಿಸಿಕೊಂಡೆವು. ಆ ನೀರೋ, ಎಷ್ಟು ಸೊಗಸಾಗಿ ಎಷ್ಟು ಪವಿತ್ರವಾಗಿ ಇತ್ತೊ! ನಮಗೆ ನೀರು ಸೇದುವ ಕಷ್ಟ ತಪ್ಪಲೆಂದು ೪-೫ ಆಳುದ್ದ ಆಳದ ಭಾವಿಯು ನಮ್ಮ ಕೈಗೆ ಎಟುಕುವಂತೆ ಮೇಲೆ ಬಂದಿತ್ತು. ಹಂಡೆಯಿಂದ ನೀರು ತುಂಬಿಕೊಂಡು ಸ್ನಾನಮಾಡುವಂತೆ ಆ ನೀರನ್ನು ತುಂಬಿಕೊಂಡು ಸ್ನಾನಮಾಡಿದೆವು. ನಮ್ಮ ವಿಷಯದಲ್ಲಿ ನಿರ್ಜೀವ ವಸ್ತುಗಳಿಗೂ ಅಷ್ಟು ಮಮತೆ, ಕರುಣೆ!

ಯಜಮಾನರು ಬಹಳ ನಿಷ್ಠರು; ಅವರಿಗೆ ಕಾಫಿಟೀಗಳ ಅಭ್ಯಾಸವಿಲ್ಲ. ನಾನು ಎಷ್ಟೋ ಕಷ್ಟಪಟ್ಟು ಉರಿಯುವ ಬಿಸಿಲಿನಲ್ಲಿ ಅಂಗಡಿಗೆ ಓಡಿಹೋಗಿ ಹೊಸಪೇಟೆಯಿಂದಲೆ ಒಂದು ಪೌಂಡು ಪುಡಿಯನ್ನು ತಂದಿದ್ದೆ. ಹಿಂದಿನ ದಿನದ ಅವಸರದಲ್ಲಿ ಕಾಫಿ ಮಾಡಿಕೊಂಡು ಕುಡಿದು ಹೋಗುವು

ದಕ್ಕೆ ಆಗಿರಲಿಲ್ಲ. ಅದರ ದುಷ್ಫಲಗಳು ಎಷ್ಟು ಮಹತ್ತರವಾದುವೆಂಬುದು ಯಜಮಾನರಿಗೆ ಆ ಮಧ್ಯಾಹ್ನ ತಿಳಿದುಬಂದಿತ್ತು. ಬಿಸಿಲು ಬಾಯಾರಿಕೆಗಳಿಂದ ದಣಿದು, ಕಂಗೆಟ್ಟು ಎಳೆಯ ಅಶ್ವತ್ಥಪತ್ರಗಳಂತೆ ಬಾಡಿ, ಹಜಾರ ರಾಮಸ್ವಾಮಿದೇವಸ್ಥಾನದ ಹೊರಹಜಾರದಲ್ಲಿ ತಂಪಾಗಿ ಮಲಗಿ ಮೂರು ಗಂಟೆಗಳಕಾಲ ನಿದ್ರೆ ಮಾಡಿಬಿಟ್ಟಿದ್ದುದು ಅವರ ನೆನಪಿನಲ್ಲಿದ್ದಿತು. 'ನಿಮಗೆ ಬೇಕಾದಷ್ಟು ಕಾಫಿ ಮಾಡಿಕೊಂಡು ಕುಡಿಯಿರಪ್ಪ. ಆಮೇಲೆ ಮುಖಗಳನ್ನು ಪೇಟೇಲು ಕಮಾನುಗಳಷ್ಟು ಉದ್ದ ಎಳೆದು ಜೋಲುಹಾಕಬೇಡಿ' ಎಂದು ಅವರು ಹೇಳಿದರು. ವಸಂತಕುಸುಮಗಳ ಹಾಗೆ ನಮ್ಮ ಮುಖಕುಸುಮಗಳು ಅರಳಿ ಹಿಗ್ಗಿದವು...ಹಂಪೆಯ ಕಾಫಿಯು ಎಷ್ಟು ರುಚಿಯಾಗಿತ್ತೊ! ದೇವತೆಗಳು ಕುಡಿವ ಅಮೃತವು ಅತಿ ಮಧುರವಾದುದೆಂದು ಹೇಳುತ್ತಾರೆ. ಅವರಾರಾದರೂ ಹಂಪೆಗೆ ನಮ್ಮಲ್ಲಿಗೆ ಇಳಿದು ಬಂದಿದ್ದು ನಾವು ಕುಡಿದ ಕಾಫಿಯಲ್ಲಿ ಒಂದು "ಅರ್ಧ ಕಪ್" ಕುಡಿದಿದ್ದರೆ, ಅವರು ಅಮೃತ ಪಾತ್ರೆಗಳನ್ನು ಅಧೋಲೋಕದ ಅತಲಜಲದೊಳಕ್ಕೆ ಬೀಸಾಟು ಕಾಫಿಯ ಅಭ್ಯಾಸವನ್ನು ಖಂಡಿತವಾಗಿ ಮಾಡಿಬಿಡುತ್ತಿದ್ದರೆಂದು ನಾನು ಶಪಥಮಾಡಿ ಹೇಳಬಲ್ಲೆನು.

ನಮ್ಮ ಹಂಪೆಯ ಯಾತ್ರೆಯಲ್ಲಿ ದಾರಿಯುದ್ದಕ್ಕೂ ಯಜಮಾನರೇ ನಮಗೆ ಅನ್ನದಾತರು ; ಅವರು ಪರಸ್ಥಳಗಳಲ್ಲಿ ಇತರರ ಕೈಯಲ್ಲಿ ಊಟ ಮಾಡುವವರಲ್ಲ. ಅಡಿಗೆಗೆ ಬೇಕಾದ ಸಮಸ್ತ ಸಂಭಾರದ ಸಾಮಾನುಗಳನ್ನೂ, ಉಪ್ಪು ಊಟದೆಲೆ ಮೊದಲುಗೊಂಡು ಎಲ್ಲವನ್ನೂ ತಂದಿದ್ದರು. ಏಕೆ ಇಲ್ಲದ 'ಕಾಪ್ಟಾವ್ಯಸನ' ಗಳನ್ನು ಇವರು ಇಟ್ಟುಕೊಳ್ಳುವರೊ! ಎಲ್ಲಿ ಹೋದರೂ ಈ ಹಾಳು ಸಂಸಾರವನ್ನು ಹೊತ್ತುಕೊಂಡು ಹೋಗುವರಲ್ಲ ; ಹೋಗುವ ಕಡೆ ಹೇಗೋ ಹಾಗೆ ಸುಲಭವಾಗಿ ತಿಂಡಿ ತೀರ್ಥಗಳಿಗೆ 'ಸರಿ ನೋಡಿ' ಕೊಂಡು ಹೋಗಬಾರದೆ? ಎಂದು ನಾವು ಅಂದುಕೊಳ್ಳುತ್ತಿದ್ದೆವು. ನಾವು ಈಗಿನ ಕಾಲದವರು : ಹೇಗೆ

ಬೇಕೆಂದರೆ ಹಾಗೆ ಹೊಂದಿಕೊಂಡು ಹೋಗಲು ಬಲ್ಲವರು ; ನಮಗೆ ವ್ರತವಿಲ್ಲ ; ನಿಷ್ಠೆಯಿಲ್ಲ ; ಆಚಾರವಿಲ್ಲ ;—ಊಟ ಉಪಚಾರಗಳಲ್ಲಿ 'ಯಗ್ಗಿ' ಲ್ಲ. ಹೋಟಲುಗಳಿರುವ ಕಡೆ ಹೋಗಿ ಊಟಮಾಡಿಬಿಡುವೆವು. ತಿಂಡಿಗಿಂಡಿ-ಅವು ಹೇಗಾದರೂ ಇರಲಿ—ಮಾಡುವವರು ಬ್ರಾಹ್ಮಣರಾಗಿಬಿಟ್ಟರೆ ಸರಿ—ಹೋಗಿ ತಿಂದುಬಿಡುವೆವು. ಆನಂದಭವನಗಳಲ್ಲಿ ತಿನ್ನುವ ನಮಗೆ ಎಲ್ಲಾದರೇನು ಸ್ವಾಮಿ, ಬೊಂಬಾಯಾದರೂ ಇಂಗ್ಲೆಂಡಾದರೂ—ನಿಕರಾಗುವ ಆಗಲೇಳಿ—ಎಲ್ಲಾದರೂ ಯೋಚನೆ ಇಲ್ಲ. ಅವರಿಗೆ ಹಾಗಲ್ಲ. ಆದರೆ ಹಂಪೆಯಲ್ಲಿ ಹೋಟಲೆಲ್ಲಿಂದ ತರಬೇಕು ? ಯಜಮಾನರಂಥವರು ಕೃಪೆತೋರಿ ಅನ್ನಮಾಡಿಹಾಕದಿದ್ದರೆ ನಮಗೆ ಎಡ ಮಗ್ಗುಲೆ ? ನಾವು ಮಾಡಿಕೊಂಡು ತಿನ್ನುವ ಸಂಭವವುಂಟೆ ? ನಮ್ಮಲ್ಲಿ ಎಲ್ಲರೂ ಧೀರರೇಯೆ—ಎಲ್ಲರೂ ಪಾಕಶಾಸ್ತ್ರ ಪ್ರವೀಣರೇಯೆ. ಆದರೆ ಮೈಬಗ್ಗಿಸಿ ಅಡಿಗೆಮಾಡುವುದಕ್ಕೆ ಕೂಡುವುದು ಯಾರ ಕೈಯಲ್ಲೂ ಆಗುತ್ತಿರಲಿಲ್ಲ. ನಾವು ನಾವೇ ಆಗಿದ್ದರೆ ಅಲ್ಲೆ ವಾಸವಾಗಿದ್ದ ಮುದುಕಿಯೊಬ್ಬರಿಗೆ ಹೇಳಿ, ಬೇಕಾದ ಸಾಮಾನುಗಳನ್ನು ತಂದುಹಾಕಿ ಅಡಿಗೆ ಮಾಡಿಸಿ ತಿಂದುಬಿಡುತ್ತಿದ್ದೆವು. ವಿಚಾರಿಸಿದುದರಲ್ಲಿ ನನಗೆ ಅವರು ೪-೫ ತಲೆಹಿಂದಿನ ಸಂಬಂಧವೆಂದೂ ತಿಳಿಯಿತು. ಈಗಿನ ಕಾಲದವರು ನಾವು ಧೀಮರು ; ನಮಗೆ ಯಾವ ವಿಧವಾದ ನಿರ್ಬಂಧವೂ ಸಹಿಸದು. ನಾವು ಸುಖಪಡಬೇಕೆನ್ನುವ ರೀತಿಯೇ ಬೇರೆ ; ವಿಧಗಳೇ ಬೇರೆ. ಪೂರ್ವಕಾಲದ ಹಿರಿಯರ ರೀತಿ ನಡೆವಳಿಗಳೇ ಬೇರೆ.

ಅದು ಹಾಗಿರಲಿ. ಯಜಮಾನರೇನೋ ಶುಚಿಯಾಗಿ, ರುಚಿಯಾಗಿ, ಎಲ್ಲರಿಗೂ ಅಡಿಗೆಮಾಡಿ ಹಾಕಿಬಿಡುತ್ತಿದ್ದರು. ನಮಗೆ ಬೇಸರವೆಂದು ತೋರಿದರೆ ಮಿಕ್ಕ ಎಲ್ಲ ಕೆಲಸಗಳನ್ನೂ ತಾವೇ ಮಾಡಿಬಿಡುವರು. ಆದರೆ ಎಲ್ಲ ಕೆಲಸಗಳನ್ನೂ ಅವರಿಂದಲೆ ಮಾಡಿಸುವುದು ನಮಗೆ ಧರ್ಮವೆ ? ಮರ್ಯಾದೆಯೆ ? ಎಂದುಕೊಂಡವರು ಚಿಲ್ಲರೆ ಕೆಲಸಗಳೊಂದೊಂದನ್ನೂ

ನಾವು ಒಬ್ಬೊಬ್ಬರು ಮಾಡುತ್ತಿದ್ದೆವು. ಕಸಗುಡಿಸುವುದು, ನೆಲಸಾರಿಸುವುದು, ಹುಳಿಹಚ್ಚಿ ದಿನಕ್ಕೆ ಎಂಟುಸಲ ಪಾತ್ರೆ ತೊಳೆಯುವುದು, ಬೂದಿ ಇಟ್ಟಿಗೆಪುಡಿಗಳಿಂದ ಮುಸುರೆ ತಿಕ್ಕುವುದು, ಇಂಥ ಕೆಲಸಗಳು ಮಾಡಿದಷ್ಟೂ ಇರಲೇ ಇರುತ್ತಿದ್ದವಾದುದರಿಂದ ಒಬ್ಬರಲ್ಲದಿದ್ದರೆ ಒಬ್ಬರು ಇವುಗಳಲ್ಲಿ ಇರುತ್ತಲೆ ಇದ್ದರು. ಏನು ಕೆಲಸಗಳಪ್ಪ ಇವು, ಎಂದು ಗುಡಿಸುತ್ತ ಗುಡಿಸುತ್ತ ಸೊಂಟದಮೇಲೆ ಕೈಯಿಟ್ಟುಕೊಂಡು ಒಬ್ಬರ ಮುಖವನ್ನೊಬ್ಬರು ನಿಸ್ತೇಜರಾಗಿ ನೋಡುತ್ತ, ಅರ್ಧ ಆರಿಹೋಗುವಂತಿರುವ ದೀಪದಂತೆ ನಗುತ್ತ, ಭಗವಂತನ ವಿಚಿತ್ರಸೃಷ್ಟಿಯಲ್ಲಿನ ಈ ದಿನಚರಿಯ ಕರ್ಮಗಳನ್ನು ಕುರಿತು ಚಿಂತಿಸುತ್ತಲೂ, ವಿಧಿಯು ತಮ್ಮನ್ನು ಆ ಸ್ಥಿತಿಗೆ ತಂದುದಕ್ಕೆ ತಮ್ಮನ್ನೂ ವಿಧಿಯನ್ನೂ ಒಟ್ಟಿಗೆ ದೂಷಿಸಿಕೊಳ್ಳುತ್ತಲೂ, ಇರುವುದನ್ನು ನೋಡಿದ್ದರೆ ಯಾರಾದರೂ ಕಣ್ಣೀರು ಹಾಕುತ್ತಿದ್ದರು. ಆದರೆ ಏನು ಮಾಡುವುದು ? ಕರ್ತವ್ಯಕರ್ಮ. ನಮ್ಮ ಪ್ರಾಪಂಚಿಕ ಜೀವನದಲ್ಲಿ ಈ ತೆರದ ಕರ್ಮಗಳೇ ಹೆಚ್ಚು. ಅದೂ ಅಲ್ಲದೆ ನಮಗೋಸ್ಕರವಾಗಿ ಅಷ್ಟು ದುಡಿಯುತ್ತಿರುವ ೬೦ ವರುಷ ವಯಸ್ಸಿನ ಸಾತ್ವಿಕ ಯಜಮಾನರಿಗೆ ಅಸಮಾಧಾನವಾಗದಿದ್ದರೆ ಸಾಕು ಎಂಬುದೊಂದೂ ಆಶಯ ; ಹಂಪೆಯಲ್ಲಿ ಇತರಕಡೆ ಊಟಉಪಚಾರಗಳನ್ನು ಮಾಡುವುದು ಅಪಾಯಕರವೆಂದೂ ನಾವು ಕೇಳಿದ್ದೆವು. ಆದುದರಿಂದ ನಮ್ಮ ಕರ್ತವ್ಯನಿಷ್ಠೆಯು ಇನ್ನೂ ಬಲವತ್ತರವಾಗುತ್ತಿತ್ತು. ಒಂದೊಂದುಸಲ ಮಾತ್ರ ಆ ಕೆಲಸಗಳನ್ನು ಮುಗಿಸಿಕೊಂಡು ಹೊರಗೆ ಬಂದರೆ ಪ್ರತಿಯೊಬ್ಬರೂ ಹಣೆಹಣೆ ಬಡಿದುಕೊಳ್ಳುತ್ತ ವಿಕಟವಾಗಿ ನಗುತ್ತಿದ್ದುದನ್ನು ನೆನೆದುಕೊಂಡರೆ ಈಗಲೂ ಅಳುಬರುವಂತಾಗುತ್ತದೆ. '' ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ''

ಕಾಫಿಗೆ ಅನುಕೂಲಮಾಡಿಕೊಟ್ಟು ಯಜಮಾನರು ನಮ್ಮನ್ನು ಸುಪ್ರಸನ್ನರನ್ನಾಗಿ ಮಾಡಿದ್ದುದರಿಂದ ಆದಿನ ಪಂಪಾಸರೋವರವನ್ನು ನೋಡಿಕೊಂಡುಬಂದು ಸಾಯಂಕಾಲ ಬಂಗಲೆಗೆ ಹೊರಟುಹೋಗುವು

ದೆಂದು ನಿಷ್ಕರ್ಷೆಯಾಯಿತು. 'ಅದೆಷ್ಟು ದೂರವಿದೆಯೊ? ಅಲ್ಲಿಂದ ಹಿಂದಿರುಗಿ ಬರುವುದಕ್ಕೆ ಎಷ್ಟು ಹೊತ್ತು ಹಿಡಿಯುವುದೋ? ಆಮೇಲೆ ಎಲ್ಲಿಯ ಅಡಿಗೆ? ಎಲ್ಲಿಯ ಊಟ? ತುಂಬ ಅನಾನುಕೂಲವಾಗುವುದು' ಎಂದುಕೊಂಡವರು ಅಡಿಗೆ ಊಟಗಳನ್ನು ತೀರಿಸಿಕೊಂಡೇ ಹೊರಡುವುದೆಂದು ನಿಷ್ಕರ್ಷೆಯಾಯಿತು. ಅವು ಮುಗಿಯುವಹೊತ್ತಿಗೆ ೧೧ ಗಂಟೆಯಾಯಿತು. ಬೇಸಗೆಯ ಬಿಸಿಲು. ಅದರಲ್ಲಿಯೂ ಹಂಪೆಯಲ್ಲಿ. ಆ ಮಟಮಟಮಧ್ಯಾಹ್ನದಲ್ಲಿ ಹೊರಡುವುದಕ್ಕೆ ಮುಂಚೆಯೇ ಮುಸುರೆಪಾತ್ರೆಗಳನ್ನೆಲ್ಲ ತೊಳೆದು ಸಾಯಂಕಾಲ ಬಂಗಲೆಗೆ ಹೊರಡುವುದಕ್ಕೆ ಎಲ್ಲವನ್ನೂ ಸಿದ್ಧಮಾಡಿಟ್ಟು ಹೋಗಬೇಕೆಂದು ಯಜಮಾನರು ಸ್ವಲ್ಪ ಒತ್ತಿಯೇ ಹೇಳಿದರು. ಬೇರೆ ಏನು ಕೆಲಸವನ್ನಾದರೂ ಮಾಡಬಹುದು ನೋಡಿ; ಎಷ್ಟಾದರೂ ತಿನ್ನಬಹುದು, ನಿದ್ದೆಹೋಗಬಹುದು. ಗಾಡಿ ಹೊಡೆಯಬಹುದು, ಬಟ್ಟೆ ಒಗೆಯಬಹುದು, ಸೌದೆ ಸೀಳಬಹುದು; ನಮಗೆ ಬೇಕಿಲ್ಲದಾಗಲೂ, ಊಟ ಮಾಡಿದ ಕೂಡಲೆಯೂ, ಯಾರಾದರೂ ಕೆಲಸ ಹೇಳಿದರೆ ನಮಗೆ ಮೈ ಕಿಡಿಕಿಡಿಯಾಗುವುದು. ಅದರಲ್ಲಿಯೂ ಮುಸುರೆಪಾತ್ರೆಗಳಿಗೆ ಏನು ಮದುವೆ, ಏನು ಮಡಿ, ಹೇಳಿ. ಆಮೇಲೆ ತೊಳೆದುಕೊಂಡರೆ ಆಗುವುದಿಲ್ಲವೆ? ಯಾರಿಗಾದರೂ ಹೇಳಿ ಆ ಕೆಲಸ ಮಾಡಿಸಿದರೆ ಆಗದೆ? ನೀವೂ ನಾವೂ ಆದರೆ ಆಗುತ್ತೆ. ಯಜಮಾನರಿಗೆ ಹಾಗಲ್ಲ. ಕ್ರಮವಾಗಿ ಒಂದು ಕೆಲಸವನ್ನು ಮಾಡಿ—ಅದು ಎಷ್ಟು ಅಲ್ಪವಾದುದಾಗಿರಲಿ—ಅದನ್ನು ಆಗಲೇ ಪೂರೈಸಿಬಿಡಬೇಕೆಂಬುದು ಅವರ ಜೀವನದ ತತ್ತ್ವ. ಅವರಿಗೆ ಭಗವಂತನ ಅನುಗ್ರಹದಿಂದ ಹಾಗೆಯೇ ಈವರೆಗೂ ನಡೆದುಬಂದಿದೆ. ವಿಶೇಷ ಹೇಳಲೇನು? ಆ ಕೆಲಸವನ್ನು ಮಾಡಿ ಮುಗಿಸಲು ಅಂಗಳದ ಕಾಲುವೆಗೆ ಹೋದೆವು. ಅವರೂ ನಮ್ಮೆಲ್ಲರ ಅಸಮಾಧಾನವನ್ನು ಕಂಡಿದ್ದರು. ಆಗ ಒಂದು ಚಮತ್ಕಾರವನ್ನು ಮಾಡಿ ನಮ್ಮನ್ನು ಒಲಿಸಿಕೊಂಡುಬಿಟ್ಟರು. ಲಂಚ, ಸ್ವಾಮಿ, ಲಂಚ. ಅಲ್ಲದೆ ಮತ್ತೇನು? ಸ್ಟೌ ಹತ್ತಿಸಿದ

ವರು ಒಂದು ಕೊಳಗ ನೀರು ಮರಳಿಸಿ "ಮೂರ್ತಿ, ಇಲ್ಲಿ ಬಾರಯ್ಯ ಸ್ವಲ್ಪ" ಎಂದರು. ಮೂರ್ತಿಗಳು ಒಳಗೆ ಹೋಗಲು "ಆ ಪುಡಿ ಇನ್ನಷ್ಟು ಇದೆಯೇನೊ ಹಾಕಿ ಮುಗಿಸಿಬಿಡಪ್ಪ; ಆ ಅನಿಷ್ಟವನ್ನು ಇನ್ನೆಲ್ಲಿ ಹಿಂದಕ್ಕೆ ಹೊತ್ತುಕೊಂಡು ಹೋಗುವುದು" ಎಂದರು. ನಾವು ಪಾತ್ರೆಗಳನ್ನು ಸಂಭ್ರಮದಿಂದ ಒಳಕ್ಕೆ ಎತ್ತಿಕೊಂಡುಹೋದೆವು. ಆ ಒಳಗಾಗಿ ಕಾಫಿ ಸಿದ್ಧವಾಗಿತ್ತು. ಮೂವರೂ ನೋಡಿದೆವು. ಉದ್ದಕ್ಕೆ ಹೋಗಿ ಯಜಮಾನರಿಗೆ ನಮಸ್ಕಾರ ಮಾಡಿಬಿಡೋಣವೇ ಎಂಬಷ್ಟು ಭಕ್ತಿ ಬಂದು ಅವರಲ್ಲಿಯೂ ದೇವರಲ್ಲಿಯೂ ನಮ್ಮ ನಂಬಿಕೆಯು ಬಲವಾಗಿ ಹುರಿಗೊಂಡಿತು. ಆದರೆ ನಮ್ಮ ಕಿರುಚಾಪಲ್ಯಗಳನ್ನು ದೊಡ್ಡವರಿಗೆ ಹಾಗೆ ನಾಚಿಕೆಯಿಲ್ಲದೆ—ಅಂಥ ಸಮಯದಲ್ಲಿ—ತೋರಿಸುವುದು ಸರಿಯಲ್ಲವೆಂದು ತಿಳಿದುಕೊಂಡು "ಏಳಿ ಸಾರ್ ಹೊರಡೋಣ, ಇನ್ನು ಹೊತ್ತಾಗಿಹೋಗುತ್ತೆ, ಇವತ್ತು ೨೦ ಮೈಲಿ ಆದರೂ ನಡೆಯುವಷ್ಟು ಶಕ್ತಿ ಬಂದುಬಿಟ್ಟಿದೆ" ಎಂದರು ವೆಂಕಟೇಶಯ್ಯನವರು. ಉಳಿದವರು ಒಬ್ಬರಮುಖವನ್ನೊಬ್ಬರು ನೋಡಿಕೊಂಡು "ಭೇಷ್" ಎಂದು ತಮತಮಗೂ ಯಜಮಾನರಿಗೂ ಕಣ್ಣುಸಂಜ್ಞೆಯಿಂದಲೇ ಧನ್ಯವಾದಗಳನ್ನು ಸಮರ್ಪಿಸುತ್ತಿರುವಂತೆ ಮನೋಭಾವವನ್ನು ಮುಖದಲ್ಲಿ ವ್ಯಕ್ತಗೊಳಿಸಿದೆವು.

"ಅದು ನನ್ನ ಪ್ರಭಾವವೂ ಅಲ್ಲ; ನಿಮ್ಮದೂ ಅಲ್ಲಪ್ಪ; ಅಗೋ ಎದುರಿಗೆ ಆ ಕೊಳಗದಪ್ಪಲೆ ಇದೆಯೇ ಅದರ ಪ್ರಭಾವ" ಅಂದುಬಿಟ್ಟರು ಯಜಮಾನರು.

ಅವರು ಯಾವಾಗಲೂ ಸುಳ್ಳಾಡುವವರೇ ಅಲ್ಲ. ಇತರರಿಗೆ ಅದು ಸಹಿಸಲಿ ಸಹಿಸದೆ ಇರಲಿ, ತಮಗೆ ನಿಜವೆಂದು ತೋರಿದುದನ್ನು ಹಿಂದುಮುಂದು ಯೋಚಿಸದೆ ಹೇಳಿಯೇಬಿಡುವರು. ಆದುದರಿಂದಲೆ ಅನೇಕರಿಗೆ ಅವರಲ್ಲಿ ಸಹನೆಯಿಲ್ಲ.

ಮುಂದೆ ಒಂದು ಭಾರಿ ಚರ್ಜೆಗೆ ಆರಂಭವಾಯಿತು. ಯಜಮಾನರ ದೃಷ್ಟಿಯಲ್ಲಿ ಅದೇನೂ ಆಗ "ಫೈಸಲ್" ಆಗುವಂತೆ ತೋರಲಿಲ್ಲ. ಆಗತಾನೇ 'ಪೃಷ್ಠೋಷ್ಠ'ವಾಗಿ ಊಟಮಾಡಿ ಹೊಟ್ಟೆಗಳು ಪೀಪಾಯಿಗಳಂತೆ ಆಗಿಹೋಗಿದ್ದುವು. ಆ ಬಿಸಿಲಿನಲ್ಲಿ, ಅದೇ ಕ್ಷಣವೇ ಒಂದುಕೊಳಗ ಬಿಸಿಕಾಫಿ ಕುಡಿಯುವುದು ಎಂದರೇನಪ್ಪ ಎಂದು ನೀವು ನಗಬಹುದು. ನೀವೆಲ್ಲ ವಿರಕ್ತರು, ಸಂಯಮಿಗಳು. ನಮಗೆ ಅಷ್ಟು ಆತ್ಮಸಂಯಮವಿಲ್ಲ. ಹುಡುಗತನದಿಂದಲೂ ಹೀಗೇ—ನಮ್ಮ ತಾಯಿ ನನ್ನನ್ನು ಅನೇಕ ವೇಳೆ ಬೈದಿದ್ದಾರೆ—" ನಿನ್ನ ಆಶೆಗೆ ಬೆಂಕಿ ಇಟ್ಟರು; ತಪ್ಪಲೆಯಲ್ಲಿರುವುದು ಹೊಟ್ಟೆಯಲ್ಲಿ ಇರಲಿ ಎನ್ನುತ್ತಿರುವೆಯೇ ಹೊರತು" ಇತ್ಯಾದಿ. ಬೇಕಾದರೆ ನಮ್ಮನ್ನು ನೀವೂ ಬೈಯಿರಿ. ದೇವರು ನಮ್ಮನ್ನು ಸೃಷ್ಟಿಸಿರುವುದು ಹೀಗೆ, ಅವನ ಇಚ್ಛೆಯಮೇಲೆ ನಮ್ಮ ಪ್ರಯತ್ನವೇನು ನಡೆಯುತ್ತದೆ? ಹೀಗೆ ನಮ್ಮನ್ನು ಏಕೆ ಸೃಷ್ಟಿಸಿದೆಯೊ, ಪಾಪಿ, ಎಂದು ನಾವು ಮೊದಲಿಸಿ ಅವನ ಕೈಲಿ ಜಗಳವಾಡುವುದಕ್ಕಾಗುತ್ತದೆಯೆ? ನಾವು ಆಡಿದರೂ ಆಡಬಹುದು; ಅವನೂ ಜಗಳಕ್ಕೆ ನಿಲ್ಲಬಹುದು. ಆದರೆ ಮಠಮುದ್ರೆಯವರು ನಮಗೆ ಬಹಿಷ್ಕಾರ ಹಾಕಿಬಿಡುತ್ತಾರೆ. ಆಮೇಲೆ?... ಅವನ ಚಕ್ರದ ಭಯಕ್ಕಿಂತಲೂ ಇವರ ಬಹಿಷ್ಕಾರಭಯವೇ ಹೆಚ್ಚು ಭೀಕರವಾದುದು. ನಾನು ಹೇಳುವುದು ಸುಳ್ಳೆ?...ಹೆಣ್ಣು ಮಕ್ಕಳಿರುವರು ಸ್ವಾಮಿ, ನಮಗೇನೋ ಹೆದರಿಕೆ.

ಕೊನೆಗೆ ನಾನು ವೆಂಕಟೇಶಯ್ಯನವರಿಗೆ " ನಿನ್ನೆ ನೀರನ್ನು ಹೊತ್ತುಕೊಂಡು ಹೋದಹಾಗೆ ಈ ಹೊತ್ತು ಕಾಫಿ ತೆಗೆದುಕೊಂಡುಹೋದರಾಯಿತು; ದಾರಿಯಲ್ಲಿ ಬಾಯಾರಿಕೆಯಾದಾಗ ಕುಡಿಯೋಣ" ಎಂದೆ. ನೋಡೋಣ, ಅವರ ಮನಸ್ಸಿನಲ್ಲಿ ಹೇಗಿದೆಯೊ ತಿಳಿದುಕೊಳ್ಳೋಣ ಎಂದು.

" ನೀವು ಹೊತ್ತುಕೊಂಡು ಬರುವ ಹಾಗಿದ್ದರೆ ನೋಡಿ, ಎರಡು ತಂಬಿಗೆ ಇದೆ".

“ ಎಲ್ಲರೂ ಸ್ವಲ್ಪಸ್ವಲ್ಪ ದೂರ ತಕ್ಕೊಂಡು ಹೋಗೋಣ ”...

ಯಥಾರ್ಥವನ್ನು ಹೇಳಲೇನು ? ನಮ್ಮೊಬ್ಬರಿಗೂ ಅದನ್ನು ಹೊತ್ತು ಕೊಂಡು ಹೋಗುವುದಕ್ಕೆ ಇಷ್ಟವಿಲ್ಲ. ನಾನು ಹೇಳಿದುದು ಲೋಕ ಮರ್ಯಾದೆಗಾಗಿ. ನಾನು ಎಸೆದ ಹಗ್ಗ ನನ್ನ ಕುತ್ತಿಗೆಗೇ ಬೀರುವಂತಾದರೆ! ಮೂರ್ತಿಗಳಂದರು—“ ಸ್ವಲ್ಪ ಇಲ್ಲಿ ಕುಡಿದು, ಸ್ವಲ್ಪ ತೆಗೆದು ಕೊಂಡು ಹೋಗೋಣ ” ಎಂದು.

ಯಜ—ನಿಮಗೆಲ್ಲ ಕಷ್ಟವಾದರೆ ನಡೆಯಿರಪ್ಪ, ನಾನು ಹೊತ್ತು ಕೊಂಡುಬರುತ್ತೇನೆ.

ರಾ—ಸರಿ ! ಸಾರ್ ಚೆನ್ನಾಯಿತು, ಇಷ್ಟುಹೊತ್ತೂ ಚೆನ್ನಾಗಿರಲಿಲ್ಲ. ಎಲ್ರಿ, ಶ್ರೀಕಂಠಯ್ಯ, ಲೋಟ ತಕ್ಕೊಳ್ರಿ ;

ಚರ್ಚಾವಿಷಯವು ಸ್ವಲ್ಪಮಟ್ಟಿಗೆ ಹತೋಟಿಗೆ ಬಂದ ಹಾಗಾಯಿತು. ಒಳಗೆ ಎಲ್ಲರಿಗೂ ಉಕ್ಕಿಉಕ್ಕಿ ಬರುತ್ತಿರುವ ನಗು. ಯಜಮಾನರು ಹೋಯೆಂದು ನಕ್ಕರು. ಅವರು ಹಾಗೆ ನಗುತ್ತಿದ್ದರೆ ಅದು ನಮಗೆ ಶ್ರೇಯಸ್ಕರ ಎಂದುಕೊಂಡವರು ಒಬ್ಬೊಬ್ಬರಾಗಿ ಲೋಟಗಳಲ್ಲಿ ಅಮೃತವನ್ನು ತುಂಬಿದೆವು.—ತುಂಬಿ ಪಾನಮಾಡಿ, ಆತ್ಮಶಾಂತಿ ಮಾಡಿಕೊಂಡೆವು. ಒಬ್ಬೊಬ್ಬರಿಗೆ ಎರಡೆರಡು ಲೋಟಗಳಾದುವು.

ವೆಂ—ಇನ್ನು ಉಳಿದಿರುವ ಈ ಇಷ್ಟನ್ನೇನು ಹೊತ್ತುಕೊಂಡು ಹೋಗುವುದು ? ಹಿಡೀರ್ರಿ ಈ ಲೋಟವನ್ನು, ಕಾಫಿ ಆರಿಹೋದರೆ ಚೆನ್ನಾಗಿರುವುದಿಲ್ಲ.

“ ನನಗೆ ಜಾಸ್ತಿ ಆಯಿತು ಸಾರ್ ” ಎಂದೆ ; ದೇವರಿಗೆ ಹೇಳುವಂತೆ ಹೇಳಿದೆ. ಅವರು ಕೇಳಲಿಲ್ಲ.

“ ಈ ಆವಟ ಬಿಡಿ ಕಂಡಿದ್ದೇನೆ. ನೀವು ಕಾಫಿ ಸಾಕು ಎಂದರೆ ನಾನು ನಂಬಿಯೇನೆ ? ”

ಎಷ್ಟು ವಿಧವಾಗಿ ಹೇಳಿದರೂ ಕೇಳದೆ ಇನ್ನೂ ಒಂದು ಲೋಟದ ತುಂಬ ಹಾಕಿಬಿಟ್ಟರು. ಇನ್ನೇನು ಮಾಡುವುದು? 'ವೈದ್ಯೋನಾರಾಯಣೋ ಹರಿಃ' ಎಂದುಕೊಂಡು ಕಣ್ಣುಮುಚ್ಚಿಕೊಂಡು ಕುಡಿದುಬಿಟ್ಟೆ. ಉಳಿದ ಮೂವರು ಸ್ನೇಹಿತರೂ ಹಾಗೆಯೇ ಮಾಡಿದರು. ಎಲ್ಲರಿಗೂ ನಾನು ಚಿರಂಜೀವಿ. ನನಗೆ ತೃಪ್ತಿಯಾದಮೇಲೆ ತಮಗೆ. ಹಿರಿಯರ ರೀತಿಯೇ ಹೀಗೆ.

೨.

"ಇನ್ನು ಹೊರಡಬಹುದು ತಾನೇಪ್ಪ" ಎಂದರು ಯಜಮಾನರು. ನಾವೆಲ್ಲರೂ "ಓಹೋ" ಎಂದು ಹೊರಟೆವು. ನಮ್ಮಲ್ಲಿ ಇಬ್ಬರು, ಮೇಲೆ ಸಾದಾ ಷರಟು ಬನಿಯನ್ನುಗಳನ್ನು ಹಾಕಿಕೊಂಡು ಉತ್ತರೀಯವನ್ನು ಹೊದ್ದಿದ್ದೆವು. ಮೂರ್ತಿಗಳು ಮಾತ್ರ ಕೋಟುಹಾಕಿಕೊಂಡಿದ್ದರು. ನಮ್ಮ ಬಂಡವಾಳವೆಲ್ಲ ಅವರ ಕೈಲಿತ್ತು. ಆದುದರಿಂದ ಅವರಿಗೆ ಆ ಬಿಸಿಲಿನಲ್ಲಿಯೂ ಕೋಟು ಹಾಕಿಕೊಂಡೇ ಇರಬೇಕಾದ ಸುಖವು ನಿರ್ಬಂಧವಾಗಿ ಬಂದಿತ್ತು. ಇನ್ನಿಬ್ಬರು ಕೇವಲ ಒಂದೊಂದು ಉತ್ತರೀಯವನ್ನು ಹೊದ್ದಿದ್ದರು. ಐವರಿಗೆ ಮೂರು ಛತ್ರಿ. ಮೂವರ ಕಾಲುಗಳಿಗೆ ಮಾತ್ರ ಜೋಡು. ಇನ್ನಿಬ್ಬರು ಛತ್ರಿ ಹಿಡಿಯುವ ಪದ್ಧತಿಯನ್ನೇ ಇಟ್ಟುಕೊಂಡಿಲ್ಲ. ಕಾಲಿಗೆ ಹಾಕಿದ್ದ ಜೋಡುಗಳನ್ನು ಒಬ್ಬರು ಬೆಳಗಾಂವಿಯಲ್ಲಿಯೂ, ಇನ್ನೊಬ್ಬರು ಗದಗಿನಲ್ಲಿಯೂ ಮರೆತುಬಿಟ್ಟು ಬಂದು ಈಗ ಬರಿಯ ಕಾಲಿನಲ್ಲಿ ನಡೆದು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ಭೂಮಾತೆಯ ಸಂಪರ್ಕದಿಂದ ಪವಿತ್ರರಾಗಿ ಸುಖಿಸದೆ, ಅಖಿಲಲೋಕ ಜೀವನಾಧಿಕಾರಿಗಳಾದ ಸೂರ್ಯ ವಾಯುದೇವರುಗಳಿಂದ ತಲೆಯನ್ನು ಮುಚ್ಚಿಕೊಂಡು ಬಾಳುವ ಜೀವನವು ಎಷ್ಟು ಹೇಯವಾದುದು! ಎಂದು ಅವರ ಅಭಿಪ್ರಾಯ. ಆ ದೇವತೆಗಳ ಅನುಗ್ರಹವು ಅಂದು ಅವರಿಗೆ ಸಂಪೂರ್ಣವಾಗಿ ಆಯಿತೆಂದೇ ಹೇಳಬೇಕು.

ಕೊಠಡಿಯಿಂದ ಹೊರಗೆ ಬಂದವರು "ಚೆನ್ನಯ್ಯ" ಎಂದು ಕೂಗಿದೆವು. ವೆಂಕಟೇಶಯ್ಯನವರು, "ಅವನು ಹಿಂದಿರುಗಿ ಬಂದ ಹಾಗೆಯೇ ಇಲ್ಲ. ಧಾರವಾಡದವರು ಯಾರನ್ನೊ ನೋಟಕ್ಕೆ ಕರೆದುಕೊಂಡು ಹೋಗಿ ಬರುತ್ತೇನೆಂದು ಬೆಳಗ್ಗಿಯೆ ಹೇಳಿ ಹೋಗಿದ್ದ" ಎಂದರು. ಅವನೇ ನಮಗೆ ಅಲ್ಲಿ ಮಾರ್ಗದರ್ಶಕನು; ಪರಮಾಪ್ತ ಸ್ನೇಹಿತನು. ಆದರೆ ಅವನಿಗೆ ಕಾಯುತ್ತ ಕುಳಿತರೆ ಕೆಲಸ ಕೆಡುತ್ತದೆಂದು ತಿಳಿದು ಹಂಪೆಯ ಹಾಳುಗಳ ವಿಚಾರವಾದ ಪುಸ್ತಕವೊಂದನ್ನು ಕೈಲಿ ಹಿಡಿದುಕೊಂಡು ಹೊರಟೆವು. "ದಾರಿಯಲ್ಲಿ ಯಾರಾದರೂ ಸಿಕ್ಕದೆಹೋಗುವರೆ? ಕಾಲು ಕುರುಡೇನು? ಬಾಯಿ ಕುರುಡೇ? ಕೇಳಿ ಕೇಳಿಕೊಂಡು ಹೋಗೋಣ ನಡೆಯಿರಿ" ಎಂದು ಮುಂದೆ ನಡೆದೆವು. ಇಷ್ಟು ಹೊತ್ತಿಗೆ ಆಗಲೆ ೧ ಗಂಟೆಯ ಸುಮಾರಿಗೆ ಬಂದಿತ್ತು. ಹತ್ತು ಹತ್ತು ಮಾರಿಗೂ 'ಚೆನ್ನಯ್ಯನು ಜೊತೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು' ಎಂದುಕೊಳ್ಳುತ್ತ ಹೊರಟೆವು. ಒಂದೊಂದು ಸಲ "ಹೋಗಲಿ; ಅವನ ದಂಡೆ ಹರಿಯಿತು; ಬರುವ ರೂಪಾಯಿ ಕಳೆದುಕೊಂಡ; ಯಾರಿಗೆ ನಷ್ಟ?" ಎಂದುಕೊಳ್ಳುತ್ತ ಸಮಾಧಾನಮಾಡಿಕೊಳ್ಳುತ್ತಿದ್ದೆವು. ಆದರೂ ಒಂದು ವಿಷಯ ಮಾತ್ರ ಖಂಡಿತ; ಅವನಿಲ್ಲದುದರಿಂದ ನಮಗೆ ಕೊರತೆ ಕಾಣುತ್ತಿತ್ತು.

ಹರಿಹರೇಶ್ವರ ದೇವಸ್ಥಾನದ ಮುಂದೆ ಸುಮಾರು ೨೦೦-೩೦೦ ಗಜಗಳ ದೂರದವರೆಗೂ ಅಗಲವಾದ ತೇರು ಬೀದಿ; ಮೈಸೂರು ನೂರಡಿ ರಸ್ತೆಗಿಂತಲೂ ವಿಶಾಲವಾಗಿಯೂ, ಜನ ಪೂರ್ಣವಾಗಿಯೂ, ಪೂರ್ವದಲ್ಲಿ ಅದು ಇದ್ದಿರಬೇಕು. ಇರ್ಕಡೆಗಳಲ್ಲಿಯೂ ಕಲ್ಲು ಮಂಟಪಗಳು; ರಸ್ತೆಯ ಕೊನೆಯಲ್ಲಿ ನಮ್ಮ ದಾರಿಯ ಎಡಗಡೆ ಬೃಹದಾಕಾರದ ಕಲ್ಲು ಬಸವನ ವಿಗ್ರಹ. ಆಗಿನ ಕಾಲದವರಿಗೆ ಮಾಡುವುದಕ್ಕೆ ಬೇರೆ ಏನೂ ಕೆಲಸವಿರಲಿಲ್ಲವೆಂದು ಕಾಣುತ್ತದೆ; ಎಲ್ಲಿ ದೊಡ್ಡ ಬಂಡೆಯೊಂದು ಸಿಕ್ಕಿದರೆ ಅಲ್ಲಿ ಬಸವ, ಗಣೇಶ, ಹನುಮಂತ, ನರಸಿಂಹ ಈ ವಿಗ್ರಹಗಳನ್ನು

ಕೆತ್ತಿಬಿಡುತ್ತಿದ್ದರು. ಕೆಲಸದ ಶ್ರಮವೂ, ಅಗಾಧತೆಯೂ, ಅವರಿಗೆ ತೋರುತ್ತಲೇ ಇರಲಿಲ್ಲವೇನೊ! ಇಲ್ಲವಾದರೆ ೨೦ ಅಡಿ ಅಗಲದ ಪಾಣಿ ಪಾಟದಮೇಲೆ ೬-೭ ಅಡಿಗಳ ಉದ್ದದ ಶಿವಲಿಂಗವನ್ನು ಮಾಡಿಡುತ್ತಿದ್ದರೆ? ೧೫-೨೦ ಅಡಿ ಎತ್ತರದ ನರಸಿಂಹಸ್ವಾಮಿ! ೧೫ ಅಡಿಯ ಗಣೇಶ!! ಅವರಿಗೆ ಹುಚ್ಚು ಹಿಡಿದುಬಿಟ್ಟಿರಬೇಕು. ಅವುಗಳ ಹೆಸರೊ? ಒಂದು ಸಾಸವೆಕಾಳಿನ ಗಣೇಶವಂತೆ; ಇನ್ನೊಂದು ಕಡಲೆಕಾಳಿನ ಗಣೇಶವಂತೆ; ಹೀಗೆಯೇ ಹಲಸಿನಕಾಯಿ ಗಣೇಶನೆಂದು ಒಂದನ್ನು ಮಾಡಿದರೆ ಅದು ಹೇಗಿರುತ್ತಿದ್ದಿತೊ! ನಾನು ಬೇರೆ ಈಗ ಊಹಿಸಲಾರೆ.

ಮುಂದೆ ಹೋಗುತ್ತಹೋಗುತ್ತ ರಸ್ತೆಯು ಚಿಕ್ಕದಾಯಿತು;—ಅಲ್ಲಿ ಕ್ರೈಸ್ತರಾರಾದರೂ ಇದ್ದಿದ್ದರೆ ಸ್ವರ್ಗದ ದಾರಿಯಂತೆ ಎಂದು ಹೇಳುತ್ತಿದ್ದರು. ಉದ್ದಕ್ಕೂ ಬೆಟ್ಟಗಳು. ಮಾರ್ಗವು ಸಾಧ್ಯವಾದಷ್ಟು ಸುಲಭವಾಗಲೆಂದು ಹಿಂದಿನವರು ಕಲ್ಲು ಕಡಿದು ಮೆಟ್ಟಲುಗಳನ್ನು ಮಾಡಿದ್ದಾರೆ. ದಾರಿಯುದ್ದಕ್ಕೂ ಇದ್ದ ಮುಳ್ಳುಗಿಡ ಮುಳ್ಳು ಕೊಂಟುಗಳನ್ನು ಬಿಟ್ಟರೆ ಕಣ್ಣು ಹರಿಯುವವರೆಗೂ ಸುತ್ತಲೂ ಏನು ಸುಂದರವಾದ ದೃಶ್ಯಗಳು! ನೂರಾರು ವರುಷಗಳಿಂದ ಸುಮಾರು ಒಂದೇ ಸಮನಾಗಿ ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡು ಪ್ರಪಂಚದ ಕಷ್ಟಸುಖಗಳನ್ನೂ, ಮಂಗಳಾಮಂಗಳಗಳನ್ನೂ ತಮ್ಮ ಅವಿಚಲಿತದೃಷ್ಟಿಯಿಂದ ನೋಡುತ್ತ ದೃಢವಾಗಿ ಪಟುವಾಗಿ ನಿಂದಿರುವ ಪರ್ವತಗಳು; ಪರ್ವತ ಶಿಖರಗಳ ಮೇಲೆ ಆಕಾಶದ ಬಿಳಿ ಮೋಡಗಳಿಂದ ಸುತ್ತುವರಿಯಲ್ಪಟ್ಟು ಸೇವೆಗೊಳ್ಳುತ್ತ ಸಿಡಿಲು ಬಳ್ಳಿಗಳೊಡನೆ ಸರಸವಾಡುತ್ತ ಉಚ್ಚ ಪೀಠಗಳ ಮೇಲಿರುವ ದೇವಾಲಯ, ತಪೋಗೃಹ, ಆಶ್ರಮಗಳು; ಬೆಟ್ಟಗಳ ನಡು ನಡುವೆ ದೂರದಲ್ಲಿ ಒಂದರ ಹಿಂದೆ ಒಂದು, ಒಂದಕ್ಕಿಂತ ಒಂದು ಹೆಚ್ಚು ಎತ್ತರವಾಗಿ ಕಾಣುತ್ತಿರುವ ದೇವಾಲಯಗಳ ಮಹಾದ್ವಾರಗೋಪುರಗಳು; ಎಡಗಡೆ ಹತ್ತಿರದಲ್ಲಿಯೆ ಕಲ್ಲು ಬಂಡೆಗಳ ಹಿಂದೆ ಕಲಕಲನಾದದಿಂದ

ಹರಿಯುತ್ತಿರುವ ತರಂಗಿಣೀ ತುಂಗಭದ್ರೆಯ ಕೋಲಾಹಲ; ನದಿಗೂ ನಮಗೂ ಮಧ್ಯೆ ಅಲ್ಲಲ್ಲಿ ಹೊಸದಾಗಿ ಪೂರ್ಣ ಕುಸುಮಿತವಾದ ಕಾಡು ಮಲ್ಲಿಗೆ ಗಿಡಗಳು ; ಸ್ವಲ್ಪದೂರ ನೇರವಾಗಿ ಹೋಗಿ, ಉತ್ತರಕ್ಷಣದಲ್ಲಿಯೆ ಎಲ್ಲಿಯೋ ಹೊಕ್ಕು ಹೇಗೋ ತಿರುಗಿ ಮರೆಯಾಗಿ ಮುಖವನ್ನು ಮುಚ್ಚಿ ಕೊಂಡು ಪುನಃ ಮೈಲಿಗಳ ದೂರದಲ್ಲಿ ಪರ್ವತಸಾನುವೊಂದರಲ್ಲಿ ಕಣ್ಣಿಗೆ ಬೀಳುತ್ತ ನಮ್ಮೊಡನೆ ಹುಡುಗಾಟವಾಡಲೆಳಸುವಂತೆ ಮುಂದುವರಿದಿರುವ ಮೆಟ್ಟಲುದಾರಿ. ಬಲುದೂರ ಹೀಗೆಯೆ ಪ್ರಕೃತಿಯ ಈ ತೆರದ ವಿಚಿತ್ರ ರಮಣೀಯತೆಯನ್ನು ನೋಡುತ್ತ ಅಲ್ಲಿ ಹೊರಹೊಮ್ಮುತ್ತಿರುವ ಸೌಂದರ್ಯವನ್ನು ಅನುಭವಿಸುತ್ತ ಖಗಮೃಗಕೀಟಧ್ವನಿಗಳಿಂದ ತುಂಬಿ ನಿಬಿಡವಾಗಿ ಹೃದಯರಂಜಕವಾಗಿರುವ ಪ್ರಕೃತಿಯ ಏಕಾಂತತೆಯನ್ನು ನೋಡಿ ಆನಂದಿಸುವ ನಾವೇ ಪುಣ್ಯಶಾಲಿಗಳೆಂದು ಅಂದುಕೊಳ್ಳುತ್ತ ಮುಂದೆ ಮುಂದೆ ಹೊರಟೆವು. ಹೀಗೆ ಮೈಮರೆತು ಹೋಗುತ್ತಿರುವ ನಮಗೆ ಅಲ್ಲಲ್ಲಿ ಒಡೆದು ಬೇರೆಯಾಗುತ್ತಿರುವ ದಾರಿಗಳ ಯೋಚನೆಯೇ ಬರಲಿಲ್ಲ.

ಸ್ವಲ್ಪವೂ ಶ್ರಮವಿಲ್ಲದೆ ಅಚ್ಯುತರಾಯರ ದೇವಸ್ಥಾನದವರೆಗೂ ಹೋದೆವು. ಅಲ್ಲಿಯೆ ನರಸಿಂಹಸ್ವಾಮಿಯ ದೇವಸ್ಥಾನವೂ ಒಂದಿದೆ. ಬ್ರಿಟಿಷ್ ಸರಕಾರದವರು ತಮ್ಮ ಕೈಯಲ್ಲಾದ ಮಟ್ಟಿಗೆ ಇಲ್ಲಿಯೂ ಜೀರ್ಣೋದ್ಧಾರ ಕಾರ್ಯವನ್ನು ಮಾಡಿದ್ದಾರೆ. ಒಳಗೆ ಹೋಗಿ ನೋಡಿದು ದಾಯಿತು. ಅಲ್ಲಿ ಹೆಚ್ಚು ಹೊತ್ತು ನಿಲ್ಲಲು ಅವಕಾಶವಿಲ್ಲ. ಮುಂದೆ ನೋಡಬೇಕಾದುದೆಷ್ಟನ್ನೊ ಇಟ್ಟುಕೊಂಡು ಇಲ್ಲಿ ಬಹುಕಾಲ ಕಳೆವುದು ಹೇಗೆ ? ಅಲ್ಲಿಂದ ಮುಂದೆ ನಾಲ್ಕಾರು ದಾರಿಗಳು ಕವಲೊಡೆದಿದ್ದವು. ಕೈಲಿದ್ದ ಪುಸ್ತಕದ ಪ್ರಯೋಜನ ಅಲ್ಲಿಗೆ ನಿಂತುಹೋಯಿತು. ಉತ್ತರದಿಕ್ಕಿನ ಕಲ್ಲುಮಂಟಪ ಸಾಲಿನಲ್ಲಿಯೆ ಹೊರಟುಹೋಗಿದ್ದರೆ ಸುಲಭವಾಗಿ ಕೋದಂಡ ರಾಮಸ್ವಾಮಿಯ ದೇವಸ್ಥಾನಕ್ಕೆ ಹೋಗಿ ಸೇರಬಹುದಾಗಿತ್ತು. ಆದರೆ ನಮ್ಮ ಐವರ ಅಭಿಪ್ರಾಯಗಳು ಐದು ತೆರನಾಗಿದ್ದುದರಿಂದ ಒಬ್ಬರು

ಯಾರಿಗೆ ಯಾರು ಕಡಮೆ ?

ಕೆಲವು ವರ್ಷಗಳ ಕೆಳಗೆ ಜುಲೈ ತಿಂಗಳಲ್ಲಿ ಒಂದು ದಿವಸ ಬೆಳಿಗ್ಗೆ ಹತ್ತು ಗಂಟೆಯ ಸಮಯದಲ್ಲಿ, ಚಾಮರಾಜಪೇಟೆಯ ಎರಡನೆಯ ಬೀದಿಯಲ್ಲಿರುವ ಒಂದು ಮಹಡಿಯ ಮನೆಯ ಮುಂದುಗಡೆ ಒಂದು ಬಗ್ಗಿಯ ಗಾಡಿಯು ನಿಂತಿತ್ತು. ಬಂಡಿಯಲ್ಲಿ ಇಬ್ಬರು ವಿದ್ಯಾರ್ಥಿನಿಯರು ಪುಸ್ತಕಗಳನ್ನು ಸಮೀಪದಲ್ಲಿ ಇಟ್ಟುಕೊಂಡು ಏನನ್ನೋ ಮಾತನಾಡುತ್ತಿದ್ದರು. ಗಾಡಿಹೊಡೆಯುವವನು ಲಗಾಮನ್ನು ಹಿಡಿದು ಕುದುರೆಯ ಹತ್ತಿರ ನಿಂತಿದ್ದನು.

ಇದೇ ಸಮಯದಲ್ಲಿಯೇ ಉತ್ತಮವಾದ ಬಟ್ಟೆಯ ಸೂಟನ್ನು ಹಾಕಿಕೊಂಡು ಬೂಟ್ಸ್ ಕಾಲರ್ ನೆಕ್‌ಟೈಗಳಿಂದ ಅಲಂಕೃತನಾದ ಒಬ್ಬ ಯುವಕನು ತನ್ನ ಕೈಯಲ್ಲಿದ್ದ ಬೆತ್ತವನ್ನು ಅಲ್ಲಾಡಿಸುತ್ತಾ ಇನ್ನೊಂದು ಕೈಯಲ್ಲಿದ್ದ ಕೈ ವಸ್ತ್ರದ ಒದ್ದೆ ಗಂಟನ್ನು ಮೆಲ್ಲಗೆ ತೂಗಿಸುತ್ತಾ ಬಂದು ಸಡಗರದಿಂದ ಮನೆಯ ಮೆಟ್ಟಿಲನ್ನು ಹತ್ತಿದನು. ಅದೇ ವೇಳೆಯಲ್ಲಿಯೇ ರೂಪವತಿಯಾದ ಯುವತಿಯೊಬ್ಬಳು ಮನೆಯೊಳಗಿನಿಂದ ಬಂದಳು. ಆಕೆಯು ಶ್ರೇಷ್ಠವಾದ ಚೀನಾದೇಶದ ರೇಷ್ಮೆಯ ಸೀರೆಯನ್ನುಟ್ಟು ತಿಳಿಗೆಂಪಿನ ಜಾಕೀಟು ತೊಟ್ಟಿದ್ದಳು. ಸೆರಗು ಗಾಳಿಗೆ ಹಾರದಂತೆ ನೀಲಿಯ ಹರಳಿನ ಸೂಜಿಯಿಂದ ಭದ್ರಪಡಿಸಿದ್ದಳು. ಯುವತಿಯ ಮುಖದಲ್ಲಿ ಸಣ್ಣ ಗುಂಡು ಕುಂಕುಮ, ಒಂದು ಕೈಯಲ್ಲಿ ಛತ್ರಿ, ಇನ್ನೊಂದರಲ್ಲಿ ಒಂದೆರಡು ಪುಸ್ತಕಗಳುಳ್ಳ ಪುಸ್ತಕದ ಚೀಲ, ಕಾಲಿನಲ್ಲಿ ಕರಿಯಬಣ್ಣದ ಷೂ. ಗಂಭೀರ ನಡಗೆಯಿಂದ ಯುವತಿಯು ಹೊರಗೆ ಬರುವುದಕ್ಕೂ ಸಡಗರದಿಂದ ಯುವಕನು ಮೆಟ್ಟಲೇರುವುದಕ್ಕೂ ಸರಿಹೋಗಿ ಯುವಕ ಯುವತಿಯರು ಮನೆಯ ಮುಂಬಾಗಿಲಲ್ಲಿ ಎದುರುಬದರಾಗಿ ಸಂಧಿಸಿದರು.

" ಎಲ್ಲಿಗೆ ಹೊರಟೆ, ದೇವೀ ? "

" ಹೊರಡುವಾಗಲೇ ಯಾರಾದರೂ ' ಎಲ್ಲಿಗೆ ' ಅಂತ ಕೇಳಿದರೆ ಹೊರಟ ಕೆಲಸ ಹೇಗಾಗಬೇಕು ? " ತಲೆ ಎತ್ತಿ ನೋಡಿ, " ಮನೆಗೆ ಬರೋದು ಯಾಕೆ ಇಷ್ಟುಹೊತ್ತಾಯಿತು ? ಇದುವರಿಗೂ ಕಾದಿದ್ದೆ ; ಈಗ ತಾನೆ ಸ್ಕೂಲಿಗೆ ಹೊತ್ತಾಯಿತೆಂದು ಊಟಮಾಡಿದೆ. ಇವತ್ತು ಎನ್‌ಟ್ರೆನ್ಸ್ ಕ್ಲಾಸಿಗೆ ಸೇರುತ್ತೇನೆ. "

" ಸ್ಕೂಲಿಗೆ ಸೇರ್ತೀಯಾ ! "

" ಯಾಕೆ, ಸೇರಬಾರದೇನು ? "

“ ನೋಡು, ದೇವೀ, ನೀನು ಪ್ರೌಢೆಯಾಗುವವರಿಗೂ ನಿನ್ನ ವಿದ್ಯಾಭ್ಯಾಸಕ್ಕೆ ನಾನು ಅಡ್ಡಿಬರಲಿಲ್ಲ. ಇನ್ನುಮೇಲೆ ನೀನು ಸ್ಕೂಲಿಗೆ ಹೋಗುವುದು ನನಗೆ ಇಷ್ಟವಿಲ್ಲ. ”

“ ಯಾಕೆ ಹೋಗಬಾರದು ?

ಸ್ವಲ್ಪ ಧ್ವನಿ ಬದಲಾಯಿಸಿ, “ ನನ್ನ ಹೆಂಡತಿ ದೊಡ್ಡವಳಾದಮೇಲೆ ಸ್ಕೂಲಿಗೆ ಹೋಗಕೂಡದು. ”

(ಇಂಗ್ಲೀಷಿನಲ್ಲಿ) “ ನೀವು ನನ್ನ ವಿಷಯದಲ್ಲಿ ಹೀಗೆ ನಡಿಸುವಿರೆಂದು ನಾನು ತಿಳಿದಿರಲಿಲ್ಲ. ”

(ಇಂಗ್ಲೀಷಿನಲ್ಲಿಯೇ) “ ನನ್ನ ಅನುರಾಗಕ್ಕಿಂತ ಸ್ಕೂಲು ಹೆಚ್ಚೆಂದು ನೀನು ಭಾವಿಸುವಿಯೋ ! ”

ಬಂಡಿಯಲ್ಲಿದ್ದ ವಿದ್ಯಾರ್ಥಿನಿಯರು, “ಶಾರದಮ್ಮ ಸ್ಕೂಲಿಗೆ ಹೊತ್ತಾಯಿತು.”

“ ಬಂದೆ. ”

ಶಾರದೆಯು ಮೆಟ್ಟಲಿಳಿದು ಬಂಡಿಯಕಡೆ ಹೊರಟಳು. ತಾನು ಬೇಡವೆಂದು ಹೇಳುತ್ತಿದ್ದರೂ ತನ್ನ ಮಾತಿಗೆ ಉತ್ತರ ಕೂಡ ಕೊಡದೆ, (ಸ್ನೇಹಿತರನ್ನು ಕುರಿತು ‘ ಬಂದೆ ’ ಎಂದು ಹೇಳಿ), ಹೆಂಡತಿಯು ಹೊರಟುಹೋದಳಲ್ಲಾ ಎಂದು ಕೋಪ ದಿಂದ ಕೃಷ್ಣಮೂರ್ತಿಯು ಮನೆಯನ್ನು ಹೊಕ್ಕನು. ಶಾರದೆಯು ಹೊರಡುವಾಗ ಚಿಲಕಕ್ಕೆ ಸಿಕ್ಕಿದ್ದ ಕೊಡೆಯ ಕಂಬಿಯನ್ನು ನೋಡದೆ ಎಳೆಯಲು ಬಾಗಿಲು ಕದಲಿ, ಕ್ರಮವಾಗಿ ಅದರ ವೇಗ ಹೆಚ್ಚಿ, ಆಕೆಯು ಬಂಡಿಯ ಹತ್ತಿರ ಹೋಗುವುದರೊಳ ಗಾಗಿ ಚೌಕಟ್ಟಿಗೆ ರಾಚಿತು. ಶಾರದೆಯು ಬೆಚ್ಚಿ ಹಿಂತಿರುಗಿ ನೋಡಿದಳು. ತಾನು ಸ್ವಲ್ಪ ಹೊತ್ತಿನಲ್ಲಿ ಬರುತ್ತೇನೆಂದು ಗಂಡನಿಗೆ ಹೇಳಿ, ಸ್ನೇಹಿತರೊಡನೆ “ ಇವತ್ತು ಪಾಠಶಾಲೆಗೆ ಬರುವುದಿಲ್ಲ ” ಎಂದು ಹೇಳಿ ಹಿಂತಿರುಗುವುದರೊಳಗಾಗಿ, ಸ್ನೇಹಿತರಿರು ವಾಗಲೇ, ತನ್ನ ಪತಿಯು ಬಾಗಿಲನ್ನು ರಾಚಿ ಅಪಮಾನಮಾಡಿದನಲ್ಲಾ ಎಂದು ಶಾರದೆಗೆ ಬಹಳ ಕೋಪಬಂತು. ಆದಿನ ಸ್ಕೂಲಿಗೆ ಹೋಗಬಾರದೆಂಬ ತನ್ನ ಅಭಿ ಪ್ರಾಯವನ್ನು ಬದಲಾಯಿಸಿ, ತನ್ನಷ್ಟಕ್ಕೆ ತಾನೇ ಇಂಗ್ಲೀಷಿನಲ್ಲಿ “ ಇದು ಶುದ್ಧ ಗುಲಾಮಗಿರಿ ” ಎಂದು ಗೊಣಗುಟ್ಟುತ್ತಾ ಬಂಡಿಯನ್ನೇರಿದಳು. ಬಂಡಿಯವನು ಗಾಡಿಯನ್ನು ಹತ್ತಿ ಚಾಟಿಯಿಂದ ಹೊಡೆಯಲು ಕುದುರೆಯು ಅತಿ ವೇಗವಾಗಿ ಹೊರಟಿತು.

ಕೃಷ್ಣಮೂರ್ತಿಯು ಕೋಪದಿಂದಲೂ ಸಂಕಟದಿಂದಲೂ ಮಹಡಿಯನ್ನೇರಿ, ಬಟ್ಟೆಬರೆಗಳನ್ನು ಬಿಚ್ಚದೆ, ತನ್ನ ನಡವಳಿಕೆ ಸರಿಯೋ ಅಥವಾ ತನ್ನ ಹೆಂಡತಿಯು

ಮಾಡಿದ್ದು ಸರಿಯೋ ಎಂದು ಬಹಳ ಹೊತ್ತು ಯೋಚಿಸಿ, ಎಲ್ಲಾ ವಿಧದಲ್ಲಿಯೂ ಶಾರದೆಯೇ ತಪ್ಪಿತಸ್ಥಳೆಂತಲೂ, ತನ್ನಿಂದ ಲೇಶವೂ ತಪ್ಪಿಲ್ಲವೆಂತಲೂ ನಿರ್ಧರಿಸಿದನು. ಕಡೆಗೆ ಶಾರದೆಯಂಥಾ ಕೆಟ್ಟ ಹೆಂಗಸಿನ ವಿಷಯದಲ್ಲಿ ಯೋಚನೆಮಾಡುವುದೂ ಅಸಂಗತವಾದ್ದರಿಂದ ಆ ವಿಷಯವನ್ನೇ ಆಲೋಚಿಸದೆ ಶಾಂತಚಿತ್ತನಾಗಿರಬೇಕೆಂದು ವ್ಯವಸ್ಥೆಮಾಡಿಬಿಟ್ಟನು.

ತಾನು ಮಾಡಿದ ತೀರ್ಮಾನವನ್ನು ನಡೆವಳಿಕೆಗೆ ತರುವುದಕ್ಕೋಸ್ಕರ ಕೃಷ್ಣ ಮೂರ್ತಿಯು ತಾನು ತೊಟ್ಟಿದ್ದ ಪೋಷಾಕನ್ನು ತೆಗೆದು ಪಂಚೆಯನ್ನುಟ್ಟು, ನಡು ಮನೆಗೆ ಊಟಕ್ಕೆ ಹೋದನು. ಊಟಕ್ಕೆ ಕೂತವನು ಎಲ್ಲಿಯೋ ಜ್ಞಾನದಿಂದ ಅಗಳ ಗಳನ್ನು ಕಚ್ಚುತ್ತಾ ಸಾರೂ ಅನ್ನ ಊಟಮಾಡಿ, ಮುಗಿದ ನಂತರ ಬೇರೆ ಅನ್ನವನ್ನು ಹಾಕಿಸಿಕೊಂಡು, “ ಅನ್ನಕ್ಕೆ ಮಜ್ಜಿಗೆ ತರಲೇನು ” ಎಂದು ಅಡಿಗೆಯವನು ಎರಡು ಮೂರು ಸಲ ಕೇಳಿದ ಮೇಲೆ “ ಆ, ಏನು, ಮಜ್ಜಿಗೆಯೇ, ಬಡಿಸು ” ಎಂದು ಉತ್ತರಕೊಟ್ಟು, ಮಜ್ಜಿಗೆ ತರುವುದಕ್ಕೆ ಮುಂಚಿತವೇ, ತಾನು ಮಜ್ಜಿಗೆಗಾಗಿ ಕಾದಿರುವ ಸಂಗತಿಯನ್ನೇ ಮರೆತು ಎಲೆ ಬಿಟ್ಟೆದ್ದು ಕೈ ತೊಳೆದು ಟವಲಿನಿಂದ ಕೈ ಒರಸಿಕೊಳ್ಳುತ್ತಾ ಮಹಡಿಯನ್ನೇರಿದನು.

ಬಿಸಿ ಊಟದಿಂದ ಬೆವರಿದ ಮುಖವನ್ನು ಒರಸಿಕೊಳ್ಳಬೇಕೆಂದು ಕರವಸ್ತ್ರ ಕ್ಕಾಗಿ ಜೇಬಿನಲ್ಲಿ ಕೈಹಾಕಲು ಅದು ಅಲ್ಲಿ ಇರಲಿಲ್ಲ; ಜ್ಞಾಪಿಸಿಕೊಂಡು ಮೇಜಿನ ಹತ್ತಿರ ಹೋಗಿ ಅಲ್ಲಿದ್ದ ಒದ್ದೆಗಂಟನ್ನು ಬಿಚ್ಚಿ, ಅದರಲ್ಲಿ ಕಟ್ಟಿದ್ದ ಹೂವಿನ ಕುಚ್ಚನ್ನೂ ಚಿಗರು ವೀಳೆಯದೆಲೆಯ ಕಟ್ಟನ್ನೂ ಮೇಜಿನ ಮೇಲಿಟ್ಟು ವಸ್ತ್ರದಿಂದ ಮುಖವನ್ನು ಒರಸಿಕೊಂಡನು. ಆ ಹುವ್ವು ವಿಳ್ಳೇದೆಲೆಗಳನ್ನು ನೋಡುತ್ತಾ ಯೋಚಿ ಸಲು ಪ್ರಾರಂಭಿಸಿದನು. ಶಾರದೆಯ ತಪ್ಪು ಹತ್ತರಷ್ಟಾಗಿ ಕಂಡಿತು; ಇಪ್ಪತ್ತ ರಷ್ಟಾಯಿತು; ನೂರರಷ್ಟೂ ಆಯಿತು; ಕೊನೆಗೆ ದೊಡ್ಡ ಬೆಟ್ಟವಾಗಿ ಕಂಡುಬಂತು; ಶಾರದೆಯ ಅಪರಾಧಕ್ಕೆ ತ್ಯಾಗವೇ ತಕ್ಕ ಶಿಕ್ಷೆ ಎಂದು ನಿರ್ಧರಿಸಿದನು. ತಕ್ಷಣ ಕೈ ಗಡಿಯಾರವನ್ನು ನೋಡಿದನು; ಹನ್ನೆರಡೂವರೆಗಂಟೆ; ಇನ್ನೂ ಹಿಂದೂಪುರದ ರೈಲು ಹೊರಡುವುದಕ್ಕೆ ಎರಡು ಗಂಟೆ ತಡವಿತ್ತು. ಹಳ್ಳಿಗೆ ಹೋಗಲು ನಿಶ್ಚಯಿಸಿ ಕೃಷ್ಣಮೂರ್ತಿಯು ಪೋಷಾಕನ್ನು ಹಾಕಿಕೊಂಡು, ಜಟಕಾ ಸ್ಟಾಂಡಿನಿಂದ ಬಂಡಿ ಯನ್ನು ಮಾಡಿಕೊಂಡು ರೈಲ್ವೇ ಸ್ಟೇಷನ್ನಿಗೆ ಹೋಗಿ, ರೈಲಿನಲ್ಲಿ ಕೂತನು. ರೈಲೂ ಕದಲಿತು.

ಶಾರದೆಯು ಸ್ಕೂಲು ತಲಪುವವರಿಗೂ ಸಖಿಯರೊಡನೆ ಸರಿಯಾಗಿ ಮಾತ ನಾಡಲಿಲ್ಲ. ತನಗೂ ತನ್ನ ಪತಿಗೂ ಉಂಟಾದ ಮನಸ್ತಾಪವನ್ನು ಕುರಿತು ಯೋಚನೆ

ಮಾಡುತ್ತಿದ್ದಳು. ಸ್ಕೂಲು ತಲಪುತ್ತಲೂ ಎಲ್ಲವೂ ಬದಲಾಯಿಸಿತು. ಶಾರದೆಯು ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ದೇಶಕ್ಕೆ ಎರಡನೆಯವಳಾಗಿ ತೇರ್ಗಡೆಯಾದದ್ದು ಅನೇಕರಿಗೆ ಸಂತೋಷವನ್ನುಂಟುಮಾಡಿತ್ತು. ಎಷ್ಟೋ ಮಂದಿ ಬಾಲಕಿಯರು ತಮ್ಮ ಆನಂದಸೂಚಕವಾದ ಮಾತುಕಥೆಗಳನ್ನಾಡಲು ಶಾರದೆಯ ಬಳಿಗೆ ಬಂದರು. ಕೆಲವರು ಇಂಥ ಬುದ್ಧಿವಂತಳ ಸ್ನೇಹವನ್ನು ಸಂಪಾದಿಸಬೇಕೆಂದು ಬಂದರು. ಈಕೆ ವಿದ್ಯಾರ್ಥಿನಿಯಾಗಿ ತನ್ನ ಪಾಠಶಾಲೆಗೆ ಬಂದಿರುವುದರಿಂದ ಶಾಲಾ ಮುಖ್ಯಾಧಿಕಾರಿಣಿಗೆ ಬಹಳ ಸಂತೋಷವಾಯಿತು. ಆಕೆಯು ಶಾರದೆಯನ್ನು ತನ್ನ ಗುಮಾಸ್ತರ ಮೂಲಕ ಕರೆಕಳುಹಿಸಿ ಹಸ್ತಲಾಘವ ಕೊಟ್ಟು ಸಮೀಪದಲ್ಲಿದ್ದ ಕುರ್ಚಿಯಲ್ಲಿ ಕೂಡಿಸಿಕೊಂಡಳು. ಕುಶಲಪ್ರಶ್ನೆ ಮಾಡಿದನಂತರ, ಶಾರದೆಯು ಎಂಟ್ರೆನ್ಸ್ ಕ್ಲಾಸಿನಲ್ಲಿಯೂ ಉತ್ತಮರೀತಿಯಲ್ಲಿ ತೇರ್ಗಡೆ ಹೊಂದಿ ತಾನು ಸೇರಿದ ಸ್ಕೂಲಿಗೆ ಕೀರ್ತಿ ತರುವುದಲ್ಲದೆ ಸ್ತ್ರೀಯರ ಗುಂಪಿಗೇ ಮರ್ಯಾದೆ ತಂದುಕೊಡುವಳೆಂದು ತಾನು ನಂಬಿರುವುದಾಗಿ ಶಾಲಾ ಮುಖ್ಯಾಧಿಕಾರಿಣಿಯಾದ ರಂಗನಾಯಕಿಯು ಅವಳಿಗೆ ಹೇಳಿದಳು. ಈ ರೀತಿಯಾದ ಗಡಿಬಿಡಿಯಲ್ಲಿ ಶಾರದೆಯು ತನ್ನ ಗೃಹಕೃತ್ಯದ ವಿಷಯದಲ್ಲಿ ಗಮನಕೊಡದೆ ಐದುಗಂಟೆಯವರಿಗೂ ಸಂತೋಷದಿಂದ ಕಾಲಕಳೆದಳು.

ಐದುಗಂಟೆಗೆ ಪಾಠಶಾಲೆಯ ಪಾಠಕಾಲ ಮುಗಿಯಿತೆಂಬುದನ್ನು ಸೂಚಿಸುವ ಗಂಟೆ ಹೊಡೆಯಿತು. ಶಾರದೆಯು ಮನೆಗೆ ಹೊರಡುವ ಕಾಲವಾಯಿತು. ಆಗ ಬೆಳಿಗ್ಗೆ ತನಗೂ ತನ್ನ ಗಂಡನಿಗೂ ನಡೆದ ಮಾತುಕಥೆಗನ್ನು ಜ್ಞಾಪಿಸಿಕೊಂಡಳು. ಮನಸ್ಸಿನಲ್ಲಿ ಕಳವಳವಾಯಿತು. ಗಂಡನು ಬಾಗಿಲು ಹಾಕುವುದರಿಂದ ಕೋಪವನ್ನು ತೋರಿಸಿದರೆ ತಾನು ಅವನಿಗೆ ಇಷ್ಟವಿಲ್ಲದ ಕೆಲಸವನ್ನು ಮಾಡಿಬಿಟ್ಟಳಲ್ಲಾ ಎಂದು ಶಾರದೆಗೆ ಸಂಕಟವಾಯಿತು. ತಮ್ಮಿಬ್ಬರಲ್ಲಿ ಯಾರು ತಪ್ಪಿತಸ್ಥರೆಂದು ಮನಸ್ಸಿನಲ್ಲಿಯೇ ಯೋಚಿಸಿ, ಇಬ್ಬರೂ ದುಡುಕಿದವರೆಂತಲೂ ಅದರಲ್ಲಿ ತನ್ನ ತಪ್ಪೇ ಹೆಚ್ಚೆಂತಲೂ ಶಾರದೆಯು ತಿಳಿದಳು. ಹೀಗೆ ಯೋಚಿಸುತ್ತಾ ಬರುವಾಗ ಸ್ಕೂಲಿನ ಗಾಜಿನ ಬಾಗಿಲಿನಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ತಾನೇ ಸ್ತಬ್ಧಳಾಗಿ ನಿಂತಳು. “ಇಂಥ ಸೌಂದರ್ಯಮೂರ್ತಿಗೆ ಪತಿಯನ್ನು ಸ್ವಾಧೀನಮಾಡಿಕೊಳ್ಳುವುದು ಅಸಾಧ್ಯವೇ? ಒಂದುಸಲ ಬೆಡಗಿನಿಂದ ಮಾತನಾಡಿದರೆ ಎಂಥ ಕೋಪ ಬಂದಿದ್ದರೂ ಶಾಂತವಾಗುವುದು” ಎಂದು ತಕ್ಷಣವೇ ಮನಸ್ಸಿನಲ್ಲಿ ಹೊಳೆಯಿತು. ಕೃಷ್ಣಮೂರ್ತಿಯು ತನ್ನಲ್ಲಿ ಮಿತಿಮೀರಿ ಅನುರಕ್ತನಾದ್ದರಿಂದ ಸಮಾಧಾನವು ಮತ್ತಷ್ಟು ಸುಲಭವೆಂದು ಶಾರದೆಯು ಗೊತ್ತುಮಾಡಿದಳು. ಇನ್ನುಮೇಲೆ ಪತಿಯು ಅಲಕ್ಷ್ಯಮಾಡಿ ಕಾಣದಂತೆ

ಈ ದಿವಸ ಬೆಳಿಗ್ಗೆ ನಡೆದ ವಿವಾದದಿಂದ ತನಗೆ ಕೋಪ ಉಂಟಾದುದನ್ನು ಆತನಿಗೆ ತಿಳಿಸಬೇಕೆಂದು ಯೋಚಿಸಿ, ತಾನು ಪ್ರತಿದಿವಸ ಮನೆಗೆ ಹೋಗುವ ಹೊತ್ತಿಗಿಂತ ತಡ ವಾಗಿ ಹೋದರೆ ತನ್ನ ಕೋಪವು ಪತಿಗೆ ತಿಳಿಯುವುದೆಂದು ಯೋಚಿಸಿ ಇನ್ನು ಒಂದು ಒಂದೂವರೆ ಗಂಟೆಯವರಿಗೂ ಟೆನ್ನಿಸ್ ಆಡಿ ಕಾಲ ಕಳೆಯಬೇಕೆಂದು ಮನಸ್ಸು ಮಾಡಿದಳು.

ಶಾರದೆಯು ಮನೆಗೆ ಬರುವಾಗ ಏಳುಗಂಟೆಯಾಗಿತ್ತು. ಕೃಷ್ಣಮೂರ್ತಿಯು ತನ್ನ ಮಾರ್ಗವನ್ನೇ ಎದುರುನೋಡುತ್ತಾ ಮಹಡಿಯ ಕೈಸಾಲೆಯಲ್ಲಿ ನಿಂತಿರುತ್ತಾ ನೆಂಬುದರಲ್ಲಿ ಶಾರದೆಗೆ ಸಂದೇಹವಿರಲಿಲ್ಲ. ಆದ್ದರಿಂದ ಮನೆಯ ಹತ್ತಿರ ಬಂದೊಡನೆ ಸ್ವಲ್ಪ ಹುಬ್ಬು ಗಂಟುಹಾಕಿ ಮಹಡಿಯ ಕಡೆ ತಲೆಯೆತ್ತಿ ನೋಡದೆ ಮೆಟ್ಟಲನ್ನು ಏರುವಾಗ ಪ್ರತಿ ಒಂದು ಹೆಜ್ಜೆಗೂ "ಯಾರದು; ಶಾರದೇ!" ಎಂದು ಪ್ರೇಮೋ ತ್ಸಾಹದಿಂದ ಕೂಗುವ ಕೃಷ್ಣಮೂರ್ತಿಯ ಧ್ವನಿಯು ಕೇಳಿಬರುವುದೆಂದು ನಿರೀಕ್ಷಿಸಿ ಕೊನೆಗೆ ನಿರಾಶಳಾಗಿ ತಲೆಯೆತ್ತಿ ನೋಡಿದಳು; ಮಹಡಿಯ ಕೈಸಾಲೆಯಲ್ಲಿ ಕೃಷ್ಣ ಮೂರ್ತಿಯು ಕಾಣಿಸಲಿಲ್ಲ. ಮಹಡಿಯನ್ನು ಹತ್ತಿ ನೋಡಿದಳು. ಮಹಲಿನಲ್ಲಿ ತನ್ನ ಪತಿಯಿರಲಿಲ್ಲ. ಮನೆಯಲ್ಲಿ ವಿಚಾರಿಸಲು ಉಂಡು ಹೊರಗೆ ಹೊರಟವನು ಇನ್ನೂ ಮನೆಗೆ ಬರಲಿಲ್ಲವೆಂದು ಗೊತ್ತಾಯಿತು.

ಶಾರದೆಯು ಮಹಡಿಯ ಮೇಲಿನ ಕಿರುಮನೆಗೆ ಹೋಗಿ ಬೇರೆ ಸೀರೆಯನ್ನು ಟ್ಟಳು; ಅತಿ ನವುರಾದ ಜಾಕೀಟನ್ನು ಧರಿಸಿ, ತಲೆ ಬಾಚಿ ಜಡೆ ಹಾಕಿಕೊಂಡು, ಕೈಯಲ್ಲಿ ಸಾಬೂನನ್ನೂ ಚಲುವೆಯ ಟವಲನ್ನೂ ಹಿಡಿದು ಚಂದ್ರಶಾಲೆಯಲ್ಲಿದ್ದ ನಲ್ಲಿಯ ಬಳಿಗೆ ಬಂದು ಮುಖವನ್ನು ಚನ್ನಾಗಿ ತೊಳೆದು ಟವಲಿನಿಂದ ಒರಸಿ ಕೊಳ್ಳುತ್ತಾ ಕಿರುಮನೆಗೆ ಹೋಗಿ, ಮೇಜಿನಮೇಲಿದ್ದ ಸೀಸೆಯಿಂದ ಹ್ಯಾಜಿ ಲೈನ್‌ಸ್ನೊ ತೆಗೆದು ಮುಖಕ್ಕೆ ಹಾಕಿ ತಿಕ್ಕಿ, ಸ್ವಲ್ಪ ಹೊತ್ತಾದಮೇಲೆ ಕುಂಕುಮದ ಚುಕ್ಕೆಯನ್ನಿಟ್ಟು, ಸುಲ್ತಾನ್ ಸೆಂಟನ್ನು ಕರವಸ್ತ್ರದಲ್ಲಿ ಹಾಕಿಕೊಂಡು ಚಂದ್ರಶಾಲೆಗೆ ಬಂದಳು. ಆಳುಗಳು ಬಿಸಲುಮಾಳಿಗೆಯ ಕಸವನ್ನು ಬಳಿದು, ಎಲ್ಲಾ ಕಡೆಯಲ್ಲಿಯೂ ನೀರನ್ನು ಚಿಮುಕಿಸಿ ಅಲ್ಲಿ ಇಟ್ಟಿದ್ದ ಹೂವಿನ ಕುಮ್ಮಟಿಗಳಿಗೆಲ್ಲಾ ನೀರು ಹಾಕಿ ದ್ದರು. ಶಾರದೆಯು ಆಗತಾನೇ ಅರಳುತ್ತಿದ್ದ ಗುಲಾಬಿಹೂವನ್ನು ತಲೆಯಲ್ಲಿ ಮುಡಿದು ಒಂದೆರಡು ಬಟನ್‌ರೋಜಾ ಕೈಯಲ್ಲಿ ತೆಗೆದುಕೊಂಡು ಕಿರುಮನೆಗೆ ಹೋಗಿ, ಅಲ್ಲಿಂದ ದಂತದ ಬಾಚಣಿಗೆಯನ್ನೂ ತಲೆಗೆ ಹಚ್ಚಿಕೊಳ್ಳುವ ಸುವಾಸನೆ ತೈಲವನ್ನೂ ಮುಖತೊಳೆಯುವ ಸಾಬೂನನ್ನೂ ಚಲುವೆಯ ಕೈವಸ್ತ್ರವನ್ನೂ ತೆಗೆದು

ಕೊಂಡು ಬಂದು ಮಹಲಿನ ಮೇಜಿನಮೇಲಿಟ್ಟಳು. ಅದರ ಸಮೀಪದಲ್ಲಿ ಪತಿಯು ಬಂದು ಕೂಡುವುದಕ್ಕೆ ಒಂದು ಕುರ್ಚಿಯನ್ನು ಸರಗಿಸಿದಳು. ಅದರ ಹಿಂಭಾಗದಲ್ಲಿ ತಾನು ಕೂತು ತಲೆಬಾಚುವುದಕ್ಕೆ ಸರಿಹೋಗುವಂತೆ ಇನ್ನೊಂದು ಕುರ್ಚಿಯನ್ನು ಹಾಕಿದಳು. ಆಯಾಸಪಟ್ಟು ಬರುವ ಗಂಡನಿಗೆ ಫಲಾಹಾರಕ್ಕಾಗಿ ಬೆಳ್ಳಿಯತಟ್ಟೆಯಲ್ಲಿ ಕರಿದ ಅವಲಕ್ಕಿಯನ್ನೂ ರವೆಯ ಲಾಡುಗಳನ್ನೂ ತಂದಿಟ್ಟಳು. ಬೆಳ್ಳಿಯ ಲೋಟದಲ್ಲಿ ಕುಡಿಯುವ ನೀರನ್ನು ತಂದಿಟ್ಟು ಮೇಲೆ ಮುಚ್ಚಿದಳು. ಇಷ್ಟು ಕೆಲಸವಾದರೂ ಕೃಷ್ಣಮೂರ್ತಿಯು ಮನೆಗೆ ಬರಲಿಲ್ಲ. ಈ ಮೇಜಿನ ಎದುರಿಗಿರುವ ಮೇಜಿನಮೇಲೆ ಹರಡಿ ಬಿದ್ದಿದ್ದ ಚಿಗುರುವೀಳೆಯದೆಲೆಗಳನ್ನೂ ಹೂವಿನ ಕುಚ್ಚನ್ನೂ ನೋಡಿ " ಮನೆಗೆ ತರುವ ಪದಾರ್ಥಗಳನ್ನೆಲ್ಲಾ ಸರಿಪಡಿಸಿಕೊಂಡು, ನಾನು ಅವರ ಯೋಗಕ್ಷೇಮವನ್ನೂ ನೋಡಿಕೊಳ್ಳುತ್ತಿರುವುದರಿಂದ ನನ್ನ ಕೃಷ್ಣಮೂರ್ತಿಯು ಒಬ್ಬ ಮನುಷ್ಯರಾಗಿದಾರೆ, ನಾನು ಒಂದೆರಡು ದಿವಸಗಳು ಹತ್ತಿರ ಇಲ್ಲದಿದ್ದರೆ ಮನೆಯ ಸಾಮಾನುಗಳೆಲ್ಲಾ ಹಲಾಕಾಗಿ ಅವರೂ ಬಡವು ಕಡ್ಡಿಯಾಗುವುದರಲ್ಲಿ ಸಂದೇಹವಿಲ್ಲ " ಎಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾ ಅರ್ಧ ಹೂವನ್ನು ಮುಡಿದು, ವೀಳೆಯದೆಲೆಯ ಕಟ್ಟನ್ನೂ ಉಳಿದ ಹೂವನ್ನೂ ಒದ್ದೆಬಟ್ಟೆಯಲ್ಲಿ ಸುತ್ತಿಟ್ಟಳು. ಇನ್ನೂ ಕೃಷ್ಣಮೂರ್ತಿಯು ಬರಲಿಲ್ಲ. ಹತ್ತಿರಿದ್ದ ನಿಲವುಕನ್ನಡಿಯಲ್ಲಿ ತನ್ನ ಉಡಿಗೆತೊಡಿಗೆಗಳು ಸರಿಯಾಗಿವೆಯೇ ಎಂದು ನೋಡಿಕೊಂಡಳು ; ತಾನು ಎಲ್ಲಿಯೋ ಮನಸ್ಸಿನಿಂದ ಕೆಲಸಮಾಡುತ್ತಿದ್ದರೂ ತನ್ನ ಗಂಡನು ಚನ್ನಾಗಿ ಒಪ್ಪುತ್ತದೆಂದು ಹೇಳಿದ ಸೀರೆಯನ್ನೇ ತಾನು ಉಟ್ಟಿರುವುದಾಗಿ ಶಾರದೆಗೆ ಗೊತ್ತಾಯಿತು. ಈಗ್ಗೆ ಸ್ವಲ್ಪದಿವಸಗಳ ಹಿಂದೆ, ಇದೇ ಉಡಿಗೆತೊಡಿಗೆಗಳನ್ನುಟ್ಟು ಹೀಗೆಯೇ ಕನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಾಗ ಸದ್ದುಮಾಡದೆ ಹಿಂದಿನಿಂದ ತನ್ನ ಪತಿಯು ಬಂದು ಕಣ್ಣು ಮುಚ್ಚಿದ್ದೂ, ಕೈಯಲ್ಲಿ ಬಳೆ ಇಲ್ಲದೆ ಷರಟಿನ ಗುಂಡಿ ಇದ್ದದ್ದರಿಂದ ಕಣ್ಣು ಮುಚ್ಚಿದವರು ತನ್ನ ಗಂಡನೆಂದು ಊಹಿಸಿ " ಹೆಂಗಸಾದವಳು ಗಂಡನನ್ನೇ ಗುರ್ತಿಸದಿದ್ದರೆ ಸರಿಯೇ " ಎಂದು ಹೇಳಿದರೂ ಕಣ್ಣನ್ನು ಬಿಡದೆ ಇದ್ದದ್ದರಿಂದ ತನ್ನಿಂದ ಗಂಡನ ಹೆಸರನ್ನು ಹೇಳಿಸಬೇಕೆಂದು ತನ್ನ ಪತಿಯು ಇಷ್ಟವೆಂದು ತಿಳಿದು, ತಾನು ಹೆಸರನ್ನು ಹೇಳದೆ ಉಪಾಯದಿಂದ ಕಣ್ಣನ್ನು ಬಿಡಿಸಿಕೊಳ್ಳಬೇಕೆಂದು ಗಂಟಲಲ್ಲಿಯೇ ಸಣ್ಣಸ್ವರದಿಂದ " ಕೃಷ್ಣಾಮೂರ್ತೀ ಬೆನ್ನಾಹಿಂದೆ ನಿಂತಿದ್ದಂತೀದೆ " ಎಂದು ಹಾಡಿದ್ದೂ, ಶಾರದೆಗೆ ಜ್ಞಾಪಕ ಬಂತು. ಸ್ವಲ್ಪ ನಾಚಿ ನಗುಮುಖದಿಂದ ವರ್ತಮಾನಪತ್ರಿಕೆಯನ್ನು ತೆಗೆದುಕೊಂಡು ಮಹಲಿನಲ್ಲಿಯೂ ಕಿರುಮನೆಯಲ್ಲಿಯೂ ವಿದ್ಯುಚ್ಛಕ್ತಿಯ ದೀಪ

ಗಳನ್ನು ಹತ್ತಿಸಿ ಮಹಡಿಯಮೇಲಿನ ಕೈಸಾಲೆಯಲ್ಲಿ ಕಿಟಿಕಿಯ ದೀಪದ ಬೆಳಕಿನಲ್ಲಿ ಪತ್ರಿಕೆಯನ್ನು ಓದುತ್ತಾ ಪತಿಯ ಆಗಮನವನ್ನೇ ಎದುರುನೋಡುತ್ತಾ ಕುಳಿತು ಕೊಂಡಳು.

ಎಷ್ಟುಹೊತ್ತಾದರೂ ಶಾರದೆಯು ಪತ್ರಿಕೆಯ ಪುಟವನ್ನು ತಿರುಗುಹಾಕಲಿಲ್ಲ. ಸ್ವಲ್ಪ ಹೊತ್ತಾದ ಮೇಲೆ ಮುಚ್ಚುಮರೆ ಇಲ್ಲದೆ ಎವೆಇಕ್ಕದೆ ದೂರದವರಿಗೂ ಪತಿಯು ಬರುವುದು ಕಾಣಿಸುವುದೇನೊ ಎಂದು ನೋಡಲು ಪ್ರಾರಂಭಿಸಿದಳು. ತಾನು ಸ್ಕೂಲಿಗೆ ಹೋದುದಕ್ಕಾಗಿ ಕೃಷ್ಣಮೂರ್ತಿಗೆ ತನ್ನ ಮೇಲೆ ಕೋಪಬಂದಿರಬಹುದೆಂಬ ದಿಗಿಲು ಅವಳ ಮನಸ್ಸಿನಲ್ಲಿ ತಲೆದೋರಿತು. ಗಂಡನು ಮನೆಗೆ ಬರುವುದು ಸ್ವಲ್ಪ ಹೊತ್ತಾದರೆ ಹೀಗೆಲ್ಲಾ ಯೋಚನೆ ಮಾಡುವುದು ತಪ್ಪೆಂದುಕೊಂಡು ತನ್ನ ಮನಸ್ಸು ಅತ್ತಕಡೆ ಹೋಗದಂತೆ ಇರುವುದಕ್ಕೋಸ್ಕರ ಶಾರದೆಯು ಮಹಲಿನೊಳಗೆ ಬಂದು ಲೆಗ್ ಹಾರ್ಮೋನಿಯಂ ಮೀಟುತ್ತಾ ಒಳ್ಳೆಯ ಕೃತಿಗಳನ್ನು ಹಾಡಲು ಪ್ರಾರಂಭಿಸಿದಳು. ಯಾವ ರಾಗವನ್ನು ಹಾಡಿದರೂ ಯಾಕೋ ನೀಲಾಂಬರಿ ರಾಗಕ್ಕೇ ತಿರುಗಲು ಮೊದಲಾಯಿತು ; ಹಾಡುವುದು ಸರಿಬೀಳಲಿಲ್ಲ. ಇಷ್ಟುಹೊತ್ತಿಗೆ ಎಂಟೂವರೆ ಗಂಟೆಯಾಯಿತು. ಬಹುಶಃ ಕೃಷ್ಣಮೂರ್ತಿಯು ಬೈಸ್ಕೋಪಿಗೆ ಹೋಗಿರಬಹುದು. (ತನ್ನನ್ನು ಬಿಟ್ಟುಹೋಗಿರುವುದಕ್ಕಾಗಿ ಶಾರದೆಗೆ ಸ್ವಲ್ಪ ಅಸಮಾಧಾನವಾಯಿತು ;) ಈ ತಪ್ಪಿಗಾಗಿ ಅವನು ಬಂದೊಡನೆ ಜಾಗ್ರತೆಯಾಗಿ ಊಟಮಾಡಿ ಆ ದಿವಸವೇ ಎರಡನೆಯ ಆಟಕ್ಕೆ ತನ್ನನ್ನು ಕರೆದುಕೊಂಡುಹೋಗುವಂತೆ ಮಾಡುವೆನೆಂದು ಅವಳು ಅಂದುಕೊಂಡಳು. ಕೂಡಲೇ ಶಾರದೆಯು ಅಡಿಗೆಮನೆಗೆ ಹೋಗಿ, ಇಬ್ಬರಿಗೆ ಬಡಿಸಿ ಮಹಡಿಯಮೇಲೆ ತಂದಿಟ್ಟು ಊಟಮಾಡಿ ಬಾಗಿಲುಗಳನ್ನು ಭದ್ರಪಡಿಸಿ ಮಲಗಿಕೊಳ್ಳುವಂತೆ ಅಡಿಗೆಯವನಿಗೆ ಹೇಳಿದಳು. ಬೆಳ್ಳಿಯ ತಟ್ಟೆಯಲ್ಲಿಟ್ಟಿದ್ದ ಫಲಾಹಾರದ ಸಾಮಾನನ್ನು ವಾಪಸು ಹಾಕಿ ಆ ತಟ್ಟೆಯಲ್ಲಿ ಎಲೆಯಡಿಕೆ, ಸುಣ್ಣ, ಜಾಯಿಕಾಯಿ ಪತ್ರೆ ಮೊದಲಾದುವನ್ನು ತೆಗೆದಿಟ್ಟಳು ; ಬೆಳ್ಳಿಯ ಲೋಟಾದಲ್ಲಿ ಕಾದ ಹಾಲನ್ನು ತಂದು ಮೇಜಿನಮೇಲೆ ಮುಚ್ಚಿಟ್ಟಳು ; ಆಳಿನಿಂದ ಹಾಸಿಗೆಯನ್ನು ಹಾಸಿಸಿದಳು. ಪತಿಯ ಮೇಜಿನಿಂದ "ವೆಂಡಟ್ಟ" ಎಂಬ ಪುಸ್ತಕವನ್ನು ತೆಗೆದುಕೊಂಡು, ಮಂಚವೇರಿ, ಹಾಸಿಗೆಯಲ್ಲಿ ಮಲಗಿ, ಮೊಳಕಾಲಿನವರೆಗೂ ರಗ್ಗನ್ನು ಹೊದ್ದು ಓದಲು ಪ್ರಾರಂಭಿಸಿದಳು. ಸ್ವಲ್ಪ ಸೆಕೆಯಾಯಿತು ; ಹತ್ತಿರದಲ್ಲಿ ಸ್ಟೂಲಿನಮೇಲಿದ್ದ ಎಲೆಕ್ಟ್ರಿಕ್ ಫ್ಯಾನನ್ನು ಹಾಕಿ ಪುನಃ ಓದಲು ಪ್ರಾರಂಭಿಸಿದಳು.

ಯಾವದೋ ಮಾಯದಲ್ಲಿ ಶಾರದೆಗೆ ನಿದ್ರೆಹತ್ತಿತು. ರಾತ್ರಿ ಒಂದು ಹೊತ್ತಿನಲ್ಲಿ ಶಾರದೆಯು ಭರನಿದ್ರೆಯಲ್ಲಿರುವಾಗ ಬೆಕ್ಕು ಬಂದು ಮೇಜಿನ ಮೇಲಿಟ್ಟಿದ್ದ

ಹಾಲಿನ ಪಾತ್ರೆಯನ್ನು ಮೇಲೆ ಮುಚ್ಚಿದ್ದ ತಟ್ಟೆಯೊಂದಿಗೆ ಉರುಳಿಸಿತು. ಆ ಶಬ್ದದಿಂದ ಶಾರದೆಗೆ ನಿದ್ರಾಭಂಗವಾಗಿ, ಬೇರೆಮಗ್ಗುಲಿಗೆ ತಿರುಗಿ, ಅರನಿದ್ರೆಯಲ್ಲಿಯೇ ಅವಳು "ಏನೋ ಶಬ್ದವಾಯಿತು ಅಂದ್ರೆ" ಎಂದು ಹೇಳಿ ಪತಿಯನ್ನು ಎಬ್ಬಿಸುವಳಂತೆ ಪಕ್ಕದಲ್ಲಿ ಕೈಹಾಕಿದಳು; ಕೈ ಪಾತಾಳಕ್ಕೆ ಬಿದ್ದಂತಾಗಿ ಬೆಚ್ಚಿಬಿದ್ದು ಎಚ್ಚತ್ತಳು. ಹಾಸಿಗೆಯಲ್ಲಿ ಸ್ವಲ್ಪಹೊತ್ತು ಕೂತು ನಿದ್ರೆಯ ಮೊಬ್ಬು ಸ್ವಲ್ಪ ಕಮ್ಮಿಯಾಯಿತು. ದೀಪವು ಜಗಜ್ಜ್ಯೋತಿಯಂತೆ ಉರಿಯುತ್ತಿದೆ; ಎಲೆಕ್ಟ್ರಿಕ್ ಫ್ಯಾನ್ ಬೀಸುತ್ತಿದೆ; ಬಡಿಸಿಟ್ಟಿದ್ದ ತಟ್ಟೆಗಳು ಅಲ್ಲಿಯೇ ಇವೆ; ಹಾಲು ಚೆಲ್ಲಿ ಲೋಟವು ಕೆಳಗೆ ಉರುಳಿದೆ; ಮಹಲಿನ ಬಾಗಿಲುಗಳೆಲ್ಲಾ ಹಾರುಹೊಡೆದಿವೆ; ಮಹಡಿಗೆಲ್ಲಾ ತಾನು ಒಬ್ಬಳೇ ಇದಾಳೆ; ಶಾರದೆಗೆ ಬಹಳ ಭಯವಾಯಿತು. ಹಾಗೆಯೇ ಎದ್ದು ಎರಡು ಬಾಗಿಲುಗಳನ್ನೂ ಭದ್ರಪಡಿಸಿ ಬಂದು ಹಾಸಿಗೆಯಲ್ಲಿ ಮಲಗಿದಳು. "ಈಗ ಎಷ್ಟುಗಂಟೆ, ಇಷ್ಟು ಹೊತ್ತಾದರೂ ಕೃಷ್ಣಮೂರ್ತಿಯು ಯಾಕೆ ಮನೆಗೆ ಬರಲಿಲ್ಲ?" ಎಂದು ಶಾರದೆಯು ಯೋಚಿಸುತ್ತಿರುವಾಗಲೇ ಗಡಿಯಾರದಲ್ಲಿ ಅರ್ಧಗಂಟೆ ಹೊಡೆಯಿತು; ತಲೆಯೆತ್ತಿ ನೋಡಿದಳು; ಎರಡೂವರೆ ಗಂಟೆಯಾಗಿತ್ತು. ಈಗ ಶಾರದೆಗೆ ತನ್ನ ರಮಣನಿಗೆ ತನ್ನಲ್ಲಿ ಬಹಳ ಕೋಪಬಂದಿದೆ ಎಂತಲೂ, ಅವನು ಬುದ್ಧಿಪೂರ್ವಕವಾಗಿ ಮನೆಗೆ ಬರಲಿಲ್ಲವೆಂತಲೂ ಗೊತ್ತಾಯಿತು. ಇಷ್ಟು ಸಣ್ಣ ತಪ್ಪಿಗೆ ಕೃಷ್ಣಮೂರ್ತಿಯು ತನ್ನನ್ನು ತ್ಯಜಿಸಿಯೇ ಬಿಟ್ಟನೇ? ಇನ್ನುಮೇಲೆ ತನ್ನ ರಮಣನು ತನ್ನೊಡನೆ ಸರಸವಾಡುವುದೇ ಇಲ್ಲವೇ? ತಾನು ಬದುಕಿರುವವರಿಗೂ ಏಕಾಂಗಿಯಾಗಿಯೇ ಜೀವಿಸಬೇಕೇ? ಶಾರದೆಗೆ ಬಹಳ ದುಃಖವಾಯಿತು; ಕಣ್ಣಿನಲ್ಲಿ ನೀರು ತುಂಬಿ, ಸುರಿದು, ತಲೆದಿಂಬನ್ನು ನೆನೆಸಿತು. ಆ ದುಃಖದಲ್ಲಿಯೇ, ತನ್ನ ಮದುವೆಯಾದಂದಿನಿಂದ ತಾನೂ ಕೃಷ್ಣಮೂರ್ತಿಯೂ ಹೇಗಿದ್ದರೆಂಬುದನ್ನು ಒಂದೊಂದನ್ನಾಗಿ ಶಾರದೆಯು ಜ್ಞಾಪಿಸಿಕೊಂಡಳು.

(೨)

ರೈಲು ಕದಲಿ ತಂಗಾಳಿ ಬಂದು ಒಂದೆರಡು ಊರುಗಳು ದಾಟಿದಮೇಲೆ ಕೃಷ್ಣಮೂರ್ತಿಯ ಕೋಪವು ಕಡಮೆಯಾಗುತ್ತಾ ಬಂತು. ಶಾಂತಭಾವದಿಂದ ವಿಚಾರಮಾಡುವುದರಲ್ಲಿ ತಾನು ತಪ್ಪಿತಸ್ಥನೆಂದು ಅವನಿಗೆ ಗೊತ್ತಾಯಿತು. ಅವಿವೇಕಿಯಾದ ಹೆಂಗಸು ತನಗೆ ಬೇಡದ ಕೆಲಸವನ್ನು ಹೇಗೆ ಮಾಡಿಬಿಟ್ಟಳೋ, ಹಾಗೆಯೇ ತಾನೂ ಅವಳಿಗೆ ಪ್ರತಿಯಾಗಿ ಮನೆ ಬಿಟ್ಟುಬಂದು, ಅವಳಿಗೆ ಸಂಕಟವನ್ನುಂಟುಮಾಡಿದ್ದರಿಂದ, ತಾನೂ ಶಾರದೆಯಂತೆ ಅವಿವೇಕಿಯೇ ಹೊರತು ಅವಳಿಗಿಂತ

ಉತ್ತಮನಾಗಲಿಲ್ಲವೆಂದು ಕೃಷ್ಣಮೂರ್ತಿಯು ತಿಳಿದನು. ಶಾರದೆಯು ತಿಳಿಯದೆ ಒಂದು ದಿವಸ ಸ್ಕೂಲಿಗೆ ಹೋದದ್ದಕ್ಕೆ ಕೋಪಮಾಡಿಕೊಂಡು ಮನೆಬಿಟ್ಟು ಬರದೆ, ಅವಳಿಗೆ ಪ್ರೌಢೆಯಾದ ಮೇಲೆ ಶಾಲೆಗೆ ಹೋಗುವುದರಿಂದ ಉಂಟಾಗುವ ದೋಷ ಗಳನ್ನು ಮನಸ್ಸಿಗೆ ಹತ್ತುವಂತೆ ತಿಳಿಸಿ, ಅಲ್ಲಿಗೆ ಹೋಗದಂತೆ ಮಾಡಬೇಕಾದದ್ದು ತನ್ನ ಕರ್ತವ್ಯವೆಂದು ಅವನು ಅಂದುಕೊಂಡನು. ಮುಂದೆ ಬರುವ ಸ್ಟೇಷನ್ ಬೆಂಗಳೂರಿಗೆ ಬರುವ ರೈಲೂ ಹಿಂದೂಪುರಕ್ಕೆ ಹೋಗುವ ರೈಲೂ ಸೇರುವ ಸ್ಥಳ ವಾದ್ದರಿಂದ ಅಲ್ಲಿ ರೈಲನ್ನು ಬದಲಾಯಿಸಿ ಬೆಂಗಳೂರಿಗೆ ಸಾಯಂಕಾಲ ಏಳುಗಂಟೆಗೆ ತಲುಪಬೇಕೆಂದು ಗೊತ್ತುಮಾಡಿದನು. ಅದರಂತೆ ಮುಂದಿನ ಸ್ಟೇಷನ್‌ನಲ್ಲಿ ತಾನು ಹತ್ತಿದ್ದ ರೈಲಿನಿಂದ ಇಳಿಯಲು, ಬೆಂಗಳೂರಿಗೆ ಹೋಗುತ್ತಿದ್ದ ರೈಲಿನಿಂದ ಯಾರೋ ತನ್ನ ಹೆಸರನ್ನು ಕೂಗಿದಂತಾಯಿತು. ಆಕಡೆ ತಿರುಗಿನೋಡಿ ಅವರು ತನ್ನ ದೂರದ ನೆಂಟರೆಂದು ಕೃಷ್ಣಮೂರ್ತಿಯು ಗುರ್ತುಹಿಡಿದು ಅಲ್ಲಿಗೆ ಹೋಗುವುದರೊಳಗಾಗಿ ಅವರೂ ರೈಲಿನಿಂದಿಳಿದು ಇವನ ಹತ್ತಿರ ಬಂದರು. ವೆಂಕಮ್ಮನವರಿಗೆ ಮೂರುದಿವಸ ಗಳಿಂದ ಬಂದ ಜ್ವರ ಬಿಡಲೇ ಇಲ್ಲವೆಂತಲೂ, ಕಾಗದ ಬರೆದರೆ ತಲುಪುವುದು ತಡ ವಾಗುತ್ತದೆಂದು ತಿಳಿದು ಅವನನ್ನು ತಾವೇ ಕರೆದುಕೊಂಡು ಬರಬೇಕೆಂದು ಬೆಂಗ ಳೂರಿಗೆ ಹೊರಟಿದ್ದರೆಂತಲೂ ಅವರು ಕೃಷ್ಣಮೂರ್ತಿಗೆ ಹೇಳಿದರು. ಈ ವರ್ತಮಾನ ವನ್ನು ಕೇಳಿ ಹುಚ್ಚನಂತಾಗಿ ಕೃಷ್ಣಮೂರ್ತಿಯು ತನ್ನ ನಂಟರೊಡನೆ ಹಿಂದೂಪುರಕ್ಕೆ ಹೋಗುವ ರೈಲಿನಲ್ಲಿ ಕೂತು ಹಳ್ಳಿಗೆ ಹೋದನು. ವೆಂಕಮ್ಮನವರು ಅವನ ಅಜ್ಜಿ ; ಚಿಕ್ಕಂದಿನಲ್ಲಿಯೇ ತಾಯಿ ತೀರಿಹೋಗಲು ಆಗಿನಿಂದಲೂ ಅವನನ್ನು ಸಾಕಿದವರು. ಅವನ ಹೆಂಡತಿ ಮನೆಗೆ ಬಂದಮೇಲೆ ಈಗಿನ ನವನಾಗರಿಕತೆಯು ಅವರಿಗೆ ಒಪ್ಪದೆ ಹಳ್ಳಿಯಲ್ಲಿಯೇ ಇದ್ದುಬಿಟ್ಟಿದ್ದರು.

ಇತ್ತ ಹಾಸಿಗೆಯಮೇಲೆ ಮಲಗಿ ಕಣ್ಣೀರು ಸುರಿಸುತ್ತಿದ್ದ ಶಾರದೆಗೆ ತಿರುಗಿ ನಿದ್ರೆಹತ್ತಿತು. ಈಗ ಮೊದಲು ಬಂದಂತೆ ಗಾಢನಿದ್ರೆ ಬರಲಿಲ್ಲ ; ನಿದ್ರೆಯೆಲ್ಲಾ ಸ್ವಪ್ನದಿಂದ ತುಂಬಿಹೋಗಿತ್ತು ; ತಾನು ಜ್ಞಾಪಿಸಿಕೊಂಡದ್ದನ್ನೆಲ್ಲಾ ಶಾರದೆಯು ಸ್ವಪ್ನದಲ್ಲಿ ಅನುಭವಿಸಿಬಿಟ್ಟಳು. ಅವಳು ಬೆಳಿಗ್ಗೆ ಏಳುವಹೊತ್ತಿಗೆ ಎಂಟುಗಂಟೆ ಯಾಯಿತು. ಮುಖತೊಳೆದು ಕಾಫಿಯನ್ನು ಕುಡಿಯುವಾಗ ಅಡಿಗೆಯವನನ್ನು ವಿಚಾರಿಸಲು, ಕೃಷ್ಣಮೂರ್ತಿಯು ಮನೆಗೆ ಬರಲಿಲ್ಲವೆಂತಲೂ ಅವನು ಎಲ್ಲಿಗೆ ಹೋದ ನೆಂಬ ಸಂಗತಿಯನ್ನು ಕೂಡ ತಿಳಿಸಲಿಲ್ಲವೆಂತಲೂ, ಅವಳಿಗೆ ಗೊತ್ತಾಯಿತು. ಮಹಲಿಗೆ ಹೋಗಿ ಕೂತು, ಬೇಕಾದಷ್ಟು ಅತ್ತು, ಕೊನೆಗೆ ತನ್ನ ವಿದ್ಯೆಯ ಸಹಾಯವನ್ನು

ಪಡೆದಳು. ತನ್ನನ್ನು ಕೃಷ್ಣಮೂರ್ತಿಯು ಈ ರೀತಿಯಾಗಿ ಧಿಕ್ಕರಿಸುವುದಕ್ಕೆ ತಾನೇನು ಪಶುವೇ? ತಾನು ಎಷ್ಟು ತಪ್ಪು ಮಾಡಿರುವಳೋ ಅವನೂ ಅಷ್ಟು ತಪ್ಪನ್ನು ಮಾಡಿಯೇ ಇರುವನು; ಕೃಷ್ಣಮೂರ್ತಿಯೇ ಮನೆಗೆ ಬಂದು ಅವನ ತಪ್ಪನ್ನು ಒಪ್ಪಿಕೊಂಡರೆ ತಾನು ಪ್ರಸನ್ನಳಾಗಬೇಕೇ ಹೊರತು, ಹೀಗೆ ಅವನಿಗೋಸ್ಕರ ದುಃಖಪಡುತ್ತಾ ಅವನು ಮನೆಗೆ ಬಂದರೆ ಸಾಕೆಂದಿರುವುದು ಎಲ್ಲಿಯ ನ್ಯಾಯ? ಹೆಂಗಸರು ಗಂಡಸರಿಗಿಂತ ಯಾತರಲ್ಲಿ ಏನು ಕಡಿಮೆ; ತನ್ನ ಗಂಡನು ತನ್ನನ್ನು ಬಿಟ್ಟು ಇರಬಲ್ಲನಾದರೆ ಅವನನ್ನು ಬಿಟ್ಟಿರಲು ತನ್ನಿಂದ ಏಕೆ ಸಾಧ್ಯವಲ್ಲ? ಕೃಷ್ಣ ಮೂರ್ತಿಗೆ ತಾನು ಬೇಡವಾದಮೇಲೆ ಅವನ ಮನೆಯಲ್ಲಿತಾನೆ ತನಗೆ ಏನುಕೆಲಸ?

ಶಾರದೆಯು ಈ ರೀತಿಯಾಗಿ ಯೋಚನೆ ಮಾಡಿ ತನ್ನ ತಂದೆಯ ಮನೆಗೆ ಹೋದಳು. ಅದೇ ಊರಿನಲ್ಲಿಯೇ ತವರುಮನೆ. ಮಗಳು ಅತ್ತೆಯ ಮನೆಗೆ ಹೋಗಿ ಇನ್ನೂ ಎರಡು ತಿಂಗಳು ಮಾತ್ರ ಆಗಿದ್ದದ್ದರಿಂದ, ಅವಳು ಓದಿಕೊಳ್ಳುತ್ತಿದ್ದ ಕೊಠಡಿ ಯನ್ನು ತೆರವು ಮಾಡಿಸಿ ಬೇರೆ ಕೆಲಸಕ್ಕೆ ಉಪಯೋಗಿಸಿರಲಿಲ್ಲ. ಶಾರದೆಯು ಮನೆ ಯೊಳಗೆ ಹೋಗಿ ಅಡಿಗೆ ಮನೆಯಲ್ಲಿದ್ದ ರಮಾಬಾಯಿಯಿಂದ ಬೀಗದ ಕೈಯನ್ನು ತೆಗೆದುಕೊಂಡು ಬಂದು ತನ್ನ ಕೊಠಡಿಯಲ್ಲಿ ಕೂತುಕೊಂಡಳು. ಮೇಜಿನ ಮೇಲಿ ಟ್ಟಿದ್ದ ಫೋಟೋ ನೋಡಿದ ಕೂಡಲೇ ಶಾರದೆಗೆ ಮಿತಿಮೀರಿ ದುಃಖ ಉಂಟಾಗಿ, ಕುರ್ಚಿಯಮೇಲೆ ಕೂತು ಮೇಜಿನ ಮೇಲೆ ತಲೆಯನ್ನಿಟ್ಟು ಗೋಡೆಯಕಡೆ ತಿರುಗಿ ಫೋಟೋ ಕೈಯಲ್ಲಿ ಹಿಡಿದು ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದಳು.

ಯಾತಕ್ಕೋ ಹೊರಗೆ ಹೋಗಿದ್ದ ವ್ಯಾಸರಾಯರು ಮನೆಗೆ ಬಂದು, ಶಾರದೆಯ ಕೊಠಡಿಯ ಬಾಗಿಲು ತೆರೆದಿರುವುದನ್ನು ನೋಡಿ, ಒಳಗೆ ಹೊಕ್ಕರು. ಮಗಳ ದುಃಖವು ಹೊಟ್ಟೆಹಿಡಿಸುವಂತಿರಲಿಲ್ಲ; ಹತ್ತಿರ ಹೋಗಿ ಮಗಳ ಬೆನ್ನಿನ ಮೇಲೆ ಕೈಆಡಿಸುತ್ತಾ ಅವಳ ಸಂಕಟಕ್ಕೆ ಕಾರಣವನ್ನು ವಿಚಾರಿಸಿದರು. ಶಾರದೆಯು ನಡೆದ ಸಂಗತಿಯನ್ನೆಲ್ಲಾ ತಂದೆಗೆ ಹೇಳಿದಳು. ಅವರು

"ಓ, ಬಿಡಮ್ಮ, ನಿನ್ನಂಥ ರತ್ನವನ್ನು ಇಟ್ಟುಕೊಂಡಿರಲಿಕ್ಕೆ ಅವನಿಗೇ ಅದೃ ಷ್ಟವಿಲ್ಲ. ನಾನಿರುವವರಿಗೂ ನಿನಗೇನು ಕಡಿಮೆ! ನೀನೇ ನನ್ನ ಗಂಡುಮಗನಾದೆ; ಇಲ್ಲಿಯೇ ಇದ್ದುಬಿಡು" ಎಂದರು.

ವ್ಯಾಸರಾಯರು ಮಗಳನ್ನು ಸಮಾಧಾನ ಮಾಡಿ ಕೃಷ್ಣಮೂರ್ತಿಯ ಮನೆ ಯಲ್ಲಿದ್ದ ಅವಳ ಸಾಮಾನನ್ನೆಲ್ಲಾ ಆಳುಗಳನ್ನು ಕಳಿಸಿ ತಮ್ಮ ಮನೆಗೆ ತರಿಸಿ ಕೊಂಡರು.

ಕೃಷ್ಣಮೂರ್ತಿಯ ಮನೆಯಲ್ಲಿ ಅಡಿಗೆಯವನಿಗೆ ಏನುಮಾಡಬೇಕೋ ಗೊತ್ತಾಗಲಿಲ್ಲ. ಮಧ್ಯಾಹ್ನ ಹನ್ನೆರಡುಗಂಟೆಯಾದರೂ ಕೃಷ್ಣಮೂರ್ತಿಯು ಮನೆಗೆ ಬರಲಿಲ್ಲ; ಮನೆಯನ್ನು ಬಿಟ್ಟು ಇಪ್ಪತ್ತು ನಾಲ್ಕು ಗಂಟೆಗಳಾದರೂ ಅವನ ಸಮಾಚಾರವೇ ಇಲ್ಲ. ಕೃಷ್ಣಮೂರ್ತಿಯು ಇನ್ನೂ ಮನೆಗೆ ಬರಲಿಲ್ಲವೆಂದು ಶಾರದೆಗೆ ತಿಳಿಸಿ, ಅವಳು ಏನು ಹೇಳುತ್ತಾಳೋ ಕೇಳಿಕೊಂಡು ಬರಬೇಕೆಂದು ಅಡಿಗೆಯವನು ವ್ಯಾಸರಾಯರ ಮನೆಗೆ ಹೊರಟನು. ಅವನು ಶಾರದೆಯನ್ನು ಮನೆಯ ವಿಷಯದಲ್ಲಿ ಏನು ಮಾಡಬೇಕೆಂದು ಕೇಳಿದ್ದಕ್ಕೆ ಅವಳು "ಮನೆಯ ವಿಷಯವನ್ನು ಮನೆಯ ಯಜಮಾನರನ್ನೇ ಕೇಳು" ಎಂದು ಉತ್ತರಕೊಟ್ಟಳು. ವ್ಯಾಸರಾಯರು ತಮಗೆ ಕೃಷ್ಣಮೂರ್ತಿಯ ಮೇಲಿದ್ದ ಕೋಪವನ್ನೆಲ್ಲಾ ಅವನ ಮೇಲೆ ತೀರಿಸಿದರು. ಅಡಿಗೆಯವನು ಸಂಕಟಪಟ್ಟುಕೊಂಡು ಮನೆಗೆ ಬಂದು ಏನು ಮಾಡಬೇಕೆಂಬುದು ತೋರದೆ ವೆಂಕಮ್ಮನಿಗೆ ಕಾಗದ ಬರೆಸಿದನು.—

"ಮಾತೋಶ್ರೀ ವೆಂಕಮ್ಮನವರಿಗೆ ನಮಸ್ಕಾರಗಳು. ಇಲ್ಲಿ ನನಗೆ ತುಂಬಾ ತೊಂದರೆಯಾಗಿದೆ. ಕೃಷ್ಣಮೂರ್ತೀರಾಯರು ನಿನ್ನೆ ಮಧ್ಯಾಹ್ನ ಮನೆ ಬಿಟ್ಟವರು ಇನ್ನೂ ಮನೆಗೆ ಬರಲೇ ಇಲ್ಲ. ಶಾರದಮ್ಮನವರು ಅವರ ತಂದೇ ಮನೆಗೆ ಹೊರಟುಹೋದರು; ಅವರ ಸಾಮಾನನ್ನೆಲ್ಲಾ ತರಿಸಿಕೊಂಡರು. ತುಂಬಿದ ಮನೆ. ಏನು ಮಾಡಬೇಕೋ ಗೊತ್ತಿಲ್ಲ. ಏನುಮಾಡಬೇಕೋ ತಕ್ಷಣ ಕಾಗದ ಬರೀಬೇಕು."

ವೆಂಕಮ್ಮನಿಗೆ ಔಷಧ ತರಲಿಕ್ಕೆ ಹೋದವನು ಬರುವಾಗ ಟಪಾಲನ್ನೂ ತಂದನು. ಕೃಷ್ಣಮೂರ್ತಿಯು ಅಜ್ಜಿಗೆ ಔಷಧ ಪಥ್ಯಗಳನ್ನು ಕೊಟ್ಟು ಕಾಗದವನ್ನು ಓದಿಕೊಂಡನು. ಅದರಿಂದ ಶಾರದೆಯು ಸ್ಕೂಲಿಗೆ ಹೋದವಳು ಹಾಗಿಂದಹಾಗೆಯೇ ತಂದೆಯ ಮನೆಗೆ ಹೋದಳೆಂದು ಅವನಿಗೆ ಅರ್ಥವಾಯಿತು. ಪ್ರಪಂಚವನ್ನರಿಯದ ಹೆಂಡತಿಯನ್ನು ಬಿಟ್ಟು ಬಂದದ್ದೂ, ಅವಳಿಗೆ ಕಾಗದ ಬರೆಯಲು ಕೂಡಾ ಅವಕಾಶ ಇರದೇ ಇದ್ದದ್ದೂ, ಕೃಷ್ಣಮೂರ್ತಿಯ ಮನಸ್ಸಿನಲ್ಲಿ ಕೊರೆಯುತ್ತಿದ್ದವು. ಈ ಕಾಗದ ಬರುತ್ತಲೂ ಅವನಿಗೆ ಸ್ವಲ್ಪ ಸಮಾಧಾನವಾಯಿತು; ಸ್ಕೂಲಿಗೆ ಹೋದವಳು ಮನೆಗೆ ಬರದೇ ತಂದೆಯ ಮನೆಗೆ ಹೋದದ್ದರಿಂದ ಶಾರದೆಯೇ ಗಂಡನನ್ನು ಬಿಟ್ಟಂತೆ ಆಯಿತೇ ಹೊರತು ತಾನು ಹೆಂಡತಿಯನ್ನು ಬಿಟ್ಟಂತೆ ಆಗಲಿಲ್ಲ. ಈ ವಿಷಯದಲ್ಲಿ ಇನ್ನು ಹೆಚ್ಚು ಯೋಚಿಸಲು ಕಾಲವಿರಲಿಲ್ಲ. ಅಡಿಗೆಯವನು ಬೆಲೆಯುಳ್ಳ ಪದಾರ್ಥಗಳನ್ನೆಲ್ಲಾ ಕಟ್ಟಿಕೊಂಡು, ಮನೆಯನ್ನು ಆಳುಗಳ ವಶದಲ್ಲಿ ಬಿಟ್ಟು, ಹಳ್ಳಿಗೆ ಬಂದು ಬಿಡುವಂತೆ, ತಂತಿಯ ವರ್ತಮಾನವನ್ನು ತನ್ನ ಹೆಸರಿನಿಂದ ಕಳಿಸುವಂತೆ ಕೃಷ್ಣಮೂರ್ತಿಯು ಕೆಲವರಿಗೆ ಹೇಳಿ, ಅವರನ್ನು ತಾಲ್ಲೂಕು ಗ್ರಾಮಕ್ಕೆ ಕಳಿಸಿದನು.

ವೆಂಕಮ್ಮನವರಿಗೆ ಅಡಿಗೆಯವನ ಕಾಗದವನ್ನು ಓದಿಹೇಳಿ, ತನಗೂ ತನ್ನ ಹೆಂಡತಿಗೂ ಬೆಂಗಳೂರಲ್ಲಿ ನಡೆದ ಸಂಗತಿಯನ್ನೆಲ್ಲಾ ಸಂಕ್ಷೇಪವಾಗಿ ತಿಳಿಸಿದನು.

" ಶಾರದೆ ನಿನಗೆ ತಕ್ಕ ಹೆಂಡತಿಯಲ್ಲ ಅಂಬೋದು ನನಗೆ ಮೊದಲೇ ಗೊತ್ತಿತ್ತು. ನಿನಗೆ ಎಷ್ಟೋ ಸಲ ಹೇಳಿದೆ, ಬೇರೇ ಮದುವೆಮಾಡಿಕೋ ಅಂತ, ನೀನು ಬೇರೆ ಕೇಳಲಿಲ್ಲ. ಈಗಾದರೇನು ಚಿಂತೆ ಇಲ್ಲ, ಬಡಜ್ಜಿಯ ಮಗಳು ರುಕ್ಮಿಣಿಯನ್ನು ಮದುವೆಮಾಡಿಕೋ. ಒಳ್ಳೇ ಬೆಳೆದ ಹೆಣ್ಣು, ಸಂಸಾರಸ್ಥರಿಗೆ ತಕ್ಕಂತೆ ಇದ್ದಾಳೆ. ರೂಪದಲ್ಲಿ ನಿನ್ನ ಶಾರದೆಗೆ ಏನೂ ಕಮ್ಮಿ ಇಲ್ಲ. "

" ನಿನಗೆ ಏಕಮ್ಮಾ ಕಾಯಿಲೆ ಮಲಗಿರೋಳಿಗೆ ಈ ಯೋಚನೆಯೆಲ್ಲಾ ! ಸದ್ಯಕ್ಕೆ ಈ ಜ್ವರ ಒಂದು ವಾಸಿಯಾಗಲಿ. ಒಂದೂ ಯೋಚನೆ ಮಾಡಬೇಡ ಸುಮ್ಮನಿರು. "

ಡಾಕ್ಟರು ಆಗಾಗ ಬಂದು ರೋಗಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಜ್ವರ ಬಂದು ಹದಿನೈದು ದಿವಸಗಳವರಿಗೂ ಒಂದೇ ರೀತಿಯಾಗಿಯೇ ಇತ್ತು ; ಅವತ್ತು ರಾತ್ರಿ ಕೆಮ್ಮು ಪ್ರಾರಂಭವಾಯಿತು. ಬೆಳಗಾದ ಮೇಲೆ ಸ್ವಲ್ಪ ಕಡಿಮೆಯಾಗಿ ರಾತ್ರಿ ಕೆಮ್ಮು ವಿಪರೀತವಾಯಿತು. ಬೆಳಗಿನ ಝಾವದಲ್ಲಿಯೇ ಡಾಕ್ಟರನ್ನು ಕರೆದುಕೊಂಡು ಬರುವಂತೆ ಕೃಷ್ಣಮೂರ್ತಿಯು ಆಳನ್ನು ಕಳಿಸಿದನು. ಅವರು ಬಂದು ಶ್ವಾಸಕೋಶ ಕೆಟ್ಟಿದೆ ಎಂದು ಹೇಳಿ, ಬೆಂಗಳೂರಿನಿಂದ ತಂತಿಯನ್ನು ಕೊಟ್ಟು ತರಿಸುವಂತೆ ಹೇಳಿ ಔಷಧದ ಹೆಸರನ್ನು ಬರೆದುಕೊಟ್ಟು, ತಾವೂ ಆಸ್ಪತ್ರೆಯಿಂದ ಬೇರೇ ಔಷಧವನ್ನು ಕೊಟ್ಟುಕಳಿಸಿದರು. ಸಾಯಂಕಾಲವೆನ್ನುವ ಹೊತ್ತಿಗೆ ಕೆಮ್ಮು ಇನ್ನೂ ಹೆಚ್ಚಿತು. ಮನೆಯಲ್ಲಿ ಎಲ್ಲರಿಗೂ ಗಾಬರಿಯಾಯಿತು. ವೆಂಕಮ್ಮನವರೂ ಬದುಕುವ ಆಶೆಯನ್ನು ಬಿಟ್ಟುಬಿಟ್ಟರು. ಅವತ್ತಿನ ದಿವಸ ಮನೆಯಲ್ಲಿ ಯಾರಿಗೂ ನಿದ್ರೆ ಇಲ್ಲ. ಮಧ್ಯೆ ರಾತ್ರಿಯಲ್ಲಿ ವೆಂಕಮ್ಮನವರು ಮೊಮ್ಮಗನನ್ನು ಹತ್ತಿರಕ್ಕೆ ಕರೆದು " ನಾನು ಉಳಿಯುವಹಾಗಿಲ್ಲ, ನುರಿ " ಎಂದರು.

ನಾಲ್ಕುವರ್ಷದ ಹುಡುಗನಿಂದ ತಾಯಿ ಇಲ್ಲದ ತನ್ನನ್ನು ಬೆಳೆಸಿ ದೊಡ್ಡವನನ್ನು ಮಾಡಿದವಳು ಈ ಮಾತನ್ನು ಹೇಳುತ್ತಲೂ ಕೃಷ್ಣಮೂರ್ತಿಯ ಕಣ್ಣಿನಲ್ಲಿ ನೀರು ತುಂಬಿತು.

" ನಿನ್ನ ಮನಸ್ಸಿನಲ್ಲಿ ಏನಿದ್ದರೂ ಹೇಳು, ಆ ಕೆಲಸ ನಾನು ಮಾಡುತ್ತೇನೆ. "

" ಇನ್ನೇನೂ ಇಲ್ಲ, ನಿನಗೆ ಗಂಡುಕೂಸು ಆದದ್ದನ್ನು ನೋಡಬೇಕು ಅಂತ ಇತ್ತು, ದೇವರು ಅಷ್ಟು ಮಾಡಿಸಲಿಲ್ಲ. ನಿನಗೆ ಒಳ್ಳೇ ಹೆಂಡತಿ ಕೂಡ ಸಿಕ್ಕಲಿಲ್ಲ

ಅಂತ ಕೊರೀತಾ ಅದೆ. ನೀನು ರುಕ್ಮಿಣಿಯನ್ನು ಮದುವೆಮಾಡಿಕೋತೇನೆ ಅಂತ ಕೈ ಮೇಲೆ ಕೈಹಾಕಿ ಮಾತುಕೊಡು ; ಸಂತೋಷದಿಂದ ಪ್ರಾಣಬಿಡುತ್ತೇನೆ.''

ಕೃಷ್ಣಮೂರ್ತಿಯು ಬದಲು ಮಾತನಾಡದೆ ಅಜ್ಜಿಯ ಕೈಯಲ್ಲಿ ತನ್ನ ಕೈಯನ್ನಿಟ್ಟನು.

'' ನೀನೂ ರುಕ್ಮಿಣಿ ನೂರುಕಾಲ ಸುಖವಾಗಿರಿ. ಶುಭ ಸ್ವೀಕಾರವಾದಮೇಲೆ ಮೊದಲನೆಯ ಮುಹೂರ್ತದಲ್ಲಿಯೇ ಮದುವೆಮಾಡಿಕೊ. ಇನ್ನು ಒಂದೇ ಮನಸ್ಸಿನಲ್ಲಿ ಪ್ರಾಣಹೋಗುತ್ತಪ್ಪಾ —ಮರಿ, ಬಹಳ ದಿವಸದಿಂದ ಜಾಗರಮಾಡುತ್ತಾ ಇದ್ದಿ, ನಿನಗೆಲ್ಲಾದರೂ ಕಾಯಿಲೆ ಬಂದೀತು, ಮಲಗಿಕೋ ಹೋಗು ; ನನಗೆ ಹೆಚ್ಚು ಸಂಕಟವಾದರೆ ಹೇಳಿಕಳಿಸುತ್ತೇನೆ. ''

ಆದರೆ ಆಕೆ ಸಾಯಲಿಲ್ಲ. (ಹಿಂದಿನಕಾಲದ ಗಟ್ಟಿಮುದುಕಿ !) ಸ್ವಲ್ಪ ಓಡಾಡುವ ಹಾಗಾದಮೇಲೆ ರುಕ್ಮಿಣಿಗೂ ಕೃಷ್ಣಮೂರ್ತಿಗೂ ಮದುವೆಯನ್ನು ಮಾಡಿಸಿದಳು.

ರುಕ್ಮಿಣಿಯು ಬೆಳೆದ ಹುಡುಗಿ ; ಮದುವೆಯಾದ ಆರುತಿಂಗಳಿಗೆ ದೊಡ್ಡವಳಾದಳು ; ನಿಷೇಕವು ಹಳ್ಳಿಯಲ್ಲಿಯೇ ಆಯಿತು. ಈಗ ಕೃಷ್ಣಮೂರ್ತಿಗೆ ಮೊದಲಿನಷ್ಟು ಉತ್ಸಾಹವಿರಲಿಲ್ಲ ; ಶಾರದೆಯನ್ನು ಕರೆದುಕೊಂಡು ಹೋದಂತೆ ರುಕ್ಮಿಣಿಯನ್ನು ದೊಡ್ಡ ದೊಡ್ಡ ಪಟ್ಟಣಗಳಿಗೆ ಕರೆದುಕೊಂಡು ಹೋಗಿ ತಿರುಗಿಸಲಿಲ್ಲ. ಹಳ್ಳಿಯಿಂದ ಬೆಂಗಳೂರಿಗೆ ಬಂದನು.

ಈಗ ಹಿಂದೆ ನಡೆದಂತೆ ಚಾಮರಾಜಪೇಟೆಯ ಮನೆಯಲ್ಲಿ ಹೊಸ ದಂಪತಿಗಳ ಸಂಸಾರ; ಮೊದಲಿನಂತೆ ಆಳು ಕಾಳುಗಳೂ ಅಡಿಗೆಯವನೂ ಇದಾರೆ; ಆದರೆ ಇದು ಶಾರದಾ ಕೃಷ್ಣಮೂರ್ತಿಯರ ಸಂಸಾರವಲ್ಲ ; ರುಕ್ಮಿಣೀ ಕೃಷ್ಣಮೂರ್ತಿಯರ ಸಂಸಾರ ; ಮನೆಯಲ್ಲಿ ಪೂರ್ವಕಾಲದ ಪದ್ಧತಿಗಳು ಹೆಚ್ಚಿವೆ.

ಕೃಷ್ಣಮೂರ್ತಿಯು ಊರಿಗೆ ಬರುತ್ತಲೂ ಸ್ನೇಹಿತರು ಮನೆಗೆ ಬಂದು ಹೋಗಲು ಪ್ರಾರಂಭಿಸಿದರು. ಊರಿಗೆ ಬಂದು ಎರಡು ಮೂರು ದಿವಸಗಳಾದ ಮೇಲೆ ಒಂದು ದಿವಸ ಮಧ್ಯಾಹ್ನ ಮೂರುಗಂಟೆಯ ಹೊತ್ತಿನಲ್ಲಿ, ಕೃಷ್ಣಮೂರ್ತಿಯು ತನ್ನ ಸ್ನೇಹಿತರೊಂದಿಗೆ ಮಾತನಾಡುತ್ತಾ ಮಹಲಿನಲ್ಲಿ ಕೂತಿದ್ದನು. ಚಂದ್ರ ಶಾಲೆಯಲ್ಲಿ ರುಕ್ಮಿಣಿಯನ್ನು ನೋಡಿ ಎದ್ದುಬಂದು, ತನ್ನ ಸ್ನೇಹಿತರಿಗೆ ಫಲಾಹಾರಕ್ಕೆ ಏನನ್ನಾದರೂ ತೆಗೆದುಕೊಂಡು ಬರುವಂತೆ ಹೇಳಿದನು. ಸ್ವಲ್ಪ ಹೊತ್ತಾದ ಮೇಲೆ ಕೃಷ್ಣಮೂರ್ತಿಯು ಮಾತನಾಡುತ್ತಿರುವಾಗ ಏನೋ ಜರುಗಿಸಿದ ಶಬ್ದವಾಗಿ ಬಾಗಿಲ

ಕಡೆ ನೋಡಿದನು ; ಮಹಲಿನ ಬಾಗಿಲ ಹತ್ತಿರ ಒಂದು ಕಲ್ಲುಗಡಿಗೆ ಇಟ್ಟಿತ್ತು. ಎದ್ದು ಬಂದು ನೋಡಿದನು ; ಅದರ ತುಂಬಾ ಮಸರೂ ಅವಲಕ್ಕಿ ; ಚಂದ್ರಶಾಲೆ ಯಲ್ಲಿ ಇಣಿಕಿನೋಡಿದನು ; ರುಕ್ಮಿಣಿಯು ಆರು ಮೊಳದ ಧಾವಳಿಯನ್ನು ಸುತ್ತಿ ಕೊಂಡು ನಿಂತಿದ್ದಳು ! ಕೈಯೆಲ್ಲಾ ಮಸರಾಗಿತ್ತು. ನವನಾಗರಿಕತೆಯಲ್ಲಿ ತೇಲಿ ಮುಳುಗುತ್ತಿದ್ದ ಕೃಷ್ಣಮೂರ್ತಿಗೆ ಇದನ್ನು ನೋಡಿ ಮಿತಿಮೀರಿ ಕೋಪಬಂತು. ಕಲ್ಲುಗಡಿಗೆಯನ್ನು ರುಕ್ಮಿಣಿಯ ಮುಂದೆ ತಂದಿಟ್ಟು, ಅಡಿಗೆಯವನನ್ನು ಕೂಗಿ ಹೇಳಿ ಬೇಕಾದ ಪದಾರ್ಥಗಳನ್ನು ಮಾಡಿಸಿ ಸ್ನೇಹಿತರಿಗೆ ಕೊಟ್ಟನು. ಆದಿವಸ ರಾತ್ರಿ ಕೃಷ್ಣಮೂರ್ತಿಯು ಪಟ್ಟಣಗಳಲ್ಲಿರುವ ಸಮಾಜಸ್ಥಿತಿಯನ್ನು ರುಕ್ಮಿಣಿಗೆ ತಿಳಿಯಪಡಿಸಿ ಅವಳು ಫಲಾಹಾರಕ್ಕೆ ಮಸರೂ ಅವಲಕ್ಕಿಯನ್ನು ಧಾವಳಿಯನ್ನುಟ್ಟು ತಂದದ್ದು ತನಗೆ ಎಷ್ಟು ಅವಮಾನವಾಯಿತೆಂಬುದನ್ನು ತಿಳಿಸಿಕೊಟ್ಟನು. ಗಂಡನು ಮಾತ ನಾಡಿದ ಹಾಗೆಲ್ಲಾ ರುಕ್ಮಿಣಿಯ ಕಣ್ಣಿನಲ್ಲಿ ನೀರು ಸುರಿಯಲು ಪ್ರಾರಂಭವಾಯಿತು ; ಇನ್ನು ಮುಂದೆ ಈ ರೀತಿಯಾದ ತಪ್ಪನ್ನು ಮಾಡುವುದಿಲ್ಲವೆಂದು ಅವಳು ಹೇಳಿದಳು. ತನ್ನ ತಪ್ಪನ್ನು ತಾನು ಒಪ್ಪಿಕೊಂಡು ಮುಂದೆ ತಾನು ತಿದ್ದಿಕೊಳ್ಳುತ್ತೇನೆಂದು ರುಕ್ಮಿಣಿಯು ಹೇಳಿದ್ದರಿಂದ ಕೃಷ್ಣಮೂರ್ತಿಗೆ ಬಹಳ ಸಂತೋಷವಾಯಿತು. ರುಕ್ಮಿಣಿಯು ಇದನ್ನೇ ಮನಸ್ಸಿನಲ್ಲಿ ಹಚ್ಚಿಕೊಂಡು ಸಂಕಟಪಡದಂತೆ, ಕೃಷ್ಣ ಮೂರ್ತಿಯು ಒಳ್ಳೆಯ ಮಾತನ್ನಾಡಿ, ಅವಳನ್ನು ಸಮಾಧಾನಮಾಡಿದನು.

ಶನಿವಾರ ಸಾಯಂಕಾಲ ಕಬ್ಬನ್ ಪಾರ್ಕಿಗೆ ಹೋಗಿ ಬ್ಯಾಂಡ್ ಕೇಳಬೇ ಕೆಂದು ಕೃಷ್ಣಮೂರ್ತಿಗೆ ಮನಸ್ಸು ಹುಟ್ಟಿತು ; ರುಕ್ಮಿಣಿಯನ್ನು ಬಗ್ಗಿಯ ಗಾಡಿ ಯಲ್ಲಿ ಕೂರಿಸಿಕೊಂಡು ಹೋದನು. ಕೃಷ್ಣಮೂರ್ತಿಯು ದಾರಿಯಲ್ಲಿ ಅವಳ ಕಡೆ ನೋಡುವಾಗ ಯಾಕೋ ಒಂದು ತರಹವಾಗಿ ಕೂತಿದ್ದಂತೆ ಕಾಣಿಸಿತು. ಬರುತ ಬರುತ ಇನ್ನೂ ಹೆಚ್ಚಿ ಕಬ್ಬನ್‌ಪಾರ್ಕ್ ಸೇರುವ ಹೊತ್ತಿಗೆ ರುಕ್ಮಿಣಿಯು ಒಂದು ಮೂಲೆಯಲ್ಲಿ ಅಡಗಿಕೊಂಡಿದ್ದಳು. ಅವಳ ಮುಖದಲ್ಲಿ, ಏನೋ ಮಾಡಬಾರದ್ದನ್ನು ಮಾಡಿ ಸಿಕ್ಕಿಬಿದ್ದವರ ಮುಖದ ಕಳೆ ಇತ್ತು. ಹೊಸ ನಮೂನೆಯ ಉಡಿಗೆಗಳ ನ್ನುಟ್ಟು ಬಂದಿದ್ದ ಜನರನ್ನು ಹೆಂಡತಿಗೆ ತೋರಿಸಿ, ಬ್ಯಾಂಡನ್ನು ಕೇಳುತ್ತಾ, ಅವ ಳೊಡನೆ ಸರಸವಾಡಬೇಕೆಂದು ಬಂದಿದ್ದ ಕೃಷ್ಣಮೂರ್ತಿಗೆ ಉತ್ಸಾಹಭಂಗವಾಯಿತು. ಬಂಡಿಯನ್ನು ಹೊಡಿಸಿಕೊಂಡು ಮನೆಗೆ ಬಂದುಬಿಟ್ಟನು.

ಕೃಷ್ಣಮೂರ್ತಿಯು ರುಕ್ಮಿಣಿಯ ಈ ನಡೆವಳಿಕೆಗಳಿಗೆಲ್ಲಾ ಅವಳಿಗೆ ವಿದ್ಯೆ ಇಲ್ಲದಿರುವುದೇ ಕಾರಣವೆಂದು ತಿಳಿದು, ಅವಳಿಗೆ ಅಕ್ಷರಾಭ್ಯಾಸ ಮೊದಲು ಇಂಗ್ಲೀಷು

ಕನ್ನಡಗಳಲ್ಲಿ ಚನ್ನಾಗಿ ಓದುಬರಹ ಬರುವವರಿಗೂ ತಾನೇ ಹೇಳಿಕೊಡಬೇಕೆಂದು ವ್ಯವಸ್ಥೆಮಾಡಿದನು. ಅವಳೊಡನೆ ಬೆಂಗಳೂರಲ್ಲಿ ಸಂಸಾರಮಾಡಿದರೆ ಸ್ನೇಹಿತರ ಮುಂದೆಲ್ಲಾ ಅವಮಾನವಾಗುವುದರಿಂದ ರುಕ್ಮಿಣಿಯು ವಿದ್ಯಾವತಿಯಾಗುವವರೆಗೂ ಹಳ್ಳಿಯಲ್ಲಿಯೇ ವಾಸಮಾಡಬೇಕೆಂದು ಗೊತ್ತುಮಾಡಿ, ಮಾರನೆಯ ದಿವಸವೇ ಹಳ್ಳಿಗೆ ಹೋಗಬೇಕೆಂದು ಕೃಷ್ಣಮೂರ್ತಿಯು ರುಕ್ಮಿಣಿಗೆ ಹೇಳಿದನು. ಬೆಂಗಳೂರಿಗೆ ಬಂದ ಒಂದು ವಾರದೊಳಗಾಗಿ ರುಕ್ಮಿಣೀ ಕೃಷ್ಣಮೂರ್ತಿಯರು ಹಳ್ಳಿಗೆ ಹೊರಟುಹೋದರು.

(೩)

ಶಾರದೆಯು ಅಡಿಗೆಯವನಿಗೆ ಒರಟು ಉತ್ತರವನ್ನು ಕೊಟ್ಟು, ಕೃಷ್ಣಮೂರ್ತಿಯ ಯೋಗಕ್ಷೇಮ ತಿಳಿಯದೆ, ಆ ದಿವಸವೆಲ್ಲಾ ಕೊರಗಿದಳು. ಮಾರನೆಯ ದಿವಸ ಸಾಯಂಕಾಲ ತನ್ನ ಮನೆಯ ಆಳುಗಳನ್ನು ಕೃಷ್ಣಮೂರ್ತಿಯ ಮನೆಗೆ ಕಳಿಸಿ ವರ್ತಮಾನವನ್ನು ತರಿಸಿಕೊಂಡಳು. ಕೃಷ್ಣಮೂರ್ತಿಯು ಹಳ್ಳಿಯಿಂದ ತಂತಿಯನ್ನು ಕೊಟ್ಟು ಅಡಿಗೆಯವನನ್ನು ಕರೆಸಿಕೊಂಡನೆಂದು ಗೊತ್ತಾಯಿತು. ಈ ವರ್ತಮಾನದಿಂದ ಕೃಷ್ಣಮೂರ್ತಿಯು ಹಳ್ಳಿಯಲ್ಲಿ ಸೌಖ್ಯವಾಗಿದಾನೆಂದು ತಿಳಿದು ಅವಳ ಮನಸ್ಸಿಗೆ ಸಂತೋಷವಾದರೂ, ಅಡಿಗೆಯವನನ್ನು ಕರೆಸಿಕೊಂಡು ಮನೆಯ ಮುಖ್ಯವಾದ ಸಾಮಾನುಗಳನ್ನೆಲ್ಲಾ ತರಿಸಿಕೊಂಡದ್ದರಿಂದ ಕೃಷ್ಣಮೂರ್ತಿಯು ತನ್ನನ್ನು ಬಿಟ್ಟುಬಿಟ್ಟದ್ದು ನಿಜವೆಂದೂ, ಸದ್ಯದಲ್ಲಿ ಬೆಂಗಳೂರಿಗೆ ಬರುವ ಯೋಚನೆ ಕೂಡ ಅವನಿಗೆ ಇಲ್ಲವೆಂದೂ ಶಾರದೆಗೆ ಸ್ಪಷ್ಟವಾಗಿ ತಿಳಿದು ಅವಳಿಗೆ ಬಹಳ ದುಃಖವನ್ನು ಉಂಟುಮಾಡಿತು.

ಒಂದೆರಡು ದಿವಸಗಳಲ್ಲಿಯೇ ತಂದೆಯ ಮಾತಿನಂತೆ ಎನ್‌ಟ್ರೆನ್‌ಸ್ ಕ್ಲಾಸಿಗೆ ಸೇರಿಬಿಟ್ಟಳು. ಸ್ಕೂಲಿಗೆ ಸೇರಿದ ಮೊದಲು ಸಂಸಾರದ ಯೋಚನೆಯೇ ಘಳಿಗೆ ಘಳಿಗೆಗೂ ಬಂದು ಶಾರದೆಯ ಓದು ಸಾಗುತ್ತಿರಲಿಲ್ಲ; ಆದರೆ ದಿವಸಗಳು ಕಳೆದ ಹಾಗೆಲ್ಲಾ ವಿರಹ ದುಃಖವು ಕಡಮೆಯಾಗುತ್ತಾ ಬಂದು, ಒಂದೆರಡು ತಿಂಗಳೊಳಗಾಗಿ ಶಾರದೆಯು ಒಂದೇ ಮನಸ್ಸಿನಿಂದ ಪಾಠಶಾಲೆಯ ಕೆಲಸವನ್ನು ಮಾಡಲಾರಂಭಿಸಿದಳು.

ಶಾರದೆಯಂಥ ಬುದ್ಧಿವಂತೆಗೆ ಮತ್ತು ಕಷ್ಟಪಟ್ಟು ಕೆಲಸಮಾಡುವ ಹುಡುಗಿಗೆ ಎನ್‌ಟ್ರೆನ್‌ಸ್ ಪ್ಯಾಸು ಮಾಡುವುದು ಏನೂ ಕಷ್ಟವಾಗಲಿಲ್ಲ. ವಿದ್ಯೆಯ ವಿಷಯದಲ್ಲಿ ಅದೃಷ್ಟವಿದ್ದಂತೆ ಶಾರದೆಗೆ ಸಂಸಾರದಲ್ಲಿ ಅದೃಷ್ಟವಿರಲಿಲ್ಲ. ಮಗಳೂ ಅಳಿಯನೂ ಅಗಲಿದ ಮೊದಲು ರಮಾಬಾಯಿಯವರು ಕೊರಗಿಕೊರಗಿ ಶಾರದೆಗೆ

ವ್ಯಾಸಾದ ವರ್ತಮಾನ ತಿಳಿಯುವುದರೊಳಗಾಗಿ ಪರಲೋಕಕ್ಕೆ ಹೊರಟುಹೋದರು. ಪತಿಯ ವಿರಹದಿಂದ ಮೊದಲೇ ಸಂಕಟಪಡುತ್ತಿದ್ದವಳಿಗೆ ಮಾತೃದುಃಖವೂ ಬಂತು.

ವ್ಯಾಸರಾಯರೇ ಶಾರದೆಗೆ ದೊಡ್ಡ ಬೆಂಬಲ; ಅವರ ಮಾತಿನಂತೆ ಅವಳು ಕಾಲೇಜಿಗೆ ಸೇರಿದಳು. ತಾಯಿ ಇಲ್ಲದ್ದರಿಂದ ಮನೆಯ ಸಂಸಾರವೆಲ್ಲಾ ಶಾರದೆಯ ಮೇಲೆ ಬಿತ್ತು. ಒಬ್ಬ ಹೆಂಗಸನ್ನು ಅಡಿಗೆಮಾಡುವುದಕ್ಕೆ ತಂದಿಟ್ಟುಕೊಂಡಳು; ಮನೆಯ ಪರಿಚಾರಕೆಗೆ ದೇವದತ್ತನೆಂಬ ಒಬ್ಬ ಹುಡುಗನೂ ಬಂದನು; ತನ್ನ ಸ್ನೇಹಿತರ ಪೈಕಿ ಒಬ್ಬ ಬಡ ವಿದ್ಯಾರ್ಥಿನಿಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡಳು. ಆಳುಗಳಿಂದ ಒಂದು ತಿಂಗಳಿಗೆ ಬೇಕಾದ ಸಾಮಾನನ್ನೆಲ್ಲಾ ಒಟ್ಟಿಗೆ ತರಿಸಿಹಾಕಿ, ಇವರೆಲ್ಲರ ಸಹಾಯದಿಂದ ಶಾರದೆಯು ಸುಲಭವಾಗಿ ಸಂಸಾರಮಾಡುತ್ತಿದ್ದಳು. ದಡ್ಡರಂತೆ ಬುದ್ಧಿವಂತರಿಗೂ ಕಷ್ಟಗಳು ಬಂದರೂ, ಅವುಗಳಿಂದ ತಮಗೆ ಹೆಚ್ಚು ತೊಂದರೆಯಾಗದಂತೆ ಅವರು ನೋಡಿಕೊಳ್ಳುತ್ತಾರೆ.

ಶಾರದೆಯ ಯಜಮಾನಿಕೆಯಲ್ಲಿ ಒಂದುವರ್ಷ ಸಂಸಾರ ನಡೆಯಿತು. ಮೊದಲನೇ ವರ್ಷದ ಬಿ. ಎ. ಕ್ಲಾಸಿನಲ್ಲಿ ತೇರ್ಗಡೆಯಾದಳು. ಆದರೆ ಶಾರದೆಗೆ ಸ್ವಲ್ಪ ಸಂತೋಷವಾದರೆ ದುಃಖವು ಹಿಂದೆಯೇ ನಾನಿದ್ದೇನೆಂದು ಕಾದಿರುತ್ತಿತ್ತು. ಇಷ್ಟು ದಿವಸ ಬೆಂಗಳೂರಲ್ಲಿ ಇದ್ದ ವ್ಯಾಸರಾಯರಿಗೆ ಈಗ ಮದ್ದಗಿರಿಗೆ ವರ್ಗವಾಯಿತು. ತಾವು ಅಲ್ಲಿಗೆ ಹೋಗಿ ಬೆಂಗಳೂರಿಗೆ ವರ್ಗಮಾಡಿಸಿಕೊಳ್ಳಲು ಪ್ರಯತ್ನಪಡುವರೆಂದೂ, ಅಲ್ಲಿಯವರಿಗೂ ಶಾರದೆಯು ಹಾಸ್ಟಲಿನಲ್ಲಿ ಇದ್ದು ಓದಬೇಕೆಂದೂ ಗೊತ್ತುಮಾಡಿ ಅವರು ಊರಿಗೆ ಹೋದರು. ಇನ್ನೊಂದುವಾರ ಬಿಟ್ಟು ಮೊದಲನೆಯ ತಾರೀಖಿನ ದಿವಸ ಹಾಸ್ಟಲಿಗೆ ಹೋಗುವುದೂ ಗೊತ್ತಾಗಿತ್ತು. ವ್ಯಾಸರಾಯರು ಬೆಂಗಳೂರನ್ನು ಬಿಟ್ಟುಹೋದ ಎರಡುಮೂರು ದಿವಸಗಳ ಮೇಲೆ ಅವರ ಹೆಸರಿಗೆ ಒಂದು ಲಕೋಟೆಯು ಬಂತು. ಅದರಲ್ಲಿ ಎರಡು ಕಾಗದಗಳಿದ್ದುವು; ಒಂದನ್ನು ಓದಿದಳು; ತನ್ನ ತಂದೆಯು ತನಗೆ ಬರೆದ ಕಾಗದ! ಒಂದೆರಡು ಪಂಕ್ತಿಗಳು ಮಾತ್ರ ಇದ್ದುವು. ಪ್ರಾರಂಭ ಮಾತ್ರ; ಇನ್ನೂ ಕಾಗದ ಪೂರೈಸಿರಲಿಲ್ಲ. ಇನ್ನೊಂದು ಕಾಗದವನ್ನು ತೆಗೆದುಕೊಂಡಳು. ಅದು ತನಗೆ ಪರಿಚಿತ ಅಕ್ಷರವಲ್ಲ. ಓದಿದಳು, ಗಟ್ಟಿಯಾಗಿ ಚೀರಿ ಕುರ್ಚಿಯ ಮೇಲೆ ಕೂತುಬಿಟ್ಟಳು. ಗುಮಾಸ್ತರು ಬೆಳಿಗ್ಗೆ ನೋಡಿದಾಗ ವ್ಯಾಸರಾಯರು ಕಾಗದ ಬರೆಯುತ್ತಿದ್ದಂತೆ ಮೃತರಾಗಿದ್ದರೆಂತಲೂ, ಡಾಕ್ಟರು ಇದ್ದಕ್ಕಿದ್ದಂತೆ ಹೃದಯದ ಕೆಲಸವು ನಿಂತುಹೋದದ್ದೇ ಮರಣಕ್ಕೆ ಕಾರಣವೆಂದು ಹೇಳಿದರೆಂತಲೂ, ವ್ಯಾಸರಾಯರ ಮಗಳ ಹೆಸರು ಮೇಲ್ವಿಳಾಸ ಗೊತ್ತಿಲ್ಲದ್ದರಿಂದ

ರಾಯರ ಹೆಸರಿಗೇ ಕಾಗದ ಬರೆದರೆಂತಲೂ, ಈ ಕಾಗದ ತಲುಪಿದಮೇಲೆ ಮಗಳು ಬರುವುದು ಬಹಳ ದಿವಸಗಳಾಗುತ್ತೆಂದು ಅವತ್ತೇ ದಹನವನ್ನು ಕೂಡ ಮಾಡಿಬಿಟ್ಟ ರೆಂತಲೂ ಆ ಕಾಗದದಿಂದ ಗೊತ್ತಾಯಿತು.

ಈ ವರ್ತಮಾನವು ಕೃಷ್ಣಮೂರ್ತಿಗೆ ಒಬ್ಬ ಆಚಾರ್‍ರಿಂದ ತಿಳಿಯಿತು. ಅವರು " ಏನು ರಾಯರೆ, ನಿಮ್ಮ ಮಾವನವರು ತೀರಿಹೋದ ವರ್ತಮಾನ ನಿಮಗೆ ತಿಳಿಯಲಿ ಲ್ಲವೆಂದು ತೋರುತ್ತೆ. ಇವತ್ತು ನಾಲ್ಕನೆಯ ದಿವಸ; ಇಷ್ಟರಲ್ಲಿಯೇ ನೀವು ಬೆಂಗ ಳೂರಿಗೆ ದಿವಸ ವಾರಗಳಿಗೋಸ್ಕರ ಬರಬೇಕಾಗುತ್ತೆ " ಎಂದರು. ಅವನ ಅತ್ತೆಯ ವರು ತೀರಿಹೋದಾಗ ವ್ಯಾಸರಾಯರು ಅಳಿಯನ ಮೇಲಿನ ಕೋಪದಿಂದ ಕಾಗದ ಬರೆದಿರಲಿಲ್ಲ. ಯಾರೋ ಹೋಗಿಬರುವವರಿಂದ ಅವನಿಗೆ ಆ ವರ್ತಮಾನ ಗೊತ್ತಾ ಯಿತು. ಈಗ ವ್ಯಾಸರಾಯರ ಮರಣವರ್ತಮಾನವನ್ನು ನ್ಯಾಯವಾಗಿ ಶಾರದೆ ಬರಿಯಬೇಕಾಗಿತ್ತು ; ಅವಳಿಗೆ ಅಷ್ಟು ಇಷ್ಟವಿಲ್ಲದಿದ್ದರೆ ಯಾರ ಕೈಯಲ್ಲಾದರೂ ಬರಿಸಬೇಕಾಗಿತ್ತು ; ಅದೂ ಇಲ್ಲದೆ ಅವರು ತೀರಿಹೋದ ನಾಲ್ಕು ದಿವಸಕ್ಕೆ ಈಗಲೂ ಯಾರೋ ದಾರಿಯಲ್ಲಿ ಹೋಗುವವರಿಂದ ಈ ವರ್ತಮಾನ ತಿಳಿಯಿತಲ್ಲಾ ಎಂದು ಕೃಷ್ಣಮೂರ್ತಿಗೆ ಅಸಮಾಧಾನವಾಯಿತು. ಆದ್ದರಿಂದ " ನಾನು ಬೆಂಗಳೂರಿಗೆ ಬರ ಬೇಕಾಗಿಲ್ಲ. ಅವರೇ ಮಾಡಿಕೊಳ್ಳುತ್ತಾರೆ " ಎಂದನು.

ಆಚಾರ್ಯರು ಊರಿಗೆ ತಲಪುತ್ತಲೇ ದೇವದತ್ತನಿಗೆ ಈ ವರ್ತಮಾನವನ್ನು ಹೇಳಿಬಿಟ್ಟರು. ಶಾರದೆಯು ಕೃಷ್ಣಮೂರ್ತಿಗೆ ಕಾಗದ ಬರಿ ಎಂದು ಸೂಚಿಸಿದಾಗ " ಅವರಿಗೆ ಎಂದೋ ತಿಳಿಸಿತಮ್ಮ " ಎಂದು ದೇವದತ್ತನು ಹೇಳಿಬಿಟ್ಟನು. ದಿವಸ ವಾರಗಳನ್ನು ಯಾರೋ ಮಾಡಲು ಪ್ರಾರಂಭಿಸಿದ್ದನ್ನು ಶಾರದೆಯು ನೋಡಿ, ವ್ಯಾಸರಾಯರ ಮರಣವನ್ನು ತಿಳಿಸಿ ಬರೆದ ಕಾಗದಕ್ಕೆ ಕೃಷ್ಣಮೂರ್ತಿಯು ಏನೋ ಒರಟು ಉತ್ತರ ಕೊಟ್ಟಿರುವನೆಂತಲೂ, ಆದ್ದರಿಂದಲೇ ಕೂಲಿ ಕೊಟ್ಟು ದಿವಸ ವಾರ ಗಳನ್ನು ಮಾಡಿಸುತ್ತಿದಾರೆಂತಲೂ, ಈ ವರ್ತಮಾನವನ್ನು ತನ್ನೊಡನೆ ಹೇಳಿದರೆ ತನಗೆ ಸಂಕಟವಾಗುವುದೆಂದು ದೇವದತ್ತನು ತನ್ನೊಡನೆ ಹೇಳಲಿಲ್ಲವೆಂತಲೂ ತಿಳಿದು ಕೊಂಡಳು.

ತಾನು ಯಾರಮೇಲೆ ಭಾರಹಾಕಿದ್ದಳೋ ಅವರೇ ತೀರಿಹೋದದ್ದು ಶಾರದೆಗೆ ಸಿಡಿಲುಬಡಿದಂತಾಯಿತು. ಬಹಳ ದಿವಸಗಳು ಕಾಲೇಜಿಗೆ ಕೂಡ ಹೋಗದೆ ಕೊರ ಗಲು ಪ್ರಾರಂಭಿಸಿದಳು. ಹೀಗೆಯೇ, ಮಾಡುವುದಕ್ಕೆ ಕೆಲಸವಿಲ್ಲದೆ ಕೊರಗುತ್ತಿದ್ದರೆ ಶಾರದೆಯು ಬದುಕುವ ಹಾಗಿಲ್ಲವೆಂದು ತಿಳಿದು ಸ್ನೇಹಿತರು ಅವಳಿಗೆ ಬೋಧಿಸಿ ಕಾಲೇಜಿಗೆ ಕಳಿಸಿದರು.

ಇಷ್ಟು ಕಷ್ಟಗಳು ಬಂದರೂ ಶಾರದೆಗೆ ಮೂರನೇವರ್ಷದ ಬಿ.ಎ. ಕ್ಲಾಸಿಗೆ ತೇರ್ಗಡೆಯಾಗಿಹೋಯಿತು. ಇದೆಲ್ಲವೂ ಸೇರಿ ಶಾರದೆಗೆ "ಗಂಡಸರಿಗಿಂತಲೂ ಹೆಂಗಸರು ಯಾತರಲ್ಲಿ ಏನು ಕಡಿಮೆ" ಎಂದು ಘಳಿಗೆ ಘಳಿಗೆಗೂ ತೋರಲು ಪ್ರಾರಂಭವಾಯಿತು. ಕೆಲವು ಸಂದರ್ಭಗಳಲ್ಲಿ ಆಳನ್ನು ಕರೆದುಕೊಂಡು ಪೇಟೆಗೆ ಹೋಗಿ ವ್ಯಾಪಾರಮಾಡಿ ತಾನೇ ಸಾಮಾನುಗಳನ್ನು ತರುತ್ತಿದ್ದಳು. ಗಂಡಸರು ಆಡುವುದಕ್ಕೆ ಮಾಡಿಕೊಂಡಿರುವ ಸಂಘಗಳಲ್ಲೆಲ್ಲಾ ತಾನೂ ಮೆಂಬರಾದಳು; ಆದರೆ ರಾತ್ರಿ ಏಳು ಗಂಟೆಯೊಳಗಾಗಿ ಮನೆಯಲ್ಲಿರುತ್ತಿದ್ದಳು. ಒಂದೊಂದುವೇಳೆ ತಾನೊಬ್ಬಳೇ ಸಂಚಾರಕ್ಕೆ ಹೋಗುವುದುಂಟು; ಆದರೆ ಅಂಥಾ ಸಂದರ್ಭಗಳಲ್ಲಿ ಬಹಳ ದೂರ ಹೋಗುತ್ತಿರಲಿಲ್ಲ.

ಇನ್ನೂ ಒಂದು ವರ್ಷ ಕಳೆಯಿತು. ಶಾರದೆಯು ಕಷ್ಟಪಟ್ಟದ್ದು ಸಾರ್ಥಕವಾಯಿತು. ಬಿ.ಎ. ಪರೀಕ್ಷೆಯಲ್ಲಿ ಇಂಗ್ಲೀಷು ಕನ್ನಡಗಳಲ್ಲಿ ಮೊದಲನೆಯ ತರಗತಿಯಲ್ಲಿಯೂ, ಉಳಿದವುಗಳಲ್ಲಿ ಎರಡನೆಯ ತರಗತಿಯಲ್ಲಿಯೂ ತೇರ್ಗಡೆಯಾದಳು. "ಹೆಂಗಸರು ಗಂಡಸರಿಗಿಂತ ಯಾತರಲ್ಲಿ ಏನು ಕಡಿಮೆ?"

(೪)

ಕೃಷ್ಣಮೂರ್ತಿಯು ರುಕ್ಮಿಣಿಯೊಡನೆ ಸಂಸಾರ ಮಾಡಲು ಪ್ರಾರಂಭಿಸಿದ ಒಂದೆರಡು ತಿಂಗಳವರಿಗೂ ಅವಳ ಒರಟುತನವು ಶಾರದೆಯ ನಾಗರಿಕತೆಗೆ ತಲೆಕೆಳಗಾಗಿದ್ದು ಅವಳನ್ನು ಆಗಾಗ ಕೃಷ್ಣಮೂರ್ತಿಗೆ ಜ್ಞಾಪಕ ತಂದುಕೊಡುತ್ತಿತ್ತು. ಆದರೆ ರುಕ್ಮಿಣಿಯು ಒರಟೆಂದು ಕೃಷ್ಣಮೂರ್ತಿಯು ಬೇಜಾರು ಪಡಲಿಲ್ಲ; ರುಕ್ಮಿಣಿಯು ತಾನು ಮಾಡಿದ ತಪ್ಪನ್ನು ತೋರಿಸಿಕೊಟ್ಟರೆ ಸಿಟ್ಟುಮಾಡಿಕೊಳ್ಳದೆ, ಅವನು ಹೇಳಿದ್ದನ್ನೆಲ್ಲಾ ಚನ್ನಾಗಿ ಗಮನಿಸಿ ಕೇಳಿ, ಒಂದುಸಲ ಮಾಡಿದ ತಪ್ಪನ್ನು ತಿರುಗಿ ಮಾಡುತ್ತಿರಲಿಲ್ಲ. ಆದ್ದರಿಂದ ಅವಳು ಬಹು ಜಾಗ್ರತೆಯಾಗಿ ನಾಗರಿಕತೆಯನ್ನೂ ವಿದ್ಯೆಯನ್ನೂ ಕಲಿತು ಕೃಷ್ಣಮೂರ್ತಿಗೆ ಸಂಸಾರದಲ್ಲಿ ಅಚ್ಚುಮೆಚ್ಚಾದ ಹೆಂಡತಿಯಾದಳು.

ಆದ್ದರಿಂದ ಹೆಂಡತಿಯೊಡನೆ ಯಾವಾಗ ಬೆಂಗಳೂರಲ್ಲಿ ಸಂಸಾರ ಮಾಡೇನೆಂದು ಅವನಿಗೆ ಎನ್ನಿಸುತ್ತಿತ್ತು. ರುಕ್ಮಿಣಿಯೇನೋ ಅವನ ಅಭಿಪ್ರಾಯದಂತೆ ಪಟ್ಟಣವಾಸದಲ್ಲಿ ಇರುವುದಕ್ಕೆ ಬೇಕಾದಷ್ಟು ಜಾಣೆಯಾದರೂ, ಅವನು ಬೆಂಗಳೂರಿಗೆ ಬರುವುದಕ್ಕೆ ಇನ್ನೊಂದು ಅಡಚಣೆ ಬಂತು. ವೆಂಕಮ್ಮನವರಿಗೆ ಪುನಃ ಕಾಯಿಲೆಯಾಯಿತು; ಈಸಲ ಉಳಿಯಲಿಲ್ಲ, ತೀರಿಹೋದರು. ಶಾರದೆಯು ವ್ಯಾಸರಾಯರು ತೀರಿಹೋದ

ವರ್ತಮಾನವನ್ನು ತನಗೆ ತಿಳಿಸದೆ ಇದ್ದಂತೆ ಕೃಷ್ಣಮೂರ್ತಿಯೂ ವೆಂಕಮ್ಮನವರು ತೀರಿಹೋದ ವರ್ತಮಾನವನ್ನು ಅವಳಿಗೆ ತಿಳಿಸಲಿಲ್ಲ. ದಿವಸ ವಾರಗಳನ್ನೆಲ್ಲಾ ಲೋಪ ವಿಲ್ಲದೆ ಹಳ್ಳಿಯಲ್ಲಿಯೇ ಮಾಡಿದನು; ಅದೆಲ್ಲಾ ಮುಗಿದಮೇಲೆ ಕೃಷ್ಣಮೂರ್ತಿಯು ಬೆಂಗಳೂರಿಗೆ ಸಂಸಾರ ಹೊರಟನು.

ಬೆಂಗಳೂರು ತಲಪಿದ ದಿವಸವೇ ರಾತ್ರಿ ರುಕ್ಮಿಣಿಗೆ ಕೆಂಡಾಮಂಡ ಜ್ವರ ಬಂತು. ಕೃಷ್ಣಮೂರ್ತಿಯು ವಿಚಾರಿಸುವಾಗ ಅವಳಿಗೆ ದಿವಸ ವಾರಗಳ ಓಡಾಟ ದಲ್ಲಿ ಎರಡುಮೂರು ದಿವಸಗಳಿಂದ ಜ್ವರ ಬರುತ್ತಿತ್ತೆಂದು ಗೊತ್ತಾಯಿತು. ರುಕ್ಮಿ ಣಿಯು ಗಂಡನನ್ನು ನೋಡಿದಳು; ಕಣ್ಣಿನಲ್ಲಿ ನೀರು ತುಂಬಿತು. "ನನಗೆ ಯಾಕೋ ಭಯವಾಗುತ್ತದೆ. ನಿಮ್ಮನ್ನು ಬಿಟ್ಟು ನಾನು ಹೋಗಲಾರೆ" ಎಂದಳು. ಈ ಮಾತನ್ನು ಕೇಳಿ ಅವನಿಗೂ ಕಣ್ಣಿನಲ್ಲಿ ನೀರು ಬಂತು; ಆದರೂ ಅದನ್ನು ತಡೆದು, "ಅಯ್ಯೋ ಹುಚ್ಚಿ, ಜ್ವರ ಬಂದರೆ ಸತ್ತುಹೋಗುತ್ತಾರೇನೇ? ಎಲ್ಲೋ ಓಡಾಟದ ಆಯಾಸಕ್ಕೆ ಮೈಬೆಚ್ಚಗಾಗಿದೆ. ಈಗ ನನಗೂ ಪಟ್ಟಾಗಿ ತಣ್ಣೀರಿನಲ್ಲಿ ಮುಳುಗಿದ್ದ ರಿಂದ ನೆಗಡಿ ತಲೆಭಾರ ತಲೆನೋವು ಇದೆಲ್ಲಾ ಇದ್ದೇ ಇದೆ. ಧ್ವನೀ ಕೂಡ ನೋಡು ಭಾರವಾಗಿದೆ. ಇದಕ್ಕೆಲ್ಲಾ ಭಯಪಟ್ಟರೆ ಆಗುತ್ತದೆಯೇ? ಈ ಊರಿನಲ್ಲಿ ಎಂಥೆಂಥ ಡಾಕ್ಟರಿದ್ದಾರೆ! ಬೆಳಿಗ್ಗೆ ಒಪ್ಪತ್ತು ಔಷಧ ಕುಡಿದರೆ ಜ್ವರ ಎಲ್ಲೋ ಓಡಿಹೋಗಿ ನೀನೇ ಮನೆಯಲ್ಲೆಲ್ಲಾ ಓಡಾಡುತ್ತೀ" ಎಂದು ಹೇಳಿ ಸಮಾಧಾನ ಮಾಡಿದನು.

ಬೆಳಗಾಗೆದ್ದು ಡಾಕ್ಟರನ್ನು ಮನೆಗೆ ಕರತಂದನು. ಅವರು ರುಕ್ಮಿಣಿಯನ್ನು ನೋಡಿ, ಆಸ್ಪತ್ರೆಗೆ ಕರೆದುಕೊಂಡು ಹೋಗುವುದು ಉತ್ತಮವೆಂದು ಹೇಳಿ ಹೊರಟು ಹೋದರು. ಕೃಷ್ಣಮೂರ್ತಿಯು ಬಾಡಿಗೆಕೊಟ್ಟು ರುಕ್ಮಿಣಿಗೊಬ್ಬಳಿಗೇ ಬೇರೇ ಸ್ಥಳ ವನ್ನು ಆಸ್ಪತ್ರೆಯಲ್ಲಿ ಗೊತ್ತುಮಾಡಿದನು. ಆಳುಗಳಿಗೂ 'ನರಸಮ್ಮ' ನಿಗೂ ದುಡ್ಡು ಕೊಟ್ಟನು. ಡಾಕ್ಟರುಗಳಿಗೂ ಬೇಕಾದಷ್ಟು ದ್ರವ್ಯಲಾಭವಾಯಿತು. ಆದರೇನು, ಆಸ್ಪತ್ರೆಗೆ ಹೋದ ಮರುದಿವಸ ರಾತ್ರಿಯೇ ರುಕ್ಮಿಣಿಗೆ ಸನ್ನಿಹುಟ್ಟಿತು. ಕ್ರಮವಾಗಿ ರೋಗ ಹೆಚ್ಚಿ ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ರುಕ್ಮಿಣಿಯು ವೆಂಕಮ್ಮನವ ರನ್ನು ಹಿಂಬಾಲಿಸಿದಳು.

ಶಾರದೆಯು ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ ಸ್ತ್ರೀಸಮಾಜವನ್ನು ಉತ್ತೇಜನಮಾಡಿ ವಿದ್ಯಾವತಿಯರನ್ನು ಹೆಚ್ಚು ಮಾಡಬೇಕೆಂದು ಮನಸ್ಸು ಮಾಡಿ ದಳು. ಈ ವಿಷಯದಲ್ಲಿ ಕೆಲವು ಉಪನ್ಯಾಸಗಳನ್ನು ಕೊಟ್ಟಳು. ರಂಗನಾಯಕಿಗೆ ತನ್ನ ಪಾಠಶಾಲೆಯ ವಿದ್ಯಾರ್ಥಿನಿಯು ಇಷ್ಟು ಮುಂದಕ್ಕೆ ಬಂದದ್ದು ಬಹಳ

ಸಂತೋಷ. ಅವಳೇ ಸ್ವಂತವಾಗಿ ಮೇಲಿನ ಅಧಿಕಾರಿಯಾದ ರಮೇಶನನ್ನು ನೋಡಿ, ಶಾರದೆಯ ಮೊದಲನೆಯ ಉಪನ್ಯಾಸಕ್ಕೆ ಅವನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಳು. ರಂಗನಾಯಕಿಯು ಶಾರದೆಗೆ ತನ್ನ ಪಾಠಶಾಲೆಯಲ್ಲಿಯೇ ಒಳ್ಳೆಯ ಅಧಿಕಾರವನ್ನು ಕೊಡಿಸುವುದಾಗಿಯೂ ಮಾತುಕೊಟ್ಟಿದ್ದಳು. ರಮೇಶನಲ್ಲಿ ರಂಗನಾಯಕಿಯ ಮಾತು ನಡೆಯುತ್ತಿತ್ತು.

ಶಾರದೆಯು ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಐದಾರು ತಿಂಗಳಿಗೆ ಬಂತು ; ಅವಳಿಗೆ ರಂಗನಾಯಕಿಯ ಶಿಫಾರಸು ಬೇರೇ ಇತ್ತು ; ಇಷ್ಟಾದರೂ ಅಧಿಕಾರ ಬೇರೆ ಸಿಕ್ಕಲಿಲ್ಲ. ಒಂದೆರಡು ದಿವಸಗಳ ಹಿಂದೆ ಶಾರದೆಯು ಶಾಲಾ ಮುಖ್ಯಾಧಿಕಾರಿಣಿಯನ್ನು ನೋಡಿದಾಗ, ಶಾರದೆಗೆ ಇನ್ನೂ ಕೆಲಸವಾಗದೆ ಇದ್ದದ್ದಕ್ಕೆ ಅವಳು ವ್ಯಸನಪಟ್ಟು, ಇಷ್ಟರಲ್ಲಿಯೇ ಶಾರದೆಯನ್ನು ರಮೇಶನ ಬಳಿಗೆ ಕರೆದುಕೊಂಡು ಹೋಗಿ ಅವನ ಪರಿಚಯವನ್ನುಂಟುಮಾಡಿಸುವುದಲ್ಲದೆ, ಅವನೊಡನೆ ಶಾರದೆಯ ವಿಷಯದಲ್ಲಿ ಮಾತನಾಡುವುದಾಗಿಯೂ ಅವಳು ಹೇಳಿದ್ದಳು. ಆದರೆ ಪರಿಚಯ ಹೆಚ್ಚಾದ ಹಾಗೆಲ್ಲಾ ಆಕೆಯಲ್ಲಿ ಗೌರವ ಕಡಮೆಯಾಯಿತು. ಆಕೆಯ ನಡೆನುಡಿಯನ್ನು ಕೇಳಿ—ನೋಡಿ—ನಾಚಿಕೆಯಾದ್ದರಿಂದ ಇಂಥವರ ಕೈಯಲ್ಲಿ ಉಪಕಾರ ಪಡೆಯುವುದಕ್ಕಿಂತ ಉಪವಾಸವಿರುವುದು ಮೇಲೆಂದು ಸುಮ್ಮನೆ ಇದ್ದುಬಿಟ್ಟಳು.

ಕೃಷ್ಣಮೂರ್ತಿಗೆ ಬೆಂಗಳೂರಿನ ಮೇಲೆಯೇ ದ್ವೇಷ ಹುಟ್ಟಿತು. ಮಾರನೆಯ ದಿವಸವೇ ಹಳ್ಳಿಗೆ ಹೊರಟುಹೋದನು. ಅಲ್ಲಿ ದಿವಸ ವಾರಗಳನ್ನು ಮುಗಿಸಿಕೊಂಡು, ವೈರಾಗ್ಯದಿಂದ ತೀರ್ಥಯಾತ್ರೆಗೆ ಹೊರಟನು. ಯಾತ್ರೆ ಮುಗಿದಮೇಲೆ ಬೆಂಗಳೂರಿಗೆ ಬರಲಿಲ್ಲ ; ಹಳ್ಳಿಯಲ್ಲಿಯೇ ನಿಂತುಬಿಟ್ಟನು. ಅಲ್ಲಿತಾನೆ ಸಂತೋಷವೆಲ್ಲಿ ಬಂತು ? ಜಮೀನಿನ ವಿಚಾರವೆಲ್ಲಾ ಒಬ್ಬ ಗುಮಾಸ್ತನಿಗೆ ಒಪ್ಪಿಸಿ ತಾನು ಒಬ್ಬ ಹುಚ್ಚನಂತೆ ಇರುತ್ತಿದ್ದನು.

ರುಕ್ಮಿಣಿಯು ಬೆಂಗಳೂರಿನಲ್ಲಿಯೇ ತೀರಿಹೋದಳೆಂತಲೂ, ಕೃಷ್ಣಮೂರ್ತಿಯು ಆ ದುಃಖದಿಂದ ಹಳ್ಳಿಗೆ ಹೊರಟುಹೋಗಿ ನಿಂತುಬಿಟ್ಟನೆಂತಲೂ ಶಾರದೆಗೆ ವರ್ತಮಾನ ಬಂತು. ಶಾರದೆಯು ಕೆಲಸವಿಲ್ಲದೆ ಸುಮ್ಮನೆ ಕೂತಿರುವ ಚೈತನ್ಯವಲ್ಲ ; ಇನ್ನುಮುಂದೆ ತಾನು ಜೀವಿಸಿರುವವರೆಗೂ ಯಾವದಾದರೂ ಒಳ್ಳೆಯ ಕೆಲಸವನ್ನು ಮಾಡಿ ತನ್ನ ದೇಹವನ್ನು ತೆಯ್ಯಬೇಕೆಂದು ನಿಶ್ಚಯಮಾಡಿದಳು. ಬಹಳ ಹೊತ್ತು ಯೋಚನೆ ಮಾಡಿದಮೇಲೆ ಆಸ್ಪತ್ರೆಯಲ್ಲಿ ಸೇವಕಳಾಗಿ ಸೇರಿ ಕಾಯಿಲೆಯಲ್ಲಿ ನರಳುವವರಿಗೆ ಸೇವೆಮಾಡುವುದರಿಂದ ತನಗೆ ಪೂರ್ತಿಯಾಗಿ ಕೆಲಸವಿರುವುದಲ್ಲದೆ, ಬಳಲು

ವರ ಸೇವೆಯಲ್ಲಿ ತನ್ನ ದೇಹವನ್ನು ಸವೆಸಿದರೆ ಅದು ಪವಿತ್ರವಾದುದೆಂದು ಅವಳು ಗೊತ್ತುಮಾಡಿದಳು.

ಕೃಷ್ಣಮೂರ್ತಿಯು ಮೈಸೂರು ಬ್ಯಾಂಕಿನಲ್ಲಿ ಹಣವನ್ನಿಟ್ಟಿದ್ದು ಬೇಕಾದಾಗ ಹಳ್ಳಿಯಿಂದ ಬಂದು ತೆಗೆದುಕೊಂಡು ಹೋಗುತ್ತಿದ್ದನು. ಒಂದುಸಲ ಹಣವನ್ನು ತೆಗೆದುಕೊಂಡು ಹೋಗಲು ಬಂದವನು ರಾತ್ರಿ ಎಂಟುಗಂಟೆಯ ಹೊತ್ತಿನಲ್ಲಿ ಮೋಟಾರಿಗೆ ಸಿಕ್ಕಿಬಿದ್ದನು. ಸುತ್ತಲೂ ಜನ ನೆರೆದುಹೋಯಿತು. ಅವನನ್ನು ಅದೇ ಮೋಟಾರಿನಲ್ಲಿಯೇ ಹಾಕಿಕೊಂಡು ಆಸ್ಪತ್ರೆಗೆ ತಂದರು. ಅಲ್ಲಿಗೆ ಬರುವಾಗ ಅವನಿಗೆ ಜ್ಞಾನವಿರಲಿಲ್ಲ. ಡಾಕ್ಟರಿಗೆ ಕೃಷ್ಣಮೂರ್ತಿಯ ಗುರ್ತು ಸಿಕ್ಕಿತು—ರುಕ್ಮಿಣಿಯು ಆಸ್ಪತ್ರೆಯಲ್ಲಿದ್ದಾಗ ಅವರಿಗೆ ಅವನ ಪರಿಚಯವಾಗಿತ್ತು ; ಅವನು ಹಣವಂತನೆಂದು ಗೊತ್ತಿತ್ತು. ಜ್ಞಾನಬರಬೇಕಾದರೆ ಮಾಡಬೇಕಾದ್ದನ್ನೆಲ್ಲಾ ಮಾಡಿ, ಬಾಡಿಗೆ ಕೊಡುವರಿಗೆ ಮಾತ್ರವೆಂದು ಗೊತ್ತುಮಾಡಿರುವ ಸ್ಥಳದಲ್ಲಿ ಅವನನ್ನು ಮಲಗಿಸುವಂತೆ ಡಾಕ್ಟರು ಆಳುಗಳಿಗೆ ಹೇಳಿದರು. ಅರ್ಧಗಂಟೆ ಬಿಟ್ಟುಕೊಂಡು ಅವರು ಬರುವ ಹೊತ್ತಿಗೆ ಅವನಿಗೆ ಜ್ಞಾನ ಬಂದಿತ್ತು. ಮೋಟಾರು ಹೊಡತದಿಂದ ಬಿದ್ದ ವರಸೆಯಲ್ಲಿ ಅವನಿಗೆ ಜ್ಞಾನ ತಪ್ಪಿತ್ತೇ ಹೊರತು, ಒಂದೆರಡು ಗಾಯಗಳು ಕೆಲವು ಮೂಕು ಪೆಟ್ಟುಗಳು ವಿನಾ ಹೆಚ್ಚು ಅಪಾಯವೇನೂ ಆಗಲಿಲ್ಲವೆಂದು ಡಾಕ್ಟರು ಕೃಷ್ಣಮೂರ್ತಿಗೆ ಹೇಳಿದರು ; ಬೇಕಾದರೆ ಬೆಳಗಾಗುತ್ತಲೂ ಕೃಷ್ಣಮೂರ್ತಿಯು ಮನೆಗೆ ಹೋಗಬಹುದೆಂದು ತಿಳಿಸಿದರು.

ಶಾರದೆಯು ಆಸ್ಪತ್ರೆಯಲ್ಲಿ ರಾತ್ರಿಯ ಕೆಲಸ ಮಾಡುವುದಕ್ಕೆ ಈ ದಿವಸವೇ ಮೊದಲು. ರಾತ್ರಿ ಒಂದು ಹೊತ್ತಿನಲ್ಲಿ ಗಡಿಬಿಡಿಯಾಯಿತು—ದಾದಿಯರ ಗದ್ದಲ. ಶಾರದೆಯು ಅದನ್ನು ಕಂಡು ತನ್ನ ಸ್ವಂತ ವಿಷಯದಲ್ಲಿ ಭಯಪಟ್ಟು, ದೂರ ಹೋಗಿ ಕಾಯಿಲೆಯವರು ಮಲಗಿಕೊಳ್ಳುವ ಒಂದು ಚಿಕ್ಕಮನೆಯಲ್ಲಿ ಸೇರಿಕೊಂಡಳು. ಹಾಸಿಗೆಯಲ್ಲಿ ಒಬ್ಬನೇ ಗಂಡಸು ಮಲಗಿರುವುದನ್ನು ನೋಡಿ ಗಾಬರಿಯಾಯಿತು. ನಿದ್ರೆಮಾಡುತ್ತಿದ್ದವನನ್ನು ಚನ್ನಾಗಿ ನೋಡಿ ಕೃಷ್ಣಮೂರ್ತಿ ಎಂದು ತಿಳಿದಳು. ಭಯಪಡುತ್ತಿದ್ದ ಶಾರದೆಗೆ ಧೈರ್ಯವಾಯಿತು ; ಆ ರಾತ್ರಿಯೆಲ್ಲಾ ಅಲ್ಲಿಯೇ ಕಳೆದಳು.

ಕೃಷ್ಣಮೂರ್ತಿಗೆ ರಾತ್ರಿಯೆಲ್ಲಾ ಗಾಯದ ಕಸಾರೆಗೆ ಜ್ವರ ಬಂದಿತ್ತು. ಒಳ್ಳೆಯ ನಿದ್ರೆ ಬರಲಿಲ್ಲ. ಏನೋ ಒಂದು ತರಹ ಮೊಬ್ಬು. ಆ ಮೊಬ್ಬಿನಲ್ಲಿ ಯಾರೋ ರೂಪವತಿಯಾದ ಹೆಂಗಸು ರಾತ್ರಿಯೆಲ್ಲಾ ತನ್ನ ಸಮೀಪದಲ್ಲಿ ಕೂತು ಕಣ್ಣೀರು ಸುರಿಸುತ್ತಿದ್ದಂತೆ ಇತ್ತು. ಬೆಳಗಾಗುತ್ತಲೂ ತಾನೊಬ್ಬನೆ ; ಇನ್ನಾರೂ ಇರಲಿಲ್ಲ.

ರಾತ್ರಿ ಹೆಂಗಸು ತನ್ನನ್ನು ಉಪಚರಿಸುತ್ತಿದ್ದಂತೆ ಕಂಡದ್ದು ತನ್ನ ಬುದ್ಧಿಯ ವಿಕಾರವೆಂದು ತಿಳಿದನು. ತನಗೆ ಚನ್ನಾಗಿ ಗುಣವಾಗುವವರಿಗೂ ಹಳ್ಳಿಗೆ ಹೋಗಬಾರದೆಂದು ಅವನು ಗೊತ್ತುಮಾಡಿದನು. ಆದ್ದರಿಂದ ತಾನು ಹಳ್ಳಿಗೆ ತೆಗೆದುಕೊಂಡು ಹೋಗಬೇಕೆಂದಿದ್ದ ಮುನ್ನೂರು ರೂಪಾಯಿಗಳನ್ನು ಗುಮಾಸ್ತನಿಗೆ ಕಳಿಸಿಕೊಡಬೇಕಾಯಿತು ; ತನ್ನ ಕೈಪುಸ್ತಕದಿಂದ ಲಕೋಟೆಯನ್ನು ತೆಗೆದು ಅದರಲ್ಲಿ ನೋಟುಗಳನ್ನಿಟ್ಟು ಮೇಲ್ವಿಳಾಸವನ್ನು ಬರೆದನು. ಮೊಹರು ಮಾಡಲು ಅರಗು ಮುದ್ರೆಗಳಿಗೆ ಹೇಳಿಕಳುಹಿಸಿದನು. ಕೃಷ್ಣಮೂರ್ತಿಯು ಆಳು ತಂದ ಅರಗನ್ನು ಲಕೋಟೆಗೆ ಹಚ್ಚಿ, ಉಂಗುರದಿಂದ ಮುದ್ರೆಹಾಕಿ, ಅದರಲ್ಲಿದ್ದ ಅಕ್ಷರವನ್ನು ಓದಿದನು. ತನ್ನ ಹೆಸರಿದೆ! ತನ್ನದೇ ಉಂಗುರ. ಆಳನ್ನು ಕರೆದು ಉಂಗುರವನ್ನು ಯಾರು ಕೊಟ್ಟರೆಂದು ವಿಚಾರಿಸಿದನು ; 'ನರಸಮ್ಮ' ನೆಂದು ಗೊತ್ತಾಯಿತು. ಅವರ ಕೈಯಲ್ಲೇ ಉಂಗುರವನ್ನು ಕೊಡುವನೆಂತಲೂ, ಅವರನ್ನು ಕಳಿಸಿಕೊಡೆಂತಲೂ ಕೃಷ್ಣಮೂರ್ತಿಯು ಆಳಿಗೆ ಹೇಳಿದನು. ತನ್ನ ಕೆಲಸ ಮುಗಿದದ್ದರಿಂದ ನರಸಮ್ಮನು ಮನೆಗೆ ಹೊರಟು ಹೋದಳೆಂದು ವರ್ತಮಾನ ಬಂತು. ಶಾರದೆಯು ಆ ದಿನ ಮನೆಗೆ ಹೋದವಳು ಕೃಷ್ಣಮೂರ್ತಿಯು ಆಸ್ಪತ್ರೆಯಲ್ಲಿರುವವರಿಗೂ ಅಲ್ಲಿಗೆ ಬರಲಿಲ್ಲ.

ಈ ದಿವಸ ವಿಜಯದಶಮಿ. ದೇವಸ್ಥಾನಗಳಲ್ಲಿ ಪೂಜೆಪುನಸ್ಕಾರಗಳು ವಿಜೃಂಭಣೆಯಿಂದ ನಡೆಯುತ್ತಿವೆ. ಸಂಜೆಗೆ ದೇವರು ಬನ್ನಿಯನ್ನು ಮುಡಿಯಲು ಹೋಗಬೇಕು ; ಊರಲ್ಲಿ ದೇವಸ್ಥಾನಗಳ ರಥಗಳನ್ನೆಲ್ಲಾ ತೊಳೆದಿಟ್ಟಿದ್ದಾರೆ. ಇವತ್ತು ಬನ್ನಿಯನ್ನು ಮುಡಿಯಲು ಹೋಗುವ ನೂರಾರು ರಥಗಳನ್ನು ನೋಡಲು ಬಹು ದೂರದಿಂದ ಬೆಂಗಳೂರಿಗೆ ಜನಗಳು ಬರುತ್ತಾರೆ.

ಕೃಷ್ಣಮೂರ್ತಿಯ ಮನೆಯ ಹತ್ತಿರ ಆಂಜನೇಯ ದೇವಸ್ಥಾನವಿದೆ. ಅವನು ಆಸ್ಪತ್ರೆಯಿಂದ ಮನೆಯ ಹತ್ತಿರ ಬರುವಾಗ ದೇವಸ್ಥಾನದಲ್ಲಿ ಮಂಗಳಾರತಿಯಾಗುತ್ತಿತ್ತು. ಕೃಷ್ಣಮೂರ್ತಿಯು ದೇವಸ್ಥಾನವನ್ನು ಹೊಕ್ಕು ಮಂಗಳಾರತಿಯನ್ನು ತೆಗೆದುಕೊಂಡನು. ಆಚಾರ್ಯರು ಮಂತ್ರ ಹೇಳಿ ಶಮಿಯನ್ನು ಕೊಟ್ಟರು. ಕೃಷ್ಣಮೂರ್ತಿಯು ಅವರಿಗೆ ನಮಸ್ಕಾರಮಾಡಿ ಆಶೀರ್ವಾದವನ್ನು ಪಡೆದು ಮನೆಗೆ ಬಂದನು.

ಆಸ್ಪತ್ರೆಯಲ್ಲಿ ದಾದಿಯರ ಗದ್ದಲವನ್ನು ನೋಡಿ ಮನೆಗೆ ಬಂದಮೇಲೆ ಶಾರದೆಯು ತಿರುಗಿ ಆಸ್ಪತ್ರೆಗೆ ಹೋಗಲಿಲ್ಲ ; ಹಾಗೆಯೇ ರಾಜೀನಾಮೆಯನ್ನು ಕೊಟ್ಟುಕಳುಹಿಸಿದಳು. ಆದರೆ ಕಾಯಿಲೆಯೊದ ಕೃಷ್ಣಮೂರ್ತಿಯ ಯೋಗಕ್ಷೇಮ ತಿಳಿಯದೇ ಅವಳಿಗೆ ಬಹಳ ಯೋಚನೆಗಿಟ್ಟಿತು.

*　　*　　*　　*

ಸಾಯಂಕಾಲ ಐದೂವರೆಗಂಟೆಯ ಹೊತ್ತಿಗೆ ಕೃಷ್ಣಮೂರ್ತಿಯ ಮನೆ ಬಾಗಿಲ ಮುಂದೆ ಒಂದು ಬಗ್ಗೀಗಾಡಿ ನಿಂತಿದೆ. ಬಂಡಿಯಲ್ಲಿ ಇಬ್ಬರು ಬಾಲಕಿಯರು ಕೂತಿದಾರೆ. ಹೊರಗೆ ಸಂಚಾರಕ್ಕೆ ಹೋದ ಕೃಷ್ಣಮೂರ್ತಿಯು ಕಾಲುನೋವಿನಿಂದ ಬಹುದೂರ ಹೋಗಲಾರದೆ, ಹಿಂತಿರುಗಿ ಬಂದು, ಮನೆಯ ಮೆಟ್ಟಲೇರುವುದಕ್ಕೂ, ಅವನ ಯೋಗಕ್ಷೇಮವನ್ನು ತಿಳಿದುಕೊಂಡು ಹೋಗಬೇಕೆಂದು ಬಂದ ಶಾರದೆಯು ಒಳಗಿನಿಂದ ಹೊರಗೆ ಬರುವುದಕ್ಕೂ ಸರಿಹೋಗಿ, ಇಬ್ಬರೂ ಬಾಗಿಲಲ್ಲಿ ಎದರುಬದ ರಾಗಿ ಸೇರಿದರು. ಅವರಿಬ್ಬರಿಗೂ ಮನಸ್ತಾಪ ಬಂದಮೇಲೆ ಒಬ್ಬರನ್ನೊಬ್ಬರು ನೋಡಿದ್ದು ಇದೇ ಮೊದಲು ; ಒಬ್ಬರ ಮುಖವನ್ನು ಇನ್ನೊಬ್ಬರು ನೋಡುವಾಗಲೇ ತಮಗೆ ಅವರ ಮೇಲಿದ್ದ ಕೋಪವೆಲ್ಲಾ ಎಲ್ಲಿಯೋ ಹಾರಿಹೋಯಿತು ; ಮನಸ್ತಾಪವೇ ಇಲ್ಲದೆ ಒಟ್ಟಿಗೆ ಸಂಸಾರ ಮಾಡುತ್ತಲೇ ಇದಾರೇನೋ ಅನ್ನುವಂತೆ ಆಯಿತು.

" ಎಲ್ಲಿಗೆ ಹೊರಟೆ, ದೇವಿ ? "

ರಸ್ತೆಯಲ್ಲಿದ್ದ ಬಂಡಿಯಿಂದ " ಶಾರದಮ್ಮ, ಹೊತ್ತಾಯಿತು."

ಶಾರದೆಯು " ಬಂದೆ " ಎಂದು ಹೇಳಿ, ಬಂಡಿಯ ಹತ್ತಿರ ಹೋಗಿ ತನ್ನ ಸ್ನೇಹಿತರಿಗೆ ತಾನು ಬರುವುದಿಲ್ಲವೆಂದು ಹೇಳಿ ಹಿಂತಿರುಗಿದಳು. ಮೆಟ್ಟಲ ಮೇಲೆ ನಿಂತಿದ್ದ ಕೃಷ್ಣಮೂರ್ತಿಗೆ ತಮ್ಮಿಬ್ಬರಿಗೂ ಮನಸ್ತಾಪವಾದ ದಿವಸ ಜ್ಞಾಪಕಬಂದು, ಅವತ್ತು ಶಾರದೆಯು " ಬಂದೆ " ಎಂದು ಹೇಳಿದ್ದಳೇ ಎಂಬ ಸಂಶಯ ಬಂತು. ಬಂಡಿ ಯಿಂದ ಹಿಂತಿರುಗಿ ಬಂದ ಶಾರದೆಯನ್ನು ಕೃಷ್ಣಮೂರ್ತಿಯು ಚಂದ್ರಶಾಲೆಗೆ ಕರೆದು ಕೊಂಡು ಹೋಗಿ ಅಲ್ಲಿ ಇಬ್ಬರೂ ಕೂತುಕೊಂಡರು. ಆ ಮೇಲೆ ಅವನು " ಬಂದೆ " ಎಂದು ಆ ದಿವಸ ಯಾರಿಗೆ ಹೇಳಿದಳೆಂದು ಕೇಳಿದನು. ಈ ರೀತಿಯಾಗಿ ಮಾತನಾಡಿ ಕೊಂಡಮೇಲೆ ತಮ್ಮ ಮನಸ್ತಾಪಕ್ಕೆ ನಿಜವಾಗಿಯೂ ಏನೂ ಕಾರಣವಿಲ್ಲವೆಂದು ಅವರಿಗೆ ಗೊತ್ತಾಯಿತು. ಮಹಲಿಗೆ ದೀಪಹಚ್ಚಲು ಬಂದ ಅಡಿಗೆಯವನು, ಶಾರದೆ ಯು ಕೃಷ್ಣಮೂರ್ತಿಯೊಡನೆ ಮಾತನಾಡುತ್ತಿರುವುದನ್ನು ನೋಡಿ, ಅವಳಿಗೂ ಅಡಿಗೆ ಮಾಡಿದನು. ಎಷ್ಟು ಹೊತ್ತಾದರೂ ಅವರ ಮಾತು ಮುಗಿಯಲಿಲ್ಲ. ಅಡಿಗೆಯವನು ಇಬ್ಬರಿಗೂ ಬಡಿಸಿ ತಟ್ಟೆಯನ್ನು ಬೀದಿಯ ಕೈಸಾಲೆಯಲ್ಲಿದ್ದ ತಿರುಗಣೆಯ ಮೆಟ್ಟಲಿ ನಿಂದ ತಂದು ಮಹಲಿನಲ್ಲಿಟ್ಟನು.

ಶಾರದಾ ಕೃಷ್ಣಮೂರ್ತಿಯರು ಬಹಳ ಹೊತ್ತು ಮಾತನಾಡಿದಮೇಲೆ ಮಹ ಲಿಗೆ ಹೋದರು. ಬಡಿಸಿ ತಂದಿಟ್ಟಿದ್ದ ತಟ್ಟೆಯನ್ನು ನೋಡಿ ಅಡಿಗೆಯವನ ಜಾಣ

ತನಕ್ಕೆ ಮೆಚ್ಚಿದರು. ಊಟವಾದಮೇಲೆ ಎಲೆ ಅಡಿಕೆಯನ್ನು ಹಾಕಿಕೊಳ್ಳುತ್ತಿರುವಾಗ ಕೃಷ್ಣಮೂರ್ತಿಯು ಮೇಜಿನ ಕಡೆ ನೋಡಿದನು. ಅಲ್ಲಿ ಆಚಾರ್ಯರು ಬೆಳಿಗ್ಗೆ ತನಗೆ ಕೊಟ್ಟ ಶಮೀಪತ್ರದಲ್ಲಿ ತಾನು ಮುಡಿದು ಮಿಕ್ಕಿದ್ದ ಒಂದು ದಳವೂ ಮಂತ್ರಾಕ್ಷತೆಯೂ ಇದ್ದವು. ಕೃಷ್ಣಮೂರ್ತಿಯು ಶಮೀಪತ್ರವನ್ನು ಶಾರದೆಯ ತುರುಬಿನಲ್ಲಿ ಮುಡಿಸುತ್ತಾ

"ದೇವಿ, ಶಮಿಯು ರಾಮನಿಗೊಬ್ಬನಿಗಲ್ಲದೆ ಕೃಷ್ಣನಿಗೂ ಪ್ರಿಯದರ್ಶಿನಿಯಾದಳು" ಎಂದನು.

ಶಾರದೆಯೂ ನಕ್ಕಳು ; ಕೃಷ್ಣಮೂರ್ತಿಯೂ ನಕ್ಕನು ; ಅವರಿಬ್ಬರ ಮುಖದ ಪ್ರತಿಬಿಂಬವು ನಿಲವುಗನ್ನಡಿಯಲ್ಲಿ ಬಿತ್ತು. ಅಷ್ಟು ಹೊತ್ತಿಗೆ ಎಲೆಯಡಿಕೆ ಹಾಕಿಕೊಳ್ಳುವುದೂ ಮುಗಿಯಿತು ; ಆ ದಂಪತಿಗಳು ಮೇಜಿನ ಮುಂದೆ ಕೂತಿದ್ದವರು ಆನಂದದಿಂದ ಎದ್ದರು.

ಕಾವ್ಯಾವಲೋಕನ

ಪ್ರತಿಮಾನಾಟಕ:—ಡಾಕ್ಟರ್ ಎ. ಬೆರಿಡೇಲ್ ಕೀತ್‌ರವರು ಸಂಸ್ಕೃತ ನಾಟಕಗಳನ್ನು ಕುರಿತು ಬರೆದ ತಮ್ಮ ಗ್ರಂಥದಲ್ಲಿ ಪ್ರತಿಮಾನಾಟಕವು ಅಷ್ಟೇನೂ ಉತ್ತಮವಾದುದಲ್ಲವೆಂದೂ, ರಾಮಕಥಾ ಸಂಬಂಧವಾದ ನಾಟಕಗಳಲ್ಲಿನ ಸಂಗತಿಗಳೆಲ್ಲಾ ಹೆಚ್ಚು ಬದಲಾವಣೆಗಳಿಲ್ಲದೆ ಚರ್ವಿತಚರ್ವಣವಾಗಿ ವಾಲ್ಮೀಕಿ ರಾಮಾಯಣದಿಂದ ತೆಗೆದುಕೊಂಡವುಗಳೆಂದೂ, ಪಾತ್ರರಚನೆಯೂ ಕೂಡ ಹುರುಳಿಲ್ಲದ ಪಡಿಯಚ್ಚಿನಂತಿದೆಯೆಂದೂ, ಅಭಿಪ್ರಾಯಪಟ್ಟಿದ್ದಾರೆ. ಅಭಿಷೇಕನಾಟಕದ ವಿಷಯದಲ್ಲಿ ಅವರ ಮಾತು ನಿಜವಾಗಿ ತೋರಬಹುದಾದರೂ, ಪ್ರತಿಮಾನಾಟಕಕ್ಕೆ ಮಾತ್ರ ಈ ಹೇಳಿಕೆಯು ಖಂಡಿತವಾಗಿಯೂ ಅನ್ವಯಿಸದು. ಇಷ್ಟಕ್ಕೂ, ಅಭಿಷೇಕನಾಟಕದಲ್ಲಿ ಭಾಸಮಹಾಕವಿಯ ಅಮೋಘಚೈತನ್ಯದ ನಿದರ್ಶನಗಳೇ ಇಲ್ಲದಿರುವುದನ್ನು ನೋಡಿದರೆ, ಅದು ಬಹುಶಃ ಅವನ ಆರಂಭಪ್ರಯತ್ನವಾಗಿರಬಹುದೆಂದು ತೋರುತ್ತದೆ. ಆದರೆ, ಪ್ರತಿಮಾನಾಟಕದ ನಿಜಸ್ಥಿತಿಯು ಡಾಕ್ಟರ್ ಕೀತ್‌ರವರಿಗೆ ಸರಿಯಾಗಿ ಗೋಚರಿಸಲಿಲ್ಲವೆಂಬುದು ಸಾಹಸದ ಮಾತಾಗಬಹುದಾದರೂ, ಇಂಥಾ ದೊಡ್ಡ ಪಂಡಿತರಿಗೆ ಈ ಅಭಿಪ್ರಾಯವು ಹುಟ್ಟಿದುದು ಆಶ್ಚರ್ಯಕರವೆಂದೇನೋ ಖಂಡಿತವಾಗಿ ಹೇಳಬಹುದಾಗಿದೆ. ಭಾಸನು ಮುಖ್ಯಾಂಶಗಳನ್ನು ವಾಲ್ಮೀಕಿ ರಾಮಾಯಣದಿಂದ ಸಂಗ್ರಹಿಸಿರುವುದೇನೋ ನಿಜ. ಆದರೆ ಷೇಕ್ಸ್‌ಪಿಯರ್ ಕವಿಯು ನಾರ್ತ್ ಮುಂತಾದವರ ಗ್ರಂಥಗಳಿಂದ ತಾನು ಸಂಗ್ರಹಿಸಿದ ಪ್ರಧಾನಾಂಶಗಳ ಜತೆಗೆ ತನ್ನ ಕಲಾಕೌಶಲದ ಮಹಿಮೆಯಿಂದ ಅನೇಕ ಹೊಸ ಸಂಗತಿಗಳನ್ನು ಸೇರಿಸಿ, ಉತ್ತಮ ಗ್ರಂಥಗಳನ್ನು ರಚಿಸಿ ಸಿದ್ಧಗೊಳಿಸುತ್ತಿದ್ದಂತೆ ಪ್ರತಿಮಾನಾಟಕವನ್ನು ಬರೆಯುವುದರಲ್ಲಿ ಭಾಸನೂ ಕೂಡ ಕಲಾಕೌಶಲವನ್ನು ತೋರಿಸಿದ್ದಾನೆ. ವಸ್ತುವಿನಲ್ಲಿಯೂ ಪಾತ್ರರಚನೆಯಲ್ಲಿಯೂ, ಅನೇಕ ಬದಲಾವಣೆಗಳನ್ನು ತಂದೊಡ್ಡಿ, ತನ್ನ ಕೈವಾಡವನ್ನು ತೋರಿಸಿದ್ದಾನೆ. ಆದಕಾರಣ, ನಾಟಕಲೇಖಕರಲ್ಲಿ ಅತ್ಯುತ್ತಮರೆನಿಸಿದವರ ಪಂಕ್ತಿಗೆ ಭಾಸನೂ ಅರ್ಹನೆಂಬುದನ್ನು ಕೈಯೆತ್ತಿ ಹೇಳಬಹುದಾಗಿದೆ.

'ಪ್ರತಿಮಾನಾಟಕ' ವೆಂಬ ಹೆಸರೇ ಭಾಸನ ಕಲ್ಪನಾಸಾಮರ್ಥ್ಯವನ್ನು ಸೂಚಿಸುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ, ದಶರಥನು ಮೃತಪಟ್ಟ ಸಂಗತಿಯು ಭರತನಿಗೆ ತಿಳಿಯುವ ವಿಷಯದಲ್ಲಿ ಕಲಾಸೌಂದರ್ಯದೃಷ್ಟಿಯಿಂದ ಅತಿಶಯವೇನೂ ಇಲ್ಲ. ಈ ವಿಷಯದಲ್ಲಿ ಭಾಸನ ಪ್ರತಿಮಾನಾಟಕದ ಸಂವಿಧಾನವೇ ಬೇರೆ. ಕಲೋಪಾಸಕನ ಅಭಿಪ್ರಾಯದಲ್ಲಿ ಅದು ಕೇವಲ ಅಭಿನಂದನೀಯವೂ ಹೌದು. ಅಯೋಧ್ಯೆಗೆ ಸಮೀಪವಾದೊಂದು ತೋಪಿನ ಬಳಿಯಲ್ಲಿ ಒಂದು ಪ್ರತಿಮಾಗೃಹ. ಸೂರ್ಯವಂಶದ ಅರಸರಲ್ಲಿ ಮೃತಪಟ್ಟವರ ಪ್ರತಿಮೆಗಳನ್ನೆಲ್ಲಾ ಅಲ್ಲಿಡುತ್ತಿದ್ದುದು ವಾಡಿಕೆ. ದಶರಥನು ಮೃತಪಟ್ಟ ಕೂಡಲೆ ಅವನ ಪ್ರತಿಮೆಯನ್ನೂ, ಅಲ್ಲಿದ್ದ ರಘು, ದಿಲೀಪ ಅಜ ಈ ಮೂವರ ಪ್ರತಿಮೆಗಳ ವೃಂದಕ್ಕೆ ಸೇರಿಸಿರುತ್ತಾರೆ. ರಾಮಲಕ್ಷ್ಮಣರು ವನವಾಸಕ್ಕೆ ತೆರಳಿದ್ದುದರಿಂದ, ರಾಜ್ಯಸೂತ್ರವನ್ನು ಸ್ವೀಕರಿಸುವುದಕ್ಕಾಗಿ ಭರತನನ್ನು ಅಯೋಧ್ಯೆಗೆ ಕರೆದುಕೊಂಡು ಬರಲು, ರಥವನ್ನು ಕಳುಹಿಸುತ್ತಾರೆ. ದಶರಥನ ಮರಣವೃತ್ತಾಂತವು ಅವನಿಗೆ ತಿಳಿದಿರುವುದಿಲ್ಲ. ದಶರಥನು ಅಲ್ಪಸ್ವಲ್ಪ ಅಸ್ವಸ್ಥನಾಗಿರುವನೆಂದು ಮಾತ್ರವೇ ಅವನಿಗೆ ಹೇಳುತ್ತಾರೆ. ತಾನು ಹೋಗುವ ವೇಳೆಗೆ ತಮ್ಮ ತಂದೆಯು ಆರೋಗ್ಯವಾಗಿರುವನೆಂದು ಭರತನಿಗೆ ಪೂರ್ಣವಾಗಿ ನಂಬಿಕೆ. ಅವನು ಮನಸ್ಸಿನಲ್ಲಿಯೇ ಹಬ್ಬವನ್ನು ಮಾಡಿಕೊಳ್ಳುತ್ತಾನೆ. ನಮಸ್ಕರಿಸಿದಾಗ ತನ್ನ ತಂದೆಯು ತನ್ನನ್ನು ತಕ್ಕೈಸಿ ಮೇಲಕ್ಕೆಬ್ಬಿಸುವುದನ್ನೂ, ತನ್ನ ಸಹೋದರರು ತ್ವರೆಗೊಂಡು ಓಡಿಬರುವುದನ್ನೂ, ಮಾತೆಯರು ಚಿರಕಾಲ ತನ್ನನ್ನು ಅಗಲಿದ್ದುದಕ್ಕಾಗಿ ಕಂಬನಿ ದುಂಬಿ ನಿಲ್ಲುವುದನ್ನೂ, ಭೃತ್ಯರೆಲ್ಲರೂ ತನ್ನನ್ನು ಕೊಂಡಾಡುವುದನ್ನೂ, ಲಕ್ಷ್ಮಣನು ತನ್ನನ್ನು ಹಾಸ್ಯಮಾಡಿ ಪ್ರೀತಿಯಿಂದ ನಗುವುದನ್ನೂ ಊಹಿಸಿಕೊಂಡು,

> ಸಿರದಿಂ ನಾಂ ಪಿತೃವಡಿದಾ|ವರೆಗಳ್ಗೆ ಬಾಗಿದವೊಲಾತನೆನ್ನಂ ಪಿಡಿದಾ |
> ದರದಿಂ ನೆಗೆಪಿದವೋಲ್ ಸೋ|ದರರೊಲವಿಂ ಘಟ್ಟನೆನ್ನ ಬಳಿಸಾರ್ದವೊಲುಂ ||
> ಜನನಿಯರಶ್ರುವಿನೆನ್ನಂ | ನನೆಯಿಪವೊಲುಮಾಳ್ಗಳರ್ಹನೆನುತಧಿಕನೆನು |
> ತ್ತನುಚರಿಪವೊಲುಂ ಲಕ್ಷ್ಮಣ | ನೆನತ್ತು ನಡೆನುಡಿಗೆ ನಗುವವೋಲುಂ ತೋರ್ಕುಂ || *

ಎಂದು ಹೇಳುವುದನ್ನು ನೋಡಿ ಪ್ರೇಕ್ಷಕರು ಏಕಕಾಲದಲ್ಲಿಯೇ ನಿಟ್ಟುಸಿರು ಬಿಟ್ಟು ನಗುವಂತಾಗುವುದು. ಭರತನು ಪುರಪ್ರವೇಶ ಮಾಡಲು ಇನ್ನೂ ಮುಹೂರ್ತವು ಸಮೀಪಿಸಿರುವುದಿಲ್ಲ. ಆದುದರಿಂದ, ಪ್ರತಿಮಾಗೃಹದ ಬಳಿಯಲ್ಲಿರುವ ತೋಪಿನ

---

* ಪ್ರತಿಮಾನಾಟಕ (III. ೫೫, ೫೬) --ಕನ್ನಡಿಗರ ಸೌಕರ್ಯಾರ್ಥವಾಗಿ ಇಲ್ಲಿ ವೇ|| ಬ್ರ|| ಸೀತಾರಾಮಶಾಸ್ತ್ರಿಗಳವರಿಂದ ರಚಿತವಾದ (ಪ್ರತಿಮಾನಾಟಕದ) ಕನ್ನಡ ಭಾಷಾಂತರದಿಂದ ಅನುವಾದ ಮಾಡಿರುತ್ತೇನೆ.

ಸಮೀಪದಲ್ಲಿ ಅವನು ಸ್ವಲ್ಪಹೊತ್ತು ನಿರೀಕ್ಷಿಸಬೇಕಾಗುವುದು. ಆಗ ಅವನು ಪ್ರತಿಮಾಗೃಹಕ್ಕೆ ಹೋಗುವನು. ಅಲ್ಲಿ ತಮ್ಮ ತಂದೆಯ ಪ್ರತಿಮೆಯಿರುವುದನ್ನು ನೋಡಿ ಅಪ್ರತಿಭನಾಗುವನು. ಮನಸ್ಸಿಗೆ ಏನೋ ಕಳವಳವುಂಟಾಗುವುದು. ಅವನು ತನ್ನ ಬಳಿಯಲ್ಲಿರುವ (ಪ್ರತಿಮಾಗೃಹದ ಕಾವಲುಗಾರನಾದ) ದೇವಕುಲಿಕನನ್ನು ಕುರಿತು "ಇಲ್ಲಿ ಬದುಕಿರುವವರ ಪ್ರತಿಮೆಯನ್ನೂ ಇಡುವುದುಂಟೆ?" ಎಂದು ಕೇಳುವನು. ದೇವಕುಲಿಕನು ಇಲ್ಲವೆನ್ನುವನು. ದಾರುಣವಾದ ನಿಜಸ್ಥಿತಿಯು ಕ್ಷಣಮಾತ್ರದಲ್ಲಿ ಗೋಚರಿಸುವುದು. ಭರತನು ಶೋಕದ ಆವೇಗದಿಂದ—ತಾನು ಹಗಲಿನಲ್ಲಿಯೇ ಭವಿಷ್ಯತ್ ಸುಖದ ಸ್ವಪ್ನಗಳನ್ನು ಕಾಣುತ್ತಿರುವಾಗ, ಹಠಾತ್ತಾಗಿ ತನ್ನನ್ನು ಆಹತನನ್ನಾಗಿ ಮಾಡಿದ ಶೋಕದ ಆವೇಗದಿಂದ—ಕೂಡಿ, ತನ್ನ ದುರ್ದೈವವನ್ನು ಹಳಿದುಕೊಳ್ಳುವನು. ಇದೆಲ್ಲಾ ರಾಮಾಯಣದಲ್ಲಿ ಹೇಳಿಯೇ ಇಲ್ಲ. ಭರತನಿಗೆ ಇನ್ನೂ ಹೆಚ್ಚಿನ ದುಃಖವು ಕಾದಿದೆ. ರಾಮಲಕ್ಷ್ಮಣರೂ, ಸೀತಾದೇವಿಯೂ, ವನವಾಸಕ್ಕೆ ಹೋದುದಕ್ಕೆ ತನ್ನ ತಾಯಿಯಾದ ಕೈಕೆಯಿಯೇ ಕಾರಣಳೆಂಬುದು ಅವನಿಗೆ ದೇವಕುಲಿಕನಿಂದ ತಿಳಿಯುವುದು. ಅವನು ದುಃಖವನ್ನು ತಾಳಲಾರದೆ ಮೂರ್ಛಿತನಾಗಿ ಕೆಳಗೆ ಬೀಳುವನು. ಪ್ರತಿಮಾಗೃಹಕ್ಕೆ ಬಂದ ದೇವಿಯರು (ಕೌಸಲ್ಯೆ, ಸುಮಿತ್ರೆ ಕೈಕೆಯಿ, ಇವರುಗಳು) ಅವನನ್ನು ಸಂತೈಸುವರು.

ಭಾಸನು ಸಿದ್ಧಿಹೊಂದಿದ ನಾಟಕಕಲೆಯ ಉಪಾಸಕನೆಂಬುದಕ್ಕೆ ಪ್ರತಿಮಾ ನಾಟಕದಲ್ಲಿನ ಮೊದಲನೆಯ ದೃಶ್ಯವೇ ತಕ್ಕಷ್ಟು ನಿದರ್ಶನವನ್ನೊದಗಿಸುವುದು. ಅದರಲ್ಲಿನ ಸಂಗತಿಗಳೆಲ್ಲಾ ಭಾಸನಿಂದಲೇ ಕಲ್ಪಿತವಾದವುಗಳು. ಜ್ಯೂಲಿಯಸ್ ಸೀಸರ್ ನಾಟಕದಲ್ಲಿ ಮೊಟ್ಟಮೊದಲನೆಯ ದೃಶ್ಯಕ್ಕೆ ಎಷ್ಟು ಪ್ರಾಮುಖ್ಯತೆಯುಂಟೋ, ಪ್ರತಿಮಾ ನಾಟಕದಲ್ಲಿ ಇದಕ್ಕೂ ಅಷ್ಟೇ ಪ್ರಾಮುಖ್ಯತೆಯುಂಟು. ಅವದಾತಿಕೆಯೆಂಬ ಚೇಟಿಯು ಅರಮನೆಯ ನಾಟಕಶಾಲೆಯಿಂದ ಒಂದು ವಲ್ಕಲವನ್ನು ಕದ್ದು ತರುವಳು. ನಾಟಕಶಾಲೆಯ ಯಜಮಾನಿಯಾದ ಆರ್ಯರೇವೆಯು ಅಶೋಕವೃಕ್ಷದ ಚಿಗುರನ್ನು ತನಗೆ ಕೊಡುವುದಿಲ್ಲವೆಂದು ಹೇಳಿದ್ದುದರಿಂದ ಅವಳನ್ನು ಕಾಡಲು ವಿನೋದಕ್ಕಾಗಿ ಅವದಾತಿಕೆಯು ವಲ್ಕಲವನ್ನು ಕದ್ದು ತರುವಳು. ಸೀತೆಯು ಅವಳಿಂದ ಸಂಗತಿಯನ್ನೆಲ್ಲಾ ಹೊರಡಿಸಿ, ವಿನೋದಕ್ಕೋಸ್ಕರವೂ ಕಳವುಮಾಡಬಾರದೆಂದೂ, ವಲ್ಕಲವನ್ನು ಆರ್ಯರೇವೆಗೆ ಕೊಟ್ಟುಬಿಡಬೇಕೆಂದೂ, ಬುದ್ಧಿ ಹೇಳುವಳು. ಅವದಾತಿಕೆಯು ಹೊರಡಲನುವಾಗುವಳು. ಆಗ ಆ ವಲ್ಕಲವನ್ನು ತಾನು ಧರಿಸಿದರೆ ಹೇಗಿರುವುದೋ ನೋಡಬೇಕೆಂದು ಸೀತೆಗೆ ಕುತೂಹಲವಾಗುವುದು. ಅವಳು ಅದನ್ನು

ಉಟ್ಟುಕೊಂಡು ಹೇಗಿರುವುದೆಂದು ಕೇಳುವಳು. ವಲ್ಕಲವೇ ಸುವರ್ಣರಚಿತವಾಗಿದ್ದಂತೆ ತೋರುವುದೆಂದು ಅವದಾತಿಕೆಯು ಹೇಳುವಳು. ಸೀತೆಯು ನೋಡಿಕೊಳ್ಳಲು ಕನ್ನಡಿಯನ್ನು ತರಿಸುವಳು. ಇದನ್ನೆಲ್ಲಾ ನೋಡಿದರೆ, ಆತಂಕಮಿಶ್ರವಾದ ಮತ್ತು ಅನಿರ್ವಚನೀಯವಾದ ಕಳವಳವುಂಟಾಗುತ್ತದೆ. ಅಂದು ರಾಮನಿಗೆ ಪಟ್ಟಾಭಿಷೇಕವಾಗಬೇಕಾದ ಶುಭದಿನ. ಅಂದು ಸೀತಾದೇವಿಯು ವಲ್ಕಲವನ್ನು ಉಡುವುದೆಂದರೆ ನಮ್ಮ ಮನಸ್ಸಿಗೆ ಏನೋ ಒಂದು ವಿಧದ ಶಂಕೆಯುಂಟಾಗುವುದು. ಮುಂದೇನಾಗುವುದೋ ಎಂದು ನಮ್ಮ ಮನಸ್ಸಿನಲ್ಲಿ ಆತಂಕವೂ, ತವಕವೂ, ಉಂಟಾಗುವುವು. ವಲ್ಕಲವು ಮುನಿಜನೋಚಿತವಾದುದು. ಕಾಡಿನಲ್ಲಿ ತಪೋನಿಷ್ಠೆಯಿಂದ ವಾಸವಾಗಿರುವವರು ಧರಿಸಬೇಕಾದುದು. ಆದಕಾರಣ, ಸೀತಾದೇವಿಯು ವಲ್ಕಲವನ್ನು ಉಡುವುದನ್ನು ನೋಡಿದರೆ ಪರಿಣಾಮದಲ್ಲಿ ಅಭಿಷೇಕವೇ ನಡೆಯದೇ ಹೋಗುವುದೋ ಏನೋ ಎಂಬುದಾಗಿ ನಮ್ಮ ಮನಸ್ಸಿನಲ್ಲಿ ಶಂಕೆಯುಂಟಾಗುವುದು. ಅಂತು, ಮುಂದೆ ರಾಜ್ಯಾಭಿಷೇಕವು ನಡೆಯದೆ ನಿಂತುಹೋಗಿ, ಸೀತಾರಾಮರು ವನವಾಸಮಾಡಬೇಕಾಗುವ ಅಂಶವು ಅತಿ ಸೂಕ್ಷ್ಮವಾಗಿ ಕಲಾಭಿಜ್ಞತೆಯಿಂದ ಸೂಚಿಸಲ್ಪಟ್ಟಿರುವುದು. ಇದರ ಮೇಲೋ, ಶ್ರೀರಾಮನಿಗೆ ಪಟ್ಟಾಭಿಷೇಕವಾಗುವುದೆಂಬ ಸುದ್ದಿಯು ಸೀತೆಯ ಕಿವಿಗೆ ಬಿದ್ದೊಡನೆಯೇ "ತಂದೆಯವರು ಕ್ಷೇಮವಾಗಿರುವರಷ್ಟೆ?" ಎಂದು ಕೇಳುವಳು. ಇದರಿಂದ ವ್ಯಂಗ್ಯವಾಗಿ ದುಃಖದ ಸೂಚನೆಯುಂಟಾಗುವುದು. ಶ್ರೀರಾಮನು ವನವಾಸಕ್ಕೆ ಹೊರಡಬೇಕೆಂಬುದು ಮುಂದೆ ನಮಗೆ ತಿಳಿಯುತ್ತದೆ. ಸೀತೆಯೂ, ಲಕ್ಷ್ಮಣನೂ, ಅವನೊಡನೆ ಹೊರಡಲು ಸಿದ್ಧವಾಗುವರು. ರಾಮನೂ ವಲ್ಕಲವನ್ನು ಧರಿಸಬೇಕಷ್ಟೆ. ಆ ವೇಳೆಗೆ ಸರಿಯಾಗಿ ನಾಟಕಶಾಲೆಯಿಂದ ಹೊಸ ವಲ್ಕಲವು ಬರುವುದು. ಇಲ್ಲಿ ಕೂಡ ಭಾಸನು ತನ್ನ ಕಲಾಕೌಶಲವನ್ನು ತೋರಿಸಿದ್ದಾನೆ. ಸೀತಾದೇವಿಯು ವಿಲಾಸಾರ್ಥವಾಗಿ ಹಳೆಯ ವಲ್ಕಲವನ್ನು ಧರಿಸಿದುದನ್ನು ಕೇಳಿ ಆರ್ಯರೇವೆಯು ಅರಮನೆಯ ರಂಗಸ್ಥಳದಲ್ಲಿ ಯಾರಿಂದಲೂ ಧರಿಸಲ್ಪಡದೇ ಇರುವ ಹೊಸ ವಲ್ಕಲವನ್ನು ಕಳುಹಿಸುವಳು. ಅದನ್ನು ರಾಮನು ಧರಿಸುವನು. ರಾಮಾಯಣದಲ್ಲಿ ಕೈಕೆಯಿಯೇ ವಲ್ಕಲಗಳನ್ನು ಕೊಡುವಳು.

ಎರಡನೆಯ ಅಂಕದಲ್ಲಿ ರಾಮನ ವನವಾಸದ ದೆಸೆಯಿಂದ ದಶರಥನಿಗುಂಟಾದ ಶೋಕವನ್ನು ಚಿತ್ರಿಸುವುದರಲ್ಲಂತು ಭಾಸನು ಕರುಣರಸದ ಚರಮ ಸೀಮೆಯನ್ನು ಮುಟ್ಟಿದ್ದಾನೆ. ಭವ್ಯವಾದ ತನ್ನ ಕಲ್ಪನಾ ಸಾಮರ್ಥ್ಯದಿಂದ, ರಾಮಾಯಣದಲ್ಲಿನ ಸಾಮಾನ್ಯ ಸಂಗತಿಗಳ ಜೋಡಣೆಯಲ್ಲಿಯೇ ವಿಶೇಷ ಚಾತುರ್ಯವನ್ನು ತೋರಿಸಿ

ಹೊಸ ಸಂಗತಿಗಳನ್ನು ಸೇರಿಸುವುದರಲ್ಲಿ ತನ್ನ ಕೌಶಲವನ್ನು ಬೀರಿ, ತನ್ಮೂಲಕ ಶೋಕರಸವನ್ನು ಬಹು ಚೆನ್ನಾಗಿ ಪುಷ್ಟಿಗೊಳಿಸಿದ್ದಾನೆ. ನಾಟಕವನ್ನು ರಂಗಸ್ಥಳದಲ್ಲಿ ಪ್ರದರ್ಶಿಸುವಾಗ ನಮ್ಮ ಮನಸ್ಸಿನ ಮೇಲೆ ಉಂಟಾಗುವ ಪರಿಣಾಮವು ಹಾಗಿರಲಿ. ನಾಟಕವನ್ನು ಸುಮ್ಮನೆ ಓದತೊಡಗಿದರೇ ಸಾಕು. ನಮ್ಮೆದುರಿಗೆ ದಶರಥನೇ ನಿಂತು ಪ್ರಲಾಪಿಸುತ್ತಿರುವಂತೆ ತೋರಿ, ನಮ್ಮ ಮನಸ್ಸು ಹಿಡಿತಕ್ಕೆ ಸಿಕ್ಕದೆ, ಸ್ವಲ್ಪಕಾಲ ಎಲ್ಲಿಯೋ ತೇಲಿ ಹೋಗುತ್ತದೆ. ದಶರಥನ ದುಃಖವು ಮಿತಿಮೀರಿರುವುದು. ಆಗಲೇ ಅವನಿಗೆ ಅರೆವಾಸಿ ಹುಚ್ಚು ಹಿಡಿದಿರುವುದು. ಅವನ ಬುದ್ಧಿಶಕ್ತಿಯು ಶೋಕಾಗ್ನಿಯಲ್ಲಿ ಬಹುಮಟ್ಟಿಗೆ ಬೆಂದು ಹೋಗಿರುವುದು. ಅವನು ತನ್ನ ಸುತ್ತಮುತ್ತಲೂ ಜನರು ಇರುವುದನ್ನು ನೋಡುವನು. ಆದರೆ, ಅವನಿಗೆ ಯಾರೊಬ್ಬರನ್ನು ಗುರುತಿಸುವುದಕ್ಕೂ ಆಗದು. ದಶರಥನು ಕೌಸಲ್ಯೆಯನ್ನು ನೋಡಿ "ನೀನು ಯಾರು?" ಎಂದು ಕೇಳುವನು. ಅವಳು ತಾನು ಕೌಸಲ್ಯೆಯೆಂದು ತಿಳಿಸುವಳು. ಆಗ ಅವನು ಅಚ್ಚರಿಗೊಂಡು "ಏನು, ಏನು, ಸಮಸ್ತ ಜನರ ಹೃದಯನಯನಾನಂದಕರನಾದ ರಾಮನ ಜನನಿಯಾದ ಕೌಸಲ್ಯೆಯೆ?" ಎಂದು ಕೇಳುವನು. ಆ ಬಳಿಕ ಸುಮಿತ್ರೆಯನ್ನು ನೋಡಿ, ಅವಳನ್ನೂ ಗುರುತಿಸಲಾರದೆ "ಇಲ್ಲಿರುವ ಮತ್ತೊಬ್ಬಳು, ಇವಳಾರು?" ಎಂದು ಕೇಳುವನು. ಕೌಸಲ್ಯೆಯು ಅವಳು ಲಕ್ಷ್ಮಣನ ತಾಯಿಯಾದ ಸುಮಿತ್ರೆಯೆಂದು ಹೇಳತೊಡಗಿ "ಮಹಾರಾಜ! ವತ್ಸ ಲಕ್ಷ್ಮಣ..." ಎನ್ನುವಳು. ಅವಳು ಮುಂದಣ ಮಾತುಗಳನ್ನಾಡುವಷ್ಟರಲ್ಲಿಯೇ—ವತ್ಸ ಲಕ್ಷ್ಮಣನೆಂಬ ಮಾತು ಅವಳ ಬಾಯಿಂದ ಹೊರಟೊಡನೆಯೇ—ದಶರಥನು ಉತ್ಸಾಹ ಭರದಿಂದ, "ಎಲ್ಲಿ, ಎಲ್ಲಿ, ಲಕ್ಷ್ಮಣನೆಲ್ಲಿ, ಕಾಣುವುದೇ ಇಲ್ಲವಲ್ಲ. ಅಯ್ಯೋ, ಕಷ್ಟ! ಕಷ್ಟ!" ಎನ್ನುವನು. ಆಗ ಕೌಸಲ್ಯೆಯು ತಾನು ಏನನ್ನು ಹೇಳಬೇಕೆಂದಿದ್ದಳೆಂಬುದನ್ನು ತಿಳಿಸುವಳು. ವನವಾಸಕ್ಕೆ ಹೊರಟ ರಾಮಲಕ್ಷ್ಮಣರನ್ನೂ, ಸೀತೆಯನ್ನೂ, ರಥದಲ್ಲಿ ಕುಳ್ಳಿರಿಸಿಕೊಂಡು ಹೋಗಲು ಅವರನ್ನು ಹಿಂಬಾಲಿಸಿದ್ದ ಸುಮಂತ್ರನು ಹಿಂದಿರುಗಿ ಬಂದಿರುವನೆಂದು ಅಷ್ಟರಲ್ಲಿ ಸುದ್ದಿಯು ಬರುವುದು. ದಶರಥನು ಎಷ್ಟೋ ಆಶೆಯಿಂದ "ರಾಮನೊಡನೆಯೆ?" ಎಂದು ಕೇಳುವನು. ಬರಿಯ ರಥವು ಬಂದಿರುವುದೆಂದು ಉತ್ತರವು ಬರುವುದು. ದಶರಥನ ಹೃದಯದಲ್ಲಿ ಶೋಕಜ್ವಾಲೆಯು ಏಳುವುದು. "ರಥವು ಬರಿದಾಗಿ ಬಂದಿದ್ದರೆ ನನ್ನ ಮನೋರಥವೂ ಭಗ್ನವಾಯಿತು. ನಿಜವಾಗಿಯೂ, ಈ ರಥವು ದಶರಥನನ್ನು ಕರೆದುಕೊಂಡು ಹೋಗಲು ಯಮನು ಕಳುಹಿಸಿರುವ ರಥವೇ ಸರಿ" ಎಂದು ಹೇಳುವನು. ಈ ಮಾತು ಎಷ್ಟು ಸಂತಾಪಕರವಾಗಿದೆ!

ಸುಮಂತ್ರನು ತನ್ನ ಬಳಿಗೆ ಬಂದಮೇಲೆ ದಶರಥನು "ರಾಮಲಕ್ಷ್ಮಣವೈದೇಹಿಯರೆಲ್ಲಿ? ಮರಣಕಾಲವು ಸಮೀಪಿಸುತ್ತಿರುವ ನನಗೆ ಅವರು ಏನನ್ನಾದರೂ ಹೇಳಿಕಳುಹಿಸಿರುವರೇ?" ಎಂದು ಕೇಳುವನು. ಸುಮಂತ್ರನು "ಮಹಾರಾಜ, ಹೀಗೆ ಅಮಂಗಳ ವಚನಗಳನ್ನಾಡುವುದು ಯುಕ್ತವಲ್ಲ. ನೀನು ಸ್ವಲ್ಪಕಾಲದಲ್ಲಿಯೇ ಅವರನ್ನು ನೋಡುವೆ" ಎನ್ನುವನು. ಆಗ, ದಶರಥನು "ನೀನು ಹೇಳಿದುದು ನಿಜ; ಇದು ತಪಸ್ವಿಜನೋಚಿತವಾದ ಪ್ರಶ್ನೆಯಲ್ಲ. ಹಾಗಾದರೆ ಈಗ ಹೇಳು. ತಪಸ್ವಿಗಳ ತಪಸ್ಸು ವರ್ಧಿಸುತ್ತಿರುವುದೆ?..." ಎಂದು ಮುಂತಾಗಿ ಹೇಳುವ ಉತ್ತರವು ಕೇವಲ ದಾರುಣವಾದುದು. ಸುಮಿತ್ರೆಯು ಸುಮಂತ್ರನನ್ನು ಕುರಿತು, ವೈದೇಹಿಯು ತಮ್ಮನ್ನೂ, ಮಹಾರಾಜನನ್ನೂ ಸ್ಮರಿಸಿಕೊಂಡಳೇ ಎಂಬುದಾಗಿ ಕೇಳುವಳು. ಎಲ್ಲರೂ ಮಹಾರಾಜನನ್ನು ಸ್ಮರಿಸಿಕೊಂಡರೆಂದು ಅವನು ಉತ್ತರ ಹೇಳುವನು. ಅವರ ಹೆಸರುಗಳನ್ನೇ ಹೇಳಿ ಶ್ರುತಪಡಿಸಬೇಕೆಂದು ದಶರಥನು ಕೋರುವನು.—

ಸುಮಂತ್ರ:—ಆಯುಷ್ಮಂತನಾದ ರಾಮನು.

ದಶರಥ:—"ರಾಮ"; ಇವನು ರಾಮ; ಇವನ ಹೆಸರ ಕೇಳಿದುದರಿಂದ ಇವನನ್ನು ಸೋಕಿದಂತೆ ನನಗೆ ತೋರುವುದು. ಆಮೇಲಾಮೇಲೆ?

ಸುಮಂತ್ರ:—ಆಯುಷ್ಮಂತನಾದ ಲಕ್ಷ್ಮಣ.

ದಶರಥ:—ಇವನು ಲಕ್ಷ್ಮಣ; ಆಮೇಲಾಮೇಲೆ.

ಸುಮಂತ್ರ:—ಆಯುಷ್ಮತಿಯಾದ ಜನಕರಾಜನ ಪುತ್ರಿ ಸೀತೆ.

ಸುಮಂತ್ರನು, ರಾಮಲಕ್ಷ್ಮಣ ವೈದೇಹಿಯೆಂಬ ಕ್ರಮದಲ್ಲಿ ಅವರ ಹೆಸರುಗಳನ್ನು ಶ್ರುತಪಡಿಸಿದುದು ಸರಿಯಲ್ಲವೆಂದೂ, ಅರಣ್ಯವು ಬಹು ದೋಷಯುಕ್ತವಾದುದರಿಂದ ವೈದೇಹಿಯು ಸುರಕ್ಷಿತವಾಗಿರಲನುಕೂಲಿಸುವಂತೆ ಅವಳು ರಾಮಲಕ್ಷ್ಮಣರ ಮಧ್ಯದಲ್ಲಿ ಬರುವಹಾಗೆ ಹೊಸಕ್ರಮದಲ್ಲಿ ಅವರುಗಳ ಹೆಸರನ್ನು ತಿಳಿಸಬೇಕೆಂದೂ, ದಶರಥನು ಅವನಿಗೆ ಹೇಳುತ್ತಾನೆ. ಆ ಬಳಿಕ ಸುಮಂತ್ರನು ಆರೀತಿ ಮಾಡುತ್ತಾನೆ. ಮೊದಲು ರಾಮನ ಹೆಸರನ್ನೂ, ಆ ಬಳಿಕ ಸೀತೆಯ ಹೆಸರನ್ನೂ ಕೊನೆಗೆ ಲಕ್ಷ್ಮಣನ ಹೆಸರನ್ನೂ ತಿಳಿಸುತ್ತಾನೆ. ಸುಮಂತ್ರನ ಮಾತುಗಳು ಮುಗಿಯುವ ವೇಳೆಗೆ ಅವರು ಮೂವರೂ ತನ್ನೆದುರಿಗಿರುವಂತೆ ದಶರಥನು ಭಾವಿಸಿಕೊಂಡು ಅವರು ತನ್ನನ್ನು ಆಲಿಂಗಿಸುವಂತೆ ಕೇಳಿ,

"ಇವನು ಲಕ್ಷ್ಮಣ. ರಾಮ! ಜಾನಕಿ! ಲಕ್ಷ್ಮಣ! ಮಕ್ಕಳಿರಾ! ನೀವು ನನ್ನನ್ನು ಅಪ್ಪಿಕೊಳ್ಳಿ"

ಎಂದು ಹೇಳುವುದನ್ನು ಕೇಳಿ ನಮ್ಮ ಹೃದಯವೆಲ್ಲಾ ಕಲಕಿಹೋಗುವುದು.

ಅಂತು ಎರಡನೆಯ ಅಂಕದಲ್ಲಿ ಪ್ರತಿಯೊಂದು ಪಂಕ್ತಿಯೂ ಭಾಸನ ಕಲ್ಪನಾ ಸಾಮರ್ಥ್ಯವನ್ನೂ, ನಾಟಕ ಲೇಖನದ ವೈಖರಿಯನ್ನೂ ತೋರಿಸುವುದು. ಅಂಕವು ಮುಗಿಯುತ್ತಾ ಬರುವವೇಳೆಗೆ ದಶರಥನ ಸ್ಥಿತಿಯು ಪ್ರತೀಕಾರಕ್ಕೆ ಸಾಧ್ಯವಿಲ್ಲದೆ ಕೈಮೀರುವುದು. ಅವನು ತನ್ನನ್ನು ಸಮಾಧಾನಮಾಡಿ ಸಂತೈಸಲು ತನ್ನ ಪಿತೃಗಳು ಬಂದಿರುವರೆಂದು ಭಾವಿಸಿಕೊಂಡು "ರಾಮ, ವೈದೇಹಿ, ಲಕ್ಷ್ಮಣ, ನಾನು ಇಲ್ಲಿಂದ ಪಿತೃಗಳ ಬಳಿಗೆ ಹೋಗುವೆನು. ಎಲೈ ಪಿತೃಗಳಿರಾ, ಇದೋ, ಇದೋ, ಬಂದೆ." ಎಂದು ಹೇಳಿ ಮೂರ್ಛಿತನಾಗುವನು. ಅಭಿನಯದೃಷ್ಟಿಯಿಂದಲೂ ಭಾವ ಪುಷ್ಟಿಯ ದೆಸೆಯಿಂದಲೂ, ಈ ಅಂಕವನ್ನು ಷೇಕ್ಸ್‌ಪಿಯರ್ ಕವಿಯ ನಾಟಕಗಳಲ್ಲಿನ ಮುಖ್ಯ ದೃಶ್ಯಗಳೊಡನೆ, ಹೋಲಿಸಬಹುದಾಗಿದೆ. ಈ ಅಂಕವು ಮುಗಿದೊಡನೆಯೇ, ಅನುತಾಪದಿಂದ ಕುಗ್ಗಿದ ಪ್ರೇಕ್ಷಕರ ಮನಸ್ಸನ್ನು ಸ್ವಲ್ಪ ಉಲ್ಲಾಸಗೊಳಿಸಲು, ಗುಡಿಸುವವನಿಗೂ ಅವನ ಯಜಮಾನನಾದ ಅಧಿಕಾರಿಗೂ ನಡೆಯುವ ಹಾಸ್ಯರಸ ಯುಕ್ತವಾದ ಸಂಭಾಷಣೆಯು ಚಿತ್ರಿಸಲ್ಪಟ್ಟಿದೆ.

ಮೂರನೆಯ ಅಂಕದಲ್ಲಿ ಮುಖ್ಯವಾಗಿ ಭರತನು ಪ್ರತಿಮಾಗೃಹಕ್ಕೆ ಹೋದ ವಿಚಾರವೇ ವರ್ಣಿತವಾಗಿದೆ. ಭಾಸನ ಕಲ್ಪನಾ ಸಾಮರ್ಥ್ಯದ ನಿದರ್ಶನಗಳಲ್ಲಿ ಅಮೋಘವಾದುದೊಂದು ಅದರಲ್ಲಿ ದೊರೆಯುತ್ತದೆ. ಭಾಸನು ಮುಖ್ಯಸಂಗತಿಗಳನ್ನು ವಾಲ್ಮೀಕಿರಾಮಾಯಣದಿಂದ ಸ್ವೀಕರಿಸಿರುವ ಸನ್ನಿವೇಶಗಳಲ್ಲಿಯೂ ಕೂಡ, ಅವು ಗಳನ್ನು ಚಿತ್ರಿಸುವುದರಲ್ಲಿ ಒಂದು ನವೀನರೀತಿಯನ್ನನುಸರಿಸಿ ನಮ್ಮ ಮನಸ್ಸನ್ನೇ ಮುಗ್ಧಗೊಳಿಸಿದ್ದಾನೆ.

ಸೀತಾಪಹರಣವು ರಾಮಾಯಣದಲ್ಲಿಯೂ ಹೇಳಿದೆ. ಪ್ರತಿಮಾನಾಟಕ ದಲ್ಲಿಯೂ ಹೇಳಿದೆ. ಆದರೆ, ಅದು ನಡೆದ ರೀತಿಯನ್ನು ವರ್ಣಿಸುವುದರಲ್ಲಿ ಭಾಸನು ಮನೋಹರವಾಗಿ ತನ್ನ ಕೈಚಳಕವನ್ನು ತೋರಿಸಿದ್ದಾನೆ. ರಾಮಾಯಣದಲ್ಲಿನ ಸನ್ನಿವೇಶವನ್ನೇ ಬದಲಾಯಿಸಿ ಬರೆದಿದ್ದಾನೆ. ರಾಮಾಯಣದಲ್ಲಿ ರಾವಣನ ಕೋರಿ ಕೆಯ ಪ್ರಕಾರ, ಅವನ ಸೋದರಮಾವನಾದ ಮಾರೀಚನು ಸುವರ್ಣಮೃಗದ ರೂಪವನ್ನುತಾಳಿ ರಾಮನ ಪರ್ಣಶಾಲೆಯ ಬಳಿಯಲ್ಲಿ ಸುಳಿದಾಡುತ್ತಾನೆ. ಸೀತೆಯು ಅದನ್ನು ತನಗೆ ತಂದುಕೊಡಬೇಕೆಂದು ಕೇಳುತ್ತಾಳೆ. ರಾಮನು ಆಶ್ರಮದಲ್ಲಿ ಕಾವಲಿಟ್ಟು ತಾನು ಮಾಯಾಮೃಗವನ್ನು ಹಿಂಬಾಲಿಸಿಕೊಂಡು ಹೊರಡುತ್ತಾನೆ. ಮಾರೀಚನು ಬಹುದೂರ ರಾಮನನ್ನು ಸೆಳೆದೊಯ್ದು, ಕೊನೆಗೆ ರಾಮಬಾಣದಿಂದ ಗಾಯಹೊಂದಿ "ಹಾ, ಸೀತೆ! ಹಾ, ಲಕ್ಷ್ಮಣ!" ಎಂದು ಕೂಗಿ ಮೃತಪಡುತ್ತಾನೆ.

ಸೀತೆಯು ಆ ಧ್ವನಿಯನ್ನು ಕೇಳಿ ರಾಮನಿಗೆ ವಿಪತ್ತು ಸಂಭವಿಸಿರುವಂತೆ ಬಗೆದು, ಅವನ ಸಹಾಯಾರ್ಥವಾಗಿ ಲಕ್ಷ್ಮಣನು ಹೋಗಬೇಕೆಂದು ಬಯಸುತ್ತಾಳೆ. ಲಕ್ಷ್ಮಣನು ರಾಮನ ಪರಾಕ್ರಮವನ್ನು ವರ್ಣಿಸಿ, ಅವನಿಗೆಂದಿಗೂ ವಿಪತ್ತುಂಟಾಗಿಲ್ಲವೆಂದೂ, ತಾನು ಅಣ್ಣನ ಆಜ್ಞೆಯನ್ನು ಮೀರಲೊಲ್ಲೆನೆಂದೂ, ತಿಳಿಸುತ್ತಾನೆ. ಸೀತೆಯು ಕುಪಿತಳಾಗಿ, ಅವನನ್ನು ಮನಸ್ಸು ಬಂದಂತೆ ದೂಷಿಸಿ, ಅವನು ದುರುದ್ದೇಶದಿಂದ ಹಾಗೆ ಹೇಳಿದುದಾಗಿ ಅವನನ್ನು ನಿಂದಿಸುತ್ತಾಳೆ. ಕೊನೆಗೆ ನಿರ್ವಾಹವಿಲ್ಲದೆ, ಲಕ್ಷ್ಮಣನು ಆಶ್ರಮದಿಂದ ಹೊರಟುಹೋಗುತ್ತಾನೆ. ರಾವಣನು ಈ ಸಮಯವು ಸಿಕ್ಕಿದರೆ ಸಾಕೆಂದಿದ್ದು, ಆಶ್ರಮಕ್ಕೆ ಸನ್ಯಾಸಿವೇಷದಲ್ಲಿ ಬಂದು ಸೀತೆಯನ್ನು ಹೊತ್ತುಕೊಂಡು ಓಡಿಹೋಗುತ್ತಾನೆ. ಪ್ರತಿಮಾನಾಟಕದಲ್ಲಿ ಭಾಸನು ಚಿತ್ರಿಸಿರುವ ಸನ್ನಿವೇಶಗಳೇ ಬೇರೆ. ಸೀತಾಪಹರಣವು ಚಿತ್ರಿತವಾಗಿರುವ ಅಂಕವು ಆರಂಭವಾದಾಗ ಸೀತೆಯು ಆಶ್ರಮವನ್ನು ಗುಡಿಸಿ ಸಾರಿಸಿ, ರಂಗವಲ್ಲಿಯಿಂದ ಅಲಂಕರಿಸುತ್ತಿರುತ್ತಾಳೆ. ಮರುದಿನ ದಶರಥನ ಶ್ರಾದ್ಧಕರ್ಮವು ನೆರವೇರಬೇಕು. ರಾಮನು ಲಕ್ಷ್ಮಣನನ್ನು ಕೆಲಸದ ಮೇಲೆ ಕಳುಹಿಸಿರುತ್ತಾನೆ. ತಾನೂ ಎಲ್ಲಿಗೋ ಹೋಗಿದ್ದು ಆಶ್ರಮಕ್ಕೆ ಬರುತ್ತಾನೆ. ಸೀತೆಯು ತಾನು ಮಕ್ಕಳಂತೆ ಪೋಷಿಸುತ್ತಾ ಇರುವ ಗಿಡಗಳಿಗೆ ಆಗ ನೀರೆರೆಯುತ್ತಾ ಇರುತ್ತಾಳೆ. ಕೆಲವು ಗಿಡಗಳಿಗೆ ನೀರು ಹಾಕಿ ಮತ್ತೆ ಕೊಡದಲ್ಲಿ ನೀರನ್ನು ತರಲು ಹೋಗಿರುತ್ತಾಳೆ. ರಾಮನು ಅವಳ ಸ್ಥಿತಿಗೆ ಮನಮರುಗಿ, "ಯಾವುದು ಕನ್ನಡಿಯನ್ನು ಹಿಡಿಯುವುದರಿಂದಲೂ ಸೋತು ಹೋಗುತ್ತಿದ್ದಿತೋ ಅಂಥಾ ಸುಕುಮಾರಿಯಾದ ಸೀತೆಯ ಕೈಯು ಬಿಂದಿಗೆಯಲ್ಲಿ ನೀರು ಹೊರುತ್ತಿದ್ದೂ ಖೇದಗೊಳ್ಳುವುದಿಲ್ಲ. ಅಯ್ಯೋ ಕಷ್ಟ! ವನವು ಲತೆಗಳಿಗೆ ಸಮವಾದ ಸ್ತ್ರೀಜನ ಸೌಕುಮಾರ್ಯವನ್ನು ಕಠಿನಗೊಳಿಸುತ್ತದೆ." ಎಂದು ಪೇಚಾಡುತ್ತಾನೆ.

ಈ ಮಾತಿನ ಸಾರವನ್ನು ಗ್ರಹಿಸುವುದಾದರೆ, ಯಾರಿಗಾದರೂ ತಟಕ್ಕನೆ ಕಣ್ಣಿನಲ್ಲಿ ನೀರು ಉದುರುವುದು. ರಾಮನು ಆ ಬಳಿಕ, ತಾವು ಅರಣ್ಯದಲ್ಲಿರುವುದರಿಂದ, ಉಚಿತರೀತಿಯಲ್ಲಿ ದಶರಥನ ಶ್ರಾದ್ಧವನ್ನು ಮಾಡುವುದಕ್ಕೆ ಇಲ್ಲದೆ ಹೋಯಿತಲ್ಲಾ ಎಂಬುದಾಗಿ ವ್ಯಸನಪಡುತ್ತಾನೆ. ಭರತನು ಉಚಿತರೀತಿಯಲ್ಲಿ ಶ್ರಾದ್ಧವನ್ನು ನಡೆಸುವನೆಂದೂ, ತಮ್ಮ ಅವಸ್ಥೆಗನುಸಾರವಾಗಿ ರಾಮನು ನಡೆಸುವ ಶ್ರಾದ್ಧದಿಂದಲೇ ದಶರಥನು ತೃಪ್ತನಾಗುವನೆಂದೂ, ಸೀತೆಯು ಸಮಾಧಾನವನ್ನು ಹೇಳುತ್ತಾಳೆ. ಆಗ ರಾಮನು "ನಾನು ದರ್ಭೆಯಲ್ಲಿ ಇಡುವ ಫಲಗಳನ್ನು ನೋಡಿ, ನಮ್ಮ ವನ

ವಾಸವನ್ನು ಸ್ಮರಿಸಿಕೊಂಡು, ತಂದೆಯು ಸ್ವರ್ಗದಲ್ಲಿ ಕೂಡ ರೋದಿಸುವನು'' ಎಂಬ ಅರ್ಥಕ್ಕೆ ಅವನು ಹೇಳುವ ಶ್ಲೋಕದಿಂದ ನಮ್ಮ ಹೃದಯವು ಕರಗಿ ನೀರಾಗುವುದು. ರಾಮನೂ ಸೀತೆಯೂ ಹೀಗೆ ಸಂಭಾಷಣೆಮಾಡುತ್ತಿರುವಾಗ, ರಾವಣನು ಸನ್ಯಾಸಿಯ ವೇಷವನ್ನು ತಾಳಿ ತಾನೊಬ್ಬ ಅತಿಥಿಯೆಂದು ಹೇಳುವನು. ರಾಮನೂ ಸೀತೆಯೂ ಅವನನ್ನು ಆದರದಿಂದ ಬರಮಾಡಿಕೊಂಡು ಉಪಚರಿಸುವರು. ಅವನು ತಾನು ವೇದಾಧ್ಯಯನಸಂಪನ್ನನೆಂದು ಮುಂತಾಗಿ ಹೇಳಿಕೊಳ್ಳುವನು. ಶ್ರಾದ್ಧದಲ್ಲಿ ಯಾವ ಯಾವ ಆಹಾರವಸ್ತುಗಳನ್ನುಪಯೋಗಿಸುವುದು ಉತ್ತಮವೆಂದು ರಾಮನು ಅವನನ್ನು ಕೇಳುವನು. ರಾವಣನು ಕೆಲವು ಪದಾರ್ಥಗಳನ್ನು ಹೇಳಿ, ಆ ಬಳಿಕ ಕಾಂಚನಪಾರ್ಶ್ವಮೃಗವನ್ನು ತಂದು ಅದರ ಮಾಂಸವನ್ನು ಉಪಯೋಗಿಸುವುದು ಸರ್ವೋತ್ತಮವೆಂದು ತಿಳಿಸುವನು. ರಾಮನು ತಾನು ಬರುವವರೆಗೂ, ಪೂಜ್ಯನಾದ ಆ ಅತಿಥಿಯನ್ನು ಉಪಚರಿಸುತ್ತಿರುವಂತೆ ಸೀತೆಗೆ ಕಟ್ಟುಮಾಡಿ, ಮೃಗವನ್ನು ಹುಡುಕಿಕೊಂಡು ಹೋಗುವನು. ಇತ್ತ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುವನು. ಭಾಸನು ಮಾಡಿರುವ ಈ ಬದಲಾವಣೆಯು ಎಷ್ಟು ರಮಣೀಯವಾಗಿದೆ! ರಾಮನೂ ವೈದೇಹಿಯೂ ತನ್ನನ್ನು ಎಷ್ಟು ಆದರದಿಂದ ಸತ್ಕರಿಸಿ ಗೌರವಿಸಿದ್ದರೆಂಬುದನ್ನೂ ಮರೆತು, ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುವನು. ಅವನು ಕೃತಘ್ನತೆಯ ಅವತಾರವೇ ಸರಿ. ಪ್ರತಿಮಾ ನಾಟಕದಲ್ಲಿನ ರಾವಣನು ರಾಮಾಯಣದಲ್ಲಿನ ರಾವಣನಿಗಿಂತಲೂ ಜಘನ್ಯವೃತ್ತಿಯವನೆನ್ನಲು ಅಡ್ಡಿಯಿಲ್ಲ.

ಸೀತಾಪಹರಣದ ಸುದ್ದಿಯು ಭರತನಿಗೆ ತಿಳಿಯಬರುವಂತೆಯೂ, ರಾಮನಿಗೆ ಆಶ್ರಮದಲ್ಲಿ ಕಿರೀಟಧಾರಣೆಯು ಆಗುವಂತೆಯೂ, ಭರತನು ಸಪರಿವಾರನಾಗಿ ಅಲ್ಲಿಗೆ ಹೋಗುವಂತೆಯೂ, ಚಿತ್ರಿಸಿರುವುದು ಭಾಸನ ಕಲ್ಪನಾಸಾಮರ್ಥ್ಯವನ್ನು ಸೂಚಿಸುವುದು. ಇವುಗಳಿಂದ ವಿಶೇಷ ಪ್ರಯೋಜನವೂ ಉಂಟು. ಕರುಣರಸವು ಮತ್ತಷ್ಟು ಉಕ್ಕಿಹರಿಯಲೆಂಬ ಉದ್ದೇಶದಿಂದ ಭರತನಿಗೆ ಸೀತಾಪಹರಣದ ಸುದ್ದಿಯು ತಿಳಿಯುವಂತೆಯೂ, ರಾಮನಿಗೆ ಚಿರಪರಿಚಿತರಾದ ಮುನಿಗಳ ಮನಸ್ಸಿಗೆ ಹರ್ಷವುಂಟಾಗಲೆಂಬ ಉದ್ದೇಶದಿಂದ ಋಷ್ಯಾಶ್ರಮದಲ್ಲಿ ಅವನ ಪಟ್ಟಾಭಿಷೇಕವು ನಡೆಯುವಂತೆಯೂ, ಭಾಸನು ಚಿತ್ರಿಸಿರುವನೆಂದು ಡಾಕ್ಟರ್ ಟಿ. ಗಣಪತಿಶಾಸ್ತ್ರಿಗಳವರು ತಿಳಿಸಿದ್ದಾರೆ. ರಾಮನ ಪಟ್ಟಾಭಿಷೇಕವು ತಪೋವನದಲ್ಲಿ ನಡೆದುದರಿಂದ ಮತ್ತೊಂದು ವಿಶೇಷವೂ ಉಂಟೆಂಬುದು ನನ್ನ ಅಭಿಪ್ರಾಯ. ತ್ಯಾಗ ಭೋಗಗಳೆರಡಕ್ಕೂ ಆದರ್ಶ

ವೆನಿಸುವ ರಾಮರಾಜ್ಯವು ಆರಂಭವಾಗುವುದರಲ್ಲಿದ್ದುದರಿಂದ, ತಪಸ್ವಿವೃತ್ತಿಗೂ ಗೃಹಸ್ಥಧರ್ಮಕ್ಕೂ ಇರುವ ಸಾಮರಸ್ಯವನ್ನೂ, ಈ ಸಾಮರಸ್ಯವಿದ್ದರೆ ಸುಖೋತ್ಕರ್ಷವು ತಾನಾಗಿಯೇ ಉಂಟಾಗುವುದನ್ನೂ, ಸೂಚಿಸುವುದಕ್ಕಾಗಿ ಭಾಸನು ಹೀಗೆ ಮಾಡಿದ್ದರೂ ಮಾಡಿರಬಹುದು.

ಪ್ರತಿಮಾನಾಟಕವು ಅತ್ಯುತ್ತಮವಾದ ನಾಟಕಗಳ ಗುಂಪಿಗೆ ಸೇರಿದುದೆಂಬುದಕ್ಕೆ ಆದರಲ್ಲಿನ ಪಾತ್ರರಚನೆಯೂ ಒಂದು ಮುಖ್ಯವಾದ ನಿದರ್ಶನವಾಗಿದೆ. ಈ ನಾಟಕದಲ್ಲಿ ಪಾತ್ರಗಳೆಲ್ಲರೂ, ಮಾನವಪ್ರಕೃತಿಗನುಗುಣವಾದ ಲಕ್ಷಣಗಳಿಂದ ಕೂಡಿ, ತಮ್ಮ ಸ್ಥಿತಿಗತಿಗಳಿಗನುರೂಪವಾದ ರೀತಿಯಲ್ಲಿ ಮಾತನಾಡುತ್ತಾರೆ. ಇದರಿಂದ ಪ್ರೇಕ್ಷಕರ ಮನಸ್ಸಿಗೆ ಆನಂದವಾಗುತ್ತದೆ. ಧೀರೋದ್ಧತನಾಯಕನಾಗಲು ತಕ್ಕವನಾದ ಭಾರತದ ದುರ್ಯೋಧನನನ್ನು ಪಾಂಚರಾತ್ರದ ಧರ್ಮವೀರನನ್ನಾಗಿ ಮಾರ್ಪಡಿಸಿದ ಭಾಸನೂ, ಭಾರತದಲ್ಲಿ ಸಿಕ್ಕಿದ ಮರದ ತುಂಡನ್ನು ಮೃದುಮಧುರವಾದ ಮತ್ತು ರಸಭರಿತವಾದ ಇಕ್ಷುದಂಡವನ್ನಾಗಿ ಮಾರ್ಪಡಿಸಿ ಶಾಕುಂತಲವೆಂದು ಹೆಸರನ್ನಿಟ್ಟ ಕಾಳಿದಾಸನೂ, ಈ ವಿಷಯದಲ್ಲಿ ಷೇಕ್ಸ್‌ಪಿಯರ್ ಕವಿಗೆ ಕಡಮೆಯೋದವರಲ್ಲ. ರಾಮಾಯಣದಲ್ಲಿ ವರ್ಣಿತವಾಗಿರುವ ವ್ಯಕ್ತಿಗಳೇ ಪ್ರತಿಮಾನಾಟಕದಲ್ಲಿನ ಪಾತ್ರಗಳಾಗಿದ್ದಾಗ್ಯೂ, ಪಾತ್ರರಚನೆಯಲ್ಲಿ ನಾಟಕಕ್ಕೆ ಉಚಿತವೆನಿಸುವಂತೆ ಭಾಸನು ಅಮೋಘವಾದ ಶಕ್ತಿಯನ್ನು ತೋರ್ಪಡಿಸಿದ್ದಾನೆ. ಅವನು ಸೃಷ್ಟಿಸಿರುವ ಪಾತ್ರಗಳೆಂದಿಗೂ ರಾಮಾಯಣದ ವ್ಯಕ್ತಿಗಳ ಪಡಿಯಚ್ಚುಗಳಲ್ಲ. ಪಾತ್ರರಚನೆಯಲ್ಲಿ ಭಾಸನು ತೋರಿಸಿರುವ ಅನ್ಯಾದೃಶವಾದ ಕೌಶಲವನ್ನು ಇಲ್ಲಿ ಕೆಲವು ಸಂಗತಿಗಳಿಂದ ಸ್ವಲ್ಪ ಸೂಚಿಸಬಹುದು.

ರಾಮಾಯಣದಲ್ಲನ ಶ್ರೀರಾಮಚಂದ್ರನು ಆದರ್ಶತೆಯ ನೆಲೆ; ಘನತೆಯ ಗಣಿ; ಶೌರ್ಯದ ಆಗರ. ಪ್ರತಿಮಾನಾಟಕದಲ್ಲ ಶ್ರೀರಾಮನು ಮತ್ತಷ್ಟು ಘನತೆಯಿಂದ ಶೋಭಿಸುತ್ತಿದ್ದಾನೆ. ರಾಜ್ಯಾಭಿಷೇಕವು ನಿಂತುಹೋಗಿ, ತನಗೆ ರಾಜ್ಯಭೋಗವು ತಪ್ಪಿಹೋದುದಕ್ಕಾಗಿ ಅವನು ಸ್ವಲ್ಪವೂ ಚಿಂತಿಸುವುದಿಲ್ಲ. ಅಭಿಷೇಕವು ನಿಂತುಹೋದುದೇ ಅವನಿಗೊಂದು ಸಂತೋಷ !

ಕಾಂಚುಕೀಯನಿಗೂ, ರಾಮನಿಗೂ, ನಡೆಯುವ ಸಂಭಾಷಣೆಯನ್ನು ನೋಡಿದರೆ, ರಾಮನ ಉದಾತ್ತ ಸ್ವಭಾವವೂ, ಸಾತ್ವಿಕ ಪ್ರೇಮವೂ, ವ್ಯಕ್ತವಾಗುವುವು. ಅಭಿಷೇಕೋತ್ಸವವು ನಿಂತುಹೋದುದಕ್ಕೆ ಕೈಕೆಯಿಯೇ ಕಾರಣವೆಂದು ಕಾಂಚುಕೀಯನು ಹೇಳಿದುದಕ್ಕೆ 'ಆರ್ಯ, ಹೀಗಾದುದು ಒಳ್ಳೆಯದೇ ಆಯಿತಲ್ಲವೆ'—

ಎಂದು ಉತ್ತರಕೊಡುತ್ತಾನೆ. ಇದು ಕಾಂಚುಕೀಯನ ಮನಸ್ಸಿಗೆ ಹಿಡಿಯಲೊಲ್ಲದು. ಆದಕಾರಣ, ಅವನು ಈ ಉತ್ತರಕ್ಕೆ ಕಾರಣವನ್ನು ಕೇಳುವನು. ಆಗ ರಾಮನು,

> ಜನಪಾಲಂ ವನಮೆಯ್ದ್ವವೇೞ್ಪುದು ವಲಂ ತಪ್ಪಿತ್ತು ತಾತಂಗಧೀ
> ನನೆನಿಪ್ಪೆಂ ಗಡ ನಾನೆತ್ತದುವೆ ಸಲ್ಗುಂ ಬಾಲಭಾವಂ ಪೊಸಂ
> ಬನಿವಂ ರಾಜ್ಯಮನೆಂತು ರಕ್ಷಿಪನೊ ಎಂಬಾಶಂಕೆಯಿಲ್ಲಂ ಜನ
> ಕ್ಕೆನಿತುಂ ಬಂಚನೆಗೈದನಾಗೆನನುಜರ್ಗಂ ಭೋಗಸಂಪತ್ತಿಯಿಂ ||

ಎಂದು ಹೇಳುವನು. ದಶರಥನ ಕೋರಿಕೆಯಂತೆ ತಾನು ಪಟ್ಟಾಭಿಷಿಕ್ತನಾಗಿದ್ದರೆ ತಾನು ತನ್ನ ತಮ್ಮಂದಿರಿಗೆ ವಂಚನೆಮಾಡಿದ ಹಾಗಾಗುತ್ತಿದ್ದಿತೆಂಬ ಈ ಮನೋಭಾವವು ಅನನ್ಯ ಸಾಧಾರಣವಾದುದು. ಅವನು ಜ್ಯೇಷ್ಠ ಪುತ್ರನಾದುದರಿಂದ ಅವನಿಗೆ ರಾಜ್ಯವು ಸಲ್ಲಲೇಬೇಕು. ಆದರ ಮಾತು ಹಾಗಿರಲಿ. ಅವನ ಈ ವಿಧವಾದ ಮನೋಭಾವವನ್ನು ಮಾತ್ರ, ಎಷ್ಟು ಕೊಂಡಾಡಿದರೂ ಸಾಲದು. ಕಾಂಚುಕೀಯನು ಆ ಬಳಿಕ ಹೇಳುವುದನ್ನು ನೋಡಿ: "ಕೈಕೆಯಿಯು ಅಪ್ರಾರ್ಥಿತವಾಗಿ ರಾಜನಬಳಿಗೆ ಹೋಗಿ ಭರತನಿಗೆ ರಾಜ್ಯಾಭಿಷೇಕವಾಗಬೇಕೆಂದು ಬೇಡಿದಳು. ಇದಾದರೂ ರಾಜ್ಯಲೋಭವೆನಿಸುವುದಿಲ್ಲವೇ?" ಎಂದು ಕಾಂಚುಕೀಯನು ಕೇಳುವನು. ಆದಕ್ಕೆ ರಾಮನು ಕಾಂಚುಕೀಯನು ತನ್ನ ಮೇಲಣ ಪಕ್ಷಪಾತದಿಂದ ಈ ರೀತಿ ಹೇಳುತ್ತಿರುವುದಾಗಿಯೂ, ಶುಲ್ಕದ ಸಂಬಂಧದಲ್ಲಿ ಕೈಕೆಯಿಗೆ ಪಣವಾಗಿ ಕೊಡಲ್ಪಟ್ಟಿದ್ದ ರಾಜ್ಯವನ್ನು ತನ್ನ ಪುತ್ರನಿಗಾಗಿ ಯೋಚಿಸಿದರೆ ಅದು ಲೋಭವಾದಲ್ಲಿ ಭ್ರಾತೃರಾಜ್ಯಾಪಹಾರಿಯಾಗಿ ತಾನು ರಾಜ್ಯವನ್ನು ಪರಿಗ್ರಹಿಸಿದರೆ ಅದು ಲೋಭವೆನಿಸುವುದಿಲ್ಲವೇ ಎಂಬುದಾಗಿಯೂ, ತಾತ್ಪರ್ಯವಾಗುವಂತೆ ಉತ್ತರ ಹೇಳುತ್ತಾನೆ. ಈ ಉತ್ತರವನ್ನು ನೋಡಿದರೆ, ಸಂಸ್ಕಾರಯುಕ್ತವಾದ ಅವನ ಸುಸ್ವಭಾವವನ್ನೂ ಸಮದರ್ಶಿತ್ವವನ್ನೂ, ಹೊಗಳಲು ನಮಗೆ ಹತ್ತುಬಾಯಿಗಳಿದ್ದರೂ ಸಾಲದೆನಿಸುವುದು.

ಈ ಸಂದರ್ಭದಲ್ಲಿ ವಾಲ್ಮೀಕಿರಾಮಾಯಣದಲ್ಲಿನ ಶ್ರೀರಾಮನ ಮನೋಭಾವವೇ ಬೇರೆ. ಕೈಕೆಯಿಯು ಭರತನಿಗೆ ರಾಜ್ಯವಾಗಬೇಕೆಂದು ತಾನು ದಶರಥನನ್ನು ಕೇಳಿದ್ದುದಾಗಿಯೂ, ರಾಮನು ಕಾಡಿಗೆ ಹೋಗಬೇಕೆಂಬುದಾಗಿಯೂ ಹೇಳಿದಾಗ ಅವನು ಶೋಕಭರವನ್ನು ತಾಳಲಾರದೆ, ಆತ್ಮಸಂಯಮವನ್ನೂ ಕಳೆದುಕೊಳ್ಳುವನು.

ಪ್ರತಿಮಾ ನಾಟಕದಲ್ಲಾದರೋ, ಈ ಸಂದರ್ಭದಲ್ಲಿ ರಾಮನು "ನನ್ನ ಧೈರ್ಯವನ್ನು ನೋಡಿ, ಜನರು ವಿಸ್ಮಯಪಡುತ್ತಿದ್ದಾರೆ. ಮಗನು ತಂದೆಯ ಮಾತಿ

ನಂತೆ ನಡೆದರೆ, ಅದರಲ್ಲಿ ಆಶ್ಚರ್ಯವೇನು ? ಎಂದು ಹೇಳುವನು. ರಾಮಾಯಣದಲ್ಲಿ ರಾಮನು

" ಮಮ ಪ್ರವ್ರಜನಾದದ್ಯ ಕೃತಕೃತ್ಯಾ ನೃಪಾತ್ಮಜಾ |
ಸುತಂ ಭರತಮವ್ಯಗ್ರಮಭಿಷೇಚಯತಾಂ ತತಃ || "

ಎಂದು ಹೇಳಿ ಕೈಕೆಯಿಯ ವಿಷಯದಲ್ಲಿ ಬಿರುನುಡಿಗಳನ್ನಾಡುವನು. ಆ ಬಳಿಕ ಅವನು ತನ್ನ ದುರದೃಷ್ಟವನ್ನು ಹಳಿದುಕೊಂಡು ಸುಮ್ಮನಾಗುವನು. ಪ್ರತಿಮಾ ನಾಟಕದಲ್ಲಿ ರಾಮನಿಗೆ ಕೈಕೆಯಿಯಲ್ಲಿ ಎಷ್ಟೋ ಭಕ್ತಿ. ತಾನು ಅವಳ ವಿಷಯದಲ್ಲಿ ಬಿರುನುಡಿಗಳನ್ನಾಡುವುದಿರಲಿ. ಕಾಂಚುಕೀಯನು ಅವಳಮೇಲೆ ದೋಷಾರೋಪಣೆ ಮಾಡುತ್ತಿರುವುದನ್ನೂ ಅವನು ಸಹಿಸಲಾರದೆ, "ಇನ್ನು ಮುಂದೆ ಮಾತೃನಿಂದೆಯನ್ನು ಕೇಳಲು ನನಗೆ ಇಷ್ಟವಿಲ್ಲ." ಎಂದು ಖಂಡಿತವಾಗಿ ಹೇಳಿಬಿಡುವನು. ಪ್ರತಿಮಾ ನಾಟಕದಲ್ಲಿ ರಾಮನ ಮನಸ್ಸಿಗೆ ಯಾವ ಭೇದಭಾವವೂ ತೋರುವುದಿಲ್ಲ. ತಾನು ರಾಜನಾದರೂ ಒಂದೇ, ಭರತನು ರಾಜನಾದರೂ ಒಂದೇ ಎಂಬುದು ಅವನ ಅಭಿಪ್ರಾಯ. ಆದುದರಿಂದಲೇ ತಮ್ಮ ತಂದೆಯ ವರ್ತನೆಯನ್ನು ಕಂಡು ಲಕ್ಷ್ಮಣನು ಕೋಪದಿಂದ ಕಿಡಿಕಿಡಿಯಾಗಿರುವುದನ್ನು ನೋಡಿ ಅವನಿಗೆ,

ಅರಸಕ್ಕೆ ಭರತನಲ್ಲದೊ | ಡರಸಾಗುವಮಾಂ ಸಮಾನವಿದೆರಡುಮೆಲೆ ಸೋ |
ದರ ನೀಂ ಬಿಲ್ಲಂ ಪೊಗೆಚ್ಚೊಡೆ | ಪರಿಪಾಲಿಸು ನೆರವಿನಿಂದಮುರಸನನವನಂ ||

ಕೈಕೆಯಿಯು ತನ್ನ ಸ್ವತ್ತನ್ನು ತಾನು ತೆಗೆದುಕೊಂಡಳೆಂಬ ಇಲ್ಲಿಯ ಮನೋಭಾವಕ್ಕೂ ವಾಲ್ಮೀಕಿ ರಾಮಾಯಣದ ರಾಯನ ಮನೋಭಾವಕ್ಕೂ ಬಲುದೂರ.

ರಾಮಾಯಣದಲ್ಲಿ ಸೀತಾದೇವಿಯ ಚಾರಿತ್ರವು ಅತಿಶುದ್ಧವಾದುದೂ, ಸಾತ್ವಿಕವಾದುದೂ, ಆಗಿದೆ. ಅದರಲ್ಲಿ ಲೇಶಮಾತ್ರವೂ ಸಂಶಯವಿಲ್ಲ. ಆದರೂ ಅವಳು ಎರಡು ತಡವೆ ತಾಳ್ಮೆತಪ್ಪಿ, ಬಿರುನುಡಿಗಳನ್ನಾಡಿ ಗರ್ಜಿಸುವಳು. ಅವಳು ಕೋಪಿಸಿಕೊಂಡುದೇ ತಪ್ಪೆಂದಾಗಲಿ ಸ್ತ್ರೀವೃಂದಕ್ಕೇ ಶಿರೋಮಣಿಯೆನಿಸಿದ ಸೀತಾದೇವಿಯಲ್ಲಿ ನಾನು ಕುಂದನ್ನೆಣಿಸಿದೆನೆಂದಾಗಲಿ ಯಾರೂ ಭಾವಿಸಲಾಗದು. ಭಾಸನು ಮಾಡಿರುವ ಬದಲಾವಣೆಗಳನ್ನು ಸೂಚಿಸುವುದು ಮಾತ್ರವೇ ನನ್ನ ಉದ್ದೇಶ. ರಾಮಾಯಣದಲ್ಲಿ, ರಾಮನು ಕಾಡಿಗೆ ಹೊರಡುವಾಗ ಸೀತೆಯು ತಾನೂ ಅವನನ್ನು ಹಿಂಬಾಲಿಸುವುದಾಗಿ ಹೇಳುವಳು. ಅದಕ್ಕೆ ಅವನು ಸಮ್ಮತಿಸದಿರುವುದನ್ನು ಕಂಡು, "ಪುರುಷಾಕಾರದ ಹೆಂಗಸನ್ನು ನಮ್ಮ ತಂದೆಯು ಹೇಗೆ ಅಳಿಯನನ್ನಾಗಿ ಮಾಡಿಕೊಂಡನೊ !" ಎಂದು ರಾಮನನ್ನು ಮೂದಲಿಸುವಳು. ಅವಳ ತರ್ಜನೆಯು ಅಲ್ಲಿಗೇ ನಿಲ್ಲುವುದಿಲ್ಲ. ಅವಳು, "ರಾಮ ! ನಿನ್ನನ್ನೇ ನಂಬಿಕೊಂಡು ಬಹುಕಾಲದಿಂದಲೂ ಆಶ್ರಯಿಸಿ

ಕೊಂಡಿರುವ ಚಿಕ್ಕವಯಸ್ಸಿನ ಹೆಂಡತಿಯಾದ ನನ್ನನ್ನು ನಟುವನಂತೆ ಪರರಿಗೀಡು ಮಾಡಲು ಇಚ್ಛಿಸುತ್ತೀಯೆ'' ಎಂದು ಕೂಡ ಹೇಳಿಬಿಡುವಳು.

ರಾಮನು ಸುವರ್ಣ ಮೃಗವನ್ನು ಓಡಿಸಿಕೊಂಡು ಹೋದ ಬಳಿಕ, ವೇಷ ಧಾರಿಯಾದ ಮಾರೀಚನು ರಾಮಬಾಣದಿಂದ ಮೃತಿಹೊಂದುವಾಗ "ಹಾ, ಸೀತೆ, ಹಾ, ಲಕ್ಷ್ಮಣ'' ಎಂದು ಕೂಗುವನಷ್ಟೆ. ಸೀತೆಯು ಈ ಧ್ವನಿಯನ್ನು ಕೇಳಿ ತನ್ನ ಗಂಡನ ಸಹಾಯಕ್ಕೆ ಹೋಗುವಂತೆ ಲಕ್ಷ್ಮಣನಿಗೆ ಅಪ್ಪಣೆಮಾಡುವಳು. ಅವನು ತನ್ನ ಅಣ್ಣನ ಆಜ್ಞೆಗೆ ವಿರೋಧವಾಗಿ ಆಶ್ರಮವನ್ನು ಬಿಟ್ಟು ಹೋಗಲು ಸಮ್ಮತಿಸ ದಿರುವುದನ್ನು ಕಂಡು, ಸೀತೆಯು ಕೋಪದಿಂದ ಗರ್ಜಿಸುತ್ತಾ,

"ಅನಾರ್ಯ ಕರುಣಾರಂಭ ನೃಶಂಸ ಕುಲಪಾಂಸನ |....
ಅಹಂ ತವ ಪ್ರಿಯಂ ಮನ್ಯೇ ರಾಮಸ್ಯ ವ್ಯಸನಂ ಮಹತ್ ||....
ಸುದುಷ್ಟಸ್ತ್ವಂ ವನೇ ರಾಮಮೇಕಮೇಕೋನುಗಚ್ಛಸಿ |
ಮಮ ಹೇತೋಃ ಪ್ರತಿಚ್ಛನ್ನಃ ಪ್ರಯುಕ್ತೋ ಭರತೇನ ವಾ ||....
ಸಮಕ್ಷಂ ತವ ಸೌಮಿತ್ರೇ ಪ್ರಾಣಾಂಸ್ತ್ಯಕ್ಷ್ಯಾಮ್ಯಸಂಶಯಮ್ ||"

ಎಂದು ಕರ್ಣಕಠೋರವಾಗಿ ನುಡಿಯುತ್ತಾಳೆ. ಪ್ರತಿಮಾ ನಾಟಕದ ಸೀತಾದೇವಿ ಯಲ್ಲಿ ಈ ದೋಷವೂ ಇಲ್ಲ. ರಾಮಾಯಣದಲ್ಲಿ ಅವಳು ಕೋಪಿಸಿಕೊಂಡಂತೆ, ಇಲ್ಲಿ ಕೋಪಿಸಿಕೊಳ್ಳದೆ ಇರುವುದಕ್ಕೆ ನಾಟಕದಲ್ಲಿನ ಸಂವಿಧಾನವೂ ಕಾರಣ. ಭಾಸನು ಕಥಾವಸ್ತುವನ್ನು ಬದಲಾಯಿಸಿರುವುದರಿಂದ ಇದಕ್ಕೆ ಅವಕಾಶವೇ ಇಲ್ಲ. ಆದರೂ ಭರತನಲ್ಲಿಯೂ, ಲಕ್ಷ್ಮಣನಲ್ಲಿಯೂ, ಅವಳಿಗೆ ವಿಶೇಷ ವಾತ್ಸಲ್ಯವುಂಟೆಂಬುದನ್ನು ತೋರಿಸಲು ಪ್ರತಿಮಾನಾಟಕದಲ್ಲಿ ಅನೇಕ ನಿದರ್ಶನಗಳಿವೆ. ರಾಮನಲ್ಲಿ ಅವಳ ಪಂಚಪ್ರಾಣಗಳೂ ನೆಲೆಸಿವೆ. ಅವರಿಬ್ಬರಿಗೂ ದೇಹಗಳು ಎರಡಾದರೂ ಆತ್ಮವು ಮಾತ್ರ ಒಂದೇ ಆಗಿದೆ. ಭಾಸನು ಚಿತ್ರಿಸಿರುವ ನಾಯಕಿಯರಲ್ಲೆಲ್ಲಾ ಸೀತೆಯೇ ಅತ್ಯುತ್ತಮಳು.

ಕೌಸಲ್ಯೆಯ ಪಾತ್ರವು ರಾಮಾಯಣದಲ್ಲಿರುವುದಕ್ಕಿಂತಲೂ ಹೆಚ್ಚು ಘನತೆ ಗಾಂಭೀರ್ಯಗಳಿಂದೊಡಗೂಡಿರುವುದು ಪ್ರತಿಮಾನಾಟಕದ ಮತ್ತೊಂದು ಮುಖ್ಯ ಲಕ್ಷಣವಾಗಿದೆ. ರಾಮನನ್ನು ಕಾಡಿಗೆ ಕಳುಹಿಸಿದುದಕ್ಕಾಗಿ ರಾಮಾಯಣದಲ್ಲಿ ದಶರಥನನ್ನು ಕೌಸಲ್ಯೆಯು, "ಸರ್ವಥಾ ಹಾ ಹತಾ ತ್ವಯಾ'' (ನಿನ್ನಿಂದ ನಾನು ಪೂರ್ತಿಯಾಗಿ ಕೆಟ್ಟೆ) ಎಂದು ನಿಂದಿಸುವಳು. ಪಾಪ! ದಶರಥನು ದಿಕ್ಕುಕಾಣದೆ ತನ್ನಲ್ಲಿ ಕರುಣೆಯನ್ನು ತೋರಿಸಬೇಕೆಂದು ಹೇಳಿ ಅವಳ ಕಾಲಿಗೆರಗುವನು. ಆಗ ಕೌಸಲ್ಯೆಗೆ ಪಶ್ಚಾತ್ತಾಪವುಂಟಾಗಿ ಅವಳು ಅವನ ಕ್ಷಮೆಯನ್ನು ಬೇಡಿ, ಸ್ತುತ್ಯವಾದ

ರೀತಿಯಲ್ಲಿ ವರ್ತಿಸುವಳು. ಪ್ರತಿಮಾ ನಾಟಕದಲ್ಲಾದರೋ ಕೌಸಲ್ಯೆಯು "ಕ್ಷಮಯಾ ಧರಿತ್ರೀ" ಎಂಬ ಸೂತ್ರಕ್ಕನುಗುಣವಾಗಿ ನಡೆಯುವ ಸುರಲೋಕದ ರಮಣಿಯೆಂದು ತೋರುವುದು. ತನ್ನ ಹೃದಯವನ್ನೇ ಹಿಂಡುತ್ತಿರುವ ಶೋಕವನ್ನು ಸಹಿಸಿಕೊಂಡು, ಅವಳು ಸುಮಿತ್ರೆಯೊಡನೆ ದಶರಥನನ್ನು ಸಂತೈಸಿ ಸಮಾಧಾನ ಹೇಳುವಳು. ಅವನ ದುಃಖದಲ್ಲಿ ಸಮಭಾಗಿನಿಯಾಗಿ ಸಹಾಯಕಳಾಗಿರುವಳು. ರಾಮಾಯಣದಲ್ಲಿ ಕೌಸಲ್ಯೆಯು ನಿರಪರಾಧಿಯಾದ, ರಾಜ್ಯಲೋಭದ ಲವಲೇಶವನ್ನೂ ಕಾಣದ ಭರತನ ಮೇಲೆ ಆಗ್ರಹಗೊಂಡು, "ಕ್ರೂರಕರ್ಮದಿಂದ ಕೈಕೆಯಿಯು ಕೊಡಿಸಿರುವ ನಿಷ್ಕಂಟಕವಾದ ಈ ರಾಜ್ಯವು ರಾಜ್ಯಕಾಮಿಯಾದ ನಿನಗೆ ದೊರೆತಿದೆ." ಎಂದು ಕಠಿನೋಕ್ತಿಯನ್ನಾಡುವಳು. ಪ್ರತಿಮಾನಾಟಕದಲ್ಲಿ ಕೌಸಲ್ಯೆಯು ವರ್ತಿಸುವ ರೀತಿಯೇ ಬೇರೆ. ಭರತನಿಗೆ ಅಭಿವಾದನ ಕ್ರಮವನ್ನು ತಿಳಿಸಲು ಸುಮಂತ್ರನು ಕೌಸಲ್ಯೆಯ ಕಡೆಗೆ ಕೈ ತೋರಿಸಿ ಅವಳು ರಾಮನ ಜನನಿಯಾದ ಕೌಸಲ್ಯಾದೇವಿಯೆಂದು ಹೇಳುವನು. ಆಗ ಭರತನು "ಅಮ್ಮಾ ! ನಿರಪರಾಧಿಯಾದ ನಾನು ನಮಸ್ಕರಿಸುವೆನು." ಎಂದು ಹೇಳಿ ನಮಸ್ಕಾರಮಾಡುವನು. ಕೌಸಲ್ಯೆಯು ಮಾತೃವಾತ್ಸಲ್ಯದಿಂದ ಕೂಡಿ, "ಮಗು, ಸಂತಾಪರಹಿತನಾಗು" ಎಂದು ಆಶೀರ್ವದಿಸುವಳು ಅದನ್ನು ಕೇಳಿ ಭರತನಿಗೇ ಆಶ್ಚರ್ಯವಾಗುವುದು. ಸುಮಂತ್ರನು ಆ ಬಳಿಕ ಸುಮಿತ್ರೆಯನ್ನು ತೋರಿಸುವನು. ಭರತನು ಅವಳಿಗೂ ಅಭಿವಂದಿಸುವನು. ಅನಂತರ ಸುಮಂತ್ರನು ಕೈಕೆಯಿಯನ್ನು ತೋರಿಸಿ, 'ಇವಳು ನಿನ್ನ ಜನನಿ' ಯೆಂದು ಹೇಳುವನು. ಭರತನು ಅವಳಿಗೆ ನಮಸ್ಕಾರವನ್ನೇ ಮಾಡದೆ, ಕಠಿನೋಕ್ತಿಗಳನ್ನಾಡುವನು. ಆಗ ಕೌಸಲ್ಯೆಯು ಅಡ್ಡ ಬಂದು, "ಸರ್ವಸದಾಚಾರವನ್ನೂ ಅರಿತವನಾದ ನೀನು ಮಾತೆಗೆ ನಮಸ್ಕರಿಸುವುದಿಲ್ಲವೇಕೆ ?" ಎಂದು ಕೇಳುವಳು. ಆಗ ಭರತನು "ಮಾತೆಗೆ (ಅಭಿವಂದಿಸಬೇಕು) ಎಂದೆಯೋ ? ನೀನೇ ನನ್ನ ಮಾತೆ ! ಮಾತೆಯೇ, ಅಭಿವಂದಿಸುವೆನು" ಎಂದು ಹೇಳಿ ಕೌಸಲ್ಯೆಗೇ ಮತ್ತೆ ನಮಸ್ಕಾರಮಾಡುವನು. ಅದಕ್ಕೆ ಕೌಸಲ್ಯೆಯು ಅವನು ಕೈಕೆಯಿಗೆ ನಮಸ್ಕಾರ ಮಾಡುವುದು ಯುಕ್ತವೆಂದು ಧ್ವನಿಬರುವಂತೆ "ಅಲ್ಲ, ಅಲ್ಲ, ಇವಳು ನಿನ್ನ ತಾಯಿ" ಎಂದು ಹೇಳುವಳು. ಕೌಸಲ್ಯೆಯ ಗುಣವೂ, ನಡತೆಯೂ, ಅಮೋಘವಾದವುಗಳೆಂಬುದನ್ನು ಮತ್ತೆ ಬಿಡಿಸಿ ಹೇಳಲೂ ಬೇಕೆ ?

ಕೈಕೆಯಿಯ ಪಾತ್ರವನ್ನೂ ಕೂಡ ಭಾಸನು ರಮ್ಯವಾಗಿ ರಚಿಸಿದ್ದಾನೆ. ವಾಲ್ಮೀಕಿ ರಾಮಾಯಣದ ಸನ್ನಿವೇಶವನ್ನು ಬದಲಾಯಿಸಿ ಕೈಕೆಯಿಯ ವರ್ಣನೆಯು

ಸಂಪೂರ್ಣವಾಗಿ ಕ್ಷಮೆಗೆ ಅರ್ಹವಾದುದಾಗಿ ತೋರುವಂತೆ ಮಾಡಿದ್ದಾನೆ. ರಾಮಾಯಣದಲ್ಲಿ, ರಾಮನನ್ನು ಹದಿನಾಲ್ಕು ವರುಷಕಾಲ ವನವಾಸಕ್ಕೆ ಕಳುಹಿಸಿ ಭರತನಿಗೆ ಪಟ್ಟವನ್ನು ಕಟ್ಟಬೇಕೆಂದು ಕೈಕೆಯಿಯು ಉದ್ದೇಶಪೂರ್ವಕವಾಗಿ ದಶರಥನನ್ನು ಕೇಳಿಕೊಳ್ಳುತ್ತಾಳೆ. ಪ್ರತಿಮಾನಾಟಕದಲ್ಲಿನ ಸಂವಿಧಾನವೇ ಬೇರೆ. ಕೈಕೆಯಿಗೆ ರಾಮನಲ್ಲಿ ಎಷ್ಟೋ ವಿಶ್ವಾಸ. ಆದರೆ, ಅವಳೊಂದನ್ನು ಎಣಿಸಿದರೆ ದೈವವು ತಾನೊಂದನ್ನು ಎಣಿಸುತ್ತದೆ. ರಾಮನ ಪಟ್ಟಾಭಿಷೇಕಕ್ಕಾಗಿ ಸಕಲ ಸಂಭಾರಗಳೂ ಸಿದ್ಧವಾಗುತ್ತವೆ. ಮಂಗಳವಾದ್ಯಗಳು ಭೋರ್ಗರೆಯುತ್ತವೆ. ಆ ಅಟ್ಟಹಾಸವನ್ನು ನೋಡಿ, ಕೈಕೆಯಿಗೆ ತನ್ನ ಮಗನಾದ ಭರತನೂ ಸ್ವಲ್ಪಕಾಲ ರಾಜನಾಗಬೇಕೆಂದು ಆಸೆಯುಂಟಾಗುತ್ತದೆ. ಹದಿನಾಲ್ಕು ದಿವಸಗಳಕಾಲ ಭರತನಿಗೆ ರಾಜ್ಯಭಾರವನ್ನು ವಹಿಸುವಂತೆ ದಶರಥನನ್ನು ಕೇಳಬೇಕೆಂದು ಉದ್ದೇಶಿಸುತ್ತಾಳೆ. ತಾಯಿಯೆನಿಸಿದ ಯಾವಳಲ್ಲಿ ತಾನೇ ಇದು ಅಕ್ಷಮ್ಯವಾದ ಅಪರಾಧವೆನಿಸುತ್ತದೆ? ಆದರೆ, ದಶರಥನ ಮೇಲೆ ಹೊತ್ತಿರುವ ಒಂದು ಶಾಪದ ಮಹಿಮೆಯಿಂದ, ಹದಿನಾಲ್ಕು ದಿನಗಳೆಂದು ಹೇಳಲು ಹೊರಟವಳು—ಅದನ್ನು ಹೇಳುವುದರಲ್ಲಿಯೂ ಪರ್ಯಾಕುಲಹೃದಯೆಯಾಗಿ ಹೇಳಹೊರಟವಳು—ಬಾಯಿತಪ್ಪಿ ಹದಿನಾಲ್ಕು ವರುಷಗಳೆಂದು ಹೇಳಿಬಿಡುತ್ತಾಳೆ. ರಾಮನ ವನವಾಸದ ವಿಷಯದಲ್ಲಿಯೂ ಶಾಪದದೆಸೆಯಿಂದ ಅಚಾತುರ್ಯವು ನಡೆದು ಹೋಯಿತು. ಭರತನು ಇದೆಲ್ಲದರ ವಿಷಯವಾಗಿಯೂ, ಆರನೆಯ ಅಂಕದಲ್ಲಿ ಅವಳನ್ನು ಬಹುಚೆನ್ನಾಗಿ ಪ್ರಶ್ನೆಮಾಡುತ್ತಾನೆ. ಪುತ್ರವಿಪ್ರವಾಸದದೆಸೆಯಿಂದ ಶೋಕಸಂತಪ್ತನಾಗಿ ದಶರಥನು ಮರಣಹೊಂದಬೇಕಾಗಿದ್ದ ಪಕ್ಷದಲ್ಲಿ ರಾಮನಿಗೆಬದಲಾಗಿ ತನ್ನನ್ನೇ ಹೊರಡಿಸಬಹುದಾಗಿದ್ದಿತಲ್ಲವೇ ಎಂಬುದಾಗಿ ಭರತನು ಕೇಳಿದಾಗ ಕೈಕೆಯಿಯು ಭರತನು ತನ್ನ ಸೋದರಮಾವನ ಮನೆಯಲ್ಲಿಯೇ ಪರಸ್ಥಳದಲ್ಲಿದ್ದುದರಿಂದ ವಿಪ್ರವಾಸವು ಅವನಿಗೆ ಒದಗಿಯೇ ಇದ್ದಿತೆಂದು ಉತ್ತರ ಹೇಳುವಳು. ಇದಲ್ಲದೆ, ತಾನು ಮಾಡಿದ ಅಪರಾಧಕ್ಕಾಗಿ ಅವಳು ಬಹುವಾಗಿ ಪಶ್ಚಾತ್ತಾಪಪಡುವಳು. ಭರತನು ಆಡುವ ಪರುಷವಾಕ್ಕುಗಳಿಗೆಲ್ಲಾ ತಲೆಬಾಗಿಸಿ ನಿಲ್ಲುವಳು. ಬಹುಮಟ್ಟಿಗೆ ಅವಳು ನಿರ್ದೋಷಿಯೆಂದು ತಿಳಿದು ಭರತನೂ ಆರನೆಯ ಅಂಕದಲ್ಲಿ ಅವಳ ಕ್ಷಮೆಯನ್ನು ಬೇಡುವನು. ಆದರೂ, ಅವಳ ಮನಸ್ಸಿಗೆ ಶಾಂತಿಯಿಲ್ಲ. ರಾಮನು ರಾಜ್ಯಸೂತ್ರವನ್ನು ಸ್ವೀಕರಿಸುವ ದಿನವನ್ನು ಕಂಡೇನೇ ಎಂದು ಅವಳು ತವಕಪಡುತ್ತಿರುವಳು. ಕೊನೆಗೆ ಆಶ್ರಮದಲ್ಲಿ ರಾಮನಿಗೆ ಪಟ್ಟಾಭಿಷೇಕವಾದಾಗ "ವತ್ಸ, ಈ ಮನೋರಥವು ಚಿರಾಭಿಲಷಿತವಾದುದು" ಎಂದು ಹೇಳು

ವುದರಿಂದ ಈ ಅಂಶವು ವ್ಯಕ್ತವಾಗುವುದು. ಇದು ಔಪಚಾರಿಕವಾಗಿ ಹೇಳಿದ ಮಾತಲ್ಲ. ಚಿರಕಾಲ ಪಶ್ಚಾತ್ತಾಪಪಟ್ಟು ಶೋಕದಿಂದ ಜರ್ಝರಿತವಾದ ದೀರ್ಣ ಹೃದಯದಿಂದ ಹೊರಬಿದ್ದ ನಿಶ್ಚಲವಾದ ಪ್ರೇಮದ ನುಡಿಯಿದು! ಅದಕ್ಕೆ ಮುಂದೆ ನಿದರ್ಶನಗಳು ದೊರೆಯುತ್ತವೆ: ರಾಮನಿಗೆ ಪಟ್ಟಾಭಿಷೇಕವಾದಾಗಿನ ವಿಜಯ ಘೋಷವನ್ನು ಕೇಳಿ ಅವಳು ಆನಂದಪಡುತ್ತಾಳೆ. ಕಾಂಚುಕೀಯನು ರಾಮನನ್ನು "ಮಹಾರಾಜ" ಎಂದು ಸಂಬೋಧಿಸುವುದನ್ನು ಕಂಡು ಅವಳು ಸಂತೋಷದಿಂದ ಉಬ್ಬಿಹೋಗುವಳು. ಆಶ್ರಮದಲ್ಲಿ ರಾಮನಿಗೆ ಕಿರೀಟಧಾರಣೆಯಾದಮೇಲೆ ಅವಳು ವಾತ್ಸಲ್ಯದಿಂದ ಕೂಡಿ, ರಾಮನ ಪಟ್ಟಾಭಿಷೇಕವನ್ನು ನೋಡಿದ ತಾನೇ ಧನ್ಯಳೆಂದು ಕೊಳ್ಳುವಳು; ಪಟ್ಟಾಭಿಷೇಕವು ಅಯೋಧ್ಯೆಯಲ್ಲಿ ಮತ್ತೊಮ್ಮೆ ವಿಜೃಂಭಣೆಯಿಂದ ನಡೆಯಬೇಕೆಂದು ಆಂತರವಾಗಿ ಬಯಸುವಳು. ರಾಮಾಯಣದಲ್ಲಿನ ಕೈಕೆಯಿಯು ಸ್ವಲ್ಪ ಮಟ್ಟಿಗೆ ಕಠೋರಹೃದಯಳೇ ಸರಿ. ರಾಮಲಕ್ಷ್ಮಣರಿಗೆ ನಾರುಮಡಿಗಳನ್ನು ಕೊಡುವುದೇ ಅವಳಿಗೊಂದು ಸಂತೋಷ; ಸೀತೆಗೆ ಕೂಡ ಅವಳು ಉತ್ಸಾಹದಿಂದ ವಲ್ಕಲವನ್ನು ಕೊಡಹೋಗುವಳು. ಆದರೆ, ವಸಿಷ್ಠರು ಅದನ್ನು ತಪ್ಪಿಸುವರು. ಭಾಸನ ಸಂವಿಧಾನ ಕೌಶಲದಿಂದ ಪ್ರತಿಮಾ ನಾಟಕದಲ್ಲಿ, ವನವಾಸಕ್ಕೆ ಹೊರಡುವ ಯೋಜನೆಯು ಸೀತೆಯ ಮನಸ್ಸಿಗೆ ಬರುವುದಕ್ಕೆ ಮೊದಲೇ ಸೀತೆಯು ವಲ್ಕಲವನ್ನು ಧರಿಸಿರುವಳು. ರಾಮನು ವಲ್ಕಲವನ್ನು ಅಪೇಕ್ಷಿಸುವ ವೇಳೆಗೆ ಸರಿಯಾಗಿ ಆರ್ಯ ರೇವೆಯು ವಲ್ಕಲಗಳನ್ನು ಕಳುಹಿಸುವಳು. ರಾಮನು ಅದನ್ನು ಧರಿಸುವನು.

ಭರತನ ಪಾತ್ರವು ಮತ್ತಷ್ಟು ಸದ್ಗುಣಗಳಿಂದ ಕೂಡಿ ಶೋಭಿಸುತ್ತಾ ಇದೆ. ಭರತನ ಸರಳ ಸ್ವಭಾವ, ಘನತೆ, ಸಹೋದರ ಪ್ರೇಮ, ಧರ್ಮನಿಷ್ಠೆ, ಮುಂತಾದವು ಗಳನ್ನು ಎಷ್ಟು ಕೊಂಡಾಡಿದರೂ ತೀರದು. ಲಕ್ಷ್ಮಣನ ಪಾತ್ರವೂ ಮನೋಹರ ವಾಗಿದೆ. ಕೋಪಬಂದರೂ, ಅದು ಕ್ಷಣಿಕವಾಗಿರುವುದು ಉತ್ತಮರ ಲಕ್ಷಣ; ಲಕ್ಷ್ಮಣನೂ ಇದೇ ಗುಂಪಿಗೆ ಸೇರಿದವನು. ಲಕ್ಷ್ಮಣನ ಕೋಪವೆಂದರೆ, ಕೈಯಲ್ಲಿ ಭಾಗಮಾಡಿದ ಸರೋವರದ ನೀರು, ಕೈಯೆತ್ತಿದೊಡನೆಯೇ ಮತ್ತೆ ಒಟ್ಟಿಗೆ ಸೇರಿ ಕೊಳ್ಳುವಂತೆಯೇ ಸರಿ. ಮೊದಲು ಕೋಪಗೊಂಡಿದ್ದ ಲಕ್ಷ್ಮಣನು ತನಗೆ ರಾಮನು ಸಮಾಧಾನ ಹೇಳಿದೊಡನೆಯೇ ಸುಮ್ಮನಾಗುವನು. ಆ ಬಳಿಕ ಅವನ ಚಿತ್ತವೆಂದಿಗೂ ಕ್ಷೋಭೆಹೊಂದದು. ಅವನ ಶಾಂತಿಯು ಅಂದಗೆಡದು. ವಾಲ್ಮೀಕಿ ರಾಮಾಯಣ ದಲ್ಲಿ ಲಕ್ಷ್ಮಣನು ಕಾಡಿಗೆ ಹೋದಮೇಲೆ ದಶರಥನಿಗೆ ಬಿರುನುಡಿಯ ಬಿನ್ನಹವನ್ನು ಕಳುಹಿಸುವಂತೆ ಪ್ರತಿಮಾ ನಾಟಕದಲ್ಲಿ ಲಕ್ಷ್ಮಣನು ಅಂಥದನ್ನು ಕಳುಹಿಸಿಲ್ಲ.

ಭರತನು ಆಶ್ರಮಕ್ಕೆ ಬಂದಾಗ ಅವನು ತಮ್ಮ ಮೇಲೆ ದಂಡೆತ್ತಿಬಂದಿದ್ದನೆಂದೂ, ಅವನಿಗೆ ತಮ್ಮಲ್ಲಿ ದ್ವೇಷವೆಂದೂ, ರಾಮಾಯಣದಲ್ಲಿ ಲಕ್ಷ್ಮಣನು ರಾಮನಿಗೆ ಹೇಳುತ್ತಾನೆ. ಪ್ರತಿಮಾ ನಾಟಕದಲ್ಲಿ ಲಕ್ಷ್ಮಣನ ಪ್ರೇಮಪೂರಿತವಾದ ಸರಳ ಹೃದಯದಲ್ಲಿ ಇಂತಹದಕ್ಕೆ ಅವಕಾಶವೇ ಇಲ್ಲ. ಪ್ರತಿಮಾ ನಾಟಕದ ರಾವಣ ನಂತೂ ರಾಮಾಯಣದ ರಾವಣನಿಗಿಂತಲೂ ಹೆಚ್ಚಿನ ಜಘನ್ಯವೃತ್ತಿಯ ನೃಶಂಸಕ; ಕೃತಘ್ನನಾದ ಹುಟ್ಟುಕೇಡಿಗ ; ರಾಮನೂ, ಸೀತೆಯೂ, ತನ್ನನ್ನು ಗೌರವಿಸಿ ಪೂಜಿಸಿದ ಮೇಲೆ,—ರಾಮನು ತನ್ನನ್ನು ಸತ್ಕರಿಸಿ, ತನ್ನನ್ನು ನಂಬಿ, ಸೀತೆಗೆ "ಶುಶ್ರೂಷಸ್ವ ಭಗವಂತಂ" ಎಂದು ಹೇಳಿ, ಅವಳು ತನ್ನನ್ನು ಸೇವಿಸುತ್ತಿರಬೇಕೆಂದು ಬೆಸಸಿ ಹೊರಟುಹೋದುದನ್ನು ನೋಡಿಯೂ—ಅವನು ಸೀತೆಯನ್ನು ಅಪಹರಿಸಿಕೊಂಡು ಹೋಗುವನು. ರಾಮಾಯಣದಲ್ಲಿ, ರಾವಣನು ರಾಮನಿಗೆ ಕೃತಜ್ಞನಾಗಿರಬೇಕಾದ ಆವಶ್ಯಕತೆಯೇ ಇಲ್ಲ.

ವಸ್ತುವಿನಲ್ಲಿಯೂ, ಪಾತ್ರರಚನೆಯಲ್ಲಿಯೂ, ಭಾಸನು ಅನೇಕ ಬದಲಾವಣೆಗಳನ್ನು ಮಾಡಿ ಪ್ರತಿಮಾನಾಟಕವನ್ನು ಬರೆದಿದ್ದಾನೆಂದು ಮುಂತಾಗಿ ನಾನು ಅರಿಕೆ ಮಾಡಿದುದನ್ನು ನೋಡಿ, ವಾಲ್ಮೀಕರು ರಚಿಸಿರುವ ಶ್ರೀಮದ್ರಾಮಾಯಣವನ್ನಾಗಲಿ, ಅದ್ಭುತ ಚೈತನ್ಯದಿಂದೊಡಗೂಡಿದ್ದ ಆ ಮಹಾನುಭಾವರನ್ನಾಗಲಿ, ಅಲ್ಲಗಳೆದು ಹಳಿಯುವುದು ನನ್ನ ಉದ್ದೇಶವೆಂದು ಯಾರೊಬ್ಬರೂ ಯೋಚಿಸಕೂಡದು. ವಾಲ್ಮೀಕರು ಆದಿಕವಿಗಳು. ನೈತಿಕನಿಷ್ಠೆಯನ್ನು ಪ್ರತಿಬಿಂಬಿಸುವ ಉದಾತ್ತ ಕಾವ್ಯವನ್ನು ರಚಿಸಿದ ಋಷಿಶ್ರೇಷ್ಠರು. ಅವರ ಕೀರ್ತಿಗೆ ಇದರಿಂದ ಚ್ಯುತಿ ಇರದು.

ಒಟ್ಟಿನಲ್ಲಿ ಹೇಳಬಹುದೇನೆಂದರೆ :—ಭಾಸ ಮಹಾಕವಿಯು ತಾನು ರಚಿಸಿರುವ ಅನೇಕ ನಾಟಕಗಳಲ್ಲಿ ವಸ್ತುವನ್ನು ಸಿದ್ಧಗೊಳಿಸಿಕೊಳ್ಳುವುದರಲ್ಲಿಯೂ, ಪಾತ್ರರಚನೆಯಲ್ಲಿಯೂ, ತನ್ನ ಕಲಾನೈಪುಣ್ಯವನ್ನು ಬಹು ಚೆನ್ನಾಗಿ ತೋರ್ಪಡಿಸಿದ್ದಾನೆ. ಪಾತ್ರಗಳ ಸ್ವಭಾವಕ್ಕೆ ತಕ್ಕಂತೆ ಭಾಷೆಯನ್ನು ಸಜ್ಜುಗೊಳಿಸಿದ್ದಾನೆ. ಸಮಸ್ತ ವಿಷಯಗಳಲ್ಲಿಯೂ ಔಚಿತ್ಯವನ್ನರಿತು ಘನತೆ ಗಾಂಭೀರ್ಯಗಳಿಂದಲೂ, ಭಾವರಸ ಪುಷ್ಟಿಯಿಂದಲೂ, ಉದಾತ್ತರೀತಿಯಲ್ಲಿ ಗ್ರಂಥರಚನೆಮಾಡಿದ್ದಾನೆ. ಆತನ ನಾಟಕಗಳಲ್ಲಿರುವ ಎಷ್ಟೋ ಸಂಗತಿಗಳ ಮಾದರಿಯನ್ನೇ ಕಾಳಿದಾಸ ಮಹಾಕವಿಯೂ ಕೂಡ ಅನುಸರಿಸಿದ್ದಾನೆಂದಮೇಲೆ, ಭಾಸನನ್ನು ಕೊಂಡಾಡಿಯೂ ಇದ್ದಾನೆಂದ ಮೇಲೆ, ಭಾಸನ ಸಾಮರ್ಥ್ಯವು ಅತ್ಯಧಿಕವಾದುದೆಂಬುದನ್ನು ಮತ್ತೆ ತಿಳಿಸಲೂಬೇಕೆ ?

ಸಿ. ಕೆ. ವೆಂ.

ವಸ್ತು ಕೋಶ

ಈಗ ಕೆಲವು ದಿವಸಗಳಿಂದ ಕನ್ನಡಿಗರ ಕಿವಿ ಕಣ್ಣು ಮನಗಳಲ್ಲಿ ತಾನೇ ತಾನಾಗಿ ತುಂಬಿಕೊಂಡಿರುವುದು, ಶ್ರೀಮನ್ಮಾಹಾರಾಜ ಕೃಷ್ಣರಾಜ ಒಡೆಯರವರ ಆಳಿಕೆಯ ರಜತಮಹೋತ್ಸವ. ಕನ್ನಡಿಗರ ಪುಣ್ಯೋದಯದಿಂದ ಮೈಸೂರು ದೇಶದಲ್ಲಿ ಬಹುಕಾಲಕ್ಕೆ ಲಭ್ಯವಾದ ಈ ಮಹೋತ್ಸವದಲ್ಲಿ ಉತ್ಸಾಹಪಡದವರಿಲ್ಲ; ಸಂಭ್ರಮ ಸಡಗರ ಪಡದವರಿಲ್ಲ; ಆನಂದಪಡದವರಿಲ್ಲ; ಭರತಖಂಡದ ಯಾವ ಪತ್ರಿಕೆಯನ್ನೇ ನೋಡಲಿ ಇದರ ವರ್ಣನೆ! ಉತ್ಸವವು ಕಳೆದು ಒಂದು ತಿಂಗಳಾದರೂ ವರ್ಣನೆಗಳೂ ಪ್ರಶಂಸೆಗಳೂ ಇನ್ನೂ ಬರುತ್ತಲೇ ಇವೆ—ಸೊಗಸಾದ ಸಂಗೀತದ ಕಛೇರಿ ನಿಂತಮೇಲೂ ಬಹಳ ಹೊತ್ತು ಕಿವಿ ಮನ ಹೃದಯಗಳಲ್ಲಿ ಸೂಕ್ಷ್ಮವಾಗಿ, ಆದರೆ ಮಧುರತರವಾಗಿ, ನಾದಗೊಡುತ್ತಿರುವ ಗಾನದಂತೆ. ಕೆಲವು ಪತ್ರಿಕೆಗಳು ರಜತಮಹೋತ್ಸವದ ವಿಶೇಷ ಸಂಚಿಕೆಗಳನ್ನು ಪ್ರಕಟಿಸಿವೆ; ಕನ್ನಡ ಪತ್ರಿಕೆಗಳು ಮಾತ್ರವೇ ಅಲ್ಲ; 'ಬೊಂಬಾಯಿ ಕ್ರಾನಿಕಲ್,' 'ಹಿಂದೂ' ಪತ್ರಿಕೆಗಳು ಬಹು ಸುಂದರವಾದ, ವಿಷಯ ಪರಿಪೂರ್ಣವಾದ, ಸಂಚಿಕೆಗಳನ್ನು ಪ್ರಕಟಗೊಳಿಸಿವೆ. ಇದರಿಂದ ಅವುಗಳಿಗೆ ಲಾಭವೇನೋ ಆಯಿತೆಂದು ಕೇಳುತ್ತೇವೆ. ಆಗಲಿ! ಸ್ವಾಮಿಕಾರ್ಯ ಸ್ವಕಾರ್ಯಗಳೆರಡನ್ನೂ ಹೊಂದಿಸಿಕೊಂಡು ನಡೆಯಬಲ್ಲವರೇ ವಿವೇಕಿಗಳು. ಇವುಗಳಲ್ಲಿ ಜ್ಞಾನವೃದ್ಧರೂ ವಯೋವೃದ್ಧರೂ ಆದ ಅನೇಕ ಪ್ರಜಾಮುಖಂಡರೂ ಅಧಿಕಾರಿಗಳೂ ಶ್ರೀಮನ್ಮಹಾರಾಜರವರ ಶಕ್ತಿಸಾಮರ್ಥ್ಯ, ಘನತೆಗಾಂಭೀರ್ಯ, ನಯವಿನಯ, ಔದಾರ್ಯವಾತ್ಸಲ್ಯಾದಿ ಗುಣಗಳನ್ನೂ, ಮೈಸೂರು ದೇಶವು ಅವರ ಶ್ವೇತಚ್ಛತ್ರದ ನೆರಳಲ್ಲಿ ಬೆಳೆದು ಧನ ಕನಕ ವಸ್ತುವಾಹನಾದಿಗಳಲ್ಲಿಯೂ, ವಿದ್ಯಾವ್ಯವಸಾಯಗಳಲ್ಲಿಯೂ ವಿಧವಿಧವಾದ ಕಲಾಕುಶಲಕರ್ಮಗಳಲ್ಲಿಯೂ ಹೇಗೆ ಮುಂದುವರಿಯುತ್ತ ನಿಜವಾಗಿಯೂ 'ಮಾದರಿ ಸಂಸ್ಥಾನ' ವಾಗಿ ಪರಿಣಮಿಸಿದೆಯೆಂಬುದನ್ನೂ ವಿಧವಿಧವಾದ ವಾಗ್ವೈಖರಿಯಿಂದ ವಿವರಿಸಿದ್ದಾರೆ. ಅವುಗಳೆಲ್ಲವನ್ನೂ ಕನ್ನಡಿಗರು--ಇಂಗ್ಲೀಷನ್ನು ಬಲ್ಲ ಕನ್ನಡಿಗರು—ಓದಿ ಆನಂದಪಟ್ಟಿದ್ದಾರೆಂಬುದರಲ್ಲಿ ಸಂಶಯವಿಲ್ಲ; ಅವುಗಳನ್ನು ಇಲ್ಲಿ ಸಂಗ್ರಹಿಸು

ಶ್ರೀಕೃಷ್ಣರಾಜ ರಜತಮಹೋತ್ಸವ.

ವುದು ತಂಗುಳೂಟವನ್ನು ಮಾಡಿಸಿದಂತಾಗುವುದು. ಕನ್ನಡಿಗರ ಸೌಕರ್ಯಕ್ಕಾಗಿ ಬೆಂಗಳೂರಿನ ವಿಶ್ವಕರ್ಣಾಟಕವು 'ರಜತಪೂಜೋತ್ಸವ ಸಂಚಿಕೆ' ಯನ್ನು ಪ್ರಕಟಿಸಿ ಸುಖೋಷ್ಣವೂ ಸುಸ್ವಾದುವೂ ಆದ ಔತಣವನ್ನು ಸಕಾಲದಲ್ಲಿ ಮಾಡಿಸಿದೆ. ಆದರೆ ಎಷ್ಟುಜನ ಕನ್ನಡಿಗರು ಇದನ್ನು ಆಸ್ವಾದಿಸಿ ಸುಖಾನುಭವ ಮಾಡಿದ್ದಾರೆಂಬುದರಲ್ಲಿ ನಮಗೆ ಸಂಶಯವಿದೆ; ಹಿಂದೆ ಹೇಳಿದ ಇಂಗ್ಲಿಷ್ ಪತ್ರಿಕೆಗಳನ್ನು ಎಷ್ಟುಜನ ಓದಿದರೋ ಅವರಲ್ಲಿ ಹತ್ತರೊಳಗೆ ಒಂದುಪಾಲು—ನೂರರೊಳಗೆ ಒಂದುಪಾಲು—ಜನರಾದರೂ ಈ ಸಂಚಿಕೆಯನ್ನು ಓದಿದ್ದಾರೆಯೇ? ಆ ಇಂಗ್ಲಿಷ್ ಪತ್ರಿಕೆಗಳಿಗೆ ಬಂದ ಲಾಭವು ಇವರಿಗೆ ಬಂದಿದೆಯೆ? ಲಾಭವಿಲ್ಲದಿದ್ದರೆ ಹೋಗಲಿ, ಹೂವು ಕುಯ್ಯುವುದಕ್ಕೆ ಹೋಗಿ ಹಾವು ಕಚ್ಚದಿದ್ದರೆ ಅದೇ ಪುಣ್ಯ. ಕನ್ನಡಿಗರ ಉತ್ಸಾಹದಲ್ಲಿ ನಮಗೆ ಇನ್ನೂ ನಂಬಿಕೆ ಬಂದಿಲ್ಲ. ಅವರನ್ನು ನೆಚ್ಚಿಕೊಂಡು ಈಗ ಕೆಲವು ವರ್ಷಗಳ ಕೆಳಗೆ ದುಡ್ಡು ದಾಕ್ಷಿಣ್ಯ ದೇಹಶಕ್ತಿಗಳನ್ನು ವೆಚ್ಚಮಾಡಿಕೊಂಡು 'ಕರ್ಣಾಟಕದ ಕೈಪಿಡಿ' ಯನ್ನು ಬರೆಯಿಸಿ ಪ್ರಕಟಿಸಿದ ನಮ್ಮ ಮಿತ್ರರು ಈಗಲೂ ಕೈ ಕೈ ಹಿಸುಕಿಕೊಳ್ಳುತ್ತಿರುವುದನ್ನು ಬಲ್ಲೆವು. ನಮ್ಮ ಜನರಿಗೆ ಕನ್ನಡದಲ್ಲಿ ಮಮತೆಯಾಗಲಿ ಪೂಜ್ಯತೆಯಾಗಲಿ ಇನ್ನೂ ಸಾಕಾದಷ್ಟು ಬಂದಿಲ್ಲ.

ಪ್ರಬುದ್ಧ ಕರ್ಣಾಟಕಕ್ಕೂ ಇಂಥ ಒಂದು ವಿಶೇಷ ಸಂಚಿಕೆಯನ್ನು ಪ್ರಕಟಿಸಬೇಕೆಂದು ಆಸೆ! ಆದರೆ ಭಾಷಾಸಾಹಿತ್ಯಕಲೆಗಳಲ್ಲಿಯೇ ಕೈಯಿಟ್ಟುಕೊಂಡಿರುವವರು ಸರ್ವತೋಮುಖವಾದ ಶ್ರೀಕೃಷ್ಣರಾಜವೈಭವದ ಪ್ರಕಾಶನಕಾರ್ಯಕ್ಕೆ ಕೈಹಾಕಬಹುದೋ ಇಲ್ಲವೋ, ಕೈಹಾಕಿದರೆ ಅದನ್ನು ಸುಸಂಪೂರ್ಣವಾಗಿರುವಂತೆ ಮಾಡುವುದು ಸಾಧ್ಯವೋ ಅಲ್ಲವೋ, ಎಂಬ ಔಚಿತ್ಯಸಾಮರ್ಥ್ಯಾದಿಗಳ ಚಿಂತೆ! ಎಂಟು ವರ್ಷದ ಪ್ರಬುದ್ಧ ಕರ್ಣಾಟಕ ಬಾಲಕನು ದೊಡ್ಡದೊಡ್ಡವರೊಡನೆ ನಿಂತು ಈ ಗೌರವಕಾರ್ಯವನ್ನು ಕೈಕೊಳ್ಳುವುದು ಹೇಗೆ ಎಂಬ ಹೆದರಿಕೆ! ಆದರೆ ಉತ್ಸವಗಳಲ್ಲಿ ಸುಖವೂ ಸಂಭ್ರಮವೂ ಹುಡುಗರಿಗೆ ಇರುವಷ್ಟು ದೊಡ್ಡವರಿಗೆ ಏನು ಇದ್ದಾವು? ಆದ್ದರಿಂದ ಈ ಸಂಚಿಕೆಯ ಆದಿಯಲ್ಲಿ ಪ್ರಬುದ್ಧ ಕರ್ಣಾಟಕಕ್ಕೆ ಗುರುಸ್ಥಾನೀಯರಾದ "ಶ್ರೀ" ಯವರ "ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ" ವನ್ನು ಪ್ರಕಟಿಸಿ, ಇಲ್ಲಿ ಶ್ರೀ ಕೃಷ್ಣರಾಜ ಮಹಾ ಪ್ರಭುಗಳವರ ಕೃಪಾಪೋಷಣೆಯಿಂದ ಕನ್ನಡ ಕಲಾಸಾಹಿತ್ಯಗಳು ಹೇಗೆ ಬೆಳೆದುಕೊಂಡು ಬಂದಿವೆ ಎಂದು ಸೂಕ್ಷ್ಮವಾಗಿ ಸೂಚಿಸಬೇಕೆಂದಿದ್ದೇವೆ. ಇನ್ನು, ಇವುಗಳ ಮಧ್ಯೆ ಇರತಕ್ಕ ಲೇಖನಗಳೂ ಸಾಕ್ಷಾತ್ತಾಗಿಯಾಗಲಿ ಪರಂಪರೆಯಿಂದಾಗಲಿ ಮಹಾಪ್ರಭುಗಳವರ ಪ್ರಸಾದದಿಂದಲೇ ಬಂದವುಗಳು; ಆದ್ದರಿಂದ ಈ ಸಂಚಿಕೆಯನ್ನು "ರಜತಮಹೋ

ತ್ಸವ'' ಸಂಚಿಕೆ ಎಂದು ಭಾವಿಸುವುದಕ್ಕೆ ಏನು ಅಡ್ಡಿ ? ವಿಚಾರಪರರಿಗೆ, ಪ್ರಬುದ್ಧ ಕರ್ಣಾಟಕವು ಇದುವರೆಗೆ ಪ್ರಕಟಿಸಿರುವ ಪ್ರತಿಯೊಂದು ಸಂಚಿಕೆಯೂ, ಈ ನ್ಯಾಯವನ್ನು ಅನುಸರಿಸಿ, ಶ್ರೀಮನ್ ಮಹಾರಾಜರವರ ಸದಾಶ್ರಯದಲ್ಲಿ ಕನ್ನಡ ಕಲಾಸಾಹಿತ್ಯಾದಿಗಳು ಹೇಗೆ ಬೆಳೆಯುತ್ತಿವೆಯೆಂದು ತೋರಿಸುತ್ತಿರುವ ಒಂದೊಂದು ವಿಶೇಷ ಸಂಚಿಕೆಯೇ ಎಂದು ತಿಳಿದಿದೆ.

ಈಗ್ಗೆ ನಲವತ್ತನಾಲ್ಕು ವರ್ಷಗಳ ಕೆಳಗೆ ಶ್ರೀಮನ್ ಮಹಾರಾಜರವರು ಜನ್ಮಿಸಿದಾಗ ಅವರೊಡನೆಯೇ ಹೊಸಗನ್ನಡದ ಕಲಾಸಾಹಿತ್ಯಾದಿಗಳು ಹುಟ್ಟಿದುವೆಂದೂ, ಅವರು ವರ್ಧಿಸುತ್ತ ಬಂದ ಹಾಗೆಲ್ಲಾ ವರ್ಧಿಸುತ್ತ ಬಂದುವೆಂದೂ ಹೇಳಬಹುದು. ಅವರು ರಾಜ್ಯಸೂತ್ರವನ್ನು ಧರಿಸಿದಾಗಿನಿಂದಂತೂ ಅದು ಇನ್ನೂ ಸ್ಪಷ್ಟತರವಾಗಿ ಗೋಚರವಾಗುತ್ತ ಬಂದಿದೆ. " ನವೇ ತಸ್ಮಿನ್ ಮಹೀಪಾಲೇ ಸರ್ವಂ ನವಮಿವಾಭವತ್ '' ಎಂದು ಶ್ರೀರಾಮನ ಮುತ್ತಾತನ ವಿಚಾರವಾಗಿ ಕಾಳಿದಾಸನು ಕಾವ್ಯದಲ್ಲಿ ಹೇಳಿದ್ದನ್ನು ಸುಮಾರು ೧೫೦೦ ವರ್ಷಗಳ ಮೇಲೆ ನಮ್ಮ ಪ್ರಭುಗಳ ವಿಚಾರದಲ್ಲಿ ಕನ್ನಡಿಗರು ಪ್ರತ್ಯಕ್ಷವಾಗಿ ಕಂಡಂತಾಯಿತು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಹೊಸಕನ್ನಡ ಜಗತ್ತಿಗೆ ಶ್ರೀಮುಮ್ಮಡಿ ಕೃಷ್ಣರಾಜವೊಡೆಯರವರ ಆಳಿಕೆಯಲ್ಲಿ ಉಷಃಕಾಲ ತೋರಿ, ಶ್ರೀಮಚ್ಚಾಮರಾಜ ವೊಡೆಯರವರ ಕಾಲಕ್ಕೆ ಅರುಣೋದಯವಾಗಿ, ಶ್ರೀಮನ್ನಾಲ್ವಡಿ ಕೃಷ್ಣರಾಜ ವೊಡೆಯರವರ ಉದಯದೊಡನೆ ಸೂರ್ಯೋದಯವಾಯಿತೆಂದು ಹೇಳಬಹುದು. ಈ ಬೆಳಕಿನಲ್ಲಿ ಸೃಷ್ಟಿಯ ಅಂದಚಂದಗಳು ಬೆಳಗುತ್ತಿರಲು, ನಾವು ಕಣ್ಣನ್ನು ಪಡೆದು, ಅವುಗಳನ್ನು ನೋಡಿ ನಲಿಯುವವರಾಗಿದ್ದೇವೆ. ನಾವು ಈ ಮಾತುಗಳನ್ನು ಬರೆಯಬಲ್ಲವರಾಗಿರುವುದೂ, ವರ್ಷಕ್ಕೆ ಸುಮಾರು ಐವತ್ತು ಲಕ್ಷ ರೂಪಾಯಿಗಳಂತೆ ವೆಚ್ಚಮಾಡಿ, ಶ್ರೀಮನ್ ಮಹಾರಾಜರವರ ಸರ್ಕಾರದವರು ಮಾಡುತ್ತಿರುವ ವಿದ್ಯಾದಾನದ ಫಲವೆಂಬುದನ್ನು ಕೃತಜ್ಞತೆಯಿಂದ ಮನಸ್ಸಿಗೆ ತಂದುಕೊಳ್ಳುತ್ತಿದ್ದೇವೆ. ಕನ್ನಡದ ಅಭಿವೃದ್ಧಿಗೇ ಎಂದು ಏರ್ಪಡಿಸಿದ್ದ " ಭಾಷೋಜ್ಜೀವಿನೀ '' ಪಾಠಶಾಲೆ, ದಕ್ಷಿಣದೇಶಕ್ಕೆಲ್ಲಾ ಸಂಸ್ಕೃತ ವಿದ್ವಾಂಸರನ್ನು ಸಂಪಾದನೆ ಮಾಡಿಕೊಟ್ಟಿರುವ " ಸಂಸ್ಕೃತ ಮಹಾಪಾಠಶಾಲೆ '', ಮೈಸೂರಿನ ಭಾಷಾಸಾಹಿತ್ಯಗಳು ಮತ್ತು ಮೈಸೂರಿಗೆ ಬೇಕಾದ ಜ್ಞಾನವಿಶೇಷಾದಿಗಳು ಇವುಗಳನ್ನು ಅಭಿವೃದ್ಧಿಪಡಿಸಲು ಏರ್ಪಟ್ಟ " ವಿಶ್ವವಿದ್ಯಾನಿಲಯ '', ಪ್ರಜಾಸಾಮಾನ್ಯರ ಅಂಧಕಾರವನ್ನು ಹೋಗಲಾಡಿಸಿ ಅವರನ್ನು ಧೃಷ್ಟರನ್ನೂ ಪುಷ್ಟರನ್ನೂ ಮಾಡುತ್ತಿರುವ ಸಾವಿರಾರು ಸ್ಕೂಲುಗಳು—ಇವುಗಳು " ಕನ್ನಡದ ಕಣ್ಣು—ಮೈಸೂರು '' ಎಂದು ಹೇಳುವಹಾಗೆ ಮಾಡಿವೆ. ಶ್ರೀಮನ್ಮಹಾರಾಜರವರು ಈ

ಸಂಸ್ಥೆಗಳಿಗೆ ಅಧಿಷ್ಠಾತೃದೇವತೆಯಾಗಿ ಸಂಸ್ಥಾನವಿದ್ಯಾರಥದ ಸಾರಥ್ಯವನ್ನು ಕೈಕೊಂಡು ನಡೆಸಲು ಪ್ರಜೆಗಳಿಗೆ ಪೂರ್ವಪಶ್ಚಿಮ ಜ್ಞಾನಭಾಂಡಾರಗಳೆರಡೂ ದೊರೆತುವು. ಕನ್ನಡಿಗರು ಅವುಗಳನ್ನು ಸೂರೆಗೊಂಡರು. ಇವುಗಳೊಳಗೆ ಇಂಗ್ಲಿಷಿನ ಪ್ರಾಬಲ್ಯದ ಪ್ರವಾಹದಲ್ಲಿ ಎಲ್ಲವೂ ತೇಲಿಹೋಗುತ್ತಿರುವಾಗ, ಮೈಸೂರು ದೇಶದವರೆಲ್ಲರಿಗೂ ಕನ್ನಡದಲ್ಲಿ ಇರಬೇಕಾದ ಮಮತೆಗೆ ಮೇಲ್ಪಂಕ್ತಿ ಹಾಕಿಕೊಟ್ಟಂತೆ ಮಹಾಸ್ವಾಮಿಯವರು ವಿಶೇಷ ಸಂದರ್ಭ ಬಂದಾಗ ಕನ್ನಡದಲ್ಲಿ ಭಾಷಣಮಾಡುವ ಪದ್ಧತಿಯನ್ನು ಆಚರಣೆಗೆ ತಂದರು. ಇದರಿಂದ, ಮೈಸೂರಿನವರಾದರೂ ಕನ್ನಡದ ಶತ್ರುಗಳಾಗಿದ್ದವರ ರೆಕ್ಕೆಪುಕ್ಕಗಳು ಉದುರಿಹೋದುವು; ಕನ್ನಡದ ಅಭಿಮಾನಿಗಳಿಗೆ ಚತುರ್ಭುಜವಾಯಿತು. ಇಂಗ್ಲಿಷಿನ ಸಾರವನ್ನು ಸೆಳೆದುಕೊಂಡರೂ ತನ್ನನ್ನು ತಾನು ಮರೆಯಬಾರದೆಂಬುದನ್ನು ಉದಾಹರಣೆಯಿಂದ ಕನ್ನಡಕ್ಕೂ ಕನ್ನಡಿಗರಿಗೂ ಹೇಳಿಕೊಟ್ಟಂತಾಯಿತು.

ಕನ್ನಡವು ಕಣ್ಣುಬಿಟ್ಟದ್ದು ಈ ಕಾಲದಲ್ಲಿಯೇ! ಕಾವ್ಯಮಂಜರೀ ಕಾವ್ಯಕಲಾನಿಧಿಗಳಿಂದ ಹಳಗನ್ನಡ ಸಾಹಿತ್ಯವು ಹೊರಪಟ್ಟು, ಕರ್ಣಾಟಕ ಗ್ರಂಥಮಾಲೆ ಕರ್ಣಾಟಕ ಚಂದ್ರಿಕೆ ಮುಂತಾದವುಗಳಲ್ಲಿ ಹೊಸಗನ್ನಡ ಸಾಹಿತ್ಯವು ಹುಟ್ಟಿದ್ದು ಈ ಪ್ರಭುಗಳ ಕಾಲದಲ್ಲಿ. ಈ ಕಾಲದಲ್ಲಿಯೇ, ವಿದೇಶೀಯರಾದರೂ ವಿಲಕ್ಷಣ ಜ್ಞಾನಶಕ್ತಿ ಸಂಪನ್ನರಾದ ರೈಸ್ ಕಿಟ್ಟೆಲ್ ಮುಂತಾದ ಮಹನೀಯರು ಕನ್ನಡದೇಶದಲ್ಲಿ ಜ್ಞಾನಸೋಪಾನವನ್ನು ಕಟ್ಟಿ ಮೈಸೂರು ದೇಶದ ಪ್ರಾಚೀನಚರಿತ್ರೆ ಸಾಹಿತ್ಯಾದಿಗಳನ್ನು ಆಮೂಲಾಗ್ರವಾಗಿ ಶೋಧಿಸಿ ಕನ್ನಡಿಗರಿಗೆ ಆತ್ಮಗೌರವವನ್ನೂ ಸಮಾನಸ್ಕಂಧರಲ್ಲಿ ಸನ್ಮಾನವನ್ನೂ ತಂದರು. "ಪಂಪಭಾರತ" "ಕವಿರಾಜಮಾರ್ಗ" "ಶಬ್ದಾನುಶಾಸನ" ಮುಂತಾದ ಗ್ರಂಥಗಳೂ ಶಾಸನರಾಶಿಗಳೂ ಹೊರಕ್ಕೆ ಬಂದು, ಕನ್ನಡಸಾಹಿತ್ಯಚರಿತ್ರೆಗೆ ಮೂಲವಾಗಿ, "ಕವಿಚರಿತೆ" ಯಂಥ ದೊಡ್ಡ ಗ್ರಂಥಗಳು ಬರುವಂತಾಯಿತು. ಇದರಿಂದ ಕನ್ನಡಕ್ಕೂ ಹೆಮ್ಮೆಪಡಬಹುದಾದಷ್ಟು ವಿಸ್ತಾರವೂ ಘನವೂ ಆದ ಸಾಹಿತ್ಯವಿದೆಯೆಂದು ತಿಳಿಯಬಂದಿತು.

ಹೊಸಗನ್ನಡವು ಬಂದು ಎಷ್ಟೋ ದಿನವಾಗಿದ್ದರೂ, ಪಾಶ್ಚಾತ್ಯಸಾಹಿತ್ಯಸಂಸರ್ಗದಿಂದ ಬಂದ ನವೀನಮಾರ್ಗದ ಹೊಸಗನ್ನಡಸಾಹಿತ್ಯವು ವಿಧವಿಧವಾದ ರೂಪನ್ನು ತಾಳಿ ವಿಜೃಂಭಿಸಲಾರಂಭಿಸಿರುವುದೂ ಈ ಕಾಲದಲ್ಲಿಯೇ! ಗದ್ಯವು ಹುಟ್ಟಿ, ಪ್ರಾಚೀನ ಭಾರತೀಯ ಕಾವ್ಯಪ್ರಪಂಚಕ್ಕೇ ಅಪರಿಚಿತವಾದ, ಸರಳವೂ ಶುದ್ಧವೂ ಹೃದ್ಯವೂ ಆದ ಗದ್ಯವು ಹುಟ್ಟಿ, ಅದರಲ್ಲಿ ಚರಿತ್ರೆ ಜೀವನಚರಿತ್ರೆ ಪ್ರಬಂಧ ವಿಮರ್ಶೆ

ಮುಂತಾದ ಗ್ರಂಥಭೇದಗಳು ರೂಪುಗೊಂಡುವು. ಹಳಗನ್ನಡಗದ್ಯದ ತೊಡರುಶೈಲಿ ಹೋಗಿ, ಹೊಸ ವಿಷಯಕ್ಕೆ ತಕ್ಕ ಹೊಸಶೈಲಿ ಒದಗಿ, ಆರ್ಯಕೀರ್ತಿಯ ಗಂಡುಶೈಲಿಯಿಂದ ಹಿಡಿದು ವೆಂಕಟಾಚಾರ್ಯರ ನವೀನ ಕಾದಂಬರೀಶೈಲಿ, ಪುಟ್ಟಣ್ಣನವರ ಮನೆಮಾತಿನಶೈಲಿ, ಶ್ರೀನಿವಾಸರ ಸಣ್ಣಕಥೆಯ ಸುಖಶೈಲಿಯ ವರೆಗೆ ವಿಂಗಡಿಸಲಾರದಷ್ಟು ವಿಧವಿಧವಾದ ಶೈಲಿಗಳು ಬಂದುವು. ಜಲಪಾತಗಳಂತೆಯೂ, ವಿಷಝುರಿಗಳಂತೆಯೂ, ವಿದ್ಯುದ್ವಾಹಿನಿಗಳಂತೆಯೂ, ಕೆರೆ ಕಟ್ಟೆ ಕಾಲುವೆಗಳಂತೆಯೂ ನಾನಾವಿಧವಾದ ಗುಣಪ್ರಯೋಜನಗಳುಳ್ಳ ಪತ್ರಿಕಾಕಾರ್ಯವು ಜನ್ಮವೆತ್ತಿ ಬೆಳೆಯಿತು. ಕನ್ನಡದೇಶದ ಪತ್ರಿಕಾಕಾರ್ಯದಲ್ಲಿ ಪಿತಾಮಹರೆನ್ನಬಹುದಾದ ಮ|| ವೆಂಕಟಕೃಷ್ಣಯ್ಯನವರು ಕನ್ನಡ ಮಾಸಪತ್ರಿಕೆಗಳಿಗೆ ಮೂಲವಾದ '' ಹಿತಬೋಧಿನಿ '' ಯನ್ನು ಹೊರಡಿಸಿದರು. ಅದು ಸುಮಾರು ಮೂವತ್ತೇಳುವರ್ಷದ ಹಿಂದಿನಮಾತು—ಅಲ್ಲಿಂದೀಚೆಗೆ, ನಂದಿನೀಧೇನುವಿನಿಂದ ಜನಿಸಿದ ಜನಸ್ತೋಮದಂತೆ ಪತ್ರಿಕೆಗಳು ಬಂದುವು, ಬರುತ್ತಿವೆ.

ಗದ್ಯದಂತೆ ಪದ್ಯಕಾವ್ಯನಾಟಕಗಳೂ ಹುಟ್ಟಿದುವು. ನಾಟಕದಲ್ಲಿ, ಬಸಪ್ಪಶಾಸ್ತ್ರಿಗಳ ಶಾಕುಂತಲನಾಟಕ ಮೊದಲು ಮಾಡಿಕೊಂಡು ಸಂಸ್ಕೃತ ಇಂಗ್ಲೀಷು ತೆಲುಗು ಬಂಗಾಳಿ ಮುಂತಾದ ಭಾಷೆಗಳ ನಾಟಕಗಳ ಭಾಷಾಂತರಗಳೂ, ವಿದ್ವಾಂಸರೂ ನಟಶ್ರೇಷ್ಠರೂ ಸ್ವಂತವಾಗಿ ಅಥವಾ ಆಧಾರದಮೇಲೆ ಬರೆದ ನಾಟಕಗಳೂ, ಇಂಗ್ಲಿಷಿನ ಆಧುನಿಕ ನಾಟಕಗಳ ಮಾದರಿಯಮೇಲೆ ಬರೆದ, ನಗುವಿನಿಂದ ಹೊಟ್ಟೆಯೊಡಿಸಿ ಸಂಕಟದಿಂದ ಹೃದಯವನ್ನು ಸೀಳುವ, ಮತ್ತು ಅಪೂರ್ವವಾದ ಉಪಜ್ಞತೆಯುಳ್ಳ ಮ|| ಕೈಲಾಸಂರವರ ನಾಟಕಗಳೂ ಬಂದಿವೆ. ಪದ್ಯದಲ್ಲಿ '' ಮಹತ್ತ್ವವೂ ಭಾರವತ್ತ್ವವೂ '' ಉಳ್ಳ ಕಾವ್ಯಗಳು ಹೋದುವು—ಕುಕ್ಕೆ ಮೊರಗಳಲ್ಲಿ ತುಂಬುವ ತಿಂಡಿಗಳೂ ಅದನ್ನು ತಿನ್ನುವ ಉದರವೀರರೂ ಹೋದಂತೆ ಹೋದುವು: ಅಂತರಿಕ್ಷವನ್ನು ಮುಟ್ಟುತ್ತ ನಿಂತಿದ್ದ ಮಹಾವೃಕ್ಷಗಳು ಹೋದಂತೆ ಹೋದುವು. ಆ ಸ್ಥಾನದಲ್ಲಿ ಹೊಸ ಕಾವ್ಯಗಳು ನಗುತ್ತ ನಲಿಯುತ್ತ ಬಂದುವು—ತಳತಳನೆ ಹೊಳೆಯುವ ಪುಟ್ಟ ದುಂಡು ತಟ್ಟೆಗಳೂ, ಅವುಗಳಲ್ಲಿ ನಾನಾ ಬಣ್ಣಗಳ ರಸವತ್ತಾದ ನಾಜೂಕು ತಿಂಡಿಗಳೂ, ಅವುಗಳನ್ನು ತಿನ್ನುವುದಕ್ಕೆ ರಸಿಕಶಿರೋಮಣಿಗಳೂ ಬಂದಂತೆ ಬಂದುವು: ಹಸುರಾದ ಹುಲ್ಲುಗಾವಲಿನಿಂದಲೂ, ಸುತ್ತುಸುತ್ತಾದ ಸೀಳುದಾರಿಗಳಿಂದಲೂ, ಕತ್ತರಿಸಿದ ಗಿಡಗಳಿಂದಲೂ ಬಗೆ ಬಗೆಯೊದ ಹೂ ಬಳ್ಳಿಗಳಿಂದಲೂ ಪರಿಶೋಭಿತವಾದ ಉದ್ಯಾನಗಳು ಬಂದಂತೆ ಬಂದುವು. ಗದ್ಯದಲ್ಲಿ ಹೇಗೆ ವೈವಿಧ್ಯ, ಜೀವಕಳೆ, ರಸಿಕತೆ, ಸರಳತೆ, ನವೀನತೆಗಳು ಬಂದುವೋ ಪದ್ಯದಲ್ಲಿಯೂ ಹಾಗೆಯೇ, ಇನ್ನೂ ಸ್ವಲ್ಪ ಅತಿಶಯವಾಗಿಯೇ, ಬಂದುವು.

ಇವುಗಳಿಗೆ ಶ್ರೀಮನ್ ಮಹಾರಾಜರವರೂ ಅವರ ಸರ್ಕಾರವೂ, ತಿಳಿದಂತೆಯೂ ತಿಳಿಯದಂತೆಯೂ, ಮುಕ್ತಹಸ್ತದಿಂದ ಉತ್ತೇಜನ ಕೊಡುತ್ತಿದ್ದಾರೆ. ಪ್ರಬುದ್ಧ ಕರ್ಣಾಟಕವೂ ಹೀಗೆ ಪಡೆದಿರುವ ಸಹಾಯವನ್ನು ಇಲ್ಲಿ ಕೃತಜ್ಞತೆಯಿಂದ ಪ್ರಕಾಶ ಪಡಿಸಲಪೇಕ್ಷಿಸುವೆವು. ಅದರಂತೆ, ಪ್ರಬುದ್ಧಕರ್ಣಾಟಕದ ಸಂಪಾದಕ ವರ್ಗಕ್ಕೆ ಸೇರಿದ ನಮ್ಮ ಮಿತ್ರರೊಬ್ಬರೂ ತಾವು ಬರೆದ ಒಂದು ಗ್ರಂಥಕ್ಕಾಗಿ ಮಹಾಸ್ವಾಮಿ ಯವರಿಂದ ಸನ್ಮಾನಿತರಾಗಿದ್ದಾರೆ.

ಶ್ರೀಮನ್ ಮಹಾರಾಜರವರ ರಸಿಕತೆಯಿಂದ ಸೃಷ್ಟವಾದ ಸೌಂದರ್ಯ ಪ್ರಪಂಚವು ಸಾಹಿತ್ಯಸಾಮ್ರಾಜ್ಯದಲ್ಲಿಯೇ ಮುಗಿದಿಲ್ಲ. ಅದು ಸಾಕ್ಷಾತ್ತಾಗಿ, ಪ್ರಕಾಶ ವಾಗಿ, ಕಂಡುಬರುತ್ತಿರುವುದು ಲಲಿತಕಲಾಪ್ರಪಂಚದಲ್ಲಿ—ವಾಸ್ತುಶಿಲ್ಪ ಸಂಗೀತಾದಿ ಗಳಲ್ಲಿ. ಈ ಇಪ್ಪತ್ತೈದು ವರ್ಷಗಳೊಳಗೆ ಮೈಸೂರು ನಗರ ಒಂದರಲ್ಲಿಯೇ ಅರ ಮನೆ ಮೊದಲು ಮಾಡಿಕೊಂಡು ಕಟ್ಟಿರುವ ನಾನಾ ಸೌಧಗಳೂ ವಿಶಾಲವಾದ ಬೀದಿಗಳೂ ಸುಂದರವಾದ ಉದ್ಯಾನಗಳೂ ನೋಟಕರನ್ನು ಎಲ್ಲಾ ಕಡೆಯಿಂದಲೂ ಯಾವಾಗಲೂ ಸೆಳೆದು ತರುವಂತಾಗಿದೆ. "ಹೊಸದಾಗಿ ದಾನಮಾಡುವುದಕ್ಕಿಂತ ಹಿಂದೆ ಕೊಟ್ಟದ್ದನ್ನು ನಡೆಸಿಕೊಂಡು ಬರುವುದು ಶ್ರೇಯಸ್ಸು"—ದಾನಾಚ್ಛ್ರೇ ಯೋನುಪಾಲನಂ—ಎಂಬುದೊಂದು ಪ್ರಾಚೀನವಾದ ಹೇಳಿಕೆಯಿದೆ; (ಶಾಸನ ಗಳನ್ನು ಹಾಕಿಕೊಟ್ಟವರು ಇದನ್ನು ಬೇಜಾರಿಲ್ಲದೆ ಹೇಳಿದ್ದಾರೆ.) ಇದರಂತೆ ನಮ್ಮ ದೇಶದಲ್ಲಿ, ಭರತಖಂಡದಲ್ಲಿ, ಬಹು ಪ್ರಸಿದ್ಧಗಳಾದ ವಾಸ್ತುರತ್ನಗಳನ್ನು ಕಾಪಾಡಿ ಕೊಂಡು ಸುಸ್ಥಿತಿಯಲ್ಲಿ ಇಡಲು ಏರ್ಪಾಡು ಆಗಿದೆ. ಇವುಗಳ ಸೌಂದರ್ಯವನ್ನು ವರ್ಣಿಸಿ ಶಾಸನದ ಇಲಾಖೆಯವರು ಇಂಗ್ಲಿಷಿನಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ— ಕನ್ನಡಿಗರು ಕೇಳುವಹಾಗಾದರೆ ಕನ್ನಡದಲ್ಲಿಯೂ ಬರೆಯಿಸಬಹುದು. ಮಕ್ಕಳು ಅಳದಿದ್ದರೆ ತಾಯಿಯೂ ಹಾಲು ಕೊಡಳು. ಪ್ರಬುದ್ಧಕರ್ಣಾಟಕವು ಈ ಕೊರತೆ ಯನ್ನು ಸ್ವಲ್ಪಮಟ್ಟಿಗಾದರೂ ಹೋಗಲಾಡಿಸಬೇಕೆಂದು "ಮೈಸೂರು ದೇಶದ ವಾಸ್ತುಶಿಲ್ಪ" ವನ್ನು ಪ್ರಕಟಿಸುತ್ತಾ ಅದರಲ್ಲಿ ಒಂದು ಭಾಗವನ್ನು ಮುಗಿಸಿರುವುದು ಕನ್ನಡಿಗರಿಗೆ ವೇದ್ಯವಾಗಿದೆ. ಚಿತ್ರಕಲೆಯಲ್ಲಿ, ರಾಜಾರವಿವರ್ಮರು ಕೊನೆಕೊನೆಗೆ ಬರೆದ ಅನೇಕ ರಾಮಾಯಣ ಭಾರತ ದೃಶ್ಯಗಳು ಶ್ರೀಮನ್ ಮಹಾರಾಜರವರ ಅಪೇ ಕ್ಷೆಯಂತೆ ಕೈಕೊಂಡವುಗಳೆಂಬುದು ಮೈಸೂರಿನವರಲ್ಲದ ಅನೇಕರಿಗೆ ತಿಳಿಯದ ವಿಷಯ. ಈಗ ಚಿತ್ರಕಲಾಪ್ರಪಂಚದಲ್ಲಿ ಜಗತ್ಪ್ರಸಿದ್ಧರೂ "ಅಭಿನವಕರ್ಣಾಟಕ ಕಲಾಸಂಪ್ರದಾಯ" ದ ಸ್ಥಾಪಕರೂ ಆಗಿರುವ ಮ|| ವೆಂಕಟಪ್ಪನವರು ಮಹಾ ಪ್ರಭುಗಳವರ ಆಶ್ರಯದಲ್ಲಿಯೇ ಶಿಕ್ಷಣವನ್ನು ಪಡೆದವರು. ಕನ್ನಡಿಗರಿಗೆ ಪ್ರಬುದ್ಧ ಕರ್ಣಾಟಕದ ಮೂಲಕ ಅವರ ಪರಿಚಯವನ್ನೂ ಈಗಾಗಲೇ ಸ್ವಲ್ಪಮಟ್ಟಿಗೆ ಮಾಡಿ ಕೊಟ್ಟಿದ್ದೇವೆ. ಶ್ರೀಜಗನ್ಮೋಹನ ಚಿತ್ರಶಾಲೆಯ ಸ್ಥಾಪನೆಯೂ ಶ್ರೀಮನ್ ಮಹಾರಾಜರವರ ಕಲಾಸಂಪ್ರೀತಿಯಿಂದಲೇ ಉಂಟಾದದ್ದು.

ಮಹಾಸ್ವಾಮಿಗಳವರ ರಸಿಕತೆಯು ಇವೆಲ್ಲಕ್ಕಿಂತಲೂ ಬಹು ಮನೋಹರ ವಾದ ರೂಪನ್ನು ತಳೆದಿರುವುದು, ಈಗಾಗಲೇ ಭರತಖಂಡದಲ್ಲೆಲ್ಲಾ ಆನಂದವನ್ನು

ಬೀರಿ ಶಾಶ್ವತವಾದ ಕೀರ್ತಿಯನ್ನು ತಂದಿರುವ ಗಾನರಚನೆಯಲ್ಲಿ. ನಮ್ಮ ಸಂಗೀತವು ಮಧುರವಾದದ್ದೇನೋ ನಿಜ; ಅದನ್ನು ಪಿಟೀಲು ತಂಬೂರಿ ಮೃದಂಗಗಳೊಡನೆ ಹಾಡುವುದೂ ರೂಢಿ; ಆದರೆ ನಾನಾ ವಾದ್ಯಗಳನ್ನು ಪಾಶ್ಚಾತ್ಯರೀತಿಯಲ್ಲಿ ಒಂದೇ ಹದಕ್ಕೆ ತಂದು ನಿಲ್ಲಿಸಿ ಮೇಳಪದ್ಧತಿಯಿಂದ ಅಮೃತವರ್ಷವನ್ನು ಕರೆಯುವುವಂತೆ ಕಲ್ಪಿಸಿದ್ದು ಒಂದು ಅಪೂರ್ವ ವರಪ್ರದಾನ. ಈ ಗಾಯನ ಮೇಳದವರು ಈಗ ಕೆಲವು ವರ್ಷಗಳ ಕೆಳಗೆ ಮೊದಲುಸಾರಿ ಹೊರಕ್ಕೆ ಬಂದು, ಸಾಯಂಕಾಲದ ತಂಪಿನಲ್ಲಿ, ಸುಂದರವಾದ "ನಿಷಾತ್‌ಬಾಗ್" ನಲ್ಲಿ, ವಿದ್ಯುದ್ದೀಪಗಳ ಬೆಳಕಿನಲ್ಲಿ, ಅಮೃತವನ್ನು ಸೂಸುವುದಕ್ಕೆ ಆರಂಭಿಸಲು, ಅದು ವಾಯುಮಂಡಲದಲ್ಲಿ ನರ್ತಿಸುತ್ತ ನಲಿಯುತ್ತ ಬಂದು, ಅಲ್ಲಿ ಏನೇನೋ ನೋಡುತ್ತ ಏನೇನೋ ಯೋಚಿಸುತ್ತ ಹೋಗುತ್ತಿದ್ದ ಜನರನ್ನು ಹೇಗೆ ತಟ್ಟನೆ ಗಂಧರ್ವಲೋಕಕ್ಕೆ ತೆಗೆದುಕೊಂಡು ಹೋಗಿ ಮೋಹದಲ್ಲಿ ಮುಳುಗಿಸಿಬಿಟ್ಟಿತೆಂಬುದು ಅನೇಕರ ಅನುಭವದಲ್ಲಿದೆ. ಒಳ್ಳೆಯ ಕಾವ್ಯವೂ ಒಳ್ಳೆಯ ಗಾನವೂ ಮರ್ತ್ಯಲೋಕದವುಗಳಲ್ಲ; ಆದ್ದರಿಂದಲೇ ಅವುಗಳನ್ನು ಎಷ್ಟು ಅನುಭವಿಸಿದರೂ ತೃಪ್ತಿಯಾಗುವುದಿಲ್ಲ, ಬೇಸರವಾಗುವುದಿಲ್ಲ, ಅನಾರೋಗ್ಯವಾಗುವುದಿಲ್ಲ; ಇದನ್ನು ಒಪ್ಪುವುದಾದರೆ ಈ ಹೊಸ ಸಂಗೀತ ಮೇಳನವು ಅಮರಲೋಕದ ಗಾನವೆಂದು ಹೇಳಬಹುದು. ಮಿಠಾಯಿ ಅಂಗಡಿಯಲ್ಲಿ ಸದಾ ಕುಳಿತಿರುವವನಿಗೆ ಸಿಹಿ ಬೇಡವಾಗಬಹುದು, ನೀರಿನಲ್ಲಿಯೇ ಓಡಾಡುತ್ತಿರುವ ಮೀನಿಗೆ ನೀರು ಬೇಕಾಗದಿರಬಹುದು, ಆದರೆ ಈ ಗಾನವನ್ನು ಕೇಳುತ್ತಿರುವವರಿಗೆ ತೃಪ್ತಿಯಾಗದು. ಇದರ ಪ್ರಾಬಲ್ಯದಿಂದ ಪ್ರತಿಯೊಂದು ಬ್ಯಾಂಡುವಾದ್ಯವೂ ಮಾರ್ಪಟ್ಟು, ಬಾರಿಸುವವರಿಗೂ ಕೇಳುವವರಿಗೂ ಮತ್ತಾವುದೂ ರುಚಿಸದಂತಾಗಿದೆ. ಕೊನೆಗೆ ಸಿನಿಮಾ ಕಂಪೆನಿಗಳೂ ಈ ಜಾತಿಯ ಬ್ಯಾಂಡುಗಳನ್ನೇ ಇಟ್ಟುಕೊಂಡಿದ್ದಾರೆ.—ಇದನ್ನು ನೋಡುವುದಕ್ಕೆ ಹೋದರೆ, ಕಾಸಿಗೆ ಕಸ ಕೊಂಡುಕೊಂಡು ಕೊಸರಿಗೆ ಚಿನ್ನ ಸಂಪಾದಿಸಿದಂತೆ ಭಾವನೆಯಾಗುತ್ತದೆ.

ಇದನ್ನೆಲ್ಲಾ ಯೋಚಿಸಿ ನೋಡಿದರೆ, ಮೈಸೂರಿನಲ್ಲಿ 'ಸಂಗೀತ ಸಾಹಿತ್ಯ ಕಲಾವಿಹೀನ'ರೇ ಹುಡುಕಿದರೂ ಸಿಕ್ಕದಂತಾಗಿಬಿಡುತ್ತದೆಯೋ ಎನ್ನಿಸುತ್ತದೆ. 'ರಾಜಾ ರಾಷ್ಟ್ರಸ್ಯ ಕಾರಣಂ' 'ಯಥಾ ರಾಜಾ ತಥಾ ಪ್ರಜಾಃ' ಎಂಬ ಹೇಳಿಕೆಗಳ ತತ್ತ್ವವು ಇಲ್ಲಿ ಅನುಭವಕ್ಕೆ ಬಂದಿದೆ. ಶ್ರೀಮನ್ಮಹಾರಾಜರವರ ಧರ್ಮಪರಾಯಣತೆ, ಸದಾಚಾರ, ಪರಿಶುದ್ಧವಾದ ನಡತೆ, ಪಾಪಭೀತಿ, ಪವಿತ್ರವಾದ ಜೀವನಕ್ರಮ, ವಾತ್ಸಲ್ಯ ಇವು 'ನಾವಿಷ್ಣುಃ ಪೃಥಿವೀಪತಿಃ' ಎಂದು ಬಂಗಾರದ ಅಕ್ಷರಗಳಲ್ಲಿ ಕೆತ್ತಿ ಬರೆದಿವೆ. ಇಂಥ ಪ್ರಭುಗಳನ್ನು ಪಡೆದಿರುವುದು ಪ್ರಜೆಗಳ ಒಂದು ಅಪೂರ್ವ ಪುಣ್ಯ. ಈ ಪುಣ್ಯವನ್ನು ಪ್ರಜೆಗಳಾದ ನಮಗೆ ಭಗವಂತನು ಶಾಶ್ವತವಾಗಿ ಕರುಣಿಸಲಿ! ರಜತಮಹೋತ್ಸವವಾದಂತೆ ಸ್ವರ್ಣಮಹೋತ್ಸವವೂ, ರತ್ನಮಹೋತ್ಸವವೂ ನೆರವೇರುವಂತೆ ಅನುಗ್ರಹಿಸಲಿ! ಆ ಉತ್ಸವಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಉತ್ಸಾಹದಿಂದ ಭರತಖಂಡವೇ ಭಾಗಿಯಾಗುವಂತೆ ದಯೆಪಾಲಿಸಲಿ!!

ಪ್ರಬುದ್ಧ ಕರ್ಣಾಟಕ

ಪ್ರಭವ ಸಂವತ್ಸರ —೩೨— ದೀಪಾವಳಿಯ ಸಂಚಿಕೆ

ಸಂಪುಟ ೯] ವಿಷಯಸೂಚಿಕೆ. [ಸಂಚಿಕೆ ೨

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೭

All Rights Reserved

Printed at the Crown Electric Press, Mysore.

619
ಬೆಂಗಳೂರು-19



ಶ್ರೀ ಚಾಮರಾಜವೊಡೆಯರವರ ಅಮೃತಶಿಲಾಪ್ರತಿಮೆ



ಕಾರಂಜಿಕೆರೆ ದಾರಿ

೧

ಪುಟ್ಟಿದೂರ ಮಮತೆಯಿಂದ
ಬಿಟ್ಟು ಪೋಗಲೊಂದು ವಾರ
ಅಟ್ಟಿ ಬಂದು ನಿನ್ನ ಸ್ನೇಹ
ಕೂಗಿ ಕರೆಯಿತು ;
ಬಿಟ್ಟು ಇರಲು ಆರೆನೆಂದು
ಬೇಡಿ ಕರೆಯಿತು. ೧

ನಮ್ಮ ಕೆಳೆಯತನವು ಮೊಳೆತು
ಇಂದಿಗೆಂಟುವರುಷವಾಯ್ತು
ಅಂದಿನಿಂದಲಿಂದುವರೆಗು
ಬೆಳೆದುಬಂದಿತು ;
ತಳಿತು ಪೂವ ತಳೆದು ಬೇಗ
ಫಲಗಳಿತ್ತಿತು. ೨

ಎಂಟುದಿನಗಳಗಲಿಕೆಯು
ಕಂಡುದೊಂದು ಕಲ್ಪದಂತೆ,
ದೂರದೂರಿನಲ್ಲಿನೊಂದಲು
ಮರಳಲೆಳಸಿತು ;
ನಿನ್ನ ಬಳಿಯೊಳಿರಲು ಮನವು
ತವಕಪಟ್ಟಿತು. ೩

ಹಗಲು ಇರುಳು ನಿನ್ನ ಧ್ಯಾನ,
ನಿನ್ನ ಚಲುವು ಜೊನ್ನಪಾನ,
ನಿನ್ನನಂತಪ್ರೇಮಗಾನ
ಎನ್ನ ಸೆಳೆವುವು ;
ಮಂತ್ರ ಬೊಂಬೆಯೆಳೆಯುವಂತೆ
ಎನ್ನನೆಳೆವುವು. ೪

೨

ಎನ್ನ ಕೆಲದೆ ನೀನು ಬೆಳೆದೆ,
ನಿನಗೆ ಮೇಲು ನಾನು ಬೆಳೆದೆ ;
ನಿನ್ನ ಎರುಕಳೆಗಳನ್ನು
ನಾನು ತಳೆದಿಹೆ ;
ಎನ್ನ ಬೆಳಸು ಹಣ್ಣುಗಳನು
ನೀನು ಉಂಡಿಹೆ. ೫

ಎನಿತು ಸೊಗಸುನೋಟಗಳನು,
ಎನಿತು ಸವಿಯ ಗಾನಗಳನು,
ಎನಿತು ಹರುಷ ಬಿನದಗಳನು
ಬೀರಿ ನಲಿಸಿದೆ !
ಮುಗುಳುನಗೆಯ ಸವಿಯಕೆನೆಯ
ಎರೆದು ಸಲಹಿದೆ ! ೬

ಎರಡುಕೆಲದೆ ಪಸುರು, ಪೂವು,
ಕೆರೆವನಂಗಳೆಲರುಸೇವೆ,
ಗಿರಿತರುಗಳ ಬೆಡಗುಲೋಕ,
ಹುಲ್ಲುಕಾವಲು ;
ನೀರುಧಾರೆ ಎರಚಿ ಸುರಿವ
ಚಿಲುಮೆಸರಗಳು. ೭

ಎದುರಿಗಿಹವು, ನೇರವಾಗಿ
ತೆರೆದ ನಿನ್ನ ಹೃದಯಪಥದಿ,
ತೋರಮುತ್ತಿನಂತೆ ಬೆಳಗಿ
ಸಾಲುದೀಪಗಳ್ ;
ಗಿರಿಯು ಮುಗಿಲ ಮುಟ್ಟುವಲ್ಲಿ
ಮಾಲೆದೀಪಗಳ್. ೮

ನಿನ್ನಕೆರೆಯ ಮಡಿಲಿನಲ್ಲಿ,
ಬಾನು ಇಳಿದು ಬಂದು ನೆಲೆಸಿ,
ನೀಲಿಯುಡುಗೆ ತಾರೆತೊಡುಗೆ
ತೊಡಿಸುತಿರುವುದು ;
ಬಾಲಶಶಿಯು ನಗುತೆ ಬಂದು
ಆಡುತಿರುವನು. ೯

ಕೊಳದ ನೀಲಿಯಂಚಿನಲ್ಲಿ
ತಿಳಿಯ ನೀರಿನಾಳದಲ್ಲಿ
ಅಲೆಗಳೇಳಲಗ್ರದಲ್ಲಿ
ದಿವ್ಯಬಿಂಬಗಳ್ ;
ಸಾಲುನಿಂತ ದೀವಿಗೆಗಳ
ಮುತ್ತಿನಾರತಿ. ೧೦

ಕೊಳದ ಹೃದಯದಲ್ಲಿ ಹುದುಗಿ
ಎಮಗೆ ತಿಳಿಯದಾಳದಿಂದ

ಮಿರುಗಿ ಮಿರುಗಿ ತಾರೆಲೋಕ
ಕರೆಯುತಿರುವುದು ;
ಉರಿಯನುಳಿದ ಬೆಳಕುಲೋಕ
ಸನ್ನೆಗೈವುದು. ೧೧

೩

ನಿನ್ನ ಚಲುವ ನೋಡಿ ನೋಡಿ,
ನಿನ್ನ ಒಲವನುಂಡು ಪಾಡಿ,
ನಿನ್ನ ಲತೆಗಳೊಡನೆ ಆಡಿ
ಹಿಗ್ಗುತಿರುವೆನು ;
ನಿನ್ನ ತಣ್ಪು ಶಾಂತಿ ಸವಿದು
ಶಾಂತಿಗೊಳುವೆನು. ೧೨

ನಿಡುವಗಲಿನ ಬೆಳಕಿನಲ್ಲಿ
ನಡುನಿಶಿ ಬೆಳುತಿಂಗಳಲ್ಲಿ
ಕರುನಿಶಿ ಕಳ್ತಲೆಗಳಲ್ಲಿ
ಕೊಳನ ನೋಡುತೆ,
ಅಲ್ಲಿ ಜ್ವಲಿಸುತಿರುವ ಲೋಕ
ಗಳಲಿ ಚರಿಸುವೆ. ೧೩

ಸುಳಿವ ಗಾಳಿ ಜಲನೆ ನಿಂತ
ವಿಜನದೇಕಾಂತಗಳಲಿ
ಬಳಲಿ ನಿನ್ನ ಸಂಗವರಸಿ
ಮನವ ಪೇಳಲು,
ಮನದ ಬೇಗೆ ಹರಿಸಿ ಪೊಸದು
ಜೀವವುಸಿರುವೆ. ೧೪

೪

ನಿನಗೆ ಜೀವವಿಲ್ಲವೆಂದು
ಪೇಳುವವರು ಮರುಳರಲ್ತೆ !

ನಿನ್ನ ಮಮತೆ ನಿನ್ನ ಸ್ನೇಹ
ವದನು ತೋರವೆ !
ನರರು ನಂಬದಿರ್ದೊಡೇನು
ನಿಜವು ಅಳಿವುದೆ ? ೧೫

ಎನ್ನ ನಿನ್ನ ಈರ್ವರಲ್ಲಿ
ಒಂದುಜೀವದಾತ್ಮಭಾವ
ಹೊಂದಿ ಬಲಿದ ಹೃದಯಭಾವ
ಹರಿದು ಬರುತಿದೆ ;
ಒಂದನಂತಪ್ರೇಮಭಾವ
ಬೆರೆದು ಬರುತಿದೆ. ೧೬

ಎನ್ನ ನೆನೆವ ಜನರು ಎಲ್ಲ
ಪೋದಮೇಲು ಅಳಿದಮೇಲು,
ಎನ್ನದಿವುಗಳೆಂಬುವೆಲ್ಲ
ಮಾಯವಾದರೂ,
ಎನ್ನ ಉಸಿರು ನಿಂತಮೇಲು
ನೀನು ಉಳಿಯುವೆ. ೧೭

ಆಗ—ನಿನ್ನ ಕೆಳೆಯತನದ
ಭಾಗ್ಯ ಭೋಗಿಸಿರುವ ಎನ್ನ
ಕೂಗಿ ಕರೆದು ಎಂದಿನಂತೆ
ನೆನಸಿಕೊಳುವೆಯ ?
ಈಗ ಪಟ್ಟ ವಿರಹವೆತೆಯ
ಆಗಪಡುವೆಯ ? ೧೮

ವಿ. ಸೀ.

ಪ್ರತಿಭೆ

ಕರಿಯ ಮುಗಿಲಿನಿದಿರಿನಲ್ಲಿ
ಮಿಂಚುಬಳ್ಳಿ ಹೊಳೆಯುವಂತೆ
ನನ್ನ ಮುಂದೆ ಸುಳಿವೆ, ರಮಣಿ,
ನೀನು ಯಾರೆಲೌ ?
ಕಣ್ಣುಮಿಟುಕಿಸುವುದರಲ್ಲೆ
ಮಿಂಚು ಥಟ್ಟನಳಿಯುವಂತೆ
ಒಂದೆ ನಿಮಿಷ ಕುಣಿದದೇಕೆ
ಮಾಯವಾಗುವೆ ? ೧

ನೀನು ಜನಿಸುವೆಡೆಯದೆಲ್ಲಿ,
ನಿನ್ನ ನೆಲೆಯ ಮನೆಯದೆಲ್ಲಿ,
ನಿನ್ನನೊಲಿಸಿ ವಶಕೆ ತರುವ
ದಾರಿ ಯಾವುದು ?
ಇಳೆಯೆ ಮೋಹಗೊಳ್ಳುವಂತೆ
ಹೂವಿಗಿಂಪನಿತ್ತ ದಿವ್ಯ—
ಶಕ್ತಿಯೊಂದುಕಿಡಿಯೊ, ನೀನು,
ನಿಜದ ದೇವಿಯೋ ? ೨

ಕೋರಿ ಕವಿಯು ಕರೆದ ವೇಳೆ
ಬರುವಳಲ್ಲ, ತರುಣಿ, ನೀನು,
ಅಲಸಿ ಜಗವನವನು ಮರೆತ
ಹೊತ್ತು ಸಾರುವೆ.
'ಬಾರೊ' ಎನಲು ನಕ್ಕು ಓಡಿ,
ಬಳಲಿದಾಗ ಬೆನ್ನನೇರಿ
ಕುಣಿವ ಮಗುವಿನಂತೆ ನೀನ-
ದೇತಕಾಡುವೆ ? ೩

ರಾಶಿಯಾಗಿ ಪದಗಳಿರಲಿ,
ನೆನೆದು ತಂದ ಭಾವವಿರಲಿ,
ಕುಳಿತು ಬರೆಯುತಿರಲಿ ಕವಿಯು,
—ಚೆಲುವು ಹೊಳೆವುದೇ ?
ಕತ್ತಲಾದ ಕೋಣೆಯಲ್ಲಿ
ಚಿನ್ನವಿರಲಿ, ರನ್ನವಿರಲಿ,—
ಅಲ್ಲಿ ನೋಡುವವರಿಗದರ
ಹೊಳಪು ತಿಳಿವುದೇ ? ೪

ದೇವಿ, ನೀನು ದಯವ ತೋರಿ
ಕವಿಯನೊಪ್ಪಿ ಬಂದರವನ
ಕವನದಲ್ಲಿ ಜೀವಕಳೆಯು
ಸೂಸಿ ಹರಿವುದು.
ಹೊನ್ನಿನೆರಕದಲ್ಲಿ ಸೇರಿ
ಮಣಿಯ ಹರಳು ತೊಳಗುವಂತೆ
ಮಾತಿನಲ್ಲಿ ಭಾವವೆಲ್ಲ
ಹೊಂದಿ ಮೆರೆವುದು. ೫

ನನ್ನ ಕಣ್ಣುಗಳನು ಮುಸುಕಿ
ಮನಸು ಹಾರುವುದನು ತಡೆವ
ಮಂಜು ನಿನ್ನ ಮುಗುಳುನಗೆಯ
ಬೆಳಕಿಗೋಡಲಿ.
ನಿನ್ನ ಕರದ ಸೋಂಕಿನಿಂದ
ನನ್ನ ಹೃದಯವುಬ್ಬಿ ಬಿರಿದು
ಹೊಸವು ಭಾವಗಳನು ಕಂಡು
ಸುಖವ ಪಡೆಯಲಿ. ೬

ತೀ. ನಂ. ಶ್ರೀಕಂಠಯ್ಯ.

———

ವಿಧವೆ

ಮುಂದೆ ಬಾರದಿರೆಂದು ಮನೆಯಿಂದ ಮೈದುನನು
ಹೊರಡಿಸಲು ಗೋಳಿಡುತ ಕಂಬನಿಯ ತಳೆದು,
ಚೆಂದದಾಟಕೆ ನಲಿವ ತಂದೆ ಕೈಬಿಡಲಂದು
ಸೊರಗಿ ಬಲು ಕಳವಳಿಸಿ ಕಾಲವನು ಕಳೆದು,
ನೊಂದು ನಾಚುತ ಹೆರರ ಬೇಡಲಾರದೆಯುಡುಗಿ,
ಬಾಲೆ ದೈನ್ಯದಿ ಕೇರಿಕೇರಿಗಳನಲೆದು,
ಬಂಧುಗಳ ಬಿರುನುಡಿಗೆ ತಲೆಯ ತಗ್ಗಿಸಿ ಕೊರಗಿ,
ಹಾಳುಬಾಳನು ಹಳಿದು ಬಿಸಿಯುಸಿರನೆಳೆದು ;
ತಾಯಿ ಬದುಕಿರುವಾಗ ತಬ್ಬಲಿಯು ನೀನು,
ನಿನ್ನ ಮನೆಯಿರುವಾಗ ಪರದೇಶಿ ನೀನು,
ನಿನ್ನ ಜನ ದೊರೆವಾಗ ಗತಿಹೀನೆ ನೀನು,
ಸಾಯದೆಯೆ ಸತ್ತಂತೆ ಬಾಳುವಳು ನೀನು.

ಎಲ್. ಗುಂಡಪ್ಪ.

೧೨. ಕಮಲಭವ

ಶಾಂತೀಶ್ವರಪುರಾಣದ ಕರ್ತೃವಾದ ಈ ಕಮಲಭವನನ್ನು ಕುರಿತು ಕವಿಚರಿತ ಕಾರರು—

“ಈತನು ಶಾಂತೀಶ್ವರ ಪುರಾಣವನ್ನು ಬರೆದಿದ್ದಾನೆ. ಇವನು ಜೈನಕವಿ. ಇವನ ಗುರು ದೇಶೀಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ಮಾಘಣಂದಿ ಪಂಡಿತಯತಿ.

ಈತನು ತನಗೆ ಹಿಂದೆ ಇದ್ದ ಕವಿಗಳಲ್ಲಿ ಜನ್ನನನ್ನು (1230) ಸ್ತುತಿಸುವುದರಿಂದ ಆತನಿಗೆ ಈಚೆಯವನೆಂದು ವ್ಯಕ್ತವಾಗುತ್ತದೆ. ಇವನ ಗ್ರಂಥದಿಂದ ಮಲ್ಲಿಕಾರ್ಜುನನು (ಸು. 1245) ಸೂಕ್ತಿ ಸುಧಾರ್ಣವದಲ್ಲಿ ಪದ್ಯಗಳನ್ನು ಉದ್ಧರಿಸಿ ಬರೆದಿರುವುದರಿಂದ ಆವನಿಗಿಂತ ಸ್ವಲ್ಪ ಹಿಂದೆ ಇದ್ದಿರ ಬೇಕು. ಆದುದರಿಂದ ಈತನು ಸುಮಾರು 1235 ರಲ್ಲಿ ಇದ್ದಿರಬಹುದು.”

ಎಂದು ಕವಿಚರಿತೆ ಒಂದನೇ ಸಂಪುಟದ ಎರಡನೇಮುದ್ರಣದ ೩೬೧-೩೬೩ನೇ ಪುಟಗಳಲ್ಲಿ ಬರೆದು, ಈ ೩೬೨ನೇ ಪುಟದ ಅಡಿಯಲ್ಲಿರುವ ಟಿಪ್ಪಣಿಯಲ್ಲಿ—

“ಈತನು ಗುರುಪರಂಪರೆಯನ್ನು ಸ್ತುತಿಸುವಾಗ ವಿನಯೇಂದುವ್ರತಿ ಎಂಬ ಒಬ್ಬ ಗುರು ವನ್ನು ಸ್ಮರಿಸಿ ಆವನಿಗೆ ‘ಸಿಂಹಣೋರ್ವೀಶ್ವರಂ ವಿನಮನ್ಮಸ್ತಕನಾದಂ’ ಎಂದು ಹೇಳಿದ್ದಾನೆ. ಈ ಸಿಂಹಣನು ದೇವಗಿರಿಯ ಯಾದವರಾಜರಲ್ಲಿ ಒಬ್ಬನು. ಇವನು 1210 ರಿಂದ 1247 ರ ವರೆಗೆ ಆಳಿ ದಂತೆ ತಿಳಿಯುತ್ತದೆ.”

ಎಂದೂ ಬರೆದಿರುವರು.

ಕವಿಚರಿತಕಾರರು ಹೇಳಿರುವಂತೆ ಈ ಸಿಂಹಣೋರ್ವೀಶ್ವರನು ೧೨೧೦ ರಿಂದ ೧೨೪೭ ರ ವರೆಗೆ ದೇವಗಿರಿಯಲ್ಲಿ ರಾಜ್ಯವಾಳುತ್ತಿದ್ದ ಆ ಹೆಸರಿನ ಸೇವುಣಚಕ್ರ ವರ್ತಿಯೇ ಎಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ. ಆದರೆ ಈ ಸಿಂಹಣನು ‘ವಿನಮನ್ಮಸ್ತಕನಾದ’ ವಿನಯೇಂದುವ್ರತಿಗೂ (ಮತ್ತು ಈ ಗುರುವಿ ನಂತೆಯೇ ಶಾಂತೀಶ್ವರ ಪುರಾಣದಲ್ಲಿ ಕಮಲಭವನಿಂದ ಸ್ತುತನಾಗಿರುವ) ಕುಮು ದೇಂದುಯೋಗಿಶಿಷ್ಯ ಮಾಘಣಂದಿಮುನಿಗೂ ನಡುವೆ ಬಾಳಚಂದ್ರಮುನಿ, ಪದ್ಮಸೇನ ವ್ರತಿ, ಜಯಕೀರ್ತಿವ್ರತಿ ಎಂಬ ಮೂವರು ಗುರುಗಳು ಸ್ತುತರಾಗಿರುವುದರಿಂದಲೂ, ‘ಸಿಂಹಣೋರ್ವೀಶ್ವರಂ ವಿನಮನ್ಮಸ್ತಕನಾದಂ’ ಎಂಬ ಕಮಲಭವನ ವಾಕ್ಯದಿಂದಲೂ ಕೂಡ ಈ ಶಾಂತೀಶ್ವರಪುರಾಣವನ್ನು ಬರೆದಾಗ ಸಿಂಹಣನು ಇರಲಿಲ್ಲವೆಂದು, ಎಂದರೆ, ಈ ಪುರಾಣವು ಕ್ರಿ.ಶ. ೧೨೪೭ ಕ್ಕಿಂತ ಈಚೆಗೆ ಬರೆಯಲ್ಪಟ್ಟಿತೆಂದು ಊಹಿಸಬೇ ಕಾಗಿರುವುದು.

ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವವೂ ಕೂಡ ಕ್ರಿ.ಶ. ೧೨೪೫ ಕ್ಕಿಂತ ಕೆಲವು ವರ್ಷಗಳಮೇಲೆ ಎಂದರೆ ಸುಮಾರು ೧೨೬೩ ರಲ್ಲಿ ರಚಿಸಲ್ಪಟ್ಟಿತೆಂದು ನಾವು

ಮುಂದೆ ನಿರೂಪಿಸುವೆವು. ಅಲ್ಲದೆ ಕಮಲಭವನಿಂದ ಶಾಂತೀಶ್ವರಪುರಾಣದಲ್ಲಿ ಕೀರ್ತಿಸಲ್ಪಟ್ಟಿರುವ ಕುಮುದೇಂದುಯೋಗಿಶಿಷ್ಯ ಮಾಘಣಂದಿಮುನಿಯು ನಾವು ಮೇಲೆ (ಪುಟ ೫೭ ಆದಿ) ಪ್ರಸ್ತಾವಮಾಡಿರುವ ಶಾಸ್ತ್ರಸಾರ ಸಿದ್ಧಾಂತಸಾರಾದಿ ಗ್ರಂಥಗಳನ್ನು ಸುಮಾರು ಕ್ರಿ.ಶ. ೧೨೫೦-೫೮ ರಲ್ಲಿ ರಚಿಸಿದ ಬಲಾತ್ಕಾರಗಣದ ಮಾಘನಂದಿ ಗುರುವೇ ಎಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ.

ಆದ್ದರಿಂದ ಇದೆಲ್ಲವನ್ನೂ ಪರ್ಯಾಲೋಚಿಸಿದಲ್ಲಿ ಕಮಲಭವನು ಶಾಂತೀಶ್ವರ ಪುರಾಣವನ್ನು ಕ್ರಿ.ಶ. ಸುಮಾರು ೧೨೩೫ ರಲ್ಲಿ ಬರೆದನೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವೇನೂ ಇರಲಾರದೆಂದು ನಮಗೆ ತೋರುವುದು.

೧೩. ಎರಡನೆಯ ಗುಣವರ್ಮ

ಪುಷ್ಪದಂತಪುರಾಣದ ಕರ್ತೃವಾದ ಈ ಗುಣವರ್ಮನ ವಿಷಯದಲ್ಲಿ ಕವಿಚರಿತ ಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಪುಷ್ಪದಂತಪುರಾಣವನ್ನೂ ಚಂದ್ರನಾಥಾಷ್ಟಕವನ್ನೂ ಬರೆದಿದ್ದಾನೆ.

ಈತನು ಜೈನಮತದವನು. 'ಅಹಿತಕ್ಷ್ಮಾಭೃದ್ಭೃಹದ್ವಜ್ರ' ನಾದ ಕಾರ್ತವೀರ್ಯರಾಜನ ಕೈಯಕೆಳಗೆ 'ನಾಳ್ಪ್ರಭು' ವಾಗಿದ್ದ ಶಾಂತಿವರ್ಮನು ಈ ಕವಿಯ ಪೋಷಕನು. ಈ ಕಾರ್ತವೀರ್ಯನ ಗುರುವಾದ ಮುನಿಚಂದ್ರನೇ ಈತನಿಗೂ ಗುರು.

ಈತನು ಪೂರ್ವಕವಿಗಳನ್ನು ಸ್ಮರಿಸುವಾಗ ಜನ್ನನನ್ನು (1230) ಸ್ತುತಿಸಿರುವುದರಿಂದ ಆ ಕವಿಗಿಂತ ಈಚೆಯವನಾಗಿರಬೇಕು. ಮಲ್ಲಿಕಾರ್ಜುನನು (ಸು. 1245) ಈತನ ಪುಷ್ಪದಂತಪುರಾಣದಿಂದ ಪದ್ಯಗಳನ್ನು ಅನುವಾದಮಾಡಿರುವ ಕಾರಣ ಅವನಿಗೆ ಹಿಂದೆ ಇದ್ದಿರಬೇಕು. ಸುಮಾರು 1235 ರಲ್ಲಿದ್ದನೆಂದು ತೋರುತ್ತದೆ. 1229 ರಲ್ಲಿ ಬರೆದ ಸೌಂದತ್ತಿಯ ಶಾಸನದಲ್ಲಿ ಹೇಳಿರುವ ಕಾರ್ತವೀರ್ಯ, ಮುನಿಚಂದ್ರ, ಶಾಂತಿನಾಥ ಎಂಬವರು ಈತನು ಹೇಳುವ ಕಾರ್ತವೀರ್ಯ, ಮುನಿಚಂದ್ರ, ಶಾಂತಿವರ್ಮರೇ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ....ಮೇಲೆ ಹೇಳಿದ ಕಾರ್ತವೀರ್ಯನು 1202 ರಿಂದ 1220 ರ ವರೆಗೆ ಆಳಿದಂತೆ ಶಾಸನಗಳಿಂದ ತಿಳಿಯುತ್ತದೆ. ಈ ರಾಜನ ಸಭೆಯಲ್ಲಿ ಶಾಂತಿವರ್ಮನು ಪುಷ್ಪದಂತಪುರಾಣವನ್ನು ರಚಿಸಹೇಳಲು ಕವಿ ರಚಿಸಿದಂತೆ

ಎಂದೋರಂತಿರೆ ವಜ್ರದೇವನರನಾಥಾಸ್ಥಾನದೊಳ್ ಕೂರ್ತನ |
ಪ್ಪಿಂದಂ ಕೋವಿದರೆಯ್ದೆ ಕೊಂಡುಕೊನೆಯಲ್ ಕೇಳ್ದೞ್ಕಱಿಂ ಶಾಂತಿವ ||
ರ್ಮಂ ದೀನಾನತವರ್ಮನಾದರಿಸಿ ನೀಂ ಪೇೞೆಂದೊಡೀಗಳ್ ಮನಂ |
ದಂದೆಂ ಪಾಲ್ಗಡ ಮುದ್ದನಲ್ ಜಿನಕಥಾವಿಸ್ತಾರಮಂ ಸಾರಮಂ ||

ಎಂಬ ಪದ್ಯದಿಂದ ವ್ಯಕ್ತವಾಗುತ್ತದೆ" (ಕವಿಚರಿತೆ I ೨೮೫—೨೮೬).

ಇಲ್ಲಿ ಪ್ರಸ್ತುತನಾಗಿರುವ ಕಾರ್ತವೀರ್ಯನು ನಾವು ಮೇಲೆ (ಪುಟ ೮೮) ಹೇಳಿದ ರಟ್ಟಮಹಾಮಂಡಲೇಶ್ವರ ಒಂದನೆಯ ಲಕ್ಷ್ಮಿದೇವನ ಮಗನಾದ ನಾಲ್ಕನೆಯ ಕಾರ್ತವೀರ್ಯನು. ಇವನು ಕ್ರಿ.ಶ. ಸುಮಾರು ೧೧೯೦ ರಿಂದ ೧೨೧೮ ರ ವರೆಗೆ ರಾಜ್ಯವನ್ನಾಳಿರಬಹುದೆಂದು ನಾವು ಮೇಲೆ (ಪುಟ ೮೯) ಹೇಳಿರುವೆವು. * ಈ ರಾಜನ ಸಭೆಯಲ್ಲಿ ಶಾಂತಿವರ್ಮನು ಪುಷ್ಪದಂತಪುರಾಣವನ್ನು ಹೇಳೆಂದು ಪ್ರೇರಿಸಿದುದಕ್ಕಾಗಿ ಈ ಪುರಾಣವನ್ನು ವಿರಚಿಸಿದೆನೆಂದು ಕವಿಯು ಹೇಳಿಕೊಂಡಿರುವುದರಿಂದ ಈ ಕಾರ್ತವೀರ್ಯನ ಆಳಿಕೆಯಲ್ಲಿ ಎಂದರೆ ಕ್ರಿ.ಶ. ೧೧೯೦-೧೨೧೮ ರಲ್ಲಿ ಕವಿಯು ತನ್ನ ಗ್ರಂಥವನ್ನು ಬರೆದಿರಬೇಕು.

---

* ಮೇಲೆ ೮೯ ನೇ ಪುಟದಲ್ಲಿನ ಟಿಪ್ಪಣವನ್ನು ನೋಡಿ.

ಈ ಕವಿಯು ಜನ್ನನನ್ನು ಸ್ತುತಿಸಿರುವುದರಿಂದ ಈ ಪುಷ್ಪದಂತಪುರಾಣವನ್ನು ಅವನು ವಿರಚಿಸಿದ ಕಾಲದಲ್ಲಿ ಜನ್ನನು ಪ್ರಸಿದ್ಧನಾದ ಕವಿಯಾಗಿದ್ದಿರಬೇಕೆಂಬ ಅಂಶವಂತೂ ವ್ಯಕ್ತವಾಗಿಯೇ ಇರುವುದು. ಈ ಜನ್ನನು ಶಕ ೧೧೧೩ ಮತ್ತು ೧೧೧೯ ರಲ್ಲಿ ಎಂದರೆ ಕ್ರಿ.ಶ. ೧೧೯೦ ಮತ್ತು ೧೧೯೫ ರಲ್ಲಿ ‡ ಹುಟ್ಟಿದ ಚನ್ನರಾಯಪಟ್ಟಣದ ೧೭೯ ನೆಯ ಮತ್ತು ತರೀಕೆರೆಯ ೪೫ ನೆಯ ಶಾಸನಗಳನ್ನೂ ಬರೆದಿದ್ದನಲ್ಲದೆ, 'ಶ್ರೀ ಗಿರಿದುರ್ಗಮಲ್ಲನೃಪರಾಜ್ಯದ ವತ್ಸರಮುತ್ತರೋತ್ತರಕ್ಕಾಗಿರೆ ಶುಕ್ಲದಾಶ್ವಯುಜ ಕೃಷ್ಣದ ಪಂಚಮಿ' ಯಲ್ಲಿ ಎಂದರೆ ಕ್ರಿ.ಶ. ೧೨೦೯ ನೇ ವರ್ಷದಲ್ಲಿ ತನ್ನ ಯಶೋಧರಚರಿತವನ್ನು ಬರೆದು ಮುಗಿಸಿದನು. ಇವನಿಗೆ 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೂಡ ವೀರಬಲ್ಲಾಳನು ಕ್ರಿ.ಶ. ೧೨೦೯ ರಿಂದ ಈಚೆಯೇ ಕೊಟ್ಟನು. †

---

‡ ಈ ಶಾಸನಗಳು ಕ್ರಿ.ಶ. ೧೧೯೧ ಮತ್ತು ೧೧೯೭ ರಲ್ಲಿ ಹುಟ್ಟಿದವೆಂಬ ಕವಿಚರಿತಕಾರರ ಅಭಿಪ್ರಾಯವು (ಕವಿಚರಿತೆ I. ೨೬೨) ತಪ್ಪಾದದ್ದು. ಇವುಗಳಲ್ಲಿ ಚನ್ನರಾಯಪಟ್ಟಣದ ೧೭೯ ನೇ ಶಾಸನವು ಕ್ರಿ.ಶ. ೧೧೯೦ ನೇ ಡಿಸೆಂಬರ್ ೨೩ ನೇ ತಾರೀಖು ಆದಿತ್ಯವಾರದಲ್ಲಿ ಹುಟ್ಟಿತೆಂದು ನಾವು ಮೇಲೆ (ಪುಟ ೯೧) ವ್ಯಕ್ತಮಾಡಿರುವೆವು.

ಎರಡನೇದಾದ ತರೀಕೆರೆ ೪೫ ನೇ ಶಾಸನವು ಶಕವರ್ಷ ೧೧೧೯ ನೇ ಪಿಂಗಳ ಸಂವತ್ಸರದ ಪುಷ್ಯ ಬಹುಳ ಸಪ್ತಮೀ ಸೋಮವಾರ ಉತ್ತರಾಯಣ ಸಂಕ್ರಾಂತಿಯಂದು ಹುಟ್ಟಿದ್ದು. ಈ ಪಿಂಗಳ ಸಂವತ್ಸರದಲ್ಲಿ ಪುಷ್ಯಬಹುಳ ಸಪ್ತಮೀ ತಿಥಿಯು ಕ್ರಿ.ಶ. ೧೧೯೮ ನೇ ಜನವರಿ ೧ ನೇ ತಾರೀಖು ಬೃಹಸ್ಪತಿವಾರದಂದು ಲಂಕೋದಯಾತ್ಪರ ಸುಮಾರು ೨ ಘ. ೩೦ ವಿ. ಗೆ ಪ್ರಾರಂಭವಾಗಿ ಮಾರನೇ ಶುಕ್ರವಾರ ಸೂರ್ಯೋದಯಾನಂತರ ಸುಮಾರು ೨ ಘ. ವರೆಗೆ ವ್ಯಾಪಿಸಿಕೊಂಡಿತ್ತು. ಈ ಬೃಹಸ್ಪತಿವಾರ ಶುಕ್ರವಾರಗಳಲ್ಲಿ ಯಾವ ವಿಧವಾದ ಸಂಕ್ರಾಂತಿಯೂ ಸಂಬದ್ಧವಾಗಿರಲಿಲ್ಲ. ಈ ವರ್ಷದ ಒಂದುಬಿಟ್ಟು ಹಿಂದಿನ ವರ್ಷದಲ್ಲಾದರೆ (ಇಂತಹ ವರ್ಷಗಳನ್ನು ಕುರಿತು ಮೇಲೆ ನಿರ್ದಿಷ್ಟವಾದ ನನ್ನ ಪುಸ್ತಕದ ೪೪-೪೫ನೇ ಪುಟಗಳನ್ನು ನೋಡಿ) ಪುಷ್ಯ ಬಹುಳ ಸಪ್ತಮಿಯು ಕ್ರಿ.ಶ. ೧೧೯೫ ನೇ ಡಿಸೆಂಬರ್ ೨೫ ನೇ ತಾರೀಖು ಸೋಮವಾರದಂದು ಲಂಕೋದಯಾತ್ಪರ ೧೨ ಘ. ೩೭ ವಿ. ವರೆಗೆ ವ್ಯಾಪಿಸಿಕೊಂಡಿತ್ತು. (ನಿರಯನ) ಮಕರ ಸಂಕ್ರಾಂತಿಯು ಇದೇ ಸೋಮವಾರದಂದು ಸೂರ್ಯೋದಯಾತ್ಪರ ೫೧ ಘ. ೮ ವಿ. ಗೆ ಆಯಿತು. ಆದುದರಿಂದ ಮೇಲಿನ ಶಾಸನದಲ್ಲಿ ನಿರ್ದಿಷ್ಟವಾದ ಸೋಮವಾರವು ಈ ೧೧೯೫ ನೇ ಡಿಸೆಂಬರ್ ೨೫ ನೇ ತಾರೀಖು ಸೋಮವಾರವೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

† ಈ ಬಿರುದನ್ನು ಜನ್ನನು ಯಶೋಧರಚರಿತದ ಆಶ್ವಾಸಾಂತ್ಯದಲ್ಲಿ ಹೇಳದೆ ಅನಂತನಾಥಪುರಾಣದ ಆಶ್ವಾಸಾಂತ್ಯದಲ್ಲಿ ಹೇಳಿರುವುದರಿಂದ ಮೊದಲು ಹೇಳಿದ ಕಾವ್ಯವನ್ನು ಬರೆದನಂತರ ಈ ಬಿರುದು ಇವನಿಗೆ ಕೊಡಲ್ಪಟ್ಟಿತೆಂಬುದು ಸ್ಪಷ್ಟವಾಗುವುದು.

ಗುಣವರ್ಮನು ಪುಷ್ಪದಂತಪುರಾಣದಲ್ಲಿ ಜನ್ನನನ್ನು ಸ್ತೋತ್ರಮಾಡಿದ ಕಾಲಕ್ಕಿಂತ ಮುಂಚೆಯೇ ಈ ಕವಿಯು ಯಶೋಧರಚರಿತವೇ ಮೊದಲಾದ ಕಾವ್ಯಗಳನ್ನು ಬರೆದಿದ್ದು ಪ್ರಸಿದ್ಧಿಯನ್ನು ಪಡೆದಿದ್ದನೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಪುಷ್ಪದಂತಪುರಾಣವು ಕ್ರಿ.ಶ. ೧೨೧೯ ರಿಂದ ಈಚೆಗೂ ೧೨೧೮ ಅಥವಾ ೧೨೨೨ ಕ್ಕಿಂತ ಹಿಂದೆಯೂ ಬರೆಯಲ್ಪಟ್ಟಿರಬೇಕು. ಎಂದರೆ, ಕ್ರಿ.ಶ. ಸುಮಾರು ೧೨೧೭ ರಲ್ಲಿ ಅವನು ಅದನ್ನು ಬರೆದನೆಂದು ನಾವು ತಿಳಿದುಕೊಳ್ಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವೇನೂ ಇರಲಾರದು. ಆ ಗ್ರಂಥವನ್ನು ಗುಣವರ್ಮನು ಕ್ರಿ. ಶ. ಸುಮಾರು ೧೨೩೫ ರಲ್ಲಿ ಬರೆದನೆಂಬ ಕವಿಚರಿತಕಾರರ ಅಭಿಪ್ರಾಯವಂತೂ ಅಸಂಭವವಾಗಿರುವಂತೆ ತೋರುವುದು. ಈ ಕ್ರಿ. ಶ. ೧೨೩೫ ಕ್ಕಿಂತ ಐದುವರ್ಷಗಳ ಹಿಂದೆಯೇ ಎಂದರೆ, ಸುಮಾರು ೧೨೩೦ ರಲ್ಲಿಯೇ ದೇವಗಿರಿಯಲ್ಲಿ ರಾಜ್ಯವನ್ನಾಳುತ್ತಿದ್ದ ಪ್ರತಾಪಚಕ್ರವರ್ತಿ ಸಿಂಘಣನ ದಂಡನಾಯಕನಾದ ವೀಚಣನು ರಟ್ಟರನ್ನು ಸೋಲಿಸಿ ಅವರ ರಾಜ್ಯವನ್ನು ಆಕ್ರಮಿಸಿಕೊಂಡಿದ್ದನೆಂದು ಹರಳಹಳ್ಳಿಯಲ್ಲಿನ ಒಂದು ಶಾಸನದಿಂದ ತಿಳಿಯುವುದರಿಂದ (ಡಾ|| ಫ್ಲೀಟ್‌ರವರ ಗ್ರಂಥದ ೫೫೮ ನೇ ಪುಟವನ್ನು ನೋಡಿ) ಕಾರ್ತವೀರ್ಯನ ಮಗನಾದ ಎರಡನೆಯ ಲಕ್ಷ್ಮೀದೇವನೂ ಕೂಡ ಆಗ ರಾಜ್ಯಭಾರಮಾಡುತ್ತಿರಲಿಲ್ಲವೆಂದು ಹೇಳಬೇಕಾಗಿರುವುದು. ಹೀಗಿರುವಲ್ಲಿ ಕ್ರಿ. ಶ. ೧೨೩೫ ರಲ್ಲಿ ರಟ್ಟರಾಜನಾದ ನಾಲ್ಕನೆಯ ಕಾರ್ತವೀರ್ಯನು ಆಳುತ್ತಿದ್ದನೆಂಬುದೂ, ಅವನ ಆಸ್ಥಾನ ಕವಿಯಾದ ಗುಣವರ್ಮನು ಪುಷ್ಪದಂತಪುರಾಣವನ್ನು ಆ ವರ್ಷದಲ್ಲಿ ಬರೆದನೆಂಬುದೂ ಬಹಳ ಅಸಂಭವವೆಂದೇ ನಮಗೆ ತೋರುವುದು.

* * *

ಕವಿಚರಿತೆ I. ೧೩೭ ರಲ್ಲಿ—

"ಶಾಂತಿವರ್ಮ. ಸು. 1160—ಈ ಕವಿಯನ್ನು ರುದ್ರಭಟ್ಟನು (ಸು. 1180) "ಶಾಂತಿವರ್ಮನ ನಯಂ" ಎಂದು ಹೊಗಳುವುದರಿಂದ ಈತನು ರುದ್ರಭಟ್ಟನಿಗೆ ಹಿಂದೆ ಇದ್ದವನೆಂಬುದು ವ್ಯಕ್ತವಾಗುತ್ತದೆ. ಈತನು ಆವ ಗ್ರಂಥಗಳನ್ನು ಬರೆದಿದ್ದಾನೆಯೋ ತಿಳಿಯದು. ನಂಜುಂಡನು (16 ನೆಯ ಶತಮಾನ) ತನ್ನ ಕುಮಾರರಾಮ ಕಥೆಯಲ್ಲಿ ಈತನನ್ನು ಇತರ ಪೂರ್ವಕವಿಗಳೊಡನೆ ಸೇರಿಸಿ ಈ ಪದ್ಯದಲ್ಲಿ ಸ್ತುತಿಸಿದ್ದಾನೆ :—

ಗಜಗನ ಗುಣವರ್ಮನ ನಾಗಚಂದ್ರನ | ಸುಜನೋತ್ತಂಸನಸಗನ ||
ಸುಜನರನ್ನನ ಶಾಂತಿವರ್ಮನ ಪದಸರ | ಸಿಜಗಳಿಗೊಲಿದೆಱಗುವೆನು ||

ಪುಷ್ಪದಂತಪುರಾಣವನ್ನು ಬರೆದ ಎರಡನೆಯ ಗುಣವರ್ಮನು (ಸು. 1235) ತನ್ನ ಪೋಷಕನಾದ ಒಬ್ಬ "ನಾಳ್ಪ್ರಭು" ಶಾಂತಿವರ್ಮನನ್ನು ಹೊಗಳುತ್ತಾನೆ. ರುದ್ರಭಟ್ಟನು

ಹೇಳುವ ಶಾಂತಿವರ್ಮನಿಗೂ ಈ ಶಾಂತಿವರ್ಮನಿಗೂ ಆವ ಸಂಬಂಧವೂ ಇಲ್ಲ. ಈ ಕವಿಯನ್ನು ರುದ್ರಭಟ್ಟನು ಸ್ತುತಿಸುವುದರಿಂದ ಈತನು ಆವನಿಗೆ ಹಿಂದೆ—ಎಂದರೆ ಸುಮಾರು 1160 ರಲ್ಲಿದ್ದಿರಬಹುದು."

ಎಂದು ಕವಿಚರಿತಕಾರರು ಒಬ್ಬ ಶಾಂತಿವರ್ಮಕವಿಯ ಪ್ರಸ್ತಾವವನ್ನು ಮಾಡಿ, ರುದ್ರಭಟ್ಟನಿಂದ ಸ್ತುತಿಸಲ್ಪಟ್ಟಿರುವ ಈ ಶಾಂತಿವರ್ಮಕವಿಗೂ, (ಎರಡನೆಯ) ಗುಣವರ್ಮನಿಂದ ಕೀರ್ತಿತನಾಗಿರುವ 'ನಾಳ್ಪ್ರಭು' ಶಾಂತಿವರ್ಮನಿಗೂ ಯಾವ ಸಂಬಂಧವೂ ಇಲ್ಲವೆಂದೂ, ಈ ಶಾಂತಿವರ್ಮಕವಿಯು ಸುಮಾರು ೧೧೬೦ ರಲ್ಲಿ ಇದ್ದಿರಬಹುದೆಂದೂ ಹೇಳಿರುವರು.

ರುದ್ರಭಟ್ಟನು ಜಗನ್ನಾಥವಿಜಯವನ್ನು ಕ್ರಿ.ಶ. ೧೨೧೭ (ನೇ ಸೆಪ್ಟೆಂಬರ್)-೧೨೨೦ ರಲ್ಲಿ ಬರೆದನೆಂದು ನಾವು ಮೇಲೆಯೇ ವ್ಯಕ್ತಪಡಿಸಿರುವೆವು. ಈ ಗ್ರಂಥದಲ್ಲಿ ಸ್ತುತನಾಗಿರುವ ಶಾಂತಿವರ್ಮಕವಿಯು ಕವಿಚರಿತಕಾರರು ಹೇಳುವಂತೆ ಕ್ರಿ.ಶ. ೧೧೬೦ ರಲ್ಲಿ ಇದ್ದರೂ ಇದ್ದಿರಬಹುದು ; ೧೧೦೦ ಅಥವಾ ೧೨೧೦ ರಲ್ಲಿ ಇದ್ದರೂ ಇದ್ದಿರಬಹುದು. ೧೨೧೭ ಕ್ಕೆ ಹಿಂದೆಯೇ ಅವನು ಇದ್ದಿರಬೇಕೆಂಬೊಂದಂಶವು ಆ ಕವಿಯ ವಿಷಯವಾಗಿ ನಮಗೆ ತಿಳಿದಿರುವುದೇ ಹೊರತು ಅವನು ೧೧೬೦ ರಲ್ಲಿ ೧೧೦೦ ರಲ್ಲಿ ಅಥವಾ ೧೨೧೦ ರಲ್ಲಿ ಇದ್ದನೆಂದಾಗಲೀ ಇರಲಿಲ್ಲವೆಂದಾಗಲೀ ನಿರ್ಧರಿಸುವುದಕ್ಕೆ ನಮಗೆ ತಿಳಿದಂತೆ ಯಾವ ಆಧಾರವೂ ಇಲ್ಲ.

ಪುಷ್ಪದಂತಪುರಾಣದಲ್ಲಿ ಗುಣವರ್ಮನು ತನ್ನ ಪೋಷಕನಾದ ನಾಳ್ಪ್ರಭು ಶಾಂತಿವರ್ಮನನ್ನು

ಕ್ಷಿತಿಯೊಳ್ ಮುನ್ನಬ್ಜನೇತ್ರಂ ಮನೆಯಳಿಯನೆನಲ್ ಕ್ಷೀರವಾರಾಶಿಯಿಂ ವಿ |
ಶ್ರುತಲಕ್ಷ್ಮೀದೇವಿಯಂ ಕೌಸ್ತುಭಮಣಿಸಹಿತಂ ಕೊಂಡನೆಂತಂತೆ ತನ್ನಂ |
ಸತತಂ ಕೂರ್ತೀತ್ತುಕೊಂಡಂ ಗುಣನಿಧಿ ಗುಣವರ್ಮಂಗೆ ಕೀರ್ತ್ಯನ್ವಿತಂ ಸತ್ |
ಕೃತಿಲಕ್ಷ್ಮೀಕಾಂತೆಯಂ ರಂಜಿತವಿಬುಧಜನಸ್ವಾಂತೆಯಂ ಶಾಂತಿವರ್ಮಂ ||

ಎಂದೂ,

ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ |
ಕ್ಷರಜನಕಂ ಜಗಜ್ಜನಕಮೊಲ್ದುದನಿತ್ತಭಿರಕ್ಷಿಪಲ್ತ್ರಿಯಿಂ ||
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತಸಾ |
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ ||

ಎಂದೂ ಹೊಗಳಿರುವುದನ್ನು ನೋಡಿದರೆ, ಈ ಶಾಂತಿವರ್ಮನೂ ಒಂದು ವೇಳೆ ಕವಿಯಾಗಿ ಇದ್ದರೂ ಇದ್ದಿರಬಹುದೆಂದು ನಾವು ಹೇಳಬಹುದಾಗಿರುವುದು. ಇವನು ಕ್ರಿ.ಶ. ೧೨೧೭ ಕ್ಕಿಂತ ಹಿಂದೆಯೇ ಇದ್ದುದರಿಂದ ರುದ್ರಭಟ್ಟನು ಕೀರ್ತಿಸಿರುವ

ಶಾಂತಿವರ್ಮನು ಈ ನಾಲ್ಪ್ರಭು ಶಾಂತಿವರ್ಮನೇ ಆಗಿದ್ದರೂ ಆಗಿರಬಹುದು; ಅಥವಾ ಏತದ್ಭಿನ್ನನಾದ ಶಾಂತಿವರ್ಮನಾಗಿದ್ದರೂ ಆಗಿರಬಹುದು. ಇವನೇ ಆಗಿದ್ದನು, ಅಥವಾ ಆಗಿರಲಿಲ್ಲವೆಂದು ಹೇಳುವುದಕ್ಕಂತೂ ನಮಗೆ ಯಾವ ಆಧಾರವೂ ಇಲ್ಲ.

---

೧೪. ಸುಮನೋಬಾಣ.

ಈ ಕವಿಯ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿರುವರು:—

"ಈಕವಿ ಬರೆದಿರುವ ಗ್ರಂಥಗಳಾವುವೂ ದೊರೆತಿಲ್ಲ. ಜನ್ನನು ಅನಂತನಾಥ ಪುರಾಣದಲ್ಲಿ ಜೈನ ಪುರಾಣಗಳನ್ನು ಬರೆದ ಕವಿಗಳ ಗೋಷ್ಠಿಯಲ್ಲಿ "ಪುಷ್ಪಬಾಣ" ಎಂದು ಈತನ ಹೆಸರನ್ನೂ ಸೇರಿಸಿರುವುದರಿಂದ ಈತನೂ ಆವುದೋ ಒಂದು ಜೈನ ಪುರಾಣವನ್ನು ಬರೆದಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ.

ಈತನು '(ಕವಿ) ಭಾಳಲೋಚನ' ಎಂಬ ಬಿರುದುಳ್ಳ ಜನ್ನನ (1209) ತಂದೆಯೆಂಬುದು ಆತನ ಯಶೋಧರಚರಿತ್ರೆಯಲ್ಲಿಯ—"ಭಾಳಲೋಚನಂ ಕವಿಸುಮನೋಬಾಣನ ಮಗನೆಂದ ಖಿಳ ಕ್ಷೋಣಿಗೆ ಪೆಸರಾಯ್ತು........" ಎಂಬ ಪದ್ಯಭಾಗದಿಂದ ತಿಳಿಯುತ್ತದೆ. ಅನಂತನಾಥ ಪುರಾಣದಲ್ಲಿ ಜನ್ನನು "ಶಂಕರಪುತ್ರಂ ಕವಿ ಕಮ್ಮೆವಂಶನಧಿಕಜ್ಞಂ ಕಾಶ್ಯಪಂ" ಎಂದೂ, "ಶಂಕರ ಶುದ್ಧಾಂತಾಂಗನ ಗಂಗೆಗೇನುದಯಂಗೆಯ್ದಿದನೊ ಕಾಶ್ಯಪೋದ್ಭವಕರಂ ಸಾಹಿತ್ಯರತ್ನಾಕರಂ" ಎಂದೂ ಹೇಳುವುದರಿಂದ ಈ ಕವಿಯ ನಿಜವಾದ ಹೆಸರು ಶಂಕರ ಎಂದು ತಿಳಿಯಬರುತ್ತದೆ. ಈತನು ಕಮ್ಮೆ ವಂಶದವನೆಂದೂ ಕಾಶ್ಯಪಗೋತ್ರದವನೆಂದೂ, ಈತನ ಹೆಂಡತಿ ಗಂಗೆಯೆಂದೂ ಮೇಲೆ ಬರೆದಿರುವ ಪದ್ಯಭಾಗಗಳಿಂದ ವ್ಯಕ್ತವಾಗುತ್ತದೆ. ಮಲ್ಲಿಕಾರ್ಜುನನು (ಸು. 1245) ಸೂಕ್ತಿಸುಧಾರ್ಣವದಲ್ಲಿ ತಾನು "ಯಾದವಕಟಕಾಚಾರ್ಯ ಕವಿಸುಮನೋಬಾಣನ ಜಾಮಾತೃ" ಎಂಬುದರಿಂದ ಈತನು ಮಲ್ಲಿಕಾರ್ಜುನನ ಮಾವನೆಂದೂ, ಈ ಮಲ್ಲಿಕಾರ್ಜುನನ ಮಗನಾದ ಕೇಶಿರಾಜನು (ಸು. 1260) ಶಬ್ದಮಣಿದರ್ಪಣದಲ್ಲಿ 'ಕವಿಸುಮನೋಬಾಣನ ಯಾದವಕಟಕಾಚಾರ್ಯನೆಸೆವ ದೌಹಿತ್ರನೆನಾಂ' ಎಂಬುದರಿಂದ ಕೇಶಿರಾಜನ ಮಾತಾಮಹನೆಂದೂ ತಿಳಿಯುತ್ತದೆ. ಈತನು "ಯಾದವಕಟಕಾಚಾರ್ಯನು" ಎಂದು ಮಲ್ಲಿಕಾರ್ಜುನನೂ, ಕೇಶಿರಾಜನೂ ಹೇಳುವ ಅಂಶವನ್ನೇ ಜನ್ನನೂ ಈ ಪದ್ಯದಲ್ಲಿ ವಿವರಿಸಿದ್ದಾನೆ:—

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ |
ರ್ಮ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ||
ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂ |
ಕ್ತಿ ನವೀನೋಜ್ಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ||

ಇದರಿಂದ ಜನ್ನನ ಉಪಾಧ್ಯಾಯನಾದ ಎರಡನೆಯ ನಾಗವರ್ಮನು ಚಾಳುಕ್ಯ ಜಗದೇಕ ಮಲ್ಲನಲ್ಲಿಯೂ, ಜನ್ನನ ತಂದೆಯಾದ ಸುಮನೋಬಾಣನು ಬಲ್ಲಾಳ ನರಸಿಂಹನಲ್ಲಿಯೂ, ಕಟಕೋಪಾಧ್ಯಾಯರಾಗಿದ್ದಂತೆ ವ್ಯಕ್ತವಾಗುತ್ತದೆ. ಈ ಬಲ್ಲಾಳ ನರಸಿಂಹನು 1136 ರಿಂದ 1171 ರ ವರೆಗೆ ಆಳಿದುದಾಗಿ ತಿಳಿಯಬರುವುದರಿಂದ ಈ ಕವಿ ಸುಮಾರು 1150 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ. ಮಲ್ಲಿಕಾರ್ಜುನ, ಜನ್ನ, ಕೇಶಿರಾಜ ಮೊದಲಾದವರು ಈತನನ್ನು ಸ್ತುತಿಸಿರುವ ರೀತಿಯನ್ನು ನೋಡಿದರೆ ಈತನು ದೊಡ್ಡಕವಿಯಾಗಿ ಇದ್ದಿರಬೇಕೆಂದು ತೋರುತ್ತದೆ. ಈ ಕವಿಯ ನಿಜವಾದ ಹೆಸರು ಶಂಕರ ಎಂದು ಜನ್ನನು ಹೇಳುವುದರಿಂದ ಸುಮನೋಬಾಣ ಎಂಬುದು ಇವನ ಬಿರುದಾಗಿರಬಹುದು. "ನವೀನೋಜ್ಜ್ವಳಬಾಣನಪ್ಪ" ಎಂಬುದರಿಂದ ಈತನಿಗೆ ಅಭಿನವಬಾಣ ಎಂಬ ಬಿರುದು ಇದ್ದಂತೆ ಊಹಿಸಬಹುದಾಗಿದೆ.

ಈ ಕವಿಗೆ ಶಂಕರ ಎಂದೂ, ಈತನ ಹೆಂಡತಿಗೆ ಗಂಗೆ ಎಂದೂ, ಅಳಿಯನಿಗೆ ಮಲ್ಲಿಕಾರ್ಜುನ ಎಂದೂ ಹೆಸರುಗಳಿರುವುದರಿಂದ ಇವರು ಸ್ಮಾರ್ತರಾಗಿದ್ದು ಬಳಿಕ ಜೈನಮತವನ್ನು ಅವಲಂಬಿಸಿರಬಹುದು." (ಕವಿಚರಿತೆ I ೧೩೫-೧೩೬)

ಇದೆಲ್ಲವೂ ಭ್ರಮಮೂಲವಾದುದು. ಸೂಕ್ತಿಸುಧಾರ್ಣವವನ್ನು ಮಲ್ಲಿಕಾರ್ಜುನನು ಕ್ರಿ. ಶ. ಸುಮಾರು ೧೨೪೫ ರಲ್ಲಿ ಬರೆದನೆಂದು ಇಲ್ಲಿ ಮೇಲೆ ಕವಿಚರಿತಕಾರರು ಹೇಳಿರುವರಷ್ಟೆ. ಈ ಸೂಕ್ತಿಸುಧಾರ್ಣವವು ೧೨೪೫ ಕ್ಕಿಂತ ಸ್ವಲ್ಪವರ್ಷಗಳೀಚೆಗೆ, ಎಂದರೆ ಸುಮಾರು ೧೨೬೩ ರಲ್ಲಿ ಬರೆಯಲ್ಪಟ್ಟಿರಬಹುದೆಂಬುದನ್ನು ನಾವು ಮುಂದೆ ನಿರೂಪಿಸುವೆವು. ಅದು ಹೇಗಾದರೂ ಇರಲಿ; ಕವಿಚರಿತಕಾರರು ಹೇಳುವಂತೆಯೇ ಈ ಗ್ರಂಥವು ೧೨೪೫ ರಲ್ಲಿ ಬರೆಯಲ್ಪಟ್ಟಿದ್ದಾಗ್ಯೂ ಕೂಡ ಈ ವರ್ಷಕ್ಕೂ ಕವಿಚರಿತಕಾರರು ಸುಮನೋಬಾಣನಿದ್ದನೆಂದು ಹೇಳುವ ಕ್ರಿ. ಶ. ೧೧೫೦ ನೆಯ ವರ್ಷಕ್ಕೂ ನಡುವೆ ೯೫ ವರ್ಷಗಳ ಅಂತರವಿರುವುದು. ಎಂದರೆ ಸುಮನೋಬಾಣನು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲಕ್ಕೂ ಅವನ ಅಳಿಯನಾದ ಮಲ್ಲಿಕಾರ್ಜುನನು ಉಚ್ಛ್ರಾಯಸ್ಥಿತಿಯಲ್ಲಿದ್ದಕಾಲಕ್ಕೂ ನಡುವೆ ೯೫ ವರ್ಷಗಳ ಅಂತರವಿರುವುದೆಂದು ಕವಿಚರಿತಕಾರರು ಹೇಳಿದಂತಾಯಿತು. ಇದು ಪ್ರಾಯಶಃ ಅಸಂಭವವಾದುದರಿಂದ ನಮಗೆ ಇದನ್ನು ನಂಬುವುದಕ್ಕಾಗುವುದಿಲ್ಲ.

ಅಲ್ಲದೆ ಕವಿಚರಿತಕಾರರು ಮೇಳೆ ಹೇಳಿರುವ—

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ |
ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ||
ದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರ್...

ಎಂಬ ಪದ್ಯವು ಜನ್ನನ ಅನಂತನಾಥಪುರಾಣದಿಂದ ಉದ್ಧೃತವಾಗಿರುವುದು. ಈ ಅನಂತನಾಥಪುರಾಣವು 'ಶಕಸಂವತ್ಸರಮಂದು ಸಾಸಿರದನೂರ್ರೈವತ್ತೆರಡಪ್ಪಿನಂ | ವಿಕೃತಾಬ್ದಂ ಬರೆ ಚೈತ್ರ ಶುದ್ಧ ದಶಮೀ ದೇವೇಜ್ಯನೊಳ್ ಪುಷ್ಯತಾ || ರಕದೊಳ್ ಮಾಡಿಸಿದಂ ಪ್ರತಿಷ್ಠೆಯನನಂತ ಶ್ರೀ ಪುರಾಣಕ್ಕೆ ಕ | ರ್ಮ್ಮಕುಲಾಂಭೋರುಹಭಾನು ಜನ್ನಮರಸಂ ಸಾಹಿತ್ಯರತ್ನಾಕರಂ ||' ಎಂಬ ಗ್ರಂಥಾಂತ್ಯದಲ್ಲಿನ ಪದ್ಯದಲ್ಲಿ ಹೇಳಿರುವಂತೆ ಶಕ ೧೧೫೨ ನೆಯ ವಿಕೃತಸಂವತ್ಸರದಲ್ಲಿ, ಎಂದರೆ, ಕ್ರಿ. ಶ. ೧೨೨೮ ರಲ್ಲಿ (ಮಾರ್ಚಿ ೧೬ ನೇ ತಾರೀಖು ಬೃಹಸ್ಪತಿವಾರದಂದು) * ಹೊಯ್ಸಳ ಚಕ್ರವರ್ತಿ

* ದಾಕ್ಷಿಣಾತ್ಯಸಂಪ್ರದಾಯಕ್ಕನುಸಾರವಾಗಿ 'ವಿಕೃತ' ಎಂದು ವ್ಯವಹರಿಸಲ್ಪಡುವ ಬಾರ್ಹಸ್ಪತ್ಯಸಂವತ್ಸರವು ಕ್ರಿ. ಶ. ೧೨೩೦ ನೇ ವರ್ಷದ ಮಾರ್ಚಿ ತಿಂಗಳಿನಲ್ಲಿ ಪ್ರಾರಂಭವಾಗಿ ಕ್ರಿ. ಶ. ೧೨೩೧ ನೇ ಮಾರ್ಚಿ ತಿಂಗಳಿನಲ್ಲಿ ಚೈತ್ರ ಶುದ್ಧ ಪಾಡ್ಯದ ಅಥವಾ ಮೇಷ ಸಂಕ್ರಾಂತಿಯ ದಿವಸದ

ಎರಡನೆಯ ನರಸಿಂಹನು ರಾಜ್ಯವನ್ನಾಳುತ್ತಿದ್ದಾಗ ಪರಿಸಮಾಪ್ತವಾಯಿತು. ಗ್ರಂಥಾವತಾರದಲ್ಲಿಯೂ

ನರಸಿಂಹನ ಚೋಳಕುಲೋ | ದ್ಧರಣನ ಸರ್ವಜ್ಞಭೂಪನೋಲಗದೊಳ್ ನಿಂ ||
ದಿರೆ ದಂಡಾಧೀಶಂ ಕು | ಳ್ಳಿರೆ ಮಂತ್ರಿ ತೊಡಂಕೆ ಕವಿಜನಾರ್ದನದೇವಂ ||

ಎಂದು 'ಚೋಳಕುಲೋದ್ಧರಣ' ಎಂದರೆ 'ಚೋಳರಾಜರಾಜ್ಯ ಪ್ರತಿಷ್ಠಾಚಾರ್ಯ' ನಾದ † ಎರಡನೆಯ ನರಸಿಂಹನ ಹೆಸರನ್ನು ಪ್ರಸ್ತಾವಮಾಡಿರುವುದರಿಂದ ಈ ಕಾವ್ಯವನ್ನು ಬರೆಯುವುದಕ್ಕೆ ಪ್ರಾರಂಭಿಸಿದ ಸಮಯದಲ್ಲಿಯೂ ಈ ಎರಡನೆಯ ನರಸಿಂಹನೇ ಆಳುತ್ತಿದ್ದನೆಂಬುದು ಸ್ಪಷ್ಟವಾಗಿರುವುದು. ಆದುದರಿಂದ ಈ ಅನಂತ ನಾಥಪುರಾಣದ ಮೇಲೆ ಹೇಳಿದ ಪದ್ಯದಲ್ಲಿರುವ 'ಇಂದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರ್' ಎಂಬ ಪದ್ಯಭಾಗದಲ್ಲಿ ಕೀರ್ತಿತನಾಗಿರುವ ನೃಸಿಂಹ ಕ್ಷಿತಿಪಾಲನು ಈ ಎರಡನೆಯ ನರಸಿಂಹನೇಯೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ಪದ್ಯಕ್ಕೆ ಕವಿಚರಿತಕಾರರು ತಪ್ಪಾಗಿ ಅರ್ಥಮಾಡಿರುವಂತೆ ಕಾಣಿಸುವುದು. 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮನಿದಾನೀಂತನ ಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂದು' ಎಂಬವರೆಗೆ ಒಂದು

ವರೆಗೆ ಪ್ರಚಾರದಲ್ಲಿತ್ತು. ಈ ಸಂವತ್ಸರದಲ್ಲಾದರೆ ಚೈತ್ರ ಶುದ್ಧ ದಶಮಿಯಾಗಲಿ ಪುಷ್ಯನಕ್ಷತ್ರವಾಗಲಿ ಬೃಹಸ್ಪತಿವಾರದೊಡನೆ ಸಂಬದ್ಧವಾಗಿರಲಿಲ್ಲ.

ಔತ್ತರಸಂಪ್ರದಾಯಕ್ಕನುಸಾರವಾಗಿ ವಿಕೃತ ಎಂದು ವ್ಯವಹರಿಸಲ್ಪಡುವ ಸಂವತ್ಸರವು ಕ್ರಿ. ಶ. ೧೨೨೬-೨೭ ರಲ್ಲಿ ಪ್ರಚಾರದಲ್ಲಿತ್ತು. ಈ ಸಂವತ್ಸರದಲ್ಲಿ ಕೂಡ ಚೈತ್ರ ಶುದ್ಧ ದಶಮಿಯಾಗಲಿ ಪುಷ್ಯನಕ್ಷತ್ರವಾಗಲಿ ಬೃಹಸ್ಪತಿವಾರದೊಡನೆ ಸಂಬದ್ಧವಾಗಿರಲಿಲ್ಲ. ಈ ಔತ್ತರಸಂಪ್ರದಾಯಾನುಸಾರವಾದ ವಿಕೃತಸಂವತ್ಸರದ ಮುಂದಿನ ವರ್ಷದಲ್ಲಾದರೆ ('ಮುಂದಿನ' ವರ್ಷಗಳ ವಿಚಾರವನ್ನು ಕುರಿತು ಮೇಲೆ ನಿರ್ದಿಷ್ಟವಾದ ನನ್ನ ಪುಸ್ತಕದ ೨೭-೩೧ ನೇ ಪುಟಗಳನ್ನು ನೋಡಿರಿ) ಚೈತ್ರ ಶುದ್ಧ ದಶಮಿಯು ಕ್ರಿ. ಶ. ೧೨೨೮ ನೇ ವರ್ಷದ ಮಾರ್ಚಿ ೧೬ ನೇ ಬೃಹಸ್ಪತಿವಾರದಂದು ಲಂಕೋದಯಾತ್ಪರ ೧೨ ಘಳಿಗೆ ೬ ವಿ. ಗೆ ಪ್ರಾರಂಭವಾಗಿ ಮುಂದೆ ಆ ದಿವಸವೆಲ್ಲಾ ವ್ಯಾಪಿಸಿತ್ತು. ಪುಷ್ಯನಕ್ಷತ್ರವೂ ಕೂಡ ಆ ಬೃಹಸ್ಪತಿವಾರದಂದು ೪೪ ಘಳಿಗೆ ೩೮ ವಿ. ವರೆಗೆ ವ್ಯಾಪಿಸಿತ್ತು. ಆದುದರಿಂದ 'ಶಕಸಂವತ್ಸರಮುಂದು' ಎಂಬ ಮೇಲಿನ ಪದ್ಯದಲ್ಲಿ ನಿರ್ದಿಷ್ಟವಾದ ದಿವಸವು ಈ ಬೃಹಸ್ಪತಿವಾರವೇ ಎಂಬುದರಲ್ಲಿ ಪ್ರಾಯಃ ಯಾವ ಸಂದೇಹವೂ ಇಲ್ಲ.

† 'ಚೋಳಕುಲೋದ್ಧರಣ' ಅಥವಾ 'ಚೋಳರಾಜ್ಯಪ್ರತಿಷ್ಠಾಚಾರ್ಯ' ಎಂಬ ಬಿರುದು ಹೊಯ್ಸಳರಾಜನಾದ ಒಂದನೆಯ ನರಸಿಂಹನಿಗೆ ಇರಲಿಲ್ಲ. ಈ ಬಿರುದು ಮೊದಲು ವೀರಬಲ್ಲಾಳನಿಂದ ಕ್ರಿ. ಶ. ೧೨೧೮ ರಲ್ಲಿ ಧರಿಸಲ್ಪಟ್ಟಿತೆಂಬ ಅಂಶವನ್ನು ನಾವು ಮೇಲೆ (ಪುಟ ೧೦೮-೧೧೩) ವ್ಯಕ್ತಪಡಿಸಿರುವೆವು.

ವಾಕ್ಯವೆಂದೂ, 'ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾರೆಂಬ ಸೂಕ್ತಿನವೀನೋಜ್ವಲಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್' ಎಂಬುದು ಮತ್ತೊಂದು ವಾಕ್ಯವೆಂದೂ ಭಾವಿಸಿ, * ಮೊದಲನೆಯ ವಾಕ್ಯಕ್ಕೆ 'ಜಗದೇಕನೃಪನಲ್ಲಿ ಕಟಕೋಪಾಧ್ಯಾಯನಾಗಿದ್ದು ನಿಜವಾಗಿಯೂ ಇದಾನೀಂತನ ಶರ್ವವರ್ಮನಾಗಿರುವ ಪ್ರಸಿದ್ಧನಾದ ನಾಗವರ್ಮನು ಈಗ ಜನ್ನನಿಗೆ ಉಪಾಧ್ಯಾಯನಾಗಿರುವನು' ಎಂದೂ, ದ್ವಿತೀಯವಾಕ್ಯಕ್ಕೆ 'ನವೀನೋಜ್ವಲಬಾಣನಾದ ಕವಿಶ್ರೇಷ್ಠನಾದ ಸುಮನೋಬಾಣನು (ಹೊಯ್ಸಲರಾಜನಾದ ಒಂದನೆಯ) ನರಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯನಾಗಿದ್ದನು' ಎಂದೂ ಕವಿಚರಿತಕಾರರು ಅರ್ಥಮಾಡಿರುವಂತೆ ತೋರುವುದು.

---

* ಈ ಪದ್ಯವನ್ನು ಹೀಗೆ ಎರಡು ವಾಕ್ಯಗಳಾಗಿ ವಿಭಾಗಮಾಡಬೇಕೆಂದು ಕವಿಚರಿತಕಾರರು ಎಲ್ಲಿಯೂ ಹೇಳಿಲ್ಲ. ಆದಾಗ್ಯೂ ಕ್ರಿ. ಶ. ೧೧೪೧ ರಿಂದ ೧೧೭೩ ರವರೆಗೆ ಆಳಿದ (ಒಂದನೆಯ) ಹೊಯ್ಸಲನರಸಿಂಹನಲ್ಲಿ ಸುಮನೋಬಾಣನು ಕಟಕೋಪಾಧ್ಯಾಯನಾಗಿದ್ದನೆಂದೂ ಇವನು ಸುಮಾರು ೧೧೫೦ ರಲ್ಲಿ ಇದ್ದಿರಬಹುದೆಂದೂ (ನಾವು ಮೇಲೆ ನೋಡಿದಂತೆ) ಕವಿಚರಿತಕಾರರು ಹೇಳಿರುವುದರಿಂದ ಈ ಪದ್ಯದಲ್ಲಿರುವ 'ಇಂದು' ಎಂಬ ಪದವನ್ನು ಅವರು 'ನೃಸಿಂಹಕ್ಷಿತಿಪಾಲನಲ್ಲಿ....ಕವಿಶ್ರೇಷ್ಠರೊಳ್' ಎಂಬ ವಾಕ್ಯದೊಡನೆ ಸೇರಿಸಿ ಅರ್ಥಮಾಡಿಲ್ಲವೆಂಬುದು ಸ್ಪಷ್ಟ. ಆದುದರಿಂದ ಈ ಪದವನ್ನು 'ಜನನಾಥಂ ಜಗದೇಕನಲ್ಲಿ....ಜನ್ನಂ ಗುಪಾಧ್ಯಾಯಂ' ಎಂಬ ಮೊದಲನೆಯ ವಾಕ್ಯದೊಡನೆಯೇ ಸೇರಿಸಿ ಅರ್ಥಮಾಡುವುದು ಯುಕ್ತವೆಂದು ಅವರು ಅಭಿಪ್ರಾಯಪಡುವರೆಂದು ನಾವು ಊಹಿಸಿ ಮೇಲೆ ಈ ರೀತಿಯಾಗಿ ಬರೆದಿರುವೆವು.

ಆದರೆ 'ಎರಡನೆಯ' ನಾಗವರ್ಮನ ಚರಿತಾವಸರದಲ್ಲಿ (ಕವಿಚರಿತೆ I. ೧೨೧) ಕವಿಚರಿತಕಾರರು 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾನಾಗವರ್ಮನಿದಾನೀಂತನ ಶರ್ವವರ್ಮನೆಗಡಂ ಜನ್ನಂಗುಪಾಧ್ಯಾಯಂ' ಎಂದು ಇಷ್ಟು ಮಾತ್ರ ವಾಕ್ಯವನ್ನೇ ಉದಾಹರಿಸಿರುವುದನ್ನು ನೋಡಿದರೆ 'ಇಂದು' ಎಂಬ ಈ ಪದವನ್ನು ಅವರು ಈ ವಾಕ್ಯದೊಡನೆಯೂ ಕೂಡ ಸೇರಿಸಿ ಅನ್ವಯ ಮಾಡುವುದಿಲ್ಲವೆಂದು ಊಹಿಸುವುದಕ್ಕೆ ಅವಕಾಶವಿರುವುದು.

ಅದು ಹೇಗಾದರೂ ಇರಲಿ. 'ನೃಸಿಂಹಕ್ಷಿತಿಪಾಲನಲ್ಲಿ....ಕವಿಶ್ರೇಷ್ಠರೊಳ್' ಎಂಬ ವಾಕ್ಯದೊಡನೆಯಂತೂ ಅವರು 'ಇಂದು' ಎಂಬ ಈ ಪದವನ್ನು ಸೇರಿಸಿ ಅನ್ವಯಮಾಡುವುದಿಲ್ಲವೆಂದು ಸ್ಪಷ್ಟವಾದುದರಿಂದ ಈ 'ಇಂದು' ಎಂಬ ಪದವನ್ನು ಅವರು 'ಜನನಾಥಂ....ಜನ್ನಂ ಗುಪಾಧ್ಯಾಯ' ಎಂಬ ಮೊದಲನೆಯ ವಾಕ್ಯದೊಡನೆ ಸೇರಿಸಿ ಅನ್ವಯಮಾಡಿರಬೇಕು ಅಥವಾ ಆ ಪದವನ್ನು ಬಿಟ್ಟುಬಿಟ್ಟೇ ಪದ್ಯಕ್ಕೆ ಅರ್ಥವನ್ನು ಮಾಡಿರಬೇಕು. ಹೀಗೆ ಪದವನ್ನು ಬಿಟ್ಟು ಬಿಟ್ಟು ಪದ್ಯಕ್ಕೆ ಅರ್ಥವನ್ನು ಮಾಡುವುದು ತಪ್ಪೆಂಬುದನ್ನು ನಾವು ಕಂಠತಃ ಹೇಳಬೇಕಾಗಿಲ್ಲ. 'ಜನನಾಥಂ....ಜನ್ನಂಗುಪಾಧ್ಯಾಯಂ' ಎಂಬ ಮೊದಲನೆಯ ವಾಕ್ಯದೊಡನೆ ಸೇರಿಸಿ ಅನ್ವಯಮಾಡುವುದೂ ತಪ್ಪೆಂದೂ ಅದರಿಂದ ಅನರ್ಥಗಳುಂಟಾಗುವವೆಂದೂ ನಾವು ಮೇಲೆ ಬರೆದಿರುವ ಪಂಕ್ತಿಗಳಿಂದ ಸ್ಪಷ್ಟವಾಗುವುದು.

ಈ ಪದ್ಯದಲ್ಲಿರುವ 'ಇಂದು' ಎಂಬ ಪದಕ್ಕೆ 'ಈಗ' ಎಂದರೆ, 'ಅನಂತನಾಥಪುರಾಣವನ್ನು ಬರೆಯುವಾಗ' ಎಂದು ಅರ್ಥವು. ಈ ಅನಂತನಾಥಪುರಾಣವು ಕ್ರಿ. ಶ. ೧೨೩೦ ರಲ್ಲಿ ಪರಿಸಮಾಪ್ತವಾಯಿತು. ಅದರ ಪ್ರಾರಂಭವು ನಾಲ್ಕೈದು ವರ್ಷಗಳು ಹಿಂದೆ ಎಂದರೂ ಕೂಡ ಈ ಪದ್ಯವನ್ನು ಬರೆದಕಾಲವು ಕ್ರಿ. ಶ. ೧೨೨೩ ಆಗುವುದರಿಂದ ಕವಿಚರಿತಕಾರರು ಮಾಡಿರುವ ಅರ್ಥಕ್ಕನುಸಾರವಾಗಿ, ಕ್ರಿ. ಶ. ೧೧೩೯-೧೧೪೯ (೧೧೫೧) ರಲ್ಲಿ ಆಳಿದ ಚಾಲುಕ್ಯಚಕ್ರವರ್ತಿ ಪೆರ್ಮ ಜಗದೇಕಮಲ್ಲನಲ್ಲಿ † ಕಟಕೋಪಾಧ್ಯಾಯನಾಗಿದ್ದ ಇದಾನೀಂತನಶರ್ವವರ್ಮನಾದ ನಾಗವರ್ಮನು ಕ್ರಿ. ಶ. ೧೨೨೩ ರಲ್ಲಿ ಜನ್ನನಿಗೆ ಉಪಾಧ್ಯಾಯನಾಗಿದ್ದನೆಂದು ಹೇಳಿದಹಾಗಾಗುವುದು. ಇದು ಸುತರಾಂ ಅಸಂಭವವಾದುದು. ನಾಗವರ್ಮನು ಕಟಕೋಪಾಧ್ಯಾಯನಾದಾಗ ಅವನಿಗೆ ಮೂವತ್ತು ವರ್ಷಮಾತ್ರ ವಯಸ್ಸೆಂದೂ, ಮೇಲೆ ಹೇಳಿದ ಜಗದೇಕಮಲ್ಲನ ಆಳಿಕೆಯ ಅಂತ್ಯ ವರ್ಷದಲ್ಲಿ ಎಂದರೆ ಕ್ರಿ. ಶ. ೧೧೪೯ (೧೧೫೧) ರಲ್ಲಿ ಅವನು ಕಟಕೋಪಾಧ್ಯಾಯನಾದನೆಂದೂ ನಾವು ಇಟ್ಟುಕೊಂಡರೂ ಕೂಡ ಅನಂತನಾಥಪುರಾಣವನ್ನು ಜನ್ನನು ಪ್ರಾರಂಭಮಾಡಿದ ಸಮಯಕ್ಕೆ ಎಂದರೆ ಕ್ರಿ. ಶ. ೧೨೨೩ ನೆಯ ವರ್ಷಕ್ಕೆ ನಾಗವರ್ಮನಿಗೆ ೧೦೪ (೧೦೨) ವರ್ಷ ವಯಸ್ಸು ಆಗುವುದು. ಇಷ್ಟು ವಯಸ್ಸಿನವರೆಗೆ ಅವನು ಜೀವಿಸಿದ್ದನೆಂದೂ, ಆಕಾಲದಲ್ಲಿ ಜನ್ನನಿಗೆ ಅವನು ಉಪಾಧ್ಯಾಯನಾಗಿದ್ದನೆಂದೂ ಹೇಳುವುದು ಅಸಾಧ್ಯವೆಂದೇ ನಮಗೆ ತೋರುವುದು. ಅಲ್ಲದೆ, ಜನ್ನನಿಗೂ ಕೂಡ ಆ ಕಾಲಕ್ಕೆ ಎಂದರೆ, ಅನಂತನಾಥಪುರಾಣವನ್ನು ಪ್ರಾರಂಭಮಾಡುವಕಾಲಕ್ಕೆ ಸುಮಾರಾಗಿ ವಯಸ್ಸಾಗಿತ್ತು. ಕ್ರಿ. ಶ. ೧೨೨೩ ಕ್ಕಿಂತ ಹಿಂದೆಯೇ ಅವನು ಯಶೋಧರಚರಿತವನ್ನೂ ಪ್ರಾಯಶಃ ಇನ್ನೂ ಒಂದೆರಡು ಗ್ರಂಥಗಳನ್ನೂ ಬರೆದು ವೀರಬಲ್ಲಾಳನಿಂದ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದು ವೀರನರಸಿಂಹನ ಆಳಿಕೆಯಲ್ಲಿ ಮಂತ್ರಿಯೂ ದಂಡಾಧೀಶನೂ ನಾಲ್ಪ್ರಭುವೂ ಆಗಿದ್ದನು. ಉಪಾಧ್ಯಾಯರಿಂದ ಪಾಠವನ್ನು ಕಲಿಯುವ ಕಾಲವನ್ನು ಅವನು ಅತಿಕ್ರಮಿಸಿದ್ದನೆಂಬುದಂತೂ ಸುಸ್ಪಷ್ಟವಾಗಿರುವುದು. ಇಂತಹವನಿಗೆ ಕ್ರಿ. ಶ. ೧೨೨೩ ರಲ್ಲಿ ಒಬ್ಬ ಉಪಾಧ್ಯಾಯನಿದ್ದನೆಂಬುದನ್ನು ನಂಬುವುದೂ ಕೂಡ ಬಹುಕಷ್ಟವಾಗಿರುವುದು.

ದ್ವಿತೀಯ ವಾಕ್ಯದಲ್ಲಿಯೂ ಕೂಡ 'ನೃಸಿಂಹಕ್ಷಿತಿಪಾಲನಲ್ಲಿ' ಎಂಬ ಪದಕ್ಕೆ ಆ ಪದ್ಯವನ್ನು ಬರೆದ ಕಾಲಕ್ಕಿಂತ ಸುಮಾರು ೫೦ ವರ್ಷಗಳ ಹಿಂದೆ ಲೋಕಾಂತರವನ್ನೈದಿದ್ದ 'ಒಂದನೆಯ ನರಸಿಂಹನೃಪಾಲನಲ್ಲಿ' ಎಂದು ಕವಿಚರಿತ

† ಕವಿಚರಿತೆ ೧೨೧ ನೇ ಪುಟವನ್ನು ನೋಡಿ.

ಕಾರರು ಅರ್ಥಮಾಡಿರುವುದು ಸುತರಾಂ ಅಸಮಂಜಸವಾಗಿರುವುದು. ಅಲ್ಲದೆ, ಕವಿಚರಿತಕಾರರು ಮಾಡುವ ಅರ್ಥವನ್ನು ನಾವು ಒಪ್ಪಿಕೊಂಡ ಪಕ್ಷದಲ್ಲಿ ಸುಮನೋಬಾಣನಿಗೂ ತನಗೂ ಇಂತಹ ಸಂಬಂಧವಿತ್ತೆಂಬುದನ್ನು ಈ ಪದ್ಯದಲ್ಲಾಗಲೀ ಇದರ ಹಿಂದಿನ ಅಥವಾ ಮುಂದಿನ ಪದ್ಯಗಳಲ್ಲಾಗಲೀ ಹೇಳದೆ ಯಾವ ಪ್ರಸಕ್ತಿಯೂ ಇಲ್ಲದೆ ಜನ್ನನು ಇಲ್ಲಿ ಕವಿಸುಮನೋಬಾಣನನ್ನು ಸ್ತುತಿಸಿರುವನೆಂದು ನಾವು ಹೇಳಬೇಕಾಗುವುದರಿಂದ ಕವಿಯನ್ನು ಅಪ್ರಕೃತವಸ್ತುವರ್ಣನರೂಪವಾದ ದೋಷಕ್ಕೂ ನಾವು ಗುರಿಮಾಡಿದಂತಾಗುವುದು.

ಆದುದರಿಂದ ಇದನ್ನೆಲ್ಲಾ ಪರ್ಯಾಲೋಚಿಸಿದರೆ ಕವಿಚರಿತಕಾರರು ಮಾಡಿರುವ ಅರ್ಥವು ತಪ್ಪೆಂಬುದು ವ್ಯಕ್ತವಾಗದಿರಲಾರದು.

ವಸ್ತುತಃ 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮ೦' ಎಂಬವರೆಗೆ ಒಂದು ವಾಕ್ಯವೆಂದೂ ಉಳಿದುದೆಲ್ಲಾ ಮತ್ತೊಂದು ವಾಕ್ಯವೆಂದೂ ಕವಿಯ ಆಶಯವೆಂದು ನಮಗೆ ತೋರುವುದು. * ಈ ಪದ್ಯದಲ್ಲಿ ದೃಷ್ಟಾಂತಾಲಂಕಾ

---

* ಈ ಪದ್ಯದಲ್ಲಿ 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮನಿದಾನೀಂತನಶರ್ವವರ್ಮನೆ ಗಡಂ' ಎಂಬವರೆಗೆ ಒಂದು ವಾಕ್ಯವೆಂದೂ ಉಳಿದುದೆಲ್ಲಾ ಒಂದು ವಾಕ್ಯವೆಂದೂ ಕೆಲವರು ಅಭಿಪ್ರಾಯಪಡಬಹುದು. ಎಂದರೆ ಈ ಪದ್ಯದಲ್ಲಿರುವ 'ಆ ನಾಗವರ್ಮನಿದಾನೀಂತನಶರ್ವವರ್ಮನೆ ಗಡಂ' ಎಂಬ ಪದಗಳು ಕವಿಚರಿತಕಾರರು ಹೇಳಿರುವಂತೆ (ಕವಿಚರಿತೆ I, ಪುಟ ೪೫, ೧೨೧, ೨೬೧ ನ್ನು ನೋಡಿ) ನಾಗವರ್ಮನು ಕಾವ್ಯಾವಲೋಕನದಲ್ಲಿ ತನ್ನ ವಿಷಯವಾಗಿ ಹೇಳಿಕೊಂಡಿರುವ 'ಅಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ' ಎಂಬ ಪದಗಳಿಂದ ದ್ಯೋತಿತವಾದ ಅರ್ಥವನ್ನೇ ಬೋಧಿಸುವುವೆಂದೂ, ಆದುದರಿಂದ ಈ ಪದ್ಯದಲ್ಲಿರುವ 'ಇದಾನೀಂತನಶರ್ವವರ್ಮನೆ ಗಡಂ' ಎಂಬ ಪದಗಳು ಸುಮನೋಬಾಣನನ್ನು ಲಕ್ಷೀಕರಿಸಿ ಉಪಯೋಗಿಸಲ್ಪಟ್ಟಿರುವುವೆಂದು ಹೇಳುವುದಕ್ಕಿಂತಲೂ ನಾಗವರ್ಮನನ್ನು ಲಕ್ಷೀಕರಿಸಿ ಉಪಯೋಗಿಸಲ್ಪಟ್ಟಿರುವುವೆಂದು ಹೇಳುವುದೇ ಸಾಧುವಾಗಿರುವುದೆಂದೂ ಕೆಲವರು ಅಭಿಪ್ರಾಯಪಡಬಹುದು.

ಆದರೆ ಹೀಗೆ ಅರ್ಥಮಾಡುವುದರಲ್ಲಿಯೂ ದೋಷಗಳಿರುವುವೆಂದು ನಮಗೆ ತೋರುವುದು. 'ಅಭಿನವಶರ್ವವರ್ಮ' ಎಂದು ಕಾವ್ಯಾವಲೋಕನದಲ್ಲಿ ಹೇಳಿರುವ ಬಿರುದಿಗೆ ಹೊಸಶರ್ವವರ್ಮನೆಂದರ್ಥವು; 'ಇದಾನೀಂತನಶರ್ವವರ್ಮ' ಎಂದು ಪ್ರಕೃತಪದ್ಯದಲ್ಲಿರುವ ಪದಕ್ಕಾದರೆ ಈಗಿನ ಕಾಲದ ಶರ್ವವರ್ಮನೆಂದರ್ಥವೇ ಹೊರತು ಹೊಸಶರ್ವವರ್ಮನೆಂದರ್ಥವಲ್ಲ. ಆದುದರಿಂದ ಕವಿಚರಿತಕಾರರು ಸೂಚಿಸಿರುವಂತೆ ಈ ಎರಡು ಪದಗಳೂ ಏಕಾರ್ಥವಾಚಕಗಳೆಂಬುದನ್ನು ನಂಬುವುದು ನಮಗೆ ಕಷ್ಟವಾಗಿರುವುದು. ಅದು ಹೇಗಾದರೂ ಆಗಲಿ; ಇವೆರಡೂ ಏಕಾರ್ಥವಾಚಕಗಳೆಂದೇ ನಾವು ಒಂದುವೇಳೆ ಒಪ್ಪಿಕೊಂಡರೂ ಕೂಡ, ಕ್ರಿ. ಶ. ಸುಮಾರು ೧೨೨೫ ರಲ್ಲಿ ಬರೆಯಲ್ಪಟ್ಟ ಈ ಪದ್ಯದಲ್ಲಿ ನಾಗವರ್ಮನಿಗೆ 'ಇದಾನೀಂತನಶರ್ವವರ್ಮ' ಎಂದರೆ 'ಈಗಿನ ಕಾಲದ ಶರ್ವವರ್ಮ' ಎಂಬ ಬಿರುದು ಹೇಳಲ್ಪಟ್ಟಿರುವುದರಿಂದ ಅವನು ಆ ಕಾಲದಲ್ಲಿ (ಎಂದರೆ ಕ್ರಿ. ಶ.

ರವು ಭಾಸಮಾನವಾಗಿರುವುದು. ಜನ್ನನ ಉಪಾಧ್ಯಾಯನಾದ ಸುಮನೋಬಾಣ ನಲ್ಲಿ ನಾಗವರ್ಮಸಾದೃಶ್ಯವೇ ಈ ಪದ್ಯದ ಮುಖ್ಯ ಪ್ರತಿಪಾದ್ಯ ವಿಷಯವು. ಇದ ಲ್ಲದೆ ನರಸಿಂಹಕ್ಷಿತಿಪಾಲನಲ್ಲಿ ಜಗದೇಕಜನನಾಥನ ಸಾದೃಶ್ಯವೂ ಗೌಣತ್ವೇನ ಪ್ರತಿ ಪಾದ್ಯವಾಗಿರುವಂತೆ ಕಾಣಿಸುವುದು. ಕಾವ್ಯಾವಲೋಕನ ವಸ್ತುಕೋಶಗಳ ಕರ್ತೃ ವಾದ ನಾಗವರ್ಮನೇ ಛಂದೋಂಬುಧಿ ಕರ್ಣಾಟಕ ಕಾದಂಬರಿಗಳ ಕರ್ತೃವೂ ಆಗಿದ್ದು ಈ ಗ್ರಂಥಗಳನ್ನು ಕ್ರಿ. ಶ. ಸುಮಾರು ೧೦೩೦-೧೦೫೦ ರಲ್ಲಿ ಬರೆದುದ ರಿಂದ (ಈ ಅಂಶವನ್ನು ನಾವು ಮುಂದೆ ವ್ಯಕ್ತಪಡಿಸುವೆವು) ಅವನನ್ನು ಕಟಕೋ ಪಾಧ್ಯಾಯನನ್ನಾಗಿ ಮಾಡಿಕೊಂಡಿದ್ದ ಜಗದೇಕಜನನಾಥನು ಆ ಕಾಲದಲ್ಲಿ (ಕ್ರಿ.ಶ. ೧೦೧೫-೧೦೪೨) ಆಳುತ್ತಿದ್ದ (ಜಯಸಿಂಹ-) ಜಗದೇಕಮಲ್ಲನೆಂಬ ಚಾಲುಕ್ಯ ಚಕ್ರವರ್ತಿಯೇ ಆಗಿರಬೇಕು. ಈ ಜಯಸಿಂಹ-ಜಗದೇಕಮಲ್ಲನು ಧಾರಾನಗರದಲ್ಲಿ ರಾಜ್ಯವಾಳುತ್ತಿದ್ದ ಮಾಳವೇಶನಾದ ಭೋಜರಾಜನನ್ನೂ ಇನ್ನೂ ಇತರ ರಾಜ ರನ್ನೂ ಜಯಿಸಿದನೆಂದು ಶಾಸನಗಳಿಂದ ತಿಳಿದುಬರುವುದು.† ಇವನು ಕ್ರಿ. ಶ.

ಸುಮಾರು ೧೨೨೩ ರಲ್ಲಿ) ಜೀವಿಸಿದ್ದನೆಂದು ನಾವು ಹೇಳಬೇಕಾಗುವುದು. ಇದು ಅಸಂಭಾವನೀಯ ವಾದುದೆಂಬುದನ್ನು ನಾವು ಮೇಲೆ ಸ್ಪಷ್ಟಮಾಡಿರುವೆವು. ಅಲ್ಲದೆ ಜನ್ನನು ಯಾವ ಪ್ರಸಕ್ತಿಯೂ ಇಲ್ಲದೆ ನಾಗವರ್ಮನನ್ನು ಈ ಪದ್ಯದಲ್ಲಿ ಅಪ್ರಕೃತವಾಗಿ ಸ್ತೋತ್ರಮಾಡಿರುವನೆಂದು ನಾವು ಹೇಳ ಬೇಕಾಗುವುದರಿಂದ ಅಪ್ರಕೃತವಸ್ತುವರ್ಣನರೂಪವಾದ ದೋಷಕ್ಕೂ ನಾವು ಕವಿಯನ್ನು ಗುರಿಮಾಡ ದಂತಾಗುವುದು.

ಆದುದರಿಂದ ಹೀಗೆ ಅರ್ಥಮಾಡುವುದು ಸಾಧುವಲ್ಲವೆಂದೂ, ನಾವು ಮೇಲೆ ಹೇಳಿರುವ ರೀತಿಯೇ ಸರಿಯಾದ ರೀತಿಯೆಂದೂ ನಮ್ಮ ಅಭಿಪ್ರಾಯ. ಈ ರೀತಿಯನ್ನನುಸರಿಸಿ ಅರ್ಥಮಾಡಿದಲ್ಲಿ ಜನ್ನನು ಈ ಪದ್ಯದಲ್ಲಿ ತನ್ನ ಉಪಾಧ್ಯಾಯನಾದ ಸುಮನೋಬಾಣನನ್ನು ನಾಗವರ್ಮನಿಗೆ ಹೋಲಿಸಿ ಹೊಗಳಿರುವನೆಂದು ಸ್ಪಷ್ಟವಾಗುವುದರಿಂದ ಅಪ್ರಕೃತವಸ್ತುವರ್ಣನರೂಪವಾದ ದೋಷಕ್ಕೆ ಇಲ್ಲಿ ಯಾವ ಅವಕಾಶವೂ ಇರುವುದಿಲ್ಲ.

† ಡಾ|| ಫ್ಲೀಟ್‌ರವರ ಪೂರ್ವನಿರ್ದಿಷ್ಟಗ್ರಂಥದಲ್ಲಿ ೪೩೬ ನೆಯ ಪುಟವನ್ನು ನೋಡಿ. ಬೆಳ ಗಾಮೆಯಲ್ಲಿರುವ ಷಿಕಾರಿಪುರದ ೧೨೫ ನೆಯ ಶಾಸನದಲ್ಲಿರುವ—

ಆ ಜಯಸಿಂಘನೃಪಾಳಂ | ಭೋಜನೃಪಾಂಭೋಜರಾಜನಿನನಿಭತೇಜಂ ||
ರಾಜೇಂದ್ರಚೋಳಗಜಮೃಗ | ರಾಜಂ ರಾಜಾಧಿರಾಜನೆನಿಪುದು ಪಿರಿದೇ ||

ಎಂಬ ಪದ್ಯವನ್ನು ನೋಡಿ.

ಈ ಶಾಸನವು ಕ್ರಿ. ಶ. ೧೦೧೭ ರಲ್ಲಿ (ಡಿಸೆಂಬರ್ ತಾರೀಖು ೨೨ ರಲ್ಲಿ) ಹುಟ್ಟಿದ್ದು (ಮೇಲೆ ನಿರ್ದಿಷ್ಟವಾದ ನನ್ನ ಪುಸ್ತಕದ ೧೨೮ ನೇ ಪುಟದಲ್ಲಿ ೨೦೩ ನೇ ನಂಬರನ್ನು ನೋಡಿ). ಇದರಲ್ಲಿ ಚಾಲುಕ್ಯಚಕ್ರವರ್ತಿ ಜಯಸಿಂಹ-ಜಗದೇಕಮಲ್ಲನು ಚೋಳರಾಜನಾದ ರಾಜೇಂದ್ರನನ್ನು ಜಯಿಸಿದನೆಂದು ಹೇಳಿರುವುದಲ್ಲದೆ 'ಚೋಳೋಗ್ರಕಾಳಾನಳಂ' ಎಂಬ ಬಿರುದೂ ಇವನಿಗೆ ಹೇಳಲ್ಪ

೧೦೧೮ ಕ್ಕಿಂತ ಹಿಂದೆಯೇ ಚೋಳರಾಜನನ್ನು ಜಯಿಸಿದನೆಂಬ ಅಂಶವನ್ನಂತೂ ನಾವು ಮೇಲೆಯೇ ನಿರೂಪಿಸಿರುವೆವು. ಆದುದರಿಂದ ಈ ದೊರೆಯು ಬಹು ಪ್ರತಾಪ ಶಾಲಿಯೂ, ಚೋಳರಾಜನಿಗಿಂತ ಬಲಶಾಲಿಯೂ ಆಗಿದ್ದನೆಂದು ಸ್ಪಷ್ಟವಾಯಿತು.

ಪಂಚತಂತ್ರಕರ್ತೃವಾದ ದುರ್ಗಸಿಂಹನು ಇವನಿಂದ ಸಮ್ಮಾನಿತನಾಗಿ ಮಹಾ ಸಂಧಿವಿಗ್ರಹಿಪದವಿಯನ್ನು ಹೊಂದಿ ಇವನ ಆಸ್ಥಾನದಲ್ಲಿದ್ದನೆಂದು ನಾವು ಮೇಲೆ ೧೮ ನೆಯ ಪುಟದಲ್ಲಿ ಬರೆದಿರುವುದರಿಂದ ಸ್ಪಷ್ಟವಾಗುವುದು. ಮದನತಿಲಕದ ಕರ್ತೃ ವಾದ ಚಂದ್ರರಾಜನು ಈ ದೊರೆಯನ್ನು ಹೊಗಳಿರುವುದರಿಂದ (ಮೇಲೆ ೩೧ನೇ ಪುಟವನ್ನು ನೋಡಿ) ಇವನಿಂದ ಸಮ್ಮಾನಿತನಾಗಿದ್ದಂತೆ ತೋರುತ್ತದೆ. ಕ್ರಿ. ಶ. ೧೦೪೨ ಕ್ಕೆ ಹಿಂದೆಯೇ ರಾಮಚಂದ್ರಚರಿತಪುರಾಣ, ಮಲ್ಲಿನಾಥಪುರಾಣಗಳನ್ನು ಬರೆದ ನಾಗಚಂದ್ರನೂ ಕೂಡ ಒಂದುವೇಳೆ ಈ ದೊರೆಯಿಂದ ಸನ್ಮಾನವನ್ನು ಪಡೆದು ಇವನ ಆಸ್ಥಾನವನ್ನು ಭೂಷಿಸಿದ್ದರೂ ಭೂಷಿಸಿರಬಹುದು. ಅಂತೂ ಈ ಜಯಸಿಂಹ–ಜಗದೇಕಮಲ್ಲನು ಚಕ್ರವರ್ತಿಯೂ, ಬಹು ಪ್ರತಾಪಶಾಲಿಯೂ, ಚೋಳ ನಿಗಿಂತ ಬಲಶಾಲಿಯೂ, ಕವಿಗಳಿಗೆ ಆಶ್ರಯದಾತೃವೂ ಆಗಿದ್ದನೆಂಬುದು ಸ್ಪಷ್ಟ.

ಟ್ಟಿರುವುದು. ಆದ್ದರಿಂದ ಮೇಲೆ ೨೦ ನೆಯ ಪುಟದಲ್ಲಿ ಹೇಳಲ್ಪಟ್ಟ ಮಿರಜ್ ತಾಮ್ರಶಾಸನವು ಹುಟ್ಟುವದಕ್ಕಿಂತ (ಈ ಶಾಸನವು ಕ್ರಿ. ಶ. ೧೦೨೪ ನೆಯ ಏಪ್ರಿಲ್ ೨೬ ನೆಯ ತಾರೀಖು ಭಾನು ವಾರದಂದು ಹುಟ್ಟಿತು) ಕೆಲವು ದಿವಸಗಳ ಹಿಂದೆ ಜಯಸಿಂಹ-ಜಗದೇಕಮಲ್ಲನು ರಾಜೇಂದ್ರಚೋಳ ನನ್ನು ಜಯಿಸಿ, ಇದರ ಪ್ರಯುಕ್ತ 'ಚೋಳೋಗ್ರಕಾಳಾನಳಂ' ಎಂಬ ಬಿರುದನ್ನು ವಹಿಸಿಕೊಂಡ ನೆಂದು ನಾನು ಅಲ್ಲಿ ಹೇಳಿರುವ ಅಭಿಪ್ರಾಯವು ತಪ್ಪಾದುದೆಂದೂ, ರಾಜೇಂದ್ರಚೋಳನನ್ನು ಜಯ ಸಿಂಹನು ಕ್ರಿ. ಶ. ೧೦೧೭ ನೆಯ ಡಿಸೆಂಬರ್ ತಿಂಗಳಿಗಿಂತ ಹಿಂದೆಯೇ ಜಯಿಸಿ ಮೇಲೆ ಹೇಳಿದ ಬಿರುದನ್ನು ವಹಿಸಿದ್ದನೆಂದೂ ಸ್ಪಷ್ಟವಾಗುವುದು. ಆದ್ದರಿಂದ ಪಾಠಕರು ಮೇಲೆ ೨೦ನೇ ಪುಟದ ೪ ನೆಯ ಪಂಕ್ತಿಯಲ್ಲಿ, '೧೦೨೪ ನೆಯ ವರ್ಷದಲ್ಲಿ' ಎಂಬುದನ್ನೂ, ಅಂತ್ಯದಲ್ಲಿರುವ ೫ ಪಂಕ್ತಿ ಗಳನ್ನೂ, ಆದರ ಮುಂದಿನ ಪುಟದ ಅಂತ್ಯದಲ್ಲಿರುವ ೭ ಪಂಕ್ತಿಗಳನ್ನೂ ಅಳಿಸಿಬಿಟ್ಟು, ೨೦ನೇ ಪುಟದ ೬ ನೆಯ ಪಂಕ್ತಿಯಲ್ಲಿಯೂ, ೨೨ (ಪಂಕ್ತಿ ೫), (ಪಂಕ್ತಿ ೨೬), ೩೨ (ಪಂಕ್ತಿ ೪), ೪೪ (ಪಂಕ್ತಿ ೨), ಮತ್ತು ೭೨ ನೆಯ (ಪಂಕ್ತಿ ೨೫) ಪುಟಗಳಲ್ಲಿಯೂ '೧೦೨೪' ಎಂಬುದನ್ನು '೧೦೧೫' ಎಂದು ತಿದ್ದಿಕೊಳ್ಳಬೇಕು.

ಮೇಲಿನ ಪದ್ಯದಲ್ಲಿ ಹೇಳಲ್ಪಟ್ಟಿರುವ ಭೋಜರಾಜನು ಧಾರಾನಗರದಲ್ಲಿ ಆಳುತ್ತಿದ್ದ ಪರಮಾರ ವಂಶದ ಭೋಜರಾಜನು. ಮೇಲಿನ ಶಾಸನವು ಹುಟ್ಟಿದ ಕಾಲದಲ್ಲಿ, ಎಂದರೆ ಕ್ರಿ. ಶ. ೧೦೧೭ ರಲ್ಲಿ ಇವನು ರಾಜ್ಯಭಾರ ಮಾಡುತ್ತಿದ್ದನೆಂದು ಈ ಪದ್ಯದಿಂದ ಸೂಚಿಸಲ್ಪಟ್ಟಂತಿರುವುದರಿಂದ ಇವನು ಕ್ರಿ. ಶ. ೧೦೧೮ ರಲ್ಲಿ ರಾಜ್ಯವಾಳುವುದಕ್ಕೆ ಪ್ರಾರಂಭಿಸಿದನೆಂಬ ಡಾ|| ವಿಂಟರ್ನಿಟ್ಸರವರ ಅಭಿಪ್ರಾ ಯವು (ಪೂರ್ವನಿರ್ದಿಷ್ಟಗ್ರಂಥ, ಸಂಪುಟ ೩, ಪುಟ ೫೨) ತಪ್ಪೆಂದು ತೋರುವುದು.

ಈ ಜಯಸಿಂಹ-ಜಗದೇಕಮಲ್ಲನೊಡನೆ ಹೋಲಿಸಲ್ಪಟ್ಟಿರುವ ಎರಡನೆಯ ಹೊಯ್ಸಲನರಸಿಂಹನೂ ಹೀಗೆಯೇ ಚಕ್ರವರ್ತಿಯೂ, ಬಹು ಪ್ರತಾಪಶಾಲಿಯೂ, ಚೋಳನಿಗಿಂತ ಬಲಶಾಲಿಯೂ, ಕವಿಗಳಿಗೆ ಆಶ್ರಯದಾತೃವೂ ಆಗಿದ್ದನೆಂಬ ಅಂಶವು ಶಿಲಾಲೇಖನಗಳಲ್ಲಿ ಇವನಿಗೆ ಹೇಳಲ್ಪಟ್ಟಿರುವ ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪ್ರತಾಪಚಕ್ರವರ್ತಿ ಮೊದಲಾದ ಬಿರುದುಗಳಿಂದಲೂ (ಈ ಬಿರುದುಗಳನ್ನು ಈ ನರಸಿಂಹನ ತಂದೆಯಾದ ವೀರಬಲ್ಲಾಳನು ಮೊದಲು ಕ್ರಿ. ಶ. ಸುಮಾರು ೧೧೯೦ರಲ್ಲಿ ವಹಿಸಿದನೆಂದು ನಾವು ಮೇಲೆ ೯೨ನೇ ಪುಟದಲ್ಲಿ ಹೇಳಿರುವೆವು) ನಾವು ಮೇಲೆ (ಪುಟ೧೧೩-೧೧೫) ನೋಡಿದಂತೆ ಇವನು ಮಗರರಾಜ ಪಾಂಡ್ಯ ರಾಜರನ್ನು ಜಯಿಸಿ ಚೋಳರಾಜನನ್ನು ಅವನ ರಾಜ್ಯದಲ್ಲಿ ಸ್ಥಾಪಿಸಿದುದರಿಂದಲೂ (ಇದರಿಂದ ಇವನು ಚೋಳರಾಜನಿಗಿಂತ ಬಲಶಾಲಿಯಾಗಿದ್ದನೆಂಬ ಅಂಶವು ಸ್ಪಷ್ಟವಾಗಿ ಹೊರಪಡುವುದು) ಜನ್ನ, ಚಿದಾನಂದ-ಮಲ್ಲಿಕಾರ್ಜುನರೇ ಮೊದಲಾದ ಕವಿಗಳು ಇವನ ಆಸ್ಥಾನವನ್ನು ಭೂಷಿಸಿದ್ದರೆಂಬುದರಿಂದಲೂ ವ್ಯಕ್ತವಾಗುವುದು. ಆದುದರಿಂದ ಉಪಮಾನೋಪಮೇಯಭೂತರಾದ ಜಯಸಿಂಹ-ಜಗದೇಕಮಲ್ಲ, ನರಸಿಂಹ-ಹೊಯ್ಸಲರಿಗೆ ಈ ವಿಷಯಗಳಲ್ಲಿ ಸಂಪೂರ್ಣವಾದ ಬಿಂಬಪ್ರತಿಬಿಂಬ ಭಾವವಿರುವುದು.

ನಾಗವರ್ಮ, ಸುಮನೋಬಾಣರಿಗೂ ಕೂಡ ಹೀಗೆಯೇ ಸಂಪೂರ್ಣವಾದ ಬಿಂಬಪ್ರತಿಬಿಂಬ ಭಾವವಿರುವುದು. ಈ ನಾಗವರ್ಮನು ಕನ್ನಡ ಕಾದಂಬರಿಯ ಕರ್ತೃವಾದುದರಿಂದ ಇವನಿಗೆ 'ಕರ್ಣಾಟಕಬಾಣ' ಅಥವಾ 'ಅಭಿನವಬಾಣ' ಎಂಬ ಬಿರುದೋ ಅಥವಾ ಏತತ್ಸಜಾತೀಯವಾದ ಬಿರುದೋ ಇದ್ದಿರಬೇಕು. ಅಭಿನವಶರ್ವವರ್ಮನೆಂಬ ಬಿರುದು ತನಗಿತ್ತೆಂಬ ಅಂಶವನ್ನಂತೂ ಇವನು ಕಾವ್ಯಾವಲೋಕನದಲ್ಲಿ ತಾನೇ ಹೇಳಿಕೊಂಡಿರುವನು. ಆದುದರಿಂದ 'ಕರ್ಣಾಟಕಬಾಣ' ಅಥವಾ 'ಅಭಿನವಬಾಣ' ಎಂಬ (ಅಥವಾ ಏತತ್ಸಜಾತೀಯವಾದ) ಬಿರುದನ್ನೂ, ಅಭಿನವ ಶರ್ವವರ್ಮ ಎಂಬ ಬಿರುದನ್ನೂ ಹೊಂದಿ ಪ್ರಸಿದ್ಧನಾಗಿ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದ (ದೃಷ್ಟಾಂತಭೂತನಾದ) ನಾಗವರ್ಮನಿಗೂ, ನವೀನೋಜ್ವಲ ಬಾಣನೆಂದೂ, ಇದಾನೀಂತನಶರ್ವವರ್ಮನೆಂದೂ ಪ್ರಸಿದ್ಧನಾಗಿ ನರಸಿಂಹ-ಹೊಯ್ಸಲನಲ್ಲಿ ಕಟಕೋಪಾಧ್ಯಾಯನಾಗಿದ್ದ (ದಾರ್ಷ್ಟಾಂತಿಕಭೂತನಾದ) ಸುಮನೋಬಾಣನಿಗೂ ಸಂಪೂರ್ಣವಾದ ಬಿಂಬಪ್ರತಿಬಿಂಬ ಭಾವವಿರುವುದೆಂಬುದು ಸ್ಪಷ್ಟ.

ಅಂತು 'ಚಕ್ರವರ್ತಿಯೂ, ಬಹು ಪ್ರತಾಪಶಾಲಿಯೂ, ಚೋಳನಿಗಿಂತ ಬಲಶಾಲಿಯೂ, ಕವಿಗಳಿಗೆ ಆಶ್ರಯದಾತೃವೂ ಆಗಿದ್ದ (ಜಯಸಿಂಹ-) ಜಗದೇಕಮಲ್ಲ

ನಲ್ಲಿ ‘ ಕರ್ಣಾಟಕಬಾಣ ’ ಅಥವಾ ‘ ಅಭಿನವಬಾಣ ’ ಎಂಬ (ಅಥವಾ ಏತತ್ಸಜಾತೀಯವಾದ) ಬಿರುದಿನಿಂದಲೂ, ಅಭಿನವಶರ್ವವರ್ಮ ಎಂಬ ಬಿರುದಿನಿಂದಲೂ ಪ್ರಸಿದ್ಧನಾದ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದಂತೆಯೇ ಈಗ ಚಕ್ರವರ್ತಿಯೂ, ಬಹು ಪ್ರತಾಪಶಾಲಿಯೂ, ಚೋಳರಾಜನಿಗಿಂತ ಬಲಶಾಲಿಯೂ, ಕವಿಗಳಿಗೆ ಆಶ್ರಯದಾತೃವೂ ಆದ ನರಸಿಂಹಹೊಯ್ಸಲನಲ್ಲಿ ನವೀನೋಜ್ವಲಬಾಣ ಎಂಬ ಬಿರುದಿನಿಂದಲೂ ಇದಾನೀಂತನಶರ್ವವರ್ಮ ಎಂಬ ಬಿರುದಿನಿಂದಲೂ ಪ್ರಸಿದ್ಧನಾದ ಸುಮನೋಬಾಣನು ಕಟಕೋಪಾಧ್ಯಾಯನಾಗಿರುವನು. ಇವನು ಜನ್ನನ ಉಪಾಧ್ಯಾಯನು’ ಎಂಬುದೇ ಈ ಪದ್ಯದ ಸಮುದಿತಾಭಿಪ್ರಾಯವು.* ಆದುದರಿಂದಲೇ ಪ್ರಥಮಚರಣದಲ್ಲಿರುವ ‘ ಆ ’ ಎಂಬ ಪದಕ್ಕೂ ದ್ವಿತೀಯ ಚತುರ್ಥ ಚರಣಗಳಲ್ಲಿರುವ ‘ ಇದಾನೀಂತನಶರ್ವವರ್ಮನೆ ಗಡಂ ’, ‘ ನವೀನೋಜ್ವಲ ಬಾಣಂ ’ ಎಂಬ ಪದಗಳಿಗೂ ಸಾರ್ಥಕ್ಯವೂ ಉಂಟಾಗಿರುವುದು.

ಈ ಪದ್ಯದಲ್ಲಿ ಕೀರ್ತಿತನಾದ ನರಸಿಂಹಕ್ಷಿತಿಪಾಲನು ಹೊಯ್ಸಳ ಚಕ್ರವರ್ತಿಯಾದ ಎರಡನೆಯ ನರಸಿಂಹನೆಂದು ನಾವು ಮೇಲೆ ಹೇಳಿರುವೆವಷ್ಟೆ. ಆದುದರಿಂದ ಸುಮನೋಬಾಣ ಕವಿಯು ಕ್ರಿ. ಶ. ೧೨೨೦ ರಿಂದ ೧೨೩೫ ರ ವರೆಗೆ ರಾಜ್ಯವಾಳಿದ ಎರಡನೆಯ ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದು, ಆ ಕಾಲದಲ್ಲಿ ಜೀವಿಸುತ್ತಿದ್ದನೆಂದು ವ್ಯಕ್ತವಾಯಿತು. ಕವಿಚರಿತಕಾರರು ಹೇಳಿರುವ ‘ ನವೀನಬಾಣ ’ ಅಥವಾ ‘ ಅಭಿನವಬಾಣ ’ ಎಂಬ ಬಿರುದಲ್ಲದೆ ‘ ಇದಾನೀಂತನಶರ್ವವರ್ಮ ’ ಎಂಬ ಬಿರುದೂ ಇವನಿಗೆ ಇದ್ದಂತೆ ಮೇಲಿನ ಪದ್ಯದಿಂದ ತಿಳಿದುಬರುವುದರಿಂದ, ಇವನು ಒಂದು ವ್ಯಾಕರಣಗ್ರಂಥವನ್ನೂ ಬರೆದಿರಬೇಕು.

---

* ಆದ್ದರಿಂದಲೇ ಈ ಪದ್ಯದಲ್ಲಿ ನರಸಿಂಹಹೊಯ್ಸಲನೊಡನೆ ಹೋಲಿಸಲ್ಪಟ್ಟಿರುವ ‘ ಜಗದೇಕ-ಜನನಾಥ ’ನೂ ಚಾಲುಕ್ಯಚಕ್ರವರ್ತಿಯಾದ ಒಂದನೆಯ ಜಗದೇಕಮಲ್ಲನೇ ಆಗಿರಬೇಕೆಂದೂ, ಎರಡನೆಯ ಅಥವಾ ಮೂರನೆಯ ಜಗದೇಕಮಲ್ಲನಾಗಿರಲಾರನೆಂದೂ ಸ್ಪಷ್ಟವಾಗುವುದು. ಒಂದನೆಯ ಜಗದೇಕಮಲ್ಲನು ಕ್ರಿ. ಶ. ೧೦೧೮ ಕ್ಕಿಂತ ಹಿಂದೆಯೇ ಚೋಳರಾಜನನ್ನು ಜಯಿಸಿದನೆಂಬುದನ್ನೂ ಎರಡನೆಯ ಮತ್ತು ಮೂರನೆಯ ಜಗದೇಕಮಲ್ಲರಿಗೂ ಚೋಳರಾಜರಿಗೂ ಯಾವ ವಿಧವಾದ ಸಂಬಂಧವೂ ಇರಲಿಲ್ಲವೆಂಬುದನ್ನೂ ನಾವು ಮೇಲೆಯೇ (ಪುಟ ೨೦) ವ್ಯಕ್ತಪಡಿಸಿರುವೆವು. ಹೀಗೆಯೇ ಒಂದನೆಯ ಜಗದೇಕಮಲ್ಲನು ಅನೇಕ ಕವಿಗಳಿಗೆ ಆಶ್ರಯದಾತೃವಾಗಿದ್ದನೆಂಬುದನ್ನೂ ನಾವು ಮೇಲೆ (ಪುಟ ೧೩೧) ವ್ಯಕ್ತಪಡಿಸಿರುವೆವು. ಎರಡನೆಯ ಮತ್ತು ಮೂರನೆಯ ಜಗದೇಕಮಲ್ಲರಾದರೆ ನಮಗೆ ತಿಳಿದಂತೆ ಯಾವ ಕವಿಗೂ ಪೋಷಕರಾಗಿರಲಿಲ್ಲ. ಆದ್ದರಿಂದ ಈ ಪದ್ಯದಲ್ಲಿ ಜನ್ನನಿಂದ ಕೀರ್ತಿಸಲ್ಪಟ್ಟಿರುವ ಜಗದೇಕ-ಜನನಾಥನು ಚಾಲುಕ್ಯಚಕ್ರವರ್ತಿಯಾದ ಒಂದನೆಯ ಜಗದೇಕಮಲ್ಲನೇಯೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಜನ್ನನು ಯಶೋಧರಚರಿತೆಯಲ್ಲಿ 'ಭಾಳಲೋಚನಂ ಕವಿ ಸುಮನೋ ಬಾಣನ ಮಗನೆಂದಖಿಳಕ್ಷೋಣಿಗೆ ಪೆಸರಾಯ್ತು' ಎಂದು ಹೇಳಿ, ಅನಂತನಾಥಪುರಾಣ ದಲ್ಲಿ 'ಶಂಕರಪುತ್ರಂ ಕವಿ ಕಮ್ಮೆವಂಶನಧಿಕಜ್ಞಂ ಕಾಶ್ಯಪಂ', 'ಶಂಕರಶುದ್ಧಾಂ ತಾಂಗನಾ ಗಂಗೆಗೇನುದಯಂಗೆಯ್ದನೊ ಕಾಶ್ಯಪೋದ್ಭವಕರಂ ಸಾಹಿತ್ಯರತ್ನಾಕರಂ' ಎಂದೂ, ತನ್ನನ್ನು ಸ್ತೋತ್ರಮಾಡಿಕೊಂಡಿರುವುದರಿಂದ, ಕವಿಚರಿತಕಾರರು ಈ ಸುಮನೋಬಾಣನು ಜನ್ನನ ತಂದೆಯಾಗಿದ್ದನೆಂದೂ, ಇವನ ನಿಜವಾದ ಹೆಸರು ಶಂಕರ ಎಂದೂ, ಇವನ ಹೆಂಡತಿಯ ಹೆಸರು ಗಂಗೆ ಎಂದೂ ನಿರ್ಧರಿಸಿರುವರಲ್ಲದೆ 'ಕವಿಸುಮನೋಬಾಣನ ಜಾಮಾತೃ' ಎಂದು ತನ್ನನ್ನು ಹೇಳಿಕೊಂಡಿರುವ ಸೂಕ್ತಿ ಸುಧಾರ್ಣವವನ್ನು ವಿರಚಿಸಿದ ಮಲ್ಲಿಕಾರ್ಜುನನು ಜನ್ನನ ಸೋದರಿಯ ಗಂಡನೆಂದೂ, 'ಕವಿಸುಮನೋಬಾಣನ ದೌಹಿತ್ರನೆನಾಂ' ಎಂದು ತನ್ನನ್ನು ಸ್ತೋತ್ರಮಾಡಿಕೊಂ ಡಿರುವ ಶಬ್ದಮಣಿದರ್ಪಣಕಾರನಾದ ಕೇಶಿರಾಜನು ಜನ್ನನ ಸೋದರದಳಿಯನೆಂದೂ (ಕವಿಚರಿತೆ I, ೨೬೧ ರಲ್ಲಿ) ಹೇಳಿಬಿಟ್ಟಿರುವರು. ಇದು ವಾಸ್ತವವಾಗಿದ್ದ ಪಕ್ಷದಲ್ಲಿ ಆ ಇಬ್ಬರು ಗ್ರಂಥಕರ್ತೃಗಳು ಜನ್ನನೊಡನೆ ತಮಗಿದ್ದ ಬಂಧುತ್ವವನ್ನು ಏಕೆ ಪ್ರಸ್ತಾವ ಮಾಡಲಿಲ್ಲ? ವೀರಬಲ್ಲಾಳನಿಂದ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದು ಯಶೋಧರಚರಿತ ಅನಂತನಾಥಪುರಾಣವೇ ಮೊದಲಾದ ಕಾವ್ಯಗಳನ್ನು ಬರೆದು ಪ್ರಸಿದ್ಧಿಯನ್ನು ಹೊಂದಿದ್ದ ಜನ್ನನು ಹೊಯ್ಸಲರಾಜರಲ್ಲಿ ಕಟಕೋಪಾಧ್ಯಾ ಯನಾಗಿದ್ದ ಸುಮನೋಬಾಣನಿಗಿಂತ ಅನ್ಯೂನನಾದವನೆಂಬುದು ಸ್ಪಷ್ಟವೇ ಆಗಿರು ವುದು. ಹೀಗಿರುವಲ್ಲಿ, ಮಲ್ಲಿಕಾರ್ಜುನನು 'ಯಾದವಕಟಕಾಚಾರ್ಯ-ಕವಿಸುಮ ನೋಬಾಣನ ಜಾಮಾತೃ' ಎಂದು ಮಾತ್ರ ತನ್ನ ವಿಷಯವಾಗಿ ಹೇಳಿಕೊಂಡು ಕವಿ ಚಕ್ರವರ್ತಿಯಾದ ಜನ್ನನು ತನ್ನ ಶ್ಯಾಲನೆಂದು ಏತಕ್ಕೆ ಹೇಳಿಲ್ಲ? 'ಕವಿಸುಮನೋ ಬಾಣನ ಯಾದವಕಟಕಾಚಾರ್ಯನೆಸೆವ ದೌಹಿತ್ರನೆನಾಂ' ಎಂದೂ, 'ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನಸುತನೆಂ' ಎಂದೂ ತನ್ನನ್ನು ಹೊಗಳಿಕೊಂಡಿರುವ ಅವನ ಮಗನಾದ ಕೇಶಿರಾಜನೂ ಕೂಡ 'ಕವಿಚಕ್ರವರ್ತಿ ಜನ್ನನ ಸ್ವಸ್ರೀಯನು ನಾನು' ಎಂದು ಏತಕ್ಕೆ ಹೇಳಿಕೊಂಡಿಲ್ಲ? ತನ್ನ ತಂದೆಯು ಶಂಕರನೆಂದು ಹೇಳಿರುವ ಜನ್ನನೂ ಕೂಡ ಈ ತಂದೆಯು ಕಟಕೋಪಾಧ್ಯಾಯನಾಗಿದ್ದನೆಂದು ಏತಕ್ಕಾಗಿ ಹೇಳಲಿಲ್ಲ? ಇದೆಲ್ಲವನ್ನೂ ಪರ್ಯಾಲೋಚಿಸಿದರೆ 'ಜನ್ನನು ಕವಿಸುಮನೋಬಾಣನ ಮಗನು' ಎಂಬ ಕವಿಚರಿತಕಾರರ ಅಭಿಪ್ರಾಯವು ತಪ್ಪೆಂದು ಸ್ಪಷ್ಟವಾಗುವುದು. ವಸ್ತುತಃ 'ಭಾಳಲೋಚನಂ ಕವಿಸುಮನೋಬಾಣನ ಮಗನೆಂದಖಿಳಕ್ಷೋಣಿಗೆ ಪೆಸ ರಾಯ್ತು' ಎಂದು ಮೇಲೆ ಹೇಳಿದ ಯಶೋಧರಚರಿತದಲ್ಲಿನ ಪದ್ಯಭಾಗದಲ್ಲಿರುವ

'ಮಗ' ಎಂಬ ಪದವು ಮುಖ್ಯಾರ್ಥದಲ್ಲಿ ಉಪಯೋಗಿಸಲ್ಪಟ್ಟಿಲ್ಲದೆ ಗೌಣಾರ್ಥದಲ್ಲಿ, ಎಂದರೆ 'ಶಿಷ್ಯ' ಎಂಬ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದೆಂಬ ಅಂಶವು ಮೇಲೆ ಹೇಳಿದ 'ಜನನಾಥಂ ಜಗದೇಕನಲ್ಲಿ...' ಎಂಬ ಅನಂತನಾಥಪುರಾಣದ ಪದ್ಯದಲ್ಲಿನ 'ಜನ್ನಂಗುಪಾಧ್ಯಾಯಂ...ಸುಮನೋಬಾಣಂ' ಎಂಬ ಪದಗಳಿಂದ ವ್ಯಕ್ತವಾಗುವುದು. ಈ ಪದ್ಯದಲ್ಲಿ ಸುಮನೋಬಾಣನು ಜನ್ನನಿಗೆ ಉಪಾಧ್ಯಾಯನಾಗಿದ್ದನೆಂದು ಹೇಳಲ್ಪಟ್ಟಿರುವುದೆಂದು ನಾವು ಮೇಲೆಯೇ ನಿರೂಪಿಸಿರುವೆವಷ್ಟೆ. ಹೀಗೆ ಜನ್ನನು ಸುಮನೋಬಾಣನ ಶಿಷ್ಯನಾಗಿದ್ದನೆಂಬ ಅಂಶವೇ 'ಭಾಳಲೋಚನಂ ಕವಿಸುಮನೋಬಾಣನ ಮಗನಂ' ಎಂಬ ಮೇಲೆ ಹೇಳಿದ ಪದ್ಯಭಾಗದಿಂದ ಬೋಧಿತವಾಗಿರುವುದೇ ಹೊರತು ಜನ್ನನು ಸುಮನೋಬಾಣನ ಮಗನಾಗಿದ್ದನೆಂಬ ಅರ್ಥವನ್ನು ಆ ಪದ್ಯಭಾಗವು ಬೋಧಿಸುವುದೆಂದು ನಾವು ತಿಳಿದುಕೊಳ್ಳುವುದು ತಪ್ಪು.

'ಮಗ', 'ಸುತ', 'ಪುತ್ರ' ಮೊದಲಾದ ಪದಗಳು ಹೀಗೆ ಗೌಣಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದಕ್ಕೆ ನಿದರ್ಶನಗಳು ಶ್ರವಣಬೆಳ್ಗೊಳದ ಶಾಸನಗಳಲ್ಲಿ ಹೇರಳವಾಗಿ ದೊರೆಯುವುವು. ಕವಿಚರಿತಕಾರರು ಪ್ರಸ್ತಾವ ಮಾಡಿರುವ ಕವಿಗಳಲ್ಲಿ ರಾಮಾಯಣಕರ್ತೃವೂ ಮಾಘನಂದಿಸಿದ್ಧಾಂತಿಯ ಶಿಷ್ಯನೂ, ಪದ್ಮನಂದಿವ್ರತಿಯ ಮಗನೂ (ಕವಿಚರಿತೆ I, ೩೧೬) ಆದ ಕುಮುದೇಂದುವು ತಾನು ಬರೆದ ಪ್ರತಿಷ್ಠಾಕಲ್ಪಟಿಪ್ಪಣದಲ್ಲಿ 'ಮಾಘಣಂದಿಸಿದ್ಧಾಂತಚಕ್ರವರ್ತಿತನೂಭವಃ', 'ಮಾಘಣಂದಿಸಿದ್ಧಾಂತಚಕ್ರವರ್ತಿಸುತ' ಎಂದು ತನ್ನನ್ನು ವ್ಯವಹರಿಸಿಕೊಂಡಿದ್ದಾನೆ. 'ಹರೀಶ್ವರನ ವರಸುತಂ', 'ಹರಿದೇವಸುತರಾಘವ' ಎಂದು ತನ್ನನ್ನು ಹೊಗಳಿಕೊಂಡಿರುವ ಹರಿಶ್ಚಂದ್ರಕಾವ್ಯವೇ ಮೊದಲಾದ ಗ್ರಂಥಗಳ ಕರ್ತೃವಾದ ರಾಘವಾಂಕನು ಹರೀಶ್ವರನ ಶಿಷ್ಯನಾದುದರಿಂದ ಹೀಗೆ ಹೇಳಿಕೊಂಡಿರಬೇಕೆಂದು ಕವಿಚರಿತಕಾರರೇ ಅಭಿಪ್ರಾಯಪಟ್ಟಿರುತ್ತಾರೆ (ಕವಿಚರಿತೆ I, ೧೮೨). ಆದುದರಿಂದ ಸುಮನೋಬಾಣನ ಶಿಷ್ಯನಾದ ಜನ್ನನು ತಾನು 'ಸುಮನೋಬಾಣನ ಮಗನು' ಎಂದು ಹೇಳಿಕೊಂಡಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಆದುದರಿಂದ 'ಈ ಕವಿಯ ನಿಜವಾದ ಹೆಸರು ಶಂಕರ,' 'ಈತನ ಹೆಂಡತಿ ಗಂಗೆ' ಎಂದು ಕವಿಚರಿತಕಾರರು ಹೇಳಿರುವದೂ ಕೂಡ ತಪ್ಪೆಂದು ಮೇಲೆ ಹೇಳಿದುದರಿಂದ ವ್ಯಕ್ತವಾಗುವುದು.

ಮೇಲೆ ಹೇಳಲ್ಪಟ್ಟ ಶಂಕರನೂ, ಗಂಗೆಯೂ ಸುಮನೋಬಾಣನ ಅಳಿಯನಾದ ಮಲ್ಲಿಕಾರ್ಜುನನೂ ಜೈನರೆಂಬ ಕವಿಚರಿತಕಾರರ ಅಭಿಪ್ರಾಯಕ್ಕೆ ನಮಗೆ ತಿಳಿದಂತೆ

ಯಾವ ಆಧಾರವೂ ಇಲ್ಲ. ಹೀಗೆಯೇ ಈ ಮಲ್ಲಿಕಾರ್ಜುನನ ಮಗನೂ ಶಬ್ದಮಣಿ ದರ್ಪಣದ ಕರ್ತೃವೂ ಆದ ಕೇಶಿರಾಜನು ಜೈನನೆಂಬ ಕವಿಚರಿತಕಾರರ ಅಭಿಪ್ರಾಯಕ್ಕೂ (ಕವಿಚರಿತೆ I. ೩೧೧) ಯಾವ ಆಧಾರವೂ ಇರುವಂತೆ ಕಾಣುವುದಿಲ್ಲ. ಜನ್ನನೂ ಅವನ ಹೆಂಡತಿ ಲಕುಮಾದೇವಿಯೂ ಜಿನಭಕ್ತರಾದುದರಿಂದ ಅವರ ಬಂಧುಗಳೆಂದು ಕವಿಚರಿತಕಾರರು ತಿಳಿದುಕೊಂಡಿರುವ ಸುಮನೋಬಾಣ ಮಲ್ಲಿಕಾರ್ಜುನ ಕೇಶಿರಾಜರೂ, ಶಂಕರಗಂಗೆಯರೂ ಜೈನರೆಂದು ಕವಿಚರಿತಕಾರರು ಹೇಳಿರಬಹುದು. ಹಾಗಿದ್ದಲ್ಲಿ ಈ ಕಾರಣವು ಸರಿಯಾದ ಕಾರಣವೇ ಅಲ್ಲ. ಏಕೆಂದರೆ ಈಗಿನ ಕಾಲದಲ್ಲಿ ಆದಿತ್ಯನ, ಶಕ್ತಿಯ, ಅಥವಾ ಗಣೇಶನ ಉಪಾಸಕನಾದ ಒಬ್ಬ ಮನುಷ್ಯನ ಬಂಧುಗಳೆಲ್ಲರೂ ಆದಿತ್ಯನ, ಶಕ್ತಿಯ, ಅಥವಾ ಗಣೇಶನ ಉಪಾಸಕರೆಂದು ಹೇಳುವುದು ಎಷ್ಟು ಅಯುಕ್ತವೋ ಕ್ರಿ.ಶ. ೧೦-೧೩ ನೆಯ ಶತಮಾನಗಳಲ್ಲಿ ಜಿನಭಕ್ತನಾದ ಒಬ್ಬ ಮನುಷ್ಯನ ಬಂಧುಗಳೆಲ್ಲರೂ ಜಿನಭಕ್ತರಾಗಿದ್ದರೆಂದು ಹೇಳುವುದು ಅಷ್ಟೇ ಅಯುಕ್ತವಾಗಿರುವುದು.

ಕ್ರಿ.ಶ. ೧೦-೧೩ ನೆಯ ಶತಮಾನಗಳಲ್ಲಿ ಜಿನಭಕ್ತರಾದ ಮನುಷ್ಯರ ಸಮೀಪ ಬಂಧುಗಳು ಕೂಡ ಕೆಲವು ವೇಳೆ ಅನ್ಯದೇವತಾಭಕ್ತರಾಗಿದ್ದರೆಂಬುದಕ್ಕೆ ನಿದರ್ಶನಗಳು ಮೈಸೂರು ದೇಶದ ಶಾಸನಗಳಲ್ಲಿ ಅನೇಕವಾಗಿರುವವು. ಅವುಗಳಲ್ಲಿ ಕೆಲವನ್ನು ಇಲ್ಲಿ ನಾವು ಉದಾಹರಿಸುವೆವು :—

೧. ಮೇಲೆ (ಪುಟ ೩೪) ನಾಗಚಂದ್ರನ ಜೀವನಕಾಲವಿಚಾರಾವಸರದಲ್ಲಿ ಅಧ್ಯಾತ್ಮಿಬಾಲಚಂದ್ರನೆಂಬ ಜೈನಗುರುವು ಕ್ರಿ. ಶ. ೧೧೮೧ ರಲ್ಲಿ ಬದುಕಿದ್ದಂತೆ ಶ್ರ. ಬೆಳ್ಗೊಳದ ೧೨೪ನೆಯ ಶಾಸನದಿಂದ ತಿಳಿದುಬರುವುದೆಂಬ ಕವಿಚರಿತಕಾರರ ಅಭಿಪ್ರಾಯವನ್ನು ನಾವು ಅನುವದಿಸಿರುವೆವಷ್ಟೆ. ಈ ಶಾಸನದಲ್ಲಿ 'ಅನವರತವಿನಮದಮರಮೌಳಿಮಾಳಾಮಿಳಿತಚಳಣ (-ರಣ-) ನಳಿನಯುಗಳಭಗವದರ್ಹತ್ಪರಮೇಶ್ವರ ಸ್ನಾತಗಂಧೋದಕಪವಿತ್ರೀಕೃತೋತ್ತಮಾಂಗೆ' ಯಾದ ಆಚಲದೇವಿಯು ಅಧ್ಯಾತ್ಮಿ ಬಾಲಚಂದ್ರನಿಗೆ ಒಂದು ದತ್ತಿಯನ್ನು ಕೊಟ್ಟಂತೆ ಹೇಳಿ,

ಪರಮಾರಾಧ್ಯನನಂತಸೌಖ್ಯನಿಳಯಂ ಶ್ರೀಮಜ್ಜಿನಾಧೀಶ್ವರಂ
ಗುರು ಸೈದ್ಧಾಂತಿಕಚಕ್ರವರ್ತಿ ನಯಕೀರ್ತಿಖ್ಯಾತಯೋಗೀಶ್ವರಂ |
ಧರಣೀವಿಶ್ರುತಚಂದ್ರಮೌಳಿಸಚಿವಂ ಹೃತ್ಕಾಂತನೆಂದಂದಡಾರ್
ದೊರೆಯಾಯಾಚಲದೇವಿಗಿಂದು ವಿಶದೋದ್ಯತ್ಕೀರ್ತಿಗೀಧಾತ್ರಿಯೊಳ್ ||
ಭರದಿಂ ಬೆಳ್ಗುಳತೀರ್ಥದೊಳ್ ಜಿನಪತಿಶ್ರೀಪಾರ್ಶ್ವದೇವೋದ್ಧಮಂ
ದಿರಮಂ ಮಾಡಿಸಿದಳ್ ವಿನೂತನಯಕೀರ್ತಿಖ್ಯಾತಯೋಗೀಂದ್ರಭಾ |

ಸುರಶಿಷ್ಮೋತ್ತಮಬಾಳಚಂದ್ರಮುನಿಪಾದಾಂಭೋಜಿನೀಭಕ್ತೆ ಸು
ಸ್ಥಿರೆಯಪ್ಪಾಚಲದೇವಿ ಕೀರ್ತಿವಿಶದಾಶಾಚಕ್ರೆ ಸದ್ಭಕ್ತಿಯಿಂ ||

ಎಂದು ಈ ಆಚಲದೇವಿಯ ಸ್ತುತಿಯಿರುವುದು. ಇಲ್ಲಿ ಹೇಳಲ್ಪಟ್ಟಿರುವ ಚಂದ್ರಮೌಳಿ ಸಚಿವನು ಮೇಲೆ (ಪುಟ ೯೭) ರುದ್ರಭಟ್ಟನ ಜೀವನಕಾಲವಿಚಾರಾವಸರದಲ್ಲಿ ಪ್ರಸ್ತುತ ನಾದ ಆ ಹೆಸರಿನ ವೀರಬಲ್ಲಾಳಸಚಿವನೇಯೆ. ಈ ಚಂದ್ರಮೌಳಿಯು ಶಿವಪೂಜಕ ನಾಗಿದ್ದನೆಂದು ಶ್ರ. ಬೆ. ಇದೇ ೧೨೪ನೇ ಶಾಸನದಲ್ಲಿನ—

ತನಗಾರಾಧ್ಯಂ ಹರಂ ವಿಕ್ರಮಭುಜಪರಿಘಂ ವೀರಬಲ್ಲಾಳದೇವಾ
ವನಿಪಾಲಂ ಸ್ವಾಮಿ ವಿಭ್ರಾಜಿತವಿಮಳಚರಿತ್ರೋತ್ಕರಂ ಶಂಭುದೇವಂ |
ಜನಕಂ ಶಿಷ್ಟೇಷ್ಟಚಿಂತಾಮಣಿ ಜನನಿ ಜಗತ್ಖ್ಯಾತೆ ಯಕ್ಕವ್ವೆಯೆಂದಂ
ದಿನಿಸಂ ಶ್ರೀಚಂದ್ರಮೌಳಿಪ್ರಭುಗೆ ಸಮಮೆ ಕಾಳೀಯಮಂತ್ರೀಶವರ್ಗಂ ||

ಎಂಬ ಪದ್ಯದಿಂದ ತಿಳಿದುಬರುವುದು.

೨. ಕ್ರಿ.ಶ. ೧೧೨೮ ರಲ್ಲಿ ನೊಳಂಬವಾಡಿ ೩೨೦೦೦ ಸೀಮೆಯನ್ನು ಮಂಡ ಲಿಕ ವೃತ್ತಿಯಿಂದ ಆಳುತ್ತಿದ್ದ ಮಹಾಮಂಡಲೇಶ್ವರ ತ್ರಿಭುವನಮಲ್ಲಪಾಂಡ್ಯನ ಬಳಿ ಯಲ್ಲಿ ಪ್ರಚಂಡದಂಡನಾಥಪದವೀವಿರಾಜಮಾನನಾದ ಸೂರ್ಯದಂಡನಾಯಕನೆಂಬ ವನೂ, ಇವನ ತಮ್ಮನೂ ಚಾಳುಕ್ಯವಿಕ್ರಮಾದಿತ್ಯದೇವಸಭಾನರ್ಘ್ಯವಸ್ತುನಾಯಕ ನೂ ಆದ ಸಮಧಿಗತಪಂಚಮಹಾಶಬ್ದ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಆದಿತ್ಯನೂ ಈಶ್ವರಪಾದಾರಾಧಕರಾಗಿದ್ದರೆಂದು ದಾವಣಗೆರೆಯ ೯೦ ನೇ ಶಾಸನದಲ್ಲಿ ಹೇಳಿರುವುದು. ಈ ಸೂರ್ಯದಂಡನಾಯಕನ ಪತ್ನಿಯಾದ ಕಾಳಿಯಕ್ಕನಾದರೆ ' ಜಿನಪೂಜಾವಿನೋದೆ ' ಎಂದೂ, ' ಜಿನೇಶ್ವರಚರಣಸರಸಿರುಹಮ ಧುಕರೋಪಮಾನಕುಟಿಲಕುಂತಳಕಲಾಪೆ ' ಎಂದೂ ಇಲ್ಲಿ ವರ್ಣಿಸಲ್ಪಟ್ಟಿದ್ದು ಸಂಬ ನೂರಿನಲ್ಲಿ ಒಂದು ಜಿನಬಸದಿಯನ್ನು ಈಕೆಯು ಕಟ್ಟಿಸಿದಳೆಂದೂ ಈ ಶಾಸನದಲ್ಲಿ ಹೇಳಿರುವುದು.

೩. ಹೊಯ್ಸಲಚಕ್ರವರ್ತಿ ವೀರಬಲ್ಲಾಳನ ದಂಡನಾಯಕರಲ್ಲಿ ಒಬ್ಬನಾದ ಸುರಿಗೆಯ ಪೆರುಮಾಳುದಂಡನಾಯಕನಿಗೂ ಇವನ ತಮ್ಮನೂ ಬಲ್ಲಾಳಸಚಿವರಲ್ಲಿ ಒಬ್ಬನೂ ಆದ ಸಿಂಗಪೆಳ್ಳೆಗೂ ಪೆರ್ಗಡೆ ಜವನಯ್ಯನೆಂಬವನು ಭೃತ್ಯನೂ ಸಚಿವನೂ ಆಗಿದ್ದನೆಂದು ಚನ್ನರಾಯಪಟ್ಟಣದ ೨೫೭ ನೇ ಶಾಸನದಲ್ಲಿ ಹೇಳಲ್ಪಟ್ಟು ಈ ಜವ ನಯ್ಯ-ಪೆರ್ಗಡೆಯು ಹಬ್ಬಳಲಲ್ಲಿ ಸಿಂಗೇಶ್ವರದೇವರ ಪ್ರತಿಷ್ಠೆಯನ್ನು ಮಾಡಿ ಕೆರೆ ಯನ್ನು ಕಟ್ಟಿಸಿದನೆಂದೂ ಈ ಶಾಸನದಲ್ಲಿ ಹೇಳಿರುವುದು. ಈ ಜವನಯ್ಯ-ಹೆಗ್ಗಡೆ ಯು ' ಶಿವಪಾದಶೇಖರ 'ನೆಂದು ಇಲ್ಲಿ ವರ್ಣಿತನಾಗಿರುವನು. ಇವನ ಸತಿಯಾದ ಕಲ್ಲಿಯಕ್ಕನಾದರೆ ಜಿನಭಕ್ತಳಾಗಿದ್ದಳೆಂದು ಇದೇ ಶಾಸನದಲ್ಲಿರುವ—

ಜಿನಪತಿ ಕುಲದೈವಂ ಸಲೆ |
ಜಿನಮುನಿಗಳ ಗುರುಗಳವಳಧರ್ಮ್ಮಮೆ ಧರ್ಮ್ಮಂ ||
ತನಗೆನಲೀ ಜವನನ ನುತೆ |
....................ರಾಜಿಪಳು ಕಲ್ಲಿಯಕ್ಕನವೋಘ ||

ಎಂಬ ಪದ್ಯದಿಂದ ತಿಳಿದುಬರುವುದು.

೪. ಶ್ರವಣಬೆಳ್ಗೊಳದ ೫೩ (೧೪೩) ನೆಯ ಶಾಸನದಲ್ಲಿ ಒಬ್ಬ ಬಲದೇವ ದಂಡನಾಯಕನ ಪ್ರಸ್ತಾವವನ್ನು ಮಾಡಿ, ಇವನ ಮತ್ತು ಇವನ ಹೆಂಡತಿ ಮಕ್ಕಳು ಮುಂತಾದ ಇವನ ಬಂಧುಗಳ ಸ್ತುತಿಯು ಹೇಳಲ್ಪಟ್ಟಿರುವುದು. ಈ ಬಲದೇವ ದಂಡ ನಾಯಕನು 'ಜಿನಸಮಯ ಮಹಾಗಗನ ಶೋಭಾಕರ ದಿವಾಕರ', 'ಜಿನಧರ್ಮ ನಿರ್ಮಳ', 'ಜಿನಗಂಧೋದಕಪವಿತ್ರೀಕೃತೋತ್ತಮಾಂಗಂ' 'ಜಿನಧರ್ಮಕಥಾಕಥನ ಪ್ರಮೋದಂ' ಎಂದೂ, ಇವನ ಮಗನಾದ ಹೆಗ್ಗಡೆ ಸಿಂಗಿಮಯ್ಯನು 'ಜಿನಪತಿ ಭಕ್ತಂ, ಜಿನಧರ್ಮಾಂಬರತಿಗ್ಮರೋಚಿ' ಎಂದೂ ಇವನ ಮಗಳು ಮಾಚಿಕಬ್ಬೆಯು 'ಜಿನಚರಣಭಕ್ತೆ', 'ಜಿನಪದಭಕ್ತೆ' ಎಂದೂ ಈ ಶಾಸನದಲ್ಲಿ ಹೇಳಲ್ಪಟ್ಟಿದ್ದು, ಈ ಮಾಚಿಕಬ್ಬೆಯು 'ಜಿನಚರಣಾಂಭೋಜಮಮಂ ಭಾವಿಸುತ್ತಂ', 'ಜಿನನಂ ಮನದೊಳು ಧ್ಯಾನಿಸುತ್ತಂ' ಸನ್ಯಸನಮಂ ಕೈಕೊಂಡು ಮುಡಿಪಿದಳೆಂದು ಹೇಳಲ್ಪಟ್ಟಿರುವುದು. ಆದುದರಿಂದ ಈ ಬಲದೇವದಂಡನಾಯಕನೂ, ಇವನ ಮಗ ಹೆಗ್ಗಡೆ ಸಿಂಗಿಮಯ್ಯನೂ, ಮಗಳು ಮಾಚಿಕಬ್ಬೆಯೂ ಜಿನಭಕ್ತರೆಂಬುದು ಸ್ಪಷ್ಟವಷ್ಟೆ. ಈ ಬಲದೇವ ದಂಡನಾಯಕನ ಅಳಿಯ ಎಂದರೆ ಈ ಮಾಚಿಕಬ್ಬೆಯ ಗಂಡನಾದ ಹೆಗ್ಗಡೆ ಮಾರ ಸಿಂಗಯ್ಯನಾದರೆ ಶಿವಪೂಜಕನಾಗಿದ್ದನೆಂದು ಇದೇ ಶಾಸನದಲ್ಲಿರುವ—

ಹರಪಾದಾಂಬುಜಭಕ್ತಿಯೊಳ್ ನಿಯಮದೊಳ್ ಶೀಲಂಗಳೊಳ್ ತಾನೆನಲ್ |
ಸುರಲೋಕಕ್ಕೆ ಮನೋಮುದಂಬೆರಸು ಪೋದಂ ಭೂತಳಂ ಕೀರ್ತಿಸಲ್ ||

ಎಂಬ ಪದ್ಯಭಾಗದಿಂದಲೂ, ಹಾಸನದ ೧೧೬ ನೇ ಶಾಸನದ ೪೭ ನೆಯ ಪಂಕ್ತಿಯಲ್ಲಿ ಪೆರ್ಗಡೆ ಮಾರಸಿಂಗಯ್ಯನು (ಗ್ರಾಮದಲ್ಲಿ) ಧರ್ಮೇಶ್ವರ ದೇವಾಲಯವನ್ನು* ಮಾಡಿಸಿದನೆಂದು ಹೇಳಲ್ಪಟ್ಟಿರುವುದರಿಂದಲೂ ಕೂಡ ವ್ಯಕ್ತವಾಗುವುದು. ಈ ಬಲದೇವ ದಂಡನಾಯಕನ ಮೊಮ್ಮಗಳು ಎಂದರೆ, ಮೇಲೆ ಹೇಳಿದ ಪೆರ್ಗಡೆ ಮಾರಸಿಂಗಯ್ಯ ಮಾಚಿಕಬ್ಬೆಯರ ಪುತ್ರಿಯಾದ ಶಾಂತಲದೇವಿಯು ಇದೇ ಶ್ರವಣ ಬೆಳ್ಗೊಳದ ೫೩ (೧೪೩) ನೆಯ ಶಾಸನದಲ್ಲಿ 'ಚತುಸ್ಸಮಯ ಸಮುದ್ಧರಣೆ' ಎಂದರೆ, ಶೈವ-ವೈಷ್ಣವ-ಬೌದ್ಧಾರ್ಹತಗಳೆಂಬ ನಾಲ್ಕು ಮತಗಳ ಸಮುದ್ಧಾರಕಳೆಂದು ಸ್ತುತಳಾಗಿರುವಳು. ಈ ವಿಶೇಷಣವು ಸ್ತುತಿಮಾತ್ರವಲ್ಲದೆ ಅನ್ವರ್ಥವಾದು

* ಈ ದೇವಾಲಯವು ಈಗಲೂ ಇರುವುದು.

ದೆಂಬ ವಿಷಯವು ಈಕೆಯು ಶ್ರವಣಬೆಳ್ಗೊಳದಲ್ಲಿ ಕಟ್ಟಿಸಿದ ಸವತಿಗಂಧವಾರಣ ಬಸದಿಯಿಂದಲೂ ಮತ್ತು ಈ ೫೩ನೆಯ ಶಾಸನದಲ್ಲಿ ಹೇಳಿರುವ 'ಜಿನಸಮಯ ಸಮುದಿತಪ್ರಾಕಾರೆ', 'ಜಿನಧರ್ಮಕಥಾಕಥನಪ್ರಮೋದೆ', 'ಜಿನಗಂಧೋದಕ ಪವಿತ್ರೀಕೃತೋತ್ತಮಾಂಗೆ' ಎಂಬ ವಿಶೇಷಣಗಳಿಂದಲೂ, ಇವಳು ಈಶಾಪುರದಲ್ಲಿ ರಾಮೇಶ್ವರ ದೇವಾಲಯವನ್ನು ಕಟ್ಟಿಸಿದುದರಿಂದಲೂ, * ಹಾಸನದ ೧೧೬ ಬೇಲೂರು ೧೬ ಮತ್ತು ೫೮ನೆಯ ಶಾಸನಗಳಲ್ಲಿ ಇವಳಿಗೆ ಹೇಳಿರುವ 'ನಗರಾಜ ನಂದಿನೀಪಾದಾರವಿಂದ ವಂದನಾಭಿರುಚಿ' ಎಂಬ ವಿಶೇಷಣದಿಂದಲೂ ಮತ್ತು ಬೇಲೂರಿನ ಕೇಶವದೇವಾಲಯದಲ್ಲಿ 'ಕಪ್ಪೆ' ಚೆನ್ನಿಗರಾಯಸ್ವಾಮಿಯನ್ನು ಈಕೆ ಪ್ರತಿಷ್ಠೆಮಾಡಿದುದರಿಂದಲೂ (ಮ|| ಆರ್. ನರಸಿಂಹಾಚಾರ್ಯರು ಬರೆದ ೧೯೧೧ ನೇ ವರ್ಷದ ಮೈಸೂರು ಆರ್ಕೆಯಾಲಾಜಿಕಲ್ ರಿಪೋರ್ಟಿನ ೪೩ ನೇ ಪುಟವನ್ನು ನೋಡಿ) ಕೂಡ ಸ್ಪಷ್ಟವಾಗುವುದು. ಬೌದ್ಧಸಮಯವನ್ನು ಈಕೆಯು ಯಾವ ಪ್ರಕಾರದಲ್ಲಿ ಉದ್ಧರಿಸಿದಳೆಂಬುದು ನಮಗೆ ತಿಳಿಯದು.

---

* ಈ ದೇವಾಲಯವನ್ನು ಈಕೆ ಕಟ್ಟಿಸಿದಳೆಂಬ ಅಂಶವು ಬೇಲೂರು ೧೬ ನೆಯ ಮತ್ತು ೫೮ನೆಯ ಶಾಸನಗಳಲ್ಲಿ ಈಕೆಗೆ ಹೇಳಿರುವ 'ಈಶಾಪುರರಚಿತರಾಮೇಶ್ವರಪ್ರಾಸಾದೆ' ಎಂಬ ವಿಶೇಷಣದಿಂದ ವ್ಯಕ್ತವಾಗುತ್ತದೆ.

ಮೇಲೆ ಹೇಳಿದ ಈ ವಿಶೇಷಣವಲ್ಲದೆ 'ಧರ್ಮೇಶ್ವರದೇವಲಬ್ಧವರ ಪ್ರಸಾದೆ', 'ಬಲಿಪುರ ವರಕ್ಷೀರವಾರಾಶಿಜನಿತಕಮಲೆ' ಎಂಬ ಎರಡು ವಿಶೇಷಣಗಳೂ ಈ ಎರಡು ಶಾಸನಗಳಲ್ಲಿ (ಯೂ ಇತರ ಶಾಸನಗಳಲ್ಲಿಯೂ) ಇವಳಿಗೆ ಹೇಳಲ್ಪಟ್ಟಿರುವುವು. ಇವುಗಳಲ್ಲಿ ಒಂದನೆಯದಾದ 'ಧರ್ಮೇಶ್ವರದೇವಲಬ್ಧವರ ಪ್ರಸಾದೆ' ಎಂಬುದರಿಂದ ಧರ್ಮೇಶ್ವರನ (ಎಂದರೆ ಮಾರಸಿಂಗಯ್ಯನು ಪ್ರತಿಷ್ಠೆ ಮಾಡಿದ ಧರ್ಮೇಶ್ವರದೇವರ) ವರಪ್ರಸಾದದಿಂದ ಹೆಗ್ಗಡೆ ಮಾರಸಿಂಗಯ್ಯನಿಗೆ ಈ ಮಗಳು ಹುಟ್ಟಿದ ಳೆಂದು ದ್ಯೋತಿಸಲ್ಪಡುವದು.

ಈ ವಿಷಯವು ಹಾಸನದ ೧೧೬ನೆಯ ಶಾಸನದಲ್ಲಿ 'ಧರ್ಮೇಶ್ವರವರಪ್ರಸಾದ ಪುತ್ರಿ' ಎಂಬ ವಿಶೇಷಣದಲ್ಲಿ ಸ್ಪಷ್ಟವಾಗಿಯೇ ಹೇಳಲ್ಪಟ್ಟಿರುವುದು

ಎರಡನೆಯದಾದ 'ಬಲಿಪುರಕ್ಷೀರವಾರಾಶಿಜನಿತಕಮಲೆ' ಎಂಬ ವಿಶೇಷಣದಿಂದ ಈ ಶಾಂತಲ ದೇವಿಯು ಬಲಿಪುರದಲ್ಲಿ ಎಂದರೆ, ಈಗಿನ ಶಿಕಾರಿಪುರದ ತಾಲ್ಲೋಕಿನಲ್ಲಿರುವ ಬೆಳಗಾಮೆಯಲ್ಲಿ ಹುಟ್ಟಿದಳೆಂದು ಸೂಚಿಸಲ್ಪಟ್ಟಂತಿರುವುದು. ಈ ಬೆಳಗಾಮೆಯು ಆ ಕಾಲದಲ್ಲಿ ಬನವಸೆ ೧೨೦೦೦ ದ ಸೀಮೆಗೆ ರಾಜಧಾನಿಯೂ, ಬಹುದೊಡ್ಡ ಪಟ್ಟಣವೂ, ಕಾಳಾಮುಖಶೈವರಿಂದ ಸಮಾಶ್ರಿತವಾದ ಸ್ಥಾನ ಗಳಲ್ಲಿ ಮುಖ್ಯವಾದ ಒಂದು ಸ್ಥಾನವೂ ಆಗಿತ್ತೆಂದು ನಾನು 'ಎ ಟ್ವೆಲ್ಫ್ತ್ ಸೆಂಚುರಿ ಯೂನಿವರ್ಸಿಟಿ ಇನ್ ಮೈಸೂರ್' (ಮಿಥಿಕ್ ಸೊಸೈಟಿ ಜರ್ನಲ್, ೭ ನೇ ಸಂಪುಟ) ಎಂಬ ಲೇಖನದಲ್ಲಿ ನಿರೂಪಿಸಿ ರುವೆನು. ಈ ಶಾಂತಲದೇವಿಯ ಮೊಮ್ಮಗನಾದ ಹೊಯ್ಸಳಚಕ್ರವರ್ತಿ ವೀರಬಲ್ಲಾಳನ ಅರಸಿಗಳಲ್ಲಿ ಒಬ್ಬಳಾದ ಅಭಿನವಕೇತಲದೇವಿಯು ಕೂಡ ಈ ಬೆಳಗಾಮೆಯ ಸಮೀಪದಲ್ಲಿರುವ ಬಂದನಿಕೆ ಅಥವಾ ಬಾಂಧವಪುರ ಎಂಬ ಊರಿನವಳು (ಪೂರ್ವೋಕ್ತ ಲೇಖನದ ೨೦ನೆಯ ಪುಟವನ್ನು ನೋಡಿ).

ಈ ಶಾಂತಲದೇವಿಯ ಪತಿಯಾದ ವಿಷ್ಣುವರ್ಧನ-ಬಿಟ್ಟಿದೇವ ಹೊಯ್ಸಳನು ವಿಷ್ಣುಭಕ್ತನಾಗಿದ್ದನೆಂದು ಬೇಲೂರು ೫೮, ಬೇಲೂರು ೭೧, ಹಾಸನ ೬೯, ಮೊದಲಾದ ಅನೇಕ ಶಾಸನಗಳಲ್ಲಿ ಇವನಿಗೆ ಹೇಳಿರುವ 'ಶ್ರೀಮನ್ಮುಕುಂದಪಾದಾರವಿಂದವಂದನವಿನೋದನುಂ' ಎಂಬ ವಿಶೇಷಣದಿಂದಲೂ ಮತ್ತು ಇವನು ಗದಗು, ಬೇಲೂರು, ತಲಕಾಡು ಮೊದಲಾದ ಊರುಗಳಲ್ಲಿ ವಿಷ್ಣುದೇವಾಲಯಗಳನ್ನು ಕಟ್ಟಿಸಿದ್ದರಿಂದಲೂ ಸ್ಪಷ್ಟವಾಗುವುದು. ಮೇಲೆ ಹೇಳಿದ ಶಾಂತಲದೇವಿಯ ಮರಣಾನಂತರ ಇವನು 'ಶಿವಧರ್ಮಶ್ರೀತಿಲಕೆ' ಯಾದ ಜಕ್ಕಿಯಬ್ಬೆಯೆಂಬವಳ ಮಗಳಾದ ಚಿಕ್ಕಶಾಂತಲದೇವಿಯನ್ನು ಮದುವೆಯಾದನೆಂದೂ, ಇವಳೂ ಇವಳ ಮಗಳೂ ಪರಲೋಕಕ್ಕೆ ಹೋಗಲಾಗಿ, ಇವರಿಗೆ ಪರೋಕ್ಷವಿನಯವಾಗಿ ಈ ಜಕ್ಕಿಯಬ್ಬೆಯು ಕಟ್ಟಿಸಿದ ಶಿವದೇವಾಲಯಕ್ಕೆ ವಿಷ್ಣುವರ್ಧನನು ದತ್ತಿಯನ್ನು ಕೊಟ್ಟನೆಂದೂ ಹಾಸನದ ೬೯ ನೇ ಶಾಸನದಲ್ಲಿ ಹೇಳಿರುವುದು. ವಿಷ್ಣುಭಕ್ತನಾದ ಈ ವಿಷ್ಣುವರ್ಧನನ ಪುತ್ರಿಯರಲ್ಲಿ ಒಬ್ಬಳಾದ ಹರಿಯವೆ ಅಥವಾ ಹರಿಯಬ್ಬರಸಿಯು 'ಭಗವದರ್ಹತ್ಪರಮೇಶ್ವರಚರಣನಖಮಯೂಖಲೇಖಾವಿಳಸಿತಲಲಾಟಫಲಕೆ' ಎಂದರೆ ಜಿನಭಕ್ತಳೂ, ಗಂಡವಿಮುಕ್ತಸಿದ್ಧಾಂತದೇವನ ಗುಡ್ಡಿಯೂ, ಆಗಿದ್ದಳೆಂದೂ ಹಂತಿಯೂರಿನಲ್ಲಿ ಒಂದು ಜಿನಬಸದಿಯನ್ನು ಕಟ್ಟಿಸಿದಳೆಂದೂ ಮೂಡಗೆರೆಯ ೨೨ ನೇ ಶಾಸನದಲ್ಲಿ ಹೇಳಿರುವುದು.

ಹೀಗೆ ಮೇಲೆ ಹೇಳಿದ ನಿದರ್ಶನಗಳಿಂದ ಕ್ರಿ. ಶ. ೧೦-೧೩ ನೇ ಶತಮಾನಗಳಲ್ಲಿ ಜಿನಭಕ್ತನಾದ ಒಬ್ಬ ಮನುಷ್ಯನ ಅಳಿಯ, ಮೊಮ್ಮಗಳು ಇತ್ಯಾದಿ ಬಂಧುಗಳು ಜಿನದೇವತೆಯನ್ನಲ್ಲದೆ ಇತರ ದೇವತೆಗಳನ್ನು ಪೂಜಿಸುತ್ತಿದ್ದರೆಂಬುದು ನಿರ್ವಿವಾದವಾಗಿ ವ್ಯಕ್ತವಾಗುವುದಷ್ಟೆ. ವಸ್ತುತಃ ಆ ಕಾಲದಲ್ಲಿ ಹುಟ್ಟಿದ ಗ್ರಂಥಗಳಲ್ಲಿ ಅಥವಾ ಶಾಸನಗಳಲ್ಲಿ ಒಬ್ಬ ಮನುಷ್ಯನು ಭಗವದರ್ಹತ್ಪರಮೇಶ್ವರನನ್ನು ಪೂಜಿಸುತ್ತಿದ್ದನೆಂದು, ಒಂದು ಜಿನಬಸದಿಗೆ ದತ್ತಿಯನ್ನು ಕೊಟ್ಟನೆಂದು ಅಥವಾ ಜಿನಬಸದಿಯನ್ನು ಕಟ್ಟಿಸಿದನೆಂದು ಹೇಳಿದಮಾತ್ರದಿಂದಲೇ ಅಂಥವನು 'ಜೈನ' ನೆಂದೂ ಶಿವವಿಷ್ಣ್ವಾದಿದೇವತೆಗಳನ್ನು ಪೂಜಿಸುತ್ತಿರಲಿಲ್ಲವೆಂದೂ ನಿರ್ಧರಮಾಡುವುದೇ ಅಯುಕ್ತವಾಗಿರುವುದು.

ಈಗಿನಕಾಲದಲ್ಲೇನೋ ಜಿನಭಕ್ತರಾಗಿರುವವರು ಶಿವ ವಿಷ್ಣ್ವಾದಿಗಳಿಗೆ ಮನ್ನಣೆಯನ್ನು ಮಾಡುವುದಿಲ್ಲವೆಂಬುದೂ ಶಿವ ವಿಷ್ಣ್ವಾದಿ ಭಕ್ತರು ಜಿನನಿಗೆ ಮನ್ನಣೆಯನ್ನು ಮಾಡುವುದಿಲ್ಲವೆಂಬುದೂ ವಾಸ್ತವವೇ ಆಗಿರುವುದು. ಕ್ರಿ. ಶ. ೧೦-೧೩ ನೇ ಶತಮಾನಗಳಲ್ಲಿನ ಸ್ಥಿತಿಯಾದರೆ ಹೀಗಿರಲಿಲ್ಲ. ಆಗ ಜಿನಭಕ್ತರು ಶಿವ ವಿಷ್ಣ್ವಾದಿ

ದೇವತೆಗಳಿಗೆ ಮನ್ನಣೆಮಾಡುತ್ತಿದ್ದರೆಂದೂ, ಶಿವ ವಿಷ್ಣ್ವಾದಿ ದೇವತಾಭಕ್ತರು ಜಿನನಿಗೆ ಮನ್ನಣೆಮಾಡುತ್ತಿದ್ದರೆಂದೂ ಆ ಕಾಲದಲ್ಲಿ ಹುಟ್ಟಿದ ಅನೇಕ ಶಾಸನಗಳಿಂದ ವ್ಯಕ್ತವಾಗುವುದು. ಇಂತಹ ಕೆಲವು ನಿದರ್ಶನಗಳನ್ನು ಈ ಶಾಸನಗಳಿಂದ ಇಲ್ಲಿ ನಾವು ಉದಾಹರಿಸುವೆವು :—

೧. ವಿಷ್ಣುವರ್ಧನ-ಬಿಟ್ಟಿದೇವನ ಸೇನಾನಾಯಕರಲ್ಲಿ ಪ್ರಧಾನನಾಗಿದ್ದು, 'ಸಮಧಿಗತಪಂಚಮಹಾಶಬ್ದ ಮಹಾಸಾಮಂತಾಧಿಪತಿ, ಮಹಾಪ್ರಚಂಡದಂಡನಾಯಕ, ದ್ರೋಹಘರಟ್ಟ, ಹೊಯ್ಸಲರಾಜ್ಯಸಮುದ್ಧರಣ' ಮೊದಲಾದ ಬಿರುದುಗಳುಳ್ಳ ಗಂಗರಾಜದಂಡನಾಯಕನು ಜಿನಭಕ್ತಾಗ್ರೇಸರನಾಗಿದ್ದನೆಂದು ಅನೇಕ ಶಾಸನಗಳಲ್ಲಿ* ಹೇಳಲ್ಪಟ್ಟಿರುವುದು. ಇವನು ಕ್ರಿ.ಶ. ೧೧೨೦ ರಲ್ಲಿ ಜಯಂಗೊಂಡೇಶ್ವರ ದೇವರಿಗೆ † (ಶಿವದೇವರಿಗೆ) ಒಂದು ದತ್ತಿಯನ್ನು ಬಿಟ್ಟನೆಂದು ಚನ್ನರಾಯಪಟ್ಟಣದ ೨೬೦ ನೇ ಶಾಸನದಲ್ಲಿ ಹೇಳಿರುವುದು; ಮತ್ತು ನವಿಲೆಯಲ್ಲಿರುವ ನಾಗೇಶ್ವರದೇವರಿಗೆ ಭೂಮಿಯನ್ನು ಕೊಟ್ಟನೆಂದು ಚನ್ನರಾಯಪಟ್ಟಣದ ೨೧೨, ೨೧೩ ನೇ ಶಾಸನಗಳಲ್ಲಿ ಹೇಳಿರುವುದು. ೨. ಈ ಗಂಗರಾಜದಂಡನಾಯಕನ ಮಗನಾದ ಬೊಪ್ಪದಂಡನಾಯಕನೂ, ಗಂಗರಾಜನ ಅಣ್ಣನಾದ ಬಮ್ಮದೇವ ದಂಡನಾಯಕನ ಸತಿಯಾದ ಬಾ (ಭಾ) ಗಣಬ್ಬೆಯೂ ಅವನ ಮಗನಾದ ಏಚದಂಡನಾಯಕನೂ ಹೀಗೆಯೇ ಜಿನಭಕ್ತರಾಗಿದ್ದರೆಂದು ಚನ್ನರಾಯಪಟ್ಟಣದ ೨೪೮ ನೆಯ ಬೇಲೂರು ೧೨೪ ನೆಯ ಮತ್ತು ಶ್ರವಣಬೆಳ್ಗೊಳದ ೧೪೪ ನೆಯ ಶಾಸನಗಳಲ್ಲಿ ಹೇಳಿರುವುದು; ಮತ್ತು ಈ ಬೊಪ್ಪದಂಡನಾಯಕನು ತನ್ನ ತಂದೆಯಾದ ಗಂಗರಾಜನು ಲೋಕಾಂತರವನ್ನೈದಲು ಅವನಿಗೆ ಪರೋಕ್ಷವಿನಯವಾಗಿ ದೋರಸಮುದ್ರದಲ್ಲಿ ಪಾರ್ಶ್ವನಾಥಜಿನಾಲಯವೆಂಬ ಬಸದಿಯನ್ನು ಕಟ್ಟಿಸಿದನೆಂದು ಈ ಬೇಲೂರು ೧೨೪ ನೇ ಶಾಸನದಲ್ಲಿ ಹೇಳಿರುವುದು. ಮೇಲೆ ಹೇಳಿದ ಚನ್ನರಾಯಪಟ್ಟಣದ ೨೪೮ನೇ ಶಾಸನದಲ್ಲಾದರೆ ಈ ಬೊಪ್ಪದಂಡನಾಯಕನೂ ಮತ್ತು ಮೇಲೆ ಹೇಳಿದ ಏಚದಂಡ

---

* ಶ್ರವಣಬೆಳ್ಗೊಳದ ೪೩, ೪೪, ೪೫, ೪೭, ೫೯, ೬೫, ೯೦, ೧೪೪, ೨೫೧, ೩೮೪ ಮತ್ತು ೩೯೭ ನೆಯ ಶಾಸನಗಳು; ಬೇಲೂರು ೧೨೪ ನೇ ಶಾಸನ.

† ಈ ಜಯಂಗೊಂಡೇಶ್ವರದೇವರಿಗೆ ಗಂಗರಾಜದಂಡನಾಯಕನಲ್ಲದೆ ವಿಷ್ಣುವರ್ಧನ-ಬಿಟ್ಟಿದೇವನೂ ಇವನ ಪಟ್ಟಮಹಾದೇವಿ ಶಾಂತಲದೇವಿಯೂ ಮಹಾಪ್ರಧಾನ ದಾವಪನೂ ಮಹಾಪ್ರಧಾನ ಹುಣಿಸಿಮಯ್ಯ ದಂಡನಾಯಕನೂ ದತ್ತಿಗಳನ್ನು ಕೊಟ್ಟಂತೆ ಈ ಶಾಸನದಲ್ಲಿ ಹೇಳಿರುವುದನ್ನು ನೋಡಿದರೆ, ಈ ಜಯಂಗೊಂಡೇಶ್ವರದೇವರನ್ನು ವಿಷ್ಣುವರ್ಧನ-ಬಿಟ್ಟಿದೇವನೇ ತನಗೆ ಯುದ್ಧದಲ್ಲಿ ಜಯವಾದುದಕ್ಕಾಗಿ ಪ್ರತಿಷ್ಠೆಮಾಡಿದನೆಂದು ಊಹಿಸಬೇಕಾಗಿರುವುದು.

ನಾಯಕ ಭಾಗಣಬ್ಬೆಯರೂ ' ಬೆಳ್ಗಲಿಯ ಮೂಲಸ್ಥಾನದ ಗಂಗೇಶ್ವರದೇವರ್ಗೆ... ಮಹದೇವಶಕ್ತಿಯೆತ್ತಿಸಿದ ದೇವಾಲ್ಯಕ್ಕೆ ' ಒಂದು ದತ್ತಿಯನ್ನು ಕೊಟ್ಟಂತೆ ಹೇಳಿರುವುದು. ಹೀಗೆಯೇ ಈ ಬೊಪ್ಪದಂಡನಾಯಕನು ಆಸಂದಿನಾಡಿನಲ್ಲಿರುವ ಕೊಂಡಲಿಯನ್ನು ' ತನ್ನ ಹೆಸರಿಂ ದ್ರೋಹಘರಟ್ಟಚತುರ್ವೇದಿ ಮಂಗಲಮೆಂದು ಪೆಸರನಿಟ್ಟು ' ಒಂದು ಮಹಾಗ್ರಹಾರವನ್ನಾಗಿ ಮಾಡಿ ೫೨ ಬ್ರಾಹ್ಮಣರಿಗೆ* ಕೊಟ್ಟನೆಂದೂ, ಈ ಏಚದಂಡನಾಯಕನು ಕ್ರಿ. ಶ. ೧೧೩೭ ರಲ್ಲಿ ಲಾಲನಕೆರೆಯಲ್ಲಿರುವ ಮಲ್ಲಿಕಾರ್ಜುನ ದೇವರಿಗಾಗಿ ಒಂದು ದತ್ತಿಯನ್ನು ಬಿಟ್ಟನೆಂದೂ ಬೇಲೂರು ೧೩೭ ನೆಯ ಮತ್ತು ನಾಗಮಂಗಲದ ೨೮ ನೆಯ ಶಾಸನಗಳಲ್ಲಿ† ಹೇಳಿರುವುದು.

೩. ಹೊಯ್ಸಳರಾಜನಾದ ಒಂದನೇ ನರಸಿಂಹನ ಬಳಿಯಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ಹಿರಿಯಭಂಡಾರಿಯಾಗಿದ್ದ ಹುಳ್ಳ (ಹುಳ್ಳಪ-ಹುಳ್ಳಮಯ್ಯ) ದಂಡನಾಯಕನು ಜಿನಭಕ್ತಾಗ್ರೇಸರನೆಂದೂ ಎರಡನೇ ಗಂಗರಾಜನಾಗಿದ್ದನೆಂದೂ ಶ್ರವಣಬೆಳ್ಗೊಳದ ೪೨, ೧೩೭, ೧೩೮ ಮೊದಲಾದ ಶಾಸನಗಳಲ್ಲಿ ಹೇಳಲ್ಪಟ್ಟು ಇವನು ಶ್ರವಣಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿ, ಇವನೂ ಇವನ ತಮ್ಮಂದಿರಾದ ಲಕ್ಷ್ಮಣ ಅಮರೇಶ್ವರರೂ ನರಸಿಂಹದೇವನನ್ನು ಬೇಡಿಕೊಂಡು ತಮ್ಮ ಸುಂಕದ ಅಧಿಕಾರದಂದು ಕೆಲವು ತೆರಿಗೆಗಳನ್ನು ಜಿನಾಲಯಕ್ಕಾಗಿ ಅವನ ಕೈಯಿಂದ ಬಿಡಿಸಿದರೆಂದು ಈ ೧೩೮ ನೇ ಶಾಸನದಲ್ಲಿ§ ಹೇಳಿರುವುದು. ಗುಬ್ಬಿ ೧೨ ನೇ ಶಾಸನದಲ್ಲಿ

---

* ಈ ದ್ರೋಹಘರಟ್ಟಚತುರ್ವೇದಿಮಂಗಲದ ಮಹಾಜನಗಳು—' ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನುಷ್ಠಾನ ಜಪಸಮಾಧಿ ಶೀಲಗುಣ ಸಂಪನ್ನರೌಪಾಸನಾಗ್ನಿಹೋತ್ರದ್ವಿಜಗುರುದೇವತಾಪೂಜಾತತ್ಪರರುಂ ಮಾರ್ತಾಂಡೋಜ್ವಳಕೀರ್ತಿಯುತರುಂ ಋಗ್ಯಜುಸ್ಸಾಮಾಥರ್ವಣವೇದವೇದಾರ್ಥ ಸಕಳಶಾಸ್ತ್ರಪಾರಾವಾರಾಯಿತರುಮಪ್ಪ ಕೊಂಡಲಿಯ ಶ್ರೀಮದಶೇಷಮಹಾಜನಂಗಳ್ ' ಎಂದು ಬೇಲೂರು ೧೪೦ ನೇ ಶಾಸನದಲ್ಲಿ ವರ್ಣಿತರಾಗಿರುವರು.

† ಈ ಬೊಪ್ಪದಂಡನಾಯಕನೂ ಏಚದಂಡನಾಯಕನೂ ಗಂಗರಾಜನ ಮಗನೆಂದೂ ಅವನ ಅಣ್ಣನ ಮಗನೆಂದೂ ಈ ಶಾಸನಗಳಲ್ಲಿ ಹೇಳಲ್ಪಟ್ಟಿಲ್ಲವಾದರೂ ಈ ದಂಡನಾಯಕರಿಗೆ ಈ ಶಾಸನಗಳಲ್ಲಿ ಹೇಳಿರುವ ' ದ್ರೋಹಘರಟ್ಟ ', ' ಹೊಯ್ಸಳರಾಜ್ಯಸಮುದ್ಧರಣ ' ಮೊದಲಾದ ಬಿರುದುಗಳಿಂದ ಈ ಅಂಶವನ್ನು ನಾವೇ ಊಹಿಸಬಹುದು. ಎಂದರೆ, ಈ ಶಾಸನಗಳಲ್ಲಿ ಹೇಳಲ್ಪಟ್ಟಿರುವ ಏಚದಂಡನಾಯಕನೂ ಮತ್ತು ಬೊಪ್ಪದಂಡನಾಯಕನೂ ಗಂಗರಾಜನ ಅಥವಾ ಅವನ ಅಣ್ಣನ ಪುತ್ರರಾಗಿದ್ದರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

§ ಈ ಲಕ್ಷ್ಮಣ-ಅಮರೇಶ್ವರರೂ ಹುಳ್ಳನಂತೆಯೇ ಹೊಯ್ಸಳನರಸಿಂಹನ ಬಳಿಯಲ್ಲಿ ಮಹಾಪ್ರಧಾನರೂ ದಂಡನಾಯಕರೂ ಆಗಿದ್ದರೆಂದು ಗುಬ್ಬಿ ೧೨ ನೆಯ ಶಾಸನದಿಂದ ತಿಳಿದುಬರುವುದು. ಶ್ರವಣಬೆಳ್ಗೊಳದ ಈ ೧೩೮ ನೇ ಶಾಸನದಲ್ಲಿ ಈ ಲಕ್ಷ್ಮಣ ದಂಡನಾಯಕನು ೪೧ನೇ ಪಂಕ್ತಿಯಲ್ಲಿ ' ಲಕ್ಷ್ಮಣ ' ಎಂಬ ಹೆಸರಿನಿಂದಲೂ ೬೯ ನೇ ಪಂಕ್ತಿಯಲ್ಲಿ ' ಹೆಗ್ಗಡೆ ಲಕ್ಕಯ್ಯ ' ಎಂದೂ ವ್ಯವಹೃ

ಇದೇ ಹುಳ್ಳಪ-ದಂಡನಾಯಕನೂ ಮತ್ತು ಲಕ್ಷ್ಮಣ-ಅಮರೇಶ್ವರದಂಡನಾಯಕರೂ ಆದಲಗೆರೆಯಲ್ಲಿರುವ ಕಲ್ಲೇಶ್ವರ ಮತ್ತು ಬ್ರಹ್ಮೇಶ್ವರ ದೇವರುಗಳ ಪೂಜಾನೈವೇದ್ಯಾದಿಗಳಿಗಾಗಿ ಸ್ವಲ್ಪ ಭೂಮಿಯನ್ನು ಬಿಟ್ಟರೆಂದು ಹೇಳಿರುವುದು.* ಈ ಶಾಸನದಲ್ಲಿರುವ 'ಆ ವಿಭುಗಳು ಸುಖದೊದವಿಂ' ಎಂದು ಮೊದಲಾಗುವ ಪದ್ಯವನ್ನೂ, ಶ್ರವಣ

ತನಾಗಿರುವನು. ಅಮರೇಶ್ವರ ದಂಡನಾಯಕನು ೪೧ ನೇ ಪಂಕ್ತಿಯಲ್ಲಿ 'ಅಮರ' ಎಂದು ವ್ಯವಹೃತನಾಗಿರುವನು. ೬೯ ನೇ ಪಂಕ್ತಿಯಲ್ಲಾದರೆ ಇವನ ಹೆಸರಿನ ಆದಿಯಲ್ಲಿರುವ 'ಅ' ಎಂಬ ಅಕ್ಷರವೊಂದೇ ಸ್ಪಷ್ಟವಾಗಿದ್ದು ಇತರ ಅಕ್ಷರಗಳು ಲುಪ್ತಗಳಾಗಿರುವುವು.

* ಈ ಶಾಸನದಲ್ಲಿ ಈ ಹುಳ್ಳ-ಲಕ್ಷ್ಮಣ-ಅಮರೇಶ್ವರರು ವಾಜಿವಂಶದ ನಾಗವರ್ಮನ ಮತ್ತು ಅವನ ಸತಿ ಭಾಗ[ಲದೇವಿ]ಯ ಪುತ್ರರೆಂದು ಹೇಳಿರುವುದು. ಶ್ರವಣಬೆಳ್ಗೊಳದ ೧೩೮ ನೇ ಶಾಸನದಲ್ಲಾದರೆ ಲಕ್ಷ್ಮಣ-ಅಮರೇಶ್ವರರ ಅಣ್ಣನಾದ ಈ ಹುಳ್ಳದಂಡನಾಯಕನು ವಾಜಿವಂಶದ ಜಕ್ಕಿರಾಜ ಅಥವಾ ಯಕ್ಷರಾಜನ ಮತ್ತು ಅವನ ಸತಿ ಲೋಕಾಂಬಿಕೆಯ ಪುತ್ರರೆಂದು ಹೇಳಲ್ಪಟ್ಟಿರುವುದು. ಹೀಗೆಯೇ ನಾಗಮಂಗಲದ ೩೦ ನೇ ಶಾಸನದಲ್ಲಿ ಮಹಾಪ್ರಧಾನ ಕಂಟಿಮಯ್ಯನು ಈ ಹುಳ್ಳದಂಡನಾಯಕನ ಅಣ್ಣನೆಂದು ಹೇಳಲ್ಪಟ್ಟು ಈ ಕಂಟಿಮಯ್ಯನೂ, ಇವನ ತಮ್ಮ [ಮಹಾಪ್ರಧಾನ-ದಂಡನಾಯಕ ಚೊಕ್ಕಣ್ಣನೂ] ದಂಡನಾಯಕ-ಹರಿಯಣ್ಣನೂ ವಾಜಿವಂಶದ ಮಧುಸೂದನನ, ಮತ್ತು ಅವನ ಸತಿ ಮುದ್ದಿಯಕ್ಕನ ಪುತ್ರರೆಂದು ಹೇಳಲ್ಪಟ್ಟಿರುವುದು.

ಸಹೋದರರಲ್ಲಿ ಒಬ್ಬನಿಗೆ ಹುಟ್ಟಿದ ಮಕ್ಕಳನ್ನು ಇನ್ನೊಬ್ಬನ ಮಕ್ಕಳೆಂದು ವ್ಯವಹಾರ ಮಾಡುವುದು ಕನ್ನಡ ಶಾಸನಗಳಲ್ಲಿ ಬಳಕೆಯಾಗಿರುವುದರಿಂದ (ಈ ವಿಷಯದಲ್ಲಿ ನಾಗಮಂಗಲ ೩೨ ನೇ ಶಾಸನದಲ್ಲಿಯೂ ಚಿಕ್ಕಮಗಳೂರ ೧೬೦ ನೇ ಶಾಸನದಲ್ಲಿಯೂ ಮರಿಯಾನೆ-ಭರತದಂಡನಾಯಕರ ತಾಯಿತಂದೆಗಳ ಹೆಸರುಗಳು ಬೇರೆ ಬೇರೆಯಾಗಿ ಕೊಡಲ್ಪಟ್ಟಿರುವುದನ್ನು ನೋಡಿ) ಮೇಲೆ ಹೇಳಿದ ಶಾಸನಗಳಲ್ಲಿ ಕೀರ್ತಿತರಾಗಿರುವ ವಾಜಿವಂಶದ ಯಕ್ಷರಾಜ, ನಾಗವರ್ಮ, ಮಧುಸೂದನರು ಸಹೋದರರಾಗಿದ್ದರೆಂದೂ, ಹುಳ್ಳ, ಲಕ್ಷ್ಮಣ, ಅಮರೇಶ್ವರರು ಅವರಲ್ಲಿ ಯಕ್ಷರಾಜನ ಅಥವಾ ನಾಗವರ್ಮನ ಔರಸಪುತ್ರರಾಗಿದ್ದರೆಂದೂ ನಾವು ಊಹಿಸಬೇಕಾಗಿರುವುದು.

ಜಿನಭಕ್ತನಾದ ಹುಳ್ಳನ ಅಣ್ಣನಾದ ಮೇಲೆಹೇಳಿದ ಹೆಗ್ಗಡೆ ಕಂಟಿಮಯ್ಯನು ಈಶ್ವರಭಕ್ತನೆಂದೂ ಅವನು ಶಿವದೇವಾಲಯವನ್ನು ಕಟ್ಟಿಸಿದನೆಂದೂ, ಅವನೂ [ಅವನ ತಮ್ಮ] ಮಹಾ ಪ್ರಧಾನ-ದಂಡನಾಯಕ ಚೊಕ್ಕಣ್ಣನೂ, ದಂಡನಾಯಕ-ಹರಿಯಣ್ಣನೂ ಕ್ರಿ. ಶ. ೧೧೬೫ ರಲ್ಲಿ ಮಧುಕೇಶ್ವರ ಅಂಗಭೋಗನೈವೇದ್ಯಾದಿಗಳಿಗಾಗಿ ಸ್ವಲ್ಪ ಭೂಮಿಯನ್ನು ಕೊಟ್ಟರೆಂದೂ ನಾಗಮಂಗಲದ ಈ ೩೦ ನೇ ಶಾಸನದಲ್ಲಿ ಹೇಳಿರುವುದು.

ಚನ್ನರಾಯಪಟ್ಟಣದ ೧೯೭ ನೆಯ ಶಾಸನದಲ್ಲಿ ಕೀರ್ತಿತರಾಗಿರುವ ಲಕ್ಷ್ಮಣದಂಡನಾಯಕ ಅಮರೇಶ್ವರದಂಡನಾಯಕರು ಮೇಲೆ ಹೇಳಿದ ಹುಳ್ಳದಂಡನಾಯಕನ ಸಹೋದರರಿಂದ ಭಿನ್ನರು. ಇವರೂ ವಾಜಿವಂಶದವರು, ಮತ್ತು ಸಹೋದರರು. ಆದರೆ ಇವರ ಅಣ್ಣನು ಹುಳ್ಳಪನಲ್ಲ, ವಾಮರಾಜನು; ಇವನು ಎರಡನೆಯ ನರಸಿಂಹನ ಸೇನಾನಾಯಕನಾದ ಅಮಿತದಂಡನಾಯಕನ ತಂದೆಯಾದುದರಿಂದ ಈ ಲಕ್ಷ್ಮಣ ಅಮರೇಶ್ವರರು ಈ ಎರಡನೆಯ ನರಸಿಂಹನ ಕಾಲದಲ್ಲಿಯೋ ಅಥವಾ ವೀರಬಲ್ಲಾಳನ ಕಾಲದಲ್ಲಿಯೋ ಜೀವಿಸಿದ್ದರು.

ಬೆಳ್ಗೊಳದ ಶಾಸನಗಳಲ್ಲಿ ಹುಳ್ಳನೊಬ್ಬನೇ ಜಿನಭಕ್ತನೆಂದು ಸ್ತುತಿಸಲ್ಪಟ್ಟಿರುವುದನ್ನೂ ಪರ್ಯಾಲೋಚಿಸಿದಲ್ಲಿ ಇವನ ತಮ್ಮಂದಿರಾದ ಲಕ್ಷ್ಮಣ ಅಮರೇಶ್ವರ ದಂಡನಾಯಕರು ತಮ್ಮ ಪಿತೃವ್ಯಪುತ್ರರಾದ ಕಂಟಿಮಯ್ಯ-ಹೆಗ್ಗಡೆ, ಹರಿಯಣ್ಣ-ದಂಡನಾಯಕರಂತೆ ಶಿವವಿಷ್ಣ್ವಾದಿಗಳ ಭಕ್ತರಾಗಿದ್ದರೆಂದು ನಾವು ಊಹಿಸಬೇಕಾಗಿರುವುದು. *೪. ಮೇಲೆ ೬ ನೇ ಪುಟದಲ್ಲಿ ನಾವು ೨ ನೇ ಮರಿಯಾನೆ ದಂಡನಾಯಕನ ಮಗಳಾದ ಬಮ್ಮಲೆಯು ಪಾರಿಸಣ್ಣ ಅಥವಾ ಪಾರ್ಶ್ವನನ್ನು ಮದುವೆಯಾದಳೆಂದು ಹೇಳಿರುವೆವಷ್ಟೆ. ಈ ಪಾರ್ಶ್ವನು ೧ ನೇ ಹೊಯ್ಸಲ ನರಸಿಂಹನ ಬಳಿಯಲ್ಲಿ ಮಹಾಪ್ರಧಾನ-ಪಟ್ಟಸಭಂಡಾರಿಯಾಗಿದ್ದನೆಂದೂ, ಇವನ ತಂದೆಯು ಚಾವುಂಡಮಯ್ಯನೆಂದೂ, ಇವನು ಜಿನದೇವ ಅಥವಾ ಜಿನ್ನನ ಮಗನೆಂದೂ, ಈ ಜಿನದೇವನ ತಮ್ಮನಾದ ಪಾರ್ಶ್ವನು ನಿಟ್ಟೂರಿನಲ್ಲಿ ಚೈತ್ಯಾಲಯವನ್ನು ಮಾಡಿಸಿದನೆಂದೂ, ಮತ್ತು ಮೇಲೆ ಹೇಳಿದ ಮಹಾಪ್ರಧಾನಭಂಡಾರಿ ಪಾರಿಸಣ್ಣನು ಕಾಳಗದಲ್ಲಿ ಮಡಿಯಲಾಗಿ, ಅವನ ಮಗನಾದ ಶಾಂತಿಯಣ್ಣ ದಂಡನಾಯಕನು ಅವನಿಗೆ ಪರೋಕ್ಷವಿನಯವಾಗಿ ಒಂದು ಬಸದಿಯನ್ನು ಕಟ್ಟಿಸಿದನೆಂದೂ ಅರಶೀಕೆರೆ ೧೪೧ ನೆಯ ಶಾಸನದಲ್ಲಿ ಹೇಳಿರುವುದು. ಅರಶೀಕೆರೆ ೧೪೪ ನೇ ಶಾಸನದಲ್ಲಾದರೆ ಮೇಲೆ ಹೇಳಿದ ಚಾವುಂಡಮಯ್ಯನು ಕರಿಗುಂದದ ಮೂಲಸ್ಥಾನೇಶ್ವರದೇವರಿಗಾಗಿ ಸ್ವಲ್ಪ ಭೂಮಿಯನ್ನು ಬಿಟ್ಟನೆಂದು ಹೇಳಿರುವುದು.

೫. ಹೀಗೆಯೇ 'ಮಂಡಲಿಸಾಯಿರದ ನಾಳ್ಪ್ರಭು ವಡ್ಡವ್ಯವಹಾರಿ ಜಿನೇಂದ್ರಪಾದಾರಾಧಕರುಮಪ್ಪ ಹೊಯ್ಸಳಗೊಯ್ಸಿಸೆಟ್ಟಿಯರಾಯನಗ್ರತನೂಜಂ ಬಲ್ಲಗಾ

---

* ವಸ್ತುತಃ ಇವನು ವಿಷ್ಣುಭಕ್ತನಾಗಿದ್ದನೆಂದು ಒಂದನೆಯ ನರಸಿಂಹ ಹೊಯ್ಸಲನ ಕಾಲದಲ್ಲಿ ಹುಟ್ಟಿದ ಹಾಸನದ ೬೬ ನೆಯ ಶಾಸನದಿಂದ ತಿಳಿದುಬರುವುದು. ಈ ಶಾಸನದಲ್ಲಿ ಕಾಣ್ವವಂಶೋದ್ಭವನೂ ಕಾಶ್ಯಪಗೋತ್ರಪವಿತ್ರನೂ ಆದ ಒಬ್ಬ ನಾಗದೇವನಾಯಕನ ಹೆಸರನ್ನು ಹೇಳಿ ಇವನ ಮಗನಾದ ಮಹಾಪ್ರಧಾನಲಕ್ಷ್ಮದಂಡನಾಯಕ ಅಥವಾ ಹೆಗ್ಗಡೆ ಲಕುಮಯ್ಯನು ಹೊನ್ನಾವರದ ಕೇಶವದೇವರ ದೇವಾಲಯಕ್ಕೆ ಒಂದು ವೃತ್ತಿಯನ್ನು ಕೊಟ್ಟನೆಂದೂ, ಈ ದಂಡನಾಯಕನು 'ಪುರುಷೋತ್ತಮಾರಾಧನ ಪ್ರಸಾದಾಸಾದಿತ ಮಹದೈಶ್ವರ್ಯ' ನಾಗಿದ್ದನೆಂದೂ ಹೇಳಿರುವುದು. ಈ ಕಾಣ್ವವಂಶದ ನಾಗದೇವನಾಯಕನು ಪ್ರಾಯಶಃ ಗುಬ್ಬಿ ೧೨ ನೇ ಶಾಸನದಲ್ಲಿ ಪ್ರಸ್ತುತನಾದ ವಾಜಿವಂಶದ ನಾಗವರ್ಮನೇ ಆಗಿರುವುದರಿಂದ (ಕಾಣ್ವಶಾಖೆಗೆ ವಾಜಸನೇಯ ಶಾಖೆಯೆಂದೂ ಹೆಸರುಂಟು), ಅಲ್ಲಿ ಪ್ರಸ್ತುತನಾದ ಮಹಾಪ್ರಧಾನ ಲಕ್ಷ್ಮದಂಡನಾಯಕನೇ ಈ ಹಾಸನದ ೬೬ ನೇ ಶಾಸನದಲ್ಲಿಯೂ ಕೀರ್ತಿಸಲ್ಪಟ್ಟಿರುವನೆಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ. ಕ್ರಿ. ಶ. ೧೧೭೩ ರಲ್ಲಿ ವೀರಬಲ್ಲಾಳನು ರಾಜ್ಯವಾಳುತ್ತಿದ್ದಾಗಲೂ ಈ ದಂಡನಾಯಕನು ಈ ದೇವಾಲಯಕ್ಕೆ ಒಂದು ದತ್ತಿಯನ್ನು ಬಿಟ್ಟನೆಂದು ಹಾಸನದ ೬೭ ನೆಯ ಶಾಸನದಿಂದ ತಿಳಿದುಬರುವುದು.

ವುಂಡನಾತನ ತಮ್ಮ ಬೊಪ್ಪಗಾವುಂಡನಿಂತೀ ಸುಪುತ್ರರ್ವೆರಸು. . .ಪರೋಪಕಾರಾರ್ಥದಿಂ ಸುಖದಿಂ ಜೀವಿಸುತ್ತಿರ್ದೊಂದು ದೆವಸಂ ಶಿವಧರ್ಮಕಥನವಂ ಕೇಳ್ದು ಚಾಳುಕ್ಯವಿಕ್ರಮವರ್ಷದ ೧೪೯ ನೆಯ ಶಾರ್ವ್ವರಿಸಂವತ್ಸರದುತ್ತರಾಯಣ ಸಂಕ್ರಾಂತಿ ಸೂರ್ಯಗ್ರಹಣ ವಿತೀಪಾತ ಮಿಂತೀ ಸುದಿನಂ ಕೂಡಲು' ಶ್ರೀ ಸಿದ್ಧೇಶ್ವರದೇವರ ಅಂಗಭೋಗಾದಿಗಳಿಗಾಗಿ ಸ್ವಲ್ಪ ಭೂಮಿಯನ್ನು ಕೊಟ್ಟನೆಂದು ಶಿವಮೊಗ್ಗಾ ೪೦ ನೆಯ ಶಾಸನದಲ್ಲಿ ಹೇಳಿರುವುದು.

೬. ಬೆಳಗಾಮೆಯಲ್ಲಿನ ತ್ರಿಪುರಾಂತಕೇಶ್ವರದೇವಾಲಯದ ಸ್ಥಾನಿಕನಾದ ಶೈವಗುರು ಸೂರ್ಯಾಭರಣನು (ಚಿಕ್ಕ) ಮಾಗಡಿಯಲ್ಲಿರುವ ಜಿನಾಲಯಕ್ಕೆ ಒಂದು ಸ್ಥಲವೃತ್ತಿಯನ್ನು ಕೊಟ್ಟಂತೆ ಷಿಕಾರಿಪುರದ ೧೯೭ ನೆಯ ಶಾಸನದಲ್ಲಿ ಹೇಳಿರುವುದು. ೭. ಕಮ್ಮಟದ ಮಲ್ಲಿಸೆಟ್ಟಿ ಅಥವಾ ಮಲ್ಲಿದಂಡನಾಯಕನು ವೀರಬಲ್ಲಾಳನ ಕೆಳಗೆ ಬಂದಣಿಕೆ ೭೦ ರ ಮೇಲಾಳ್ಕೆಯನ್ನು ನೋಡುತ್ತಿದ್ದನು. ಇವನೂ ಮತ್ತು ಇವನ ಪ್ರಧಾನನಾಗಿದ್ದ ಸೂರ್ಯದಂಡನಾಯಕನೂ 'ನಾರಾಯಣಪದಕಮಲದ್ವಂದ್ವಭೃಂಗ' ರೆಂದು ಷಿಕಾರಿಪುರದ ೨೨೫ ಮತ್ತು ೨೩೫ ನೆಯ ಶಾಸನಗಳಲ್ಲಿ ಹೇಳಲ್ಪಟ್ಟಿದ್ದು, ಇವರಿಬ್ಬರೂ ಬಂದಣಿಕೆಯ ಶಾಂತಿನಾಥನ ಬಸದಿಗೆ ದತ್ತಿಯನ್ನು ಬಿಟ್ಟರೆಂದು ಈ ೨೨೫ ನೇ ಶಾಸನದಲ್ಲಿ ಹೇಳಿರುವುದು. ಈ ೨೩೫ ನೇ ಶಾಸನದಲ್ಲಾದರೆ ಈ ಇಬ್ಬರು ದಂಡನಾಯಕರು ವೀರಬಲ್ಲಾಳನ ಅರಸಿಯಾದ ಅಭಿನವಕೇತಲದೇವಿಗೂ ತದ್ದ್ವಾರಾ ವೀರಬಲ್ಲಾಳದೇವಿಗೂ ಬಿನ್ನಪಮಾಡಿ ೩೩ ಬ್ರಾಹ್ಮಣರಿಗೆ ವೃತ್ತಿಗಳನ್ನು ಕೊಡಿಸಿದರೆಂದು ಹೇಳಿರುವುದು. ೮. ವೀರಬಲ್ಲಾಳನ ಸೇನಾಪತಿಯಾಗಿದ್ದ ಅಮೃತದಂಡನಾಯಕನೂ ಮತ್ತು ಇವನ ಸಹೋದರರಾದ 'ಶಿವಪಾದಶೇಖರ' ಮಸಣಯ್ಯದಂಡನಾಯಕನೂ, ಕಲ್ಲಯ್ಯದಂಡನಾಯಕನೂ, ಬಸವದಂಡನಾಯಕನೂ ಅಮೃತಾಪುರದಲ್ಲಿ ಅಮೃತೇಶ್ವರದೇವಾಲಯವನ್ನು ಕಟ್ಟಿಸಿದರೆಂದು ತರೀಕೆರೆ ೪೫ ನೆಯ ಶಾಸನದಿಂದ ತಿಳಿದುಬರುವುದು. ಕಡೂರು ೩೬ ನೇ ಶಾಸನದಲ್ಲಿ ಈ ಮೇಲೆಹೇಳಿದ ನಾಲ್ಕುದಂಡನಾಯಕರೂ ವಕ್ಕಲಗೆರೆಯಲ್ಲಿ ಯೆಕ್ಕೋಟಿಜಿನಾಲಯವನ್ನು ಕಟ್ಟಿಸಿದರೆಂದು ಹೇಳಲ್ಪಟ್ಟಿದ್ದು, ಮೇಘಚಂದ್ರ, ಪ್ರಭಾಚಂದ್ರ, ಎಂದು ಮೊದಲಾದ ಅವರ ಗುರುಕುಲಾನ್ವಯವೂ ಕೊಡಲ್ಪಟ್ಟಿರುವುದು. ೯. ಚಾಲುಕ್ಯಚಕ್ರವರ್ತಿ ಜಯಸಿಂಹ-ಜಗದೇಕಮಲ್ಲನ ಕೆಳಗೆ ಬನವಾಸೆ ೧೨,೦೦೦ವೇ ಮೊದಲಾದ ಸೀಮೆಗಳನ್ನು ಆಳುತ್ತಿದ್ದಂಥಾ ಮಹಾಮಂಡಲೇಶ್ವರ ಚಾಮುಂಡರಾಯನು ಭೇರುಂಡೇಶ್ವರದೇವರಿಗಾಗಿ ಒಂದು ಗ್ರಾಮವನ್ನು ಬಿಟ್ಟನೆಂದು ಷಿಕಾರಿಪುರದ ೧೫೧ನೇ ಶಾಸನದಲ್ಲಿ ಹೇಳಿರುವುದು. ಇದೇ ತಾಲ್ಲೂಕಿನ

೧೨೦ನೇ ಶಾಸನದಲ್ಲಿ ಈ ಚಾಮುಂಡರಾಯನು ಒಂದು ಬಸದಿಗಾಗಿ ಸ್ವಲ್ಪಭೂಮಿಯನ್ನು ಕೊಟ್ಟನೆಂದೂ, ನಾಗವರ್ಮವಿಭುಗೆ ಆಜ್ಞಾಪಿಸಿ ಅವನಿಂದ ಬನವಾಸೆದೇಶದಲ್ಲಿ ಜಿನ, ವಿಷ್ಣು, ಈಶ್ವರ ನಿಲಯಗಳನ್ನು ಮಾಡಿಸಿದನೆಂದೂ ಹೇಳಿರುವುದು. ೧೦. ಹೊನ್ನಗವುಂಡನಮಗ ಮಹಾಪ್ರಭು ಆದಿಗವುಂಡನು ಆದಿಮಲ್ಲಿಕಾರ್ಜುನೇಶ್ವರ ದೇವಾಲಯವನ್ನು ವೀರಬಲ್ಲಾಳನ ಕಾಲದಲ್ಲಿ ಕಟ್ಟಿಸಿ ಅದಕ್ಕಾಗಿ ಭೂಮಿಯನ್ನು ಬಿಟ್ಟನೆಂದು ಬೇಲೂರು ೧೩೭ನೇ ಶಾಸನದಿಂದ ತಿಳಿದುಬರುವುದು. ಇದರ ಮುಂದಿನ ಶಾಸನದಲ್ಲಾದರೆ ಇದೇ ಆದಿಗವುಂಡನು ಒಂದು ಬಸದಿಯನ್ನು ಮಾಡಿಸಿ ಅದಕ್ಕಾಗಿ ಒಂದು ದತ್ತಿಯನ್ನು ಬಿಟ್ಟಂತೆ ಹೇಳಿರುವುದು. ೧೧. ಚಾಲುಕ್ಯಚಕ್ರವರ್ತಿ ವಿಕ್ರಮಾದಿತ್ಯ ತ್ರಿಭುವನಮಲ್ಲನ ಬಳಿಯಲ್ಲಿ ಮಹಾಪ್ರಧಾನ ಬಾಣಸವೆರ್ಗ್ಗಡೆ ದಂಡನಾಯಕನಾಗಿದ್ದ ಅನಂತಪಾಲಯ್ಯನ ಕೆಳಗೆ ನೊಳಂಬವಾಡಿ ೩೨೦೦೦ ಸೀಮೆಯ ಅಚ್ಚುಪನ್ನಾಯವನ್ನು ಆಳುತ್ತಿದ್ದ ಬಮ್ಮರಸನು 'ಈಶಪದಾಬ್ಜಸಂಭೃತೋನ್ಮಸ್ತಕ' ನಾಗಿದ್ದನೆಂದು ದಾವಣಗೆರೆ ೧೨ ನೆಯ ಶಾಸನದಲ್ಲಿ ವರ್ಣಿಸಲ್ಪಟ್ಟಿರುವುದಲ್ಲದೆ ಇವನು ಜಿನಾಲಯಗಳಿಗೂ ದತ್ತಿಗಳನ್ನು ಕೊಟ್ಟನೆಂದು ಇದೇ ಶಾಸನದಲ್ಲಿರುವ—

ಕೊಂಗಳಿನಾಡೊಳಗ್ಗದ ಕದಂಬಳಿಸಾಯಿರದಾಗರಂಗಳೊಳ್ ।
ದೇಗುಲಕಂ ಜಿನಾಲಯಕವಾರವೆಗಂ ಕೆಱೆಬಾವಿಸತ್ರಕಂ ॥
ರಾಗದೆ ತನ್ನ ಪನ್ನಯದ ಸುಂಕದೊಳಂ ದಶಪನ್ನವತ್ತನಿಂ ।
ತಾಗರಮುಳ್ಳಿನಂ ನೆಗರ್ದ ಬಮ್ಮರಸಂ ಗುಣರತ್ನದಾಗರಂ ॥

ಎಂಬ ಪದ್ಯದಲ್ಲಿ ಹೇಳಲ್ಪಟ್ಟಿರುವುದು.

ಹೀಗೆ ಕ್ರಿ. ಶ. ೧೦-೧೩ ನೇ ಶತಮಾನಗಳಲ್ಲಿ ಶಿವ ವಿಷ್ಣ್ವಾದಿ ಭಕ್ತರು ಜಿನನನ್ನು ಪೂಜಿಸುತ್ತಿದ್ದರೆಂದೂ ಜಿನಭಕ್ತರು ಶಿವ ವಿಷ್ಣ್ವಾದಿಗಳನ್ನು ಪೂಜಿಸುತ್ತಿದ್ದರೆಂದೂ ನಾವು ಮೇಲೆ ಹೇಳಿರುವ ನಿದರ್ಶನಗಳಿಂದ ಸ್ಪಷ್ಟವಾಗುವುದಷ್ಟೆ. ಜಿನನಂತೆಯೇ ಬುದ್ಧದೇವರನ್ನೂ ಆ ಕಾಲದಲ್ಲಿ ಜನರು ಪೂಜಿಸುತ್ತಿದ್ದರೆಂದೂ ಶಾಸನಗಳಿಂದ ವ್ಯಕ್ತವಾಗುವುದು. ಚಾಲುಕ್ಯಚಕ್ರವರ್ತಿ ಸೋಮೇಶ್ವರ ತ್ರೈಲೋಕಮಲ್ಲನ ಬಳಿಯಲ್ಲಿ ದಂಡನಾಯಕನಾಗಿದ್ದ ರೂಪಭಟ್ಟಯ್ಯನು ಒಂದು ಬೌದ್ಧವಿಹಾರವನ್ನು ಮಾಡಿಸಿದ್ದಲ್ಲದೆ ಶ್ರೀ ಕೇಶವದೇವರ ಲೋಕೇಶ್ವರದೇವರ (ಇದು ಒಂದು ಶಿವಲಿಂಗನೆಂದು ತೋರುವುದು) ಬೌದ್ಧದೇವರ ಮತ್ತು ಪರಿವಾರ ದೇವತೆಗಳ ಅರ್ಚನಾದಿಗಳಿಗಾಗಿ ಸ್ವಲ್ಪ ಭೂಮಿಯನ್ನು ಬಿಟ್ಟನೆಂದು ಷಿಕಾರಿಪುರದ ೧೭೦ ನೆಯ ಶಾಸನದಲ್ಲಿ ಹೇಳಿರುವುದು. ವಿಷ್ಣುವರ್ಧನ ಹೊಯ್ಸಳನ ರಾಣಿಯಾದ ಸಾಂತಲದೇವಿಯು ಚತುಸ್ಸಮಯಸಮುದ್ಧರಣಳಾಗಿದ್ದಳೆಂಬುದನ್ನು ನಾವು ಮೇಲೆಯೇ ನೋಡಿರುವೆವು.

ಮಱುಗರೆ ನಾಡನ್ನು ಕ್ರಿ.ಶ. ೧೧೫೧ ರಲ್ಲಿ ಆಳುತ್ತಿದ್ದ ಚತುಸ್ಸಮಯಧರ್ಮೋದ್ಧಾರ ಧೌರೇಯನಾದ ಸಾಮಂತ ಬಾಚಿದೇವನು—

ಉದ್ಧರಿಸಿ ಜೈನಭವನವ ನುದ್ಧರಿಸಿ ಶಿವಾಲಯಂಗಳಂ ಮುದದಿಂದಂ |
ತುದ್ಧರಿಸಿ ವಿಷ್ಣುಗೇಹಮನುದ್ಧರಿಸಿದನಲ್ತೆ ಬಾಚಿ ಜಸದುನ್ನತಿಯಂ ||

ಸೊಗಯಿಪ ಕಾಮಧೇನು ಜಿನಶಾಸನಲಕ್ಷ್ಮಿಗೆ ಕಲ್ಪಭೂರುಹಂ |
ಮೃಗಧರಭೂಷಣಾಗಮತಪಸ್ಸಿಗೆ ಸಿದ್ಧರಸಪ್ರವಾಹಮೇಂ |
ನೆಗೆದುದು ಬುದ್ಧಕೋಟಿಗೆನೆ ಚಿಂತಿಸದೀವ ಮಹಾಂಶುರತ್ನವಾ |
ನಗಧರನಾಗಮಜ್ಞರಿಗಮೆಂದೊಡೆ ಬಾಚಿಯಿದೇಂ ಕೃತಾರ್ಥನೋ ||

ಎಂದು ತುಮ್ಕೂರು ೯ನೆಯ ಶಾಸನದಲ್ಲಿ ಸ್ತುತನಾಗಿರುವನಲ್ಲದೆ, ಇವನು ಗಂಗೇಶ್ವರ ಚಲವಱಿವೇಶ್ವರ ಮತ್ತು ರಾಮೇಶ್ವರ ದೇವಾಲಯಗಳನ್ನೂ ಭೀಮಜಿನಾಲಯವನ್ನೂ ಮಾಡಿಸಿದನೆಂದೂ ದಿಬ್ಬೂರ್‌ರನ್ನು ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣರಿಗೆ ಕೊಟ್ಟನೆಂದೂ ಈ ಶಾಸನದಲ್ಲಿ ಹೇಳಿರುವುದು. ಹೀಗೆಯೇ ಮಾಹೇಶ್ವರ ಬೌದ್ಧ ವೈಷ್ಣವಾರ್ಹತ ಚತುಸ್ಸಮಯ ಸಮುದ್ಧರಣನಾಗಿ ವೀರಬಲ್ಲಾಳನ ಕೆಳಗೆ ಮಗಱೆ ೩೦೦ ನ್ನು ಆಳುತ್ತಿದ್ದ ಒಬ್ಬ ಮಹಾಸಾಮಂತ ಗೋವಿ (ಅಥವಾ ಗೋವಿಂದ) ದೇವನು * ಚಿಕ್ಕನಾಯಕನಹಳ್ಳಿ ೧೩, ೧೪ ಮೊದಲಾದ ಶಾಸನಗಳಲ್ಲಿ ಕೀರ್ತಿಸಲ್ಪಟ್ಟಿದ್ದು ಇವನ ಅಣ್ಣನಾದ ಸಾಮಂತಚಟ್ಟನ ಸತಿಯಾದ ಶಾಂತಲದೇವಿಯು—

ಸ್ಥಿರಗಂಭೀರಉದಾತ್ತಸದ್ಗುಣಸದಾಚಾರತ್ವಮೆಂಬೀ ಗುಣೋ |
ನ್ನತಿಯಂ ತಾಳ್ದಿ ಮಹೇಶ್ವರಾಗಮಜಿನ ಶ್ರೀ ಧರ್ಮಸದ್ವೈಷ್ಣವಾ |
ಶ್ರಿತಬೌದ್ಧಾಗಮವೆಂಬ ನಾಲ್ಕುಸಮಯವ್ಯಾಪಾರಮಂ ಮಾಪ್ಪ ಸಂ |
ಗತಚಾತುರ್ಯ್ಯಗೆ ಕಾಂತೆಶಾಂತಲೆಗೆ ಪೇಳಾರುಂ ಸಮಂಬಪ್ಪರೇ ||

ಎಂದು ಇದೇ ತಾಲ್ಲೂಕಿನ ೨೧ನೇ ಶಾಸನದಲ್ಲಿ ಹೊಗಳಲ್ಪಟ್ಟಿರುವಳು. ನಾಗಮಂಗಲದ ೧೫ನೆಯ ಶಾಸನದಲ್ಲಿಯೂ ಹೀಗೆಯೇ 'ಸಮಯಸಮುದ್ಧರಣ' (ಎಂದರೆ ಪ್ರಾಯಶಃ ಚತುಸ್ಸಮಯ ಸಮುದ್ಧರಣ) ನಾದ ಪುರುಷಮಾಣಿಕ್ಯಸೆಟ್ಟಿಯೂ, ಅವನ ಪೌತ್ರನಾದ 'ಜಿನಸಮಯಸಮುದ್ಧರಣ ಪಾರಿಷದೇವರ ಪಾದಾರಾಧಕ'ನಾದ ಹೆಮ್ಮೆಯ ನಾಯಕನೂ, ಇವನ ಮಗನೂ, 'ಚತುಸ್ಸಮಯ ಸಮುದ್ಧರಣನೂ', ವೀರಬಲ್ಲಾಳನ ಕೆಳಗೆ ಮಹಾಸಾಮಂತನೂ ಆದ ದುಮ್ಮೆಯನಾಯಕನೂ

* ಈ ಗೋವಿದೇವನು ಹೆಗ್ಗೆಱೆಯಲ್ಲಿ ಒಂದು ಚೆನ್ನಪಾರ್ಶ್ವದೇವರ ಬಸದಿಯನ್ನು ಕಟ್ಟಿಸಿದನೆಂದು ಚಿಕ್ಕನಾಯಕನಹಳ್ಳಿ ೨೨ ನೆಯ ಶಾಸನದಿಂದಲೂ, ಕಲಿಕಟ್ಟೆಯ ತೆಲಿಗೇಶ್ವರದೇವರಿಗೆ ಕ್ರಿ.ಶ. ೧೧೪೩ ರಲ್ಲಿ ಸ್ವಲ್ಪ ಭೂಮಿಯನ್ನು ಬಿಟ್ಟನೆಂದು ಅರಶೀಕೆರೆ ೫೫ ನೆಯ ಶಾಸನದಿಂದಲೂ ತಿಳಿದುಬರುವುದು. ಬೌದ್ಧ-ವೈಷ್ಣವಸಮಯಗಳನ್ನು ಇವನು ಹೇಗೆ "ಉದ್ಧರಿಸಿದನು" ಎಂಬುದು ನಮಗೆ ತಿಳಿದಿಲ್ಲ.

ಸ್ತುತಿಸಲ್ಪಟ್ಟಿದ್ದು, ಈ ಮನ್ನೆಯನಾಯಕನು ಜೆಟ್ಟಿಗದಲ್ಲಿ ಹೇಮೇಶ್ವರ ದೇವಾಲಯವನ್ನು ಕಟ್ಟಿಸಿದನೆಂದು ಹೇಳಿರುವುದು.

ಅಂತು ಈಗಿನ ಕಾಲದಲ್ಲಿರುವಂತೆ, ವೈದಿಕಮಾರ್ಗಾನುಯಾಯಿಗಳು, ಜೈನರು, ಮತ್ತು ಬೌದ್ಧರೆಂಬ ಪ್ರಭೇದಗಳು ಕ್ರಿ.ಶ. ೧೦–೧೩ ನೇ ಶತಮಾನಗಳಲ್ಲಿ ಇರಲಿಲ್ಲವೆಂದು ನಾವು ಮೇಲೆ ಹೇಳಿರುವ ನಿದರ್ಶನಗಳಿಂದ ವ್ಯಕ್ತವಾಗುವುದು. ಈಗಿನ ಕಾಲದಲ್ಲಿ ದೇವಿಯು, ಆದಿತ್ಯನು, ಗಣೇಶನು, ವಿಷ್ಣುವು ಅಥವಾ ಶಿವನೇ ಪರದೈವವೆಂದು ಪೂಜಿಸುವವರೂ ಕೂಡ ಬೇರೆ ಬೇರೆ ಮತದವರಲ್ಲರೆಂದು ಎಣಿಸಲ್ಪಡದೆ ಎಲ್ಲರೂ ವೈದಿಕಮಾರ್ಗಾನುಯಾಯಿಗಳೇ ಎಂದು ಎಣಿಸಲ್ಪಡುವಂತೆಯೇ ಮೇಲೆ ಹೇಳಿದ ಕಾಲದಲ್ಲಿ ಬುದ್ಧನು ಅಥವಾ ಜಿನನೇ ಪರದೈವವೆಂದು ಪೂಜಿಸುತ್ತಿದ್ದವರೂ ಕೂಡ ವೈದಿಕಮಾರ್ಗಾನುಯಾಯಿಗಳೆಂದೇ ಎಣಿಸಲ್ಪಡುತ್ತಿದ್ದರು. ಎಂದರೆ, ಒಂದು ಕುಟುಂಬದಲ್ಲಿ ತಂದೆಯು ವಿಷ್ಣುವನ್ನೂ, ತಾಯಿಯು ಶಿವನನ್ನೂ, ಮಗಳು ದೇವಿಯನ್ನೂ, ಒಬ್ಬ ಮಗನು ಆದಿತ್ಯನನ್ನೂ ಮತ್ತೊಬ್ಬನು ಗಣೇಶನನ್ನೂ ಪರದೈವವೆಂದು ಈಗಿನ ಕಾಲದಲ್ಲಿ ಪೂಜಿಸುವಂತೆಯೇ ಮೇಲೆ ಹೇಳಿದ ಕಾಲದಲ್ಲಿ ಒಂದೇ ಕುಟುಂಬದಲ್ಲಿ ಕೆಲವರು ಜಿನನನ್ನೂ ಅಥವಾ ಬುದ್ಧನನ್ನೂ, ಇನ್ನು ಕೆಲವರು ಶಿವ ವಿಷ್ಣ್ವಾದಿಗಳನ್ನೂ ಪೂಜಿಸುತ್ತಿದ್ದರು. ಆದ್ದರಿಂದಲೇ 'ವೀರ'ರಾದ ಕೆಲವು ಜನರನ್ನು ಬಿಟ್ಟರೆ ಆ ಕಾಲದಲ್ಲಿ ಇತರ ಜನರೆಲ್ಲರಿಗೂ ಜಿನ ಬುದ್ಧ ಶಿವ ವಿಷ್ಣ್ವಾದಿ ದೇವತೆಗಳೆಲ್ಲರಿಗೂ ಭೇದವಿಲ್ಲದೆ ಮನ್ನಣೆಯನ್ನು ಮಾಡುವುದೂ ಆ ದೇವರ ಪ್ರಸಾದವನ್ನು ಸ್ವೀಕರಿಸುವುದೂ* ಆಲಯಗಳಿಗೆ ಹೋಗುವುದೂ ಮತ್ತು ಆ ದೇವರುಗಳ ಆಲಯಗಳಿಗೆ ದತ್ತಿಗಳನ್ನು ಬಿಡುವುದೂ ವಾಡಿಕೆಯಾಗಿದ್ದಿತು.

ಹೀಗಿರುವಲ್ಲಿ ಚನ್ನನು ಜಿನಭಕ್ತನಾಗಿದ್ದನೆಂಬುದೊಂದರ ಆಧಾರಬಲದಿಂದಲೇ ಅವನ ತಂದೆತಾಯಿಗಳೂ ಮತ್ತು ಅವನ ಸೋದರಿಯ ಪತಿಪುತ್ರರೂ ಜಿನಪೂಜಕರಾಗಿದ್ದರೆಂದು ಕವಿಚರಿತಕಾರರು ನಿರ್ಧರಿಸಿರುವುದು ಅಸಂಗತವಾದುದೆಂದು ನಮಗೆ

---

* ಮೇಲೆ (ಪುಟ ೧೪೧) ಹೇಳಿದಂತೆ ಬೊಪ್ಪದಂಡನಾಯಕನು ದೋರಸಮುದ್ರದಲ್ಲಿ ತನ್ನ ತಂದೆಯಾದ ಗಂಗರಾಜನ ಪರೋಕ್ಷವಿನಯಕ್ಕಾಗಿ ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿ, ಆ ದೇವರ ತೀರ್ಥಪ್ರಸಾದಗಳನ್ನು ಬಂಕಾಪುರದಲ್ಲಿದ್ದ ತನ್ನ ದೊರೆ ವಿಷ್ಣುವರ್ಧನ ಹೊಯ್ಸಳನಿಗೆ ಕಳುಹಿಸಿದಾಗ ವಿಷ್ಣುಭಕ್ತನಾದ ಈತನು ಸಂತುಷ್ಟನಾಗಿದ್ದು 'ಪಾರ್ಶ್ವದೇವರ ಪ್ರತಿಷ್ಠೆಯ ಗಂಧೋದಕಶೇಷೆಗಳಂ ಕೊಂಡು ಬಂದಿರ್ದ್ದಂಪ್ರರಂ ಕಂಡು ಬರವೇಳ್ದಿದಿರೆದ್ದು ಪೊಡೆವಟ್ಟು ಗಂಧೋದಕಮುಂ ಶೇಷೆಯುಮಂ' ಸ್ವೀಕರಿಸಿದನೆಂದೂ, ತದನಂತರ ಆ ಪಾರ್ಶ್ವನಾಥದೇವರ ಬಸದಿಗಾಗಿ ಸ್ವಲ್ಪ ಭೂಮಿಯನ್ನು ಬಿಟ್ಟನೆಂದೂ ಬೇಲೂರು ೧೩೪ ನೇ ಶಾಸನದಲ್ಲಿ ಹೇಳಿರುವುದು.

ತೋರುವುದು. ವಸ್ತುತಃ ಮೇಲೆ ಹೇಳಿದ ಸುಮನೋಬಾಣ, ಮಲ್ಲಿಕಾರ್ಜುನ, ಕೇಶಿರಾಜರು * ಜನ್ನನ ಬಂಧುಗಳೇ ಅಲ್ಲವಾದುದರಿಂದ ಅವರು ಜೈನರಾಗಿದ್ದರೆಂದು ಹೇಳುವುದಕ್ಕೆ ಈ ಕಾರಣವು ಕೂಡ ಸಹಕಾರಿಯಾಗಿಲ್ಲ. ಅವನ ತಂದೆತಾಯಿಗಳಾದ ಶಂಕರ-ಗಂಗೆಯರು ತಮ್ಮ ಮಗನಿಗೆ ಜನಾರ್ದನ ಎಂದು ಹೆಸರಿಟ್ಟುದನ್ನು ನೋಡಿದರೆ ಅವರೂ ಕೂಡ ಜಿನಭಕ್ತರಾಗಿರಲಿಲ್ಲವೆಂದೇ ನಾವು ಊಹಿಸಬೇಕಾಗಿರುವುದು.

---

* ಜಿನೇಂದ್ರಪುರಾಣಕರ್ತೃವೆಂದು ಜನ್ನನಿಂದ ಹೇಳಲ್ಪಟ್ಟಿರುವ ಪುಷ್ಪಬಾಣಕವಿಯು ಈ ಸುಮನೋಬಾಣನೇಯೆ ಎಂಬ ಕವಿಚರಿತಕಾರರ ಅಭಿಪ್ರಾಯವು ಸಮಂಜಸವಾಗಿರುವಂತೆ ನಮಗೆ ತೋರುವುದಿಲ್ಲ. ಸುಮನೋಬಾಣ, ಪುಷ್ಪಬಾಣ, ಕಾಮ, ಮನಸಿಜ, ಮನಸ್ಸಂಜಾತ ಎಂಬ ಈ ಪದಗಳೆಲ್ಲವೂ ಏಕಾರ್ಥವಾಚಕಗಳಾಗಿರುವ ಮಾತ್ರದಿಂದಲೇ ಜಿನಪುರಾಣಕರ್ತೃವಾದ ಪುಷ್ಪಬಾಣನು ಕವಿಕಾಮ ಕವಿಸುಮನೋಬಾಣ ಕವಿಮನಸಿಜ ಅಥವಾ ಕವಿಮನಸ್ಸಂಜಾತನೇ ಆಗಿದ್ದನೆಂದು ಹೇಳುವುದು ಯುಕ್ತವಾಗಿರುವಂತೆ ನಮಗೆ ಕಾಣುವುದಿಲ್ಲ.

ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣದಲ್ಲಿ ಮಲ್ಲಿಕಾರ್ಜುನನ ಚರಿತಾವಸರದಲ್ಲಿ ಕವಿಚರಿತಕಾರರು ತತ್ಕೃತವಾದ ಸೂಕ್ತಿಸುಧಾರ್ಣವದ ಎರಡನೇ ಪ್ರತಿಯು ತಮಗೆ ದೊರಕಿತೆಂದೂ ಅದರ ಆದಿಯಲ್ಲಿ ಜಿನಸ್ತುತಿ ರೂಪವಾದ ಒಂದು ಪದ್ಯವಿರುವುದೆಂದೂ ಬರೆದಿರುವರು. ಈ ಪದ್ಯವು ಮೊದಲನೆಯ ಪ್ರತಿಯಲ್ಲಿ ಪ್ರಮಾದದಿಂದ ಬಿಟ್ಟುಹೋಗಿದ್ದರೂ ಇರಬಹುದು, ಅಥವಾ ಎರಡನೆಯ ಪ್ರತಿಯ ಲೇಖಕನಿಂದ ಹೊಸದಾಗಿ ಸೇರಿಸಲ್ಪಟ್ಟಿದ್ದರೂ ಇರಬಹುದು. ಇದು ಹೀಗೆಯೇ ಆಯಿತೆಂಬುದನ್ನು ಯಥಾವತ್ತಾಗಿ ನಿರ್ಧರಿಸುವುದಕ್ಕೆ ಮುಂಚೆ ಈ ಪದ್ಯದ ಆಧಾರ ಬಲವೊಂದರಿಂದ ಮಲ್ಲಿಕಾರ್ಜುನನು ಜಿನಭಕ್ತನಾಗಿದ್ದನೆಂದು ನಿರ್ಣಯಿಸುವುದು ಯುಕ್ತವಲ್ಲ.

ಕೇಶಿರಾಜ ವಿರಚಿತವಾದ ಶಬ್ದಮಣಿದರ್ಪಣದಲ್ಲಂತೂ ಜಿನದೇವರ ಪ್ರಸ್ತಾವವೇ ಇಲ್ಲ. ಈ ಗ್ರಂಥದ ಅಂತ್ಯದಲ್ಲಿ ಅವನು ಸ್ವಕೃತವೆಂದು ಹೇಳಿರುವ ಚೋಳಪಾಲಕಚರಿತ, ಸುಭದ್ರಾಹರಣ, ಪ್ರಬೋಧಚಂದ್ರ ಮತ್ತು ಕಿರಾತವೆಂಬ ಗ್ರಂಥಗಳ ಹೆಸರುಗಳನ್ನು ನೋಡಿದರೆ ಅವನು ಶಿವಪೂಜಕನಾಗಿದ್ದನೆಂದು ನಾವು ಊಹಿಸಬೇಕಾಗಿರುವುದು. ಈ ವಿಷಯದಲ್ಲಿ ನಾವು ಮುಂದೆ ಇವನ ತಂದೆಯಾದ ಮಲ್ಲಿಕಾರ್ಜುನನ ಜೀವನಕಾಲವಿಚಾರದಲ್ಲಿ ಹೇಳಿರುವುದನ್ನು ನೋಡಿ.

೧೫. ಜಗದ್ದಳಸೋಮನಾಥ.

ಕರ್ಣಾಟಕ ಕಲ್ಯಾಣಕಾರಕದ ಕರ್ತೃವಾದ ಈ ಕವಿಯ ವಿಷಯವಾಗಿ ಕವಿಚರಿತಕಾರರು—

“ಇವನು ಕರ್ಣಾಟಕ ಕಲ್ಯಾಣಕಾರಕವನ್ನು ಬರೆದಿದ್ದಾನೆ. ಈತನು ಜೈನಕವಿ. ಇವನಿಗೆ ವಿಚಿತ್ರಕವಿ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ತನ್ನ ಗ್ರಂಥವನ್ನು ಸುಮನೋಬಾಣಕವಿಯೂ ಅಭಯಚಂದ್ರಸಿದ್ಧಾಂತಿಗಳೂ ತಿದ್ದಿದಂತೆ

ಸುಮನೋಬಾಣಕವೀಂದ್ರ | ಪ್ರಮುಖಂಬೆರಸಭಯಚಂದ್ರಸಿದ್ಧಾಂತಿಗಳು |
ತ್ತಮವಾಗೆ ತಿರ್ದಿದೀಕೃತಿ | ಗಮರ್ದುದು ಸೌಭಾಗ್ಯವೊಂದಿದಾಯುಂ ಶ್ರೀಯುಂ ||

ಎಂಬ ಪದ್ಯದಲ್ಲಿ ಹೇಳಿರುವುದರಿಂದ ಕವಿ ಸುಮನೋಬಾಣನ ಸಮಕಾಲದವನು ಎಂಬುದು ವ್ಯಕ್ತವಾಗುತ್ತದೆ. ಸುಮನೋಬಾಣನು ಸುಮಾರು 1150 ರಲ್ಲಿ ಇದ್ದುದಾಗಿ ತಿಳಿವುದರಿಂದ ಕವಿಯ ಕಾಲವೂ ಅದೇ ಆಗಿರಬೇಕು. ಅಲ್ಲದೆ ಇವನು ಸ್ತುತಿಸುವ ಮಾಧವೇಂದು 1131 ರಲ್ಲಿ ಗತಿಸಿದ ಗಂಗರಾಜನ ಮಗನಾದ ಬೊಪ್ಪನ ಗುರುವಾಗಿದ್ದಂತೆ ಸುಮಾರು 1135 ರಲ್ಲಿ ಬರೆದ ಶ್ರವಣಬೆಳ್ಗೊಳದ 144 ನೆಯ ಶಾಸನದಿಂದ ತಿಳುವುದರಿಂದ ಈ ವಿಷಯವೂ ನಾವು ಕವಿಗೆ ಕೊಟ್ಟಿರುವ ಕಾಲವನ್ನು ದೃಢಪಡಿಸುತ್ತದೆ.”

ಎಂದು (ಕವಿಚರಿತೆ ೧ನೇ ಸಂಪುಟದ ೨ನೇ ಮುದ್ರಣ ಪುಟ ೧೬೪-೧೬೫) ಬರೆದು ಇವನು ಸುಮಾರು ೧೧೫೦ ರಲ್ಲಿ ಇದ್ದನೆಂದು ಹೇಳಿರುತ್ತಾರೆ.

ಇದು ತಪ್ಪು. ಸುಮನೋಬಾಣಕವಿಯು ಕ್ರಿ. ಶ. ಸುಮಾರು ೧೨೨೩ ರಲ್ಲಿ ಹೊಯ್ಸಳಚಕ್ರವರ್ತಿಯಾದ ಎರಡನೆಯ ನರಸಿಂಹನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂಬುದನ್ನು ನಾವು ಮೇಲೆ (ಪುಟ ೧೩೩) ವ್ಯಕ್ತಮಾಡಿರುವೆವಷ್ಟೆ. ಈ ಕವಿಯು ಸೋಮನಾಥನ ಕಲ್ಯಾಣಕಾರಕವನ್ನು ಸುಮಾರಾಗಿ ಅದೇಕಾಲದಲ್ಲಿ ಎಂದರೆ ಕ್ರಿ. ಶ. ೧೨೨೦-೧೨೪೫ ರಲ್ಲಿ ಯಾವಾಗಲೋ ತಿದ್ದಿರಬಹುದೆಂದು ತೋರುವುದು. ಆದುದರಿಂದ ಈ ಸೋಮನಾಥನು ಕಲ್ಯಾಣಕಾರಕವನ್ನು ಕ್ರಿ. ಶ. ಸುಮಾರು ೧೨೨೦-೧೨೪೫ ರಲ್ಲಿ ಯಾವಾಗಲೋ ಬರೆದನೆಂದು ನಾವು ಹೇಳಬಹುದು.

ಶಕ ೧೧೫೫ ನೆಯ ಚಿತ್ರಭಾನುಸಂವತ್ಸರದ ಕಾರ್ತಿಕ ಶುದ್ಧ ೧೫ ಸೋಮವಾರ ಸೋಮೋಪರಾಗದಂದು ಎಂದರೆ ಕ್ರಿ. ಶ. ೧೨೨೧ ನೇ ನವೆಂಬರ್ ೧ ನೇ ತಾರೀಖು ಸೋಮವಾರದಂದು (ಮೇಲೆ ಹೇಳಿದ ನನ್ನ ಪುಸ್ತಕದ ೧೨೭ ನೇ ಪುಟ, ನಂ. ೧೯೮ ನ್ನು ನೋಡಿ) ಹುಟ್ಟಿದ ಮುನೋಳಿಯಲ್ಲಿರುವ ಒಂದು ಶಾಸನದಲ್ಲಿ (ಈ ಶಾಸನವು ಬೊಂಬಾಯಿ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನ ೧೨ ನೇ ಸಂಪುಟದ ೧೧ ಆದಿಯಾದ ಪುಟಗಳಲ್ಲಿ ಪ್ರಕಾಶಿಸಲ್ಪಟ್ಟಿರುವುದು) ಸೇವುಣ

ಚಕ್ರವರ್ತಿಯಾದ ಸಿಂಘಣನ ಸೇನಾಪತಿಗಳಲ್ಲಿ ಒಬ್ಬನಾದ ಜಗದಳ ಪುರುಷೋತ್ತಮ ದಂಡನಾಯಕನನ್ನು ಸ್ತುತಿಸಿ ಅವನ ತಮ್ಮನಾದ ಜೋಗದೇವದಂಡನಾಯಕನಿಗೂ ತತ್ಪತ್ನಿಯಾದ ಗೌರ್ಭಾಯಿಗೂ ಸೋಮನಾಥನೆಂಬ ಮಗನಿದ್ದನೆಂದು ಹೇಳಲ್ಪಟ್ಟಿರುವುದು. ಈ ಸೋಮನಾಥನೇ ಕಲ್ಯಾಣಕಾರಕದ ಕರ್ತೃವಾದ ಜಗದ್ದಳ-ಸೋಮನಾಥನಾಗಿದ್ದ ಪಕ್ಷದಲ್ಲಿ, ಈ ಗ್ರಂಥವು ಸುಮಾರು ೧೨೨೦-೧೨೪೫ ರಲ್ಲಿ ರಚಿಸಲ್ಪಟ್ಟಿತೆಂಬ ನಮ್ಮ ಅಭಿಪ್ರಾಯವು ಈ ಶಾಸನದ ತಾರೀಖಿನಿಂದಲೂ ದೃಢೀಕರಿಸಲ್ಪಡುವುದು.

ಈ ಗ್ರಂಥದಲ್ಲಿ ಸ್ತುತನಾಗಿರುವ ಮಾಧವಚಂದ್ರನು ಕ್ರಿ. ಶ. ೧೩ ನೇ ಶತಮಾನದ ಆದಿಪಾದದಲ್ಲಿ ಜೀವಿಸಿದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಈ ಮಾಧವಚಂದ್ರನು ಶ್ರವಣಬೆಳ್ಗೊಳದ ೧೪೪ ನೆಯ ಶಾಸನದಲ್ಲಿ ಕೀರ್ತಿತನಾಗಿರುವ ಮಾಧವಚಂದ್ರನಲ್ಲವೆಂಬುದು ಆ ಶಾಸನವು ಕ್ರಿ. ಶ. ಸುಮಾರು ೧೧೯೫ ರಲ್ಲಿ ಬರೆಯಲ್ಪಟ್ಟಿತೆಂಬ ಕವಿಚರಿತಕಾರರ ವಾಕ್ಯದಿಂದಲೇ ಸ್ಪಷ್ಟವಾಗುವುದು.

೧೬. ನಾಗವರ್ಮ.

ಛಂದೋಂಬುಧಿ, ಕಾದಂಬರೀ, ಕಾವ್ಯಾವಲೋಕನ, ವಸ್ತುಕೋಶ, ಕರ್ಣಾಟಕ ಭಾಷಾಭೂಷಣ—ಎಂಬ ನಾಗವರ್ಮ ಕೃತವಾದ ಐದು ಗ್ರಂಥಗಳು ಪ್ರಚಾರದಲ್ಲಿರುವುವು. ಇವುಗಳಲ್ಲಿ ಮೊದಲು ಹೇಳಲ್ಪಟ್ಟ ಎರಡು ಗ್ರಂಥಗಳು ಒಬ್ಬ ನಾಗವರ್ಮನಿಂದ ವಿರಚಿತವಾಗಿವೆಯೆಂದೂ, ಮಿಕ್ಕ ಮೂರು ಗ್ರಂಥಗಳು ಇನ್ನೊಬ್ಬ ನಾಗವರ್ಮನಿಂದ ರಚಿತವಾಗಿವೆಯೆಂದೂ ಕವಿಚರಿತಕಾರರು ಅಭಿಪ್ರಾಯಪಡುವರು. ಈ ಅಭಿಪ್ರಾಯವು ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರ ಸ್ವಂತ ಉಪಜ್ಞವಾದುದು. ೧೯೦೩ ರಲ್ಲಿ ಪ್ರಕಟಿಸಲ್ಪಟ್ಟ ಕಾವ್ಯಾವಲೋಕನ ಗ್ರಂಥದ ಉಪೋದ್ಘಾತದಲ್ಲಿಯೇ (ಪುಟ ೧-೯) ಮ|| ನರಸಿಂಹಾಚಾರ್ಯರು—ಛಂದೋಂಬುಧಿಯೂ, ಕಾವ್ಯಾವಲೋಕನವೂ ಒಬ್ಬನೇ ನಾಗವರ್ಮನಿಂದ ರಚಿಸಲ್ಪಟ್ಟವೆಂಬ ಅಭಿಪ್ರಾಯವು ಅಸಾಧುವೆಂದು ಅದನ್ನು ದೂಷಿಸಿ ಈ ಎರಡು ಗ್ರಂಥಗಳನ್ನು ಬರೆದ ನಾಗವರ್ಮರು ಬೇರೆ ಬೇರೆ ಮನುಷ್ಯರೆಂದು ಸಿದ್ಧಾಂತಿಸಿರುವರು. ಕವಿಚರಿತದ ಒಂದನೇ ಸಂಪುಟದಲ್ಲಿಯೂ ಅವರು ಹೀಗೆಯೇ "ನಾಗವರ್ಮ ಎಂಬ ಹೆಸರುಳ್ಳ ಒಬ್ಬ ಕವಿಯೇ ಛಂದೋಂಬುಧಿ, ಕಾವ್ಯಾವಲೋಕನ ಮುಂತಾದ ಗ್ರಂಥಗಳನ್ನು ಬರೆದುದಾಗಿ ತಿಳಿವಳಿಕೆಯಿದ್ದಿತು. ಈಗ ಆ ಹೆಸರಿನ ಇಬ್ಬರು ಕವಿಗಳು ಬೇರೆ ಬೇರೆ ಕಾಲಗಳಲ್ಲಿದ್ದು ಒಬ್ಬನು ಛಂದೋಂಬುಧಿ ಕಾದಂಬರಿಗಳನ್ನೂ ಮತ್ತೊಬ್ಬನು ಕಾವ್ಯಾವಲೋಕನ, ಭಾಷಾಭೂಷಣ, ವಸ್ತುಕೋಶ ಮೊದಲಾದ ಗ್ರಂಥಗಳನ್ನೂ ಬರೆದುದಾಗಿ ನಿಶ್ಚಯಿಸಿದೆ" ಎಂದು (ಒಂದನೇ ಮುದ್ರಣದ) ಅವತರಣಿಕೆಯ ೧೪ ನೇ ಪುಟದಲ್ಲಿ ಬರೆದು, ಈ ಅಭಿಪ್ರಾಯವನ್ನು ಸಮರ್ಥಿಸುವುದಕ್ಕಾಗಿ ತಮಗೆ ತೋಚಿದ ಕಾರಣಗಳನ್ನು ಆ ಮುದ್ರಣದ ೪೩-೪೬ ನೇ ಪುಟಗಳಲ್ಲಿಯೂ ಎರಡನೆಯ ಮುದ್ರಣದ ೫೩-೫೪ ನೆಯ ಪುಟಗಳಲ್ಲಿಯೂ ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ಮೊದಲನೆಯ ಮುದ್ರಣಕ್ಕೂ ಎರಡನೆಯ ಮುದ್ರಣಕ್ಕೂ ಸ್ವಲ್ಪ ಭೇದಗಳಿರುವುದರಿಂದ ನಾವು ಎರಡನೆಯ ಮುದ್ರಣದಲ್ಲಿ ಅವರು ಬರೆದಿರುವ ಕಾರಣಗಳನ್ನೇ ಇಲ್ಲಿ ಅನುವದಿಸುವೆವು.

ಈ ಮುದ್ರಣದಲ್ಲಿ—

"ಈ ಹೆಸರಿನವರು ಇಬ್ಬರು ಕವಿಗಳು ಇದ್ದಂತೆ ತಿಳಿಯಬರುತ್ತದೆ. ಛಂದೋಂಬುಧಿಯನ್ನೂ ಕಾದಂಬರಿಯನ್ನೂ ಬರೆದವನು ಒಬ್ಬ ನಾಗವರ್ಮನೆಂದೂ, ಕಾವ್ಯಾವಲೋಕನ ವಸ್ತು

ಹೇಳಿದುದು ಒಬ್ಬರಿಗೆ ಸರಿತೋರದಾಯಿತು. ದೇವರು ಜನರಿಗೆ ಸ್ವಲ್ಪ ಬುದ್ಧಿಕೊಟ್ಟರೆ ಸಾಕು, ಒಬ್ಬರಿಗೆ ಒಪ್ಪಿದುದು ಇನ್ನೊಬ್ಬರಿಗೆ ಸರಿ ಹೋಗದು. ಕೊನೆಗೆ ಯಜಮಾನರೂ ರಾಯರೂ ತಮ್ಮ ಕಾಲಲ್ಲಿ ಜೋಡುಗಳಿವೆಯೆಂದೂ ತಾವು ಮುಂದೆ ಹೋಗಿ ಆ ದಾರಿ ಸರಿಯೋ ಅಲ್ಲವೊ ಎಂಬುದನ್ನು ಪರೀಕ್ಷೆಮಾಡಿ ನಮಗೆ ಕೂಗಿಹೇಳುವೆವೆಂದೂ ಹೇಳಿ ಮುಂದೆ ನಡೆದರು. ನಾವು ಮೂವರು ಹಿಂದುಳಿದೆವು. ಮೂರ್ತಿೀ ಕಾಲಿಗೆ ಮುಳ್ಳುಚುಚ್ಚಿ ರಕ್ತ ಹರಿಯುವಂತಾಗಿತ್ತು. ಸರಿಯಾದ ದಾರಿಯು ಸಿಕ್ಕದಿದ್ದರೆ ಒಂದು ಹೆಜ್ಜೆ ಕೂಡ ಮುಂದಕ್ಕಿಡಲು ಅವರಿಗೆ ಸಾಧ್ಯವಾಗು ವಂತಿರಲಿಲ್ಲ. ಪುನಃ ಅಂದುಕೊಂಡೆವು—"ಹಾಳಾದವನು ಆ ಚೆನ್ನಯ್ಯ ನಮ್ಮ ಸಂಗಡ ಇದ್ದಿದ್ದರೆ!" ಎಂದು. ಮುಂದೆ ಹೊರಟಿದ್ದವರು ಹಾಗೂ ಹೀಗೂ ಸುತ್ತಿಕೊಂಡು ಒಂದು ಸೀಳುದಾರಿಯನ್ನು ಹಿಡಿದು ನಮ್ಮನ್ನು ಕರೆದು ಕೂಗಿದರು. ನಾವು ಆ ಮುಳ್ಳುಕಲ್ಲುಗಳ ದಾರಿಯನ್ನೇ ಹಿಡಿಯ ಬೇಕಾಯಿತು. ಚೆನ್ನಯ್ಯನಿದ್ದಿದ್ದರೆ! ಅವನು ದಾರಿಗಳನ್ನು ಬಲ್ಲವನು. ಸುಲಭವಾಗಿ, ನೇರವಾಗಿ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದನು. ನಮ್ಮ ಸ್ವಂತ ಅನುಭವ ಪರೀಕ್ಷೆಗಳಿಂದಲೇ ಎಲ್ಲವನ್ನೂ ಕಂಡು ತಿಳಿದು ಕೊಳ್ಳುವೆವೆಂದು ಯಾವ ಕೆಲಸ ಮಾಡಿದರೂ ಹೀಗೇಯೆ ಎಂದು ತೋರು ತ್ತದೆ: ಪರಿಣಾಮದಲ್ಲಿ ಫಲವೇನೋ ದೊರಕಬಹುದು, ಆದರೆ ಮಾರ್ಗವು ತಪ್ಪುವ ಸಂಭವವುಂಟು; ಮಾರ್ಗವು ಕಷ್ಟವಾಗುವುದಂತೂ ಖಂಡಿತ;— ಗುರುಮುಖೇನ ಕಲಿತ ಪಾಠವು ಸುಲಭವಾಗಿ ಉತ್ತಮ ಶಿಕ್ಷಣವನ್ನು ಕೊಡುವಂತೆ.

ಹತ್ತುನಿಮಿಷಗಳಲ್ಲಿ ದೊಡ್ಡದಾರಿಗೆ ಬಂದೆವು. ಅಲ್ಲಿಗೆ ಸೇರುವಷ್ಟ ರೊಳಗೆ ಮೂರ್ತಿಗಳಿಗೂ ವೆಂಕಟೇಶಯ್ಯನವರಿಗೂ ಸಾಕುಸಾಕಾಗಿ ಹೋಗಿತ್ತು. ಸಂಸಾರದಲ್ಲಿ ಒದಗುವ ಅಲ್ಪ ಕಷ್ಟಗಳೂ ವೇದನೆಗಳೂ ಮನಸ್ಸನ್ನು ಕೆಡಿಸಿ ನಿರಾಶೆಯನ್ನುಂಟುಮಾಡಿ ಪ್ರಪಂಚದ ಸರ್ವ ಸತ್ಕರ್ಮ

ಗಳಿಗೂ, ಉತ್ತಮಭಾವನಾಸಂತೋಷಗಳಿಗೂ ಅಡ್ಡಬರುವಂತೆ ಈ ಹಾಳು ಮುಳ್ಳುಗಳು ನಮ್ಮ ಮನಸ್ಸನ್ನು ಬಲವಂತದಿಂದ ತಮ್ಮತ್ತ ಸೆಳೆದು ಹಿಂಸೆಕೊಟ್ಟಿದ್ದವು. ಜೀವನವು ಕೇವಲ ಸುಖಮಯವಾದುದೇ ಅಲ್ಲ; ಅದರಲ್ಲಿ ದಾರುಣವಾದ ದುಃಖವಿದೆ. ಈ ತತ್ತ್ವವನ್ನು ಜನರು ಮರೆತು ಸರ್ವದಾ ಲೋಲರಾಗದೆ ಇರಲಿ ಎಂದು ಭಗವಂತನು ಈ ವಿಧವಾಗಿ ಪ್ರಪಂಚವನ್ನು ಸೃಷ್ಟಿಸಿದನೋ ಏನೋ! ಅದು ಹೇಗಾದರೂ ಇರಲಿ, ಭೂಸಂಪರ್ಕದಿಂದ ಪವಿತ್ರವಾಗುವೆವೆಂದು ತಿಳಿದಿದ್ದ ನಮ್ಮ ಸ್ನೇಹಿತ ರೀರ್ವರಿಗೂ, ಭೂಮಾತೆಯು ನಿಷ್ಕಪಟವಾದ ಪ್ರೇಮವನ್ನೇ ತೋರಿದ ಳೆಂದು ಹೇಳಬೇಕು.

ಇನ್ನೆರಡು ಮಾರುಗಳ ದೂರದಲ್ಲಿ ಎರಡು ದೇವಸ್ಥಾನಗಳು; ಒಂದು ಕೋದಂಡರಾಮಸ್ವಾಮಿಯ ದೇವಸ್ಥಾನ;—ನದಿಯ ದಂಡೆಯಲ್ಲಿಯೆ. ಇನ್ನೊಂದು, ಈಚೆ, ಬೆಟ್ಟದ ಕಿಬ್ಬಿಯಲ್ಲಿ, ಲಕ್ಷ್ಮೀನಾರಾಯಣಸ್ವಾಮಿಯ ದೇವಸ್ಥಾನ. ನಮ್ಮಲ್ಲಿ ಕೆಲವರು 'ಅದನ್ನೇನು ನೋಡುವುದು? ಅಂಥಾದ್ದು ಇಲ್ಲಿ ಒಂದು ಸಾವಿರವಿದೆ ಬನ್ನಿ; ಕೋದಂಡರಾಮರ ದರ್ಶನ ತೆಗೆದು ಕೊಂಡು ಮುಂದೆ ಹೋಗೋಣ; ಅಲ್ಲಿ ಪೂಜೆ ನಡೆಯುತ್ತಿರುವಂತೆ ಕಾಣು ವುದು' ಎಂದರು. ಆದರೂ ನಮಗೆ ಸ್ವಲ್ಪ ಚಪಲ. ರಾಯರು ದೊಡ್ಡಮನಸ್ಸುಮಾಡಿ, ನನ್ನಂತೆಯೇ, ನೋಡಿಕೊಂಡು ಹೋಗೋಣವೆಳಿ ಎಂದರು.

ಆ ದೇವಸ್ಥಾನವು ದೊಡ್ಡದಲ್ಲ. ಹೊರಗಡೆ ಕೆತ್ತನೆಯ ಕೆಲಸ ವೊಂದೂ ಇಲ್ಲ. ಯಾವ ಜಕ್ಕಣಾಚಾರ್ಯನ ಶಿಲ್ಪವೂ ಅಲ್ಲಿ ಇಲ್ಲ. ಒಂದೇ ಬಂಡೆಯಲ್ಲಿ ದೇವಸ್ಥಾನವನ್ನು ಕೊರೆದು ಅದನ್ನು ಸಾಮಾನ್ಯವಾಗಿ ಕಟ್ಟಿ ದ್ದಾರೆ. ಪ್ರಾಕ್ತನ ವಿಚಾರಕರ ಅಥವ ಯಾತ್ರಿಕರ ಗಮನವು ಈದೇವ ಸ್ಥಾನದ ಕಡೆ ಹೆಚ್ಚಾಗಿ ತಿರುಗಿಲ್ಲ. ಒಳಗೆ ಮೂರು ವಿಗ್ರಹಗಳಿವೆ; ತೆಳ್ಳಗೆ ಉದ್ದವಾಗಿ ಒಂದರ ಪಕ್ಕದಲ್ಲಿ ಒಂದು ಅತ್ಯುತ್ತಮವಾಗಿ ಕಡೆದು ಮಾಡ

ಲ್ಪಟ್ಟಿವೆ. ಒಂದು ಶ್ರೀಮನ್ನಾರಾಯಣ ವಿಗ್ರಹ; ಅದರ ಎರಡು ಪಕ್ಕಗಳಲ್ಲಿಯೂ ಶ್ರೀದೇವಿ ಭೂದೇವೀ ಮೂರ್ತಿಗಳು.—ನಿಜವಾದ ದೇವತಾ ವಿಗ್ರಹಗಳಿವು. ಹೀಗಿದ್ದರಲ್ಲವೆ, ಜನರಿಗೆ ಅವುಗಳಲ್ಲಿ ಭಕ್ತಿಯೂ ಪ್ರೀತಿಯೂ ಹುಟ್ಟುವುದು? ಆದರೆ ನಾವು ಹತಭಾಗ್ಯರು. ಆ ದೇವತಾಮೂರ್ತಿಗಳನ್ನು ಕಣ್ಣಾರೆ ನೋಡಿ ಸಂತೋಷಪಡುವ ಪುಣ್ಯವು ನಮಗೆ ಎಲ್ಲಿ ಬಂದೀತು? ಯಾರೋ ಕ್ರೂರಕರ್ಮಿಗಳು—ಘಾತುಕರು—ಈ ಸೌಂದರ್ಯವನ್ನೆ ದೂರದಿಂದ ಹುಡುಕಿಕೊಂಡು ಬಂದು ಅದರ ಚೆಂದವನ್ನೂ ಚಲುವನ್ನೂ ನೋಡಿ ಸಹಿಸಲಾರದೆ ಅವನ್ನು ಭಿನ್ನಮಾಡಿದ್ದಾರೆ. ದೇವನ ಅಖಂಡಮೂರ್ತಿಯನ್ನು ಈ ಕರ್ಮಭೂಮಿಯಲ್ಲಿ ನೋಡುವುದು ಅಸಾಧ್ಯವೆಂದು ಕಾಲಕಾಲದಲ್ಲಿಯೂ ಯಾವುದೊ ಅದೃಷ್ಟ ವ್ಯಕ್ತಿಯೊಂದು ಸಾರಿ ಸಾರಿ ಹೇಳುತ್ತಿರುವಂತೆ, ಈ ಮೂರ್ತಿಗಳ ಪಾದ ಭಾಗವೊಂದು ಮಾತ್ರ ಉಳಿದು ಉಳಿದ ಶ್ರೀತನುವೆಲ್ಲವೂ ಈಗ ಮಾಯವಾಗಿದೆ. ಸಾಧಾರಣದವರಿಗೆ ಕಾಣಿಸದ ಕಡೆ ಎಲ್ಲಿಯೋ ಒಂದು ಮೂಲೆಯಲ್ಲಿ, ಶ್ರದ್ಧಾಳುಗಳಾಗಿ ಅರಸುವವರಿಗೆ ಮಾತ್ರ ಭಗವಂತನ 'ಪಾದ' ದರ್ಶನವಾಗುವುದೆಂದು ಹಿರಿಯರು ಹೇಳುವುದನ್ನು ಕೇಳಿದ್ದೇವೆ. ಆದರೆ ಆ ಪಾದದರ್ಶನ ಮಾತ್ರದಿಂದ—ಅವು ಇಂಥ ದಿವ್ಯ ಪಾದಗಳೇ ಆಗಿದ್ದಾಗ್ಯೂ—ನಮಗೆ ಸಂತೋಷವು ದೊರೆಯದೆಂದೂ, ಈರೀತಿ ಅವನ್ನು ಕಂಡರೆ ಸಂತೋಷಕ್ಕಿಂತಲೂ ಹೆಚ್ಚಾಗಿ ದುಃಖವೇ ಆಗುವುದೆಂದೂ ವಿಶದವಾಗಿ ಹೇಳಬೇಕಾದುದೇನಿದೆ? ಇಲ್ಲವಾಗಿದ್ದರೆ ದೇವಸಂದರ್ಶನವಂತೂ ಹಾಗಿರಲಿ—ಈ ಶಿಲಾದೈವಸಂದರ್ಶನವೂ ಸಂಪೂರ್ಣವಾಗಿ ನಮಗೆ ಆಗದಿರುತ್ತಿತ್ತೆ? ಮೇಲ್ಗಡೆ ಸಪ್ತಫಣಗಳಿಂದ ದೇವನಿಗೆ ಛತ್ರಿ ಹಿಡಿದಂತೆ ನಿಂತಿರುವ ಫಣಿರಾಜನಿಗೂ ದುರ್ಗತಿ ತಪ್ಪಿಲ್ಲ; ಫಣಿರಾಜನ ಕಂಠವು ಕತ್ತರಿಸಿಹೋಗಿದೆ; ಎಲ್ಲೋ ನಡುವೆ ಹರಿದುಹೋಗಿರುವ ಫಣಭಾಗದಿಂದ ಒಂದೆರಡು ಜೊತೆ ನಾಲಿಗೆಗಳು ಒಡೆಯನಿಗೆ ಏನೋ ಹೇಳುವುದಕ್ಕೆಂದು ಹೊರಟು ಅದನ್ನು

ಹೇಳಿ ಮುಗಿಸುವಷ್ಟರಲ್ಲೇ ಜೀವರಸಪ್ರವಾಹವು ನಿಂತುಹೋಗಲು ನಿಶ್ಚೇಷ್ಟ ವಾಗಿ ನಿಂತುಬಿಟ್ಟಂತೆ ಕಾಣುತ್ತಿದೆ. ಈಗಲೂ ಇಷ್ಟುದಿನಗಳ ಮೇಲೆ ಈ ಮುನ್ನೂರು ಮೈಲಿಗಳ ದೂರದಿಂದ ಒಮ್ಮೆ ಆ ದೃಶ್ಯವನ್ನು ನೋಡಿದರೆ, ದುಶ್ಯಮಿತವಾದ ತೀವ್ರ ವೇದನೆಯೊಂದು ಮನಸ್ಸಿನಲ್ಲಿ ಉಂಟಾಗಿ ಶೂಲದ ಇರಿತದಂತೆ ನೋಯಿಸುತ್ತದೆ. ಆದರೂ ಅದೇ ದೃಷ್ಟಿಯು ಪುನಃ ಪುನಃ ಪ್ರೀತಿಯಿಂದ, ಭಕ್ತಿಯಿಂದ, ನಯದಿಂದ, ನಿರ್ಮಲಾಂತಃಕರಣದಿಂದ, ಅಶ್ರುಜಲಾಂಜಲಿಗಳಿಂದ ಆ ಪವಿತ್ರಪಾದಗಳ ಬಳಿಗೆ ಹೋಗಿ ಅವನ್ನು ತೊಳೆದು ಕುಸುಮಪರಿಮಳಗಳಿಂದ ಪೂಜಿಸಲೆಳಸಿ ಸರ್ವದಾ ಅಲ್ಲಿಯೇ ಇರಲು ಆತುರಾತುರವಾಗಿಯೂ ಇರುತ್ತದೆ. ಕವಿಯೊಬ್ಬನು ಹೇಳಿರುವಂತೆ ಇಹದಲ್ಲಿ ಅಸಮಗ್ರವಾಗಿ, ಅಸಂಪೂರ್ಣವಾಗಿ, ಮುರಿದು ಬೇರೆ ಬೇರೆ ಯಾಗಿರುವುದೆಲ್ಲ ಪರದಲ್ಲಿ ಸಮಗ್ರವಾಗಿ ಸಂಪೂರ್ಣವಾಗಿ ರೂಪುಗೊಂಡು ರಂಜಿಸುವುದೇನೊ! ಈಗ ಉಳಿದಿರುವ ಈ ಪಾದಪದ್ಮಗಳ ನೆನಪಾದರೂ ಸರ್ವದಾ ನಮಗೆ ಇರುವಂತೆ ಆ ದೇವನೇ ನಮ್ಮನ್ನು ಆಶೀರ್ವದಿಸಕೂಡ ದೇಕೆ?

ಮುಂದೆ ಕೋದಂಡರಾಮಸ್ವಾಮಿಯ ಗುಡಿ. ಅಲ್ಲಿ ಜನರ ಗದ್ದಲ ಬಹಳ; ಸಮಾರಾಧನೆಯ ಸಂಭ್ರಮದ ಓಡಾಟ ಬೇರೆ. ಅಷ್ಟು ಜನರ ಗದ್ದಲವಿರುವಕಡೆಯೂ, ಅರ್ಚಕರ ಆರಾಧನೆ ಪೂಜೆಗಳು ನಡೆಯುತ್ತಿರುವ ಕಡೆಯೂ ವಾಸಿಸಿಕೊಂಡಿರುವುದಕ್ಕೆ ದೇವನು ಹಿಂಜರಿಯತ್ತಾನಂತೆ. ಅವ ನಿಗೆ ಈ ಜನರ ಭಯ ಬಹಳ. ಅಲ್ಲಿಂದ ಮುಂದೆ ನೋಡುವಲ್ಲಿ ಅತಿಶಯ ಸಂತೋಷದಾಯಕವಾದ ವಿಷಯ! ನಮ್ಮ ಭಾಗ್ಯದೇವತೆಯ ಹಾಗೆ ಚೆನ್ನಯ್ಯನು ಬರುತ್ತಿದ್ದನು!! ಇನ್ನೇನು ನಮಗೆ ಭಯ?

"ನೋಡಿ ಸಾರ್ ಇಲ್ಲಿ ಬರುತ್ತಿದ್ದಾನೆ. ಅಲ್ಲೆಲ್ಲ ಹುಡುಕಿದರೆ ಅವನು ಸಿಕ್ಕುತ್ತಾನೆಯೆ?"

“ ಇಷ್ಟುಹೊತ್ತು ಎಲ್ಲಿ ಹೋಗಿದ್ದೆಯೊ —ಗಂಡ ? ” ಎಂದರು ಯಜಮಾನರು—“ ನಿನಗೆ ಕಾದು ಕಾದು ಈ ಹೊತ್ತಿನ ಕೆಲಸವೆಲ್ಲ ನಾಶವಾಗಿ ಹೋಯಿತು.”

ಚೆನ್ನಯ್ಯ—ಅವರು ಒಯ್ದುಕೊಂಡೋಗಿಬಿಟ್ರು. ಎಷ್ಟು ಹೇಳಿದರೂ ಬಿಡಲಿಲ್ಲ. ಈಗ ಬರೋದುಕೂಡ ಕಷ್ಟವಾಗಿ ಹೋಯ್ತು.

ಯಜ—ಹೋಗಲಿ. ಈಗ ನಮ್ಮ ಜೊತೆಯಲ್ಲಿ ನೀನು ಬರಬೇಕು.

ಚೆ—ಒಂದುಸಲ ನಾನಲ್ಲಿಗಾಗಲೆ ಅವರನ್ನು ಕರೆದುಕೊಂಡು ಹೋಗಿ ಬಂದೆ ಸ್ವಾಮಿ. ಅದು ಇಲ್ಲಿಗೆ ಬಲುದೂರ ಇದೆ. ಕಾಲು ಬಿದ್ದು ಹೋಗಿದೆ.

ನಾವು—ನೋವು ಏನುಮಾಡುತ್ತೆ ನಡಿಯೊ ! ನಾಳೆ ನಿನ್ನ ನಾವು ಬಾಯೆಂದು ಕರೆಯುತ್ತೇವೇನೊ ? ಇಲ್ಲಿಂದ ಅಲ್ಲಿಗೆ ಎಷ್ಟು ದೂರವಾಗುತ್ತೆ ?

ಮನುಷ್ಯರ ಸ್ವಾರ್ಥಪರತೆಗೆ ಮೇರೆಯೇ ಇಲ್ಲ. ನಮ್ಮ ಕೆಲಸವಾದರೆ ಆಯಿತು. ಇತರರ ಚಿಂತೆ ನಮಗೇನು ?

ಚೆ—ನಾಲ್ಕೈದುಮೈಲಿ ಆಗುತ್ತೆ ಸ್ವಾಮಿ. ಬರೋದಕ್ಕೆ ತುಂಬ ಹೊತ್ತಾಗುತ್ತೆ.

ನಾವು—ದೂರದ ನೆವಹಾಕಿ ತಪ್ಪಿಸಿಕೊಳ್ಳಬೇಕು ಅಂತಿದ್ದೀಯೊ? ನಿನಗೇನು ಎಷ್ಟು ತಪ್ಪಿದರೆ ಅಷ್ಟೇ ಸಾಕು. ಇವತ್ತು ಎಷ್ಟೇ ಹೊತ್ತಾದರೂ ಅಲ್ಲಿ ಹೋಗಿಯೇ ಬರಬೇಕು.

ಚೆ—ಅದಕ್ಕಲ್ಲ ಸ್ವಾಮಿ—ನಡೀರಿ ಬರ್ತೇನೆ. ದೂರ ಏನೋ ಕಡಿಮೆ ಇಲ್ಲ. ಇತ್ಯಾದಿ—

ಅಂತು ಚೆನ್ನಯ್ಯನು ನಮ್ಮ ಜೊತೆಯಲ್ಲಿ ಬರುವುದಕ್ಕೆ ಒಪ್ಪಿ ಮುಂದೆ ನಡೆದನು. ಅವನು ಮುಂದೆ, ನಾವು ಹಿಂದೆ. ಅವನು ಹಾಗೆಯೇ ನಮ್ಮ ಕಡೆ ತಿರುಗಿ ಅಲ್ಲಿನ ಒಂದು ಪ್ರದೇಶವನ್ನು ಕೈಬೆರಳಿನಿಂದ ನಿರ್ದೇಶಿಸಿ,

"ಅಲ್ಲಿ ನೀರು ಬಲು ಆಳ ಇದೆ ಸ್ವಾಮಿ. ಮೊನ್ನೆ ಇಬ್ಬರು ಮುಳುಗಿಹೋಗಿ ಬಿಟ್ಟರು" ಎಂದನು.

"ಎಲ್ಲೊ ?"

ಕೋದಂಡರಾಮಸ್ವಾಮಿ ದೇವಸ್ಥಾನದ ಎದುರಿನಲ್ಲಿ ನದಿಯ ಪಾತ್ರವು ಬಹಳ ಅಗಲವಾಗಿದೆ. ನೀರಿನ ಪ್ರವಾಹವು ಬಂದು ಬಂದು ಇಲ್ಲಿ ಸುಮಾರು ಒಂದು ಸಣ್ಣ ಕೆರೆಯಷ್ಟು ಅಂಗಳವನ್ನು ಮಾಡಿಕೊಂಡಿದೆ. ಎದುರಿಗಿರುವ ದೇವರು ದೇವಸ್ಥಾನಗಳ ಸಮುಖದಲ್ಲಿ ತುಂಗಭದ್ರೆಯು ನಮ್ರಳಾಗಿ ಪ್ರಣಾಮಗೈಯಲೆಳಸಿ ಪ್ರದಕ್ಷಿಣೆ ಮಾಡಿ ಮುಂದೆ ಹೋಗುವಂತಿದೆ ಅಲ್ಲಿಗೆ ಕೈಬೆರಳು ತೋರಿಸಿ ಚೆನ್ನಯ್ಯನು "ಅಲ್ಲಿ" ಎಂದನು. ನದಿಯ ಆಚೆಕಡೆಯ ದಂಡೆಯಲ್ಲಿ ಶ್ರೀರಾಮದೂತನು ಹುಟ್ಟಿದ ಅಂಜನಾ ಪರ್ವತ. ನಮಗೆ ಎಡಗಡೆ ಬೆಟ್ಟಗಳ ಮಧ್ಯೆ ಜಾಗಮಾಡಿಕೊಂಡು ಹರಿದು ಬರುತ್ತಿರುವ ನದಿ. ವಿಶಾಲವಾದ ನಮ್ಮ ಮುಂದಿನ ಜಲಾಂಗಣ ; ತುಂಗಭದ್ರೆಯು ಅಲ್ಲಿಂದ ಮುಂದೆ ಅತಿ ಸಂಭ್ರಮದಿಂದ ಪ್ರಯಾಣಮಾಡುತ್ತ ಎದುರಿಗೆ ಸಿಕ್ಕಿದ ಕಲ್ಲುಬಂಡೆಗಳನ್ನು ಅಪ್ಪಳಿಸಿಕೊಂಡು, ಸೀರ್ಪನಿಗಳನ್ನು ಚೆಲ್ಲಿಕೊಂಡು, ಅವುಗಳ ಮೇಲೆ ಝುಲ್ಲನೆ ಹರಿದು, ಸುಳಿದು ಸಗರ್ವದಿಂದ ಹೋಗುತ್ತಿರುವ ದೃಶ್ಯ. ಅವನ್ನು ನೋಡಿದರೆ ಯಾರ ಮನಸ್ಸಿನಲ್ಲಿ ತಾನೆ ಗಂಭೀರಭಾವತರಂಗಗಳು ಉದಯಿಸವು ! ರಾಯರು ಕೇಳಿದರು— "ಇಲ್ಲೆಲ್ಲೊ, ಚೆನ್ನಯ್ಯ, ಸಂನ್ಯಾಸಿ ದಿಬ್ಬವೆಂಬ ಜಾಗವಿದೆ ಅಂತಾರಲ್ಲ ?" ಎಂದು.

ಚೆ—ಆಗೊಳ್ಳಿ ಸ್ವಾಮಿ, ಆ ಕಲ್ಲುಮಂಟಪ, ನದಿ ಆಚೆಕಡೆ.

ಮಂಟಪವನ್ನು ಆಗಲೆ ನಾವೆಲ್ಲ ನೋಡಿದ್ದೆವು. ಇತರ ಕಲ್ಲು ಮಂಟಪಗಳಂತೆಯೇ—ಹೊರಗಣ ಆಕಾರದಲ್ಲಿ—ಅದೂ ಅತಿ ಸಾಮಾನ್ಯವಾದುದು. ಆದರೆ ಬೆಟ್ಟದ ಆ ಕಡಿದಾದ ತಪ್ಪಲಿನಲ್ಲಿ, ಆ ದುರ್ಗಮ ಪ್ರದೇಶದಲ್ಲಿ, ಪ್ರಾಣಿಸಂಬಂಧವಿಲ್ಲದ ಆ ನಿವಾಸವನ್ನು ಮಾಡಿಕೊಂಡು

ಇರುತ್ತಿದ್ದವರು ಎಂಥವರಾಗಿರಬೇಕು ? ಎಂದುಕೊಂಡಿದ್ದೆವು. ಈಗ ಅದೇ ಮಂಟಪವೇ ಸಂನ್ಯಾಸಿದಿಬ್ಬವೆಂದು ತಿಳಿಯುತ್ತಲೆ ರಾಯರ ಮನಸ್ಸು ಸಂಪೂರ್ಣವಾಗಿ ಆಕಡೆ ಹೊರಟುಹೋಯಿತು. ಅದನ್ನು ಅವರು ಹಾಗೇ ಧ್ಯಾನಿಸುತ್ತ ನಿಂತರು. ಐತಿಹಾಸಿಕಸಂಬಂಧಗಳಿಂದ ಅವರ ದೃಷ್ಟ್ಯ—ನಮ್ಮೆಲ್ಲರ ದೃಷ್ಟ್ಯ—ಆ ನಿರ್ಜೀವಮಂಟಪವು ವಿದ್ಯಾರಣ್ಯರ ತಪಸ್ಸ್ಥಾನವಾಗಿ ನಮ್ಮ ಎದುರಿಗೆ ಚಿತ್ರಿತವಾಗಿ ನಿಂತಿತು. ವಿದ್ಯಾರಣ್ಯರ ವಿಷಯದಲ್ಲಿ ಅನಂತ ಭಕ್ತಿಭಾವಗಳಿದ್ದ ರಾಯರಿಗಂತೂ ಕಾಲದೇಶದ ಅರಿವು ಅಳಿಸಿಹೋಗಿ ಮನಸ್ಸು ಧ್ಯಾನದಲ್ಲಿ ಮುಳುಗಿಹೋಯಿತು. ಸ್ವಲ್ಪ ಹೊತ್ತಿನ ಬಳಿಕ "ಅಲ್ಲಿಗೆ ಹೋಗುವುದಕ್ಕೆ ದಾರಿಯಿಲ್ಲವೇನಯ್ಯ" ಎಂದರು.

ಚೆ—ಇಲ್ಲ ಸ್ವಾಮಿ. ಆನೆಗೊಂದಿಯ ಕಡೆಯಿಂದ ಬೆಟ್ಟವನ್ನು ಹತ್ತಿಕೊಂಡು ಇಳಿದುಬಂದರೆ ಆಗಬಹುದು. ಆದರೆ ಬಲು ಕಷ್ಟ.

ರಾ—ಆದರೆ ಯಾರೂ ಆಕಡೆ ಈಗ ಹೋಗುವುದೇ ಇಲ್ಲವೇನು ?

ಚೆ—ನಾನು ಅಂಥವರ್‍ಯಾರನ್ನೂ ನೋಡಿಲ್ಲ ಗುರುವೆ. ನೀರು ಬಹಳವಿದೆ. ಅಂಥಾದ್ದು ಎಷ್ಟೋ ಈ ಸುತ್ತಮುತ್ತಲೂ ಇವೆ. ಆದರೆ ಅಲ್ಲಿ ಹೋಗಿ ಇರೋ ಅಂಥಾವ್ರೋರು ಈಗ ಯಾರೂ ಇಲ್ಲ.

ನಿಜವಾಗಿಯೂ ಅದು ನಿರ್ಗಮಪ್ರದೇಶವೇಯೆ. ಇಲ್ಲದಿದ್ದರೆ ವಿದ್ಯಾರಣ್ಯರು ಆ ಸ್ಥಳದಲ್ಲಿ ತಮ್ಮ ಆಶ್ರಮವನ್ನು ನಿರ್ಮಾಣಮಾಡಿಕೊಳ್ಳುತ್ತಿದ್ದರೆ? ಜನರ ಸುಳಿವಿಲ್ಲದೆ, ಅವರ ಗದ್ದಲಕ್ಕೆ ದೂರವಾದ ಆ ಏಕಾಂತಸ್ಥಾನವು ಎಷ್ಟು ರಮಣೀಯವಾಗಿದೆ! ವಿಶ್ವವ್ಯಾಪಾರತತ್ತ್ವಗಳನ್ನು ಕುರಿತು ಚಿಂತಿಸುತ್ತ, ಶಮದಮಯೋಗಾದಿ ತಪಶ್ಚರ್ಯೆಗಳಿಂದ ಆತ್ಮಶಕ್ತಿಯನ್ನು ವೃದ್ಧಿಪಡಿಸಿಕೊಂಡು, ಮನಸ್ಸನ್ನು ಸ್ಥಿಮಿತತೆಗೆ ತಂದುಕೊಂಡು ನಿಶ್ಚಿಂತರಾಗಿರಲು ಕಲಿಯುವುದಕ್ಕೆ ಈ 'ಶಾಂತಿನಿಕೇತನ'ವು ಎಷ್ಟು ತಕ್ಕುದಾಗಿ ಮನೋಹರವಾಗಿರುವುದೆಂಬುದನ್ನು ವರ್ಣಿಸಿ ಹೇಳು

ವುದು ಸಾಧ್ಯವಿಲ್ಲ. ಇಲ್ಲಿ ಕುಳಿತುತಾನೆ ಆ ವೀರತಪಸ್ವಿಗಳು ಹಿಂದೂ ಧರ್ಮವನ್ನು ಉದ್ಧಾರಮಾಡುವ ಯೋಜನೆಗಳನ್ನು ಪಕ್ವಮಾಡಿಕೊಂಡುದು! ಹಿಂದೂಸಾಮ್ರಾಜ್ಯಸ್ಥಾಪನೆಯ ಉದ್ದೇಶಗಳನ್ನು ಹುರಿಮಾಡಿಕೊಂಡುದು!

ಹಂಪೆಯ ಆಕೃತಿಯನ್ನೂ, ಅಲ್ಲಿ ಭೂಕಟ್ಟನ್ನೂ, ಪ್ರಕೃತಿ ರಮಣೀಯತೆಯನ್ನೂ ನೋಡಿದರೆ ಸಾಮಾನ್ಯರಾದವರ ಮನಸ್ಸಿನ ಉತ್ಸಾಹವೇ ಮೇರೆತಪ್ಪಿದಂತಾಗುವುದು. ಅವರಂಥ ತಪಸ್ವಿಗಳಿಗೂ, ದೇಶಬಾಂಧವರಿಗೂ ಸ್ಮಾರ್ತ ಸಾಮ್ರಾಜ್ಯ ಸಂಸ್ಥಾಪನೆಯ ಯೋಜನೆ ಬಂದುದು ಹೆಚ್ಚೇನು? ಬ್ರಾಹ್ಮಣನ ಸತ್ವತೇಜಸ್ಸಂಪಾದನೆಗೂ, ಕ್ಷತ್ರಿಯನ ಕ್ಷಾತ್ರ ರಾಷ್ಟ್ರ ಪ್ರತಿಷ್ಠಾಪನೆಗೂ ಭೂಮಿಯ ಈ ಭಾಗವು ಹೊಂದಿರುವಷ್ಟು ಅನುಕೂಲ್ಯವು ಇನ್ನಾವ ಭಾಗವೂ ಹೊಂದಿಲ್ಲವೆಂದು ಹೇಳಬಹುದು. ಮುಂದೆ ಮುಂದೆ ಹೊರಟೆವು; ರಾಯರು ಇನ್ನೂ ಧ್ಯಾನತತ್ಪರರಾಗಿಯೇ ಇದ್ದರು. ನಾವು ಯಾರೂ ಅವರನ್ನು ಮಾತನಾಡಿಸಲಿಲ್ಲ; "ಅವರನ್ನು ನಾಸ್ತಿಕರೆಂದು ಕರೆವರಾರು?" ಎಂದು ನನಗೆ ಅನ್ನಿಸಿತು.

ಮುಂದೆ ಅನತಿದೂರದಲ್ಲಿಯೆ ಎತ್ತರವಾದ ತುಲಾಪುರುಷ ದಾನ ಸ್ತಂಭಗಳು; ವಿಜಯನಗರದ ಅರಸರು ಪರ್ವಗ್ರಹಣೇತ್ಯಾದಿ ಪುಣ್ಯಕಾಲಗಳಲ್ಲಿ ತುಲಾಭಾರಮಾಡಿಸಿಕೊಂಡು ರತ್ನಕನಕಾದಿ ದ್ರವ್ಯಗಳನ್ನು ಯಥೇಚ್ಛವಾಗಿ ದಾನಮಾಡುತ್ತಿದ್ದ ಸ್ಥಳವಂತೆ. ಸಾಮ್ರಾಜ್ಯೇಶ್ವರ ಕೃಷ್ಣದೇವರಾಯನೂ ಅವನ ತರುವಾಯ ಬಂದ ಅಚ್ಯುತರಾಯನೂ ಇಲ್ಲಿ ಈ ತೆರನಾದ ಸುವರ್ಣದಾನಗಳನ್ನು ಅನೇಕವಾಗಿ ಮಾಡಿದರಂತೆ. ಅದು ಶಾಂತಿಕರ್ಮವೋ, ಶಾಸ್ತ್ರವಿಧಿಯೋ, ತಮ್ಮ ವೈಭವದರ್ಪಗಳ ಉದ್ದಂಡ ಧೋರಣೆಯನ್ನು ಲೋಕಕ್ಕೆ ಪ್ರಕಟಿಸಿ ಖ್ಯಾತಿಗೊಳ್ಳಲು ಅವರು ನಡೆಸುತ್ತಿದ್ದ ದಂಭವೃತ್ತಿಯೋ, ಇವೆಲ್ಲವೂನೋ ಹೇಳುವರಾರು? ನಮ್ಮದು ಅತಿವೃಷ್ಟಿ ಅನಾವೃಷ್ಟಿಯ ಖಂಡ. ಇಲ್ಲಿ ಯಾವ ವಿಷಯದಲ್ಲಿಯೂ, ಜನರಲ್ಲಿ ಸಮತೆ



ಹಂಪೆಯಲ್ಲಿರುವ ವಿಟ್ಠಲಸ್ವಾಮೀ ದೇವಸ್ಥಾನ

ಯಾಗಲಿ ಸ್ಥಿಮಿತಗತಿಯಾಗಲಿ, ಮಧ್ಯವೃತ್ತಿಯಾಗಲಿ ಇರದು. ಈ ಸ್ವಭಾವವು ಉಷ್ಣದೇಶಗಳವರಾದ ನಮಗೆ ಸೃಷ್ಟಿಕರ್ತನು ಕೊಟ್ಟ ಅಖಂಡ ಶಾಪವೆನ್ನುವುದರಲ್ಲಿ ಸಂಶಯವೇನಿದೆ ?

ಅಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಸಾವಕಾಶದಿಂದ ನೋಡಲು ನಮಗೆ ಕಾಲವಿಲ್ಲದಿದ್ದುದರಿಂದ ಶೀಘ್ರವಾಗಿ ನಡೆದೆವು. ಸ್ವಲ್ಪದೂರದಲ್ಲಿಯೇ ಒಂದು ದೊಡ್ಡ ದೇವಸ್ಥಾನ. ಅದೇ ವಿಟ್ಠಲಸ್ವಾಮಿಯ ಗುಡಿಯೆಂದು ತಿಳಿಯಿತು. ಹೊರಗಡೆ ಎತ್ತರವಾದ ಘೌಳಿ ಗೋಡೆಯ ಪ್ರಾಕಾರ; ಅದನ್ನು ಕಟ್ಟಲು ಉಪಯೋಗಿಸಿರುವ ೨೦-೩೦ ಅಡಿಗಳ ಉದ್ದ, ೪-೫ ಅಡಿಗಳ ದಪ್ಪ ನಯವಾದ ಕಲ್ಲುಚಪ್ಪಡಿಗಳನ್ನು ಬಿಟ್ಟರೆ, ಹಂಪೆಗೆ ಅತಿ ಸಾಮಾನ್ಯವಾದ ಗೋಡೆ. ನನಗೆ ದೇವಸ್ಥಾನದ ವಿಚಾರ ಹೆಚ್ಚಾಗಿ ತಿಳಿಯದು. ಎಲ್ಲರೂ "ವಿಟ್ಠಲಸ್ವಾಮಿಗುಡಿ, ವಿಟ್ಠಲಸ್ವಾಮಿಗುಡಿ" ಎಂದು ಹೇಳುತ್ತಿದ್ದುದನ್ನು ಮಾತ್ರ ಕೇಳಿದ್ದೆ. ಹೊರಪ್ರಾಕಾರವನ್ನು ನೋಡಿದವನು, ಇಷ್ಟೇಯೆ ? "ಇಲಿಯನ್ನು ಹುಲಿಯೆಂದು ಕರೆದು ಹೋ ಎನ್ನುವುದೇ ನಮ್ಮ ಜನದ ಸ್ವಭಾವ. ಅಸ್ಥಿಭಾರವಿಲ್ಲದ ಉತ್ಪ್ರೇಕ್ಷೆ. ಅದು ನಮ್ಮ ರಾಷ್ಟ್ರಕ್ಕೇ ಬಂದುದು" ಎಂದುಕೊಂಡೆನು. ಆದರೆ ಒಳಗಡೆ ಹೋದಮೇಲೆ ನನ್ನ ಈ ಭಾವನೆಯು ತಪ್ಪೆಂದು ಮನಗಂಡೆನು. ನಾವು ಹೊರಟ ದಾರಿಯಿಂದ ಗುಡಿಗೆ ಪ್ರವೇಶ ತೆಂಕಣದ್ವಾರದಿಂದ. ಚೆನ್ನಯ್ಯನು ಬಾಗಿಲಿನಲ್ಲಿ ಜಗಲಿಯ ಮೇಲೆ ಹುಳಿಮಾವಿನಕಾಯಿಗಳನ್ನು ತಿನ್ನುತ್ತ ಕುಳಿತುಕೊಂಡವನು, ನಾವು ದೇವಸ್ಥಾನದ ಒಳ ಪ್ರಾಂಗಣವನ್ನು ಹೊಕ್ಕೊಡನೆಯೆ ತನ್ನ ಜಂಖಾನವನ್ನು ಹಾಸಿಕೊಂಡು ಮಲಗಿದನು. ಅವನಿಗೇನು ? ಎಲ್ಲಿದ್ದರೆ ಅದೇ ಮನೆ—ಅವನ ಆಯುಧ ಆ ದೊಣ್ಣೆ—ಆ ಹರಕು ಜಂಖಾನವೇ ಸರ್ವಸ್ವ ಆಸ್ತಿ. ಅವುಗಳನ್ನು ಬಿಟ್ಟರೆ, ಪ್ರಪಂಚದಲ್ಲಿ ತನ್ನದೆನ್ನುವ ಬೇರೊಂದು ವಸ್ತು ಅವನಿಗೆ ಇಲ್ಲ. "ಪಾಪ ! ತುಂಬ ಆಯಾಸಪಟ್ಟಿದ್ದಾನೆ. ಹಾಗೇ ಸ್ವಲ್ಪಹೊತ್ತು ಉರುಟಿಕೊಂಡಿರಲಿ"

ಎಂದರು ಯಜಮಾನರು. ನಮಗೂ ಹಾಗೇಯೆ ಅನ್ನಿಸಿತು. ಆ ದೇವ ಸ್ಥಾನದಲ್ಲಿ ನೋಡಬೇಕಾದುದು ಮುಖ್ಯವಾಗಿ ಮೂರು: ಮುಖದ ಮಹಾಮಂಟಪ, ಪಕ್ಕದ ದೇವರ ಕಲ್ಯಾಣಮಂಟಪ, ಎದುರಿನಲ್ಲಿ ಸಣ್ಣ ಕಲ್ಲು ರಥ. ಪ್ರಾಕಾರದ ಒಳಗಡೆ ಅನೇಕ ಶಿಲಾಶಾಸನಗಳಿವೆ. ಪ್ರಾಕ್ತನ ವಿಚಾರಕರು ಈ ಶಾಸನಗಳನ್ನು ಓದಿ ಚಾರಿತ್ರಕ ವಿಷಯಗಳನ್ನು ವಿಮರ್ಶೆಮಾಡಿ ತಿಳಿದುಕೊಳ್ಳಬಹುದು. ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿಕೊಂಡು ಮುಖಭಾಗಕ್ಕೆ ಬಂದು ನಿಂತರೆ ಅದೇನು ಚಿತ್ರಕೃತಿಯ ಸಂವಿಧಾನ! ಏನು ಶಿಲ್ಪಕಲಾಕೌಶಲ್ಯ! ದ್ರಾವಿಡ ಶೈಲಿಯ ವಸ್ತುರಚನೆ ಯಲ್ಲಿ ಈತೆರನಾದ ಇನ್ನೊಂದು ಶಿಲ್ಪಕೃತಿಯಿಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗದು. ಮಹಾಮಂಟಪಕ್ಕೆ ಹತ್ತಿಹೋಗಲು ಮಾಡಿರುವ ಮೆಟ್ಟಲುಗಳ ಎರಡು ಕಡೆಗಳಲ್ಲೂ ಸುಂದರವಾಗಿ ಕೆತ್ತಿ ಮಾಡಿದ, ಸರ್ವಾ ಲಂಕಾರಭೂಷಿತಗಳಾಗಿ ಮುಂಗಾಲ್ಗಳೆತ್ತಿ ನಿಂತಿರುವ, ಮದಗಜಗಳು. ಹಂಪೆಯಲ್ಲಿನ ಸರ್ವತ್ರ ಶಿಥಿಲಸ್ಥಿತಿಯು ಈ ಆನೆಗಳಿಗೂ ಬಂದಿದೆ. ಅವು ಗಳ ಮುಖದಿಂದ ಸೊಂಡಿಲು ಕತ್ತರಿಸಿಹೋಗಿವೆ. ಮೇಲೆ ಹತ್ತಿಹೋಗಿ ನೋಡಿದರೆ ಸುತ್ತಲೂ ಸಾಲುಕಂಭಗಳು; ಎಲ್ಲವೂ ಒಂದೇ ಸಮನಾಗಿ ಸೌಂದರ್ಯೈಕ ದೃಷ್ಟಿಯಿಂದ ಮಾಡಿದುವು. ಗರ್ಭಗುಡಿಯ ಬಾಗಿಲುವರೆಗೆ ವಿಶಾಲವಾದ ಸ್ತಂಭಮಾರ್ಗ, ಅವುಗಳ ಆಚೆಯಲ್ಲಿ ಉಪಕಂಭಸಾಲುಗಳು; ಮಧ್ಯೆ ಉಪರಂಗ. ಪ್ರತಿಯೊಂದು ಕಂಭದಲ್ಲಿಯೂ ಶರಭ ಸಾಳ್ವಗಳ ಮೇಲೆ ಕುಳಿತ ಪಹರೆಯವರು. ಮೇಲ್ಗಡೆ ಸುತ್ತಲೂ ಪಟ್ಟಿಕೆಗಳಲ್ಲಿ ಚಿತ್ರಕೆಲಸ. ರಾಮಾಯಣ ಮಹಾಭಾರತಗಳಲ್ಲಿನ ಘಟನಾವಳಿಗೆ ಸಂಬಂಧಪಟ್ಟುವು ಗಳು. ನಾನು ಈ ವರೆಗೆ ನೋಡಿದ ನಾಟಕಶಾಲೆಗಳಲ್ಲಿನ ಯಾವ ಓಲ ಗದ ಘರದೆಯೂ ಇಷ್ಟು ಮನೋಹರವಾಗಿ, ಹೃದಯಾಪಹಾರಕವಾಗಿ ಇದ್ದುದನ್ನು ನೋಡಿರಲಿಲ್ಲ. ಅಲ್ಲಿಯೇ ಒಂದು ಕಡೆಯಿಂದ ಇನ್ನೊಂದು ಕಡೆಗೆ, ಒಂದು ಮೂಲೆಯಿಂದ ಇನ್ನೊಂದಕ್ಕೆ ಹೋಗಿ ಆ ಸೊಬಗನ್ನೇ

ಅನುಭವಿಸುತ್ತಿರಬೇಕೆಂದು ಆಶೆ. ಉಳಿದವರು ಕಲ್ಯಾಣಮಂಟಪದ ಕಡೆ ಹೊರಟರು. "ಸಾಕಪ್ಪ ಬನ್ನಿ" ಎಂದು ಕೂಗಿದರು. "ಬಂದೆ" ಎಂದು ಹೇಳಿ ಕಳ್ಳತಪ್ಪಿಸಿಕೊಂಡು ಅವರಿಂದ ಮರೆಯಾಗಿ ಅಲ್ಲಿ ಇನ್ನೂ ಸ್ವಲ್ಪಹೊತ್ತು ಸುಳಿದಾಡಿದೆ; ಇಲ್ಲಿ ಇಷ್ಟು ಶೃಂಗಾರವೇತಕ್ಕೆ ? ಎಂದು ಒಂದು ಸಲ ಪ್ರಶ್ನೆ ಬಂತು. ದೇವರು ಇಷ್ಟು ಸೌಂದರ್ಯವನ್ನು ಒಂದೇ ಕಡೆ ರಾಶಿಹಾಕಿ ಮಿಕ್ಕ ಭಾಗಗಳಿಗೆ ದಾರಿದ್ರ್ಯವನ್ನೇಕೆ ಕೊಟ್ಟನೊ ! ಅವನಿಗೂ ಹೀಗೆ ಪಕ್ಷಪಾತ ಬುದ್ಧಿ ಬಂದಮೇಲೆ ಸಾಮಾನ್ಯರು ನಿಷ್ಪಕ್ಷಪಾತಿಗಳಲ್ಲವೆಂದು ಅವರನ್ನು ನಾವೇಕೆ ಆಕ್ಷೇಪಿಸಬೇಕು ? ಎಂದುಕೊಂಡೆ. ಇಷ್ಟು ಸುಂದರವಾದ ಕಟ್ಟಡಕ್ಕೆ ಈ ದುಸ್ಥಿತಿಯು ಏಕೆ ಬರಬೇಕು, ಏನು ವಿಧಿಲೇಖನವೊ ! ಎಂದು ಇನ್ನೊಂದು ಸಲ ತೋರಿತು. ಈ ಸೌಂದರ್ಯಕ್ಕೆ ಸಾಫಲ್ಯವೇ ಇಲ್ಲವೇನು ? ಇಲ್ಲಿ ದೇವತಾವಿಗ್ರಹವಿಲ್ಲ. ಇಷ್ಟು ಸೊಗಸಾದ ಕಟ್ಟಡವು ತನ್ನಂಥವನಿಗೆ ತಕ್ಕುದಲ್ಲವೆಂದೂ, ಇಂಥ ಶೃಂಗಾರದ ನೆಲೆಯು ತನ್ನ ಯೋಗ್ಯತೆಗೆ ತಡೆಯದೆಂದೂ, ವಿಾರಿದುದೆಂದೂ ಹೇಳಿ ವಿಟ್ಠಲಸ್ವಾಮಿಯು ಹಂಪೆಗೆ ಬರದೆ ಪಂಡರಪುರದ ತನ್ನ ಹಳೆಯ ಬಡಮಂದಿರದಲ್ಲೆ ನಿಂತುಬಿಟ್ಟಿರುವಲ್ಲಿ, ಈ ಸೌಂದರ್ಯಕ್ಕೆ ಪವಿತ್ರತೆ ಹೇಗೆ ಬರಬೇಕು ? ದೈವವಾಸವಿಲ್ಲದ ದೇವಸ್ಥಾನವು ಮಂಗಳ ಸ್ಥಾನವೆಂತಾದೀತು ? ಎಂದು ತೋರಿತು. ಉತ್ತರಕ್ಷಣದಲ್ಲಿಯೇ, ಛೇ ! ಸೌಂದರ್ಯವೇ ಭಗವಂತನ ಪ್ರತಿರೂಪ ; ಅದಕ್ಕೆ, ಇತರ ಕರಣಗಳಿಂದ ಸಿದ್ಧಿ ಬರಬೇಕಾದ ಆವಶ್ಯಕತೆಯೇನಿದೆ ? ಎಂದೂ ಹೀಗೆ ವಿಧವಿಧವಾಗಿ ಮನಸ್ಸು ಭ್ರಮಿಸತೊಡಗಿತು. ಅಥವ, ತಮ್ಮ ಕುಶಲತೆಯ ವಿಷಯದಲ್ಲಿ ಅಹಂಕಾರಪಟ್ಟು, ಹೆಮ್ಮೆ ಬುದ್ಧಿಯಿಂದಿರುವ ಈ ವಿಜಯನಗರದ ಅರಸರ ಸವಿಾಪದಲ್ಲಿ ನಾನೇಕೆ ವಾಸಮಾಡಬೇಕು ? ಅವರ ಉಚ್ಛ್ರಾಯದ ಉಪ್ಪರಿಗೆಗೆ ನಾನೇಕೆ ಸೋಪಾನ ಕಟ್ಟಿಕೊಡಬೇಕು ? ಇದು ನನ್ನವರ ಸ್ವಾರ್ಥಸಾಮ್ರಾಜ್ಯ, ನಿಜ. ಆದರೆ ನಮ್ಮವರೆಂದು ಮಲೆತವರನ್ನು ಶಿಕ್ಷಿ

ಸಿದೆ ಬಿಡುವುದು ಯೋಗ್ಯವೆ? ಎಂದು, ದೂರದಿಂದ ಅವರ ಕರ್ಮಗಳನ್ನು ಸುಮಾರು ಅರ್ಧಶತಮಾನದವರೆಗೆ ನೋಡಿ ತಡೆಯಲಾರದ ಕೋಪದಿಂದ, ತಾನಾಗಿ ಕರುಣೆಯಿಂದಿತ್ತ ಆ ಸಾಮ್ರಾಜ್ಯವನ್ನು ನಾಶ ಮಾಡಿದನೇನೊ! ಎಂದೂ ಭಾವನೆ ಬಂತು. ಭಾವನೆಗಳು ಹಾಗಿರಲಿ, ಆ ಸೌಂದರ್ಯವನ್ನು ನೋಡಿದರೆ—ಶಾಂತಂ ಪಾಪಂ—ಇಂಥ ಅಮಂಗಳವನ್ನು ನುಡಿಯಬಾರದು—ಅದು ಸಾಧ್ವಿಯ ಸಾತ್ವಿಕಸೌಂದರ್ಯದಂತೆ ಕಳೆಗೊಂಡಿರಲಿಲ್ಲ. ಅತುಳ ಲಾವಣ್ಯಮಯಿಯಾಗಿ, ಹಾವಭಾವ ವಿಲಾಸಗಳಿಂದ ಲೋಕವನ್ನು ಬೆರಗುಮಾಡಿ ಸೋಲಿಸುವ ನಾರಿಯ ಚಿರವೈಧವ್ಯ ಪರಿಣತಸೌಂದರ್ಯದಂತೆ ತೋರತೊಡಗಿತು. ಇನ್ನು ಒಬ್ಬನೇ ಅಲ್ಲಿರಲು ಸಾಧ್ಯವಾಗದೆ ಹೋಯಿತು. ಅಪವಿತ್ರಭಾವನೆಗಳನ್ನು ದೂರಮಾಡಲು ನನ್ನ ಸಂಗಡಿಗರಿದ್ದಲ್ಲಿಗೆ ಹೊರಟೆನು.

ಅವರೆಲ್ಲರೂ ಕಲ್ಯಾಣಮಂಟಪವನ್ನು ಸೇರಿ ಅದನ್ನು ಪ್ರಶಂಸೆ ಮಾಡುತ್ತ ಮಂಟಪದ ಮಧ್ಯದಲ್ಲಿ ಕುಳಿತಿದ್ದರು. ಆ ಮಂಟಪವನ್ನು ನೋಡಿದೆ. ಮನಸ್ಸು ಪರವಶವಾದಂತಾಯಿತು. ಅದರ ಚಂದವು ದೇವಸ್ಥಾನದ ಮಹಾಮಂಟಪದ ಮೋಹನತೆಯನ್ನು ಕೀಳುಮಾಡಿ ಲಜ್ಜೆಗೊಳಿಸುವಂತಹುದು. ಅಲ್ಲಿಯೂ ಹೀಗೇಯೆ. ಕಂಭಸಾಲುಗಳು; ವಿಶಾಲವಾದ ಮಧ್ಯರಂಗ, ಅಕ್ಕಪಕ್ಕಗಳಲ್ಲಿ ನಾಲ್ಕೂಕಡೆ ಉಪರಂಗಗಳು; ಒಂದೊಂದು ಕಂಭವೂ ಒಂದೊಂದೇ ಕಲ್ಲಿನಿಂದ ಕಡೆದು ಕೆತ್ತಿ ಮಾಡಿದಂತಹುದು. ನಿಲುಕಂಭದ ಅಡಿಭಾಗದಲ್ಲ ಒಳಮುಖನಾಗಿ ಸಿಂಹಜಾತಿಯ ಮೃಗಗಳು; ಮಧ್ಯದಲ್ಲಿ ಪೀಠದಮೇಲೆ ಹೊರಮುಖನಾಗಿ ನಾಲ್ಕೈದು ಶಿಲಾದಂಡಗಳು; ಒಳಭಾಗದಲ್ಲಿ ಶರಭಾರೂಢರಾದ ಸವಾರರು. ಮಂಟಪದ ನಾಲ್ಕೂಕಡೆಯೂ ಹೀಗೆಯೇ. ವಿಧವಿಧವಾದ ನಯಗೆಲಸಗಳಿಂದ, ಶಿಲ್ಪಾಭರಣಚಮತ್ಕೃತಿಗಳಿಂದ ಕೆತ್ತಿ ಸಿಂಗರಿಸಲ್ಪಟ್ಟಿರುವ ಸ್ತಂಭವೇದಿಕೆಗಳು. ಮೇಲ್ಗಡೆ ಮಾಳಿಗೆಯ ಮೂಲೆವಾಟಗಳಲ್ಲಿ ಲೋವೆಕಲ್ಲುಗಳಮೇಲೆ ಪಕ್ಷಿಯ ರೆಕ್ಕೆ

ಗಳಂತೆ ಶಿಲ್ಪಕೆಲಸ; ಲೋವೆಯ ಕೆಳಗೆ ಲಾಂದರಗಳನ್ನು ತಗುಲಿಹಾಕು ವುದಕ್ಕಾಗಿ ಮಾಡಿದ ಕಲ್ಲು ಉಂಗುರಗಳು. ಉತ್ತಮವಾದ ಸಹಜ ಸೌಂದರ್ಯವನ್ನು ವೃದ್ಧಿಮಾಡಲು ಅಂಗಾಂಗಗಳಿಗನುಗುಣವಾದ ಉಡು ಗೆ ತೊಡಿಗೆಗಳನ್ನು ಹಾಕಿ ಅಲಂಕರಿಸುವಂತೆ—ಮಂಟಪದ ಒಳಮಾಳಿ ಗೆಯ ಪ್ರತಿಭಾಗವೂ ಸ್ಫುಟವಾಗಿ ಕಂಡು ಶೋಭಿಸುವಂತೆ—ಹಸುರು, ನೀಲಿ, ಗುಲಾಬಿ, ಕೆಂಪು ಇತ್ಯಾದಿ ಬಣ್ಣಗಳಿಂದ ಅವನ್ನು ಹೆಚ್ಚು ಉಜ್ಜ್ವಲವಾಗಿ ಕಾಂತಿಯುತವಾಗಿ ಮಾಡಿದ್ದಾರೆ. ಆ ರಾಜರ ಕಲಾಭಿ ರುಚಿ, ಅಲಂಕಾರದೃಷ್ಟಿ, ರಸಿಕತೆ ಇವುಗಳನ್ನು ಏನೆಂದು ಹೇಳೋಣ! ಆ ಚಿತ್ರಗಾರರೂ ಶಿಲ್ಪಿಗಳೂ ತಾನೇ ಎಂಥವರು! ಯಾವ ಚಕ್ರವರ್ತಿಯ ವಿವಾಹಮಂಟಪವು ಈ ತೆರನಾದ ಶಿಲ್ಪಕೌಶಲವನ್ನು ತೋರಿಸಬಲ್ಲುದು! ಕಲ್ಯಾಣಮಂಟಪವೆಂದರೆ ಇದಕ್ಕಲ್ಲವೆ ಆ ಹೆಸರು ಸಲ್ಲತಕ್ಕದ್ದು? ಎಂದು ಕೊಂಡೆನು. ಆ ಅರಸರ ವೈಭವವೂ, ಮೈಯುಬ್ಬೂ ಎಂಥವಾಗಿದ್ದಿರ ಬೇಕು? ಪಂಪಾಪತಿಯ ದೇವಸ್ಥಾನದ ಮೇಲೆ ಬೆಳ್ಳಿ ಚಿನ್ನಗಳ ತಗಡು ಗಳಿಂದ ಹೊದ್ದಿಕೆಗಳನ್ನು ಮಾಡಿಸಿ ಅದನ್ನು ಕಾಪಾಡುತ್ತಿದ್ದರಂತಲ್ಲ! ತಾವು ಮಾಡಿದ ಪ್ರತಿಯೊಂದು ಕೆಲಸವೂ ಚಿರ ಯಶಸ್ವಿಯಾಗಿ, ಆಚಂ ದ್ರಾರ್ಕವಾಗಿ ನಿಲ್ಲಲೆಂದು ಜಗತ್ತನ್ನು ಅಚ್ಚರಿಗೊಳಿಸಲು ಮಾಡಿದಂತ ಹುದು; ಎಷ್ಟು ಅಲ್ಪ ಅವಧಿಯಲ್ಲಿ ಎಷ್ಟು ಮಹತ್ಕಾರ್ಯಸಾಧನೆಗಳು! ಯಶೋಹೀನರಾಗಿ ಅನಾಮಧೇಯರಾಗಿ ಹತ್ತಾರು ಶತಮಾನಗಳು ಬದು ಕಿಕೊಂಡು ಕ್ರಿಮಿಗಳಂತೆ ಜೀವಿಸಿಕೊಂಡಿದ್ದು ತಾವು ಚಿರಜೀವಿಗಳೆನ್ನಿಸಿ ಕೊಳ್ಳುವುದಕ್ಕಿಂತ, ಪ್ರಚಂಡಸತ್ತ್ವಶಾಲಿಗಳಾಗಿ, ಕೀರ್ತಿಮಹಿಮಾನ್ವಿತ ರಾಗಿ ನಾಲ್ಕುದಿನಗಳು ಬಾಳಿ ಹೋಗುವುದು ಘನತರವಾದದ್ದಲ್ಲವೆ? ಎನ್ನಿಸಿತು. ಬರಿಯ ಆಯುಷ್ಯಕ್ಕೆ ಈ ಮಡ್ಡಿಜನರು ಏಕೆ ಹೀಗೆ ಆಶೆಪಡು ವರೊ! ಆಯುಷ್ಯ ವಿಷಯದಲ್ಲಿ ನಮ್ಮ ಭಾವನೆ ಹಾಗಾಗಿಹೋದರೆ ನವ ಗಿಂತಲೂ ಶತಾಧಿಕವಾಗಿ—ಶತಸಹಸ್ರಾಧಿಕವಾಗಿ—ಇರುವ ಆ ಕಲ್ಲು

ಬಂಡೆಗಳು ಶ್ರೇಷ್ಠವಾದುವಲ್ಲವೆ ?......ಅದು ಹೋಗಲಿ—ಯಾವ ಚಿತ್ರಗಾರನು ತಾನೆ ತನ್ನ ಚಿತ್ರಗಳನ್ನು ಇಷ್ಟು ಉಜ್ಜ್ವಲವಾಗಿ, ಸುಂದರವಾಗಿ, ಸಜೀವವಾಗಿ ಚಿತ್ರಿಸ ಬಲ್ಲನೋ ನಾನರಿಯೆ. ಸಂಧ್ಯಾರುಣರಾಗಗಳಿಂದ ಬಣ್ಣಗೊಂಡು ವಿಧವಿಧವಾಗಿ ಕಾಂತಿಪಡೆದು ಕ್ಷಣಕ್ಷಣಕ್ಕೂ ಹೊಸ ಶೃಂಗಾರಗಳನ್ನು ತೋರಿಸಿ ಮೋಹಿಸುವ ಮುಗಿಲಿನ ಶ್ರೇಣಿಗಳು ಒಂದೊಂದೂ ತಮ್ಮಷ್ಟಕ್ಕೆತಾವೆ ಕೂಡಿಬಂದು ಈ ರೀತಿಯಲ್ಲಿ ಆಕಾರ ತಾಳಿ, ಘನಿಷ್ಠವಾಗಿ ಇಲ್ಲಿ ಊರಿ ನಿಂತುಬಿಟ್ಟಿರುವಂತೆ ಈ ಮಂಟಪವು ಶೋಭಿಸುವುದಲ್ಲ! ಒರಟಾದ, ಜಡವಾದ ಕಲ್ಲಿಗೆ ಹೀಗೆ ಜೀವಕಳೆತುಂಬುವವನು ಸೃಷ್ಟಿಕರ್ತನಿಗೆ ಸಮಾನನಲ್ಲವೆ! ಇಹದಲ್ಲಿ ಸೃಷ್ಟಿಕರ್ತನೆಂಬುವವನಾರಾದರೂ ಇರುವನಾದರೆ, ಅಂಥವನು ಕಲಾನಿಪುಣನೆಂದೂ, ಆ ಕೆಲಸವು ಕವಿ, ಚಿತ್ರಕ, ಶಿಲ್ಪಿ, ಗಾಯಕ ಇವರುಗಳಿಗಲ್ಲದೆ ಇತರರಿಗೆ ಸಾಧ್ಯವಾಗದೆಂದೂ, ತಮ್ಮತಮ್ಮ ಇಲಾಖೆಗಳಲ್ಲಿ ಅವರು ಸರ್ವನಿಯಾಮಕರೆಂದೂ, ಅವರು ಶ್ರೇಷ್ಠರಾದರೆ, ಅವರು ನಿಜವಾಗಿಯೂ ಬ್ರಹ್ಮರೇ ಎಂದೂ ಎನ್ನಿಸಿತು.

ಯಜಮಾನರೂ, ರಾಯರೂ ಗಡಿಯಾರ ತೆಗೆದು ನೋಡಿದರು. ನಾಲ್ಕೂಕಾಲು ಗಂಟೆಗಳಾಗಿತ್ತು. "ಹಿಂದಿರುಗಿ ಬರುವುದು ಬಹಳ ಹೊತ್ತಾಗಿ, ಕತ್ತಲಾಗಿ ಹೋಗುತ್ತೆ ನಡೆಯಿರಪ್ಪ; ಹೆಜ್ಜೆಹಾಕಿ"—ಎಂದರು. ಚೆನ್ನಯ್ಯನೂ, "ಹೊರಡೋಣ ಸ್ವಾಮಿ" ಎಂದ. ಮೂರ್ತಿಸ್ವರೂಪದಲ್ಲಿ ಅಲ್ಲಿ ವಾಸಮಾಡಿಕೊಂಡಿರದಿದ್ದರೂ ಅಲ್ಲೇ ಎಲ್ಲಿಯೊ ಅಡಗಿಕೊಂಡು ಆ ಕಲ್ಲುಕಟ್ಟಡಕ್ಕೆ ಜೀವವನ್ನಿತ್ತಿರುವ ಆ ಸೌಂದರ್ಯಮೂರ್ತಿಯಿಂದ ಅಪ್ಪಣೆ ಪಡೆದು ಮುಂದೆ ಹೊರಟೆವು.

ಇತರ ದೇವಸ್ಥಾನಗಳ ಮುಂಭಾಗದಲ್ಲಿರುವಂತೆಯೆ ಇಲ್ಲಿಯೂ ತೇರು ಬೀದಿ; ನಾಲ್ಕೂಕಡೆ ದೇವಸ್ಥಾನಗಳು; ಈಗ ಅವೆಲ್ಲ ಭೂಶಾಯಿತವಾಗಿವೆ. ಅಲ್ಲಿನ ದೇವರುಗಳ ಕೈ ಒಂದುಕಡೆ, ಕಾಲೊಂದುಕಡೆ, ರುಂಡ

ಮುಂಡಗಳು ಬೇರೆಬೇರೆ ಕಡೆ, ಕಣ್ಣೊಂದುಕಡೆ—ಕಣ್ಣಿನ ಹೊಳಪೊಂದು ಕಡೆ, ಹೀಗೆ ತಮ್ಮ ಅವಯವ ಭಾಗಗಳನ್ನೂ ಕಳೆಗಳನ್ನೂ ಕಳೆದುಕೊಂಡು ವಿಗ್ರಹಗಳು ಭಿನ್ನವಾಗಿ ಎಲ್ಲೆಲ್ಲಿಯೂ ಬಿದ್ದಿವೆ. ಅವುಗಳ ಮೇಲ್ಗಡೆ ಪೊದೆಗಳೂ ಮುಳ್ಳುಗಿಡಗಳೂ ಕ್ರೂರವಾಗಿ ಹಬ್ಬಿವೆ; ಕ್ರೂರತರವಾದ ಮುಳ್ಳುಹಂದಿಗಳು ಯಥೇಷ್ಟವಾಗಿ ಅವುಗಳೊಳಗೆ ವಾಸಮಾಡಿಕೊಂಡಿವೆ. ಅವುಗಳ ಹಂದಿಮೂತಿಯೂ ಕಿಸುಗಣ್ಣೂ ಪರಕೆ ಮೈಯೂ ಭಯಂಕರ ವಾದ ತಮ್ಮ ರೂಪವನ್ನು ಆಗಿಂದಾಗ್ಗೆ ಹೊರದೋರಿಸಿಕೊಳ್ಳುತ್ತ ಆ ಸ್ಥಾನದಲ್ಲಿ ಈಗ ಶಾಶ್ವತವಾಗಿ ತಾವು ವಸತಿ ಕಲ್ಪಿಸಿಕೊಂಡಿರುವೆವೆಂದು ಸಾರುವಂತೆ ಕಾಣುವುವು; "ಈ ಪ್ರದೇಶವೆಲ್ಲ ಈಗ ನಮಗೆ ಸೇರಿದುದು ಇಲ್ಲಿಗೆ ಬರುವ ಜನರು ನೀವು ಜೋಕೆಯಿಂದರಬೇಕು" ಎಂದು ಹೇಳು ವಂತೆ—ತಮ್ಮ ಪ್ರಾಬಲ್ಯದ ಗಡಿಗಳನ್ನು ಸೂಚಿಸಲೋ ಎಂಬುವಂತೆ—ನಾಲ್ಕಾರು ಮಾರುಗಳದೂರ ಮೊನಚಾದ ತಮ್ಮ ಮುಳ್ಗರಿಗಳನ್ನು ಎಸೆದಿವೆ. ಕ್ರೂರತಮವಾಗಿ, ಎಲ್ಲೆಲ್ಲಿಯೂ, ಪಾಳುದೇವತೆಯು ವಿಕಟ ಹಾಸದಿಂದ ತನ್ನ ಪ್ರಭಾವವೆಂಥುದೆಂಬುದನ್ನು ಬಿರ್ರನೆ ಬೀಸುವ ಆ ಉರಿಗಾಳಿಗೆ ಚೀರಿಹೇಳಿ ಆ ಪ್ರದೇಶವನ್ನು ಸ್ಮಶಾನವನ್ನಾಗಿಮಾಡಿದೆ.—ಸ್ಮಶಾನವಲ್ಲದೆ ಮತ್ತೇನು? ರಕ್ತ, ಮಾಂಸ, ರಸ, ರಾಗ, ಬಣ್ಣ, ಕಾಂತಿ, ಇವುಗಳಿಂದ ಪರಿಪುಷ್ಟರಾದ ಯುವಕಯುವತಿಯರು ನಗುನಗುತ್ತ ಸರಸ ವಾಡುತ್ತಿದ್ದ ಸುಖಭೂಮಿಯಲ್ಲಿ ಈಗ ವಿಷಧರಸರ್ಪಗಳು, ಮುಳ್ಳುಹಂದಿ ಗಳು, ಕಳ್ಳಕಾಕರು; ಎಲ್ಲಿ ಹೂದೋಟಗಳ ಪರಿಮಳವನ್ನು ಹೊತ್ತು ಕೊಂಡು ತಣ್ಣಗೆ ತೆಂಗಾಳಿ ಬೀಸುತ್ತಿತ್ತೊ ಅಲ್ಲಿ ಈಗ ದಾರುಣವಾದ ಉರಿಗಾಳಿ. ಪ್ರಪಂಚದ ಚಕ್ರಾಧಿಪತಿಗಳ ಸಂದಣಿಯಲ್ಲಿ ಎಲ್ಲ ಅಂಶ ಗಳಲ್ಲಿಯೂ ಸಮತೂಗಲು ಅರ್ಹರಾಗಿದ್ದ ಸಮ್ರಾಜರು ಆಳುತ್ತಿದ್ದ ಆ ಪ್ರದೇಶದಲ್ಲಿ ಈಗ ಮುಳ್ಳುಪೊದೆ; ಅವರ ದರ್ಪಪೌರುಷಗಳು ಪ್ರತಿ ಧ್ವನಿತವಾಗುತ್ತಿದ್ದ ಅರಮನೆಗಳಲ್ಲಿ ನರಿಗೂಗೆಗಳ ಕರ್ಕಶಧ್ವನಿ; ಪಾಳು

ದೇವತೆಯ ಕುಹಕದ ಅಟ್ಟಹಾಸ. ಅತ್ಯುತ್ತಮ ಸೌಂದರ್ಯ ಕಾಂತಿಯಿಂದ ಬೆಳಗುತ್ತಿದ್ದ ಮಂಟಪ, ಗುಡಿ, ಪ್ರಾಸಾದ, ಅರಮನೆ ಇವುಗಳಿದ್ದಕಡೆ ಪದಚ್ಯುತವಾದ ದೇವತಾವಿಗ್ರಹಗಳು; ಒಡೆದುಬಿದ್ದಿರುವ, ಇನ್ನೂ ಬೀಳುತ್ತಲೇ ಇರುವ ಕಟ್ಟಡಗಳು; ತಮಗೆ ಬಂದಿರುವ ದುರ್ಗತಿಯೊದರೂ ಎಂಥುದೆಂಬುದನ್ನು ನೋಡಿ ಜನರು ನೀತಿಗೊಳ್ಳಲೆಂದು, ರಾಶಿರಾಶಿಯಾಗಿ ಭೂಶ್ಲಿಷ್ಟವಾದ—ಬರಿಯ ಕಲ್ಲುರಾಶಿಗಳಂತಿರುವ—ಸ್ತಂಭ, ವೇದಿಕೆ, ಸೂರುಗಲ್ಲು; ವಿಜಯನಗರವು ಧ್ವಂಸವಾದುದಂತೂ ಹಾಗಿರಲಿ; ಆ ರಾಜರ ಇಂದ್ರಸದೃಶವಾದ ವೈಭವಗಳೂ, ಉಚ್ಛ್ರಾಯಾಭಿಲಾಷೆಗಳೂ, ಮಹಾ ಸನ್ನಾಹಗಳೂ, ಕಾರ್ಯಮುಖೇನ ಅಮರತ್ವವನ್ನು ಪಡೆಯಬೇಕೆಂದು ಅವರು ಮಾಡಿದ ಅದ್ಭುತವಾದ ಪ್ರಯತ್ನಗಳೂ ಒಟ್ಟಿಗೆ ಇಲ್ಲಿ ನಾಶಪಡೆದು, ಅವರ ವೈಭವರಂಗವನ್ನು ಈಗ ಮಹಾಶ್ಮಶಾನವನ್ನಾಗಿ ಮಾಡಿದೆ.

ಹೆಜ್ಜೆ ಬೇಗಬೇಗನೆ ಹಾಕಬೇಕೆಂದು ಅಪ್ಪಣೆಯಾಯಿತು—ಹಾಕಿದೆವು. ಸ್ವಲ್ಪಕಾಲದಲ್ಲೇ ಕಾಮಲಾಪುರದಿಂದ ಆನೆಗೊಂದಿಗೆ ಹೋಗುವ ರಸ್ತೆ. ಇನ್ನು ಅದನ್ನು ಹಿಡಿದು ಎಡಕ್ಕೆ ಹೋಗಬೇಕು. ಆನೆಗೊಂದಿಯು ನದಿಯ ಆಚೆಯ ಭಾಗದಲ್ಲಿ; ನಮ್ಮ ಕಡೆಯಿಂದ ಅಲ್ಲಿಗೆ ಹರಿಗೋಲುಗಳಲ್ಲಿ ದಾಟಿಹೋಗಬೇಕು. ಹರಿಗೋಲೂ ಅಂಬಿಗರೂ ಸಿದ್ಧವಾಗಿದ್ದರು. ಅವುಗಳಲ್ಲಿ ಒಂದನ್ನು ಹತ್ತಿ ಒಳಗೆ ಸುತ್ತಲೂ ಕುಳಿತೆವು. ಅಂಬಿಗನು ಹುಟ್ಟು ಹಾಕಲು ಜಲ್ಲೆ ಹಿಡಿದುಕೊಂಡು ಮೆಲ್ಲಮೆಲ್ಲನೆ ಅದನ್ನು ನಡೆಸುತ್ತ ಬಂದನು. ನಮ್ಮಂತೆಯೆ ಬಲಗುಂದುತ್ತ ಸೂರ್ಯದೇವನೂ ಅಸ್ತಮಾನಕ್ಕೆ ಪ್ರಯಾಣಮಾಡುತ್ತಿದ್ದನು. ಮಧ್ಯಾಹ್ನದ ಪ್ರಕಾಶವಿಲ್ಲ; ಉರಿತೇಜವಿಲ್ಲ. ಅವನ ಬೆಳಕು ನೇರವಾಗಿ ಬೀಳುತ್ತಿರುವ ಪ್ರದೇಶವನ್ನು ಬಿಟ್ಟರೆ ಉಳಿದ ಕಡೆಗಳಲ್ಲೆಲ್ಲಾ ಬೆಟ್ಟಗಳೂ, ಬೆಟ್ಟಸಾನುಗಳೂ ತಿಳಿ ನೆಳಲಿನ ಜವನಿಕೆಯೊಂದರಿಂದ ಸ್ವಲ್ಪ ಸ್ವಲ್ಪವಾಗಿ ಮುಚ್ಚಿಹೋಗುತ್ತಿರುವುದೊ ಎಂಬುವಹಾಗಿತ್ತು. ಎರಡೂಕಡೆಯ ಬೆಟ್ಟಗಳಲ್ಲಿ ದಾರಿಮಾಡಿಕೊಂಡು

ಶ್ರೀ

ಸುಬ್ಬಣ್ಣ

೧

ಶ್ರೀಮನ್ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ಮೈಸೂರ ಸಿಂಹಾಸನವನ್ನು ಅಲಂಕರಿಸಿದ್ದ ಕಾಲದಲ್ಲಿ ಮೈಸೂರಿನ ಆಸ್ಥಾನವು ಎಂದಿಗಿಂತಲೂ ವಿಶೇಷವಾಗಿ ಸಮಸ್ತ ವಿದ್ವಾಂಸ ರಸಿಕ ಕಲಾಕೋವಿದರಿಗೆ ಆಶ್ರಯ ಸ್ಥಾನವಾಗಿತ್ತು. ಮಹಾರಾಜರು ಸ್ವಭಾವವಾಗಿ ಉದಾರಶೀಲರು; ಅದರಮೇಲೆ ಸ್ವಯಂ ಪಂಡಿತರು; ಶಾಸ್ತ್ರಜ್ಞರು, ಕಾವ್ಯ ಕರ್ತೃಗಳು. ಆದುದರಿಂದ ಅವರಿಗೆ ವಿದ್ಯೆಯನ್ನು ಕಂಡರೆ ಪೂಜ್ಯಬುದ್ಧಿ. ಈ ಕಾರಣದಿಂದ ಅವರು ಆಶ್ರಯವನ್ನಾಶಿಸಿ ಬಂದ ಯಾರಿಗಾಗಲಿ ನಾಸ್ತಿ ಎಂದು ಹೇಳುತ್ತಿರಲಿಲ್ಲ. ಹಾಗೆ ಮಹಾರಾಜರ ಔದಾರ್ಯದ ಪೋಷಣೆಯಲ್ಲಿದ್ದವರಲ್ಲಿ ಪುರಾಣದ ನಾರಾಯಣ ಶಾಸ್ತ್ರಿಗಳೆನ್ನುವವರು ಒಬ್ಬರು. ಶಾಸ್ತ್ರಿಗಳ ಹಿರಿಯರು ಚಾಮರಾಜ ನಗರದವರು. ಆದರೆ ಆಗ್ಯೆ ಮೂರು ನಾಲ್ಕು ತಲೆಗಳಿಂದ ಇವರ ಮನೆಯವರು ಮೈಸೂರಿನಲ್ಲಿ ಇರುತ್ತಿದ್ದರು. ನಾರಾಯಣಶಾಸ್ತ್ರಿಗಳು ಸಂಸ್ಕೃತದಲ್ಲಿ ಎಲ್ಲಾ ಭಾಗದಲ್ಲೂ ಪಾಂಡಿತ್ಯವನ್ನು ಸಂಪಾದಿಸಿದ್ದರೂ ಮುಖ್ಯವಾಗಿ ಪುರಾಣ ಶ್ರವಣ ಮಾಡಿಸುವುದರಲ್ಲಿ ಅತಿಶಯವಾದ ಶಕ್ತಿಯನ್ನು ಪಡೆದಿದ್ದರು. ಇವರ ಧ್ವನಿಯು ಗಂಭೀರವಾಗಿಯೂ ಮಧುರವಾಗಿಯೂ ಇತ್ತು; ಮಾತು ಅವಿರಳವಾದರೂ ಸಾವಧಾನ. ಸಭೆಯಲ್ಲಿ ಉಪನ್ಯಾಸ ಮಾಡಲು ಇತರ ಪಂಡಿತರಿಗಿಂತ ಇವರಿಗೆ ಈ ಕಾರಣದಿಂದ ಸೌಲಭ್ಯ ಹೆಚ್ಚು. ದೈವಭಕ್ತಿನಿರತರಾದ ಮಹಾಸ್ವಾಮಿಯವರು ಶಾಸ್ತ್ರಿಗಳನ್ನು ಪುರಾಣ ಹೇಳುವ ಕೆಲಸಕ್ಕೆ ನಿಯಮಿಸಿ ಆಗಾಗ ಅವರನ್ನು ಕರೆಸಿಕೊಂಡು ಪುರಾಣ ಶ್ರವಣ ಮಾಡುವರು. ಇದರಿಂದ ಶಾಸ್ತ್ರಿಗಳಿಗೆ ಪುರಾಣದ ನಾರಾಯಣಶಾಸ್ತ್ರಿಗಳೆಂದು ಅಡ್ಡ ಹೆಸರಾಗಿತ್ತು.

ನಾರಾಯಣಶಾಸ್ತ್ರಿಗಳಿಗೆ ಇಬ್ಬರು ಹೆಣ್ಣುಮಕ್ಕಳು, ಒಬ್ಬ ಮಗ. ಮಗನು ಹುಡುಗಿಯರಿಬ್ಬರಿಗಿಂತ ಚಿಕ್ಕವನು. ಅವನ ಹೆಸರು

ಸುಬ್ಬಣ್ಣ ಎಂದು. ಸುಬ್ಬಣ್ಣನು ತಂದೆಯಂತೆ ಸಂಸ್ಕೃತವನ್ನು ಕಲಿತು ಪಂಡಿತನಾಗಿದ್ದರೆ ಸುಬ್ರಹ್ಮಣ್ಯಶಾಸ್ತ್ರಿ ಎಂದು ಕರೆದುಕೊಳ್ಳಬಹುದಾಗಿತ್ತು; ಅವನೂ ಪುರಾಣ ಹೇಳಬಹುದಾಗಿತ್ತು. ಆದರೆ ಅವನ ಮನಸ್ಸು ಸಂಸ್ಕೃತದ ಕಡೆ ಹೋಗಲಿಲ್ಲ. ಸಂಗೀತದ ಕಡೆಗೆ ಹೋಯಿತು. ಅವನನ್ನು ಕಂಡಿದ್ದವರೆಲ್ಲ ಅವನನ್ನು ಸುಬ್ಬಣ್ಣ ಎನ್ನುವರೇ ಹೊರತು ಸುಬ್ರಹ್ಮಣ್ಯ ಎಂದು ಕೂಡ ಕರೆಯುತ್ತಿರಲಿಲ್ಲ. ಸಂಸ್ಕೃತ ಕಲಿತವನನ್ನು ಸುಬ್ರಹ್ಮಣ್ಯ ಎನ್ನಬಹುದು; ಸಂಗೀತಕ್ಕಾದರೆ ಇಂಥ ಹೆಸರು ಹೆಚ್ಚು. ಇವನು ಕೊನೆಗೂ ಸುಬ್ಬಣ್ಣನಾಗಿದ್ದನೇ ಹೊರತು ಸುಬ್ರಹ್ಮಣ್ಯಶಾಸ್ತ್ರಿಯಾಗಲಿಲ್ಲ. ಈ ನಮ್ಮ ಕತೆಯು ಈ ಸುಬ್ಬಣ್ಣನ ಬದುಕನ್ನು ಕುರಿತದ್ದು.

ನಾನು ಸುಬ್ಬಣ್ಣನವರನ್ನು ನೋಡಿದ್ದು ಅವರ ಕೊನೆಯ ದಿನಗಳಲ್ಲಿ. ಅವರ ಬಾಲ್ಯದ ಚರಿತ್ರೆಯನ್ನು ನನಗೆ ಅವರೇ ಆಗಾಗ ಸ್ವಲ್ಪ ಸ್ವಲ್ಪವಾಗಿ ಹೇಳಿದರು. ತೊರೆಯಪುರದಲ್ಲಿ ಅವರು ಇದ್ದ ರೀತಿಯನ್ನು ನಮ್ಮ ಮಾವನವರು ಚೆನ್ನಾಗಿ ಬಲ್ಲರು; ನಾನೂ ಸ್ವಲ್ಪ ನೋಡಿದ್ದೆ. ಕೊನೆಯ ದಿನಗಳ ವಿಷಯವಂತೂ ನಾನು ಕಣ್ಣಾರೆ ನೋಡಿದ್ದು. ಇನ್ನು ಕೆಲವು ವಿಷಯಗಳನ್ನು ಈಚೆಗೆ ಇಲ್ಲಿ ಅಲ್ಲಿ ವಿಚಾರಿಸಿ ತಿಳಿದುಕೊಂಡೆನು. ಸುಬ್ಬಣ್ಣನವರು ಎಂಥ ಮನುಷ್ಯರೆಂಬುದನ್ನು ನಾನು ಈ ಕತೆಯಲ್ಲಿ ಸರಿಯಾಗಿ ವರ್ಣಿಸಿದೇನೆಂದು ನಾನು ಹೇಳಲಾರೆ. ಕಠಿನವಾದ ಶಿಲೆಯ ಮಧ್ಯೆ ಸೇರಿರುವ ಸ್ವರ್ಣ ರೇಣುಗಳನ್ನು ತೆಗೆಯಬೇಕಾದರೆ ಕಲ್ಲನ್ನು ಪುಡಿಮಾಡಿ ಚಿನ್ನವನ್ನು ಬೇರೆಮಾಡುವ ರಸಗಳಿಂದ ಅದನ್ನು ಪ್ರತ್ಯೇಕಿಸಿ ಅಪರಂಜಿಯಾಗುವುದಕ್ಕೆ ಅದನ್ನು ಕಾಯಿಸುವರು. ಆ ಕಠಿನ ಶಿಲೆಯೆಲ್ಲಿ? ಈ ಅಪರಂಜಿಯೆಲ್ಲಿ? ಮೊದಲಲ್ಲಿ ಕಠಿನತೆಯಿಂದ ಕೂಡಿದ್ದ ಇವರ ಮನಸ್ಸು ದೇವರ ಕೃಪೆಯಿಂದ ನಯವಾಗುತ್ತ ಆಗುತ್ತ ಪೂರ್ಣವಾದ ಸಂಸ್ಕಾರವನ್ನು ಪಡೆದು ಕೊನೆಗೆ ಅಪರಂಜಿಯಾಯಿತು. ಅದು ಹೀಗಾದ ವಿಚಿತ್ರ ನ್ಯಾಸವನ್ನು ನಾನು ಹೇಗೆ ವಿವರಿಸಬಹುದು? ಆ ಅಪರಂಜಿಯನ್ನು ಯಾವ ಮಾತುಗಳಿಂದ ಹೊಗಳಿ ನಿಮಗೆ ತಿಳಿಯುವಂತೆ ವರ್ಣಿಸಬಹುದು? ಆದರೆ ಈ ರೀತಿಯ ನ್ಯಾಸವು ದಿನವೂ ನಡೆಯುತ್ತಿರುವುದನ್ನು ನೋಡಿ ಬಲ್ಲವರಿಗೆ ನಾನು ಹೇಳುವ ಸ್ವಲ್ಪದರಿಂದಲೇ ಸುಬ್ಬಣ್ಣನವರ ಜೀವನ ಚರಿತೆಯ ಪೂರ್ಣವಾದ ಭಾವನೆಯು ಉಂಟಾಗಬಹುದು. ಹೇಗಾದರೂ ಓದುವವರೇ ಊಹಿಸಿ ಸೇರಿಸಿಕೊಳ್ಳಬಹುದಾದ ಬಹು ಭಾಗದಿಂದ ಮಾತ್ರ ಈ

ಕತೆಯು ಸಂಪೂರ್ತಿಯಾಗಬಹುದೇ ಹೊರತು ಇಲ್ಲಿ ಹೇಳಿರುವಷ್ಟರಿಂದ ಮಾತ್ರ ಸಂಪೂರ್ತಿಯಾಗಲಾರದು.

೨

ಸುಬ್ಬಣ್ಣನು ಸುಬ್ರಹ್ಮಣ್ಯಶಾಸ್ತ್ರಿಯಾಗಲಿಲ್ಲವೆಂದು ಹೇಳಿದೆ. ಇದೇ ಪ್ರಾಯಶಃ ಈ ಕತೆಯೆಲ್ಲದರ ಸಾರಾಂಶವೆಂದು ಹೇಳಬಹುದು. ಮಗ ಹುಟ್ಟಿದಾಗ ನಾರಾಯಣಶಾಸ್ತ್ರಿಗಳಿಗೆ ಬಹಳ ಸಂತೋಷ. ಆವರೆಗೆ ಅವರಿಗೆ ಮೂರು ಹೆಣ್ಣುಮಕ್ಕಳಾಗಿದ್ದು ಒಂದು ಹೋಗಿತ್ತು. ನಾಲ್ಕನೆಯದೂ ಹೆಣ್ಣಾಗಿದ್ದರೆ ಏನುಮಾಡುವಂತಿತ್ತು? ಹಾಗಾಗದೆ ಪುತ್ರೋತ್ಸವವು ನಿಜವಾಗಿಯೂ ಪುತ್ರೋತ್ಸವವೇ ಆದದ್ದರಿಂದ ಅವರು ಬಹಳ ಸಂತುಷ್ಟರಾದರು. ಶಾಸ್ತ್ರಿಗಳ ಯಜಮಾನಿಗೂ ಹಾಗೆಯೆ. ಈ ಕಾರಣದಿಂದ ಇಬ್ಬರೂ ಹುಡುಗನನ್ನು ಅತಿಶಯವಾದ ಪ್ರೇಮೆಯಿಂದ ಸಾಕಿದರು. ಹುಡುಗನಿಗೆ ಏಳೆಂಟು ವರುಷಗಳಾದುವು. ಶಾಸ್ತ್ರಿಗಳು ಅಕ್ಷರಗಳನ್ನು ಹೇಳಿಕೊಟ್ಟರು; ಒಂದೆರಡು ಸರ್ಗ ಅಮರ ಕೋಶವನ್ನು ಹೇಳಿಕೊಟ್ಟರು. ಆದರೆ ವಿದ್ಯೆ ಮುಂದಕ್ಕೆ ಸಾಗಲಿಲ್ಲ. ಮೊದಲಿಂದ ಹುಡುಗನಿಗೆ ಅದು ಏನೋ ಸಂಗೀತದ ಮೇಲೆ ಬುದ್ಧಿ ಹೋಯಿತು. ಅವನಿಗೆ ತಂದೆಯ ಗಂಭೀರವಾದ ಮಧುರವಾದ ಧ್ವನಿಯು ಇಳಿದು ಬಂದಿತ್ತು; ಅವರ ಸಂಸ್ಕೃತ ಇಳಿದುಬರಲಿಲ್ಲ. ಏಳು ವರುಷದ ಹುಡುಗ ಯಸ್ಯಜ್ಞಾನ ದಯಾಸಿಂಧೋ ಎಂದು ಎಲ್ಲಿಲ್ಲದ ರಾಗಗಳಲ್ಲಿಯಾದರೂ ಹಾಡುವನು. ಆದರೆ ಅದರ ಅರ್ಥದ ಕಡೆ ಅವನ ಮನಸ್ಸು ಹೋಗುತ್ತಿರಲಿಲ್ಲ. ತಂದೆ ಮಗನನ್ನು ಮನೆಯಲ್ಲಿ ಪಾಠಕ್ಕೆ ಕೂರಿಸಿ ಎಲ್ಲಿಯಾದರೂ ಹೋದರೆ ಇವನು ಹಾಡು ತಿದ್ದಿ ಕೊಳ್ಳುವುದರಲ್ಲಿ ಪಾಠವನ್ನೇ ಮರೆಯುವನು. ಮೊದಮೊದಲಲ್ಲಿ ಹುಡುಗನು ಶ್ಲೋಕಗಳನ್ನು ಚೆನ್ನಾಗಿ ಹೇಳುವನೆಂಬ ಜಂಭದಿಂದ ತಂದೆಯೂ ತಾಯಿಯೂ ಮನೆಗೆ ಬಂದವರ ಹತ್ತಿರವೆಲ್ಲ ಇವನನ್ನು ನಿಲ್ಲಿಸಿ ಇವನಿಂದ ಹಾಡಿಸುವರು. ಜನರು ಕೇಳಿ ಶಾಭಾಸ್ ಎನ್ನುವರು. ಅವರು ಹೀಗೆ ಎಂದಷ್ಟೂ ಹುಡುಗನು ಅದರಲ್ಲೇ ನಿಲ್ಲುವಂತೆ ಆಯಿತು. ಹೀಗೆ ಸುಬ್ಬಣ್ಣನಿಗೆ ಚಿಕ್ಕಂದಿನಲ್ಲೇ ಸಂಸ್ಕೃತದಲ್ಲಿ ಅಶ್ರದ್ಧೆಯೂ ಸಂಗೀತದಲ್ಲಿ ಅಭಿಲಾಷೆಯೂ ಸಿದ್ಧವಾದುವು.

ಸಂಗೀತದಲ್ಲಿ ಇವನಿಗೆ ಸಹಜವಾಗಿದ್ದ ಅಭಿಲಾಷೆಯು ಅರಮನೆ ಯಲ್ಲಿ ಒಂದು ಸಲ ನಡೆದ ಒಂದು ಸಂಗತಿಯಿಂದ ಮತ್ತಷ್ಟು ಸ್ಥಿರ ವಾಯಿತು. ಒಂದು ದಿನ ಶಾಸ್ತ್ರಿಗಳು ತಮ್ಮ ಮಗನನ್ನು ಕರೆದುಕೊಂಡು

೧ ರಾಣೀವಾಸದ ಮುಂದೆ ಪುರಾಣವನ್ನು ಹೇಳುತ್ತಿರುವಾಗ ಎಂದ ಶುಕ್ಲಾಂಬರಧರಂ ಎಂಬ ಶ್ಲೋಕವನ್ನು ಹೇಳಿಸಿದರು. ಎಲ್ಲರೂ ಬಹಳ ಮೆಚ್ಚಿದರು. ಸ್ವಲ್ಪ ಹೊತ್ತಿನ ಮೇಲೆ ಮಹಾರಾಜರು ದಯಮಾಡಿಸಿ ಪುರಾಣವನ್ನು ಕೇಳುತ್ತಾ ಕುಳಿತರು. ಸುಬ್ಬಣ್ಣ ತಂದೆಯ ಬಳಿಯಲ್ಲೇ ಕುಳಿತು ಅವರು ಹೇಳುತ್ತಿದ್ದ ಒಂದೊಂದು ಮಾತನ್ನೂ ಬಹಳ ಕುತೂಹಲದಿಂದ ಕೇಳುತ್ತಾ ಆಗಾಗ ಮಹಾರಾಜರ ಕಡೆ ನೋಡಿ ಅವರ ಆ ಸುಂದರವಾದ ಮುಖದ ದೊಡ್ಡ ತಿಲಕವನ್ನೂ ವಿಶಾಲವಾದ ಗಂಡಸ್ಥಲಕ್ಕೆ ಒಂದು ತರದ ಚಂದವನ್ನು ಕೊಡುತ್ತಿದ್ದ ಅವರ ಮೀಸೆಯನ್ನೂ ಆತ್ಯಾತುರದಿಂದ ನೋಡುತ್ತಿದ್ದನು. ರಾಜರು ಹುಡುಗನನ್ನು ಎರಡು ಮೂರು ಸಲ ನೋಡಿ ಬಹಳ ಸೂಟಿಯಾಗಿದ್ದಾನೆ ಎಂದುಕೊಂಡರು. ಪುರಾಣ ಮುಗಿದಮೇಲೆ ಶಾಸ್ತ್ರಿಗಳನ್ನು “ಈ ಹುಡುಗ ನಿಮ್ಮ ಕುಮಾರನೋ, ಶಾಸ್ತ್ರಿಗಳೆ” ಎಂದರು. ಶಾಸ್ತ್ರಿಗಳು “ಹೌದು, ಮಹಾಪ್ರಭು” ಎಂದರು. ರಾಜರು ನಗುತ್ತಾ ಹುಡುಗನನ್ನು “ಏನಪ್ಪಾ ನೀನೂ ಅಪ್ಪಾಜಿಹಾಗೆ ಪುರಾಣ ಹೇಳೀಯೋ?” ಎಂದು ಕೇಳಿದರು. ಹುಡುಗ “ನಾನು ಪುರಾಣ ಹೇಳೋಲ್ಲ; ಸಂಗೀತ ಹೇಳ್ತೇನೆ” ಎಂದ. ರಾಜರು “ಆಹಾ, ಹಾಗೇ ಆದು ; ಎಲ್ಲಿ ಹೇಳು ನೋಡೋಣ” ಎಂದರು. ಸುಬ್ಬಣ್ಣ “ಶ್ರೀರಾಘವಂ ದಶರಥಾತ್ಮಜಂ” ಎಂಬುದನ್ನು ರಾಗವಾಗಿ ಹೇಳಿ “ಕಸ್ತೂರೀತಿಲಕಂ ಬರುತ್ತೆ” ಎಂತ ಹೇಳಿದ. ರಾಜರಿಗೆ ಬಹಳ ಸಂತೋಷವಾಯಿತು. ಒಂದು ತಟ್ಟೆಯಲ್ಲಿ ಎಲೆ ಅಡಿಕೆ ತರಿಸಿ ಅದರಲ್ಲಿ ಒಂದು ವಸ್ತ್ರವನ್ನು ಇಟ್ಟು ಹುಡುಗನಿಗೆ ಕೊಟ್ಟು “ನೀನು ಒಳ್ಳೇ ಬುದ್ಧಿವಂತ. ಚೆನ್ನಾಗಿ ಹಾಡುವುದನ್ನು ಕಲಿತುಕೊ. ನಿನಗೆ ಖಿಲ್ಲತ್ತು ಕೊಡುತ್ತೇವೆ” ಎಂದು ಹೇಳಿ ಶಾಸ್ತ್ರಿಗಳಿಗೆ “ಹುಡುಗ ಒಳ್ಳೆ ಸೂಟಿ ಶಾಸ್ತ್ರಿಗಳೆ—ಚೆನ್ನಾಗಿ ತರಬೇತ್ ಮಾಡಿ. ಬಲೇ ಹುಡುಗನಾಗುತ್ತಾನೆ” ಎಂದು ಅಪ್ಪಣೆ ಕೊಟ್ಟರು. ಶಾಸ್ತ್ರಿಗಳೂ ಮಗನೂ ಮನೆಗೆ ಬಂದುಬಿಟ್ಟರು.

ಸಂಗೀತ ಕಲಿತು ಮಹಾರಾಜರಲ್ಲಿ ಖಿಲ್ಲತ್ತು ಪಡೆಯಬೇಕೆಂದು ಸುಬ್ಬಣ್ಣನಿಗೆ ಅಂದಿನಿಂದ ಒಂದು ಗೀಳು ಹಿಡಿಯಿತು. ಸುಬ್ಬಣ್ಣನವರು ನಾನು ನೋಡಿದಾಗಲೂ ಯಾವುದನ್ನು ಹಿಡಿದರೂ ಕೊನೆಮುಟ್ಟಿಸುವ ಒಂದು ಹಠದ ಮನುಷ್ಯರಾಗಿದ್ದರು. ಹುಡುಗನಾಗಿದ್ದಾಗಲೂ ಅವರಲ್ಲಿ ಇದೇ ಹಠ ಇದ್ದಿರಬೇಕು. ಮಹಾರಾಜರನ್ನು ಮೆಚ್ಚಿಸುವ ಚಪಲಕ್ಕಾಗಿ ಹುಡುಗ ಎಲ್ಲಿ ಸಂಗೀತವಾದರೆ ಅಲ್ಲೆಲ್ಲ ಹೋಗಿ ಕುಳಿತುಕೊಂಡು ಕೇಳುವನು. ಅಲ್ಲಲ್ಲಿ ಸಣ್ಣ ಗುಂಪುಗಳಲ್ಲಿ ಹಾಡುವನು. ಹೀಗೆ

ಹದಿನಾಲ್ಕು ವರ್ಷ ವಯಸ್ಸಾಗುವ ವೇಳೆಗೆ ಅವನಿಗೆ ಸಂಗೀತದಲ್ಲಿ ಒಂದು ಅದ್ಭುತವಾದ ಪರಿಚಯವುಂಟಾಯಿತು. ಸಂಗೀತಗಾರರು ಅವನಿಗೆ ಮೊದಮೊದಲು ವಿಶ್ವಾಸದಿಂದಲೂ ಬರಬರುತ್ತಾ ಅರೆಮರೆಯ ಈರ್ಷೆಯಿಂದಲೂ ತೋರಿಬರುವ ಗೌರವವನ್ನೂ ತೋರಿಸುವುದಕ್ಕೆ ಆರಂಭಿಸಿದರು. ಬಾಯಿ ಹಾಡುಗಾರಿಕೆಯಲ್ಲೇ ಅಲ್ಲದೆ ಸುಬ್ಬಣ್ಣನಿಗೆ ಪಿಟೀಲು ವೀಣೆಗಳನ್ನು ನುಡಿಸುವುದರಲ್ಲಿಯೂ ಮೃದಂಗವನ್ನು ಬಾರಿಸುವುದರಲ್ಲಿಯೂ ಅತಿಶಯವಾದ ಶಕ್ತಿಯಿತ್ತು. ತಂದೆ ಉದ್ದಕ್ಕೂ ಮಗನಿಗೆ ಸಂಸ್ಕೃತ ಹೇಳಿಕೊಡಲು ನೋಡುತ್ತ, ಪುರಾಣದ ಮಾತನ್ನೇ ಆಡುತ್ತಿದ್ದದ್ದರಿಂದ ಹುಡುಗ ತಾನು ಸಂಗೀತಕ್ಕೆ ಹೋಗುತ್ತಿದ್ದು ದನ್ನು ಅವರಿಗೆ ಸಾಮಾನ್ಯವಾಗಿ ತಿಳಿಸುತ್ತಿರಲಿಲ್ಲ. ಮಗನಿಗೆ ಸಂಸ್ಕೃತ ದಲ್ಲಿ ತಿಳಿವು ಬರಲಿಲ್ಲವಲ್ಲಾ ಎಂದು ಅವರು ವ್ಯಥೆಪಡುತ್ತಿದ್ದರೇ ಹೊರತು ಅವನಿಗೆ ಇಷ್ಟು ಸಂಗೀತ ಬಂದಿದೆಯೆಂದು ಅವರಿಗೆ ತಿಳಿಯು ವುದಕ್ಕೆ ಅವಕಾಶವಾಗಲಿಲ್ಲ. ಗುಟ್ಟಾಗಿ ಎಲ್ಲವನ್ನೂ ಕಲಿತು ಒಂದೇ ಸಲ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿಬಿಡಬೇಕೆಂಬ ಉದ್ದೇಶದಿಂದ ಹುಡುಗ ತಾನು ಮಾಡುತ್ತಿದ್ದ ಕೆಲಸವನ್ನು ಮನೆಯಲ್ಲಿ ಕೂಡ ಯಾರಿಗೂ ಹೇಳಲಿಲ್ಲ.

ಸುಬ್ಬಣ್ಣ ತಾನು ಸಂಗೀತಕ್ಕೆ ಹೋಗುತ್ತಿದ್ದ ವಿಷಯವನ್ನು ಮನೆಯಲ್ಲಿ ಹೇಳದಿರುವುದಕ್ಕೆ ಇನ್ನೊಂದು ಕಾರಣವಿತ್ತು. ಸಂಗೀತದ ಕಚೇರಿಗಳು ನಡೆಯುವುದು ಕೆಲವು ವೇಳೆ ಆ ವಿದ್ವಾಂಸರ ಮನೆಗಳಲ್ಲಿ; ಅನೇಕ ವೇಳೆ ವಾರಸ್ತ್ರೀಯರ ಮನೆಗಳಲ್ಲಿ. ಸಂಗೀತದ ಅಭಿಲಾಷೆ ಬಲವಾದ ಹಾಗೆ ಸುಬ್ಬಣ್ಣನು ಅದು ಎಲ್ಲಿ ನಡೆದರೆ ಅಲ್ಲಿ ಹೋಗುವುದಕ್ಕೆ ಮೊದಲು ಮಾಡಿದನು. ಅವನಿಗೆ ಕೊಂಚ ದಿನದಲ್ಲೇ ಮೈಸೂರಿನ ವಾರಸ್ತ್ರೀಯರ ಮನೆಗಳಿಗೆಲ್ಲಾ ಹೋಗಿಬರುವಂತೆ ದಾರಿಯಾಯಿತು. ಹುಡುಗನಾದರೂ ಚೆಲುವ. ಸ್ವಲ್ಪ ಅಗಲವಾದ ಮುಖ; ಹೊಳಪಾದ ಕಣ್ಣುಗಳು; ಕಪ್ಪಗೆ ತುಂಬ ಕೂದಲಿರುವ ಹುಬ್ಬುಗಳು; ಮೇಲ್ತು ಟಿಯ ಮೇಲೆ ಆಗತಾನೇ ತಲೆದೋರುತ್ತಿದ್ದ ತೆಳ್ಳಗಿರುವ ಕುಡಿಮೀಸೆ. ತಿಂಗಳಿಗೆ ಎರಡು ತಿಂಗಳಿಗೆ ಒಂದು ಸಲ ಕ್ಷೌರಮಾಡಿಸಿಕೊಳ್ಳುವುದ ರಿಂದ ಇದು ಚೆನ್ನಾಗಿ ಕಾಣುವುದು. ಕೆಂಪಗೆ ಕುಂಕುಮ ಸವರಿದಂತೆ ಇರುವ ರಂಗಿನ ತುಟಿ. ನಿತ್ಯಕರ್ಮಗಳನ್ನು ಲೋಪವಿಲ್ಲದೆ ಮಾಡು ತ್ತಿದ್ದದ್ದರಿಂದ ಮುಖಕ್ಕೆ ಬಂದಿದ್ದ ಒಂದು ಅವರ್ಣನೀಯವಾದ ವರ್ಚಸ್ಸು. ಇದೆಲ್ಲದರ ಜತೆಗೆ ಇನ್ನೂ ದೋಷವನ್ನರಿಯದೆ ತಾಯ ಎದೆಯ ಬಳಿ ಮುಖವನ್ನಿಟ್ಟು ಸ್ತನ್ಯಕ್ಕಾಗಿ ಅರಸುವ ಮಗುವಿನಂತೆ

ಜೀವನದ ವಿಚಾರವನ್ನು ತಿಳಿಯದೆ ಇಲ್ಲಿ ಏನಿದೆಯೋ ಎಂದು ತಿಳಿಯಲು ಯತ್ನವನ್ನು ಮಾಡುತ್ತಿರುವ ಪೂರ್ವ ಯೌವನದ ಆ ಒಂದು ಸರಳತೆ. ಇದನ್ನು ನೋಡಿದ ಯಾರುತಾನೆ ಇವನಲ್ಲಿ ಮೋಹಗೊಳ್ಳರು? ವಾರ ಸ್ತ್ರೀಯರಿಗೆ ಇವನ ವಿಷಯದಲ್ಲಿ ಅಸಾಧಾರಣವಾದ ಮಮತೆಯುಂ ಟಾಗಿತ್ತು. ಇವನು ಹೋದಾಗ ಅವರು ಇವನಿಗೆ ಹಾಲು ಹಣ್ಣು ತಂದುಕೊಡುವರು. ಒಂದು ಹಾಡು ಹೇಳೆಂದು ಕೇಳುವರು. ನೀನು ಹಾಡು ಎಂದು ಅವನು ಕೇಳಿದರೆ, ಸಂತೋಷವಾಗಿ ಹಾಡಿ ಅವನನ್ನು ಸಂತೋಷಪಡಿಸುವರು. ಹೀಗೆ ಹದಿನೈದು ವರುಷಗಳ ವೇಳೆಗೆ ಸುಬ್ಬಣ್ಣನು ತಂದೆಗೆ ತಿಳಿಯದಂತೆ ಸಂಗೀತದಲ್ಲಿ ಗಣ್ಯನಾಗಿ ಸಂಗೀತ ಗಾರರ ಸಮುದಾಯದಲ್ಲಿ ಸೇರಿಹೋದನು. ಅವನಿಗೆ ಆ ಪ್ರಪಂಚ ದಲ್ಲಿ ಎಲ್ಲಾ ಕಡೆಗೂ ಹೋಗುವ ಅಧಿಕಾರವು ಬಂದುಬಿಟ್ಟಿತು.

ಇದಕ್ಕೆ ಮೊದಲೇ ಸುಬ್ಬಣ್ಣನಿಗೆ ಮದುವೆಯಾಗಿತ್ತು. ಅವನ ಹೆಂಡತಿಯ ಹೆಸರೇನೋ ನನಗೆ ಇನ್ನೂ ಖಂಡಿತವಾಗಿ ಗೊತ್ತಿಲ್ಲ. ನಾನು ನೋಡಿದಾಗ ಸುಬ್ಬಣ್ಣನವರು ಆಕೆಯ ಮಾತನ್ನು ಯಾವಾಗ ಎತ್ತಿದರೂ "ಅವರು" ಎಂದು ಹೇಳುತ್ತಿದ್ದರು. ನನಗೆ ಯಾವಾಗಲೂ ಆಕೆಯ ಹೆಸರೇನೆಂದು ಕೇಳುವುದಕ್ಕೆ ಮನಸ್ಸು ಬರಲಿಲ್ಲ. ಅವರು ಒಂದು ಸಲ "ಲಲಿತಾ ಎನ್ನುವ ಹೆಸರು ನೋಡಿ, ಅಮ್ಮನವರಿಗೆ ಒಪ್ಪಿದ ಹೆಸರು. ಅದಕ್ಕೇ ಆಚಾರ್ಯರು ಸಹಸ್ರನಾಮವನ್ನು ಲಲಿತಾ ಸಹಸ್ರನಾಮವೆಂದು ಕರೆದರು. ತಾಯಿ ಲಲಿತಾ ಅಲ್ಲದಿದ್ದರೆ ನಮ್ಮೆಲ್ಲರ ಗತಿಯೇನು?" ಎಂದರು; ಸ್ವಲ್ಪ ಹೊತ್ತಿನಮೇಲೆ "ಆ ಹೆಸರಿನ ಹೆಂಗಸರೂ ಹಾಗೆಯೆ. ಲೋಕಮಾತೆಯ ಅಂಶದ ಹಾಗೆ ಇರುತ್ತಾರೆ" ಎಂದರು. ಹಾಗೆ ಹೇಳುವಾಗ ಅವರ ದೃಷ್ಟಿಯು ಎಲ್ಲೋ ದೂರ ದಲ್ಲಿತ್ತು. ಕನಸಿನಲ್ಲಿಯ ಕನಸೆಂಬಂತೆ ಎಂದೋ ಇದ್ದುಹೋದ ತನ್ನ ಪತ್ನಿಯನ್ನು ನೆನೆದುಕೊಂಡು ಅವರು ಹಾಗೆ ಹೇಳುತ್ತಿದ್ದರೆಂದು ಆಗ ನನಗೆ ತೋರಿತು. ಆದದ್ದರಿಂದ ಇಲ್ಲಿ ಅವರ ಹೆಂಡತಿಯ ಹೆಸರು ಲಲಿತಾ ಎಂದು ಇಟ್ಟುಕೊಳ್ಳಬಹುದು. ಸುಬ್ಬಣ್ಣನವರಿಗೆ ಹದಿನೇಳು ವರುಷವಾಗುವ ವೇಳೆಗೆ ಹೆಂಡತಿ ಮನೆಗೆ ಬಂದಳು. ಶಾಸ್ತ್ರಿಗಳ ಸಂಪಾ ದನೆಯಿಂದಲೇ ಮನೆಯಲ್ಲಿ ಜೀವನ. ಸುಬ್ಬಣ್ಣ ಏನನ್ನೂ ಸಂಪಾದಿಸುವ ಹಾಗಿರಲಿಲ್ಲ. ಸಂಗೀತವನ್ನು ಕಲಿತವನು ಸಂಪಾದನೆ ಮಾಡುವುದೆಂದರೆ ಬಹಳ ದಿನ ಕಳೆಯಬೇಕು. ಸಂಸ್ಕೃತವನ್ನು ಸ್ವಲ್ಪ ಕಲಿತಿದ್ದರೆ ಪೌರೋ ಹಿತ್ಯವನ್ನೋ ಇತರ ಯಾವುದಾದರೂ ಕೆಲಸವನ್ನೋ ಮಾಡಬಹು ದಾಗಿತ್ತು; ಪುರಾಣವನ್ನು ಹೇಳಬಹುದಾಗಿತ್ತು. ಸುಬ್ಬಣ್ಣನು

ಸಂಗೀತಕ್ಕೆ ಬಾಳನ್ನು ಅರ್ಪಿಸಿ ಇಂಥ ಸಂಪಾದನೆಗೆ ದಾರಿಯಿಲ್ಲದಂತೆ ಮಾಡಿಕೊಂಡನು. ಇದರಿಂದ ಸುಬ್ಬಣ್ಣ ವಯಸ್ಕನಾದ ಮಗನಾದರೂ ಶಾಸ್ತ್ರಿಗಳಿಗೆ ಅವನಿಂದ ಏನೂ ಸಹಾಯವಿಲ್ಲದೆ ಹೋಯಿತು. ಸಾಲದ್ದಕ್ಕೆ ಇವನ ಸಂಸಾರ ಬೇರೆ. ತಂದೆ ಎಷ್ಟೋ ಒಳ್ಳೆಯವನಾದರೂ ಬೆಳೆದ ಮಗ ಭಾರವಾಗಿ ಮನೆಯಲ್ಲಿ ಕೂತರೆ ಸುಮ್ಮನೆ ಇರುವುದಕ್ಕಾಗುತ್ತದೆಯೆ? ಶಾಸ್ತ್ರಿಗಳು ಒಂದೊಂದು ಸಲ ಮಗನನ್ನು ಏನಾದರೂ ಎನ್ನುವರು. ಮಗನು ಬಹಳ ದಿನ ತಡೆದು ತಡೆದು ಕೊನೆಗೆ ಒಂದು ದಿನ "ಸುಮ್ಮನೆ ನನ್ನನ್ನು ಅನ್ನುವುದು ಯಾತಕ್ಕೆ? ನನಗೆ ಅನ್ನಹಾಕುವುದಕ್ಕೆ ಆಗದಿದ್ದರೆ ಹೇಳಿ. ಹೊರಟುಹೋಗುತ್ತೇನೆ. ನನ್ನ ಹೊಟ್ಟೆಹೊರೆದುಕೊಳ್ಳುವುದಕ್ಕೆ ನನಗೇನೂ ಕಷ್ಟವಿಲ್ಲ" ಎಂದನು. "ನೀನು ಹೋದರೆ ನಿನ್ನ ಹೆಂಡತಿಯನ್ನು ಸಾಕುವವರು ಯಾರು? ಅವಳನ್ನೂ ಕರೆದುಕೊಂಡು ಹೋಗುತ್ತೀಯಾ?" ಎಂದು ಅವರ ತಾಯಿ ಕೇಳಿದರು. "ನನಗೆ ಮದುವೆ ಮಾಡಿ ಎಂತ ಹೇಳಿದವರು ಯಾರು? ನಾನು ಕೇಳಿದೆನೇ? ನೀವೇ ಮದುವೆ ಮಾಡಿದಿರಿ; ಸಾಕಿ; ಸಾಕದೆ ಇದ್ದರೆ ಅವರ ತಂದೆಯ ಮನೇಲಿ ಬಿಡಿ" ಎಂದು ಸುಬ್ಬಣ್ಣ ಹೇಳಿದನು. ಮನೆಯಲ್ಲಿ ಆ ದಿನ ರಾದ್ಧಾಂತ. ಜಗಳವಾದ ಮೇಲೆ ಸುಬ್ಬಣ್ಣ ಎಲ್ಲೋ ಹೊರಟು ಹೋದನು. ಮನೆಯಲ್ಲಿ ಊಟಮಾಡಲಿಲ್ಲ. ಲಲಿತಮ್ಮನೂ ಊಟಮಾಡಲಿಲ್ಲ. ತಂದೆ ಇಷ್ಟವಿದ್ದೂ ಇಲ್ಲದೆಯೂ ಎರಡು ತುತ್ತು ತಿಂದು ಎಲ್ಲೋ ಹೊರಟುಹೋದರು. ಮನೆಯ ಯಜಮಾನಿತಿ ಸೊಸೆಯನ್ನು ಊಟ ಮಾಡೆಂದು ಬಹಳ ಹೇಳಿ ಅವಳು ಒಪ್ಪದೆ ಇರಲು "ಇನ್ನು ನಿಮಗೆ ಅನ್ನ ಬೇಡದ ಮೇಲೆ ನಾನು ಹೇಗೆ ತಿನ್ನಲಿ" ಎಂದು ತಾನೂ ಹಸಿದು ಕೊಂಡಿದ್ದರು. ಶಾಸ್ತ್ರಿಗಳೂ ಅವರ ಹೆಂಡತಿಯೂ ಅಂದು ಮಗನನ್ನು ಹೆತ್ತ ಸುಖದ ಒಂದು ರೀತಿಯನ್ನು ಹೊಸದಾಗಿ ಅನುಭವ ಮಾಡಿದ ಹಾಗಾಯಿತು.

ಸುಬ್ಬಣ್ಣ ಈಗಾಗಲೇ ಸಂಪಾದನೆ ಮಾಡಿಕೊಳ್ಳದಿದ್ದರೂ ಸಂಗೀತದಲ್ಲಿ ಪಾಂಡಿತ್ಯವನ್ನು ಪಡೆದಿದ್ದನು. ಮುಂದಿನ ನವರಾತ್ರಿಯಲ್ಲಿ ಅವನು ಮಹಾರಾಜರ ಮುಂದೆ ಹಾಡುವುದಕ್ಕೆ ಏರ್ಪಾಡು ಮಾಡುವುದಾಗಿ ವೀಣೆಭಕ್ಷಿಗಳು ಅವನಿಗೆ ವಾಗ್ದಾನ ಮಾಡಿದ್ದರು; ಆದ್ದರಿಂದ ಎಂದಿಗಿಂತ ಹೆಚ್ಚಾಗಿ ಸಂಗೀತವನ್ನು ಅಭ್ಯಾಸಮಾಡುತ್ತಿದ್ದನು. ಹಾಡು ಕೂಗುವುದಕ್ಕೆ ಮನೆಯಲ್ಲಿ ಅನುಕೂಲವಿಲ್ಲ. ಅಲ್ಲದೆ ಅದಕ್ಕೆ ತಕ್ಕ ಉತ್ತೇಜನವಿಲ್ಲ. ಆದುದರಿಂದ ಅವನು ಹಾಡುವುದನ್ನು ಅಭ್ಯಾಸ ಮಾಡುವುದಕ್ಕೆ ಒಬ್ಬ ವೇಶ್ಯೆಯ ಮನೆಗೆ ಹೋಗುತ್ತಿದ್ದನು. ಅವನು

ವೇಶ್ಯೆಯರ ಸಂಬಂಧದಿಂದ ಕೆಟ್ಟನೋ ಬಿಟ್ಟನೋ ನಾನು ಹೇಳಲಾರೆ. ನನಗೆ ತಿಳಿಯದು. ಇಷ್ಟಕ್ಕೆ ಕೆಡುವುದೆಂದರೇನೋ ನಾನು ಕಾಣೆ. ನೀಲಾಸಾನಿಯಾದರೋ ಸುಬ್ಬಣ್ಣನನ್ನು ಅವನ ಹಾಡುಗಾರಿಕೆಗಾಗಿಯೂ, ಅವನು ಬ್ರಾಹ್ಮಣನಾದದ್ದರಿಂದಲೂ ದೇವರಂತೆ ಕಾಣುತ್ತಿದ್ದಳು. ಅವಳಿಗೆ ಹಣಕ್ಕೆ ಕಡಿಮೆಯಿರಲಿಲ್ಲ; ಬೇಕಾದವರೂ ಬಹಳ ಜನ; ಆದರೆ ಇವನ ವಿಷಯದಲ್ಲಿ ಬಹಳ ವಿಶ್ವಾಸ, ಭಕ್ತಿ. ಅವಳು ಸ್ವಭಾವವಾಗಿ ಗೋಪಸ್ತ್ರೀ; ಕೃಷ್ಣದೇವರ ಉಪಾಸಕಳು. ಸುಂದರಾಕಾರನೂ ವರ್ಚಸ್ವಿಯೂ ಆದ ಸುಬ್ಬಣ್ಣನನ್ನು ನೋಡಿ ಇವನು ಪ್ರತ್ಯಕ್ಷವಾಗಿ ಬಂದ ಕೃಷ್ಣನೆಂದೇ ಅವಳು ಭಾವಿಸಿದ್ದಳು. ಅವನು ಬಂದರೆ ನೀಲಾ ಅವನಿಗೆ ಕಾಲು ತೊಳೆದುಕೊಳ್ಳುವುದಕ್ಕೆ ನೀರನ್ನು ಕೊಡುವಳು. ದೊಡ್ಡದಾದ ತನ್ನ ಮನೆಯ ಮಹಡಿಯ ಮೇಲೆ ಅವಳು ಸುಬ್ಬಣ್ಣನಿಗೆ ಒಂದು ಕೊಠಡಿಯನ್ನು ಬಿಟ್ಟುಕೊಟ್ಟಿದ್ದಳು. ಅಲ್ಲಿ ಕುಳಿತುಕೊಳ್ಳುವುದಕ್ಕೆ ಮಣೆ, ರತ್ನಗಂಬಳಿ, ಒರಗುದಿಂಬು, ಅಭ್ಯಾಸಕ್ಕೆ ಬೇಕಾದ ಪಿಟೀಲು, ಮೃದಂಗ ಇವೆಲ್ಲವನ್ನೂ ಇರಿಸಿರುವಳು. ಅಲ್ಲಿ ಒಂದು ಮಂಚಿಗೆಯ ಮೇಲೆ ಒಂದು ಮಡಿಚೀಲದಲ್ಲಿ ಬ್ರಾಹ್ಮಣರಿಂದ ಮಾಡಿಸಿದ ತಿಂಡಿಯೊಂದಿಷ್ಟನ್ನು ಸಿದ್ಧವಾಗಿ ಯಾವಾಗಲೂ ಇರಿಸಿಯೇ ಇರುವಳು. ಸುಬ್ಬಣ್ಣ ಕೈಕಾಲು ತೊಳೆದುಕೊಂಡು ಬಂದು ಕುಳಿತುಕೊಂಡರೆ ನೀಲಾ ಕೊಠಡಿಗೆ ಬಂದು ದೂರದಲ್ಲಿ ಕುಳಿತು ಹತ್ತು ನಿಮಿಷದ ಹೊತ್ತು ನಗುತ್ತ ಮಾತನಾಡಿಸಿ ಇನ್ನು ತಾವು ಅಭ್ಯಾಸ ಮಾಡಿ ಎಂದು ಹೇಳಿ ಮನೆಯೊಳಗೆ ಹೊರಟುಹೋಗುವಳು. ಸುಬ್ಬಣ್ಣ ತನ್ನಷ್ಟಕ್ಕೆ ತಾನೆ ಕುಳಿತು ಪಿಟೀಲನ್ನು ನುಡಿಸುತ್ತ ತನಗೆ ತೋರಿದ ಸಂಗತಿ ವರೇಕುಗಳನ್ನು ಹಾಕುತ್ತ ಯಾವುದು ಹ್ಯಾಗಾಗುತ್ತದೆ ಎಂದು ನೋಡುತ್ತ ಎಷ್ಟು ಹೊತ್ತು ಹೋಯಿತೆಂಬುದನ್ನು ಕಾಣದೆ ಗಾನಯೋಗದಲ್ಲಿ ಮಗ್ನನಾಗಿರುವನು. ಬಹಳ ದಿನ ಊಟದ ಹೊತ್ತಿಗೆ ನೀಲಾ ಬಂದು "ದೇವರಿಗೆ ಮನೆಗೆ ಹೋಗೋ ಹೊತ್ತಾಯಿತು" ಎಂದು ಹೇಳದೇ ಇದ್ದರೆ ಅವನಿಗೆ ಮನೆಗೆ ಹೋಗೋಣವೆಂದೂ ತೋರಿರಲಾರದು.

ಆ ದಿನ ಮನೆಯಲ್ಲಿ ಜಗಳವಾದ ಮೇಲೆ ಸುಬ್ಬಣ್ಣ ನೀಲಾ ಸಾನಿಯ ಮನೆಗೆ ಹೋದನು. ಅವನಿಗೆ ಮನಸ್ಸಿನಲ್ಲಿ ಬಹು ಕಾರಣದಿಂದ ಅಸಮಾಧಾನ. ತಾನು ಒಬ್ಬರಿಗೆ ಹೊರೆಯಾಗಿದೇನಲ್ಲಾ ಎಂಬುದು ಮೊದಲು ಕಾರಣ. ಇದು ಎಲ್ಲರಿಗೂ ಬರುವ ಅತೃಪ್ತಿ. ಬಾಲ್ಯದಲ್ಲಿ ನಾವೆಲ್ಲ ನಮ್ಮ ತಂದೆಯ ಮನೆಯಲ್ಲೋ ಇನ್ನು ಯಾರ

ಮನೆಯಲ್ಲೋ ಇದ್ದುಕೊಂಡು ನಮ್ಮ ಪಾಲಿನ ಅನ್ನವನ್ನು ತಿನ್ನುವುದಕ್ಕೆ ನಮಗೆ ಅಧಿಕಾರ ಹೇಗೆ ಬಂತು ಎಂಬುದನ್ನು ಯೋಚಿಸದೆ ಕುಳಿತು ಊಟಮಾಡಿಬಿಡುತ್ತೇವೆ. ಸ್ವಲ್ಪ ತ್ರಾಣ ಬಂದ ಒಡನೆಯೇ ಇದು ಸರಿಯಲ್ಲವೆಂಬ ಭಾವನೆ ಮನಸ್ಸಿನಲ್ಲಿ ತಾನಾಗಿ ಹುಟ್ಟುತ್ತದೆ. ಇನ್ನೊಬ್ಬರ ಮನೆಯಲ್ಲಿ ಊಟಕ್ಕೆ ಕೂಡುವುದಕ್ಕೆ ಸಂಕೋಚ ಉಂಟಾಗುತ್ತದೆ. ಸುಬ್ಬಣ್ಣನಿಗೆ ಈ ರೀತಿಯ ಯೋಚನೆ ತಂದೆ ಏನನ್ನಾದರೂ ಹೇಳುವುದಕ್ಕೆ ಮುಂಚೆಯೇ ಬಂದಿತ್ತು. ಆದರೆ ಸದ್ಯಕ್ಕೆ ಬೇರೆ ಏನನ್ನು ಮಾಡುವುದೂ ತೋಚಿರಲಿಲ್ಲ. ಅಲ್ಲದೆ ಇಷ್ಟರಲ್ಲೇ ಮಹಾರಾಜರಲ್ಲಿ ಸಂಗೀತ ಶಾಸ್ತ್ರದ ಜ್ಞಾನವನ್ನು ತೋರಿಸಿ ಸಣ್ಣ ಸಂಬಳ ಒಂದನ್ನು ಸಂಪಾದಿಸಿಯೇನೆಂದು ಅವನು ಆಸೆ ಇಟ್ಟುಕೊಂಡಿದ್ದನು. ತಾನು ಸಭೆಯಲ್ಲಿ ಹಾಡುವುದಕ್ಕೆ ಕುಳಿತಾಗ ತನ್ನ ತಂದೆಯು ನೋಡಿ ಸಂತೋಷಪಡುವುದನ್ನೂ ಮಹಾರಾಜರು ಸಂಬಳ ಗೊತ್ತುಮಾಡಿದಾಗ ಅವರು ಎಷ್ಟು ಉಬ್ಬಿ ಹೋಗಬಹುದೆಂಬುದನ್ನೂ ಅವನು ಒಮ್ಮೊಮ್ಮೆ ನೆನೆದು ಆನಂದಪಡುವನು. ಈ ದಿನ ನೋಡಿದ್ದರಲ್ಲಿ ಅವರಿಗೆ ತನ್ನ ವಿಷಯದಲ್ಲಿ ತೀರಾ ಬೇಸರ ಹುಟ್ಟಿದ್ದಂತೆ ಕಂಡಿತು. ತಾನು ಅಯೋಗ್ಯನೆಂದೂ ಅಪ್ರಯೋಜಕನೆಂದೂ ಇವರು ತಿಳಿದರಲ್ಲಾ ಎಂದು ಬೇರೆ ಅವನಿಗೆ ಅಸಮಾಧಾನ. ಆಮೇಲೆ ತನ್ನ ಹೆಂಡತಿ. ತಾನು ಒಬ್ಬನಾಗಿದ್ದರೆ ಎಲ್ಲಾದರೂ ತೊಲಗಿ ಹೋಗಬಹುದಾಗಿತ್ತು. ಇವಳು ಬೇರೆ ಕುತ್ತಿಗೆಗೆ ಸುತ್ತಿದಾಳೆ. ಇದೆಲ್ಲಿಯ ಶನಿ. ಪೂರ್ವದಲ್ಲಿ ಹೆಂಡತಿ ಎಂದರೆ ಇಷ್ಟೇಯೇ ಪ್ರೀತಿ ಇದ್ದದ್ದು ಎಂದು ನೀವು ಹೇಳಬೇಡಿ. ಈಗ ನಾವು ಪ್ರೀತಿ ಎನ್ನುವ ಪ್ರೀತಿ ಕೇವಲ ಕಾಯಿಕವಾದ ಪ್ರೀತಿ. ಪೂರ್ವದವರ ಪ್ರೀತಿಯು ಒಂದು ರೀತಿಯ ಅಶ್ರದ್ಧೆಯಲ್ಲಿ ಪ್ರಾರಂಭವಾದರೂ ಕೊನೆಗೆ ಹೆಂಡತಿ ಎಂದರೆ ಲೋಕಮಾತೆಯ ಅಂಶ ಎಂಬ ಭಕ್ತಿಯಲ್ಲಿ ಮುಗಿಯುತ್ತಿತ್ತು. ಸುಬ್ಬಣ್ಣನಿಗೂ ಹಾಗೆಯೇ ಆಯಿತು. ಆದರೆ ಆ ಚಿಕ್ಕ ವಯಸ್ಸಿನಲ್ಲಿ ಅವನಿಗೆ ಹೆಂಡತಿಯ ವಿಷಯದಲ್ಲಿ ಇದ್ದದ್ದು ಅಶ್ರದ್ಧೆಯೇ. ಏಕೆಂದರೆ, ಆ ಸಂದರ್ಭದಲ್ಲಿ ಗಂಡಹೆಂಡಿರು ಒಬ್ಬರಿಗೊಬ್ಬರು ಬಹಳ ಪ್ರೀತಿಯನ್ನು ತೋರಿಸುವಂತೆ ಇರಲಿಲ್ಲ. ಲಲಿತಮ್ಮ ಸಾವಿತ್ರಿಯ ಅವತಾರವಾಗಿದ್ದರೂ ಸುಬ್ಬಣ್ಣನಿಗೆ ಹೆಚ್ಚು ಶುಶ್ರೂಷೆ ಮಾಡುವುದು ಸಾಧ್ಯವಾಗುತ್ತಿರಲಿಲ್ಲ. ಅವನು ಮನೆಗೆ ಹೋದರೆ ದೂರದಿಂದ ನೋಡಿ ಸಂತೋಷಪಡಬೇಕು. "ನಿನ್ನ ಗಂಡನಿಗೆ ನೀರು ಕೊಡು" ಎಂದು ಅತ್ತೆ ಹೇಳಿದರೆಯೇ ಕೊಡಬಹುದು. ಇಲ್ಲದಿದ್ದರೆ ಸುಮ್ಮನೆ ಇರಬೇಕು. ಒಂದು

ದಿನ ತಿಳಿಯದೆ ಅವಳು ಗಂಡನಿಗೆ ತಾನೇ ನೀರು ಕೊಟ್ಟಳು. ಅತ್ತೆ ತನಗೆ ತಾನೇ "ಇದೇನಪ್ಪಾ ಕಾಲ ಹೀಗಾಗಿ ಹೋಯಿತು. ಐವತ್ತು ವರುಷ ಸಂಸಾರಮಾಡಿದ ಹೆಂಗಸಿಗಿಂತ ಹೆಚ್ಚಾಗಿ ಗಂಡನಿಗೆ ನೀರು ಕೊಡುತ್ತಾಳೆ. ನಮ್ಮ ದಿನದಲ್ಲಿ ಹೀಗೆಲ್ಲಾ ಮಾಡುವುದುಂಟೇ" ಎಂದು ಬೆಳಗಿನಿಂದ ಸಂಜೆಯವರೆಗೆ ಐದಾರು ಸಲ ಹೇಳಿಬಿಟ್ಟರು. ಲಲಿತಮ್ಮ "ದೇವರೆ, ಇವರು ಇದನ್ನು ಮರೆತುಬಿಟ್ಟರೆ ಹೀಗೆ ಇನ್ನೊಂದು ಸಲ ಮಾಡುವುದಿಲ್ಲ" ಎಂದುಕೊಂಡಳು. ಆಮೇಲೆ ಅವಳು ಹಾಗೆ ಮಾಡಲಿಲ್ಲ. ಲಲಿತ ಹಾಗೆ ನೀರು ಕೊಟ್ಟ ದಿನ ತನ್ನ ತಾಯಿ ಮಾಡಿದ ಗಲಾಟೆಯು ಸುಬ್ಬಣ್ಣನಿಗೂ ಗೊತ್ತಿತ್ತು. ಅವನು ಅದಕ್ಕೆ ಏನನ್ನೂ ಹೇಳಲಿಲ್ಲ. ಅವನಿಗೆ ಆ ವಿಷಯದಲ್ಲಿ ಬಹಳ ಯೋಚನೆ ಹೋಗಲಿಲ್ಲ. ಅವನು ಸಂಗೀತದಲ್ಲಿ ಮುಳುಗಿದ್ದನು. ಅಲ್ಲದೆ ಇಲ್ಲಿ ಮನೆಯಲ್ಲಿ ಹೆಂಡತಿ ನೀರು ಕೊಡದಿದ್ದರೂ ಬೇರೆ ಒಂದು ಮನೆಯಲ್ಲಿ ನೀಲಾ ನೀರು ಕೊಡುತ್ತಿದ್ದಳು. ಪ್ರಾಯಶಃ ಗಂಡಸಿಗೆ ಎಲ್ಲಾದರೂ ಒಂದುಕಡೆ ಇಂತಹ ಶುಶ್ರೂಷೆ ನಡೆದರೆ ಸಾಕು; ಇನ್ನೊಂದು ಕಡೆ ಅದನ್ನು ಅವನ ಮನಸ್ಸು ಅಪೇಕ್ಷಿಸುವುದಿಲ್ಲ. ಆದ್ದರಿಂದ ಸುಬ್ಬಣ್ಣನಿಗೆ ಈ ಸಂದರ್ಭದಲ್ಲಿ ನೀಲಾ ಸಾನಿ ಜೀವನದ ಒಂದು ಭಾಗವಾಗಿದ್ದಳು; ಹೆಂಡತಿ ಅರ್ಥ ಅನಿಷ್ಟವಾದ ಭಾರವಾಗಿದ್ದಳು. ಈ ಎಲ್ಲ ಕಾರಣಗಳಿಂದ ಅತೃಪ್ತನಾಗಿ ಅವನು ಆ ದಿನವನ್ನೆಲ್ಲಾ ನೀಲಾಸಾನಿಯ ಮನೆಯಲ್ಲಿ ಕಳೆದು ರಾತ್ರಿ ಮಲಗುವುದಕ್ಕೆ ಮಾತ್ರ ಮನೆಗೆ ಬಂದನು.

ಶಾಸ್ತ್ರಿಗಳು ಅದಕ್ಕೆ ಸ್ವಲ್ಪ ಮುಂಚೆ ಮನೆಗೆ ಬಂದಿದ್ದರು. ಮುದುಕನಿಗೆ ಎಷ್ಟಾದರೂ ಮಗನ ಮೇಲೆ ಪ್ರೀತಿ. ಅಲ್ಲದೆ ಪ್ರಾಯದ ಮಗನನ್ನು ಅನ್ನಕ್ಕೆ ಹೊರೆ ಎಂದು ಹೇಳಿದ್ದು ತನ್ನ ತಪ್ಪು ಎಂದು ಬೇರೆ ಆ ವೇಳೆಗೆ ತೋರಿತ್ತು. ಬಂದಹಾಗೆ ಯಜಮಾನಿಯನ್ನು "ಹುಡುಗ ಬಂದನೇ" ಎಂದು ಕೇಳಿದರು. ಆಕೆಗೆ ಹಸಿದು ಹಸಿದು ಬಹಳ ಕೋಪ ಬಂದಿತ್ತು. ಗಂಡ ಹೀಗೆ ಕೇಳುತ್ತಲೂ "ನನ್ನನ್ನೇಕೆ ಕೇಳುತ್ತೀರಿ. ಕೇಳಿ, ಆ ಲೋಪಾಮುದ್ರೇನ" ಎಂದರು. ಶಾಸ್ತ್ರಿಗಳಿಗೆ ಮಾತು ಸರಿಯಾಗಿ ತಿಳಿಯಲಿಲ್ಲ. "ಯಾರನ್ನ" ಎಂದರು. "ಅಯ್ಯೋ ನೀವೂ ಸರಿಯೆ; ಏನು ಹುಡುಗ ಹುಡುಗ ಎಂತೀರಿ. ನಿಮಗೆ ಒಂದು ಭ್ರಾಂತು. ಹೆತ್ತು ಸಾಕುವುದಕ್ಕೆ ನಾವು; ಆಳುವುದಕ್ಕೆ ಬೇರೆಯೋರು ಬರುತ್ತಾರೆ. ನೋಡಿ, ಹಡೆದ ಮುದುಕಿ ಅನ್ನ ಇಲ್ಲದೆ ಸಾಯುತ್ತಾಳಲ್ಲಾ ಎನ್ನದೆ ಹೊರಟು ಹೋಗಿದಾನೆ. ಊಟಕ್ಕೇ ಬರಲಿಲ್ಲ. ಇವಳೂ ಹಠ ಮಾಡಿದ್ದಾಳೆ. ಇವಳೇ ಅವನಿಗೆ ಹೇಳಿಕೊಟ್ಟಿರಬೇಕು. ಈಗಿನ ಹುಡುಗಿಯ

ರೇನು ಮಾಯಾವಿನಿಯರು. ಮೋಹಿನಿಯರು. ಮುಂದುಕಿ ನಾಯಲಿ ಎಂತ ಗಂಡನಿಗೆ ಊಟಮಾಡಬೇಡ ಎಂತ ಹೇಳಿಕೊಟ್ಟು ಕಳುಹಿಸಿ ಬಿಟ್ಟಿದಾಳೆ ನೋಡಿ" ಎಂದರು. ಮಾತಿನ ಮಳೆ ಮುಗಿದ ಮೇಲೆ ಶಾಸ್ತ್ರಿಗಳು "ಹೇಳಿಕೊಡುವುದೇನು ಇದನ್ನೆಲ್ಲ—ತಾನೇ ಬರುತ್ತೆ" ಎಂದರು. ಯಜಮಾನಿ "ನಿಮಗೆ ಏನು ತಿಳಿಯುತ್ತೆ? ಇವಳು ಬರುವುದಕ್ಕೆ ಮುಂಚೆ ಹೀಗೆಲ್ಲಾ ಆಯಿತೇನು? ಇವಳು ಬಂದೇ ಸಂಸಾರ ಹೀಗಾದದ್ದು" ಎಂದರು. ಯಜಮಾನಿಗೆ ಕೋಪದಲ್ಲಿ ಲಲಿತೆಯನ್ನು ತಾನು ಎಂಥಾ ಮಾತು ಹೇಳಿ ನೋಯಿಸುತಿದ್ದೇನೆ ಎಂಬುದು ತಿಳಿಯಲಿಲ್ಲ. ಇದು ಎಲ್ಲ ಕಡೆಯೂ ಇರುವ ಒಂದು ಹುಚ್ಚು. ತಾಯಿಯಾದವಳು ತನ್ನ ಮಗ ತಪ್ಪುಮಾಡಿದರೆ ಅವನು ಸ್ವತಃ ಅದನ್ನು ಮಾಡಿದನೆಂದು ನಂಬಲಾರಳು. ಯಾರೋ ಅದನ್ನು ಹೇಳಿಕೊಟ್ಟಿರಬೇಕು. ಹಾಗಾದರೆ ಯಾರು? ಯಾರು ಎಂದು ಹುಡುಕಬೇಕಾದದ್ದೇ ಇಲ್ಲ. ಯಕ್ಷಿಣಿ ಹತ್ತಿರವೇ ಇದಾಳೆ. ಹೀಗೆ ಮಗನ ಮೇಲೆ ಹಾಕಬೇಕಾದ ತಪ್ಪನ್ನು ಹಾಕುವುದಕ್ಕೆ ಇನ್ನೊಬ್ಬರು ಇರಲಿ ಎಂದೇ ತಾಯಿಯರು ಜಾಗ್ರತೆಯಾಗಿ ಸೊಸೆಯನ್ನು ಬರಮಾಡಿಕೊಳ್ಳುವುದು. ಇಲ್ಲಿ ಇಷ್ಟು ಮಾತಾಗುವ ವೇಳೆಗೆ ಸುಬ್ಬಣ್ಣ ಮನೆಗೆ ಬಂದ. ಶಾಸ್ತ್ರಿಗಳು ಸಂಧ್ಯಾವಂದನೆಗೆ ಮೊದಲುಮಾಡಿದ್ದರು. ತಾಯಿ ಗಲಭೆ ಮಾಡುತ್ತಿದಾರೆ. ಲಲಿತಮ್ಮ ಒಂದು ಕಡೆ ಕುಳಿತು ಕಣ್ಣೀರು ಸುರಿಸುತ್ತಿದಾಳೆ. ಸುಬ್ಬಣ್ಣ ಬಂದು ಒಂದು ಮಾತನ್ನೂ ಆಡದೆ ಕೈಕಾಲು ತೊಳೆದುಕೊಂಡು ಸಂಧ್ಯಾವಂದನೆ ಮಾಡುತ್ತ ಕುಳಿತನು. ಹೆಂಗಸರು ಗಲಭೆ ಮಾಡುತ್ತಿದ್ದ ಕಡೆ ಗಂಡಸರು ಸಂಧ್ಯಾವಂದನೆ ಮಾಡುವುದು ಆಗುವುದಿಲ್ಲ. ತಂದೆ ಮಕ್ಕಳಿಬ್ಬರೂ ಜಾಗ್ರತೆಯಲ್ಲಿ ಸಂಧ್ಯಾವಂದನೆ ಮುಗಿಸಿದರು. ಸುಬ್ಬಣ್ಣ ಮತ್ತೆ ಹೊರಗೆ ಹೊರಟನು. ತಂದೆ "ಊಟಮಾಡಿಕೊಂಡು ಹೋಗೋ" ಎಂದರು. ಸುಬ್ಬಣ್ಣ "ನನಗೆ ಹಸಿವಿಲ್ಲ" ಎಂದ. ಯಜಮಾನಿ "ಹೌದಪ್ಪ ನಿನಗೆ ಹೇಗೆ ಹಸಿದೀತು. ನಿನ್ನ ಹೆಂಡತಿ ಬಂದಾಗ ನಿನಗೆ ಅವರಪ್ಪನ ಮನೆಯಿಂದ ಅಮೃತ ತಂದುಕೊಟ್ಟಳು. ಅವಳಿಗೂ ಹಸಿವಿಲ್ಲ; ನಿನಗೂ ಹಸಿವಿಲ್ಲ. ನಿಮ್ಮ ತಂದೆಗೆ ನನಗೇ ಹೊಟ್ಟೇಲಿ ಭೂತ ಹೊಕ್ಕಿರುವುದು" ಎಂದರು. ತಂದೆ "ಯಾಕೆ ಸುಮ್ಮನೇ ಮಾತನಾಡುತೀ" ಎಂದು, ಮಗನಿಗೆ "ಅಪ್ಪಾ ಏನೋ ಒಂದು ಮಾತು ಹೇಳಿದರೆ ನೀನೂ ಊಟಮಾಡದೆ ನಿನ್ನ ಹೆಂಡತೀನೂ ಊಟಮಾಡದೆ ಇದ್ದುಬಿಟ್ಟರೆ ಹೇಗೋ, ಬಾಪ್ಪ—ಕೋಪಾ ಬೇಡ" ಎಂದರು. ಯಜಮಾನಿ, "ಬಾರೇ ಎಂದೆ; ನೀನು ಊಟಮಾಡು, ನಾನು ಊಟಮಾಡುತ್ತೇನೆ'

ಎಂದು ಬೇಡಿಕೊಂಡೆ; ಕಾಲಿಗೆ ಒಂದು ಬೀಳಲಿಲ್ಲ. ಇನ್ನೆಷ್ಟು ಕೇಳಿಕೊಂಡರೂ ಅವಳು ಒಪ್ಪುವಳೇ? ಇನ್ನವರು ಊಟ ಮಾಡದಮೇಲೆ ನನಗೇಕೆ ಊಟ" ಎಂದರು. ತಾಯಿ ಊಟ ಮಾಡಲಿಲ್ಲವೆಂದು ಸುಬ್ಬಣ್ಣನಿಗೆ ಆಗ ತಿಳಿಯಿತು. ತನ್ನ ಹೆಂಡತಿ ಊಟ ಮಾಡದ್ದರಿಂದ ಆಕೆ ಊಟ ಮಾಡಲಿಲ್ಲವೆಂದೂ ಹೊಳೆಯಿತು. ಅವನಿಗೆ ಹೆಂಡತಿಯ ಮೇಲೆ ಬಹಳ ಕೋಪ ಬಂತು. ಬೆಳಗ್ಗಿನಿಂದ ಹೊಟ್ಟೆಯಲ್ಲಿ ತುಂಬಿ ಬೆಳೆದ ಕೋಪ ಮೇಲೆ ಹರಿಯಿತು. ಅವನು ಲಲಿತ ಇದ್ದ ಕಡೆಗೆ ಸರ್ರನೆ ಹೋಗಿ "ನೀನು ಯಾಕೆ ಊಟ ಮಾಡಲಿಲ್ಲ; ಏನು ತಲೆಯೆಲ್ಲಾ ಹರಟೆ" ಎಂದು ಅವಳ ಕೆನ್ನೆಯ ಮೇಲೆ ಫಳೀರ್ ಫಳೀರ್ ಎಂದು ಎರಡು ಏಟು ಹೊಡೆದನು.

ಇದನ್ನು ಬರೆಯಬೇಕಾದರೆ ನನಗೆ ಕಣ್ಣಲ್ಲಿ ನೀರು ಬರುವಹಾಗಾಗಿದೆ. ಲಲಿತೆ ಕೊನೆಗೆ ಬಹಳ ಸುಖವನ್ನು ನೋಡಿದಳು. ಅವಳನ್ನು ಸುಬ್ಬಣ್ಣನು ಕೊನೆಗೆ ದೇವಿಯ ಅವತಾರವೆಂದೇ ಭಾವಿಸುವುದನ್ನು ಕಲಿತನು. ಆದರೆ ಆ ದಿನದ ಪಾಡನ್ನು ನೆನೆದರೆ ಯಾರಿಗೂ ವ್ಯಥೆಯಾಗುವುದು. ಅವಳು ಮಾಡಿದ ತಪ್ಪು ಏನು? ಗಂಡ ಊಟಮಾಡದೆಯಿದ್ದ ಕಾರಣ ತಾನೂ ಊಟಮಾಡದೆ ಇದ್ದದ್ದು. ಸುಬ್ಬಣ್ಣನು ಊಟಮಾಡದೆ ಹೊರಟುಹೋದದ್ದು ಕೋಪದಿಂದ. ಅವಳು ಊಟ ಮಾಡದೆ ಇದ್ದದ್ದು ಅವನು ಊಟ ಮಾಡದ್ದರಿಂದ. ಅವಳಿಗೆ ನಿಜವಾಗಿಯೂ ಇನ್ನು ಯಾವ ಅಸಮಾಧಾನವೂ ಇರಲಿಲ್ಲ. ಮಾವನು ತನ್ನ ಗಂಡನನ್ನು ಬಯ್ದನೆಂದಾಗಲೀ ತನ್ನನ್ನು ಭಾರವೆಂದು ಎಣಿಸಿದನೆಂದಾಗಲೀ ಅವಳು ಮನಸ್ಸಿಗೆ ಹಚ್ಚಿಕೊಂಡು ಇರಲಿಲ್ಲ. ತಂದೆಮಕ್ಕಳ ಮಾತು ನೂರು ಇರುತ್ತದೆ, ನನಗೇನು ಎಂದು ಇಂಥ ಸಂದರ್ಭಗಳಲ್ಲಿ ತನಗೆ ತಾನೇ ಎಂದುಕೊಳ್ಳುವಳು. ತಾಯಿ ಮಗನ ವಿಷಯದಲ್ಲಿ ಅಸಮಾಧಾನದ ಮಾತನಾಡಿದರೆ ಆಗಲೂ ಹೆತ್ತವರು ಸಾಕಿದವರು ಅವರೆನ್ನದೆ ಇನ್ಯಾರು ಎನ್ನುತ್ತಾರೆ ಎಂದುಕೊಳ್ಳುವಳು. ತಾನು ಏನಾದರೂ ತಪ್ಪುಮಾಡಿದಾಗ ಅತ್ತೆ ತನ್ನನ್ನು ಏನಾದರೂ ಹೇಳಿದರೆ, "ನ್ಯಾಯ, ಮಗನೇನೋ ಅವರು ಹೆತ್ತು ಸಾಕಿದವರು. ನಾನವರಿಗೆ ಏನಾಗಬೇಕು" ಎಂದು ಸ್ವಲ್ಪ ಖಿನ್ನಳಾಗಿ "ಇನ್ನುಮೇಲೆ ಹೀಗೆ ಮಾಡುವುದಿಲ್ಲ. ಅತ್ತೆಮ್ಮನವರ ಇಷ್ಟದಂತೆ ನಡೆದುಬಿಡುವುದು" ಎಂದುಕೊಳ್ಳುವಳು. ಸಂಪ್ರದಾಯವಂತರ ಮಗಳು. ಅವಳ ತಾಯಿ ಬಹಳ ಬುದ್ಧಿವಂತರು. ತಾನು ಅತ್ತೆ ಮಾವಂದಿರು, ಭಾವಮೈದಂದಿರು, ಓರಗಿತ್ತಿಯರೊಂದಿಗೆ ಇಪ್ಪತ್ತು ವರುಷದ ಸಂಸಾರ ಮಾಡಿ ಕಲಿತ ವಿವೇಕವನ್ನೆಲ್ಲಾ ಮಗಳಿಗೆ ಆಗಾಗ

ಹೇಳಿ ಪಾಠ ಮಾಡಿಸಿದ್ದರು. ಆದ್ದರಿಂದ ಲಲಿತೆ ಹದಿನಾರು ವರುಷ ಮಾತ್ರದ ಹುಡುಗಿಯಾದರೂ ಮುವ್ವತ್ತು ವರುಷದ ತಿಳುವಳಿಕೆಯುಳ್ಳವಳಾಗಿದ್ದಳು. ಸಾಧ್ಯವಾದಷ್ಟು ಒಳ್ಳೆಯದನ್ನೇ ಮಾಡುವಳು. ಅತ್ತೆ ಮಾವಂದಿರ ವಿಷಯದಲ್ಲೂ ಇತರರ ವಿಷಯದಲ್ಲೂ ಒಳ್ಳೆಯದನ್ನೇ ಯೋಚಿಸುವಳು. ಏನೇ ಆದರೂ ಅತ್ತೆ ಮಾವಂದಿರಲ್ಲಿ ಭಕ್ತಿಯನ್ನು ಬಿಡಳು. ಆದರೆ ಯಾವ ವಿವೇಕದಿಂದ ಅವಳು ಇದನ್ನೆಲ್ಲಾ ಮಾಡುತ್ತಿದ್ದಳೋ ಅದೇ ವಿವೇಕವು ಅವಳಿಗೆ ಆ ದಿನ ಗಂಡನು ಹಸಿದುಕೊಂಡಿರುವಾಗ ತಾನು ಊಟ ಮಾಡಬಾರದೆಂದು ಹೇಳಿಕೊಟ್ಟಿತು. ಉಪವಾಸ ಮಾಡಿದಳು. ಸರಿಯಾದ ಕೆಲಸ ಮಾಡಿದರೂ ಗಂಡನಿಂದ ಏಟು ತಿಂದಳು. ಏಟುಬಿದ್ದ ಒಂದು ಕ್ಷಣ ಸ್ತಬ್ಧಳಾಗಿ ಏನೂ ತೋರದೆ ದೇವರ ಮನೆಯ ಬಳಿಗೆ ಹೊರಟುಹೋಗಿ ತನ್ನ ತಾಯನ್ನು ನೆನೆದುಕೊಂಡು ಐದು ನಿಮಿಷ ಚೆನ್ನಾಗಿ ಅತ್ತಳು. ಆಮೇಲೆ ಅತ್ತು ಪ್ರಯೋಜನವಿಲ್ಲವೆಂದುಕೊಂಡು ಮಾವನವರಿಗೂ ಊಟ ಮಾಡುವುದಾದರೆ ಗಂಡನಿಗೂ ಎಂದು ಎರಡು ಮಣೆ ಹಾಕಿ ಎಲೆಗಳನ್ನೂ ಹಾಕಿದಳು.

ಹೆಂಡತಿಯನ್ನು ಹೊಡೆದು ಸುಬ್ಬಣ್ಣನಾಗಲಿ ಸುಖಿಯಾಗಲಿಲ್ಲ. ಹೊಡೆದ ಉತ್ತರ ಕ್ಷಣದಲ್ಲಿಯೇ ತಾನು ಮಾಡಿದ್ದು ಹೇಡಿಯ ಕೆಲಸ ಎಂದುಕೊಂಡನು. ಇದೇಕೋ ತನ್ನ ಕೋಪ ಅನರ್ಥಪರಂಪರೆಯನ್ನು ತರುತ್ತಿದೆ ಎಂದು ತೋರಿ ಎಲ್ಲೋ ಹೋಗಬೇಕೆಂದು ಹೊರಟಿದ್ದವನು ಆ ಯೋಚನೆ ಬಿಟ್ಟು ಅಲ್ಲೇ ಕುಳಿತನು. ತಂದೆ ಸ್ತೋತ್ರವನ್ನು ಮುಗಿಸಿದ ಮೇಲೆ ಹೋಗಿ ಎಲೆಯ ಹತ್ತಿರ ನಿಂತಿದ್ದು ಅವರು ಬಂದು ಕುಳಿತಮೇಲೆ ತಾನೂ ಕುಳಿತು ಅವರ ಜತೆಗೆ ಊಟ ಮಾಡಿದನು. ಆಮೇಲೆ ತಂದೆಯ ಓಲೆಗರಿ ಪುಸ್ತಕವೊಂದನ್ನು ದೂಳು ಹೊಡೆಯುತ್ತಾ ಹಜಾರದಲ್ಲಿ ಕುಳಿತಿದ್ದನು. ಅಷ್ಟುಹೊತ್ತಿಗೆ ಲಲಿತೆಯೂ ಊಟ ಮಾಡಿ ಅತ್ತೆಗೆ ಬಡಿಸಿ ಮನೆಯ ಕೆಲಸ ಮುಗಿಸಿಕೊಂಡು ಬಂದು ಹಜಾರಕ್ಕೆ ಸೇರಿದಹಾಗಿದ್ದ ಕೊಟಡಿಯಲ್ಲಿ ಎಂದಿನಂತೆ ಗಂಡನಿಗೆ ಹಾಸಿಗೆಯನ್ನು ಹಾಕಿ ಬಂದು ಅತ್ತೆಯೊಂದಿಗೆ ದೇವರ ಮನೆಯಬಳಿ ಕುಳಿತಳು. ಜಗಳವಾಡಿ ಸಾಕಾಗಿದ್ದ ದಿನವಾದ್ದರಿಂದ ಯಾರಿಗೂ ಆ ದಿನ ಬಹಳ ಹೊತ್ತು ಎಚ್ಚರಿಕೆಯಾಗಿರುವ ಇಷ್ಟವಿರಲಿಲ್ಲ. ಶಾಸ್ತ್ರಿಗಳು ಬೇಗನೆಯೇ ಹಜಾರದಲ್ಲಿ ಮಲಗಿದರು. ಯಜಮಾನಿ "ಹೋಗೇ ಮಲಗಿಕೋ ಹೋಗು ದಿನಾ ದಿನಾ ನಾನು ಹೇಳಬೇಕೇ" ಎಂದು ಹೇಳಿದರು. ಲಲಿತಮ್ಮ ಮಲಗುವ ಮನೆಗೆ ಹೋದಳು.

ನನಗೆ ಯೋಗ್ಯತೆ ಇದ್ದರೆ ಇಲ್ಲಿ ಲಲಿತಮ್ಮನನ್ನು ವರ್ಣಿಸಬೇಕು. ಅವಳ ಮನಸ್ಸಿನ ಭಾವಗಳನ್ನು ವಿವರಿಸಿ ಹೇಳಬೇಕು. ನನಗೆ ಆ ಯೋಗ್ಯತೆ ಇಲ್ಲ. ಅಲ್ಲದೆ ಲಲಿತಮ್ಮನ ಆಕಾರ ಹೇಗಿತ್ತೆಂದು ನಾನು ಕಾಣೆ. ಮತ್ತೆ ಯೋಚಿಸುವುದರಲ್ಲಿ ಒಂದು ಸಂದೇಹ ಬರುತ್ತದೆ. ಈ ಆಕಾರವನ್ನು ಕಾಣದ್ದರಿಂದ ನಾನೇನೂ ವ್ಯಥೆಪಡಬೇಕಾದದ್ದಿಲ್ಲ. ಕಂಡಿದ್ದರೆ ತಾನೆ ವರ್ಣಿಸುತ್ತಿದ್ದೆನೆ? ಕವಿಗಳು ಸ್ತ್ರೀ ವರ್ಣನೆಯೆಂದು ಬರೆಯುವ ವರ್ಣನವು ಪ್ರಾಯಶಃ ಮಾನವನು ಸ್ತ್ರೀಯರ ವಿಷಯದಲ್ಲಿ ತೋರಬೇಕಾದ ಮರ್ಯಾದೆಯನ್ನು ಮೀರುತ್ತದೆಯೆಂದು ನನ್ನ ಭಾವನೆ. ಅಯ್ಯಾ ಕವಿ! ಯಾವುದನ್ನು ಕೇವಲ ಒಂದು ಶೃಂಗಾರದ ಆವಾಸ ವೆಂದು ಕಾಮುಕಾವಸ್ಥೆಯಲ್ಲಿ ನೀನು ಭ್ರಮಿಸಿ ನಿನ್ನಂಥ ಕಾಮುಕರಿಗೆ ವರ್ಣಿಸಿ ಹೇಳುವೆಯೋ ಆ ಸ್ತನಯುಗ್ಮವನ್ನು ಲೋಕಮಾತೆಯು ನನ್ನ ನಿನ್ನಂಥ ಸಾವಿರ ಕ್ಷುದ್ರಜೀವಿಗಳ ಪಾಲನೆಗಾಗಿ ಧರಿಸಿರುವಳು. ಇದನ್ನು ವಿಟಪುರುಷನಂತೆ ವರ್ಣಿಸುವುದಕ್ಕೆ ನಿನ್ನ ಧೃಷ್ಟತನವೆಷ್ಟಿರ ಬೇಕು? ನಿನ್ನ ತಾಯ ಅಂಗಾಂಗಗಳನ್ನು ಹೀಗೆ ವರ್ಣಿಸುವೆಯಾ? ನಿನ್ನ ಒಡಹುಟ್ಟಿದ ಹೆಣ್ಣುಮಕ್ಕಳ ಅಂಗಾಂಗಗಳನ್ನು ಹೀಗೆ ವರ್ಣಿಸು ವೆಯಾ? ಹಾಗಾದರೆ ಕವಿಯೆಂದು ಹೆಸರಿಟ್ಟುಕೊಂಡಮಾತ್ರಕ್ಕೆ ಸ್ತ್ರೀ ಯೆಂಬ ಒಂದು ವ್ಯಕ್ತಿಯನ್ನು ಹಾಗೆ ವರ್ಣಿಸುವುದಕ್ಕೆ ಕಾರಣ ವೇನು? ಸ್ತ್ರೀಯು ಪ್ರೇಯಸಿ ಹೇಗೋ ಅದಕ್ಕಿಂತ ಹೆಚ್ಚಾಗಿ ಮಾತೆ ಯಾಗಿರುವಳು. ನೀನು ಯಾರನ್ನು ನಿನ್ನ ಪತ್ನಿಯೆಂದು ಕರೆಯು ವೆಯೋ ಅವಳು ಕೂಡ ನಿನ್ನ ಸಂಸ್ಕಾರಕ್ಕಾಗಿ ಒಂದು ಸಮಯದಲ್ಲಿ ಪತ್ನಿಯಂತೆ ನಡೆದುಕೊಂಡರೂ ಸದಾ ಹೃದಯದಲ್ಲಿ ನಿನ್ನನ್ನೂ ಒಂದು ಮಗುವಂತೆ ನೋಡುವಳು. ನಾನು ಕವಿಯಲ್ಲ. ಲಲಿತಮ್ಮನನ್ನು ನೋಡಿದ್ದರೂ ಅವಳ ಮುಖ ಹೀಗಿತ್ತು, ಕಣ್ಣು ಹಾಗಿತ್ತು, ತುಟಿ ಇನ್ನು ಹೇಗಿತ್ತು ಎಂದು ವರ್ಣಿಸುವುದಕ್ಕೆ ನನ್ನ ಮನಸ್ಸು ಒಪ್ಪು ತ್ತಿರಲಿಲ್ಲ. ಅವಳು ಸುಂದರಿಯಾಗಿಯೇ ಇದ್ದಿರಬೇಕು ಎಂದು ಮಾತ್ರ ಹೇಳುತ್ತಿದ್ದೆನು. ಅಲ್ಲದೆ ನಾವು ನಮ್ಮ ಗೃಹಿಣಿಯರಲ್ಲಿ ಮೆಚ್ಚು ವುದು ಏನನ್ನು? ಕಣ್ಣು ಮೂಗು ತುಟಿಗಳನ್ನೆ? ಅಪರಿಚಿತಳಾದ ಸ್ತ್ರೀಯನ್ನು ನೋಡಿದಾಗ ಅವರ ಆಕಾರದ ವಿಷಯದಲ್ಲಿ ಮನಸ್ಸು ಸ್ವಲ್ಪ ಪ್ರವರ್ತಿಸಬಹುದು. ಮನೆಯ ಹೆಂಗಸರ ವಿಷಯದಲ್ಲಿ ಹಾಗೆ ಪ್ರವರ್ತಿ ಸುವುದಿಲ್ಲ. ಯಾವ ಸ್ತ್ರೀಯ ವಿಷಯದಲ್ಲೇ ಆಗಲಿ ಆಕಾರದ ಸೊಗಸು ಸ್ವಲ್ಪ ಕಾಲ ಮಾತ್ರ ಪ್ರಮುಖವಾಗಿರಬಹುದು. ಆಮೇಲೆ ನಮಗೆ ತೋರುವುದು ಆ ಅವರ್ಣನೀಯವಾದ ಸ್ತ್ರೀ ವ್ಯಕ್ತಿತ್ವ; ಸಾವಿರ ಸಂದರ್ಭ

ದಲ್ಲಿ ನಾವು ನೋಡಿರುವ ಆ ಪ್ರೇಮ, ಆ ದಯ, ಆ ಕನಿಕರ; ಆ ವಿಭ್ರಮ, ಆ ಲಾಲಿತ್ಯ, ಆ ಸೌಕುಮಾರ್ಯ; ಆ ಸ್ತ್ರೀತ್ವ. ವರ್ಣಿಸುವು ದಾದರೆ ಲಲಿತೆಯನ್ನು ಕುರಿತು ನಾನು ಇದನ್ನು ವರ್ಣಿಸಬೇಕು. ಆದರೆ ಇದನ್ನು ವರ್ಣಿಸುವ ಶಕ್ತಿ ನನಗೆ ಇಲ್ಲ.

ಸ್ತ್ರೀತ್ವ ಎಂದು ಹೇಳಿದ ಮಾತ್ರಕ್ಕೇ ಎಲ್ಲಾ ಹೆಂಗಸರೂ ಒಂದೇ ರೀತಿ ಎಂತಲೂ ಲಲಿತಮ್ಮನಿಗೂ ಅವಳ ಅತ್ತೆಗೂ ವ್ಯತ್ಯಾಸವಿಲ್ಲ ವೆಂತಲೂ ನಾನು ಹೇಳುತ್ತಿರುವೆನೆಂದು ಗ್ರಹಿಸಬಾರದು. ಲಲಿತಾ ಸ್ತ್ರೀಯರಲ್ಲಿ ಉತ್ತಮ ರೀತಿಯವಳು. ಅದರಿಂದಲೇ ಅವಳಲ್ಲಿ ದಿನ ದಿನಕ್ಕೆ ಒಳ್ಳೆಯ ಗುಣಗಳು ಬೆಳೆಯುತ್ತಿದ್ದುವು. ಆ ದಿನ ಗಂಡನು ಹೊಡೆದಾಗ ಮನಸ್ಸಿಗೆ ಭೀತಿಯೂ ನೋವೂ ಉಂಟಾದರೂ ಮಲ ಗುವ ಮನೆಗೆ ಹೋಗುವ ವೇಳೆಗೆ ಆ ಭೀತಿಯೂ ನೋವೂ ಮರೆ ಯಾಗಿ ಅವಳ ಮನಸ್ಸಿನಲ್ಲಿ ಗಂಡನ ವಿಷಯವಾಗಿ ತನಗೇ ತಿಳಿಯದೆ ಹೊಸದಾದ ಒಂದು ಸ್ವತ್ವಭಾವವು ಉಂಟಾಗಿತ್ತು. ಅದುವರೆಗೆ ಸುಬ್ಬಣ್ಣನು ಅವಳನ್ನು ಬಹಳ ಮಾತನಾಡಿಸಿರಲಿಲ್ಲ. ಅವನು ಹುಡುಗ, ಅವಳು ಹುಡುಗಿ. ಕಾಡುಹರಟೆ ಹೊಡೆಯುವ ಸ್ವಭಾವ ದವರಲ್ಲ. ಮಾತನಾಡಿದರೆ ರಾತ್ರಿ ಸ್ವಲ್ಪ ಹೊತ್ತು ಮಾತನಾಡ ಬೇಕು. ಅದರಲ್ಲೂ ಲಲಿತಮ್ಮನಿಗೆ ಒಂದು ಸಂದೇಹ ಬೇರೆ. ತನ್ನ ಅತ್ತೆ ಬಾಗಿಲ ಬಳಿ ನಿಂತು ತಾವು ಆಡುವ ಮಾತನ್ನು ಕೇಳು ತ್ತಿದ್ದಾರೆ ಎಂದು ಅವಳಿಗೆ ಒಂದೆರಡು ಸಲ ತೋರಿತ್ತು. ಆದ್ದರಿಂದ ಆಡುವ ಎರಡು ಮಾತನ್ನೂ ಅವಳು ಮರ್ಯಾದೆಯಿಂದಲೇ ಆಡಿ ಮುಗಿಸುವಳು. ಸುಬ್ಬಣ್ಣನಿಗೂ ಕೂಡ ಸಂಸಾರದ ಸುಖದ ಮೇಲೆ ಮನಸ್ಸು ಅಷ್ಟಾಗಿ ಹೋಗಿರಲಿಲ್ಲ. ಅವನಿಗೆ ಸಂಗೀತದಲ್ಲಿ ಪಂಡಿತ ನಾಗಬೇಕೆನ್ನುವ ಯೋಚನೆಯಲ್ಲಿ ಇನ್ನು ಯಾವುದೂ ಬಹಳ ಬೇಕಾಗಿ ರಲಿಲ್ಲ. ಅಲ್ಲದೆ ಸ್ತ್ರೀಯಿಂದ ಯಾವ ಉಪಚಾರ ಅಥವಾ ಪ್ರೀತಿಪುರಸ್ಸರ ವಾದ ಸೇವೆ ಬೇಕೋ ಅದನ್ನು ಅವನು ನೀಲಾಸಾನಿಯ ಮನೆಯಲ್ಲಿ ಪಡೆಯುತ್ತಿದ್ದನು. ತನ್ನ ಮನೆಯಲ್ಲಿ ಪಡೆಯುವ ಹಾಗಿರಲಿಲ್ಲ. ಗಂಡ ನನ್ನು ಕಣ್ಣಾರ ನೋಡುವುದಕ್ಕೇ ರಾತ್ರಿಯವರೆಗೆ ಕಾಯಬೇಕಾಗಿರು ವಾಗ ಲಲಿತ ಅವನಿಗೆ ಕೈಕಾಲಿಗೆ ನೀರು ಕೊಟ್ಟು ಮಣೆ ಹಾಕಿ ಹತ್ತಿರ ಬಂದು ನಗುನಗುತ್ತಾ ಮಾತನಾಡಿಸುವುದೆಲ್ಲಿ? ಆದ್ದರಿಂದ ಇದುವರೆಗೆ ಸುಬ್ಬಣ್ಣ ಲಲಿತೆಯರ ಸಂಬಂಧವು ಸೂಕ್ಷ್ಮವಾದದ್ದಾಗಿತ್ತು. ಹೀಗೆ ಅಂಟಿಯೂ ಅಂಟದ ಸಂಬಂಧವನ್ನು ನಮ್ಮಲ್ಲಿ ಇರುವೆ ಕಚ್ಚಿದ ಹಾಗೆ ಎಂತ ವರ್ಣಿಸುತ್ತಾರೆ. ಇರುವೆ ಕಚ್ಚಿದರೆ ಕಚ್ಚಿದ ಹಾಗೆ ನೋವಿಲ್ಲ.

ಮುತ್ತಿಟ್ಟ ಹಾಗೆ ಸುಖವಿಲ್ಲ; ಇಂಥ ಸಂಬಂಧದಲ್ಲಿ ಹಿಡಿತವಿಲ್ಲ. ಅವರು ಆದುವರೆಗೆ ಹೇಗೋಹಾಗೆ ನಾವೂ ಗಂಡಹೆಂಡಿರು ಎಂತ ಇದ್ದ ಹಾಗಾಗಿತ್ತು. ಸುಬ್ಬಣ್ಣನು ಯಾವಾಗ ಹೊಡೆದನೋ ಆಗ ಅವನು ಹೆಂಡತಿಯನ್ನು ಈ ವಸ್ತು ಏನು ಮಾಡುವುದಕ್ಕೂ ನನ್ನದು ಎಂದು ಹೇಳಿದಹಾಗಾಯಿತು. ಲಲಿತೆಗೂ ಮನಸ್ಸಿನಲ್ಲಿ ಹೀಗೆಯೇ ಭಾವನೆ ಯುಂಟಾಯಿತು. ಅವಳ ಚೇತನವು ತಾನಾಗಿ "ನಾವಿಬ್ಬರೂ ಒಂದು. ಅತ್ತೆ ಬೇರೆ, ಮಾವ ಬೇರೆ, ಪ್ರಪಂಚವೆಲ್ಲವೂ ಬೇರೆ; ಆದರೆ ನಾವಿಬ್ಬರೂ ಒಂದು" ಎಂಬ ನಿಲುವಿಗೆ ತಿರುಗಿತು. ಆಮೇಲೆ ಅವಳು "ಹೊಡೆದರೆ ಏನು? ಇನ್ನ್ಯಾರೂ ಅಲ್ಲವಲ್ಲ, ನನ್ನ ಗಂಡತಾನೇ" ಎಂದುಕೊಂಡಳು. ತನ್ನ ತಾಯಿ ಹೇಳಿದ್ದ ಒಂದು ಮಾತು ಜ್ಞಾಪಕಕ್ಕೆ ಬಂತು. "ಏನು ಮಾಡಿದರೂ ಪತಿ ಪರದೈವ. ಗಂಡಸರು ದೇವರನ್ನು ಹುಡುಕಿಕೊಂಡು ಹೋಗಬೇಕು; ಹೆಂಗಸಿಗೆ ದೇವರು ಸದಾ ಪ್ರತ್ಯಕ್ಷನಾಗಿದಾನೆ. ಕಷ್ಟ ಕೊಟ್ಟ ಎಂತ ದೇವರನ್ನು ಬಿಟ್ಟು ಎಲ್ಲಿಗೆ ಹೋಗೋಹಾಗಿದೇವೆ. ಹಾಗೇವೆ ಬೈದ, ಹೊಡೆದ ಎಂತ ಹೆಂಗಸು ಗಂಡನನ್ನು ಬಿಟ್ಟು ಹೋಗೋಹಾಗಿಲ್ಲ." ಹೀಗೆಂದುಕೊಂಡು ಲಲಿತ ಸಮಾಧಾನ ತೆಗೆದು ಕೊಂಡಿದ್ದಳು. ನಿದ್ದೆ ಹೋಗುತಾರೋ ಎಚ್ಚರವಾಗಿರುತಾರೋ, ಮಾತನಾಡಿಸುತಾರೋ ಇನ್ನೂ ಕೋಪವಾಗಿಯೇ ಇರುತಾರೋ ಎಂದು ಯೋಚಿಸುತ್ತಾ ಲಲಿತಮ್ಮ ಸದ್ದಿಲ್ಲದೆ ಒಳಗೆ ಸುಳಿದು ಬಾಗಿಲನ್ನು ಮುಚ್ಚಿ ಹಾಸಿಗೆಯ ಬಳಿ ಬಂದಳು. ಸುಬ್ಬಣ್ಣ ಎಡ ಪಕ್ಕಕ್ಕೆ ಮಲಗಿಕೊಂಡು ಕಣ್ಣು ಮುಚ್ಚಿಕೊಂಡಿದ್ದನು. ಲಲಿತ ಅಷ್ಟು ಬೇಗ ಬಂದಾಳೆಂದು ಅವನಿಗೆ ತಿಳಿದಿರಲಿಲ್ಲ. ಎಂದಿನಂತೆ ಸಾವ ಕಾಶವಾಗಿ ಬರುವಳೆಂದುಕೊಂಡಿದ್ದನೆಂದು ಕಾಣುತ್ತದೆ. ಮಲಗಿ ತನ್ನ ಸ್ಥಿತಿಯನ್ನು ಕುರಿತು ಯೋಚಿಸುತ್ತಾ ಹಾಗೆಯೇ ಕಣ್ಣು ಮುಚ್ಚಿ ಕೊಂಡಿದ್ದನು. ಅದಕ್ಕೆ ಹಿಂದೆ, ರಾತ್ರಿಯಲ್ಲಿ ಅವನಿಗೆ ನಿದ್ರೆ ಅರ್ಧ ಹತ್ತಿದಮೇಲೆ ಲಲಿತಾ ಬಂದು ಬಾಗಿಲು ಹಾಕಿ ತನಗೆ ಸರಿಯಾಗಿ ಹೊದಿಸಿ ದೀಪವನ್ನು ಆರಿಸಿ ತಾನು ಬಂದು ಬಳಿಯಲ್ಲಿ ಸದ್ದಿಲ್ಲದೆ ಮಲಗುವುದು ತಿಳಿಯುತ್ತಿತ್ತು. ಈ ದಿನ ಬಂದು ದೂರ ಮಲಗು ವಳೋ ಎಂದು ಅವನಿಗೆ ಒಂದು ಸಂದೇಹ; ಬಂದಾಗ ಮಾತ ನಾಡಿಸುವುದೇ ಸುಮ್ಮನೆ ಇರುವುದೇ ಎಂದು ಒಂದು ಯೋಚನೆ; ಸುಲಭವಾಗಿ ಮಾತನಾಡುವಳೋ ಇಲ್ಲ ಹಠ ಮಾಡುವಳೋ ಎಂದು ಶಂಕೆ. ಇವೆಲ್ಲವೂ ತಲೆದೋರಿ ಸುಬ್ಬಣ್ಣನು "ತಪ್ಪು ಅವಳದು; ತಾನು ಹೊಡೆದದ್ದು ಹೆಚ್ಚು; ಆದರೂ ಮೊದಲ ತಪ್ಪು ಅವಳದು;

ಆದರೂ ಸಮಾಧಾನ ಮಾಡಿ ನೋಡುವುದು" ಎಂದುಕೊಳ್ಳು ತ್ತಿದ್ದನು. ಲಲಿತಾ ಎಂದಿನಂತೆ ದೀಪ ಆರಿಸಿದ್ದರೆ ಅವನಿಗೆ ಅವಳು ಬಂದದ್ದು ತಿಳಿಯುತ್ತಿತ್ತು. ಅಂದು ಅವಳು ದೀಪವನ್ನಾರಿಸದೆ ಮೆಲ್ಲಗೆ ಬಂದು ಹತ್ತಿರ ಕುಳಿತುಕೊಂಡಳು. ಗಂಡನು ನಿದ್ರೆಯಲ್ಲಿ ಇದ್ದಾ ನೆಂದು ತೋರಿತು. ತನ್ನದೆಂದು ಬಂದಿದ್ದ ಹೊಸ ಆದರದಿಂದ ಅವನನ್ನು ಚೆನ್ನಾಗಿ ನೋಡಿದಳು. ಅವಳ ತಾಯಿ ಎಂದೋ ಒಂದು ಸಲ "ಗಂಡ ನನ್ನು ನೋಡಬೇಕಾದರೆ ದೃಷ್ಟಿಯಾಗುವ ಹಾಗೆ ಒಂದೇಸಮನೆ ನೋಡ ಬಾರದು. ಗಂಡನು ಪಾರಿಜಾತದ ಹೂವಿನಂತೆ. ನೋಡಿದರೆ ಬಾಡು ತಾನೆ" ಎಂದು ಹೇಳಿದ್ದದ್ದನ್ನು ನೆನೆದುಕೊಂಡು ಅವನನ್ನು ನೋಡು ವುದನ್ನು ಬಿಟ್ಟಳು. ಆದರೆ ಮನಸ್ಸು ನಿಲ್ಲಲಿಲ್ಲ. ಮತ್ತೆ ಅವನನ್ನೇ ದೃಷ್ಟಿಸಿ ನೋಡಿದಳು. ಬಹಳ ಮೆಚ್ಚಿಗೆಯಾಗಿ ಅವನನ್ನು ಮಗುವಿನಂತೆ ಕೈಯಲ್ಲಿ ಹಿಡಿದುಕೊಳ್ಳೋಣವೇ ಎಂದು ತೋರಿತು. ಆದರೆ ಇನ್ನೂ ಅಷ್ಟು ಸ್ವಾತಂತ್ರ್ಯವಿಲ್ಲ; ಅಲ್ಲದೆ ನಿದ್ರೆಹೋಗುತ್ತಿರುವನು. ಅದರಮೇಲೆ ಸುಮ್ಮನಾಗಿ ತನ್ನನ್ನು ಹೊಡೆದಿದ್ದ ಆ ಬಲಗೈಯನ್ನು ನೋಡಿ ಏನೋ ತೋರಿ ಮೆಲ್ಲಗೆ ಅದರ ಹತ್ತಿರಕ್ಕೆ ಮುಖವನ್ನಿಟ್ಟು ತುಟಿ ಕೈಗೆ ಸೋಕಿತೋ ಇಲ್ಲವೋ ಎನ್ನುವ ಹಾಗೆ ಒಂದು ಮುತ್ತಿಟ್ಟಳು. ಸುಬ್ಬಣ್ಣ ನಿಜವಾಗಿಯೂ ನಿದ್ರೆಯಲ್ಲಿರಲಿಲ್ಲ. ಲಲಿತಾ ಕೊಟ್ಟ ಮುತ್ತಿ ನಿಂದ ಕಣ್ಣು ತೆರೆದನು. ಪರ್ವತರಾಜಕನ್ಯೆಯ ತಪಸ್ಸಿಗೆ ಮೆಚ್ಚಿದ ಪರಶಿವನಂತೆ ಯಾವ ಮಾತನ್ನೂ ಆಡದೆ ಯಾವ ಯೋಚನೆಯನ್ನೂ ಮಾಡದೆ ಅವಳನ್ನು ಎರಡು ಕೈಗಳಿಂದಲೂ ಹಿಡಿದು ಹತ್ತಿರಕ್ಕೆ ಕರೆದು ಕೊಂಡು "ಶಾನೆ ನೋವಾಯಿತೇ" ಎಂದನು.

ನನಗೆ ಇಲ್ಲಿ ಸ್ವಲ್ಪ ನಗು ಬರುತ್ತದೆ. ಪರಶಿವನೇನು? ಪರ್ವತ ರಾಜಕನ್ಯೆಯೇನು? ಕೊನೆಗೆ ಈ ನೋವಾಯಿತೇ ಎಂಬ ಮಾತೇನು? ಆದರೇನು ಮಾಡುವುದು. ಇದು ಬದುಕು. ಭಾವನೆಯನ್ನೇ ಮೀರಿದ ಪ್ರಣಯವು ಆಕಾರವನ್ನು ತಳೆಯುವುದು ಇಂತ ಮಾತುಗಳಲ್ಲಿ. ಸುಬ್ಬಣ್ಣ ನಾಟಕವನ್ನು ಬರೆಯುವುದಕ್ಕೆ ಯೋಚನೆ ಮಾಡುತ್ತಾ ಇದ್ದಿದ್ದರೆ ಅವನಿಗೆ ಒಳ್ಳೆಯ ರಸಪುಷ್ಟವಾದ ಮಾತುಗಳು ತೋರ ಬಹುದಾಗಿತ್ತು. ಅಲ್ಲದೆ ನಾಟಕ ಬರೆಯುವವರು ಹುಡುಗಿ ಹೀಗೆಯೇ ಮಾಡುತ್ತಾಳೆ ಎಂದು ಬಲ್ಲರು. ಅದಕ್ಕೆ ಹುಡುಗ ಹೀಗೆಯೇ ಹೇಳು ತ್ತಾನೆ ಎಂದು ಅವರು ಸರಿಯಾಗಿ ಯೋಚಿಸುವರು. ನಾವು ದಿನವೂ ಆಡುತ್ತಿರುವ ನಾಟಕದಲ್ಲಿಯಾದರೋ ಹುಡುಗಿ ಹೇಗೆ ನಡೆಯುತ್ತಾಳೆ ಎಂಬುದು ತಿಳಿಯದು. ಆದ್ದರಿಂದ ನಾವು ಏನು ಹೇಳಬೇಕು ಎನ್ನು

ವುದನ್ನು ಪಾಠಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆ ರಾತ್ರಿ ಇನ್ನವರಿಬ್ಬರೂ ಆಡಿದ ಮಾತನ್ನು ನಾನು ಹೇಗೆ ಹೇಳಲಿ? ಮಕ್ಕಳಂಥ ಇಬ್ಬರು ಹೊಸದಾಗಿ ತಲೆದೋರಿದ ಪ್ರಣಯದಲ್ಲಿ ಒಬ್ಬರಿಗೊಬ್ಬರು ಆಡಿಕೊಂಡ ಮಾತು ಇದೇ ಎಂದು ಯಾರು ಹೇಳಬಲ್ಲರು. ಮಾತೇನೋ ಬಹಳ ಹೊತ್ತು ಆಡಿದರು. ಏನು ಮಾತೆಂದು ಅವರಿಗೇ ತಿಳಿದಿದ್ದಿರಲಾರದು. ಆದರೆ ಒಂದು ವಿಷಯವೇನೆಂದರೆ, ಇಲ್ಲಿ ಮಾತು ಮುಖ್ಯವಲ್ಲ, ಮನಸ್ಸು ಹತ್ತಿರವಾಗಿದ್ದರೆಸರಿ. ಆ ದಿನ ಈ ಮಾತಿನಿಂದ ಲಲಿತಾ ಮತ್ತು ಸುಬ್ಬಣ್ಣ ಇಬ್ಬರ ಮನಸ್ಸು ಬಹುಸಮೀಪಕ್ಕೆ ಬಂದಾಯಿತು; ಆ ಎರಡು ಆತ್ಮಗಳೂ ಹತ್ತಿರ ಹತ್ತಿರ ಬಂದುವು; ಲಲಿತಾ ತನ್ನ ಗಂಡನಿಗೆ ಯಜಮಾನಿಯಾದಳು, ಗೃಹಿಣಿಯಾದಳು. ಆವರೆಗೆ ಗೃಹಿಣಿಯಾಗಿರಲಿಲ್ಲವೇ ಎಂದು ಯಾರಾದರೂ ಕೇಳಬಹುದು. ಅದಕ್ಕೆ ಇಲ್ಲವೆಂದೇ ಹೇಳಬೇಕು. ಹೆಂಗಸಿಗೆ ಗಂಡನ ಹೃದಯದಲ್ಲಿ ಎಂದು ಸ್ಥಿರವಾದ ಜಾಗ ಸಿಕ್ಕುವುದೋ ಅಂದೇ ಅವಳು ಗೃಹಿಣಿಯಾಗುವುದು.

೩

ಮಾರನೆಯ ದಿನ ಸುಬ್ಬಣ್ಣನು ತಾನು ಸಂಗೀತವನ್ನು ಕಲಿಯುತ್ತಿರುವೆನೆಂದೂ ಇಷ್ಟರಲ್ಲೇ ಏನಾದರೂ ಸ್ವಲ್ಪ ಸಂಬಳ ಸಿಕ್ಕಬಹುದೆಂದೂ ತಂದೆಗೆ ತಿಳಿಸಿದನು. ನಾರಾಯಣಶಾಸ್ತ್ರಿಗಳು ಇದನ್ನು ಕೇಳಿ ಮನಸ್ಸಿನಲ್ಲಿ ಬಹಳ ನೊಂದುಕೊಂಡರು. ತನ್ನ ಹಿರಿಯರೆಲ್ಲಾ ಸಂಸ್ಕೃತದಲ್ಲಿ ಅಸಾಧ್ಯಪಂಡಿತರು. ತಾನೂ ಸಂಸ್ಕೃತದಲ್ಲಿ ಪಂಡಿತ. ಇಂಥಾದ್ದರಲ್ಲಿ ತನಗೆ ಆದ ಒಬ್ಬನೇ ಮಗ ಸಂಸ್ಕೃತದಲ್ಲಿ ಪಂಡಿತನಾಗದೆ ಹಾಡುಗಾರಿಕೆ ಮನುಷ್ಯನಾದನಲ್ಲಾ ಎಂದು ಅವರಿಗೆ ಬಹಳ ವ್ಯಥೆಯಾಯಿತು. ಸಭೆಯಲ್ಲಿ ವೈದಿಕಮಂಡಲಿಯಲ್ಲಿ ಕುಳಿತು ಸ್ವಸ್ತಿಯನ್ನು ಹೇಳಿ ಮಹಾರಾಜರಿಗೆ ಆಶೀರ್ವಾದ ಮಾಡುವುದು ಹೇಗೆ? ಎಲ್ಲರೆದುರಿಗೆ ಕಿಂಕರನಂತೆ ಕುಳಿತು ಹಾ ಹೂ ಎಂದು ಹಾಡುವುದು ಹೇಗೆ? ಅವರಿಗೆ ಅಂದು ಹಿಂದೆ ತಮ್ಮ ಹಿರಿಯರು ಕಟ್ಟಿದ್ದ ಒಂದು ಶಿಖರವು ಕಳಚಿಬಿದ್ದಂತೆ ತೋರಿತು. ಆದರೆ ಮಾಡುವುದೇನು? ಹೇಗಾಗಬೇಕೆಂದಿತ್ತೋ ಹಾಗೆ ಆಯಿತು ಎಂದುಕೊಂಡು ಅವರು ಮತ್ತೆ ಆ ಯೋಚನೆಯನ್ನು ಮಾಡದೆ ಮರೆತರು. ಮನೆಯ ಯಜಮಾನಿಗೂ ಬಹಳ ಕೋಪ. ತಾನು ಹೆತ್ತ ಒಬ್ಬ ಮಗ ಸೂಳೆಯಂತೆ ಸಭೆಯ ಮುಂದೆ ಕುಳಿತು ಹಾಡುವುದೇ ಎಂದು ಅವರಿಗೆ ಬಹಳ ಹೀನಾಯ. ಇದು ಸ್ವಭಾವ. ನಮಗೆಲ್ಲ ಅಧಿಕಾರದಲ್ಲಿ ಆಸೆಯಿರುವಂತೆ ಇತರರಿಗೆ ಸುಖವನ್ನುಂಟುಮಾಡುವುದರಲ್ಲಿ ಆಸೆಯಿರುವುದಿಲ್ಲ. ಅಲ್ಲದೆ ಸಾಮಾನ್ಯವಾಗಿ, ವೈಕುಂಠದಲ್ಲಿ ವಿಷ್ಣು

ಸಾನ್ನಿಧ್ಯದಲ್ಲಿ ದೇವರ್ಷಿ ಪ್ರಮುಖನಾದ ನಾರದನು ಗಾಯಕನೆಂಬುದು ಪ್ರಾಯಶಃ ಮನಸ್ಸಿಗೆ ತೋರುವುದಿಲ್ಲ. ಪಾಂಡಿತ್ಯದಿಂದ ದೇವರನ್ನು ಹೇಗೆ ಮೆಚ್ಚಿಸಬಹುದೋ ಹಾಗೆ ಗಾಯನದಿಂದಲೂ ಮೆಚ್ಚಿಸಬಹುದೆಂದು ನಾವು ಯೋಚಿಸುವುದಿಲ್ಲ. ಸಂಸ್ಕೃತ ಕಲಿತವರು ಮಹಾರಾಜರಿಗೆ ಆಶೀರ್ವಾದ ಮಾಡುತ್ತಾರೆ. ಹಾಡು ಕಲಿಯುವವಳು ಮುಖ್ಯವಾಗಿ ಸೂಳೆ. ಆದ್ದರಿಂದ ಸಂಸ್ಕೃತ ಹೆಚ್ಚು, ಹಾಡುಗಾರಿಕೆ ಕಡಿಮೆ. ನಮ್ಮೆಲ್ಲರ ತರ್ಕಶಾಸ್ತ್ರವೂ ಇಷ್ಟು ದೂರವೇ ವ್ಯಾಪಿಸುವುದು. ಯಜಮಾನಿ ಯಾವ ಕಾರಣದಿಂದಲೋ ಇದರ ಹೊಣೆಗಾರಿಕೆಯನ್ನು ಲಲಿತೆಯ ಮೇಲೆಯೇ ಹಾಕಿದರು. ಸುಬ್ಬಣ್ಣ ಸಂಗೀತ ಕಲಿತನೆಂದೊಡನೆ ಅವನು ಸೂಳೆಯ ಮನೆಗೆ ಹೋಗುತ್ತಾನೆಂದು ಅವರು ಗೊತ್ತುಮಾಡಿದರು. "ಅಯ್ಯೋ, ಈಗಿನ ಹುಡುಗೀರನ್ನು ಏನು ಹೇಳುವುದು? ಗಂಡಂದಿರನ್ನ ಸರಿಯಾಗಿಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಹೆಂಗಸು ಗಂಡನನ್ನು ಸರಿಯಾಗಿ ಕಂಡರೆ ಅವನು ಇನ್ನೊಂದು ಕಡೆ ಏಕೆ ಹೋಗುತ್ತಾನೆ" ಎಂದರು. ಆ ದಿನ ಯಾರೋ ನೆರೆಮನೆಯವರು ಬಂದಾಗ ಇದನ್ನೆಲ್ಲಾ ಹೇಳಿ ನಾವು ಹೀಗಿದ್ದಿದ್ದರೆ ನಮ್ಮ ಸಂಸಾರಗಳೆಲ್ಲಾ ಏನಾಗಬೇಕಾಗಿತ್ತು ಎಂದರು. ಅವರ ಮಾತನ್ನು ಕೇಳಿದ ಯಾರಿಗಾದರೂ ಚಿಕ್ಕಂದಿನಲ್ಲಿ ನಾರಾಯಣಶಾಸ್ತ್ರಿಗಳು ಬಹಳ ಅಯೋಗ್ಯರಾಗಿದ್ದಂತೆಯೂ ಅವರನ್ನು ಈ ಹೆಂಡತಿ ಬಹಳ ಚಮತ್ಕಾರದಿಂದ ಒಲಿಸಿಕೊಂಡು ಸರಿಮಾಡಿಕೊಂಡಂತೆಯೂ ತೋರಿರಬೇಕು. ನಿಜವಾಗಿಯೂ ಯಜಮಾನಿ ಹೀಗಿರದೆ ಇನ್ನು ಹ್ಯಾಗೂ ಇರಲಿಲ್ಲ. ಪ್ರಾಯಶಃ ಇಷ್ಟರವುಟ್ಟಿಗೂ ಇದ್ದಿರಲಾರರು. ಅವರೂ ಕೂಡ ಯಾವ ಅರ್ಥವನ್ನಾದರೂ ಇಟ್ಟುಕೊಂಡು ಮಾತನಾಡುತ್ತಿರಲಿಲ್ಲ. ಸೊಸೆಯನ್ನು ಏನಾದರೂ ಅನ್ನಬೇಕು, ಅದಕ್ಕೆ ಇದೇ ಮಾತು ಅದೇ ಮಾತು ಎಂತ ಏನು? ಹಿಂದಿನ ದಿನ ಸೊಸೆ ಮಾಯಾವಿನಿ ಮೋಹಿನಿ ಎಂದಾಗ್ಯೂ ಈ ದಿನ ಸೊಸೆ ಗಂಡನನ್ನು ಸರಿಯಾಗಿ ನೋಡಿಕೊಳ್ಳಲಿಲ್ಲ ಎಂದಾಗ್ಯೂ ಭಾವ ಬೇರೆಯಾಯಿತಲ್ಲ. ಇದು ಹೇಗೆ ಎಂದರೆ, ಸಂದರ್ಭ ಬೇರೆಯಾದ್ದರಿಂದ ಮಾತು ಬೇರೆ ಅಷ್ಟೆ. ಅಂತೂ ಸುಬ್ಬಣ್ಣ ಆ ಹೊತ್ತು ತಿಳಿಸಿದ ವಿಷಯದಿಂದ ಮನೆಯಲ್ಲಿ ಬಹಳ ಅಸಂತುಷ್ಟಿಗೆ ಕಾರಣವಾಯಿತು.

ಸುಬ್ಬಣ್ಣನಿಗೂ ಈ ಸಂದರ್ಭದಲ್ಲಿ ತಾಯಿ ವಿಷಯದಲ್ಲಿ ಒಂದು ವಿಧವಾದ ಅಸೂಯೆ ಉಂಟಾಯಿತು. ಅವರು ಹೇಳಿದ್ದನ್ನು ಕೇಳಿ ತಾನು ಹೆಂಡತಿಯನ್ನು ಹೊಡೆದದ್ದರಿಂದ ಅವನಿಗೆ ಅವರಮೇಲೆ ಕೋಪ ಬಂತೋ ಏನೋ. ಇಲ್ಲ ಹೆಂಡತಿಯ ಮೇಲೆ ಹೊಸ ಕನಿಕರ ಬಂದದ್ದ

ರಿಂದ ಅವಳನ್ನು ಅವರು ಬಯ್ಯುತ್ತಾರಲ್ಲಾ ಎಂದು ತೋರಿತೋ. ಅಂತೂ ಕಾಯಿ ಬಳ್ಳಿಯಿಂಡ ಬೇರೆಯಾಗುವುದಕ್ಕೆ ಪ್ರಾರಂಭವಾಯಿತು. ಆದಿನ ತಾಯಿ ಸಂಗೀತವನ್ನು ಬಯ್ಯುತ್ತಾ ಗೊಣಗುಟ್ಟುತ್ತಿದ್ದದ್ದೂ ಗಂಡನನ್ನು ಸರಿಯಾಗಿ ಇಟ್ಟುಕೊಳ್ಳುವುದಕ್ಕೆ ಬರಲಿಲ್ಲವೆಂದು ಸೊಸೆಯನ್ನು ಹೇಳಿದ್ದೂ ಅವನ ಕಿವಿಗೆ ಬಿತ್ತು. ಅದರಿಂದ ಬೇರೆ ಅವನಿಗೆ ಕೋಪ. ಹೀಗೆ ಆರಂಭವಾದ ಅಸಮಾಧಾನವು ದಿನದಿಂದ ದಿನಕ್ಕೆ ಹೆಚ್ಚುತ್ತಾಬಂತು. ಇದುವರೆಗೆ ವಿಧೇಯನಾಗಿದ್ದುಕೊಂಡು ಬಡಿಸಿದ್ದನ್ನು ಊಟಮಾಡಿಕೊಂಡು ಏನೂ ಅರಿಯದ ಬಸವನ ಹಾಗೆ ಇದ್ದ ಮಗನು ಈಗ ವ್ಯತ್ಯಸ್ತನಾಗುತ್ತಿದ್ದನೆಂದು ಯಜಮಾನಿಗೆ ತಿಳಿಯಲಿಲ್ಲ. ಸೊಸೆಯನ್ನು ಮಾಟಗಾತಿ ಮಾಯಾವಿನಿ ಎಂದು ಅವರು ಸುಮ್ಮನೆ ಹೇಳುತ್ತಿದ್ದದ್ದು ಎಷ್ಟೋ ಅಷ್ಟೆ. ಮಗನನ್ನು ಅವಳು ಇನ್ನೂ ಸ್ವಾಧೀನ ಮಾಡಿಕೊಂಡಿರಲಿಲ್ಲವೆಂದು ಅವರು ಚೆನ್ನಾಗಿ ತಿಳಿದಿದ್ದರು. ಅವನು ಈಗ ಹೀಗಾಗುತ್ತಿದ್ದುದನ್ನು ತಿಳಿಯದೆ ಅವರು ಅವನನ್ನೂ ಸೊಸೆಯನ್ನೂ ಎಂದಿನಂತೆಯೇ ಕಾಣುತ್ತಿದ್ದರು. ಇದೆಲ್ಲ ಸುಬ್ಬಣ್ಣನಿಗೆ ಹೊಸ ರೀತಿಯಲ್ಲಿ ಕಾಣುವುದಕ್ಕೆ ಆರಂಭವಾಯಿತು. ಸೊಸೆ ದೇವರ ಉಪಕರಣ ತೊಳೆಯುವುದು ಎರಡು ನಿಮಿಷ ಸಾವಕಾಶವಾದರೆ ನಾನೇ ತೊಳೆಯಬೇಕೇ ಉಪಕರಣಾ ಎಂದು ದಡಬಡನೆ ಎತ್ತಿಕೊಂಡುಬಂದು ಯಜಮಾನಿ ಪಿತ್ತಲಲ್ಲಿ ಹಾಕಿದ್ದುದನ್ನು ಅವನು ಹಿಂದೆ ಎಷ್ಟೋ ಸಲ ನೋಡಿದ್ದನು; ಆಗ ಅವನು ಏನೂ ಎಂದುಕೊಂಡಿರಲಿಲ್ಲ. ಆ ದಿನ ಹಾಗೆಯೇ ಆಯಿತು; ಸುಬ್ಬಣ್ಣ ನೋಡಿ ಅದುವರೆಗೂ ಪಡದೇ ಇದ್ದ ಒಂದು ಅಸಹನೆಯನ್ನು ಅನುಭವ ಮಾಡಿದನು. ಹೆಂಡತಿ ಹಜಾರದಲ್ಲಿ ಕಸ ಗುಡಿಸುತ್ತಿದ್ದಳು. ಎರಡು ಕೆಲಸ ಒಂದೇ ಸಲ ಹೇಗೆ ಮಾಡಿಯಾಳು ಎಂದು ಹೇಳಬೇಕೆಂದು ಅವನಿಗೆ ತೋರಿತು. ಆದರೆ ತಡೆದುಕೊಂಡು ಸುಮ್ಮನಾದನು.

ಇಷ್ಟರಲ್ಲೇ ಮನೆಯ ಹೆಣ್ಣುಮಕ್ಕಳಲ್ಲಿ ಎರಡನೆಯವಳಾದ ಲಕ್ಷ್ಮಿ ಗರ್ಭಿಣಿಯಾಗಿ ಮನೆಗೆ ಬಂದಳು. ಮನೆಯಲ್ಲಿ ಅಸಮಾಧಾನ ಹೆಚ್ಚುವುದಕ್ಕೆ ಅದೂ ಒಂದು ಕಾರಣವಾಯಿತು. ಯಜಮಾನಿ ಮಾತಿಗೆ ಮುಂಚೆ "ಏನು ಸುಖಕ್ಕೆ ಎಂತ ಈ ಮನೆಗೆ ಬಂದೆಯೇ ಅಮ್ಮಾ ನೀನು. ಹಾಲೇ, ಮೊಸರೇ, ಕೈತುಂಬ ಸಂಪಾದಿಸಿಹಾಕುವ ಕೂಡಹುಟ್ಟಿದವರೇ? ಏನೋ ಅವರೊಬ್ಬರು ಆದುಕೊಂಡು ತಂದುಹಾಕಬೇಕು. ಎಲ್ಲಾ ಊಟ ಮಾಡಬೇಕು. ನಿನಗೆ ನಾನೇನು ಉಪಚಾರ ಮಾಡಲಿ" ಎನ್ನುವರು. ಲಲಿತಾ ಮುಖ ಚಿಕ್ಕದು ಮಾಡಿಕೊಳ್ಳುವಳು. ಇದು ಸುಬ್ಬಣ್ಣ

ಸಿಗೆ ತಿಳಿಯದು. ಲಲಿತಾ ಒಂದೆರಡು ಸಲ ಗಂಡನಿಗೆ ಈ ಮಾತನ್ನು ಹೇಳೋಣವೇ ಎಂದುಕೊಂಡಳು. ಒಡನೆ ಹೆತ್ತತಾಯಿಗೆ ಮಗನಿಗೆ ಜಗಳತರಲೇ, ನನಗೇಕೆ ಎಂದು ಸುಮ್ಮನಾದಳು. ಯಜಮಾನಿ ಎಂದಿನಂತೆಯೇ ಮೊಸರು ತೆಗೆದು ಅದರಲ್ಲಿ ಮಗಳಿಗೆ ಗಟ್ಟಿ ಮೊಸರು ತೆಗೆದಿಟ್ಟು ಉಳಿದದ್ದನ್ನು ನೀರುಹಾಕಿ ಕಡೆದು ಎಲ್ಲರಿಗೂ ಬಡಿಸುವರು. ಒಂದು ದಿನ ಶಾಸ್ತ್ರಿಗಳು ಮಜ್ಜಿಗೆ ತೀರಾ ನೀರಾಯಿತು ಎಂದರು. ಯಜಮಾನಿ ಇನ್ನು ಮನೇಲಿ ಎಲ್ಲರಿಗೂ ಮೊಸರು ಹಾಕಬೇಕು ಎಂದರೆ ಎಷ್ಟು ಮೊಸರು ತೆಗೆದರೆ ಆಗುತ್ತೆ ಎಂದರು. ಸುಬ್ಬಣ್ಣ ಪಕ್ಕದಲ್ಲಿ ಊಟಕ್ಕೆ ಕೂತಿದ್ದ. ಅವನಿಗೆ ಮನಸ್ಸು ಚಿಕ್ಕದಾಯಿತು. ಆಮೇಲೆ ಹುಡುಗಿಯರಿಬ್ಬರೂ ಊಟ ಮಾಡುತ್ತಿದ್ದಾಗ ಅವನು ಏತಕ್ಕೋ ಒಳಗೆ ಹೋದನು. ಲಲಿತ ಎಲ್ಲರಂತೆ ನೀರು ಮಜ್ಜಿಗೆಯಲ್ಲಿ ಅನ್ನ ಕಲೆಸಿಕೊಂಡಿದ್ದಳು. ಲಕ್ಷ್ಮಮ್ಮನಿಗೆ ಮೊಸರು ಬಡಿಸಿದ್ದರು. ಸುಬ್ಬಣ್ಣ ನೋಡಿ, ಈ ಮೊಸರು ಸ್ವಲ್ಪ ಅಪ್ಪನಿಗೆ ಬಡಿಸಿದ್ದರೆ ಆಗಿರಲಿಲ್ಲವೆ ಎಂದುಕೊಂಡನು. ಇವನು ಈ ಮಾತುಗಳನ್ನು ಹೇಳಿದ್ದರೆ ಯಜಮಾನಿ ಎಚ್ಚತ್ತುಕೊಳ್ಳಬಹುದಾಗಿತ್ತೋ ಏನೋ; ಆದರೆ ಸುಬ್ಬಣ್ಣ ಮಾತನಾಡುವ ಮನುಷ್ಯನಲ್ಲ. ನೋಡಿದ್ದನ್ನೂ ಮಾಡಿದ್ದನ್ನೂ ಮನಸ್ಸಿನಲ್ಲಿಯೇ ಇಟ್ಟುಕೊಳ್ಳುವನು. ಹೀಗೆ ಬರಬರುತ್ತಾ ಮಗನಿಗೆ ತಾಯ ವಿಷಯದಲ್ಲಿ ಅಸಮಾಧಾನವು ಹೆಚ್ಚಿತು. ತಾಯಿ ತನ್ನ ಹೆಂಡತಿಯನ್ನು ಸರಿಯಾಗಿ ನೋಡುತ್ತಿಲ್ಲವೆಂದೂ, ತಾನು ತನ್ನ ಹೆಂಡತಿಗೆ ಸರಿಯಾದ ಸಂಸಾರವನ್ನು ಕಟ್ಟಿಕೊಟ್ಟಹಾಗೆ ಆಗಲಿಲ್ಲವೆಂದೂ ಅವನು ಬಹಳ ಸಲ ಎಣಿಸಿಕೊಂಡನು.

ತಪ್ಪು ಎಣಿಸಿಕೊಳ್ಳುವುದಕ್ಕೆ ಮನಸ್ಸಿದ್ದರೆ ಏನೂ ಇಲ್ಲದೆಯೇ ತಪ್ಪು ಸಿಕ್ಕುತ್ತದೆ. ಇನ್ನು ಇಂಥ ಸಂಸಾರದಲ್ಲಿ ಹೇಳಬೇಕಾದದ್ದಿಲ್ಲ. ಲಲಿತೆಯೂ ಗರ್ಭಿಣಿಯಾದಳು. ಅವಳನ್ನು ಅವರ ಮನೆಯವರು ಕರೆದುಕೊಂಡು ಹೋಗಲಿಲ್ಲ. ಅವಳು ಎಲ್ಲಕ್ಕೂ ಅತ್ತೆಯ ಕೈಗೆ ಕಾಯಬೇಕಾಯಿತು. ಅವರೂ ಅಷ್ಟೆ. ಸೊಸೆಯನ್ನು ವಿಚಾರಿಸಿಕೊಳ್ಳುವುದು ಅತ್ತೆಯತನಕ್ಕೆ ಕಡಿಮೆಯೋ ಏನೋ ಎನ್ನುವ ಹಾಗೆ ಇದ್ದುಬಿಟ್ಟರು. ಹುಡುಗಿ ಗುಡಿಸಲಾರದೆ ಕಸ ಗುಡಿಸುತ್ತಿದ್ದರೆ ಬೇಡ ಎಂದು ಹೇಳರು. ಮಗಳಿಗೆ ಮೊಸರು ತೆಗೆದಿಟ್ಟು ಹಾಕುತ್ತಿದ್ದ ಹಾಗೆ ಇವಳಿಗೆ ಹಾಕರು. ಇದನ್ನೆಲ್ಲಾ ಸುಬ್ಬಣ್ಣ ನೋಡಿದನು. ಇದೆಲ್ಲ ಅವನಿಗೆ ವಿಪರೀತವಾಗಿ ಕಂಡಿತು. ಸೀಮಂತ ಮುಂತಾದುವನ್ನು ಶಾಸ್ತ್ರಿಗಳು ಉಪಾಯವಾಗಿ ನಡೆಸಿದರು. ದಿನ ಕಳೆದು ಲಲಿತಮ್ಮ ಒಂದು ಗಂಡುಮಗುವನ್ನು ಹೆತ್ತಳು.

ಸುಬ್ಬಣ್ಣನಿಗೆ ಇದರಿಂದ ಏನೂ ಹೆಚ್ಚು ಸಂತೋಷವಾಗಲಿಲ್ಲ. ತಾನೂ ತನ್ನ ಹೆಂಡತಿಯೂ ಸಂಸಾರದಲ್ಲಿ ಭಾರವಾಗಿರುವಾಗ ಈ ಮಗು ಬೇರೆ ಒಂದು ಭಾರವಾಗಿ ಹುಟ್ಟಿತಲ್ಲಾ ಎಂದು ಅವನು ಯೋಚಿಸತೊಡಗಿದನು. ಅದಕ್ಕೆ ತಕ್ಕ ಹಾಗೆ ಆ ಸಲ ನವರಾತ್ರಿಯಲ್ಲಿ ಅವರಿವರ ಅಸೂಯೆಯಿಂದ ಅವನಿಗೆ ಹಾಡುವುದಕ್ಕೆ ಅವಕಾಶವಾಗಲಿಲ್ಲ. ಅಲ್ಪಸ್ವಲ್ಪವಾದರೂ ಸಂಪಾದನೆಗೆ ದಾರಿಯಾಗಬಹುದೆಂದುಕೊಂಡಿದ್ದನು. ಅದೂ ತಪ್ಪಿ ಹೋಯಿತು. ಇಷ್ಟರಲ್ಲಿ ದೇಶದ ದುರದೃಷ್ಟದಿಂದ ಇವನಂಥ ನೂರು ಜನದ ಆಸೆಯ ಡೇರೆಗೆ ಮೂಲಸ್ತಂಭದಂತಿದ್ದ ಉದಾರಶೀಲರಾದ ಮಹಾರಾಜರು ಕಾಲಾಧೀನರಾದರು. ಹತ್ತಾರು ಕಡೆಯ ಪಕ್ಷಿಗಳಿಗೆ ಆಶ್ರಯವಾಗಿದ್ದ ಮರ ಬಿದ್ದುಹೋದರೆ ಅವು ಹತ್ತಾರು ಕಡೆಗೆ ಹೋಗುವಂತೆ ಆಸ್ಥಾನದಲ್ಲಿ ನಿಂತಿದ್ದ ಪಂಡಿತರನೇಕರು ಬೇರೆ ಆಶ್ರಯಗಳನ್ನು ಹುಡುಕಿಕೊಂಡು ಹೊರಟುಹೋದರು. ಕೆಲವರು ಮಾತ್ರ ವಯಸ್ಸಾದವರು ಇನ್ನು ಎಲ್ಲಿಗೆ ಹೋಗುವುದು ಎಂಬ ಯೋಚನೆಯಿಂದಲೂ, ಇನ್ನು ಕೆಲವರು ತಮ್ಮ ದೊರೆಯ ಮನೆ ಎಂಬ ಪ್ರೀತಿಯಿಂದಲೂ, ಮುರಿದು ಬಿದ್ದ ಮರದ ಕೊಂಬೆಯ ಮೇಲೆಯೇ ಬಿಟ್ಟುಹೋಗಲಾರದೆ ಕುಳಿತಿರುವ ಪಕ್ಷಿಗಳಂತೆ ಹೇಗೋ ಹಾಗೆ ನಿಂತರು. ಹೀಗೆ ನಿಂತವರಲ್ಲಿ ಶಾಸ್ತ್ರಿಗಳು ಒಬ್ಬರು. ಅವರು "ಇಷ್ಟು ದಿವಸ ಉಪ್ಪು ತಿನ್ನಲಿಲ್ಲವೆ? ಯುವರಾಜರಿಗೆ ಶ್ರೇಯಃಪ್ರಾರ್ಥನೆ ಮಾಡಬೇಕಲ್ಲ, ಮಾಡೋಣ. ನನ್ನ ದಿನ ಕಳೆಯಿತು. ನಮ್ಮಪ್ಪನ ಮನೆ ಉಳಿಯಲಿ ಬೆಳೆಯಲಿ. ಕೊಟ್ಟದ್ದನ್ನ ತೆಕ್ಕೊಂಡು ಅವರಿಗೆ ಒಳ್ಳೇದಾಗಲಿ ಎನ್ನುತ ಕಾಲ ಕಳೆಯುತ್ತೇನೆ" ಎಂದರು. ಅರಮನೆಯವರಿಗೆ ಎಂದಿನಂತೆ ವಿಜೃಂಭಣೆಯಿಂದ ಖರ್ಚು ಮಾಡುವುದಕ್ಕೆ ಅವಕಾಶವಿರಲಿಲ್ಲವಾದರೂ ಇಂಥವರನ್ನು ಬಿಟ್ಟುಹೋಗಿ ಎನ್ನುವುದಕ್ಕೆ ಇಷ್ಟವಿಲ್ಲ. ಕೈಯಲ್ಲಾದದ್ದನ್ನು ಕೊಡುತ್ತಾ ಸಂಪ್ರದಾಯವನ್ನು ನಡೆಯಿಸುತ್ತಿದ್ದರು. ಆದರೂ ಶಾಸ್ತ್ರಿಗಳಿಗೆ ವರಮಾನ ಎಂದಿಗಿಂತ ಸ್ವಲ್ಪ ಕಡಿಮೆಯಾಯಿತು. ಇದ್ದವರಿಗೇ ಆಶ್ರಯವು ಕಡಿಮೆಯಾಯಿತೆಂದಮೇಲೆ ಹೊಸ ಸಂಬಳ ಕೊಟ್ಟು ಯಾರನ್ನೂ ಸಾಕುವಂತಿರಲಿಲ್ಲವೆಂದು ಹೇಳಬೇಕಾದದ್ದಿಲ್ಲ. ಸುಬ್ಬಣ್ಣನಿಗೆ ಅರಮನೆಯ ಸಂಬಳ ಸಿಕ್ಕುವ ಆಸೆ ತೀರಾ ತಪ್ಪಿ ಹೋಯಿತು.

ಸಂಸಾರದಲ್ಲಿಯಾದರೋ ಕಾರ್ಪಣ್ಯವು ದಿನೇ ದಿನೇ ಹೆಚ್ಚುತ್ತಾ ಬಂತು. ಯಜಮಾನಿಯ ಸಿಡುಕು ಹೆಚ್ಚಿತು. ಲಲಿತೆ ಹತ್ತಾರು ಸಲ ಕಣ್ಣೀರು ಹಾಕಿದಳು. ಮಗುವಿಗೆ ಬೇಕಾದ ಉಪಚಾರವಿಲ್ಲ. ಗಂಡ

ನಿಗೆ ಚೆನ್ನಾಗಿ ಬಡಿಸಬೇಕು ಎಂದು ಅವಳಿಗೆ ಒಂದು ಆಸೆ. ಆ ಆಸೆ ಈಡೇರುವ ದಾರಿಯಿಲ್ಲ. ಈ ಮಧ್ಯೆ ಹೆಣ್ಣುಮಕ್ಕಳ ಮನೆಗೆ ಏನನ್ನಾದರೂ ಕಳುಹಿಸಿಕೊಡಬೇಕೆಂದು ಮುದುಕಿಗೆ ಒಂದು ಚಪಲ. ಎಲ್ಲರೂ ಅರಮನೆಗೆ ಕಾದಿದ್ದವರು. ಅವರ ಮನೆಗಳಲ್ಲಿಯೂ ವರಮಾನ ಕಡಿಮೆಯಾಗಿತ್ತು. ಒಂದೊಂದು ಸಲ ಅವರು ಬಂದು ಅಮ್ಮ ಸ್ವಲ್ಪ ತುಪ್ಪ ಕೊಡಮ್ಮ ನಾಳೆ ಕೊಡುತ್ತೇವೆ ಎಂದು ಕೇಳುವರು. ಮುದುಕಿ ಬಾಯಿ ಸಿಲ್ಲಲಾರದೆ "ಅಯ್ಯೋ ಏನುಮಾಡಲೇಮ್ಮ, ಲಕ್ಷ್ಮಿ ತಾಂಡವ ವಾಡುತ್ತಿದ್ದ ಮನೇಲಿ ಈಗ ಏನೂ ಇಲ್ಲದಹಾಗಾಗಿದೆ. ಬಂದವರ ಪುಣ್ಯ. ಏನೋ ಅವರವರ ಮಕ್ಕಳನ್ನು ಅವರವರು ಸಾಕಿದರೆ ಹೇಗಾದರೂ ಮಾಡಬಹುದು. ನಿಮ್ಮಪ್ಪ ಎಷ್ಟು ಜನಾನ ಎಷ್ಟು ದಿನಾ ಎಂತ ಸಾಕಿಯಾರು" ಎನ್ನುವರು. ತುಪ್ಪವನ್ನು ಕೊಡದೆ ಬಿಡುತ್ತಿರಲಿಲ್ಲ. ಮಾತು ಮಾತ್ರ ಆಡಿಬಿಡುವರು. ಲಲಿತೆಗೆ ಈ ಒಂದೊಂದು ಮಾತೂ ಕಷ್ಟ. ಹಾಗೆಯೇ ಮುದುಕಿ ಒಂದೊಂದು ಸಲ ಮಗಳು ಬಂದಾಗ ಅವಳನ್ನು ಕೂಡಿಸಿಕೊಂಡು ಮನೆಯಲ್ಲಿ ಸೊಸೆ ಮಾಡಿದ ತಪ್ಪು ಇದ್ದದ್ದು ಇಲ್ಲದ್ದನ್ನೆಲ್ಲಾ ವರ್ಣಿಸುತ್ತಾ ಕುಳಿತುಕೊಳ್ಳುವರು. ಒಂದು ದಿನ ಹೀಗೆ ಮಾತನಾಡುತ್ತಿದ್ದಾಗ ಸುಬ್ಬಣ್ಣ ಬಂದ. ಅಕ್ಕ ಒಂದು ದೊಡ್ಡ ಬಟ್ಟಲಲ್ಲಿ ತುಪ್ಪ ಇಟ್ಟುಕೊಂಡಿದಾಳೆ. ಅಮ್ಮ ಅಕ್ಕನಿಗೆ ಸೊಸೆಯ ಗುಣಕಥನ ಮಾಡುತ್ತಿದಾಳೆ. ಏನೂ ಮಾತನಾಡದೆ ಕೊಟಡಿಯೊಳಕ್ಕೆ ಹೋಗಿ ಶಾಲು ತೆಗೆದುಹಾಕಿ ಬಂದನು. ಅವನು ಸಾಮಾನ್ಯವಾಗಿ ಅಕ್ಕನನ್ನು ಮಾತನಾಡಿಸುತ್ತಿದ್ದನು. ಆ ದಿನ ಮನಸ್ಸು ಬರಲಿಲ್ಲ. ಇವರೆಲ್ಲಾ ಸೇರಿ ತನ್ನ ಹೆಂಡತಿಯನ್ನು ಬಯ್ಯುವರಲ್ಲಾ ಎಂದು ಅವನಿಗೆ ಕೋಪ. ಒಂದು ಕ್ಷಣ ಬಿಟ್ಟು ಅಕ್ಕ ಹೊರಟು ಹೋದಳು. ಯಜಮಾನಿ ಸ್ವಲ್ಪ ಹೊತ್ತು ಅಲ್ಲೇ ಕುಳಿತಿದ್ದು, ಎದ್ದು ಅವಳ ಹಿಂದೆ ಅವರ ಮನೆಗೆ ಹೋದರು. ಸುಬ್ಬಣ್ಣ ಹಜಾರದಲ್ಲಿ ಕುಳಿತು ಒಂದು ಓಲೆಯ ಕರಡನ್ನು ನೋಡುತ್ತಿದ್ದನು. ಶಾಸ್ತ್ರಿಗಳು ಸಾಯಂಕಾಲ ಬಂದು ಸೊಸೆಯನ್ನು ಕರೆದು ಬಾಯಿಯೇಕೋ ಅರೋಚಿಕವಾಗಿದೆ, ಸ್ವಲ್ಪ ಸಂಡಿಗೆ ಕರಿ ಎಂದರು. ಲಲಿತಮ್ಮ ಅಡಿಗೆ ಮಾಡುವಾಗ ಸಂಡಿಗೆಯನ್ನು ಕರಿದಿಟ್ಟಳು. ದೀಪ ಹಚ್ಚುವ ವೇಳೆಗೆ ಯಜಮಾನಿ ಬಂದು ಸಂಡಿಗೆಯನ್ನು ನೋಡಿ, "ಇದೇನು ಗರ್ವ, ಮನೆಯಲ್ಲಿ ತುಪ್ಪ ಇಲ್ಲದೆ ಇರುವಾಗ ಸಂಡಿಗೆ ಕರಿಯದೇ ಇದ್ದರೆ ಸಿಂತುಹೋಯಿತೆ? ಮನೆಯ ಯಜಮಾನಿಗಿಂತ ಹೆಚ್ಚಾಗಿ ಕುಣಿಯುತ್ತೀಯಲ್ಲಾ" ಎಂದು ಸೊಸೆಯಮೇಲೆ ರೇಗಿದರು. ಶಾಸ್ತ್ರಿಗಳು "ನಾನೇ ಕರಿಯೆಂತ ಹೇಳಿದೆ. ಯಾಕೆ ಅವಳನ್ನು

ಅನ್ನುತ್ತೀಯೆ'' ಎಂದರು. ಮುದುಕಿ ''ಸರಿ, ಇಷ್ಟು ದಿನವೂ ಗಂಡನನ್ನ ಮರುಳು ಮಾಡಿದ್ದಳು. ಈಗ ನಿಮ್ಮನ್ನೂ ಮರುಳು ಮಾಡಿದ್ದಾಳೇನೋ. ಇದಕ್ಕೇನಾಗಬೇಕು. ಸಂಸಾರ ಒಪ್ಪವಾಗಿ ನೋಡಿಕೊಳ್ಳುವವರಿಗಲ್ಲವೆ ತಿಳಿಯುವುದು'' ಎಂದರು. ಈ ಹಿಂದೆ ಒಂದೆರಡು ಸಲ ಶಾಸ್ತ್ರಿಗಳು ಏನಾದರೂ ಬೇಕು ಎಂದಾಗ, ತಾಯಿ ಇಲ್ಲ ಎಂದದ್ದನ್ನು ಸುಬ್ಬಣ್ಣನು ನೋಡಿದ್ದನು. ಶಾಸ್ತ್ರಿಗಳು ಕೇಳಿದಾಗ ಇಲ್ಲವಾದರೂ ಅದೇ ದಿನ ಅಕ್ಕಂದಿರಿಗೆ ಅದು ಸಿಕ್ಕುತ್ತಿತ್ತು. ಈ ದಿನ ತಾಯಿ ಅಕ್ಕನಿಗೆ ದೊಡ್ಡ ಬಟ್ಟಲ ತುಂಬ ತುಪ್ಪ ಕೊಟ್ಟು ತಂದೆಗೆ ಒಂದೆರಡು ಸಂಡಿಗೆ ಕರಿದದ್ದಕ್ಕೆ ಅಡ್ಡಿಮಾಡುತ್ತಿರುವುದನ್ನು ನೋಡಿ ಸುಬ್ಬಣ್ಣನಿಗೆ ಕೋಪಬಂತು. ಉಳಿದ ಕೋಪದ ಕಾರಣವನ್ನು ಮೊದಲೇ ಹೇಳಿದೆ. ಎಲ್ಲಾ ಸೇರಿ ಅವನಿಗೆ ತಡೆಯಲಾರದ ಹಾಗಾಯಿತು. ಅಮ್ಮನನ್ನು ''ಏನಮ್ಮ ಇದು, ಸುಮ್ಮನೆ ಮಾತು. ಅಕ್ಕನಿಗೆ ಒಂದು ಬಟ್ಟಲು ತುಪ್ಪ ಕೊಟ್ಟೆ ಮಧ್ಯಾಹ್ನ. ಈಗ ಅಪ್ಪನಿಗೆ ಎರಡು ಸಂಡಿಗೆ ಕರಿಯುವುದಕ್ಕೆ ತುಪ್ಪ ಇಲ್ಲವೆ'' ಎಂದನು. ಅವರು ''ಹೌದಪ್ಪ, ಇಷ್ಟು ದಿನ ನೀನೂ ನಿನ್ನ ಹೆಂಡತಿ ಮಾತ್ರ ಸೇರಿಕೊಂಡು ನನ್ನ ಪ್ರಾಣ ತೆಗೀತಿದ್ದಿರಿ. ಈಗ ಅವರ ಮನಸ್ಸನ್ನು ಕೆಡಿಸಿ. ಇರಿ ಅಪ್ಪಾ, ನೀವು ಸುಖವಾಗಿರಿ. ನಾನು ನನ್ನ ಮಗಳ ಮನೆಗೇ ಹೋಗುತ್ತೇನೆ'' ಎಂದರು. ಸುಬ್ಬಣ್ಣ ''ನಾನು ನಿನ್ನನ್ನ ಮಗಳ ಮನೆಗೆ ಹೋಗು ಎಂದೆನೆ?'' ಎಂದನು. ಅವರು ''ಇನ್ನು ಅನ್ನಬೇಕೆ ಬೇರೆ? ಒಪ್ಪವಾಗಿ ಸಂಸಾರ ಮಾಡೆ ಎಂತ ಸೊಸೆಗೆ ಹೇಳಿದರೆ ಅವಳನ್ನು ಅನುಸರಿಸಿಕೊಂಡು ನೀನು, ಅಮ್ಮ ಅಕ್ಕನಿಗೆ ತುಪ್ಪ ಕೊಟ್ಟಳು ಎಂತ ಚಾಡಿ ಹೇಳುತ್ತೀಯಲ್ಲಾ ಅಪ್ಪನಿಗೆ; ನಾನೇನು ಈ ಮನೇಲಿ ಇರಬೇಕೆ, ಹೋಗಬೇಕೇ? ಮುವ್ವತ್ತು ವರ್ಷ ಸಂಸಾರಮಾಡಿ ಹೆಣ್ಣುಮಗು ಬಂದರೆ ಒಂದಿಷ್ಟು ತುಪ್ಪ ಕೊಡೋಕೆ ನನಗೆ ಅಧಿಕಾರವಿಲ್ಲವೇ'' ಎಂತ ಕೂಗಿದರು. ಸುಬ್ಬಣ್ಣನೂ ರೇಗಿ ಕೂಗಬೇಕು. ಲಲಿತಮ್ಮ ಆ ಕಡೆ ಏನೋ ಬಂದ ಹಾಗೆ ಬಂದು, ಹೋಗಲಿ, ಸುಮ್ಮನಿರಬಾರದೇ ಎಂದು ಮೆಲ್ಲಗೆ ಹೇಳಿದಳು. ಸುಬ್ಬಣ್ಣ ಬಾಯಿಮುಚ್ಚಿಕೊಂಡನು. ಯಜಮಾನಿ ಇದನ್ನ ನೋಡಿದರು. ನೋಡಿ ''ಆಹಾ, ಚೆನ್ನಾಯಿತು ಚೆನ್ನಾಯಿತು. ನನ್ನೆದುರಿಗೇ ಬಂದು ಗಂಡನಿಗೆ ಹೀಗೆ ಅನ್ನು, ಹಾಗೆ ಅನ್ನು ಎಂತ ಹೇಳಿ ಕೊಡುತ್ತಾಳಲ್ಲ. ಬಹಳ ಚೆನ್ನಾಯಿತು'' ಎಂದರು. ಸುಬ್ಬಣ್ಣ ಇನ್ನು ಇಲ್ಲಿದ್ದರೆ ಬಹಳ ಜಗಳವಾಗುತ್ತೆ ಎಂತ ಎದ್ದು ಹೊರಟು ಹೋದನು.

ಹೀಗೆ ಸಂಸಾರವು ಬರಬರುತ್ತಾ ಬಹಳ ಕಷ್ಟಕ್ಕೆ ಬಂತು. ಸುಬ್ಬಣ್ಣ ಸಂಗೀತದಲ್ಲಿ ತಕ್ಕಮಟ್ಟಿಗೆ ಪಂಡಿತನೇ ಆದನು. ಆದರೆ ಸಂಗೀತಗಾರರಲ್ಲಿ ಕೆಲವರು ಅವನಿಗೆ ಆಗದವರು. ಅವನು ಕಛೇರಿಗಳಲ್ಲಿ ಹಾಡುವುದಕ್ಕೆ ಇನ್ನೂ ಹಿಂತೆಗೆಯುತ್ತಿದ್ದನು. ಆದದ್ದರಿಂದ ಸಂಪಾದನೆಯಿಲ್ಲ. ಇಷ್ಟರಲ್ಲೇ ಕಛೇರಿಗಳಲ್ಲಿ ಹಾಡಬೇಕೆಂದು ಮನಸ್ಸು ಮಾಡಿಕೊಂಡನು. ಸೂಳೆಯರಿಗೆ ಪಾಠ ಹೇಳುವುದಾದರೆ ಅವರು ಹಣ ಕೊಡುವುದಕ್ಕೆ ಸಿದ್ಧವಾಗಿದ್ದರು. ಆದರೆ ಅದು ನೀಚಾನ್ನ. ತಂದೆಯ ಪರಿಶುದ್ಧವಾದ ಜೀವನಕ್ಕೆ ಅವನು ಇಂಥ ಕಲುಷಿತವಾದ ಸಂಪಾದನೆಯನ್ನು ತಂದು ಸೇರಿಸಲೆ ಎಂದು ಸಮ್ಮತಿಸಲಿಲ್ಲ. ಹೀಗೆ ಇರುತ್ತಿರುವಲ್ಲಿ ಒಬ್ಬ ಅಕ್ಕನೂ ಅವಳ ಮಕ್ಕಳೂ ಮನೆಗೆ ಬಂದರು. ಸಂಸಾರ ನಡೆಯುವುದೇ ಕಷ್ಟ. ಅದರಲ್ಲಿ ಇದು ಬೇರೆ. ಸುಬ್ಬಣ್ಣನು ಕಂಡ ಹಾಗೆ ಅವರ ತಾಯಿ ತನ್ನ ಮಗಳ ಮಕ್ಕಳಿಗೆ ಹೆಚ್ಚಾಗಿ ತುಪ್ಪಹಾಕುವರು; ಮಗನ ಮಗನಿಗೆ ಕಡಿಮೆ ಹಾಕುವರು. ಆದರೆ ಸುಬ್ಬಣ್ಣ ಸುಮ್ಮನಿರುವನು. ಮಗಳ ಮಕ್ಕಳಿಗೆ ಮೊಸರು. ಮಗನ ಮಗನಿಗೆ ನೀರುಮಜ್ಜಿಗೆ. ಮಗನೊಡನೆ ಜಗಳವಾಡೋಣ ಎಂದಲ್ಲ, ಅವರು ಹೀಗೆ ಮಾಡುತ್ತಿದ್ದುದು. ಮೊಮ್ಮಗನ ಮೇಲೆ ಆ ಮೊಮ್ಮಕ್ಕಳ ಮೇಲೆ ಹೇಗೋ ಹಾಗೆಯೇ ಪ್ರೀತಿಯೂ ಇತ್ತು. ಆದರೆ, ಇವರು ನನ್ನನ್ನು ಬೇರೆ ಎನ್ನುತ್ತಾರಲ್ಲಾ, ಅವನನ್ನು ಇವರೇ ಸಾಕಿಕೊಳ್ಳಲಿ ಎಂದು ಅವರದು ಒಂದು ಹಠ. ತಿಳಿಯದ ಹೆಂಗಸು. ಆದರೆ ಈ ಸಮಾಧಾನವನ್ನು ಸುಬ್ಬಣ್ಣನಿಗೆ ಹೇಳುವವರಿರಲಿಲ್ಲ. ಒಂದೆರಡು ಸಲ ಲಲಿತ ಗಂಡನಿಗೆ ಸಮಾಧಾನ ಹೇಳುವುದಕ್ಕೆ ನೋಡಿದಳು. ಅವನು ಅವಳ ಮೇಲೆ ಕೋಪಮಾಡಿದನು. ಏನು, ನಮ್ಮಮ್ಮ ಹೇಳಿದಹಾಗೆ ನನ್ನ ಮೇಲೆ ದೊರೆತನ ಮಾಡುವುದಕ್ಕೆ ಬರುತ್ತೀ? ಎಂದನು. ಅವಳು ಏನು ಹೇಳುವುದು? ದೇವರೇ ಇವರಿಗೆ ಈ ಕೋಪ ಹೋಗಲಿ ಎಂದು ಪ್ರಾರ್ಥಿಸಿ ಸುಮ್ಮನಾದಳು. ತಾಯಿಯ ಮಗನ ಮನಸ್ಸು ಬಹಳ ದೂರವಾಗುತ್ತಾ ಬಂತು.

ಸಂಸಾರದ ವರಮಾನದಲ್ಲಿ, ಅತ್ತೆ ಸೊಸೆಯರು ಅರಸುಮಕ್ಕಳ ಮನೆಗಳಿಗೆ ಹಬ್ಬ ಹುಣ್ಣಿಮೆಯಲ್ಲಿ ಹೋಗಿ ತರುತ್ತಿದ್ದ ಬಾಗಿನಗಳೂ ಸೇರಿದ್ದುವು. ಸುಬ್ಬಣ್ಣನಿಗೆ ಇದು ಸರಿಹೋಗುತ್ತಿರಲಿಲ್ಲ. ಹೆಂಗಸರು ಇನ್ನೊಬ್ಬರ ಮನೆಗೆ ಹೋಗುವುದು ತಪ್ಪುಎಂದಲ್ಲ. ಅವರು ಸಂಪಾದಿಸಿ ತಂದದ್ದನ್ನು ತಾನು ತಿನ್ನುವುದಾಗಿದೆಯಲ್ಲಾ ಎಂದು ಮಾತ್ರ ಅವನಿಗೆ ಅಸಮಾಧಾನ. ಒಂದುಸಲ ಅವನು ಮನೆಗೆ ಬಂದಾಗ ತಾಯಿ ಬಹಳ ಕೋಪಿಸಿಕೊಂಡಿದ್ದರು. ಲಲಿತಾ ಒಂದುಕಡೆ ನಿಂತು ಅಳುತ್ತಿದ್ದಳು. ಬಂದು ಅವನು ಏನಾಯಿತು ಎಂದನು. ತಾಯಿ "ನೋಡಪ್ಪಾ,

ಎಂತಾ ದಿಟ್ಟಕ್ಕೆ ಇಳಿಯಿತು. ಆ ಅರಸಿನವರ ಮನೆಗೆ ಹೋಗಿ ಬಾಗಿನ ತಾ ಎಂತ ಹೇಳಿದರೆ ಹೋಗೋದಿಲ್ಲ ಎಂತಾಳೆ. ಇವಳು ರಾಣಿ; ನಾನು ಹೋಗಿ ಬೇಡಿ ತರಬಹುದು; ಇವಳಿಗೆ ಮಾನಕ್ಕೆ ಕಡಿಮೆ'' ಎಂದರು. ಆ ಅರಸಿನವರ ಮನೆಯಲ್ಲಿ ಐದಾರು ದಿನದಿಂದ ಏನೋ ಪೂಜೆ ನಡೆಯು ತ್ತಿತ್ತು. ಅದಕ್ಕೆ ದಿನವೂ ಹೆಂಡತಿಯೂ ಹೋಗಿ ಬರುತ್ತಿದ್ದಳೆಂಬು ದನ್ನು ಸುಬ್ಬಣ್ಣ ಬಲ್ಲನು. ಇಂದು ಯಾಕೆ ಹೋಗಲಿಲ್ಲವೋ ಅವನಿಗೆ ತಿಳಿಯಲಿಲ್ಲ. ಅವನು ಹೆಂಡತಿಯನ್ನು ಯಾಕೆ ಹೋಗಲಿಲ್ಲ ಎಂದು ಕೇಳಿದನು. ಅವಳು ಯಾಕೋ ಹೋಗಲಿಲ್ಲ ಎಂದಳು. ಆ ಹೊತ್ತಿಗೆ ಶಾಸ್ತ್ರಿಗಳು ಬಂದರು. ನಡೆದದ್ದನ್ನೆಲ್ಲಾ ಕೇಳಿ ಸೊಸೆಗೆ ನೆರವಾಗಿ, ಹೋಗದಿದ್ದರೆ ಇಲ್ಲ ಅದಕ್ಕೆ ಎಷ್ಟು ದಂಡನೆ ಎಂದರು. ಸುಬ್ಬಣ್ಣನಿಗೆ ಕೋಪ ತಡೆಯಲಿಲ್ಲ. ಹೆಂಡತಿಯನ್ನು ಇಲ್ಲಿ ಬಾ ಎಂದು ಕರೆದು ಕೊಟಡಿಯೊಳಕ್ಕೆ ಹೋದನು. ಅವನು ತನ್ನನ್ನು ಬಹಳ ಬಯ್ಯುತ್ತಾನೆ, ಹೊಡೆಯುತ್ತಾನೋ ಏನೋ ಎಂದು ಲಲಿತಾ ಬಲ್ಲಳು. ಆದರೂ ಹೋದಳು. ಅವಳಿಗೆ ಅವರ ತಾಯಿ, ''ಸಾಯಲಿ ಬದುಕಲಿ ದೇವ ರನ್ನ ಬಿಟ್ಟು ಇಲ್ಲ. ಹೊಡೀಲಿ ಬಡೀಲಿ ಗಂಡನ್ನ ಬಿಟ್ಟು ಇಲ್ಲ.'' ಎಂತ ಒಂದುಸಲ ಹೇಳಿದ್ದರು. ಕೊಠಡಿಗೆ ಹೋದಮೇಲೆ ಸುಬ್ಬಣ್ಣನು ಅವ ಳನ್ನು ಬಾಗಿನಕ್ಕೆ ಯಾಕೆ ಹೋಗಲಿಲ್ಲ ಎಂತ ಕೇಳಿದನು. ಅವಳು ನಾನು ಹೇಳುವುದಿಲ್ಲವೆಂದಳು. ನೀನು ಹೇಳಲೇಬೇಕು ಎಂದು ಅವನು ಹಠಮಾಡಿದನು. ಅವಳು ಹೇಳಲಿಲ್ಲ. ಅವನು ಅವಳನ್ನು ನೀನು ಬಹಳ ಕೆಟ್ಟ ಹೆಂಗಸು ಎಷ್ಟು ಅಹಂಕಾರ ನಿನ್ನದು ಎಂದು ಚೆನ್ನಾಗಿ ಹೊಡೆದನು. ಮಗನು ಸೊಸೆಯನ್ನು ಹೊಡೆಯುವುದನ್ನು ಕೇಳಿ ಶಾಸ್ತ್ರಿಗಳು ಯಜ ಮಾನಿಗೆ ''ನೋಡಿದೆಯೋ ನೀನು ಮಾಡಿದ್ದು ಆ ತಿಳಿಯದ ಹುಡುಗೀನ ಹೊಡೆಯಿಸಿದೆ'' ಎಂದರು. ಆಕೆ ''ಹೊಡೀಲಿ ಬಿಡಿ. ಬುದ್ಧಿ ಬರಲಿ. ನಾನು ಹೋಗಿ ಬಾಗಿನ ತರಬಹುದಂತೆ ಇವಳು ಯಾಕೆ ಹೋಗಬಾರದು?'' ಎಂದರು. ''ಯಾಕೆ ಬರೋದಿಲ್ಲ ಎಂದಳು'' ಎಂದು ಶಾಸ್ತ್ರಿಗಳು ಕೇಳಿ ದರು. ಯಜಮಾನಿಯು ''ನನ್ನ ಜತೇಲೆ ಬರುತ್ತೇನೆಂದಳು. ಬೇಡ, ನೀನು ಆಮೇಲೆ ಹೋಗುವೆಯಂತೆ ನಾನು ಮೊದಲು ಹೋಗಿಬರುತ್ತೇನೆ ಎಂತ ಹೊರಟು ಹೋದೆ. ಆಮೇಲೆ ಹೋಗು ಎಂತ ಹೇಳಿದರೆ ಹೋಗೋದಿಲ್ಲ ಎಂದಳು. ಮೊದಲು ಬರುತ್ತೇನೆ ಎಂದಾಗ ಬೇಡ ಎಂದೆ. ಅದಕ್ಕೆ ಹಠ,'' ಎಂದರು. ಶಾಸ್ತ್ರಿಗಳು ಅದಕ್ಕೆ ''ಒಬ್ಬಳೇ ಹೋಗೋದು ಹೇಗೆಂದು ಸಂಕೋಚವಿರಬೇಕು'' ಎಂದರು. ಆಕೆ ''ನಾಲ್ಕುದಿನ ತಾನೇ ಹೋಗುತಾ ಇರಲಿಲ್ಲವೇ, ಯಾತರ ಸಂಕೋಚ. ನಿನ್ನೇನೂ ಹೀಗೇ ಎಂದಳು; ಆಮೇಲೆ ಹೋದಳು. ಈ ಹೊತ್ತು ಹಟಾಮಾಡಿಬಿಟ್ಟಳು'' ಎಂದರು. ಶಾಸ್ತ್ರಿಗಳು ''ಏನೂ ತಿಳಿಯದ ಹುಡುಗಿ, ಇವನು ಸುಮ್ಮನೆ

ಹೊಡೆಯುತ್ತಾನೆ'' ಎಂದರು. ಯಜಮಾನಿ ''ಬಿಡಿ ಬಿಡಿ, ಇದೆಲ್ಲ ವೇಷ. ಜಗಳ ಆಡಿದ ಹಾಗೆ ಆಡುತ್ತಾರೆ. ಅವನೇನು ನಿಜವಾಗಿಯೂ ಹೊಡೆಯುತ್ತಾನೆಯೇ'' ಎಂದು ಮಾತನ್ನು ಮುಗಿಸಿದರು.

ಸುಬ್ಬಣ್ಣ ಹೆಂಡತಿಯನ್ನು ಹೊಡೆದದ್ದು ನಿಜವೆಂದು ಯಜಮಾನಿ ನಂಬದೇ ಇದ್ದರೂ ಲಲಿತಮ್ಮನಿಗೆ ಮಾತ್ರ ಆ ದಿನ ಬಹಳ ಪೆಟ್ಟುಬಿತ್ತು. ಅಮ್ಮನೂ ಹೆಂಡತಿಯೂ ಬಾಗಿನಕ್ಕೆ ಹೋಗದೇ ಇರುವುದೇ ಸುಬ್ಬಣ್ಣನಿಗೆ ಸಮ್ಮತವಾದರೂ, ಆ ದಿನ ಲಲಿತಾ ಕಾರಣವನ್ನು ಹೇಳದೇ ಹಠ ಮಾಡಿದ್ದರಿಂದ ಅವನು ಅವಳನ್ನು ಹೊಡೆದನು. ಎಷ್ಟು ಹೊಡೆದರೂ ಲಲಿತಮ್ಮ ತಾನು ಏಕೆ ಹೋಗಲಿಲ್ಲವೆಂಬ ಕಾರಣವನ್ನು ಹೇಳಲಿಲ್ಲ. ಬಹಳ ದಿನಗಳ ಮೇಲೆ ಸುಬ್ಬಣ್ಣನಿಗೆ ಹೇಳಿದಳು. ಅವಳು ಅರಸು ಮಕ್ಕಳ ಮನೆಗಳಿಗೆ ಆಗಾಗ ಹೋಗಿ ಬರುತ್ತಿದ್ದಳು. ಎಲ್ಲರೂ ದೊಡ್ಡ ಮನುಷ್ಯರು, ಸಂಪ್ರದಾಯವಂತರು; ಪಾಪಭೀರುಗಳು, ಧರ್ಮಜ್ಞರು. ಅದರಂತೆ ಈ ಒಂದು ಮನೆಗೂ ಹೋದಳು. ಮೂರು ದಿನ ಹೋಗಿ ಬಂದಳು. ನಾಲ್ಕನೆಯ ದಿನ ಬಾಗಿನ ತೆಗೆದುಕೊಂಡು ಬರುತ್ತಿರ ಬೇಕಾದರೆ ಹಜಾರದ ಕೊಠಡಿಯ ಬಳಿ ಯಾವನೋ ನಿಂತು ಒಂದೇ ದೃಷ್ಟಿಯಿಂದ ಇವಳನ್ನು ನೋಡುತ್ತಿದ್ದನು. ಸರಿಯಾದ ಹೆಂಗಸಿಗೆ ಇಂತಹ ದೃಷ್ಟಿ ಸಿಡಿಲ ಬಡಿತದಂತೆ ತೋರುತ್ತದೆ. ಅಯ್ಯೋ ಏನು ಬಂತು ಎಂದು ಅವಳು ಅವಸರವಾಗಿ ಹೊರಟು ಮನೆಗೆ ಬಂದಳು. ಮಾರನೆಯ ದಿನ ಅತ್ತೆಯ ಜತೆಯಲ್ಲಿಯೇ ಬರುತ್ತೇನೆಂದು ಹೇಳಿದಳು. ಆಕೆ ಬೇಡ ವೆಂದರು. ಆಮೇಲೆ ಲಲಿತಮ್ಮ ಅರೆಮನಸ್ಸಿನಿಂದ ಒಬ್ಬಳೇ ಹೋದಳು. ಆ ಹೊತ್ತು ದಿನವೂ ಬರುವ ಬಾಗಿಲು ಹಾಕಿತ್ತು. ಪಕ್ಕದ ಕೊಠಡಿಗಳಲ್ಲಿ ಹಾಯ್ದು ಹೋಗಬೇಕಾಗಿ ಬಂತು. ಕೊನೆಯ ಕೊಠಡಿಯಲ್ಲಿ ಅದೇ ಆ ಹಿಂದಿನ ದಿನದ ಮನುಷ್ಯನು ನಿಂತು ಇವಳನ್ನು ದುರುದುರನೆ ನೋಡು ತ್ತಿದ್ದನು. ಅವನು ಯಾರೆಂದು ಲಲಿತೆಗೆ ತಿಳಿಯದು. ಮಾರನೆಯ ದಿನ ಅತ್ತೆಯ ಜತೆಗೆ ಹೋಗುವುದಕ್ಕೆ ಆಗದೆ ಹೋಗಲು ಅವಳು ಒಬ್ಬಳೇ ಹೋಗುವುದಕ್ಕೆ ಹೆದರಿ ನಿಂತುಬಿಟ್ಟಳು. ''ಇದು ಸಣ್ಣಮಾತು. ಇದನ್ನು ಅತ್ತೆಗಾಗಲಿ ಗಂಡನಿಗಾಗಲಿ ಹೇಗೆ ಹೇಳುವುದು? ಇಷ್ಟಕ್ಕೆ ಅವನು ಯಾವ ದುಷ್ಟನೋ ಏನೋ. ಈ ಮಾತನ್ನ ಅರಸಿನವರ ಮನೆಯಲ್ಲಿ ಹೇಳುವುದು ಬೇರೆ. ಅಲ್ಲಿ ಬೇರೆ ಪಂಚಾಯಿತಿ. ಇದೆಲ್ಲ ಯಾಕೆ? ಒಂದು ಬಾಗಿನಕ್ಕಲ್ಲವೆ? ಅದೇ ಬೇಡ. ಹಟಮಾಡುವುದಕ್ಕೆ ಬೈಗಳು ಬೀಳುತ್ತವೆ. ಬಿದ್ದರೆ ಬೀಳಲಿ'' ಎಂದು ಸುಮ್ಮನಿದ್ದಳು.

ಇದಾದ ಕೊಂಚ ದಿನದ ಮೇಲೆ ಒಂದು ಸಂಜೆ ಲಲಿತಮ್ಮ ಮಗು ವನ್ನು ಹಾಸಿಗೆಯಲ್ಲಿ ಮಲಗಿಸಿ ತಟ್ಟುತ್ತ ಬಹು ಸಪ್ಪೆಯ ಮುಖವನ್ನು

ಹಾಕಿಕೊಂಡು ಕುಳಿತಿದ್ದಳು. ಸುಬ್ಬಣ್ಣ ಬಂದು ಏಕೆ ಹೀಗಿದ್ದೀಯೆ ಎಂದನು. ಅವಳು ಏನೂ ಇಲ್ಲ ಎಂದಳು. ಸುಬ್ಬಣ್ಣ ಆಗ ಸುಮ್ಮನಾಗಿ ಅವಳು ರಾತ್ರಿ ಮಲಗಿಕೊಳ್ಳುವುದಕ್ಕೆ ಬಂದಾಗ ಈ ಹೊತ್ತು ಏನಾಯಿತು ಎಂದು ಕೇಳಿದನು. ಲಲಿತ—"ತಿಳಿದೇ ಇದೆ ಅವರಿಗೆ ಮೊಸರು ಹಾಕಿದರು, ಇವನಿಗೆ ಮಜ್ಜಿಗೆ ಹಾಕಿದರು" ಎಂದಳು. ಸುಬ್ಬಣ್ಣನು ಅದಕ್ಕೆ "ತಿಳಿದೇ ಇದ್ದರೆ ನೀನೇನು ಯೋಚನೆ ಮಾಡುತ್ತಿದ್ದಿ" ಎಂದನು. ಲಲಿತ "ಇದೂ ಇವರ ಮೊಮ್ಮಗು ಅಲ್ಲವೆ? ಇದಕ್ಕೂ ಮೊಸರು ಹಾಕುವ ಬುದ್ಧಿಯನ್ನು ಇವರಿಗೆ ಕೊಡು ದೇವರೆ ಎಂದುಕೊಂಡೆ" ಎಂದಳು. ಸುಬ್ಬಣ್ಣ "ಇದಿಷ್ಟಕ್ಕೇನೇ ಮುಖ ಅಷ್ಟು ಸಪ್ಪೆಯಾಗಿತ್ತೆ" ಎಂದನು. ಲಲಿತಮ್ಮ ಸ್ವಲ್ಪ ವ್ಯಸನದಿಂದ ನಕ್ಕು "ಇಲ್ಲ. ಈ ಮಗುವನ್ನು ಸಾಕುವುದೇ ನನಗೆ ಕಷ್ಟವಾಗಿರುವಾಗ ನನಗೆ ತಿರುಗಿ ಮೂರು ತಿಂಗಳಾಯಿತಲ್ಲಾ" ಎಂದು ಯೋಚಿಸುತ್ತಿದ್ದೆ ಎಂದಳು. ಸುಬ್ಬಣ್ಣ ಸ್ವಲ್ಪ ಹೊತ್ತು ಯೋಚಿಸಿ ಅರ್ಧಗಂಟೆ ಎಲ್ಲಿಯೋ ಹೋಗಿ ಹಿಂದಕ್ಕೆ ಬಂದು ಹೆಂಡತಿಗೆ—ನಿನಗೆ ಬೇಕಾದ ಸೀರೆ ಬಟ್ಟೆ ಮಗುವಿನ ಬಟ್ಟೆ ಎಲ್ಲ ಗಂಟುಕಟ್ಟಿಕೊ ಎಂದನು. ಲಲಿತ ಎಲ್ಲಿಗೆ ಹೋಗುವುದಕ್ಕೆ? ಎಂದಳು. ಸುಬ್ಬಣ್ಣ "ನನ್ನನ್ನು ಮಾತನಾಡಿಸಬೇಡ, ಹೇಳಿದ ಹಾಗೆ ಕೇಳು" ಎಂದನು. ಗಂಡನಿಗೆ ಕೋಪ ಬಂದಿರುವುದೆಂದು ಲಲಿತ ತಿಳಿದುಕೊಂಡಳು. ಇನ್ನು ಮಾತಾಡಿ ಉಪಯೋಗವಿಲ್ಲ. ಮನೆಯೊಳಕ್ಕೆ ಹೋಗಿ ತನ್ನ ಸೀರೆಯನ್ನೂ ಮಗುವಿನ ಬಟ್ಟೆಯನ್ನೂ ಒಂದೆರಡನ್ನು ತೆಗೆದುಕೊಂಡು ಬಂದು ಒಂದು ಸಣ್ಣ ಗಂಟುಮಾಡಿದಳು. ಇದಾದ ಮೇಲೆ ಸುಬ್ಬಣ್ಣನೂ ತನ್ನ ಬಟ್ಟೆಗಳನ್ನು ಗಂಟುಕಟ್ಟಿ ಆ ಮೇಲೆ ಮಲಗಿಕೊಂಡನು. ಲಲಿತಮ್ಮ ಗಂಟನ್ನು ಒಂದು ಕಡೆಯಿಟ್ಟು ತಾನೂ ಮಲಗಿಕೊಂಡಳು. ಒಂದೆರಡು ಗಳಿಗೆಯಾದಮೇಲೆ ಸುಬ್ಬಣ್ಣನು ಹೆಂಡತಿಯನ್ನು ಎಬ್ಬಿಸಿದನು. ತಾನು ತಂದೆ ಮಲಗಿದ್ದ ಕಡೆ ಹೋಗಿ ಹಿಂದಕ್ಕೆ ಬಂದು ಹೆಂಡತಿಗೆ ನಿನ್ನ ಇಷ್ಟದೇವತೆಯನ್ನು ನೆನೆದುಕೊ ಹೊರಡೋಣ ಎಂದನು. ಲಲಿತ–ಎಲ್ಲಿಗೆ ಎಂದು ಕೇಳುವುದಕ್ಕಿಲ್ಲ— "ಬಹಳ ದಿನವಾಗುತ್ತೆಯೆ" ಎಂದಳು. ಸುಬ್ಬಣ್ಣ ಸುಮ್ಮನೆ ಮಾತನಾಡಬೇಡ ಎಂದು ಗದರಿಸಿ ಒಂದು ಮೂಟೆಯನ್ನು ತೆಗೆದುಕೊಂಡು ಮಗುವನ್ನು ಹೆಗಲಮೇಲೆ ಕೂರಿಸಿಕೊಂಡು ಬಾಗಿಲಕಡೆ ಹೊರಟನು. ಲಲಿತ ಇನ್ನೊಂದು ಮೂಟೆ ತೆಗೆದುಕೊಂಡು ಹಿಂದೆ ಹೊರಟಳು. ಬೀದಿಯ ಬಾಗಿಲು ತೆಗೆದು ಹೊರಕ್ಕೆ ಬಂದು ಅದನ್ನು ಸದ್ದಿಲ್ಲದೆ ಮುಂದಕ್ಕೆ ಎಳೆದುಕೊಂಡು ಇಬ್ಬರೂ ಶ್ರೀರಂಗಪಟ್ಟಣದ ಕಡೆಗೆ ನಡೆದರು.

ಬೆಂಗಳೂರು ಪ್ರೆಸ್.

ದೇವರು ಎಲ್ಲಿದ್ದಾನೆ?

ನಮ್ಮೂರನ್ನು ನೋಡಿ ಏಳೆಂಟು ವರ್ಷಗಳಾಗಿದ್ದುವು. ಆದ್ದರಿಂದ ಬರುತ್ತಲೂ ಎಷ್ಟೋ ಸಂತೋಷವಾಯಿತು. ಏನು ಮಾಡುವುದು ಹೇಳಿ. ಸರ್ಕಾರಿಯ ನೌಕರಿಗೆ ಸೇರಿದಮೇಲೆ ಬೆಂಗಳೂರು ಮೈಸೂರಲ್ಲಿಯೇ ಕೆಲಸಮಾಡಿಕೊಡಿ, ಇಲ್ಲ ಹತ್ತಿರ ತುಮಕೂರಿಗಾದರೂ ಹಾಕಿ ಎಂದು ಅತ್ತೆಯಮನೆಯ ಅಳಿಯನ ಹಾಗೆ ಹಟಮಾಡುವುದಕ್ಕಾಗುವುದೋ? ಅವರಾದರೂ ಹಾಕಿಯಾರೇ? ಅದಕ್ಕೆಲ್ಲ ಪುಣ್ಯ ಮಾಡಿರಬೇಕು. ಇಲ್ಲ ಚೋಳಮಂಡಲದಲ್ಲಿ ಹುಟ್ಟಿ ಬೆಳೆದುಬಂದಿರಬೇಕು. "ನೀವೇ ನಿಮ್ಮ ದೇಶದ ಸೇವೆಮಾಡದಿದ್ದರೆ ಮತ್ತಾರು ಮಾಡುತ್ತಾರೆ?" ಎಂದು ನಮ್ಮನ್ನೆಲ್ಲ ಕೊಪ್ಪಕ್ಕೆ, ಸಾಗರಕ್ಕೆ, ಸಮುದ್ರಕ್ಕೆ ಕಳುಹಿಸಿಬಿಟ್ಟರು. ಬಲವಂತ ಮಾಘಸ್ನಾನದ ಪುಣ್ಯ ಬರುವಹಾಗೆ ಈ ಬಲವಂತ ದೇಶಾಭಿಮಾನದ ಕೀರ್ತಿಯೂ ಬಂತು.

ಹಳೆಯ ಪರಿಚಯಗಳನ್ನೆಲ್ಲ ಮಾತನಾಡಿಸಿಕೊಂಡು ಮನೆಗೆ ಬರುತ್ತಿದ್ದೆ. ದೂರದಲ್ಲಿಯೇ ಗೋಪಾಲರಾಯನ ಮನೆ ಕಾಣಿಸಿತು. ಒಡನೆಯೇ ನನ್ನ ದೃಷ್ಟಿಯು ಆ ಗುಡಿಸಲಿನ ಕಡೆಗೆ ಹೋಗಬೇಕೇ? ಅಯ್ಯೋ ಆ ಗುಡಿಸಲು ಎಲ್ಲಿದೆ? ಮೇಲು ಚಾವಣಿಯೆಲ್ಲ ಮುರಿದು ಅಡಿಕೆಯ ಪಟ್ಟಿಗಳು ತೂಗಾಡುತ್ತಿದ್ದುವು. ಮುಂಭಾಗದಲ್ಲಿ ದ್ರಾಕ್ಷಿಯ ಚಪ್ಪರದ ಗುರ್ತು ಎಳ್ಳಷ್ಟೂ ಇಲ್ಲ; ತುಳಸಿಯ ಗಿಡಗಳಿಲ್ಲ. ಮಲ್ಲಿಗೆಯ ಹಂಬು ಮಾಯವಾಗಿದೆ. ಅಲ್ಲಲ್ಲಿ ಗೆದ್ದಲುಗೂಡಗಳು. ಬಾಗಿಲು ಮುರಿದು ತುಂಡುಗಳೂ ಹಲಗೆಗಳೂ ಅನ್ಯರ ಪಾಲಾಗಿದ್ದವು. ಆ ಕಥೆಯೆಲ್ಲ ಸ್ಮರಣೆಗೆ ಬಂದುಬಿಟ್ಟಿತು. ಒಂದುಕಡೆ ರಾಜಮ್ಮನವರು ಕೊರಗಿನಿಂದ ನರಳುತ್ತಿದ್ದ ಚಿತ್ರ. ಇನ್ನೊಂದುಕಡೆ ಆ ವಾಸುದೇವಯ್ಯನ ಚಿಕ್ಕಸಂಸಾರದ ಪರಿಣಾಮ. ಎಲ್ಲಾ ಸ್ಫುರಿಸಿತು.

ರಾಜಮ್ಮನವರು ಆ ದೊಡ್ಡಮನೆ ಗೋಪಾಲರಾಯರ ಹೆಂಡತಿ. ನಮ್ಮೂರಲ್ಲಿ ಆಕೆಯನ್ನು ನೋಡದವರೇ ಪಾಪಿಷ್ಠರು. ಶ್ರೀಮಂತರ ಮನೆಯ ಹುಡುಗಿಯಾದ್ದರಿಂದ ನಾವೆಲ್ಲ ಅವರನ್ನು ಯಾವಾಗಲೂ ರಾಜಮ್ಮನವರು ಎಂದು ಗೌರವವಾಗಿಯೇ ಹೇಳುತ್ತಿದ್ದೆವು. ಆಕೆಯಾದರೋ, ಎಂತಹ ಸರಳತೆ—ಎಂತಹ ಶಾಂತಿ—ಎಂತಹ ಗಾಂಭೀರ್ಯ! ಅವರೇನಾದರೂ ನಮ್ಮ ಮನೆಗಳಿಗೆ ಬಂದರೆ ಆ ದಿನವೆಲ್ಲ ನಮ್ಮ ಮನೆಯಲ್ಲಿ ಏನೋ ಸಂತೋಷ. ಮನೆಗೆ ಭಾಗ್ಯಲಕ್ಷ್ಮಿ ಬಂದಹಾಗೆ ಇರುತ್ತಿತ್ತು. ಅವರ ಹೊಟ್ಟೆ ತಣ್ಣಗಿರಲಿ, ಅವರು ಚಿರಕಾಲ ಸುಖವಾಗಿರಲಿ ಎಂದು ಹರಸುತ್ತಿದ್ದವರೇ ಹೊರತು ಒಂದು ಅಪಶಬ್ದವನ್ನೂ ಹೇಳಿದವರೇ ಇಲ್ಲ.

ಆ ಗುಡಿಸಲಿನಲ್ಲೇ ವಾಸುದೇವಯ್ಯ ಇದ್ದುದು. ಅವನು ಒಬ್ಬ ಉಪಾಧ್ಯಾಯ. ಸಂಬಳ ಇಪ್ಪತ್ತುರೂಪಾಯಿಗಳು. ಪ್ಲೇಗು ಬಂದ ಗಲಾಟೆಯಲ್ಲಿ ಅವನೂ ಅವನ ಹೆಂಡತಿ ಸೀತಮ್ಮನೂ ಸೇರಿ ಆ ಗುಡಿಸಲನ್ನು ಕಟ್ಟಿಕೊಂಡರು. ಎಂತಹ ಒಳ್ಳೆಯ ಮನುಷ್ಯ ಆತ! ಏನೋ ಸ್ವಲ್ಪ ವೈದ್ಯ ಬೇರೆ ಕಲಿತಿದ್ದ. ಅವನ ತಾತ ಮುತ್ತಾತ ಒಳ್ಳೆಯ ವೈದ್ಯರಂತೆ. ವಂಶಕ್ಕೆ ಬಂದದ್ದು ಏಕೆ ಬಿಡಬೇಕು—ಎಂದು ಹಿಂದಿನ ಕಾಲದ ಚೂರ್ಣಗಳನ್ನೂ ಮಾತ್ರೆಗಳನ್ನೂ ನಡೆಸಿಕೊಂಡೇ ಬಂದಿದ್ದ. ಇದರಿಂದ ಅವನಿಗೆ ಒಂದು ಕಾಸೂ ಹುಟ್ಟುತ್ತಿರಲಿಲ್ಲ. ಆತನು ಕೇಳುತ್ತಲೂ ಇರಲಿಲ್ಲ. ಅಯ್ಯೋ ಪಾಪ—ಬಡವ—ಎನ್ನುವ ಮಹಾ ಉದಾರಿಗಳೇ ಹೊರತು ಕನಿಕರವನ್ನು ಕಾಸಿನಲ್ಲಿ ತೋರಿಸಿದ ಪುಣ್ಯಾತ್ಮರೊಬ್ಬರೂ ಇರಲಿಲ್ಲ. ರಾತ್ರಿ ಹನ್ನೆರಡುಗಂಟೆ ಆಗಿರಲಿ, 'ವಾಸುದೇವಯ್ಯ' ಎಂದು ಒಂದುಬಾರಿ ಕೂಗಿದರೆ ಸಾಕು. "ಎದ್ದಿದೇನೆ, ಎದ್ದಿದೇನೆ, ಬಂದೆ" ಎಂದು ದೀಪಹಚ್ಚಿ ಹೊರಗೆ ಬಂದು ತನಗೆ ತೋಚಿದ ಔಷಧ ಕೊಟ್ಟು, ಬೇಕಾದರೆ ಮನೆಗೂ ಬಂದು ಹೋಗುತ್ತಿದ್ದ ಪ್ರಾಣಿ. ವೈದ್ಯ ಏನು ಬರುತ್ತಿತ್ತೋ ನನಗೆ ತಿಳಿಯದು—ಹಸ್ತಗುಣ ಚೆನ್ನಾಗಿತ್ತು. ಕಡೆಗೆ ಬಾಯಲ್ಲಿ 'ಹೀಗೆ ಮಾಡಿ' ಅಂದರೂ ಸಾಕು, ಗುಣವಾಗಿ ಹೋಗಬೇಕೇ!

ಒಂದುದಿನ ಬೆಳಿಗ್ಗೆ ವಾಸುದೇವಯ್ಯನು ಸ್ನಾನಕ್ಕೆ ಇಳಿದು ಹಂಡೆಯಲ್ಲಿ ಕೈಯಿಡಲು ನೀರು ಬಹಳ ಬಿಸಿಯಾಗಿತ್ತು. ಹತ್ತಿರ ತಣ್ಣೀರು ಇರಲಿಲ್ಲ. ಸೀತಮ್ಮನು ಅದನ್ನು ನೋಡಿ "ಸ್ವಲ್ಪ ತಾಳಿ ಒಂದು ಕೊಡ ನೀರನ್ನು ಬೇಗ ತರುವೆನು" ಎಂದು ಕೊಡವನ್ನು ಸೊಂಟಕ್ಕೆ ಹಾಕಿಕೊಂಡು ಹೊರಟುಬಂದಳು. "ನೀರನ್ನು ಬೇಗ ತರಬೇಕಲ್ಲ--ಗಂಡನು ಬಚ್ಚಲಿನಲ್ಲಿ ಕಾದಿರುವನಲ್ಲ"—ಎಂದು ಆತುರದಿಂದ ಕೊಡವನ್ನು ಕಟ್ಟುತ್ತಿದ್ದಳು. ನಮ್ಮೂರಿನಲ್ಲಿ ನೀರಿನ ಕಷ್ಟ ಏನು ಹೇಳುತ್ತೀರಿ. ಬೆಂಗಳೂರು ಮೈಸೂರುಗಳಲ್ಲಿ ಇರುವ ಹಾಗೆ, ಬಾ ಎಂದರೆ ಬರುವುದು, ನಿಲ್ಲು ಎಂದರೆ ನಿಲ್ಲುವುದು, ಇಂಥ ನೀರಿನ ನಲ್ಲಿಗಳೇ—ಒಂದೂ ಇಲ್ಲ. ಕೆಲವರ ಮನೆಗಳಲ್ಲಿ ಬಾವಿಗಳಿದ್ದರೂ ನೀರು ಬತ್ತಿಹೋಗಿತ್ತು; ಮತ್ತೆ ಕೆಲವರು ಬಡವರಾದ್ದರಿಂದ ಬಾವಿಗಳನ್ನು ತೋಡಿಯೇ ಇರಲಿಲ್ಲ. ಎಲ್ಲಿ ನೀರು ಸಿಗುತ್ತಿತ್ತೋ ಅಲ್ಲಿಗೆ ಹೋಗಿ ತರುತ್ತಿದ್ದರು. ಸೀತಮ್ಮನ ಗುಡಿಸಲ ಹಿಂದೆ ಐವತ್ತುಮಾರು ದೂರದಲ್ಲಿ ಗೋಪಾಲರಾಯರ ಮನೆಯ ಬಾವಿ. ತನ್ನ ಮನೆಗೆ ಬೇಕಾಗುವ ನೀರನ್ನೆಲ್ಲ ಅಲ್ಲಿಂದಲೇ ಸೀತಮ್ಮನು ತಂದುಕೊಳ್ಳುತ್ತಿದ್ದಳು.

ಕೊಡವನ್ನು ಸೇದಿ ಕಂಕುಳಲ್ಲಿಟ್ಟುಕೊಳ್ಳುವಾಗ ಸೀತಮ್ಮನು ತಿರುಗಿದಳು. ಬಹಳ ನಾಚಿಕೆಪಟ್ಟುಕೊಂಡು, ತಲೆಯನ್ನು ತಗ್ಗಿಸಿ ಇನ್ನೊಂದು ಕೈಯಿಂದ ಸರ್‍ರನೆ

ಸೆರಗನ್ನೆಳೆದುಕೊಂಡು "ಗಂಡಸರು ಹೀಗೂ ನಿಂತು ನೋಡುವುದುಂಟೇ! ಇದೇನು ಅನ್ಯಾಯ!" ಎಂದು ವ್ಯಥೆಯಿಂದ ಹೇಳಿಕೊಳ್ಳುತ್ತ ಹೆಜ್ಜೆಹಾಕಿದಳು. ಮರು ಕ್ಷಣದಲ್ಲಿಯೇ "ರಾಜಮ್ಮನವರ ಗಂಡ! ದೊಡ್ಡಮನುಷ್ಯರು, ಏನೋ ಆಕಸ್ಮಾತ್ತಾಗಿ ಅಲ್ಲಿದ್ದರೇನೋ" ಎಂದುಕೊಳ್ಳುತ್ತ ಮನೆಗೆ ಬಂದಳು.

ವಾಸುದೇವಯ್ಯ ಸ್ನಾನಮಾಡಿಕೊಂಡು ಹೊರಟುಹೋದ. ಸೀತಮ್ಮನು ಪುನಃ ನೀರಿಗೆ ಬರಬೇಕಾಯಿತು. ಬರುತ್ತಿರುವಾಗಲೇ ಹೆದರಿದ ಹುಲ್ಲೆಯು ಬೇಟೆಗಾರರ ಸುಳಿವನ್ನು ನೋಡುವಂತೆ ಗೋಪಾಲರಾಯನ ಮನೆಯ ಕಡೆಯೇ ನೋಡುತ್ತ ಮೆಲ್ಲ ಮೆಲ್ಲಗೆ ಬಂದಳು. ಕಿಟಕಿಯಲ್ಲಿ ಗೋಪಾಲರಾಯನಿರಲಿಲ್ಲ. ನೀರನ್ನು ತುಂಬಿಕೊಂಡು ಹೊರಟುಹೋಗಬೇಡವೇ? ಇನ್ನೊಂದುಬಾರಿ ನೋಡಿಬಿಡೋಣವೆಂದು ಮನಸ್ಸುಹೋಯಿತು. ಚಪಲಬುದ್ಧಿ. ಗೋಪಾಲರಾಯನು ತನ್ನ ವಜ್ರದ ಹತ್ತುಕಡಕುಗಳನ್ನು ಕಿವಿಯಲ್ಲಿಟ್ಟುಕೊಳ್ಳುತ್ತ ಕಿಟಿಕಿಯ ಬಳಿ ನಿಂತಿದ್ದನು. ಸೀತಮ್ಮನು ಅಲ್ಲಿ ನಿಲ್ಲಲಿಲ್ಲ.

ವಾಸುದೇವಯ್ಯನು ಊಟಕ್ಕೆ ಕುಳಿತಿದ್ದಾಗ ಸೀತಮ್ಮನು ಅರ್ಧರ್ಧ ನುಂಗಿಕೊಂಡು "ನೋಡಿ...ನೀರಿಗೆ...ಬಹಳ ಕಷ್ಟ. ಇನ್ನೆಲ್ಲಾದರೂ ಅನುಕೂಲವಾಗಿ ಮನೆ ಸಿಗುವುದಿಲ್ಲವೇ?" ಎಂದಳು.

"ಅದೇಕೆ? ಕಟ್ಟಿದ ಗುಡಿಸಲನ್ನು ಬಿಟ್ಟು ಮತ್ತೆಲ್ಲಿ ಹೋಗೋಣ. ಬಾಡಿಗೆ ಕೊಡಲಿಕ್ಕಾಗುವುದೇ? ಗೋಪಾಲರಾಯರ ಮನೆಯಲ್ಲಿ ನೀರಿದೆಯೋ ಇಲ್ಲವೋ?"

"ಇದೆ......"

"ಮತ್ತೆ? ಇದಕ್ಕಿಂತ ಅನುಕೂಲವಾಗಿ ಎಲ್ಲಿ ಸಿಗುವುದು?"

ಸೀತಮ್ಮನು ಸುಮ್ಮನಾದಳು. ಚಟ್ನಿಗೆ ಕಾರ ಹೆಚ್ಚಾಗಿತ್ತೋ ಏನೋ ವಾಸುದೇವಯ್ಯನು ಪಂಚಪಾತ್ರೆಯನ್ನು ಕೈಗೆ ತೆಗೆದುಕೊಂಡು ಎರಡು ಗುಟುಕು ನೀರನ್ನು ಕುಡಿದನು. ಅಷ್ಟರಲ್ಲೇ ತೃಪ್ತನಾಗಲಿಲ್ಲ. ಅನುಮಾನ ತಟ್ಟಿದಂತೆ ಪುನಃ ಕುಡಿದನು. ನೀರನ್ನು ರುಚಿ ನೋಡುತ್ತಿದ್ದಾಗ ಸೀತಮ್ಮನು

"ಈ ನೀರನ್ನು ವಕೀಲರ ಮನೆಯಿಂದ ತಂದೆ, ಸ್ವಲ್ಪ ಉಪ್ಪಾಗಿರಬಹುದು" ಎಂದಳು."

"ಅದೇಕೆ ವಕೀಲರ ಮನೆ? ಬಹಳ ದೂರವಾಯಿತಲ್ಲಾ—ನೀರೂ ಚೆನ್ನಾಗಿಲ್ಲ."

"ಏನುಮಾಡಲಿ......ಅದನ್ನೇ ತಂದೆ......"

"ನಾಳೆಯಿಂದ ಈ ನೀರು ಬೇಡ. ಗೋಪಾಲರಾಯರ ಮನೆಯಿಂದ ತೆಗೆದುಕೊಂಡುಬಾ, ಬಾವಿ ಹತ್ತಿರದಲ್ಲಿಯೂ ಇದೆ."

ಸೀತಮ್ಮನು ಸ್ವಲ್ಪಹೊತ್ತು ಸುಮ್ಮನಿದ್ದು "ನೀರು ಅಷ್ಟೇನೂ ಉಪ್ಪಾಗಿಲ್ಲ ......ವಕೀಲರ ಮನೆಯವರು ಇದನ್ನೇ ಕುಡಿಯುತ್ತಾರಂತೆ" ಎಂದಳು.

"ಇಷ್ಟುದಿನ ತರುತ್ತಿದ್ದ ನೀರನ್ನು ಬಿಟ್ಟು ಈ ಉಪ್ಪುನೀರೇಕೆ......"

"ಇಲ್ಲ......ನಮಗೆ..ಅನುಕೂಲವಿಲ್ಲ......"

"ಊರು ಮನೆ ಹೆಂಗಸರೆಲ್ಲ ತೆಗೆದುಕೊಂಡು ಹೋಗುತ್ತಾರಲ್ಲ. ರಾಜಮ್ಮನವರು ಬೇಡವೆನ್ನುತ್ತಾರೆಯೇ ? ನಾವು ತೆಗೆದುಕೊಳ್ಳುವುದೆಲ್ಲ ನಾಲ್ಕು ಕೊಡ."

"ಅವರೇನೂ..ಅನ್ನಲಿಲ್ಲ..ನಾನೇ..ನಾನೇ" ಸೀತಮ್ಮನ ಕಣ್ಣುಗಳಲ್ಲಿ ನೀರು ತುಂಬಿತು. "ಅಲ್ಲಿಗೆ ಹೋಗಲಾರೆ."

"ಅದೇನು.." ವಾಸುದೇವಯ್ಯನು ಮುಖವೆತ್ತಿ ನೋಡಿದನು. "ಏನೀ ಸಮಾಚಾರ......ಏನಾಯಿತು ಬೆಳಿಗ್ಗೆ—ಅದೇಕೆ ಅಳುತ್ತೀ.."

ಸೀತಮ್ಮನು ಎಲ್ಲವನ್ನೂ ಬಿಚ್ಚಿ ಹೇಳಬಾರದೆಂದು ತಡೆದಿದ್ದಳು. ಇನ್ನೇಕೆ ಮರೆಮಾಜುವುದೆಂದು ಬೆಳಗ್ಗೆ ನಡೆದದ್ದನ್ನೂ ತನ್ನ ಮನಸ್ಸಿಗೆ ತೋಚಿದ್ದನ್ನೂ ಹೇಳಿಬಿಟ್ಟಳು.

"ಏನುಮಾಡುವುದು ನೋಡಿ......ನಾವು ಬಡವರು."

ವಾಸುದೇವಯ್ಯನು ಒಂದು ನಿಮಿಷಕಾಲ ಹಾಗೇ ಕುಳಿತುಬಿಟ್ಟನು. ಆಮೇಲೆ ಅವನಿಗೆ ನಗು ಬಂತು. "ಅಯ್ಯೋ ಹುಚ್ಚಿ—ನಿನ್ನ ಬುದ್ಧಿಗೆ ಏನು ಹೇಳಲಿ! ದೊಡ್ಡಮನುಷ್ಯರ ಮನೆ ಹುಡುಗಿಯನ್ನು ಮದುವೆಮಾಡಿಕೊಂಡಿದ್ದಾರೆ. ರಾಜಮ್ಮನವರನ್ನು ನೀನೇನು ನೋಡಿಲ್ಲವೇ—ಸಾಕ್ಷಾತ್ ಲಕ್ಷ್ಮೀದೇವಿಯರು. ಆಕೆ ಅಷ್ಟು ಚೆನ್ನಾಗಿದ್ದಾರೆ—ಶ್ರೀಮಂತರ ಮನೆಯವರು; ಗೋಪಾಲರಾಯರು ದೊಡ್ಡ ಮನುಷ್ಯರು; ನಿನ್ನ ನೋಡುವುದಕ್ಕೆ ಅವರು ನಿಂತಿದ್ದರೆಂದು ಹೇಳುವಿಯಲ್ಲ. ನೀನು ಸುಮ್ಮ ಸುಮ್ಮನೆ ಹೆದರಿಕೊಂಡೆ; ಬೇಕಾದರೆ ನಾಳೆ ಹೋಗಿ ನೋಡು. ನನ್ನ ಮಾತು ನಿಜ"

ಸೀತಮ್ಮನು "ಅಹುದೋ—ಏನೋ.." ಎಂದುಕೊಂಡಳು. "ಹಾಳು ಹೆಂಗಸು ಜನ್ಮ ಏನುಮಾಡುವುದು ಹೇಳಿ......ಯಾರು ಎಲ್ಲಿ ನೋಡುತ್ತಿದ್ದರೂ ನಮ್ಮನ್ನೇ ನೋಡುತ್ತಿದ್ದಾರೇನೋ—ಎಂದು ಮನಸ್ಸು ಹೆದರುವುದು. ಸಾಲದ್ದಕ್ಕೆ ಬಡವರು ನಾವು. ಅಪಕೀರ್ತಿ ಬಂದರೆ ನಮಗೆ ಗತಿಯಾರು ಎಂದು ಹೊಡಕೊಳ್ಳುತ್ತದೆ"

ಗೋಪಾಲರಾಯನಿಗೆ ನಮ್ಮೂರಲ್ಲಿಯೇ ಒಂದು ದೊಡ್ಡ ಉದ್ಯೋಗ. ನೂರೈವತ್ತು ರೂಪಾಯಿ ಸಂಬಳ ಬರುತ್ತಿತ್ತು. ರಾಜಮ್ಮನವರು ಆತನಿಗೆ ಎರಡನೆಯ

ಸಂಬಂಧ. ಈ ಮದುವೆಯಲ್ಲಿಯೂ ಸಾವಿರಾರು ರೂಪಾಯಿ ವರದಕ್ಷಿಣೆ ತೆಗೆದು ಕೊಂಡನೆಂದು ಜನರು ಹೇಳುತ್ತಿದ್ದರು. ಆದರೆ ತಾನು ಏನನ್ನೂ ತೆಗೆದುಕೊಳ್ಳಲಿಲ್ಲ ವೆಂದು ಆತನು ಸ್ನೇಹಿತರ ಮುಂದೆಲ್ಲ ಪ್ರಮಾಣಮಾಡಿ ಹೇಳಿದ್ದನು. ಏನುಮಾಡು ವುದು ? ಮದುವೆಯಾದ ಮೇಲೆ ಗೋಪಾಲರಾಯನು ಆ ಮನೆಯನ್ನು ಕೊಂಡು ಕೊಳ್ಳಬೇಕೇ ? ಜನಗಳ ಬಾಯಿ ಕೆಟ್ಟದು.

ಈ ಎರಡನೆಯ ಮದುವೆ ಆಗಿ ಕೆಲವು ವರ್ಷಗಳಾಗಿದ್ದುವು ಎಂದು ಕಾಣುತ್ತೆ. ಈಗ ಚೆನ್ನಾಗಿ ಜ್ಞಾಪಕವಿಲ್ಲ. ಅವರಿಗೆ ಎರಡು ವರ್ಷದ ಹೆಣ್ಣುಮಗು ಸರೋಜ ಆಗಿತ್ತು. ರಾಜಮ್ಮನವರು ತಮ್ಮ ಮಗಳನ್ನು ಆಡಿಸುತ್ತ ಒಳಗಿದ್ದರು. ಮಗು ನೀರಿನಲ್ಲಿ ಓಡಾಡಿಬಿಟ್ಟು ಶೀತ ಕೆಮ್ಮಲು ಆರಂಭವಾಗಿತ್ತು. ಗೋಪಾಲ ರಾಯನು ಬೈಸ್ಕಲನ್ನು ವರಾಂಡದಲ್ಲಿ ಬಿಟ್ಟು ಬಟ್ಟೆಬರೆಗಳನ್ನು ಬದಲಾಯಿಸಿ ಮಗಳ ಬಳಿಗೆ ಬಂದನು. ಮಗಳನ್ನು ಎತ್ತಿಕೊಂಡು ಅಡಿಗೆಯಮನೆಯ ಕಡೆ ಬಗ್ಗಿನೋಡಿ ಕೋಪದಿಂದ ಕೂಗಿದನು. "ಇವರನ್ನೇಕೆ ಇನ್ನೂ ಊರಿಗೆ ಕಳುಹಿಸಲಿಲ್ಲ ?"

ರಾಜಮ್ಮನವರು ಸುಮ್ಮನಿದ್ದರು.

"ನಾನು ಯಾರನ್ನು ಕೇಳುವುದು ?"

"ನಾಳೆ ನಾಡಿದ್ದು ಹೋಗುತ್ತಾರೆ. ಏಕೆ ಹಾಗೆಲ್ಲ ಅವರ ಮುಂದೆ ಕೇಳು ತ್ತೀರಿ. ನಮ್ಮ ಮಾನಹೋಗುವುದಲ್ಲಾ"

"ಅಹುದಹುದು ಬಹಳ ಬಳ್ಳ ಮಾನ ಕಂಡವಳು."

"ಅಲ್ಲ—ನೀವು ಹೇಳಿ—ನೀವೇನಾದರೂ ಅವರಿಗೆ ಸಂಬಳ ಕೊಡುತ್ತಿ ದೀರಾ—ನಮ್ಮ ತಂದೆತಾಯಿಗಳು ಎಲ್ಲ ಖರ್ಚನ್ನು ಮಾಡುತ್ತಿಲ್ಲವೇ—"

"ಸಂಬಳ ಕೊಡದಿದ್ದರೆ ಹೊಟ್ಟೆಗೆ ಹಾಕುತ್ತಿಲ್ಲವೇ ? ಮೊದಲು ಒಬ್ಬ ಳಿದ್ದಳು—ಈಗ ಇಬ್ಬರಾಯಿತು. ನಾಳೆ ಹತ್ತುಜನ ತಂದೀಯೇ."

"ಹತ್ತುಜನ ಬಂದಾರೇ ? ಆಕೆ ಊರಿಂದ ಬಂದವಳು. ಹೊರಟುಹೋಗು ವಳು. ಹಾಗೆಲ್ಲ ಕೋಪಮಾಡಬೇಡಿ."

"ಇರೋ ಸಂಸಾರ ಗಂಡ ಹೆಂಡತಿ ಒಂದು ಮಗು. ಉಪಚಾರಕ್ಕೆ ನೋಡಿ ದರೆ ಹತ್ತುಜನ ಬೇಕು."

"ಇರಲಿ, ಸುಖಪಡೋಣವಂತೆ—ದೇವರೇನೂ ಕಡಿಮೆಮಾಡಿಲ್ಲ. ಹತ್ತು ಜನವೂ ತಿನ್ನಲಿ."

"ಸುಖಪಡುವುದು……ಸುಖ……ನಿನ್ನ ಶ್ರೀಮಂತಿಗೆಯಿಂದ ನನ್ನ ಮನೆ ಹಾಳಾಯಿತು."

"ನಿಮ್ಮ ಮನೆಮಠ ಬಂದದ್ದು ನನ್ನಿಂದ ತಾನೆ. ಮಾಡೋ ಖರ್ಚನ್ನೆಲ್ಲ ನಾನೇ ಮಾಡಿಕೊಳ್ಳುತ್ತಲಿದ್ದೇನೆ. ಅಂಥಾ ರಾಜಭೋಗ ನಮ್ಮ ಮನೆಯಲ್ಲಿ ನಡೆಯುವ ಹಾಗೆ ಇಲ್ಲೇನಿದೆ—ಅವರು ತಿನ್ನುವುದು ಒಂದು ಹೊತ್ತು. ಅದನ್ನು ಹಾಕಲಾರಿರಾ ?"

"ನಿನ್ನ ಚರ್ಜೆ ಬೇಕಿಲ್ಲ. ಲಾಯರ್ ಎಂದು ಗೊತ್ತು. ನೀನೀ ಹೊಸ್ತಲ ಮೆಟ್ಟಿದ ಲಾಗಾಯಿತು ಒಂದು ಕಾಸು ಕೈಗೆ ಹತ್ತಿಲ್ಲ. ಕೋರಿ ಕೋರಿ, ಒಳ್ಳೆಯ ಸುಡುಗಾಡನ್ನು ಕಟ್ಟಿಕೊಂಡೆ."

"ಆಡಬಾರದೆಂದು ಇದ್ದರೂ ಬಾಯಿಂದ ಆಡಿಸುತ್ತೀರಿ. ನೀವೇ ಹೇಳಿ. ನೀವು ನನ್ನನ್ನು ಕಟ್ಟಿಕೊಂಡಿರಾ—ಹಿರಿಯರ ಮೇಲೆ ಆಣೆಯಿಟ್ಟು ಹೇಳಿ. ತುಂಬಿದ ಸಭೆ—ಮುಹೂರ್ತ ಮೀರಿಹೋಯಿತು. ದೊಡ್ಡಮನುಷ್ಯರೆಲ್ಲಾ ಬಂದುಬಿಟ್ಟಿದ್ದರು. ರೂಪಾಯಿ ಸುರಿದ ಹೊರತು ತಾಳೀ ಕಟ್ಟುವುದಿಲ್ಲ ಎಂದು ಭಂಗಪಡಿಸಿದಿರಲ್ಲಾ. ಚಿತಿಮೇಲಿಟ್ಟು ನನ್ನ ಸುಟ್ಟಾಗಲೂ ನನ್ನ ಹೃದಯ ಸುಟ್ಟೀತೇ ? ತೊಳದ ಕಾಲು ತೊಳದರೂ ಹಾಗೆ ಭಂಗಪಡಿಸಿದಿರಿ. ನಾನು··ಸರಿಯಲ್ಲ··ಸರಿಯಲ್ಲ··ಹೆತ್ತ ಮನೆಗೆ ಅಪಕೀರ್ತಿ ಬಂದೀತು ಎಂದು ನಿಮ್ಮ ಚರ್ಯೆಗಳನ್ನೆಲ್ಲ ನುಂಗಿಕೊಂಡು ಸಂಸಾರ ಮಾಡುತ್ತಿದ್ದೀನಿ. ನಮ್ಮ ಬಾವಿಗೆ ಹೆಂಗಸರು ಬರುವುದಕ್ಕೇ ಹೆದರುತ್ತಾರಲ್ಲಾ—ನಾನು ಬದುಕೇನುಫಲ···" ಎಂದು ಕಣ್ಣೀರು ತಂದುಕೊಂಡು "ಮಹಾಪತಿವ್ರತೆಯ ಹೊಟ್ಟೆಯಲ್ಲಿ ಹುಟ್ಟಿ ಇದನ್ನೆಲ್ಲ ನೋಡುವ ಕರ್ಮ ಬಂತು."

ಗೋಪಾಲರಾಯನು ಅಲ್ಲಿ ನಿಲ್ಲದೆ ತನ್ನ ಕೊಠಡಿಗೆ ಹೋಗಿ ಕುರ್ಚಿಯ ಮೇಲೆ ಕುಕ್ಕರಿಸಿಬಿಟ್ಟನು.

ಹಿಂದಿನ ರಾತ್ರಿಯೇ ಅಸ್ವಸ್ಥವಾಗಿದ್ದ ಮಗು ಹಾಸಿಗೆಯನ್ನು ಹಿಡಿದು ಮಲಗಿದಳು. ಗಂಡಹೆಂಡಂದಿರಿಗೆ ಪರಸ್ಪರ ಎಷ್ಟೊಂದು ಕೋಪವಿದ್ದರೂ ಜುಗುಪ್ಸೆಯಿದ್ದರೂ ಅಸಮಾಧಾನವಿದ್ದರೂ ಮಗು ಖಾಯಿಲೆ ಮಲಗಿದಾಗ ಸ್ವಲ್ಪಸ್ವಲ್ಪ ಮಾತನಾಡಬೇಕಾಗುತ್ತೆ. ಗೋಪಾಲರಾಯನು ಆಸ್ಪತ್ರೆಗೆ ಹೋಗಿ ಔಷಧಿಯನ್ನು ತಂದುಕೊಟ್ಟನು. ಎರಡುಮೂರು ದಿವಸಗಳಾದುವು. ಜ್ವರವೇನೂ ನಿಲ್ಲಲಿಲ್ಲ. ರಾಜಮ್ಮನವರಿಗೆ ಮಗುವಿನ ವಿಷಯದಲ್ಲಿ ಬಹಳ ಹೆದರಿಕೆಯುಂಟಾಯಿತು.

ಮೂರನೆಯದಿನ ಸಾಯಂಕಾಲ ರಾಜಮ್ಮನವರು ತಟ್ಟನೆ "ಸೀತಮ್ಮನ ಗಂಡ ಏನೋ ವೈದ್ಯತಿಳಿದವನಂತೆ—ಏತಕ್ಕೆ ಹೇಳಬಾರದು" ಎಂದುಕೊಂಡರು. ಈ ಆಲೋಚನೆ ಹೊಳದಿದ್ದೇ ತಡ, ಸೀತಮ್ಮನ ಗುಡಿಸಲಿಗೆ ಬಂದುಬಿಟ್ಟರು. ವಾಸು

ದೇವಯ್ಯನು ಮಕ್ಕಳನ್ನು ಆಡಿಸುತ್ತ ಒಳಗಿದ್ದುದರಿಂದ ರಾಜಮ್ಮನವರು ಬಂದಾಗ ತಟ್ಟನೆ ಎದ್ದು ಹೋಗಲಿಕ್ಕೂ ಆಗಲಿಲ್ಲ. ರಾಜಮ್ಮನವರು ಒಳಗೆ ಹೋದರು.

" ರಾಜಮ್ಮನವರ ಮಗಳಿಗೆ ಸರೋಜಾಗೆ ಮೈಯಲ್ಲಿ ಸ್ವಸ್ಥವಿಲ್ಲವಂತೆ."

" ಏನಾಗಿದೆ ? "

" ಮೂರುದಿವಸದಿಂದ ಜ್ವರ—ಬಂದ ಜ್ವರ ಬಿಟ್ಟಿಲ್ಲ" ಎಂದು ರಾಜಮ್ಮನವರು ಮಾತಿನಲ್ಲಿ ಸೇರಿಕೊಂಡು ಹೇಳಿದರು.

" ಪ್ರವೃತ್ತಿ ಆಗುತ್ತಿದೆಯೇನಮ್ಮ ? "

" ಉಂ ಸುಮಾರಾಗಿ, ಈದಿನ ಮಾತ್ರ ಆಗಲಿಲ್ಲ."

" ಮೊದಲು ಚಳಿ ಏನಾದರೂ ಬಂತೇ ತಾಯಿ."

" ಇಲ್ಲ."

" ತಲೆನೋವು—ಎಂದು ಮಗು ಅಳುತ್ತಿದ್ದಳೇ. . ."

" ಮೊದಲು ರಾತ್ರಿ ಬಹಳ ಅತ್ತಿತು. ನನಗೇನೂ ಗೊತ್ತಾಗಲಿಲ್ಲ."

" ಒಳ್ಳೆಯದು ತಾಯಿ. ಎರಡು ಮಾತ್ರೆಗಳನ್ನು ಕೊಡುತ್ತೇನೆ. ಜೇನುತುಪ್ಪದಲ್ಲಿ ತೇದುಕೊಡಿ. ನಾಳೆಯದಿವಸದ ಸ್ಥಿತಿ ನೋಡಿಕೊಂಡು ಮುಂದೆ ಔಷಧ ಕೊಡುತ್ತೇನೆ."

ರಾಜಮ್ಮನವರು ಮಾತ್ರೆಗಳನ್ನು ತೆಗೆದುಕೊಂಡು ಮನೆಗೆ ಬರುತ್ತಿದ್ದರು. ಬೈಸ್ಕಲ್ ಮೇಲಿಂದ ಬರುತ್ತಿದ್ದ ಗೋಪಾಲರಾಯನು ದೂರದಿಂದಲೇ ನೋಡಿದನು. ರಾಜಮ್ಮನವರು ಮನೆಯನ್ನು ಸೇರುವ ಹೊತ್ತಿಗೆ ಬೈಸ್ಕಲ್ಲಿಂದ ಇಳಿದು " ನಿನಗೆ ಬುದ್ಧಿ ಇದೆಯೋ ಇಲ್ಲವೋ—ಯಾರಮನೆಗೂ ಹೋಗಕೂಡದೆಂದು ನಾನು ಹೇಳಿರಲಿಲ್ಲವೇ—ವಾಸುದೇವಯ್ಯನ ಮನೆಯಲ್ಲಿ ನಿನಗೇನು ಕೆಲಸ—ಹಿಂದೆ ನಾಲ್ಕಾರು ಬಾರಿ ಹೋಗಿದ್ದೆ. ಅದನ್ನು ನಾನು ಸೈರಿಸಿದೆ. ಹೋಗಕೂಡದೆಂದು ನಿಷೇಧಿಸಿದರೂ ಪದೇ ಪದೇ ಹೋಗುತ್ತೀ; ನಿನ್ನಿಂದ ನನ್ನ ಮಾನ ಹೋಗುವುದು" ಎಂದು ಮುಂತಾಗಿ ಕ್ರೋಧಾವೇಶದಿಂದ ಒದರಿದನು.

" ಮಗುವಿಗೆ ಮಾತ್ರೆ ತರೋಣವೆಂದು ಹೋಗಿದ್ದೆ. ಏಕೆ ಹೀಗೆಲ್ಲ ಮಾಡುತ್ತೀರಿ ? "

" ಎಲ್ಲಾ ಕಂಡಿದ್ದೇನೆ—ಹೆಂಗಸರಿಗೆ ನೆಪ ಹೇಳಿಕೊಡಬೇಕೇ. . . . . . ಇರಲಿ . . .ನೋಡಿಕೊಳ್ಳುತ್ತೇನೆ."

ಹೆಂಡತಿಯ ಮೇಲಿನ ಕೋಪವೆಲ್ಲ ವಾಸುದೇವಯ್ಯನ ಮೇಲೆ ತಿರುಗಿಬಿಟ್ಟಿತು.

ಸರೋಜಾಗೆ ಸ್ವಲ್ಪ ಸ್ವಲ್ಪ ಗುಣವಾಗುತ್ತ ಬಂತು. ಗೋಪಾಲರಾಯನಿಗೆ ಕಚೇರಿಯಲ್ಲಿ ಕೆಲಸ ಸರಿಯಾಗಿ ಸಾಗುತ್ತಿರಲಿಲ್ಲ. ಕಾಗದಪತ್ರಗಳು ಮೇಜಿನ ಮೇಲೆ ಬಂದು ಅವುಗಳನ್ನು ನೋಡಬೇಕಾದಾಗ, ಅವು ವಾಸುದೇವಯ್ಯನಿಗೂ ತನ್ನ ಹೆಂಡತಿಗೂ ನಡೆದ ಪ್ರೇಮಪತ್ರಗಳಂತೆ ಭಾಸವಾಗುತ್ತಿದ್ದುವು. "ಅಯ್ಯೋ ಪಾಪಿ—ಅಯ್ಯೋ ವಾಸುದೇವಯ್ಯ—ಇನ್ನು ನನ್ನ ಮಾನ ಬಯಲಾಯಿತಲ್ಲಾ—ಎಲ್ಲರೂ ಏನೆಂದು ಆಡಿಕೊಳ್ಳುತ್ತಿರುವರೋ—ಅಯ್ಯೋ ನನ್ನ ಬಾಳೇ—" ಎಂದು ಇದ್ದಕ್ಕಿದ್ದಹಾಗೆ ಹುಚ್ಚನಂತೆ ಎದ್ದನು. ಪುನಃ ಇದ್ದಕ್ಕಿದ್ದ ಹಾಗೆ ಕುಕ್ಕರಿಸಿದನು. ಮನಸ್ಸಿನಲ್ಲಿ ಕುತಕುತ ಕುದಿಯಿತು. ಅಲ್ಲೋಲ ಕಲ್ಲೋಲವಾಯಿತು—ಲೇಖನಿಗಳನ್ನು ಬೀಸಾಡಿ ಮಸಿಕುಡಿಕೆಗಳನ್ನು ಉರುಳಿಸಿ ಕೊಠಡಿಯಿಂದ ಹೊರಕ್ಕೆ ಬಂದುಬಿಟ್ಟನು. ಬೈಸ್ಕಲನ್ನು ಏರಿ ಕ್ಷಣಮಾತ್ರದಲ್ಲಿ ಸ್ಕೂಲಿನ ಬಳಿ ಬಂದು ವಾಸುದೇವಯ್ಯ ಬಂದಿರುವನೇ—ಎಂದು ವಿಚಾರಿಸಿದನು. ವಾಸುದೇವಯ್ಯನು ಯಾವುದೋ ತರಗತಿಗೆ ಪಾಠ ಹೇಳುತ್ತಿದ್ದನು. "ಸರಿ, ಇಲ್ಲಿಯೇ ಇದ್ದಾನೆ—ಇರಲಿ—" ಎಂದುಕೊಂಡು ಕಚೇರಿಗೆ ಬಂದನು.

ಆ ದಿವಸ ಸಾಯಂಕಾಲ ವಾಸುದೇವಯ್ಯನು ಮನೆಗೆ ಬರಲಿಲ್ಲ. ಸ್ಕೂಲನ್ನು ಬಿಡುತ್ತಲೂ ಮನೆಗೆ ಬರುತ್ತಿದ್ದ ಗಂಡನು ರಾತ್ರಿ ಎಂಟುಗಂಟೆಯಾದರೂ ಬಾರದಿದ್ದರೆ ಸೀತಮ್ಮನು ಏನುಮಾಡುವುದು? ದೀಪದ ಮುಂದೆ ಮಕ್ಕಳನ್ನು ಕೂಡಿಸಿಕೊಂಡು ಯಾವುದೊಂದು ಸದ್ದಾದರೂ ಗಂಡನ ಹೆಜ್ಜೆಯ ಸದ್ದೆಂದು ನಿರೀಕ್ಷಿಸುತ್ತಿದ್ದಳು. ಮಕ್ಕಳು ಎಷ್ಟುಹೊತ್ತು ಎದ್ದಿದ್ದಾವು? ಅವುಗಳಿಗೆ ನಿದ್ದೆ ಬಂದು ಅವೂ ಮಲಗಿಬಿಟ್ಟವು. ಒಂಭತ್ತುಗಂಟೆಯ ತುತೂರಿಯು ಕೇಳಿಸಿತು. ವಾಸುದೇವಯ್ಯನು ಬರಲಿಲ್ಲ. ಒಂಟಿ ಹೆಂಗಸು—ಒತ್ತು ಮನೆಗಳೂ ಇಲ್ಲ. ಆ ಗುಡಿಸಲೇ ಕೊನೆಯದು. ಮನಸ್ಸಿಗೆ ಭೀತಿ ಬಡಿಯಿತು. "ಏಕೆ ಇನ್ನೂ ಬರಲಿಲ್ಲ—ಅಯ್ಯೋ ಎಂದೂ ಇಷ್ಟುಹೊತ್ತು ಮಾಡಿಕೊಂಡು ಬಂದವರಲ್ಲವಲ್ಲ—ಈಗ ಯಾರನ್ನು ಕಳುಹಿಸಲಿ. ನಾನೆಲ್ಲಿ ಹುಡುಕಲಿ—ಈ ಅವೇಳೆ ಹೊತ್ತಿನಲ್ಲಿ ರಾಜಮ್ಮನವರ ಮನೆಗೆ ಹೋಗಿ ಕರೆಯುವುದೆಂತು—ಗುಡಿಸಲಿನಲ್ಲಿ ಇಬ್ಬರು ಮಕ್ಕಳನ್ನೇ ಬಿಟ್ಟು ಹೋಗುವುದು ಹೇಗೆ—ಅಯ್ಯೋ ದೇವರೇ ಏನು ಸಂಕಟ ತಂದಿಟ್ಟೆಯಪ್ಪ—" ಎಂದುಕೊಂಡಳು. ಹೊರಗಡೆ ಗಾಳಿಯು ರೊಯ್ಯನೆ ಬೀಸುತ್ತಿದೆ. ಒಳಗೆ ನುಗ್ಗಿದ ಗಾಳಿಯ ಆರ್ಭಟಕ್ಕೆ ದೀಪವು ನಂದಿಹೋಯಿತು. ಸೀತಮ್ಮನು ನಡುಗಿದಳು. ಕಡ್ಡೀಪೆಟ್ಟಿಗೆಯನ್ನು ತಡವಿದಳು. ತಟ್ಟನೆ ಸಿಗಲಿಲ್ಲ. ಹತ್ತುಗಂಟೆ ಹೊಡೆದಾಯಿತು.

ಹೊರಗೆ ಒಳಗೆ ಏಕಪ್ರಕಾರವಾಗಿ ಕಗ್ಗತ್ತಲು ಕವಿದುಕೊಂಡು ದಿಕ್ಕುತೋಚದಂತಾಗಿದೆ. ಹಾಗೆಯೇ ಹುಡುಕುತ್ತಿದ್ದಾಗ ಪೆಟ್ಟಿಗೆ ಸಿಕ್ಕಿತು. ದೀಪವನ್ನು ಹಚ್ಚಿ ಗಾಳಿಗೆ ಮರೆಯಾಗಿ ಇಟ್ಟಳು.

ಗುಡಿಸಲ ಹೊರಗೆ ಯಾರೋ ಓಡಾಡುವಂತೆ ಕೇಳಿಸಿತು. ' ಯಾರದು ? ' ಎಂದು ಕೂಗಿದಳು. ಬಾಗಿಲನ್ನು ಮಾತ್ರ ತೆರೆಯಲಿಲ್ಲ. ಹೊರಗಿಂದ ಅಸ್ಪಷ್ಟಧ್ವನಿ ಕೇಳಿಬಂತು. ಸೀತಮ್ಮನು ಹೆದರಿ ಕಂಗಾಲಾಗಿ ಹೋದಳು. ಪುನಃ ' ಯಾರದು ? ' ಎಂದಳು.

" ನಾನು " ಎಂದು ದೈನ್ಯಧ್ವನಿ ಬಂತು. ಗಂಡನ ಸ್ವರವಿದ್ದಹಾಗೆ ಕಂಡು ಬಂತು. ಆದರೆ ಗಟ್ಟಿಯಾಗಿ ಧೈರ್ಯವಾಗಿ ಮಾತನಾಡುವ ಬದಲು ಮೆಲ್ಲಗೆ ಮಾತನಾಡುವುದನ್ನು ಕೇಳಿ ಸೀತಮ್ಮನಿಗೆ ಅನುಮಾನವುಂಟಾಯಿತು. ಪುನಃ "ಯಾರದು?" ಎಂದಳು.

" ನಾನು, ಬಾಗಿಲು..." ಎಂದು ಪ್ರತ್ಯುತ್ತರ ಬಂತು. ಗಂಡನ ಧ್ವನಿಯೇ. ಆದರೆ ನಿಶ್ಶಕ್ತಿಯಿಂದ ಹೇಳಿದಂತೆ ಭಾಸವಾಯಿತು. ನಡುರಾತ್ರಿಯಾಗುತ್ತ ಬಂದಿದೆ. ಹೆಂಗಸು ತಾನೊಬ್ಬಳು. ಗಂಡನಹುದೋ ಅಲ್ಲವೋ—ಬಾಗಿಲು ತೆರೆಯುವುದಕ್ಕೆ ಧೈರ್ಯವಿಲ್ಲ. ತೆರೆಯದಿದ್ದರೆ ಗಂಡನೋ ಏನೋ—ಎಂದು ಆಸೆ. ಮಲಗಿದ್ದ ಮಕ್ಕಳನ್ನು ತಟ್ಟಿ ಎಬ್ಬಿಸಿಬಿಟ್ಟಳು. ನಿದ್ದೆಗಣ್ಣಿನಲ್ಲಿ ಎದ್ದ ಮಕ್ಕಳು ಅಳತೊಡಗಿದವು. ಇದರಿಂದ ಸೀತಮ್ಮನಿಗೆ ಎಷ್ಟೋ ಧೈರ್ಯ. ಮಕ್ಕಳನ್ನು ಸಮಾಧಾನ ಪಡಿಸುವುದರಲ್ಲಿ ಗಟ್ಟಿಯಾಗಿ ಮಾತನಾಡುತ್ತ ಮತ್ತಷ್ಟು ಧೈರ್ಯವನ್ನು ತಂದುಕೊಂಡು ಪುನಃ " ಯಾರದು " ಎಂದು ಕೇಳಿದಳು.

" ನಾನು " ಎಂದು ಉತ್ತರ ಬಂತು.

" ಏನಾದರೂ ಆಗಲಿ " ಎಂದು ಧೈರ್ಯಮಾಡಿಕೊಂಡು ಬಾಗಿಲನ್ನು ತೆರೆದು ಬಾಗಿಲ ಹಿಂದೆಯೇ ಮರೆಯಾದಳು. ಒಳಗೆ ಬಂದವನು ವಾಸುದೇವಯ್ಯ. ಸೀತಮ್ಮನಿಗೆ ಹೋದ ಪ್ರಾಣ ಬಂತು. ' ದೇವರು ನನ್ನ ಪಾಲಿಗಿದ್ದಾನೆ ' ಎನ್ನುತ್ತಿರುವಷ್ಟರಲ್ಲಿ ವಾಸುದೇವಯ್ಯನು ನಿಲ್ಲಲಾರದೆ ನೆಲದಮೇಲೆ ಧೊಪ್ಪನೆ ಬಿದ್ದುಬಿಟ್ಟನು. ಸೀತಮ್ಮನಿಗೆ ಜಂಘಾಬಲವು ಕುಗ್ಗಿಹೋಯಿತು. ತಟ್ಟನೆ ಬಾಗಿಲನ್ನು ಮುಚ್ಚಿ ಗಂಡನನ್ನು ಎಬ್ಬಿಸಲು ಹೋದಳು.

ವಾಸುದೇವಯ್ಯನು ಕಣ್ಣುಮುಚ್ಚಿಬಿಟ್ಟಿದ್ದನು. ಉದ್ದಕ್ಕೂ ನಿಶ್ಚೇಷ್ಟಿತನಾಗಿ ಕಣ್ಣುಮುಚ್ಚಿ ಬಿದ್ದಿದ್ದರೆ ಸೀತಮ್ಮನಿಗೆ ಏನೇನೋ ಆಲೋಚನೆಗಳು ಸ್ಫುರಿಸಿ ಅಳು

ಬಂದುಬಿಟ್ಟಿತು. ಹತ್ತಿರ ಬಂದು ಕೈಕಾಲುಗಳನ್ನು ಮುಟ್ಟಿನೋಡಿ ಗಲ್ಲವನ್ನು ತಿರುಹಿ ಹಿಡಿದು—"ಏನಾಗಿದೆ—ಹೊತ್ತುಮಾಡಿಕೊಂಡು ಏಕೆ ಬಂದಿರಿ—ನನ್ನ ನೋಡಿ—ನನ್ನ ನೋಡಿ ಮಾತನಾಡಿ" ಎಂದಳು. ಮಾತೇ ಇಲ್ಲ.

ಸೀತಮ್ಮನಿಗೆ ದಿಕ್ಕುತೋಚಲಿಲ್ಲ. ಗಾಳಿ ರೊಯ್ಯನೆ ಬೀಸುತ್ತಿದೆ—ಮಧ್ಯ ರಾತ್ರಿ—"ಏನಾಗಿದೆ—ಮೈಯಲ್ಲಿ ಸ್ವಸ್ಥವಿಲ್ಲವೇ..ಮಾತನಾಡಿ.. ಅಯ್ಯೋ—ಮಾತನಾಡಿ ಎಂದರೆ...ಏನು ಮಾಡಲಮ್ಮಾ—ನನ್ನ ಕೈಕಾಲೇ ಆಡುವುದಿಲ್ಲ. ಇನ್ನೇನು ಗತಿಯಮ್ಮಾ..." ಎಂದು ಮುಖದಮೇಲೆ ಮುಖವಿಟ್ಟು ಅತ್ತಳು.

ವಾಸುದೇವಯ್ಯನು ಕಣ್ಣುಗಳನ್ನು ಬಿಟ್ಟುಕೊಂಡು ಸೀತಮ್ಮನನ್ನು ಸುಮ್ಮನೆ ನೋಡಿದನು. ಅವನ ಕಣ್ಣುಗಳಲ್ಲಿಯೂ ನೀರು.

"ಏನಾಯಿತು ಹೇಳಿ. ಅದೇಕೆ ಹಾಗೆ ನೋಡುತ್ತೀರಿ. ಅಯ್ಯೋ ನನಗೆ ಹೆದರಿಕೆಯಾಗುತ್ತದಲ್ಲಾ—ಹಾಗೆಲ್ಲ ಹುಚ್ಚುಹುಚ್ಚು ಮಾಡಬೇಡಿ—ಏನಾಯಿತು ......ಏನಾಯಿತು..."

ಮಾತೇ ಇಲ್ಲ.

ಸೀತಮ್ಮನು ಅಳುತ್ತ ಎದ್ದಳು. ಅಡಿಗೆಯ ಮನೆಯಲ್ಲಿದ್ದ ಸ್ವಲ್ಪ ಹಾಲನ್ನು ತಂದಳು. ಹಾಲನ್ನು ಬಾಯಿಗೆ ಬಿಡುತ್ತಲೂ ಒಂದೆರಡು ಗುಟುಕು ಹೊಟ್ಟೆಗೆ ಹೋಯಿತು. ತೆರೆದಿದ್ದ ಕಣ್ಣುಗಳನ್ನು ವಾಸುದೇವಯ್ಯನು ಮುಚ್ಚಿದನು. ಸೀತಮ್ಮನು ಹಾಲನ್ನು ಒಂದುಕಡೆಯಿಟ್ಟು "ಏನಾಗಿದೆ ಹೇಳಿ. ಯಾಕೆ ಇಷ್ಟುಹೊತ್ತು—ಅದೇಕೆ ಹಾಗೆ ಕೂಗಿಕೊಂಡಿರಿ—" ಎಂದು ಕೇಳುತ್ತ ಕಣ್ಣುರೆಪ್ಪೆಯನ್ನು ಬಲವಂತದಿಂದ ಬಿಡಿಸಿದಳು. ನಿಮಿಷಮಾತ್ರ ಕಣ್ಣುಗಳನ್ನು ಬಿಟ್ಟನು. ಆದರೂ ಕಣ್ಣುಗಳು ಮೇಲಕ್ಕೆ ಸೇದಿಕೊಂಡುಹೋಗುತ್ತಿದ್ದುವು. "ಆಯಾಸ..ಆಯಾಸ.." ಎಂದು ಹೇಳಿ ಕಣ್ಣುಗಳನ್ನು ಮುಚ್ಚಿಬಿಟ್ಟನು.

ಸೀತಮ್ಮನು ಗಂಡ ಬರಲಿ—ಎಂದು ಊಟಮಾಡದೆ ಕಾದಿದ್ದಳು. ಈಗ ಆಕೆಗೆ ಹಸಿವೆಲ್ಲಿಯೋ ಅಡಗಿಹೋಯಿತು. ಹೊಟ್ಟೆಯೆಲ್ಲ ತುಂಬಿಹೋಗಿದೆ. ದೀಪವನ್ನು ದೊಡ್ಡದುಮಾಡಿ ಗಂಡನ ಹಾಸಿಗೆಯನ್ನು ಚೊಕ್ಕಟಮಾಡಿ ಹಾಸಿದಳು. ಕಷ್ಟಪಟ್ಟುಕೊಂಡು ವಾಸುದೇವಯ್ಯನನ್ನು ಹಾಸಿಗೆಗೆ ಜರುಗಿಸಿದಳು. "ಇನ್ನು ಸ್ವಲ್ಪ ಹಾಲು ಕೊಡಲೇ" ಎಂದು ಕೇಳಿದಳು. ಉತ್ತರ ಬರಲಿಲ್ಲ. ಆದರೂ ಬಲವಂತದಿಂದ ಕುಡಿಸಿದಳು. ಮತ್ತೆರಡು ಗುಟುಕು ಹೊಟ್ಟೆಗೆ ಹೋಯಿತು.

ರಾತ್ರಿ ಒಂದುಗಂಟೆ. ಕೃಷ್ಣಪಕ್ಷದ ದಿನಗಳು. ಅಮಾವಾಸ್ಯೆಗೆ ಎರಡು ಮೂರುದಿನಗಳ ಹಿಂದೆ. ಹೊರಗೆ ಕಾರಕಗ್ಗತ್ತಲು. ಬೀದಿಗಳು ಮನೆಗಳು ಯಾವುವೂ ಕಾಣಿಸವು. ಗುಡಿಸಲ ಮುಂದೆ ಭೂತಗಳಂತೆ ಎರಡು ದೊಡ್ಡ ಮರಗಳು. ಊರೇ ನಿದ್ದೆಯಲ್ಲಿದೆ. ನಿಶ್ಶಬ್ದ. ಪ್ಲೇಗುಗಲಾಟೆಯಲ್ಲಿ ಆಯಸ್ಸು ಮುಗಿದವರೆಲ್ಲ ಹಗಲೂ ರಾತ್ರಿ ಅತ್ತಕಡೆಯೇ ಸಾಗಿ ಆಚೆಯ ತೋಟಕ್ಕೆ ಹೋದದ್ದು.

ಆ ಗುಡಿಸಲಿನಲ್ಲಿ ಸೀತಮ್ಮನು ಗಂಡನ ಪಕ್ಕದಲ್ಲಿ. ಗಂಡನು ಉದ್ದಕ್ಕೆ ಚಾಚಿಕೊಂಡು, ಸೇದಿಹೋದ ಕಣ್ಣು, ಕಳೆಯಿಳಿದ ಮುಖ, ಬದಿಗೆ ಹಾಕಿದ ಕೈಗಳೊಡನೆ ಮೇಲ್ಮೊಗನಾಗಿ ಮಲಗಿಬಿಟ್ಟಿದ್ದಾನೆ. ಸೀತಮ್ಮನು ಹೆದರಿ ಗಂಡನನ್ನು ಒಂದು ಪಕ್ಕಕ್ಕೆ ತಿರುಗಿಸಿದಳು. ಗೋಡೆಯ ಮೇಲಿದ್ದ ಹಲ್ಲಿಯೊಂದು—ಕಿಟ್—ಕಿಟ್—ಕಿಟ್—ಎಂದು ನುಡಿಯಿತು. "ಹಾಳು ಹಲ್ಲಿ ನುಡಿಯುತ್ತೆ—" ಎನ್ನುತ್ತ ಬೆರಳನ್ನು ಭೂಮಿಗೆ ನಾಲ್ಕುಬಾರಿ ಬಡಿದಳು. ಮುಂದಿದ್ದ ಮರದಮೇಲೆ ಗೂಬೆಯು ಕೂಗಿತು. ಹಾಳು ಗೂಬೆ ಎದ್ದುಹೋಗುವುದೇನೋ ಎಂದು ನೋಡಿದರೆ —ಅದು ಹೋಗಲಿಲ್ಲ—ಮತ್ತೆ ಕೂಗಿತು. "ಕೃಷ್ಣ—ರಾಮ—" ಎಂದು ದೇವರ ನಾಮವನ್ನು ಹೇಳಿಕೊಂಡಳು. ಬೀದಿಯಲ್ಲೊಂದು ನಾಯಿ "ಕುಯ್ಯೋ—" ಎಂದು ಅಳುವುದಕ್ಕೆ ತೊಡಗಿತು. ತಾನೆದ್ದುಹೋಗಿ ಓಡಿಸುವ ಹಾಗಿರಲಿಲ್ಲ—ಬಾಗಿಲು ತೆರೆಯುವುದಕ್ಕೆ ಹೆದರಿಕೆ. "ಬೇಗ ಕೋಳಿ ಕೂಗಬಾರದೇ—ದೇವರೇ —ಇದೇನು ಪರೀಕ್ಷೆಮಾಡುತ್ತೀ ಅಪ್ಪ—" ಎಂದು ಎದ್ದು ನೀಲಾಂಜನಗಳಿಗೆ ತುಪ್ಪವನ್ನು ಹಾಕಿ ಬತ್ತಿಗಳನ್ನು ಹಚ್ಚಿ ದೇವರ ಮುಂದಿಟ್ಟಳು. ಎಲ್ಲಿಯೋ, ಯಾವಾಗಲೋ ಇಟ್ಟುಕೊಂಡಿದ್ದ ಒಂದು ರೂಪಾಯಿಯನ್ನು ತೆಗೆದು ಮುಡುಪು ಕಟ್ಟಿಟ್ಟಳು. ಅವಳ ಕಣ್ಣುಗಳಲ್ಲಿ ನೀರು ತುಂಬಿ ತುಳುಕಾಡುತ್ತ ಸೆರಗೆಲ್ಲ ಒದ್ದೆಯಾಗಿ ಹೋಗಿತ್ತು. ಹಿಂತಿರುಗಿ ಬಂದು ಗಂಡನ ಪಕ್ಕದಲ್ಲಿ ಕುಳಿತಳು. ದೂರದಲ್ಲೆಲ್ಲೋ "ಹೋ" ಎಂದು ಕೂಗಿದ ಹಾಗಾಯಿತು. ನಡುಗಿದಳು.—ಮರುಕ್ಷಣದಲ್ಲಿಯೇ ಶೀಟಿಯ ಧ್ವನಿ. 'ಪೋಲೀಸಿನವನು ಬೀಟು ತಿರುಗುತ್ತಿದಾನೆ' ಎಂದುಕೊಂಡಳು. ಸ್ವಲ್ಪ ಧೈರ್ಯ. ವಾಸುದೇವಯ್ಯನು ಹೊರಳಿದನು. ಎಚ್ಚರವಾಯಿತೇನೋ ಎಂದು ಬಗ್ಗಿನೋಡಿದಳು. ಆಗಿರಲಿಲ್ಲ. ಆದರೂ ಬಲವಂತಮಾಡಿ ಹಾಲನ್ನು ಕುಡಿಸಿದಳು. ಇದ್ದುದು ಎಲ್ಲೋ ಸ್ವಲ್ಪ ಹಾಲು—ಈ ಬಲವಂತದಿಂದ ವಾಸುದೇವಯ್ಯನು ಕಣ್ಣನ್ನು ಬಿಟ್ಟು ನೋಡಿದನು. ಹಾಲು ಮುಗಿದುಹೋಗಿತ್ತು. ರಾತ್ರಿ ಮಗು ಅತ್ತರೆ ಕೈಗಾವಲಿರಲಿ—ಎಂದು ಇಟ್ಟುಕೊಂಡದ್ದು. ಇನ್ನಷ್ಟು ಇದ್ದಿದ್ದರೆ ಕುಡಿ

ಯುತ್ತಿದ್ದನೋ ಏನೋ—ಸೀತಮ್ಮನಿಗೆ ಬಹಳ ಕೊರತೆಯುಂಟಾಯಿತು. "ಇನ್ನು ಸ್ವಲ್ಪ ಹಾಲು ಬೇಕೇ" ಎಂದು ಕೇಳಿಯೂ ಕೇಳಿದಳು. ವಾಸುದೇವಯ್ಯನು ಕಣ್ಣುಬಿಟ್ಟುಕೊಂಡೇ ಇದ್ದನು. ಗಂಡನು ಹಾಲಿಗೋಸ್ಕರ ನಿರೀಕ್ಷಿಸುತ್ತಿದ್ದಾನೆಂದು ಆಕೆಗೆ ಸಂಕಟ ಉಕ್ಕಿಬಂತು. "ಅಯ್ಯೋ ಹೀಗೂ ದೇವರು ಪರೀಕ್ಷೆಮಾಡುವುದುಂಟೇ?" ಎಂದು ಮುಖವನ್ನು ವಾಸುದೇವಯ್ಯನ ಎದೆಯಮೇಲಿಟ್ಟು ಅದನ್ನೆಲ್ಲ ತೋಯಿಸಿದಳು—ಆತನಿಗೆ ಜ್ವರಬಂದು ಮೈಕಾಯುತ್ತಿತ್ತು.

ಬೆಳಗಾಯಿತು. ಗುಡಿಸಲ ಬಾಗಿಲು ಇನ್ನೂ ಹಾಕಿಯೇ ಇದೆ. ರಾತ್ರಿಯೆಲ್ಲ ನಿದ್ದೆಮಾಡದೆ ಕುಳಿತಿದ್ದ ಸೀತಮ್ಮನಿಗೆ ಬೆಳಗಿನ ಜಾವದಲ್ಲಿ ತೂಕಡಿಕೆ ಹತ್ತಿ ವಾಸುದೇವಯ್ಯನ ಕಾಲಬಳಿ ಆಕೆ ಮುದುರಿಕೊಂಡಿದ್ದಳು. ಸೂರ್‍ಯೋದಯಕ್ಕೆ ಪೂರ್ವವೇ ನೀರುಚೆಲ್ಲಿ ಸಾರಿಸಿ—ಗುಡಿಸಿ ರಂಗವಲ್ಲಿಯಿಡುತ್ತಿದ್ದ ಮನೆಯ ಮುಂಭಾಗಕ್ಕೆ ಆದಿನ ಎಂಟುಗಂಟೆಯಾಗಿದ್ದರೂ ಏನೂ ಆಗಿರಲಿಲ್ಲ. ಪಕ್ಕದಲ್ಲಿದ್ದ ತುಳಸೀಗಿಡಗಳನ್ನು ಹಸುವೊಂದು ಬಂದು ಮೇಯುತ್ತಿತ್ತು.

ಮಕ್ಕಳಿಗೆ ಎಚ್ಚರವಾಗಿ ಅವು ಅತ್ತವು. ಸಮಾಧಾನಪಡಿಸುವವರಾರೂ ಇರಲಿಲ್ಲ. ಮೂರುವರ್ಷದ ಹುಡುಗನು ಸೀತಮ್ಮನ ಬಳಿ ಬಂದು "ಅಮ್ಮಾ—ಏಳೇ" ಎಂದು ಎಳೆದನು. ಆಕೆ ಮಾತನಾಡದೇ ಮಲಗಿದ್ದುದನ್ನು ನೋಡಿ ವಾಸುದೇವಯ್ಯನ ಬಳಿಗೆ ಹೋಗಿ "ಅಪ್ಪಾ—ಅಪ್ಪಾ" ಎಂದು ಕೂಗಿದನು. ಮಾತಿಲ್ಲ. ಅವನು ಅಳುವುದು ಹೆಚ್ಚಾಯಿತು. ಈ ಮಕ್ಕಳ ಅಳುವಿನ ಗಲಾಟೆಯಲ್ಲಿ ಸೀತಮ್ಮನಿಗೆ ಕಡೆಗೆ ಎಚ್ಚರವಾಗಿಹೋಯಿತು. ಕಣ್ಣುಬಿಟ್ಟು ನೋಡಿದರೆ ಗುಡಿಸಲು ಒಳಗೆಲ್ಲ ಬಿಸಿಲು ಬಂದುಬಿಟ್ಟಿದೆ, ದೀಪವಿನ್ನೂ ಉರಿಯುತ್ತಲೇ ಇದೆ. ದೀಪವನ್ನು ಆರಿಸಿ ಬಾಗಿಲು ತೆರೆದಳು. ಒಂಭತ್ತುಗಂಟೆ. "ತಿಳಿಯಲೇ ಇಲ್ಲವಲ್ಲ" ಎಂದು ಹೊರಗೆ ಬಂದಳು. ತುಳಸಿಗಿಡಗಳಿರಲಿಲ್ಲ. ಬಾಳೆಯಗಿಡಗಳು ಅರ್ಧ ಮುಕ್ಕಾಲುಪಾಲು ಹೋಗಿಬಿಟ್ಟಿದ್ದುವು. ತೋಟದಲ್ಲಿ ದನಕರುಗಳು ಹಾವಳಿಮಾಡಿ ಹೋಗಿದ್ದುವೆಂದು ವ್ಯಥೆಪಟ್ಟಳು. "ಕಷ್ಟಪಟ್ಟು ಗಂಡ ಬೆಳಸಿದ್ದನಲ್ಲಾ" ಎಂದುಕೊಂಡಳು. ಗಂಡನ ಸ್ಮೃತಿ ಬರುತ್ತಲೂ ಹಿಂದಿನ ರಾತ್ರಿಯೆಲ್ಲ ಕಣ್ಣಿಗೆ ಕಟ್ಟಿಬಿಟ್ಟಿತು. ತಟ್ಟನೆ ಒಳಗೆ ಹೋಗಿ ಗಂಡನನ್ನು ಮಾತನಾಡಿಸಲು ಪ್ರಯತ್ನಪಟ್ಟಳು. ಜ್ವರ ಬಿಟ್ಟಿರಲಿಲ್ಲ. ಅವನು

"ಹೊಡೆಯುತ್ತಾರೆ—ಅಯ್ಯೋ ಪ್ರಾಣಹೋಯಿತು" ಎಂದು ಕಿರಲಿದನು.

"ಯಾರು ಹೊಡೆಯುತ್ತಾರೆ...ಏನಾಯಿತು ನೆನ್ನೆದಿನ—ಏಕೆ ಹೊತ್ತುಮಾಡಿಕೊಂಡು ಬಂದಿರಿ?" ಎಂದು ಸೀತಮ್ಮನು ಬಹಳ ದೈನ್ಯದಿಂದ ಕೇಳಿದಳು.

ಉತ್ತರವಿಲ್ಲ.

ಗಲ್ಲವನ್ನು ಹಿಡಿದು ಮೆಲ್ಲಗೆ ತಿರುಹಿದಳು.—" ಸುಮ್ಮನೆ ನೋಡಬೇಡಿ— ನನಗೆ ಅಳುಬರುತ್ತೆ. ನನಗೆ ನೀವು ಧೈರ್ಯಹೇಳಬೇಕು. . ."

ಅಳುವೇನೋ ಬಂದೇ ಇತ್ತು. ಕಣ್ಣೀರು ಹರಿಯುತ್ತಲಿತ್ತು.

" ಅಮ್ಮಾ—ಅಪ್ಪಾ ಯಾಕೆ ಪಾಚ್ಕಿದ್ದಾನೆ."

" ಅಪ್ಪಾ—ನನಗೆ ಗೊತ್ತಿಲ್ಲವೋ. . ನಿಮ್ಮ ಅದೃಷ್ಟ. . . ಏನು ಹೇಳಲಿ. . ." ಎಷ್ಟು ತಡೆದರೂ ಕಟ್ಟೆಯನ್ನು ಒಡೆದುಕೊಂಡು ಶೋಕಪ್ರವಾಹವು ಹರಿದುಹೋಗುತ್ತಿತ್ತು.

" ಯಾಕಮ್ಮಾ—ನೀ ಅಳೋದು. . ." ಕೇಳುವ ಮಗನಿಗೂ ಅಳುಬಂತು.

" ಯಾಕೆಂದು ಹೇಳಲಪ್ಪಾ. . . . . ."

" ಹೊಡೆಯುತ್ತಾರೆ—ಅಯ್ಯೋ ಪ್ರಾಣ ಹೋಯಿತು ! "

ಸೀತಮ್ಮನಿಗೆ ಬಹಳ ಅಧೈರ್ಯವಾಯಿತು. " ಅದ್ಯಾಕೆ ಹಾಗೆ ಹೇಳುತ್ತೀರಿ— ಯಾರು ಹೊಡೆಯುತ್ತಾರೆ—ಅಯ್ಯೋ—ಯಾರೋ ಏನೋ ಮಾಡಿಬಿಟ್ಟರಮ್ಮ— ನಾವು ಬಡವರು—ಯಾರ ಕಣ್ಣಲ್ಲಿ ಬಿದ್ದೆವೋ "

ವಾಸುದೇವಯ್ಯನು ಸುಮ್ಮನೆ ಕಣ್ಣುಬಿಟ್ಟು ಮಾತ್ರ ನೋಡುತ್ತಿದ್ದನು ; ಮಾತಿಲ್ಲ.

ಮಕ್ಕಳು ' ಹಸಿವು ' ಎಂದು ಅಳಲಾರಂಭಿಸಿದವು. ಸೀತಮ್ಮನು ಎಷ್ಟು ಹೊತ್ತು ಸುಮ್ಮನೆ ಕುಳಿತಿದ್ದಾಳು. ರೋಗವಿರಲಿ, ರುಜನವಿರಲಿ—ನಡೆಯುವ ಕೆಲಸಗಳು ನಡೆಯಬೇಕೋ ಬೇಡವೋ. ತನ್ನ ಮನಸ್ಸನ್ನೆಲ್ಲ ಬಿಗಿಹಿಡಿದು ಮಕ್ಕಳಿಗೆ ಒಂದಷ್ಟು ಅಡಿಗೆಮಾಡಿದಳು. ಅವರಿಗೆ ಬಡಿಸಿ ಆದಮೇಲೆ ಗಂಡನ ಬಳಿ ಬಂದು " ಊಟಮಾಡುವಿರಾ " ಎಂದು ಕೇಳಿದಳು. ಪ್ರತ್ಯುತ್ತರ ಬರಲಿಲ್ಲ. ಅಡಿಗೆಯನ್ನೆಲ್ಲ ಮುಚ್ಚಿಟ್ಟು ಹಾಸಿಗೆಯ ಪಕ್ಕದಲ್ಲಿ ಬಂದು ಕುಳಿತಳು. ತಲೆಯಮೇಲೆ ದೊಡ್ಡ ಚಪ್ಪಡಿ ಬಿದ್ದಾಗ ಊಟವೆಲ್ಲಿಯದು ? ಗಂಡನ ಮುಖವನ್ನೇ ನೋಡುತ್ತ ಗೋಡೆಗೆ ಒರಗಿಕೊಂಡು ಕುಳಿತಿದ್ದಳು. ಮಧ್ಯಾಹ್ನ ಮೂರುಗಂಟೆಯಾಗುತ್ತ ಬಂತು. ವಾಸುದೇವಯ್ಯನು ತನ್ನ ಕಡೆಗೆ ಹೊರಳಿ ನೋಡಿದನು. ಮಾತನಾಡುತ್ತಾರೇನೋ ಎಂದು ಧೈರ್ಯಬಂತು. ' ಊಟಮಾಡುವಿರಾ ' ಎಂದು ಕೇಳಿದಳು. ಉತ್ತರಕೊಡಲು ಹವಣಿಸುತ್ತಿದ್ದ ಹಾಗೆ ಕಂಡಿತು. ಇನ್ನು ಹತ್ತಿರ ಬಂದು ಮುಖವನ್ನು ತಗ್ಗಿಸಿ " ಏನು ಬೇಕು " ಎಂದಳು.

" ನೀರು "

ಸೀತಮ್ಮನ ಸಂತೋಷಕ್ಕೆ ಪಾರವಿಲ್ಲ. ಒಳಗೆದ್ದು ಹೋಗಿ ಹಾಲನ್ನು ತಂದಳು. ಮೂರು ನಾಲ್ಕು ಗುಟುಕು ಕುಡಿದು "ಅವರೆಲ್ಲ ಎಲ್ಲಿ ಹೋದರು ?" ಎಂದು ಕೇಳಿದನು.

ಸೀತಮ್ಮನಿಗೆ ಅರ್ಥವಾಗಲಿಲ್ಲ.

"ಅವರು—ಎಂದರೆ ಯಾರು ?"

"ಅವರು..."

"ಇಲ್ಲಿ ಯಾರೂ ಇಲ್ಲ...ಮಕ್ಕಳನ್ನು ಕೇಳುತ್ತೀರಾ"

"ಅಲ್ಲ...ಅವರು..."

"ಏನೋ ಅಜ್ಞಾನದ ಮಾತು ಆಡುತ್ತಿದಾರೆ" ಎಂದು ಕೊಂಡಳು. "ನೆನ್ನೆರಾತ್ರಿ ಎಲ್ಲಿಗೆ ಹೋಗಿದ್ದಿರಿ......ಏನಾಯಿತು..."

"ರಾತ್ರಿ...ರಾತ್ರಿ......ಹೇಳುತ್ತೇ...ಕೊಡಿಸು."

"ಬೇಡ—ಬೇಡ—ಮಲಗಿಕೊಂಡೇ ಹೇಳಿ...ನಿಮಗೆ ಶಕ್ತಿಯಿಲ್ಲ."

"ಕೊಡಿಸು...ಕೊಡಿಸು—" ಎಂದು ಏಳಲಿಕ್ಕೆ ಪ್ರಯತ್ನಪಟ್ಟನು.

ಸೀತಮ್ಮನು ಗಂಡನನ್ನು ಮೆಲ್ಲಗೆ ಎಬ್ಬಿಸಿ ಒರಗಿಸಿಕೊಂಡಳು. ಅಷ್ಟುಹೊತ್ತಿಗೆ ಯಾರೋ ಬರುತ್ತಿದ್ದಹಾಗೆ ಬಾಗಿಲು ಮುಂದೆ ನೆರಳು ಬಿತ್ತು. ಆದರೆ ಗಂಡನನ್ನು ಕೆಳಗೆ ಬಿಟ್ಟುಬಿಡುವ ಸ್ಥಿತಿಯಲ್ಲಿರಲಿಲ್ಲ. ರಾಜಮ್ಮನವರು ಮೆಲ್ಲಗೆ ತಲೆಹಾಕಿದರು. ವಾಸುದೇವಯ್ಯನು 'ಕಿರೋ' ಎಂದು ಕಿರಿಚಿ—ಉರುಳಿಬಿದ್ದನು. ಕೈಕಾಲುಗಳು ಅದುರುತ್ತಿದ್ದುವು. ರಾಜಮ್ಮನವರಿಗೆ ಏನೂ ತೋಚದೆ, ದಿಗ್ಭ್ರಾಂತರಾಗಿ ಹಿಂದಕ್ಕೆ ಸರಿದುಬಿಟ್ಟರು. ಸೀತಮ್ಮನಿಗೆ ಏನೂ ತೋಚಲಿಲ್ಲ. ರಾಜಮ್ಮನವರು ಹೊರಟುಹೋಗಲಿಲ್ಲ.

"ಯಾಕೆ ಸೀತಮ್ಮ—ನಿಮ್ಮ ಯಜಮಾನರಿಗೆ ಮೈಸ್ವಸ್ಥವಿಲ್ಲವೇ—"

"ಅಮ್ಮಾ...ನಾನೇನು ಹೇಳಲಿ. ಸ್ವಲ್ಪವೂ ಚೆನ್ನಾಗಿಲ್ಲ. ರಾತ್ರಿಯಿಂದ ಒಂದೇ ರೀತಿ ಕಾಯುತ್ತಿದ್ದೇನೆ."

"ಅಯ್ಯೋ ಪಾಪ. ಏನಾಗಿದೆ ? ನೆನ್ನೆ ಮೊನ್ನೆ ಚೆನ್ನಾಗಿದ್ದರಲ್ಲ. ಏನು ಗ್ರಹಚಾರ. ನಿಮಗೇನು ಸಹಾಯವಾಗಬೇಕು—ಹೇಳಿ—ನಾನು ಮಾಡಿಕೊಡುತ್ತೇನೆ."

"ಅಮ್ಮ ನಮಗೆ ಎಲ್ಲರ ಸಹಾಯವೂ ಬೇಕು. ಬಡವರನ್ನು ಅಷ್ಟರಮಟ್ಟಿಗೆ ವಿಚಾರಿಸುವವರಾರು—ನಮ್ಮ ಅಣ್ಣನಿಗೆ ಕಾಗದ ಬರೆದಿಟ್ಟಿದ್ದೇನೆ. ಅದನ್ನು ಟಪ್ಪಾಲಿಗೆ ಹಾಕಿಸಿ ಉಪಕಾರಮಾಡಿ"

"ಇಲ್ಲಿಕೊಡಿ—ಹಾಕಿಸುತ್ತೇನೆ. ನೀವು ಸಂಕೋಚಪಟ್ಟುಕೊಳ್ಳಬೇಡಿ ಸೀತಮ್ಮ ! ಹತ್ತಿರ ಹಣಕಾಸು ಇಲ್ಲದಿದ್ದರೆ ನಾನು ಕೊಡುತ್ತೇನೆ."

"ಬೇಡಮ್ಮ—ಬೇಡ—ನಿಮ್ಮ ದಯೆಯಿದ್ದರೆ ಸಾಕು—ಮುಖ್ಯ ದೇವರು ನನಗೆ ಒಳ್ಳೆಯದನ್ನು ಮಾಡಬೇಕು."

ರಾಜಮ್ಮನವರು ವ್ಯಸನದಿಂದ ಮನೆಗೆ ಬಂದರು. "ಪಾಪ—ಸೀತಮ್ಮನ ಗಂಡನಿಗೆ ಎಷ್ಟು ಖಾಯಿಲೆ......ಅವರೇಕೆ ನನ್ನನ್ನು ನೋಡಿ ಹಾಗೆ ಕಿರಿಚಿದರು ?..." ಏನೋ ಪಾಪ...ರಾಜಮ್ಮನವರಿಗೆ ಏನೂ ತಿಳಿಯಲಿಲ್ಲ.

ವಾಸುದೇವಯ್ಯನು "ಹೊಡೆಯುತ್ತಾರೆ—ಅಯ್ಯೋ ಪ್ರಾಣ ಹೋಯಿತು" ಎಂದು ಕೂಗಿಕೊಂಡನು. ಸೀತಮ್ಮನು ಏನು ಉಪಚಾರ ಮಾಡಿದರೂ ಫಲವಾಗಲಿಲ್ಲ. ಸಾಯಂಕಾಲವಾಗುತ್ತ ಬಂತು—ರಾತ್ರಿ ತಲೆಹಾಕುವುದರಲ್ಲಿತ್ತು. ಅಮಾವಾಸ್ಯೆಯ ಹಿಂದಿನ ರಾತ್ರಿ ; ಸೀತಮ್ಮನು ನಡುಗಿ ಹೋದಳು. "ಇನ್ನು ರಾತ್ರಿ ಕಳೆಯುವುದು ಹೇಗಮ್ಮ" ಎಂದುಕೊಂಡಳು. ವಾಸುದೇವಯ್ಯನ ಸ್ಥಿತಿ ಗಂಟೆಗಂಟೆಗೂ ಕೆಡುತ್ತ ಬಂತು. ಮೊದಲು ಎಲ್ಲೋ ಒಂದು ಬಾರಿ ಕೂಗುತ್ತಿದ್ದವನು—ಈಗ ಪದೇ ಪದೇ "ಹೊಡೆಯುತ್ತಾರೆ—ಅಯ್ಯೋ ಪ್ರಾಣ ಹೋಯಿತು" ಎನ್ನುತ್ತಿದ್ದನು.

ಆ ದಿನ ರಾತ್ರಿ ರಾಜಮ್ಮನವರು ತನ್ನಅಡಿಗೆಯ ಹೆಂಗಸನ್ನು ಮಕ್ಕಳಿಗೆ ಒಂದಷ್ಟು ಅನ್ನ—ಹಾಲು—ಹಣ್ಣು—ಇವುಗಳೊಂದಿಗೆ ಗುಡಿಸಲಿಗೆ ಕಳುಹಿಸಿದರು. ಕಾಲುಗಂಟೆ ಬಿಟ್ಟುಕೊಂಡು ಅವರೇ ಬಂದು "ಸೀತಮ್ಮ—ನೀವೇನಾದರೂ ತೆಗೆದು ಕೊಳ್ಳಬಾರದೆ—ಬಹಳ ಬಡವಾಗಿ ಹೋಗಿದ್ದೀರಿ. ಸ್ವಲ್ಪ ಆಧಾರಮಾಡಿಕೊಳ್ಳಿ ರಮ್ಮ—ದೇವರ ಮೇಲೆ ಭಾರಹಾಕಿ—" ಎಂದು ಮುಂತಾಗಿ ಸಮಾಧಾನ ಹೇಳಿ ಬಲವಂತದಿಂದ ಊಟದ ಶಾಸ್ತ್ರಮಾಡಿಸಿದರು. ಅಡಿಗೆಯವಳು ಅಲ್ಲಿಯೇ ಮಲಗಿ ಸೀತಮ್ಮನಿಗೆ ಸಹಾಯವಾಗಿರುವಂತೆ ಬಿಟ್ಟುಹೋದರು.

"ನಿಮ್ಮ ಹೊಟ್ಟೆ ತಣ್ಣಗಿರಲಿ—ಪುಣ್ಯವಂತರ ಮನೆಯವರೂ ಇಷ್ಟು ಒಳ್ಳೆಯವರಾಗಿರುತ್ತಾರೆಯೇ—"

ಆದರೆ ರಾಜಮ್ಮನವರು ಈ ಮಾತುಗಳನ್ನು ಕೇಳಲಿಲ್ಲವೆಂದು ತೋರುತ್ತದೆ. ಅವರು ಹೊರಟುಹೋಗಿದ್ದರು.

ಎರಡು ಮೂರು ದಿವಸಗಳು ಕಳೆದವು. ವಾಸುದೇವಯ್ಯನಿಗೆ ಯಾರು ಬರುವರು ಯಾರು ಹೋಗುವರು ಎಂಬ ವಿಚಾರವೇ ತಿಳಿಯುತ್ತಿರಲಿಲ್ಲ. ರಾಜಮ್ಮನವರು ದಿವಸಕ್ಕೆ ಮೂರು ನಾಲ್ಕು ಬಾರಿ ಬಂದು 'ನಿಮಗೇನು ಬೇಕಮ್ಮ-ಆಸ್ಪತ್ರೆಯವರಿಗೆ

ತೋರಿಸೋಣವೇ, ಏನು ಸಹಾಯ ಮಾಡಲಮ್ಮ ' ಎಂದು ಕೇಳುತ್ತ ಸೀತಮ್ಮನು ಒಂದಷ್ಟು ಆಹಾರತೆಗೆದುಕೊಳ್ಳುವ ಹಾಗೆ ಹತ್ತಿರವಿದ್ದು ಬಲವಂತಮಾಡಿ ಹೋಗುತ್ತಿದ್ದರು. ಎರಡು ಮೂರು ದಿನಗಳಲ್ಲಿಯೂ ಅಡಿಗೆಯವಳು ಗುಡಿಸಲಿನಲ್ಲಿಯೇ ಇದ್ದು ಸಹಾಯಮಾಡುತ್ತಿದ್ದಳು.

" ವಾಸುದೇವಯ್ಯನಿಗೆ ಹುಚ್ಚು ಹಿಡಿದುಹೋಗಿದೆ-ಏನೇನೋ ಕೂಗುತ್ತಾನೆ" ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದರು. " ಅಯ್ಯೋ ಪಾಪ ಏನಾಗಿತ್ತು-ಏಕೆ ಹುಚ್ಚು ಹಿಡಿಯಿತು " ಎಂದು ಮತ್ತೆ ಕೆಲವರು ಕೇಳುತ್ತಿದ್ದರು. ಆತ ಬಹಳ ಹೆದರಿಕೆಯ ಮನುಷ್ಯ, ಭೂತ ಹೊಡೆಯಿತೇನೋ " ಎಂದು ಇನ್ನು ಕೆಲವರು ಹೇಳುತ್ತಿದ್ದರು. ನಾನು ಹೋಗಿ ಗುಡಿಸಲಿನಲ್ಲಿ ವಿಚಾರಿಸಿಕೊಂಡು ಬಂದೆ. ಅವರ ಕಷ್ಟವೆಲ್ಲ ಕಂಡು ಕೇಳಿ ನನ್ನ ಹೊಟ್ಟೆ ಅವಿಚಿಹೋಯಿತು.

ಸೀತಮ್ಮನ ಅಣ್ಣನು ಬಂದನು. ಅವನು ಹಳ್ಳಿಯ ಸ್ಕೂಲಿನ ಉಪಾಧ್ಯಾಯ. ಸಂಬಳವೋ ತಿಂಗಳಿಗೆ ಹದಿನೇಳು ರೂಪಾಯಿಗಳು ; ಕೈಯಲ್ಲಿದ್ದ ಗಂಟನ್ನು ಮೂಲೆಗಿಟ್ಟು ಕೈಕಾಲು ತೊಳೆದು ವಾಸುದೇವಯ್ಯನ ಹತ್ತಿರ ಬರುತ್ತ " ಅಮ್ಮಾ ಇದೇನು ನಿನ್ನ ಅವಸ್ಥೆ ಕಣ್ಣಿಂದ ನೋಡಲಾರೆನಲ್ಲಾ ಎಷ್ಟುದಿವಸದಿಂದ ಹೀಗೆ ? " ಎಂದನು.

" ಅಣ್ಣಾ ನಾನೇನು ಹೇಳಲಿ ಕಾಗದದಲ್ಲಿ ಎಲ್ಲವನ್ನೂ ಬರೆಯಲಾಗಲಿಲ್ಲ. ಇಲ್ಲಿ ಆ ರಾಜಮ್ಮನವರ ಸಹಾಯ-ಅವರ ಹೊಟ್ಟೆ ತಣ್ಣಗಿರಲಿ-ಅವರ ಸಹಾಯ ಇಲ್ಲದಿದ್ದರೆ ನಾನು ಏನಾಗಿ ಹೋಗುತ್ತಿದ್ದೆನೋ "

ವಾಸುದೇವಯ್ಯನನ್ನು ಮಾತನಾಡಿಸಿ ಕೈಮುಟ್ಟಿ ನೋಡಿದನು. ಸ್ವಾರಸ್ಯ ಕಾಣಲಿಲ್ಲ.

" ಇದೇಕಮ್ಮಾ ಹೀಗಾಯಿತು ? "

" ದೇವರಿಗೆ ಗೊತ್ತಪ್ಪ ; ರಾತ್ರಿ ಬಂದು ಬಿದ್ದದ್ದೇ ಬಿದ್ದದ್ದು "

" ಅಮ್ಮಾ ನಾವು ಬಡವರು...ಏನೋ ಗ್ರಹಚಾರ...ಗಂಟೂ ಮೂಟೆ ಕಟ್ಟು-ಇಲ್ಲಿದ್ದು ಏನು ಮಾಡಬೇಕು. ನಿನ್ನ ಅದೃಷ್ಟ ಚೆನ್ನಾಗಿದ್ದರೆ ಭಾವನ ಬುದ್ಧಿಯು ಸ್ವಾಧೀನಕ್ಕೆ ಬರಬಹುದು " ಎಂದು ಆತ ಸಮಾಧಾನಪಡಿಸಿದ. ಊಟ ಮಾಡಿ ಮಧ್ಯಾಹ್ನದ ಮೇಲೆ ಗಂಟು ಮೂಟೆಗಳನ್ನು ಕಟ್ಟಿದ್ದಾಯಿತು. ಗಾಡಿಯೂ ಬಂತು. ಸಾಮಾನುಗಳನ್ನೆಲ್ಲ ಭಂಡಿಗೆ ಭರ್ತಿಮಾಡಿ ಮಕ್ಕಳನ್ನು ಕೂಡಿಸಿದ್ದೂ ಆಯಿತು. ಗಾಡಿಯ ಬಳಿ ನಿಂತು " ಅಮ್ಮಾ-ಬಾ-ಇನ್ನೂ ಏನು ಸವರಿಸುತ್ತಿದೀಯೆ " ಎಂದು ಅಣ್ಣನು ಕರೆದನು. ಸೀತಮ್ಮನು ಗುಡಿಸಲಿಂದ

ಹೊರಗೆ ಬಂದು ಮುಂದೆ ಹೆಜ್ಜೆಯಿಡಲಾರದೆ ಆ ಗುಡಿಸಲನ್ನು ಹಾಗೆ ನೋಡಿ, ಹೀಗೆ ನೋಡಿ, ಕಣ್ಣೀರನ್ನು ಸೆರಗಿಂದ ಒರಸಿಕೊಳ್ಳುತ್ತ "ಅನುವಾಗಿ ಸಂಸಾರಮಾಡಬೇಕೆಂದು ಕಟ್ಟಿದ ಗುಡಿಸಲು—ಕಾಲೇ ಬಾರದಲ್ಲಾ......ಹೀಗಾಗುವುದೆಂದು ಕನಸಿನಲ್ಲಿಯೂ ಕಾಣೆನಲ್ಲಾ......" ಎಂದು ಬಿಡಲಾರದೆ ಬಿಟ್ಟುಬಂದಳು.

ರಾಜಮ್ಮನವರೂ ಅಷ್ಟುಹೊತ್ತಿಗೆ ಅಲ್ಲಿಗೆ ಬಂದರು. ಅವರ ಮುಖವು ಮಂಜುಮುಸುಕಿದ ಕಮಲವಾಗಿತ್ತು. ಆರುತಿಂಗಳು ಖಾಯಿಲೆ ಬಿದ್ದಹಾಗೆ ಬಡವಾಗಿದ್ದರು. ಕಣ್ಣೀರು ಸುರಿಯುತ್ತಿತ್ತು. ಬಂದವರು ಸೀತಮ್ಮನ ಕೈಯನ್ನು ಹಿಡಿದುಕೊಂಡು ಭುಜದ ಮೇಲೆ ಮುಖವಿಟ್ಟು—"ಸೀತಮ್ಮ......ಸೀತಮ್ಮ......ನಾನಿನ್ನು ಭೂಮಿಯಮೇಲಿರಬಾರದು......ಇಂಥಾ ಅನ್ಯಾಯವೂ ಉಂಟೇ......ಅಯ್ಯೋ......" ಎಂದು ಅತ್ತರು. ಸೀತಮ್ಮನಿಗೆ ಏನು ಹೇಳಲಿಕ್ಕೂ ತೋರದೆ "ಅಮ್ಮಾ—ನೀವೇಕೆ ಕಣ್ಣೀರು ಹಾಕುತ್ತೀರಿ, ನನ್ನ ಗ್ರಹಚಾರ" ಎಂದಳು.

"ಅಯ್ಯೋ...ಗಂಡಸರು...ಇಷ್ಟು ಕಲ್ಲುಮನಸ್ಸು...ಎಂದು ತಿಳಿಯಲಿಲ್ಲವೇ...ಯಾತಕ್ಕೂ ಹೇಸುವರಲ್ಲಮ್ಮ...ಸೀತಮ್ಮ...ನನ್ನ ಜನ್ಮ ಇನ್ನೇಕೆ"

ಸೀತಮ್ಮನು ಮೆಲ್ಲಗೆ ಬಿಡಿಸಿಕೊಂಡು ಗಾಡಿಯನ್ನು ಹತ್ತಿ "ನನ್ನನ್ನು ಮರೆಯಬೇಡಿರಮ್ಮ—ಹೋಗಿಬರುತ್ತೇನೆ. ಜ್ಞಾಪಕವಿರಲಿ" ಎಂದಳು.

ಗಾಡಿಯು ಹೊರಟಿತು. ರಾಜಮ್ಮನವರು ಹೋಗುತ್ತಿದ್ದ ಗಾಡಿಯನ್ನೇ ದೃಷ್ಟಿಸಿ ನೋಡುತ್ತ "ಹೇಗೆ ಮರೆತೇನಮ್ಮ—ಮರೆ ಎಂದರೆ ಮರೆತೀತೇ...ಎಂಥಾ ಅನ್ಯಾಯ...ಎಂಥಾ ಕಲ್ಲುಮನಸ್ಸು...ಸೀತಮ್ಮನ ಸಂಕಟ ಸಹಿಸಬಹುದೇ...ಇನ್ನಿರಬಾರದಮ್ಮಾ ಭೂಮಿಯ ಮೇಲೆ" ಎಂದು ಕಣ್ಣೀರು ಸುರಿಸುತ್ತ ಮನೆ ಸೇರಿದರು.

ಇದಾಗಿ ಮೂರು ದಿವಸಗಳಾಗಲಿಲ್ಲ. ರಾಜಮ್ಮನವರು "...ಅಯ್ಯೋ...ಹೊಟ್ಟೆಯಲ್ಲಿ ಸುಣ್ಣಕಲ್ಲು ಸುರಿದಹಾಗೆ ಕುದಿದುಹೋಗುತ್ತೆ!" ಎಂದು ಯಾವಾಗ ನೋಡಿದರೂ ಸಂಕಟಪಡುತ್ತಿದ್ದರು. ಏನು ಮಾಡಿದರೂ ಸಂಕಟವು ಕಮ್ಮಿಯಾಗುವಂತಿರಲಿಲ್ಲ.

ಆಕೆಯ ತಂದೆತಾಯಿಗಳು ಬಂದರು. ಯಾರು ಬಂದು ಏನು ಮಾಡುತ್ತಾರೆ—ಮುಖ ಮಾತ್ರ ದಕ್ಕಿತು. ಆ ದಿವಸ ಆ ತಂದೆತಾಯಿಗಳ ಗೋಳು ನೋಡಬೇಕೇ—ರಾಮರಾಮ. ದೇವರಂತೆ ದೇವರು! ಎಲ್ಲಿದ್ದಾನೋ ಆ ದೇವರು!—ಎನ್ನಿಸಿಬಿಟ್ಟಿತು. ಊರಿಗೆ ಊರೇ ಅತ್ತಿತು. ಎಲ್ಲರ ಬಾಯಲ್ಲಿಯೂ "ರಾಜಮ್ಮನವರು...

5

ರಾಜಮ್ಮನವರು. ನಮ್ಮ ಊರಿಗೇ ಕಳೆಯಿತ್ತಲ್ಲಾ—ಲಕ್ಷ್ಮಿಯಂತಿದ್ದರಲ್ಲಾ—ಯಮನಿಗೇನು ಕರುಣವಿಲ್ಲ'' ಎಂಬ ಮಾತೇ.

ಆ ಕಥೆ ಸಾಕು. ಈಗ್ಗೆ ಜ್ಞಾಪಕಬಂದರೂ ಸಂಕಟ ಉಕ್ಕಿಬರುತ್ತದೆ.

ಗೋಪಾಲರಾಯನ ಮನೆ ಬೀಗ ಹಾಕಿತ್ತು. ನನ್ನ ಹತ್ತಿರ ಇದ್ದ ರಾಮಣ್ಣನವರನ್ನು 'ಗೋಪಾಲರಾಯ ಈಗೆಲ್ಲಿದ್ದಾನೆ'—ಎಂದು ಕೇಳಿದೆ. ಅವರು

'ಆ ಪಾಪಿಯ ಮಾತೆತ್ತಬೇಡಿ. ಎಲ್ಲಿದ್ದಾನೋ... ಕೃಷ್ಣ... ರಾಮ... ಗೋವಿಂದ...' ಎಂದು ದೇವರ ಸ್ಮರಣೆ ಮಾಡಿದರು.

ಕಾ ವ್ಯಾ ವ ಲೋ ಕ ನ

ಕರ್ನಾಟಕ ಸಾಮ್ರಾಜ್ಯ ಸಂಪುಟ ೧—ಭಾಗ ೧, ೨. ೧೯೨೬ ನೆಯ ನವಂಬರ್. ಬೆಲೆ ಪ್ರತಿಭಾಗಕ್ಕೆ ರೂ. ೧—೨—೦. ಗ್ರಂಥಕರ್ತರು ಮ|| ರಾ|| ಹ. ದೇಶಪಾಂಡೆ, ಎಂ.ಎ., ಧಾರವಾಡ. ಬೆಂಗಳೂರು ಪ್ರೆಸ್, ಬೆಂಗಳೂರು.

ದಕ್ಷಿಣದೇಶದ ಪೂರ್ವಚರಿತ್ರೆಯಲ್ಲಿ ಕರ್ಣಾಟಕವು ಕೇಂದ್ರಸ್ಥಾನವಾಗಿ ಕಾಣಬರುತ್ತದೆ. ಇಂಥ ಕನ್ನಡದೇಶದ ಚರಿತ್ರೆಗೆ ಆಧಾರಗಳಾದ ಶಾಸನಗಳೂ, ನಾಣ್ಯಗಳೂ, ಗುಡಿಗೋಪುರಗಳೂ, ಸಂಸ್ಕೃತ ಕನ್ನಡ ಮೊದಲಾದ ಭಾಷೆಗಳ ಗ್ರಂಥಗಳೂ ಹೇರಳವಾಗಿರುವುವು. ಇವುಗಳಲ್ಲಿ ಇದುವರೆಗೆ ದೊರೆತಿರುವ ಕೆಲವು, ಶಾಸನದ ಇಲಾಖೆಗಳ ರಿಪೋರ್ಟುಗಳಲ್ಲಿಯೂ ಇಂಡಿಯನ್ ಆಂಟಿಕ್ವೆರಿ ಮೊದಲಾದ ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಇವುಗಳನ್ನು ವಿಮರ್ಶಿಸಿ ಇವುಗಳಿಂದ ಹೊರ ಪಡುವ ಚರಿತ್ರಾರ್ಹವಾದ ವಿಷಯವನ್ನು ಇತಿಹಾಸರೂಪವಾಗಿ ಬರೆದಿರುವವರು ಬಹಳ ಕಡಮೆ. ಇಂಥವರಲ್ಲಿ ಡಾ|| ಫ್ಲೀಟ್ ಮತ್ತು ಮೆ|| ರೈಸ್ ಸಾಹೇಬರುಗಳ ಪ್ರಯತ್ನಗಳು ಚಿರಸ್ಮರಣೀಯವಾದುವು. ಡಾ|| ರಾ. ಗೋ. ಭಾಂಡಾರಕರರೂ, ರಾ|| ನರಸಿಂಹಾಚಾರ್ಯರೂ, ಮ|| ಹೊ. ಕೃಷ್ಣಶಾಸ್ತ್ರಿಗಳೂ, ಡಾ|| ಕೃಷ್ಣಸ್ವಾಮಯ್ಯಂಗಾರ್ಯರೂ, ಇನ್ನೂ ಇತರ ವಿದ್ವಾಂಸರೂ ಅನೇಕ ಹೊಸವಿಷಯಗಳನ್ನು ಕಂಡುಹಿಡಿದಿರುವರು. ಇವರುಗಳ ಗ್ರಂಥಗಳಲ್ಲಿ ಸಿಕ್ಕುವ ವಿಷಯಗಳನ್ನೆಲ್ಲ ಸಂಗ್ರಹಿಸಿ ಕರ್ಣಾಟಕದ ಚರಿತ್ರೆಯೊಂದನ್ನು ಯಾರೂ ಇಂಗ್ಲಿಷಿನಲ್ಲಾಗಲಿ ಕನ್ನಡದಲ್ಲಾಗಲಿ ಬರೆದಿಲ್ಲ. ನಾಲ್ವತ್ತುವರ್ಷಗಳ ಕೆಳಗೆ ಡಾ|| ಫ್ಲೀಟರು ಬರೆದ ಪುಸ್ತಕವೇ ಈಗ್ಗೂ ಕನ್ನಡದೇಶದ ಚರಿತ್ರೆಗೆ ಮುಖ್ಯ ಕೈಪಿಡಿಯಾಗಿದೆ. ಆಂಧ್ರದೇಶಕ್ಕೆ ಮ|| ಚಿ. ವೀರಭದ್ರರಾಯರ 'ಆಂಧ್ರುಲ ಚರಿತ್ರಮು' ಹೇಗೋ, ಮಹಾರಾಷ್ಟ್ರಕ್ಕೆ ಮ|| ಸರದೇಸಾಯಿಯವರ 'ಮರಾಠೀ ರಿಯಾಸತ್' ಹೇಗೋ ಹಾಗೆ ಆ ಎರಡು ದೇಶಗಳಿಗಿಂತಲೂ ಹೆಚ್ಚು ವೈಭವವುಳ್ಳ ಕನ್ನಡನಾಡಿನ ಚರಿತ್ರೆಯನ್ನು ಬರೆಯುವುದಕ್ಕೆ ಕನ್ನಡಿಗರನೇಕರು ಉತ್ಸಾಹಿಸುವುದು ಸಹಜವಾಗಿದೆ. ಇಂಥ ಪ್ರಯತ್ನಗಳ ಫಲಗಳಲ್ಲಿ 'ಕರ್ನಾಟಕ ಸಾಮ್ರಾಜ್ಯ'ವು ಒಂದಾಗಿದೆ.

ಕನ್ನಡಭಾಷೆಯ ಪುನರುಜ್ಜೀವನದಲ್ಲಿ ಅಭಿಮಾನಿಗಳಾದವರೆಲ್ಲರಿಗೂ ಮ|| ರಾಮಚಂದ್ರ ಹಣುಮಂತ ದೇಶಪಾಂಡೆ, ಎಂ.ಎ. ಇವರ ಹೆಸರು ಸುಪರಿಚಿತವಾಗಿಯೇ ಇದೆ. ಇವರು ಬರೆದಿರುವ 'ಬೀರಬಲ್ಲನ ಚರಿತ್ರೆ' 'ಛತ್ರಪತಿ ಶಿವಾಜಿ ಮಹಾರಾಜ' ಮೊದಲಾದ ಗ್ರಂಥಗಳನ್ನು ಅನೇಕರು ಓದಿ ಸಂತೋಷಪಟ್ಟಿದ್ದಾರೆ. ಉತ್ತರ ಕರ್ಣಾಟಕದಲ್ಲಿ ವಿದ್ಯಾವೃದ್ಧಿಗಾಗಿ ನಾಲ್ವತ್ತುವರ್ಷ ಕಾಲ ಕೆಲಸಮಾಡಿ ಮ|| ದೇಶಪಾಂಡೆಯವರು ಪ್ರಸಿದ್ಧರಾಗಿದ್ದಾರೆ. ಇವರು ಈಗ ಕನ್ನಡದೇಶದ ಚರಿತ್ರೆಯನ್ನು ವಿವರಿಸುವುದಕ್ಕಾಗಿ ಮೇಲೆ ಹೇಳಿದ 'ಕರ್ನಾಟಕ ಸಾಮ್ರಾಜ್ಯ'ವೆಂಬ ದೊಡ್ಡ ಗ್ರಂಥವನ್ನು ರಚಿಸಿ ಶ್ರೀ ವಿದ್ಯಾರಣ್ಯಸಂಸ್ಥೆಯಲ್ಲಿ ಪ್ರಕಟಿಸುವುದಕ್ಕೆ ಪ್ರಾರಂಭಿಸಿರುವರು. ಇಂಥ ಮಹತ್ಕಾರ್ಯವನ್ನು ಸರಿಯಾಗಿ ನಡೆಸಿ ಕೊನೆಮುಟ್ಟಿಸಬೇಕಾದರೆ ಇತಿಹಾಸ ಶೋಧನಕಾರ್ಯದಲ್ಲಿ ದಕ್ಷರಾದ ಹಲವುಮಂದಿ ವಿದ್ವಾಂಸರು ಕಲೆತು ಕೆಲಸಮಾಡಬೇಕು. ಈಗಿನ ಕನ್ನಡನಾಡಿನಲ್ಲಿ ಇಂಥ ವಿದ್ವಾಂಸರೂ ಕಡಮೆ. ಇರುವ ಒಬ್ಬಿಬ್ಬರಿಗೂ ವಿರಾಮವಿಲ್ಲ. ಆದ್ದರಿಂದ ಸ್ವಯಂ ಇತಿಹಾಸಸಂಶೋಧನದಲ್ಲಿ ಪ್ರವೀಣರಲ್ಲದಿದ್ದರೂ ಮ|| ದೇಶಪಾಂಡೆಯವರ ಪ್ರಕೃತಪ್ರಯತ್ನವು ಬಹಳ ಶ್ಲಾಘನೀಯವಾಗಿದೆ. ಇವರು ಈ ಕಾರ್ಯವನ್ನು ಸಾಧಿಸುವುದಕ್ಕಾಗಿ 'ಹಳಹಳಿಸಿ, ಚಡಪಡಿಸಿ, ತಳಮಳಿಸಿ, ಚಿಂತಿಸಿ, ಚಿಂತಿಸಿ, ನೊಂದು, ಬೆಂದು, ಕೊರಗಿ, ಮಿಡಿಕಿ, ತಲ್ಲಣಿಸಿ'ದುದನ್ನು ಕೇಳಿದವರೆಲ್ಲರಿಗೂ, ವೃದ್ಧರಾದರೂ ಗ್ರಂಥಕರ್ತರು ಪರಮೋತ್ಸಾಹಿಗಳೆಂಬುದು ವ್ಯಕ್ತವಾಗುತ್ತದೆ.

ವಿಷಯದ ಮಹತ್ವಕ್ಕೆ ತಕ್ಕಂತೆ ಈಗ ಪ್ರಾರಂಭಿಸಿರುವ ಗ್ರಂಥವೂ ಬಹಳ ದೊಡ್ಡದಾಗಿದೆ. ಇದುವರೆಗೆ ಪ್ರಥಮಸಂಪುಟದಲ್ಲಿ ಸರಾಸರಿ ೧೭೦ ಪುಟಗಳುಳ್ಳ ಎರಡುಭಾಗಗಳು ಮಾತ್ರ ಹೊರಬಿದ್ದಿವೆ. ಒಂದನೆಯ ಭಾಗದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದ ಪ್ರಾರಂಭಿಸಿ, ಮೌರ್ಯರು, ಶಾತವಾಹನರು, ಗಂಗರು, ಪಲ್ಲವರು, ಕದಂಬರು, ಈ ಮನೆತನಗಳಿಗೆ ಸಮಕಾಲೀನವಾದ ಇತರ ಅರಸುಮನೆತನಗಳು, ಕ್ರಿ. ಶ. ೫೫೦ ರ ವರೆಗೆ ದೇಶಕಾಲಸ್ಥಿತಿ ಈ ವಿಷಯಗಳನ್ನು ಬರೆದಿದೆ. ಎರಡನೆಯ ಭಾಗದಲ್ಲಿ, ಬಾದಾಮಿಯ ಚಾಳುಕ್ಯರ ಏಳಿಗೆಯೂ, ಅವರ ಆಳಿಕೆಯೂ, ಕಡೆಗೆ ಅವರ ರಾಜ್ಯವನ್ನು ರಾಷ್ಟ್ರಕೂಟರು ಆಕ್ರಮಿಸಿದುದೂ, ಕ್ರಿ. ಶ. ೭೫೭ ರ ವರೆಗೆ ದೇಶಕಾಲಸ್ಥಿತಿಯೂ ವಿವರಿಸಲ್ಪಟ್ಟಿವೆ. ಪ್ರತಿಭಾಗದಲ್ಲೂ ಸುಮಾರು ೧೦ ಚಿತ್ರಗಳಿವೆ. ಇದೇ ರೀತಿಯಲ್ಲಿ ೧೯ ನೆಯ ಶತಮಾನದವರೆಗೂ ಕರ್ಣಾಟಕದ ಚರಿತ್ರೆ ಎಲ್ಲವನ್ನೂ ಬರೆದರೆ ಸುಮಾರು ಎರಡುಸಾವಿರ ಪುಟಗಳಿಗಿಂತ ಕಡಮೆಯಾಗಲಾರದೆಂದು ತೋರುತ್ತದೆ.

ಪ್ರಕೃತಗ್ರಂಥಕ್ಕೆ ಮೇಲೆ ಹೇಳಿದ ಫ್ಲೀಟ್ ಮೊದಲಾದ ಪ್ರಾಕ್ತನವಿಮರ್ಶಕ ವಿದ್ವಾಂಸರ ಪ್ರಸಿದ್ಧಗ್ರಂಥಗಳೇ ಆಧಾರಗಳೆಂದು ಗ್ರಂಥಕರ್ತರೇ ತಿಳಿಸಿದ್ದಾರೆ. ರನ್ನನ ಗದಾಯುದ್ಧ, ಚಾಮುಂಡರಾಯಪುರಾಣ ಮೊದಲಾದ ಕನ್ನಡ ಗ್ರಂಥಗಳಿಂದಲೂ ಒಂದೆರಡು ವಿಷಯಗಳು ಉದ್ಧೃತವಾಗಿವೆ. ಇದಲ್ಲದೆ ತಮ್ಮ ಸ್ವಂತ ಅನುಮಾನಗಳನ್ನೂ, ಅಭಿಪ್ರಾಯಗಳನ್ನೂ, ಲೋಕಾನುಭವವನ್ನೂ ಕೆಲವೆಡೆಗಳಲ್ಲಿ ಬರೆದಿರುವರು. ಹೀಗೆ ನಾನಾಮೂಲದಿಂದ ವಿಷಯಸಂಗ್ರಹವನ್ನು ಮಾಡುವಾಗ ಪುಟದ ಅಡಿಯಲ್ಲಿ ಪ್ರಕೃತವಾದ ಆಧಾರಗ್ರಂಥಗಳನ್ನು ಸೂಚಿಸುವುದು ಚರಿತ್ರಕಾರರ ಪದ್ಧತಿಯಾಗಿದೆ. ಇದು ಅಸಾಧ್ಯವಾದಲ್ಲಿ ಆಧಾರಗ್ರಂಥಗಳ ಪಟ್ಟಿಯೊಂದನ್ನು ಪ್ರತಿಸಂಪುಟದ ಕಡೆಯಲ್ಲಾದರೂ ಕೊಡುವುದು ಆವಶ್ಯಕ. ಮತ್ತು ಅಲ್ಲಲ್ಲಿ ಚರಿತ್ರೆಗೆ ಸಂಬಂಧಪಟ್ಟ ಭೂಪಠಗಳನ್ನು ಕೊಡುವುದರಿಂದ ಪುಸ್ತಕವು ಹೆಚ್ಚು ಉಪಯುಕ್ತವಾಗುತ್ತದೆ.

'ಕರ್ನಾಟಕ ಸಾಮ್ರಾಜ್ಯ' ವೆಂಬ ಹೆಸರು ಚರಿತ್ರೆಯಲ್ಲಿ ಸಾಮಾನ್ಯವಾಗಿ ವಿಜಯನಗರಸಾಮ್ರಾಜ್ಯಕ್ಕೆ ಅನ್ವಯಿಸುತ್ತದೆ. ಹಿಂದೆ ಕನ್ನಡ ದೇಶದಲ್ಲಿ ಮರಾಟಿಯವರ ರಿಯಾಸತ್ತಿನಂಥ ಒಂದು ಸಾಮ್ರಾಜ್ಯಮಾತ್ರವಲ್ಲದೆ ಅನೇಕ ಸಾಮ್ರಾಜ್ಯಗಳು ಹುಟ್ಟಿ, ಹೆಸರಾಗಿ, ಹಾಳಾದುವು. ಆದ್ದರಿಂದ ಪ್ರಕೃತಗ್ರಂಥಕ್ಕೆ ಚರಿತ್ರಕಾರರ ದೃಷ್ಟಿಯಿಂದ ಕರ್ನಾಟಸಾಮ್ರಾಜ್ಯಗಳು ಅಥವಾ 'ಕನ್ನಡನಾಡಿನ ಚರಿತ್ರೆ' ಎಂಬ ಹೆಸರು ನ್ಯಾಯವಾಗಿ ತೋರುತ್ತದೆ. ಪ್ರಾಯಶಃ ಗ್ರಂಥಕರ್ತರು ಉದ್ದೇಶಪೂರ್ವಕವಾಗಿಯೇ ಸಾಮಾನ್ಯ ಚರಿತ್ರಕಾರರ ಮಾರ್ಗವನ್ನು ಕೆಲವೆಡೆಗಳಲ್ಲಿ ತ್ಯಜಿಸಿರಬಹುದು. ಏಕೆಂದರೆ, ಶುದ್ಧ ಚರಿತ್ರಕಾರರ ಧ್ಯೇಯವು ಸತ್ಯದ ಅನ್ವೇಷಣವೂ ಪ್ರಕಟನೆಯೂ ಮಾತ್ರವೇ. ಮತಾಭಿಮಾನ, ದೇಶಾಭಿಮಾನಗಳು ಅವರ ಕೆಲಸಕ್ಕೆ ಸ್ವಲ್ಪ ಅಪಾಯಕರ. ಆದರೆ ಪ್ರಕೃತ ಗ್ರಂಥಕರ್ತರು ಮುನ್ನುಡಿಯಲ್ಲಿ ಹೇಳಿರುವಂತೆ ತಾಯಿನುಡಿ ಮತ್ತು ತಾಯಿನಾಡಿನ ಅಭಿಮಾನವು ಹೆಚ್ಚಲೆಂದೇ ಈ ಗ್ರಂಥವನ್ನು ಬರೆಯಲಾಗಿದೆ. ಈ ದೇಶವೂ ಅಭಿಮಾನವೂ ಅನೇಕ ಕಡೆಗಳಲ್ಲಿ ಚರಿತ್ರಕಾರರಿಗೆ ಆವಶ್ಯಕವಾಗಿರುವುದಕ್ಕಿಂತ ಹೆಚ್ಚಾಗಿ ವ್ಯಕ್ತವಾಗುತ್ತವೆ.

ಮ|| ದೇಶಪಾಂಡೆಯವರು ಬರೆಯುವ ಕನ್ನಡವು ಉತ್ತರ ದಕ್ಷಿಣ ಕರ್ಣಾಟಕರೆಲ್ಲರಿಗೂ ಅರ್ಥವಾಗುತ್ತದೆ. ಇದರಲ್ಲಿ ಕ್ಲಿಷ್ಟಪದಗಳಿಲ್ಲದೆ ವಿಷಯವು ಸುಗ್ರಾಹ್ಯವಾಗಿದೆ. ವಿಷಯಸರಣಿಯು ಕೆಲವೆಡೆಗಳಲ್ಲಿ ಪ್ರೌಢವಾಗಿಯೂ ಗಂಭೀರವಾಗಿಯೂ, ಮತ್ತೆ ಕೆಲವೆಡೆಗಳಲ್ಲಿ ಅದಕ್ಕೆ ಪ್ರತಿಯಾಗಿಯೂ ಕಾಣಬರುವುದು.

೧೪೯—೧೫೦ ನೆಯ ಪುಟಗಳಲ್ಲಿ ಬಂದಿರುವ ಲಜ್ಜಾಸ್ಪದವಾದ ಊಹೆಯನ್ನು ಸ್ವಲ್ಪ ಸಂಕ್ಷೇಪವಾಗಿ ಹೇಳಬಹುದಾಗಿತ್ತು. ೧೫೦ ನೆಯ ಪುಟದಡಿಯಲ್ಲಿರುವ ವಾಕ್ಯವು ಅಪ್ರಕೃತ ಮಾತ್ರವಲ್ಲದೆ, ಈ ಗ್ರಂಥಕ್ಕೇ ಕಳಂಕಪ್ರಾಯವಾಗಿರುವುದು.

ಪ್ರಕೃತ ಗ್ರಂಥದಲ್ಲಿ ಬಂದಿರುವ ಚರಿತ್ರೆಯ ವಿಷಯಗಳನ್ನು ಒಂದೊಂದಾಗಿ ವಿಮರ್ಶಿಸಿ ಅನುಮೋದಿಸುವುದಕ್ಕಾಗಲಿ, ಖಂಡಿಸುವುದಕ್ಕಾಗಲಿ, ಇಲ್ಲಿ ಸ್ಥಳವಿಲ್ಲ. ಮುಂದಿನ ಮುದ್ರಣದಲ್ಲಿ ತಿದ್ದಿಕೊಳ್ಳಬಹುದಾದ ವಿಷಯಗಳು ಬಹಳವಾಗಿವೆ. ಉದಾಹರಣೆಗಾಗಿ ಸ್ಥೂಲವಾಗಿ ಕಂಡುಬರುವ ಒಂದೆರಡು ಅಂಶಗಳನ್ನು ಮಾತ್ರ ಇಲ್ಲಿ ಸೂಚಿಸಬಹುದು:—ಒಂದನೆಯ ಅಧ್ಯಾಯದಲ್ಲಿ ಕೊಟ್ಟಿರುವ ಅವತಾರಾದಿಗಳ ಸಂಬಂಧಿಯಾದ ಪುರಾಣ ಪ್ರಸಿದ್ಧವಾದ ವಿಷಯಗಳನ್ನು ಎಷ್ಟುಮಟ್ಟಿಗೆ ಇತಿಹಾಸದೃಷ್ಟಿಯಿಂದ ಒಪ್ಪಿಕೊಳ್ಳಬಹುದೋ ಅದು ನಿರ್ಧರವಾಗಿಲ್ಲ. ಇಂಥ ವಿಷಯಗಳನ್ನು ಅವಿಮರ್ಶಿತವಾದ ಪುರಾಣಭಾಗವೆಂದೇ ಬರೆಯುವುದರಲ್ಲಿ ದೋಷವಿಲ್ಲ.—ಶಿಲಾಯುಗದ ವಿಚಾರವೇ ಬಿಟ್ಟುಹೋಗಿದೆ. ಮೆ|| ಬ್ರೂಸ್ ಫೂಟ್ ಮೊದಲಾದವರು ಬರೆದಿರುವ ಒಂದೆರಡು ವಿಷಯಗಳು ಕನ್ನಡ ದೇಶದ ಬಳ್ಳಾರಿ ಮುಂತಾದ ಪ್ರಾಂತಗಳಿಗೆ ಸಂಬಂಧಪಟ್ಟಿರುವುದರಿಂದ, ಚರಿತ್ರೆಯಲ್ಲಿ ಅವುಗಳನ್ನೂ ಸೂಚಿಸಬಹುದು. ಪಾಶ್ಚಾತ್ಯಪಂಡಿತರು ಮಾಡಿರುವ ಪ್ರಾಚೀನಕಾಲ ನಿರ್ಣಯದಲ್ಲಿ ದೋಷಗಳೇನೋ ಇವೆ. ಆದರೆ ಅವುಗಳಿಗೆ ಬದಲಾಗಿ ಕೈ|| ನಾರಾಯಣಶಾಸ್ತ್ರಿಗಳೇ ಮೊದಲಾದವರು ಮಾಡಿರುವ ಕಾಲನಿರ್ಣಯವನ್ನು ಒಪ್ಪಲಾಗುವುದಿಲ್ಲ. ಬುದ್ಧಜಿನರ ಕಾಲವನ್ನು ನಿರ್ಣಯಿಸುವಾಗ, ಖಾರವೇಲನ ಶಾಸನದ ಆಧಾರದಮೇಲೆ ಮ|| ಕಾ. ಜಯಸ್ವಾಲರು ಮಾಡಿರುವ ಬದಲಾವಣೆಗಳನ್ನು ಒಪ್ಪಿಕೊಳ್ಳಬಹುದು. ಶಾತವಾಹನರ ರಾಜ್ಯಭಾರಕಾಲದ ವಿಚಾರದಲ್ಲಿ, ಪ್ರೊ|| ರ್‍ಯಾಪ್ಸನ್ ಪ್ರೊ|| ದ. ಭಾಂಡಾರಕರ್ ಇವರುಗಳ ಬರೆವಣಿಗೆಗಳನ್ನು ಅನುಸರಿಸಬಹುದು. ಗಂಗರ ಪ್ರಾಚೀನರಾಜರಿಗೆ ಮೆ|| ರೈಸ್‌ಸಾಹೇಬರು ಕೊಟ್ಟಿರುವ ಇಸವಿಗಳನ್ನು ಬಹಳ ಬದಲಾಯಿಸಬೇಕೆಂದು ತೋರುತ್ತದೆ. ಪುಲಕೇಶಿಯ ಸಾವಿನ ವಿಚಾರದಲ್ಲಿ ಫ್ಲೀಟರ ಅನುಮಾನಗಳಲ್ಲಿ ಕುಂದುಗಳು ಕಂಡುಬರುವುದು ನಿಜ; ಆದರೆ ಗ್ರಂಥಕರ್ತರ ಅಭಿಪ್ರಾಯಗಳಿಗೂ ಆಧಾರ ಸಾಲದು. ದೇಶಕಾಲ ಸ್ಥಿತಿಗಳ ವರ್ಣನೆಗಳು ಪಠನೀಯಗಳಾಗಿವೆ; ಆದರೆ ಈ ಅಧ್ಯಾಯಗಳನ್ನು ಇನ್ನೂ ವಿಸ್ತಾರವಾಗಿ ಬರೆಯಬಹುದಾಗಿತ್ತು; ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳಿಗೆ ಬಹಳ ಅವಕಾಶ ಉಂಟು. ಪ್ರಸಿದ್ಧ ಗ್ರಂಥಗಳ ಆಧಾರದ ಮೇಲೆ ಬರೆದಿರುವ ಭಾಗಗಳು ಚನ್ನಾ

ಗಿವೆ; ಸ್ವಂತವಾಗಿ ಬರೆದಿರುವ ಭಾಗಗಳಲ್ಲಿ ವಿಶೇಷ ಅಭಿಮಾನಯುಕ್ತವಾದ ವಾಕ್ಯಗಳನ್ನು ಬಿಟ್ಟುಬಿಡಬಹುದು, ಮತ್ತು ಚರ್ಚಾಸ್ಪದವಾದ ವಿಷಯಗಳನ್ನೂ ಊಹೆಗಳನ್ನೂ ಸಂಕ್ಷೇಪವಾಗಿ ಬರೆಯಬಹುದು.

ಒಟ್ಟಿನಲ್ಲಿ, ಪ್ರಕೃತಗ್ರಂಥವು ಇದನ್ನು ಓದುವ ಕನ್ನಡಿಗರಲ್ಲಿ ಸ್ವಭಾಷೆಯಲ್ಲೂ, ಸ್ವದೇಶದಲ್ಲೂ, ಅಭಿಮಾನವನ್ನು ಹೆಚ್ಚಿಸುವುದಕ್ಕೆ ಸಹಕಾರಿಯಾಗಿದೆ. ಇದು ಸ್ಮಿತ್, ಫ್ಲೀಟ್, ರೈಸ್, ನರಸಿಂಹಾಚಾರ್ಯರು, ಕೃಷ್ಣಸ್ವಾಮಯ್ಯಂಗಾರ್ಯರು, ಕೃಷ್ಣಶಾಸ್ತ್ರಿಗಳು ಮೊದಲಾದವರ ಬರೆವಣಿಗೆಯಂತೆ, ಪ್ರೌಢಪಾಠಕರಿಗಾಗಿ ಐತಿಹಾಸಕ ದೃಷ್ಟಿಯಿಂದ ಬರೆದುದಲ್ಲವಾದರೂ, ಸುಶಿಕ್ಷಿತರಾದ ಇತಿಹಾಸ ವಿಮರ್ಶಕರು ಇನ್ನೊಂದು ಗ್ರಂಥವನ್ನು ಬರೆಯುವವರೆಗೆ, ಸ್ವದೇಶದ ವೈಭವವನ್ನು ತಿಳಿಯದ ಕರ್ಣಾಟಕದ ಸಾಮಾನ್ಯ ಜನರು ಓದಿ ಸಂತೋಷಪಡಬಹುದಾದ ಗ್ರಂಥವಾಗಿದೆ. ಕರ್ಣಾಟಕದ ಪ್ರಬೋಧನಕ್ಕೆ ಇಂಥ ಗ್ರಂಥಗಳು ಆವಶ್ಯಕವಾಗಿವೆ.

ಗ್ರಂಥಕರ್ತರು ಮುನ್ನುಡಿಯಲ್ಲಿ ಗ್ರಂಥರಚನೆಗೆ ಕಾರಣವನ್ನೂ, ಆ ಕಾರ್ಯದಲ್ಲಿ ತಾವು ಪಟ್ಟಕಷ್ಟಗಳನ್ನೂ ವಿಸ್ತಾರವಾಗಿ ವಿವರಿಸಿದ್ದಾರೆ. ರೌದ್ರಿಸಂವತ್ಸರದ ಒಂದಾನೊಂದು ರಾತ್ರಿ ಕನಸಿನಲ್ಲಿ ಶ್ರೀ ಶಾಕಂಭರೀ ದೇವಿಯು ತಮಗೆ ಕಾಣಿಸಿಕೊಂಡು, ಈ ಗ್ರಂಥದ ರಚನೆಯನ್ನು ಕೈಕೊಳ್ಳುವಂತೆ ಅಪ್ಪಣೆಮಾಡಿದಳಂತೆ. ಅಪರವಯಸ್ಸಿನಲ್ಲಿ ಏಕಾಂಗಿಯಾಗಿ ಈ ಮಹಾ ಗ್ರಂಥವನ್ನು ಪ್ರಾರಂಭಿಸಿ, ವಿದ್ವಾಂಸರು ಒಪ್ಪುವಂತೆ ಬರೆದು ಕೊನೆಮುಟ್ಟಿಸಬೇಕಾದರೆ ದೈವ ಸಹಾಯವು ಅತ್ಯಾವಶ್ಯಕ. ಇಂಥ ಕೆಲಸವನ್ನು ನಿರ್ವಿಘ್ನವಾಗಿ ನೆರವೇರಿಸುವುದಕ್ಕೆ ಬೇಕಾದ ಶಕ್ತಿಯನ್ನೂ, ಸಹಾಯವನ್ನೂ, ಆರೋಗ್ಯವನ್ನೂ ದೇವಿಯು ಮ|| ದೇಶಪಾಂಡೆಯವರಿಗೆ ದಯಪಾಲಿಸಲೆಂದು ಹಾರೈಸುತ್ತೇವೆ.

ಎಂ. ಎಚ್. ಕೃ.

ವ್ಯಾಪಾರ ಅಂದರೇನು?—ಕ್ರೌ ಪುಟಗಳು ೪೬. ಜಿ.ಆರ್. ಜೋಸ್ಯರ್, ಎಂ.ಎ., ಎಂ.ಆರ್.ಇ.ಎಸ್. ಯವರಿಂದ; ಕ್ರಯ ೧೨ ಆಣೆ.

ಮ|| ರಾ|| ಜೋಸ್ಯರವರು ಈ ಪುಸ್ತಕದಲ್ಲಿ ವ್ಯಾಪಾರವೆಂದರೇನೆಂಬುದನ್ನು ವಿವರಿಸಿರುವರಲ್ಲದೆ ಹಿಂದಿನಕಾಲದ ಮತ್ತು ಈಗಿನ ಕಾಲದ ವ್ಯಾಪಾರಗಳಿಗೆ ಇರುವ ವ್ಯತ್ಯಾಸಗಳಲ್ಲಿ ಕೆಲವನ್ನು ತಿಳಿಸಿ, ವ್ಯಾಪಾರಕ್ಕೆ ಸಾಧನಗಳಾವುವು, ಅದರ ಧರ್ಮಮರ್ಮಗಳಾವುವು ಎಂಬುದನ್ನು ತಿಳಿಸಿರುವರು. ಅಲ್ಲಲ್ಲಿ ವಿಷಯಗಳಿಗೆ ಸಂಬಂಧಪಟ್ಟ ಲಘುತತ್ವಗಳೂ ಸೂಚಿತವಾಗಿವೆ. ಒಂದೆರಡು ಕಡೆ ಮನಸ್ಸಿಗೆ ಭ್ರಾಂತಿ ತೋರುವು

ದಾದರೂ, ‘ಬೆಲೆ’ ಮತ್ತು ‘ಹಣ’ದ ವಿಚಾರವಾಗಿ ಬರೆದಿರುವುದನ್ನು ಅವರು ಇನ್ನೂ ಸ್ವಲ್ಪ ವಿಶದವಾಗಿ ತಿಳಿಯಾಗಿ ಬರೆಯಬಹುದಾಗಿತ್ತಾದರೂ, ಹೇಳಿರುವಷ್ಟನ್ನು ಸುಲಭವಾಗಿ ಹೇಳಿರುತ್ತಾರೆ. ವ್ಯಾಪಾರದ ಮರ್ಮಗಳು ಧರ್ಮಗಳು ಎಂಬ ಭಾಗವು ಎಲ್ಲ ವರ್ತಕರ ಗಮನಕ್ಕೂ ಆಚರಣೆಗೂ ಬರಬೇಕಾದುದು.

ಇಲ್ಲಿ, ಮೈಸೂರಿನಲ್ಲಿ, ಹೊರದೇಶಗಳವರ ವರ್ತಕತನದ ಪ್ರಾಬಲ್ಯ ದಿನೇ ದಿನೇ ಹೆಚ್ಚುತ್ತಿದೆ. ನಿನ್ನೆ ನಮ್ಮವಾಗಿದ್ದ ಅಂಗಡಿಮುಂಗಟ್ಟುಗಳಲ್ಲಿ ಈಹೊತ್ತು ಮಾರ್ವಾಡಿ, ಗುಜರಾತಿ, ಮುಲ್ತಾನಿ, ಚೆಟ್ಟಿ, ಫರಂಗಿ ಈ ಜನರು ಹೆಚ್ಚಾಗಿ ಬಂದು ನೆಲೆಸಿ ಸಂಪಾದನೆ ಮಾಡಿಕೊಂಡು ಹೋಗುತ್ತಿದ್ದಾರೆ. ನಮ್ಮ ದೇಶದ ವ್ಯಾಪಾರವು ನಮ್ಮವರ ಕೈಯಿಂದ ಪೂರ್ತ ತಪ್ಪಿಹೋಗುವ ಸ್ಥಿತಿಯೂ ಬಂದೀತು. ನಾವು ಬೇಗನೆ ಎಚ್ಚರಗೊಳ್ಳಬೇಕು. ಇತರರ ಮೇಲೆ ನಮಗೆ ಯಾವ ಹೊಟ್ಟೆ ಉರಿಯೂ ಇಲ್ಲ. ನಮ್ಮವರಿಗೇ ಆ ಸಂಪಾದನೆ ಬರಲಿ, ನಮ್ಮವರೇ ಉತ್ತಮ ವ್ಯಾಪಾರಿಗಳಾಗಿ ನಮ್ಮ ದೇಶದ ಸಂಪತ್ತು ಹೆಚ್ಚಲಿ ಎಂಬುದೇ ಆಶಯ. ಹಾಗಾಗಬೇಕಾದರೆ ನಮ್ಮವರಲ್ಲಿ ಈಗ ಇರುವುದಕ್ಕಿಂತ ಹೆಚ್ಚಿನ ಪ್ರಾಮಾಣಿಕತೆ, ಕ್ರಮನಿಷ್ಠೆ, ಕಾಲನಿಷ್ಠೆ, ನಂಬಿಕೆ ಈ ಗುಣಗಳು ಮೊಳೆತು ಬೆಳೆಯಬೇಕು. ಅವರಿಗೆ ತಾಳ್ಮೆಯೂ ನಗುಮುಖವೂ ಬರಬೇಕು. ಯಾವರೀತಿ ವ್ಯಾಪಾರ ಮಾಡಿದರೆ ಲಾಭವೊಂದೇ ಅಲ್ಲದೆ ವ್ಯಾಪಾರವೂ ದಿನೇದಿನೇ ಮೊತ್ತದಲ್ಲಿ ಹೆಚ್ಚಿ ನೂರಾರು ವರುಷಗಳವರೆಗೂ ಅಂಗಡಿ ಬೆಳೆಯಬಲ್ಲದೊ ಆರೀತಿ ಅವರು ಕೆಲಸಮಾಡಬೇಕು. ಗಿರಾಕಿಗಳನ್ನು ಆಕರ್ಷಿಸಿ, ಅವರಿಗೆ ಗೌರವ ಕೊಟ್ಟು, ಒಂದಲ್ಲದಿದ್ದರೆ ಹತ್ತು ಪದಾರ್ಥಗಳನ್ನು ಬೇಸರವಿಲ್ಲದೆ ತೋರಿಸಿ, ಅವರು ಸ್ವಲ್ಪವೇ ವ್ಯಾಪಾರ ಕೊಳ್ಳಲಿ ಕೊಳ್ಳದೆಯೇ ಹೊರಟುಹೋಗಲಿ, ಒಂದೇ ವಿಶ್ವಾಸದಿಂದಲೂ ಒಂದೇ ಶ್ರದ್ಧೆಯಿಂದಲೂ ವರ್ತಿಸಿದರೆ ಗಿರಾಕಿಯನ್ನು ಉಳಿಸಿಕೊಳ್ಳಬಹುದು; ಶೇಕಡ ೫೦ ರಂತೆ ಲಾಭ ಹಾಕಿ ಒಂದು ವಸ್ತುವನ್ನು ಮಾರಿ ಅದರಿಂದ ಲಾಭ ಪಡೆಯುವುದಕ್ಕಿಂತಲೂ ಶೇಕಡ ೫ ರಂತೆ ಹಾಕಿ ಹತ್ತು ಪದಾರ್ಥಗಳನ್ನು ಮಾರಿ, ಅದೇ ಲಾಭವನ್ನು ಪಡೆಯುವ ಯತ್ನವನ್ನು ಅವರು ಮಾಡಬೇಕು. ಒಬ್ಬರಿಗೊಂದು ಇನ್ನೊಬ್ಬರಿಗೆ ಇನ್ನೊಂದು ಮಾಡಿ, ವ್ಯಾಪಾರವೆಂದರೆ ದ್ರೋಹಚಿಂತನೆಯೆಂದು ತಿಳಿದು ಜನರಿಗೆ ಮೋಸಮಾಡಿ, ಇರುವ ಎರಡು ದಿನಗಳಲ್ಲಿ ಐಶ್ವರ್ಯಪಡೆಯಬೇಕೆಂದು ವ್ಯಾಪಾರಮಾಡುವವರು ಎಂದಿಗೂ ಊರ್ಜಿತವಾಗರು. ಕೊಟ್ಟವರಿಗೆ ಹಿಂತಿರುಗಿ ಕೊಡದೆ ಹಣವನ್ನು ಹೆಂಗಸರ ಹೆಸರಿಗೆ ಬರೆದುಹಾಕಿ ದಿವಾಳಿಚೀಟಿ ಪಡೆದು ಶಿಕ್ಷೆಯ ಅವಧಿಯು ಕಳೆದಮೇಲೆ ಸುಖವಾಗಿರಬಹುದೆಂದು ವ್ಯಾಪಾರದಲ್ಲಿ

ತೊಡಗುವಂಥವರ ಸಂಖ್ಯೆಯು ಹೆಚ್ಚುತ್ತಿರುವುದನ್ನು ನೋಡಿ ವ್ಯಸನವಾಗುತ್ತದೆ. ಹೀಗಾದರೆ ಯಾರಲ್ಲಿ ಯಾವ ನಂಬಿಕೆತಾನೆ ಉಳಿದೀತು ? ಯಾವ ವ್ಯಾಪಾರ ಅಭಿವೃದ್ಧಿಯಾದೀತು ? ಉತ್ತಮ ವ್ಯಾಪಾರ ಧರ್ಮಗಳನ್ನು ಅನುಸರಿಸಿರುವುದರಿಂದಲೇ ಪರಕೀಯರು ಇಲ್ಲಿ ತಳ ಊರಿ ನಿಲ್ಲಲು ಸಾಧ್ಯವಾಗಿರುವುದು ; ಅವರ ಪ್ರಭಾವವು ನಮ್ಮ ವ್ಯಾಪಾರ ಮಂಡಲದಲ್ಲಿ ಹೆಚ್ಚುತ್ತಿರುವುದು ; ಅಷ್ಟೇಕೆ, ನಮ್ಮ ದೇಶದಲ್ಲಿ ವ್ಯಾಪಾರಕ್ಕೆ ಬಂದವರೇ ಅಲ್ಲವೆ ಇಲ್ಲಿ ಸಾಮ್ರಾಜ್ಯಸ್ಥಾಪನೆಮಾಡಿ ನಮ್ಮನ್ನು ಈಗ ಆಳುತ್ತಿರುವವರು ? ಈಗಲೂ ಅವರಂತೆ ವ್ಯಾಪಾರ ಚತುರರೂ ಧರ್ಮಶೀಲರೂ ಆಗಿರುವವರು ನಮ್ಮವರಲ್ಲಿ ಅತಿ ವಿರಳ. ಈ ಪುಸ್ತಕದ ೪೧ ನೆಯ ಪುಟದಲ್ಲಿ ಉದ್ಧೃತವಾಗಿರುವ 'ನಿಮಗೆ ಲಾಭ, ಅವರಿಗೆ ಅನುಕೂಲ' ಎಂಬ ತತ್ವವನ್ನು ಸರ್ವದಾ ಮನಸ್ಸಿನಲ್ಲಿಟ್ಟ ಹೊರತು ಯಾವ ವ್ಯಾಪಾರಿಗೂ ಲಕ್ಷ್ಮಿ ಒಲಿಯಳು.

ಒಳದೇಶ ಹೊರದೇಶದ ವ್ಯಾಪಾರಗಳು, ಅವುಗಳ ಲಕ್ಷಣ, ಪರಿಮಾಣ, ಸಂಬಂಧಗಳು, ಅವು ನಡೆಯುವ ರೀತಿ, ಅವುಗಳಿಂದ ನಮ್ಮ ದೇಶದ ಸಂಪತ್ ಸ್ಥಿತಿಯ ಮೇಲೂ ಜನಜೀವನದ ಮೇಲೂ ಆಗುವ ಪರಿಣಾಮ, ಸಹಾಯಕಸಂಸ್ಥೆ ವ್ಯವಸ್ಥೆಗಳು, ನಮ್ಮ ದೇಶದ ಸರಕುಗಳಿಗೆ ಮೇಲ್ತರನಾದ ಗಿರಾಕಿ ದೊರೆಯುವ ಸ್ಥಳಗಳು, ಅವನ್ನು ದೊರಕಿಸಿಕೊಳ್ಳುವ ಬಗೆ, ಇವೆಲ್ಲಕ್ಕೂ ಸಂಬಂಧಪಡುವ ನಿಯಮಗಳು, ತತ್ವಗಳು ಮುಂತಾದ ಅನೇಕ ವಿಷಯಗಳನ್ನು ಕುರಿತು ಮುಂದೆ ಬರೆಯಬೇಕಾಗುವುದು. ಅದು ನಾಳಿನ ಮಾತು. ಈ ಪುಸ್ತಕದಲ್ಲಿ ಏನಿದೆ ಎಂಬುದನ್ನು ಹೇಳುವ ಕೆಲಸಮಾತ್ರ ಅವಲೋಕನಕಾರನದು.

ಈ ಪುಸ್ತಕದಲ್ಲಿ ಶ್ರೀಮನ್ಮಹಾರಾಜರ ಚಿತ್ರಪಟವೊಂದೂ ಸಂಸ್ಥಾನದ ವ್ಯಾಪಾರದ ಚಿತ್ರಪಟವೊಂದೂ ಇವೆ. ಆದರೆ ೪೬ ಪುಟಗಳುಳ್ಳ ಸಣ್ಣಪುಸ್ತಕಕ್ಕೆ ೧೨ ಆಣೆ ಬೆಲೆ ಕೇಳುವುದು ಬಹಳ ಹೆಚ್ಚು.

ವಿ. ಸೀ.

ಬೆಂಜಮಿನ್ ಫ್ರಾಂಕ್ಲಿನ್—ಮ|| ಕೆ. ಲ. ಸುಬ್ಬರಾವ್, ಬಿ. ಎ., ಅವರಿಂದ ; **ಕ್ರೌನ್ ಪುಟಗಳು ೧೬೨, ಬೆಲೆ ೧೨ ಆಣೆ.**

ಮಹಾಪುರುಷರ ಜೀವನಚರಿತ್ರೆಗಳು ಯಾವ ಭಾಷೆಯಲ್ಲಿದ್ದರೂ ಅವುಗಳನ್ನು ಕನ್ನಡಕ್ಕೆ ಪರಿವರ್ತಿಸಿ ಬರೆಯುವುದು ಈಗಿನ ಕಾಲಕ್ಕೆ ಅತ್ಯಾವಶ್ಯಕ. ಒಂದು ರಾಜ್ಯವಾಗಲಿ ಒಂದು ಜನಾಂಗವಾಗಲಿ ಕೇವಲ ಮಂತ್ರೋಚ್ಚಾರಣೆಯಿಂದ ಸ್ಥಾಪಿತವಾಗುವುದಿಲ್ಲ. ಕರ್ತವ್ಯನಿಷ್ಠರೂ ದೇಶಸೇವಾತತ್ಪರರೂ ನಿಸ್ಸ್ವಾರ್ಥರೂ ಆದ ಇತಿಹಾಸ

ಪುರುಷರ ಶ್ರಮಬಲಗಳಿಂದ ಅವು ಸ್ಥಾಪಿತವಾಗಬೇಕು. ಸ್ವರಾಜ್ಯವನ್ನೂ ರಾಜ್ಯ ಶಾಸನಸಂಸ್ಕರಣವನ್ನೂ ಬಯಸುತ್ತಿರುವ ನಾವು ಒಂದು ದೇಶದವರು ಹೇಗೆ ಒಂದು ಜನಾಂಗವಾದರು, ಹೇಗೆ ವಿಶಾಲ ರಾಜ್ಯವನ್ನು ಕಟ್ಟಿದರು ಎಂಬೀ ವಿಷಯಗಳನ್ನು ತಿಳಿಯಬೇಕಾದರೆ ಬರಿಯ ಚರಿತ್ರೆಯನ್ನು ಓದುವುದಕ್ಕಿಂತ ಆ ದೇಶದ ಪ್ರಸಿದ್ಧ ಪುರುಷರ ಜೀವನ ಚರಿತ್ರೆಗಳನ್ನು ಓದುವುದು ಒಳ್ಳೆಯದು. ಏಕೆಂದರೆ ಇತಿಹಾಸ ವಾಗುವುದು ಪ್ರಸಿದ್ಧ ಪುರುಷರಿಂದ. ಇತಿಹಾಸಗಳಲ್ಲಿ ದೊರೆಯದ ವ್ಯಕ್ತಿಸಂಬಂಧ ವಾದ ಆಸಕ್ತಿಯು ಜೀವನ ಚರಿತ್ರೆಗಳಲ್ಲಿದೆ. ವ್ಯಕ್ತಿಯ ಮಹತ್ವವೂ ಆ ಮಹತ್ವ ದಿಂದ ಇತಿಹಾಸರಚನೆಯೂ ಇತಿಹಾಸದಿಂದ ಮಾನವವರ್ಗದ ಅಭಿವೃದ್ಧಿಮಾರ್ಗವೂ ಪರಸ್ಪರ ಹೇಗೆ ಸಂಬಂಧಿಸಿದೆ ಎಂಬುದನ್ನು ಇಲ್ಲಿ ನೋಡಬಹುದು.

ಮ|| ರಾ|| ಸುಬ್ಬರಾಯರು ಬರೆದಿರುವ ಬೆಂಜಮಿನ್ ಫ್ರಾಂಕ್‌ಲಿನ್ ಎಂಬ ಪುಸ್ತಕವು ಎಲ್ಲ ಕನ್ನಡಿಗರ ಕೈಯಲ್ಲಿಯೂ ಇರಬೇಕಾದುದು. ಮುಖ್ಯವಾಗಿ ಯಾರು ಪ್ರಜಾಪ್ರಮುಖರೆಂದೂ ಪ್ರಜಾಪ್ರತಿನಿಧಿಗಳೆಂದೂ ನಮ್ಮ ಸಂಸ್ಥಾನದ ರಾಜಕೀಯ ಸಭೆಗಳಲ್ಲಿ ಸೇರಿಕೊಂಡಿದ್ದಾರೋ ಅವರೆಲ್ಲರೂ ಈ ಪುಸ್ತಕವನ್ನು ಓದಬೇಕು. ಆಗ ದೇಶಸೇವೆಯು ಎಂತಹ ಗುರುತರವಾದ ಕಾರ್ಯವೆಂಬುದೂ, ಪ್ರತಿನಿಧಿಯಾಗಿರುವುದು ಎಂತಹ ಜವಾಬ್ದಾರಿಯೆಂಬುದೂ ಅವರಿಗೆ ತಿಳಿಯುತ್ತದೆ. ಮ|| ರಾ|| ಸುಬ್ಬರಾಯರು ಈ ಪುಸ್ತಕವನ್ನು ಬರೆದು ಬಹಳ ಉಪಕಾರಮಾಡಿದ್ದಾರೆ. ಭಾಷೆಯು ಲಲಿತವಾಗಿದೆ. ಅನ್ಯದೇಶದ ವಿಷಯಗಳಾದರೂ ಅವುಗಳನ್ನು ನಮ್ಮವಾಗಿ ಮಾಡಿಕೊಂಡು ರೂಪು ಗೆಡದ ಕನ್ನಡದಲ್ಲಿ ಬರೆದಿರುವುದು ಶ್ಲಾಘನೀಯ. ಮ|| ರಾ|| ಸುಬ್ಬರಾಯರಿಂದ ಇಂತಹ ಇನ್ನೂ ಅನೇಕ ಗ್ರಂಥಗಳು ಹೊರಬೀಳಲೆಂದು ಹಾರೈಸುತ್ತೇವೆ.

ಎಂ. ಆರ್. ಶ್ರೀ.

ವಸ್ತುಕೋಶ

ಈಗ ಕೆಲವು ಕಾಲದಿಂದೀಚೆಗೆ ಮಂಗಳೂರು ಪ್ರಾಂತದಿಂದ ಕನ್ನಡಕ್ಕೆ ಜೀವ ಕಳೆಯು ಹೆಚ್ಚು ಹೆಚ್ಚಾಗಿ ಬರುತ್ತಿದೆ. ಕನ್ನಡ ಪತ್ರಿಕೆಗಳಲ್ಲಿ ಮೊದ ಮೊದಲು ಚೆನ್ನಾಗಿ ಬಾಳಿದ "ಶ್ರೀ ಕೃಷ್ಣಸೂಕ್ತಿ"ಯು ನಿಂತೇಹೋಗಿದ್ದರೂ ಅದರಂತೆಯೇ ಹೆಸರುಗೊಂಡು ನಿಂತುಹೋಗಿದ್ದ "ಸುವಾಸಿನಿ" ಯು ಪುನರುಜ್ಜೀವಿತವಾಗಿದೆ. ಸುಮಾರು ಆರೇಳು ತಿಂಗಳಿಂದೀಚೆಗೆ 'ಉದಯ ಭಾರತ' 'ಕರ್ನಾಟಕ ಕೇಸರಿ' ಮುಂತಾದ ಮಾಸಪತ್ರಿಕೆಗಳು ಹೊಸದಾಗಿ ಹೊರಟಿವೆ. ಈ ವರ್ಷ ಮಂಗಳೂರಿನಲ್ಲಿ ನಡೆದ ಸಾಹಿತ್ಯಪರಿಷತ್ತಿನ ಸಮ್ಮೇಳನದ ಜ್ಞಾಪಕಾರ್ಥವಾಗಿ ಆ ಉತ್ಸವಕಾಲದಲ್ಲಿಯೇ "ಪಂಚಕಜ್ಜಾಯ"ದ ಹಂಚಿಕೆ ಬೇರೆ ಆಗಿದೆ. ಇವೆಲ್ಲವನ್ನೂ ನೋಡಿದಾಗ ಮನಸ್ಸುಮಾಡಿದರೆ ಮ|| ಪಂಜೆ ಮಂಗೇಶರಾಯರಂಥವರ ಗುರುತ್ವದಲ್ಲಿ, ಮ|| ಗಳಾದ ಮಂ|| ಅನಂತರಾವ್, ಮತ್ತು ವಿಟ್ಠಲರಾವ್ ಇಂಥವರ ನೇತೃತ್ವದಲ್ಲಿ ಮಂಗಳೂರಿನವರೊಬ್ಬರೇ ಎಷ್ಟು ಕೆಲಸಮಾಡಬಲ್ಲರೆಂಬುದು ಗೊತ್ತಾಗುತ್ತದೆ. ಆದ್ದರಿಂದ ನಮ್ಮ ಮಂಗಳೂರಿನ ಮಿತ್ರಮಂಡಲಿಯನ್ನು ನೋಡಿ ದುಷ್ಯಂತನಿಗೆ ವೈಖಾನಸರು ಹೇಳಿದಂತೆ "ಮೌರ್ವೀಜನಿತ ಕಿಣವಾಂಕ ಮದ್ಭುಜಮೆನಿತೆಡೆಯಂ ಪೊರೆವುದೆಂದು ತಿಳಿವೈ ನೃಪ ನೀಂ" ಎಂದು ಹೇಳೋಣವೆನ್ನಿಸುತ್ತದೆ. ಹೀಗೆಂದರೆ ಇತರ ಪ್ರಾಂತದವರು ಆಲಸರಾಗಿದ್ದಾರೆಂದು ಅರ್ಥವಲ್ಲ. ಉತ್ತರಕರ್ನಾಟಕರು ಕರ್ಮವೀರರೆಂದು ಯಾವಾಗಲೂ ಹೆಸರುಪಡೆದಿದ್ದಾರೆ ಅಲ್ಲಿ "ಜಯಕರ್ನಾಟಕ"ದ ಜಯಘೋಷದೊಡನೆ ನವೀನ ಗ್ರಂಥಗಳ ಉದ್ಘೋಷವೂ ಹೊಸ ಹೊಸ ಪತ್ರಿಕೆಗಳ ಪ್ರಘೋಷವೂ ಕೇಳಿಬರುತ್ತಿದೆ. ಇವುಗಳಲ್ಲಿ ರಾವ್ ಸಾಹೇಬ್, ಪಿ. ಜಿ. ಹಳಕಟ್ಟಿಯವರ "ನವಕರ್ನಾಟಕ"ವು ಆಗಲೇ ಎಲ್ಲರ ದೃಷ್ಟಿಗೂ ಗೋಚರವಾಗಿದೆಯೆಂದು ನಂಬಿದ್ದೇವೆ. ಇವಕ್ಕೆ ಕೆಲಸಮಾಡುತ್ತಿರುವವರೆಲ್ಲರೂ ಉತ್ಸಾಹಪೂರ್ಣರಾದ ಸಾಹಿತ್ಯಾಭಿಮಾನಿಗಳು. ಆದರೂ ಕನ್ನಡ ಸಾಹಿತ್ಯಪತ್ರಿಕೆಗಳಿಗೆ "ಭವತಿ ಭಿಕ್ಷಾಂ ದೇಹಿ" ಎಂದು ಜೋಳಿಗೆ ಹಾಕಿಕೊಂಡು ಹೊರಟು ಹೊತ್ತಿಲ್ಲದೆ ಕಾಲವಿಲ್ಲದೆ

ಸಮುದ್ರದ ನೆಂಟು ; ಉಪ್ಪಿಗೆ ಬಡತನ.

ದೀಪಾವಳಿಯನ್ನು ಸಂಕ್ರಾಂತಿಯಲ್ಲಿ ನಡೆಸಿ ಊಟದ ಶಾಸ್ತ್ರಮಾಡುವುದು ಬೇರೆ ತಪ್ಪಿಲ್ಲ. ಎಲ್ಲ ದೋಸೆಗೂ ತೂತಿರುವ ಹಾಗೆ ಎಲ್ಲ ಕನ್ನಡಪತ್ರಿಕೆಗೂ ಕಾಲುಕುಂಟು. ನಾಲ್ಕಾರು ಜನರು ಹೊಟ್ಟೆಗೆ ಸಾಲದೆ ನಶಿಸಿ ಸಾಯುವುದು ಒಳ್ಳೆಯದೋ ಒಬ್ಬಿಬ್ಬರು ಹೊಟ್ಟೆತುಂಬ ಊಟಮಾಡಿ ಬೆಳೆದು ಬದುಕುವುದು ಒಳ್ಳೆಯದೊ ? ಹೇಗೆ ಹೇಳುವುದು ? ಹಾಗೂ ಉಂಟು ಹೀಗೂ ಉಂಟು. ಊಟ ಕಡಮೆಯಾದರೆ ಅಜೀರ್ಣದ ಭಯವಿಲ್ಲ ; ಅಲ್ಲದೆ ಬಡಸಂಸಾರದಲ್ಲಿ ಎಲ್ಲರೂ ಸಾಕು ಸಾಲದಹಾಗೆ ಊಟಮಾಡುತ್ತಿರುವುದೂ ಉಂಟು ; ಮಿಕ್ಕವರೆಲ್ಲರೂ ಪ್ರಾಣ ಒಪ್ಪಿಸಿ ಶಕುನಿಯನ್ನು ಬದುಕಿಸಿಕೊಂಡು ಮಹಾಭಾರತವನ್ನು ಮಾಡಿ ಮುಗಿಸಿದ್ದೂ ಉಂಟು ! ಆದರೂ ಒಂದೊಂದೇ ಕಾಲಿನ ನಾಲ್ಕು ಮಂಚಗಳಿಗಿಂತಲೂ ನಾಲ್ಕು ಕಾಲಿನ ಒಂದು ಮಂಚವೇ ಉತ್ತಮವೆನ್ನಿಸುತ್ತದೆ.

ಕವಿವರ್ಯ ಶ್ರೀ ನಂದಳಿಕೆಯವರೂ ಕನ್ನಡ "ಕಾಮಶಾಸ್ತ್ರ"ವೂ.

ಕವಿವರ್ಯ ಶ್ರೀ ನಂದಳಿಕೆಯವರೂ, ಕನ್ನಡ "ಕಾಮಶಾಸ್ತ್ರ"ವೂ—ಎಂಬ ಹೆಸರಿನ ಲೇಖನವೊಂದನ್ನು ಮ|| ಮಂ. ಗೋವಿಂದಪೈಯವರು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ (೫-೮-೧೯೨೭) ಬರೆದು ಅದರಲ್ಲಿ, ಕಾಮಶಾಸ್ತ್ರವೆಂಬ ಗ್ರಂಥವನ್ನು ಲಕ್ಷ್ಮೀನಾರಾಯಣಯ್ಯನವರು ಬರೆದಿರಬಹುದೆಂಬ ಊಹೆಯು ತಪ್ಪೆಂದೂ ಅದು ವಿಜಯನಗರದ ರಾಜನಾದ ಮಲ್ಲಿಕಾರ್ಜುನನಿಂದ ರಚಿತವಾದದ್ದೆಂದೂ ತಿಳಿಸಿದರು. ಮೇಲೆ ಕಂಡ ಊಹೆಯನ್ನು ಪ್ರಚಾರಕ್ಕೆ ತಂದ ರಾ|| ನರಸಿಂಹಾಚಾರ್ಯರು ಈ ಲೇಖನಕ್ಕೆ ಉತ್ತರ ಬರೆದು ಈ ವಿಚಾರದಲ್ಲಿ ಸರಿಯಾದ ತಿಳಿವಳಿಕೆಯನ್ನು ಕೊಟ್ಟ ಮ|| ಗೋವಿಂದಪೈಯವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿ, ಆ ಗ್ರಂಥವು ಲಕ್ಷ್ಮೀನಾರಣಯ್ಯನವರಿಂದಾಗಲಿ, ಮಲ್ಲಿಕಾರ್ಜುನನಿಂದಾಗಲಿ ರಚಿತವಾದದ್ದಲ್ಲವೆಂದೂ, ಅದಕ್ಕೆ 'ಜನವಶ್ಯ'ವೆಂದು ಹೆಸರೆಂದೂ, ಅದನ್ನು ಬರೆದವನು 'ಕಲ್ಲರಸ'ನೆಂದೂ, ತಿಳಿಯಪಡಿಸಿದ್ದಾರೆ. ಈ ವಿಚಾರವಾಗಿ ಮ|| ಪೈಯವರು ಬರೆದ ಲೇಖನದಲ್ಲಿ ಮುಖ್ಯಭಾಗಗಳನ್ನೂ, ರಾ|| ನರಸಿಂಹಾಚಾರ್ಯರವರ ಉತ್ತರರೂಪವಾದ ಪತ್ರವನ್ನೂ ಇಲ್ಲಿ ಪ್ರಕಟಿಸಿದ್ದೇವೆ :—

"ನಮ್ಮ ಜಿಲ್ಲೆಯ ಅಪ್ರತಿಮಕವಿಗಳಾದ ದಿವಂಗತ ಶ್ರೀ ನಂದಳಿಕೆ ಲಕ್ಷ್ಮೀನಾರಾಯಣಯ್ಯನವರನ್ನೂ ಅವರ ಗ್ರಂಥಗಳನ್ನೂ ಕುರಿತು ಹಲವು ಸುರಸವಾದ ಲೇಖಗಳುಳ್ಳ 'ಮುದ್ದಣ' ಎಂಬುದೊಂದು ಪುಸ್ತಕವು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ 'ಕರ್ಣಾಟಕ ಸಂಘ' ದಿಂದ ಇತ್ತೀಚೆಗೆ ಪ್ರಕಟಿಸಲ್ಪಟ್ಟಿರುತ್ತದೆ. ಆದರ

ಲ್ಲಿಯ ಅಗ್ರಲೇಖವಾದ 'ಶ್ರೀಮಾನ್ ನಂದಳಿಕೆ ಲಕ್ಷ್ಮೀನಾರಾಯಣಯ್ಯ' ಎಂಬುದನ್ನು ಬರೆದಿರುವ ಪ್ರಾಕ್ತನವಿಮರ್ಶವಿಚಕ್ಷಣ ರಾವ್‌ಬಹದ್ದೂರ್ ಶ್ರೀ ಆರ್. ನರಸಿಂಹಾಚಾರ್ಯರವರು, ಆ ಲೇಖದ ೫ನೆಯ ಪುಟದಲ್ಲಿ ಹೀಗೆಂದಿರುವರು—'ಕಾಮಶಾಸ್ತ್ರ'ವೆಂಬ ಮತ್ತೊಂದು ಗ್ರಂಥವನ್ನು ಈತನು (ಅಂದರೆ ಶ್ರೀ ನಂದಳಿಕೆಯವರು) ಬರೆದುದಾಗಿ ತಿಳಿಯುತ್ತದೆ. ಇದರ ಕೈಬರಹದ ಪ್ರತಿ ಕೆನರಾ ಹೈಸ್ಕೂಲ್ ಹೆಡ್ಮಾಸ್ಟರ್ ಪದ್ಮನಾಭ ಬಾಳಿಗರ ವಶದಲ್ಲಿದೆ ಎಂದು ಲಕ್ಷ್ಮೀನಾರಾಯಣಯ್ಯನ ತಮ್ಮ ಶಿವರಾಮಯ್ಯನು ಹೇಳುತ್ತಿದ್ದನು.' ನನಗೀ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಲಿಕ್ಕಿದೆ. ಅದೇನೆಂದರೆ—

"ಶ್ರೀ ನಂದಳಿಕೆಯವರ ಕೈಬರಹದ 'ಕಾಮಶಾಸ್ತ್ರ'ದ ಪ್ರತಿಯು ನನ್ನೊಂದಿಗಿದೆ. ಇಂದಿಗೆ ಸುಮಾರು ೨೦ ವರ್ಷಗಳ ಹಿಂದೆ ನನ್ನ ಗುರುವರ್ಯರಾದ ದಿವಂಗತ ಶ್ರೀ ಬಂಟ್ವಾಳ ಪದ್ಮನಾಭ ಬಾಳಿಗರು (The late Mr. B. P. Baliga) ತನ್ನ ಹಲವು ಪುಸ್ತಕಗಳು ಗೆದ್ದಲ ಪಾಲಾಗಿ ಹೋದುದನ್ನು ಕಂಡು, ಈ 'ಕಾಮಶಾಸ್ತ್ರ'ದ ಪ್ರತಿಯನ್ನೂ ಇನ್ನೂ ಕೆಲ ಪುಸ್ತಕಗಳನ್ನೂ ನಾನಾದರೂ ಜೋಕೆಯಿಂದ ಇಟ್ಟುಕೊಳ್ಳುವೆನೆಂದು ನನಗಿತ್ತರು ; ಹಾಗೆ ಈ ಪ್ರತಿಯನ್ನು ಅವರು ನನಗೆ ಕೊಡುವಂದು, ಆ ಹಸ್ತಪ್ರತಿಯನ್ನು ತನ್ನ ತಿದ್ದುವಿಕೆಯ ಬಗ್ಗೆಂದು ತನಗೆ ಶ್ರೀ ನಂದಳಿಕೆಯವರೇ ಕಳುಹಿಸಿಕೊಟ್ಟರೆಂದೂ ಹಾಗೆಯೇ ಕೊಂಚಕಾಲದಲ್ಲಿ ಅವರು ಅಕಾಲಮೃತ್ಯುವಿಗೆ ತುತ್ತಾದುದರಿಂದ ಅದನ್ನು ಮರಳಿ ಕಳುಹಿಸಿಕೊಡೋಣ ಎಂದರೆ ಅವರ ಯಾರೊಬ್ಬ ಬಂಧುಗಳ ಪರಿಚಯವಾದರೂ ತನಗಿಲ್ಲದುದರಿಂದ ಅದು ತನ್ನೊಡನೆಯೇ ಹಿಂದುಳಿದಿದೆಯೆಂದೂ ಶ್ರೀ ಬಾಳಿಗರು ನನ್ನೊಂದಿಗೆ ಹೇಳಿದುದು, ವರ್ಷಗಳು ಹಲವಾಗಿ ಹೋದುವಾದರೂ, ನನ್ನ ನೆನಪಿನಲ್ಲಿ ಇಂದಿಗೂ ಅಮ್ಲಾನವಾಗಿದೆ; ಅಂದಿನಿಂದ ಈ ಗ್ರಂಥವು ನನ್ನ ವಶದಲ್ಲಿದೆ.

"ಇದು ನಂದಳಿಕೆಯವರ ಸ್ವಹಸ್ತಾಕ್ಷರದಲ್ಲಿಯೇ ಬರೆಯಲ್ಪಟ್ಟಿದೆ. ಪ್ರಥಮ ಸಂಧಿಯ ಮೊದಲಣ ೧೮ ಪದ್ಯಗಳು ಗ್ರಂಥದ ಕೊನೆಯಲ್ಲಿ ಬರೆಯಲ್ಪಟ್ಟಿವೆ, ಮತ್ತು ಗ್ರಂಥಾರಂಭದಲ್ಲಿ

ಶ್ರೀಃ

ಗಣಪತಯೇನಮಃ

ಕಾ ಮ ಶಾ ಸ್ತ್ರಂ

ಮಲ್ಲಿಕಾರ್ಜುನಕವೀಂದ್ರಪ್ರಣೀತಂ

ಕುಸುಮಷಟ್ಪದಿ.

* ಮಂಗಳಾಚರಣೆಯ ಪದ್ಯಗಳು ನಷ್ಟವಾಗಿವೆ * ಎಂದು ಬರೆದಿದ್ದು ಆ ಬಳಿಕ,

ಅನುಕೂಲೆಯಲ್ಲದಂ
ಗನೆಯಿಂದ ಘನಪಾಪ
ವಿನೆಯಂಗೆ ದೊರೆಕೊಳ್ಳ್ಗ ಮದುಕಾರಣಂ | ಇತ್ಯಾದಿಯಾಗಿ ಗ್ರಂಥ ವಾರಂಭಿಸುತ್ತದೆ. ಗ್ರಂಥದ ಕೊನೆಯಲ್ಲಿ

ಕಾಮಶಾಸ್ತ್ರಂ
ಸಂಪೂರ್ಣಂ

22—7—96. ಮಂಗಳಾಚರಣಂ ||

ಎಂದಿದ್ದು, ಆದರ ಕೆಳಗೆ 'ಭೋಗ ಷಟ್ಪದಿ'ಯ ಲಕ್ಷಣವನ್ನು ಹೇಳುವ 'ಮುನ್ನಿನಂಘ್ರಿಗಳ್ಗೆ ಮಾತ್ರೆ' ಎಂಬ ಪದ್ಯವಿದ್ದು, ಆ ಬಳಿಕ ಮಂಗಳಾಚರಣೆಯೇ ಮುಂತಾಗಿ ಉಳ್ಳ ೧೮ ಪದ್ಯಗಳಿವೆ. ಗ್ರಂಥದ ಪ್ರತಿ ಪುಟದಲ್ಲೆಂಬಂತೆ ಕೆಂಪು ಶಾಯಿಯಲ್ಲಿ ಅಲ್ಲಲ್ಲಿ ತುಂಬಾ ತಿದ್ದುಗಳಿವೆ; ಈ ತಿದ್ದುಗಳು ಶ್ರೀ ನಂದಳಿಕೆಯವರ ಕೈಬರಹದಲ್ಲಿವೆ. ೨೨-೭-೯೬ ಎಂಬುದರಿಂದ ೧೮೯೬ ನೆಯ ಇಸವಿ ಜುಲಾಯಿ ತಿಂಗಳ ೨೨ ನೆಯ ತಾರೀಕಿನಂದು ಅವರು ಇದನ್ನು (ಆ ತಾರೀಕು ಬರೆದಿರುವ ಎಡೆಯವರೆಗಾದರೂ) ಬರೆದು ಮುಗಿಸಿರಬೇಕೆಂದು ಊಹಿಸಬಹುದು.

"ಆದರೆ ಈ 'ಕಾಮಶಾಸ್ತ್ರ'ವು ಶ್ರೀ ನಂದಳಿಕೆಯವರ ಕೃತಿಯಲ್ಲವು; ಏಕೆಂದರೆ—

ಇದರ ಮೊದಲನೆಯ ಸಂಧಿಯಲ್ಲಿಯ

"........ಉ | ಮಾಮಹೇಶನಿಂದುಜೂಟ | ಹೇಮಕೂಟಗಿರಿ ನಿವಾಸನೀಗೆ ಸೌಖ್ಯಮಂ ||" (I 1)

"ಯದುಕುಲಲಲಾಮ ಗುಣ | ಸದನ ಶುಭವದನ ಕೋ | ವಿದರರಸ ಮಲ್ಲಿಕಾರ್ಜುನ ನೃಪಾಲ ||" (I 10),

"ಧಾತ್ರೀಶ ದೇವನೃಪ | ಪುತ್ರ........" (I 30),

"ಮಲ್ಲಿಕಾರ್ಜುನನವನಿಪ........" (I 31),

ಎಂಬಿವೂ ಹದಿಮೂರನೆಯ (ಅಂದರೆ ಕೊನೆಯ) ಸಂಧಿಯಲ್ಲಿಯ

"........ಯದುವಂಶ| ವನಧಿ ವಿದು ಮಲ್ಲಿಕಾ | ರ್ಜುನರಾಜ ನಿನೆಯಳ್ಗೆ ನಯದೊಳಿರದ ||" (XIII 72)

"........ಅಘ | ಹರ ವಿರೂಪಾಕ್ಷನಾಥೀನಮಲ್ತೇ ||" (XIII 75)

"........ಪಂಪಾಪುರಾಧೀಶ್ವರಾ ||" (XIII 77)

ಎಂಬಿವೂ ಪ್ರತಿಸಂಧಿಯ ಮುದ್ರಿಕಾಪದವಾದ 'ಉದಾರ ತ್ರಿಯಂಬಕ' ಎಂಬಿವೇ ಮೊದಲಾದುವೆಲ್ಲವು ಈ ಗ್ರಂಥವು ಶ್ರೀ ನಂದಳಿಕೆಯವರಿಂದ ರಚಿಸಲ್ಪಟ್ಟದಲ್ಲವೆಂಬು

ದನ್ನೂ, ವಿಜಯನಗರ ಸಂಸ್ಥಾನದ ಒಡೆಯನಾದ ಯದುವಂಶೀಯ ಮಲ್ಲಿಕಾರ್ಜುನನೆಂಬ ಅರಸನಿಂದ, ಅಥವಾ ಆತನ ಹೆಸರಲ್ಲಿ ಆತನ ಯಾರೊಬ್ಬ ಆಸ್ಥಾನಕವಿಯಿಂದ ರಚಿಸಲ್ಪಟ್ಟಿರಬೇಕೆಂಬುದನ್ನೂ ದೃಢೀಕರಿಸುತ್ತವೆ.

" ಈ ಮಲ್ಲಿಕಾರ್ಜುನನು ವಿಜಯನಗರ ಸಂಸ್ಥಾನವನ್ನು ಆಳಿದುದು ಕ್ರಿ. ಶ. 1446 ರಿಂದ 1467 ವರೆಗೆ,......ಈ 'ಕಾಮಶಾಸ್ತ್ರ'ದಲ್ಲಿಯ 'ಎಂಮ ಕುಲ ಗುರು ಕ್ರಿಯಾಶಕ್ತಿ ಮುನಿ' (I. 5) ಎಂಬುದು ವಿಜಯನಗರದ ಹರಿಹರ ಮಹಾ ರಾಯನ ಗುರುವಾದ ರಾಜಗುರು 'ಕ್ರಿಯಾಶಕ್ತಿ' ಎಂಬಾತನನ್ನೇ ಹೆಸರಿಸುತ್ತದೆ. ('ಶ್ರೀಮಾನ್ ಹರಿಹರೋ ರಾಜಾ ಚತುರ್ವರ್ಗಪರಾಯಣಃ | ಶ್ರೀಮತ್ ಕ್ರಿಯಾ ಶಕ್ತಿಮೂರ್ತಿಗುರ್ವಾಜ್ಞಾಮನುಗೃಹ್ಯ ಚ ||—(Journal of the Bombay Branch of R. A. S. Vol. XII. No. 34; p. 357') ಇವೆಲ್ಲವುಗಳಿಂದ ಕನ್ನಡ "ಕಾಮಶಾಸ್ತ್ರ"ವನ್ನು ಬರೆದ ಕವಿಯಾದ, ಅಥವಾ ತನ್ನ ಆಸ್ಥಾನಕವಿಯಿಂದ ಬರೆಯಿಸಿದ ಅರಸಾದ ಮಲ್ಲಿಕಾರ್ಜುನ ಮಹಾರಾಯನು ಯಾರೆಂಬುದು ತಿಳಿಯುತ್ತದೆ; ಮತ್ತದನ್ನು ಶ್ರೀ ನಂದಳಿಕೆಯವರು ಬರೆದಿರಬಹುದೆಂದು ಶಂಕಿಸಲಾದರೂ ಕಾರಣವಿಲ್ಲವೆಂಬುದೂ ಖಚಿತವಾಗುತ್ತದೆ.

" ಇಷ್ಟೇ ಅಲ್ಲ—ಇದೇ ಕನ್ನಡ 'ಕಾಮಶಾಸ್ತ್ರ'ದೊಂದು ಓಲೇಗರಿಯ ಪ್ರತಿಯು ದಿವಂಗತರಾದ ನನ್ನ ಭಾವ ಶ್ರೀ. ಬಂಗ್ಲೆಕರ ನಾರಾಯಣ ಕಾಮತರವರು ನಮಗೆ ಕೊಟ್ಟುದು ಈಗಲೂ ನಮ್ಮಲ್ಲಿದೆ; ಅದು 'ಕ್ರೋಧನ' ಸಂವತ್ಸರದ ಶ್ರಾವಣ ಬಹುಳ ಅಷ್ಟಮಿ (ಶ್ರೀ ಕೃಷ್ಣಾಷ್ಟಮಿ) ಯಂದು ಶೃಂಗೇರಿಯ ಜೋಗೆಯ್ಯರಿಂದ ಬರೆಯಲ್ಪಟ್ಟಿತೆಂದು ಅದರ ಕೊನೆಯಲ್ಲಿದೆ; ... ಇದನ್ನು ಆ ಜೋಗೆಯ್ಯರು ಬರೆದುದು ಕ್ರಿ.ಶ. ೧೮೭೯ನೆಯ ಶುಕ್ಲ ಸಂವತ್ಸರದ (ಅಂದರೆ ಶ್ರೀ ನಂದಳಿಕೆಯವರು ಹುಟ್ಟಿದ ಸಂವತ್ಸರದ) ಮುಂಚೆ ಎಂಬುದರಲ್ಲಿ ಯಾವ ಬಗೆಯ ಶಂಕೆಯೂ ಇಲ್ಲ. ಶ್ರೀ ನಂದಳಿಕೆಯವರ ಕೈ ಬರಹದ ಪ್ರತಿಯಲ್ಲೂ 'ಮಲ್ಲಿಕಾರ್ಜುನ ಕವೀಂದ್ರ ಪ್ರಣೀತಂ' ಎಂದೇ ಇದೆ; ಮತ್ತು ಅದರಲ್ಲಿ ಅವರು ಬರೆದ ತಾರೀಕಿನಂದು (೨೨-೭-೯೬) ಅವರು ಅದನ್ನು ಯಾವುದೊಂದು ಹಳೆಯ ಓಲೇಗರಿಯ ಗ್ರಂಥದಿಂದ ನಕಲು ತೆಗೆದು ಮುಗಿಸಿರಬೇಕು. ಅವರ ಕೈ ಬರಹದ ಪ್ರತಿಗೂ ನಮ್ಮ ಓಲೇಗರಿಯ ಪ್ರತಿಗೂ ಹೆಚ್ಚಿನ ವ್ಯತ್ಯಾಸವಿಲ್ಲ—ಹಲವೆಡೆಗಳಲ್ಲಿ, ಅದು ಇದರ "ನೊಣಪ್ರತಿ" ಯಂತಿದೆ.

ಮಂಜೇಶ್ವರ,
೧-೮-೧೯೨೭. } ಗೋವಿಂದ ಪೈ.

ಮಲ್ಲೇಶ್ವರ, ಬೆಂಗಳೂರು.
20-8-1927.

ಪ್ರಬುದ್ಧಕರ್ಣಾಟಕದ ಸಂಪಾದಕರಿಗೆ.

ಮಹಾಶಯರೇ !

ನಿಮ್ಮ ಮುದ್ದಣನ ಸಂಚಿಕೆಯ ೫ ನೆಯ ಪುಟದಲ್ಲಿ " ಕಾಮಶಾಸ್ತ್ರವೆಂಬ ಮತ್ತೊಂದು ಗ್ರಂಥವನ್ನು ಈತನು (ನಂದಳಿಕೆ ಲಕ್ಷ್ಮೀನಾರಣಯ್ಯನು) ಬರೆದುದಾಗಿ ತಿಳಿಯುತ್ತದೆ. ಇದರ ಕೈಬರಹದ ಪ್ರತಿ ಕನರ ಹೈಸ್ಕೂಲ್ ಹೆಡ್ಮಾಸ್ಟರ್ ಪದ್ಮನಾಭ ಬಾಳಿಗರ ವಶದಲ್ಲಿದೆ ಎಂದು ಲಕ್ಷ್ಮೀನಾರಣಯ್ಯನ ತಮ್ಮ ಶಿವರಾಮಯ್ಯನು ಹೇಳುತ್ತಿದ್ದನು" ಎಂದು ನಾನು ಹೇಳಿದುದಾಗಿ ಮುದ್ರಿತವಾಗಿದೆ. ಈ ಕಾಮ ಶಾಸ್ತ್ರವನ್ನು ನಾನು ನೋಡಿರಲಿಲ್ಲ. ಇತರರ ಹೇಳಿಕೆಯನ್ನು ನಾನು ಅನುವಾದ ಮಾಡಿದೆನು. ಈಚೆಗೆ ಶ್ರೀಮಾನ್ ಎಂ. ಗೋವಿಂದಪೈಯವರು ಈ ತಿಂಗಳು ೫ ನೆಯ ತಾರೀಖಿನ ಸ್ವದೇಶಾಭಿಮಾನಿ ಎಂಬ ಪತ್ರಿಕೆಯಲ್ಲಿ ಈ ಕಾಮಶಾಸ್ತ್ರದ ಪ್ರತಿ ತಮ್ಮ ಗುರುವಾದ ಪದ್ಮನಾಭ ಬಾಳಿಗರಿಂದ ಸುಮಾರು ೨೦ ವರ್ಷಗಳಿಗೆ ಹಿಂದೆ ತಮ್ಮ ವಶಕ್ಕೆ ಬಂದಂತೆಯೂ ಅದು ನಂದಳಿಕೆ ಲಕ್ಷ್ಮೀನಾರಣಯ್ಯನ ಕೈಬರಹದಲ್ಲಿರುವಂತೆಯೂ ಆದಿಯಲ್ಲಿ " ಕಾಮಶಾಸ್ತ್ರಂ ಮಲ್ಲಿಕಾರ್ಜುನ ಕವೀಂದ್ರ ಪ್ರಣೀತಂ" ಎಂದಿರುವಂತೆಯೂ ಹೇಳಿ ಆ ಗ್ರಂಥದಿಂದ ಕೆಲವು ಕುಸುಮಷಟ್ಪದಿಗಳನ್ನು ಉದಾಹರಿಸಿ ಗ್ರಂಥವು ವಿಜಯನಗರದ ರಾಜನಾದ ಮಲ್ಲಿಕಾರ್ಜುನನಿಂದಲೋ ಅಥವಾ ಅವನ ಆಸ್ಥಾನ ಕವಿಯೊಬ್ಬನಿಂದಲೋ ರಚಿತವಾಗಿರಬೇಕು ಎಂದು ಹೇಳಿ ಲಕ್ಷ್ಮೀನಾರಣಯ್ಯನಿಂದ ರಚಿತವಾದ ಗ್ರಂಥವಲ್ಲ ಎಂಬುದನ್ನು ಸ್ಪಷ್ಟಮಾಡಿದ್ದಾರೆ. ಆದುದರಿಂದ ಆ ಗ್ರಂಥವು ಲಕ್ಷ್ಮೀನಾರಣಯ್ಯನದಲ್ಲ. ಆತನು ಹಿಂದಣ ಗ್ರಂಥವನ್ನು ಪ್ರತಿಮಾಡಿ ಇಟ್ಟುಕೊಂಡಿರಬೇಕು. ಶ್ರೀಮಾನ್ ಗೋವಿಂದಪೈಯವರು ನನ್ನ ತಪ್ಪನ್ನು ತೋರಿಸಿಕೊಟ್ಟುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ.

ಈ ಗ್ರಂಥದ ಆದಿಯಲ್ಲಿ " ಮಲ್ಲಿಕಾರ್ಜುನ ಕವೀಂದ್ರ ಪ್ರಣೀತಂ" ಎಂದು ಲಕ್ಷ್ಮೀನಾರಣಯ್ಯನು ಬರೆದುಕೊಂಡಿರುವುದು ತಪ್ಪು. ಈ ಗ್ರಂಥವನ್ನು ಕಲ್ಲರಸ ಎಂಬ ಕವಿ ಬರೆದನು. ಇದಕ್ಕೆ ಜನವಶ್ಯ ಎಂದು ಹೆಸರು ; ಮಲ್ಲಿಕಾರ್ಜುನವಿಜಯ ಎಂಬ ಹೆಸರೂ ಉಂಟು. ವಿಜಯನಗರದ ರಾಜನಾದ ಮಲ್ಲಿಕಾರ್ಜುನನು ತನ್ನ ಮಹಿಷಿಗೆ ಹೇಳಿದ ವಿಷಯಗಳನ್ನು ತಾನು ವಿಸ್ತರಿಸಿ ಈ ಗ್ರಂಥದ ರೂಪವಾಗಿ ಬರೆದಂತೆ ಕಲ್ಲರಸನು ಹೇಳುತ್ತಾನೆ. ಕವಿಚರಿತೆಯ ದ್ವಿತೀಯ ಸಂಪುಟದ ೧೩–೧೫ ಪುಟಗಳನ್ನು ನೋಡಿ.

ರಾ. ನರಸಿಂಹಾಚಾರ್ಯ.

ಪ್ರಬುದ್ಧ

ಕರ್ಣಾಟಕ

ಪ್ರಭವ ಸಂವತ್ಸರ —೩೩— ಸಂಕ್ರಾಂತಿ ಸಂಚಿಕೆ

ಸಂಪುಟ ೯] ವಿಷಯಸೂಚಿಕೆ. [ಸಂಚಿಕೆ ೩

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೮

All Rights Reserved

Printed at the Crown Electric Press, Mysore.

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ).

ವಾರ್ಷಿಕಚಂದಾ (ಅಂಚೆವೆಚ್ಚ ಸೇರಿ)

ಆಶ್ರಯದಾತರಿಗೆ	ರೂ.	೧೦--೦--೦
ಪೋಷಕರಿಗೆ	ರೂ.	೩--೬--೦
ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳಿಗೆ	ರೂ.	೨--೮--೦
ಚಂದಾದಾರರಿಗೆ	ರೂ.	೨--೦--೦

ಕಾರ್ಯದರ್ಶಿ,
ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯರೂಪವಾಗಿ ಬರುತ್ತಿರುವ ಪತ್ರಿಕೆಗಳು

ಬೆಂಗಳೂರು :—ಕರ್ಣಾಟಕ ಸಾಹಿತ್ಯ, ಪರಿಷತ್ಪತ್ರಿಕೆ ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ವಿಶ್ವಕರ್ಣಾಟಕ, ಒಕ್ಕಲಿಗರ ಪತ್ರಿಕೆ, ಸರಸ್ವತಿ, ಮಿಥಿಕ್ ಸೊಸೈಟಿ ಪತ್ರಿಕೆ, ರಂಗಭೂಮಿ, ಮಕ್ಕಳ ಪುಸ್ತಕ.

ಮೈಸೂರು :—ಸಾಧ್ವಿ, ಮಧ್ವಸಿದ್ಧಾಂತ ಪ್ರಕಾಶಿನೀ, ವಿಶ್ವಬಂಧು.

ತುಮಕೂರು :—ಸ್ಕೂಲ್ ಫ್ರೋಕ್.

ನಂಜನಗೂಡು :—ಸನ್ಮಾರ್ಗದರ್ಶಿ.

ಚಾಮರಾಜನಗರ :—ಕಾದಂಬರೀ ಸಂಗ್ರಹ.

ಧಾರವಾಡ :—ಕರ್ಣಾಟಕ ವೃತ್ತ ಮತ್ತು ಧನಂಜಯ, ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ಣಾಟಕ.

ಬೆಳಗಾಂ :—ಸುಧಾರಕ, ಪ್ರಬೋಧ.

ಬಿಜಾಪುರ :—ಕಲ್ಪಲತಾ ಗ್ರಂಥಮಾಲಾ.

ಅಗಡಿ :—ಸದ್ಬೋಧಚಂದ್ರಿಕೆ.

ಪುತ್ತೂರು :—ಕನ್ನಡ ಸಹಕಾರ.

ತುಂಗಭದ್ರ :—ಪ್ರೇಮ.

ಬಾಗಲಕೋಟೆ :—ಕನ್ನಡಿಗ.

ಮಂಗಳೂರು :—ಸುವಾಸಿನೀ, ಸುಬೋಧಕ ಗ್ರಂಥಮಾಲಾ.

ಉಡುಪಿ :—ಸತ್ಯಾಗ್ರಹಿ.

ಕುಂದಾಪುರ :—ವಸಂತ.

ಮಡಿಕೇರಿ :—ಓಲ್ಡ್ ಸ್ಟೂಡೆಂಟ್ಸ್ ಮ್ಯಾಗಸೀನ್, ಲೋಕಪಾವನ, ಕೊಡಗು ವೃತ್ತಾಂತ.

ಮದರಾಸು :—ಆರೋಗ್ಯಚಂದ್ರಿಕೆ.

ಚಿಕ್ಕಬಳ್ಳಾಪುರ :—ಬೋಧಕಸೇವೆ.


ಗ್ರಂಥಾಲಯ
ಬೆಂಗಳೂರು-19



ಬೆಂಗಳೂರು ಕಬ್ಬನ್ ಪಾರ್ಕಿನಲ್ಲಿ ಹೊಸದಾಗಿ ಪ್ರತಿಷ್ಠಿಸಿರುವ

ಶ್ರೀ ಚಾಮರಾಜ ಒಡೆಯರ್ ಬಹದ್ದೂರವರ

ಪ್ರತಿಮೆ.



ದೇವನ ಬರವು.

ಆನಂದ ಭೈರವಿ.

ಎನ್ನ ಭಾಗ್ಯದದೇವ – ಬಂದುಳಿಸಿದೆ ಜೀವ !
ನಿನ್ನ ಬರವಿಗೊಂದು ಯುಗ ಕಾಯ್ದೆ ; |
ಅನ್ನಿಗರೊಲು ಮನ ಮರೆಯದಾ ದಿನಗಳ
ಬನ್ನವಡುತೆ ಬಲು ತೊಳಲಿದುದು || ೧

ಈ ನಾಲ್ಕುವರುಷಗ ಳನುದಿನದೊಳು ನೀ
ನೇ ನಿಮಿಷದೊಳೆಂತೊ ಬರ್ಪೆಯೆಂಬ |
ಆ ನಿರೀಕ್ಷಣೆಯೊಳು ಕಂಗಳು ಬಳಲ್ದವು,
ಕಿವಿ ನಿನ್ನ ದನಿಕೇಳೆ ತಪಿಸಿದವು || ೨

ಹೃದಯ ಪದುಮ ಸುಮ ದಳದೆರೆ ದರಳುತೆ
ಮೃದುವಾಗಿ ಇರ್ದುದು - ಬಾಡಿದುದು ; |
ಹೃದಯೇಶ್ವರ, ನಿನ್ನ ಸ್ಪರುಶದ ಪುಳಕದೆ
ಮರಳಿ ಮುದವನಿಂದು ತಾಳಿಹುದು || ೩

ಮರುವಿನ ಮಧ್ಯದಿ ತಿಳಿನೀರ ಕೊಳನಂತೆ,
ಬರಗಾಲಕೆ ಬಂದ ಭಾಗ್ಯದಂತೆ, |
ಸುಡುವ ಬಿಸಿಲ ಝಳದುರಿಯ ಹರಿಸೆ ಬಂದ
ಪರಮಾತ್ಮ, ಬಂದ್ಯೆಯ ತಂಬೆಲರೊಲ್ || ೪

ಇತ್ತನಿಸುಂಡು ವಿಶೇಷವೆಂದೆಣಿಸಿದೆ,
ತುಷ್ಟಿಯಾನಂದದಿ ತೇಗಿದ್ಯೆಯು ; |
ಇಷ್ಟು ದಿನದ ತನು ಮನದ ರಿಕ್ತತೆಗಳು
ಎತ್ತಲೋಡಿದವೊ ನೀ ಕಾಣುತ್ತಲೆ ! || ೫

ಶಿಶಿರದೆ ವನ ಚಿಗುರ್ವಿಡದವೊಲಾದುದು
ಕುಸುಮವನಾಕ್ಷಣ ತಳೆದವೊಲು ; |
ಎಸೆವ ನಿನ್ನಯ ಕೈ ಎನ್ನ ಕೈವಿಡಿಯಲು
ಒಸೆದು ಸೇರುತಲಲ್ಲೆ ಫಲಿಸಿದುದು || ೬

ವಿ. ಸೀ.

ಮಿಣುಕು ಹುಳುಗಳು.

೧

ಕಣ್ಣನು ತಿವಿಯುವ ಕಗ್ಗತ್ತಲು ಕವಿ
ದಿದ್ದಿತು ; ಇದ್ದುವು
ವನಗಳು ಗಾಢ ಸುಷುಪ್ತಿಯಲಿ !
ಮೌನವು ಶಾಂತಿಯ ಮಡಿಲೊಳಗಿದ್ದಿತು ;
ಭೇದವ ನೀಗಿ
ಅತೀತ ವಾಗಿ
ಕತ್ತಲೊಳೆಲ್ಲವು ಲಯವಾಗಿ
ಇಹ ಪರವೆರಡೂ ಒಂದಾಗಿ
ವಿಶ್ವವೆ ಗೂಢ ಸಮಾಧಿಯ ಸೇರಿ
ಇದ್ದಿತು ಧ್ಯಾನಾನಂದವ ತೋರಿ !

೨

ಮೇರೆಯೆ ಇಲ್ಲದ ಕತ್ತಲ ಕಡಲೊಳು
ಮಿಣುಕಿ, ಮಿಣುಕಿ,
ಮಿಂಚಿನ ಹನಿಗಳ ಮಳೆಯಂತೆ !
ಹೊನ್ನೆಯ ಹುಳುಗಳು, ಕಾಂತಿಯ ಕಿಡಿಗಳು !
ಹೊಳೆದು, ಅಳಿದು,
ಅಳಿದು, ಹೊಳೆದು,
ಚಿಮ್ಮುತ ಎಲೆಯಿಂದೆಲೆಯೆಡೆಗೆ
ಚಿಮುಕಿಸಿ ಮೋಹವನಡಿಗಡಿಗೆ,
ಕುಣಿಯುತ, ಮಿಣುಕುತ, ಮನಸನು ಸೆಳೆದು
ಮೆರೆದುವು ಬೆಳಕಿನ ಮಣಿಗಳು ಹೊಳೆದು !

೩

ಮಸಿಮಯ ನಭದೊಳು ಚುಕ್ಕಿಗಳೆಸೆದುವು,
ಜ್ಯೋತಿಯ ಸೇಸೆಗ
ಳವುಗಳನಣಕಿಸಿ ಮಿಣುಕಿದುವು!
ಕೊಳದೆದೆಯೊಳು ಮರುಬಿಂಬಿಸಿ ಮಿಣುಕುತ
ಇಮ್ಮಡಿಯಾಗಿ
ಅಗಣಿತವಾಗಿ
ಕುಸುಮಿತ ಮಿಂಚಿನ ಲತೆಯಿಂದ
ಉದುರುವ ಸುಮಗಳ ತೆರದಿಂದ
ಗಡಿಪಾರಾದುಡುಗಣದಳದಂತೆ
ಹೊಳೆದುದು ಹೊನ್ನಿಯ ಹುಳುಗಳ ಸಂತೆ!

೪

ಎವೆಯೆನು ಮುಚ್ಚದೆ, ಚಲಿಸದೆ, ಸುಮ್ಮನೆ
ನೋಡಿದೆ! ನೋಡಿದೆ!
ಮಹಿಮೆಯ ನೋಟವ ಮೈಮರೆತು!
ಕವಿತಾವೇಶಾನಂದದ ಲಹರಿಯು
ಚಿತ್ತದಿ ಮೊರೆದು,
ಎದೆಯೊಳು ಹರಿದು,
ಕರಗಿಸಿತೆನ್ನೀ ವ್ಯಕ್ತಿಯನು
ದೊರಕಿಸಿತೆನಗಾ ಮುಕ್ತಿಯನು!
ಮೋಹದ ನೋಟದೊಳಾನೊಂದಾಗಿ
ಮಿಣು ಮಿಣುಕಿದೆ ಮಿಂಚಿನ ಹುಳುವಾಗಿ!

ದೇವರು ಮತ್ತು ದೊರೆ.

೧

ದಿನವು ನಿನ್ನ ಕೂಡಿ ನಲಿವೆ
ದೇವ, ಮಾತನಾಡಿ ನಲಿವೆ ;
ನಲಿವೆ ನಿನ್ನ ವಸನವುಟ್ಟು
ನಲಿವೆ ನಿನ್ನ ಬೆಡಗ ತೊಟ್ಟು ;

ನಿನ್ನ ರೂಪ ಧರಿಸಿ ನಾನು
ನೋಡಿ ಕುಣಿವೆ ನಲಿಯೆ ನೀನು ;
ನಿನ್ನ ದನಿಯ ಸಿರಿಯನೊಲಿವೆ
ಹೆಮ್ಮೆಯಿಂದ ಹಾಡಿ ನಲಿವೆ ;

–ಸುದ್ದಿಯೊಂದು ಹರಡಲಿಲ್ಲ ;
ಯಾರು ಬಳಿಗೆ ಬಾರಲಿಲ್ಲ ;
'ಧನ್ಯ ನೀನು' ಎನ್ನಲಿಲ್ಲ ;
ನಿನ್ನನಂತು ಕೇಳ್ದರಿಲ್ಲ ;

ಆದರೆನ್ನ ನೋಡಿ ಎಲ್ಲ
    ಹುಚ್ಚ ನೆಂದರು !
ಬಂದಕೆಲರು ಹಾಸ್ಯಕಾಗಿ
    ಬಳಿಗೆ ಬಂದರು !

೨

ಇಂದು ನಾನು ಗಳಿಗೆಯೊಂದೆ
ದೊರೆಯ ಬಳಿಗೆ ಹೋಗಿ ಬಂದೆ
ಅವನಿಗೇನು ಹಾಡಲಿಲ್ಲ ;
ಸಲಿಗೆಯಿಂದ ನುಡಿಯಲಿಲ್ಲ ;

ಅವನು ದೊರೆಯತನದೊಳಿದ್ದ ;
ಪ್ರಜೆಯತನದೊಳಾನು ಇದ್ದೆ !
ಅವನ ಸಿರಿಯನೊಲಿಯಲಿಲ್ಲ
ಕಂಡು ಹೆಮ್ಮೆಪಡಲು ಇಲ್ಲ !

–ಸುದ್ದಿ ಹರಡಿತೂರೊಳೆಲ್ಲ !
ಎನ್ನ ಬಳಿಗೆ ಬಂದರೆಲ್ಲ !
'ಧನ್ಯ ನೀನು' ಎಂದರೆಲ್ಲ !
ರಾಜನನ್ನು ಕೇಳ್ದರೆಲ್ಲ !

ನಾನೆ ಹುಚ್ಚೊ ಅವರೆ ಹುಚ್ಚೊ
ಯಾರು ಬಲ್ಲರು !
ನೀನೆ ಹೆಚ್ಚೊ ದೊರೆಯೆ ಹೆಚ್ಚೊ
ಯಾರು ಬಲ್ಲರು !

ಕಿಶೋರಚಂದ್ರ ವಾಣಿ.

ಬಯಕೆ.

ಹುಣ್ಣಿಮೆಯ ರಾತ್ರಿಯಲಿ ಬಿಳಿಮುಗಿಲು ಗಗನದಲಿ
ಸಾಲುಗೂಡುವ ಮತ್ತೆ ಚೆದರುವಾಟ;
ಕಣ್ಣು ತಣಿವಷ್ಟೊಂದು ನೀರು ಬೆಳಗುವ ಹೊಳೆಯು;
ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು;
ತೊರೆಯೊಂದು ದಡದಲ್ಲಿ ಹರಡಿರುವ ಮಳಲೊಟ್ಟು,
ಮತ್ತೊಂದರಲಿ ಗುಂಪುಮರದ ನೆಳಲು;
ಹೊರಟು ನೀರಿನ ಮೇಲೆ ಸರಿದು ಸಾಗುವ ದೋಣಿ;
ಎತ್ತಲೂ ನಿರ್ಜನತೆ, ನಿಶ್ಶಬ್ದತೆ.
ಎತ್ತ ನೋಡಿದರತ್ತ ನದಿಯ ತಿಳಿನೀರೆದ್ದು
ಸಣ್ಣ ಸಣ್ಣಲೆಯಾಗಿ ಕುಣಿವ ಬೆಡಗು;
ಒತ್ತಿ ದೋಣಿಗೆ ಬಡಿದು ಕೈನೀಡಿದರೆ ಸೋಕಿ
ನುಣ್ಣನಪ್ಪುತ ನೀರು ತೋರುವಿಂಪು;
ತುಂಬಿದಿಂದುವಿನ ನಗೆ ಹೊರಸೂಸಿ ಪಾಲಾಗಿ
ತೆರೆತೆರೆಗೆ ಹರಡಿಕೊಂಡಿರುವ ಸೊಗಸು;
–ಇಂಬಾದ ನೋಟದೊಳಗುಕ್ಕುವಾನಂದವನು
ತೆರೆದ ಹೃದಯವು ನಲಿದು ಹೀರುತಿರಲು,
ಅಲ್ಲಿ ಕುಳಿತೊಬ್ಬನೇ, ಕಟ್ಟುನಿಟ್ಟಿಲ್ಲದೆಯೆ
ತೇಲುವುದಕೆಡೆಗೊಟ್ಟು ಹರಿಗೋಲಿಗೆ,
ಎಲ್ಲಿ ಹೋಗುವೆ ನಾನು, ಯಾರು ಕರೆಯುವರೆನ್ನು–
ತಾಲಿಸದೆ, ಚಿಂತಿಸದೆ, ಹಂಬಲಿಸದೆ,
ಶಾಂತಿಯುಡಿಗೆಯನುಟ್ಟು ಪ್ರಕೃತಿಯೊಲವನು ತೋರಿ
ತನ್ನ ಮಡಿಲಲಿ ನನ್ನನಿಟ್ಟು ತೂಗಿ
ಸಂತೋಷದಿಂದುಲಿಯು ವಾನಂದಗಾನದಲಿ
ನನ್ನ ಮೈಯನು ಮರೆಯುವೊಂದೆ ಬಯಕೆ.

ತೀ. ನಂ. ಶ್ರೀಕಂಠಯ್ಯ.

ಶ್ರೀರಂಗಪಟ್ಟಣ.

ಕಾವೇರಿಯ ತೋಳ್ತೆಕ್ಕೆಗೆ ಸಿಕ್ಕಿ,
ತೀವಿದ ಶೃಂಗಾರದಿ ಬಲು ಸೊಕ್ಕಿ ;
ಸುಖ ಸಂಪತ್ತಿನ ಶಿಖರವ ಹತ್ತಿ,
ನಿಖಿಲಾವನಿಯಲಿ ಕೀರ್ತಿಯ ಬಿತ್ತಿ ;
ಸುತ್ತುತ ಮುತ್ತಿದ ಶೂರರ ಪಡೆಯ,
ಕತ್ತರಿಸುತ ಗರ್ವಿತರೊಗ್ಗಡೆಯ ;
ಒತ್ತರಿಸುತ ನೆರೆ ನಾಡಿನ ಗಡಿಯ,
ಎತ್ತಿ ಹಿಡಿದು ಬಾಂದಳದಲಿ ಗುಡಿಯ ;
ಅರಿದುರ್ಭೇದ್ಯವಿದೆನ್ನುತ ಮೆರೆದು,
ಪರಿಪರಿಯಲಿ ಶೂರರ ಕರೆ ಕರೆದು ;
ರಣದಲಿ ಸೆಣಸಿದ ದಿಟ್ಟರನಟ್ಟಿ,
ಮಣಿದವರರಿಗಳ ನಾಕ್ಷಣ ಕುಟ್ಟಿ ;
ಎಣೆಯಿಲ್ಲದ ರತ್ನಂಗಳನೊಟ್ಟಿ,
ಮಣಿ ತೋರಣಗಳ ನಲಿಯುತ ಕಟ್ಟಿ ;
ಕಮಲಾದೇವಿಯ ನೆಲೆವನೆಯೋ ಮೇಣ್
ಸುಮನೋವೃಕ್ಷದ ಕೈದೋಟವೊ ಎನ-
ಲಮರಾವತಿಯನು ಜರಿಯಿತು ಸೊಬಗಿಂ,
ಸುಮನೋಮುಖ್ಯಾರಾಧಿತನಹ ಶ್ರೀ-
ರಂಗನಾಥನಾವಾಸದ ಬೆಡಗಿಂ
ಮಂಗಳಕರ ಶ್ರೀರಂಗಪಟ್ಟಣಂ

ಎಲ್. ಗುಂಡಪ್ಪ.

ಗಾನಕಲೆ.

(ಆಂಧ್ರ ಗಾಯಕಜನ ಸಭೆಯಲ್ಲಿ ಶ್ರೀಮಾನ್ ರಾಳ್ಲಪಲ್ಲಿ ಅನಂತಕೃಷ್ಣಶರ್ಮರವರು ಕೊಟ್ಟ ಅಧ್ಯಕ್ಷೋಪನ್ಯಾಸ.)

" ಚೈತನ್ಯಂ ಸರ್ವಭೂತಾನಾಂ,
ನಿರ್ವೃತಿಂ ಜಗದಾತ್ಮನಾಮ್,
ನಾದಬ್ರಹ್ಮ ಸದಾನಂದ
ಮದ್ವಿತೀಯ ಮುಪಾಸ್ಮಹೇ."

ಮಹನೀಯರೆ,

ಅತಿವಿನಯದಿಂದ ನೈಚ್ಯಾನುಸಂಧಾನಮಾಡಿ ತಮ್ಮ ಕಾಲಹರಣಮಾಡುವುದು ನನ್ನ ಉದ್ದೇಶವಲ್ಲ. ಆದರೂ ಹೊರಲಾಗದ ಭಾರವನ್ನು ನನ್ನ ತಲೆಯ ಮೇಲೆ ಹೊರಿಸಿದಿರಿ. ತಾವೆಲ್ಲರೂ ದಯಮಾಡಿ ತೆಲುಗು ದೇಶದಲ್ಲಿ ಎಲ್ಲಿಯೋ ಒಂದು ಮೂಲೆಯೊದ ಈ ಅನಂತಪುರದಲ್ಲಿ ಈ ಸಮಾವೇಶವನ್ನು ಜರುಗಿಸಲು ಅಂಗೀಕರಿಸಿ ದಯಮಾಡಿಸಿರುವುದು ನಮ್ಮ ಭಾಗ್ಯವೇಯೇ. ಆದರೆ ಈ ಸಂದರ್ಭದಲ್ಲಿ ನಾನು ಅನಂತಪುರ ಜಿಲ್ಲೆಯಲ್ಲಿ ಹುಟ್ಟಿದವನಾಗಿರುವುದೂ, ನನಗಿಂತಲೂ ಅರ್ಹರಾದ ಮಹನೀಯರು ಸ್ವಾರ್ಥಪರರಾಗಿ ಈ ಭಾರದಿಂದ ತಪ್ಪಿಸಿಕೊಂಡಿರುವುದೂ, ನನ್ನ ಭಾಗ್ಯವೆಂದು ಮಾತ್ರ ಹೇಳಲಾರೆನು. ಈ ದಿನ ನನಗೆ ಈ ಗೌರವವನ್ನು ತಾವು ಕೊಟ್ಟುದಕ್ಕಾಗಿ ಮೇಲಿನ ಎರಡನ್ನು ಬಿಟ್ಟರೆ ಬೇರೆ ಕಾರಣಗಳ್ನು ನಾನು ಕಾಣೆನು. ಹೇಗೆಯೇ ಆಗಲಿ ನೊಗಕ್ಕೆ ಕಟ್ಟಿದಿರಿ. ಆದುದರಿಂದ ಕೈಲಾಗುವವರೆಗೂ ಎಳೆಯುವೆನು. ನಡುವೆ ಕುಂಟುಬಿದ್ದರೆ, ತಪ್ಪು ನನ್ನದಲ್ಲ. ನನ್ನ ಶಕ್ತಿಯನ್ನು ಅರಿಯದೆ ನಿಯೋಗಿಸಿದ ತಮ್ಮ ದಯೆಯದು.

ಆದರೆ ಒಂದು ಮಾತು ಮಾತ್ರ ಹೇಳಬೇಕಾಗಿದೆ. ಇಂಥ ಸಭೆಗಳಲ್ಲಿ ಅಧ್ಯಕ್ಷಪದವಿಯನ್ನು ಅಂಗೀಕರಿಸುವವರಿಗೆ ಮಿಕ್ಕ ಶಕ್ತಿಯುಕ್ತಿಗಳು ಇದ್ದರೂ ಇಲ್ಲದಿದ್ದರೂ ಒಂದು ಗುಣಮಾತ್ರ ಮುಖ್ಯವಾಗಿ ಇರಲೇಬೇಕು. ಅದಾವುದೆಂದರೆ : ಯಾವ ವಿದ್ಯೆಯ ಅಭಿವೃದ್ಧಿಯನ್ನು ಕುರಿತ ಚರ್ಚೆಗಾಗಿ ಸಭೆಯು ಏರ್ಪಟ್ಟಿರುವುದೋ ಅದರಲ್ಲಿ ಸಂಪೂರ್ಣವಾದ ಅಭಿರುಚಿ. ಅದಿಲ್ಲದವರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವುದೂ ಉಂಟು ; ಅವರು ಅಂಗೀಕರಿಸುವುದೂ ಉಂಟು. ಆದರೆ, ಪ್ರಕೃತಸಂದರ್ಭದಲ್ಲಿ ತಮ್ಮನ್ನಾಗಲಿ ನನ್ನನ್ನಾಗಲಿ ಈ ವಿಷಯದಲ್ಲಿ ನಿಂದಿಸುವವರು ಇರಲಾರರು.

ಏಕೆಂದರೆ, ಸಂಗೀತವಿದ್ಯೆಯಲ್ಲಿ ನನಗೆ ಇರುವ ಅಭಿರುಚಿಯು ಅನಂತವಾದ್ದು. ಇಷ್ಟು ಅಭಿರುಚಿ ಇದ್ದು ನೀನು ಸಾಧಿಸಿದುದು ಏನು? ಎಂದು ತಾವು ಕೇಳಿದರೆ, ಅದು ಬೇರೆ ಮಾತು. ನಮಗೆ ಅಭಿರುಚಿಯಿರುವ ವಸ್ತುಗಳನ್ನೆಲ್ಲ ನಾವು ಸಾಧಿಸಬಲ್ಲೆವಾದರೆ ನಮ್ಮನ್ನು ಹಿಡಿಯುವವರು ಯಾರು? ಅಲ್ಲದೆ ಬಾರದಿರುವ ವಿದ್ಯೆಗಳಲ್ಲಿಯೇ ಮನುಷ್ಯರಿಗೆ ಅಭಿರುಚಿ ಹೆಚ್ಚು. ದರಿದ್ರನಿಗೇ ದ್ರವ್ಯದಲ್ಲಿ ಹೆಚ್ಚಾಸೆ. ಅದು ಹಾಗಿರಲಿ.

ಸಂಗೀತವಿದ್ಯೆಯಲ್ಲಿ ರುಚಿಯಿಲ್ಲದವರು ಯಾರು? ಅದರಲ್ಲಿಯೂ ಭರತಖಂಡದಲ್ಲಿ ಜನಿಸಿರುವವರಿಗೆ—ಹಿಂದೂಜಾತಿಯವರಿಗೆ? ಅದು ಜಾತಿಧರ್ಮ. ತಂದುಕೊಳ್ಳಬೇಕಾದ ಹೊರಗಿನ ವಸ್ತುವಲ್ಲ. ಬಿಡಲಾಗದ ಒಳಗಿನ ಗುಣ. "ಸ್ವರಾಜ್ಯವು ನನ್ನ ಜನ್ಮದ ಹಕ್ಕು" ಎಂದು ಶ್ರೀ ಲೋಕಮಾನ್ಯರು ಹೇಳಿದರು. ಹಾಗೆಯೇ ಸಂಗೀತವು ನನ್ನ ಜನ್ಮದ ಹಕ್ಕೆಂದು ಯಾವ ಹಿಂದೂವೇ ಆಗಲಿ ಧಾರಾಳವಾಗಿ ಹೇಳಬಹುದು. ಮನುಷ್ಯರಿಗೆ, ಆಬಾಲಗೋಪಾಲವಾಗಿ, ಸಂಗೀತದಲ್ಲಿ ಅಭಿರುಚಿ ಸಹಜ. ತಾಯಿಯ ಹಾಡಿಲ್ಲದಿದ್ದರೆ ಮಗುವಿಗೆ ನಿದ್ದೆಬಾರದು; ಪಿಳ್ಳಂಗೋವಿ ಇಲ್ಲದಿದ್ದರೆ ಗೊಲ್ಲರವನಿಗೆ ಹೊತ್ತು ಹೋಗದು. ಆದರೆ ಜೀವಿತದಲ್ಲಿನ ಪ್ರತಿಕಾರ್ಯದೊಡನೆಯೂ ಸಂಗೀತವನ್ನು ನಮ್ಮಷ್ಟು ದೃಢವಾಗಿ ಮೇಳೈಸಿರುವವರು ಯಾವ ದೇಶದಲ್ಲಿಯೂ ಯಾವ ಜಾತಿಯಲ್ಲಿಯೂ ನಾನು ತಿಳಿದಿರುವವರೆಗೂ ಇಲ್ಲ. ನಮ್ಮ ತಾತ ಮುತ್ತಾತಂದಿರಿಗೆ ಈಗಿನ ಇಂಥ ಸಭೆ ಸಮಾಜಗಳನ್ನು ಏರ್ಪಡಿಸುವುದಾಗಲಿ ಅಲ್ಲಿ ಉಪನ್ಯಾಸಗಳನ್ನು ಕೊಟ್ಟು ತೀರ್ಮಾನಗಳನ್ನು ಮಾಡಿ ಪ್ರಕಟಿಸುವುದಾಗಲಿ ತಿಳಿಯದು. ಆದರೆ ಹಾಡುವುದರಲ್ಲಿ ಬಿಡಲಾಗದ ಅಭಿಮಾನವನ್ನೂ ಅಭಿರುಚಿಯನ್ನೂ ಪ್ರಜೆಗಳಿಗೆ ಉಂಟುಮಾಡುವ ವಿಷಯದಲ್ಲಿ, ಅವರು ಸಾಧಿಸಿದಷ್ಟು ಕೆಲಸವನ್ನು, ನಾವು ಇಂಥ ಸಭೆಗಳನ್ನು ವರ್ಷಕ್ಕೊಂದುಸಾರಿಯಲ್ಲ, ದಿನಕ್ಕೊಂದುಸಾರಿ ನಡೆಯಿಸಿದರೂ ಸಾಧಿಸಬಲ್ಲೆವೇ ಎಂದು ಸಂದೇಹಿಸಬೇಕಾಗಿದೆ. ನೋಡಿ: ಆಸೇತುಹಿಮಾಚಲವೂ ಹಿಂದೂಗಳೆಲ್ಲರೂ ಸಂಗೀತದಿಂದ ಶುಭಕರ್ಮಗಳನ್ನು ನಡೆಯಿಸುವರು. ಸಂಗೀತದಿಂದ ಭಗವದ್ಭಜನೆ ಮಾಡುವರು; ಇತರರಿಗೆ ನೀತಿ ವೈರಾಗ್ಯಾದಿಗಳನ್ನೂ ಸಂಗೀತದಿಂದ ಉಪದೇಶಿಸುವರು; ಸಂಗೀತದಿಂದ ಓದುವರು; ಸಂಗೀತದಿಂದ ತಮ್ಮ ತಮ್ಮ ಜಾತಿ ಕಸುಬುಗಳನ್ನು ಮಾಡುವರು; ಸಂಗೀತದಿಂದ ವ್ಯಾಪಾರಮಾಡುವರು; ಸಂಗೀತದಿಂದ ಭಿಕ್ಷವೆತ್ತುವರು. ನಮಗೇ ಅಲ್ಲ, ಪ್ರಪಂಚಕ್ಕೇ ಮೊದಲನೇ ವಾಙ್ಮಯವಾದ ವೇದವು ಹಾಡಬೇಕಾದುದು. ದ್ವಿಜರೆಲ್ಲರೂ ಶುಭಾಶುಭ ಕರ್ಮಗಳಲ್ಲಿ ಅದನ್ನು ಹಾಡದಿದ್ದರೆ ತೀರದು. ಆದರಲ್ಲಿಯೂ ಸಾಮವೇದವು ಗಾನರೂಪವಾದುದು.

ಮತ್ತು ಈಗಿನ ಸಂಗೀತವನ್ನೂ ಬ್ರಹ್ಮನು ಅದರಿಂದಲೇ ಸೃಷ್ಟಿಸಿದನಂತೆ! ಭಗವಂತನು ಸಾಮಗಾನಪ್ರಿಯನಂತೆ. ಆದುದರಿಂದಲೇ ವೇದಗಳಲ್ಲೆಲ್ಲ ಅದು ಶ್ರೇಷ್ಠ ವಾದುದು. ಪ್ರಸ್ತಪ್ರಯೋಜನ ಕಾಲಗಳಲ್ಲಿ ಮುಂಚೆ ಮುತ್ತೈದೆಯರು ಹಾಡುಗಳನ್ನು ಹಾಡಿ ವಧೂವರರನ್ನು ಹಸೆಗೆ ಕರೆಯುವರು. ನಾಲ್ಕು ಆರತಿಯ ಹಾಡುಗಳಾದರೂ ಬಾರದ ಹೆಂಗಸು ಉರುಟಣೆಗಳಲ್ಲಿ ನಾಲ್ವರೊಡನೆ ಕುಳಿತುಕೊಳ್ಳಲು ನಾಚಿಕೆಪಡುವಳು. "ಮದ್ಭಕ್ತಾ ಯತ್ರ ಗಾಯನ್ತಿ ತತ್ರ ತಿಷ್ಠಾಮಿ ನಾರದ" ಎಂದು ಭಗವಂತನು ನುಡಿದು, ಹಾಡಿಲ್ಲದ ಭಜನೆ ತನಗೆ ತೃಪ್ತಿಕರವಲ್ಲವೆಂದು ಸಾರಿದ್ದಾನೆ. ಆತನು ಕುರುಕ್ಷೇತ್ರ ಮಹಾಯುದ್ಧರಂಗದಲ್ಲಿ ಅರ್ಜುನನಿಗೆ ಉಪದೇಶಮಾಡಿದ ಯೋಗವಿದ್ಯೆಗೆ "ಉಕ್ತಿ" ಎನ್ನದೆ, "ಉಪದಿಷ್ಟೆ" ಎನ್ನದೆ, 'ಆಜ್ಞೆ' ಎನ್ನದೆ, 'ಗೀತೆ' ಎಂದು ಹೆಸರಿಟ್ಟಿದ್ದಾನೆ. ಇದೇ ಹರಿಕಥೆ ಪುರಾಣ ಮೊದಲಾದ ಉಪದೇಶ ವಿದ್ಯೆಗಳನ್ನು ಗಾನಪ್ರಧಾನವನ್ನಾಗಿ ಮಾಡಿದುದು. ನಮ್ಮಲ್ಲಿ ಆದಿಕಾವ್ಯವಾದ ಶ್ರೀಮದ್ರಾಮಾಯಣವನ್ನು ರಚಿಸಿದ ವಾಲ್ಮೀಕಿಯು ಅದನ್ನು ಮೊದಲು ಪ್ರಪಂಚಕ್ಕೆ ತಿಳಿಸುವವೇಳೆ ತನ್ನ ಮುದಿಶಾರೀರದಿಂದ ಓದಿದರೆ ಸ್ವಾರಸ್ಯ ಕೆಡುವುದೆಂದು ಯೋಚಿಸಿಯೇ, ಕುಶಲವರ ಕೋಮಲಗಾತ್ರದಿಂದ ಅದನ್ನು ಹಾಡಿಸಿದ್ದಾನೆ. ಅಂದಿನಿಂದ ಮೊದಲು ನಮ್ಮಲ್ಲಿ ರಸಭಾವಗಳಿಗೆ ಅನುಗುಣವಾದ ರಾಗಲಯಗಳೊಡನೆ ಕಾವ್ಯ ನಾಟಕಾದಿಗಳನ್ನು ಓದುವುದು ಒಂದು ವಿದ್ಯೆಯಾಗಿ ಏರ್ಪಟ್ಟಿತು. ಕೊನೆಗೆ ಹಳ್ಳಿಯ ಮಠದಲ್ಲಿ ಸಾಯಂಕಾಲ ಮಗ್ಗಿಯನ್ನು ಕುರುಡುಪಾಠಮಾಡುವ ಹುಡುಗನು ಕೂಡ ಒಂದು ವಿಧವಾದ ರಾಗವನ್ನು ಮರೆಯದೆ ಉಪಯೋಗಿಸುವನು. ಸಂಗೀತದ ವಾಸನೆಯಿಲ್ಲದ ಓದು ಶ್ರಾದ್ಧಮಂತ್ರಗಳಂಥುದೆಂದು ಹಿರಿಯರು ಹೇಳಿರುವುದನ್ನು ಹಲಬಾರಿ ಕೇಳಿದ್ದೇವೆ. ಲೋಕಪ್ರಸಿದ್ಧವಾದ ಕಾಶ್ಮೀರದ ಶಾಲುಗಳನ್ನು ನೇಯುವ ಕೆಲಸ ಕಾರ್ಯಗಳು, ಹಾಡದಿದ್ದರೆ ನಡೆಯವಂತೆ! ಅಷ್ಟು ದೂರವೇಕೆ? ಹಿಟ್ಟು ಬೀಸುವುದು, ಕಪಿಲೆಹೊಡೆಯುವುದು, ಕಳೆಕೀಳುವುದು ಮೊದಲಾದ ನಿತ್ಯಕರ್ಮಗಳಲ್ಲಿ ರೈತರ ಕಷ್ಟವನ್ನು ಮರೆಯಿಸುವುದು ಹಾಡಲ್ಲದೆ ಬೇರೊಂದೇನಿದೆ? ರೈಲ್ವೆ ಸ್ಟೇಷನುಗಳಲ್ಲಿ ಕಾಫಿ ಟೀಗಳನ್ನು ಮಾರುವ ಮಂಗಳೂರು ಆಚಾರಿಯೂ, ಸಿಗರೆಟ್ಟು ಚುಟ್ಟಾಗಳನ್ನು ಮಾರುವ ಸಾಹೇಬನೂ, ಬೀದಿಗಳಲ್ಲಿ ಹಾಲು ಮೊಸರುಗಳನ್ನೂ ಕಾಯಿಸೊಪ್ಪುಗಳನ್ನೂ ಮಾರುವ ಒಕ್ಕಲಕಲಕೆಂತೆಯರೂ, ಯಾವುದೊ ಒಂದು ರಾಗವಿಲ್ಲದೆ ಕೆಲಸಮಾಡಲಾರರು. ಭಿಕ್ಷಾನ್ನದ ಬ್ರಹ್ಮಚಾರಿ, ನಿತ್ಯಯಾತ್ರೆಮಾಡುವ, ನಿರುದ್ಯೋಗೀ ಬ್ರಾಹ್ಮಣ, ಭೂತಭವಿಷ್ಯತ್ತುಗಳನ್ನು ಹೇಳುವ ಬುಡುಬುಡುಕೆಯವನು ದಾರಿಯ ದಾಸಯ್ಯಗಳು, ಕುಂಟ ಕುರುಡ ಮೊದಲಾದ ಪರತಂತ್ರ

ಜೀವಿಗಳು—ಇವರೆಲ್ಲರಿಗೂ ಪ್ರಾಣಾಧಾರವು ಹಾಡೇ. ಎಲ್ಲ ದೇಶಗಳಲ್ಲಿಯೂ ಯೋಜನಾವೃತ್ತಿ ದುಸ್ಸಹವೆಂದು ಅದನ್ನು ನಿರ್ಮೂಲಗೊಳಿಸುತ್ತಿರುವಾಗ, ಶಿಕ್ಷಿಸುತ್ತಿರುವಾಗ, ನಮ್ಮ ದೇಶದಲ್ಲಿ ಮಾತ್ರ ಅದು ಇನ್ನೂ ಪ್ರಬಲವಾಗಿಯೇ ಇರುವುದಕ್ಕೆ ಮುಖ್ಯಕಾರಣವಾಗಿರುವವುಗಳಲ್ಲಿ ಹಿಂದೂಗಳಿಗೆ ಇರುವ ಸಹಜವಾದ ಗಾನ ಪ್ರೀತಿ ಒಂದು ಎನ್ನುವುದರಲ್ಲಿ ಸಂದೇಹವಿಲ್ಲ. ಅದು ಹಾಗಿರಲಿ. ಹಿಂದೂಗಳೆಲ್ಲರೂ ಪಲ್ಲವಿ ಹಾಡಬಲ್ಲ ಪರಮ ವಿದ್ವಾಂಸರೆಂದು ಹೇಳಲು ಬರಲಿಲ್ಲ. ಈಗ ಸಾಮಾನ್ಯವಾಗಿ ಸಂಗೀತ ವಿದ್ವಾಂಸರನೇಕರು ಹಾಡುತ್ತಿರುವ ಪಲ್ಲವಿಯೇ ಹಾಡಾಗಿದ್ದಪಕ್ಷದಲ್ಲಿ, ಹಿಂದೂಗಳೆಲ್ಲರೂ ಅದನ್ನು ಹಾಡಲು ಕಲಿತಿದ್ದ ಪಕ್ಷದಲ್ಲಿ, ಭರತಖಂಡವು ಒಂದು ದೊಡ್ಡ ಕುರುಕ್ಷೇತ್ರವಾಗಿ ಪರಿಣಮಿಸಿ ಭಗವಂತನಿಗೆ ಪುನಸ್ಸೃಷ್ಟಿಗೆ ಮಾರ್ಗವು ಎಂದೋ ಉಂಟಾಗುತ್ತಿತ್ತು. ಮತ್ತೂ ಏನೆಂದರೆ ಸಾಮಾನ್ಯವಾಗಿ ಮಾತುಗಳಲ್ಲಿ ಉಪಯೋಗಿಸುವ 'ಶಬ್ದ'ಕ್ಕಿಂತಲೂ ಮಧುರತರವಾದ 'ನಾದ' ವೊಂದು ಇರುವುದೆಂದೂ, ಅದರಿಂದ ಭಾಷೆಗೆ ಮೆರುಗೂ ಮನಸ್ಸಿಗೆ ಸುಖವೂ ದೊರೆಯುವುವೆಂದೂ, ಎಲ್ಲರಂತೆಯೇ ನಾವೂ ತಿಳಿದಿರುವೆವು ಮಾತ್ರವಲ್ಲದೆ ಅದನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಸಂಸಾರದಲ್ಲಿ ಉಪಯೋಗಿಸಿಕೊಳ್ಳುತ್ತಿರುವೆವೆಂದೂ ಹಿಂದೂ ನಾಗರಕತೆಗೆ ಇದು ಒಂದು ಪ್ರಧಾನಲಕ್ಷಣವೆಂದೂ ನಾನು ವಿಜ್ಞಾಪಿಸುತ್ತಿರುವುದು.

ನಮ್ಮ ಧರ್ಮ ಸಹೋದರರಾದ ಮಹಮ್ಮದೀಯರಲ್ಲಿ ಸ್ತ್ರೀಯರ ವಿಷಯವನ್ನು ನಾವು ತಿಳಿಯೆವು. ಆದರೂ ಪುರುಷರು ಮಾತ್ರ ಸಂಗೀತವೆಂದರೆ ಕಿವಿ ಕುಯಿದುಕೊಳ್ಳುವರು. ತಾನಸೇನನ ಹಾಡಿಗೆ ತನ್ನ ಸಾಂರಾಜ್ಯವನ್ನೇ ಧಾರೆ ಎರೆಯ ಹೋದ ಅಕ್ಬರು ಚಕ್ರವರ್ತಿಯ ಕಥೆಯು ನಾವು ಅರಿಯದುದಲ್ಲ. ಇಂಗ್ಲಿಷಿನವರು ಮೊದಲಾದ ಪರದೇಶೀಯರಲ್ಲಿ ನಾಗರಕತೆಯುಳ್ಳ ಸ್ತ್ರೀಪುರುಷರೆಲ್ಲರೂ ಸಂಗೀತ ವಿದ್ಯೆಯನ್ನು ತಪ್ಪದೆ ಕಲಿತಿರುವರೆಂದೂ, ಗಾಯಕರಿಗೆ ಆ ದೇಶದಲ್ಲಿ ಒಂದೊಂದು ಕಚ್ಚೇರಿಗೆ ಸಾವಿರಗಟ್ಟಲೆ ಪೌನುಗಳು ಲಭಿಸುವುದುಂಟೆಂದೂ ಕೇಳಿದ್ದೇವೆ. ಆದರೆ, ಇವರಲ್ಲಿ ಯಾರಲ್ಲಿಯೂ, ನಮ್ಮಲ್ಲಿರುವಂತೆ, ಸಂಗೀತವು ಪಂಡಿತಪಾಮರರಿಗೆಲ್ಲ ನಿತ್ಯಯಾತ್ರೆಯಲ್ಲಿ ಬಿಡಲಾಗದ ವಸ್ತುವಾಗಿ, ಮೇಲಾಗಿ ಪೂಜ್ಯವಾಗಿ ಏರ್ಪಟ್ಟಿತ್ತೆಂದು ತಿಳಿದು ಬಂದಿಲ್ಲ. ಸರಸ್ವತೀ ನಾರದರ ಕೈ ವೀಣೆಗಳು, ತುಂಬುರನ ಕೈ ತಂಬೂರಿ, ಶ್ರೀ ಪರಮೇಶ್ವರನ ಕೈಯಲ್ಲಿನ ಡಮರುಗ, ಶ್ರೀಕೃಷ್ಣನ ಕೈಕೊಳಲು ಇವೆಲ್ಲವೂ ನಮಗೆ ಸಂಗೀತವು ಇತರರಿಗಿರುವಂತೆ ಮಾನುಷವಾದ ಭೋಗ್ಯವಸ್ತು ಮಾತ್ರವೇ ಅಲ್ಲದೆ, ದಿವ್ಯವಾದ ಪೂಜ್ಯವಸ್ತುವಾಗಿ ಕೂಡ ಇರುವುದೆಂದು ಸ್ಪಷ್ಟವಾಗಿ ಸಾರು

ತ್ರವೆ. ಇದಲ್ಲದೆ ಗಾನಯೋಗಿ ರಾಜನಾದ ತ್ಯಾಗರಾಜನು 'ಸಂಗೀತಜ್ಞಾನ ವಿಹೀನಲುಕು ಮೋಕ್ಷ ಮುಗಲದಾ' (ಎಂದರೆ ಸಂಗೀತಜ್ಞಾನ ವಿಹೀನರಿಗೆ ಮೋಕ್ಷವುಂಟೇ ?) ಎಂದು ಧೈರ್ಯವಾಗಿ ಹಾಕಿದ ಪ್ರಶ್ನೆಗೆ 'ಉಂಟು' ಎಂದು ನಿರ್ಭಯವಾಗಿ ಪ್ರತ್ಯುತ್ತರ ಕೊಡಬಲ್ಲವನು ಇನ್ನೂ ಹುಟ್ಟಿಲ್ಲ. ಏತಕ್ಕೂ ಕೆಲಸಕ್ಕೆ ಬಾರದ ಮನುಷ್ಯರಾದ ನಮ್ಮ ಮಾತೇಕೆ? ಶಂಕರನಾರಾಯಣ ವಿಧುಗಳು ಕೂಡ ನಾದೋಪಾಸನೆಯಿಂದ ಬೆಳಗಿದರಂತೆ!

ಸಂಗೀತಕ್ಕೆ ಮೇಲೆ ಹೇಳಿದ ಪ್ರಾಧಾನ್ಯವೆಲ್ಲವೂ ನಮ್ಮ ಪ್ರಾಚೀನರು ಸಾಧಿಸಿದುದು. ಆದರೆ ನಾವು ಈಗ ಏನು ಮಾಡುತ್ತಿದ್ದೇವೆ ? ಅವರು ಏರ್ಪಡಿಸಿದ ಮಾರ್ಗದಲ್ಲಿ, ಅದನ್ನು ವೃದ್ಧಿಗೊಳಿಸುವುದು ಹಾಗಿರಲಿ, ಅವರು ಕೊಟ್ಟದ್ದನ್ನಾದರೂ ನಿಲ್ಲಿಸಿಕೊಳ್ಳುತ್ತಿರುವೆವೇನು ? ಇಲ್ಲವೆಂದು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ಪಾಮರರಾದ ಹಳ್ಳಿಯವರು ಇನ್ನೂ ಹಳೆಯ ಮಾರ್ಗವನ್ನು ಬಿಡಲಿಲ್ಲವಾದರೂ ನವನಾಗರಕರಾದ ನಾವೇ ಈ ವಿಷಯದಲ್ಲಿ ನಗೆಗೆ ಈಡಾಗುತ್ತಿದ್ದೇವೆ. ಪಿತೃ ಪೈತಾಮಹವಾದ ಆ ನಿಧಿಯು ನಮ್ಮ ಕೈಜಾರಿಹೋಗುತ್ತಿದೆ. ಅದರ ಬೆಲೆಯನ್ನು ಅತಿಪರಿಚಯದಕಾರಣ ನಾವು ಗುರುತಿಸಲಾರದೆ ಇದ್ದೇವೆ. ಗುರುತಿಸುವುದಕ್ಕೆ ಮಾರ್ಗಗಳೂ ಕಾಣಿಸಲಾಗದೆ ಹೋಗುತ್ತಿವೆ. ನಮ್ಮ ವಿದ್ಯೆ ಮತ ಇವುಗಳ ಸಂಪ್ರದಾಯವು ಹಾಗಿದೆ. ಓದಿನಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ ; ಮತದಲ್ಲಿ ನಂಬಿಕೆಯಿಲ್ಲ. ಮತವನ್ನು ಬೋಧಿಸಿ ಅದರ ಬೆಲೆಯನ್ನು ತಿಳಿಸುವವರಿಲ್ಲ. ಓದು ಹೇಳಿಕೊಡುವವರಿಗೆ ನಮ್ಮ ಸಂಗೀತವು ತಿಳಿಯದು ; ಅವರ ಮನಸ್ಸಿಗೆ ಅದು ಬೇಕಾಗಿಯೂ ಇಲ್ಲ. ಇಷ್ಟು ದಿನವೂ ಕಲಾಶಾಲೆಗಳು ಗುಮಾಸ್ತೆಗಳನ್ನೇ ತಯಾರು ಮಾಡುತ್ತಿದ್ದವು. ಈಗ ಅವರ ಜೊತೆಗೆ ಕೂಲಿಯವರನ್ನೂ, ವ್ಯಾಪಾರಿಗಳನ್ನೂ ಸೃಷ್ಟಿಸಲು ಮೊದಲುಮಾಡಿವೆ. ಇಷ್ಟೇ ಅಲ್ಲದೆ, ರಸಿಕರನ್ನು ಸೃಷ್ಟಿಸುವುದು ಕೂಡ ತನ್ನ ಧರ್ಮವೆಂದು ತಿಳಿದುಕೊಂಡ ಯೂನಿವರ್ಸಿಟಿಯು ನಮ್ಮ ದೇಶದಲ್ಲಿ ಇನ್ನೂ ಹುಟ್ಟಬೇಕಾಗಿದೆ. ಈಗಿನ ಓದಿಗೆ ಫಲವು ಬದುಕು-ಎಂದರೆ, ಕಾಲಕ್ಷೇಪಮಾಡುವುದು. ಅಷ್ಟೇ ಅಲ್ಲದೆ ಮನುಷ್ಯರ ಹೃದಯದಲ್ಲಿ ಹುಟ್ಟುತ್ತಿರುವ, ಹುಟ್ಟಬೇಕಾದ ರಸಭಾವಗಳಿಗೆ ಸಂಬಂಧಿಸಿದ ಕಲೆಗಳಿಗೆ ನಮ್ಮ 'ಕಲಾಶಾಲೆ' ಗಳಲ್ಲಿ ಸ್ಥಳವೆಲ್ಲಿಯದು ? ಆದುದರಿಂದಲೇ ಲಕ್ಷಣವಾಗಿ ಪದ್ಯವೊಂದನ್ನು ಓದಬಲ್ಲ ವಿದ್ಯಾರ್ಥಿಯೊಬ್ಬನು ಈಗ ದೊರಕುವುದು ದುರ್ಲಭವಾಗಿದೆ. ರಾಗಯುಕ್ತವಾಗಿ ಓದಬೇಕೆನ್ನುವ ಉತ್ಸಾಹವನ್ನೂ, ತನಗೆ ತಿಳಿದಷ್ಟರಲ್ಲಿ ಶ್ರಾವ್ಯವಾಗಿ ಹತ್ತುಜನರ ಎದುರಿಗೆ

ಓದುವುದಕ್ಕೆ ಧೈರ್ಯವನ್ನೂ ಉಂಟುಮಾಡುವ ವಿದ್ಯಾವಿಧಾನವು ಈಗ ಎಲ್ಲಿರುವುದು ? ಈಗಿನ ವಿದ್ಯಾಶಾಲೆಗಳು ಬಾಯಿರುವವರನ್ನೇ ಮೂಕರನ್ನಾಗಿ ಮಾಡುತ್ತಿವೆ. ಈಗಿನ ಓದಿನಲ್ಲಿ 'ಓದೇ' ಇಲ್ಲ. ಆದುದರಿಂದಲೇ ಈಗಿನ ಕಾಲದ ವಿದ್ಯಾವಂತನು, ನಾಲ್ವರಲ್ಲಿ, ಪದ್ಯವನ್ನು ಪದ್ಯದಂತೆ ಓದುವುದಕ್ಕೆ ನಾಚಿಕೆ ಪಡುತ್ತಿದಾನೆ. ಉಪನ್ಯಾಸ ವೇದಿಕೆಗಳಮೇಲೆ, ಪಾಠ ಪೀಠಗಳ ಮೇಲೆ ವಿಧಿಯಿಲ್ಲದೆ ಓದಬೇಕಾಗಿ ಬಂದಾಗ ಪದ್ಯವನ್ನು ಹತ್ತುದಿನ ಬಿಸಿಲಿನಲ್ಲಿ ಒಣಗಿಸಿದ ಬದನೆಯ ಒರುಗಿನಂತೆ ಮಾಡಿ, ಗದ್ಯಕ್ಕಿಂತಲೂ ನೀರಸವಾದ ರೀತಿಯಲ್ಲಿ ಗೊಣಗುವುದು ನಾಗರಕ ಆಚಾರವಾಯಿತು. ಹೀಗಿರಲು ಇನ್ನು ಹಾಡುಗಳನ್ನು ಹೇಳಿಕೊಡುವವರು ಯಾರು ; ಕಲಿತುಕೊಳ್ಳುವವರು ಯಾರು ?

ಗಂಡಸರಾದ ನಮ್ಮ ಗತಿಯೇ ಹೀಗಿರುವಲ್ಲಿ ಇನ್ನು ಅಬಲೆಯರಾಗಿರುವ ನಮ್ಮ ಹೆಂಗಸರ ಮಾತನ್ನು ಬೇರೆಯಾಗಿ ಹೇಳಬೇಕೇನು ? ನಮ್ಮ ಒಪ್ಪಿಕೆಯನ್ನೂ ಮೆಚ್ಚಿಕೆಯನ್ನೂ ನಂಬಿಕೊಂಡಿರುವವರು ಅವರು. ಸಹಜವಾದ ಶಾರೀರಸಂಪತ್ತನ್ನೂ ಆರ್ದ್ರ ಹೃದಯವನ್ನೂ ಪಡೆದಿರುವರಾದುದರಿಂದ ಅವರಿಗೆ ಆಶೆಯೇನೊ ಇದೆ; ಆದರೆ ಅದನ್ನೇನುಮಾಡಬೇಕೊ, ಹೇಗೆ ಉಪಯೋಗಿಸಿಕೊಳ್ಳಬೇಕೊ ತಿಳಿಯದು. ಅಲ್ಲದೆ ಹಾಡುಗಳನ್ನು ಹಾಡುತ್ತ ತನ್ನನ್ನು ತಾನೆ ಮರೆಯುವುದು ನಾಗರಕಲಕ್ಷಣವಲ್ಲವೆಂಬ ಪತಿಯಭಾವವು ಭಾರ್ಯೆಗೂ ಸಂಕ್ರಮಿಸದೆ ಹೋಗದು. ಇನ್ನು, ಯಜಮಾನನ ಓದನ್ನೇ ಈಕೆಯು ಕಲಿತುಕೊಂಡದ್ದಾದರೆ ಕೇಳಬೇಕಾದ ಕೆಲಸವೇ ಇಲ್ಲ. ಹೀಗಾಗುವುದರಿಂದ ಈಗಿನ ಪ್ರಸ್ತಪ್ರಯೋಜನಗಳಲ್ಲಿ ಮಾತುಗಳು ಮಾತ್ರವೇ ಹೊರತು ಹಾಡುಗಳಿಗೆ ಸೊನ್ನೆಯಾಯಿತು. ಅಡಕೆ ಎಲೆ ದಂಡವೇಹೊರತು ಮುತ್ತೈದೆಯರಿಂದ ಈಗ ಕೆಲಸವೇ ಇಲ್ಲ. ಆದಾಗ್ಯೂ ಹಿಂದೂಜಾತಿಯಲ್ಲಿ ಹುಟ್ಟಿದ ಪುಣ್ಯದಿಂದ ಸಹಜವಾದ ಗಾನಾಭಿರುಚಿಯುಳ್ಳವರಾದುದರಿಂದ, ನಮ್ಮ ತರುಣ ಬ್ರಹ್ಮಚಾರಿಗಳಲ್ಲಿ ಕೆಲವರು ತಮ್ಮ ಧರ್ಮಪತ್ನಿಯರಾಗುವ ಕನ್ಯೆಯರಿಗೆ ಸಂಗೀತ ಬಂದಿರಬೇಕೆಂದು ಅಭಿಲಾಷೆಪಡುತ್ತಿದ್ದಾರೆ. ಹಾಡುವುದಕ್ಕೆ ಅವರಿಗೆ ಇಷ್ಟವಿಲ್ಲದಿದ್ದರೂ ಇತರರು ಹಾಡಿದ್ದಾದರೆ ಸಂತೋಷಿಸುವ ಚೈತನ್ಯವು ಇನ್ನೂ ಅವರಲ್ಲಿ ಉಳಿದಿದೆ. ಆದರೆ ಅವರಿಗೆ ಈ ಮದುವೆಯ ಹಾಡುಗಳನ್ನೂ, ಭಜನೆಯ ಕೀರ್ತನೆಗಳನ್ನೂ ಕಂಡರೆ ಅಸಹ್ಯ. ಗ್ರಾಮಾಫೋನುಗಳಲ್ಲಿ ನಾವು ಅಲ್ಲಲ್ಲಿ ಕೇಳಿರುವಂಥ ಕೋಯಂಬತ್ತೂರು ತಾಯಿಯಂತೆ ಹಾಡಬಲ್ಲ ಕೋಮಲಾಂಗಿಯನ್ನೇ ಅವರು ಕೋರುವುದು. ಅವರ ಪಾಲಿಗೆ ಹಾಡು ಮಲಗುವ ಮನೆಯ ಒಂದು ಅಲಂಕಾರ. ಇದರಿಂದ ಆಗುವ

ಫಲವೇನೆಂದರೆ, ಅಳಿಯಂದಿರನ್ನು ಸಂಪಾದಿಸುವವರೆಗೂ, ಆಮೇಲೆ ಕೆಲವು ದಿನಗಳ ವರೆಗೂ, ಹೆಣ್ಣುಮಕ್ಕಳ ತಂದೆಯು ಹಾರ್ಮೋನಿಯಮ್ಮಿನ ಶರಣುಹೋಗುವುದು ತಟಸ್ಥಿತವಾಗಿದೆ. ತಿಂಗಳಿಗೊಂದು ನಾಲ್ಕು ರೂಪಾಯಿಗಳ ಕರ್ಚಿನಲ್ಲಿ ತಂದೆಗೆ ತಂಟೆತೀರಿಹೋಗುವುದು. ಹೆಂಡತಿ ಸಂಗೀತವನ್ನು ಕಲಿತುಕೊಳ್ಳುತ್ತಿರುವಳೆಂದು ಅಳಿಯನು ಆನಂದಪಡುತ್ತಿರುವನು. ಇಷ್ಟೇ ಅಲ್ಲದೆ ಆಕೆ ಏನು ಕಲಿತುಕೊಳ್ಳುತ್ತಿರುವಳೆಂದು ಆತನಾಗಲಿ ಈತನಾಗಲಿ ವಿಚಾರಿಸುವುದಿಲ್ಲ. ಏನು ವಿಚಾರಿಸಬಲ್ಲರು? ಏನಾದರೂ ಅದರ ವಿಷಯ ತಮಗೆ ತಿಳಿದಿದ್ದರಲ್ಲವೆ! ಹಾಗಿರುವುದರಿಂದ ಶಾರೀರಕ ತಾರತಮ್ಯತಿಳಿಯದ, ಶ್ರುತಿ ಸ್ವರ ಜ್ಞಾನವಿಲ್ಲದ, ಅರ್ಥಭಾವಗಳ ಗಂಧವರಿಯದ, ಇನ್ನು ಬೇರೆ ಯಾವ ವಿಧವಾಗಿಯೂ ಜೀವನ ಜರುಗಿಸಿಕೊಳ್ಳಲಾರದ, ಯಾವನೋ ಒಬ್ಬನು ಯಾವುದೋ ಶ್ರುತಿಯಲ್ಲಿ ಯಾವುವೋ ಕೀರ್ತನೆಗಳನ್ನು ಪಾಠ ಹೇಳಿ ಹೋಗುವುದರಿಂದ ನಮ್ಮ ಈಗಿನ ನಾಗರಕರ ಮನೆಯ ಬಾಲಕಿಯರಿಗೆ ಶ್ರುತಿಶೂನ್ಯವಾದ, ಅರ್ಥವಂತರಿಸಿದ, ಭಾವ ಭ್ರಷ್ಟವಾದ ಅನಿರ್ವಚನೀಯವಾದ ಅಸಹ್ಯವಸ್ತುವೊಂದು ಸಂಗೀತವೆಂಬ ಹೆಸರಿನಿಂದ ಲಭಿಸುತ್ತಿದೆ. ತಂತ್ರೀ ನಾದದಿಂದ ಮೇಳೈಸಬೇಕಾಗಿರುವ ಅವರ ಸುಕುಮಾರ ಶಾರೀರವು ಆ ಹಾರ್ಮೋನಿಯಮ್ಮಿನ ನಿರ್ಘೋಷದ ಜೊತೆಯಲ್ಲಿ ಅರಚಬೇಕಾಗಿ ಬರುವುದರಿಂದ ಕಂದಿ ಕುಂದಿಹೋಗುವುದು. ಅದನ್ನೇ ಕೇಳಿ ಕೇಳಿ ಮೃದುನಾದವನ್ನು ಗ್ರಹಿಸುವ, ಅಭಿನಂದಿಸುವ ಶಕ್ತಿಯೇ ಶ್ರವಣೇಂದ್ರಿಯಕ್ಕೆ ನಶಿಸುವುದು. ಈ ಹಾರ್ಮೋನಿಯಮ್ಮು ಈಗಿನ ಅನೇಕ ವಿದ್ವಾಂಸರಿಗೇ ಶೃತಿಜ್ಞಾನವನ್ನು ಕೆಡಿಸಿರುವುದು ಎಂದಮೇಲೆ ಉಳಿದವರ ಮಾತೇಕೆ?

ಸಾಮಾನ್ಯವಾದ ಮನೆಯ ಹಾಡೇ ಈ ಅವಸ್ಥೆಗೆ ಬಂದಿರುವಾಗ ಇನ್ನು ಸಂಗೀತ ವಿದ್ಯೆಯ ಗತಿ ಏನು ಎಂದು ಕೇಳುವವರು ಯಾರು? ಅದನ್ನು ಒಂದು ವಿದ್ಯೆಯಂತೆ ಹಾಡುವುದಾಗಲಿ, ಬಾಜಿಸುವುದಾಗಲಿ ಕಲಿಯಲು ಎತ್ನಿಸುವುದು ಸಾಮಾನ್ಯವಾದ ಸಾಹಸವಲ್ಲ. ತಲೆಯಲ್ಲಿನ ಮೆದುಳೂ ದೇಹದಲ್ಲಿನ ರಕ್ತ ಮಾಂಸಗಳೂ ದಿನದಿನವೂ ಕರಗುವಂತೆ ಕಷ್ಟಪಡುವವರಿಗಲ್ಲದೆ, ಸೋಮಾರಿ ಸುಕುಮಾರರಿಗೂ, ಬಣ್ಣದ ಬೀಸಣಿಗೆಗಳಿಗೂ ಇದು ಒಲಿದುಬರುವ ವಿದ್ಯೆಯಲ್ಲ. ಆಹಾರ ವಿಹಾರಾದಿಗಳಲ್ಲಿ ನಿಯಮವುಳ್ಳ, ಶರೀರ ಮನಸ್ಸುಗಳನ್ನು ನೀರೋಗವಾಗಿ ಇಟ್ಟುಕೊಂಡು ಬಗಿಯಾಗಿ ನರಗಳ ಜಿಡಿತವಿರುವ, ಮೇಧಾವಂತನಾದ ರಸಿಕನು ಇದನ್ನು ವಶೀಕರಿಸಿಕೊಳ್ಳಬಲ್ಲನು. ಚಿತ್ರ, ಕವಿತ್ವ, ವಿಗ್ರಹರಚನೆ ಮೊದಲಾದ ಇತರ ಕಲೆ

ಗಳನ್ನು ಆಶ್ರಯಿಸಿದವರಿಗೆ ಅವರವರ ಕೆಲಸವನ್ನು ತೃಪ್ತಿಕರವಾಗಿ ತೀರಿಸುವುದಕ್ಕೆ ಬೇಕಾಗುವಷ್ಟು ಕಾಲವಿದೆ. ಆಲೋಚಿಸುವುದಕ್ಕೆ ಅವಕಾಶವಿದೆ. ಭಾವಪ್ರವಾಹವು ನಿಂತಾಗಲೂ, ದೇಹಶಕ್ತಿ ತಗ್ಗಿದಾಗಲೂ, ಅವರು ವಿಶ್ರಾಂತಿ ತೆಗೆದುಕೊಳ್ಳಬಹುದು. ಸರ್ವಾಂಗಸುಂದರವಾಗಿ ವಸ್ತುವನ್ನು ತಯಾರು ಮಾಡುವವರೆಗೂ ಒಬ್ಬರಿಗೆ ತೋರಿಸದೆ ಮಾಡಿ ಆಮೇಲೆ ನಿರ್ಭಯವಾಗಿ ಅದನ್ನು ಬಯಲಿನಲ್ಲಿಡಬಹುದು. ಮತ್ತು ತಾವು ಮಾಡಿದುದನ್ನು ತಾವೇ ಪ್ರದರ್ಶಿಸಬೇಕಾದ ನಿರ್ಬಂಧವಿಲ್ಲ. ಗಾಯಕನಿಗೆ ಹಾಗಲ್ಲ. ಈತನದು ಆಕ್ಷಣದಲ್ಲಿ, ಎಲ್ಲರ ಎದುರಿಗೂ ಮಾಡಬೇಕಾದ ಕಣ್ಣುಕಟ್ಟು ಗಾರಡೀ ವಿದ್ಯೆ. ಬೇಕೆಂದಾಗ ಕೃತ್ರಿಮವಾಗಿ ರಸಭಾವಗಳನ್ನು ತಾನು ಆರೋಪಿಸಿಕೊಂಡು, ಎದುರಿಗಿರುವವರು ಎಷ್ಟೇ ಜನರಾದಾಗ್ಯೂ, ಅವರ ಮನೋಧರ್ಮವು ಹೇಗೇ ಇದ್ದರೂ, ಅವುಗಳನ್ನೆಲ್ಲ ತನ್ನ ಕಡೆಗೆ ಎಳೆದುಕೊಂಡು, ತನ್ನಿಚ್ಛೆಬಂದಂತೆ ಅವರನ್ನು ಆಡಿಸುವುದು ಆತನ ಧರ್ಮ. ಮನೆಯಲ್ಲಿ ಒರಲುಹಾಕಿಕೊಂಡ ಕೀರ್ತನೆಗಳು ವರ್ಣಗಳು ಮೊದಲಾದುವೆಲ್ಲವೂ ಇಟ್ಟಿಗೆ ಗಾರೆ ಮೊದಲಾದವುಗಳಂಥುವೇ ಹೊರತು ಅವನ್ನು ತಕ್ಕಂತೆ ಸೇರಿಸಿ ಕಟ್ಟುವುದೆಂಬ ಗಾಯಕನ ಕೆಲಸವು, ನಮ್ಮ ಎದುರಿನಲ್ಲಿಯೇ ನೆಡೆಯಬೇಕಾದದ್ದು. ಮತ್ತು ಆ ಗಂಧರ್ವನಗರವು ಆಕ್ಷಣದಲ್ಲಿಯೇ ನಶಿಸಿಹೋಗುವುದು. ಹೀಗೆ ಇತರರು ರಚಿಸಿದ ಹಾಡುಗಳನ್ನು ಹಾಡುವಾಗ ಅಲ್ಲಿನ ರಸಭಾವ ಭೇದಗಳನ್ನು ಸೃಷ್ಟಿಸುವುದಕ್ಕೂ ಗಾಯಕನಿಗೆ ದೇಹಮನಸ್ಸತ್ವಗಳ ಶಕ್ತಿಯೆಲ್ಲವೂ ಸ್ವಾಧೀನವಾಗಿರಬೇಕು. ಆದುದರಿಂದಲೇ ಈ ಕೀರ್ತನೆಯನ್ನೂ ಈ ರಾಗವನ್ನೂ ಹೀಗೇ ಹಾಡತಕ್ಕುದೆಂದು ಮುಂಚಿತವಾಗಿ ಯಾವ ಗಾಯಕನಾಗಲಿ ನಂಬಿಕೊಂಡಿರಲಾರನು. ಇಂಥ ಸಾಮರ್ಥ್ಯವನ್ನು ಸಂಪಾದಿಸಬೇಕಾಗಿದ್ದರೆ ಅದನ್ನು ತಿಳಿದುಕೊಂಡು ಸಂತೋಷಿಸಬಲ್ಲ ಸಹೃದಯರು ಇರಬೇಕಲ್ಲವೆ ?

"ಸಹೃದಯರಿಗೆ ಏನು ಕಡಮೆ ? ನಾವೆಲ್ಲರೂ ಅಲ್ಲವೆ ? ಒಳ್ಳೆಯ ಸಂಗೀತವನ್ನು ಹಾಡಿ ನಮ್ಮ ಮನಸ್ಸನ್ನು ಕರಗಿಸಬಲ್ಲ ಸಮರ್ಥನು ಇರುವನಾದರೆ ಅವು ಏನು ಕರಗುವುದಿಲ್ಲವೆನ್ನುವುವೆ ? ಎಂದು ಕೆಲವರು ಅಂದುಕೊಳ್ಳಬಹುದು. ಸಾಮಾನ್ಯವಾಗಿ ಕಲೆಗಳ ವಿಷಯದಲ್ಲಿ ಅನೇಕರು ವಿದ್ಯಾವಂತರೇ ಇಂಥ ತಪ್ಪು ತಿಳಿವಳಿಕೆಗೆ ಒಳಪಡುತ್ತಾರೆ. ಕಲೆಗಳಲ್ಲಿ ಅಭಿಮಾನವುಳ್ಳವರೆಲ್ಲರೂ ಕಲೆಗಳಲ್ಲಿ ಸುಖವಿರುವುದೆಂದು ತಿಳಿದವರೆಲ್ಲರೂ, ಸಹೃದಯರಾಗುವರೆಂದು ನಂಬುವುದು ಸರಿಯಲ್ಲ. 'ಸಹೃದಯ' ಶಬ್ದಕ್ಕೆ ಎರಡರ್ಥಗಳಿರುವುವು. ಹೃದಯವೆಂಬ ಪದಾರ್ಥವನ್ನು ಉಳ್ಳವನು ಎಂಬುದು ಒಂದು ಎಂದರೆ ಕಣ್ಣು, ಮೂಗು, ಕಿವಿ, ಮೊದಲಾದ ಇಂದ್ರಿಯ

ಗಳಿಗೆ ಸಾಮಾನ್ಯವಾಗಿ ಯಾವ ಯಾವ ಗುಣಗಳು—ಬಣ್ಣ, ವಾಸನೆ, ನಾದ ಮೊದಲಾದವು—ಗ್ರಾಹ್ಯಗಳಾಗುವುವೊ, ಅಂಥವುಗಳಲ್ಲಿ ಸಂತೋಷವನ್ನು ಉಂಟುಮಾಡುವವುಗಳನ್ನು ಗ್ರಹಿಸಿ ಸಂತೋಷಿಸುವ ಅಂತರಂಗವುಳ್ಳವನು ಎಂಬುದು. ಈ ಅಂಶದಲ್ಲಿ ಸ್ವಲ್ಪ ಹೆಚ್ಚು ಕಡಮೆ ಎಲ್ಲರೂ ಸಹೃದಯರೇಯೆ. ಕಪ್ಪಿಗಿಂತಲೂ ನೀಲಿ ಬಣ್ಣವು ದರ್ಶನೀಯವೆಂದು, ಉಳ್ಳಿಗಿಂತಲೂ ಮಲ್ಲಿಗೆಯ ವಾಸನೆಯು ಭೋಗ್ಯವೆಂದು, ಕಾಂಚನಕ್ಕಿಂತಲೂ ಕಂಚಿನನಾದವು ಶ್ರಾವ್ಯವೆಂದು ಯಾರಿಗೆ ತಿಳಿಯದು? "ಸ್ವಲ್ಪ ಹೆಚ್ಚು ಕಡಮೆ" ಎಂದು ಏಕೆಂದೆನೆಂದರೆ, ಕೆಲವರಿಗೆ ಅಭ್ಯಾಸ ಮೊದಲಾದ ದೋಷಗಳ ಮೂಲಕ ಈ ಮಾತ್ರದ ಗ್ರಹಣಶಕ್ತಿಯೂ ಹೃದಯಕ್ಕೆ ಇರದು. ತಂಬೂರಿಯು ದಾಸರಿಗೆ ಮಾತ್ರ ತಕ್ಕಂಥುದೆಂದೂ, ಹಾರ್ಮೋನಿಯಮ್ಮು ಹೆಣ್ಣು ಮಕ್ಕಳಿಗೆ ಅಲಂಕಾರವೆಂದೂ ಭಾವಿಸುವವರು ನಮಲ್ಲಿ ಇಲ್ಲವೆ? ನಸ್ಯಹಾಕಿಕೊಳ್ಳುವವರಿಗೆ ಪುನಗಿಗಿಂತಲೂ ಹೊಗೆಸೊಪ್ಪಿನ ವಾಸನೆ ಸುಖವಲ್ಲವೆ? ಆದರೂ ಮೊತ್ತದಲ್ಲಿ ಪರಿಶುದ್ಧವಾದ ಪಂಚೇಂದ್ರಿಯಗಳು ಇರುವವರೆಲ್ಲರೂ ಸಹೃದಯರೆಂದೆನ್ನಬಹುದು. ಆದರೆ ಇಷ್ಟು ಮಾತ್ರ ಸಾಕೆ? ಹಲವು ಬಣ್ಣಗಳನ್ನು ಕಲಸಿ, ಅನೇಕ ವಾಸನೆಯ ವಸ್ತುಗಳನ್ನು ಸೇರಿಸಿ, ವಿವಿಧ ನಾದಗಳನ್ನು ಮೇಳಗೈದು ಮನುಷ್ಯರು ಎಷ್ಟೋ ವಿಚಿತ್ರವಸ್ತುಗಳನ್ನು ಸೃಷ್ಟಿಸಲು ಕಲಿತುಕೊಂಡಿದ್ದಾರೆ. ಅವುಗಳನ್ನು ನೋಡಿದಾಗ, ಮೂಸಿನೋಡಿದಾಗ, ಕೇಳಿದಾಗ ಆಗಬೇಕಾದ ರಸಭಾವಭೇದಗಳನ್ನು ಗ್ರಹಿಸುವುದಕ್ಕೆ ಎಲ್ಲರಿಗೂ ಸಾಮರ್ಥ್ಯವಿರುವುದೇನು? ಅದಕ್ಕೆ ಸಂಸ್ಕಾರ ಬೇಕು. ಸಂಸ್ಕಾರವೆಂದರೆ ಸಾಧನೆಯಲ್ಲ. ಅದು ಕಲಾವಂತನ ಕೆಲಸ. ಹಾಡುವವನ ಹಾಗೆ ಕೇಳುವವರು ಕೂಡ ಅರುಣೋದಯಕ್ಕೆ ಎದ್ದು ಅಕಾರಸಾಧನೆಯನ್ನು ಮಾಡಬೇಕಾದ ಕೆಲಸವಿಲ್ಲ. ಮತ್ತೆ ಸಂಸ್ಕಾರವೆಂದರೆ ಚಿಕ್ಕಂದಿನಿಂದ ಅಂಥ ಶಿಲ್ಪಿ ಕೌಶಲ್ಯವನ್ನು ಕೇಳಿ, ನೋಡಿ, ಮನನಮಾಡಿರುವುದರಿಂದ ನಮ್ಮ ಹೃದಯಕ್ಕೆ ಬರುವ ಒಂದು ವಿಧವಾದ ಹದ. ಆದುದರಿಂದ ನಾವು ಗಾಯಕನಂತೆ ಹಾಡಲಾರದಿದ್ದರೂ ಹಾಡುವಾಗ ಆತನು ಯಾವ ಯಾವ ರಸಭಾವಗಳು ನಮಗೆ ಉಂಟಾಗಬೇಕೆಂದು ಸಂಕಲ್ಪಮಾಡಿಕೊಂಡು ಕೆಲಸಮಾಡುವನೋ ಅವುಗಳನ್ನೆಲ್ಲ ಹಾಗೇ ಗ್ರಹಿಸಿ ಅನುಭವಿಸುವಂಥವರಾಗುತ್ತೇವೆ. ಇದೇ ಸಹೃದಯ ಶಬ್ದಕ್ಕೆ ಎರಡನೆಯ ಅರ್ಥ,—ಸಮಾನವಾದ ಹೃದಯವನ್ನು ಉಳ್ಳವನು ಎನ್ನುವುದು. ಇಂಥವನನ್ನೇ ಪ್ರಾಚೀನರು "ವಾಸನಾ ಪರಿಪಕ್ವಬುದ್ಧಿ" ಎಂದರು.

ಈ ವಾಸನೆಯೇ ಕಲೆಗಳ ಅಭಿವೃದ್ಧಿಗೆ ಜೀವ. ಅದೇ ಈಗ ಸಂಗೀತ ವಿಷಯದಲ್ಲಿ ನಮ್ಮಲ್ಲಿ ಮಂದವಾಗುತ್ತಲಿದೆ. ಇದಕ್ಕೆ ಕಾರಣವು ಮುಖ್ಯವಾಗಿ ಈಗಿನ

ವಿದ್ಯಾಪದ್ಧತಿ ಎಂದು ಮೊದಲೇ ವಿಜ್ಞಾಪಿಸಿದೆನು. ಇದರಲ್ಲಿ ಸಂಗೀತಕ್ಕೆ ಪ್ರಾಧಾನ್ಯದ ಮಾತು ಹಾಗಿರಲಿ, ಅಸಲು ಸ್ಥಳವೇ ಇಲ್ಲ. ಈಚೆಗೆ ಕಾಶೀ ಹಿಂದೂ ವಿಶ್ವವಿದ್ಯಾಲಯದವರು ಧೈರ್ಯಮಾಡಿ ಮಾರ್ಗತೋರಿಸಲು, ಮದರಾಸಿನವರೂ ಆಂಧ್ರರೂ ತಮ್ಮತಮ್ಮ ಯೂನಿವರ್ಸಿಟೀ ಮಂದಿರಗಳಲ್ಲಿ ಸಂಗೀತದ ಗಾಳಿ ಪ್ರವೇಶಿಸುವುದಕ್ಕೆ ಬಾಗಿಲು ಸ್ವಲ್ಪ ಓರೆ ಮಾಡಿದ್ದಾರೆಂದು ಕೇಳಿದ್ದೇನೆ. ಇದು ಒಂದು ಸಂತೋಷ ವಿಷಯವೇಯೆ. ಆದರೂ ಇದರಿಂದ ಅಧಿಕಾರಿಗಳ ದಯಕ್ಕೆ ಪಾತ್ರರಾದ ಯಾವ ಒಬ್ಬರಿಬ್ಬರಿಗೋ ತಿಂಗಳಿಗೆ ೩೦ ರೂಪಾಯಿಗಳ ಸಂಬಳ ದೊರಕಬಹುದಲ್ಲದೆ ಬೇರೆ ಫಲವು ನನಗೆ ಕಂಡು ಬಾರದು. ಏಕೆಂದಿರಾ: ಈಗಿನ ಕಾಲಶಾಲೆಗಳು ಭಾಗ್ಯವಂತರಾದ ನಾಲ್ವರಿಗೇ ಅಲ್ಲದೆ ಬಡವರಿಗೆ ಅಂದದ ಮರದ ಹಣ್ಣುಗಳು. ಆ ನಾಲ್ವರಿಗಾದರೂ ಸಂಗೀತವು ನಿರ್ಬಂಧ ಪಠನೀಯವಾಗಿ ಇರಿಸುವುದಕ್ಕೆ ಯೂನಿವರ್ಸಿಟಿಯವರು ಧೈರ್ಯಪಡುತ್ತಾರೆಂದು ನಾನು ನಂಬೆನು. ಒಂದು ವೇಳೆ ಹಾಗೆ ಮಾಡಿದರೂ ಸಾಮಾನ್ಯವಾಗಿ ಒಬ್ಬರಿಬ್ಬರು ಉಪಾಧ್ಯಾಯರು ಅದನ್ನು ಸಫಲವಾಗಿ ನಿರ್ವಹಿಸಲಾರರು. ಉಳಿದ ವಿಷಯಗಳಲ್ಲಿನಂತೆಯೇ ವಿದ್ಯಾರ್ಥಿಗಳನ್ನು ನೂರಾರರಂತೆ ಮಂದೆ ಸೇರಿಸಿ ಒಂದು ಗಂಟೆಹೊತ್ತು ಉಪನ್ಯಾಸ ಊದಿದ ಮಾತ್ರದಿಂದ ಸಂಗೀತವು ಬರುವಂಥ ವಿದ್ಯೆಯಲ್ಲ. ನಮ್ಮ ಸಂಗೀತವು ಪಾಶ್ಚಾತ್ಯರ ಸಂಗೀತದಂತೆ ಮೇಳ ಪ್ರಧಾನವಲ್ಲ. ಅವರಲ್ಲಿ ಎಷ್ಟು ಜನ ಮನುಷ್ಯರೋ ಅಷ್ಟು ಹಾಡುಗಳು, ಅಷ್ಟು ವಾದ್ಯಗಳು. ಗುಂಪು ಎಷ್ಟಿದ್ದರೆ ಅಷ್ಟು ದೊಡ್ಡತನ. ಸಮಷ್ಟಿಯಾಗಿ ಎಲ್ಲರೂ ಕಲೆತು ಹಾಡುವುದರಿಂದ, ಬಾಜಿಸುವುದರಿಂದ, ಉಂಟಾಗುವ ವಿವಿಧ ನಾದಮೇಳನವೇ ಅವರ ಉದ್ದಿಷ್ಟಫಲ. ವ್ಯಕ್ತಿಗಳು ಹೇಗಿದ್ದರೂ ಅಷ್ಟು ಬಾಧೆಯಿಲ್ಲ. ನಮ್ಮ ಮಾರ್ಗ ಬೇರೆ. ಲಯವು ನಮಗೆ ಜೀವ. ಶ್ರುತಿ, ತಾಳ, ರಾಗ, ಭಾವ ಮೊದಲಾದವುಗಳಿಂದ ಗಾಯಕನು ಪೂರ್ತಿಯಾಗಿ ಲಯಹೊಂದಿ, ಎಂದರೆ ತನ್ನನ್ನು ತಾನು ಮರೆತು, ಹೋಗಬೇಕು. ಇದರಲ್ಲಿ ಯಾವುದು ಕೊರತೆಯಾದರೂ ಹಾಡಿನ ಚೆಂದ ಕೆಡುವುದು. ಅಲ್ಲದೆ, ಪಾಶ್ಚಾತ್ಯರಲ್ಲಿ ಒಂದು ಸಾವಿರ ಜನ ಮೇಳವಾಗಿ ಸೇರಿದರೂ —ಇದು ಅತಿಶಯೋಕ್ತಿಯಲ್ಲ, ಯುದ್ಧಕಾಲದಲ್ಲಿ ಇಂಗ್ಲೆಂಡಿನಲ್ಲಿ ಒಂದು ಮೇಳದಲ್ಲಿ ಹತ್ತು ಸಾವಿರ ಜನರಿದ್ದರಂತೆ!—ಅವರೆಲ್ಲರೂ ಇತರನಾವನೊ ಮಾಡಿದ ಹಾಡನ್ನು ಕಿಂಕರರಾಗಿ ಅನುವಾದ ಮಾಡುವರೇ ಅಲ್ಲದೆ, ಸ್ವತಂತ್ರಿಸಿ, ಒಂದು ಸಂಗತಿ ಹಾಕುವುದಕ್ಕೂ ಯಾರಿಗೂ ಅಧಿಕಾರವಿರದು. ಹೀಗಾಗುವುದರಿಂದ ಅವರಲ್ಲಿ ಗಾಯಕನು ಹಾಡಿಗೆ ಅಧೀನನಾಗಿರುವನೇ ಹೊರತು ಹಾಡು ಗಾಯಕನಿಗೆ ಅಧೀನವಾಗಿರದು. ನಮ್ಮಲ್ಲಿ ಹಾಗಲ್ಲ. ಇತರರು ರಚಿಸಿದ ಅಥವ ತಾನೇ ಎಂದೋ

ರಚಿಸಿದ ಕೀರ್ತನೆ, ವರ್ಣ ಮುಂತಾದುವನ್ನು, ಆಧಾರವಾಗಿ ಮಾತ್ರ ಇಟ್ಟು ಕೊಂಡು, ಅದರ ಮೇಲೆ ತತ್ಕಾಲದಲ್ಲಿ ಸ್ಫುರಿಸುವ ಭಾವಗಳನ್ನು ವ್ಯಕ್ತಪಡಿಸುವ ರಾಗಾಲಾಪನೆ, ಸ್ವರಕಲ್ಪನೆ ಮೊದಲಾದ ಸ್ವತಂತ್ರಸೃಷ್ಟಿ ಮಾಡಬೇಕಾಗಿರುವುದು. ಹೀಗಿರುವುದರಿಂದ, ಉಪಾಧ್ಯಾಯನು ಶಿಷ್ಯರಿಗೆ ಪ್ರತ್ಯೇಕವಾಗಿ ಕಲಿಸಿ, ತಯಾರು ಮಾಡಬೇಕಾಗಿರುವುದಲ್ಲದೆ, ಅವರನ್ನು ಗುಂಪುಗೂಡಿಸುವುದಕ್ಕೆ ಅವಕಾಶವಿಲ್ಲ. ಮೇಲ್‌ಪಕ್ಷ ಮೂವರಿಗಿಂತ ಹೆಚ್ಚಾಗಿ ಏಕಕಾಲದಲ್ಲಿ ನಮ್ಮ ಸಂಗೀತವನ್ನು ಕಲಿಸಲು ಅಸಾಧ್ಯಕಾರ್ಯವೆಂದು ಹೇಳಬಲ್ಲೆನು. ಹೀಗಿರುವುದರಿಂದ ಶಿಷ್ಯರ ಸಂಖ್ಯೆಗೆ ಬೇಕಾದಷ್ಟು ಜನ ಉಪಾಧ್ಯಾಯರನ್ನು ನೇಮಿಸಿ, ಅವರೆಲ್ಲರಿಗೂ ತಕ್ಕ ವಿಶಾಲ ಮಂದಿರವನ್ನು ನಿರ್ಮಿಸಿ, ಅಭ್ಯಾಸಕಾಲದಲ್ಲಿ ಅವರ ಅಪಸ್ವರವನ್ನು ಕೇಳುವುದಕ್ಕೆ ಓರ್ಪು ಪಡೆದು, ಕೆಲಸಮಾಡಿಸುವುದಕ್ಕೆ ಬೇಕಾದ ಶಕ್ತಿಯೂ ರಕ್ತಿಯೂ ಈಗಿನ ನಮ್ಮ ಯಾವ ಯೂನಿವರ್ಸಿಟೀಗೂ ಇರುವಂತೆ ನನಗೆ ತೋರದು. ಅಲ್ಲದೆ ಈಗಿನ ಪಾಠ ಪದ್ಧತಿಗೂ ಕಲಾಪ್ರಪಂಚಕ್ಕೂ ವೈರ. ಓದು ಕಲಿತ ಶಾಸ್ತ್ರಮಾಡಿ ಸಂಬಳ ಸಂಪಾದಿಸಬೇಕೆಂದಿರುವವರಿಗೂ ಸಂಪಾದಿಸಿಕೊಳ್ಳಬಲ್ಲ ಅನುಕೂಲಗಳುಳ್ಳವರಿಗೂ ಇದು ವರಪ್ರಸಾದದಂಥದು. ಪರೀಕ್ಷೆಗಳಲ್ಲಿ ೩೫ ನಂಬರುಗಳನ್ನು ಸಂಪಾದಿಸುವುದು ಗುರುವಿಗೂ ಶಿಷ್ಯನಿಗೂ ಕೂಡ ಈಗ ಪರಮ ಪುರುಷಾರ್ಥವಾಗಿದೆ. ಅದನ್ನು ಸಾಧಿಸುವುದಕ್ಕೆ ಬೇಕಾದ ಹೊಸಹೊಸ ಮಾರ್ಗಗಳನ್ನು ದಿನದಿನವೂ ಅವರು ಕಂಡುಹಿಡಿಯುತ್ತಿದ್ದಾರೆ. ಆ ಹೊಳೆ ದಾಟಿದ ತರುವಾಯ ಆ ತೆಪ್ಪವನ್ನು ತಿರುಗಿ ನೋಡಕೆಲಸವಿಲ್ಲ. ಈ ಭಾವವು ನಮ್ಮವರಿಗೆ ಐದನೆಯ ವರ್ಷದ ಅಕ್ಷರಾಭ್ಯಾಸದ ದಿನವೇ ಹುಟ್ಟಿ, ಬರುತ್ತ ಬರುತ್ತ ಹೆಚ್ಚಾಗಿ ಬೆಳೆದು ಸಹಜವಾದ ಜ್ಞಾನಾಭಿಲಾಷೆಯನ್ನೇ ತಿಂದುಹಾಕಿಬಿಡುತ್ತಿದೆ. ನಮ್ಮ ಸರ್ವಕಲಾಶಾಲೆಗಳು ಇಂಥ ದುರ್ಭಾವವನ್ನು ವಿದ್ಯಾರ್ಥಿಗಳಲ್ಲಿ ಬುದ್ಧಿಪೂರ್ವಕವಾಗಿ ಹರಡುತ್ತಿರುವುವೆಂದು ಹೇಳುವುದು ಅನ್ಯಾಯವಾಗುವುದಾದರೂ ಹೆಚ್ಚಿ ಬೆಳೆಯುತ್ತಿರುವ ಅದನ್ನು ನಶಿಸುವಂತೆ ಮಾಡಲು ತಕ್ಕ ಪ್ರಯತ್ನಗಳೇನನ್ನೂ ಮಾಡದೆ ಇನ್ನೂ ಹಳೆಯ ದಾರಿಯಲ್ಲಿಯೇ ಇರುವುವೆನ್ನುವುದು ಅಸತ್ಯವಲ್ಲ. ಇಂಥ ಸನ್ನಿವೇಶಗಳಲ್ಲಿ ಕಲೆಗಳು ಬೆಳೆಯುವು. ಅವನ್ನು ಕಲಿಯುವವನು ನಿತ್ಯವೂ ಪರೀಕ್ಷೆ ಕೊಡುವುದಕ್ಕೆ ಸಿದ್ಧನಾಗಿರಬೇಕು. ನಿನ್ನೆಯ ಸರ್ಟಿಫಿಕೇಟು ತೋರಿಸಿ ಇಂದು ಸನ್ಮಾನಕ್ಕಾಶಿಸುವುದು ಸಾಧ್ಯವಿಲ್ಲ. ಅದರಲ್ಲಿಯೂ ಸಂಗೀತಗಾರರ ವಿಷಯ ಇನ್ನೂ ಕಷ್ಟ. ಒಂದು ಒಳ್ಳೆಯ ಕಾವ್ಯವನ್ನು ಬರೆದ ಕವಿ ಬೇರೆ ಏನನ್ನೂ ಬರೆಯದಿದ್ದರೂ ಬಂದವರಿಗೆಲ್ಲ ಅದನ್ನೇ ಓದಿ ಹೇಳಬಹುದು. ಒಂದು ಬಾರಿ ಬರೆದ ಚಿತ್ರವನ್ನು ಆ ಮೇಲೆ ಎಷ್ಟು ಜನರಿಗಾದರೂ

ಎಷ್ಟು ಬಾರಿಯಾದರೂ ತೋರಿಸಬಹುದು. ಆದರೆ ವರುಷದ ಹಿಂದೆ ಹಾಡಿದ ತೋಡಿ ರಾಗಕ್ಕಾಗಿ ವಿದ್ವಾಂಸನಿಗೆ ಈ ದಿನ ತೋಡಾ ಹಾಕುವವರಾರು? ಆತನ ಸೃಷ್ಟಿಯು ಮಿಂಚಿನಂಥುದು. ಆಗಲೇ ಹುಟ್ಟಿ ಆಗಲೇ ನಾಶವಾಗುವುದು. ಯಾವಾಗಲೂ ಸಾಧನೆ ಮಾಡುತ್ತಲೇ ಇರಬೇಕು. ಇಲ್ಲದಿದ್ದರೆ ಶರೀರ ಶಾರೀರಗಳು ಎರಡೂ ಸ್ವಾಧೀನ ತಪ್ಪುವುವು. ಆದುದರಿಂದ ಹಾಗೆ ಸಾಧನೆಮಾಡುವುದಕ್ಕೆ ಸಿದ್ಧವಾಗಿ ಅದಕ್ಕೆ ವಿರೋಧವಾದವುಗಳನ್ನೆಲ್ಲ ಬಿಟ್ಟುಬಿಡುವುದಕ್ಕೆ ತಯಾರು ಆಗಿರುವವನಿಗಲ್ಲದೆ ಇತರರಿಗೆ ಈ ವಿದ್ಯೆ ಫಲಿಸದು. ಈಗಿನ ಯೂನಿವರ್ಸಿಟೀಗಳಲ್ಲಿ ಇಂಥ ಉತ್ಸಾಹವನ್ನು ಉಂಟುಮಾಡುವ ಸನ್ನಿವೇಶವಿಲ್ಲವೆನ್ನುವುದು ಅಸತ್ಯವೇ? ಹಾಗಿರುವಾಗ ಸಂಗೀತವು ಕೂಡ ತಮ್ಮ 'ಕರಿಕ್ಯುಲಂ' ನಲ್ಲಿ ಉಂಟೆಂದು ಪ್ರಕಟಿಸಿಕೊಳ್ಳುವುದರ ಫಲವೇನು? ನಿಜವಾಗಿ ಅವರಿಗೆ ಅಭಿಮಾನವಿದ್ದುದಾದರೆ, ಇಂಥ ಬಯಲುಡಂಭದ ಕೆಲಸಗಳನ್ನು ಬಿಟ್ಟು, ವೈದ್ಯ, ನ್ಯಾಯ, ಗಣಿತ ಮೊದಲಾದವುಗಳಿಗೆ ಏರ್ಪಡಿಸಿದಂತೆಯೇ ತಕ್ಕಷ್ಟು ದ್ರವ್ಯವನ್ನು ವೆಚ್ಚಮಾಡಿ ಪ್ರತ್ಯೇಕವಾಗಿ ಗಾನವಾದನ ಕಲಾಶಾಲೆಗಳನ್ನು ಸ್ಥಾಪಿಸುವ ತ್ಯಾಗವನ್ನು ತೋರಿಸಬೇಕು. 'ವಿದ್ವಾಂಸರನ್ನು ತಯಾರುಮಾಡುವುದು ನಮ್ಮ ಉದ್ದೇಶವಲ್ಲ. ವಿದ್ಯಾರ್ಥಿಗಳಿಗೂ ಆ ಮೂಲಕ ಜನಸಾಮಾನ್ಯಕ್ಕೂ ಸಾಮಾನ್ಯವಾದ ಸಂಗೀತಾಭಿರುಚಿಯನ್ನೂ ಉಂಟುಮಾಡುವುದು ನಮ್ಮ ಪ್ರಯತ್ನ' ಎಂದು ಹೇಳುವುದಾದರೆ ಅದೂ ಫಲಿಸುವುದು ದುರ್ಲಭ. ಅವರು ಕೊಡುವ ೩೦ ರೂಪಾಯಿಗಳಿಗೆ ಮೂರನೆಯ ತರಗತಿಯ ವಿದ್ವಾಂಸನು ಕೂಡ ದೊರಕುವುದು ಕಷ್ಟ. ಅಂಥವನು ವಾರಕ್ಕೆ ಒಂದೆರಡು ಗಂಟೆಯಕಾಲ ವಿದ್ಯಾರ್ಥಿಗಳಿಗೆ ಸರಳಿವರಸೆಯನ್ನು ಹೇಳುವುದರಿಂದ ಅವರಿಗೆ ಲಭಿಸುವುದೇನು? ಸಂಗೀತದಲ್ಲಿ ಅಭಿರುಚಿಯಲ್ಲ,—ಅಸಹ್ಯ. ಎಲ್ಲ ವಿದ್ಯೆಗಳಿಗಿಂತಲೂ ಸಂಗೀತವು ಆರಂಭದಶೆಯಲ್ಲಿ ಅಸಹ್ಯವಾದುದು. ಬರಿಯ ಅಕ್ಷರಾಭ್ಯಾಸದಿಂದ ಅಭಿರುಚಿ ಬರುವುದೆಂದು ಯೋಚಿಸಬಹುದೆ? ಆದುದರಿಂದ ಅಭಿರುಚಿ ಉಂಟಾಗುವುದಕ್ಕೆ ಸಾಧನೆಗಿಂತಲೂ ಸಂಸ್ಕಾರವು ಮುಖ್ಯವೆಂದು ಮೊದಲೇ ವಿಜ್ಞಾಪಿಸಿದೆನು. ಅದಕ್ಕೆ ಯೂನಿವರ್ಸಿಟೀಯವರು ತಿಂಗಳಿಗೊಂದಾವರ್ತಿಯಾದರೂ ಪ್ರಸಿದ್ಧ ವಿದ್ವಾಂಸರನ್ನು ಕರೆಯಿಸಿ, ಅವರ ಕಚ್ಚೇರಿಯನ್ನು ವಿದ್ಯಾರ್ಥಿಗಳು ಕೇಳುವಂತೆ ಮಾಡಿ, ಗಾಯಕರನ್ನು ಬಹೂಕರಿಸಬೇಕು. ವಿದ್ಯಾರ್ಥಿಗಳಿಗೆ ಪಟ್ಟಗಳನ್ನು ಕೊಡುವ ಮಹಾಸಭೆಗಳು ಮೊದಲಾದುವುಗಳಲ್ಲೆಲ್ಲ ಸಂಗೀತವನ್ನೂ ಒಂದು ಮುಖ್ಯಾಂಗವನ್ನಾಗಿ ಇಟ್ಟುಕೊಳ್ಳಬೇಕು. ವೇತನ ಭತ್ಯಗಳನ್ನು ಕೊಟ್ಟು ಎಷ್ಟೋ ಮಂದಿ ಪರದೇಶ ಪಂಡಿತರನ್ನು ಕರೆಯಿಸಿ ಬೇರೆ ಬೇರೆ ವಿಷಯಗಳಲ್ಲಿ ಅವರಿಂದ ಎಕ್ಸ್‌ಟೆನ್ಷನ್ ಲೆಕ್ಚರುಗಳು

ಎಂಬ ಹೆಸರಿನ ಉಪನ್ಯಾಸಗಳನ್ನು ಈಗ ಪ್ರತಿ ಯೂನಿವರ್ಸಿಟಿಯವರೂ ಕೊಡಿಸುತ್ತ, ವಿದ್ಯಾರ್ಥಿಗಳಿಗೇ ಅಲ್ಲದೆ ಇತರ ಪ್ರಜೆಗಳಿಗೂ ಜ್ಞಾನಾಭಿವೃದ್ಧಿಗೆ ಸಹಾಯ ಮಾಡುತ್ತಿದ್ದಾರೆಯಷ್ಟೆ. ಹಾಗೆಯೇ ಪ್ರಜೆಗಳಲ್ಲಿ ಸಹೃದಯತ್ವವನ್ನು ಉಂಟು ಮಾಡುವುದಕ್ಕಾಗಿ ಬೇರೆ ಬೇರೆ ಕಲೆಗಳ ಪ್ರದರ್ಶನಗಳನ್ನು ಏಕೆ ಮಾಡಿಸಬಾರದು? ಅಲ್ಲದೆ, ಮೇಲಿನ ಉಪನ್ಯಾಸಗಳಲ್ಲಿ ಕೆಲವು, ಸಂಗಿತ ವಿದ್ಯೆಯನ್ನು ಕುರಿತೂ ನಡೆಯುತ್ತವೆ. ಆದರೆ ಸಂಗೀತ ಕಚ್ಚೇರಿಗಳು ಏನುಪಾಪ ಮಾಡಿದವು? ಅವಕ್ಕೇಕೆ ಸ್ಥಳವಿಲ್ಲ? ಒಂದು ಕಚ್ಚೇರಿಯು ಉಂಟುಮಾಡುವಂಥ ಚಿತ್ತಸಂಸ್ಕಾರವನ್ನು ಹತ್ತು ಉಪನ್ಯಾಸಗಳಾದರೂ ಉಂಟುಮಾಡಿ ಕೊಡಲಾರವು.

ವಿದ್ಯಾವಿಧಾನಕ್ಕೆ ಫಲ ನಾಗರಕತೆ. ನಾಗರಕತೆಗೆ ಮುಖ್ಯ ಲಕ್ಷಣ ಕಲೆಗಳಲ್ಲಿ ಒಳ್ಳೆಯ ಅಭಿರುಚಿ. ಆದುದರಿಂದ ಅದರಲ್ಲಿ ಇಲ್ಲದುದು ಇದರಲ್ಲಿ ಎಲ್ಲಿಂದ ಬಂದೀತು? ಹಾಗಾಗುವುದರಿಂದಲೇ ಈಗಿನ ನಾಗರಕರಲ್ಲಿ ಅನೇಕರಿಗೆ ಸಂಗೀತವೆಂದರೆ ಉದಾಸೀನ ಮಾತ್ರವೇ ಅಲ್ಲದೆ ಕೆಲವರಿಗೆ ದ್ವೇಷವೂ ಉಂಟಾಗುತ್ತದೆ. ನಮಗೆ ಅರ್ಥವಾಗದ ವಸ್ತುಗಳ ಮೇಲೆ ಅನಾದರ ಸಹಜವಲ್ಲವೆ! ಅನಾದರಕ್ಕೆ ಮುಂದಿನ ಮೆಟ್ಟಲು ಅಸಹ್ಯ. ವಿದ್ಯಾಧಿಕರಾದ ಒಬ್ಬ ದೊಡ್ಡ ಪದವೀಧರರು ಹಿಂದೂ ಸಂಗೀತವು ಕಿಸುಬಾಯಿ ದಾಸನ ಹಾಡಿನಂಥುದೇ ಅಲ್ಲದೆ, ಅದರಲ್ಲಿ 'ನವ್ಯತೆ' ಎಂಬ ಕಲಾಲಕ್ಷಣವಿಲ್ಲವೆಂದು ನನ್ನಕೂಡ ಹಲವು ವೇಳೆ ವಾದಿಸುತ್ತಿದ್ದರು. ಕೆಲವರು ವಿದ್ವಾಂಸರ ಹಾಡುಗಾರಿಕೆ ಹಾಗಿರುವುದು ಈ ಭ್ರಾಂತಿಗೆ ಕಾರಣವಾಗಿರಬಹುದು. ಆದರೆ ಆ ಪಂಡಿತರ ಬುದ್ಧಿಯು ಈ ವಿಷಯದಲ್ಲಿ ವಾಸನಾಪರಿಪಕ್ವವಾಗದೇ ಹೋಗಿರುವುದೇ ಅದಕ್ಕಿಂತಲೂ ಮುಖ್ಯಕಾರಣ. ಅಪರೂಪವಾಗಿ ಯಾವುದೊ ಒಂದು ಸಂಗೀತ ಕಚ್ಚೇರೀಗೆ ಹೋಗಿ, ಯಾರ ಕೂಡೆಯೊ ಏನೊ ಮಾತನಾಡುತ್ತ ಕಾಲಕ್ಷೇಪಮಾಡಿ ಹೊರಗೆ ಬಂದ ಮಾತ್ರವೇ ಸಂಗೀತದಂಥ ಕಲೆಯನ್ನು ವಿಮರ್ಶಿಸುವುದಕ್ಕೆ ಅಧಿಕಾರವು ಸಾಲದೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಪಟ್ಟಪರೀಕ್ಷೆಗಳು ಎಷ್ಟನ್ನು ಪ್ಯಾಸುಮಾಡಿದ್ದರೂ, ಇತರ ಕಲೆಗಳೊಡನೆ ನಮಗೆ ಎಷ್ಟು ಪರಿಚಯವೂ ಪ್ರಾವೀಣ್ಯವೂ ಇದ್ದರೂ, ಈ ಕಲೆಯೊಡನೆ ತಕ್ಕಷ್ಟು ಪರಿಚಯವುಂಟಾಗುವವರೆಗೂ ಈ ವಿಷಯದಲ್ಲಿ ನಾವೆಲ್ಲರೂ ಬಾಲಕರಂತೆಯೇ ಎಂದು ನಮ್ಮ ಅಜ್ಞಾನವನ್ನು ನಾವು ಅಂಗೀಕರಿಸಬೇಕಾದೆ. ಸಂಗೀತದಲ್ಲಿ ಸಂಗತಿಗಳೇಕೆ ಎನ್ನುವವರು ಕೆಲವರು; ಶ್ರುತಿ ಮಾಡುವಷ್ಟುಕಾಲ ಕಾದಿರುವುದಕ್ಕೆ ಸಹನೆಯಿಲ್ಲದೆ ತಂಬೂರಿಯೇ ಬೇಡವೆನ್ನುವವರು ಕೆಲವರು; ಕೈಗಳಿಂದ ತೊಡೆಗಳನ್ನು ತಟ್ಟದೆ ಗಂಭೀರವಾಗಿ ಹಾಡಬಾರದೆ ಎಂದು

ಇನ್ನು ಕೆಲವರು ; ಮೃದಂಗ ನಾದವನ್ನು ಕೇಳಲಾರದೆ ತಲೆಕೆರೆದುಕೊಳ್ಳುವವರು ಕೆಲವರು. ಇಂಥ ಸ್ವಾಜ್ಞಾನಜ್ಞಾನವಿಲ್ಲದವರು ವಿದ್ಯಾಧಿಕರಾಗಿ ಅಧಿಕಾರಿಗಳಾಗಿ, ನಾಗರಕತೆಗೆ ದಾರಿ ತೋರಿಸುವವರಾಗುವುದರಿಂದ ಸಂಗೀತಾಭಿವೃದ್ಧಿಗೆ ಬೇಕಾದ ವಾಸನಾವಂತರಾದ ರಸಿಕರೂ, ಸಹೃದಯರೂ ಈಗ ಅಪರೂಪವಾಗುತ್ತಿದಾರೆ. ಅವರಿಗಿರುವ ಧನ, ವಿದ್ಯೆ, ಅಧಿಕಾರ, ಗೌರವ ಇವುಗಳಿಂದ ಕಚ್ಚೇರಿಗಳಲ್ಲಿ ಮುಂದೆ ಅವರು ಕೂಡಿಸಲ್ಪಟ್ಟದ್ದರೂ, ಎಲ್ಲಿಯೋ ಮೂಲೆಯಲ್ಲಿ ಕುಳಿತುಕೊಂಡು ತನ್ನ ಹಾಡನ್ನು ತದೇಕಧ್ಯಾನದಿಂದ ಕೇಳುತ್ತಿರುವ ಯಾವನೋ ಒಬ್ಬ ಬಡಮುದುಕನ ಕಡೆಗೆ ಹಾಡುವಾತನು ಆಸೆಯಿಂದ ದೃಷ್ಟಿಹರಿಸಬೇಕಾಗಿರುವುದು. ದಿನ ದಿನವೂ ಇಂಥಸಂಸ್ಕಾರವು ನಮ್ಮ ಜೀವಿತದಿಂದ ಬೇರೆಯಾಗಿ ದೂರವಾಗುತ್ತಿದೆ. ಅದಕ್ಕಾಗಿ ದ್ರವ್ಯವನ್ನೂ, ಕಾಲವನ್ನೂ ವೆಚ್ಚಮಾಡಲು ವೃಥಾವ್ಯಯವೆಂಬ ಭಾವವು ಬೇರೂರುತ್ತಿದೆ. ಈಗಲೂ ಸಂಗೀತವಿದ್ಯೆಯು ನಮ್ಮ ದೇಶದಲ್ಲಿ ಪೂರ್ತಿಯಾಗಿ ನಶಿಸದಿರುವುದಕ್ಕೆ, ಸಂಗೀತಗಾರರಿಗೆ ಜೀವನ ನಡೆಯುತ್ತಿರುವುದಕ್ಕೆ, ಪ್ರಾಚೀನ ನಾಗರಕತೆಗೆ ಸೇರಿದ ದಾತರಾದ ಪ್ರಭುಗಳೂ, ಧನವಂತರಾದ ಕೆಲವರೂ ಇನ್ನೂ ಬುಕಿರುವುದೇ ಕಾರಣವಲ್ಲದೆ ನವನಾಗರಕರಾದ ನಾವಲ್ಲ. ಸುಮಾರು ಐದಾರು ವರುಷಗಳಿಗೆ ಹಿಂದೆ ಮದರಾಸಿನಲ್ಲಿನ ಒಬ್ಬ ಚೆಟ್ಟಿಯವರು ತಮ್ಮ ಮಗಳ ಕಿವಿಚುಚ್ಚಿಸುವ ಮಹೋತ್ಸವದಲ್ಲಿ ಸಾವಿರಗಟ್ಲೆ ರೂಪಾಯಿಗಳನ್ನು ವೆಚ್ಚಮಾಡಿ ಹತ್ತುದಿನಗಳವರೆಗೂ ಪ್ರಸಿದ್ಧ ವಿದ್ವಾಂಸರ ಸಂಗೀತದಿಂದ ಊರಿನವರೆಲ್ಲರನ್ನೂ ಆನಂದಸಮುದ್ರದಲ್ಲಿ ಓಲಲಾಡಿಸಿದರಂತೆ! ನಮ್ಮ ಮೈಸೂರು ಮಹಾರಾಜರವರು ಪ್ರತಿನಿತ್ಯವೂ ಕೆಲವು ಗಂಟೆಗಳಕಾಲವಾದರೂ ಸಂಗೀತಪ್ರಪಂಚದಲ್ಲಿ ಲೀನರಾಗಿರುವರು. ಪ್ರತಿ ಸಂವತ್ಸರವೂ ಅವರ ವರ್ಧಂತಿಯಲ್ಲಿಯೂ, ನವರಾತ್ರಿಕಾಲದಲ್ಲಿಯೂ ಹೊರಗಿನಿಂದ ಬರುವ ವಿದ್ವಾಂಸರ ಬಹುಮಾನಕ್ಕಾಗಿ ಅವರು ವೆಚ್ಚಮಾಡುವ ಧನವು ಕೆಲವು ಸಾವಿರಗಳಿಗೆ ಕಡಮೆಯಿಲ್ಲ. ಊರಿನ ವಿದ್ವಾಂಸರಿಗೆ ನೂರುಗಟ್ಲೆ ತಿಂಗಳು ತಿಂಗಳು ಸಂಬಳ ಕೊಡುತ್ತಿದ್ದಾರೆ. ನಮ್ಮಲ್ಲಿ ಅನೇಕರು ಇದನ್ನು ಹುಚ್ಚು ಎನ್ನುವರು. ಆದರೂ ಈ ಹುಚ್ಚೇ ಕಲೆಗಳ ಅಭಿವೃದ್ಧಿಗೆ ಕಲ್ಪವೃಕ್ಷದಂಥುದು. ಈ ಹುಚ್ಚೇ ಕವಿಸಾರ್ವಭೌಮನಾದ ಶ್ರೀನಾಥನಿಗೆ ಮುತ್ತುಗಳ ಚಪ್ಪರದಲ್ಲಿ ಕನಕಾಭಿಷೇಕವನ್ನು ಮಾಡಿಸಿದುದು. ಬಾಣನಂಥ ಕವಿ ನಮಗೆ ಲಭಿಸುವುದಕ್ಕೆ ಭಾರ*ಗಳಗಟ್ಲೆ ಭಂಗಾರವನ್ನು ಖರ್ಚುಮಾಡಿದ ಮಹಾರಾಜಾಧಿರಾಜ ಶ್ರೀಹರ್ಷವರ್ಧನದೂ ಇದೇ ಹುಚ್ಚೇ!

* ೧೨ ಮಣದ ತೂಕ.

ಪಾಶ್ಚಾತ್ಯ ದೇಶಗಳಲ್ಲಿ ಪ್ರಾಚೀನ ಚಿತ್ರಕಾರರ ಚಿತ್ರಗಳೊಂದೊಂದಕ್ಕೆ ಲಕ್ಷಗಟ್ಲೆ ಪೌನುಗಳನ್ನು ಕೊಟ್ಟು ಕೊಳ್ಳುತ್ತಿರುವುದಕ್ಕೂ ಇಂಥ ಹುಚ್ಚರು ಅಲ್ಲಿ ಇರುವುದೇ ಕಾರಣ ! ಇಷ್ಟೇಕೆ ? ಪ್ರಪಂಚದಲ್ಲಿನ ಸಪ್ತವಿಚಿತ್ರಗಳಲ್ಲಿ ಒಂದೆನಿಸುವ ತಾಜ್ ಮಹಲೆಂಬ ಮನೆಯನ್ನಲ್ಲ, ಗೋರಿಯನ್ನು ನಿರ್ಮಿಸಲು ಎಷ್ಟೋ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದ ಷಾಹಜಹಾನ ಚಕ್ರವರ್ತಿಯು ಇಂಥ ಹುಚ್ಚರಿಗೆಲ್ಲ ಪ್ರಥಮಾಚಾರ್ಯನು ! ಆದುದರಿಂದ ನಮ್ಮ ಈ ಅಜ್ಞಾನವನ್ನು, ಈ "ಸ್ವಾದು ಪರಾಙ್ಮುಖತ್ವ" ವನ್ನು, ಈ ರಸದ್ವೇಷವನ್ನು ದೂರವಾಗಿ ಮಾಡಿ ಬದುಕು ಧನ್ಯವಾಗುವಂತೆ ಮಾಡಿಕೊಳ್ಳುವ ಉಪಾಯವನ್ನು ನಾವೆಲ್ಲರೂ ಈದಿನ ಆಲೋಚಿಸ ಬೇಕಾಗಿದೆ.

ನಾವೆಂದರೆ, ಗಾನ ವಿದ್ಯೆಯಲ್ಲಿ ಅಭಿರುಚಿಯನ್ನೂ ಅಭಿಮಾನವನ್ನೂ ಇಟ್ಟು ಕೊಂಡು ಅದರಲ್ಲಿ ಹೆಚ್ಚಿನ ಪರಿಶ್ರಮಮಾಡದಿರುವವರೆಂದೂ, ಅದನ್ನು ಜೀವಿಕೆಯ ನ್ನಾಗಿಟ್ಟುಕೊಳ್ಳದವರೆಂದೂ ನನ್ನ ಉದ್ದೇಶ. ಆದರೆ ಸಂಗೀತ ವಿದ್ವಾಂಸರು, ಅದನ್ನು ಜೀವನೋಪಾಯವಾಗಿ ಇಟ್ಟುಕೊಂಡವರು ಈ ವಿಷಯದಲ್ಲಿ ನಮಗಿಂತಲೂ ಹೆಚ್ಚಿನ ಕೆಲಸ ಮಾಡಬೇಕಾಗಿದೆ. ಚೆನ್ನಾಗಿ ಕೇಳಿ ಆನಂದಪಡುವವರಿದ್ದರೆ ಹಾಡ ಬಲ್ಲ ವಿದ್ವಾಂಸರು ವೃದ್ಧಿಯಾಗುವರೆನ್ನುವುದು ಸತ್ಯವೇ. ಆದರೂ ಚೆನ್ನಾಗಿ ಹಾಡುವವರಿದ್ದರೆ ಕೇಳಿ ಆನಂದಪಟ್ಟು ಬಹುಮಾನ ಮಾಡುವವರೂ ಹೆಚ್ಚಾ ಗುವರು ಎನ್ನುವುದು ಅದಕ್ಕಿಂತಲೂ ಸತ್ಯವಾದುದು. ಆದುದರಿಂದ ಸಂಗೀತ ವಿದ್ಯೆಯ ವೃದ್ಧಿನಾಶಗಳಿಗೆ ತಾವೂ ಮುಖ್ಯಕಾರಣಭೂತರೆನ್ನುವುದನ್ನು ವಿದ್ವಾಂಸರು ತಿಳಿದುಕೊಳ್ಳಬೇಕಾಗಿರುವುದು. ನಾನು ತಿಳಿದಿರುವ ಮಟ್ಟಿಗೂ ಸಂಗೀತದ ಜೀವಾಳವನ್ನರಿತ ಸಹೃದಯರು ಇಲ್ಲವೆಂದು ಈಗಿನ ವಿದ್ವಾಂಸರು ಬೈಯು ತ್ತಿರುವರೇ ಅಲ್ಲದೆ, ಹಾಗೆ ಅವರು ಇಲ್ಲದೆ ಹೋಗುವುದಕ್ಕೆ ತಮ್ಮ ದೋಷವೂ ಸ್ವಲ್ಪ ಉಂಟೆಂದು ಊಹಿಸರು. ಸಂಗೀತವು ಶಕ್ತಿಪ್ರಧಾನವಾದ ವಿದ್ಯೆ ಯೆಂದು ಅವರಲ್ಲಿ ಅನೇಕರು ಗ್ರಹಿಸಿಲ್ಲ. ಉಳಿದ ಎಲ್ಲ ವಿದ್ಯೆಗಳಂತೆಯೇ ಇದನ್ನೂ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವಾಗಿ ವಿಭಾಗಿಸಬಹುದು. (೧) ಸಾತ್ವಿಕ—ಕೇವಲ ಆತ್ಮೋತ್ತಾರಣಕ್ಕೆ ಮಾತ್ರವೇ ಉಪಯೋಗಿಸುವಂಥುದು. ಇತರರು ಯಾರೇ ಆಗಲಿ ಅಭಿನಂದಿಸುವುದನ್ನೂ ನಿಂದಿಸುವುದನ್ನೂ ಲೆಕ್ಕಿಸದೆ "ಉಂಡೇದೇ ರಾಮುಡೊೋ ಸೋಮುಡೋ ಒಕಡು" (ಇರುವವನೇ ರಾಮನೋ ಸೋಮನೋ ಒಬ್ಬನು) ಎಂದು ನಂಬಿ ಆತನನ್ನು ಉಪಾಸನೆಮಾಡುವುದಕ್ಕೆ

ಆತನಲ್ಲಿ ಚಿತ್ತವೃತ್ತಿಯನ್ನು ನಿರೋಧಿಸುವುದಕ್ಕೆ ನಾದೋಪಾಸನೆ ಮಾಡಿದ ತ್ಯಾಗರಾಜಾದಿ ಮಹನೀಯರಿಗೆ ಮಾತ್ರವೇ ಇದು ಸಿಕ್ಕುವ ಒಡವೆ. ಕರ್ಮ, ಜ್ಞಾನ ಮೊದಲಾದವುಗಳಂತೆ ಇದೂ ಒಂದು ಯೋಗ. ಭಕ್ತಿ ವೈರಾಗ್ಯಳು ಮಾತ್ರ ಇದ ರಲ್ಲಿ ಪ್ರಧಾನ. (೨) ರಾಜಸ—ಇದು ಶೃಂಗಾರಾದಿ ನವರಸಗಳನ್ನೂ ಅಸಂಖ್ಯ ಭಾವಗಳನ್ನೂ ಪ್ರದರ್ಶಿಸಿ, ಆ ಮೂಲಕ ತನಗೂ, ಪರರಿಗೂ ಮನಸ್ಸು ಕರಗುವಂತೆ ಮಾಡಿ ಇಹಲೋಕವು ಇಬ್ಬರಿಗೂ ಸುಖಮಯವಾಗುವಂತೆ ಮಾಡುವಂಥುದು. ಇದರಲ್ಲಿ ಹಾಡುವಾತನು ನಟನಂತೆ ಅಭಿನಯಿಸುವನು. ತನ್ನಲ್ಲಿ ರಸಭಾವಗಳು ಇಲ್ಲ ದಿದ್ದರೂ, ಬೇಕೆಂದಾಗ, ಅವುಗಳನ್ನು ಆರೋಪಿಸಿಕೊಂಡು, ತನ್ಮಯತ್ವವನ್ನು ಪಡೆದು, ಕೇಳುವವರಿಗೂ ಆಯಾ ಭಾವಗಳು ಉಕ್ಕಿಬರುವಂತೆ ಮಾಡುವನು. ಇದೇ ಕಲೆ. (೩) ತಾಮಸ—ರಸಭಾವಗಳ ಸಂಬಂಧವಿಲ್ಲದೆ, ಕೇವಲ ತನ್ನ ಶಕ್ತಿ ಯನ್ನು ಪ್ರದರ್ಶಿಸುವುದು ಮಾತ್ರವೇ ಇದರ ಕೆಲಸ. ಗಾಯಕನು ಎಷ್ಟು ಹೊತ್ತು ಉಸಿರು ಹಿಡಿಯಬಲ್ಲನು, ಎಷ್ಟು ವೇಗವಾಗಿ ಅಕಾರಗಳನ್ನು ನುಡಿಯಬಲ್ಲನು, ಎಷ್ಟು ಸ್ಥಾಯಿಗಳಲ್ಲಿ ಸಂಚರಿಸಬಲ್ಲನು, ಇತರರು ಮಾಡಲಾಗದ ಕೆಲಸಗಳು ಎಷ್ಟನ್ನು ಮಾಡಬಲ್ಲನು, ಮೊದಲಾದ ಚರ್ಚೆಗಳು ಇದರಲ್ಲಿ ಬರುವುವು. ಆದುದರಿಂದ ಇದರಲ್ಲಿ ಸ್ಪರ್ಧೆ ಮುಖ್ಯವಾಗಿರುವುದು. ಈ ಮೂರುವಿಧ ಗಾನಗಳಲ್ಲಿ ಸಾತ್ವಿಕಗಾನವು ಪ್ರಕೃತ ವಿಷಯವಲ್ಲ. ಅವರಷ್ಟಿಗವರು ಅದನ್ನು ಸಂಪಾದಿಸಿಕೊಳ್ಳಬೇಕಾದುದೇ ಅಲ್ಲದೆ, ಅದಕ್ಕೆ ಇತರರ ಕೆಲಸ ಬೇಕಾಗಿಲ್ಲವಾದುದರಿಂದ ಇತರರಿಗೂ ಅದರಿಂದ ಕೆಲಸವಿಲ್ಲ. ನಮಗೆ ಬೇಕಾಗಿರುವುದು ರಾಜಸಕಲೆ. ಸಂಸಾರದ ಸುಖದುಃಖಗಳಲ್ಲಿ ಮುಳುಗಿ ತೇಲುತ್ತಿರುವ ನಮ್ಮನ್ನು ಕ್ಷಣಕಾಲವಾದರೂ ಮೈಮರೆಸುವುದು ಅದೇ. ಆದರೆ ಈಗಿನ ವಿದ್ವಾಂಸರಲ್ಲಿ ಅನೇಕರು ಆಶ್ರಯಿಸಿದುದು ಅದೂ ಅಲ್ಲ ಇದೂ ಅಲ್ಲ; ಆದರೆ ? ತಾಮಸವಿದ್ಯೆ. ಅವರಿಗೆ ಬೇಕಾದುದು ಕಲಹ. ಹಾಡುವವನು ಪಕ್ಕವಾದ್ಯಗಳವರಿಗೂ ಆತನಿಗೆ ಇವರೂ ಪರಾಭವವುಂಟುಮಾಡುವುದಕ್ಕೇ ಪ್ರಯ ತ್ನಿಸುವರು. ರಸಭಾವಗಳು ಸುಲಭವಾಗಿ ಕೈಗೆಸಿಕ್ಕುವ ಪದಾರ್ಥಗಳಲ್ಲವಾದುದರಿಂದ ಅವುಗಳನ್ನು ಹೀಗೆ ಜಗಳಕ್ಕೆ ಎಳೆಯುವುದು ಸಾಧ್ಯವಲ್ಲ. ಅವುಗಳಲ್ಲಿ ಪ್ರವೇಶಿಸಿದ ವನು ತನ್ನನ್ನೇ ಮರೆಯುವನು. ಆದುದರಿಂದ ಈಗಿನ ವಿದ್ವಾಂಸರ ಹಾಡಿನಲ್ಲಿ ಬಹು ಮಟ್ಟಿಗೆ ಇವು ಹಿಂದಕ್ಕೆ ಬಿದ್ದುವು. ಚಿತ್ರವಿಚಿತ್ರವಾದ ಕೆಲಸಗಳಿಗೆ ಅವಕಾಶಕೊಡು ವಂಥುದೂ, ಜ್ಞಾಪಕಶಕ್ತಿ, ದೇಹಬಲ ಇವುಗಳನ್ನು ಆಶ್ರಯಿಸಿದುದೂ ಆದ ತಾಳವು ಮುಂದಕ್ಕೆ ಬಂದಿತು.



ವಿಟ್ಠಲಸ್ವಾಮೀ ದೇವಸ್ಥಾನದ ಮುಖಮಂಟಪ

ತೆಳ್ಳಗೆ ಬೆಳ್ಳಗೆ, ಎಷ್ಟು ಯುಗಗಳಿಂದಲೊ ಇದೇ ರೀತಿ ಹರಿದುಬರುತ್ತ, ಎಲ್ಲಿಯೋ ಹುಟ್ಟಿ, ಹೇಗೆಹೇಗೋ ಹರಿದು, ಎಲ್ಲಿನ ಯಾವುದನ್ನೊ ಅರಸಿಕೊಂಡು ಹೋಗುತ್ತಿರುವ ಮಂದಗಾಮಿನೀ ನದಿ; ತತ್ ಸಮಕಾಲೀನರಾಗಿ, ಇಲ್ಲವೆ ಇನ್ನೂ ಪುರಾತನರಾಗಿ ಒಂದೇ ವಿಧವಾದ ವೃತ್ತಿ ಪ್ರವೃತ್ತಿ, ಮೋಹ, ದ್ವೇಷ, ಅಸೂಯೆ ಮೊದಲಾದ ಮೂಲಸ್ವಭಾವಗಳನ್ನು ವ್ಯಕ್ತಗೊಳಿಸುತ್ತ ಜೀವನ ಪ್ರಯಾಣಮಾಡುತ್ತಿರುವ ಮನುಷ್ಯರಾದ ನಾವು. ನಮ್ಮ ಸ್ವಭಾವ ಅನುಕೂಲ ಉಪಯೋಗಗಳಿಗೆ ತೋರಿದಂತೆ ನಾವೇ ನಿರ್ಮಾಣಮಾಡಿಕೊಂಡು, ಹತ್ತಾರು ಶತಮಾನಗಳಿಂದ ನಡೆಸಿಕೊಂಡುಬರುತ್ತಿರುವ, ಹರಿಗೋಲುಗಳ ಮೇಲೆ ನದಿ ದಾಟುವ ಪದ್ಧತಿ. ಇವೆಲ್ಲವನ್ನೂ ನೋಡಿ ನದಿಯು ಸಂಸಾರವಾಹಿನಿಯೆಂದೂ, ನಾವೆಲ್ಲರೂ ಸಣ್ಣಸಣ್ಣ ಕೆಲಸಗಳಿಗಾಗಿ ಆಕಡೆಯಿಂದ ಈಕಡೆಗೆ ಈಕಡೆಯಿಂದ ಆಕಡೆಗೆ, ಯಾವುದೊ ದೋಣಿಗಳ ಸಹಾಯದಿಂದ ಪ್ರತಿನಿಮಿಷವೂ ಹಾಯುತ್ತಿರುವೆವೆಂದೂ, ನೇರವಾಗಿ ಸಮುದ್ರದತ್ತ ಹೋಗದೆ ಪ್ರಯಾಣ ಮುಂದೆಸಾಗದೆ, ಪ್ರಯಾಣದ ಚಿಂತೆ ಕೂಡ ಇಲ್ಲದೆ, ಅಲ್ಲಿ ಇಲ್ಲಿ ಕಾಲಕಳೆಯುತ್ತ, ಸುಳಿಯುತ್ತಿರುವೆವೆಂದೂ ತೋರುತ್ತ ಬಂತು.

ಇದನ್ನು ಓದುವ ನೀವು ನಗಬಹುದು; ಇವನ ತಲೆಯ ಕೀಲುಗಳು ಸಡಿಲ ಬಿದ್ದುಹೋಗಿರುವುವೆಂದೂ ಅನುಮಾನಿಸಬಹುದು. ನಿಮ್ಮನ್ನು ಆಕ್ಷೇಪಣೆಮಾಡುವ ಅಧಿಕಾರ ನನಗಿಲ್ಲ. ಆದರೂ ಆ ಸ್ಥಳಕ್ಕೆ ಹೋಗಿ ನಿಂತು ನೀವೂ ನನ್ನಹಾಗೆಯೆ ಮನಸೋತು ದಗ್ಧಚಿತ್ತರಾಗಿ ನೋಡುತ್ತಿದ್ದರೆ ನಿಮ್ಮ ಮೆದುಳ ಕೀಲುಗಳ ಬಿಗಿಗೂ ಹೀಗೆಯೇ ಸ್ವಲ್ಪ ಊನ ಬರುತ್ತೆಂದೇ ನನ್ನ ಅಭಿಪ್ರಾಯ. ಅಲ್ಲಿ ಸುತ್ತಲೂ ಎಲ್ಲಿಯಾದರೂ ಯಾವ ವಸ್ತುವನ್ನಾದರೂ ನೋಡಿ. ಒಂದು ದೃಷ್ಟಿಯಿಂದಲ್ಲದಿದ್ದರೆ ಇನ್ನೊಂದು ವಿಧದಲ್ಲಿ ಅನನ್ಯಸಾಮಾನ್ಯವಾಗಿ ಮಹತ್ತರವಾಗಿರುವುವೇ ಹೊರತು ಸಾಧಾರಣವಾಗಿ ಕಾಣಲೇ ಕಾಣವು. ಅಲ್ಲಿನ ಕೋಟೆ ಕೊತ್ತಲಗಳು,

ಶಿಥಿಲವಾದ ಅರಮನೆ ಶಿಬಿರಗಳು, ವಿಗ್ರಹ ದೇವಸ್ಥಾನಗಳು, ಲಾಯ ಉಗ್ರಾಣಗಳು, ಕಟ್ಟೆ ತೊಟ್ಟಿಗಳು, ವಿಹಾರ ಓಲಗಸ್ಥಾನಗಳು ಇವುಗಳ ದೃಶ್ಯವನ್ನು ನೋಡಿದಕೂಡಲೆ—ಪೂರ್ವದ ಮಹತ್ತ್ವವನ್ನು ಕಳೆದು ಕೊಂಡು ಈಗ ವೈಧವ್ಯವನ್ನು ಅನುಭವಿಸುತ್ತಿರುವ ಶ್ರೀಮಂತರಮಣಿ ಯೋರ್ವಳಂತೆ ಕಾಣುವುವೇ ಹೊರತಾಗಿ ನಾಡಾಡಿಯಾಗಿ ಕಾಣವು. ಖಿನ್ನಳಾಗಿ, ಅಧೋಮುಖಳಾಗಿ, ಉದಾಸೀನತೆಯಿಂದ ಮಲಿನಳಾಗಿ, ಕಾಂತಿಹೀನಳಾಗಿ—ಆದರೂ ದೀನತಾಲೇಶವಿಲ್ಲದೆ—ಓರ್ವರ ಅವಲಂಬನ ಸಹಾಯಗಳನ್ನೂ ಬೇಡದೆ, ಸಗರ್ವದಿಂದ ತನ್ನ ಕರ್ಮಫಲವನ್ನು ಅನು ಭವಿಸುತ್ತಿರುವಂತೆ ಇರುವುದನ್ನು, ಈ ದೂರದಿಂದ ನಾನೂರು ವರ್ಷಗಳು ಕಳೆದುಹೋದ ಮೇಲೆ, ಒಂದೆರಡು ದಿನ ಮಾತ್ರ ಅಲ್ಲಿ ನೋಡುವುದಕ್ಕೆ ಹೋಗಿದ್ದ ನಮಗೇ ಕಣ್ಣೀರು ಉಕ್ಕಿ ಹರಿದು ಬಂದು, ದುಃಖಾಗ್ನಿಯಿಂದ ಹೃದಯವು ಸುಟ್ಟು ಹೀರಿಹೋಗುತ್ತಿರುವಲ್ಲಿ ಅದನ್ನು ದಿನದಿನವೂ ಸ್ವಂತ ದೇಹದಲ್ಲಿ ಅನುಭವಿಸುತ್ತಿರುವ ವಿಜಯನಗರದ ಸಾಮ್ರಾಜ್ಯಲಕ್ಷ್ಮಿಯ ಅಪಾವಸ್ಥೆಯನ್ನು ಏನೆಂದು ಹೇಳೋಣ! ಕಾಲದ ಚಕ್ರಪರಿವರ್ತನದಲ್ಲಿ ಆಕೆಯ ಅದೃಷ್ಟಪಙ್ಕ್ತಿಯ ಅರಗಳು ಯಾವ ರೀತಿಯಲ್ಲಿ ಪರಿಭ್ರಮಿಸಿ ಕಳಚಿ ಹೊರಗೆ ಬಿದ್ದವೊ ಓದಿ ತಿಳಿದುಕೊಂಡಿರುವ ನಮಗೆ, ಈ ದೃಶ್ಯ ವನ್ನು ನೋಡುತ್ತಲೆ ಯಾವ ವಿಧವಾದ ಮಾನಸಿಕ ಪರಿಣಾಮಗಳು ಉಂಟಾಗುವುವೊ ಅದರ ವಾಸ್ತವ್ಯತೆಯನ್ನು ಇತರರಿಗೆ ಹೇಗೆ ವ್ಯಕ್ತ ಪಡಿಸುವುದು? ಗತವೈಭವದ ನೆನಪು ದುಸ್ಸಹವಾದ ವಿಷದುರಿಯಂತೆ ಆಕೆಯ ದೇಹವನ್ನು ಸುತ್ತಿ, ಅದನ್ನು ಒಂದೇಬಾರಿಗೆ ಭಸ್ಮಮಾಡಿಬಿಡದೆ ಸುಮ್ಮನೆ ಸಂತತವಾಗಿ ಉರಿಸುತ್ತಿದೆಯೆಂದರೆ ಅದನ್ನು ಬಾಯರಿಯದ ಸಾಮಾನ್ಯೋಕ್ತಿಯೆಂದು ಹೇಳಬಹುದು.

ನದಿಯ ಹೊರದಡವನ್ನು ಸೇರಿದುದಾಯಿತು. ಉದ್ದಕ್ಕೆ ಹೊರ ಟೆವು. ಆನೆಗೊಂದಿ 'ಸಂಸ್ಥಾನ'ವನ್ನು ಹೊಕ್ಕು ಮುಂದೆ ನಡೆದೆವು. ನಾವು

ಹಿಂದೆ ಬಿಟ್ಟು ಬಂದ ಆ ಹಾಳು ಸಾಮ್ರಾಜ್ಯಕ್ಕೂ ಈ ಜೀವಂತ ಸಂಸ್ಥಾನಕ್ಕೂ ಎಲ್ಲಿನ ಹೋಲಿಕೆ? ಇಲ್ಲಿ ಜನರು ವಾಸವಾಗಿದ್ದಾರೆ; ಮನೆ, ಬೀದಿ, ದೇವಸ್ಥಾನ, ಅಂಗಡಿ, ಹೊಲ, ಗದ್ದೆ ಎಲ್ಲ ಇವೆ. ಇದೂ ಒಂದು ಸಂಸ್ಥಾನ. ರಾಜನೊಬ್ಬನು ಇಲ್ಲಿ ಅಧಿಕಾರಿ. ಆವೂರನ್ನು ದಾಟಿ ಹೋಗುತ್ತಿರುವಲ್ಲಿ ನಮಗೆ ಇವಾವುದೂ ಜೀವಂತವಾಗಿರುವಂತೆ ಕಾಣಬರಲಿಲ್ಲ. ಸ್ವಪ್ನಪ್ರವಾಹದಲ್ಲಿ ಹರಿದುಹೋಗುತ್ತಿರುವ ಜಲವಾಹಿನಿಯಂತೆ ನಮ್ಮ ಅಂತರಂಗವೂ ಅದರ ಭಾವನೆಗಳೂ ಬೇರೆಕಡೆ ಹರಿದುಹೋಗುತ್ತಿದ್ದುವು. ಹೊರಗಣ ಜಗತ್ತಿನ ವ್ಯಾಪಾರಗಳಲ್ಲಿ ನಮ್ಮ ಮನಸ್ಸು ಆಸಕ್ತಿ ತೋರಿಸಲಿಲ್ಲ. ಒಟ್ಟಿಗೆ ನಮ್ಮ ಪಾಲಿಗೆ ಪ್ರಪಂಚವೆಲ್ಲ ಶೂನ್ಯವಾಗಿ ಭಗ್ನವಾಗಿ ವಿಜಯನಗರದಂತೆ ಆಗಿಹೋಗಿತ್ತು. ಕೂಲಿಹೋದ ಆ ಸೌಂದರ್ಯ ಸಾಮ್ರಾಜ್ಯದ ಪಾಳೇ ಸತ್ಯ, ಈ ಜೀವಂತ ಸಂಸ್ಥಾನವು ಮಿಥ್ಯ—ನಾವೂ ಆ ಶೂನ್ಯಜಗತ್ತೂ ಪರಸ್ಪರ ಪ್ರೇಮಾಭಿಲಾಷಿಗಳು; ಇತರ ವಿಶ್ವಾಸ ಬಂಧನಗಳಿಗೆ ಸಿಕ್ಕದೆ ಅನುರಕ್ತರಾಗಿ ಆ ಪ್ರೇಮಸಾಧನೆಯಲ್ಲೇ, ಮಗ್ನರಾಗಿರುವವರು ಎಂಬುದು ಸ್ಥಿರಪಡುವಂತೆ ನಮ್ಮ ಮನಸ್ಸಿನಿದಿರಿಗೆ ಆ ಶಿಥಿಲ ಸೌಂದರ್ಯದ ಚಿತ್ರವೊಂದು ಮಾತ್ರ ಕಾಣುತ್ತಿತ್ತು. ಊರನ್ನು ಬಿಟ್ಟು ಮುಂದೆ ಮುಂದೆ ಜಾಗ್ರತೆಯಾಗಿ ಹೊರಟೆವು. ರಾಜಪಥವು ಕೃಶವಾಯಿತು. ಎರಡು ಕಡೆಗಳಲ್ಲೂ ಎತ್ತರವಾದ ಬೆಟ್ಟಗಳು; ಒಂದು ಬೆಟ್ಟದ ಮೇಲೂ ಹೆಚ್ಚಾಗಿ ಹಸುರಿಲ್ಲ; ಕೇವಲ ಸಣ್ಣ ದೊಡ್ಡ ಕಲ್ಲುಗುಂಡುಗಳು. ಅಪರೂಪವಾಗಿ ದೂರದೂರದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣಮರ. ದುಂಡುಕಬ್ಬಿನ ತೋಟಗಳು. ತಪ್ಪಲುಗಳಲ್ಲಿ ಎಲ್ಲಿಂದಲೊ ಭೂಮಿಯೊಳಗಿನಿಂದಲೇ ಸದ್ದಿಲ್ಲದೆ ಹರಿದುಕೊಂಡು ಬಂದು ತೋಟಗಳ ಪಕ್ಕದಲ್ಲಿ ಕಾಲುವೆ ಹರಿಯುತ್ತಿರುವ ತುಂಗಭದ್ರೆಯ ನೀರು. ಅಂಗುಳು ಒಣಗಿಹೋಗುತ್ತಿದ್ದರೂ ಆ ನೀರನ್ನು ಕುಡಿಯಕೂಡದೆಂದು ಮನಸ್ಸು. ಪಂಪಾಸರಸ್ಸಿನ "ಪಾವನ ಸ್ಫಟಿಕೋದಕವು" ಅನತಿದೂರದಲ್ಲಿಯೆ ಇರು

ತ್ತಿರುವಲ್ಲಿ ಈ ನೀರನ್ನು ಕುಡಿಯಲು ಮನಸ್ಸು ಹೇಗೆ ತಾನೆ ಬಂದೀತು? ಉತ್ತಮ ವಸ್ತುಗಳು ದೊರಕುವುವೆಂದು ನಿರ್ಧರವಾಗಿ ಮನಸ್ಸಿಗೆ ತಿಳಿದಿದ್ದರೆ ಸಾಮಾನ್ಯ ವಸ್ತುಗಳನ್ನು ಕಂಡರೆ ನಮಗೆ ಅಲಕ್ಷ್ಯ, ತಿರಸ್ಕಾರ. ಪ್ರಪಂಚವೇ ಹೀಗೆ.

ಇಲ್ಲಿಯೆ ಎಲ್ಲಿಯೊ ರಾಮದರುಶನಸುಧಾರಸಪಾನಕ್ಕಾಗಿ ಚಕೋರಿಯಂತೆ ಕಾದಿದ್ದ ಪೂಜ್ಯಳಾದ ಶಬರಿಯ ಆಶ್ರಮ; ಆತನ ಸಂದರುಶನಕ್ಕಾಗಿ ವರ್ಷಾಂತರಗಳು ಕಾದುಕೊಂಡಿದ್ದು, ಹೃದಯದಲ್ಲಿ ಆತನ ಮೂರ್ತಿಯನ್ನು ಕಲ್ಪಿಸಿ, ಕಣ್ಣಿಗಳಿಂದ ಸರ್ವದಾ ಅವನನ್ನೇ ನೋಡುತ್ತ, ಕೈಗೆಟುಕಿದ ಪ್ರತಿಯೊಂದು ತನಿಹಣ್ಣನ್ನೂ ಕಿತ್ತು ಶೇಖರಿಸಿಟ್ಟು, ಕೈಗೆ ಸಿಕ್ಕಿದ ಪ್ರತಿಯೊಂದು ಹೂವರಳನ್ನೂ ಪೂಜೆಗೆಂದು ಅಣಿಮಾಡಿಟ್ಟು, ನಿಮಿನಿಮಿಷವೂ ಅವನು ಬರುವನೆಂದು ನಿರೀಕ್ಷಿಸಿಕೊಂಡು, ಗಾಳಿಯ ಪ್ರಭಾವದಿಂದ ತರಗೆಲೆಯೊಂದು ಮೆಲ್ಲನೆ ಮರಮರ ಶಬ್ದಮಾಡಿದರೆ ಅದು ತನ್ನ ಉಪಾಸನಾದೇವನ ಕಾಲ ಸಪ್ಪಳವೆಂದು ಭ್ರಮಿಸಿ ಹೊರಗೆ ನೋಡುತ್ತ ಕಾದಿರುತ್ತಿದ್ದ ಆಕೆಯ ಆಶ್ರಮಸ್ಥಾನ. ಮುಂದೆ ವಾಲಿ ಸುಗ್ರೀವರು ಕಿಷ್ಕಿಂಧೆಗಾಗಿ ಹೋರಾಡಿದ ಪ್ರದೇಶಗಳು. ಈ ಗುಂಡುಗಳೆ ಅವರ ಶಿಲಾಯುಧಗಳು. ಈ ಎಡದಲ್ಲಿನ ಬೆಟ್ಟದ ಡೊಗರೇ ವಾಲಿಯ ಭಂಡಾರ. ಅದು ಸುಗ್ರೀವನನ್ನು ದೂಡಿದ್ದ ಕಾರಾಗಾರ; ಅಗೊ ಅದು ಸುಗ್ರೀವನ ರಾಜಕಾರ್ಯಸ್ಥಾನ. ಮುಂದೆ ಇಲ್ಲಿಯೆ ಅಣ್ಣತಮ್ಮಂದಿರು ಘೋರವಾಗಿ ಯುದ್ಧಮಾಡಿ ಕಪಿರಕ್ತದ ಕಾಲವೆಗಳನ್ನು ಸುರಿಸಿದುದು. ಹೀಗೇ ರಾಮಲಕ್ಷ್ಮಣರು ಸೀತಾ ವಿಯೋಗದಿಂದ ಬಳಲಿ ಬಾಡಿ ಪಂಪಾಸರಸ್ಸಿಗೆ ನಡೆದು ಹೋಗಿದ್ದುದು. ಎದುರಿಗೆ ಈಚಲುಮರಗಳು, ತಾಳೆಯ ಮರಗಳು, ಕಬ್ಬಿನ ತೋಟಗಳು, ದಟ್ಟವಾಗಿ ಬೆಳೆದಿರುವ ಹೊಂಗೆ ಮರಗಳು. ಬಿಸಿಲು ಕಡಿಮೆಯಾದ ಹಾಗೆಲ್ಲ ಸುತ್ತಣ ಆವರಣದಲ್ಲಿನ ನಿರಾದ್ರರ್ತೆಯು ಹೋಗಿ ಸಣ್ಣಗೆ ಮೆಲ್ಲಗೆ ಎಳೆಗಾಳಿಯು ಮೊದಮೊದಲು ಸುಳಿದಾಡುತ್ತ

ಬಂದಿತು. ಆಮೇಲೆ ಇನ್ನೂ ಸ್ವಲ್ಪ ವೇಗವಾಗಿ ಸಂಚರಿಸುತ್ತ ಹೊಂಗೆಯ ಎಲೆಗಳನ್ನು ಹೊಕ್ಕು, ಹೂಗಳ ಜೊಂಪೆಗಳನ್ನು ತೊನೆಯಿಸಿ, ಅವುಗಳ ಪರಾಗವನ್ನು ಸೂರೆಗೊಂಡು ಸುವಾಸಿತವಾಗಿ ಆಪ್ಯಾಯಕರವಾಗಿ ಬಂದಿತು. ನಾಲ್ಕಾರು ಹೆಂಡದ ಗಾಡಿಗಳು, ಕಬ್ಬಿನ ಕಂತೆಗಳು; ಅರ್ಧ ಮತ್ತವಾದ ಕಣ್ಗೆಂಪಿನಿಂದಲೂ ಅಸ್ಥಿಮಿತಪದಗತಿಯಿಂದಲೂ ನಡೆದುಬರುತ್ತಿರುವ ಮನುಷ್ಯಮೂರ್ತಿಗಳು. ಕಬ್ಬಿನ ತುಂಡುಗಳನ್ನು ಹಲ್ಲಿನಿಂದ ಶೀಳಿ ಸವಿಯುವುದಕ್ಕೆ ಹೊರಟು ಆ ರಸವು ನಾಲಿಗೆಗೆ ಇಳಿಯುವುದಕ್ಕೆ ಮುಂಚೆಯೆ ಬಾಯಿಚಪ್ಪರಿಸಿ ಹಾಡುಗಳನ್ನು ಹೇಳಿಕೊಳ್ಳುತ್ತ ಕೇಕೆಹಾಕುತ್ತ, ಒಬ್ಬರ ತಲೆಯನ್ನು ಇನ್ನೊಬ್ಬರ ತಲೆಯ ಕಡೆಗೆ ತೂಗಿ, ಓರೆ ನೋಡುತ್ತ ಬರುತ್ತಿರುವ ನರನಾರಿಯರು. ಅವರಂತೆಯೆ ಅರ್ಧಪ್ರಮತ್ತವಾಗಿ, ಹೃದಯದಲ್ಲಿ ಉಕ್ಕಿಬರುವ ಯಾವುದೊ ಒಂದು ಭಾವವನ್ನು ಇಂಚರದಿಂದ ವ್ಯಕ್ತಪಡಿಸುತ್ತ ಸಂಗಡಿಗರನ್ನು ಕೂಗುತ್ತ ಪ್ರತ್ಯುತ್ತರ ಹೇಳುತ್ತಿರುವ ಕೋಗಿಲೆಗಳು; ಸಮೀಪದ ಶೀತಲಜಲಾಶಯದಿಂದ ಹೊರಟು, ಬಂಧುಮಿತ್ರರೆಲ್ಲರೂ ಒಟ್ಟುಗೂಡಿ, ನಿಜನಿವಾಸವಾವುದಕ್ಕೊ ವಿಶ್ರಾಂತಿಗಾಗಿ ಹೊರಟು, ಕ್ಷಣ ಕ್ಷಣಕ್ಕೂ ಬೇರೆ ಬೇರೆ ಸಾಲ್ಕಟ್ಟಿಕೊಂಡು, ಮೇಲಿನ ನೀಲಾಕಾಶವನ್ನು ಚಿಮ್ಮಿಕೊಂಡು 'ಸಪ್ಪಳವಿಲ್ಲದೆ ನಿದ್ರಿಸುವಂತಿರುವ' ರೆಕ್ಕೆಗಳನ್ನು ಹಾರಿಸುತ್ತ ಮುಗಿಲುಯಾನ ಮಾಡುತ್ತಿರುವ ಕ್ರೌಂಚಬಲಾಕಗಳ ಪಙ್ಕ್ತಿಗಳು. ಇವೇ ಮೊದಲಾದುವನ್ನು ನೋಡಿ ಹೃದಯದಲ್ಲಿ ಉಕ್ತಿಶಕ್ತಿಗೆ ಮೀರಿದ ಸಂತೋಷವುದಯಿಸಿತು. ಪಕ್ಷಿಪರಮೆಗಳ ನುಣ್ಚರಗಳಿಂದ ನಿಬಿಡವಾದ ಈ ತೆರನಾದ ಪ್ರಕೃತಿಯ ಏಕಾಂತತೆಯು ನಮ್ಮನ್ನು ಜಯಿಸಿ ವಶಮಾಡಿಕೊಂಡುಬಿಟ್ಟಿತು. ಮುಂದೆ ಒಂದು ಸಣ್ಣ ಕುಲ್ಲುಸೇತುವೆ; ಎಡಕ್ಕೆ ಸ್ವಲ್ಪ ತಿರುಗಿದರೆ ಅಲ್ಲಿಯೇ ಎದುರಿಗೆ, ಅಂಜನಾಪರ್ವದ ತಪ್ಪಲಲ್ಲಿ, ತಿಳಿಹಸುರಿನ ಮೃದುಚೌಕಟ್ಟಿನಲ್ಲಿ, ನೆಲೆಸಿರುವ ಪ್ರಶಾಂತ ಪಂಪಾಸರಸ್ಸು!

ಆ ದಿವ್ಯಸರಸ್ಸನ್ನು ಕಂಡಕೂಡಲೆ ಮನಸ್ಸಿನ ಎಲ್ಲಾ ಅಲ್ಪಭಾವನೆಗಳೂ ದೇಹದ ಎಲ್ಲಾ ತಾಪಗಳೂ ಮಾಯವಾಗಿಬಿಟ್ಟವು. ಪೂರ್ಣವಾಹಿನೀ ನದಿಯನ್ನು ನೋಡಿದರೆ ಒಂದು ವಿಧವಾದ ಗಾಂಭೀರ್ಯವು ತೋರುವುದು; ಪ್ರಕಾಂಡ ಸಮುದ್ರವನ್ನು ನೋಡಿದರೆ ಅನಂತವಿಸ್ತಾರವಾಗಿ, ಉದ್ದಂಡವೈಭವದಿಂದ ಮೆರೆಯುವ ಸ್ವಾತಂತ್ರ್ಯ ಮಹಾಮೂರ್ತಿಯೊಂದನ್ನು ಕಂಡಂತಾಗುವುದು. ಅಗಾಧವಾಗಿ, ಆನೆಗಳಂತೆ ಮೇಲೆದ್ದು ಬರುವ ಅದರ ಮಾಲೆಯಲೆಗಳನ್ನೂ, ಅವುಗಳು ಉರುಳಿ ಹೊರಳಿ ಒಂದರೊಡನೊಂದು ಹೋರಾಡುತ್ತ ನೊರೆಯ ಸೇರೆಗಳನ್ನೆತ್ತಿ ಎಸೆಯುತ್ತ ಬರುವುದನ್ನು ನೋಡಿದರೆ ಉನ್ಮಾದ ಕೋಲಾಹಲವೊಂದರ ಅನುಭವವಾಗುವುದು. ನೂರಾರು ಅಡಿಗಳ ಮೇಲಿನಿಂದ ಕೆಳಕ್ಕೆ ಧುಮ್ಮಿಕ್ಕುತ್ತಿರುವ ಜಲಪಾತಗಳನ್ನು ನೋಡಿದರೆ, ಪ್ರಕೃತಿಯ ತಾದ್ರ್ರದ ಒಂದು ಮುಖವು ಕಣ್ಣಾಗ್ಗಣುವುದು. ಇಲ್ಲಿ ಈ ಸರಸ್ಸನ್ನು ನೋಡಿದರೆ ಆ ವಿಧವಾದ ಭಾವಗಳಾವುವೂ ಬಾರವು. ಇಲ್ಲಿ ವಿಶೇಷ ವೈಶಾಲ್ಯವಿಲ್ಲ. ಯಾವೊಂದು ವಿಧವಾದ ತಳಮಳವೂ ಇಲ್ಲ. ಇದರ ಸುತ್ತಳತೆ ಎರಡುಎರಡುವರೆ ಮೈಲಿಗಳಿಗೆ ಮೇಲಿರದು. ಮೂರು ಕಡೆ ಪುಣ್ಯಾತ್ಮರು ಸೋಪಾನ ಕಟ್ಟಿದ್ದಾರೆ. ದಂಡೆಯ ಮೇಲೆ ಸಾಲಿಗೆ ಹೂಗಿಡಗಳು; ಗೋರಂಟಿ ಮಲ್ಲಿಗೆ ಪಾರಿಜಾತ ಮುಂತಾದುವು. ಪಕ್ಕದಲ್ಲಿ ಸೀತಾದೇವಿಯ ದೇವಾಲಯವೊಂದು. ಉತ್ತರದೇಶದಿಂದ ಯಾತ್ರೆ ಬಂದು ಈ ದೇವಾಲಯದಲ್ಲಿ ವಾಸಮಾಡಿಕೊಂಡು ಇಲ್ಲಿಯ ರಾಜನ ಆಶ್ರಯದಲ್ಲಿ, ದೇವಿಯ ಸನ್ನಿಧಿಯಲ್ಲಿ ನೆಲೆಸಿರುವ ೪-೫ ಜನ ಬೈರಾಗಿಗಳು; ಅವರೇ ಸರಸ್ಸಿನ 'ರಕ್ಷಸ್ಸು'ಗಳು—ಅದಕ್ಕೆ ಕಾವಲಾಗಿ ಅಲ್ಲಿ ಕೊಳೆಯಾಗದಿರುವಂತೆ ಅದನ್ನು ನೋಡಿಕೊಂಡಿರುವವರು. ಸರೋವರದ ಸುತ್ತಲೂ ಹೊರಗೆ ಬೆಟ್ಟಗಳು. ಉತ್ತರಕ್ಕೆ ಅಂಜನಾಪರ್ವತ. ಇನ್ನು ಮೂರು ಕಡೆಯೂ ಬೇರೆ ಪರ್ವತಗಳ ಸಾನುಪ್ರದೇಶಗಳು ಈ ಸರಸ್ಸಿನವರೆಗೂ ಇಳಿದುಬಂದಿವೆ. ಕಾಲದ ಆದಿಯಿಂದಲೂ,

ಇಲ್ಲೇ ಹೀಗೇ ಒಂದರ ಸಖ್ಯದಲ್ಲೊಂದು ಬೆಳೆದು ಏಕಾಂತರಂಗದಿಂದ ಕಾಲಕಳೆಯುತ್ತಿರುವ ಚಿರಂಜೀವಿಗಳು ಇವು. ಯುಗಗಳೂ, ಮನ್ವಂತರಗಳೂ ಕಳೆದುಹೋದಾಗ್ಯೂ ತಮ್ಮ ಸ್ಥಿತಿಯನ್ನು ಸ್ವಲ್ಪವೂ ಬದಲಾಯಿಸದೆಯೆ, ಚಪಲರಾಗಿ, ಚಂಚಲರಾಗಿ, ಇಲ್ಲದುದಕ್ಕೂ ಆಗದುದಕ್ಕೂ ಕೊರಗಿ ಕ್ಲೇಶಪಡುತ್ತಿರುವ, ಅಲ್ಪಾಯು ಮನುಷ್ಯರನ್ನು ಗಣನೆಗೆ ತಾರದೆ, ಎಲ್ಲ ಭಾಗಗಳಲ್ಲೂ ಅವರಿಗೆ ಅಸದೃಶವಾಗಿವೆ. ಎಲ್ಲೆಲ್ಲಿಯೂ ನಿಶ್ಶಬ್ದ. ಆದರೆ ಆ ನಿಶ್ಶಬ್ದತೆಯು ಯಾವ ನಿರ್ಜೀವವಸ್ತುವಿನ ಅಥವ ನಿದ್ರಿತವಸ್ತುವಿನ ನಿಶ್ಶಬ್ದತೆಯಂತೆಯೂ ಇಲ್ಲ ; ಮೂಢನ ಅಥವ ಗರ್ವಿಯ ಮೌನದಂತೆಯೂ ಇಲ್ಲ. ಶಬ್ದಕ್ಕೆ ಇಲ್ಲಿ ಸ್ಥಳವಿಲ್ಲ, ಅವಕಾಶವಿಲ್ಲ. ವ್ಯವಹಾರ ಪ್ರಪಂಚವು ಈ ಭೂಭಾಗದ ಹೊರ ಎಲ್ಲೆಗೆ ಬಹುದೂರದಲ್ಲಿ ಎಲ್ಲಿಯೊ ಕೊನೆಗೊಂಡಂತಿದೆ. ಅದಕ್ಕೂ ಇದಕ್ಕೂ ಯಾವ ವಿಧವಾದ ಸಂಪರ್ಕವೂ ಇಲ್ಲ. ಬೆಟ್ಟಗಳುಕೂಡ ಇಲ್ಲಿ ನಮ್ರತೆಯಿಂದ ಉಚ್ಚ ಮನೋಭಾವದಿಂದ ನಿರ್ಮಲಚಿತ್ತದಿಂದ ಸರಸ್ಸಿಗೆ ಮರ್ಯಾದೆಯಿತ್ತು ಅದರ ಶಾಂತಿಯನ್ನು ಕಾಪಾಡಿಕೊಂಡು ಬಂದಿವೆ. ಸರಸ್ಸಿನ ಅಧಿದೇವತೆಗೆ ಎಲ್ಲ ಪ್ರಕಾರದಿಂದಲೂ ನೆರವುಕಾಣಿಕೆಗಳನ್ನರ್ಪಿಸಿವೆ. ಆ ದೇವತೆಯ ಪ್ರತಿನಿಧಿಯಾಗಿ ತಡಿಯ ದೇವಾಲಯದ ಗಹ್ವರ ಪ್ರದೇಶದಿಂದ ಸೀತಾದೇವಿಯು ತನ್ನ ಪ್ರೇಮಾಧಿಕಾರವನ್ನು ಹೂಡಿ, ಬಾಹ್ಯಾಚರಣೆಗಳೆಲ್ಲವನ್ನೂ ವ್ಯವಸ್ಥೆಮಾಡಿ, ತನ್ನ ಸೇವಕರ ಮುಖೇನ, ಕಾರ್ಯಭಾರ ನಡೆಸುತ್ತಿದಾಳೆ. ಅವರೂ ಅಮಾನುಷವಾದ, ಸಾಮಾನ್ಯಲಭ್ಯವಲ್ಲದ ಆ ಆವರಣದಲ್ಲಿ ಕಲೆತು ಒಂದಾಗಿ ಹೋಗಿದ್ದಾರೆ. ಆ ಗೋಸಾಯಿಗಳು ಸಾಕಿಕೊಂಡಿರುವ ಹರಿಣಿಯು ಕೂಡ ಅಲ್ಲಿನ ಸಾತ್ವಿಕ ಸೌಂದರ್ಯಕ್ಕೆ ಅನುರೂಪವಾಗಿ ಒಪ್ಪಿ ರಾಜಿಸುತ್ತಿದೆ. ಅನೇಕ ಶತಮಾನಗಳ ಪರ್ಯಂತ ಯೋಗನಿರತನಾಗಿ ತಪಶ್ಚರ್ಯೆಯಿಂದ ಶಾಂತಾತ್ಮವನ್ನೂ ಸಿದ್ಧಿಯನ್ನೂ ಪಡೆದು, ಎಲ್ಲಾ ವ್ಯಾಮೋಹ ಮಮತೆಗಳನ್ನೂ ತೊರೆದು, ಮಲಿನವಾಗದ

ತನ್ನ ತೇಜಸ್ಸಿನಿಂದ ಪ್ರಪಂಚವನ್ನು ಬೆಳಗಿ, ಏಕಾಗ್ರತೆಯಿಂದ ಸದಾನಂದವನ್ನು ಅನುಭವಿಸುತ್ತಿರುವ ಯೋಗಿವರ್ಯನಂತೆ ಸರಸ್ಸು ಕಾಣುತ್ತದೆ. ಇಲ್ಲಿನದು ತಿಳಿಯಾದ 'ಪರಮ ನಿರ್ಮಲವಾದ ಸ್ಪಟಿಕೋದಕ'. ಶ್ರೀ ರಾಮಪಾನದಿಂದ ಪವಿತ್ರವಾದದ್ದು. ಕನ್ನಡಿಯಂತೆ ಶುಭ್ರತೇಜಸ್ಸಿನಿಂದ ಹೊಳೆವ ಅದರ ವಕ್ಷದಲ್ಲಿ ಅಲ್ಲಲ್ಲಿ ತಾವರೆ ನೈದಿಲೆ ಹೂವುಗಳು ಹಗಲೆಲ್ಲ ಅರಳಿದ್ದು ಈಗ ಅರ್ಧಅರ್ಧವಾಗಿ ಅವಗುಂಠಿತವಾಗುತ್ತಿರುವಂತಿವೆ. ಸುತ್ತಣ ಹೂಗಿಡಗಳೂ ಪರ್ವತ ಪಂಗ್ತಿಗಳೂ, ತಮ್ಮ ಪ್ರತಿಬಿಂಬಗಳನ್ನು ಅದರೊಳಗೆ ಕಾಣುತ್ತ ಕೃತಕೃತ್ಯತೆಯನ್ನು ಪಡೆವಂತಿವೆ. ಭರ್ರನೆ ಬೀಸುವ ಮಾರುತವು ಕೂಡ, ಭಕ್ತಿಯಿಂದ ಮೃದುವಾಗಿ ಚಲಿಸಿ, ಸರಸ್ಸಿನ ಗೋಜಿಗೆ ಹೋಗದೆ ತನ್ನ ಸ್ವಾಚ್ಛಂದ್ಯವನ್ನು ಮರೆತು, ಮೆಲ್ಲನೆ ಸುಳಿದುಹೋಗುತ್ತಿದೆ. ಪಕ್ಕದ ಪರ್ವತಶಿಖರಗಳೊಂದಿಗೆ ಎಷ್ಟೋ ಬಾರಿ ಸರಿಸದಿಂದ ಕ್ರೀಡಿಸಿದ್ದ ಸಿಡಿಲುಗಳೂ ದರ್ಪಾಹತವಾಗಿ ಈ ಶಾಂತಿಯಲ್ಲಿ ಲಯವಾಗಿ ಹೋಗಿರಬೇಕು. ದಿಕ್ಕುಗಳನ್ನು ತಿವಿದಳಸಿ ಉರಿಸಿಕೊಂಡು ಕ್ಷಣಮಾತ್ರದಲ್ಲಿ ಭೂವಲಯವನ್ನೇಳುಸುತ್ತಿ ಭೂವ್ಯಾಕಾಶಗಳನ್ನು ಒಂದುಮಾಡಿ ಹೊಳೆದು ಹೋಗುವ ಮಿಂಚೂ ಈ ಸರಸ್ಸಿಗೆ ತನ್ನ ಕಾಂತಿಯನ್ನು ಕಾಣಿಕೆ ಕೊಟ್ಟು ಪರಾಜಯವನ್ನು ಒಪ್ಪಿಕೊಂಡು ಶಿಷ್ಯವೃತ್ತಿಯಾಚರಿಸಿರಬೇಕು. ಡೊಳ್ಳು ಡೋಳಿನ ಆಡಂಬರವನ್ನು ನೂರ್ಮಡಿ ಮಾಡಿ ಅಬ್ಬರಿಸುವ ಗುಡುಗುಗಳಂತೂ ಇಲ್ಲಿನವರೆಗೂ ಬರಲು ಕೂಡ ಧೈರ್ಯವಿಲ್ಲದೆ ಸದ್ದಿಲ್ಲದೆ ಕಣ್ಣಿಗೆ ಕಾಣದೆ ಹೇಗೊ ಅಡಗಿಹೋಗಿರಬೇಕು. ಇತ್ತಲಾಗಿ ಇವೆಲ್ಲವನ್ನೂ ನೋಡುತ್ತ, ಪುರಾತನದಿಂದ ಈವರೆಗಿನ ಎಲ್ಲ ವಿಧವಾದ ಕಾರ್ಯಕರ್ಮಗಳನ್ನೂ ಕಣ್ಣಾರ ಕಂಡು ಎಲ್ಲವನ್ನೂ ತಿಳಿದುಕೊಂಡಿದ್ದರೂ ಏನೂ ತಿಳಿಯದೆ ತನ್ನ ಆನಂದದಲ್ಲಿ ತಾನು ಮಗ್ನನಾಗಿರುವ ಸಿದ್ಧನಂತೆ ಈ ಸರಸ್ಸು ಕಾಣುತ್ತದೆ.

ದಾರಿಯಲ್ಲಿ ಆನೆಗೊಂದಿಯಲ್ಲಿ ಕಬ್ಬನ್ನೂ ಮಾವಿನ ಹಣ್ಣುಗಳನ್ನೂ ಕೊಂಡು ತಂದಿದ್ದೆವು. ಸರಸ್ಸಿನಲ್ಲಿ ಮುಖವನ್ನು ತೊಳೆದು ಅವುಗಳನ್ನು

ತಿಂದು ದಾಹವಡಗುವಂತೆ ನೀರು ಕುಡಿದು ಆಯೊಸ ಪರಿಹಾರ ಮಾಡಿಕೊಂಡೆವು. ಆಗಲೆ ಸಂಜೆಯಾಗಿತ್ತು. ದೂರದ ಪಶ್ಚಿಮ ದಿಗಂತದಲ್ಲಿ ಕಿತ್ತಿಳೆ ಬಣ್ಣದ ಸೂರ್ಯನು ಮುಳುಗುವುದರಲ್ಲಿದ್ದನು. ಅವನ ಕೆಂಪು ಮಿಶ್ರವಾದ ಹೊಂಬಣ್ಣದ ಕಾಂತಿಯು ಬೆಟ್ಟದ ಸಾನುಗಳನ್ನು ದಾಟಿಕೊಂಡು ಗಿಡದೆಲೆವೂಗಳನ್ನು ದೂರಿಕೊಂಡು ಸುತ್ತಣ ಪ್ರದೇಶವನ್ನು ಬೆಳಗುತ್ತಿತ್ತು. ಮೇಲಿನ ಮೋಡಗಳನ್ನು ಹೊಕ್ಕು ಅವನ್ನು ವಿಧವಿಧ ವರ್ಣಗಳಿಂದ ಸಿಂಗರಿಸಿತ್ತು. ಮೇಲೆ ಆಕಾಶ; ಸಂಧ್ಯಾರಾಗ ರಂಜಿತವಾದ ಮೋಡಗಳು; ಕೆಳಗೆ ಸರಸ್ಸು; ದೂರದ ಆಳದಲ್ಲಿ, ಅದರ ಹೃದಯದಂತರಾಂತರದಲ್ಲಿ ಈ ಆಕಾಶದ ಪೇಲವಾದ ಆದರೂ ಸುಸ್ಪಷ್ಟವಾದ ಪ್ರತಿಬಿಂಬ; ಸುತ್ತಣ ಪ್ರಶಾಂತ ನೀರವತೆ; ಅಮಾನುಷವಾದ ಲೋಕಾತೀತವಾದ ಶಾಂಮೂರ್ತಿಯ ಸದಸ್ಸು; ಇವುಗಳಲ್ಲಿ ನಟ್ಟಮನಸ್ಸು ಪ್ರಪಂಚವನ್ನು ಮರೆದುದೇನಾಶ್ಚರ್ಯ? ಎಷ್ಟು ಹೊತ್ತು ಅಲ್ಲಿ ಕುಳಿತಿದ್ದರೂ ಅದನ್ನು ಬಿಟ್ಟು ಏಳಲು ಮನಸ್ಸೇ ಬಾರದು. ಏಳದಿದ್ದರೆ? ಮಳೆ ಬರುವುದರೊಳಗಾಗಿ ಗೂಡು ಸೇರಿಕೊಳ್ಳಬೇಕು. ಏನು ಗೂಡೊ—ಏನು ಬಾಳೊ! ಗೊಸಾಯಿಗಳು ದೇವಸ್ಥಾನದೊಳಕ್ಕೆ ನಮ್ಮನ್ನು ಬರಹೇಳಿದರು. ಒಳಗೆ ಹೋಗಲು ಅವಕಾಶವಿಲ್ಲ; ಅಲ್ಲದೆ ಅಲ್ಲಿ ಸೀತಾದೇವಿಯ ದರ್ಶನಮಾಡಲು ನನಗೇನೊ ಮನಸ್ಸು ಬರಲಿಲ್ಲ: ರಾವಣನು ತನ್ನನ್ನು ಮೋಸದಿಂದ ಕೊಂಡೊಯ್ಯುತ್ತಿರುವಾಗ ಭೀತಿಗೊಂಡು, ನಿಡುಸುಯ್ಯುತ್ತ ತಾನು ಕಣ್ಣೀರು ಮಳೆಯನ್ನು ಸುರಿಸಿಕೊಂಡುಹೋಗಿದ್ದ ಪ್ರದೇಶವಿದು! ದೇವಿಯ ವಿರಹದಿಂದ ಶ್ರೀರಾಮನು ಬಾಡಿ ಉನ್ಮತ್ತನಂತಾಗಿ ದುಃಖಪಟ್ಟ ಸ್ಥಳವಿದು! ಚಿರದುಃಖಿನಿಯಾದ ದೇವಿಯು ಪುನಃ ಈ ಜಾಗಕ್ಕೇ ಬಂದು ಪತಿಯಿಂದ ದೂರಳಾಗಿ ನೆಲಸಿ ಕಾಲಕಳೆಯುತ್ತಿದ್ದರೆ ಅದು ಆಕೆಗೆ ಹರುಷವನ್ನೆಂತು ತಂದೀತು? ಫುಲ್ಲಹಾಸವು ಹೋಗಿ ಆಕೆಯ ಮೊಗದ ಮೇಲೆ ಕತ್ತಲೆ ಕವಿದಂತಿರುವ ಈ ಪ್ರದೇಶದಲ್ಲಿ ಆಕೆಯನ್ನು ಕಂಡು ಆನಂದಿಸುವುದು ಹೇಗೆ?

ಆ ದರ್ಶನಯಾತನೆಯನ್ನು ಸಹಿಸುವುದು ಹೇಗೆ ? ನಾವು ಒಳಗೆ ಹೋಗಲಿಲ್ಲ. ಅವರ ಕೈಲಿ ನಾಲ್ಕಾಣೆ ನಾಣ್ಯಹಾಕಿ ಹೊಗಿನಿಂದಲೇ ನಮಸ್ಕಾರ ಮಾಡಿ ಹೊರಟುಹೋದೆವು. ಗೋಸಾಯಿಗಳು ನಮ್ಮನ್ನು ಬೈದುಕೊಂಡಿರಬೇಕು. ಬೈದುಕೊಳ್ಳಲೇಳಿ. ನಮ್ಮ ಮನಸ್ಸನ್ನು ಅವರು ಹೇಗೆ ಅರಿಯಬಲ್ಲರು ?

ಬಂದದಾರಿ ಹಿಡಿದು ಹಿಂತಿರುಗಿದೆವು. ಆರು ಗಂಟೆಗೆ ಮೀರಿ ಹೋಗಿತ್ತು. ಮೇಲೆ ಆಕಾಶದಲ್ಲಿ ಕಾರ್ಮೋಡಗಳು ಹಾಕಿ ಸುತ್ತಲೂ ಕತ್ತಲು ಕವಿದುಕೊಂಡಿತ್ತು. ಮರಗಿಡಗಳು ಅಲ್ಲಾಡಲು ಆರಂಭಿಸಿದವು. ನಮಗೆ ಜಾಗ್ರತೆ 'ಮನೆ' ಗೆ ಹೋಗಿ ಸೇರಿಕೊಳ್ಳಬೇಕೆಂಬ ಆತುರ. ಅಂಬಿನ ವೇಗದಲ್ಲಿ ಹೊರಟಿದ್ದೆವು. ಶೀತಗಾಳಿಯೊಂದಿಗೆ ಮಳೆಯ ವಾಸನೆ ಬಂದಿತು. ಈ ಸೂಚನೆಗಳು ಭಯವನ್ನುಂಟುಮಾಡತೊಡಗಿದವು. ರಾತ್ರಿಯೆಲ್ಲ ಮಳೆ ನಿಲ್ಲದೆಯೆ ಇದ್ದರೆ ಎಲ್ಲಿ ತಂಗುವುದು ? ಏನು ಮಾಡುವುದು ? ಊಟ ನಿದ್ರೆಗಳಿಗೆ ಹೇಗೆ ? ಹಸಿವಾದಾಗಮಾತ್ರವೇ ಊಟಮಾಡಬೇಕೆಂಬ ನಿಯಮವಿಲ್ಲದೆ, ಹಸಿವೆಂಬುದನ್ನೇ ಅರಿಯದೆ, ಇದ್ದವರಲ್ಲಿಯೂ ಕೂಡ ಕ್ಷುಧಾಗ್ನಿಯು ಪ್ರಜ್ವಲಿಸುತ್ತಿತ್ತು. ಭಯವನ್ನು ಮತ್ತಷ್ಟು ಹೆಚ್ಚಿಸಲು ಮಿಂಚು ಮಿಂಚಿತು; ಗುಡುಗು ಗುಡುಗಿತು. ಅವುಗಳ ಹಾವಳಿ ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಇನ್ನೆರಡು ಹೆಜ್ಜೆ ಮುಂದಿಡುವುದರೊಳಗಾಗಿ ಮಳೆ ಬಂದೇಬಿಟ್ಟಿತು. ಒಂದೊಂದು ಹನಿ ಒಂದೊಂದು ನೆಲ್ಲಿಯಕಾಯಿನಷ್ಟು ಗಾತ್ರ; ತಡೆಯಲಾಗದಷ್ಟು ರಭಸದಲ್ಲಿ, ತೀವ್ರ ಧಾರೆಯಲ್ಲಿ ಬಂತು. ಮಳೆಯ ಜೊತೆಗೆ ಗಾಳಿ; ಗಾಳಿಯ ಜೊತೆಗೆ ಮಳೆ. ಈ ಕೋಲಾಹಲದ ಜೊತೆಗೆ ನಮ್ಮ ಛತ್ರಿಗಳು ದುರ್ದಮನೀಯವಾಗಿ ಸ್ವತಂತ್ರವೃತ್ತಿಯನ್ನವಲಂಬಿಸಿದವು. ಅವುಗಳ ಮೇಲೆ ನಮಗಿದ್ದ ಇಷ್ಟು ದಿನದ ಅಧಿಕಾರವೂ ಈಗೊಂದು ನಿಮಿಷದಲ್ಲಿ ಹಾರಿಹೋಯಿತು. ಬಹುದಿನ ಪರತಂತ್ರದಲ್ಲಿದ್ದ ಅಲ್ಪರು ಹೊರಗಣ ಬಲವತ್ಸಹಾಯದಿಂದ ದಂಗೆಯೆದ್ದು ಸ್ವತಂತ್ರ ಸಂಪಾದನೆಗೆ ಹೊರಟರೆ ಯಾವ ಯಾವ ವಕ್ರವೃತ್ತಿ ಚೇಷ್ಟೆ

ಗಳನ್ನು ಮಾಡುವರೊ ಅದಕ್ಕಿಂತಲೂ ಹೆಚ್ಚಿನ ಚೇಷ್ಟೆಮಾಡಲಾರಂಭಿಸಿದವು. ನನ್ನ ಛತ್ರಿಯಂತೂ ತನ್ನ ಕೀಲುಗಳನ್ನು ಮೇಲಕ್ಕೆತ್ತಿ ತಲೆಕೆಳಗಾಗಿ ನಿಂತಿತು. ಆ ಹಾಳು ಮಳೆಯಲ್ಲಿ ಈ ಉತ್ಸವ ಬೇರೆ. ಸ್ನೇಹಿತರ ಲೇವಡಿ. ನಗಿ! ಬೇಕಾದಷ್ಟು ನಗಿ! ಎಂದುಕೊಂಡೆ. ಆದರೂ ಸನ್ನಿವೇಶವನ್ನು ನೋಡಿದರೆ ಯಾರು ತಾನೆ ಬೇರೆ ರೀತಿ ಆಚರಿಸಿಯಾರು? ನಾನು ನನ್ನ ಆಗಿನ ಸ್ಥಿತಿಯನ್ನೂ ಅವರನ್ನೂ ಛತ್ರಿಯನ್ನೂ ನೋಡಿ ಸೂಕ್ಷ್ಮ ತಿಳಿದುಕೊಂಡೆ. ಅವರಿಗಿಂತಲೂ ಹೆಚ್ಚಾಗಿ ನಕ್ಕೆ. ಅಂಥ ಸಮಯಗಳಲ್ಲಿ ಇತರರ ನಗು ಅಪಹಾಸ್ಯಗಳನ್ನು ಅಡಗಿಸುವುದಕ್ಕೆ ಅದೇ ಉತ್ತಮೋತ್ತಮ ಉಪಾಯ. ಚೆನ್ನಯ್ಯನೂ ಅವರೊಡನೆ ಸೇರಿಕೊಂಡು "ಹ್ಯೋ" ಎನ್ನಲು ಷುರುಮಾಡಿದನು. ಅದನ್ನು ನೋಡಿ ಮಾತ್ರ ನನಗೆ ರೇಗಿತು.

"ಏಕೋ, ನೀನೇಕೊ ನಗೋದು?" ಎಂದು ಸ್ವಲ್ಪ ಗದರಿಸಿಕೊಂಡೇ ಕೇಳಿದೆ. ನನ್ನ ಆ ಗಂಭೀರ ಭೀಷಣಧ್ವನಿಯು ಕೂಡ ಅವನನ್ನು ಅಡಗಿಸಲಿಲ್ಲ. ಅವನಂಥವರ ಸಹವಾಸ ಬಲುಕಷ್ಟ. "ನಗು ಬಂದು ಬಿಟ್ಟಿತು ಸ್ವಾಮಿ, ಏನು ಮಾಡೋದು?" ಎಂದು ಬಿಟ್ಟ. ಅವನಿಗೆ ಯಾರ ಯಾವ ಆತಂಕವೂ ಇಲ್ಲ. ಆಮೇಲೆ? ಆಮೇಲೆ ಮಾಡುವುದೇನು? "ಅಯ್ಯೊ ರ್‍ಯಾಸ್ಕಲ್" ಎಂದು ಮನಸ್ಸಿನಲ್ಲಿ ಅಂದುಕೊಂಡು ಸುಮ್ಮನಾದೆ.

ಹತ್ತಿರದಲ್ಲಿಯೆ ಒಂದು ಹಳೆಯ ಆಲೆಯಮನೆ. ಅಲ್ಲಿ ನಮ್ಮಂಥವರು ಇನ್ನೂ ಅನೇಕರು ಸೇರಿದ್ದರು. ಎಲ್ಲರ ಮೈಮೇಲಿನ ಬಟ್ಟೆಗಳಿಂದಲೂ ನೀರು ಕೋಡಿ ಹರಿಯುತ್ತಿತ್ತು. ತಿಳುವಾದ ಬಟ್ಟೆಗಳನ್ನು ಹಾಕಿಕೊಂಡಿದ್ದ ನಮ್ಮವರ ಬಟ್ಟೆಗಳು ಮೈಗಳಿಗಂಟಿಕೊಂಡಿದ್ದವು; ರೈತರ ದುಪ್ಪಟಿಗಳೂ ಯಥಾಶಕ್ತಿ ಗಂಭೀರವಾಗಿ ಶ್ರೀಮಂತವೃತ್ತಿಯನ್ನೇ ಅವಲಂಬಿಸಿದ್ದವು. ಕರಿಯಬಟ್ಟೆಗಳನ್ನು ಉಟ್ಟಿದ್ದವರ ಬಟ್ಟೆಗಳು ಕೂಡ ಮಿಂಚಿನಲ್ಲಿ ಮಿನುಗತೊಡಗಿದವು; ಅಲ್ಲಲ್ಲೆ ಮೂಲೆಗಳನ್ನು ಸೇರಿಕೊಂಡಿದ್ದ ಮುದುಕರು

ಮೊಳಕಾಲುಗಳ ಮೇಲೆ ತಲೆಯಿಟ್ಟುಕೊಂಡು ಗಡಗಡ ನಡುಗುತ್ತಿದ್ದರು. ಕುದಿಪ್ರಾಯದವರಾದ ನಮ್ಮ ಹಲ್ಲುಗಳೂ ಚಳಿಯಿಂದ ಒಂದೊಂದು ಸಲ ಎಷ್ಟು ಹೇಳಿದರೂ ಕೇಳದೆ ಬಡಿದುಕೊಂಡು ಶಬ್ದಮಾಡುತ್ತಿದ್ದವು. ಎರಡು ಕೋಳಿಗಳು ನಾಲ್ಕು ಕುರಿಗಳು ಹತ್ತು ಕಬ್ಬಿನ ಜಲ್ಲೆಗಳು ನಮ್ಮಂಥ ಜನರು, ಅಲ್ಲಿ ಸೇರಿದ್ದವರು ; ಒಟ್ಟು ದೊಡ್ಡವರು, ಚಿಕ್ಕವರು, ಹೆಂಗಸರು, ಗಂಡಸರು, ಹಿಂದು ಮುಸಲ್ಮಾನರು ಎಲ್ಲರೂ ಸೇರಿ ೧೬ ಜನ ; ಎಲ್ಲಾ ಕೋಮಿನವರೂ ಎಲ್ಲರ ಪ್ರತಿನಿಧಿಗಳೂ ಅಲ್ಲಿ ಸೇರಿದ್ದಂತೆಯೇ ಆಯಿತು. ಒಟ್ಟು ಹದಿನಾರು ಜನರಿಗೆ ನಾವು ಬ್ರಾಹ್ಮಣರು ಐವರೇ ಇದ್ದುದರಿಂದ ನಮ್ಮ ಸಂಖ್ಯೆ ಹೆಚ್ಚೆಂದು ಯಾರೂ ಮೂದಲಿಸುವರು ಇರಲಿಲ್ಲ. ಮುಖ್ಯ ಭಗವದನುಗ್ರಹ.

ಒಂದು ಮಣ್ಣುಗದ್ದಿಗೆಯ ಮೇಲೆ ಇಬ್ಬರು ಮೂವರು ಕಂಬಳಿ ದುಪ್ಪಟಿಗಳನ್ನು ಹೆಗಲ ಮೇಲೆ ಹಾಕಿಕೊಂಡು ಒಂದೆರಡು ಕುಡುಗೋಲು ಗಳನ್ನು ಹತ್ತಿರವಿಟ್ಟುಕೊಂಡು ಕುಳಿತಿದ್ದರು. ಅವರಲ್ಲಿ ಇಬ್ಬರು ' ರೆಡ್ಡಿ ' ಗಳು. ಹೊಗೆಕಡ್ಡಿಯನ್ನು ತೀಡುತ್ತ ಒಬ್ಬನು, ಹೊಗೆಸೊಪ್ಪನ್ನು ಅಗಿಯುತ್ತ ಇನ್ನೊಬ್ಬನು ಜಡಭರತರಂತೆ ಕುಳಿತಿದ್ದರು. ಇನ್ನೊಬ್ಬನು ಸಾಬಿ. ಅವನೇ ಆ ಸಭೆಗೆ ನಾಯಕ. ಬಾಯಿತುಂಬ ಅಡಿಕೆ ಎಲೆಗಳನ್ನು ಹಾಕಿಕೊಂಡು ಅಗಿಯುತ್ತ ಆಗಾಗ್ಗೆ ಕಡ್ಡಿಪುಡಿಯನ್ನೂ, ಸುಣ್ಣ ಕಾಯಿಂದ ಸುಣ್ಣವನ್ನೂ ತೆಗೆದು ಸೇವಿಸುತ್ತ ತನ್ನ ತನುಗಾಂತಿಗಿಂತಲೂ ಹೆಚ್ಚು ಕರಾಳವಾದ ದೀರ್ಘವಾದ ದಾಡಿಯನ್ನು ನೀವಿಕೊಳ್ಳುತ್ತ, ಒಂದೊಂದು ಸಲ ಅದನ್ನು ಮೇಲೆತ್ತಿ ಚಪ್ಪರಿಸುತ್ತ, ವಿಚಿತ್ರ ವಿಚಿತ್ರವಾದ ತಮಾಷೆಗಳನ್ನು ಮಾಡಿಕೊಂಡು ಕುಳಿತಿದ್ದನು. ಅವನು ಬುದ್ಧಿವಂತ ; ಮಳೆಗೆ ಸಿಕ್ಕಿರಲಿಲ್ಲ. ಆಮಾತು ಈಮಾತುಗಳನ್ನು ಆಡಿಯಾದ ಮೇಲೆ ಯಾರೋ ತಿಪ್ಪಾರೆಡ್ಡಿಯೆಂಬುವನನ್ನು ಆ ಹಿಂದಿನ ದಿನ ಅಲ್ಲಿ ಹೇಗೆ " ನರಿಕಿ " ಹಾಕಿ ಬಿಟ್ಟರೆಂಬುವ ಪ್ರಸಂಗಕ್ಕೆ ಷುರುವಾಗುವುದರೊಳ

ಗಾಗಿ ಮಳೆಯ ಜೋರು ಸ್ವಲ್ಪ ಕಡಿಮೆಯಾಯಿತು. ನಾವು ಅಲ್ಲಿಂದ ಹೊರಗೆ ಹೊರಟು ದಾರಿಗೆ ಬಂದೆವು. ಹನಿಯುತ್ತ ಬಸಿಯುತ್ತ ನಡೆದೆವು. ಮುಸ್ಸಂಜೆಯ ಮಬ್ಬೂ ಮೋಡಗಳ ಮೇಲ್ಕಪ್ಪೂ ಸೇರಿಕೊಂಡು ಎಲ್ಲವೂ ಅಂಧಕಾರಮಯವಾಯಿತು. "ಇಷ್ಟು ಹೊತ್ತಿನಮೇಲೆ ಈ ಕತ್ತಲಿನಲ್ಲಿ ಇನ್ನು ಆರುಮೈಲಿ ಯಾರಪ್ಪ ಆ ದಾರಿಯಲ್ಲಿ ನಡೆಯುವರು. ಇಲ್ಲಿಯೇ ರಾತ್ರಿಯನ್ನು ಹೇಗೋ ಹಾಗೆ ಕಳೆದುಕೊಂಡು ಬೆಳಗಾಗುತ್ತಲೆ ಹೊರಡೋಣ ಬೇಕಾದರೆ ಎಂದರು ರಾಯರು." ಅವರಿಗೆ ದೂರ ನಡೆಯುವ ಅಭ್ಯಾಸವಿಲ್ಲ. ಸಾಮಾನ್ಯವಾಗಿ ಬಹು ನಿಧಾನವಾಗಿ ನಡೆದು ಬೇರೆ ಅಭ್ಯಾಸ. ಅಲ್ಲದೆ ದಾರಿಯೂ ಸ್ವಲ್ಪ ಕಷ್ಟವೇನೆ. ಭೀತಿ ಬೇರೆ. ಆದರೆ ಒಬ್ಬರ ಮೇಲೂ ಒಂದು ಬಿಟ್ಟರೆ ಮತ್ತೊಂದು ಬಟ್ಟೆ ಇಲ್ಲ. ಇರುವುದೂ ಒದ್ದೆ. ಹೊಟ್ಟೆಯಲ್ಲಿ "ಅಸಾಧ್ಯ" ಹಸಿವು. ಎಷ್ಟೇ ಹೊತ್ತಾಗಲಿ ಗೂಡು ಸೇರಿಕೊಂಡರೆ ಊಟಮಾಡಿ ಬೆಚ್ಚಗೆ ಅವರವರ ಹಾಸುಗೆಗಳಲ್ಲಿ ಮಲಗಬಹುದು. ರಾಯರ ಮಾತು ನಡೆಯಲಿಲ್ಲ. ಅವರೂ ಬಹು ಜನಮತಕ್ಕೆ ತಲೆಬಾಗಿಸಬೇಕಾಯಿತು. ಸಂಸ್ಥಾನದ ರಾಜಬೀದಿಯಲ್ಲಿದ್ದ ಮೂರು ದೊಡ್ಡ ಅಂಗಡಿಗಳಿಗೂ ಹೋಗಿ ವಿಚಾರಿಸಿದೆವು. ಒಂದೊಂದಕ್ಕೆ ನಾಲ್ಕಾಣೆ ಕೊಡುವೆವೆಂದೆವು; ಒಂದು ಮೇಣದ ಬತ್ತಿ ಕೂಡ ದೊರೆಯಲಿಲ್ಲ. 'ಇನ್ನೇನು ಮಾಡುವುದು—ನಡೆಯಿರಿ ಜಾಗ್ರತೆ ಹೋಗೋಣ. ನದಿಯ ದಂಡೆಯಿಂದ ಅಂಬಿಗರೂ ಹೊರಟು ಹೋದಾರು.' ಎಂದರು ಯಜಮಾನರು. ಹತ್ತುಮಾರು ಹೋಗುವುದರೊಳಗಾಗಿ ಆನೆಗೊಂದಿರಾಜ್ಯದ ಸುಂಕದ ಅಧಿಕಾರಿಗಳು ತಮ್ಮ ದುಡ್ಡಿನಪೆಟ್ಟಿಗೆಯನ್ನು ಎತ್ತಿಕೊಂಡು ಎದುರಿಗೆ ಬರುತ್ತಿರುವುದು ಕಂಡಿತು. ಅವರನ್ನು ನಾನಾ ವಿಧವಾಗಿ ವಿನಯದಿಂದ ಬೇಡಿಕೊಂಡು ಉಪಶಾಂತಿಯನ್ನು ಮಾಡಲೊಪ್ಪಿದೆವು. ೧೦ ನಿಮಿಷಗಳಲ್ಲಿ ಬರುವೆವು ನಡೆಯಿರೆಂದು ಅವರು ಊರೊಳಕ್ಕೆ ಹೋದರು. ಆದರೆ ಪಾಪ! ಏನು ತೊಂದರೆ ಸಂಭವಿಸಿತೊ ಅವರು

ಪುನಃ ಬರಲಿಲ್ಲ. ಆದರೂ ನಮ್ಮ ಪ್ರಯಾಣದ ವಿಚಾರವನ್ನು ಅಧಿಕಾರಿಗಳ ತಿಳಿವಳಿಕೆಗೆ ತಂದು ಅವರ ಅನುಮತಿ ಪಡೆದಿರುವೆವಲ್ಲ ಎಂದು ಮನಸ್ಸು ನಿರ್ಮಲಮಾಡಿಕೊಂಡು ದಡಕ್ಕೆ ಹೋಗಿ ಸೇರಿದೆವು. ಪ್ರಯಾಣಕ್ಕೆ ಅವರಿಂದ ತೊಂದರೆಯೇನೂ ಬರುವ ಸಂಭವವಿರಲಿಲ್ಲ. ಆದರೆ ಅಂಬಿಗರಾರೂ ಅಲ್ಲಿ ಇರಲಿಲ್ಲ. ಎಲ್ಲರೂ ಆಚೆದಡಕ್ಕೆ ಹೊರಟುಹೋಗಿದ್ದರು. ಆಚೆ, ದೂರದಲ್ಲಿ ಅವರ ಮನೆ. ಕೆಲವರು ಬೆಂಕಿಹೊತ್ತಿಸಿಕೊಂಡು ತಮಟೆ ಬಡಿದುಕೊಂಡು ಕುಣಿಯುವುದಕ್ಕೆ ಷುರುಮಾಡಿದ್ದಂತೆ ಕಂಡುಬಂದಿತು. ಗಟ್ಟಿಯಾಗಿ ಕೂಗಿಕೊಂಡೆವು. ಮೊದಲು, ಒಬ್ಬೊಬ್ಬರಾಗಿ ಆಮೇಲೆ ಎಲ್ಲರೂ ಒಟ್ಟಿಗೆ ಕೂಗಿದೆವು. ಗಂಟಲು ಶಕ್ತಿಯನ್ನೆಲ್ಲ ವೆಚ್ಚಮಾಡಿದೆವು. ಇನಾಮು ಕೊಡುತ್ತೇವಯ್ಯ ಬನ್ನಿ ಎಂದು ಕೂಗಿದೆವು. ಆ ಮೋಹಿನೀ ಮಂತ್ರದ ಉಚ್ಚಾರ ಮಾತ್ರದಿಂದಲೇ ಕೊನೆಗೆ ಹರಿಗೋಲಿನವನು ಒಬ್ಬನು ನಮ್ಮತ್ತ ಹರಿಗೋಲನ್ನು ನಡೆಸಿಕೊಂಡು ಬಂದು ನಮ್ಮನ್ನು ಆ ದಡಕ್ಕೆ ಸಾಗಿಸಿಕೊಂಡು ಹೋದನು. ಅಂಬಿಗನು ಆಗ ಮಾಡಿದುದು ನಮಗೆ ಮಹದುಪಕಾರವೆಂದೇ ಭಾವಿಸಬೇಕು. ಆರುವರೆ ಗಂಟೆಯಾಗಿ ಸುಂಕದ ಅಧಿಕಾರಿಗಳು ಹೊರಟುಹೋದಮೇಲೆ ಅಂಬಿಗರು ಹರಿಗೋಲು ನಡೆಸಕೂಡದೆಂಬುದು ಸಂಸ್ಥಾನದವರ ಕಟ್ಟಾಜ್ಞೆ. ಅವನಂತೂ ಇನಾಮಿನ ಹೆಸರು ಕೇಳಿ ಧೈರ್ಯಮಾಡಿದ್ದನು.

ಹರಿಗೋಲಿಳಿದು "ಚೆನ್ನಯ್ಯ; ಮುಂದೆ ನಡಿಯಪ್ಪ, ದಾರಿತೋರಿಸು" ಎಂದು ಹೇಳಿ ಅವನನ್ನು ಹಿಂಬಾಲಿಸಿದೆವು. ಕತ್ತಲಿನಲ್ಲಿ, ಒಂದೊಂದು ಸಲ, ಮುಂದೆ ಹೋಗುತ್ತಿರುವ ಅವನೂ ದಾರಿ ಕಾಣಿಸದಾಗುತ್ತಿತ್ತು. ಆಗ ಅವನು ಸೇದುತ್ತಿದ್ದ ಬೀಡಿಯ ಬೆಳಕೇ ನಮಗೆ ಮಾರ್ಗದರ್ಶಿ. ಮನೆ ಸೇರುವ ಆತುರ; ದಾರಿಯ ಹೆದರಿಕೆ; ಭೀರುಮನಸ್ಸು; ಮಳೆ, ಕತ್ತಲು; ಭಯಗಳ ಉದ್ವೇಗವು ಮನಸ್ಸಿನಲ್ಲಿ ಪ್ರಬಲವಾದ ಅಧಿಕಾರವನ್ನು ಹೂಡಿಬಿಟ್ಟಿತ್ತು. ಅದೇ ದಾರಿಯಲ್ಲಿ ೨-೩ ಗಂಟೆಗಳಿಗೆ ಹಿಂದೆ ತಾನೇ

ಅನೇಕ ಸೌಂದರ್ಯಗಳನ್ನು ನೋಡಿಕೊಂಡು ಶ್ಲಾಘಿಸುತ್ತ, ಆನಂದ ಪಡುತ್ತ ಹೋಗಿದ್ದೆವು; ಐತಿಹಾಸಿಕ ಸಂಗತಿಗಳನ್ನು ನೆನಪಿಗೆ ತಂದು ಕೊಳ್ಳುತ್ತ, ಅನೇಕ ಹಳೆಯ ಸನ್ನಿವೇಶಗಳನ್ನು ಮನಸ್ಸಿನಲ್ಲಿ ಕಲ್ಪಿಸಿ ಕೊಳ್ಳುತ್ತ, ಹೆಜ್ಜೆಹೆಜ್ಜೆಗೂ ಹೊಸ ನೋಟಗಳನ್ನು ನೋಡುತ್ತ, ವ್ಯಾಖ್ಯಾನಮಾಡುತ್ತ, ಹೋದವರ ಸುತ್ತಲೂ, ಹೊರಗೂ ಒಳಗೂ ಈಗ ಭಯ ಅಂಧಕಾರ ಇವು ಮಾತ್ರವೇ ತುಂಬಿಕೊಂಡು ಇತರ ಭಾವನೆ ಕಲ್ಪನೆಗಳೆಲ್ಲ ಎಲ್ಲಿಯೋ ಮಾಯವಾಗಿದ್ದುವು. ಚೆನ್ನಯ್ಯನು ಎಷ್ಟು ಧೈರ್ಯ ಹೇಳಿದರೆ ತಾನೇ ಏನು ? ಕಣ್ಣು ಕಾಣದ ದೇಶ ; ಕಣ್ಣು ಮನ ಸ್ಸುಗಳು ಓಡದ ಸಮಯ ; ಕಳ್ಳಕಾಕರ ಭೀತಿ, ಸ್ವಲ್ಪ ಈಚೆ ಆಚೆ ಸುಳಿ ದರೆ ಎಡವಿಬೀಳುವ, ಮೈ ತರಚಿಹೋಗುವ, ಕೈಕಾಲು ಮುರಿಯುವ ಸಂಭವ. ಮಿಂಚಿನ ಬೆಳಕು ಬೆಳಗಿದರೆ ಮಾತ್ರ ದಿಕ್ಕೂ ದೆಶೆ ಕಾಣುವುವು. ಆ ಬೆಳಕೊ ಎಷ್ಟು ಭಯಂಕರ ! ಅಕ್ಕಪಕ್ಕದಲ್ಲಿದ್ದು ಮಿಂಚಿನಲ್ಲಿ ಬೆಳಗಿದ ಕೋಡುಗಲ್ಲುಗಳು ಕಟಬಾಯ್ಗಳನ್ನು ತೆರೆದುಕೊಂಡಿರುವ ಮೊಸಳೆಗಳಂತೆ ಕಾಣುವುವು. ಒಣಗಿ ನಿಂತಿದ್ದ ಬೋಳುಮರಗಳನ್ನು ನೋಡಿದರೆ ತೋಳು ಗಳನ್ನು ಹೊರಚಾಚಿ ನಿಂತಿರುವ ಭೂತಗಳಂತೆ ಇರುವುವು.

"ಇಂಥ ಸಮಯಗಳಲ್ಲಿ ಒಂದೊಂದು ಪಿಸ್ತೂಲು ಹತ್ತಿರವಿದ್ದರೆ ಎಷ್ಟೋ ಅನುಕೂಲ" ಎಂದರು ಯಜಮಾನರು. ನಿಶ್ಚಯ ; ನಮಗೆ ಪಿಸ್ತೂಲುಗಳ ಜ್ಞಾಪಕಕೂಡ ಬರತಕ್ಕದ್ದು ಇಂಥ ಸಮಯಗಳಲ್ಲಿಯೆ. ಆದರೆ ಪಿಸ್ತೂಲುಗಳನ್ನು ಇಟ್ಟುಕೊಳ್ಳುವುದು ಹೇಗೆ ? ಅವಕ್ಕೆ ಹತ್ತಾರು ರೂಪಾಯಿಗಳನ್ನು ಖರ್ಚುಮಾಡಿ ಮೇಲೆ ಮೇಲೆ ತೋಟೆಗಳನ್ನು ಕೊಳ್ಳು ತ್ತಲೇ ಇರಬೇಕು. ಅವನ್ನು ಹಿಡಿದು ಉಪಯೋಗಿಸುವ ಯೋಗ್ಯತೆ ತಾನೆ ನಮಗೆಲ್ಲರಿಗೂ ಎಲ್ಲಿಂದ ಬರಬೇಕು ? ಎಲ್ಲರಿಗೂ ಲೈಸೆನ್ಸು ಯಾರು ಕೊಡುವವರು ? ದೇವರು ದೊಡ್ಡಮನಸ್ಸುಮಾಡಿ ನಮಗೆ ಬ್ರಿಟಿಷ್ ಸರ ಕಾರದವರ ಆಶ್ರಯವನ್ನಾದರೂ ಕರುಣಿಸಿರುವುದರಿಂದ ನಮ್ಮ ದೇಶದಲ್ಲಿ

ಸುಖಶಾಂತಿಗಳು ನೆಲೆಸಿ ನಮ್ಮ ದೇಹ ರಕ್ಷಣಾಕಾರ್ಯವಾದರೂ ಸರಿಯಾಗಿಯೋ ತಪ್ಪಾಗಿಯೋ ಇಷ್ಟುಮಟ್ಟಿಗಾದರೂ ನಡೆಯುತ್ತಿದೆ. ಇಲ್ಲದಿದ್ದರೆ ನಮ್ಮ ಗತಿ ಏನು ? ನಮ್ಮನ್ನು ರಕ್ಷಿಸುವ ಕಾರ್ಯವು ಅವರ ತಲೆಯ ಮೇಲೆ ಬಿದ್ದಿರುವ ಭಾರ ; ಅವರ ತಲೆಬುರುಡೆಗಳು ಗಟ್ಟಿಯಾಗಿರುವತನಕ ನಮಗೆ ಸುತರಾಂ ಭಯವಿಲ್ಲ. ಎಲ್ಲಿದ್ದರೂ ಎಲ್ಲಿ ಹೋದರೂ ಭಯವಿಲ್ಲ ; " ಭಯವಿಲ್ಲ ನಡೆಯಿರಿ, ಸಾರ್, ಏನು ಹೆದರಿಕೆ ಬಂದದ್ದು, ನಾವು ಆರು ಜನ ಒಟ್ಟಿಗೆ ಇದ್ದೇವೆ " ಎಂದೆ ನಾನು.

" ಆರು ಜನ ಇದ್ದರೂ ಒಂದೆ, ಅರವತ್ತು ಜನ ಇದ್ದರೂ ಒಂದೆ " ನಿನ್ನೆ ರಾತ್ರಿ ನೋಡಿದಿರೊ ಇಲ್ಲವೊ ! ಎಂದು ಉತ್ತರ ಬಂದುಬಿಟ್ಟಿತು. ನನ್ನ ಶೌರ್ಯದ ಪ್ರತಾಪವು ಅಡಗಿಹೋಯಿತು. ದೊಡ್ಡವರು ಅರವತ್ತು ವರುಷಗಳ ಅನುಭವದಿಂದ ಹೇಳುವ ಮಾತು ಅಸತ್ಯವಲ್ಲವೆಂದು ಬೇರೆ ನಮಗೆ ಸಿದ್ಧಾಂತ. ಅವರು ಹೇಳಿದ್ದೂ ನಿಶ್ಚಯವೇಯೆ.

ಮೂರ್ತಿ—ಓಹೋ ಶ್ರೀಕಂಠಯ್ಯನವರೂ ನಾನೂ ಇರುವಾಗ ನಿಮಗೆಲ್ಲ ಭಯವೇಕೆ ? ನನಗೆ ದೊಣ್ಣೆ, ಪಿಸ್ತೂಲ್, ಜುಜಿಟ್ಸು ಎಲ್ಲ ಅಭ್ಯಾಸವಿದೆ. ಹುಳುಹುಪ್ಪಟೆ ಏನು ಮಾಡ್ಯಾವು ? ತಂಟೆಖೋರರು ಬಂದರೆ ಶ್ರೀಕಂಠಯ್ಯ ಒಬ್ಬರು ಸಾಲದೆ ? ಅವತ್ತು ದೇವರಾಯನ ದುರ್ಗದ ದಾರಿಯಲ್ಲಿ ನೋಡಿದಿರೊ ಇಲ್ಲವೊ ? ಹುಳುಹುಪ್ಪಟೆ ಹೆದರಿಸುವುದಕ್ಕೆ ದಾರಿಯಲ್ಲಿ ಎಲ್ಲರೂ ಕೈಚಪ್ಪಾಳೆ ಹೊಡೆದುಕೊಂಡು ಆ ರಾತ್ರಿ ಹೋದ ಹಾಗೆ ಈಗಲೂ ಹೋಗೋಣ ನಡೀರಿ. " ಎಂದು ಕೈಚಪ್ಪಾಳೆ ಹೊಡೆಯುವುದಕ್ಕೆ ಮೊದಲು ಮಾಡಿದರು.

ನನಗೆ ರೇಗಿತು. ಮೂರ್ತಿ ನನ್ನನ್ನು ಹೀಗೆ ಅಲ್ಲಗಳೆದದ್ದು ನನಗೆ ಸಹಿಸಲಿಲ್ಲ. ಧೈರ್ಯಕ್ಕೂ ಶಕ್ತಿಗೂ ಆಳು ದಪ್ಪ ದಪ್ಪಗೆ ಉದ್ದುದ್ದಕ್ಕೆ ಆಕಾರ ಇದ್ದು ನೂರ ಐವತ್ತು ಪೌಂಡು ತೂಕ ಇದ್ದುಬಿಟ್ಟರೆ ಮಾತ್ರಕ್ಕೆ ಸಾಕೆ ? ಹೊರಗೆ ನಿಸ್ಸಾರವಾಗಿ ತೂಕವಿಲ್ಲದೆ ಕಂಡಮಾತ್ರಕ್ಕೇನೆ ನಮ್ಮಲ್ಲಿ

ಧೈರ್ಯವೂ, ಶಕ್ತಿಯೂ ಇರಕೂಡದೆ? ಲೇವಡಿ ಮಾಡುವುದಕ್ಕೆ ಏನು ಖರ್ಚಾಗಬೇಕು ಹೇಳಿ. ಯಾರು ಮಾಡುವುದಕ್ಕಾಗುವುದಿಲ್ಲ? ನಾಳೆ ವೈಕುಂಠದಿಂದ ವಿಷ್ಣುವೇ ಎದುರಿಗೆ ಬಂದು ನಿಂತರೂ ಅರ್ಧಗಂಟೆಯ ಕಾಲದಲ್ಲಿ ಅವನನ್ನು ಲೇವಡಿಮಾಡಿ ಪುನಃ ಸ್ವಸ್ಥಾನಕ್ಕೆ ಓಡಿಸಿಬಿಡುವುದು ಕಷ್ಟವೇನೊ ಮಹಾ; ನಾನು ಲೇವಡಿಮಾಡಲಾರೆನೊ! ಅಂದುಕೊಂಡೆ. ಒಂದು ಸಂಗತಿ ಮಾತ್ರ ಹೇಳಿಕೊಳ್ಳಲೇ ಬೇಕು, ಆದರೆ. ನನ್ನಲ್ಲಿ ಶಕ್ತಿ ಧೈರ್ಯಗಳಿಗೇನೂ ಕಡಿಮೆಯಿಲ್ಲವಾದರೂ ಅವಕ್ಕಿಂತಲೂ ಸ್ವಾಭಿಮಾನ ಹೆಚ್ಚು. ಪ್ರಪಂಚದಲ್ಲಿ ಸುಮಾರು ಎಲ್ಲರೂ ಹಾಗೆಯೆ ಎಂದು ನನ್ನ ಭಾವನೆ. ಕೆಲವರು ಅದನ್ನು ಹೊರಗೆ ತೋರಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಅದನ್ನು ಒಳಗೇ ದಮನಮಾಡಿಟ್ಟುಕೊಂಡಿರುತ್ತಾರೆ ಇಷ್ಟೇ ಜನರಲ್ಲಿ ವ್ಯತ್ಯಾಸ. 'ನೀನು ಹೇಡಿ' ಎಂದು ಹೇಳಿದರೆ ಕೋಪಿಸಿಕೊಳ್ಳದ ನರಾಧಮನೂ, 'ನೀನು ಧೀರ' ನೆಂದರೆ ಹಿಗ್ಗದ ನರನೂ ಈ ಪ್ರಪಂಚ ದಲ್ಲಿ ಇಲ್ಲವೆಂದೇ ನನ್ನ ಅಭಿಪ್ರಾಯ. ಅಂತು ನಾನೇನೊ ಬಹಳ ಹುರು ಡಿನಿಂದ ಮುಂದೆ ಮುಂದೆ ನಡೆಯತೊಡಗಿದೆ. ಸ್ವಲ್ಪಹೊತ್ತು ಹಾಗೆಯೇ ನಡೆದದ್ದಾಯಿತು. ಆದರೆ ನನ್ನ ಹೆಜ್ಜೆ ಮಾತ್ರ ನಿಸ್ಸಂಕೋಚವಾಗಿ ಹೆಚ್ಚು ಹೆಚ್ಚು ಭಾರವಾಯಿತು. ಕ್ರಮವಾಗಿ ಹಿಂದೇಟು ಹಾಕತೊಡ ಗಿತು. ಎಷ್ಟೋ ವಿಧವಾಗಿ ಪಾದಗಳಿಗೆ ನಾನು ಬುದ್ಧಿ ಹೇಳಿಕೊಟ್ಟೆ. ಸಮಯಾಸಮಯ ಪರಿಜ್ಞಾನವಿಲ್ಲದೆ ನನ್ನನ್ನು ಅವಮಾನಕ್ಕೆ ಗುರಿ ಮಾಡಿಸಬೇಕೆಂಬ ಅಭಿಲಾಷೆ ಅವಕ್ಕಿದ್ದರೆ ನಾನು ಏನನ್ನು ತಾನೆ ಮಾಡು ವುದಕ್ಕಾದೀತು? ಸಾಂದ್ರವಾಗಿ ಕವಿದ ಕತ್ತಲು ಸುತ್ತಲೂ ಮುತ್ತಿದ್ದು ದರಿಂದ ಯಾರೂ ನನ್ನ ಆಗಿನ ದುರವಸ್ಥೆಯನ್ನು ನೋಡಿ ನಗುವಹಾಗಿರ ಲಿಲ್ಲ. ಮೂರ್ತಿ ಇಂಥ ವಿಷಯಗಳಲ್ಲಿ ಬಾಯಿಗೆ ಬೀಗ ಹಾಕಿ ಅದನ್ನು ಬಿಗಿಹಿಡಿಯುವ ಅಭ್ಯಾಸವನ್ನೇ ಕಲಿತಿಲ್ಲ. ಪಾಪ, ಮನುಷ್ಯರ ಮನಸ್ಸನ್ನು ಏಕೆ ನೋಯಿಸಬೇಕೆಂದು ಕೂಡ ಅವರಿಗೆ ಲೆಕ್ಕವಿಲ್ಲ. ಕನಿಕರವಿಲ್ಲ.

“ ಎಲ್ಲರ ಜೊತೇಲೆ ಬನ್ರಿ, ಮಹರಾಯರಾ, ಸುರಕ್ಷಿತವಾಗಿ ಊರು ಸೇರಿಕೊಳ್ಳೋಣ. ಎಲ್ಲಾದರೂ ಬಿದ್ದು ಕಾಲು ಗೀಲು ಮುರಿದುಕೊಂಡು ಲಂಗಡೇ ಆಗೀರಿ ! ’’ ಎಂದರು. ಅದೇ ಸಮಯ ! . . . ಆದರೂ ಅವರ ಉದ್ಯಮಕಂಟಕತನದ ವಿಚಾರವಾಗಿ ಅವರಿಗೆ ಕೇಳಿಸುವಂತೆ ಗೊಣಗಾಡಿ ಕೊಳ್ಳುತ್ತ ಎಲ್ಲರ ಜೊತೆಗೇ ನಡೆಯ ತೊಡಗಿದೆ. ನಮ್ಮಲ್ಲಿ ಯಾರಿಗೂ ಮಾತನಾಡಬೇಕು ಎಂದು ಕೂಡ ಅನ್ನಿಸಲಿಲ್ಲ. ಮಾತೂ ಭಾವಗಳೂ ತಾಮಸೀವೃತ್ತಿಯ ಮನಸ್ಸಿನ ಆ ಅರೆಮಬ್ಬಿನಲ್ಲಿ ಎಲ್ಲಿಯೋ ಅಡಗಿ ಹೋಗಿಬಿಟ್ಟಿದ್ದವು. ಕಣ್ಣಿಗೆ ಕಾಣದೆ, ಸುಲಭವಾಗಿ ಮನಸ್ಸಿನ ವಿಭಜನ ವಿಶ್ಲೇಷಗಳಿಗೆ ಸಿಕ್ಕದ ಯಾವುದೋ ಒಂದು ಶಕ್ತಿಯು ಹೃದಯ ವನ್ನೂ ಮನಸ್ಸನ್ನೂ, ದುಸ್ಸ್ವಪ್ನಸಮಯಗಳಲ್ಲಾಗುವಂತೆ, ಮೇಲೆಮೇಲೆ ಅದುಮುತ್ತಿತ್ತು.

“ ಈಗ ಎಲ್ಲಿದ್ದೇವಯ್ಯ, ಚೆನ್ನಯ್ಯ ? ’’ ಎಂದರು ರಾಯರು. ಅವನು, “ ಆಗ ತೋರಿಸಿದೆನಲ್ಲ ಸ್ವಾಮಿ, ಸೀತಾಮ್ಮನೋರು ಒಡವೆ ಬಿಸಾಕಿದ ಸ್ಥಳ ಎಂದು, ಅಲ್ಲಿಗೆ ಬಂದಿದ್ದೇವೆ ’’ ಎಂದನು. ತಲೆಯ ಮೇಲೆ ಮೋಡ, ಗುಡುಗು, ಮಿಂಚು ಇವು ತಮಗೆ ಬೇಕಾದಂತೆ ಸಂಚರಿ ಸುತ್ತ ಭಯಂಕರವಾಗಿದ್ದುವೆಂದು ಹಿಂದೆಯೇ ಹೇಳಿರುವೆನಷ್ಟೆ. ಈಗ ಹೃದಯ ವಿದ್ರಾವಕವಾಗಿ ದೇಹಪಂಜರದ ಕೀಲುಗಳು ಕಳಚಿ ಪುಡಿ ಪುಡಿ ಯಾಗುವುವೊ ಎಂಬಂತೆ ಎದುರಿನಿಂದ ಆರ್ಭಟಿಸಿ ಬಂದು ಸಿಡಿಲು ಹೆದರಿ ಸಿತು. ಮೇಲೆ ನಾವು ನಡೆದು ಹೋಗುತ್ತಿರುವಾಗ, ಕಾಲ್ಕೆಳಗಿನ ಭೂಮಿ ಯು ಕಂಪಿಸಿ ಆ ಕಂಪನ ರಭಸವು ನಮ್ಮೆಲ್ಲರನ್ನೂ ೫೦೦ ಅಡಿ ಮೇಲಕ್ಕೆ ಎತ್ತಿಹಾಕಿಬಿಟ್ಟಿದ್ದರೆ ನಮ್ಮ ಆತ್ಮವು ಹೇಗೆ ತಲ್ಲಣಿಸಿ ಹೋಗುತ್ತಿತ್ತೊ ಅದಕ್ಕಿಂತಲೂ ಹತ್ತರಷ್ಟು ಪ್ರಬಲವಾದ ತಲ್ಲಣವು ಉಂಟಾಯಿತು. ಅದು ಸುತ್ತಲಪ್ರದೇಶವನ್ನು ಹತ್ತಿಸಿ ಉರಿಸಿ ತನ್ನ ವಿದ್ಯುನ್ಮೊನೆ ರೌದ್ರ ಗಳಿಂದ ತಿವಿದುಕೊಂಡು ಹೋಗುವುದನ್ನು ಆ ಸನ್ನಿವೇಶದಲ್ಲಿ ಅನುಭವಿಸ

ಬೇಕು ! ಆಗ ಅದು ಎಂಥುದೆಂಬುದು ತಿಳಿಯುವುದು. ಅದರ ಚಿತ್ರವನ್ನಾಗಲಿ ಆಗಿನ ನಮ್ಮ ಮನೋಭಾವವನ್ನಾಗಲಿ ಲೇಖಿನಿಯ ವರ್ಣನೆಯಿಂದ ವರ್ಣಿಸುವುದು ಹೇಗೆ ಸಾಧ್ಯ ? ತಕ್ಷಣದಲ್ಲಿಯೇ ನಾಲ್ಕಾರು ಹಸಿ ಹಸುರು ತಾಳೇಮರಗಳು ಭಗ್ಗನೆ ಹತ್ತಿಕೊಂಡು ಬೆಳ್ಳಗೆ ಸೂರ್ಯಕಾಂತಿಯಂತಿರುವ ಕಾಂತಿಯಿಂದ ಬೆಳಗಿ ಉರಿದವು. ಒಂದು ನೂರು ವಾಷಿಂಗ್ ಟನ್ ದೀಪಗಳ ಕಾಂತಿಯು ಒಂದೇ ದೀಪದಲ್ಲಿ ಒಂದೇ ಕಡೆ ಏಕಾಗ್ರದಲ್ಲಿ ಉರಿಯುತ್ತಿದ್ದರೆ ಆ ಬೆಳ್ಳುರಿಯು ಯಾವ ರೀತಿ ಇರಬಹುದೊ ಆ ರೀತಿ ಇತ್ತು. ಬೆಳ್ಳುರಿಯು ನಿಂತು, ಮೇಲಿಂದ ಕಿಡಿಗಳುದುರಿ, ಉರಿಯು ಕೆಂಪು ತಿರುಗುವುದಕ್ಕೆ ಹತ್ತುನಿಮಿಷಗಳು ಹಿಡಿಯಿತು. ಅಬ್ಬಾ ! ಏನು ದೃಶ್ಯವದು ! ಆಗ ಉಂಟಾದ ನರಗಳ ಕಂಪನವು ಆಮೇಲೆ ಸುಮಾರು ಅರ್ಧಗಂಟೆಯವರೆಗೂ ನಾಳನಾಳದಲ್ಲಿಯೂ ಚರ್ಮಕೂಪಗಳಲ್ಲಿಯೂ ಸೇರಿಕೊಂಡು ಮೈಯನ್ನು ನಡುಗಿಸಿತು. ಅಂಥುದನ್ನು ಹಿಂದೆ ಎಂದೂ ಅನುಭವಿಸಿರಲಿಲ್ಲ ; ಮುಂದೆಯೂ ಅನುಭವಿಸಲಾರೆವೆಂದು ಹೇಳಬಹುದು.

ದಾರಿಯು ಹೋಗುಹೋಗುತ್ತ ಭಾರಿಯಾದ ಎರಡು ಕಲ್ಲುಬಂಡೆಗಳ ನಡುವೆ ಹೊರಟಿತು. ಸುಮಾರು ೧೦-೧೫ ಗಜಗಳ ದೂರದವರೆಗೂ ಈ ಸುರಂಗದಂತಿರುವ ದಾರಿ. ನಮ್ಮ ಹತ್ತಿರ ದೀಪವಿಲ್ಲ. ಮುಂದೆ ಕಣ್ಣು ಕಾಣಿಸದು ; ಬೆಂಕಿಯ ಪೆಟ್ಟಿಗೆಯಲ್ಲಿದ್ದ ಕಡ್ಡಿಗಳನ್ನೆಲ್ಲ ಹಚ್ಚಿಯಾಯಿತು; ಅವು ಹೇಳಿ, ನಿರ್ಭಾಗ್ಯರಾದ ನಮ್ಮ ಕಾಲದವರ ದೀಪದ ಕಡ್ಡಿಗಳು ; ಏನು ಮಾಡಿದರೂ ಹತ್ತಿಕೊಳ್ಳವು. ಕತ್ತಲನ್ನು ಓಡಿಸಿಕೊಂಡು ಮುಖವನ್ನು ಅಪ್ಪಳಿಸಿಕೊಂಡು ಮೇಲೆ ಬರುತ್ತಿರುವ ಚಂಡವಾಯು ಬೇರೆ. ಬಹಳ ಹೊತ್ತು, ಡವಡವನೆಂದು ನಿಮಿಷಕ್ಕೆ ೧೫೦ ಕ್ಕೆ ಮೀರಿದಂತೆ ಧ್ವನಿಮಾಡಿ, ಹರಿಕಥೆ ದಾಸರ ತಾಳದಂತೆ ಹೊಡೆದುಕೊಳ್ಳುತ್ತಿದ್ದ ಎದೆಯ ಸ್ಥಿತಿ ; ಒದ್ದೆ ಚಳಿಗಳಿಂದ ಮೈ ನಡುಕ ; ಹಲ್ಲುಗಳ ಕಟಕಟ ಶಬ್ದ ; ಅವುಗಳನ್ನು ಈ ಜೀವವಿರುವವರೆಗೂ ಮರೆಯುವ ಹಾಗಿಲ್ಲ. ಚೆನ್ನಯ್ಯನು

ತನ್ನ ಕಿವಿಯಮೇಲೆ ಸಿಕ್ಕಿಸಿಕೊಂಡಿದ್ದ ಕೊನೇ ಬೀಡಿಯನ್ನು ತೆಗೆದು ಹತ್ತಿಸಿದನು. ಅವನ ಬೀಡಿಗಳು ನಮಗೆ ಮಾಡಿದ ಉಪಕಾರವನ್ನು ಮಾತಿನಲ್ಲಿ ಹೇಳಲು ಅಳವಲ್ಲ. ಅವಕ್ಕೆ,—ವಿಶೇಷವಾಗಿ ಆ ಕೊನೆಯ ಬೀಡೀಗೆ ಎಷ್ಟು ಧನ್ಯವಾದಗಳನ್ನು ಸಮರ್ಪಿಸಿದರೂ ಸಾಲದು. ಯಜಮಾನರ ಮನಸ್ಸಿಗೂ ಕೂಡ ಅವುಗಳ ವಿಷಯದಲ್ಲಿ ಗೌರವ ಹುಟ್ಟಿತೆಂದರೆ ಇನ್ನು ಅದಕ್ಕೆ ಮೇಲಾಗಿ ನಾವ್ಯಾರು ಏನನ್ನು ತಾನೇ ಹೇಳಬಹುದು? ಒಬ್ಬರಿಗಿಂತ ಹೆಚ್ಚು ಜನರು ಅಡ್ಡಡ್ಡಲಾಗಿ ಅಲ್ಲಿ ಹೋಗಲು ಆಗದು. ಒಬ್ಬರ ಹಿಂದೊಬ್ಬರು ಜೀವದಲ್ಲಿ ಜೀವವಿಲ್ಲದೆ ಮಾರ್ಗತಾರಕವಾದ ಆ ಬೀಡಿಯ ಬೆಳಕನ್ನನುಸರಿಸಿ ಹೊರಟು ಅದನ್ನು ದಾಟಿ ಪುನಃ ದೊಡ್ಡ ರಸ್ತೆಯನ್ನು ಸೇರಿಕೊಂಡೆವು. ಎದೆಯಮೇಲೆ ಹೇರಿದ್ದ ಬಹು ದೊಡ್ಡ ಭಾರವೊಂದು ಕೆಳಕ್ಕೆ ಇಳಿದು ಸುಲಭವಾಗಿ ಉಸಿರಾಡುವಂತಾಯಿತು.

ಇನ್ನೊಂದು ಕಾಲುಗಂಟೆಯ ಹೊತ್ತಿಗೆ ಮಳೆಯು ನಿಂತಿತು. ದಾರಿಯಲ್ಲಿ ಉದ್ದಕ್ಕೂ ವಿಚಿತ್ರವಾದ ಸಂಗೀತವೊಂದು ಷುರು ಆಯಿತು. ಬಂಡೆಗಳ ಮಧ್ಯದಲ್ಲಿಯೂ, ದಾರಿಯ ನೀರ್ಗಾಲುವೆಗಳಲ್ಲಿಯೂ ತಮಗೆ ಮನಸ್ಸು ಬಂದೆಡೆಯಿಂದ ಸಪ್ತಸಹಸ್ರ ಸ್ವರಗಳಿಂದ ಕ್ರಮಲಕ್ಷ್ಯವಿಲ್ಲದೆ ಸ್ವಚ್ಛಂದವಾಗಿ ಭೇಕಗಳು ಗಾನಮಾಡಲು ಉಪಕ್ರಮಿಸಿದವು. ಆ ಗಾನದ ಜೊತೆಗೆ ಕ್ರಿಮಿಕೀಟಗಳ ಧ್ವನಿಯ ಸೇರುವೆ ಬೇರೆ. ನನಗೆ ಈ ವರೆಗೂ ಇದರ ಒಳ ತತ್ವ ಗೊತ್ತಾಗಿಲ್ಲ. ನೀರಿನಲ್ಲಿಯೇ ಜೀವನಮಾಡಬೇಕಾಗಿರುವ ಈ ಭೇಕಾದಿಗಳು ಬಿಸಿಲಿನ ಉರಿತಾಪದಿಂದ ಉರಿದು ಬೆಂದು ಹೋಗಿರುವ ನೆಲನಲ್ಲಿ ಮಳೆ ಬಂದ ತಕ್ಷಣ ಹೇಗೆ ಬರುವುವೊ ಹೇಗೆ ಜೀವಂತವಾಗುವುವೊ, ಅವು ಎಲ್ಲಿ ಹೇಗೆ ಯಾವ ಸೂಕ್ಷ್ಮ ರೂಪದಲ್ಲಿ ಮಳೆ ಬರುವವರೆಗೂ ವಾಸಮಾಡಿಕೊಂಡಿರುವುವೊ ನನಗೆ ಇನ್ನೂ ಚೆನ್ನಾಗಿ ಅರ್ಥವಾಗಿಲ್ಲ. ಹುಡುಗನಾಗಿದ್ದಾಗ ಈ ವಿಚಾರವಾಗಿ ಒಬ್ಬರಿಗೆ ಪ್ರಶ್ನೆ ಹಾಕಿದ್ದೆ. ಅವರು ಸರಿಯಾದ ಉತ್ತರಕೊಡದೆ, ಕೇಳಿದ್ದಕ್ಕೆ ಏನೋ ಒಂದು

ಹೇಳಿಬಿಡಬೇಕು, ತಮಗೆ ತಿಳಿದಿಲ್ಲವೆಂದು ಹೇಳಿಕೊಳ್ಳುವುದು ಮರ್ಯಾದೆಗೆ ಕಮ್ಮಿ ಎಂದು ಆಗ ಬಾಯಿಗೆ ಬಂದುದನ್ನು ಹೇಳಿಬಿಟ್ಟಿದ್ದರು. ಆಮೇಲೆ ಬಹುಕಾಲದವರೆಗೂ ಮಳೆಯ ಜೊತೆಯಲ್ಲಿಯೆ ಅವೂ ಮೋಡಗಳಿಂದ ಭೂಮಿಗೆ ಬೀಳುವುವೆಂದು ನಾನು ಅಂದುಕೊಂಡಿದ್ದೆ. ಈಗಲೂ ನನಗೆ ಈ ವಿಷಯ ಚೆನ್ನಾಗಿ ಗೊತ್ತಿದೆಯೊ ಇಲ್ಲವೊ ನನಗೆ ತಿಳಿಯದು. ಎದೆ ಮುಟ್ಟಿ ಪ್ರಮಾಣಮಾಡೆಂದರೆ ಬೇರೆ ನಾನು ಮಾಡುವುದಿಲ್ಲ. ತತ್ವ ಹೇಗಾದರೂ ಇರಲಿ, ಜೀವಲೇಶದ ಸುಳಿವಿಲ್ಲದಂತೆ ಇದುವರೆಗೂ ನಿಶ್ಶಬ್ದವಾಗಿದ್ದ ಆ ಪ್ರದೇಶವೆಲ್ಲವೂ ಈಗ ಅನಂತಾನಂತ ಜೀವಸಮೂಹದ ಶಬ್ದದಿಂದ ತುಂಬಿಹೋಯಿತು. ಒಳಗೆ ನಮ್ಮ ಮನಸ್ಸನ್ನು ಅದುಮಿಕೊಂಡು ಮೇಲೆ ಏರಿ ಊರಿ ಕೂತಿದ್ದ ಭಯಂಕರ ಭಾವವು ಹೊರಟುಹೋಗಿ ಸುತ್ತಣ ಪ್ರಪಂಚದ ಅರಿವು ಪುನಃ ನಮಗೆ ಬಂದಿತು. ಇಷ್ಟು ಸಹಚರ ಜಂತುಗಳು ಈ ಬೆಗ್ಗಾಡು ಪ್ರದೇಶದಲ್ಲಿ ಹೀಗೆ ಅಸಂಖ್ಯಾತವಾಗಿ ವಾಸ ಮಾಡಿಕೊಂಡಿರುವುದನ್ನು ನೋಡಿ ಆಶ್ಚರ್ಯವಾಯಿತು. ನಡುನಡುವೆ ಮಾತ್ರ ಈ ಪಕ್ಕದಿಂದ ಆ ಪಕ್ಕಕ್ಕೊ ಆ ಕಡೆಯಿಂದ ಈಕಡೆಗೂ ಒಂದು ಮುಂಗುಸಿಯೊ ಕಾಡುಬೆಕ್ಕೊ ಓಡಿಹೋಗುವುದು. ಬೆಕ್ಕಿನ ಪೊಂಗಣ್ ಕಾಂತಿಯು ರಾತ್ರಿಯ ಕತ್ತಲಲ್ಲಿ ಕೆಂಡದಂತೆ ಉರಿದು ಅದರ ಕ್ರೂರ ಮುಖವನ್ನೂ, ನಿಮಿರಿನಿಂತ ಅದರ ಮೀಸೆಯನ್ನೂ ಬೆಳಗುವುದು. ಇಲ್ಲವಾದರೆ ಯಜಮಾನರ ಕಾಲಿಗೊ, ರಾಯರ ಕಾಲಿಗೊ ದೊಡ್ಡದೊಂದು ಭೇಕವು ಸಿಕ್ಕಿ ಅವರು ಥಂಗನೆ ಬೇರೆ ಕಡೆಗೆ ಹಾರಿಹೋಗುವರು. ಪುನಃ ನೆಲದ ಮೇಲೆ ಹೆಜ್ಜೆಯಿಟ್ಟರೆ ಕಾಲಿನ ಕೆಳಕ್ಕೆ ಇನ್ನೊಂದು ಸಿಕ್ಕುವುದು. "ಥು! ಹಾಳುಮುಂಡೇದೆ," ಎನ್ನುತ್ತ ಅವನ್ನು ಶಿಕ್ಷಿಸುವಂತೆ ತಮ್ಮ ಕೊಡೆಯನ್ನು ಮೇಲಿಂದ ಕೆಳಕ್ಕೆ ಅವರು ಬೀಸುವರು. ಈ ಹಾರಾಟದಿಂದ ಅವಕ್ಕೂ ಭಯವಾಗಿ ಹೋಗಿ ಅವೂ ದಾರಿಬಿಟ್ಟುಕೊಡುವುವು. ಈ ಮಧ್ಯದಲ್ಲಿ ಒಂದು ಭಾರಿ ಅಸಂಗತವು

ನಡೆದು ನನ್ನ ಮನಸ್ಸನ್ನು ಸ್ವಲ್ಪಹೊತ್ತು ತಳಮಳಗುಟ್ಟಿಸಿತು: ನನ್ನ ಕಾಲಿನ ಒಂದು ಎಕ್ಕಡಕ್ಕೆ ಕೋಪ ಬಂದು, ಬಲ ಹೆಬ್ಬೆರಳಿನಿಂದ ಉಂಗುಷ್ಟವು ಕಳಚಿಕೊಂಡುಬಿಟ್ಟಿತು. ಆ ಕಷ್ಟ, ನಮ್ಮ ಶತ್ರುಗಳಿಗೂ ಬೇಡ. ಮೊದಲೇ ಆ ಮಳೆ ಕೆಸರುಗಳಲ್ಲಿ ಒಂದೊಂದು ಎಕ್ಕಡವೂ ಒಂದೊಂದು 'ಧಡಿಯ' ಸೀಸವನ್ನು ಕಾಲಿಗೆ ತಗುಲಿಹಾಕಿದಂತಾಗಿತ್ತು. ಈಗಿನ ಸ್ಥಿತಿಯ ವೈಕೃತಿಯನ್ನು ಬಣ್ಣಿಸಲು ಆದಿಶೇಷನಿಗೂ ಕಷ್ಟವಾಗ ಬಹುದು. ಕಾಲನ್ನೂ ಎಕ್ಕಡವನ್ನೂ ಹಾಗೇ ಈಜಿಕೊಂಡು ಈಜಿಕೊಂಡು ಮುಂದೆ ನಡೆಯಬೇಕೆಂದು ಎಷ್ಟು ಹೆಚ್ಚಾಗಿ ಪ್ರಯತ್ನಪಟ್ಟರೆ, ಅವು ಅಷ್ಟು ಅಷ್ಟೂ ಹಿಂದು ಹಿಂದಕ್ಕೆ ಎಳೆಯಲು ಪ್ರಾರಂಭಮಾಡುವುವು. ನಾನು ಮುಂದಕ್ಕೆ ಎಳೆಯುವುದು—ಅವು ಹಿಂದಕ್ಕೆಳೆಯುವುದು...ಉಂಹ್! ಮೂರ್ತೀ ಕಣ್ಣಿಗೆ ಇದೂ ಬಿದ್ದುಬಿಟ್ಟಿತು. ಅವರೇನು ಗಂಭೀರವಾಗಿ ಸಮ್ಮನೆ ಇದ್ದಾರೇ? ನಿಮಗೆ ಮರ್ಯಾದೆ ಇರುವ ಯಾವ ಜಾಗಕ್ಕಾ ದರೂ ಅವರನ್ನು ಕರೆದುಕ್ಕೊಂಡು ಹೋದರೆ ನೀವು ಬಹಳ ಹುಷಾರಾ ಗಿರಬೇಕು. ಇಲ್ಲವಾದರೆ ಬಹುಕಷ್ಟ, ಬಹುಕಷ್ಟ. ಅವರ ಬಾಯಿ ಮುಚ್ಚಿಸುವುದು ಆ ನಾಲ್ಕುಮುಖದ ಬ್ರಹ್ಮನಿಗೂ ಸಾಧ್ಯವಿಲ್ಲ.

"ಏನ್ರಿ, ನಿಮ್ಮವಸ್ಥೆ; ಹಿಂದಕ್ಕೆ ಹಿಂದಕ್ಕೇ ಹೋಗುತ್ತಿದ್ದೀರಿ" ಎಂದರು.

ನಾನು—"ನೀವು ನಡೀರಿ ಮುಂದೆ. ನಿಧಾನವಾಗಿ ಬರುತ್ತೇನೆ. ಇನ್ನೇನು ಗುಡಿಮುಂದಿನ ರಸ್ತೆಗೆ ಬಂದೆವಲ್ಲ" ಎಂದೆ.

ಮೂ—ಏನಾಯಿತು ಹೇಳಬಾರದೆ?

ನಾನು ಅವರ ಭುಜ ಹಿಡಿದುಕೊಂಡು, (ಅವರು ನನಗಿಂತಲೂ ಸುಮಾರು ಒಂದು ಅಡಿಯಷ್ಟಕ್ಕಿಂತಲೂ ಹೆಚ್ಚು ಎತ್ತರವಾಗಿದ್ದಾರೆ) ಮೆಲ್ಲಗೆ "ಚಪ್ಪಲಿ ಉಂಗುಷ್ಟ ಕಿತ್ತುಹೋಯಿತ್ರಿ, ಸ್ವಲ್ಪ ತಕರಾರು ಮಾಡುತ್ತ ಇದೆ" ಎಂದೆ.

ಮೂ—ಏನು ಮಹಾಪ್ರಮಾದ, ಕೈಗೆ ತಕ್ಕೊಳ್ಳಿ. ಹೊತ್ತು ಕೊಂಡು ನಡೀರಿ. ಇಲ್ಲವೆ ಕಿವಿಗೆ ತಗುಲಿಹಾಕಿಕೊಳ್ಳಿ, ನಿಮಗೆ ಹಾಗೇ ಆಗಬೇಕು. ಅವರು ಕಪ್ಪೆ ತುಳಿದಾಗ ನೀವೇಕೆ ಹಾಗೆ ನಗಬೇಕು ?

ನನಗೂ ಹಾಗೆಯೇ ಅನ್ನಿಸಿತು. ದೊಡ್ಡವರೆಂದು ಸುಮ್ಮನೆ ಮರ್ಯಾದೆಯಿಂದ ನಡೆದುಕೊಳ್ಳದೆ ಆಗ ಅವರನ್ನು ನೋಡಿ ನಕ್ಕದ್ದಕ್ಕಾಗಿ ದೇವರು ಅಲ್ಲೇ ಧರ್ಮ ತೋರಿಸಿ ತಕ್ಕ ಶಾಸ್ತಿಮಾಡಿಸಿದ—ಎಲ್ಲ ತಕ್ಷಣ ಫಲಗಳು.

ನಾ—ನಿಮ್ಮ ದಮ್ಮಯ್ಯ ಸುಮ್ಮನೆ ಇರಿ ಅಪ್ಪ ; ಯಜಮಾನರಿಗೆ ಕೇಳಿಸೀತು. ಇನ್ನೆಲ್ಲಾ ಹಾಸ್ಯಮಾಡುತ್ತಾರೆ.

ಅವರು ಹೇಳಿದ ಮಾತು ಇಷ್ಟಾದರೂ ಕೇಳುತ್ತಾರೆಯೆ ? ನಿಮಗೆ ಭ್ರಾಂತಿ...

ಕಾಲಿನದನ್ನು ಕೈಗೆ ತೆಗೆದುಕೊಂಡದ್ದಾಯಿತು.

ಮೂ—ಇನ್ನಾದರೂ ಬೇಗಬೇಗ ಬನ್ನಿ.

ನಾ—ತಾಳ್ರಿ ಸ್ವಲ್ಪ ; ಅಲ್ಲೇನು ಕೊಳ್ಳೆಹೋಗೋದು, ಹೋಗೋಣ.

ಮೂ—ನಿಮ್ಮ ಸಂಕೋಚ ನಿರ್ವಾಹವಿಲ್ಲ ; ಪ್ರಪಂಚಕ್ಕಿಲ್ಲದ ಮರ್ಯಾದೆ ನಿಮಗೆ ಬಂದುಬಿಟ್ಟಿದೆಯೆ ? ರೀ, ವೆಂಕಟೇಶಯ್ಯ, ಇವರ ಅವಸ್ಥೆ ನೋಡಿ. ಎಕ್ಕಡ ಕೈಯಲ್ಲಿ ಹಿಡಿದುಕೊಂಡು ಬರೋದಕ್ಕೆ ಅವಮಾನವಂತೆ.—ಇನ್ನುಮೇಲೆ, ಆ ತಲೆ ದಪ್ಪವಾಗಿದೆ ಅಂತ ಹೊರಕ್ಕೆ ಬರುವಾಗ ಎಲ್ಲಾದರೂ ಅದನ್ನು ಎತ್ತಿಟ್ಟುಬನ್ನಿ, ಹಾಗಾದರೆ—ಈ ಕತ್ತಲಿನಲ್ಲಿ ಎಕ್ಕಡವನ್ನು ತಲೆಮೇಲೆ ಇಟ್ಟುಕೊಂಡರೆ ತಾನೆ ಯಾರು ನೋಡಿ ನಗುವವರು.

ಯಾವುದು ಸಂಭವಿಸಕೂಡದೆಂದು ಅಷ್ಟು ಪ್ರಯತ್ನಮಾಡಿದ್ದೆನೊ ಅದು ನಡದೇ ಹೋಯಿತು. ಮುಖ ಜೋಲುಬಿತ್ತು. ಯಾವುದು ಆಗ ಬೇಕೊ ಆದು ಆಗಿಯೇ ತೀರೀತು.

ಯಾರು ಇದ್ದರೇನು ? ಯಾರು ಇಲ್ಲದಿದ್ದರೇನು ? ಕೆಲವು ಕೆಲಸಗಳನ್ನು ಮಾಡಲು, ನಮ್ಮ ಮನಸ್ಸು ಸಂಸ್ಕಾರವಶಾತ್ ಯಾವಾಗಲೂ ಹಿಂಜರಿಯುತ್ತದೆ. ಏನು ಮಾಡುವುದು ಎಂದು ಯೋಚನೆಮಾಡಿನೋಡಿದೆ. ಎಕ್ಕಡವೂ ತುಂಬ ಹಳೆಯದಾಗಿತ್ತು. ಆ ದಿನದ ಪ್ರಯಾಣದಿಂದಲೂ ಕೆಸರಿನಿಂದಲೂ ಇನ್ನೂ ಕೆಟ್ಟುಹೋಗಿತ್ತು. ಎರಡುಮೂರುದಿನಗಳವರೆಗೂ ಅದನ್ನು ಬಿಸಿಲಿನಲ್ಲಿ ಒಣಗಿಸಿ, ಎಣ್ಣೆಗಿಣ್ಣೆ ಹಾಕಿ ಮಾಲೀಸು ಮಾಡಿದ ಹೊರತು ಅದು ದಾರಿಗೆ ಬರುವ ಹಾಗೂ ಇರಲಿಲ್ಲ. ನಾಳೆಯೆಲ್ಲ ಅದನ್ನು ಕಾಗದದಲ್ಲಿಯೊ, ಬಟ್ಟೆಯಲ್ಲಿಯೊ ಸುತ್ತಿಟ್ಟು, ಕೈಲಿಹಿಡಿದುಕೊಂಡು ಬೆಂಗಳೂರಿಗೆ ಹೋಗಿ ಮನೆ ಸೇರಿದಮೇಲೆ ತಾನೆ ಅದಕ್ಕೆ ಆ ಉಪಚಾರಗಳನ್ನೆಲ್ಲಾ ನಡೆಸಬೇಕಾದರೆ! ನಮ್ಮನ್ನೇ ಸರಿಯಾಗಿ ನೋಡಿಕೊಳ್ಳುವವರಿಲ್ಲ; ಇನ್ನು ಆ ಹಳೆಯ ಎಕ್ಕಡವನ್ನು ಯಾರು ನೋಡಿಕೊಳ್ಳುವರು ? ಎಂದು ಯೋಚಿಸಿದೆ. ಮನಸ್ಸಿನಲ್ಲಿ ಆಗ ನಡೆದ ಚರ್ಚಾವಿವಾದಗಳನ್ನೂ ಯುಕ್ತಿಯ ದ್ವಂದ್ವಯುದ್ಧವನ್ನೂ ಯಾರಾದರೂ ಹೊರಗಿನವರ ಇದಿರಿಗೆ ನಡೆಯಿಸಿ ತೋರಿಸಿದ್ದರೆ ನನಗೆ ತರ್ಕಶಾಸ್ತ್ರದಲ್ಲಿ ಮಹಾಮಹೋಪಾಧ್ಯಾಯರ ಪದವಿ ದೊರಕುತ್ತಿದ್ದಿತೆಂದು ನನಗೆ ಸಂಪೂರ್ಣವಾದ ನಿಶ್ಚಯ. 'ಛೆ! ಎರಡುರೂಪಾಯಿ ಕೊಟ್ಟು ಕೊಂಡುಕೊಂಡದ್ದು ಹೋಗುತ್ತೆ; ಏನು ಮಹಾ ಕೆಟ್ಟುಹೋಗಿರುವುದು, ಉಂಗುಷ್ಟ ಕಿತ್ತುಹೋದರೆ ಎರಡಾಣೆ ಕೊಟ್ಟು ಸರಿಮಾಡಿಸಿದರಾಯಿತು. ಬೇಡ, ಬೀಸಾಡಬೇಡ' ಎಂದು ಮನಸ್ಸು ಒಂದುಸಲ ಬುದ್ಧಿಹೇಳುವುದು. 'ಇನ್ಯಾರಪ್ಪ, ಅದನ್ನು ಬೆಂಗಳೂರವರೆಗೂ ಹೊತ್ತುಕೊಂಡುಹೋಗಿ ರಿಪೇರಿ ಮಾಡಿಸುವವರು! ಅದೂ ನಾಲ್ಕುತಿಂಗಳು ಸೇವೆಮಾಡಿದೆ. ಅದರ ಸರ್ವಿಸ್ಸೂ ಕಳೆದುಹೋಗುತ್ತ ಬಂದಿದೆ. ಹಳೆ ಎಕ್ಕಡಗಳ ಸಂರಕ್ಷಣೆಗೆ ಇನ್ನೂ ಯಾರೂ ಪಿಂಜರಾಪೋಲೂ ಏರ್ಪಡಿಸಿಲ್ಲ. ಹೋಗಲೇಳು. ಯಾವ ಯಾವುದಕ್ಕೆ ಎಷ್ಟೆಷ್ಟು ಋಣವೊ ಅಷ್ಟು ತೀರಿಸಿಕೊಂಡುಹೋಗಲಿ' ಎಂದು ಇನ್ನೊಂದುಸಲ ದುರ್ಮಂತ್ರ

೪

ಕೋಳಿ ಕೂಗುವ ಮೊದಲೇ ಅವರು ಶ್ರೀರಂಗಪಟ್ಟಣವನ್ನು ಸೇರಿದರು. ಅಲ್ಲಿ ಛತ್ರದ ಹೊರಗಡೆ ಜಗಲಿಯ ಮೇಲೆ ನಿಂತು ಸುಬ್ಬಣ್ಣನು ಹೆಂಡತಿಯನ್ನು ಸ್ವಲ್ಪ ನಿದ್ದೇಹೋಗು ಎಂದನು. ತಾನೂ ಸ್ವಲ್ಪ ಹಾಗೆ ನಿದ್ದೆಹೋದನು. ಬೆಳಗಾಗ ಎಲ್ಲರಿಗೆ ಮುಂದಾಗಿಯೇ ಎದ್ದು ಅವಳನ್ನೂ ಎಬ್ಬಿಸಿ ಬಾ ಹೋಗೋಣ ಎಂದನು.

ಲಲಿತೆಗೆ ಭಯವಾಯಿತು. ರಾತ್ರಿ ಹೊರಟಾಗ ಅವಳು ಗಂಡನನ್ನು ಏನೂ ಒತ್ತಿ ಕೇಳಲಿಲ್ಲ. ಅವನಿಗೆ ಆಗ ಕೋಪವೆಂದು ಬಲ್ಲಳು. ಸ್ವಲ್ಪ ಹೊತ್ತು ಗಂಡನು ತನ್ನನ್ನು ತಾಯ ಮನೆಯಲ್ಲಿ ಬಿಡಲು ಚಾಮರಾಜನಗರದ ಕಡೆ ಕರೆದುಕೊಂಡುಹೋಗುತ್ತಿದ್ದಾನೆ ಎಂದುಕೊಂಡಳು. ಆದರೆ ಸ್ವಲ್ಪ ಹೊತ್ತಿನಲ್ಲೇ ಕೋಟೆಯ ಬಾಗಿಲು ಪೇಟೆ ಇಷ್ಟನ್ನೂ ದಾಟಿ ಹೋಗುವುದರಲ್ಲಿ ಇದು ಶ್ರೀರಂಗಪಟ್ಟಣದ ದಾರಿಯೆಂದು ತಿಳಿಯಿತು. ಸುಮ್ಮನಿದ್ದಳು. ಈಗ ಶ್ರೀರಂಗಪಟ್ಟಣವನ್ನು ಬಿಟ್ಟು ಮುಂದಕ್ಕೆ ಹೊರಡುವ ಪ್ರಸಂಗ ಬಂದಾಗ, ಎಲ್ಲಿಗೆ ಹೋಗುವುದು ಎಂದು ತಿಳಿಯದೆ ಎಷ್ಟು ದೂರ ಹೋಗುವುದು ಎಂದು ಯೋಚಿಸಿ "ನೀವು ಕೋಪ ಮಾಡಬೇಡಿ, ಅವರು ನೂರು ಹೇಳಿದರೂ ಹೆತ್ತ ತಂದೆತಾಯಿ, ಹಿಂದಕ್ಕೆ ನಡೆಯಿರಿ ಹೋಗೋಣ" ಎಂದಳು. ಸುಬ್ಬಣ್ಣ—"ಹೆಂಗಸರು ಈ ಪಾರುಪತ್ಯ ಮಾಡಬಾರದು. ನಾನು ಹೋದಕಡೆ ನೀನು ಸುಮ್ಮನೆ ಬರಬೇಕು" ಎಂದನು. ಲಲಿತ—"ಬರಲಿಲ್ಲ ಎಂದೆನೇ ನಾನು. ನಾವೇನೋ ಹೊರಟುಹೋಗುತ್ತೇವೆ. ಅತ್ತೆ ಮಾವ ಎಷ್ಟು ಯೋಚನೆಮಾಡುತ್ತಾರೋ ಎಷ್ಟು ಭಯಪಡುತ್ತಾರೋ ಎನ್ನುವುದು ಬೇಡವೆ" ಎಂದಳು. ಸುಬ್ಬಣ್ಣ—"ನೀನು ಹೋದೆ ಎಂತ ಅಲ್ಲಿ ಅಳುವವರು ಯಾರೂ ಇಲ್ಲ, ಸಾಕು, ಬಾ." ಲಲಿತ—"ನಾನೇ ನಿಮಗೆ ಹೇಳಿಕೊಟ್ಟು ಕರೆದುಕೊಂಡು ಹೋದೆ ಎಂದುಕೊಂಡಾರು, ಅತ್ತೆಯವರು. ನಾವು ಅವರನ್ನ ನೋಯಿಸಬಾರದು" ಎಂದಳು. ಸುಬ್ಬಣ್ಣ—"ಇನ್ನು ನಮಗೆ ಅವರಿಗೆ ಸಂಬಂಧವಿಲ್ಲ. ಅವರು ಬೇಕಾದ್ದನ್ನು ಹೇಳಿಕೊಳ್ಳಲಿ, ಬಾ" ಎಂದನು. ಲಲಿತ—"ಅತ್ತೆಯವರದು ಬಹಳ ಕೋಪ, ಮಾವನವರನ್ನು ನೋಡಿಕೊಳ್ಳುವವರಿಲ್ಲದಹಾಗಾಗುತ್ತದೆ. ನೀವು ಕೋಪ ಮಾಡಬೇಡಿ, ಬನ್ನಿ." ಸುಬ್ಬಣ್ಣ—"ನನಗೆ ಬುದ್ಧಿ ಹೇಳುವಷ್ಟರ ಮಟ್ಟಿಗಾದೆಯಾ ನೀನು." ಲಲಿತ—"ದೊಡ್ಡವರು ಹತ್ತಿರ ಇದ್ದಾಗ ಅವರು ಹೇಳುತ್ತಿದ್ದರು. ಈಗ ಏನಾದರೂ ಒಂದು ಮಾತು ಹೇಳ

ಬೇಕಾದರೆ ನಾನೇ ತಾನೆ.'' ''ಸರಿ, ನನ್ನ ಜತೆಯಲ್ಲಿ ಬರುವುದಕ್ಕೆ ಇಷ್ಟವಿಲ್ಲದಿದ್ದರೆ ನೀನು ಹೋಗು, ನಾನು ಶೇಷನನ್ನ ಕರೆದು ಕೊಂಡು ಹೋಗುತ್ತೇನೆ.'' ಹೀಗೆಂದು ಸುಬ್ಬಣ್ಣನು ಮಗನನ್ನು ಹೆಗಲ ಮೇಲೆ ಕೂರಿಸಿಕೊಂಡು ಮೂಟೆಯನ್ನು ಹೊತ್ತುಕೊಂಡನು. ಮಾತ ನಾಡಿ ಪ್ರಯೋಜನವಿಲ್ಲವೆಂದು ಲಲಿತ ಇನ್ನೊಂದು ಮೂಟೆಯನ್ನು ತೆಗೆದುಕೊಂಡು ಹಿಂದೆ ಹೊರಟಳು.

ಇತ್ತ ಮನೆಯಲ್ಲಿ ಬೆಳಕು ಹರಿಯುವ ಹೊತ್ತಿಗೆ ಯಜಮಾನಿ ಎದ್ದು ಇನ್ನೂ ಸೊಸೆ ಎದ್ದ ಚಿಹ್ನೆ ಇಲ್ಲದಿರುವುದನ್ನು ನೋಡಿ, ಈ ದಿನ ಇದೊಂದು ತಪ್ಪು ಸಿಕ್ಕಿತು ಎಂಬ ಸಂತೋಷದಿಂದ ಹಜಾರವನ್ನೆಲ್ಲಾ ತಾನೇ ಕಸ ಗುಡಿಸಿ ಸೆಗಣಿ ನೀರು ಚಿಮುಕಿಸುತ್ತಾ, ಇಷ್ಟು ಹೊತ್ತಾ ದರೂ ಏಳದೆ ಇರುವವರುಂಟೆ? ಮನೆ ಹೆಣ್ಣುಮಕ್ಕಳಾದರು ಸೊಸೆಯರು, ಎಲ್ಲಾ ಚಾಕರಿಯನ್ನೂ ಮುದುಕಿ ನಾನು ಮಾಡಬೇಕು—ಎಂದು ಗೊಣಗುಟ್ಟುತ್ತಾ ಓಡಿಯಾಡುತ್ತಿದ್ದರು. ಶಾಸ್ತ್ರಿಗಳು ಎದ್ದು ಹೆಂಡತಿಯ ಮಾತನ್ನು ಕೇಳಿ, ಅಯ್ಯೋ ಪಾಪ, ಮೈಯಲ್ಲಿ ಸರಿಯಾಗಿ ಲ್ಲವೋ ಏನೋ—ಎಂದು, ಸುಬ್ಬಣ್ಣ ಏಳಲಿಲ್ಲವೇ ಎಂದರು. ಯಜಮಾನಿ, ಬಾಗಿಲು ತೆರೆದಿತ್ತು, ಎದ್ದು ಎಲ್ಲೋ ಹೋಗಿದ್ದಾನೆ ಎಂತ ಹೇಳಿದರು. ಶಾಸ್ತ್ರಿಗಳು ಸೊಸೆ ಸುಮ್ಮನೆ ಮಾತು ಕೇಳುತ್ತಾಳಲ್ಲಾ ಎಂಬ ಕನಿಕರದಿಂದ, ಮಗನ ಕೊಟಡಿಯ ಬಳಿಗೆ ಹೋಗಿ—''ಲಲಿತಮ್ಮ, ಲಲಿತಮ್ಮ'' ಎಂದು ಕರೆದು ಕೂಗಿದರು. ಯಾರೂ ಮಾತನಾಡಲಿಲ್ಲ. ಇಷ್ಟು ನಿದ್ದೆಯುಂಟೆ ಎಂದು ಬಾಗಿಲನ್ನು ಮೆಲ್ಲಗೆ ತಳ್ಳಿ ಒಳಗೆ ನೋಡಿದರು. ಅಲ್ಲಿ ಯಾರೂ ಇರಲಿಲ್ಲ. ಯಾರೂ ಇಲ್ಲದ್ದನ್ನು ಕಂಡು ಶಾಸ್ತ್ರಿಗಳು, ಎದ್ದಿದ್ದಾಳೆ, ಏಳದಹಾಗೆ ಏನು, ಎಂದು ಹೇಳಿ ಕೆರೆಗೆ ಹೊರಟು ಹೋದರು.

ಅವರು ಮತ್ತೆ ಬರುವ ವೇಳೆಗೆ ಮಧ್ಯಾಹ್ನ ಆಗಿತ್ತು. ಬರುವ ವೇಳೆಗೆ ಯಜಮಾನಿ ಸುಮ್ಮನೆ ಕೂಗಾಡುತ್ತಿದ್ದರು. ''ನೋಡಿ, ಸೊಸೆ ಮಾಡಿರುವುದನ್ನ. ಏನೂ ತಿಳಿಯದಹಾಗಿದ್ದು ಗಂಡನನ್ನ ಕರೆದು ಕೊಂಡು ತಾಯಿಾ ಮನೆಗೆ ಹೊರಟುಹೋಗಿದ್ದಾಳೆ. ಆ ಸಲ ಬಸು ರಾಗಿದ್ದಾಗ ನಾನೇನು ಸರಿಯಾಗಿ ನೋಡಿಕೊಳ್ಳಲಿಲ್ಲವೇ? ನನ್ನ ಕೆಟ್ಟವ ಳನ್ನಾಗಿ ಮಾಡೋದಕ್ಕೆ ಏನುಬೇಕೋ ಅದನ್ನೆಲ್ಲಾ ಮಾಡುತ್ತಾಳೆ'' ಎಂದರು. ಮಗನೂ ಸೊಸೆಯೂ ಮೊಮ್ಮಗನೂ ಇಲ್ಲದಿರುವುದನ್ನು ನೋಡಿ ಶಾಸ್ತ್ರಿಗಳಿಗೆ ಮನಸ್ಸು ಕ್ಷಣಮಾತ್ರ ಅಳುಕಿತು. ಆಮೇಲೆ

"ಸರಿ, ಇಲ್ಲಿ ಇದ್ದು ಬೇಸರವಾಗಿದೆ ಎಂತ ಹೇಳಿದಳೇನೋ ಹುಡುಗಿ, ಅವರ ತಾಯಿಯ ಮನೆಗೆ ಕರೆದುಕೊಂಡುಹೋಗಿದಾನೆ"—ಎಂದು ಕೊಂಡು ಸುಮ್ಮನಾದರು. ಆದರೆ ಹೇಳದಹಾಗೆ ಯಾಕೆ ಹೊರಟು ಹೋದರೋ, ಅವನು ಹಾಗೇ ಹೋಗೋಣವೆಂದರೂ, ಲಲಿತ ಹಾಗೆ ಮಾಡುವಳಲ್ಲವಲ್ಲ ಎಂದು ಯೋಚನೆ ಮಾಡಿದರು. ಅವನು ಹಠದ ಹುಡುಗ, ಹೋಗುತ್ತೇವೆ ಎಂದರೆ ಇದೊಂದು ರಂಪಾಗುತ್ತೆ ಎಂತ ಯೋಚಿಸಿ ಹೀಗೆ ಮಾಡಿರಬೇಕು, ಎಂದುಕೊಂಡು ಆ ಮಾತನ್ನು ಮರೆತರು.

ಐದಾರು ದಿನ ಕಳೆದರೂ ಮಗ ಹಿಂದಕ್ಕೆ ಬರಲಿಲ್ಲ. ಶಾಸ್ತ್ರಿಗಳಿಗೆ ಅನ್ನ ಸೇರದ ಹಾಗಾಯಿತು. ಒಬ್ಬನೇ ಮಗ; ಇಪ್ಪತ್ತೈದು ವರುಷ ಸಾಕಿದ್ದರು. ದೊಡ್ಡವನೂ ಅವನೇ ಚಿಕ್ಕವನೂ ಅವನೇ. ವಯಸ್ಸಾದ ಹುಡುಗನಾದರೂ ಅವನು ಅವರ ಕಣ್ಣಿಗೆ ಮಗುವಿನಂತೆಯೇ ಇದ್ದನು. ಆ ಮೊಮ್ಮಗನಾದ ಹುಡುಗ ಅವರಿಗೆ ಅಚ್ಚುಮೆಚ್ಚು. ದಿನಾ ಅವರ ಜತೆಗೆ ಮಗನೂ ಊಟಕ್ಕೆ ಕೂಡುತ್ತಿದ್ದನು. ಈಗ ಅವನಿಲ್ಲದ್ದು ಅವರಿಗೆ ಊಟ ಬೇಡದಂತೆ ಬೇಸರವಾಗುವುದಕ್ಕೆ ಮೊದಲಾಯಿತು. ಆಗಾಗ, ಯಾಕೋ ಹುಡುಗ ಬರಲಿಲ್ಲವಲ್ಲಾ, ಎಂದುಕೊಳ್ಳುವರು. ಯಜಮಾನಿಗೂ ಮನಸ್ಸಿನಲ್ಲಿ ಭಯ ತಟ್ಟಿತು. ಇವರೆಲ್ಲಾದರೂ ಬೇರೆ ಯಾಗಿಬಿಟ್ಟರೆ, ಸೊಸೆಯನ್ನ ಬಾಳಿಸಲಿಲ್ಲ ಅಟ್ಟಿಬಿಟ್ಟರು ಎಂತ ಜನ ತನ್ನನ್ನು ಬಯ್ಯುವರಲ್ಲಾ ಎಂದು ಅವರಿಗೆ ಯೋಚನೆ. ಸದ್ಯ ಮಗ ಹಿಂದಕ್ಕೆ ಬಂದುಬಿಟ್ಟರೆ, ಆಮೇಲೆ ಒಳ್ಳೆಯ ಮಾತೇನನ್ನಾದರೂ ಹೇಳಿ ಸೊಸೆಯನ್ನ ಕರೆಯಿಸಿಕೊಳ್ಳಬಹುದು, ಮಾನ ಉಳಿಯುತ್ತದೆ, ಎಂದು ಕೊಂಡರು. ಆಮೇಲೆ ಒಂದು ದಿನ ಶಾಸ್ತ್ರಿಗಳು ಮಗ ಬರಲಿಲ್ಲವಲ್ಲಾ, ಎಂದು ಹೇಳಿದಾಗ, "ಅದಕ್ಕೇನು ಅತ್ತೇಮನೆಗೆ ಬಹಳ ದಿನಗಳಿಂದ ಹೋಗಿರಲಿಲ್ಲ. ಈಗ ಹೋದ. ಹತ್ತು ದಿನ ಇರು ಎಂತ ಹೇಳಿರ ಬಹುದು. ಇದ್ದಾನೆ. ಬೇಕಾದರೆ ಹೇಳಿಕಳುಹಿಸಿ. ಜಾಗ್ರತೆ ಹಿಂದಕ್ಕೆ ಬಾ ಎಂತ" ಎಂದರು. ಹೇಳಿಕಳುಹಿಸಲಿ ಎಂದು ಆಸೆ. ಆದರೆ ತಾನು ಬೇಡಿದ ಹಾಗಾಗಬಾರದು ಎಂದು ಜಂಭ. ಶಾಸ್ತ್ರಿಗಳು ಒಬ್ಬ ಆಳನ್ನು ಗೊತ್ತುಮಾಡಿ ಚಾಮರಾಜನಗರದ ಹತ್ತಿರದ ಆ ಹಳ್ಳಿಗೆ ಹೇಳಿ ಕಳುಹಿಸಿದರು. ಆಳು ಹಿಂದಕ್ಕೆ ಬಂದಾಗ ಜತೆಗೆ ಲಲಿತೆಯ ಚಿಕ್ಕಪ್ಪನ ಮಗ ಬಂದ. "ಲಲಿತಮ್ಮನೂ ಅಳಿಯಂದಿರೂ ನಮ್ಮೂರಿಗೆ ಎಂತ ಹೊರಟರೆ?" ಎಂದು ಕೇಳಿದ. ಇವರು "ಹೌದು, ಹೊರಟು ಎಂಟು ದಿನವಾಯಿತಲ್ಲಾ" ಎಂದರು. ಅವನು "ಅವರು ನಮ್ಮೂರಿಗೆ

ಬರಲಿಲ್ಲ. ದಾರಿಯಲ್ಲಿ ಕಳ್ಳಕಾಕರ ಕೈಗೆ ಸಿಕ್ಕಿದರೋ ಏನೋ'' ಎಂದು ಹೇಳಿ ಗಾಬರಿಯಿಂದ ಯೋಚನೆಮಾಡುತ್ತ ಕುಳಿತನು.

ಶಾಸ್ತ್ರಿಗಳಿಗೆ ಎದೆ ಒಡೆಯಿತು. ಯಜಮಾನಿಯ ಕಾಟವನ್ನು ತಡೆಯಲಾರದೆ ಸೊಸೆ ಮಗನನ್ನು ಕರೆದುಕೊಂಡು ಎಲ್ಲಿಯೋ ಹೊರಟು ಹೋಗಿರಬೇಕೆಂದು ಅವರು ಯೋಚಿಸಿಕೊಂಡರು. ಮಗನು ತಾನಾಗಿಯೇ ಹೊರಟುಹೋಗಿರಬಹುದೆಂದು ಈಗ ಅವರಿಗೆ ಕೂಡ ತೋರಲಿಲ್ಲ. ಎಷ್ಟಾದರೂ ಮಗ ತನ್ನವನು. ಹೀಗೆಯೇ ಯೋಚಿಸಿಕೊಂಡು, ಇದೇಕೋ ಅನಾಹುತಕ್ಕೆ ಬಂತೆಂದು ಜೀಗರ ಹುಡುಗನನ್ನು ಕುರಿತು ''ಮನೇಲಿ ಹೆಂಗಸರು ಹೆಂಗಸರಿಗೆ ಅಸಮಾಧಾನವಾಗಿತ್ತು. ಎಲ್ಲೋ ಹೋಗಿದಾರೆ. ನಿಮ್ಮೂರಿಗೆ ಹೋಗಿದ್ದಾರೆ ಎಂದುಕೊಂಡಿದ್ದೆ. ಇಲ್ಲ ಎಂದಮೇಲೆ ಇನ್ನೆಲ್ಲಿಗೆ ಹೋದರೋ ನೋಡೋಣ'' ಎಂದರು. ಯಜಮಾನಿ ತಪ್ಪನ್ನು ಕೊನೆಗೂ ಸೊಸೆಯ ಮೇಲೆ ಹೊರಿಸಬೇಕು ಎಂತ ''ನಮ್ಮ ಹುಡುಗಿ ಮನೆಗೆ ಬಂದದ್ದೇ, ಸೊಸೆ ಏನೋ ಒಂದು ಮಾದರಿಯಾಗಿಬಿಟ್ಟಳು. ಈಗ ಹೊರಟೇ ಹೋದಳು. ಅತ್ತಿಗೆ ಇಲ್ಲಿ ಇರಕೂಡದು ಎಂದಿದ್ದರೆ ಅವಳನ್ನು ಕಳುಹಿಸಿಬಿಡುತ್ತಿದ್ದೆ. ನನಗೇನು ಬೇಕಾಗಿತ್ತು. ಇವರು ಗಂಡ ಹೆಂಡತಿ ಸುಖವಾಗಿರುತ್ತೇವೆ ಎಂದರೆ ಬೇಡ ಎನ್ನುತ್ತಿದ್ದೆನೇ ನಾನು'' ಎಂದರು.

ಲಲಿತೆಯ ತಮ್ಮ ಶಾಸ್ತ್ರಿಗಳಿಗೆ ''ನೀವು ಎಲ್ಲಿ ಬರುವುದಕ್ಕಾಗುತ್ತದೆ. ಅವರು ಎತ್ತಲಾಗಿ ಹೋದರು ಎಂತ ತಿಳಿದರೆ ನಾನು ಹೋಗಿ ನೋಡಿಕೊಂಡು ಬರುತ್ತೇನೆ. ಬರುವುದಾದರೆ ಕರೆದುಕೊಂಡೇ ಬರುತ್ತೇನೆ'' ಎಂದನು. ಶಾಸ್ತ್ರಿಗಳು ಹಾಗೇ ಆಗಲಿ ಎಂದು ಅರಮನೆಯಲ್ಲಿ ಕೇಳಿ ಇವನ ಜತೆಗೆ ಒಬ್ಬ ಆಳನ್ನೂ ದಾರಿಯ ಖರ್ಚಿಗೆ ಇಷ್ಟು ಹಣವನ್ನೂ ಕೊಡಿಸಿ ಇವನನ್ನು ಕಳುಹಿಸಿದರು.

ಸುಬ್ಬಣ್ಣ ಹೋದ ದಾರಿ ಇವನಿಗೆ ಪತ್ತೆ ಹತ್ತಲಿಲ್ಲ. ಹತ್ತಾರು ದಿನದ ಮೇಲೆ ಇವನೂ ಆಳೂ ಹಿಂದಕ್ಕೆ ಬಂದರು. ಎಲ್ಲರೂ ಹತಾಶರಾದರು. ಶಾಸ್ತ್ರಿಗಳು ಮಗ ದೇಶಾಂತರ ಹೋದನೇ ಎಂದು ಮರುಗುವುದಕ್ಕೆ ಆರಂಭಿಸಿದರು. ಯಜಮಾನಿ, ನಾನು ಪಾಪಿ ಅಂಥಾ ಸೊಸೆಯನ್ನ ಇಟ್ಟುಕೊಂಡು ಬಾಳುವುದಕ್ಕೆ ಪುಣ್ಯ ಇಲ್ಲ ಎಂದುಕೊಂಡು, ಮಗ ಹಿಂದಕ್ಕೆ ಬರಲಿ ತ್ರಿಣೇಶ್ವರನ ದೇವಸ್ಥಾನಕ್ಕೆ ನೂರು ಕಾಯಿ ಒಡೆಯುತ್ತೇನೆ ಎಂದು ಹರಸಿಕೊಂಡರು. ಮನೆಯ ಮೇಲೆ ದುಃಖದ ಕತ್ತಲು ಕವಿದುಕೊಂಡಿತು.

ಮನೆಯಿಂದ ಹೊರಟ ರಾತ್ರಿ ಎಲ್ಲಿಗೆ ಹೋಗುವುದೆಂದು ಸುಬ್ಬಣ್ಣ ಗೊತ್ತುಮಾಡಿಕೊಂಡಿರಲಿಲ್ಲ. ಎಲ್ಲಿಗಾದರೂ ಹೋಗುವುದು. ಈ ಮನೆಯಿಂದ ಎಷ್ಟು ದೂರ ಹೋದರೆ ಅಷ್ಟು ಒಳ್ಳೆಯದು. ಹೋದಲ್ಲಿ ಒಂದು ಸಣ್ಣ ಮನೆಮಾಡಿ ಈ ಹೆಂಡತಿಯನ್ನೂ ಈ ಮಗನನ್ನೂ ಅಲ್ಲಿ ಇಟ್ಟು ಅವರಿಗೆ ಸಂಪಾದಿಸಿ ಹಾಕುವುದು. ಸಂಗೀತದ ಪಾಠಹೇಳಿ ಸಂಪಾದಿಸುವುದಕ್ಕೆ ಏನೂ ಕಷ್ಟವಿಲ್ಲ. ಸೂಳೆಯರಿಗೆ ಬೇಕಾದರೂ ಪಾಠ ಹೇಳುವುದು. ಮಗನಿಗೆ ದಿನಾ ಮೊಸರು ಬೇಕು ಎಂದರೂ ಹಾಕುವುದು. ಹೆಂಡತಿ ಯಾವಾಗಲೂ ನಿಷ್ಕಾರಣವಾಗಿ ಮಾತುಗಳನ್ನು ಕೇಳುತ್ತಾ ಕಣ್ಣೀರು ಬಿಡುತ್ತಾ ಇರುವುದನ್ನು ತಪ್ಪಿಸುವುದು. ಇಷ್ಟೇ ಅವನ ಯೋಚನೆ. ಇದಿಷ್ಟನ್ನು ಮನಸ್ಸಿನಲ್ಲಿಟ್ಟುಕೊಂಡು ಅಲ್ಲಲ್ಲಿ ಎರಡು ದಿನ ಮೂರು ದಿನ ನಿಂತು ಅವನು ನಾಲ್ಕು ತಿಂಗಳಿಗೆ ಕಾಶಿಯನ್ನು ಸೇರಿದನು. ಹೆಂಡತಿ ಗರ್ಭಿಣಿ ಎನ್ನುವುದನ್ನೇ ಅವನು ಮರೆತನು. ಪ್ರಯಾಣದ ಆಯಾಸದಿಂದ ರಾಯಚೂರಿನ ಬಳಿ ಲಲಿತೆಗೆ ಗರ್ಭಸ್ರಾವ ವಾಯಿತು. ಅಲ್ಲಿ ಒಂದು ವಾರ ನಿಂತು ಮುಂದಕ್ಕೆ ನಡೆದರು. ಕಾಶಿಗೆ ಬರುವ ಹೊತ್ತಿಗೆ ಲಲಿತೆಗೆ ಬಹಳ ನಿತ್ರಾಣ. ಮಗು ಒಣಗಿಕೊಂಡಿದೆ. ಸುಬ್ಬಣ್ಣನಿಗೂ ಸಾಕಾಗಿತ್ತು. ಅಲ್ಲಿ ಒಂದು ತಿಂಗಳು ನಿಂತರು. ಆ ಮೇಲೆ ಅಲ್ಲಿಂದ ಹೊರಟು ಕಲಿಕತ್ತೆಯನ್ನು ಸೇರಿದರು. ಸುಬ್ಬಣ್ಣ ಅಲ್ಲಿ ಒಂದು ಸಣ್ಣ ಮನೆಯನ್ನು ಮಾಡಿಕೊಂಡು ಸಂಸಾರವನ್ನು ಹೂಡಿ, ಕೆಲವು ಪಾಠಗಳನ್ನು ಸಂಪಾದಿಸಿ, ಜೀವನಕ್ಕೆ ದಾರಿಮಾಡಿಕೊಂಡನು. ಐದು ಆರು ತಿಂಗಳು ಅಷ್ಟು ಹಣವನ್ನು ಸೇರಿಸಿ ಕಲಿಕತ್ತೆಯಲ್ಲಿ ಒಬ್ಬ ಸಾಹುಕಾರನನ್ನು ಕೇಳಿ ಇಂಥವರಿಂದ ಎಂದು ತಿಳಿಸದೆ ಮೈಸೂರಿನಲ್ಲಿ ನೀಲಾಸಾನಿಗೆ ಈ ಹಣವನ್ನು ಸೇರಿಸಬೇಕೆಂದು ಸ್ವಲ್ಪ ರೂಕ್ಕವನ್ನು ಕೊಟ್ಟನು. ಅವನು ಪ್ರಯಾಣಕ್ಕೆಂದು ಆ ಹಣವನ್ನು ನೀಲಾ ಹತ್ತಿರ ತೆಗೆದುಕೊಂಡುಬಂದಿದ್ದನು. ಇಂದು ಆ ಸಾಲ ತೀರಿತು. ಇನ್ನು ಮೈಸೂರಿನ ಸಂಬಂಧ ತನಗೇನೂ ಇಲ್ಲವೆಂದು ಆ ಕಡೆಯ ಯೋಚನೆಯನ್ನು ಬಿಟ್ಟು ಬಂಗಾಳಾದಲ್ಲಿ ಹುಟ್ಟಿ ಬೆಳೆದೆನೆಂದೇ ತಿಳಿದುಕೊಂಡು ಅಲ್ಲಿ ದಿನಗಳನ್ನು ಕಳೆಯುವುದಕ್ಕಾರಂಭಿಸಿದನು.

ಸುಬ್ಬಣ್ಣನು ಹೀಗೆ ಕಲಿಕತ್ತೆಯಲ್ಲಿ ಮೂವತ್ತೈದು ವರುಷ ಇದ್ದನು. ಆ ಮೂವತ್ತೈದು ವರುಷವೂ ಅವನಿಗೂ ಮೈಸೂರಿಗೂ ಸಂಬಂಧವಿಲ್ಲದಂತೆ ಇತ್ತು. ಈತನ ಜೀವನದ ಈ ಭಾಗವನ್ನು ನಾನು ಬಹಳ ವಿಸ್ತಾರವಾಗಿ ವರ್ಣಿಸುವುದಿಲ್ಲ. ಒಂದು ವಿಷಯವೇನೆಂದರೆ,

ನನಗೆ ಅದು ಅಷ್ಟು ಚೆನ್ನಾಗಿ ತಿಳಿಯದು. ಸುಬ್ಬಣ್ಣನವರು ಯಾವ ವಿಷಯವನ್ನು ಕುರಿತೂ ಬಹಳ ಮಾತನಾಡುತ್ತಿರಲಿಲ್ಲ. ಈ ವರ್ಷಗಳನ್ನು ಕುರಿತಂತೂ ತೀರ ಮೌನವನ್ನೇ ಧರಿಸಿದ್ದರು. ನಾನು ಅವರ ಸಂಗಡ ಮಾತನಾಡುತ್ತಾ, ನಾನಾಗಿಯೇ ಕಲಿಕತ್ತೆಯ ಮಾತನ್ನೆತ್ತಿದರೆ, ಆ ಮಾತು ಬೇಡಿ ಎನ್ನುವರು. ಅವರಾಗಿ ಮಾತನಾಡುತ್ತ ಆಗಾಗ ಹೇಳಿದ ಒಂದೊಂದು ಮಾತಿನಿಂದ ಅಲ್ಲಿ ಅವರು ಇದ್ದ ರೀತಿಯನ್ನು ನಾನು ಊಹಿಸಿ ತಿಳಿದುಕೊಳ್ಳಬೇಕಾಯಿತು. ಮೈಸೂರಿನಲ್ಲಿ ತಂದೆತಾಯಿ ತನಗಾಗಿ ಚಿಂತಿಸುವರಲ್ಲಾ ಎಂದು ಆತನಿಗೆ ಒಂದೆರಡು ವರುಷಗಳವರೆಗೆ ಯೋಚನೆಯೇ ಬರಲಿಲ್ಲ. ತಾನು ನೀಲಾಸಾನಿಗೆ ಹಣ ಕಳುಹಿಸಿದ್ದರಿಂದ ತಾನು ಎಲ್ಲೋ ಜೀವಂತನಾಗಿರುವ ವಿಷಯ ಮೈಸೂರಿನಲ್ಲಿ ಒಬ್ಬರಿಗಾದರೂ ತಿಳಿಯುವುದು ಎಂದುಕೊಂಡನು. ಅದು ಆದದ್ದೂ ಹಾಗೆಯೇ. ಸಾಹುಕಾರ ವರ್ಧಮಾನಯ್ಯನವರು ಬೊಂಬಾಯಿ ಸಾಹುಕಾರರೊಬ್ಬರಿಂದ ಬಂದ ಹುಂಡಿಯ ಪ್ರಕಾರ ನೀಲಾಸಾನಿಗೆ ಹೇಳಿಕಳುಹಿಸಿ ನಿನಗೆ ಉತ್ತರ ದೇಶದಿಂದ ಬರಬೇಕಾದ ಹಣ ಯಾವುದಿದೆ? ಎಂದು ಕೇಳಿದರು. ನೀಲಾ ಏನೂ ಇಲ್ಲ ಎಂದಳು. ಸಾಹುಕಾರರು, ಬೊಂಬಾಯಿಂದ ನಿನ್ನ ಹೆಸರಿಗೆ ಬಂದಿದೆ, ಉತ್ತರ ದೇಶದಿಂದ ಯಾರೋ ಕಳುಹಿಸಿದ್ದು ಎಂದರು. "ಎಷ್ಟು ರೂಪಾಯಿಗೆ?" "ನೂರೈವತ್ತು" ನೀಲಾಗೆ ಆಗ ಹೊಳೆಯಿತು. ತಾನು ಸುಬ್ಬಣ್ಣನಿಗೆ ಕೆಲವು ತಿಂಗಳ ಹಿಂದೆ ಆ ಹಣವನ್ನು ಕೊಟ್ಟಿದ್ದಳು. ಆ ಮಾರನೆಯ ದಿನದಿಂದಲೇ ಅವನು ತನ್ನ ಮನೆಗೆ ಬರಲಿಲ್ಲ. ದೇಶಾಂತರ ಹೋದನೆಂದು ಆಮೇಲೆ ತಿಳಿಯಿತು. ಆ ದಿನ ರಾತ್ರಿ ಸುಬ್ಬಣ್ಣ ಬಂದಾಗ, ಇದೇನು ಎಂದೂ ಬರದವನು ಈ ದಿನ ಇಷ್ಟು ಹೊತ್ತಿನಲ್ಲಿ ಬಂದಿದಾನೆ, ಎಂದುಕೊಂಡಳು. ಸುಬ್ಬಣ್ಣ—"ನೀಲಾಸಾನಿ, ನಿನ್ನಿಂದ ಒಂದು ಕೆಲಸ ಆಗಬೇಕಾಗಿದೆ" ಎಂದನು. ನೀಲಾ—"ಏನು ಅಪ್ಪಣೆಯಾಗಲಿ" ಎಂದಳು. "ಸ್ವಲ್ಪ ಹಣಬೇಕು." "ಎಷ್ಟು?" "ಒಂದುನೂರು ರೂಪಾಯಿ ಕಡವಾಗಿ ಕೊಟ್ಟಿರು. ತಿರಿಗಿ ಕೊಟ್ಟುಬಿಡುತ್ತೇನೆ." ನೀಲಾ—"ಅಯ್ಯೋ, ಇಷ್ಟೇನೆ" ಎಂದು ಒಳಗೆ ಹೋಗಿ ನೂರುರೂಪಾಯಿನ ನೋಟು ಒಂದನ್ನೂ ಐವತ್ತು ರೂಪಾಯಿನ ನೋಟು ಒಂದನ್ನೂ ತಂದು, ನೂರು ರೂಪಾಯಿನದನ್ನ ಕೊಟ್ಟು "ಸಾಕೆ? ಇನ್ನೊಂದು ಐವತ್ತು ರೂಪಾಯಿ ಇರಲಿ, ಬೇಕಾದರೆ ತಕ್ಕೊಳ್ಳಿ" ಎಂದಳು. ಸುಬ್ಬಣ್ಣ ಸ್ವಲ್ಪ ಹಿಂತೆಗೆದು "ಇರಲಿ, ಕೊಡು ಕಳುಹಿಸಿಬಿಡುತ್ತೇನೆ" ಎಂದನು. ನೀಲಾ—"ಕೊಡ್ತ

ಬೇಕಾದದ್ದೇನೂ ಇಲ್ಲ. ನಿಮ್ಮಂಥವರಿಗೆ ಕೊಟ್ಟಲ್ಲವೆ ನಮ್ಮ ಜನ್ಮ ಸಾರ್ಥಕವಾಗಬೇಕು'' ಎಂದಳು. ಕೊಡಬೇಕಾದದ್ದಿಲ್ಲ ವೆಂದು ಹೇಳುವುದರಲ್ಲಿ ಕೊಟ್ಟು ಕಳುಹಿಸುವುದು ಬೇರೆ ಕಡೆಯಿಂದ ಎಂಬ ಅವನ ಮಾತಿನ ಭಾವ ಅವಳಿಗೆ ತೋರಲಿಲ್ಲ. ಅವನು ದೇಶಾಂತರ ಹೋದನೆಂದು ತಿಳಿದಮೇಲೆ ಅದನ್ನು ಅವಳು ನೆನೆದುಕೊಂಡಳು. ತನ್ನ ದೇವರನ್ನು ದೂರ ಕಳುಹಿಸುವುದಕ್ಕೆ ತಾನು ಈ ಹಣವನ್ನು ಕೊಟ್ಟೆನೇ ಎಂದುಕೊಂಡಳು. ಐದಾರು ತಿಂಗಳಾದಮೇಲೆ ಎಲ್ಲಿಂದಲೋ ಬಂದ ಈ ನೂರಐವತ್ತು ರೂಪಾಯಿ ಸುಬ್ಬಣ್ಣನು ಸಾಲಾ ತೀರಿಸು ವುದಕ್ಕೆ ಕಳುಹಿಸಿದ್ದೆಂದು ಅವಳು ತಿಳಿದುಕೊಂಡಳು. ಅವಳ ಅಂತರ್ಯ ದಲ್ಲಿ ವರ್ಣಿಸಲಾಗದ ಒಂದು ಸಂಕಟವಾಯಿತು. ಹಣವನ್ನು ತೆಗೆದು ಕೊಂಡು ಮನೆಗೆ ಬಂದು ಅದನ್ನು ದೇವರ ಪೆಟ್ಟಿಗೆಯಲ್ಲಿಟ್ಟು ಅದಕ್ಕೆ ಅಂದಿನಿಂದ ಸುಬ್ಬಣ್ಣನ ಜ್ಞಾಪಕಾರ್ಥವಾಗಿ ಪೂಜೆಮಾಡುವುದಕ್ಕೆ ಮೊದಲು ಮಾಡಿ ಒಂದೆರಡು ವರುಷದ ಮೇಲೆ ತೀರಾ ವಿಧಿಯಿಲ್ಲದೆ ಬರುವವರೆಗೂ ಅದನ್ನು ಖರ್ಚುಮಾಡದೆ ಇಟ್ಟಿದ್ದಳು. ಸುಬ್ಬಣ್ಣನ ತಾಯಿತಂದೆಗಳಿಗೂ ಈ ಹಣ ಬಂದ ಮಾತು ತಿಳಿಯುವಂತೆ ಮಾಡಿದಳು. ತಾಯಿ ನಮ್ಮನ್ನು ಮರೆತರೂ ಸೂಳೆಯ ಜ್ಞಾಪಕ ಇದೆಯಲ್ಲ ಎಂದು ನಿಷ್ಠೂರ ನುಡಿದರು. ತಂದೆ—ನೀನು ಇನ್ನೂ ನಿಷ್ಠೂರ ಬಿಡಲಿಲ್ಲ ವಲ್ಲಾ, ಏನು ಮಾಡೋದು ಎಂದರು. ಯಜಮಾನಿ—''ಅವನದು ಯಾವಾಗಲೂ ಹಠ. ನನ್ನ ಹಾಗೇ ಆದ ನಾನೇನು ಮಾಡಲಿ. ನನ್ನ ಕರ್ಮ. ಆ ಸೊಸೇನ ಇಟ್ಕೊಂಡು ಸಂಸಾರಮಾಡೋ ಪುಣ್ಯ ಇಲ್ಲ. ಅಷ್ಟು ಅನ್ನುತ್ತಾ ಇದ್ದೆನಲ್ಲಾ ಒಂದು ದಿನ ಒಂದು ಮಾತು ಬದಲು ಹೇಳಿದ್ದಿಲ್ಲ. ನನ್ನ ಕಂದ ಎಲ್ಲಿ ಹೋದಳೋ, ಎಂದು ಬರುತ್ತಾಳೊ'' ಎಂದು ಕಣ್ಣೀರು ಸುರಿಸಿದರು. ಸೊಸೆಯನ್ನು ಒಂದು ಸಲ ನೋಡಿ ಯೇನೇ ಎಂದು ಬಹಳ ಆಸೆಪಟ್ಟರು.

ಯಜಮಾನಿ ಮತ್ತೆ ಸೊಸೆಯನ್ನು ನೋಡಲಿಲ್ಲ. ಮಾತು ಕಠಿನ ವಾಗಿದ್ದರೂ, ನಡತೆ ಕಠಿನವಾಗಿದ್ದರೂ, ಅವರು ಮನಸ್ಸಿನಲ್ಲಿ ಕಠಿನರಾದವರಲ್ಲವೆಂದು ತೋರುತ್ತದೆ. ಅತ್ತೆಯಾದವಳು ಸೊಸೆಗೆ ಬಹಳ ಸಲಿಗೆ ಕೊಡಬಾರದೆಂದು ಹಾಗೆ ನಡೆದುಕೊಂಡಿದ್ದರು. ಸೊಸೆ ಹೊರಟುಹೋದ ಮೇಲೆ ಅವಳ ಮೇಲೆ ಕನಿಕರ ಹುಟ್ಟಿತು. ಮಗನನ್ನೂ ಸೊಸೆಯನ್ನೂ ಅಟ್ಟಿದೆನಲ್ಲಾ ಎಂದು ಯೋಚನೆಯಲ್ಲಿ ಆಕೆ ಮೆಲ್ಲಗೆ ಕರಗಿಹೋದರು. ಎರಡು ಮೂರು ವರುಷ ಕಳೆಯುವವರೆಗೂ ಅವರು ಹಿಂದಕ್ಕೆ ಬಂದಾರು ಎಂದು ತಂದೆತಾಯಿ ಇಬ್ಬರೂ ಎದುರು

ನೋಡುತ್ತಿದ್ದರು. ಆಮೇಲೆ ಇಬ್ಬರೂ ಆ ಆಸೆಯನ್ನು ಬಿಟ್ಟರು. ಒಂದು ಸಲ ಯಜಮಾನಿ—"ಬರದೇ ಇದ್ದರೆ ಬಿಡಲಿ, ಎಲ್ಲಿಯಾದರೂ ಸುಖವಾಗಿದ್ದಾರೆಂದು ತಿಳಿದರೆ ಸಾಕು" ಎಂದು ಹೇಳಿದರು. ಶಾಸ್ತ್ರಿಗಳು—"ನಮ್ಮ ಎದುರಿಗೆ ಇಲ್ಲದೆ ಎಲ್ಲೋ ಸುಖವಾಗಿದ್ದರೆ ನಮಗೆ ಬಂದದ್ದೇನು" ಎಂದರು.

ಮುದುಕನಿಗೆ ವಯಸ್ಸಾಗುತ್ತಾ ಬಂದದ್ದರಿಂದ ಒಬ್ಬಳಲ್ಲದೆ ಇದ್ದರೆ ಒಬ್ಬ ಮಗಳು ಬಂದು ಮನೆಯಲ್ಲಿರುವಂತೆ ಏರ್ಪಾಡು ಮಾಡಿಕೊಂಡರು. ಮುದುಕನು ಮಗಳ ಮಕ್ಕಳೊಂದಿಗೆ ಸ್ವಲ್ಪ ಆಟವಾಡುವನು. ಮಧ್ಯೆ ಆ ದೇಶಾಂತರ ಹೋದ ಮೊಮ್ಮಗನ ಜ್ಞಾಪಕ ಬಂದು ಆಟವನ್ನು ಬಿಟ್ಟು ಗೋಡೆಯನ್ನು ನೋಡುತ್ತಾ ಧ್ಯಾನದಲ್ಲಿ ಕುಳಿತುಕೊಳ್ಳುವನು. ಅದು ಏನು ಧ್ಯಾನವೆಂದು ಮನೆಯಲ್ಲಿ ಎಲ್ಲಾ ಬಲ್ಲರು. ಏನು ಸಮಾಧಾನ ಹೇಳುವುದಕ್ಕೂ ಯಾರಿಗೂ ತೋರದು. ಮಗಳು ಬಂದು—"ಅಪ್ಪಾ, ಈ ದಿನ ಮೆಣಸಿನಸಾರು ಮಾಡಲೇ" ಎಂದೋ, "ಈ ಹೊತ್ತು ಪುರಾಣಕ್ಕೆ ಎಷ್ಟು ಹೊತ್ತಿಗೆ ಹೋಗಬೇಕು" ಎಂದೋ ಕೇಳಿ ಆ ಯೋಚನೆಯನ್ನು ತಪ್ಪಿಸುವಳು. ಹೀಗೆ ಹತ್ತು ವರುಷ ಕಳೆಯಿತು.

ಆಗ ಹರಿದ್ವಾರದಲ್ಲಿ ಒಂದು ಮೇಳ ನಡೆಯಿತು. ಶಾಸ್ತ್ರಿಗಳು ಅರಮನೆಯವರನ್ನು ಕೇಳಿಕೊಂಡು ಸ್ವಲ್ಪ ಸಹಾಯ ತೆಗೆದುಕೊಂಡು ಗಂಗಾ ಯಾತ್ರೆಗೆಂದು ಹೊರಟರು. ಜತೆಯಲ್ಲಿ ಯಜಮಾನಿಯೂ ಇದ್ದರು. ಮೈಸೂರಿಂದ ಇನ್ನೆರಡು ಮೂರು ಮನೆಯವರು ತಿಳಿದವರು ಹೊರಟಿದ್ದರು. ಶಾಸ್ತ್ರಿಗಳಿಗೆ ಮನಸ್ಸಿನಲ್ಲಿ ಒಂದು ಚಪಲ; ಆ ಗುಂಪಿನಲ್ಲಿ ಎಲ್ಲಿಯಾದರೂ ಮಗ ಕಣ್ಣಿಗೆ ಬೀಳಬಹುದು ಎಂದು. ಆದರೆ ಅದನ್ನು ಅವರು ಯಜಮಾನಿಗೆ ಹೇಳಲಿಲ್ಲ. ಯಜಮಾನಿಗೂ ಈ ಚಪಲ ಇತ್ತು. ಆದರೆ ಅವರೂ ಆ ಮಾತನ್ನಾಡಲಿಲ್ಲ. ಅದಕ್ಕೆ ತಕ್ಕಹಾಗೆ ಇಲ್ಲಿ ಕಲಿಕತ್ತೆಯಲ್ಲಿ ಲಲಿತ "ನಾವು ಈ ಸೀಮೆಯಲ್ಲಿರುವಾಗಲೇ ಈ ಮೇಳಕ್ಕೆ ಹೋಗದೆ ಇದ್ದರೆ ಇನ್ನು ಯಾವಾಗ ಹೋಗುವುದು" ಎಂದು ಬಲವಂತಮಾಡಿದ್ದರಿಂದ ಸುಬ್ಬಣ್ಣ ಅವಳನ್ನೂ ಮಗನನ್ನೂ ಕರೆದುಕೊಂಡು ಹರಿದ್ವಾರಕ್ಕೆ ಹೊರಟನು. ಲಲಿತ ಆ ವೇಳೆಗೆ ಇಪ್ಪತ್ತು ಸಲ ಊರಿಗೆ ಹೋಗೋಣ ಎಂದು ಅವನನ್ನು ಬೇಡಿಕೊಂಡಿದ್ದಳು. ಅವನು ಒಪ್ಪಿರಲಿಲ್ಲ. ಒಂದೊಂದು ಸಲವೂ, ಆ ಒಂದು ಮಾತನ್ನು ಬಿಟ್ಟು ಇನ್ನೇನನ್ನಾದರೂ ಕೇಳು, ಬೇಡವೆನ್ನುವುದಿಲ್ಲ ಎಂದು ಹೇಳುವನು. ಈ ಸಲ ಲಲಿತ ಹರಿದ್ವಾರಕ್ಕೆ ಹೋಗೋಣವೆಂದಾಗ

ಅವಳಿಗೆ—ಮೈಸೂರ ಕಡೆಯಿಂದ ಜನ ಯಾರಾದರೂ ಬರುವರು, ಅವರ ಕೈಲಿ ಕ್ಷೇಮ ಸಮಾಚಾರ ವಿಚಾರಿಸಬಹುದು, ಬೇಕಾದರೆ ಹೇಳಿಕಳುಹಿಸಬಹುದು, ಅದಕ್ಕೆ ಅಲ್ಲಿ ಗಂಡನನ್ನು ಅಪ್ಪಣೆ ಕೇಳುವುದು, ತನ್ನ ಕಡೆ ಜನರನ್ನು ನೋಡಿದಾಗ ಗಂಡನಿಗೂ ಮನಸ್ಸು ಕರಗಬಹುದು ಎಂದು ಚಪಲ. ಸುಬ್ಬಣ್ಣನಿಗೆ ಮೈಸೂರಿನವರನ್ನು ಯಾರನ್ನಾದರೂ ಕಂಡು ಸಮ್ಮ ನೆಲೆ ಅವರಿಗೆ ತಿಳಿದು ಮೈಸೂರಿಗೆ ಹೋಗುವ ಪ್ರಮೇಯ ಬಂದೀತೆಂದು ಒಂದು ಭಯ. ಅವನಿಗೆ ಮೈಸೂರಿನ ಆ ಮನೆ ಎಂದರೆ ಅಷ್ಟು ಅಸಹ್ಯ ಹುಟ್ಟಿಬಿಟ್ಟಿತ್ತು. ಹೀಗೆ ಇವರೂ ಹರಿದ್ವಾರಕ್ಕೆ ಬಂದರು. ಒಂದು ದಿನ ಸುಬ್ಬಣ್ಣನನ್ನು ಮೈಸೂರಿನ ಇವರ ಕಡೆಯ ಮನುಷ್ಯನೊಬ್ಬನು ನೋಡಿಯೇ ನೋಡಿದನು; ಸುಬ್ಬಣ್ಣ, ಸುಬ್ಬಣ್ಣ ಎಂದು ಕೂಗುತ್ತ ಆತನು ಹಿಂದೆಯೇ ಬಂದನು. ಸುಬ್ಬಣ್ಣ ಒಂದು ಸಲ ಹಿಂತಿರುಗಿ ನೋಡಿ ಬಲವಾಗಿ ಗುಂಪಿನಲ್ಲಿ ಸುಗ್ಗಿದನು. ಆತನು "ನಿಮ್ಮ ತಾಯಿತಂದೆ ಬಂದಿದ್ದಾರೆ" ಎಂದು ಕೂಗಿ ಹೇಳಿದನು. ಸುಬ್ಬಣ್ಣ ಅರ್ಧ ಕ್ಷಣ ತಂದೆಯನ್ನು ನೋಡುವುದೇ ಎಂದುಕೊಂಡು, ಒಡನೆ ಛೆ ಛೆ ಏನು ಹುಚ್ಚು, ಆ ಹುಟ್ಟು ಇಲ್ಲವೆಂದು ಬಂದಿರುವವನಿಗೆ ತಂದೆಯೆಲ್ಲಿ ತಾಯಿಯೆಲ್ಲಿ ಎಂದು ಧೈರ್ಯ ಮಾಡಿ ಹೊರಟೇ ಹೋದನು. ಆಮೇಲೆ ಅರ್ಧ ಗಂಟೆಯೊಳಗಾಗಿ ಅವನು ಹೆಂಡತಿಗೆ ಈ ಮಾತನ್ನು ಹೇಳದೆ ಅವಳನ್ನೂ ಮಗನನ್ನೂ ಕರೆದುಕೊಂಡು ಕಲಿಕತ್ತೆಗೆ ಮತ್ತೆ ಹೊರಟುಬಿಟ್ಟನು. ಅವನನ್ನು ನೋಡಿದ್ದ ಮನುಷ್ಯನು ಬಂದು ತಂದೆಗೂ ತಾಯಿಗೂ ತಾನು ಸುಬ್ಬಣ್ಣನನ್ನು ಕಂಡದ್ದಾಗಿ ಹೇಳಿದನು. ತಾಯಿ ಅದನ್ನು ನಂಬಿದಂತೆ ತೋರಲಿಲ್ಲ. "ಯಾರನ್ನು ನೋಡಿ ಸುಬ್ಬಣ್ಣ ಎಂದುಕೊಂಡೆಯೋ" ಎಂದರು. ಶಾಸ್ತ್ರಿಗಳು ಮಾತ್ರ ಮನಸ್ಸಿನಲ್ಲಿ "ಅವನು ಸುಬ್ಬಣ್ಣನೇ ಸರಿ. ನೋಡುವುದಾಗಿದ್ದರೆ ಅವನು ಇವನ ಜತೆಗೆ ಬರುತ್ತಾ ಇದ್ದ. ಈ ಜನ್ಮದಲ್ಲಿ ಆ ಪುಣ್ಯ ಇಲ್ಲ" ಎಂದುಕೊಂಡರು. ಗಂಗಾ ಯಾತ್ರೆ ಎಂದು ಹೆಸರಿಟ್ಟು ಸುಬ್ಬಣ್ಣನನ್ನು ನೋಡಿಯೇನೆಂದು ಬಂದ ತನ್ನ ಪಾಪವನ್ನು ಕ್ಷಮಿಸಬೇಕೆಂದು ಗಂಗಾ ಮಾತೆಗೆ ಪ್ರಾರ್ಥನೆ ಮಾಡಿದರು. ಮೇಳ ಮುಗಿದ ಮೇಲೆ ಇವರೆಲ್ಲ ಮೈಸೂರಿಗೆ ಹಿಂತಿರುಗಿ ಬಂದರು.

ಬಂದ ಒಂದು ವರುಷದೊಳಗಾಗಿ ಶಾಸ್ತ್ರಿಗಳು ತೀರಿಹೋದರು. ಯಜಮಾನಿ ಮಗಳ ಮಗನೊಬ್ಬನಿಂದ ಅವರ ಕರ್ಮಾಂತರಗಳನ್ನು ನಡೆಯಿಸಿ, ಮನೆಯನ್ನು ಇರುವುದಕ್ಕೆ ಇನ್ಯಾರಿಗೋ ಕೊಟ್ಟು, ತನ್ನ ಹೆಣ್ಣುಮಕ್ಕಳ ಮನೆಗಳಲ್ಲಿ ಇಲ್ಲಿ ಕೊಂಚ ದಿನ ಅಲ್ಲಿ ಕೊಂಚ ದಿನ ಇರುತ್ತಿ

ದ್ದರು. ವಯಸ್ಸು ಬಹಳವಾಗದಿದ್ದರೂ ಕೊರಗಿದ್ದು ಹೆಚ್ಚಾಗಿದ್ದದ್ದರಿಂದ ಆಕೆಯೂ ಆಮೇಲೆ ಮೂರು ವರುಷಗಳಲ್ಲಿ ತೀರಿ ಹೋದರು. ಅಳಿಯಂದಿರು ಆ ಮನೆಯನ್ನು ಮಾರಿ ಅದರ ಬೆಲೆಯನ್ನು ಹಂಚಿಕೊಂಡರು. ಸುಬ್ಬಣ್ಣನ ತಾಯಿತಂದೆಗಳ ಕಥೆ ಇಲ್ಲಿಗೆ ಮುಗಿಯಿತು.

೫

ಇತ್ತ ಕಲಿಕತ್ತೆಯಲ್ಲಿ ಸುಬ್ಬಣ್ಣನೂ ಅಷ್ಟೇನೂ ಸಂತೋಷವಾಗಿರಲಿಲ್ಲ. ಅವನ ಪ್ರಕೃತಿ ಸಂತೋಷವಾಗಿರತಕ್ಕ ಪ್ರಕೃತಿ ಅಲ್ಲ. ಜನರಲ್ಲಿ ಅವನು ತೀರಾ ಅಸಾಧ್ಯವಾದ ಒಳ್ಳೆಯತನವನ್ನು ಅಪೇಕ್ಷಿಸುವನು. ಇಂಥ ಸ್ವಭಾವದವರಿಗೆ ಸೂರ್ಯನು ಸಾಕಾದಷ್ಟು ತೇಜಸ್ವಿಯಲ್ಲ; ಗಾಳಿ ಸಾಕಾದಷ್ಟು ಹಗುರವಲ್ಲ. ಮೈಸೂರಿನ ಜನ ಸರಿ ಹೋಗಲಿಲ್ಲವೆಂದೇ ಅವನು ಕಲಿಕತ್ತೆಗೆ ಬಂದದ್ದು. ಮನೆಯ ಜನ ಮಾತ್ರ ಅಲ್ಲ. ಹೊರಗಣ ಜನರೂ ಹಾಗೆಯೇ ಆಗಿದ್ದರಷ್ಟೆ. ಸಂಗೀತಗಾರರಲ್ಲಿ ಎಲ್ಲಿಲ್ಲದ ಹೊಟ್ಟೆಯುರಿ. ಅವರಿವರು ಸೇರಿ ಅವನು ಮಹಾರಾಜರ ಮುಂದೆ ಹಾಡುವುದಕ್ಕಿಲ್ಲದಂತೆ ಮಾಡಿದ್ದರು. ಇದರಿಂದ ಆ ಪ್ರಪಂಚವೇ ಅವನಿಗೆ ಬೇಡವಾಗಿ ಹೋಗಿತ್ತು. ಇಲ್ಲಿಗೆ ಬಂದನು. ಈ ಪ್ರಪಂಚವೂ ಅದೇ ಪ್ರಪಂಚವೇ. ಇಲ್ಲಿಯೂ ಜನರಲ್ಲಿ ಅಸೂಯೆ, ಅನಾದರ, ಅಸಹನ. ಹುಟ್ಟಿದ ಊರಿನಲ್ಲಿಯೇ, ಬಾರಪ್ಪ, ಬಂದೆಯಾ ಎನ್ನುವವರಿಲ್ಲದಿದ್ದರೆ ಬೇರೆ ಸೀಮೆಯಲ್ಲಿ ಯಾರು ಹೇಳುವರು. ಹೇಗೋ ಕೊಂಚ ದಿನದಲ್ಲಿ ಕೆಲವು ಕಡೆ ಪಾಠ ಸಿಕ್ಕಿತು. ಅಲ್ಲದೆ ಇವನ ದಾಕ್ಷಿಣಾತ್ಯ ಪದ್ಧತಿಯನ್ನು ಕಂಡು ಅನೇಕರು ಮೆಚ್ಚಿ ಇವನಿಂದ ಪಾಠ ಹೇಳಿಸಿಕೊಳ್ಳುವುದಕ್ಕಾರಂಭಿಸಿದರು. ಅಲ್ಲಲ್ಲಿ ಸಣ್ಣ ಸಣ್ಣ ಕಚೇರಿಗಳು ಏರ್ಪಾಡಾಗಿ ಸ್ವಲ್ಪ ಹಣ ಬಂತು. ಅಂತೂ ಜೀವನಕ್ಕೆ ಯಾವ ವಿಧವಾದ ಯೋಚನೆಯೂ ಇಲ್ಲದಂತಿತ್ತು. ಹೆಂಡತಿಗೆ ಒಳ್ಳೆಯ ಸೀರೆಗಳನ್ನು ತೆಗೆದುಕೊಟ್ಟನು. ಮಗನಿಗೆ ಒಳ್ಳೆಯ ಬಟ್ಟೆಗಳನ್ನು ಹೊಲಿಸಿದನು. ಹೊರಗೆ ಜನ ಬೇಕಾದವರಿಲ್ಲದ್ದರಿಂದ ಮನೆಯಲ್ಲಿ ಮನಸ್ಸು ನೆಟ್ಟಿತು. ಹೆಂಡತಿಯ ವಿಷಯದಲ್ಲಿ ಬಹಳ ಕನಿಕರ, ಅವಳ ಸ್ವಭಾವ ತಿಳಿದಹಾಗೆಲ್ಲಾ ಬಹಳ ಪೂಜ್ಯ ಭಾವ. ಮಗನೆಂದರೆ ಪಂಚಪ್ರಾಣ. ಹೀಗೆ ಹೃದಯದಲ್ಲಿ ಅತಿಶಯವಾಗಿ ಬೆಳೆದ ಪ್ರೇಮವೇ ಗಾನವಾಗಿ ಬಂತೆಂಬಂತೆ ಇವನ ಗೀತದಲ್ಲಿ ಒಂದು ಅಸಾಧಾರಣವಾದ ಕಳೆ ಬಂದು ಸೇರಿತು. ಸಂಸಾರಿಗಳಿಗೆಲ್ಲ ಸಾಮಾನ್ಯವಾದ ಅರ್ಧ ಸುಖ ಅರ್ಧ ಚಿಂತೆಯ ಮಿಶ್ರಣವೊಂದು ಹಗಲು ರಾತ್ರಿಗಳಲ್ಲಿ ಮನಸ್ಸನ್ನು ಆವರಿಸಿತು.

ಇದ್ದದ್ದರಲ್ಲಿ ಲಲಿತೆ ಸುಖಿಯಾದಳು. ಅವಳಿಗೆ ಸುಬ್ಬಣ್ಣನೇ ದೇವರು, ಸುಬ್ಬಣ್ಣನೇ ಪ್ರಪಂಚ. ಅವನು ಎದುರಿಗಿದ್ದರೆ, ಅವನು ಸುಖವಾಗಿದ್ದರೆ ಅವಳಿಗಿನ್ನೇನೂ ಬೇಕಿಲ್ಲ. ಅಥವಾ ಇನ್ನೇನಾದರೂ ಬೇಕಾದರೂ ಅದರ ವಿಷಯದಲ್ಲಿ ಅಷ್ಟು ಖಂಡಿತವಾದ ಆಸೆಯಿಲ್ಲ. ಇಂಥ ಏಕಾಗ್ರತೆಯು ಹೆಂಗಸರಲ್ಲಿ ಅನೇಕರಿಗೆ ಸಾಧ್ಯ. ಪುರಾಣದ ಸಾವಿತ್ರೀ ಸೀತೆಯರು ಈ ರೀತಿಯ ಮಹಿಳೆಯರು. ಅವರ ಏಕಾಗ್ರತೆಯು ಯಾವ ಋಷಿಯ ತಪಸ್ಸಿಗಿಂತಲೂ ಕಡಿಮೆಯಾದದ್ದಲ್ಲ. ಅವರು ಅದರಿಂದಲೇ ಜೀವನದ ಸಮಸ್ತ ಸಂಸ್ಕಾರಗಳನ್ನೂ ಸಾಧಿಸಿಬಿಡುವರು. ಲಲಿತೆ ಈ ಮೊದಲೇ ಬದುಕಿನಲ್ಲಿ ಒಂದು ದೊಡ್ಡ ಅಂತಸ್ತನ್ನು ಸೇರಿಬಿಟ್ಟಿದ್ದಳು. ಯಾವುದರಲ್ಲೂ ತನ್ನ ಸುಖ, ತನ್ನ ಆಸೆ, ತನ್ನದು ಎನ್ನುವುದನ್ನು ಮರೆಯುವುದನ್ನು ಅವಳು ಕಲಿತು ಮುಗಿಸಿದ್ದಳು. ಈಗಲಾದರೋ ಎಲ್ಲಕ್ಕೂ ತನ್ನ ಮಗ, ತನ್ನ ಗಂಡ, ಇವರು ಹೊರತು ಯಾರೂ ಇಲ್ಲದ್ದರಿಂದ ಅವರ ಮೇಲೆ ತನ್ನ ಹೃದಯದ ಅನಂತವಾದ ದಯೆಯನ್ನು ಸುರಿಸುತ್ತಾ ಅವರಿಗೆ ದೇವಿಯ ಅವತಾರವೆಂಬಂತೆ ರಕ್ಷಕಳಾದಳು. ಅಲ್ಲದೆ ಗಂಡನ ಸಂಗೀತದಲ್ಲಿ ಸ್ವಲ್ಪ ಭಾಗವು ಅವಳಿಗೂ ಬಂತು. ಅವಳು ನೆರೆಹೊರೆಯ ಮಕ್ಕಳನ್ನು ಕರೆದುಕೊಂಡು ಅವರಿಗೆ ಸುಮ್ಮನೆ ನಮ್ಮ ಸೀಮೆಯ ಹಾಡುಗಳನ್ನು ಹೇಳಿಕೊಡುವಳು. ಹೀಗೆ, ಮನೆಯ ಕೆಲಸ, ಗೌರೀ ಪೂಜೆ, ಮಗನನ್ನು ನೋಡಿಕೊಳ್ಳುವುದು, ಗಂಡನಿಗೆ ಬೇಕಾದ್ದನ್ನು ಮಾಡುವುದು, ನೆರೆಹೊರೆಯವರ ಕಷ್ಟ ಸುಖದಲ್ಲಿ ಕೈಲಾದದ್ದನ್ನು ಮಾಡುವುದು, ಇದರಲ್ಲಿ ಅವಳ ಜೀವನವು ತಕ್ಕಮಟ್ಟಿಗೆ ಸಂಪೂರ್ಣವಾಯಿತು.

ಮನುಷ್ಯನು ಆಯುಸ್ಸನ್ನು ಎಲ್ಲಿ ಬೇಕಾದರೂ ಕಳೆಯಬಹುದು ; ಅದಕ್ಕೆ ಅವನು ಕಷ್ಟಪಡಬೇಕಾದದ್ದಿಲ್ಲ. ಕಷ್ಟವೆಲ್ಲಾ ಸರಿಯಾದ ರೀತಿಯನ್ನು ಹುಡುಕುವುದರಲ್ಲಿ. ಸುಬ್ಬಣ್ಣನಿಗೂ ಲಲಿತೆಗೂ ಈ ರೀತಿಯ ಶಾಂತಿಯಲ್ಲಿ ಕಲಿಕತ್ತೆಯಲ್ಲಿ ಹನ್ನೆರಡು ವರುಷಗಳು ಕಳೆದುವು. ಆ ವೇಳೆಗೆ ಅವರಿಗೆ ಒಂದು ಹೆಣ್ಣು ಮಗು ಆಗಿಹೋಗಿದ್ದು ಅದಾದ ಮೂರು ವರುಷದ ಮೇಲೆ ಇನ್ನೊಂದು ಮಗುವಾಗಿತ್ತು. ಬಹು ದಿನದ ಮೇಲೆ ಹುಟ್ಟಿದ ಈ ಮಗುವನ್ನು ನೋಡುತ್ತಾ ಸಾಕಿ ಸಲಹುತ್ತಾ ಗಂಡ ಹೆಂಡರು ನಾಲ್ಕು ವರುಷ ಕಳೆದರು. ಆಗ್ಯೆ ಇದ್ದದ್ದಿದ್ದಹಾಗೆ ಶೇಷನಿಗೆ ವಿಷಮಶೀತಜ್ವರ ಬಂದು ಏನುಮಾಡಿದರೂ ಉಪಯೋಗವಾಗದೆ ಅವನು ತೀರಿಹೋದನು.

ಲಲಿತೆಗೆ ಅಪಾರವಾದ ದುಃಖ ಒದಗಿತು. ಸುಬ್ಬಣ್ಣನಿಗೆ ಸಿಡಿಲು ಪೆಟ್ಟು ಬಿದ್ದಂತಾಯಿತು. ದಿಕ್ಕು ತೋಚದೆ ಲಲಿತಮ್ಮ ಎಂದಿಗಿಂತ ಹೆಚ್ಚಾಗಿ ಗೌರೀ ಪೂಜೆಯಲ್ಲಿ ಮನಸ್ಸನ್ನಿಟ್ಟಳು. ತಾಯಿ, ಹೋದದ್ದಕ್ಕೆ ನಾನು ಅಳುವುದಿಲ್ಲ, ಇರುವವರನ್ನು ಸರಿಯಾಗಿ ಕಾಪಾಡು ಎಂದು ಬೇಡಿಕೊಳ್ಳುವಳು. ಈ ತರುಣದಲ್ಲಿ ಅವಳಿಗೆ ಮಾವನವರೂ ಅತ್ತೆಯವರೂ ತೀರಿಹೋದಂತೆ ಕನಸುಗಳಾದುವು. ಆದರೆ ಅದೇನನ್ನೂ ಅವಳು ಗಂಡನಿಗೆ ಹೇಳಲಿಲ್ಲ. ತನ್ನ ಭಯ, ತನ್ನ ಆಸೆ ಏನಿದ್ದರೂ ಎಲ್ಲವನ್ನೂ ದಮನಮಾಡುತ್ತಾ, ದೇವರಲ್ಲಿ ಭಕ್ತಿ ಒಂದು ನಿಜ, ಪತಿದೈವದ ಸೇವೆಯೊಂದು ನಿಜ, ಮಿಕ್ಕದ್ದು ನನಗೇನು ಬೇಕು ಎಂದುಕೊಂಡು ಸುಮ್ಮನಾದಳು. ಸುಬ್ಬಣ್ಣನ ಕಷ್ಟ ಪ್ರಕೃತಿಗೆ ಮಗನ ಸಾವು ಬಹು ವಿಪರೀತದ ಪೆಟ್ಟಾಯಿತು. ಲಲಿತೆಗೆ ದೇವರ ಮೇಲೆ ಭಕ್ತಿ ಹುಟ್ಟಿದಂತೆ ಅವನಿಗೆ ಹುಟ್ಟಿರಲಿಲ್ಲ. ದೇವರ ವಿಷಯ ಯೋಚನೆಮಾಡಿದಾಗ, ಏನು ದೇವರು ರತ್ನದಂತಹ ಮಗನನ್ನು ತಕ್ಕೊಂಡ, ಇನ್ನು ಇದರ ಮೇಲೆ ನನಗೆ ಆಗುವುದೇನು ಎಂದುಕೊಳ್ಳುವನು. ಸ್ವಲ್ಪ ದಿನದಲ್ಲೇ, ಆದದ್ದಾಯಿತು ಇದಕ್ಕೆ ಯೋಚನೆ ಯಾಕೆ ಎಂದುಕೊಂಡು, ಮತ್ತೆ ಹಿಂದಿನಂತೆ ಪಾಠವೇನು ಮನೆಯೇನು ಮಗುವಿನ ಕೂಡ ಆಟವೇನು ಹೀಗೆ ಕಾಲ ಕಳೆಯುತ್ತಿದ್ದನು. ಆದರೆ ವಯಸ್ಸಿನಿಂದಲೂ, ಪ್ರಾಪ್ತವಾಗಿದ್ದ ದೊಡ್ಡ ದುಃಖದಿಂದಲೂ ಮನಸ್ಸು ತನ್ನನ್ನೇ ಅರಿಯದೆ ಸ್ವಲ್ಪ ಮೃದುವಾಗಿತ್ತು.

ಮಗಳಿಗೆ ಒಂಬತ್ತು ವರುಷವಾಗುತ್ತ ಬರಲು, ಲಲಿತಮ್ಮ ಮತ್ತೆ ಊರಿನ ಮಾತನ್ನೆತ್ತಿದಳು. ಹುಡುಗಿಗೆ ಮದುವೆಯ ವಯಸ್ಸು. ಊರಿಗೆ ಹೋಗಿ ಸರಿಯಾದ ಒಬ್ಬ ವರನಿಗೆ ಕೊಟ್ಟು ಮದುವೆಮಾಡಬೇಕು. ಸುಬ್ಬಣ್ಣನಿಗೆ ಊರಿಗೆ ಹೋಗಲು ಇಷ್ಟವಿಲ್ಲ. ತಂದೆತಾಯಿಗಳ ಹತ್ತಿರ ಹೋಗಬೇಕು. ಅವರು ಇದಾರೋ ಇಲ್ಲವೋ. ಇಲ್ಲಿಗೆ ಬಂದಾಗ ಶೇಷನನ್ನು ಕರೆದುಕೊಂಡು ಬಂದವನು ಹೋಗುವಾಗ ಶೇಷನಿಲ್ಲದೆ ಹೋಗುವುದು ಅವನಿಗೆ ಒಪ್ಪಲಿಲ್ಲ. ಆದರೆ ಏನು ಮಾಡುವುದು. ಮಗಳಿಗೆ ಮದುವೆ ಮಾಡಬೇಕು. ಇಷ್ಟರಲ್ಲೇ ಹೊರಡೋಣವೇ ಒಂದು ಕಾಗದ ಹಾಕೋಣವೇ ಎಂದುಕೊಂಡಿರುವಲ್ಲಿ ಒಂದು ದಿನ ಗಂಗಾನದಿಯಲ್ಲಿ ಸ್ನಾನಮಾಡುತ್ತಿರುವಾಗ ಹುಡುಗಿ ಪ್ರವಾಹದಲ್ಲಿ ಹೋಗಿಬಿಟ್ಟಳು. ಲಲಿತೆಯೂ ಸುಬ್ಬಣ್ಣನೂ ಕತ್ತಲಲ್ಲಿ ಒಂಟಿಯಾಗಿ ಸಿಕ್ಕಿಕೊಂಡ ಮಕ್ಕಳಂತೆ ಎದೆಯೊಡೆದು ನಿಂತರು. ಲಲಿತೆ—ನಾನು ಪೂರ್ವ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ ಇಂಥ ದುಃಖವನ್ನು ಅನು

ಭವಿಸುತ್ತಿದ್ದೇನೆ. ಈ ಜನ್ಮದಲ್ಲಿ ನಿಮ್ಮನ್ನು ನಿಮ್ಮ ತಂದೆತಾಯಿಗಳಿಂದ ಬಿಡಿಸಿಕೊಂಡು ಬಂದೆ. ಇದಕ್ಕೆ ಇನ್ನು ಯಾವ ಶಿಕ್ಷೆಯನ್ನು ಅನುಭವಿಸಬೇಕೋ ಎಂದು ನದೀ ತೀರದಲ್ಲಿ ಕುಳಿತು ಅತ್ತಳು. ಸುಬ್ಬಣ್ಣನಿಗಾದರೆ ಯೋಚಿಸುವ ಶಕ್ತಿಯೇ ಹೋಗಿಬಿಟ್ಟಿತ್ತು. ಅವನು ಮಂಕನಂತೆ ಮಗಳ ಸಂಸ್ಕಾರಗಳನ್ನು ಮುಗಿಸಿ ಹೆಂಡತಿಯನ್ನು ಮನೆಗೆ ಕರೆತಂದನು.

ಈ ಶೋಕ ಪರಂಪರೆಯನ್ನು ವರ್ಣಿಸುವುದಕ್ಕೆ ನನಗೆ ದುಃಖವಾಗುತ್ತದೆ. ಆದರೆ ಇದನ್ನು ಬದಲಾಯಿಸುವುದಕ್ಕೆ ಇದೇನು ಕಟ್ಟುಕತೆಯಲ್ಲ. ನಡೆದದ್ದು ಹೀಗೆ. ಲಲಿತೆಗೆ ಅಂದಿನಿಂದ ಏನೋ ಕಾಯಿಲೆಗೆ ಆರಂಭವಾಯಿತು. ಅವಳು—ಊರಿಗೆ ಹೋದರೆ ಇದ್ದೀತು, ನಾನು ಈ ಊರಲ್ಲಿ ಇನ್ನಿರಲಾರೆ ಎನ್ನುವಳು. ಸುಬ್ಬಣ್ಣ—ಬರುವಾಗ ಬಂದ ಹುಮ್ಮಸ್ಸೇನು; ಈಗ ಸೋತು ಹಿಂದಕ್ಕೆ ಹೋಗುವುದೆಂದರೇನು. ಅಲ್ಲಿ ಹೋಗಿ ಆಗತಕ್ಕದ್ದೇನು. ಇಲ್ಲೇ ಇರೋಣ. ಕಾಗೆ ಮಳೇಲಿ ನೆನೆದ ಹಾಗೆ ದುಃಖದಲ್ಲಿ ನೆನೆದದ್ದಾಯಿತು. ಎಲ್ಲೋ ಇದ್ದು ಕಣ್ಣು ಮುಚ್ಚಿಕೊಳ್ಳುವುದು—ಎಂದನು. ಲಲಿತಮ್ಮ ಸುಮ್ಮನಾದಳು. ಗಂಡನೇ ದೇವರೆಂದ ತನಗೇಕೆ ಈ ಅಜ್ಞಾನವೆಂದು ಮತ್ತೆ ಗೌರೀ ಪೂಜೆ ವ್ರತ ಮಾಡಿಕೊಂಡು—ತಾಯಿ, ಎಲ್ಲಿಲ್ಲದ ದುಃಖವನ್ನು ನೋಡಿದ್ದಾಯಿತು, ಇವರನ್ನು ಸುಖವಾಗಿ ನೋಡಿಕೊ, ನನ್ನನ್ನು ಸುಮಂಗಲಿಯಾಗಿ ನಿನ್ನ ಪಾದಕ್ಕೆ ಸೇರಿಸಿಕೊ, ಆದರೆ ಒಂದು ಸಲ ಅಮ್ಮನನ್ನು ನೋಡುವ ಪುಣ್ಯ ನನಗೆ ಕೊಡು—ಎಂದು ಪ್ರಾರ್ಥಿಸಿದಳು.

ಆದರೆ ಆ ಪುಣ್ಯ ಒಂದು ಅವಳಿಗೆ ಲಭಿಸಲಿಲ್ಲ. ಮಿಕ್ಕದ್ದು ಲಭಿಸಿತು. ಕಾಯಿಲೆ ಹೆಚ್ಚಾಗಿ ಮೂರು ವರುಷ ಮಕ್ಕಳ ದುಃಖದಲ್ಲಿ ಕೊರಗಿ ಒಂದು ದಿನ ಅವಳು ಸರ್ವಮಂಗಳೆಯ ಪಾದಾರವಿಂದವನ್ನು ಸೇರಿದಳು.

ಸುಬ್ಬಣ್ಣನು ಕೊನೆಯ ತನಕ ಅವಳ ಬಳಿ ಕುಳಿತು ಅವಳನ್ನು ಎಳೆಯ ಮಗುವಿನಂತೆ ನೋಡಿಕೊಂಡನು. ಕೊನೆ ಕೊನೆಗೆ ಇವರು ಗಂಡ ಹೆಂಡತಿಯರಂತೆ ಮರ್ಯಾದೆಯಿಂದಿರುವುದನ್ನು ಬಿಟ್ಟರು. ಅಣ್ಣ ತಂಗಿಯರೋ ಎಂಬಂತೆ ಧಾರಾಳವಾದ ಒಂದು ವಿಚಿತ್ರ ಸ್ನೇಹದಿಂದಿದ್ದರು. ಇವರ ಮನಸ್ಸೆರಡೂ ಒಂದಾಯಿತು. ಲಲಿತೆ ಗಂಡನನ್ನು ಕುರಿತು ಯಾವಾಗಲೂ—ದೇವರು, ದೇವರ ಇಚ್ಛೆ, ದೇವರ ಕೆಲಸ ಎಂದು

ಹೇಳುತ್ತಿರುವಳು. ಸುಬ್ಬಣ್ಣನು ಹೆಂಡತಿಯ ಪಕ್ಕದಲ್ಲಿ ಕುಳಿತು ಯೋಚಿಸುತ್ತ—"ಇವಳ ಜೀವ ಎಷ್ಟು ಸಂಸ್ಕಾರ ಪಡೆದದ್ದು. ನಾನು ಹಠವಾದಿ. ನನ್ನ ಹಠಕ್ಕಾಗಿ ನಾನು ಹೇಳಿದ್ದನ್ನೆಲ್ಲಾ ಮಾಡಿ ತಾನು ಎನ್ನುವುದನ್ನೇ ಮರೆತಳಲ್ಲಾ. ಈ ದೇವರ ಭಕ್ತಿ ಎಂಥದು" ಎಂದುಕೊಳ್ಳುವನು. ಕೊನೆಗೆ ಅವಳು ತನ್ನನ್ನು ತಿದ್ದುವುದಕ್ಕೆಂದು ಬಂದಿದ್ದ ದೇವಿಯ ಅವತಾರವೇ ಎಂದು ಅವನು ಭಾವಿಸಿಕೊಂಡನು. ಅವಳು ತೀರಿಹೋದಾಗ ಅವನು ಅಳಲಿಲ್ಲ. ಇದು ಸರಿ ಎಂದು ಅವಳಿಗೆ ಉತ್ತರ ಕ್ರಿಯೆಗಳನ್ನೆಲ್ಲಾ ಸಂಪೂರ್ಣವಾಗಿ ಮಾಡಿ ತಾನು ಇನ್ನೇನು ಮಾಡುವುದು ಎಂದು ಯೋಚಿಸಿ ಅವಳು ಅಂಥ ನಂಬಿಕೆಯನ್ನಿಟ್ಟಿದ್ದ ದೇವರಲ್ಲಿ ತನಗೂ ಭಕ್ತಿ ಉಂಟಾಗುವುದಾದರೆ ಆಗಲೆಂದು ಪುಣ್ಯಸ್ಥಳಗಳಿಗೆಲ್ಲ ಒಂದು ಸಲ ಯಾತ್ರೆ ಹೋಗಿ ಬಂದನು.

೬

ನಾವು ಹುಟ್ಟುವುದು ಏಕೆ? ಬಾಳುವುದು ಹೇಗೆ? ಎಲ್ಲಿಂದ ಬರುತ್ತೇವೆ? ಎಲ್ಲಿಗೆ ಹೊರಟಿದೇವೆ? ಸಂಸಾರವೆಂಬ ಸಾಗರದಲ್ಲಿ ಮುಳಿತು ಮೇಲೆ ಬರುವ ಅಲೆಯ ನೀರಿನ ದಿಬ್ಬವನ್ನು ಹಿಮಾಲಯವೆಂದೇ ಭ್ರಮಿಸಿ ಭೀತಿಪಡುವವೇಕೆ? ಕಷ್ಟವೆನ್ನುವುದು ಬರಿಯ ಭ್ರಮೆಯ ಭೀತಿಯಾದರೆ ನಿಜ ಯಾವುದು? ಸುಖ ನಿಜವೆ? ಸಂತೋಷ ನಿಜವೆ? ಸುಬ್ಬಣ್ಣನಿಗೆ ಈಗ್ಗೆ ಸುಮಾರು ಅರುವತ್ತು ವರುಷ ವಯಸ್ಸಾಗಿತ್ತು. ಒಬ್ಬರೇ ಯಾತ್ರೆ ಹೋಗಿ ಬೇರೆ ಬೇರೆ ಸ್ಥಳಗಳಲ್ಲಿ ದೇವರ ಸೇವೆಯನ್ನು ಮಾಡಿಕೊಂಡು ಕಲಿಕತ್ತೆಗೆ ಬರುವ ವೇಳೆಗೆ ಅವರು ಈ ಯೋಚನೆಗಳನ್ನು ಮತ್ತೆ ಮತ್ತೆ ಮಾಡಿ ಇದಕ್ಕೆ ಉತ್ತರ ತೋರದೆ ಜೀವನವೆನ್ನುವುದು ಸಫಕರಿಗೆ ವೇಷಹಾಕಿ ಕುಣಿಸುವ ಬಯಲುನಾಟಕ ಎಂದುಕೊಂಡರು. ಅವರಿಗೆ ತಾವು ಮೈಸೂರಿನಲ್ಲಿ ಅಸಹ್ಯಪಟ್ಟುಕೊಂಡು ಬಂದದ್ದು, ಕಲಿಕತ್ತೆಯಲ್ಲಿ ಸಂಸಾರ ಮಾಡಿದ್ದು, ಇದೆಲ್ಲ ಮಕ್ಕಳ ಆಟದಂತೆ ತೋರಿಬಂದಿತು. ಎಂದರೆ ತನ್ನ ಪರವಾಗಿ ಮಾತ್ರ. ತಾವು ಲಲಿತೆಯನ್ನು ನೋಡಿದ್ದು ತಮ್ಮ ಜನ್ಮದ ದೊಡ್ಡ ಪುಣ್ಯವೆಂದು ಅವರು ಎಣಿಸಿದರು. ಅವಳು ಜೀವನದಲ್ಲಿ ತೋರಿಸಿದ ಸಹನವನ್ನು ತಾನು ತೋರಿಸಲಿಲ್ಲವಲ್ಲಾ ಎಂದು ವ್ಯಸನಪಟ್ಟರು. ತಾವು ತಾಯಿತಂದೆಗಳನ್ನು ಬಿಟ್ಟುಬಂದದ್ದು ತಪ್ಪುಕೆಲಸ. ತಮ್ಮ ಮಗನೂ ಮಗಳೂ ಹೋದಾಗ ತನಗೆಷ್ಟು ಖೇದವಾಯಿತೋ ತಾವು ಬಂದುಬಿಟ್ಟಾಗ ತಮ್ಮ ತಾಯಿತಂದೆಗಳಿಗೆ ಅಷ್ಟು ಖೇದವಾಗಿರಬೇಕಲ್ಲವೆ? ಆದರೂ ತಾವು ತಮ್ಮ ಮೂಗಿನ ನೇರಕ್ಕೆ

ನಡೆದಂತೆ ಆಯಿತೇ ಹೊರತು, ಇತರರ ಕಷ್ಟ ಸುಖವನ್ನು ಯೋಚಿಸಿ ನಡೆದುಕೊಂಡ ಹಾಗಾಗಲಿಲ್ಲ. ಹೀಗೆಲ್ಲಾ ಯೋಚಿಸುತ್ತಾ ಯಾತ್ರೆಯನ್ನು ಮುಗಿಸಿಕೊಂಡು ಕಲಿಕತ್ತೆಗೆ ಬಂದರು. ಅಲ್ಲಿ ಮಗನ ಜ್ಞಾಪಕವೂ ಹೆಂಡತಿಯ ಜ್ಞಾಪಕವೂ ಮತ್ತೆ ಬಲವಾದುವು. ತಾವು ಮಾಡಿದ್ದು ತಪ್ಪು ಅಲ್ಲ. ಆ ಹುಡುಗ ಅಷ್ಟು ಚಿಕ್ಕ ವಯಸ್ಸಿನಲ್ಲಿ ತೀರಿ ಹೋದನಲ್ಲಾ. ಅವನು ಮೈಸೂರಿನಲ್ಲಿದ್ದಿದ್ದರೆ ಎಷ್ಟರ ಮಟ್ಟಿಗೆ ಸುಖ ಪಡುತ್ತಿದ್ದನು. ಒಂದಿಷ್ಟು ಮೊಸರನ್ನು ಹಾಕುವುದಕ್ಕೆ ಮನೆಯಲ್ಲಿ ಅವಕಾಶವಿರಲಿಲ್ಲ. ಆ ಹೆಂಡತಿಯು ಏನು ಸುಖಪಡುತ್ತಿದ್ದಳು ? ದಿನವೂ ಮಾತು ಕೇಳುತ್ತಿದ್ದಳು. ತಾವು ಮಾಡಿದ್ದೇ ಸರಿ ಎಂದುಕೊಂಡರು. ಪರದೇಶಕ್ಕೆ ಬಂದರೇನು ? ತಾವು ಕೆಟ್ಟವರಾದರೇನು ? ಆ ಹೆಂಡತಿಯೂ ಆ ಮಗನೂ ಇದ್ದಷ್ಟು ದಿನ ಸುಖವಾಗಿದ್ದು ಹೋದರು. ಇನ್ನು ತನ್ನ ಪಾಡು ಏತಕ್ಕೆ? ತಾವು ಒಳ್ಳೆಯವರಾಗದಿದ್ದರೆ ಏನು ? ಎಲ್ಲೋ ಹೇಗೋ ದಿನ ಕಳೆಯುವುದು ಎಂದು ಯೋಚಿಸಿಕೊಂಡರು. ಮನೆಯನ್ನೆಲ್ಲ ನೋಡಲು ಅವರಿಗೆ ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಾಯಿತು. ಯಾರನ್ನು ಚೆನ್ನಾಗಿ ಸಾಕುವುದಕ್ಕೆಂದು ಇಲ್ಲಿಗೆ ಓಡಿ ಬಂದದ್ದಾಯಿತೋ ಆ ಮಗನು ಹೋದನು. ಯಾರಿಗಾಗಿ ಒಂದು ಒಳ್ಳೆಯ ಸಂಸಾರವನ್ನು ಕಟ್ಟುವುದಕ್ಕೆ ಇಲ್ಲಿ ಪ್ರಯತ್ನ ಮಾಡಿದ್ದಾಯಿತೋ ಆ ಹೆಂಡತಿ ಹೋದಳು. ಅವರೊಂದಿಗೆ ಮಕ್ಕಳಾಟದ ಗುಬ್ಬಚ್ಚಿಯ ಗೂಡಿನಂತೆ ಆ ಆಸೆಯೆಲ್ಲ ಕರಗಿಹೋಯಿತು. ನಮಗೆ ದೇವರ ಸಾನ್ನಿಧ್ಯದಲ್ಲಿ ಬರುವ ಶಾಂತಿಯು ಸಂಸಾರದ ಆವರಣಕ್ಕೆ ಬಂದಾಗ ಇರುವುದಿಲ್ಲ. ಸುಬ್ಬಣ್ಣನವರು ತಮ್ಮ ಸಂಪಾದನೆಯಿಂದ ಮೊದಲು ತಾವು ಬಾಡಿಗೆಗೆ ತೆಗೆದುಕೊಂಡಿದ್ದ ಮನೆಯನ್ನು ಕೊಂಡು ಕೊಂಡಿದ್ದರು. ಆಗಾಗ ಸಂಸಾರಕ್ಕಾಗಿ ಕೆಲವು ಸಾಮಾನುಗಳನ್ನು ತೆಗೆದುಕೊಂಡಿದ್ದರು. ಮಗನಿಗೆ ಬೇಕಾದ ಬಟ್ಟೆ ಮುಂತಾದ್ದನ್ನು ತೆಗೆದುಕೊಟ್ಟಿದ್ದರು. ಮಗ ಹೋದ ಮೇಲೆ ಲಲಿತಮ್ಮ ಅದನ್ನೆಲ್ಲಾ ಒಂದು ಪೆಟ್ಟಿಗೆಯಲ್ಲಿ ಹಾಕಿ ಇರಿಸಿದ್ದಳು. ಹುಡುಗಿಗೆ ತೆಗೆದಿದ್ದ ಬಟ್ಟೆ ಬರೆಯನ್ನೂ ಒಡವೆ ತೊಡವುಗಳನ್ನೂ ಇನ್ನೊಂದು ಪೆಟ್ಟಿಗೆಯಲ್ಲಿ ಹಾಕಿಟ್ಟಿದ್ದಳು. ಇನ್ನು ಅವಳ ಸಾಮಾನು ಬೇರೆ. ಸುಬ್ಬಣ್ಣನವರು ಸಾಮಾನೆಲ್ಲವನ್ನೂ ನೋಡಿದರು. ಪೆಟ್ಟಿಗೆಗಳನ್ನು ತೆಗೆದು ಮಕ್ಕಳ ಬಟ್ಟೆ ಬರೆಯನ್ನು ನೋಡಿದರು. ತಾವು ಕಳೆದುಕೊಂಡ ಸೌಖ್ಯವೆಂಥದೆಂದು ಮತ್ತೆ ಮತ್ತೆ ಧ್ಯಾನಮಾಡಿ ಜೀವನದಲ್ಲಿ ಬಹಳ ಬೇಸರವನ್ನು ಪಡೆದರು. ಕೊನೆಗೆ ಈ ಹಾಳು ಕೊಂಪೆಯಲ್ಲಿ ನಾನು ಇರಲಾರೆ

ಎಂದುಕೊಂಡು, ತಮ್ಮ ಹತ್ತಿರ ಪಾಠ ಹೇಳಿಸಿಕೊಳ್ಳುತ್ತಿದ್ದವರನ್ನು ಕರೆದು ಅವರಿಗೆ, ನಾನು ಊರಿಗೆ ಹೋಗುತ್ತೇನೆ, ನಿಮಗೆ ಬೇಕಾದ ದ್ದನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಅವರು ತೆಗೆದುಕೊಂಡು ಮಿಕ್ಕದ್ದನ್ನೆಲ್ಲ ಬಡಬಗ್ಗರನ್ನು ಕರೆದು ಎಲ್ಲರಿಗೂ ಕೊಟ್ಟು ಮನೆಯನ್ನು ಆ ಬೀದಿಯಲ್ಲಿದ್ದ ಒಂದು ಭಜನೆಯ ಕೂಟದವರಿಗೆ ದಾನಮಾಡಿ ತಾವು ಬಹಳ ದಿನದಿಂದ ನುಡಿಸುತ್ತಿದ್ದ ಪಿಟೀಲನ್ನೂ ಸ್ವಲ್ಪ ಹಣವನ್ನೂ ತೆಗೆದುಕೊಂಡು ಕಲಿಕತ್ತೆಯನ್ನು ಬಿಟ್ಟು ಹೊರಟರು.

ಇದಿಷ್ಟನ್ನು ಮಾಡುವ ಸಂಭ್ರಮದಲ್ಲಿ ಎಲ್ಲಿಗೆ ಹೋಗುವುದೆಂದು ಅವರು ಯೋಚನೆಮಾಡಲಿಲ್ಲ. ರೈಲ್ವೆ ಸ್ಟೇಷನಿಗೆ ಬಂದು ತನ್ನ ಕೈಯಲ್ಲಿದ್ದ ಹಣವನ್ನೆಲ್ಲಾ ಸ್ಟೇಷನ್ ಮೇಷ್ಟರಿಗೆ ಕೊಟ್ಟು ಒಂದು ಟಿಕೇಟು ಕೊಡಿ ಎಂದರು. ಅವನು—ಎಲ್ಲಿಗೆ ಎಂದನು. ಸುಬ್ಬಣ್ಣ— "ಎಲ್ಲಿಗಾದರೂ." ಸ್ಟೇಷನಿನವನು—"ಎಲ್ಲಿಗಾದರೂ ಎಂದರೆ ಎಲ್ಲಿಗೆ ಕೊಡುವುದು." ಸುಬ್ಬಣ್ಣನವರಿಗೆ ತಮ್ಮ ಅವಸ್ಥೆಯನ್ನು ನೆನೆದು ಕೊಂಡು ಸ್ವಲ್ಪ ಕೋಪ ಬಂತು, ಸ್ವಲ್ಪ ನಗು ಬಂತು. ಸ್ಟೇಷನ್ ಮೇಷ್ಟರನ್ನು "ಸ್ವಾಮಿ, ಇಂಥ ಊರಿಗೆ ಟಿಕೇಟು ಕೊಡಿ ಎಂದರೆ ಇದೆಯೋ ಇಲ್ಲವೋ ನೋಡಬೇಕು. ಎಲ್ಲಿಗಾದರೂ ಕೊಡಿ ಎಂದರೆ ನಿಮ ಗೇನು ಕಷ್ಟ? ನಿಮ್ಮ ಕೈಲಿರುವ ರೂಪಾಯಿಗೆ ಎಲ್ಲಿಯವರೆಗೆ ಹೋಗ ಬಹುದೋ ಅಲ್ಲಿಯವರೆಗೆ ಟಿಕೇಟು ಕೊಡಿ" ಎಂದರು. ಸ್ಟೇಷನ್ ಮೇಷ್ಟರು ಇವರ ಮುಖವನ್ನು ನೋಡಿ ಏನು ಹುಚ್ಚನಾಗಿದ್ದಾನೆ ಎಂದುಕೊಂಡು ದಕ್ಷಿಣ ದೇಶದವನಾಗಿ ಕಂಡದ್ದರಿಂದ ಅವರಿಗೆ ಬೊಂಬಾಯಿಯವರೆಗೆ ಒಂದು ಟಿಕೇಟನ್ನು ಕೊಟ್ಟು, ಮೂರು ರೂಪಾಯಿ ಚಿಲ್ಲರೆ ವಾಪಸು ಕೊಟ್ಟನು. ಅದನ್ನು ತೆಗೆದುಕೊಂಡು ಸುಬ್ಬಣ್ಣನವರು ರೈಲು ಹತ್ತಿದರು. ಟಿಕೇಟು ಯಾವ ಊರಿಗೆ ಎಂದು ಕೂಡ ನೋಡಲಿಲ್ಲ.

೭

ನಾಲ್ಕೈದು ದಿನ ರೈಲು ಪ್ರಯಾಣ ಮುಗಿಸಿಕೊಂಡು ಅವರು ಬೊಂಬಾಯಿಗೆ ಬಂದು ಸೇರಿದರು. ಸೇರಿದಾಗ ಟಿಕೇಟನ್ನು ರೈಲಿನ ವರು ತೆಗೆದುಕೊಂಡರು. ಪ್ರಯಾಣ ಇಲ್ಲಿಗೆ ಮುಗಿಯಿತೆಂದು, ಸುಬ್ಬಣ್ಣ—ಇದು ಯಾವ ಊರೆಂದು ಕೇಳಿದರು. ಬೊಂಬಾಯಿ ಎಂದು ಹೇಳಿದರು. ಯಾವ ಊರಾದರೇನು ಎಂದು ಸುಬ್ಬಣ್ಣ ಊರೊಳಕ್ಕೆ ಹೊಕ್ಕರು. ಸ್ಟೇಷನ್ ಮೇಷ್ಟರು ಕೊಟ್ಟಿದ್ದ ಹಣದಲ್ಲಿ ಅವರು ದಾರಿ ಯಲ್ಲಿ ಖರ್ಚುಮಾಡಿದ್ದು ಹೋಗುತ್ತಾ ಒಂದೂವರೆ ರೂಪಾಯಿಯಷ್ಟು

ಉಳಿದಿತ್ತು. ಯಾವುದೋ ಒಂದು ಬೀದಿಯಲ್ಲಿ ಸ್ವಲ್ಪ ಮಿಠಾಯಿ ಕೊಂಡುಕೊಂಡು ಅಲ್ಲಿ ಒಂದು ದೇವಸ್ಥಾನದ ಮುಂದುಗಡೆ ಕುಳಿತು ಸಮಯ ನೋಡಿ ಹತ್ತಿರದ ನಲ್ಲಿಯ ಬಳಿ ಸ್ನಾನ ಮಾಡಿಕೊಂಡು ಅದನ್ನು ತಿಂದರು. ಪ್ರಯಾಣದಲ್ಲಿ ಯಾವ ಯೋಚನೆಯನ್ನೂ ಹಚ್ಚಿ ಕೊಳ್ಳದೆ ಬರುತ್ತಾ, ತಾವು ಹೆಂಡತಿ ಮಕ್ಕಳಿಗಾಗಿ ಅಷ್ಟು ಖೇದ ಪಟ್ಟದ್ದು ತಪ್ಪು ಎಂದೂ, ಇನ್ನು ಮೇಲೆ ಯಾವುದನ್ನೂ ಅಷ್ಟು ಹಚ್ಚಿ ಕೊಳ್ಳಬಾರದೆಂದೂ, ಅದೇ ನಿಜವಾದ ಸುಖಕ್ಕೆ ದಾರಿಯೆಂದೂ ಅವರು ನಿರ್ಧರಿಸಿದ್ದರು. ಕಟ್ಟಿಕೊಂಡವರಿಗೆ ಬಿಟ್ಟ ದುಃಖ ತಪ್ಪಿದ್ದಲ್ಲ. ಬಿಟ್ಟೇ ಇರುವವನಿಗೆ ದುಃಖವೇ ಇಲ್ಲ. ಇದೇನು ಹೊಸದಲ್ಲ. ಗೀತೆಯಲ್ಲಿ ಹೇಳಿರುವ ತತ್ತ್ವವೂ ಇದೇ. ಇದನ್ನು ಸುಬ್ಬಣ್ಣನವರು ಈ ಮೊದಲು ಕೇಳಿ ತಿಳಿದಿದ್ದರು. ಈಗ ಅನುಭವಿಸಿ ತಿಳಿದರು. ಹಿಂದೆ ಏನೋ ತಿಳಿಯದೆ ಇದು ತನ್ನದು ಇದು ನನ್ನದು ಎಂದು ಭಾವಿಸಿ ಕಷ್ಟಕ್ಕೆ ಸಿಕ್ಕಿದ್ದಾ ಯಿತು. ಇನ್ನು ಅದೇ ತಪ್ಪನ್ನು ಮಾಡಬಾರದು. ಕೇವಲ ಸಂನ್ಯಾಸಿ ಯಂತೆ ಇರಬೇಕು ಎಂದು ನಿರ್ಧರಿಸಿಕೊಂಡರು. ಕೈಯಲ್ಲಿದ್ದ ಒಂದೂ ವರೆ ರೂಪಾಯಿ ನಾಲ್ಕು ದಿನದಲ್ಲಿ ಖರ್ಚಾಯಿತು. ಐದನೆಯ ದಿನ ಮಿಠಾಯಿಗಾಗಿ ಕಾಸು ಸಂಪಾದಿಸುವುದಕ್ಕೆ ಏನು ಮಾಡುವುದೆಂದು ಯೋಚಿಸಿ ಇದಕ್ಕೆ ಮಾನವೇನು ಮರ್ಯಾದೆ ಏನು ಎಂದು ಒಬ್ಬ ಮಿಠಾಯಿ ಅಂಗಡಿಯ ಮುದುಕಿಯ ಹತ್ತಿರ ಹೋಗಿ ಪಿಟೀಲನ್ನು ಬಾರಿಸುತ್ತಾ ಕುಳಿತರು. ಜನ ಅಲ್ಲಿ ಇಲ್ಲಿ ಹೋಗುವವರು ಬಂದು ಸ್ವಲ್ಪ ಹೊತ್ತು ಕೇಳುತ್ತಾ ನಿಂತರು. ಇದರಿಂದ ಮುದುಕಿಗೆ ವ್ಯಾಪಾರ ಚೆನ್ನಾಗಿ ಆಯಿತು. ಕೊನೆಗೆ ಮುದುಕಿ ಅಪ್ಪಾ ನಿನ್ನಿಂದ ನನಗೆ ವ್ಯಾಪಾರ ಆಯಿತು. ಏನಾದರೂ ಕೊಡುತ್ತೇನೆ ತೆಗೆದುಕೊ ಎಂದಳು. ಸುಬ್ಬಣ್ಣನವರು, ನನಗೇನೂ ಬೇಡ, ನನಗೆ ಒಂದು ಊಟದ ಮಿಠಾಯಿ ಕೊಡು ಅಷ್ಟೇ, ಎಂದರು. ಮುದುಕಿ ಅಗತ್ಯವಾಗಿ ಆಗಲಿ ಎಂದು ಅವರು ತೆಗೆದುಕೊಳ್ಳುವಷ್ಟು ಮಿಠಾಯಿ ಕೊಟ್ಟು, ದಿನಾ ಬರುವು ದಾದರೆ ಬಾ, ಮಿಠಾಯಿ ನಿನಗೆ ಬೇಕಾದಷ್ಟು ಕೊಡುತ್ತೇನೆ ಎಂದಳು. ಸುಬ್ಬಣ್ಣನವರು ಈ ಏರ್ಪಾಡಿಗೆ ಒಪ್ಪಿದರು. ಈ ರೀತಿಯಾಗಿ ಹದಿನೈದು ದಿನ ಇವರು ಮಿಠಾಯಿ ಅಂಗಡಿಯ ಹತ್ತಿರ ಪಿಟೀಲು ಬಾರಿಸುವುದು, ಆ ಮುದುಕಿ ಇವರಿಗೆ ಮಿಠಾಯಿ ಕೊಡುವುದು ಹೀಗೆ ನಡೆಯಿತು. ಆ ದಿನ ಮುದುಕಿಯ ಅಂಗಡಿಯ ಬಳಿ ಇವರು ಪಿಟೀಲನ್ನು ಬಾರಿಸು ತ್ತಿರುವಾಗ ಒಂದು ಗಾಡಿ ಬಂದು ಅಂಗಡಿಯ ಬಳಿ ನಿಂತಿತು. ಅದರಲ್ಲಿ ಒಬ್ಬ ದೊಡ್ಡಮನುಷ್ಯನು ಕುಳಿತಿದ್ದನು. ಅವನ ಕೈಯಲ್ಲಿದ್ದ ವಜ್ರದ

ಉಂಗುರವೇ ಸಾವಿರಾರು ರೂಪಾಯಿಗಳು ಬಾಳಬಹುದಾಗಿತ್ತು. ಇಂಥಾ ಸಾಹುಕಾರನ ಗಾಡಿ ಹತ್ತಿರ ನಿಂತಿದ್ದನ್ನು ನೋಡಿ ಸೇರಿದ್ದ ಗುಂಪು ಅವನಿಗೆ ದಾರಿಬಿಟ್ಟು ನಿಂತಿತು. ಸಾಹುಕಾರನು ಐದು ನಿಮಿಷ ಗಾಡಿ ಯಲ್ಲಿ ಕುಳಿತಿದ್ದ ಹಾಗೆಯೇ ಈ ಪಿಟೀಲನ್ನು ಕೇಳಿ ಗಾಡಿಯಿಂದ ಇಳಿದು ಬಂದು ಮುದುಕಿಯನ್ನು ಕುರಿತು "ಈತನು ಯಾರು? ನಿನ ಗೇನಾಗಬೇಕು?" ಎಂದನು. ಅವಳು "ಯಾರೋ ತಿಳಿಯದು. ದಿನಾ ಬಂದು ಇಲ್ಲಿ ಪಿಟೀಲನ್ನು ನುಡಿಸುತ್ತಾನೆ. ನಾನು ಅವನಿಗೆ ಮಿಠಾಯಿ ಕೊಡುತ್ತೇನೆ" ಎಂದಳು. ಆ ರಾಗ ಮುಗಿದ ಮೇಲೆ ಸಾಹುಕಾರನು ಸುಬ್ಬಣ್ಣನನ್ನು "ಅಣ್ಣ ನಿಮ್ಮದು ಯಾವ ಊರು" ಎಂದು ಕೇಳಿದನು. ಸುಬ್ಬಣ್ಣನವರಿಗೆ ತಮ್ಮ ಸಂಗೀತದ ಸುಖದಲ್ಲಿ ಯಾವ ಮಾತನ್ನೂ ಆಡುವ ಇಷ್ಟವಿರಲಿಲ್ಲ. ಅವರು ಮತ್ತೆ ಅದೇ ರಾಗದಲ್ಲಿ ಗೀತಗೋವಿಂದದ ಗೀತೆಯೊಂದನ್ನು ಸೊಗಸಾಗಿ ನುಡಿಸುತ್ತಾ ಗಾನ ದಲ್ಲಿ ಮಗ್ನವಾಗಿಹೋದರು. ಸಾಹುಕಾರನು ಆನಂದದಿಂದ ಪರವಶ ನಾದನು. ಅದು ಮುಗಿದ ಮೇಲೆ ಸುಬ್ಬಣ್ಣನನ್ನು ಗಟ್ಟಿಯಾಗಿ ಕರೆದು "ಅಣ್ಣಾ ನೀವು ನನ್ನ ಜತೆಗೆ ಬರುತ್ತೀರಾ? ಸ್ವಲ್ಪ ಸಂಗೀತ ಕೇಳ ಬೇಕು" ಎಂದನು. ಸುಬ್ಬಣ್ಣನವರಿಗೆ ಮೊದಲು ಸ್ವಲ್ಪ ಕೋಪ ಬಂತು. ಅವರು ತಾವಾಗಿ ಹೋಗಿ ದಿಕ್ಕಿಲ್ಲದ ಮುದುಕಿಯ ಅಂಗಡಿಯ ಬಳಿ ಹಾಡಿದ್ದು ತಾವು ಅವಳಿಗೆ ಉಪಕಾರ ಮಾಡಿದಂತೆಯೂ ಆಯಿತೆಂದು ಎಣಿಸಿದ್ದರು. ಅದರಲ್ಲಿ ಅವರಿಗೆ ಅವಮಾನವೇನೂ ಇಲ್ಲ. ಈ ಸಾಹು ಕಾರ ಬಂದು ತನ್ನನ್ನು ಕೇಳಿದುದಕ್ಕೆ ಇವನು ಬಹಳ ದೊಡ್ಡಮನುಷ್ಯ, ತಾನು ಬೀದೀ ಪಿಟೀಲಿನವನು ಎಂದುಕೊಂಡಿದಾನೆಯೋ ಏನೋ ಎಂದು ಸ್ವಲ್ಪ ಅಸಮಾಧಾನಪಟ್ಟರು. ಆದರೆ ಒಡನೆಯೇ ನನಗೇನು ಜಂಭ, ಹಿಂದೆ ಪಾಠ ಹೇಳಿ ಕಾಸು ಸಂಪಾದಿಸಲಿಲ್ಲವೆ? ಈಗ ಇವನ ಹತ್ತಿರ ನುಡಿಸುವುದಕ್ಕೆ ಏನು ಅಡ್ಡಿ? ಎಂದುಕೊಂಡು ಆಗಲಿ ಬರು ತ್ತೇನೆ ಎಂದೆದ್ದು ಹೊರಟರು. ಮಿಠಾಯಿ ಅಂಗಡಿಯ ಮುದುಕಿಯು ಎಂದಿನಂತೆ ಮಿಠಾಯಿ ಕೊಡುವುದಕ್ಕೆ ಬಂದಳು. ಸಾಹುಕಾರನು ಅದೇನೂ ಬೇಡ, ನಾನು ಎಲ್ಲಾ ಕೊಡುತ್ತೇನೆ, ಎಂದನು. ಅವಳು ಸುಬ್ಬಣ್ಣನವರಿಗೆ, ಹೋಗಲಿ ಈ ಹಣ ಇಟ್ಟುಕೊಂಡಿರು, ಎಂದು ಐದು ರೂಪಾಯಿಗಳನ್ನು ಕೊಡುವುದಕ್ಕೆ ಬಂದಳು. ಸುಬ್ಬಣ್ಣನವರು ನನಗೆ ಹಣವೇಕೆ? ಬೇಡ ಎಂದರು. ಮುದುಕಿ "ನಿನಗೆ ತಿಳಿಯದು. ನೀನು ಪರಸ್ಥಳದವನಂತೆ ಇದ್ದೀಯೆ. ಇಲ್ಲಿ ನೀನು ತಲೇನೋವು ಮೂಗುನೋವು ಎಂದರೆ ನಿನ್ನನ್ನು ಕೇಳುವವರಾರು? ಕೆಟ್ಟ ಮಾತಾಡ

ಜಾರದು. ಸತ್ತು ಹೋದರೆ ಹೆಣ ನಾಯಿ ಪಾಲಾಗುತ್ತದೆಯಲ್ಲ. ಪರದೇಶದಲ್ಲಿರುವವನು ಕೈಯಲ್ಲಿ ಕಾಸು ಇಟ್ಟುಕೊಂಡಿರಬೇಕು. ತಿಳಿದ ಇಬ್ಬರು ಸ್ನೇಹಿತರನ್ನು ಮಾಡಿಕೊಳ್ಳಬೇಕು'' ಎಂದಳು. ಸುಬ್ಬಣ್ಣ ನವರು ''ಈ ಹಣ ನಿನ್ನಲ್ಲೇ ಇರಲಿ. ನನಗೆ ಬೇಕಾದಾಗ ಬಂದು ತೆಗೆದು ಕೊಂಡು ಹೋಗುವೆನು'' ಎಂದರು. ಅವರೂ ಸಾಹುಕಾರನೂ ಹೊರಟುಹೋದರು.

ಸಾಹುಕಾರನ ಮನೆ ಅರಮನೆಯಂತಿತ್ತು. ಅವನಿಗೆ ಒಬ್ಬ ವಯಸ್ಸಾದ ತಾಯಿ, ಒಬ್ಬ ಹೆಂಡತಿ, ಒಬ್ಬಳೇ ಮಗಳು; ಪರಿವಾರ ಬಹಳ ಇತ್ತು. ಸಾಹುಕಾರನು ಆ ದೊಡ್ಡ ಮನೆಯಲ್ಲಿ ಬೀದಿಯ ಕಡೆಯ ಒಂದು ಕೊಠಡಿಯನ್ನು ಸುಬ್ಬಣ್ಣನವರಿಗೆ ತೋರಿಸಿ ನೀವು ಬೇಕಾದರೆ ಇಲ್ಲಿಯೇ ಇರಿ ಎಂಬುದಾಗಿ ಹೇಳಿದನು. ಅವನು ಸುಬ್ಬಣ್ಣನಿಗೆ ನೇಮಿಸಿದ ಕೆಲಸವೆಲ್ಲಾ ಇಷ್ಟೆ. ಅವನು ಇಷ್ಟ ಬಂದಾಗ ಪಿಟೀಲನ್ನು ಬಾರಿಸಬಹುದು. ಸುಬ್ಬಣ್ಣನವರಿಗೆ ಈ ರೀತಿ ದೊಡ್ಡ ಮನೆಯಾಗಲಿ, ಈ ಐಶ್ವರ್ಯವಾಗಲಿ ಹೊಸತಲ್ಲ. ಇಂತಹುದನ್ನು ಅವರು ಬಹಳ ನೋಡಿದ್ದರು. ಅದರಲ್ಲಿ ಅವರಿಗೆ ಬೇಸರ. ಇಷ್ಟು ಹಣವಿರುವ ಮನುಷ್ಯರು ಸಾಮಾನ್ಯವಾಗಿ ತಾವು ಬೇರೆಯ ಜಾತಿಯ ಮನುಷ್ಯರಂತೆ ಮಾತ ನಾಡುವರು. ಎಲ್ಲಿಲ್ಲದ ಧೋರಣೆಯನ್ನೂ ತೋರುವರು. ಅವರು ಸಾಹುಕಾರನಿಗೆ—''ಅಪ್ಪಾ, ನಾನು ನಿಮ್ಮಲ್ಲಿಯೇ ನಿಲ್ಲುವುದಿಲ್ಲ. ನಾನು ಪರದೇಶಿ. ಈಗ ಗೀತಗೋವಿಂದವನ್ನು ಬಾರಿಸುತ್ತೇನೆ. ಕೇಳಿ. ಇನ್ನು ಯಾವಾಗಲಾದರೂ ಬಾ ಎಂದರೆ ಬರುತ್ತೇನೆ. ಆಗ ಕೇಳಿ'' ಎಂದರು. ಸಾಹುಕಾರನು ಕುಳಿತುಕೊಂಡು ಈಗಲೇ ಬಾರಿಸು ಎಂದನು. ಸುಬ್ಬಣ್ಣನವರು ''ಸಾವಿರ ಹೇತವ ದೀನಾ'' ಎಂಬ ಗೀತವನ್ನು ಬಾರಿಸಿದರು.

ಸುಬ್ಬಣ್ಣನವರು ಪಿಟೀಲು ನುಡಿಸುವುದರ ಸೊಗಸು ಹೀಗೆಂದು ನಾನು ಹೇಳಲಾರೆ. ಅವರು ತೊರೆಯಪುರದಲ್ಲಿ ದೇವಸ್ಥಾನದಲ್ಲಿ ನುಡಿ ಸುವಾಗ ಅದನ್ನು ನಾನು ಕೇಳಿದ್ದೇನೆ. ಇತರರು ಪಿಟೀಲು ಬಾರಿಸು ವುದನ್ನೂ ಕೇಳಿದ್ದೇನೆ. ಎರಡಕ್ಕೂ ವ್ಯತ್ಯಾಸವನ್ನು ಒಂದು ಮಾತಿ ನಲ್ಲಿ ಹೇಳಬಹುದು. ಅವರು ನುಡಿಸುವುದು ಆಪ್ತನಲ್ಲಿ ಹೇಳುವ ಮನಸ್ಸಿ ನೊಳಗಣ ಮಾತಿನಂತೆ; ಇತರರು ಬಾರಿಸುವುದು ಸಭೆಯಲ್ಲಿ ಕೊಡುವ ಲೆಕ್ಚರಿನಂತೆ. ಇತರರು ಪಿಟೀಲನ್ನು ತಮ್ಮ ಕೌಶಲವನ್ನು ತೋರಿಸು ವುದಕ್ಕಾಗಿ ಇರುವ ಒಂದು ಸಾಧನವೆಂಬಂತೆ ಉಪಯೋಗಿಸುವರು.

ಇವರು ಅದು ತಮ್ಮ ದೇಹದ ಹೊರಗಣ ಧ್ವನಿಯೆಂಬಂತೆ ಉಪಯೋಗಿಸುವರು. ಸ್ವಾರಸ್ಯ ಹುಟ್ಟಿದಾಗ ಇವರು ನುಡಿಸುವ ರೀತಿಯಲ್ಲಂತೂ ನಮಗೆ ಆ ಪಿಟೀಲು ಬೇರೆಯ ವಸ್ತು, ಅದನ್ನು ಇವರು ಹಿಡಿದುಕೊಂಡು ಕೈಯಿಂದ ನುಡಿಸುತ್ತಿದ್ದಾರೆ ಎಂಬ ಭಾವನೆಯೇ ಬರುತ್ತಿರಲಿಲ್ಲ. ಇತರರು ಸ್ವರವನ್ನು ಹುಡುಕಿಕೊಂಡು ಹೋಗುವರು. ಇವರನ್ನು ಸ್ವರ ತಾನೇ ಹುಡುಕಿಕೊಂಡು ಬರುವಂತಿತ್ತು. ಅವರ ಮುಖದ ಮೇಲೆ ಒಂದು ಭಾವವು ಕಾಣುತ್ತಿರುವುದು ; ಪಿಟೀಲಿನಲ್ಲಿ ಆ ಭಾವವು ಹೊರಹೊಮ್ಮುತ್ತಿರುವುದು. 'ರಾಧೆ ನಿನ್ನ ವಿರಹದಿಂದ ದೀನಳಾಗಿ ಹಾಳೆ' ಎಂಬ ಮಾತನ್ನು ದೇಶೀತೋಡಿಯಲ್ಲಿ ನುಡಿಸುತ್ತಿರಬೇಕಾದರೆ ಅವರ ಮುಖದಲ್ಲಿ ಒಂದು ಅತಿಶಯವಾದ ದೈನ್ಯವು ತೋರುವುದು ; ಆ ಸ್ವರವು ಅಯ್ಯೋ ಎಂದು ಕನಿಕರವನ್ನುಂಟುಮಾಡುವಂತೆ ನುಡಿಯುವುದು. ಮುಖ್ಯ ಅವರು ಪಿಟೀಲು ನುಡಿಸುತ್ತಿದ್ದ ಹಾಗೆ ನಾನು ಈಚೆಗೆ ಯಾರಿಂದಲೂ ಕೇಳಿಲ್ಲ. ಯಾವ ಸಂಗೀತಗಾರನು . ಗಾನವನ್ನು ಅಂತರ್ಯದಲ್ಲಿ ದೇವರ ಪೂಜೆಗೆಂದು ಉಪಯೋಗಿಸುವನೋ, ತನ್ನ ಬುದ್ಧಿಶಕ್ತಿಯ ಪ್ರದರ್ಶನಕ್ಕೆ ಅವಕಾಶವೆಂದು ಉಪಯೋಗಿಸುವುದಿಲ್ಲವೋ, ಅವನಿಗೆ ಮಾತ್ರ ಈ ರೀತಿಯ ಸೊಗಸು ಲಭ್ಯ. ಯಾವನು ಗಾನ ದೊಡ್ಡದು ತಾನು ಅಲ್ಪನೆಂದು ತಿಳಿದಿರುವನೋ, ತಾನು ದೊಡ್ಡ ವಿದ್ವಾಂಸ ತನ್ನ ವಿದ್ಯೆಯನ್ನು ತೋರಿಸುವುದಕ್ಕೆ ಗಾನವು ಸಾಧನ ಎಂದು ಇರುವುದಿಲ್ಲವೋ, ಅವನಿಗೆ ಮಾತ್ರ ಈ ರಸವು ಸಾಧ್ಯ. ಸಂಗೀತಗಾರರಿಗೆ ಸಂಗೀತದ ಮಾತನ್ನು ಹೇಳುವುದಕ್ಕೆ ನಾನು ಯಾವೂರ ದಾಸಯ್ಯ ? ಆದರೆ ಸುಬ್ಬಣ್ಣನವರು ಬಾರಿಸಿದ್ದನ್ನು ಕೇಳಿದಾಗ ಸಭೆಯ ಪಂಡಿತರೂ ಪಾಮರರೂ ಮೈಮರೆಯುತ್ತಿದ್ದಹಾಗೆ ಈಚೆಗೆ ಇತರರು ಬಾರಿಸಿದಾಗ ಮೈಮರೆತದ್ದನ್ನು ನಾನು ನೋಡಿಲ್ಲ. ಆ ದಿನ ಸಾಹುಕಾರನ ಮನೆಯಲ್ಲಿ ಸುಬ್ಬಣ್ಣನವರು 'ಸಾವಿರ ಹೇ ತವ ದೀನಾ' ಎಂದು ಪಿಟೀಲಿನಲ್ಲಿ ರಾಧೆಯ ದೈನ್ಯವನ್ನು ವರ್ಣಿಸಿದಾಗ ಪ್ರಕೃತಿಯು ಪರಮಾತ್ಮನ ಚಿರ ವಿರಹದಿಂದ ಅನುಭವಿಸುತ್ತಿರುವ ದುಸ್ಸಹವಾದ ದುಃಖವು ಅಲ್ಲಿ ಹೊಳೆಯಾಗಿ ಹರಿದಂತೆ ತೋರಿತು. ಸಾಹುಕಾರನು ಕಣ್ಣಲ್ಲಿ ನೀರು ಸುರಿಸಿದನು. ಅವನ ಹೆಂಡತಿಯೂ ಬಂದು ಅಲ್ಲೇ ಕುಳಿತು, ನಮ್ಮಪ್ಪ ಭೇಷ್ ಬಾರಿಸಿದಿರಿ ಎಂದಳು. ಅವರ ಮಗಳು ಬಂದು ಸುಬ್ಬಣ್ಣನವರ ಹತ್ತಿರ ಕುಳಿತು ಇದೇನು ವಿಚಿತ್ರ ಎಂದು ನೋಡುವಳೆಂಬಂತೆ ಒಂದು ನಿಮಿಷ ಸುಬ್ಬಣ್ಣನ ಮುಖವನ್ನೇ ನೋಡುತ್ತಾ, ಒಂದು ನಿಮಿಷ ಪಿಟೀಲಿನ ಮೇಲೆ ಅವರ ಕೈ ಆಡುವುದನ್ನೇ ನೋಡುತ್ತಾ, ಇದ್ದಳು.

ಸುಬ್ಬಣ್ಣನವರಿಗೂ ಆ ದಿನ ಅದುವರೆಗೆ ಬಹಳ ದಿನ ಬಾರದೇ ಇದ್ದ ಗಾನ ಶಕ್ತಿಯು ಬಂದಿತ್ತು. ವಿರಹದಿಂದ ವ್ಯಥೆಪಡುತ್ತಿದ್ದವಳು ರಾಧೆಯಲ್ಲ; ತಾವು. ಮಾನವರೆಲ್ಲ ಈ ವಿರಹದಲ್ಲಿದಾರೆ. ಆದರೆ ಅವರಿಗೆ ಅದರ ಜ್ಞಾನ ಬಂದಿಲ್ಲ. ಸಂಸಾರವೇ ಈ ವಿರಹ. ತಾವು ತಮ್ಮ ದೇವರನ್ನು ಹುಡುಕುತ್ತ ಅವನನ್ನು ಕಾಣದೇ ಪಡುತ್ತಿದ್ದ ಕ್ಷೋಭೆಯೇ ಈ ಸಂಸಾರ ದುಃಖ. ಅವನನ್ನು ಕಂಡ ಒಂದೆರಡು ಗಳಿಗೆಗಳಲ್ಲಿ ತಾವು ಸುಖವಾಗಿಯೇ ಇದ್ದರು. ಅರುವತ್ತು ವರುಷದಲ್ಲಿ ಪರಮಾತ್ಮನನ್ನು ಕಂಡಂತಾದದ್ದು ಆ ಎರಡು ಮೂರು ಕ್ಷಣ ಮಾತ್ರ. ಅದೂ ಕನಸಿನಲ್ಲಿ ಕಂಡ ಹಾಗೆ. ಸುಬ್ಬಣ್ಣ ನವರಿಗೆ ಈ ಜೀವನವು ಬಹು ಬೇಸರವಾಗಿ ಕಂಡಿತು. ದೇವರು ತಮ್ಮನ್ನು ಇಲ್ಲಿ ಇರು ಎಂದು ಹೇಳಿ ತಾನು ಮಾತ್ರ ಇಲ್ಲಿಲ್ಲದೆ ಮರೆಯಾಗಿರುವನು. ಈ ಬಾಳು ಮುಗಿದ ಮೇಲೆ ಅಲ್ಲವೆ ಅವನನ್ನು ಸೇರುವುದು ? ದೇವರೇ, ಎಂದಿಗೆ ನನ್ನನ್ನು ಕರೆದುಕೊಳ್ಳುವೆ ಎಂದುಕೊಂಡರು. ನಿನ್ನ ವಿರಹ ದಿಂದ ನಾನು ದೀನನಾಗಿದೇನೆ ಎಂದು ಮತ್ತೆ ಮತ್ತೆ ನುಡಿಸಿದರು. ಸಾಹುಕಾರನು ಸುಖದಲ್ಲಿದ್ದನು. ಅವನಿಗೆ ಹೆಂಡತಿ ಹತ್ತಿರ ಇದ್ದಳು. ಮಗಳೂ ಹತ್ತಿರ ಇದ್ದಳು. ಇಂಥ ಸಂತೋಷದ ಮಧ್ಯದಲ್ಲಿ ಅಂಥ ಸಂತೋಷವಿಲ್ಲದ ಮನುಷ್ಯನಿಗೆ ತನ್ನನ್ನೇ ಅರಿಯದ ಒಂದು ಉತ್ಕಾನತೆ ಬರುತ್ತದೆ. ಈ ಉತ್ಕಾನತೆಯು ಸುಬ್ಬಣ್ಣನವರ ಆ ಗಾನದಲ್ಲಿ ಮಿಂಚಿನ ಬಳ್ಳಿಯಂತೆ ರೂಪನ್ನು ತಳೆಯಿತು. ಅವರ ಹೃದಯದ ದೈನ್ಯವು ಆ ಇತರ ಹೃದಯಗಳನ್ನು ಆವರಿಸಿ ಲೋಕವೆಲ್ಲ ಈ ವಿರಹದ ದೈನ್ಯದಲ್ಲಿ ಮರಗುತ್ತಿದೆಯೋ ಎಂಬಂತೆ ತೋರಿಸಿತು.

ಹಾಡು ಮುಗಿದಮೇಲೆ ಸುಬ್ಬಣ್ಣನವರು ಮತ್ತೆ ಬರುತ್ತೇನೆಂದು ಹೊರಟುಹೋದರು. ಆ ದಿನ ಅವರಿಗೆ ಏನೂ ಬೇಕು ಎನ್ನುವಂತೆ ಇರಲಿಲ್ಲ. ಸಮೀಪದ ಒಂದು ದೇವಾಲಯದ ಬಳಿ ಕುಳಿತು ತನ್ನ ಸ್ಥಿತಿಯನ್ನೆಲ್ಲ ಕುರಿತು ಯೋಚಿಸುತ್ತಾ ದೇವರೇ ಕೃಪೆ ಮಾಡು, ದೇವರೇ ಕೃಪೆ ಮಾಡು, ಏನು ಮಾಡುವುದೆಂದು ತೋರಿಸು, ಈ ಅತಿ ಘೋರವಾದ ಬೇಸರವನ್ನು ಹೋಗುವಂತೆ ಮಾಡು, ಎಂದು ಪ್ರಾರ್ಥಿಸು ತ್ತಿದ್ದರು. ಅವರು ಅಂದು ಬ್ರಹ್ಮಾಂಡದ ದೈನ್ಯರಸಕಟಾಹದ ಪಕ್ಕ ದಲ್ಲಿ ನಿಂತು ಸಣ್ಣ ಒಂದು ರಂಧ್ರವನ್ನು ಕೊರೆದ ಹುಡುಗನಂತೆ ಆದರು. ಇಷ್ಟು ಯೋಚನೆಗೆ ಕಾರಣವಿಲ್ಲವೆಂದು ತನಗೆ ತಾನೇ ಎಷ್ಟು ಹೇಳಿಕೊಂಡರೂ ದೈನ್ಯವು ಮತ್ತೆ ಮತ್ತೆ ಅವರನ್ನು ಆವರಿಸಿತು. ಭಗವಂತನು ಮಾನವನ ಆತ್ಮವನ್ನು ತನ್ನ ಬಳಿಗೆ ಕರೆದುಕೊಳ್ಳುವುದು ಹೀಗೆಯೇ ಎಂದು ತೋರುತ್ತದೆ. ಸರಿಯಾದ ಸಮಯನ್ನು ನೋಡಿ

ಕಷ್ಟವನ್ನೋ ಸುಖವನ್ನೋ ಕೊಟ್ಟು ಮನುಷ್ಯನು ತನ್ನನ್ನು ಅಪೇಕ್ಷಿಸುವಂತೆಯೂ ತನ್ನನ್ನು ನಂಬುವಂತೆಯೂ ಮಾಡಿ ಮತ್ತೆ ಮತ್ತೆ ಈ ಅಪೇಕ್ಷೆಯೂ ಈ ನಂಬಿಕೆಯೂ ಹೃದಯದಲ್ಲಿ ಆವಿರ್ಭಸುವಂತೆ ಮಾಡುವನು. ಆ ದಿನವು ಸುಬ್ಬಣ್ಣನವರಿಗೆ ಈ ದೈನ್ಯದ ತಪಸ್ಸಿನಿಂದ ತುಂಬಿಹೋಯಿತು.

ಆ ದಿನ ರಾತ್ರಿ ಸುಬ್ಬಣ್ಣನವರಿಗೆ ಒಂದು ಕನಸಾಯಿತು. ಅದರಲ್ಲಿ ತಾವು ಮೈಸೂರಿನಲ್ಲಿ ಇದ್ದಂತೆಯೂ ತಮ್ಮ ತಾಯಿತಂದೆಗಳ ಸೇವೆಯನ್ನು ಮಾಡುತ್ತಿದ್ದಂತೆಯೂ ತೋರಿ ಅವರು ಅರ್ಧ ರಾತ್ರಿಯಲ್ಲಿ ಎಚ್ಚತ್ತು, ಇದೇನು ಸ್ವಪ್ನ, ಅರುವತ್ತು ವರುಷದ ಮುದುಕನಾದೆ, ನಾಟಕ ಮುಗಿಯುತ್ತಾ ಬಂತು, ಈಗ ತಂದೆತಾಯಿಗಳ ಭ್ರಾಂತಿ ಏಸು ಬಂತು—ಎಂದು ಆ ಯೋಚನೆಯನ್ನು ನಿವಾರಿಸಿಕೊಂಡರು. ಆದರೆ ಆ ಯೋಚನೆಯನ್ನು ಬಿಟ್ಟು ಇನ್ಯಾವ ಯೋಚನೆಯನ್ನು ಮಾಡುವುದು? ಹಾಗೆಯೇ ಆ ಯೋಚನೆಯನ್ನು ಮಾಡುತ್ತ ಮಲಗಿದ್ದರು. ಆಗ ಅವರಿಗೆ ಆ ಮುದುಕಿ ಹೇಳಿದ ಮಾತು ಜ್ಞಾಪಕ ಬಂತು. "ಪರದೇಶದಲ್ಲಿದೀಯೆ. ಕಾಯಿಲೆ ಬಿದ್ದರೆ ಕೇಳುವವರು ಯಾರು? ಸತ್ತರೆ ಸುಡುವರಿಲ್ಲ. ಹೆಣ ನಾಯಿ ಪಾಲಾಗುತ್ತದೆ." ಅದರೊಂದಿಗೆ ಸುಬ್ಬಣ್ಣನವರಿಗೆ, ಏನಾದರೂ ಸರಿ, ಒಡನೆಯೇ ಊರಿಗೆ ಹೋಗಿ ಸೇರಬೇಕು ಎಂದು ತೋರಿತು. ಹೋಗಬೇಕೆಂಬ ಆಸೆಯು ಬಹುವಾಗಿ ಬೆಳೆಯಿತು. ಮಾರನೆಯ ದಿನ ಸಾಹುಕಾರನ ಮನೆಗೆ ಹೋದಾಗ ಸಾಹುಕಾರನು ಇನ್ನೂ ಮನೆಗೆ ಬಂದಿರಲಿಲ್ಲ. ಮನೆಯ ಯಜಮಾನಿಯು ಇವನನ್ನು ಕುಳ್ಳಿರಹೇಳಿ ಸ್ವಲ್ಪ ಹಣ್ಣು ಹಂಪಲನ್ನು ತಂದಿಟ್ಟು, ಒಂದು ಬಟ್ಟಲು ಹಾಲನ್ನು ತಂದು ಕೊಟ್ಟು, ತೆಗೆದುಕೊಳ್ಳಿ, ಸಾಹುಕಾರರು ಬರುತ್ತಾರೆ ಎಂದಳು. ಅವರ ಮಗಳು ಬಂದು ಹತ್ತಿರ ಕುಳಿತು ಹಣ್ಣು ತಕ್ಕೊಳ್ಳಿ ಎಂದು ಒಂದು ಹಣ್ಣನ್ನು ಎತ್ತಿಕೊಟ್ಟಳು. ಸುಬ್ಬಣ್ಣನಿಗೆ ಕ್ಷಣಮಾತ್ರ ಬಹಳ ಸಂತೋಷವಾಯಿತು. ತನ್ನ ಮಗು ಹಾಗೆ ಎತ್ತಿಕೊಡುತ್ತಿದ್ದದ್ದು ಜ್ಞಾಪಕ ಬಂದು ಬಹಳ ಖೇದವುಂಟಾಯಿತು. ಇದು ಏಕೋ, ಮರೆಯೋಣವೆಂದರೆ ಬಿಡದೆ ಜ್ಞಾಪಕ ಮಾಡುವ ಸಂದರ್ಭಗಳೇ ಬರುತ್ತಿವೆಯಲ್ಲಾ ಎಂದು, ಇಲ್ಲಿಂದ ಎಷ್ಟು ಬೇಗನೆ ಆದರೆ ಅಷ್ಟು ಬೇಗನೆ ಹೊರಡಬೇಕು ಎಂದುಕೊಂಡರು. ಸಾಹುಕಾರನು ಬಂದಮೇಲೆ ಇವರು ಗೀತಗೋವಿಂದದ ಗೀತವೊಂದನ್ನು ನುಡಿಸಿದರು. ಸಾಹುಕಾರನಿಗೆ ಪರಮಾನಂದವಾಯಿತು. ಅವನು ಅಯ್ಯಾ ನೀವು ಇಲ್ಲೇ ನನ್ನ ಹತ್ತಿರ ಸಂಬಳಕ್ಕೆ ಇದ್ದುಬಿಡಿ ಎಂದು ಕೇಳಿ

ದನು. ಅದಕ್ಕೆ ಸುಬ್ಬಣ್ಣನವರು ಅದಕ್ಕೇನೂ ಅಡ್ಡಿಯಿಲ್ಲ, ಆದರೆ ನಾನು ಪರದೇಶಕ್ಕೆ ಬಂದು ಬಹಳ ವರುಷವಾಯಿತು, ಊರಿಗೆ ಹೋಗಬೇಕು ಎಂದರು. ಅನಂತರ ಸಾಹುಕಾರನು ಸಮಾಚಾರವನ್ನೆಲ್ಲಾ ಕೇಳಿದನು. ಎಲ್ಲವನ್ನೂ ಸಂಕ್ಷೇಪವಾಗಿ ಕೇಳಿ ತಿಳಿದ ಮೇಲೆ "ಹಾಗಾದರೆ ನೀವು ಊರಿಗೆ ಹೋಗುವುದೇ ಸರಿ. ನಿಮಗಾದಷ್ಟು ದಿನ ಇಲ್ಲಿದ್ದು ಆಮೇಲೆ ಹೋಗಿ" ಎಂದನು. ಸುಬ್ಬಣ್ಣನವರು "ಅಪ್ಪಣೆಯಾದರೆ ನನ್ನ ರೈಲ್ ಛಾರ್ಜಿಗೆ ಹಣ ಸಂಪಾದಿಸುವವರೆಗೆ ಇಲ್ಲಿದ್ದು ಆಮೇಲೆ ಹೊರಡುತ್ತೇನೆ" ಎಂದು ಹೇಳಿದರು. ಸಾಹುಕಾರನು ಆಗಬಹುದು ಎಂದು ಹೇಳಿದನು. ಮಾರನೆಯ ದಿನ ಇವರು ಪಿಟೀಲನ್ನು ತೆಗೆದುಕೊಂಡು ಹೋಗುವ ವೇಳೆಗೆ ಒಂದು ತಟ್ಟೆಯಲ್ಲಿ ಎಲೆ ಅಡಿಕೆ, ಒಂದು ಜತೆ ಪಂಚೆ, ಮೈಸೂರಿಗೆ ಒಂದು ಟಿಕೀಟು, ಒಂದು ನೂರು ರೂಪಾಯಿ ನೋಟು ಇಷ್ಟನ್ನು ಇಟ್ಟುಕೊಂಡಿದ್ದು ನಿಮಗೆ ಈ ದಿನ ಬಾರಿಸುವುದಕ್ಕೆ ಆದರೆ ಬಾರಿಸಿ ಇಲ್ಲದಿದ್ದರೆ ಈಗಲೇ ಊರಿಗೆ ಹೊರಡಿ, ನನ್ನ ಅಡ್ಡಿ ಇಲ್ಲ ಎಂದನು. ಸುಬ್ಬಣ್ಣನವರು ಇದಕ್ಕೆ ನಾನು ಇನ್ನೂ ಚಾಕರಿ ಮಾಡಿ ಇಲ್ಲ ಎಂದರು. ಸಾಹುಕಾರನು ಅವರಿಗೆ ಬಹಳ ಉಪಚಾರದ ಮಾತನ್ನಾಡಿ ನೀವು ಗೀತಗೋವಿಂದದ ಒಂದು ಚರಣವನ್ನು ನುಡಿಸಿದರೆ ನಿಮಗೆ ಒಂದು ಸಾವಿರ ರೂಪಾಯನ್ನು ಕೊಟ್ಟರೂ ಕಡಿಮೆ ಎಂದು ನುಡಿದು ಅವರನ್ನು ಅಂದೇ ಕೊಟ್ಟು ಕಳುಹಿಸಿದನು. ಸುಬ್ಬಣ್ಣನವರು ಆ ನೂರು ರೂಪಾಯಿಗಳನ್ನು ತೆಗೆದುಕೊಂಡರು. ಏಕೆಂದರೆ, ಅವರಿಗೆ ಮುದುಕಿಯ ಮಾತು ಜ್ಞಾಪಕಕ್ಕೆ ಬಂತು. ಸಾಯುವ ದಿನಕ್ಕೆ ಖರ್ಚು ಹಣವನ್ನು ಸಿದ್ಧಮಾಡಿಕೊಳ್ಳಬೇಕೆಂದು ಅವರು ಖಂಡಿತಮಾಡಿಕೊಂಡಿದ್ದರು. ಅವಳು ಕೊಡುತ್ತೇನೆಂದ ಐದು ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಹೋಗಲಿಲ್ಲ. ಆ ದಿನ ರಾತ್ರಿ ಮೈಸೂರಿನ ಕಡೆಗೆ ಹೊರಟರು.

೮

ಈ ವರ್ಣನೆಯಲ್ಲೆಲ್ಲ ಬಣ್ಣ ಸಾಲದೆಂದು ನಾನು ಬಲ್ಲೆ. ಸುಬ್ಬಣ್ಣನವರ ಜೀವನವು ವಿಚಿತ್ರವಾದದ್ದು. ಅದರ ಭಾವನೆಗಳನ್ನೆಲ್ಲಾ ನಾನು ಎಷ್ಟು ಪ್ರಯತ್ನಪಟ್ಟರೆತಾನೆ ಊಹಿಸಲಾಗುತ್ತದೆ. ಮೂರು ದಿವಸದ ರೈಲು ಪ್ರಯಾಣ ಮುಗಿದು ಸುಬ್ಬಣ್ಣನವರು ಮೈಸೂರ ಹತ್ತಿರ ಹತ್ತಿರ ಬಂದರು. ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ಪಶ್ಚಿಮವಾಹಿನಿ; ಎಷ್ಟು ಸುಖವಾದ ಹೆಸರುಗಳು. ಆದರೆ ಪಿಟೀಲಿನ ದೀನಸ್ವರದಂತೆ

ಅವು ಇವರ ಮನಸ್ಸಿಗೆ ದುಃಖ ಮಿಳಿತವಾದ ಸುಖವನ್ನು ಮಾತ್ರ ತಂದುವು. ಅಂದು ಈ ಊರುಗಳನ್ನು ಬಿಟ್ಟುಹೋದ ಅವಸ್ಥೆ ಏನು? ಇಂದು ಮತ್ತೆ ಬರುತ್ತಿರುವ ರೀತಿ ಏನು? ಆಗ್ಗೆ ಈಗ್ಗೆ, ಅದೂ ಇದೂ ಒಂದೇ ಜೀವನವೇ ಎರಡು ಬೇರೆಯವೇ, ಎನ್ನುವಷ್ಟು ಅಂತರ ಕಳೆದುಹೋಗಿತ್ತು. ಕನಸಿನಲ್ಲಿ ನಡೆಯುವವನಂತೆ ಅವರು ಮೈಸೂರಿನ ಹತ್ತಿರ ಹತ್ತಿರ ಸೇರಿದರು. ಸೀಮೆಯ ಕಥೆಯೇ ಬದಲಾಯಿಸಿದಂತೆ ರೈಲಿನ ಮಾತುಗಳಿಂದ ತಿಳಿದರು. ಮೊದಲೆತ್ತಿಕೊಳ್ಳುತ ಆಗ ಮೈಸೂರಿಗೆ ರೈಲು ಇರಲಿಲ್ಲ. ಈಗ ರೈಲು ಮೈಸೂರಿಂದ ಮುಂದಕ್ಕೆ ಹೊರಟುಹೋಗಿತ್ತು. ಆಗ ಯುವರಾಜರಾಗಿದ್ದ ಶ್ರೀ ಚಾಮರಾಜ ಒಡೆಯರವರು ಈಚೆಗೆ ರಾಜ್ಯವನ್ನಾಳಿ ಪ್ರಜೆಗಳನ್ನು ಮಕ್ಕಳಂತೆ ರಕ್ಷಿಸಿ ಕೆಲವು ವರ್ಷದ ಹಿಂದೆ ದೈವಾಧೀನರಾಗಿದ್ದರೆಂದು ಅವರು ಕಲ್ಕತ್ತೆಯಲ್ಲಿಯೇ ಕೇಳಿದ್ದರು. ಇಲ್ಲಿ ಈಗ ಅವರ ಹಿರಿಯ ಮಕ್ಕಳು ರಾಜ್ಯವಾಳುವುದನ್ನು ಬಲ್ಲರು. ಆದರೆ ಅವರ ಮನಸ್ಸಿಗೆ ಈ ಯುಗವೇ ಬೇರೆ ಎಂಬಂತೆ ತೋರಿತು. ಹೋಯಿತೆಂದು ತೋರಿದ ಯಾವುದೋ ಒಂದು ಒಳ್ಳೆಯದನ್ನು ನೆನೆನೆನೆದು ಅವರು ಮರುಗಿದರು. ಆ ಮೇಲೆ, ನಾನು ಈ ರೀತಿ ಯೋಚನೆ ಮಾಡುವುದು ಸರಿಯಲ್ಲ, ಸಂನ್ಯಾಸಿಯಂತೆ ಇದ್ದು ಬಿಡಬೇಕು ಎಂದು ಆ ಯೋಚನೆಯನ್ನು ಬಿಟ್ಟರು. ಮೈಸೂರಿನ ಹತ್ತಿರ ಹತ್ತಿರ ಬಂದಹಾಗೆ ತಂದೆತಾಯಿಗಳು ಜೀವಂತರಾಗಿರಬಹುದೇ? ಇದ್ದರೆ ಹೋಗಿ ನನ್ನ ತಪ್ಪನ್ನೆಲ್ಲಾ ಒಪ್ಪಿಕೊಳ್ಳುವುದು, ಮಗುವಿನಂತೆ ಅವರ ಸೇವೆಗೆ ನಿಲ್ಲುವುದು ಎಂದುಕೊಂಡರು. ಕಣ್ಣಿನಲ್ಲಿ ತಡೆಯಲಾರದೆ ಎರಡು ತೊಟ್ಟು ನೀರನ್ನು ಹಾಕಿದರು. ಈ ಯೋಚನೆಯನ್ನೆಲ್ಲಾ ಮಾಡುತ್ತಿರುವಾಗ ಮೈಸೂರಿನಲ್ಲಿ ರೈಲು ನಿಂತಿತು. ಸುಬ್ಬಣ್ಣನವರು ರೈಲಿನಿಂದ ಇಳಿದು ಪಿಟೀಲನ್ನೂ ಪಂಚೆಗಳನ್ನೂ ಕೊಂಕುಳಲ್ಲಿಟ್ಟುಕೊಂಡು ಊರೊಳಕ್ಕೆ ಹೊರಟರು.

ಸುಬ್ಬಣ್ಣನವರು ಮೈಸೂರಿಗೆ ಹಿಂದಕ್ಕೆ ಬಂದಾಗ ವೈಶಾಖಮಾಸ. ಐದಾರು ದಿನಗಳಿಂದ ಸಂಜೆಯಲ್ಲಿ ಮಳೆ ಬಂದು ಆ ಉದಯದ ಆಕಾಶವು ಶುಭ್ರವಾಗಿತ್ತು. ಬೀದಿಗಳಲ್ಲೆಲ್ಲಾ ನೀರು ಹಾಕಿ ದೇವರ ಉತ್ಸವಕ್ಕೆ ಸರಿಮಾಡಿದಂತಿತ್ತು. ಗಾಳಿ ತಣ್ಣಗೆ ದಕ್ಷಿಣದಿಂದ ಹರಿದುಬರುತ್ತಿತ್ತು. ಎಲೆ ತುಂಬಿದ್ದ ಮರಗಳ ಮೇಲೆಲ್ಲಾ ನೂರಾರು ಹಕ್ಕಿಗಳು ಕುಳಿತು ಬಹು ಸಂಭ್ರಮದಿಂದ ಕಲಕಲ ಧ್ವನಿಯನ್ನು ಮಾಡುತ್ತಿದ್ದುವು. ಅಂದವಾದ ಉದಯ. ಆನಂದವನ್ನು ಕೋ ಎಂದು ಸಾವಿರ ಕೈಗಳಿಂದಲೂ

ನೀಡಿ ಕೊಡುತ್ತಿರುವ ಬಾಲಸೂರ್ಯನು. ಇವರ ಹೃದಯದಲ್ಲಿ ಆನಂದವು ಉಕ್ಕಿ ಬರುವಂತೆ ಎದ್ದು ಪುನಃ ಕುಗ್ಗಿತು. ಹಿಂದೆ ಇಂಥ ಎಷ್ಟು ಉದಯಗಳಲ್ಲಿ ತಾವು ಎದ್ದು ದೊಡ್ಡ ಕೆರೆಗೆ ಹೋಗಿ ಪ್ರಾತಃಕರ್ಮ ಗಳನ್ನು ಮುಗಿಸಿಕೊಂಡು ಹೀಗೆ ಬೀಸುವ ತೆಂಗಾಳಿಗೆ ಮೈಯೊಡ್ಡಿ ಆನಂದದಿಂದ ಮನೆಗೆ ಬರುತ್ತಿದ್ದರು! ಆಗ ಈ ರಾಗದಲ್ಲಿ ಹೀಗೆ ಸಂಗತಿ ಹೀಗೆ ವರೇಕು, ಆ ರಾಗದಲ್ಲಿ ಹಾಗೆ ಸಂಗತಿ ಹಾಗೆ ವರೇಕು ಎಂದು ಎಷ್ಟು ಯೋಚನೆ! ಜೀವನದಲ್ಲಿ ಯಾವುದೋ ಕೋಟೆಗಳನ್ನು ಗೆಲ್ಲುವುದಕ್ಕಾಗಿ ಹೊರಟಿದ್ದಂತೆ ಸಂಭ್ರಮ. ಆ ಹುಮ್ಮಸು ಇನ್ನೆಲ್ಲಿ? ಜೀವನವು ಆಗ್ಗೆ ಇವರನ್ನು ಆಗತಾನೆ ಆಟಕ್ಕೆಂದು ಕರೆಯುತ್ತಿತ್ತು. ಈಗ ಆಟ ಮುಗಿದಿತ್ತು. ಆ ಆಟವು ಇಂಥ ಬೇಸರದ ಆಟವೆಂದು ಆಗ ಯಾರಾದರೂ ಹೇಳಿದ್ದರೆ ತಾವು ನಂಬುತ್ತಿರಲಿಲ್ಲ. ಏನೋ ಇನ್ನು ಆ ಯೋಚನೆಗಳೇಕೆ? ಇನ್ನು ತಮ್ಮ ಮಾತೇನು? ತಾವು ಸುಖಪಟ್ಟರೆಷ್ಟು? ಇಲ್ಲದಿದ್ದರೆಷ್ಟು? ಇಗೋ ಆಗ ಇದ್ದ ನೂರು ಜನಕ್ಕೆ ಬದಲಾಗಿ ಈಗ ಇನ್ನೂ ನೂರು ಜನ ಇದಾರೆ. ತನಗೆ ಬದಲಾಗಿ ಬೇರೆ ಹತ್ತು ಜನ ಇದಾರೆ. ಈ ಬಾಲಸೂರ್ಯನು ನೀಡುವ ಆನಂದವೂ ಈ ಬಾಲಸೂರ್ಯ ಸದೃಶನಾದ ರಾಜನು ಕೊಡುವ ಆಶ್ರಯವೂ ಈ ಊರಿನ ಬಹುವಿಧವಾದ ಜೀವನವೂ ಈಗ ಬೇರೆಯ ಜನಕ್ಕೆ. ಒಳ್ಳೆಯದು. ತನಗೆ ಇಲ್ಲದೇ ಹೋದ ಸುಖವು ಇವರಿಗೆ ಉಂಟಾಗಲಿ. ಹೀಗೆಂದುಕೊಂಡು ಸುಬ್ಬಣ್ಣನವರು ತಮ್ಮ ತಂದೆಯ ಮನೆಯಿದ್ದ ಅಗ್ರಹಾರದ ಬಳಿಗೆ ಬಂದು ಸೇರಿದರು. ಮನೆಯ ಹತ್ತಿರ ಬಂದಾಗ ಸುಬ್ಬಣ್ಣನವರ ಮನಸ್ಸಿನಲ್ಲಿ ಸಾವಿರಾರು ಯೋಚನೆ ಬಂದು ಪರದಾಡುತ್ತಿತ್ತು. ಎಲ್ಲಿಯೋ ಜ್ಞಾನವಾಗಿರುವಂತೆ ಅವರು ಬಂದು ಮನೆಯ ಬಾಗಿಲಲ್ಲಿ ಜಗಲಿಯ ಮೇಲೆ ಕುಳಿತರು. ಇನ್ನೂ ಮನೆಯ ಬಾಗಿಲು ತೆಗೆದು ಇರಲಿಲ್ಲ. ರೈಲು ಸ್ವಲ್ಪ ಜಾಗ್ರತೆಯಾಗಿಯೇ ಸೇರಿತ್ತೆಂದು ಹೇಳಬೇಕು. ಜನವೂ ಇನ್ನೂ ಅಷ್ಟಾಗಿ ಓಡಾಡುತ್ತಿರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಯಾರೋ ಮನೆಯ ಬಾಗಿಲನ್ನು ತೆಗೆದರು. ಸುಬ್ಬಣ್ಣನವರು ಆ ಕಡೆ ತಲೆ ತಿರುಗಿಸಿ ನೋಡಿದರು. ಯಾವುದೋ ಹೊಸ ಮುಖ. ಯಾರೋ ಮುದುಕ ಪಿಟೀಲು ಬಟ್ಟೆಯನ್ನು ಹತ್ತಿರ ಇಟ್ಟು ಕೊಂಡು ಕುಳಿತಿರುವುದನ್ನು ನೋಡಿ ಮನೆಯ ಮನುಷ್ಯನು ಯಾರಪ್ಪಾ ಅದು ಎಂದನು. ಸುಬ್ಬಣ್ಣನವರು ಹಠಾತ್ತಾಗಿ ನಾವು ಪರಸ್ಥಳ ಎಂದರು. ಈ ಮಾತನ್ನು ನನಗೆ ಏಳೆಂಟು ವರುಷಗಳ ಮೇಲೆ ಹೇಳ ಬೇಕಾದರೆ ಸುಬ್ಬಣ್ಣನವರು ಹೇಳಿದರು. "ನೋಡಿ, ಅವರು ಕೇಳಿದ

ಕ್ಷಣ ಹಾಗೆಂದುಬಿಟ್ಟೆ. ಅಲ್ಲಿ ಹುಟ್ಟಿದ್ದು ಅಲ್ಲ ಬೆಳೆದದ್ದು; ಇಪ್ಪತ್ತೈದು ವರುಷವಾದ ಮೇಲೆ ಮನೆಬಿಟ್ಟು ಹೋದದ್ದು. ಕೊಂಚ ವರುಷ ಬೇರೆ ಊರಿಗೆ ಹೋಗಿದ್ದ ಮಾತ್ರಕ್ಕೇ ಅಲ್ಲಿ ಹುಟ್ಟಿದ್ದೂ ಬೆಳೆದದ್ದೂ ಇಲ್ಲ ವಾಯಿತೆ ? ಆದರೂ ಕೇಳಿದ ಒಡನೆ ಪರಸ್ಥಳ ಎಂದು ಬಿಟ್ಟೆ. ಒಂದು ಕ್ಷಣದ ಮೇಲೆ, ಎಲಾ ಏನು ಹೀಗೆ ಹೇಳಿದೆ, ಇದು ಪರಸ್ಥಳ ಎಂದರೆ ಏನು ಕಲಿಕತ್ತಾ ಸ್ಥಳವಾಯಿತೇ ? ದೇವರನ್ನು ಬಿಟ್ಟು ಈ ಪ್ರಪಂಚಕ್ಕೆ ಬಂದಿರೋದಾಯಿತು ; ತಿರುಗಿ ಪರಶಿವನ ಹತ್ತಿರಕ್ಕೆ ಹೋದಾಗ ದ್ವಾರಪಾಲಕರು ಯಾರಪ್ಪಾ ಅದು ಎಂದರೆ ನಾನು ಪರಸ್ಥಳ ಎಂದರೆ ಏನು ಗತಿ ! ನಿನ್ನ ಸ್ಥಳಕ್ಕೆ ಹೋಗು ಎನ್ನಬಹುದಲ್ಲಾ ಅವರು, ಈ ಪ್ರಪಂಚವೇ ನಮ್ಮೂರು ಎಂತ ನಾನೇ ಹೇಳಿದ ಹಾಗಾಗುತ್ತೆ ಎಂದೆಂದು ಕೊಂಡೆ. ಆಮೇಲೆ ತಿರುಗಿ ತೋರಿತು. ಮೈಸೂರು ಪರಸ್ಥಳ ಎಂದೆ; ಕಲಿಕತ್ತೆ ಸ್ಥಳ ಅನ್ನಲಿಲ್ಲವಲ್ಲ. ಮೈಸೂರೂ ಪರಸ್ಥಳವೇ ಕಲಿಕತ್ತೆಯೂ ಪರಸ್ಥಳವೇ. ಸ್ಥಳ ಯಾವುದು ಎಂದರೆ ಕೈಲಾಸ ಎನ್ನುವುದು ಎಂದು ಕೊಂಡೆ.'' ಪ್ರಾಯಶಃ ಆ ದಿನದ ಅವರ ಸ್ಥಿತಿಯನ್ನು ಅನುಭವಿಸಿದವರಿಗೆ ಕಣ್ಣಿನಲ್ಲಿ ನೀರು ಬರಬೇಕು. ಮನೆಯಾತ ಮತ್ತೆ ಬಾಗಿಲನ್ನು ಹಾಕಿ ಕೊಂಡು ಒಳಕ್ಕೆ ಹೊರಟುಹೋದನು. ಸುಬ್ಬಣ್ಣನವರು ಈ ಮನೆಯಲ್ಲಿ ಯಾರೋ ಹೊಸಬರಿದಾರೆಂದು ತಿಳಿದುಕೊಂಡು ಹಾಗೆಯೇ ಹೊರಟು ಕರುಹಟ್ಟಿಯ ಬಳಿ ಬಾಗಿಲು ಬೀಗ ಹಾಕಿದ್ದ ಒಂದು ಮನೆಯ ಜಗಲಿಯ ಮೇಲೆ ಕುಳಿತುಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಮನೆಯ ಬಳಿಗೆ ಹೋಗಿ ಅಲ್ಲಿದ್ದ ಯಾರನ್ನೋ ಕುರಿತು, ಅಪ್ಪಾ ಇಲ್ಲಿ ಪುರಾಣದ ಶಾಸ್ತ್ರಿಗಳು ಎಂತ ಇದ್ದರು ಅವರ ವಿಚಾರ ಏನು ಎಂದರು.

"ಶಾಸ್ತ್ರಿಗಳು ತೀರಿಹೋಗಿ ಬಹಳ ವರ್ಷವಾಯಿತು.''

"ಅವರ ಮನೆಯವರು ಎಲ್ಲಿದ್ದಾರೆ ?''

"ಅವರ ಮನೆಯವರು ಯಾರೂ ಇಲ್ಲ.''

"ಅವರ ಹೆಂಡತಿ''—

"ಅವರೂ ತೀರಿಹೋದರು.''

"ಅವರ ಹೆಣ್ಣುಮಕ್ಕಳು ಇಲ್ಲಿ ಎಲ್ಲಿಯೋ ಇದ್ದರಂತಲ್ಲಾ?''

"ಒಬ್ಬಾಕೆ ತೀರಿಹೋದರು. ಇನ್ನೊಬ್ಬರು ಅವರ ಮಗನ ಹತ್ತಿರ—ಅದೆಲ್ಲೋ ಅವರಿಗೆ ಕೆಲಸವಿದೆಯಂತೆ—ಅಲ್ಲಿ ಇದಾರೆ. ನಾವು ಈ ಮನೆಯನ್ನು ಕೊಂಡುಕೊಂಡೆವು.''

ಸುಬ್ಬಣ್ಣನವರು ತಂದೆತಾಯಿಗಳು ತೀರಿಹೋಗಿರಬೇಕೆಂದೂ ಅಕ್ಕಂದಿರೂ ಏನೇನಾಗಿದಾರೋ ಎಂದೂ ಮನಸ್ಸಿನಲ್ಲಿ ಮೊದಲೇ ನಿರಾಶ ರಾಗಿದ್ದರೂ ಇಲ್ಲಿ ಕೇಳಿದ ಒಂದೊಂದು ಮಾತೂ ಅವರ ಮನಸ್ಸಿನ ಮೇಲೆ ಒಂದೊಂದು ವಜ್ರದ ಏಟಿನಂತೆ ಬಿತ್ತು. ಅಲ್ಲಿಂದ ಅವರು ಮಂಕನಂತೆ ಕೆರೆಯ ಕಡೆ ಹೊರಟರು. ಮೈಸೂರು ಪರಸ್ಥಳವಲ್ಲದೆ ಇನ್ನೇನು ? ಬೆಳೆದ ಕಡೆ ನಾವೇನು ಬೇರು ಬಿಟ್ಟಿರುತ್ತೇವೆಯೇ ? ಜನರಲ್ಲಿ ಬಾಳಿ ಅವರ ಮನ್ನಣೆಯನ್ನು ಪಡೆದು ನಮ್ಮ ಜೀವನದ ಬೇರು ಬೇರೆ ಜೀವನಕ್ಕೆ ಸೇರುವಹಾಗೆ ಎಲ್ಲಿ ಮಾಡಿದರೆ ಅಲ್ಲಿ ಸ್ಥಳ. ತಿಳಿದ ಜನ ಇಲ್ಲದ ಮೇಲೆ ಹುಟ್ಟಿದ ಊರೂ ಪರಸ್ಥಳವೇ. ಸುಬ್ಬಣ್ಣನವರು ಕೆರೆಗೆ ಹೋಗಿ ತಲೆಗೆ ಸ್ನಾನ ಮಾಡಿ ತಂದೆಗೆ ತರ್ಪಣವನ್ನು ಬಿಟ್ಟು, ತಾಯಿಗೂ ಒಂದು ತರ್ಪಣವನ್ನು ಬಿಟ್ಟು, ಇದೇ ನಾನು ನಿಮ್ಮ ಮಗನಾದುದಕ್ಕೆ ನಿಮಗೆ ಮಾಡಿದ ಶುಶ್ರೂಷೆ, ಉತ್ತರ ಕ್ರಿಯೆ, ಎಂದುಕೊಂಡು ತೊರೆಯಪುರಕ್ಕೆ ಹೋಗುವುದೇ ನಂಜನಗೂಡಿಗೆ ಹೋಗುವುದೇ ಎಂದು ಯೋಚಿಸಿ ನಂಜನಗೂಡಿನಲ್ಲಿ ಜನಸಂದಣಿ, ತೊರೆಯಪುರದಲ್ಲಿ ಗಲಾಟೆಯಿಲ್ಲ, ನಾರಾಯಣ ಗೋವಿಂದ ಎಂದುಕೊಂಡು ನೆಮ್ಮದಿಯಾಗಿರಬಹುದು, ಇನ್ನು ನನಗೆ ಆಗಬೇಕಾದುದೇನು ? ಎಂದುಕೊಂಡು ತೊರೆಯಪುರವನ್ನು ಕುರಿತು ಪ್ರಯಾಣಮಾಡಿದರು. [ಸಶೇಷ]

231—28. ಬೆಂಗಳೂರು ಪ್ರೆಸ್.

ಹುಚ್ಚೋ ಅಲ್ಲವೋ?

ರೈಲಿನ ಅನುಭವ ಪೂರ್ತಿಯಾಗಿ ಬರಬೇಕಾದರೆ ಮೂರನೆಯ ತರಗತಿಯಲ್ಲಿಯೇ ಪ್ರಯಾಣಮಾಡಬೇಕು. ಸೆಕೆಂಡ್‌ಕ್ಲಾಸ್ ಗಾಡಿಯಲ್ಲಿಯೋ ಫಸ್ಟ್‌ಕ್ಲಾಸ್ ಗಾಡಿಯಲ್ಲಿಯೋ ಹೋದರೆ ಬರೀ ಮಿಟಿ ಮಿಟಿ ಸ್ವರ್ಗ; ದುಡ್ಡುಕೊಟ್ಟ ಹೊಟ್ಟೆಯ ಕಿಚ್ಚಿಗೆ ಮಲಗಿಕೊಂಡಾದರೂ ಹೋಗೋಣವೆಂದು ರಾತ್ರಿ ಕಣ್ಣುಮುಚ್ಚಿಕೊಂಡು ಪ್ರಯಾಣ; ಇಲ್ಲದಿದ್ದರೆ ಹೆಚ್ಚು ದುಡ್ಡು ಸಂಪಾದನೆ ಮಾಡುವ ಸಂಕಟಕ್ಕೆ ಹಗಲುಹೊತ್ತು ಗಾಡಿಗೆಲ್ಲಾ ಇಬ್ಬರೋ ಮೂವರೋ ಕುಳಿತು ನ್ಯೂಸುಪೇಪರುಗಳಿಂದ ಮುಖಗಳನ್ನು ಮುಚ್ಚಿಕೊಂಡು ಹೋಗುವುದೂ ಉಂಟು; ಗಾಡಿಗೆಲ್ಲಾ ಒಬ್ಬೊಬ್ಬರೇ ಕಿಟಿಕಿ ಬಾಗಿಲು ಹಾಕಿಕೊಂಡು ಹೋಗುವುದೂ ಉಂಟು; ಅದೆಲ್ಲಾ ಅವರವರ ದರ್ಜೆಯಮೇಲೆ ಹೋಗುತ್ತದೆ. ಆದರೆ ರೈಲಿನ ನಿಜವಾದ ಕಷ್ಟಸುಖಗಳೂ ಅನುಭವವೂ ಬರಬೇಕಾದರೆ ಮೂರನೇ ಕ್ಲಾಸ್ ಗಾಡಿಯಲ್ಲಿಯೇ ಹೋಗಬೇಕು. ಅನೇಕ ವಿಧವಾದ ಜನ, ಏನುಮಾತು, ಏನುಜಗಳ, ಏನುಗುದ್ದಾಟ! ಏನು ಗಂಧಪುಷ್ಪಧೂಪದೀಪಾದಿಷೋಡಶೋಪಚಾರಗಳು! ಷೇಕ್ಸ್‌ಪಿಯರ್ ಸ್ಕಾಟ್ ಬಂಕಿಂ ಇವರಿಗೆ ಈ ಮೂರನೇ ಕ್ಲಾಸ್ ಗಾಡಿಯ ಅನುಭವದಿಂದಲೇ ಆ ವಿಚಿತ್ರ ಅನುಭವವೂ ವಿಶ್ವಹೃದಯವೂ ಬಂದಿತೆಂದು ತೋರುತ್ತದೆ. ಮನಸ್ಸಿನಲ್ಲಿ ಏನೋ ಆಶೋತ್ತರಗಳನ್ನು ಇಟ್ಟುಕೊಂಡು ಎಷ್ಟು ಹೊತ್ತಿಗೆ ಊರಿಗೆ ಹೋಗಿ ಸೇರಿಯೇನು ಎಂದು ತವಕಪಡುತ್ತ ಸುತ್ತಮುತ್ತಿನ ಜ್ಞಾನವೇ ಇಲ್ಲದವನ ಭಾಗಕ್ಕೆ ರೈಲೂ ಒಂದೇ ಸಮುದ್ರವೂ ಒಂದೇ ಆಕಾಶವೂ ಒಂದೇ! ಹಾಗಲ್ಲದೆ ಸ್ವಲ್ಪ ಕಣ್ಣು ಕಿವಿಗಳನ್ನು ಬಿಟ್ಟುಕೊಂಡು ನಿರ್ಲಿಪ್ತನಾಗಿ ಕೇಳುತ್ತಿದ್ದರೆ ಎಷ್ಟು ವಿಧವಾದ ಮಾತುಕಥೆಗಳು ಬರುತ್ತವೆ! ಹೀಗೆ ರೈಲಿನಲ್ಲಿ ಪ್ರಯಾಣ ಮಾಡಿದವನು ಅವತ್ತಿನ ವೃತ್ತಪತ್ರಿಕೆಯನ್ನು ಓದಬೇಕಾಗಿಲ್ಲ; ಚಕ್ರವರ್ತಿಯಿಂದ ಚಾಕರಿವಾನನವರೆಗೆ ಎಲ್ಲರ ಮನೆಯ ವೃತ್ತಾಂತಗಳೂ ಕೈಕಾಲುಗಳನ್ನು ಪಡೆದು ಪ್ರತ್ಯಕ್ಷವಾಗಿ ಬಿಡುತ್ತವೆ.

ನಾನು ಒಂದುಸಾರಿ ಹೀಗೆ ಮೈಸೂರು ರೈಲಿನಲ್ಲಿ ಹೋಗುತ್ತಿದ್ದೆ. ಮದ್ದೂರು ಬಂತು. ಎಲ್ಲರೂ ಬಟ್ಟೆಬರೆಗಳನ್ನು ಸರಿಮಾಡಿಕೊಂಡು ಕಾಫಿ ತಿಂಡಿಗಳನ್ನು ತೆಗೆದುಕೊಳ್ಳಲು ಅನುವಾದರು. ನಮ್ಮ ಬೆಂಚಿನ ಮೇಲಿದ್ದ ಒಬ್ಬ ಮುದುಕರು ಮಾತ್ರ ತವಕಪಡದೆ "ಇದು ಹೊಸಸೇತುವೆಯೋ? ಇದನ್ನು ಕಟ್ಟಿದ ಮೇಲೆ ನಾನು ಈ ಕಡೆ

ಬಂದೇ ಇರಲಿಲ್ಲ'' ಎಂದು ಹಳೇಸೇತುವೆಯನ್ನು ತೋರಿಸಿ "ಅದು ಮುರಿಯು ವುದಕ್ಕೆ ಮುಂಚೆಯೇ ಇದನ್ನು ಕಟ್ಟಿದರಲ್ಲಾ! ಮಳೂರು ಸೇತುವೆಯ ಹಾಗಾಗ ಲಿಲ್ಲವಲ್ಲ!'' ಎಂದರು. ಮಳೂರು ಸೇತುವೆ ಮುರಿದಾಗ ಅವರು ರೈಲಿನಲ್ಲಿದ್ದರಂತೆ; ಆ ಕಗ್ಗತ್ತಲೆಯ ರಾತ್ರಿಯಲ್ಲಿ ರೈಲು ಮುರಿದು ಹೋದದ್ದನ್ನೂ ಹೆಂಗಸರು ಮಕ್ಕಳ ಹಾಹಾಕಾರವನ್ನೂ, ಕೆಪ್ಟಾನ್ ಶಾನ್ಯೆಂಗಾರ್‍ರು ಕಲಾಪತ್ತಿನ ಗದ್ದೆಮಡಿ ರುಮಾಲನ್ನು ತೆಗೆದುಕೊಂಡು ಹೋಗುತ್ತಿದ್ದ ತುಪ್ಪದ ಡಬ್ಬದಲ್ಲಿ ಅದ್ದಿ ಹೊತ್ತಿಸಿ ತುಕ್ಕುಡ ಉರಿಸಿದ್ದನ್ನೂ ಅದರಿಂದ ಆದ ಸಹಾಯವನ್ನೂ ವರ್ಣಿಸಿ ಕೊನೆಗೆ "ಈಗ ಅಂಥ ಆಫೀಸರು ಎಲ್ಲಿದಾರೆ ಸ್ವಾಮಿ!'' ಎಂದು ಮುಕ್ತಾಯಮಾಡಿದರು. ಅದನ್ನು ಕೇಳಿ ಸ್ವಲ್ಪ ದೂರದಲ್ಲಿದ್ದ ಮಧ್ಯವಯಸ್ಸಿನ ಒಬ್ಬಾತನು "ಯಾಕೆ ಹಾಗಂತೀರಿ ಸ್ವಾಮಿ! ನಮ್ಮ ಖಾವಂದರ ಧರ್ಮಪ್ರಭುತ್ವದಲ್ಲಿ ಅಂಥವರಿಗೆ ಏನು ಕಡಿಮೆ? ಯಥಾರಾಜಾ ತಥಾಪ್ರಜಾಃ!'' ಎಂದು ಉತ್ತರ ಕೊಟ್ಟನು. ನಾನು ಈತ ಯಾರೋ ಸ್ಕೂಲು ಮೇಷ್ಟ್ರು ಉಪನ್ಯಾಸಕ್ಕೆ ಆರಂಭಮಾಡಿದ ಎಂದು ಕೊಂಡೆ. ನೋಡುವುದಕ್ಕೆ ಅವನು ಸ್ಕೂಲು ಉಪಾಧ್ಯಾಯನಾಗಿ ಕಾಣುತ್ತಿರಲಿಲ್ಲ. ಅವನ ಸ್ಥಿತಿಯನ್ನು ನೋಡಿದರೆ ನಾಲ್ಕನೇ ಐದನೇ ತರಗತಿ ಗಾಡಿ ಇಲ್ಲದ್ದರಿಂದ ಮೂರನೇ ತರಗತಿಯಲ್ಲಿ ಹೋಗುತ್ತಿರುವಂತಿತ್ತು. ಅಷ್ಟು ಬಡವನಾಗಿ ಕಾಣು ತ್ತಿದ್ದನು. ಹಾಕಿಕೊಂಡಿದ್ದ ಒಂದು ಚೆಕ್ಕಿನ ಕೋಟು; ಅದು ಹರಿದುಹೋಗಿ ಅದರಿಂದ ಮುಚ್ಚುವ ಶರೀರಭಾಗಕ್ಕಿಂತಲೂ ಕಾಣುತ್ತಿದ್ದ ಭಾಗವೇ ಹೆಚ್ಚಾಗಿರು ತ್ತಿತ್ತು. ಪಂಚೆಯೂ ಅದರ ಅಣ್ಣತಮ್ಮನೇಯೆ. ಆಳು ಮಾತ್ರ ಕಟ್ಟುಮುಟ್ಟು; ರೂಪು ಅಷ್ಟೇನೂ ಸುಂದರವಲ್ಲದಿದ್ದರೂ ವಿಕಾರವಲ್ಲ. ಬಣ್ಣವು ಸ್ವಲ್ಪ ಕಪ್ಪು ಛಾಯೆಯಾಗಿದ್ದರೂ ಚೆನ್ನಾಗಿ ಸೋಪುಹಾಕಿಕೊಂಡು ಸ್ನಾನಮಾಡಿ ಒಗೆದ ಮಡಿಯುಟ್ಟು ವಿಭೂತಿಯನ್ನಿಟ್ಟುಬಂದರೆ ಒಪ್ಪುವಂತಿತ್ತು. ಈತ ಇರುವುದು ಈ ಅವಸ್ಥೆ; ಇದೇನು ಹೀಗೆ ಸರ್ಕಾರವನ್ನು ಹೊಗಳುತ್ತಾನೆ, ಎಂದು ನಾನು ಅನುಮಾನಪಡುತ್ತಾ ಅವನನ್ನು ನೆತ್ತಿಯಿಂದ ಹಿಡಿದು ಕಾಲಿನವರೆಗೆ ಹಾಗೇ ದೃಷ್ಟಿಸಿ ನೋಡಿದೆನು. ಆತನೂ ನನ್ನನ್ನು ಗಮನಿಸಿ "ಅದೇನು ಸ್ವಾಮಿ, ಹಾಗೆ ನೋಡುತ್ತೀರಿ!'' ಎಂದನು. ನಾನು ಏನು ಹೇಳಲಿ! ಒಂದುಕಡೆ ಆತ ಯಾರು— ಏಕೆ ಹಾಗೆ ಅಂದ ಎಂತ ತಿಳಿದುಕೊಳ್ಳಬೇಕೆಂಬ ಕುತೂಹಲ; ಇನ್ನೊಂದುಕಡೆ ಈ ಶ್ವಪಚನಕೈಲಿ ಮಾತನಾಡುವುದೇನು! ನಾನು ಕೋರು ರುಮಾಲುಸುತ್ತಿ ಕಲಾಪತ್ತಿನಪಂಚೆ ಉಟ್ಟಿರತಕ್ಕವನು ಎಂದು ಅಹಂಕಾರ, ಅದರ ಹಿಂದಿನದಿವಸ ಇನ್ನೂ ಯಾರೋ ಒಬ್ಬರು ಅಧಿಕಾರಿಗಳನ್ನು ನೋಡುವುದಕ್ಕೆ ಹೋಗಿ, "ಇಲ್ಲಿಗೆ

ಯಾಕೆ ಬಂದೆನಪ್ಪಾ, ಈತನ ಕೈಯಿಂದ ತಪ್ಪಿಸಿಕೊಂಡು ಹೋದರೆ ಸಾಕಲ್ಲಾ" ಎಂದು ಜಪಿಸುತ್ತ ಕೆಡ್ಡಾಶಾಮ್ಮೆಂಗಾರ್ಯರ ಕಾಲವನ್ನು ಮನಸ್ಸಿನಲ್ಲಿಯೇ ಮೆಚ್ಚುತ್ತಿದ್ದ ನಾನು ಈ ದರವೇಸಿಯು ಹೇಳಿದರೆ ಅದಕ್ಕೆ ಸಮ್ಮತಿ ರುಜುಹಾಕಿಬಿಡು ವಂತಿರಲಿಲ್ಲ. ವ್ಯಾಜ್ಯವಾಡುವುದಕ್ಕೆ ಮನಸ್ಸಿಲ್ಲ. ಅವನಿಗೆ ನಾನು ಸಮನೇ! ಕಕ್ಷಿ ಪ್ರತಿಕಕ್ಷಿಗಳು ಸರಿಸಮನಾಗಿಲ್ಲದಿದ್ದರೆ ಸರಿಗಟ್ಟಿಗೊಂಡು ಹೋಗುವವರಿಗೆ ಮಾನ ಬಂದೀತೆ? ನನ್ನ ಅನುಭವ ತಿಳಿವಳಿಕೆ ಇವು ಇವನಿಗೆ ಏನು ಇದ್ದಾವು? ಎಂದು ಯಾವ ಉತ್ತರವನ್ನೂ ಕೊಡದೆ ಉಪೇಕ್ಷೆಯಿಂದ ಮುಖವನ್ನು ತಿರುಗಿಸಿಕೊಂಡೆನು. ಆದರೆ ಆತ ಬಿಡುವಹಾಗಿರಲಿಲ್ಲ. 'ಒಂದು ಕಾಸು ಕೊಡ್ತೀನಿ ಹಾಡು ದಾಸಯ್ಯ, ಎರಡು ಕಾಸು ಕೊಡ್ತೀನಿ ಬಿಡುದಾಸಯ್ಯ' ಎಂಬ ಗಾದೆಯಂತಾಯಿತು. ಅಷ್ಟು ಹೊತ್ತಿಗೆ ರೈಲು ಮದ್ದೂರು ಸ್ಟೇಷನ್‌ಗೆ ಬಂದು ನಿಂತಿತು. ನಾನು ಸ್ವಲ್ಪ ಉಪಾಹಾರ ಚಾರನಾಕೊಂಡು ಬರೋಣವೆಂದು ಇಳಿದು ಹೋದೆ.

(೨)

ಕಾಫಿ ಕುಡಿದು ಬಂದು ನೋಡಿದರೆ ಆ ಮನುಷ್ಯ ತನ್ನ ಜಾಗವನ್ನು ಬಿಟ್ಟು ಎದ್ದಿರಲಿಲ್ಲ; ಆದ್ದರಿಂದ ಹೊರಗೇ ಶತಪದ ತಿರುಗುತ್ತಿದ್ದೆ—ಅವನು ಇಳಿದು ಹೋದಾನೋ ಎಂಬ ಚಪಲ; ಅವನನ್ನು ಇಳಿದು ಹೋಗು ಎನ್ನುವದಕ್ಕೆ ನನಗೆ ಹೆದರಿಕೆ; ಅವನು ಹೋಗದಿದ್ದರೆ? ಇಲ್ಲದೆ ಜಗಳವಾಗಿ ಮೇಲೆ ಬಿದ್ದರೆ? ಅವನು ನೋಡುವುದಕ್ಕೆ ಹುಚ್ಚಾಗಿದ್ದನು ಹುಚ್ಚನೋ ಏನೋ ಯಾರು ಬಲ್ಲರು? ಕೆಲವರ ಹುಚ್ಚು ಹೀಗೆ ಎಂದು ಹೇಳುವಂತಿರುವುದಿಲ್ಲ; ನಮ್ಮ ಸಂಬಂಧಿಗಳಲ್ಲಿ ಒಬ್ಬರಿಗೆ ಹುಚ್ಚು ಹಿಡಿಯುತ್ತಿತ್ತು. ಆಗ ಅವರನ್ನು ಬಲ್ಲವರಿಗೆ ಅವರ ಹುಚ್ಚು ಗೊತ್ತಾಗು ತ್ತಿತ್ತೇ ಹೊರತು ಇತರರಿಗೆ ಗೊತ್ತಾಗುತ್ತಿರಲಿಲ್ಲ. ಎಲ್ಲರಂತೆಯೇ ಮಾತು ಕಥೆ; ಇನ್ನೂ ಹೆಚ್ಚು—ಅದೇ ಒಂದು ವಿಶೇಷ. ಅತನಲ್ಲಿ ಮಾತು ಎಷ್ಟು ಕಮ್ಮಿಯಾದರೆ ಅಷ್ಟು ಹುಚ್ಚು ಇಳಿಯಿತು ಎಂತ ನಿರ್ಧರ; ಮಾತೇ ಆಡದೇ ಪರಮ ಮೌನ ವಾಗಿದ್ದರೆ ಅದು ಶುದ್ಧ ಆರೋಗ್ಯಲಕ್ಷಣ; ಆಗ "ಉಸ್ ಉಸ್" ಎಂತ ನಿಟ್ಟುಸಿರುಬಿಡುತ್ತ ಮೈಕೈ ಒಡವಾಗಿ ಒಂದು ತಿಂಗಳು ಕಾಯಿಲೆ ಬಿದ್ದವನಂತಿರುತ್ತಿ ದ್ದನು. ಅವನಿಗೆ ಹುಚ್ಚುರೇಗಿತೆಂದರೆ ಆ ಬಲವೂ ಕಾಂತಿಯೂ ಎಲ್ಲಿ ಬಂದುಬಿಡು ತ್ತಿತ್ತೋ! ನಾಲ್ಕಾರು ಜನ ಹಿಡಿದರೂ ನಿಲ್ಲಿಸುವುದಕ್ಕಾಗುತ್ತಿರಲಿಲ್ಲ. ಇದೆಲ್ಲ ಜ್ಞಾಪಕಕ್ಕೆ ಬಂದು ಸುಮ್ಮನಾಗಿ ಬಿಟ್ಟೆನು: ರೈಲು ಹೊರಡುವ ಹೊತ್ತಾಯಿತು. ವಿಧಿಯಿಲ್ಲದೆ ಒಳಗೆ ಹತ್ತಿ ಕುಳಿತೆನು. ನನ್ನ ಗಂಟು ಮಟ್ಟೆಗಳು ಸ್ವಲ್ಪ ಹೆಚ್ಚಾಗಿಯೇ

ಇದ್ದುವು. ಅವುಗಳನ್ನು ಹೊರುವುದುತಾನೇ ಹೇಗೆ? ಕೋರು ರುಮಾಲು ಸುತ್ತಿಕೊಂಡು !

ಇಷ್ಟು ಹೊತ್ತಿಗೆ ಕೆಡ್ರಾ ಶಾಮೈಂಗಾರ್ರ ಕಥೆಯನ್ನು ಹೇಳಿದ ಮುದುಕನೂ ಹುಚ್ಚನಂತಿದ್ದ ಹರುಕು ಅಂಗಿಯ ಮನುಷ್ಯನೂ ಎದುರುಬದುರಿಗೆ ಕುಳಿತು ಮಾತನಾಡುತ್ತಿದ್ದರು. ನಾನು "ಅಂತೆಗೆ ತಕ್ಕ ಬೊಂತೆ" ಎಂದುಕೊಂಡೆ. ಮುದುಕನು ಮಾತು ಕೇಳುತ್ತ ಕೇಳುತ್ತ ನೆಶ್ಯವನ್ನು ತಿಕ್ಕಿಯೇ ತಿಕ್ಕಿದರು. ಕೊನೆಗೆ ಹುಚ್ಚನಂತಿದ್ದವನು "ಇಗೊಳ್ಳಿ ಸ್ವಾಮಿ! ಇದೇ ಅದು" ಎಂದು ತನ್ನ ಹತ್ತಿರ ಇದ್ದ ಒಂದು ಸಣ್ಣ ಗಂಟಿನಿಂದ ಒಂದು ಸೊಗಸಾದ ಕೋಟನ್ನು ತೆಗೆದು ತೋರಿಸಿದನು. ಆಗ ಅವರಿಗೆ ಜ್ಞಾನೋದಯವಾದಂತಾಗಿ "ಹುಂ, ನಶ್ಯಮಾಡಿದ್ದು ಹೆಚ್ಚಾಯಿತೇನೊ!" ಎಂದು ಗೊಣಗಿಕೊಂಡು ಎರಡು ಮೂರು ಸಾರಿ ಅದನ್ನು ಸೇದಿ ಕಣ್ಣು ಕೆಂಪಗೆಮಾಡಿಕೊಂಡು ಹ ಹ ಹ! ಎಂದು ಗಂಟಲು ಸರಿಮಾಡಿಕೊಂಡು ಆ ಕೋಟನ್ನು ಬಿಚ್ಚಿನೋಡಿದರು. ಒಳ್ಳೆಯ ಟ್ವೀಡುಕೋಟು! ನನ್ನ ಅನುಮಾನ ಇನ್ನೂ ಹೆಚ್ಚಾಯಿತು "ಹುಚ್ಚಿನ ಜೊತೆಗೆ ಕಳ್ಳತನವೂನೋ!" ಎಂದುಕೊಂಡೆ; ಅದನ್ನು ಕೇಳುವುದು ಹೇಗೆ? ಆದ್ದರಿಂದ ಸುಮ್ಮನಿದ್ದೆ. ಕೋಟು ಚೆನ್ನಾಗಿತ್ತು. ಆದ್ದರಿಂದ ಬಹಳ ಹೊತ್ತು ಸುಮ್ಮನಿರಲು ಆಗಲಿಲ್ಲ.

"ಅದು ಯಾರದ್ದು ಸ್ವಾಮಿ ಕೋಟು? ಖರೀದಿಗೆ ಬಂದಿದೆಯೇನು?" ಎಂದು ಕೇಳಿದೆ—ಕೋಟು ಅಷ್ಟು ಹೊಸದಾಗಿತ್ತು.

ಆತ ಸುಮ್ಮನಿದ್ದನು. ಮಾತನಾಡುವುದಕ್ಕೆ ಮನಸಿದ್ದಂತೆ ತೋರಲಿಲ್ಲ; ಮುಖವು ಜೋಲುಬಿದ್ದಿತ್ತು. ಕಣ್ಣಿನಿಂದ ನೀರುಬರುತ್ತಿದ್ದದ್ದನ್ನು ತನ್ನ ಕೊಳಕು ಪಂಚೆಯಿಂದ ಒರಸಿಕೊಳ್ಳುತ್ತಿದ್ದನು.

ಮುದುಕರು "ಯಾಕೆ ಸ್ವಾಮಿ? ಅವರದೇ!" ಎಂದರು. ನನಗೆ ಆಶ್ಚರ್ಯವಾಯಿತು. ಆತನಿಗೆ ಇಂಥ ಕೋಟು ಎಲ್ಲಿ ಬರಬೇಕು? ಯಾರಾದರೂ ಎಲೆ ಅಡಿಕೆ ದಕ್ಷಿಣೆ ಇಟ್ಟು ಸದ್ಬ್ರಾಹ್ಮಣ ಎಂದು ಕರೆದು ದಾನಕೊಟ್ಟರೇನೋ ಎಂದುಕೊಂಡು ಹಾಗಾದರೆ ಯಾಕೆ ಹಾಕಿಕೊಳ್ಳುವುದಿಲ್ಲ? ಹೊಸ ಅಂಗಿ ಇಟ್ಟುಕೊಂಡು ಹರುಕು ಅಂಗಿಯೇ?" ಎಂದೆ.

"ಹಾಕಿಕೊಳ್ಳಬೇಕಾದರೆ ಅದಕ್ಕೆ ತಕ್ಕ ಯೊಗ್ಯತೆ ಬೇಕೋ ಬೇಡವೋ ಸ್ವಾಮಿ! ಈಗಾಗಲೇ ನನ್ನನ್ನು 'ಹುಚ್ಚ' ಅಂತ ಎಲ್ಲರೂ ಅಟ್ಟುತ್ತಿದ್ದಾರೆ. ಇನ್ನು ಅದನ್ನು ಹಾಕಿಕೊಂಡರೆ 'ಕಳ್ಳ' ಅಂತ ಬಂದೀಖಾನೆಗೆ ಕಳುಹಿಸುವುದು ಒಂದು ಬಾಕಿ!"

" ಹುಚ್ಚಾಗುವುದಕ್ಕೆ ನಿಮಗೇನು ಸ್ವಾಮಿ? " ಹುಚ್ಚ ಅಂದರೇನು, ಕಳ್ಳತನ ಅಂದರೇನು ? ಹಾಗಾದರೆ ಈ ಕೋಟು ಹೇಗೆ ಬಂತು ನಿಮಗೆ? "

" ಕೊಟ್ಟರು ಸ್ವಾಮಿ ಯಾರೋ ದಣಿಗಳು ತಮ್ಮಂಥವರು, ಬಡವರ ಬಗ್ಗರ ಕಷ್ಟ ಬಲ್ಲವರು, ಮಕ್ಕಳ ಹೆತ್ತವರು! "

" ಬರೀ ಕೋಟನ್ನು ಯಾಕೆ ಕೊಟ್ಟರು? "

" ಇನ್ನೇನು ಕೊಡಬೇಕು ಸ್ವಾಮಿ, ಇದೇ ಕೋಟಿನಲ್ಲೇ ನೋಡುವುದಕ್ಕೆ ಹೋಗಿದ್ದೆ ; ನಾನು ಅವರ ಇಲಾಖೆಯವನು ಅಂತ ತಿಳಿಯಿತು. ನನ್ನ ಅರ್ಜಿಯನ್ನು ತೆಗೆದುಕೊಂಡು, ಕೆಲಸವಿದೆ ನಾಡಿದ್ದು ಬನ್ನಿ ಎಂದು ಹೇಳಿ ಕಳುಹಿಸಿದರು. ಮೂರನೆಯ ದಿನ ಹೆಡ್ ಗುಮಾಸ್ತರು ನರಸಿಂಗರಾಯರನ್ನುಹೋಗಿ ನೋಡಿದೆ. ಅವರು ನಿನ್ನ ಅರ್ಜಿ ನನ್ನ ಹತ್ತಿರಕ್ಕೆ ಬಂದಿದೆ. ' ಇದೇನು ಬರೆವಣಿಗೆ ! ಒಂದು ಕಟ್ಟು ಕಾಗದದಲ್ಲಿ ಬರೆಯಬೇಕಾದ್ದನ್ನ ಒಂದು ಗಜದಲ್ಲಿ ಬರೆದಿದ್ದೀಯಲ್ಲಾ ಓದುವುದೇ ಕಷ್ಟವಾಗಿದೆ ಎಂದರು. ಏನು ಮಾಡಲಿ ಮಹಾಸ್ವಾಮಿ ; ಸಂಬಳ ಬಂದು ಒಂದು ವರ್ಷವಾಯಿತು ; ಸರ್ಕಾರದ ನೌಕರರಿಗೆ ಸಂಬಳ ಬರದಿದ್ದರೆ ಹೊಟ್ಟೆಗೇನು ಗತಿ ; ಹೊಟ್ಟೆಗೆ ಸಂಪಾದಿಸಲೇ ; ಬಟ್ಟೆ ಹವಣಿಸಿಕೊಳ್ಳಲೇ ; ಕಾಗದ ಕಡ್ಡಿ ಸಾದಿಲ್ವಾರು ಹುಡುಕಿಕೊಂಡು ಹೋಗಲೇ ! ಎಷ್ಟು ಅರ್ಜಿ ಬರೆಯಲಿ ದೇವರು ! ಈಗಾಗಲೇ ಒಂದು ಕಟ್ಟು ಕಾಗದವಾಗಿರಬಹುದು ; ಒಂದು ಸಾವಿರ ಅರ್ಜಿ ಆಗಿರಬಹುದು ; ಕಂಡ ಕಂಡ ದೇವರಿಗೆಲ್ಲಾ ಕೈಮುಗಿದದ್ದಾಯಿತು. ನಾಲ್ಕು ನಾಲ್ಕು ಸಾರಿ ಹತ್ತು ಹತ್ತು ಸಾರಿ ಆಯಿತು. ಇಷ್ಟು ಕಾಗದದಲ್ಲಿ ರಾಮ ನಾಮವನ್ನು ಬರೆದು ಹಾಕಿದ್ದರೆ ರಾಮ ನಮ್ಮಪ್ಪ ಇಷ್ಟು ಹೊತ್ತಿಗೆ ಈ ಕಷ್ಟ ಪಾರುಮಾಡಿ ತನ್ನ ಪಾದವನ್ನಾದರೂ ಸೇರಿಸಿಕೊಂಡು ಬಿಡುತ್ತಿದ್ದ. ಈ ಹಾಳು ಜನ್ಮ ನೀಗಿಕೊಂಡು ಬಿಡಬಹುದಾಗಿತ್ತು"

" ಯಾಕೆ ? ಅರ್ಜಿ ಯಾರಿಗೆ ಕೊಟ್ಟೆ?"

"ಯಾರಿಗೇ ಅಂತ ಹೇಳಲಿ ಸ್ವಾಮಿ ? ಎಲ್ಲರಿಗೂ ಕೊಟ್ಟೆ ; ಯಾರು ಯಾರು ನಮ್ಮ ಮೇಲ್ಪಟ್ಟ ಅಧಿಕಾರಿಗಳು ಎಂತ ಇದ್ದರೋ ಎಲ್ಲರಿಗೂ ಕೊಟ್ಟೆ. ಕೆಲವರು ಹುಚ್ಚ ಅಂತ ಅಟ್ಟಿಬಿಟ್ಟರು ; ಮತ್ತೆ ಕೆಲವು ಕಡೆ ದಫೇದಾರರು ಕೈಬೆಚ್ಚಗಾಗದೆ ಒಳಗೇ ಬಿಡುತ್ತಿರಲಿಲ್ಲ ; ತಿಂದರೂ ತಿಂದುಕೊಂಡು ಹೋಗಲಿ ಅವರ ಬಾಯಿಗೂ ಹಾಕಿಬಿಡೋಣ ; ತಿಂದರೂ ನಮ್ಮೋನೇ ತಿಂತಾನೆ ಎಂದರೆ, ವಿಷ ತೆಗೆದುಕೊಳ್ಳು ವುದಕ್ಕೂ ಕೈಲಿ ಒಂದು ಕಾಸು ಇರಲಿಲ್ಲ. "

" ಈಗ ಬರುವುದು ಇನ್ನು ಎಂಟು ದಿನದ ಹಿಂದೆ ಬಂದಿದ್ದರೆ ಇಲ್ಲೂ ಅದೇ ಗತಿಯಾಗುತ್ತಿತ್ತೊ ಏನೋ ಯಾರಿಗೆ ಗೊತ್ತು! "

" ಇರಬಹುದು ಸ್ವಾಮಿ; ಈಗ ಎಂಟು ದಿನಗಳ ಕೆಳಗೆ ನನಗೆ ಶನಿದೃಷ್ಟಿ ಮುಂದಕ್ಕೆ ಆಯಿತು. ಅದು ಆಗಲಿ ಅಂತ ಕಾದುಕೊಂಡಿದ್ದೆ "

" ನಿನಗೊಬ್ಬನಿಗೇ ಅಲ್ಲ ಶನಿದೃಷ್ಟಿ ಮುಂದಕ್ಕೆ ಆದದ್ದು ; ನಿನ್ನ ಹಾಗೆ ಎಷ್ಟೋ ಜನಕ್ಕೆ ಆಯಿತು "

" ಹೌದು ಮಹಾಸ್ವಾಮಿ ; ನನ್ನದು ಮಕರಲಗ್ನ ; ಮಕರಲಗ್ನದವರಿಗೆಲ್ಲ ರಿಗೂ ಇನ್ನು ಮೇಲೆ ಒಳ್ಳೆಯದೇ "

ಅವರು ನಕ್ಕು, "ನಿಮಗೆ ಜ್ಯೋತಿಷ ಬೇರೆ ಬರುವ ಹಾಗೆ ಕಾಣುತ್ತದೆ?"

'ಜ್ಯೋತಿಷವೂ ಬರುತ್ತೆ ವೈದ್ಯವೂ ಬರುತ್ತೆ ಸ್ವಾಮಿ; ಅದರಿಂದ ಏನೋ ಇದುವರೆಗೆ ಜೀವ ಅಂಟಿಕೊಂಡಿದೆ'

' ಚೆನ್ನಾಗಿ ಬರುತ್ತೇನು ? '

' ಚೆನ್ನವೇನು ಸ್ವಾಮಿ ಅಷ್ಟರಲ್ಲೇ ಇದೆ; ಹಳ್ಳಿಯವರ ಜ್ಞಾನ ಪಂಚಾಂಗ ದಲ್ಲಿರೋದನ್ನು ಓದಿಹೇಳೋದು ; ನಾರು ಬೇರು ಕಷಾಯ ತಿಳಿದಿದ್ದನ್ನು ಮಾಡುವುದು '

' ಹಾಗಾದರೆ ಸರ್ಕಾರಿ ನೌಕರಿಗೆ ಏಕೆ ಒದ್ದಾಡಬೇಕು? '

' ಈಗ ಜ್ಯೋತಿಷ ಯಾರಿಗೆ ಬೇಕು, ವೈದ್ಯ ಯಾರಿಗೆ ಬೇಕು ಸ್ವಾಮಿ ? ಈಗ ಹಳ್ಳಿ ಹಳ್ಳಿಗೂ ಆಸ್ಪತ್ರೆ ; ಅಲ್ಲಿ ಅವರು ಬಣ್ಣದ ಬರೀ ನೀರುಕೊಡಲಿ ಅದು ಪಾವನವೇ ಹೊರತು ನಾಡು ವೈದ್ಯ ಯಾಗೆ ಬೇಕು ? ನನಗೆ ಬರುವ ಔಷಧಿ ಹಿಂದಿನ ಕಾಲದಲ್ಲಿ ಊರಿನವರೆಲ್ಲರಿಗೂ ಗೊತ್ತಿರುತ್ತಿತ್ತು. ಆಸ್ಪತ್ರೆಗಳು ಪಾಪುಗಳು ಬಂದು ಅನೆಲ್ಲಾ ಮರೆತು ಹೋಗಿ ಎಲ್ಲಾ ದುಡ್ಡಿನಮೇಲೆ ಬಂದುಬಿಟ್ಟಿತು ; ಆದರೆ ನಮ್ಮ ಯಜಮಾನರು ಮೂಲವ್ಯಾಧಿ ಉಪದ್ರಕ್ಕೆ ಒಂದು ಮೂಲಿಕೆಯನ್ನು ತೋರಿಸಿ ಕೊಟ್ಟಿದ್ದರು ; ಅದನ್ನು ಪ್ರಯೋಗಿಸಿ ನಾಲ್ಕು ಕಾಸು ಸಂಪಾದಿಸುತ್ತಿದ್ದೆ '

'ಮೂಲವ್ಯಾಧಿ ಮೂಲಿಕೆಯಿಂದ ಗುಣವಾಗುತ್ತದೆಯೇ ? ಎರಡೆರಡು ಮೂರು ಮೂರು ಸಲ ಆಪರೇಷನ್ ಮಾಡಿಸಿಕೊಂಡು ಇನ್ನೂ ನರಳುವವರು ನರಳುತ್ತಿದ್ದಾರೆ.! '

' ಏನೋ ಸ್ವಾಮಿ ಆ ಸೊಪ್ಪಿನ ಕರಾಮತ್ತು, ಎಷ್ಟೋ ಜನಕ್ಕೆ ಗುಣವಾಗಿದೆ'

' ಹಾಗಾದರೆ ಅದು ಒಂದು ತಿಳಿದರೆ ಸಾಕು ಬೇಕಾದಷ್ಟು ಸಂಪಾದಿಸ ಬಹುದಲ್ಲಾ '

' ಸಂಪಾದನೆಗೆ ಹೊರಟರೆ ಅದರ ಖರಾಮತ್ತು ಹೋಗಿ ಬಿಡುತ್ತದೆಯಂತೆ ಸ್ವಾಮಿ ; ರೋಗಿಗಳೇ ಸಂತೋಷದಿಂದ ಎಷ್ಟು ತಂದುಕೊಟ್ಟರೆ ಅಷ್ಟನ್ನು ತೆಗೆದು ಕೊಂಡು ಅದರಲ್ಲಿ ಅರ್ಧದಾನಮಾಡಿ ಮಿಕ್ಕ ಅರ್ಧವನ್ನು ಉಪಯೋಗಿಸಿಕೊಳ್ಳ ಬಹುದಂತೆ '

' ಎಲ್ಲಾ ಹುಚ್ಚು ; ಯಾಕೋ, ನಮ್ಮ ಯಕ್ಷಿಣಿಯವರು ದುಡ್ಡು ಮಾಡು ತಾರಲ್ಲಾ ಹಾಗಾಯಿತು ! '

' ಹೋಗಲಿ, ಸಂಬಳ ಯಾಕೆ ಬರಲಿಲ್ಲ ? '

' ಆಗಲೇ ಹೇಳಿದೆನಲ್ಲ ಮಹಾಸ್ವಾಮಿ ! ಹುಚ್ಚು ಅಂತ ಕೆಲಸ ತೆಗೆದುಹಾಕಿ ಬಿಟ್ಟರು '

' ನಿಮಗೆ ಎಂದಾದರೂ ಹುಚ್ಚು ಹಿಡಿದಿತ್ತೋ ? '

' ಅದೊಂದು ಉಳಿದಿತ್ತು ಸ್ವಾಮಿ ! '

' ಹಾಗಂದರೆ ? '

' ಈಗಿನ ಹಳ್ಳಿಗಾಡಿನ ಸ್ಥಿತಿಯಲ್ಲಿ ಹುಚ್ಚು ಹಿಡಿಯದೇ ಇರಬೇಕಾದರೆ, ಧರ್ಮ ಕರ್ಮ ದೇವರು ದಿಂಡರು ಸತ್ಯ ನ್ಯಾಯ ಎಲ್ಲ ಬಿಟ್ಟವರಿಗೇ ಸಾಧ್ಯ '

' ಯಾಕೆ ? '

' ಯಾಕೆ ಅಂದರೆ ಏನು ದೇವರು ? ತಾವು ಮೈಸೂರು ಬೆಂಗಳೂರು ಷಹರು ಗಳಲ್ಲಿದ್ದೀರಿ ತಮಗೆ ಹ್ಯಾಗೆ ತಿಳಿದೀತು ? '

' ನಾವು ಹಳ್ಳಿಪಳ್ಳಿಗೆ ಬರದೇ ಇರುವುದಕ್ಕಾಗುತ್ತದೆಯೇ ? ತಿಂಗಳಿಗೆ ಇಪ್ಪತ್ತು ದಿನ ಸರ್ಕೀಟು ಇದ್ದೇ ಇರುತ್ತದೆ ! '

' ಸರ್ಕೀಟು ಬಂದಾಗ ಅಧಿಕಾರಿಗಳಿಗೆ ಆಗುವ ಸರಬರಾಯಿ ನೋಡಿಕೊಂಡು ತಾವು ಅಪ್ಪಣೆಕೊಡುತ್ತೀರಿ ; ಇದು ಜಾತ್ರೆ ಕಾಲದಲ್ಲಿ ನಮ್ಮೂರಿನಲ್ಲಿ ಸೇರುವ ಪರಸೆ ನೋಡಿಕೊಂಡು ನಮ್ಮ ಹಳ್ಳಿಯೂ ನಿಮ್ಮ ಷಹರೂ ಒಂದೇ ಎಂದು ಹೇಳುವ ಹಾಗಾಯಿತು '

' ಅದೇನು ನಿಮ್ಮೂರಿನಲ್ಲಿ ತೊಂದರೆ ? ನಮ್ಮೂರಿನ ಹಾಗೆ ನಲ್ಲಿಗಳಿಲ್ಲದಿರ ಬಹುದು, ತಕರಾರಿ ಸಿಕ್ಕದಿರಬಹುದು, ನಾಟಕ ಸಿನಿಮಾ ಸಂಗೀತ ಇವೆಲ್ಲಾ ಇಲ್ಲದಿರಬಹುದು ಅಷ್ಟೇತಾನೆ ; '

'ಸ್ವಾಮಿ ತಾವೆಲ್ಲ ಪುಣ್ಯವಂತರ ಮಾತನಾಡುತ್ತೀರಿ. ತರ್ಕಾರಿ ಯಾರಿಗೆ ಬೇಕು ಸಿನೀಮಾ ಯಾರಿಗೆಬೇಕು ? ಒಂದು ತುತ್ತು ಅನ್ನ ಕಂಡರೆ ಸಾಲದೇ ! ಯಾವ ಗಳಿಗೆಯಲ್ಲಿ ಏನೋ ಎಂದು ಎಡಗೈಯಲ್ಲಿ ಜೀವಹಿಡಿದುಕೊಂಡಿರದೆ ನೆಮ್ಮದಿಯಾಗಿದ್ದರೆ ಸಾಲದೇ ?' ಎನ್ನುತ್ತ ನಿಟ್ಟುಸಿರು ಬಿಟ್ಟನು.

'ಕೂತುಕೊಳ್ಳಿರಿ'

'ಇರಲಿ ಸ್ವಾಮಿ ; ಇದೇನು, ?

ಅವರಿಗೆ ನನ್ನ ಮೇಲೆ ಏನೋ ಕರುಣ ಬಂದಂತೆ ತೋರಿತು.

'ನೀವು ಬಹಳ ಸಂಕಟಪಟ್ಟಂತಿದೆ ; ಕೂತುಕೊಳ್ಳಿ ; ಕೂತುಕೊಂಡು ಹೇಳಿ ?'

'ಏನು ಮಾಡೋಣ ಸ್ವಾಮಿ, ಈಗ ಯಾವ ಹಳ್ಳಿಯಲ್ಲಿ ನೋಡಲಿ ಪಾರ್ಟಿಗಳು ; ಒಬ್ಬರ ಮೇಲೆ ಒಬ್ಬರ ಕಚ್ಚಾಟ ; ಶಾನುಭೋಗರು ಪಟೇಲರು ಸ್ಕೂಲು ಮೇಷ್ಟ್ರುಗಳು ಜಮೇದಾರ್ರು ಇವರಿಗೆ ಪ್ರಾಣಸಂಕಟ ; ಆಕಡೆ ಸೇರುವುದಕ್ಕಿಲ್ಲ ಈಕಡೆ ಸೇರುವುದಕ್ಕಿಲ್ಲ........'

'ಎರಡು ಕಡೆಗೂ ಸೇರಿಕೊಳ್ಳುವುದು ; ಆರುದೋಸೆಕೊಟ್ಟರೆ ಅತ್ತೆಕಡೆ, ಮೂರುದೋಸೆಕೊಟ್ಟರೆ ಸೊಸೆಕಡೆ, ಅಂತೂ ಇಂತೂ ಒಂಬತ್ತುದೋಸೆ ಹೊಡೆಯುವನೇ ಜಾಣ'

'ಅದೇನೋ ನಿಜ, ಸ್ವಾಮಿ ; ಅಂಥವರೇ ಹೆಚ್ಚು ಜನ ; ಆದೆಲ್ಲಾ ನಮ್ಮಂಥ ಗೊಡ್ಡುಗಳಿಗಲ್ಲ ಸ್ವಾಮಿ ; ನಾನು ಹಿಂದೇಯೇ ಹೇಳಲಿಲ್ಲವೇ ಧರ್ಮಕರ್ಮ ಎಲ್ಲ ಬಿಟ್ಟುಬಿಡಬೇಕು ಹಳ್ಳಿಯಲ್ಲಿ ಇರಬೇಕಾದರೆ ಅಂತ! ಪಟ್ಟಣವಾಸ ಸಾವಿರಪಾಲಿಗೆ ವಾಸಿ ಸ್ವಾಮಿ ! ಅಷ್ಟಲ್ಲದೆ ಕೆಟ್ಟು ಪಟ್ಟಣ ಸೇರು ಅಂತ ಗಾದೆ ಮಾಡಿದಾರೆಯೆ ?'

'ಹಾಗಾದರೆ ಯಾವ ಕಡೆಗೂ ಹೋಗದೆ ಸುಮ್ಮನೆ ಇದ್ದುಬಿಟ್ಟರೆ ಸರಿ ?'

'ಇರಗೊಡಿಸಿದರೆ ! ಇಲ್ಲದೆ ಹೋದರೂ, ನಾವು ಒಬ್ಬೊಬ್ಬರೇ ಆದರೆ ಹೇಗಾದರೂ ಇರಬಹುದು ಸ್ವಾಮಿ, ಬೈದಾದರೂ ಬೈದುಕೊಳ್ಳಲಿ ತಲೆಯಾದರೂ ಒಡೆದುಕೊಳ್ಳಲಿ ಅನ್ನಬಹುದು ; ಹೆಂಗಸರು ಮಕ್ಕಳು ಇರುತ್ತಾರಲ್ಲ ಸ್ವಾಮಿ !'

'ಇರಲಿ ಅವರನ್ನೇನು ಮಾಡುತ್ತಾರೆ ?'

'ಏನು ಮಾಡುತ್ತಾರೆಯೇ ? ಏನು ಮಾಡುವುದಿಲ್ಲ ಸ್ವಾಮಿ ; ದುರ್ಬೋಧನೆ ಮಾಡುತ್ತಾರೆ, ಮಾಡಬಾರದ್ದು ಮಾಡುತ್ತಾರೆ. ನಮ್ಮ ಹೆಂಗಸರಿಗೆ ವಿವೇಕ

ಏದ್ದಿದ್ದರೆ ಇಷ್ಟೇಕಾಗುತ್ತಿತ್ತು ಸ್ವಾಮಿ ಇಷ್ಟೇಕಾಗುತ್ತಿತ್ತು ! ಈ ಗಂಡ ಸೂಳೆ ಮಗ ಸ್ವಲ್ಪ ತಿಳಿದವನು ಇವನ ಮಾತು ಕೇಳೋಣ ಅನ್ನುವಹಾಗಿದ್ದರೆ ಯಾಕೆ ಚಿಂತೆಪಡಬೇಕಾಗಿತ್ತು........'

'ಹೋಗಲಿ ಬಿಡಿ ; ನಿಮ್ಮ ಮಾತು ಹೇಳಿ.'

'ನನ್ನ ಮಾತೇ ಸ್ವಾಮಿ ; ನನ್ನ ಹೆಂಡತಿಗೆ ಯಾರೋ ದುರ್ಬೋಧೆ ಮಾಡಿದರು ; ಅವಳು ಯಾವನ ಜೊತೆಯೋ ಓಡಿ ಹೋದಳು ; ಮುತ್ತಿನಂಥ ಮಗನಿದ್ದ ; ಸ್ಕೂಲಿನಲ್ಲಿ ಚೆನ್ನಾಗಿ ಓದುತ್ತಿದ್ದ ; ಹೊಟ್ಟೆಕಿಚ್ಚಿಗೆ ಅವನನ್ನ ಯಾರೋ ಏನೋ ಮಾಡಿಬಿಟ್ಟರು ; ಹೀಗಾದರೆ ಯಾರಿಗೆ ಮನಸ್ಸು ಸಮಾಧಾನವಾಗಿದ್ದೀತು ಸ್ವಾಮಿ ? ಇನ್ನು ಹುಚ್ಚು ಹಿಡಿಯಬೇಕೇ. ನನ್ನನ್ನೂ ಯಾರಾದರೂ ಕೊಂದರೆ ಸಾಕೆಂದು ಹುಚ್ಚನ ಹಾಗೆ ಅಲೆಯುತ್ತಿದ್ದೆ ; ನನಗೆ ಆಗದವರು ಇನ್ಸ್‌ಪೆಕ್ಟರಿಗೆ ಒಂದು ಮೂಗರ್ಜಿಯನ್ನು ಹಾಕಿದರು. ಇನ್ಸ್‌ಪೆಕ್ಟರು ನನ್ನ ಅವಸ್ಥೆಯನ್ನು ನೋಡಿ ಹುಚ್ಚನೆಂದು ತಿಳಿದು ಕೊಂಡರೋ, ನನ್ನ ದ್ವೇಷಿಗಳಿಂದ ಕೈ ಬೆಚ್ಚಗೆ ಮಾಡಿಸಿಕೊಂಡರೋ, ಇಲ್ಲ ಅವರಿಗೆ ಹೆದರಿಕೊಂಡರೋ ಆ ಪರಮೇಶ್ವರನೇ ಬಲ್ಲ ! ನನ್ನನ್ನು ಬರತರಫ್ ಮಾಡಿಸಿಬಿಟ್ಟರು. ನಮ್ಮ ಸಂಕಟ ನೋಡಿದರೆ ಹೀಗೆ ! ಯಾವ ಪೇಪರಿನಲ್ಲಿ ನೋಡಲಿ, ಈ ಸ್ಕೂಲು ಮೇಷ್ಟರು, ಶಾನುಭೋಗರು, ಪೊಲೀಸಿನವರು ಇವರ ಕಾಟ ಸಹಿಸುವದಕ್ಕಾಗುವುದಿಲ್ಲ ; ಎಲ್ಲಾ ಅನರ್ಥಕ್ಕೂ ಇವರೇ ಮೂಲ ಎಂದು ಕೂಗಿಕೊಳ್ಳುತ್ತಾರೆ'

'ನೀವು ತಿರುಗಿ ಇನ್ಸ್‌ಪೆಕ್ಟರರನ್ನು ಕಂಡು ಹೇಳಿಕೊಳ್ಳಲಿಲ್ಲವೇ ?'

'ಹುಚ್ಚ ಅಂತ ನನ್ನನ್ನು ಡಿಸ್ಮಿಸ್ ಮಾಡಿದ ಮೇಲೆ ನನ್ನನ್ನು ಯಾರು ಸ್ವಾಮಿ ಕೇಳೋರು ? ಕೆಳಗಿನಿಂದ ಮೇಲಿನವರೆಗೆ ಎಲ್ಲರಿಗೂ ನಾನು ಹುಚ್ಚನಾಗಿ ಹೋದೆ. ಪೋಸ್ಟು ಮೇಲೆ ಅರ್ಜಿಹಾಕಿ ಆಯಿತು ! ರೂಬುರೂಬು ಕೊಟ್ಟಾಯಿತು ; ಎಲ್ಲಾ ಹಾಳುಬಾವಿಗೆ ಹೋಗಿಬಿದ್ದಹಾಗೆ ವೇಸ್ಟ್‌ಪೇಪರ್ ಬ್ಯಾಸ್ಕೆಟ್ (ಕಸದಬುಟ್ಟಿ)ಗೆ ಬಿದ್ದು ಹೋದುವು !'

'ಈ ಆಫೀಸಿಗೆ ಅರ್ಜಿಹಾಕಿಕೊಂಡಿರಲಿಲ್ಲವೇ ?'

'ಇಲ್ಲಿಗೂ ಹಾಕಿಕೊಂಡಿದ್ದೆ ಸ್ವಾಮಿ ; ಅದರ ಮೇಲೆ ಕೆಳಗಿನ ಆಫೀಸಿನಿಂದ ರಿಪೋರ್ಟು ತರಿಸಿಕೊಂಡರು ಅಂತಕಾಣುತ್ತೆ ; ಕೆಳಗಿನ ಆಫೀಸ್ ರಿಪೋರ್ಟು ಗೊತ್ತೇ ಇದೆ—ನಾನು ಹುಚ್ಚ ಅಂತ. ಹುಚ್ಚನಿಗೆ ಕೆಲಸ ಯಾರು ಕೊಡುತಾರೆ !'

'ಇವತ್ತು ಊಟ ಎಲ್ಲಿ ಮಾಡಿದಿರಿ ?'

‘ ಎಲ್ಲಿ ಮಾಡಲಿ ಸ್ವಾಮಿ ! ಪಟ್ಟಣವಾಸದಲ್ಲಿ ಅನ್ನ ಹಾಕುವವರು ಯಾರು?’

‘ ಅಯ್ಯೋ ಮನುಷ್ಯ, ಹೋಗಿ ! ನಿಮ್ಮ ಮನೆ ಎಂಟೆಮ್ಮೆಕರೀತು ! ನಾರಣಪ್ಪ, ಬೇಗ ಹೋಗಿ ಏನಾದರೂ ಸ್ವಲ್ಪ ತಿಂಡೀನೂ ಎರಡು ಕಪ್ ಕೋಕೋನೂ ತೆಗೆಸಿಕೊಂಡು ಬಾ. ಹೋಗು ಬೇಗ !’

‘ ಅಷ್ಟು ಹೊತ್ತಿಗೆ ಸಾಹೇಬರು ಹೇಳಿ ಕಳುಹಿಸಿದರು. ಕರೆಸಿ ನನ್ನ ವಿಚಾರವನ್ನೇ ಕೇಳಿರಬಹುದು. ಮತ್ತೊಂದು ಗಳಿಗೆಗೆ ದಲಾಯಿತನು ಬಂದು ನನ್ನನ್ನು ಕರೆದುಕೊಂಡು ಸಾಹೇಬರ ಇದುರಿಗೆ ನಿಲ್ಲಿಸಿದನು. ನರಸಿಂಗರಾಯರೂ ಅಲ್ಲೇ ಇದ್ದರು. ಅವರು ನನ್ನ ಅರ್ಜಿಯನ್ನು ಇನ್ನೂ ಓದಿರಲಿಲ್ಲ. ಆದರೂ ನನ್ನ ಮಾತಿನಿಂದಲೇ ಎಲ್ಲವನ್ನೂ ಗ್ರಹಿಸಿ ಸಾಹೇಬರಿಗೆ ಹೇಳಿದ್ದಂತೆ ತೋರುತ್ತದೆ. ನನ್ನನ್ನು ನೋಡಿದಾಗ ಸಾಹೇಬರ ಮೊಖ ಕಂದಿಹೋಗಿತ್ತು. ಕಣ್ಣಿನಲ್ಲಿ ನೀರುತುಂಬಿತ್ತು ; ಆ ಎರಡು ಕಣ್ಣುಗಳನ್ನೂ ಎತ್ತಿ ನನ್ನನ್ನು ನೋಡಿದರು. ನಾನು ದೀರ್ಘದಂಡ ನಮಸ್ಕಾರಮಾಡಿ ಹೋ ಎಂದು ಗೋಳಾಡುವುದಕ್ಕೆ ಮೊದಲು ಮಾಡಿದೆ. ಸಾಹೇಬರು ಮಾಡಿದ ಸನ್ನೆಯನ್ನರಿತು ಹೆಡ್‌ಗುಮಾಸ್ತರು ತಮ್ಮ ಕಂಕುಳಲ್ಲಿದ್ದ ಈ ಕೋಟನ್ನು ತೆಗೆದುಕೊಂಡು ‘ ತಗೊಳ್ಳಿ ಇದನ್ನು ಹಾಕಿಕೊಳ್ಳಿ, ಸಾಹೇಬರು ಕೊಟ್ಟಿದಾರೆ’ ಎಂದರು. ‘ ಮಹಾಸ್ವಾಮಿ, ಎರಡು ಮಕ್ಕಳಿವೆ ಹೊಟ್ಟೆಗಿಲ್ಲದೆ ಸಾಯುತ್ತಿವೆ ! ನನ್ನ ನೌಕರಿ ನನಗೆ ಕೊಡಿಸಿಕೊಡಬೇಕು, ಹುಚ್ಚ ಕೂಗಾಡುತಾನೆ ಅಂತ ಕೈಬಿಡಬೇಡಿ ತಾವೂನೂ......’’ ಎಂತು ಅರಿಚುತ್ತಿದ್ದೆ.

ಸಾಹೇಬರು ಒಂದು ಚೀಟಿಯಲ್ಲಿ ಏನೋ ಗುರುತುಹಾಕಿ ನರಸಿಂಗರಾಯರಿಗೆ ತೋರಿಸಿದರು. ಅವರು ‘ ಆಯಿತಲ್ಲಬಿಡಿ ; ಇನ್ನೇನು ; ದೊರೆಯುತನಕ ದೂರು, ಹೊಳೆಯುತನಕ ಓಟ ; ದೊರೆಗಳಿಗೆ ಹೇಳಿ ಆಯಿತಲ್ಲ. ನಿಮ್ಮ ಕೆಲಸವನ್ನ ನಿಮಗೆ ಕೊಡಿಸುವಂತೆ ಆರ್ಡರಾಗಿದೆ. ಇವತ್ತೇ ನಿಮ್ಮ ಇನ್‌ಸ್ಪೆಕ್ಟರವರನ್ನು ಕರೆಸಿ ಸಾಹೇಬರು ಮಾತನಾಡುತ್ತಾರೆ ; ಇನ್ನೊಂದುಸಲ ಈ ಊರಿಗೆ ಬಂದಾಗ ತಿರುಗಿ ಸಾಹೇಬರನ್ನು ಬಂದು ನೋಡಿ, ಹೋಗಿ ’

‘‘ ನಾನು ತಿರುಗಿ ಉದ್ದಕ್ಕೆ ಅಡ್ಡಬಿದ್ದೆನು. ಸಾಹೇಬರೂ ಸುಮ್ಮನೆ ಕೈಮುಗಿದರು. ಖರ್ಚಿಗೆಂದು ಹತ್ತು ರೂಪಾಯಿ ಕೊಟ್ಟರು. ನಿನ್ನೆ ರಾತ್ರಿ ನರಸಿಂಗರಾಯರ ಮನೆಯಲ್ಲಿಯೇ ಊಟಮಾಡಿಕೊಂಡು ಬರುತ್ತಾ ಇದ್ದೇನೆ’

‘ ನನಗೂ ಅಯ್ಯೋಪಾಪ ! ಎನ್ನಿಸಿತು. ನಾನೂ ಏನಾದರೂ ಸಹಾಯ ಮಾಡೋಣ ಅಂದುಕೊಂಡು ಜೇಬಿಗೆ ಕೈಹಾಕಿದೆ. ಊರಿಗೆ ಹೋಗಿ ಇಳಿದರೆ

ಜಟಕಾ ಬಾಡಿಗೆಗೆ ಸಾಕುಸಾಲದಷ್ಟು ಇತ್ತು. ಆದ್ದರಿಂದ ನನ್ನ ದಾನಬುದ್ಧಿ ಉತ್ಪನ್ನವಾಗುತ್ತಿದ್ದ ಹಾಗೇ ವಿಲೀನವೂ ಆಗಿ ಹೋಯಿತು. ರೈಲು ನಿಂತಿತು. ನನ್ನ ಪಾಡಿಗೆ ನಾನು ಆತನ ಪಾಡಿಗೆ ಆತ ಹೊರಟು ಹೋದೆವು.

ನರಸಿಂಗರಾಯರು ನನಗೆ ಗುರುತು. ಅವರ ಊರಿಗೆ ಹೋದಾಗ ಉದ್ದೇಶ್ಯ ಪೂರ್ವಕವಾಗಿ ಅವರನ್ನು ಕಂಡೆನು. ಅವರು ಆ ಮಾತು ಈ ಮಾತು ಆಡುತ್ತ 'ಎಲ್ಲಿ ಇಳಿದುಕೊಂಡಿದ್ದೀಯೆ ಶ್ರೀಪತಿ, ಸಾಯಂಕಾಲಕ್ಕೆ ನಮ್ಮ ಮನೆಗೆ ಬಾ ಊಟಕ್ಕೆ' ಅಂದರು.

'ಏನಯ್ಯಾ ನಾನೂ ಆ ಹುಚ್ಚ ಎಂದು ತಿಳಿದುಕೊಂಡೆಯೋ?' ಅವರಿಗೆ ಸ್ವಲ್ಪ ದಿಗ್ಭ್ರಮೆಯಾಯಿತು. ನಾನು ಸ್ವಲ್ಪ ಜ್ಞಾಪಿಸಿದೆ. ಅವರು ಬಿದ್ದು ಬಿದ್ದು ನಕ್ಕು 'ಅದು ನಿನಗೆ ಹೇಗೆ ಗೊತ್ತಾಯಿತು? ನೀನೇ ಕಳುಹಿಸಿದ್ದೆಯೋ ಆ ಹುಚ್ಚನ್ನ? ಇಲ್ಲ ಆತನಿಗೇನಾದರೂ ಆಗಬೇಕೋ?'

'ಏನೋಪ್ಪ, ಹ್ಯಾಂಲೆಟ್‌ನ ಹುಚ್ಚನ್ನಾದರೂ ತೀರ್ಮಾನಿಸಿ ಹೇಳಬಹುದು ಅದನ್ನು ಹೇಳುವದಕ್ಕೆ ಆಗುವುದಿಲ್ಲ. ಸಾಹೇಬರೂ ಒಂದೊಂದುಸಲ 'ಆತನಿಗೆ ಒಂದು ಸ್ಕ್ರೂ ಲೂಸ್ ಆಗಿತ್ತು ಅಂತಕಾಣತ್ತರೀ' ಎನ್ನುತ್ತಾರೆ. ಇನ್ನೊಂದುಸಲ, 'ಪಾಪ! ಆ ಹುಚ್ಚ ಹ್ಯಾಗಿದ್ದಾನ್ರೀ; ಆತನಿಗೆ ಪ್ರೊಮೋಷನ್ ಗಿಮೋಷನ್ ಏನಾದರೂ ಆಯಿತೋ?' ಅನ್ನುತ್ತಾರೆ''

ಶ್ರೀಪತಿ.

ಕಾವ್ಯಾವಲೋಕನ

ಮುದ್ದನಮಾತು—ಬರೆದವನು-'ಆನಂದಕಂದ.' ಪ್ರಕಾಶಕರು—ಪಿ. ಟಿ. ಐ. ಬುಕ್ ಡಿಪೊ ಬಸವನಗುಡಿ, ಬೆಂಗಳೂರು.

ಅರುಣೋದಯ—ಗೆಳೆಯರಗುಂಪಿನ 'ಆನಂದಕಂದ'ರಿಂದ. ಪ್ರಕಾಶಕರು—ಜ. ಕೆ. ಜೋಷೀ ಅಂಡ್ ಬ್ರದರ್ಸ್, ಬಳೇಪೇಟೆ, ಬೆಂಗಳೂರುಸಿಟಿ. ಬೆಲೆ ೨ ಆಣೆ.

ಈಗಿನ ಉತ್ತರ ಕರ್ಣಾಟಕವು ಪಂಪ, ರನ್ನ, ನಾರಣಪ್ಪ ಮೊದಲಾದ ನಮ್ಮ ದೊಡ್ಡ ಕವಿಗಳೆಲ್ಲರೂ ಹುಟ್ಟಿ, ಬೆಳೆದು, ಬಾಳಿದ ನಾಡು. ಅಂಥವರ ಬದುಕಿನಿಂದ ಪವಿತ್ರವಾದ ಪ್ರದೇಶದಿಂದ ಕವಿತೆಯ ನವಜೀವನದ ಕಾಲವಾದ ಈ ಕಾಲದಲ್ಲಿಯೂ ಒಳ್ಳೆಯ ಕಾವ್ಯಕುಸುಮಗಳು ಬೆಳೆದುಬಂದು ಸಾಹಿತ್ಯಲಕ್ಷ್ಮಿಯ ಕೊರಳ ಮಾಲೆಗೆ ಅರ್ಪಿತವಾಗಬೇಕೆಂಬ ಹಾರೈಕೆ ಯಾರಿಗೆ ಇಲ್ಲ? ನಾನಾ ಕಾರಣಗಳಿಂದ ಆ ಭೂಮಿಯೂ ಬಹುವಾಗಿ ಬಂಜರುಬಿದ್ದು ಎಲ್ಲೋ ಆಗೊಂದುಸಲ ಈಗೊಂದುಸಲ ಅಪರೂಪವಾಗಿ ಸಣ್ಣಸಣ್ಣ ಕವನಗಳು ಮಾತ್ರ ಅಲ್ಲಿಂದ ನಮ್ಮ ಕಡೆಗೆ ಬರುತ್ತಲಿದ್ದವು. "ಗೆಳೆಯರಗುಂಪಿ" ನ ಕವಿಗಳು ಕೆಲಸಕ್ಕೆ ಆರಂಭಿಸಿದ ಕಾಲದಿಂದ ಈಚೆಗೆ ಧಾರವಾಡದಲ್ಲಿ ಒಂದು ರೀತಿಯ ವಿಚಿತ್ರ ಎಚ್ಚರವೂ ಶೈಲಿಯೂ ಉಂಟಾದುವೆನ್ನಬಹುದು. ಅದೇ ಗುಂಪಿಗೆ ಸೇರಿದ ಶ್ರೀಯುತ ಬೆಟಗೇರಿಯವರು, ಈ ಎರಡು ಸಣ್ಣ ಪುಸ್ತಕಗಳಲ್ಲಿಯೂ, ಎಲ್ಲರಿಗೂ ಆದರ ಬರುವಂಥ ಕವನಗಳನ್ನು ಮಾಡಿ ಅಚ್ಚು ಹಾಕಿಸಿರುತ್ತಾರೆ.

ಇಂದಿನ ಕಾವ್ಯಗಳಿಗೆ ಸಾಮಾನ್ಯ ಜನದ ದಿನದಿನದ ಜೀವನವೇ ಸಾಮಗ್ರಿ ಇಹದ, ಕ್ಷಣದ, ಸುಖದುಃಖಗಳು, ಕಷ್ಟನಿಷ್ಠುರಗಳು, ಕುಂದುಕೊರತೆಗಳು, ಆಶೆಭರವಸೆಗಳು ಮುಂತಾದುವು ಕವಿ ಹೃದಯದಲ್ಲಿ ಭಾವಗಳನ್ನು ಉದ್ರೇಕಗೊಳಿಸಿ ಅವರ ತನಿ ಅನುಭವಗಳ ಪಾಕವನ್ನು ಕವಿಗಳಲ್ಲದ ಸಹೃದಯರಿಗೆ ದೊರೆಯುವಂತೆ ಮಾಡಿವೆ. ಎಳೆಯ ಮಕ್ಕಳ ಮನಸ್ಸಿನ ಮಾಟವನ್ನೂ, ಅದು ವ್ಯಕ್ತಪಡುವ ರೀತಿಯನ್ನೂ ತಿಳಿಸಲು ಹೊರಟು, ಈವರೆಗೂ ವಿಶೇಷವಾಗಿ ಕಣ್ಣಿಗೆ ಬೀಳದಿದ್ದುದನ್ನು ಸಾಹಿತ್ಯ ಪ್ರಪಂಚಕ್ಕೆ ತಂದಿರುವ ಈ ಕವನಗಳನ್ನು ನೋಡಿದರೆ ನಮ್ಮ ಕವಿಗಳ

ಗಮನವು ಎಷ್ಟು ಎಷ್ಟು ಹೆಚ್ಚಾಗಿ ಪ್ರಕೃತಿಯ ಕಡೆಗೂ, ಸರಳತೆಯ ಕಡೆಗೂ ಹೋಗುತ್ತಿದೆಯೆಂಬುದು ಸ್ಪಷ್ಟಪಡದೆ ಇರದು.

"ಮುದ್ದನಮಾತು" ಕನ್ನಡದಲ್ಲಿ ಹೊಸಮಾದರಿಯ ಕಾವ್ಯವೆಂದೂ, ಇದರಲ್ಲಿ ಕಂಡುಬರುವ ಗುಣವೂ ವಿಷಯವೂ ಎಂಥುವೆಂದೂ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರವರು ತಮ್ಮ ಅಮೂಲ್ಯವಾದ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಅವರು ಯಾವುದಾದರೊಂದು ವಿಷಯವನ್ನು ಹೇಳಿ ಬಿಟ್ಟಮೇಲೆ ಇತರರು ಅದೇ ಕೆಲಸಕ್ಕೆ ಕೈಹಾಕ ಹೋಗುವುದು ಮಡ್ಡಿತನ. ಆದರೆ ನಾವೂ ಈ ಪುಸ್ತಕದ ಅವಲೋಕನ ಶಾಸ್ತ್ರವಾದರೂ ಮಾಡಬೇಕಾಗಿದೆ. ಆದುದರಿಂದ ನಮಗೆ ತೋರಿದ ಒಂದೆರಡು ಮಾತುಗಳನ್ನು ನಾವೂ ಇಲ್ಲಿ ಹೇಳಲೆತ್ನಿಸಿದ್ದೇವೆ.

ಪುಸ್ತಕದ ವಿಳಾಸದ ವಿಷಯದಲ್ಲಿ ಕೆಲವರಿಗೆ ಮೊದಲು ಅಪ್ರಸನ್ನತೆ ಬರಬಹುದು ; ಈ ಕವನಗಳಲ್ಲಿ ಕಂಡುಬರುವ ಛಂದೋರೀತಿಯೂ, ಕಟ್ಟಡವೂ ಹಳೆಯ ತರಹದ ಕಾವ್ಯಸಂಸ್ಕಾರವಿರುವವರಿಗೆ ಏಕನಾದದಂತೆ ಕಂಡು ಅದನ್ನು ಸುಪ್ರಸನ್ನತೆಗೆ ತಿರುಗಿಸಲು ಸಹಾಯಮಾಡದಿರಬಹುದು ; ಅಲ್ಲಲ್ಲಿ "ಮುದ್ದನ" ವಯಸ್ಸು ಮನಸ್ಸು ಇವುಗಳ ವಿಷಯದಲ್ಲಿ ಇನ್ನು ಕೆಲವರಿಗೆ ಭ್ರಮೆ ಅಸಮಂಜಸ ಗಳು ಬೋಧೆಯಾಗಬಹುದು. ಆದರೇನು ? ಇಲ್ಲಿನ ೪೦ ಕವನಗಳಲ್ಲಿಯೂ ಒಂದು ಮನೋಹರವಾದ ಸರಳತೆಯೂ, ಸವಿಯೂ, ನಸುಕೋಮಲತೆಯೂ, ಪ್ರೇಮ ಭಾವವೂ, ಹಂಬಲೂ ಕಂಡು ಬರುತ್ತವೆ. ಮೊದಲಿಂದ ಕೊನೆಯವರೆಗೂ ಒಂದೇ ರೀತಿ. ಈ ಮಗುವಿನ ಎಲ್ಲ ಸಂತೋಷ, ಉತ್ಸಾಹ, ಪ್ರೀತಿಗಳಿಗೂ ತಾಯಿಯೇ ನೆಲೆ, ತಾಯೇ ಬೆಂಬಲ. ಆಕೆಯೇ ಎಲ್ಲವೂ ; ಆಕೆಯೇ ದೇವರು. ದೇವರು ಮಾತ್ರವೇ ಏಕೆ ? ದೇವರಿಗಿಂತಲೂ ಹೆಚ್ಚು. ಒಂದೊಂದುಸಲ ದೇವರೇ ಆಕೆ ಎಂಬ ಭಾವನೆಕೂಡ ನಮಗೆ ಹೊಳೆಯುವುದರಿಂದ ಇಂಗ್ಲಿಷಿನಲ್ಲಿ ಮಿಸ್ಟಿಸಿಸಮ್ ಎಂದು ಯಾವುದನ್ನು ಕರೆಯುವರೋ ಅದರ ಪ್ರಭೆ ಪ್ರಭಾವಗಳೂ ಇಲ್ಲಿ ಕಂಡು ಬರುವುವು. ಈ ಮಗುವಿಗೆ ತಾಯಿಯನ್ನು ಒಂದು ಕ್ಷಣವಾದರೂ ಬಿಟ್ಟಿರಲು ಮನಸ್ಸಿಲ್ಲ.

> ಏನನಿತ್ತರು ಒಲ್ಲೆ ! ಏನನಿತ್ತರು ಒಲ್ಲೆ !
> ನಾ ನಿನ್ನ ತೊಡೆಮಡಿಲ ಬಿಟ್ಟಳಿಯಲೊಲ್ಲೆ !

ಎಂಬುದು ಪಲ್ಲವಿಯಂತೆ ಎಲ್ಲೆಲ್ಲಿಯೂ ಕೇಳಿಬರುವುದು. ತಾಯಿಗೆ ಈ ಮಗು ಹೇಗೆ ಅಂಟಿಕೊಂಡಿದೆ ಎಂಬುದನ್ನೂ ಇದರ ಹಂಬಲನ್ನೂ ನೋಡಿಬಿಟ್ಟರೆ ಒಂದೊಂದುಸಲ ಅಯ್ಯೋ, ಇದು ಏನು ಅಸಹಾಯತೆ! ಎಂದು ಮನಸ್ಸಿಗೆ ವ್ಯಸನವಾಗುವುದು.

ಮಕ್ಕಳನ್ನೂ, ಮಕ್ಕಳ ಅವಸ್ಥೆಯನ್ನೂ, ಅವು ಆಶೆತೋರುವ, ಕ್ಲೇಶಪಡುವ, ಅಥವ ಸಂತೋಷಪಡುವ ರೀತಿಗಳನ್ನೂ ನೋಡಿರುವ ಯಾರಿಗೆ ತಾನೇ ಇದು ನಿಜವೆಂದು ಸ್ಫುರಿಸದು! ಮಕ್ಕಳ ಪ್ರಪಂಚವೇ ಪ್ರಪಂಚ! ಅವಕ್ಕೆ ನಿಜವಾದ ಕಾರ್ಯಕಾರಣ ಸಂಬಂಧ ತಿಳಿಯದು; ನಿಯಮನೀತಿಗಳ ನಿರ್ಬಂಧವಿಲ್ಲ; ಯುಕ್ತಾಯುಕ್ತ ವಿಚಾರ ವಿಲ್ಲ; ಅವರ ಎಳೆಯ ಮನಸ್ಸು ಓಡುವರೀತಿಯಲ್ಲಿ ಯಾವ ತಡೆಯೂ ಇಲ್ಲ;— ದೊಡ್ಡವರು ಯಾವುದನ್ನು ಯುಕ್ತಿ, ವಿಮರ್ಶೆ ವಿಷಯಸಂಯೋಜನಾಕ್ರಮ ಎನ್ನುವರೋ ಅವು ಒಂದೂ ಇಲ್ಲ. ಆದರೂ ಎಷ್ಟು ವಿಚಿತ್ರವಾಗಿ ಮಕ್ಕಳು ಒಂದ ಕ್ಕೊಂದು ಕೂಡಿಸುತ್ತವೆ! ಎಷ್ಟು ನಿರಾಳವಾದ ಮನಸ್ಸು! ತಮಗೆ ಬೇಕು ಬೇಡ ದವುಗಳನ್ನು ಎಷ್ಟು ಬೇಗ ನಿರ್ಧರಿಸಿಕೊಳ್ಳುವುವು! ಹೇಗೆ ಹಟಮಾಡಿ ಒಂದು ನಿಮಿಷದಲ್ಲಿ ತಮಗೆ ಬೇಕಾದುದನ್ನು ಪಡೆದುಕೊಳ್ಳುವುವು! ಗದರಿಕೆ, ಪೆಟ್ಟುಗಳನ್ನು ಸಂಪೂರ್ಣವಾಗಿ ಮರೆತುಬಿಟ್ಟು ಉತ್ತರಕ್ಷಣದಲ್ಲಿಯೇ ಪ್ರೇಮಕಾಮಿಗಳಾಗಿ ನಮ್ಮೆಡೆಗೇ ಹೇಗೆ ಹಿಂದಿರುಗುವುವು! ಅವರ ಹೃದಯವು ಎಷ್ಟು ಕಲ್ಮಷರಹಿತ ವಾದುದು, ಎಂಬುವು ಇಲ್ಲಿ ಚೆನ್ನಾಗಿ ಚಿತ್ರಿತವಾಗಿರುವುವು.

ಈ ಮಗುವು ಕಡೆಯಪಕ್ಷ ಮೂರುತೆರನಾಗಿ ಕಾಣುವುದು. ಒಂದುಸಲ ಹೆತ್ತತಾಯಿಯ ಬೆನ್ನುಹಿಡಿದು ಆಕೆಯ ಪ್ರೇಮಾಕಾಂಕ್ಷಿಯಾದ ಮುದ್ದಿನ ಮಗುವಾಗಿ ಆಕೆಯ ಲಾಲನೆ ಪಾಲನೆ ಬೇಡುವುದು. ಇನ್ನೊಂದುವೇಳೆ ದೇಶ ಮಾತೆಯ ಮುದ್ದುಕೂಸಾಗಿ ಆಕೆಯ ಕಷ್ಟಸುಖಗಳನ್ನು ಚಿಂತಿಸುತ್ತ, ಅವುಗಳಲ್ಲಿ ಭಾಗಿಯಾಗಿ, ವಾತ್ಸಲ್ಯದಿಂದ ಮರುಗುವುದು. ಮೂರನೆಯಸಲ ದೇವರನ್ನು ತಾಯಂತೆ ಸಂಬೋಧಿಸಿ ಪ್ರೇಮಭಿಕ್ಷೆಬೇಡಿ, ಅವನ ಸಾನ್ನಿಧ್ಯದಲ್ಲಿರಲು ಸದಾ ತವಕ ಪಡುತ್ತಿರುವ ಭಕ್ತನಂತೆ ಮೊರೆಯಿಡುವುದು. ಈ ಮೂರು ಸಂಬಂಧಗಳಲ್ಲಿ ಹರಿಯುತ್ತಿರುವುದೂ ಒಂದೇ ವಿಧವಾದ ಸರಳಪ್ರೇಮವೃತ್ತಿ.

ಹಿಂದೆ ಬರೆಯುತ್ತಿದ್ದವರು ಮಕ್ಕಳಕಡೆ ಹೆಚ್ಚಾಗಿ ಈತೆರನಾದ ಗಮನ ಹರಿಸಿರಲಿಲ್ಲ. ಹರಿಸಿದಾಗ ಅವರ ಕಣ್ಣಿನ ನೋಟ ಬೇರೇಕಡೆ ಇರುತ್ತಿತ್ತು. ಮುಕ್ಕಾಲುಮೂರುವೀಸಪಾಲು ಅವರು ಎಲ್ಲರೂ ಮಕ್ಕಳಲ್ಲಿನ–ಬಾಲಕರಲ್ಲಿನ–ವೀರ ವನ್ನು ಮಾತ್ರ ತೋರಿಸಿದರು. ಅಥವ ಅವರ ಆಟಪಾಟಗಳನ್ನು ತಾಯಿತಂದೆಯ ರಾಗಲಿ, ಇತರರಾಗಲಿ ನೋಡಿ, ಹೇಳಿ ನಲಿಯುವಂತೆ ತೋರಿಸುತ್ತಿದ್ದರು; ಅವರ ಮೃತಿಯಲ್ಲಿ ತಾವು ದುಃಖಪಟ್ಟು, ಓದುವವರನ್ನೂ ಶೋಕದಲ್ಲಿ ಮುಳುಗಿಸುತ್ತಿದ್ದರು; ಅವರ ಸ್ಥಿತಿಯನ್ನು ಆಧಾರವಾಗಿಟ್ಟುಕೊಂಡು ಕೆಲವು ತತ್ವಗಳನ್ನು ಉಪದೇಶಿಸುತ್ತಿ

ದ್ದರು. ಇಲ್ಲವೆ ಆತೆರನಾದ ಜೀವನವು ಸುಖಮಯವಾದುದು; ಅಂಥ ಭಾಗ್ಯ ನಮಗೆಲ್ಲಿ ಪುನಃ ಬಂದೀತು; ಎಂದಿಗೂ ಹಾಗೆಯೇ ಇದ್ದುಬಿಡುವುದಕ್ಕೆ ಸಾಧ್ಯ ವಾಗಿದ್ದಿದ್ದರೆ ಎಷ್ಟು ಸುಖವಾಗಿರಬಹುದಾಗಿತ್ತು ಮುಂತಾಗಿ ಭಾವಿಸುತ್ತ ಮಕ್ಕಳ ಬದುಕಿನಕಡೆ ಆಶೆಯ ದೃಷ್ಟಿಯಿಂದ ನೋಡುತ್ತ, ಅದನ್ನು ನೆನೆನೆನೆದುಕೊಂಡು ನಿಡುಸುಯ್ಯುತ್ತ ಇರುವಂತೆ ಬರೆದರು. ಆದರೆ ತಾವೇ ಮಗುವಾಗಿ ಅದರ ಹೃದಯ ವನ್ನು ಹೊಕ್ಕು, ಆ ಹೃದಯವೇ ನುಡಿಯುವಂತೆಮಾಡಿ, ಲೋಕಕ್ಕೆ ತೋರಿಸ ತಕ್ಕದ್ದು ಬಹುಕಷ್ಟವಾದ ಕೆಲಸ. ಇದಕ್ಕೆ ವಿಶಾಲ ಅನುಭವಬೇಕು; ಬಹು ಸೂಕ್ಷ್ಮವಾದ ತಿಳಿವಳಿಕೆಬೇಕು. ಬಹುಸರಳವಾದ ಹೃದಯದ ನೋಟ ಬೇಕು. ಕಣ್ಣಿನಲ್ಲಿ ಕಾಣುವುದಕ್ಕಿಂತ, ಕಿವಿಯಲ್ಲಿ ಕೇಳುವುದಕ್ಕಿಂತ ಹೆಚ್ಚಾಗಿ ಎದೆಯ ಪ್ರೇಮದ ಕಣ್ಣಿನಿಂದ ನೋಡಿ ತಿಳಿದುಕೊಳ್ಳತಕ್ಕ ಸಾಮರ್ಥ್ಯಬೇಕು. ಒಂದುಕ್ಷಣ ದಲ್ಲಿ ಅಸಮಂಜಸ ಕಂಡುಬಿಡಬಹುದು; ಕೇವಲ ಕೃತಕಕಲ್ಪನೆ ಎಂದು ತೋರಿ ಬಿಡಬಹುದು; ಬೆಳೆದ ಕವಿಯು ತನ್ನ ಎಳವು ಕಲ್ಪನೆಗಳನ್ನು ಮಗುವಿನಲ್ಲಿ ಆರೋ ಪಿಸಿ ಅವನ್ನು ಪ್ರದರ್ಶನೆಮಾಡುತ್ತಿದ್ದಾನೆಂದು ಭಾಸವಾಗಬಹುದು. ಈ ಅಂಶದಲ್ಲಿ ಇಲ್ಲಿನ ಹಲವು ಕವನಗಳು ಪರೀಕ್ಷೆಕೊಟ್ಟು ಉತ್ತೀರ್ಣವಾಗುವುವಾದರೂ "ತಿರುಕರ ಮುದುಕೆ" ಯಂಥುವು ಆಗುವುವೊ ಇಲ್ಲವೊ ಖಂಡಿತವಾಗಿ ಹೇಳುವುದು ಕಷ್ಟ. ಮಗುವಿನ ಚಿತ್ತವ್ಯಾಪಾರರಂಗಕ್ಕೂ ಅದರ ಎಳೆತಿಳಿವಿನ ಮಟ್ಟದ ಉನ್ನತಿಗೂ ಮೀರಿದ ಕಲ್ಪನೆಗಳು "ಕೆಡಿಗೇಡಿ" ಯಂಥುದರಲ್ಲಿಯೂ ಇರುವಂತೆ ನಮಗೆ ಕಾಣುವುವು. ಅಲ್ಲಲ್ಲಿ ಇತರಕಡೆ ಮಾತುಗಳು ಕೇವಲ ಸಾಹಿತ್ಯದ ಪದಗಳು; ಕೆಲವು ಸಾಮ್ಯ ರೂಪಕಗಳೂ ಮಗುವಿನ ಶಕ್ತಿಗೆ ಮೀರಿದಂಥುವು. ಆದರೆ 'ಅಲೆದಾಟ' 'ಆಡಾಡ ಬುತ್ತಿ' 'ಹೆಮ್ಮೆ ಮುಳಿಸು' 'ಆರಕ್ಷ ಈರಕ್ಷ' ಮುಂತಾದುವುಗಳಲ್ಲಿ ತೋರುವ ಸಹಜ ಸರಳತೆಯೂ, 'ಬಡನೆ' 'ಹೂಮಾಲೆ' ಇವುಗಳಲ್ಲಿ ಕಾಣಬರುವ (ಇವನ್ನು ದೇಶವಾತ್ಸಲ್ಯವೆಂದೂ ಅನ್ವಯಿಸಿಕೊಳ್ಳಬಹುದು) ರಕ್ತಿಯೂ, 'ದೇವರಗುಡಿ' 'ಮುಗಿಲಹೂ' 'ಮಲೆಯ ಮರ' 'ಹೇಗೆಬರಲಿ' 'ಹಾಡು' ಇವುಗಳಲ್ಲಿ ಕಂಡು ಬರುವ ಧ್ವನಿ ಪೂರ್ಣವಾದ, ಸಂಕೇತಪೂರಿತವಾದ, ಉದಾತ್ತಮಧುರವಾದ ಭಕ್ತಿ ಕೃತಿಗಳೂ ಕವಿಗಳ ಕಲ್ಪನಾಶಕ್ತಿಗೆ ಒಳ್ಳೆಯ ಫಲಗಳನ್ನು ದೊರಕಿಸಿಕೊಟ್ಟಿವೆ.

'ನನ್ನ ಹಾಡೆಲ್ಲ ನಿನ್ನಂತೆ ಸವಿಯೆನಿಸುವೊಲು
ಚೆನ್ನಾದ ಸರವ ತೆಗೆಯಲು ನನಗೆ ಹೇಳು!'

ಎಂದು ಪ್ರಾರ್ಥಿಸಲು ಯಾರುತಾನೇ ಆಶೆಪಡರು? ಇಷ್ಟೂ ಭಾವದ ಮಾತಾ ಯಿತು. ಇವರು ಮಾತುಗಳನ್ನು ಆರಿಸುವ ಕೆಲಸದಲ್ಲಿಯೂ ಅವುಗಳನ್ನು ಸಂಯೋ

ಜಿಸುವ ಅಥವ ನೆಯ್ಯುವ ಕಲಾಕಾರ್ಯದಲ್ಲಿಯೂ ಇನ್ನೂ ಹೆಚ್ಚು ಶ್ರಮತೆಗೆದು ಕೊಂಡಿದ್ದರೆ ತಮ್ಮ ಕಲೆಯ ಕಳೆಯನ್ನು ಇನ್ನೂ ಹೆಚ್ಚಿಸಬಹುದಾಗಿತ್ತು. 'ಸರವತೆಗೆ' ಎಂಬುದು ಅರ್ಥದಲ್ಲಿ ಚೆನ್ನಾಗಿದ್ದರೂ ಅಲ್ಲಿ ಮಾತಿನ ಲಾಲಿತ್ಯ, ಭಾವದ ಸೌಕುಮಾರ್ಯ ನಾದದ ಮಾಧುರ್ಯ ಇವುಗಳು ಇನ್ನೂ ಚೆನ್ನಾಗಿ ಮೇಳೈಸುವಂತೆ ಮಾಡಬಹುದಾಗಿತ್ತು. ಸಹೃದಯರಾಗಿ ಇಲ್ಲಿನ ಭಾವಸರಣಿಯಲ್ಲಿ ಮನಸ್ಸನ್ನು ತೇಲಿಬಿಟ್ಟು ಇದನ್ನು ಎರಡು ಮೂರುಬಾರಿ ಓದಿದ ಹೊರತು ಇಲ್ಲಿನ ರುಚಿ ಇಂಥುದೆಂಬುದು ತಿಳಿದುಬರುವುದಿಲ್ಲ. ಕನ್ನಡದ ಅಭಿಮಾನಿಗಳೆಲ್ಲರಿಗೂ ಅದು ಅಗತ್ಯವಾದ ಕೆಲಸ.

'ಅರುಣೋದಯ' ದಲ್ಲಿ ಹಿಂದಿನ ಪುಸ್ತಕದಲ್ಲಿರುವಂಥ ಪ್ರತಿಭೆಯ ಪ್ರಾಚುರ್ಯವೂ ಆಳವೂ ಅಷ್ಟಾಗಿ ಇಲ್ಲ. ಇಲ್ಲಿನ ಶೈಲಿ ಸರಣಿಗಳು ಕಲಾಸಂಪ್ರದಾಯವನ್ನು ಹೇರಾಳ್ವಾಗಿ ಅನುಸರಿಸಲೆತ್ನಿಸಿವೆ. ಇಲ್ಲಿನ ಪದ್ಯಗಳಲ್ಲಿರುವ ಶಬ್ದಸೌಂದರ್ಯ, ಓಟ, ತಾನ, ರಚನೆ ಇವೇ ಇದಕ್ಕೆ ಸಾಕ್ಷಿ. ದೇಶವಾತ್ಸಲ್ಯದಿಂದ ಬರುವ ಆವೇಶಗಳನ್ನು ಇಲ್ಲಿನ 'ರಣದುಂಧುಬಿ' 'ಬಾಲಭಟನ ವಿರವಾಣಿ' ಇವು ಹೆಚ್ಚಿಸಬಲ್ಲವು; ಆದುದರಿಂದ ಬಹುಜನರು ಹಾಡುವಂತೆಯೂ ಆದಾವು. 'ಒಡೆದ ಕನ್ನಡಿ' ಯಲ್ಲಿನ ಭಾವ ಚೆನ್ನಾಗಿದೆ. ಇಲ್ಲಿರುವ ಹಲವು ಕವನಗಳ ಕಟ್ಟಡದರೀತಿಯು ಶ್ರೀಯವರ 'ಪ್ರಗಾಥ' 'ಭರತಮಾತೆಯ ವಾಕ್ಯ' ಮುಂತಾದುವುಗಳ ತಾನವನ್ನು ಕೆಲವು ಅನುಸರಿಸಿಯೂ ಕೆಲವು ಹರಡಿಸಿಯೂ ಇವೆ. ಪ್ರಾಯಃ ಚಿಕ್ಕ ಕವಿಗಳಲ್ಲಿ ಆ ತಾನಗಳ ಮೋಹನತೆಗೆ ಸೋತು ಬಂದಿಬೀಳದವರೇ ಅಪೂರ್ವವೆಂದರೆ ಅತಿಶಯೋಕ್ತಿಯಾಗಲಾರದು.

ವಿ. ಸೀ.

ಭೀಷ್ಮಚರಿತೆ—ಶ್ರೀಮಾನ್ ಚ. ವಾಸುದೇವಯ್ಯನವರಿಂದ ರಚಿತವಾದದ್ದು ; ಕ್ರೌನ್. ಪುಟಗಳು ೨೪೮. ಬೆಂಗಳೂರು ಪ್ರೆಸ್ ೧೯೨೭ ; ಬೆಲೆ ರೂ. ೧—೮—೦.

ಮಹಾಪುರುಷರ ಜೀವನ ಚರಿತ್ರೆಗಳು ಜನರ ನೀತಿನಡವಳಿಕೆಗಳನ್ನು ಸಂಸ್ಕಾರಗೊಳಿಸಿ ಉತ್ತಮಗೊಳಿಸಿ ಸಾಧಕಗಳಾಗುವುವು. ಕಥಾನಾಯಕನು ದೇಶಭಕ್ತನಾಗಿದ್ದಲ್ಲಿ ಸ್ವದೇಶಾಭಿಮಾನವೂ ಉತ್ತಮಯೋಧನೂ ಸಾಹಸಿಯೂ ಆಗಿದ್ದಲ್ಲಿ ಸ್ಥೈರ್ಯಶೌರ್ಯಗಳೂ ಧಾರ್ಮಿಕನಾಗಿದ್ದಲ್ಲಿ ಸಚ್ಚರಿತ್ರವೂ ಪಾಠಕಲೇಖಕರ ಸಂಸ್ಕಾರ ಯೋಗ್ಯತೆಗಳಿಗನುಗುಣವಾಗಿ ನಮ್ಮಲ್ಲಿ ಉಜ್ಜ್ವಲಿತವಾಗುವುವು. ಹೆಸರು 'ಜೀವನ ಚರಿತ್ರೆ' ಯೆಂದಿದ್ದರೂ ಕಥಾನಾಯಕರಿಗೆ ಸಂಬಂಧಪಡುವಂತೆ ಆ ಕಾಲದ ಘಟನಾ

ವಿಶೇಷಗಳು ಪ್ರಾಸಂಗಿಕವಾಗಿಯೋ ವಿಸ್ತಾರವಾಗಿಯೋ ಅದರಲ್ಲಿ ಬಂದೇಬರುವುವು. ಆ ಘಟನಾವಿಶೇಷಗಳಿಂದಲೇ ಅವರ ಮಹತ್ವವು ಪ್ರಕಾಶಕ್ಕೆ ಬರುವುದು. ಹೀಗೆ ಜೀವನಕಥೆಯೂ ಆ ಕಾಲದ ಚರಿತ್ರೆಯೂ ಒಂದರೊಂದಿಗೆ ಒಂದು ಮಿಳಿತವಾಗಿಯೇ ಇರುವುವು. ಆದುದರಿಂದಲೇ ಭೀಷ್ಮಕಥಾವೃತ್ತಾಂತವಾದ ಪ್ರಸಕ್ತವಿಷಯದೊಂದಿಗೆ ದ್ವಾಪರಯುಗದ ಚರಿತ್ರೆಯೆನಿಸಿದ ಭಾರತಕಥೆಯೂ ನಿರೂಪಿತವಾಗಿದೆ.

ಮಹಾಭಾರತವೊಂದರಲ್ಲಿಯೇ ಸಮಸ್ತ ವೇದವೇದಾಂತಗಳ ಸಾರವೂ ಅಡಕವಾಗಿದೆಯೆಂದು ಹೇಳುವರಷ್ಟೆ. ಭೀಷ್ಮನೇ ಆ ಸಾರದಮೂರ್ತಿ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಆತನು ಅಷ್ಟವಸುಗಳ ಅಂಶಗಳಿಂದ ಕೂಡಿ ಲೋಕಹಿತಾರ್ಥವಾಗಿ ಮನುಷ್ಯರೂಪವನ್ನು ಧರಿಸಿದವನು; ಕುರುಕುಲ ಪ್ರತಿಷ್ಠಾಪನಾಚಾರ್ಯನು. ಧರ್ಮಸಂಸ್ಥಾಪನೆಗೆ ಬದ್ಧಕಂಕಣನಾಗಿದ್ದವನು. ಆದರೂ ಅವನಲ್ಲಿ ನಮಗೆ ಅಮಾನುಷಭಾವವು ಹುಟ್ಟಬಾರದೆಂದೋ ಅಥವಾ ಅವನ ಮಾಹಾತ್ಮ್ಯಕ್ಕೆ ಸಂಬಂಧಪಡುವುದಿಲ್ಲವೆಂದೋ ಅವನು ಗಂಗಾದೇವಿಯಲ್ಲಿ ಜನಿಸಿದ ಕ್ರಮವನ್ನೂ ಅವರಿಗೆ ಪೂರ್ವಜನ್ಮದಲ್ಲಿ ವಸಿಷ್ಠರಿಂದ ಉಂಟಾಗಿದ್ದ ಶಾಪದ ಸಮಾಚಾರವನ್ನೂ ಈ ಪುಸ್ತಕದಲ್ಲಿ ಹೇಳಿಲ್ಲ. ಆ ಮೇಲೆ ಯೌವನದಲ್ಲಿ ಪಿತೃಭಕ್ತಿಯಿಂದ ಲೋಕೋತ್ತರವಾದ ಸ್ವಾರ್ಥತ್ಯಾಗವನ್ನೂ ವಿಷಯ ನಿಸ್ಪೃಹತೆಯನ್ನೂ ತೋರ್ಪಡಿಸಿ ಆಮರಣಾಂತವಾದ ಅಖಂಡ ಬ್ರಹ್ಮಚರ್ಯವನ್ನೂ ಸಾಧಿಸಿದನು. ಪಾಂಡವರಲ್ಲಿ ಹೆಚ್ಚು ಪ್ರೇಮವುಳ್ಳವನಾದರೂ ದುರ್ಯೋಧನನನ್ನು ವಂಚಿಸದೆ, ಇಬ್ಬರನ್ನೂ ಏಕರೀತಿಯಾದ ವಿಶ್ವಾಸದಿಂದ ಸಾಕಿಸಲಹಿ ಸುಶಿಕ್ಷಿತರನ್ನಾಗಿ ಮಾಡಿದನು. ದುರ್ಯೋಧನನಿಗೆ ಹಿತೋಪದೇಶಮಾಡುವುದರಲ್ಲಿ ಅವಿಶ್ರಾಂತನಾಗಿದ್ದನು. ಯುದ್ಧವು ಅನಿವಾರ್ಯವಾದಾಗ ಪಾಂಡವರ ಹಿತವನ್ನೇ ಕೋರುತ್ತಿದ್ದರೂ ಕೌರವರ 'ಕೂಳಿನ ಋಣಕ್ಕಾಗಿ' ಅವರ ಪಕ್ಷವನ್ನೇ ವಹಿಸಿ ಕಾದಿ ದೇಹವನ್ನು ತೆತ್ತನು ಕಡೆಗೆ ದೇಹಧಾರಣೆಯಲ್ಲಿ ಜುಗುಪ್ಸೆ ತೋರಲು ತನ್ನನ್ನು ಕೊಲ್ಲುವಂತೆ ಯುಧಿಷ್ಠಿರನನ್ನು ಪ್ರಾರ್ಥಿಸಿ ಭೀಮ, ಅರ್ಜುನ, ಶಿಖಂಡಿ ಇವರುಗಳ ಶರವರ್ಷದಿಂದ ಶರಶಯ್ಯೆಯಲ್ಲಿ ಮಲಗಿದನು. ಧರ್ಮರಾಯನು ಜ್ಞಾತಿಗಳ ವಿಯೋಗ ದುಃಖದಿಂದ ಮನಃಕ್ಲೇಶಪಡುತ್ತಿದ್ದಾಗ ಕೃಷ್ಣನು ತಾನೇ ಸಮರ್ಥನಾದರೂ ಭೀಷ್ಮನಿಂದಲೇ ಧರ್ಮರಾಯನಿಗೆ ವರ್ಣಾಶ್ರಮಧರ್ಮ, ರಾಜಧರ್ಮ, ಮೋಕ್ಷಧರ್ಮ, ಇವುಗಳನ್ನು ಉಪದೇಶಿಸಿ ಅವನ ಮನಃಕ್ಲೇಶವನ್ನು ಹೋಗಲಾಡಿಸುವನು. ಈ ಉಪದೇಶವು ರಾಜ್ಯಸೂತ್ರಗಳನ್ನು ಹಿಡಿದಿರುವವರಿಗೂ ರಾಜನೀತಿಜ್ಞರಿಗೂ ಅವಧರಿಸಲು ಯೋಗ್ಯವಾದುದಾಗಿದೆ. ಹೀಗೆ ಭೀಷ್ಮನು

ಅಸಾಧಾರಣವಾದ ಪಿತೃಭಕ್ತಿ, ಸ್ವಾರ್ಥತ್ಯಾಗ, ವಿಷಯೋಪೇಕ್ಷೆ, ದೃಢವ್ರತ, ಧರ್ಮಪರಾಯಣತೆ, ಕರ್ತವ್ಯನಿಷ್ಠೆ, ಶೌರ್ಯ, ಸಾಹಸ ಮುಂತಾದ ಸದ್ಗುಣಗಳ ನೆಲೆಯಾಗಿರುವನು.

ಭೀಷ್ಮಚರಿತೆಯು 'ಸಂಕ್ಷೇಪಭಾರತಕಥೆ' ಯಂತೆ ತೋರಿದರೂ ಭೀಷ್ಮರ ಮಾಹಾತ್ಮ್ಯಕ್ಕೆ ಉಪಷ್ಟಂಭಕವಾಗದ ಕಥಾಭಾಗಗಳು ಸೇರಿಲ್ಲ. ಮಹಾಭಾರತದ ಆದಿಪರ್ವದಿಂದ ಆನುಶಾಸನಿಕ ಪರ್ವದವರೆಗೆ ಎಂದರೆ ದೇವವ್ರತ (ಭೀಷ್ಮ) ನ ಜನನದಿಂದ ಭಾರತ ಯುದ್ಧವು ಮುಗಿದು ಯುಧಿಷ್ಠಿರನು ರಾಜ್ಯವನ್ನು ಸ್ವೀಕರಿಸುವವರೆಗೂ ಬರುವ ಮುಖ್ಯ ಕಥಾಭಾಗವು ಇದರಲ್ಲಿ ಅಡಕವಾಗಿದೆ. ಭಾರತ ಕಥೆಯ ಮಹಾಪ್ರವಾಹದಲ್ಲಿ ಭೀಷ್ಮರ ಮಾಹಾತ್ಮ್ಯವು ಇತರ ಮಹಾಪುರುಷರ ಮಹತ್ವದೊಂದಿಗೆ ಬೆರೆತು ಮನಸ್ಸಿನಲ್ಲಿ ಸ್ಥಾಯಿಯಾಗಿ ನಿಲ್ಲದಿರಬಹುದು. ಆದರೆ 'ಭೀಷ್ಮಚರಿತೆ' ಯಿಂದ ಅದು ಪ್ರಕಾಶಕ್ಕೆಬಂದು ಮನಸ್ಸಿನಲ್ಲಿ ನಾಟುವುದು.

ಮ|| ರಾ|| ವಾಸುದೇವಯ್ಯನವರು ಅವರ "ಬಾಲಬೋಧೆ" ಯಿಂದಲೂ "ಆರ್ಯಕೀರ್ತಿ" ಯ ಎರಡು ಭಾಗಗಳಿಂದಲೂ ಕನ್ನಡಿಗರಿಗೆ ಪೂರ್ವಪರಿಚಿತರು. ಅವರು ಸಾತ್ವಿಕರು, ಸದ್ವೃತ್ತರು, ಶಾಂತಮೂರ್ತಿಗಳು ; ಆದುದರಿಂದಲೇ ಭೀಷ್ಮನ ಮಾಹಾತ್ಮ್ಯವನ್ನು ಆಸ್ವಾದಿಸಿ ನಮಗೂ ಅದರ ಫಲವನ್ನು ಒದಗಿಸಿಕೊಟ್ಟಿರುವರು.

ಮಹಾಪುರುಷರ ಚರಿತ್ರೆಗಳು ಲೇಖಕರ ಯೋಗ್ಯತಾನುಸಾರ ಸ್ಫೂರ್ತಿ ಹೊಂದುವುವು. ವೀರನ ಯೋಗ್ಯತೆಯನ್ನು ನಿರ್ಧರಿಸಲು ವೀರನೇ ಸಮರ್ಥನು ; ಧರ್ಮವೀರನ ಯೋಗ್ಯತೆಯನ್ನು ತಿಳಿಯುವುದು ಧರ್ಮವೀರನಿಗೇಸಾಧ್ಯ. ಅದ್ದರಿಂದ ವಾಸುದೇವಯ್ಯನವರ ಕರ್ತೃತ್ವವು 'ಭೀಷ್ಮಚರಿತೆ' ಗೆ ಹೆಚ್ಚು ಬೆಲೆಯನ್ನು ಕೊಡುತ್ತದೆ ಎಂದು ನಮ್ಮ ಭಾವನೆ. ಅವರ ಶೈಲಿಯೂ ರೀತಿಯೂ ಅವರ ಸತ್ಸ್ವಭಾವ ನಡತೆಗಳಂತೆ ಅನ್ಯರಿಗೆ ಸಾಧ್ಯವಲ್ಲದವು. ಈ ಗ್ರಂಥದ ಪ್ರತಿ ಪುಟವೂ ನೀತಿಬೋಧಕವಾಗಿದೆ. ಧರ್ಮದಲ್ಲಿ ಔದಾಸೀನ್ಯವೂ ಪುರಾಣಗಳಲ್ಲಿ ಲಾಘವಬುದ್ಧಿಯೂ ಕಾಣಬರುತ್ತಿರುವ ಈ ಕಾಲದಲ್ಲಿ ಇಂಥ ಪುರಾಣಪುರುಷರ ಗುಣಕಥನಗಳು ಪುರಾತನ ಕಾವ್ಯಗಳಲ್ಲಿ ಪೂಜ್ಯತೆಯನ್ನೂ ಜನರಲ್ಲಿ ಸನ್ಮಾರ್ಗಪ್ರವರ್ತನೆಯನ್ನೂ ನೆಲೆಗೊಳಿಸಲು ಸಾಧನಗಳಾಗುವುವೆಂದು ನಂಬುತ್ತೇವೆ.

ಡಿ. ವಿ. ಶೇ.

ವಸ್ತು ಕೋಶ

ಕನ್ನಡ ಮಹೋಪಾಧ್ಯಾಯರಿಗೆ ಅಭಿನಂದನ

ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾದಾಗ, ದೇಶಭಾಷೆಯಾದ ಕನ್ನಡಕ್ಕೆ ತಕ್ಕ ಪ್ರಾಶಸ್ತ್ಯವನ್ನು ಕೊಡಬೇಕೆಂಬುದೂ ಅದರ ಸ್ಥಾಪಕರ ಉದ್ದೇಶಗಳಲ್ಲಿ ಒಂದಾಗಿತ್ತು. ಅಕ್ಕಪಕ್ಕಗಳಲ್ಲಿದ್ದ ಮದರಾಸು ಬೊಂಬಾಯಿ ವಿಶ್ವವಿದ್ಯಾಲಯಗಳೊಡನೆ ಹೋಲಿಸಿ ನೋಡಿದರೆ ಅದು ಕನ್ನಡಕ್ಕೆ ಕೊಟ್ಟ ಪ್ರಾಶಸ್ತ್ಯವೂ ಗೋಚರಿಸುವಂತಿತ್ತು. ಆದರೂ ಈ ಹತ್ತು ಹನ್ನೆರಡು ವರ್ಷಗಳಿಂದಲೂ ಕನ್ನಡದಲ್ಲಿ ಎಂ.ಎ. ಪರೀಕ್ಷೆಯನ್ನು ಇಡಲಿಲ್ಲ. ಈ ಉದ್ದೇಶ್ಯವೇನೋ ಆದಿಯಿಂದಲೂ ಅಧಿಕಾರಿಗಳ ಮನಸ್ಸಿನಲ್ಲಿ ಇದ್ದೇ ಇತ್ತು. ಸುಮಾರು ಆರೇಳುವರ್ಷಗಳ ಕೆಳಗೆ ಅದು ಕೈಗೆಬಂದ ತುತ್ತಾಗಿ ಬಾಯಿಗೆ ಬರದೇ ಬಿದ್ದುಹೋಯಿತು. ಎಲ್ಲದಕ್ಕೂ ಕಾಲಬರಬೇಕೆಂಬುದು ನಿಜವೋ ಏನೋ! ಅಂತು ಈ ವರ್ಷ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪರೀಕ್ಷೆಗೆ ಏರ್ಪಾಡಾಯಿತು. ಯಾರಾದರೂ ಈ ತರಗತಿಗಳಿಗೆ ವಿದ್ಯಾರ್ಥಿಗಳು ಬರುತ್ತಾರೋ ಇಲ್ಲವೋ ಎಂದು ಸಂಶಯಾತ್ಮರು ತಳಮಳಗುಟ್ಟುತ್ತಿದ್ದಾಗ, ಇಂಥ ಪರೀಕ್ಷೆಗೆ ಸ್ವಲ್ಪ ಹೆಚ್ಚೆಂದೇ ಹೇಳಬಹುದಾದಷ್ಟು ವಿದ್ಯಾರ್ಥಿಗಳೂ ಬಂದು ಸೇರಿದರು. ಈ ಸಂದರ್ಭದಲ್ಲಿ ಕನ್ನಡಕ್ಕೆ ಒಬ್ಬ ಪ್ರೊಫೆಸರು (ಮಹೋಪಾಧ್ಯಾಯರು) ಇರಬೇಕೆಂದು ಸರ್ಕಾರದವರು ನಿಶ್ಚಯಿಸಿ ಆ ಕೆಲಸಕ್ಕೆ ನಮ್ಮ ಸಂಘದ ಉಪಾಧ್ಯಕ್ಷರಾಗಿರುವ ಮ|| ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಯವರನ್ನು ಗೊತ್ತುಮಾಡಿದರು ಸರ್ಕಾರದವರ ಈ ನಿರ್ಣಯವು ಕನ್ನಡಕ್ಕೂ ಮ|| ವೆಂಕಣ್ಣಯ್ಯನವರಿಗೂ ಅದೃಷ್ಟಪೂರ್ವವಾದ ಗೌರವವನ್ನು ತಂದಿದೆ ಎಂಬುದರಲ್ಲಿ ಸಂದೇಹವಿಲ್ಲ. ಮ|| ವೆಂಕಣ್ಣಯ್ಯನವರಿಗೆ ಸಂಘದ ಅಭಿನಂದನಗಳು!

ಈಗ್ಗೆ ಹತ್ತಾರು ವರ್ಷಗಳ ಹಿಂದೆ ಕನ್ನಡಕ್ಕೆ ಒಬ್ಬ "ಮುನುಷಿ" ಹೊರತು ಇಂಗ್ಲಿಷ್ ತಿಳಿದ ಮಹೋಪಾಧ್ಯಾಯರನ್ನು ನಿಯಮಿಸುವುದೆಂದರೆ ತೀರ ಅಸಂಭಾವ್ಯವಾಗಿತ್ತು. ಈಗ ನೋಡಿದರೆ ಇದನ್ನು ಈ ಹಿಂದೆಯೇ ಮಾಡದೆ ಇಷ್ಟು ತಡವೇಕಾಯಿತೆಂದು ಆಶ್ಚರ್ಯವಾಗುತ್ತದೆ. ಇಂಗ್ಲೀಷನ್ನು ಓದುತ್ತಿದ್ದರೂ ಬರೆಯುತ್ತಿ

ದ್ದರೂ ಆಡುತ್ತಿದ್ದರೂ ನಾವು ಕನ್ನಡಿಗರು ಎಂಬ ಪರಿಜ್ಞಾನವು ಜನರಲ್ಲಿ ಹುಟ್ಟಿ ಬೆಳೆದದ್ದೇ ಇದಕ್ಕೆ ಕಾರಣ. ಆದ್ದರಿಂದಲೇ ಪ್ರತಿಯೊಬ್ಬ ಮೈಸೂರು ವಿದ್ಯಾರ್ಥಿಯೂ ಕನ್ನಡವನ್ನು ಓದಿರಬೇಕು, ಕನ್ನಡ ಗ್ರಂಥಗಳಿಗೆ ತಕ್ಕ ಪ್ರೋತ್ಸಾಹವಿರಬೇಕು, ಕನ್ನಡನೂತಿಗೆ ಪ್ರಾಶಸ್ತ್ಯವಿರಬೇಕು, ಕನ್ನಡಕ್ಕೆ ಇಂಗ್ಲಿಷಿನೊಡನೆ ಸರಿಸಮನಾದ ಗೌರವವಿರಬೇಕು ಎಂದು ಮುಂತಾಗಿ ಪ್ರಜೆಗಳು ಉತ್ಸಾಹಗೊಳ್ಳುತ್ತಿರುವುದು.

ಇದರಂತೆಯೇ, ಸ್ವಲ್ಪಕಾಲಕ್ಕೆ ಹಿಂದೆ, "ಕನ್ನಡಕ್ಕೆ" ಬಹುಮಾನಗಳನ್ನಿಟ್ಟರೆ ವಿಚಿತ್ರವಾಗಿ ಕಾಣುವಂತಿತ್ತು. ಒಂದು ವಿಧದಲ್ಲಿ ಅದೇನೋ ನ್ಯಾಯವೇ! ಏಕೆಂದರೆ "ಅರದಲ್ಲಿ ಬರದಲ್ಲಿ ನನ್ನ ಹೆಂಡತಿ ಮಕ್ಕಳನ್ನು ನಾನೇ ಸಾಕಿದೆ!" ಎಂದು ಹೇಳಿಕೊಳ್ಳುವನಂತೆ "ನಮ್ಮ ಮಾತೃಭಾಷೆಯಲ್ಲಿ ನಾನು ಮಾತನಾಡುತ್ತೇನೆ, ನನಗೆ ಬಹುಮಾನಕೊಡಿ" ಎಂದು ಯಾರಾದರೂ ಕೇಳಬಹುದೋ? ಇಲ್ಲದಿದ್ದರೆ "ಅಯ್ಯಾ, ನಿನ್ನ ಕರ್ತವ್ಯವನ್ನು ನೀನು ಮಾಡಿದ್ದಕ್ಕಾಗಿ ನಿನಗೆ ತಗೋ ಇದೊಂದು ಬಹುಮಾನ!" ಎಂದು ಹೇಳಬಹುದೋ? ಮೊದಲನೆಯದು ಹಾಸ್ಯಾಸ್ಪದವಾದರೂ, ಎರಡನೆಯದು ನಮ್ಮ ಧರ್ಮವನ್ನು ನಾವು ಅರಿಯದ ಕಾಲದಲ್ಲಿ ಆವಶ್ಯಕವೇಯೆ.—ಹಿಂದೆ ನಾವು ಹುಡುಗರಾಗಿದ್ದಾಗ "ಕಾಂಡಕ್ಟ್ ಮಾರ್ಕ್ಸ್" (ಒಳ್ಳೆಯ ನಡತೆಗಾಗಿ ಕೊಡತಕ್ಕ ನಂಬರು) ಎಂದು ಕೊಡುತ್ತಿದ್ದರಲ್ಲಾ ಹಾಗೆ. ಅಂತು ಮೈಸೂರು ವಿಶ್ವವಿದ್ಯಾಲಯ ಹುಟ್ಟಿದಮೇಲೆ ಕೆಲವು ಜನ ಕರ್ತವ್ಯಪರಿಜ್ಞಾನವುಳ್ಳ ದೇಶಭಾಷಾಭಿಮಾನಿಗಳು ಕನ್ನಡಕ್ಕೆಂದೇ ಬಹುಮಾನಗಳನ್ನೂ ಸ್ವರ್ಣಪದಕಗಳನ್ನೂ ಕೊಡುತ್ತಿರುವುದು ಸ್ತುತ್ಯವಾಗಿಯೂ ಸಂತೋಷಜನಕವಾಗಿಯೂ ಇದೆ

ಮ|| ಬಿ. ಎಂ. ಶ್ರೀಕಂಠಯ್ಯನವರು ಇಂಥ ದಾತೃಗಳಲ್ಲಿ ಒಬ್ಬರು. ಅವರು ಈಗ ಇಪ್ಪತ್ತು ವರ್ಷಗಳಿಂದ ಜ್ಞಾನರೂಪವಾಗಿ ಮಾಡಿರುವ ದಾನವು ಅನಂತವಾಗಿ ದೇಶದಲ್ಲಿ ಬೇರೂರಿ ಫಲ ಬಿಡುತ್ತಿರುವುದನ್ನು ಅವರು ಇತರ ಮೈಸೂರು ದೇಶೀಯರೊಡನೆ ನೋಡಿ ಆನಂದಿಸುತ್ತಿರುವರು. ಈಗ ಆ ಜ್ಞಾನದಾನವು "ಅದಕ್ಷಿಣ" ವಾಗಬಾರದೆಂದು ಅದಕ್ಕೆ ಒಂದು ಬಂಗಾರದ ಪದಕವನ್ನು ಕಟ್ಟಿದ್ದಾರೆ. ಇದಕ್ಕೆ "ಶ್ರೀ ರಜತೋತ್ಸವದ ಸ್ವರ್ಣಪದಕ" ವೆಂದು ಹೆಸರು. ಇದು, ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಅಚ್ಚಕನ್ನಡ ಛಂದಸ್ಸಿನಲ್ಲಿ ರಚಿತವಾದ ಕನ್ನಡ ಪದ್ಯಕಾವ್ಯಕ್ಕೆ ಸಲ್ಲತಕ್ಕದ್ದಾಗಿದೆ. ಈ ಪದಕವನ್ನು ಸ್ಥಾಪಿಸಿದ್ದಕ್ಕಾಗಿ ಕನ್ನಡಿಗರ ಪರವಾಗಿ ಪ್ರಬುದ್ಧ

ಕನ್ನಡಕ್ಕೆ ಒಂದು ಪದಕ

ಕರ್ಣಾಟಕವು ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರನ್ನು ಅಭಿವಂದಿಸಿ ಅಭಿನಂದಿಸುತ್ತದೆ. ಇಂಗ್ಲಿಷ್ ಸಾಹಿತ್ಯವನ್ನು ಓದಿದ ಅನೇಕರು ಹೊಸಮಾದರಿಯಲ್ಲಿ ಕನ್ನಡ ಪದ್ಯ ಕಾವ್ಯವನ್ನು ಬರೆಯಬೇಕೆಂದು ಉತ್ಸಾಹಪಡುತ್ತ ಗುಂಡಿಗೆಯುಳ್ಳ ಒಬ್ಬಿಬ್ಬರು ಹೊರತು ಮಿಕ್ಕವರು ಬರೆದರೆ ಹೇಗೋ ಎಂದು ಅಳುಕುತ್ತ ಇದ್ದಾಗ ಮ|| "ಶ್ರೀ" ಯವರು ತಮ್ಮ "ಇಂಗ್ಲಿಷ್ ಗೀತೆ" ಗಳನ್ನು ಪ್ರಕಟಿಸಿ ಅಂಥವರನ್ನು ಬೆನ್ನು ತಟ್ಟಿದರು. ಅದರ ಫಲವಾಗಿ ಸಂಕೋಚಪಡುತ್ತ ಒಳಗೆ ಕುಳಿತಿದ್ದ ನವೀನ ರೀತಿಯ ಕವಿಗಳೆಲ್ಲರೂ ತಮ್ಮ ಸರಕನ್ನು ಧೈರ್ಯವಾಗಿ ಸಂತೆಗೆ ತಂದು ಹರಡುವಂತಾಯಿತು. ನಮ್ಮ ಅನುಭವದಲ್ಲಿ ಈ ನವೀನ ರೀತಿಯ ಅನೇಕ ಕವಿಗಳು 'ಸ್ವಾತಂತ್ರ್ಯ' ಕ್ಕೆ ಬದಲಾಗಿ 'ಸ್ವಾಚ್ಛಂದ್ಯ' ವನ್ನು ವಿಶೇಷವಾಗಿ ತರುವಂತೆ ತೋರುತ್ತಿದೆ. ಕಟ್ಟಿನಲ್ಲಿರುವುದು ಸುಲಭ, ಕ್ಷೇಮ ; ಆದರೆ ಅದರಿಂದ ಮೋಕ್ಷವಿಲ್ಲ. ಕಟ್ಟು ಕಿತ್ತು ಹಾಕಿಬಂದರೆ ಆ ಸ್ವಾತಂತ್ರ್ಯವನ್ನು ಉಪಯೋಗಿಸಲು, ವಿನಿಯೋಗಿಸಲು, ಅನುಭವಿಸಲು, ಒಂದು ಯೋಗ್ಯತೆ ಬೇಕು. ಅದನ್ನು ಸಂಪಾದಿಸುವಷ್ಟು ತಾಳ್ಮೆ ಅಪರೂಪ. ಇಂಥ 'ಸ್ವಾಚ್ಛಂದ್ಯದೊಡನೆ ಹರಿಯುವ ಕಾವ್ಯಪ್ರವಾಹಕ್ಕೆ ಅಣೆಕಟ್ಟು ಕಟ್ಟಿ, ಅದರ ರಸವನ್ನು ಕಾಲುವೆಗಳಲ್ಲಿ ಹರಿಸಿ ಬೆಳೆತೆಗೆಯುವುದಕ್ಕೆ ಮ|| ಶ್ರೀಕಂಠಯ್ಯನವರ ಸ್ವರ್ಣಪದಕವು ಉತ್ತಮವಾದ ಸಾಧನವೆಂದು ನಂಬುತ್ತೇವೆ.

ಸ್ವಾತಂತ್ರ್ಯವನ್ನೂ ಸ್ವಾಚ್ಛಂದ್ಯವನ್ನೂ ಜನರು ಎಲ್ಲಿ ಒಂದುಮಾಡಿಕೊಂಡು ಬಿಡುತ್ತಾರೋ ಎಂದು ಹೆದರಿ ನಿಯಮಪ್ರಿಯರಾದ ನಮ್ಮ ಮಿತ್ರರೊಬ್ಬರು "ಲಕ್ಷಣವಾಗಿ ಬರೆದ ಕಂದ ವೃತ್ತಗಳ ಕಾವ್ಯಕ್ಕೂ ಒಂದು ಬಹುಮಾನ ಕೊಡಬೇಕು—ಕಂದ ವೃತ್ತಗಳ ಗಾಂಭೀರ್ಯವನ್ನೂ ಬಿಗಿಯನ್ನೂ ಉಳಿಸಿಕೊಂಡು ಕಟ್ಟಿನಲ್ಲಿದ್ದು ಉತ್ತಮವಾದ ಕಾವ್ಯವನ್ನು ಬರೆಯುವುದು ಸುಲಭವೇನೂ ಅಲ್ಲ" ಎಂದು ಅಪ್ಪಣೆಕೊಡಿಸಿದರು. ಅವರ ಮಾತೂ ನಿಜವೇ. ಸಂಪ್ರದಾಯ ಪ್ರಿಯರಾದ ಸಾಹಿತ್ಯಾಭಿಮಾನಿಗಳಾರಾದರೂ ಇಂಥ ಕಾವ್ಯಕ್ಕೂ ಒಂದು ಪದಕವನ್ನಿಡಲಿ! ನಮ್ಮಲ್ಲಿ ಅಂಥವರಾದರೂ ಇಲ್ಲವೇ? ಕನ್ನಡ ಸಾಹಿತ್ಯವು ಎಲ್ಲ ಮುಖಗಳಲ್ಲಿಯೂ ಬೆಳೆಯಲಿ!

ಇದೇ ಮಾಘಮಾಸದ "ರಂಗಭೂಮಿ" ಯಲ್ಲಿ (ವರ್ಷ ೩, ಸಂಚಿಕೆ ೭) ಕೆಲವು "ಚಕಮುಕಿ ಕಿಡಿಗಳು" ಇವೆ. ಇವುಗಳಲ್ಲಿ ಒಂದು "ಪ್ರಬುದ್ಧಕರ್ಣಾಟಕ" ಕ್ಕೂ ಹಾರಿದೆ. ಹೇಳುವುದು ಹೇಳುತ್ತಾ "ಚಕಮುಕಿ" ಕಿಡಿ ಎಂದು ಏಕೆ ಹೇಳಿದರೋ! "ವಜ್ರದ" ಕಿಡಿ ಎನ್ನಬಾರದಾಗಿತ್ತೇ? ಅಮೆಚೂರ್ ನಾಟಕಮಂಡಲಿಯಂಥ ಶ್ಲಾಘ್ಯಕಲಾಭಿಮಾನಿಗಳಿಗೆ ವಜ್ರಕ್ಕಿಂತ 'ಚಕಮುಕಿ' ಯ ಮೇಲೆ ಏಕೆ ಮನಸ್ಸು ಹೋಯಿತೊ! ವಜ್ರದಿಂದ ಬಂದರೆ ಬರಿಯ ಕಾಂತಿಯೆಂದೂ 'ಚಕಮುಕಿ' ಯಿಂದ ಕಾಂತಿಯ ಜೊತೆಗೆ ಲೋಕಕ್ಕೆ ಉಪಕಾರವಾಗುವ ಬೆಂಕಿಯೂ ಬರುವುದೆಂದೂ ಅವರ ಅಭಿಪ್ರಾಯವಿರಬಹುದು. ಊಹಾಪೋಹಗಳಿರಲಿ, ಮೊದಲು ಕರ್ಣಾಟಕ ಸಂಘಕ್ಕೆ

"ಚಕಮುಕಿ ಕಿಡಿ"

ತಗಲಿದ ಕಿಡಿಯಾವುದೆಂದೂ ಅದರಿಂದ ಸಂಘವು ಹೇಗೆ ಬೆಳಗಿದೆ ಎಂದೂ ತಿಳಿಸುತ್ತೇವೆ:—

ನಮ್ಮ ನಾಟಕವೋ ಆಂಜನೇಯನ ಬಾಲವೋ.

"ಸುಮಾರು ಐದಾರು ವರ್ಷಗಳ ಹಿಂದೆ ಸ್ಕಾಟ್‌ಲಂಡು ದೇಶದ ಪ್ರಖ್ಯಾಶನ (ಪ್ರಖ್ಯಾತ ?) ನಕಲಿಗಾರನಾದ ಸರ್ ಹ್ಯಾರಿಲಾಡರನು (Sir Harry Lauder) ಮುಂಬಯಿ ಪಟ್ಟಣಕ್ಕೆ ತನ್ನ ಸ್ವಂತ ಕಂಪನಿಯನ್ನು ತಂದನು; ಒಂದೆರಡು ನಾಟಕಗಳನ್ನಾಡಿ ಮುಗಿಸಿದನು. ವಿಲಾಯಿತಿಯಿಂದ ಹಿಂತಿರುಗಿ ಬಂದ ಒಬ್ಬ ಸ್ನೇಹಿತರು ನನಗೆ ಹೇಳಿದರು. ಈ ಮಹಾರಾಯನಿಗೆ ವಾರಕ್ಕೆ ಎರಡು ಸಾವಿರ ಪೌಂಡುಗಳಂತೆ ಜೀತ! 'ಪ್ರಬುದ್ಧ ಕರ್ಣಾಟಕ'ಕ್ಕೆ ಇದೇ ಮಾತು ಯಾವುದೋ ಅಚಾತುರ್ಯದಿಂದ ತಿಳಿದಿದ್ದರೆ, ಅದರ 'ಮೈ ಜುಂ' ಅನ್ನುವುದು ಬಿಟ್ಟು ವಿಷಮಶೀತಜ್ವರವೇ ಬರುತ್ತಿತ್ತು!............"........" ಬಂಟು "

ಹ್ಯಾರಿಲಾಡರನ ಸಂಪಾದನೆಗೂ 'ಪ್ರಬುದ್ಧ ಕರ್ಣಾಟಕ' ಕ್ಕೂ ವಿಷಮಶೀತಜ್ವರಕ್ಕೂ ಸಂಬಂಧವನ್ನು ಕಲ್ಪಿಸಿದ "ಬಂಟು" ಗಳು ಬಹಳ ಚತುರರು. ಪ್ರಬುದ್ಧ ಕರ್ಣಾಟಕಕ್ಕೆ ಇಂದಿನವರೆಗೂ ಈ ವಿಚಾರ ಗೊತ್ತಿರಲಿಲ್ಲವೆಂದೂ ಈ ವಿಚಾರವನ್ನು ತಿಳಿಯಪಡಿಸಿದ್ದಕ್ಕಾಗಿ ಮಿಕ್ಕ ಕನ್ನಡಿಗರಂತೆ ನಾವೂ 'ರಂಗಭೂಮಿ' ಗೆ ಕೃತಜ್ಞರಾಗಿರುವೆವೆಂದೂ ತಿಳಿಸಲಪೇಕ್ಷಿಸುವೆವು. 'ಬಂಟು' ಗಳು ಹೇಳುವಂತೆ ವಿಷಮಶೀತಜ್ವರವು ಬರುವುದಾದರೆ ಪ್ರಬುದ್ಧ ಕರ್ಣಾಟಕವು ಅದನ್ನು ತಾನಾಗಿ ತಿಳಿದುಕೊಳ್ಳಲು ಏಕೆ ಪ್ರಯತ್ನಪಡಬೇಕು? ಅಂತು ಚಾತುರ್ಯದಿಂದಲೋ ಅಚಾತುರ್ಯದಿಂದಲೋ ರಂಗಭೂಮಿಯ ಮೂಲಕ ಈ ಸಂಗತಿ ತಿಳಿದಾಗ ವಿಷಮಶೀತಜ್ವರವೇನೂ ಬಂದಿಲ್ಲ. (ನಮ್ಮ ಪೋಷಕವರ್ಗದಲ್ಲಿ ಡಾಕ್ಟರುಗಳು ಅನೇಕರು ಇದ್ದಾರೆ; ಬೇಕಾದರೆ ಅವರು ಹೇಳಬಲ್ಲರು!) 'ರಂಗಭೂಮಿ' ಯು ಫಲನಿರಪೇಕ್ಷವಾಗಿ ಸರ್ವವಿಧದಿಂದಲೂ ರಂಗಭೂಮಿಯ ವಿಚಾರವನ್ನು ತಿಳಿಯುತ್ತಲೂ ತಿಳಿಸುತ್ತಲೂ ಇರುವಾಗ ಪ್ರಬುದ್ಧ ಕರ್ಣಾಟಕವು ಏಕೆ ಆ ಕೆಲಸ ಮಾಡಬೇಕು? ಜ್ಞಾನಪ್ರಪಂಚವು ಬಹು ವಿಸ್ತಾರವಾದದ್ದು—ಅನಂತವಾದದ್ದು. ಅವೆಲ್ಲವನ್ನೂ ನಾವು ಹಿಡಿಯಲ್ಲಿ ಅಡಗಿಸಿಕೊಂಡುಬಿಡುತ್ತೇವೆಂದೇನೂ ಹೊರಟಿಲ್ಲ; 'ರಂಗಭೂಮಿ' ಯೂ ಹಾಗೆಯೇ; ಎಂದರೆ, ಈಗಿನಕಾಲದಲ್ಲಿ ಕೆಲವು ಜನರು ಸರ್ವಜ್ಞರಾಗಬೇಕೆಂದೂ, ಕೆಲವು ಅಂಗಡಿಗಳು ಎಲ್ಲಾ ಪದಾರ್ಥಗಳನ್ನು ಮಾರಬೇಕೆಂದೂ, ಕೆಲವು ಪತ್ರಿಕೆಗಳು ಎಲ್ಲಾ ವಿಚಾರಗಳನ್ನೂ ತಿಳಿಸುತ್ತೇವೆಂದೂ ಹೊರಡುವಂತೆ, ರಂಗಭೂಮಿಯೂ ಹೊರಟಿಲ್ಲ, ನಾವೂ ಹೊರಟಿಲ್ಲ; ಪ್ರತಿಯೊಬ್ಬರೂ 'ಬಾರಾಬಲೂತಿ' ಗಳೇಕಾಗಬೇಕು? ಅದರಿಂದೇನು ಫಲ? ಆಗುವುದು ತಾನೇ ಸಾಧ್ಯವೋ? ಕಾರ್ಯಕ್ಷೇತ್ರವನ್ನು ನಿಯಮಿಸಿಕೊಳ್ಳದೆ, ಮಾಡುವಷ್ಟು ಕೃಷಿಯನ್ನು ಚೆನ್ನಾಗಿ ಮಾಡದೆ ಮೇಲೆಮೇಲೆ ಓಡಾಡಿದರೆ ಸಿಕ್ಕುವುದು ಬರಿಯ ಕಸವೇ! ಈ ನಿಯಮವನ್ನು ಅನುಸರಿಸಿದ್ದರಿಂದಲೇ ಈಗ ಒಂದೆರಡು ವರ್ಷಗಳಲ್ಲಿ 'ರಂಗಭೂಮಿ' ಯೊಳಗೆ ಹಿಂದೆ ಮತ್ತಾವ ಪತ್ರಿಕೆಗಳಿಂದಲೂ ರಂಗಭೂಮಿಯ ವಿಚಾರವಾಗಿ ಬಾರದಿದ್ದಷ್ಟು ಸಂಗತಿಗಳು ಬರೆದುಬಂದಿವೆ. 'ರಂಗಭೂಮಿ'ಯು ಆ ಕೆಲಸವನ್ನು ಮಾಡಲಿ, ಇನ್ನೂ

ಚೆನ್ನಾಗಿ ಮಾಡಲಿ; ಪ್ರಬುದ್ಧ ಕರ್ಣಾಟಕವೂ ತನ್ನ ಕೆಲಸವನ್ನೇ ಮಾಡುತ್ತ ಹೋಗುತ್ತದೆ! ಹ್ಯಾರಿ ಲಾಡರಿನ ವಾರಕ್ಕೆ ಎರಡುಸಾವಿರ ಪೌಂಡು ಜೀತದಂಥ ವಿಚಾರವನ್ನು ಅಚಾತುರ್ಯದಿಂದ ತಿಳಿದುಕೊಂಡು ಪ್ರಬುದ್ಧ ಕರ್ಣಾಟಕಕ್ಕೆ ವಿಷಮ ಶೀತಜ್ವರ ಬರುವುದೂ ಬೇಡ, ಸೋಮರಾಜನು ಕ್ರಿ.ಶ. ೧೨೨೨ ರವನಲ್ಲ ೧೫೨೨ ರವನು ಎಂಬ ವಿಚಾರವನ್ನು ತಿಳಿದು ರಂಗಭೂಮಿಗೆ ಸಮಶೀತಜ್ವರ ಬರುವುದೂ ಬೇಡ. ಸರ್ವೇಜನಾಸ್ಸುಖಿನೋಭವಂತು!

ಶ್ರೀಯುತ ಕಾಶೀಪ್ರಸಾದ ಜಯಸ್ವಾಲ್, ಬಾರಿಸ್ಟರ್ ಅಟ್-ಲಾ ಎಂಬವರು ಬರೆದ "ಕಲ್ಕಿ ಅವತಾರದ ಐತಿಹಾಸಿಕತೆ" ಎಂಬ ಲೇಖನದ ಕನ್ನಡ ಭಾಷಾಂತರವು "ಕರ್ಣಾಟಕ ಕೇಸರಿ" ಯಲ್ಲಿ (I. ೬) ಬಂದಿದೆ. ಈ ಲೇಖನದಲ್ಲಿ ಅವರು ನಿರ್ಧರಿಸಿರುವುದೇನೆಂದರೆ:—

ಕಲ್ಕಿ ಅವತಾರದ ಐತಿಹಾಸಿಕತೆ.

"ಮೊದಲನೆಯದು, ಪುರಾಣವರ್ಣಿತ ಕಲ್ಕಿಯು ಒಬ್ಬ ಐತಿಹಾಸಿಕ ವ್ಯಕ್ತಿಯೆಂಬುದು; ಎರಡನೆಯದು, ಅವನು ಸಂಭವತಃ ವಿಷ್ಣುವರ್ಧನ ಯಶೋಧರ್ಮನೆಂಬುದು. ಎರಡನೆಯ ಮಾತಿನ ಸಂಬಂಧದಲ್ಲಿ ಸಂದೇಹವಿರಬಹುದು; ಪರಂತು, ಮೊದಲನೆಯ ಮಾತಿನಲ್ಲಿ ಯಾವ ಸಂದೇಹವೂ ಇಲ್ಲ. ಭಾರತದ ಇತಿಹಾಸದಲ್ಲಿ ಕಲ್ಕಿಯ ಸ್ಥಾನವು ಚಂದ್ರಗುಪ್ತನಿಗಿಂತ ನೀಚವಾಗಿಲ್ಲವೆಂದು ನಾವು ತಿಳಿದಿರುವೆವು. ಧರ್ಮ ಹಾಗೂ ಸಮಾಜದ ದೃಷ್ಟಿಯಲ್ಲಿ ಕಲ್ಕಿಯ ಸ್ಥಾನವು ಬಹಳ ಉಚ್ಚವಾಗಿದೆ. ಗುಪ್ತ ಸಾಮ್ರಾಜ್ಯವು ನಷ್ಟವಾದ ಮೇಲೆ ಯಾವಾಗ ಅನೇಕ ಪ್ರಕಾರದ ವಿದೇಶೀಯ ಮ್ಲೇಚ್ಛರಾಜರು ಭಾರತದ ಸಂಸ್ಕೃತಿ ಹಾಗೂ ಧರ್ಮವನ್ನು ಉಚ್ಛೇದಮಾಡುವದಕ್ಕಾಗಿ ಉದ್ಯತರಾದರೋ, ಆಗ ಕಲ್ಕಿಯು ನಷ್ಟಪ್ರಾಯವಾದ ಜಾತೀಯ ಸಂಸ್ಕೃತಿಯ ಪುನರುದ್ಧಾರಕ್ಕಾಗಿ ಎದ್ದು ಭಾರತದ ಅನೇಕ ರಾಜರುಗಳನ್ನು ಐಕ್ಯತೆಯ ಸೂತ್ರದಲ್ಲಿ ಬಂಧಿಸಿ (ಕಲ್ಕಿಪುರಾಣ ಅಧ್ಯಾಯ ೨ ರ ಮೂರನೆಯ ಅಂಶ) ಧರ್ಮದ್ರೋಹಿಗಳನ್ನು ನಾಶಮಾಡಿದನು. ಅವನು ಒಂದುಕಡೆಯಿಂದ ಇತಲೀ ದೇಶದ ಮಾಜ್ಜೀನಿಯೂ ಇನ್ನೊಂದುಕಡೆಯಿಂದ ಫ್ರಾನ್ಸ್ ದೇಶದ ನೆಪೋಲಿಯನ್ನನೂ ಆಗಿದ್ದನು. ಇಂದಿನವರೆಗೆ ಭಾರತವರ್ಷದ ಆರನೆ ಶತಾಬ್ದಿಯ ಇತಿಹಾಸವು ಯಾವ ಅಂಧಕಾರದಲ್ಲಿ ಮುಳುಗಿತ್ತೋ ಅದು ಕಲ್ಕಿಯ ಇತಿಹಾಸದ ಮೂಲಕ ಸ್ವಲ್ಪಮಟ್ಟಿಗೆ ದೂರವಾದೀತು. ಮತ್ತು ಕಲ್ಕಿಯ ಅಭ್ಯುದಯದ ಪರವರ್ತಿಕಾಲದ ರಾಷ್ಟ್ರ, ಧರ್ಮ ಹಾಗೂ ಸಮಾಜದ ಸ್ವರೂಪವು ಸ್ಪಷ್ಟವಾಗಿ ತಿಳಿವಂತಾದೀತು"

ಶ್ರೀಮತ್ ಚಾಮರಾಜ ಒಡೆಯರ್ ಬಹದ್ದೂರ್ ರವರ ಶಿಲಾಪ್ರತಿಮೆ

ಈ ಸಂಚಿಕೆಯ ಮುಖಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವ ಶಿಲಾಪ್ರತಿಮೆಯ ಚಿತ್ರವು ಬೆಂಗಳೂರು ಪಟ್ಟಣದ ಕಬ್ಬನ್ ಪಾರ್ಕಿನಲ್ಲಿ ಹೊಸದಾಗಿ ಪ್ರತಿಷ್ಠೆಮಾಡಿರುವ ಆಳಿದ ಮಹಾಸ್ವಾಮಿಯವರಾದ ಸರ್. ಶ್ರೀ ಚಾಮರಾಜ ಒಡೆಯರ್ ಬಹದ್ದೂರರವರ ಅಮೃತಶಿಲೆಯ ಪ್ರತಿಮೆಯದು. ಹಿಂದಿನ ಸಂಚಿಕೆಯಲ್ಲಿ ಮೈಸೂರಿನಲ್ಲಿರುವ ಪ್ರತಿಮೆಯ ಚಿತ್ರವನ್ನು ಪ್ರಕಟಿಸಿದೆವು. ಮೈಸೂರಿನ ಪ್ರತಿಮೆಯು ಹೆಚ್ಚು ವಿಭವಸಂಪನ್ನವಾದುದು. ಅದನ್ನು

ಸುಂದರವಾದ ಅಮೃತಶಿಲೆಯು ಮಂಟಪದಲ್ಲಿ ನಿಲಿಸಿದ್ದಾರೆ. ಮಂಟಪದ ಗೋಪುರಕ್ಕೆ ಭಂಗಾರದ ಮೆರುಗು ಕೊಟ್ಟಿದ್ದಾರೆ. ಅದಕ್ಕಾಗಿ ಸರ್ಕಾರದವರಿಗೆ ಲಕ್ಷಾಂತರ ರೂಪಾಯಿಗಳು ವೆಚ್ಚವಾಗಿವೆ. ಕೆಲವು ಅಂಶಗಳಲ್ಲಿ ಬೆಂಗಳೂರು ಮೈಸೂರಿಗಿಂತಲೂ ಮುಖ್ಯವಾದ ಪಟ್ಟಣವಾದುದರಿಂದಲೂ, ಸರ್ಕಾರದ ಅಧಿಕಾರಸ್ಥಾನವಾಗಿರುವುದ ರಿಂದಲೂ, ಇಲ್ಲಿಯೂ ಅಂಥುದೊಂದು ಪ್ರತಿಮೆಯಿರತಕ್ಕುದೆಂದು ಈ ವರ್ಷದ ಮೊದಲನೆಯದಿನ ಎಂದರೆ (೧೯೨೮ನೇ ಇಸವಿ ಜನವರಿ ೧ನೆ ತಾರೀಖಿನಲ್ಲಿ) ಇದನ್ನು ಪ್ರತಿಷ್ಠೆಮಾಡಿದರು.

ಈ ಪ್ರತಿಮೆಯೂ ಅಮೃತಶಿಲೆಯದು. ಇದರ ಎತ್ತರ ಸುಮಾರು ೮ ಅಡಿ. ಮಹಾಸ್ವಾಮಿಯವರು ದರಬಾರು ಉಡುಪಿನಲ್ಲಿ ಸಾಮಾನ್ಯವಾಗಿ ನಿಲ್ಲುತ್ತಿದ್ದ ಕಾಯ ಭಂಗಿಯಲ್ಲಿದೆ. ಕೆತ್ತನೆಯ ಕೆಲಸವು ನಿಜವಾಗಿಯೂ ಚೆನ್ನಾಗಿದೆ. ಶಿಲ್ಪಿಯು ಮಹಾ ರಾಜರವರ ಸ್ವರೂಪವನ್ನು ಹೆಚ್ಚುಕಡಿಮೆಯಿಲ್ಲದೆ ಪ್ರತಿಮೆಗೆ ತಂದಿದ್ದಾನೆ. ಆದರೂ ತಲೆಯನ್ನು ಇನ್ನೂ ಸ್ವಲ್ಪ ಮೇಲೆತ್ತಿ, ಎದೆ ತುಂಬಿಕೊಂಡು ಉನ್ನತವಾಗಿರುವಂತೆ ಮಾಡಿದ್ದಿದ್ದರೆ ಈ ಆಕೃತಿಗೆ ಹೆಚ್ಚುಗಾಂಭೀರ್ಯವನ್ನೂ ಕಳೆಯನ್ನೂ ತರಬಹು ದಾಗಿತ್ತು.

ಪ್ರತಿಮೆಯ ಪೀಠವನ್ನು ಕಗ್ಗಲ್ಲಿನಲ್ಲಿ ಮಾಡಿದ್ದಾರೆ. ಅದರ ಶಿಲ್ಪವು ಹಿಂದೂ ಸಂಪ್ರದಾಯದ ಭಾವನೆ ತರುವಂಥದು. ಅದರ ನಾಲ್ಕುಕಡೆಯೂ ಗಂಡಭೇರುಂಡ ಕೆತ್ತಿದೆ. ಶ್ರೀಮನ್ಮಹಾರಾಜರವರ ಹೆಸರು ಇಂಗ್ಲಿಷ್, ಕನ್ನಡ, ಉರ್ದು, ಹಿಂದಿ ಹೀಗೆ ನಾಲ್ಕು ಭಾಷೆಗಳಲ್ಲಿ ಭಂಗಾರದ ಅಕ್ಷರಗಳಲ್ಲಿ ಕೆತ್ತಿದೆ. ಹಸುರಾದ ಸಾಲು ಮರಗಳ ರಸ್ತೆಯ ಕೊನೆಯಲ್ಲಿ ಈ ಪ್ರತಿಮೆಯನ್ನು ನಿಲಿಸಿದ್ದಾರೆ. ಹಿಂಭಾಗದಲ್ಲಿ ದಟ್ಟವಾಗಿ ಬೆಳೆದಿರುವ ಗಿಡಗಳ ಹಸುರೆಲೆಗಳು ಅದರ ಆಕೃತಿಯ ರೇಖೆಯನ್ನು ಸ್ಫುಟಗೊಳಿಸುವುವು; ದೂರದಲ್ಲಿ ಹಿಂದುಗಡೆ ಆಕಾಶಕ್ಕೆ ಏರಿಹೋಗಿನಿಂತಿರುವ ಅಠಾರಾಕಚ್ಚೇರಿಯ ನಡುಗೋಪುರವು ಇದರ ಮೋಹನತೆಯನ್ನು ಹೆಚ್ಚಿಸುತ್ತಿದೆ.

ಹೀಗೆ ಪ್ರತಿಮೆಗಾಗಿ ಮಾಡಿರುವ ಆವರಣ ನಿರ್ಮಾಣವು ಅತಿಮನೋಹರ ವಾಗಿ ಬೆಂಗಳೂರಿನ ಸೌಂದರ್ಯಕ್ಕೆ ಒಂದು ಹೊಸ ಸೊಬಗುನೋಟವನ್ನು ಕಲ್ಪಿಸಿದೆ.

ಈ ಪ್ರತಿಮೆಯನ್ನು ಮಾಡಿದವರು ಬೊಂಬಾಯಿನಲ್ಲಿ ಪ್ರಸಿದ್ಧ ಶಿಲ್ಪಕೋವಿದ ರಾಗಿರುವ ಶ್ರೀಮಾನ್ ಮ್ಹಾತ್ರೆಯವರು. ಪೀಠನಿರ್ಮಾಣಕ್ಕೆ ಚಿತ್ರಬರೆದು ಸಲಹೆ ಕೊಟ್ಟಿರುವವರು ನಮ್ಮ ಚಿತ್ರಕಲಾಶಾಖೆಯ ಸಂಪಾದಕರಾಗಿರುವ ಮ|| ರಾ|| ಬಿ. ವೆಂಕೋಬರಾವ್, ಬಿ.ಎ. ಯವರು.

ಈ ಪ್ರತಿಮೆಗಾಗಿ ಖರ್ಚಾಗಿರುವದು ಸುಮಾರು ೧೦ ಸಾವಿರ ರೂಪಾ ಯಿಗಳು.

ಸತ್ಯಶೋಧನೆ

ಅಥವಾ

ಗಾಂಧೀಜಿಯವರ ಆತ್ಮಕಥೆ

(ಕನ್ನಡದ ಅನುವಾದ)

ಮೊದಲನೆಯ ಭಾಗವು ಪ್ರಕಟಿಸಲ್ಪಟ್ಟಿದೆ

ಖಾದೀ ರಟ್ಟು ಪ್ರತಿ ರೂ. ೧] [ಸಾದಾ ರಟ್ಟು ಪ್ರತಿ ಆ. ೧೨

ಎರಡನೆಯ ಭಾಗವು

ಮಾರ್ಚಿ ೨೦ನೇ ತಾರೀಖು ಪ್ರಕಟವಾಗುವುದು

ಮಾರ್ಚಿ ೨೦ನೇ ತಾರೀಖಿನೊಳಗಾಗಿ ಹಣ ಮುಂಗಡ ಕಳುಹಿಸುವವರಿಗೆ

ಖಾದೀ ರಟ್ಟು ಪ್ರತಿ ಆ. ೦-೧೨-೦ (ಅಂಚೆ ವೆಚ್ಚ ೦-೨-೬)

ಸಾದಾ ರಟ್ಟು ,, ,, ೦—೮-೦ (,, ೦-೧-೬)

ಮಾರ್ಚಿ ೨೦ನೇ ತಾರೀಖಿನ ಅನಂತರ

ಖಾದೀರಟ್ಟು ಪ್ರತಿ ರೂ. ೧-೦-೦; ಸಾದಾರಟ್ಟು ಪ್ರತಿ ಆ. ೦-೧೨-೦.

(ರೆಜಿಸ್ಟ್ರೇಷನ್ ಮತ್ತು ಅಂಚೆ ವೆಚ್ಚ ಬೇರೆ)

ಸ್ಟಾಂಪಿಗಿಂತ ಹಣವನ್ನು ಕಳುಹಿಸುವುದೇ ಉತ್ತಮ.

ರೆಜಿಸ್ಟರ್ ಮಾಡದೆ ಗೈರ್ವಿಲೆಯಾದರೆ ಪ್ರತಿಗಳಿಗೆ ನಾವು ಹೊಣೆಯಲ್ಲ.

ಪ್ರಕಾಶಕರು :

ವಿಶ್ವಕರ್ಣಾಟಕ ಪುಸ್ತಕ ಪ್ರಕಟನಾಲಯ, ಬೆಂಗಳೂರು ನಗರ,

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿಯೂ

ಪ್ರತಿಗಳು ದೊರೆಯುತ್ತವೆ.

೨೬೬—೨೮ ಶ್ರೀ ಲಕ್ಷ್ಮೀನರಸಿಂಹ ಪ್ರೆಸ್

ಕೆಲವು ಅಭಿಪ್ರಾಯಗಳು

.... ನಾನಿಷ್ಟು ಮಾತ್ರ ಹೇಳುವೆನು: ಇಂತಹ ಬೋಧಪ್ರದವಾದ ಗ್ರಂಥವು ಕನ್ನಡಿಗರಿಗೆ ಅತ್ಯಾವಶ್ಯಕವಾಗಿ ಬೇಕು. ಅದನ್ನು ತಾವು ಒದಗಿಸಿ ಕೊಟ್ಟಿರು ವುದಕ್ಕಾಗಿ ಎಲ್ಲರೂ ತಮ್ಮನ್ನು ಅಭಿನಂದಿಸಿರುವರೆಂದು ನಾನು ನಂಬಿದ್ದೇನೆ. ಭಾಷಾಂತರದ ರೀತಿಯು ಬಹು ಚೆನ್ನಾಗಿದೆ. ವಾಕ್ಯಗಳು ಬಳುವಳ್ಳವುಗಳಾ ಗಿಯೂ ಸುಲಭವಾಗಿ ಅರ್ಥಕೊಡತಕ್ಕವುಗಳಾಗಿಯೂ ಇವೆ. ಅನೇಕಕಡೆ ನಾನು ಓದಿನೋಡಿ ಅಲ್ಲಿಯ ಉಚಿತಪದಪ್ರಯೋಗದಿಂದ ಆಶ್ಚರ್ಯಸಟ್ಟು ಸಂತೋಷಿಸಿದ್ದೇನೆ. ಆಶ್ಚರ್ಯವೇಕೆಂದರೆ—ಮೂಲಗ್ರಂಥದ, ಎಂದರೆ, ಇಂಗ್ಲೀ ಷಿನ ಭಾವಭರಿತತೆಯ ಕಾರಣದಿಂದ ಆ ಭಾವಗಳೂ ಅಭಿಪ್ರಾಯವಿಶೇಷಗಳೂ ಕನ್ನಡದಲ್ಲಿ ವಿಶದವಾಗಿ ಸರಸವಾಗಿ ಬಂದಿವೆ. ....ಪುಸ್ತಕದ ಆಕಾರವೂ ಅಚ್ಚಿನ ರೀತಿಯೂ ಸಹ ಒಪ್ಪತಕ್ಕವುಗಳಾಗಿವೆ. ....

ಡಿ. ವಿ. ಗುಂಡಪ್ಪನವರು.

(೨೩-೧-೧೯೨೮)

.... ಭಾಷಾ ಶೈಲಿಯು ಸರ್ವರಿಗೂ ಅರ್ಥವಾಗುವಂತಿರುವುದಲ್ಲದೆ ಮಹಾ ತ್ಮಾಜಿಯವರ ಅಭಿಪ್ರಾಯವು ತರ್ಜುಮೆಯಲ್ಲಿ ಸರಿಯಾಗಿ ಪ್ರತಿಧ್ವನಿಸಿ ಕೊಡು ತ್ತಲಿದೆ. ಮುದ್ರಣವು ಸಮರ್ಪಕವಾಗಿದೆ. ಮಹಾತ್ಮಾಜಿಯವರ ಭಾವ ಚಿತ್ರವೂ ಈ ಪುಸ್ತಕದಲ್ಲಿ ಒಳಗೊಂಡಿದೆ. ಇಷ್ಟೇ ಅಲ್ಲದೆ ಈ ಪುಸ್ತಕದಲ್ಲಿ ಕೆಲವು ವಿಶೇಷ ವಿಷಯಗಳ ಮತ್ತು ಮುಖ್ಯಪುರುಷರ ವಿಚಾರವಾಗಿ ಟಿಪ್ಪಣಿಗಳು ಸೇರಿಸಲ್ಪಟ್ಟಿವೆ. ....

ಪ್ರಜಾಮಿತ್ರ.

(ಜನವರಿ ೧೯೨೮)

.... ಭಾಷಾ ಶೈಲಿ, ಮುದ್ರಣ, ಕಾಗದ ಮುಂತಾದುವು ಅತ್ಯುತ್ತಮವಾಗಿ ಗ್ರಂಥವು ಮನೋಹರವಾಗಿದೆ. ವಿಷಯ ಟಿಪ್ಪಣಿ ಮತ್ತು ಅಕ್ಷರಾನುಕ್ರಮಣಿಕೆ ಗಳು ಪುಸ್ತಕದ ಅನುಕೂಲತೆಯನ್ನು ಹೆಚ್ಚಿಸುತ್ತಿವೆ. .... ಸುಬೋಧ.

(ಜನವರಿ ೧೯೨೮)

.... ಮೂಲದ ಸ್ವಾರಸ್ಯವು ಪರಿವರ್ತನೆಯಲ್ಲಿ ಬಂದಿರುತ್ತದೆ. ಪುಸ್ತಕದ ಕೊನೆಯಲ್ಲಿ ವಾಚಕರ ಉಪಯೋಗಕ್ಕಾಗಿ ಕೆಲವು ಮಾಹಿತಿಗಳು ಕೊಡಲ್ಪ ಟ್ಟಿವೆ. ಮುದ್ದಾದ ಮುದ್ರಣ. ಮನೋಹರವಾದ 'ಬೈಂಡು.' ಈ ಪುಸ್ತಕವು ಪ್ರತಿಯೊಬ್ಬ ಕನ್ನಡಿಗನಿಂದಲೂ ಸಂಗ್ರಹಿಸಲ್ಪಡತಕ್ಕದ್ದು.

ನವಯುಗ.

(೧೬-೨-೨೮)

ಪ್ರಬುದ್ಧ ಕರ್ನಾಟಕ

ಪ್ರಭವ ಸಂವತ್ಸರ —೩೪— ಕಾಮನ ಸಂಚಿಕೆ

ಸಂಪುಟ ೯] [ಸಂಚಿಕೆ ೪

ವಿಷಯಸೂಚಿಕೆ

ಬೆಂಗಳೂರು
ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ.
೧೯೨೮

All Rights Reserved

Printed at the Crown Electric Press, Mysore.

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ).

ವಾರ್ಷಿಕಚಂದಾ (ಅಂಚೆವೆಚ್ಚ ಸೇರಿ)	ಆಶ್ರಯದಾತರಿಗೆ	ರೂ. ೧೦—೦—೦
	ಪೋಷಕರಿಗೆ	ರೂ. ೩—೬—೦
	ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳಿಗೆ	ರೂ. ೨—೮—೦
	ಚಂದಾದಾರರಿಗೆ	ರೂ. ೨—೦—೦

ಕಾರ್ಯದರ್ಶಿ,
ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯರೂಪವಾಗಿ ಬರುತ್ತಿರುವ ಪತ್ರಿಕೆಗಳು.

ಬೆಂಗಳೂರು :—ಕರ್ಣಾಟಕ ಸಾಹಿತ್ಯ, ಪರಿಷತ್ಪತ್ರಿಕೆ ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ವಿಶ್ವಕರ್ಣಾಟಕ, ಒಕ್ಕಲಿಗರ ಪತ್ರಿಕೆ, ಸರಸ್ವತಿ, ಮಿಥಿಕ್ ಸೊಸೈಟಿ ಪತ್ರಿಕೆ, ರಂಗಭೂಮಿ, ಮಕ್ಕಳ ಪುಸ್ತಕ.

ಮೈಸೂರು :—ಸಾಧ್ವಿ, ಮಧ್ವಸಿದ್ಧಾಂತ ಪ್ರಕಾಶಿನೀ, ವಿಶ್ವಬಂಧು.

ತುಮಕೂರು :—ಸ್ಕೂಲ್ ಫೋಕ್.

ನಂಜನಗೂಡು :—ಸನ್ಮಾರ್ಗದರ್ಶಿ.

ಚಾಮರಾಜನಗರ :—ಕಾದಂಬರೀ ಸಂಗ್ರಹ.

ಧಾರವಾಡ :—ಕರ್ಣಾಟಕ ವೃತ್ತ ಮತ್ತು ಧನಂಜಯ, ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ಣಾಟಕ.

ಬೆಳಗಾಂ :—ಸುಧಾರಕ, ಪ್ರಬೋಧ.

ಬಿಜಾಪುರ :—ಕಲ್ಪಲತಾ ಗ್ರಂಥಮಾಲಾ.

ಅಗಡಿ :—ಸದ್ಬೋಧಚಂದ್ರಿಕೆ.

ಪುತ್ತೂರು :—ಕನ್ನಡ ಸಹಕಾರ.

ತುಂಗಭದ್ರ :—ಪ್ರೇಮ.

ಬಾಗಲಕೋಟೆ :—ಕನ್ನಡಿಗ.

ಮಂಗಳೂರು :—ಸುವಾಸಿನೀ, ಸುಬೋಧಕ ಗ್ರಂಥಮಾಲಾ.

ಉಡುಪಿ :—ಸತ್ಯಾಗ್ರಹಿ.

ಕುಂದಾಪುರ :—ವಸಂತ.

ಮಡಿಕೇರಿ :—ಓಲ್ಡ್ ಸ್ಟೂಡೆಂಟ್ಸ್ ಮ್ಯಾಗಸೀನ್, ಲೋಕಪಾವನ, ಕೊಡಗು ವೃತ್ತಾಂತ.

ಮದರಾಸು :—ಆರೋಗ್ಯಚಂದ್ರಿಕೆ.

ಚಿಕ್ಕಬಳ್ಳಾಪುರ :—ಬೋಧಕಸೇವೆ.



ಶ್ರೀಮಾನ್ ಎನ್. ಎಸ್. ಸುಬ್ಬರಾವ್, ಎಂ. ಎ., ಬಾರ್-ಅಟ್-ಲಾ.

ಈಸಾರಿಯ ವಾರ್ಷಿಕೋತ್ಸವದ ಅಗ್ರಾಸನಾಧಿಪತಿಗಳು.

(ಯೂನಿವರ್ಸಿಟಿ ಯೂನಿಯನ್ನಿನವರು ದಯಮಾಡಿ ಕೊಟ್ಟದ್ದು.)



ಅದೇಕೆ?

ತಣ್ಗದಿರನೆಸೆಯುತಿರೆ
ಗಾಳಿಯಳಲೇಕೆ ?
ಕಣ್ಗಳಿಗೆ ಹಬ್ಬಮಿರೆ
ಎದೆ ಬೇವುದೇಕೆ ? ೧

ಉಡುಗಣವು ನಗುತಲಿರೆ
ಕಡಲ ಮೊರೆಯೇಕೆ ?
ಒಡಲಿಗೈಸಿರಿಯಿರಲು
ಎಡರಾತ್ಮಗೇಕೆ ? ೨

ತರಣಿ ಬೆಳಕೀಯುತಿರೆ
ತಿರೆಯು ಜಡವೇಕೆ ?
ಮತಿ ನಯುವನುಸಿರುತಿರೆ
ಮನವಲೆವುದೇಕೆ ? ೩

ಹೊರಗಿಹುದು ಒಳಗಿಹುದ
ತಣಿಸದಿಹುದೇಕೆ ?
ಒಳಗಿಹುದು ಹೊರಗಿಹುದ
ಸೇರದಿಹುದೇಕೆ ? ೪

ಡಿ. ವಿ. ಜಿ.

619
ಬೆಂಗಳೂರು-19

ಅವರಿಗೆ ಬೇಕಾಗಿರುವುದು ಕಲಹ. ಪಕ್ಕವಾದ್ಯಗಳವರಿಗೆ ಹಾಡುವವನೂ, ಅವನಿಗೆ ಇವರೂ ಪರಾಭವವುಂಟುಮಾಡುವುದಕ್ಕೇ ಪ್ರಯತ್ನಿಸುವರು. ರಸಭಾವಗಳು ಸುಲಭವಾಗಿ ಕೈಗೆಸಿಕ್ಕುವ ಪದಾರ್ಥಗಳಲ್ಲವಾದುದರಿಂದ ಅವುಗಳನ್ನು ಹೀಗೆ ಜಗಳಕ್ಕೆಳೆಯುವುದು ಸಾಧ್ಯವಲ್ಲ. ಅವುಗಳಲ್ಲಿ ಪ್ರವೇಶಿಸಿದವನು ತನ್ನನ್ನೇ ಮರೆಯುವನು. ಆದುದರಿಂದ ಈಗಿನ ವಿದ್ವಾಂಸರ ಹಾಡಿನಲ್ಲಿ ಬಹುಮಟ್ಟಿಗೆ ಇವು ಹಿಂದಕ್ಕೆ ಬಿದ್ದವು. ಚಿತ್ರವಿಚಿತ್ರವಾದ ಕೆಲಸಗಳಿಗೆ ಅವಕಾಶಕೊಡುವುದೂ, ಜ್ಞಾಪಕಶಕ್ತಿ, ದೇಹಬಲ ಇವುಗಳನ್ನು ಆಶ್ರಯಿಸಿದುದೂ ಆದ ತಾಳವು ಮುಂದಕ್ಕೆ ಬಂದಿತು. ಇದನ್ನೇ ಈಗಿನ ವರನೇಕರು ಲಯವೆನ್ನುವರು. ಆದರೆ ಲಯವು ಅನೇಕವಿಧ. ಲಯವೆಂದರೆ ಸಾಮ್ಯ. ಭಾವದಲ್ಲಿ ಲಯವಿದೆ ; ಶ್ರುತಿಗೆ ಲಯವಿದೆ; ತಾಳಕ್ಕೂ ಲಯವುಂಟು. ವರಾಳಿಯನ್ನು ನಗುತ್ತ ಬೇಗಡೆಯನ್ನು ಅಳುತ್ತ ಹಾಡದೆ ' ರಾಮು ನೀಸಮಾನಮೆವರು, ಎನ್ನುವಾಗ ರಾಮನೊಡನೆ ಯುದ್ಧಕ್ಕೆ ನಿಂತ ರಾವಣಾಸುರನಂತೆ ಅಭಿನಯಿಸದೆ, ರಾಗಭಾವವನ್ನಾಗಲಿ, ಸಾಹಿತ್ಯಭಾವವನ್ನಾಗಲಿ ಪ್ರತ್ಯಕ್ಷವಾಗಿ ಅನುಭವಿಸಿದಂತೆ ತೋರಿಸುವುದು ಭಾವಲಯವು ; ಆಧಾರ ಷಡ್ಜವಾದ ಶ್ರುತಿಯಲ್ಲಿ ಯಾವ ಯಾವ ಸ್ವರವು ಯಾವ ಯಾವ ಸ್ಥಾನದಲ್ಲಿ ಹುಟ್ಟುವುದೊ ಅದನ್ನು ದಾಟಿ ಹೋಗದೆ, ಎಲ್ಲವೂ ಅದರಲ್ಲಿಯೇ ಅಣಗಿದಂತಿರುವುದು ಶ್ರುತಿಲಯವು ; ದ್ರುತಮಧ್ಯ ವಿಳಂಬ ಕಾಲಗಳಲ್ಲಿ ಯಾವುದನ್ನಾಶ್ರಯಿಸಿ ಹಾಡುವುದಕ್ಕೆ ಉಪಕ್ರಮಿಸುವೆವೊ ಅದನ್ನೇ ಹಿಂದಕ್ಕೆಳೆಯದೆ, ಮುಂದಕ್ಕೆ ತಳ್ಳದೆ ಕಡೆಯವರೆಗೂ ನಿರ್ವಹಿಸುವುದು ತಾಳಲಯವು. ತಾಳವೆಂದರೆ ಅಕ್ಷರಕಾಲಗಳನ್ನು ಎಣಿಸುವುದೆಂದು ಮಾತ್ರವೇ ಅರ್ಥ. ಆದರೆ ಈಗಿನ ವಿದ್ವಾಂಸರನೇಕರು ಮೇಲೆ ಹೇಳಿದ ಲಯಗಳಲ್ಲಿ ಯಾವುದನ್ನೂ ಗಮನಿಸದೆ, ಕೇವಲ ಸಂಖ್ಯಾ ಪ್ರಧಾನವಾದ ಒಂದು ತಾಳವನ್ನು ಮಾತ್ರ ಮುಖ್ಯವಾಗಿ ತೆಗೆದುಕೊಂಡು, ತಮ್ಮ ಪಾಂಡಿತ್ಯವೆಲ್ಲವನ್ನೂ ಅದರಲ್ಲಿ ಪ್ರದರ್ಶಿಸಲು ಪ್ರಯತ್ನಿಸುವರು. ಇಂಥಾ ತಾಳದ ಕೆಲಸಗಳಿಗೆ ಕೀರ್ತನೆ, ವರ್ಣ, ಪದ ಮೊದಲಾದವುಗಳಿಗಿಂತಲೂ ಪಲ್ಲವಿಯು ಅದರಲ್ಲಿಯೂ ಸ್ವರಕಲ್ಪನೆಯು ಹೆಚ್ಚು ಅನುಕೂಲವಾಗಿರುವುದರಿಂದ ಅವಕ್ಕೆ ಪ್ರಾಮುಖ್ಯತೆ ಬಂದಿತು. ಇದರಿಂದಲೇ ಹಾಡುವವನಿಗೆ ಸಹಾಯರಾಗಿ ಇರಬೇಕಾದ ಪಕ್ಕವಾದ್ಯಗಳವರು ಸಮಾನರಾಗಿ, ಕೆಲವು ಸಂದರ್ಭಗಳಲ್ಲಿ ಅವನಿಗಿಂತಲೂ ಪ್ರಧಾನರಾಗಿ ವರ್ತಿಸುತ್ತಿರುವರು. ಸಂಖ್ಯಾಮಾತ್ರ ಪ್ರಧಾನವಾದ ಸಂಗೀತದಲ್ಲಿ ಮದ್ದಳೆಯ ಬಾಯಿ, ಹಾಡುವವನ ಬಾಯಿ, ಎರಡೂ ಸಮಾನವೇ ಅಲ್ಲವೆ ? ಹೀಗಾಗುವುದರಿಂದ ಯಾವ ಹಾಡನ್ನು ಹಾಡಿದರೂ, ಅದಕ್ಕೆ ಕೈಲಾಗುವಷ್ಟು ಆವರ್ತಗಳ ಸ್ವರವನ್ನು ಹಾಕದೆ, ಪಲ್ಲವಿಯ ಕತ್ತರಿದಾಟುಗಳ

ಕೆಲಸ ತೋರಿಸದೆ ಇದ್ದರೆ ಈಗಿನ ವಿದ್ವಾಂಸನಿಗೆ ತೃಪ್ತಿಯಿಲ್ಲ. ಹೀಗಾಗುವುದರಿಂದ ಈಗಿನ ಕಚ್ಚೇರಿಗಳಲ್ಲಿ ದಾಕ್ಷಿಣಾತ್ಯ ಪದ್ಧತಿಯಲ್ಲಿನ ಅನೇಕ ತಾಳಗಳನ್ನೂ ಅವುಗಳ ಅಂಗಗಳನ್ನೂ ಅರಿತವರಿಗೇನೋ ಸ್ವಲ್ಪವರೆಗೂ ಆನಂದವೊ ಆಶ್ಚರ್ಯವೊ ಆಗುವುದೇ ಹೊರತು, ಅರಿಯದವರಿಗೆ ಆಗುವುದೇನು ? ಅಸಹ್ಯ. ಇನ್ನೇನಿದೆ ? ಸಭಾನಾಯಕನಾದ ವಿದ್ವಾಂಸನು ಯಾವುದೋ ಜಾತಿಗೆ ಸೇರಿದ ಯಾವುದೋ ತಾಳದಲ್ಲಿ ಪಲ್ಲವಿ ಎತ್ತಿ, ಬೇರೆ ಬೇರೆ ವಿಚಿತ್ರವಿನ್ಯಾಸಗಳಿಂದ ಜಾತಿ ಭೇದಗಳನ್ನು ತೋರುವಾಗ ತಾಳ ತಪ್ಪಿ ಹೋಗುವುದೆಂಬ ಭಯದಿಂದ ಮುಖವೆಲ್ಲವೂ ಬೆವರುತ್ತಿರಲು, ತೊಡೆಯಮೇಲೆ ತೊಗಲೆಗರುವ ಹಾಗೆ ಕೈತಟ್ಟುತ್ತ, ಮುಖವನ್ನು ಮುಡಿಹಾಕಿ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ನರಗಳನ್ನೆಲ್ಲವನ್ನೂ ಬಿಗಿಮಾಡಿಕೊಂಡು, ಗಂಟಲು ಒಣಗಿ ಗರಸಾಗುತ್ತಿರಲು ಕೈಗಳನ್ನು ಬೀಸುತ್ತ ಮಾಡುವ ವಿಕಾರಗಳ ಜೊತೆಗೆ, ಪಿಟೀಲು ಮೃದಂಗಗಳವರೂ ಹೀಗೇ ಒಬ್ಬರನ್ನು ಮೀರಿಸಿ ಇನ್ನೊಬ್ಬರು, ಮಾಡುತ್ತಿರುವ ಕರಕರ ಡಮುಡಮು ಧ್ವನಿಗಳೊಡನೆ, ಸಭ್ಯರಲ್ಲಿ ಇಂಥ ವೀರಾವೇಶವುಳ್ಳವರು ಕೆಲವರು ಶಕ್ತ್ಯನುಸಾರವಾಗಿ ತಾಳವನ್ನು ಕೈಗಳಿಂದ ತಟ್ಟುವ ಪಟಪಟ ಧ್ವನಿಗಳನ್ನು ಸೇರಿ ನಾದವು ನಶಿಸಿ, ಲಯವು ಲಯಿಸಿ, ಯಾವುದೋ ಒಂದು ನಿರ್ಘೋಷವೊಂದು ಕಿವಿಗಳನ್ನು ದಿಮ್ಮು ಹಿಡಿಸುತ್ತಿರಲು ಅಂಥ ಸಂಗೀತದ ಜಂಝಾಮಾರುತದಲ್ಲಿ ಭಾವಕ್ಕೂ ರಸಕ್ಕೂ ಭ್ರಾಂತಿಪಟ್ಟು ಬಂದ ರಸಿಕರಿಗೆ ಬೇಸರವಲ್ಲದೆ ಇನ್ನೇನು ಬಂದೀತು ? ಕಬ್ಬಿಣದ ಅಂಗಡಿಯಲ್ಲಿ ನೊಣಗಳಿಗೇನಿದೆ ?

ನಿಜವಾಗಿ ವಿಚಾರಿಸಿದರೆ, ಪಲ್ಲವಿ, ಸ್ವರಕಲ್ಪನೆ ಈ ಎರಡೂ ದಾಕ್ಷಿಣಾತ್ಯ ಗಾಯಕರು ಪ್ರಪಂಚದಲ್ಲಿನ ಸಂಗೀತಸರಸ್ವತಿಗೆ ಅರ್ಪಿಸಿದ ಅಮೂಲ್ಯವಾದ ಆಭರಣಗಳು. ವರ್ಣ, ಕೀರ್ತನೆ ಮೊದಲಾದವು ತಾನೋ ಇತರನೋ ಯಾವಾಗಲೊ ಕಲ್ಪಿಸಿದವಾದುದರಿಂದ, ಅವನ್ನು ಹಾಡುವಾಗ ತನಗೂ, ಕೇಳುವವರಿಗೂ ಸ್ವಲ್ಪ ಆನಂದವಿದ್ದರೂ, ಹಾಡುವವನಿಗೆ ಪಾರತಂತ್ರ್ಯ ಹೆಚ್ಚು. ಪ್ರತಿಭಾಬಲವು ಧಾರಾಳವಾಗಿ ಪ್ರವಹಿಸುವಾಗ ಸ್ವತಂತ್ರಸೃಷ್ಟಿಯಲ್ಲಿ ಇರುವ ಆನಂದವು ಅನುಕರಣದಲ್ಲಿ ಇರದು. ಚಿತ್ರಕಾರ ಮೊದಲಾದವರಂತೆ ಗಾಯಕನಿಗೆ ತಾನು ಸೃಷ್ಟಿಸಿದ ವಸ್ತುಗಳೆಲ್ಲವನ್ನೂ ಶಾಶ್ವತವಾಗಿ ಇರಿಸುವುದಕ್ಕೆ ಅವಕಾಶವಿಲ್ಲವೆಂದು ಮುಂಚೆಯೇ ವಿಜ್ಞಾಪಿಸಿದೆನಲ್ಲವೆ. ಕೀರ್ತನೆ ವರ್ಣಗಳಂಥವು ಕೆಲವನ್ನು ಹಾಗೆ ಕಲ್ಪಿಸಬಹುದು ; ಆದರೂ, ಬಣ್ಣ, ಭಾಷೆ ಮೊದಲಾದವುಗಳಂತಲ್ಲದೆ, ಆತನಿಗೆ ಆಧಾರವಾದ ನಾದವು ಅನಂತವಾದ ಅಮೇಯವಾದ ವಸ್ತುವಾದುದರಿಂದ ಅವುಗಳಲ್ಲಿನ ಸೃಷ್ಟಿಯಂತೆ ಇದರಲ್ಲಿನ ಸೃಷ್ಟಿಯೆ

ಗಾನಪದ್ಧತಿಯನ್ನು ಹೀಗೇ ಬಿಟ್ಟರೆ ಇನ್ನು ಕೆಲವು ದಿನಗಳಲ್ಲಿ ಸಂಗೀತವೇ ಸವೆದು ಹೋಗುವುದು. ಆದುದರಿಂದ ಯಾರಾದರೂ ನಿಷ್ಠುರವಾಗಿ ಮಾತನಾಡಿಯೇ ತೀರ ಬೇಕು. ವಿದ್ವಾಂಸರ ಕೋಪವನ್ನು ಸಹಿಸಬಹುದೇ ಹೊರತು ಸಂಗೀತನಾಶವನ್ನು ಸಹಿಸಲಾರೆವು. ಈಗಿನ ಗಾಯಕರೆಲ್ಲರಲ್ಲಿಯೂ ಈ ದೋಷಗಳು ಇವೆಯೆಂದು ಹೇಳಲಿಲ್ಲ. ರಸಿಕರಾದ ವಿದ್ವಾಂಸರನೇಕರು ಇನ್ನೂ ಬದುಕಿದ್ದಾರೆ. ಅವರಿಂದಲೇ ಸಂಗೀತಕ್ಕೆ ಮರ್ಯಾದೆ ಇನ್ನೂ ಉಳಿದಿದೆ. ಆದರೆ ಸಾಮಾನ್ಯವಾಗಿ ಈಗಿನ ವಿದ್ವಾಂಸರನೇಕರಿಗೆ ಇರುವ ಕಲಹಪ್ರಿಯತ್ವ, ಅವರ ನೀರಸ ಗಾನಪದ್ಧತಿ ಇವು ಜನರಲ್ಲಿನ ಗಾನಾಭಿರುಚಿಯನ್ನೇ ನಶಿಸುವಂತೆ ಮಾಡುತ್ತಿದೆಯೆಂದು ಹೇಳದಿದ್ದರೆ ತಪ್ಪದು. ನಮ್ಮ ಸಂಗೀತಕ್ಕೆ ಇಂಥ ಅವಸ್ಥೆಯನ್ನು ಬರಗೊಡಿಸಬಾರದು. ಇದು ಲೋಕೋತ್ತರವಾದ ವಿದ್ಯೆ. ಇತರ ದೇಶಗಳವರ ಸಂಗೀತವನ್ನು ನಾನು ಅರಿಯೆನಾದರೂ, ಕೇಳಿರುವವಮಟ್ಟಿಗೂ, ಅದು ಹಿಂದೂಗಳ ಕಲೆಗೆ ಸಾಟಿ ಬಾರದೆಂದು ನನ್ನ ಭಾವನೆ. ಇದು ಅಭಿಮಾನದ ಮಾತಲ್ಲ. ಅಜ್ಞಾನದ ಮಾತಾಗಿರಬಹುದು; ಶ್ರೀ ಮೈಸೂರು ಮಹಾರಾಜರವರು ಯೂರೋಪು ಸಂಗೀತಕ್ಕೆ ಕೂಡ ತಮ್ಮ ಸಂಸ್ಥಾನದಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿರುವುದರಿಂದ ನಮಗೆ ಆಗಾಗ್ಗೆ ಅದೂ ಕಿವಿಗೆ ಬೀಳುತ್ತಿರುತ್ತದೆ. ಆದರೆ ಅದು ಇನ್ನೂ ನನ್ನ ಕಿವಿಗಳಿಗೆ ರುಚಿಸಿಲ್ಲ. ನಮ್ಮ ಸಂಗೀತದ ರುಚಿ ಸವಿದ ನನ್ನ ಮಿತ್ರರಲ್ಲಿ ನಾನರಿತಿರುವ ಮಟ್ಟಿಗೂ ನನಗಿಂತ ಪಾಶ್ಚಾತ್ಯ ಸಂಗೀತದಲ್ಲಿ ಅಭಿರುಚಿಯುಳ್ಳವರು ಕಂಡುಬಂದಿಲ್ಲ. ಇನ್ನು ಹಿಂದೂಸ್ತಾನೀ ಗಾನಕ್ಕೆ ರೂಪು ಸ್ವಲ್ಪ ಬದಲಾಯಿಸಿದೆಯಾದರೂ ಪ್ರಾಣವು ನಮ್ಮದೇ. ನಮ್ಮದು ಕರ್ಮ ಭೂಮಿಯಾದುದರಿಂದ ಪಾರತಂತ್ರ್ಯ ಹೆಚ್ಚು. ಅವರದು ಪುಣ್ಯಭೂಮಿಯಾದುದರಿಂದ ಅವರಲ್ಲಿ ಸ್ವಾತಂತ್ರ್ಯ ಹೆಚ್ಚು. ಹೊಸ ಸಂಸ್ಕಾರಗಳು ಅವರಲ್ಲಿ ವ್ಯಾಪಿಸಿದಷ್ಟು ಬೇಗ ನಮ್ಮಲ್ಲಿ ವ್ಯಾಪಿಸವು. ಆದುದರಿಂದ ಆ ದೇಶದಲ್ಲಿನ ಮನುಷ್ಯರಲ್ಲಿನಂತೆಯೇ ಸಂಗೀತದಲ್ಲಿಯೂ ಪರದೇಶೀಯರ ಸಂಬಂಧವು ಸ್ಪಷ್ಟವಾಗಿ ಕಾಣಬರುತ್ತದೆ. ಇಷ್ಟೇ ಹೊರತು ಶಾಸ್ತ್ರ, ಫಲ, ಪದ್ಧತಿ ಇವು ನಮಗೂ ಅವರಿಗೂ ಸಾಮಾನ್ಯವಾದುವೇ. ಲೋಪಗಳೂ ಹಾಗೆಯೇ. ನಮ್ಮವರು ಪಲ್ಲವಿ ಸ್ವರಗಳಿಂದ ಪ್ರಾಣ ತೆಗೆಯುತ್ತಿದ್ದರೆ ಅವರು ತಾನಗಳನ್ನು ಬೆಳೆಸಿ ತಲೆನೋವು ತರುವರು. ಹಿಂದೂಸ್ತಾನಿ ಸಂಗೀತದಲ್ಲಿ ಕರ್ಣಾಟಕ ಸಂಗೀತಕ್ಕಿಂತ ರುಚಿ ಹೆಚ್ಚು ಇದೆಯೆಂದು ನಾವು ಅಂದುಕೊಳ್ಳುವೆವು. ನಮ್ಮ ಗಾನವೇ ಮನೋಹರತರವೆಂದು ಅವರಂದುಕೊಳ್ಳುವರು. ನಮಗೆ ಅದೂ ಅವರಿಗೆ ಇದೂ ಹೊಸದು. ಇಷ್ಟೇ ಅಲ್ಲದೆ ಸ್ವಭಾವಭೇದವಿಲ್ಲ. ಪ್ರಕೃತದಲ್ಲಿ ಅವರ ಚಿಂತೆ ನಮಗೆ ಬೇಕಿಲ್ಲ. ಮನೆಯಲ್ಲಿ ಗೆದ್ದು ಬೀದಿಯಲ್ಲಿ

ಗೆಲ್ಲೋಣ. ನಮ್ಮ ಗಾನವು ನೀರಸವಾಗುತ್ತಿದೆ. ಪರಸ್ಪರ ಪ್ರಾಣಗಳಾದ ಸಂಗೀತ ಸಾಹಿತ್ಯಗಳು ಬೇರೆಯಾಗುತ್ತಿವೆ. ಕ್ರಮವಾಗಿ ಹಾಡಿನಲ್ಲಿ ರುಚಿಯೂ ಗೌರವವೂ ನಶಿಸುತ್ತ ಬಂದಿವೆ. ಈ ಸಭೆಯಲ್ಲಿ ವಿದ್ವಾಂಸರಾದ ಸಹೃದಯರೂ, ಸಹೃದಯರಾದ ವಿದ್ವಾಂಸರೂ ಸಮಾವೇಶವಾಗಿದ್ದಾರೆ. ಇಂಥ ಕಡೆಯಲ್ಲಿ ನಾವು ಸಂಗೀತವಿದ್ಯೆಯ ಯೋಗಕ್ಷೇಮಗಳನ್ನು ವಿಚಾರಿಸದಿದ್ದರೆ ಇನ್ನಾರಿಗೆ ಅದು ಸಾಧ್ಯ ?

ನಮಗೆ, ಎಂದರೆ ತೆಲುಗಿನವರಿಗೆ ಈ ವಿಷಯವನ್ನು ವಿಚಾರಿಸುವುದಕ್ಕೆ ಅಧಿಕಾರ ಉಂಟು; ಆವಶ್ಯಕತೆಯೂ ಇದೆ. ಅಧಿಕಾರವೇನೆಂದರೆ, ನಿಜವಾಗಿ ನೋಡಿದರೆ ಈ ವಿದ್ಯೆ ನಮ್ಮದು. ದಾಕ್ಷಿಣಾತ್ಯ ಸಂಗೀತದಲ್ಲಿನ ಸುಪ್ರಸಿದ್ಧ ರಚನೆಗಳಲ್ಲಿ ಮುಕ್ಕಾಲು ಪಾಲು ತೆಲುಗಿನವರದೇ. ಶೊಂಠಿಯವರ ವರ್ಣಗಳು, ಶ್ಯಾಮಾಶಾಸ್ತ್ರಿಗಳು ತ್ಯಾಗರಾಜ ಮೊದಲಾದವರ ಕೀರ್ತನೆಗಳು, ರಸಮೂರ್ತಿಯಾದ ಕ್ಷೇತ್ರಯ್ಯ ಮೊದಲಾದವರ ಪದಗಳು, ಇವು ಆಮೇಲೆ ಬಂದವರಿಗೆ ಮಾರ್ಗದರ್ಶಕವಾಗಿ ಮಾತ್ರವೇ ಅಲ್ಲದೆ ಇಂದಿಗೂ ಸಾಟಿಯಿಲ್ಲದೆ ವಿರಾಜಿಸುತ್ತಿವೆ. ಇವರ ರಚನೆಗಳನ್ನು ಅರಿಯದವರಿಗೆ ದಕ್ಷಿಣ ಸಂಗೀತದ ಗಾಂಭೀರ್ಯ, ಮಾಧುರ್ಯ, ಅದರಲ್ಲಿ ವಿಚಿತ್ರಕಲ್ಪನೆಗಳಿಗಿರುವ ಅವಕಾಶ ಇವು ಅರ್ಥವಾಗದು ಎಂದರೆ ಅಸತ್ಯವಾಗದು. ಅದರಲ್ಲಿಯೂ ಆಂಧ್ರರಲ್ಲಿ ಆಂಧ್ರನಾದ ತ್ಯಾಗರಾಜನನ್ನು ಮರೆತ ಗಾಯಕನು ಯಾವ ಕೆರೆಯ ನೀರನ್ನು ಕುಡಿಯಬಲ್ಲನು ? ಆ ಗಾನಮಂದಿರಕ್ಕೆ ಆತನು ಮೂಲಸ್ತಂಭ. ಮೂರು ಗಂಟೆಯ ಕಚ್ಚೇರಿಯಲ್ಲಿ ಎರಡುಗಂಟೆಯ ಕಾಲವನ್ನಾದರೂ ತ್ಯಾಗರಾಜ ಕೀರ್ತನೆಗಳಿಗೆ ವಿನಿಯೋಗಿಸದಿದ್ದರೆ ಈಗಿನ ಗಾಯಕನಿಗೆ ಗತಿಯಿಲ್ಲ. ಇನ್ನು ಸಂಗೀತ ತಿಳಿಯದ ಸಾಹಿತ್ಯದವರಿಗೂ, ಸಾಹಿತ್ಯವರಿಯದ ಗಾಯಕರಿಗೂ ಮನಸ್ಸನ್ನು ಕರಗಿಸಬಲ್ಲವನಾಗಿ, ಎರಡನ್ನೂ ತಿಳಿದ ರಸಿಕರಿಗೆ ಪ್ರಪಂಚವನ್ನೇ ರಸಮಯವಾಗಿ ಮಾಡಬಲ್ಲ ಪದಗಳನ್ನು ಸೃಷ್ಟಿಸಿದ ಕ್ಷೇತ್ರಯ್ಯ ನಮ್ಮವನೆಂದು ಹೇಳಿಕೊಳ್ಳಬಲ್ಲ ಆಂಧ್ರರ ಭಾಗ್ಯಕ್ಕೆ ಮೀರಿದುದು ಯಾವುದು ? ಉಳಿದವರು ಯಾರು ಹೇಗಾದರೂ ಈ ಇಬ್ಬರ ಹೆಸರುಗಳೂ ಗಾನಪ್ರಪಂಚದಲ್ಲಿ ಇರುವವರೆಗೂ, ಈ ಸಂಗೀತವು ನಮ್ಮದೆಂದು ಹೇಳುವುದಕ್ಕೆ ಸಂಕೋಚ ನಮಗೆ ಬೇಕಿಲ್ಲ.

ಇದಲ್ಲದೆ, ಈ ಸಂಗೀತಕ್ಕೆ ಜೀವ ತೆಲುಗು. ಮನೆಯಲ್ಲಿ ಯಾವ ಭಾಷೆ ಮಾತನಾಡಿಕೊಂಡರೂ ದಾಕ್ಷಿಣಾತ್ಯರೆಲ್ಲರೂ ಸಂಗೀತ ವಿಷಯದಲ್ಲಿ ಆಂಧ್ರರೇ. ಕನ್ನಡ, ಮಲೆಯಾಳ, ಅರವ ಇವುಗಳಲ್ಲಿ ಪದಕೀರ್ತನಾದಿಗಳಿದ್ದರೂ ಅವು ಸಂಗೀತದ ಸಮಾರಾಧನೆಯಲ್ಲಿ ನಂಜಿಕೊಳ್ಳಬೇಕಾದ ಉಪ್ಪಿನಕಾಯಿಗಳಂಥವಷ್ಟೇ. ಇದು

ಪ್ರಪಂಚದಲ್ಲಿ ಇರುವವರಿಗೆಲ್ಲ ಸ್ವಾಭಿಮಾನವನ್ನೂ, ಸ್ವೀಯಾಭಿಮಾನವನ್ನೂ ಸಹಜವಾಗಿ ಆಗದಿದ್ದರೂ ಕೃತ್ರಿಮವಾಗಿಯಾದರೂ ಉಂಟುಮಾಡುವ ಕಾಲ ಆದುದರಿಂದ, ಇನ್ನು ಮುಂದೆ ಆಂಧ್ರೇತರರು ಅಭಿಮಾನ ಪೂರಿತರಾಗಿ ತೆಲುಗನ್ನು ಬಿಟ್ಟುಬಿಟ್ಟರೆ ಆಗ ಹೇಗಾಗುವುದೊ ಹೇಳಲಾರೆನೇ ಹೊರತು, ಈಗೇನೊ ತೆಲುಗು ಭಾಷೆಗೂ ದಾಕ್ಷಿಣಾತ್ಯಗಾನಕ್ಕೂ ಬಿಡಲಾಗದ ಸಂಬಂಧವಿದೆ.

ಇಂಥ ಸಂಬಂಧ ಏತರಿಂದ ಉಂಟಾದುದೆಂದು ವಿಚಾರಿಸುವುದು ಅಪ್ರಕೃತವಲ್ಲ. ಏಕೆಂದರೆ ' ಏಂದೋ, ಪೂರ್ವಿಕರಾದ ತ್ಯಾಗರಾಜಾದಿಗಳು ತೆಲುಗರಾದ್ದರಿಂದ, ಆ ಭಾಷೆಯಲ್ಲಿ ರಚನೆಮಾಡಲು ಅವರ ಭಕ್ತರಾದ ಆಮೇಲೆ ಬಂದವರು ಅಂಧಪರಂಪರೆಯಾಗಿ ಅದನ್ನುಬಿಟ್ಟರೆ ಗತಿಯಿಲ್ಲವೆಂದುಕೊಂಡು ಅದನ್ನೇ ಹಿಡಿದುಕೊಂಡು ಒದ್ದಾಡಿದರೇ ಹೊರತು, ಉಳಿದಭಾಷೆಗಳಿಗಿಂತ ಅದರಲ್ಲಿ ವಿಶೇಷವೇನು ?' ಎಂದು ಅನಾಂಧ್ರರು ಕೆಲವರು ಹೇಳಬಹುದು. ಕಾವ್ಯನಾಟಕಾದಿ ಸಾರಸ್ವತ ರಚನೆಗಳಲ್ಲಿಯಾಗಲಿ, ಸಭಾವೇದಿಕೆಗಳಲ್ಲಿ ಉಪನ್ಯಾಸಮಾಡುವುದರಲ್ಲಾಗಲಿ, ಇತರ ಭಾಷೆಗಳಿಗಿಂತಲೂ ತೆಲುಗಿನಲ್ಲಿ ವಿಶೇಷವಿದೆಯೆಂದು ನಾನು ಅಂದುಕೊಳ್ಳಲಿಲ್ಲ. ಆದರೆ ಸಂಗೀತವಿಷಯದಲ್ಲಿ ತಪ್ಪದೆ ಇದೆ. "ದೇಶಭಾಷೆಗಳಲ್ಲಿ ತೆಲುಗು ಚೆನ್ನ" ಎಂಬ ವಾಕ್ಯದಲ್ಲಿನ ಸತ್ಯವು ನನಗೆ ಇಲ್ಲಿಯೇ ಗೋಚರಿಸುತ್ತಿದೆ. ಕಾರಣವೇನೆಂದರೆ: ತೆಲುಗು ಅಜಂತ ಭಾಷೆ. ಪ್ರತಿ ಪದವೂ, ಇತರ ಭಾಷೆಗಳಂತೆ ವ್ಯಂಜನದಿಂದಲ್ಲದೆ, ಸ್ವರದಿಂದ ಮುಗಿಯುವುದು.* ಪದಾಂತದಲ್ಲಿ ಪ್ರಾಯಿಕವಾಗಿ ಬರುವ ನಕಾರವು ಕೂಡ ನಿತ್ಯವಲ್ಲ. ಬೇಕಾದರೆ ತೆಗೆದುಹಾಕಬಹುದು. ಅದು ಇದ್ದರೂ ಹಾಡುವವರಿಗೆ ಅನುಕೂಲವೇ ಹೊರತು ಪ್ರತಿಕೂಲವಲ್ಲ. ಅದಲ್ಲದೆ ನಮ್ಮ ಭಾಷೆ ಸಂಸ್ಕೃತ ಪ್ರಾಕೃತ ದ್ರಾವಿಡ ಭಾಷೆಗಳಲ್ಲಿನ ಮೃದುವಾದ ಅಕ್ಷರಗಳನ್ನು ಮಾತ್ರ ಗ್ರಹಿಸಿ, ಕಠಿಣವಾದ ಮಹಾಪ್ರಾಣಾಕ್ಷರ ಮೊದಲಾದುವುಗಳನ್ನು ಪ್ರಾಯಿಕವಾಗಿ ಬಿಟ್ಟುಬಿಟ್ಟಿದೆ. ಕ್ಷ್ವ, ಕ್ತ ಮೊದಲಾದ ವಿಜಾತೀಯಾಕ್ಷರ ಸಂಯೋಗವು ಇತರ ಭಾಷೆಗಳಲ್ಲಿರುವಂತೆ ನಮ್ಮ ಭಾಷೆಯಲ್ಲಿ ಇಲ್ಲವೆಂದೇ ಹೇಳಬೇಕು.

ಆದುದರಿಂದ ಕಾವ್ಯರೀತಿಗಳಲ್ಲಿ ಉತ್ತಮವಾದ ವೈದರ್ಭಿ ನಮ್ಮ ಭಾಷೆಗೆ ಸಹಜ. ಇತರರು ಅದಕ್ಕಾಗಿ ಪ್ರಯತ್ನಪಡಬೇಕು. ಇನ್ನು ಸಂಗೀತದಲ್ಲಿಯೋ ಎಂದರೆ, ಪ್ರಯತ್ನವೆಲ್ಲವನ್ನು ನಾದಕ್ಕಾಗಿ ಉಪಯೋಗಿಸಬೇಕಾಗಿರುವುದರಿಂದ ಅಕ್ಷರಗಳು ಎಷ್ಟು ಸುಖೋಚ್ಚಾರಣವಾಗಿದ್ದರೆ ಅಷ್ಟುಮೇಲು. ಮತ್ತು ನಾದದಲ್ಲಿ ಸ್ವರಗಳು

* ಹೊಸ ಕನ್ನಡದಲ್ಲಿ ಈ ಅನುಕೂಲವಿದೆ.

ಪ್ರಧಾನ. ಅವುಗಳ ಮೂಲಕವೇ ನಾದವು ಸ್ಪಷ್ಟವಾಗಿ ವ್ಯಕ್ತವಾಗುವುದು. ಆದುದರಿಂದ ಬರಿಯ ವ್ಯಂಜನಾಂತ ಶಬ್ದಗಳು ಸಂಗೀತಕ್ಕೆ ಶತ್ರುಗಳು. ಹಾಗಾಗುವುದರಿಂದ ಗಾನದಲ್ಲಿ ನಾದಾಭಿವ್ಯಕ್ತಿ ಸ್ಪಷ್ಟವಾಗಿ ಇರಬೇಕೆಂದಿರಾದರೆ, ಅದಕ್ಕೆ ನಾನು ಕೇಳಿರತಕ್ಕ ಭಾಷೆಗಳಲ್ಲೆಲ್ಲ ತೆಲುಗಿನಂಥುದು ಇಲ್ಲ. ಆದುದರಿಂದಲೇ ಅಂದಿನಿಂದ ಈವರೆಗೂ ಶುದ್ಧ ತಮಿಳರೂ, ಶುದ್ಧ ಕರ್ಣಾಟಕರೂ ತೆಲುಗಿನಲ್ಲಿಯೇ ತಮ್ಮ ಕೈಯಲ್ಲಾದಮಟ್ಟಿಗೂ ಗೀತರಚನೆಗಳನ್ನು ಮಾಡುತ್ತಿದ್ದಾರೆ. ಆದುದರಿಂದ ದ್ರಾವಿಡ ಸಂಗೀತದ ಯೋಗಕ್ಷೇಮವೆಂದರೆ ಆಂಧ್ರಭಾಷೆಯ ಯೋಗಕ್ಷೇಮವೇ ಆಗುವುದು. ಅದನ್ನು ಚರ್ಚಿಸುವ ಅಧಿಕಾರ ನಮಗಲ್ಲದೆ ಇನ್ನಾರಿಗಿದೆ?

ಇನ್ನು ಆವಶ್ಯಕತೆ ಇದೆ ಎಂದೆ. ಅದೇನೆಂದರೆ ಮೊದಲಿನಿಂದಲೂ ಆಂಧ್ರ ದೇಶವು ಸಂಗೀತ ವಿಷಯದಲ್ಲಿ ಅಶ್ರದ್ಧೆಯನ್ನೇ ತೋರಿಸುತ್ತಿರುವಂತೆ ಊಹಿಸಬೇಕಾಗಿದೆ. ದಾಕ್ಷಿಣಾತ್ಯಗಾನಾಭಿವೃದ್ಧಿಗೆ ಆಂಧ್ರರಲ್ಲಿ ಕೆಲವರು ವ್ಯಕ್ತಿಗಳು ಕಾರಣಭೂತರೇಯೆ; ಅದನ್ನು ಪೋಷಿಸಿದವರಲ್ಲಿ ದಕ್ಷಿಣದೇಶದ ಆಂಧ್ರ ನಾಯಕರಾಜರು ಮುಖ್ಯರೆನ್ನುವುದು ಸತ್ಯವೇ; ತೆಲುಗು ಭಾಷೆಯೇ ಅದಕ್ಕೆ ಜೀವವೆನ್ನುವುದು ನಿರ್ವಿವಾದವೇ; ಆದರೆ ಆಂಧ್ರರು, ಆಂಧ್ರದೇಶ ವಾಸಿಗಳು ಒಟ್ಟಿನ ಮೇಲೆ ಸಂಗೀತದಲ್ಲಿ ಹೆಚ್ಚಿನ ಅಭಿಮಾನವನ್ನು ತೋರಿಸಲಿಲ್ಲವೆಂಬುದು ಕೆಲವರ ಅಭಿಮತ. ಇದರಲ್ಲಿ ಸ್ವಲ್ಪ ಸತ್ಯವಿದೆಯೆಂದು ನಾವು ಅಂಗೀಕರಿಸದಿದ್ದರೆ ತಪ್ಪದು. ತ್ಯಾಗರಾಜನು ಆಂಧ್ರನೇ. ಆದರೆ ಆತನನ್ನು ಕಾಪಾಡಿದ್ದು ಕಾವೇರಿಯೇ ಹೊರತು ಕೃಷ್ಣಾ ಗೋದಾವರಿಗಳಲ್ಲ. ಕ್ಷೇತ್ರಯ್ಯನ ರಸಮಾಧುರಿಯನ್ನು ಸೂರೆಗೊಂಡದ್ದು ತಂಜಾವೂರು. ಶ್ಯಾಮಾಶಾಸ್ತ್ರಿಗಳು ಕಂಚಿ ಕಾಮಾಕ್ಷಮ್ಮನಿಗೆ ದತ್ತು. ತ್ಯಾಗರಾಜನ ಕಾಲದಲ್ಲಿ ಆತನ ಮಹತ್ವವನ್ನು ಕೇಳಿ ತನ್ನ ಸಂಸ್ಥಾನಕ್ಕೆ ಆತನನ್ನು ಬರಮಾಡಿಕೊಂಡು ಧನ್ಯತ್ವವನ್ನು ಪಡೆಯ ಕೋರಿದ ಮಹಾರಾಜರು ಮಲೆಯಾಳದವರೂ ಮೈಸೂರಿನವರೂ ಅಂತೆ! ಏಕೆ? ಆ ಕಾಲದಲ್ಲಿ ಆಂಧ್ರದೇಶದಲ್ಲಿ ರಾಜರೇ ಇರಲಿಲ್ಲವೆ? ಹೋಗಲಿ ಬಿಡಿ. ಇಂಥ ಮಹನೀಯನ ಹತ್ತಿರ ಶಿಷ್ಯವೃತ್ತಿ ಮಾಡಬೇಕೆಂದು ಯೋಚಿಸಿದ ಆ ಕಾಲದ ಆಂಧ್ರನು ಯಾವನಾದರೂ ಇದ್ದಾನೆಯೆ? ಆತನ ಶಿಷ್ಯರೆಲ್ಲರೂ ತಮಿಳರು; ಅಥವ ತಮಿಳು ದೇಶದಲ್ಲಿದ್ದ ತೆಲುಗಿನವರು. ಅದೂ ಹಾಗಿರಲಿ. ರಾಮರಾಜಭೂಷಣನು 'ಸಂಗೀತಕಲಾರಹಸ್ಯನಿಧಿ' ಯಲ್ಲವೆ? ಆ ರಹಸ್ಯಗಳು ಎಂಥುವೋ, ಆತನು ಯಾವ ಕೃತಿಗಳನ್ನು ಮಾಡಿದನೋ, ಆಂಧ್ರರು ಪ್ರಪಂಚಕ್ಕೆ ತಿಳಿಸಬೇಡವೆ? ತಾಳ್ಲಪಾಕರವರ ತಂಬೂರಿಯನ್ನು ಮಾತ್ರ ವೇಣುಗೋಪಾಲ

ಶತಕ ಕರ್ತನು ಕುಚೋದ್ಯ ಮಾಡಿದನೇ ಹೊರತು ಸಾವಿರಕ್ಕೆ ಏರಿದ ಆತನ ಕೀರ್ತನೆಗಳ ಮಟ್ಟನ್ನು ಇತರರಿಗೆ ನಾವು ತಿಳಿಸಬಲ್ಲೆವಾಗಿದ್ದೇವೆಯೆ ? ವೆಂಕಟ ಮಖಿಯ ಸಂಪ್ರದಾಯವನ್ನು ಸ್ಪಷ್ಟವಾಗಿ ತಿಳಿಸಬಲ್ಲವರು ದಕ್ಷಿಣದಲ್ಲಿ ಸಾವಿರಕ್ಕೆ ಸಾವಿರ ಜನವಿದ್ದಾರೆಯೇ ಹೊರತು, ನಮ್ಮ ರಾಮಾಮಾತ್ಯನನ್ನು ಆತನು ಕೆಟ್ಟ ಬೈಗಳು ಬೈದರೂ ಬಾಯಿಮುಚ್ಚಿಕೊಂಡು ಇದ್ದೇವೆಯೇ ಹೊರತು ಆ ರಾಮಾ ಮಾತ್ಯನ ಪದ್ಧತಿಪ್ರಕಾರವಾಗಿ ರಾಗಾದಿ ಸ್ವರೂಪವನ್ನು ತಿಳಿಸಬಲ್ಲ ಆಂಧ್ರನು ಈಗ ಇದ್ದಾನೆಯೆ? ತ್ಯಾಗರಾಜನು ನಮ್ಮವನೆಂಬ ಮಾತು ನಮಗೆ ಈಗ ಬಂದಿದೆ. ಇಷ್ಟೇ ಹೊರತು ಇಂದಿಗೂ ಆತನ ಕೀರ್ತನೆಗಳಲ್ಲಿ ಇತರರಿಗಿರುವ ಭಕ್ತಿ ನಮಗಿ ದೆಯೆ ? ಇದ್ದುದಾದರೆ ಅವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲಾರದ ತಮಿಳರ ತಪ್ಪುಗಳತಡಿಕೆಯೊದ ಮೂಲವನ್ನೂ ವಿಪರೀತ ವ್ಯಾಖ್ಯಾನಗಳನ್ನೂ ನಂಬಿರ ಬೇಕಾದ ಅಕ್ಕರೆಯಿಲ್ಲದೆ ನಾವೇ ಅವನ್ನು ಚೆನ್ನಾಗಿ ಪ್ರಕಟಿಸದಿರುತ್ತಿದ್ದೆವೆ ? ತೆಲುಗರಿತ ಆಂಧ್ರರಿಗೆ ಈ ಧರ್ಮವು ಈವರೆಗೂ ಏಕೆ ಗೋಚರಿಸಲಿಲ್ಲ ? ಮತ್ತು, ಸಂಗೀತವನ್ನು ಕುರಿತು ಇಂದು ತೆಲುಗಿನಲ್ಲಿ ಬರೆದಿರತಕ್ಕ ಗ್ರಂಥಗಳಲ್ಲಿ ಆಂಧ್ರರು ರಚಿಸಿರುವುವು ಎಷ್ಟು ? ಹತ್ತಕ್ಕೆ ಎರಡಿವೆಯೆ ? ಆ ಗ್ರಂಥಗಳಾದರೂ ಅರವ ಕನ್ನಡ ದೇಶಗಳಲ್ಲಿ ಮಾರಾಟಕ್ಕೆ ಹೋಗುವಷ್ಟು ತೆಲುಗುದೇಶದಲ್ಲಿ ಮಾರಾಟಕ್ಕೆ ಹೋಗು ತ್ತಿವೆಯೆ? ಇಲ್ಲವೆಂದು ನನಗೆ ಗೊತ್ತಿದೆ. ಆದುದರಿಂದಲೇ ತೆಲುಗು "ತ್ಯಾಗರಾಜ ಹೃದಯ" ವು ಮೂರು ಸಂಪುಟಗಳಿಗೇ ನಿಂತಿತು. ಈಚೀಚೆಗೆ ತೆಲುಗುಕೀರ್ತನೆ ಗಳನ್ನು ರಚಿಸಿದವರೆಲ್ಲರೂ ತಮಿಳರೊ ಕನ್ನಡಿಗರೊ ಹೊರತು ತೆಲುಗಿನವರ ಕೀರ್ತನೆಗ ಳೇಕೆ ಕೇಳಬಾರವು? ತೆಲುಗು ಬಾರದವರು ತೆಲುಗು ಕಲಿತುಕೊಂಡು ಅದರಲ್ಲಿ ಕೀರ್ತನೆಗಳನ್ನು ಬರೆದು ತೆಲುಗರಿಗೇ ಹಾಡಿಕೊಳ್ಳಿರೆಂದು ಕೊಡುವ ಧೈರ್ಯಕ್ಕೆ ಸಂತೋಷಪಡೋಣ. ಆದರೆ ಅವನ್ನು ತೆಗೆದುಕೊಳ್ಳಬೇಕಾದ ನಮ್ಮ ದೈನ್ಯವನ್ನು ಏನೆನ್ನಬೇಕು ? ಮಾರ್ಗದರ್ಶಕರು ನಮ್ಮವರಾಗಿ, ಭಾಷೆ ನಮ್ಮದಾಗಿ, ನಮಗೇ ಅದರಲ್ಲಿ ಅಭಿಮಾನವಿದ್ದಿದ್ದರೆ, ಆಂಧ್ರಸಂಗೀತವೆಂದರೆ ದ್ರಾವಿಡಸಂಗೀತವೆಂದೂ, ಕರ್ಣಾಟಕ ಸಂಗೀತವೆಂದೂ ಅದಕ್ಕೆ ಹೆಸರು ಬರಗೊಡಿಸುತ್ತಿದ್ದೆವೆ? ಅದನ್ನು ಪೋಷಿಸಿದ ಮಧುರೆ ತಂಜಾವೂರುಗಳ ನಾಯಕರು ತೆಲುಗರಲ್ಲವೆ! ಕರ್ಣಾಟಕ ರಾಜರು ಆಂಧ್ರರಾದರೂ ಆಗದಿದ್ದರೂ, ಅವರ ಕೈಕೆಳಗಿನ ರಾಜ್ಯಗಳಲ್ಲಿ ಆಂಧ್ರರಾ ಜ್ಯವು ದೊಡ್ಡದಲ್ಲವೆ! ಆಂಧ್ರ ಜನಸಂಖ್ಯೆ ಹೆಚ್ಚಲ್ಲವೆ! ಇಂದಿಗೂ ಸುಪ್ರಸಿದ್ಧ ವಿದ್ವಾಂಸರೆಲ್ಲರೂ ತಮಿಳರೊ ಕನ್ನಡಿಗರೊ ಹೊರತು ಶುದ್ಧಾಂಧ್ರದೇಶ ವಿದ್ವಾಂಸರು ಏಕೆ ಹೊರಕ್ಕೆ ಬಾರರು ? ಈಚೀಚೆಗೆ ಶ್ರೀ ಪಿಠಾಪುರದ ಸಂಗಮೇಶ್ವರಶಾಸ್ತ್ರಿಗಳ

ವರೂ, ಶ್ರೀಹರಿನಾಗಭೂಷಣಂ ಪಂತಲುಯವರೂ, ಇವರಂಥವರು ಇನ್ನೂ ಒಬ್ಬರಿಬ್ಬರು ಮಹಾವಿದ್ವಾಂಸರು ತೆಲುಗುಗೋಡೆಗಳನ್ನು ಭೇದಿಸಿಕೊಂಡು ಹೊರಕ್ಕೆ ಬರುತ್ತಿದ್ದಾರೆ; ಆದರೆ ನಮ್ಮ ಗುಂಪಿಗೆ ಆ ಒಬ್ಬರಿಬ್ಬರು ಸಾಕೆ? ಆಂಧ್ರರಿಗೆ ಸಂಗೀತದಲ್ಲಿ ಪ್ರತಿಭೆಯಿಲ್ಲವೆಂದು ಯಾರೂ ಹೇಳುವ ಸಾಹಸಮಾಡರು; ಆದರೆ ಅದು ಪ್ರಸಿದ್ಧಿಗೆ ಬರುವುದಕ್ಕೆ ಆಂಧ್ರದೇಶದಲ್ಲಿ ತಕ್ಕ ರಂಗಸ್ಥಳವನ್ನು ಬೇಕಾದಷ್ಟು ಆಂಧ್ರರು ಏರ್ಪಡಿಸಲಿಲ್ಲವೆಂದು ಊಹಿಸಬೇಕಾಗಿದೆ. ಇಂಥ ಅಪವಾದವನ್ನು ಹೋಗಗೊಡಿಸುವುದಕ್ಕಾಗಿ ಕೆಲಸಮಾಡಬೇಕಾದ ಆವಶ್ಯಕತೆ ಈಗ ನಮಗೆ ಬಂದಿರುತ್ತದೆ.

ನಿಮಗೆ ಕರ್ತವ್ಯವನ್ನು ಉಪದೇಶಿಸುವ ಶಕ್ತಿ ನನಗೆ ಸ್ವಲ್ಪವೂ ಇಲ್ಲವಾದರೂ, ಈ ವಿಷಯದಲ್ಲಿ ನಾವೇನು ಮಾಡಬೇಕೆಂಬುದರಲ್ಲಿ ನನಗೆ ತೋಚಿದ ಒಂದೆರಡುಸಂಗತಿಗಳನ್ನು ವಿಜ್ಞಾಪಿಸುತ್ತೇನೆ. ನಮ್ಮ ಮಕ್ಕಳಿಗೆ, ಹುಡುಗರಿಗಾಗಲಿ, ಹುಡುಗಿಯರಿಗಾಗಲಿ, ಚಿಕ್ಕವಯಸ್ಸಿನಿಂದ ಧಾರಾಳವಾಗಿ ಹಾಡುಗಳನ್ನು ಹಾಡುವುದಕ್ಕೆ ಅವಕಾಶ ಕಲ್ಪಿಸಬೇಕು. ಒಳ್ಳೆಯ ಶಾರೀರವಿರುವ ನಮ್ಮ ಹುಡುಗರಿಂದ ಹಾಡಿಸದಿರುವುದೂ, ಅವರಿಗೆ ಸಾಧ್ಯವಾಗುವವರೆಗೂ ಸಂಗೀತವಿದ್ಯೆಯನ್ನು ಕಲಿಸದೆ ಹೋಗುವುದೂ, ಸೃಷ್ಟಿಕರ್ತನ ವಿಷಯದಲ್ಲಿ ಮಾಡುವ ದೊಡ್ಡ ದ್ರೋಹವೆಂದು ತಾಯಿತಂದೆಗಳೆಲ್ಲರೂ ತಿಳಿಯಬೇಕು. ಮತ್ತು ಹಾಡು ಮನುಷ್ಯರಿಗಾಗಿ ಏರ್ಪಟ್ಟ ವಿದ್ಯೆಯಾದುದರಿಂದ ಸಾಮಾನ್ಯವಾಗಿ ಎಲ್ಲರಿಗೂ ಒಳ್ಳೆಯ ಶಾರೀರವೇ ಇರುವುದು. ಅದು ಸಣ್ಣವಯಸ್ಸಿನಿಂದ ತಕ್ಕಷ್ಟು ಪರಿಶ್ರಮವಿಲ್ಲದೆ ಹೋದರೆ ಕೃಶವಾಗಿ ಒಡೆದು ಹೋಗುವುದು. ಹಾಗಾಗದಂತೆ ಕಾಪಾಡುವುದು ಜನನೀಜನಕರ ಧರ್ಮ. ಇದಲ್ಲದೆ ಸಣ್ಣವಯಸ್ಸಿನಿಂದ ಶಾರೀರಕ್ಕೆ ಪರಿಶ್ರಮಕೊಡುವುದರಿಂದ ಶ್ವಾಸಕೋಶಗಳು ಬಲಿಷ್ಠವಾಗಿ ಶರೀರಾರೋಗ್ಯವು ವೃದ್ಧಿಯಾಗುವುದು. ಆದುದರಿಂದ ಮಕ್ಕಳಿಗೆ ಹಾಡು ಕಲಿಸುವುದರಿಂದ ಅವರ ಆರೋಗ್ಯವನ್ನು ಕಾಪಾಡಿದಂತಾಗುವುದು. ಅನುಕೂಲವಿರುವವರೆಲ್ಲರೂ ತಮ್ಮ ಮಕ್ಕಳಲ್ಲಿ ಅಭಿರುಚಿಯೂ ಶಕ್ತಿಯೂ ಉಳ್ಳವರನ್ನು ಪ್ರತ್ಯೇಕವಾಗಿ ಆ ವಿದ್ಯೆಯಲ್ಲಿಯೇ ತಯಾರುಮಾಡಲು ಪ್ರಯತ್ನಿಸಬೇಕು. ಅನುಕೂಲವಿರುವವರೆಂದೇನು. ಅಭಿಮಾನವಿದ್ದರೆ ಅನುಕೂಲ ಯಾರಿಗಿಲ್ಲ? ತಮ್ಮ ಮಕ್ಕಳನ್ನು ಬಿ.ಎ., ಎಂ.ಎ., ಗಳ ವರೆಗೂ ಓದಿಸುವ ತಾಯಿತಂದೆಯರಲ್ಲಿ ಎಷ್ಟು ಜನರಿಗೆ ನಿಜವಾದ ದ್ರವ್ಯಾದಿ ಸಾಹಾಯ್ಯವಿದೆಯೋ ಯೋಚಿಸಿರಿ. ಅದಕ್ಕಾಗಿ ಒಂದು ಹೊತ್ತು ಊಟಮಾಡುವವರು ಎಷ್ಟು ಜನರಿಲ್ಲ? ಈ ಕಾರ್ಯವನ್ನು ವಿದ್ಯಾಧಿಕರಾದ ದೊಡ್ಡವರು ಉಪಕ್ರಮಿಸಬೇಕು. ಅವರು ಧಾರಾಳವಾಗಿ, ಸಂಕೋಚಬಿಟ್ಟು ತಾವು

ಹಾಡುವುದಕ್ಕೆ ಮೊದಲು ಪ್ರಯತ್ನಿಸಬೇಕು. ಸಂತೋಷಕರವಾದ ಸಮಸ್ತ ಸನ್ನಿವೇಶಗಳಲ್ಲಿಯೂ ಶಕ್ತಿಯಿದ್ದಷ್ಟು ಹಾಡಿನ ಕಚ್ಚೇರಿಗಳನ್ನು ಮಾಡಿಸಿ ವಿದ್ವಾಂಸರನ್ನು ಬಹುಮಾನಿಸಬೇಕು. ಯಾವಸಂದರ್ಭಗಳಲ್ಲಿಯೂ ಗಾಯಕನನ್ನು ಬಿಟ್ಟಿಯಾಗಿ ಹಾಡಿ ಹೋಗೆನ್ನುವುದು ಭಿಕ್ಷೆ ಬೇಡುವುದಕ್ಕಿಂತ ನೀಚವಾದುದೆಂದು ಎಲ್ಲರೂ ತಿಳಿಯಬೇಕು. ಮತ್ತು ಗಾಯಕನನ್ನು ಒಬ್ಬ ಕೂಲಿಯವನಂತಲ್ಲದೆ ನಮಗೆ ಮನೋವಿಕಾಸವನ್ನು ಪ್ರಸಾದಿಸುವ ದಾತನಂತೆ ಭಾವಿಸಬೇಕು. ದಾರಿದ್ರ್ಯವೇ ಕಾರಣವಾಗಿ ಸಾಮಾನ್ಯ ಜನರು ಸಂಗೀತಕ್ಷಾಮದಲ್ಲಿ ಬಿದ್ದುಹೋಗದಂತೆ ಧನವಂತರು ಅವರಿಗೆ ತಮ್ಮ ಖರ್ಚಿನಿಂದ ಸಂಗೀತವನ್ನು ಕೇಳಿಸಬೇಕು. ಇವೆಲ್ಲವೂ ಕೆಲವು ವರ್ಷಗಳಿಗೆ ಹಿಂದೆ ನಾವು ಅವಲಂಬಿಸುತ್ತಿದ್ದ ಪದ್ಧತಿಗಳೇ ಹೊರತು ಹೊಸವಲ್ಲ. ಇದಕ್ಕಿಂತಲೂ ಮುಖ್ಯವಾಗಿ ನಾವು ಗಾಯಕರಿಗೆ ಮಾಡುವ ಮಹೋಪಕಾರವೂ, ಧರ್ಮವೂ ಒಂದಿದೆ. ಅದೇನೆಂದರೆ, ಆತನು ಹಾಡುತ್ತಿರುವಾಗ ನಾವು ಶ್ರದ್ಧೆಯುಳ್ಳವರಾಗಿ ಕೇಳುತ್ತ ಮೌನವಾಗಿರುವುದು. ನಿಮಗೆ ಈ ಮಾತು ನಗುಹುಟ್ಟಿಸಬಹುದಾದರೂ, ಕೆಲವರಿಗೆ ಎಲ್ಲೂ ಇಲ್ಲದ ಚರ್ಚೆಗಳು ಹಾಡಿನ ಕಚ್ಚೇರಿಗಳಲ್ಲಿಯೇ ಬರುವುವು. ನಮ್ಮ ಮನಸ್ಸನ್ನು ಆಕರ್ಷಿಸಿ ಆನಂದವುಂಟುಮಾಡುವುದಕ್ಕಾಗಿ ನಿರ್ವಂಚನೆಯಿಂದ ತನ್ನನ್ನು ಮರೆತು ಕೆಲಸಮಾಡುವ ಗಾಯಕನಿಗೆ, ನಾವುಬೇರೆ ಏನನ್ನೋ ಯೋಚಿಸುತ್ತ ಮಾತನಾಡುತ್ತಿದ್ದರೆ, ತನ್ನ ಪ್ರಯತ್ನವು ನಿಷ್ಫಲವಾಯಿತೆಂದು ಪ್ರಾಣವೆಷ್ಟು ನೊಂದುಕೊಳ್ಳುವುದೊ ಅದು ಅನುಭವಿಸಿದವರಿಗೇ ಗೊತ್ತು ! ಆತನಿಗೆ ನಮ್ಮನ್ನು ಆಕರ್ಷಿಸುವ ಶಕ್ತಿ ಇಲ್ಲದೆ ಹೋಗಬಹುದು ; ಆದರೆ ಹಾಗೆ ಮಾಡಬೇಕೆಂಬ ನಿಷ್ಕಲ್ಮಷ ಶ್ರದ್ಧೆಮಾತ್ರ ತಪ್ಪದೆ ಇರುತ್ತದೆ. ಅಶ್ರದ್ಧೆಯಿಂದ ಕೆಲಸಮಾಡುವುದಕ್ಕೆ ಯಾವ ಕಲಾವಂತನಿಗೂ ಸಾಮಾನ್ಯವಾಗಿ ಸಾಧ್ಯವಿಲ್ಲ. ಕಲೆಗಳಿಂದ ಉಂಟಾಗುವ ಚಿತ್ತಸಂಸ್ಕಾರ ಅಂಥಾದ್ದು. ಅದರಲ್ಲಿಯೂ ಗಾಯಕನಿಗೆ ಅದು ಅಸಾಧ್ಯವೆಂದೇ ಹೇಳಬೇಕು. ಸದ್ಯಸ್ಸಂತೋಷವನ್ನುಂಟುಮಾಡುವುದು ಆತನ ಧರ್ಮವಾದುದರಿಂದ ಆತನು ಅಸಡ್ಡೆ ತೋರಿಸುವುದು ಸಾಧ್ಯವಿಲ್ಲ. ಶ್ರದ್ಧೆಯುಳ್ಳವನಲ್ಲಿ ನಾವು ಉದಾಸೀನತೆಯಿಂದ ವರ್ತಿಸಿದರೆ ಆತನಿಗೆ ಅದಕ್ಕಿಂತ ಹೆಚ್ಚಿನ ದುಃಖವಿರದು. ಮತ್ತು ಹಾಡಬಲ್ಲವನ ಶಕ್ತಿಸಾಮರ್ಥ್ಯಗಳೆಲ್ಲವನ್ನೂ ಹೊರಕ್ಕೆ ತೆಗೆಯಬಲ್ಲ ಶಕ್ತಿ ಕೇಳುವವರಲ್ಲಿದೆ. ಇದಲ್ಲದೆ ನಮಗೆ ರುಚಿಸದ ಹಾಡು ಹತ್ತುಜನರಲ್ಲಿ ಇತರರಿಗೆ ರುಚಿಸಬಹುದು. ಹಾಗಿದ್ದರೆ ಸಂತೋಷವನ್ನನುಭವಿಸುವ ಇತರರಿಗೆ ನಮ್ಮ ಮಾತುಗಳಿಂದ ವಿಘ್ನವುಂಟುಮಾಡಿದವರಾಗುತ್ತೇವೆ. ಆದುದರಿಂದ ಸಭೆಯಲ್ಲಿ ಬಂದು ಕುಳಿತುಕೊಂಡ ತರುವಾಯ ನಮಗೆ ಸುಖವಿಲ್ಲದಿದ್ದರೂ

ಗಾಯಕನಲ್ಲಿ ಅವಧಾನವಿಟ್ಟು ಪ್ರೋತ್ಸಾಹಿಸುವುದು ಧರ್ಮ. ಅದು ಸಾಧ್ಯವಾಗ ದಿದ್ದರೆ ಮೌನದಿಂದ ಸಹಿಸಿಕೊಂಡಿರುವುದು ಒಳ್ಳೆಯ ನಡತೆ; ಕೊನೆಗೆ ಸಭೆ ಬಿಟ್ಟು ಹೋದರೂ ಮೇಲೇ. ಆದರೆ ಪ್ರಕಟವಾಗಿ ಗಾಯಕನಿಗೆ ನಿರುತ್ಸಾಹವನ್ನೂ, ಇತರ ರಿಗೆ ವಿಘ್ನವನ್ನೂ ಉಂಟುಮಾಡುತ್ತ ಮಾತನಾಡುವುದು ನಾವು ಸಂಗೀತ ವಿದ್ಯೆಯ ವಿಷಯದಲ್ಲಿ ಮಾಡುವ ಮನ್ನಿಸಲಾಗದ ಅಪರಾಧ.

ಇವೆಲ್ಲವೂ ಪ್ರತ್ಯೇಕವಾಗಿ ನಾವೆಲ್ಲರೂ ಮಾಡಬೇಕಾದ ಕೆಲಸಗಳು. ಇದಲ್ಲದೆ ಅನುಕೂಲವಾದ ಸ್ಥಳಗಳಲ್ಲೆಲ್ಲ ಸಮಾಜಗಳನ್ನು ಏರ್ಪಡಿಸಬೇಕು. ಅನೇಕ ಸ್ಥಳ ಗಳಲ್ಲಿ ಹಲಬಾರಿ ಇಂಥ ಸಭೆಗಳನ್ನು ಸೇರಿಸಿ ಸಂಗೀತದ ಈಗಿನ ಪರಿಸ್ಥಿತಿಯನ್ನು ಚರ್ಚಿಸುವುದಲ್ಲದೆ, ಪ್ರತ್ಯೇಕವಾಗಿ ಚಂದಾಹಾಕಿಸಿ ವಿದ್ವಾಂಸರ ಕಚ್ಚೇರಿಗಳನ್ನು ಏರ್ಪಡಿಸಬೇಕು. ಆದರೆ ಒಟ್ಟುಗೂಡಿ ಹತ್ತುಮಂದಿಮಾಡುವ ಕೆಲಸಕ್ಕಿಂತ, ಕಲೆಗಳ ಅಭಿವೃದ್ಧಿಗೆ ಒಬ್ಬೊಬ್ಬರು ಮಾಡುವ ಕೆಲಸಗಳೇ ಸಾಧನವಾಗುವುವು. ಸಮಾಜ ಗಳಲ್ಲಿ ಪರತಂತ್ರ ಹೆಚ್ಚು; ಸಭೆಗಳಲ್ಲಿ ಪರೋಪದೇಶಪಾಂಡಿತ್ಯವು ಹೆಚ್ಚು. ಒಬ್ಬರನ್ನು ಮಾಡಿರೆಂದು ಪ್ರಾರ್ಥಿಸುವುದಕ್ಕಿಂತ ತಾವು ಮಾಡುವುದು ಸಾವಿರಪಾಲು ಮೇಲು. ಜನರು ಉದಾಹರಣೆಯಿಂದ ಗ್ರಹಿಸುವಂತೆ ಉಪದೇಶದಿಂದ ಗ್ರಹಿಸರು. ಸಂಗೀತದಲ್ಲಿ ಅಭಿರುಚಿಯೂ ಅಭಿಮಾನವೂ ಉಂಟೆಂದು ಹೇಳುವವರಿಗೆಲ್ಲ, ಅದನ್ನು ಕುರಿತು ಉಪನ್ಯಾಸಮಾಡುವವರಿಗೆಲ್ಲ (ಇದರಲ್ಲಿ ನನ್ನನ್ನು ಕೂಡ ಸೇರಿಸಿಕೊಂಡಿದ್ದೇನೆ) ನನ್ನ ಪ್ರಶ್ನೆ ಒಂದಿದೆ. "ಅದನ್ನು ಕಲಿಯುವುದಕ್ಕಾಗಿ, ಕಲಿತವರನ್ನು ಪ್ರೋತ್ಸಾಹಿಸು ವುದಕ್ಕಾಗಿ ಸ್ವಂತವಾಗಿ ನೀವೇನು ಮಾಡಿದ್ದೀರಿ?" ಎಂದು. ಇದಕ್ಕೆ ನಮ್ಮ ಹೃದಯಕ್ಕೆ ತೃಪ್ತಿಯಾಗುವಂತೆ ಪ್ರತ್ಯುತ್ತರಕೊಡಬಲ್ಲ ಧೈರ್ಯವನ್ನು ನಾವು ಉಂಟು ಮಾಡಿಕೊಳ್ಳಬೇಕಾಗಿದೆ.

ನಮ್ಮ ಈ ಪ್ರಯತ್ನಕ್ಕೆ ವಿದ್ವಾಂಸರೂ ಅರ್ಧದೂರ ಸಹಾಯ ಮಾಡ ಬೇಕಾಗಿದೆ. ಎಷ್ಟುವರ್ಷ ಸಾಧಿಸಿದರೂ, ಪಲ್ಲವಿ ಸ್ವರಾದಿಗಳಲ್ಲಿ ಎಷ್ಟು ವಿಚಿತ್ರಗಳನ್ನು ಮಾಡಬಲ್ಲವರಾದರೂ ಸಂಗೀತವು ರಕ್ತಿಪ್ರಧಾನವಾದ ವಿದ್ಯೆಯೇ ಹೊರತು ಶಕ್ತಿ ಪ್ರಧಾನವಲ್ಲವೆಂಬ ತತ್ವವನ್ನು ಅವರು ಮರೆಯಬಾರದು. ಶಕ್ತಿಯನ್ನು ಒಂದು ಸಾರಿ ನೋಡಿದೆವಾದರೆ ಎರಡನೆಯ ಸಾರಿ ನೋಡುವ ಉತ್ಸಾಹವಿರದು. ಅಭಿನವ ಭೀಮಸೇನರಾದ ರಾಮಮೂರ್ತಿಯವರು ಆನೆಯನ್ನು ಎದೆಯಮೇಲೆ ತೂಗುವುದನ್ನು ನೋಡಿದೆ. ಸಂತೋಷಪಟ್ಟೆ. ಆದರೆ ಇನ್ನೊಂದುಸಲ ನೋಡುವ ಕೋರಿಕೆಯಿಲ್ಲ. ಹೀಗೇ ಸದಾಶಿವರಾಯರು ಒಂದು ಸಭೆಯಲ್ಲಿ ಪಂದ್ಯಹಾಕಿಕೊಂಡು ಹದಿನಾರು

ಕಳೆಯ ಚೌಕದ ಪಲ್ಲವಿಯಲ್ಲಿ ಅಖಂಡವಾಗಿ ಐನೂರು ಆವರ್ತಗಳನ್ನು ಬೇರೆ ಬೇರೆ ಜಾತಿಯ ಸ್ವರವಿನ್ಯಾಸವನ್ನು ಮಾಡಿ ನಿರ್ವಹಿಸಿದರಂತೆ! ಈಗಿನ ವಿದ್ವಾಂಸರು ಯಾರಾದರೂ ಇಂದು ಈ ಕೆಲಸ ಮಾಡಿದ್ದಾದರೆ ಒಂದುಸಾರಿ ನೋಡುವ ಆಶೆ ಇದೆ. ಅಷ್ಟೇ ಹೊರತು, ಕಾಂಭೋಜಿ, ಶಹನಾ ಮೊದಲಾದ ರಾಗಗಳನ್ನು ರಕ್ತಿಯುಂಟುಮಾಡುವಂತೆ ಹಾಡಿ ಸಾಕೆನ್ನಿಸುವವರು ಇದ್ದಾರೆಯೆ? ಇದೇ ಸರ್ಕಸ್ಸಿಗೂ ಸಂಗೀತಕ್ಕೂ ಇರುವ ಭೇದ. ತೃಪ್ತಿಯಿಲ್ಲದ ಬ್ರಹ್ಮಾನಂದದಂಥುದನ್ನು ಪ್ರಸಾದಿಸುವ ದಿವ್ಯವಿದ್ಯೆ ಇದು. ಇದನ್ನು ರಾಕ್ಷಸ ವಿದ್ಯೆಯಾಗಿ ತಿರುಗಿಸದೆ ದಿವ್ಯವಾಗಿ ಇರಿಸುವುದು ವಿದ್ವಾಂಸರ ಧರ್ಮ. ಶಕ್ತಿತೋರಿಸುವುದಕ್ಕೆ ಎಷ್ಟು ಸಾಧನೆಬೇಕೊ ರಕ್ತಿ ಉಂಟುಮಾಡುವುದಕ್ಕೆ ಅದಕ್ಕಿಂತ ಹೆಚ್ಚಾಗಿಯೇ ಬೇಕು. ಶಕ್ತಿಯು ಮುಖ್ಯವಾಗಿ ದೇಹವು ಮಾಡುವ ಕೆಲಸ. ರಕ್ತಿಯು ಮನಸ್ಸು ಬುದ್ಧಿಗಳಿಗೆ ಸೇರಿದುದು. ಮನೋಬುದ್ಧಿಗಳ ಸಾಧನೆಯು ದೇಹಸಾಧನೆಯಷ್ಟು ಸುಲಭವಾಗಿಲ್ಲವೆಂದು ಬೇರೆ ಹೇಳಬೇಕೆ? ಹೀಗೆ ವಿದ್ವಾಂಸರು ಸಂಗೀತವನ್ನು ರಕ್ತಿಪ್ರಧಾನವಾಗಿ ಮಾಡುವುದೇ ಅಲ್ಲದೆ ಅದರ ಪ್ರಚಾರಕ್ಕೆ ತಾವು ಮುಖ್ಯವಾಗಿ ಸಹಾಯಮಾಡಬೇಕು. ಏತಕ್ಕೆಂದರೆ: ಯಾವ ವಿದ್ಯೆಯನ್ನು ಜೀವಿತವಾಗಿ ಏರ್ಪಡಿಸಿಕೊಂಡರೂ ಅದರಲ್ಲಿ ವ್ಯಾಪಾರಧರ್ಮವು ವರ್ತಿಸುವುದು. ತನಗೆ ಇಷ್ಟ ಬಂದಂತೆ ವಸ್ತುಗಳನ್ನು ತಯಾರುಮಾಡಿಟ್ಟುಕೊಂಡು ಜನರು ಕೊಳ್ಳಲಿಲ್ಲವೆಂದು ಅಂಗಲಾಚುವ ವ್ಯಾಪಾರಿಗಿಂತ ಹುಚ್ಚನು ಬೇರೊಬ್ಬನಿರನು. ಜನರಿಗೆ ಬೇಕಾದವುಗಳನ್ನು ತಯಾರುಮಾಡುವುದು ವ್ಯಾಪಾರಿಯ ಮೊದಲನೆಯ ಧರ್ಮ. ತಾನು ಅಪೂರ್ವವಸ್ತುಗಳನ್ನು ಸೃಷ್ಟಿಸಿ ಜನರಿಗೆ ಅವುಗಳಲ್ಲಿ ರುಚಿಹುಟ್ಟಿಸುವುದು ಅದಕ್ಕಿಂತ ಕಷ್ಟವಾದ ಎರಡನೆಯ ಧರ್ಮ. ಆದುದರಿಂದ ಈಗಿನ ವಿದ್ವಾಂಸರು ರಸಿಕರಿಗೆ ಬೇಕಾಗುವಂತೆ ಹಾಡುವುದೂ ಅಲ್ಲದೆ, ತಮ್ಮ ಹಾಡನ್ನು ಅರ್ಥಮಾಡಿಕೊಂಡು ಅನುಭವಿಸುವ ರಸಿಕರನ್ನೂ ಕೂಡ ತಾವೇ ತಯಾರುಮಾಡಬೇಕಾಗಿದೆ. ಇದಕ್ಕಾಗಿ ಕಚ್ಚೇರಿಗಳಲ್ಲಿ ಕಲಹಗಳನ್ನು ದೂರಮಾಡುವುದು, ಕಲಿತ ಹಾಡುಗಳ ಅರ್ಥಭಾವಗಳನ್ನು ಚೆನ್ನಾಗಿ ಹಲವುಬಾರಿ ಮನನಮಾಡಿ ಸ್ವಾಧೀನಪಡಿಸಿಕೊಳ್ಳುವುದು, ಕೇಳಬೇಕೆಂದು ಆಶೆಪಟ್ಟವರಿಗೆಲ್ಲ ಕೈಲಾದಮಟ್ಟಿಗೂ ಕೇಳಿಸುವುದು, ಅದಕ್ಕಿಂತ ಮುಖ್ಯವಾಗಿ ಕಲಿಯಬೇಕೆಂದು ಅಪೇಕ್ಷಿಸಿದವರಿಗೆಲ್ಲ ಕಲಿಸುವುದು ತಮ್ಮ ಧರ್ಮವೆಂದು ಅವರು ಗ್ರಹಿಸಬೇಕು. ಅಲ್ಲದೆ ದ್ರವ್ಯವೇ ಪ್ರಧಾನವಾಗಿ ಭಾವಿಸಿದ ಯಾರಿಗೂ ಸಂಗೀತವು ಸ್ವಾಧೀನವಾಗದು. ಇದು ರಾಜಸವಿದ್ಯೆಯಾಗಿರುವವರೆಗೂ ಪರರನ್ನು ಸಂತೋಷಪಡಿಸುವುದೇ ಇದಕ್ಕೆ ಫಲ. ಆದುದರಿಂದ ತನಗೆ ದ್ರವ್ಯಲಾಭವಿಲ್ಲವೆಂದು

ಕೊರಗುತ್ತ ಕುಳಿತ ಯಾವ ಗಾಯಕನು ಹಾಡಿನಲ್ಲಿ ರಕ್ತಿ ಉಂಟುಮಾಡಬಲ್ಲನು? ಹೀಗೆಂದು ಕೇಳುವ ರಸಿಕರು ವಿದ್ವಾಂಸರಿಗೆ ಉಪವಾಸವ್ರತ ಉಪದೇಶಿಸಬಾರದೆಂದು ಮೊದಲೇ ವಿಜ್ಞಾಪಿಸಿದೆನಲ್ಲವೇ? ಅವರನ್ನು ಬಹುಮಾನಿಸುವುದು ನಮ್ಮ ಧರ್ಮ. ನಮ್ಮ ಬಹುಮಾನವನ್ನೇ ಪ್ರಧಾನವಾಗೆಣಿಸದಿರುವುದು ಅವರ ಧರ್ಮ. ಹೀಗೆ ಅವರವರ ಧರ್ಮಗಳನ್ನು ಅವರು ಕಂಡುಕೊಂಡ ದಿನವೇ ಸಂಗೀತಕ್ಕೆ ಕೃತಯುಗವೇರ್ಪಡುವುದು. ಪ್ರಾಚೀನರು ಇದನ್ನು ಅರಿತು ಆಚರಣೆಗೆತಂದಿದ್ದರು. ನಾವೇಕೆ ತರಲಾರೆವು?

ಮಹಾಶಯರೆ! ಯಾವುವೋ ಕೆಲವು ಮಾತುಗಳನ್ನು ಅರಿಕೆಮಾಡಿದೆ. ನಿಮಗೆಲ್ಲರಿಗೂ ಇಷ್ಟು ಕಾಲಹರಣವಾಗುವಂತೆ ಮಾಡುವೆನೆಂದಿರಲಿಲ್ಲ. ಕಾಲವೆಷ್ಟಾಯಿತೆಂಬ ಜ್ಞಾನವಿಲ್ಲದಿರುವುದು ಸಂಗೀತಗಾರರ ಸ್ವಭಾವ. ಅದರ ವಿಷಯವಾಗಿ ಮಾತನಾಡುವವರಿಗೂ ಅದು ಸಂಕ್ರಮಿಸುವುದೋ ಏನೋ. ಈದಿನ ನನ್ನ ಮಾತುಗಳಲ್ಲಿನ ಇತರ ತಪ್ಪುಗಳ ಜೊತೆಗೆ ಇದನ್ನು ಕೂಡ ತಾವು ಮನ್ನಿಸಲು ಕರ್ತರು. "ನಮ್ಮ ಆಂಧ್ರದೇಶದಲ್ಲಿ ಸಂಗೀತ ಬಾರದವರಾರೂ ಇರಕೂಡದೆಂದು ನನ್ನ ಅಭಿಪ್ರಾಯ" ಎಂದು ಕಳೆದ ಸಂವತ್ಸರದ ಸಭಾಧ್ಯಕ್ಷರಾಗಿದ್ದ ಶ್ರೀಹರಿನಾಗಭೂಷಣಂಪಂತಲು ಯವರು ಒಂದಮೂಲ್ಯವಾದ ಮಾತನ್ನು ಹೇಳಿ, ಆಂಧ್ರಗಾಯಕೋದ್ಯಮಕ್ಕೆ ಮೂಲ ಸೂತ್ರವನ್ನು ರಚಿಸಿದರು. ಅದು ನಾವೆಲ್ಲರೂ ನಿತ್ಯವೂ ಅನುವಾದಮಾಡಬೇಕಾದ ಮಂತ್ರವೆಂದು ಹೇಳುತ್ತ ಇಷ್ಟಕ್ಕೆ ಮುಗಿಸಲು ನಿಮ್ಮ ಅನುಮತಿ ಬೇಡುತ್ತಿದ್ದೇನೆ

ಕೋಶ ಕರ್ಣಾಟಕಭಾಷಾಭೂಷಣಗಳನ್ನು ಬರೆದವನು ಬೇರೊಬ್ಬ ನಾಗವರ್ಮನೆಂದೂ ನಿರ್ಧರಿಸು ವುದಕ್ಕೆ ಸಾಕಾದ ಕಾರಣಗಳಿವೆ."

ಎಂದು ಕವಿಚರಿತಕಾರರು ೫೨ ನೆಯ ಪುಟದಲ್ಲಿ ಹೇಳಿ, ತದನಂತರ—

ಮೆ|| ಕಿಟ್ಟಲ್ ಅಚ್ಚುಹಾಕಿಸಿರುವ ಛಂದೋಂಬುಧಿಯಲ್ಲಿ ಗ್ರಂಥಾದಿಯಲ್ಲಿದ್ದ ಮಂಗಳ ಶ್ಲೋಕಗಳಲ್ಲಿ ಕವಿಯ ಕಾಲವೇ ಮೊದಲಾದ ಅಂಶಗಳನ್ನು ನಿಶ್ಚಯಿಸುವುದಕ್ಕೆ ಸಹಕಾರಿಯಾದ ಕೆಲವು ಪದ್ಯಗಳು ಬಿಟ್ಟುಹೋಗಿವೆ. ನಾವು ನೋಡಿದ ನಾಲ್ಕು ಓಲೆಯ ಪುಸ್ತಕಗಳಲ್ಲಿಯೂ—

ಅರಸಂ ರಕ್ಕಸಗಂಗಂ | ಗುರುಗಳ್ ನೆಗಳ್ದಜಿತಸೇನದೇವರ್ ದಯೆಯಿಂ ||
ಪೊರೆವ ನೃಪನಣ್ಣನೆನೆ ಮ | ಚ್ಚರಿಸುವರಾರ್ ನಾಕಿಯಿರುಳೊಳೇಂ ಪುಟ್ಟಿದನೇ ||
ಗಂಡರ ಮೂಕುತಿ ಯೆನಿಸಿದ | ಮಾಂಡಳಿಕರ ಮಂತ್ರಿ ಸಂಧಿವಿಗ್ರಹಿ ರಾಯಂ ||
ಕೊಂಡಾಡಿ ಪೊರೆದನೆನೆ ಧರೆ | ಕೊಂಡಾಡದೆ ಕೊಂಡುಕೊನೆಯದೇ ನಾಕಿಗನಂ ||

ಎಂಬ ಪದ್ಯಗಳು ದೊರೆಯುತ್ತವೆ. ಈ ಪದ್ಯಗಳಿಂದ ಛಂದೋಂಬುಧಿಯನ್ನು ಬರೆದ ನಾಗವರ್ಮನ ಕಾಲವನ್ನು ನಿಸ್ಸಂದೇಹವಾಗಿ ನಿಶ್ಚಯಿಸಬಹುದು.

I. (1) ರಕ್ಕಸಗಂಗ.—ಈ ರಾಜನು ರಾಚಮಲ್ಲನ (974-984) ತಮ್ಮನೆಂದೂ ಆತನ ಕಾಲವಾದಮೇಲೆ ಸುಮಾರು 984 ರಿಂದ ರಾಜ್ಯಭಾರಮಾಡಿದನೆಂದೂ ಶಾಸನಗಳಿಂದ ತಿಳಿಯಬರುತ್ತದೆ. (2) ಅಜಿತಸೇನದೇವ.—ಇವನು ರಾಚಮಲ್ಲನಿಗೂ ಆತನ ಮಂತ್ರಿಯಾದ ಚಾವುಂಡರಾಯನಿಗೂ ಗುರು. (3) ಅಣ್ಣ; ರಾಯ.—ಈ ಹೆಸರುಗಳು ಚಾವುಂಡರಾಯನಿಗೆ ಉಂಟೆಂದು ಅವನ ಚರಿತೆಯಲ್ಲಿ ತಿಳಿಸಿದ್ದೇವೆ. ಆದುದರಿಂದ ಈ ನಾಗವರ್ಮನು ರಕ್ಕಸಗಂಗನ ಕಾಲದಲ್ಲಿ ಚಾವುಂಡರಾಯನಿಂದ ಪೋಷಿತನಾಗಿಯೂ ಅಜಿತಸೇನದೇವನ ಶಿಷ್ಯನಾಗಿಯೂ ಇದ್ದನೆಂಬುದು ವ್ಯಕ್ತವಾಗದಿರಲಾರದು.

ಅಲ್ಲದೆ ಕಾದಂಬರಿಯ ಕೊನೆಯಲ್ಲಿ ಕುದುರೆಗಳನ್ನು "ಸತ್ಕೃತಿವನಿತೆಗಿದೌಚಿತ್ಯಮೆಂದಿತ್ತನತ್ಯುತ್ಸವದಿಂ ವಿದ್ವತ್ಸಭಾಮಂಡಲಿ ತಣಿವಿನೆಗಂ ಭೋಜರಾಜಕ್ಷಿತೀಶಂ" ಎಂದು ಹೇಳಿದೆ. ಧಾರಾಪುರದ ಭೋಜರಾಜನು 10 ನೆಯ ಶತಮಾನದ ಅಂತ್ಯಭಾಗದಲ್ಲಿ ಆಳುವುದಕ್ಕೆ ಆರಂಭಿಸಿದಂತೆ ತಿಳಿಯುತ್ತದೆ. ಮೇಲಣ ಪದ್ಯಭಾಗದಲ್ಲಿ ಹೇಳಿರುವ ಭೋಜರಾಜನು ಇವನೇ ಆಗಿರಬಹುದು. ಈ ಕಾರಣಗಳಿಂದ ಈ ನಾಗವರ್ಮನು ಸುಮಾರು 990 ರಲ್ಲಿ ಇದ್ದಿರಬೇಕು.

ಕಾವ್ಯಾವಲೋಕನದಲ್ಲಿ—

ಪ್ರಣುತಗುಣರೆನಿಪ ವಿಬುಧಾ| ಗ್ರಣಿಗಳ್ ಕೆಯ್ಕೊಂಡು ಪೊಗಳ್ ಸಲೆ ನೆಗಳ್ದವು ಧಾ|
ರಿಣಿಯೊಳಗೆ ನಾಗವರ್ಮನ | ಗುಣವರ್ಮನ ಶಂಖವರ್ಮನಧ್ವಾನಂಗಳ್ ||

ಎಂಬ ಪದ್ಯವು ಉದಾಹೃತವಾಗಿದೆ. ಇದರಿಂದ ಈ ಗ್ರಂಥಕರ್ತೃವಾದ ನಾಗವರ್ಮನಿಗೆ ಹಿಂದೆಯೇ ಬೇರೆ ಒಬ್ಬ ಲಕ್ಷಣಗ್ರಂಥಕಾರನಾದ ನಾಗವರ್ಮನು ಪ್ರಖ್ಯಾತನಾಗಿದ್ದನೆಂಬುದು ವ್ಯಕ್ತವಾಗುತ್ತದೆ. ಅಲ್ಲದೆ ಕಾವ್ಯಾವಲೋಕನವನ್ನು ಬರೆದ ನಾಗವರ್ಮನಿಗೆ ಅದೇ ಗ್ರಂಥದಲ್ಲಿಯ—

ಅಭಿಮತಶಬ್ದಸಂಸ್ಕರಣದಿಂ ಜನಮುಂ ತಿಳಿವಂತು ಮಾಡಿ ವಾ |
ಗ್ವಿಭವಮುದಪ್ರತರ್ಕ್ಯಮೆನೆ ಸಂದೆಸೆಕಂ ದೆಸೆಯಂತನೆಯ್ದೆ ತ |
ತ್ಸಭೆಯೊಳಗಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂ |
ದಭಿನವಶರ್ವವರ್ಮನಿವನೆಂದಪುದುರ್ವರೆ ನಾಗವರ್ಮನಂ ||

ಎಂಬ ಪದ್ಯದಿಂದ ಅಭಿನವಶರ್ವವರ್ಮನೆಂಬ ಬಿರುದಿದ್ದಂತೆ ತಿಳಿಯುತ್ತದೆ.

ಜನ್ನನು ಅನಂತನಾಥಪುರಾಣದಲ್ಲಿ—ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ|ರ್ಮ ನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯಂ *....ಎಂಬುದರಿಂದ ಇದಾನೀಂತನಶರ್ವವರ್ಮನೆನಿಸಿದ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾಗಿದ್ದಂತೆಯೂ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದಂತೆಯೂ ತಿಳಿಯುತ್ತದೆ. ಈ ನಾಗವರ್ಮನೇ ಕಾವ್ಯಾವಲೋಕನವನ್ನು ಬರೆದವನಾಗಿರಬೇಕು. ಚಾಳುಕ್ಯರಾಜರಲ್ಲಿ, ಜಗದೇಕಮಲ್ಲ ಎಂಬವನು 1138 ರಿಂದ 1150 ರವರೆಗೆ ಆಳಿದ ಹಾಗೆ ತಿಳಿಯಬರುತ್ತದೆ. ಆದುದರಿಂದ ಈ ನಾಗವರ್ಮನು ಸುಮಾರು 1145 ರಲ್ಲಿ ಇದ್ದಿರಬೇಕು. ಜನ್ನನು 1209ರಲ್ಲಿ ಯಶೋಧರಚರಿತವನ್ನೂ 1230ರಲ್ಲಿ ಅನಂತನಾಥಪುರಾಣವನ್ನೂ ಬರೆದಂತೆ ಆ ಗ್ರಂಥಗಳಿಂದ ತಿಳಿಯಬರುವುದರಿಂದ ಈ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾದಾಗ ಬಹಳ ವೃದ್ಧನಾಗಿದ್ದಿರಬೇಕು.

II. (1) ಛಂದೋಂಬುಧಿಯನ್ನು ಬರೆದ ನಾಗವರ್ಮನು ತನ್ನ ತಂದೆ ವೆಣ್ಣಮಯ್ಯನೆಂದು ಹೇಳಿಕೊಂಡಿದ್ದಾನೆ. ಎರಡನೆಯ ನಾಗವರ್ಮನು ಕಾವ್ಯಾವಲೋಕನದ ಕೊನೆಯಲ್ಲಿ "ಪೇಲ್ದಂ ದಾಮೋದರತನಯನೀ ವಚೋಲಂಕೃತಿಯಂ" ಎಂದೂ ವಸ್ತುಕೋಶದ ಕೊನೆಯಲ್ಲಿ "ದಾಮೋದರಪ್ರಿಯಸುತಂ" ಎಂದೂ ಹೇಳಿಕೊಂಡಿದ್ದಾನೆ. (2) ಮೊದಲನೆಯ ನಾಗವರ್ಮನಿಗೆ ನಾಕಿ, ಸಯ್ಯಡಿಯಾತಂ, ಎಂಬ ಹೆಸರುಗಳು ಇದ್ದಂತೆ ತಿಳಿಯುತ್ತದೆ. ಕಾವ್ಯಾವಲೋಕನಾದಿ ಗ್ರಂಥಗಳಲ್ಲಿ ಈ ಹೆಸರುಗಳು ಸಿಕ್ಕುವುದಿಲ್ಲ. (3) ಮೊದಲನೆಯವನಿಗೆ "ಕವಿರಾಜಹಂಸ" ಎಂಬ ಬಿರುದುಂಟು; ಎರಡನೆಯವನಿಗೆ "ಕವಿತಾಗುಣೋದಯ" ಎಂಬ ಬಿರುದಿದೆ. (4) ಮೊದಲನೆಯವನು ಛಂದೋಂಬುಧಿಯ ಆದಿಭಾಗದ ಸ್ತೋತ್ರದಿಂದಲೂ ಅಧಿಕಾರಗಳ ಆದಿಪದ್ಯಗಳಿಂದಲೂ ಕೆಲವು ಓಲೆಯ ಪುಸ್ತಕಗಳ ಪ್ರಕಾರ ಅಧಿಕಾರಾಂತ್ಯದ ಗದ್ಯಗಳಿಂದಲೂ ಕಾದಂಬರಿಯ ಆದಿಶ್ಲೋಕದಿಂದಲೂ ಜೈನನೋ ಅಲ್ಲವೋ ಎಂಬ ಸಂದೇಹವನ್ನು ಉಂಟುಮಾಡುತ್ತಾನೆ. ಆದರೆ ತನ್ನ ಗುರು ಅಜಿತಸೇನಾಚಾರ್ಯನೆಂದು ಹೇಳುವುದರಿಂದ ಜೈನನೇ ಆಗಿರಬೇಕು. ಚಾವುಂಡರಾಯಪುರಾಣದಿಂದ ಚಾವುಂಡರಾಯನಿಗೆ ನಾಗವರ್ಮನೆಂಬ ಒಬ್ಬ ತಮ್ಮನಿದ್ದಂತೆ ತಿಳಿಯುತ್ತದೆ. ಮೇಲೆ ಬರೆದಿರುವ "ಅರಸಂ ರಕ್ಕಸಗಂಗಂ" ಎಂಬ ಪದ್ಯದಲ್ಲಿ ತನ್ನ ಪೋಷಕನು "ಅಣ್ಣ" ನೆಂಬುದರಿಂದ ಇವನೇ ಅವನ ತಮ್ಮನಾಗಿರಬಹುದೋ ಎಂಬ ಸಂದೇಹವು ಹುಟ್ಟುತ್ತದೆ. ಆದರೆ ತಾನು ವೆಣ್ಣಮಯ್ಯನ ಜ್ಯೇಷ್ಠಪುತ್ರನೆಂದು ಹೇಳುವುದರಿಂದ ಇವನು ತದ್ಭಿನ್ನನೆಂದು ತೋರುತ್ತದೆ. ಎರಡನೆಯವನು ಜೈನನೆಂಬುದರಲ್ಲಿ ಸಂದೇಹವೇ ಇಲ್ಲ. ಈ ವಿಷಯವು ಕಾವ್ಯಾವಲೋಕನ, ವಸ್ತುಕೋಶ, ಕರ್ಣಾಟಕಭಾಷಾಭೂಷಣ, ಇವುಗಳಲ್ಲಿಯ ಆದಿಭಾಗದ ಸ್ತುತಿಪದ್ಯಗಳಿಂದಲೂ ಅಂತ್ಯಭಾಗದ ಗದ್ಯದಿಂದಲೂ ಜನ್ನನು ಜೈನಪುರಾಣ ಕರ್ತೃಗಳಲ್ಲಿ ಇವನನ್ನೂ ಸೇರಿಸಿ ಹೇಳಿರುವುದರಿಂದಲೂ ದೃಢಪಡುತ್ತದೆ." ಎಂದು ೫೩, ೫೪ ನೆಯ ಪುಟಗಳಲ್ಲಿ ಬರೆದಿರುವರು.

ಈ ಮೇಲೆ ಹೇಳಿದ ಕಾರಣಗಳಲ್ಲಾದರೆ ಆವುದರಿಂದಲೂ ಕವಿಚರಿತಕಾರರ ಇಷ್ಟಕಾರ್ಯಸಿದ್ಧಿಯಾಗುವುದಿಲ್ಲ.

I. ೧. ಚಾವುಂಡರಾಯಪುರಾಣದ ಕರ್ತೃವಾದ ಚಾಮುಂಡರಾಯನ ತಮ್ಮನಾದ ಒಬ್ಬ ನಾಗವರ್ಮನ ಹೆಸರನ್ನು ಕವಿಚರಿತಕಾರರು ಇಲ್ಲಿ ಮೇಲೆ ಪ್ರಸ್ತಾವ ಮಾಡಿರುವರಷ್ಟೆ. ಈ ಪುರಾಣದಲ್ಲಿ ಈ ನಾಗವರ್ಮನ ಹೆಸರು 'ತನ್ನ ತಮ್ಮನಂ

ನಾಗವರ್ಮ್ಮನಂ ಕೊಂದ ಪಗೆಗೆ ಚಲದಂಕಗಂಗನುಂ ಗಂಗರ ಬಂಟನುಮೆನಿಸಿದ ಮುದುರಾಚಯನಂ ದಾಟಿಟ್ಟು ಕೊಂದು ಚಲಮುಂ ನೆರಪಿದುದಱಿಂ ಸಮರಪರಶು ರಾಮನಂ ಜಟ್ಟಿಗರನಟ್ಟಿದದಂಡಿನೊಳೆ...' ಎಂದು ಮೊದಲಾಗುವ ಒಂದು ವಾಕ್ಯ ದಲ್ಲಿ ಹೇಳಲ್ಪಟ್ಟಿರುವುದು. ಇಲ್ಲಿ 'ತನ್ನ ತಮ್ಮನಂ ನಾಗವರ್ಮ್ಮನಂ ಕೊಂದ ಪಗೆಗೆ ಚಲದಂಕಗಂಗನುಂ' ಎಂಬಷ್ಟಕ್ಕೇ ಒಂದು ವಾಕ್ಯವೆಂದು ಪ್ರಥಮದಲ್ಲಿ ಕವಿಚರಿತ ಕಾರರು ಭಾವಿಸಿ 'ತನ್ನ ತಮ್ಮನಾದ ನಾಗವರ್ಮನನ್ನು ಕೊಂದುದರಿಂದ ಚಾಮುಂ ಡರಾಯನಿಗೆ ಚಲದಂಕಗಂಗಂ ಎಂಬ ಬಿರುದು ಬಂದಿತು' ಎಂದು ಅರ್ಥಮಾಡಿ, 'ದೇವಚಂದ್ರನು ತನ್ನ ರಾಜಾವಳೀಕಥೆಯಲ್ಲಿ ಚಾಮುಂಡರಾಯನು ತನ್ನ ತಮ್ಮ ನಾದ ನಾಗವರ್ಮನು ಜೈನಮತವನ್ನು ಬಿಟ್ಟು ಮತಾಂತರದಲ್ಲಿ ಆದರವನ್ನು ಮಾಡಿ ದುದಕ್ಕಾಗಿ ಅವನನ್ನು ರಾಜ್ಯದಿಂದ ಹೊರಗೆ ಕಳುಹಿಸಿದನೆಂದು ಬರೆದಿರುವನು' ಎಂದು ದೇವಚಂದ್ರನು ಹೇಳಿರುವುದನ್ನು ಅನುವದಿಸಿ, ಚಾಮುಂಡರಾಯನು ವಸ್ತುತಃ ತನ್ನ ತಮ್ಮನಾದ ನಾಗವರ್ಮನನ್ನು ಕೊಂದಾಗ್ಯೂ ಅವನ ಭ್ರಾತೃಹತ್ಯಾ ದೋಷವನ್ನು ಮರೆಮಾಚುವುದಕ್ಕಾಗಿ ದೇವಚಂದ್ರನು ಹೀಗೆ ಹೇಳಿರುವನೆಂದು ಹೇಳಿ, ಈ ನಾಗವರ್ಮನೇ ಛಂದೋಂಬುಧಿ ಕಾದಂಬರಿಗಳ ಕರ್ತೃವಾದ ಒಂದನೇ ನಾಗವ ರ್ಮನೆಂದೂ, ಈ ಅಂಶವು ನಾಗವರ್ಮನ ಛಂದೋಂಬುಧಿಯಲ್ಲಿರುವ 'ಪೊರೆವ ನೃಪನ ಣ್ಣನೆನೆ' 'ರಾಯಂ ಕೊಂಡಾಡಿ ಪೊರೆದನೆನೆ' ಎಂಬ ವಾಕ್ಯಗಳಿಂದಲೂ ದೃಢಪಡು ವುದೆಂದು ಅವರು ಕಾವ್ಯಾವಲೋಕನದ ಉಪೋದ್ಘಾತದಲ್ಲಿಯೂ ಕವಿಚರಿತೆ ೧ ನೇ ಸಂಪುಟದ ೧ ನೇ ಮುದ್ರಣದ ೪೬ ನೇ ಪುಟದಲ್ಲಿಯೂ ಬರೆದರು. ಹೀಗೆ ಈ ಗ್ರಂಥಗಳಲ್ಲಿ ಕವಿಚರಿತಕಾರರು ಪ್ರಕಾಶಪಡಿಸಿದ—"(೧) 'ಒಂದನೆಯ' ನಾಗ ವರ್ಮನು ಚಾಮುಂಡರಾಯನ ತಮ್ಮನು (೨) ಇವನನ್ನು ಇವನ ಅಣ್ಣನಾದ ಚಾಮುಂಡರಾಯನು ಕೊಂದನು" ಎಂಬ ಎರಡು ಅಭಿಪ್ರಾಯಗಳಲ್ಲಿ ಎರಡನೆಯ ಅಭಿಪ್ರಾಯವು ತಪ್ಪಾದುದೆಂದು ಮ|| ಪಾಠಕರು ಬಾಂಬೆ ಬ್ರ್ಯಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನ ೨೨ ನೇ ಸಂಚಿಕೆಯ ೮೩ ನೇ ಪುಟದಲ್ಲಿ ಬರೆದ ೧ ನೇ ಟಿಪ್ಪಣಿಯಿಂದ ಸ್ಪಷ್ಟವಾಗುವುದು. ಈ ಟಿಪ್ಪಣಿಯಲ್ಲಿ ಅವರು ಚಾಮುಂಡ ರಾಯನು ತನ್ನ ತಮ್ಮನನ್ನು ಕೊಂದನೆಂದು ಅವನ ಮೇಲೆ ಭ್ರಾತೃಹತ್ಯಾದೋಷ ವನ್ನು ಮ|| ಆರ್. ನರಸಿಂಹಾಚಾರ್ಯರು ಆರೋಪಿಸಿರುವುದು ತಪ್ಪೆಂದೂ, 'ಚಲದಂಕಗಂಗ' ಎಂಬುದು ಚಾಮುಂಡರಾಯನ ಬಿರುದಲ್ಲವೆಂದೂ, ಅದು ಚಾಮುಂಡರಾಯನ ತಮ್ಮನಾದ ನಾಗವರ್ಮನನ್ನು ಕೊಂದ ಮುದುರಾಚಯ

ನೆಂಬ ಗಂಗರಾಜನ ಹೆಸರೆಂದೂ, ಈ ಮುದುರಾಚಯ್ಯನನ್ನು ಚಾಮುಂಡರಾಯನು ಕೊಂದುದರಿಂದ 'ಸಮರ ಪರಶುರಾಮಮಂ' ಎಂಬ ಬಿರುದು * ಅವನಿಗೆ ಬಂದಿತೆಂದೂ 'ತನ್ನ ತಮ್ಮಂ ನಾಗವರ್ಮ್ಮನಂ' ಎಂಬುದರಿಂದ 'ಸಮರಪರಶುರಾಮನುಂ' ಎಂಬವರೆಗೆ ಒಂದು ವಾಕ್ಯವೆಂದೂ, ವ್ಯಕ್ತಪಡಿಸಿರುವರು. ಇದೇ ಸಮಂಜಸವಾದ ಅಭಿಪ್ರಾಯವಾದುದರಿಂದ ಕವಿಚರಿತಕಾರರು ಕವಿಚರಿತೆ I, ೩೭೫ ರಲ್ಲಿಯೂ, ಮತ್ತು ಕವಿಚರಿತೆ ಒಂದನೇ ಸಂಪುಟದ ಎರಡನೇ ಮುದ್ರಣದಲ್ಲಿಯೂ (ಪುಟ ೪೭) ತಮ್ಮ ಅಭಿಪ್ರಾಯವನ್ನು ಇದಕ್ಕನುಸಾರವಾಗಿ ಮಾರ್ಪಡಿಸಿಕೊಂಡಿರುವರು.

'ಚಾಮುಂಡರಾಯನು ತನ್ನ ತಮ್ಮನಾದ ನಾಗವರ್ಮನನ್ನು ಕೊಂದನು' ಎಂಬ ಅಭಿಪ್ರಾಯವನ್ನು ಹೀಗೆ ಕವಿಚರಿತಕಾರರು ಈಗ ನಿರಾಕರಿಸಿರುವರಾದಾಗ್ಯೂ ಇದರ ಸಹಕೃತವಾದ "'ಒಂದನೆಯ' ನಾಗವರ್ಮನು ಚಾಮುಂಡರಾಯನ ತಮ್ಮನು" ಎಂಬ ಅಭಿಪ್ರಾಯವನ್ನಾದರೆ ಅವರು ಇನ್ನೂ ತಮ್ಮ ಹೃದಯದಿಂದ ದೂರಮಾಡಿರುವಂತೆ † ಕಾಣುವುದಿಲ್ಲ. ವಸ್ತುತಃ ಈ ಅಭಿಪ್ರಾಯ ತಪ್ಪೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ವೆಣ್ಣಮಯ್ಯನಿಗೆ ತಾನು ಜ್ಯೇಷ್ಠಪುತ್ರನೆಂದು

---

* ಚಾಮುಂಡರಾಯನಿಂದ ಪೋಷಿತನಾಗಿದ್ದ ಕವಿರನ್ನನು ತನ್ನ ಮಗನಿಗೆ 'ರಾಯ' ಎಂಬ ಹೆಸರನ್ನು ಇಟ್ಟು, ಈ ಮಗನ ಹೆಸರಿನಲ್ಲಿ 'ಪರಶುರಾಮಚರಿತ' ಎಂಬ ಗ್ರಂಥವನ್ನು ತಾನು ಬರೆದಂತೆ ಅಜಿತಪುರಾಣದಲ್ಲಿ ಹೇಳಿಕೊಂಡಿದ್ದಾನೆ. 'ರಾಯ' ಎಂಬ ಹೆಸರು 'ಚಾಮುಂಡರಾಯ' ಎಂಬ ಹೆಸರಿನ ಸಂಕ್ಷಿಪ್ತರೂಪವೆಂಬುದಂತೂ ಸ್ಪಷ್ಟವಾಗಿಯೇ ಇರುವುದು. ಹೀಗೆಯೇ ಈ ಪರಶುರಾಮಚರಿತವೂ 'ಸಮರಪರಶುರಾಮಂ' ಎಂಬ ಚಾಮುಂಡರಾಯನ ಈ ಬಿರುದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕವಿಯಿಂದ ಬರೆಯಲ್ಪಟ್ಟಿತೆಂದು ನಮಗೆ ತೋರುವುದು. ತನಗೆ ಆಶ್ರಯದಾತೃವಾದ ಚಾಲುಕ್ಯಚಕ್ರವರ್ತಿ ಸತ್ಯಾಶ್ರಯ ಇಱಿವಬೆಡಂಗನ ಬಿರುದುಗಳಲ್ಲಿ ಒಂದಾದ 'ಸಾಹಸಭೀಮ' ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಕವಿಯು ತಾನು ಬರೆದ ಸಾಹಸಭೀಮವಿಜಯದಲ್ಲಿ ಸಾಹಸಭೀಮನ ಪರಾಕ್ರಮಗಳನ್ನೂ ಮತ್ತು ವಾಯುಪುತ್ರನಾದ ಭೀಮನ ಪರಾಕ್ರಮಗಳನ್ನೂ ವರ್ಣಿಸಿರುವಂತೆಯೇ, ಈ ಪರಶುರಾಮಚರಿತದಲ್ಲಿಯೂ ಅವನು ಈ ಸಮರಪರಶುರಾಮನ (ಎಂದರೆ ಚಾಮುಂಡರಾಯನ) ಪರಾಕ್ರಮಗಳನ್ನೂ ಜಮದಗ್ನಿಪುತ್ರನಾದ ಪರಶುರಾಮನ ಪರಾಕ್ರಮಗಳನ್ನೂ ವರ್ಣಿಸಿರುವನೆಂದು ತೋರುತ್ತದೆ.

† ಈ ಅಂಶವು—'ಚಾವುಂಡರಾಯಪುರಾಣದಿಂದ ಚಾವುಂಡರಾಯನಿಗೆ ನಾಗವರ್ಮನೆಂಬ ಒಬ್ಬ ತಮ್ಮನಿದ್ದಂತೆ ತಿಳಿಯುತ್ತದೆ. ಮೇಲೆ ಬರೆದಿರುವ "ಅರಸಂ ರಕ್ಕಸಗಂಗಂ" ಎಂಬ ಪದ್ಯದಲ್ಲಿ ತನ್ನ ಪೋಷಕನು "ಅಣ್ಣ" ನೆಂಬುದರಿಂದ ಇವನೇ ಅವನ ತಮ್ಮನಾಗಿರಬಹುದೋ ಎಂಬ ಸಂದೇಹ ಹುಟ್ಟುತ್ತದೆ. ಆದರೆ ತಾನು ವೆಣ್ಣಮಯ್ಯನ ಜ್ಯೇಷ್ಠಪುತ್ರನೆಂದು ಹೇಳುವುದರಿಂದ ಇವನು ತದ್ಭಿನ್ನನೆಂದು ತೋರುತ್ತದೆ'—ಎಂಬ ಕವಿಚರಿತಕಾರರ ಮೇಲೆ ಹೇಳಿದ ವಾಕ್ಯಗಳಿಂದ ಸ್ಪಷ್ಟವಾಗುವುದು.

ಛಂದೋಂಬುಧಿಯಲ್ಲಿ ಹೇಳಿಕೊಂಡಿರುವ ನಾಗವರ್ಮನು ಚಾಮುಂಡರಾಯನಿಗಾಗಲಿ ಅಥವಾ ಇತರ ಯಾವ ಮನುಷ್ಯನಿಗಾಗಲಿ ವಾಸ್ತವವಾಗಿ ತಮ್ಮನಾಗಿರಲಾರನೆಂಬುದು ಸ್ಪಷ್ಟವಾಗಿರುವುದು. ಹೀಗೆಯೇ ಚಾಮುಂಡರಾಯಪುರಾಣವು ಪರಿಸಮಾಪ್ತವಾಗುವುದಕ್ಕಿಂತ ಪೂರ್ವದಲ್ಲಿಯೇ ಎಂದರೆ, ಕ್ರಿ. ಶ. ೯೭೭ * ಕ್ಕೆ ಪೂರ್ವದಲ್ಲಿಯೇ ಮುದುರಾಚಯನಿಂದ ಕೊಲ್ಲಲ್ಪಟ್ಟು ಪರಲೋಕಗತನಾಗಿದ್ದ ಚಾಮುಂಡರಾಯನ ತಮ್ಮನಾದ ನಾಗವರ್ಮನು ಕವಿಚರಿತಕಾರರು ಹೇಳುವಂತೆ ಕ್ರಿ. ಶ. ೯೯೭ ಅಥವಾ ೧೦೦೪ ರಲ್ಲಿ ರಾಜ್ಯವನ್ನಾಳಲು ಉಪಕ್ರಮಿಸಿದ ಭೋಜರಾಜನ ಹೆಸರನ್ನು ಕಾದಂಬರಿಯಲ್ಲಿ ಉಲ್ಲೇಖನಮಾಡಿರಲಾರನೆಂಬುದೂ ಸ್ಪಷ್ಟವಾಗಿಯೇ ಇರುವುದು.

---

* ಈ ಪುರಾಣವು ಕ್ರಿ.ಶ. ೯೭೮ ರಲ್ಲಿ ಹುಟ್ಟಿತೆಂಬ ಕವಿಚರಿತಕಾರರ ಅಭಿಪ್ರಾಯವು (I, ೩೯) ತಪ್ಪಾದುದು. ಚಾವುಂಡರಾಯಪುರಾಣದ ಕೊನೆಯಲ್ಲಿರುವ—

ನವಶತಸಂಖ್ಯೆಯಾಗೆ ಶಕಕಾಲಸಮಂ ನೆಗಳ್ದೀಶ್ವರಾಬ್ದಮು |
ತ್ಸವಕರಮಾಗೆ ಫಾಲ್ಗುಣಸಿತಾಷ್ಟಮಿ ರೋಹಿಣಿ ಸೋಮವಾರಮೆಂ ||
ಬಿವು ಶುಭದಂಗಳಾಗೆ ಪರಮೋತ್ಸವದಿಂ ಗುಣರತ್ನಭೂಷಣಂ |
ಕವಿಜನಶೇಖರಂ ಬರೆದು ಪುಸ್ತಕಕೇಱಿಸಿದಂ ಪುರಾಣಮಂ ||

ಎಂಬ ಪದ್ಯದಿಂದ ಈ ಪುರಾಣವು ಶಕ ೯೦೦ ನೆಯ ಈಶ್ವರಸಂವತ್ಸರದ ಫಾಲ್ಗುಣಶುದ್ಧ ಅಷ್ಟಮಿ ರೋಹಿಣೀನಕ್ಷತ್ರಯುಕ್ತವಾದ ಸೋಮವಾರದಲ್ಲಿ ಪರಿಸಮಾಪ್ತವಾಯಿತೆಂದು ತಿಳಿದುಬರುವುದು. ಶಕ ಒಂಭೈನೂರನೆಯ ಈಶ್ವರಸಂವತ್ಸರವೆಂದರೆ ದಾಕ್ಷಿಣಾತ್ಯ ಸಂಪ್ರದಾಯಕ್ಕನುಸಾರವಾಗಿ ಕ್ರಿ. ಶ. ೯೭೭ ನೇ ವರ್ಷವು. ಈ ವರ್ಷದಲ್ಲಿ ಫಾಲ್ಗುಣಶುದ್ಧ ಅಷ್ಟಮಿಯ ದಿವಸ ರೋಹಿಣೀನಕ್ಷತ್ರವಿರಲಿಲ್ಲ. ಔತ್ತರಸಂಪ್ರದಾಯಾನುಸಾರವಾಗಿ ಶಕ ೯೦೦ ನೇ ಈಶ್ವರಸಂವತ್ಸರವೆಂದರೆ ಕ್ರಿ. ಶ. ೯೭೬ ನೇ ವರ್ಷವಾಗುವುದು. ಈ ಈಶ್ವರಸಂವತ್ಸರದಲ್ಲಿ ಫಾಲ್ಗುಣಶುದ್ಧ ಅಷ್ಟಮಿಯು ಕ್ರಿ. ಶ. ೯೭೭ನೇ ವರ್ಷದ ಜನವರಿ ೨೭ನೇ ತಾರೀಖು ಸೋಮವಾರದಂದು ಲಂಕಾಸೂರ್ಯೋದಯಾತ್ಪರ ೩೧ ಘಳಿಗೆ ೩ ವಿಘಳಿಗೆಗೆ (ಸೂರ್ಯಸಿದ್ಧಾಂತ) ಅಥವಾ ೨೬ ಘಳಿಗೆ ೨೫ ವಿಘಳಿಗೆಗೆ (ಬ್ರಹ್ಮಸಿದ್ಧಾಂತ, ಆರ್ಯಸಿದ್ಧಾಂತ) ಹುಟ್ಟಿತು. ರೋಹಿಣೀನಕ್ಷತ್ರವೂ ಆ ದಿವಸ ಗರ್ಗಾಚಾರ್ಯನ ವಿಷಮಭೋಗಮತಕ್ಕನುಸಾರವಾಗಿ ಲಂಕೋದಯಾತ್ಪರ ೩೯ ಘಳಿಗೆ, ೪೯ ವಿಘಳಿಗೆಗೂ (ಸೂರ್ಯಸಿದ್ಧಾಂತ) ಅಥವಾ ೩೨ ಘಳಿಗೆ ೪೫ ವಿಘಳಿಗೆಗೂ (ಬ್ರಹ್ಮಸಿದ್ಧಾಂತ, ಆರ್ಯಸಿದ್ಧಾಂತ) ಬ್ರಹ್ಮಗುಪ್ತನ ವಿಷಮಭೋಗಮತಕ್ಕನುಸಾರವಾಗಿ ಲಂಕೋದಯಾತ್ಪರ ೩೮ ಘಳಿಗೆ ೧೨ ವಿಘಳಿಗೆಗೂ (ಸೂರ್ಯಸಿದ್ಧಾಂತ) ಅಥವಾ ೩೧ ಘಳಿಗೆ ೮ ವಿಘಳಿಗೆಗೂ (ಬ್ರಹ್ಮಸಿದ್ಧಾಂತ, ಆರ್ಯಸಿದ್ಧಾಂತ) ಪ್ರಾರಂಭವಾಯಿತು. ಆದ್ದರಿಂದ ಚಾಮುಂಡರಾಯನಿಂದ ನಿರ್ದಿಷ್ಟವಾದ ದಿವಸವು ಈ ಸೋಮವಾರವೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಸೂರ್ಯೋದಯವನ್ನು ವ್ಯಾಪಿಸಿಕೊಂಡಿದ್ದ ತಿಥಿ ನಕ್ಷತ್ರಗಳನ್ನು ಬಿಟ್ಟು ಆ ದಿವಸ ಬಹುಕಾಲದ ಮೇಲೆ ಹುಟ್ಟಿದ ತಿಥಿನಕ್ಷತ್ರಗಳನ್ನು ಚಾಮುಂಡರಾಯನು ಏಕೆ ಹೇಳಿದನೋ ನಮಗೆ ತಿಳಿಯದು. ಇದೇ ವಿಧವಾದ ಇತರ ತಿಥಿ ನಕ್ಷತ್ರಕೀರ್ತನಗಳು ಮೇಲೆ ಹೇಳಲ್ಪಟ್ಟ ನನ್ನ ಪುಸ್ತಕದ ೬೯—೭೦ ನೇ ಪುಟಗಳಲ್ಲಿ ಉದಾಹರಿಸಲ್ಪಟ್ಟಿರುವುವು.

೨. ಜನ್ನನು ಅನಂತನಾಥಪುರಾಣದಲ್ಲಿ ಹೇಳಿರುವ—‘ ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮ್ಮನಿದಾನೀಂತನಶರ್ವವರ್ಮನೆ ಗಡಂ..’ ಎಂದು ಮೊದಲಾಗುವ ಪದ್ಯಕ್ಕೆ ಕವಿಚರಿತಕಾರರು ‘ ನಾಗವರ್ಮನು ಜನ್ನನಿಗೆ ಉಪಾಧ್ಯಾಯನಾಗಿದ್ದನು ’ ಎಂದು ಅರ್ಥಮಾಡಿರುವುದೂ, ನಾಗವರ್ಮನು ೧೧೩೯ ರಿಂದ ೧೧೪೯ ರ ವರೆಗೆ ಆಳಿದ ಚಾಳುಕ್ಯಚಕ್ರವರ್ತಿ ಪೆರ್ಮಜಗದೇಕಮಲ್ಲನ ಆಸ್ಥಾನದಲ್ಲಿ ಕಟಕೋಪಾಧ್ಯಾಯನಾಗಿದ್ದನೆಂದು ಹೇಳಿರುವುದೂ ತಪ್ಪೆಂದು ನಾವು ಮೇಲೆ (ಪುಟ ೧೩೦) ನಿರೂಪಿಸಿರುವೆವು. ಆದ್ದರಿಂದ ಕಾವ್ಯಾವಲೋಕನ ಕರ್ತೃವಾದ ನಾಗವರ್ಮನು ಕ್ರಿ. ಶ. ಸುಮಾರು ೧೧೪೫ ರಲ್ಲಿ ಇದ್ದಿರಬೇಕೆಂಬ ಕವಿಚರಿತಕಾರರ ಅಭಿಪ್ರಾಯಕ್ಕೆ ಈ ಪದ್ಯವು ಸಾಧಕವಾಗುವುದಿಲ್ಲ.

೩. ಛಂದೋಂಬುಧಿಯಲ್ಲಿ ನಾಗವರ್ಮನು ತಾನು ವೆಣ್ಣಮಯ್ಯನ ಜ್ಯೇಷ್ಠಪುತ್ರನೆಂದೂ ದಾಮಮಯ್ಯನ ಪೌತ್ರನೆಂದೂ ಹೇಳಿಕೊಂಡಿರುವನಷ್ಟೆ. ದಾಮಮಯ್ಯ ಎಂಬ ಇವನ ಪಿತಾಮಹನ ಹೆಸರಿನಲ್ಲಿ ‘ ಮಯ್ಯ ’ ಎಂಬುದು ಒಂದು ಪ್ರತ್ಯಯವಾಗಿಯೂ *‘ ದಾಮ ’ ಎಂಬುದು ಮಾತ್ರ ಹೆಸರಾಗಿಯೂ ಇರುವುದು. ಈ ಹೆಸರಾದರೆ ದಾಮೋದರ ಎಂಬ ಹೆಸರಿನ ಸಂಕ್ಷಿಪ್ತರೂಪವೇ ಹೊರತು ಬೇರೆ ಏನೂ ಅಲ್ಲ. ‘ ವಿನಾಪಿ ಪ್ರತ್ಯಯಂ ಪೂರ್ವೋತ್ತರಪದಯೋ ರ್ವಾ ಲೋಪೋ ವಾಚ್ಯಃ ’ ಎಂದು ಕಾತ್ಯಾಯನರು ಪಾ. ೫-೩-೮೩ ರ ಮೇಲೆ ಹೇಳಿರುವ ವಾರ್ತಿಕಕ್ಕನುಸಾರವಾಗಿ ‘ ದೇವದತ್ತಃ ’ ಎಂಬ ಹೆಸರು ‘ ದತ್ತಃ ’ ಎಂದೂ,

* ಈ ಪ್ರತ್ಯಯವನ್ನು ಪುಂವಾಚಕಸಂಜ್ಞಾಪದಗಳಿಗೆ ಹಚ್ಚಿರುವುದಕ್ಕೆ ಕರ್ಣಾಟಕದೇಶದ ಶಾಸನಗಳಲ್ಲಿ ಅನೇಕ ಉದಾಹರಣೆಗಳು ದೊರೆಯುವುವು. ದಾವಣಗೆರೆ ೧೪೯ ನೇ ಶಾಸನದಲ್ಲಿ ಶ್ರೀಧರ-ಶ್ರೀಧರಮಯ್ಯ ಎಂಬ ಹೆಸರೂ ತರೀಕೆರೆ ೩೮ ನೇ ಶಾಸನದಲ್ಲಿ ಎರೆಯಂಗ-ಎರೆಯಂಗಮಯ್ಯ ಎಂಬ ಹೆಸರೂ ಶಿಕಾರಿಪುರದ ೯೨ ನೇ ಶಾಸನದಲ್ಲಿ ಕೇಶವ-ಕೇಶಿಮಯ್ಯ ಎಂಬ ಹೆಸರೂ ಉಪಯೋಗಿಸಲ್ಪಟ್ಟಿರುವುದು. ಹೀಗೆಯೇ ಭರತ, ಚಾವುಂಡರಾಯ, ಕಾಳಿದಾಸ, ಗೋವಿಂದ, ರುದ್ರ, ಚಾವು, ನಾಕ, ಬೂಚ ಎಂಬ ಹೆಸರುಗಳ ಕೊನೆಯಲ್ಲಿ ಈ ಪ್ರತ್ಯಯವನ್ನು ಸೇರಿಸುವುದರಿಂದ ಆಗುವ ಭರತಮಯ್ಯ-ಭರತಿಮಯ್ಯ (ಶ್ರ.ಬೆ. ೨೬೭,೬೪ ನೇ ಶಾಸನಗಳು) ಚಾವುಂಡಮಯ್ಯ (ಸೊರಬ ೧೭೦ ನೇ ಶಾಸನ) ಕಾಳಮಯ್ಯ-ಕಾಳಿಮಯ್ಯ (ಹಾಸನದ ೫೩,೭೫ ನೇ ಶಾಸನಗಳು), ಗೋವಿಂದಮಯ್ಯ (ಶಿಕಾರಿಪುರದ ೧೩೮ ನೇ ಶಾಸನ), ರುದ್ರಿಮಯ್ಯ (ಚನ್ನರಾಯಪಟ್ಟಣದ ೧೭೯ ನೇ ಶಾಸನ), ಚಾವಿಮಯ್ಯ (ಹಾಸನದ ೫೭ ನೆಯ ಶಾಸನ), ನಾಕಿಮಯ್ಯ (ಹಾಸನದ ೭೬ ನೇ ಶಾಸನ), ಬೂಚಿಮಯ್ಯ, (ಹಾಸನದ ೭೧ ನೇ ಶಾಸನ), ಎಂಬ ಹೆಸರುಗಳು ಮೇಲೆ ಹೇಳಿದ ಶಾಸನಗಳಲ್ಲಿ ಉಪಯೋಗಿಸಲ್ಪಟ್ಟಿರುವುವು. ಹೀಗೆಯೇ ಬಿಟ್ಟಿಮಯ್ಯ, ಹುಣಿಸಮಯ್ಯ, ಸೋವಿಮಯ್ಯ ಎಂಬ ಇದೇ ವಿಧವಾದ ಹೆಸರುಗಳೂ ಅನೇಕ ಶಾಸನಗಳಲ್ಲಿ ಹೇಳಲ್ಪಟ್ಟಿರುವುವು.

'ದೇವಃ' ಎಂದೂ, 'ಸತ್ಯಭಾಮಾ' ಎಂಬ ಹೆಸರು 'ಸತ್ಯಾ' ಎಂದೂ 'ಭಾಮಾ' ಎಂದೂ ಸಂಸ್ಕೃತಭಾಷೆಯಲ್ಲಿ * ಆಗುವಂತೆಯೇ (ಸಿದ್ಧಾಂತಕೌಮುದಿ '§೨೦೩೫ ನ್ನು ನೋಡಿ) 'ದಾಮೋದರ' ಎಂಬ ಹೆಸರೂ ಈ ವಾರ್ತಿಕಕ್ಕನುಸಾರವಾಗಿ 'ದಾಮ' ಎಂದು ಆಗುವುದು. ಆದ್ದರಿಂದಲೇ ಚೋಳರಾಜನ ಕೆಳಗೆ ತಲಕಾಡನ್ನು ಆಳುತ್ತಿದ್ದು ವಿಷ್ಣುವರ್ಧನ ಹೊಯ್ಸಳನ ಸೇನಾಪತಿಯಾದ ಗಂಗರಾಜನಿಂದ ಸೋಲಿಸಲ್ಪಟ್ಟು ಅಲ್ಲಿಂದ ಓಡಿಹೋದ ತಿಗುಳ-ದಾಮೋದರ ಅಥವಾ ಸಾಮಂತ-ದಾಮೋದರನು ಶ್ರವಣಬೆಳ್ಗೊಳದ ೨೪೦ (೯೦), ೨೫೧, ೩೯೭ ನೆಯ ಶಾಸನಗಳಲ್ಲಿ 'ದಾಮ' ಎಂದೂ 'ದಾಮೋದರ' ಎಂದೂ ವ್ಯವಹೃತನಾಗಿರುವನು (ಈ ವಿಷಯದಲ್ಲಿ ಶ್ರವಣಬೆಳ್ಗೊಳದ ಶಾಸನಗಳ ೨ ನೆಯ ಮುದ್ರಣದಲ್ಲಿರುವ ನಾಮಾನುಕ್ರಮಣಿಯನ್ನು ನೋಡಿ). ಹೀಗೆಯೇ ನಂಬ್ಯಕ್ಕ-ಮಣವಾಳ ಮತ್ತು ಔಚಲುನಂಗೆಯರ ಮಗನಾದ ದಾಮೋದರಶೆಟ್ಟಿಯ ಹೆಸರೂ ಅರಸೀಕೆರೆ ೮೨ ನೆಯ ಶಾಸನದಲ್ಲಿ 'ದಾಮ' ಎಂದೂ (೭೫, ೭೬, ೭೮ ನೆಯ ಪಂಕ್ತಿಗಳು) 'ದಾಮೋದರಶೆಟ್ಟಿ' ಯೆಂದೂ (೭೯, ೮೦ ನೆಯ ಪಂಕ್ತಿಗಳು; ಮತ್ತು ಅರಸೀಕೆರೆ ೧೦೮ ನೆಯ ಶಾಸನ) ಎರಡು ವಿಧವಾಗಿಯೂ ಹೇಳಲ್ಪಟ್ಟಿರುವುದು.

---

* ಹೀಗೆಯೇ 'ಚಾಮುಂಡರಾಯ' ಎಂಬ ಹೆಸರು 'ಚಾಮುಂಡ' ಎಂದೂ, 'ರಾಯ' ಎಂದೂ ಆಗುವುದು; 'ಕಾಳಿದಾಸ' ಎಂಬ ಹೆಸರು 'ಕಾಳಿ' ಎಂದು ಆಗುವುದು; ಜಯಸಿಂಹ ಎಂಬ ಹೆಸರು 'ಸಿಂಹ' ಎಂದು ಆಗುವುದು (ಮೇಲೆ ೨೦, ೩೧ ನೇ ಪುಟಗಳನ್ನು ನಾವು ಅನುವದಿಸಿರುವ ಪದ್ಯಗಳನ್ನು ನೋಡಿ); 'ವಿಷ್ಣುವರ್ಧನ' ಎಂಬ ಹೆಸರು 'ವಿಷ್ಣು' ಎಂದು ಆಗುವುದು. 'ಬಿಟ್ಟಿ' 'ಬಿಟ್ಟ' 'ವಿಟ್ಟು' ಎಂಬವುಗಳು ಈ 'ವಿಷ್ಣು' ಎಂಬ ಹೆಸರಿನ ಪ್ರಾಕೃತ ರೂಪಗಳು. ಇವುಗಳಿಗೆ 'ಗ' 'ವ್ಯೆಯ' 'ಲ' ಎಂಬ ಪ್ರತ್ಯಯಗಳನ್ನು ಸೇರಿಸಿದರೆ, ಬಿಟ್ಟಿಗ, ಬಿಟ್ಟಿವ್ಯೆಯ ವಿಟ್ಠಲ ಎಂಬ ರೂಪಗಳಾಗುವುವು.

ಹೀಗೆಯೇ 'ಕೇಶವ' 'ಮಾಧವ' ಎಂಬ ಹೆಸರುಗಳು 'ಕೇಶಿ' 'ಮಾದಿ' ಎಂದು ಆಗುವುದರಿಂದ 'ಕೇಶಣ್ಣ' 'ಕೇಶಿಮಯ್ಯ' 'ಕೇಶಿರಾಜ' ಎಂಬವುಗಳು 'ಕೇಶವ' ಎಂಬ ಹೆಸರಿನ ರೂಪಾಂತರಗಳೆಂದೂ, 'ಮಾದಿರಾಜ', 'ಮಾದರಸ', 'ಮಾದಣ್ಣ' ಎಂಬವುಗಳು 'ಮಾಧವ' ಎಂಬ ಹೆಸರಿನ ರೂಪಾಂತರಗಳೆಂದೂ ನಾವು ತಿಳಿಯಬೇಕು. ಆದ್ದರಿಂದ ಕವಿಚರಿತಕಾರರು (I. ೩೩೦) ನವಿಲ್ಗುಂದದ ಮಾದಿರಾಜನ ಚರಿತದಲ್ಲಿ ಈ ಮಾದಿರಾಜನಿಗೆ 'ಬುಧಮಾಧವ ಎಂಬ ಬಿರುದು ಇದ್ದಂತೆ ತೋರುತ್ತದೆ' ಎಂದು ಬರೆದಿರುವುದು ಸಂಗತವಾಗಿದೆಯೆಂದು ಹೀಗೆಯೇ ಹೇಳಲಾಗುವುದಿಲ್ಲ. 'ನಾಗವರ್ಮ' ಎಂಬ ಹೆಸರು 'ನಾಗ' ಎಂದು ಆಗಿ ಈ ಹೆಸರು 'ನಾಕಿ' 'ನಾಕಿಗ' 'ನಾಕಿಮಯ್ಯ' ಎಂದು ಆಗುವುದು. 'ನಾಗರುದ್ರ' ಎಂಬ ಹೆಸರೂ ಹೀಗೆಯೇ 'ನಾಗ' ಎಂದೂ 'ರುದ್ರ' ಎಂದೂ ಆಗಿ ಈ ಹೆಸರುಗಳಿಂದ 'ನಾಕಿ', 'ನಾಕಿಮಯ್ಯ', 'ರುದ್ದಿಮಯ್ಯ' ಎಂಬ ಹೆಸರುಗಳು ನಿಷ್ಪನ್ನವಾಗುವುವು.

ನಾಗವರ್ಮನ ತಂದೆಯ ತಂದೆಯಾದ ದಾಮಮಯ್ಯನೇ ಕಾವ್ಯಾವಲೋಕನದ ಅಂತ್ಯದಲ್ಲಿ ೯೬೧ ನೇ ಪದ್ಯದಲ್ಲಿರುವ 'ಪೇೞ್ದಿಂ ದಾಮೋದರತನಯನೀವಚೋಲಂಕೃತಿಯಂ' ಎಂಬ ವಾಕ್ಯದಲ್ಲಿಯೂ, ವಸ್ತುಕೋಶದ ಅಂತ್ಯದಲ್ಲಿರುವ 'ಪೇೞ್ದಿಂ ದಾಮೋದರಪ್ರಿಯಸುತಂ ಕವಿಕರ್ಣಪೂರಂ' ಎಂಬ ವಾಕ್ಯದಲ್ಲಿಯೂ 'ದಾಮೋದರ' ಎಂಬ ಪೂರ್ಣವಾದ ಹೆಸರಿನಿಂದ ವ್ಯವಹೃತನಾಗಿರುವನು. ಆದ್ದರಿಂದ ನಾವು ಈ ವಾಕ್ಯಗಳಲ್ಲಿರುವ 'ಸುತ', 'ತನಯ' ಎಂಬ ಪದಗಳಿಗೆ 'ಮಗ' ಎಂದು ಅರ್ಥಮಾಡದೆ, 'ಮಗನ ಮಗ' ಎಂದು ಅರ್ಥಮಾಡಬೇಕು. ಹೀಗೆ 'ಪುತ್ರ' 'ಸುತ', 'ತನಯ', 'ಆತ್ಮಜ' ಮೊದಲಾದ ಪದಗಳಿಗೆ 'ಮಗನ ಮಗ' ಎಂಬ ಅರ್ಥವೂ ಉಂಟೆಂಬ ಅಂಶವು ಸಂಸ್ಕೃತ ಪುರಾಣಾದಿಗಳನ್ನೂ ಧರ್ಮಶಾಸ್ತ್ರದಲ್ಲಿನ ದಾಯಭಾಗ ಪ್ರಕರಣಗಳನ್ನೂ ಕರ್ಣಾಟಕ ದೇಶದ ಶಾಸನಗಳನ್ನೂ ಓದಿರುವವರೆಲ್ಲರಿಗೂ ತಿಳಿದ ವಿಷಯವೇ ಆಗಿರುವುದು. ಅಪುತ್ರನಾಗಿ ಮೃತನಾದವನ ಧನವು ಇಂಥವರಿಗೆ ಕ್ರಮವಾಗಿ ಹೋಗುವುದೆಂದು ವಿಧಿಸುವಂಥ—

> ಪತ್ನೀ ದುಹಿತರಶ್ಚೈವ ಪಿತರೌ ಭ್ರಾತರಸ್ತಥಾ ।
> ತತ್ಸುತಾ ಗೋತ್ರಜಾ ಬಂಧುಶಿಷ್ಯಸಬ್ರಹ್ಮಚಾರಿಣಃ ॥
> ಏಷಾಮಭಾವೇ ಪೂರ್ವಸ್ಯ ಧನಭಾಗುತ್ತರೋತ್ತರಂ ।
> ಸ್ವರ್ಯಾತಸ್ಯ ಹ್ಯಪುತ್ರಸ್ಯ ಸರ್ವವರ್ಣೇಷ್ವಯಂ ವಿಧಿಃ ॥

ಎಂಬ ಯಾಜ್ಞವಲ್ಕ್ಯರ ವಾಕ್ಯದಲ್ಲಿರುವ (II, ೧೩೫, ೧೩೬) 'ಪುತ್ರ' ಎಂಬ ಪದಕ್ಕೆ 'ಮಗ; ಮಗನಮಗ; ಮಗನಮಗನ ಮಗ' ಎಂದು ಅರ್ಥವೆಂದು* ವಿಜ್ಞಾನೇಶ್ವರನೇ ಮೊದಲಾದ ವ್ಯಾಖ್ಯಾನಕಾರರೆಲ್ಲರೂ ಹೇಳಿರುವರು.† ಹೀಗೆಯೇ 'ಪುತ್ರ' ಎಂಬ ಪದಕ್ಕೆ ಮೇಲೆ ಹೇಳಿದಂತೆ ಅರ್ಥಮಾಡಬೇಕೆಂದು ಜೀಮೂತವಾಹನನೂ ಹೇಳಿ ಇದಕ್ಕೆ ಆಧಾರವಾಗಿ ಮನು, ವಿಷ್ಣು, ಹಾರೀತ, ಮತ್ತು ಶಂಖಲಿಖಿತರ ಸ್ಮೃತಿಗಳಿಂದ ವಾಕ್ಯಗಳನ್ನು ಉದ್ಧರಿಸಿ ಬರೆದಿರುವನು.‡ ಪುರಾಣಗಳಲ್ಲಿಯೂ

---

* ೧೩೭ ನೆಯ ಶ್ಲೋಕದ ವ್ಯಾಖ್ಯಾನದ ಉಪಕ್ರಮದಲ್ಲಿದ್ದು ಹಿಂದಿನ ಶ್ಲೋಕಾರ್ಥವನ್ನು ಸಂಗ್ರಹದಿಂದ ನಿರೂಪಿಸುವ 'ಪುತ್ರಾಃ ಪೌತ್ರಾಶ್ಚ ದಾಯಂ ಗೃಹ್ಣಂತಿ ತದಭಾವೇ ಪತ್ನ್ಯಾದಯ ಇತ್ಯುಕ್ತಂ' ಎಂಬ ವಾಕ್ಯವನ್ನು ನೋಡಿ. ಮಾಂಡಲಿಕರ 'ಹಿಂದೂಲಾ' (Mandlik: Hindu Law) ಎಂಬ ಗ್ರಂಥದ ೨೨೨ ನೇ ಪುಟವನ್ನು ನೋಡಿ.

† ಮೇಲೆ ಹೇಳಿದ ಮಾಂಡಲಿಕರ ಗ್ರಂಥದ ೨೨೪ ನೇ ಪುಟವನ್ನು ನೋಡಿ.

‡ ಜೀಮೂತವಾಹನನ ದಾಯಭಾಗದಲ್ಲಿರುವ 'ಅತ ಏವ ಪುತ್ರಪದಂ ಪ್ರಪೌತ್ರಪರ್ಯಂತಪರಂ' ಎಂಬ ವಾಕ್ಯವನ್ನೂ (ಪುಟ ೧೬೨) ನೋಡಿ. ಈ ಗ್ರಂಥದಲ್ಲಿರುವ 'ಭ್ರಾತೃತನಪ್ತಾಪಿ ಪಿತೃವ್ಯಸ್ಯಬಾಧಕಃ' ಎಂಬ ವಾಕ್ಯದಿಂದ (ಪುಟ ೨೦೮) ಮೇಲೆ ಹೇಳಿದ ಯಾಜ್ಞವಲ್ಕ್ಯ ಸ್ಮೃತಿಶ್ಲೋಕದಲ್ಲಿರುವ 'ತತ್ಸುತಾಃ' ಎಂಬ ಪದಾಂತರ್ಗತವಾದ 'ಸುತ' ಶಬ್ದಕ್ಕೂ ಕೂಡ 'ಮಗ, ಮಗನ ಮಗ' ಎಂದು ಇವನು ಅರ್ಥಮಾಡಿರುವನೆಂದು ಸ್ಪಷ್ಟವಾಗುವುದು.

ಹೀಗೆಯೇ 'ಪುತ್ರ', 'ಸುತ' ಮೊದಲಾದ ಪದಗಳಿಗೆ 'ಮಗನಮಗ' ನೆಂದೂ, ಮಗನ ಮಗನ ವಂಶದವನೆಂದೂ ಅರ್ಥವಿರುವುದೆಂದು ಮ|| ಪಾರ್ಜಿಟರ್‌ರವರು ರಾಯಲ್ ಏಶ್ಯಾಟಿಕ್ ಸೊಸೈಟಿ ಜರ್ನಲಿನ ೧೯೧೦ ನೇ ವರ್ಷದ ಸಂಪುಟದ ೮ನೇ ಪುಟದಲ್ಲಿ ಬರೆದಿರುವ ವಾಕ್ಯಗಳಿಂದ ಸ್ಪಷ್ಟವಾಗುವುದು. ಬಾಣಕವಿಯ ತಂದೆಯಾದ ಚಿತ್ರಭಾನುವು ಕುಬೇರನ ಮಗನಾದ ಪಾಶುಪತನ ಮಗನಾದ ಅರ್ಥಪತಿಗೆ ಮಗನಾಗಿದ್ದನೆಂದು ಹರ್ಷಚರಿತದ ಒಂದನೆಯ ಉಚ್ಛ್ವಾಸದಲ್ಲಿ ಹೇಳಿರುವುದು. ಕಾದಂಬರಿಯ ೧೩ ನೆಯ ಶ್ಲೋಕದಲ್ಲಾದರೆ—'ಅಭೂತ್ಸುಪರ್ಣೋ ವಿನತೋದರಾದಿವ ದ್ವಿಜನ್ಮನಾಮರ್ಥಪತಿಃ ಪತಿಸ್ತತಃ' ಎಂದು ಆ ಕುಬೇರನಿಂದ ಅರ್ಥಪತಿಯು ಉಂಟಾದನು, ಎಂದರೆ ಅರ್ಥಪತಿಯು ಕುಬೇರನ ಆತ್ಮಜನು ಎಂದು ಹೇಳಿರುವುದರಿಂದ 'ತತಃ ಸಮಭವತ್' ಅಥವಾ 'ಆತ್ಮಜ' ಎಂದರೆ 'ಮಗನ ಮಗನು' ಎಂದು ಇಲ್ಲಿ ಅರ್ಥಮಾಡಬೇಕೆಂಬುದು ಸ್ಪಷ್ಟ. ಹೀಗೆಯೇ ಚಿತ್ರದುರ್ಗದ ೭೬ ನೆಯ ಶಾಸನದಲ್ಲಿರುವ 'ಅಮೋಘವರ್ಷನ ಮಗಂ ದೇವಂ' ಎಂಬ ವಾಕ್ಯದಲ್ಲಿ ಕೀರ್ತಿತನಾಗಿರುವ ದೇವನು, ಎಂದರೆ ಅಕಾಲವರ್ಷನೆಂಬ ೨ ನೆಯ ಕೃಷ್ಣ-ಕನ್ನರನು (ಎಪಿ. ಕರ್ಣಾಟಿಕ, ೧೧ ನೇ ಸಂಪುಟದಲ್ಲಿನ ಉಪೋದ್ಘಾತದ ೮ ನೇ ಪುಟವನ್ನು ನೋಡಿ) ಅಮೋಘವರ್ಷನ ಮಗನಾದ ೨ ನೆಯ ಜಗತ್ತುಂಗನ ಮಗನಾದುದರಿಂದ (ಡಾ|| ಫ್ಲೀಟ್‌ರವರ ಪೂರ್ವನಿರ್ದಿಷ್ಟಗ್ರಂಥದ ೩೮೬ ನೇ ಪುಟಕ್ಕೆ ಎದುರಾಗಿರುವ ವಂಶವೃಕ್ಷವನ್ನೂ ४೧४ ನೇ ಪುಟವನ್ನೂ ನೋಡಿ), ಇಲ್ಲಿ ಪ್ರಯುಕ್ತವಾಗಿರುವ 'ಮಗ' ಎಂಬ ಪದಕ್ಕೆ 'ಮಗನ ಮಗ' ಎಂದು ಅರ್ಥವೆಂಬುದೂ ಸ್ಪಷ್ಟವಾಗಿರುವುದು. ಹೀಗೆಯೇ ನಾವು ಮೇಲೆ ೧४४ ನೆಯ ಪುಟದಲ್ಲಿ ಪ್ರಸ್ತಾವಮಾಡಿರುವ ಭಂಡಾರಿ-ಚಾವುಂಡಮಯ್ಯನ ಪಿತಾಮಹನಾದ ಚಾವುಂಡರಾಯನು 'ಭದ್ರರಾಜಾತ್ಮಜಾತಂ' ಎಂದು ಅರಶೀಕೆರೆಯ ೧४೧ ನೆಯ ಶಾಸನದಲ್ಲಿ ಹೇಳಲ್ಪಟ್ಟಿರುವನು. ಆವನು ವಸ್ತುತಃ ಭದ್ರರಾಜ, ಅಥವಾ ಭದ್ರಾದಿತ್ಯದಂಡನಾಯಕನ ಮಗನಾದ ತೈಲದಂಡನಾಯಕನ ಮಗನಾಗಿದ್ದನೆಂದು ಈ ಶಾಸನದಲ್ಲಿಯೇ ಹೇಳಲ್ಪಟ್ಟಿರುವುದರಿಂದ ಮೇಲೆ ಹೇಳಿದ 'ಆತ್ಮಜಾತ' ಎಂಬ ಪದವು 'ಮಗನ ಮಗ' ಎಂಬ ಅರ್ಥದಲ್ಲಿ ಇಲ್ಲಿ ಪ್ರಯುಕ್ತವಾಗಿದೆಯೆಂಬುದು ಸ್ಪಷ್ಟ. ಈ ವಿಧವಾದ ಪ್ರಯೋಗಗಳು ಕರ್ಣಾಟಕ ಶಾಸನಗಳಲ್ಲಿ ಇನ್ನೂ ಅನೇಕ ದೊರೆಯುವುವು.

ಹೀಗೆ 'ಸುತ' 'ತನಯ' ಎಂಬ ಪದಗಳಿಗೆ 'ಮಗನ ಮಗ' ಅಥವಾ 'ಪೌತ್ರ' ಎಂದೂ ಅರ್ಥವಿರುವುದರಿಂದ ಕಾವ್ಯಾವಲೋಕನ, ವಸ್ತುಕೋಶಗಳಲ್ಲಿ

ರುವ ' ದಾಮೋದರ ಪ್ರಿಯಸುತಂ ' ' ದಾಮೋದರತನಯಂ ' ಎಂಬ ಪದಗಳಿಗೆ ' ದಾಮೋದರನ ಮಗನ ಮಗನು ' ಎಂದು ಅರ್ಥವು. ಆದ್ದರಿಂದ ' ಆ ಪೋಳಕ ಬ್ಬೆಗಂ…ವೆಣ್ಣಮಯ್ಯಂಗಂ ನಾಗವರ್ಮನಗ್ರತನೂಜಂ ' ಎಂಬ ಛಂದೋಂಬುಧಿ ಯಲ್ಲಿನ ವಾಕ್ಯಕ್ಕೂ ' ದಾಮೋದರಪ್ರಿಯಸುತಂ ' ' ದಾಮೋದರತನಯಂ ' ಎಂದು ನಾಗವರ್ಮನು ಕಾವ್ಯಾವಲೋಕನ ವಸ್ತುಕೋಶಗಳಲ್ಲಿ ತನಗೆ ಹೇಳಿಕೊಂಡಿರುವ ವಿಶೇಷಣಗಳಿಗೂ ಪರಸ್ಪರ ಯಾವ ವಿರೋಧವೂ ಇಲ್ಲ. ಛಂದೋಂಬುಧಿಯಲ್ಲಿ ಹೇಳಿರುವಂತೆ ತನ್ನ ಪಿತೃಪಿತಾಮಹಪ್ರಪಿತಾಮಹರ ಮತ್ತು ಅವರ ಪತ್ನಿಯರ ಹೆಸರುಗಳನ್ನು ನಾಗವರ್ಮನು ಮೇಲೆ ಹೇಳಿದ ಎರಡು ಗ್ರಂಥಗಳಲ್ಲಿ ಹೇಳದೆ ತಾನು ದಾಮೋದರನ ಪೌತ್ರನೆಂದಷ್ಟುಮಾತ್ರ ಹೇಳಿಕೊಂಡಿರುವನು. ಹೀಗೆ ತನ್ನ ತಂದೆಯ ಹೆಸರನ್ನು ಹೇಳದೆ ಪಿತಾಮಹನ ಹೆಸರನ್ನು ಹೇಳುವುದಕ್ಕೆ ಆ ಎರಡು ಪದ್ಯಗಳಲ್ಲಿಯೂ* ' ಮ ' ಕಾರದ ಪ್ರಾಸಿನ ಆವಶ್ಯಕತೆಯೊಂದಲ್ಲದೆ ಬೇರೆ ಯಾವ ಕಾರಣಗಳು ಇದ್ದು ವೆಂಬುದನ್ನು ನಾವು ಅರಿಯೆವು.

II. ಹೀಗೆ " (೧) ಛಂದೋಂಬುಧಿ ಕರ್ತೃವಾದ ನಾಗವರ್ಮನ ತಂದೆಯಾದ ವೆಣ್ಣಮಯ್ಯನು ಕಾವ್ಯಾವಲೋಕನ ಕರ್ತೃವಾದ ನಾಗವರ್ಮನ ತಂದೆಯಲ್ಲ; ಈತನ ತಂದೆಗೆ ದಾಮೋದರ ಎಂದು ಹೆಸರು. (೨) ಕಾವ್ಯಾವಲೋಕನದ ಕರ್ತೃ ವಾದ ನಾಗವರ್ಮನು ಕ್ರಿ. ಶ. ೧೧೩೮-೧೧೫೦ ರಲ್ಲಿ ಆಳಿದ ಚಾಲುಕ್ಯ ಚಕ್ರವರ್ತಿ ಪೆರ್ಮಜಗದೇಕಮಲ್ಲನ ಕಾಲದಲ್ಲಿದ್ದನು "—ಎಂಬ ಕವಿಚರಿತಕಾರರ ಎರಡು ಅಭಿಪ್ರಾಯಗಳು ಭ್ರಮಮೂಲವಾದವುಗಳೆಂದು ನಾವು ಮೇಲೆ ಹೇಳಿರುವುದರಿಂದ ವ್ಯಕ್ತವಾಗುವುದಷ್ಟೆ. ಕಾವ್ಯಾವಲೋಕನದ ಕರ್ತೃವಾದ ನಾಗವರ್ಮನು ಛಂದೋಂ

---

* ಈ ಪದ್ಯಗಳು ಯಾವವೆಂದರೆ—

ವಾಮನನುಂ ರುದ್ರಟನುಂ |
ಭಾಮಹನುಂ ದಂಡಿಯುಂ ಮನಂಗೊಳೆ ಪೇೞ್ದಂ ||
ತೀ ಮಹಿಗೆ ನೆಗಱ್ ಪೇೞ್ದಂ |
ದಾಮೋದರತನಯನೀ ವಚೋಲಂಕೃತಿಯಂ ||

(ಕಾವ್ಯಾವಲೋಕನ)

ಸಾಮಾನ್ಯವಾಚಿಗಳನೀತೆಱದಿಂದನನ್ಯ
ಸಾಮಾನ್ಯಮಾನ್ಯಸುಚರಿತ್ರಗುಣಾವತಾರಂ |
ಸಾಮಾನ್ಯಮಪ್ಪ ಜನಮುಂ ತಿಳಿವಂತು ಪೇೞ್ದಂ
ದಾಮೋದರಪ್ರಿಯಸುತಂ ಕವಿಕರ್ಣಪೂರಂ ||

(ವಸ್ತುಕೋಶ)

ಬುಧಿಯ ಕರ್ತೃವಾದ ನಾಗವರ್ಮನಿಂದ ಭಿನ್ನನೆಂಬ ಅವರ ಸಿದ್ಧಾಂತಕ್ಕೆ ಮೇಲೆ ಹೇಳಿದ ಈ ಎರಡು ಅಭಿಪ್ರಾಯಗಳೇ ಮುಖ್ಯ ಆಧಾರಗಳಾಗಿದ್ದು ಅವರು ಹೇಳಿರುವ ಇತರ ಕಾರಣಗಳು ಯಾವ ಪ್ರಯೋಜನಕ್ಕೂ ಬಾರದವುಗಳಾಗಿರುವುವು.

೧. 'ಪ್ರಣುತಗುಣರೆನಿಪ..' ಎಂದು ಮೊದಲಾಗುವ ಕಾವ್ಯಾವಲೋಕನ ಪದ್ಯದಲ್ಲಿ ನಾಗವರ್ಮ, ಗುಣವರ್ಮ, ಶಂಖವರ್ಮರ ಹೆಸರುಗಳು ಕೀರ್ತಿತಗಳಾಗಿ ರುವುದು ವಾಸ್ತವವೇ. ಆದರೆ ಇಲ್ಲಿ ಕೀರ್ತಿತನಾಗಿರುವ ನಾಗವರ್ಮನು ಕಾವ್ಯಾವ ಲೋಕನದ ಕರ್ತೃವೇಯೆ ಎಂದು ನಮಗೆ ತೋರುವುದು. ಕನ್ನಡ ಕವಿಗಳು ತಮ್ಮ ತಮ್ಮ ಕಾವ್ಯಗಳಲ್ಲಿ ತಮ್ಮನ್ನೇ ಹೊಗಳಿಕೊಳ್ಳುವುದು ಬಹಳ ವಾಡಿಕೆಯಾಗಿದ್ದು, ಇದೇ ಕಾವ್ಯಾವಲೋಕನದಲ್ಲಿಯೇ 'ಅಭಿಮತಶಬ್ದಸಂಸ್ಕರಣದಿಂ..ಅಭಿನವಶರ್ವ ವರ್ಮನಿವನೆಂದಪ್ಪುದುರ್ವರೆ ನಾಗವರ್ಮನಂ' ಎಂದು ನಾಗವರ್ಮನು ತನ್ನನ್ನು ಹೊಗಳಿಕೊಂಡಿರುವನು. ಇದನ್ನರಿತಿದ್ದಾಗ್ಯೂ ಕವಿಚರಿತಕಾರರು 'ಅಧಿಕರಣದ ಅಂತ್ಯದಲ್ಲಿರುವ ಪದ್ಯಗಳಲ್ಲಿ ನಾಗವರ್ಮನು ತನ್ನನ್ನು ಸ್ತೋತ್ರಮಾಡಿಕೊಂಡಿರುವನೇ ಹೊರತು, ಗ್ರಂಥದ ಮಧ್ಯದಲ್ಲಿ ಅವನು ತನ್ನನ್ನು ಹೊಗಳಿಕೊಂಡಿಲ್ಲ' ಎಂದು (ಕಾವ್ಯಾವಲೋಕನದ ಉಪೋದ್ಘಾತದಲ್ಲಿ) ಹೇಳಿರುವರು. ಈ ವಿಧವಾದ ಅವರ ಅಭಿಪ್ರಾಯಕ್ಕೆ ನಮಗೆ ತಿಳಿದಂತೆ ಯಾವ ಆಧಾರವೂ ಇಲ್ಲವಾದುದರಿಂದ, 'ಪ್ರಣುತ ಗುಣರೆನಿಪ.....' ಎಂಬ ಪೂರ್ವೋಕ್ತ ಪದ್ಯದಲ್ಲಿ * ಕವಿಯು ತನ್ನನ್ನೇ ಹೊಗಳಿ ಕೊಂಡಿರುವನೆಂದು ನಮಗೆ ತೋರುವುದು. ಕವಿಚರಿತಕಾರರು ಹೇಳುವಂತೆ ಒಂದು ವೇಳೆ ಅವನು 'ಬೇರೆ ಒಬ್ಬ ಲಕ್ಷಣಗ್ರಂಥಕಾರನಾದ' ನಾಗವರ್ಮನನ್ನು ಇಲ್ಲಿ ಹೊಗಳಿದ್ದರೂ ಕೂಡ, ಈ ನಾಗವರ್ಮನು ಛಂದೋಂಬುಧಿಯ ಕರ್ತೃವಾದ ನಾಗವರ್ಮನಿಂದ ಭಿನ್ನನಾಗಿಯೇ ಇರಬೇಕು. ಏಕೆಂದರೆ, ಈ ನಾಗವರ್ಮನು ಛಂದೋಂಬುಧಿ ಕಾದಂಬರಿಗಳನ್ನು ಬರೆದನೆಂದು ಕವಿಚರಿತಕಾರರು ಹೇಳಿರುವರೇ ಹೊರತು ಇವನು ಒಂದು ಲಕ್ಷಣಗ್ರಂಥವನ್ನು (ವ್ಯಾಕರಣ ಅಥವಾ ಅಲಂಕಾರ ಗ್ರಂಥವನ್ನು) ಬರೆದನೆಂದು ಅವರು ಹೇಳುವುದಿಲ್ಲ. ಆದ್ದರಿಂದ ಕಾವ್ಯಾವಲೋಕನ ದಲ್ಲಿ ಛಂದೋಂಬುಧಿಯ ಕರ್ತೃವಾದ ನಾಗವರ್ಮನು ಕೀರ್ತಿತನಾಗಿರುವನೆಂಬ ಅವರ ಅಭಿಪ್ರಾಯವು ಸಂಗತವಾಗಿರುವಂತೆ ನಮಗೆ ತೋರುವುದಿಲ್ಲ.

೨. ಕವಿಚರಿತಕಾರರು ಹೇಳಿರುವಂತೆ ಕವಿಗೆ ಛಂದೋಂಬುಧಿಯಲ್ಲಿ 'ಕವಿ ರಾಜಹಂಸ' ಎಂಬ ಬಿರುದು ಹೇಳಲ್ಪಟ್ಟಿದ್ದು, ಕಾವ್ಯಾವಲೋಕನ ವಸ್ತುಕೋಶ

---

* ಹೀಗೆಯೇ—'ತಾರಾತಾರಾಮಳಿನಗುಳಿಕಾ....' ಎಂಬ ೫೪೭ ನೆಯ ಪದ್ಯದಲ್ಲಿಯೂ ಕವಿಯು ತನ್ನನ್ನೇ ಹೊಗಳಿಕೊಂಡಿರುವನೆಂದು ನಮ್ಮ ಅಭಿಪ್ರಾಯ.

ಗಳಲ್ಲಾದರೆ ' ಕವಿತಾಗುಣೋದಯ ' ಎಂಬ ಬಿರುದು ಹೇಳಲ್ಪಟ್ಟಿರುವುದೆಂಬುದು ವಾಸ್ತವವೇ. ಆದರೆ ಇದರಿಂದ ಏನನ್ನು ನಿರ್ಣಯಿಸುವುದಕ್ಕೆ ಸಾಧ್ಯ ?

" ' ಕವಿರಾಜಹಂಸಂ ' ಎಂಬ ಬಿರುದನ್ನು ಹೇಳದಿರುವುದರಿಂದ ಕಾವ್ಯಾವಲೋಕನವನ್ನು ಬರೆದ ನಾಗವರ್ಮನು ಛಂದೋಂಬುಧಿಯ ಕರ್ತೃವಿನಿಂದ ಭಿನ್ನನು " ಎಂದು ಹೇಳುವ ಕವಿಚರಿತಕಾರರ ಯುಕ್ತಿವಾದವು ಸಂಗತವಾಗಿದ್ದಲ್ಲಿ ನಾವು ಇದೇ ಯುಕ್ತಿವಾದವನ್ನೇ ಅವಲಂಬಿಸಿ—ಕರ್ಣಾಟಕ ಭಾಷಾಭೂಷಣದಲ್ಲಿ ' ಕವಿತಾಗುಣೋದಯಂ ' ಎಂಬ ಬಿರುದು ಹೇಳಲ್ಪಟ್ಟಿಲ್ಲವಾದುದರಿಂದ, ಅದನ್ನು ಬರೆದ ನಾಗವರ್ಮನು ಕಾವ್ಯಾವಲೋಕನದ ಕರ್ತೃವಿನಿಂದ ಭಿನ್ನನೆಂದೂ, ಕಾದಂಬರಿಯಲ್ಲಿ ' ಕವಿರಾಜಹಂಸಂ ' ಎಂಬ ಬಿರುದನ್ನು ಹೇಳಿಲ್ಲವಾದುದರಿಂದ ಅದರ ಕರ್ತೃವಾದ ನಾಗವರ್ಮನು ಛಂದೋಂಬುಧಿಯ ಕರ್ತೃವಿನಿಂದ ಭಿನ್ನನೆಂದೂ, ವಸ್ತುಕೋಶವನ್ನು ಬರೆದ ನಾಗವರ್ಮನಿಗೆ ' ಕವಿತಾಗುಣೋದಯಂ ' ಎಂಬ ಬಿರುದಲ್ಲದೆ, ' ಕವಿಕರ್ಣಪೂರ ', ' ಕವಿಕಂಠಾಭರಣ ' ಎಂಬ ಬಿರುದುಗಳೂ ಇದ್ದುವಾದುದರಿಂದ (ಕವಿಚರಿತೆ I. ೩೭೮ ನ್ನು ನೋಡಿ), ಈ ನಾಗವರ್ಮನು ' ಕವಿತಾಗುಣೋದಯಂ ' ಎಂಬ ಒಂದೇ ಬಿರುದುಳ್ಳ ಕಾವ್ಯಾವಲೋಕನದ ಕರ್ತೃವಿನಿಂದ ಭಿನ್ನನೆಂದೂ, * ಎಂದರೆ ಮೇಲೆ ಹೇಳಿದ ಐದು ಗ್ರಂಥಗಳೂ ಐದು ಮಂದಿ ನಾಗವರ್ಮರಿಂದ

---

* ಕಾವ್ಯಾವಲೋಕನದಲ್ಲಿರುವ—

ಛಂದೋವಿಚಿತಿಯಲಂಕೃತಿ |
ಸಂದಭಿಧಾನಕೋಶಮೆಂಬಿವು ವಾಕ್ಶ್ರೀ ||
ಸುಂದರಿಗೆ ರತ್ನಮಂಡನ |
ದಂದದೊಳಿರ್ದ್ದಪುವು ನಾಗವರ್ಮನ ಕೃತಿಗಳ್ ||

ಎಂಬ ಅಂತ್ಯಪದ್ಯದಿಂದ ಕಾವ್ಯಾವಲೋಕನದ ಕರ್ತೃವಾದ ನಾಗವರ್ಮನು ಒಂದು ಛಂದೋವಿಚಿತಿಯನ್ನೂ (ಎಂದರೆ ಛಂದೋವಿಷಯಕವಾದ ಗ್ರಂಥವನ್ನೂ) ಮತ್ತು ಒಂದು ಅಭಿಧಾನಕೋಶವನ್ನೂ ಬರೆದನೆಂಬುದು ಸ್ಪಷ್ಟವಾಗುವುದು. ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರಾದರೆ ಇಲ್ಲಿ ಹೇಳಲ್ಪಟ್ಟಿರುವ ಛಂದೋಗ್ರಂಥವು ಈಗ ಪ್ರಚಾರದಲ್ಲಿರುವ ನಾಗವರ್ಮರಚಿತವಾದ ಛಂದೋಂಬುಧಿಯಲ್ಲವೆಂದೂ, ಅದು ಈಗ ದೊರೆತಿಲ್ಲದ ಬೇರೆ ಗ್ರಂಥವಾಗಿರಬೇಕೆಂದೂ ಕಾವ್ಯಾವಲೋಕನದ ಉಪೋದ್ಘಾತದಲ್ಲಿ (ಪುಟ ೧೦) ಹೇಳಿರುವರಾದ್ದರಿಂದ, ಇವರ ಮೇಲುಪಂಕ್ತಿಯನ್ನನುಸರಿಸಿ, ಈಗ ಪ್ರಚಾರದಲ್ಲಿರುವ ನಾಗವರ್ಮಕೃತವಾದ ವಸ್ತುಕೋಶವು ಮೇಲಿನ ಪದ್ಯದಲ್ಲಿ ಹೇಳಲ್ಪಟ್ಟಿರುವ ಅಭಿಧಾನಕೋಶವಲ್ಲವೆಂದೂ, ಇದನ್ನು ಬರೆದ ನಾಗವರ್ಮನು ಕಾವ್ಯಾವಲೋಕನದ ಕರ್ತೃವಾದ ನಾಗವರ್ಮನಿಂದ ಭಿನ್ನನೆಂದೂ, ತಾನು ಬರೆದಂತೆ ಈತನು ಮೇಲಿನ ಪದ್ಯದಲ್ಲಿ ಹೇಳಿಕೊಂಡಿರುವ ಅಭಿಧಾನಕೋಶವೆಂಬ ಗ್ರಂಥವು ಈಗ ನಮಗೆ ದೊರೆತಿಲ್ಲವೆಂದೂ ಯಾರಾದರೂ ಹೇಳಿದರೆ ಕವಿಚರಿತಕಾರರು ಅದಕ್ಕೆ ಆಕ್ಷೇಪಣೆಮಾಡಲಾರರು.

ಬರೆಯಲ್ಪಟ್ಟವೆಂದು ವಾದಿಸುವುದಕ್ಕೆ ಸಾಧ್ಯವು. ಆದರೆ ಹೀಗೆ ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವವರಲ್ಲಿ ನಾಗವರ್ಮ ಎಂಬ ಹೆಸರುಳ್ಳ ಐದು ಜನರು ಇರುವರೆಂಬುದನ್ನು ಪ್ರಾಯಶಃ ಯಾರೂ ಒಪ್ಪಲಾರರಾದುದರಿಂದ ಕವಿಚರಿತಕಾರರ ಮೇಲೆ ಹೇಳಿದ ಯುಕ್ತಿವಾದವು ಕಾರ್ಯಕಾರಿಯಲ್ಲವೆಂಬುದು ಸ್ಪಷ್ಟವಾಗಿರುವುದು. ಛಂದೋಂಬುಧಿಯಲ್ಲಿ 'ಕವಿರಾಜಹಂಸಂ' ಎಂಬ ಬಿರುದನ್ನು ನಾಗವರ್ಮನು ತನಗೆ ಹೇಳಿಕೊಂಡ ಮಾತ್ರಕ್ಕೇ ಅವನು ಬರೆದ ಇತರ ಗ್ರಂಥಗಳಲ್ಲಿಯೂ ಈ ಬಿರುದನ್ನು ಹೇಳಿಕೊಳ್ಳಬೇಕೆಂದೂ, ಬೇರೆ ಯಾವ ಬಿರುದನ್ನೂ ಹೇಳಿಕೊಳ್ಳಕೂಡದೆಂದೂ ನಿಯಮವೇನೂ ಇಲ್ಲವಾದುದರಿಂದ ಈ ಕಾರಣವನ್ನು ಅವಲಂಬಿಸಿ ಮೇಲೆ ಹೇಳಿದ ಗ್ರಂಥಗಳನ್ನು ನಾಗವರ್ಮ ಎಂಬ ಹೆಸರುಳ್ಳ ಬೇರೆ ಬೇರೆ ಮನುಷ್ಯರು ಬರೆದರೆಂದು ನಿರ್ಧರಿಸುವುದು ಸಂಗತವಲ್ಲವೆಂದು ನಮಗೆ ತೋರುವುದು.

೩. 'ಸಯ್ಯಡಿಯಾತ' 'ನಾಕಿ' ಎಂಬ ಪದಗಳನ್ನೂ ಕೂಡ ಹೀಗೆಯೇ ನಾಗವರ್ಮನು ಛಂದೋಂಬುಧಿಯಲ್ಲಿ ಉಪಯೋಗಿಸಿದ ಮಾತ್ರಕ್ಕೇ ಅವನು ಬರೆದ ಇತರ ಗ್ರಂಥಗಳಲ್ಲಿಯೂ ಅವನ್ನು ಉಪಯೋಗಿಸಬೇಕೆಂಬ ನಿಯಮವಿಲ್ಲ. ಆದುದರಿಂದ ಈ ಪದಗಳನ್ನು ಉಪಯೋಗಿಸಿಲ್ಲದಿರುವ ಕಾವ್ಯಾವಲೋಕನಾದಿ ಗ್ರಂಥಗಳನ್ನು ಈ ನಾಗವರ್ಮನು ಬರೆದಿಲ್ಲವೆಂದು ಈ ಆಧಾರದ ಮೇಲೆ ಹೇಳುವುದು ಸಾಧುವಲ್ಲ.

'ನಾಕಿ' 'ನಾಕಿಗ' ಎಂಬ ಪದಗಳು 'ನಾಗವರ್ಮ' ಎಂಬ ಹೆಸರಿನ ರೂಪಾಂತರಗಳೆಂದು ನಾವು ಮೇಲೆಯೇ (ಪುಟ ೧೫೯) ಹೇಳಿರುವೆವು. ಈ ಎರಡು ಸಂಕ್ಷಿಪ್ತ ರೂಪಗಳೂ ಛಂದೋಂಬುಧಿಯಲ್ಲಿ ಉಪಯೋಗಿಸಲ್ಪಟ್ಟಿರುವುವೆಂದು ಮ|| ಕಿಟ್ಟೆಲ್‌ರವರ ಉಪೋದ್ಘಾತದ ೧೯, ೨೦ ನೇ ಪುಟಗಳಿಂದ ವ್ಯಕ್ತವಾಗುವುದು. ಕಾವ್ಯಾವಲೋಕನದಲ್ಲಾದರೆ 'ನಾಕಿ' ಎಂಬ ರೂಪವು ಉಪಯೋಗಿಸಲ್ಪಟ್ಟಿಲ್ಲವಾದಾಗ್ಯೂ 'ನಾಕಿಗ' ಎಂಬ ರೂಪವು ೭೭೯, ಮತ್ತು ೯೫೯ ನೆಯ ಪದ್ಯಗಳಲ್ಲಿ ಉಪಯೋಗಿಸಲ್ಪಟ್ಟಿರುವುದು. ವಸ್ತುಕೋಶ ಕಾದಂಬರಿ ಕರ್ಣಾಟಕಭಾಷಾಭೂಷಣಗಳಲ್ಲಿ 'ನಾಗವರ್ಮ' ಎಂಬ ಸಂಪೂರ್ಣ ಹೆಸರೊಂದೇ ಉಪಯೋಗಿಸಲ್ಪಟ್ಟಿರುವುದು.

೪. ಕಾವ್ಯಾವಲೋಕನಾದಿಗಳನ್ನು ಬರೆದ ನಾಗವರ್ಮನು ಜಿನಭಕ್ತನಾಗಿದ್ದನೆಂದು ಆ ಗ್ರಂಥಗಳ ಆದಿ ಪದ್ಯಗಳಿಂದಲೂ ಅಂತ್ಯದಲ್ಲಿನ ಪ್ರಶಸ್ತಿಯಿಂದಲೂ ಸ್ಪಷ್ಟವಾಗುವುದರಿಂದ ವಿಷ್ಣು ಶಿವ ಪಾರ್ವತೀ ವಿನಾಯಕಾದಿಗಳನ್ನು ಸ್ತುತಿಸಿರುವ ಛಂದೋಂಬುಧಿಯ ಕರ್ತೃವು ಈ ನಾಗವರ್ಮನಲ್ಲದೆ ಬೇರೆ ನಾಗವರ್ಮನಾಗಿರಬೇಕೆಂಬ ಕವಿಚರಿತಕಾರರ ಅಭಿಪ್ರಾಯವೂ ಕೂಡ ಹೀಗೆಯೇ ಅಸಾಧುವಾಗಿರು

ವುದು. ಈ ವಿಷಯದಲ್ಲಿ ನಾವು ಮೇಲೆ ೧೪೦—೧೪೯ ನೇ ಪುಟಗಳಲ್ಲಿ ಹೇಳಿರುವುದನ್ನು ನೋಡಿ.

III. ಹೀಗೆ ಕಾವ್ಯಾವಲೋಕನಾದಿ ಗ್ರಂಥಗಳ ಕರ್ತೃವಾದ ನಾಗವರ್ಮನು ಛಂದೋಂಬುಧಿಯ ಕರ್ತೃವಿನಿಂದ ಭಿನ್ನನೆಂಬ ಕವಿಚರಿತಕಾರರ ಅಭಿಪ್ರಾಯಕ್ಕೆ ಆಧಾರಭೂತಗಳೆಂದು ಅವರು ಹೇಳಿರುವ ಕಾರಣಗಳು ಕಾರ್ಯಕಾರಿಗಳಲ್ಲವೆಂದು ನಾವು ಮೇಲೆ ಹೇಳಿರುವುದರಿಂದ ಸ್ಪಷ್ಟವಾಗುವುದಷ್ಟೆ. ವಸ್ತುತಃ ಕಾವ್ಯಾವಲೋಕನದ ಕರ್ತೃವಾದ ನಾಗವರ್ಮನೇ ಛಂದೋಂಬುಧಿಯನ್ನು ಬರೆದನೆಂದು ನಾವು ಮೇಲೆ ಅನುವದಿಸಿರುವ ಕೆಲವು ಪದ್ಯಗಳಿಂದ ವ್ಯಕ್ತವಾಗುವುದು.

೧. "'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮಂ ...' ಎಂಬ ಮೇಲೆಹೇಳಿದ ಪದ್ಯದಿಂದ 'ಅಭಿನವಶರ್ವವರ್ಮ' ನೆಂಬ ಬಿರುದುಳ್ಳ ಕರ್ಣಾಟಕ ಕಾದಂಬರೀ ಕರ್ತೃವಾದ ನಾಗವರ್ಮನು ಚಾಲುಕ್ಯಚಕ್ರವರ್ತಿ ಜಯಸಿಂಹ-ಜಗದೇಕಮಲ್ಲನ ಬಳಿಯಲ್ಲಿ ಕಟಕೋಪಾಧ್ಯಾಯನಾಗಿದ್ದನು" ಎಂದು ತಿಳಿದುಬರುವುದೆಂದು ನಾವು ಮೇಲೆಯೇ (ಪುಟ ೧೩೦) ಹೇಳಿರುವೆವಷ್ಟೆ. ಕಾದಂಬರಿಯನ್ನು ಬರೆದ ನಾಗವರ್ಮನೇ ಛಂದೋಂಬುಧಿಯ ಕರ್ತೃವೆಂದೂ, 'ಅಭಿನವ ಶರ್ವವರ್ಮ' ಎಂಬ ಬಿರುದು ಕಾವ್ಯಾವಲೋಕನ ಕರ್ತೃವಾದ ನಾಗವರ್ಮನಿಗೆ ಇತ್ತೆಂದೂ ಕವಿಚರಿತಕಾರರೇ ಹೇಳಿರುವರಾದ್ದರಿಂದ ಕಾವ್ಯಾವಲೋಕನ ಛಂದೋಂಬುಧಿಗಳೆರಡೂ ಒಬ್ಬನೇ ನಾಗವರ್ಮನಿಂದ ಬರೆಯಲ್ಪಟ್ಟವೆಂದು ಈ ಪದ್ಯದಿಂದ ಸಿದ್ಧವಾಗುವುದು.

೨. "ಛಂದೋವಿಚಿತಿಯಲಂಕೃತಿ| ಸಂದಭಿಧಾನಕೋಶಮೆಂಬಿವು·....." ಎಂಬ ಮೇಲೆ ಹೇಳಿದ ಕಾವ್ಯಾವಲೋಕನ ಪದ್ಯದಲ್ಲಂತೂ ನಾಗವರ್ಮನು ಛಂದೋವಿಚಿತಿ ಅಲಂಕೃತಿ ಅಭಿಧಾನಕೋಶಗಳನ್ನು ಎಂದರೆ ಛಂದೋಂಬುಧಿ ಕಾವ್ಯಾವಲೋಕನ ವಸ್ತುಕೋಶಗಳನ್ನು ತಾನು ಬರೆದನೆಂದು ಸ್ಪಷ್ಟವಾಗಿಯೇ ಹೇಳಿಕೊಂಡಿರುವನು. ಈ ಛಂದೋಂಬುಧಿಯು ಬೇರೆ ಒಬ್ಬ ನಾಗವರ್ಮನಿಂದ ರಚಿತವಾಯಿತೆಂದೂ, ಕಾವ್ಯಾವಲೋಕನ ಕರ್ತೃವಾದ ನಾಗವರ್ಮನಿಂದ ರಚಿತವಾದ ಛಂದೋಗ್ರಂಥವು ಇದಲ್ಲವೆಂದೂ ಅದು ನಮಗೆ ದೊರೆತಿಲ್ಲವೆಂದೂ ಹೇಳುವ ಕವಿಚರಿತಕಾರರ ಅಭಿಪ್ರಾಯವನ್ನು ನಾವು ಮೇಲೆಯೇ (ಪುಟ ೧೬೪) ಅನುವದಿಸಿರುವೆವಷ್ಟೆ. ಆದರೆ ಕಾವ್ಯಾವಲೋಕನವು ಕವಿಚರಿತಕಾರರು ಹೇಳುವಂತೆ ಕ್ರಿ. ಶ. ೧೧೪೫ ರಲ್ಲಿ ಹುಟ್ಟಲಿಲ್ಲವೆಂದೂ ಅದು ಸುಮಾರು ೧೦೫೦ ರಲ್ಲಿ ಬರೆಯಲ್ಪಟ್ಟಿತೆಂದೂ ಊಹಿಸುವುದಕ್ಕೆ ಹಲವು ಕಾರಣಗಳಿರುವವು: (೧) ಕ್ರಿ. ಶ. ೯೭೩ ರಿಂದ ಈಚೆಗೆ ರಾಜ್ಯವಾಳಿದ

ಚಾಲುಕ್ಯರಾಜರಲ್ಲಿ ತೈಲಪ (ಕ್ರಿ.ಶ. ೯೭೩-೯೯೭), ಚಾಲುಕ್ಯ ಕಂಠೀರವ ಅಥವಾ ಇಱಿವಬೆಡಂಗ-ಸತ್ಯಾಶ್ರಯ (೯೯೭-೧೦೦೮), ವಿಕ್ರಮಾಂಕ (೧೦೦೯-೧೦೧೪), ಮತ್ತು ಜಯಸಿಂಹ (೧೦೧೫-೧೦೪೨) ಎಂಬ ನಾಲ್ಕುಜನ ಚಾಲುಕ್ಯರಾಜರು ಮಾತ್ರ ಈ ಗ್ರಂಥದಲ್ಲಿ ಸ್ತುತಿಸಲ್ಪಟ್ಟಿರುವರೇ ಹೊರತು ಈ ಜಯಸಿಂಹನಿಂದ ಈಚಿಗೆ ರಾಜ್ಯವಾಳಿದ ಸೋಮೇಶ್ವರ ತ್ರೈಲೋಕ್ಯಮಲ್ಲ ಆಹವಮಲ್ಲ (೧೦೪೨-೧೦೬೮), ಸೋಮೇಶ್ವರ ಭುವನೈಕಮಲ್ಲ (೧೦೬೮-೧೦೭೬), ೬ ನೇ ವಿಕ್ರಮಾದಿತ್ಯ ತ್ರಿಭುವನಮಲ್ಲ (೧೦೭೬-೧೧೨೭), ಸೋಮೇಶ್ವರ ಭೂಲೋಕಮಲ್ಲ (೧೧೨೭-೧೧೩೬), ಪೆರ್ಮ ಜಗದೇಕಮಲ್ಲ (೧೧೩೬-೧೧೫೧) ಎಂಬ ರಾಜರಲ್ಲಿ ಒಬ್ಬನೂ ಸ್ತುತಿಸಲ್ಪಟ್ಟಿಲ್ಲ. 'ಸೋಮೇಶ್ವರ' ಎಂಬ ದೊರೆಯ ಹೆಸರು ಈ ಗ್ರಂಥದಲ್ಲಿಯೇ ಹೇಳಲ್ಪಟ್ಟಿಲ್ಲ. (೨) ಹೀಗೆಯೇ ಈ ಗ್ರಂಥದಲ್ಲಿ ಕ್ರಿ. ಶ. ೧೦೪೨ ಕ್ಕಿಂತ ಹಿಂದೆ ಇದ್ದ ಪಂಪ, ೧ ನೆಯ ಗುಣವರ್ಮ, ಪೊನ್ನ, ರನ್ನ ಮೊದಲಾದ ಕವಿಗಳ ಪದ್ಯಗಳು ಉದಾಹರಿಸಲ್ಪಟ್ಟಿರುವುವೇ ಹೊರತು ೧೦೪೨ ಕ್ಕಿಂತ ಈಚೆಗೆ ಜೀವಿಸಿದ್ದ ಕೀರ್ತಿವರ್ಮ, ಬ್ರಹ್ಮಶಿವ, ಧರ್ಮಾಮೃತಕಾರನಾದ ನಯಸೇನ, ಮೊದಲಾದವರ ಪದ್ಯಗಳಲ್ಲೊಂದೂ ಈ ಗ್ರಂಥದಲ್ಲಿ ಉದಾಹರಿಸಲ್ಪಟ್ಟಿಲ್ಲ. ಈ ಗ್ರಂಥಕರ್ತೃವಿಗೆ ಸಮಕಾಲೀನನಾಗಿದ್ದ ದುರ್ಗಸಿಂಹನ ಪಂಚತಂತ್ರದಿಂದಲೂ ಕೂಡ ವಸ್ತುತಃ ಯಾವ ಪದ್ಯವೂ ಇಲ್ಲಿ ಉದಾಹೃತವಾಗಿಲ್ಲ. ಈ ಕಾರಣಗಳಿಂದ ಕಾವ್ಯಾವಲೋಕನವು ಕ್ರಿ. ಶ. ಸುಮಾರು ೧೦೫೦ ಕ್ಕಿಂತ ಹಿಂದೆ ರಚಿತವಾಯಿತೆಂದು ನಾವು ಊಹಿಸಬಹುದು. ಆದ್ದರಿಂದ ಈ ಗ್ರಂಥಕರ್ತೃವಿನಿಂದ ಬರೆಯಲ್ಪಟ್ಟ ಛಂದೋಗ್ರಂಥವೂ ಕ್ರಿ. ಶ. ೧೦೫೦ ಕ್ಕಿಂತ ಹಿಂದೆ ವಿರಚಿತವಾಯಿತೆಂದೂ ನಾವು ಊಹಿಸಬಹುದು. ಹೀಗೆ ಕ್ರಿ. ಶ. ಸುಮಾರು ೧೦೫೦ ರಲ್ಲಿ ಕಾವ್ಯಾವಲೋಕನವನ್ನು ಬರೆದ ದಾಮೋದರಪೌತ್ರನಾದ ನಾಗವರ್ಮನು ತಾನು ಒಂದು ಛಂದೋಗ್ರಂಥವನ್ನು ಬರೆದಂತೆ ಅಲ್ಲಿ ಹೇಳಿಕೊಂಡಿದ್ದು, ಕ್ರಿ. ಶ. ಸುಮಾರು ೧೦೫೦ ಕ್ಕೆ ಹಿಂದೆ ದಾಮೋದರಪುತ್ರನಾದ ವೆಣ್ಣಮಯ್ಯನ ಪುತ್ರನಾದ ನಾಗವರ್ಮನಿಂದ ಬರೆಯಲ್ಪಟ್ಟ ಛಂದೋಂಬುಧಿಯೆಂಬ ಒಂದು ಛಂದೋಗ್ರಂಥವು ನಮಗೆ ದೊರೆತಿರುವುದರಿಂದ, ಈ ಗ್ರಂಥವನ್ನು ಬರೆದ ನಾಗವರ್ಮನು ಕಾವ್ಯಾವಲೋಕನ ಕರ್ತೃವಿನಿಂದ ಅಭಿನ್ನನೆಂದು ನಾವು ದೃಢವಾಗಿ ಹೇಳಬಹುದು.*

---

* ಆದರೆ ಇದು ಊಹಾಮಾತ್ರವಾಗಿರುವುದೇ ಹೊರತು ಕಣ್ಣಾರೆನೋಡಿದ ವಿಷಯವಲ್ಲ. ಆದ್ದರಿಂದ ಇದನ್ನೆಲ್ಲಾ ತಿಳಿದೂಕೂಡ ಕವಿಚರಿತಕಾರರಂತೆ ಯಾರಾದರೂ, 'ಕಾವ್ಯಾವಲೋಕನ ಕರ್ತೃವು ದಾಮೋದರನ ಪೌತ್ರನಾಗಿದ್ದುದೂ, ಅವನು ಒಂದು ಛಂದೋಗ್ರಂಥವನ್ನು ಬರೆದುದೂ

ಇಲ್ಲಿ ನಾವು ಅವಧರಿಸಬೇಕಾದ ಇನ್ನೊಂದು ಅಂಶವುಂಟು. ಕಾವ್ಯಾವಲೋಕನವನ್ನು ಬರೆಯುವುದರಲ್ಲಿ ನಾಗವರ್ಮನು ದಂಡಿಯ ಕಾವ್ಯಾದರ್ಶವನ್ನು ವಿಶೇಷವಾಗಿ ಅನುಸರಿಸಿರುವನೆಂದು ಕಾವ್ಯಾವಲೋಕನ ಮುದ್ರಿತಪುಸ್ತಕದ ೧ನೇ ಅನುಬಂಧದಿಂದಲೂ ಉಪೋದ್ಘಾತದಿಂದಲೂ (ಪುಟ ೨೭, ೨೮) ವ್ಯಕ್ತವಾಗುವುದು. ಈ ದಂಡಿಯಾದರೆ ಕಾವ್ಯಾದರ್ಶವೆಂಬ ಅಲಂಕಾರ ಗ್ರಂಥವನ್ನೂ, ಮತ್ತು ದಶಕುಮಾರ ಚರಿತವೆಂಬ ಗದ್ಯಗ್ರಂಥವನ್ನೂ ಬರೆದಿರುವುದಲ್ಲದೆ ಛಂದೋವಿಷಯಕವಾದ ಒಂದು ಗ್ರಂಥವನ್ನೂ ಬರೆದನೆಂದು ಅವನ ಕಾವ್ಯಾದರ್ಶದಲ್ಲಿರುವ (I, ೧೧)—

ಛಂದೋವಿಚಿತ್ಯಾಂ ಸಕಲಸ್ತತ್ಪ್ರಪಂಚೋ ನಿರೂಪಿತಃ |
ಸಾ ವಿದ್ಯಾ ನೌಸ್ತಿತೀರ್ಷೂಣಾಂ ಗಂಭೀರಂ ಕಾವ್ಯಸಾಗರಂ ||

ಎಂಬ ಶ್ಲೋಕದಿಂದ ನಿರ್ಧರಿಸಲ್ಪಟ್ಟಿರುವುದು (ಡಾ|| ಪೀಟರ್‌ಸ್‌ರವರ ದಶಕುಮಾರ ಚರಿತೆಯ ಉಪೋದ್ಘಾತ, ಪುಟ ೪, ೫; ಮ|| ಕಾಣೆಯವರಾದರೆ ಈ ಅಭಿಪ್ರಾಯವು ತಪ್ಪೆಂದೂ ಇಂತಹ ಗ್ರಂಥವನ್ನು ದಂಡಿಯು ಬರೆಯಲಿಲ್ಲವೆಂದೂ ಇಂಡಿಯನ್ ಆಂಟಿಕ್ವೆರಿ ೪೦, ೧೭೭ ರಲ್ಲಿ ವಾದಿಸಿರುವರು). ಆದ್ದರಿಂದ ದಂಡಿಯ ಮೇಲು ಪಂಕ್ತಿಯನ್ನು ಅನುಸರಿಸುವಂಥ ನಾಗವರ್ಮನು ಅವನಂತೆ ಕನ್ನಡದಲ್ಲಿ ಒಂದು ಗದ್ಯಗ್ರಂಥವನ್ನೂ (ಕನ್ನಡ ಕಾದಂಬರಿ; ಇದರಲ್ಲಾದರೆ ಸಂಸ್ಕೃತದಲ್ಲಿರುವುದಕ್ಕಿಂತ ಬಹುವಾಗಿ ಪದ್ಯಗಳಿರುವುವು) ಒಂದು ಅಲಂಕಾರಗ್ರಂಥವನ್ನೂ (ಕಾವ್ಯಾವಲೋಕನ) ಮತ್ತು ಒಂದು ಛಂದೋಗ್ರಂಥವನ್ನೂ (ಛಂದೋಂಬುಧಿ) ರಚಿಸಿರುವುದು ಸಹಜವಾಗಿಯೇ ಇರುವುದು. ವಸ್ತುತಃ ಈ ಮೂರು ಗ್ರಂಥಗಳ ರಚನೆಯಿಂದ ತೃಪ್ತನಾಗದೆ ನಾಗವರ್ಮನು ಒಂದು ವ್ಯಾಕರಣಗ್ರಂಥವನ್ನೂ, ಒಂದು ಅಭಿಧಾನ ಕೋಶವನ್ನೂ ರಚಿಸಿರುವುದರಿಂದ, ಅವನು ತನಗೆ ಮೇಲುಪಂಕ್ತಿಯಾಗಿದ್ದ ದಂಡಿಯನ್ನು ಮೀರಿಸಿರುವನೆಂದೇ ನಾವು ಹೇಳಬೇಕಾಗಿರುವುದು.

ಅದಂತಿರಲಿ; ಛಂದೋಂಬುಧಿ ಕಾವ್ಯಾವಲೋಕನಗಳನ್ನು ಬರೆದ ನಾಗವರ್ಮರು ಬೇರೆಬೇರೆ ಮನುಷ್ಯರೆಂಬ ಕವಿಚರಿತಕಾರರ ಅಭಿಪ್ರಾಯವು ತಪ್ಪೆಂದೂ ಈ

ನಿಜವೇ ಆದಾಗ್ಯೂ, ಈ ಗ್ರಂಥವು ನಮಗೆ ದೊರೆತಿರುವ ಛಂದೋಂಬುಧಿಯಲ್ಲ. ಇದನ್ನು ಬರೆದ ನಾಗವರ್ಮನು ಕಾವ್ಯಾವಲೋಕನ ಕರ್ತೃವಾದ ನಾಗವರ್ಮನಿಗೆ ಸಮಕಾಲೀನನಾಗಿದ್ದರೂ, ಇವನೂ, ಇವನ ಪಿತಾಮಹ ದಾಮೋದರನೂ, ಕಾವ್ಯಾವಲೋಕನ ಕರ್ತೃವಾದ ನಾಗವರ್ಮನಿಂದಲೂ, ಅವನ ಪಿತಾಮಹನಾದ ದಾಮೋದರನಿಂದಲೂ, ಭಿನ್ನರು; ಈ ಇಬ್ಬರು ನಾಗವರ್ಮರು ಬರೆದ ಛಂದೋಗ್ರಂಥಗಳೂ ಹೀಗೆಯೇ ಬೇರೆಬೇರೆಯಾಗಿರುವುವು' ಎಂದು ಆಕ್ಷೇಪಿಸಿದಲ್ಲಿ ಅಂಥ ಆಕ್ಷೇಪಣೆಗೆ ಪ್ರತ್ಯುತ್ತರವನ್ನು ಕೊಡಲು ನಮ್ಮಿಂದ ಸಾಧ್ಯವಲ್ಲ.

ಎರಡು ಗ್ರಂಥಗಳೂ ವಸ್ತುತಃ ಒಬ್ಬನೇ ನಾಗವರ್ಮನಿಂದ ಬರೆಯಲ್ಪಟ್ಟವೆಂದೂ ಸ್ಪಷ್ಟವಾಗಿರುವುದಷ್ಟೆ. ಇನ್ನು ಈ ನಾಗವರ್ಮನು ಯಾವಕಾಲದಲ್ಲಿ ಜೀವಿಸಿದ್ದನೆಂಬುದನ್ನು ಕುರಿತು ನಾವು ಈಗ ವಿಚಾರಮಾಡಬೇಕಾಗಿರುವುದು.

"ಅರಸಂ ರಕ್ಕಸಗಂಗಂ| ಗುರುಗಳ್‌ನೆಗಲ್ದಜಿತಸೇನದೇವರ್ ದಯೆಯಿಂ||.." ಎಂದು ಮೊದಲಾಗುವ ಛಂದೋಂಬುಧಿಯಲ್ಲಿನ ಎರಡು ಪದ್ಯಗಳಲ್ಲಿ (ಮೇಲೆ ೧೫೩ ನೇ ಪುಟವನ್ನು ನೋಡಿ) ಹೊಗಳಲ್ಪಟ್ಟಿರುವ ರಕ್ಕಸಗಂಗನು ಕ್ರಿ. ಶ. ೯೭೪-೯೮೪ ರಲ್ಲಿ ರಾಜ್ಯವಾಳಿದ ರಾಚಮಲ್ಲನ ತಮ್ಮನೆಂದೂ, ಅಜಿತಸೇನದೇವನು ಈ ರಾಚಮಲ್ಲನ ಮತ್ತು ಮೇಲೆಹೇಳಿದ ಚಾಮುಂಡರಾಯನ ಗುರುವೆಂದೂ, 'ಅಣ್ಣ' 'ರಾಯ' ಎಂಬ ಹೆಸರುಗಳು ಈ ಚಾಮುಂಡರಾಯನನ್ನೇ ನಿರ್ದೇಶಿಸುವುವೆಂದೂ ಕವಿಚರಿತಕಾರರು ಹೇಳಿ, ಆದ್ದರಿಂದ ನಾಗವರ್ಮನು ಕ್ರಿ. ಶ. ಸುಮಾರು ೯೯೦ ರಲ್ಲಿ ಇದ್ದಿರಬಹುದೆಂದು ನಿರ್ಧರಿಸಿರುವರಷ್ಟೆ. ಇಂತಹ ಅಭಿಪ್ರಾಯಕ್ಕೆ ನಾಮೈಕ್ಯವೊಂದನ್ನು ಬಿಟ್ಟರೆ ಬೇರೆ ಯಾವ ಆಧಾರವೂ ಇಲ್ಲವಾದುದರಿಂದ ನಮಗೆ ಇದನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ವಸ್ತುತಃ ರಕ್ಕಸಗಂಗ, ಅಜಿತಸೇನ, ರಾಯ ಎಂಬ ಹೆಸರುಳ್ಳ ಅನೇಕ ಜನರು ಕರ್ಣಾಟಕದೇಶದ ಶಾಸನಗಳಲ್ಲಿ ಸ್ತುತರಾಗಿರುವರು. 'ರಾಯ' ಎಂಬುದು ಹೆಸರಲ್ಲವೆಂದೂ, ಅದು ಒಂದು ಬಿರುದೆಂದೂ ಕವಿಚರಿತಕಾರರ ಅಭಿಪ್ರಾಯ; ಶ್ರವಣಬೆಳ್ಗೊಳದಲ್ಲಿ ಗೊಮ್ಮಟದೇವನ ವಿಗ್ರಹವನ್ನು ಮಾಡಿಸಿದ ಚಾಮುಂಡರಾಯನ ಔದಾರ್ಯಕ್ಕೆ ಮೆಚ್ಚಿ, ಅವನ ಸ್ವಾಮಿಯಾದ ರಾಚಮಲ್ಲನು ಅವನಿಗೆ 'ರಾಯ' ಎಂಬ ಬಿರುದನ್ನು ಕೊಟ್ಟನೆಂದು ಭುಜಬಲಿಶತಕದಲ್ಲಿ * ದೊಡ್ಡಯ್ಯನು ಹೇಳಿರುವುದನ್ನು ನಂಬಿ ಅವರು ಹಾಗೆಂದು ಕವಿಚರಿತೆ I, ೩೯ ರಲ್ಲಿಯೂ, ಕಾವ್ಯಾವಲೋಕನದ ಉಪೋದ್ಘಾತದಲ್ಲಿಯೂ (ಪುಟ ೩) ಶ್ರವಣಬೆಳ್ಗೊಳದ ಶಾಸನಗಳ ಎರಡನೆಯ ಮುದ್ರಣದ ಉಪೋದ್ಘಾತದಲ್ಲಿಯೂ (ಪುಟ ೧೫) ಬರೆದಿರುವರು. ಈ ಅಭಿಪ್ರಾಯವು ತಪ್ಪೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. 'ರಾಯ' ಎಂಬ ಹೆಸರು 'ಚಾಮುಂಡರಾಯ' ಎಂಬ ಹೆಸರಿನ ರೂಪಾಂತರವೇ ಹೊರತು ಅದು ಬಿರುದಲ್ಲವೆಂಬ ಅಂಶವು ಷಿಕಾರಿಪುರದ ೧೨೦, ೧೧೪ ನೇ ಶಾಸನಗಳಿಂದಲೂ ಮತ್ತು ಇತರ ಶಾಸನಗಳಿಂದಲೂ ವ್ಯಕ್ತವಾಗುವುದು. ಷಿಕಾರಿಪುರದ ಈ ೧೨೦ ನೇ ಶಾಸ

* ಕಾವ್ಯಾವಲೋಕನದ ಉಪೋದ್ಘಾತದಲ್ಲಾದರೆ ಮ|| ಆರ್. ನರಸಿಂಹಾಚಾರ್ಯರು ಭುಜಬಲಿಶತಕದ ಹೆಸರನ್ನು ಹೇಳದೆ, ಭುಜಬಲಿಚರಿತೆಯಲ್ಲಿ ಹೀಗೆ ಹೇಳಲ್ಪಟ್ಟಿರುವುದೆಂದು ಬರೆದಿರುವರು.

ನದಲ್ಲಿ (ಇದು ಕ್ರಿ. ಶ. ೧೦೪೬ ನೆಯ ಏಪ್ರಿಲ್ ೩೦ ನೆಯ ತಾರೀಖು ಆದಿತ್ಯ ವಾರದಲ್ಲಿ ಹುಟ್ಟಿತು) ಬನವಾಸೆ ೧೨೦೦೦ ಸೀಮೆಯನ್ನು ಆಳುತ್ತಿದ್ದ ಮಹಾ ಮಂಡಲೇಶ್ವರನಾದ ಒಬ್ಬ ಚಾಮುಂಡರಾಯನನ್ನು ಸ್ತುತಿಸಿ ಈ ಚಾಮುಂಡ ರಾಯನ ಆಜ್ಞಾನುಸಾರವಾಗಿ ನಾಗವರ್ಮನು ಜಿನ ವಿಷ್ಣು ಶಿವಾಲಯಾದಿಗಳನ್ನು ಮಾಡಿಸಿದನೆಂದು ಹೇಳುವ

ಬನವಾಸೆದೇಶದೊಳಗಣ |
ಜಿನನಿಳಯಂ ವಿಷ್ಣುನಿಳಯಮೀಶ್ವರನಿಳಯಂ ||
ಮುನಿಗಣನಿಳಯಮಿವಂ ರಾ |
ಯನ ಬೆಸದಿಂ ನಾಗವರ್ಮ್ಮವಿಭು ಮಾಡಿಸಿದಂ ||

ಎಂಬ ಅಂತ್ಯಪದ್ಯದಲ್ಲಿ ಈ ಚಾಮುಂಡರಾಯನು 'ರಾಯ' ಎಂಬ ಹೆಸರಿನಿಂದ ವ್ಯವಹೃತನಾಗಿರುವನು. ಹೀಗೆಯೇ ಇದೇ ಶಿಕಾರಿಪುರದ ತಾಲ್ಲೂಕಿನ ೧೫೧ ನೇ ಶಾಸನದಲ್ಲಿಯೂ ಈ ಚಾಮುಂಡರಾಯನು, 'ನೆಗಳ್ದಿ ವನೀಪಕವ್ರಜಕೆ **ರಾಯನು** ಕೊಟ್ಟ ಪೊದಳ್ದ ಪೊನ್ನರಾಶಿಗಳುಮಂ...' ಎಂಬ ಪದ್ಯದಲ್ಲಿಯೂ, 'ಬೆಸನಂ ತ್ರೈಳೋಕ್ಯಮಲ್ಲಂ ಬೆಸಸಿದನೆಲೆಲೇ ಬಂದಪಂ **ರಾಯಂ**...' ಎಂಬ ಪದ್ಯದಲ್ಲಿಯೂ 'ರಾಯ' ಎಂಬ ಹೆಸರಿನಿಂದ ವ್ಯವಹೃತನಾಗಿರುವನು. ಹೀಗೆಯೇ ಕ್ರಿ. ಶ. ೧೦೯೩ ರಲ್ಲಿ ಹುಟ್ಟಿದ ಶಿಕಾರಿಪುರದ ೧೧೪ ನೆಯ ಶಾಸನದಲ್ಲಿಯೂ ಒಬ್ಬ ಚಾಮುಂಡದಂಡನಾಯಕನನ್ನು ಸ್ತುತಿಸಿದನಂತರ ಅವನ ಮಗನಾದ ನಾಗವರ್ಮ-ದಂಡನಾಯಕನಿಗೆ * ಸರ್ವದೇವ-ದಂಡನಾಯಕನೂ, ಚಾಮುಂಡನಾಯಕನೂ ಪುತ್ರರಾದರೆಂದು ಹೇಳಿ ಈ ಇಬ್ಬರು ದಂಡನಾಯಕರು ಸ್ತುತಿಸಲ್ಪಟ್ಟಿರುವರು. ಅವರಲ್ಲಿ ಈ ಚಾಮುಂಡದಂಡನಾಯಕ ಅಥವಾ ಚಾಮುಂಡರಾಯನು (ಪಂಕ್ತಿ ೨೦, ೨೪) ೨೨, ೨೪, ೩೫ ನೆಯ ಪಂಕ್ತಿಗಳಲ್ಲಿ 'ರಾಯ' ಎಂದೇ ವ್ಯವಹೃತ ನಾಗಿರುವನು. ಹೀಗೆಯೇ ಈತನ ಪಿತಾಮಹನಾದ ಚಾಮುಂಡದಂಡನಾಯಕ ಅಥವಾ ಚಾಮುಂಡರಾಯನೂ ೧೩ ನೇ ಪಂಕ್ತಿಯಲ್ಲ 'ರಾಯ' ಎಂಬ ಹೆಸರಿನಿಂದ † ವ್ಯವಹೃತನಾಗಿರುವನು. ಹೀಗೆಯೇ ಚಿಕ್ಕಮಗಳೂರ ೧೩೭ ನೆಯ ಶಾಸನ

---

* ಈ ಚಾಮುಂಡರಾಯ-ನಾಗವರ್ಮರು ಮೇಲೆ ಹೇಳಿದ ೧೨೦ ನೆಯ ಶಾಸನದಲ್ಲಿ ಸ್ತುತ ರಾಗಿರುವ ಚಾಮುಂಡರಾಯ-ನಾಗವರ್ಮರಿಂದ ಭಿನ್ನರೆಂಬುದನ್ನು ನಾವು ಕಂಠತಃ ಹೇಳಬೇಕಾ ಗಿಲ್ಲ. ಈ ೧೧೪ ನೇ ಶಾಸನದಲ್ಲಿ ಸ್ತುತರಾದ ಈ ಇಬ್ಬರೂ ೧೨೦ ನೆಯ ಶಾಸನದಲ್ಲಿ ಸ್ತುತರಾದ ವರಂತೆ, ಕ್ರಿ. ಶ. ಸುಮಾರು ೧೦೪೭ ರಲ್ಲಿ ಇದ್ದರು.

† ಶಾಸನದಲ್ಲಾದರೆ ಈ ಹೆಸರಿನ 'ರಾ' ಎಂಬ ಅಕ್ಷರವು ಚೆನ್ನಾಗಿ ಕಾಣಿಸುವುದಿಲ್ಲ ವಾದ್ದರಿಂದ ಮುದ್ರಿತಪುಸ್ತಕದಲ್ಲಿ ಅದು ಗಲಿತವಾಗಿರುವುದು.

ದಲ್ಲಿ ಸ್ತುತನಾಗಿರುವ ಚಾಮುಂಡರಾಯನ ಮಗನಾದ ಕಾಳಿಮಯ್ಯನ ಮಗನಾದ ರಾಯ ಅಥವಾ ರಾಯಣದಂಡನಾಥನ* ಪೂರ್ಣವಾದ ಹೆಸರು 'ಚಾಮುಂಡ ರಾಯ' ಎಂದೇ ಇತ್ತೆಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

ಮೇಲೆ ಹೇಳಿದ ಚಾಮುಂಡರಾಯರೆಲ್ಲರಿಗೂ 'ರಾಯ' ಎಂಬ ಬಿರುದು ಇತ್ತೆಂದು ಹೇಳುವುದು ಅಸಾಧ್ಯವಾಗಿರುವುದರಿಂದ ಇದು ಚಾಮುಂಡರಾಯನಿಗೆ ರಾಚಮಲ್ಲನು ಕೊಟ್ಟ ಬಿರುದೆಂಬ ಕವಿಚರಿತಕಾರರ ಅಭಿಪ್ರಾಯವು ತಪ್ಪಾದುದೆಂದು ಸ್ಪಷ್ಟವಾಗುವುದು. ವಸ್ತುತಃ ಈ 'ರಾಯ' ಎಂಬ ಪದವು 'ವಿನಾಪಿ ಪ್ರತ್ಯಯಂ ಪೂರ್ವೋತ್ತರಪದಯೋರ್ವಾ ಲೋಪೋ ವಾಚ್ಯಃ' ಎಂಬ ಮೇಲೆ ಹೇಳಿದ (ಪುಟ ೧೫೮) ವಾರ್ತಿಕಕ್ಕನುಸಾರವಾಗಿ 'ಚಾಮುಂಡರಾಯ' ಎಂಬ ಪದದಲ್ಲಿ ಪೂರ್ವ ಪದ ಲೋಪವಾದಾಗ ಉಳಿಯುವ ಉತ್ತರಪದವೇ ಆಗಿರುವುದರಿಂದ ಇದು 'ಚಾಮುಂಡರಾಯ' ಎಂಬ ಹೆಸರಿನ ರೂಪಾಂತರವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. 'ಅಣ್ಣ' ಎಂಬುದೂ ಹೀಗೆಯೇ 'ಚಾಮುಂಡರಾಯ' ಎಂಬುದರ ರೂಪಾಂತರವೆಂದು ನಮಗೆ ತೋರುವುದು.

ರಾಯ ಅಥವಾ ಚಾಮುಂಡರಾಯ ಎಂಬ ಹೆಸರುಳ್ಳಂಥವರನೇಕರು ಕ್ರಿ.ಶ. ೧೧ ನೇ ಶತಮಾನದ ಮಧ್ಯಭಾಗದಲ್ಲಿ ದೊಡ್ಡ ಅಧಿಕಾರದಲ್ಲಿದ್ದರೆಂದು ನಾವು ಮೇಲೆ ಹೇಳಿರುವುದರಿಂದ ವ್ಯಕ್ತವಾಗುವುದಷ್ಟೆ. ಹೀಗೆಯೇ ರಾಚಮಲ್ಲ ಚಾಮುಂಡರಾಯರ ಗುರುವಾದ ಅಜಿತಸೇನನಿಂದ ಭಿನ್ನನಾದ ಆ ಹೆಸರಿನ ಗುರುವು ಮೇಲೆ ಹೇಳಿದ ಕಾಲದಲ್ಲಿದ್ದನೆಂದು ಕ್ರಿ. ಶ. ೧೦೭೭ ರಲ್ಲಿ ಹುಟ್ಟಿದ ನಗರದ ೩೫ ನೆಯ ಶಾಸನದಿಂದ ತಿಳಿದುಬರುವುದು. ಹೀಗೆಯೇ ಕವಿಚರಿತಕಾರರಿಂದ ಹೇಳಲ್ಪಟ್ಟಿರುವ ರಕ್ಕಸಗಂಗನಿಂದ ಭಿನ್ನನಾದ ಒಬ್ಬ ರಕ್ಕಸಗಂಗನು ಶಿವಮೊಗ್ಗಾ ೪ ನೆಯ ಶಾಸನದಲ್ಲಿ ಸ್ತುತನಾಗಿರುವನು. ಇವರಿಬ್ಬರಿಂದಲೂ ಭಿನ್ನನಾದ ಮೂರನೆಯ ರಕ್ಕಸಗಂಗನು ಹೊನ್ನಾಳಿಯ ೧೪ ನೇ ಶಾಸನದಲ್ಲಿ ಕೀರ್ತಿತನಾಗಿರುವನು. ಮೇಲೆ ಹೇಳಿದ ನಗರದ ೩೫ ನೆಯ ಶಾಸನದಲ್ಲಿ ಸ್ತುತನಾಗಿರುವ ರಕ್ಕಸಗಂಗನೂ ಹೀಗೆಯೇ ಕವಿಚರಿತಕಾರರು ಹೇಳಿರುವ ರಕ್ಕಸಗಂಗನಿಂದ ಭಿನ್ನನಾಗಿರುವಂತೆ ತೋರುವುದು.

'ಗಂಡರಮೂಕುತಿಯೆನಿಸಿದ | ಮಂಡಳಿಕರ ಸಂಧಿವಿಗ್ರಹಿ ರಾಯಂ ||
ಕೊಂಡಾಡಿ ಪೊರೆದನೆನೆ ಧರೆ | ಕೊಂಡಾಡದೆ ಕೊಂಡು ಕೊನೆಯದೇ ನಾಕಿಗಸಂ ||'

* ಈ ರಾಯ ಅಥವಾ ಚಾಮುಂಡರಾಯ-ದಂಡನಾಥನೂ, ಇವನ ಪಿತಾಮಹನಾದ ಚಾಮುಂಡರಾಯನೂ ಕ್ರಿ. ಶ. ಸುಮಾರು ೧೧೦೦ ರಲ್ಲಿಯೂ ೧೦೪೦ ರಲ್ಲಿಯೂ ಇದ್ದರೆಂದು ಈ ಶಾಸನದಿಂದ ನಾವು ಊಹಿಸಬಹುದು.

ಎಂಬ ಮೇಲೆ ಹೇಳಿದ ಛಂದೋಂಬುಧಿಯ ಪದ್ಯದಲ್ಲಿರುವ ' ಗಂಡರ ಮೂಕುತಿ ' ಯೆಂಬ ಪದವು ರಾಯನ (ಎಂದರೆ ಚಾಮುಂಡರಾಯನ) ಬಿರುದೆಂದು ಕವಿಚರಿತಕಾರರಾದ ಮ|| ಆರ್| ನರಸಿಂಹಾಚಾರ್ಯರು ಅರ್ಥಮಾಡಿರುವರು (ಕಾವ್ಯಾವಲೋಕನದ ಉಪೋದ್ಘಾತ, ಪುಟ ೨). ಆದರೆ ಚಾವುಂಡರಾಯಪುರಾಣದಲ್ಲಿ ಅವನು ತನಗೆ ಹೇಳಿಕೊಂಡಿರುವ ಬಿರುದುಗಳಲ್ಲಿ (ಕವಿಚರಿತೆ I, ೩೯, ೪೦ ನ್ನು ನೋಡಿ) ಈ ಬಿರುದು ಇಲ್ಲವಾದುದರಿಂದ, ' ಗಂಡರ ಮೂಕುತಿಯೆನಿಸಿದ ' ಯೆಂಬುದನ್ನು ' ಮಂಡಳಿಕರ ' ಎಂಬ ಪದಕ್ಕೆ ವಿಶೇಷಣವನ್ನಾಗಿಮಾಡಿ ಅರ್ಥಮಾಡುವುದೇ ಉಚಿತವೆಂದು ನಮಗೆ ತೋರುವುದು. ಮೇಲೆ ಪ್ರಸ್ತುತರಾದ ರಕ್ಕಸಗಂಗರಲ್ಲಿ, ನಗರದ ೩೫ ನೇ ಶಾಸನದಲ್ಲಿ ಕೀರ್ತಿತನಾಗಿರುವವನಿಗೆ ' ಗಂಡರ ಮೂಕುತಿ ' ಎಂಬ ಬಿರುದು ಇತ್ತೆಂದು ಆ ಶಾಸನದಲ್ಲಿರುವ—

ನಿರವದ್ಯಚರಿತನನ್ವಯ |
ಧುರಂಧರಂ ಸತ್ಯವಾಕ್ಯನಿರ್ಬ್ಬರಗಂಡಂ ||
ಪರಚಕ್ರಕರ್ಕ್ಕಶಂ ಗಂ ||
ಡರಮೂಕುತಿ ಗಂಡದಲ್ಲಳಂ ನೃಪತಿಳಕಂ ||
ವಸುಧಾಲಂಕಾರನಾರೋಹಕರ ವೊಗದ ಕೈ ಬಲ್ಕಣಿ ಬ್ರಹ್ಮನುಗ್ರಾ |
ರಿಸಮೂಹೋತ್ಸಾಹಶಕ್ತಿಪ್ರಳಯಕರಕರಾಭೀಳಖಳ್ಗಂ ಯಶಶ್ರೀ ||
ಪ್ರಸರಪ್ರಚ್ಛನ್ನದಿಙ್ಮಂಡಳನಧಿಕಬಳಂ ಗಂಗನಾರಾಯಣಂ ರ |
ಕ್ಕಸಗಂಗಂ ಗಂಗಚೂಡಾಮಣಿ ನೃಪತಿಳಕಂ ವೀರಮಾರ್ತ್ತಂಡದೇವ ||
ತಳಿಯಂ ದಾಟುವ ಕರಿಯಂ |
ಘಳಿಲೆನೆ ಪಿಡಿದುಗಿಯೆ ನಿಜಶಿರಂ ಪೇಚಕಮಂ ||
ಕಳಿದುದು ಕರಿಸಿರಮುರಮುಂ |
ಪಳಿಲೆನೆ ತಾಗಿದುದು ಕದನಕಂಠೀರವನ ||

ಎಂಬ ಪದ್ಯಗಳಿಂದ ತಿಳಿದುಬರುವುದು. ಮೇಲೆ ಪ್ರಸ್ತುತರಾದ ಇನ್ನಿಬ್ಬರು ರಕ್ಕಸಗಂಗರಲ್ಲಾದರೆ ಆರಿಗೂ ಈ ಬಿರುದು ನಮಗೆ ತಿಳಿದಂತೆ ಇರಲಿಲ್ಲವಾದುದರಿಂದ ಛಂದೋಂಬುಧಿಯಲ್ಲಿ ಸ್ತುತನಾಗಿರುವ ರಕ್ಕಸಗಂಗನು ಈ ನಗರದ ೩೫ ನೇ ಶಾಸನದಲ್ಲಿ ಸ್ತುತನಾಗಿರುವನೇಯೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇವನು ಕ್ರಿ. ಶ. ೯೭೪-೯೮೪ ರಲ್ಲಿ ಆಳುತ್ತಿದ್ದ ಮೇಲೆಹೇಳಿದ ರಾಜಮಲ್ಲನ ತಮ್ಮನಾದ ವಾಸವದೇವನ ಮತ್ತು ಕಂಚಲದೇವಿಯ ಮಗನೆಂದೂ, ಇವನ ಹೆಸರು ಗೋವಿಂದರದೇವನೆಂದೂ, ಇವನಿಗೆ ಅರುಮುಳಿದೇವನೆಂಬ ತಮ್ಮನಿದ್ದನೆಂದೂ, ಇವನ ಗುರುವು ದ್ರವಿಡಸಂಘದ ನಂದಿಗಣದ ಅರುಂಗು (ಗ) ಳಾನ್ವಯದ ವಿಮಲಚಂದ್ರ ಭಟ್ಟಾರ

ಕನ ಶಿಷ್ಯನಾದ ಕನಕಸೇನವಾದಿರಾಜನ ಶಿಷ್ಯನಾದ ಶ್ರೀವಿಜಯಭಟ್ಟಾರಕನೆಂದೂ* ಹೇಳಿ ಆವನ ಶಿಷ್ಯರಾದ ಶ್ರೇಯಾಂಸದೇವ, ಕಮಳಭದ್ರದೇವ, ಅಜಿತಸೇನದೇವ

---

*ಜರ್ಮನ್ ಓರಿಯಂಟಲ್ ಸೊಸೈಟಿ ಜರ್ನಲಿನ (Zeitschrift der Dewtschen Morgenlaendischen Gesellschaft) ೬೮ ನೇ ಸಂಪುಟದಲ್ಲಿ (ಪುಟ ೬೯೫ ಆದಿ) ಡಾ|| ಹುಲ್ಟ್‌ಷ್‌ರವರು ದ್ರವಿಡಸಂಘದ ನಂದಿಗಣದ ಅರುಂಗುಳಾನ್ವಯದ ಜೈನ ಗುರುಗಳನ್ನು ಕುರಿತು ಬರೆದಿರುವ 'ಮೈಸೂರು ದೇಶದ ದಿಗಂಬರರು' ಎಂಬ ಒಂದು ಲೇಖನದಲ್ಲಿ ಈ ಶ್ರೀವಿಜಯನು ಗಂಗರಾಜನಾದ ಬೂತುಗನ (ಕ್ರಿ. ಶ. ೯೪೦-೯೫೩) ಮತ್ತು ರಕ್ಕಸಗಂಗನ (ಕ್ರಿ. ಶ. ೯೭೮) ಗುರುವಾಗಿದ್ದನೆಂದು ಬೇಲೂರು ೧೭ ನೆಯ, ಮತ್ತು ನಗರದ ೩೫ ನೆಯ ಶಾಸನಗಳಲ್ಲಿ ಹೇಳಲ್ಪಟ್ಟಿರುವುದೆಂದು ಬರೆದು ಆದ್ದರಿಂದ ಇವನು ಆ ಕಾಲದಲ್ಲಿ ಜೀವಿಸಿದ್ದನೆಂದು ಹೇಳಿರುವರು. ಕವಿಚರಿತಕಾರರೂ ಕೂಡ ಹೀಗೆಯೇ ಶ್ರೀವಿಜಯನು ೧೦ ನೆಯ ಶತಮಾನದಲ್ಲಿದ್ದ ಗಂಗರಾಜನಾದ ಬೂತುಗನ, ಎಂದರೆ ಮೇಲೆ ಹೇಳಿದ ಬೂತುಗನ ಗುರುವಾಗಿದ್ದನೆಂದು ಹೇಳಿರುವರು (I, ೩೭೪).

ಈ ಅಭಿಪ್ರಾಯವು ತಪ್ಪಾದುದು. ಈ ಶ್ರೀವಿಜಯನು ಚಾಲುಕ್ಯಚಕ್ರವರ್ತಿ ಜಯಸಿಂಹ_ಜಗದೇಕಮಲ್ಲನಿಗೆ ಗುರುವಾಗಿದ್ದು ಪಾರ್ಶ್ವನಾಥಚರಿತವನ್ನು ಕ್ರಿ. ಶ ೧೦೨೫ ರಲ್ಲಿ ಬರೆದ ಜಗದೇಕಮಲ್ಲ ವಾದಿರಾಜನ ಹಿರಿಯಸಧರ್ಮನಾಗಿದ್ದುದರಿಂದ (ಬೇಲೂರು ೧೭ ನೆಯ ಮತ್ತು ನಗರ ೩೯ ನೆಯ ಶಾಸನಗಳನ್ನು ನೋಡಿ) ಇವನು ಕ್ರಿ. ಶ. ೯೪೦-೯೫೩ ರಲ್ಲಿ ಆಳುತ್ತಿದ್ದ ಬೂತುಗ ಪೆರ್ಮಾಡಿಗೆ ಗುರುವಾಗಿದ್ದನೆಂಬುದು ಅಸಂಭಾವನೀಯವಾಗಿರುವುದು. ಆದ್ದರಿಂದ ಬೇಲೂರು ೧೭ ನೇ ಶಾಸನದಲ್ಲಿ ಹೇಳಲ್ಪಟ್ಟಿರುವ ಶ್ರೀವಿಜಯಶಿಷ್ಯನಾದ ಬೂತುಗ-ಪೆರ್ಮಾಡಿಯು ಕ್ರಿ. ಶ. ೧೧ ನೇ ಶತಮಾನದಲ್ಲಿದ್ದ ಒಬ್ಬ ಗಂಗರಾಜನಾಗಿರಬೇಕು.

ಹೀಗೆಯೇ ಶ್ರೀವಿಜಯಶಿಷ್ಯನಾದ ರಕ್ಕಸಗಂಗ-ಪೆರ್ಮಾನಡಿಯು ಕ್ರಿ. ಶ. ೯೭೮ ರಲ್ಲಿ ಆಳುತ್ತಿದ್ದ ಗಂಗರಾಜನೆಂಬ ಡಾ|| ಹುಲ್ಟ್‌ಷ್‌ರವರ ಅಭಿಪ್ರಾಯವೂ ತಪ್ಪು. ಈ ರಕ್ಕಸಗಂಗನು ಕ್ರಿ. ಶ. ಸುಮಾರು ೯೭೪-೯೮೪ ರಲ್ಲಿ ರಾಜ್ಯವಾಳುತ್ತಿದ್ದ ರಾಚಮಲ್ಲನ ತಮ್ಮನಾದ ವಾಸವದೇವನ ಮಗನೆಂದು ನಗರದ ಈ ೩೯ ನೇ ಶಾಸನದಲ್ಲಿಯೇ ಹೇಳಿರುವುದು. ಶ್ರೀವಿಜಯನ ಗುರುವಾದ ಕನಕಸೇನ ವಾದಿರಾಜನಿಗೆ ಶಿಷ್ಯನಾಗಿದ್ದನೆಂದು ಈ ಶಾಸನದಲ್ಲಿ ಹೇಳಲ್ಪಟ್ಟಿರುವ ರಾಚಮಲ್ಲನು ಈ ರಾಚಮಲ್ಲನೇ ಎಂಬುದರಲ್ಲಿ ಪ್ರಾಯಃ ಯಾವ ಸಂದೇಹವೂ ಇಲ್ಲವಾದುದರಿಂದ 'ಕನಕಸೇನ ವಾದಿರಾಜನ ಶಿಷ್ಯನಾದ ರಾಚಮಲ್ಲನು ಕ್ರಿ. ಶ. ೯೪೦ ಕ್ಕಿಂತ ಹಿಂದೆ ಆಳುತ್ತಿದ್ದ ಗಂಗರಾಜನಾದ ೧ ನೆಯ ರಾಚಮಲ್ಲನು' ಎಂಬ ಡಾ|| ಹುಲ್ಟ್‌ಷ್‌ರವರ ಅಭಿಪ್ರಾಯವೂ (ಪುಟ ೬೯೬) ಹೀಗೆಯೇ ತಪ್ಪಾಗಿರುವುದು. ಆದ್ದರಿಂದ—'ಕರುಣದಿಂ ಮೃಗಮುಂ ನಿಜಾಂಕದೊಳಿಟ್ಟು............ಧರೆಗಧೀಶ್ವರನಕ್ಕುಮೇ ಪರಚಕ್ರಕರ್ಕಶನಲ್ಲದಂ' ಎಂಬ ಕಾವ್ಯಾವಲೋಕನದ ೧೬೪ ನೆಯ ಪದ್ಯದಲ್ಲಿನ 'ಪರಚಕ್ರಕರ್ಕಶಂ' ಎಂಬ ಪದವೂ, 'ಕಲಿ ಪಾರ್ಥಂ ಪಾರ್ಥನಿಂದಂ ಕಲಿ ರವಿತನಯಂ........ ಅಂಜನಾಪುತ್ರನಿಂದಂ ಕಲಿ ಧಾತ್ರೀಚಕ್ರದೊಳ್ ವಿಕ್ರಮಗುಣನಿಳಯಂ ವೀರಮಾರ್ತಾಂಡದೇವಂ' ಎಂಬ ೬೫೭ ನೇ ಪದ್ಯದಲ್ಲಿರುವ 'ವೀರಮಾರ್ತಾಂಡದೇವ' ಎಂಬ ಪದವೂ ಈ ರಕ್ಕಸಗಂಗನನ್ನು ನಿರ್ದೇಶಿಸುವುವೆಂದು ತೋರುವುದು.

ಮೊದಲಾದವರನ್ನು ಹೊಗಳಿ, ಶಕವರ್ಷ ೯೪೯ ನೆಯ ಪಿಂಗಳ ಸಂವತ್ಸರದ ಜ್ಯೇಷ್ಠ ಶುದ್ಧ ಬಿದಿಗೆ ಬೃಹಸ್ಪತಿವಾರದಂದು (ಎಂದರೆ ಕ್ರಿ. ಶ. ೧೦೭೭ ನೆಯ ಏಪ್ರಿಲ್ ೨೭ ನೇ ತಾರೀಖು ಬೃಹಸ್ಪತಿವಾರದಂದು) ಹುಂಚದಲ್ಲಿರುವ ಪಂಚಕೂಟ ಬಸದಿಗಾಗಿ ಈ ಕಮಳಭದ್ರದೇವನಿಗೆ ಮಹಾಮಂಡಲೇಶ್ವರ ನನ್ನಿಶಾಂತರನು ಗ್ರಾಮಾದಿಗಳನ್ನು ಕೊಟ್ಟನೆಂದು ಈ ಶಾಸನದಲ್ಲಿ ಹೇಳಿರುವುದು. ಈ ನನ್ನಿಶಾಂತರನು ಮೇಲೆ ಹೇಳಿದ ಅರುಮುಳಿದೇವನ ದೌಹಿತ್ರನಾದುದರಿಂದ ಈ ಅರುಮುಳಿದೇವನ ಅಣ್ಣನಾದ ಗೋವಿಂದರದೇವ ಅಥವಾ ರಕ್ಕಸಗಂಗನು ಕ್ರಿ. ಶ. ಸುಮಾರು ೧೦೫೦ ರವರೆಗೂ ಜೀವಿಸಿರಬಹುದು.

ಛಂದೋಂಬುಧಿಯಲ್ಲಿ ಸ್ತುತನಾಗಿರುವ ರಾಯ ಅಥವಾ ಚಾಮುಂಡರಾಯನು ಚಾವುಂಡರಾಯಪುರಾಣದ ಕರ್ತೃವೂ ಮಾರಸಿಂಹ ರಾಜಮಲ್ಲರ ಸೇನಾಪತಿಯೂ ಆದ ಚಾಮುಂಡರಾಯನೇ ಆಗಿದ್ದನೆಂಬುದು ಅಸಂಭವವಾಗಿಲ್ಲ.* ಆದಾಗ್ಯೂ

ಈ ಗ್ರಂಥದ ೧೬೧, ೧೬೨ ನೇ ಪದ್ಯಗಳಲ್ಲಿ ಸ್ತುತಳಾಗಿರುವ ಸುಗ್ಗವ್ವೆಯು ನಾಗವರ್ಮನ ಪೋಷಕನಾದ ಚಾಲುಕ್ಯ ಜಯಸಿಂಹ-ಜಗದೇಕಮಲ್ಲನ ರಾಣಿಯಾಗಿರಬಹುದು (ಈ ಹೆಸರಿನ ರಾಣಿಯೊಬ್ಬಳು ಅವನಿಗೆ ಇದ್ದಳೆಂದು ಬೇಲೂರು ೧೧೨ನೇ ಶಾಸನದಿಂದ ತಿಳಿದುಬರುವುದು). ಹೀಗೆಯೇ ೭೩೧, ೮೬೩ ನೆಯ ಶಾಸನಗಳಲ್ಲಿ ಸ್ತುತನಾಗಿರುವ ಶ್ರೀಗಂಡಮಾರ್ತಂಡನು ರಾಷ್ಟ್ರಕೂಟ ರಾಜನಾದ ೩ ನೆಯ ಕೃಷ್ಣನಾಗಿರಬಹುದು (ಶ್ರವಣಬೆಳ್ಗೊಳದ ೩೬ನೇ ಶಾಸನದ ೯ನೇ ಪಂಕ್ತಿಯನ್ನು ನೋಡಿ). ೧೮೮ ನೆಯ ಪದ್ಯದಲ್ಲಿ ಸ್ತುತನಾಗಿರುವ ವಾದಿರಾಜನೂ ಹೀಗೆಯೇ ಕವಿಚರಿತಕಾರರು ಹೇಳಿರುವಂತೆ (ಕಾವ್ಯಾವಲೋಕನ, ಉಪೋದ್ಘಾತ, ಪುಟ ೪೫) ಜಗದೇಕಮಲ್ಲ ವಾದಿರಾಜನೆಂಬ ದ್ರವಿಡಸಂಘದ ಅರುಂಗುಳಾನ್ವಯದ ಜೈನಗುರುವೇ ಎಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ.

* ವಸ್ತುತಃ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನ ೧೯೨೩ ನೇ ವರ್ಷದ ವಾರ್ಷಿಕರಿಪೋರ್ಟಿನಲ್ಲಿ (ಪುಟ ೧೭; §೫೯) ಈ ಚಾಮುಂಡರಾಯನು ಕ್ರಿ. ಶ. ೧೦೨೮ನೇ ಮಾರ್ಚಿ ೩ನೇ ತಾರೀಖು ಭಾನುವಾರದಂದು ಶ್ರವಣಬೆಳ್ಗೊಳದಲ್ಲಿ ಗೊಮ್ಮಟದೇವರನ್ನು ಪ್ರತಿಷ್ಠೆ ಮಾಡಿದನೆಂದು ಡಾ|| ಶಾಮುಶಾಸ್ತ್ರಿಗಳು ಹೇಳಿರುತ್ತಾರೆ. ಇದು ಸಂಭವವಾಗಿಯೇ ಇದ್ದಾಗ್ಯೂ ಈ ಅಭಿಪ್ರಾಯಕ್ಕೆ ಆಧಾರಭೂತವೆಂದು ಡಾ|| ಶಾಸ್ತ್ರಿಗಳು ಕೊಟ್ಟಿರುವ ಕಾರಣವು ಕಾರ್ಯಕಾರಿಯಾದುದಲ್ಲ. ಪ್ರಥಮತಃ ಅವರು ಉದಾಹರಿಸಿರುವ 'ಕಲ್ಕ್ಯಬ್ದೇ ಷಟ್‌ಛತಾಖ್ಯೇ ವಿನುತವಿಭವ ಸಂವತ್ಸರೇ ಮಾಸಿ ಚೈತ್ರೇ....' ಎಂದು ಮೊದಲಾಗುವ ಶ್ಲೋಕದಲ್ಲಿ ಮೊದಲನೆಯ ಪದವು 'ಕಲ್ಕ್ಯಬ್ದೇ' ಎಂದು ಇರಬೇಕೆಂಬುದರಲ್ಲಿಯೂ, 'ಕಲ್ಕ್ಯಬ್ದೇ' ಎಂಬುದು ಒಂದು ಅಪಪಾಠವೆಂಬುದರಲ್ಲಿಯೂ ಪ್ರಾಯಶಃ ಯಾವ ಸಂದೇಹವೂ ಇಲ್ಲ; ಈ ವಿಷಯದಲ್ಲಿ "ಶ್ರವಣಬೆಳ್ಗೊಳದ ಶಾಸನ" ಗಳ ೨ ನೇ ಮುದ್ರಣದಲ್ಲಿ ಮ|| ಆರ್. ನರಸಿಂಹಾಚಾರ್ಯರು ಬರೆದಿರುವ ಉಪೋದ್ಘಾತದ ೧೫ ನೆಯ ಪುಟವನ್ನು ನೋಡಿ.

ತಾನು ರಾಚಮಲ್ಲನಲ್ಲಿ ಸೇನಾನಾಯಕನೂ† ಮಂತ್ರಿಯೂ ಆಗಿದ್ದಂತೆ ಈತನು ಚಾವುಂಡರಾಯಪುರಾಣದಲ್ಲಿ ಹೇಳಿಕೊಂಡಿರುವುದನ್ನೂ, ಛಂದೋಂಬುಧಿಯಲ್ಲಿ ಸ್ತುತನಾಗಿರುವ ರಾಯನಾದರೆ ಮಂಡಲಿಕರಲ್ಲಿ **ಸಂಧಿವಿಗ್ರಹಿಯೂ** ಮಂತ್ರಿಯೂ ಆಗಿದ್ದನೆಂಬುದನ್ನೂ ಪರ್ಯಾಲೋಚಿಸಿದರೆ, ನಾಗವರ್ಮಕವಿಯ ಪೋಷಕನಾದ ರಾಯನು ಚಾವುಂಡರಾಯಪುರಾಣದ ಕರ್ತೃವಲ್ಲವೆಂದೂ, ಇವನಿಂದ ಭಿನ್ನನಾದ ಯಾವನೋ ಒಬ್ಬ ಚಾವುಂಡರಾಯನಾಗಿದ್ದನೆಂದೂ ನಾವು ಊಹಿಸಬೇಕಾಗುವುದು.

ಇಷ್ಟರಮೇಲೆ 'ಕಲ್ಕ್ಯಬ್ದೇ' ಎಂಬುದು ಸರಿಯಾದ ಪಾಠವೇ ಆಗಿರುವುದೆಂದು ಒಂದುವೇಳೆ ನಾವು ಒಪ್ಪಿಕೊಂಡರೂ ಕೂಡ ಕ್ರಿ. ಶ. ೧೦೨೮ ನೇ ಮಾರ್ಚಿ ೩ ನೇ ತಾರೀಖು ಭಾನುವಾರದ ದಿವಸಕ್ಕೆ ಡಾ|| ಶಾಸ್ತ್ರಿಗಳು ಹೇಳುವಂತೆ ವಿಭವಸಂವತ್ಸರದ ಚೈತ್ರ ಶುದ್ಧ ಪಂಚಮಿಾ ತಿಥಿ, ಮೃಗಶಿರಾನಕ್ಷತ್ರ ಸೌಭಾಗ್ಯಯೋಗವೆಂಬ ಈ ವಾರರ ಸಂಬಂಧವಿರಲಿಲ್ಲ. ಮೇಲೆ ಹೇಳಿದ ರಿಪೋರ್ಟಿನ ೧೭ ನೇ ಪುಟದಲ್ಲಿ ಡಾ|| ಶಾಸ್ತ್ರಿಗಳು ಮಾಡಿರುವ ಲೆಕ್ಕಾಚಾರದಿಂದಲೇ ಮೃಗಶಿರಾನಕ್ಷತ್ರವು ಆ ಭಾನುವಾರದಲ್ಲಿ ಇರಲಿಲ್ಲವೆಂದೂ, ಆದರ ಮಾರನೇ ಸೋಮವಾರದಂದು ಸೂರ್ಯೋದಯವಾದ ಮೇಲೆ ಆ ನಕ್ಷತ್ರ ಹುಟ್ಟಿತೆಂದೂ ಸ್ಪಷ್ಟವಾಗುವುದು.

ಆದರೆ ಡಾ|| ಶಾಸ್ತ್ರಿಗಳು ಮಾಡಿರುವ ಲೆಕ್ಕಾಚಾರವು ಸರಿಯಾಗಿಲ್ಲ. ಅವರು ಉಪಯೋಗಿಸಿರುವ ಸ್ವಾಮಿಕಣ್ಣುಪಿಳ್ಳೆಯವರ ಕೋಷ್ಠಕಗಳನ್ನೇ ನಾವೂ ಉಪಯೋಗಿಸಿ ಸರಿಯಾಗಿ ಲೆಕ್ಕಾಚಾರ ಮಾಡಿದಲ್ಲಿ ಉಕ್ತ ಕ್ರಿ. ಶ. ೧೦೨೮ ನೇ ಮಾರ್ಚಿ ೩ ನೇ ತಾರೀಖು ಭಾನುವಾರ ರಾತ್ರಿ ಕುಂಭಲಗ್ನದ ಸಮಯದಲ್ಲಿ ಕೃತ್ತಿಕಾನಕ್ಷತ್ರವೂ ವಿಷ್ಕಂಭಯೋಗವೂ ಇದ್ದುವೆಂದು ಸ್ಪಷ್ಟವಾಗುವುದು. ಮೃಗಶಿರಾನಕ್ಷತ್ರವು ಆ ಮಾರ್ಚಿ ತಿಂಗಳಿನ ೫ ನೆಯ ತಾರೀಖು ಮಂಗಳವಾರದಲ್ಲಿ ಸುಮಾರು ಮಧ್ಯಾಹ್ನ ಸಮಯಕ್ಕೆ ಹುಟ್ಟಿತು. ಸೌಭಾಗ್ಯಯೋಗವೂ ಅದೇ ಮಂಗಳವಾರ ಸೂರ್ಯೋದಯಾತ್ಪರ ಸುಮಾರು ೫೦ ಘಳಿಗೆಗೆ ಹುಟ್ಟಿತು.

ಡಾ|| ಶಾಸ್ತ್ರಿಗಳು ಹೇಳಿರುವ ಕ್ರಿ. ಶ. ೧೦೨೮ ನೇ ಮಾರ್ಚಿ ೩ ನೇ ತಾರೀಖು ಭಾನುವಾರವು 'ಕಲ್ಕ್ಯಬ್ದೇ ಷಟ್‌ಛತಾಖೇ....' ಎಂಬ ಮೇಲೆ ಹೇಳಿದ ಶ್ಲೋಕದಲ್ಲಿ ನಿರ್ದಿಷ್ಟವಾದ ಭಾನುವಾರವಲ್ಲವೆಂದೂ ಆ ದಿವಸ ಚಾಮುಂಡರಾಯನು ಗೊಮ್ಮಟದೇವರ ಪ್ರತಿಷ್ಠೆಯನ್ನು ಮಾಡಲಿಲ್ಲವೆಂದೂ ಸ್ಪಷ್ಟವಾಗುವುದು. ಆದ್ದರಿಂದ 'ಚಾಮುಂಡರಾಯನು ಕ್ರಿ. ಶ. ೧೦೨೮ನೇ ಮಾರ್ಚಿ ೩ ನೇ ತಾರೀಖು ಭಾನುವಾರದಂದು ಗೊಮ್ಮಟದೇವರನ್ನು ಪ್ರತಿಷ್ಠೆಮಾಡಿದನು' ಎಂಬ ಡಾ|| ಶಾಮಶಾಸ್ತ್ರಿಗಳ ಅಭಿಪ್ರಾಯಕ್ಕೆ ಯಾವ ಆಧಾರವೂ ಇಲ್ಲ.

† 'ಗಂಗಮಂಡಲಚಕ್ರೇಶ್ವರ ಕಟಕೋತ್ತಮನಾಯಕ ವಿರಚನೆಯಿನನರ್ಘ್ಯ ರತ್ನಮಾದಂ ರತ್ನಂ' ಎಂಬ ಸಾಹಸಭೀಮವಿಜಯದಲ್ಲಿನ ವಾಕ್ಯದಿಂದಲೂ ಹೀಗೆಯೇ ಈ ಚಾಮುಂಡರಾಯನು 'ಗಂಗಮಂಡಲಚಕ್ರೇಶ್ವರಕಟಕದ ಉತ್ತಮನಾಯಕ' ಎಂದರೆ ಗಂಗಮಂಡಲಾಧೀಶ್ವರನ ಸೇನೆಯ ಶ್ರೇಷ್ಠನಾಯಕನಾಗಿ ಅಥವಾ ಗಂಗರಾಜನ ಬಳಿಯಲ್ಲಿ ಸೇನಾನಾಯಕನಾಗಿ ಇದ್ದನೆಂದೇ ಸೂಚಿಸಲ್ಪಟ್ಟಿರುವುದು.

ಛಂದೋಂಬುಧಿಯಲ್ಲಿ ಕೀರ್ತಿತನಾಗಿರುವ ಅಜಿತಸೇನಮುನಿಯು ರಾಚಮಲ್ಲ, ಚಾಮುಂಡರಾಯರ ಗುರುವಾದ ಅಜಿತಸೇನಮುನಿಯೋ ಅಥವಾ ಮೇಲೆ ಹೇಳಿದ ರಕ್ಕಸಗಂಗನಿಗೆ ಗುರುವಾಗಿದ್ದ ಶ್ರೀವಿಜಯಭಟ್ಟಾರಕನ ಶಿಷ್ಯನಾದ ಅಜಿತಸೇನ ಮುನಿಯೋ, ಅಥವಾ ಇವರಿಬ್ಬರಿಂದಲೂ ಭಿನ್ನನಾದ ಈ ಹೆಸರಿನ ಮೂರನೆಯ ಗುರುವೋ ಎಂಬುದನ್ನು ನಿರ್ಣಯಿಸಿ ಹೇಳುವುದಕ್ಕೆ ಯಾವ ಆಧಾರವೂ ನಮಗೆ ದೊರೆತಿಲ್ಲ. ಆದಾಗ್ಯೂ ರಾಚಮಲ್ಲ, ಚಾಮುಂಡರಾಯರ ಗುರುವಾದ ಅಜಿತಸೇನ ಮುನಿಯು ಕ್ರಿ. ಶ. ೯೬೧-೯೭೪ ರಲ್ಲಿ ಆಳುತ್ತಿದ್ದ ಗಂಗರಾಜನಾದ ಮಾರಸಿಂಹ ನಿಗೂ ಗುರುವಾಗಿದ್ದನೆಂದು ಶ್ರವಣಬೆಳ್ಗೊಳದ ೫೯ (೩೮) ನೆಯ ಶಾಸನದಿಂದ ತಿಳಿದುಬರುವುದರಿಂದ ಈ ಅಜಿತಸೇನನು ಕ್ರಿ. ಶ. ೧೧ ನೇ ಶತಮಾನದ ದ್ವಿತೀಯ ಪಾದದಲ್ಲಿ ಗ್ರಂಥಗಳನ್ನು ಬರೆದ ನಾಗವರ್ಮನ ಗುರುವಾಗಿರಲಾರನೆಂದು ನಮಗೆ ತೋರುವುದು.

ಛಂದೋಂಬುಧಿ, ಕರ್ಣಾಟಕಭಾಷಾಭೂಷಣ, ಕಾದಂಬರೀ, ವಸ್ತುಕೋಶ, ಕಾವ್ಯಾವಲೋಕನಗಳನ್ನು ಬರೆದ ಈ ನಾಗವರ್ಮನು ಕ್ರಿ. ಶ. ೧೦೧೫-೧೦೪೨ ರಲ್ಲಿ ರಾಜ್ಯವಾಳುತ್ತಿದ್ದ ಚಾಲುಕ್ಯಚಕ್ರವರ್ತಿ-ಜಯಸಿಂಹ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂದು 'ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವರ್ಮಂ......' ಎಂಬ (ಮೇಲೆ ಹೇಳಿದ) ಜನ್ನನ ಅನಂತನಾಥಪುರಾಣದ ಪದ್ಯದಿಂದ ತಿಳಿದುಬರುವುದು (ಮೇಲೆ ೧೩೦-೧೩೨ನೆಯ ಪುಟಗಳನ್ನು ನೋಡಿ). ಇವನು ಛಂದೋಂಬುಧಿಯಲ್ಲಿ ಸ್ತುತಿಸಿರುವ ರಕ್ಕಸಗಂಗನು ಸುಮಾರು ಕ್ರಿ. ಶ ೧೦೫೦ ರ ವರೆಗೂ ಜೀವಿಸಿದ್ದನೆಂದು ನಾವು ಮೇಲೆಯೇ (ಪುಟ ೧೭೪) ಹೇಳಿರುವೆವು. ಇವನು ಕಾದಂಬರಿಯ ಅಂತ್ಯಪದ್ಯದಲ್ಲಿ ಸ್ತುತಿಸಿರುವ ಭೋಜರಾಜ ಕ್ಷಿತೀಶನು ಕವಿಚರಿತಕಾರರು ಹೇಳಿರುವಂತೆ ಧಾರಾನಗರದ ಭೋಜರಾಜನೇ ಆಗಿದ್ದನೆಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ. ಈ ಭೋಜರಾಜನು ಕ್ರಿ. ಶ. ೧೦೧೮ ರಿಂದ * ೧೦೬೦ ರ ವರೆಗೆ ಆಳುತ್ತಿದ್ದನೆಂದು ಡಾ|| ವಿಂಟರ್‌ನಿಟ್ಸ್‌ರವರ ಪೂರ್ವನಿರ್ದಿಷ್ಟಗ್ರಂಥದಲ್ಲಿ (ಸಂಪುಟ ೩, ಪುಟ ೫೨) ಹೇಳಲ್ಪಟ್ಟಿರುವುದು. ಆದ್ದರಿಂದ ನಾಗವರ್ಮನು ಮೇಲೆ ಹೇಳಿದ ತನ್ನ ಗ್ರಂಥಗಳನ್ನು ಕ್ರಿ. ಶ. ಸುಮಾರು ೧೦೩೦-೧೦೫೦ ರಲ್ಲಿ ಬರೆದನೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವೇನೂ ಇರಲಾರದು.

---

* ಆದರೆ ಮೇಲೆ ೧೩೧ ನೆಯ ಪುಟದಲ್ಲಿನ ಟಿಪ್ಪಣಿಯನ್ನು ನೋಡಿ.

ಜಯಸಿಂಹ-ಜಗದೇಕಮಲ್ಲನ ಬಳಿಯಲ್ಲಿ ಇವನು ಕಟಕೋಪಾಧ್ಯಾಯನಾಗಿದ್ದಾಗ ಇವನಿಗೆ 'ಅಭಿನವಶರ್ವವರ್ಮ' ಎಂಬ ಬಿರುದಿತ್ತೆಂದೂ, ಆ ಕಾಲದಲ್ಲಿ ಇವನು ಕಾದಂಬರಿಯನ್ನು ಬರೆದಿದ್ದನೆಂದೂ ಮೇಲೆ ಹೇಳಿದ ಅನಂತನಾಥ ಪುರಾಣ ಪದ್ಯದಿಂದ ಸೂಚಿಸಲ್ಪಟ್ಟಿರುವುದಷ್ಟೆ (ಮೇಲೆ ೧೭೩ ನೇ ಪುಟವನ್ನು ನೋಡಿ). 'ಅಭಿನವಶರ್ವವರ್ಮ' ಎಂಬ ಈ ಬಿರುದು ತನಗೆ ಬಂದುದಕ್ಕೆ ಕಾರಣವನ್ನು ನಾಗವರ್ಮನು ಕಾವ್ಯಾವಲೋಕನದ ಶಬ್ದಸ್ಮೃತ್ಯಧಿಕರಣವೆಂಬ ಒಂದನೇ ಅಧಿಕರಣದ ಅಂತ್ಯದಲ್ಲಿರುವ 'ಅಭಿಮತಶಬ್ದಸಂಸ್ಕರಣದಿಂ...' ಎಂಬ ಪದ್ಯದಲ್ಲಿ (ಮೇಲೆ ೧೫೩ ನೆಯ ಪುಟವನ್ನು ನೋಡಿ) ಹೇಳಿಕೊಂಡಿರುವನು. ಈ ಅಧಿಕರಣದಲ್ಲಿ ಶಬ್ದಸಂಸ್ಕಾರವು ಹೇಳಲ್ಪಟ್ಟಿರುವುದೆಂಬುದೇನೋ ವಾಸ್ತವವೇ. ಆದರೆ ಅವನಿಗೆ ಈ ಬಿರುದು ಈ ಅಧಿಕರಣವನ್ನು ಬರೆದುದರ ಪ್ರಯುಕ್ತ ಬಂದಿತೆಂದು ಭಾವಿಸಬೇಕಾದರೆ ಈ ಅಧಿಕರಣವನ್ನು ಅವನು ಬರೆಯುವುದಕ್ಕೆ ಪ್ರಾರಂಭಮಾಡಿದಮೇಲೆಯೂ ಮತ್ತು ಮೇಲೆ ಹೇಳಿದ ಅಧಿಕರಣಾಂತ್ಯಪದ್ಯವನ್ನು ಅವನು ಬರೆಯುವುದಕ್ಕೆ ಮುಂಚೆಯೂ ಅವನ ವಿಷಯವಾಗಿ ಈ ಬಿರುದು ಜನಗಳಿಂದ ಉಪಯೋಗಿಸಲ್ಪಡುತ್ತಿತ್ತೆಂದು ಹೇಳಬೇಕಾಗುವುದು. ಇದು ಅಸಂಭವವಲ್ಲದಿದ್ದರೂ ನಂಬುವುದಕ್ಕೆ ಸ್ವಲ್ಪ ಕಷ್ಟವಾಗಿರುವುದರಿಂದ ಆ ಪದ್ಯದಲ್ಲಿ ಹೇಳಲ್ಪಟ್ಟಿರುವ 'ಶಬ್ದಸಂಸ್ಕರಣ'ವು ನಾಗವರ್ಮನ ಕರ್ಣಾಟಕಭಾಷಾಭೂಷಣಕ್ಕೆ* ಅನ್ವಯಿಸುವುದೆಂದು ನಮಗೆ ತೋರುವುದು. ಈ ಅಭಿಪ್ರಾಯವು ಸರಿಯಾಗಿದ್ದಲ್ಲಿ ನಾಗವರ್ಮನು ಕಟಕೋಪಾಧ್ಯಾಯನಾಗಿದ್ದ

---

* ಈ ಕಾರಣದಿಂದಲೇ ನಾವು ನಾಗವರ್ಮಕೃತ ಗ್ರಂಥಗಳಲ್ಲಿ ಕರ್ಣಾಟಕಭಾಷಾಭೂಷಣವನ್ನೂ ಸೇರಿಸಿರುವೆವು.

ಅಭಿನವಶರ್ವವರ್ಮನೆಂಬ ಅವನ ಬಿರುದು ಕಾವ್ಯಾವಲೋಕನದ ಶಬ್ದಸ್ಮೃತ್ಯಧಿಕರಣದ ಪ್ರಯುಕ್ತವಾಗಿಯೇ ಅವನಿಗೆ ಬಂದಿತೆಂದು ಹೇಳುವ ಪಕ್ಷದಲ್ಲಿ ಆ ಗ್ರಂಥವನ್ನು ಬರೆದ ಬಳಿಕ ನಾಗವರ್ಮನು ಈ ಭಾಷಾಭೂಷಣವನ್ನು ಬರೆದನೆಂದು ನಾವು ಹೇಳಬೇಕಾಗುವುದು. ಆದರೆ ಹೀಗೆ ಹೇಳಿದಲ್ಲಿ ಕಾವ್ಯಾವಲೋಕನದ ಶಬ್ದಸ್ಮೃತ್ಯಧಿಕರಣವನ್ನು ಬರೆದ ಬಳಿಕ ಈ ವಿಧವಾದ ಗ್ರಂಥವನ್ನು ಬರೆಯುವುದು ಅನವಶ್ಯಕವಾದುದರಿಂದ ಈ ಗ್ರಂಥವನ್ನು ಬರೆದ ನಾಗವರ್ಮನು ಕಾವ್ಯಾವಲೋಕನದ ಕರ್ತೃವಲ್ಲವೆಂಬ ಸಂಶಯವು ಮನಸ್ಸಿನಲ್ಲಿ ಹುಟ್ಟುವುದು. ಭಾಷಾಭೂಷಣವನ್ನು ಬರೆದ ಮೇಲೆಯೂ, ಶಬ್ದಸ್ಮೃತ್ಯಧಿಕರಣವನ್ನು ಬರೆಯುವುದು ಅನವಶ್ಯಕವೆಂದು ಹೇಳಲಾಗುವುದಿಲ್ಲ. ಈ ಭಾಷಾಭೂಷಣವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿರುವುದಾದ್ದರಿಂದ ಸಂಸ್ಕೃತವನ್ನು ತಿಳಿಯದ ಕನ್ನಡಿಗರ ಉಪಯೋಗಕ್ಕಾಗಿ ನಾಗವರ್ಮನು ಶಬ್ದಸ್ಮೃತ್ಯಧಿಕರಣವನ್ನು ಬರೆದಿರಬಹುದು. ಈ ಅಧಿಕರಣವನ್ನು ಬರೆದನಂತರ ಸಂಸ್ಕೃತದಲ್ಲಿ ಭಾಷಾಭೂಷಣವನ್ನು ಬರೆಯುವುದೆಂಬುದು ಪಿಷ್ಟಪೇಷಣ ಸದೃಶವಾಗಿರುವುದೇ ಹೊರತು ಅನ್ಯಥಾ ಇಲ್ಲ.

ಕಾಲದಲ್ಲಿ ಅವನು ಕಾದಂಬರೀ ಭಾಷಾಭೂಷಣಗಳೆರಡನ್ನೂ ಬರೆದಿದ್ದನೆಂದು ಸಿದ್ಧ ವಾಗುವುದು. ಎಂದರೆ ನಾಗವರ್ಮನು ಜಯಸಿಂಹ-ಜಗದೇಕಮಲ್ಲನ ಬಳಿಯಲ್ಲಿ ಕಟಕೋಪಾಧ್ಯಾಯನಾಗುವುದಕ್ಕಿಂತ ಮುಂಚೆಯೇ ಅವನು ಭೋಜರಾಜನ ಸಭೆಗೆ ಹೋಗಿ ತಾನು ಬರೆದಿದ್ದ ಕಾದಂಬರಿಯನ್ನು ಅಲ್ಲಿ ಓದಿ ಅವನಿಂದ ಬಹುಮಾನವನ್ನು ಪಡೆದಿದ್ದನು. ಹೀಗೆಯೇ ಛಂದೋಂಬುಧಿಯನ್ನೂ ಕೂಡ ಅವನು ಕಟಕೋಪಾಧ್ಯಾ ಯನಾಗುವುದಕ್ಕಿಂತ ಪೂರ್ವದಲ್ಲಿಯೇ ಬರೆದಿದ್ದನೆಂಬುದರಲ್ಲಿಯೂ ಯಾವ ಸಂದೇ ಹವೂ ಇಲ್ಲ. ಅವನು ಬರೆದ ಗ್ರಂಥಗಳಲ್ಲಿ ಇದೇ ಮೊದಲನೆಯದೆಂದು ನಮಗೆ ತೋರುವುದು. ವಸ್ತುಕೋಶ ಕಾವ್ಯಾವಲೋಕನಗಳನ್ನಾದರೆ ಅವನು ಕಟಕೋಪಾ ಧ್ಯಾಯನಾದ ಬಳಿಕ ಬರೆದನೆಂದು ನಮಗೆ ತೋರುವುದು. ಎಂದರೆ ನಾಗವರ್ಮನು ಕ್ರಿ. ಶ. ಸುಮಾರು ೧೦೩೦-೧೦೪೦ ರಲ್ಲಿ ಛಂದೋಂಬುಧಿ ಕಾದಂಬರೀ ಭಾಷಾ ಭೂಷಣಗಳನ್ನು ಬರೆದು ತದನಂತರ ಜಯಸಿಂಹ-ಜಗದೇಕಮಲ್ಲನ ಆಳಿಕೆಯ ಅಂತ್ಯ ವರ್ಷಗಳಲ್ಲಿ ಅವನ ಬಳಿಯಲ್ಲಿ ಕಟಕೋಪಾಧ್ಯಾಯನಾಗಿದ್ದು ೧೦೪೦-೧೦೪೨ ರಲ್ಲಿಯೋ ಅಥವಾ ೧೦೪೨ ರಿಂದ ಈಚೆಯೋ ವಸ್ತುಕೋಶ ಕಾವ್ಯಾವಲೋಕನ ಗಳನ್ನು ಬರೆದನೆಂದು ನಮ್ಮ ಅಭಿಪ್ರಾಯ.

ಜಿನೇಂದ್ರಪುರಾಣಕರ್ತೃವೆಂದು ಜನ್ನನಿಂದ ಹೇಳಲ್ಪಟ್ಟಿರುವ ನಾಗವರ್ಮನು ಇವನೇಯೋ ಅಥವಾ ಬೇರೆ ಒಬ್ಬ ನಾಗವರ್ಮನೋ ಎಂಬುದನ್ನು ಆ ಪುರಾಣವನ್ನು ನೋಡದೆ ನಿರ್ಣಯಿಸಲಾಗುವುದಿಲ್ಲ.

ನಾಗವರ್ಮನಿಂದ ಭಾಷಾಭೂಷಣದಲ್ಲಿ ಕೀರ್ತಿತನಾಗಿರುವ **ಹರಿಪಾಲನೂ,** ಕಾವ್ಯಾವಲೋಕನದಲ್ಲಿ ಕೀರ್ತಿತನಾಗಿರುವ **ಶಂಖವರ್ಮನೂ,** ಅಲ್ಲಿ ಉದಾಹರಿಸಲ್ಪಟ್ಟಿರುವ 'ತರವೇಟ್ಮ್ಮಾಣಿಕ್ಯಭಂಡಾರದ...' ಎಂಬ (೨೮೪ ನೆಯ) ಪದ್ಯದ ಕರ್ತೃವಾದ **ಹಂಸರಾಜನೂ** ಕ್ರಿ. ಶ. ೧೦೫೦ ಕ್ಕಿಂತ ಹಿಂದೆ ಪ್ರಸಿದ್ಧ ರಾಗಿ ಇದ್ದಿರಬೇಕೆಂದೂ, ಶಂಖವರ್ಮನು ಕ್ರಿ. ಶ. ಸುಮಾರು ೧೧೦೦ ರಲ್ಲಿಯೂ (ಕವಿಚರಿತೆ I, ೮೦), ಇತರರಿಬ್ಬರು ಕ್ರಿ. ಶ. ಸುಮಾರು ೧೧೪೦ ರಲ್ಲಿಯೂ ಇದ್ದ ರೆಂಬ (ಕವಿಚರಿತೆ I, ೧೧೪-೧೧೫) ಕವಿಚರಿತಕಾರರ ಅಭಿಪ್ರಾಯವು ತಪ್ಪೆಂದೂ ಮೇಲೆ ನಾವು ಹೇಳಿರುವದರಿಂದಲೇ ವ್ಯಕ್ತವಾಗುವುದು. 'ತರವೇಟ್ಮ್ಮಾಣಿಕ್ಯ ಭಂಡಾರದ' ಎಂಬ ಪದ್ಯದಲ್ಲಿ (ಕವಿಚರಿತೆ I, ೧೧೫ ನ್ನು ನೋಡಿ) ಸ್ತುತನಾಗಿ ರುವ ವಿಕ್ರಮಾಂಕನು ಕ್ರಿ. ಶ. ೧೦೭೬—೧೧೨೬ ರಲ್ಲಿ ಆಳುತ್ತಿದ್ದ ಚಾಲುಕ್ಯ ಚಕ್ರವರ್ತಿ ೬ ನೆಯ ವಿಕ್ರಮಾದಿತ್ಯನಾದುದರಿಂದ ಹಂಸರಾಜನು ಆ ರಾಜನ

ಸಮಕಾಲೀನನಾಗಿರಬಹುದೆಂಬ ಅಭಿಪ್ರಾಯವೂ ಕೂಡ (ಕವಿಚರಿತೆ I, ೧೧೬, ಕಾವ್ಯಾವಲೋಕನದ ಉಪೋದ್ಘಾತ, ಪುಟ ೪೪) ತಪ್ಪೆಂದು ಮೇಲೆ ಹೇಳಿರುವುದರಿಂದ ವ್ಯಕ್ತವಾಗುವುದು. ಕ್ರಿ. ಶ. ೧೦೫೦ ಕ್ಕಿಂತ ಹಿಂದೆ ಕ್ರಿ. ಶ. ೧೦೦೯—೧೦೧೪ ರಲ್ಲಿ ಚಾಲುಕ್ಯಚಕ್ರವರ್ತಿಯಾದ ೫ ನೆಯ ವಿಕ್ರಮಾದಿತ್ಯನು ಆಳುತ್ತಿದ್ದನೆಂದೂ, ಆಹವಮಲ್ಲನೆಂಬ ೨ ನೆಯ ತೈಲಪನ ತಂದೆಗೆ ೪ ನೆಯ ವಿಕ್ರಮಾದಿತ್ಯ ಎಂಬ ಹೆಸರಿತ್ತೆಂದೂ ನಮಗೆ ತಿಳಿದಿರುವುದರಿಂದ (ಪೂರ್ವನಿರ್ದಿಷ್ಟವಾದ ಇಂಡಿಯನ್ ಆಂಟಿಕ್ವೆರಿ ಪತ್ರಿಕೆಯ ೪೭, ೪೮ ನೇ ಸಂಪುಟಗಳಲ್ಲಿರುವ ನನ್ನ ಲೇಖನವನ್ನು ನೋಡಿ) ಮೇಲಿನ ಪದ್ಯದಲ್ಲಿ ಸ್ತುತನಾಗಿರುವ ವಿಕ್ರಮಾಂಕನು ಈ ಇಬ್ಬರು ವಿಕ್ರಮಾದಿತ್ಯರಲ್ಲಿ ಒಬ್ಬನಾಗಿರಬಹುದು.

ಭಾಷಾಭೂಷಣದಲ್ಲಿ ಸ್ತುತನಾಗಿರುವ ವೈಯಾಕರಣನಾದ **ನಯಸೇನನೂ** ಹೀಗೆಯೇ ಕ್ರಿ. ಶ. ೧೦೫೦ ಕ್ಕಿಂತ ಹಿಂದೆ ಪ್ರಸಿದ್ಧನಾಗಿದ್ದನೆಂದು ನಾವು ಮೇಲೆ ಹೇಳಿರುವುದರಿಂದ ವ್ಯಕ್ತವಾಗುವುದು. ಇಲ್ಲಿ ಸ್ತುತನಾಗಿರುವ ನಯಸೇನನು ಧರ್ಮಾಮೃತದ ಕರ್ತೃವಾದ ನಯಸೇನನೇಯೆ ಎಂದು ಕವಿಚರಿತಕಾರರ ಅಭಿಪ್ರಾಯ (ಕವಿಚರಿತೆ I, ೯೬, ೧೨೧). ಆದರೆ ಧರ್ಮಾಮೃತದ ಕರ್ತೃವಾದ ನಯಸೇನನು ಒಂದು ವ್ಯಾಕರಣಗ್ರಂಥವನ್ನೂ ಬರೆದಿರುವನೆಂದು ಊಹಿಸುವುದಕ್ಕೆ ಯಾವ ಆಧಾರವೂ ಇಲ್ಲವಾದುದರಿಂದಲೂ ಈತನು ಧರ್ಮಾಮೃತವನ್ನು ಕ್ರಿ. ಶ. ೧೧೧೨ ರಲ್ಲಿ ಬರೆದನೆಂದು ಆ ಗ್ರಂಥದಲ್ಲಿಯೇ ಹೇಳಲ್ಪಟ್ಟಿರುವುದರಿಂದಲೂ ಕೂಡ ಇವನು ಕ್ರಿ.ಶ. ೧೧೧೨ ಕ್ಕಿಂತ ಸುಮಾರು ೭೦, ೮೦ ವರ್ಷಗಳಹಿಂದೆ ಬರೆಯಲ್ಪಟ್ಟ ಭಾಷಾಭೂಷಣದಲ್ಲಿ ಸ್ತುತನಾದ ನಯಸೇನನಿಂದ ಭಿನ್ನನೆಂದೂ ಕವಿಚರಿತಕಾರರ ಮೇಲೆ ಹೇಳಿದ ಅಭಿಪ್ರಾಯವು ತಪ್ಪೆಂದೂ ಸ್ಪಷ್ಟವಾಗುವುದು.

ಎಪಿಗ್ರಾಫಿಯ ಇಂಡಿಕ ಪತ್ರಿಕೆಯ ೧೬ ನೇ ಸಂಪುಟದಲ್ಲಿ (ಪುಟ ೫೪ ಆದಿ) ಡಾ|| ಬಾರ್ನೆಟ್‌ರವರು ಮುಳುಗುಂದದಲ್ಲಿರುವ ಒಂದು ಶಿಲಾಶಾಸನವನ್ನು ಪ್ರಕಟಿಸಿರುವರು. ಈ ಶಾಸನದಲ್ಲಿ ಮೂಲಸಂಘದ ಸೇನಾನ್ವಯವನ್ನು ಪ್ರಸ್ತಾವಮಾಡಿ ಈ ಸೇನಾನ್ವಯದ ಅಜಿತಸೇನಭಟ್ಟಾರಕರ* ಶಿಷ್ಯರಾದ ಕನಕಸೇನಭಟ್ಟಾರಕರ ಶಿಷ್ಯರಾದ ನರೇಂದ್ರಸೇನ ಮುನಿಗಳನ್ನು—

---

* ಈ ಅಜಿತಸೇನಭಟ್ಟಾರಕನು ಮಾರಸಿಂಹ, ಚಾಮುಂಡರಾಯರ ಗುರುವಾದ ಅಜಿತಸೇನನೇ ಆಗಿರಬಹುದೆಂದೂ, ಶ್ರವಣಬೆಳ್ಗೊಳದ ಶಾಸನಗಳಲ್ಲಿಯೂ ಕೊಪ್ಪದ ೩ ನೇ ಶಾಸನದಲ್ಲಿಯೂ ಹೊಗಳಲ್ಪಟ್ಟಿರುವ ಅಜಿತಸೇನನಿಂದ ಅಭಿನ್ನನೆಂದೂ ಡಾ|| ಬಾರ್ನೆಟ್‌ರವರು (ಎಪಿ. ಇಂಡಿಕ ೧೬ ನೇ

ಚಾಂದ್ರಂ ಕಾತಂತ್ರಂ ಜೈ । ನೇಂದ್ರಂ ಶಾಬ್ದಾನುಶಾಸನಂ ಪಾಣಿನಿ ಮ ।
ತ್ತೈಂದ್ರಂ ನರೇಂದ್ರಸೇನಮು । ನೀಂದ್ರಂಗೇಕಾಕ್ಷರಂ ಪೆಱಗಿದುವೊಗ್ಗೇ ॥

ಎಂದು ಹೊಗಳಿ, ಇವರಿಗೆ 'ಸಮಸ್ತಶಬ್ದಶಾಸ್ತ್ರಪಾರಾವಾರಪಾರಗ' ರಾದ ನಯಸೇನಪಂಡಿತರು ಶಿಷ್ಯರಾಗಿದ್ದರೆಂದು ಹೇಳಿ, ಅವರನ್ನು—

ಸಂಪುಟ, ಪುಟ ೫೩) ಹೇಳಿರುವರಲ್ಲದೆ ಮೇಲಿನ ಶಾಸನದಲ್ಲಿ ಸ್ತುತನಾಗಿರುವ ಕನಕಸೇನಭಟ್ಟಾರಕನೂ ನಗರದ ೩೫ ನೆಯ ಮತ್ತು ೩೯ ನೆಯ ಶಾಸನಗಳಲ್ಲಿಯೂ ತೀರ್ಥಹಳ್ಳಿಯ ೧೯೨ ನೇ ಶಾಸನದಲ್ಲಿಯೂ ಸ್ತುತನಾಗಿರುವ ಕನಕಸೇನ ವಾದಿರಾಜನಿಂದ ಅಭಿನ್ನನೆಂದೂ, ಈ ಶಾಸನಗಳಲ್ಲಿ ಹೊಗಳಲ್ಪಟ್ಟಿರುವ ಜೈನ ಗುರುಪರಂಪರೆಯೂ ಮೇಲಿನ ಮುಳುಗುಂದದ ಶಾಸನದಲ್ಲಿ ಹೊಗಳಲ್ಪಟ್ಟಿರುವ ಜೈನ ಗುರುಪರಂಪರೆಯೂ ಒಂದೇ ಎಂದೂ ಹೇಳಿರುವರು. ಅವರು ಹೇಳಿರುವಂತೆ ಮಾರಸಿಂಹ ಚಾಮುಂಡರಾಯರ ಗುರುವಾದ ಅಜಿತಸೇನನು ಪ್ರಾಯಶಃ ಮೇಲಿನ ಮುಳುಗುಂದದ ಶಾಸನದಲ್ಲಿ ಸ್ತುತನಾಗಿರುವ ಸೇನಾನ್ವಯದ ಅಜಿತಸೇನನೇಯೆ ಎಂಬುದನ್ನು ಒಂದುವೇಳೆ ನಾವೂ ಒಪ್ಪಿಕೊಳ್ಳಬಹುದು; ಎಂದರೆ ಶ್ರವಣಬೆಳ್ಗೊಳದ ೫೯ (೩೮), ೧೨೧ (೬೭) ನೆಯ ಶಾಸನಗಳಲ್ಲಿ ಸ್ತುತನಾಗಿರುವ ಅಜಿತಸೇನನು ಮುಳುಗುಂದದ ಶಾಸನದಲ್ಲಿ ಸ್ತುತನಾಗಿರುವ ಅಜಿತಸೇನನೇ ಆಗಿರಬಹುದು. ಶ್ರವಣಬೆಳ್ಗೊಳದ ೬೭ (೫೪) ನೆಯ ಶಾಸನದಲ್ಲಿ ಕೀರ್ತಿತನಾಗಿರುವ ಅಜಿತಸೇನನಾದರೆ ಮೇಲೆ ಹೇಳಿದ ೫೯, ೧೨೧ ನೇ ಶಾಸನಗಳಲ್ಲಿಯೂ ಮುಳುಗುಂದದ ಶಾಸನದಲ್ಲಿಯೂ ಕೀರ್ತಿತನಾದ ಅಜಿತಸೇನನಲ್ಲ. ಈತನು ನಾವು ಮೇಲೆ (ಪುಟ ೧೭೩) ಪ್ರಸ್ತಾವಮಾಡಿರುವ ಕನಕಸೇನವಾದಿರಾಜನ ಶಿಷ್ಯನಾದ ಶ್ರೀವಿಜಯಭಟ್ಟಾರಕನ ಶಿಷ್ಯನು; ದ್ರವಿಡಸಂಘದ ನಂದಿಗಣದ ಅರುಂಗುಳಾನ್ವಯದವನು. ಆದ್ದರಿಂದ ಈತನು ಮೇಲೆ ಹೇಳಿದ ಮೂಲಸಂಘದ ಸೇನಾನ್ವಯದ ಅಜಿತಸೇನನಿಂದ ಭಿನ್ನನಾಗಿದ್ದನೆಂಬುದನ್ನು ನಾವು ಕಂಠತಃ ಹೇಳಬೇಕಾಗಿಲ್ಲ. ವಸ್ತುತಃ ಈ ಸೇನಾನ್ವಯದ ಅಜಿತಸೇನನು ಕ್ರಿ. ಶ. ೯೬೧-೯೭೪ ರಲ್ಲಿ ಆಳುತ್ತಿದ್ದ ಮಾರಸಿಂಹನಿಗೆ ಗುರುವಾಗಿದ್ದನೆಂದು ಶ್ರವಣಬೆಳ್ಗೊಳದ ೫೯ (೩೮) ನೇ ಶಾಸನದಿಂದ ತಿಳಿದುಬಂದು, ಶ್ರೀವಿಜಯನ ಶಿಷ್ಯನಾದ ಅಜಿತಸೇನನು ಶಕ ೧೦೦೯ ನೆಯ ಪ್ರಭವಸಂವತ್ಸರದಲ್ಲಿ ಎಂದರೆ ಕ್ರಿ. ಶ. ೧೦೮೭ ರಲ್ಲಿ ಒಂದು ದತ್ತಿಯನ್ನು ಸ್ವೀಕರಿಸಿದನೆಂದು ನಗರದ ೪೧ ನೆಯ ಶಾಸನದಿಂದ ತಿಳಿದುಬರುವುದರಿಂದಲೂ ಕೂಡ, ಈ ಶಾಸನಗಳಲ್ಲಿ ಹೇಳಿರುವ ಅಜಿತಸೇನರು ಬೇರೆಬೇರೆ ಮನುಷ್ಯರೆಂಬ ವಿಷಯವು ಸುಸ್ಪಷ್ಟವಾಗುವುದು. ಈ ದ್ರವಿಡಸಂಘದ ಅಜಿತಸೇನನೇ ನಗರದ ೩೫, ೩೬, ೩೭, ೩೯, ೪೦ ನೆಯ ಶಾಸನಗಳಲ್ಲಿಯೂ ಮತ್ತು ಮೇಲೆ ಹೇಳಿದ ತೀರ್ಥಹಳ್ಳಿಯ ೧೯೨ ನೆಯ ಶಾಸನದಲ್ಲಿಯೂ, ಕೊಪ್ಪದ ೩ ನೇ ಶಾಸನದಲ್ಲಿಯೂ ಇನ್ನೂ ಇತರ ಶಾಸನಗಳಲ್ಲಿಯೂ ಕೀರ್ತಿತನಾಗಿರುವನು (ಡಾ|| ಹುಲ್ಟ್ಷ್‌ರವರ ಮೇಲೆ ಹೇಳಿದ ಲೇಖನವನ್ನು ನೋಡಿ; ಪುಟ ೬೯೯). ಇವನಿಗೆ 'ವಾದೀಭಸಿಂಹ' ಎಂಬ ಬಿರುದಿತ್ತೆಂದು ನಗರದ ೩೬, ೪೦ ಮೊದಲಾದ ಶಾಸನಗಳಿಂದ ತಿಳಿದುಬರುವುದು.

ಹೀಗೆಯೇ ಮೂಲಸಂಘದ ಸೇನಾನ್ವಯದ ಅಜಿತಸೇನನ ಶಿಷ್ಯನಾದ ಕನಕಸೇನನೂ ದ್ರವಿಡಸಂಘದ ಅರುಂಗುಳಾನ್ವಯದ ಅಜಿತಸೇನ-ವಾದೀಭಸಿಂಹನ ಗುರುವಿನ ಗುರುವಾದ ಕನಕಸೇನನೂ ಬೇರೆ ಬೇರೆ ಮನುಷ್ಯರೆಂಬುದೂ (ಇವರಿಬ್ಬರೂ ಸಮಕಾಲೀನರು; ಕ್ರಿ. ಶ. ೧೦ ನೇ ಶತಮಾನದ ಅಂತ್ಯದಲ್ಲಿ ಜೀವಿಸಿದ್ದರು; ಮೇಲೆ ೧೭೩ ನೇ ಪುಟವನ್ನು ನೋಡಿ) ಮೂಲಸಂಘದ ಸೇನಾನ್ವಯವೂ ದ್ರವಿಡಸಂಘದ ಅರುಂಗುಳಾನ್ವಯವೂ ಬೇರೆ ಬೇರೆ ಎಂಬುದೂ ಸ್ವತಃ ವ್ಯಕ್ತವಾಗಿರುವುದು.

ನಿನಗೇನೆಂಬೆನೊ ಶಾಕಟಾಯನಮುನೀಶಂ ತಾನೆ ಶಬ್ದಾನುಶಾ |
ಸನದೊಳ್ ಪಾಣಿನಿ ಪಾಣಿನೀಯದೊಳೆ ಚಂದ್ರಂ ಚಾಂದ್ರದೊಳ್ತಜ್ಜನೇಂ |
ದ್ರನೆ ಜೈನೇಂದ್ರದೊಳಾ ಕುಮಾರನೆ ಗಡಂ ಕೌಮಾರದೊಳ್ ಪೋಲ್ವರೆಂ |
ತೆನೆ ಪೋಲರ್ನಯಸೇನಪಂಡಿತರೊಳನ್ಯರ್ ವಾರ್ಥಿವೀತೋರ್ವಿಯೊಳ್ ||

ಎಂಬ ಪದ್ಯದಲ್ಲಿ ಹೊಗಳಿ, ಈ ನಯಸೇನಪಂಡಿತರಿಗೆ ಕ್ರಿ. ಶ. ೧೦೫೩ ನೆಯ ಡಿಸೆಂಬರ್ ೨೪ ನೇ ತಾರೀಖು ಶುಕ್ರವಾರದಂದು ಒಂದು ದತ್ತಿಯು ಕೊಡಲ್ಪಟ್ಟಿತೆಂದು ಹೇಳಿರುವುದು. ಭಾಷಾಭೂಷಣದಲ್ಲಿ ನಾಗವರ್ಮನಿಂದ ಕೀರ್ತಿತನಾಗಿರುವ ವೈಯಾಕರಣನಾದ ನಯಸೇನನು ಒಂದುವೇಳೆ ಈ ಶಾಸನೋಕ್ತನಾದ ನಯಸೇನಪಂಡಿತನೇ ಇರಬಹುದೆಂದು ನಮಗೆ ತೋರುವುದು. ನಯಸೇನಕೃತವಾದ ಧರ್ಮಾಮೃತದ ೧ನೇ ಆಶ್ವಾಸದ ೨೧ ನೇ ಪದ್ಯದಲ್ಲಿ ಸ್ತುತನಾಗಿರುವ ಅಜಿತಸೇನದೇವನ ಶಿಷ್ಯನಾದ ಸೋಮದೇವನ ಶಿಷ್ಯನಾದ ನರೇಂದ್ರಸೇನ ಶಿಷ್ಯನಾದ ನಯಸೇನನು ಮೇಲಿನ ಶಾಸನದಲ್ಲಿ ಸ್ತುತನಾದ ನಯಸೇನನೇಯೆ ಎಂದು ತೋರುವುದರಿಂದ, ಈ ನಯಸೇನಪಂಡಿತನು ವ್ಯಾಕರಣದಲ್ಲಲ್ಲದೆ ತರ್ಕಶಾಸ್ತ್ರದಲ್ಲಿಯೂ ಪಂಡಿತನಾಗಿದ್ದನೆಂದು ನಾವು ಊಹಿಸಬೇಕಾಗುವುದು.

೧೭. ಮಲ್ಲಿಕಾರ್ಜುನ

ಸೂಕ್ತಿಸುಧಾರ್ಣವವನ್ನು ರಚಿಸಿರುವ ಈ ಮಲ್ಲಿಕಾರ್ಜುನನ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಸೂಕ್ತಿಸುಧಾರ್ಣವವೆಂಬ ಗ್ರಂಥವನ್ನು ಬರೆದಿದ್ದಾನೆ........ಈತನಿಗೆ ಮಲ್ಲಪ, ಮಲ್ಲ, ಚಿದಾನಂದಮಲ್ಲಿಕಾರ್ಜುನ ಎಂಬ ಹೆಸರುಗಳೂ ಉಂಟು. "ಯಾದವಕಟಕಾಚಾರ್ಯ ಸುಕವಿಸುಮನೋಬಾಣ ಜಾಮಾತೃ" ಎಂಬುದರಿಂದ ಈತನು ಶಬ್ದಮಣಿದರ್ಪಣವನ್ನು ಬರೆದ ಕೇಶಿ ರಾಜನ ತಂದೆಯೆಂದು ತಿಳಿಯುತ್ತದೆ. ಸುಮನೋಬಾಣನ ಮಗನಾದ ಜನ್ನನನ್ನು ಸ್ತುತಿಸಿ ಅವನ ಗ್ರಂಥಗಳಿಂದ ಪದ್ಯಗಳನ್ನು ಅನುವಾದಮಾಡಿರುವುದರಿಂದ ಈತನು ಜನ್ನನ ತಂಗಿಯ ಗಂಡನೆಂದು ತೋರುತ್ತದೆ. ಹೊಯ್ಸಳ ವೀರಸೋಮೇಶ್ವರನ "ವಿನೋದಾಕರ್ಣನ ಕೌತುಕೋತ್ಪಾದಿತಮುಂ" ಎಂಬುದರಿಂದ ಆ ದೊರೆಯ ಕಾಲದಲ್ಲಿ ಈ ಗ್ರಂಥವು ಹುಟ್ಟಿದಂತೆ ತಿಳಿಯುತ್ತದೆ. ವೀರಸೋಮೇಶ್ವರನು 1233 ರಿಂದ 1254 ರ ವರೆಗೆ ರಾಜ್ಯವಾಳಿದಂತೆ ತಿಳಿವುದರಿಂದ ಈ ಕವಿ ಸುಮಾರು 1245 ರಲ್ಲಿದ್ದಿರಬಹುದು. "ಮುನಿಗಳ ಸಭೆಯೊಳ್ ಪರಮಮುನಿ" ಎಂಬುದರಿಂದಲೂ, ಕೇಶಿರಾಜನು "ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನ" ಎಂಬುದರಿಂದಲೂ ಈತನು ಮುನಿಶ್ರೇಷ್ಠನೆಂದು ತಿಳಿಯುತ್ತದೆ" (ಕವಿಚರಿತೆ I. ೨೯೯).

ಇಲ್ಲಿ ಕವಿಚರಿತಕಾರರು ಹೇಳಿರುವ ಕಾರಣಗಳು ಬಹು ವಿಚಿತ್ರಗಳಾಗಿರುವುವು. ಮಲ್ಲಿಕಾರ್ಜುನನು 'ಯಾದವಕಟಕಾಚಾರ್ಯ ಸುಕವಿಸುಮನೋಬಾಣ ಜಾಮಾತೃ' ಎಂದು ತನ್ನನ್ನು ಹೇಳಿಕೊಂಡ ಮಾತ್ರದಿಂದ, ಈತನು ಶಬ್ದಮಣಿ ದರ್ಪಣವನ್ನು ಬರೆದ ಕೇಶಿರಾಜನ ತಂದೆಯೆಂದು ಹೇಗೆ ನಿರ್ಧರಿಸಬಹುದೋ ಅದು ನಮಗೆ ತಿಳಿಯದು. ಈ ಕೇಶಿರಾಜನು 'ಕವಿಸುಮನೋಬಾಣನ ಯಾದವಕಟಕಾಚಾರ್ಯನೆಸೆವ ದೌಹಿತ್ರನೆ ನಾಂ' ಎಂದು ತನ್ನನ್ನು ಹೇಳಿಕೊಂಡಿರುವುದಂತೂ ಉಂಟು. ಆದರೆ ಕವಿಚರಿತಕಾರರು ಈ ಅಂಶವನ್ನು ಇಲ್ಲಿ ಪ್ರಸ್ತಾವಮಾಡಿಲ್ಲ. ಒಂದು ಪಕ್ಷ ಹಾಗೆ ಮಾಡಿದ್ದರೂ ಕೂಡ ಕೇಶಿರಾಜನು ಸುಮನೋಬಾಣನ ದೌಹಿತ್ರನು ತಾನು ಎಂದು ಹೇಳಿಕೊಂಡಿರುವುದರಿಂದಲೂ, ಮಲ್ಲಿಕಾರ್ಜುನನು ಈ 'ಸುಮನೋಬಾಣನ ಜಾಮಾತೃವು ನಾನು' ಎಂದು ಹೇಳಿಕೊಂಡಿರುವುದರಿಂದಲೂ ಕೂಡ ಕೇಶಿರಾಜನು ಈ ಮಲ್ಲಿಕಾರ್ಜುನನ ಮಗನೆಂದು ನಿರ್ಧರಿಸುವುದು ನ್ಯಾಯವೇ? ಕೇಶಿರಾಜನು ಸುಮನೋಬಾಣನ ಇನ್ನೊಬ್ಬ ಅಳಿಯನ ಮಗನಾಗಿರಬಾರದೇ? ವಸ್ತುತಃ ಈ ಕೇಶಿರಾಜನು 'ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನ ಸುತನೆಂ' ಎಂದು ಹೇಳಿಕೊಂಡಿರುವುದರಿಂದ ಅವನು ಮಲ್ಲಿಕಾರ್ಜುನನ ಮಗನೇ ಹೌದು. ಆದರೆ ಈ ಅಂಶವು ಈ ಮೇಲೆ ಹೇಳಿದ ವಾಕ್ಯದಿಂದ ಸಿದ್ಧವಾಗುವುದೇ ಹೊರತು ಕವಿಚರಿತಕಾರರು ಹೇಳಿರುವ ವಾಕ್ಯದಿಂದ ಸಿದ್ಧವಾಗುವುದಿಲ್ಲ.

ಹೇಳುವುದು. ಕೊನೆಗೂ ದುರ್ಮಂತ್ರಿಗೇ ಜಯವಾಯಿತು. ಸ್ವಾಭಾವಿಕ ತಾನೆ! ಕೈಬೀಸಿಕೊಂಡು ಪಕ್ಕದಲ್ಲೇ ಬರುತ್ತಿದ್ದ ಮೂರ್ತಿ ಇದನ್ನೂ ಇನ್ನೊಂದು ದೊಡ್ಡ ಪ್ರಮಾದವಾಗಿ ಮಾಡುವರೆಂದು ತಿಳಿದು ಮೆಲ್ಲಗೆ ನನ್ನ ಬೆನ್ನುಕಡೆ ದಾರಿಯಲ್ಲಿ ಸಿಕ್ಕಿದ ಒಂದು ಕಲ್ಲುಬಂಡೆಯ ತುದಿಯಿಂದ ಎಕ್ಕಡಗಳನ್ನು ಆಕಡೆಗೆ ಜಾರಿಸಿಬಿಟ್ಟು ಮುಂದೆ ಧಾರಾಳವಾಗಿ ನಡೆದು ಹೋದೆ. ಜಾಗ್ರತೆಯಲ್ಲಿಯೇ ದೇವಸ್ಥಾನವನ್ನು ಸೇರಿದೆವು.

ಮೊದಲು ಬಟ್ಟೆಗಳನ್ನು ಬದಲಾಯಿಸಿ ಸ್ವಲ್ಪ ವಿಶ್ರಮಿಸಿಕೊಂಡಾದ ಮೇಲೆ ಕೈಲಾದಷ್ಟು ಊಟಮಾಡಿ ಎಲ್ಲರೂ ಮಲಗ ಹೋದೆವು. ಮಧ್ಯಾಹ್ನ ಯಾತ್ರೆ ಹೊರಡುವುದಕ್ಕೆ ಮುಂಚೆಯೆ ವೆಂಕಟೇಶಯ್ಯನವರು ಮುದುಕಮ್ಮನವರಿಗೆ ಹೇಳಿ ಹೊರಟಿದ್ದರಂತೆ. ಇನ್ನೇನು ಮಲಗಬೇಕು, ಆಗ ಆಕೆ, ಐದು ಲೋಟಗಳ ತುಂಬ ಕೆಂಪಗೆ ಕಾಸಿ ಕೇಸರಿ, ಸಕ್ಕರೆ, ಬಾದಾಮಿ, ಹಾಕಿ ಹದವಾಗಿದ್ದ ಹಾಲನ್ನು ನಮಗೆ ತಂದುಕೊಟ್ಟರು. ಭೇಷ್! ಎಂದರು ರಾಯರು. “ಶಹಬಾಸ್, ನಿಮಗೆ ಎಂಟು ಜನ ಸುಪುತ್ರರಾಗಲಿ ವೆಂಕಟೇಶಯ್ಯ” ಎಂದರು ಯಜಮಾನರು. ‘ಭಲೆ’ ಎಂದುಕೊಂಡು ನಾನು ಮೂರ್ತಿಕಡೆ ನೋಡಿದೆ. ಅವರು ಲೋಟ ಕೈಲಿ ಹಿಡಿದುಕೊಂಡು ಕಣ್ಣು ಅರ್ಧ ಮುಚ್ಚಿಕೊಂಡು ಓರೆ ನೋಡುತ್ತ ಮೂತಿ ಯನ್ನೂ ಮೀಸೆಯನ್ನೂ ಸಂಕುಚಿಸಿಕೊಂಡು, ಈ ಯೋಚನೆ ಹೊಳೆದು ಹಾಗೆ ಏರ್ಪಾಡುಮಾಡಿಸಿದವರಿಗೆ ಒಂದು ಜಹಗೀರಿ ಕೊಡಬಹುದು ಕಣ್ರೀ! ಎಂದರು. ನಮ್ಮ ಕಾಲ ಪಾಪಿಷ್ಟರಕಾಲ. ಐವತ್ತು ವರ್ಷಕ್ಕೆ ಹಿಂದೆ ಆಸ್ಥಾನಗಳಲ್ಲಿ ಹೀಗೆ ಯಾರಾದರೂ ಮಾಡಿರೋರೆ ಒಂದು ಜಹಗೀರಿ ದೊರೆಯುವುದಕ್ಕೆ ಬೇತಾಡಬೇಕಾಗಿತ್ತೆ? ಬಿರುದುಬಿಲ್ಲೆ ತೋಡಾ ಕೂಡ ಬರುತ್ತಿತ್ತು!

“ಎಲ್ಲ ಸರಿಯೆ. ಸ್ವಲ್ಪ ಕೇಸರಿ, ಸ್ವಲ್ಪ ಸಕ್ಕರೆ ಕಡಿಮೆ ಹಾಕಿ ಕಾಸಿರೋರೇ ಹಾಲು ಇನ್ನೂ ಎಷ್ಟುರುಚಿಯಾಗಿರುತ್ತಿತ್ತೊ” ಎಂದು ವೆಂಕಟೇಶಯ್ಯನವರು ಹೇಳಿದರು.

ನಾಲಿಗೇನ ಅಷ್ಟು ಸೂಕ್ಷ್ಮ ಮಾಡಿಕೊಂಡುಬಿಟ್ಟರೆ ಬದುಕೋದು ಹೇಗಪ್ಪ; ನೀವು ಬಿಡಿ ; ಎಂಥ ಪದಾರ್ಥವನ್ನು ತಂದುಕೊಟ್ಟರೂ 'ತಂಗು, ತೊಸಗು' ಎಂದು ಬಿಡುತ್ತೀರಿ. ಇದು ನೋಡಿ, ಸರ್, ಒಳ್ಳೆ ಖೋವಾಕ್ಕೆ ಕಾಸೋ ಹಾಗೆ ಮಸಾಲೆ ಹಾಕಿ ಕಾಸಿದ್ದಾರೆ; ಇದನ್ನೇ ಇವರು ಹೀಗೆನ್ನುತ್ತಿದ್ದಾರೆ ಎಂದರು ರಾಯರು.

ವೆಂ—ಹಾಗಾದರೆ, ಈಗ ನಾನು ಹೇಳಿದ್ದು ಸುಳ್ಳೊ ?

ರಾ—ನೀವು ಯಾವಾಗಲಾದರೂ ಸುಳ್ಳಾಡೀರಾ. ನಿಶ್ಚಯವೇ ಅನ್ನಿ. ಹೋಗಲಿ ಬಿಡಿ. ಇನ್ನು ಕೆಣಕಿ ಪ್ರಯೋಜನವಿಲ್ಲ.

ಸತ್ಯ ಪ್ರಮಾಣದ ಮೇಲೆ ಬೇರೆ ಪ್ರಮಾಣವೆಲ್ಲಿಯದು ? ಇದ್ದರೂ ನಿಲ್ಲುವುದೊ ? ಎಲ್ಲರೂ ಅವರು ಹೇಳಿದುದನ್ನು ಒಪ್ಪಿಕೊಂಡೇನೊ ಒಪ್ಪಿ ಕೊಳ್ಳಬೇಕಾಯಿತು. ವೆಂಕಟೇಶಯ್ಯನವರ ಕೆಲಸವೆಲ್ಲ ಹೀಗೇ. ಅವರು ಹೆಚ್ಚು ಮಾತಿನವರಲ್ಲ. ಒಂದು ಮಾತಿನಲ್ಲಿ ಕೆಲಸವಾಗುವುದಾದರೆ ಇನ್ನರ್ಧಮಾತು ಹೆಚ್ಚಾಗಿ ಆಡರು. ಅವರು ಬರವಣಿಗೆಯಲ್ಲಿಯೂ ಹಾಗೆಯೆ. ಜೂಬರ್ಟಿನ ಹಾಗೆ: ಒಂದು ಪುಸ್ತಕದ ಸಾರವನ್ನೆಲ್ಲ ಒಂದು ಪುಟ ಪ್ರಮಾಣಕ್ಕಿಳಿಸಬೇಕು. ಒಂದು ಪುಟದ ವಿಷಯವನ್ನೆಲ್ಲ ಒಂದು ವಾಕ್ಯ ದಲ್ಲಿ, ಒಂದು ವಾಕ್ಯದಲ್ಲಿ ಅಡಗಿರುವ ಅರ್ಥವನ್ನೆಲ್ಲ ಒಂದು ಮಾತಿನಲ್ಲಿ ಹೇಳಿ ಮುಗಿಸಿಬಿಡಬೇಕು. ಅಷ್ಟು ಅಡಕ ಶೈಲಿ. ವಿಸ್ತಾರಮಾಡುವುದೆಂದರೆ ಅವರಿಗೆ ಬೇಸರ. ಅವರು ಮಾಡಿದ ಕೆಲಸದಲ್ಲಿ ಒಂದು ಚೂರು ದೋಷ ವಿರದಂತೆ ಮಾಡುವರು. ಇಲ್ಲ, ಮಾಡಿಸುವರು. ಅವರ ಬಲಗೈ ಮಾಡಿ ದುದು ಅವರ ಎಡಗೈಗೇ ತಿಳಿಯದಾಗುವುದು. ನಾವಂತೂ ಬಾಯಿ ಚಪ್ಪರಿ ಸುತ್ತ, ತುಟಿಗಳನ್ನು ಸವರಿಕೊಳ್ಳುತ್ತ ಅಂದಿನ ಕಷ್ಟಗಳಿಂದ ನಮ್ಮನ್ನು ಪಾರುಮಾಡಿಸಿದುದಕ್ಕೂ, ಈ ಸುಖ ತಂದುಕೊಟ್ಟದ್ದಕ್ಕೂ ದೇವರಿಗೆ ಅನೇಕಾನೇಕ ವಂದನೆಗಳನ್ನು ಸಮರ್ಪಿಸಿ, ಅವನ ಮಹಿಮೆಯನ್ನು ಶ್ಲಾಘಿಸುತ್ತ ಪಂಪಾಪತಿಯ ಸನ್ನಿಧಾನದಲ್ಲಿ ಪವಳಿಸಿ ನಿದ್ರಾವಶರಾದೆವು.

ಅವತ್ತು ನನಗೆ ತಿಳಿಯಿತು. ‘ ಕಷ್ಟಪಟ್ಟರೆ ಸುಖವುಂಟು ’ ಎಂಬುದು. ಕೆಸರಿನಲ್ಲಿಯೂ ಮಳೆಯಲ್ಲಿಯೂ ನಡೆದು ಹಸಿದುಬಂದವರಿಗೆ ಕೇಸರಿ ಹಾಲು ಸಿಕ್ಕುತ್ತದೆ, ಇದು ನಿಶ್ಚಯ ಎಂದೂ ಆ ದಿನ ಸಿದ್ಧಾಂತ ವಾಯಿತು.

ರಾತ್ರಿಯೆಲ್ಲ ಕನಸುಗಳು : ಸೂರ್ಯಾಸ್ತಮಯ ಸಮಯ. ಮೇಳ ತಾಳ ದೀವಟಿಗೆಯವರೂ, ಬೆಳ್ಳಿಯ ಕೋಲಿನವರೂ ಮುಂದೆ ಹೋಗು ತ್ತಿದ್ದಾರೆ. ಕೊಡಗಳನ್ನು ಹೊತ್ತು ನಡುವಿಗೆ ಧೋತ್ರ ಸುತ್ತಿ ಸಡಿಲವಾದ ಕೂದಲಗಂಟನ್ನು ತಲೆಯ ಮೇಲೆ ಹಾಕಿಕೊಂಡು ಭುಜದ ಮೇಲೆ ಒದ್ದೆ ಚೌಕವನ್ನು ಹಾಕಿಕೊಂಡು ವೈದಿಕರು ಒಟ್ಟಿಗೆ ಹೊರಟಿದ್ದಾರೆ. ಒಂದು ಭಂಗಾರದ ಕೊಡ, ಎರಡು ಬೆಳ್ಳಿಯವು ; ಚೊಕ್ಕಟವಾಗಿ ತೊಳೆದು ಮಿರು ಮಿರುಗುತ್ತಿರುವ ತಾಮ್ರದವು ನಾಲ್ಕು. ದೀವಟಿಗೆಯವನ ಪಕ್ಕದಲ್ಲಿ ಬಲಗಡೆ ದಾಸರಿಯೊಬ್ಬನು ಹಳದಿ ನಾಮವೊಂದನ್ನಿಟ್ಟು ಕೈಲಿ ಜಾಗಟೆ ಬಡಿಯುತ್ತ ಆಗಾಗ್ಗೆ ಶಂಖವೂದುತ್ತ ಹೋಗುತ್ತಿರುವನು. ಬ್ರಾಹ್ಮಣರೂ ಬಾಯಿಂದ ವೇದಗಳನ್ನು ಹೇಳುತ್ತ ಗುಡಿಯ ಉತ್ತರದ್ವಾರದಿಂದ ಹೊರಟು ನದಿಗೆ ಹೋಗುತ್ತಿದಾರೆ. ಸ್ವಲ್ಪ ಮುಂದೆ ಹಾಗೇ ಹೋದರೆ ಅಲ್ಲಿ ಶಾಂತ ವಾಗಿ ಹರಿಯುತ್ತಿರುವ ನದಿ. ಸೋಪಾನದಿಂದ ಕೆಳಗಿಳಿದು ಬಂಡೆಯ ಬಸವನಿರುವ ಸ್ಥಾನದವರೆಗೂ ಒಬ್ಬರಿಬ್ಬರು ಮುಂದುವರಿದಿದ್ದಾರೆ. ಎಡ ಬಲಕ್ಕೆ ೨-೩ ಫರ್ಲಾಂಗು ದೂರದವರೆಗೂ ನದಿಯ ಪ್ರಸರವೂ ಪ್ರವಾಹ ವೂ ಕಾಣುತ್ತಿವೆ. ನದಿಯ ಎರಡೂ ಕಡೆ ಬೆಟ್ಟಗಳಾದುದರಿಂದ ಇಳಿ ಸೂರ್ಯನ ಕಿರಣಗಳು ಪೇಲವವಾಗಿವೆ. ನದಿಯ ವಕ್ಷಮಾತ್ರ ದೀಪ್ತ ವಾಗಿದೆ. ಸಂಧ್ಯಾರಾಗವು ಪೂರ್ವಾಕಾಶಕ್ಕೆ ಹರಡಿ ಎಲ್ಲರ ಮೈಕೈಗ ಳನ್ನೂ, ಪಾತ್ರೆ ಪದಾರ್ಥಗಳನ್ನೂ ಗರ್ಭಗುಡಿಯ ಚಿನ್ನದ ಗೋಪುರ ವನ್ನೂ, ಮಂಟಪಗಳ ಬೆಳ್ಳಿಯ ಮೇಲುಹೊದಿಕೆಯನ್ನೂ ನದಿಯ ನೀರ ನ್ನೂ ನಾನಾಬಣ್ಣಗಳಿಂದ ಅಲಂಕರಿಸಿದೆ. ಬ್ರಾಹ್ಮಣರು ನೀರಿಗೆ ಪೂಜೆ

ಮಾಡಿ, ತುಂಗಭದ್ರೆಯ ಜೊತೆಗೆ ಸಂಧ್ಯಾರಾಗವನ್ನೂ ತುಂಬಿಕೊಂಡು ದಡಕ್ಕೆ ಬಂದು, ಬಂದ ಕ್ರಮದಲ್ಲಿಯೇ ಹೊರಡಲುದ್ಯುಕ್ತರಾಗಿದ್ದಾರೆ. ದಾಸರಿಯು ಭುಜಕ್ಕೆ ತಗಲಿಹಾಕಿಕೊಂಡಿದ್ದ ಭಾಂಕಿ ತುತೂರಿಗಳನ್ನು ಊದುತ್ತಿದ್ದಾನೆ. ನಾಗಸ್ವರದವರೂ ಡೋಲಿನವನೂ ಬಹು ಉಲ್ಲಾಸ ದಿಂದ ವಾದ್ಯಗಳನ್ನು ಬಾಜಿಸುತ್ತಿದ್ದಾರೆ. ಮೆರವಣಿಗೆಯು ಕ್ರಮವಾಗಿ ದೇವಸ್ಥಾನಕ್ಕೆ ಬರುವುದು. ಒಳಗೆ ದೇವರ ಸಾನ್ನಿಧ್ಯದಲ್ಲಿ ತೇಜಸ್ವಿಯಾದ ವೃದ್ಧ ಅರ್ಚಕನೊಬ್ಬನು 'ಬೇಗ ಬನ್ನಿರಪ್ಪ; ಸವಾರಿ ಈದಿನ ಜಾಗ್ರತೆ ಯಾಗಿ ಬರುವುದೆಂದು ಅರಮನೆಯಿಂದ ಹೇಳಿಕಳುಹಿಸಿದ್ದಾರೆ' ಎನ್ನುವನು.

ಈ ದೃಶ್ಯವು ಇಲ್ಲಿಗೇ ನಿಂತುಹೋಯಿತು. ಪುನಃ ಸಹಸ್ರಾರು ಪುರ ಜನರು ಹೊರಮಂಟಪದಲ್ಲಿ ಮಡಿಯುಟ್ಟು ನಿಂತಿದ್ದಾರೆ. ಎಲ್ಲೆಲ್ಲಿಯೂ ಹಿತ್ತಾಳೆಯ ಹಣತೆಗಳಲ್ಲಿ ದೀಪಗಳು ಉರಿಯುತ್ತಿವೆ. ಹೊರಬಾಗಿಲಲ್ಲಿ ನಿಂತಿರುವವರಿಗೂ ದೇವರ ದರ್ಶನವಾಗುವಂತೆ, ನೇರವಾಗಿ ನಡುವೆ ದಾರಿ ಬಿಟ್ಟಿದೆ. ಗರ್ಭಗುಡಿಯಿಂದ ಹೂ ಹಣ್ಣು, ನೈವೇದ್ಯ, ದಶಾಂಗ, ಗುಗ್ಗುಳ, ಸಾಂಬ್ರಾಣಿಗಳ ವಾಸನೆ ಬರುತ್ತಿದೆ. ದೇವರಿಗೆ ಅಭಿಷೇಕ ಮುಗಿದು ಎಲ್ಲರೂ ಎದುರೆದುರು ನೋಡುತ್ತಿದ್ದಾರೆ. ಇಷ್ಟರಲ್ಲಿ ದೂರ ದಿಂದ ಶಂಖ ತುತೂರಿಗಳ ಬಾಜನ ಕೇಳಿಸಿತು. ಉತ್ತರಕ್ಷಣದಲ್ಲಿ ಮಹಾ ಸ್ವಾಮಿಯವರ ಸವಾರಿಯೂ ಚಿತ್ತೈಸಿತು. ಭಂಗಾರದ ಪಾಲ್ಕಿಯಲ್ಲಿ ಮಗುಟವನ್ನುಟ್ಟು ಕಿಂಕಾಪಿನ ಮೇಲುದನ್ನು ಹೊದ್ದು ರತ್ನಕುಂಡಲ ಧರಿಸಿದ್ದ ಆಜಾನುಬಾಹು, ಸಾರ್ವಭೌಮ ಶ್ರೀಕೃಷ್ಣದೇವರಾಯನು ದೇವರ ದರುಶನಕ್ಕಾಗಿ ಬರುತ್ತಿದ್ದಾನೆ. ಪಕ್ಕದಲ್ಲಿ ಭಂಗಾರದ ಕಟ್ಟಿಗೆಯವರೂ, ಶ್ವೇತಛತ್ರಿಯವರೂ ನಡೆದು ಬರುತ್ತಿದ್ದಾರೆ. ವಂಧಿಮಾಗಧರು ಬಿರುದಾವಳಿ ಗಳನ್ನು ಹೊಗಳುತ್ತ ಬನಾತಿನ ವಸ್ತ್ರ ಬೀಸುತ್ತ ದೇವಸಾನ್ನಿಧ್ಯಕ್ಕೆ ಪ್ರಭು ವನ್ನು ಕರೆದುಕೊಂಡು ಹೋಗುತ್ತಿದ್ದಾರೆ. ವಾದ್ಯಗಳು ಮೊಳಗುತ್ತಿವೆ; ವೇದಘೋಷಿಸುತ್ತಿದೆ; ಗಂಟೆಗಳು ಧ್ವನಿಗೈಯುತ್ತಿವೆ; ಗಾಯಕರು ಗಾನ

ಮಾಡುತ್ತಿದ್ದಾರೆ. ಈಗತಾನೆ ಅಭ್ಯಂಜನಮಾಡಿಕೊಂಡು ಬಂದಿರುವಂತಿರುವ—ಜೇನುತುಪ್ಪದಲ್ಲಿ ನೆನೆಸಿಟ್ಟು ಹೊಸದಾಗಿ ಹೊರಗೆ ತೆಗೆದಂತಿರುವ—ಮಹಾರಾಯನ ಮುಖದ ಮೇಲೆ ದೀಪಗಳ ಕಾಂತಿಯು ಬಿದ್ದು ಅದು ಬೆಳಗುತ್ತಿದೆ. ವಿರೂಪಾಕ್ಷನಿಗೆ ಮಹಾಮಂಗಳಾರತಿಯು ಬಹು ವಿಜೃಂಭಣೆಯಿಂದ ನಡೆಯುತ್ತದೆ. ಮುಂದೆ ಮಂತ್ರಪುಷ್ಪ; ರಾಜಾಶೀರ್ವಾದ; ಪ್ರಸಾದ ವಿನಿಯೋಗ. ಎಲ್ಲಿಯೂ ಸದ್ದು ಗದ್ದಲವಿಲ್ಲ. ಹತ್ತಾರು ಜನ ಹತ್ತಾರು ಕಡೆಯಿಂದ ಪ್ರಸಾದಗಳನ್ನು ಹಂಚುತ್ತಿದ್ದಾರೆ. ಒಂದು ಕೂದಲೆಳೆ ಕೆಳಗೆ ಬಿದ್ದರೆ ಆ ಶಬ್ದವನ್ನು ಕೂಡ ಅಲ್ಲಿ ಕೇಳಲು ಸಾಧ್ಯ. ಯಥಾಕ್ರಮದಲ್ಲಿ ಮೊದಲು ಪ್ರಭು, ತರುವಾಯ ಮಂತ್ರಿ ಪ್ರಮುಖರು, ಉಳಿದವರು ಹೀಗೆ ಮನೆಗಳ ಕಡೆ ಹೊರಟುಹೋಗುವರು. ದೇವಸ್ಥಾನದಲ್ಲಿ ದೇವರಿಗೆ ಉತ್ತರಪೂಜೆ ಉಪಚಾರ ಶಯನೋತ್ಸವಗಳು ನಡೆದು ಗುಡಿಯ ಬಾಗಿಲನ್ನೂ ಹಾಕುವರು....

ರಾತ್ರಿಯೆಲ್ಲ ಹೀಗೆಯೆ—ಕನಸುಗಳು ನಿಲ್ಲಲೇ ನಿಲ್ಲವು; ಪರಂಪರೆಯಾಗಿ ಬರುವುವು. ಅಷ್ಟು ದಣಿವಾಗಿದ್ದ ಆದಿನ ಕೂಡ ನಿದ್ರೆ ಬರಬಾರದೆ! ಒಂದು ಕಳೆದಮೇಲೆ ಸ್ವಲ್ಪ ಎಚ್ಚರವಾಗಿ ಪುನಃ ಜೊಂಪು ಹತ್ತಿ ಕಣ್ಣುಮುಚ್ಚುವುದು. ಉತ್ತರ ಕ್ಷಣದಲ್ಲಿಯೇ ಇನ್ನೊಂದು ಕನಸಾಗುವುದು. ದೇವಸ್ಥಾನದಿಂದ ಹೊರಟ ರಾಜ ರಾಣಿಯರ ಸವಾರಿಯು ಊರಿನೊಳಕ್ಕೆ ಅರಮನೆಯೊಳಕ್ಕೆ, ಹೋಗುವುದು. ಈ ಕನಸುಗಳಿಗೆ ಸಂಗತ, ಸಂಬದ್ಧತೆಗಳ ಚಿಂತೆಯೇ ಇಲ್ಲ; ಕಾಲದೇಶಗಳ ನಿಯಮವೇ ಇಲ್ಲ. ಹಗಲು ನಾಲ್ಕು ಗಂಟೆಯ ಸಮಯ. ಈಗ ರಾಣಿಯರ ಅಂತಃಪುರದ ಚಿತ್ರಗಳು. ಅಲ್ಲಿ ಅವರ ವಿಹಾರ ವಿಲಾಸ, ದರ್ಪ ಅಹಂಕಾರ, ಅಸೂಯೆ ಕೃತ್ರಿಮ, ವಾದ ವಿವಾದಗಳು, ಅವಹೇಳನ ತಿರಸ್ಕಾರಗಳು. ಇಲ್ಲವಾದರೆ ಪಗಡೆ, ಅಥವ ಚದುರಂಗದ ಆಟ. ಅದೂ ಇಲ್ಲವೆ ಜಂತದ ಬೊಂಬೆಗಳೊಡನೆ ಗೃಹ ಜೀವನದಾಟ. ವೀಣೆ, ರುದ್ರವೀಣೆ, ಪಿಟೀಲು,

ಕೊಳಲು ಇವುಗಳನ್ನು ನುಡಿಸುತ್ತಿರುವ ಸತಿಯರು. ಎಲ್ಲರೂ ರಾಜೋದ್ಯಾನ ಕುಸುಮಗಳು—ಅಪ್ಸರೆಯರು; ಪ್ರತಿಯೊಬ್ಬಳೂ ಒಬ್ಬ ಚಕ್ರವರ್ತಿಯನ್ನು ಒಲಿಸಿ ಆಳಬಲ್ಲ ರಾಣಿ. ಕಂಠವೆತ್ತಿ ಸರಸವಾಗಿ, ಮೃದುವಾಗಿ ತಾನಲಯಸಮನ್ವಿತವಾಗಿ ಅವರು ಹಾಡುವ ಹಾಡುಗಳು. ಪ್ರಿಯೆಯು ಪ್ರಿಯನನ್ನು ಕುರಿತು ಇಲ್ಲಿ ಉತ್ಕಂಠಿತೆಯಾಗಿ ಹಾಡುತ್ತಿರುವಳು; ವಿರಹರಾಗ ಒಂದುಸಲ, ವಿಭವರಾಗ ಒಂದುಸಲ. ಅಲ್ಲಿ ಆಕಡೆ ಸಂತೋಷದ ಸಂಭ್ರಮದಲ್ಲಿ ಮೈಮರೆತು ಹಾಡುವ ಗೀತೆ ಗೀತಿಕೆಗಳು; ಹಾಡಹಾಡುತ್ತ ಎದುರಿಗಿದ್ದ ಯಾರನ್ನೊ ಓರೆ ನೋಟದಿಂದ ನೋಡಿದಂತೆ ನೋಡಿ, ಅವರನ್ನು ಒಲಿಸಿಕೊಳ್ಳಲು ಹಾಡುವ ಹಾಡು. ಇರುವರನ್ನು ನೋಡಿಯೂ ನೋಡದಂತೆ ನಟಿಸಿ, ತಲೆಬಾಗಿಸಿ, ಕೊರಳ ಸರ ಕಂಠೀಹಾರವನ್ನು ಸರಿಮಾಡಿಕೊಳ್ಳುತ್ತ ಹಾಡಿನ ಚರಣಗಳಿಗೆ ಸ್ವಕಪೋಲಕಲ್ಪಿತವಾದ ಸ್ವರಮೇಳ ಸಾಹಿತ್ಯಗಳನ್ನು ಸೇರಿಸಿ ಹಾಡುವವರು; ತೊಡೆಗಳಮೇಲೆ ಮೊಳಕೈ ಊರಿ, ಪೂರ್ಣಿಮಾಚಂದ್ರನಂತೆ—ವಸಂತ ಪ್ರಾತದಲ್ಲಿ ಬಿರಿದು ಅರಳುತ್ತಿರುವ ಗುಲಾಬಿಯಂತೆ—ಇರುವ ಮುಖಗಳನ್ನು ಬಾಗಿಸಿ ಊರೆ ನಿಲ್ಲಿಸಿಕೊಂಡು ನಿಡುಸುಯ್ಯುವವರು; ಎಷ್ಟು ವಿಧವಾಗಿ ದೂರ ತಳ್ಳಿದರೂ ಮೇಲೆ ಮೇಲೆ ಉರುಳಿಬಿದ್ದು ಹಣೆ ಕಪೋಲಗಳ ಮೇಲೆ ಹರಿದು ಸುಳಿದಾಡಿ ಹಾರಾಡಿ ಹಾವಳಿಮಾಡುತ್ತಿರುವ ಚಿಕುರದಾಮವನ್ನು ಕೈಬೆರಳಿಂದ ನೇವರಿಸಿ ತಿದ್ದಿ, ಪುನಃ ನಿಡುಸುಯ್ಯುತ್ತ ಕುಳ್ಳಿರುವ ಕಾಂತೆಯರು; ಹಾಗೇ ಬೆಚ್ಚಿಬಿದ್ದು ಮುಖವೆತ್ತಿ ನೋಡಿ ಏನೂ ಕಾಣದಿದ್ದರೂ ಏನನ್ನೋ ಕಂಡಂತೆ ಸಂತೋಷವನ್ನನುಭವಿಸುತ್ತ ತಮ್ಮ 'ಸುಲಿಪಲ್' ಸಾಲುಗಳ ಸೌಂದರ್ಯವೂ ಕೆಂದುಟಿಗಳ ಕುಂದಣದಲ್ಲಿ ಖಚಿತವಾಗಿರುವ ಬಾಯ್ ಚಲುವೂ ಹೊರದೋರುವಂತೆ, ಆದರೆ ಅರೆಕ್ಷಣದಲ್ಲೆ ಆರಿ ಮಾಯವಾಗುವಂತೆ—ನಗುವ ಮುಗುಳ್‌ನಗೆ. ಇನ್ನೊಂದೆಡೆ ಸುಪ್ಪತ್ತಿಗೆಗಳ ಮೇಲೆ ಅರ್ಧ ಶಾಯಿತರಾಗಿ, ದಿಂಬಿಗೆ ತೋಳ್ಗಳನ್ನು ಅನುವಡಿಸಿಕೊಂಡು,

ತಾಂಬೂಲರಾಗದಿಂದ ರಂಜಿತವಾದ ಅಧರವನ್ನು ನಾಲ್ಕು ಕಡೆಯ ನಿಲುಗನ್ನಡಿಗಳ ಕಡೆ ಹಿಡಿದು ನೋಡಿ ನೋಡಿ ವಿನೋದಪಡುತ್ತಿರುವ ಸುಂದರಿಯರು. ಇಲ್ಲಿ ಕಾಣುವ ಈಕೆ ಮಹಾರಾಜ್ಞಿಯಿರಬೇಕು. ಚೈತ್ರೋದ್ಯಾನದಲ್ಲಿ ತೆಳ್ಳನೆ ಎತ್ತರವಾಗಿ ಬೆಳೆದು, ಹಸುರು, ಕೆಂಪು ಚಿಗುರುಗಳಿಂದ ಅಲಂಕೃತವಾಗಿ ಸರ್ವಾಂಗ ಸುಂದರವಾಗಿರುವ ವೃಕ್ಷವನ್ನು ಕುಸುಮಚಯವು ಸಿಂಗರಿಸಿರುವಂತೆ ಈಕೆಯ ಸಹಜ ಲಾವಣ್ಯವನ್ನು ರತ್ನಾಭರಣರಾಜಿಯು ರಂಜಿಸಿದೆ. ನಾನಾವಿಧ ಪರಿಮಳಗಳಿಂದ ತುಂಬಿದ ಈ ಮಂದಿರ. ಆಕಡೆ, ಈಕಡೆ, ತಲೆಯ ಹಿಂಭಾಗದಲ್ಲಿ ಬೀಸಣಿಗೆಯ ದಾಸಿಯರು. ಈಕೆಯ ಕಾಲುಂಗುರವನ್ನು ಸರಿಮಾಡುತ್ತ ಕಾಲ್ದೆಸೆಯಲ್ಲಿ ಕುಳಿತಿರುವ ನಳಿತೋಳ ಸುಂದರಿ ದಾಸಿಯೊಬ್ಬಳು. ಇತ್ತ ಮನ್ಮಥ ರತಿಯರ ಪಟ ; ಅತ್ತ ಕೃಷ್ಣಲೀಲಾವಿಲಾಸ. ಎಲ್ಲೆಲ್ಲಿಯೂ ತನ್ನ ತನ್ನಿನಿಯ ಮಹಾರಾಜನ ತೈಲಚಿತ್ರಗಳು. ಹಾಗೆಯೇ ಕನಸು ಬೇರೆ ಮಹಲಿಗೆ ಹೋಗುವುದು. ಅಲ್ಲಿ ಕೆಲವರು ವಸ್ತ್ರಾಭರಣಗಳನ್ನು ಧರಿಸುತ್ತಲೂ, ಮತ್ತೆ ಕೆಲವರು ಸುಗಂಧತೈಲಗಳಿಂದ ತಲೆಬಾಚಿಸಿಕೊಂಡು ಹೆರಳು ಹಾಕಿಸಿಕೊಳ್ಳುತ್ತಲೂ ವಿಧವಿಧವಾಗಿ ಸಲ್ಲಾಪಮಾಡುತ್ತ ಒಬ್ಬರನ್ನೊಬ್ಬರು ಹಾಸ್ಯಮಾಡಿಕೊಳ್ಳುತ್ತಿರುವರು. ಆ ಸಮಯದಲ್ಲಿ ಇನ್ನೊಬ್ಬಳು ಗಿಳಿಯ ಹತ್ತಿರಕ್ಕೆ ಹೋಗಿಯೊ ಶಾರಿಕೆಯನ್ನು ಕರೆದೊ, 'ನಮ್ಮ ಸಖಿಯ ಮನಸ್ಸಿನಲ್ಲಿ ಇರುವುದನ್ನು ಹೇಳಿಬಿಡು ಮತ್ತೆ ! ನಿನಗೆ ಮುತ್ತಿನಸರ ಹಾಕುತ್ತೇನೆ—ಹಣ್ಣು ಕೊಡುತ್ತೇನೆ—ಮುತ್ತುಕೊಡುತ್ತೇನೆ' ಎನ್ನುವಳು. 'ಸಾಕು ಸುಮ್ಮನಿರೆ, ನಿನಗೆ ಯಾವಾಗಲೂ ಒಂದೆ' ಎಂದು ತುರುಬಿಗೆ ಹೂ ಮುಡಿಸಿಕೊಳ್ಳುತ್ತಿರುವ ಸುಂದರಿಯು ಹುಸಿಮುನಿಸಿನಿಂದ ಅವಳನ್ನು ಗದರಿಕೊಳ್ಳುವಳು. ಆ ಸಮಯಕ್ಕೆ ಸರಿಯಾಗಿ ಗಿಳಿಯು ಆಕೆಯ ಮಡಿಲಿನೊಳಕ್ಕೆ ಇಳಿದು ಬಂದು ಕುಳಿತು ಭುಜದ ಮೇಲಕ್ಕೆ ಹಾರಿ ನಿಂತು, ಆಕೆಯ ಕಪೋಲಕ್ಕೆ ತನ್ನೊಡಲನ್ನು ಒಡ್ಡಿ ಮುಖದಲ್ಲಿ ಮುಖವಿಟ್ಟು ಆಡುವುದು ... ಅಂತಃಪುರದ

ಪಾರ್ಶ್ವದಲ್ಲಿಯೇ ತುಂಗಭದ್ರೆ ಹರಿಯುತ್ತಿದೆ. ರಾತ್ರಿ ಎಂಟು ಘಂಟೆಯ ಸಮಯ. ನದಿಯಲ್ಲಿ ಇಳಿಯಲು ಅಮೃತಶಿಲೆಯ ಸೋಪಾನವಿದೆ. ಸೋಪಾನವನ್ನೂ ನದಿಯನ್ನೂ ಸುತ್ತಣ ಜಗತ್ತನ್ನೂ ಬೆಳಗುವ ಶರತ್ ಚಂದ್ರನು ಮೇಲೆ ಓಲೈಸಿದ್ದಾನೆ. ನದಿಯ ಸಣ್ಣ ಸಣ್ಣ ಅಲೆಗಳಿಂದ ತಾಡಿತವಾದ ನೀರಿನಲ್ಲಿ ಅವನ ಬಿಂಬವು ಚದುರಿ, ಖಂಡಿಸಿ, ಸಾವಿರಾರಾಗಿ ಹೋಗುತ್ತಿದೆ. ಗಾಳಿ ಬೀಸುವುದು ನಿಂತಮೇಲೆ ಮತ್ತೆ ಶಾಂತವಾಗಿ ನೀರು ನಿಶ್ಚಲವಾಗಿ ನಿಲ್ಲುವುದು. ಈಗ ಚಂದ್ರತಾರಾಮಂಡಲವೆಲ್ಲ ಭೂರಂಗಕ್ಕೆ ಇಳಿದು ಬಂದು ಎಲ್ಲಿನೋಡಿದರಲ್ಲಿ ಆ ತಿಳಿನೀರಿನಲ್ಲಿ ಬಿಂಬಗೊಂಡು ಮೇಲಿನ ನೀಲಾಕಾಶವನ್ನು ನದಿಯ ತಳದಲ್ಲಿ ಹಾಸಿಬಿಟ್ಟಂತಿದೆ. ಚಂದ್ರಕಾಂತಿ ಯನ್ನು ಅನುಭವಿಸಲು ರಮಣಿಯರು ಕೆಳದಿಯರೊಡಗೂಡಿ ಮೆಲ್ಲ ಮೆಲ್ಲನೆ ಬರುತ್ತಿದ್ದಾರೆ. ಅವರ ಕಾಲುಂಗುರಗಳು ಘಲ್ ಘಲ್ ಎಂದು ಶಬ್ದ ಮಾಡುತ್ತಿವೆ; ಅದರ ತಾನಕ್ಕೆ ಸರಿಯಾಗಿ ಕಾಲಿಡುತ್ತ ಅವರು ಸೋಪಾ ನದ ಮೆಟ್ಟಲನ್ನು ಇಳಿಯುತ್ತ, ಸುತ್ತಲೂ ನೋಡಿಕೊಂಡು, ಸೆರಗು ಸರಿ ಮಾಡಿಕೊಳ್ಳುತ್ತ ತುರುಬಿನಿಂದ ಜಾರಿಬೀಳುತ್ತಿರುವ ಹೂ ಸರವನ್ನು ಸರಿ ಯಾಗಿ ಮುಡಿದುಕೊಳ್ಳುತ್ತ, ಒಬ್ಬರ ಕಡೆ ಒಬ್ಬರು ನೋಡಿ ವಿನೋದ ದಿಂದ ನಗುತ್ತ, ಹಾಡಿನ ಪಲ್ಲವಿಗಳಿಗೆ ತಮ್ಮ ಮನಸ್ಸಿಗೆ ತೋರಿದ ಪದಗ ಳನ್ನು ಸೇರಿಸಿಕೊಂಡು ಹಾಡುತ್ತ, ಒಬ್ಬರ ಮುಖಕ್ಕೆ ಇನ್ನೊಬ್ಬರು ಆರತಿ ಬೆಳಗಿ ಅಕ್ಷತೆ ಚೆಲ್ಲುವಂತೆ ನಟಿಸುತ್ತ ಹೋಗಿ ನೀರಿನೆಡೆಯಲ್ಲಿ ಕಾಲು ಚಾಚಿಕೊಂಡು ಕುಳಿತುಕೊಳ್ಳುತ್ತಿದ್ದಾರೆ. ಆಹಾ, ಏನು ಚಿತ್ರಗಳು! ಪ್ರಪಂಚದ ಅನುಭವವೆಲ್ಲ ಈ ರಮಣಿಯರಿಗೆ ಈತೆರನಾದ ಭೋಗಭಾಗ್ಯ ವಿಲಾಸಗಳಲ್ಲಿಯೆ ಅಡಕವಾಗಿಹೋಗಿರುವಂತಿದೆ. ಶಾಶ್ವತವಾಗಿ ತಾವು ಹೀಗೇ ಇರುವೆವೆಂದೂ, ಎಲ್ಲವೂ ತಮಗೆ ಹೀಗೇ ನಡೆದು ಬರುವುದೆಂದೂ ಅವರ ಭಾವನೆ, ಪಾಪ!

ಛೆ! ಈ ಸ್ವಪ್ನಗಳು ಮುಗಿಯಲೇ ಮುಗಿಯವೆ? ಎಚ್ಚರಗೊಂಡು ಸ್ವಲ್ಪಹೊತ್ತು ಬೇರೆ ಯೋಚನೆ ಮಾಡೋಣವೆಂದು ಕುಳಿತರೆ ಕಣ್ಣು

ತೆರೆದಿದ್ದ ಹಾಗೆಯೆ ಬೇರೊಂದು ಸ್ವಪ್ನ: ಈಗ ಆ ಅಂತಃಪುರವಿಲ್ಲ; ರಮಣಿಯರ ಲಲಿತವಿಲಾಸಗಳಿಲ್ಲ; ನಗುವಿಲ್ಲ:—ಇದು ವಿಜಯ ದಶಮಿಯ ಸಂಭ್ರಮ—ರಾಮರಾಜನ ಒಡ್ಡೋಲಗ. ದಟ್ಟವಾಗಿ ಎಲ್ಲೆಲ್ಲಿಯೂ ನೆರೆದಿರುವ ಜನರ ಸಂದಣಿ; ಸಡಗರದಿಂದ ಓಡಾಡುತ್ತಿರುವ ಓಲೆಕಾರರು; ರಾಜಪಥಗಳಲ್ಲಿ ಕಣ್ಣುಹರಿಯುವವರೆಗೂ ಜನ; ಉದ್ದಕ್ಕೂ ಉತ್ಸವಸ್ತಂಭವೇದಿಕೆಗಳು, ತೋರಣಗಳು. ರಾಜಪಥದ ಮಧ್ಯೆ ಸುಸಜ್ಜಿತರಾಗಿ ನಾಲ್ವರು ನಾಲ್ವರಂತೆ ಕಾಳಾಶ್ವಗಳ ಮೇಲೆ ಹಿಂದೂ ಸವಾರರು ಕುಳಿತಿದ್ದಾರೆ. ಕುದುರೆಗಳು ಅರಬ್ಬಿಸ್ತಾನ್, ಬರ್ಮ, ಪರ್ಷ್ಯ ದೇಶದ ಉತ್ತಮಜಾತಿಯವು; ವಿಜಯನಗರದವರ ಕುದುರೆಗಳೆಂದರೆ ಮುಸಲ್ಮಾನ್ ಚಕ್ರವರ್ತಿಗಳಿಗೂ ಅಸೂಯೆ. ಎಲ್ಲವೂ ಹಂಸಗತಿಯಲ್ಲಿ ನಡೆಯುತ್ತಿವೆ. ರಾವುತರೂ ಸುಶಸ್ತ್ರಯುತರಾಗಿದ್ದಾರೆ. ಒರೆಗಳಚಿದ ಖಡ್ಗವನ್ನು ಒಂದು ಕೈಯಲ್ಲಿಯೂ, ಕುದುರೆಯ ಲಗಾಮನ್ನು ಇನ್ನೊಂದರಲ್ಲಿಯೂ ಹಿಡಿದುಕೊಂಡು ಕೊನೆ ಮೊದಲಿಲ್ಲದೆ, ಮುಂಗಾರು ಮಳೆಗೆ ಮುಂಚೆ ಸಂದಣಿಸಿ ಹೊರಡುವ ಕಟ್ಟಿರುವೆಗಳ ದಳದಂತೆ ಸಭಾಮಂಟಪದ ಕಡೆ ಹೋಗುತ್ತಿದ್ದಾರೆ. ಮೇಲ್ಗಡೆ ವಿಜಯದಶಮಿ ದಿಬ್ಬದಲ್ಲಿ ಮಹಾರಾಜನ ಆಗಮನವನ್ನು ನಿರೀಕ್ಷಿಸುತ್ತ ಕಿಕ್ಕಿರಿದು, ಪಿಸುಪಿಸು ಮಾತನಾಡುತ್ತಿರುವ ಮಾನವ ಮಹಾಸಾಗರದಲ್ಲಿನ ಅಲೆಮಾಲೆಗಳ ಗಜಿಬಿಜಿ. ನಡುನಡುವೆ, ಅಧಿಕಾರ ದರ್ಪದಿಂದ ಉತ್ಪನ್ನವಾದ ಉಚ್ಚಗಂಭೀರಸ್ವರದ 'ಸದ್ದು!' ಎಂಬ ಕೂಗು. ಸ್ವಲ್ಪಹೊತ್ತು ಎಲ್ಲವೂ ನೀರವ. ಕರಿಯಕಲ್ಲು ಕೆತ್ತನೆಗಳಿಂದ ಮಾಡಿದ ದಿಬ್ಬದಮೇಲಿನ ಸಭಾಮಂದಿರದಲ್ಲಿ ಒಂದು ಕೊನೆಯಲ್ಲಿ ಪೂರ್ವಾಭಿಮುಖವಾಗಿ ರಾಯನ ರತ್ನಸಿಂಹಾಸನ. ಸ್ವಲ್ಪ ಸರಿದು ಎಡಕ್ಕೆ ಬಲಕ್ಕೆ, ಹಿಂದೆ ನಿಮ್ನಾಸನಗಳು. ಅಮೃತಶಿಲೆಯ ಸಾಲ್ಕಂಭಗಳಲ್ಲಿ ಕೆತ್ತನೆಯ ಗಜಸಿಂಹಗಳು. ಆನೆಗಳ ಎತ್ತುಸೊಂಡಿಲುಗಳಲ್ಲಿ ಮುತ್ತಿನ ಸರ, ಹೂವಿನ ಹಾರಗಳು. ರಾಯನ ಸಿಂಹಾಸನಕ್ಕೆ ಹೋಗುವ ದಾರಿಯು

ದ್ದಕಕ್ಕೊ ಪರ್ಶ್ಯಾದೇಶದ ರತ್ನಕಂಬಳಿ; ಅದರಮೇಲೆ ಕೆಂಪುಮೊಖಮಲ್ಲಿನ ನಿಡುಹಾಸು. ಉತ್ತರಕ್ಷಣದಲ್ಲಿಯೆ ನೂರಾರು ವಾದ್ಯಗಳೂ ಶಂಖ ಭೇರಿಗಳೂ ಮೊಳಗುವುವು. ಲಕ್ಷಾಂತರ ಜನರ ಜಯಘೋಷ; ಹೊಗಳುಭಟರ ಬಿರುದಾವಳಿಪ್ರಶಂಸೆ. ವೈದಿಕರ ಮಂತ್ರಪೂತಸ್ವಾಗತವಚನ. ಪುನಃ ಐದುನಿಮಿಷ ಪರ್ಯಂತ ಎಲ್ಲವೂ ನಿಶ್ಶಬ್ದ. ಈವರೆಗೆ ರಾಯನೂ, ಮಂತ್ರಿ ಪ್ರಧಾನರೂ ತಮ್ಮ ಆಸನಗಳಮೇಲೆ ಕುಳಿತುಕೊಳ್ಳುವರು. ಪಟ್ಟದ ಆನೆ, ಕುದುರೆ, ಹಸು, ಇವು ಮರ್ಯಾದೆಯಂತೆ ಮುಂದೆ ಬಂದು ದೂರದಲ್ಲಿ ಬಾಗಿ ನಮಸ್ಕರಿಸುವುವು; ಮಲ್ಲರ ದ್ವಂದ್ವಯುದ್ಧಗಳೂ ಇತರರ ಸಾಹಸಕಾರ್ಯಪ್ರದರ್ಶನಗಳೂ ನಡೆಯುವುವು. ಆಮೇಲೆ ಮೇಳತಾಳದಿಂ ದೊಡಗೂಡಿ ಪಲ್ಲಕ್ಕಿಯಲ್ಲಿ ಚಂದ್ರಾಯುಧ ಬರುವುದು. ಪುರೋಹಿತರೂ ಜಗುಲಿಯಮೇಲಿದ್ದ ಮುಖ್ಯಸಭಿಕರೂ, ರಾಯನೂ ಎದ್ದುನಿಲ್ಲುವರು; ವೈದಿಕರು ಮಂತ್ರೋಚ್ಚಾರಣೆ ಮಾಡುತ್ತಿರಲು, ರಾಯನು ಭಕ್ತಿಯಿಂದ ಆದಕ್ಕೆ ಪೂಜೆಮಾಡಿ, ಮೊಳಕಾಲೂರಿ, ಅದನ್ನು ಎರಡೂ ಕೈಗಳಿಂದ ಎತ್ತಿ ಹಿಡಿದು, ಹಣೆಗೆ ಮುಟ್ಟಿಸಿ, ತಲೆಯಮೇಲೆ ಇಟ್ಟುಕೊಂಡು ಎದ್ದುನಿಂತು ಆದನ್ನು ಬಲಹಿಡಿಯಿಂದ ಮೇಲೆತ್ತಿ ಝುಳಪಿಸುವನು; 'ಜಯಜಯ ಮಹಾರಾಜ!' 'ಜಯವಿಜಯನಗರಾಧೀಶ!' 'ಜಯಶ್ರೀರಾಮರಾಜ' ಎಂಬ ಜನರ ಕೂಗು—ಇವೆಲ್ಲವೂ ಮುಗಿಯಲು ಮಹಾರಾಜನು ಸನ್ನೆ ಮಾಡಲು ಪ್ರಧಾನಿಯು ಮುಂದೆ ಬಂದು ನಿಂತು ಒಂದು ಲೇಖನವನ್ನೋದುವನು. ಈ ತೊಂಭತ್ತುವರ್ಷದ ವಯಸ್ಸಿನಲ್ಲಿಯೂ ಸುಲಕ್ಷಣವಾಗಿ ಸುಕ್ಕುಗಳಿಲ್ಲದೆ ಗುಲಾಬಿಯ ರಂಗಿನಿಂದ ರಾಜಿಸುತ್ತಿದ್ದ ರಾಮರಾಜನ ಮುಖವು ಈಗ ವೀರಗಂಭೀರವಾಗಿದೆ. ಆದರಮೇಲೆ ತೆಳ್ಳನೆಯ ನೆಳಲು ಮುಸುಕಿದಂತಿದೆ. ಸ್ಥಿರಪ್ರತಿಜ್ಞೆಯ ಮುದ್ರೆಯಿದು ಎಂಬಂತಿರುವ ಆ ದವಡೆಯ ಮಾಟ. ಹುಬ್ಬುಗಳು ನಿಷ್ಠುರವಾಗಿವೆ; ಹುಬ್ಬುಗಳ ನಡುವೆ ಕುಂಕುಮ; ಕಣ್ಣುಗಳಿಂದ ಕಿಡಿಕಾರುವಂತಿದೆ; ನಿಮಿರಿನಿಂತಿರುವ ಶ್ಮಶ್ರು;

ಅಂಬಿನ ಅಲಗಿನಂತೆ ನೇರವಾದ ಕಾಯಭಂಗಿ ; ಉತ್ಸವಕಾಲವಾಗಿದ್ದರೂ ಬಹುಮಟ್ಟಿಗೆ ರಣಸಜ್ಜವಾದ ವೇಷ ; ಕಾಠಿಣ್ಯದ ಕಠಿನತೆಯನ್ನೇ ಕೀಳು ಮಾಡುವಂತಿದ್ದ ಆ ಮುಖದ ಅಚ್ಚು ; ಪ್ರಧಾನಿಯ ತೀಕ್ಷ್ಣತಾ ಪೂರ್ಣವಾದ, ಉಕ್ಕಿನ ಮೊನೆಯಂತಿದ್ದ ವಾಕ್ಯಸರಣಿ ; ಇವುಗಳನ್ನು ನೋಡಿದವರ ವಿಸ್ಮಯ. ಇದೇನಿರಬಹುದೆಂದು ಒಬ್ಬರ ಮುಖವನ್ನೊಬ್ಬರು ನೋಡುವರು. ಬಿಜಾಪುರದ ಸುಲ್ತಾನ್ ಆದಿಲ್‌ಷಾ ಬರೆಸಿರುವ ಕೆಚ್ಚಿನ ಧೋರಣೆಯ ಪತ್ರವನ್ನು ಪ್ರಧಾನಿ ಓದುತ್ತಿರುವನು. ಮಧ್ಯೆ ಮಧ್ಯೆ ಮಹಾರಾಜನು ತನ್ನ ಕಣ್ಣಿನ ಜ್ವಾಲೆಯನ್ನು ಸೈನಿಕರತ್ತ ತಿರುಗಿಸಿ ಖಡ್ಗದ ಹಿಡಿಯನ್ನು ಪ್ರಬಲತರವಾದ ಮುಷ್ಟಿಯಿಂದ ಹಿಡಿ ಹಿಡಿಯುವ ಆವೇಶವೃತ್ತಿ. ಮದಗಜಗಳಂತಿರುವ ಮುಂಗಾರು ಮೋಡಗಳು ಸಾಂದ್ರವಾಗಿ, ತಂಡ ತಂಡವಾಗಿ ಆಕಾಶದಲ್ಲಿ ಹೋಗುತ್ತಿರುವಾಗ, ಸೂರ್ಯನೇ ಅವುಗಳ ಹಿಂದೆ ಮರೆಯಾಗಿ ಹೋಗಿ ಅವನ ಕಿರಣಗಳ ಬೆಳ್ಳುರಿಯು ಆ ಕಾರ್ಮೋಡಗಳ ಮಧ್ಯೆ ಕೆಂಪುಗೊಂಡು, ಅವುಗಳ ಕರಾಳತೆಯೊಡನೆ ತಾನೂ ಸೇರಿ ಕೃಷ್ಣಾರುಣವಾಗಿ, ಅವನ್ನು ಕಾದ ತಾಮ್ರದಂತೆ ಮಾಡಿ, ಭೀಕರ ರೌದ್ರರೂಪನ್ನು ತಾಳುವಂತೆ ಈಗಾಗಲೇ ನೆಳಲಿನಿಂದ ಮುಸುಕಿದಂತಿದ್ದ ರಾಯನ ಮುಖವನ್ನು ನವಾಬನ ಪತ್ರವು ಹೆಚ್ಚು ಕರಾಳವಾಗಿ, ಹೆಚ್ಚು ರೌದ್ರವಾಗಿ, ಹೆಚ್ಚು ಭೀಕರವಾಗಿ ಮಾಡಿದೆ ; ಎಡಗಡೆ ಓರೆಯಲ್ಲಿ ಪಠಾಣಸರದಾರನ ಅರ್ಧದ್ವೇಷದ ಅರ್ಧವ್ಯಂಗ್ಯದ ಹುಸಿನಗೆ : ಅರ್ಧಕೋಪದಿಂದ ಅರ್ಧವಾತ್ಸಲ್ಯದಿಂದ ತನ್ನೆಡೆಗೆ ನೋಡುತ್ತಿರುವ ರಾಯನ ದೃಷ್ಟಿಗೆ ಪ್ರತ್ಯುತ್ತರವಾಗಿ ಅವನೂ ತನ್ನ ಖಡ್ಗದ ಹಿಡಿಯನ್ನು ಹಿಡಿಯುತ್ತಿದ್ದಾನೆ. ನವುರು ಕಾಗದದಂತಿರುವ ಅವನ ಕೆಳತುಟಿಯ ವಕ್ರತಿರುವಿನಲ್ಲಿ ತಿರಸ್ಕಾರದ ಅಂಕಿತವಿದೆ. ಪತ್ರಪಠನ ಮುಗಿಯಿತು. ಕೂಡಲೆ ಕ್ರುದ್ಧನಾದ ಮಹಾರಾಜನು ವಜ್ರಕಂಪಿತಸ್ವರದಿಂದ, “ಕೇಳಿದಿರಾ, ಸರದಾರರೆ, ಪೌರರೆ, ಈ ವಾಕ್ಯಗಳನ್ನು ! ವಿಜಯನಗರದ ದರ್ಪವೂ ಗೌರವವೂ

ನಷ್ಟವಾಗಿ ಹೋಗಿರುವುವೇನು ? ನಮ್ಮ ತೋಳುಗಳಲ್ಲಿ ಬಲವಿಲ್ಲವೇನು ? ಆಬ್ಬಾ, ಏನು ದುರಹಂಕಾರ ! ಕಾಲ್ಕೆಳಗೆ ಹರಿದುಹೋಗುವ ಹುಳುಗಳು ಪ್ರಭು ಕೇಸರಿಯನ್ನು ಧಿಕ್ಕರಿಸಿ ಮದೋನ್ಮತ್ತವಾಗಿರುವುವೆ ? ವಿಜಯನಗರದ ಪಾದತಳದಲ್ಲಿ ಸಿಕ್ಕಿ ನಾಲ್ಕಾರುಬಾರಿ ಚೂರ್ಣೀಕೃತರಾಗಿ ಹೋಗಿರುವುದನ್ನು ಅವರು ಮರೆತಂತಿದೆ. ಆಗಲಿ ; ಯವನ ಖಳಾಧಮರ ಸೊಕ್ಕುಮುರಿಯುವುದಕ್ಕೆ ರಾಮರಾಜನಿದ್ದಾನೆ. ವೀರಾಳುಗಳೆ, ಸೈನಿಕರೆ, ನಿಮ್ಮ ಪೌರುಷವನ್ನು ಇಂದು ರಣರಂಗದಲ್ಲಿ ತೋರಬೇಕಾಗಿರುವುದು. ಸ್ಮಾರ್ತಸಾಮ್ರಾಜ್ಯದ ಗೌರವವನ್ನು ಕಾಪಾಡಲು ಸಮಯವೊದಗಿರುವುದು. ಐದು ಜನರೂ ಸೇರಿರುವರಂತೆ !—ಐದು ಜನ ಬಹಮನಿಯವರು !! ಸೇರಲೇಳಿ ; ಇನ್ನೂ ನಾಲ್ವರನ್ನು ಜೊತೆಗೆ ಸೇರಿಸಿಕೊಳ್ಳಲಿ—ಕೂಡಿಬರಲಿ. ಬಿರುಗಾಳಿಯ ರಭಸದಲ್ಲಿ ಶುಷ್ಕಪತ್ರಗಳೆಷ್ಟಿದ್ದರೇನು ಮಾಡಬಲ್ಲವು ? ಯವನ ಸೈನ್ಯವನ್ನು ತಂದು ನಮ್ಮ ರಾಜ್ಯವನ್ನು ದಾಳಿಟ್ಟು ನಮ್ಮನ್ನು ಚ್ಯುತಿಗೊಳಿಸಿ ಈ ಸಾಮ್ರಾಜ್ಯವನ್ನು ನಾಶಮಾಡುವರಂತೆ ! ಸೈನ್ಯವೊಂದನ್ನು ಆಗಲೇ ಗಡಿನಾಡಿನ—ಕೋಟೆಯಕಡೆ ಕಳುಹಿಸಿರುವರಂತೆ ; ಪ್ರಜೆಗಳೇ, ಇವರಿಗೆ ನಮ್ಮ ಮೇಲೆ ಎಷ್ಟರ ದ್ವೇಷಾಸೂಯೆಗಳಿವೆಯೊ ನಿಮಗೆ ತಿಳಿದೇ ಇದೆ. ನಮ್ಮ ಪವಿತ್ರಮಂದಿರಗಳನ್ನು ಒಡೆಯುವುದು ; ನಮ್ಮ ಧರ್ಮವನ್ನು ಕಲುಷಿತಮಾಡುವುದು ; ಗೋವಧೆ ಮಾಡುವುದು. ಅಬಲೆಯರಾದ ನಿಮ್ಮ ಸುತಾಸತಿಯರ ಮಾನಕ್ಕೂ, ನಿಮ್ಮ ಧರ್ಮಕ್ಕೂ, ನಿಮ್ಮ ರಾಷ್ಟ್ರಕೀರ್ತಿಯ—ಸ್ಥೈರ್ಯಕ್ಕೂ ಬದ್ಧವೈರಿಗಳಿವರು. ಕೆಣಕಿ ಬಂದಿರುವರು. ಇವರ ಸೊಕ್ಕನ್ನು ಈಗಲೇ ಮುರಿದುಬಿಡಬೇಕು. ಇನ್ನು ಸುಮ್ಮನಿರಲಾಗದು. ನಿಮ್ಮಲ್ಲೊರ್ವನೂ ಜೀವಗಳ್ಳನಲ್ಲವೆಂದು ನಾನು ಬಲ್ಲೆ. ದೇಶಭಕ್ತಾಗ್ರಣಿಗಳೆ ! ಎಲ್ಲ, ನಾವು ಹೇಡಿಗಳಲ್ಲವೆಂದೂ, ಎಂದಿಗೂ ನಾವು ಹಿಂದೆ ನಿಲ್ಲೆವೆಂದೂ ಶಪಥಮಾಡಿ ಹೇಳಿ ; ವೈದಿಕರು ಶಾಂತಿಕರ್ಮಗಳನ್ನೂ ಅರ್ಚಕರು ಪೂಜೆಗಳನ್ನೂ ಮಾಡಿ

ಹೋಗಿ; ನಿಮ್ಮ ಧ್ವನಿಗಳನ್ನು ಕೇಳಿಯೇ ಈ ಕ್ಷುದ್ರಜಂತುಗಳು ಪಲಾಯನ ಗೈಯುವುವು,'' ಎನ್ನುತ್ತಿರುವನು. ಆವೇಶದಿಂದೆದ್ದ ಸೈನಿಕರೆಲ್ಲರೂ ಖಡ್ಗಗಳನ್ನೊರೆಯಿಂದ ಹಿರಿದು ಮಹಾರಾಜನ ಪಾದದತ್ತ ನಿರ್ದೇಶಿಸಿ ತಲೆಬಾಗುತ್ತಿದ್ದಾರೆ. ಪ್ರಜೆಗಳಲ್ಲಿ ಯುವಕವೃದ್ಧರೆಲ್ಲರೂ ಏಕಕಂಠರಾಗಿ "ನಾವೆಂದಿಗೂ ಹೇಡಿಗಳಾಗೆವು, ಮಹಾಸ್ವಾಮಿ. ಧಮನಿಯಲ್ಲಿ ಒಂದು ತೊಟ್ಟು ರಕ್ತವುಳಿದಿರುವವರೆಗೂ, ಜೀವದಲ್ಲಿ ಕಡೆಯ ಉಸಿರಿರುವವರೆಗೂ ತಮ್ಮ ಅನುಗಾಮಿಗಳಾಗಿದ್ದು ಜಯಸಾಧಿಸುವೆವು'' ಎನ್ನುತ್ತಿರುವರು.

ಸಭೆಯು ಮುಕ್ತಾಯವಾಯಿತು. ಸಭಾಮಂದಿರವು ಸ್ವಲ್ಪ ಹೊತ್ತಿನಲ್ಲಿಯೆ ಬರಿದಾಯಿತು. ರಾತ್ರಿಯ ಕಗ್ಗತ್ತಲಿನಲ್ಲಿ ದೂರದ ಅಂತರಾಳದೆಲ್ಲಿಂದಲೋ ಹೊರಟು ಬರುವಂತಿರುವ ಪಿಶಾಚಿಯೊಂದರ ಅಪಹಾಸ್ಯದ ಕೀಚುನಗುವೊಂದು ಮಾತ್ರ ಕೇಳಿಸಿದಂತೆ ಕೇಳಿಸಿ ಅದೂ ನಿಲ್ಲುವುದು. ನಗುವಿನ ಧ್ವನಿಯು ಆ ಯುವಕ ಪಠಾಣನ ಧ್ವನಿಯನ್ನು ದೂರದಲ್ಲಿ ಹೋಲುವಂತಿತ್ತು.

ತಕ್ಷಣದಲ್ಲಿಯೆ ಎಲ್ಲೆಲ್ಲಿಯೂ ಹಾಹಾಕಾರ; ಹೆಂಗಸರು ಮಕ್ಕಳ ರೋದನ; ಗುಂಡುಗಳ ಮಳೆ; ಖಡ್ಗಕಠಾರಿಗಳ ಇರಿತ ಕೊರೆತಗಳು. ಸಾವಿರಾರು ಜನರು ಒಬ್ಬರನ್ನೊಬ್ಬರು ಶಪಿಸುತ್ತ ಹೋರಾಡುತ್ತಿದ್ದಾರೆ; ನೀರು! ನೀರು! ಎಂಬ ಕೂಗು; ನೆಲದ ಮೇಲುರುಳಿ ಗಾಯಗಳಿಂದ ಮುಲಗುತ್ತಿರುವವರ ಶಬ್ದ; ಕುದುರೆ ಆನೆಗಳ ಹೇಹಾರವಗಳು. ಛಿನ್ನಮಸ್ತಕಗಳು; ಭಿನ್ನವಾದ ಮೈಕೈಕಾಲುಗಳು; ರಕ್ತದ ಕಾಲುವೆಗಳು; ಎಲ್ಲೆಲ್ಲಿಯೂ ಭಯಂಕರ ರಣಕೋಲಾಹಲ; ಮನುಷ್ಯರು ಪಿಶಾಚಿಗಳಾಗಿ ವಿಗಡರಾಗಿ ಲಯಕಾರ್ಯದೀಕ್ಷಿತರಾಗಿರುವ ದೃಶ್ಯ; ಉರಿವ ಮನೆಮಠಗಳು; ಉರುಳಿ ಬೀಳುತ್ತಿರುವ ಗೋಡೆ, ಕಂಬ, ಗುಡಿಗೋಪುರಗಳು; ದಿಕ್ಕಾಪಾಲು ಓಡುತ್ತಿರುವ ಕುದುರೆ ಆನೆಗಳು. ಭೇರಿಗಳ ಚೀರುಹೊಯಿಲು; ಇನ್ನೊಂದುಕ್ಷಣದಲ್ಲಿ ವಿದ್ಯಾನಗರ ಪತಾಕೆಯೂ

ದುರ್ಗದ ಹೊನ್ನುಕಳಶವೂ ಕೆಳಗೆಬಿದ್ದು ಅಖಂಡಸೌಭಾಗ್ಯದ, ಅವಿಶ್ರಾಂತ ಸಾಹಸದ, ನೆಲೆಬೀಡಾಗಿದ್ದ ಲಕ್ಷ್ಮೀವಲಯವು ಶ್ಮಶಾನವಾದ ದುಃಖ ಮಯ ನೋಟ. ಹಾ! ಹಾ! ಎಂದೆದ್ದೆ.

"ಏನ್ರಿ ಆಯಿತು? ಯಾಕೆ, ಹಾಗೆ ಕೂಗುತ್ತೀರಿ? ಕನಸು ಗಿನಸು ಆಯಿತೇನು? ಏಳಿ" ಎಂದು ಮೂರ್ತಿಗಳು ನನ್ನನ್ನು ಎಚ್ಚರಿಸಿದಂತೆ ಆಯಿತು. ನನಗೆ ಅದಕ್ಕಿಂತಲೂ ಎದುರಿನ ನೋಟದ್ದೇ ಇನ್ನೂ ಪ್ರಜ್ಞೆ.

"ಹೇ ದೂರವಿರು, ಜೋಕೆ"—

"ಹೋ ಹೋ, ಏನು ಬಂತಪ್ಪ, ಗ್ರಹಚಾರ, ಶ್ರೀಕಂಠಯ್ಯ, ಇದೇನು ಈ ಹುಚ್ಚು!" ಎಂದು ನನ್ನನ್ನು ಉರುಳಿಸಿ ಎಬ್ಬಿಸಿ ಬಿಟ್ಟರು.

"ಮೂರ್ತಿ, ಹೀಗಾಗಿ ಹೋಯಿತು, ಕಾಣ್ರಿ" ಎಂದೆ.

"ಈಹೊತ್ತಾಯಿತೇನು? ಆಗಿ ನಾನೂರು ವರ್ಷಗಳಾಗಿಹೋದವು. ಸುಮ್ಮನೆ ಮಲಗಿಕೊಂಡು ಸುಖವಾಗಿ ನಿದ್ರೆಮಾಡಿ, ಮಹರಾಯರಾ!" ಎಂದು ಹೇಳಿದರು. ಗಡಿಯಾರ ತೆಗೆದು ನೋಡಿದೆ. ಇನ್ನೂ ಎರಡೂವರೆ ಗಂಟೆ ಮಾತ್ರ ಆಗಿತ್ತು.

ಆದರೇನು? ಆದಿನ ನಿದ್ರೆ ನನ್ನ ಹಣೆಯಲ್ಲಿ ಬರೆದಿರಲಿಲ್ಲ. ಮುಂದಕ್ಕೆ, ಘೋರಸ್ವಪ್ನಗಳಾವುವೂ ಇಲ್ಲ; ಇತರ ಕನಸುಗಳು ಬಂದವು. ಈಗ ಎಲ್ಲವೂ ರಾಮಾಯಣದ ಕನಸುಗಳು; ಒಂದುಸಲ ಕಪಿಸೈನ್ಯ; ವಾಲಿ ಸುಗ್ರೀವರ ಯುದ್ಧ; ಒಂದುಸಲ ರಾವಣನ ರಥವು ಸೀತಾದೇವಿಯನ್ನು ಎತ್ತಿಕೊಂಡು ಹೋಗುತ್ತಿರುವಾಗ ದೇವಿಯು ಆಭರಣಗಳನ್ನು ಬಿಸಾ ಡುತ್ತಿರುವಂತಿರುವುದು; ಇನ್ನೊಂದುಸಲ ಶಬರಿಯ ಆಶ್ರಮ; ಆಕೆಯು ರಾಮನಿಗಾಗಿ ಮಾಡುತ್ತಿದ್ದ ನಿರೀಕ್ಷಣೆ; ಇನ್ನೊಂದುಸಲ ರಾಮ ವಿಲಾಪ ಕೇಳಿಸಿದಂತಾಗುವುದು; ಲಕ್ಷ್ಮಣನು ಅಣ್ಣನನ್ನು ಸಂತೈಸು ತ್ತಿರುವನು. ಹೀಗೆಯೇ ನೂರಾರು.

ರಾತ್ರಿ ಕಳೆದು ಬೆಳಗಾಗುತ್ತಲೆ ಬಂದ ದಾರಿ ಹಿಡಿದು ಊರಿಗೆ ಪ್ರಯಾಣಮಾಡುವ ಪ್ರಯತ್ನ ನಡೆಯಿತು. ನಾವೂ ಎಲ್ಲವನ್ನೂ ಸಿದ್ಧಮಾಡಿ

ಕೊಂಡು ನಿಲ್ಲುವ ಹೊತ್ತಿಗೆ ಹೊಸಪೇಟೆಗೆ ಹೇಳಿಕಳುಹಿಸಿದ್ದ ಗಾಡಿಗಳು ಬಂದುವು. ಸಾಮಾನುಗಳನ್ನೆಲ್ಲ ಗಾಡಿಗಳಿಗೆ ಸಾಗಿಸಿಯಾಯಿತು. ಕೊನೆಯ ಸಲ ದೇವಸ್ಥಾನದೊಳಕ್ಕೆ ಹೋಗಿ ದೇವರಿಗೆ ಮಂಗಳಾರತಿ ಮಾಡಿಸಿ, ದರುಶನಮಾಡಿಕೊಂಡು ಬಂದುದೂ ಆಯಿತು. ಗಾಡಿಯಲ್ಲಿ ಕುಳಿತು ಕೊಳ್ಳುವ ಮುಂಚೆ ಚೆನ್ನಯ್ಯನಿಗೆ ಮರ್ಯಾದೆಮಾಡಿ ಅವನ ಪ್ರಣಾಮ ಸ್ವೀಕರಿಸಿ ಅವನಿಗೊಂದು ಯೋಗ್ಯತಾಪತ್ರವನ್ನು ಕೊಟ್ಟುದಾಯಿತು. ಚೆನ್ನಯ್ಯನಿಗೆ ನಾವು ಯೋಗ್ಯತಾಪತ್ರ ಕೊಡುವ ಅಂಶದಲ್ಲಿ ಮೊದಲು ಯುಕ್ತಾಯುಕ್ತ ವಿಚಾರ ನಡೆಯಿತು. ಅವನ ಸ್ವಭಾವಸೌಜನ್ಯವೂ, ದಿನ ಚರಿಯ ಕರ್ಮವೂ ಅವನಿಗೆ ಸಾಕಾದಷ್ಟು ಸಿಫಾರಸು ಮಾಡಲಾರವೆ? ಅವನಂಥ ಹಸನ್ಮುಖಿ, ನಿರಾಳಮನಸ್ಸಿನ ವಿರಾಗಿಗೆ ಶೀಲಪತ್ರ ಕೊಡುವವರು ನಾವೇ? ಬೇಡವೊ ಚೆನ್ನಯ್ಯ, ಎಂದರು ರಾಯರು. "ಇಲ್ಲ, ಸ್ವಾಮಿ, ತಮ್ಮಹಾಗೆ ಇನ್ಯಾರಾದರೂ ಬಂದೋರಿಗೆ ನನ್ನಲ್ಲಿ ನಂಬಿಕೆ ಇರುತ್ತೆ. ನೀವು ಕೊಡೊ ದುಡ್ಡಿನ ಮೇಲೆ ಅಷ್ಟು ಆಶೆ ಇಲ್ಲ. ಬಂದೋರಿಗೆ ಇಲ್ಲಿರೋದನ್ನೆಲ್ಲ ತೋರಿಸಿಕೊಂಡು ಅವರ ಮನಸ್ಸಿಗೆ ತೃಪ್ತಿ ಉಂಟು ಮಾಡಬೇಕು ಅಂತ ಅಷ್ಟೆ. ಅಷ್ಟುದೂರದಿಂದ ನೀವೆಲ್ಲ ಇಲ್ಲಿಗೆ ಇನ್ನೇತಕ್ಕೆ ಮಾಸ್ವಾಮಿ ಬರ್ತೀರಿ? ಇಲ್ಲಿ ಇನ್ನೂ ಎರಡುಮೂರು ಜನ ಇದ್ದಾರೆ. ಆದರೆ ಅವ ರನ್ನು ನಂಬೋದು ಮಹಾಕಷ್ಟ. ಬೇಕಾದರೆ ಒಳಗೆ ನೀವೇ ವಿಚಾರಿಸಿ ನೋಡಿ" ಎಂದ. "ಏನಾಶ್ಚರ್ಯವಿಲ್ಲ. ನಿಜವೇ ಇರಬಹುದಪ್ಪ. ಆಗ ಲೇಳು, ಏನು ಖರ್ಚಾಗಬೇಕು? ಎಲ್ರಿ, ವೆಂಕಟೇಶಯ್ಯ ಫೌಂಟೆನ್ ಪೆನ್ ಕೊಡಿರಿ," ಎಂದರು ಯಜಮಾನರು. ರಾಯರನ್ನು ಬರೆಯ ಹೇಳಿದರು. ಬರವಣಿಗೆಯಲ್ಲಿ ರಾಯರು ನಿಸ್ಸೀಮರು. ಅವರ ಬರವಣಿಗೆಯೆಂದರೆ ಎಂಥ ಪ್ರಬಲರಿಗೂ ಭಯ; ಜಂಘಾಬಲ ಉಡುಗಿಹೋಗುತ್ತೆ. ಅವರು ಬರೆದು ಕೊಟ್ಟರು. "ಸರಿಯೇನಯ್ಯ, ಇನ್ನೇನಾದರೂ ಬರೆಯಬೇಕೆ?" ಎಂದರು. "ಇನ್ನೇನು ಸ್ವಾಮಿ, ಬೇಕು? ಹೀಗೆ ಸಿಫಾರಸು ಬರೆದುಕೊಟ್ಟರೆ

ದಗಾಖೋರನಿಗೆ ಕೂಡ ಖುಲಾಸೆ ಆಗ್ಹೋಗಿ ಬಿಡುತ್ತೆ,'' ಎಂದ, ಚೆನ್ನಯ್ಯ. ಅವನಿಂದ ಬೀಳ್ಕೊಂಡು ಗಾಡಿಯಲ್ಲಿ ಕುಳಿತು ಹೊರಟೆವು.

ಎರಡು ದಿನಗಳ ಅಲ್ಪಾವಧಿಯಲ್ಲಿ ೨೫೦ ವರುಷಗಳ ಚರಿತ್ರೆಯನ್ನು ಸತ್ವತಃ ಅನುಭವಮಾಡಿಸಿಕೊಟ್ಟು, ಒಂದೇಕಾಲದಲ್ಲಿ ಸುಖದುಃಖಗಳನ್ನು ಉಂಟುಮಾಡಿದ ಆ ಸೌಂದರ್ಯದ ಪಾಳನ್ನೂ ಪಾಳೆಯವನ್ನೂ ಬಿಟ್ಟು ಹೊರಟೆವು. ಏರಿನಲ್ಲಿಯೂ ತಗ್ಗಿನಲ್ಲಿಯೂ ಆ ಶಾಂತಿಯ ರುದ್ರಭೂಮಿಯಲ್ಲಿ ಗಾಡಿ ಹೊರಟಿತು. ದೇಹಪಂಜರದಲ್ಲಿನ ಕೀಲುಗಳು ಹಾಡತೊಡಗಿದವು. ತಂಬಿಗೆಯ ನೀರು ಕುಲುಕುವುದು. ಕುಳಿತಿರುವ ಕಡೆ ತಳ ಶೀತಳವಾಗುವುದು. ಯಾವುದೋ ಒಂದು ಕಥೆ ಜ್ಞಾಪಿಸಿಕೊಂಡು ಭಯವಾಯಿತು. ಆದರಾಯಿತು. ವಿಜಯನಗರದ ವೈಭವರಂಗವನ್ನು ಕಣ್ಣಾರೆ ನೋಡಿದೆವಲ್ಲ. ಆ ಪುಣ್ಯಕ್ಷೇತ್ರದಲ್ಲಿ ಸ್ವಲ್ಪಕಾಲವಿದ್ದೆವಲ್ಲ. ಅಷ್ಟು ಸಾಲದು, ನಿಜ. ಆದರೆ ಎಲ್ಲಿಗೆ ಪಾರ? ಹೇಳಿ. ತೃಪ್ತಿಯೇನೋ ಆಗಿರಲಿಲ್ಲ. ಆ ಪ್ರದೇಶವನ್ನು ನೋಡುವುದಕ್ಕೆ ಕೀಳೆಣಿಕೆಯಲ್ಲಿ ಒಂದು ವಾರವಾದರೂ ಬೇಕು. ಆ ಪಾಳುಗಳಲ್ಲಿ ಸಚ್ಛಂದವಾಗಿ ತಿರುಗಾಡಬೇಕು. ಅಲ್ಲಿನ ಚಮತ್ಕೃತಿಗಳನ್ನು ಪರಿಶೀಲಿಸಬೇಕು. ಅಲ್ಲಿನ ವಸ್ತುಚಯವನ್ನು ಮೇಲಿಂದ ಮೇಲೆ, ಒಂದು ಪರ್ವತದ ಮೇಲಿಂದ ಇನ್ನೊಂದಕ್ಕೆ ಹೋಗಿ ನಿಂತು ನದಿ ಕಾಲುವೆ ಗುಡಿ ಗೋಪುರ ಕೊತ್ತಲ ಮುಂತಾದವುಗಳ ನೆಲಸು ಬೆಡಗುಗಳನ್ನು ನೋಡಬೇಕು. ಸೂರ್ಯೋದಯ ಸೂರ್ಯಾಸ್ತಗಳ ಕೋಟಿ ಕಳೆಕಾಂತಿಗಳನ್ನು ಕಣ್ಣಿನಿಂದ ನೋಡಿ, ಅದರಲ್ಲಿ ಮನಸ್ಸನ್ನು ತೊಳೆದು, ಹೃದಯವನ್ನು ತೆರೆದು ವಿಶಾಲಗೊಳಿಸಿ ಆನಂದಿಸಬೇಕು. ಎಲ್ಲ ಪ್ರದೇಶಗಳನ್ನೂ ಗುರುತಿಸಿ ಅಲ್ಲಲ್ಲಿ ಕುಳಿತು ಆಯಾ ಸ್ಥಳಗಳಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನೂ, ಘಟನೆಗಳನ್ನೂ, ಸನ್ನಿವೇಶಗಳನ್ನೂ ಕಲ್ಪಿಸಿಕೊಂಡು ಅವುಗಳಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ, ಅವುಗಳೊಡನೆ ಕಲೆತು ಪುನಃ ನಮ್ಮೆದುರಿಗೆ ಅವು ಜೀವಿಸುವಂತೆ ಮಾಡಿಕೊಳ್ಳಬೇಕು. ಅಂದಿನವರಂತೆಯೇ

ಉಕ್ಕಿನ ಅಲಗುಗಳನ್ನು ಸಾಣೆಯ ಕಲ್ಲಿನ ಬಂಡೆಗಳಮೇಲೆ ಹರಿತಮಾಡಿ ಕೊಳ್ಳಬೇಕು. ಅವರೊಡನೆ ಸೇರಿ ಹೋರಾಡಬೇಕು. ಹೊಸ ಜೀವನ ಸಂಗ್ರಾಮಕ್ಕೆ ಸಿದ್ಧರಾಗಬೇಕು. ತಾನುಮಾಡಿದ ಕಾರ್ಯವು ಕೊನೆಗೆ ಹೀಗಾಗಬೇಕಾಯಿತೆ! ಎಂದು ಚಿಂತಾಮಗ್ನರಾಗಿ ಅಲ್ಲೆ, ಎಲ್ಲೆಲ್ಲಿಯೂ, ಹಗಲೆನ್ನದೆ ಇರುಳೆನ್ನದೆ, ಒಂಟಿಯಾಗಿ ತಿರುಗಾಡುತ್ತಿರುವ ವಿದ್ಯಾರಣ್ಯರ ದರ್ಶನವನ್ನು ಮಾಡಿಕೊಳ್ಳಬೇಕು. ನಮಗೆ ಇವು ಸಾಧ್ಯವಾಗದುದಕ್ಕೆ ಮಾತ್ರ ಪಶ್ಚಾತ್ತಾಪ. ಹೋಗಲಿ, ಪಂಪಾದರುಶನವಾದರೂ ಆಯಿತಲ್ಲ! ಅಲ್ಲಿನ ಮನೋಹರತೆಯನ್ನು ಸವಿದುದಾಯಿತಲ್ಲ. ಅಷ್ಟೇ ಪುಣ್ಯ!

ಗಾಡಿಯ ರಸ್ತೆಯ ಎರಡು ಪಕ್ಕಗಳಲ್ಲಿಯೂ ಮಸೀದಿಗಳು, ಮುರುಕುದೇವಾಲಯಗಳು; ಹಸುರು ಹಚ್ಚೆಗಳು ಹೆಚ್ಚಾಗಿ ಕಾಣದ ಸುಡುಗಾಡುದೇಶ. ಸುತ್ತಲೂ ಎಲ್ಲೆಲ್ಲಿಯೂ ಬೆಟ್ಟಗಳ ಸಾನುಪಙ್ಕ್ತಿಯಲ್ಲಿ ಹಿಂದಿನ ಕೋಟೆಗಳ ಘೌಳಿಗೋಡೆಗಳು. ಇವುಗಳನ್ನು ದಾಟಿಕೊಂಡು ಹೊರಟು ಮಧ್ಯಾಹ್ನ ಮೂರುಗಂಟೆಯ ಹೊತ್ತಿಗೆ ಹೊಸಪೇಟೆ ಸೇರಿದೆವು.

ರೈಲು ಬರುವುದಕ್ಕೆ ಮುಂಚೆಯೆ ಅಲ್ಲಿನ ಫಲಾಹಾರಮಂದಿರಕ್ಕೆ ಹೋಗಿ ನಾನು ಟೀ ಕುಡಿಯಕುಳಿತೆ. ಟೀ ಕುಡಿದು ಐದಾರು ದಿನಗಳ ಮೇಲೆ ಆಗಿ ಹೋಗಿತ್ತು. ನಮ್ಮ ದೇಶದಲ್ಲಿ ಟೀ ಕುಡಿಯುವವರೂ ಕಾಫಿ ಕುಡಿಯುವವರೂ ಅನೇಕವೇಳೆ ಶತ್ರುಗಳು. ಯಾವಾಗಲೂ ವಾದಿ ಪ್ರತಿ ವಾದಿಗಳು. ಕಾಫಿಯವರ ಸಂಖ್ಯೆ ಜಾಸ್ತಿ. ಆದುದರಿಂದ ಅವರದೇ ಪ್ರಾಬಲ್ಯ. ಟೀಯವರ ವಿಷಯದಲ್ಲಿ ಅವರಿಗೆ ಸಹನೆಯೇ ಇಲ್ಲ. ನನ್ನಂಥ ವರು ನಮ್ಮ ದೇಶದಲ್ಲಿ ಬಹುಕಡಿಮೆ. ಆದುದರಿಂದಲೇ ನಮ್ಮ ದೇಶ ಹೀಗೆ ಅಧೋಗತಿಗೆ ಬಂದಿರುವುದು. ಬೆಳಿಗ್ಗೆ ಕಾಫಿ, ಅಪರಾಹ್ನದಲ್ಲಿ ಟೀ, ಸಾಯಂಕಾಲ ಕೋಕೋ, ರಾತ್ರಿ ಮಲಗುವುದಕ್ಕೆ ಮುಂಚೆ ಬೇಕಾ ದಷ್ಟು ಹಾಲು ಇವೆಲ್ಲವನ್ನೂ ಒಂದೇ ಸಂತೋಷದಿಂದ, ಅವೊಂದಕ್ಕೂ ಮನಸ್ಸಿಗೆ ಅಸಮಾಧಾನವಾಗದಂತೆ ಕುಡಿಯಬಲ್ಲವರು ಎಲ್ಲೊ ಸ್ವಲ್ಪ

ಮಂದಿ ಮಾತ್ರ. ಸಜ್ಜನವರ್ಗದಹಾಗೆ. ನಮ್ಮಿಂದಲೇ ಈ ದೇಶದ ಕೀರ್ತಿ ಇನ್ನೂ ಉಳಿದಿರುವುದು; ನಮ್ಮ ಸಾಂಪತ್ತಿಕಸ್ಥಿತಿಯೂ ಉತ್ತಮಗೊಳ್ಳುತ್ತಿರುವುದು. ಮೊಗಲ್ ಸುಲ್ತಾನರಿಗೆ ತಮ್ಮ ಅನಂತ ಮಹಿಷೀವರ್ಗದಲ್ಲಿ ಎಷ್ಟು ಸರ್ವಸಮನಾದ ಪ್ರೀತಿಯಿದ್ದಿತೊ ನನಗೆ ಈ ಪಾನೀಯಗಳ ವಿಚಾರದಲ್ಲಿ ಹಾಗೆ. ಅಂಥವರನ್ನು ಕಂಡರೆ ನನಗೆ ಮೆಚ್ಚುಗೆ ಬಹಳ. ನಮಗೆ, ನೋಡಿ, ದ್ವೇಷಾಸೂಯೆಗಳಿಲ್ಲ. ಕೇವಲ ಕಾಫಿ ಉಪಾಸಕರಂಥ ಕಠಿಣರು, ಅಸಹನೆಯವರು ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲವೆಂದು ಹೇಳಬಲ್ಲೆನು. ನನಗೆ ಅವರ ಅನುಭವವಿದೆ,...ಮಹಾರಾಯರು!...ಇತ್ತ, ಒಂದು ಬಟ್ಟಲಾಯಿತು. ಎರಡು...ಮೂರು. ಸಾಕಲ್ಲವೆ? ಎಂದು ನನ್ನ ಮನಸ್ಸನ್ನು ಕೇಳಿದೆ; ಅದು ನನಗೇನೂ ಉತ್ತರ ಕೊಡಲಿಲ್ಲ; ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ, ಹಾಗೂ ಹೀಗೂ ಎರಡುವಿಧವಾಗಿಯೂ ಹೇಳಿತು. ಇಷ್ಟರಲ್ಲಿ ನನ್ನನ್ನು ಹುಡುಕಿಕೊಂಡು ರೈಲಿಗೆ ಹೊತ್ತಾಗಿ ಹೋಗುತ್ತದೆಂದು ಹೇಳುವುದಕ್ಕೆ ಮೂರ್ತೀ ವೆಂಕಟೇಶಯ್ಯನವರು ಬಂದರು. ಇವರ ಗುಟ್ಟನ್ನು ನಾನರಿಯೆನೊ? ನನ್ನ ಜೊತೆಗೆ ಸೇರಿಕೊಂಡರು. ಇನ್ನೂ ಎರಡು ಬಟ್ಟಲುಗಳಾದವು. 'ನಾನೇನ್ರಿ ಪಾಪಮಾಡಿಬಿಟ್ಟದ್ದು, ನನ್ನನ್ನು ಕುಲದಿಂದ ಹೊರಗೆ ಹಾಕಿಬಿಟ್ಟಿದ್ದೀರಿ. ಸರಿಯಪ್ಪ, ನಿಮ್ಮನ್ನ ನಂಬಿದವರ ತಲೆಯಮೇಲೆ ಕಲ್ಲೇ, ಏಳಿ' ಎಂದು ಹಿಂದಿನಿಂದ ಯಾರೋ ಅಂದ ಹಾಗಾಯಿತು. ಹಿಂದಿರುಗಿ ನೋಡಿದೆ, ರಾಯರು. 'ಎಲ್ಲಯ್ಯ ಇನ್ನು ಒಂದೊಂದು ಕಪ್ ಟೀ ತಕ್ಕೊಂಡು ಬಾರಯ್ಯ' ಎಂದರು. ಕ್ಲಬ್ಬಿನವನು ನನ್ನ ಮುಖನೋಡಿದ; ಇವರುಗಳೂ ನೋಡಿದರು. ನನಗೆ ಅರ್ಥವಾಗಲಿಲ್ಲ. ಮುಖಗಳನ್ನು ವಿಸ್ಮಯಚಿಹ್ನೆಗಳಂತೆ ಮಾಡಿಕೊಂಡು ನಿರಪರಾಧಿಯೊಬ್ಬನಕಡೆ ಹೀಗೆ ಯಾರಾದರೂ ನೋಡಿದರೆ ಅವನೇನು ಮಾಡಬೇಕು, ಹೇಳಿ. ವಿಜಯನಗರವನ್ನು ನೋಡಿ ವಿಜೇತರಾಗಿ ಬಂದಮೇಲೆ ಐದು ಬಟ್ಟಲು ಟೀ ಜಾಸ್ತಿಯೆ? ಇವರಿಗೇನು ತಿಳಿಯುವುದಿಲ್ಲ! ಅಂದುಕೊಂಡೆ.

ಇಷ್ಟರಲ್ಲಿಯೆ ರೈಲಿನ ಗಾರ್ಡ್ ಶಿಳ್ಳೆ ಊದಿದ ಶಬ್ದ ಕೇಳಿಸಿತು. ತ್ವರೆಯಿಂದ ಗಾಡಿಗೆ ಹೋಗಿ ಕುಳಿತೆವು. ರೈಲು ಹೊರಟಿತು. ' ಇದೇನು, ಮುಖ ಒರಸಿಕೊಳ್ಳಿ, ಸುರಿಯುತ್ತ ಇದೆಯಲ್ಲ ' ಎಂದರು, ವೆಂಕಟೇಶಯ್ಯನವರು. " ಇನ್ನೇನು ಆಗುತ್ತೆ, ಸುರಿಯದೆ ? ಇವರೇನು ಹಿಂದೆ ಅಗಸ್ತ್ಯರಾಗಿದ್ದರೊ, ಏನೋಪ್ಪ. ಹಾಗೆ ಟೀ ಕುಡಿದರೆ ! ನೀವು ಹೀಗೇ ಮಾಡಿ, ಇನ್ನು ಮೈಯಲ್ಲಿ ಇರೊ ಮೂಳೆಗಳು ಕೂಡ ಕರಗಿಹೋಗುತ್ತೆ, ಆಮೇಲೆ " ಎಂದರು ಮೂರ್ತಿ. ನಾನು ದುರದುರನೋಡಿದೆ, ಅವರಕಡೆ. ಆದರೂ ತಲೆಬಾಗಿಸಿಕೊಂಡೆ ; ಉಹು—ಕಿಟಿಕಿ ಕಡೆ ತಿರುಗಿಸಿಬಿಟ್ಟೆ. ಅವರಕಡೆ ನೋಡಿದರೆತಾನೆ ಅವರೇನಾದರೂ ಅನ್ನುವುದು ? ನೋಡದೆಯೆ ಇದ್ದರೆ ? ಅವರಿಗೆ ಬೇಕಾದುದನ್ನು ಅಂದುಕೊಳ್ಳಲಿ.

ಎಲ್ಲರೂ ಕಿಟಿಕಿಗಳಿಂದ ಹಿಂದೆ ಮುಂದೆ ನೋಡಲುಪಕ್ರಮಿಸಿದರು. ಆ ದೃಶ್ಯಗಳು, ದೂರದ ಬಿಸಿಲಿನ ಝಳ ಮಸುಕುಗಳಲ್ಲಿ, ಬಿಸಿಲು ಕುದುರೆಗಳ ಓಟದಲ್ಲಿ ಮುಚ್ಚಿಹೋದವು. ವಸ್ತುಪ್ರಪಂಚದ ಇತರ ದೃಶ್ಯಗಳೂ ಶಬ್ದಗಳೂ ಜೀವವ್ಯಾಪಾರಗಳೂ ಸಹವಾಸಗಳೂ ಕರ್ತವ್ಯಚಿಂತೆಗಳೂ ಮನಸ್ಸಿಗೆ ಬಂದವು. ಕ್ಷಣಕ್ಷಣಕ್ಕೂ ಬದಲಾಯಿಸಿದವು. ತಾತ್ಕಾಲಿಕ ವ್ಯವಹಾರ ಮಾತುಕಥೆ ನೋಟಗಳಲ್ಲಿ ಹಂಪೆ, ಪಂಪಾ, ವಿಜಯನಗರಗಳ ವಿಚಾರವು ಕ್ರಮ ಕ್ರಮವಾಗಿ ನಿಂತುಹೋಯಿತು. ಇನ್ನೊಂದುಸಲ ಆಕಡೆ ನೋಡಿ ಕೈಮುಗಿಯಬೇಕೆನ್ನಿಸಿತು. ಆದರೆ ಯಾರಾದರೂ ನೋಡಿ ನಕ್ಕರೆ ? ಏ ! ಎಂದುಕೊಂಡು ಮುಗಿಸುವುದರಲ್ಲಿ ವೆಂಕಟೇಶಯ್ಯನವರೂ ರಾಯರೂ ನಿಟ್ಟುಸಿರು ಬಿಟ್ಟಂತೆ ಕೇಳಿಸಿತು. ನನ್ನ ಭ್ರಮೆಯಿರಬಹುದೆ ? ಎಂದುಕೊಂಡೆ. ಅವರ ಮುಖಗಳಲ್ಲಿ ಮತ್ತಾವ ವಿಶೇಷವಾದ ಭಾವ ಸಂಚಾರದ ಸುಳಿವೂ ಈ ಮುಂಚೆ ಕಾಣುತ್ತಿರಲಿಲ್ಲ. ಆದರೂ ಮೂವರೂ ಥಟ್ಟನೆ ಪರಸ್ಪರ ಮುಖಗಳನ್ನು ನೋಡಿಕೊಂಡೆವು.—ಎಲ್ಲರ ಮುಖಗಳಲ್ಲಿಯೂ ಏಕಮನೋಭಾವದ ಸಂಚಾರವಿತ್ತು. ಸುಮ್ಮನಾದೆವು.

‘ ಪಂಪಾಯಾತ್ರೆ ಮುಗಿಯಿತಪ್ಪ ’ ಎಂದರು ರಾಯರು.

“ ಇನ್ನೊಂದುಸಲ ನಾವು ಬರುವಹೊತ್ತಿಗೆ ಅಲ್ಲಿನ ಬೆಟ್ಟಗಳೆಲ್ಲ ಉರುಳಿ ಪುಡಿ ಪುಡಿಯಾಗಿ ಹೋಗಿರುವುವೇನೋ ” ಎಂದರು ವೆಂಕಟೇಶಯ್ಯನವರು.

“ ನಾಳೆ ಊರು ಸೇರಿಕೊಳ್ಳುವೆವು. ಅಲ್ಲಿ ಯಾವ ಯಾವುದು ಏನೇನು ಗತಿಯಾಗಿ ಹೋಗಿದೆಯೊ ? ಊರುಬಿಟ್ಟು ಆಗಲೆ ಹತ್ತು ಹನ್ನೆರಡು ದಿನಗಳಾಗಿ ಹೋಯಿತು ” ಎಂದರು, ಯಜಮಾನರು.

ಯಾತ್ರೆ ಮುಗಿಯಿತು.

೯

ಸುಬ್ಬಣ್ಣನವರು ತೊರೆಯುಪುರದಲ್ಲಿ ಹದಿಮೂರು ವರುಷ ಇದ್ದರು. ಕೊನೆ ಕೊನೆಗೆ ಅವರ ಮನಸ್ಸಿನಿಂದ ಈ ಅಶಾಂತಿಯೆಲ್ಲಾ ವಾಸಿಯಾಗಿ ಹೋಯಿತು. ಕೊನೆಗೆ ಅವರು ತತ್ತ್ವಜ್ಞಾನಿಗಳಾದರೆಂದೇ ನನ್ನ ಭಾವನೆ. ಯಾರಿಗೂ ಒಂದು ಕೆಟ್ಟ ಮಾತನ್ನು ಹೇಳದೆ ಯಾರಿಂದಲೂ ಒಂದಿಷ್ಟನ್ನು ಬೇಕೆಂದು ಕೇಳದೆ, ಜೀವನದಲ್ಲಿ ಇದು ಕುಂದು ಇದು ಕೊರತೆ ಎಂಬ ವ್ಯಥೆಯನ್ನು ಕಾಣದೆ ಸರ್ವದಾ ಶಾಂತ ಭಾವದಿಂದ ದೇವರ ಧ್ಯಾನದಲ್ಲಿದ್ದವರು ತತ್ತ್ವಜ್ಞಾನಿಗಳಲ್ಲದೆ ಏನು ? ಆದರೆ ವೇಷದಲ್ಲಿ ಈ ತತ್ತ್ವಜ್ಞಾನಿಯಂತೆ ಇದ್ದರೆಂದು ಹೇಳಲಾರೆ. ಕೊನೆಗೂ ಪಿಟೀಲನ್ನು ಬಾರಿಸುತ್ತಾ ಇದ್ದರು. ಕೆಲವರಿಗೆ ಪಾಠ ಹೇಳುವರು. ಒಂದು ಮನೆಯೊಳಕ್ಕೆ ಹೋಗಿ ಮಲಗುತ್ತಿರಲಿಲ್ಲ. ಯಾವುದಾದರೂ ಒಂದು ಜಗಲಿ. ಇನ್ನ್ಯಾವುದೂ ಇಲ್ಲದೆ ಇದ್ದರೆ ದೇವಸ್ಥಾನದ ಮುಂಭಾಗ. ಒಂದು ಜಗಲಿಯ ಮೇಲೆ ಇದ್ದಾಗ ಮಳೆ ಇರಿಚಲು ಬಡಿದರೆ ಅದರ ಮುಂದುಗಡೆಯ ಮನೇ ಜಗಲಿಗೆ ಹೋಗುವರು. ಹೀಗೆ ಹದಿಮೂರು ವರುಷ ಇವರು ತೊರೆಯುಪುರದಲ್ಲಿ ಜೀವಿಸುತ್ತಿದ್ದರು. ಕೊಂಚ ದಿನದಲ್ಲೇ ಸುಬ್ಬಣ್ಣನವರನ್ನು ಕಂಡರೆ ಊರಿನ ಜನಕ್ಕೆಲ್ಲಾ ಪ್ರೀತಿ, ಗೌರವ. ಎಲ್ಲರೂ ಅವರಿಗೆ ತಮ್ಮ ಕೈಯಲ್ಲಾದ ಸಹಾಯ ಮಾಡಬೇಕೆಂದು ನೋಡುವರು. ಆದರೆ ಅವರಿಗೆ ಬೇಕಾದದ್ದು ಏನಿತ್ತು? ನಮ್ಮ ಮನಸ್ಸಿನ ತೃಪ್ತಿಗಾಗಿ ನಾವು ಅವರಿಗೆ ಏನಾದರೂ ಕೊಡಬೇಕೇ ಹೊರತು ಅವರಿಗೆ ಏನೂ ಅಪೇಕ್ಷೆ ಇಲ್ಲ. ಹೀಗೆ ಸುಬ್ಬಣ್ಣನವರು ತೊರೆಯುಪುರದಲ್ಲಿ ಒಬ್ಬ ಯೋಗಿಯಂತೆ ಕಾಲವನ್ನು ಕಳೆದು ಕೊನೆಗೆ ದೇವರ ಪಾದಾರವಿಂದವನ್ನು ಸೇರಿದರು. ಅಲ್ಲಿ ಅವರಿದ್ದ ರೀತಿಯನ್ನು ಸ್ವಲ್ಪ ಹೇಳಿದರೆ ಈ ಕಥೆ ಮುಗಿಯಿತು.

ಸುಬ್ಬಣ್ಣನವರು ತೊರೆಯುಪುರಕ್ಕೆ ಆ ದಿನ ಮಧ್ಯಾಹ್ನ ಬಂದು ಸೇರಿದರು. ತೊರೆಯುಪುರ ಒಂದು ತಾಲ್ಲೂಕು ಸ್ಥಳ; ನದೀತೀರ; ಒಳ್ಳೆಯ ಅಗ್ರಹಾರ, ಬ್ರಾಹ್ಮಣರ ಶ್ರೇಣಿ, ದೊಡ್ಡ ದೇವಾಲಯ. ತಪಸ್ಸಿಗೆ ಸ್ಥಳ ಬೇಕೆಂದವರಿಗೆ ಪ್ರಶಸ್ತವಾದ ಸ್ಥಳ. ಅಂದಿನ ರಾತ್ರಿ ಅವರು ದೇವಾಲಯದ ಮುಂದುಗಡೆ ಹಾಗೆಯೇ ಮಲಗಿಕೊಂಡರು. ರಾತ್ರಿಯಲ್ಲಿ ನಾಲ್ಕಾರು ಸಲ ನಾನು ಕೇವಲ ದಿಕ್ಕಿಲ್ಲದಾದೆ ಎಂದು ಕತ್ತಲಲ್ಲಿ ಮಗು ಭಯಪಡುವಂತೆ ಭಯಪಟ್ಟು ನಿದ್ದೆಯಿಂದ ಎದ್ದರು. ನಾಲ್ಕು ಸಲವೂ ಮನಸ್ಸಿನಲ್ಲಿ "ಈ ಭಯವು ಸರಿಯಲ್ಲ. ದಿಕ್ಕಿಲ್ಲದವರಿಗೆ ದೊಡ್ಡ

ದಿಕ್ಕು ದೇವರು. ನನಗೆ ಆಗಬೇಕಾದುದೇನು ? ನನಗೆ ಭಯವೇನು ? ನಾರಾಯಣಾ ಎನ್ನುತ್ತಾ ನಿಶ್ಚಿಂತನಾಗಿ ಕಾಲ ಕಳೆಯುವುದೊಂದೇ ಈಗ ಕೆಲಸ. ನಾನು ಇತರರಂತೆ ಇಲ್ಲವಲ್ಲಾ ಎಂದು ಬೇಕಾದರೆ ದುಃಖಪಡಬೇಕಲ್ಲದೆ ಇನ್ಯಾವ ಕಾರಣವೂ ಇಲ್ಲ ದುಃಖಕ್ಕೆ. ಇತರರಂತೆ ಇದ್ದದ್ದೂ ಆಯಿತು. ಹೆಂಡತಿ ಮಕ್ಕಳನ್ನು ನೋಡಿದ್ದಾಯಿತು. ಇತರರು ಇನ್ನೂ ಅದರಲ್ಲಿ ಇದಾರೆ. ತನಗೆ ಅದು ತಪ್ಪಿತು. ಅವರ ಬದುಕು ಹಾಗೆ, ನನ್ನ ಬದುಕು ಹೀಗೆ. ಇದು ದೇವರ ಇಚ್ಛೆ. ಇದಕ್ಕೆ ಯೋಚನೆಯೇಕೆ'' ಎಂದುಕೊಂಡರು. ಮಾರನೆಯ ದಿನ ಎದ್ದಾಗ ಹಿಂದಿನ ರಾತ್ರಿಯ ಯೋಚನೆಯಿಂದ ಉಂಟಾಗಿದ್ದ ವ್ಯಥೆಯಿಂದ ಕುಗ್ಗಿ ಹಾಗೆಯೇ ಸ್ವಲ್ಪ ಹೊತ್ತು ಕುಳಿತಿದ್ದರು. ಆಮೇಲೆ ನದಿಗೆ ಹೋಗಿ ಉದಯದ ಆಹ್ನಿಕಗಳನ್ನು ಮುಗಿಸಿಕೊಂಡು ಬಂದು ದೇವಸ್ಥಾನದ ಮುಂದುಗಡೆಯೇ ಸುಮ್ಮನೆ ಕುಳಿತರು.

ಊರಿನ ಜನ ನದಿಗೆ ಬಂದ ಕೆಲವರು ಹತ್ತಿರ ಪಿಟೀಲನ್ನೂ ಒಂದೆರಡು ಬಟ್ಟೆಯನ್ನೂ ಇರಿಸಿಕೊಂಡು ಕುಳಿತಿರುವ ಈ ನೋತ ಮುಖದ ಮುದುಕನನ್ನು ನೋಡಿ, ಇವನ್ಯಾರೋ, ಪಾಪ, ಎಂದುಕೊಂಡು ಹೋದರು. ಇದು ಯಾವುದನ್ನೂ ಸುಬ್ಬಣ್ಣನವರು ಗಮನಿಸಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿಗೆ ಒಬ್ಬ ಹುಡುಗ ಬಂದನು. ಅವನು ಆ ಊರ ವೇಶ್ಯೆಯೊಬ್ಬಳ ಮಗ. ಅವನಿಗೆ ಸಂಗೀತ ಸ್ವಲ್ಪ ಬರುತ್ತಿತ್ತು. ಪಿಟೀಲನ್ನೂ ಸ್ವಲ್ಪ ಬಾರಿಸಬಲ್ಲನು. ಅವನು ಸುಬ್ಬಣ್ಣನವರ ಪಕ್ಕದಲ್ಲಿದ್ದ ಪಿಟೀಲನ್ನು ನೋಡಿ ಹತ್ತಿರ ಬಂದು ಬಹಳ ಧಾರಾಳವಾಗಿ ''ಯಾವ ಊರು ಸ್ವಾಮಿ ನಿಮ್ಮದು'' ಎಂದನು. ಸುಬ್ಬಣ್ಣನವರು ಮಾತಾಡಲಿಲ್ಲ. ಅವರಿಗೆ ಬಂದು ಹೋಗುವವರ ಹತ್ತಿರ ಮಾತಾಡುವದಕ್ಕೆ ಆಗ ಸಹನೆ ಇರಲಿಲ್ಲ. ಹುಡುಗ ಒಂದು ಕ್ಷಣ ಬಿಟ್ಟು, ಏನು ಸ್ವಾಮಿ, ನಿಮ್ಮದು ಯಾವ ಊರು ಎಂದನು. ಸುಬ್ಬಣ್ಣನವರು ಬೇಸರದಿಂದ, ಯಾವುದೋ ಊರು ಎಂದರು. ಹುಡುಗ ಈ ಉತ್ತರಕ್ಕೆ ಹೆದರಿ ಹೊರಟುಹೋಗಲಿಲ್ಲ. ಅಲ್ಲೇ ಕುಳಿತುಕೊಂಡು ಪಿಟೀಲನ್ನು ತೆಗೆದುಕೊಂಡು ನೋಡಿದನು. ಒಳ್ಳೆಯ ಪಿಟೀಲು. ''ಏನು ಸ್ವಾಮಿ, ಒಳ್ಳೇ ಪಿಟೀಲು, ಸ್ವಲ್ಪ ಬಾರಿಸಿ, ನೋಡೋಣ'' ಎಂದನು. ಸುಬ್ಬಣ್ಣನವರು ಮಾತನಾಡಲಿಲ್ಲ. ಒಂದು ಕ್ಷಣ ಬಿಟ್ಟುಕೊಂಡು ಹುಡುಗ ''ಸ್ವಾಮಿ, ಈ ಪಿಟೀಲು ನನಗೆ ಮಾರಿಬಿಡಿ. ಹದಿನೈದು ರೂಪಾಯಿ ಕೊಡುತೇನೆ'' ಎಂದನು. ಈ ಮಂಕು ಮುಖದ ಮನುಷ್ಯ ಪಿಟೀಲು ಏನು ಬಾರಿಸಿಯಾನು ? ಎಲ್ಲೋ ಹೊಡೆದುಕೊಂಡು ಬಂದಿದಾನೆ.

ಸುಲಭವಾಗಿ ಸಿಕ್ಕಬಹುದು—ಎಂದು ಅವನ ಯೋಚನೆ. ಸುಬ್ಬಣ್ಣನವರು ಮಾತನಾಡಲಿಲ್ಲ. ಹುಡುಗ ಮತ್ತೆ "ಏನು ಸ್ವಾಮಿ" ಎಂದನು. ಸುಬ್ಬಣ್ಣನವರು "ಅಪ್ಪಾ, ನಾನು ಬಾರಿಸೋದೂ ಇಲ್ಲ. ನಿನಗೆ ಮಾರೋದೂ ಇಲ್ಲ. ಸುಮ್ಮನೆ ಹೋಗು" ಎಂದರು. ಅವರಿಗೆ ಬಹಳ ಬೇಸರ. ಹುಡುಗ "ಇದ್ಯಾತರ ಮಾತು ಸ್ವಾಮಿ ಇದು. ಇಲ್ಲದೇ ಇದ್ದರೆ ಬಾರಿಸಬೇಕು. ಇಲ್ಲದೇ ಇದ್ದರೆ ಬಾರಿಸೋನಿಗೆ ಕೊಡಬೇಕು. ಕಸಬುದಾರನಲ್ಲದೇ ಇದ್ದರೆ ಪಿಟೀಲು ಇಟ್ಟುಕೊಂಡು ಏನು ಮಾಡೋದು" ಎಂದು, "ನೋಡಿ, ನಾನು ಬಾರಿಸುತ್ತೇನೆ" ಎಂತ ಪಿಟೀಲಿನ ಮೇಲೆ ಕಮಾನನ್ನು ಎಳೆದು ಸ್ವಲ್ಪ ಭೈರವೀ ರಾಗವನ್ನಾರಂಭಿಸಿದನು. ಸುಬ್ಬಣ್ಣನವರಿಗೆ ಕಲಾ ಉಪಾಸಕನ ಆವೇಶ ಬಂತು. ಹುಡುಗನು ಬಾರಿಸಿ ಮುಗಿಸಿದ ಮೇಲೆ ಅವರು ಪಿಟೀಲನ್ನು ಹಿಂದಕ್ಕೆ ತೆಗೆದುಕೊಂಡು ಭೈರವಿಯನ್ನು ಬಾರಿಸಿದರು.

ಸುಬ್ಬಣ್ಣನವರು ಇಂಥ ರಾಗಗಳನ್ನು ಬಾರಿಸುವುದರಲ್ಲಿ ಒಂದು ಹಿಂದೂಸ್ಥಾನಿ ವರೇಕು ಬರುತ್ತಿತ್ತು. ಇದು ರಾಗಕ್ಕೆಲ್ಲಾ ಒಂದು ವಿಲಕ್ಷಣವಾದ ಕಳೆಯನ್ನು ಕಟ್ಟುತ್ತಿತ್ತು. ಹುಡುಗ ಇವರ ಭೈರವಿಯನ್ನು ಒಂದು ನಿಮಿಷ ಕೇಳಿ, "ಸ್ವಾಮಿ, ಷೋಕ್ ಮೇಲೆ ಬಾರಿಸುತ್ತೀರಾ. ಪಕ್ಕಾ ಕಸಬುದಾರರು ನೀವು, ಭೇಷ್" ಎಂದು ಹೇಳಿ ಅವರು ಬಾರಿಸುತ್ತಿದ್ದುದನ್ನು ಆಮೇಲೆ ಸುಮ್ಮನೆ ನೋಡುತ್ತ ಕುಳಿತನು. ಇಷ್ಟರಲ್ಲೇ ಇನ್ನು ಕೆಲವು ಜನ ಬಂದು ಸೇರಿದರು. ಇದನ್ನು ನೋಡಿ ಸುಬ್ಬಣ್ಣನವರು ಜಾಗ್ರತೆ ರಾಗವನ್ನು ಮುಗಿಸಿ ಪಿಟೀಲನ್ನೂ ಬಟ್ಟೆಗಳನ್ನೂ ಎತ್ತಿಕೊಂಡು ಎದ್ದು ಹೊರಟು ಹೋದರು.

ಸುಬ್ಬಣ್ಣನವರಿಗೆ ತಮ್ಮ ವಿಷಯದಲ್ಲಿ ಬಹಳ ಅಸಮಾಧಾನ ಉಂಟಾಗಿತ್ತು. ಎಲ್ಲವನ್ನೂ ಬಿಟ್ಟರೂ ಸಂಗೀತದ ಜಂಭವನ್ನು ಇನ್ನೂ ಬಿಡಲಿಲ್ಲ. ಯಾವನೋ ಒಬ್ಬ ಹುಡುಗ ಬಂದು ಒಂದು ಹಾಸ್ಯದ ಮಾತನ್ನಾಡಿದ್ದಕ್ಕೆ ತಾನು ಅದನ್ನು ಸಹಿಸಲಾರದೆ ತನ್ನ ಪಾಂಡಿತ್ಯವನ್ನು ಪ್ರದರ್ಶಿಸುವುದಕ್ಕೆ ಆರಂಭಮಾಡಿದೆನಲ್ಲಾ, ಇದೇನು ಅವಿವೇಕ ಎಂದು ಅವರಿಗೆ ಅಸಮಾಧಾನ. ಹಿಂದಿನ ಬದುಕಿನ ಎಲ್ಲವೂ ಹೋಯಿತು. ಹೆಂಡತಿ ಹೋದಳು. ಮಕ್ಕಳು ಹೋದರು. ತಾಯಿ ತಂದೆ ಅಕ್ಕ ಎಲ್ಲರೂ ಹೋದರು. ಈ ಪಿಟೀಲಿನ ಮೇಲೆ ಏನು ನನಗೆ ಇಷ್ಟುಪ್ರೀತಿ. ಹೋದ ಎಲ್ಲದರ ಜತೆಗೆ ಇದೂ ಹೋಗಲಿ. ಇದು ಇದ್ದರಲ್ಲವೇ ಪಿಟೀಲು ನುಡಿಸೋಣ ಎಂಬ ಆಸೆ; ನುಡಿಸುವ ಜಂಭ. ಇದೂ ಹೋಗಲಿ.

ಆಮೇಲೆ ಆ ವ್ಯಸನವೂ ಇಲ್ಲ. ಹೀಗೆಂದು ಅವರು ಗೊತ್ತುಮಾಡಿ ಕೊಂಡರು. ದೂರದಲ್ಲಿ ಒಂದು ಸ್ನಾನಘಟ್ಟ. ಅಲ್ಲಿ ಜನ ಬಹಳ ಇರಲಿಲ್ಲ. ಅವರು ಅಲ್ಲಿಗೆ ಹೋಗಿ ಅಲ್ಲಿ ಇದ್ದ ಒಬ್ಬಿಬ್ಬರು ಹೊರಟು ಹೋಗುವ ತನಕ ಕಾದಿದ್ದು ಯಾರೂ ಇಲ್ಲದ ವೇಳೆಯನ್ನು ನೋಡಿ ಪಿಟೀಲನ್ನು ಒಡೆಯೋಣ ಎಂದು ಕಲ್ಲಿನ ಮೇಲೆ ಎತ್ತಿದರು; ಮನಸ್ಸು ಬಾರದೆ ತಡೆದು ಕುಳಿತರು. ಎರಡು ನಿಮಿಷ ಕಳೆದ ಮೇಲೆ, ಈ ಚಪಲವನ್ನು ಬಿಡಬೇಕು ಎಂದು ನಿರ್ಧರಿಸಿ ನೀರೊಳಕ್ಕೆ ಇಳಿದು ದೇವರೇ ಎಲ್ಲವನ್ನೂ ಬಿಟ್ಟೆ, ಇದನ್ನೂ ಬಿಡುತ್ತೇನೆ, ಇನ್ನು ನನಗೆ ಶಾಂತಿಯನ್ನು ಕೊಡು ಎಂದು ಪಿಟೀಲನ್ನು ದೂರವಾಗಿ ನೀರೊಳಕ್ಕೆ ತೇಲುಬಿಟ್ಟರು; ಇಲ್ಲಿಗೆ ಋಣ ಮುಗಿಯಿತು ಎಂದು ಸೋಪಾನದ ಮೇಲೆ ಬಂದು ಕುಳಿತು ತಡೆಯಲಾರದೆ ಅತ್ತುಬಿಟ್ಟರು. ಈ ಮಾತನ್ನು ಹೇಳುವಾಗ ಆಮೇಲೆ ನನಗೆ "ನನ್ನ ಹೆಂಡತಿ ಹೋದಾಗಲೂ ಮಕ್ಕಳು ಹೋದಾಗಲೂ ಕೂಡ ನಾನು ಅಷ್ಟು ಅಳಲಿಲ್ಲ ನೋಡಿ, ಹಾಗೆ ಅತ್ತುಬಿಟ್ಟೆ. ನನ್ನ ಪ್ರಾಣ ತೆಗೆದು ಕಳಚಿ ಎಸೆದ ಹಾಗೆ ಆಗಿಹೋಯಿತು, ಆ ಪಿಟೀಲು ಎಸೆದಾಗ" ಎಂದರು.

ಆ ದಿನ ಈ ವಿಶ್ವಜಿದ್ಯಜ್ಞವು ಮುಗಿದ ಮೇಲೆ ಸುಬ್ಬಣ್ಣನವರು ಊರೊಳಕ್ಕೆ ಹೋಗಿ ಸ್ವಲ್ಪ ಹಣ್ಣು ತೆಗೆದುಕೊಂಡು ಬಂದು ದೇವರ ಎದುರಿಗೆ ಇಟ್ಟು ನಮಸ್ಕಾರಮಾಡಿ ಅದನ್ನು ತಿಂದು ಅಲ್ಲೇ ಇದ್ದರು. ಪಿಟೀಲು ಹೋಯಿತು. ಇನ್ನು ಇರುವುದು ಬಟ್ಟೆ ಮಾತ್ರ. ಆ ದಿನ ರಾತ್ರಿ ಅವರು ಮಲಗಿ ಮತ್ತೆ ಮತ್ತೆ ಮನಸ್ಸಿನಲ್ಲಿ ಪಿಟೀಲನ್ನೇ ಕಾಣು ತ್ತಿದ್ದರು. ಆದರೆ ಹಿಂದಿನ ರಾತ್ರಿಗಿಂತ ಚೆನ್ನಾಗಿ ನಿದ್ದೆ ಹತ್ತಿತು. ರಾತ್ರಿ ಎಚ್ಚೆತ್ತಾಗ "ನಾನು ಶುದ್ಧ ಬೆಪ್ಪ. ಪಿಟೀಲು ಹತ್ತಿರ ಇದ್ದರೆ ಯಾವಾಗ ಲಾದರೂ ಒಂದು ದೇವರನಾಮವನ್ನು ನುಡಿಸಬಹುದಾಗಿತ್ತು. ಒಂದು ರಾಗ ಆಲಾಪನೆ ಮಾಡಬಹುದಾಗಿತ್ತು. ಈಗ ದೇವರಿಗೆ ಹೀಗೆ ಸೇವೆ ಮಾಡುವುದಕ್ಕೆ ಇಲ್ಲದೇ ಹೋಯಿತು" ಎಂದುಕೊಂಡರು. ಬಂಗಾಳಕ್ಕೆ ಹೋದ ಹೊಸದರಲ್ಲಿ ತೆಗೆದುಕೊಂಡ ಪಿಟೀಲು ಅದು. ಅನೇಕ ಕಚೇರಿಗಳಲ್ಲಿ ಬಾರಿಸಿದ್ದು. ತನ್ನ ಜೀವಮಾನವೆಲ್ಲಾ ಅದು ಜತೆಯಲ್ಲಿ ಇದ್ದದ್ದು. ಅದರ ವಿಷಯದಲ್ಲಿ ಅವರಿಗೆ ಆ ಮಮತೆ ಇದ್ದದ್ದು ಏನೂ ಆಶ್ಚರ್ಯವಲ್ಲ. ಮಾರನೆಯ ದಿನ ಬೆಳಿಗ್ಗೆ ಅವರು ಏಳುವುದು ಸ್ವಲ್ಪ ನಾವಕಾಶವಾಯಿತು. ಎದ್ದು ನೋಡಿದರೆ ಪಿಟೀಲು ಪಕ್ಕದಲ್ಲೇ ಇದೆ. ಇದೇನು ನಿದ್ದೆಗಣ್ಣು ಎಂದು ಕಣ್ಣೊರಸಿಕೊಂಡು ಮತ್ತೆ ನೋಡಿದರು. ಅದು ಪಿಟೀಲು—ತಮ್ಮ ಪಿಟೀಲು. ಇದೇನು

ಮಾಯೆ ಎಂದು ಸುಬ್ಬಣ್ಣನವರು ಆಶ್ಚರ್ಯದಿಂದಲೂ, ಆದರೆ ಪಿಟೀಲು ಬಂತಲ್ಲಾ ಎಂಬ ಸಂತೋಷದಿಂದಲೂ ಅದನ್ನು ಆದರದಿಂದ ಎತ್ತಿಕೊಂಡರು. ಆ ವೇಳೆಗೆ ಹಿಂದಿನ ದಿನ ಬಂದಿದ್ದ ಹುಡುಗ ಕಂಬದ ಮರೆಯಿಂದ ಹತ್ತಿರಕ್ಕೆ ಬಂದನು. ಅಡ್ಡಬಿದ್ದು ನಮಸ್ಕಾರ ಮಾಡಿ—"ನೀವು ನನಗೆ ಗುರುಗಳು. ನಾನು ನಿನ್ನೆ ತಮ್ಮನ್ನು ಹಾಗೆ ಮಾತನಾಡಿಸಿದ್ದು ತಪ್ಪು. ಇಂಥ ವಿದ್ಯೆ ಇದೆ ಎಂತ ತಿಳಿಯಲಿಲ್ಲ. ತಪ್ಪು ಮಾಡಿಬಿಟ್ಟೆ. ಮಾಫ್ ಮಾಡಬೇಕು" ಎಂದನು. ಸುಬ್ಬಣ್ಣನವರು "ನೀನೇನು ಹೇಳಿದೆಯಪ್ಪ. ನನ್ನನ್ನು ಏನೂ ಹೇಳಲಿಲ್ಲ. ಬಿಡು" ಎಂದರು. ಹುಡುಗ "ಗುರುಗಳೇ, ನೀವು ಒಬ್ಬರೇ ಬಂದಿರುವ ಹಾಗಿದೆ. ಹತ್ತಿರ ಯಾರೂ ಇಲ್ಲ. ಅಪ್ಪಣೆಯಾದರೆ ನಾನು ಹತ್ತಿರ ಇರುತ್ತೇನೆ. ಚಾಕರಿ ಮಾಡುತ್ತೇನೆ" ಎಂದನು.

ಸುಬ್ಬಣ್ಣನವರು—"ಅಯ್ಯೋ, ನನಗೆ ಚಾಕರಿ ಯಾರೂ ಮಾಡಬೇಕಾದ್ದಿಲ್ಲವಪ್ಪಾ. ನಾನೇ ಗುಲಾಮ. ನನಗೆ ಚಾಕರರ್‍ಯಾಕೆ" ಎಂದರು. ಈ ಹುಡುಗ ಈ ಪಿಟೀಲನ್ನು ಹೊಳೆಯಿಂದ ತಂದಿರಬೇಕು, ಇದನ್ನು ನನ್ನ ಹತ್ತಿರ ತಂದು ಇಟ್ಟವನು ಇವನೇ, ಇವನಿಂದ ನನಗೊಂದು ಉಪಕಾರವಾಯಿತು—ಎಂಬ ಭಾವನೆಯಿಂದ ಸುಬ್ಬಣ್ಣನವರ ಮಾತು ಹಿಂದಿನ ದಿನದಷ್ಟು ಒರಟಾಗಿರಲಿಲ್ಲ. ಅವರ ಮನಸ್ಸು ಸ್ವಲ್ಪ ನಯವಾಗಿತ್ತು. ಅವರು ಹಾಗೆಯೇ ಕುಳಿತಿದ್ದರು. ಹುಡುಗನೂ ಕುಳಿತಿದ್ದನು. ಅವನನ್ನು ಹೊರಟುಹೋಗು ಎನ್ನುವುದಕ್ಕೆ ಮನಸ್ಸು ಬರಲಿಲ್ಲ. ದಾಕ್ಷಿಣ್ಯ. ಸ್ವಲ್ಪ ಹೊತ್ತಿನ ಮೇಲೆ ಹುಡುಗ "ಸ್ವಾಮಿ, ನನ್ನ ಹೆಸರು ವೆಂಕಟರಮಣ. ನಾವು ನಟುವರು. ನಿಮಗೆ ಇಷ್ಟವಿದ್ದಾಗ ತಿರುಗಿ ಬರುತ್ತೇನೆ. ಅದಕ್ಕೆ ಮುಂಚೆ ಏನಾದರೂ ಬೇಕಾದರೆ ನಮ್ಮ ಮನೆಗೆ ಬಂದರೂ ಸರಿಯೆ. ಬರುವವರ ಕೈಯಲ್ಲಿ ಯಾರ ಕೈಯಲ್ಲಾದರೂ ಹೇಳಿಕಳುಹಿಸಿದರೂ ಸರಿಯೆ ತರುತ್ತೇನೆ" ಎಂದು ಎದ್ದು ಹೊರಟನು. ಸುಬ್ಬಣ್ಣನವರಿಗೆ ಅವನನ್ನು ಇರು ಎಂದು ಹೇಳಬೇಕೆಂದು ಒಂದು ಯೋಚನೆ. ಹೋಗಲಿ, ಯಾರು ಇನ್ನು ಇಲ್ಲಿ ಗುರುತು ಪರಿಚಯಗಳನ್ನು ಮಾಡಿಕೊಂಡು ತಿರುಗಿ ಕಷ್ಟಪಡುವವರು ಎಂದು ಇನ್ನೊಂದು ಯೋಚನೆ. ಈ ಮಧ್ಯೆ ಏನೂ ಹೇಳದೆ ಸುಮ್ಮನೆ ಇದ್ದರು.

ಮಧ್ಯಾಹ್ನದ ಹೊತ್ತಿಗೆ ವೆಂಕಟರಮಣ ಮತ್ತೆ ಬಂದ. ಸುಬ್ಬಣ್ಣನವರು ಸ್ನಾನ ಮುಗಿಸಿಕೊಂಡು ಕುಳಿತುಕೊಂಡಿದ್ದರು. ಅವರಿಗೆ ಆ

ಮಧ್ಯೆ—ಇದೇನು ವ್ಯರ್ಥ ಜನ್ಮ. ಇನ್ನೊಬ್ಬರಿಗೆ ಉಪಕಾರವಿಲ್ಲದೆಯೇ ಹೋಗಬೇಕೇ. ಉಪಕಾರ ಬೇಡ. ಸಾಲ ತೀರಿಸುವುದೂ ಬೇಡವೇ. ಈ ಹುಡುಗ ನನಗೆ ಪಿಟೀಲನ್ನು ತಂದುಕೊಡಬೇಕಾದದ್ದು ಏನಿತ್ತು. ಅವನಿಗೆ ಬದಲಿಗೆ ನಾಲ್ಕು ಪಾಠವಾದರೂ ಹೇಳಿ ಈ ಋಣ ತೀರಿಸಿಕೊಳ್ಳಬೇಕು—ಎಂದು ಯೋಚನೆ ತಲೆದೋರಿತ್ತು. ವೆಂಕಟರಮಣ ಬಂದು ನಮಸ್ಕಾರ ಮಾಡಿ ನಿಂತಿರಲು, ಅವರು ಅವನಿಗೆ ಕುಳಿತುಕೊ ಎಂದು ಸನ್ನೆ ಮಾಡಿದರು. ಅಲ್ಲದೆ ನೀಲಾಸಾನಿಯ ಜ್ಞಾಪಕದಿಂದ ಅವರಿಗೆ ಇವನ ಮೇಲೆ ಸ್ವಲ್ಪ ಹೆಚ್ಚು ಆದರ. ಅವಳೂ ನಟುವಳು. ಈ ಹುಡುಗನೂ ನಟುವನು. ಇಂಥ ಸಂಬಂಧಗಳಿಂದ ಹೃದಯದಲ್ಲಿ ಸ್ನೇಹವು ಮೊಳೆಯುವುದು. ಅವರು ಅವನನ್ನು ತಾವಾಗಿಯೇ ನೀನು ಪಿಟೀಲು ಚೆನ್ನಾಗಿ ಬಾರಿಸುತ್ತೀಯೆ ಎಂದರು. ಅವನು "ನಿಮ್ಮ ಆಶೀರ್ವಾದ. ನಾಲ್ಕು ಸ್ವರ ಕಲಿತಿದ್ದೇನೆ. ನಿಮ್ಮ ವಿದ್ಯದ ಮುಂದೆಯೇ. ಇಲ್ಲಿ ಯಾರೂ ಇಲ್ಲ ನಿಮ್ಮ ಜತೆಗೆ ಬಾರಿಸುವವರು" ಎಂದನು. "ನಿನಗೆ ಬೇಕಾದಾಗ ನಿನ್ನ ಪಿಟೀಲನ್ನು ತಂದು ನುಡಿಸು ಕೇಳೋಣ." "ಅಪ್ಪಣೆ. ಕೊಂಚ ದಿನ ಹೇಳಿಕೊಟ್ಟರೆ ಗುರುಗಳ ಅನುಗ್ರಹದಿಂದ ಈ ಕಡೆಯವರನ್ನೆಲ್ಲಾ ಸೋಲಿಸಿಬಿಡುತ್ತೇನೆ." ಸುಬ್ಬಣ್ಣನವರಿಗೆ ಈ ಹುಡುಗನ ಉತ್ಸಾಹವು ದೂರದ ಮೋಡದಲ್ಲಿಯ ಗುಡುಗಿನ ಧ್ವನಿಯಂತೆ ತಮ್ಮ ಚಿಕ್ಕಂದಿನ ಉತ್ಸಾಹವನ್ನು ನೆನಪಿಗೆ ತಂದಿತು. ಅವರು ಏನೂ ಹೇಳಲಿಲ್ಲ. ವೆಂಕಟರಮಣನು—"ಊಟಕ್ಕೆ ಏರ್ಪಾಡು ಮಾಡಿದೇನೆ ದಯಮಾಡಿಸಬೇಕು. ತಾವು ಸ್ಮಾರ್ತರು. ನಾನು ಸ್ಮಾರ್ತರ ಮನೆಯಲ್ಲೇ ಹೇಳಿದೇನೆ. ಅವರು ಆಚಾರಶೀಲರು. ಅವರನ್ನು ದೀಕ್ಷಿತರು ಎಂದು ಕರೆಯುತ್ತಾರೆ. ಅವರ ಮನೆ" ಎಂದನು. ಸುಬ್ಬಣ್ಣನವರು ಇದೇಕೋ ಸಾಲ ದೊಡ್ಡದಾಗುವ ಸ್ಥಿತಿ ಬಂದಿದೆ ಎಂದುಕೊಂಡು, "ಅಪ್ಪಾ, ನನಗಿದೆಲ್ಲಾ ಬೇಡ. ನಿನಗೆ ಬೇಕಾದಾಗ ಪಿಟೀಲು ತಾ. ಕಾಲು ಗಂಟೆ ಬಾರಿಸು. ಕೇಳುತ್ತೇನೆ. ಇನ್ನೇನೂ ನಿನ್ನಿಂದ ನನಗೆ ಬೇಡ" ಎಂದರು. ವೆಂಕಟರಮಣನು, ಇನ್ನೂ ಇವರಿಗೆ ಸಮಾಧಾನವಿಲ್ಲ ಎಂದು ತಿಳಿದು ಎದ್ದು ನಮಸ್ಕಾರ ಮಾಡಿ ಹೊರಟುಹೋದನು.

ಆದರೆ ವೆಂಕಟರಮಣನು ಹಿಂದಿನ ದಿನದ ತನ್ನ ನಡತೆಯಿಂದ ಸುಬ್ಬಣ್ಣನವರನ್ನು ಪುನಃ ಪ್ರಪಂಚಕ್ಕೆ ಕಟ್ಟಿಹಾಕಿದ್ದನು. ಆ ದಿನ ಅವರು ಕೋಪಿಸಿಕೊಂಡು ಹೊರಟುಹೋದಾಗ ಈತ ಏನು ಮಾಡುತ್ತಾರೋ ಎಂದು ಅವನು ದೂರದಲ್ಲಿ ಹಿಂದೆಯೇ ಹೋದನು. ಅವರು ಪಿಟೀಲನ್ನು

ಒಡೆಯುವದಕ್ಕೆ ನೋಡಿದ್ದು, ನೀರಿನೊಳಕ್ಕೆ ಇಳಿದು ಪಿಟೀಲನ್ನು ತೇಲಿಸಿದ್ದು, ಮೆಟ್ಟಲ ಮೇಲೆ ಕುಳಿತು ಸುಮ್ಮನೆ ಅತ್ತದ್ದು, ಎಲ್ಲವನ್ನೂ ನೋಡಿದನು. ಹುಡುಗನ ಮನಸ್ಸು—ಅವನಿಗೆ ಅಯ್ಯೋ ಎನಿಸಿತು. "ಎಂಥ ಪಿಟೀಲು, ಬಿಸಾಡಬೇಕು ಎಂದರೆ ಕಸಬುದಾರನಿಗೆ ಕಷ್ಟವಲ್ಲವೆ? ಇವರಿಗೆ ತಾನು ಮಾಡಿದ್ದು ಎಷ್ಟು ಬೇಸರವಿರಬೇಕು. ಆಗಲಿ ತಿರಿಗಿ ಸಮಾಧಾನ ಮಾಡೋಣ." ಎಂದು ನೀರೊಳಕ್ಕೆ ಹೋಗಿ ಅವನು ಪಿಟೀಲನ್ನು ಎತ್ತಿಕೊಂಡನು. ಆ ದಿನವೆಲ್ಲಾ ಅವನು ದೂರದಿಂದ ಹೊಂಚುಹಾಕಿ ಸುಬ್ಬಣ್ಣನವರನ್ನು ನೋಡುತಾ ಸಮಯವನ್ನು ಕಾಯುತ್ತಿದ್ದನು. ಸರಿಹೋಗಲಿಲ್ಲ. ಮಾರನೆಯ ದಿನ ಎಚ್ಚತ್ತಾಗ ಅದನ್ನು ಹತ್ತಿರ ಇಟ್ಟು ಅವರಿಗೆ ಅದನ್ನು ನೋಡಿ ಸಂತೋಷವಾದಂತೆ ಕಂಡರೆ ಮಾತನಾಡಿಸುವುದು, ಇಲ್ಲದೆ ಇದ್ದರೆ ಸುಮ್ಮನೆ ಹೊರಟು ಹೋಗುವುದು ಎಂದು ಯೋಚಿಸಿದನು. ಹಾಗೆಯೇ ಮಾಡಿದನು. ಮುಂದಕ್ಕೆ ನಡೆದದ್ದನ್ನು ಈ ಮೊದಲೇ ಹೇಳಿದೆ. ಅಂತೂ ಪಿಟೀಲನ್ನು ಒಡೆಯಲಾರದೆ ನೀರಿನೊಳಕ್ಕೆ ಹಾಕಿದ ಸ್ವಲ್ಪದ ಪ್ರೀತಿಯ ಮೂಲಕ ಸುಬ್ಬಣ್ಣನವರ ಮನಸ್ಸಿನಲ್ಲಿ ಒಂದು ದಾಕ್ಷಿಣ್ಯ ಹುಟ್ಟುವುದಕ್ಕೂ, ಅವರು ವೆಂಕಟರಮಣನಿಗೆ ಪಾಠ ಹೇಳುವುದಕ್ಕೂ ಸಂದರ್ಭ ಒದಗಿತು. ಭೂದೇವಿಯು ವೈಕುಂಠನಾಥನ ಧರ್ಮಪತ್ನಿ. ನಮಗವಳು ಮಾತೆ. ಮಕ್ಕಳಾದ ನಾವು ಕೋಪದಿಂದ ಹಠ ಮಾಡಿ ಒಲ್ಲೆನೆಂದು ದೂರ ಹೋಗನೋಡಿದರೆ ಅವಳು ನಮ್ಮನ್ನು ಹೀಗೆ ಉಪಾಯವಾಗಿ ಸಮಾಧಾನ ಮಾಡಿ ಹತ್ತಿರಕ್ಕೆ ಕರೆದುಕೊಳ್ಳುವಳು. ಸುಬ್ಬಣ್ಣನವರಿಗೂ ತೊರೆಯುಪುರದ ಜೀವನಕ್ಕೂ ಆ ದಿನ ಹೀಗೆ ಆರಂಭಿಸಿದ ಸಂಬಂಧವು ತಕ್ಕಮಟ್ಟಿಗೆ ಬೆಳೆಯಿತು. ಸುಬ್ಬಣ್ಣನವರೇನೋ ಯಾರಿಂದ ಏನೊಂದನ್ನೂ ಅಪೇಕ್ಷಿಸದೆ ತಮ್ಮಷ್ಟಕ್ಕೆ ಎಲ್ಲೋ ಇರುತ್ತ ಹೇಗೋ ಕಾಲ ಕಳೆಯುತ್ತಿದ್ದರು. ಆದರೂ ಅವರು ಎಲ್ಲರಿಗೂ ಬೇಕಾದವರಾದರು. ಅವರಿಂದ ಅನೇಕರು ಪಿಟೀಲನ್ನು ಕಲಿತರು. ಅವರು ವಿಶ್ವಸಂಸಾರದಲ್ಲಿ ಒಂದು ಕೆಲಸವನ್ನು ಒಪ್ಪಿಕೊಂಡ ಹಾಗಾಯಿತು. ಎಸೆದಿದ್ದ ಪಿಟೀಲನ್ನು ಹಿಂದಕ್ಕೆ ಕೊಡಿಸಿದ್ದನ್ನು ನೋಡಿದರೆ ದೇವರಿಗೆ ಈ ಪಿಟೀಲನ್ನು ಕೇಳುವುದರಲ್ಲಿ ಸುಖವಿರಬೇಕು ಎಂದು ಅವರು ಆಗಾಗ ದೇವಸ್ಥಾನದಲ್ಲಿ ಕುಳಿತು ಪಿಟೀಲನ್ನು ಬಾರಿಸುವರು. ಹೀಗೆ ಅವರಿಗೆ, ಕಷ್ಟಪಡಲಿ ಸುಖಪಡಲಿ ಜೀವನವು ದೇವರ ಸೇವೆ ಎನ್ನುವ ಭಾವನೆಯು ಮನಸ್ಸಿನಲ್ಲಿ ಮೆಲ್ಲಮೆಲ್ಲನೆ ಊರಿ ಎಲ್ಲವನ್ನೂ ದೈವೇಚ್ಛೆಗೆ ಸಮರ್ಪಿಸುವ ಭಕ್ತಿಯೊಂದು ಅವರಲ್ಲಿ ನಿಶ್ಚಲವಾಯಿತು.

೧೦

ನಮ್ಮ ಮಾವನವರಿಗೆ ೧೯೧೦ರಲ್ಲಿ ತೊರೆಯುಪುರದ ಸುಬೇದಾರಿ ಕೆಲಸವಾಯಿತು. ಆಗ ಅವರು ನನಗೆ ಇನ್ನೂ ಭಾವನವರಾಗಿದ್ದರು. ಮಾವನಾದ್ದು ಈಚೆಗೆ. ಅವರಿಗೆ ಆಗ್ಗೆ ಇಬ್ಬರು ಹೆಣ್ಣುಮಕ್ಕಳು. ದೊಡ್ಡವಳಾದ ಲಲಿತಾ ಈಗ ನನಗೆ ಗೃಹಿಣಿಯಾಗಿದ್ದಾಳೆ. ನಮ್ಮ ಮಾವನವರೂ ಸ್ವಲ್ಪ ವಿಶೇಷ ತರದ ಮನುಷ್ಯರು. ಬರೆದರೆ ಅವರದೇ ಒಂದು ಕತೆಯಾಗುವುದು. ಆದರೆ ಅದಕ್ಕೆಲ್ಲ ಇಲ್ಲಿ ಅವಕಾಶವಿಲ್ಲ. ಅವರಿಗೆ ಸಂಗೀತದಲ್ಲಿ ಬಹಳ ಅಭಿರುಚಿ. ಅವರೂ ಸ್ವಲ್ಪ ಮಟ್ಟಿಗೆ ಚೆನ್ನಾಗಿ ಪಿಟೀಲನ್ನು ಬಾರಿಸುವರು. ಪಿಟೀಲು ಚೆನ್ನಾಗಿ ಬಾರಿಸುತ್ತೀರಿ ಎಂತ ನೀವು ಹೇಳಿದರೆ, ಸರಿಸರಿ ನನಗೇನು ಬರುತ್ತದೆ ಎನ್ನುವರು. ನಿಮಗೆ ಇನ್ನೂ ಚೆನ್ನಾಗಿ ಬರುವುದಿಲ್ಲ ಎಂದರೆ, "ಸರಿ, ನಿಮಗೆ ತಿಳಿಯುದು. ನೋಡಿ. ಈ ಸಂಗತಿ ಥೇಪ್ ಸಂಗತಿ. ಎಂಥಾ ಪಂಡಿತರಿಗೂ ಬರೋದಿಲ್ಲ" ಎಂದು ಒಂದು ಸಂಗತಿಯನ್ನು ನುಡಿಸುವರು. ಅದು ನಿಜ. ಸಾಮಾನ್ಯವಾಗಿ ಅಂಥ ಲಟಕು ಅವರ ಸ್ವಂತದ್ದಾಗಿರುವುದು. ಎಂದರೆ ನೀವು ಹೇಳುವುದಕ್ಕೆ ಪ್ರತಿಹೇಳುವುದೇ ಅವರ ವಾಡಿಕೆ. ನಿಮ್ಮ ಸಂಗಡ ಜಗಳವಾಡುವುದಕ್ಕೆಂದಲ್ಲ, ಅವರು ಹಾಗೆ ಮಾಡುವುದು. ಅವರ ಮನಸ್ಸು ಆಗಿರುವ ರೀತಿಯೇ ಹಾಗೆ. ಅಧಿಕಾರ ಚಲಾಯಿಸಿರುವ ಅನೇಕರಿಗೆ ಈ ರೀತಿಯ ಮನೋವೃತ್ತಿ ಬರುತ್ತೆ. ಕಾಲದ್ದಕ್ಕೆ ಇವರ ಸ್ವಭಾವವೇ ಹಾಗೆ. ತೊರೆಯುಪುರಕ್ಕೆ ಹೋದ ಕೆಲವು ದಿನದಲ್ಲಿ ನಮ್ಮ ಮಾವ ಒಂದು ದಿನ ಕಛೇರಿಗೆ ಹೋಗುತ್ತಿರಬೇಕಾದರೆ ಯಾರೋ ಒಬ್ಬರ ಮನೆಯಲ್ಲಿ ಪಿಟೀಲು ನುಡಿಸುತ್ತಿದ್ದುದು ಕೇಳಿಸಿತು; ಬಹಳ ಸ್ವಾರಸ್ಯವಾಗಿತ್ತು. ನಮ್ಮ ಮಾವ ಹತ್ತಿರ ಇದ್ದವರನ್ನು ಅದು ಯಾರು ಪಿಟೀಲು ಬಾರಿಸುತ್ತಿರುವವರು ಎಂದು ಕೇಳಿದರು. ಬಾರಿಸುತ್ತಿದ್ದವನು ವೆಂಕಟರಮಣ. ಆ ದಿನ ಸಾಯಂಕಾಲ ಅವರು ವೆಂಕಟರಮಣನನ್ನು ಮನೆಗೆ ಕರೆಯಿಸಿ ಒಂದು ಗಂಟೆಹೊತ್ತು ಅವನು ಬಾರಿಸಿದ್ದನ್ನು ಕೇಳಿ, ಒಳ್ಳೇ ಪಾಠವಾಗಿದೆ, ಚೆನ್ನಾಗಿ ಬಾರಿಸುತ್ತೀಯೆ ಎಂದರು. ಹತ್ತಿರ ಇದ್ದವರು "ಇವರ ಪಿಟೀಲು ಏನು ಹೇಳೋದು. ಸುಬ್ಬಣ್ಣನವರು ಬಾರಿಸಿದಾಗ ಕೇಳಬೇಕು ಎಂದರು. "ಸುಬ್ಬಣ್ಣನವರು ಯಾರು?" "ಅವರು ನಮ್ಮ ಗುರುಗಳು." "ಈಗ ಇಲ್ಲಿದಾರೆಯೋ?" "ಇದಾರೆ." "ಅವರನ್ನು ಬರಹೇಳಿ. ಅವರು ಬಾರಿಸುವುದನ್ನು ಕೇಳೋಣ." ಅವರು ಹಾಗೆಲ್ಲಾ ಬರುವುದಿಲ್ಲವೆಂದೂ

ಯಾವ ತರದ ಮನುಷ್ಯನೆಂದೂ ಅಲ್ಲಿದ್ದವರು ನಮ್ಮ ಮಾವನವರಿಗೆ ಹೇಳಿದರು.

ಯಾರಾದರೂ ತಮ್ಮ ಹತ್ತಿರ ಬರುವುದಿಲ್ಲನೆಂದು ಹೇಳಿದರೆ ನಮ್ಮ ಮಾವನವರು ಅವರನ್ನು ಮತ್ತೆ ಕೇಳುವ ಸ್ವಭಾವದವರಲ್ಲ. ಅದನ್ನು ನೀವು ಜಂಭವೆಂದು ಕರೆಯಬಹುದು. ನಾನು ಹಾಗೆ ಕರೆಯುವುದಿಲ್ಲ. ಇದು ಒಂದು ರೀತಿಯ ದೊಡ್ಡಮನುಷ್ಯರಲ್ಲಿರುವ ಆತ್ಮಗುರುತ್ವ. ನಮ್ಮ ಮಾವನವರು ಈ ಸುಬ್ಬಣ್ಣ ಒಪ್ಪಿದರೆ ಅವರಿಂದ ಲಲಿತಾಗೆ ಪಿಟೀಲು ಹೇಳಿಸಬಹುದು ಎಂದು ಯೋಚಿಸಿದರು; ಆದರೆ ಅದಕ್ಕೆ ಅವಕಾಶವಿಲ್ಲವಾಯಿತು ಎಂದು ಸುಮ್ಮನಾದರು. ಹೀಗಿರುವಾಗ ಇನ್ನೊಂದು ದಿನ ಇವರು ಕಛೇರಿಗೆ ಹೋಗುವಾಗ ಸುಬ್ಬಣ್ಣನವರು ಯಾರ ಮನೆಯ ಜಗಲಿಯ ಮೇಲೆಯೋ ಕುಳಿತು ಪಾಠಹೇಳುತ್ತ ಹುಡುಗರಿಗೆ ತೋರಿಸುವುದಕ್ಕೆ ಪಿಟೀಲು ನುಡಿಸುತ್ತಿದ್ದರು. ಹೀಗೆ ನುಡಿಸುವುದರಲ್ಲಿ ರುಚಿಹತ್ತಿ, ರಾಗವನ್ನು ತೀರಾ ಆಲಾಪನೆ ಮಾಡುವುದಕ್ಕೆ ಮೊದಲುಮಾಡಿದರು. ಅವರು ರಾಗದ ಮಧ್ಯೆ ಇರುವಾಗ ಅದು ನಮ್ಮ ಮಾವನವರ ಕಿವಿಗೆ ಬಿತ್ತು. ಆ ಸ್ವಚ್ಛಂದವಾದ ವಿಚಿತ್ರವಾದ ರಸಭಾವ ಪರಿಪೂರ್ಣವಾದ ಗಾನದ ಆ ಸ್ವಲ್ಪ ಭಾಗವನ್ನು ಕೇಳಿ ನಮ್ಮ ಮಾವನವರಿಗೆ ಮನಸ್ಸು ಸೋತಿತು. ಅವರು ಆಗ ಕಛೇರಿಗೆ ಹೋಗಿ ಆ ರಾಗದ ವಿಚಾರ ಯೋಚನೆ ಮಾಡುತ್ತಿದ್ದು ಬೇಗನೆ ಕೆಲಸ ಮುಗಿಸಿ ಮನೆಗೆ ಬಂದರು. ಗುಮಾಸ್ತರೊಬ್ಬರನ್ನು ಕರೆದು, ಹೋಗಿ ಆ ಸುಬ್ಬಣ್ಣ ಎನ್ನುವರನ್ನು ಹೇಗಾದರೂ ಕರೆದುಕೊಂಡು ಬನ್ನಿ ಎಂದು ಕಳುಹಿಸಿದರು.

ಗುಮಾಸ್ತರು ಬಂದು ಸುಬ್ಬಣ್ಣನವರನ್ನು—"ಸ್ವಾಮಿ, ನಿಮ್ಮ ಸಂಗಡ ಸ್ವಲ್ಪ ಮಾತನಾಡಬೇಕು" ಎಂದರು. "ಏನು ಮಾತು." "ತಮ್ಮನ್ನು ಸುಬೇದಾರರು ಸ್ವಲ್ಪ ಬರಹೇಳುತ್ತಾರೆ. ಬಹಳ ಒಳ್ಳೆಯವರು. ಒಂದು ಅರ್ಧ ಗಂಟೆ ಪಿಟೀಲು ಬಾರಿಸಬೇಕಂತೆ." ಸುಬ್ಬಣ್ಣನವರು ಏನೂ ಮಾತೇ ಆಡಲಿಲ್ಲ. ಅವರಿಗೆ ಇದೆಲ್ಲ ಇಷ್ಟವಿಲ್ಲ. ಎಲ್ಲವನ್ನೂ ಬಿಟ್ಟವನು ಈಗ ಪಾಠ ಹೇಳುವ ಸಂಸಾರಕ್ಕೆ ಸಿಕ್ಕಿಬಿದ್ದೆ. ಇನ್ನು ದೊಡ್ಡಮನುಷ್ಯರ ಮನೆಯಲ್ಲಿ ಹೋಗಿ ಬಂದು ಆ ದೊಡ್ಡಸ್ತಿಕೆಗೆ ಸಿಕ್ಕಿ ಬೀಳುವುದು. ಇದು ತಮಗೆ ಬೇಡವೆಂದು ಅವರು ಯಾವ ಮಾತನ್ನೂ ಆಡದೆ ಸುಮ್ಮನೆ ಇದ್ದರು. ಗುಮಾಸ್ತರು ಬಹಳ ಬಲವಂತಮಾಡಿದ ಮೇಲೆ—"ನಾನು ಅಷ್ಟು ದೊಡ್ಡವರ ಹತ್ತಿರ ಬರಲಾರೆ. ಸುಬೇದಾರರಲ್ಲಿ ನಾನು ಕ್ಷಮಾಪಣೆ ಬೇಡಿಕೊಂಡೆ ಎಂದು

ಹೇಳಿ'' ಎಂದರು. ಗುಮಾಸ್ತರು ಹಿಂದಕ್ಕೆ ಬಂದು ಸುಬೇದಾರರಿಗೆ ತಿಳಿಸಿದರು.

ನಮ್ಮ ಮಾವನವರಿಗೆ ಸ್ವಲ್ಪ ಕೋಪವೇ ಬಂತು. ನಾನು ಹೇಳಿಕಳುಹಿಸಿದರೂ ಬರುವುದಿಲ್ಲವೆನ್ನುವಷ್ಟು ಜಂಭವೇ ಈ ಹಾಡುಗಾರನದು ಎಂತ ಅವರ ಯೋಚನೆ. ರಾಜರ ವೇಷಹಾಕಿ ರಂಗರಾಯು ನಾಟಕದಲ್ಲಿ ತಾನು ರಾಜನಂತೆ ನಡೆಯಬೇಕು. ನಾವೂ ಸಂಸಾರದಲ್ಲಿ ಕೆಲವರು ದೊಡ್ಡಮನುಷ್ಯನ ವೇಷಹಾಕಿ ದೊಡ್ಡಮನುಷ್ಯನೆಂದುಕೊಳ್ಳುತ್ತೇವೆ. ಚಿಕ್ಕ ಮನುಷ್ಯನ ವೇಷಹಾಕಿ ಚಿಕ್ಕ ಮನುಷ್ಯ ಎಂದುಕೊಳ್ಳುತ್ತೇವೆ. ಈ ಚಿಕ್ಕ ಮನುಷ್ಯ ಎಂದುಕೊಂಡವನು ತಗ್ಗಿ ನಡೆದುಕೊಳ್ಳುತ್ತಾನೆ. ದೊಡ್ಡಮನುಷ್ಯ ಎಂದುಕೊಂಡವನು ದರ್ಪ ಮಾಡುತ್ತಾನೆ. ಚಿಕ್ಕಮನುಷ್ಯನ ವೇಷದವನು ತಗ್ಗಿ ನಡೆಯದಿದ್ದರೆ ದೊಡ್ಡಮನುಷ್ಯನ ವೇಷದವನಿಗೆ ಕೋಪ. ಆದರೆ ನೋಡಿ, ಜವಾನ ಪಾರ್ಟಿನ ಜೀವಂಡರಾಯ ರಾಜಾ ಪಾರ್ಟಿನ ರಂಗರಾಯನಿಗೆ ನಾಟಕದಲ್ಲಂತೂ ನಮಸ್ಕಾರ ಮಾಡಬೇಕು; ಬೀದೀಲಿ ಬಂದಾಗಲೂ ದಾಸೋಹಂ ಎನ್ನುವುದಕ್ಕಾಗುತ್ತದೆಯೇ? ಒಂದೊಂದು ಸಂದರ್ಭದಲ್ಲಿ ಏನಾಗುತ್ತೆ ಎಂದರೆ ರಂಗರಾಯ ಇನ್ನೂ ನಾಟಕದಲ್ಲೇ ಇರುತ್ತಾನೆ. ಜೀವಂಡರಾಯ ಹೊರಗೆ ಬಂದಿರುತ್ತಾನೆ. ಆಗ ತೊಂದರೆ. ಇಲ್ಲಿ ಆಗಿದ್ದದ್ದೂ ಅದೇ. ನಮ್ಮ ಮಾವನವರು ಇನ್ನೂ ಸಂಸಾರದಲ್ಲಿರುವವರು. ಸುಬ್ಬಣ್ಣ ಸಂಸಾರವನ್ನು ಬಿಟ್ಟವರು. ಸುಬ್ಬಣ್ಣ ತಮಗೆ ಮರ್ಯಾದೆ ತೋರಿಸಲಿಲ್ಲವೆಂದು ನಮ್ಮ ಮಾವನವರು ಕೋಪಿಸಿಕೊಳ್ಳುವುದು ಸಹಜ. ನಾವು ಯಾರಾದರೂ ಅಂಥ ಸಂದರ್ಭದಲ್ಲಿ ಕೋಪಿಸಿಕೊಳ್ಳುವುದೇ ನಿಜ. ಸುಬ್ಬಣ್ಣನವರು ಬರುವುದಿಲ್ಲವೆಂದು ಕೇಳಿ ನಮ್ಮ ಮಾವನವರು ಬರದೇ ಇದ್ದರೆ ಬಿಡುತ್ತಾನೆ ಎಂದು ಬಹಳ ಕೋಪದಿಂದ ಹೇಳಿ ಸುಮ್ಮನಾದರು.

ಇದಾದ ಕೆಲವು ದಿವಸದ ಮೇಲೆ ನಮ್ಮ ಮಾವನವರ ಬಳಿಗೆ ಗುಮಾಸ್ತರು ಬಂದು '' ಈ ದಿನ ಸಾಯಂಕಾಲ ದೇವಸ್ಥಾನದಲ್ಲಿ ಹೆಚ್ಚು ಗಟ್ಟಿ. ಈದಿನ ಸುಬ್ಬಣ್ಣನವರು ದೇವಸ್ಥಾನದಲ್ಲಿ ಪಿಟೀಲು ನುಡಿಸುತ್ತಾರೆ. ಹಬ್ಬ ಹುಣ್ಣಿಮೆಗಳಲ್ಲಿ ಬಂದು ನುಡಿಸುವುದು ವಾಡಿಕೆ. ಸ್ವಾಮಿಯವರು ದಯಮಾಡಿಸಿದರೆ ಕೇಳಬಹುದು'' ಎಂದು ಹೇಳಿದರು. ಮೊದಲಲ್ಲಿ ನಮ್ಮ ಮಾವನವರು ''ಇವನು ನಮ್ಮ ಮನೆಗೆ ಬರುವುದಿಲ್ಲ ಎಂತ ಹೇಳಿರುವಾಗ ನಾನು ಇವನ ಪಿಟೀಲು ಕೇಳುವುದಕ್ಕೆ ದೇವಸ್ಥಾ

ಸಕ್ಕೆ ಹೋದರೆ ಮರ್ಯಾದೆಯಿಲ್ಲ ಎಂದುಕೊಂಡರು; ಆದ್ರೆ ಮೇಲೆ ದೇವಸ್ಥಾನಕ್ಕೆ ಹೋಗುವುದಕ್ಕೆ ಇಂಥಾ ಕಾರಣ ಅಡ್ಡಿಯಾಗಬಾರದು. ಹೋಗುವುದೇ ಸರಿ. ಹಾಗೆಯೇ ಸಂಗೀತವನ್ನು ಕೇಳುವುದಾದರೆ ಕೇಳುವುದು. ನನ್ನದು ಯಾಕೋ ವಿಪರೀತ ಜಂಭಕ್ಕೆ ಬಂತು'' ಎಂದು ಕೊಂಡು ಆ ದಿನ ಸಾಯಂಕಾಲ ದೇವಸ್ಥಾನಕ್ಕೆ ಹೋದರು.

ಸುಬ್ಬಣ್ಣನವರು ಗುಂಪಿನಲ್ಲಿದ್ದರು; 'ಸಂಗೀತಮವಧಾರಯ' ಎಂದಾಗ ಮುಂದಕ್ಕೆ ಬಂದು ಪಿಟೀಲನ್ನು ನುಡಿಸಿದರು. ಜತೆಯಲ್ಲಿ ವೆಂಕಟರಮಣನೂ ಬಾರಿಸುತ್ತಿದ್ದನು.

ಸುಬ್ಬಣ್ಣನವರು ಪಿಟೀಲಿನಲ್ಲಿ ತರುತ್ತಿದ್ದ ಗಾನವನ್ನು ವರ್ಣಿಸ ಲಾರೆನೆಂದು ನಾನು ಮೊದಲೇ ಹೇಳಿದ್ದೇನೆ. ಅವರಿಗೆ ದಿನ ದಿನಕ್ಕೆ ಕೈನುರಿಯುತ್ತಿತ್ತು. ಆ ದಿನ ಭೈರವೀರಾಗವನ್ನು ಬಾರಿಸಿದ್ದನ್ನು ಕೇಳಿ ದೇವಸ್ಥಾನದಲ್ಲಿ ನೆರೆದಿದ್ದ ಜನ ದೇವರನ್ನೇ ಕಂಡವರಂತೆ ಸಂತೋಷದಲ್ಲಿ ಮುಳುಗಿದರು. ಪೂಜೆಯೆಲ್ಲಾ ಮುಗಿದ ಮೇಲೆ ಎಲ್ಲರೂ ಹೊರಡ ಬೇಕು, ಆಗ ನಮ್ಮ ಮಾವ ಒಂದು ಕೆಲಸ ಮಾಡಿದರು; ಮೆಲ್ಲನೆ ಗಂಭೀರವಾಗಿ ಸುಬ್ಬಣ್ಣ ನಿಂತಿದ್ದ ಕಡೆ ಬಂದು, ನಿಮ್ಮಂಥ ಸಂಗೀತಗಾರರನ್ನು ನಮ್ಮ ಹತ್ತಿರ ಬನ್ನಿ ಎಂತ ನಾವು ಕರೆದದ್ದು ತಪ್ಪು ಅಲ್ಲವೇ ಸ್ವಾಮಿ? ನೀವು ಸಂಗೀತವನ್ನು ಯೋಗದಂತೆ ಸಾಧಿಸಿ ಬಿಟ್ಟಿದ್ದೀರಿ ಎಂದರು.

ಸುಬ್ಬಣ್ಣ "ನನಗೆ ಇಷ್ಟು ಮಾತು ಹೇಳಿಬಿಟ್ಟರೆ ನನ್ನ ಬುದ್ಧಿ ಕೆಟ್ಟುಹೋಗುತ್ತೆ, ನಾನು ಅಲ್ಪ, ದೊಡ್ಡವರ ಹತ್ತಿರ ಬರುವಷ್ಟರವ ನಲ್ಲ," ಎಂದರು.

ನಮ್ಮ ಮಾವನವರು "ನೀವು ಬಂದರೆ ನಮಗೆ ಬಹಳ ಸಂತೋಷ. ನಮ್ಮ ಮನೆಯಲ್ಲಿ ಒಂದು ಮಗುವಿದೆ. ಅದಕ್ಕೆ ಹಾಡು ಹೇಳಿಕೊಡುವು ದಾದರೆ ಇನ್ನೂ ಸಂತೋಷ. ಹೇಗಾದರೂ ನಮ್ಮನ್ನು ದೂರ ಎಂತ ಎಣಿಸಬೇಡಿ ಸುಬ್ಬಣ್ಣನವರೇ" ಎಂದು ಹೇಳಿ ಹೊರಟುಹೋದರು.

ನಮ್ಮ ಮಾವನವರು ಜನರಲ್ಲಿ ಇಷ್ಟು ಸುಲಭವಾಗಿ ಇಷ್ಟು ಮಾತನಾಡುವವರಲ್ಲ. ಆದರೆ ಎಷ್ಟಾದರೂ ದೊಡ್ಡತರದ ಮನುಷ್ಯರು. ದೊಡ್ಡವರನ್ನು ಕಂಡಾಗ ಗುರುತಿಸುವರು, ಮರ್ಯಾದೆ ಮಾಡು ವರು. ಅಲ್ಲದೆ ಅವರು ಸುಬ್ಬಣ್ಣನವರ ಗಾನಕ್ಕೆ ಸೋತುಹೋದರು. ಎಂತಹ ಕಠಿಣರನ್ನೂ ಗಾನವು ನಯವಾಗಿ ಮಾಡಬಲ್ಲುದು. ವಿದ್ಯೆ

ಯಿಂದ ಸಂಸ್ಕೃತರೂ ಆದವರನ್ನು ಅದು ನಯದ ದಾರಿಗೆ ಕರೆಯುವುದು ಏನು ಆಶ್ಚರ್ಯ? ನೋಡಿದರೆ ಅವರಲ್ಲಿರುವ ನಯವನ್ನೇ ಅದು ಹೊರಗೆ ಬರುವಂತೆ ಮಾಡುತ್ತದೆಂದು ಹೇಳಬಹುದು.

ಇವರ ನಡತೆಯಿಂದ ಸುಬ್ಬಣ್ಣನವರ ನಯವೂ ಹೊರಕ್ಕೆ ಬಂತು. ಮಾರನೆಯ ದಿನ ಅವರು ನಮ್ಮ ಮನೆಗೆ ಬಂದು ಲಲಿತೆಗೆ ಪಾಠ ಹೇಳುವುದಕ್ಕೆ ಆರಂಭಿಸಿದರು. ಆ ಮೇಲೆ ಎಂದೋ ಈ ಮಾತು ಆಡುವಾಗ ಅವರು ಹೀಗೆಂದು ಹೇಳಿದರು. “ಸುಬೇದಾರರು ಸುಬೇದಾರರು ಎಂದರೆ ಹ್ಯಾಗಿದಾರೋ ಎಂಥಾ ಮನುಷ್ಯರೋ ಎಂತ ಇದ್ದೆ. ನೋಡಿ, ಅದರಿಂದಲೇ ಕರೆದರೆ ಬರೋದಿಲ್ಲ ಎಂತ ನಾನು ಇದ್ದದ್ದು. ದೇವಸ್ಥಾನದಲ್ಲಿ ಅವರು ಬಂದು ಮಾತನಾಡಿಸಿದಾಗ ಅವರು ಎಂಥವರು ಎಂತ ತಿಳಿಯಿತು. ಚಿನ್ನ, ಸ್ವಾಮಿ, ಅಪರಂಜಿಯ ಚಿನ್ನ; ಸ್ವಲ್ಪ ಜಂಭ ಎನ್ನಬಹುದು ಜನ. ಆದರೆ ಸುಬೇದಾರರಿಗೆ ಜಂಭ ಇಲ್ಲದೇ ಇದ್ದರೆ ಕೆಲಸ ಹೇಗೆ ನಡೆಯಬೇಕು?” ಎಂದರು. ಕೊಂಚ ದಿನ ಪಾಠ ಹೇಳುವುದರಲ್ಲಿ ಇವರಿಗೆ ನಮ್ಮ ಮಾವನವರ ಮನೆಯಲ್ಲಿ ಬರುವುದು ಹೋಗುವುದು ಬಳಕೆಯಾಯಿತು.

ನಮ್ಮ ಅಕ್ಕನಿಗೆ ಸುಬ್ಬಣ್ಣನವರಲ್ಲಿ ಬಹಳ ಕನಿಕರ. ಆಕೆಗೆ ಯಾರನ್ನು ಕಂಡರೂ ಕನಿಕರವೇ. ಅವರು ಜನರ ಕಷ್ಟವನ್ನು ನೋಡಲಾರರು. ಗಂಡನಲ್ಲಿ ಅತಿಶಯವಾದ ಪ್ರೇಮ, ಭಕ್ತಿ. ಮಕ್ಕಳೆಂದರೆ ಹೇಳಲಾರದ ಅಕ್ಕರೆ. ಬಂದವರು ಹೋದವರಲ್ಲಿ ಎಷ್ಟೋ ವಿಶ್ವಾಸ. ಇವರು ಗಂಡನನ್ನೂ ಮಕ್ಕಳನ್ನೂ ನೋಡಿಕೊಳ್ಳುವ ರೀತಿಯನ್ನೂ ಮನೆಯ ಆಳುಗಳನ್ನು ಕಾಣುವ ರೀತಿಯನ್ನೂ ಎಲ್ಲ ಕೆಲಸದ ಮೇಲ್ವಿಚಾರಣೆ ಮಾಡುವ ರೀತಿಯನ್ನೂ ನೋಡಿ ಸುಬ್ಬಣ್ಣನವರಿಗೆ ಅವರಲ್ಲಿ ಬಹಳ ಮರ್ಯಾದೆ ಹುಟ್ಟಿತು. ಅವರು ಬಹಳ ದಿನದಮೇಲೆ ನನಗೆ ಹೇಳಬೇಕಾದರೆ “ಎಂಥ ಹೆಂಗಸು ಸ್ವಾಮಿ ಆಕೆ. ನಾನು ಒಬ್ಬರನ್ನು ಅಂಥವರನ್ನು ನೋಡಿದ್ದೆ. ಈಗ ಇನ್ನೊಬ್ಬರನ್ನು ನೋಡಿದ ಹಾಗಾಯಿತು” ಎಂದರು. “ಒಬ್ಬರು ಯಾರು?” “ನನ್ನ ಸಂಸಾರ ಮಾಡಿದರು ಬಿಡಿ; ಎಂದೋ ಒಂದು ಕಾಲದಲ್ಲಿ.” ಹೀಗೆ ಹೇಳುವಾಗ ಸುಬ್ಬಣ್ಣನವರು ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡರು. ಇಷ್ಟು ಒಳ್ಳೆಯವರ ಮನೆಗೆ ಹೋಗಿಬರುವುದರಲ್ಲಿ ಇವರಿಗೆ ಸ್ವಲ್ಪ ಸಂತೋಷ. ಅಲ್ಲದೆ ಲಲಿತೆ ಸುಟಿಯಾಗಿ ಹಾಡನ್ನು ಕಲಿತುಕೊಳ್ಳುತ್ತಿದ್ದಳು. ಅವಳಿಗೆ ಹೇಳಿಕೊಡುವುದರಲ್ಲಿ ಒಂದು ಹೆಚ್ಚಾದ ಸಂತೋಷ. ಹೀಗೆ ಸಂಸಾರದ ಸುಖ

ಒಂದೊಂದೂ ಸುಬ್ಬಣ್ಣನವರನ್ನು ರಾಟೆಯ ಓಟದಲ್ಲಿ ಸೇರಿಸಿಕೊಂಡಿತು. ಅವರು ಇದಕ್ಕೆ ಸಿಕ್ಕಬಾರದು ಸಿಕ್ಕಬಾರದು ಎಂದುಕೊಳ್ಳುತ್ತಾ ಸೇರಿಯೂ ಸೇರದ ಹಾಗೆ ಇರಬೇಕು ಎಂದು ಪ್ರಯತ್ನಪಡುತ್ತಾ ಕಾಲವನ್ನು ಕಳೆಯುತ್ತಿದ್ದರು.

ಏನೇ ಆದರೂ ಸುಬ್ಬಣ್ಣನವರು ನಮ್ಮ ಮಾವನವರ ಮನೆಯಲ್ಲಿ ಊಟ ಮಾಡುತ್ತಿರಲಿಲ್ಲ. ಊಟಕ್ಕೆ ಏಳಿ ಎಂದರೆ ಕಣ್ಣಿಗೆ ಕಾಣದೇ ಓಡುವರು. ಎರಡು ತಿಂಗಳಾಯಿತು. ನಮ್ಮ ಮಾವನವರು ಅವರಿಗೆ ಹತ್ತು ರೂಪಾಯಿ ಕೊಡುವುದಕ್ಕೆ ಹೋದರು. ಸುಬ್ಬಣ್ಣ ತೆಗೆದು ಕೊಳ್ಳುವುದಿಲ್ಲವೆಂದರು. ನಮ್ಮ ಮಾವನವರು "ನೀವು ಸಂಬಳ ತೆಗೆದುಕೊಳ್ಳದೇ ಇದ್ದರೆ ನಿಮ್ಮ ಕೈಲಿ ಪಾಠವನ್ನು ಹೇಗೆ ಹೇಳಿಸು ವುದು ? ಅದೆಲ್ಲಾ ಆಗುವುದಿಲ್ಲ" ಎಂದರು. ಸುಬ್ಬಣ್ಣನವರು "ನನಗೆ ಬೇಕಾದರೆ ತಾವು ಹಣ ಕೊಡಬೇಕು. ಬೇಡದೇ ಇದ್ದರೆ ಕೊಡ ಬೇಕಾದದ್ದೇನು ? ನನಗೆ ಹಣ ಬೇಡ," ಎಂದರು. ನಮ್ಮ ಮಾವನವರು "ಹಣ ಉಳಿಸಿಕೊಳ್ಳುವುದಕ್ಕೆ ದಿಕ್ಕಿಲ್ಲದ ಮುದುಕನನ್ನು ಕರೆದು ಪಾಠ ಹೇಳೋಕೆ ಇಟ್ಟುಕೊಂಡರು ಎಂತ ಜನರು ಎಂದಾರು, ಆಗುವುದಿಲ್ಲ" ಎಂದರು. ಸುಬ್ಬಣ್ಣ ಹೊರಟುಹೋದರು. ಮಾರನೆಯ ದಿನ ಪಾಠಕ್ಕೆ ಬರಲೇ ಇಲ್ಲ. ನಮ್ಮ ಮಾವನವರು ಏಕೆ ಎಂದು ವಿಚಾರಿಸಿದರು. ಲಲಿತಾ ಆ ವೊದಲೇ ಸುಬ್ಬಣ್ಣನವರನ್ನು ಕೇಳಿದ್ದಳು. ಅವರು, ನಿಮ್ಮ ತಂದೆಯವರು ಬರಬೇಡ ಎಂದು ಹೇಳಿದಾರೆ, ಎಂತ ಹೇಳಿದರಂತೆ. ಅದನ್ನು ತಂದೆಗೆ ತಿಳಿಸಿದಳು. ಪಾಠ ಹೇಳುವುದಾದರೆ ಸಂಬಳ ತೆಗೆದು ಕೊಳ್ಳಬೇಕು, ಇಲ್ಲದೆ ಇದ್ದರೆ ಬಿಡಲಿ, ಎಂದು ನಮ್ಮ ಮಾವನವರು ಖಂಡಿತವಾಗಿ ಹೇಳಿಬಿಟ್ಟರು. ಮೂರು ನಾಲ್ಕು ದಿನದ ಮೇಲೆ ಸುಬ್ಬಣ್ಣನವರು ಮತ್ತೆ ಬಂದು ಪಾಠ ಹೇಳುವುದಕ್ಕೆ ಆರಂಭ ಮಾಡಿದರು. ನಮ್ಮ ಮಾವನವರು ಹಣ ಕೊಡುವುದಕ್ಕೆ ಬಂದರು. ಅವರು ತೆಗೆದುಕೊಂಡರು. ನಮ್ಮ ಮಾವನವರು "ಅದೀಗ ಸರಿ, ನಮಗೂ ಸಂತೋಷ, ನಿಮಗೂ ಸಂತೋಷ ಇದು" ಎಂದು ಹೇಳಿದರು. ಸುಬ್ಬಣ್ಣ "ನನಗೆ ಸಂತೋಷ ಇಲ್ಲ ಸ್ವಾಮಿ. ಆದರೇನು ಮಾಡುವುದು. ನೀವು ಎಷ್ಟಾದರೂ ಮ್ಯಾಜಿಸ್ಟ್ರೇಟರು. ನಿಮ್ಮನ್ನು ಕಂಡರೆ ನಮಗೆ ಭಯ ಸ್ವಾಮಿ" ಎಂದರು. ನಮ್ಮ ಮಾವನವರು ನಕ್ಕರು. ನಮ್ಮ ಅತ್ತೆ ಅಲ್ಲಿಗೆ ಬಂದಾಗ ಸುಬ್ಬಣ್ಣನವರು "ಅಲ್ಲವೇನಮ್ಮ, ನಿಮ್ಮ ಯಜಮಾನರು ಮ್ಯಾಜಿಸ್ಟ್ರೇಟರು. ನಮ್ಮಂತವರು ಹೆದರ ಬೇಕೋ ಇಲ್ಲವೋ ?" ಎಂದರು. ಆಕೆ "ಇದಕ್ಕೆಲ್ಲಾ ಹೆದರುತ್ತಾರೆಯೆ

ಸುಬ್ಬಣ್ಣನವರೇ, ನ್ಯಾಯ ಹೇಳಿದರೆ ಮ್ಯಾಜಿಸ್ಟ್ರೇಟರು. ಅನ್ಯಾಯ ಮಾಡಿದರೆ ಅಪೀಲು ಇಲ್ಲವೇ?'' ಎಂದರು. ಸುಬ್ಬಣ್ಣನವರು ಸುಮ್ಮನೆ ತಮಗೆ ತಾವೇ ನಕ್ಕರು. ಒಂದು ಗಳಿಗೆ ಬಿಟ್ಟು ನಮ್ಮ ಮಾವನವರನ್ನು ''ಏನು ಸ್ವಾಮಿ, ಅಪೀಲು ಇದೆ ಅಲ್ಲವೇ ಸ್ವಾಮಿ. ಮಾಡಬಹುದಲ್ಲವೇ ಸ್ವಾಮಿ'' ಎಂದರು. ನಮ್ಮ ಮಾವನವರು ''ಏಕಿಲ್ಲ? ಕ್ಕೆ ಅಪೀಲು ಇರಬಹುದು. ಇದಕ್ಕೆ ಅಪೀಲು ಇಲ್ಲ'' ಎಂದರು. ಸುಬ್ಬಣ್ಣ ''ಏನೋ ಕಂಡವರ್ಯಾರು'' ಎಂದರು. ತಮಗೆ ತಾವೇ ನಕ್ಕರು.

ಆಗಿದ್ದದ್ದು ಏನು ಎಂದರೆ ನಮ್ಮ ಅತ್ತೆ ಹಿಂದಿನ ದಿನ ಅವರ ಹತ್ತಿರ ಹೋಗಿ ''ನಿಮ್ಮದೂ ಹಠ, ಅವರದೂ ಹಠ. ನಿಮ್ಮ ಹಠದಲ್ಲಿ ಮಗುವಿಗೆ ಪಾಠವೇ ಇಲ್ಲ. ಅವರು ಚಿಕ್ಕವರು. ಅವರ ಹಠವೇ ನಡೆಯಲಿ ಬನ್ನಿ'' ಎಂದರು. ಸುಬ್ಬಣ್ಣ ''ಬರುತ್ತೇನೆ, ಅದಕ್ಕೆ ಅಡ್ಡಿಯಿಲ್ಲ. ನಾನು ರೂಪಾಯಿ ತೆಗೆದುಕೊಂಡು ಏನು ಮಾಡಲಿ?'' ಎಂದರು. ಎಷ್ಟು ಹೇಳಿದರೂ ಒಪ್ಪಲಿಲ್ಲ. ''ಹುಡುಗೀಗೆ ಪಾಠ ಹೇಳಬೇಕು ಎಂತ ನಿಮಗೆ ಇಷ್ಟವಿಲ್ಲವೇ'' ಎಂದು ಇವರು ಕೇಳಿದರು. ''ನಮ್ಮಪ್ಪ ನಾಣೆ ಈ ಮೂರು ದಿನ ಬರದೇ ಇದ್ದದ್ದೇ ನನಗೆ ಕಷ್ಟವಾಗಿದೆ. ಆದರೆ ನಾನೇನು ಮಾಡಲಿ. ನನಗೆ ಹಣ ಬೇಕಿಲ್ಲ. ತಕ್ಕೊಂಡರೆ ನನ್ನ ಬುದ್ಧಿ ಕೆಡುತ್ತೆ'' ಎಂದು ಸುಬ್ಬಣ್ಣನವರು ಹೇಳಿದರು. ನಮ್ಮತ್ತೆ ''ಅದಕ್ಕೊಂದು ಉಪಾಯ ಮಾಡಿ. ನೀವು ರೂಪಾಯಿ ತೆಗೆದುಕೊಂಡು ಅದನ್ನು ಯಾರಿಗಾದರೂ ಕೊಟ್ಟುಬಿಡಿ'' ಎಂದರು. ಸುಬ್ಬಣ್ಣನವರು ''ಮಹಾತಾಯಿ, ಒಂದು ಕೆಲಸ ಮಾಡಿ. ಅವರು ಕೊಡುವ ಹಣ ನಿಮ್ಮ ಕೈಗೆ ಕೊಟ್ಟುಬಿಡುತ್ತೇನೆ. ಅದನ್ನು ನೀವು ಏನಾದರೂ ಮಾಡಿಬಿಡಿ. ನಾನು ಬಂದು ಪಾಠ ಹೇಳುತ್ತೇನೆ'' ಎಂದರು. ಆಕೆ ಒಪ್ಪಿದರು. ಅದರಿಂದಲೇ ಸುಬ್ಬಣ್ಣನವರು ಮತ್ತೆ ಪಾಠ ಹೇಳುವುದಕ್ಕೆ ಬಂದದ್ದು. ಈ ಏರ್ಪಾಡು ನಮ್ಮ ಮಾವನವರಿಗೆ ತಿಳಿಯದು. ಸುಬ್ಬಣ್ಣನವರು ಆಮೇಲೆ ಈ ಮಾತನ್ನು ನನಗೆ ಹೇಳುವಾಗ, ''ನೋಡಿದಿರೋ ಅಪೀಲು. ಸುಬೇದಾರ್ರಿಂದ ಸುಬೇದಾರರ ಹೆಂಡತಿಗೆ'' ಎಂದರು. ನಾನು ನಕ್ಕೆ. ಸುಬ್ಬಣ್ಣನವರು ''ಅಲ್ಲೂ ಅಷ್ಟೇ ಸ್ವಾಮಿ. ಅವ ಅನ್ಯಾಯ ಮಾಡಿದರೆ ಅಪೀಲು ಮಾಡುವುದೇ'' ಎಂದರು. ನಾನು ಎಲ್ಲಿ—ಎಂದೆ. ಸುಬ್ಬಣ್ಣ ''ಪರಲೋಕದಲ್ಲಿ. ಪರಶಿವ ಹೀಗೇನಾದರೂ ಹಠ ಮಾಡುತ್ತಾನೆ; ಮಾಡದೇ ಬಿಡೋದಿಲ್ಲ. ಆಗ್ಯೆ ಅಮ್ಮನವರಿಗೆ ಅಪೀಲು ಮಾಡುವುದೇ, ಬಿಡೋದಿಲ್ಲ'' ಎಂದರು. ನಾನು ಅವರ ಮುಖವನ್ನು ನೋಡಿದೆ. ಅವರು ಅದನ್ನು ನಿಜವಾಗಿಯೇ

ಸಂಪಿದ್ದರೆಂದು ತೋರಿತು. ಹೀಗೆ ಇಲ್ಲಿಯ ನಡವಳಿಕೆಗಳಿಂದ ಅಲ್ಲಿಯ ನಡವಳಿಕೆಗಳನ್ನು ಕಟ್ಟುವುದು ಇವರಲ್ಲಿ ಒಂದು ವಾಡಿಕೆಯಾಗಿ ಹೋಗಿತ್ತು.

೧೧

ಹೀಗೆಯೇ ನಾಲ್ಕು ವರುಷಗಳು ಕಳೆದುವು. ಈ ಮಧ್ಯೆ ಆದ ವಿಷಯಗಳು ಹೇಳತಕ್ಕಂಥವು ಏನೂ ಇಲ್ಲ. ಈ ಕಾಲದಲ್ಲೇ ನಾನು ಬಂದು ಸುಬ್ಬಣ್ಣನವರ ಸಂಗಡ ಪರಿಚಯ ಮಾಡಿಕೊಂಡದ್ದು. ಲಲಿತಾನ ನನಗೆ ಕೊಡಬೇಕೆಂದು ಗೊತ್ತಾಗಿದ್ದುದರಿಂದ ಸುಬ್ಬಣ್ಣನವರಿಗೆ ನನ್ನ ಮೇಲೆ ಬಹಳ ವಿಶ್ವಾಸ. ನಾವು ಆಗಾಗ ಏನನ್ನಾದರೂ ಮಾತ ನಾಡುವೆವು. ನನಗೂ ಪಿಟೀಲಿನ ಮೇಲೆ ಆಸೆ. ಸುಬ್ಬಣ್ಣನವರು ನನಗೂ ಪಿಟೀಲು ಹೇಳಿಕೊಟ್ಟರು. ಬರಬರುತ್ತ ನನಗೆ ಸುಬ್ಬಣ್ಣನವರ ಸ್ವಭಾವ ಚೆನ್ನಾಗಿ ತಿಳಿದು "ಈತನು ಧನ್ಯನು, ಈತನು ಯೋಗಿಗಳಲ್ಲಿ ಅಗ್ರಗಣ್ಯನು, ಈತನು ದೇವರನ್ನು ಸಾಕ್ಷಾತ್ ಕಂಡವನು" ಎಂದು ನಾನು ತಿಳಿದುಕೊಂಡೆನು. ಏನೇ ಆಗಲಿ ಸುಬ್ಬಣ್ಣನವರು ಮನೆ ಯೊಳಗೆ ಮಲಗುತ್ತಿರಲಿಲ್ಲವಷ್ಟೆ. ಒಂದು ಸಲ ನಮ್ಮ ಮಾವ "ಸುಬ್ಬಣ್ಣನವರೇ, ಎಲ್ಲೋ ಅಲೆಯುತ್ತಾ ಯಾಕೆ ಇರಬೇಕು. ನಮ್ಮ ಮನೆಯವರ ಹಾಗೆ ಇದ್ದುಬಿಡಿ. ಇಲ್ಲೇನು ಜಾಗಕ್ಕೆ ಕಮ್ಮಿ ಯಿಲ್ಲ. ಮನೆಯವರೆಲ್ಲಾ ಪಳಗಿದಾರೆ ಬನ್ನಿ" ಎಂದರು. ಸುಬ್ಬಣ್ಣ ನವರು ಆಮೇಲೆ ನಾಲ್ಕು ದಿನ ಮನೆಗೇ ಬರಲಿಲ್ಲ. ಕೊನೆಗೆ ನಮ್ಮ ಮಾವ "ಇರಲಿಕ್ಕೆ ಇಷ್ಟವಿಲ್ಲದಿದ್ದರೆ ಬೇಡ, ಬಿಡಿ" ಎಂದು ಹೇಳಿ ಕಳುಹಿಸುವವರೆಗೆ ಅವರಿಗೆ ಆ ಕಡೆ ಬರುವುದಕ್ಕೆ ಹೆದರಿಕೆ. ಯಾಕೆಂದರೆ "ಯಜಮಾನರದು ಹಠ. ಅಮ್ಮನವರೂ ಆ ಕಡೆ ಮಾತಾಡಿದರೆ ನನ್ನ ಕೆಲಸ ಮುಗಿಯಿತು" ಎಂದರು. ಇನ್ನೊಂದು ಸಲ ಲಲಿತೆಯ ಹುಟ್ಟಿದ ಹಬ್ಬದಲ್ಲಿ ಇವರಿಗೆ ಹೆಚ್ಚಿನ ಮರ್ಯಾದೆ ಮಾಡುತ್ತಾರೆ ಎಂತ ತಿಳಿದು ಇವರು ನಾಲ್ಕು ದಿನ ಕಣ್ಮರೆಯಾದರು. ಹುಟ್ಟಿದ ಹಬ್ಬದ ದಿನವೇ ಆಸಾಮಿ ಇಲ್ಲ. ಮೂರು ದಿನದ ಮೇಲೆ ಬಂದರು. ನಮ್ಮ ಮಾವನವರು ಉರಿದುಬಿದ್ದರು. ಸುಬ್ಬಣ್ಣನವರು ಲಕ್ಷ್ಯಮಾಡಲಿಲ್ಲ. ಲಲಿತೆಯ ಮದುವೆಯಲ್ಲೂ ಹಾಗೆಯೇ. ನಮ್ಮ ಮಾವನವರು ಯಾವಾಗ ಅವರಿಗೆ ಮರ್ಯಾದೆ ಮಾಡಬೇಕು ಎನ್ನುವರೋ ಆಗ ಅವರು ತಪ್ಪಿಸಿಕೊಳ್ಳುವರು. ಹೀಗೆ ಏನೂ ಬೇಡದೆ ಇದ್ದ ಮನುಷ್ಯನನ್ನು ನಾನು ಇನ್ನಾರನ್ನೂ ನೋಡಿಲ್ಲ. ಮನೆಯ ಜನರಲ್ಲಿ ಬಹಳ ಪ್ರೀತಿ ಯಿದ್ದರೂ ಅದರಿಂದ ಕಟ್ಟಿಗೆ ಸಿಕ್ಕದಂತೆ ಇರುವುದಕ್ಕೆ ಇವರು ದಿನಾ

ಪ್ರಯತ್ನ ಮಾಡುತ್ತಿರುವರು. ಕೊನೆಗೂ ಇವರು ಹೀಗೆಯೇ ಇದ್ದರು.

ಕೊನೆಗೆ ನಮ್ಮ ಮಾವನವರಿಗೆ ಬೆಂಗಳೂರಿಗೆ ವರ್ಗವಾಯಿತು. ಇದು ತಿಳಿದ ದಿನ ಸುಬ್ಬಣ್ಣನವರ ಮುಖ ಕಂದಿದಹಾಗಿತ್ತು. ನಾನು ಆಗ ಅಲ್ಲೇ ಇದ್ದೆ. ಏನು ಸುಬ್ಬಣ್ಣನವರೇ, ಎಂತ ಕೇಳಿದೆ. ಅವರು "ನೋಡೇಪ್ಪಾ, ಇದಕ್ಕೇ ನಾನು ಇವರನ್ನು ಬೇಡಿದೆ. ಸ್ವಾಮಿ, ಬೇಡ. ನನ್ನ ಮಾಫ್ ಮಾಡಿ. ಈ ಕಷ್ಟಕ್ಕೆ ಸಿಕ್ಕಿಸಬೇಡಿ ಎಂದೆ. ಒಪ್ಪಲಿಲ್ಲ" "ಏನು ಕಷ್ಟ?" "ನಾನು ನಿಮ್ಮನ್ನು ನೋಡದೇ ಇದ್ದರೆ ಈಗ ಹೊರಟುಹೋಗುತ್ತೀರಿ ಎನ್ನುವ ದುಃಖ ಇತ್ತೆ? ಈಗ ನೋಡಿ. ನನ್ನ ಪ್ರಾಣ ತಲ್ಲಣಿಸುತ್ತದೆ. ಇನ್ನು ಈ ರಾತ್ರಿಯೆಲ್ಲಾ ಇದಕ್ಕೆ ಉಪಶಮನ ಮಾಡಿಕೊಳ್ಳಬೇಕು" ಅವರ ಉಪಶಮನ ಎನ್ನುವುದು ದೇವಸ್ಥಾನದಲ್ಲಿ ಕುಳಿತು ದೇವರ ಧ್ಯಾನ ಮಾಡುತ್ತ ಇಲ್ಲಿಯ ಯೋಚನೆಗಳನ್ನು ಮರೆಯುವುದಕ್ಕೆ ಶಕ್ತಿ ಕೊಡೆಂದು ಪ್ರಾರ್ಥಿಸುವುದು. ನಾನು ಆ ದಿನ ಸಾಯಂಕಾಲ ಅವರ ಜತೆಯಲ್ಲಿ ಕುಳಿತೆನು. ಮೆಲ್ಲಮೆಲ್ಲಗೆ ಈ ಮಾತು ಆ ಮಾತು ಎತ್ತಿ ಅವರ ಚರಿತ್ರೆಯನ್ನು ಹೇಳುವ ಹಾಗೆ ಮಾಡಿದೆನು. ಅಲ್ಲಲ್ಲಿ ಒಂದೆರಡು ಕನಿಕರದ ಮಾತನ್ನಾಡಿದೆನು. ಅಲ್ಲಲ್ಲಿ ಒಂದೆರಡು ತತ್ತ್ವದ ಮಾತನ್ನೂ ಹೇಳಿದೆನು. ಎಲ್ಲೋ ಸೂಕ್ಷ್ಮವಾಗಿ ಸ್ವಲ್ಪ ಸ್ವಲ್ಪವಾಗಿ ಅವರು ಮೊದಲಿಂದ ಕೊನೆಯವರೆಗೆ ಎಲ್ಲವನ್ನೂ ಹೇಳಿದರು; "ತುಂಬಿ ಹರಿಯುವ ನದೀಲಿ ನೀರು ಕೆಂಪು; ನೀರು ತಿಳಿಯಾಗಬೇಕಾದರೆ ಹೊಳೆ ಸಣ್ಣದಾಗಬೇಕು" ಎಂದರು. ನಾನು ಅವರಿಗೆ ಹೇಳಿದೆ "ಸ್ವಾಮಿ, ಬಿಟ್ಟು ಪಡುವ ಸುಖ ಸುಖವಲ್ಲ. ಕಟ್ಟಿಕೊಂಡು ಆಮೇಲೆ ಬಿಡಬಹುದು. ಅದರ ಸುಖ ಸುಖ. ಸಂಸಾರ ಮಾಡದೆಯೇ ಇದ್ದಿದ್ದರೆ ನಿಮಗೆ ಇಷ್ಟು ಸಂಸ್ಕಾರ ಹೇಗಾಗುತ್ತಿತ್ತು?"—ಎಂದೆ. ಅವರು ಇಲ್ಲಿಗೆ ಬಂದು ಈ ಸಂಸ್ಕಾರ ಏಕೆ ಆಗಬೇಕು ಎಂದರು. ನಾನು ಏನೂ ಹೇಳಲಾರದೆ ಹೋದೆ. ಬಹಳ ಹೊತ್ತು ಈ ಮಾತು ಆ ಮಾತು ಆಡುತ್ತಿದ್ದೆವು. ಆಮೇಲೆ ನಾನು ಹೊರಟುಬಂದೆ.

ಆ ಮೊದಲು ನಾವು ಹೊರಡುವವರೆಗೂ ಸುಬ್ಬಣ್ಣನವರು ಕಣ್ಣಿಗೆ ಕಾಣಲಿಲ್ಲ. ನಮ್ಮ ಅತ್ತೆಗೆ ದೊಡ್ಡ ಯೋಚನೆ ಹತ್ತಿತು. ಸುಬ್ಬಣ್ಣನವರು ತಮಗೆ ಬೊಂಬಾಯಲ್ಲಿ ಸಾಹುಕಾರನು ಕೊಟ್ಟ ನೂರು ರೂಪಾಯಿ ನೋಟನ್ನು ಮಾವನವರ ಕೈಯಲ್ಲಿ ಕೊಟ್ಟು ಬ್ಯಾಂಕಿನಲ್ಲಿ ಹಾಕಿಸಿದ್ದರು. ತನ್ನ ಕಡೆಯ ದಿನಕ್ಕೆ ಇದು ಉಪಯೋಗಕ್ಕೆ ಬರಬೇಕು

ಎಂಬುದು ಅವರ ಅಭಿಪ್ರಾಯ. ನಮ್ಮ ಮಾವ ಕೊಟ್ಟ ಸಂಬಳವನ್ನು ನಮ್ಮತ್ತೆಯ ಕೈಯಲ್ಲೇ ಕೊಡುತ್ತಾ ಇದ್ದರಷ್ಟೆ. ನಮ್ಮತ್ತೆ ಅದನ್ನು ಖರ್ಚು ಮಾಡಲಿಲ್ಲ. ಇವರಿಗೆ ಉಪಯೋಗವಾದೀತು, ಇರಲಿ, ಹೇಗಿದ್ದರೂ ಊರಿಗೆ ಹೋಗುವ ಮುಂಚೆ ಇರುತ್ತಾರಲ್ಲಾ, ಅವರ ಕೈಯಲ್ಲೇ ಎಲ್ಲವನ್ನೂ ಕೊಡೋಣ ಎಂತ ಇದ್ದರು. ಈಗ ನೋಡಿದರೆ ಸುಬ್ಬಣ್ಣನವರೇ ಮಾಯವಾದರು. ಈ ಪೇಚಾಟವನ್ನು ನನಗೆ ಹೇಳಿದರು. ನಾನು ಮಾವನಿಗೆ ಹೇಳಬೇಕಾಯಿತು. ನಮ್ಮ ಮಾವನವರು ಮೊದಲು ಸ್ವಲ್ಪ ಕೋಪ ಮಾಡಿದರು. ಆಮೇಲೆ ಹೆಂಡತಿಯನ್ನ, ಕುರಿತು "ನ್ಯಾಯ. ನನ್ನದೂ ಹಠ. ಅವರದೂ ಹಠ. ನೀನೇನು ಮಾಡೀಯೆ?" ಎಂದು ಹೇಳಿ ಹಣವನ್ನು ಸುಬ್ಬಣ್ಣನವರ ಲೆಕ್ಕಕ್ಕೆ ಬ್ಯಾಂಕಿನಲ್ಲಿ ಹಾಕಿಸಿ, ವೆಂಕಟರಮಣನನ್ನು ಕರೆದು "ಸುಬ್ಬಣ್ಣನವರಿಗೆ ಇದನ್ನು ತಿಳಿಸು" ಎಂದು ಹೇಳಿದರು. ಸುಬ್ಬಣ್ಣನವರನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹತ್ತು ಜನಕ್ಕೆ ಹೇಳಿ ನಾವೆಲ್ಲಾ ಊರು ಬಿಟ್ಟು ಬೆಂಗಳೂರಿಗೆ ಪ್ರಯಾಣ ಮಾಡಿದೆವು.

ಮೂರು ಮೈಲು ಬಂದ ಮೇಲೆ ಯಾರೋ ಹಿಂದಿನಿಂದ ಓಡಿ ಬರುತ್ತಿದ್ದರು. ಪ್ರಾಣ ಭಯದಿಂದ ಓಡುವವರು ಹಾಗೆ ಓಡಲಾರರು. ನಾವು ನೋಡಿ ಗಾಡಿ ನಿಲ್ಲಿಸಿದೆವು. ಬಂದವರು ಸುಬ್ಬಣ್ಣ. ಬಂದು "ಅಯ್ಯೋ ಈ ಸಂಸಾರದ ಬಂಧನ ನನಗೆ ಬೇಡವೆಂದು ಹೊರಟು ಹೋಗಿದ್ದೆ. ನನ್ನಿಂದಾಗಲಿಲ್ಲ. ಬಂದೇಬಿಟ್ಟೆ. ಲಲಿತಮ್ಮನನ್ನು ನೋಡದ ಹಾಗೆ ಇರೋಕಾಗಲಿಲ್ಲ. ಬಂದೇಬಿಟ್ಟೆ" ಎಂದರು. ನಮ್ಮ ಮಾವ "ಅಯ್ಯೊ, ಹುಚ್ಚು ಬ್ರಾಹ್ಮಣ. ಇದಕ್ಕೇ ಇಷ್ಟು ಕಷ್ಟ? ಹೊರಟು ಹೋಗೋಣೇಕೆ. ಓಡಿಬರೋಣೇಕೆ. ಎಲ್ಲರಂತೆ ಇದ್ದರೆ ಆಗದೆ" ಎಂದು ಹೇಳಿದರು. ಅವರು ತಿಳಿಯದೆ ಹೇಳಿದ ಮಾತಲ್ಲ, ಸುಬ್ಬಣ್ಣನವರು ಎಲ್ಲರಂತೆ ಇರಬಲ್ಲವರಲ್ಲವೆಂಬ ವಿಷಯವು ಅವರಿಗೆ ಗೊತ್ತು, ಆದರೂ ಆ ಸಮಯದಲ್ಲಿ ಹಾಗೆ ಹೇಳಿದರು. ಸುಬ್ಬಣ್ಣನವರು ಲಲಿತಮ್ಮನನ್ನು ಹತ್ತಿರ ಕರೆದು ಆಶೀರ್ವಾದ ಮಾಡಿ ಆಮೇಲೆ ಮಾವನವರಿಗೆ ನಮಸ್ಕಾರ, ನನಗೆ ಆಶೀರ್ವಾದ ಮಾಡಿ ಕಡೆಗೆ ನಮ್ಮತ್ತೆಗೆ ಮಹಾತಾಯಿ ನಮಸ್ಕಾರ ಎಂದು ಹೇಳಿ ಬೇರೆ ಮಾತನಾಡದೆ ಧಡಧಡನೆ ಬಂದ ಹಾಗೆಯೇ ಅವಸರವಾಗಿ ಹೊರಟುಹೋದರು.

ಅವರು ನಾಲ್ಕು ವರ್ಷದ ಮೇಲೆ ಮತ್ತೆ ಬೆಂಗಳೂರಿಗೆ ಬಂದರು. ನಮ್ಮ ಮಗುವನ್ನು ನೋಡಿ ಸಂತೋಷಪಟ್ಟರು. "ನಿಮ್ಮನ್ನೆಲ್ಲಾ

ಬಿಟ್ಟು ಹೋಗೋಕೆ ಮನಸ್ಸು ಬರುತ್ತೋ ಇಲ್ಲವೋ ಎನ್ನುವ ಭಯ ದಿಂದ ಆ ದಿನ ಹಾಗೆ ಓಡಿಹೋದೆ ನೋಡಿ, ಪ್ರಾಣ ಗಾಡಿಹತ್ತಿರ ನಿಂತು ಬಿಟ್ಟಿತು. ಊರಿಗೆ ಹಿಂದಕ್ಕೆ ಹೋದದ್ದು ಬರೀ ಒಂದು ಹೆಣ, ನೋಡಿ'' ಎಂದರು. ನಾವೆಲ್ಲ ಅವರನ್ನು ಆದಷ್ಟು ಆದರದಿಂದ ಕಂಡೆವು. ಅವರು ಆ ದಿನ ಇದ್ದು ಮಾರನೆಯ ದಿನ ಹೊರಟುಹೋದರು. ಹಿಂದಕ್ಕೆ ಹೋಗಬೇಕಾದರೆ ತೊರೆಯುಪುರದಲ್ಲಿ ಪಟ್ಟ ಹಿಂಸೆಯ ಚಿಹ್ನೆ ಯಾವು ದನ್ನೂ ತೋರಿಸಲಿಲ್ಲ. ಆಗ್ಗೆ ಈಗ್ಗೆ ಅವರ ಮನಸ್ಸು ಇನ್ನೂ ಪರಿಪಕ್ವ ವಾಗಿತ್ತು. ನೋಡಬೇಕೆಂದು ತೋರಿತು, ಬಂದರು. ಅದು ತಪ್ಪು ಎಂದು ಯೋಚಿಸಲಿಲ್ಲ. ನೋಡಿಯಾಯಿತು, ಹೊರಟರು. ಹೊರಡು ವುದಕ್ಕೆ ಖೇದವಿಲ್ಲ. ನಾವೆಲ್ಲ ಇವರನ್ನು ''ಇಲ್ಲೇ ಇದ್ದುಬಿಡಿ. ಕೊಂಚ ದಿನ ಇರಿ. ನಾಳೆ ಮಾತ್ರ ಇರಿ'' ಎಂದು ಬೇಡಿದೆವು. ಕೇಳಲಿಲ್ಲ; ಹೊರಟುಹೋದರು.

ಊರಿಗೆ ಹೋಗುವ ದಿನ ಬೆಳಿಗ್ಗೆ ಸುಬ್ಬಣ್ಣನವರು ಇದ್ದಕ್ಕಿದ್ದ ಹಾಗೆ ''ಏನು ಸ್ವಾಮಿ ಅವನೂ ಮರೆತುಬಿಟ್ಟಾಂತ ಕಾಣುತ್ತೆ ನನ್ನ'' ಎಂದರು. ನಾನು ''ಯಾರು?'' ಎಂದೆ. ಸುಬ್ಬಣ್ಣನವರು ''ಯಮ ಧರ್ಮರಾಯ. ಅವನೂ ಮರೆತುಬಿಟ್ಟಿದ್ದಾನೆ'' ಎಂದರು. ನನಗೆ ಏನು ಹೇಳುವುದಕ್ಕೂ ತೋರಲಿಲ್ಲ. ನಮ್ಮ ಮಾವ ''ಏನೂ ಭಯಪಡಬೇಡಿ ಸುಬ್ಬಣ್ಣನವರೆ, ಅವನು ಮರೆಯುಗಿರಿಯೋದಿಲ್ಲ ಹೆದರಬೇಡಿ'' ಎಂದರು. ಸುಬ್ಬಣ್ಣನವರಿಗೆ ಬಾಳು ಸಾಕಾಗಿತ್ತು. ಅದು ಬೇಸರವಲ್ಲ; ಸಾಕಾಯಿ ತೆಂಬ ಭಾವನೆ ಮಾತ್ರ. ಬಡುಗಡೆಯೂ ಬೇಗನೆ ಬಂತು. ಅವರು ಊರಿಗೆ ಹೋದ ಒಂದು ವಾರದಲ್ಲಿ ನಮಗೆ ವೆಂಕಟರಮಣ ಒಂದು ಕಾಗದ ಬರೆದ. ಮೂರು ದಿನಗಳ ಹಿಂದೆ ಸುಬ್ಬಣ್ಣನವರು ದೇವಸ್ಥಾನ ದಿಂದ ಐವತ್ತು ಗಜ ದೂರದಲ್ಲಿ ಒಂದು ಮರದ ಕೆಳಗೆ ಕುಳಿತು ಕೈ ಜೋಡಿಸಿಕೊಂಡಿದ್ದ ಹಾಗೆಯೇ ಪ್ರಾಣ ಬಿಟ್ಟಿದ್ದರೆಂದು ಬರೆದಿದ್ದನು. ಊರಿನ ಬ್ರಾಹ್ಮಣರು ಉತ್ತರ ಕ್ರಿಯೆಗಳನ್ನು ನಡೆಯಿಸಿದರಂತೆ. ''ಬ್ಯಾಂಕಿನಲ್ಲಿದ್ದ ಹಣದಲ್ಲಿ ಇನ್ನೂ ಇನ್ನೂರು ರೂಪಾಯಿ ಮೇಲೆ ಉಳಿದಿದೆ. ಅದರಿಂದ ವರ್ಷ ವರ್ಷವೂ ದೇವಸ್ಥಾನದಲ್ಲಿ ಒಂದು ದಿನ ಸಂತರ್ಪಣೆ ನಡೆಯುವ ಹಾಗೆ ಏರ್ಪಾಡು ಮಾಡುತ್ತೇನೆ. ಅವರು ಹಾಗೆ ಇಷ್ಟಪಟ್ಟಿದ್ದರು'' ಎಂದೂ ಅವನು ಬರೆದಿದ್ದನು. ನಾವೆಲ್ಲ ಆ ದಿನ ನೆಂಟರಿಗೆ ಹೇಗೋ ಹಾಗೆ ನಡೆದುಕೊಂಡೆವು.

ಹೀಗೆ ಸುಬ್ಬಣ್ಣನವರು ಈ ಜೀವನದ ನಾಟಕವನ್ನು ಮುಗಿಸಿ ಮುಕ್ತಿಯನ್ನು ಹೊಂದಿದರು.

೧೨

ಮುಕ್ತಿಯೆನ್ನುವುದು ಇದ್ದರೆ ಸುಬ್ಬಣ್ಣನವರು ಅದನ್ನು ಪಡೆದಿದಾರೆ ಎನ್ನುವುದರಲ್ಲಿ ನನ್ನ ಮನಸ್ಸಿಗೆ ಯಾವ ಸಂದೇಹವೂ ಇಲ್ಲ.

ನಾನು ಅವರನ್ನು ಒಂದು ಸಲ ಸಂಗೀತದಲ್ಲಿ ಒಂದೊಂದು ಮಟ್ಟಕ್ಕೆ ಏಳೇಳು ಸ್ವರಾನೇ ಏತಕ್ಕೆ ಸುಬ್ಬಣ್ಣನವರೇ ಎಂದೆ. ಅವರು ನಾವು ಏಳು ಎಂತ ಇಟ್ಟುಕೊಂಡರೆ ಏಳು, ನೋಡಲಿಕ್ಕೆ ಹೋದರೆ, ಇಲ್ಲ ನೂರು ಕೋಟಿ ಸ್ವರ, ಇಲ್ಲ ಒಂದು ಸ್ವರ, ಎಂದರು. ಅವರು ಪಿಟೀಲು ಬಾರಿಸುವುದನ್ನು ಕೇಳಿದಾಗ ಇದರ ಅರ್ಥ ಏನೋ ಒಂದು ವಿಧವಾಗಿ ಸ್ವಲ್ಪ ಮಟ್ಟಿಗೆ ತಿಳಿಯುತ್ತಿತ್ತು. ಇನ್ನೊಂದು ಸಲ ನಾನು ಸುಬ್ಬಣ್ಣನವರೇ, ಅದ್ವೈತ ಒಳ್ಳೇದೋ ದ್ವೈತ ಒಳ್ಳೇದೋ ಎಂತ ಕೇಳಿದೆ. ಅವರು, ನನ್ನ ಪಾಡು ನೋಡಿದರೆ, ಅದ್ವೈತ ಒಳ್ಳೇದು ಎನ್ನುವ ಹಾಗೆ ಇದೆ. ಅವರ ಪಾಡು ನೋಡಿದರೆ ದ್ವೈತ ಒಳ್ಳೇದು ಎನ್ನುವ ಹಾಗೆ ಇದೆ ಎಂದರು. ನಾನು ಸುಮ್ಮನಿದ್ದೆ. ಅವರು ಮಾತಾಡುವ ರೀತಿಯೇ ಹೀಗೆ. ಒಂದು ಕ್ಷಣದಲ್ಲಿ ಅವರು ಯಾರು ಎನ್ನುವುದೂ, ಅವರ ಪಾಡು ಎನ್ನುವುದು ಯಾವುದು ಈ ಅಭಿಪ್ರಾಯದ ಕಾರಣವೇನು ಎನ್ನುವುದೂ ಹೊರಕ್ಕೆ ಬರುವುವೆಂದು ನಾನು ಬಲ್ಲೆ. ಸ್ವಲ್ಪ ಹೊತ್ತಿನ ಮೇಲೆ ಅವರು ಹೇಳಿದರು—''ಹೋಗಬೇಕಾದರೆ ನೋಡಿ'' ಆಕೆ ಹೇಳಿದರು, ''ಇಷ್ಟು ದಿನ ನಿಮ್ಮ ನೆರಳಲ್ಲಿದ್ದುಕೊಂಡು ದಿನಾ ಗೌರೀಪೂಜೆ ಮಾಡಿದೆ. ಈಗ ಅವಳೇ ಹತ್ತಿರಕ್ಕೆ ಕರೆದು ಕೊಳ್ಳುತ್ತಾ ಇದ್ದಾಳೆ; ನಿಮ್ಮನ್ನೊಂಟಿಯಾಗಿ ಬಿಡುವುದೊಂದೇ ದುಃಖ; ಹೊಟ್ಟೇಲಿ ಹುಟ್ಟಿದ ಮಕ್ಕಳೂ ಇಲ್ಲವಾದವು; ಆದರೇನು? ಕರ್ಮ ಸವೆದಾಗ್ಗೆ ನೀವೂ ಅಲ್ಲಿಗೆ ಬರುತ್ತೀರಲ್ಲ, ಅಲ್ಲೇ ಇರುತ್ತೇನೆ. ಇಬ್ಬರೂ ಜತೆಯಾಗಿ ದೇವೀ ಸೇವೇಲಿ ನಿಂತುಬಿಡೋಣ ಎಂದರು. ಅವರ ನಂಬಿಕೆ ಅವರ ಜೀವನ ನೋಡಿದರೆ ದ್ವೈತವಾಗೇ ಇರಲಿ ಎನ್ನಿಸುತ್ತೆ. ನನ್ನ ಬದುಕು ನೋಡಿದರೆ ಈ ಆಟ ಎಷ್ಟು ಬೇಗನೆ ಮುಗಿದರೆ ಅಷ್ಟು ಒಳ್ಳೆಯದು. ಇದಾದಮೇಲೆ ಅದ್ವೈತವಾಗಿದ್ದು ಬಿಡೋದು ಎನ್ನಿಸುತ್ತದೆ.''

ಇನ್ನೊಂದು ಸಲ ನಾನು ''ಸುಬ್ಬಣ್ಣನವರೇ ಶಿವ ಹೆಚ್ಚೋ, ವಿಷ್ಣು ಹೆಚ್ಚೋ?'' ಎಂದೆ. ಸುಬ್ಬಣ್ಣನವರು ಏನನ್ನೂ ಹೇಳಲಿಲ್ಲ. ನಾನು ಆ ಮಾತನ್ನು ಅವರು ಕಿವಿಯಲ್ಲಿ ಹಾಕಿಕೊಳ್ಳಲಿಲ್ಲವೆಂದಿದ್ದೆ.

ಕಾಲುಗಂಟೆ ಬಿಟ್ಟು ಪಿಟೀಲನ್ನು ಎತ್ತಿ ಶಂಕರಾಭರಣವನ್ನು ಒಂದು ಗಂಟೆ ಹೊತ್ತು ಆನಂದವಾಗಿ ಬಾರಿಸಿದರು. ಹಿಂದಿನ ದಿನ ಭೈರವಿಯನ್ನು ಹೀಗೆಯೇ ಬಾರಿಸಿದ್ದರು. ಇವರು ಶಂಕರಾಭರಣವನ್ನು ಬಾರಿಸಿದ ಸೊಗಸಿನಲ್ಲಿ ನನಗೆ ಹಿಂದೆ ಆಡುತ್ತಿದ್ದ ಮಾತು ಮರೆತು ಹೋಗಿತ್ತು. ಏನು ರಾಗ ಇದು ಸುಬ್ಬಣ್ಣನವರೇ, ಏನು ಆಲಾಪನೆ, ಏನು ಸೊಗಸು! ಎಂದೆ. ಅವರು "ನಿನ್ನೇ ಭೈರವೀ ಹೇಗಿತ್ತು" ಎಂದರು. ನಾನು ಅದೂ ಭೇಷ್ ಇತ್ತು ಎಂದೆ. ಸುಬ್ಬಣ್ಣನವರು "ಭೈರವೀ ಹೆಚ್ಚೊ, ಶಂಕರಾಭರಣ ಹೆಚ್ಚೋ" ಎಂದರು. ನಾನು ಕೇಳಿದ ಪ್ರಶ್ನೆಗೆ ಅವರು ಉತ್ತರ ಕೊಟ್ಟದ್ದು ಹೀಗೆ.

ಸುಬ್ಬಣ್ಣನವರಿಗೆ ಗಾನದ ಮೂಲಕ ಸರ್ವ ತತ್ತ್ವವೂ ತಿಳಿದು ಹೋಗಿತ್ತು. ಇಂಥಾ ತಿಳಿವು ಇಂಥಾ ಸಾಧನ. ಈ ತಿಳಿವು ಈ ಸಾಧನದಿಂದ ಇಲ್ಲೂ ಇನ್ನುಮೇಲೂ ಯಾವ ಅವಸ್ಥೆ ಬರಬಹುದೋ ಅದು ಮುಕ್ತಿಯಲ್ಲದಿದ್ದರೆ ಮುಕ್ತಿಯೆನ್ನುವುದು ಇನ್ನು ಬೇರೆ ಯಾವುದು ?

— ಸಂಪೂರ್ಣ —

231—28. ಬೆಂಗಳೂರು ಪ್ರೆಸ್.

ಲಿಂಗ

ಅಥವಾ

(ಯಾರೂ ಅರಿಯದ ವೀರ.)

೧

ಆಷಾಢಮಾಸ. ಸುಮಾರು ರಾತ್ರಿ ಎಂಟುಗಂಟೆ ಸಮಯ. ಕಗ್ಗತ್ತಲು ಕಣ್ಣುತಿವಿಯುವಂತಿತ್ತು. ಜಡಿಮಳೆಯು ಜಿರ‍್ರೆಂದು ಕರೆಕರೆ ಹುಟ್ಟಿಸುತ್ತಿತ್ತು. ಸುಬ್ಬಣ್ಣಗೌಡರು ಜಗಲಿಯಲ್ಲಿ ಒಂದು ಜಮಖಾನದಮೇಲೆ ಕುಳಿತು ಲ್ಯಾಂಪಿನ ಬೆಳಕಿನಲ್ಲಿ ಮನೆಯ ಲೆಕ್ಕಪತ್ರ ನೋಡುತ್ತಿದ್ದರು.

ಲಿಂಗ ಹೊರಗಿನಿಂದ ಕೈಲೊಂದು ಲಾಟೀನು ಹಿಡಿದುಕೊಂಡು ಬಂದು "ಅಯ್ಯಾ, ಹೊಳೇ ನೀರು ಏಳನೇ ಮೆಟ್ಟಲಿಗೇರಿದೆ" ಎಂದ.

ಸುಬ್ಬಣ್ಣಗೌಡರು ಗಾಬರಿಯಿಂದ ತಟಕ್ಕನೆ ಎದ್ದು "ಎಲ್ಲಿ, ನೋಡೋಣ ಬಾ" ಎಂದು ಕಂಬಳಿಕೊಪ್ಪೆ ಹಾಕಿಕೊಂಡು ಹೊರಟರು.

ಇಬ್ಬರೂ ಹೊರಗೆಹೋಗಿ ಐದಾರು ಮೆಟ್ಟಲು ಇಳಿದು ನಿಂತರು. ನೊರೆ ಯೆದ್ದ ಕೆಂಬಣ್ಣದ ಹೊಳೆಯ ತೆರೆಗಳು ಅವರ ಕಾಲಿಗೆ ಬಂದು ಬಡಿಯುತ್ತಿದ್ದುವು. ತುಂಗಾನದಿಯ ಪ್ರವಾಹವು ಉಕ್ಕಿಯುಕ್ಕಿ ನೊರೆನೊರೆಯಾಗಿ ಭೋರೆಂದು ಹರಿಯು ತ್ತಿತ್ತು. ಲಾಟೀನಿನ ಬೆಳಕಿನಲ್ಲಿ ಅಲೆಗಳು ಪಳಪಳ ಮಿಂಚುತ್ತಿದ್ದುವು. ಮಳೆಯು ನಿರಂತರವಾಗಿ ಸುರಿಯುತ್ತಲೇ ಇತ್ತು. ಅವರು ಅಲ್ಲಿ ನಿಂತಹಾಗೆಯೇ ಆರನೆ ಮೆಟ್ಟ ಲಿಗೆ ನೀರೇರಿ ಮುಚ್ಚಿತು. ಐದನೆ ಮೆಟ್ಟಲಿಗೆ ಹತ್ತಿನಿಂತರು.

ಸುಬ್ಬಣ್ಣಗೌಡರು ಲಿಂಗನಕಡೆ ತಿರುಗಿ "ನಿನ್ನೆ ಎಲ್ಲಿಯವರೆಗೆ ಏರಿತ್ತೋ ನೀರು ?" ಎಂದರು.

"ನಿನ್ನೆ ಇಷ್ಟು ನೀರು ಬಂದಿರಲಿಲ್ಲ. ಎಂಟನೆ ಮೆಟ್ಟಲಲ್ಲಿಯೇ ಇತ್ತು. ಆದರೂ ನಿನ್ನೆ ಕೆರೆಹಳ್ಳಿಯೆಲ್ಲಾ ಕೊಚ್ಚಿಕೊಂಡು ಹೋಯಿತಂತೆ. ಕೆಳಮನೆ ರಂಗಪ್ಪ ಗೌಡರ ಮಗ ರಾಮು ಸಿಕ್ಕಲೇ ಇಲ್ಲವಂತೆ. ಬಹಳ ಅನಾಹುತ ಆಯಿತಂತೆ."

ಗೌಡರ ಮುಖವು ಭಯದ ಚಿಹ್ನೆತೋರಿ ಗಂಭೀರವಾಯಿತು. "ಇಂದು ಮೇಲ್ಮಳೆ ಹೇಗಿದೆಯಂತೆ ? ನಿನಗೇನಾದರೂ ಗೊತ್ತೇ ?" ಎಂದು ಕೇಳಿ ಕಗ್ಗತ್ತಲಿನ ಕಡೆ ಕುರುಡಾಗಿ ನಿಟ್ಟಿಸುತ್ತಾ ನಿಂತರು.

"ಮೇಲ್ಮಳೆ ಬಹಳ ಜೋರಾಗಿದೆಯಂತೆ. ಶೃಂಗೇರಿ ಆಕಡೆಯಂತೂ, ಒಂದು ನಿಮಿಷಬಿಡದೆ ಹೊಡೆಯುತ್ತಿದೆಯಂತೆ." ಎಂದು ಹೇಳಿ, ಲಿಂಗ ಲಾಟೀನಿನ ಬೆಳಕಿನಲ್ಲಿ ಕೆಳಗೆ ನೋಡಿ "ಅಯ್ಯೊ, ಇಲ್ಲಿ ನೋಡಿ! ನೀರು ಐದನೆ ಮೆಟ್ಟಲಿಗೇರುತ್ತಾ ಇದೆ" ಎಂದ. ಗೌಡರು ಕೆಳಗೆ ನೋಡಿ, ಎದೆನಡುಗಿ, ಮುಖ ಕಪ್ಪಗಾಗಿ, ಸ್ವಲ್ಪ ಪೆಚ್ಚಾದರು.

ಇಬ್ಬರೂ ಹಿಂತಿರುಗಿ ಮನೆಯೊಳಗೆ ಹೋದರು. ಗೌಡರು ಕಂಬಳಿ ತೆಗೆದುಹಾಕಿ, ಬಿಸಿನೀರಿನಲ್ಲಿ ಕಾಲುತೊಳೆದುಕೊಂಡು, ಜಮಖಾನದ ಮೇಲೆ ಕುಳಿತು, ಕೈಗಳನ್ನು ಹಿಂದಕ್ಕೆ ಹಾಕಿ, ಅವುಗಳ ಮೇಲೆ ಒರಗಿಕೊಂಡು ಆಲೋಚನಾಪರರಾದರು. ಲಿಂಗ ಲಾಟೀನಿನ ದೀಪ ಸಣ್ಣಗೆಮಾಡಿ, ಕಂಬಳಿ ಕೊಡವಿ, ಗಳುವಿನ ಮೇಲೆ ಹರಡಿ, ಅಡಿಗೆಮನೆಯೊಳಗೆ ಹೋದ.

ಸುಬ್ಬಣ್ಣಗೌಡರ ಹೆಂಡತಿ ನಾಗಮ್ಮ "ಅದೇನು ಲಿಂಗ? ಲಾಟೀನನ್ನು ತೆಗೆದುಕೊಂಡು ಹೊರಗೆ ಹೋಗಿದ್ದರಲ್ಲಾ. ಹೊಳೆ ಬಹಳ ಬಂದಿದೆಯೇನು?" ಎಂದರು. ಸುಬ್ಬಣ್ಣಗೌಡರ ಹನ್ನೆರಡುವರ್ಷದ ಮಗ ತಿಮ್ಮು, ಎಂಟು ವರ್ಷದ ಮಗಳು ಸೀತೆ, ಇಬ್ಬರೂ ಊಟಕ್ಕೆ ಕುಳಿತಿದ್ದರು. ಹೊಳೆ ಏರುವ ಮಾತು ಕೇಳಿ, ಉಣ್ಣುವುದನ್ನು ಬಿಟ್ಟು, ಕಳೆದಬಾಯಿ ಮುಚ್ಚದೆ, ತೆರೆದರೆಪ್ಪೆ ಹಾಕದೆ, ಇಟ್ಟಕೈ ತೆಗೆಯದೆ ನಾಗಮ್ಮ, ಲಿಂಗ, ಇವರ ಸಂಭಾಷಣೆ ಕೇಳುತ್ತಾ ಕುಳಿತರು.

"ಹೌದಮ್ಮಾ, ಹೊಳೆ ಯದ್ವಾತದ್ವಾ ಏರುತ್ತಾ ಇದೆ. ಅದರಲ್ಲಿಯೂ ಮೇಲ್ಮಳೆ ವಿಪರೀತವಂತೆ. ನಿನ್ನೆಯೇ ಕೆರೆಹಳ್ಳಿಯೆಲ್ಲಾ ತೇಲಿಹೋಯಿತಂತೆ. ಪಾಪ! ಆ ಕೆಳಮನೆ ರಂಗಪ್ಪಗೌಡರ ರಾಮು ಇನ್ನೂ ಸಿಕ್ಕಿಲ್ಲವಂತೆ!"

ನಾಗಮ್ಮ ಊಟಕ್ಕೆಕುಳಿತ ಮಕ್ಕಳಕಡೆ ನೋಡಿದರು. ಏಕೆ ನೋಡಿದರೋ ಯಾರಿಗೆಗೊತ್ತು? ಅವರು ಉಣ್ಣದೆ ಕುಳಿತಿದ್ದುದನ್ನು ನೋಡಿ, ತಾವೇಹೋಗಿ ಅವರಹತ್ತಿರ ಕುಳಿತುಕೊಂಡು ಉಣ್ಣಿಸತೊಡಗಿಸಿದರು.

ಸೀತೆ ತುತ್ತುತಿನ್ನುತ್ತಾ "ಅಮ್ಮಾ, ರಾಮು ಏನಾದ?" ಎಂದಳು.

ನಾಗಮ್ಮ "ಏನೂ ಆಗಲಿಲ್ಲ. ನೀ ಉಣ್ಣು ಸುಮ್ಮನೆ" ಎಂದರು.

ತಿಮ್ಮು "ಏನಮ್ಮಾ ಅದು ಲಿಂಗಹೇಳಿದ್ದು?" ಎಂದ.

ನಾಗಮ್ಮ "ಏನಿಲ್ಲ ಮಗೂ, ಹೊಳೆಯಲ್ಲಿ ನೀರು ಏರುತ್ತಿದೆಯಂತೆ, ಅಷ್ಟೇ. ನೀನು ಊಟಮಾಡು." ಎಂದವರು ಲಿಂಗನಕಡೆ ನೋಡಿ "ಅಷ್ಟೇ! ಅಲ್ಲವೇನೋ ಲಿಂಗ?" ಎಂದರು.

ಲಿಂಗ ತಲೆದೂಗಿ ಸಮ್ಮತಿಸಿ "ಅಷ್ಟೇ! ಇನ್ನೇನು! ನೀವು ಉಣ್ಣಿ ತಿಮ್ಮಯ್ಯ" ಎಂದ.

ಸುಬ್ಬಣ್ಣಗೌಡರು ಜಗಲಿಯಿಂದ "ಲಿಂಗಾ!" ಎಂದು ಕರೆದರು. ಲಿಂಗನಿಗೆ ಕಿವಿ ಕೊಂಚ ಮಂದ; ಕೇಳಿಸಲಿಲ್ಲ. ಮತ್ತೆ ಕರೆದರು. ಆಗ ನಾಗಮ್ಮ "ಏ! ಲಿಂಗ, ಹೊರಗೆ ಕರೆಯುತ್ತಾರೋ! ಹೋಗೊ!" ಎಂದರು. ಲಿಂಗ ತಟಕ್ಕನೆ ಎದ್ದು ತನ್ನ ಜೊಟ್ಟಕಾಲು ಓರೆಯಾಗಿ ಹಾಕುತ್ತಾ ಹೋದ. ಪಾಪ! ಅವನ ಬಲಗಾಲು ಎಡಗಾಲಿಗಿಂತ ತುಸು ಮೋಟ ಮತ್ತು ಸಣ್ಣ.

ಲಿಂಗ ಜಗಲಿಗೆ ಹೋಗಿ "ಯಾಕಯ್ಯ ಕರೆದಿದ್ದು?" ಎಂದು ಕೇಳಿದ.

ಗೌಡರು "ಹೋಗಿ ನೋಡಿಕೊಂಡುಬಾ ನೀರು ಈಗೆಷ್ಟು ಏರಿದೆ" ಎಂದರು.

ಲಿಂಗ ಲಾಟೀನಿನ ಬತ್ತಿ ಏರಿಸಿ, ದೀಪ ದೊಡ್ಡದುಮಾಡಿ, ಕಂಬಳಿ ಕೊಪ್ಪೆ ಹಾಕಿಕೊಂಡು ಹೊಳೆಯಕಡೆ ಹೋದ. ಅವನು ಹೋದ ಸ್ವಲ್ಪಹೊತ್ತಿನಲ್ಲಿಯೇ ಗೌಡರು "ನಾಗಾ!" ಎಂದು ಕೂಗಿದರು. ಎಂಟುವರ್ಷದ ಹುಡುಗನೊಬ್ಬನು ಮುರಬೇಯಿಸುವ ಒಲೆಯ ಕಡೆಯಿಂದ ಓಡಿಬಂದು, ಮುಂಡಿಗೆಯ ಮರೆಯಲ್ಲಿ ನಿಂತು "ಏನ್ರಯ್ಯಾ?" ಎಂದ.

ಗೌಡರು "ದನ ಎಲ್ಲಾ ಕಟ್ಟಿದ್ದೀರೇನೊ?" ಎಂದರು.

"ಹೌದ್ರಯ್ಯಾ, ಎಲ್ಲಾ ಕಟ್ಟಿದ್ದೇನೆ. ತುಂಗೆದನ ಪುಟ್ಟಗುಡ್ಡ ಎರಡು ಮಾತ್ರ ಕೊಟ್ಟಿಗೆಗೆ ಬರಲೇ ಇಲ್ಲ."

"ಹೋಗಲಿ ಬಿಡು!" ಎಂದು ಗೌಡರು ದಿಂಬಿನಮೇಲೆ ಒರಗಿಕೊಂಡರು. ನಾಗ ಮೆಲ್ಲಗೆ ಚಳಿಕಾಯಿಸಲು ಮುರಿನ ಒಲೆಗೆ ಜಾರಿದ. ಅಷ್ಟುಹೊತ್ತಿಗೆ ಹೊಳೆಗೆ ಹೋಗಿದ್ದ ಲಿಂಗ ಬಂದ. ಗೌಡರು "ನೀರೇರಿದೆಯೇನೊ?" ಎಂದು ಕೇಳಿದರು.

ಲಿಂಗ ಲಾಟೀನು ಕೆಳಗಿರಿಸಿ, ಕಂಬಳಿ ಕೊಡುವುತ್ತಾ "ನಾಲ್ಕನೆ ಮೆಟ್ಟಲಿಗೆ ಮುಟ್ಟಮುಟ್ಟ ಬಂದಿದೆ" ಎಂದ.

"ಹಾಗಾದರೆ ಕೊಟ್ಟಿಗೆಗೆ ಹೋಗಿ ದನಗಳ ಕೊರಳಕಣ್ಣಿ ಎಲ್ಲಾ ಬಿಚ್ಚಿ ಬಾ" ಎಂದು ಗೌಡರು ಚಿಂತಿಸುತ್ತಾ ಕೂತರು.

ಲಿಂಗ ತನ್ನ ಮಗ ನಾಗನನ್ನೂ ಕರೆದುಕೊಂಡು ಕೊಟ್ಟಿಗೆಗೆ ಹೋದ. ಅಷ್ಟು ಹೊತ್ತಿಗೆ ನಾಗಮ್ಮ ನೀರುತಂದಿಟ್ಟು "ಬಳ್ಳಿ ಹಾಕಿದೆ" ಎಂದರು. ಸುಬ್ಬಣ್ಣ ಗೌಡರು ಎದ್ದು ತಂಬಿಗೆ ತೆಗೆದುಕೊಂಡು ಬಾಯಿಮುಕ್ಕಳಿಸಿ ಊಟಕ್ಕೆ ಹೋದರು. ತಿಮ್ಮ, ಸೀತೆ ಇಬ್ಬರೂ ಹೊರಗೆ ಬಂದು ಜಗಲಿಮೇಲಿನ ಲ್ಯಾಂಪಿನ ಬೆಳಕಿನಲ್ಲಿ ಮಕ್ಕಳ

ಹರಟೆ ಹೊಡೆಯುತ್ತಿದ್ದರು. ತುಸು ಹೊತ್ತಿನಲ್ಲಿ ಲಿಂಗನೂ, ಅವನಮಗ ನಾಗನೂ ಕೊಟ್ಟಿಗೆಯಿಂದ ಬಂದು, ಕಾಲು ತೊಳೆದುಕೊಂಡು ಜಗಲಿಯ ಕೆಸರಲಿಗೆಯಮೇಲೆ ಕೂತರು. ಲಿಂಗ, ನಾಗ ಇವರೊಡನೆ ತಿಮ್ಮು, ಸೀತೆ ಇಬ್ಬರಿಗೂ ತುಂಬಾ ಸಲಿಗೆ.

ತಿಮ್ಮು "ಲಿಂಗ, ಹೊಳೆ ಪೂರಾ ಏರಿದೆಯೇನೊ ?" ಎಂದು ಕೇಳಿದ.

ಲಿಂಗ "ಇಲ್ಲಯ್ಯಾ, ಯಾವಾಗಲೂ ಏರುವಂತೆ" ಎಂದ.

ಲಿಂಗನಹತ್ತಿರ ಕುಳಿತಿದ್ದ ಸೀತೆ ಇವರ ಸಂಭಾಷಣೆಗೆ ಗಮನ ಕೊಡಲೇಇಲ್ಲ. ಅವಳ ಮನಸ್ಸು ಇನ್ನೇತರಮೇಲೋ ಹೋಗಿತ್ತು. ಒಂದುಸಲ ಲಿಂಗನ ಕಾಲುಗಂಟುಗಳ ಕಡೆ ನೋಡುತ್ತಿದ್ದಳು; ಒಂದುಸಲ ಕೈಗಂಟುಗಳ ಕಡೆ ನೋಡುತ್ತಿದ್ದಳು. ಆಕೆಗೆ ಬಹಳ ಸೋಜಿಗವಾಯಿತು.

ಕಡೆಗೆ ನಾಚಿಗೆಗಿಂತ ಕುತೂಹಲ ಹೆಚ್ಚಾಗಲು "ಲಿಂಗ, ಇದೇನು ಕಲೆಗಳೋ, ನಿನ್ನ ಕಾಲ್ಗಂಟಿನಲ್ಲಿ, ಕೈಗಂಟಿನಲ್ಲಿ" ಎಂದು ಕೇಳಿದಳು.

ಲಿಂಗನಮುಖ ಇದ್ದಕ್ಕಿದ್ದಹಾಗೆ ಬಾಡಿತು. ಬಾಯಿಂದ ಮಾತೇ ಹೊರಡಲಿಲ್ಲ. ಕಣ್ಣಿನಲ್ಲಿ ನೀರೂ ತುಂಬಿತು. ಮರುಕೊಳಿಸಿದ ಹಿಂದಿನ ದುಃಖ ತಡೆದುಕೊಂಡು ದೈನ್ಯದಿಂದ "ಅದೆಲ್ಲಾ ಕಟ್ಕೊಂಡು ನಿಮಗೇಕೆ ಸೀತಮ್ಮಾ !" ಎಂದ.

ತಿಮ್ಮುಗೆ ಲಿಂಗನ ಆಸ್ಥಿತಿ ನೋಡಿ ಕನಿಕರದೊಂದಿಗೆ ಆಶ್ಚರಿಯೂ ಆಯಿತು. ಸೀತೆಗೆ ಬದಲಾಗಿ ಅವನೇ "ಲಿಂಗ, ಸಂಕೋಚವೇಕೊ, ನಮ್ಮೊಡನೆ ಹೇಳಬಾರದೇ ?" ಎಂದ.

"ಹೇಳದೆ ಏನು ತಿಮ್ಮಯ್ಯ ನಿಮ್ಮೊಡನೆ? ಇವು ಜೈಲಿನಲ್ಲಿ ಸಂಕೋಲೆ ಹಾಕಿದ್ದ ಗುರುತು."

ಲಿಂಗನಂಥ ಮುಗ್ಧನಿಗೆ ಜೈಲಾದುದನ್ನು ಕೇಳಿ ತಿಮ್ಮುವಿನ ಹೂವಿನಂಥ ಎದೆಗೆ ಸಿಡಿಲು ಬಡಿದಂತಾಗಿ "ಏನು? ನಿನಗೂ ಜೈಲೆ? ಯಾವ ಪುಣ್ಯಾತ್ಮನಪ್ಪಾ ನಿನಗೂ ಜೈಲುಮಾಡಿದವನು." ಎಂದು ಕೇಳಿದ.

"ನಾನು ಮೊದಲು, ಮಾವಿನಹಳ್ಳಿ ರಂಗೇನಾಯ್ಕರ ಮನೇಲಿದ್ದೆ, ಕೆಲಸಕ್ಕೆ. ಅಲ್ಲೆ ಐದಾರು ವರ್ಷ ಜೀತಮಾಡಿದೆ. ತಿಮ್ಮಯ್ಯ, ಏನು ಮಾಡೋದು. ಯಾರ್ಯಾರ ಜೊತೆಯಲ್ಲೋ ಸೇರಿಕೊಂಡು ಕಳ್ಳು ಕುಡಿಯೋದ ಕಲಿತೆ. ಒಂದು ದಿನ ಬೈಗಿನ ಹೊತ್ತು; ಕಳ್ಳುಕುಡಿದೆ, ತಲೆಗೇರಿತು. ಕಳ್ಳಿನವನು ಏನು ಸೇರಿಸಿದ್ದನೋ ಅದಕ್ಕೆ, ಅಮಲುಬರಲಿ ಅಂತ. ದಾರೀಲಿ ಬರ್ತಾ ಇದ್ದೆ. ರಂಗೇನಾಯ್ಕರಮಗ ಶೇಷೇನಾಯ್ಕ, ಅಂತ ಇದಾರೆ. ಅವರಿಗೂ ಕುಡಿದು ತಲೆಗೆ ಅಮಲೇರಿತ್ತು. ಎಲ್ಲಿಂದಲೋ

ಹಿಂದಿನಿಂದ ಬಂದು, ಬಾಯಿಗೆ ಬಂದಂತೆ ಬೈದರು. ನನಗೂ ಕುಡಿದ ಮತ್ತಿನಲ್ಲಿ ಒಡೇರ ಮಕ್ಕಳು ಅಂತ ಗೊತ್ತಾಗಲಿಲ್ಲ. ಬಾಯಿಗೆಬಂದಂತೆ ಬೈದೆ. ಆ ಮೇಲೆ ಇಬ್ಬರಿಗೂ ಮಾರಾಮಾರಿಯಾಗಿ ಅವರಿಗೆ ಪೂರಾ ಪೆಟ್ಟಾಯ್ತು. ನನ್ನ ಮೇಲೆ ಪಿರ್ಯಾದುಕೊಟ್ಟರು. ನಾನು ಬಡವ, ಆದರಿಂದ ಜೈಲಾಯ್ತು.''

ಕಡೆಯ ಎರಡು ಮಾತು ಹೇಳುವಾಗ ಅವನ ಕಂಠ ಗದ್ಗದವಾಯಿತು. ಕಣ್ಣಿನಲ್ಲಿ ನೀರುಕ್ಕಿ ಮಕ್ಕಳಂತೆ ಬಿಕ್ಕಿಬಿಕ್ಕಿ ಅತ್ತ. ಅದನ್ನು ನೋಡಿ ಅವನ ಮಗ ನಾಗನೂ ಅಳುತ್ತಿದ್ದ. ಸೀತೆಯ ಕಣ್ಣಿನಲ್ಲಿಯೂ ನೀರು ತುಂಬಿ ತುಳುಕಾಡುತಿತ್ತು. ತಿಮ್ಮು ಏನನ್ನೊ ಯೋಚಿಸುತ್ತಾ ಕುಳಿತಿದ್ದ. ಲಿಂಗನ ಎದೆಯುರಿಯು ಸ್ವಲ್ಪ ತಣಿತ ಮೇಲೆ, ತಿಮ್ಮು ಮಕ್ಕಳಾಡುವ ಮುದ್ದುಮಾತಿನಿಂದ "ಲಿಂಗಾ, ನಿನಗೆ ಜೈಲಿನಲ್ಲಿ ತುಂಬಾ ಕಷ್ಟಕೊಟ್ಟರೆ?'' ಎಂದು ಕೇಳಿದ.

"ತಿಮ್ಮಯ್ಯಾ, ಈಗ ಅದನ್ನೆಲ್ಲಾ ಹೇಳಿ ನೆನೆದುಕೊಂಡು ಅತ್ತರೆ ಏನು ಬಂದ ಹಾಗಾಯ್ತು? ನಾನು ಜೈಲಿನಿಂದ ಬರಬೇಕಾದರೆ ನನ್ನ ಹೆಂಡತಿ ತೀರಿ ಕೊಂಡಿದ್ದಳು. ನನ್ನ ಮಗ ಪರದೇಶಿಯಾಗಿ ಯಾರ್‍ಯಾರ ಕೈಗೆಲ್ಲಾ ಹಾರೈಸಿಕೊಂಡು ಅಲೆದುಕೊಂಡಿದ್ದ.''

"ಹಾಗಾದರೆ, ಎಷ್ಟು ವರ್ಷ ಜೈಲಿನಲ್ಲಿದ್ದೆಯೋ ಲಿಂಗಾ?''

"ಎರಡು ವರ್ಷ, ತಿಮ್ಮಯ್ಯಾ, ಎರಡುವರ್ಷ. ಆದರ ಮೇಲಾದರೂ ಸುಖ ಅಂತೀರೋ? ಅದೂ ಇಲ್ಲ. ನೆಂಟರಿಷ್ಟರೆಲ್ಲ ನನ್ನ ದೂರಮಾಡಿದರು, ಜೈಲಿಗೆ ಹೋಗಿ ಬಂದವನೆಂದು. ಮಗನನ್ನು ಕಟ್ಟಿಕೊಂಡು ಅಲೆದೂ ಅಲೆದೂ ಸುಟ್ಟು ಸುಣ್ಣಾಗಿದ್ದೆ. ಕಡೆಗೆ ಯಾರೋ ಶಿವನೂರು ಸುಬ್ಬಣ್ಣಗೌಡರಲ್ಲಿಗೆ ಹೋಗು ಎಂದರು. ಇಲ್ಲಿಗೆ ಬಂದೆ. ಮಾರಾಯರು, ತಮ್ಮ ತಂದೆ, ಅನ್ನಬಟ್ಟೆ ಕೊಟ್ಟು ಸತ್ತುಹೋದವನ ಬದುಕಿಸಿದರು.''

ಲಿಂಗ ತನ್ನ ಕತೆ ಹೇಳಿ ಮುಗಿಸಲು, ತಿಮ್ಮು ನಿಟ್ಟುಸಿರು ಬಿಟ್ಟು, "ಲಿಂಗಾ, ನೀನಿನ್ನು ನಮ್ಮನೇ ಬಿಟ್ಟು ಹೋಗಲೇ ಬೇಡ. ನಾಗನೂ ಹಾಗೇ'' ಎಂದ. ಅದಕ್ಕೆ ಲಿಂಗ "ಆಗಲಿ ನನ್ನೊಡೆಯ, ಹಾಗೇ ಆಗಲಿ'' ಎಂದ.

೨

ಸಿಡಿಲು, ಗುಡುಗು, ಮಿಂಚು, ಗಾಳಿ, ಮಳೆ–ಇವುಗಳಿಂದ ರಾತ್ರಿ ಹುಚ್ಚೆದ್ದ ಭೈರವಿಯಾಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ಲಿಂಗ, ಸುಬ್ಬಣ್ಣಗೌಡರು ಇಬ್ಬರೇ ಎಚ್ಚರವಾಗಿ ಜಗಲಿಯ ಮೇಲೆ ಕುಳಿತಿದ್ದರು. ಇಬ್ಬರೂ ಆಗಾಗ್ಗೆ ಹೋಗಿ ಹೊಳೆ ನೋಡಿಕೊಂಡು ಬರುತ್ತಿದ್ದರು. ನೆರೆಯ ನೀರು ಬೇಗ ಬೇಗ ಏರುತ್ತಿತ್ತು.

“ ಲಿಂಗಾ, ದೋಣಿ ಎಲ್ಲಿ ಕಟ್ಟಿದ್ದೀಯೆ? ಮನೆ ಬಿಡಬೇಕಾಗಿ ಬರಬಹುದು.” ಎಂದು ಗೌಡರು ಲಿಂಗನನ್ನು ಕೇಳಿದರು.

ಲಿಂಗ ಸ್ವಲ್ಪ ಗಾಬರಿಯಾಗಿ “ ಆ ಹುಳಿಮಾವಿನ ಮರದ ಬೇರಿಗೆ ಕಟ್ಟಿದ್ದೆ! ನೀರೇರಿತೋ ಏನೋ? ಅಲ್ಲಿಗೆ ಹೋಗುವುದಕ್ಕೆ ಆಗುತ್ತೊ ಇಲ್ಲವೊ?” ಎಂದು ಹೇಳುತ್ತಾ ಲಾಟೀನು ತೆಗೆದುಕೊಂಡು ಹೊರಗೆ ಓಡಿದ. ಸುಬ್ಬಣ್ಣಗೌಡರೂ ಅವನ ಹಿಂದೆಯೇ ಓಡಿದರು. ಹೋಗಿನೋಡಲು ಲಿಂಗ ಊಹಿಸಿದಂತೆಯೇ ಆಗಿತ್ತು. ನೆರೆ ಮಾವಿನಮರದ ಬುಡ ಮುಚ್ಚಿಬಿಟ್ಟಿತ್ತು. ಇಬ್ಬರಿಗೂ ಸ್ವಲ್ಪಹೊತ್ತು ಏನೂ ತೋರಲಿಲ್ಲ. ಸುಮ್ಮನೆ ಹೊಳೆಯಕಡೆ ನೋಡುತ್ತಾ ನಿಂತರು. ಅಷ್ಟರಲ್ಲಿಯೇ ಮನೆಯ ಹಿಂದುಗಡೆ ಏನೋ ಬಿದ್ದ ಹಾಗೆ ದೊಡ್ಡ ಶಬ್ದವಾಯಿತು. ಇಬ್ಬರೂ ಅಲ್ಲಿಗೆ ಓಡಿದರು. ಹಿತ್ತಲ ಕಡೆ ಗೋಡೆ ಬಿದ್ದು ನೀರು ಅಂಗಳಕ್ಕೆ ನುಗ್ಗುತಿತ್ತು. ಇನ್ನು ಕಾಲಹರಣಮಾಡಿದರೆ ಸರ್ವನಾಶವೆಂದು ಗೌಡರಿಗೆ ತೋರಿತು.

ಕೋಣೆಕೋಣೆಗೆ ನುಗ್ಗಿ ಮನೆಯವರನ್ನೆಲ್ಲಾ ಎಬ್ಬಿಸಿದರು. ಅವರೆಲ್ಲಾ ಅರೆನಿದ್ದೆಯಲ್ಲಿ ಗಾಬರಿಯಿಂದ ಜಗಲಿಗೆ ನುಗ್ಗಿದರು. ಗೌಡರು ಅವರಿಗೆ ಗಾಬರಿ ಪಡಬೇಡಿರೆಂದು ಸಮಾಧಾನ ಹೇಳಿ ಲಿಂಗನಿಗಾಗಿ ಸುತ್ತಲೂ ನೋಡಿದರು. ಲಿಂಗ ಅಲ್ಲಿರಲಿಲ್ಲ “ ಲಿಂಗಾ! ಲಿಂಗಾ!” ಎಂದು ಕೂಗಿದರು. ಉತ್ತರ ಬರಲಿಲ್ಲ. ಅಷ್ಟು ಹೊತ್ತಿಗೆ ಪ್ರಚಂಡ ಗಾಳಿ ಬೀಸತೊಡಗಿತು. ಹುಚ್ಚೆದ್ದು ಸರಿಯು ಸುರಿಯಿತು. ಹೊರಂಗಳದಲ್ಲಿದ್ದ ತೆಂಗಿನಮರ ಮುರಿದು ಮನೆಗೆ ಹೊದಿಸಿದ ಸತುವಿನ ತಗಡುಗಳ ಮೇಲೆ ಬಿದ್ದು, ಬಹುದೊಡ್ಡ ತಬ್ದಮಾಡಿತು. ತಿಮ್ಮ, ಸೀತೆ, ನಾಗ ಮೂವರೂ ಕಿಟ್ಟನೆ ಕಿರಚಿಕೊಂಡರು. ನಾಗಮ್ಮನವರೂ “ ದೇವರೇ ” ಎನ್ನುತ್ತಿದ್ದರು. ಗೌಡರು ಅವರಿಗೆಲ್ಲಾ ಧೈರ್ಯ ಹೇಳಿ, ಲಿಂಗನನ್ನು ಹುಡುಕಿಕೊಂಡು ಕರೆಯುತ್ತಾ ಓಡಿದರು. ಹೋಗಿ ನೋಡಲು ಲಿಂಗ ಮಾವಿನಮರದ ಬುಡ ಸೇರಿ ದೋಣಿಬಿಚ್ಚುತ್ತಿದ್ದ. ಮನೆಯ ಬೆಳಕಂಡಿಗೆ ಒಂದು ಕತ್ತದ ಮಿಣಿ ಕಟ್ಟಿ, ಅದನ್ನು ಹಿಡಿದು ಅದರ ಸಹಾಯದಿಂದ ಮಾವಿನಮರದ ಬುಡ ಸೇರಿದ್ದ. ತುಸು ಹೊತ್ತಿನಲ್ಲಿಯೇ ದೋಣಿ ಬಿಚ್ಚಿ, ಅದರೊಳಗೆ ದಾಟಿದ. ಬೆಳಕಂಡಿಗೆ ಬಿಗಿದ ಹುರಿಯನ್ನು ಮಾತ್ರ ಕೈಯಲ್ಲಿಯೇ ಹಿಡಿದುಕೊಂಡಿದ್ದ.

ಗಾಳಿಯ ಅಬ್ಬರದಲ್ಲಿ ಲಿಂಗ ಗೌಡರನ್ನು ಕುರಿತು “ ಅಯ್ಯಾ, ಹಗ್ಗ ಹಿಡಿದು ಎಳೆಯಿರಿ ” ಎಂದು ಗಟ್ಟಿಯಾಗಿ ಕೂಗಿದ. ಗೌಡರು ಹಾಗೆಯೇ ಮಾಡಿದರು. ದೋಣಿ ದಡಸೇರಿತು. ಅಷ್ಟರಲ್ಲಿ ಒಳಂಗಳದಿಂದ ಏಳೆಂಟು ಜನ ಕಿಟ್ಟನೆ ಚೀತ್ಕರಿಸಿದಂತಾಯಿತು.

ಗೌಡರು “ ಲಿಂಗಾ, ದೋಣಿ ಬಾಗಿಲಿಗೆ ತೆಗೆದುಕೊಂಡು ಬಾ ! ಬೇಗ ! ” ಎಂದು ಹೇಳಿ ಒಳಗೆ ನುಗ್ಗಿದರು. ಹೆಬ್ಬಾಗಿಲು ದಾಟುವುದರೊಳಗಾಗಿಯೇ ಕೆಲಸದ ಹೆಂಗಸು ಸೋಮಕ್ಕ ಬಾಯಿ ಕಳೆದುಕೊಂಡು ಕಣ್ಕಣ್ಣು ಬಿಟ್ಟುಕೊಂಡು ಏದುತ್ತಾ ಓಡಿಬಂದಳು.

ಗೌಡರನ್ನು ಕಂಡೊಡನೆ ಸೋಮಕ್ಕ “ ಉಪ್ಪರಿಗೆ ಗೋಡೆ ಬಿದ್ದುಹೋಯ್ತು! ಜಗಲಿಗೆ ನೀರೇರ್‍ತಾ ಇದೆ.” ಎಂದು ಮಳೆಗಿಂತಲೂ ಮಿಗಿಲಾಗಿ ಮಾತು ಕರೆದಳು.

ಗೌಡರು ಜಗಲಿಗೆ ಬಂದು “ ನೀವೆಲ್ಲಾ ಹೆಬ್ಬಾಗಿಲಿಗೆ ಓಡಿ ! ಬೇಗ ! ಲಿಂಗ ದೋಣಿ ತರ್‍ತಾನೆ ! ಏ, ನಾಗಾ, ನೀನಿಲ್ಲಿ ಬಾರೊ ” ಎಂದರು. ನಾಗ ಗೌಡರ ಸಂಗಡ ಹೋದ.

ನಾಗಮ್ಮ, ತಿಮ್ಮ, ಸೀತೆ, ಲೋಕಮ್ಮ, ಸೋಮಕ್ಕನ ಮಗಳು ದಾಸಮ್ಮ ಎಲ್ಲರೂ ಹೆಬ್ಬಾಗಿಲಿಗೆ ಓಡಿದರು. ಸೋಮಕ್ಕಮಾತ್ರ ಮಾಣಿಗೆ ಕೋಣೆಯಲ್ಲಿ ತಾನು ಇಟ್ಟಿದ್ದ “ ಪುಟ್ಟಗಂಟು ” ತರಲು ಓಡಿದವಳು ಹಿಂದಕ್ಕೆ ಬರಲೇ ಇಲ್ಲ. ಗೌಡರು ಜಗಲಿಯ ಮೇಲಿದ್ದ ತಮ್ಮ ದೊಡ್ಡ ಬೀರಿನ ಬಾಗಿಲು ತೆಗೆದು, ಎರಡು ಪೆಟ್ಟಿಗೆ ಈಚೆಗೆ ತೆಗೆದಿಟ್ಟು, ಬೀರಿನ ಬಾಗಿಲು ಹಾಕಿ ಬೀಗಹಾಕಿದರು. ಅಲ್ಲಿದ್ದ ಕಬ್ಬಿಣದ ಸಂದುಕದ ಬಾಗಿಲನ್ನೂ ತೆರೆದರು. ಆದರೆ ಮತ್ತೇನನ್ನೊ ಯೋಚಿಸಿ ಅದನ್ನು ಪುನಃ ಹಾಗೆಯೇ ಮುಚ್ಚಿ ಬೀಗಹಾಕಿದರು.

“ ನಾಗ, ಈ ಪೆಟ್ಟಿಗೆ ಹೊತ್ತುಕೊಳ್ಳೊ ” ಎಂದರು. ನಾಗ ಒಂದು ಹೊತ್ತು ಕೊಂಡ ; ಗೌಡರು ಮತ್ತೊಂದು ಹೊತ್ತುಕೊಂಡರು. ಲಿಂಗ ಎಲ್ಲರನ್ನೂ ದೋಣಿಗೆ ಹತ್ತಿಸಿ ಅದರ ತುದಿ ಹಿಡಿದುಕೊಂಡು ನಿಂತಿದ್ದ. ಗೌಡರು ಓಡಿಬಂದು ಎರಡು ಪೆಟ್ಟಿಗೆಗಳನ್ನು ದೋಣಿಯೊಳಗಿಟ್ಟು, ನಾಗನನ್ನೂ ಎತ್ತಿ ದೋಣಿಗೆ ಹಾಕಿ, ತಾವೂ ಒಳಗೆ ದಾಟಿ, ಲಿಂಗನಿಗೆ ದೋಣಿಹತ್ತುವಂತೆ ಹೇಳಿ ಒಂದು ಹುಟ್ಟು ತೆಗೆದುಕೊಂಡು ದೋಣೀತುದಿ ಕುಳಿತರು. ಅಷ್ಟುಹೊತ್ತಿಗೆ ಸೀತೆ ನಾಗಮ್ಮನವರನ್ನು ಕುರಿತು “ ಅವ್ವಾ ಸೋಮಕ್ಕೆಲ್ಲಿ ?” ಎಂದು ಕೇಳಿದಳು. ಆಗಲೇ ಮನೆಯೂ ಮುರಿದು ಬಿದ್ದಂತಾಗಿ ಏನೋ ಒಂದು ಚೀತ್ಕಾರದ ಧ್ವನಿಯು ಕೇಳಬಂದಿತು. ಸೋಮಕ್ಕನ ಆಸೆಯನ್ನು ಅವಳ ಮಗಳು ದಾಸಮ್ಮ ಕೂಡ ಬಿಟ್ಟಳು.

ದೋಣಿ ಬಹಳ ಸಣ್ಣದು. ಐದಾರು ಜನರು ಕೂರುವಂಥಾದ್ದು. ತುಂಬಿದ ನೆರೆಯಲ್ಲಂತೂ ಇಬ್ಬರೇ ಸರಿ. ಆಗಲೇ ಅದರೊಳಗೆ ಏಳು ಜನರಿದ್ದರು. ಸಾಲದಿದ್ದಕ್ಕೆ ಜೊತೆಗೆ ಎರಡು ಪೆಟ್ಟಿಗೆ ಬೇರೆ ; ಲಿಂಗನಿಗೆ ಜಾಗವೇ ತೋರದೆ, ಬಗೆಯೇ ಹರಿಯದೆ

ಸುಮ್ಮನೆ ನಿಂತು ದೋಣಿಯು ಸುರಕ್ಷಿತವಾಗಿ ದಡಸೇರುವುದೇ ಎಂದು ಚಿಂತಿಸುತ್ತಿದ್ದ.

ಲಿಂಗ ತಡಮಾಡಿದ್ದನ್ನು ಕಂಡು ಗೌಡರು "ಲಿಂಗಾ ಹೊತ್ತೇಕೊ? ಹತ್ತೊ!" ಎಂದು ಕಳವಳದಿಂದ ಕೂಗಿ ಗದರಿಸಿದರು.

ಲಿಂಗ "ಅಯ್ಯಾ, ಜಾಗವೇ ಇಲ್ಲವಲ್ಲ. ಈಗಾಗಲೇ ದೋಣಿಗೆ ಭಾರ ಹೆಚ್ಚಾಗಿದೆ. ನಾನೂ ಕೂತರೆ ದೋಣಿ ದಡಕಾಣುವ ಬಗೆ?" ಎಂದ.

"ಹಾಂಗಾದರೆ ಈಗ ಮಾಡೋದೇನೋ? ಏನಾದರೂ ಆಗಲಿ ಹತ್ತು. ದೇವರು ಮಾಡಿಸಿದ್ದಾಯಿತು." ಎನ್ನುತ್ತಾ ಗೌಡರು ನದಿಯ ಕಡೆ ನೋಡಿದರು ಅವರ ಮೈ ಸ್ವಲ್ಪನಡುಗಿತು.

ಲಿಂಗ "ಹಾಗಾದರೆ, ಅಯ್ಯಾ, ಒಂದು ಕೆಲಸಮಾಡಿ ನೀವೆಲ್ಲಾ ದಡ ಸೇರಿದಮೇಲೆ, ದೋಣಿಕೊಟ್ಟು ಯಾರನ್ನಾದರೂ ಕಳ್ಸಿ. ಅಲ್ಲೀತನಕ ನಾ ಇಲ್ಲೆ ಇರ್ತೇನೆ. ನಿಮಗೇನೂ ಭಯಬೇಡ" ಎಂದ.

ಗೌಡರಿಗೆ ಸಿಟ್ಟು ಬಂತು. ಲಿಂಗನಿಗೆ ದೋಣಿ ಹತ್ತುವಂತೆ ಗಟ್ಟಿಯಾಗಿ ಕೂಗಿ ಅಪ್ಪಣೆಮಾಡಿದರು. ಲಿಂಗ ಮರುಮಾತಾಡದೆ ದೋಣಿಯ ಮತ್ತೊಂದು ತುದಿಯಲ್ಲಿ ಹುಟ್ಟು ಹಿಡಿದು ಕುಳಿತ. ಗೌಡರು ತಮ್ಮ ತೋಟಾಕೋವಿಯಿಂದ ಹತ್ತು ಹನ್ನೆರಡು ಗುಂಡು ಹಾರಿಸಿದರು.

ದೋಣಿ ಹೊರಟಿತು. ಆ ಗಾಳಿ, ಆ ಮಳೆ, ಆ ಕತ್ತಲು ಇವುಗಳ ನಡುವೆ ಬಂದೂಕಿನ 'ಢಂ ಢಂ' ಶಬ್ದಗಳು ಗಂಭೀರವಾಗಿ ಹೊರಟು ಮಲೆನಾಡಿನ ಬೆಟ್ಟಗುಡ್ಡಗಳಿಂದ ಗಭೀರವಾಗಿ ಮರುದನಿಯಾದವು. ದೂರದ ಹಳ್ಳಿಗಳಲ್ಲಿದ್ದ ಜನರು ಎಚ್ಚೆತ್ತು ಗುಂಡಿನ ಶಬ್ದಗಳನ್ನು ಕೇಳಿ ಬೆರಗಾದರು.

ಶಿವನೂರಿಗೆ ಎರಡು ಮೈಲಿ ದೂರದಲ್ಲಿದ್ದ ಸುಗ್ಗಿಹಳ್ಳಿಯಲ್ಲಿ ಮನೇ ಜಗಲೀ ಮೇಲೆ ಮಲಗಿದ್ದ ರಾಮೇಗೌಡರಿಗೂ, ಅವರ ತಮ್ಮ ಸಿದ್ದೇಗೌಡರಿಗೂ ಈಡಿನ ಶಬ್ದ ಕೇಳಿ ಎಚ್ಚರವಾಗಿ ಬೆರಗಿನಿಂದ ಎದ್ದು ಕುಳಿತರು.

ಸಿದ್ದೇಗೌಡರು ರಾಮೇಗೌಡರನ್ನು ಕುರಿತು "ಅಣ್ಣಾ, ಅದೇನೊ ಈಡು ಕೇಳಿಸಿದುವಲ್ಲ!" ಎಂದರು.

ರಾಮೇಗೌಡರು "ಎತ್ತ ಮುಖದಿಂದ ಕೇಳಿಸಿದುವ್ರೋ" ಎಂದರು.

"ಕೆಮ್ಮಣ್ಣುಬ್ಬಿನ ಕಡೆಯಿಂದ ಅಂತ ಕಾಣ್ತದಪ್ಪಾ"

"ಅಲ್ಲಾ ನೋಡು, ನಂಗೇಕೋ ಸ್ವಲ್ಪ ಸಂಶಯಾನೆ. ಶಿವನೂರಿನ ಕಡೆಯಿಂದ ಕೇಳಿಸಿದ ಹಾಗಾಯಿತು."

" ಎಲ್ಲಾದರೂ ಹೊಳೆಗಿಳೆ ಏರ್ತ್ತೇನೊ ?"

" ಏನೋ ಸಂಗತಿ ಇರಬೇಕಪ್ಪಾ. ಏನಾದ್ರಾಗಲಿ, ನಾಲ್ಕೈದು ಜನ ಕರ ಕೊಂಡು ಹೋಗೋಣ."

ಸಿದ್ದೇಗೌಡರು ಅವಸರದಿಂದ ಲಾಟೀನು ಹೊತ್ತಿಸಿದರು. ರಾಮೇಗೌಡರು ಮೂಲೆಹಿಡಿದು ಮಲಗಿ ಕೊರೆಯುತ್ತಿದ್ದ ರಂಗನನ್ನು ಎಬ್ಬಿಸಿ ನಾಲ್ಕೈದು ಜನ ಗಟ್ಟದ ಕೆಳಗಿನವರನ್ನು ಕರೆತರುವಂತೆ ಹೇಳಿದರು.

೩

" ರಾಮಾ ! ರಾಮಾ !" ಎಂಬ ಹೆಂಗಸರು ಮಕ್ಕಳ ಗೋಳಾಟವು, ಪ್ರವಾಹದ ಅಲೆಗಳ ಸೆಳವಿನ ನಡುವೆ ಸಿಕ್ಕಿ ಏಳುತ್ತ ಬೀಳುತ್ತ ತೇಲುವ ದೋಣಿಯಿಂದ ಹೊರಟು, ಗಾಳಿಯ ಭೋರಾಟದಲ್ಲಿ ಸೇರುತ್ತಿತ್ತು. ಸುಬ್ಬಣ್ಣಗೌಡರು, ಲಿಂಗ ಇಬ್ಬರೂ ಎದೆಗೆಡದೆ ಹುಟ್ಟುಹಾಕುತ್ತಿದ್ದರು. ದೋಣಿಯ ನಡುವೆ ಇದ್ದ ಲಾಟೀನಿನ ಬೆಳಕು, ಕಗ್ಗತ್ತಲೆಗೆ ಹೆದರಿ ಮೂಲೆ ಸೇರಿತೋ ಏನೋ ಎನ್ನುವಹಾಗೆ, ತನ್ನ ಸುತ್ತಲೂ ಒಂದಡಿಯ ಜಾಗ ಮಾತ್ರ ಬೆಳಗುತ್ತಿದ್ದಿತು. ಭಾರದಿಂದ ದೋಣಿಯು ಈಗಲೋ ಆಗಲೋ ಮುಳುಗುವಂತೆ ತೋರುತ್ತಿತ್ತು.

ಗೌಡರು ದೋಣಿಯಲ್ಲಿದ್ದ ಎರಡು ಬೆಲೆಯುಳ್ಳ ಪೆಟ್ಟಿಗೆಗಳನ್ನು ತೆಗೆದು ಹೊಳೆಗೆ ಎಸೆದರು ಆದರೂ ಭಾರ ಕಡಮೆಯಾಗಲಿಲ್ಲ. ಎಷ್ಟು ಹೇಳಿದರೂ ಕೇಳದೆ ಹೆಂಗಸರು ಮಕ್ಕಳು " ರಾಮ, ರಾಮ " ಎಂದುಕೂಗಿ ಗೋಳಾಡುವುದನ್ನು ಬಿಡಲೇ ಇಲ್ಲ. ದಿಕ್ಕುಕೆಟ್ಟ ಹುಚ್ಚನಂತೆ ದೋಣಿಯು ಅಲೆಯ ತೊಡಗಿತು. ಒಂದುಸಾರಿ ಅದು ಮುಳುಗುವಂತಾಗಿ ಸ್ವಲ್ಪ ನೀರೂ ಒಳಗೆ ನುಗ್ಗಿತು. ಮತ್ತೆ " ರಾಮ, ರಾಮಾ " ಎಂದು ಬೊಬ್ಬೆಹಾಕಿದರು.

ಹುಟ್ಟುಹಾಕುತ್ತಲಿದ್ದ ಲಿಂಗನು ಹೆಂಗಸರು ಮಕ್ಕಳ ಗೋಳನ್ನು ಕಂಡು ಎದೆಮರುಗಿದನು. ದೋಣಿಯು ಭಾರದಿಂದ ಮುಳುಗುವುದು ಖಂಡಿತವೆಂದೇ ಅವನು ನಿಶ್ಚಯಿಸಿದನು. ಭಾರ ಕಡಮೆ ಮಾಡುವ ದಾರಿ ಯೋಚಿಸಿದನು; ಬಗೆಯೇ ಹರಿಯಲಿಲ್ಲ. ಸ್ವಲ್ಪಹೊತ್ತಿನಮೇಲೆ ಇದ್ದಕ್ಕಿದ್ದಹಾಗೆ ಅವನ ಮುಖ ಗಂಭೀರವಾಯಿತು. ಹುಟ್ಟು ಹಾಕುವುದನ್ನು ನಿಲ್ಲಿಸಿದ. ಸುತ್ತಲೂ ನೋಡಿದ. ಎಲ್ಲವೂ ಕಗ್ಗತ್ತಲಲ್ಲಿ ಅಳಿಸಿ ಹೋಗಿದ್ದುವು. ದೋಣಿಯ ಕಡೆ ನೋಡಿದ. ಮಳೆಯ ಭರದಲ್ಲಿ ಒಬ್ಬರಿಗೊಬ್ಬರು ಕಾಣುತ್ತಲೇ ಇರಲಿಲ್ಲ. ಕಾಣುವಹಾಗಿದ್ದರೂ ಯಾರೂ ನೋಡುವ ಸ್ಥಿತಿಯಲ್ಲಿರಲಿಲ್ಲ. ತಾನು ಹೊಳೆಗೆ ಹಾರಿದರೆ ಭಾರ ಕಡಮೆಯಾಗಿ,

ದೋಣಿಯು ಸುರಕ್ಷಿತವಾಗಿ ದಡಕ್ಕೆ ಹೋಗುವುದೆಂದು ಹಾರೈಸಿದ. ತನ್ನನ್ನು ಲೋಕವೇ ಕಳ್ಳನೆಂದು ದೂರಮಾಡಿದಾಗ, ಅನ್ನಬಟ್ಟೆ ಕೊಟ್ಟು ಸಾಕಿದವರ ಬಳಗ ವನ್ನು ಹೇಗಾದರೂ ಉಳುಹಬೇಕೆಂದು ಮಹಾಲೋಚನೆ ಮಾಡಿದ. ಹುಟ್ಟನ್ನು ದೋಣಿಯ ಒಳಗಿಟ್ಟು ಹೊಳೆಗೆ ಹಾರಲು ಸಿದ್ಧನಾದ.

ಇನ್ನೇನು ಹಾರಬೇಕು! ಅಷ್ಟರಲ್ಲಿಯೇ ತನ್ನ ಮಗನ ನೆನಪಾಯಿತು. ಎದೆ ನಡುಗಿ ಹಿಂಜರಿಯಿತು. ಹಾಗೆಯೇ ನಿಂತ. ಅಷ್ಟರಲ್ಲಿಯೇ ದೋಣಿ ಮುಳುಗು ವಂತಾಗಿ "ರಾಮು! ರಾಮು!! ಅಯ್ಯೋ!" ಎಂದು ಕೂಗಿಕೊಂಡರು. ಲಿಂಗ ಬಿಸುಸುಯ್ದ. ಎಲ್ಲರೂ ಇದ್ದಂತೆಯೇ ದೋಣಿ ದಡ ಸೇರಬಾರದೇಕೆ? ಎಂದು ಯೋಚಿಸಿದ. ಮತ್ತೆ ಅದು ಆತ್ಮವಂಚನೆಯ ಆಲೋಚನೆ ಎಂದು ತಿಳಿದ. "ಅಯ್ಯೋ!" ಎಂದು ಮತ್ತೆ ರೋದಿಸಿದರು. ಲಿಂಗ ಹಿಂದುಮುಂದು ನೋಡದೆ "ರಾಮು! ರಾಮು!!" ಎಂದು ಕೂಗಿ ಹೊಳೆಗೆ ಹಾರಿದ. ಅವನು ಹಾರಿದ್ದು ಆ ಕಗ್ಗತ್ತಲಲ್ಲಿ, ಆ ಗಾಳಿ ಮಳೆ ಹೊಳೆಗಳ ಘೋರಾಟದಲ್ಲಿ ಯಾರಿಗೂ ತಿಳಿಯ ಲಿಲ್ಲ. ದೋಣಿಯ ಭಾರ ಕಡಮೆಯಾಗಿ ಮೊದಲಿಗಿಂತಲೂ ಸ್ವಲ್ಪ ಸರಾಗವಾಗಿ ಹೋಗತೊಡಗಿತು. ಎಲ್ಲರಿಗೂ ಒಂದು ವಿಧವಾದ ಭರವಸೆ ಬಂದಹಾಗಾಯಿತು.

ಗೌಡರು "ಲಿಂಗಾ, ದೋಣಿ ಸ್ವಲ್ಪ ಸರಾಗವಾಗಿ ಹೋಗುತ್ತಿದೆಯೋ ಭಗವಂತನ ದಯೆಯಿಂದ" ಎಂದರು. ಲಿಂಗನ ದಯೆಯೂ ಜೊತೆಗೆ ಸೇರಿತ್ತೆಂದು, ಪಾಪ, ಅವರಿಗೆ ತಿಳಿದಿರಲಿಲ್ಲ.

ಅಷ್ಟರಲ್ಲಿಯೇ ಹೆಂಗಸರು ಮಕ್ಕಳೆಲ್ಲ "ದೀಪ! ದೀಪ!" ಎಂದು ಕೂಗಿ ದರು. ಸುಬ್ಬಣ್ಣಗೌಡರು ತಿರುಗಿ ನೋಡಲು, ಬಳಿಯಾದ ಹೊಳೆಯ ದಡದಲ್ಲಿ ಐದಾರು ದೀಪ ಕಂಡುಬಂದುವು. ದೀಪದ ಬೆಳಕಿನಲ್ಲಿ ಹತ್ತು ಹದಿನೈದು ಜನರು ಸುಳಿದಾಡುತಿದ್ದುದನ್ನೂ ಕಂಡರು. ಅಂಚಿನಿಂದ ನಾಲ್ಕೈದು ಬಂದೂಕಿನ ಶಬ್ದಗಳೂ ಕೇಳಿಸಿದುವು. ಮೆಲ್ಲಮೆಲ್ಲನೆ ತೇಲುತ್ತಾ ದೋಣಿಯು ದಡಮುಟ್ಟಿತು.

ನುಗ್ಗೇಹಳ್ಳೀ ರಾಮೇಗೌಡರೂ ಸಿದ್ದೇಗೌಡರೂ ಓಡಿಬಂದು ಹೆಂಗಸರು ಮಕ್ಕಳನ್ನೆಲ್ಲಾ ಎಚ್ಚರಿಕೆಯಿಂದ ದೋಣಿಯಿಂದ ಇಳಿಸಿದರು. ಸುಬ್ಬಣ್ಣಗೌಡರೂ ಉಸ್ಸೆಂದು ಇಳಿದರು. ಎಲ್ಲರಿಗೂ ದಡಸೇರಿದೆವಲ್ಲಾ ಬದುಕಿದೆವಲ್ಲಾ ಎಂಬು ದೊಂದೇ ಯೋಚನೆ. ಆ ಆನಂದದ ಸಡಗರದಲ್ಲಿ ಲಿಂಗನ ನೆನಪು ಆಗದಿದ್ದದ್ದು ಏನೂ ಅತಿಶಯವಲ್ಲ. ಆದರೆ ನಾಗ ಮಾತ್ರ ಅಳುತ್ತಿದ್ದ. ಅದನ್ನು ನೋಡಿ ನುಗ್ಗೇ ಹಳ್ಳೀ ಸಿದ್ದೇಗೌಡರು "ಯಾಕಪ್ಪಾ ಅಳ್ತೀಯೆ? ಏನಾಯ್ತು?" ಎಂದು ಕೇಳಿದರು.

ಅವನು ಬಿಕ್ಕಿ ಬಿಕ್ಕಿ ಅಳುತ್ತಾ "ಅಪ್ಪ!" ಎಂದ.

ಸುಬ್ಬಣ್ಣಗೌಡರು "ಏನದು ಸಿದ್ದೇಗೌಡ್ರೆ?" ಎಂದರು.

"ಈ ಹುಡುಗ ಅಪ್ಪಾ ಎಂದು ಅಳ್ತಾನೆ." ಎಂದರು.

ಸುಬ್ಬಣ್ಣಗೌಡರ ಮುಖ ಬೆಳ್ಳಗಾಗಿ, ತಟಕ್ಕನೆ ಎದ್ದುನಿಂತು "ಲಿಂಗಾ! ಲಿಂಗಾ!" ಎಂದು ಕರೆದರು. ಕಾಡಿನಿಂದ "ಲಿಂಗಾ! ಲಿಂಗಾ!" ಎಂದು ಮರುದನಿಯಾಯಿತು. ಲಿಂಗ ಎಲ್ಲಿಯೂ ಕಾಣಲಿಲ್ಲ. ದೋಣಿಗೆ ಓಡಿದರು; ಅಲ್ಲಿಯೂ ಇರಲಿಲ್ಲ. ಘೋರವಾದ ಕಗ್ಗತ್ತಲನ್ನು ಹೊದೆದುಕೊಂಡು ಗಂಭೀರವಾಗಿಯೂ, ಭೀಕರವಾಗಿಯೂ, ವಿಶಾಲವಾಗಿಯೂ ಹರಿಯುವ ಕ್ರೂರನದಿಯನ್ನು ದಿಟ್ಟಿಸಿ ನೋಡಿದರು. ಅವರ ಎದೆ ನಡುಗಿತು. ಕಣ್ಣೀರು ಸುರಿಯಿತು. "ಲಿಂಗಾ! ಲಿಂಗಾ!!" ಎಂದು ರೋದಿಸಿದರು. ನಾಗ ಬಿದ್ದುಬಿದ್ದು ಅಳುತ್ತಿದ್ದ. ತಿಮ್ಮು, ಸೀತೆ ಇಬ್ಬರೂ ಅಳಲಾರಂಭಿಸಿದರು.

"ನಮ್ಮ ಮನೆಯ ಒಂದು ಬೆಳಕೇ ಹೋಯಿತು." ಎಂದು ಸುಬ್ಬಣ್ಣಗೌಡರು ಅಲ್ಲಿದ್ದವರೊಡನೆ ಹೇಳಿಕೊಂಡು ಗೋಳಿಟ್ಟರು. ಲಿಂಗನ ಆಕಸ್ಮಿಕವಾದ ಅನಿರೀಕ್ಷಿತ ಮರಣಕ್ಕಾಗಿ ಎಲ್ಲರೂ ಶೋಕಿಸಿದರು. ಗೌಡರು ನಾಗನನ್ನು ಬಹಳವಾಗಿ ಸಂತೈಸಿದರೂ, ಅವನು ಅಳುವುದನ್ನೂ "ಅಪ್ಪಾ! ಅಪ್ಪಾ!" ಎಂದು ಕರೆಯುವುದನ್ನೂ ಬಿಡಲೇ ಇಲ್ಲ.

ಲಿಂಗ ಹೊಳೆಯ ಪಾಲಾದುದು ಹೇಗೆ ಎಂಬುದು ಮಾತ್ರ ಒಬ್ಬರಿಗೂ ಬಗೆಹರಿಯಲಿಲ್ಲ. ಸುಬ್ಬಣ್ಣಗೌಡರು ಲಿಂಗನ ಸುಳಿವು ಎಲ್ಲಾದರೂ ಕಾಣಬಹುದೋ ಎಂಬ ಆಸೆಯಿಂದ ದಡವನ್ನೆಲ್ಲಾ ಹುಡುಕಲು ಕೆಲವು ಆಳುಗಳನ್ನು ಕಳುಹಿಸಿದರು. ರಾಮೇಗೌಡರು ಎಲ್ಲರನ್ನೂ ನುಗ್ಗೇಹಳ್ಳಿಗೆ ಬರುವಂತೆ ಪ್ರಾರ್ಥಿಸಿದರು.

ದಾರಿಯಲ್ಲಿ ಲಿಂಗನು ಹಠಾತ್ತಾಗಿ ಮರೆಯಾದ ವಿಚಾರವನ್ನೇ ಪ್ರಸ್ತಾಪಿಸಿ ವಿಸ್ಮಯಪಡುತ್ತಾ ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲರೂ ನುಗ್ಗೇಹಳ್ಳಿ ಸೇರಿದರು.

ಬೆಳಗಾಯಿತು. ಮಳೆ ಇನ್ನೂ ನಿಂತಿರಲಿಲ್ಲ. ರಾತ್ರಿಯ ಗಡಿಬಿಡಿಯಿಂದ ಬಳಲಿ ಬೆಂಡಾದ ಸುಬ್ಬಣ್ಣಗೌಡರು ಹಾಸಿಗೆಯಮೇಲೆ ಮಲಗಿಕೊಂಡು, ರಾಮೇಗೌಡರು ಸಿದ್ದೇಗೌಡರೊಡನೆ ಹಿಂದಿನ ರಾತ್ರಿ ನಡೆದ ಸಂಗತಿಗಳನ್ನು ಕುರಿತು ಮಾತಾಡುತ್ತಿದ್ದರು. ಅವರಿಗೆ ಸ್ವಲ್ಪದೂರದಲ್ಲಿ, ಅಳುತ್ತಿದ್ದ ನಾಗನನ್ನು ತಿಮ್ಮು ಸೀತೆ ಇಬ್ಬರೂ ಸಮಾಧಾನಪಡಿಸುತ್ತಿದ್ದರು.

ಸೀತೆ "ಅಳಬೇಡ, ನಾಗ; ಅಪ್ಪ ಬರ್‍ತಾನೆ" ಎಂದು ಅವನ ಕಣ್ಣೀರು ಒರಸಿದಳು.

ನಾಗ ಬಿಕ್ಕಿ ಬಿಕ್ಕಿ ಅತ್ತ. ತಿಮ್ಮು "ಲಿಂಗ ಬರ್ತಾನೊ ನಾಗ; ಅಳೋದ್ಯಾಕೋ? ಸುಮ್ಮನಿರೊ" ಎಂದು ಸಂತೈಸುತ್ತಿದ್ದ.

ಅಷ್ಟರಲ್ಲಿ ಹೊರಂಗಳದಲ್ಲಿ ಏನೋ ಗದ್ದಲವಾಗಿ "ಲಿಂಗ ಬಂದಾ! ಲಿಂಗ!" ಎಂಬ ಕೂಗು ಕೇಳಿಸಿತು. ಸುಬ್ಬಣ್ಣಗೌಡರು ಎದ್ದು ಹೊರಗೆ ಓಡಿದರು. ರಾಮೇಗೌಡರೇ ಮೊದಲಾದವರು ಅವರ ಹಿಂದೆಯೇ ನುಗ್ಗಿದರು. ತಿಮ್ಮು ಸೀತೆ ಇಬ್ಬರೂ ನಾಗನನ್ನು ಎಳೆದುಕೊಂಡು ಅಲ್ಲಿಗೆ ಓಡಿದರು. ವಾಸ್ತವವಾಗಿಯೂ ಲಿಂಗ ಬಂದಿದ್ದ! ನಾಗ "ಅಪ್ಪಾ" ಎಂದು ಓಡಿಹೋಗಿ ಅವನನ್ನು ತಬ್ಬಿಕೊಂಡ. ಲಿಂಗನ ಬಟ್ಟೆಬರಿಯೆಲ್ಲಾ ಒದ್ದೆಯಾಗಿ, ಮೈಯೆಲ್ಲಾ ಕೆಸರಾಗಿತ್ತು. ಬಹಳ ಬಳಲಿ ಕಂಗೆಟ್ಟು ಏದುತ್ತಿದ್ದ ಅವನನ್ನು ಒಳಗೆ ಕರೆದುಕೊಂಡುಹೋಗಿ, ಬೇರೆ ಬಟ್ಟೆ ಉಡಿಸಿ, ಕಾಫೀ ತಿಂಡಿ ಕೊಟ್ಟು ಬೆಚ್ಚಗೆ ಮಲಗಿಸಿದರು.

ಆಮೇಲೆ ಸುಬ್ಬಣ್ಣಗೌಡರು ಅವನ ಹಾಸಿಗೆ ಬಳಿ ಕುಳಿತು, "ಲಿಂಗಾ, ಇದೇನು ಸಮಾಚಾರ?" ಎಂದರು.

ಲಿಂಗ ಕಿರುದನಿಯಿಂದ: "ಹುಟ್ಟುಹಾಕುತ್ತಾ ಇದ್ದೆ. ಒಂದುಸಲ ದೋಣಿ ಮೇಲೆಕೆಳಗಾಗಲಿಲ್ಲವೇ? ಆಗ ಮುಗ್ಗುರಿಸಿ ಹೊಳೆಗೆ ಬಿದ್ದೆ. ದೋಣಿ ಹಿಡಿಯುವಷ್ಟರಲ್ಲಿಯೇ ಮುಂದಕ್ಕೆ ಹೋಯಿತು. ನಾನು ಸ್ವಲ್ಪದೂರ ಈಜಿಕೊಂಡು, ತೇಲಿಕೊಂಡು ಹೋದೆ. ಏನೋ ನನ್ನ ಅದೃಷ್ಟದಿಂದ ಕಾಲಿಗೆ ದಿಣ್ಣೆ ಸಿಕ್ಕಿತು. ನಿಂತೆ. ಸೊಂಟದವರೆಗೂ ನೀರಿತ್ತು. ಹಾಗೇ ನಿಂತಿದ್ದೆ. ಬೆಳಗಾದ ಮೇಲೆ ಹೊಳೆ ಇಳಿಯಿತು. ಏನೋ ನಿಮ್ಮನ್ನದ ಋಣ ಇನ್ನೂ ಇತ್ತು."

ಅದಕ್ಕೆ ಗೌಡರು, "ಅಲ್ಲೋ, ಹುಟ್ಟುಹಾಕುತ್ತಿದ್ದವನು ಮುಗ್ಗುರಿಸಿ ಬಿದ್ದರೆ ಹುಟ್ಟು ದೋಣಿಗೆ ಬರುವುದು ಹೇಗೋ?"

ಲಿಂಗ "ಏನೋ ಆಯ್ಯಾ, ದೇವರಿಗೆ ಗೊತ್ತು!"

* * * *

ಮಧ್ಯಾಹ್ನ ಊಟ ಆದಮೇಲೆ ತಿಮ್ಮು ಸೀತೆ ಇಬ್ಬರೂ "ನಾನು ಮೊದಲು ಹೇಳಿದ್ದು!" "ತಾನು ಮೊದಲು ಹೇಳಿದ್ದು!" ಎಂದು ಚರ್ಚೆಮಾಡುತ್ತಿದ್ದರು.

ನಾಗಮ್ಮ ಅಲ್ಲಿಗೆ ಬಂದು "ಏನ್ರೋ ಅದೂ! ತಿಮ್ಮೂ!"

ಅವನು "ಮೊದಲು ನಾನು ಹೇಳಿದ್ದಮ್ಮ ಲಿಂಗ ಬರ್ತಾನೆ ಅಂತಾ" ಎಂದನು.

ಸೀತೆ "ಇಲ್ಲಮ್ಮ! ತಿಮ್ಮಣ್ಣಯ್ಯ ಬರೀ ಸುಳ್ಳು! ನಾನೇ ಮೊದಲು ಹೇಳಿದ್ದು. ಬೇಕಾದರೆ ನಾಗನ್ನೇ ಕೇಳಮ್ಮ."

"ಯಾರಾದರೂ ಹೇಳಿದ್ದಾಗಲಿ! ಅಂತೂ ಲಿಂಗ ಬಂದನಲ್ಲ. ಅಷ್ಟೇ ಸಾಕು!" ಎಂದು ಹೇಳಿ ನಾಗಮ್ಮ ಒಳಗೆ ಹೋದರು.

ಕೆ. ವಿ. ಪುಟ್ಟಪ್ಪ.

ಕಾವ್ಯಾವಲೋಕನ

ಕನ್ನಡ ಕೈಪಿಡಿ—ಸಂಪುಟ ೧. ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಲ್ಪಟ್ಟುದು. ೧೯೩೭. ಡೆಮ್ಮಿ ಪುಟಗಳು ೩೫೦. ಬೆಲೆ ೧ ರೂಪಾಯಿ.

ಕನ್ನಡಭಾಷೆಯ ಸಾಹಿತ್ಯರೂಪದ ಸಂಪ್ರದಾಯ ಮರ್ಯಾದೆಗಳನ್ನು ತಿಳಿದುಕೊಳ್ಳಬೇಕೆನ್ನುವವರಿಗೆ ಅತ್ಯಂತೋಪಯುಕ್ತವಾದ ಈ ಗ್ರಂಥವನ್ನು ನಮ್ಮ ವಿಶ್ವವಿದ್ಯಾಪೀಠದವರು ಬರೆಯಿಸಿ ಪ್ರಕಟಗೊಳಿಸಿರುವುದು ಎಲ್ಲರೂ ಮೆಚ್ಚಬೇಕಾದ ಸಂಗತಿ. ದೇಶಭಾಷೆಯ ವಿಷಯದಲ್ಲಿ ಉತ್ಸಾಹವು ಹೆಚ್ಚಾಗುತ್ತಿರುವ ಮತ್ತು ಹೊಸಹೊಸ ಬಗೆಯ ಗ್ರಂಥಗಳು ಹುಟ್ಟಬೇಕಾಗಿರುವ ಈ ಕಾಲದಲ್ಲಿ ಇಂಥಾ ಕೆಲಸವನ್ನು ಮಾಡಿಸಬೇಕಾದುದು ವಿಶೇಷ ಆವಶ್ಯಕವಾಗಿತ್ತು. ಇದನ್ನು ತಿಳಿದು ಕಾರ್ಯ ವಿಧಾನವನ್ನು ಗೊತ್ತುಮಾಡಿ, ಅದಕ್ಕೆ ತಕ್ಕ ಪಂಡಿತಮಂಡಲಿಯನ್ನು ಆರಿಸಿ ನೇಮಕಮಾಡಿದುದು ವಿಶ್ವವಿದ್ಯಾನಿಲಯಕ್ಕೆ ಯಶಸ್ಸನ್ನು ಸಂಪಾದಿಸಿಕೊಡತಕ್ಕ ವಿಷಯವಾಗಿದೆ. ಆ ಪಂಡಿತಸಭೆಯವರು ತಮ್ಮ ಕೆಲಸವನ್ನು ನೆರವೇರಿಸುವುದರಲ್ಲಿ ಮುಖ್ಯೋದ್ದೇಶವನ್ನು ಲಕ್ಷ್ಯದಲ್ಲಿಟ್ಟು, ತಕ್ಕ ಪರಾಮರ್ಶೆಯೊಡನೆಯೂ ಜಾಗರೂಕತೆಯೊಡನೆಯೂ ನಡೆದುಕೊಂಡಿದ್ದಾರೆ. ಗ್ರಂಥವು ಅತಿಸಂಕ್ಷಿಪ್ತವಾಗಿಲ್ಲ, ಅತಿ ವಿಸ್ತಾರವೂ ಆಗಿಲ್ಲ. ವಿಷಯಪ್ರತಿಪಾದನೆಯು ವಿಶದವಾಗಿಯೂ ಪ್ರಮಾಣವತ್ತಾಗಿಯೂ ಇದೆ.

ಈಗ ಪ್ರಕಟವಾಗಿರುವುದು ಸಂಪೂರ್ಣಗ್ರಂಥವಲ್ಲ; ಅದರ ಪೂರ್ವಾರ್ಧ ಮಾತ್ರ. ಈ ಸಂಪುಟದಲ್ಲಿ ಈ ಕೆಳಗಿನ ಮೂರು ಭಾಗಗಳು ಅಡಗಿವೆ:—

(೧) ಹಳಗನ್ನಡದ ವ್ಯಾಕರಣ—ಮ|| ಟಿ. ಶ್ರೀನಿವಾಸರಾಘವಾಚಾರ್ಯರು, ಮ|| ಬಿ. ಕೃಷ್ಣಪ್ಪನವರು, ಇವರಿಂದ.

(೨) ಕನ್ನಡ ಛಂದಸ್ಸು—ಮ|| ಟಿ. ಶ್ರೀನಿವಾಸರಾಘವಾಚಾರ್ಯರವರಿಂದ.

(೩) ಅಲಂಕಾರ—(೧-೧೧ ಪ್ರಕರಣಗಳು) ಮ|| ಎ. ಆರ್. ಕೃಷ್ಣಶಾಸ್ತ್ರಿಗಳವರಿಂದ.

,, (೧೨-೧೩ ಪ್ರಕರಣಗಳು) ಮ|| ಕೆ. ವರದಾಚಾರ್ಯರವರಿಂದ.

ಈ ಸುಪ್ರಖ್ಯಾತ ವಿದ್ವಾಂಸರು ಬೇರೆಬೇರೆಯಾಗಿ ಗ್ರಂಥಭಾಗಗಳನ್ನು ಬರೆದ ಬಳಿಕ, ಅವುಗಳನ್ನು ಸಭೆಯವರೆಲ್ಲರೂ ಒಟ್ಟಿಗೆ—ಎಂದರೆ, ಈ ನಾಲ್ವರ ಜೊತೆಗೆ ಮ|| ಟಿ. ಎಸ್. ವೆಂಕಣ್ಣಯ್ಯನವರೂ ಮ|| ಬಿ. ಎಂ. ಶ್ರೀಕಂಠಯ್ಯನವರೂ ಸೇರಿ–ಪರಾಮರ್ಶಿಸಿರುತ್ತಾರೆ. ಆದಕಾರಣ ಗ್ರಂಥವು ಎಷ್ಟು ಚೆನ್ನಾಗಿ ಪರಿಶುದ್ಧವಾಗ ಬಹುದೋ ಅಷ್ಟು ಚೆನ್ನಾಗಿ ಪರಿಶುದ್ಧಿಹೊಂದಿ ಪರಿಷ್ಕೃತವಾಗಿದೆಯೆಂದು ನಾವು ಧಾರಾಳವಾಗಿ ಭಾವಿಸಬಹುದು. ಇನ್ನು ಮುಂದಿನ ಸಾಮಾನ್ಯ ಜಿಜ್ಞಾಸುಗಳಿಗೆ ಈ "ಕೈಪಿಡಿ" ಯು ಪ್ರಮಾಣಭೂತವಾದ ಸಂಗ್ರಹಗ್ರಂಥವಾದೀತು.

ಇಂಥ ಪುರಾತನ ಸಂಪ್ರದಾಯ ವಿವರಣೆಯು ಈ ನೂತನ (ಗ್ರಂಥ) ರಚನೆಯ ಕಾಲಕ್ಕೆ ಆವಶ್ಯಕವೆಂದು ಮೇಲೆ ಹೇಳಿದೆಯಲ್ಲವೆ? ಅದು ಹೇಗೆ—ಎಂದು ಕೇಳುವವರಿಗೆ ತಕ್ಕ ಉತ್ತರವನ್ನು ಮ|| ಶ್ರೀಕಂಠಯ್ಯನವರ ಒಂದು ಉಪನ್ಯಾಸದಿಂದಲೇ ಒದಗಿಸಬಹುದು. ಅವರು ಸುಮಾರು ೧೫ ವರ್ಷಗಳಹಿಂದೆ ಆಡಿದಮಾತು ಇದು:—

"ತಾಯಿ ಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ, ಹಾಗೆಯೇ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಹಾರುವುದಕ್ಕೆ ಆಗಲಾರದು."

ಮನುಷ್ಯರಿಗೂ, ಮನುಷ್ಯಸಮಾಜಗಳಿಗೂ ಕೆಲಕೆಲವು ಹುಟ್ಟುಗುಣಗಳೂ, ಕೆಲ ಕೆಲವು ಜನ್ಮಲಕ್ಷಣಗಳೂ ಇರುವಂತೆ ನಮ್ಮ ಮಾತುಗಳಿಗೂ ಭಾಷೆಗೂ ಕೆಲವು ಬಗೆಯ ಸ್ವಭಾವಗಳೂ ಜಾಯಮಾನಗಳೂ ಉಂಟು. ಹೀಗೆ ಮಾತಿನ ಒಳಮರ್ಮಗಳನ್ನೂ ಗುಣಲಕ್ಷಣಗಳನ್ನೂ ತಿಳಿಯಬೇಕಾದರೆ ಪೂರ್ವಕವಿಗಳ ಮತ್ತು ಲಾಕ್ಷಣಿಕರ ಶುಶ್ರೂಷೆಯಹೊರತು ಉಪಾಯಾಂತರವಿಲ್ಲ. ಆ ಮರ್ಮಲಕ್ಷಣಗಳನ್ನು ತಿಳಿದುಕೊಳ್ಳದೆ ಬರೆಯುವವನ ಬರೆವಣಿಗೆಯು ಸ್ವಕೀಯನ ವಾಕ್ಕಾಗದೆ ಪರದೇಶೀಯನ ವಾಕ್ಯದಂತೆ ವಕ್ರವಕ್ರವಾಗಿ ವಿಕಾರವಾಗಿರುವುದು. ಇನ್ನುಮುಂದಿನ ಭಾಷಾಸರಣಿಯು ಇಲ್ಲಿಗೆ ಹಿಂದಿನಿಂದ ಬಂದಿರುವ ಭಾಷೆಯ ಅಖಂಡಪ್ರವಾಹವೇ ಆಗಬೇಕು. ನದಿಯ ದಡಗಳು ಬೇರೆ ಬೇರೆ ಆಗಬಹುದು, ಉಪನದಿಗಳು ಬೇರೆ ಬೇರೆ ಆಗಬಹುದು, ಆಳ ಅಗಲಗಳು ಬೇರೆ ಬೇರೆ ಆಗಬಹುದು; ಅದರ ಮುಖ್ಯ ಪ್ರವಾಹದ ನೀರು ಮಾತ್ರ ಒಂದುಕಡೆ ಸಂಪೂರ್ಣವಾಗಿ ಇಮರಿಹೋಗಿ ಇನ್ನೊಂದು ಕಡೆ ಬೇರೆಯಾಗಿ ಹುಟ್ಟಲಾರದು. ಹಾಗೆ ಆದಲ್ಲಿ ಅದು ಎರಡು ನದಿಗಳೆನ್ನಿಸುವುದೇ ಹೊರತು ಒಂದೇ ನದಿ ಎನ್ನಿಸಲಾರದು. ನಮ್ಮ ಭಾಷೆಯ ಮುಂದಿನ ರೂಪಾವತಾರದಲ್ಲಿ ಹಳೆಯ ಪದ್ಧತಿಗಳು ಸ್ವಲ್ಪಮಟ್ಟಿಗೆ ಮಾರ್ಪಡಬೇಕಾಗಿರುವುದು ಸಹಜ. ಆದರೆ ಆ ಮಾರ್ಪಾಟುಗಳಿಗೂ ಕೂಡ ಕೆಲವು ಕಟ್ಟುಪಾಡುಗಳು ಇರುವುದು

ಉಚಿತವಾಗಿದೆ. ಹಿಂದಿನ ನಿರ್ಬಂಧವು ಸಡಿಲಬೇಕು; ಆದರೆ ಸ್ವೇಚ್ಛಾಪ್ರವರ್ತನೆಯಾಗಬಾರದು. ಹೊಸ ಸ್ವಾತಂತ್ರ್ಯ ಬರಬೇಕು; ಆದರೆ ಮರ್ಯಾದೆಯೇ ಇಲ್ಲದೆ ಹೋಗಬಾರದು. ಭಾಷಾರಸವು ನಿಂತಕಡೆಯೇ ನಿಂತು ನಾರುವ ಕುಂಟೆಯ ನೀರೂ ಆಗಬಾರದು, ದಡಗಳನ್ನು ಮೀರಿ ಹರಿದು ಗ್ರಾಮಾರಾಮಗಳನ್ನು ಹಾಳುಮಾಡುವ ಜಲಪ್ರಳಯವೂ ಆಗಬಾರದು. ಅದು ಸ್ವಚ್ಛತೆಯಿಂದಲೂ, ಮಿತ ರಭಸದಿಂದಲೂ ಚಿತ್ರವಿನ್ಯಾಸದಿಂದಲೂ ರಮಣೀಯವೂ ಉಪಕಾರಕವೂ ಆಗಿ ಹರಿಯುವ ನದಿಯಂತೆ ಇರಬೇಕು. ಈಗ ಕನ್ನಡಕ್ಕೆ ಹೊಸದಾಗಿ ಬರಬೇಕಾಗಿರುವ ಗುಣಲಕ್ಷಣಗಳು—ಎಂದರೆ ರೀತಿ ಸ್ವಾತಂತ್ರ್ಯ, ಭಾವ ವೈಶಾಲ್ಯ, ವಿಷಯ ವೈವಿಧ್ಯ, ಪದಪ್ರಯೋಗ ಸೌಲಭ್ಯ ಇವೇ ಮೊದಲಾದುವು—ಇಂಗ್ಲಿಷ್ ಮೊದಲಾದ ಭಾಷೆಗಳ ಅನುವಾದದ ಮೂಲಕವೂ ಲೌಕಿಕವ್ಯವಹಾರಾಭಿವೃದ್ಧಿಯ ಸಂಪರ್ಕದ ಮೂಲಕವೂ ಬರತಕ್ಕುವಾಗಿವೆ. ಹಿಂದಿನಿಂದಲೂ ಬೆಳೆದುಬಂದು ಇನ್ನು ಮುಂದೆಯೂ ಸ್ಥಿರವಾಗಿ ನಿಲ್ಲಬೇಕಾಗಿರುವ ಗುಣಲಕ್ಷಣಗಳಾದರೋ ಪ್ರಾಚೀನ ಕಾವ್ಯಶಾಸ್ತ್ರಗಳ ಅಭ್ಯಾಸಗಳಿಂದಲೇ ಬರಬೇಕಾದುವು. ಆ ಪ್ರಾಚೀನ ಕಾವ್ಯಶಾಸ್ತ್ರಗಳ ಸಾರಭೂತವಾದ ಗ್ರಂಥವೇ ಈ ಕೈಪಿಡಿ.

ವ್ಯಾಕರಣ ಭಾಗದಲ್ಲಿಯ ವಿಷಯವು ನಾಗವರ್ಮ ಕೇಶಿರಾಜ ಭಟ್ಟಾಕಳಂಕರನ್ನು ಅನುಸರಿಸಿರುವುದು ನ್ಯಾಯವಾಗಿಯೇ ಇದೆ. ಸಂಜ್ಞೆ ವಿಧಿಗಳನ್ನು ಈಗಿನ ಕನ್ನಡದ ವಾಕ್ಯಗಳಲ್ಲಿ ಕೊಟ್ಟಿದೆ; ಉದಾಹರಣೆಗಳನ್ನು ಮಾತ್ರ ಹಳಗನ್ನಡದಲ್ಲಿ ಕೊಟ್ಟಿದೆ. ವರ್ಣ, ಸಂಧಿ, ನಾಮಪದ, ಕ್ರಿಯಾಪದ, ಅವ್ಯಯ, ತದ್ಧಿತ, ಕೃದಂತ, ಸಮಾಸ, ತದ್ಭವ, ಪ್ರಯೋಗವೈಲಕ್ಷಣ್ಯ—ಇವುಗಳನ್ನು ಕುರಿತ ೧೦ ಪ್ರಕರಣಗಳಲ್ಲಿ ವಿಷಯವು ಸಮಗ್ರವಾಗಿದೆ. ಇಲ್ಲಿ ಕೊಟ್ಟಿರುವ ಸೂತ್ರಗಳಿಗೆ ಆಧಾರಗಳಾವುವೆಂಬುದನ್ನು ಕೆಳಗೆ ಟಿಪ್ಪಣಿಗಳಲ್ಲಿ ಸಂಕೇತಾಕ್ಷರಗಳಿಂದ ಸೂಚಿಸಿದ್ದಿದ್ದರೆ ಜಿಜ್ಞಾಸುಗಳಿಗೆ ಬಹು ಸಹಾಯವಾಗುತ್ತಿತ್ತು

ಮೇಲೆಹೇಳಿದ ಮೂವರು ವ್ಯಾಕರಣಕಾರರಲ್ಲಿ ಪರಸ್ಪರ ಮತಭೇದವೇನಾದರೂ ಉಂಟೆ? ಅದು ಯಾವಯಾವ ಅಂಶಗಳಲ್ಲಿ? ಅವರಲ್ಲಿ ಒಬ್ಬರಕಾಲದಿಂದ ಮತ್ತೊಬ್ಬರಕಾಲಕ್ಕೆ ಭಾಷಾರೂಪಗಳಲ್ಲಿ ವ್ಯತ್ಯಾಸಗಳೇನಾದರೂ ನಡೆದಿದ್ದಂತೆ ತೋರುತ್ತದೆಯೆ?—ಈ ಪ್ರಶ್ನೆಗಳಿಗೆ ಲೇಖಕರು ಕೈಹಾಕಿಲ್ಲ. ಬಹುಶಃ "ಕೈಪಿಡಿ"ಯ ಎರಡನೆಯ ಸಂಪುಟದಲ್ಲಿ ಬರುವ "ಭಾಷೆಯ ಚರಿತ್ರೆ" ಯಲ್ಲಿ ಈ ಪ್ರಶ್ನೆಗಳಿಗೆ ಸ್ವಲ್ಪಮಾತ್ರ ಉತ್ತರದೊರೆಯಬಹುದು. ಹಳಗನ್ನಡವು ಪೂರ್ವಕಾಲದಲ್ಲಿ ಕನ್ನಡ

ನಾಡಿನಲ್ಲಿ ವಿಶೇಷವಾಗಿ ವ್ಯವಹಾರದಲ್ಲಿತ್ತೆಂದು ಇಲ್ಲಿ ಹೇಳಿದೆ. ಅದು ಕೇವಲ ಗ್ರಂಥ ಲೇಖನರೂಪದ ವ್ಯವಹಾರವೋ ಅಥವಾ ಸಾಧಾರಣವಾದ ಬಾಯಮಾತಿನ ವ್ಯವಹಾರವೋ ಸ್ಪಷ್ಟವಾಗಿ ಹೇಳುವುದು ಆವಶ್ಯಕವೆಂದು ತೋರುತ್ತದೆ. ನೃಪತುಂಗ ಪಂಪರುಗಳ ಕನ್ನಡವು ಒಂದಾನೊಂದುಕಾಲದಲ್ಲಿ ಸಾಮಾನ್ಯಜನರಿಗೆ ಸಾಮಾನ್ಯ ವಾಗಿ ರೂಢಿಯಲ್ಲಿದ್ದುದೆ? ಸಾಧ್ಯವಾದರೆ ಇದು ನಿಷ್ಕರ್ಷೆಯಾಗಿ ತಿಳಿಯಬೇಕಾದ ವಿಷಯ. ಏಕೆಂದರೆ ಕನ್ನಡವು ಹಿಂದೆ ಆಗಾಗ ಬದಲಾಯಿಸಿ ಬೆಳೆದುಕೊಂಡು ಬಂದಿದೆಯೆಂಬುದು ಸಿದ್ಧವಾದರೆ, ಇನ್ನು ಮುಂದೆಯೂ ಅದಕ್ಕೆ ಬದಲಾಯಿಸಿ ಬೆಳೆಯುವ ಅಧಿಕಾರವುಂಟೆಂಬುದನ್ನು ಎಲ್ಲರೂ ಸುಲಭವಾಗಿ ಒಪ್ಪುವಂತೆ ಆಗುತ್ತದೆ. ಸಮಾಸಪ್ರಕರಣದಲ್ಲಿ ದ್ವಿಗು ಅವ್ಯಯೀಭಾವಗಳ ಹೆಸರುಗಳನ್ನು ಎತ್ತಿಲ್ಲ. ಅದೇಕೆ? ಅರಿಸಮಾಸೋದಾಹರಣೆಗಳಲ್ಲಿ "ಮೂಡುವ ರವಿ" ಎಂಬುದನ್ನು ಸೇರಿಸಿದೆ. ಇದು ಸಮಸ್ತ ಪದವೆ? ಈ ಬಗೆಯ ಶಂಕೆಗಳು ಒಂದೆರಡು ಕಡೆ ಕಾಣಬಹುದು. ಆದರೆ ಅವುಗಳಿಂದ ಗ್ರಂಥಕ್ಕೆ ಕುಂದೆಂದು ಹೇಳಲಾಗದು.

ಎರಡನೆಯ ಭಾಗವಾದ ಛಂದೋವಿವರಣೆಯು ವರ್ಣವೃತ್ತ ಮಾತ್ರಾ ವೃತ್ತಗಳ ಲಕ್ಷಣಗಳನ್ನು ದೃಷ್ಟಾಂತಸಹಿತವಾಗಿ ತಿಳಿಸುತ್ತದೆ. ಈ ಛಂದಃ ಪ್ರಬಂಧ ಗಳಲ್ಲಿ ಕನ್ನಡಕ್ಕೆ ಸಹಜವಾಗಿ ಬಂದಿರತಕ್ಕ ಪದ್ಯ ಗೀತ ರಗಳೆಗಳು ಯಾವ ತತ್ತ್ವ ವನ್ನು ಅನುಸರಿಸಿವೆ; ಸಂಸ್ಕೃತದಿಂದ ಬಂದಿರತಕ್ಕ ಶ್ಲೋಕ ವೃತ್ತಗಳಿಗಿಂತ ಅವು ಯಾವ ಭಾಗದಲ್ಲಿ ಅನುಕೂಲವಾದುವು, ಯಾವ ಭಾಗದಲ್ಲಿ ಪ್ರತಿಕೂಲವಾದುವು; ಸಾಂಗತ್ಯ ಷಟ್ಪದಿಗಳು ಸಂಗೀತದ ತಾಳಗತಿಯನ್ನು ಎಷ್ಟುಮಟ್ಟಿಗೆ ಅನುಸರಿಸಿವೆ; ಇರತಕ್ಕ ನಾನಾವೃತ್ತ ಪದ್ಯ ರೂಪಗಳಲ್ಲಿ ಕನ್ನಡಕ್ಕೆ ಹೆಚ್ಚು ಅನುಕೂಲವಾದುವು ಯಾವುವು, ಅಪರೂಪವಾಗಿ ಉಪಯುಕ್ತವಾಗತಕ್ಕುವು ಯಾವುವು—ಎಂಬಿವೇ ಮೊದಲಾದ ವಿಚಾರಗಳು ಈ ಭಾಗದಲ್ಲಿ ಆಸಕ್ತರಾದವರ ಮನಸ್ಸಿಗೆ ಸ್ವಾಭಾವಿಕ ವಾಗಿ ತೋರುತ್ತವೆ. ಅವುಗಳ ಗೋಜಿಗೆ ಲೇಖಕರು ಹೋಗಿಲ್ಲ. ಅವು ಪರಿಶೋಧನೆ ಯಿಂದ ಗೊತ್ತಾಗಬೇಕಾದ ವಿಷಯಗಳು. ಬಹುಶಃ ಇವುಗಳನ್ನೂ ಎರಡನೆಯ ಸಂಪುಟದ ಲೇಖಕರು ಸ್ವಲ್ಪಮಟ್ಟಿಗಾದರೂ ವಿಶದಗೊಳಿಸಬಹುದು.

ಈ ಗ್ರಂಥದಲ್ಲಿ ಮೂರನೆಯ ಭಾಗವಾದ ಅಲಂಕಾರ ನಿರೂಪಣೆಯು ವಿಸ್ತಾರ ದಲ್ಲಿ ಉಳಿದೆರಡು ಭಾಗಗಳಿಗಿಂತಲೂ ದೊಡ್ಡದಾಗಿದೆ. ವಿಷಯ ಸ್ವಾರಸ್ಯದಲ್ಲಿಯೂ ಹಾಗೆಯೇ ಇದೆ ಎಂದು ಹೇಳಿದರೆ ಪಕ್ಷಪಾತವಾಗಲಾರದು. ಈ ಭಾಗವನ್ನು ಬರೆದ ವರು, ವ್ಯಾಕರಣ ಛಂದಶ್ಶಾಸ್ತ್ರಗಳವರಂತಲ್ಲದೆ, ತಮ್ಮ ಶಾಸ್ತ್ರದ ಪೂರ್ವಚರಿತ್ರೆ

ಯನ್ನು ಸಂಕ್ಷೇಪವಾಗಿ ಕೊಟ್ಟಿದ್ದಾರೆ. ಕಾವ್ಯವೆಂದರೇನು, ರಸವೆಂದರೇನು, ಅಲಂಕಾರವೆಂದರೇನು, ಎಂಬಿವೇ ಮೊದಲಾದ ಮೂಲವಿಷಯಗಳನ್ನು ಸಂಕ್ಷೇಪವಾಗಿ ವಿಚಾರಮಾಡಿ ಪ್ರಾಚೀನರ ಮತಮತಾಂತರಗಳನ್ನು ಕುರಿತು ಚರ್ಚೆನಡೆಸಿದ್ದಾರೆ. ಈ ಪ್ರಕರಣಗಳು ಕಾವ್ಯಪಾಠದಲ್ಲಿ ಆಸಕ್ತಿಯುಳ್ಳವರ ಗಮನಕ್ಕೆ ಅತ್ಯಂತಾರ್ಹವಾಗಿವೆ. ಕಾವ್ಯ ಮೀಮಾಂಸೆಯಲ್ಲಿ ನಮ್ಮ ಪುರಾತನರು ಎಷ್ಟು ದೂರ ಹೊಕ್ಕು ವಿಚಾರ ನಡೆಸಿದ್ದರೆಂಬುದನ್ನು ಇಲ್ಲಿ ಕಾಣಬಹುದು. ಕಾವ್ಯಕ್ಕೆ ಜೀವವಾವುದು, ಮುಖ್ಯ ಶರೀರವಾವುದು, ಆಭರಣಮಾತ್ರವಾದುದಾವುದು, ಈ ಆಭರಣಗಳಲ್ಲಿ ಮುತ್ತು ರತ್ನಗಳಂತೆ ಕಾಂತಿಯನ್ನು ಹೆಚ್ಚಿಸತಕ್ಕವು ಯಾವುವು, ಕೊಂಬಿನಬಳೆ ಕವಡೆಯ ಸರಗಳಂತೆ ವಿಕಾರವನ್ನುಂಟುಮಾಡತಕ್ಕವು ಯಾವುವು, ಎಂಬೀ ಗುಣದೋಷ ವಿಮರ್ಶೆಗೆ ಈ ಪ್ರಕರಣಗಳು ಸಹಾಯ ಕೊಡುತ್ತವೆ. ಈ ಬಗೆಯ ಗುಣದೋಷವಿಮರ್ಶೆಯನ್ನರಿಯದ ಕಾವ್ಯಪಾಠಕನು ರಸಜ್ಞನಾಗಲಾರನು.

ಈ ಅಲಂಕಾರ ಭಾಗದ ಎರಡನೆಯ ವಿಭಾಗದಲ್ಲಿ (೧೨—೧೩ ನೆಯ ಪ್ರಕರಣಗಳಲ್ಲಿ) ಪ್ರಾಸ ಯಮಕ ಮುಖ್ಯಗಳಾದ ಶಬ್ದಾಲಂಕಾರಗಳೂ, ಉಪಮೆ, ಉತ್ಪ್ರೇಕ್ಷೆ, ದೀಪಕ, ರೂಪಕ, ಇವೇ ಮೊದಲಾದ ಅರವತ್ತು ಅಲಂಕಾರಗಳೂ ಉದಾಹರಣೆಗಳೊಡನೆ ವಿವರಿಸಲ್ಪಟ್ಟಿವೆ.

ಕಾವ್ಯತತ್ತ್ವಜಿಜ್ಞಾಸೆಯಲ್ಲಿ ನಮ್ಮ ಪುರಾತನರು ಬಹುದೂರ ಹೊಕ್ಕವರೆಂದು ಹೇಳಿದೆವು. ಅವರಲ್ಲಿ ಕೆಲವರು ಅತಿದೂರ—ಶಕ್ತಿಮೀರಿದಷ್ಟು ದೂರ—ನಡೆದು ಶ್ರಮಪಟ್ಟರೆಂದು ಒಂದರ್ಥದಲ್ಲಿ ಹೇಳಬಹುದು. ಕಾವ್ಯದ ರಾಜ್ಯವು ಮನೋರಾಜ್ಯ. ಮನಸ್ಸಾದರೋ ಕಣ್ಣು ಕೈಗಳ ತೂಕ ಅಳತೆಗಳಿಗೆ ದೊರೆಯದುದು. ಮನಸ್ಸು ಆತ್ಮಸರೂಪವೇ ಎಂದು ಉಪನಿಷತ್ತುಗಳು ಹೇಳುತ್ತವೆ. ಅಂಥಾ ಸೂಕ್ಷ್ಮದ್ರವ್ಯವಾದ ಮನಸ್ಸಿನ ಸ್ಥಿತಿಗತಿಗಳನ್ನು ನಾವು ಸ್ಥೂಲವಾಗಿ ಗುರುತಿಸಲಾಗುವುದೇ ಹೊರತು, ಅವುಗಳನ್ನು ಆಮೂಲಾಗ್ರವಾಗಿ ವಿಮರ್ಶಿಸಿ, ಪ್ರತ್ಯೇಕಿಸಿ, ಬೇರೆಬೇರೆ ಅಂಶಗಳ ಬಣ್ಣ ತೂಕ ಗಾತ್ರಗಳನ್ನು ಗೊತ್ತುಮಾಡಲು ಸಾಧ್ಯವಲ್ಲ. ಮನೋವ್ಯಾಪಾರಗಳಲ್ಲಿ ಅನೇಕಗಳು ಮಿಶ್ರವಾದುವು. ಅವುಗಳ ಒಳಗಿನ ತಿರುಳು ಇದೊಂದೇಸರಿ, ಅವುಗಳ ಶಕ್ತಿವ್ಯಾಪನೆಗಳು ಇಷ್ಟುಮಾತ್ರವೇ ಸರಿ—ಎಂದು ನಿರ್ಧರಿಸ ಹೊರಡುವುದು ಸಾಹಸದ ಪ್ರಯತ್ನ. ನಮ್ಮ ಪೂರ್ವದ ಅಲಂಕಾರಿಕರಲ್ಲಿ ಕೆಲವರು ಈ ಸಾಹಸಕ್ಕೆ ತೊಡಗಿ ಮನುಷ್ಯನ ಮನಸ್ಸಿನಲ್ಲಿ ಹುಟ್ಟಬಹುದಾದ ಸಮಸ್ತಭಾವವಿಭಾವಗಳ ಭೇದಪ್ರಭೇದಗಳನ್ನೆಲ್ಲಾ ಪಟ್ಟಿಹಾಕಿ ಮಗ್ಗಿಯಕೋಷ್ಟಕದ ಹಾಗೆ ಮಾಡಿಟ್ಟರು. ಇದು ಸ್ವಲ್ಪ

ಅತಿಯೆಂದೇ ತೋರುತ್ತದೆ. ಮನಶ್ಶಾಸ್ತ್ರಶೋಧಕರಿಗೆ ಈತೆರದ ಮನೋಭಾವ ವಿಭಜನೆಯು ಪ್ರಯೋಜಕವಾಗಬಹುದು. ಆದರೆ ಕಾವ್ಯತತ್ತ್ವಾನ್ವೇಷಿಗಳು ಈ ಪಟ್ಟಿಯೇ ಪರಮದರ್ಶನವೆಂದೂ ಅದರಿಂದ ಹೊರಗೆ ತತ್ತ್ವಾಂಶವೇನೂ ಇಲ್ಲವೆಂದೂ ಒಪ್ಪಲಾಗುವುದಿಲ್ಲ. ಈ ಪಟ್ಟಿಗಳಿಂದ ಕಾವ್ಯಸಂಬಂಧವಾದ ವಾದವಿವಾದಗಳೇನೂ ನಿಲ್ಲುವಂತಾಗಿಲ್ಲ. ಪ್ರತಿಭಾಪ್ರಧಾನವಾದ ಯಾವಕಲೆಯೂ—ತತ್ರಾಪಿ ಕಾವ್ಯಕಲೆಯು—ಶಾಸ್ತ್ರದ ಹಿಡಿತಕ್ಕೆ ಸಿಕ್ಕತಕ್ಕುದಲ್ಲ. ಕವಿತೆಯ ಜೀವಾಳವು ಶಾಸ್ತ್ರಾತೀತವಾದುದು.

ಅನೇಕ ಗಹನಮರ್ಮಗಳನ್ನು ಬೋಧಿಸುವುದಾಗಿ ಹೃದಯಂಗಮವಾಗಿರುವ ಕಾವ್ಯಸ್ವರೂಪೋಪನ್ಯಾಸದಲ್ಲಿ, ರಸವೇ ಕಾವ್ಯದ ಮುಖ್ಯಸಾರವೆಂದೂ ಆನಂದವೇ ಅದರ ಮುಖ್ಯಫಲವೆಂದೂ ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಎಲ್ಲರೂ ಅಂಗೀಕರಿಸುವರು. ಆದರೆ ಅವರು ಬಾಹ್ಯಪ್ರಪಂಚವಸ್ತುಗಳ ವರ್ಣನೆಯನ್ನು ಕಾವ್ಯ "ರಸ" ದಿಂದ ಬೇರೆಮಾಡಿರುವಂತೆಯೂ "ಉಪದೇಶ" ಕಾರ್ಯವನ್ನು ಕಾವ್ಯಫಲದಿಂದ ಬೇರೆಮಾಡಿರುವಂತೆಯೂ ತೋರುತ್ತದೆ. ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಅದು ಅಧಿಕಪ್ರಸಂಗವೆನಿಸಲಾರದಷ್ಟೆ? "ರಸ" ವೆಂಬುದು ಹೃದಯದಲ್ಲಿ (ಬುದ್ಧಿಯಲ್ಲಿ ಅಲ್ಲ) ಆಗತಕ್ಕ ಒಂದು ಅನುಭವ. ಈ ಹೃದಯಾನುಭವದಿಂದ ಅದರ ವೇಗಕ್ಕನುಗುಣವಾಗಿ ಒಂದು ಬುದ್ಧಿ ವ್ಯಾಪಾರವು ಹುಟ್ಟುವುದು ಸ್ವಾಭಾವಿಕ. ಹೃದಯಾನುಭವವು ಒಂದಾಗಿಯೇ ಆದರೂ, ಅಥವಾ ತನ್ನ ಜೊತೆಗೆ ಬುದ್ಧಿವ್ಯಾಪಾರವನ್ನು ಸ್ವಲ್ಪಮಟ್ಟಿಗೆ ಸೇರಿಸಿಕೊಂಡಾದರೂ, ವಾಕ್ಕಿನರೂಪದಲ್ಲಿ ಹೊರಹೊರಟು ಬಂದರೆ ಅದು ಕಾವ್ಯವಾಗುವುದು. ಹೃದಯ ಬುದ್ಧಿಗಳ ಅನುಭವ ವೈಶದ್ಯವೂ ವ್ಯಾಪಾರ ವಿಶೇಷವೂ ಕವಿಯ ಪ್ರತಿಭೆಗೆ ಅನುಸಾರವಾಗಿರುವುವು. ಪ್ರತಿಭೆಯೆಂಬುದು ಮನೋಬುದ್ಧಿಗಳೆರಡರ ಒಂದು ವಿಚಿತ್ರ ಸಮ್ಮೇಳನದ ಪರಿಣಾಮ. ಅದು ಒಂದು ಬಗೆಯ ಉಭಯ ಸಂಸ್ಕಾರದ ಪ್ರತಿಫಲ ಇದರ ಮಹಿಮೆಯಿಂದ ಕವಿಗೆ ಇತರರಿಗೆ ಉಂಟಾಗದ ಅನುಭವಗಳೂ ಅಂಥಾ ಅನುಭವಗಳನ್ನು ಸೂಚಿಸಲು ಇತರರಿಗೆ ತೋರದ ವಕ್ರೋಕ್ತಿ ಅಲಂಕಾರ ಮೊದಲಾದ ಶಾಬ್ದಿಕೋಪಾಯಗಳೂ ದೊರೆಯುತ್ತವೆ. ಈ ಪ್ರತಿಭೆಯ ಮೂಲಹೇತುವು ಎಂಥಾದ್ದೆಂಬುದು ನಾವು ಚರ್ಚಿಸಲಾಗದ ಸಂಗತಿ. ಅದು ಯಾವುದಾದರೂ ಆಗಲಿ; ಆ ಪ್ರತಿಭೆಯ ಮಹತ್ವಕ್ಕನುಗುಣವಾಗಿ, ಅದರ ನೈರ್ಮಲ್ಯಕ್ಕನುಗುಣವಾಗಿ, ಅದರ ಜಾಗರೂಕತೆಗನುಗುಣವಾಗಿ, ಕವಿಗೆ ಬಾಹ್ಯಪ್ರಪಂಚದಲ್ಲಾಗುವ ರಮಣೀಯವಸ್ತುಸಂದರ್ಶನದಿಂದಲೇ ಅಥವಾ ಅದ್ಭುತಕೃತಿಸಂದರ್ಶನ

ದಿಂದಲೇ ಕೆಲವು ಹೃದಯಾನುಭವಗಳಾಗಬಹುದು. ಈ ಅನುಭವಗಳ—ಈ ಹಾರ್ದ ಯಥಾರ್ಥಗಳ—ಅಭಿವ್ಯಕ್ತಿಯೇ ವಸ್ತುವರ್ಣನೆ. ಆ ವರ್ಣನೆಯು ವಸ್ತುವಿನ ಕೇವಲ ಬಾಹ್ಯ ಚಿಹ್ನೆಯ ನಾಮಸ್ಮರಣೆಯಾಗಿ

"ಗೋಪೀನಾಥ ಗುರುಂ ವಂದೇ ಗೋಪೀಚಂದನ ಧಾರಿಣಂ"

ಎಂಬ ರೀತಿಯಲ್ಲಿದ್ದರೆ, ಕವಿಯ ಶಕ್ತಿಯು ಹೀನವಾದುದೆಂದೂ ಆತನ ವಾಕ್ಯದಲ್ಲಿ ಕಾವ್ಯತ್ವವೇ ಇಲ್ಲವೆಂದೂ ಹೇಳಬೇಕಾಗುವುದು. ಹಾಗಲ್ಲದೆ ವರ್ಣನೆಯು ವಸ್ತುವಿನ ಚಿತ್ರವನ್ನು ಪಾಠಕನ ಕಣ್ಣೆದುರಿಗೆ ತಂದು, ಕವಿಗುಂಟಾದ ಸಂತೋಷ ವಿಸ್ಮಯಗಳನ್ನು ಅವನಿಗೂ ಉಂಟುಮಾಡಿಕೊಡಬಲ್ಲುದಾದರೆ, ಅದರಲ್ಲಿ ಹಾರ್ದ ಯಥಾರ್ಥವು ರೂಪುಗೊಂಡಿರುವುದೆಂದೂ, ಅದು ಸರಸವಾದುದೆಂದೂ, ಹೇಳಲೇ ಬೇಕಾಗುವುದು. ಆದರೆ ಒಂದು ಕ್ರೋಡವಾಕ್ಯವನ್ನು ಇದಕ್ಕೆ ಸೇರಿಸಬೇಕು :— ಭೌತಿಕ ಪ್ರಪಂಚದ ವಸ್ತುಗಳಿಂದ ಮನಸ್ಸಿಗೆ ಆಗುವ ಅನುಭವಗಳಿಗಿಂತ ಮಾನವನ ಅಂತಃಕರಣ ವಿಕಾರಗಳ ಚಿಂತನೆಯಿಂದ ಆಗುವ ಅನುಭವಗಳು ಉತ್ಕಟವಾದುವು. ಹೀಗಿರುವುದರಿಂದ, ಗಿರಿ ವನ ಸಮುದ್ರಾದಿಗಳ ವರ್ಣನೆಗಿಂತ ವಿರಹಿ ಕರುಣಿ ಧೀರರುಗಳ ಚರ್ಯೆಯ ವರ್ಣನೆಗಳು ರಸವತ್ತರಗಳಾಗಿ ತೋರುವುದು ಸ್ವಾಭಾವಿಕ ವಾಗಿಯೇ ಇದೆ. ಉಪದೇಶ ವಿಷಯವೂ ಹೀಗೆಯೇ. ಅದು ರಸಾನುಭವ ಜನಿತವಾದ ಎಂದರೆ, ಹಾರ್ದ ಯಥಾರ್ಥ ದರ್ಶನದಿಂದ ಉಂಟಾದ, ಒಂದು ಬುದ್ಧಿ ಸಂಸ್ಕಾರ. ಅದು ಕಾವ್ಯಪಾಠದ ಪ್ರತ್ಯಕ್ಷ ಫಲವಲ್ಲ ; ಪರೋಕ್ಷ ಫಲಿತಾಂಶ. ಶೋಕಾನುಭವ, ಅದ್ಭುತಾನುಭವ, ವೀರಾನುಭವಗಳು ಹೃದಯಪ್ರಾಂತದಲ್ಲಿ ಆದ ಕೂಡಲೆ ಬುದ್ಧಿಯು ಕೆಲವು ವಿಕಾರಗಳನ್ನು ಪಡೆಯಲೇ ಬೇಕಲ್ಲವೆ ? ಆ ವಿಕಾರಗಳ ಅಥವಾ ಸಂಸ್ಕಾರಗಳ ಪ್ರತಿಫಲವೇ ಕಾರುಣ್ಯ, ಶಾಂತಿ, ಶೌರ್ಯ ಮೊದಲಾದ ನೀತಿ ಮೂಲಗಳಾದ ಗುಣಗಳು. ಕಾವ್ಯವು ನೀತಿಯನ್ನು ಬೋಧಿಸಬೇಕಾದುದಿಲ್ಲ ; ಆದರೆ ಅದು ನೀತಿಗೆ ಬೇಕಾದ ಬುದ್ಧಿ ಪರಿಪಾಕವನ್ನು ಸ್ವಲ್ಪಮಟ್ಟಿಗಾದರೂ, ನಮಗೆ ಗೋಚರಿಸದ ರೀತಿ ಯಲ್ಲಾದರೂ, ಉಂಟುಮಾಡಲೇ ಮಾಡುವುದು. ಏಕೆಂದರೆ, ಕಾವ್ಯದ ಬಂಧುವಾದ ಮನಸ್ಸೂ, ನೀತಿಯ ಬಂಧುವಾದ ಬುದ್ಧಿಯೂ ಎರಡೂ ಒಂದೇ ಅಂತಸ್ತತ್ತ್ವದ ಎರಡು ಕೈಗಳು, ಅಥವಾ ಎರಡು ಕಣ್ಣುಗಳು. ಆವೆರಡೂ ಪರಸ್ಪರ ಸಹಕಾರಿ ಗಳಾಗಿ ಉತ್ತೇಜಕಗಳಾಗಿ ಇರುತ್ತವೆ. ಕಾವ್ಯದ ಉಪದೇಶವು "ಸನ್ಮತಿಶತಕ" "ಸೋಮೇಶ್ವರಶತಕ" ಗಳ ರೀತಿಯಲ್ಲಿ ಆಗಬೇಕಾದುದಿಲ್ಲ. "ಕಾಂತಾಸಮ್ಮಿತ ತಯಾ" ಎಂದು 'ಕಾವ್ಯಪ್ರಕಾಶ' ಕಾರರೇ ಹೇಳಿದ್ದಾರೆ. ಜಾಣೆಯಾದವಳು ತನಗೆ ಬೇಕಾದುದನ್ನು ಬಾಯಿಬಿಟ್ಟು ಪ್ರಿಯನಿಗೆ ಹೇಳುತ್ತಿರಬೇಕಾದುದಿಲ್ಲ ; ಅವಳು ತನ್ನ

ಒಲಪು ಒಯ್ಯಾರಗಳಿಂದ ಪ್ರಿಯನನ್ನು ಒಲಿಸಿ ವಶಪಡಿಸಿಕೊಂಡು, ತನ್ನ ಇಂಗಿತವನ್ನು ಅವನು ತಾನಾಗಿಯೇ ಕಂಡುಕೊಂಡು ನಡಿಸುವಂತೆ ಮಾಡುತ್ತಾಳೆ. ಕಾವ್ಯದ ಉಪದೇಶವು ಈ ಮಾಯಗಾತಿಯ ರೀತಿಯದು. ಈ ಕಾವ್ಯಕಾರ್ಯವನ್ನು ಉಪದೇಶವೆಂದಾಗಲಿ ಬೋಧನೆಯೆಂದಾಗಲಿ ಕರೆಯುವುದಕ್ಕಿಂತ, ಪ್ರೇರಣೆಯೆಂದು ಕರೆಯುವುದು ಉಚಿತವಾದೀತು.

ಈ ಗ್ರಂಥದ ಪದಶೈಲಿಯಲ್ಲಿ ಸಂಸ್ಕೃತವು ಹೆಚ್ಚಿದೆಯೆಂಬ ಆಕ್ಷೇಪಣೆಯನ್ನು ವಿಷಯದ ಸ್ವಭಾವವನ್ನರಿತವರು ಮಾಡಲಾರರೆಂದು ನಂಬಿದ್ದೇವೆ. ಇಂತಹ ಬರೆವಣಿಗೆಯಲ್ಲಿ ಸಂಸ್ಕೃತವು ಅನಿವಾರ್ಯವಾಗಿ ಬರುತ್ತದೆ. ಏಕೆಂದರೆ ವಿಷಯವು "ಶಾಸ್ತ್ರ." ಕನ್ನಡದಲ್ಲಿ ಶಾಸ್ತ್ರ ಪಕ್ಕಿಕೆಯು ಎಷ್ಟು ಮಾತ್ರವೂ ಸ್ವತಂತ್ರವಾಗಿ ಬೆಳೆದಿಲ್ಲ. ತರ್ಕ ಮೀಮಾಂಸಾದಿ ಶಾಸ್ತ್ರಗಳು ಕನ್ನಡದಲ್ಲಿಲ್ಲ. ಕನ್ನಡದಲ್ಲಿರತಕ್ಕ "ಶಾಸ್ತ್ರ" ಗಳು ಭಾಷಾಸಂಬಂಧಿಗಳಾದ ವ್ಯಾಕರಣ ಛಂದಸ್ಸು ಅಲಂಕಾರಗಳು ಮಾತ್ರ. ಇವುಗಳಾದರೋ ಸಂಸ್ಕೃತವನ್ನೇ ಅವಲಂಬಿಸಿಕೊಂಡು ಬೆಳೆದಿರತಕ್ಕವು. ಹೀಗಿರುವುದರಿಂದ ಶಾಸ್ತ್ರಪ್ರಸಂಗಕ್ಕೆ ಬೇಕಾದ ಪದಸಾಮಗ್ರಿಯು ಕನ್ನಡದಲ್ಲಿ ಹುಟ್ಟಿಲ್ಲ. ಧಾತು ಸಿದ್ಧವಾಗದೆ, ರೂಪನಿಷ್ಕೃಷ್ಟತೆಯಿಲ್ಲದಿರುವ ಭಾಷೆಯಲ್ಲಿ ಶಾಸ್ತ್ರ ಪರಿಭಾಷೆ ಹುಟ್ಟುವುದು ಸುಲಭವೂ ಅಲ್ಲ. ಅಥವಾ ಹಠಮಾಡಿ ತದ್ಭವ ಶಬ್ದಗಳನ್ನೋ ಹಳಗನ್ನಡ ಮಾತುಗಳನ್ನೋ ಹಿಸುಕಿ, ಅವುಕಿ, ತಿರಿಚಿ, ಹೊಸಮಾತುಗಳನ್ನು ಸೃಷ್ಟಿಮಾಡಿದರೆ ಅವುಗಳನ್ನು ಅರ್ಥಮಾಡಿಕೊಳ್ಳುವವರು ತಾನೆ ಯಾರು ? ಈ ಕಷ್ಟದಲ್ಲಿ, ಸಿದ್ಧವಾದ ಪರಿಭಾಷೆಯುಳ್ಳ ಸಂಸ್ಕೃತದ ಸಹಾಯವನ್ನು ಬಿಟ್ಟರೆ ನಮಗೆ ಬೇರೆ ಗತಿಯೇ ಇಲ್ಲ. ಸಂಸ್ಕೃತವನ್ನು ನಾವು ಬಿಡಬೇಕೆಂಬುದಾದರೂ ಏಕೆ ? ಕನ್ನಡಿಗರಿಗೆ ಸಂಸ್ಕೃತವು ಪರಭಾಷೆಯಲ್ಲ, ಅದು ಪೋಷಕಭಾಷೆ. ಕರ್ಣಾಟಕವು ತಾನು ಎಷ್ಟೇ ದೊಡ್ಡದಾದರೂ, ಆರ್ಯಪ್ರಪಂಚದ ಒಂದು ಭಾಗವೇ ಹೊರತು, ಅದು ತಾನೇ ಬೇರೆ ಸ್ವತಂತ್ರ ಲೋಕವೆಂದು ಹೇಳಲಾದೀತೆ ? ಆರ್ಯ ಪ್ರಪಂಚಕ್ಕೆಲ್ಲ ಏಕಭಾಷೆಯಾಗಿ, ಕನ್ನಡಕ್ಕೆ ಹಿಂದೆ ಮಹೋಪಕಾರಮಾಡಿದ ಸಂಸ್ಕೃತವನ್ನು ಈಗ ನಾವು ತೊರೆಯಬೇಕೆಂದು ಯಾರೂ ಹೇಳಲಾರರು. ಇಂತಹ ಗ್ರಂಥದಲ್ಲಿ ಸಂಸ್ಕೃತಪದಗಳನ್ನು ಏಕೆ ಉಪಯೋಗಿಸಿದರೆಂಬುದು ನ್ಯಾಯವಾದ ಪ್ರಶ್ನೆಯಲ್ಲ. ಅದರಲ್ಲಿ ಸಂಸ್ಕೃತವನ್ನು ಅನಾವಶ್ಯಕವಾಗಿ—ಗರ್ವಪೂರ್ವಕವಾಗಿ—ಉಪಯೋಗಿಸಿರುವರೆ—ಎಂಬುದು ನ್ಯಾಯವಾದ ಪ್ರಶ್ನೆ. ಇಂಥ ಪ್ರಶ್ನೆಗೆ ಈ "ಕೈಪಿಡಿ" ಯ ವಿಷಯದಲ್ಲಿ ಅವಕಾಶವಿಲ್ಲವೆಂದು ನಮಗೆ ತೋರುತ್ತದೆ. ಪ್ರಥಮಪ್ರಯತ್ನದಲ್ಲಿ ಇಂಥ ಕೊರತೆಗಳು ಮರೆವಿನಿಂದ ಅಲ್ಲಲ್ಲಿ ಉಳಿದಿದ್ದರೆ ಅದು ಆಶ್ಚರ್ಯವೇನೂ ಅಲ್ಲ. ಒಂದು

ವೇಳೆ ಒಂದೆರಡುಕಡೆ ಕ್ಲಿಷ್ಟಪದಗಳೂ ಕಠಿನಪ್ರಯೋಗಗಳೂ ಕಂಡುಬಂದರೆ ಅವುಗಳನ್ನು ಮುಂದಿನ ಮುದ್ರಣದಲ್ಲಿ ತಿದ್ದಿಯಾರೆಂದು ನಾವು ಧಾರಾಳವಾಗಿ ನಂಬಬಹುದು. ಈ ಗ್ರಂಥವನ್ನು ಓದತಕ್ಕವರು ಕೆಳಗಿನ ತರಗತಿಯ ಬಾಲಕರೇನೂ ಅಲ್ಲ. ತಕ್ಕಮಟ್ಟಿಗೆ ವಿದ್ಯಾವಂತರಾಗಿ ಇನ್ನೂ ಕಲಿಯಬೇಕೆನ್ನುವ ಪ್ರೌಢಪಾಠಕರಿಗೆ ತಕ್ಕ ಗ್ರಂಥವಿದು. ವಿದ್ಯಾಗಂಧವೇ ಇಲ್ಲದವರು ಕಾವ್ಯರಹಸ್ಯೋಪನ್ಯಾಸವನ್ನು ಏತಕ್ಕೆ ಕಟ್ಟಿಕೊಂಡಾರು? ಆದ್ದರಿಂದ ಈ "ಕೈಪಿಡಿ" ಯು ವಿಷಯಕ್ಕೂ ಉದ್ದಿಷ್ಟ ಪಾಠಕರಿಗೂ ತಕ್ಕ ಶೈಲಿಯಲ್ಲಿದೆಯೆಂದು ಹೇಳುವುದು ಯುಕ್ತವಾಗಿದೆ.

ಕಾವ್ಯಸ್ವರೂಪೋಪನ್ಯಾಸಕರು ಇಂಗ್ಲಿಷ್ ಸಾಹಿತ್ಯದಿಂದ ಕನ್ನಡಕ್ಕೆ ಬರುತ್ತಿರುವ ಹೊಸಬೆಳಕನ್ನು ಕುರಿತು ಪ್ರಸ್ತಾವಿಸಿ "ಕೈಪಿಡಿ"ಯ ಎರಡನೆಯ ಸಂಪುಟದ ಕಡೆ ದೃಷ್ಟಿಹಾಕಿರುವಂತಿದೆ. ಈ ಮೊದಲನೆಯ ಸಂಪುಟದ ಸ್ವಾರಸ್ಯವು ಎರಡನೆಯದನ್ನು ನೋಡಬೇಕೆಂಬ ಕುತೂಹಲವನ್ನು ತೀವ್ರಪಡಿಸತಕ್ಕುದಾಗಿದೆ.

ಡಿ. ವಿ. ಗುಂಡಪ್ಪ.

ವ ಸ್ತು ಕೋ ೯ ಶ

ಇದೇ ಫೆಬ್ರುವರಿ ತಿಂಗಳು ೧೨ ನೆಯ ತಾರೀಖಿನ ದಿನ ವಿದ್ಯಾಭ್ಯಾಸದ ಇಲಾಖೆಯ ಪ್ರಧಾನಾಧಿಕಾರಿಗಳಾಗಿದ್ದ ಶ್ರೀಮಾನ್ ಎನ್. ಎಸ್. ಸುಬ್ಬರಾವ್ ಎಂ. ಎ. ಬಾರ್-ಆಟ್-ಲಾ ಅವರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವವೂ, ೨೨ನೆಯ ತಾರೀಖಿನ ದಿನ ಕವಿವರ್ಯರೂ "ಕರ್ಣಾಟಕ" ಪತ್ರಿಕಾ ಸಂಪಾದಕರೂ ಆದ ಶ್ರೀಮಾನ್ ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಮಹಾ ರಾಜಾ ಕಾಲೇಜಿನ ಕರ್ಣಾಟಕ ಸಂಘದ ವಾರ್ಷಿಕೋತ್ಸವವೂ ನಡೆದುವು. ವಾರ್ಷಿಕೋತ್ಸವಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಪ್ರಾರ್ಥನೆ ಕಾರ್ಯದರ್ಶಿಗಳ ವರದಿ ಗಾನಗೀತ ಮುಂತಾದುವುಗಳು ನಡೆದುವು. ಅವುಗಳ ವಿಸ್ತಾರವಾದ ವರದಿಯನ್ನು ಕೊಡಲು ಇಲ್ಲಿ ಸ್ಥಳವಿಲ್ಲ. ಸ್ಥಳವಿಲ್ಲದಿದ್ದರೂ ಅಧ್ಯಕ್ಷಭಾಷಣಗಳಿಗೆ ಸ್ಥಳ ಕಲ್ಪಿಸಬೇಕೆಂಬುದೊಂದು ತೀವ್ರವಾದ ಆಶೆ: ಆದರೆ ಆ ಆಶೆಯು ನಿರಾಶೆಯಾಗುತ್ತಿದೆ. ಏಕೆಂದರೆ, ಸಭಿಕರಲ್ಲಿ ಸಾಮಾಜಿಕನಾಗಿ ಆ ಮಾತುಗಳನ್ನು ಕೇಳಿದಾಗ ಅವು ಹಣ್ಣಿನ ರಸದಂತೆ ರುಚಿನೋಡುತ್ತಿದ್ದಹಾಗೇ ರಕ್ತಗತವಾಗಿಬಿಟ್ಟುವು. ಹೀಗಿರುವಾಗ ಆ ಮಾತುಗಳನ್ನು ಸ್ವಸ್ವರೂಪದಲ್ಲಿ ಹೇಗೆ ಪಾಠಕರ ಮುಂದೆ ತಂದಿಡುವುದು ? ಕನ್ನಡದಲ್ಲಿ ಬೇಗ ಲಘುಲೇಖನ ವಿದ್ಯೆಯಾದರೂ ಬರಬಾರದೇ ?

ಕರ್ಣಾಟಕ ಸಂಘಗಳ ವಾರ್ಷಿಕೋತ್ಸವ

ಮ|| ಎನ್. ಎಸ್. ಸುಬ್ಬರಾಯರು ತಾವು ವಿದ್ಯಾರ್ಥಿಗಳಾಗಿದ್ದಾಗ ಕನ್ನಡಕ್ಕೆ ಇದ್ದ ಸ್ಥಾನ ಮರ್ಯಾದೆಗಳನ್ನೂ ಈಗ ಕ್ರಮಕ್ರಮವಾಗಿ ಅದಕ್ಕೆ ಬರುತ್ತಿರುವ ಪ್ರಾಶಸ್ತ್ಯ ಗೌರವಗಳನ್ನೂ ಹೋಲಿಸಿ, ಕನ್ನಡಭಾಷಾಸಾಹಿತ್ಯಗಳು ಅಭಿವೃದ್ಧಿಗೆ ಬರುತ್ತಿವೆ ಎಂಬುದಕ್ಕೆ ಎಲ್ಲೆಲ್ಲೂ ಶುಭಲಕ್ಷಣಗಳು ಕಾಣುತ್ತಿವೆಯೆಂದೂ ಕನ್ನಡಿಗರೆಲ್ಲರೂ ಮಮತೆಯಿಂದ ಕೆಲಸಮಾಡುವುದು ಧರ್ಮವೆಂದೂ ಹೃದಯಂಗಮವಾಗಿ ಮಾತನಾಡಿ ಮೆ|| ಲೂಯಿ ರೈಸ್‌ರವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಮ|| ಬಿ. ಎಂ. ಶ್ರೀಕಂಠಯ್ಯನವರು ಹೊಸ ಕವಿತೆಯ ಲಕ್ಷಣವನ್ನು ವಿವರಿಸುತ್ತ ಕಾವ್ಯರಚನೆಗೆ ಸೂತ್ರಪ್ರಾಯವಾದ ಈ ಮಾತ

ನ್ನಾಡಿದರು: "ಸತ್ಯ, ಧರ್ಮ, ಸ್ವಾತಂತ್ರ್ಯ, ಸೌಂದರ್ಯ—ಇವೇ ಕಾವ್ಯದ ಜೀವ. ಇವು ಎಲ್ಲಿ ದೊರೆಯುತ್ತವೆಯೋ ಆ ಕಡೆಗೆ ನಾವು ತಿರುಗಬೇಕು; ಯಾರಲ್ಲಿ ದೊರೆಯುತ್ತವೆಯೋ ಅವರನ್ನು ಉಪಾಸಿಸಬೇಕು. ಈ ಅಂಶದಲ್ಲಿ ಪೂರ್ವ, ಪಶ್ಚಿಮ ಎಂದು ಭೇದವೆಣಿಸಬಾರದು. ನಮಗೆ ಬೇಕಾದದ್ದು ಜ್ಯೋತಿ. ಆ ಜ್ಯೋತಿ ಪೂರ್ವ ದಲ್ಲಿದ್ದಾಗ ಆ ದಿಕ್ಕಿಗೆ ಕೈಮುಗಿಯುತ್ತೇವೆ. ನೆತ್ತಿಯ ಮೇಲಕ್ಕೆ ಬಂದಾಗ ಕತ್ತೆತ್ತಿ ಧ್ಯಾನಿಸುತ್ತೇವೆ. ಸಂಜೆಯಲ್ಲಿ ಪಶ್ಚಿಮದಲ್ಲಿದ್ದಾಗ ಅತ್ತ ತಿರುಗಿ ಉಪಾಸನೆಮಾಡು ತ್ತೇವೆ. ಜ್ಯೋತಿ ಮತ್ತೆ ಪೂರ್ವಕ್ಕೆ ಬಂದಾಗ ಪೂರ್ವವನ್ನೇ ಇನ್ನೊಂದುಸಲ ಆಶ್ರಯಿಸೋಣ." ಹೀಗೆ ಹೇಳಿ, "ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ| ಧಿಯೋ ಯೋ ನಃ ಪ್ರಚೋದಯಾತ್ ||" ಎಂದು ಗಾಯತ್ರೀಮಂತ್ರವನ್ನುಚ್ಚರಿಸಿ ಅದಕ್ಕೆ ಆಧುನಿಕ ಕನ್ನಡ ಸಾಹಿತ್ಯದ ಪರವಾಗಿ ಒಂದು ಉಜ್ಜ್ವಲವಾದ ವ್ಯಾಖ್ಯಾನಮಾಡಿದರು. ಮ|| ಗುಂಡಪ್ಪನವರು ಹೊಸಕನ್ನಡಕವಿತೆಯು ಅಭಿವೃದ್ಧಿ ಯಾಗುತ್ತಿರುವುದಕ್ಕೆ ಸಂತೋಷಪಟ್ಟು, ಈ ಆವೇಶದಲ್ಲಿ ನಾವು ಗದ್ಯವನ್ನು ಮರೆಯ ಬಾರದೆಂದೂ, ಕೀಳು ಪದ್ಯಕ್ಕಿಂತಲೂ ಉತ್ತಮವಾದ ಗದ್ಯಕ್ಕೆ ಹೆಚ್ಚು ಆವಶ್ಯಕತೆ ಯೆಂದೂ ಸೂಚಿಸಿ ಹೈನೆ (Heine) ಎಂಬ ಜರ್ಮನ್ ಕವಿ ತನ್ನ ಜನಗಳಿಗೆ, "ನಾನು ಸತ್ತಬಳಿಕ ನನ್ನ ಗೋರಿಯ ಮೇಲೆ ಗೌರವಕ್ಕಾಗಿ ಹೂವಿನ ಮಾಲೆ ಯನ್ನೇನೋ ಹಾಕುತ್ತೀರಿ. ಆದರೆ ಅಷ್ಟೇ ಸಾಲದು. ಅದರ ಜೊತೆಯಲ್ಲಿ ಒಂದು ಕತ್ತಿಯನ್ನೂ ಇರಿಸಿ" ಎಂದು ಹೇಳಿದ ಮಾತನ್ನು ಶ್ಲಾಘಿಸುತ್ತ ಕಾವ್ಯವು ಹೂವಿ ನಂತೆ ಕೋಮಲವೂ ಹೌದು, ಕತ್ತಿಯಂತೆ ತೀಕ್ಷ್ಣವೂ ಹೌದು. ನಿಜವಾದ ಕಾವ್ಯವು ಕತ್ತಿಯಂತೆಯೇ ಅಧರ್ಮವನ್ನೂ ಅನ್ಯಾಯವನ್ನೂ ಖಂಡಿಸಬಲ್ಲುದು. ಸತ್ಯದ ಆಧಾರದ ಮೇಲೆ ಕಾವ್ಯವನ್ನು ಕಟ್ಟಿ ಅದಕ್ಕೆ ಉಜ್ಜ್ವಲತೆಯನ್ನೂ ತೀಕ್ಷ್ಣತೆ ಯನ್ನೂ ಸಂಪಾದಿಸಬೇಕು."—ಎಂದು ಉಪದೇಶಮಾಡಿದರು.

ಮೈಸೂರಿನಲ್ಲಿ ಮ|| ಕೆ. ವಿ. ಪುಟ್ಟಪ್ಪ, ಬಿ.ಎ., ಅವರಿಂದ ರಚಿತವಾದ "ಯಮನ ಸೋಲ"ನ್ನೂ ಬೆಂಗಳೂರಲ್ಲಿ "ಗದಾಯುದ್ಧ" ನಾಟಕವನ್ನೂ ಅಭಿನಯಿಸಿದರು. ಎರಡೂ ಎರಡು ಮಾದರಿಯವು—ಹೊಸರೀತಿಯವು. ಇವುಗಳನ್ನು ವಿದ್ಯಾರ್ಥಿಗಳು, ಕೆಲವು ಸಂದರ್ಭಗಳಲ್ಲಿ ಅನುಭವವುಳ್ಳ ಕಸಬುದಾರರಿಗಿಂತಲೂ ಚೆನ್ನಾಗಿ, ಅಭಿನಯಿಸಿದರು.

ಮೈಸೂರಿನ ನಮ್ಮ ಸೋದರ ಕರ್ಣಾಟಕಸಂಘದವರು ಈ ವಾರ್ಷಿಕೋತ್ಸವದ ದಿವಸ "ಕಿರಿಯ ಕಾಣಿಕೆ" ಎಂಬ ಹೊಸಮಾದರಿಯ ಕವಿತೆಗಳ ಸಂಗ್ರಹ

ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಗ್ರಂಥವು ಸಣ್ಣದಾಗಿದ್ದರೂ ಮುದ್ದಾಗಿದೆ. "ಆಕಾರಕ್ಕೆ ಸದೃಶವಾದ ಪ್ರಜ್ಞೆ." ಎಲ್ಲವೂ ವಿದ್ಯಾರ್ಥಿಗಳ ನುಡಿ; ಆದರೂ ವಿದ್ಯಾರ್ಥಿದಶೆಯಲ್ಲಿಯೇ ಹೀಗೆ ಬರೆದರೆ ಮುಂದೆ ಇನ್ನೂ ಹೇಗೆ ಬರೆಯಬಹುದೆಂಬ ಕುತೂಹಲ ಉತ್ಸಾಹ ಆಶ್ಚರ್ಯಗಳನ್ನು ಉಂಟುಮಾಡುವಂತಿವೆ. ಈ ಗ್ರಂಥಕ್ಕೆ ಮ|| ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಅವರಿಂದ 'ಮುನ್ನುಡಿ' ಯನ್ನು ಬರೆಸಿ ಈ "ಕಿರಿಯ ಕಾಣಿಕೆ" ಯನ್ನು ಸಂಘದ ಅಧ್ಯಕ್ಷರೂ ವಿಶ್ವವಿದ್ಯಾಲಯದ ರಿಜಿಸ್ಟ್ರಾರರೂ ಹೊಸಕನ್ನಡ ಸಾಹಿತ್ಯಕ್ಕೆ ನಾನಾವಿಧದಲ್ಲಿ ಉತ್ತೇಜಕರೂ ಆದ ಮ|| ಬಿ. ಎಂ. ಶ್ರೀಕಂಠಯ್ಯ, ಎಂ. ಎ., ಬಿ. ಎಲ್., ರವರಿಗೆ ಉಚಿತವೂ ಭಕ್ತಿಪುರಸ್ಸರವೂ ಆದ ಈ ಮಾತುಗಳಲ್ಲಿ ಕಾಣಿಕೆಯಾಗಿ ಅರ್ಪಿಸಿದ್ದಾರೆ:—

ಗುರುವೆ, ನೀವು ಕಲಿಸಿದೆರಡು
ಚರಣಗಳನೆ ಮರಳಿ ಹಾಡಿ,
ಕಿರಿಯಕಾಣಿಕೆಯನು ತಂದೆ
ವಿದನು ಸಲಿಸಲು.—
ಹಿರಿಯರಾಡುವುದನೆ ಹಸುಳೆ
ತೊದಲಿ ನಲಿಯವೆ!

ಕಾಣಿಕೆಯು ಕಿರಿಯದಾದರೂ ಕಿರಿಯರದ್ದಾದರೂ ಭಕ್ತಿಪುರಸ್ಸರವಾಗಿ ಅರ್ಪಿಸಿರುವದರಿಂದ ಅದನ್ನು ಹಿರಿಯರು ಹಿರಿಯಕಾಣಿಕೆಯಾಗಿ ಭಾವಿಸಿ ಸಂತೋಷ ಪಟ್ಟಿದ್ದಾರೆಂಬುದರಲ್ಲಿ ಸಂದೇಹವಿಲ್ಲ.

ಈ ಸಲದ ಸಂಕ್ರಾಂತಿಸಂಚಿಕೆಯು ಬಂದಮೇಲೆ ಮೈಸೂರಿನಿಂದ "ಓರ್ವ ಪ್ರಬುದ್ಧ ಕನ್ನಡಿಗ"ರು ಮುಂದೆ ಕೊಟ್ಟಿರುವಂತೆ ಒಂದು ಮೂಗುಪತ್ರವನ್ನು ಬರೆದರು. ನಮಗೆ ಸ್ತೋತ್ರಪಾಠವನ್ನು ಕೇಳಿಕೇಳಿ ಕಿವಿ ಬೆಂಡಾಗಿತ್ತು. ಆದ್ದರಿಂದ ಇದನ್ನು ಓದಿ ಕಿವಿ ಸ್ವಲ್ಪ ಚುರುಕಾಯಿತು—

ಪ್ರಬುದ್ಧಕರ್ಣಾಟಕದ ಸಂಪಾದಕರಲ್ಲಿ ವಿಜ್ಞಾಪನೆಗಳು.

ಸಂಕ್ರಾಂತಿಯ ಸಂಚಿಕೆಯು ಕೈಗೆಬಂದಾಗ ಕೆಲವು ಭಾವಗಳು ತೋರಿದುವು. ಮೊದಲಿಂದ ಕೊನೆಯವರೆಗೂ ಓದಿನೋಡಿದ ಬಳಿಕ ಅದೇ ಭಾವಗಳೇ ಸ್ಥಿರೀಕೃತವಾದುವು. ಸಂಚಿಕೆಯಮೇಲಿನ ರಟ್ಟು ಬಲವಾದ ಯೋಚನೆಯನ್ನುಂಟುಮಾಡಿತು. ಪ್ರತಿಸಲವೂ ಪುಸ್ತಕವನ್ನು ತೆಗೆದುಕೊಂಡರೆ ಹೊರಗೆ ನೋಡುವುದಕ್ಕೆ ಎಷ್ಟೋ ಆನಂದವಾಗುತ್ತಿತ್ತು. ಈಗಲಾದರೋ ರಟ್ಟಿನ ಬಣ್ಣ ಮಾಸಲು; ರಟ್ಟೋ ಬಲು ತೆಳುವು. ನೋಡುವುದಕ್ಕೆ ಅಂದವಾಗಿ ಕಾಣಲಿಲ್ಲ.

ಒಳಗಿನ ವಿಷಯದಲ್ಲೋ ಎಂದರೆ—ಮೊದಲು ಸಾಮಾನ್ಯವಾಗಿ ಸಣ್ಣಕತೆಯನ್ನೇ ಓದುವ ಪದ್ಧತಿಯಷ್ಟೆ. ಹಾಗೇ ಓದುವುದಕ್ಕೆ ಮೊದಲುಮಾಡಿಯಾಯಿತು. ಉಪ್ಪಿಲ್ಲ, ಹುಳಿ ಇಲ್ಲ; ಸಂತೆ

ಹೊತ್ತಿಗೆ ಮೂರುವೊಳ ನೆಯ್ದಿರುವಂತೆ ತೋರಿತು. ಕತೆಯಲ್ಲಿ ವಸ್ತುವೇನು, ಶ್ರೀಪತಿಯ ಆಶಯವೇನು ಇವೊಂದೂ ಸ್ಪಷ್ಟವಾಗಿ ಕಾಣಲಿಲ್ಲ. ಸನ್ನಿವೇಶಗಳ ಹೊಂದಾವಣೆಯು ಸಮರ್ಪಕವಾಗಿ ತೋರಲಿಲ್ಲ. ಇದರಮೇಲೆ ಅಕ್ಷರಸ್ಖಾಲಿತ್ಯಗಳು ವಿಪರೀತವಾಗಿ ಕಾಣುತ್ತವೆ. ಮೊದಲು ಇದನ್ನು ಯಾಕೆ ತೆಗೆದುಕೊಂಡೆನಪ್ಪಾ, "ಸುಬ್ಬಣ್ಣ" ನನ್ನಾದರೂ ಮುಂದಕ್ಕೆ ಓದಿದ್ದರೆ ಚೆನ್ನಾಗಿತ್ತು ಎಂದುಕೊಂಡೆ.

ಸಂಕ್ರಾನ್ತಿಯ ಸಂಚಿಕೆಯೂ ಕಾಮನಸಂಚಿಕೆಯೂ ಒಟ್ಟಿಗೇ ಬರಬಹುದೆಂದು ಮೊದಲು ಯೋಚಿಸಿದ್ದೆ. ಆದರೆ ಕಾಮನ ಹಬ್ಬಕ್ಕೆ ಮುಂಚೆಯೇ ಬಂದುಬಿಟ್ಟದ್ದನ್ನು ನೋಡಿ ವಿಷಯ ಬಹು ಅಮೂಲ್ಯವಾದ್ದಿರಬಹುದು ! ಅದನ್ನು ಸಂಗ್ರಹಿಸುವುದಕ್ಕೆ ವಿಳಂಬವಾಗಿರಬಹುದೆಂದು ಯೋಚಿಸಿ, ಪುಸ್ತಕವನ್ನು ನೋಡಿದರೆ ಮನಸ್ಸಿನ ಆಶೆಯಲ್ಲವೂ ಭಗ್ನವಾಯಿತು.

ಮನಸ್ಸಿಗೆ ಒಂದು ವಿಷಯ ಹೊಳೆಯಿತು. ಈ ಸಂಚಿಕೆಗಳಿಗೆ ಇಟ್ಟಿರುವ ಹಬ್ಬಗಳ ಹೆಸರುಗಳನ್ನು ಸ್ವಲ್ಪ ಮುಂದಕ್ಕಾದರೂ ತಳ್ಳಬಾರದೆ ನಮ್ಮ ಪಂಚಾಂಗಗಳಲ್ಲಿ ? ಇಲ್ಲ ಸಂಚಿಕೆ ಯಾವ ಹಬ್ಬದ ಹೊತ್ತಿಗೆ ಹೊರಡುತ್ತ ಆ ಹಬ್ಬದ ಹೆಸರನ್ನು ಸೇರಿಸುವುದು. ಮಸಲಾ ಈಸಲ ಶಿವರಾತ್ರಿ ವೇಳೆಗೆ ಸಂಚಿಕೆ ಬಂತು ಎಂದು ಇಟ್ಟುಕೊಳ್ಳೋಣ. ಅದಕ್ಕೆ ಶಿವರಾತ್ರಿ ಸಂಚಿಕೆ ಎಂದೇ ಹೆಸರಿಟ್ಟು ಬಿಡುವುದು. ಇಲ್ಲದೆ ಶಿವರಾತ್ರಿಯ ಸಮಯದಲ್ಲಿ ಸಂಕ್ರಾನ್ತಿಯ ಸಂಚಿಕೆಯನ್ನು ತರಬಹುದಾದರೆ, "ನವರಾತ್ರಿಯಲ್ಲಿ ಶಿವರಾತ್ರಿ ಬಂದೀತೇ" ಎಂದು ಕೇಳಿದರೆ "ಹುಂ ಬರಬಹುದು" ಎಂದು ಉತ್ತರ ಕೊಡಕೂಡದೇನು ?

ಕಡೆಯ ಮಾತು ಕ್ಷಮಾಪಣೆ. ತಾವು ಕ್ಷಮಿಸಿದರೂ ಕ್ಷಮಿಸದಿದ್ದರೂ ಅದನ್ನು ಬೇಡುವುದು ನನ್ನ ಕೆಲಸ. ಇದನ್ನು ಬರೆದಮೇಲೆ ಹಾಕಲೋ ಬೇಡವೋ ಎಂದು ಯೋಚನೆಗಿಟ್ಟಿತು. ಕಡೆಗೆ "ನಮ್ಮ ಅಭಿಪ್ರಾಯಗಳೂ ಸ್ವಲ್ಪ ತಿಳಿಯಲಿ" ಎಂದು ನಿರ್ಧರಿಸಿ ಟಪಾಲಿಗೆ ಹೊರಟೆನು.

ಮೈಸೂರು, ಇತಿ ವಿಜ್ಞಪ್ತಯಃ,
ಪ್ರಭವ ಫಾಲ್ಗುಣ ಏಕಾದಶಿ. ಓರ್ವ ಪ್ರಬುದ್ಧ ಕನ್ನಡಿಗ.

ಇದರಲ್ಲಿ ಬರಿಯ ಔಪಚಾರಿಕವಾದ 'ಕ್ಷಮಾಪಣೆ' ಯನ್ನು ಬಿಟ್ಟರೆ ಉಳಿಯುವವು ಮೂರು ಅಂಶಗಳು—(೧) ರಟ್ಟಿನ ಬಣ್ಣ ಮಾಸಲು...ಬಲು ತೆಳುವು; ನೋಡುವುದಕ್ಕೆ ಅಂದವಾಗಿಲ್ಲ (೨) ಕಥೆಯು ಚೆನ್ನಾಗಿಲ್ಲ; ಇದರಲ್ಲಿ ಸ್ಖಾಲಿತ್ಯಗಳು ಹೆಚ್ಚಾಗಿವೆ (೩) ಸಂಚಿಕೆಯು ಹೊರಟದ್ದು ತಡ.

ಈ ಅಭಿಪ್ರಾಯಗಳನ್ನು ಖಂಡಿಸಿ ಕಾಗೆಯನ್ನು ನವಿಲೆಂದು ಸಾಧಿಸುವುದು ನಮ್ಮ ಇಷ್ಟವಲ್ಲ. ಏಕೆಂದರೆ, ಇವೆಲ್ಲವೂ ಲೋಪಗಳೆಂದು ನಮಗೇ ಗೊತ್ತಿದೆ; ಅವುಗಳನ್ನು ನಾವು ತಿಳಿದು ತಿಳಿದೂ ಅನಿವಾರ್ಯವಾದ್ದರಿಂದ ಸಂಕೋಚಪಟ್ಟುಕೊಂಡು ಕನ್ನಡಿಗರ ಮುಂದೆ ಇಟ್ಟಿರುವುದಾಗಿದೆ. ಆದರೂ ನಮಗೆ ತೋರುವ ಕೆಲವು ಭಾವಗಳನ್ನು ಇಲ್ಲಿ ಸೂಚಿಸಲಪೇಕ್ಷಿಸುತ್ತೇವೆ.

ರಟ್ಟಿನ ಬಣ್ಣ ಮಾಸಲು ಎಂಬುದು ನಿಜ; ಆದರೆ ಹಿಂದಿನ ಸಂಚಿಕೆಗಳಿಗೆ ಹಾಕುತ್ತಿದ್ದ ರಟ್ಟಿನ ಬಣ್ಣಕ್ಕಿಂತ ಮಾಸಲಲ್ಲ; ಅದಕ್ಕಿಂತ ಇನ್ನೂ ಶುಭ್ರವಾಗಿಯೇ

ಇದೆ; ಅಥವಾ ಮೊಸಲು ಶಬ್ದಕ್ಕೆ ಇದಕ್ಕೆ ವಿರುದ್ಧವಾಗುವಂತೆ ಮತ್ತೇನಾದರೂ ಅರ್ಥವಿದೆಯೋ ಕಾಣೆವು. ಅದು ತೆಳುವಿರಬಹುದು; 'ಬಲು ತೆಳುವು' ಎಂದು ಹೇಳಲಾರೆವು. ರಟ್ಟಿಗಾಗಿ ಇಷ್ಟು ದುಡ್ಡು ದಂಡಮಾಡುತ್ತೀರಿ ಎಂದು ಅನೇಕರು ಆಕ್ಷೇಪಿಸುತ್ತಿರುವಾಗಲೂ ನಾವು ಇದ್ದಿದ್ದರಲ್ಲಿ ದಪ್ಪವಾದ ದೃಢವಾದ ಅಂದವಾದ ರಟ್ಟನ್ನೇ ಆರಿಸಿ ಹಾಕುತ್ತಿದ್ದೇವೆಂದು ನಮ್ಮ ಪಾಠಕರು ಬಲ್ಲರು. ನಮ್ಮ ಮಗು ಚೆನ್ನಾಗಿ ಉಟ್ಟು ತೊಟ್ಟು ಇರಬೇಕೆಂದು ಪರರಿಗಿಂತಲೂ ನಮಗೆ ಹೆಚ್ಚಾಗಿ ಆಸೆಯಿದೆ; ಅದಕ್ಕೆ ದುಡ್ಡು ವೆಚ್ಚವಾಗುವುದೆಂದೇನು ಹಿಂತೆಗೆಯುವಂತಿಲ್ಲ; ಆದರೆ 'ದುಡ್ಡು ಕೊಟ್ಟರೂ ದೊಡ್ಡಪ್ಪ ಕೊಡ' ಎಂತ ಇದ್ದವರು ಮಾರದೇ, ಮಾರುವವರಲ್ಲಿ ಒಳ್ಳೆಯವಸ್ತು ಸಿಕ್ಕದೆ ಹೋದರೆ ಮಾಡುವುದೇನು? "ಮೈಸೂರು ಅಕ್ಕಿ ಈರನಗೆರೆ ಬದನೇಕಾಯಿ ಸಿಕ್ಕದಿದ್ದರೆ ಉಪವಾಸ ಮಾಡುವುದಕ್ಕಾಗುತ್ತದೆಯೇ?" ಎಂದು ಕೇಳಿದರೆ 'ಹುಂ ಮಾಡಬಹುದು' ಎಂದು ಉತ್ತರ ಕೊಡಬಹುದೇನು? (ಬೆತ್ತಲೆ ತಿರುಗಾಡುವ ಭಿಕಾರಿಗಳಂತೆ ರಟ್ಟೇ ಇಲ್ಲದೆ ಪತ್ರಿಕೆಯನ್ನು ಕಳುಹಿಸಬಹುದೋ?) ಬೆಂಗಳೂರಿನವರು ದುಡ್ಡು ತೆರುವುದು ತೆತ್ತು ಗುಂಟೂರು ಅಕ್ಕಿ ಬೀಜದ ಕಹಿಬದನೇಕಾಯಿ ತಿನ್ನುವಂತೆ ಕೆಲವುವೇಳೆ ಅಭಾವವೈರಾಗ್ಯದಿಂದ ಮೊಸಲೂ, ತೆಳುವೂ ಆದ ಕಾಗದವಾದರೂ ಸಿಕ್ಕಿತಲ್ಲಾ ಎಂದು ಸಂತೋಷಪಡಬೇಕಾಗಿದೆ. ನಮ್ಮಲ್ಲಿ, ಬೇಕಾದ ಕಾಗದವನ್ನು ಬೇಕಾದಾಗ ತಯಾರುಮಾಡಿಸಿ ಕೊಡುವ ಕಾಗದದ ಕಾರ್ಖಾನೆಗಳಿಲ್ಲ. 'ಅನ್ಯಮಿಂದ್ರಂ ಕರಿಷ್ಯಾಮಿ' ಎಂಬ ವಿಶ್ವಾಮಿತ್ರನ ತಪಶ್ಶಕ್ತಿ ಮೊದಲೇ ಇಲ್ಲ.

(೨) ಕಥೆಯು ಹಿಂದೆ ಬಂದ ಕೆಲವು ಕಥೆಗಳಷ್ಟು ಚನ್ನಾಗಿಲ್ಲದಿರಬಹುದು. ಆದರೆ ಅದರಲ್ಲಿ 'ಉಪ್ಪಿಲ್ಲ, ಹುಳಿಯಿಲ್ಲ' ಎಂದು ನಂಬಲಾರೆವು. ಅಲ್ಲದೆ, ಹಿಮಾಲಯ ಪರ್ವತದಲ್ಲಿ ಎಲ್ಲಾ ಭಾಗಗಳೂ ೨೯೦೦೨ ಅಡಿಯೆತ್ತರವೇ ಇರುವುದಿಲ್ಲ. ಮತ್ತು, ಇದುವರೆಗೆ ಯಾವ ಲೇಖನಗಳನ್ನು ಓದಿ ಪ್ರಬುದ್ಧ ಕನ್ನಡಿಗರಿಗೆ ನಾಲಗೆ ಸೂಕ್ಷ್ಮವಾಗಿದೆಯೋ, ಅಂಥ ಲೇಖನಗಳನ್ನು ಇದುವರೆಗೆ ತಯಾರಿಸಿ ಆರಿಸಿ ಒಪ್ಪಿ ಹಾಕುತ್ತಿದ್ದ ಸಂಪಾದಕಮಂಡಲಿಯೇ ಈಗಲೂ ಇದಕ್ಕೆ ಉತ್ತಮವಾದ ಸ್ಥಾನವನ್ನು ಕೊಟ್ಟು ಪ್ರಕಟಿಸಿದೆ. ಒರ್ವರು ಇರ್ವರು ಪ್ರಬುದ್ಧ ಕನ್ನಡಿಗರ ಅಭಿಪ್ರಾಯಕ್ಕಿಂತಲೂ ನಮ್ಮ ಸಂಪಾದಕಮಂಡಲಿಯಲ್ಲಿ ನಮಗೆ ಹೆಚ್ಚು ಪ್ರತ್ಯಯವಿದೆ; ಶ್ರೀಪತಿಯು ಸಂತೆಹೊತ್ತಿಗೆ ಮೂರುಮೊಳ ನೆಯ್ದನೋ ಮೂರುಗೇಣು ನೆಯ್ದನೋ ಅದನ್ನು ಯಾರು ಬಲ್ಲರು? ಅಲ್ಲದೆ ನಿದಾನವಾಗಿ ಮಾಡಿದ್ದೇ ಚೆನ್ನು ಜಾಗ್ರತೆ ಮಾಡಿದ್ದು ಹಾಳು ಎಂಬ ನಿಯಮವೇನೂ ಇಲ್ಲ. ಉತ್ತಮವಾದ ಕಾವ್ಯವನ್ನು ಬರೆದವರ ಅನುಭವ ಇದಕ್ಕೆ

ಅಪವಾದವೇ ಆಗಿರುತ್ತದೆ; ತಿಂಗಳುಗಟ್ಟಲೆ ತಲೆಚಚ್ಚಿಕೊಂಡರೂ ಹೊಳೆಯದಿರುವ, ಬರೆಯಲಾಗದ, ಸಂಗತಿಗಳು ಕೆಲವುವೇಳೆ ನಿಮಿಷಮಾತ್ರದಲ್ಲಿ ಸ್ಫುರಿಸಿ ಮಿಂಚಿನಂತೆ ಪ್ರವಹಿಸಿಬಿಡುತ್ತವೆ. ಆ ನಿಮಿಷದಲ್ಲಿ ಅದನ್ನು ಹಿಡಿದು ಕಟ್ಟಿಹಾಕಿಬಿಡಬೇಕು ಎಂದು ಅವರು ಹೇಳುತ್ತಾರೆ. ಇಂಥವರನ್ನು ಸಂತೆಹೊತ್ತಿಗೆ ಮೂರುಮೊಳ ನೆಯ್ಯುವವರೆಂದು ಅಲ್ಲಗಳೆಯಬಹುದೇ ?

ಇದರಲ್ಲಿ 'ವಸ್ತುವೇನು ?' ಎಂದು ಸಂದೇಹಪಡುವಷ್ಟು ಈ ಕಥೆಯು ಟೊಳ್ಳಾಗಿದೆಯೆ ? ಇದ್ದರೂ ಸಣ್ಣಕಥೆಯಲ್ಲಿ ವಸ್ತು ಯಾವಾಗಲೂ ಕರ್ಜಿಕಾಯಿ ವೊಳಗಿನ ಕಾಳಿನಂತೆ ಸ್ವಲ್ಪವೇ. ಶ್ರೀಪತಿಯ 'ಆಶಯ' ಸ್ಪಷ್ಟವಾಗಿಲ್ಲದಿದ್ದರೆ ಅದು ಕಾವ್ಯಕ್ಕೆ ಭೂಷಣವೇ ಹೊರತು ದೂಷಣವಲ್ಲ. ಸನ್ನಿವೇಶ 'ಗಳು' ಏನೂ ಇಲ್ಲ—ಇರುವುದೆಲ್ಲಾ ಒಂದೇ ಸನ್ನಿವೇಶ; ಮಿಕ್ಕಭಾಗವೆಲ್ಲ ಅದರ ಪರಿಕರ. 'ಅಕ್ಷರ ಸ್ಖಾಲಿತ್ಯ'ಗಳು ಹಿಂದೆ ಎಂದೂ ಆಗದಷ್ಟಿವೆ; ಅಷ್ಟೇ ಅಲ್ಲ ಕೆಲವು ಮಾತುಗಳೂ ವಾಕ್ಯಗಳೂ ಬಿಟ್ಟುಹೋಗಿವೆ—'ಹೊಂದಾವಣೆ'ಯು ಸಮರ್ಪಕವಾಗಿ ಇಲ್ಲದಿರುವುದಕ್ಕೆ ಇದೂ ಸ್ವಲ್ಪಕಾರಣ. ಈಗ ಕೆಲವುದಿವಸಗಳ ಕೆಳಗೆ ಪ್ರಬುದ್ಧಕರ್ಣಾಟಕಕ್ಕೆ ಸ್ವಲ್ಪ ಕುಲುಕಾಟವಾಯಿತು ; ಅಲ್ಲದೆ 'ಈಗಾಗಲೇ ತಡವಾಯಿತು, ನವರಾತ್ರಿ ಶಿವರಾತ್ರಿ ಒಂದಾದೀತಲ್ಲಾ' ಎಂಬ ಹೆದರಿಕೆಯಲ್ಲಿ ಆತುರ ಬೇರೆ; ಮುದ್ರಣಶಾಲೆಗಳು ಇರುವುದು ಮೂರು ಮತ್ತೊಂದು ; ಅವುಗಳ ಕೆಲಸವೋ ಅಷ್ಟರಲ್ಲೇ ಇದೆ; ಆದರೂ ಅವುಗಳನ್ನು ಆಶ್ರಯಿಸಿ ಸಮಯ ಕಾದು 'ತ್ರಾಹಿ ತ್ರಾಹಿ !' ಎನ್ನುತ್ತಾ ಕೆಲಸ ಮಾಡಿಸಿಕೊಳ್ಳುವುದು ಪತ್ರಿಕಾ ಪ್ರಚಾಲಕರಿಗೆ ಮಾತ್ರ ವೇದ್ಯ! ಇವೆಲ್ಲವೂ ಈ ಅಕ್ಷಮ್ಯದೋಷಕ್ಕೆ ಕಾರಣ. ಇಷ್ಟರಮೇಲೆ 'ಶ್ರೀನಿವಾಸ'ನ ಮುಂದೆ 'ಶ್ರೀಪತಿ'ಯೆ? ಸಾಲದ್ದಕ್ಕೆ 'ಸುಬ್ಬಣ್ಣ'ನು ಶ್ರೀನಿವಾಸರ ಕಥೆಗಳಲ್ಲೆಲ್ಲಾ ಸರ್ವೋತ್ತಮವಾದದ್ದು; ವಸ್ತುಕಥನ ಪಾತ್ರಪ್ರದರ್ಶನ ಭಾವವಿಭಜನ ರಸಪ್ರತಿಪಾದನ—ಈ ವಿಚಾರಗಳಲ್ಲಿ ಶ್ರೀನಿವಾಸರು ಈ ಕತೆಯೊಳಗೆ ತಮ್ಮನ್ನೇ ತಾವು ಮೀರಿಸಿಬಿಟ್ಟಿದ್ದಾರೆ. ಇದರ ಮುಂದೆ ಶ್ರೀಪತಿಯ ಹುಚ್ಚುಕಥೆಯೇ ? *

ಹೀಗೆ ಕಥೆಯ ದೋಷಗಳನ್ನು ನಾವೇ ಒಪ್ಪಿಕೊಂಡರೂ ಮಿಕ್ಕವಿಷಯವು 'ಮನಸ್ಸಿನ ಆಶೆಯೆಲ್ಲವೂ ಭಗ್ನ'ವಾಗುವಂತೆ ಇದೆ ಎಂಬುದನ್ನು ನಂಬಲಾರೆವು—ಮ|| ಶರ್ಮರವರ ಗಾನಕಲೆಯು ಉತ್ತಮವಾದ ಶೈಲಿಯಿಂದಲೂ, ನವೀನಭಾವ


---

* ಈ ಕಥೆಯಮೇಲಣ ವಿರುದ್ಧ ವಿಮರ್ಶೆಗಳನ್ನು ಕೇಳಿದಾಗ ಮೋಲಿಯರ್ ಕವಿಯ "School for wives Criticised" ಎಂಬ ನಾಟಕವು ಜ್ಞಾಪಕಕ್ಕೆ ಬಂತು. ಅವಕಾಶವಾದಾಗ ಪಾಠಕರು ಅದನ್ನು ದಯವಿಟ್ಟು ಓದುವರೇ ?—ಸಂ.

ಗಳಿಂದಲೂ, ಗುಣೈಕಪಕ್ಷಪಾತ, ರಸಿಕತೆ, ನಮ್ಮ ಕಲೆಯು ಹೇಗೆ ಮುಂದಕ್ಕೆ ಬಂದೀತು ಎಂಬ ಚಿಂತೆ, ಇದಕ್ಕೆ ಸ್ವಾನುಭವದ ಸಾಧನಸೂಚನೆ—ಇವುಗಳಿಂದಲೂ ತುಂಬಿದೆ. ಪಂಪಾಯಾತ್ರೆಯು ಹಿಂದಿನಿಂದ ಬರುತ್ತಿದ್ದದ್ದೇ; ಹೊಸಕನ್ನಡ ಸಾಹಿತ್ಯದಲ್ಲಿಯೇ ಇದುವರೆಗೆ ಈ ಮಾದರಿಯ ಕಾವ್ಯಜಾತಿಯಾಗಲಿ, ಬರೆವಣಿಗೆಯಾಗಲಿ ವಿಷಯ ಪ್ರತಿಪಾದನವಾಗಲಿ ಬಂದಿಲ್ಲವೆಂದರೆ ಅದು ಯಾವ ಕನ್ನಡಿಗನಾಗಲಿ ಒಪ್ಪಬೇಕಾಗಿರುವ ಮಾತು. ಕಪನಗಳು ಎಂದೆಂದೂ ಬರುತ್ತಿದ್ದವುಗಳಿಗೇನು ಕಡಮೆಯಾದವುಗಳಲ್ಲ; ಇವುಗಳನ್ನು ನೋಡಿದರೆ ಹೊಸಗನ್ನಡ ಸಾಹಿತ್ಯದ ಪದ್ಯಕಾವ್ಯಸರಣಿಯೂ, ಅದರ ಫಲೋನ್ಮುಖತೆಯೂ ಸ್ಪಷ್ಟವಾಗುವಂತಿವೆ. ಕಥೆಯಮೇಲಣ ಕೋಪವು ಮಿಕ್ಕಭಾಗಕ್ಕೆ ನಿಷ್ಕಾರಣವಾಗಿ ಪ್ರಸರಿಸದಿರಲಿ!

ಸಂಕ್ರಾಂತಿ ಸಂಚಿಕೆಯು ಹೊರಡುವುದಕ್ಕೆ ವಿಳಂಬವಾದದ್ದಕ್ಕಾಗಿ 'ಲೇವಡಿ' ಮಾಡುವುದಿರಲಿ; (ಅದಕ್ಕೆ ನಮಗೆ ಕೋಪವಿಲ್ಲ; ಇಂಥ ಹಾಸ್ಯ ಶೈಲಿಯನ್ನು ನಮ್ಮವರು ಬರೆಯಬಲ್ಲರಲ್ಲ ಎಂದು ಸಂತೋಷವೇ!) ಪತ್ರಿಕೆಯನ್ನು ಸಕಾಲದಲ್ಲಿ ಹೊರಡಿಸಬೇಕೆಂಬ ಆಶೆ ನಮಗಿಂತ ಮತ್ತಾರಿಗೂ ಬಲವತ್ತರವಾಗಿಲ್ಲವೆಂದೂ ತಡಕ್ಕೆ ಕಾರಣವು ಪತ್ರಿಕಾ ಕಾರ್ಯದಲ್ಲಿ ಅನುಭವವಿಲ್ಲದಿರುವವರಿಗೆ (ಹೆಣ್ಣು ಮಕ್ಕಳ ಮದುವೆ ಮಾಡದವರಿಗೆ ಅದರ ಕಷ್ಟ ಹೇಗೆ ಗೊತ್ತಾಗುವುದಿಲ್ಲವೋ ಹಾಗೆ) ಗೊತ್ತಾಗುವುದಿಲ್ಲವೆಂದೂ, ವಿಧಿಯಿಲ್ಲದೆ ವಿಳಂಬವಾದರೆ ಅದಕ್ಕಾಗಿ ಎಲ್ಲರಿಗಿಂತಲೂ ನಮಗೇ ಕೊರಗುಂಟಾಗುವುದೆಂದೂ, ಪ್ರಬುದ್ಧ ಕನ್ನಡಿಗರಿಗೆ ಭರವಸೆ ಹೇಳಲಪೇಕ್ಷಿಸುವೆವು.

ಇಂಥ 'ಪ್ರಬುದ್ಧ ಕನ್ನಡಿಗ' ರನೇಕರಿರಬಹುದು; ಅವರೆಲ್ಲರಿಗೂ ಇದರಿಂದ ಅಂತೂ ಇಂತೂ ಸಮಾಧಾನವಾಗಬಹುದೆಂದು ನಂಬುತ್ತೇವೆ. ಮಹಾಯುದ್ಧ ಮುಗಿದಮೇಲೆ ಯಾವನೋ ಒಬ್ಬ ಅಜ್ಞಾತ ಸೈನಿಕನ ಶವಕ್ಕೆ ಮೆರೆವಣಿಗೆ ಮರ್ಯಾದೆ ಮಾಡಿ, ಜೀವವನ್ನು ತೆತ್ತ ಸೈನ್ಯಕೋಟಿಗೆಲ್ಲಾ, ಮರ್ಯಾದೆ ಮಾಡಿದ ಹಾಗಾಯಿತೆಂದು ಹೇಳಿದ ಹಾಗೆ, ನಾವು ಈ ಅಜ್ಞಾತ 'ಓರ್ವ ಪ್ರಬುದ್ಧ ಕನ್ನಡಿಗ' ರಿಗೆ ಉತ್ತರ ಕೊಟ್ಟು, ಪ್ರಬುದ್ಧಕರ್ಣಾಟಕದ ಮೇಲೆ ಅಸಮಾಧಾನವಿದ್ದವರಿಗೆಲ್ಲ ಸಮಾಧಾನ ಮಾಡಲೆಳಸಿದ್ದೇವೆ. ನಮ್ಮ ದೋಷವನ್ನು ನಾವು ಮುಚ್ಚಿಕೊಳ್ಳುವಂತಿಲ್ಲ; ನಮ್ಮ ಹಸುಬೆಯ ಚೀಲವನ್ನು ಹಿಂದು ಮುಂದು ಮಾಡಿ ಹಾಕಿಕೊಂಡಿದ್ದೇವೆ. ನಮ್ಮ ನ್ಯೂನತೆ ನಮಗೇ ಕಾಣುತ್ತಿದೆ; ಇತರರೂ ಅದನ್ನು ತೋರಿಸಲಿ; ಅದಕ್ಕೆ ನಮಗೆ ಅಸಮಾಧಾನವಿಲ್ಲ. ಅಂಥವರಿಗೆ ಮಗುವಿನ ತಾಯಿಯು 'ಪೋಲಿ ಕಿಟ್ಟಿ'ಗೆ ಹೇಳಿದ ರೀತಿಯಲ್ಲಿ "ಏನಾದರೂ ಅಂದ್ಕೊ ಸನ್ರಾಜ, ಪ್ರಬುದ್ಧ



ದಿವಂಗತರಾದ

ಬಿ. ಲ್ಯೂಯಿ ರೈಸ್, ಸಿ.ಐ.ಇ., ಎಂ.ಆರ್.ಎ.ಎಸ್., ಅವರು.

ಕರ್ಣಾಟಕದ ಮೇಲೆ ಇಷ್ಟು ಮಮತೆಯಿದೆಯಲ್ಲಾ ಅಷ್ಟೇಸಾಕು. ಬೈಯುತ್ತ ದೂರುತ್ತ ಆಕ್ಷೇಪಿಸುತ್ತಲಾದರೂ ನಿನ್ನ ಹಾಗೆ ಸಾವಿರಾರು ಜನ ಕನ್ನಡವನ್ನು ಓದುವವರಾಗಲಿ! ನೂರಾರು ಜನ ಬರೆಯುವವರಾಗಲಿ; ಪ್ರಬುದ್ಧ ಕರ್ಣಾಟಕವು ಇನ್ನೂ ಅಭಿವೃದ್ಧಿಹೊಂದಿ, ಒಂದಕ್ಕೆರಡು ಬೆಳೆದು, ಮತ್ತೂ ರುಚಿಕರವಾಗಿ, ಕಾಲಕ್ಕೆ ಸರಿಯಾಗಿ ಅಲ್ಲದಿದ್ದರೆ ಇನ್ನೂ ನಾಲ್ಕು ದಿನ ಮುಂಚಿತವಾಗಿಯೇ ಬಂದೀತು''—ಎಂದು ಹೇಳಲಪೇಕ್ಷಿಸುವೆವು.

ರೈಸ್ ಸಾಹೇಬರು ದಿವಂಗತರಾದ ಬಳಿಕ ಅವರ ಹಿಂದೆ ಒಬ್ಬರಾದಮೇಲೆ ಒಬ್ಬರಂತೆ ಕನ್ನಡಿಗರಾದ ಹಲವು ವಿದ್ವಾಂಸರು ಕೀರ್ತಿಶೇಷರಾದರು. ಅವರಲ್ಲಿ ಕನ್ನಡಕ್ಕೂ ಕರ್ಣಾಟಕ ಸಂಘಕ್ಕೂ ಸಾಕ್ಷಾತ್ ಸಂಬಂಧವಿದ್ದ ಕೆಲವರ ನಾಮ ಸ್ಮರಣೆ ಮಾಡುತ್ತೇವೆ :—

ಮಿ|| ಲೂಯಿ ರೈಸ್‌ರವರು ಪಾಶ್ಚಾತ್ಯರಾದರೂ ನಮ್ಮವರು—ನಮ್ಮ ದೇಶ ದಲ್ಲಿ ಹುಟ್ಟಿದವರು (೧೭—೭—೧೮೩೭). ಇಂಗ್ಲೆಂಡಿನಲ್ಲಿ ಶಿಕ್ಷಣಪಡೆದು ನಾಲ್ಕಾರು ವರ್ಷ ಕೆಲಸದಲ್ಲಿದ್ದರೂ ೧೮೬೦ ರಲ್ಲಿ ನಮ್ಮ ದೇಶಕ್ಕೆ ಬಂದು ಇಲ್ಲಿ ಸುಮಾರು ಅರ್ಧ ಶತಮಾನದವರೆಗೆ ದೇಹವನ್ನು ತೆಯ್ದವರು. ಅವರು ನಮ್ಮ ಸಂಸ್ಥಾನಕ್ಕೆ ಬಂದಾಗ ಇಲ್ಲಿ ಆಗ ಇನ್ನೂ ಕಾಲೇಜುಗಳಿರಲಿಲ್ಲ. ಬೆಂಗಳೂರಿನಲ್ಲಿ, ಇನ್ನೂ ಹುಟ್ಟಿ ಎರಡು ವರ್ಷ ವಾಗಿದ್ದ ಸೆಂಟ್ರಲ್ 'ಹೈಸ್ಕೂಲು' ಮಾತ್ರ ಇತ್ತು. ಅದಕ್ಕೆ ಅವರು ಹೆಡ್‌ಮಾಸ್ಟರಾಗಿ ಬಂದರು. ಆಮೇಲೆ ಕೆಲವುಕಾಲ ಮೈಸೂರು ಮತ್ತು ಕೊಡಗು ಸೀಮೆಗಳ ಇನ್ಸ್ಪೆಕ್ಟರಾಗಿಯೂ, ವಿದ್ಯಾಭ್ಯಾಸದ ಇಲಾಖೆಯ ಮುಖ್ಯಾಧಿಕಾರಿಗಳಾಗಿಯೂ, ಹಂಟರ್ ವಿದ್ಯಾಸಮಿತಿಯ (೧೮೮೨) ಕಾರ್ಯದರ್ಶಿಗಳಾಗಿಯೂ, ಮೈಸೂರು ಸರ್ಕಾರದ ವಿದ್ಯಾಶಾಖೆಯ ಪ್ರಥಮಕಾರ್ಯದರ್ಶಿಗಳಾಗಿಯೂ ಕೆಲಸಮಾಡಿ ಅನಂತರ ೧೮೮೫ ರಲ್ಲಿ ಹೊಸದಾಗಿ ಏರ್ಪಾಟಾದ ಶಾಸನ ಸಂಶೋಧನ ಇಲಾಖೆಯ ಪ್ರಧಾನಾಧಿಕಾರಿ ಕಾರ್ಯವನ್ನು ಕೈಕೊಂಡು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ (೧೯೦೬) ನಿವೃತ್ತರಾಗುವವರೆಗೂ ಈ ಕೆಲಸದಲ್ಲಿಯೇ ಇದ್ದರು.

ಮಿ|| ಲೂಯಿ ರೈಸ್, ಸಿ. ಐ. ಇ.

ಶಾಸನದ ಇಲಾಖೆಗೆ ಬರುವುದಕ್ಕೆ ಮುಂಚೆಯೇ ಶಾಸನ ಸಾಹಿತ್ಯಾದಿ ಸಂಶೋಧನಕಾರ್ಯಗಳಲ್ಲಿ ದಕ್ಷರೆಂದು ಅವರು ಹೆಸರುಪಡೆದಿದ್ದರು. ದೇಶಭಾಷೆ ಯಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಸಂಸ್ಥಾನದಲ್ಲಿ ಪ್ರಯಾಣಮಾಡುತ್ತಿದ್ದಾಗ ಲೆಲ್ಲಾ ಆಯಾ ಸ್ಥಳದ ಪುರಾಣ ಚರಿತ್ರ ವಿದ್ಯಮಾನಗಳನ್ನು ಪರಿಚಯಮಾಡಿ

ಕೊಂಡಿದ್ದರು. ಇದರಿಂದ ಅವರ ಸುಪ್ರಸಿದ್ಧವಾದ ಮೈಸೂರು ಗೆಜೆಟಿಯರ್‌ನ ಎರಡು ಸಂಪುಟಗಳನ್ನು ಬರೆಯುವುದಕ್ಕೆ ಅವರಿಗೆ ಒಳ್ಳೆಯ ಸಾಧನಸಂಪತ್ತಿ ದೊರಕಿತು. ಇವುಗಳಲ್ಲಿ ಅವರು ತೋರಿಸಿರುವ ಸಾಮಗ್ರಿಸಂಚಯ ವಿಷಯ ಪ್ರತಿಪಾದನ, ರೀತಿನೈಪುಣ್ಯಾದಿಗಳು ಅತ್ಯಾಶ್ಚರ್ಯಾವಹವಾಗಿವೆ. ಈ ಎರಡು ಸಂಪುಟಗಳ ಗಾತ್ರವನ್ನು ನೋಡಿದರೇ ನಮ್ಮಂಥವರು ಎದೆಗುಂದುವ ಹಾಗಿದೆ. ಅದರಲ್ಲಿಯೂ ಇಂಥಗ್ರಂಥವನ್ನು ಹೊಸದಾಗಿ ಬರೆಯಬೇಕಾದರೆ ಅಪೂರ್ವಸಾಮರ್ಥ್ಯ ಬೇಕು. ಅಂಥ ಮೇಧಾಶಕ್ತಿ, ಲೇಖನಶಕ್ತಿ, ಕಾರ್ಯಾಸಕ್ತಿಗಳು ಈಚಿಗೆಬಂದ ಇಂಗ್ಲೀಷ್ ಅಧಿಕಾರಿಗಳಲ್ಲಿಯೂ ಅಪರೂಪ. ಅಂಥವರಿಗೆ ಸರ್ಕಾರದವರು ಕೊಟ್ಟ ಸಂಬಳವು ಅವರು ಮಾಡಿದ ಕೆಲಸಕ್ಕೆ ಹೋಲಿಸಿದರೆ ಅತ್ಯಲ್ಪ ; ಇಂಥ ಕೆಲವರ ಅಮೋಘವಾದ ಕಾರ್ಯಕಲಾಪವನ್ನು ನೋಡಿ ಪಾಶ್ಚಾತ್ಯರಲ್ಲಿ ಗೌರವವೂ ಅವರಿಗೆ ನಮ್ಮದೇಶೀಯರಿಗಿಂತ ಹೆಚ್ಚು ಸಂಬಳವನ್ನು ಕೊಡುವ ಸಂಪ್ರದಾಯವೂ ಬಂದಿವೆ. ಇವರೇ ೧೮೭೧ರಲ್ಲಿ ಮೈಸೂರು ದೇಶದ ಮೊದಲನೆಯ ಖಾನೇಷುಮಾರಿಯ ಲೆಕ್ಕವನ್ನೂ ವರದಿಯನ್ನೂ ಮಾಡಿಸಿದವರು. ಹೀಗೆ ಅವರು ಮೈಸೂರಿನವರಿಗೆ ಅನೇಕ ವಿಷಯಗಳಲ್ಲಿ ಮಾರ್ಗದರ್ಶಿಗಳೂ ಅಗ್ರಯಾಯಿಗಳೂ ಆಗಿದ್ದರು.

ಅವರ ಕಾಲದಲ್ಲಿ ನಮ್ಮ ಸಂಸ್ಥಾನದ ಸಾವಿರಾರು ಶಾಸನಗಳು ದೃಷ್ಟಿಗೂ ಅಚ್ಚಿಗೂ ಬಂದು ಹನ್ನೆರಡು ಸಂಪುಟಗಳಲ್ಲಿ ಎಪಿಗ್ರಾಫಿಯಾ ಕರ್ಣಾಟಿಕಾ ಎಂಬ ಹೆಸರಿನಿಂದ ಪ್ರಕಟವಾದುವು. ಮೊಳಕಾಲ್ಮುರು ತಾಲ್ಲೂಕಿನಲ್ಲಿದ್ದ ಅಶೋಕನ ಶಾಸನಗಳನ್ನು ಕಂಡುಹಿಡಿದು ಅಶೋಕನ ಚಕ್ರಾಧಿಪತ್ಯವು ಮೈಸೂರು ಸೀಮೆಯವರೆಗೂ ಹಬ್ಬಿತ್ತೆಂದು ತಿಳಿಯಪಡಿಸಿದವರು ಅವರೇ! ಪಂಪಭಾರತ, ಪಂಪರಾಮಾಯಣ, ಶಬ್ದಾನುಶಾಸನ, ಮುಂತಾದ ಕನ್ನಡಗ್ರಂಥಗಳನ್ನು ಶೋಧನೆಮಾಡಿಸಿ ಪ್ರಕಟಿಸಿ ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ತೋರಿಸಿ, ಶಬ್ದಾನುಶಾಸನದ ಪೀಠಿಕೆಯಲ್ಲಿ ಕನ್ನಡ ಸಾಹಿತ್ಯದ ಚರಿತ್ರೆಗೆ ಪ್ರಥಮಸೋಪಾನವನ್ನು ಕಟ್ಟಿದವರು ಅವರೇ. ಕನ್ನಡ ನಾಡಿನಲ್ಲಿ ಹುಟ್ಟಿಬೆಳೆದು ಅದರ ಉಪ್ಪನ್ನು ಮಣಗಟ್ಟಲೆ ತಿಂದವನೂ ಕನ್ನಡ ದೇಶಕ್ಕೆ ಇಷ್ಟು ಉಪಕಾರವನ್ನು ಮಾಡಿರುವುದು ಅಪರೂಪವೆಂದು ಹೇಳಿದರೆ ಅತ್ಯುಕ್ತಿಯಾಗಲಾರದು.

ಅವರು ಸುಮಾರು ಎಪ್ಪತ್ತನೆಯ ವಯಸ್ಸಿನಲ್ಲಿ ಕೆಲಸವನ್ನು ಬಿಟ್ಟು ಸೀಮೆಗೆ ಹೋಗಿ ಹ್ಯಾರೋಪಟ್ಟಣದಲ್ಲಿ ವಿಶ್ರಾಂತಿಪಡೆದಿರುತ್ತಿದ್ದರು. ಅಲ್ಲಿಯೂ ಕನ್ನಡದ ವಿಚಾರ ಬಂದರೆ ರಾಯಲ್ ಏಷಿಯಾಟಿಕ್ ಸೊಸೈಟಿಯ ಪತ್ರಿಕೆ ಇಂಡಿಯನ್ ಆಂಟಿಕ್ವೇರಿ ಮುಂತಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಕಳುಹಿಸುತ್ತಿದ್ದರು. ಈಗ



ಶ್ರೀಮಾನ್ ಎಂ. ಜಿ. ಶ್ರೀನಿವಾಸರಾವ್, ಎಂ.ಎ., ಎ.ಎಂ.
(ಯೂನಿವರ್ಸಿಟಿ ಜರ್ನಲ್ ಅಧಿಕಾರಿಗಳು ದಯಮಾಡಿ ಕೊಟ್ಟದ್ದು.)

ಆರೇಳು ವರ್ಷಗಳ ಕೆಳಗೆ ಅವರಿಗೆ ಕೈ ಕಾಲು ಹಿಡಿದು ನಡೆಯದಂತಾಯಿತು. ಮ|| ಎಸ್. ಜಿ. ಶಾಸ್ತ್ರಿಗಳು ಪ್ರದರ್ಶನ ಸಂಬಂಧವಾಗಿ ಇಂಗ್ಲೆಂಡಿಗೆ ದಯಮಾಡಿದ್ದಾಗ ಆಸ್ಥಿತಿಯಲ್ಲಿಯೇ ರೈಸ್ ಸಾಹೇಬರು ಅವರನ್ನು ನೋಡಲು ಬಂದರಂತೆ. ಮ|| ಶಾಸ್ತ್ರಿಗಳು ತಕ್ಕ ಗೌರವದಿಂದ ಅವರನ್ನು ಬರಮಾಡಿಕೊಂಡು ಮಿಕ್ಕವರನ್ನೆಲ್ಲಾ ಕಳುಹಿಸಿಬಿಟ್ಟು ಅವರೊಡನೆ ಇಂಗ್ಲೀಷಿನಲ್ಲಿ ಮಾತನಾಡಲಾರಂಭಿಸಿದರಂತೆ. ಆಗ ಸಾಹೇಬರು "ಇಂಗ್ಲಿಷಿರಲಿ; ದಯವಿಟ್ಟು ಕನ್ನಡದಲ್ಲಿಯೇ ಮಾತನಾಡಿ; ಅದನ್ನು ಕೇಳಬೇಕೆಂದು ತುಂಬ ಆಸೆಯಾಗಿದೆ" ಎಂದರಂತೆ. ಆಗ ಮ|| ಶಾಸ್ತ್ರಿಗಳು ಕನ್ನಡದಲ್ಲಿಯೇ ಮಾತನಾಡಲು, ಎರಡು ಕಿವಿಗಳಿಂದಲೂ ಬಹು ಆಸಕ್ತಿಯಿಂದ ಆಲಿಸಿ ಸಂತೋಷಪಟ್ಟು "ಆಹಾ ಕನ್ನಡ! ಎಷ್ಟು ಮಧುರ! ಎಷ್ಟು ಮಧುರ!!" ಎಂದು ಆನಂದಪಟ್ಟರಂತೆ. ಕನ್ನಡದ ಮೇಲೆ ಕನ್ನಡಿಗರಿಗೆ ಈ ಅಭಿಮಾನವಿದೆಯೆ?

ಅವರು ೧೯೨೭ ನೇ ಜುಲೈ ತಿಂಗಳಿನಲ್ಲಿ ಸುಮಾರು ತೊಂಬತ್ತು ವರ್ಷ ವಯಸ್ಸಾಗಿದ್ದಾಗ ಸ್ವಕ್ಷೇತ್ರ ಸ್ವಗೃಹದಲ್ಲಿ ಬಂಧು ಮಿತ್ರರ ಮಧ್ಯದಲ್ಲಿ ಸ್ವರ್ಗಸ್ಥರಾದರು. ಅವರು ಮೈಸೂರು ದೇಶದಲ್ಲಿ ಮಾಡಿಟ್ಟುಹೋಗಿರುವ ಕೆಲಸವು ಅವರನ್ನು ಸರ್ವದಾ ನಮ್ಮ ಕಣ್ಣುಮುಂದೆ ಮೇಲ್ಪಂಕ್ತಿಯಾಗಿರುವಂತೆ ಇಟ್ಟು ಕನ್ನಡಿಗರೆಲ್ಲರೂ ಚಿರಋಣಿಗಳಾಗಿರುವಂತೆ ಮಾಡಿದೆ.

ಮ|| ಎಂ. ಜಿ. ಶ್ರೀನಿವಾಸರಾವ್, ಎಂ. ಎ., ಎ. ಎಂ. ರವರು ಮೈಸೂರು ರೆವಿನ್ಯೂ ಇಲಾಖೆಯಲ್ಲಿ ಅಮಲ್ದಾರರಾಗಿದ್ದ ಮ|| ಗುರುರಾಯರ ಹಿರಿಯಮಕ್ಕಳು.

ಎಂ. ಜಿ. ಶ್ರೀನಿವಾಸ ರಾಯರು, ಎಂ. ಎ., ಎ. ಎಂ.,

ಅವರು ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ. ಎ. ಪರೀಕ್ಷೆಯನ್ನು ಕೊಟ್ಟು, ಕೆಲವು ಕಾಲ ವ್ಯವಸಾಯದ ಇಲಾಖೆಯಲ್ಲಿ ರಾಸಾಯನಿಕರು (Chemist) ಆಗಿಯೂ, ಸೆಂಟ್ರಲ್ ಕಾಲೇಜಿನಲ್ಲಿ ನಿದರ್ಶಕರು (Demonstrator) ಆಗಿಯೂ ಕೆಲಸ ಮಾಡಿದರು. ಅನಂತರ ಎಂ. ಎ. ಪರೀಕ್ಷೆಯನ್ನು ಕೊಟ್ಟು ಸರ್ಕಾರದ ವೇತನವನ್ನು ತೆಗೆದುಕೊಂಡು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಸಾವಯವ ರಸಾಯನ ಶಾಸ್ತ್ರವನ್ನು (Organic Chemistry) ವ್ಯಾಸಂಗಮಾಡಿ ಅಲ್ಲಿ ಎ. ಎಂ. ಡಿಗ್ರಿಯನ್ನು ಪಡೆದು ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾಗುವ ಕಾಲಕ್ಕೆ ಸರಿಯಾಗಿ ಹಿಂತಿರುಗಿ ಬಂದು ಸೆಂಟ್ರಲ್ ಕಾಲೇಜಿನಲ್ಲಿ ಸಾವಯವ ರಸಾಯನಶಾಸ್ತ್ರವನ್ನು ಬೋಧಿಸುವ ಮಹೋಪಾಧ್ಯಾಯರಾದರು.

• ಮ|| ಶ್ರೀನಿವಾಸರಾಯರು ಉತ್ತಮವಾದ ಬೋಧನಶಕ್ತಿಯಿದ್ದವರು; ಬಹು ಸ್ನೇಹಪರರು. ವಿದ್ಯಾರ್ಥಿಗಳಲ್ಲಿಯೂ ಸಹಾಧ್ಯಾಪಕರಲ್ಲಿಯೂ ಬಹು ಮೈತ್ರಿ ಪ್ರೀತಿಸಹಾನುಭೂತಿಗಳಿಂದಿರುತ್ತಿದ್ದರು. ಆಟಪಾಟ ವಿನೋದಗಳಲ್ಲಿ ಅಗ್ರೇಸರರು. ಕಾಲೇಜಿಗಾಗಲಿ, ವಿಶ್ವವಿದ್ಯಾಲಯಕ್ಕಾಗಲಿ ಸಂಬಂಧಪಟ್ಟಹಾಗೆ ಯಾವ ಕೆಲಸ ಬರಲಿ ಅದನ್ನು ಸಂತೋಷದಿಂದ ಮುಂದುವರಿದು ವಹಿಸಿ ನಿರ್ವಹಿಸಿಬಿಡುತ್ತಿದ್ದರು. ಒಂದೆರಡು ಸಂದರ್ಭಗಳಲ್ಲಿ ಅವರಮೇಲಣ ಕರುಣೆಯಿಂದ ಅವರ ಮಿತ್ರರು ಕೆಲಸ ಗಳನ್ನು ಹೊತ್ತುಕೊಂಡಿರುವುದುಂಟು. ಈ ಕೆಲಸಗಳ ಮಧ್ಯದಲ್ಲಿ ತಮ್ಮ ಶಾಸ್ತ್ರ ಕೆಲಸವನ್ನು ಅಲಕ್ಷ್ಯಮಾಡಿರಲಿಲ್ಲ. ಅದರಲ್ಲಿ ಅನೇಕ ಸಂಶೋಧನೆಗಳನ್ನು ಸ್ವತಂತ್ರ ವಾಗಿಯೂ ಸಹಾಯಕರೊಡನೆಯೂ ನಡೆಸಿ ಕೆಲವನ್ನು ಪ್ರಕಟಿಸಿರುತ್ತಾರೆ. ಇಂಥ ವಿದ್ವಾಂಸರನ್ನೂ, ಉದ್ಯಮಶೀಲರನ್ನೂ, ಸತ್ಪುರುಷರನ್ನೂ ಕಳೆದುಕೊಂಡದ್ದು ವಿಶ್ವ ವಿದ್ಯಾಲಯಕ್ಕೂ ಸೆಂಟ್ರಲ್ ಕಾಲೇಜಿಗೂ, ಕರ್ಣಾಟಕಕ್ಕೂ, ಕರ್ಣಾಟಕ ಸಂಘಕ್ಕೂ ದೊಡ್ಡ ನಷ್ಟವಾಗಿದೆ.

ಮ|| ಬಿ. ಕೃಷ್ಣಪ್ಪನವರು ಎಂ.ಎ.,

ಮ|| ಕೃಷ್ಣಪ್ಪನವರು ಮೈಸೂರು ಪಟ್ಟಣದಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ ಮಾಡಿದವರು. ಅವರು ೧೯೦೭ ನೆಯ ಇಸವಿಯಲ್ಲಿ ಬಿ. ಎ. ಪರೀಕ್ಷೆಯನ್ನು ಕೊಟ್ಟು ಏಳೆಂಟುವರ್ಷ ಮೈಸೂರು ಸಂಸ್ಥಾನದ ನಾನಾ ಹೈಸ್ಕೂಲು ಗಳಲ್ಲಿ ಉಪಾಧ್ಯಾಯರಾಗಿದ್ದು ಅನಂತರ ಮೈಸೂರು ಕುರುಡ-ಮೂಗರ ಸ್ಕೂಲಿನಲ್ಲಿ ಹೆಡ್‌ಮಾಸ್ಟರಾದರು. ಅಲ್ಲಿದ್ದಾಗ ಕನ್ನಡ ತೆಲಗುಭಾಷೆಗಳನ್ನು ತೆಗೆದುಕೊಂಡು ಎಂ.ಎ., ಪರೀಕ್ಷೆ ಕೊಟ್ಟು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಪರಿವರ್ತಕರಾದರು. ಮೈಸೂರು ವಿಶ್ವವಿದ್ಯಾಲಯವು ಸ್ಥಾಪಿತವಾದಮೇಲೆ ಅಲ್ಲಿಂದ ಮಹಾರಾಜರವರ ಕಾಲೇಜಿಗೆ ಕನ್ನಡ ಅಸಿಸ್ಟೆಂಟ್ ಪ್ರೊಫೆಸರಾಗಿ ಬಂದು ಸುಮಾರು ಈಗ ಎರಡು ವರ್ಷಗಳ ಕೆಳಗೆ ನೇತ್ರ ಪಾಟವವು ಕಮ್ಮಿಯಾಗಿ ರಜತೆಗೆದುಕೊಂಡರು. ಈ ರಜದಲ್ಲಿರುವಾಗಲೇ ಈ ವರ್ಷ ಫೆಬ್ರುವರಿ ತಿಂಗಳು ೨ ನೆಯ ತಾರೀಖು ರಾತ್ರಿ ಸ್ವರ್ಗಸ್ಥರಾದರು.

ಮ|| ಕೃಷ್ಣಪ್ಪನವರು ಉದ್ಯೋಗಶೀಲತೆಗೆ ಪರ್ಯಾಯನಾಮದಂತಿದ್ದರು. ಕೃಷ್ಣಪ್ಪನವರೆಂದರೆ, ಅವರ ಜೊತೆಯ ಉಪಾಧ್ಯಾಯರಿಗೆ ಎಂಥ ಗದ್ದಲವಿದ್ದರೂ ಲಕ್ಷ್ಯಮಾಡದೆ, ಎಂಥ ಹಾಸ್ಯಕ್ಕೂ ಬಾಯಿಹಾಕದೆ ತಮ್ಮ ಎದುರಿನಲ್ಲಿ ಕತ್ತು ಬಗ್ಗಿಸಿಕೊಂಡು ಪುಸ್ತಕನೋಡುತ್ತಿರುವ ಒಂದು ನಿಶ್ಚಲಮೂರ್ತಿಯೂ, ಮನೆಯಲ್ಲಿ

ನೋಡಿರುವವರಿಗೆ ಊಟ ತಿಂಡಿಗಳಿಗೂ ಅವಕಾಶವಿರದೆ ಯಾವಾಗಲೂ ಏನೋ ಕೆಲಸಮಾಡುತ್ತಿರುವ ಒಂದು ನೀರವವ್ಯಕ್ತಿಯೂ, ಕಾಲೇಜು ಮನೆಗಳನ್ನು ಬಿಟ್ಟು ಹೊರಗೆ ನೋಡಿದವರಿಗೆ ಬೈಸಿಕಲ್ ಮೇಲೆಯೇ ವಿಶೇಷವಾಗಿ ಪುರಸತ್ತಿಲ್ಲದಂತೆ ಓಡಿ ಯಾಡುತ್ತಿದ್ದ ಚಲಚ್ಚಿತ್ರವೂ ಆಗಿದ್ದರು. ಯಾವಾಗಲೂ ಯಾವವಿಧವಾದ ವಿಶ್ರಾಂತಿ ಯನ್ನಾಗಲಿ ವಿನೋದವನ್ನಾಗಲಿ ಅವರು ಅಪೇಕ್ಷಿಸಿದಂತೆಯೇ ಇಲ್ಲ. ಅವರ ದೇಹ ಶಕ್ತಿಯೂ, ಮನಶ್ಯಕ್ತಿಯೂ, ತಾಳ್ಮೆಯೂ ಈ ಮನೋವೃತ್ತಿಗೆ ಅನುಕೂಲವಾಗಿ ದ್ದುವು. ವಿದ್ಯಾರ್ಥಿದಶೆಯಲ್ಲಿ ಅವರು ಒಬ್ಬರೊಡನೆ ಆಟಪಾಟಗಳಿಗೆ ಹೋಗು ತ್ತಿದ್ದವರಲ್ಲ; ತಮ್ಮ ಪುಸ್ತಕವಾಯಿತು, ತಾವಾಯಿತು; ಅದನ್ನು ವ್ಯಾಸಂಗ ಮಾಡುವುದೆಂದರೆ ಚ ತು ಬಿಡದಂತೆ ಮಾಡಬೇಕು. ಅವರು ಹೈಸ್ಕೂಲಿನ ಯಾವುದೋ ಒಂದು ತರಗತಿಯಲ್ಲಿದ್ದಾಗ ಓದಿದ "ಹೆರವರ್ಡ್ ದಿ ವೇಕ್" ಎಂಬ ಒಂದು ಇಂಗ್ಲಿಷ್ ಗದ್ಯ ಗ್ರಂಥವನ್ನು ನೋಡಿದ ಜ್ಞಾಪಕವಿದೆ. ಅದರಲ್ಲಿ ಅಚ್ಚಾದ ಭಾಗದ ಸುತ್ತಲೂ ಪ್ರತಿಪುಟದಲ್ಲಿಯೂ ಕಷ್ಟವಾದ ಶಬ್ದಗಳಿಗೆ ನಿಘಂಟುವಿ ನಿಂದ ಅರ್ಥವನ್ನು ನೋಡಿ ಬರೆದಿಟ್ಟಿದ್ದರು; ಆ ಬರೆವಣಿಗೆಯಲ್ಲಿ ಆತುರವಿಲ್ಲ; ಅಸ್ಪಷ್ಟತೆಯಿಲ್ಲ; ಅಕ್ಷರವೂ ಹಾಗೇ ದುಂಡಾಗಿದ್ದುವು. "ಹೆರವರ್ಡ್ ದಿ ವೇಕ್" ಪುಸ್ತಕವು ಇಂಗ್ಲಿಷ್ ಸಾಹಿತ್ಯದಲ್ಲಿ ರಸತೊಟ್ಟಿಕ್ಕುವ ಕಾವ್ಯವೇನೂ ಅಲ್ಲ. ಅಂಥ ಗ್ರಂಥಕ್ಕೆ ಇಷ್ಟು ಶ್ರಮಪಡಬೇಕಾಗಿದ್ದರೆ ಅವರ ತಾಳ್ಮೆಯೂ ಚಿಂತನಕ್ರಮವೂ ಎಷ್ಟು ಆಶ್ಚರ್ಯಕರವಾದುವೆಂಬುದನ್ನು ಹೇಳಬೇಕಾಗಿಲ್ಲ. ಅವರು ಕುರುಡರ ಮತ್ತು ಮೂಗರ ಸ್ಕೂಲಿನಲ್ಲಿದ್ದಾಗ ಅವರ ಕರ್ತವ್ಯಪರಾಯಣತೆಯನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುವಂತಿತ್ತು. ಆಗ ಅವರು ವಾಸವಾಗಿದ್ದದ್ದು ಮೈಸೂರು ಪಟ್ಟಣದ ಪಶ್ಚಿಮ ಕೊನೆ, ಹೋಗಬೇಕಾಗಿದ್ದದ್ದು ಪೂರ್ವದ ಕೊನೆ; ಪ್ರತಿನಿತ್ಯವೂ ದಿನಕ್ಕೆ ಎರಡುಸಾರಿ ಈ ಪೂರ್ವ ಪಶ್ಚಿಮ ದಿಕ್ಕುಗಳು ಸಂಧಿಸಬೇಕಾ ಗಿತ್ತು; ಆ ಸಂಧಿ ಕಾಲದಲ್ಲಿ ಅವರು ಒಂದುಕ್ಷಣ ವಿಚ್ಛಿತಿಯಿಲ್ಲದೆ ಕೆಲಸಮಾಡು ವರು—ಒಬ್ಬೊಬ್ಬರ ವಿಚಾರವನ್ನೂ ತಾವೇ ನೋಡಿಕೊಳ್ಳಬೇಕು; ಸಹಾಯಕ ರಿದ್ದರೂ ಅವರಮೇಲೆ ಯಾವುದನ್ನೂ ಹಾಕುತ್ತಿರಲಿಲ್ಲ; ಸ್ಕೂಲಿಗೆ ಸೇರಿದ ಭೋಜನ ಶಾಲೆಗೆ ಸಾಮಾನುಗಳು ಸರಿಯಾಗಿ ಬಂದುವೇ ಇಲ್ಲವೇ, ಯಾವುದಕ್ಕೆ ಒಂದು ಕಾಸು ಹೆಚ್ಚಾಯಿತು? ಏಕೆ? ಹುಡುಗರಿಗೆ—ಕಣ್ಣು ಕಾಣದವರು, ಮಾತನಾಡಲಾರ ದವರು ಎಂದು—ಬಡಿಸುವವನು ತುಪ್ಪಹಾಕುವುದನ್ನು ಬಿಟ್ಟುಬಿಟ್ಟನೇ, ಇಲ್ಲ ಕಮ್ಮಿ ಹಾಕಿದನೇ—ಎಂದು ಮೊದಲುಗೊಂಡು ಪ್ರತಿಯೊಂದು ವಿಷಯವನ್ನೂ ತಾವೇ ಸ್ವಂತವಾಗಿ ನೋಡಿಕೊಂಡಹೊರತು ಅವರಿಗೆ ತೃಪ್ತಿಯಿರುತ್ತಿರಲಿಲ್ಲ. ಆದ್ದರಿಂದಲೇ

ಅವರಿಗೆ ಅಲ್ಲಿಯ ಕೆಲಸ ಬಹು ಶ್ರಮಕಾರಕವಾಗಿತ್ತು. ಯಾವ ಕಾರ್ಯವನ್ನು ಕೈಕೊಳ್ಳಲಿ ಆದರಲ್ಲಿ ಈ ಭಾಗ ಸಣ್ಣದು ಈ ಭಾಗ ದೊಡ್ಡದು ಇದು ಮುಖ್ಯ ಇದು ಗೌಣವೆಂಬ ತಾರತಮ್ಯವನ್ನು ಮಾಡುತ್ತಿರಲಿಲ್ಲ—ಎಲ್ಲವೂ ಚೆನ್ನಾಗಿ ಸಮಗ್ರವಾಗಿ ನಡೆಯಬೇಕು ಎಂಬುದು ಅವರ ಭಾವ. "ಸಣ್ಣಸಣ್ಣದನ್ನು ಯಾರು ಲಕ್ಷ್ಯ ಮಾಡುತ್ತಾರೆಯೋ ಅವರು ದೊಡ್ಡದನ್ನು ಮಾಡರು" ಎಂದು ಕೆಲವರು ಹೇಳುವುದುಂಟು. ಇಂಥವರು ಮನೆಗೆ ನೆಂಟರಿಷ್ಟರನ್ನು ಊಟಕ್ಕೆ ಕರೆದು ಮಲ್ಲಿಗೆ ಹೂವಿನ ಹಾಗೆ ಸಣ್ಣಕ್ಕಿಯ ಅನ್ನಮಾಡಿಸಿ ಮಿಕ್ಕದ್ದನ್ನೆಲ್ಲಾ ಅಲಕ್ಷ್ಯಮಾಡುತ್ತಾರೆಂದು ತೋರುತ್ತದೆ. ಇದು ಕೃಷ್ಣಪ್ಪನವರ ಜಾಯಮಾನದಲ್ಲಿರಲಿಲ್ಲ. ಅವರ ವಿದ್ಯಾರ್ಥಿಗಳು ಬಲ್ಲರೇನೆಂದರೆ, ಅವರು ಬೋಧಿಸುತ್ತಿದ್ದ ಗ್ರಂಥಗಳಲ್ಲಿ ಮಂಗಳಶ್ಲೋಕಕ್ಕೆ ಅವರು ಎಷ್ಟು ಗಮನಕೊಡುತ್ತಿದ್ದರೋ ಆಶ್ವಾಸಾಂತ್ಯದಲ್ಲಿ ಬರುವ ಗದ್ಯಕ್ಕೂ ಅಷ್ಟೇ ಗಮನಕೊಡುತ್ತಿದ್ದರು. ಯಾವುದೊಂದು ಶಬ್ದಾರ್ಥವೋ ಪೂರ್ವಕಥೆಯೋ ವೃತ್ತಾಂತವೋ ತಿಳಿಯದೇ ಹೋದರೂ ಅವರಿಗೆ ಮನಸ್ಸಮಾಧಾನವಿರದು.

ಈ ವಿಧವಾದ ತಾಳ್ಮೆ ತ್ರಾಣ ನಿಶ್ಚಲತೆಗಳಿದ್ದದ್ದರಿಂದಲೇ ಇಂಗ್ಲೀಷ್ ಸಂಸ್ಕೃತ, ತೆಲಗುಭಾಷೆಗಳಿಂದ ಭಾಷಾಂತರಗಳನ್ನೂ, ಕನ್ನಡ ನಿಘಂಟುವಿನ ಕೆಲಸವನ್ನೂ ಕೈಕೊಂಡರು. ವರ್ಷಾಕಾಲದಲ್ಲಿ ಮಿಂಚುವ ಆಕಾಶದಂತೆ ಹುಚ್ಚುರೇಗಿದಾಗ ಹತ್ತು ಪದ್ಯಗಳನ್ನು ಹೊರಸೂಸಿಬಿಡುವ ಕವಿಗಳಿಂದ ಇಂಥ ಕೆಲಸ ಸಾಧ್ಯವಲ್ಲ. ಆದರೆ ಅವರು ಯಾವಾಗ ಏನು ಕೆಲಸಮಾಡುತ್ತಿದ್ದರು, ಅವರ ಆಶಯವೇನು ಇರುತ್ತಿದ್ದಿತು ಎಂಬುದು ಯಾರಿಗೂ ಮುಂದಾಗಿ ತಿಳಿಯುತ್ತಿರಲಿಲ್ಲ—"ಫಲಾನುಮೇಯಾಃ ಪ್ರಾರಂಭಾಃ"—ಅವರ ಹೃದಯವು ಅಷ್ಟು ಗೂಢವಾಗಿತ್ತು. ಅದಕ್ಕೆ ತಕ್ಕಂತೆ ಹೊರಗೂ ಯಾವಾಗಲೂ ಗಂಭೀರವಾಗಿರುತ್ತಿದ್ದರು. ಇಷ್ಟರೊಡನೆಯಾಗಲಿ ಮಿತ್ರರೊಡನೆಯಾಗಲಿ ಎಂದೂ ಹುಚ್ಚು ಹುಚ್ಚಾಗಿ ಹಾಸ್ಯಮಾಡಿದವರಲ್ಲ, ಅತ್ತವರಲ್ಲ, ನಕ್ಕವರಲ್ಲ, ಅಶ್ಲೀಲವಾಗಿ ಮಾತನಾಡಿದವರಲ್ಲ. ಮಾತು ಕಥೆ ನಡೆ ನುಡಿ ಊಟ ಉಪಚಾರಗಳಲ್ಲಿ ಬಹು ಮಿತಿ—ಅವರು ಒಂದುದಿನ ಹೋಟಲಿಗೆ ಹೋಗಿ ಕಳ್ಳತನದಿಂದಾದರೂ ತಿಂಡಿತಿಂದದ್ದನ್ನು ಯಾರೂ ಅರಿಯರು; ಹೀಗೆ ಅವರಿಗಾಗದವರು ಅವರನ್ನು ಶುಷ್ಕರೆಂದು ಆಕ್ಷೇಪಿಸುವಮಟ್ಟಿಗೆ ಮಿತಜೀವಿಗಳೂ ಗಂಭೀರಜೀವಿಗಳೂ ಆಗಿದ್ದರು. ಆದ್ದರಿಂದಲೇ ಅವರು ದೇಹವನ್ನೂ ಮನಸ್ಸನ್ನೂ ಸ್ವಾಧೀನದಲ್ಲಿಟ್ಟುಕೊಂಡು ಅಹೋರಾತ್ರಿಯಲ್ಲಿಯೂ ಯಂತ್ರದಂತೆ ಕೆಲಸಮಾಡಬಲ್ಲವರಾಗಿದ್ದರು; ಅಷ್ಟೊಂದು ದೃಢಕಾಯರಲ್ಲದಿದ್ದರೂ ಆರೋಗರಾಗಿದ್ದರು.

ಕನ್ನಡದಲ್ಲಿ ಎಷ್ಟು ಪಾಂಡಿತ್ಯವಿತ್ತೋ ಅವರಿಗೆ ಅಷ್ಟು ಮಮತೆಯೂ ಇತ್ತು. ಬೆಂಗಳೂರಿನಲ್ಲಿ ಕರ್ಣಾಟಕ ಸಾಹಿತ್ಯಪರಿಷತ್ತು ಆರಂಭವಾದಾಗ ಅವರು ಗೌ|| ಕಾರ್ಯದರ್ಶಿಗಳಾಗಿದ್ದರು. ಹತ್ತು ಜನರ ಕೆಲಸ ಯಾರ ಕೆಲಸವೂ ಅಲ್ಲ. ಅದರಲ್ಲಿಯೂ ನಾಲ್ಕಾರು ಪ್ರಾಂತಗಳ ಜನರನ್ನು ತಕ್ಕಡಿಯಲ್ಲಿ ಹಾಕಿ, ಆಕ್ಷೇಪಣೆಯಿಲ್ಲದಂತೆ ತೃಪ್ತಿಕರವಾಗಿ ಯಾವನೂ ಯಾವ ಸಂಸ್ಥೆಯ ಕೆಲಸವನ್ನೂ "ಗೌರವ" ವಾಗಿ ತೂಗಲಾರನು. ಇಂಥ ಕೆಲಸವನ್ನು ಮ|| ಕೃಷ್ಣಪ್ಪನವರು ಕೈಕೊಂಡು ನಡೆಸಿದ್ದರು. ಮೈಸೂರಿಗೆ ಬಂದಮೇಲೆ ಮ|| ಬಾವು ಸುಬ್ಬರಾಯರ ಮರಣದಿಂದ "ಕರ್ಣಾಟಕ ಗ್ರಂಥಮಾಲೆ"ಯು ನಿಂತುಹೋಯಿತಷ್ಟೆ. ಆಗ ಅದನ್ನು ಮ|| ಕೃಷ್ಣಪ್ಪನವರು ತೆಗೆದುಕೊಂಡರು. ಸ್ವಲ್ಪದಿವಸದಲ್ಲಿಯೇ ದೃಷ್ಟಿಯು ದುರ್ಬಲವಾಯಿತು. ಆಗ ಅವರ ಮಿತ್ರರೊಬ್ಬರು "ಈ ಕೆಲಸವನ್ನು ಬಿಟ್ಟು ಬಿಡಬಾರದೇ ? ಪ್ರೂಫು ಓದುವುದು ಬರೆಯುವುದು ಮುಂತಾದ ಕೆಲಸದಿಂದ ತೊಂದರೆಯಾದೀತು" ಎಂದು ಹೇಳಿದಾಗ ಅವರು ಕನ್ನಡದಮೇಲಿನ ಸಹಜವಾದ ಮಮತೆಯಿಂದಲೂ ಅಭಿಮಾನದಿಂದಲೂ "ಗ್ರಂಥಮಾಲೆಯು ನನ್ನ ಕೈಗೆ ಬಂದು ಸತ್ತುಹೋಯಿತು ಎಂದಾಗಬಾರದು. ಆದ್ದರಿಂದ ಎಷ್ಟೇ ಕಷ್ಟವಾದರೂ ಆಗಲಿ ಇದನ್ನು ನಡೆಸಬೇಕೆಂದಿದ್ದೇನೆ" ಎಂದು ಉತ್ತರಕೊಟ್ಟರು. ಅವರು ಬಹು ಕನ್ನಡ ಗ್ರಂಥಗಳನ್ನು ಓದಿದ್ದರು ; ಅವರು ಶೇಖರಿಸಿ ಇಟ್ಟುಕೊಂಡಿದ್ದಷ್ಟು ಕನ್ನಡ ಗ್ರಂಥಗಳು ಮತ್ತೆ ಯಾವ ಒಬ್ಬ ವ್ಯಕ್ತಿಯಲ್ಲಿಯೂ ಇದ್ದಿರಲಾರವು. ಅವರ ಮರಣದಿಂದ ಕನ್ನಡಿಗರು ಒಬ್ಬ ದೊಡ್ಡ ಪಂಡಿತರನ್ನು ಕಳೆದುಕೊಂಡಿದ್ದಾರೆಂಬುದರಲ್ಲಿ ಸಂದೇಹವಿಲ್ಲ.

ಕೃಷ್ಣಪ್ಪನವರು ಬಹುದೊಡ್ಡ ಕುಟುಂಬಿಗಳು ; ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೂ ಅವರ ಆತ್ಮೀಯರಿಗೆ ಸುಖಸಮಾಧಾನಗಳನ್ನೂ ಅನುಗ್ರಹಿಸಲಿ !

ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು

ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು (೧೮೭೦-೧೯೨೮) ಮೈಸೂರು ದೇಶೀಯರು. ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಹೊಸಕೋಟೆಯಲ್ಲಿ ಜನಿಸಿದವರು. ಆದರೂ ಅವರ ಜೀವಮಾನದ ಬಹು ಭಾಗದಲ್ಲಿ ಅವರ ಕಾರ್ಯಕ್ಷೇತ್ರವು ಮೈಸೂರಿನ ಹೊರಗೇ ಇತ್ತು. ಅವರು ಮೊದಲು ಡಾ|| ಹುಲ್ಷ್‌ರವರ ಕಾಲದಲ್ಲಿ ಬ್ರಿಟಿಷ್ ಸರ್ಕಾರದ ಶಾಸನದ ಇಲಾಖೆಗೆ ಕೆಲಸಕ್ಕೆ ಸೇರಿ ಅಲ್ಲಿಯೇ ಕ್ರಮಕ್ರಮವಾಗಿ ಮೇಲಕ್ಕೆ ಬಂದು ಲಿಪ್ಯನ್ವೇ

ಷಣ ಶಾಖೆಯ ಪ್ರಧಾನಾಧ್ಯಕ್ಷರಾದರು. ಹೀಗೆ ತಮ್ಮ ಆಯುಸ್ಸೆಲ್ಲವನ್ನೂ ಒಂದೇ ಇಲಾಖೆಯಲ್ಲಿ ಒಂದೇ ವಿಧವಾದ ಕೆಲಸದಲ್ಲಿ ಕಳೆದವರು ಅಪರೂಪ.

ಅವರ ಮಾತೃಭಾಷೆಯು ತೆಲುಗು ; ಆ ಭಾಷೆಯಲ್ಲಿಯೂ ತಮಿಳು ಕನ್ನಡ ಸಂಸ್ಕೃತ ಇಂಗ್ಲೀಷುಗಳಲ್ಲಿಯೂ ಅವರಿಗೆ ಒಳ್ಳೆಯ ಪಾಂಡಿತ್ಯವಿತ್ತು. ಈ ಪಾಂಡಿತ್ಯ ಸಾಮರ್ಥ್ಯಗಳನ್ನು, ಅವರು ಬರೆದಿರುವ ವರದಿಗಳಲ್ಲಿಯೂ " ಎಪಿಗ್ರಾಫಿಕಾ ಇಂಡಿಕಾ " ಪತ್ರಿಕೆಯಲ್ಲಿಯೂ " ದಕ್ಷಿಣದೇಶದ ದೇವದೇವತಾ ವಿಗ್ರಹಗಳು " ಎಂಬ ಗ್ರಂಥದಲ್ಲಿಯೂ ಕಾಣಬಹುದು. ಮೈಸೂರಿನ ಹೊರಗೇ ಕೆಲಸಮಾಡುತ್ತಿದ್ದರೂ ತಾವು ಕನ್ನಡಿಗರೆಂಬುದನ್ನು ಅವರು ಮರೆತಿರಲಿಲ್ಲ. ಮೈಸೂರಿನ ಹೊರಗೆ ಇರುವ ಶಾಸನಗಳನ್ನು ಹುಡುಕಿಸಿ ಶೇಖರಿಸಿ ಅರ್ಥಮಾಡುವುದಕ್ಕೆ ಅವರು ಬಹುವಾಗಿ ಪ್ರಯತ್ನಪಟ್ಟರು. ರೈಸ್‌ಸಾಹೇಬರು ಮೈಸೂರಿನಲ್ಲಿ ಮಾಡಿದ ಕೆಲಸವನ್ನು ಅವರು ಹೊರಗೆ ಆರಂಭಿಸಿದರೆಂದು ಹೇಳಬಹುದು. ಈಗ ಕೆಲವು ವರ್ಷಗಳ ಕೆಳಗೆ ಕೋಲಾರದಲ್ಲಿ ನಡೆದ ಸಾಹಿತ್ಯಪರಿಷತ್ಸಮ್ಮೇಳನದಲ್ಲಿಯೂ ಕ್ರೋಧನಸಂವತ್ಸರದಲ್ಲಿ ಬೆಂಗಳೂರೊಳಗೆ ನಡೆದ ನಮ್ಮ " ಕರ್ಣಾಟಕಸಂಘ "ದ ವಾರ್ಷಿಕೋತ್ಸವದಲ್ಲಿಯೂ ಅಧ್ಯಕ್ಷರಾಗಿದ್ದರು. ಸಂಘಕ್ಕೆ ಅವರೊಬ್ಬರು ಒಳ್ಳೆಯ ಆಶ್ರಯದಾತರಾಗಿದ್ದರು. ಸಂಘದಲ್ಲಿ ಒಂದು " ಕವಿತಾಸ್ಪರ್ಧೆ " ಯನ್ನು ಏರ್ಪಡಿಸಿ ಅದರಲ್ಲಿ ಅಗ್ರಸ್ಥಾನವನ್ನು ಪಡೆದ ವಿದ್ಯಾರ್ಥಿಗೆ ಐವತ್ತು ರೂಪಾಯಿನ ಒಂದು ಬಹುಮಾನವನ್ನು ಕೊಡುತ್ತಿದ್ದರು. ಆದ್ದರಿಂದ ಸಂಘಕ್ಕೆ ಅವರ ಮರಣದಿಂದ (೮-೨-೨೮) ಒಬ್ಬ ದಾತೃವೂ ಅಭಿಮಾನಿಯೂ ಇಲ್ಲದಂತಾಯಿತು.

ಅವರನ್ನು ಒಂದುಸಾರಿ ನೋಡಿದವರು ಮರೆಯುವಂತಿರಲಿಲ್ಲ; ಅವರಸ್ವಭಾವವು ಹಸುಮಗುವಿನ ಸ್ವಭಾವದಂತಹದು; ಅವರಲ್ಲಿ ಸುಳ್ಳು ಕಪಟ ಕೃತ್ರಿಮ ಇವುಗಳ ಲೇಶವೂ ಇರಲಿಲ್ಲ. ಇಂಥ ಋಜುಮಾರ್ಗದ ಪರಮಸಾತ್ವಿಕರು ತುಂಟರಿಂದ ತುಂಬಿದ ಈ ಪ್ರಪಂಚದಲ್ಲಿ, ಆಡಂಬರದಿಂದ ಬೆಳಗುತ್ತಿರುವ ಈ ನವನಾಗರಿಕ ಕಾಲದಲ್ಲಿ, ಹೇಗೆ ಬದುಕಿ ಮುಂದಕ್ಕೆಬಂದರೋ ಎಂದು ಆಶ್ಚರ್ಯವಾಗುವಂತಿತ್ತು. ಕೊನೆಗೆ ತಮ್ಮ ಈ ಸತ್ತ್ವಭಾವವೇ ಸ್ವಲ್ಪಮಟ್ಟಿಗೆ ಅಸುಖಕ್ಕೂ ಕೊರಗಿಗೂ ಕಾರಣವಾಯಿತು. ಅದೇ ಸಾವಿಗೂ ಮೂಲವಾಗಿರಬಹುದು. ಸಾವು ಯಾರಿಗೆ ಬರುವುದಿಲ್ಲ? ಆದರಲ್ಲಿ ಆಧುನಿಕ ನವನಾಗರಿಕ ದುರ್ಮಾರ್ಗಗಳಿಗೆ ಬಲಿಯಾಗಿ ಸಾವನ್ನು ಪಡೆಯುವುದಕ್ಕಿಂತ ಸದ್ವೃತ್ತಿಯಲ್ಲಿ ಜೀವನ ಮಾಡಿಕೊಂಡಿದ್ದು ನಿಷ್ಕಳಂಕವಾದ ಸದ್ಗುಣಕ್ಕೆ ಬಲಿಯಾಗಿ ಸಾವನ್ನು ಪಡೆಯುವುದು ಸರ್ವಶ್ರೇಯಸ್ಕರ; ಆ ಭಾಗ್ಯವು ಎಲ್ಲರಿಗೂ ಇರುವುದಿಲ್ಲ.

ಎಂದಿನಂತೆ ಈ ವರ್ಷವೂ ಕಾಲೇಜಿನಲ್ಲಿ ವೇತನ ಪಡೆಯುವ ವಿದ್ಯಾರ್ಥಿಗಳು ಸಂಘಕ್ಕೆ ಮುಂದೆತಿಳಿಸುವಂತೆ ದಾನದ್ರವ್ಯವನ್ನು ಕೊಟ್ಟಿರುತ್ತಾರೆ. ಇವರ ಉದಾರವಾದ ಸಹಾಯಕ್ಕಾಗಿ ಸಂಘವು ಅತ್ಯಂತ ಕೃತಜ್ಞವಾಗಿದೆ :—

ಮೊದಲನೆಯ ವರ್ಷದ ಬಿ.ಎ.

ಮ॥ ಗಳಾದ	ರೂ.
ಜಿ. ಚನ್ನರಾಯರೆಡ್ಡಿ	೧
ಎಸ್. ಬಿ. ಧರಣೇಂದ್ರಯ್ಯ	೧
ಎ೯. ರಾಮಯ್ಯ	೧
ಎ೯. ಬಿ. ಕೃಷ್ಣಯ್ಯಂಗಾರ್	೧
ಎಂ ಮಹಮ್ಮದಾಲಿ	೧
ಎಂ. ವೆಂಕಟಗಿರಿರಾವ್	೧
ಎಂ. ಮರಿಯಪ್ಪ	೧
ವಿ. ಗುಂಡಪ್ಪ	೧
ಎಂ. ಪುಟ್ಟೇಗೌಡ	೧
ಎಂ. ಲಿಂಗಯ್ಯ	೧
ಬಿ. ಸಯ್ಯದ್ ಮಹಮ್ಮದ್	೧
ಎಂ. ಬಿ. ಸುಂದರರಾವ್	೧
ಡಿ. ಆರ್. ನರಸಿಂಗರಾವ್	೧
ಕೆ. ಗೌರೀಶಂಕರ್	೧
ಎಂ. ಆರ್. ಜನಾರ್ದನಅಯ್ಯಂಗಾರ್	೧
ಕೆ. ಏ. ಅರ್ಜುನರಾವ್	೧
ರಾಜಶೇಖರಯ್ಯ	೧
ಎಲ್. ಮಹರಸ	೧
ಶ್ರೀ ಪರಂಜ್ಯೋತಿ ಸ್ಟೀಫ೯	೧
,, ಟಿ. ಪಿ. ವನಜಾಕ್ಷಿ	೧
,, ವಿ. ಎಲ್. ರತ್ನಮ್ಮಾಳ್	೧
,, ಪಿ. ಜೆ. ಕೃಷ್ಣರಾವ್	೧
,, ಸೀತಮ್ಮ	೧

ಎರಡನೆಯ ವರ್ಷದ ಬಿ.ಎ.

ಮ॥ ಗಳಾದ	ರೂ.
ಎ೯. ಎಸ್. ರಾಮಚಂದ್ರಯ್ಯ	೧॥
ಎ೯. ಚೌಡಪ್ಪ	೧
ಡಿ. ಆರ್. ರಾಮಯ್ಯ	೧
ಬಿ. ಬೀರಪ್ಪ	೧
ಆರ್. ರಂಗಯ್ಯ	೧
ಎಚ್. ಎಸ್. ಚಂದ್ರಶೇಖರರಾವ್	೧
ಕೆ. ಟಿ. ನಂಜಪ್ಪ	೧
ಎ೯. ಲಿಂಗಪ್ಪ	೧
ವಿ. ಶಂಕರಪ್ಪ	೧

ಎರಡನೆಯ ವರ್ಷದ ಬಿ.ಎಸ್‌ಸಿ.

ಎಂ. ವಿ. ಅಣ್ಣಾಸಾಮಿಅಯ್ಯಂಗಾರ್	೧
ಕೆ. ಲಕ್ಷ್ಮೀಪತಿ	೨
ಎಚ್. ಎಸ್. ಕೃಷ್ಣರಾವ್	೧
ಟಿ. ಪಿ. ತಿರುಮಲರಾವ್ ನಾಯಿಡು	೧
ಬಿ. ನಾರಾಯಣದಾಸ್	೧
ಎಸ್. ಎ೯. ಗುಂಡುರಾವ್	೧
ಶ್ರೀಪತಿರಾವ್	೧
ಎಚ್. ವಿ. ಸೂರ್ಯನಾರಾಯಣರಾವ್	೧
ಕೆ. ಚಿಕ್ಕನಾರಾಯಣಸಾಮಿ	೧
ಪಿ. ರಾಮಚಂದ್ರರಾವ್	೧
ಕೆ. ಏ. ಕೃಷ್ಣಸ್ವಾಮಿರಾವ್	೧
ಬಿ. ಭೀಮರಾವ್	೧
ಶ್ರೀ ಜಿ. ಪಿಚ್ಚಮುತ್ತು	೧

ಮೂರನೆಯ ವರ್ಷದ ಬಿ.ಎ.		ಮ|| ಗಳಾದ	ರೂ.
ಮ|| ಗಳಾದ	ರೂ.	ಕೆ. ಆರ್. ಶ್ರೀನಿವಾಸಯ್ಯಂಗಾರ್	೧
ಎಂ. ಸುಬ್ಬರಾವ್	೧	ಕೆ. ವೆಂಕಟಾಚಲಯ್ಯಂಗಾರ್	೧
ಎ. ರಾಮಚಂದ್ರನಾಯಿಡು	೧	ವಿ. ವಿಶ್ವನಾಥನ್	೧
ಬಿ. ತಿಮ್ಮಯ್ಯ	೧	ಟಿ. ಗೋಪಾಲರಾವ್	೧
ಎಂ. ಚಂದ್ರಯ್ಯ	೧	ಪಿ. ಆರ್. ನಾಗಪ್ಪ	೧
ಎ. ಸಂಪತ್ಕುಮಾರಾಚಾರ್	೧	ಜಿ. ನಾರಾಯಣ	೧
ವಿ. ರೇವಣ್ಣ	೧	ಬಿ. ಆರ್. ಸುಂದರರಾಜಯ್ಯಂಗಾರ್	೧
ರಾಮರಾವ್	೧	ಎಂ. ಬಿ. ರಾಮಚಂದ್ರರಾವ್	೧
ಮೂರನೆಯ ವರ್ಷದ ಬಿ.ಎಸ್‌ಸಿ.		ಎಸ್. ನರಸಿಂಹಮೂರ್ತಿ	೧
ಡಿ. ವೆಂಕಟಸಾಮಿ	೧	ಬಿ. ಎನ್. ರಘುನಾಥರಾವ್	೧

ದಾತೃಗಳು.

	ರೂ.		ರೂ.
ಆಮೆಚೂರ್ ನಾಟಕಮಂಡಲಿ	೩೦	ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್ ಎಂ. ಶಾಮರಾವ್, ಎಂ.ಎ.	೫
ಮ|| ಮೋಕ್ಷಗುಂಡಂ ಕೃಷ್ಣಮೂರ್ತಿಗಳು ಬಿ.ಎ., ಎಲ್‌ಎಲ್.ಬಿ.	೧೫	ರಾಜಸಭಾಭೂಷಣ ಕರ್ಪೂರ್ ಶ್ರೀನಿವಾಸರಾವ್, ಬಿ.ಎ., ಬಿ.ಇ.	೧೨
ಭೂಪಾಲಂ ರುಕ್ಮಯ್ಯನವರು	೧೦		
ಡಾ|| ಸಂಪತ್ಕುಮಾರನ್ ಎಂ.ಎ., ಇತ್ಯಾದಿ	೧೦		

ಪೋಷಕರು.

ಮೈಸೂರು ಡಿಸ್ಟ್ರಿಕ್ಟ್.

ಮ|| ಗಳಾದ

ಬಿ. ಎಂ. ಶ್ರೀಕಂಠಯ್ಯನವರು, ಎಂ.ಎ., ಬಿ.ಎಲ್.

ಬಿ. ಕೆ. ರಾಮಕೃಷ್ಣಯ್ಯನವರು, ಎಂ.ಎ., ಎಲ್‌ಎಲ್.ಬಿ.

ಬಿ. ಮಾಧವರಾಯರು

ಎನ್. ಆರ್. ಸುಬ್ಬಣ್ಣಯ್ಯನವರು.

ಪುಟ್ಟರಾಜೇಅರಸಿನವರು, ಎಂ.ಎ., ಬಿ.ಎಲ್.

ಎ. ಸಿ. ಬಸಪ್ಪಾಜಿ ಅರಸಿನವರು

ಮ|| ಗಳಾದ

ಎನ್. ಎಸ್. ಲಿಂಗಾಶಾಸ್ತ್ರಿಗಳು, ಬಿ.ಎಸ್‌ಸಿ.

ಎಂ. ಮಂಜಪ್ಪನವರು

ಪಿ. ಎಚ್. ಕೃಷ್ಣರಾವ್, ಎಂ.ಎ.

ಸಾತನೂರು ರಾಮರಾವ್.

ಎ. ಆರ್. ನಾರಾಯಣರಾವ್

ಬಿ. ಶಂಕರಪ್ಪ.

ಎ. ಕೆ. ರಂಗರಾವ್.

ಕೆ. ಎಸ್. ಧೀರೇಂದ್ರದಾಸ್, ಬಿ.ಎ.

ತುಮಕೂರು ಡಿಸ್ಟ್ರಿಕ್ಟ್.

ಮ|| ಗಳಾದ

ವೆಂಕಟರಮಣಪ್ಪ, ಬಿ.ಎ.

ಡಿ. ರಾಘವೇಂದ್ರರಾವ್, ಬಿ.ಎ., ಎಲ್‌ಎಲ್.ಬಿ.

ಹಾಸನ ಡಿಸ್ಟ್ರಿಕ್ಟ್.

ಎ. ಎಸ್. ನಂಜುಂಡಪ್ಪ.

ಬಿ. ವೆಂಕಟಾಚಾರ್, ಬಿ.ಎ.

ಕೆಳಗಿನಮನೆ ಸೂರ್‍ಯನಾರಣಪ್ಪನವರು

ಎ. ನಾರಣಯ್ಯಂಗಾರ್.

ಎಚ್. ಎಸ್. ಸುಬ್ಬರಾಯಸೆಟ್ಟರು.

ಕಡೂರು ಡಿಸ್ಟ್ರಿಕ್ಟ್.

ಎನ್. ಮಾಧವರಾವ್, ಬಿ.ಎ.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಬಿ. ವೆಂಕಟಶಾಮಣ್ಣನವರು, ಬಿ.ಎ., ಬಿ.ಎಲ್.

ಎ. ತಂಡೋಣಿರಾವ್, ಎಲ್.ಸಿ.ಇ.

ಡಿ. ಆರ್. ಹೊಸೂರಪ್ಪನವರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.

ಬಿ. ಎನ್. ರಾಘವಯ್ಯನವರು,
ಬಿ.ಎ., ಬಿ.ಎಲ್.

ಎಂ. ವೆಂಕಟನಾರಣಪ್ಪನವರು ಬಿ.ಎ.

ಕೆ. ಆರ್. ವೆಂಕಟರಾವ್, ಬಿ.ಎ.

ಕೆ. ರಾಮಕೃಷ್ಣಭಟ್ಟರು.

ಎ. ಅನಂತಯ್ಯನವರು.

ಭೂಪಾಲಂ ರುಕ್ಮಯ್ಯನವರು.

ಶ್ರೀಕಂಠಪ್ಪಗೌಡರು.

ಕೋಲಾರ ಡಿಸ್ಟ್ರಿಕ್ಟ್.

ಎಸ್. ಸೀತಾರಾಮಯ್ಯ, ಬಿ.ಎ.

ಎನ್. ಸೀತಾರಾಮಯ್ಯ, ಬಿ.ಎ., ಬಿ.ಎಲ್.

ಜಿ. ಸುಂದರರಾವ್, ಬಿ.ಎ.

ಬಿ. ಶಂಕರಗೌಡ ಪಾಟೀಲ್.

ಕೆ. ರಾಮಸ್ವಾಮಯ್ಯ.

ರಾಮರಾವ್, ತೆರುಗುಂಡಿ.

ಇತರ ಕಡೆಗಳಿಂದ.

ಮ|| ಗಳಾದ

ಆರ್. ಎ. ಜಹಗೀರದಾರ್,
ಎಂ.ಎ., ಎಲ್‌ಎಲ್.ಬಿ.

ಎನ್. ವಿ. ಶ್ರೀನಿವಾಸಮೂರ್ತಿ, ಬಿ.ಎ., ಬಿ.ಇ.

ಎನ್. ಲಕ್ಷ್ಮೀನಾರಾಯಣರಾವ್, ಎಂ.ಎ.

ಆರ್. ಕೆ. ಅಸುಂಡಿ, ಬಿ.ಎ., ಬಿ.ಎಸ್‌ಸಿ.

ವಿದ್ವಾನ್ ಹನುಮಂತಾಚಾರ್ಯ ಕುರುಡಿ, ಬಿ.ಎ.

ಬಿ. ಎಸ್. ರಾಮಯ್ಯ, ಬಿ.ಎ.

ಸಿ. ಎಸ್. ಬಾಜಿ.

ಕೆ. ವಿ. ಶ್ರೀಕಂಠೇಶ್ವರನ್, ಬಿ.ಎಸ್‌ಸಿ.,
ಎಫ್.ಸಿ.ಎಸ್.

ವಿ. ಕೃಷ್ಣಮೂರ್ತಿ, ಬಿ.ಎಸ್‌ಸಿ.

ಡಿ. ಎಸ್. ಆರ್. ರಾವ್, ಬಿ.ಇ.

ಎನ್. ಎನ್. ಅಯ್ಯಂಗಾರ್, ಬಿ.ಎ.

ಎಸ್. ಎಚ್. ಗೋಪಾಲಸ್ವಾಮಿನಾಯ್ಡು,
ಬಿ.ಎ., ಬಿ.ಎಸ್‌ಸಿ.

ಸಿ. ಸಿ. ಅಕ್ಬರ್.

ಶರ್ಮಪ್ಪನಾಯಕ್.

ಬೆಂಗಳೂರು ಡಿಸ್ಟ್ರಿಕ್ಟ್.

ಬಿ. ವೆಂಕಟೇಶಾಚಾರ್ಯರು, ಎಂ.ಎ.

ಎ. ವೆಂಕಟರಾವ್ ಟೆಲಾಂಗ್‌ರವರು, ಎಂ.ಎ.

ಸಿ. ಕೆ. ಸುಂದರಾಚಾರ್‍ಯರು, ಎಂ.ಎ.

ಪಿ. ಶ್ರೀನಿವಾಸರಾಯರು, ಎಂ.ಎಸ್‌ಸಿ.

ಎಂ. ಜಿ. ಶ್ರೀನಿವಾಸರಾಯರು, ಎಂ.ಎ., ಎ.ಎಂ.

ಸಿ. ಶ್ರೀಕಂಠಯ್ಯನವರು, ಬಿ.ಎ.

ಎಂ. ಶೇಷಯ್ಯಂಗಾರ್‍ಯರು, ಎಂ.ಎ.

ಸಿ. ಎನ್. ಶ್ರೀನಿವಾಸಯ್ಯಂಗಾರ್ಯರು,
ಎಂ.ಎಸ್‌ಸಿ.

ಪಿ. ಸಂಪತ್ತಯ್ಯಂಗಾರ್‍ಯರು, ಎಂ.ಎ.

ಎಲ್. ರಾಮರಾಯರು, ಎಂ.ಎ.

ಎಫ್. ಆರ್. ಸೆಲ್, ಎಂ.ಎ.

ಮ|| ಗಳಾದ

ಪಿ. ಎಸ್. ಅಣ್ಣಾಜಿರಾಯರು, ಎಂ.ಎ.

ಬಿ. ನಾಗೇಶರಾಯರು, ಎಂ.ಎ.

ಕೆ. ಅನಂತರಾಮಯ್ಯನವರು, ಎಂ.ಎ.

ಎನ್. ಎಸ್. ಸೂರ್ಯನಾರಾಯಣರಾಯರು, ಎಂ.ಎ.

ಟಿ. ಎಸ್. ವೆಂಕಣ್ಣಯ್ಯನವರು, ಎಂ.ಎ.

ಎಸ್. ಲಕ್ಷ್ಮಣರಾಯರು, ಬಿ.ಎಸ್‌ಸಿ.

ಎಚ್. ರಾಮಸ್ವಾಮಯ್ಯಂಗಾರ್ಯರು, ಬಿ.ಎಸ್‌ಸಿ.

ಎನ್. ವೆಂಕಟೇಶಯ್ಯಂಗಾರ್, ಬಿ.ಎ.

ಬಿ. ಪುಟ್ಟಯ್ಯ, ಬಿ.ಎ.

ಟಿ. ಅಪ್ಪೂರಾವ್, ಬ.ಎ., ಬಿ.ಎಲ್.

ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

ಎಂ. ಶಾಮರಾವ್, ಎಂ.ಎ.

ಡಾ|| ಸಿ. ಎಸ್. ರಾಮರಾವ್.

ಡಾ|| ಎನ್. ಸುಬ್ಬರಾವ್, ಬಿ.ಎ.,ಎಂ.ಬಿ.ಸಿ.ಎಂ. ಇತ್ಯಾದಿ.

ಬಿ. ವೆಂಕಟನಾರಣಪ್ಪ, ಎಂ.ಎ.

ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ.

ಮ|| ಗಳಾದ

ಜಿ. ಎಸ್. ತಮ್ಮಣ್ಣಯ್ಯ, ಬಿ.ಎ.

ಸೆಕ್ರೆಟರಿ, ಎ. ಡಿ. ಎ.

ಕರ್ಪೂರ ಶ್ರೀನಿವಾಸರಾವ್, ಬಿ.ಎಸ್.ಸಿ. ಎಲ್.ಸಿ.ಇ.

ಎಂ. ಕೃಷ್ಣಮೂರ್ತಿ, ಬಿ.ಎ., ಎಲ್‌ಎಲ್.ಬಿ.

ಎ. ಎನ್. ರಾಘವಾಚಾರ್, ಎಂ.ಎ.

ಬಿ. ರಾಮಕೃಷ್ಣ, ಬಿ.ಎ.

ಬಿ. ಎಸ್. ರಾಘವೇಂದ್ರರಾವ್, ಎಂ.ಎ.

ವಿ. ಗೋಪಾಲಸ್ವಾಮಿ ಅಯ್ಯಂಗಾರ್, ಎಂ.ಎ.

ಎನ್. ರಾಮರಾವ್, ಬಿ.ಎ.

ಸಿ. ಇ. ರಾಮರಾವ್, ಬಿ.ಎ.

ಆರ್. ರಂಗರಾವ್, ಬಿ.ಎ., ಬಿ.ಎಲ್.

ಎಂ. ವೀರರಾಜ ಅರಸ್.

ಎ. ಕೆ. ಶಂಕರಯ್ಯ, ಬಿ.ಎ.

ಎನ್. ಕೃಷ್ಣಯ್ಯಂಗಾರ್, ಬಿ.ಇ.

ಎಚ್. ವಿ. ನಾರಾಯಣರಾವ್, ಬಿ.ಎ., ಎಲ್‌ಎಲ್.ಬಿ

ಡಿ. ರಾಮಯ್ಯ.

ಕ್ಯಾಪ್ಟನ್ ಬಸವರಾಜ ಅರಸ್.

ಪ್ರಬುದ್ಧ

ಕರ್ಣಾಟಕ

ವಿಭವ ಸಂವತ್ಸರ —೩೫— ಗಣೇಶನ ಸಂಚಿಕೆ

ಸಂಪುಟ ೧೦] ವಿಷಯಸೂಚಿಕೆ [ಸಂಚಿಕೆ ೧

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೮

All Rights Reserved

Printed at the Crown Electric Press, Mysore.

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ).

ವಾರ್ಷಿಕಚಂದಾ (ಅಂಚೆವೆಚ್ಚ ಸೇರಿ)	ಆಶ್ರಯದಾತರಿಗೆ	ರೂ. ೧೦—೦—೦
	ಪೋಷಕರಿಗೆ	ರೂ. ೩—೬—೦
	ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳಿಗೆ	ರೂ. ೨—೮—೦
	ಚಂದಾದಾರರಿಗೆ	ರೂ. ೨—೦—೦

ಕಾರ್ಯದರ್ಶಿ,
ಕರ್ಣಾಟಕ ಸಂಘ,
ಸೆಂಟ್ರಲ್ ಕಾಲೇಜು, ಬೆಂಗಳೂರು.

ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯರೂಪವಾಗಿ ಬರುತ್ತಿರುವ ಪತ್ರಿಕೆಗಳು.

ಬೆಂಗಳೂರು :—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ವಿಶ್ವಕರ್ಣಾಟಕ, ಒಕ್ಕಲಿಗರ ಪತ್ರಿಕೆ, ಸರಸ್ವತಿ, ಮಿಥಿಕ್ ಸೊಸೈಟಿ ಪತ್ರಿಕೆ, ರಂಗಭೂಮಿ, ಮಕ್ಕಳ ಪುಸ್ತಕ.

ಮೈಸೂರು :—ಸಾಧ್ವಿ, ಮಧ್ವಸಿದ್ಧಾಂತ ಪ್ರಕಾಶಿನೀ, ವಿಶ್ವಬಂಧು.

ತುಮಕೂರು :—ಸ್ಕೂಲ್ ಫ್ರೋಕ್.

ನಂಜನಗೂಡು :—ಸನ್ಮಾರ್ಗದರ್ಶಿ.

ಚಾಮರಾಜನಗರ :—ಕಾದಂಬರೀ ಸಂಗ್ರಹ.

ಧಾರವಾಡ :—ಕರ್ಣಾಟಕ ವೃತ್ತ ಮತ್ತು ಧನಂಜಯ, ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ಣಾಟಕ.

ಬೆಳಗಾಂ :—ಸುಧಾರಕ, ಪ್ರಬೋಧ.

ಬಿಜಾಪುರ :—ಕಲ್ಪಲತಾ ಗ್ರಂಥಮಾಲಾ.

ಅಗಡಿ :—ಸದ್ಬೋಧಚಂದ್ರಿಕೆ.

ಪುತ್ತೂರು :—ಕನ್ನಡ ಸಹಕಾರ.

ತುಂಗಭದ್ರ :—ಪ್ರೇಮ.

ಬಾಗಲಕೋಟೆ :—ಕನ್ನಡಿಗ.

ಮಂಗಳೂರು :—ಸುವಾಸಿನೀ, ಸುಬೋಧಕ ಗ್ರಂಥಮಾಲಾ.

ಉಡುಪಿ :—ಸತ್ಯಾಗ್ರಹಿ.

ಕುಂದಾಪುರ :—ವಸಂತ.

ಮಡಿಕೇರಿ :—ಓಲ್ಡ್ ಸ್ಟೂಡೆಂಟ್ಸ್ ಮ್ಯಾಗಸೀನ್, ಲೋಕಪಾವನ, ಕೊಡಗು ವೃತ್ತಾಂತ.

ಮದರಾಸು :—ಆರೋಗ್ಯಚಂದ್ರಿಕೆ.

ಚಿಕ್ಕಬಳ್ಳಾಪುರ :—ಬೋಧಕಸೇನೆ.





ಪ್ರಾರ್ಥನೆ.

ರಾಗ : ಮೋಹನ.

ಅರೆಯಲಿ ಬಿಡುವೆಯ ತೊಡಗಿದ ಕಾರ್ಯವ
ಪರಿಪೂರಣ ಮಾಡೋ ಶ್ರೀಹರಿ
ಪರಿಪೂರಣ ಮಾಡೋ.

ಮುನ್ನ ದಿನದಿ ನಾ ಮಗುವಾಗಿರುವಂದು
ಇನ್ನೂ ಅರಿಯದಿರಲು, ಏ
ನನ್ನೂ ಅರಿಯದಿರಲು
ಚೆನ್ನಾ ನೀನು ಬಂದು ಎನ್ನೊಡನಾಡುತೆ
ನಿನ್ನ ಸೊಬಗ ತೋರಿದೆ, ಎನ್ನ
ನಿನ್ನವಳನು ಮಾಡಿದೆ.

ಹರೆಯವು ತಂದುದು ಅರಿವಿನ ಪ್ರೇಮದ
ಅರಿದಾದ ಬೇನೆಯನು, ಹರಿ
ತರಲಿಲ್ಲದು ನಿನ್ನನು ;
ಮರುಳೆ ಬಾರನು ಹರಿ ಎಂಬರು ಸಖಿಯರು
ಕಿರಿಯಳು ನಾನೆಂಬರು, ಆಸೆ
ಹಿರಿದು ಎಂದೆಣಿಸರು.

ಮೌನದ ಕಣ್ಣ ವಿಲಾಸದ ಹಾಸದಿ
ನಾನು ಬರುವೆನೆಂದೆನೀ, ಹರಿ
ನೀನದ ಮರೆಯದಿರು ;
ದಾನವ ಮರೆಯದೆ ಬಾರೊ ; ಬಾರದಿರೆ
ಮಾನವುಳಿವುದೇನೋ, ನಿನ್ನ
ಮಾನವುಳಿವುದೇನೋ !

ಎನ್ನನರಿಯದೆ ಬಂದು ಎನ್ನ ಮನವನು ಹೊಕ್ಕು
ಎನ್ನ ನಿನ್ನವಳೆಂದು ನೋಡಿದೇ, ಹರಿ
ನಿನ್ನವಳನು ಮಾಡಿದೆ ;
ಚೆನ್ನಾ ಅಂದು ಹಿಡಿದಿಂದು ಬಿಡುವೆನೆನೆ
ಗನ್ನಗತಕವಾಗದೇ, ಅದು
ಅನ್ಯಾಯವಾಗದೇ ?

ಶ್ರೀನಿವಾಸ.

ಒಂದು ಪಕ್ಷಿಗೆ.

೧

ನಿನ್ನನೊಮ್ಮೆ ಅರಿವೆ ನಾನು
 ಹಕ್ಕಿ, ಬಾಲ್ಯದಿ ;
ಮುನ್ನ ನಿನ್ನನರಿತು ಇಂದು
ಅಣ್ಣ ಆದನು ಮರೆತು ಇಂಥ
ಬಣ್ಣದುಡುಪ ಸೊಗಸ ಕಂಡು
 ಯಾರಿದೆಂಬೆನು.

೨

ಅಂದು ನಮ್ಮ ಹಳ್ಳಿಯಲ್ಲಿ
 ಬೆಳೆವ ದಿನದಲಿ
ಒಂದು ಚಿಂತೆ ಆಸೆ ಭಯದ
ಕುಂದನರಿಯದೆಳೆಯತನದ
ಚೆಂದದೊಂದು ಕನಸ ದಿನದೆ
 ಅರಿವೆ ನಿನ್ನನು.

೩

ದಾರಿಗಳಲಿ ಒಮ್ಮೆ ಒಮ್ಮೆ
 ನಡೆಯುತಿರಲು ನಾ
ಹಾರಿ ಬಂದು ನೀನು ಬಳಿಯ
ಕಾರೆ ಹೊಲದ ತೊಗರಿ ಹಲಸು
ನೇರಿಳೆಯಲಿ ಲಕ್ಕೆಯಲ್ಲಿ
 ನಲಿದು ಸುಳಿಯುವೆ.

೮

ಅಂದು ಕೂಡ ಹಕ್ಕಿ ನೀನು
ಸೊಗಸ ಮಂದಿಯೇ
ಚೆಂದವಾದ ನಿನ್ನ ಸೊಗೆಯ
ಕಂದಿ ನೀಲಿ ಕಪ್ಪ ನಾನು
ಮಂದವಾದ ಕೆಂಪ ನೋಡಿ
ಮನದೆ ಮೆಚ್ಚಿದೆ.

೫

ಕೊಕ್ಕು ಸ್ವಲ್ಪ ಉದ್ದ ಹೆಚ್ಚು
ನಿನಗೆ ಅಲ್ಲವೆ?
ಚಿಕ್ಕಮೈಗೆ ಸ್ವಲ್ಪ ಹಿರಿದು
ಚಿಕ್ಕದಲ್ಲ ತೋಕೆ ಕೂಡ
ಹಕ್ಕಿ ನಿನಗೆ ಕೋಪಬೇಡ
ನಿಜವ ನುಡಿದರೆ.

೬

ಉದ್ದ ಕೊಕ್ಕು; ಆದರೆ ಅರೆ
ನೀರ ಮರೆಯಲಿ
ಕದ್ದುಸುಳಿವ ಮೀನ ಹಿಡಿದು
ಮೆದ್ದರಲ್ಲದಿಲ್ಲ ಬದುಕು;
ಉದ್ದ ಅದಕೆ ಕೊಕ್ಕು; ಏನ
ಮಾಳ್ಪ? ಅಲ್ಲದೆ,

೭

ಬೇರೆಬೇರೆ ನೋಡೆ ಹಿರಿದು
 ಕಿರಿದು ಎನ್ನುವ
ಮೋರೆ ತೋಕೆ ಮೈಯಿವೆಲ್ಲ
ಸೇರೆ ಅಮ್ಮ ! ನಿನ್ನ ಸೊಗಸು
ಮಿಾರಿ ಎಂತು ನಮ್ಮ ಮನವ
 ಗೆಲುತಲಿರುವುದು.

೮

ಇದು ವಿಚಿತ್ರವಲ್ಲ ನೋಡೆ
 ಬಲ್ಲ ಕರ್ಮಿಯು
ಎದೆಯ ಗೆಲುವ ಗೆಯ್ಮೆಗಳಲಿ
ಕುದುರಿದೊಂದು ಕೌಶಲದಲಿ
ಒದವಿಸುವನು ಸೊಗಸನಿಂತೆ
 ಏನಿದಚ್ಚರಿ ?

೯

ಎಳೆಯದಿನದಿ ಬಲ್ಲ ನಾನು
 ಮರೆತೆನಾದರೂ
ಗೆಳೆಯ ನೀನು ಎನ್ನ ಬಿಡದೆ
ಬಳಿಗೆ ಮರಳಿ ಸಾರಿ ಮುಂದೆ
ಸುಳಿದು ಎನ್ನ ಮನದೆ ಆ
 ಕಳೆದ ಕಾಲದ

೧೦

ಹಾರಿಹೋದ ಸೊಗಸ ನೆನವ
ಸುಳಿಸಿ ಬದುಕಿನ
ದಾರಿಯಲ್ಲಿ ಬರಿಯ ಬೀತ
ಕಾರೆ ಬರಿಯ ಲಕ್ಕೆ ಇಲ್ಲ
ನೇರಿಳಿಹುದು ಮಾವು ನಾನು
ಇರುವೆನೆನ್ನುತ,

೧೧

ಎದೆಗೆ ತಂಪ ತಳಿದೆ; ಮುಂದೆ
ಬರುವ ದಿನದಲಿ
ಬದುಕಿನಲ್ಲಿ ಎಂದೆ ಇರಲಿ
ಮುದದಬಣ್ಣ ಬಾಡಿ ಕ್ಲೇಶ
ಅದುಮಿ ಮನವ ಹಿಡಿದ ದಿನದಿ
ಮತ್ತೆ ಇಂತು ಬಾ.

೧೨

ಬಂದು ಮರಳಿಯಿಂತೆ ಅಣ್ಣಾ
ಕಣ್ಣ ಮುಂಗಡೆ
ಒಂದು ನಿಮಿಷ ಹಾರಿ ತಿಳಿವ
ಮಾಂದ್ಯವನ್ನು ಹರಿದು ಬಾಳು
ಚೆಂದವಪ್ಪುದೆಂದು ನೆನೆಸಿ
ಬದುಕ ಬೆಳಗಿಸು.

ಶ್ರೀನಿವಾಸ.

ಕೋಗಿಲೆ.

ಹಿರಿಮಂಜು ಬಿಟ್ಟಿಲ್ಲ,
ಚಳಿಗಾಳಿ ನಿಂತಿಲ್ಲ,
ಮೈನಡುಕ ಹೋಗಿಲ್ಲ,
ಇಬ್ಬನಿಯು ಸುರಿಮಳೆಯ ನಿಲ್ಲಿಸಿಲ್ಲ ;
ಶಿಶಿರ ಸಾಮ್ರಾಜ್ಯಕ್ಕೆ ಚ್ಯುತಿಯು ಬಂದಿಲ್ಲ ;
ಚ್ಯುತಿ ಬರುವುದೆಂಬೊಂದು ಚಿಹ್ನೆಯಿಲ್ಲ.

ತರಗೆಲೆಗಳುದುರಿಲ್ಲ,
ತಾರೆಮೊಗವರಳಿಲ್ಲ,
ತರುವೊಂದು ಚಿಗುರಿಲ್ಲ,
ಚಿಗುರ್ವಿಡಿವುದೆಂಬೊಂದು ಚಿಹ್ನೆಯಿಲ್ಲ ;
ಹಿಮಕರನ ಬಿಳಿಮೊಗವು ನಗುಬೀರುವಂತಿಲ್ಲ,
ಬೆಳುದಿಂಗಳನ್ನುಂಡು ಆಡುವವರಿಲ್ಲ.

ಹಸುರಿನಿಸು ಕಾಣದಿಹ
ಬರಲು ಕೊಂಬೆಗಳೇರಿ
ಮರದ ತುದಿಯನು ಸಾರಿ
ಏಕಾಂಗಿ ನೀನೇಕೆ ಉಲಿಯುತಿಹೆ ಇಂತು ?
ಆವ ಸಂತಸ ನಿನದು ಪೇಳು ಕೋಗಿಲೆಯೆ,
ಏಂ ಪ್ರಮತ್ತತೆಯಿಂದು ನಿನ್ನ ಕೂಗಿನಲಿ !

ಎತ್ತಲೇಂ ಚೆಲುವಿಲ್ಲ,
ಸಂಗಡಿಗರಾರಿಲ್ಲ,
ಗಿಳಿವಿಂಡು ಗೊರವಂಕ
ಹೊನ್ನಕ್ಕಿ ಹಾಡುತಿಹ ಸರಕೇಳುತಿಲ್ಲ ;
ಆವ ಸೊಗ ಬರುವುದನು ನೀನಲ್ಲಿ ಕಾಣುತಿಹೆ ?
ನಡುಚೈತ್ರವೆಂಬಂತೆ ಉಲಿಯುತಿಹೆಯೆ !

ನಿಡುಬಯಲಸಿರಿಯುತಿಹೆ
ದೆಸೆಗಳನು ತುಂಬುತಿಹೆ
ಕಿವಿಗಳನು ಬಿರಿಸುತಿಹೆ
ಎದೆವೊಕ್ಕು ಆಸೆಗಳ ಕೆರಳಿಸುತ್ತಿಹೆಯೆ !
ಬಂದೀತು ಬಂದೀತು ನಗುಗಾಲ, ಅಕ್ಕ ಓ,
ಎಂದು ಕಂಠವನೆತ್ತಿ ಹಾಡುತಿಹೆಯೆ !

ನಮಗೆ ಗೋಚರಿಸದಿಹ
ಪರರಾರು ಅರಿಯದಿಹ
ನೀನೊರ್ವ ಕಾಣುತಿಹ
ಹೊಸಜೀವಸಂಚಾರವಾವುದಿಹುದೊ !
ನೆಲದಿಂದ ಬೇರಿಂಗೆ, ಬೇರಿಂದ ತರುವಿಂಗೆ,
ಜೀವರಸವೇರುವುದ ಕಾಣುತಿಹೆಯೊ !

ಒಣಗಿರುವ ಶಾಖೆಗಳ
ಶಾಖೆಯುಪಶಾಖೆಗಳ
ನಾಳನಾಳದಿ ಹರಿದು
ಎಳೆಗೆಂಪುಮೊಸುಗಳು ಕುಡಿಯಿಟ್ಟವೇನು ?
ಪಸುಳೆಕುಡಿ ಮೃಗಂಧ ನೀಸವಿದೆಯೇನು ?
ಶಿಶಿರವಳಿವುದು ಚೈತ್ರ ಬಹುದೆಂಬೆಯೇನು ?

ವಿ. ಸೀ.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ*

ಆರ್ಯಮಹಾಶಯರೆ,

ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ತುಂಬಿರುವ ಈ ಮಹಾಸಭೆಯಲ್ಲಿ ಅಗ್ರಾಸನಕ್ಕೆ ಅರ್ಹನಲ್ಲದ ನನಗೆ ತಾವು ಕೊಟ್ಟಿರತಕ್ಕ ಮರ್ಯಾದೆಗೆ ನಾನು ತಲೆಯನ್ನು ತಗ್ಗಿಸಬೇಕಾಗಿದೆ. ತಮ್ಮಲ್ಲಿ ಹಲವರು ದೇಶದ ಏಳಿಗೆಗಾಗಿಯೂ, ಭಾಷೆಯ ಅಭಿವೃದ್ಧಿಗಾಗಿಯೂ ಬಹಳವಾಗಿ ಕೆಲಸಮಾಡಿರುತ್ತೀರಿ; ನಾನು ಮಾಡಿರುವುದು ಅತ್ಯಲ್ಪವಾಗಿರುತ್ತದೆ. ಈಗಲೂ ನನಗೆ ಜ್ಞಾಪಕವಿದೆ—ಮದರಾಸಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ನನ್ನ ಸ್ನೇಹಿತರೂ ನಾನೂ ಸಾಯಂಕಾಲ ಸಮುದ್ರತೀರದಲ್ಲಿ ಮರಳಿನಮೇಲೆ ಕುಳಿತು, ಸಮಾಜದ ಮತ್ತು ಸಾಹಿತ್ಯದ ವಿಷಯಗಳನ್ನು ಚರ್ಚಿಸುತ್ತ, ಹೀಗೆ ಮಾಡಬೇಕು, ಹಾಗೆ ಮಾಡಬೇಕು, ಕನ್ನಡನಾಡಿಗೆ, ಕನ್ನಡನುಡಿಗೆ, ನಮ್ಮ ಬಾಳಿಕೆಯನ್ನೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು ಎಂದು ಪೌರುಷವನ್ನು ಕೊಚ್ಚಿಕೊಳ್ಳುತಿದ್ದದ್ದು. ಕನ್ನಡಕಾವ್ಯಗಳನ್ನೆಲ್ಲಾ ಓದಬೇಕು, ಜನರಲ್ಲಿ ಬಳಕೆಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನು ಬಿತ್ತಬೇಕು, ಜನಸಾಮಾನ್ಯಕ್ಕೆ ತಿಳಿವಳಿಕೆಯೂ, ಹೊಸನಡವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರೆಯಬೇಕು, ಷೇಕ್ಸ್ಪಿಯರಿನ ನಾಟಕಗಳನ್ನೂ, ಗ್ರೀಕರ ರುದ್ರನಾಟಕಗಳನ್ನೂ, ಪ್ಲೇಟೋವಿನ ಸಂವಾದಗಳನ್ನೂ, ಕಾರ್ಲೈಲಿನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು ಎಂದಿವೇ ಮೊದಲಾದ ಸವಿಗನಸುಗಳನ್ನು ಕಂಡ ಆ ಯುವಕನ ಆಶೆ ಎಷ್ಟು! ಉದ್ಯೋಗದ ನಿರ್ಬಂಧಗಳಿಗೂ, ಸಂಸಾರದ ಮನಃಕ್ಲೇಶಗಳಿಗೂ, ಪ್ರಕೃತಿಧರ್ಮವಾದ ಅಸಡ್ಡೆ ಸೋಮಾರಿ

* ಕಲ್ಬುರ್ಗಿಯಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ೧೪ನೆಯ ಸಮ್ಮೇಳನದಲ್ಲಿ ಅಧ್ಯಕ್ಷರ ಆರಂಭ ಭಾಷಣ. (೧-೬-೧೯೨೮)

ತನಗಳಿಗೂ ತುತ್ತಾಗಿ, ಇದ್ದಬದ್ದ ಅಲ್ಪಸ್ವಲ್ಪ ಶಕ್ತಿಯೂ ಕುಂದಿ ಹೋಗಿ, ಎಣಿಸುವುದಕ್ಕೆ ಹೋದರೆ ಕಾರ್ಯದಲ್ಲಿ ಈಗ ನಡಸಿರುವುದೆಷ್ಟು ! ದೇಶಸೇವೆ, ಭಾಷಾಸೇವೆ, ಇವುಗಳ ಪುಣ್ಯ ಬಯಸಿದವರಿಗೆಲ್ಲಾ ದೊರಕ ದೆನ್ನುವುದು ಚೆನ್ನಾಗಿ ಅನುಭವಕ್ಕೆ ಬಂದ ಹತಾಶನಿಗೆ ಈ ದಿನ ತಾವು ತೋರಿಸಿರುವ ವಿಶ್ವಾಸಕ್ಕೆ ಒಂದುಕಡೆ ನಾನು ಹೇಳಿದಂತೆ ತಲೆಯನ್ನು ತಗ್ಗಿಸಬೇಕಾಗಿದೆ; ಆದರೆ ಮತ್ತೊಂದುಕಡೆ ತಮ್ಮಂತಹ ಮಹಾಜನರ ಸಂಘದಲ್ಲಿ ನಾನೂ ಒಬ್ಬನು ಸೇರಿ ದೀಕ್ಷೆಗೊಂಡದ್ದಕ್ಕಾಗಿ ಹೆಮ್ಮೆಯೂ, ಉತ್ಸಾಹದ ಪುನರುತ್ಥಾನವೂ ಹೃದಯದಲ್ಲಿ ಹೊಮ್ಮುತ್ತಿವೆ. ಈ ಜೀವದಾನಕ್ಕೆ ತಮ್ಮಗಳಿಗೆಲ್ಲಾ ನಾನು ಬಹಳ ಕೃತಜ್ಞನಾಗಿರುತ್ತೇನೆ.

೨. ಮಹಾಶಯರೆ, ಒಂದು ದೇಶದ ಶ್ರೇಯೋಭಿವೃದ್ಧಿಗೆ ಆವಶ್ಯಕ ವಾದ ಅನೇಕಮುಖವಾದ ಸಾಧನಗಳಲ್ಲಿ ಸಾಹಿತ್ಯಕೃಷಿ ಒಂದಾಗಿರುತ್ತದೆ. ಈ ಸಾಹಿತ್ಯಪರಿಷತ್ತಿನಲ್ಲಿ ಮುಖ್ಯವಾಗಿ ನಾವು ವಿಚಾರಮಾಡತಕ್ಕದ್ದೂ ಸಾಹಿತ್ಯವಿಷಯವೇ ಆಗಿರುತ್ತದೆ. ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ, ನಿಷ್ಕಲ್ಮಷವಾದ ಆನಂದವೂ, ಸತ್ಪ್ರೇರಣೆಯೂ, ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಐಕ ಮತ್ಯವೂ ಬಲವಾಗಿ ಬೇರೂರುತ್ತವೆ. ಅಂತಹ ಸಾಹಿತ್ಯ, ಅಂತಹ ಪುಸ್ತಕ ಭಂಡಾರ, ನಮ್ಮಲ್ಲಿ ಎಷ್ಟಿದೆ? ಕನ್ನಡನಾಡಿನಲ್ಲಿ ಅನೇಕ ಜನರು—ಜನಸಾ ಮಾನ್ಯರು—ಗಂಡಸರು, ಹೆಂಗಸರು, ಮಕ್ಕಳು—ಈಗ ಓದುಬರಹವನ್ನು ಕಲಿಯುತ್ತಿದ್ದಾರೆ; ಮುಂದೆ ಇನ್ನೂ ಹೆಚ್ಚಾಗಿ ಕಲಿಯುವವರಾಗಿ ದ್ದಾರೆ. ತಮ್ಮೆಲ್ಲರ ಘನೋದ್ದೇಶವೂ ದೇಶದಲ್ಲಿ ಸರ್ವರೂ ಅಕ್ಷರಸ್ಥರಾಗಿ, ವಿದ್ಯಾರ್ಥಿಗಳಾಗಿ, ಜ್ಞಾನಕಾಮರಾಗಿ, ಸತ್ಪ್ರಜೆಗಳಾಗಿ, ದೊಡ್ಡ ಬದು ಕನ್ನು ಬದುಕಬೇಕೆಂಬುದೇ ಆಗಿದೆ. ಈ ಸಾಮಾನ್ಯರಾದ ಗಂಡಸರು ಹೆಂಗಸರು ಮಕ್ಕಳಿಗೆಲ್ಲಾ, ವಿರಾಮಕಾಲವನ್ನು ಸದ್ವಿನಿಯೋಗಮಾಡು ವುದಕ್ಕಾಗಿ, ಸುಲಭವಾದ, ಪ್ರಯೋಜನಕಾರಿಯಾದ, ಶುಚಿಯಾದ,

ಹರ್ಷಜನಕವಾದ, ಸದ್ಬೋಧಕವಾದ ಪುಸ್ತಕಗಳನ್ನು ಎಷ್ಟುಮಟ್ಟಿಗೆ ಒದಗಿಸಿದ್ದೀರಿ ? ಓದುವವರು ಕಡಮೆಯಾದರೆ, ಬರೆಯುವವರು ಇನ್ನೂ ಕಡಮೆ. ಒಕ್ಕಡೆ ನಮ್ಮ ಪುಸ್ತಕವನ್ನು ಕೇಳುವವರೇ ಇಲ್ಲವೆಂಬ ಕೂಗು; ಒಕ್ಕಡೆ ನಮ್ಮ ಹುಡುಗರಿಗೆ ಓದುವುದಕ್ಕೆ ಸರಿಯಾದ ಪುಸ್ತಕಗಳೇ ಇಲ್ಲವೆಂಬ ದೂರು. ಇದರಮೇಲೆ, ಇಂಗ್ಲಿಷಿನ ಮೇಲೆ ಮತ್ಸರ. ಮತ್ಸರವಿಲ್ಲದಿದ್ದರೂ, ಅಸಮಾಧಾನ, ಅಸಡ್ಡೆ. ಹೋಗಲಿ, ಇಂಗ್ಲಿಷನ್ನು ಕಲಿತವನು ಕಾಣಬಹುದಾದ, ಹೊಕ್ಕುಬಳಸಬಹುದಾದ, ಸಾಹಿತ್ಯದ ರಮಣೀಯವಾದ ಉದ್ಯಾನವನಗಳನ್ನು ಕನ್ನಡವನ್ನು ಬಲ್ಲವನು ಕಾಣುವಂತೆ, ಹೊಕ್ಕುಬಳಸುವಂತೆ ಮಾಡಿರುತ್ತೀರಾ ? ಇಲ್ಲವಾದರೆ, ಬಂಗಾರದ ಬಳೆಯೂ ಇಲ್ಲದೆ, ಹಿತ್ತಾಳೆಯ ಕಡಗವೂ ಇಲ್ಲದೆ, ಹಾಗೂ ಕೆಟ್ಟೆ, ಹೀಗೂ ಕೆಟ್ಟೆ, ಎಂಬ ಸ್ಥಿತಿಗೆ ನಮ್ಮ ಮಕ್ಕಳನ್ನು ತಳ್ಳಿದ ಹಾಗೆ ಆಗುವುದಿಲ್ಲವೇ ?

೩. ಒಳ್ಳೆಯದು, ತಾವು ಕೇಳಬಹುದು: ಇದೇನು, ಒಳ್ಳೆಯ ಸಾಹಿತ್ಯವೇ ನಮ್ಮಲ್ಲಿಲ್ಲವೆ ? ಪುರಾತನರ ಪ್ರೌಢಸಾಹಿತ್ಯ, ಮಧ್ಯಕಾಲದವರ ಸುಲಭಸಾಹಿತ್ಯ, ನೂತನರ ರಂಜನ ಸಾಹಿತ್ಯ, ಇವು ನಮ್ಮ ಜ್ಞಾನದಾನವ್ರತಕ್ಕೆ ಸಾಲದೆ ? ಸಾಲದು; ಕ್ಷಮಿಸಬೇಕು; ಸಾಲದು. ಹೆಮ್ಮೆಯಿಂದ ತಮ್ಮ ಬೆನ್ನನ್ನು ತಾವು ತಟ್ಟಿಕೊಳ್ಳುವವರು ಬೇಕಾದದ್ದು ಹೇಳಿಕೊಳ್ಳಬಹುದು; ಹಾಗೆ ಜಂಭಹೊಡೆಯುವುದೇ ದೇಶಾಭಿಮಾನವೆಂದೂ, ಹಾಗೆ ಹೊಗಳದವರು ದೇಶದ್ರೋಹಿಗಳೆಂದೂ ಭಾವಿಸಿಕೊಳ್ಳಬಹುದು. ಆದರೆ ಅನೇಕ ಉತ್ತಮಸಾಹಿತ್ಯಗಳನ್ನು ದರ್ಶನಮಾಡಿರುವ, ವಿಶ್ವಪ್ರಪಂಚದ ಕವಿಮಹಾನುಭಾವರ ದಿವ್ಯಕಾವ್ಯತೀರ್ಥಗಳಲ್ಲಿ ಹೃದಯವನ್ನು ತೊಳೆದಿರುವ, ವಿಮರ್ಶೆಯ ತಾರತಮ್ಯಜ್ಞಾನವಿಲ್ಲದ ಅತಿಶ್ಲಾಘನೆಗೆ ಮನಸ್ಸಾಕ್ಷಿಯೊಪ್ಪಲಾರದ, ನಿರ್ವಂಚನೆಯಾಗಿ ನಿರ್ದಾಕ್ಷಿಣ್ಯವಾಗಿ ನಮ್ಮ ಸಾಹಿತ್ಯವನ್ನು ಕುಲುಮೆಗೆ ಹಾಕಿ, ಒರೆಗಲ್ಲಿನಲ್ಲಿ ಉಜ್ಜಿ, ಪರೀಕ್ಷೆ

ಮಾಡುವುದು ಕರ್ತವ್ಯವೆಂದು ನಂಬಿರುವ ರಸಜ್ಞರು ಯಾರೂ ಆ ರೀತಿ ಭಾವಿಸರು. ತಾರತಮ್ಯಜ್ಞಾನವುಳ್ಳವರು ಯಾರುತಾನೇ ಕೀಳನ್ನು ಮೇಲೆಂದೂ, ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದೂ, ಕಳಂಕಮಿಶ್ರ ವಾದದ್ದನ್ನು ಪರಿಶುದ್ಧವೆಂದೂ, ಅರ್ಧಪಕ್ವವಾದ ಕಲಾಚಾತುರ್ಯ ವನ್ನು ಪೂರ್ಣಸಂಸ್ಕೃತಕಲೆಯ ಪರಮಪದವೆಂದೂ ಹೇಳಲಾದೀತು? ಆದರಲ್ಲಿಯೂ, ತಮ್ಮಂತಹ ಮಹಾಪರಿಷತ್ತಿನ ಸಭಿಕರು ನಿಷ್ಪಕ್ಷಪಾತ ವಾದ ವಿಮರ್ಶೆಯನ್ನು ಕೈಬಿಟ್ಟರೆ ಆದಕ್ಕೆ ಮತ್ತೆಲ್ಲಿ ಆಶ್ರಯ ದೊರೆತೀತು?

೪. ನವಜೀವನದಲ್ಲಿ ಕಾಲಿಡುತ್ತಿರುವ, ನವದರ್ಶನವನ್ನು ಕೈಕೊಳ್ಳುತ್ತಿರುವ ಜನಸಾಮಾನ್ಯಕ್ಕೆ ಹಳಗನ್ನಡದ ಮತ್ತು ಬಲುಮಟ್ಟಿಗೆ ನಡುಗನ್ನಡದ ಕಾವ್ಯಮಾಲೆಯಿಂದ ಅಷ್ಟು ಹೆಚ್ಚಾದ ಪ್ರಯೋಜನವಾಗಲಾರದೆಂದು ನಾನು ಶಂಕಿಸುತ್ತೇನೆ. ಒಟ್ಟಿನಮೇಲೆ, ಅದು ಪುರಾತನ ಪ್ರಪಂಚದ ಸಾಹಿತ್ಯ. ಭಾಷೆ, ಕಷ್ಟ; ಹಳಗನ್ನಡ ಹಾಗಿರಲಿ, ಅನಾವಶ್ಯಕವಾದ, ಕನ್ನಡಕ್ಕೆ ಒಂದು ಪುಷ್ಟಿಯನ್ನಾಗಲಿ, ಶಕ್ತಿಯನ್ನಾಗಲಿ, ಸೌಂದರ್ಯ ವನ್ನಾಗಲಿ ಕೊಡದ ನಿಸ್ಸಾರವಾದ ಪುಸ್ತಕದ ಸಂಸ್ಕೃತಶಬ್ದಗಳಿಂದ ಹೆಣೆದುಕೊಂಡಿರುವ ಸೀಗೆಯ ಮೆಳೆ. ಶೈಲಿ, ಸಾಧಾರಣವಾಗಿ ಕೃತಕ, ನೀರಸ;—ಇನ್ನೂ ರೆಕ್ಕೆ ಬಲಿಯದೆ ಕುಪ್ಪಳಿಸುವ ಹಕ್ಕಿಯಮರಿಯ ಹಾಗೆ. ಸಣ್ಣ ಪದ್ಯಗಳಲ್ಲಿ ತೊಡರಿಕೊಂಡು ಕತ್ತರಿಸಿಬೀಳುವ ಸಣ್ಣ ಪುಟ್ಟ ವಾಕ್ಯಗಳು; ಕೆಲವು ನಿರುಕಾದ, ಆಡುವ ಮಾತಿನ ಮಟ್ಟವನ್ನು ಅಷ್ಟೇನೂ ಮೀರಿ ಏರದ, ವಾಕ್ಯರಚನೆ; ಮಾನವನ ವಿಶಾಲವಾದ ಮನೋವೃತ್ತಿಗಳನ್ನು ಛಾಯೆಯಂತೆ ಅನುಸರಿಸುವ ಪ್ರತಿಭಾವಿಷ್ಟವಾದ ಉದಾತ್ತ ವಾಣಿಯಲ್ಲ. ನುಡಿಗಳನ್ನು ಮುತ್ತಿನಂತೆ ಸೋಸಿ ಆಯುವ, ಮಿತವಾಗಿ ಬಳಸುವ, ಸೈನಿಕವ್ಯೂಹದಂತೆ ಸುಶಿಕ್ಷಿತವಾಗಿ ಒಮ್ಮೊನೆಗೆ ನುಗ್ಗುವ, ಬಣ್ಣಗಾರನಂತೆ ಅಲ್ಲಲ್ಲಿ ಬಣ್ಣವನ್ನು ತುಂಬುವ, ಸಮಯೋಚಿತವಾಗಿ ಸಹ

ಜವಾಗಿ ಏರುವ, ಇಳಿಯುವ, ಸಮುದ್ರದ ತೆರೆಯಂತೆ ಹರಡಿ ಬೀಸುವ, ಹೊರಳುವ, ತಗ್ಗಿಕುಗ್ಗುವ, ಕುಲಸ್ತ್ರೀಯಂತೆ ಅರೆಮಾತಾಡುವ, ಮೌನ ದಿಂದಲೇ ಭಾವವನ್ನು ಸೂಚಿಸುವ, ಜಾತಿವೀರನಂತೆ ಸಂದರ್ಭದಲ್ಲಿ ತಟಕ್ಕನೆ ವೀರಾವೇಶವನ್ನು ತಾಳುವ, ಹಾಗೆಯೇ ಶಾಂತವಾಗುವ, ಅಂತರ್ಯವನ್ನು ತೋರಿಸಿ ಮರಳಮೇಲೆ ನಗುನಗುತ ಹರಿಯುವ ಹೊಳೆಯಂತೆ ಸ್ಪಷ್ಟವಾಗಿ ಸ್ವಚ್ಛವಾಗಿ ಹರಿಯುವ, ಅಲ್ಲಲ್ಲಿ ಮೊರೆಯುವ, ದುಮುಕುವ, ಗಂಭೀರ ವಾಗಿ ತೂಗುವ, ನಲ್ಲೆಯ ಮೆಲ್ನುಡಿಯಂತೆ ಹೃದಯವೀಣೆಯ ತಂತಿ ಗಳನ್ನು ಮಿಡಿದು ನೋಯಿಸುವ, ನಲಿಯಿಸುವ ಅನಂತಾನಂತ ರೂಪಿ ಯೊದ ಮಹಾವಾಣಿಯಲ್ಲ. ಶಾಸ್ತ್ರ ಶಿಕ್ಷೆಯನ್ನು ಪಡೆದಿರಬಹುದು ; ಆಡಂಬರವಿರಬಹುದು ; ಚಮತ್ಕಾರ, ಚೇಷ್ಟೆ, ಒಲಪು, ಒಯ್ಯಾರ ಎಲ್ಲಾ ಇರಬಹುದು. ಆದರೆ ಎಲ್ಲಾ ಪಾಮರರಂಜನೆ, ಒಂದು ಬಗೆಯ ಪಂಡಿತರಿಗೆ ಮಾತ್ರ ರಂಜನೆ. ಕಥೆಯನ್ನು ರಚಿಸುವುದೂ ಅಷ್ಟೆ ; ವ್ಯಕ್ತಿಗಳನ್ನು ಚಿತ್ರಿಸುವುದೂ ಅಷ್ಟೆ ; ರಸ, ಭಾವ, ವರ್ಣನೆಗಳನ್ನು ಪ್ರತಿಪಾದಿಸುವುದೂ ಅಷ್ಟೆ :—ಏಕನಾದ, ಚರ್ವಿತ ಚರ್ವಣ, ಹರಿದ ಕಾಲುವೆಯಲ್ಲಿ ಪಾಚಿಗಟ್ಟಿ ಹರಿಯುವ ನೀರು. ವಿಷಯವೋ, ವೈರಾಗ್ಯ ; ವೈರಾಗ್ಯದಲ್ಲಿ ವೈರಾಗ್ಯ ಹುಟ್ಟಿದಾಗ ಶೃಂಗಾರ :—ಎಂತಹ ಶೃಂಗಾರ ! ಭಕ್ತಿ, ಜ್ಞಾನ, ಧರ್ಮ, ನೀತಿ, ಮಾನವಪ್ರಪಂಚ, ಪ್ರಕೃತಿ, ಇವೆಲ್ಲಾ ಉತ್ತಮ ಕವಿತಾವಿಷಯಗಳೇ ಅಹುದು : ಆದರೆ—ಹೇಳುವ ರೀತಿ ? ರಸ ಪುಷ್ಟಿ ? ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರುವ ಮಹಾ ಮಹಾ ಕವಿಗಳ ಪ್ರತಿಭೆಯೂ, ಕಲ್ಪನಾಶಕ್ತಿಯೂ, ಉದಾತ್ತಭಾವಗಳೂ, ರಸ ಪ್ರವಾಹವೂ, ಅದ್ಭುತಕವಿತಾದೃಷ್ಟಿಯೂ, ಮನುಷ್ಯಜಾತಿಯ ನಾನಾವಿಧ ವಾದ ಅನುಭವಗಳೂ, ಸಂಕಟಗಳೂ, ಮಹತ್ಪ್ರಯತ್ನಗಳೂ, ನಗೆಯೂ, ಕಣ್ಣೀರೂ, ಸೋಲೂ, ಗೆಲವೂ, ಹೀಗೇ ಸರಿಯೆಂದು ನಿರ್ಣಯಕ್ಕೆ ಸಿಕ್ಕದ ಜೀವದ ರಹಸ್ಯವೂ, ಆಶ್ಚರ್ಯವೂ, ವೈವಿಧ್ಯವೂ, ಸೌಂದರ್ಯವೂ

ಭಯವೂ, ಶಾಂತಿಯೂ, ಮಂಗಳವೂ, ಅಮಂಗಳವೂ, ಆ ಅಮಂಗಳ ದಿಂದಲೇ ಮಂಗಳವನ್ನು ಹಿಂಡುವ ಆತ್ಮಶಕ್ತಿಯೂ, ಉತ್ತಮ ಸಾಹಿತ್ಯ ಗಳ ಸಮಕ್ಕೆ ತೂಗಬಲ್ಲುವು ನಮ್ಮ ಪೂರ್ವದ ಸಾಹಿತ್ಯದಲ್ಲಿ ಎಷ್ಟುಮಟ್ಟಿಗೆ ದೊರೆಯಬಹುದು ? ಶುದ್ಧಕಲಾದೃಷ್ಟಿಯಿಂದ ಸಾಹಿತ್ಯ, ಕಾವ್ಯ, ಎನ್ನಿಸಿ ಕೊಳ್ಳಬಹುದಾದ ಬರವಣಿಗೆ ನಮ್ಮ ಪೂರ್ವದ ಸಾಹಿತ್ಯದಲ್ಲಿ ಹೇರಳ ವಾಗಿದೆ ಎಂದು ಎಷ್ಟು ಮಟ್ಟಿಗೆ ಧೈರ್ಯವಾಗಿ ಹೇಳಬಹುದು ?

೫. ಕರ್ಣಾಟಕಭಕ್ತರೆ, ಕ್ಷಮೆಯಿಂದ ಲಾಲಿಸಬೇಕು. ಈ ನ್ಯೂನತೆಗಳನ್ನು ಸಾಮಾನ್ಯವಾಗಿ ಹೇಳಿದೆನೇ ಹೊರತು, ನಮ್ಮ ಸಾಹಿತ್ಯ ದಲ್ಲಿಯೂ ಇರುವ ಉದ್ದಾಮಕವಿಗಳನ್ನೂ ಸೇರಿಸಿಕೊಂಡು ಹೇಳಲಿಲ್ಲ. ಒಂದೇ ಸಾಹಿತ್ಯದಲ್ಲಿ ಸಂಕುಚಿತದೃಷ್ಟಿಗಳಾಗದೆ, ಹಲವು ಸಾಹಿತ್ಯಗಳ ಉದ್ದಾಮ ಕವಿಗಳನ್ನೆಲ್ಲಾ ನೋಡಿ, ಅನುಭವಿಸಿ, ಸಂಸ್ಕಾರವನ್ನು ಪಡೆಯ ಬೇಕು ಎಂಬುದಕ್ಕಾಗಿ ಹೇಳಿದೆ. ನಮ್ಮದು, ಆದದ್ದರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನು ಬಲ್ಲ ವಿಮರ್ಶೆ ಯನ್ನು ಅಭ್ಯಾಸಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿ ಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿ ಕೊಳ್ಳೋಣ. ಆಗ್ಗೆ ನಮಗೆ ವಿನೀತರಲ್ಲಿ ಮರ್ಯಾದೆ ಹುಟ್ಟುವುದು. ನಿಜವಾದ ಸೌಂದರ್ಯದ ಸರಿಯಾದ ಪರಿಜ್ಞಾನವುಂಟಾಗುವುದು. ಮದ ದಿಂದ ಕಣ್ಣುಮುಚ್ಚಿಹೋಗದೆ, ಎಲ್ಲೆಲ್ಲಿ ದಿವ್ಯಜ್ಯೋತಿ ಪ್ರಕಾಶಿಸುವುದೋ ಅಲ್ಲೆಲ್ಲಾ ಶಿಷ್ಯರಾಗಿದ್ದು ಕೊನೆಗೆ ನಮಗೂ ಗುರುತ್ವ ಲಭಿಸುವುದು. ಕೇವಲ ಮತಬೋಧನೆಗಾಗಿ, ಅಥವಾ ಪುರಾಣೇತಿಹಾಸಮಾಹಾತ್ಮ್ಯ ಪ್ರಸಾರಣೆಗಾಗಿ, ಅಥವಾ ಸುಖಪುರುಷರಂಜನೆಗಾಗಿ, ಅಥವಾ ಪಾಂಡಿತ್ಯ ಪ್ರದರ್ಶನಕ್ಕಾಗಿ, ಗತಿಸಿಹೋದ ಲೋಕದ ನೂಲೆಳೆಗಳನ್ನು ತೀರ ಹಳೆಯ ದಾದ ಮಗ್ಗಗಳಲ್ಲಿ ನೆಯ್ದು ನೆಯ್ದು ನೆಯ್ದು ರಾಶಿಹಾಕಿರುವ ಗ್ರಂಥ ಗಳು ಎಷ್ಟಿದ್ದರೇನು ? ಎಷ್ಟು ಇನ್ನೂ ಅಚ್ಚಾಗದಿದ್ದರೇನು ? ಎಷ್ಟೋ

ಉತ್ತಮವಾದ ವ್ಯವಸಾಯಗಳಿಗೆ ವಿನಿಯೋಗಿಸಬೇಕಾಗಿಬಂದಿರುವ ಈ ನೂತನ ಕಾಲದಲ್ಲಿ ನಮ್ಮ ಹ್ರಸ್ವಜೀವಮಾನವನ್ನು ವಾತ್ಸಲ್ಯದಿಂದ ಪೂರ್ವ ಗ್ರಂಥಗಳಿಗೆ ಅರ್ಪಿಸಿ ಕೃಷಿಮಾಡಲು ಅವಕಾಶವುಂಟೆ? ಹಾಗೆ ಕನ್ನಡದ ಗ್ರಂಥರಾಶಿಯನ್ನೆಲ್ಲಾ ಪರೀಕ್ಷಿಸಿ ನೋಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶವಾಗದಿದ್ದರೂ, ಪಂಪ, ಪೊನ್ನ, ರನ್ನ, ನಾಗವರ್ಮ, ನಾಗ ಚಂದ್ರ, ನೇಮಿಚಂದ್ರ, ಜನ್ನ, ಮಧುರ, ರತ್ನಾಕರ, ಬಸವೇಶ್ವರ, ವಚನಕಾರರು, ಹರೀಶ್ವರ, ರಾಘವಾಂಕ, ಸರ್ವಜ್ಞಮೂರ್ತಿ, ಚಾಮರಸ, ವಿರೂಪಾಕ್ಷ, ಷಡಕ್ಷರಿ, ರುದ್ರಭಟ್ಟ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ನಿತ್ಯಾತ್ಮಶುಕ, ಲಕ್ಷ್ಮೀಶ, ದಾಸರು, ತಿರುಮಲಾರ್ಯ, ಹೊನ್ನಮ್ಮ—

ಹೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ?
ಹೆಣ್ಣಲ್ಲವೆ ಪೊರೆದವಳು ?
ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು ?

ಎಂದು ಮೊದಲಿಸಿದ ಹೊನ್ನಮ್ಮ—ಇಂತಹ ಪ್ರಸಿದ್ಧ ಕವಿಗಳ ಕಾವ್ಯ ಗಳನ್ನಾದರೂ ಓದಿ, ವಿಮರ್ಶಿಸಿ, ಪರಸ್ಪರ ಯೋಗ್ಯತಾಪಕ್ಷವನ್ನು ನಿರ್ಧ ರಿಸಿ, ಅತ್ಯುತ್ತಮವಾದ ಕಾವ್ಯಗಳನ್ನೂ, ಕಾವ್ಯಭಾಗಗಳನ್ನೂ ಸಂಗ್ರ ಹಿಸಿ, ಸರ್ವತ್ರ ಪ್ರಚಾರಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಹೀಗೆ ಶೋಧಿಸಿದ ಪೂರ್ವಸಾಹಿತ್ಯದ ತಿರುಳು ಜನಸಾಮಾನ್ಯಕ್ಕೆ ಉತ್ತೇ ಜನಕೊಡುವುದೇ ಅಲ್ಲದೆ ಹೊಸಸಾಹಿತ್ಯವನ್ನು ರಚಿಸತಕ್ಕವರಿಗೂ ಮಾರ್ಗ ದರ್ಶಿಯಾಗಿ ಫಲಪ್ರದಾಯಕವಾಗುತ್ತದೆ.

೬. ಅಂತಹ ಉತ್ತಮಕಾವ್ಯಗಳೂ, ಕಾವ್ಯಭಾಗಗಳೂ ಕನ್ನಡ ದಲ್ಲಿ ಬೇಕಾದಷ್ಟು ಇಲ್ಲದೆ ಇಲ್ಲ. ಈ ವಿಷಯದಲ್ಲಿ ನಾವು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ; ಅಹೋ ರೂಪಂ! ಅಹೋ ಧ್ವನಿಃ! ಎಂದು ಬೆರಗಾ

ಗುವ ಅಸಂಸ್ಕೃತರ ಜಳ್ಳುಜಂಭಕ್ಕೆ ಮಾತ್ರ ನಾವು ತಲೆತಗ್ಗಿಸಬೇಕಾಗಿದೆ ಅಷ್ಟೆ ! ಈಗ ಸುಮಾರು ೩೦ ವರ್ಷಗಳಿಂದ ನಾನು ಕನ್ನಡವನ್ನು ಪ್ರೀತಿಯಿಂದ ಓದುತ್ತಿದ್ದೇನೆ; ನಗುತ ಹೇಳಿದವರು ಕೆಡಹೇಳಿದರು ಎಂಬ ಪ್ರೀತಿಯಿಂದಲ್ಲ; ಬಯ್ದುಹೇಳಿದವರು ಬದುಕಹೇಳಿದರು ಎಂಬ ಪ್ರೀತಿಯಿಂದ. ಉದಾರವಾದ ಸನಾತನಧರ್ಮ, ಉಜ್ವಲವಾದ ಭಕ್ತಿ, ಸಂಸಾರದ ದುಸ್ಸಹವಾದ ದುಃಖ, ಮರಣಪ್ರಲಾಪ, ನಿಸ್ಸಾರವಸ್ತುವಿನಲ್ಲಿ ವೈರಾಗ್ಯ, ವಿಘ್ನಕ್ಕೆ ಜಗ್ಗದ ತಪಸ್ಸು, ಶೌರ್ಯ, ಕಾರುಣ್ಯ, ರಾಗಾವೇಶ, ಕ್ಷಮೆ, ಪ್ರೇಮ, ಮಕ್ಕಳ ಬಯಕೆ, ಪ್ರಕೃತಿಯ ಚೆಲುವುನೋಟಗಳಲ್ಲಿ ಆನಂದ;-ಇವೇ ಮುಂತಾದ ನಮ್ಮ ಜನಕ್ಕೆ ಸ್ವಾಭಾವಿಕವಾದ, ಸರ್ವಸಾಧಾರಣವಾದ ಅನೇಕ ಲಕ್ಷಣಗಳನ್ನು ಬಹು ಸುಖವಾಗಿ ಕಲಾಪ್ರಪಂಚದಲ್ಲಿ ಪ್ರತಿಬಿಂಬಿಸಿರುವುದು ನಮ್ಮ ಕನ್ನಡದಲ್ಲಿ ಬೇಕಾದಷ್ಟಿದೆ. ಏಕೆಂದರೆ, ನಮ್ಮ ಕವಿಗಳಲ್ಲಿ ಪ್ರಮುಖರಾದವರು ಎಷ್ಟೇ ಪಾಂಡಿತ್ಯದ ಹುಚ್ಚುಹೊಳೆಯ ಸೆಳೆತಕ್ಕೆ ಸಿಕ್ಕಿದ್ದರೂ, ಎಷ್ಟೇ ಶಾಸ್ತ್ರದ ನಿರರ್ಥಕವಾದ ನಿರ್ಬಂಧಗಳಿಗೆ ಕಟ್ಟುಬಿದ್ದಿದ್ದರೂ, ಎಷ್ಟೇ ಆ ಕಾಲದ ಅಭಿರುಚಿಯ ಸಂಕೇತಗಳಿಗೆ ಅಂಧ ಪರಂಪರೆಯಾಗಿ ಮನ್ನಣೆಯನ್ನು ತೆತ್ತಿದ್ದರೂ, ಎಷ್ಟೇ ತಮ್ಮ ತಮ್ಮ ಮತಸಿದ್ಧಾಂತಗಳನ್ನು ರಾದ್ಧಾಂತಮಾಡಿ, ವಿಸ್ತರಿಸಿ, ಲಂಬಿಸಿ, ಮರಳುಗಾಡಿನಲ್ಲಿ ಬಾಯಾರಿಕೆಯನ್ನಿಂಗಿಸುವ ಹೊಳೆ ಮುಚ್ಚಿಹೋಯಿತೆಂಬಂತೆ, ತೀರ್ಥಂಕರರ, ಪುರಾತನಭಕ್ತರ, ಅವತಾರಪುರುಷರ, ವೀರರ, ನಾಯಕರ, ದಿವ್ಯವಿಗ್ರಹಗಳನ್ನು ಸರ್ವಕಾಲದಲ್ಲಿಯೂ ಸರ್ವರೂ ಮೆಚ್ಚುವಂತೆ ಕಡೆದಿರಿಸಲಾರದೆ ಹೋದರೂ, ಈ ಮತಾಭಿಮಾನಿಗಳಲ್ಲಿ, ಈ ಶಾಸ್ತ್ರ ಪಕ್ಷಪಾತಿಗಳಲ್ಲಿ, ಈ ಪಂಡಿತರಲ್ಲಿ, ಹೊಟ್ಟೆಯೊಳಗೆ ಒಬ್ಬ ಹುಟ್ಟುಕವಿ ಅವಿತುಕೊಂಡಿದ್ದದ್ದರಿಂದ, ಆ ಹುಟ್ಟುಕವಿ ಸರಿಯಾದ, ಸ್ವತಂತ್ರವಾದ, ಸಂಪೂರ್ಣವಾದ, ವಿವಿಧ ಮಹಾನುಭವಚೋದಿತವಾದ ಶುದ್ಧ ಕಲಾಜ್ಯೋತಿಯ

ಬಿಸಿಲಿನಲ್ಲಿ ಹೊಮ್ಮಿ, ಬೆಳದಿಂಗಳಿನಲ್ಲಿ ಹೂವಾಗದಿದ್ದರೂ, ಆ ಒಳಗಿದ್ದ ನಿಸರ್ಗ ಕವಿಯ ಪ್ರಭಾವದಿಂದ, ಶುಷ್ಕವಾದ ಅರಣ್ಯರೋದನದ ನಡುವೆ, ಸಮಯ ಬಂದ ಕೂಡಲೇ, ಒಂದುಕ್ಷಣದಲ್ಲಿ ಹೃದಯ ಹಿಗ್ಗಿ, ರಸ ಉಕ್ಕಿ, ಮರುಭೂಮಿಯಲ್ಲಿ ತಣ್ಣೀರಳ ಕೊಳ ಊರಿ ಬಂದಂತೆ, ಸುಗ್ಗಿಯ ಹೊಸ ಮಾವಿನ ಚಿಗುರನ್ನು ಸವಿದ ಕೋಗಿಲೆಯ ಕಂಠ ಇಂಪಾದಂತೆ, ಈ ಪಂಜರದ ಹಕ್ಕಿಗಳು, ಈ ಬಲೆಯ ಜಿಂಕೆಗಳು, ನೆಗೆದು, ನುಡಿದು, ಹಾರಿ, ಹಾಡಿ, ಸರಸ್ವತೀಪ್ರಸಾದದ ಪೂರ್ಣರಮಣೀಯತೆಯನ್ನು ಸಹೃದಯರಿಗೆ ಅನುಭವಮಾಡಿಸಿಬಿಟ್ಟಿರುವರು.

೭. ಮಹಾಶಯರೆ, ನನ್ನ ಭಾಷಣದಿಂದ ಉಂಟಾಗಿರಬಹುದಾದ ತಮ್ಮಗಳ ಮನಸ್ಸಿನ ಆಯಾಸವನ್ನು ಪರಿಹಾರಮಾಡುವುದಕ್ಕಾಗಿ, ಅಂತಹ ಕವಿಶ್ರೇಷ್ಠರ ಉತ್ತಮ ಕಾವ್ಯಭಾಗಗಳಲ್ಲಿ ಒಂದೆರಡನ್ನು ಓದಿ ಹೇಳಲು ಅಪ್ಪಣೆಯನ್ನು ಬೇಡುತ್ತೇನೆ. ವಿಕ್ರಮಾರ್ಜುನವಿಜಯ, ಗದಾಯುದ್ಧ, ಯಶೋಧರಚರಿತ, ಮುಂತಾದ ಉದ್ಗ್ರಂಥಗಳ ಕಥಾರಚನೆಯ ಸ್ವಾರಸ್ಯ ವನ್ನಾಗಲಿ, ಪಂಪನ ಬಾಹುಬಲಿ, ಪಂಪರನ್ನರ ದುರ್ಯೋಧನ, ನಾಗ ಚಂದ್ರನ ರಾವಣ, ಕುಮಾರವ್ಯಾಸನ ಶ್ರೀಕೃಷ್ಣ ಮುಂತಾದ ಪಾತ್ರಗಳ ಸೃಷ್ಟಿಯ ಗಾಂಭೀರ್ಯವನ್ನಾಗಲಿ ಇಲ್ಲಿ ಪ್ರದರ್ಶಿಸುವುದು ಸಾಧ್ಯವಲ್ಲ. ಕೆಲವು ಪದ್ಯಗಳನ್ನು ಮಾತ್ರ ಮುಂದಿಡಲು ಸ್ವಲ್ಪ ಕಾಲವನ್ನು ಕೇಳಿ ಕೊಳ್ಳುತ್ತೇನೆ—

ಕವಿತಾಗುಣಾರ್ಣವನಾದ ಪಂಪನು ಅರ್ಜುನನ ತೀರ್ಥಯಾತ್ರೆ ಯನ್ನು ಎಂದಿನಂತೆ ವರ್ಣಿಸಿಕೊಂಡುಬರುತ್ತ, ಆತನು ಬನವಾಸಿ ದೇಶಕ್ಕೆ ಬಂದನೆಂದಕೂಡಲೇ, ತನ್ನ ಹೃದಯದಲ್ಲಿದ್ದ ಕನ್ನಡನಾಡಿನ ಪ್ರೇಮ ವನ್ನೆಲ್ಲಾ ಸುರಿದುಬಿಟ್ಟಿರುವನು. ಇದನ್ನು ನುಡಿಯುವವನು, ಹಾಡು ವವನು ಅರ್ಜುನನಲ್ಲ, ಪಂಪ :—

ಸೊಗಯಿಸಿ ಬಂದ ಮಾಮರನೆ, ತಳ್ತಲೆವಳ್ಳಿಯೆ, ಪೂತ ಜಾತಿ ಸಂ
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ, ನೋೞ್ಪೊಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್ !

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ? ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್.

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಕೆಳೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.

ಆನುರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್
ಕೋಲ್ಪಿ ಜೊಂ
ಪಮುಮೇವೇಳ್ಪಿದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮಱೆಯಲ್ಕಿನ್ನೇಂ ಮನಂ ಬರ್ಕುಮೇ ?

ಇದು ಕನ್ನಡನಾಡಿನ ಜನ್ಮದ ಸುಖವಾಯಿತು ; ಮಾನವ ಸಂಸಾರದ ದುಃಖವನ್ನು ಕೇಳಿ ; ರನ್ನನು ಹೇಳುತ್ತಾನೆ.

ನೆನೆಯದೆ ಕಾಣದೆ ಕೇಳದೆ
ತನುವಿನ ಪೊಲ್ಲಮೆಯನಱಿದುಮಱಿಯದೆ ತೊಱೆಯಲ್
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾಗ್ಯಕಾರಣಂ ಪೆಱತುಂಟೇ ?

ತನಗಲ್ಲದೊಡಲ್ಗೊಡಮೆಗೆ
ಮನಮಿಟ್ಟಪವರ್ಗ ಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೇೞ್ವಾತ್ಮವಂಚಕರ್ ಪೆಱರೊಳರೇ ?

ಮತಿಗೆಟ್ಟು ಜೀವ ಧರ್ಮಾ
ಮೃತಮಂ ಸೇವಿಸದಧರ್ಮಮಂ ಸೇವಿಸಿ ದು
ರ್ಗತಿಗಿೞಿದೀ ಜವನೆಂಬಱ
ಸಿ ತಿಂಬ ದೈವಕ್ಕೆ ಪೋಗಿ ಪಾೞಿಂ ಬಿಡುವಯ್ !

ಎನಿತೆನಿತು ಕೞಿದ ಭವಮಂ
ನೆನೆದಪೆ ? ಎನಿತೆನಿತು ಭವದ ಬಂಧುಗಳಂ ನೀಂ
ನೆನೆದಪೆ ? ಎನಿತೆನಿತೊಡಲಂ
ನೆನೆದಪೆ ? ಎಲೆ ಜೀವ ನೀನೆ ಪೇೞ್ ಪವಣೊಳವೇ ?

ಎನಿತಂ ಕುಕ್ಕುೞಿಗುದಿದಪೆ ?
ಎನಿತಂ ಕಕ್ಕೞಿಗಲಿಲ್ದಪಯ್ ಜೀವನೆ ? ನೀ
ನೆನಿತಂ ಮಲ್ಮಲಮಱುಗುವೆ ?
ಎನಿತಂ ಸಂಸಾರದೊಳಗೆ ತಿಱ್ಱನೆ ತಿರಿವಯ್ ?

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ, ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮಗುೞೆ ಬಳ್ವಿಡಿವಿಡಿಯಾ !

ಜನನ ಮೃತಿ ದೇವ ನಾರಕ
ಮನುಷ್ಯ ತಿರ್ಯಗ್ವಿಕಲ್ಪಗತಿಗಳೊಳೆನಸುಂ
ನಿನಗೆ ಸುಖಮಿಲ್ಲ, ನೆಟ್ಟನೆ
ಮನದೊಳ್ ಭಾವಿಪೊಡಸಾರಮೀ ಸಂಸಾರಂ !

ಈ ನಾರಕ ತಿರ್ಯಗ್ಗತಿ
ಗೀ ನರ ಸುರ ಗತಿಗೆ ಪೇಸಿದೆಂ, ದರ್ಶನದಿಂ
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆವೆನಕ್ಕೆ ಪಂಚಮಗತಿಯಂ.

ದಿವಸದಿವಸಂಗಳಿಂ ಕುಂ
ದುವುವಲ್ಲದೆ ಬಳೆಯವಾಯುವುಂ ವಪುವುಂ ಪೆ
ರ್ಚುವುವಲ್ಲವು ವಿಷಯಸುಖ
ಕ್ಕವಚತ್ತೆಂ ಪಡೆದುಕೊಳ್ವೆನಕ್ಷಯಸುಖಮಂ !

ಜೀವನದ ಉತ್ಸಾಹವಾಯಿತು ; ಜೀವನದ ಜುಗುಪ್ಸೆಯಾಯಿತು. ವೃತ್ತವಾಯಿತು, ಕಂದವಾಯಿತು. ನಮ್ಮ ಕನ್ನಡದ ಮುದ್ದಾದ ಛಂದಸ್ಸಿನಲ್ಲಿ ಮಗನನ್ನು ಕಳೆದುಕೊಂಡ ಒಬ್ಬ ತಾಯಿಯ ಗೋಳನ್ನು ಕೇಳಿ. ರಾಘವಾಂಕನ ಹರಿಶ್ಚಂದ್ರಕಾವ್ಯದಿಂದ ಓದುತ್ತೇನೆ—ಕೆಲವು ಪಙ್ತಿಗಳನ್ನು ಅಲ್ಲಲ್ಲಿ ಬಿಟ್ಟುಬಿಟ್ಟು.

ಏವೆನೇವೆನೆಲೆ ಮಗನೇ, ಮಗನೇ,
ಸಾವೇಕಾಯಿತ್ತೆಲೆ ಚೆನ್ನಿಗನೇ !
ಇಱಿದೆಯೆಲಾ ಎನ್ನನು ಸುಕುಮಾರಾ !
ಕೊಱೆದೆಯೆಲಾ ಕೊರಲನು ಜಿತಮಾರಾ !
ಎತ್ತಣ ಬಱಸಿಡಿಲೆಱಗಿತೊ ನಿನ್ನ,
ಹುತ್ತದ ಹತ್ತಿರಲೊಱಗಿದೆ ಚೆನ್ನ,
ಹಾವು ಹಿಡಿಯೆ ಹಾ ಎಂದೆಯೊ ಕಂದಾ,
ಸಾವಾಗವ್ವಾ ಎಂದೆಯೊ ಕಂದಾ ?
ನೊಂದೆನು, ಬೆಂದೆನು, ಕುಂದಿದೆ, ಮಗನೇ,
ಕುಂದಿದೆ, ಕುಗ್ಗಿದೆ, ಮಗ್ಗಿದೆ, ಮಗನೇ !
ರನ್ನದ ಕನ್ನಡಿಯೊಡೆದುದೊ, ದೇವಾ,

ಹೊನ್ನ ಕಳಸ ಕೆಡೆದುದೊ, ಎಲೆ ದೇವಾ,
ಎನ್ನ ಕಡವರಂ ಸೂಱೆಹೋಯ್ತೋ ?
ಚಿನ್ನದ ಪ್ರತಿಮೆಯುಸಿರು ಹರಿಹೋಯ್ತೋ !
ಆರಿಗೆನ್ನನೊಪ್ಪಯಿಸಿದೆ ಕಂದಾ ?
ಆರಯ್ಯದೆ ಹೋಹರೆ ಗುಣವೃಂದಾ ?
ಹೆತ್ತ ಹೊಟ್ಟೆಯುರಿಯುತ್ತಿದೆ, ಮಗನೇ,
ಎತ್ತಿದ ತೋಳನು ಕೆತ್ತಿದೆ, ಮಗನೇ,
ಹಾಡುವ ಬಾಯೊಳು ಮಣ್ಣನೆ ಹೊಯ್ದೆ,
ನೋಡುವ ಕಣ್ಣೊಳು ಸುಣ್ಣವ ಹೊಯ್ದೆ !
ಪಾಪಿಯೆನ್ನ ನೀನೊಯ್ಯನೆ ನೋಡಾ,
ಕೋಪವನುಳಿದೊಯ್ಯನೆ ಮಾತಾಡಾ,
ನುಡಿದರೆ ಪಾಪವೆ ಹೆತ್ತವರೊಡನೆ ?
ಕಡು ಮುನಿಸೇಕೆಲೆ ಮಗ ನನ್ನೊಡನೆ ?
ಬಾರೈ ಬಹಳ ಸಿರಿಯ ಸಿಂಗಾರಾ,
ಬಾರೈ ಸುಜನ ಜನಕ್ಕಾಧಾರಾ,
ಮುದ್ದುತನದ ಮೋಹದ ಮುಂಗುಡಿಯೇ,
ಎದ್ದಪ್ಪೆನ್ನನು ಎಳಲತೆಗುಡಿಯೇ !
ಏಳೆನ್ನಾನಂದಾಮೃತಶರಧಿ !
ಏಳಖಿಳ ಗುಣಾರ್ಣವ ಕಳಾನಿಧಿ !
ಧರೆಯನಾಳ್ವ ಸಿರಿಯಂ ಕಳೆದಿಂದು,
ಉರಗನ ವಿಷದಗ್ನಿಯೊಳುಱೆ ಬೆಂದು,
ಅಡವಿಯೊಳೀ ಪರಿ ಕೆಡೆವರೆ ವೀರಾ !
ಪೊಡವಿಯೊಡೆಯನಗ್ಗದ ಸುಕುಮಾರಾ !

ದಯವಿಟ್ಟು ಕೇಳುವುದಾದರೆ, ಇನ್ನೊಂದು ಗೀತವನ್ನು ಓದಿ—ಹಾಡುವುದಕ್ಕೆ ನನಗೆ ಬಾರದು—ನನ್ನ ಮನಸ್ಸನ್ನು ತೃಪ್ತಿಪಡಿಸಿಕೊಳ್ಳುತ್ತೇನೆ. ಮೈಸೂರು ಶ್ರೀಮನ್ಮಹಾರಾಜರಾಗಿದ್ದ ಚಿಕ್ಕದೇವರಾಜಒಡೆಯರು ಭಗವಂತನಲ್ಲಿ ಭಕ್ತರ ತಪ್ಪುಗಳನ್ನು ಕುರಿತು ಹೀಗೆ ಬಿನ್ನಹಮಾಡಿಕೊಳ್ಳುತ್ತಾರೆ—ಇದೂ ಕನ್ನಡಮಟ್ಟು.

ತಪ್ಪದಾರದು ?-ತಿಳಿದು ನೋಡೆ,
ತಪ್ಪದಾರದು ?
ತಪ್ಪುನೆಪ್ಪುಗಳ ವಿಕಲ್ಪಿಸದೆಲ್ಲವ
ನೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ !

ಆರಯ್ಯೆ ಮುಗ್ಗಿರಿವಂಥನ ತಪ್ಪೋ ?
ದಾರಿದೋಱುವ ದಂಡಧಾರನ ತಪ್ಪೋ ?
ಮೇರೆಯಱಿಯದೆನ್ನ ಮೇಲಣ ತಪ್ಪೋ ?
ನಾರಾಯಣ ನಿನ್ನ ನಟನೆಯ ತಪ್ಪೋ ?

ತೊಂಡುಮೇವ ಪಸುವಿಂಡಿನ ತಪ್ಪೋ ?
ಕಂಡು ಕಾಯದ ತುಱುಗಾವನ ತಪ್ಪೋ ?
ಗಂಡುಮೀಱುವೆನ್ನ ಗೆಯ್ಮೆಯ ತಪ್ಪೋ ?
ಕೊಂಡಾಳುವ ನಿನ್ನ ಕೂರ್ಮೆಯ ತಪ್ಪೋ ?
ಬಾವಿಯ ಬಳಸುವ ಪಸುಳೆಯ ತಪ್ಪೋ ?
ತಾ ವಂದು ತಡೆಯದ ತಾಯಿಯ ತಪ್ಪೋ ?
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ ?
ಆವೇಳೆಗಾವುಗೆಯ್ಯದ ನಿನ್ನ ತಪ್ಪೋ ?

ಗುಱಿಯ ತಾಕದ ಮೊನೆಗೋಲಿನ ತಪ್ಪೋ ?
ಕುಱಿತೆಸೆಯದ ಬೀರಗುವರನ ತಪ್ಪೋ ?
ಬಱುಗೆಯ್ಮೆಗೆಯ್ವೆನ್ನ ಭಾವದ ತಪ್ಪೋ ?
ಅಱಿವುದೋಱಿಸದ ನಿನ್ನಾಟದ ತಪ್ಪೋ ?

ಓಜೆಗುಂದುವ ವೀಣೆಯುಲುಹಿನ ತಪ್ಪೋ ?
ಬಾಜಿಸುವನ ಕಯ್ಯ ಪವಣಿನ ತಪ್ಪೋ ?
ರಾಜ ಶ್ರೀ ಚಿಕದೇವರಾಯನಿಗೊಲಿದ ಶ್ರೀ
ರಾಜಗೋಪಾಲ ನಿರಾಕರಿಸದೆ ಪೇಳು !

ಮಹಾಶಯರೆ, ಈ ಕವನಗಳಲ್ಲಿ ಕಾಣಬರುವ ಭಾಷೆಯ ಲಾಲಿತ್ಯ, ವಿಷಯಕ್ಕನುಗುಣವಾದ ಶೈಲಿಯ ಸೌಂದರ್ಯ, ಭಾವರಸಗಳ ವೇಗ, ಲೋಕಾನುಭವದ ಕವಿತೆಯ ಸತ್ಯ ಇವುಗಳನ್ನು ನೋಡಿದರೆ ಇನ್ನು ಕಾವ್ಯ ಕಲೆಯಲ್ಲಿ ಕವಿಯಾದವನು ಮಾಡಬಹುದಾದ ಕೆಲಸವಾದರೂ ಏನು ? ಎನ್ನಿಸುತ್ತದೆ—ದೋಷೈಕದೃಷ್ಟಿಯಾದ ನನಗೇ ಎನ್ನಿಸುತ್ತದೆ. ಕನ್ನಡ ಕವಿತ್ವವೆಲ್ಲಾ ಹೀಗೆಯೇ ಇರಬಾರದೆ ! ದೋಷಗಳ ಮೇಲೆ ಎಡವಿ ಎಡವಿ ಬೀಳುವ ನನಗೆ ಯಾವ ಬ್ರಹ್ಮರಾಕ್ಷಸನು "ಸ್ವಲ್ಪಕ್ಕೆ ತೃಪ್ತನಾಗ ಬೇಡ"— "ಅಸಂತೋಷ: ಶ್ರಿಯೋ ಮೂಲಃ" ಎಂದು ಕಿವಿಯಲ್ಲಿ ಊದಿ ಹೋದನೋ ಕಾಣೆ.

೮. ಅದು ಹೇಗಾದರೂ ಇರಲಿ. ವಿಮರ್ಶೆಯ ಮೂಲಕವಾಗಿ, ನಮ್ಮ ಪೂರ್ವಸಾಹಿತ್ಯ ರಾಶಿಯಿಂದ ಉತ್ತಮ ಕಾವ್ಯಗಳನ್ನೂ ಕಾವ್ಯಭಾಗ ಗಳನ್ನೂ ಶೋಧಿಸಿ ತೆಗೆದು ಕಾವ್ಯಕೋಶಗಳನ್ನು ಸಿದ್ಧಪಡಿಸುವುದೇ ನಮ್ಮ ಪ್ರಥಮ ಕರ್ತವ್ಯವೆಂದು ನಾನು ತಿಳಿದಿರುತ್ತೇನೆ. ಈ ಉತ್ತಮ ಕಾವ್ಯಕೋಶಗಳಿಂದ ವಿದ್ಯಾರ್ಥಿಗಳ ಮತ್ತು ಲೇಖಕರ ಮನಸ್ಸನ್ನೂ ಕನ್ನಡದ ಪ್ರೇಮವನ್ನೂ ವಿಶಾಲಪಡಿಸಿ, ಮುಂದೆ ಈ ಕಾಲಕ್ಕೆ ತಕ್ಕ ನೂತನ ಸಾಹಿತ್ಯವನ್ನು ನಿರ್ಮಾಣಮಾಡತಕ್ಕದ್ದು ನಮ್ಮ ಎರಡನೆಯ ಕರ್ತವ್ಯ. ಏಕೆಂದರೆ, ಹಿಂದಿನ ಸಾಹಿತ್ಯವು ಎಷ್ಟೇ ಉತ್ತಮಭಾಗಗಳನ್ನು ಒಳಕೊಂಡಿದ್ದರೂ, ನಮ್ಮ ರಕ್ತದಲ್ಲಿ ಕೂಡಿಬಂದು ಎಷ್ಟೇ ನಮ್ಮ ಅಭಿ ಪ್ರಾಯಗಳಿಗೆ ಒಗ್ಗಿಬಂದಿದ್ದರೂ ಅದು ಪುರಾತನ ಪ್ರಪಂಚಕ್ಕೆ ಸೇರಿದ್ದು. ಅಲ್ಲಿ ಹುಟ್ಟಿದ್ದು, ಬೆಳೆದದ್ದು. ನೂತನ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿ ರುವ ನಮಗೆ ಬೇಕಾದ ರುಚಿಗಳನ್ನೆಲ್ಲಾ ಸಂಸ್ಕಾರಗಳನ್ನೆಲ್ಲಾ ಅದು

ಕೊಡಲಾರದು. ಯಾವ ವೃಕ್ಷದಲ್ಲಿ ಯಾವ ಫಲವನ್ನು ಹುಡುಕುವುದು? ಈ ನೂತನ ಪ್ರಪಂಚಕ್ಕೆ, ಈ ನೂತನ ಸಮಾಜದ ಅಭಿಲಾಷೆಗಳು, ರುಚಿಗಳು, ಜೀವನವ್ಯಾಪಾರಗಳು ಇವುಗಳಿಗೆ, ಅನುಕೂಲಿಸುವಂತಹ ಹೊಸ ಸಾಹಿತ್ಯವನ್ನು ನಿರ್ಮ್ಮಾಣಮಾಡಿದಲ್ಲದೆ ಕನ್ನಡಭಾಷೆಯ ಸೇವೆಗಾಗಲಿ, ಕನ್ನಡದೇಶದ ಏಳಿಗೆಗಾಗಲಿ ನಾವು, ಈ ಪರಿಷತ್ತು, ಸಾಕಾದಷ್ಟು ಶ್ರದ್ಧೆಯನ್ನು ವಹಿಸಿ ಋಣವನ್ನು ತೀರಿಸಿದಂತಾಯಿತೆಂದು ನಾನು ಹೇಳಲಾರೆ. ಹಾಗೆ ಮಾಡದಿದ್ದರೆ ಅರ್ಧಕ್ಕೆ ಹೆಚ್ಚಾಗಿಯೇ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸದೆ ಅಸಡ್ಡೆಮಾಡಿದಂತಾಗುತ್ತದೆ.

೯. ಈ ಹೊಸ ಸಾಹಿತ್ಯವು, ಹಳೆಯ ಸಾಹಿತ್ಯದ ಸಾರವನ್ನೂ ಸಹಾಯವನ್ನೂ ಸ್ವೀಕಾರಮಾಡಿದರೂ, ಮತಪ್ರಸಾರಣೆಗಾಗಲಿ, ಪೂರ್ವಕಥಾನುವಾದಕ್ಕಾಗಲಿ ಬರೆಯತಕ್ಕುದಲ್ಲ; ನೂತನ ಜ್ಞಾನಪ್ರಸಾರಣೆಗಾಗಿ, ಪೂರ್ಣ ಕಲಾನುಭವಕ್ಕಾಗಿ, ಉತ್ತಮಜೀವನ ಕಾರ್ಯ್ಯಾರಂಭ ಪ್ರೇರಣೆಗಾಗಿ ಬರೆಯತಕ್ಕುದು. ಪ್ರಪಂಚದಲ್ಲಿ ತಿಳಿದಿರುವ, ನುಡಿದಿರುವ, ನಡೆದಿರುವ ಉತ್ತಮವಿಷಯಗಳೆಲ್ಲವನ್ನೂ ಸಿಂಹಾವಲೋಕನದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದ ಇತರರಿಗೆ ತಿಳಿಸತಕ್ಕುದು. ಇದಕ್ಕೆ ಒಂದು ನಾಡಲ್ಲ, ಒಂದು ಬೀಡಲ್ಲ:—ಇದರ ಮೂಲಮಂತ್ರ—"ಉದಾರಚರಿತಾನಾಂ ತು ವಸುಧೈವ ಕುಟುಂಬಕಂ." ಈ ಹೊಸಮಾರ್ಗದ ಗ್ರಂಥಕರ್ತನು ಸ್ವತಂತ್ರನು; ಪದ್ಯಕ್ಕಿಂತಲೂ ಹೆಚ್ಚಾಗಿ ಗದ್ಯದಲ್ಲಿ ಕೆಲಸಮಾಡುವನು; ವಿಷಯಕ್ಕೆ ತಕ್ಕ ಶೈಲಿಯನ್ನು ಹೊಂದಿಸಿ ಸರ್ವರೂ ಅರ್ಥಮಾಡಿಕೊಳ್ಳುವಂತೆ ಬರೆಯುವನು. ಪ್ರಪಂಚದ ಎಲ್ಲಾ ಸಾಹಿತ್ಯಗಳಿಂದಲೂ ಮಾದರಿಗಳನ್ನೂ ವಿಷಯಗಳನ್ನೂ ಸ್ವೀಕರಿಸಿ ಯಾವ ಯಾವುದರಿಂದ ಕನ್ನಡಿಗರಿಗೆ ಉಪಯೋಗವುಂಟೆಂದು ತಿಳಿಯುವುದೋ ಅದೆಲ್ಲವನ್ನೂ ಕನ್ನಡಕ್ಕೆ ತಿರುಗಿಸುವನು. ಮತಗಳ ವಾದಪ್ರತಿವಾದಗಳನ್ನು ಬಿಟ್ಟು, ಸರ್ವಸಮಾನವಾದ, ಉದಾರವಾದ ಧರ್ಮ್ಮಸಾರವನ್ನು ಹರಡುವನು.

ಬರಿಯ ಶುಷ್ಕಕಲ್ಪನೆಗಳನ್ನು ಬಿಟ್ಟು, ವಾಸ್ತವಾಂಶಗಳನ್ನೂ, ಜೀವನಚರಿತ್ರೆಗಳನ್ನೂ, ಜನಾಂಗಗಳ ಚರಿತ್ರೆಗಳನ್ನೂ, ಮನುಷ್ಯಜಾತಿಯ ಪಾಜ್ಞವಾದ ಅಭ್ಯುದಯವನ್ನೂ ವಿವರಿಸುವನು. ಚಂಪೂ ಮಹಾಕಾವ್ಯಗಳನ್ನು ಹಿಂದಕ್ಕೆ ತಳ್ಳಿ, ಕಾದಂಬರಿಗಳಲ್ಲಿ ಮತ್ತು ಸಣ್ಣಕಥೆಗಳಲ್ಲಿ, ತನ್ನ ಕಾಲದ, ಅಥವಾ ಚರಿತ್ರೆ ಸಾಹಿತ್ಯ ಶಾಸನ ಮುಂತಾದ ಆಧಾರಗಳಮೇಲೆ ಸಂಗ್ರಹಿಸಿದ ಪೂರ್ವಕಾಲದ, ಜನಜೀವನವನ್ನು ಚಿತ್ರಿಸುವನು. ತನ್ನ ಮತ್ತು ತನ್ನ ಸಮಕಾಲಿಕರ ಮನಸ್ಸಿನ ಘನೋದ್ದೇಶಗಳನ್ನೂ, ಹೃದಯದ ರಸೋದ್ರೇಕಗಳನ್ನೂ ಸಣ್ಣ ಕವನಗಳಲ್ಲಿ ಮತ್ತು ಭಾವಗೀತಗಳಲ್ಲಿ ಮುಂಗಾರು ಮಳೆಯ ಹುಯ್ಯಲಂತೆ ಒಂದು ಕ್ಷಣದಲ್ಲಿ ಸುರಿದುಬಿಡುವನು. ಇವೆಲ್ಲಕ್ಕಿಂತಲೂ ಜನರಿಗೆ ಅತಿಪ್ರಿಯವಾದ, ರಂಗಸ್ಥಳಕ್ಕೆ ಒಪ್ಪುವ, ಮನೋರಂಜಕವಾದ ನಾಟಕಗಳಲ್ಲಿ ಜೀವನದ ಪ್ರತಿಬಿಂಬವನ್ನೂ, ಉದಾತ್ತಚರಿತರಾದ ಮಹಾಪುರುಷರ ಆದರ್ಶವ್ಯಕ್ತಿಗಳನ್ನೂ ಸ್ಫೂರ್ತಿಯಿಂದ ಸೃಷ್ಟಿಸುವನು. ವಿವಿಧವಿಷಯಗಳನ್ನು, ಪ್ರಕೃತಿಶಾಸ್ತ್ರಗಳ ಸಾರಾಂಶವನ್ನು, ಪ್ರಕೃತಿಶಾಸ್ತ್ರಾಭ್ಯಾಸದಿಂದ ಉತ್ಪನ್ನವಾಗುವ ಶಾಸ್ತ್ರೀಯ ಮನೋಭಾವವನ್ನು ಮತ್ತು ತನ್ನ ಇತರ ಸಾಧಾರಣವಾದ ಲೋಕಾನುಭವಗಳನ್ನು ಸ್ವಾರಸ್ಯವಾದ, ಚಿತ್ತಾಕರ್ಷಕವಾದ ಸಣ್ಣಪುಸ್ತಕಗಳಲ್ಲಿಯೂ, ಸಣ್ಣ ಪ್ರಸಂಗಗಳಲ್ಲಿಯೂ ತಂದು ತುಂಬುವನು. ಈ ನಮ್ಮ ಹೊಸಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣಮಕ್ಕಳನ್ನು ಮರೆಯುವುದಿಲ್ಲ. "ಮನುಜನಿಗೆ ಮಗು ತಂದೆ" ಎಂಬ ತತ್ವವನ್ನು ಈತನು ಬಲ್ಲನು. ಆದದ್ದರಿಂದ, ಆ ಚಿಕ್ಕಮಕ್ಕಳನ್ನು ತನ್ನಕಡೆಗೆ ಒಲಿಸಿಕೊಂಡು, ಅವರಿಗೆ ಬೇಕಾದ, ಪುಟ್ಟದಾದ, ಚಿತ್ರಗಳಿಂದ ಕೂಡಿರುವ, ಮುದ್ದಾದ ಬಾಲಶೈಲಿಯಲ್ಲಿ ಬರೆದಿರುವ ಸಾಹಸಕಥೆಗಳು, ಆಶ್ಚರ್ಯಕಥೆಗಳು, ದೇಶಸಂಚಾರಗಳು, ಸಮುದ್ರಯಾನಗಳು, ಪ್ರಕೃತಿಶಾಸ್ತ್ರದ ಅದ್ಭುತನಿರ್ಮಾಣಗಳು, ಭರತಖಂಡದ ಪೂರ್ವಚರಿತ್ರೆಯ ಸಾರಾಂಶಗಳು, ವೀರರ ನೈಜವೃತ್ತಾಂತಗಳು, ಮುಂತಾದುವನ್ನು ಮೊದಲು ಸಿದ್ಧಮಾಡುವನು. ಆ ಬಳಿಕ ದೊಡ್ಡವರಿಗೆ ಬೋಧನೆಮಾಡುವುದಕ್ಕೆ

ಹೊರಟು, ಕಾಲಗುಣ, ಸಮಾಜದ ನ್ಯೂನತೆಗಳು, ಸಂಸ್ಕರಣದ ಮಾರ್ಗಗಳು, ಸಾಧಕಬಾಧಕಗಳು, ಜಾತಿಮತಗಳ, ಪೂರ್ವಪದ್ಧತಿಗಳ ಮತ್ತು ಶಾಸ್ತ್ರವಿಧಿಗಳ ಗುಣದೋಷಗಳು, ಜನಾಂಗಗಳ ಸ್ವಾತಂತ್ರ್ಯಸಾಧನೆಯ ತತ್ವಗಳು, ಅದಕ್ಕೆ ಅತ್ಯಾವಶ್ಯಕವಾದ ಸ್ವಾರ್ಥತ್ಯಾಗಬುದ್ಧಿ, ರಾಜ್ಯಭಾರದ ಕ್ರಮಗಳು, ರಾಜಪ್ರಜೆಗಳ ಪರಸ್ಪರಧರ್ಮಗಳು, ಲೋಕದ ಜನಾಂಗಗಳೆಲ್ಲವೂ ಪರಸ್ಪರ ಸೌಹಾರ್ದದಿಂದಲೂ, ಸಹಕಾರಬುದ್ಧಿಯಿಂದಲೂ, ಯುದ್ಧದ ಕೆಟ್ಟಕನಸು ಬೀಳದ ಅವಿಚ್ಛಿನ್ನಶಾಂತಿಯಿಂದಲೂ, ಭ್ರಾತೃಭಾವದಲ್ಲಿ ವರ್ತಿಸುವಂತೆ ಮಾಡುವುದಕ್ಕೆ ನಡಸಬೇಕಾದ ಪ್ರಯತ್ನಗಳು—ಇವೇ ಮುಂತಾದ ನೂತನ ಪ್ರಪಂಚದ ನೂತನ ಸಮಸ್ಯೆಗಳನ್ನು ವೃತ್ತಾಂತಪತ್ರಿಕೆಗಳಲ್ಲಿಯೂ, ಮಾಸಪತ್ರಿಕೆಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ, ಸಣ್ಣಪುಸ್ತಕಗಳಲ್ಲಿಯೂ ಯಾವಾಗಲೂ ಚರ್ಚಿಸುತ್ತಿರುವನು. ಪುರಾತನರ ಜ್ಞಾನಕೋಶವನ್ನು ಮತ್ತೊಮ್ಮೆ ವಿಮರ್ಶಿಸಿ ಜಳ್ಳನ್ನು ತೂರಿ, ಕಾಳನ್ನು ಕಣಜಕ್ಕೆ ತುಂಬಿ, ಉಂಡು, ಮತ್ತೆ ಬಿತ್ತಿ ಹೊಸಬೆಳೆಯನ್ನು ನೂರರಷ್ಟು ಹೆಚ್ಚಿಸುವನು. ಈ ಬಗೆಯ ಬರವಣಿಗೆಗಾರನು ನೂತನ ಲೋಕದ ಶಿಶು ; ನೂತನ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಿತನಾದವನು ; ಇಂಗ್ಲಿಷ್ ಮುಂತಾದ ಪರಭಾಷೆಗಳನ್ನು ಕಲಿಯುವುದು ಒಂದು ಅಶುದ್ಧತೆ ಎಂದು ಬಗೆಯದವನು ; ಅವನ್ನು ಕಲಿತದ್ದರಿಂದ ತನ್ನ ಮಾತೃಭಾಷೆಯನ್ನು ತಿರಸ್ಕರಿಸದವನು ; ತನ್ನ ಜ್ಞಾನವನ್ನು ತಾಯ್ನುಡಿಯ ಮೂಲಕ ತನ್ನ ಜನಕ್ಕೆ ಕೊಡಬಲ್ಲವನು ತನ್ನ ದೇಶದ, ತನ್ನ ಜನರ ಪೂರ್ವದ ಮಹಿಮೆಗೂ, ಸಂಸ್ಕೃತಿಗೂ, ನ್ಯಾಯವಾದ ಭಕ್ತಿಯನ್ನು ಅರ್ಪಿಸಿ, ನೂತನ ಸಂಸ್ಕೃತಿಗೂ, ಮಾಹಾತ್ಮ್ಯಕ್ಕೂ ತಕ್ಕ ಬೆಲೆಯನ್ನು ಕಟ್ಟಬಲ್ಲವನು. ಈತನು ಇಂಗ್ಲಿಷಿನಲ್ಲಿ ಪ್ರವೀಣನಾಗಿರಬೇಕೆಂದು ನಾನು ಒತ್ತಿ ಹೇಳುತ್ತಿರುವುದನ್ನು ಒಂದು ತಪ್ಪಾಗಿ ತಾವು ಭಾವಿಸಕೂಡದು. ಇಂಗ್ಲಿಷ್ ಒಂದನ್ನೇ ಅನನ್ಯಭಾವದಿಂದ ಶರಣುಹೊಗಬೇಕೆಂದು ನನ್ನ ಭಾವವಲ್ಲ ; ಅದಿಲ್ಲದೆ ಮುಕ್ತಿಯೇ ಇಲ್ಲವೆಂದು ನಾನು ಹೇಳುತ್ತಿಲ್ಲ.

ನಮ್ಮ ದಿವ್ಯಸಂಸ್ಕೃತವಿದೆ. ಅದರಿಂದಲೂ ಹೀರಬಹುದಾದ, ತಂದು ಬೀರಬಹುದಾದ ತಿರುಳು ಅಪಾರವಾಗಿದೆ, ಅನಂತವಾಗಿದೆ. ಆದರೆ ಹಿಂದಿನ ಮಂಜುಗಣ್ಣಿನಿಂದ, ಅಂಧಶ್ರದ್ಧೆಯಿಂದ, ಅಪೂರ್ಣಕಲಾ ಸಂಸ್ಕಾರದಿಂದ ದೊಡ್ಡದು ಮಾಡಿಕೊಂಡು ನಮ್ಮ ಕನ್ನಡದ ಬಯಲಿಗೆ ತಿದ್ದಿಕೊಂಡ ಕಾಲುವೆಗಳನ್ನೇ ಮತ್ತೆ ನಾವು ಈಗ ತಿದ್ದಬೇಕಾಗಿಲ್ಲ. ಎಷ್ಟೋ ಜನ ಘನಪಂಡಿತರು ಆ ಕೆಲಸವನ್ನು ಹಿಂದೆ ಮಾಡಿರುವರು; ಈಗಲೂ ಮಾಡುತ್ತಿರುವರು. ಇಂಗ್ಲಿಷ್ ಸಂಸ್ಕಾರದಿಂದ ಅಂಜನಹಾಕಿ ಪರೆತೆಗೆದ ಹೊಸಕಣ್ಣಿನಿಂದ, ಹೊಸಬೆಲೆಗಳ ತಿಳಿವಳಿಕೆಯಿಂದ, ವಿಮರ್ಶನ ಮಿಳಿತವಾದ ಶ್ರದ್ಧೆಯಿಂದ, ವೇದಗಳು, ಉಪನಿಷತ್ತುಗಳು, ಇತಿಹಾಸ ಪುರಾಣಗಳು, ದರ್ಶನಗಳು, ಶಾಸ್ತ್ರಗಳು, ಕಲೆಗಳು, ವೈದಿಕ ಬೌದ್ಧ ಜೈನ ವೈಷ್ಣವ ಶೈವ ಧರ್ಮಗಳು—ಇವುಗಳ ಪವಿತ್ರಮೂಲಗಳನ್ನು ಪರಿಶೋಧನೆಮಾಡಿ ಹಸಿದು ಕಂಗೆಟ್ಟಿರುವ ನಮ್ಮ ಜನಸಾಮಾನ್ಯಕ್ಕೆ ಶುದ್ಧಾಹಾರವನ್ನು, ದೇಹಪುಷ್ಟಿ, ಆತ್ಮಪುಷ್ಟಿ ಆಗುವ ನಿರ್ಮಲಾಹಾರ ವನ್ನು ಒದಗಿಸುವುದು ವಿದ್ಯಾವಂತರ ಕರ್ತವ್ಯವಲ್ಲವೆ?—ಪುಷ್ಟಿಗೊಳಿಸುವ ನಿರ್ಮಲಾಹಾರವನ್ನು, ಕಲ್ಲನ್ನಲ್ಲ, ಮರಳನ್ನಲ್ಲ, ಬಾಯಿಯಲ್ಲಿ ಬೂದಿ ಯಾಗುವ, ಹೊಟ್ಟೆಯಲ್ಲಿ ವಿಷವಾಗುವ ಆಹಾರವನ್ನಲ್ಲ. ಈ ವಿದ್ಯಾ ವಂತರು ತಾವು ಸಂಸ್ಕೃತದಲ್ಲಿ, ಕನ್ನಡದಲ್ಲಿ, ಪ್ರಾಕೃತದಲ್ಲಿ, ಪಾಳಿ ಯಲ್ಲಿ, ಇಂಗ್ಲಿಷಿನಲ್ಲಿ, ಗ್ರೀಕಿನಲ್ಲಿ—ಯಾವ ಭಾಷೆಯಲ್ಲಾದರೂ ಸಂಪಾದಿಸಿದ ಜ್ಞಾನವೇನುಂಟೋ, ಶೀಲವೇನುಂಟೋ, ಆನಂದವೇ ನುಂಟೋ, ಸುಪ್ರೇರಣೆಯೇನುಂಟೋ, ಅದೆಲ್ಲವನ್ನೂ ಅಜ್ಞಾನದಲ್ಲಿ ಮುಳುಗಿ ಜಡರಾಗಿ ಚಲಿಸದಿರುವ ತಮ್ಮ ಅಣ್ಣತಮ್ಮಂದಿರಲ್ಲಿ, ಅಕ್ಕತಂಗಿ ಯರಲ್ಲಿ, ಹಸುಮಕ್ಕಳಲ್ಲಿ, ಕಡೆಗೆ ಅಜ್ಜ ಅಜ್ಜಿಯರಲ್ಲಿ—ಅವರೇನು ತೀರ ಕೈಬಿಟ್ಟುಬಿಡಬೇಕಾದವರೆ? ಅವರಿಂದ ನಮಗೆ ಅಡ್ಡಿಯಾಗಲಿ ಬೆಂಬಲ ವಾಗಲಿ ಬಾರದಿರುವುದೆ?—ಅಜ್ಜ ಅಜ್ಜಿಯರಲ್ಲಿ—"ಸುಲಿದ ಬಾಳೆಯ ಹಣ್ಣಿನಂದದಿ—ಕಳೆದ ಸಿಗುರಿನ ಕಬ್ಬಿನಂದದಿ" ಲಲಿತವಾದ, ಸುಖವಾದ,

ಕನ್ನಡದಲ್ಲಿ ಧಾರೆಯೆರೆಯಬೇಕಲ್ಲವೇ ? ಮಿತ್ರರಿರಾ, " ಬೆಳೆಯೇನೋ ಬೇಕಾದಹಾಗಿದೆ ; ಕುಯಲುಗಾರರು ಕಡಮೆ. " ಬನ್ನಿ, ಜನ್ಮವನ್ನು ತಮ್ಮ ಜನರ ಬೋಧೆಗಾಗಿ ಸಮರ್ಪಣಮಾಡಿದ ಹೊಸಬಗೆಯ ದೀಕ್ಷಿತ ರಾಗಿ. ಪೂರ್ಣವಿದ್ಯರಾಗಿ. ಸ್ವತಂತ್ರಪ್ರಿಯರಾಗಿ. (ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ). ಧರ್ಮಕಾಮರಾಗಿ. ಆತ್ಮಸಾಧಕರಾಗಿ. ವ್ಯಕ್ತಿ ವರ್ಚಸ್ಸುಳ್ಳವರಾಗಿ. ಮಹದ್ದರ್ಶನವುಳ್ಳವರಾಗಿ. ಉದಾರಾನುಭವ ರಾಗಿ. ಕಲಾಪುತ್ರರಾಗಿ.—ಉದ್ದೇಶ, ವಿಷಯ, ರೀತಿ, ಶೈಲಿ, ಭಾವ, ಛಂದಸ್ಸು,—ಹೊಸದು ಬೇಕಾದರೆ ಹೊಸದು, ಹಳದು ಸಾಕಾದರೆ ಹಳದು— ನಮ್ಮ ಸಿಂಗರವಾದ, ಮಂಗಳಮಯವಾದ ಕನ್ನಡನಾಡಿನಲ್ಲಿ ಬದುಕಾಗ ತಕ್ಕುದೇನಿದ್ದರೂ ಎಲ್ಲವನ್ನೂ ಬಳಸಿಕೊಂಡು ಹೊಸಜೀವವನ್ನು ಎಲ್ಲೆ ಲ್ಲಿಯೂ ತುಂಬಿ ! ಆಗ್ಗೆ, ವಿಶ್ವವಿದ್ಯಾನಿಲಯಗಳೂ, ಪರಿಷತ್ತುಗಳೂ, ಪಂಡಿತವರ್ಯರೂ, ಗ್ರಂಥಕರ್ತರೂ, ದೇಶಬಾಂಧವರೂ ಜನ್ಮವೆತ್ತಿದ್ದಕ್ಕೆ ಸಾರ್ಥಕತೆ ತೋರುವುದು. ಆಗ್ಗೆ ಕನ್ನಡಕ್ಕೆ ಹಿಂದಿನ ಸಾಹಿತ್ಯದ ಸೌಭಾಗ್ಯ ಕ್ಕಿಂತಲೂ, ಮುಂದಿನ ಸಾಹಿತ್ಯದ ಶಕ್ತಿ ಹೆಮ್ಮೆಯ ವಿಷಯವಾಗುವುದು. ಆಗ್ಗೆ ಕನ್ನಡಿಗರು ಇನ್ನೂ ತೇಜಸ್ವಿಗಳಾಗುವರು. ಹಿಂದುಳಿದಿರುವ ಜನ ಸಾಮಾನ್ಯರ ಮುಸುಕು ಮುಚ್ಚಿರುವ ಜ್ಞಾನವನ್ನೂ ಆತ್ಮಶಕ್ತಿಯನ್ನೂ ಬಿಡುಗಡೆಮಾಡಿದರೆ, ಎಷ್ಟು ಸಾಹಿತ್ಯಸಂಪತ್ತು ಹೊರಕ್ಕೆ ಹೊಮ್ಮುವುದೋ ನಾವು ಬಲ್ಲೆವೆ ?

೧೦. ಮಹನೀಯರೆ, ನಮ್ಮ ಕನ್ನಡನಾಡು ಚಿಕ್ಕದಿರಬಹುದು ; ನಮ್ಮ ಕನ್ನಡಿಗರು ಸ್ವಲ್ಪ ಜನವಿರಬಹುದು ; ಜರಗವನ್ನು ಚೆಲ್ಲಿದಂತೆ ಚೆದರಿಹೋಗಿರಬಹುದು. ಆದರೆ ಕರ್ಣಾಟಕದ ಪೂರ್ವಚರಿತ್ರೆಯನ್ನೂ, ಪ್ರಕೃತಸಾಹಸಗಳನ್ನೂ ನೆನಸಿಕೊಂಡರೆ, ನಮ್ಮ ಪುರೋಭಿವೃದ್ಧಿಯಲ್ಲಿ ಯಾವ ಸಂದೇಹಕ್ಕೂ ಕಾರಣವಿರುವುದಿಲ್ಲ. ಈ ಪುಣ್ಯಕ್ಷೇತ್ರದಲ್ಲಿ ಬೇರೂರಿ, ಆಕಾಶ ಹಬ್ಬಿರುವ ಎಲ್ಲಾ ಪ್ರದೇಶಗಳಿಂದಲೂ ಗಾಳಿಯನ್ನೂ ಬೆಳಕನ್ನೂ, ಆಹಾರವನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರ

ಹೃದಯವೊಂದನ್ನು ನಾವು ಭದ್ರವಾಗಿ ಕಾಪಾಡಿಕೊಂಡರೆ ;—ಅವರನ್ನು ಅನುಕರಿಸುವುದು, ಇವರನ್ನು ಧಿಕ್ಕರಿಸುವುದು, ಒಬ್ಬರ ವೇಷವನ್ನು ತಾಳಿ ಕುಣಿಯುವುದು, ಮತ್ತೊಬ್ಬರ ಮಹಿಮೆಯನ್ನು ಸಹಿಸಲಾರದೆ ಕುಯುಕ್ತಿಗಳನ್ನು ಹೂಡಿ ಆಡಿಕೊಳ್ಳುವುದು—ಈ ಅಸಭ್ಯ ಚೇಷ್ಟೆಗಳನ್ನು, ಮನೋವಿಕಾರಗಳನ್ನು ಬಿಟ್ಟುಬಿಡುವುದಾದರೆ ;—ಸ್ವಪ್ರಕೃತಿ, ಸ್ವಪ್ರತಿಭೆಯನ್ನು ವಿಚಾರಮಾಡಿ ಅರಿತು, ನಮ್ಮ ಆವರಣ, ನಮ್ಮ ಅನುಕೂಲ್ಯವನ್ನು ಮನದಟ್ಟುಮಾಡಿಕೊಂಡು, ನ್ಯೂನತೆಗಳನ್ನು ದೌರ್ಬಲ್ಯಗಳನ್ನು ಪರಿಶೋಧಿಸಿ ತ್ಯಜಿಸಿ, ಸತ್ಯಸಂಧರಾಗಿ, ಋಜುಮಾರ್ಗದಲ್ಲಿ ಕರ್ಮವೀರರಾಗಿ ಮುಂದಕ್ಕೆ ಹೆಜ್ಜೆಯನ್ನಿಡುವ ಪಕ್ಷದಲ್ಲಿ,—ನಮ್ಮ ಜನವೂ, ಜನದೊಡನೆ ಸಾಹಿತ್ಯವೂ, ಸಾಹಿತ್ಯದೊಡನೆ ಜನವೂ, ಅಮೂಲ್ಯವಾಗುವುದು, ಅಮೋಘವಾಗುವುದು ; ಸತ್ಯಪ್ರತಿಷ್ಠಿತವಾಗುವುದು ; ಧರ್ಮಪ್ರತಿಷ್ಠಿತವಾಗುವುದು. ಆಗ್ಗೆ ಅದರ ಯಶಸ್ಸಿಗೆ ಮಿತಿಯೆಲ್ಲಿ ? ಗುಣವಿದ್ದಲ್ಲಿ ಗಾತ್ರವನ್ನು ಯಾರು ನೋಡುವರು ? ವೀರ್ಯವಿದ್ದಲ್ಲಿ ವೇಷಭಾಷೆಗಳನ್ನು ಯಾರು ಕೇಳುವರು ? ಎತ್ತಕಡೆಯಿಂದ ಶಿಕ್ಷೆಯನ್ನು ಪಡೆದರೂ, ಎತ್ತ ಕಡೆಯಿಂದ ಬೆಂಬಲವನ್ನು ಬಯಸಿದರೂ, ಜೇನುಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲಾ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿಹೋದರೆ, ಆಗ ಹೊರಗಿನದು ಎಲ್ಲಿ ಬಂತು ? ಮೊದಲಿನಿಂದಲೂ ನಮ್ಮ ಕರ್ಣಾಟಕದ ಚರಿತ್ರೆಯೇ ಹೀಗೆಂದು ತೋರುವುದು. ಆರ್ಯಾವರ್ತಕ್ಕೂ, ದಕ್ಷಿಣಾಪಥದ ಸಮುದ್ರದ ಗಡಿಗಳಿಗೂ ಓಡಾಡುವ ರಾಜಮಾರ್ಗವಾಗಿ, ಭಾಷೆ, ಸಂಸ್ಕೃತಿ, ಮತಗಳನ್ನು ತನ್ನಲ್ಲಿ ಯಥೇಷ್ಟವಾಗಿ ಚಲಿಸಿ, ಪಶ್ಚಿಮಸಮುದ್ರದ ಎದೆಯಮೇಲೆ ತನ್ನ ಹಡಗುಗಳನ್ನು ತಾಂಡವವಾಡಿಸುತ್ತ, ಪಾರಸಿಕರು ಬ್ಯಾಬಿಲೋನಿಯ ಮತ್ತು ಈಜಿಪ್ಟ್ ದೇಶದ ಜನರು, ಗ್ರೀಕರು, ರೋಮನರು ಮುಂತಾದ ನಾಗರಿಕ ಜನರೊಡನೆ ನಾಗರಿಕತೆಯಿಂದ ವ್ಯವಹರಿಸುತ್ತ; ಐಹಿಕವಿಷಯದಲ್ಲಾಗಲಿ, ಪಾರಲೌಕಿಕ ವಿಷಯದಲ್ಲಾಗಲಿ, ಭಾವನಾ

ಪ್ರಪಂಚದಲ್ಲಾಗಲಿ, ಕಾರ್ಯಪ್ರಪಂಚದಲ್ಲಾಗಲಿ ಯಾವುದರಲ್ಲೂ ಅತಿಗೆ ಹೋಗದೆ, ಒಂದೇ ಸಮನಾಗಿ, ಕ್ರಮವಾಗಿ, ಸಮ್ಮಿಳಿತವಾಗಿ ವೃದ್ಧಿ ಹೊಂದುತ್ತ; ಅನೇಕ ಜನಜಾತಿಗಳನ್ನು ತನ್ನ ಸೊಬಗಿನಿಂದ ಸೆಳೆಯುತ್ತ; ಅನೇಕ ರಾಜವಂಶಗಳನ್ನು ತನ್ನ ಪರಾಕ್ರಮದಿಂದ ಕೀರ್ತಿವಂತರನ್ನಾಗಿ ಮಾಡುತ್ತ; ಬೌದ್ಧಗುರುಗಳು, ಜೈನಯತಿಗಳು, ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು, ಶ್ರೀ ಬಸವೇಶ್ವರರು ಇಂತಹ ಪ್ರಧಾನರಾದ ಧರ್ಮಸಂಸ್ಥಾಪನಾಚಾರ್ಯರುಗಳಿಗೆ ತನ್ನ ಸಮತಾ ಬುದ್ಧಿಯಿಂದ ಆಶ್ರಯವನ್ನು ನೀಡುತ್ತ ; ಶಿಲ್ಪಕಲೆ, ಚಿತ್ರಕಲೆ, ಗಾನ ಕಲೆ, ಸಾಹಿತ್ಯಕಲೆ ಮುಂತಾದ ಆತ್ಮಸ್ಫುರಣೆಗಳಲ್ಲಿ ಸೌಂದರ್ಯಾನ್ವೇಷಣೆ ಯನ್ನು ಮಾಡುತ್ತ ; ಕಾಲಕ್ಕೆ ತಕ್ಕಂತೆ ಪ್ರಜಾಸಮತೆಯನ್ನು ಪ್ರಜಾ ಹಿತವನ್ನು ಗುರಿಯಲ್ಲಿಟ್ಟುಕೊಂಡು, ಹೊಸಮತ, ಹೊಸಭಾಷೆ, ಹೊಸ ಕವನ, ಹೊಸಜೀವ ಮುಂತಾದ ಹೊಸ ಆರಂಭಗಳನ್ನು ಉದಾರ ಹೃದಯದಿಂದ ಸ್ವೀಕಾರ ಮಾಡುತ್ತ ; ಒಡೆದು, ಪಾಲಾಗಿ, ಪರಾ ಕ್ರಾಂತವಾಗಿ, ದುರ್ದಶೆಯಲ್ಲಿರುವಾಗ ಈಗ ಕೂಡ, ಗರ್ವದಿಂದ ಕಾಲೋ ಚಿತವಾದ ಶ್ರೇಯೋಮಾರ್ಗವನ್ನು ಸೂಚಿಸುವ ನೂತನ ಶಿಕ್ಷಣವನ್ನು ಪಡೆದು, ಸ್ವಲ್ಪಕಾಲದಲ್ಲಿಯೇ ನವಚೈತನ್ಯಮೂಡಿ, ನಿದ್ದೆಯುಳಿದು, ಮೈಮುರಿದು, ಮಲಗಿದ್ದೆದ್ದ ಸಿಂಹದಂತೆ ಮೇಲಕ್ಕೆ ನೆಗೆದು, ಕೇಸರವನ್ನು ಅಲುಗಿ, ಗರ್ಜಿಸುತ್ತಿರುವ ಈ ಕನ್ನಡನಾಡಿನ ಚರಿತ್ರೆ ಯಾವ ಕನ್ನಡಿಗನಿಗೆ ತಾನೇ ಆತ್ಮಗೌರವವನ್ನೂ, ಆತ್ಮಶ್ರದ್ಧೆಯನ್ನೂ, ಹೊಸಹುರುಪನ್ನೂ, ಹೊಸ ಆರಂಬವನ್ನೂ ಹೊಂದಿಸಿಕೊಡಲಾರದು ?

೧೧. ಆದುದರಿಂದ, ಕನ್ನಡಿಗರೇ, ಏಳಿ, ಎಚ್ಚರಗೊಳ್ಳಿ, ಆರಂಬ ಮಾಡಿ. ಪೂರ್ವ ಚರಿತ್ರೆಯ, ವಿಶ್ವವಿದ್ಯಾನಿಲಯದ, ಸಾಹಿತ್ಯಪರಿಷತ್ತಿನ, ನೂತನಸಾಹಿತ್ಯಕಾರರ, ಉತ್ಸಾಹಪೂರಿತರಾಗಿ ಸೇವಾತುರರಾದ ಯುವಕ ದೇಶವತ್ಸಲರ, ಕರ್ಣಾಟಕ ಭಾಷೋಜ್ಜೀವನವನ್ನು ಸದಾಕಾಲದಲ್ಲಿಯೂ ತಮ್ಮ ಘನವಾದ ದಿವ್ಯಚಿತ್ತದಲ್ಲಿ ಪರ್ಯಾಲೋಚಿಸುತ್ತಿರುವ ನಮ್ಮ

ಮೈಸೂರು ಶ್ರೀಮನ್ಮಹಾರಾಜರವರ, ಸಾಹಿತ್ಯ ಸಂಸ್ಕೃತಿಗಳ ಕಟ್ಟಿನಿಂದ ಏಕಜನತೆಯನ್ನು ಬಯಸುತ್ತಿರುವ ಸಕಲಕರ್ಣಾಟಕರ, ಮಹತ್ಪ್ರೇರಣೆಯಿಂದ, ಮಹತ್ಪ್ರಯತ್ನದಿಂದ ಸಾಧ್ಯವಾಗದ ಕಾರ್ಯ ಯಾವುದು? ಏಳಿ, ಎಚ್ಚರಗೊಳ್ಳಿ, ಆರಂಬಮಾಡಿ. ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾಪಂಡಿತನು—"ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು, ಕನ್ನಡಿಗರು; ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೇ ಅಲ್ಲ; ಹೊಸ ಉತ್ತಮಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು, ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವಜೀವನದ ಪುನರ್ನಿರ್ಮಾಣಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯಿನ ಖಡ್ಗವೂ ಅಹುದೆಂದು ತಿಳಿದಿರುವೆವು. "ನಾನು ಬಂದು ಶಾಂತಿಯನ್ನು ತರಲಿಲ್ಲ, ಖಡ್ಗವನ್ನು ತಂದೆನು" ಎಂದು ಕ್ರೂರ ಕಾರುಣ್ಯದಿಂದ ಸಾರಿದ ಒಬ್ಬ ಮಹಾತ್ಮ ಧರ್ಮಪುತ್ರನ ರಹಸ್ಯವನ್ನು ಹೃದಯದಲ್ಲಿಟ್ಟಿರುವೆವು. ಪುರಾತನ ಕರ್ಮವಾಸನೆಯಿಂದ ಆತ್ಮನು ಬದ್ಧನಾಗಿದ್ದರೂ, ಸಂಪೂರ್ಣವಾಗಿ ಬದ್ಧನಲ್ಲ; ಸ್ವತಂತ್ರನು; ಮುಕ್ತಿಗರ್ಹನು; ಹೊಸಕರ್ಮವನ್ನಾರಂಭಿಸಿ ವಿಶ್ವಾತ್ಮ ಪರಮಾತ್ಮನನ್ನು ತನ್ನಲ್ಲಿ ಅನುಭವಿಸಿ ಸಾಯುಜ್ಯವನ್ನು ಪಡೆಯುವ ಸಹಜವಾದ ಚೈತನ್ಯವುಳ್ಳವನು ಎಂದು ಆರ್ಯರಾದ ನಮ್ಮ ಹಿರಿಯರು ನಮಗೆ ಉಪದೇಶಮಾಡಿದ್ದಾರೆ. ಕನ್ನಡಿಗರಾ, ಏಳಿ, ನಮ್ಮಲ್ಲಿ ಯಾವ ಯಾವ ಭಿನ್ನಾಭಿಪ್ರಾಯಗಳು, ಭಿನ್ನರುಚಿಗಳು ಇದ್ದರೂ, ನಮ್ಮನಮ್ಮಲ್ಲಿಯೇ ಅವು ಇರಲಿ. ಹಳೆಯ ಮಾರ್ಗವನ್ನು ಹಿಡಿಯುವವರು, ಹೊಸ ಮಾರ್ಗವನ್ನು ಹಿಡಿಯುವವರು; ಸಂಸ್ಕೃತಾಭಿಮಾನಿಗಳು, ಆಂಗ್ಲೇಯಾಭಿಮಾನಿಗಳು, ಭಾರತಮಾತೆಯಲ್ಲಿ ವೀರಾವೇಶ ವಾತ್ಸಲ್ಯವುಳ್ಳವರು, ವಿಶ್ವದೃಷ್ಟಿಯ ಸರ್ವಸಮುಮೈತ್ರಿಯ ಸಾಧು ಸಂತರು—ಯಾರೇ ಆಗಲಿ ಒಬ್ಬರಂತೆ ಒಬ್ಬರಿರುವೆವೆಂಬ ಬೂಟಾಟಿಕೆಯ

ನಿರ್ಬಂಧ ಬೇಡ; ಒಬ್ಬರಂತೆ ಒಬ್ಬರಿಲ್ಲವೆಂಬ ಕಿತ್ತಾಟವೂ ಬೇಡ. ನಮಗೆ ಭಗವಂತನು ದಯಪಾಲಿಸಿರುವ ವರಪ್ರಸಾದಗಳನ್ನೂ, ಬಗೆಬಗೆಯಾದ ಶಕ್ತಿರುಚಿಗಳನ್ನೂ, ಕನ್ನಡನಾಡಿಗೆ, ಕನ್ನಡನುಡಿಗೆ ಒಮ್ಮನಸ್ಸಿನಿಂದ ಮುಡಿಪುಕಟ್ಟೋಣ; ಒಮ್ಮೆಯ್ಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

೧೨. ಸಾಹಿತ್ಯಕಲಾರಾಧಕರೆ, ಅಗೋ ನೋಡಿ, ಚಲನೆಯಿಲ್ಲದೆ ನಿಂತಿರುವಳು ಕರ್ಣಾಟಕ ಸರಸ್ವತೀದೇವಿ. ತಲೆಯಮೇಲೆ ಭಾರವಾದ ಕಿರೀಟ, ಅಂಗಾಂಗವೆಲ್ಲಾ ತೆರವಿಲ್ಲದೆ ಮುಳ್ಳುಹುಯ್ದಂತೆ ಹೇರಿರುವ ಜವಾಹಿರಿ, ಶಾಸ್ತ್ರನಿಯಮಿತವಾದ ಒಂದು ಬಗೆಯ ನಿಲವಿನ ಭಂಗಿ, ಮುಖದಲ್ಲಿ ಕಲ್ಲಿನಲ್ಲಿ ಕಡೆದ ಏನೋ ಒಂದು ಬಗೆಯಾದ ನಿಂತ ನಿಲವಿನ ನಗೆ, ಹಾಗೇ ನೋಡುವವನ ಕಣ್ಣಿಗೆ ಕಣ್ಣು ನೆಟ್ಟು ದುರುಗುಟ್ಟಿಕೊಂಡು ನೋಡುತ್ತದೆ.—ಇಲ್ಲ, ಒಮ್ಮೊಮ್ಮೆ ಆಡುವಂತೆಯೂ ಕಾಣುತ್ತದೆ. ಮೈಯೆಲ್ಲಾ ಮುಸುಕಿದ ದಪ್ಪವಾದ ಹಳೆಯ ಜರತಾರಿಯ ವಸ್ತ್ರ: ಉಸಿರು ಬಿಗಿದು ಎದೆ ಹೊಯ್ಯಲಾರಳು:—ಎದೆ ಪದರುತ್ತಿದೆಯೋ? ಬರಿಯ ನಮ್ಮೆದೆಯ ಪದರಾಟವೇಯೋ? ಎಚ್ಚತ್ತಿರುವಳೋ, ನಿದ್ದೆ ಹೋಗುತ್ತಿರುವಳೋ? ಬನ್ನಿ, ಆಕೆಯನ್ನು ಎಚ್ಚರಿಸೋಣ. ಕಿರೀಟದ, ಜವಾಹಿರಿಯ, ಶಿಲ್ಪನಿಯಮದ, ಜರತಾರಿಯ, ಭಾರವನ್ನೂ ಬಿಗುಪನ್ನೂ ಬಿಡಿಸೋಣ. ವಿಶ್ವವಾಣಿಯ, ದಿವ್ಯವಾಣಿಯ, ಸಂಜೀವನಮಣಿಯ ಸ್ಪರ್ಶದಿಂದ ಶಾಪಗ್ರಸ್ತಳಾದ ಶಿಲಾಮೂರ್ತಿಯನ್ನು ಜೀವವುಳ್ಳ ಚೆಲುವೆಯನ್ನಾಗಿ ಮಾಡೋಣ. ಆ ಉನ್ನತ ಪೀಠದಿಂದ ಆಗ ಆಕೆ ಇಳಿಯುವಳು, ನಾಡಿನಲ್ಲೆಲ್ಲಾ ಸುಳಿಯುವಳು. ಸ್ವಾತಂತ್ರ್ಯದಿಂದ ಸಹಜವಾಗಿ ಆಕೆಯ ಹೃದಯ ಆಡುವುದು. ಕಣ್ಣು ಒಲಿದ ಹೆಣ್ಣಿನ ಕಣ್ಣು ಬಿನ್ನಾಣವನ್ನೆಲ್ಲಾ ಬೆಳಗಿ ಬೀರುವುದು. ಗಾಳಿಗೆ ಕೆದರಿದ ಕೂದಲು ಕನ್ನಡ ನಾಡಿನ ಬಯಲುಗಳ ಮೊಲ್ಲೆಮಲ್ಲಿಗೆಗಳನ್ನು ಧರಿಸಿ ಕಂಪುಸೂಸುವುದು. ನಗು ನಗುತ ಆಕೆ ನಮ್ಮೊಡನಾಡಿಯಾಗಿ, ಮನುಷ್ಯರೊಡನೆ ಮನುಷ್ಯಳಾಗಿ, ದಿವ್ಯಾತ್ಮರೊಡನೆ ದೇವಿಯಾಗಿ, ತಾನೂ ನಲಿದು, ನಮ್ಮನ್ನೂ ನಲಿಸುವಳು. ಆಗ್ಗೆ ಆಕೆಯೂ ಧನ್ಯಳು—ನಾವೂ ಧನ್ಯರು: ತಾಯಿ ಧನ್ಯಳಾದರೆ, ಮಕ್ಕಳೂ ಧನ್ಯರಲ್ಲವೆ?

ಶ್ರೀ.

ಯಮನ ಸೋಲು

ಪೀಠಿಕಾ ದೃಶ್ಯ

[ಆಕಾಶ ಮಾರ್ಗದಲ್ಲಿ ಯಮದೂತನೊಬ್ಬನು ಅವಸರದಿಂದ ಬರುವನು. ಅಭಿಮುಖ ನಾಗಿ ಹೋಗುವ ಯಕ್ಷನೊಬ್ಬನು ಅವನನ್ನು ಎದುರುಗೊಂಡು ಮಾತಾಡಿಸುವನು.]

ಯಕ್ಷ— ಗಾಳಿವಟ್ಟೆಯೊಳಿಂತು ವೇಗದಿಂದೋಡುತಿಹೆ;
ಯಾವೆಡೆಗೆ ಯಮದೂತ?

ದೂತ— ನೀರ ನೀರೆಯರಾದ
ಸತ್ಯವಾನ್ ಸಾವಿತ್ರಿ ಇವರಿರುವ ವನದೆಡೆಗೆ!

ಯಕ್ಷ— ವಿಶೇಷವೇನಲ್ಲಿ?

ದೂತ— ಸತ್ಯವಾನನಿಗಿದೇ
ಚರಮದಿನ. ನಮ್ಮ ರಾಯನ ಬಳಿಗೆ ಕೊಂಡೊಯ್ಯ
ಲಾತನನು ತೆರಳುತಿಹೆ ಯಕ್ಷ.

ಯಕ್ಷ— ಅವನೇನು
ಮುದುಕನೇ?

ದೂತ— ಇಲ್ಲ; ಯುವಕನೇ! ಮದುವೆಯಾ
ಗಿನ್ನೂ ಹನ್ನೆರಡು ತಿಂಗಳೂ ಕಳೆದಿಲ್ಲ.

ಯಕ್ಷ— ಹಾಗೆಂದ ಮೇಲೆ?

ದೂತ— ನಾನು ಮಾಡುವುದೇನು?
ಕ್ರೂರವಿಧಿ ಅವನ ಬಾಳಿನ ನೂಲ ಕತ್ತರಿಸಿ
ಬಿಟ್ಟಿಹುದು. ಇಂದವನು ಕತ್ತಲಾಗುವ ಮುನ್ನ
ಸಂಜೆಯೊಳು ಸಾಯಲೇ ಬೇಕು!

ಯಕ್ಷ— ಪಾಪ! ಆ
ಸಾವಿತ್ರಿಗಿನ್ನು ಗತಿ ಏನು?

ದೂತ— ಇರುಳಲ್ಲಿ
ಕಂಡ ಕೂಪವ ಹಗಲು ಹಾರಿದಳು. ನಮ್ಮ
ತಪ್ಪೇನು? ಪತಿಯು ಈ ಗತಿಯುನರಿತೂ ಅವನ
ಮೆಚ್ಚಿದಳು; ವರಿಸಿದಳು.

ಯಕ್ಷ— ಹಾಗಾದರೀಗತಿಯ,
ಸಾವಿತ್ರಿಯರಿತಿಹಳೇ?

ದೂತ— ಚೆನ್ನಾಗಿ! ಚೆನ್ನಾಗಿ!

ಯಕ್ಷ— ಯಾರಾಕೆ? ಇಂತೇತಕೆಸಗಿದಳು? ತಿಳಿದೂ
ಸಾವನೇಕಪ್ಪಿದಳು? ತಿಳಿಸು ಯಮಕಿಂಕರಾ.

ದೂತ— ವಿಶದವಾಗುಸುರಲೆನಗೀಗ ಹೊತ್ತಿಲ್ಲ.
ತಡಮಾಡಿದರೆ ಯಮನ ದಂಡನೆಗೆ ಗುರಿಯಾಗ
ಬೇಕು. ಸಂಕ್ಷೇಪವಾಗೊರೆಯುವೆನು ಕೇಳು.

ಯಕ್ಷ— ನಾನೂ ಕಾರ್ಯಾರ್ಥವಾಗಿಯೇ ಹೊರಟಿಹೆನು.
ಸಂಕ್ಷೇಪವಾಗಿಯೇ ಹೇಳು.

ದೂತ— ಸಾವಿತ್ರಿ
ಅಶ್ವಪತಿಯೆಂಬ ರಾಜನ ಕುವರಿ. ಭಕ್ತಿಯಿಂ
ದೀಶನಾರಾಧನೆಯ ಮಾಡೆ ಜನಿಸಿದಳು.
ಬ್ರಹ್ಮಸೃಷ್ಟಿಯೊಳೀಗ ಆ ಸತಿಯ ಸೊಬಗಿನಲಿ
ಮೀರುವವರಾರಿಲ್ಲ. ಪಾತಿವ್ರತ್ಯದೊಳವಳ
ಎಣೆಯಿಲ್ಲ. ಪ್ರಾಪ್ತವಯಸಾಗಲಾಕೆಗೆ, ದೊರೆಯು
ಅನುರೂಪನಾದ ವರನನೆಲ್ಲಿಯು ಹುಡುಕಿ
ಕಾಣದಲೆ, ತನ್ನ ಪತಿಯನು ತಾನೆ ಒಲಿದರಸಿ
ತರುವಂತೆ ಬಿನ್ನವಿಸಿಯಾಕೆಯಂ ಕಳುಹಿದನು.
ದೇಶ ದೇಶವ ಚರಿಸಿ ತನಗೆ ಅನುರೂಪನಂ
ಎಲ್ಲಿಯೂ ಕಾಣದಲೆ, ಕಡೆಗಾಕೆಯೈತಂದ
ಳೊಂದು ಋಷ್ಯಾಶ್ರಮಕೆ. ಅಲ್ಲಿ, ಶತ್ರುಗಳು
ರಾಜ್ಯವನ್ನಪಹರಿಸೆ, ಕುರುಡಾಗಿ ಕಾನನಕೆ

ಬಂದು ಋಷಿಚರ್ಯೆಯಲ್ಲಿರುವ ರಾಜರ್ಷಿ
ದ್ಯುಮತ್ಸೇನಭೂಮಿಪನ ಸುತನಾದ ಸತ್ಯವಾನ್
ಎಂಬ ಶುದ್ಧಾತ್ಮನನ್ನೊಲಿದು ವರಿಸಿದಳು.

ಯಕ್ಷ— ಅವನಷ್ಟು ಸುಂದರನೆ?

ದೂತ— ಸುಂದರನು ಹೌದು;
ಪೊಸ ಜೌವನದ ಸಿರಿಗೆ ಒಡೆಯನಾಗಿಯೂ ಇದ್ದ.
ಆದರಾ ಸಾವಿತ್ರಿ ಸೌಂದರಕೆ ಮರುಳಾಗ
ಲಿಲ್ಲ. ಸೌಂದರ್ಯವನು ಮೀರಿ ಆತನೊಳು
ಶುಚಿಶೀಲವಿತ್ತು.

ಯಕ್ಷ— ಆಮೇಲೆ?

ದೂತ— ಅಶ್ವಪತಿ
ಯೊಪ್ಪಿದನು. ಆದರಾಸ್ಥಾನಕ್ಕೈತಂದ
ನಾರದರು, ಸಾವಿತ್ರಿಯೊಲಿದವನು ಅಲ್ಪಾಯು
ಎಂಬುದನು ಗುಟ್ಟಾಗಿ ತಿಳಿಸಿದರು. ದೊರೆಯು
ಬೆಚ್ಚಿದನು ಆ ನುಡಿಯ ಕೇಳಿ.

ಯಕ್ಷ— ಸಾವಿತ್ರಿ?

ದೂತ— ಪ್ರೇಮ ಮೃತ್ಯುಗೆ ಬೆದರಿ ಓಡುವುದೆ? ಪತಿಯ ಗತಿ
ಯನು ಕೇಳಿ, ಆಕೆಯೊಲುಮೆಯೂ ಚೈತ್ರಮಾಸದೊಳು
ತಳಿತೆಸೆವ ವನದಂತೆ ಹಿಗ್ಗಿದುದು.

ಯಕ್ಷ— ಹೌದು,
ಒಮ್ಮೆಯೊಬ್ಬನನೊಲಿದ ಶುಚಿಯೊಲವು, ನೋಡುವುದೆ
ಕಣ್ಣೆತ್ತಿ ಮತ್ತೊಬ್ಬನೆಂತಿರುವನೆಂದು?
ಕಡೆಗೆ?

ದೂತ— ಸಾವಿತ್ರಿ ಸತ್ಯವಾನನ ಮದುವೆ
ಯಾಗಿ, ಅತ್ತೆಮಾವಂದಿರಿಗೆ ಉಪಚಾರ
ವೆಸಗಿ, ಪತಿಯನನುಸರಿಸುತ್ತ ಕಾಡಿನೊಳ
ಗಿಹಳು. ತನ್ನ ಪತಿಗಿದೆ ಕಡೆಯ ದಿನವೆಂದು

ಮೂರು ದಿನದಿಂದ ಪೂಜೆಯುಪವಾಸಗಳ
ನೆಸಗಿಹಳು. ದಿನವು ಪರಮೇಶನಂ ಬೇಡು
ತಿಹಳು. ಆದರೇಂ? ಬಿದಿಯು ಕಟ್ಟಳೆಗಾರು
ಅಡ್ಡಬರುವರು ಯಕ್ಷ? ನಾನು ಯಮದೂತ
ನೆನ್ನೆದೆಯು ಕೂಡ ಮರುಗುತಿದೆ! ಆದರೇಂ?
ನಾನೇನು ಮಾಡಬಲ್ಲೆ? ಜವರಾಯನಿತ್ತ
ಕ್ರೂರಾಜ್ಞೆಯಂ ನಾನು ಮೀರಲಾರೆನು, ಯಕ್ಷ.
ತೆರಳುವೆನು ಹೊತ್ತಾಯ್ತು!

ಯಕ್ಷ— ಕೌತುಕದ ಸುದ್ದಿಯಿದು,
ಯಮದೂತ! ನನ್ನ ಇಂದಿನ ಕಜ್ಜವಂತಿರಲಿ!
ನಾನು ಬರುವೆನು ನಿನ್ನ ಕೂಡೆ, ಬಾ ಹೋಗೋಣ!

ದೂತ— ಬ್ರಹ್ಮಾಂಡದಾವ ಭಾಗದೊಳಿಹೆವು ನಾವೀಗ
ಯಕ್ಷ?

ಯಕ್ಷ— ಮರ್ತ್ಯಲೋಕದ ಬಳಿಗೆ ಬಂದಿಹೆವು!
ನೋಡಲ್ಲಿ! ಕೋಟಿಯುಡುಗಳ ನಡುವೆ ಮಿಣುಕುತಿಹ
ಮುದ್ದಾದ ಗ್ರಹವೊಂದು ತೋರುತಿದೆ. ಅದೆ ಭೂಮಿ!

ದೂತ— ಅದರ ಪಕ್ಕದೊಳೇನು ಪುಟ್ಟ ಸೊಡರಿನ ತೆರದಿ
ಮಿನುಗುತಿದೆ?

ಯಕ್ಷ— ಅದು ಚಂದ್ರಲೋಕ! ಬಾ, ತೆರಳೋಣ!

[ಇಬ್ಬರೂ ಹೋಗುವರು. ಪರದೆ ಬೀಳುವುದು.]

ದೃಶ್ಯ ೧

[ಆಶ್ರಮದ ಪಕ್ಕದ ಒಂದು ಎಲೆವನೆಯ ಶಿವಗುಡಿ. ಸಾವಿತ್ರಿಯು ಪೂಜೆ ಧ್ಯಾನಾದಿಗಳಲ್ಲಿ ತೊಡಗಿದ್ದಾಳೆ.]

ಸಾವಿತ್ರಿ— ಏಳದಿರು ಎಲೆ ಸೂರ್ಯ, ಏಳದಿರು ಇಂದು !
ಮುಂದೆ ಎಂದೆಂದಿಗೂ ಮುಳುಗಲೆಂದೇಕೆ
ಉದಯಿಸುವೆ ಇಂದು. ಕಾಲಚಕ್ರವೆ ನಿಲ್ಲು
ಮುಂದೆ ಎಂದೆಂದಿಗೂ ನಿಲ್ಲಲೆಂದೇಕೆ
ತಿರುಗುತಿಹೆ ನೀನು. ಸೃಷ್ಟಿಯೇ ನಿಲ್ಲಿಲ್ಲಿ ;
ಸಾಗದಿರು ಮುಂದೆ, ಹತ್ತಿರದೊಳಿದೆ ವಿಲಯ !
ಹೇ ದೇವ ವಿಶ್ವಭಕ್ತಿಯನೆಮಗೆ ಕೊಟ್ಟಿರುವೆ ;
ವಿಶ್ವದೊಲವನು ಎಮ್ಮ ಹೃದಯದೊಳಗಿಟ್ಟಿರುವೆ ;
ವಿಶ್ವಶಕ್ತಿಯನೇಕೆ ದಯಪಾಲಿಸಿಲ್ಲ ?
ಇಂದು ಆ ದಿವಸ ! ಯಮರಾಯನಿನಿಯನನು
ಕೊಂಡೊಯ್ವ ದುರ್ದಿವಸ ! ಎಲೆ ಭಯಂಕರ ದಿನವೆ
ಸೃಷ್ಟಿಜಾಲವ ಬಿಟ್ಟು ನನಗಾಗಿ ಕಳ್ಳನೊಲು
ಜಾರಬಾರದೆ, ಹಾರಿ ಹೋಗಬಾರದೆ ನೀನು !
ನಿನ್ನ ನಾನಾಗ ಪರಮೇಶನಿಗೆ ಬದಲಾಗಿ
ಪೂಜಿಸುತಲಿದ್ದೆ. ಪ್ರೇಮವೇ, ನನ್ನಂತೆ
ನೀನೂ ಅಬಲೆಯಾದೆಯ ಹೇಳು ! ಚುಕ್ಕಿಗಳೆ
ತೆರಳಬೇಡಿರಿ ! ಚಂದ್ರ, ಮರೆಯಾಗಬೇಡ !
ಕೋಗಿಲೆಯೆ ಕೂಗದಿರು, ಕೂಗಿ ಜವಗಂಟೆಯಂ
ಬಡಿಯದಿರು. ನೆನಪ ಕೊಡದಿರು ಜವಗೆ, ಇಂದು ಆ
ದುರ್ದಿವಸವೆಂದು. ವಿಸ್ಮೃತಿಯೆ ಜವನ
ನಾವರಿಸು ಹೋಗು ! ಚಲಿಸದಿರಿ, ಮರ್ಮರ ಸ
ನಾದವಂ ಮಾಡದಿರಿ ಎಲೆ ತಳಿತ ತರುಗಳಿರ !

ನಿಮ್ಮ ಒಂದೊಂದು ಮರ್ಮರವು ಯಮರಾಯ
ನನ್ನಲ್ಲಿ ಎಚ್ಚರಿಸುವುವೊ ಎಂದು ಬೆದರುವೆನು.
ಬೀಸದಿರು ಮಾರುತನೆ; ಎನಗಾಗಿ ಬೀಸದಿರು,
ಕೈಮುಗಿದು ಬೇಡುವೆನು. [ಬಾಗಿಲ ತಟ್ಟುವರು]
ಬರಬೇಡ, ಬರಬೇಡ
ಒಳಗೆ ಯಮದೂತ; ಶಪಿಸುವೆನು ಬರಬೇಡ!
ಪಾತಿವ್ರತ್ಯವೆ, ನಿನ್ನ ಪಂಡಿತರು ಹೊಗಳಿಹರು;
ಎಲ್ಲ ನಿನ್ನಾಶಕ್ತಿ? ಎಲ್ಲಿ ನಿನ್ನಾ ಮೈಮೆ? [ಬಾಗಿಲ ಶಬ್ದ]
ಯಾರಲ್ಲಿ? [ಬಾಗಿಲ ತೆರೆಯುವಳು. ಸತ್ಯವಾನನ ಪ್ರವೇಶ. ಕೈಯಲ್ಲಿ
ಹೂಬುಟ್ಟಿ, ಹೆಗಲಮೇಲೆ ಕೊಡಲಿ ಇರುವುವು.]

ಸತ್ಯವಾನ್— ಇಲ್ಲೇನು ಮಾಡುತಿಹೆ ಸಾವಿತ್ರಿ?

ಸಾವಿತ್ರಿ— ತಪ್ಪಾಯ್ತು; ಕ್ಷಮಿಸೆನ್ನ ಮನದನ್ನ. ಪೂಜೆಮಾ
ಡುತಲಿದ್ದೆ. ಅದರಿಂದ ತಡವಾಯ್ತು.

ಸತ್ಯವಾನ್— ಇದಾವ ವ್ರತ
ದಿನ ಮೂರು ಕಳೆದುವಾಗಲೆ ಪೂಜೆಯಾರಂಭ
ವಾಗಿ! ಮುಖದಲ್ಲಿ ಉದ್ವೇಗ ಚಿತ್ರಿಸ
ಲ್ಪಟ್ಟಿಹುದು.

ಸಾವಿತ್ರಿ— ಏನಿಲ್ಲ ಪ್ರಿಯತಮಾ; ದೇವರಾ
ರಾಧನೆಗೆ ಜಾಗರಣೆ ಮಾಡಿದೆನು. ಅದಕಾಗಿ
ಸ್ವಲ್ಪ ಆಯಾಸ. ಕುಳಿತುಕೋ ಬಾ; ನೀನೂ
ಈಶನಂ ಪೂಜಿಸುವೆಯಂತೆ.

ಸತ್ಯವಾನ್— ಪ್ರಿಯತಮೆ
ನಾಳೆ ಪೂಜಿಸುವೆ. ಸಮಯವಿಲ್ಲೀಗ; ಫಲ
ಪುಷ್ಪಗಳಿಗಾಗಿ ವನಗಳಿಗೆ ಹೊರಟಿಹೆನು.
ನೋಡು ಕೈಯಲಿ ಬುಟ್ಟಿ! ಭುಜದ ಮೇಲ್ನೋಡು
ಸೌದೆ ಕಡಿಯಲು ಕೊಡಲಿ!

ಸಾವಿತ್ರಿ— [ಸ್ವಗತ] ಸುಮ್ಮನಿರು ನಾಲಗೆಯೆ,
ಸುಮ್ಮನಿರು. [ಬಹಿರಂಗ] ನಾಳೆಪೂಜೆಯು ನಾಳೆ; ರಮಣ
ಪೂಜಿಸಿಂದೆನಗಾಗಿ. ಸತಿಪತಿಯರಿಬ್ಬರೂ
ಪೂಜಿಸಲೆಬೇಕಾದ ವ್ರತವು ಇದು.

ಸತ್ಯವಾನ್— ನಿನ್ನಿಷ್ಟ!

[ಪೂಜಿಸಲಾರಂಭಿಸುವನು.]

ಸಾವಿತ್ರಿ— [ಸ್ವಗತ] ಎಲೆ ರಮಣ, ಈ ದಿನವೆ ಚರಮದಿನವೆಂದರಿಯೆ.
ಅಯ್ಯೋ! ಯಮನ ಪಾಶವು ಕೊರಳೊಳಿರುವುದನು
ಅರಿಯದಲೆ ಎಷ್ಟು ಜನ ಹಿಗ್ಗುವರು. ಎಷ್ಟು ಜನ
ಸುಗ್ಗುವರು ದೀಪಕೋಡುವ ಕ್ರಿಮಿಯಹಾಳಿಯಂತೆ.
ಸತ್ಯವಾನ್, ನಾಳೆ ಪೂಜಿಸಲಾರೆ ನೀನು;
ಇದೆ ನಿನ್ನ ಕಡೆಯ ಪೂಜೆ! ಇಂದೆನಿತು
ಅಂದವಾಗಿಹನೆನ್ನ ಪತಿಯು! ಈ ತೆರದ
ಸೊಬಗ ನಾನೆಂದು ನೋಡಿರಲಿಲ್ಲ! ಇಂದೆನಿತು
ಪ್ರಿಯವಾಗಿ ತೋರುವನು! ಹಿಂದೆಂದು ಸಲ್ಲಿಸದ
ಪ್ರಣಯ ಪ್ರೇಮವ ತೋರುತಿಹನು. ಅರಿಯದಲೆ
ತನಗೆ ಒದಗುವ ಗತಿಯ ಸಂತೋಷದಿಂದಿಹನು!
ಮುಂದರಿವೆ ಹಾಳಾಗು! ಮುಂದಾಗುವುದನೊಂದ
ನರಿಯದವನೇ ಧನ್ಯ! ಎಲೆ ಕಾಲವೇ, ನಿನ್ನ
ಭೀಕರದ ಕಾಳಗರ್ಭವ ತೋರಬೇಡ!

ಸತ್ಯವಾನ್— [ಪೂಜೆ ಮುಗಿಸಿ]
ತರಳೆ, ಸಾವಿತ್ರಿ, ಹೊರಡುವೆನು; ಹೊತ್ತಾಯ್ತು!

ಸಾವಿತ್ರಿ— ಪ್ರಿಯನೆ ಇಂದಿನಾರಾಧನೆಯು ಹೇಗಿತ್ತು?

ಸತ್ಯವಾನ್— ಇಂತೇಕೆ ಕೇಳುತಿಹೆ? ಎಂದಿನಂತೆಯೆ ರಮಣಿ.

ಸಾವಿತ್ರಿ— ಎಂದಿನಂತಿರಲಾರದಿನಿಯ!

ಸತ್ಯವಾನ್— ಸಾವಿತ್ರಿ
ಇಂದೇಕೆ ನಿನ್ನ ರೀತಿಯೆ ಬೇರೆಯಾಗಿಹುದು? [ಸಾವಿತ್ರಿ ಬೆಚ್ಚುವಳು]
ಬೆಚ್ಚುತಿಹೆ ಏಕೆ?

ಸಾವಿತ್ರಿ— [ಸ್ವಗತ] ಹೃದಯವೇ ಸಿಡಿದೊಡೆಯ
ಬೇಡ. ಮನವೇ ಶಾಂತಿಯ ಹೊಂದು. [ಗಟ್ಟಿಯಾಗಿ]
ಹೃದಯೇಶ
ಬನಗಳಿಗೆ ಹೊರಡುವೆಯ? ನನ್ನನೂ ಕರೆದೊಯ್ಯು.

ಸತ್ಯವಾನ್— [ಸಾವಿತ್ರಿಯನ್ನೇ ಎವೆಯಿಕ್ಕದೆ ನೋಡಿ, ಸ್ವಗತ]
ಇಂದೇನು! ಇವಳ ರೀತಿಯನರಿಯಲಾರೆ.
ವನದೊಳೆನಗಶುಭವಾಗುವುದೆಂದು ಬೆದರಿಹಳೊ
ಏನೊ! [ಯೋಚಿಸುತ್ತ ನಿಲ್ಲುವನು.]

ಸಾವಿತ್ರಿ— [ಅವನನ್ನು ನೋಡಿ, ಸ್ವಗತ] ಇಂದೆನಿತು ದಿವ್ಯವಾಗಿಹನೀತ
ನೆನ್ನ ಕಂಗಳಿಗೆ! ಮನಕೆನಿತು ಪೂಜ್ಯನಾ
ಗಿಹನಿಂದು! ಹೃದಯಕೆ ಪವಿತ್ರನಾಗಿಹನು! [ಬಹಿರಂಗ]
ಸತ್ಯೇಂದ್ರ, ಸಟ್ಟ ದಿಟ್ಟಿಯೊಳೇನ ನೋಡುತಿಹೆ?
ಚಿಂತಿಸುವುದೇನು? ಬನಕೆನ್ನ ಕರೆದೊಯ್ಯ
ಲಾರೆಯಾ? ಜತೆಯೊಳಾನಿದ್ದರೇಂ ತೊಂದರೆಯೆ?

ಸತ್ಯವಾನ್— ಅದಕಲ್ಲ ನೀರೆ, ಹಿಂದೆಂದು ಬರದಿದ್ದ
ನೀನು, ಇಂದೇಕೆ ವನಗಳಿಗೆ? ನನಗಮಂ
ಗಳವಾಗಬಹುದೆಂದು ಬೆದರಿಕೆಯೆ?

ಸಾವಿತ್ರಿ— [ಉದ್ವೇಗದಿಂದ] ಹೌದು
ಪ್ರಿಯತಮ, ಹೌದು ಸತ್ಯೇಂದ್ರ, ಎದೆಯನ್ನ!

ಸತ್ಯವಾನ್— ಸುಮ್ಮನಿರು, ಮುಗ್ಧೆ ಸುಮ್ಮನಿರು; ಬೆದರದಿರು
ಬರಿದೆ. ಇಂದೇಕೆ ಇಂತುಟಾಲೋಚಿಸುವೆ
ಹಿಂದೆಂದು ಯೋಚಿಸದ ನೀನು?

ಸಾವಿತ್ರಿ— ಸತ್ಯವಾನ್
ಪ್ರಾಣೇಶ, ಘೋರ ಸ್ವಪ್ನವದೊಂದ ನೋಡಿದೆನು!
ಅತಿ ಭಯಂಕರ ಕನಸು!

ಸತ್ಯವಾನ್— ಕನಸಿನೊಳಗೇನಿಹುದು
ನೀರೆ? ಸ್ವಪ್ನವಾದರು ಏನು?

ಸಾವಿತ್ರಿ— ಹಳಿಯದಿರು
ಕನಸೆಂದು ನೀರ. ಘೋರ ಕಾನನದಲ್ಲಿ—
ಘೋರ ಕಾನನದಲ್ಲಿ—ನಾನೊಲ್ಲೆ, ನಾನೊಲ್ಲೆ
ದುರ್ನುಡಿಯ ನಾನುಡಿಯೆ.

ಸತ್ಯವಾ೯— ಹೇಳು ಸಾವಿತ್ರಿ!

ಸಾವಿತ್ರಿ— ನಿನ್ನ ಕೊಂಡೊಯ್ದಂತೆ ಕನಸಾಯ್ತು ಇನಿಯ.

ಸತ್ಯವಾ೯— ಮೊಲದೆದೆಯು ನಿನ್ನೆದೆಯು! ಅದಕಿನಿತು ಭೀತಿಯೇ?

ಸಾವಿತ್ರಿ— ಹಾಗಲ್ಲ ಪ್ರಿಯತಮಾ! ಕೇಳಿನ್ನ— —

ಸತ್ಯವಾ೯— ಅದಕಾಗಿ
ಬರುವುದಾದರೆ ಬೇಡ.

ಸಾವಿತ್ರಿ— ಅದಕಲ್ಲ; ನಿನ್ನೊಡನೆ
ಹೂವಾಯ್ದು ವನದಲ್ಲಿ ಅಡ್ಡಾಡಬೇಕೆಂದು.

ಸತ್ಯವಾ೯— ಹಾಗನ್ನು! ಇದಕಿಷ್ಟು ಅಭಿನಯವು ಬೇಕೆ?

ಸಾವಿತ್ರಿ— [ಸ್ವಗತ] ಹೇ ದೇವ! ಪತಿಯರಿಯ ನನ್ನೆದೆಯ ತಾಪವನು.

ಸತ್ಯವಾ೯— ಹೊರಗಿರುವೆ. ಬಾ, ಬೇಗ. ಹೊತ್ತಾಯ್ತು ಹೊರಡೋಣ!
ಬರುವಾಗ ತಂದೆ ತಾಯಿಂದಿರಿಗೆ ಹೇಳಿ ಬಾ!

[ಕೊಡಲಿ ತೆಗೆದುಕೊಂಡು ಹೊರಡುವನು.]

ಸಾವಿತ್ರಿ— ಪರಮೇಶ, ಪಾರುಮಾಡೆನ್ನನೀ ದಿನದ
ಅಳಲಿಂದ! ಪತಿಯನಗಲದ ತೆರದಿ ಭಕ್ತಿಯನು,
ಶಕ್ತಿಯನು, ದೃಢತೆಯನು ನೀಡು. ಹೋರಾಡಿ
ಯಾದರೂ ಮೃತ್ಯುವಿನ ಅಣಲಿಂದ ಪತಿಯನುಳು
ಹುವ ತೆರದಿ ಮಾಡು. ಹೇ ದುಷ್ಟ ವಿಧಿಯೇ,
ಎನ್ನ ರಮಣನನೆಲ್ಲಿಗೊಯ್ಯುತಿಹೆ? ನಿನ್ನ—
ತಾಳೆಲೈ ನಾಲಗೆಯೆ, ದುರ್ವಚನಕೆಡೆಗೊಟ್ಟು
ಸತ್ಯಶಕ್ತಿಯ ದಹಿಸಬೇಡ! ಹೇ ದೇವ
ಎನ್ನಿನಿಯನೊಡನಿಂದು ನರಕವಾದರೆ ನರಕ!
ಸಗ್ಗವಾದರೆ ಸಗ್ಗ! ನಾಶವಾದರೆ ನಾಶ!
ಯಮರಾಯನೊಡ್ಡುತಿಹ ಪಾಶವಾದರೆ ಪಾಶ!

[ಹೊರಡುವಳು. ಪರದೆ ಬೀಳುವುದು.]

ದೃಶ್ಯ ೨

[ಅರಣ್ಯ ಮಧ್ಯೆ. ಸತ್ಯವಾನ್ ಸಾವಿತ್ರಿಯರು ಅಲೆಯುತ್ತ ಬರುವರು.]

ಸತ್ಯವಾನ್— ಇತ್ತ ಬಾ, ನೀರೆ, ಇತ್ತ ಬಾ ನೋಡಿಲ್ಲೆ
ಹರಿಣಿಯಂ ಬಿಡಿಸಿದುದು ಹುಲಿಯಿಂದ. ಇನ್ನೇನು
ಬಡಮಿಗವ ಕೊಲ್ಲುವುದರಲ್ಲಿತ್ತು ಆ ದುಷ್ಟ
ವ್ಯಾಘ್ರ.

ಸಾವಿತ್ರಿ— [ಸ್ವಗತ] ಆ ಪುಣ್ಯ ನಿನ್ನನೀದಿನ ಬಂದು
ರಕ್ಷಿಸಲಿ

ಸತ್ಯವಾನ್— ನೋಡಾ ತಮಾಲವೃಕ್ಷದ ಕೆಳಗೆ, ನಾನಂದು
ಕೋಗಿಲೆಯನುರಗನಿಂ ಬಿಡಿಸಿದ್ದು. ಮಧುನೃಪನ
ಹರಿಕಾರ ಯಮನ ಪರಿಚಾರನಾಗುತಲಿದ್ದ. [ಸಾವಿತ್ರಿ ಬೆಚ್ಚಿ]
ಏಕೆ ಬೆಚ್ಚುವೆ ತರಳೆ?

ಸಾವಿತ್ರಿ— ಮುಳ್ಳು ಚುಚ್ಚಿತು, ಇನಿಯ.

[ಸತ್ಯವಾನನು ಬಗ್ಗಿ ಅಂಗಾಲನ್ನು ನೋಡುವನು.]

[ಸ್ವಗತ] ಕೋಗಿಲೆಯ ಪಾಲಿಸಿದ ಪುಣ್ಯವಿಂದೈತಂದು
ಪಾಲಿಸಲಿ ನಿನ್ನ!

ಸತ್ಯವಾನ್— ಮುಳ್ಳಿಲ್ಲ! ಹುಲ್ಲೆಂದು
ತೋರುವುದು. ಏನು ಕೋಮಲ ಕಾಯವಪ್ಪಾ!
ಚೆಂದಳಿರ ನಗುತಿಹುದು ನಿನ್ನಡಿಯು. [ಏಳುವನು.]

ಸಾವಿತ್ರಿ— [ಸ್ವಗತ] ಸರಸ!
ಮೃತ್ಯುವಿನ ಬಾಯಲ್ಲಿ ಸರಸ!

ಸತ್ಯವಾನ್— ಮಾತಾಡು
ಸಾವಿತ್ರಿ. ಮೂಕಿಯಂತಿಹೆಯಲ್ಲ. ಆಯಾಸ
ವಾಗಿದೆಯೆ? ಇಂದೇಕೆ ಖಿನ್ನಮುಖಿಯಾಗಿರುವೆ?
ವನದೊಳೆನ್ನೊಡನೆ ನಲಿಯಲೆಂದೈತಂದೆ.
ಇದೆ ನಿನ್ನ ನಲ್ಮೆ?

ಸಾವಿತ್ರಿ— ಏನೊ ಯೋಚಿಸುತಿದ್ದೆ.
ಸತ್ಯವಾನ್— ಒಮ್ಮನದೊಳದನುಂಡು ನಲಿಯೋಣ! ಹೇಳು!
ಸಾವಿತ್ರಿ— ಅಂದೆನಗೆ ಸೀತಾಳಿ ದಂಡೆಗಳ ತಂದಿತ್ತು
ದೆಲ್ಲಿಂದ?
ಸತ್ಯವಾನ್— ಇಲ್ಲಿಗದು ತುಸು ದೂರ.
ಸಾವಿತ್ರಿ— ಎಲ್ಲಿ?
ಸತ್ಯವಾನ್— ನಾವು ಹಾದು ಬಂದಾನದಿಯ ತೀರದೊಳು
ಕಾಡು ಮಾವಿನ ಮರವ ತೋರಿಸಿದೆ, ನೋಡು.
ಸಾವಿತ್ರಿ— ಉಂ! ಹೌದು.
ಸತ್ಯವಾನ್— ಅದರ ಪಕ್ಕದ ಬಸಿರಿ ಮರದಲ್ಲಿ.
ಸೀತಾಳಿ ಹೂವುಗಳು ಬೇಕೇನು ನಿನಗೆ?
ಸಾವಿತ್ರಿ— ಬೇಕಿತ್ತು.
ಸತ್ಯವಾನ್— ಆ ಮರವ ಹತ್ತಿ ತರುವೆನು ನಿಲ್ಲು.
[ಹೋಗುವ ಸತ್ಯವಾನನ ಕೈ ಹಿಡಿದು]
ಸಾವಿತ್ರಿ— ಬೇಡ, ಬೇಡೀಗ, ಸತ್ಯೇಂದ್ರ.
ಸತ್ಯವಾನ್— ಅದೇಕೆ?
ಹಿಂದೇಕೆ ಜೋಲುತಿಹೆ, ಬಾ ರಮಣಿ. ಸುಮ ಸುರಭಿ
ಭರಿತ ತಂಗಾಳಿ, ತೆಂಬೆಲರು, ಬೀಸುತಿಹು
ದಾನಂದದಿಂದ ನೋಡಲ್ಲಿ! ಮುತ್ತುಗದ ಹೂವುಗಳು
ಪ್ರಕೃತಿದೇವಿಯ ಬರವಿಗಾಗಿ ವನದೇವಿ
ಹಿಡಿಯಿಸಿದ ಪಂಜುಗಳೊ ಎಂಬಂತೆ ರಂಜಿಸಿವೆ.
ಸಾವಿತ್ರಿ— ಬಹುದೂರ ಮಸಣದೊಳು ಉರಿವ ಸೂಡುಗಳೊ
ಎಂಬಂತೆ ತೋರುತಿವೆ.
ಸತ್ಯವಾನ್— ಅಮಂಗಳದ ನುಡಿಯೇಕೆ?
ರಮಣಿ. ಹೋಲಿಸಲು ಬೇರೇನು ಇಲ್ಲವೆ?
ಸಾವಿತ್ರಿ— [ಸ್ವಗತ] ಹೃದಯವೇ, ದ್ರೋಹವನ್ನೆಣಿಸದಿರು ಚಿತ್ತಕ್ಕೆ.
ಮನವನೇತಕೆ ಹಿಡಿದುಕೊಡುವೆ? [ಬಹಿರಂಗವಾಗಿ]
..ಹಾಳು
ಬಾಯ್‌ನುಡಿದೆ, ರಮಣ, ಕ್ಷಮಿಸೆನ್ನ.

ಸತ್ಯವಾನ್— ಬಿಡು, ಪ್ರಿಯೆ.
ಮನ್ನಿಸಲು ಅಪರಾಧವೇನಿಲ್ಲ. ನೋಡಲ್ಲಿ!
ಗಿಳಿವಿಂಡುಗಳು ಶಾಲಿತೆನೆಗಳನು ಚಂಚುವಿನೊ
ಳಿಟ್ಟು ಜವದಿಂದ ಹಾರುವುದು ಕಡುರಮ್ಯ
ವಾಗಿಹುದು. ಆಶ್ರಮದೊಳೀತೆರದ ನೋಟಗಳ
ನೋಡಿದ್ದೆಯೇನು? ನೋಡಲ್ಲಿ! ನೋಡಲ್ಲಿ!
ಅಲ್ಲಿ! [ಸಾವಿತ್ರಿ ಬೆಚ್ಚುವಳು]
ಬೆಚ್ಚುತಿಹೆ ಏಕಿಂತು? ಅರಸಂಚೆ
ಯಾವಳಿಯ ತೋರಿಸಿದೆನಷ್ಟೆ! ಇದಕಾಗಿ
ಹೇಳಿದ್ದು ನಾನು ವನಕೆ ಬರಬೇಡೆಂದು.
ಕಾಡೆಂದರಾಯ್ತು, ಬಾಲೆಯರ ಎದೆಯು
ಮೊಲದ ಕರುಳಾಗುವುದು; ಅರಳಿಯೆಲೆಯಾಗುವುದು.
ನಾನಿರಲು ಭಯವೇಕೆ ರಮಣಿ!

ಸಾವಿತ್ರಿ— ಭಯವಿಲ್ಲ,
ನೀರ! ಭಯವಿಲ್ಲ. [ಸ್ವಗತ] ನಿನಗಾಗಿ ಭಯವು,
ನಿನಗಾಗಿಯುಬ್ಬೆಗವು. ನಿನಗಾಗಿ ಎದೆಯು
ಹಾರುತಿದೆ, ರಮಣ, ನೀನರಿಯೆ.

ಸತ್ಯವಾನ್— ಸಾವಿತ್ರಿ
ನೀರಡಿಕೆಯಾಗುತಿದೆ. ನೋಡಲ್ಲಿ, ದೂರದೊಳು
ಮೊರೆಮೊರೆದು ಹರಿಯುತಿಹ ತಿಳಿನೀರ ವಾಹಿನಿಯ
ತೀರವನು ಸೇರಿ ನೀರ್ಕುಡಿದು ವಿಶ್ರಮಿಸಿ
ಕೊಳ್ಳೋಣ ಬಾ ನೀರೆ!

ಸಾವಿತ್ರಿ— [ಸ್ವಗತ] ಮಚ್ಚರದ ನೇಸರಿದು!
ಕರುಣೆಯಿಲ್ಲದ ಕಾಲಚಕ್ರವಿದು! ಹೇ ದೇವ,
ಹೇಗಾದರೂ ಎನ್ನ ಪತಿಯ ಕಾಪಾಡು.
ಪರಮೇಶ, ಪತಿವ್ರತೆಗೆ ಪತಿಭಿಕ್ಷೆಯನು ನೀಡು!

[ತೆರಳುವರು, ಪರದೆ ಬೀಳುವುದು.]

ದೃಶ್ಯ ೩

[ಅದೇ ಅರಣ್ಯ. ಸಂಧ್ಯಾಕಾಲದ ಸಮಯ. ಯಮದೂತ ಯಕ್ಷ ಬರುವರು.]

ದೂತ— ಬೈಗಾಗುತಿದೆ ನೋಡು. ನಮ್ಮ ಕಜ್ಜದ ಹೊತ್ತು ಬಳಿಯಾಗುತಿದೆ ಯಕ್ಷ.

ಯಕ್ಷ— ಮುದ್ದಾದ ಪ್ರೇಮಿಗಳು! ಶುದ್ಧಾತ್ಮರಾಗಿಹರು!

ದೂತ— ಹೌದು! ಆದರೇಂ? ಯಮನೂರು ದಯೆಯ ಬೀಡಲ್ಲ. ನಿಷ್ಪಕ್ಷಪಾತವಾಗಿಹ ಧರ್ಮದೂರು. ಯಮಪಾಶ ಕಂಬನಿಗೆ ಕರಗುವಂತಹುದಲ್ಲ. ರೋದನಕೆ ಮರುಳಾಗದೆಂದಿಗೂ. ಸಂಖ್ಯೆಯಿಲ್ಲದ ವಿಧವೆಯರ ಕಣ್ಣಾಸೀರಿನೊಳು ನಲಿಸಲಿದು ಮಜ್ಜನಂಗೈದ ಪಾಶವದು. ಗಣನೆಯಿಲ್ಲದ ಮಾತೆಯರ ದುಃಖವಾಹಿನಿಯೊಳಾಳ್ದು ಕಲ್ಲಾದ ಪಾಶವದು. ಕೋಟಿ ವೀರರ ರಕ್ತವಂ ಕುಡಿದು ಕೊಬ್ಬಿರುವ ಪಾಶ. ಶತಕೋಟಿ ನೀರೆಯರ ಶಾಪಗಳ ಸಹಿಸಿ ಪಾಷಾಣವಾಗಿಹ ಪಾಶ. ಋಷಿವರರ, ಯೋಗಿಗಳ, ಅವತಾರಪುರುಷರನು ವಿನಯ ಭಕ್ತಿಗಳಿಂದ ಎಳೆದೊಯ್ದ ಪಾಶವದು. ಇಂಥಿರುವುದೀ ನೀರ ನೀರೆಯರ ಗೋಳಿಗಂಜುವುದೆ?

ಯಕ್ಷ— ಯಾರೊ ಬರುತಿಹರಲ್ಲಿ! ವೃಕ್ಷಗಳ ಮರೆಯಲ್ಲಿ ಅಡಗೋಣ!

ದೂತ— ನಿಲ್ಲಲ್ಲಿ ಯಕ್ಷ. ಅದೃಶ್ಯರಾವುಗಳು. ಅಶ್ರುತವು ಎಮ್ಮ ನುಡಿ. ಅವರೇ ಬರುತಿಹರು. ಅರುಗಾಗಿ ನಿಲ್ಲು. [ಪಕ್ಕಕ್ಕೆ ಹೋಗುವರು.]

[ಸತ್ಯವಾನ್ ಸಾವಿತ್ರಿಯ ಕೈ ಹಿಡಿದು ಬರುವನು.]

ಸತ್ಯವಾನ್— ಪ್ರಿಯತಮೆ, ಸಂಜೆ ಸನ್ನಿಹಿತವಾಗುತಿದೆ.
ನೋಡಲ್ಲಿ, ಭಾಸ್ಕರನು ತಸ್ಕರನ ತೆರದಿಂದ
ಅಸ್ತಗಿರಿಯ ಶಿಖರದಲ್ಲಿಳಿದಿಳಿದು ಹೋಗು
ತಿಹನು. ನೋಡದೋ ಸಂಜೆವೆಣ್ಣೆರಚಿರುವ
ಕುಂಕುಮದ ಓಕಳಿಯು ಹೋಲುವಾ ಮುಗಿಲೊಡ್ಡು!
ಹಿಂದಕಾಗುವೆ ಏಕೆ? ಬಹಳ ಬಳಲಿದೆ ಇಂದು.
ನಾನಿನ್ನ ಕರೆತಂದುದೇ ತಪ್ಪು.

ಸಾವಿತ್ರಿ— ಪ್ರಾಣೇಶ,
ಪತಿಯು ಪದದೊಳು ನಡೆವ ಸತಿಗೆ ಬಳಲಿಕೆ ಎಲ್ಲಿ?
ಕಷ್ಟವೆ ಮಹಾಪ್ರಸಾದ ಎಂದು ತಿಳಿದಿರುವೆ
ನಾನು.

ಸತ್ಯವಾನ್— ಆ ಜಿಂಕೆಗಳ ಗುಂಪ ನೋಡಿದೆಯ
ತರಳೆ! ಅಂಜದೇ ಬೆದರದೇ ಕತ್ತೆತ್ತಿ
ನಮ್ಮನೇ ನೋಡುತಿವೆ ನೋಡು.

ಸಾವಿತ್ರಿ— ಸತ್ಯೇಂದ್ರ,
ಪಕ್ಕದೊಳು ಹುಲಿಯಿದ್ದರದನು ಅವು ಬಲ್ಲುವೇ?
ಯಾರು ಬಲ್ಲರು? ನಾವು ಅವರ ತಿಳಿವಂತೆಯೇ
ಅವುಗಳೆಮ್ಮನು ತಿಳಿಯುವುವೊ ಏನೊ!

ಸತ್ಯವಾನ್— ಸಾವಿತ್ರಿ
ಇದ್ದಕಿದ್ದಂತೆ ತಲೆ ತಿರುಗುತಿಹುದಲ್ಲ!
ಕಾರಣವನರಿಯೆ, ಸ್ವಲ್ಪ ಹಿಡಿದುಕೊ ಎನ್ನ.

[ಸಾವಿತ್ರಿ ಹಿಡಿದುಕೊಳ್ಳುವಳು.]

ಸಾವಿತ್ರಿ— [ಸ್ವಗತ] ಹೇ ದೇವ, ಹೇ ದೇವ, ಪತಿಯು ಕಾಪಾಡು
ನಿರ್ಗತಿಕಳಾಗಿಹೆನು. [ಗಟ್ಟಿಯಾಗಿ] ಸತ್ಯೇಂದ್ರ!

ಸತ್ಯವಾನ್— ತಲೆನೋವು ಹೆಚ್ಚುತ್ತಲಿದೆ ರಮಣಿ; ಮಲಗುವಂ
ತಾಗುತಿದೆ. ಒರಗಿಕೊಳ್ಳುವೆ ಸ್ವಲ್ಪ ಸಾವಿತ್ರಿ.
[ಸಾವಿತ್ರಿಯ ತೊಡೆಯ ಮೇಲೆ ತಲೆಯಿಟ್ಟು ಮಲಗುವನು.]
ನಿನ್ನಂಕವೆನಗಿಂದು ತಲೆಗಿಂಬು. ನಾಚಿಗೆಯೆ
ಸಾವಿತ್ರಿ ನಿನಗೆ.

ಸಾವಿತ್ರಿ— ಇಲ್ಲ, ಮಲಗೆನ್ನಿನಿಯ.
[ಸ್ವಗತ] ಶಿವ ಶಿವಾ ಮೃತ್ಯುವಿನ ಮುಂದೆಯೂ ನಾಚಿಗೆಯೆ?
[ಗಟ್ಟಿಯಾಗಿ] ಪ್ರಿಯತಮ, ಏನಾಗುತಿದೆ ಹೇಳು.

ಸತ್ಯವಾನ್— ಏನಿಲ್ಲ
ಗಾಢ ನಿದ್ದೆಯು ಬರುತಲಿದೆ ರಮಣಿ.

ಸಾವಿತ್ರಿ— ಮಲಗು
ಸತ್ಯೇಂದ್ರ. [ಸ್ವಗತ] ಜವನಿದ್ದೆಯಾಗದಿರಲೀ ನಿದ್ದೆ!
[ಗಟ್ಟಿಯಾಗಿ]
ನಾನು ತಲೆಯುಜ್ಜುವೆನು, ಮಲಗು. [ಮಲಗುವನು.]
ಎಲೆ ವನಸ್ಥಳಗಳಿರ,
ಎಲೆ ನೀಲ ಗಗನವೇ, ಎಲೆ ತಾಯೆ ಭೂದೇವಿ,
ಕರುಣಮಯ ನಿರ್ಜರರೆ ಎನ್ನ ನೆರವಿಗೆ ಬನ್ನಿ.
ನಿಮ್ಮ ಆಶೀರ್ವಾದಗಳ ತನ್ನಿ. ಎನ್ನೆದೆಯ
ಜೀವದಂಬುಧಿಯಿಂದು ಬತ್ತಿಹೋಗುವ ಕಾಲ
ಬಂದಿಹುದು. ಚೈತನ್ಯಮಯರಲ್ಲವೇ ನೀವು?
ಜಡರಲ್ಲ, ಜಡರಲ್ಲ, ನಿಮಗು ವೇದನೆಯುಂಟು!
ಗೊರವಂಕವೇ ಎನ್ನ ದುಃಖವನು ಲೆಕ್ಕಿಸದೆ
ಬರಿದೆ ಹಾಡುವೆ ಏಕೆ! ಕೋಗಿಲೆಯೆ ಮೃತ್ಯುವ
ನ್ನೋಡಿಸುವ ಮಂತ್ರವನು ಜಪಿಸು. ಪತಿವ್ರತಾ
ಧರ್ಮವೇ ಬಂದೆನ್ನ ಕಾಪಾಡು. ಸತ್ಯವೇ
ಸತ್ಯವಾನನ ಸಖನೇ ಬಾ ಬೇಗ ಕಾಪಾಡು.
ತರು ಗುಲ್ಮ ಲತೆಗಳಿರ, ವನಗಳಿರ, ಬಂದೆನ್ನ
ರಕ್ಷಿಸಿರಿ. [ಬಿಸುಸುಯ್ದು] ಎನ್ನ ಗೋಳನು ಕಂಡು
ಮರುಗುವವ
ರಾರಿಲ್ಲ! ವಿಶ್ವವೆ ಅಲಕ್ಷ್ಯದಿಂದಿಹುದು!
ಸತ್ಯೇಂದ್ರ ಮಾತಾಡು! ಸತ್ಯವಾನ್ ಮಾತಾಡು!
ಪರಮೇಶ! ಪರಮೇಶ! ಕಾಪಾಡು! ಕಾಪಾಡು!

[ಪರದೆ ಬೀಳುವುದು.]

ದೃಶ್ಯ ೪

[ಆಕಾಶ ಮಾರ್ಗ. ಯಕ್ಷ, ಯಮದೂತರ ಪ್ರವೇಶ.]

ದೂತ— ನನ್ನಿಂದಸಾಧ್ಯ! ನನ್ನಿಂದಸಾಧ್ಯವದು
ಯಕ್ಷ. ಬಿರುಗಾಳಿಯಲಿ ಸಿಕ್ಕಿ ತೂರಾಡುವಾ
ತರಗೆಲೆಯ ತೆರನಾದೆ ಹದಿಬದೆಯ ಜ್ವಾಲೆಯೊಳು
ಸಿಕ್ಕಿ. ಸಾಕಪ್ಪ! ಸಾಕಿನ್ನು! ಜೀವರನೆನಿತೊ
ಕೊಂಡೊಯ್ದೆನಾದರೂ ಈ ಪರಿಯ ಜೀವರನು
ಕಂಡಿಲ್ಲ. ಸಾಕಪ್ಪ. ಸಾಕಿನ್ನು!

ಯಕ್ಷ— ಏನಾಯ್ತು,
ಯಮದೂತ, ಹೇಳಬಾರದೆ ಎನ್ನ ಕೂಡೆ?

ದೂತ— ಮೂರು ಸಲ ಯತ್ನಿಸಿದೆ ಅವಳ ಬಳಿ ಇದ್ದ
ಸತ್ಯವಾನನ ಆತ್ಮವನ್ನೆಳೆಯಲೆಂದು.
ಅವಳ ಓಜೆಯ ಉರಿಯ ಸುಳಿಯಲ್ಲಿ ಬಿದ್ದು
ಬೆಂದು ಬಾಡಿದೆನಯ್ಯ! ನನ್ನಿಂದಸಾಧ್ಯ!

ಯಕ್ಷ— ಮತ್ತೇನು ಮಾಡಬೇಕೆಂದಿರುವೆ?

ದೂತ— ಮತ್ತೇನು?
ಯಮರಾಯನಲ್ಲಿಗೇ ಓಡುವೆನು!

ಯಕ್ಷ— ಓಡು,
ಬೇಗೋಡು! ನಾನಿಲ್ಲಿಯೇ ಕಾದು ಕುಳಿತಿರುವೆ,
ನೀ ಬರುವತನಕ. ಈ ದಿಕ್ಕಿನಲ್ಲೋಡು
ಯಮಪುರಿಗೆ ಹತ್ತಿರವು. ಬೇಗೋಡು! ಓಡು!

[ಪರದೆ ಬೀಳುವುದು.]

ಉದ್ಧಾರ.

ಮೈಸೂರು ಲ್ಯಾನ್ಸ್‌ಡೌನ್ ರಸ್ತೆಯಿಂದ ಕಾರಂಜಿಕೆರೆಯ ಕಡೆಗೆ ಒಂದು ಮೋಟಾರು ಬಹುವೇಗವಾಗಿ ಹೋಗುತ್ತಿತ್ತು. ಅದರಲ್ಲಿದ್ದವರು ಮೂವರು : ನಡೆಸುವವನೊಬ್ಬನು ; ಒಬ್ಬ ಯುವಕ ; ಒಬ್ಬ ಯುವತಿ. ಯುವಕನು ಹಾಲುಗಲ್ಲಿನಲ್ಲಿ ಕಡೆದ ಪ್ರತಿಮೆಯಂತೆ ಎತ್ತರವಾಗಿ ದೃಢಕಾಯನಾಗಿ ಸುಂದರನಾಗಿದ್ದನು. ಯುವತಿಯು ಚಿತ್ರದ ಬೊಂಬೆಯಂತೆ ಮನೋಹರಳಾಗಿದ್ದಳು. ಒಂದುತೆರದ ಬೆಡಗಿನ ವಿಲಾಸವು ಅವರ ಸಂಬಂಧವನ್ನು ಸೂಚಿಸುತ್ತಿತ್ತು. ಬೇರೆ ಯಾವುದೂ ಅವನಿಗೆ ಬೇಕಿಲ್ಲ ;. ಅವಳನ್ನು ನೋಡ ನೋಡುತ್ತ, ಆಶೆಯು ದುರ್ದಮನೀಯವಾಗಿ, ಹಾಗೆ ಆದಾಗ ಆಕಾಂಕ್ಷೆಗೊಂಡು ನೋಡುವಂತೆ ಅವನು ಅವಳನ್ನು ನೋಡುತ್ತಿದ್ದನು. ಗಂಡಹೆಂಡಿರಲ್ಲಿ ಈ ವಿಧವಾದ ಆಕಾಂಕ್ಷೆಯು ಅಪರೂಪ. ದಂಪತಿಗಳಲ್ಲಿನ ಪರಸ್ಪರ ಬಳಕೆಯ ಅನುರಾಗಕ್ಕೂ, ದಾಹದಂತೆ, ದಾವಾಗ್ನಿಯ ಜ್ವಾಲೆಯಂತೆ, ಹೃದಯವನ್ನು ತಳಮಳಗೊಳಿಸಿ ಉರಿಸುವ ಈ ಮೋಹಕ್ಕೂ ಎಲ್ಲಿಯ ಹೋಲಿಕೆ! ಹೆಂಡತಿಯು ಗಂಡನಿಗೆ ಸೇರಿದ ವಸ್ತು ; ಅವನ ಪೂರ್ಣಾಧಿಕಾರದಲ್ಲಿರುವ ಸಾಮಗ್ರಿ. ಆದುದರಿಂದ ಎದುರಿಗಿರುವ ಆಕೆಯ ಸೌಂದರ್ಯದಲ್ಲಿ ಅವನ ಮನಸ್ಸು ಹೀಗೆ ನಿರ್ವಿಶೇಷವಾಗಿ ಕಲೆತು, ವಿನಷ್ಟವಾಗಿ ಹೋಗಿಬಿಡುವುದಿಲ್ಲ. ಅಲ್ಲಿ ಯಾವ ಅವಸರವೂ ಇಲ್ಲ ; ಮುಗ್ಧಮೋಹನತೆ ಕಡಮೆ. ಆದರೆ ಇವಳ ಬೆಡಗು, ಸೆಡಕು, ಬಿಂಕ, ಬಿನ್ನಾಣ, ಜಯಪೂರ್ಣವಾದ ಕೊಂಕಿನ ಕುಡಿನೋಟ? ಮೆಚ್ಚಿಗೆ ಬೇಕೆಂದು ತೀವ್ರವಾದ ಆಶೆಯಿದ್ದರೂ ಮೆಚ್ಚಿ ಸೋತಿರುವವನನ್ನು ಕಂಡು ತೋರುವ ಹುಸಿನಗೆ–ತಿರಸ್ಕಾರ? ಪ್ರಯತ್ನವೇ ಇಲ್ಲದೆ ಜನರ ಚಿತ್ತಾಕರ್ಷಣೆಮಾಡಿ ಬಂದಿಹಿಡಿಯುವ ಶಕ್ತಿಯು ತನ್ನ ರೂಪಿಗೆ ಇದೆಯೆಂದು ಅವಳು ತಿಳಿದೇ ಇದ್ದರೂ ಸ್ವಪ್ರಯತ್ನದಿಂದ, ತೋರಿಸಕೂಡದೆಂದು ಆಚರಿಸುವ ದಮನವೃತ್ತಿಯಿಂದ,—ಅದನ್ನು ಪ್ರಕಾಶಪಡಿಸಲು ಎಷ್ಟು ಆಸೆ ಅವಳಿಗೆ! ಅವನು ತನ್ನಕಡೆ ನೋಡುವಾಗ ಅವಳು ಮುಖವನ್ನು ಬೇರತ್ತ ತಿರುಗಿಸುವಳು ; ಅನ್ಯಮನಸ್ಕಳಾಗಿರುವಂತೆ ನಟಿಸುವಳು. ಅವನು ನೋಡುವುದನ್ನು ನಿಲ್ಲಿಸಿದ ಕ್ಷಣವೇ ಅವನತ್ತ ನೋಡುವಳು. ತಪ್ತಳಾಗಿರುವಳಂತೆ ಕೈಯಲ್ಲಿನ ಬಣ್ಣದ ಬೀಸಣಿಗೆಯೊಂದರಿಂದ ಬೀಸಿಕೊಳ್ಳುವಳು ; ಇಲ್ಲವೆ ಜಡೆಯನ್ನು ಭುಜದ ಮೇಲಕ್ಕೆಳೆದುಕೊಳ್ಳುವಳು ; ಕೈಬಳೆಗಳನ್ನು ತಿರುಗಿಸುತ್ತ ಜಿಲಜಿಲ ಶಬ್ದಮಾಡಿ ಕಟಾಕ್ಷವನ್ನು ಸುತ್ತ ಬೀರುವಳು ; ಅವನು ಉತ್ತರ ಕೊಡಹೋದರೆ ದಾರಿಯಲ್ಲಿ

ಕಾಣುವ ಅನ್ಯವಸ್ತುಗಳನ್ನೂ ದೃಶ್ಯಗಳನ್ನೂ ತೋರಿಸಿ ಅವನ ಮಾತು ಹೊರಗೆ ಬರದಹಾಗೆ ಮಾಡುವಳು. ಹೀಗೆ ಅವರಿಬ್ಬರೂ ಚಪಲರಾಗಿರುವುದನ್ನು ಕದ್ದು ನೋಡುತ್ತ ಉನ್ಮತ್ತನಾಗಿ ಗಾಡಿನಡೆಸುವವನು ಹೇಗೆಹೇಗೊ ವಕ್ರವಕ್ರವಾಗಿ ಗಾಡಿಯನ್ನು ನಡೆಸುತ್ತ ಹೋಗುತ್ತಿದ್ದನು.

ಇದ್ದಕ್ಕಿದ್ದಹಾಗೆ, ಅಡ್ಡಲಾಗಿ ಬಂದ ಯಾವುದೋ ಒಂದು ವಸ್ತುವನ್ನು ಎಡವಿ, ಮೊಟಾರು ಮೇಲೆದ್ದು ಕೆಳಗಿಳಿದು ಕಿರ್ರೆಂದು ಕರ್ರೆಂದು ನಿಂತುಹೋಯಿತು. ಅದೇಕ್ಷಣದಲ್ಲಿಯೆ ಸಣ್ಣಹುಡುಗನೊಬ್ಬನು ಕಿಟಾರನೆ ಕಿರಚಿಕೊಂಡನು. ಅವನ ಅಳುವು ಸ್ವಲ್ಪಕೇಳಿಸಿ, ಅದೂ ನಿಂತುಹೋಯಿತು. ಗಾಡಿನಡೆಸುವವನು ಕೆಲಸ ಕೆಟ್ಟುಹೋಯಿತೆಂದು ತಿಳಿದವನು ಕೆಳಗೆ ನೋಡಿದನು :—ಏಳುವರುಷದ ಹುಡುಗ ನೊಬ್ಬನು ಮೈಯೆಲ್ಲ ರಕ್ತಪ್ಲಾವಿತನಾಗಿ ಗಾಡಿಯ ಕೆಳಗೆ ಸಿಕ್ಕಿಬಿಟ್ಟಿದ್ದನು. ಅವನಿಗೆ ಭಯದಿಂದ ಮೈನಡುಕಬಂತು. ಪೋಲೀಸಿನವರ ಕೈಯಿಂದ ತಪ್ಪಿಸಿಕೊಂಡು ಗಾಡಿ ಯನ್ನು ಬೇರೆಕಡೆಗೆ ತೆಗೆದುಕೊಂಡು ಹೋಗಬೇಕೆಂದು ಪ್ರಯತ್ನಿಸುವಷ್ಟರಲ್ಲಿಯೇ, ಸುತ್ತಮುತ್ತಲಿಂದ ಜನರು ಅಲ್ಲಿಗೆ ಬಂದರು. ಗಾಡಿಯಲ್ಲಿದ್ದವರೂ ವಿಷಾದದಿಂದ ಈವರೆಗೆ ಕೆಳಗಿಳಿದಿದ್ದರು. ಎಲ್ಲರಿಗೂ ಪ್ರಸಂಗದ ತಿಳಿವು ಬಂತು. ಯುವತಿಯು ಮಗುವನ್ನು ನೋಡಿದಳು: ಮಗುವಿನ ವಿಷಯದಲ್ಲಿ ಬಹುವಾಗಿ ಮರುಕ ವುಂಟಾಯಿತು.

ಮೋಟಾರು ನಡೆಸುವವನಿಗೆ ಮೋಟಾರನ್ನು ಮುಂದೆ ತೆಗೆದುಕೊಂಡು ಹೋಗುವ ಯತ್ನಮಾಡಕೂಡದೆಂದು ಅವಳು ಪ್ರತಿಷೇಧಿಸಿದಳು. ಯುವಕನೂ ಇತರರ ಜೊತೆಯಲ್ಲಿ ನಿಂತು ಈ ದೃಶ್ಯವನ್ನು ನೋಡುತ್ತಿದ್ದನು. ಬಂದವರಲ್ಲಿ ಅನೇಕರು ಅವಳನ್ನು ಗುರುತಿಸಿದರು. ಕೆಲವರು ತಮ್ಮತಮ್ಮೊಳಗೆ ನಕ್ಕುಕೊಂಡರು. ಒಬ್ಬ ರಿನ್ನೊಬ್ಬರಕಡೆ ತಿರುಗಿ ಅರ್ಥಗರ್ಭಿತವಾಗಿ ಹುಬ್ಬುಹೊಡೆದರು ; ಮತ್ತೊಬ್ಬನು ದೂರದಿಂದ ಬೈಸಿಕಲ್ಲಿನಮೇಲೆ ಬಂದವನು, ಅವಳನ್ನು ನೋಡಿ ಇಳಿದು, ಗುರುತಿಸಿ, ಆಶ್ಚರ್ಯಗೊಂಡವನಹಾಗೆ ನಟಿಸಿ ಉತ್ತರಕ್ಷಣದಲ್ಲಿಯೆ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ತುಟಿಗಳನ್ನು ಸೇರಿಸಿ ಎಳೆದು, ಮೀಸೆಗಳನ್ನು ತಿರುವುತ್ತ 'ಶೀಕಿ'ನ ಮೇಲೆ ನಿಂತನು. ಅವಳು ಅದನ್ನು ಬಹು ಕಠಿಣ ದೃಷ್ಟಿಯಿಂದ ನೋಡಿದಳು. ಇನ್ನು ಅಲ್ಲಿರುವುದು ಸರಿಯಲ್ಲವೆಂದುಕೊಂಡು ಅವನು ಅಲ್ಲಿಂದ ಹೊರಟುಹೋದನು.

ಇತ್ತ, ಹುಡುಗನ ಸ್ಥಿತಿಯು ಅವಳ ಹೃದಯವನ್ನು ಹೇಗೆ ಕರಗಿಸಿತೋ! ಆದ ಕಷ್ಟವಾಗಲೆಂದೂ, ಬರುವ ತೊಂದರೆಗಳೆಲ್ಲ ಬರಲೆಂದೂ ಅವಳು ಸಿರ್ಧರಮಾಡಿ

ಕೊಂಡಹಾಗೆ ಕಾಣುತ್ತದೆ. ಅಲ್ಲಿಗೆ ಬಂದಿದ್ದ ಪೋಲೀಸು ಇನ್ಸ್‌ಪೆಕ್ಟರು ಕೇಳುವ ಪ್ರಶ್ನೆಗಳಿಗೆಲ್ಲ ತಕ್ಕ ಉತ್ತರಕೊಡೆಂದು ತನ್ನ ಜೊತೆಯವನಿಗೆ ಹೇಳಿ ತಾನು ಆ ಹುಡುಗನನ್ನು ಮೋಟಾರಿನಲ್ಲಿ ಮಲಗಿಸಿಕೊಂಡು ಆಸ್ಪತ್ರೆಗೆ ತೆಗೆದುಕೊಂಡು ಹೋದಳು. ಮುಖದಲ್ಲಿ ಈಗ ಹುಸಿಯುಲ್ಲಾಸವಾಗಲಿ, ವಿಡಂಬನ ಸೂಚನೆಯಾಗಲಿ, ಕೃತ್ರಿಮ ಕಟಾಕ್ಷ ವಿಕ್ಷೇಪವಾಗಲಿ ಇರಲಿಲ್ಲ. ಹುಡುಗನನ್ನು ತನ್ನ ತೊಡೆಯಮೇಲೆ ಮಲಗಿಸಿಕೊಂಡಿದ್ದಾಳೆ. ಶ್ವಾಸವಾಡುತ್ತಿರುವುದೊ ಇಲ್ಲವೋ ಎಂದು ನಿಮಿಷನಿಮಿಷವೂ ಪರೀಕ್ಷೆಮಾಡಿ ಅತಿ ಕಾತರಳಾಗಿದ್ದಾಳೆ; ಮೆಲ್ಲಮೆಲ್ಲಗೆ ತನ್ನ ಕೈವಸ್ತ್ರದಿಂದ ಅವನ ಮುಖದಮೇಲೆ ಗಾಳಿ ಹಾಕುತ್ತಿದ್ದಾಳೆ. ಅವನ ಮುಖದಮೇಲಿನಿಂದ ತಲೆಯ ಕೂದಲನ್ನು ಮೆಲ್ಲಗೆ ರಕ್ತದಿಂದ ಬಿಡಿಸಿ ಮೇಲಕ್ಕೆತ್ತುತ್ತಿದ್ದಾಳೆ. ಮನಸ್ಸಿನಲ್ಲಿ ಯಾವುದೋ ಒಂದುವಿಧವಾದ ಮಾರ್ಪು ಬಂದು ಅವಳ ಸರ್ವಭಾವಗಳನ್ನೂ ಹೊಸತರಹದ ಶಕ್ತಿಪ್ರಭಾವವೊಂದರಿಂದ ಆಳತೊಡಗಿದೆ. ಈ ತೆರನಾದ ಎಷ್ಟೋ ದೃಶ್ಯಗಳನ್ನು ಹಿಂದೆ ನೋಡಿದ್ದಳು; ಅವಳ ಮನಸ್ಸು ಹೀಗೆ ಕರಗಿರಲಿಲ್ಲ. ಹಿಂದೆ, ಆರುತಿಂಗಳುಗಳಿಗೆ ಮುಂಚೆ, ಹೀಗೆಯೆ ಇದೇ ಮೋಟಾರಿನಲ್ಲಿ ಹೋಗುತ್ತಿದ್ದಾಗ ಹುಡುಗನೊಬ್ಬನಿಗೆ ಪೆಟ್ಟಾಗಲು, ಅದರ ವಿಷಯವಾಗಿ ಚಿಂತೆಯನ್ನೇ ಮಾಡದೆ, ಜನರು ಸಂದಣಿಸುವುದರೊಳಗಾಗಿ ಆ ಸ್ಥಳದಿಂದ ಹೊರಟುಹೋಗಿದ್ದಳು; ಯಾವವಿಧವಾದ ಖೇದ ಪಶ್ಚಾತ್ತಾಪಗಳೂ ಅವಳಲ್ಲಿ ಉದಯಿಸಿರಲಿಲ್ಲ. ಇಂದು ಈ ಮಾರ್ಪಾಡು ಅವಳಲ್ಲಿ ಹೇಗಾಯಿತೋ-ಏಕಾಯಿತೋ-ಅರಿಯಬಲ್ಲವರಾರು?

ಆಸ್ಪತ್ರೆಯ ಬಾಗಿಲು ತೆರೆದಿತ್ತು. ಬರುವ ಜನರು ಬರುತ್ತಿದ್ದರು; ಹೋಗುವರು ಹೋಗುತ್ತಿದ್ದರು. ಅವಳ ಮನಸ್ಸು ಇವೊಂದರ ಕಡೆಗೂ ಹೋಗಲಿಲ್ಲ. ಹುಡುಗನನ್ನು ಎತ್ತಿಕೊಂಡು ಮೆಲ್ಲಗೆ ಡಾಕ್ಟರಿರುವಲ್ಲಿಗೆ ಹೋದಳು. ಡಾಕ್ಟರ ಮುಖದಲ್ಲಿ ವಿಸ್ಮಯ: "ಇವಳು! ಇಲ್ಲಿ! ಕೈಯಲ್ಲಿ ಈ ಮಗು! ಆಶ್ಚರ್ಯ!" ಎಂದು ಅನ್ನುವಂತಿತ್ತು. ಒಂದು ವಿಧವಾದ ಉಪಚಾರ ಹೇಳಿ ಆತನು ಅವಳನ್ನು ಕೂಡುವಂತೆ ಹೇಳಿದನು. ಉಪಚಾರದಲ್ಲಿ ಹೆಚ್ಚಿನ ಗೌರವವಿರಲಿಲ್ಲ. ಸಾಮಾನ್ಯವಾಗಿ ಇಂಥ ಉಪಚಾರಗಳಲ್ಲಿ ಉಲ್ಲಾಸವನ್ನು ತೋರಿಸುವ ಸ್ವಭಾವದವಳು. ಅವಳ ಜೀವನಕ್ಕೆ ಆವಶ್ಯಕವಾದ ಸಾಹಾಯ್ಯಗಳಲ್ಲಿ ಈ ತೆರನಾದ ಆದರವೂ ಒಂದು ಮುಖ್ಯ ಸಾಹಾಯ್ಯವಾಗಿತ್ತು. ಆದರೂ, ಇಂದು ಅವಳಿಗೆ ಅದರಿಂದ ಸಂತೋಷವಾದ ಹಾಗೆ ಕಾಣಲಿಲ್ಲ. ಅವಳು "ಡಾಕ್ಟರ್ ಸಾಹೇಬರೆ, ಉಪಚಾರಮಾಡಿಸಿಕೊಳ್ಳುವುದಕ್ಕೆ ನಾನು ಇಲ್ಲಿಗೆ ಬರಲಿಲ್ಲ; ಅಂಥ ಆವಶ್ಯಕತೆ ಇನ್ನೂ ಬಂದಿಲ್ಲ. ದಯವಿಟ್ಟು

ಈ ಮಗುವಿನ ಸ್ಥಿತಿಯನ್ನು ಗಮನಿಸಿ ಇದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಿ'' ಎಂದು ವಿನಯದಿಂದ ಕೇಳಿದಳು. ಡಾಕ್ಟರು ಸ್ವಲ್ಪ ಅಸುಖಿಯಾದನು. ಆದರೂ ಕರ್ತವ್ಯಪರಾಙ್ಮುಖನಾಗದೆ ತಕ್ಷಣವೇ ಮಗುವನ್ನು ಪರೀಕ್ಷಿಸಿ, ರಕ್ತವನ್ನು ತೊಳೆದು, ತಲೆಗೆ ನೀರುತಟ್ಟಿ, ಶೈತ್ಯೋಪಚಾರ ಮಾಡಿಸಿ, ಹಾಸಿಗೆಯಮೇಲೆ ಅದನ್ನು ಮಲಗಿಸಿದನು. ಹುಡುಗನು ಕಣ್ಣುಬಿಟ್ಟು ನೋಡಿದನು. ಕೂಡಲೆ ಹಾಗೆಯೇ ನಿಶ್ಶಕ್ತಿಯಿಂದ ಮುಚ್ಚಿಕೊಂಡನು. ಆ ಕಣ್ಣುಗಳನ್ನು ನೋಡಿದೊಡನೆಯೇ ಅವು ಅವಳ ಹೃದಯದೊಳಹೊಕ್ಕು ಅಲ್ಲಿಯೇ ನಟ್ಟು ನಿಂತಂತಾಯಿತು. ಮಗು ಪುನಃ ಕಣ್ಣುಗಳನ್ನು ತೆರೆದು ಸುತ್ತಲೂ ನೋಡಿದನು. ಒಂದುಕಡೆ, ದೇಹದಲ್ಲಿ ನೋವು; ಹೇಳಲು ಶಕ್ತಿಸಾಲದು. ಕಣ್ಣುಗಳಲ್ಲಿ ನೀರುತುಂಬುತ್ತಿದೆ. ತುಟಿ ಕೆನ್ನೆಗಳು ಊದಿ ಬಾತುಕೊಂಡಿವೆ. ಈ ವಿಧವಾದ ಆವರಣ. ಎಲ್ಲರೂ ಅಪರಿಚಿತವ್ಯಕ್ತಿಗಳು. ಎಲ್ಲಕ್ಕೂ ಮಿಗಿಲಾರಿ ಶ್ರೀಮಂತಳಂತೆ ಕಾಣುತ್ತಿರುವ ಈ ಸ್ತ್ರೀ: ಎದುರಿಗೆ ಡಾಕ್ಟರು: ಇರುವುದೂ ತನ್ನ ಮನೆಯಲ್ಲಲ್ಲ. ಮೂಕನಹಾಗೆ ಸುತ್ತಲೂ ನೋಡುತ್ತಮಾತ್ರವಿದ್ದು ಪುನಃ ಕಣ್ಣುಗಳನ್ನು ಮುಚ್ಚಿಕೊಂಡು "ಅಮ್ಮಾ!'' ಎಂದನು. ಈ ಶಬ್ದವನ್ನು ಕೇಳಿದೊಡನೆಯೆ ಅವಳ ಹೃದಯದಲ್ಲಿ ಒಂದು ಹೊಸಭಾವದ, ಒಂದು ಹೊಸವೇದನೆಯ ಸಂಚಾರವಾಗಿ, ಇದುವರೆಗೆ ಧ್ವನಿಮಾಡದಿದ್ದ ಹೃದಯದೊಳತಂತ್ರಿಯೊಂದು ಧ್ವನಿಮಾಡತೊಡಗಿತು. ಹುಡುಗನ ಮೇಲೆ ಬಾಗಿ ಅವನ ಕೂದಲನ್ನು ನೇವರಿಸಿ, "ಮಗು, ನಿಮ್ಮ ತಾಯಿಯವರು ಇಲ್ಲಿ ಇಲ್ಲವಪ್ಪ. ನಿನಗೇನುಬೇಕು?'' ಎಂದಳು.

ಹುಡುಗನು "ನೀರು'' ಎಂದನು. ಡಾಕ್ಟರು ದಾದಿಯೊಬ್ಬಳಿಗೆ ಹೇಳಿ ಸ್ವಲ್ಪ ಸೋಡಾವಾಟರನ್ನು ತರಿಸಿಕೊಟ್ಟನು. ಇಷ್ಟರಲ್ಲಿ ಇನ್ನೊಬ್ಬ ಡಾಕ್ಟರು ಹತ್ತಿರ ಬಂದು ಮೊದಲನೆಯವನ ಮುಖವನ್ನು ನೋಡಿದನು. "ಇದೇನು? ಇವಳಿಗೆ ಈ ಹುಡುಗ ಎಲ್ಲಿ ಪರಿಚಯ? ಇವನು ಲಾಯರು ರಾಮಚಂದ್ರಯ್ಯನವರ ಮಗ; ಹೀಗೇಕೆ ಆಯಿತು? ಅವರ ಮನೆಯವರಾರೂ ಇಲ್ಲಿ ಏಕಿಲ್ಲ?'' ಇತ್ಯಾದಿಯಾಗಿ ಪ್ರಶ್ನೆಮಾಡಿದನು. ಡಾಕ್ಟರನು ತನ್ನ ಸಹಯೋಗಿಗೆ, ತನಗೆ ತಿಳಿದುಬಂದ ಮಟ್ಟಿಗೆ ಸಮಾಚಾರವನ್ನೆಲ್ಲಾ ತಿಳಿಸಿದನು. ಆಮೇಲೆ ರಾಮಚಂದ್ರಯ್ಯನವರ ಮನೆಗೂ ಸಮಾಚಾರ ಕಳುಹಿಸಲ್ಪಟ್ಟಿತು.

ಹುಡುಗನಿಗೆ ಜ್ವರಬಂದಿತ್ತು. ಅವನ ಹತ್ತಿರ ಯಾರೂ ಗದ್ದಲಮಾಡಕೂಡದೆಂದು ಡಾಕ್ಟರು ಹೇಳಿದನು. ಯುವತಿಯು ಅವನ ಅಪ್ಪಣೆಯನ್ನು ಪಡೆದು ಹೊರಟಳು. ಕೊಂಚದೂರ ಹೋದವಳು ಇನ್ನೊಂದುಸಲ ನೋಡಿಕೊಂಡು ಬರೋಣ

ವೆಂದು ಹಿಂದಿರುಗಿ, ಹುಡುಗನ ಹತ್ತಿರ ಹೋದಳು. ಅವನನ್ನು ಒಂ[illegible] ಮುದ್ದಿಕ್ಕ ಹೋಗಬೇಕೆನ್ನಿಸಲು ಹತ್ತಿರಹೋಗಿ ನಿಂತಳು. ಪುನಃ "ಆಗ[illegible], ಆಗದು, ನನಗೆ ಆ ಹಕ್ಕಿಲ್ಲ ; ನಾನು ಪಾಪಿಷ್ಠೆ" ಎಂದುಕೊಂಡು ಹಿಂದಕ್ಕೆ ಸರಿದಳು. ದಾದಿಯೊಬ್ಬಳ ಕೈಗೆ ೫ ರೂಪಾಯಿನ ನೋಟೊಂದನ್ನು ಕೊಟ್ಟು, "ಮಗುವನ್ನು ಸರಿಯಾಗಿ ನೋಡಿಕೊಳ್ಳಿ. ಅದಕ್ಕೆ ಜಾಗ್ರತೆಯಾಗಿ ವಾಸಿಯಾಗಿ ನೀವು ಅದಕ್ಕೆ ಎಲ್ಲಾ ಅನುಕೂಲಗಳನ್ನೂ ಕಲ್ಪಿಸಿಕೊಟ್ಟರೆ ನಿಮಗೆ ಇನಾಮು ಕೊಡುತ್ತೇನೆ." ಎಂದು ಹೇಳಿ ಹೊರಟುಹೋದಳು. ದಾದಿಯೂ ಒಪ್ಪಿಕೊಂಡಳು.

ತಮ್ಮ ಕರ್ತವ್ಯವನ್ನು ತಾವು ಮಾಡುವುದರಿಂದಲೇ ಅಧಿಕಪ್ರಯೋಜನವೂ ದೊರೆಯುವುದೆಂದು ತಿಳಿದರೆ, ಯಾರುತಾನೇ ಹೆಚ್ಚು ಆದರದಿಂದಲೂ ಮುತುವರ್ಜಿಯಿಂದಲೂ ಕೆಲಸಮಾಡುವುದಿಲ್ಲ ?

೨.

ರಾಮಚಂದ್ರಯ್ಯನವರ ಮನೆಗೆ ಈ ಸಮಾಚಾರವಾಗಲೇ ತಿಳಿದಿತ್ತು. ಲಾಯರ ಮಗ ನಾರಾಯಣನ ಜೊತೆಯಲ್ಲಿ ಹೋಗಿದ್ದ ಹುಡುಗನೊಬ್ಬನು, ಭಯದಿಂದ ಅವರಮನೆಗೆ ಹೋಗಿ ಆಗಲೇ ಸುದ್ದಿಯನ್ನು ತಲಪಿಸಿದ್ದನು. ಮನೆಯಲ್ಲಿ ಯಜಮಾನರು ಇರಲಿಲ್ಲ. ನಾರಾಯಣನ ತಾಯಿಯು ಕೂಡಲೆ ಗೋಳಿಡುತ್ತ "ಏನಾಯಿತೊ ಕಂದ, ಹಾಳಾದೋರು ಯಾರವೋಟಾರೊ ಅಪ್ಪ ಅದು, ಇನ್ನೇನು ಗತಿ, ನನ್ನ ಕಂದನೇನಾಗಿಹೋಗಿದ್ದಾನೋ ಕಾಣೆ" ಎಂದು ದುಃಖಿಸುತ್ತ ಆಳಿಗೆ ಹೇಳಿ ಗಾಡಿತರಿಸಿ ಆಸ್ಪತ್ರೆಗೆ ಹೋದಳು. ಹೋಗಿ ಮಗುವನ್ನು ನೋಡಿ ಇನ್ನಷ್ಟು ಪ್ರಲಾಪಿಸುತ್ತ ಕುಳಿತಳು. ಡಾಕ್ಟರು ಆಕೆಗೆ ಸಮಾಧಾನ ಹೇಳಿ ಎರಡು ಮೂರು ದಿನಗಳೊಳಗಾಗಿ ಮಗುವಿಗೆ ಗುಣವಾಗುವುದೆಂದೂ, ಚಿಂತಿಸತಕ್ಕದ್ದೇನೂ ಇಲ್ಲವೆಂದೂ ಹೇಳಿದರು. ರಾಮಚಂದ್ರಯ್ಯನವರೂ ಹೇಗೋ ಈ ಸಮಾಚಾರವನ್ನು ಕೇಳಿದವರು ಗಾಬರಿಯಿಂದ ಅಲ್ಲಿಗೆ ಬಂದು ಮಗುವನ್ನೂ ಡಾಕ್ಟರನ್ನೂ ತಮ್ಮ ಹೆಂಡತಿಯನ್ನೂ ನೋಡಿ, ಸಮಾಚಾರವನ್ನು ವಿಚಾರಿಸಲು ಚಂದ್ರಮುಖಿಯ ಮೋಟಾರಿನ ದೆಸೆಯಿಂದ ಹೀಗಾಯಿತೆಂಬುದನ್ನು ಕೇಳಿ ಕುಪಿತರಾಗಿ, ಅದಕ್ಕೆ ಅವಳಿಗೆ ತಕ್ಕ ಶಾಸ್ತಿ ಮಾಡಿಸುತ್ತೇನೆಂದು ನಿರ್ಧರದಿಂದ ಹೇಳಿದರು. ಅಲ್ಲಿದ್ದವರೆಲ್ಲರೂ ಅವಳ ಪಶ್ಚಾತ್ತಾಪದ ವಿಷಯವನ್ನು ಎಷ್ಟು ಒತ್ತಿಹೇಳಿದರೂ ಅಯ್ಯನವರಿಗೆ ಕೋಪ ವಿಳಿಯಲಿಲ್ಲ. ಹುಡುಗನನ್ನು ಗಾಡಿಯಲ್ಲಿ ಮನೆಗೆ ಕರೆದುಕೊಂಡು ಹೋಗುವೆನೆಂದು ಅವರು ಹೇಳಲು, ಡಾಕ್ಟರು ಹಾಗಾಗದೆಂದರು. ಅವನನ್ನು ಎರಡು ಮೂರು

ದಿನಗಳ ವರೆಗೂ ಕದಲಿಸಲಾಗದೆಂದೂ, ಗಾಯಗಳು ಸ್ವಲ್ಪ ಮಾಯದಿದ್ದರೆ ಪುನಃ ರಕ್ತ ನಷ್ಟವಾಗುವುದೆಂದೂ, ತಾವು ನಾರಾಯಣನನ್ನು ಸರ್ವವಿಧದಲ್ಲಿಯೂ ಎಚ್ಚರಿಕೆಯಿಂದ ನೋಡಿಕೊಳ್ಳುವುದಾಗಿಯೂ ಹೇಳಿದರು. ಅಯ್ಯನವರು ಊರಿನ ಪ್ರಸಿದ್ಧ ಲಾಯರು ; ಪ್ರಜಾಪ್ರಮುಖರಲ್ಲೊಬ್ಬರು ; ಭಾಗ್ಯವಂತರು ; ಅವರ ವಿಷಯದಲ್ಲಿ ಎಲ್ಲರಿಗೂ ಆದರವೇ. ಅವರಿಗೆ ಸಂಬಂಧಪಟ್ಟ ಕೆಲಸಗಳನ್ನು ಎಲ್ಲರೂ ಶಿರಸಾವಹಿಸಿಯೇ ಮಾಡುವರು.

೩.

ಚಂದ್ರಮುಖಿಯು ಮೈಸೂರಿಗೆ ನಾಲ್ಕುವರುಷಗಳಿಗೆ ಹಿಂದೆ ತಾನೆ—ಪುರದಿಂದ ಬಂದಿದ್ದ ವೇಶ್ಯೆ. ಬಹುಪ್ರಸಿದ್ಧಳು. ಷೋಕಿನವರೆಲ್ಲರಿಗೂ ಅವಳ ಮೇಲೆ ಕಣ್ಣು ; ಆದರೆ ಅವಳು ಜಂಬದವಳಾದುದರಿಂದಲೂ, ಬಹಳ ಐಶ್ವರ್ಯವಂತಳಾದುದರಿಂದಲೂ ಸುಲಭಳಲ್ಲದಿರಲು ಅನೇಕರಿಗೆ ಅವಳ ಮೇಲೆ ಕ್ರೋಧ. ನಜರುಬಾದಿಗೆ ಉತ್ತರದಲ್ಲಿ ಒಂದು ಭಾರಿಬಂಗಲೆಯಲ್ಲಿ ಅವಳಿರುತ್ತಿದ್ದಳು. ಸಮಸ್ತ ವಿಧದಲ್ಲಿಯೂ ಸುಸಜ್ಜಿತವಾದ ಅವಳ ಪ್ರಾಸಾದವು ಅವಳ ರೂಪಿಗೂ, ವೈಭವಕ್ಕೂ, ಐಶ್ವರ್ಯಕ್ಕೂ ತಕ್ಕ ಹಾಗೆ ಮನೋರಂಜಕವಾಗಿತ್ತು.

ಈದಿನ ಅವಳು ಮನೆಗೆ ಹೋದವಳು ದೀರ್ಘನಿಶ್ವಾಸವನ್ನು ಬಿಟ್ಟು ತನ್ನ ಉಪ್ಪರಿಗೆಯಲ್ಲಿನ ಒಂದು ಸೋಫಾದಮೇಲೆ ಕುಳಿತುಕೊಂಡಳನು. ದಾಸಿಯರು ಹತ್ತಿರ ಬಂದು ಎಂದಿನಂತೆ ಗಾಳಿ ಹಾಕಹೋದರು. ನಾಲ್ಕಾರು ಜನರಿಂದ ಗಾಳಿ ಹಾಕಿಸಿಕೊಳ್ಳುತ್ತಿದ್ದ ಚಂದ್ರಮುಖಿಯು ಇಂದು ಎಲ್ಲರನ್ನೂ ಹೊರಟು ಹೋಗಿ ಎಂದು ಹೇಳಿ ತಾನೇ ಕೈಗೆ ಬೀಸಣಿಗೆಯನ್ನು ತೆಗೆದುಕೊಂಡು ಬೀಸಿಕೊಳ್ಳಲಾರಂಭಿಸಿದಳು. ಬೆಳಗಾಗಿದ್ದ ಆ ಚಂದ್ರಮುಖಿಯು ನಾನೆಯೆ ? ಎಂದು ಎಷ್ಟೋಸಲ ಅಂದುಕೊಂಡಳು. ತನ್ನ ಜೀವನ ರೀತಿ ವಿಹಾರ ಪದ್ಧತಿಗಳೂ, ವೇಶ್ಯಾವಿಲಾಸಗಳೂ, ಕಸುಬಿನ ಸಂಪ್ರದಾಯ ವೃತ್ತಿಗಳೂ, ಇಂದು ಅಸಹ್ಯವಾಗಿ ಪಾಪಕಲುಷಿತವಾದವುಗಳಂತೆ ತೋರಿದವು. ಹತ್ತಾರು ತಲೆಗಳಿಂದ ನಡೆದುಬಂದಿದ್ದ ಮನೋಭಾವ ಲಕ್ಷಣಗಳೂ ಶೀಲವೂ ಈದಿನ ವ್ಯತ್ಯಾಸಹೊಂದಿ ಶ್ರೇಷ್ಠಸಾಧ್ವಿಯ ಮನಸ್ಸಿನಂತೆ ಒಂದು ವಿಧವಾದ ಪವಿತ್ರತೆಯನ್ನು ಪಡೆದವು. ಜಾತಿಯಲ್ಲಿ ವೇಶ್ಯೆ ; ಅತುಳೈಶ್ವರ್ಯಕ್ಕೆ ಅಧಿಕಾರಿಣಿ ; ಪೂರ್ಣಯೌವನಯುತೆ ; ಮೋಹಗೊಳಿಸಿ, ಬೆರಗುಗೊಳಿಸಿ, ಜಗತ್ತಿನ ಜನರ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಈವರೆಗೂ ಪ್ರವೃತ್ತಳಾಗಿ ಜಯಹೊಂದಿದ್ದವಳು. ಎಷ್ಟೋ ಜನ ಭಾಗ್ಯವಂತರು ಅವಳ ದಾಸರಾಗಿದ್ದಾರೆ. ಈ ಮೂರುದಿನ

ಗಳಿಂದ ಕುಂ—ರು ಪದ್ಮನಾಭರಾಯನೆಂಬೊಬ್ಬ ಧನಿಕನು ಅವಳನ್ನು ಎಡೆಬಿಡದೆ ಇದ್ದಾನೆ. ತನ್ನ ಸರ್ವಸ್ವವನ್ನೂ ಅವಳಿಗೆ ಕೊಟ್ಟು, ಅವಳ ಕಿರುಬೆರಳಿನ ಸನ್ನೆಯೊಂದಾದರೆ ಏನುಬೇಕಾದರೂ ಮಾಡುವುದಕ್ಕೆ ಸಿದ್ಧನಾಗಿ, ಅವಳ ಪ್ರೇಮವನ್ನು ಸಂಪಾದಿಸಲು, ಅವಳ ಒಂದು ಕಟಾಕ್ಷಕ್ಕಾಗಿ—ಕಾದುನಿಂತಿದ್ದಾನೆ. ಈಗ ಅದೊಂದೂ ಅವಳಿಗೆ ಬೇಡವೆನ್ನಿಸಿತು. ಸುಖಸಾಮಗ್ರಿಗಳು, ಪುರುಷರಮೇಲೆ ದಿಗ್ವಿಜಯ, ಸಂಪತ್ತು, ರೂಪ, ಯೌವನ, ವೇಷ, ಭೂಷಣ, ಇದೊಂದರಲ್ಲಿಯೂ ಅವಳಿಗೆ ಆಸಕ್ತಿಯಿಲ್ಲ. ಇದ್ದಕ್ಕಿದ್ದಹಾಗೆ ಮನಸ್ಸು ಎಷ್ಟು ವ್ಯತ್ಯಸ್ತವಾಗಿ ಹೋಯಿತು! ಧರ್ಮಕ್ಕೆ ತಿಲತರ್ಪಣವನ್ನು ಕೊಟ್ಟು, ಸಾಧ್ವೀಮಣಿಯರ ಜೀವನವೃತ್ತಿಯನ್ನು ತಿರಸ್ಕರಿಸುತ್ತ, ಪ್ರಪಂಚವು ತನ್ನನ್ನು ಅನುಸರಿಸುತ್ತಿರುವ ಮುಗ್ಧವಿಜೇತರ ಗುಂಪೆಂದೂ, ತಾನು ಸಂರಾಜ್ಞಿಯರಿಗಿಂತಲೂ ಹೆಚ್ಚಿನವಳೆಂದೂ, ತನ್ನ ಪ್ರತಾಪದ ಪ್ರಭಾವವು ಅನನ್ಯಸಾಧಾರಣವಾದುದೆಂದೂ, ನಾಲ್ಕು ಗಂಟೆಗಳಿಗೆ ಮುಂಚೆ ತಾನೆ ತಿಳಿದಿದ್ದ ಅವಳು ಈಗ ಆ ವಿಷಯಗಳಲ್ಲಿ ಅನಾದರಳಾಗಿದ್ದಾಳೆ! ಇದುವರೆಗೂ, ಆ ಮಗುವು ಕರೆದ ಹಾಗೆ ತನ್ನಿದಿರಿನಲ್ಲಿ "ಅಮ್ಮಾ" ಎಂದು ಆರೀತಿ ಕರೆದುದನ್ನು ಅವಳು ಕೇಳಿಯೇ ಇರಲಿಲ್ಲ; ತನ್ನಂಥವಳ ಜೀವನದ ತೀವ್ರಗತಿಯಲ್ಲಿ ಅಂತಹುದಕ್ಕೆ ಅವಕಾಶವೆಲ್ಲಿ? ತನ್ನ ಸಮಸ್ತ ಐಶ್ವರ್ಯದಿಂದ ಲಭಿಸಬಲ್ಲ ಎಲ್ಲಾ ಉತ್ಕೃಷ್ಟ ಭೋಗಗಳನ್ನೂ ನಿರಂತರವಾಗಿ ಅನುಭವಿಸಿದ್ದರೂ, ಆ ಒಂದುಕ್ಷಣದಲ್ಲಿ ಅವಳು ಅನುಭವಿಸಿದ ಸುಖಕ್ಕೆ ಅವು ಸಮವಾದಾವೆ! ಮಕ್ಕಳನ್ನು ಪಡೆದು, ಲಾಲಿಸುವ ಸಾಧ್ವೀಮಾತೆಯರು ಎಂಥ ಪುಣ್ಯವಂತರು! ಅಂಥ ಪುಣ್ಯದಿಂದ ತನ್ನಾತ್ಮವನ್ನು ವಂಚಿಸಿಕೊಂಡು ಜೀವಮಾನವನ್ನು ಹಾಳುಮಾಡಿಕೊಂಡೆನೇ! ಆ ಮಾತೆಯರ ಸುಖಸಂತೋಷಗಳ ಮುಂದೆ ವೇಶ್ಯಾಪ್ರಣಯ ಸುಖಭೋಗಗಳು ಎಷ್ಟರಪಟ್ಟಿನವು? ಮಾತೃತ್ವಕ್ಕೆ ಸಂಬಂಧಿಸಿದ ಸುಖಾನುಭವಗಳಿಂದ ವಂಚಿತಳಾಗಿರುವ ತಾನು ಹತಭಾಗ್ಯೆಯೆಂದೂ, ಅಮಂಗಳೆಯೆಂದೂ, ನಾರೀಕುಲಕ್ಕೆ ಕಳಂಕಿನಿಯಾಗಿರುವೆನೆಂದೂ, ತನ್ನ ಹೇಯವಾದ ಜೀವನಕ್ಕೆ ಯಾವ ಪ್ರಾಯಶ್ಚಿತ್ತದ ತೀವ್ರ ಶಿಕ್ಷೆಯೂ ಕ್ರೂರವಲ್ಲವೆಂದೂ ಯೋಚಿಸಿಕೊಂಡು ತನ್ನನ್ನು ತಾನೇ ಹಳಿದುಕೊಳ್ಳುದ್ದಳು.

ಅಷ್ಟರಲ್ಲಿ ಪದ್ಮನಾಭರಾಯರು ಬೆಳಗ್ಗೆ ಅವಳ ಜೊತೆಯಲ್ಲಿದ್ದ ವೇಷದಲ್ಲಿಯೇ ಪ್ರಾಸಾದದೊಳಕ್ಕೆ, ಅವಳಿದ್ದಲ್ಲಿಗೆಬಂದು, ಸೋಫಾದ ಹಿಂದೆ ನಿಂತರು.

ರಾಯ—"ಚಂದ್ರಾ, ಚಿಂತಿಸುತ್ತಿರುವಿಯೇಕೆ? ನಿನ್ನ ದಾಸಿಯರೆಲ್ಲಿ? ಗಾಳಿ ಹಾಕುವವರು ಯಾರೂ ಇಲ್ಲವೇನು?" ಎಂದರು.

ಚಂದ್ರ—ರಾಯರು ದಯಮಾಡಬೇಕು. ಚಿಂತೆಯೇನೂ ಇಲ್ಲ.

ರಾಯ—ಬೆಳಗ್ಗಿನ ಮೋಟಾರು ವಿಷಯ ಯೋಚಿಸುತ್ತಿದ್ದೀಯೇನು ?

ಚಂದ್ರ—ಉಂ—ಇಲ್ಲ.

ರಾಯ—ನಾನು ಎಲ್ಲವನ್ನೂ 'ಸರಿ' ಮಾಡಿಕೊಂಡು ಬಂದಿದ್ದೇನೆ. ನಾಳೆ ಕೋರ್ಟಿಗೆ ಹೋಗಿ ಉತ್ತರಕೊಟ್ಟು ಬಂದರಾಯಿತು. ಹುಡುಗನು ರಾಮ ಚಂದ್ರಯ್ಯನವರ ಮಗನಂತೆ. ಆದರೂ ನಮಗೇನೂ ಭಯವಿಲ್ಲ. ಅವನು ಆಸ್ಪತ್ರೆಯಲ್ಲಿ ಗುಣಹೊಂದುತ್ತಿರುವುದರಿಂದ ವಿಪರೀತವೇನೂ ಆಗದು. ನಮ್ಮ ಡ್ರೈವರಿಗೆ ಬುದ್ಧಿಹೇಳುತ್ತೇವೆಂದೋ, ಅಥವ ಅವನನ್ನು ಕೆಲಸದಿಂದ ತೆಗೆದುಹಾಕುತ್ತೇವೆಂದೋ ಹೇಳಿಬಿಟ್ಟರಾಯಿತು. ಸರ್ಕಾರದವರು ನಿರ್ಧರಿಸಿದ ಜುಲ್ಮಾನೆಯನ್ನು ತೆತ್ತುಬಿಟ್ಟರಾಯಿತು. ಅದಕ್ಕೇನು ಚಿಂತೆ, ಬಾ. ಚಂದ್ರ, ನೀನು ಹೀಗಿರುವುದನ್ನು ನೋಡಿ ನಾನು ಸಹಿಸಲಾರೆ.

ಚಂದ್ರ—ರಾಯರೆ, ನನಗೇನೂ ಆ ಚಿಂತೆಯಿಲ್ಲ. ಹೇಳುವುದಕ್ಕೆ ಸಂಕೋಚವಾಗುತ್ತದೆ. ಆದರೆ ಹೇಳದಿದ್ದರೆ ಯತ್ನವಿಲ್ಲ. ಇನ್ನುಮೇಲೆ ನೀವು ನನ್ನನ್ನು ಈ ರೀತಿ ಸಂಬೋಧಿಸಕೂಡದು. ಈ ವೃತ್ತಿಯನ್ನು ಇಂದಿನಿಂದ ಬಿಟ್ಟುಬಿಟ್ಟಿದ್ದೇನೆ. ನಿಮಗೆ ಇಷ್ಟುದಿನಗಳೂ ತೊಂದರೆ ಕೊಟ್ಟುದಕ್ಕಾಗಿ ಕ್ಷಮಿಸಬೇಕು ತಾವು, ಯಾರೂ, ಇನ್ನುಮೇಲೆ ಇಲ್ಲಿಗೆ ಬರುವ ಆವಶ್ಯಕತೆಯಿರುವುದಿಲ್ಲ.

ರಾಯರಿಗೆ ಪರಮಾಶ್ಚರ್ಯವಾಯಿತು. 'ಏನಿದು ? ಬೆಳಗ್ಗೆ ಇದ್ದ ಸ್ಥಿತಿಗೂ ಈಗಿಗೂ ಎಷ್ಟು ವ್ಯತ್ಯಾಸ! ಇದು ನಿಶ್ಚಯವೆ ?—ಪ್ರಪಂಚದಲ್ಲಿ ಇದೂ ಸಾಧ್ಯವೆ ?' ಎಂದಂದುಕೊಂಡನು. ಏಕೆ ಸಾಧ್ಯವಿಲ್ಲ ? ಮನುಷ್ಯನು ಮನಸ್ಸುಮಾಡಿದರೆ ಅವನಿಗೆ ಯಾವುದುತಾನೆ ಅಸಾಧ್ಯ ?

ರಾಯ—ಚಂದ್ರ,...(ಅವಳು ತನ್ನ ಕಿವಿ ಮುಚ್ಚಿಕೊಳ್ಳಲು)—ಇಲ್ಲ, ಇನ್ನು ನಾನು ನಿನ್ನನ್ನು ಹಾಗೆ ಕರೆಯುವುದಿಲ್ಲ ; ನನ್ನದೊಂದು ಕೋರಿಕೆಯಿದೆ. ಅದನ್ನು ನೆರವೇರಿಸು.

ಚಂದ್ರ—ನಾನು ಯಾರೊಬ್ಬರಿತರರ ಕೋರಿಕೆಯನ್ನು ನೆರವೇರಿಸಲೂ ಇನ್ನುಮೇಲೆ ಬಲ್ಲವಳಲ್ಲ. ಈ ಹೊತ್ತಿನಿಂದ ನನ್ನ ಜೀವನದದಾರಿ ಬೇರೆಯಾಗುವುದು. ಇತರರ ತೃಪ್ತಿಗೂ ನನ್ನ ಜೀವನಕ್ಕೂ ಇನ್ನುಮುಂದೆ ಯಾವ ಸಂಬಂಧವೂ ಇರದು.

ರಾಯ—ನಾನು ಹೇಳುವುದನ್ನು ಕೇಳಲೇಕೂಡದೇನು ?

ಚಂದ್ರ—(ಉತ್ತರವಿಲ್ಲ.)

ರಾಯ—ನೀನು ಈ ವೃತ್ತಿಯನ್ನು ಬಿಟ್ಟುಬಿಡು, ನನ್ನ ಸಮಸ್ತ ಆಸ್ತಿಯನ್ನೂ ನಿನಗೆ ಕೊಟ್ಟುಬಿಡುತ್ತೇನೆ. ನಾವಿಬ್ಬರೂ ಎಲ್ಲಿಯಾದರೂ ಬೇರೆಕಡೆ ಹೋಗಿ ಸುಖವಾಗಿ ಇಬ್ಬರೇ ಜೀವನಮಾಡಿಕೊಂಡಿರೋಣ.

ಚಂದ್ರ—ಊಃ, ನನ್ನಿಂದಾಗದು. ರಾಯರೆ, ನನಗೆ ಇನ್ನು ಆಸ್ತಿ, ಸುಖಗಳಿಂದ ಸಂತೋಷವಿಲ್ಲ. ನಾನದಕ್ಕೆ ಒಪ್ಪೆನು.

ರಾಯ—ಆಸ್ತಿ ಬೇಡದಿದ್ದರೆ, ನಮ್ಮಿಬ್ಬರ ಆಸ್ತಿಯನ್ನು ಬೇಕಾದವರಿಗೆ ಹಂಚಿ ಕೊಟ್ಟು ಹೊರಟುಹೋಗೋಣ—

ಚಂದ್ರ—ಇನ್ನು ನನಗೆ ಮತ್ತೊಬ್ಬರಾಶ್ರಯ ಬೇಡ—ಆಗುವುದಿಲ್ಲ......ತಾವು ಕೃಪೆಮಾಡಬೇಕು. ಹೊರಡಬಹುದು.

ರಾಯನು ತಲೆಬಗ್ಗಿಸಿ ತನ್ನ ಸಾಮಾನುಗಳನ್ನು ಪೆಟ್ಟಿಗೆಗೆ ಹಾಕಿಸಿಕೊಂಡು ಹೊರಟುಹೋದನು. 'ಅಬ್ಬಾ, ಏನು ಕಲ್ಲುಮನಸ್ಸು! ಹೇಗಿದ್ದವಳು ಹೇಗಾಗಿ ಹೋದಳು ! ಈ ಸ್ಥಿತಿಯು ನಿಲ್ಲುವುದೆ ? ಏಕೆ ನಿಲ್ಲಲಾರದು, ನೋಡುವ' ಎಂದುಕೊಳ್ಳುತ್ತ ಆ ಮನೆಯಕಡೆಯೇ ತಿರುತಿರುಗಿ ನೋಡುತ್ತ ಹೊರಟು ಹೋದನು.

೪.

ರಾಮಚಂದ್ರಯ್ಯನವರು ಮಗನಿಗೆ ಸ್ವಲ್ಪ ಗುಣಮುಖವಾಗುತ್ತಲೇ ಅವನನ್ನು ಮನೆಗೆ ಕರೆದುಕೊಂಡುಬಂದರು. ಹುಡುಗನು "ಅವಳೆಲ್ಲಿ ?" ಎಂದು ಕೇಳಿದನು. ಅವಳೆಂದರೆ ಯಾರೆಂಬುದು ಅವರಿಗೆ ಯಾರಿಗೂ ಮೊದಲು ತಿಳಿಯಲಿಲ್ಲ. "ಅವಳನ್ನು ನೋಡಬೇಕು" ಎಂದು ಹುಡುಗನು ಮೇಲೆ ಮೇಲೆ ಕೇಳುತ್ತಿರಲು, ತಾಯಿಯು ಮಗನನ್ನು ಕುರಿತು "ಅವಳು ಯಾರು, ಮಗು ?" ಎಂದು ಕೇಳಿದಳು. "ಆಸ್ಪತ್ರೆಗೆ ಬಂದಿದ್ದವಳು" ಎಂದನು. ಅಯ್ಯನವರಿಗೆ ಎಲ್ಲಾ ಗೊತ್ತಾಯಿತು ; ಅವಳೆಂದರೆ ಚಂದ್ರಮುಖಿ. ಚಂದ್ರಮುಖಿಗೆ ಈ ಪ್ರಸಂಗದಲ್ಲಿ ೨೦೦ ರೂಪಾಯಿಗಳ ಜುಲ್ಮಾನೆಯಾಗಿದ್ದುದು ಅವನ ದೆಸೆಯಿಂದ ; ತನ್ನ ಮಗನಿಗೆ ಈ ವಿಧವಾದ ಆಪತ್ತನ್ನು ತಿಳಿದೊ ತಿಳಿಯದೆಯೊ ತಂದವಳು ; ಅಲ್ಲದೆ ವೇಶ್ಯೆ. ಅಂಥವಳು ತನ್ನ ಮನೆಗೆ ಬಂದುದನ್ನು ನೋಡಿದರೆ ಜನರು ಏನೆಂದುಕೊಳ್ಳುವರು ? ಅವಳುತಾನೆ ಬರುವಳೆ ? ಬರದಿದ್ದರೆ ಮಗುವಿನ ಕಳವಳವನ್ನು ಹರಿಸುವ ಬಗೆ ? ಎಂದು ನಾನಾ

ವಿಧವಾಗಿ ಯೋಚಿಸುತ್ತ ಕೊನೆಗೆ ಗಟ್ಟಿಮನಸ್ಸು ಮಾಡಿ ತನ್ನ ಮಗನಪರವಾಗಿ ಅವಳಿಗೆ ಹೇಳಿಕಳುಹಿಸಿದನು.

ಇತ್ತ ಚಂದ್ರಮುಖಿಗೂ ನಾರಾಯಣನನ್ನು ನೋಡಬೇಕೆಂಬ ಆಸೆಯು ಬಲವತ್ತರವಾಗಿತ್ತು. ಹುಡುಗನು ಆಸ್ಪತ್ರೆಯಲ್ಲಿದ್ದ ಮೂರು ದಿನಗಳೂ, ದಿನಕ್ಕೆ ಎರಡಾವರ್ತಿ, ಮೂರಾವರ್ತಿ, ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಿದ್ದಳು. ಹಣ್ಣುಹಂಪಲುಗಳನ್ನು ತೆಗೆದುಕೊಂಡುಹೋಗಿ ಕೊಡುತ್ತಿದ್ದಳು. ಅವನ ಹತ್ತಿರ ಕುಳಿತುಕೊಂಡು ಪ್ರೀತಿಯಿಂದ ಮಾತನಾಡಿಸಿ ಬರುತ್ತಿದ್ದಳು. ಹುಡಗನನ್ನು ಮನೆಗೆ ಕರೆದುಕೊಂಡು ಹೋಗಿದ್ದ ಈ ಎರಡು ದಿನಗಳಿಂದ ಅವನನ್ನು ನೋಡಿರಲಿಲ್ಲ. ಪ್ರತಿ ನಿಮಿಷವೂ ನೋಡಬೇಕೆನ್ನಿಸುವುದು. ಆದರೆ ರಾಮಚಂದ್ರಯ್ಯನವರ ಮನೆಗೆ ತಾನು ಹೋಗುವುದು ಹೇಗೆ? ಯಾವ ಮುಖದಿಂದ ಹೋಗುವುದು? ಅವರಿಗೆ ತನ್ನ ಮೇಲೆಷ್ಟು ಕೋಪವಿರಬಹುದು? ಎಂದು ಯೋಚಿಸುತ್ತ ಅಶಾಂತಳಾಗಿ ದಾರಿ ತೋರದೆ ಇದ್ದಳು. ಆಗ ರಾಮಚಂದ್ರಯ್ಯನವರ ಆಳು ಬಂದು ಕರೆಯಲು ಅವಳಿಗೆ ಬಹಳ ಸಂತೋಷವಾಯಿತು. ತಕ್ಷಣ ಒಂದು ಗಾಡಿಮಾಡಿಕೊಂಡು ಹೊರಟಳು. ಉಡುಗೆ ತೊಡುಗೆಗಳೆಲ್ಲ ಅತಿ ಸಾಮಾನ್ಯವಾದವು; ಯಾವುದರಲ್ಲಿಯೂ ಅಹಂಕಾರ, ಮದ, ಹೆಮ್ಮೆ ಇವುಗಳ ಸೋಂಕಿರಲಿಲ್ಲ. ಒಂದು ತಟ್ಟೆಯಲ್ಲಿ ಉತ್ತಮವಾದ ಒಂದು ಡಜನ್ ಸೇಬಿನಹಣ್ಣುಗಳನ್ನೂ, ಕೆಲವು ಅಂಜೂರದಹಣ್ಣುಗಳನ್ನೂ ತೆಗೆದುಕೊಂಡು ಬಂದಿದ್ದಳು. ಅವಳಿಗೆ ಹೇಳಿಕಳುಹಿಸಿ ಲಾಯರವರು ಆಫೀಸಿಗೆ ಹೊರಟು ಹೋಗಿದ್ದರು. ಮನೆಯ ಯಜಮಾನಿಗೂ ಅವಳು ಬರುವುದು ಅಷ್ಟು ಬೇಕಿರಲಿಲ್ಲವಾಗಿ, ಹೊರಗೆ ಬಂದವರು, "ಬನ್ನಿ ಅಮ್ಮ ಒಳಗೆ. ಮಗುನೋಡಬೇಕು ಅಂದು ಪೀಡಿಸಿದ. ಹೇಳಿ ಕಳುಹಿಸಿದೆ. ಹೀಗೆ ಬನ್ನಿ, ಈ ಚಿಕ್ಕಮನೆಯೊಳಗೆ ಮಲಗಿದ್ದಾನೆ" ಎಂದರು.

ಚಂದ್ರಮುಖಿಗೆ ಇದು ಒಂದುವಿಧವಾದ ಅಪಮಾನವೆಂದು ಬೋಧೆಯಾಯಿತು. ಅಪಮಾನವು ನಿಜ; ಅವಳು ಆ ಹಿಂದಿನ ಚಂದ್ರಮುಖಿಯೇ ಆಗಿದ್ದಿದ್ದರೆ ಅದು ಅಸಹನೀಯವಾಗುತ್ತಿತ್ತು. ಪೂರ್ವದ ದರ್ಪ, ಠೀವಿ ಠೇಂಕಾರಗಳು ಆ ಹಿಂದಿನ ಜೀವನಕ್ಕೆ ಸಂಬಂಧಪಟ್ಟವುಗಳಲ್ಲವೆ? ಅವನ್ನು ತ್ಯಾಗಮಾಡಿ, ಮರೆಯುವ ಪ್ರಯತ್ನಪಡುವೆನೆಂದಲ್ಲವೆ ನಾನು ನಿರ್ಧರಮಾಡಿಕೊಂಡುದು? ಅಪಮಾನವಾದರೆ ಆಗಲಿ. ಆತೆರನಾದ ಜೀವನದಲ್ಲಿ ಆಸೆಯಿಲ್ಲದ ನನಗೆ ಅವರು ಮರ್ಯಾದೆ ಮಾಡಿದರೆಷ್ಟು? ಮಾಡದಿದ್ದರೆಷ್ಟು? ಅವರಿಂದ ಮರ್ಯಾದೆ ಹೊಂದುವುದಕ್ಕೆ ನನ್ನಲ್ಲಿ ಯಾವ ಯೋಗ್ಯತೆಯಿದೆ? ಅವರ ದೃಷ್ಟಿಯಲ್ಲಿ ನಾನು ಪತಿತೆ, ಇಷ್ಟು

ಮಾತ್ರ ನನ್ನನ್ನು ಅವರು ಇಲ್ಲಿಗೆ ಕರೆಯಿಸಿಕೊಂಡುದೇ ಹೆಚ್ಚು! ಅಂದುಕೊಂಡು ತನ್ನ ಅಹಂಕಾರವನ್ನು ಅಡಗಿಸಿ ನುಂಗಿಕೊಂಡು ನಾರಾಯಣನಿದ್ದ ಕಿರುಮನೆಗೆ ಹೋದಳು. ಅವಳನ್ನಲ್ಲಿ ಕೂಡಹೇಳಿ ಹುಡುಗನ ತಾಯಿಯು ಮನೆಯೊಳಕ್ಕೆ ಹೊರಟು ಹೋದರು. ನಾರಾಯಣನಿಗೆ ಇನ್ನೂ ಕೆಲವು ಘಾಯಗಳು ಪೂರ್ತ ಮಾಯ್ದಿರಲಿಲ್ಲ. ನೋವಿನಿಂದ ಹಾಸಿಗೆಯಮೇಲೆ ಹೊರಳಾಡುತ್ತ ಮಲಗಿದ್ದನು. ಚಂದ್ರಮುಖಿಯು ಬಂದವಳು "ಮಗು, ಈಗ ನೋವು ಸ್ವಲ್ಪ ಕಮ್ಮಿಯಾಗಿದೆಯೇ ನಪ್ಪ" ಎಂದಳು.

ನಾರಾ—ಬಾ, ಇಲ್ಲಿ ಕೂತುಕೊ, ಈ ಹಾಸಿಗೆಯಮೇಲೆ; ನಿನ್ನೆ ಮೊನ್ನೆ ಏಕೆ ಬರಲಿಲ್ಲ? ನೋವು ಹಾಗೇ ಇದೆ.

ಚಂದ್ರ—ಎಲ್ಲೊ ಬರುವುದಕ್ಕೆ ಆಗಲಿಲ್ಲ. ಈ ಹೊತ್ತು ಬಿಡುವಾಯಿತು. ಬಂದೆ.

ನಾರಾ—ಆಗ ದಿನಕ್ಕೆ ೨-೩ ಸಲ ಆಸ್ಪತ್ರೆಗೆ ಬರುತ್ತಿದ್ದೆ; ಈಗ ಮೂರುದಿನಗಳಿಗೆ ಒಂದುಸಲವೂ ಬರಲಿಲ್ಲ. ಹೋಗಲಿ, ಇನ್ನು ನೀನು ಮನೆಗೆ ಹೋಗಬೇಡ. ಅಮ್ಮನಿಗೆ ಹೇಳುತ್ತೇನೆ. ಇಲ್ಲಿಯೇ ಇದ್ದುಬಿಡು.

ಚಂದ್ರ—ಹಾಗಾಗದಪ್ಪ—ನಾನಿಲ್ಲಿರುವುದಕ್ಕಾಗುವುದಿಲ್ಲ. ನಿಮ್ಮವರು ಎಲ್ಲರೂ ಒಪ್ಪಿದರೆ ಆಗಾಗ್ಗೆ ಬಂದು ಹೋಗುತ್ತೇನೆ.

ನಾರಾ—ಏಕಾಗುವುದಿಲ್ಲ?—ಅವರು ಒಪ್ಪಲೆ ಒಪ್ಪುತ್ತಾರೆ.

ಚಂದ್ರ—(ನಿಟ್ಟುಸಿರನ್ನು ಬಿಟ್ಟು) ನೀನು ಮಗು, ಅದೆಲ್ಲ ನಿನಗೆ ತಿಳಿಯುವುದಿಲ್ಲ. ನಾನು ಇಲ್ಲಿಗೆ ಬಲುಬಾರಿ ಬಾರಬಾರದು;

ನಾರಾ—ಹೇಳು—ಏಕೆ ಬರಬಾರದು? ಅಪ್ಪನಿಗೆ ನಾನು ಹೇಳಿದರೆ? ಅವನು ನಿನಗೆ ಹೇಳಿದರೆ?

ಚಂದ್ರ—ಆಗಲೂ ಕೂಡದು. ನಮ್ಮಂಥವರು ಇಂಥ ಕಡೆಗಳಿಗೆ ಅತಿ ಬಳಕೆಯಿಂದ ಬಂದು ಹೋಗಬಾರದು. ಆ ಮಾತು ಬಿಡಪ್ಪ.

ನಾರಾ—ಅವತ್ತು ಅಷ್ಟು ಒಡವೆಗಳನ್ನು ಹಾಕಿಕೊಂಡಿದ್ದೆಯಲ್ಲ; ಅವೆಲ್ಲ ಎಲ್ಲಿ?

ಚಂದ್ರ—ಮನೆಯಲ್ಲಿವೆ. ಅವನ್ನು ದಿನಾಲೂ ಹಾಕಿಕೊಳ್ಳುವುದಿಲ್ಲ. ಎಲ್ಲಿಯಾದರೂ ಬೇರೆಕಡೆ ಹೋದರೆ ಮಾತ್ರ ಹಾಕಿಕೊಳ್ಳುವುದು.

ನಾರಾ—ಹಾಗಾದರೆ ಇವತ್ತೇಕೆ ಹಾಕಿಕೊಳ್ಳಲಿಲ್ಲ? (ಅವಳಿಗೆ ಕಷ್ಟಕ್ಕಿಟ್ಟು ಕೊಂಡಿತು).

ಚಂದ್ರ—ನಿನ್ನನ್ನು ನೋಡುವುದಕ್ಕೆ ನಿಮ್ಮ ಮನೆಗೆ ಬಂದಾಗ ಅವು ಏತಕ್ಕೆ? ನಾನು ನಿನ್ನನ್ನು ನೋಡುವುಕ್ಕೆ ಮಾತ್ರ ಬಂದೆ.

ನಾರಾ—ಆ ಒಡವೆಗಳನ್ನು ಹಾಕಿಕೊಂಡಿದ್ದರೆ-ಓಹೋ-ಎಷ್ಟು ಚೆನ್ನಾಗಿರುತ್ತೆ !... ಯಾವಾಗಲೂ ಏಕೆ ಹಾಕಿಕೊಳ್ಳಕೂಡದು ?

ಚಂದ್ರ—ನಾವು ನಮ್ಮ ಸಂತೋಷಕ್ಕಿಂತಲ್ಲೂ ಇತರರ ಸಂತೋಷಕ್ಕೆ, ಆಗಾಗ ಹಾಕಿಕೊಳ್ಳುತ್ತೇವಪ್ಪ. ಕೆಲವರಿಗೆ ಅವುಗಳಿಂದ ಜೀವನವಾಗುತ್ತೆ. ಈಗ ನನಗೆ ಅವು ಬೇಕಿಲ್ಲ. ಅಷ್ಟು ಒಡವೆಗಳನ್ನು ಹಾಕಿಕೊಂಡು ಬರುವ ಸ್ಥಳವೂ ಇದಲ್ಲ.

ನಾರಾ—ಹಾಗಾದರೆ ಅವನ್ನೆಲ್ಲ ಏನುಮಾಡುವೆ ? ಯಾರಿಗಾದರೂ ಕೊಟ್ಟು ಬಿಡುವಿಯೇನು ? (ಚಂದ್ರಮುಖಿಯು ಚಮಕಿತಳಾದಳು).

ಚಂದ್ರ—ಏಕೆ ಕೊಟ್ಟುಬಿಡಬಾರದು ?

ನಾರಾ—ಕೊಟ್ಟುಬಿಟ್ಟರೆ—ಆಮೇಲೆ ನಿನಗೆ ?

ಚಂದ್ರ—ನನಗೆ ಏನು ? ಹೇಗೋ ಆಗುತ್ತೆ. ನಿನಗೆ ಬೇಕೇನು ?

ನಾರಾ—ನನಗೇಕೆ ? ನಾನು ಹೆಂಗಸೆ. ದಿನಾಲು ನನಗೆ ಬೇಕಾದಾಗ ನೀನು ಇಲ್ಲಿಗೆ ಬಾ, ಅಷ್ಟೇ ಸಾಕು.

ಚಂದ್ರಮುಖಿಯು ಅನ್ಯಮನಸ್ಕಳಾದಳು. ಎದುರಿಗೆ ಮಗು ನಾರಾಯಣನ ಮುದ್ದುಮುಖ ; ಮುಖದ ತುಂಬ ಘಾಯದ ಗುರುತುಗಳು ; ತನ್ನಿಂದ ಸಂಭವಿಸಿದ ವುಗಳು ; ಅವು ಶೀಘ್ರವಾಗಿ ಮಾಯುವುದಕ್ಕಾಗಿ ಸರ್ವಪ್ರಯತ್ನಗಳನ್ನೂ ಮಾಡುತ್ತಿದ್ದಾಳೆ. ಅದನ್ನು ನೋಡುತ್ತ ತನ್ಮೂಲಕ ಬೇರೆಯೋಚನೆಯಲ್ಲಿ ಮಗ್ನಳಾದಳು. ಪ್ರಾಯಶ್ಚಿತ್ತದಿಂದ ದುಷ್ಕರ್ಮಕ್ಕೆ ಶಾಸನವಾಗುವುದಾದರೆ ಯಾವ ವಿಧವಾದ ಪ್ರಾಯಶ್ಚಿತ್ತವನ್ನಾದರೂ ಮಾಡಿಕೊಳ್ಳಲು ಸಿದ್ಧಳಾಗಿದ್ದಾಳೆ. "ಈ ಮಗು ! ಇದರ ಮಾತುಗಳು ! ಎಷ್ಟು ಹೃದಯಭೇದಕವಾಗಿವೆ ? ಈ ಮಗುವಿನಿಂದಲ್ಲವೆ ನನ್ನಲ್ಲಿ ಜ್ಞಾನೋದಯವಾದುದು ; ನನ್ನ ನಿಜಸ್ಥಿತಿಯ ಅರಿವು ನನಗೆ ಬಂದುದು ! ಮಗು, ನೀನು ನನ್ನ ದೇವತೆಯಪ್ಪ; ನನ್ನನ್ನುದ್ಧಾರ ಮಾಡಿದ ಮಹಾಪುರುಷ." ಎಂದುಕೊಳ್ಳುತ್ತ, ಹಣ್ಣುಗಳನ್ನು ಮಗುವಿಗೆ ಕೊಟ್ಟು ಅವನಿಗೆ ಸಮಾಧಾನ ಹೇಳಿ, ಯಜಮಾನಿಗೆ ಹೇಳಿಕಳುಹಿಸಿ ಅಪ್ಪಣೆಪಡೆದುಕೊಂಡು ತನ್ನ ಮನೆಗೆ ಹಿಂದಿರುಗಿ ಬಂದಳು. ಬರುತ್ತ ದಾರಿಯಲ್ಲಿ ಏನೇನೋ ಯೋಚಿಸಿಕೊಂಡಳು. ಮನಸ್ಸಿಗೆ ನೇರವಾದ ಮಾರ್ಗವೊಂದು ಹೊಳೆದವಳಹಾಗೆ ಸ್ವಲ್ಪ ಪ್ರಫುಲ್ಲಳಾದಳು. ಆದರೆ ಉತ್ತರ ಕ್ಷಣದಲ್ಲೆ ಆ ಪ್ರಫುಲ್ಲತೆಯು ತೊಲಗಿ, ಒಂದು ಸ್ಥಿರವಾದ ಧೀರಗಂಭೀರಭಾವವು

ನೆಲೆಸಿ, ಅಧಿಕರಿಸುತ್ತಿದ್ದಂತೆ ತೋರುತ್ತಿತ್ತು. ಮನೆಗೆ ಬಂದು ಸೇರಿದವಳು, ಆ ದಿನ ಮಧ್ಯಾಹ್ನವೆಲ್ಲ ಉಪ್ಪರಿಗೆಯಮೇಲೆ ಹೋಗಿ ಒಂದು ಚಿರತೆಯ ಚರ್ಮದಮೇಲೆ ಕುಳಿತುಕೊಂಡಳು. ಸುತ್ತಲೂ ದೊಡ್ಡ ದೊಡ್ಡ ನಿಲುವುಗನ್ನಡಿಗಳು ; ಕನ್ನಡಿಗಳನ್ನು ನೋಡಿದೊಡನೆಯೆ ನಾನಾವಿಧವಾದ ನೆನಪುಗಳುಬಂದು ಅವಳು ಬಿಗಿಯಾಗಿ ಕಣ್ಣು ಮುಚ್ಚಿಕೊಂಡಳು. ಭರಿಸಲಾರದ ದುಃಖಬಂತು. ಅವುಗಳ ಮೇಲ್ಗಡೆ ನಾನಾ ವಿಧ ವಾದ ಚಿತ್ರಪಠಳು. ಕೆಲವು ನೀಚವಾದುವು ; ಕೆಲವು ಉತ್ತಮವಾದುವು. ನೋಡು ತ್ತಿದ್ದವಳು ಹಾಗೇ ಎದ್ದು ಹೊರಗೆ ಬಂದು "ಮೂರ್ತಿ" ಎಂದು ಕೂಗಿದಳು. ಮೂರ್ತಿಯೆಂಬ ಆಳು ಮೇಲೆಬಂದು ನಿಂತವನು "ಅಮ್ಮನೋರು ಕರೆದರೇನು ?" ಎಂದನು. ಚಂದ್ರಮುಖಿಯು, ಮೇಲೆ ಬಾ. ಸ್ವಲ್ಪ ಕೆಲಸವಿದೆ, ಎಂದು ಹೇಳುತ್ತ, ಕೆಲವು ಪಠಗಳನ್ನು ಕೈಯಿಂದ ತೋರಿಸಿ, ಅವುಗಳನ್ನು ಕೆಳಗೆ ತೆಗೆದು, ಪೇಟೆಗೆ ತೆಗೆದುಕೊಂಡು ಹೋಗಿ, ಹೋದಷ್ಟಕ್ಕೆ ಅವನ್ನು ಮಾರಿ ಬಂದುದನ್ನು ನೀನೇ ತೆಗೆದುಕೋ" ಎಂದುಹೇಳಿ ಕಳುಹಿಸಿಬಿಟ್ಟಳು. ಮೂರ್ತಿಯು ಅವಳ ಮುಖವನ್ನು ನೋಡಿದನು. ಅದು ನಿಶ್ಚಲವಾಗಿತ್ತು. "ಅಪ್ಪಣೆ, ಹೊರಟೆ" ಎಂದುಹೇಳಿ ಅವುಗಳನ್ನು ತೆಗೆದುಕೊಂಡು ಹೊರಟನು. ಸ್ಮೃತಿಭ್ರಮಣೆಮಾಡುತ್ತಿದ್ದ ಆ ಪಟಗಳನ್ನು ಹೊರಗೆ ಕಳುಹಿಸಿದ್ದಾಯಿತು. ಮುಂದೆ? ಒಂದು ಕನ್ನಡಿಯಲ್ಲಿ ತನ್ನ ಮುಖದ ಬಿಂಬವು ಕಾಣುತ್ತಿತ್ತು. ಹಿಂದೆ, ೫-೬ ದಿನಗಳ ಹಿಂದೆ, ನೋಡಿಕ್ಕೊಂಡದ್ದಕ್ಕೂ ಈಗ ಕಂಡದ್ದಕ್ಕೊ, ಮುಖಭಾವದಲ್ಲಿ ಎಷ್ಟುಮಾರ್ಪು! ಮಂದಹಾಸ, ಹುಸಿಯುಲ್ಲಾಸಗಳೆಂಬ ಅಲೆಗಳತಾಂಡವದಲ್ಲಿ ಮೆರೆಯುತ್ತಿದ್ದ ಆ ಮುಖದಪಾತ್ರವು ಈಗ ಎಷ್ಟು ಚಲನಾರಹಿತವಾಗಿ, ಚಪಲತಾರಹಿತವಾಗಿ ಕಾಣುತ್ತಿತ್ತು! ಅವಳು ಪುನಃ ಕನ್ನಡಿಯಕಡೆ ನೋಡಲಿಲ್ಲ. ಹಾಕಿಕೊಂಡಿದ್ದ ಹೆರಳನ್ನು ಬಿಚ್ಚಿ ತುರುಬು ಕಟ್ಟಿಕೊಂಡಳು. ವಜ್ರದ ಸೇವಂತಿಗೆ ಹೂವಿಗೆ ಬದಲಾಗಿ, ತೋಟದೊಳಕ್ಕೆ ಹೋಗಿ ಅರಳಿದ ಒಂದು ಗುಲಾಬಿ ಹೂವನ್ನು ತಂದು ಮುಡಿದುಕೊಂಡಳು. ತಲೆಯಿಂದ ಎಷ್ಟೋಮಣಗಳ ಭಾರವು ಕಡಿಮೆಯಾದಂತಾಯಿತು. ಮೇಲೂ, ಕೆಳಗೂ, ನಾಲ್ಕುಕಡೆಯೂ, ಮನೆಯೊಳಗೆ ಹೋಗಿ ಅಲ್ಲಲ್ಲಿದ್ದ ಬೆಲೆಬಾಳುವ ಸಾಮಾನುಗಳನ್ನೆಲ್ಲ ತೆಗೆದು ಪೆಟ್ಟಿಗೆಗಳಲ್ಲಿ ಹಾಕಿಸಿ ಬೀಗಹಾಕಿದಳು. ಆದಿನ ಸಾಯಂಕಾಲ ತನ್ನಲ್ಲಿ ಕೆಲಸಕಿದ್ದವರನ್ನೆಲ್ಲ ಒಟ್ಟಿಗೆ ಕರೆದು, ಎಲ್ಲರಿಗೂ ಎರಡುತಿಂಗಳುಗಳ ಸಂಬಳವನ್ನು ಉಚಿತವಾಗಿ ಕೊಟ್ಟು, ಅವರನ್ನು ಕೆಲಸದಿಂದ ನಿವೃತ್ತಿಮಾಡಿಬಿಟ್ಟಳು. ಹೀಗೆ ಸಿಬ್ಬಂದಿಯು ಚದುರಿಹೋಯಿತು. ಈಗ ಅವಳು ಆ ದೊಡ್ಡಮನೆಯಲ್ಲಿ ಏಕಾಕಿನಿ. ಪರಸಂಗಲೇಶವಿಲ್ಲ ; ಲೌಕಿಕ ವ್ಯಾಮೋಹಗಳ ಬಂಧನದಿಂದ ಸ್ವಲ್ಪ ದೂರ

ಸರಿದು ನಿಂತಿದ್ದಾಳೆ. ಅವಳಿಗೆ ಈ ಜನ್ಮದಲ್ಲಿ ಮುಕ್ತಿಯುಂಟೆ? ಧರ್ಮಭ್ರಷ್ಟರಾಗಿದ್ದವರು ಪಶ್ಚಾತ್ತಾಪಪಟ್ಟು, ಸನ್ಮಾರ್ಗಕ್ಕೆ ಬಂದು, ಮುಂದಿನ ಜೀವನವನ್ನು ಸತ್ಕಾರ್ಯಗಳಲ್ಲಿಯೂ, ಸಂಕೀರ್ತನೆಯಲ್ಲಿಯೂ ಧಾರೆಯೆರೆದರೆ ಅವರಿಗೆ ಕರ್ಮವಿಪರಿಣಾಮಗಳಿಂದ ಮೋಕ್ಷ ದೊರೆಯದೇನು? ದೊರೆಯಲಾರದೆಂದು ಎದೆಮಾಡಿ ಘೋಷಿಸಬಲ್ಲವರು ಯಾರಿದ್ದಾರೆ?

೫

ಮೇಲೆ ವಿಸ್ತರಿಸಿದ ಘಟನೆಗಳು ನಡದು ೮ ವರ್ಷಗಳು ಕಳೆದುಹೋದವು. ಚಂದ್ರಮುಖಿಯ ಮನೆಯು ಈಗ ಅವಳದಲ್ಲ. ಮುಲ್ತಾನಿ ಸೇಟು ಒಬ್ಬನು ಅದನ್ನು ಕೊಂಡುಕೊಂಡು ಅಲ್ಲಿ ವಾಸವಾಗಿದ್ದಾನೆ. ಪೂರ್ವದಂತೆಯೆ ಮನೆಯು ವೈಭವಯುಕ್ತವಾಗಿದೆ. ಆದರೆ ಅವಳುಮಾತ್ರ ಮೈಸೂರಿನಲ್ಲಿಲ್ಲ. ಎಲ್ಲಿ ಹೋದಳೋ, ಏನಾದಳೋ ಎಂಬುದು ಕೂಡ ಯಾರಿಗೂ ಗೊತ್ತಿಲ್ಲ. ಒಂದಾನೊಂದುದಿನ ರಾತ್ರಿ ರೈಲುಹತ್ತಿ ಊರುಬಿಟ್ಟು ಹೊರಟುಹೋಗಿದ್ದಳು. ಈಗ ಎರಡುವರ್ಷಗಳಿಂದ, ಪೂರ್ವದ ಅವಳ ಮನೆಯೆದುರಿಗೆ ಅನತಿದೂರದಲ್ಲಿಯೆ ಒಂದು ಅನಾಥಾಲಯವು ಸ್ಥಾಪಿತವಾಗಿ ಅವಳ ಹೆಸರಿನಲ್ಲಿ ನಡೆಯುತ್ತಿದೆ. ಅಲ್ಲಿ ೫೦ ಜನದವರೆಗೂ ಬಾಲಬಾಲಿಕೆಯರು ಪೋಷಿತರಾಗಿದ್ದಾರೆ. ಹುಡುಗರೆಲ್ಲರೂ ೭ ರಿಂದ ೧೨ ರ ವಯಸ್ಸಿನವರು. ಆಲಯವು ಚೆನ್ನಾಗಿ ನಡೆಯುತಿದ್ದಿತೆಂದೂ, ಅಲ್ಲಿನ ಮಕ್ಕಳಿಗೆ ಎಲ್ಲಾ ವಸತಿಗಳೂ ಕಲ್ಪಿತವಾಗಿದ್ದುವೆಂದೂ ಜನರು ಅಧಿಕಾರಿಗಳ ವಿಷಯದಲ್ಲಿ ಬಹಳ ವಿಶ್ವಾಸವನ್ನಿಟ್ಟಿದ್ದರು. ಇಷ್ಟೇಅಲ್ಲದೆ, ಊರಿನ ಭಿಕ್ಷುಕರೆಲ್ಲರಿಗೂ, ದಿನಾಲು ಒಂದು ಬೊಗಸೆ ಅಕ್ಕಿಯು ಅಲ್ಲಿ ದೊರೆಯುವುದೆಂಬ ನಿಶ್ಚಯವಾದ ಭರವಸೆಯಿತ್ತು. ಲಾಯರು ರಾಮಚಂದ್ರಯ್ಯನವರ ಅಧಿಕಾರದಲ್ಲಿ ನಡೆಯುತ್ತಿದ್ದ ಅಲ್ಲಿನ ಧರ್ಮಕೆಲಸಗಳೆಲ್ಲವೂ ಸರ್ವವಿಧದಲ್ಲಿಯೂ ತೃಪ್ತಿಕರವಾಗಿ ನಡೆಯುತ್ತಿದ್ದವು. ಅದಕ್ಕೆ ಅತುಲವಾದ ಮೂಲಧನವೊಂದಲ್ಲದೆ ಇತರ ವಿಧವಾದ ದ್ರವ್ಯಸಾಹಾಯ್ಯಗಳೂ ಆಗಾಗ್ಗೆ ಧರ್ಮಿಷ್ಟರಾದವರಿಂದ ಬರುತ್ತಲೇ ಇದ್ದವು. ಅಯ್ಯನವರು ಆಲಯದ ಅನಾಥಸಂಖ್ಯೆಯನ್ನು ೫೦ ರಿಂದ ೧೦೦ ಕ್ಕೆ ಹೆಚ್ಚಿಸಬೇಕೆಂದು ಸಂಕಲ್ಪಮಾಡಿಕೊಂಡು, ಜನರಿಗೆ ಇದನ್ನು ಶ್ರುತಪಡಿಸಿದ್ದರು. ಮುಂದಿನ ಬಲಿಪಾಡ್ಯಮಿಯಿಂದ ಆ ಸಂಖ್ಯೆಯ ಮಕ್ಕಳಿಗೆ ಪೋಷಣೆಯೂ, ಊರಿನ ಶಿಶುಗಳಿಗೆ ಹಾಲೂ, ಅಲ್ಲಿ ದೊರೆವುದೆಂದು ಜನರಿಗೆ ತಿಳಿದುಬರಲು ಎಲ್ಲೆಲ್ಲಿಯೂ ಅಯ್ಯನವರ ವಿಷಯದಲ್ಲಿಯೂ, ಆಲಯದ ಮೂಲದಾತೃವಿನ ವಿಷಯದಲ್ಲಿಯೂ ಪ್ರಶಂಸೆಗಳು ಹೊರಟವು. ನಾರಾಯಣನೂ ತಂದೆಗೆ

ನೆರವಾಗಿ ಎಲ್ಲವೂ ಸರಿಯಾಗಿ ನಡೆಯುವುದಕ್ಕಾಗಿ ಬಹಳ ಮೆಹನತ್ತು ಮಾಡುತ್ತಿದ್ದನು. ಅವನಿಗೆ ಆಲಯದ ವಿಷಯದಲ್ಲಿ ಒಂದು ವಿಶೇಷ ಮಮತೆಯೂ ಇತ್ತು : ಅದು ಚಂದ್ರಮುಖಿಯ ಹಣದಿಂದ, ಅವಳ ನವಜೀವನದ ಸ್ಮರಣಾರ್ಥವಾಗಿ ಸ್ಥಾಪಿತವಾದುದು : ಅವನೂ ಚಂದ್ರಮುಖಿಯೂ ಒಂದು ದೃಷ್ಟಿಯಲ್ಲಿ ಪರಮಬಂಧುಗಳು. ಈಗ ಅವಳು ಏನಾಗಿರಬಹುದೆಂಬ ಊಹೆಯು ಕೂಡ ಅವನಿಗೆ ಕಷ್ಟವಾಗಿದ್ದರೂ, ಅವಳ ಪ್ರತಿಯೊಂದು ಮಾತೂ, ಅವನ ಕಿವಿಯಲ್ಲಿ ಝೇಂಕಾರಮಾಡಿ, ಸ್ಮೃತಿಯನ್ನು ಜಾಗೃತಿಗೊಳಿಸುತ್ತಿತ್ತು.

ಅವನಿನ್ನೂ ೧೫ ವರ್ಷಗಳ ಬಾಲಕನು ಮಾತ್ರ. ಹೈಸ್ಕೂಲಿನಲ್ಲಿ ಐದನೆ ಫಾರಂನಲ್ಲಿ ಓದುತ್ತಿದ್ದನು. ಯಾವುದರಲ್ಲಿಯೂ ಅವನಿಗೆ ಕೊರತೆಯಿರಲಿಲ್ಲ. ತಡೆಯಿರಲಿಲ್ಲ. ಚಂದ್ರಮುಖಿಯನ್ನು ನೋಡಬೇಕೆಂಬ ಕುತೂಹಲದಲ್ಲಿಯೆ ೨-೩ ವರ್ಷಗಳು ಕಳೆದುಹೋಗಿ ಈಗ ೪-೫ ವರ್ಷಗಳಿಂದಲೂ ಸ್ವಲ್ಪ ಹೆಚ್ಚುಕಡಿಮೆ ನಿರಾಶನಾಗಿ ಹೋಗಿದ್ದನು. ದೂರದ ಒಂದು ಮೊಂಡುಆಶೆ ಮಾತ್ರ ಈ ನಿರಾಶೆಯ ತಳದಲ್ಲಿ ಸಣ್ಣ ಒಂದು ಅಂಶವಾಗಿ ಉಳಿದಿತ್ತು. "ಅವಳು ಬದುಕಿದ್ದರೆ ಇಲ್ಲಿಗೆ ಬಂದು ಒಮ್ಮೆ ಎಲ್ಲವನ್ನೂ ನೋಡಿಕೊಂಡು ಹೋಗದಿರುತ್ತಿದ್ದಳೆ? ನಾನು ಅವಳನ್ನು ನೋಡಬೇಕೆಂಬ ಆಶೆಯಿಂದ ಎಷ್ಟು ಕಾತರನಾಗಿರುವೆನೊ, ಅವಳಿಗೂ ಆ ರೀತಿಯಾದ ಆಶೆ ಇರಲಾರದೆ?" ಎಂದು ಒಂದೊಂದು ಸಲ ಅಂದುಕೊಳ್ಳುವನು. ಹಿಂದೆ ಒಂದುದಿನ ಅವನ ತಾಯಿಯು "ಇನ್ನು ಅವಳೆಲ್ಲಿ ಬರುವಳೋ ಮಗು? ಸುಮ್ಮನೆ ನಿನಗದೊಂದು ಹುಚ್ಚು" ಎಂದರು.

ನಾರಾ—ಹುಚ್ಚಲ್ಲಮ್ಮ; ಅವಳು ಬದುಕಿಯೇ ಇದ್ದರೆ, ಒಂದು ದಿನವಲ್ಲ ಇನ್ನೊಂದು ದಿನ ಬಂದೇಬರುವಳು. ನನಗೇನೋ ನಂಬಿಕೆಯಿದೆ; ನೋಡು ನನ್ನ ಮಾತನ್ನು ಬೇಕಾದರೆ; ಖಂಡಿತವಾಗಿ ಬರುವಳು".

* * * *

ಈದಿನ ಹನ್ನೊಂದುಗಂಟೆಯ ಹೊತ್ತಿಗೆ ೩೦-೩೫ ವಯಸ್ಸಿನ ಹೆಂಗಸೊಬ್ಬಳು ಭಿಕ್ಷುಕಳು, ಬಿಳಿಯ ವಸ್ತ್ರಗಳನ್ನುಟ್ಟು ಹಣೆಯತುಂಬ ಕುಂಕುಮವನ್ನಿಟ್ಟು ತುರುಬಿನಲ್ಲಿ ಒಂದು ಹೂ ಮುಡಿದು ಕೈಲಿ ಒಂದು ಸಣ್ಣ ತಂಬೂರಿಯನ್ನು ಹಿಡಿದುಕೊಂಡು ಅದನ್ನು ಮೀಟುತ್ತ ಆಲಯದ ಕಡೆ ಬಂದಳು. ಬಂದವಳು ಮುಚ್ಚಿದ ಹೆಬ್ಬಾಗಿಲ ಹೊರಗಡೆನಿಂತು, "ಎಂತನಿ ನೇ ವರ್ಣಿಂತುನು, ಶಬರೀಭಾಗ್ಯಮು" ಎಂಬ ಕೀರ್ತನೆಯನ್ನು ಹಾಡುತ್ತ ನಿಂತಳು. ಒಳಗಣಿಂದ ಮಾಲಿಯು ಬಂದು ಒಂದು

ಬೊಗಸೆ ಅಕ್ಕಿಯನ್ನು ಹಾಕಿದನು. ಅವಳಿಗೆ ಬಹಳ ಸಂತೋಷವಾಯಿತು. ಆ ಬೊಗಸೆ ಅಕ್ಕಿಯನ್ನು ಕಣ್ಣಿಗೆ ಒತ್ತಿಕೊಂಡಳು. ಕೀರ್ತನೆಯನ್ನು ಹಾಡಹಾಡುತ್ತ ಅವಳ ಕಣ್ಣುಗಳು ಅರಳಿ ಅಶ್ರುಪೂರ್ಣವಾದವು; ಕಂಠವು ಇನ್ನೂ ಮಧುರ ವಾಯಿತು. ಮುಖದಲ್ಲಿ ಗಾಢವಾದ ಭಕ್ತಿಭಾವವು ವ್ಯಕ್ತಪಡುತ್ತಿತ್ತು. ಒಳಗಿದ್ದ ಹುಡುಗರೆಲ್ಲರೂ ಹಾಡು ಕೇಳುತ್ತಲೆ ತಂಡತಂಡವಾಗಿ ಹೊರಗಣ ಕೈಸಾಲೆಗೆ ಓಡಿ ಬಂದರು. ಊಟಮಾಡಿದವರು ಕೈತೊಳೆದುಕೊಳ್ಳದೆ, ಒಳಗೆ ಬಡಿಸುವವರು ಹೇಳಿದ ಮಾತನ್ನು ಲಕ್ಷಿಸದೆ, ಮೊಸರನ್ನ ಉಂಡಿದ್ದ ಕೈಬೆರಳುಗಳನ್ನು ಬಾಯಲ್ಲಿಟ್ಟು ಕೊಂಡು ಚಪ್ಪರಿಸುತ್ತ, ನಗುತ್ತ ಕೇಕೆ ಹಾಕುತ್ತ ಕುಣಿಯುತ್ತ ಬಂದರು. ಎಲ್ಲರ ಮುಖದಲ್ಲಿಯೂ ಸಂತೋಷವೂ, ಸರಳತೆಯೂ, ಸಂಪೂರ್ಣ ತೃಪ್ತಿಯೂ ಇರುವು ದನ್ನು ನೋಡಿದ ಮಾತ್ರದಲ್ಲೇ ಅವಳ ಸಂಗೀತವು ನಿಂತುಹೋಯಿತು. ೮ ವರ್ಷ ಗಳ ಹುಡುಗನಿನ್ನೊಬ್ಬನು ಬಾಗಿಲಿನ ಹತ್ತಿರ ಓಡಿಬಂದು ಕೈಚಪ್ಪಾಳೆ ಹೊಡೆ ಯುತ್ತ, ತನ್ನ ತಲೆಯನ್ನು ಮೇಲೆತ್ತಿ ಅವಳ ಮುಖದಕಡೆ ನೋಡುತ್ತ "ಇನ್ನೂ ಹೇಳು, ಹೇಳು," ಎಂದು ಕೂಗಿಕೊಳ್ಳುತ್ತಿದ್ದನು. ಮಾಲಿಯು ಬಾಗಿಲನ್ನು ತೆರೆದವನು ಅವಳನ್ನು ಒಳಗೆ ಬರಹೇಳಿ, ಬೇಕಾದರೆ ಊಟಮಾಡಿಕೊಂಡು ಹೋಗ ಬಹುದೆಂದನು. ಅವಳು ಅಂಗಳದೊಳಕ್ಕೇನೋ ಬಂದಳು; ಮುಂದೆ ಪ್ರವೇಶ ಮಾಡಲಿಲ್ಲ. ಆ ೮ ವರ್ಷದ ಹುಡುಗನನ್ನು ಮುದ್ದಿಕ್ಕಿ ಅವನ ತಲೆಯನ್ನು ತನ್ನ ಮುಖಕ್ಕೊತ್ತಿಕೊಂಡು ಅವನ ಮೈದಡವುತ್ತ "ನನ್ನ ಕಂದ, ನೀನು ನೂರುವರ್ಷ ಗಳು ಸುಖವಾಗಿರಪ್ಪ; ದೇವರು ನಿನಗೆ ಎಲ್ಲಾ ಒಳ್ಳೆಯದನ್ನೂ ಮಾಡಲಿ" ಎಂದು ಹರಸಿ ಎಲ್ಲರನ್ನೂ ಒಂದುಸಲ ಕಣ್ಣುತುಂಬ ನೋಡಿ ಹೊರಕ್ಕೆ ಹೊರಟುಬಂದಳು. ಮಾಲಿಗೆ ಆಶ್ಚರ್ಯವಾಯಿತು. ಅವಳು ಹೊರಟುಹೋಗುತ್ತಿರುವುದನ್ನು ನೋಡಿ ಆ ಬಾಲಕನು ಅವಳ ಹಿಂದೆ ಹಿಂದೆಯೆ "ಇನ್ನೂ ಒಂದು ಹಾಡುಹೇಳು" ಎಂದು ಹೋಗಲುದ್ಯುಕ್ತನಾದನು. ಮಿಕ್ಕ ಹುಡುಗರೂ, "ಇನ್ನು ಒಂದು" ಎಂದು ಆಪಲ್ಲವಿಗೆ ದನಿ ಸೇರಿಸಿದರು. ಭಿಕ್ಷುಕಳೇನೋ ಹೊರಟೇಹೋದಳು. ಹಿಂತಿರುಗಿ ನೋಡಲು ಹುಡುಗರು ಒಬ್ಬೊಬ್ಬರಾಗಿ ಒಳಗೆ ಹೋಗುತ್ತಿದ್ದರು. ಮಾಲಿಯು ಮುಂದೋಡಿಬರುತ್ತಿದ್ದ ಆ ಹುಡುಗನನ್ನು ಸಮಾಧಾನಪಡಿಸಿ ಒಳಕ್ಕೆ ಕರೆದುಕೊಂಡು ಹೋಗುತ್ತಿದ್ದನು. ಇತ್ತ ಕೊಂಚದೂರ ಬಂದ ಭಿಕ್ಷುಕಳು ಓರೆಯಾಗಿ ಇತರರಿಗೆ ಕಾಣದಂತೆ, ತನಗೆ ಎಲ್ಲವೂ ಕಾಣುವ ಹಾಗೆ, ಒಂದು ಮರದಾಶ್ರಯದಲ್ಲಿ ಆಲಯದ ಕಡೆಯೇ ನೋಡುತ್ತ ನಿಂತಳು. ಇತರ ಹುಡುಗರೆಲ್ಲರೂ ತಮ್ಮ ಕಿರುಮನೆಗಳಿಗೆ ಸೇರಿದ್ದರು. ಆ ಬಾಲಕನು ಮಾತ್ರ ತನ್ನ ಕಿಟಿಕಿಯಿಂದ ಅವಳು ಹೋದಮಾರ್ಗ

ವನ್ನೆ ನೋಡುತ್ತಿದ್ದುದನ್ನು ನೋಡಿದಳು. ಅವಳ ತಲೆಗೂದಲ ಕೋಮಲವಾದ ಎಸಳುಗಳು ಕೆಲವು ಗಾಳಿಯಲ್ಲಿ ತೇಲುತ್ತ ಬಿಸಲ ಬೆಳಕಿನಲ್ಲಿ ಹೊಳೆಯುತ್ತ ಅಲ್ಲಾಡುತ್ತಿದ್ದವು. ತನ್ನ ಪ್ರಾಯಶ್ಚಿತ್ತವು ಇಂದಿಗೆ ಸಂಪೂರ್ಣವಾಯಿತೆಂದೆಂದುಕೊಂಡವಳ ಹಾಗೆ ಪುನಃ ತಲೆಯನ್ನು ಆಕಾಶದಕಡೆಗೆತ್ತಿ ತಂಬೂರಿಯನ್ನು ಮೀಟುತ್ತ ಮುಖಾರಿಯಲ್ಲಿ " ಎಂತನಿ ನೇ ವರ್ಣಿಂತುನು " ಎಂದು ಹಾಡುತ್ತ ಹೊರಟಳು. ಅಮಾನುಷ ಪವಿತ್ರತೇಜಸ್ಸೊಂದು ಆ ಗಾನದಲ್ಲಿ ಸೇರಿ ಸುತ್ತಣ ಆವರಣವನ್ನು ತುಂಬಿ, ಪುಲಕಗೊಳಿಸಿತ್ತು. ಸುಯ್ಯನೆ ಬೀಸುತ್ತಿದ್ದ ತಿಳಿಗಾಳಿಯ ವಕ್ಷದಮೇಲೆ ಮೃದುವಾಗಿ, ಸುಮಧುರವಾಗಿ ಹರಿದುಬರುತ್ತಿತ್ತು.

ಸುಮಾರು ೧೨ ಗಂಟೆಯ ಸಮಯಕ್ಕೆ ಇದೇ ಭಿಕ್ಷುಕಳು ರಾಮಚಂದ್ರಯ್ಯನವರ ಮನೆಯ ಬಾಗಿಲಿಗೆ ಹಾಡುತ್ತ ಹೋದಳು. ಮನೆಯವರು ಒಳಗಿದ್ದರು. ಹೊರಗಿದ್ದ ಆಳುಗಳು ಅವಳನ್ನು ಕುರಿತು " ಈಗ ಯಾರಿಗೂ ಕೈ ಬಿಡುವಿಲ್ಲ; ಹೋಗಿ ಬಾ " ಎಂದರು. " ನನಗೆ ಭಿಕ್ಷವು ಬೇಡಪ್ಪ. ಮನೆಯ ಯಜಮಾನಿಯನ್ನು ಎರಡು ನಿಮಿಷ ಮಾತ್ರ ನೋಡಬೇಕು " ಎಂದಳು.

" ಈಗ ಅವರು ಕೆಲಸದಲ್ಲಿದ್ದಾರೆ. ಮಧ್ಯಾಹ್ನ ಮೂರುಗಂಟೆಯ ಹೊತ್ತಿಗೆ ಬಾ ಹೋಗು—ಅವರನ್ನು ನೋಡಬೇಕಾದರೆ " ಎಂದರು.

ಭಿ—ಅವರನ್ನು ನಾನೀಗಲೆ ನೋಡಿ ಹೋಗಬೇಕು. ದಯವಿಟ್ಟು ಯಾರೋ ಒಬ್ಬ ಭಿಕ್ಷುಕಳು ತಮ್ಮನ್ನು ನೋಡಿ ಒಂದು ಮಾತು ಹೇಳಿ ಹೋಗಬೇಕೆಂದಿರುವಳೆಂದು ತಿಳಿಸಿಬನ್ನಿ, ಅವರು ಖಂಡಿತ ಹೊರಕ್ಕೆ ಬರುವರು ಎಂದಳು.

ಎಲ್ಲೊ ಒಳಗಿದ್ದ ನಾರಾಯಣನು ಆಧ್ವನಿಯನ್ನು ಕೇಳಿದೊಡನೆಯೆ ಒಂದೇ ಹಾರಿಗೆ ಹೊರಕ್ಕೆ ಹಾರಿಬಂದು ಬಾಗಿಲಿನ ಹತ್ತಿರ ನಿಂತನು. ತನ್ನೆದುರಿಗಿರುವ ಭಿಕ್ಷುಕಳನ್ನು ಎವೆಯಿಕ್ಕದೆ ನೋಡಿದನು. ಸರಿಯಾಗಿ ನೋಡಿದೆನೊ ಇಲ್ಲವೊ ಎಂದುಕೊಂಡವನು ಕಣ್ಣುಗಳನ್ನು ಒರಸಿಕೊಂಡು ಪುನಃ ನೋಡಿದನು. ನಿಶ್ಚಯವಾಗಿಯೂ ಈ ಭಿಕ್ಷುಕಳು ಅವಳೇಯೆ ? ಚಂದ್ರಮುಖಿಯೆ ? ಈ ಬಿಳಿಯ ವಸ್ತ್ರವೇನು ? ತುರುಬೇನು ? ಕೈಯಲ್ಲಿ ತಂಬೂರಿಯೇನು ? ಈ ರಜೋರಹಿತವಾದ, ಶಾಂತವಾದ, ಗಂಭೀರವಾದ ಮುಖಮುದ್ರೆಯೇನು ? ದೇವಿಯು ಹಾಗಿರುವ ಮುಖಕಾಂತಿಯೇನು? ನಾನು ಸರಿಯಾಗಿ ನೋಡುತ್ತಿದ್ದೇನೆಯೆ ? " ಎಂದು ಕೊಳ್ಳುತ್ತ ಅವಳೆದುರಿಗೆ ಬಂದು, " ನೀನು ಯಾರು ಚಂದ್ರ· · ·ಉ—ಚಂದ್ರಮುಖಿಯಲ್ಲವೆ ? " ಎಂದನು.

‡

ಭಿ—ನಾನೊಬ್ಬ ಬಡ ಭಿಕ್ಷುಕಳು. ನಿಮ್ಮ ತಾಯಿಯವರ ಕೂಡ ಮಾತನಾಡ ಬೇಕೆಂದು ಬಂದಿದ್ದೇನೆ.

ನಾ—ನಿಶ್ಚಯವಾಗಿ ಹೇಳು. ನೀನು ಚಂದ್ರಮುಖಿಯಲ್ಲವೇನು? ನಿನ್ನ ದೇವರ ಮೇಲಾಣೆಯಿಟ್ಟು ಹೇಳು...ನಾನೇನೊ ನೀನು ಅವಳೇ ಎಂದು ತಿಳಿದಿದ್ದೇನೆ.

ಎಷ್ಟೋ ವಿಧವಾಗಿ ಬಿಗಿಹಿಡಿದಿದ್ದ ಮನಸ್ಸು ಕದಲಿ ಸಡಿಲವಾಯಿತು. ಕಣ್ಣಿನಲ್ಲಿ ನೀರು ಸುರಿಯಿತು. ಇವಳಾರು? ಅವನಾರು? ಯಾವ ಸಂಬಂಧ? ಭಿಕ್ಷುಕಳು ಮುಂದೆ ಬಂದು ನಾರಾಯಣನ ಭುಜದಮೇಲೆ ಕೈಯಿಟ್ಟು ಅವನ ಮುಖವನ್ನು ನೋಡುತ್ತ "ಮಗು ನೀನು ನಿಶ್ಚಯವಾಗಿ ಊಹಿಸಿರುವೆ. ಆದರೆ ನಾನು ಈಗ ಚಂದ್ರಮುಖಿಯಲ್ಲಪ್ಪ; ಭಿಕ್ಷುಕಳು. ನಾನು ಎಷ್ಟೊ ಪ್ರಯತ್ನಪಟ್ಟೆನು ಏಕಾಕಿನಿಯಾಗಿ, ಈ ಪ್ರಪಂಚ ಸಂಪರ್ಕವಿಲ್ಲದೆ, ಹಿಂದಿನದೆಲ್ಲವನ್ನೂ ಮರೆತು ನಿಸ್ಸಂಗಳಾಗಿರಬೇಕೆಂದು. ೮ ವರ್ಷಗಳು ಹೆಣಗಾಡಿದೆ; ಮಿಕ್ಕದನ್ನೆಲ್ಲಾ ಮರೆತೆ; ನಿನ್ನನ್ನು ಮರೆಯಲಾಗಲಿಲ್ಲ. ದಿನವು ಕಳೆಯುತ್ತ ಕಳೆಯುತ್ತ ಒಂದು ಬಾರಿಯಾ ದರೂ ನಿನ್ನನ್ನು ನೋಡಬೇಕೆಂಬ ಅಭಿಲಾಷೆಯು ವೃದ್ಧಿಯಾಗುತ್ತಲೇ ಬಂತು. ಏಕಾಂತದಲ್ಲಿ ಹಳೆಯದನ್ನು ಮರೆಯಬಹುದೆಂದು ಹೇಳುತ್ತಾರೆ. ನನಗೆ ಅದು ಸಾಧ್ಯ ವಾಗಲಿಲ್ಲ. ಆದ್ದರಿಂದ ಕೊನೆಗೆ ಹೀಗೆ ಬಂದು ಬಿಟ್ಟೆನು. ಮನೆಯಲ್ಲಿ ಎಲ್ಲರೂ ಆರೋಗ್ಯವಷ್ಟೆ?"

ನಾ—"ಒಳಗೆ ಹೋಗೋಣ ಬಾ. ಮೊದಲು ಏನಾದರೂ ಸ್ವಲ್ಪ ತೆಗೆದುಕೊ. ಆಮೇಲೆ ಉಳಿದುದನ್ನು ಮಾತನಾಡುವ" ಎಂದು ಒಳಗೆ ಹೋಗಿ "ಅಮ್ಮ, ನಾನು ಏನು ಹೇಳಿದ್ದೆ? ನೋಡು ಚಂದ್ರಮುಖಿಯು ಬಂದೇ ಬಂದಿರುವಳು. ನನಗೆ ಗೊತ್ತಮ್ಮ!"

ತಾಯಿಯೂ ಹೊರಗೆ ಬಂದು ಅವಳನ್ನು ನೋಡಿ ಚಕಿತಳಾಗಿ "ಅಮ್ಮ, ನಮ್ಮ ಮಗು ನಿಮ್ಮನ್ನು ನೆನೆಸಿಕೊಳ್ಳದ ದಿನವೇ ಇಲ್ಲ; ಕೊನೆಗೆ ಬಂದೆಯಲ್ಲ; ಇದೇ ನಮ್ಮ ಈಗಿನ ಸ್ಥಿತಿ! ಕಾಲುತೊಳೆದುಕೊ, ಊಟಮಾಡುವಿಯಂತೆ." ಎಂದಳು.

ಚಂದ್ರ—ನನಗೆ ನೀವು ಮಾಡಿರುವ ಉಪಕಾರವು ಅಮೋಘವಾದುದು. ನನಗೆ ಎಷ್ಟು ದಿನ ಎಂಥ ಊಟವನ್ನು ಮಾಡಿಸಿದರೂ ಅದರಷ್ಟು ಉಪಕಾರ ಮಾಡಿದಂ ತಾಗದು. ನಾನು ಊಟಮಾಡುವುದಿಲ್ಲಮ್ಮ; ಒಂದು ಪಂಚಪಾತ್ರೆ ನೀರು

ಕೊಡಿ, ಸಾಕು. ಒಂದು ಸಲ ನಿಮ್ಮನ್ನು ನೋಡಿಕೊಂಡು ಹೋಗೋಣ ವೆಂದು ಬಂದೆ...

ತಾಯಿ—ಸ್ವಲ್ಪ ವಿಶ್ರಮಿಸಿಕೊ. ಮುಂದೆ ಮಾತನಾಡೋಣ.

ಚಂದ್ರ—ಇಲ್ಲ ತಾಯಿ ನಾನು ನಿಲ್ಲಲಾರೆ. ಈ ಊರು ಬಿಟ್ಟು ಹೊರಟುಹೋಗ ಬೇಕು.

ತಾಯಿ—(ನೀರುಕೊಟ್ಟು) ಆಲಯವನ್ನು ನೋಡಿಕೊಂಡು ಬಂದೆಯೇನಮ್ಮ.

ಚಂದ್ರ—ಅಯ್ಯನವರು ಅಲ್ಲಿ ಮಾಡುತ್ತಿರುವ ಕೆಲಸದ ವಿಷಯವನ್ನು ಕೇಳಿ ನನಗೆ ಪರಮಾನಂದವಾಯಿತು. ಅವರ ಆಡಳಿತದಲ್ಲಿ ಯಾವುದಕ್ಕೇನೂ ಕೊರತೆ ಯಿಲ್ಲವೆನ್ನುವರಮ್ಮ—ನನಗೆ ಅಷ್ಟೇ ಸಾಕು. ಇನ್ನು ನೋಡುವುದೇನು?

ನಾರಾಯಣನು ಪೇಟೆಗೆ ಹೋಗಿ ಜಾಗ್ರತೆ ಬರುವೆನೆಂದು ಹೇಳಿ ಹೊರಟು ಹೋದನು. ಇಬ್ಬರು ಹೆಂಗಸರೂ ಕುಳಿತು ಏನೇನೋ ಮಾತನಾಡಿದರು. ಅದರಲ್ಲಿ ಅತ್ಯಧಿಕಾಂಶವು ನಾರಾಯಣನ ವಿಷಯ. ಚಂದ್ರಮುಖಿಗೆ—ಮುಕ್ತಿಮಾರ್ಗವನ್ನು ತೋರಿಸಿದವನ ವಿಷಯ, ಅವನ ಗುಣಕಥನ. ಚಂದ್ರಮುಖಿಯು ತನ್ನ ಮಡಿಲೊಳ ಗಿಂದ ಒಂದು ವಜ್ರದ ಪದಕವನ್ನು ತೆಗೆದು ಅಮ್ಮನವರ ಕೈಗೆ ಕೊಟ್ಟು, ಇದು ನಾರಾಯಣನ ಮದುವೆಯ ಕಾಲದಲ್ಲಿ ಭಿಕ್ಷುಕಳ ನಮಸ್ಕಾರಪೂರ್ವಕವಾಗಿ ನಾರಾ ಯಣನ ಹೆಂಡತಿಗೆ ದೀರ್ಘಸುಮಂಗಲಿಯಾಗಿರುವಂತೆ ಹರಸಿ ನೀವು ಕೊಡಬೇಕೆಂದು ಹೇಳಿ ತಾನು ಹೊರಡಲು ನಿಂತಳು. ನಾರಾಯಣನು ಅಷ್ಟರಲ್ಲಿಯೇ ಓಡಿಬಂದನು. ಒಂದು ಬುಟ್ಟಿಯತುಂಬ ಕಿತ್ತಿಳೆ ಸೇಬು ದ್ರಾಕ್ಷಿ ಹಣ್ಣುಗಳನ್ನು ತಂದು ಅವಳ ಮುಂದಿಟ್ಟು "ನೀನು ಇದನ್ನೆಲ್ಲಾ ತೆಗೆದುಕೊಂಡೇ ಹೋಗಬೇಕು" ಎಂದು ಹೇಳಿದನು. ಚಂದ್ರಮುಖಿಯು ಒಂದು ಕಿತ್ತಿಳೆ ಹಣ್ಣನ್ನು ಸುಲಿದು ಅರ್ಧವನ್ನು ಅವನಿಗೇ ಕೊಟ್ಟು ಉಳಿದರ್ಧವನ್ನು ಮಾತ್ರ ತಿಂದು ತೃಪ್ತಳಾಗಿ, ಅವನ ಕೈಗೆ ಮುದ್ರೆ ಮೊಹರಾದ ಒಂದು ಕಾಗದವನ್ನು ಕೊಟ್ಟು, "ಇದನ್ನು ನಾನು ಇಲ್ಲಿಂದ ಹೊರಟುಹೋದ ಎರಡು ಗಂಟೆಗಳ ಮೇಲೆ ತೆಗೆದು ಓದಿಕೊಳ್ಳಬೇಕು, ಕಂಡೆಯ, ಮಗು" ಎಂದು ಹೇಳಿ, ಯಾರೆಷ್ಟು ವಿಧವಾಗಿ ಹೇಳಿದರೂ ಕೇಳದೆ, ಒಂದೆರಡು ಹೂಗಳನ್ನು ಮಾತ್ರ ತೆಗೆದುಕೊಂಡು ತನ್ನ ಜೊತೆಯಲ್ಲಿ ನಾರಾಯಣನು ಬರ ಕೂಡದೆಂದು ಹೇಳಿ, ಪುನಃ ತಂಬೂರಿಯನ್ನು ಹಿಡಿದುಕೊಂಡು ಹಾಡುತ್ತ ಹೊರಟೇ ಹೋದಳು. "ಭಜನಪರುಲಕೇಲಕಲುಗು ದಂಡಪಾಣಿ ಭಯಮು" ಎಂದು ಹಾಡುತ್ತ ಹೋದಳು.

ಅವಳು ಹೋದ ಎರಡು ಗಂಟೆಗಳ ತರುವಾಯ ಕಾಗದವನ್ನು ಒಡೆದು ದಾಯಿತು. ಅಯ್ಯನವರೂ ಅಷ್ಟುಹೊತ್ತಿಗೆ ಮನೆಗೆ ಬಂದಿದ್ದರು. ಆ ಕಾಗದದಲ್ಲಿ ರೆಜಿಸ್ಟರಾದ ಒಂದು ಪತ್ರವೂ ಮೇಲುಗಡೆ ಇನ್ನೊಂದು ಕಾಗದವೂ ಇದ್ದವು. ಕಾಗದವನ್ನು ನಾರಾಯಣನೂ ಅಯ್ಯನವರೂ ಓದಿಕೊಂಡರು. ಚಂದ್ರಮುಖಿಯ ಒಟ್ಟು ಆಸ್ತಿಯಲ್ಲಿ ಅರ್ಧಭಾಗವು ಅನಾಥಾಲಯದ ಅಭಿವೃದ್ಧಿಗೆಂದೂ, ಉಳಿದ ಅರ್ಧವಾದ ೪೫,೦೦೦ ರೂಪಾಯಿಗಳ ಆಸ್ತಿಯು ಚಂದ್ರಮುಖಿಯಿಂದ ನಾರಾಯಣನಿಗೆ ಅವಳ ಕೃತಜ್ಞತಾಸೂಚಕವಾದ ಕಾಣಿಕೆಯೆಂದೂ, ಅದನ್ನು ಅಯ್ಯನವರೂ ನಾರಾಯಣನೂ ಅವಳಲ್ಲಿ ದಯೆಯಿಟ್ಟು ಪರಿಗ್ರಹಿಸಬೇಕೆಂದೂ ಬರೆದಿತ್ತು. ನಾರಾಯಣನು ಆಮೇಲೆ ಊರೆಲ್ಲ ಸುತ್ತಿದನು :—ಚಂದ್ರಮುಖಿಯು ಸಿಕ್ಕುವಳೇನೋ ಎಂದು ಕಂಡಕಂಡವರನ್ನೆಲ್ಲಾ ಕೇಳಿದನು ; ರೈಲ್ವೇಸ್ಟೇಷನ್ನಿಗೆ ಹೋಗಿ ವಿಚಾರಿಸಿದನು. ಯಾರೂ ಅವನಿಗೆ ಅವಳು ಎತ್ತಹೋದಳೆಂಬ ಸಮಾಚಾರವನ್ನು ಕೊಡಲಾರದೆ ಹೋದರು.

ಚಂದ್ರಮುಖಿಯ ಧೀರಶಾಂತವಾದ ಮುಖವೊಂದು ಮಾತ್ರ ಯಾವಾಗಲೂ ಅವನೆದುರಿಗೇ ನಿಂತಿರುತ್ತಿತ್ತು; ಎತ್ತಹೋದರೂ, ಅವಳ ತಂಬೂರಿಯ ಝುಂಕಾರವೂ ಅವಳ ಇನಿದಾದ ಕಂಠದಿಂದ ಹೊರಟ ಗಾನವೂ ಕೇಳಿಬರುತ್ತಿತ್ತು.

ಯಾರ ಜೀವನಕ್ಕೆ ಯಾವ ಸಂಸ್ಕಾರ ಹೇಗೆ ಬರಬೇಕೊ ಯಾರು ಬಲ್ಲರು ?

ಕಾವ್ಯಾವಲೋಕನ

ಕಾಣಿಕೆ—ಲೇಖಕರು, ಮ|| ರಾ|| ಕಡೆಂಗೋಡ್ಲು ಶಂಕರಭಟ್ಟರು. **ಕ್ರೌನ್ ಪುಟಗಳು 30 ; ಕ್ರಯ 3 ಆಣೆ.**

ಸುಮಾರು ಹದಿನೈದು ವರ್ಷಗಳ ಹಿಂದೆ ಕನ್ನಡ ಸಾಹಿತ್ಯದ ಮುಂದಿನ ಬೆಳೆವಣಿಗೆಯು ಹೇಗಾಗುವುದೆಂದು ಯಾರಾದರೂ ಕೇಳಿದ್ದರೆ ಧೈರ್ಯದಿಂದ ಉತ್ತರ ಕೊಡುವುದು ಕಷ್ಟವಾಗಿದ್ದಿತು. ಸಂಸ್ಕೃತಜ್ಞರು ತಮ್ಮ ಕೈಲಾದ ಸಹಾಯವನ್ನು ಕನ್ನಡಕ್ಕೆ ಮಾಡಿ ತಟಸ್ಥರಾಗಿದ್ದರು. ಹಾಗೆಯೇ ಇಂಗ್ಲೀಷು ತಿಳಿದ ಮಹನೀಯರು ಕೆಲವು ಭಾಷಾಂತರಗಳನ್ನು ಮಾಡಿ ಸೋತುಹೋಗಿದ್ದರು. ಹೊಸಗ್ರಂಥಗಳು ಈ ರೀತಿ ನಿರ್ಮಾಣವಾದರೂ ಹೊಸ ರೂಪಗಳೂ ಹೊಸ ಮಾರ್ಗಗಳೂ ತಲೆದೋರಲಿಲ್ಲ. ಕೇವಲ ಭಾಷಾಂತರಕರ್ತರೆಂಬ ಬಿರುದನ್ನು ಕನ್ನಡ ಗ್ರಂಥಕರ್ತೃಗಳು ಪಡೆಯುವುದೇ ಅವರ ಹಣೆಯಬರೆಹವೆಂದು ಒಂದೊಂದು ವೇಳೆ ಅನ್ನಿಸುತ್ತಿದ್ದಿತು. ಈಗ ನೋಡಿದರೆ, ಎಷ್ಟು ಬೇಗ ಎಷ್ಟು ರೂಪಗಳು ಸಾಹಿತ್ಯದಲ್ಲಿ ಸ್ಥಾನಪಡೆದುನಿಂತಿವೆ ಎಂಬ ಆಶ್ಚರ್ಯವೂ ಸಂತೋಷವೂ ಉಂಟಾಗುವುವು.

ಈ ಮಾರ್ಪಾಟು ಕ್ರಮಕ್ರಮವಾಗಿ ಆದುದಲ್ಲ. ಕಾಲಮಾನದಿಂದ ನೋಡಿದರೆ ಒಮ್ಮಿಂದೊಮ್ಮೆ ಆದುದೆಂದೇ ಹೇಳಬೇಕು. ಕಾರಿರುಳಿನ ಸಮಯದಲ್ಲಿ ಕಾರ್ಮೋಡಗಳ ಮರೆಯಲ್ಲಿದ್ದ ಪೂರ್ಣಚಂದ್ರನು ಜವನಿಕೆಯನ್ನು ಸರಿದು ಎದುರು ನಿಂತಹಾಗಿದೆ. ಗುಪ್ತಗಾಮಿಯಾಗಿದ್ದ ನವಜೀವನವಾಹಿನಿಯು ಬಾಯಾರಿ ಬಳಲಿದ್ದ ಜನಮಂಡಲಿಯೆದುರಿಗೆ ಪ್ರತ್ಯಕ್ಷವಾದಂತಿದೆ. ಮಾಯಾಭುಜಂಗನು ತೋರಿದ ಇಂದ್ರಜಾಲಕ್ಕಿಂತಲೂ ಇದು ಅಧಿಕವಾಗಿ ಕಂಡುಬರುವುದು. ಸಂಸ್ಕೃತಿ ಹೊಂದಿದ ಜನಗಳಿಗೆ ನೂತನ ಭಾವಗಳೂ ನೂತನ ಶೈಲಿಯೂ ಬೇಕಾಗಿದ್ದಾಗ ಹಿಂದಿನ ಸಾಹಿತ್ಯದಲ್ಲ ಒಂದು ಬಗೆಯ ಅನಾದರಣೆಯೂ ಜುಗುಪ್ಸೆಯೂ ತಲೆದೋರಿದ್ದಾಗ ಧೈರ್ಯಶಾಲಿಗಳಾದ ಕವಿವರ್ಯರು ಕೆಲವರು ಹೊಸದಾರಿಯನ್ನು ತೋರಿಸಿದರು. ಆ ಕಾವ್ಯಗಳು ಕೂಡಲೇ ಬಹು ಜನಾದರಣೀಯವಾದುವು. ಕಾಲಕ್ಕೆ ತಕ್ಕ ಮಾರ್ಪಾಟು ಆಗಿ ಹೋಯಿತು. ಕಾಲಸ್ಥಿತಿಯನ್ನು ಪ್ರತಿಬಿಂಬಿಸುವ ಕವಿಗಳು

ಕಾಣಿಸಿಕೊಂಡರು. ಇವರ ಗೀತಗಳಲ್ಲಿ ವ್ಯಕ್ತಿತ್ವವಿರುವುದು ಒಂದು ಲಕ್ಷಣ. ಪ್ರಕೃತಿಯ ಸೌಂದರ್ಯ ವಿಶೇಷವನ್ನು ತಮ್ಮ ಮನೋಧರ್ಮಕ್ಕನುಗುಣವಾಗಿ ಚಿತ್ರಿಸುವುದು ಇನ್ನೊಂದು ಲಕ್ಷಣ. ಪ್ರಪಂಚಸ್ಥಿತಿಯನ್ನು ತಮ್ಮ ಅನುಭವ ಸಹಾಯದಿಂದ ವಿವರಿಸುವುದು ಮತ್ತೊಂದು ಲಕ್ಷಣ. ತಮ್ಮ ಮತ್ತು ನೆರೆಹೊರೆಯವರ ಲೌಕಿಕ ಜೀವನದಲ್ಲಿ ಸಮನಿಸುವ ಸುಖ ದುಃಖ ಸನ್ನಿವೇಶಗಳನ್ನು ಅರ್ಥವತ್ತಾಗಿ ರೂಪುಗೊಳಿಸುವುದು ಬೇರೊಂದು ಲಕ್ಷಣ. ಈ ಹೊಸ ಕವಿತೆಗಳು ಪಂಡಿತಜನರನ್ನು ಸಡ್ಡೆಮಾಡದೆ ಬಂದುನಿಂತಿವೆ. ಇವುಗಳನ್ನು ಅವರು ಓಡಿಸುವ ಹಾಗಿಲ್ಲ. ಅವರ ಅಸಮಾಧಾನವೂ ಗೊಣಗಾಟವೂ ಎಲ್ಲೋ ಮುಸುಕಿನಲ್ಲೇ ಕೊನೆಗಾಣುತ್ತಿದೆ. ಇನ್ನು ಹಿಂದಿನ ಮಾರ್ಗವು ಹಿಂದೆ ಉಳಿದಂತೆಯೇ ಸರಿ. ಬ್ರೌನಿಂಗ್ ಕವಿಯು "The grammarian's funeral" ಎಂಬ ಗೀತವನ್ನು ಬರೆದಂತೆ ಕಿಶೋರ ಚಂದ್ರವಾಣಿಗಳಂಥ ಕವಿ ಕಿಶೋರಗಳಲ್ಲಿ ಯಾರಾದರೊಬ್ಬರು "ಪಂಡಿತ ಕವಿಯ—" ನ್ನು ಹಾಡುವರೆಂದು ನಮಗೆ ತೋರುತ್ತದೆ.

ಶಂಕರಭಟ್ಟರು ನೂತನ ಪಂಗಡಕ್ಕೆ ಸೇರಿದ ಕವಿಗಳು. ಇವರು ಮೊದಲು ಕಾಣಿಸಿಕೊಂಡುದು ಅಸಹಕಾರದ ಚಳವಳದಲ್ಲಿ. ದೇವಾಸುರರು ಸೇರಿ ಸಮುದ್ರಮಥನ ಮಾಡಿದಾಗ ಧನ್ವಂತರಿಯು ಅಮೃತವನ್ನು ಹಿಡಿದುಕೊಂಡು ಹೊರಕ್ಕೆ ಬಂದನೆಂಬ ಪುರಾಣವೊಂದಿದೆಯಷ್ಟೆ. ಹಿಂದೆ ಆದ ಅಸಹಕಾರದ ಚಳವಳದಿಂದ ಯಾರಿಗೂ ಸ್ವರಾಜ್ಯಾಮೃತವು ಲಭಿಸಲಿಲ್ಲ. ಮೊದಲೇ ಆವಿರ್ಭವಿಸಿದ ಘೋರ ವಿಷವನ್ನು ಧರಿಸಲು ಒಬ್ಬ ಪರಮೇಶ್ವರನು ಅವತಾರಮಾಡಿದ್ದಿದ್ದರೆ ಬಹುಶಃ ಸ್ವರಾಜ್ಯಾಮೃತವು ಕಡೆಗೆ ಲಭಿಸುತ್ತಿತ್ತೋ ಏನೋ. ರಾಜಕೀಯ ಕ್ಷೇತ್ರದಲ್ಲಾದಂತೆಯೇ ಸಾಹಿತ್ಯ ಕ್ಷೇತ್ರದಲ್ಲಿಯೂ ಅಸಹಕಾರ ಮಥನದ ಅದ್ಭುತ ಘೋಷವು ಕೇಳಿಸಿತು. ಆ ತೆರೆ ನೊರೆಗಳ ಅವಾಂತರವೇ ಬಹಳವಾಗಿದ್ದರೂ ಒಂದೆರಡು ರತ್ನಗಳು ಹೊರಸೂಸಿಬಿದ್ದುವು. ಶಂಕರಭಟ್ಟರು ಆಗ "ಸಮನೋಗಂಧಿ ಶ್ರೀಕೃಷ್ಣ" ನಿಗಾಗಿ ದ್ರೌಪದೀ ವಸ್ತ್ರಾಪಹರಣವನ್ನು ಬರೆದು ದೃಷ್ಟಿಗೋಚರರಾದರು

ಈ ಆರೇಳು ವರ್ಷಗಳಲ್ಲಿ ಕವಿಯ ಮನೋಭಾವವು ಮಾರ್ಪಾಟುಹೊಂದಿದೆ. ಆಗ ಕವಿಯ ಚಿತ್ತವೃತ್ತಿಯು ಸ್ವರಾಜ್ಯಸಾಧನೋದ್ಯೋಗದಲ್ಲಿ ಲೀನವಾಗಿ ಪ್ರತಿಭೆಯು ಹುಚ್ಚುಹೊಳೆಯಾಗಿದ್ದಿತು. ಪ್ರಪಂಚದ ವಸ್ತುಸ್ಥಿತಿಯಲ್ಲಿ ಆಶಾಪೂರಿತವಾಗಿದ್ದ ಮನಸ್ಸು ಈಗ ನಿಖರವಾದ ಜ್ಞಾನದಿಂದ ಪರಿಪಕ್ವವಾಗಿ ಮೊದಲಿನ ಭ್ರಾಂತಿಯನ್ನು ಕಳೆದುಕೊಂಡು ಚಿಂತಾಪರವಶವಾಗಿದೆ.

ಪಂಕವೆಡೆಗೊಂಡ ಭೂಮಿಯ ಹೃದಯಮಧ್ಯದ ಕ |
ಲಂಕವನು ಮಳೆ ಕಳೆದುಕೊಂಡೋಡುವಂತೆ,
ಸಂಕಟವ ಪರಿಹರಿಪ ನಿನ್ನ ಕರುಣೆಯೆ ಮನದ
ಪಂಕವನು ಕಳೆಯಲಿದುವೇ ದೇವ ಚಿಂತೆ.

ಜೀವನದ ರಹಸ್ಯವನ್ನು ಭೇದಿಸುವ ಬುದ್ಧಿಯು ಆಗಿರಲಿಲ್ಲ. ಜೀವನದ ಪಥದಲ್ಲಿ ಕಲ್ಲು ಮುಳ್ಳುಗಳಿವೆಯೆಂಬ ಭಾವವು ಆಗ ಪ್ರಬಲಿಸಿರಲಿಲ್ಲ. ನೂತನದಂಪತಿಗಳ ಪ್ರಣಯ ಪ್ರಪಂಚವೆಲ್ಲ ಹೇಗೆ ಮನೋಮೋಹಕವಾಗಿರುವುದೋ ಹಾಗೆಯೇ ಯೌವನದ ಪ್ರಾದುರ್ಭಾವದಲ್ಲಿ ಕವಿತಾರಮಣಿಯ ಪ್ರಥಮಸಂದರ್ಶನದಲ್ಲಿ ಪ್ರಪಂಚವು ಸಂತೋಷಸ್ಥಾನವಾಗಿದ್ದಿತು. ಕಾಲಕ್ರಮದಲ್ಲಿ ಬಂದ ಅನುಭವಗಳಿಗೆ ಕವಿಯು ಸಿದ್ಧನಾಗಿರಲಿಲ್ಲ. ಕೆಲವು ಅನಿತ್ಯ, ಕೆಲವು ನಿತ್ಯ, ಎಂಬ ತಿಳಿವಳಿಕೆಯು ಮನಸ್ಸಿನ ಮೇಲೆ ಪರಿಣಾಮವನ್ನು ತೋರಿಸಿತು. ಪ್ರಪಂಚದ ವಸ್ತುಸ್ಥಿತಿಯಲ್ಲಿ ಉಬ್ಬಿ ಹೋಗುವ ಸನ್ನಿವೇಶಗಳಿಲ್ಲವೆಂಬ ಬಗೆಯು ಗೋಚರಿಸಲಾರಂಭಿಸಿತು. ಹಾಗೆಯೇ ಕುಗ್ಗಿಹೋಗುವ ಕಾರಣವೂ ಇಲ್ಲವೆಂದು ಸ್ಫುರಿಸಿತು.

“ ಪೋಪುದು ಹೋದರೆ ಬಪ್ಪುದು ಬಂದರೆ
ನಾ ಪಳವಿಪ ಮಾನವನಲ್ಲ
ನೀ ಪೋದೊಡೆ ಬಾಲ್ಯವೆ ! ಕಡುನೊಂದೀ
ತಾಪದೆ ಕೊಂಡಾಡುವೆನಲ್ಲ

ಎಂದು ಕವಿಯು ಸಮಾಧಾನಚಿತ್ತದಿಂದ ನೂತನ ಅರ್ಥಗಳಿಗೂ ನೂತನ ಸನ್ನಿವೇಶ ಗಳಿಗೂ ಹೊಂದಿಕೊಂಡನು. ಪ್ರೇಮದಲ್ಲಿ ಸಂತೋಷವು ಹೇಗೆ ಉಂಟೋ ಹಾಗೆ ವ್ಯಸನವೂ ಇದೆ. ಸಂತೋಷಾನುಭವದಲ್ಲಿ ಈ ದ್ವಂದ್ವ ಜೀವನವು ಗೋಚರಿಸು ವುದಿಲ್ಲ. ವ್ಯಸನದಲ್ಲಿ ಮಾತ್ರ ಅದು ಸ್ಫುರಿಸುತ್ತದೆ. ಪ್ರೇಮವಿರುವುದರಿಂದಲೇ ವಿರ ಹವು ದುಃಖಕಾರಣವಾಗುವುದು. ಕವಿಯು ಈ ಪ್ರೇಮಬಂಧನದ ದುಃಖಪರಿಣಾಮ ವನ್ನು ನಾನಾ ಗೀತಗಳಲ್ಲಿ ವ್ಯಕ್ತಗೊಳಿಸಿದ್ದಾನೆ. ಮನುಷ್ಯಾಧೀನವಲ್ಲದ ಚಿರವಿರಹ ವನ್ನು ಮನುಷ್ಯ ಮಾತ್ರದಲ್ಲಲ್ಲದೆ ಪ್ರಕೃತಿಯ ಸರ್ವಾಂಗದಲ್ಲಿಯೂ ರೂಪುಗೊಳಿಸಿ ದ್ದಾನೆ. ಹೂವುಗಳಲ್ಲಿ, ನಿಶಿತಾರೆಗಳಲ್ಲಿ, ಬಾಲ್ಯವಿಮೋಚನೆಯಲ್ಲಿ, ನಗೆಯಲ್ಲಿ, ಹೀಗೆಯೇ ಎಲ್ಲದರಲ್ಲಿಯೂ ಭಾವವ್ಯಂಜನ ಮಾಡಿಸಿದ್ದಾನೆ. ಈ ಗೀತಗಳಲ್ಲಿ ಸ್ಥಿರಾಸ್ಥಿರಗಳ ಪರಿಜ್ಞಾನದಿಂದ ಬಂದ ಸ್ಥಿಮಿತಭಾವವು ಮೂರ್ತಿವೆತ್ತಿದೆ. ಈ ಸ್ಥಿಮಿತಭಾವವು ಕೃತಕವಲ್ಲ. ತನ್ನ ಪ್ರೇಮ ಸರ್ವಸ್ವವಾದ ನಾಯಿಕೆಯನ್ನು

ಹುಡುಕಲೋಸುಗ ಸನ್ಯಾಸಿವೇಷಧಾರಿಯಾದ ನಾಟ್ಯರಂಗದ ನಾಯಕನ ವಚನ ರಚನೆಯಿದರೊಳಿಲ್ಲ. ಹೃದಯದ ಅಂತರಾಳದಿಂದಲೂ ಧ್ವನಿತವಾಗುತ್ತಿರುವ ವಚನಾನುಭವವು ಇದರಲ್ಲಿದೆ. ಪೂರ್ಣಚಂದ್ರನ ಪೂರ್ಣಕೌಮುದಿಯಲ್ಲಿ ಕುಳಿತು ಪ್ರಣಯ ಮೂರ್ತಿಗಳು ವೈರಾಗ್ಯಚರ್ಚೆಯನ್ನು ಮಾಡುತ್ತಿರುವ ಆಭಾಸಸನ್ನಿವೇಶವು ಇಲ್ಲಿಲ್ಲ. ಶುಕ್ಲಪಕ್ಷದ ಸಪ್ತಮೀ ಚಂದ್ರನು ಮೋಡಗಳ ಮರೆಯಿಂದ ಚರಮಕಿರಣ ಗಳನ್ನು ಸೂಸುತ್ತಿರುವಾಗ, ಭೂತಚ್ಛಾಯೆಗಳಂತೆ ವೃಕ್ಷಚ್ಛಾಯೆಗಳು ಮೌನ ಮುದ್ರೆಯಿಂದ ಭೀಕರನಿಶಿಯನ್ನು ಭೇದಿಸುತ್ತಿರುವಾಗ, ಮಸಣದಲ್ಲಿ ಗತಜೀವಿಗೆ ಮನೆಯನ್ನು ಸಿದ್ಧಪಡಿಸುತ್ತಿರುವ ದೃಶ್ಯವನ್ನು, ನೋಡಿ, ಅನುಭವಿಸಿ, ತರ್ಕಿಸಿ ಜಗ ವೆಂಬ ಆಟದ ಬಯಲು, ಎಂದು ಸಮಾಧಾನಪಟ್ಟು ಹಾಡಿದ ಗೀತಪದಗಳಿವು.

ವಿಧಿಗೈದ ಬಗೆಬಗೆಯ ವೇಷಗಳ ಚಂದವನು
ಹುದುಗಿಸುವ ಕೆಲಸವೊಂದೇ ನೋಡೆ ಮಸಣಕ್ಕೆ
ಜಗದೊಳುದಿಸಿದರೆಲ್ಲ ಬದುಕಿದರೆ ಧಾರಿಣಿಯ
ಆಗಲಸಾಕಾಗುವುದೆ ಜೀವನಗಳಾಟಕ್ಕೆ ?
ಕೆಲಸತೀರಿದ ಜನರು ಬಂದು ಮಲಗುವರಿಲ್ಲಿ
ನೆಲಸಲನ್ಯರಿಗೆ ಧಾರಿಣಿಯೊಳೆಡೆಮಾಡುವರು
ಜರೆಯಡಗೆ ಜೀವನವು ಮರೆಗೊಂಬ ತಾಣವಿದು
ಜನನಮರಣವ ಹಿಡಿದು ಮುರಿದುಂಬ ಮಸಣವಿದು

ಎಂದು ಮಸಣ ನಿವೇಶನಕ್ಕೂ ಒಡಂಬಡಿಕೆಗೊಂಡು ಕವಿಯು ಸ್ಥಿರಚಿತ್ತ ನಾಗಿರುತ್ತಾನೆ.

ಕವಿಯು ಆಶಿಸುತ್ತಿರುವುದು ಶಾಂತಿಯನ್ನು. ಜೀವನದ ಹೊಡೆದಾಟದಲ್ಲಿ ಕಂಬನಿಗಳನ್ನು ಸುರಿಸಿ ಆತ್ಮವು ಪರಮಾತ್ಮನಲ್ಲಿ ಶರಣುಬಂದಿದೆ. ಆದರೆ ಪ್ರಪಂಚದ ವಿಷಯದಲ್ಲಿ ವೈರಾಗ್ಯವಾಗಲಿ, ಇದು ನಿಕೃಷ್ಟವೆಂಬ ತುಚ್ಛೀಕರಣವಾಗಲಿ, ಜನ್ಮವು ಪಾಪಬದ್ಧವೆಂಬ ಜುಗುಪ್ಸೆಯಾಗಲಿ ಕವಿಗೆ ಇಲ್ಲ. ಭಗವಂತನು ಕರ್ತವ್ಯಸಾಧ್ಯನೆ ಗಾಗಿ ಈ ಜೀವನನ್ನು ನಿಯೋಜಿಸಿದ್ದಾನೆ. ಸಾಧನೆಯ ಅನಂತರ ಹಿಂದಕ್ಕೆ ಕರೆದು ಕೊಳ್ಳುತ್ತಾನೆ. ಆದುದರಿಂದ ನಿರ್ವಿಕಾರಬುದ್ಧಿಯಿಂದ ಬಂದು ಹೋಗುವೆನೆಂಬ ಭಾವವು ಕವಿಯದಾಗಿದೆ.

ತಂದೆಯಪ್ಪಣೆ ಗೊಂಡು ಬಂದೆ ನಿಮ್ಮಯ ಮನೆಗೆ
ಸಂದು ದೆನ್ನಯ ಕಾಲ, ಪೋಪೆನಿನ್ನು
ಇಂದು ನಿಂದರೆ, ತಂದೆಬಂದು ದಾರಿಯ ನೋಡಿ
ಕಂದನಂ ಕಾಣದಿರೆ ಕರೆವನವನು

* * * *

ಕೆಲಸವಿರೆ ಬಂದು ಕಾಂಬೆನು, ಕೆಲಸವಿಲ್ಲದಿರೆ
ನೆಲದೊಳಗೆಕಂಡುದೇ ಕೊನೆಯ ಕೂಟ
ಕಂಬನಿಯಸುರಿಸದೇ ನಿಡುಸುಯ್ಯಬಿಡದೆ ಮೊಗ
ವಂಬಾಡಿಸದೆ, ದೇಹವಂ ಕುನಿಸದೆ
ಹಂಬಲಿಸದಳಲದೇ ಬಳಲದೇ ಮನೆಗೆನ್ನ
ನಿಂಬುಗೊಳಿಸುತೆ ಕಳುಹಿಕೊಡುವುದಯ್ಯ

ಇಂತಹ ಕವಿಯು ಜಗಕ್ಕೆ ಕೊಡತಕ್ಕ ಸಂದೇಶವು ಅಮೂಲ್ಯವಾದುದು. ಆದುದರಿಂದ ಗ್ರಂಥವು ಚಿಕ್ಕದಾದರೂ ಗುಣವು ಮಹತ್ವದ್ದಾಗಿದೆ ಎಂದು ಹೇಳುವೆವು. ಅಲ್ಲಲ್ಲಿ ಕೆಲಕೆಲವು ಭಾವಗಳೂ ಕೆಲಕೆಲವು ಗೀತಗಳೂ ಇಂಗ್ಲೀಷು ಕವಿಗಳನ್ನು ಸ್ಮರಣೆಗೆ ತರುವುವಾದರೂ ಒಟ್ಟಿನಲ್ಲಿ ಸೀರೆ ಕುಪ್ಪಸಗಳನ್ನು ತೊಟ್ಟ ಇಂಗ್ಲೀಷು ಹುಡುಗಿಯೆಂದು ಯಾರೂ ಹೇಳುವ ಹಾಗಿಲ್ಲ. ಮನುಷ್ಯಸಾಮಾನ್ಯಕ್ಕೆ ಸಾಮಾನ್ಯವಾದ ಸುಖದುಃಖ ವಿರಹಾದಿಗಳೂ ಸತ್ಯದ ಬಯಕೆಯೂ ಗೀತಗಳ ಮೂಲಭಾವಗಳಾಗಿ ರಸಪರಿಪುಷ್ಟಿಯನ್ನು ಮಾಡಿರುವುದೇ ಹೀಗೆ ಭಾಸವಾಗದಿರಲು ಮುಖ್ಯ ಕಾರಣ. ಕವಿಯು ದುರ್ದಮನೀಯವಾದ ವಿಚಾರಶೋಕಗಳಿಗೆ ಗುರಿಯಾಗಿ ತನ್ನಂತರಂಗದ ಭಾವಗಳನ್ನೇ ಹೆಣೆದು ಹೊರಗೆಡವಿದ್ದಾನೆ. ಇವುಗಳಲ್ಲಿ ಇಂಗ್ಲೀಷು ಕವಿಗಳ ಛಾಯೆಯು ಕಂಡುಬಂದರೆ ಇಬ್ಬರ ಮನೋಧರ್ಮಗಳೂ ಒಂದೇ ಆಗಿ ಅನುಭವ ಸಾಮಾನ್ಯದಿಂದ ಹೀಗಾಗಿದ್ದಿರಬಹುದೆಂದು ತಿಳಿಯುತ್ತೇವೆ; ಅಥವಾ ಒಂದೊಂದು ಭಾವವು ಅಜ್ಞಾತವಾಗಿ ಬಂದುಸೇರಿಕೊಂಡಿದ್ದರೂ ಇರಬಹುದು.

"ನಿನ್ನಂತಿರೆ ಕಾಡಿನೊಳರಳಿದೆನ್ನೈ
ನಿನ್ನಂತಿರೆ ಮರವಿನೊಳಿಹೆನ್ನೈ
ನಿನ್ನಂತಿರೆ ಕಣ್ದೆರೆಯಂ ತೆರೆದೆಂ
ನಿನ್ನಂತಿರೆ ಕಣ್ಮುಚ್ಚುವೆನ್ನೈ"

ಎಂಬುದಾಗಿ ಶಂಕರಭಟ್ಟರು ಮುಗುಳನ್ನು ಉದ್ದೇಶಿಸಿ ತಮ್ಮ ವಿಚಾರವನ್ನು ಹೇಳಿಕೊಂಡಿದ್ದಾರೆ. "ವನಸುಮದವೊಲು" ಕನ್ನಡ ಸಾಹಿತ್ಯಕ್ಕೂ ಕನ್ನಡ ದೇಶಕ್ಕೂ ಸೇವೆಮಾಡುತ್ತಿರುವ ಈ ಬಗೆಯ ಕವಿಗಳು ಚಿರಕಾಲ ಬಾಡದೆ ಬಳಲದೆ ಸವಿಗಂಪನ್ನು ಬೀರುತ್ತಿರಲೆಂಬುದು ನಮ್ಮ ಹಾರೈಕೆ.

ಎಂ. ಆರ್. ಶ್ರೀ.

ಕಿರಿಯ ಕಾಣಿಕೆ—ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟವಾದುದು. ಬೆಲೆ ಒಂದು ರೂಪಾಯಿ.

ಬೇರೆಬೇರೆ ಆರುಜನ ಕವಿಗಳಿಂದ ರಚಿತವಾದ ಮೂವತ್ತು ಕವಿತೆಗಳ ಸಂಗ್ರಹವಿದೊಂದು. ಮಹಾರಾಜರವರ ಕಾಲೇಜಿನಲ್ಲಿ ಕನ್ನಡ ಉಪಾಧ್ಯಾಯರಾಗಿರುವ ಶ್ರೀ|| ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಅವರು ಮುನ್ನುಡಿ ಬರೆದು, ಈ ಪುಸ್ತಕದಲ್ಲಿರುವ ಕವಿತೆಗಳ ರೀತಿ ಈ ಕವಿಗಳು ಅನುಸರಿಸಿದ ಹೊಸದಾರಿಯ ಬಗೆ ಇವುಗಳನ್ನು ವಿವರಿಸಿ ಹೇಳಿರುವರು. ಈ ಪುಸ್ತಕದ ಅವಲೋಕನ ಮಾಡುವುದಕ್ಕಿಂತ ಮುಂಚೆ ಈ 'ಕಿರಿಯಕಾಣಿಕೆ' ಯಂತಹ ಹೊಸಮಾದರಿಯ ಕವಿತೆಗಳು ನಮ್ಮ ಸಾಹಿತ್ಯದಲ್ಲಿ ಯಾವಸ್ಥಾನ ಪಡೆಯಬಹುದೆಂಬುದನ್ನು ಸ್ವಲ್ಪ ವಿಚಾರಮಾಡುವೆವು.

ಹಳೆಯ ದಿನಗಳು ಒಂದರ ಹಿಂದೊಂದು ಹೋಗಿ ಹೊಸದಿನಗಳು ಬಂದ ಹಾಗೆಲ್ಲ ಪರಿಸ್ಥಿತಿಯಲ್ಲಿಯೂ ವಿಶೇಷವಾದ ಮಾರ್ಪಾಟುಗಳಾಗುವುವು. ಪರಿಸ್ಥಿತಿಯು ಮಾರ್ಪಟ್ಟಂತೆ ಜನರ ಮನೋರಚನೆಗಳೂ ಭಿನ್ನಭಿನ್ನತೆರದವಾಗುವುವು. ಆಗ ಅಲ್ಲಿ ಬೇರೆಬೇರೆ ಸ್ವತಂತ್ರ ವಿಚಾರದ ಜನಗಳು ಹುಟ್ಟಿ, ಪ್ರತಿಯೊಂದು ವ್ಯವಹಾರದಲ್ಲಿಯೂ ಹೊಸದಾರಿಯನ್ನು ಕಂಡುಕೊಳ್ಳಲು ಹವಣಿಸುತ್ತಿರುತ್ತಾರೆ; ಪರಂಪರಾಗತವಾದ ರೂಢಿ-ನಿಯಮ-ಸಂಪ್ರದಾಯಗಳ ಬಂಧನಕ್ಕೆ ಸಿಲುಕದೆ ಸ್ವತಂತ್ರ ವಿಚಾರಕ್ಕೆ ಹೆಚ್ಚು ಮಹತ್ವಕೊಡುತ್ತಾರೆ. ನಮ್ಮ ಕನ್ನಡಸಾಹಿತ್ಯ ಪ್ರಪಂಚದಲ್ಲಿ ಆಗಾಗ ಆಗುತ್ತ ಬಂದಿರುವ ಕ್ರಾಂತಿಗಳ ಕಡೆಗೆ ನೋಡಿದಲ್ಲಿ ಈ ಮಾತಿನ ಸತ್ಯತೆಯು ಕಂಡುಬರದಿರದು. ಮೊದಲು ಹರಿಹರ ಕವಿಯು ಹುಟ್ಟಿ ಜಟಿಕುಳಗಳ ನಿಯಮವನ್ನು ಹರಿದೊಗೆದು ತನ್ನ ಮುಂದಿನವರಿಗೆ ಹಾದಿಯನ್ನು ಹಸನು ಮಾಡಿಕೊಟ್ಟನು. ಆಮೇಲೆ

> "ಶಬ್ದಮಣಿ ಮೊದಲಾದ ಶಾಸ್ತ್ರದ |
> ಹೊದ್ದಿಕೆಯು ಸಾಹಿತ್ಯಕಲ್ಲದೆ |
> ಹೃದ್ಯಷಟ್ಪದಿ ಹಾಡುಗಬ್ಬಕಿದೇಕೆ ತೊಡಕುಗಳು"

ಎಂದು ಹೇಳುತ್ತ ಹೊರಟ ಷಟ್ಪದಿಕಾರರು ನಮ್ಮ ಸಾಹಿತ್ಯದ ಮುಖವನ್ನು ಕ್ಲಿಷ್ಟತರವಾದ ಚಂಪೂಶೈಲಿಯಿಂದ ಸುಲಭವಾದ ಷಟ್ಪದೀಶೈಲಿಯ ಕಡೆಗೆ ತಿರುಗಿಸಿದರು. ಬಳಿಕ ಇದಿಷ್ಟೇ ಸಾಕಾಗದೆ

> "ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು | ವಿಕಳವಾದರು ದೋಷವಿಲ್ಲ ||
> ಸಕಲ ಲಕ್ಷಣಕಾಗಿ ಬರದು ಮಾಡಿದರೆ ವು | ಸ್ತುಕದ ಬದನೆಕಾಯಹುದು ||

ಎಂದು ಹೇಳುವವರ ಪಂಗಡವೊಂದು ಹೊರಟು ನಮ್ಮ ಸಾಹಿತ್ಯದಲ್ಲಿ ಬಲವಾದ ಕ್ರಾಂತಿಯನ್ನುಂಟುಮಾಡಿ, ಕಾವ್ಯದ ಸರಳತೆಯನ್ನು ಇನ್ನೂ ಹೆಚ್ಚಿಸಿತು. "ಹೊತ್ತು

ಹೊತ್ತಿಗೆ ಹೊಸಪರಿಯ ಸಿಂಗರಬೇಕು ಉತ್ತಮಸುಖಗಳಂದವಿದು'' ಎಂದು ಹೇಳಿರುವ ರಸಿಕಶಿರೋಮಣಿ ರತ್ನಾಕರವರ್ಣಿಯ ಮಾತಿನಂತೆ ಈಗಿನ ಕೆಲವು ಹೊಸವಿಚಾರದ ಕನ್ನಡ ಕವಿಗಳಿಗೆ ತಮ್ಮ ಕವಿತಾಮಾರ್ಗವನ್ನು ಇನ್ನೂ ಸರಳವಾದುದನ್ನಾಗಿಯೂ ಹೊಸರೀತಿಯದನ್ನಾಗಿಯೂ ಮಾಡಬೇಕೆಂಬ ಆಕಾಂಕ್ಷೆಯುಂಟಾಗಿದೆ. ಈ "ಕಿರಿಯಕಾಣಿಕೆ''ಯು ಅಂತಹ ಆಕಾಂಕ್ಷೆಯ ಒಂದು ಫಲವು.

ನಮ್ಮ ಭರತಖಂಡದಲ್ಲಿಯ ಅನೇಕ ಭಾಷೆಗಳ ಜನರು ಆಧುನಿಕ ಕಾವ್ಯಪ್ರಪಂಚದಲ್ಲಿ ನವೀನವಾದ ದಾರಿಯನ್ನು ಕಂಡುಕೊಂಡು, ಇಷ್ಟರಲ್ಲಿಯೆ ನಮ್ಮಿಂದ ಆದೆಷ್ಟೊ ಮುಂದಕ್ಕೆ ಸಾಗಿ ಹೋಗಿರುವರು. ಈಗ ಕೆಲವುದಿನದ ಕೆಳಗೆ ನಮ್ಮಲ್ಲಿಯೂ ಕೈ. ವಾ|| ಹ. ನಾರಾಯಣರಾವ್ ಎಂ.ಎ., ಎಲ್.ಎಲ್.ಬಿ., ಅವರು ಕನ್ನಡ ಕಾವ್ಯದ ಭವಿಷ್ಯದ ಬುಡುಬುಡಿಕೆಯನ್ನು ಬಾರಿಸಿದರು; ಕವಿತಾಕ್ಷೇತ್ರದಲ್ಲಿಯ ಹೊಸದಾರಿಯನ್ನು ತೋರಿಸಿದರು. ಅಂದಿನ ಕಾಲದ ಎಷ್ಟೋ ಜನರು ಕೈ. ವಾ|| ನಾರಾಯಣರಾಯರ ಭವಿಷ್ಯವನ್ನು ಕೇಳಿ ನಕ್ಕಿರಬಹುದು. ಅವರು ಹೇಳಿದ ಹೊಸಹಾದಿಯು ಹುಚ್ಚುತನದ್ದೆಂದು ಬೀಳುಗಳೆದಿರಬಹುದು. ಆದರೆ ಇಂದಿನ ಕಾವ್ಯಗಳ ದಾರಿಯನ್ನು ನೋಡಿದಲ್ಲಿ ಅವರ ಭವಿಷ್ಯವು ನಿಜವೆಂದು ತೋರಲು ತೊಡಗಿದೆ. ಅವರು ತೋರಿಸಿದ ಹೊಸದಾರಿಯು ಯೋಗ್ಯವಾದುದೆಂದು ಅದನ್ನನುಸರಿಸಲು ಹಲವು ಜನರು ಸಿದ್ಧರಾಗಿ ನಿಂತುದು ದೃಗ್ಗೋಚರವಾಗತೊಡಗಿದೆ.

"ಹೊಸದಾರಿ'' ಎಂದಾಕ್ಷಣಕ್ಕೆ ಬೆಚ್ಚಿಬಿದ್ದು, ಅದರ ಗುಣಾವಗುಣಗಳನ್ನು ವಿಚಾರಿಸಿ ಕಂಡುಹಿಡಿಯದೆ, ಕೇವಲ "ಹೊಸದು'' ಎಂಬ ಒಂದೇಒಂದು ಕಾರಣದಿಂದ, ಅದನ್ನು ಮೆಟ್ಟಿ ತುಳಿದುಬಿಡಬೇಕೆಂದು ನಡುಕಟ್ಟಿ ನಿಲ್ಲುವ ಸಂಪ್ರದಾಯಶರಣರು ಲೋಕದಲ್ಲಿ ಎಲ್ಲೆಲ್ಲಿಯೂ ಇರುವರು. ಯಾವುದೇ ನಾಡಿನ-ಯಾವುದೇ ಕ್ರಾಂತಿಯ-ಇತಿಹಾಸದ ಕಡೆಗೆ ಕಣ್ಣುಬಿಟ್ಟು ನೋಡಿದಲ್ಲಿ ಸ್ವತಂತ್ರ ವಿಚಾರಿಗಳಾದ ಹೊಸ ಹಾದಿಗರಿಗೂ ಸಂಪ್ರದಾಯ ಶರಣರಿಗೂ ಎಡಬಿಡದೆ ಹೋರಾಟ ಕಾದಾಟವಾದುದು ಕಂಡುಬರುವುದು. ದೂರವೇಕೆ? ನಮ್ಮ ಹಳೆಯ ಚಂಪೂಕಾವ್ಯದ ರೀತಿಯನ್ನು ಬದಲಿಸಲು ಮಧ್ಯಕಾಲದ ಕವಿಗಳು ಸುಮಾರು 250-300 ವರ್ಷಗಳವರೆಗೆ ಒಂದೇಸವನೆ ಹೆಣಗಾಡಬೇಕಾಯಿತು. ತನ್ನ "ಸುಲಲಿತ ವೀಣಾಗಾನ'' ದಂತಿರುವ ಕಾವ್ಯದಿಂದ ಪಂಡಿತಪಾಮರರ ಮನವನ್ನು ಮೆಚ್ಚಿಸಿ ನಲಿದಾಡಿಸಿದ ಲಕ್ಷ್ಮೀಶನು ಸಹ "ವಿನೂತನ ಕಾವ್ಯವೆಂದು ಕುಂದಿಟ್ಟು ಜರಿದೊಡೆ ಪೇಳ್ದವನೊಳವದೂಣೆಯಂ', ಎಂದು, ಅದೆಷ್ಟೊ ದೈನ್ಯದಿಂದ ಸಂಪ್ರದಾಯಶರಣರಲ್ಲಿ ಉಸುರಿಕೊಳ್ಳಬೇಕಾಯಿತು.

ಈಗಲೂ ಕೂಡ ನಮ್ಮ ಪ್ರಾಚೀನ ಚಂಪೂಕಾವ್ಯಾಭಿಮಾನಿಗಳು ಷಟ್ಪದಿ ಸಾಂಗತ್ಯ ಕಾವ್ಯಗಳನ್ನು 'ಕಾವ್ಯ'ವೆಂದು ಎಣಿಕೆಮಾಡಲು ಹಿಂದೆ ಮುಂದೆ ನೋಡುವರು. ಹೀಗಿರಲು, ಈ 'ಕಿರಿಯಕಾಣಿಕೆ' ಯಂತಹ ಕಾವ್ಯಗಳು ಬಹುಜನಪ್ರಿಯವಾಗುವುದಕ್ಕೆ ಇನ್ನೂ ಬಹುಕಾಲ ಹೋಗಬೇಕೆಂಬುದರಲ್ಲಿ ಸಂದೇಹವಿಲ್ಲ. ಪ್ರಾಚೀನರ ಮತದಂತೆ 'ಕಿರಿಯಕಾಣಿಕೆ'ಗೆ ಸಾಹಿತ್ಯದಲ್ಲಿ ಸ್ಥಾನ ಸಿಕ್ಕುವುದು ಎಂತಹ ಮಾತೋ! ಆದರೆ ನವೀನರ ದೃಷ್ಟಿಯಿಂದಲಾದರೂ ಇದಕ್ಕೆ ಸಾಹಿತ್ಯದಲ್ಲಿ ಸ್ಥಾನವಿದೆಯೇ? ಇದ್ದರೆ ಯಾವಬಗೆಯದು ?

ಈಗಿನ ಕಾವ್ಯಗಳೆಂದರೆ ಒಂದು ಸರಳವಾದ ಭಾವನಾಲಹರಿಯನ್ನು ಇದ್ದುದನ್ನು ಇದ್ದಹಾಗೆಯೆ ಬರೆದ ಸ್ವಾಭಾವಿಕ ಶಬ್ದ ಚಿತ್ರ. ಹಿಂದಿನ ಕಾವ್ಯಗಳೆಂದರೆ ಬೇರೆಬೇರೆ ಭಾವನೆಗಳಿಗೆ ಭವ್ಯವಾದ ಬಣ್ಣಕೊಟ್ಟು ರಂಜಕವಾಗಿ ಕಾಣುವಂತೆ ಬರೆದಿಟ್ಟ ಶಬ್ದ ಚಿತ್ರಮಾಲಿಕೆ. ಚಿತ್ರಕಲೆಯೇನೋ ಸೊಗಸಾದುದೇ. ಆದರೆ ಅದನ್ನು ಮನೆಯತುಂಬ ಎಲ್ಲಿನೋಡಿದಲ್ಲಿ ಬರೆಯಿಸಿಬಿಟ್ಟರೆ ನೋಡುವುದಕ್ಕೆ ಬೇಸರು; ಅಷ್ಟೊಂದು ಅಂದವೂ ಕಾಣದು. ಅದೇ ಅಲ್ಲಿಯೊಂದು ಇಲ್ಲಿಯೊಂದು ಓರಣವಾಗಿ ದೂರದೂರಕ್ಕೆ ಚಿತ್ರಪಟಗಳಿದ್ದರೆ ನೋಡುವುದಕ್ಕೆ ಬೇಸರೂ ಬರದು, ಅಲ್ಲದೆ ಕಲೆಯನ್ನು ಸರಿಯಾಗಿ ವಿಮರ್ಶೆಮಾಡಿ ಸೊಗಸನ್ನು ಕಂಡುಹಿಡಿಯಲೂ ಸುಲಭವಾಗುವುದು. ಮನೆತುಂಬ ಬಣ್ಣದ ಚಿತ್ರಬರೆಯಿಸುವುದು ಹಳೆಯ ರೀತಿ. ಒಪ್ಪಾಗಿ ಕಾಣುವಂತೆ ಸ್ವಾಭಾವಿಕ ಚಿತ್ರಗಳನ್ನು ಅಲ್ಲೊಂದು ಇಲ್ಲೊಂದು ಬರೆಯಿಸುವುದು ಈಗಿನವರ ರೀತಿ. ಹಳೆಯಕಾವ್ಯ ಹೊಸಕಾವ್ಯಗಳ ರೀತಿಯಲ್ಲಿಯೂ ಅಂತರವಿರುವುದು ಇಂತಹುದೆ. ಹಂಪೆಯ ವಿಜಯವಿಠಲನ ಗುಡಿ ಆಗ್ರಾಪಟ್ಟಣದ ತಾಜಮಹಾಲುಗಳ ಕಲಾಸಂಪ್ರದಾಯದಲ್ಲಿರುವಷ್ಟು ಹೆಚ್ಚುಕಡಿಮೆ ಇವೆರಡರಲ್ಲಿಯೂ. ನಿಜವಾದ ವಿಮರ್ಶಕನು ಎರಡರಲ್ಲಿರುವ ಕೌಶಲ್ಯವನ್ನೂ ಸರಿಯಾಗಿ ಕಂಡುಹಿಡಿದು, ಆನಂದದಿಂದ ತಲೆದೂಗುವನು. ಆದರೆ ಸಾಮಾನ್ಯರಲ್ಲಿ ಕೆಲವರಿಗೆ ವಿಜಯವಿಟ್ಠಲನ ಗುಡಿಯೇಬೇಕು. ಕೆಲವರಿಗೆ ತಾಜಮಹಾಲೇ ಬೇಕು.

ಈ 'ಕಿರಿಯಕಾಣಿಕೆ'ಯಲ್ಲಿಯ ಕವಿತೆಗಳು ಹೊಸದಾರಿಯವಾದುದರಿಂದ ಇವುಗಳ ರೀತಿಯನ್ನು ಕೆಲವರು ಹೊಗಳಬಹುದು. ಕೆಲವರು ತೆಗಳಬಹುದು. 'ರಾಜಶೇಖರವಿಳಾಸ' 'ಜಗನ್ನಾಥವಿಜಯ'ಗಳಲ್ಲಿರುವಂತಹ ಅಕ್ಷರಾಲಿಂಗನ, ಶಬ್ದಾಲಿಂಗನ, ಭಾಷೆಯ ಬಿಗಿವುಗಳನ್ನು ಬಯಸುವವರು "ಇವು ಕವಿತೆಗಳೇ ?" ಎಂದು ಉದಾಶೀನತೆಯಿಂದ ಕೇಳಬಹುದು. ಪ್ರಾಚೀನ ಛಂದಶ್ಶಾಸ್ತ್ರದ ಅಭಿಮಾನಿ

ಗಳು ಈ ಕವಿತೆಗಳನ್ನು ಕಂಡು "ಛಂದಶ್ಶಾಸ್ತ್ರದ ಕೊಲೆ" ಇದೆಂದು ಕೂಗಿಕೊಳ್ಳಬಹುದು. ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ಬಯಸುವವರು 'ಇವು ಹುರುಳಿಲ್ಲದ ಮಾತಿನಮಾಲೆ' ಎಂದು ಬೇಸರವನ್ನು ಪಟ್ಟುಕೊಳ್ಳಬಹುದು. ಇನ್ನೂ ಅನೇಕ ರೀತಿಯಿಂದ ಈ ಕವಿತೆಗಳಿಗೆ ದೋಷಾರೋಪಣೆ ಮಾಡಬಹುದು. ಅದರಂತೆಯೆ ಎಷ್ಟೋ ಜನರು ಈ ಕವಿತೆಗಳು ಬಲುಚೆನ್ನಾಗಿವೆಯೆಂದು ಮುದ್ದಾಡಲೂ ಬಹುದು. ಹಾಗಾದರೆ ನಿಷ್ಪಕ್ಷಪಾತಿಯಾದ ವಿಮರ್ಶಕಾರನು ಇದರ ಬಗೆಗೆ ಏನೆಂದು ಅಭಿಪ್ರಾಯ ಪಡಬಹುದು ?

'ಕಿರಿಯಕಾಣಿಕೆ'ಯ ಕವಿಗಳೆಲ್ಲರೂ ತರುಣರು. ತಮ್ಮ ತಾಯಿನಾಡಿನ ಅವನತಿಯನ್ನು ಕಂಡು,

"ಅಕ್ಕತಂಗಿಯರೆಲ್ಲ ಮುಂದು ಮುಂದಾಗಿರಲು
ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ !
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೇ ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೇ ?
ಸರಿಯವರ ತಲೆಮೆಟ್ಟಿ ಮುಂದೆ ನಿಲ್ಲುವೆವೇ ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೇ ?"

ಎಂದು ಕೊರಗಿ ಮರುಗಿರುವರು. ಅಷ್ಟಕ್ಕೆ ನಿರಾಶರಾಗಿ ಕೈಮುಚ್ಚಿ ಕುಳಿತುಕೊಳ್ಳದೆ,

"ಬನ್ನಿ ! ತಾಯಿಗೆರಗಿ ಬೇಗ
ಮುನ್ನಗೈದ ತಪ್ಪನೆಲ್ಲ
ಮನ್ನಿಸೆಂದು ಕೈಯ ಮುಗಿದು ಬೇಡಿಕೊಳ್ಳುವ ;
ಬನ್ನಿ ಭಾರತೀಯ ಕೃತಿಯ ಮಾಡಿ ತೋರುವ"

ಎಂದು ವೀರವಾಣಿಯಿಂದ ಸರಿವರೆಯದ ತರುಣರನ್ನು ನಾಡಿನೇಳಿಗೆಯ ಕೆಲಸಕ್ಕೆ ಕೂಗಿ ಕೂಗಿ ಎಬ್ಬಿಸುತ್ತ ಹೊರಟಿರುವರು. ಹಿರಿಯರಾದ ಕನ್ನಡಿಗರು ಇವರ ಕೃತಿಯಲ್ಲಿ ಕಂಡುಬರುವ ಗುಣದೋಷಗಳನ್ನು ಚೆನ್ನಾಗಿ ವಿವರಿಸಿಹೇಳಿ, ಅವರ ಹುರುಪು ಕುಗ್ಗಿಹೋಗಲು ಅವಕಾಶವಾಗುವಂತೆ ಬರೀ ದೋಷಗಳನ್ನೇ ಮಾತ್ರ ಎಣಿಸದೆ, ಉಚಿತ ರೀತಿಯಿಂದ ಅವರಿಂದ ಕಾರ್ಯಮಾಡಿಸಿ ಕನ್ನಡನಾಡ ನುಡಿಯ ಕೀರ್ತಿಯನ್ನು ಹೆಚ್ಚಿಸುವಂತೆ ಮಾಡಬೇಕಾದುದು ಅವಶ್ಯಕವಾದ ಕೆಲಸ.

ಪ್ರಸ್ತುತ ಪುಸ್ತಕದಲ್ಲಿರುವ ಕವಿತೆಗಳಲ್ಲಿ ಕೆಲವು ಭಾವಗೀತೆಗಳು ; ಕೆಲವು ಬಾಲಗೀತೆಗಳು ; ಇನ್ನುಕೆಲವು ರಾಷ್ಟ್ರಗೀತೆಗಳು. "ಬೊಮ್ಮನ ಹಳ್ಳಿಯ ಕಿಂದರಿ ಜೋಗಿ" ಎಂಬ ಕವಿತೆಯೂ ಇದಾವ ಜಾತಿಗೂ ಸೇರಿದುದಲ್ಲ. ಅದು ವಿನೋದ

ದಿಂದ ಕೂಡಿದ ವಿಶಿಷ್ಟರೀತಿಯ ಒಂದು ಖಂಡಕಾವ್ಯವೆಂದು ಹೇಳಬಹುದು. ೫-೬ ಗೀತೆಗಳನ್ನು ಬಿಟ್ಟರೆ ಇನ್ನುಳಿದುವೆಲ್ಲ ಸ್ವತಂತ್ರ ಕೃತಿಗಳು. ಅಐದಾರು ಗೀತೆಗಳೂ ಇಂಗ್ಲಿಷ್ ಕವಿತೆಗಳ ಭಾವಾನುವಾದ ಮಾತ್ರ, ಕೇವಲ ಭಾಷಾಂತರವಲ್ಲ. ಅವೂ ಸ್ವತಂತ್ರ ಕವಿತೆಗಳೇ ಎನ್ನಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆಯೆಂದರೂ ಸಲ್ಲುವುದು.

'ಚಟಾಕಿ' ಕವಿತೆಯಲ್ಲಿಯ ಕಲ್ಪನೆಯು ಹೃದಯಾಕರ್ಷಕವಾಗಿದೆ. ಮೊದಲುಮೊದಲು ಹಾಗೆಯೆ ನಗಿಸುತ್ತ ಹೊರಟು "ಮೆಚ್ಚಿದೆನು ಮೆಚ್ಚಿದೆನು ಹೆಚ್ಚಿ ಬರುವೀ ನಿಮ್ಮ ಧೈರ್ಯದುಬ್ಬರವ ನೋಡಿ! ಮೆಚ್ಚನೀವೆನು ನಿಮಗೆ ಸಿಡಿವೀ ಚಟಾಕಿಯನು ಹಿಡಿಯಿರಿದ ಕೈಯನೀಡಿ" ಎಂದು ಹೇಳಿದ ದೇವಿಯ ಮಾತಿನಲ್ಲಿರುವ ಧ್ವನಿಯಿಂದ-ನಿಂದಾಸ್ತುತಿಯಿಂದ-ನಮ್ಮೆಲ್ಲರ ಕರುಳಿಗೆ ಬರೆಯನೆಳೆಯುವನೀಕವಿಯು. ನಮ್ಮ ಹೇಡಿತನದ ಚಿತ್ರವನ್ನು ಚಿತ್ರಿಸಿ ನಮ್ಮ ಕಣ್ಣಮುಂದೆಯೇ ಹಿಡಿದು ನಮ್ಮನ್ನು ತಲೆಬಗ್ಗಿಸುವಂತೆ ಮಾಡುವನೀ ಮಾಟಗಾರ.

"ಕನ್ನಡಿಗನ ಕೊರಗು" "ದೋರಸಮುದ್ರ" "ತಾಯಿ" "ದೂರು" ಇವು ದೇಶಾಭಿಮಾನವನ್ನು ಚಿತ್ರಿಸುವಂತಹ ಕವಿತೆಗಳು. "ಪಾರಿಜಾತ" "ಜೀರೆಯ ಹೂ" "ನನ್ನನಾಯಿ" "ವಿಧವೆ" "ಎರಡು ದಾರಿ" "ಮಲೆನಾಡ ಹುಡುಗಿ" ಈ ಕವಿತೆಗಳಲ್ಲಿರುವ ಕಲ್ಪನೆಯು ಕಮನೀಯವಾಗಿದ್ದು ಓದುವವರಿಗೆ ಅದೇನೋ ಒಂದು ಹೊಸತತ್ವದ ಬೋಧೆಯನ್ನುಂಟುಮಾಡುವುವು. "ಜೀವನ" "ಆತ್ಮನಿವೇದನ" ಮೊದಲಾದವುಗಳಲ್ಲಿಯ ಭಕ್ತಿ-ಪ್ರೇಮಗಳು ಪ್ರಶಂಸನೀಯವಾದುವುಗಳು. "ಅರ್ಧಚಂದ್ರ" "ಗುರು" "ಅಕ್ಕ" ಈ ಕವಿತೆಗಳಲ್ಲಿ ಎಳೆಯತನದ ಸರಳಹೃದಯವು ಒಡಮೂಡಿದುದು ಕಂಡುಬರುತ್ತದೆ. "ಬೊಮ್ಮನಹಳ್ಳಿಯ ಕಿಂದರಿಜೋಗಿ" ಎಂಬ ಕವಿತೆಯು ಮನೋರಂಜಕವೂ ನೀತಿಬೋಧಕವೂ ಆಗಿದೆ. ಈ ಕವಿತೆಯಲ್ಲಿ ಕವಿಯ ಕತೆಗಾರಿಕೆ ಮಾತುಗಾರಿಕೆಯ ಕೌಶಲ್ಯವು ಚೆನ್ನಾಗಿ ವ್ಯಕ್ತವಾಗಿರುವುದು. ಕವಿಯಾಗಬೇಕಾದವನು ಜನಜೀವನವನ್ನೆಷ್ಟು ಅಭ್ಯಾಸಿಸಬೇಕೆಂಬುದನ್ನು ಇದರಲ್ಲಿ ಕವಿಯು ಸರಿಯಾಗಿ ತೋರಿಸಿರುವನು. ಇದೆಲ್ಲವೂ ಹೊಗಳಿಕೆಯ ಮಾತಾಯಿತು.

ಪರಮಾತ್ಮನು ಸೃಷ್ಟಿಯನ್ನೆ ಅಪೂರ್ಣವಾಗಿ ಮಾಡಿರುವಾಗ ಈ ಪುಸ್ತಕವು ಪೂರ್ಣವಾದುದೆಂದು ಹೇಗೆ ಹೇಳುವುದು! ಕೆಲವು ಗುಣಗಳಿಗೆ ಎಡೆಯಿದ್ದಂತೆ ಇದು ಕೆಲವು ದೋಷಗಳಿಗೂ ಎಡೆಯಾಗಿದೆ. ಕೆಲಕೆಲವು ಕವಿತೆಗಳಲ್ಲಿ ಭಾಷೆಯು 'ಇದು ಗದ್ಯವೋ ಪದ್ಯವೋ, ಎನ್ನುವಷ್ಟು ಶಿಥಿಲವಾಗಿದೆ. ಉದಾಹರಣೆಗಾಗಿ :—

"ಆಗ ನನ್ನ ಎದೆಯೊಳೊಂದು ಹಕ್ಕಿ ಇರುವುದೆಂಬುದನ್ನು ನಾನು ಕಂಡುಹಿಡಿದೆನು" (ಪುಟ ೨) "ಬೇರೆಯ ಹೆಸರುಗಳಾಗಿನ ಜನರಿಗೆ ತಿಳಿದಿರಲಿಲ್ಲವೆ ಏನಮ್ಮಾ" (ಪುಟ ೨೩) ಇತ್ಯಾದಿ.

ಛಂದಸ್ಸಿನ ಈ ನೂತನರೀತಿಯಲ್ಲಿ ಯತಿಭಂಗವಾದರೆ ಕವಿತೆಯು ಅಂದಗೆಡುವುದು. ಅನೇಕ ಕಡೆಯಲ್ಲಿ ಯತಿಭಂಗವಾಗಿದೆ. ಅರಿಸಮಾಸಗಳನ್ನು ಮಾಡಬಹುದಾದರೂ ಭೀಕರಕಾಳಗ (ಪುಟ ೩೮) ವರಹೂವೇ ! (ಪುಟ ೧೨) ಇಂತಹ ಅರಿಸಮಾಸಗಳು ಅಷ್ಟೊಂದು ಉಚಿತವಾಗಿ ತೋರವು. ಉಣ್ಣುತ್ತಿರುವಾಗ ಅನ್ನದಲ್ಲಿ ಮಧ್ಯೆ ಮಧ್ಯೆ ಹರಳುಬರುವಂತೆ, ಕನ್ನಡ ಶಬ್ದಪ್ರವಾಹವು ಸರಳವಾಗಿ ಸಾಗಿದಾಗ ನಡುನಡುವೆ ದೊಡ್ಡದೊಡ್ಡ ಸಂಸ್ಕೃತ ಶಬ್ದಗಳು ಬರುವುದು, ಕಿವಿಗೆ ಇಂಪಾಗಿ ಕೇಳದು. ಶಬ್ದಗಳ ಔಚಿತ್ಯ ಅನೌಚಿತ್ಯಗಳ ಕಡೆಗೂ ಅಷ್ಟೊಂದು ಗಮನಕೊಟ್ಟಂತೆ ತೋರುವುದಿಲ್ಲ. ಒಂದೆರಡು ಕಡೆ ಅಸ್ಪಷ್ಟವಾದ ಕಲ್ಪನೆಯಿಂದ ರಸಾಭಾಸವಾದಂತೆ ಕಂಡುಬರುವುದು. "ಅರ್ಧಚಂದ್ರ" ಎಂಬ ಕವಿತೆಯಲ್ಲಿ "ಅಕ್ಷಯವಾಗಿಹ ಪೆಪ್ಪರಮೆಂಟದು" ಎಂಬಲ್ಲಿಯ 'ಅಕ್ಷಯ' ಎಂಬ ಶಬ್ದವು ಮಗುವಿನ ಬಾಯಲ್ಲಿ ಅನುಚಿತ. ಅಲ್ಲದೆ ಇದೇ ಕವಿತೆಯಲ್ಲಿಯ "ದೇವರ ಬಾಲಕನಾಗಲುಬಲ್ಲೆ" ಎಂದು ಹೇಳುವ ಮಗುವಿನ ಮಾತು ಹೆಚ್ಚು ಅವಸರದಿಂದ ಬಂದುದರಿಂದ ಅಲ್ಲಿ ಭಾವಾಭಾಸದಂತೆ ತೋರುತ್ತದೆ.

ಆಕ್ಷೇಪಾರ್ಹವಾಗಿರದ ವಸ್ತುವು ಪ್ರಪಂಚದಲ್ಲಿಲ್ಲವಷ್ಟೆ. ದೋಷಗಳನ್ನು ಳಿದು ಗುಣವನ್ನು ಸ್ವೀಕರಿಸುವುದು ಮಹನೀಯರ ಲಕ್ಷಣ. ಕನ್ನಡ ರಸಿಕರು ಈ 'ಕಿರಿಯಕಾಣಿಕೆ' ಯಲ್ಲಿಯು ಕಿರಿಯವಾಗಿರುವ ದೋಷಗಳನ್ನು ಬಿಟ್ಟು ಹಿರಿದಾಗಿರುವ ಗುಣವನ್ನು ಗ್ರಹಿಸಲೆಂಬುದು ನಮ್ಮ ಮನಃಪೂರ್ವಕವಾದ ಪ್ರಾರ್ಥನೆ.

ಕೃ. ಶ್ರೀ. ಬಿ.

ವಸ್ತು ಕೋಶ

ಈ ಸಂಚಿಕೆಯೊಡನೆ ಪ್ರಬುದ್ಧಕರ್ಣಾಟಕದ ಹತ್ತನೆಯ ಸಂಪುಟವು ಮೊದಲಾಗಿದೆ. ಇದು ನ್ಯಾಯವಾಗಿ ಒಂದು ತಿಂಗಳ ಹಿಂದಿಯೇ ಬರಬೇಕಾಗಿತ್ತು.

ವಿನಾಯಕನ ಸಂಚಿಕೆಗೆ ಪುರಾಭಿವೃದ್ಧಿ

ಆದರೆ "ದುರ್ಭಿಕ್ಷದಲ್ಲಿ (?) ಅಧಿಕಮಾಸ" ಬಂದು ಗಣೇಶನನ್ನು ಸ್ವಲ್ಪ ಮುಂದಕ್ಕೆ ತಳ್ಳಿತು. ಏನೂ ನೆಪವಿಲ್ಲದೆಯೇ ಪತ್ರಿಕೆಗಳು ಸಾವಕಾಶಮಾಡುವುದುಂಟು. ಅಂಥದರಲ್ಲಿ ಇಂಥ ನೆಪಸಿಕ್ಕಿದರೆ ಕೇಳಬೇಕೇ ? ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಹಾಗೆ !

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘವು ಹುಟ್ಟಿ ಹತ್ತುವರ್ಷವಾಯಿತು. ಪ್ರಬುದ್ಧಕರ್ಣಾಟಕವು ಹೊರಟು ಒಂಬತ್ತು ವರ್ಷವಾಯಿತು. ಅಲ್ಲಿಂದ ಈಚೆಗೆ

ಕರ್ಣಾಟಕ ಸಂಘಗಳು ಮತ್ತು ಪತ್ರಿಕೆಗಳು

ಎಷ್ಟು ಕರ್ಣಾಟಕಸಂಘಗಳು ಹುಟ್ಟಿವೆ ! ಎಷ್ಟು ಕರ್ಣಾಟಕ ಪತ್ರಪತ್ರಿಕೆಗಳು ಹೊರಟಿವೆ ! ಇದು ಸಂತೋಷಕರವಾದ ಸಂಗತಿಯಲ್ಲವೆ ? ಈ ಸಂದರ್ಭದಲ್ಲಿ ಪ್ರಬುದ್ಧ ಕರ್ಣಾಟಕದ ಒಂದು ಸಣ್ಣ ಸೂಚನೆಯಿದೆ. ಈಗ ಕರ್ಣಾಟಕ ದೇಶದಲ್ಲಿ ಎಲ್ಲೆಲ್ಲಿ ಪ್ರೌಢಕರ್ಣಾಟಕ ಸಂಘಗಳಿವೆಯೋ ಅವು ತಮ್ಮ ಅಧ್ಯಕ್ಷರು, ಕಾರ್ಯದರ್ಶಿಗಳು, ಕಾರ್ಯಸ್ಥಾನ, ಇವುಗಳನ್ನೂ, ತಾವು ಆಗಾಗ್ಗೆ ಮಾಡುವ ಕೆಲಸವನ್ನೂ ಸಂಕ್ಷೇಪವಾಗಿ ತಿಳಿಸಿದರೆ ಅದನ್ನು ಪ್ರಬುದ್ಧಕರ್ಣಾಟಕವು ಪ್ರಕಟಿಸುತ್ತ ಹೋಗುವುದು. ಒಂದು ಪ್ರಾಂತದ ಕನ್ನಡಿಗರಿಗೆ ಮತ್ತೊಂದು ಪ್ರಾಂತದವರ ಪರಿಚಯವು ಆಗಬೇಕಾದರೆ ಆಯಾ ಕಾರ್ಯದರ್ಶಿಗಳ ಸಹಾಯವಿರುತ್ತದೆ. ಇದು ತೀರ ಹೊಸಪರಿಚಯದ ಮಾತು; ಮತ್ತು ಕೇವಲ ಭಾಷಾಸಾಹಿತ್ಯಕಲಾದಿಗಳ ಮಾತು. ಪರಿಚಯದಿಂದ ವಿಶ್ವಾಸಕ್ಕೆ ಒಂದೇ ಮೆಟ್ಟಲು. "ವಿಶ್ವಾಸಃ ಫಲದಾಯಕಃ!"

"ಕನ್ನಡದಲ್ಲಿ ಬರೆಯುವವರಿಲ್ಲ, ಬರೆದರೆ ಓದುವವರಿಲ್ಲ." ಎಂಬ ಒಂದು ಹೇಳಿಕೆಯು ಆಗಾಗ್ಗೆ ಕೇಳಿಬರುತ್ತದೆ. ಇದರ ಜೊತೆಗೆ 'ಬರೆದದ್ದು ಗೊತ್ತಾಗುವುದಿಲ್ಲ' ಎಂಬ ವಾಕ್ಯವನ್ನು ಸೇರಿಸಿದರೆ ಪ್ರಕೃತ ಸ್ಥಿತಿಯು ಇನ್ನೂ ಖಚಿತವಾಗುತ್ತದೆ. 'ಗೊತ್ತಾಗುವುದಿಲ್ಲ' ವೆಂದರೆ, ಅರ್ಥವಾಗುವುದಿಲ್ಲವೆಂದಲ್ಲ—ಅರ್ಥವಾಗದಷ್ಟು ಗಹನವಾಗಿ ಬರೆಯುವ 'ಮಹಾಕವಿ' ಇನ್ನೂ ಯಾರೂ ಹೊಸಕನ್ನಡ ಸಾಹಿತ್ಯದಲ್ಲಿ ಹುಟ್ಟಿಲ್ಲ. ಗೊತ್ತಾಗುವುದಿಲ್ಲವೆಂದರೆ 'ತಿಳಿಯಬರುವುದಿಲ್ಲ' ವೆಂದರ್ಥ. ಹೇಗೆ ತಿಳಿಯ ಬಂದೀತು ? ನಮ್ಮಲ್ಲಿ ಗ್ರಂಥಕರ್ತರೂ ಪ್ರಕಾಶಕರೂ ಪುಸ್ತಕಪಟ್ಟಿಗಳನ್ನು ಪ್ರಕಟಿಸುವಷ್ಟು ಪುಷ್ಟರಲ್ಲ, ಧೃಷ್ಟರಲ್ಲ, ಸಾಹಸಶಾಲಿಗಳಲ್ಲ ; ಪಾಶ್ಚಾತ್ಯ ನಾಗರಿಕತೆಯ ಮಧ್ಯದಲ್ಲಿದ್ದರೂ ಅವರ ಪ್ರಕಟನಕ್ರಮವೂ ಸಂಪಾದನಕ್ರಮವೂ ನಮಗೆ ಇನ್ನೂ ಗೊತ್ತಾಗಿಲ್ಲ ; ಅವರಲ್ಲಿ ತಿಂಗಳಿಗೆ ಒಂದರಂತೆ ಹೊರಡುವ ಪುಸ್ತಕಪಟ್ಟಿಗಳೇ ಲೇಖನ ಮುದ್ರಣ ಸೌಂದರ್ಯ ರಚನಾದಿಗಳಲ್ಲಿ ಒಂದೊಂದೂ ಒಂದೊಂದು ದೊಡ್ಡ ಗ್ರಂಥದಂತಿರುತ್ತದೆ. ಇದು ಕೈಸೇರಿದವರೆಲ್ಲಾ ಪುಸ್ತಕಗಳನ್ನು ಕೊಂಡುಕೊಳ್ಳುತ್ತಾರೆಂದಲ್ಲ ; ಪುಸ್ತಕ ಕೊಂಡುಕೊಳ್ಳಬೇಕೆನ್ನುವವರಿಗೆ ಇದು ಸಹಾಯವಾಗುತ್ತದೆ ; ಹಿಂದು ಮುಂದು ನೋಡುತ್ತಿರುವವರನ್ನು ನಿರ್ಧರಿಸುವಂತೆ ಮಾಡುತ್ತದೆ ; ಮನಸ್ಸಿಲ್ಲದವರನ್ನು ಚಪಲಗೊಳಿಸುತ್ತದೆ. ಪತ್ರಿಕಾ ಪ್ರಕಟನದ ಅನುಭವವಿಲ್ಲದವರು ಅದರ ಮಾಯಾಮಂತ್ರಗಳಿಗೆ ಮರುಳಾಗಿ ಜೇಬು ಬರಿದುಮಾಡಿಕೊಂಡು ಕೈಕೈ ಹಿಸುಕಿಕೊಳ್ಳುವುದೂ ಉಂಟು. ಆದರಿಂದಲೇ ವರ್ತಕತನಕ್ಕೆ ಒಂದು ಕಳಂಕವಿಲ್ಲ. ಗಗ್ಗರು ಇರುವವರೆಗೂ ಠಕ್ಕರು ಇದ್ದೇಇರುತ್ತಾರೆ. ಆದರೆ ನಮ್ಮ ನಾಡಿನಲ್ಲಿ ಕೆಲವು ಮಾತ್ರೆಗಳು ಲೇಹಮುರಬ್ಬಗಳು ಮುಂತಾದವು ಹೊರತು ಪುಸ್ತಕಗಳು ಇಂಥ ಅವಿಶ್ವಸನೀಯವಾದ ಅವಾಂತರ ಪ್ರಕಟನೆಗಳಿಗೆ ಗುರಿಯಾಗಿಲ್ಲ ; ಪ್ರಕಟನೆಗಳಿಗೆ ಬರದಿರುವುದೇ ಒಂದು ನ್ಯೂನತೆಯಾಗಿದೆ. ಆದರೆ ನಮ್ಮ ಅಕಿಂಚನತ್ವದಲ್ಲಿ, ನೂರಾರು ಪಟ್ಟಿಗಳನ್ನು ಅಚ್ಚುಹಾಕಿಸಿ, ಸರಿಯಾದ ಸಂಸ್ಥೆಗಳನ್ನೂ ಜನರನ್ನೂ ವಿಚಾರಮಾಡುವ ಕಷ್ಟವನ್ನು ತೆಗೆದುಕೊಂಡು, ಅಂಚೆ ವೆಚ್ಚವನ್ನು ವಹಿಸಿ ಅವುಗಳನ್ನು ಕಳುಹಿಸುವವರು ಯಾರು ? ಈ ಖರ್ಚಿನ ಅರ್ಧಬೆಲೆಗೆ ನಮಗೆ ಪುಸ್ತಕಗಳು ಅಚ್ಚಾಗಬೇಕು ; ಅವುಗಳಿಗೆ ನಾವು ಒಂದಕ್ಕೆ ನಾಲ್ಕುಬೆಲೆ ಹಾಕಬೇಕು ; ಜನರು ಅವುಗಳನ್ನು ಸಾರವಿರಲಿ ಇಲ್ಲದಿರಲಿ ಕೊಂಡುಕೊಂಡು ಬಿಸಿಬಿಸಿ ದೋಸೆಗಳಹಾಗೆ ಗಬಗಬನೆ ತಿಂದು ನುಂಗಿ ಆನಂದಪಡಬೇಕು ! ಗ್ರಂಥಕರ್ತರನ್ನು ಪಾಠಕರೂ, ಪಾಠಕರನ್ನು ಗ್ರಂಥಕರ್ತರೂ, ಅಟ್ಟಿಕೊಂಡು ಬೈದಾಡುತ್ತ ಚಕ್ರಭವನ ಕೋಟೆಯಲ್ಲಿ ಬಾಗಿಲು ಸಿಕ್ಕದೆ

ಹೊಸ ಕನ್ನಡಗ್ರಂಥಗಳ ಪ್ರಚಾರ.

ಅಲೆದಾಡುತ್ತಿರಬೇಕು. ಈ ಮಧ್ಯೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕೆನ್ನುವವರಿಗೆ ಸರಿಯಾದ ವರ್ತಮಾನವೇ ದೊರೆಯುವಂತಿಲ್ಲ. ಕೆಲವುಕಾಲಕ್ಕೆ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನವರು ಗ್ರಂಥಕರ್ತರೂ ಪ್ರಕಾಶಕರೂ ಹೊಸ ಹೊಸ ಗ್ರಂಥಗಳ ಒಂದೊಂದು ಪ್ರತಿಯನ್ನು ತಮಗೆ ಕಳುಹಿಸಿಕೊಟ್ಟರೆ ಅವುಗಳನ್ನು ಭಂಡಾರದಲ್ಲಿಟ್ಟು ಅವುಗಳ ವಿಚಾರವನ್ನು ಪತ್ರಿಕೆಯಲ್ಲಿ ಪ್ರಕಟಿಸುವುದಾಗಿ ಪ್ರಕಾಶಪಡಿಸಿದರು. ಇದರಿಂದಲೂ ಹೆಚ್ಚು ಉಪಯೋಗವಾದಂತಿಲ್ಲ. ಏಕೆಂದರೆ ಕೆಲವು ಸಂದರ್ಭಗಳಲ್ಲಿ ಗ್ರಂಥಕರ್ತರು ಒಂದು ಪ್ರತಿ ತಮ್ಮ ಗ್ರಂಥವನ್ನು ಅಂಚೆವೆಚ್ಚ ವಹಿಸಿ ಕಳುಹಿಸಿ ಕೊಟ್ಟರೆ ಅವರು ಆ ವರ್ಷವೆಲ್ಲಾ ಪಡೆದ ಲಾಭವನ್ನು ತೆರಬೇಕಾಗಬಹುದು. ಆದ್ದರಿಂದ ನಾವು ಇನ್ನೊಂದು ಸಲಹೆಕೊಟ್ಟು ನೋಡಬೇಕೆಂದಿರುವೆವು. ಕನ್ನಡ ಗ್ರಂಥಗಳ ಪ್ರಕಾಶಕರಾಗಲಿ ಗ್ರಂಥಕರ್ತರಾಗಲಿ ಇನ್ನುಮೇಲೆ ತಮ್ಮಿಂದ ಪ್ರಕಟ ವಾಗುವ ಗ್ರಂಥಗಳ ವಿಚಾರವಾಗಿ ಅವುಗಳ (೧) ಹೆಸರು (೨) ಆಕಾರ (೩) ಪುಟಸಂಖ್ಯೆ (೪) ಕರ್ತೃವಿನ ಹೆಸರು (೫) ಪ್ರಕಾಶಕರು (೬) ಬೆಲೆ (೭) ಕಾವ್ಯ ಜಾತಿ (೮) ವಿಷಯ—ಇಷ್ಟನ್ನೂ ಸಂಕ್ಷೇಪವಾಗಿ ತಿಳಿಸುತ್ತ ಬಂದರೆ ಅವುಗಳನ್ನು ಒಂದುಸಾರಿ ಉಚಿತವಾಗಿ ಪ್ರಬುದ್ಧಕರ್ಣಾಟಕದಲ್ಲಿ ಪ್ರಕಟಿಸುವೆವು. ಆಗ ಪ್ರಬುದ್ಧಕರ್ಣಾಟಕದ ಒಂದು ಸಂಪುಟವನ್ನು ಮಗುಚಿ ಹಾಕಿದರೆ ಆ ವರ್ಷದಲ್ಲಿ ಅಚ್ಚಾದ ಮುಖ್ಯ ಮುಖ್ಯವಾದ ಕನ್ನಡ ಗ್ರಂಥಗಳಾದರೂ ತಿಳಿಯುವಂತಾಗುವುದು. ಇಂಗ್ಲಿಷಿನಲ್ಲಿ ಟೈಮ್ಸ್‌ಲಿಟರರಿ ಸಪ್ಲಿಮೆಂಟ್, ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲ್, ಮಾಡರ್ನ್ ರೆವ್ಯೂ, ಹಿಂದೂ ಮುಂತಾದ ಮೂರು ನಾಲ್ಕು ಪತ್ರಿಕೆ ಗಳನ್ನು ಓದುತ್ತಿದ್ದರೂ ಸಾಕು, ಪ್ರತಿಯೊಂದು ಶಾಖೆಯಲ್ಲಿ ಪ್ರಕಟವಾಗುವ ಹೊಸ ಪುಸ್ತಕವೂ ತಿಳಿದುಬರುತ್ತದೆ. ಈ ನಮ್ಮ ಸೂಚನೆಯು ಗ್ರಂಥಕರ್ತರಿಗೂ ಪ್ರಕಾಶಕ ರಿಗೂ ಭಾರವಾಗದೆ ಪ್ರೇರಕವಾಗುವುದೆಂದು ನಂಬುತ್ತೇವೆ.

ಎಂದಿನಂತೆ ಈ ವರ್ಷವೂ ಕರ್ಣಾಟಕ ಸಂಘವು ಸಣ್ಣಕಥೆಗಳ ಸ್ಪರ್ಧೆಯನ್ನು ಏರ್ಪಡಿಸಿ ಅದರ ಪ್ರಕಟನೆಯನ್ನು ಈ ಸಂಚಿಕೆಯಲ್ಲಿ ಮುದ್ರಿಸಿದೆ. ಇದರಲ್ಲಿ

ಮುದ್ದಣ ಸ್ವರ್ಣಪದಕ

ಉತ್ತಮವಾದ ಕಥೆಗೆ ಸ್ವರ್ಣಪದಕವು ಬರುತ್ತಿದೆಯಷ್ಟೆ. ಇದನ್ನು ಪ್ರಭವಸಂವತ್ಸರದಿಂದ ಮ|| ಎ. ಕೃಷ್ಣಸ್ವಾಮಯ್ಯಂಗಾರ್ಯರು (ರಿ|| ಅಸಿಸ್ಟೆಂಟು ಕಮಿಷನರ್, ಮೈಸೂರು) ಮಾಡಿಸಿ ಕೊಡುವುದಾಗಿ ಮುಂದುವರಿದು ಬಂದು ಮಾತು ಕೊಟ್ಟಿದ್ದಾರೆ. " ಹೇಳಿಕಳುಹಿಸಿ

ದರೆ ಮಜ್ಜಿಗೆ ಕೊಡದವಳು ತಾನಾಗಿ ಮೊಸರುಕೊಡುತ್ತಾಳೆಯೇ?'' ಎಂಬ ಮಾತು ಎಂಜಲ ಕೈಯಲ್ಲಿ ಕಾಗೆಯನ್ನು ಹೊಡೆಯದ ಜಿಪುಣರನ್ನು ವರ್ಣಿಸುವುದಕ್ಕೆ ಹುಟ್ಟಿದ್ದೇ ಹೊರತು ವಸ್ತುಸ್ಥಿತಿಯನ್ನು ವಿವರಿಸುವುದಕ್ಕೆ ಹೊರಟದ್ದೇನೂ ಅಲ್ಲ. ವಿದ್ವಾಂಸರೂ ರಸಿಕರೂ ದೇಶವತ್ಸಲರೂ ಆದ ಮಹನೀಯರು ತಾವಾಗಿ ಮುಂದೆ ಬಂದು ಹಾಲು ಮೊಸರು ಬೆಣ್ಣೆ ಎಲ್ಲವನ್ನೂ ಹಂಚಿಯಾರು! ತಾವಾಗಿ ಸಂತೋಷ ದಿಂದಿತ್ತ ದಾನವು ದ್ವಿಮುಖವಾದ ಧನ್ಯತೆಯುಳ್ಳದ್ದು; ಕೊಟ್ಟವರು ಕೊಂಡವರು ಇಬ್ಬರೂ ಅದರಿಂದ ಧನ್ಯರು. ಕನ್ನಡಸಾಹಿತ್ಯಾಭಿಮಾನಿಗಳ ಪರವಾಗಿ ಕರ್ಣಾಟಕ ಸಂಘವು ಈ ಮೂಲಕ ಮ|| ಕೃಷ್ಣಸ್ವಾಮಯ್ಯಂಗಾರ್ಯರನ್ನು ಕೃತಜ್ಞತೆಯಿಂದ ವಂದಿಸುತ್ತದೆ.

ಈ ಸಂದರ್ಭದಲ್ಲಿ ಕಥೆ ಬರೆಯುವವರಿಗೆ ಒಂದು ಮಾತು ಹೇಳಬೇಕೆನ್ನಿಸುತ್ತದೆ. ಇದುವರೆಗೆ ನಾಲ್ಕಾರು ವರ್ಷಗಳಿಂದ ಸ್ಪರ್ಧೆಗೆ ಬಂದ ನೂರಾರು ಕಥೆಗಳಲ್ಲಿ ಹತ್ತಕ್ಕೆ ಎಂಟರೊಳಗೆ ಇರತಕ್ಕ ವಸ್ತುವು, ಮದುವೆ—ಪಾಶ್ಚಾತ್ಯರೀತಿಯಲ್ಲಿ 'ಕೋರ್ಟ್ಷಿಪ'ನ್ನು ಬೆಳೆಸಿ ಪ್ರಣಯವನ್ನೂ ಭ್ರಮೆಯನ್ನೂ ಸೂಸಿ ಅದ್ಭುತಸುಖದಲ್ಲಿಯೋ ಹುಚ್ಚಿನಲ್ಲಿಯೋ ಮರಣದಲ್ಲಿಯೋ ಮುಗಿಯುವ ಮದುವೆ, ಮತ್ತು ಇದಕ್ಕೆ ಸಂಬಂಧಪಟ್ಟಹಾಗೆಯೋ ಸ್ವತಂತ್ರವಾಗಿಯೋ ಪರೀಕ್ಷೆಗಳಲ್ಲಿ ಪ್ಯಾಸುಮಾಡುವುದು. ಒಂದುವಿಧದಲ್ಲಿ ನೋಡಿದರೆ ಇದು ನೈಜವಾಗಿ ತೋರುವುದು; ಏಕೆಂದರೆ ಪ್ರತಿಯೊಬ್ಬರೂ ಅವರವರ ಅನುಭವಕ್ಕೆ ಬಂದ ಸಂಗತಿಗಳನ್ನು ತಾನೇ ಬರೆದಾರು, ಮತ್ತು ಬರೆಯಬೇಕು? ವಿದ್ಯಾರ್ಥಿಗಳಿಗೆ ಆದರ್ಶ ಪ್ರಪಂಚದಲ್ಲಿಯೋ ವ್ಯಾವಹಾರಿಕ ಪ್ರಪಂಚದಲ್ಲಿಯೋ ಅನುಭವಕ್ಕೆ ಬರತಕ್ಕದ್ದು—ವಿಶೇಷವಾಗಿ ಅನುಭವಕ್ಕೆ ಬರತಕ್ಕದ್ದು—ಈ ಎರಡು ವಿಷಯಗಳು. ಆದರೆ ಈ ಕಥೆಗಳನ್ನು ಬರೆಯುವವರು ಕಾಲೇಜಿನ ವಿದ್ಯಾರ್ಥಿಗಳು; ಇವತ್ತು ವಿದ್ಯಾರ್ಥಿಗಳಾಗಿದ್ದು ನಾಳೆ ಕುಟುಂಬಿಗಳೂ ಪ್ರಜೆಗಳೂ ಅಧಿಕಾರಿಗಳೂ ಆಗತಕ್ಕವರು. ಇಂಥವರಿಗೆ ಮತ್ತಾವ ಅನುಭವವೂ ಇಲ್ಲವೇ ಇಲ್ಲವೆ? ಕಣ್ಣೀರುಬರುವ, ಹೃದಯ ಉಬ್ಬುವ, ಆವೇಶ ಹುಟ್ಟಿಸುವ ಮತ್ತಾವ ಸಂಗತಿಗಳೂ ಕಣ್ಣಿಗೇ ಬೀಳುವುದಿಲ್ಲವೆ? ಯಾವುದನ್ನೂ ಯೋಚಿಸಲಾದರೂ ಬೇಡವೆ? ಮದುವೆಯೆಂದರೆ ವಿಶೃಂಖಲವಾದ ಪ್ರತಿಭಾ ಪ್ರಪಂಚದಲ್ಲಿ ಹೊರತು, ಗೊಣಗುತ್ತ ತಿಂದು ತೇಗುವ ಅತಿಥಿಗಳು ಹೊರತು, ಅದು ಹೆಣ್ಣು ಗಂಡು ಮೊದಲಾಗಿ ಎಲ್ಲರೂ ಈಗ ನಾನಾ ದೃಷ್ಟಿಯಿಂದ ದೀರ್ಘವಾಗಿ ಚಿಂತಿಸತಕ್ಕ ಸಂಗತಿಯಾಗಿದೆ. ಪ್ಯಾಸುಮಾಡುವುದರ ಬೆರಗೂ

ಸಾಯಂಕಾಲದ ಬೆಳಕಿನಂತೆ ಮಂಕಾಗುತ್ತ ಬರುತ್ತಿದೆ. ಸರ್ವವಿದಿತವಾದ ನಿತ್ಯ ಕಟ್ಟಲೆಯ ನೀರಸವೂ ನಿಷ್ಕಲವೂ ಆದ ಇಂಥ ವಸ್ತುವನ್ನು ರಸವತ್ತಾಗಿ ಮಾಡ ಬೇಕಾದರೆ ಅದಕ್ಕೆ ದೇವದತ್ತವಾದ ಪ್ರತಿಭೆಯುಳ್ಳವನೂ ಅನುಭವಶಾಲಿಯೂ ಆದ ಕವಿವರ್ಯನಾಗಬೇಕು. ವಿದ್ಯೆ ವಿವಾಹ ಇವೆರಡನ್ನು ಬಿಟ್ಟರೆ ಉಳಿಯುವುದು ಸಂನ್ಯಾಸತಾನೇ ?—ಎಂದು ಆಕ್ಷೇಪಿಸಬಹುದು. ಸಂನ್ಯಾಸವೋ ವಿನ್ಯಾಸವೋ, ದೇಶದಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಜನ ವಿದ್ಯಾವಂತರಾದ ಯುವಕರು ಸ್ವತಂತ್ರವಾದ ಸಾಹಿತ್ಯಪ್ರಪಂಚದಲ್ಲಿ ಕೂಡ ಮೂರುಹೊತ್ತೂ ಅಸಾಧ್ಯ ಆದರ್ಶ ವಿವಾಹ ಕಲ್ಪನೆಯಲ್ಲಿಯೂ, ಪ್ಯಾಸಿನ ಪ್ರಬಲ ಪ್ರವಾಹದಲ್ಲಿಯೂ ಮುಳುಗಿದ್ದರೆ ಗಡ್ಡೆಹತ್ತುವುದು ಹೇಗೆ ?

"ವೀಣೆಯ ಹುಚ್ಚು" ಚಿತ್ರಪರಿಚಯ

ಚಿತ್ರವು ಲಲಿತಕಲೆಗಳಲ್ಲಿ ಒಂದು. ಕಲೆಗಾರನು ತನ್ನ ಮನಸ್ಸಿಗೆ ಹರಿದುಬಂದ ಸೌಂದರ್ಯವನ್ನು ಸ್ವಂತ ಅನುಭವದಿಂದ ಪೋಷಿಸಿ, ಬಣ್ಣಗೆರೆಗಳ ಮೂಲಕ ತೋರಿಸಿ ಚಿತ್ರಕೃತಿಯನ್ನು ನಿರ್ಮಾಣಮಾಡುತ್ತಾನೆ. ಚಿತ್ರದ ವಿಷಯವೂ ಉದ್ದೇಶವೂ ನಾನಾವಿಧವಾಗಿರುತ್ತವೆ. ಅದು ಕೇವಲ ಪ್ರಕೃತಿಯ ಅನುಕರಣವಾಗಿರಬಹುದು ; ಉತ್ತಮ ಧ್ಯೇಯಗಳನ್ನೋ ದರ್ಶನಗಳನ್ನೋ ತೋರಿಸುವ ಸಂಜ್ಞೆ ಸಂಕೇತಗಳಿಂದ ತುಂಬಿರಬ ಹುದು ; ಯಾವುದಾದರೊಂದು ಸ್ಥಿತಿಯ, ಸನ್ನಿವೇಶದ, ಸಂಘಟನೆಯ, ಅಥವಾ ದೃಶ್ಯದ ವರ್ಣನೆಯಾಗಿರಬಹುದು ; ಆ ಸ್ಥಿತಿಯಲ್ಲಿರುವ ಇತರರನ್ನು ಹೊರಗಿನಿಂದ ಕಂಡೊ ಸನ್ನಿವೇಶದ ವಿಷಯ ಓದಿಯೊ, ಕೇಳಿಯೊ, ನೋಡಿಯೋ, ಅದನ್ನು ತೋರಿಸಲು ಯತ್ನಿಸಿರಬಹುದು ; ಅಥವಾ ಸ್ವಂತ ಜೀವನದಲ್ಲಿನ ಒಂದು ಸ್ಥಿತಿ ಯನ್ನೊ, ಮನಸ್ಸಿನ ಒಂದು ಭಾವವನ್ನೊ, ಜೀವನದ ಒಂದು ಅನುಭವವನ್ನೊ ಪ್ರದರ್ಶಿಸಬಹುದು. ಈ ಚಿತ್ರವು ಈ ಕಡೆಯ ಜಾತಿಗೆ ಸೇರಿದ್ದು : ಇದು ಕಲೆಗಾರನ ಜೀವನದಲ್ಲಿ ಒಂದು ಕಾಲದ ಸ್ಥಿತಿಯ ಚಿತ್ರ. ಈ ಸ್ಥಿತಿ ಆತನಿಗೆ ಹೇಗೆ ಬಂದಿತೆಂಬು ದನ್ನು ಒಂದೆರಡು ಮಾತುಗಳಲ್ಲಿ ತಿಳಿಸಬೇಕಾಗಿದೆ.

ಶ್ರೀಮಾನ್ ವೆಂಕಟಪ್ಪನವರು ಮೈಸೂರು ಕಲಾಶಾಲೆಯಲ್ಲಿ ಕಲೆಯ ಅಭ್ಯಾಸಮಾಡಿ, ಇಲ್ಲಿನ ಮತ್ತು ಮದರಾಸಿನ ಎಲ್ಲ ಪರೀಕ್ಷೆಗಳ ಎಲ್ಲ ಚಿತ್ರಕಲಾ ಭಾಗಗಳಲ್ಲಿಯೂ ಮೇಲಾಗಿ ತೇರ್ಗಡೆಹೊಂದಿ, ಇಲ್ಲಿನ ಸರಕಾರದವರ ಸಹಾಯ ದಿಂದ (ವೇತನ ಪಡೆದು) ಕಲ್ಕತ್ತೆಗೆ ಹೋದರು. ಆಗ್ಗೆ ಸ್ವಲ್ಪ ಕಾಲಕ್ಕೆ ಹಿಂದೆ ತಾನೆ ಅಲ್ಲಿ ಮೆ|| ಇ. ಬಿ. ಹ್ಯಾವೆಲ್‌ರವರ ಅಧ್ಯಕ್ಷತೆಯಲ್ಲಿ ಭರತ ಕಲೆಯ ಮಹಾಶಾಲೆ

ಯೊಂದು ಸ್ಥಾಪಿತವಾಗಿತ್ತು. ಇವರು ಅಲ್ಲಿಗೆ ವ್ಯಾಸಂಗಕ್ಕೆ ಹೋಗಿ, ಅಲ್ಲಿ ಶ್ರೀಮಂತರೂ ಸುಪ್ರಸಿದ್ಧ ಕಲೆಗಾರರೂ ಆದ, ಭಾರತ ಕಲೆಗೇ ಒಂದು ಹೊಸ ಸಂಪ್ರದಾಯವನ್ನು ತಂದು ಈಗಿಗೂ ನಮ್ಮ ಚಿತ್ರಕಲೆಗೆ ಸರಸ್ವತಿಯಿಂತಿರುವ ಶ್ರೀ|| ಅಬನೀಂದ್ರನಾಥ ಠಾಕೂರರವರಲ್ಲಿ ಚಿತ್ರಕಲೆಯನ್ನೂ ಶಿಲ್ಪವನ್ನೂ ಅಭ್ಯಾಸಮಾಡಿ ಅವರ ಮೆಚ್ಚಿಕೆಯನ್ನೂ ಪ್ರೀತಿಯನ್ನೂ ಪಡೆದರು. ಇವರ ಕೆಲಸವನ್ನು ನೋಡಿ ಗುರುವಿಗೇ ಆನಂದವಾಗಿತ್ತು. ಶಂಕರಾಚಾರ್ಯ, ದೀಪಾವಳಿ, ಪ್ರತಾಪಸಿಂಗ್ ಮುಂತಾದ ಇವರ ಚಿತ್ರಗಳನ್ನು ನೋಡಿ ಭಾರತಕಲೆಗೆ ಕೀರ್ತಿಸ್ತಂಭರಾದ ಇನ್ನೊಬ್ಬರು ಹುಟ್ಟಿಕೊಂಡರೆಂದು ಅವರು ಅರಿತರು. ಇವರ ಚಿತ್ರಗಳನ್ನು ದೇಶ ವಿದೇಶಗಳವರೆಲ್ಲರೂ ಕೊಂಡಾಡುತ್ತಿರುವುದನ್ನು ನೋಡಿ ಹಿಗ್ಗಿ ಇಂಥವರ ವಿದ್ಯಾವಿಷಯದಲ್ಲಿ ತಾವೂ ಸ್ವಲ್ಪಮಟ್ಟಿಗೆ ನೆರವಾದುದಕ್ಕಾಗಿ ಸಂತೋಷಪಟ್ಟರು. ಇತ್ತ ವೆಂಕಟಪ್ಪನವರು ಆ ಮಹಾಶಾಲೆಯಲ್ಲಿ ಕಲಿಯಬೇಕಾದುದನ್ನೆಲ್ಲ ಕಲಿತು, ಮಾಡಬೇಕಾದುದನ್ನೆಲ್ಲ ಮಾಡಿ, ಸಂಪೂರ್ಣವಾದ ಯೋಗ್ಯತೆಪಡೆದು, ಇವರು ಕಲಿಯಬೇಕಾದುದು ಅಲ್ಲಿ ಇನ್ನೇನೂ ಇಲ್ಲವೆನ್ನುವ ತನಕ ಅಲ್ಲಿಯೇ ಇದ್ದರು. ವಿದ್ಯಾಭ್ಯಾಸ ಮುಗಿಯುತ್ತಲೇ ಆಗ ಇವರ ಶಾಲೆಯ ಮುಖ್ಯಾಧಿಕಾರಿಗಳಾಗಿದ್ದ ಮೆ|| ಪರ್ಸಿ ಬ್ರೌನ್ ಅವರು ಇವರ ವಿಷಯವಾಗಿ ಮೈಸೂರು ಸರಕಾರದವರಿಗೆ ಸಿಫಾರಸು ಕಾಗದ ಬರೆದರು. ಅಮೃತಶಿಲಾ ಶಿಲ್ಪಕ್ಕೆ ಸಂಬಂಧಪಟ್ಟ ಕೆಲವಂಶಗಳನ್ನು ಕಲಿಯುವುದಕ್ಕೆ ಅವರನ್ನು ವಿಲಾಯತಿಗೆ ಕಳುಹಿಸಬೇಕೆಂದೂ, ಆದರೆ "ಯುದ್ಧ" ವು ಮುಗಿಯುವವರೆಗೂ ತಡೆದಿರಬೇಕೆಂದೂ, ಆಗಲೇ ಹೊರಟು ಆಕಸ್ಮಾತ್ ಅವರಿಗೆ ಅಪಾಯವೇನಾದರೂ ಸಂಭವಿಸಿದರೆ ಕಲಾ ಪ್ರಪಂಚಕ್ಕೇ ಒಂದು ದೊಡ್ಡ ನಷ್ಟವಾಗುವುದೆಂದೂ ಆ ಕಾಗದದಲ್ಲಿ ಬರೆದಿದ್ದರು. ಆಗ ೧೯೧೬ ನೆಯ ಇಸವಿ. ಯುದ್ಧವು ಯಾವಾಗ ಮುಗಿಯುವುದೆಂದು ಹೇಳುವಹಾಗಿರಲಿಲ್ಲ. ಅದು ಮುಗಿಯುವವರೆಗೂ ಮೈಸೂರಿನಲ್ಲಿಯೇ ಇದ್ದುಕೊಂಡು ವೀಣೆಯ ಅಭ್ಯಾಸಮಾಡಬೇಕೆಂಬ ಆಸೆಯು ವೆಂಕಟಪ್ಪನವರಿಗೆ ಬಹು ತೀವ್ರವಾಗಿ ಹುಟ್ಟಿತು.

ಕಲ್ಕತ್ತಾದಲ್ಲಿ ಅವರು ಇರುವಾಗಲೇ ಸಾಮಾನ್ಯವಾಗಿ ಸಂಗೀತದ ಶಾಸ್ತ್ರಭಾಗವನ್ನೆಲ್ಲಾ ತಿಳಿದುಕೊಂಡು ಪ್ರೌಢವಾದ ಉಪನ್ಯಾಸಗಳನ್ನೂ ವ್ಯಾಖ್ಯಾನಗಳನ್ನೂ ಬರೆದಿದ್ದರು. ಶ್ರುತಿಗಳ ವಿಚಾರದಲ್ಲಿ ವೆಂಕಟಮುಖಿಯವರ ಅಭಿಮತವು ಸರಿಯೆಂದು ವಾದಿಸಿ ಸಾಧಿಸಿ, ತಿಳಿದವರಲ್ಲಿ ಗಣ್ಯತೆಪಡೆದಿದ್ದರು. ಶಾಸ್ತ್ರದ ತಿಳಿವಳಿಕೆಯ ಜೊತೆಗೆ, ಶ್ರೀರಂಗದ ವಿದ್ವಾನ್ ರಾಮಸ್ವಾಮಯ್ಯಂಗಾರ್ಯರೆಂಬುವರು

ಅಲ್ಲಿಗೆ ಕಾರ್ಯಾಂತರದಿಂದ ಹೋಗಿದ್ದಾಗ ಅವರಲ್ಲಿ ವೀಣೆಯ ಅಭ್ಯಾಸಮಾಡಿ "ವರ್ಣ" ಗಳವರೆಗೂ ಚೆನ್ನಾಗಿ ಕಲಿತರು. ಶ್ರೀ|| ಐಯಂಗಾರ್ಯರು ಶೇಷಣ್ಣನವರ ಶಿಷ್ಯರು ಗುರುವಿನ ವಾದನ ಸಂಪ್ರದಾಯದಲ್ಲಿಯೇ ಶುದ್ಧವಾದ ಕರ್ಣಾಟಕ ರೀತಿಯಲ್ಲಿ ವೆಂಕಟಪ್ಪನವರಿಗೆ ಶಿಕ್ಷಣ ಕೊಟ್ಟರು. ಶೇಷಣ್ಣನವರು ಬದುಕಿರುವಾಗಲೇ ಅವರಲ್ಲಿ ಶಿಷ್ಯರಾಗಿ, ರಾಗ ಪಲ್ಲವಿ ಕೀರ್ತನೆಗಳ ಪಾಠ ಹೇಳಿಸಿಕೊಂಡು ಕೃತಾರ್ಥರಾಗಬೇಕೆಂದು ನಿಶ್ಚಯಿಸಿ ವೆಂಕಟಪ್ಪನವರು, ಅದಕ್ಕೆ ವಿದ್ಯಾರ್ಥಿವೇತನದ ಮೂಲಕ ಧನಸಹಾಯವಾಗಬೇಕೆಂದು ವಿದ್ಯಾ ಇಲಾಖೆಯವರನ್ನೂ, ಗುರುಸಹಾಯ ದೊರೆಯಬೇಕೆಂದು ಶ್ರೀಮನ್ಮಹಾರಾಜರವರನ್ನೂ ಪ್ರಾರ್ಥಿಸಿ ಬಹು ಕಷ್ಟಪಟ್ಟು ಕೊನೆಗೆ ಗುರುದೃಷ್ಟಿಗೆ ಬಿದ್ದರು. ವೇತನ ದೊರೆಯದೆ ಹೋದರೂ, ಗುರುವಿನ ಒಪ್ಪಿಗೆ ದೊರೆತುದಕ್ಕಾಗಿ ಸಂತೋಷಪಟ್ಟು ೧೯೧೭ ರಿಂದ ಹಿಡಿದು ಗುರುಗಳು ಕಾಲವಾಗುವವರೆಗೂ, ಎಂದರೆ ಸುಮಾರು ಎಂಟು ವರುಷಗಳ ಕಾಲ, ಅವರಲ್ಲಿ ಶಿಕ್ಷಣವನ್ನು ಪಡೆದು ಗಾನಕಲೆಯ ಸ್ವರೂಪವನ್ನೂ ವೀಣೆಯ ಜೀವಾಳವನ್ನೂ ವಾದನ ಮರ್ಮಗಳನ್ನೂ ತಿಳಿದುಕೊಂಡರು.

ವೆಂಕಟಪ್ಪನವರು ಎಲ್ಲದರಲ್ಲಿಯೂ ಹಠಯೋಗಿಗಳು ; ಮೊದಲುಮಾಡಿದುದನ್ನು ಕೊನೆವರೆಗೂ ನೋಡಿಬಿಡುವ ಸ್ವಭಾವದವರು. ಅವರ ಮನಸ್ಸು ಒಂದು ವಿಷಯದಲ್ಲಿ ನಟ್ಟರೆ ಆ ಸಮಯದಲ್ಲಿ ಬೇರೆಯಾವುದಕ್ಕೂ ಆಸ್ಪದಕೊಡತಕ್ಕುದಲ್ಲ. ಹಗಲೂ ಇರುಳೂ, ಊಟ ನಿದ್ರೆ ಉಪಚಾರಗಳನ್ನು ಮರೆತು, ತಮ್ಮ ಅಖಂಡ ಬ್ರಹ್ಮಚರ್ಯದ ಬಲದಿಂದಲೂ ವೀರ ನಿರ್ಧರದಿಂದಲೂ ಕೆಲಸಮಾಡುವಂಥವರು. ಕೆಲಸದಲ್ಲಿ ಅವರ ಚಿತ್ತದ ಒಮ್ಮೊನೆಯೂ "ತಪಸ್ಸೂ" ಅನನ್ಯಸಾಮಾನ್ಯವಾದವು. ಇಂಥವರು ಕೈಹಾಕಿದ ಯಾವ ಕೆಲಸತಾನೇ ಅಸಾಧ್ಯವಾದೀತು? ಗುರುಕಟಾಕ್ಷಕ್ಕೆ ಸಂಪೂರ್ಣವಾಗಿ ಪಾತ್ರರಾಗಿದ್ದುದರಿಂದ, ಇತರರನೇಕರಿಗೆ ದೊರೆಯಲಾರದ ರಹಸ್ಯಗಳನ್ನು ಅವರಿಂದ ತಿಳಿದು, ತಮ್ಮವನ್ನಾಗಿ ಮಾಡಿಕೊಂಡು, ತಮ್ಮ ಗ್ರಹಣಶಕ್ತಿ, ಕಲ್ಪನಾಶಕ್ತಿ, ಅಭ್ಯಾಸ, ನಯವಾದ ಶುದ್ಧವಾದ ನುಡಿತ, ಇವುಗಳಿಂದ ಶೇಷಣ್ಣನವರನ್ನು ಮೆಚ್ಚಿಸಿ ಅವರ ಯೋಗ್ಯತೆಗೆ ತಕ್ಕ ಶಿಷ್ಯರಾದರು. ಅವರ ಪ್ರತಿಮೆಯೊಂದನ್ನು (Bust) ಮಾಡಿ ಗುರುಕಾಣಿಕೆ ಕೊಟ್ಟು ಅದನ್ನು ಅರಮನೆಯ ಚಿತ್ರಶಾಲೆಯಲ್ಲಿ ಸ್ಥಾಪಿಸುವ ಏರ್ಪಾಡುಮಾಡಿದರು.

ಹಿಡಿದುದನ್ನು ಸರ್ವದಾ ಮಾಡುವುದು, ಅದರ ವಿಷಯವಾಗಿಯೇ ಸಂತತವಾಗಿ ಚಿಂತಿಸುತ್ತ ಧ್ಯಾನಿಸುತ್ತಿರುವುದು, ಅದರಲ್ಲಿ ಮುಂದುವರಿಯುವುದಕ್ಕೆ

ವಿಶ್ರಾಂತಿಯಿಲ್ಲದೆ ಪ್ರಯತ್ನಿಸುತ್ತಿರುವುದು, ಎಷ್ಟೇ ಕಷ್ಟವಾದ ಭಾಗವಾಗಲಿ ಅದು ಪೂರ್ತಿ ಬರುವವರೆಗೂ ವ್ಯವಸಾಯ ಮಾಡಿ ಕೈವಶಮಾಡಿಕೊಳ್ಳುವುದು, ಇದು ವೆಂಕಟಪ್ಪನವರ ಹುಟ್ಟುಗುಣವೆಂದು ಹೇಳಿದೆನಷ್ಟೆ. ವೀಣೆಯ ಅಭ್ಯಾಸದಲ್ಲಿ ಇತರ ಕೆಲಸಗಳನ್ನೆಲ್ಲ ಬಿಟ್ಟರು; ಚಿತ್ರದ ಸಾಮಾನುಗಳನ್ನು ಕಟ್ಟಿಟ್ಟರು; ಬೇರೇನು ಬೇಕಿಲ್ಲ. ಗುರುವಿನಲ್ಲಿ ಕಲಿಯುವುದು; ಹೇಳಿಸಿಕೊಂಡುದನ್ನು ಬರೆದಿಟ್ಟುಕೊಳ್ಳುವುದು; ಅದನ್ನು ತಮ್ಮದಾಗಿ ಮಾಡಿಕೊಳ್ಳುವುದು; ಅದಕ್ಕೆ ಸಂಬಂಧಪಡುವ ಶಾಸ್ತ್ರಭಾಗಗಳನ್ನು ವೆಂಕಟಮುಖಿ, ದೀಕ್ಷಿತರು ಇವರ ಗ್ರಂಥಗಳಲ್ಲಿ ಚರ್ಚಿಸುವುದು; ಕಾರ್ಯರೂಪವಾಗಿ ವೀಣೆಗಿಳಿಸಿಕೊಂಡು ಅದರ ನಿಜವನ್ನು ಅನುಭವಿಸಿ ಗುರು ಹೇಳಿಕೊಟ್ಟ ಪಾಠಕ್ಕೆ ಪುಷ್ಟಿತಂದುಕೊಳ್ಳುವುದು—ಈರೀತಿ ದಿನಕ್ಕೆ ೧೫-೧೬ ಗಂಟೆಗಳ ಕಾಲ ವ್ಯವಸಾಯ ಮಾಡುತ್ತಿದ್ದರಂತೆ.

ಆಗ ಮೈಸೂರಿಗೆ ಕವಿವರ್ಯರಾದ ಡಾ|| ರವೀಂದ್ರನಾಥ ಠಾಕೂರರವರು ದಯಮಾಡಿಸಿದರು. ಅವರು "ಅಪ್ಪ"ನನ್ನೂ—ವೆಂಕಟಪ್ಪನವರನ್ನು ಅವರೆಲ್ಲ "ಅಪ್ಪ" ನೆಂದು ಕರೆಯುವರು—ಆತನು ಮಾಡುತ್ತಿದ್ದ ಕೆಲಸವನ್ನೂ ಆತನ ಸ್ಥಿತಿಯನ್ನೂ ನೋಡಿ ವಿಸ್ಮಿತರಾದರು. ಹಾಗೆ ಮಾಡುವುದು ತಪ್ಪೆಂದು ಹೇಳಿ, ಇಷ್ಟುಕಾಲ ಕೃಷಿಮಾಡಿ ತನಗೆ ಶಾಶ್ವತವಾದ ಕೀರ್ತಿತಂದಿದ್ದ ಚಿತ್ರಕಲೆಯನ್ನು ಬಿಟ್ಟು, ಕ್ಷಣಿಕ ಫಲ ಮಾತ್ರವನ್ನು ತರುವ ಈ ವೀಣೆಗೆ ಮರುಳಾದ ಆತನನ್ನು ಆಕ್ಷೇಪಿಸಿದರು. ಶಿಷ್ಯನ ಈ ಹುಚ್ಚನ್ನು ತಮ್ಮ ಸಮೀಪ ಬಂಧುಗಳಾದ ಅಬನೀಂದ್ರರಿಗೆ ತಿಳಿಸಿದರು. ಅಬನೀಂದ್ರರಿಗೂ ಬಲು ದಿನದಿಂದ ಶಿಷ್ಯನು ಕಾಗದಬರೆದಿರಲಿಲ್ಲ. ಇದನ್ನು ಕೇಳಿದೊಡನೆಯೇ ಅವರೂ ವಿಸ್ಮಿತರಾಗಿ ಆತನಿಗೆ ಕಾಗದ ಬರೆದರು. ಇನ್ನೇನು, ಅವರದೂ ಆಕ್ಷೇಪಣೆಯೇ. ತಮ್ಮೆಲ್ಲರನ್ನೂ ಮರೆತು ತನಗೆ ಕೀರ್ತಿಯನ್ನು ತರುವ ಚಿತ್ರಶಿಲ್ಪಗಳನ್ನು ಅಸಡ್ಡೆಮಾಡುವುದು ಸರಿಯಲ್ಲವೆಂದೂ, ಆ ಕಲೆಗಳ ಮುಂದೆ ಗಾನವು ನಶ್ವರವೆಂದೂ, ಅಷ್ಟು ಬೇಕಾದರೆ ರಾತ್ರಿ ಬಿಡುವಾದಾಗ ವೀಣೆಯ ಅಭ್ಯಾಸಮಾಡಿ ಹಗಲೆಲ್ಲ ದೊಡ್ಡ ಚಿತ್ರಕೆಲಸಗಳನ್ನು ಮಾಡಬೇಕೆಂದೂ, ತಮ್ಮನ್ನೂ ಆ ಕಲೆಗಳ ವಿಷಯದಲ್ಲಿ ಕರ್ತವ್ಯವನ್ನೂ ಮರೆಯಕೂಡದೆಂದೂ ಆತನಿಗೆ ಕಾಗದ ಬರೆದರು. ಕಾಗದವನ್ನು ಓದಿಕೊಂಡ ವೆಂಕಟಪ್ಪನವರು ಇದಕ್ಕೆ ಏನು ಉತ್ತರ ಬರೆಯಬೇಕೆಂದು ಯೋಚಿಸಿ, "ಸ್ಥಿತಿ ಹೀಗಿರುವಾಗ ಬೇರೇನು ಮಾಡಿಯೇನು ? ಅವರನ್ನು ಮರೆಯುವುದು ಸಾಧ್ಯವೆ ? ಇದು ಅವರಿಗೆ ತಿಳಿಯಲಿ" ಎಂದು ಈ ಚಿತ್ರವನ್ನು ಬರೆದು ಕಳುಹಿಸಿ ಗುರುವಿನ ಕಾಗದಕ್ಕೆ ಉತ್ತರವಿತ್ತರು. ಉತ್ತರ

ವಾದರೂ ಎಂಥಾದ್ದು ! ಒಂದೇ ಕಾರ್ಯದಲ್ಲಿ ಎರಡು ಪ್ರಯೋಜನಗಳು ! ಕಾರ್ಯಕ್ಕೆ ಎಷ್ಟು ಸುಂದರವಾದ ಎಷ್ಟು ಅಮೂಲ್ಯವಾದ ಫಲ ! ಗುರುವಿಗೆ ಅರ್ಥವಾಯಿತು ; ಸಂತೋಷವಾಯಿತೊ ಇಲ್ಲವೊ ನನಗೇನು ಗೊತ್ತು ? ಇದು ಚಿತ್ರದ ಕಥೆ ಯಾಯಿತು.

ಇನ್ನು ಚಿತ್ರದ ಕಡೆ ನೋಡಿ. ಎಡಕ್ಕೆ—ಎತ್ತರವಾಗಿರುವ ಬೀರುವಿನಮೇಲೆ ತೆಳ್ಳನೆಯ ಮುಸುಕು ಕವಿಸಿದ ಗುರುವಿನ ಪ್ರತಿಮೆಯಿದೆ. ವೀಣೆಯ ಹುಚ್ಚಿನಲ್ಲಿ ಚಿತ್ರ ಗಾರನು ಗುರುವನ್ನು ಮರೆತಿದ್ದಾನೆ. ಪಕ್ಕದಲ್ಲಿ ದೊಡ್ಡ ಕಂಬ. ಕಂಬಕ್ಕೆ ಇಬ್ಬರು ರಮಣಿಯರನ್ನು—ಚಿತ್ರ ಶಿಲ್ಪಗಳ ಅಧಿದೇವಿಯರನ್ನು—ಕಟ್ಟಿಹಾಕಿದೆ. ಅವರು ಅನಾದರದಲ್ಲಿ ದುಃಖಪಟ್ಟು ಸೊರಗಿ ಬೀಳುವಂತಿದೆ. ಬಣ್ಣದ ಪಾತ್ರೆಯ ಬಣ್ಣ ಚೆಲ್ಲಿ ಅದು ಕೇಳುವವರಿಲ್ಲದೆ ಕೆಳಗೆ ಬಿದ್ದಿದೆ. ಈಗ ಅನುಪಯುಕ್ತವಾಗಿರುವ ಕುಂಚಿ. ಈಚೆ, ಚಿತ್ರದ ಕಾಗದಗಳ ಹಲವು ಸುರುಳಿಗಳು ; ಅಲ್ಲಿನ ಚಿತ್ರಗಳನ್ನೂ ಬಣ್ಣವನ್ನೂ ತಿಂದುಹಾಕುತ್ತ ಇಲಿಗಳು ನಿರ್ಭಯವಾಗಿ ಓಡಾಡುತ್ತಿವೆ. ಬಲಕ್ಕೆ—ಸುಂದರ ವಾದ ನಿಡಿದಾದ ವೀಣೆ; ಚಿತ್ರದ ನಾಯಕನ ಕಣ್ಣ ಮುಂದೆ ಸರ್ವಾಧಿಕಾರ ಮಾಡುತ್ತ, ನಿಮಿಷ ನಿಮಿಷವೂ ಅವನ ಕಣ್ಣಿನಲ್ಲಿ ಬೆಳೆದು ದೊಡ್ಡದಾಗುತ್ತಿರುವಂತಿದೆ. ಪ್ರತಿಭಾಗದಲ್ಲಿಯೂ—ತಂತಿ, ಮೇರು, ಮೆಟ್ಟಲು, ವಲ್ಲಕಿ, ಕಾಯಿ, ಮುಂತಾ ದುವುಗಳಲ್ಲಿ—ನಿಜವಾದ ವೀಣೆಯೇ ನಮ್ಮ ಎದುರಿಗಿರುವಂತಿದೆ. ಅತ್ತ ಮೇಲು ಗಡೆ, ಚಿತ್ರಗಾರನ ಮನಸ್ಸನ್ನು ಅಪಹರಿಸಿ ಮೋಹಗೊಳಿಸಿರುವ, ಹೊಸಚಲುವೆ ವೀಣಾದೇವಿಯ, ಬೆಡಗು ಭಂಗಿಯ ಚಿತ್ರ. ಮುಖದ ಪ್ರಭೆಯಲ್ಲಿ ಚಿನ್ನದ ಮೆರುಗು. ಆ ಮೋಹಿನಿಯ ಭುಜಕ್ಕೆ ರೆಕ್ಕೆಗಳು; ಹಾರಿಬಂದು ಹಾರಿ ಹೋಗುವಳಂತಿದೆ. ಅದೇ ಸ್ವಭಾವದವಳವಳು. ನಟ್ಟ ನಡುವೆ, ಇವುಗಳೆಲ್ಲ ಅಲ್ಲಿ ಹಾಗಿರುವುದಕ್ಕೆ ಕಾರಣನಾದ, ಇವುಗಳಿಗೆಲ್ಲ ಅರ್ಥವನ್ನೂ ಧ್ವನಿಯನ್ನೂ ಕೊಡುವ, ದೃಢಕಾಯ ನಾದ, ಹುಚ್ಚನಂತಿರುವ, ನಾಯಕನ ಚಿತ್ರ !

ನಾಯಕನ ಮನಸ್ಸು ಅವನ ವಶದಲ್ಲಿಲ್ಲ ; ಭ್ರಮಿತವಾಗಿ, ಎದುರಿಗಿರುವ ಮೋಹಿನಿಯ ರೂಪಿಗೂ ಅವಳ ಇನಿಗೊರಲ ಗಾನಕ್ಕೂ ಸೆರೆಬಿದ್ದು ಮೈಮರೆತಿದೆ. ಅವನ ಮೈಮೇಲೆ ಹೊದಿಕೆಯಿಲ್ಲ; ಬಟ್ಟೆಬರೆಯೊಂದೂ ಅವನಿಗೆ ಬೇಕಿಲ್ಲ. ಮೇಲಿನ ತುಂಡು ಹೊದಿಕೆಯೂ ಜಾರಿ ಕೆಳಗೆ ಬಿದ್ದುಹೋಗಿರುವ ಪ್ರಜ್ಞೆಯಿಲ್ಲ. ಬಲುದಿನಗ ಳಿಂದ ಆಯುಷ್ಕರ್ಮ ಕೂಡ ಮಾಡಿಸಿಕೊಳ್ಳದೆ ಮುಖದ ಕೂದಲು ಬೆಳೆದು ಹೋಗಿದೆ ; ತಲೆಯ ಕೂದಲು ಬಾಚದೆ ತಿರಿ ಕಟ್ಟಿಕೊಂಡಿದೆ. " ನನಗೆ ಇನ್ನೇನೂ

ಬೇಡ; ನೀನೊಬ್ಬಳು ಒಲಿದರೆ ಸಾಕು; ನಿನಗಾಗಿ ಎಲ್ಲವನ್ನೂ ಬಿಟ್ಟಿದ್ದೇನೆ; ಹುಚ್ಚ ನಾಗಿ ಹೋಗಿದ್ದೇನೆ. ಗುರುಗಳ ಮುಖ ಕಾಣಿಸದಿರಲೆಂದು ಮುಸುಕು ಹಾಕಿ ದ್ದೇನೆ. ನನ್ನ ಎಲ್ಲ ಆನಂದಗಳಿಗೂ ಕಾರಣರಾಗಿದ್ದ ಆ ಇಬ್ಬರು ದೇವಿಯರನ್ನು ಅಸಡ್ಡೆಮಾಡಿ ಅವರನ್ನು ದುಃಖಕ್ಕೀಡುಮಾಡಿ ನೋಯಿಸುತ್ತಿದ್ದೇನೆ. ನನ್ನ ಸಾಮ ಗ್ರಿಗಳೆಲ್ಲ ನಾಶವಾಗುತ್ತಿವೆ; ಆ ಇಲಿ ಕೂಡ ನನ್ನ ಸ್ಥಿತಿಯನ್ನು ನೋಡಿ ಅಣಕಿಸು ವಂತಾಗಿದೆ; ಒಲಿದು ಬಂದು, ಈ ಸ್ಥಿತಿಯಿಂದ ನನ್ನನ್ನು ಪಾರುಮಾಡಿ, ನನ್ನ ಚಿತ್ತ ಸ್ವಾಸ್ಥ್ಯವು ಹಿಂದಿರುಗುವಂತೆ ಮಾಡು.'' ಎಂದು ಮೊರೆಯಿಡುತ್ತಿರುವಂತಿದೆ. ನಿರ್ಬಂಧದಲ್ಲಿ, ಅನಾದರದ ಕಠಿನ ಸಂಕೋಲೆಯಲ್ಲಿ ಇರುವವರು ಪೂರ್ಣ ಸುಂದರಿ ಯರು. ಪಕ್ವವಾದ ಕುಲೀನವಾದ ಶುಚಿಯಾದ ಅವರ ತುಂಬು ಸೌಂದರ್ಯಕ್ಕೂ, ಅಪಕ್ವವಾದ ಚಪಲತಾಪೂರ್ಣವಾದ ಥಳುಕುಪಳುಕಿನ ಇವಳ ಎಳಪು ಸೌಂದ ರ್ಯಕ್ಕೂ ಎಲ್ಲಿಯ ಹೋಲಿಕೆ! ಅವರದು ಸಾಧ್ವೀಭಾವ. ಇವಳ ಕಣ್ಣಿನ ನೋಟವೂ ಅಂಗಾಂಗಗಳ ಮಾಟವೂ ನಿಲುವಿನ ಭಂಗಿಯೂ ಆ ಭಾವಕ್ಕೆ ವ್ಯತಿರೇಕ. ಆತನು ತನ್ನಲ್ಲಿ ಮರುಳಾಗಿರುವನೆಂದು ತಿಳಿದೂ ತಿಳಿದೂ, ಒಲಿದು ಆದರಿಸದೆ, ಒಮ್ಮೆ ಆತನ ಕಡೆಗೂ ಒಮ್ಮೆ ಆ ರಮಣಿಯರ ಸ್ಥಿತಿಯಕಡೆಗೂ ನೋಡಿ ಕಿರುನಗು ನಗುತ್ತಿ ದ್ದಾಳೆ. ಹೆಚ್ಚಿನ ದೇವಿಯರು ತನ್ನ ಮನೆಯನ್ನೂ ಮಾನವನ್ನೂ ಬೆಳಗಿ ಆದರಿಸು ತ್ತಿದ್ದರೂ ಈ ಕಿಶೋರಿಯು ಈಗ ಅವರಿಗಿಂತ ಹೆಚ್ಚಿನವಳಂತೆ ಹೊಳೆಹೊಳೆದು ಪ್ರಭಾ ಮಂಡಲ ರಚಿಸಿ ಅವನ ಕಣ್ಣಿಗೆ ಕಾಣುತ್ತಿದ್ದಾಳೆ. ಆದರೂ ಸ್ವಸ್ಥಿತಿಯ ಅರಿವು ಆತನಿಗೆ ಪೂರ್ತಿಯಾಗಿ ಹೋಗಿಲ್ಲ. ಮುಸುಕು ಕವಿಸಿದ್ದರೇನು? ಗುರುಮುಖವು ಆತನ ಮನಸ್ಸಿನಿಂದ ಅಳಿಸಿ ಹೋದೀತೆ? ಅದು ಅಸಾಧ್ಯ. ಆ ಪ್ರತಿಮೆಯನ್ನು ಹತ್ತಿರದಲ್ಲಿ ಸೂಕ್ಷ್ಮವಾಗಿ ನೋಡಿ. ಅದು ಚಿತ್ರದಂತಿಲ್ಲ; ಶಿಲ್ಪ ಕೃತಿಯಂತಿದೆ. ತೆಳ್ಳನೆಯ ಮುಸುಕು ಈ ಕ್ಷಣದ ಮರವನ್ನು ಮಾತ್ರ ಸೂಚಿಸುವುದು. ಅದರೊಳಗಿನ ಗುರು ಮುಖದ ಪ್ರತಿಯೊಂದು ಲಕ್ಷಣವೂ ಕಳೆಯೂ ಚರ್ಮದ ಸುಕ್ಕೂ ತಲೆಯ ಕೂದ ಲೆಳೆಗಳೂ ಸ್ಪಷ್ಟವಾಗಿ ಕಾಣಿಸುವುವು. ಎಂದರೆ ಗುರುಮುಖವು ಕಲ್ಲಿನಲ್ಲಿ ಕಡೆದಂತೆ ಈತನ ಮನಸ್ಸಿನಲ್ಲಿ ದೃಢವಾಗಿ ನಿಂತಿದೆ. ಅದನ್ನು ಮರೆತೇಹೋಗುವುದು ಆದೀತೆ? ಏನೊ ಭ್ರಾಂತಿಯ ಹುಚ್ಚು ಬಂದಿರುವ ಈ ಸ್ವಲ್ಪಕಾಲ ಅವರ ಯೋಚನೆ ನಿಂತಿದೆ, ಅಷ್ಟೇ, ಎಂಬಂಶವನ್ನು ಎಷ್ಟು ಅರ್ಥವತ್ತಾಗಿ ಸೂಚಿಸಿದ್ದಾರೆ! ಹೀಗೆ, ಮರೆವಿನ ಕ್ಷಣಿಕಭಾವವನ್ನು, ಮುಖದ ಸೂಕ್ಷ್ಮಾಂಶಗಳನ್ನು ಕೂಡ ಮರೆಮಾಡದ ಪರದೆಯ ಮೂಲಕ ಸೂಚಿಸಿರುವುದು ಈ ಚಿತ್ರಗಾರನ ಒಂದು ಕಲಾಚಾತುರ್ಯ. ಆ ಇಬ್ಬರು ದೇವಿಯರ ವಿಚಾರವಾದ ತನ್ನ ನಡೆವಳಿಕೆಯ ಅವಿವೇಕವೂ ಧರ್ಮಾಧರ್ಮಗಳೂ

ಕಲೆಗಾರನಿಗೆ ಚೆನ್ನಾಗಿ ತಿಳಿದಿವೆ. ಆದರೆ ಮನಸ್ಸು ಪರಗತವಾಗಿರುವುದರಿಂದ ಆ ಮೋಹಿನಿಯ ಮಂತ್ರದ ಎದುರಿಗೆ, ಅವಳ ಇನಿಗೊರಲಿನ ಪ್ರವಾಹದ ಸೆಳೆತದಲ್ಲಿ, ಆತನ ಶಕ್ತಿಯು ದುರ್ಬಲವಾಗಿದೆ. ಇಂಥ ಸ್ಥಿತಿಯು ಮನುಷ್ಯಮಾತ್ರನ ಜೀವಿತದಲ್ಲಿ ಸ್ವಾಭಾವಿಕವೆಂಬುದನ್ನು ಎಲ್ಲರೂ ಅರಿತೇ ಇರುವರು.

ಇನ್ನು, ಇಲ್ಲಿನ ಚಿತ್ರನೈಪುಣ್ಯವೂ, ಬಣ್ಣಗೆರೆಗಳ ಸಂವಿಧಾನವೂ, ಒಟ್ಟು ಚಿತ್ರದ ಮನೋಹರತೆಯೂ, ಕುಂಚೆಯ ಕೆಲಸದ ನಯವೂ, ಚಿತ್ರದಲ್ಲಿ ವ್ಯಕ್ತವಾಗುವ ಭಾವ, ಅರ್ಥ, ಭಂಗಿ ಇವುಗಳ ಆನುಗುಣ್ಯ ಸಾಮರಸ್ಯಗಳೂ, ರಚನೆಯ ಸಮತೆ ಪ್ರಮಾಣಗಳೂ ಎಂತಹುವೆಂಬುದನ್ನು ಮೂಲಚಿತ್ರವನ್ನು ನೋಡುವವರೆಲ್ಲರೂ ಅರಿಯುವರು. ಯಾವ ಬಣ್ಣವೂ ಹೆಚ್ಚು ಪ್ರಕಾಶವಾಗಿ ದಪ್ಪವಾಗಿಲ್ಲ. ಬಣ್ಣ ಕೈಯಲ್ಲಿದೆಯೆಂದು ಸುಣ್ಣ ಬಳಿದಂತೆಯೋ ನೆಲ ಸಾರಿಸುವಂತೆಯೋ ಆಕೃತಿಗಳಿಗೆ ರಂಗು ಹಚ್ಚಿಲ್ಲ. ಚಿತ್ರದೇವಿಯ ರಚನೆಗೂ ಶಿಲ್ಪದೇವಿಯ ಮಾಟಕ್ಕೂ ಇರುವ ವ್ಯತ್ಯಾಸವನ್ನು ಕುಂಜಿಯು ಎಷ್ಟು ಸೂಕ್ಷ್ಮವಾಗಿ, ಆದರೂ ಎಷ್ಟು ಸ್ಫುಟವಾಗಿ ಮಾಡಿದೆ! ಚಿತ್ರದಲ್ಲಿ ಶಿಲ್ಪದ ಭಾವ ತರುವುದು ಬಲು ಕಷ್ಟ. ಆ ಭಾವವನ್ನು ಈ ಕಲೆಗಾರನು ಈ ದೇವಿಯಮೂರ್ತಿಯಲ್ಲಿಯೂ ಗುರುವಿನ ಆಕೃತಿಯಲ್ಲಿಯೂ ತಂದಿದ್ದಾನೆ. ನಿಜವಾಗಿಯೂ ಗುರುವಿನ ಪ್ರತಿಮೆಯನ್ನು ಮೊದಲು ಮಾಡಿಕೊಂಡು ಅದನ್ನು ಅನುಕರಿಸಿ ಆಮೇಲೆ ಚಿತ್ರವನ್ನು ಚಿತ್ರಿಸಿಲ್ಲ; ಅಂಥ ರೂಪನ್ನು ಮನಸ್ಸಿನಲ್ಲಿ ರಚಿಸಿಕೊಂಡು ಅದು ಶಿಲ್ಪಮೂರ್ತಿಯಾಗಿದ್ದಿದ್ದರೆ ಯಾವ ರೀತಿ ಇರುತ್ತಿತ್ತೊ ಅಂಥಾದ್ದರ ಪಡಿಯಚ್ಚನ್ನು ಹೀಗೆ ರಚಿಸುವ ಕೌಶಲವು ಅಸಾಮಾನ್ಯವಾದದ್ದು. ಐದು ವರುಷಗಳಿಂದ ಕುಂಜಿ ಹಿಡಿಯದಿದ್ದ ಕೈ ಎಂಥಾ ಚಿತ್ರವನ್ನು ಸೃಷ್ಟಿಸಿತು! ಇತ್ತ, ಗಾನ ದೇವಿಯ ಮೂರ್ತಿಯು ಈತನನ್ನು ಪರೀಕ್ಷಿಸುವಂತೆ ಕಣ್ಣಿನ ನೋಟದಿಂದ ಪ್ರಶ್ನೆ ಕೇಳುವಂತೆ ಇದೆ. ಈತನ ಕಣ್ಣೆದುರಿಗೆ ಬೇರೇನೂ ಇಲ್ಲ; ವಾದ್ಯ, ದೇವಿ ಎರಡನ್ನು ಬಿಟ್ಟರೆ ಉಳಿದುದೆಲ್ಲವೂ ಈಗ ಶೂನ್ಯ; ಅವನ ಪ್ರಜ್ಞಾಪಥದಲ್ಲಿ ಕಾಣವು. ಇರುವುವೆಲ್ಲ ಹಿಂದೆ ಬಿದ್ದಿವೆ. ಚಿತ್ರದ ನಾಯಕನ ಕಾಯರಚನೆಯನ್ನಾಗಲಿ ಉಡುಪನ್ನಾಗಲಿ ಮನಸ್ಸಿನ ಸ್ಥಿತಿಯನ್ನಾಗಲಿ ಆ ಸ್ಥಿತಿಯು ಎಲ್ಲ ಅಂಗಾಂಗಗಳಲ್ಲಿಯೂ ಮುಖದಲ್ಲಿಯೂ ನೋಟದಲ್ಲಿಯೂ ಅಭಿನಯದಲ್ಲಿಯೂ ಮೊಳಕಾಲೂರಿ ಕುಳಿತು ಅಂಗಲಾಚಿ ಪ್ರಾರ್ಥಿಸುತ್ತಿರುವ ಭಂಗಿಯಲ್ಲಿಯೂ ಯಾವ ರೀತಿ ನುಡಿಯುತ್ತಿರುವುದು ಎಂಬುದನ್ನು ನೋಡಿ. ಆತನ ಮೈಬಣ್ಣವು ಬಲು ನಯವಾಗಿದೆ—ಕೇವಲ ಎಳಗಾವಿಯ ಚರ್ಮದ ಬಣ್ಣ. ದೇಹವು ದೃಢವಾದುದು,

ಬ್ರಹ್ಮಚರ್ಯವು ಅಸ್ಖಲಿತವಾದುದು ಎಂಬುದೂ ವ್ಯಕ್ತವಾಗುತ್ತಿದೆ. ಕೊನೆಗೆ, ದೇಹದ ಹೊರ ಎಲ್ಲೆಗಳನ್ನು ತೋರಿಸುವ ಗೆರೆ ಕೂಡ ಇಲ್ಲದಂತೆ, 'ಇದು ಚಿತ್ರವಲ್ಲ, ನಿಜವಾದ ಮನುಷ್ಯನೇ' ಎಂಬ ಭ್ರಾಂತಿಬರುವಂತೆ ಮೈ ಅಖಂಡವಾಗಿದೆ.

ಹೀಗೆ ಸ್ಥಿತಿಯ ಸ್ವಾಭಾವಿಕತೆಯಲ್ಲಿಯೂ ಚಿತ್ರದನಯ ಕೌಶಲಗಳಲ್ಲಿಯೂ ಒಟ್ಟಿನ ಸೌಂದರ್ಯದಲ್ಲಿಯೂ ಅರ್ಥಧ್ವನಿಗಳ ಆಳದಲ್ಲಿಯೂ ಪರಸ್ಪರ ವ್ಯತಿರಿಕ್ತ ವಾದ ಭಾವಗಳನ್ನು ಮೇಳೈಸಿರುವ ಚಾತುರಿಯಲ್ಲಿಯೂ ಇಂಥ ಚಿತ್ರವು ಬೇರೆ ಇನ್ನೊಂದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಒಂದು ಸಲ ನೋಡಿದಮೇಲೆ ಇದನ್ನು ಮರೆಯಲಾಗುವುದಿಲ್ಲ. ಸರ್ವದಾ ಕಣ್ಣಿಗೆ ಕಟ್ಟಿದಂತೆಯೂ, ಮನಸ್ಸಿನ ಕಣ್ಣೆದುರಿಗೆ ಆ ದೃಶ್ಯವು ನಡೆಯುತ್ತ ನೆನಪುಮಾಡುತ್ತಿರುವಂತೆಯೂ ಇರುವುದು. ಚಿತ್ರಗಾರನಿಂದ ಇದಕ್ಕೂ ಮೇಲಾದ ಕಲೆಯನ್ನು ಯಾರು ತಾನೇ ಅಪೇಕ್ಷಿಸಿಯಾರು!

ವಿ. ಸೀ.

ವಿ. ಸೂ.—

"ವೀಣೆಯ ಹುಚ್ಚು" ಎಂಬುದು ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಚಿತ್ರ. ಇದನ್ನು ಚಿತ್ರಿಸಿದವರು ಚಿತ್ರಕಲಾ ವಿಶಾರದರಾದ ಮ|| ರಾ|| ಕೆ. ವೆಂಕಟಪ್ಪನವರು. ಈ ಚಿತ್ರದ ಮೂಲ ಪ್ರತಿಯು ಮೈಸೂರು ಜಗನ್ಮೋಹನ ಬಂಗಲೆಯ ಚಿತ್ರಶಾಲೆಯಲ್ಲಿರುವುದು.

EME 619

೬೧೯
619

ಪ್ರಬುದ್ಧ ಕರ್ಣಾಟಕ

ವಿಭವ ಸಂವತ್ಸರ —೩೬— ದೀಪಾವಳಿಯ ಸಂಚಿಕೆ

ಸಂಪುಟ ೧೦] ವಿಷಯಸೂಚಿಕೆ [ಸಂಚಿಕೆ ೨

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೮

All Rights Reserved

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ)

ವಾರ್ಷಿಕ ಚಂದಾ-ಅಂಚೆವೆಚ್ಚ ಸೇರಿ

ಆಶ್ರಯದಾತರಿಗೆ	ರೂ.	೧೦—೦—೦
ಪೋಷಕರಿಗೆ	ರೂ.	೩—೬—೦
ವಾಚನಾಲಯಗಳು ಮತ್ತು ಪುಸ್ತಕಭಂಡಾರಗಳಿಗೆ	ರೂ.	೨—೮—೦
ಚಂದಾದಾರರಿಗೆ	ರೂ.	೨—೦—೦

ಕಾರ್ಯದರ್ಶಿ

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು.

ಪ್ರಬುದ್ಧಕರ್ಣಾಟಕಕ್ಕೆ ವಿನಿಮಯರೂಪವಾಗಿ ಬರುತ್ತಿರುವ ಪತ್ರಿಕೆಗಳು.

ಬೆಂಗಳೂರು:—ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, ದೇಶೀಯ ವಿದ್ಯಾಶಾಲಾ ಪತ್ರಿಕೆ, ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕ ಸಂಘದ ಪತ್ರಿಕೆ, ಸ್ಕೂಲು ಮತ್ತು ಸ್ಕೌಟ್ ಪತ್ರಿಕೆ, ವಿಶ್ವಕರ್ಣಾಟಕ, ಒಕ್ಕಲಿಗರ ಪತ್ರಿಕೆ, ಸರಸ್ವತಿ, ಮಿಥಿಕ್ ಸೊಸೈಟಿ ಪತ್ರಿಕೆ, ರಂಗಭೂಮಿ, ಮಕ್ಕಳ ಪುಸ್ತಕ, ನವಜೀವನ.

ಮೈಸೂರು:—ಸಾಧ್ವಿ, ಮಧ್ವಸಿದ್ಧಾಂತ ಪ್ರಕಾಶಿನೀ, ವಿಶ್ವಬಂಧು.

ತುಮಕೂರು:—ಸ್ಕೂಲ್ ಫ್ರೇಂಡ್.

ನಂಜನಗೂಡು:—ಸನ್ಮಾರ್ಗದರ್ಶಿ.

ಚಾಮರಾಜನಗರ:—ಕಾದಂಬರೀ ಸಂಗ್ರಹ.

ಧಾರವಾಡ:—ಕರ್ಣಾಟಕ ವೃತ್ತ ಮತ್ತು ಧನಂಜಯ, ಕರ್ಮವೀರ, ವಾಗ್ಭೂಷಣ, ಕರ್ಣಾಟಕ ವಿದ್ಯಾಶಾಲಾ ಪತ್ರಿಕೆ, ಜಯಕರ್ಣಾಟಕ.

ಬೆಳಗಾಂ:—ಸುಧಾರಕ, ಪ್ರಬೋಧ.

ಬಿಜಾಪುರ:—ಕಲ್ಪಲತಾ ಗ್ರಂಥಮಾಲಾ.

ಅಗಡಿ:—ಸದ್ಬೋಧಚಂದ್ರಿಕೆ.

ಪುತ್ತೂರು:—ಕನ್ನಡ ಸಹಕಾರ.

ತುಂಗಭದ್ರ:—ಪ್ರೇಮ.

ಬಾಗಲಕೋಟೆ:—ಕನ್ನಡಿಗ.

ಮಂಗಳೂರು:—ಸುವಾಸಿನೀ, ಸುಬೋಧಕ ಗ್ರಂಥಮಾಲಾ.

ಉಡುಪಿ:—ಸತ್ಯಾಗ್ರಹಿ.

ಕುಂದಾಪುರ:—ವಸಂತ.

ಮಡಿಕೇರಿ:—ಓಲ್ಡ್ ಸ್ಟುಡೆಂಟ್ಸ್ ಮ್ಯಾಗಸೀನ್, ಲೋಕಪಾವನ, ಕೊಡಗು ವೃತ್ತಾಂತ.

ಮದರಾಸು:—ಆರೋಗ್ಯಚಂದ್ರಿಕೆ.

ಚಿಕ್ಕಬಳ್ಳಾಪುರ:—ಬೋಧಕಸೇಪೆ.

619
ಬೆಂಗಳೂರು-19



ಪ್ರಬುದ್ಧ ಕನ್ನಡ

ಕನ್ನಡನಾಡಿನ ಜನರೇ ಬನ್ನಿ
ಕನ್ನಡದೊಡತಿಯ ಪೂಜಿಸುವ ;

ಕೋಗಿಲೆಯಿಂಚರ ಸುಡಿಯುತ ಬನ್ನಿ
ಹರಿಣನ ಕಂಗಳ ಕಿಡಿಗಳ ತನ್ನಿ
ಅಡವಿಯ ಮಲ್ಲಿಗೆ ಸಂಪಿಗೆ ತನ್ನಿ
ಒಡತಿಯ ಬಿಡುಗಡೆಕಾಣಿಕೆಯ

ಬೆಟ್ಟದ ಬಂಡೆಯ ಭಾಗ್ಯವ ತನ್ನಿ
ಕನ್ನಡದಬಲತೆಯೊಡೆಯೋಣ;
ನೀಲಿಯ ಗಗನದ ನಗುವನು ತನ್ನಿ
ನೆನೆಸುವ ಒಣಗಿದ ಕನ್ನಡವ.

ಗಾಳಿಯ ಗುಟ್ಟನು ಒಡೆಯುತ ಬನ್ನಿ
"ಆಳಲು ಸುಲಭವೆ?!" ಎನ್ನುತಲಿ;
ಸೂರ್ಯನ ಕಿರಣದ ತೇಜವ ತನ್ನಿ
ಕನ್ನಡಕಲೆಗಳ ಬೆಳಗೋಣ.

"ಗುರುಬಾಲ"

ಬಿ. ಎಂ. ಶ್ರೀ ಪ್ರತಿಷ್ಠಾನ
ಬೆಂಗಳೂರು-19
619

ಕುಮುದಿನಿ

[ಈ ವರ್ಷ ಮ|| ಬಿ. ಎಂ. ಶ್ರೀಕಂಠಯ್ಯನವರ "ರಜತೋತ್ಸವ ಸ್ವರ್ಣಪದಕ"ವನ್ನು ಪಡೆದ ಕವಿತೆ]

೧

ಮೋಡಗಳ ಸುಳಿವಿಲ್ಲ ; ಬಾನೊಳು
ಮಿಂಚಿದುವು ಚುಕ್ಕಿಗಳು ; ತಳಿರೆಡೆ
ಚರಿಸಿ ಕಂಪನು ಸೂರೆಗೊಳ್ಳುತ
ಲೀಲೆಯೊಳು ಮೈಮರೆತ ತಣ್ಣೆಲ
ರೊಯ್ಯನೊಯ್ಯನೆ ತೀಡಿತು.

ತಾಯಿಯೆದೆಯನ್ನಪ್ಪಿ ನಲಿಯುವ
ಹಾಲುಹಸುಳೆಯ ತೆರದಿ, ಬನಗಳ
ಮೇಲೆಯೊರಗಿತು ಚೆಲುವಿನೊರತೆಯ
ತಿಂಗಳಿನ ಹೊಂಬೆಳಕು. ಹಬ್ಬಿತು
ಮೌನ ನಾಡಿನಲಿ !

ಹರಿಯುತಿಹ ತೊರೆಯ ಬಳಿ ಮೆರೆಯಿತು
ಬನದ ಮುತ್ತನ್ನೊಲಿದು ಸಲಿಸುತ
ಕಣ್ಣ ಸೆಳೆಯುವ ಹುಲ್ಲುಗುಡಿಸಲು
ಜೊನ್ನಿನಲಿ ಮಿಂದು.

ಅಂಗಳದ ಮಲ್ಲಿಗೆಯ ಬಳ್ಳಿಯು
ಚೆಲ್ಲುತಿಹ ಬಿರಿಮುಗುಳನಾಯದೆ,
ಉಪವನದ ಗಿಡ ಬಳ್ಳಿ ಸೂಸುವ

ಮಧುಮಾಸದಲರುಗಳ ಕೊಯ್ಯದೆ,
ನೋಟಕರ ಕಂಗಳಿಗೆ ಗುಡಿಸಲು
ಬಿಟ್ಟ ಮನೆಯಂತೆಸೆದುದು !

೨

ಆದರೇನಾ ಮನೆಯ ಜಗುಲಿಯ
ಮೇಲೆ ಬೆಳಗುವ ಸೊಡರಿನೆಡೆಯೊಳು,
ಕಾಂಚನದ ಕಮನೀಯತನವನು
ಕಣ್ಣ ಮಿಂಚೊಳು ಜರೆಯುತಿರುಳಿನ
ಕತ್ತಲೆಯ ಮುಡಿಯಲ್ಲಿ ಮುಡಿಯುತ,
ಮೊಗದ ಬಾಡಿದ ಕಳೆಯೊಳಿಂದುಗೆ
ನಾಚಿಕೆಯ ನೀಡುತ್ತ ಕುಳಿತಿಹ
ಒರ್ವ ಭಾಮಿನಿಯು !

ಮೊಗದ ಕೊಳದೊಳಗರಳಿದಬುಜಗ
ಳಂತೆ ರಂಜಿಪ ಕಂಗಳಿಂ ಬಹ
ಮಧುಧಾರೆಯುಂದದಲಿ ಕಂಬನಿ
ಹರಿದುಪಂಗ್ಶೈಲಿಟ್ಟ ಕೆನ್ನೆಯು
ಮೇಲೆ ಎಡೆಬಿಡದೆ ;

ಅಳಲಿನಗ್ಗಿಯುಲುರುಳಿ ಬೆಂದಿಹ
ನಳಿನದಂದದೊಳಿದ್ದಳಾ ಸಳಿ
ನಾಕ್ಷಿ ಕಂಗಳಿಗೆ !

೩

ಎದೆಯೊಳುರಿವಾ ನೋವದಾವುದು ?
ಕಣ್ಣೊಳಿಳಿವಾ ಬೆಸನವಾವುದು ?

ಬಿಸುಸುಯ್ಲಿನಲಿ ಬಸಿವ ದುಃಖವ
ದಾವುದೆಲೆ ರಮಣಿ ?

ಒಲಿದವರ ವಿರಹವೋ ? ಫಲಿತಿಹ
ಯೌವನದ ಬೇಗೆಯೋ ? ಪಡೆದಿಹ
ರಗಲಿಕೆಯ ಯಾತನೆಯೊ ? ಬಯಕೆಯು
ಸಲ್ಲದುರಿಯೋ ? ಮೋಹ್ ಸಿರಾಶೆಯ
ಬೆಂಕಿಯೋ ? ಪೇಳಿಲೌ, ಕುಮುದಿನಿ,
ಎದೆಯ ಕೊರೆಯುವ ಗೋಳಸು !

ವರುಷವೆರಡರ ಹಿಂದೆ, ರಮಣನು
ಕದನಕೈದಿದ ; ಮರಳಲಿಲ್ಲವು.
ದಿನಗಳಳಿದುವು, ಪಕ್ಷ್ಮಕಳೆದುವು,
ಮಾಸಗಳು ಬಿರಬಿರನೆ ಸುಳಿದುವು,
ದುಗುಡ ಹೆಚ್ಚಿತು ಬಯಕೆಯು !

ಇನಿಯನಾಗಮನವನು ಹಾರೈ
ಸುತ್ತ, ತರಳೆಯು ಕಂಬನಿಗಳಂ
ಜಲಿಯ ಜಗದೀಶನಿಗೆ ಅರ್ಪಿಸಿ,
ಎದೆಯ ಭಕುತಿಯ ಮೇಲೆ ಭಾರವ
ನಿಟ್ಟು, ಕಾಲವ ನೂಂಕುತಿರುವಳು
ರಮಣದರ್ಶನಕೆ !

೪

ಮಾನವಗೆ ನಂಬುಗೆಯ ಬಲವೇ
ಪರಮ ಬಲವೈ ! ಜೀವಮಾನದ
ಕಷ್ಟಗಳ ಕರಗಿಪುದು ಭಕ್ತಿಯು;
ಬಾಳಿಗೀಯುತ ಬೆಳಕ, ಪೊರೆವುದು,
ಶಕ್ತಿಯನು ನೀಡಿ !

ಬಾಳಿನೊರತೆಯ ಬತ್ತಿಸದು ; ತಿಳಿ
ವಳಿಕೆಗೀವುದು ರಂಗದಿಂಪನು ;
ಎದೆಯ ಮರುಭೂಮಿಯನು ಮಾಡದು ;
ಮನದ ಒಣ ವಿಜ್ಞಾನಕೀವುದು
ರಸದ ಸೊಂಪನು. ದಾರಿಯನು ಮರೆ
ಮಾಡದೆಂದಿಗು ಭಕ್ತಿಯು !

ಬೆಟ್ಟಗಳನೆತ್ತುವುದು ; ಮೃತ್ಯುವ
ಮುರಿಯುವುದು ; ಹರಿಯುವುದು ಮಾಯಾ
ಜಾಲವನು ; ಕಾಣದಿಹ ದೇವನ
ತೋರುವುದು ಕಂಗಳಿಗೆ ; ಜನರಿಗೆ
ಜೀವನವನೊಲಿಸುವುದು ; ಸಾವಿನ
ಭಯವ ಪರಿಹರಿಸಿತ್ತು ಮುಕುತಿಯ
ಸಲಹುವುದು ಭಕುತಿ !

೫

ಗೂಬೆ ಕೂಗಿದರೇನು ಮರದಲಿ ?
ಹಾಲ ಚೆಲ್ಲಿದರೇನು ತಿಂಗಳು ?
ತಾರೆ ಮಿನುಗಿದರೇನು ನಭದಲಿ ?
ಸೊಬಗು ಹೊರಗಡೆ ನಲಿದರೇನು ?
ತರಳೆಯರಿಯುವಳೇ !

ಒಳಗೆ ತೋರದ ಸೊಗವು ಬಯಲಲಿ
ಎನಿತು ಹರಡಿದರೇನು ? ರಮಣಿಯ
ಮನವ ಸೆಳೆಯುವುದೇ ?
ತನುವು ಗುಡಿಸಲೊಳಿದ್ದರೇನಾ
ಮನವು ಪತಿಯಿಹ ಲೋಕದಲಿ ಸಂ
ಚರಿಸೆ ಸೋಜಿಗವೇ ?

ಇನಿಯನಿಹನೋ? ಕದನದಲಿ ಮಡಿ
ದಿಹನೊ? ಕೈದುಗಳಾಟದಲಿ ನೊಂ
ದಿಹನೊ? ಅರಿಗಳ ಸೆರೆಮನೆಯೊಳುರು
ಳುವನೊ? ದೇಸಿಗನಂತೆ ಚರಿಪನೊ?
ಎಂಬ ಹಂಬಲದಲ್ಲಿ ಬೆಂದಳು
ಸಂದೆಯದಿ ನೊಂದು!

೬

"ಬೆಳಗುತಿಹ ಚಂದಿರನೆ, ಮಿರುಗುವ
ತಾರೆಗಳೆ, ಬಿತ್ತರದ ಗಗನವೆ,
ಲೋಕವನು ದಿಟ್ಟಿಸುತ ಚರಿಸುವ
ನಿಮಗೆ ತೋರನೆ ಎನ್ನೊಲವಿನಂ
ಬುಧಿಯ ಹಿಮಕರನೆಲ್ಲಿ ನೆಲೆಸಿಹ
ನೆಂಬುದನು ತಿಳಿಸೆನಗೆ ಕರುಣಿಸಿ
ನಮಿಸುವೆನು ನಿಮಗೆ!

ತಂಬೆಲರೆ ಸುದ್ದಿಯನು ತಿಳಿಸೈ
ರಮಣನೆಲ್ಲಿಹನೆಂದು, ಪೂರ್ವದೊ
ಳಂದು ಸೀತಾದೇವಿಗರುಹನೆ
ನಿನ್ನಮಗ ಹನುಮಂತದೇವನು
ರಾಮನೆಲ್ಲಿಹನೆಂಬ ಮಂಗಳ
ವಾದ ವಾರ್ತೆಯನು?

ಇನಿಯನಗಲಿದ ರಮಣಿ, ಜಾನಕಿ
ಯಾದರೇನಂತಲ್ಲವಾದರೆ
ಏನು? ಒಲುಮೆಯೊಳಿಹುದೆ ಭೇದವು?
ವಿರಹಯಾತನೆಯೊಂದೆ ಅಲ್ಲದೆ
ಬೇರೆ ಬೇರಿಹುದೆ?

ಬೇಡುವೆನು ದಿವಿಜರಿರ ನಮಿಸುತ,
ಗಾಳಿಪಟ್ಟಿಯೊಳಲೆವ ನಿಮಗೀ
ಕಜ್ಜವಲ್ಲವು ಕಠಿನ. ಹೇಳಿರಿ
ರಮಣನೆಲ್ಲಿಹನೆಂದಿಗೈತಹ
ನೆಂಬ ಸತ್ಯವನು !

ಬೇಡುವೆನು ಜಗದೀಶ, ಬಾಲೆಯ
ಪಾಲಿಸೈ. ನಿನ್ನನೇ ನಂಬಿಹೆ
ನಿನ್ನ ಬೇರೆಯ ಗತಿಯ ಕಾಣೆನು
ಕಳುಹು ರಮಣನನು.

ಸರ್ವಶಕ್ತನು ನೀನು, ನಿನಗಿದು
ದೇವ ಪೇಳ್ ಹುಲುಗಜ್ಜವಲ್ಲವೆ ?
ತೋರು ಇನಿಯನನು.''

೭

ಇಂತೆಂದು ಬೇಡಿದಳು ಕುಮುದಿನಿ,
ಕೇಳಿದನು ಜಗದೀಶ ; ದಿವಿಜರು
ಕೇಳಿದರು ; ಕೇಳಿದರು ಮಾರುತ
ಗಗನವಿಂದುವು ತಾರೆಯಾವಳಿ
ಎಲ್ಲ ಕಿವಿಗೊಟ್ಟು !

ಎದೆಯು ಯಾತನೆಯಿಂದ ನುಡಿಯುವ
ದನಿಯು ಮರುದನಿಯಾಗಿ ಮುಟ್ಟದೆ
ವಿಶ್ವದೆಲ್ಲೆಡೆಯ ?

ಹಿಂದೆ ಕೊಳದೊಳು ಮೊಸಳೆ ಹಿಡಿಯಲು
ಗಜರಾಜ ದೇವನಿಗೆ ಮೊರೆಯಿಡೆ
ಬಂದು ಚಕ್ರದಿ ಸೀಳಿ ನಕ್ರವ,
ಪೊರೆಯನೇ ಗಜರಾಜನ?

ಮಿಗವು ಮೊರೆಯಿಡೆ ಬಂದು ಕಾಯ್ವಾ
ಖಗಗಮನ ಕಾಯನೇ ಕಾಮಿನಿ
  ಕರೆಯೆ ಭಕ್ತಿಯಲಿ?

ವಿಷ್ಣುದೂತರು ಬಂದು ಸಗ್ಗಕೆ
ಹರಿಯ ಸಂದೇಶವನು ನುಡಿದರು:
ಕುಮುದಿನಿಯ ರಮಣನನು ಕಳುಹಲು
  ಮೂರು ಗಳಿಗೆಯ ಮಾತ್ರಕೆ!

ಕಾಳಗದಿ ಕೈಮಾಡಿ ಮಡಿದಾ
ಕುಮುದಿನಿಯ ರಣವೀರನೆಂಬುವ
ಭಟನ ಕರೆಯುತ ಬಳಿಗೆ ಸಗ್ಗದ
  ರಾಜನಿಂತೆಂದ:

“ಹೋಗು ವೀರನೆ, ನಿನ್ನ ಸತಿಯೊಡ
ನಿದ್ದು, ಮೂರೇ ಗಳಿಗೆಯಲಿ ಸಂ
ತೈಸಿಯಾಕೆಯ ಹಿಂತಿರುಗಿ ಬಾ
  ಮರೆಯದಾಣತಿಯ!

ದೂತನೊಬ್ಬನ ಕಳುಹುವೆನು ನಿ
ನ್ನೊಡನೆಯಾತನ ಮಾತ ಮೀರದೆ,
ಕಾಮಿನಿಯ ಕಾಮಕ್ಕೆ ಸಿಲುಕದೆ,
ಸುರರ ಧರ್ಮವ ಮೀರಿ ನಡೆಯದೆ
  ಹೋಗಿ ಬಾ ಬೇಗ!”

ಸುರಪತಿಗೆ ಕೈಮುಗಿದು ವೀರನು
ದೂತನೊಬ್ಬನ ಕೂಡಿ ಹೊರಟನು
  ಸಗ್ಗದಿಂದಿಳೆಗೆ!

೮

ಏನ ಕಂಡಳು ಕುಮುದಿನಿ?
ಬೆಚ್ಚುತಿಹಳೇಕಿಂತುಟು?
ಅರಳಿಯೆಲೆಯಲ್ಲಾಡದಿರುವುದು;
ಗಾಳಿ ಸುಳಿಯದು; ಜನವಿಹೀನವು,
ನಿನದವೇಸಿದು ಬರುತಿದೆ?

ಅಂಗಳದ ಮಲ್ಲಿಗೆಯ ಬಳ್ಳಿಯು
ಮೊಗ್ಗುಗಳ ಬಳಬಳನೆ ಸೂಸಿತು;
ತಲೆದೂಗಿದುವು ಹೂವುಗಿಡಗಳು;
ತೆರೆಯದೆಲೆ ಬಾಗಿಲುಗಳೆಲ್ಲಾ
ತಮಗೆ ತಾವೇ ಸೆಡೆತುಕೊಂಡುವು
ಸುರರ ಬರವನು ಸೂಚಿಸಿ!

ತಲೆಯೆತ್ತಿ ನೋಡಿದಳು ತರಳೆಯು;
ನಡುಗಿದಳು ತನ್ನೆದುರಿಸಲ್ಲಿಹ
ದೀಪದೆಡೆಯೊಳು ನೆಳಲ ತೋರದೆ
ನೆಲವ ಸೋಂಕದೆಯಂತರಾಳದಿ
ನಿಂತ ರೂಪುಗಳೆರಡ ಕಾಣುತ
ಬೆಚ್ಚಿ ಬೆರಗಾಗಿ!

ಹೊಳೆವ ಹೊನ್ನನು ಕಡೆದು, ಜೊನ್ನಿನ
ಮಿರುಗನಿತ್ತಂದದಲಿ; ಬೆಂಕಿಯು
ಬೇಗೆಯನು ಕಳೆದುಳಿದ ಶಾಂತಿಯು
ರೂಪುವೆತ್ತಂದದಲಿ, ಬಾಲೆಯ
ಮುಂದೆ ಕಂಗಳಿಗೆಸೆದರಮರರು
ಅಮರತೇಜದಲಿ!

ಮೊಗದಲ್ಲಿ ನಗೆದಿಂಗಳಾಡಿತು ;
ಕಂಗಳರಳಿದುವರಳ್ವವಂದದಿ
ಸುಗ್ಗಿಯಲಿ ಮೊಗ್ಗುಗಳು; ಚಂಚಲ
ಜಲದೊಳೆಳವಿಹಾಸಲೆಯ್ವವಂದದಿ
ಮಿಂಚಿದುವು, ಚಲಿಸಿದುವು, ಸಂತಸ
ದಿಂದಲುಬ್ಬಿತು ಎದೆಯು ; ಹಿಗ್ಗಿತು
ಕಾಮಿನಿಯ ದೇಹಲತೆಯಿನಿಯನ
ನೆದುರಿನಲಿ ಕಂಡು !

ಮರೆತಳನಿಮಿಷದೂತನಿರವನು
ವಿರಹದುದ್ರೇಕದಲಿ ಭೀತಿಯ
ತೊರೆದಳಿನಿಯನನಪ್ಪಲೋಸುಗ
ಮೊಗವೆತ್ತಿ, ತೋಳುಗಳ ಮುಂದಕೆ
ಸೇಡಿ ನೆಗೆದಳು ! ಹಿಡಿಯಲಾರದೆ
ಸೂಕ್ಷ್ಮರೂಪವ ಕಂಪಿಸುತ ಚಿರ
ಗಾದಳಾ ರಮಣಿ !

ಹಿಡಿಸರೊಡೆಯಿತು ಕೈಗೆ ಸಿಕ್ಕದೆ,
ಮರಳಿ ಕೂಡಿತು ಹೊಳೆಯುವಾಕೃತಿ,
ಮುನ್ನಿನಂತೆಯೆ ನಲಿಯತೊಡಗಿತು
ಕಾಮಿನಿಯ ಮುಂದೆ !

ಕಾಮುಕರ ಕಂಗಳಿಗೆ ಕನಸಾ
ದೊಡೆಯು ಸತ್ಯವು : ಮೇಘದೂತನ
ಮಾಡಿ ಕಳುಹನೆ ಯಕ್ಷನೊಬ್ಬನು
ತನ್ನ ಸತಿಯೆಡೆಗೆ ?

೬

ಬೆದರುವಳು ಸತಿಯೆಂದು ಬಗೆಯುತ
ದೇವದೂತನು ಮುಂದೆ ಬಂದನು ;
ಕುಮುದಿನಿಯ ಸಂತೈಸಿಯುಮುರರ
ದನಿಯಲಿಂತೆಂದ :

" ತಾಯೆ ತಾಳೌ ! ಬೆದರಬೇಡೌ !
ನಿನ್ನ ಭಕುತಿಗೆ ಮೆಚ್ಚಿ ಸಗ್ಗಿಗ
ರಾಣ್ಮನೀತಸನೆನ್ನೊಡನೆ ಕಳು
ಹಿದನು. ನಿನ್ನೆಡೆಯಿೀತನಿರುವನು,
ಮೂರುಗಳಿಗೆಯ ಕಾಲವವಧಿಯು,
ಮೇಲೆ ಸಗ್ಗಕೆ ಬರುವನೀತನು
ಕೂಡಿ ಎನ್ನೊಡನೆ !"
ಎಂದು ದೂತನು ಮಾಯವಾದನು
ಸತಿಯ ಕಂಗಳಿಗೆ !

" ಕಂಗಳಿಗೆ ಮರೆಯಾದ ದೂತನು.
ಮಾತನಾಡೈ, ರಮಣ, ವೀರನೆ ;
ನಿನ್ನ ಸೊಲ್ಲನು ಕೇಳಿ ನಲಿಯುವು
ದಂಗಳದ ಮಲ್ಲಿಗೆಯ ಬಳ್ಳಿಯು ;
ನಿನ್ನ ಬರವನೆ ಬಯಸಿ, ವಿರಹದಿ
ಬಾಡಿ ಕಂದಿಹ ಹೂವುಗಿಡಗಳು
ನಳನಳಿಸಿ ಕೊನರೊಡೆದು ಸುಮಗಳ
ಚೆಲ್ಲುವುವು ಮೌನದಲಿ ಮಂಗಳ
ಗೇಯುವನು ಬೀರಿ !

ವಿರಹದಗ್ನಿಯಲುರಿಯುವೆನ್ನೀ
ಎದೆಯ ಸಂತೈಸಿನಿಯ ಮುದ್ದಿನ

ಮಾತುಗಳ ತಣ್ಣೆಲರ ಬೀಸುತ
ಶೈತ್ಯವನು ನೀಡಿ !

ಇನಿಯ ಬಾರೈ ; ದಿನವು ಮಲಗುವ
ಶಯನವಲ್ಲದೆ ನೋಡು ! ಬಾರೈ !
ದಿವಿಜಪತಿ ಕಳುಹಿದುದು ಕೆಮ್ಮನೆ
ಎನ್ನ ದಿಟ್ಟಿಸಲಲ್ಲ, ವೀರನೆ,
ಮಾತಾಡಿ ಮುಗುದೆಯನು ಸಂತೈ
ಸೆಂ''ದಳಂಗನೆಯು.

೧೦

" ಬರಿದೆ ಹಂಬಲವೇಕೆ. ಕುಮುದಿನಿ ?
ಹರಿಯು ಕೃಪೆಯಿಂದಿಲ್ಲಿಗೆನ್ನನು
ಕಳುಹಿದುದು ಕಾಮಿನಿಯ ಕಾಮವ
ಪರಿಹರಿಸಲೆಂದಲ್ಲ, ಭಕುತಿಗೆ
ಮೆಚ್ಚಿಯಟ್ಟಿದನು !

ಸಮರದಲಿ ಮಾರಾಂತು ಮಡಿದೆನು,
ವೀರನಾಕವದೆನಗೆ ಲಭಿಸಿತು ;
ಈ ವಿಯೋಗವು ಹಿಂದೆಯೆಸಗಿದ
ಕರ್ಮಫಲವೆಂದರಿತು ಸುಮ್ಮನೆ
ವಿಧಿಯ ನಾಟಕಕಡ್ಡ ಬರುವರೆ
ತಿಳಿದ ಮಾನವರು ?

ಸ್ಥೂಲಕಾಯವಿದಲ್ಲ, ತರಳೆಯೆ,
ಮುಟ್ಟಲಾರೌ ದೇಹವಿದನೀ
ನೆಳಸ ಬೇಡೌ ಕಾಯಸುಖಗಳ ;
ಬೇರೆ ಸೊಗವಿಹುದು !

ದೇವ ನೋಡುವುದೊಲವಿನಂಬುಧಿ
ಯಾಳ; ಆರ್ಭಟವಲ್ಲ. ಕುಮುದಿನಿ,
ಉಕ್ಕುತಿಹ ಕಾಮುವನು ಭಕ್ತಿಯ
ಕಣ್ಣಿಯಲಿ ಬಿಗಿ, ಕಟ್ಟು ; ಮಂಗಳ
ವಾಗುವುದು ನಿನಗೆ !"

ಎಂದ ರಮಣನ ನುಡಿಯನಾಲಿಸಿ
ನುಡಿದಳಿಂದುಮುಖಿ :

"ಮಂತ್ರನೊಂದನು ನೀಡು, ಕರುಣಿಸು,
ಮರಳಿ ಎನ್ನನು ಪರಿಸು, ವೀರನೆ ;
ಕರುಣಾಳು ಜಗದೀಶನರಿಯನೆ
ಮಾನವರ ಭಾವಗಳ ಕುಂದ್ರನು ?
ತಪ್ಪ ಮನ್ನಿಸನೆ ?

ಪೂರ್ವದಲಿ ಸಾವಿತ್ರಿದೇವಿಯು
ಪ್ರೇಮದಾಯುಧದಿಂದ ಗೆಲ್ಲಳೆ
ಜವನ ಕಣ್ಣಿಯುಲಿದ್ದ ಗಂಡನ
ಜೀವವನು ಮರಳಿ ?"

"ಆಗದಾಗದು ತರುಣಿ ; ಮೂರೇ
ಗಳಿಗೆಯವಧಿಯು ! ಮೇಲೆ ನಿಲ್ಲೆನು ;
ನಿಲ್ಲಲಾರೆನು ! ದೇವನಿಯಮವ
ಮೀರಬಾರದು. ಜೀವಮಾನವ
ಕಳೆದು, ಕರ್ಮವ ನವೆದು, ಎನ್ನನು
ಸೇರು ಸಾವಿನಲಿ !"

"ಯುಗದ ಕರ್ಮವನೆಲ್ಲ ನಿಮಿಷದಿ
ಕಳೆಯಲಾರದೆ ಗಾಢಭಕ್ತಿಯು ?

ವಿಶ್ವನಿಯಮವ ಮೀರಲಾರದೆ
ಪ್ರೇಮ ಧರ್ಮದಲಿ ?

ನೀನಿರದ ಜೀವವಿದು ಸಾವೈ !
ಸಾವೆ ಜೀವವು ನಿನ್ನ ಕೂಡಿರೆ !
ಬರುವೆ ನಿನ್ನೊಡನೆ ! ”

ಎಂದು ಮುಂದರಿದಾಕೆ ಬರುತಿರೆ
ಕಂಡು ವೀರನು “ಶಾಂತಳಾಗು ;
ತರುಣಿ ಮುಟ್ಟದಿರೆನ್ನ ಮುಟ್ಟಲು
ಸುಟ್ಟು ನೀಯುವೆಯಾತ್ಮಹತ್ಯೆಯ
ದೋಷ ನಿನಗಹುದು !

ಹುಟ್ಟಿ ಭೂಮಿಯೊಳೊಮ್ಮೆ ಕರ್ಮದ
ಕಟ್ಟಿನಲಿ ಬೀಳುವೆಯ ? ಶಾಂತಿಯ
ಹೊಂದು ಸೊಗವಹುದು ! ”

ಮಾಯಮಂತ್ರದಿ ಕಟ್ಟಿದಂದದಿ
ತರುಣಿ ನಿಂತಳು ಚಲಿಸಲಾರದೆ !
ಅಮರರಾಣತಿಗಿಹುದೆ ಭಂಗವು ?
ಧರ್ಮ ಗೆಲ್ಲದೆ ತುದಿಯಲಿ ?

೧೧

ದೇವದೂತನ ಬರವ ಕಂಡಳು,
ಚೀರಿ ಬಿದ್ದಳು ಭಯದೊಳಂಗನೆ
ಮಾಯವಾಗುವ ತನ್ನ ಇನಿಯನ
ಕಂಡು ಕಂಗೆಟ್ಟು !
ಕನಸಿನೊಳು ಸುಳಿದಾಡಿ ತೆರಳುವ

ಪುರುಷರಂದದಿ ಮಾಯವಾದರು
ಮೌನ ಹಬ್ಬಿದುದು!

ಗಗನದಲಿ ಚಂದಿರನು ಮೆರೆದನು,
ಕೌಮುದಿಯು ತಿರೆಯಮೇಲೊರಗಿತು,
ಮಿಣುಕಿದುವು ತಾರೆಗಳು, ತಣ್ಣೆಲ
ರೊಯ್ಯನೊಯ್ಯನೆ ತೀಡಿತು !

ತಿಂಗಳಿನ ಬೆಳಕಿನಲಿ ತರಳೆಯ
ಕಾಯವೊರಗಿತು ಗುಡಿಯ ಜಗುಲಿಯ
ಮೇಲೆ; ಜೀವವು ಪತಿಯ ಹಿಂಬಾ
ಲಿಸಿತು; ಕೂಡಿತು ಮರಣವಿಲ್ಲದ,
ನಿಚ್ಚಸೊಗದಾವಾಸವಾಗಿಹ,
ಮುಪ್ಪನರಿಯದ, ಯೌವನದ ನೆಲೆ
ವೀಡದಾಗಿಹ, ವಿರಹವಿಲ್ಲದ
ಪರಮಧಾಮದಲಿ!

ಕೆ. ವಿ. ಪುಟ್ಟಪ್ಪ.

“ಶ್ರೀ ರಾಮಪಟ್ಟಾಭಿಷೇಕ” ದ

ಕರ್ತೃ ಯಾರು ?

ಈ ‘ಪ್ರಬುದ್ಧ ಕರ್ಣಾಟಕ’ ದ ಅಕ್ಷಯ ಸಂವತ್ಸರದ ದೀಪಾವಳಿಯ ಸಂಚಿಕೆಯಲ್ಲಿ ಶ್ರೀಮಾನ್ ಮಂ। ಆ। ರಾಮಾನುಜಯ್ಯಂಗಾರ್ಯರು ಬರೆದಿರುವ ‘ಅದ್ಭುತ ರಾಮಾಯಣ ಮುಂತಾದ ಗ್ರಂಥಗಳ ಕರ್ತೃ ಯಾರು ?’ ಎಂಬ ಲೇಖದಲ್ಲಿ ‘ ಶ್ರೀರಾಮಪಟ್ಟಾಭಿಷೇಕ ’ ಎಂಬ ಕಾವ್ಯದ ಸಿಬಂಧ್ಯತ್ವವನ್ನು ಕುರಿತು ಅವರು ಹೀಗೆಂದಿರುವರು.

“ ಈ ಗ್ರಂಥಕ್ಕೂ ನಮ್ಮ ನಂದಳಿಕೆಯುವರೇ ಕರ್ತೃವೆಂದು ಯಾರು ಎಷ್ಟು ವಿಚಾರಮಾಡಿ ಹೇಳಿದರೂ, ನಾನು ಒಪ್ಪಲಾರೆನು. ಅನೇಕ ಸಂಶಯಗಳುಂಟಾಗಿರಲಾಗಿ, ನನ್ನ ಮನಸ್ಸು ಹಾಗೆ ಒಪ್ಪಿಕೊಳ್ಳಲು ಒಡಂಬಡದು. ”

ನಾನು ಕಳೆದ ಸನ್ ೧೮೯೯–೧೯೦೦ ರಲ್ಲಿ ಎಫ್. ಏ. ಕ್ಲಾಸಿನಲ್ಲಿ ಓದುತ್ತಿದ್ದಾಗ ‘ಶ್ರೀರಾಮಪಟ್ಟಾಭಿಷೇಕ’ವು ನನ್ನ ಪಠ್ಯಪುಸ್ತಕವಾಗಿದ್ದು ಅದನ್ನು ಆಗ ಓದಿದಬಳಿಕ ಮರಳಿ ಓದಿದ್ದಿಲ್ಲ ಎಂಬುದರಿಂದ ಶ್ರೀ ಅಯ್ಯಂಗಾರ್ಯರ ಈ ಪ್ರಗಲ್ಭವಾದ ಮಾತನ್ನು ಓದಿನೋಡುತ್ತಲೆ, ಇದರ ಪ್ರಕಾಶದಲ್ಲಿ ಆ ಗ್ರಂಥವನ್ನು ಇನ್ನೊಂದುಬಾರಿ ಓದಿನೋಡಬೇಕೆಂದು, ೧೮೯೨ ರಲ್ಲಿ ರಾ। ಅಯ್ಯಂಗಾರ್ಯರಿಂದ ಪ್ರಕಟಿತವಾಗಿದ್ದು, ಪಠ್ಯಪುಸ್ತಕವಾಗಿ ನಾನು ಓದಿದ್ದ ಪ್ರಥಮಾವೃತ್ತಿಯನ್ನೂ, ೧೯೩೪ ರಲ್ಲಿ ಅವರೇ ಸಟೀಕವಾಗಿ ಪುನಃ ಪ್ರಚುರಿಸಿದ ದ್ವಿತೀಯಾವೃತ್ತಿಯನ್ನೂ ಇತ್ತೀಚೆಗೆ ಸಾವಧಾನವಾಗಿ ಓದಿದೆನು. ಹಾಗೆ ಓದೋದುವಾಗ ಶ್ರೀ ಅಯ್ಯಂಗಾರ್ಯರ ಹೇಳಿಕೆಯು ಅನ್ಯಥಾ ಎಷ್ಟು ಸಿರ್ವಿಕಲ್ಪವೆಂದು ತೋರಬಹುದೋ ಅಷ್ಟೇ ಶಂಕಾಸ್ಪದವೆಂದು ನನಗೆ ತೋರಬಂದಿತು. ಅವರು ಸ್ವಾನುಭವವನ್ನು,

ಇಲ್ಲವೆ ನಂದಳಿಕೆಯವರಿಗೂ ತಮಗೂ ನಡೆದ ಪತ್ರವ್ಯವಹಾರವನ್ನು, ಅಥವಾ ನಂದಳಿಕೆಯವರ ಪರಿಚಿತರು ಈ ಗ್ರಂಥವನ್ನಾಗಲಿ ಬೇರೆಯ ವುಗಳನ್ನಾಗಲಿ ಕುರಿತು ತಮಗೆ ತಿಳಿಸಿದ ಮಾತುಗಳನ್ನು ನಂಬುವು ದಕ್ಕೆ ಅಲ್ಲವೆ ನಂಬದಿರುವುದಕ್ಕೆ ಬದಲಾಗಿ ಈ ಗ್ರಂಥವನ್ನೇ ತಮ್ಮ ವಿಚಕ್ಷಣತೆಯಿಂದ ಸವಿಮರ್ಶವಾಗಿ ಮತ್ತು ಸವಿಮಾಚೀನವಾಗಿ ಶೋಧಿಸಿದ್ದರೆ, ಅವರಿಗಾದರೂ ತಮ್ಮ ಆಬಗೆಯ ಹೇಳಿಕೆಗೆ ಬಲಸಾಲ ದೆಂದೂ, ಈ ಕಾವ್ಯದ ಕರ್ತೃತ್ವವನ್ನು ಕುರಿತುಳ್ಳ ಸತ್ಯವು ತಾವೆಣಿಸಿ ದಂತಲ್ಲ ಬೇರೆ ಬಗೆಯಾಗಿರಬೇಕೆಂದೂ, ಬೋಧೆಯಾಗದೆ ಇರುತ್ತಿದ್ದಿಲ್ಲ ವೆಂದು ನನಗೆ ತೋರುತ್ತದೆ. ಹೇಗೂ ಇರಲಿ, 'ಶ್ರೀರಾಮಪಟ್ಟಾ ಭಿಷೇಕ' ವು ನಂದಳಿಕೆಯವರಿಂದ ರಚಿಸಲ್ಪಟ್ಟಿರಲಾರದೆಂದು ಶ್ರೀ ಅಯ್ಯಂಗಾರ್ಯರು ತಮ್ಮ ಅಭಿಪ್ರಾಯವನ್ನು ಮುಕ್ತಕಂಠವಾಗಿ ಹೇಳಿರುವರು ; ಈ ಕಾವ್ಯವು ನಂದಳಿಕೆಯವರಿಂದಲೇ ರಚಿಸಲ್ಪಟ್ಟು ದೆಂದು ನನಗೆ ಭಾಸವಾಗುತ್ತಿದೆ.

ನನ್ನ ನೈಶ್ಚಿತ್ಯಕ್ಕೆ ಅಭ್ಯುಪಪನ್ನವಾದ ಆಧಾರಗಳನ್ನು ನಿರೂಪಿ ಸುವುದಕ್ಕೆ ಮುಂಚೆ, ನನಗೆ ನಂದಳಿಕೆಯವರ ಸ್ವಯಂ ಪರಿಚಯವೇ ನೂ ಇದ್ದಿಲ್ಲ, ನಾನವರನ್ನು ಕಣ್ಣಿಂದ ಕಂಡುದಾದರೂ ಇಲ್ಲ ಎಂಬು ದನ್ನು ಹೇಳದಿರಲಾಗದು ; ಆದುದರಿಂದ ಈ ಕಾವ್ಯದಲ್ಲಿ ಅಲ್ಲಲ್ಲಿ ಒದ ಗುವ ಕೆಲ ಮಾತುಗಳೇ ಮೊದಲಾದುವುಗಳ ಬಲದಿಂದೇನೋ ಇದರ ಕರ್ತೃತ್ವವನ್ನು ಕುರಿತು ಅನುಸಂಧಾನವನ್ನು ಮಾಡಲಿಕ್ಕೆ ಯತ್ನಿಸು ವೆನಲ್ಲದೆ ಬೇರೆಯಲ್ಲ ; ಇಂತಹ ಆಂತರಿಕ ಪ್ರಮಾಣಗಳ ಆಧಾರದಿಂ ದಲೇ ಈ ಲೇಖವನ್ನು ಬರೆದಿರುವೆನಲ್ಲದೆ, ನಂದಳಿಕೆಯವರನ್ನು ಕುರಿತು ಈ 'ಪ್ರಬುದ್ಧ ಕರ್ಣಾಟಕ'ದ ಗತಸಂಚಿಕೆಗಳಲ್ಲಿ ಅವರ ಮೊಗವರಿ ಕೆಯ ಅನೇಕ ಮಹನೀಯರು ಅವರನ್ನೂ ಅವರ ಈ ಕಾವ್ಯವನ್ನೂ ಬೇರೆಯವುಗಳನ್ನೂ ಕುರಿತು ಬರೆದಿರುವಂತೆ ಸ್ವಾನುಭವದ ಆಧಾರ ದಿಂದೇನೂ ಅಲ್ಲ ; ಆದುದರಿಂದ ಅವರನ್ನು ಕುರಿತು ಪ್ರಕಟವಾದ ಇತರ ಲೇಖಗಳೊಂದಿಗೆ ಇದನ್ನು ಸರಿತೂಗಿಸಲೂ ಬಾರದು,

ಹಾಗೆಯೇ ಅವಕ್ಕೂ ಇದಕ್ಕೂ ಎಲ್ಲಿಯಾದರೂ ತಾಗುತಟ್ಟಾಗುವಂತೆ ತೋರಿದರೆ, ಅವು ಅಪರನ್ನು ಬಲ್ಲವರಿಂದ ಬರೆಯಲ್ಪಟ್ಟ ಚಾರಿತ್ರಕ ಲೇಖಗಳು, ಇದೊಬ್ಬ ಅಸಭಿಜ್ಞನಿಂದ ಬರೆಯಲ್ಪಟ್ಟಿರುವ ಶೋಧನಾತ್ಮಕ ಲೇಖ ಎಂಬುದರಿಂದ ಇವುಗಳ ಪರಸ್ಪರ ಸಾಧನಗಳೂ ಕಾರ್ಯಕ್ಷೇತ್ರಗಳೂ ತೀರ ಭಿನ್ನವಾಗಿವೆ ಎಂಬುದನ್ನು ಮರೆಯಲಾಗದೆಂದೂ ವಿಜ್ಞಪ್ತಿ.

ಈಗ ಈ “ ಶ್ರೀರಾಮಪಟ್ಟಾಭಿಷೇಕ ”ದ ಕವಿ ಮಹಾಲಕ್ಷ್ಮಿ ಎಂಬ ಹೆಂಗುಸೇ ಆಗಿರಲಿ, ಇಲ್ಲವೆ ನಂದಳಿಕೆಯವರೇ ಆಗಿರಲಿ, ಅಥವಾ ಇವರಿಬ್ಬರೂ ಅಲ್ಲದೆ ಇನ್ನಾರೊಬ್ಬ ಅಪ್ರಜ್ಞಾತ ವ್ಯಕ್ತಿಯೇ ಆಗಿರಲಿ, ಈ ಕಾವ್ಯದಲ್ಲಿ (II ೩) ‘ಷಡಕ್ಷರಿ’ ಯನ್ನು ಹೆಸರಿಸಿರುವುದರಿಂದ, ಇದರ ರಚನೆಯು ಷಡಕ್ಷರಿಯ ಕಾಲಕ್ಕಿಂತ ಈಚೆಗಾಗಿರಬೇಕೆಂಬುದು ನಿಃಶಂಕನಷ್ಟೆ. ಷಡಕ್ಷರಿ ತನ್ನ ‘ರಾಜಶೇಖರವಿಲಾಸ’ ವನ್ನು ರಚಿಸಿದುದು ಕ್ರಿ. ಶ. ೧೬೫೫ ರಲ್ಲಿ, ‘ ವೃಷಭೇಂದ್ರವಿಜಯ ’ ವನ್ನು ರಚಿಸಿದುದು ಕ್ರಿ. ಶ. ೧೬೭೭ ರಲ್ಲಿ, ಮತ್ತು ‘ಶಬರಶಂಕರವಿಲಾಸವನ್ನು ರಚಿಸಿದುದು ಆಬಳಿಕತಾನೆ. ಆತನ ‘ಶಬರಶಂಕರವಿಲಾಸ’ ದಲ್ಲಿಯ

* ಕುಡಿದಂ ಕುಂಭಜನೆನ್ನನಾತ್ಮವಧುವೊಳ್ ಕೂಡಿರ್ದನೆಂದಿಂದಿರಂ
ಕಡೆದಂ ತನ್ನಹಿತಾದ್ರಿಗಾಂ ಶರಣಮೆಂದಾ ರಾಘವಂ ಕಟ್ಟಿ ಮೇಣ್ ।
ತಡೆದಂ ಕಾಯ್ದೊಳಕೆಯ್ದೆನೆಂದು ಪಗೆಯಂ ಹಾಲಾಹಲಂ ಕೊಟ್ಟೊಡಂ
ಮೃಡನೊರ್ವಂ ಮುಳಿಯಂ ಗಡೆಂದುಲಿವವೋಲುದ್ಘೋಷಿಕುಂ ಸಾಗರಂ ॥

ಎಂಬೀ ಪದ್ಯದ ಧ್ವನಿ ‘ಶ್ರೀರಾಮಪಟ್ಟಾಭಿಷೇಕ’ ದಲ್ಲಿಯು

---

* ‘ಶ್ರೀರಾಮಪಟ್ಟಾಭಿಷೇಕ’ ವು ರಾಮಚಾರಿತ್ರಕ ಕಾವ್ಯವೆಂಬುದರಿಂದಲೂ, ರಾಮನು ಸಮುದ್ರವನ್ನೇಕೆ ಬಂಧಿಸಿದನೆಂದು ಕವಿ ಹೇಳಿಲ್ಲ ಎಂಬುದರಿಂದಲೂ ಅದರಲ್ಲಿಯ ‘ಅಳಿಯನೀ ರಾಘವಂ ಬಂಧಿಸಿದನ್’ ಎಂಬುದು ತೀರ ಅನುಚಿತವೇ ; ‘ಶಬರಶಂಕರವಿಲಾಸ’ ದಲ್ಲಿ ಅಂತಹ ಬಂಧನಕ್ಕೆ ‘ಕಾಯ್ದೊಳಕೆಯ್ದೆನೆಂದು ಪಗೆಯಂ’

⁂ ಕೊಡನಣುಗನರಸಿಗಿಂ ಬಿತ್ತ್ತನಾದೊಡಮವಂ
ಕುಡಿದನಂದಳಿಯನೀ ರಾಘವಂ ಬಂಧಿಸಿದ
ನೆಡೆಗೊಂಡುದಂ ಮರೆದು ವಜ್ರ ಜೀವನಮನಪಹರಿಸುವಂ ಮೇಘಭಟರಿಂ ।
ಪಡೆದುಮೆನ್ನಿಂದಖಿಳ ಸಂಪದಮನೆಂದೊದರಿ
ಮೃಡನೊರ್ವ ವಿಷಮನಿತ್ತೊಡೆ ವಿಷಮನೆಣಿಸನೆ
ನ್ನೊಡೆಯನೆಂದಿರದೆ ಪೊಗಳುವೊಲಬ್ಧಿ ಮೊರೆವುದೋರೊರ್ಮೆ ಕಿರುಪೆರ್ದನಿಗಳಿಂ ॥

(III. ೧೯)

ಎಂಬೀ ಪದ್ಯದ ಬಂತಿಬಂತಿಯಿಂದ ಎಂಬಂತೆ ಉಚ್ಛಳಿಸುತ್ತದೆ. ಆದುದರಿಂದ 'ಶ್ರೀರಾಮಪಟ್ಟಾಭಿಷೇಕ' ದ ರಚನೆಯು ಕ್ರಿ. ಶ. ೧೨೦೦ಕ್ಕಿಂತ ಮುಂಚೆ ಆಗಿರಲಾರದೆಂದು ಧೈರ್ಯವಾಗಿ ಹೇಳಬಹುದು.

ಈ ಕಾವ್ಯದ ಕರ್ತೃ ಯಾರೇ ಆದರೂ ಅವಳು (ಅಥವಾ ಅವನು) ಹುಟ್ಟಿ ಬೆಳೆದುದು ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿಯೇ, ಇದನ್ನು ರಚಿಸಿದುದು ಈ ಜಿಲ್ಲೆಯ 'ಉಡುಪಪುರ' ಎಂಬ ಉಡುಪಿಯಲ್ಲಿಯೇ ಎಂಬುದಿಷ್ಟು ನಿರ್ವಿವಾದವಷ್ಟೆ. ಈಗ ಕ್ರಿ. ಶ. ೧೨೦೦ ರಿಂದ ೧೮೦೦ ರವರೆಗೆ (ಅಲ್ಲವೆ ಹೆಚ್ಚಾದರೆ ೧೮೫೦ರ ವರೆಗೆ ಎನ್ನೋಣ) ಈ ಕಾವ್ಯದಂತಹ ಕೃತಿಯನ್ನು ನಿರ್ಮಿಸಬಲ್ಲ ಯಾವಳೊಬ್ಬ ಹೆಸರಾದ ಕವಯಿತ್ರಿ ನಮ್ಮ ಜಿಲ್ಲೆಯಲ್ಲಿ ಆಗಿಹೋದಂತೆ ಕಾಣುವುದಿಲ್ಲವಾದರೂ ಯಾರಿಗೂ ಗೊತ್ತಿಲ್ಲದೆ ಅಂಥವಳೊಬ್ಬಳು ಆಗಿಹೋಗಿರಬೇಕೆಂದೇ ಇಟ್ಟುಕೊಳ್ಳೋಣ. ಆ ಬಳಿಕಲಾದರೋ (ಅಂದರೆ ೧೮೫೦ರ ಬಳಿಕ) ಇಂತಹ ಕವಯಿತ್ರಿ ಆದುದಿಲ್ಲವೆಂದು ನಾನು ಕಂಡಿತವಾಗಿ ಹೇಳಬಲ್ಲೆನು. ಅಥವಾ ಕವಯಿತ್ರಿಯೇ ಏಕೆ? ಗಂಡು ಕವಿಯೇ

ಎಂದು ಕಾರಣವನ್ನು ಸೂಚಿಸಿರುವುದರಿಂದ, ಅಲ್ಲಿ ಅದು ತುಂಬ ಉಚಿತವೇಸರಿ. ಆದರೆ 'ಶಬರಶಂಕರ' ದಲ್ಲಿ ಕುಂಭಜನ ವಧುವಿನೊಂದಿಗೆ ತಾನು ಸೇರಿದೆನೆಂದು ಕಡಲ ಹೇಳಿಕೆ ಎಷ್ಟು ಅಸಮಂಜಸವೋ, 'ಪಟ್ಟಾಭಿಷೇಕ' ದಲ್ಲಿಯ 'ಕೊಡನಣುಗನರಸಿಗಿಂ ಬಿತ್ತ್ತನ್' ಎಂಬುದು ಅಷ್ಟೇ ಮೇಲಾಗಿ ಸಮಂಜಸವಾಗಿದೆ.

ಆಗಲಿ; ಕಳೆದ ೧೦೦ ವರ್ಷಗಳಿಂದ ಈಚೆಯಲ್ಲಿ ಬಲು ಸೊಗಸಾದ ಯಕ್ಷಗಾನ ಕಾವ್ಯಗಳನ್ನು ರಚಿಸಿದ ಕವಿಗಳು ಕೆಲವರಾಗಿಹೋಗಿರುವರಾದರೂ, ಇಂತಹ ಕವಿತಾಸರಣಿಯಲ್ಲಿ ಕಾವ್ಯವನ್ನು ರಚಿಸಿದ ಕವಿ ಇದ್ದನೆಂದಾದರೆ, ಸಂದಳಿಕೆ ಲಕ್ಷ್ಮೀನಾರಣಪ್ಪರೊಬ್ಬರೇ ಅಲ್ಲದೆ ಬೇರೊಬ್ಬನಲ್ಲವೆಂದೂ ಹೇಳಬಲ್ಲೆನು. ಆದುದರಿಂದ ಈ ಕಾವ್ಯವು ಕಳೆದ ೫೦ ವರ್ಷಗಳ ಈಚೆಯಲ್ಲಿಯೇ ರಚಿಸಲ್ಪಟ್ಟಿರಬೇಕಲ್ಲದೆ, ಅದರ ಮುಂಚೆ ರಚಿಸಲ್ಪಟ್ಟಿರಲಾರದು ಎಂಬುದನ್ನು ನನ್ನೀ ಲೇಖದಲ್ಲಿ ಕಂಡಿಸಲಾಪೆನಾದರೆ, ಹಾಗೆಯೆ ಆಗಣ ಬ್ರಾಹ್ಮಣಿತಿ, ತಾನು ಕವಿಯೇ ಆಗಿರಲಿ ಇನ್ನಾರೇ ಆಗಿರಲಿ, ತಾನು ಹೆಂಗುಸಾದುದರಿಂದ ತನ್ನ ಅಧಿಕಾರಕ್ಕೆ ಮಿಕ್ಕ ತನ್ನ ಆಚಾರವಿಚಾರಗಳಿಗೆ ಪ್ರತಿಷಿದ್ಧವಾದ ವಿಷಯಗಳಿಗೆ ಎಂದಿಗೂ ಕೈಯಿಕ್ಕಲೊಲ್ಲಳೆಂಬುದರಿಂದ, ಈ ಕಾವ್ಯದಲ್ಲಿ ಸ್ತ್ರೀಯರಿಗೆ ಅನನುಷ್ಠೇಯವಾದ, ಅವರ ಅಧಿಕಾರಕ್ಕೆ ಅನರ್ಹವಾದ ಅಂಶಗಳಿವೆ ಎಂದೂ, ಆದುದರಿಂದ ಇದು ಸ್ತ್ರೀ ಕರ್ತೃಕವಾಗಿರಲಾರದೆಂದೂ ಸಮರ್ಥಿಸಲಾಪೆನಾದರೆ, ಸಂದಳಿಕೆಯವರೊಬ್ಬರೇ ವಿನಾ ಬೇರೆ ಯಾರೊಬ್ಬರಾದರೂ ಇದರ ಕರ್ತೃವಾಗಿರಲಾರರೆಂಬುದನ್ನೂ ಸಿದ್ಧೀಕರಿಸಿದಂತೆ ಆಗುತ್ತದೆಂಬುದು ವಾಚಕರಿಗೆ ಮನವರಿಕೆಯಾಗಿರಲಿ.

ಅಗ್ನಿಯೂ ಪಾಪವೂ ಬಹುಕಾಲ ಗೋಪ್ಯವಾಗಿರುವುದಿಲ್ಲವಂತೆ; ಬಯ್ತು ಮಾಡುವ ಕಳ್ಳತನವನ್ನು ಬಯ್ತಿರಿಸಬೇಕೆಂದು ಒದ್ದಾಡುವಷ್ಟಕ್ಕೆ ಅದು ಬಯಲಾಗುತ್ತದೆ; ಉರಿಗೆಂಡವನ್ನು ಅಂತೂ ಎಷ್ಟು ಕಾಲಕ್ಕೆ ಬಣಬೆಯಲ್ಲಿ ಮುಚ್ಚಿರಿಸಬಹುದು ? ಹಾಗೆಯೇ ಯಾವ ಕವಿಯೇ ಆಗಲಿ ಲೋಕದ ಕಣ್ಣಿಂದ ಹೆಚ್ಚುಕಾಲಕ್ಕೆ ಮರಮಾಚಿರಲಾರನು ; ಆತನು ಹಿಂದುಹಿಂದಾಗುವಷ್ಟಕ್ಕೆ ಆತನ ವ್ಯಕ್ತಿತ್ವವನ್ನು ಕಂಡುಹಿಡಿಯಬೇಕೆಂಬ ಆತುರವು ಮುಂದು ಮುಂದಾಗುತ್ತದೆ. ಅಥವಾ ಕಾಲನೇ ಹಿಡಿಸಿದ ತುಕ್ಕನ್ನು ಕೂಡ ಪ್ರಯತ್ನದಿಂದ ತಿಕ್ಕಿ ಪಾತ್ರಶುದ್ಧಿಯನ್ನು ಮಾಡುತ್ತಿರುವ ಈ ಕಾಲದಲ್ಲಿ ಯಾವನೊಬ್ಬ

ಶ್ರೇಷ್ಠಕವಿ ತಾನಾರೆಂದು ತಿಳಿಯಬಾರದೆಂದಾಗಲಿ, ತನ್ನ ಕಾಲಕ್ಕಿಂತ ಹಿಂದಣವನೆಂದು ಆಗಬೇಕೆಂದಾಗಲಿ, ಅಥವಾ ಆತನೇ ಬಲ್ಲ ಬೇರಾವ ಕಾರಣದಿಂದಾಗಲಿ, ಹೆರವರ ಹೆಸರ ಬಣ್ಣವನ್ನು ಬಳಿದುಕೊಂಡರೆ, ಅದೆಷ್ಟುಕಾಲಕ್ಕೆ ಅಂಟಿಕೊಂಡು ನಿಂದೀತು ? ಇನ್ನೆಷ್ಟು ಕಾಲಕ್ಕೆ ಹಳಮೆಯು ಇಲ್ಲವೆ ಅಸ್ವದ್ಭಾವದ ಆಭಾಸವನ್ನು ಕಾಪಾಡೀತು ?

ತನ್ನೀ 'ಶ್ರೀರಾಮಪಟ್ಟಾಭಿಷೇಕ'ವನ್ನು ತನ್ನಹೆಸರಲ್ಲಿ ಈ ಜಿಲ್ಲೆಯಲ್ಲಿಯೇ ಪ್ರಕಟಿಸೋಣ ಎಂದರೆ ಯಕ್ಷಗಾನ ಪ್ರಸಂಗಗಳಿಗಲ್ಲದೆ ಇತರ ಕಾವ್ಯಗಳಿಗೆ ಮುಖ್ಯತಃ ಪ್ರಾಚೀನ ಶೈಲಿಯಲ್ಲಿ ರಚಿತವಾದ ಈ ರೀತಿಯ ಹಳಗನ್ನಡ ಪ್ರಯೋಗಗಳುಳ್ಳ ಕಾವ್ಯಗಳಿಗೆ, ಈಜಿಲ್ಲೆಯಲ್ಲಿ ಆದರವಿಲ್ಲದ ಆ ಕಾಲದಲ್ಲಿ, ಅದನ್ನು ಇಲ್ಲಿ ಪ್ರಕಟಿಸಲಿಕ್ಕೆ ಅನುವಾಗುವವರಾರು ? ಓದುವವರಾರು ? ಎಂಬ ಶಂಕೆಯಿಂದೇನೋ, ಅಥವಾ ಮೈಸೂರು ಸೀಮೆಯಲ್ಲಿ ಪ್ರಕಟಿಸೋಣ ಎಂದರೆ, ಈ ಜಿಲ್ಲೆಯ ಕನ್ನಡದ ಬೆಳವು ಇಲ್ಲಿ ಬಳಿಕೆಯಲ್ಲಿರುವ ಇತರ ಭಾಷೆಗಳ ದಟ್ಟಣೆಯಲ್ಲಿ ಗುಜ್ಜಾಗಿಹೋಗಿ ಇಲ್ಲಿ ಚೊಕ್ಕ ಕನ್ನಡವೇ ಇಲ್ಲವೆಂದು ಅಲ್ಲಿಯವರು ಅಣಕಿಸುತ್ತಿರುವಂದು, ಇಲ್ಲಿಯವನದೊಂದು ಕಾವ್ಯವನ್ನು ಅಲ್ಲಿಗೆ ಕಳುಹಿಸಿಕೊಟ್ಟರೆ ಅವರದನ್ನು ಓದಿನೋಡುವರೇ ? ಪ್ರಕಟಿಸುವರೇ? ಆದರಿಸುವರೇ ? ಮೂದಲಿಸರೇ? ಎಂಬ ಶಂಕೆಯಿಂದೇನೋ, ಅಥವಾ ಹಳಗನ್ನಡ ಕವಿತಾಪದ್ಧತಿಯನ್ನು ಆಶ್ರಯಿಸಿ ಕಾವ್ಯಗಳನ್ನು ರಚಿಸುವ ವಾಡಿಕೆಯಿಲ್ಲದ ತನ್ನಾದಿನಗಳಲ್ಲಿ ತಾನೀಕಾವ್ಯವನ್ನು ತನ್ನದೆಂದೇ ಪ್ರಕಟಿಸಿದರೆ, ಇದೇನೋ ನೂತನಕೃತಿಯಲ್ಲ, ಈತಗೆಲ್ಲಿಯೋ ದಕ್ಕಿದೊಂದು ಹಳೆಯ ಓಲೇಗರಿಯ ಪ್ರತಿಯಲ್ಲಿಯ ಯಾವುದೊಂದು ಹಳೆಯ ಕಾವ್ಯವನ್ನು ಎತ್ತಿ ತೆಗೆದು ತನ್ನದೆಂದು ಮೆರಸುವನಷ್ಟೆ ಎಂದು ಜನರು ಜರೆಯದಿರರು ಎಂಬುದರಿಂದ, ತನ್ನ ಕವಿತಾಶಕ್ತಿಯಿಂದ ಪ್ರಾದುರ್ಭವಿಸಿದೀ ಕಾವ್ಯವನ್ನು ಅಂತೂ ಇಂತೂ ಪ್ರಕಟಿಸದಿರಲಾರದೆ, ತನ್ನ ಕೃತಿಯನ್ನೇ ಹಿಂದಣದೊಂದು ಹಳೆಯ ಕೃತಿಯೆಂದು

ಹೇಳಿ ಪ್ರಕಟಿಸುವುದು ಎಷ್ಟೋ ಸುಕರವಲ್ಲವೇ ಎಂದು ಭಾವಿಸಿ ಕೊಂಡೇನೋ, ನಂದಳಿಕೆಯವರು, ತಮಗೆ ಕವಿತೆಯಲ್ಲಿರುವ ಭಕ್ತಿಗೆ ತಮ್ಮ ಹೆಸರನ್ನೇ ಬಲಿಯಿತ್ತು, ಹೆಂಗುಸಿನ ಹೆಸರ ಸೋಗಿಂದಲೂ, ಹಳೆಯ ಕಾವ್ಯವೆಂಬ ನೆಪದಿಂದಲೂ, ಇದನ್ನು ತನ್ನದಲ್ಲವೆಂದು ಪ್ರಕ ಟಿಸಬೇಕಾಯಿತೆಂಬುದು ಸವಿನ್ಮಾಜಿಲ್ಲೆಯ ಆಗಣ ದುರ್ದಶೆಗೊಂದು ನಿಲುಸಿದರ್ಶನವಾಗಿದೆ. ಹಾಗೆಯೇ ಇದು ಸ್ತ್ರೀಕೃತ ಕಾವ್ಯವೆಂದೇ ಪ್ರಕಾಶಕರಲ್ಲಿ ಭ್ರಾಂತನ್ನು ಹುಟ್ಟಿಸದಿದ್ದರೆ ತಮ್ಮ ಕಾರ್ಯ ಸಾಗದೆಂಬ ಉದ್ದೇಶದಿಂದೇನೋ, ನಂದಳಿಕೆಯವರು ಬಲು ಜಾಗ್ರತೆಯಿಂದ ಇದರ ಕೆಲವೆಡೆಗಳಲ್ಲಿ ಸ್ತ್ರೀಲಿಂಗವಾಚಿ ಪದಗಳನ್ನು ಪ್ರಯೋಗಿಸಿರು ವರು ; ಉದಾ.—

"ಕಷ್ಟಸಾಧ್ಯವಹ ಕೃತಿಗೆ ಮನಗೊಟ್ಟಳೆಂದೆನ್ನ.... ...." (II ೪)

ಎಂಬಲ್ಲಿ 'ಮನಗೊಟ್ಟೆನೆಂದೆನ್ನ' ಎಂದಿರಿಸಿದ್ದರೆ ವ್ಯಾಕರಣಕ್ಕೂ, ಅರ್ಥಕ್ಕೂ, ಪ್ರಸ್ತಾರಕ್ಕೂ ಯಾವಬಗೆಯ ತೊಡಕಾದರೂ ಇಲ್ಲ ;

'ಕನ್ನಡಿತಿಯೊರೆದ ನುಡಿಯೆಂದಿದಂ ....' (II ೮)

ಹೀಗೆ ತನ್ನನ್ನೇ ತಾನು ಅಲ್ಲಗಳೆದುಕೊಳ್ಳಬೇಕಾದ ಸಲುವಾಗಿ ಅವರನ್ನು ಕನಿಕರಿಸಲೇ, ಇಲ್ಲವೆ ಈ ವಿಧದ ಮಾಯೆಯನ್ನೊಡ್ಡಿ ನಮ್ಮನ್ನು ದಿಗ್ಭ್ರಮಿಸಿರುವುದಕ್ಕಾಗಿ ಅವರನ್ನು ದೂರಲೇ, ಅಥವಾ ತಮ್ಮ ವಿಚಕ್ಷಣ ನಟನೆಯಿಂದ ನಟನಾರು? ಪಾತ್ರವಾವುದು? ಎಂದು ಸಾಕಷ್ಟು ಕಾಲಕ್ಕಾದರೂ ಭೇದಿಸಲಾಗದಂತೆ ಸಾಹಿತ್ಯಪ್ರಪಂಚವನ್ನು ಮರುಳುಗೊಳಿಸಿದ ಸಾಮರ್ಥ್ಯದಬಗ್ಗೆ ಅವರನ್ನು ಹೊಗಳಲೇ ಎಂದು ಹೇಳಲಾಗುವುದಿಲ್ಲ. ಆದರೆ ದೈವಾತ್ ಅವರು ಕೈಕೊಂಡ ಹಂಚಿಕೆ ಗಳಿಗಿಂತ ಅವರ ಪ್ರತಿಭೆ ಎಷ್ಟೋ ಮಿಗಿಲೆಂಬುದು ಈ ಜಿಲ್ಲೆಯ ಭಾಗ್ಯ—ಕನ್ನಡ ಸಾಹಿತ್ಯ ಲಕ್ಷ್ಮಿಯ ಭಾಗ್ಯ ; ಆ ಪ್ರತಿಭೆ ಸ್ವಯಂ ಪ್ರಭವಾಗಿರುವುದರಿಂದ ತಾನೆ, ಅವರು ಅದರಮೇಲಕ್ಕೆ ಎಳಕೊಂಡ ಮುಸುಕು ಎಷ್ಟೇ ದಪ್ಪವಿದ್ದರೂ, ಎಷ್ಟೇ ಗಡುಸಾಗಿದ್ದರೂ, ಎಷ್ಟು

ಕಾಲಕ್ಕೆ ತಾನೇ ಹರಿಯಲ್ಪಡದೆ ಹಿಂದುಳಿದೀತು ? ಏಕೆಂದರೆ ಈ ಕಾವ್ಯದ ಕರ್ತೃ ಸ್ತ್ರೀಯಲ್ಲ ಪುರುಷನೇ ಎಂಬುದೂ, ಇದು ೫೦ ವರ್ಷಗಳಿಂದ ಈಚೆಗಷ್ಟೆ ರಚಿಸಲ್ಪಟ್ಟಿರಬೇಕೆಂಬುದೂ ಇದರ ನುಡಿನುಡಿಗಳಿಂದ ಸ್ಫುರಿಸುತ್ತದೆಂದು ನನಗೆ ತೋರುತ್ತದೆ. ಅದು ಹೇಗಂದರೆ —

(೧) ಈ ಕಾವ್ಯದಲ್ಲಿಯ

'ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ
ಕನ್ನಡಿಗನೊರೆದ ನುಡಿಯೆಂದು ಭಾವಿಪುದು ।' (II ೮)

ಎಂಬೀ ಪದ್ಯದಿಂದ ಇದರ ಕರ್ತೃ ಹೆಂಗುಸೇ ಆಗಿರಬೇಕೆಂದು ಸಾಧಿಸುವುದು ಎಷ್ಟು ಶಕ್ಯವೋ, ಗಂಡುಸು ಆಗಿರಬೇಕೆಂದು ಸಾಧಿಸಲಾದರೂ ಅಷ್ಟೇ ಶಕ್ಯವೆಂದು ಕಾಣುವುದರಿಂದ, ಈ ಗ್ರಂಥದ ಕರ್ತೃತ್ವ ವಿಚಾರದಲ್ಲಿ ಈ ಪದ್ಯವು ಚಿರಕಾಲ ದ್ವೈಧಭೂಮಿಯಾಗಿರುತ್ತದೆ. ಈ ಪದ್ಯವು ಈ ಕಾವ್ಯದ ಕರ್ತೃ ಸ್ತ್ರೀಯಲ್ಲವೆಂಬುದನ್ನು ಸೂಚಿಸಲಿಕ್ಕೆ ಸಾಕಾಗದು, ಇದೊಂದು ಸಹಜವಾದ ಲೋಕೋಕ್ತಿಯಷ್ಟೆ ಎಂದು ಶ್ರೀ ಅಯ್ಯಂಗಾರ್ಯರು ಅಭಿಪ್ರಾಯಪಟ್ಟಿರುವರು ; ಆದರೆ ಇದು ಲೋಕೋಕ್ತಿ ಎಂಬುದು ಸರಿಯೆ ಆದರೂ "ಹೇಳಿದವರಿಗೆ ಸುದ್ದಿ ಕೇಳಿದವರಿಗೆ ಬುದ್ಧಿ" ಎಂಬಂತೆ ಸಾಕೂತವಾದ ಮತ್ತು ಅರ್ಥಯುಕ್ತವಾದ ಲೋಕೋಕ್ತಿ ತಾನೆ ಎಂದು ನನ್ನ ಭಾವನೆ ; ಎಂದರೆ ಕವಿ ತನ್ನ ಮೋರೆಯಮೇಲೆ ತೊಟ್ಟು ಕೊಂಡಿರುವ ಅವಗುಂಠನವನ್ನು ಈ ನುಡಿಗಳಿಂದ ತುಸ ಓಸರಿಸುವಂತೆ ನನಗೆ ಕಾಣುತ್ತದೆ.

'ರತ್ನಾವತೀ ಕಲ್ಯಾಣ' ಮತ್ತು 'ಕುಮಾರ ವಿಜಯ' ಎಂಬೀ ಎರಡು ಯಕ್ಷಗಾನ ಪ್ರಬಂಧಗಳು † ನಂದಳಿಕೆಯವರಿಂದಲೇ ರಚಿತ

† ಇವೆರಡು ಯಕ್ಷಗಾನ ಕಾವ್ಯಗಳು ಉಡುಪಿಯ 'ಪ್ರಭಾಕರ' ಮುದ್ರಣಾಲಯದಲ್ಲಿ ಪ್ರಕಟವಾಗಿವೆ ; 'ರತ್ನಾವತೀ ಕಲ್ಯಾಣ' (೧೯೨೩) 'ಕುಮಾರ ವಿಜಯ' (೧೯೨೭)

ವಾದುವೆಂಬುದರಲ್ಲಿ ಯಾರಿಗೂ ಸಂಶಯವಿಲ್ಲ, ಯಾವ ಬಗೆಯ ಸಂಶಯವೂ ಇಲ್ಲ. ಇವಲ್ಲಿಯ 'ಕುಮಾರವಿಜಯ'ದಲ್ಲಿ ಕನ್ನಡಿತಿಯ ಮಾತಿಲ್ಲವಾದರೂ ಹೀಗೊಂದು ಪದ್ಯವಿದೆ—

ಕನ್ನಡದ ನುಡಿಯೆಂದುಪೇಕ್ಷಿಸ
ದಿನ್ನಿದನು ಪ್ರಾಚುರ್ಯಗೊಳಿಸುವ |
ಕನ್ನಡಿಗರನು ಪೊರೆವ ಶಂಕರ
ಕನ್ನಡಿಗನು (?) || (ಪು. ೬೩)

(೨) ಇದರಲ್ಲಿಯ

"ಬುಧರೆಲ್ಲರೊಲ್ದು ಕೈಕೊಳ್ಗೆ ತಿರ್ದುಗೆ ಕೃತಿಯೊ
ಳಧಿಕ ದೋಷಂಗಳೇನಾನುಮುಳ್ಳೊಡೆ" .... | (II. ೧೧)

ಎಂಬುದನ್ನು 'ಕುಮಾರ ವಿಜಯ'ದಲ್ಲಿಯ

'ನೋಡಿ ತಪ್ಪಿರಲೀರ್ಷೆ ತೊರೆದು ತಿದ್ದುವುದು |
ಬೇಡುವೆನು ಕವಿಕುಲಕೆ ಖ್ಯಾತಿ ಹೊದ್ದುವುದು ||" (ಪು. ೨)

ಮತ್ತು 'ರತ್ನಾವತೀ ಕಲ್ಯಾಣ' ದಲ್ಲಿಯ

'ಕರುಣದೊಳು ವಾಚಿಸುತ ದೋಷವ
ನಿರದೆ ತಿದ್ದಲು ಖ್ಯಾತಿ ಬರುವುದು |' (ಪು. ೩೦)

ಎಂಬುವುಗಳೊಂದಿಗೂ, ಈ ಕಾವ್ಯದಲ್ಲಿಯ

'ಅನ್ಯಪ್ರಬಂಧಗಳ
ಹಂಬಲರಿಯೆನು ದೈವಮಲ್ಲದೆನಗಿಲ್ಲ ದಿವ್ಯಜ್ಞಾನಸದ್ಬೋಧಕಂ ||' (II. ೫)

ಎಂಬುದನ್ನು 'ಕುಮಾರ ವಿಜಯ' ದಲ್ಲಿಯ

ಅರಿಯೆ ಯಮುಕಗಮುಕದ ವ್ಯವಹೃತಿ
ಯರಿಯೆ ಪ್ರಾಸೀರೆಂಟು ಭೇದವ
ನರಿಯೆ ಪದಿನೆಂಟಂಗ ದಶಗುಣ
ವರಿಯೆನಿನಿತು ||೫||
ಹರನು ಪ್ರೇರೇಪಿಸಿದ ತೆರನಿದ
ಬರೆದೆ...................||೬||

ಎಂಬುದರೊಂದಿಗೂ ಹೋಲಿಸಿ ನೋಡುವುದು.

(೩) ಈ ಕಾವ್ಯದ ಕವಿ ಯಾರೇ ಆದರೂ, ಮತದಿಂದ ವೀರಶೈವನ(ಳ)ಲ್ಲ ಎಂಬುದಿಷ್ಟು ಕಂಡಿತವೇ ; ಆದರೂ ಇದರ ನಾಂದೀ ಸಂಧಿಯ ೮ನೆಯ ಪದ್ಯದಲ್ಲಿ ಕುಮಾರನೆಂಬ ಸ್ಕಂದನನ್ನು ಸ್ತುತಿಸಿದೆ. ವೀರಶೈವರ ಕಾವ್ಯಗಳಲ್ಲಿ ಹೊರತು ಅನ್ಯರವುಗಳಲ್ಲಿ ಸ್ಕಂದ ಸ್ತುತಿ ಕಾಣಸಿಗುವುದು ತೀರ ವಿರಳ ಅಥವಾ ಇಲ್ಲವೆನ್ನಬಹುದು. ಆದರೆ ಸಂದಳಿಕೆಯವರಿಗೆ ಕುಮಾರನಲ್ಲಿ ವಿಶೇಷ ಭಕ್ತಿ ಇದ್ದಂತೆ ಕಾಣುತ್ತದೆ; ಏಕೆಂದರೆ ಅವರು ಸ್ಕಂದಕಥಕವಾದ 'ಕುಮಾರ ವಿಜಯ' ಎಂಬ ಯಕ್ಷಗಾನ ಕಾವ್ಯವನ್ನು ರಚಿಸಿ, ಅದರಲ್ಲಿ ಆತನ ಚರಿತ್ರವನ್ನು ಬಲು ಸೊಗಸಾಗಿಯೂ ಭಕ್ತಿಭಾವದಿಂದಲೂ ವರ್ಣಿಸಿರುವರಲ್ಲದೆ, ಸ್ಕಂದನು ವಿಶ್ವರೂಪವನ್ನು ಪ್ರದರ್ಶಿಸಿದನೆಂದೂ ಅದರಲ್ಲಿ ಹೇಳಿರುವರು—

ಮಹದೇವಸುತ ದೇವನುತ ವಿಶ್ವರೂಪವ ತೋರಿದಂ ||' (ಪು. ೫೬)

ಸ್ಕಂದಸ್ತುತಿಪರವಾದ ಇದೇ ಪದ್ಯಕ್ಕೆ (I. ೮.) ಶ್ಲೇಷೆಯಿಂದ ಆಂಜನೇಯ ಪರವಾಗಿಯೂ ಅರ್ಥವಾಗುವಂತೆ ಕಲ್ಪಿಸಿದೆಯಷ್ಟೆ. ಕವಿ ಮಾಧ್ವನ(ಳ)ಲ್ಲವೆಂದೂ * ಕಂಡಿತವಿರುವಾಗ, ಆಂಜನೇಯನ

* ಈ ಕಾವ್ಯದಲ್ಲಿಯ 'ಎರಡು ಭಾವನಮಂ ತೊರೆದು' (V. ೬೪), 'ಪರಮ ಜೀವ ಸಮಭಾವದಿಂದ' (V. ೭೦) ಇತ್ಯಾದಿಗಳಿಂದ ಕವಿ ಅದ್ವೈತ ಮತದವನೆಂದು ತಿಳಿಯುತ್ತದೆ.

ಸ್ತುತಿಗೆ ಈ ಕಾವ್ಯದಲ್ಲಿ ಎಡೆಯಿಲ್ಲವೆಂದು ತೋರಬಹುದಾದರೂ, ಇದು ಶ್ರೀರಾಮವಿಷಯಕ ಕಾವ್ಯವೆಂಬುದರಿಂದ ಎಡೆಯುಂಟೆಂದೂ ಪ್ರತಿಪಾದಿಸಬಹುದು. ಆದರೆ ನಂದಳಿಕೆಯವರಿಗೆ ಹನುಮಂತನಲ್ಲಿಯೂ ಭಕ್ತಿ ಇರುವಂತೆ ಕಾಣುತ್ತದೆ, ಅಥವಾ ಅವರ 'ಕುಮಾರ ವಿಜಯ'ದಲ್ಲಿ ಆತನ ಸ್ತುತಿಪರವಾದ

ಅಣುರೂಪದಿ ಮಿಥಿಲಾಧಿಪ
ನಣುಗೆಯನರಿಯಲ್ ಲಂಕೆಯ ತೊಳಲುತುಡುಂದಿಗೆ (?) ।
ಮಣಿದುಂಗುರವಿತ್ತಿಹನಂ
ಮಣುವಂ ಪೊರೆಗನುದಿನ ಕಾಮಿತಫಲಮಿತ್ತುಂ ॥ * (ಪು. ೨)

ಎಂಬೀ ಪದ್ಯದ ಆವಶ್ಯಕತೆ ಎಲ್ಲಿ ? (ಅಣುವಂ = ಹನುಮಂತ)

(೪) ಕನ್ನಡ ಕಾವ್ಯಗಳ ಪೀಠಿಕಾಸಂಧಿಯಲ್ಲಿ ನವಗ್ರಹಗಳ ಸ್ತುತಿ ಇರುವುದು ತೀರ ವಿರಳ — ನಾನೆಲ್ಲಿಯೂ ನೋಡಿರುವಂತೆ ನೆನಪಿಲ್ಲ. ಆದರೆ ಈ ಕಾವ್ಯದ ಎರಡನೆಯ ಸಂಧಿಯ ಮೊದಲ ಪದ್ಯದಲ್ಲಿ ಹೀಗೆ ನವಗ್ರಹಸ್ತುತಿ ಇದೆ—

ಹರಿಗೆರಗಿ ಸೋಮನಂ ನುತಿಸುತೆ ಮನಂದಣಿಯೆ
ಹರಿವಾಹನನ ಬಲಂಗೊಂಡು ಹರಿಪುತ್ರರಂ
ಹರಿಸುತಾದ್ಯರ್ಗೆ ತಲೆವಾಗಿ ಗುರುಕವಿಬುಧರ ಪದಕಮಲನುಂ ಧ್ಯಾನಿಪೆಂ ॥

ನಂದಳಿಕೆಯವರಿಗೆ ನವಗ್ರಹಗಳಲ್ಲಿಯೂ ತುಂಬ ಶ್ರದ್ಧೆಯಿದ್ದಂತೆ ಕಾಣುತ್ತದೆ. ಏಕೆಂದರೆ ಅವರ 'ರತ್ನಾವತೀ ಕಲ್ಯಾಣ'ದಲ್ಲಿ

---

* ನಂದಳಿಕೆಯವರು ತಮ್ಮ ಎರಡು ಯಕ್ಷಗಾನ ಕಾವ್ಯಗಳಲ್ಲಿ ಕೂಡ ರಚಿಸಿಟ್ಟ ಕಂದಪದ್ಯಗಳು ಲಕ್ಷಣಬದ್ಧವಾಗಿಲ್ಲ ; ಇತರ ಯಕ್ಷಗಾನಕೃತಿಗಳಲ್ಲಿಯ ಕಂದಗಳಂತೆಯೇ ಅವು ಗಣಕ್ರಮಕ್ಕೆ ತೊಡಕಾಗಿವೆ ; ಆದರೆ ಅವರ 'ರಾಮಾಶ್ವಮೇಧ'ದಲ್ಲಿ ಇರುವ ಕೆಲ ಕಂದಗಳು ಪ್ರಸ್ತಾರಕ್ಕೆ ನೇರಾಗಿವೆ.

'ಭಾಸ್ಕರ ಮುಖ್ಯ ನವಗ್ರಹಗಳಿಗೆ ಶಿರಬಾಗಿ |' (ಪು. ೧)

ಎಂದೂ, 'ಕುಮಾರವಿಜಯ'ದಲ್ಲಿ

'ಅರ್ಕೇಂದು ಕುಜ ಬುಧಾಂಗೀರಸರ ನೆನದು |
ಅರ್ಕಸುತ ಕವಿ ತಮರ ಬಲವಂದು ಮಣಿದು ||' (ಪು. ೨)

ಎಂದೂ ಅವರು ನವಗ್ರಹಗಳನ್ನು ಸ್ತುತಿಸಿರುವರು. ಹಾಗೆಯೇ 'ಶ್ರೀರಾಮಪಟ್ಟಾಭಿಷೇಕ'ದಲ್ಲಿ 'ಹರಿಪುತ್ರರಂ' ಎಂದೂ, 'ಕುಮಾರ ವಿಜಯ'ದಲ್ಲಿ 'ತಮರ' ಎಂದೂ, ರಾಹು–ಕೇತುಗಳೆಂಬ ಛಾಯಾಗ್ರಹ ಗಳನ್ನು ಬೇರೆಬೇರೆಯಾಗಿ ಹೆಸರಿಸದೆ ಬಹುವಚನದಿಂದ ಒಂದೇ ಶಬ್ದ ದಲ್ಲಿ ವೇಷ್ಟಿಸಿ ಹೇಳಿದೆ ಎಂಬುವಸ್ನೂ ಮರೆಯಲಾಗದು.

ಈ ಕಾವ್ಯದಲ್ಲಿ ಶುಭೋದಯವನ್ನು ವರ್ಣಿಸುವ ಸಂದರ್ಭದಲ್ಲಿ,

'ಒಂಬತ್ತರೆಣಿಕೆಯಿಂ ಗ್ರಹಗೇಕರಾಶಿಯೊಳ
ಗಂಬುಜಾಸನನ ಕಟ್ಟಳೆಯೊಳೆಸೆದರ್ ಶುಭೋದಯರಾಗಿ ಶುಭಕಾರ್ಯಕೆ ||'
(V. ೪೫)

ಎಂದು ಹೇಳಿರುವಂತೆ ಸಂಡಳಿಕೆಯವರ 'ಕುಮಾರವಿಜಯ' ದಲ್ಲಿಕೂಡ

'ಬಳಿಕ ಮರುದಿನ ಭಾರ್ಗವಾದಿತ್ಯ ಸೋಮಾದ್ಯ
ಖಿಳ ಗ್ರಹರ್ ಯೋಗಪದದೊಳಗೊಪ್ಪಿರಲ್ಕೆ .... |' (ಪು. ೬೧)

ಎಂದಿದೆ. ರಾಹು–ಕೇತುಗಳು ಪರಸ್ಪರ ಸಮಸಪ್ತಮಸ್ಥಾನಗಳಲ್ಲಿ ವಿನಾ ಅನ್ಯಥಾ ಇರಲಾರರಾದರೂ, ನವಗ್ರಹಗಳೆಲ್ಲವು ಏಕರಾಶಿಯಲ್ಲಿ ಇದ್ದುವೆಂಬ ಭಾವನೆ ಸಂಡಳಿಕೆಯವರ ಇಷ್ಟ ಕವಿಸಮಯವೆಂಬಂತೆ ಕಾಣುತ್ತದೆ.

(೨೪) 'ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ |'(V.೯೭)

ಎಂಬುದೇ ಈ ಕವಿ ಸ್ತ್ರೀಯಲ್ಲ ಎಂಬುದಕ್ಕೆ ಸಾಕೂತವಾದ ಆಧಾರ ವೆಂದು ನನಗೆ ಕಾಣುತ್ತದೆ. ಏಕೆಂದರೆ ಕವಿ ಬ್ರಾಹ್ಮಣ ಸ್ತ್ರೀಯಾಗಿ

ದ್ದರೆ, ಆಕೆ ತನ್ನ ತಂದೆಯ ಹೆಸರನ್ನಷ್ಟೆ ಹೇಳಿ, ಗಂಡನ ಹೆಸರನ್ನು ಹೇಳದಿರುವುದು ಎಂದಿಗೂ ಉಚಿತವಲ್ಲ ಮಾತ್ರವಲ್ಲ, ಯಾವಾಕೆಯಾದರೂ ಹೀಗೆ ಮಾಡಲೊಲ್ಲಳೆಂದೇ ನನ್ನ ಭಾವನೆ. ತನಗೆ ಮದುವೆಯಾದಂದಿನಿಂದ ಬ್ರಾಹ್ಮಣಸ್ತ್ರೀಗೆ ಗಂಡನ ಗೋತ್ರವೇ ಗೋತ್ರ, ಗಂಡನೇ ಪರದೈವವೆಂಬಲ್ಲಿ, ಆಕೆ ಕಾವ್ಯವನ್ನು ರಚಿಸಿದರೆ ಅದರಲ್ಲಿ ತನ್ನ ಗಂಡನ ಹೆಸರನ್ನು ಹೇಳದಿರುವಳೇ? ಓದಿದವಳು ಬಲ್ಲವಳು ತಾನೇ ಕಾವ್ಯವನ್ನು ಬರೆಯಲಾಪಳೆಂಬುದರಿಂದ, ಅಂಥವಳು ಈರೀತಿಯಾಗಿ ತಪ್ಪಿ ಬೀಳುವಳೇ? ಗಂಡನನ್ನು ನಾಮಗ್ರಾಹವಾಗಿ ಕರೆಯಲಾಗದೆಂಬುದು ರೂಢಿಗೆ ವಿಹಿತವೇ ಆದರೂ, ತನ್ನ ಕಾವ್ಯದಲ್ಲಿ ತಾನು ಇಂಥವನ ಹೆಂಡತಿ ಎಂದು ಹೇಳುವುದರಿಂದ ತನ್ನ ಗಂಡನನ್ನು ಹೆಸರು ಹಿಡಿದು ಕರೆದಂತಾಗುವುದೇ? ಹಾಗೆ ಆತನನ್ನು ಕುರಿತು ಹೇಳದಿದ್ದರೆ, ಧರ್ಮಭಾಗಿನಿ ಎಂದಾಗುವಳೇ? ಪತಿವ್ರತೆಯಾದವಳು ತನ್ನ ಗಂಡನನ್ನು ಹೀಗೆ ಧಿಕ್ಕರಿಸಬಹುದೇ? ಅಥವಾ ಈ ಕವಿಯಿತ್ರಿಗೆ ಮದುವೆಯಾಗುವ ಮುಂಚೆ ಈಕೆ ಈ ಕಾವ್ಯವನ್ನು ರಚಿಸಿರಬೇಕೆಂದರೆ ಆಗಣ ಮರ್ಯಾದೆಯಲ್ಲಿ ಬ್ರಾಹ್ಮಣರ ಹುಡುಗಿಗೆ ೮–೯ ವರ್ಷಗಳೊಳಗೆ ಮದುವೆಯಾಗುತ್ತಿರುವಲ್ಲಿ, ಆ ಚಿಕ್ಕಂದಿನಲ್ಲಿ ಈಕೆ ಇದನ್ನು ಬರೆದಳೆಂದು ಎಣಿಸಲಾದರೂ ಸಾಧ್ಯವಲ್ಲ. ಇದನ್ನು ರಚಿಸುವಂದು ಕವಿಯಿತ್ರಿ ವಿಧವೆಯಾಗಿದ್ದಳೇನೋ ಎಂದು ಭಾವಿಸಿದರೆ, ವಿಧವೆಯಾಗಿದ್ದರೇನು ಸಧವೆಯಾಗಿದ್ದರೇನು, ಮದುವೆಯಾದಂದಿನಿಂದ ಆಕೆಯನ್ನು ಇಂಥವನ ಹೆಂಡತಿಯೆಂದೇ ಹೇಳುವರಲ್ಲದೆ, ಅಂಥವನ ಮಗಳೆಂದು ಹೇಳುವರೇ? ಎಲ್ಲಕ್ಕಿಂತ ಹೆಚ್ಚಾಗಿ, ಪತಿದೇವತೆಯಾದ ಸೀತೆಯನ್ನು ಕುರಿತುಳ್ಳ ಈ ಕಾವ್ಯದಲ್ಲಿ, ಕವಿ ತನ್ನ ಗಂಡನ ಹೆಸರನ್ನು ಹೇಳಿಲ್ಲ ಎಂಬುದು ಅತ್ಯಂತ ಸೋಜಿಗವೇ. ಹೀಗೆ ಯಾವ ಹೆಂಗುಸಾದರೂ ಮಾಡಳು; ವಿದುಷಿಯಾದ, ಅನೂಚಾನೆಯಾದ ಕವಿಯಿತ್ರಿ ಎಂದೆಂದಿಗೂ ಮಾಡಳು ಎಂಬುದರಿಂದ ಈ ಕಾವ್ಯದ ರಚಿಯಿತ್ರಿ ಎಂದಿಗೂ ಹೆಂಗುಸಾಗಿರಲಾರಳು.

(೬) ಈ ಕಾವ್ಯವು ಸ್ತ್ರೀಕರ್ತೃಕವಲ್ಲ ಎಂಬುದಕ್ಕೆ ಇನ್ನೊಂದು ಗರಿಷ್ಠವಾದ ಆಧಾರವೆಂದರೆ, ಇದರ ೫ ನೆಯ ಸಂಧಿಯಲ್ಲಿ ವೇದದಿಂದ ಮತ್ತು ಉಪನಿಷತ್ತುಗಳಿಂದ ಆಯ್ದುಕೊಂಡಿರುವ ವಚನಗಳೇ.

'ಅಣೋರಣೀಯನುಂ ಮಹತೋಮಹೀಯನುಂ' (V. ೬೭)

ಎಂಬುದು

'ಅಣೋರಣೀಯಾನ್ ಮಹತೋಮಹೀಯಾನ್'

ಎಂಬ 'ಕಠ' (I. ೨. ೨೦), 'ಶ್ವೇತಾಶ್ವತರ' (III. ೨೫) ಇತ್ಯಾದಿ ಉಪನಿಷತ್ತುಗಳಿಂದ ಎತ್ತಿಕೊಂಡ ವಚನವೇ ;

'ಅತ್ಯತಿಷ್ಠದ್ದಶಾಂಗುಲಮೆನೆ' (V. ೬೮)

ಎಂಬುದು ಋಗ್ವೇದದ (X. ೯೦) 'ಪುರುಷಸೂಕ್ತ' ದಲ್ಲಿಯ

'ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಮ್'

ಎಂಬುದೇ. ಹೆಂಗುಸರು ವೇದೋಪನಿಷದಿತ್ಯಾದಿ ಶ್ರೌತಸಮಾಮ್ನಾಯವನ್ನು ವಾಚಿಸುವುದಕ್ಕೂ ಪಠಿಸುವುದಕ್ಕೂ ತೀರ ಅನಧಿಕಾರಿಗಳೆಂದು ಸ್ಮೃತಿ ಶೀಲಗಳ ಅನುಲ್ಲಂಘನೀಯವಾದ ಶಾಸನವು ಅಕ್ಷರಶಃ ಮನ್ನಿಸಲ್ಪಡುತ್ತಿದ್ದ ಆ ಕಾಲದ ಬ್ರಾಹ್ಮಣಸ್ತ್ರೀ ಎಷ್ಟೇಪ್ರೌಢೆ ಎಷ್ಟೇ ವಿದುಷೆ ಆಗಿದ್ದರೂ, ತನ್ನ ಕಾವ್ಯದಲ್ಲಿ ವೇದದ ಋಕ್ಕನ್ನೂ, ಉಪನಿಷತ್ತುಗಳ ಚರಣಗಳನ್ನೂ * ಸೇರಿಸಿಡುವಷ್ಟು ಧೃಷ್ಟೆ ಆದಾಳೆಂದು

---

* ಹಾಗೆಯೇ ಈ ಕಾವ್ಯದ ೫ ನೆಯ ಸಂಧಿಯಲ್ಲಿ ಸೂಚಿಸಲ್ಪಟ್ಟ ಅದ್ವೈತ ಸಿದ್ಧಾಂತವೂ, ಸಾಂಖ್ಯ ತತ್ವವೂ, ಯೋಗಸಾಧನ ಕ್ರಮವೂ ಯಾವ ಹೆಂಗುಸಿನ ಪ್ರತಿಭೆಗಾದರೂ ಮಿಕ್ಕಿದೆ ಎಂದು ನನಗೆ ತೋರುತ್ತದೆ.

ಒಪ್ಪಿಕೊಳ್ಳಲು ನನ್ನ ಮನಸ್ಸು ಒಡಂಬಡದು. ಆಗಿನ ಕಾಲದ ಮಾತಂತಿರಲಿ, ವೇದೋಪನಿಷತ್ತುಗಳ ಮಾತೂ ಅಂತಿರಲಿ; ಈ ಜಿಲ್ಲೆಯ ಬ್ರಾಹ್ಮಣ ಹೆಂಗುಸರು ಗೀತೆಯನ್ನು ಕೂಡ ಕನ್ನಡ ಮರಾಟಿ ಇತ್ಯಾದಿ ಭಾಷಾಂತರಗಳಲ್ಲಿ ವಿನಾ ಮೂಲಸಂಸ್ಕೃತದಲ್ಲಿ ಓದುವ ಕಟ್ಟಳೆ ಈಗಲಾದರೂ ತೀರ ಕಡಿಮೆ. ಆದುದರಿಂದ ಈ ಕಾವ್ಯವು ಎಂದಿಗೂ ಸ್ತ್ರೀಕರ್ತೃಕವಾಗಿರಲಾರದೆಂದೇ ನನಗೆ ತೋರುತ್ತದೆ.

(೭) ಈ ಕಾವ್ಯದಲ್ಲಿಯ

ತೊಟ್ಟತುದಿ ಮರನೊಳಿಹ ಪಣ್ಣಿಗುರೆ ಬಾಯ್ಬಿಟ್ಟು
ಮುಟ್ಟಿಕೊಯ್ವುಪೆನೆಂಬ ಭ್ರಾಂತಿಯಿಂ ಕೆಯ್ನಿಳ್ಕಿ
ದಿಟ್ಟಿಸುತ ನಗೆಯಲುಜ್ಜುಗಿಪ ವಾಮನನಂತೆ ಕವಿತಾ ಸುಲಕ್ಷಣಗಳ ।
ಗುಟ್ಟನರಿಯದೆ .... ॥ (II. ೪)

ಎಂಬ ಪದ್ಯವನ್ನು ಕಾಳಿದಾಸನ 'ರಘುವಂಶ'ದ

'ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಂ ।
ಪ್ರಾಂಶುಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ ||' (I. ೩)

ಎಂಬುದರೊಂದಿಗೂ, ಇದರಲ್ಲಿಯ

ಬಿಸುಗದಿರನಾಗೆ ತಿರ್ಯಕ್ಕರಂ ಮೇಣ್ ವಿಭಾ।
ವಸುವಾಗಲೂರ್ಧ್ವಜ್ವಲನ ತೋರ್ಪ ಪೊಳಪಿದೆ
ಣ್ದೆಸೆಗೆ ಮಸಗಿರ್ಪುದೆತ್ತಣಿನೆಂದು ಕಬ್ಬಿಗಗೆ ಬಗೆ ಕಣ್ಗೆ ಸೋಲಲಿಂತು।
ಬಿಸವಂದಮಾಗೆ ಸರ್ವರ್........................॥ (IV ೨೩)

ಎಂಬುದನ್ನು ಮಾಘನ 'ಶಿಶುಪಾಲವಧ'ದಲ್ಲಿಯ

'ಗತಂ ತಿರಶ್ಚೀನಮನೂರುಸಾರಥೇಃ
ಪ್ರಸಿದ್ಧಮೂರ್ಧ್ವಜ್ವಲನಂ ಹವಿರ್ಭುಜಃ।

ಪತತ್ಯಧೋಧಾಮವಿಸಾರಿ ಸರ್ವತಃ
ಕಿಮೇತದಿತ್ಯಾಕುಲಮೀಕ್ಷಿತಂ ಜನೈಃ॥' (I. ೨)

ಎಂಬುದರೊಂದಿಗೂ ಹೋಲಿಸಿ ನೋಡುವುದು.

ಮಾಘ–ಕಾಲಿದಾಸಾದಿಗಳ ಮಹಾ ಕಾವ್ಯಗಳನ್ನು ಓದಿ ಅವಲ್ಲಿಯ ಭಾವನೆಗಳನ್ನು ತನ್ನ ಗ್ರಂಥದಲ್ಲಿ ಕೋದಿಡಲಾರ್ತಳಾದ ಕವಯಿತ್ರಿ ಈ ಜಿಲ್ಲೆಯಲ್ಲಿ ಕಳದ ೧೦೦–೧೫೦ ವರ್ಷಗಳಲ್ಲಿ ಆಗಿದ್ದಂತೆ ಇದುವರೆಗೆ ತಿಳಿದುಬಂದಿಲ್ಲ ; ಉಡುಪಿಯಲ್ಲಿಯೇ ಇರುವ ಹಿರೇ ಪ್ರಾಯದವರೊಂದಿಗೆ ವಿಚಾರಿಸಿದಲ್ಲಿ, ಅವರಿಗೂ ಗೊತ್ತಿಲ್ಲ.

(೮) ಇದರಲ್ಲಿಯ

ಕಡೆಯೆ ಪಾಲ್ಗಡಲನಮೃತಂ ಪುಟ್ಟುವಂತೆ ತೇ
ದೊಡೆ ಚಂದನಂ ಸುಗಂಧವನೀವ ತೆರದೆ ಪುಟ
ಕಿಡೆ ಕಾಂಚನಂ ಕಾಂತಿ ಪೆರ್ಚುವೊಲ್ ಕಬ್ಬಿಗೋಲಂ ಪಿಳಿದು ಕಾಸಲೊಡನೆ|
ಗುಡಮೆನಿಸುತಧಿಕಮಧುರಂ ಗುಡುವ ಪರಿಯೊಳಿಡೆ
ಬಿಡದೆ ಶ್ರೀರಾಮಚರಿತಾಮೃತವ ಮಥಿಸಲ್ಕೆ
ಪಡೆವೆವೆಲೆ ಸುಜ್ಞಾನಪಿಂಡವಂ ಖಂಡಮಂ ಸವಿಯಲೆನಿತಿನಿದೊ ಬಳಿಕ॥(III.೯)

ಎಂಬೀ ಪದ್ಯವನ್ನು 'ಪಂಪರಾಮಾಯಣ' ದ

'ಕಡೆದೊಡೆ ಪಾಲ್ಗಡಲ್ ವಿವಿಧವಸ್ತುವನೀಯದೆ ತೇಯೆ ಚಂದನಂ
ಕುಡದೆ ಸುಗಂಧಮಂ ಪಿಳಿಯೆ ಕಬ್ಬಿನಿದಾಗದೆ ಕಾಸೆ ಕಾಂಚನಂ।
ಪಡೆಯದೆ ಕಾಂತಿಯಂ ನಿಜದಿನೊಳ್ಳಿದರಪ್ಪರೆಂತು ಬಾಧೆವ
ಟ್ಟೊಡಮುಪಕಾರಮಂ ಪೆರರ್ಗೆ ಮಾಡದೆ ಬಾಧೆಯನೇಕೆ ಮಾಡುವರ್॥'

(VII. ೭೯)

ಎಂಬುದರೊಂದಿಗೆ ಹೋಲಿಸಿ ನೋಡುವುದು.

ಸವಿಸ್ತ್ರಾ ಕಾವ್ಯದ ರಚಯಿತ್ರಿ ಮಹಾಲಕ್ಷ್ಮಿ ಎಂಬ ಹೆಂಗುಸೆಂದು ವಿತರ್ಕಮಾತ್ರವಾಗಿ ಇಟ್ಟುಕೊಂಡಾದರೂ ವಿಚಾರಿಸಿದರೆ, ಆಕೆ ಕ್ರಿ. ಶ. ೧೭೦೦ ರಕ್ಕಿಂತ ಈಚೆಯವಳಾಗಿರಬೇಕು ಎಂಬುದಿಷ್ಟು ಖಂಡಿತವಿರುವುದರಿಂದ, ಆಕೆ ೧೮ನೆಯ ಶತಮಾನದವಳೆಂದು ಭಾವಿಸಿದರೂ, ಆಗ್ಗೆ 'ಪಂಪರಾಮಾಯಣ' ಎಂಬ ಕನ್ನಡಕಾವ್ಯವಿದೆ ಎಂದಾದರೂ ಈ ಜಿಲ್ಲೆಯಲ್ಲಿದ್ದ ಯಾರೊಬ್ಬರಿಗಾದರೂ ಗೊತ್ತಿರಲು ಕಾರಣವಿಲ್ಲ; ಈ ಜಿಲ್ಲೆಯ ಆಗಣ ಜೈನರಿಗೇ ಆದರೂ ಅವರ ನಿತ್ಯನೈಮಿತ್ತಿಕ ಕಾರ್ಯಗಳಿಗೆ ಆವಶ್ಯಕ ಉಳ್ಳ ಕೆಲ ಕೆಲ ಧರ್ಮಗ್ರಂಥಗಳಲ್ಲದೆ, 'ಪಂಪಭಾರತ', 'ಗದಾಯುದ್ಧ', 'ಪಂಪರಾಮಾಯಣ' ಮುಂತಾದ ಕನ್ನಡ ಕಾವ್ಯಗಳ ಅಸ್ತಿತ್ವವನ್ನು ಕುರಿತು ಗಂಧಗಾಳಿಯಾದರೂ ಇದ್ದಿರ ಕಾರಣವಿಲ್ಲ; ಅಥವಾ ಇಂತಹ ಕಾವ್ಯಗಳ ಓಲೇಗರಿಯ ಪ್ರತಿಗಳು ಇಲ್ಲಿ ಇದ್ದಾವೆಂದೂ, ಇದ್ದರೆ ಅಂಥವು ಇರುತ್ತವೆಂದೂ ಅವು ಉಳ್ಳವರಿಗಾದರೂ ಗೊತ್ತಿದ್ದಿರಬಹುದೆಂದೂ ನನಗೆ ತೋರುವುದಿಲ್ಲ; ಅಲ್ಲವೆ ಇದ್ದುವೆಂದಾದರೂ ಅವನ್ನು ಜೈನರು ಜೈನೇತರರಿಗೆ ತೋರಿಸಲಿಕ್ಕಾಗಲಿ, ಆಗಣ ಜೈನೇತರರು ಅವನ್ನು ಓದುವುದಕ್ಕಾಗಲಿ ಯಾವ ಕಾರಣವೂ ಇಲ್ಲ. ಹೀಗಾಗಿ 'ಪಂಪರಾಮಾಯಣ'ದ ಪದ್ಯವು ಈ ಕಾವ್ಯದಲ್ಲಿ ಕಂಡುಬರುವುದರಿಂದಲೆ, ಈ ಕಾವ್ಯವು ತೀರ ಆಧುನಿಕವಾಗಿರಬೇಕೆಂದು ಹಠಾತ್ ನಿಷ್ಪನ್ನವಾಗುತ್ತದೆ. ಏಕೆಂದರೆ 'ಪಂಪರಾಮಾಯಣ'ವು ಕ್ರಿ. ಶ. ೧೮೮೪ಕ್ಕೆ ಕೊಂಚ ಹಿಂದೇನೋ ಮೈಸೂರು ಸರಕಾರದವರಿಂದ (Mysore Government Press, Bangalore) ಪ್ರಕಟಿಸಲ್ಪಟ್ಟು, ಕೆಲವರ್ಷಗಳಲ್ಲಿ ಮದ್ರಾಸು ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯ ಪಠ್ಯಪುಸ್ತಕವಾಗಿ ಬಂತು. ಆಗ್ಗೆ ತಾನೇ ಅದು ಕನ್ನಡಕಾವ್ಯಗಳಲ್ಲಿ ತುಂಬ ಅಭಿಮಾನ ಅಭಿರುಚಿ ಇದ್ದ ನಂದಳಿಕೆಯವರ ಕಯ್ಸೇರಿರಬೇಕು, ಮತ್ತು ಅದನ್ನು ಓದಿದ ಬಳಿಕ ತಾನೆ ಅವರು ಅದರಲ್ಲಿಯ ಆ ಚಂಪಕಮಾಲೆಯಿಂದ ತವಿಸ್ತ್ರಾ ವಾರ್ಧಿಕವನ್ನು ರಚಿಸಿರಬೇಕು ; ಎಂಬುದರಿಂದ ಈ ಕಾವ್ಯವು ಕ್ರಿ. ಶ. ೧೮೮೪ರ ಈಚೆ ತಾನೆ ರಚಿಸಲ್ಪಟ್ಟಿರಬೇಕೆಂದು ಸಿದ್ಧವಾಗುತ್ತದೆ.

೧೮೮೫ರ ಈಚೆಯಲ್ಲಿ ಮಹಾಲಕ್ಷ್ಮಿ ಎಂದಾಗಲಿ, ಶ್ರೇಷ್ಠ ತರಗತಿಯ ಇತರ ಯಾವ ಕವಯಿತ್ರಿಯಾಗಲಿ ಈ ಜಿಲ್ಲೆಯಲ್ಲಿ ಆಗಿಲ್ಲ; ಸಂದಳಿಕೆ ಯವರೊಬ್ಬರಲ್ಲದೆ, ಅವರ ಶ್ರೇಷ್ಠತೆಯ ಬೇರಾವ ಪುರುಷಕವಿಯೂ ಆದುದಿಲ್ಲ.

ಇಷ್ಟೇ ಅಲ್ಲ; ಕ್ರಿ.ಶ. ೧೮ನೆಯ ಶತಕದಲ್ಲಿಯ ಇಲ್ಲವೆ ೧೯ನೆಯ ಶತಕದ ಪೂರ್ವಭಾಗದಲ್ಲಿಯ ಈ ಜಿಲ್ಲೆಯ ಕವಿಗೆ (ಹೆಂಗುಸಾಗಿರಲಿ ಅಥವಾ ಗಂಡುಸಾಗಿರಲಿ) ಪ್ರಾಚೀನ ಕನ್ನಡ ಕವಿಗಳಾದ 'ಚಂದ್ರ ಭಟ್ಟ' ಮತ್ತು 'ರುದ್ರ (ಭಟ್ಟ)' ಎಂಬವರ ಹೆಸರಾದರೂ ಗೊತ್ತಿರ ಕಾರಣವಿಲ್ಲ; ಆದರೆ ಈ ಕಾವ್ಯದಲ್ಲಿ ಅವರನ್ನು ಹೆಸರಿಸಿದೆ—

.... ಕರ್ಣಾಟ ಕವಿಗಳೆನಿಪ ।
ಭೂಸುರೋತ್ತಮ ಚಂದ್ರಭಟ್ಟ ಕೇಶವ* ನಂದಿ
ವಾಸುದೇವಾಚ್ಯುತ ಷಡಕ್ಷರಿ ದಿಗಂಬರ ವಿ
ಲಾಸ ಕವಿರುದ್ರ ವೇಂಕಟಕೃಷ್ಣರಭಿಮತವನನುಸರಿಸುತುಸಿರ್ವೆನಿದನು ।

(II. ೩)

ಕೇಶಿರಾಜನ * 'ಶಬ್ದಮಣಿದರ್ಪಣ'ವು ಮಿ। ಕಿತ್ತೆಲರವರಿಂದ ಸಂಪಾದಿತವಾಗಿ ಇಲ್ಲಿಯ ಬಾಸೆಲ್ ಮಿಶ್ಯನ್‌ನವರಿಂದ ಪ್ರಕಟವಾದುದು ೧೮೭೨ರಲ್ಲಿ; ಅದರಲ್ಲಿ ಚಂದ್ರಭಟ್ಟನ ಹೆಸರಿದೆ (ಪೀಠಿಕಾ ಸಂಧಿ—೫; ಪು. ೪) ಹಾಗೆಯೇ ಕೆಲವರ್ಷಗಳಲ್ಲಿ ರುದ್ರಭಟ್ಟನ 'ಜಗನ್ನಾಥ ವಿಜಯ'ವೂ, † ಷಡಕ್ಷರಿಯ ಕಾವ್ಯಗಳೂ ಬೇರೆಲ್ಲಿಯೋ

---

* ಈ ಕೇಶಿರಾಜನೇ ಈ ಪದ್ಯದಲ್ಲಿ ಹೇಳಲ್ಪಟ್ಟಿರುವ 'ಕೇಶವ' ನೆಂಬವ ನೆಂದು ಕಾಣುತ್ತದೆ— 'ಕವಿ ಕೇಶವನೆಂ' ('ಶಬ್ದಮಣಿದರ್ಪಣ' ಪೀಠಿಕಾ ಸಂಧಿ —೨; ಪು. ೨)

† ಚಂದ್ರಭಟ್ಟನ ಹೆಸರು 'ಜಗನ್ನಾಥವಿಜಯ'ದಲ್ಲಿಯೂ ಇದೆ— 'ಚಂದ್ರ ಭಟ್ಟನ ಜತಿ'

ಪ್ರಕಟವಾಗಿ ಮದ್ರಾಸು ಯೂನಿವರ್ಸಿಟಿಯ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳಾಗಿ ಏರ್ಪಟ್ಟುವು. ಹೀಗೆ ಪ್ರಕಟವಾದೀ ಗ್ರಂಥಗಳನ್ನು ಸ್ವತಃ ಓದಿನೋಡಿದ ಕವಿಯೇ ಅವುಗಳನ್ನು ರಚಿಸಿದ ಕವಿಗಳ, ಹಾಗೂ ಅವಲ್ಲಿ ಹೆಸರಿಸಲ್ಪಟ್ಟಿರುವ ಇತರರ ಹೆಸರುಗಳನ್ನು ಹೇಳಲಾಪನಲ್ಲದೆ, ಅನ್ಯನಲ್ಲ. ಅದಲ್ಲದೆ ನಂದಳಿಕೆಯವರು "ಹೆಚ್ಚಾಗಿ ಓದುತಿದ್ದುದು ಕಿಟ್ಟಲ್ ನಿಘಂಟು ಮತ್ತು ಶಬ್ದಮಣಿದರ್ಪಣ" ಎಂದು ಅವರನ್ನು ತುಂಬ ಸಲುಗೆಯಿಂದ ಬಲ್ಲ ಶ್ರೀಮಾನ್ ಐ. ಶಿವರಾಮಯ್ಯನವರು ಅವರನ್ನು ಕುರಿತು ‘ಸುವಾಸಿನಿ’ಯಲ್ಲಿ ಬರೆದ ಲೇಖದಿಂದ (‘ಸುವಾಸಿನಿ’ III, ೩. ಪು. ೯೫) ಗೊತ್ತಾಗುತ್ತದೆ. ಆದುದರಿಂದ ಈ ಕಾವ್ಯವು ೪೦ ವರ್ಷಗಳ ಈಚೆಗೆ ರಚಿತವಾದ ಗ್ರಂಥವಾಗಿರಬೇಕೆಂದೂ, ಅದನ್ನು ನಂದಳಿಕೆಯವರೇ ರಚಿಸಿದುದೆಂದೂ ನನಗೆ ತೋರುತ್ತದೆ. *

(೯) ‘ಱ’ ಎಂಬ ಅಕ್ಷರವು ಹಲವು ಶತಮಾನಗಳ ಹಿಂದೆಯೇ ಕನ್ನಡ ನುಡಿಯಿಂದಲೂ ಬರೆಹದಿಂದಲೂ ಬಿದ್ದುಹೋಯಿತೆಂದು

---

* ಈ ಕಾವ್ಯದ ಕರ್ತೃ ನಂದಳಿಕೆಯವರೇ ಎಂದು ಕಂಡಿತವಾದಗೆ, ಈಮೇಲೆ ಉದ್ಧರಿಸಿರುವ ಪದ್ಯ (II. 3)ದಲ್ಲಿ ಇವರು ಹೆಸರಿಸಿರುವ ಅಜ್ಞಾತ ಕವಿಗಳಲ್ಲಿ ಇಬ್ಬರನ್ನು ಗೊತ್ತು ಹಚ್ಚಿಕೊಳ್ಳಬಹುದು ; ಅವರಾರೆಂದರೆ ‘ವಾಸುದೇವ’ ಮತ್ತು ‘ವೇಂಕಟ’ ಎಂಬವರು. ‘ವಾಸುದೇವ’ ಎಂದರೆ ಯಕ್ಷಗಾನ ಪ್ರಸಂಗಗಳಲ್ಲಿ ಅತ್ಯುತ್ತಮವೆಂದು ಖ್ಯಾತಿಗೊಂಡ ‘ಬಿಲ್ಲಹಬ್ಬ’, ‘ಸಮುದ್ರಮಥನ’, ‘ಚಂದ್ರಹಾಸನಕಥೆ’ ಮತ್ತು ‘ರಾಧಾವಿಲಾಸ’ ಮುಂತಾದುವನ್ನೂ, ಈ ಜಿಲ್ಲೆಯಲ್ಲಿ ಜನರಿನ್ನೂ ಅಕ್ಕರೆಯಿಂದ ಹಾಡುತ್ತಿರುವ ನೂರಾರು ತುಂಡು ಪದಗಳನ್ನೂ ರಚಿಸಿದ ‘ಮಟ್ಟಿ ವಾಸುದೇವಪ್ರಭು’ ಎಂಬವರು. ‘ವೇಂಕಟ’ ಎಂದರೆ ಯಕ್ಷಗಾನದಲ್ಲಿ ‘ಮಾನಸಚರಿತ್ರ’ ಎಂಬ ತಾತ್ತ್ವಿಕ ಕಾವ್ಯವನ್ನು ಬರೆದ ‘ವೆಂಕಣ್ಣ ಕವೀಶ್ವರ’ ಎಂಬವರು. ತಾವೇ ಯಕ್ಷಗಾನಗಳಲ್ಲಿ ಎರಡು ಕೃತಿಗಳನ್ನು ರಚಿಸಿದ ನಂದಳಿಕೆಯವರು, ಆ ಪದ್ಧತಿಯಲ್ಲಿ ತನ್ನ ಪೂರ್ವಿಕರೂ ಅದರ ಸೀಮಾ ಪುರುಷರೂ ಆದೀ ಕವಿಗಳನ್ನು ನೆನಪಿಂದ ಸ್ಮರಿಸಿರುವುದು ಸಮುಚಿತವೇ.

ಬಲ್ಲವರಿಗೆ ಬೇರೆ ಹೇಳಬೇಕೆಂದಿಲ್ಲ. ಆದರೆ ಕ್ರಿ. ಶ. ೧೭೦೦ ರಿಂದ ಮುಂಚೆ ರಚಿಸಲ್ಪಟ್ಟಿರಲಾರದ ಈ ಕಾವ್ಯದಲ್ಲಿ ಅದನ್ನು ತುಂಬ ಜೋಕೆಯಿಂದ ಆರಯ್ದಿರುವುದರಿಂದಲೇ * ಈ ಕಾವ್ಯದ ಆಧುನಿಕತೆ ಸಿದ್ಧವಾಗುತ್ತದೆಂದು ನನಗೆ ಕಾಣುತ್ತದೆ; ಏಕೆಂದರೆ 'ಶಬ್ದಮಣಿದರ್ಪಣ'ದಲ್ಲಿ ಕೊಟ್ಟಿರುವ 'ೞೞಂ'ಗಳನ್ನು ಮನವಾರೆ ಕಲಿತುಕೊಂಡಾತನಲ್ಲದೆ, ಬೇರೆ ಯಾವಾತನಾದರೂ ಕಳೆದ ೧೫೦ ವರ್ಷಗಳಲ್ಲಿ 'ೞ'ಕಾರವನ್ನು ಇಷ್ಟು ಸೌಷ್ಠವತೆಯಿಂದ ಉಪಯೋಗಿಸಲಾಪನೆಂದು ನಂಬಲಾದರೂ ಸಾಧ್ಯವಲ್ಲ.

(೧೨) 'ಬರ್ದಿದಿರ್ ಪೇರಾಗ್ರಗಣ್ಯರೆನಿಸಿ'—(IV. ೩೮)

'ಬರ್ದಿದಿರ್' ಎಂಬೀ ಶಬ್ದಕ್ಕೆ ಶ್ರೀ ಅಯ್ಯಂಗಾರ್ಯರು ತಮ್ಮ ಟೀಕೆಯಲ್ಲಿ (ಪು. ೨೭), 'ಬೞ್ದಿದಿರ್, ಬಾಳಿದಿರಿ, ಬದುಕಿದಿರಿ' ಎಂಬ ಅರ್ಥವನ್ನು ಕೊಟ್ಟಿರುವರು. ಈ ಶಬ್ದವು 'ಬೞ್' ಎಂಬ ಧಾತುವಿನಿಂದ ಹುಟ್ಟಿರಬೇಕೆಂದು ಕಾಣುತ್ತದೆ; 'ಬೞ್' ಎಂಬುದಕ್ಕೆ 'ಬೞ್ದನೆಂದು ಜೀವಿಸಿದನುಂ ಒಕ್ಕಲಾದನುಮಕ್ಕುಂ' ಎಂದು 'ಶಬ್ದಮಣಿದರ್ಪಣ'ದಲ್ಲಿ (1872 Ed. ಪು. ೩೫) ಅರ್ಥ ಹೇಳಿದೆ. ಆದರೆ 'ಬೞ್'ಧಾತುವಿನ'ಬೞ್ದಂ','ಬೞ್ದುದು' ಮೊದಲಾದ ಕ್ರಿಯಾರೂಪಗಳು ಉಂಟಾದುದನ್ನು 'ಶಬ್ದಮಣಿದರ್ಪಣ'ದ ಹಲವೆಡೆಗಳಲ್ಲಿ (1872 Ed. ಪು. ೩೮, ೪೯, ೮೧, ೧೫೭) ಹೇಳಿದೆಯಾದರೂ

* ಇಷ್ಟು ಛಲದಿಂದ ನಂದಳಿಕೆಯವರು ತಮ್ಮನ್ನು ಮರೆಸಿಕೊಂಡಿರುವಂದು ಕೂಡ, ಮನುಷ್ಯ ಸ್ವಭಾವವನ್ನು ಅತಿಕ್ರಮಿಸಲಾಗದೆ, ಒಂದೆರಡು ಎಡೆಗಳಲ್ಲಿಯಾದರೂ ಮೆಯ್ಮರೆತಿರುವಂತೆ ತೋರುತ್ತದೆ; ಉದಾ. 'ಶಬ್ದಮಣಿದರ್ಪಣ'ದಲ್ಲಿ "ಕೊೞಲೆಂದು ವೇಣುವಾದ್ಯದೊಳ್ ೞೞಂ. ಕೊಳಲೆಂಬ ಕ್ರಿಯೆಯೊಳ್ ಕುಳಂ" (Ed. 1872; ಪು. ೩೫) ಎಂದು ಸ್ಪಷ್ಟವಾಗಿ ಇದೆಯಾದರೂ, ಆ ಭೇದವು ಇವರ ಲಕ್ಷ್ಯದೊಳಗೆ ಬಾರದೇನೋ, ಇವರು ವೇಣುವಾದ್ಯಾರ್ಥದಲ್ಲಿ 'ಕೊಳಲ್' ಎಂದೇ ಈ ಕಾವ್ಯದಲ್ಲಿ (IV. ೫೫) ಉಪಯೋಗಿಸಿರುವರು.

'ಬರ್ದಿದಂ', 'ಬರ್ದುದು', 'ಬರ್ದಿದಿರ್' ಎಂಬೀ ರೂಪಗಳನ್ನು ಹೇಳಿಲ್ಲ. ಆದುದರಿಂದ ವ್ಯಾಕರಣದ ಶಾಸನವನ್ನೇ ಅಕ್ಷರಶಃ ಎಂಬಂತೆ ಅನುಸರಿಸಿ ಬರೆವ ಹಿಂದಣ ಕಾಲದ ಕವಿ 'ಬಱ್ದಿದಿರ್' ಎಂದೇ ಇಡುತ್ತಿದ್ದನಲ್ಲದೆ,'ಬರ್ದಿದಿರ್' ಎಂದು ಇರಿಸುತ್ತಿದ್ದಿಲ್ಲ ಎಂದು ನನಗೆ ತೋರುತ್ತದೆ. ನಂದಳಿಕೆಯವರಾದರೊ, ಈಗಣವರೆಂಬುದರಿಂದ, 'ಶಬ್ದಮಣಿದರ್ಪಣ'ದಲ್ಲಿಯು

ಬಱ್ದುದು ಬಳ್ಳವಾಡಿ ನೆರೆ ನಂ
ಬಿರ್ದ್ದುರ್ದಾರುಹತಂ ಜಿನೇಂದ್ರನಂ
ತಿರ್ದ್ದ ಮಹಾನುಭಾವ(ರ್).... .... ॥(1872 Ed. ಪು. ೩೮ ;
1899 Ed. ಪು. ೩೮)

ಎಂಬಲ್ಲಿ 'ಬಱ್ದುದು' ಮತ್ತು 'ಬಿರ್ದ್ದುದು' ಎಂಬಿವು ಯಥಾಸೂತ್ರವಾಗಿ ಪರಸ್ಪರ ಪ್ರಾಸಿಗೆ ಪ್ರಯೋಗಿಸಲ್ಪಟ್ಟಿರುವುದನ್ನೂ, 'ಬರ್ದು' ಎಂಬ ನಾಮರೂಪವು ಅದೇ 'ಬಱ್' ಧಾತುವಿಂದ ಹುಟ್ಟಿತೆಂದು ಕಿತ್ತೆಲರ ಕನ್ನಡ-ಇಂಗ್ಲೀಷ್ ಕೋಶದಲ್ಲಿ (ಪು. ೧೦೮೫ — 'ಬರ್ದು') ಹೇಳಿರುವುದನ್ನೂ, ಆ 'ಬಱ್' ಧಾತುವಿನ ರೂಪಸಾದೃಶ್ಯ ಉಳ್ಳ 'ಬಿಱ್' ('ಬೀಱ್') ಎಂಬ ಧಾತುವಿಂದ 'ಬಿರ್ದುದು' ಎಂಬ ಕ್ರಿಯಾರೂಪು ಹುಟ್ಟಿರುವುದನ್ನೂ ವಿವೇಚಿಸಿ 'ಬರ್ದಿದಿರ್' ಎಂದಾಗಿಸಿ ಕೊಂಡಿರಬೇಕೆಂದು ಭಾವಿಸುವರೆ ಆಡ್ಡಿ ತೋರುವುದಿಲ್ಲ.

(೧೧) ಶ್ರೀ ಅಯ್ಯಂಗಾರ್ಯರಿಂದ ಪ್ರಕಟಿಸಲ್ಪಟ್ಟಿರುವ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದ (1909) ಭೂಮಿಕೆಯಲ್ಲಿ "ಈ ಗ್ರಂಥದ ಮುದ್ರಣದಲ್ಲಿ ನಮಗೆ ದೊರೆತ ಪ್ರತಿಗಳು— ೧. ಗತಿಸಿದ ಮ॥ರಾ॥ ಉಡುಪಿ ನಂದಳಿಗೆ ಲಕ್ಷ್ಮೀನಾರಣಪ್ಪನವರ ಕಾಗದದ ಪ್ರತಿ. ಇದು ಶುದ್ಧವಾದ ಪ್ರತಿ." ಎಂದಿದೆ ಎಂಬುದರಿಂದ ನಂದಳಿಕೆಯವರು 'ಹರಿಶ್ಚಂದ್ರ ಕಾವ್ಯ'ವನ್ನು ಓದಿರಬೇಕೆಂಬುದರಲ್ಲಿ ಸಂಶಯವಿಲ್ಲ. ಈ 'ಶ್ರೀರಾಮಪಟ್ಟಾಭಿಷೇಕ'ದ II. ೬ ನೆಯ ಪದ್ಯ

ವನ್ನು 'ಹರಿಶ್ಚಂದ್ರಕಾವ್ಯ'ದ I. ೨೬ನೆಯ ಪದ್ಯದೊಂದಿಗೂ, ಇದರ IV. ೧೩ನೆಯ ಪದ್ಯವನ್ನು ಅದರ IV. ೫೮-೬೨ ನೆಯ ಪದ್ಯಗಳೊಂದಿಗೂ ಹೋಲಿಸಿ ನೋಡುವುದು,

'ಶ್ರೀರಾಮಪಟ್ಟಾಭಿಷೇಕ'ದ II. ೬ ನೆಯ ಪದ್ಯದಲ್ಲಿ

'ಗುಮ್ಮ'

ನಂದುದಿಪ ನೇಸಱಿಂ ಕಂಡು ದನಿಗುಡಲ್ ....।

ಎಂದಿದೆಯಷ್ಟೆ. ಈ 'ಗುಮ್ಮ' ಎಂಬುದಕ್ಕೆ ಶ್ರೀ ಅಯ್ಯಂಗಾರ್ಯರು 'ಕಾಡುಕೋಳಿ' ಎಂದು ಅರ್ಥ ಕೊಟ್ಟಿರುವರು; ಕಿಟ್ಟೆಲರ ಕೋಶದಲ್ಲಿ (ಪು. ೫೫೫) 'ಗುಮ್ಮವಕ್ಕಿ – A Wild Cock (ಕುಕ್ಕುಭ)' ಎಂದಿದೆ. ಕನ್ನಡದಲ್ಲಿ 'ಗುಮ್ಮ' ಎಂಬುದಕ್ಕೆ ಈ ಅರ್ಥವಾದರೂ, ಈ ಅರ್ಥವು ಇಲ್ಲಿ ಅನ್ವಯಿಸುವುದಿಲ್ಲ — ಸೂರ್ಯೋದಯವನ್ನು ಕಾಡುಕೋಳಿ ಅಲ್ಲಗಳೆವುದನ್ನು ನಾನರಿಯೆ. ತುಳು ಭಾಷೆಯಲ್ಲಿ 'ಗುಮ್ಮ' ಎಂದರೆ 'ಗೂಗೆ' ಎಂದು; 'ಗೂಗೆ' ಎಂಬ ಅರ್ಥವು ಈ ಪದ್ಯದಲ್ಲಿ ನೇರಾಗಿ ಅನ್ವಯಿಸುವುದರಿಂದ, ಸಂದಳಿಕೆಯುವರು, ಸ್ವಚ್ಛಂದವಾಗಿ ಎಂದೇ ಆದರೂ, ಇಲ್ಲಿ ಉಪಯೋಗಿಸಿರುವುದು ತುಳು ಶಬ್ದವೇ ಎಂದು ತುಂಬ ವ್ಯಕ್ತವಾಗುತ್ತದೆ; ಮತ್ತು ಇಂತಹ ಅನ್ಯಭಾಷಿಕ ಶಬ್ದವನ್ನು ಕನ್ನಡದಲ್ಲಿ ಪ್ರಯೋಗಿಸುವರೆ, ಹೀಗೆಯೇ ತಮ್ಮ ಬೇರೆರಡು ಸುಡಿಗಬ್ಬಗಳಲ್ಲಿ ಮಾಡಿರುವ ಸಂದಳಿಗೆಯುವರಿಗಲ್ಲದೆ ಇತರರಿಗೆ ಧೈರ್ಯ ಸಾಲದೆಂದು ನನಗೆ ತೋರುತ್ತದೆ.

೧೨ 'ತಾಮಸಂ ಬೇಡ' — (V. ೩೪)

'ತಾಮಸ' ಎಂಬೀ ಶಬ್ದವು 'ಆಲಸ್ಯ', 'ತಳುವು' ಎಂಬ ಅರ್ಥದಲ್ಲಿ 'ಬಸವಪುರಾಣ'ದಲ್ಲಿ ಒಂದು ಸಲವೇನೋ ಬಂದಿದೆ—

'ತಾಮಸಂ ಮಾಡಿದಂ ಬಸವಂ' (XXXVII. ೧೭)

ಆದರೂ ಈ ಜಿಲ್ಲೆಯ ಕನ್ನಡನುಡಿಯಲ್ಲಿ ಅದರ ಉಪಯೋಗವಿನ್ನೂ ತೀರ ಕಡಿಮೆ ; ೩೦–೪೦ ವರ್ಷಗಳ ಹಿಂದೆ ಇದ್ದಿತೆಂದಾದರೂ ಹೇಳಲಾಗುವುದಿಲ್ಲ. ಆದರೆ ಅದು ಮಲೆಯಾಳಿ ಭಾಷೆಯಲ್ಲಿ ಸರ್ವಸಾಮಾನ್ಯವಾಗಿ ಮಾತು ಕಥೆಯಲ್ಲಿ ಕೂಡ ವಾಡಿಕೆಯಲ್ಲಿದೆ ; ಮತ್ತು ಆ ಭಾಷೆಯಿಂದಲೆ ಇಲ್ಲಿಯ ಕನ್ನಡ ತುಳು ಭಾಷೆಗಳಲ್ಲಿ ತೂರಿಕೊಂಡಿರಬೇಕು. ಉಡುಪಿಯಲ್ಲಿ ಮಲೆಯಾಳಿಯ ಸರಿಯಾದ ಪ್ರಚಾರವೆಂದರೆ ಕಳೆದ ೪೦ ವರ್ಷಗಳ ಈಚೆಗಾದುದಷ್ಟೆ. *

(೧೩) 'ಪೊಂಬಟ್ಟೆ ಸೆಱಗಿನ ಜರಿಯೊಲೆಸೆದಿರ್ದುದು' — (IV. ೫೧.)

ಈ 'ಜರಿ' ಎಂಬ ಶಬ್ದವು 'ಪಾರಸೀ' ಭಾಷೆಯಿಂದ ಬಂದದ್ದು. ಆ ಭಾಷೆಯಲ್ಲಿ ಇದರ ಮೂಲರೂಪವು 'ಜರೀನ್' (Zareen) † ಎಂದಿದ್ದು, ಅದರಿಂದ 'ಜರ್' (Zar) ಎಂಬ ರೂಪವೂ ಉಂಟಾಯಿತು ; ಇದರ ಅರ್ಥವು 'ಚಿನ್ನ' ಎಂದು. ಈ 'ಜರಿ' ಎಂಬ ಶಬ್ದವು ಕನ್ನಡ ಕಾವ್ಯಗಳಲ್ಲಿ ಇದ್ದೀತೆಂದು ಭಾವಿಸಲಾಗುವುದಿಲ್ಲ; ‡ ಅಥವಾ

---

* ನಂದಳಿಕೆಯವರಿಗೆ ಮಲೆಯಾಳಿ ಭಾಷೆಯ ಜ್ಞಾನವಿತ್ತೆಂದು ಶ್ರೀಮಾನ್ ಐ. ಶಿವರಾಮಯ್ಯನವರ ಲೇಖದಿಂದ ತಿಳಿಯುತ್ತದೆ. ('ಸುವಾಸಿನಿ'–III. 4. ಪು. ೧೯೯)

† ಸಂಸ್ಕೃತದಲ್ಲಿ 'ಹಿರಣ್' ('ಹಿರಣ್ಮಯ'= 'ಹಿರಣ್+ಮಯ')= 'ಅವಸ್ತ (Avesta) ಭಾಷೆಯಲ್ಲಿ 'ಜರನ' (Zarana); ಈ 'ಜರನ' ಎಂಬ ಅವಸ್ತಾಭಾಷೆಯ ಶಬ್ದದಿಂದಲೇ ಪಾರಸೀಭಾಷೆಯ 'ಜರೀನ್' (Zareen)ಎಂಬುದು ಹುಟ್ಟಿತು.

‡ ಈ 'ಜರಿ' ಎಂಬ ಶಬ್ದವನ್ನು ನಂದಳಿಕೆಯವರು ಪ್ರಯೋಗಿಸಿರುವುದು ತಪ್ಪೆನ್ನುವುದಲ್ಲ ; ಏಕೆಂದರೆ 'ಫೌಜು' ಎಂಬ ಅಚ್ಚ ಅರಬೀಭಾಷೆಯ ಶಬ್ದವು ಹಲವು ಕನ್ನಡ ಕಾವ್ಯಗಳಲ್ಲಿದೆ–'ಕನ್ನಡ ಜೈಮಿನಿ ಭಾರತ' (XXV. ೧೦) ; ಮಂಗರಸನ 'ಸಮ್ಯಕ್ತ್ವ ಕೌಮುದಿ' (VIII. ೨೬ ; ೪೫) ; 'ಭಾವಚಿಂತಾರತ್ನ' (VIII. ೨; ೧೨; ೧೮) ; ಬೊಮ್ಮರಸನ 'ಸೌಂದರ ಪುರಾಣ' (XVI. ೧೩)

೪೦–೫೦ ವರ್ಷಗಳ ಈಚೆಯ ಕಾವ್ಯಗಳಲ್ಲಿ ಹೊರತು, ಅದರ ಮುಂಚಿನವುಗಳಲ್ಲಿ ಈ ಶಬ್ದವು ಸಂದಳಿಕೆಯವರ 'ಕುಮಾರವಿಜಯ'ದಲ್ಲಿದೆ —

'ಉಟ್ಟ ಪೀತಾಂಬರ ಜರಿಯು' ‖ — (ಪು. ೩೮)

(೧೪) 'ಜಂತದಣಿಗೆಯನೆತ್ತಿ ಬಾಚಿ' —(IV. ೧೦)

'ಜಂತದಣಿಗೆ' ಎಂದರೆ ಆನೆಯ ಸಿಗ್ಗವಿಂದ ಮಾಡಿದ ಬಾಚಣಿಗೆ, ಹಸ್ತಿ ದಂತದಿಂದ ಮಾಡಲ್ಪಟ್ಟ ಬಾಚಣಿಗೆಗಳು ಈ ಜಿಲ್ಲೆಯಲ್ಲಿ ಪ್ರಚಾರಕ್ಕೆ ಬಂದುದು ಕಳೆದ ೫೦–೬೦ ವರ್ಷಗಳ ಈಚೆಗಷ್ಟೆ ಎಂದು ಕಾಣುತ್ತದೆ. ಆ ಮುಂಚೆ ಶ್ರೀಮಂತರಲ್ಲಿ ಚಿನ್ನ, ಬೆಳ್ಳಿ, ಹಿತ್ತಾಳೆ ಇತ್ಯಾದಿ ಲೋಹದ ಇಲ್ಲವೆ ಗಂಧದಮರದ ಬಾಚಣಿಗೆಗಳೂ, ಬಡವರಲ್ಲಿ ಬೇರಾವ ಅಗ್ಗವಾದ ಮರದ ಬಾಚಣಿಗೆಗಳೂ ಉಪಯೋಗಿಸಲ್ಪಡುತ್ತಿದ್ದುವಂತೆ. ಆ ಬಳಿಕ ಗವಲದ ಕೊಂಬಿನ ಬಾಚಣಿಕೆಗಳು ಬಂದು, ಅದರಿಂದ ಎಷ್ಟೋ ಈಚೆ ಆನೆಯ ದಂತವು ಪ್ರಚಾರದಲ್ಲಿ ಬಂದುವಂತೆ. ಆದುದರಿಂದ 'ಜಾತವಣಿಗೆ' ಎಂಬೀ ಶಬ್ದವು ಈ ಕಾವ್ಯದಲ್ಲಿ ಇರುವುದರಿಂದ ಇದು ೫೦–೬೦ ವರ್ಷಗಳ ಈಚೆಯದೇ ಎಂದು ತಿಳಿಯಬೇಕು.

(೧೫) 'ಕಡಲೊಡೆಯ ಸೆಟಿಗಿಟ್ಟ ಬಿಡುಗಂಡಿಗಳೆನಲ್ಕೆ'
—(IV. ೫೧)

ಬಿಡುಗಂಡಿ = Sluice, or flood-gate. ಕಡಲ ಕರಾವಳಿಯಲ್ಲಿರುವ ಹಲ ಹೊಳೆಗಳಲ್ಲಿ ನೀರ ಮಟ್ಟವನ್ನು ಒಡಗಳ ಚಲಾವಣಿಯ ಬಗ್ಗೆ ನೇರಾಗಿ ಇರಿಸಲಿಕ್ಕೆಂದು ಅವಲ್ಲಿ ಅಣೆಗಳೇ ಮುಂತಾದುವನ್ನು ಕಟ್ಟಿ ಬಿಡುಗಂಡಿಗಳನ್ನು ಇಟ್ಟಿರುತ್ತದೆ. ಇಂಥಾ ಬಿಡುಗಂಡಿಗಳು ನಮ್ಮಾ ಜಿಲ್ಲೆಯಲ್ಲಿ ಎಲ್ಲಿಯೂ ಇರುವಂತೆ ಗೊತ್ತಿಲ್ಲ; ಆದರೆ ಈ ಜಿಲ್ಲೆಯ ತೆಂಕಣ ಪಕ್ಕದಲ್ಲಿರುವ ಮಲಬಾರು ಜಿಲ್ಲೆಯ 'ಬಡಗರ' (Badagara) ಮತ್ತು 'ಕಲ್ಲೀಕೋಟೆ' (Calicut)ಯ ನಡು

ವಣ 'ಎಳತ್ತೂರು' ಎಂಬಲ್ಲಿಯ ಹೊಳೆಯು 'ಕೊನೋಲಿ'ಕಾಲುವೆಯಲ್ಲಿ ಬಿಡುಗಂಡಿಗಳಿವೆ. ಆ ಕಾಲುವೆಯನ್ನು ಕಡಿಸಿದುದು ೧೮೪೦ರಿಂದ ೧೮೬೦ರೊಳಗೆ ಎಂದು ಕಾಣುತ್ತದೆ. ※ ಕುಂದಾಪುರ ಮತ್ತು ಉಡುಪಿಯ ಸಾಲೆಗಳಲ್ಲಿ ಪ್ರಥಮತಃ ಗರಡಿ ಸಾಧನದ ಶಿಕ್ಷಕರಾಗಿದ್ದ ನಂದಳಿಕೆಯವರು ಅದರ ಪರೀಕ್ಷೆಯ ಬಗ್ಗೆ ಮದ್ರಾಸಿಗೆ ಹೋಗಿ ಬರುವಾಗ † ಆ ಬಿಡುಗಂಡಿಗಳನ್ನು ಕಂಡಿತವಾಗಿಯೂ ನೋಡಿರಬೇಕು. ಗದ್ದೆಗೆ ನೀರನ್ನು ಹಾಯಿಸುವುದಕ್ಕೂ, ಗದ್ದೆಯಲ್ಲಿ ತುಂಬಿದ ನೀರನ್ನು ಇಳಿಸುವುದಕ್ಕೂ ಕೊರೆದಿರಿಸುವ ಕಂಡಿಗಳಿಗೆ ಈ ಜಿಲ್ಲೆಯಲ್ಲಿ ತೂಬು (= ತೂಂಬು) ಎನ್ನುವರಲ್ಲದೆ ಬಿಡುಗಂಡಿ ಎನ್ನರು; ಅದಲ್ಲದೆ ಈ ಪದ್ಯದಲ್ಲಿ ಕಡಲ ನೆರೆಗಿಟ್ಟ ಬಿಡುಗಂಡಿಗಳ ಮಾತಿದೆ ಎಂಬುದರಿಂದ ಕೂಡ, 'ಕೋನೋಲಿ' ಕಾಲುವೆಯ ಬಿಡುಗಂಡಿಗಳಂಥವನ್ನು ನೋಡಿದಾತನೇ ಹೀಗೆಂದು ಬರೆಯಲಾಪನಲ್ಲದೆ ಅನ್ಯರಲ್ಲವೆಂದೂ ನಿರ್ಧರಿಸಬಹುದು. ಅವರು ಅದುವರೆಗೆ ನೋಡಿರಲಾರದ ಆ ವಿಶೇಷದೃಶ್ಯವು ಅವರಂತಹ ಕವಿಯ ಮನಗನ್ನಡಿಯಲ್ಲಿ ನೆಲೆತು, ಈ ಮನೋಜ್ಞವಾದ ಉಪಮಾರೂಪದಿಂದ ಮಾರ್ಪೊಳೆದುದು ಅವರ ಕವಿತಾಶಕ್ತಿಗೆ ಸಾಹಜಿಕವೇ.

※ 'The Payyoli Conolly, Ponnani and Badagara canals were all completed between 1840 and 1860.'—(Madras District Gazetteers; Malabar Vol. I P. 263)

† ಸನ್ ೧೯೦೧ ರಲ್ಲಿ 'ಬಡಗರ'ಕ್ಕೆ ರೈಲು ಬಂದಂದಿನಿಂದ, ರೈಲ್ವೆಯಿಂದ ಆ ದಾರಿಯಾಗಿ ಪ್ರಯಾಣಮಾಡುವವರಿಗೆ ಆ ಬಿಡುಗಂಡಿಗಳು ಕಾಣಸಿಗುವುದಿಲ್ಲ. ನಂದಳಿಕೆಯವರು ಕುಂದಾಪುರ ಬೋರ್ಡ್ ಹಾಯ್ ಸ್ಕೂಲಿನಲ್ಲಿ ಗರಡಿಸಾಧನದ ಶಿಕ್ಷಕರಾಗಿ ಸೇರಿದ್ದು ಅದು ೧೮೯೨ ನೆಯ ಇಸವಿಯಲ್ಲಿ ('ಸುವಾಸಿನಿ'—III. 3. ೯೪) ಎಂಬುದರಿಂದ, ಅವರು ಮದ್ರಾಸಿಗೆ ಹೋಗಿ ಪರೀಕ್ಷೆ ಕೊಟ್ಟುದು ಅದಕ್ಕಿಂತ ಮುಂಚೆ ಆಗಿರಬೇಕು.

ಮಹಾಲಕ್ಷ್ಮಿಯಂತಹ ಹೆಂಗುಸು ಬಡುಗಂಡಿಗಳನ್ನು ನೋಡಿದುದೆಲ್ಲಿ? ೧ಲಳಂಕ್ಕೆ ಮುಂಚೆ ಅವನ್ನು ಕಂಡಿರುವ ಬಗೆ ಹೇಗೆ?

(೧೬) 'ಕುಂತಲಭ್ರಮರ ಪುಡಿದಾವರೆಯ ಮಧುವಂ ನಿ
ತಾಂತಮಸಿದುಣ್ಬುದೆನೆ .... |' —(V. ೫೩)

'ಹಸಿದು' ಎಂಬ ಪದವು 'ಅಸಿದು' ಎಂದು ರೂಪಾಂತರಿಸದೆಂದು ಶ್ರೀ ಅಯ್ಯಂಗಾರ್ಯರು ತಮ್ಮ ಟೀಕೆಯಲ್ಲಿ (ಪು. ೩೫) ಹೇಳಿರುವುದು ಸರಿಯೇ; ಆದರೆ 'ಸಿತಾಂತ ಪಸಿದುಣ್ಬುದೆನೆ' ಎಂದು ಅವರು ಅಲ್ಲಿ ಸೂಚಿಸಿರುವ ಪಾಠಾಂತರ ಪಾತ್ರ ಸರಿಯೂ ಅಲ್ಲ ಉಚಿತವೂ ಅಲ್ಲ ಎಂದು ತೋರುತ್ತದೆ. ಏಕೆಂದರೆ 'ನಿತಾಂತ' ಎಂಬ ಪದವು 'ಅಸಿದು' ಎಂಬ ಕ್ರಿಯಾವಾಚಿಯನ್ನು ಅನ್ವಯಿಸುವುದರಿಂದ ಅದು 'ನಿತಾಂತಮ್' ಎಂಬ ರೂಪುಳ್ಳ ಕ್ರಿಯಾವಿಶೇಷಣವೇ ಆಗಬೇಕಲ್ಲದೆ, 'ಸಿತಾಂತ' ಎಂದು ಗುಣವಾಚಿಯಾಗಲಾರದು, ಎಂಬುದರಿಂದ 'ಸಿತಾಂತ' ಎಂಬ ರೂಪು ಸರಿಯಲ್ಲ; ಹಾಗೆಯೇ 'ಕುಂತಲ' ಎಂಬುದು ಭ್ರಮರ ಎಂದಾದರೂ, ಕೂದಲು ಹಸಿವುದೆಂದರೆ ಔಚಿತ್ಯವಿಲ್ಲ. 'ಶಬ್ದಮಣಿದರ್ಪಣ'ದ IXನೆಯ ಅಧ್ಯಾಯದಲ್ಲಿ ಕೊಟ್ಟಿರುವ ಗೂಢಪದಗಳಲ್ಲಿ 'ಅಸಿದನೆಂದುಂ ಜೆಲಂಕಿದನೆಂದುಂ ಈಡಾಡಿದಂ' (1872 Ed. ಪು. ೪೦೫ ; 1899 Ed. ಪು. ೪೦೫) ಎಂದಿದೆ. ಈ ಅರ್ಥವಾದರೂ ಈ ಪದ್ಯದಲ್ಲಿ ಅನ್ವಯಿಸುವುದಿಲ್ಲ. ಆದರೆ ಕಿತ್ತೆಲರ ನಿಘಂಟುವಿನಲ್ಲಿ 'ಅಸಿ' ಎಂಬ ಬೇರೊಂದು ಧಾತುವನ್ನು ಕೊಟ್ಟು (ಪು. ೧೩೦—ಅಸಿ. ೪), ಅದರ ಅರ್ಥವು 'to Move, to Shake, to Tremble, to Dangle, to Pendulate' ಎಂದು ಹೇಳಿದೆ; ಇದನ್ನು ಶ್ರೀ ಅಯ್ಯಂಗಾರ್ಯರೂ ತಮ್ಮ ಟೀಕೆಯಲ್ಲಿ (ಪು. ೩೫) ಸೂಚಿಸಿರುವರು. ಸೀತಾದೇವಿಯ ಕುಂತಲವಾಗಲಿ, ಆ ಕುಂತಲವೆಂಬ ಭ್ರಮರವಾಗಲಿ, ಆಕೆ ನಡೆತರುವಂದು ಜೋಲಾಡುತ್ತ ಆಕೆಯ ಅಡಿದಾವರೆಯವರೆಗೆ ನಿಳ್ಕಿ ಅದರ ಸವಿಯನ್ನು ಹೀರುವಂತಿತ್ತು ಎಂಬುದು ತುಂಬ ಸಮಿಾಚೀನವೇ. ಆದರೆ ಕಿತ್ತೆಲರು ಆ 'ಅಸಿ' ಎಂಬ

ಧಾತು ಈ ಅರ್ಥದಲ್ಲಿ ಯಾವ ಕನ್ನಡ ಕಾವ್ಯಗಳಲ್ಲಿದೆ ಎಂದೇನೂ ಹೇಳಲಿಲ್ಲವೆಂಬುದನ್ನು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಂಡು, ನಂದಳಿಕೆಯವರನ್ನು ಕುರಿತು ಅವರನ್ನು ಬಲ್ಲವರು ಬರೆದಿರುವ ಲೇಖಗಳಲ್ಲಿ ತೋರುವಂತೆ, * ಅವರು ಕಿತ್ತೆಲರ ಕನ್ನಡ ನಿಘಂಟುವನ್ನು ತುಂಬ ಆಸಕ್ತಿಯಿಂದ ಪ್ರತಿಪದವಾಗಿ ಅಭ್ಯಸಿಸುತ್ತಲಿದ್ದರೆಂಬುದನ್ನು ಅದರೊಂದಿಗೆ ಜೋಡಿಸಿದರೆ, ಈ 'ಅಸಿ' ಎಂಬ ಪದವನ್ನು ಈ ಅರ್ಥದಲ್ಲಿ ಇಲ್ಲಿ ಪ್ರಯೋಗಿಸಿದುದು ಕಿತ್ತೆಲರ ಕೋಶದ ಆಧಾರದಿಂದಲೇ ಎಂಬುದು ಮನದಟ್ಟಾಗದಿರದು; ಕಿತ್ತೆಲರ ನಿಘಂಟು ಪ್ರಕಟವಾದುದು ೧೮೯೪ರಲ್ಲಿ, ಈ ಶ್ರೀರಾಮಪಟ್ಟಾಭಿಷೇಕವನ್ನು ನಂದಳಿಕೆಯವರು ಶ್ರೀ ಅಯ್ಯಂಗಾರ್ಯರಿಗೆ ಕಳುಹಿಸಿ ಕೊಟ್ಟುದು ೧೮೯೫ ನೆಯ ಸಪ್ಟಂಬರಿನಲ್ಲಿ.

(೧೭) 'ತಂಬೆಲರ್ಸೋ೦ಕೆ ಬಳ್ಕುವ ಲತಾಂಗಮದಿಱಿಸಿ
ಲಂ ಬೇರೆ ತಡೆದುಂಟೆ .... ।'—(III. ೫೩)

ಇದರಲ್ಲಿಯ 'ಇಱಿಸಿಲ್' ಎಂಬ ಪದಕ್ಕೆ ಶ್ರೀ ಅಯ್ಯಂಗಾರ್ಯರ ಟೀಕೆಯಲ್ಲಿ (ಪು. ೨೨) "ಇರಿಸಲ್ — ಹೊಸಗನ್ನಡ ಇರಿಚಲು" ಎಂದು ಹೇಳಿದೆ. ಆದರೆ ಈ ಕಾವ್ಯದಲ್ಲಿರುವ ರೂಪು 'ಇಱಿಸಿಲ್'. ಟೀಕೆಯಲ್ಲಿ ಕೊಟ್ಟ ರೂಪು 'ಇಱಿಸಲ್'– ಇದು ಅಚ್ಚಿನ ಹುಳುಕಾ

---

* "ಆದರೆ ಹೆಚ್ಚಾಗಿ ಇವನು (ಅಂದರೆ ನಂದಳಿಕೆಯವರು) ಕಿಟಲ್ ಸಾಹೇಬರು ಬರೆದ ಕನ್ನಡ ಇಂಗ್ಲೀಷು ನಿಘಂಟನ್ನು ಹಿಡಿದುಕೊಂಡು, ಅದರಲ್ಲಿರುವ ಪದಗಳನ್ನೂ ಪದಾರ್ಥಗಳನ್ನೂ ಗಟ್ಟಿಮಾಡುವುದರಲ್ಲಿಯೇ ಸಮಯ ಕಳೆಯುತ್ತಿದ್ದನು. ಇದರಿಂದಲೇ ಇವನಿಗೆ ಎಷ್ಟೋ ಸಾವಿರ ಪದಗಳು ಕಂಠಸ್ಥಗಳಾಗಿ ಬೇಕಾದಾಗ ನಾಲಿಗೆಯ ತುದಿಯ ಮೇಲೆ ಬಂದು ಕೂಡ್ರಹತ್ತಿದುವು." ; "ಇವರು (ನಂದಳಿಕೆಯವರು) ಹೆಚ್ಚಾಗಿ ಓದುತ್ತಿದ್ದುದು ಕಿಟ್ಟೆಲ್ ನಿಘಂಟು ಮತ್ತು ಶಬ್ದಮಣಿದರ್ಪಣ." ('ಸುವಾಸಿನಿ'—III. ೩. ೯೪–೯೫)

ಗಿರಲೂ ಬಹುದು, ಅಥವಾ 'ಇಱಿಸಿಲ್' ಮತ್ತು 'ಇಱಿಸಲ್' ಎಂಬುವು ಒಂದೇ ಪದದ ಏಕಾರ್ಥವುಳ್ಳ ರೂಪಾಂತರಗಳಾಗಿರಬೇಕೆಂಬ ಊಹೆಯಿಂದೇನೋ(–ಇದು ಸಾಧಾರವೇ?) ಹೀಗಾಗಿರಲೂ ಬಹುದು. ಹೇಗೂ ಇರಲಿ; 'ಇರಿಚಲು' ಎಂದರೇನು ? ಕಿತ್ತೆಲರ ಕೋಶದಲ್ಲಿ * 'ಇಱಿಚಲು'—'ಇಱಿಚಲು'— 'ಇರ್ಚಲು' ಎಂದರೆ 'A Driving Rain' (ಪು. ೧೯೬) ಎಂದಿದೆ, ಅಲ್ಲದೆ 'ಇರಿಚಲು' ಎಂಬ ಶಬ್ದವನ್ನಾದರೂ ಅಲ್ಲಿ ಕೊಟ್ಟಿಲ್ಲ; ಅಥವಾ ಅಲ್ಲಿ ಕೊಟ್ಟಿರುವ 'ಇಱಿಚಲು' ಮುಂತಾದುವು 'ಇಱಿಸಿಲ್' ಎಂಬುದರ ರೂಪಾಂತರಗಳೆಂದಾಗಲಿ, ಸಮಾನಾರ್ಥ ಪದಗಳೆಂದಾಗಲಿ ಹೇಳಿಲ್ಲ ಮಾತ್ರವಲ್ಲ, 'ಇಱಿಸಿಲ್' ಎಂಬುದಕ್ಕೆ (ಪು. ೧೯೬) 'A Pit fall to catch Tigers. Elephants etc. (ಮಿಗಮಂ ಕೆಡಪುವ ಗುಳಿ. Smd. II)' ಎಂದೂ ಹೇಳಿದೆ. ಆದರೆ ಕಿತ್ತೆಲರು ಪ್ರಕಟಿಸಿದ 'ಶಬ್ದಮಣಿದರ್ಪಣ' ದ ಪ್ರಥಮ ಮುದ್ರಣದಲ್ಲಿ (1872) "ಇಱಿಸಿಲೆಂದು ಮಿಗಮಂ ಕೆಡಪುವ ಗುಳಿ (ಗಾಳಿ) [ಗಾಣಿ] ಎಂದಿದೆ (ಪು. ४೦४). † ಹೀಗೆ ಮುದ್ರಿಸಿರುವುದನ್ನು ಸವಿಮರ್ಶವಾಗಿ ಓದಿ ಪರಿಶೀಲಿಸುವಲ್ಲಿ, 'ಗುಳಿ' ಎಂದು ಕಿತ್ತೆಲರಿಗೆ ಕಂಡುಬಂದ ಶಬ್ದವು ಹಾಗೆಯೇ 'ಗಾಳಿ' ಎಂದೂ ಓದ

* ಈ ಲೇಖದಲ್ಲಿ ಕಿತ್ತೆಲರ ನಿಘಂಟುವನ್ನು ಇಷ್ಟು ಪ್ರಮಾಣವಾಗಿ ಇಟ್ಟುಕೊಂಡುದೇಕೆ ಎಂದು ಯಾರಾದರೂ ಆಕ್ಷೇಪಿಸಬಹುದು ; ಅದು ಯಾಸ್ಕಾಚಾರ್ಯನ 'ನಿರುಕ್ತ'ದಂತಾಗಲಿ, ತರ್ಕವಾಚಸ್ಪತಿಯ 'ಬೃಹದಭಿಧಾನ'ದಂತಾಗಲಿ ಪ್ರಮಾಣವಾಗಲಾರದೆಂದು ಬಲ್ಲೆನಾದರೂ, ನಂದಳಿಕೆಯವರು ಅದನ್ನು ವ್ಯಾಸಂಗಿಸುತ್ತಲಿದ್ದರೆಂಬುದರಿಂದ, ಅವರನ್ನು ಕುರಿತುಳ್ಳ ಲೇಖದಲ್ಲಿ ಅದರ ಆಧಾರವನ್ನು ಬಿಟ್ಟುಬಿಡಲಾಗುವುದಿಲ್ಲ.

† ಆದರೆ ಕಿತ್ತೆಲರೇ ಪ್ರಕಟಿಸಿದ 'ಶಬ್ದಮಣಿದರ್ಪಣ'ದ ದ್ವಿತೀಯ ಮುದ್ರಣದಲ್ಲಿ (1899) "ಇರಿಸಿಲೆಂದು ಮಿಗಮಂ ಕೆಡಪುವ ಗುಳಿ (ಪು. ४೦४) ಎಂದಿಷ್ಟೆ ಇದೆ; ಆ ದ್ವಿತೀಯ ಮುದ್ರಣವು ಪ್ರಕಾಶಿತವಾಗುವ ೨ ವರ್ಷಗಳ ಮುಂದೆಯೇ ಅಂದರೆ ಸನ್ ೧೮೯೭ರಲ್ಲಿ 'ಶ್ರೀರಾಮಪಟ್ಟಾಭಿಷೇಕ'ವು ಪ್ರಕಟವಾಯಿತು.

ಲಿಕ್ಕೆ ಬರುತ್ತದೆಂಬುದರಿಂದೇನೋ, ಅದು 'ಗುಳಿ' ಯೋ 'ಗಾಳಿ' ಯೋ ಎಂದು ಕಂಡಿಸಲಾರದೆ ಅವರು 'ಗಾಳಿ' ಎಂಬ ಪಾಠಾಂತರವನ್ನು ನಾಗದಂತಗಳಲ್ಲಿ ಸೂಚಿಸಿರಬೇಕೆಂದು ತೋರುತ್ತದೆ ; ಎಂಬುದರಿಂದ ಆ 'ಶಬ್ದಮಣಿದರ್ಪಣ'ದ ಮೊದಲ ಮುದ್ರಣದಲ್ಲಿ ಈ ಶಬ್ದವನ್ನು ಕಂಡ ನಂದಳಿಕೆಯವರು ಅದಕ್ಕೆ 'ಮಿಗಮಂ ಕೆಡಪುವ ಗಾಳಿ' ಅಂದರೆ 'ಸುಂಟರಗಾಳಿ' ಅಥವಾ 'ಬಿರುಗಾಳಿ' ಎಂಬ ಅರ್ಥವೇ ನೇರಾಗಿರಬೇಕೆಂದು ಭಾವಿಸಿ, * ಬಹುಶಃ ಅಲ್ಲಿಂದಲೇ ಆ ಶಬ್ದವನ್ನು ತಮ್ಮ ಕಾವ್ಯಕ್ಕೆ ಆಯ್ದುಕೊಂಡು, ಆ ಅರ್ಥದಲ್ಲಿಯೇ ಅದನ್ನಿಲ್ಲಿ ಮಡಗಿರುವಂತೆ ಕಾಣುತ್ತದೆ; ಏಕೆಂದರೆ 'ಇಱಿಸಿಲ್' ಎಂಬೀ ಶಬ್ದವು 'ಶಬ್ದಮಣಿದರ್ಪಣ'ದಲ್ಲಿ ವಿನಾ ಬೇರೆಲ್ಲಿಯೂ ಉಪಯೋಗಿಸಲ್ಪಟ್ಟಿರುವಂತೆ ಕಿತ್ತೆಲರ ಕೋಶದಲ್ಲಿ ಹೇಳಿಲ್ಲ, ಮತ್ತು 'ಶಬ್ದಮಣಿದರ್ಪಣ' ದಲ್ಲಿಯೂ ಅದನ್ನು ಗೂಢಪದಗಳ ಪಟ್ಟಿಯಲ್ಲಿ ಸೇರಿಸಿರುವುದರಿಂದ, ಕೇಶಿರಾಜನ ಕಾಲದಲ್ಲಿ ಕೂಡ ಅದೊಂದು ಅಸಾಮಾನ್ಯವಾದ ಶಬ್ದವೇ ಆಗಿದ್ದು ಪ್ರಯೋಗದಲ್ಲಿ ಇದ್ದಿರಲಾರದೆಂದು ತಿಳಿಯುವುದರಿಂದ, ನಂದಳಿಕೆಯವರು ಅದನ್ನು ಎತ್ತಿಕೊಂಡುದು 'ಶಬ್ದಮಣಿದರ್ಪಣ'ದಿಂದ ಮತ್ತು ಕಿತ್ತೆಲರ ಕೋಶದಿಂದ ಹೊರತು ಬೇರೆತ್ತಣಿಂದಲೂ ಅಲ್ಲ ಎಂದೂ, ಈ ಪ್ರಯೋಗವನ್ನು 'ಶಬ್ದಮಣಿದರ್ಪಣ'ದ ಪ್ರಥಮ ಮುದ್ರಣ (೧೮೭೨) ಮತ್ತು ಕಿತ್ತೆಲರ ಕನ್ನಡ ನಿಘಂಟು (೧೮೯೪) ಇವುಗಳ ಆಧಾರದಿಂದ ವಿನಾ ಅನ್ಯಥಾ ಸ್ಪಷ್ಟೀಕರಿಸಲಾಗುವುದಿಲ್ಲ ಎಂಬುದರಿಂದ ಈ ಕಾವ್ಯವು ಆ ವರ್ಷಗಳಿಗಿಂತ ಈಚೆಯಲ್ಲಿ ರಚಿಸಲ್ಪಟ್ಟಿರಬೇಕೆಂದೂ ನಿರ್ಧರಿಸಬಹುದು.

---

* ಏಕೆಂದರೆ 'ಜಡಿಮಳೆ' (driving rain) ಎಂಬ ಅರ್ಥವುಳ್ಳ 'ಇರಿಚಲು' ಎಂಬುದಾಗಲಿ, ಮಿಗಗಳನ್ನು ಕೆಡಪುವ ಗುಳಿ ಎಂಬ ಅರ್ಥದಲ್ಲಿ 'ಇಱಿಸಿಲು' ಎಂಬುದಾಗಲಿ, ತಂಬೆಲರೊಂದಿಗೆ ಹೇಳಲ್ಪಡುವಲ್ಲಿ ಔಚಿತ್ಯವಿಲ್ಲ ; ಆದರೆ ಮೃಗಗಳನ್ನು ಕೆಡಪುವ ಗಾಳಿಯಾದರೊ, ತಂಬೆಲರ ಪ್ರತಿಪಕ್ಷವಾಗಿ ಹೇಳಲ್ಪಡುವಲ್ಲಿ ತುಂಬ ಔಚಿತ್ಯವಿದೆಂದು ಬೇರೆ ಹೇಳಬೇಕೇ ?

ಇವೆಲ್ಲ ಕಾರಣಗಳಿಂದ ನನಗೆ ಕಂಡಿತವೆಂದು ಮನಗಾಣುವು ದೇನೆಂದರೆ—

(ಅ) 'ಶ್ರೀರಾಮಪಟ್ಟಾಭಿಷೇಕ'ವು ಎಂದೆಂದಿಗೂ ಹೆಂಗುಸಿಂದ ರಚಿಸಲ್ಪಟ್ಟ ಕಾವ್ಯವಾಗಿರಲಾರದು ;

(ಆ) ಅದರ ರಚಯಿತೃವು 'ಶಬ್ದಮಣಿದರ್ಪಣ'ದ ಮೊದಲ ಮುದ್ರಣವನ್ನೂ (೧೮೭೨)ಕಿತ್ತೆಲರ ಕನ್ನಡಕೋಶವನ್ನೂ(೧೮೯೪) ತುಂಬ ಅವಗಾಹಿಸಿರುವಂತೆ ಕಂಡುಬರುವುದರಿಂದಲೂ, ೪೦–೫೦ ವರ್ಷಗಳ ಈಚೆಯವರ ಅನುಭವಕ್ಕಷ್ಟೆ ಗೊತ್ತಿರಲು ಶಕ್ಯವಾದ ಹಲ ವಿಷಯಗಳು ಈ ಕಾವ್ಯದಲ್ಲಿ ಅಲ್ಲಲ್ಲಿವೆ ಎಂಬುದರಿಂದಲೂ, ಇದರ ರಚನೆ ೪೦–೫೦ ವರ್ಷಗಳ ಈಚೆಯಲ್ಲಿ ತಾನೆ ಆಗಿರಬೇಕಲ್ಲದೆ, ಸರ್ವಥಾ ಅದಕ್ಕಿಂತ ಮುಂಚೆ ಆಗಿರಲಾರದು ;

(ಇ) ಈ ಕಳದ ೪೦–೫೦ ವರ್ಷಗಳಲ್ಲಿ ಇಂಥಾ ಕಾವ್ಯವನ್ನು ರಚಿಸಬಲ್ಲ ಕವಿ ನಮ್ಮ ಜಿಲ್ಲೆಯಲ್ಲಿ ಇದ್ದನೆಂದರೆ, ಸಂದಳಿಕೆಯವ ರೊಬ್ಬರೇ ಅಲ್ಲದೆ ಇನ್ನೊಬ್ಬನಲ್ಲ ಎಂಬುದರಿಂದಲೂ, ಸಂದಳಿಕೆಯ ವರ ಸ್ವಾನುಭವಕ್ಕೆ ಸಿಲುಕಿರಬೇಕಾದ ಕೆಲ ಸಂಗತಿಗಳು ಈ ಕಾವ್ಯ ದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವುದರಿಂದಲೂ, ಇದನ್ನು ರಚಿಸಿದ ಕವಿ ಅವರೇ ಆಗಿರಬೇಕಲ್ಲದೆ, ಬೇರೆ ಯಾವಾತನೂ ಅಲ್ಲ, ಯಾವಾ ಕೆಯೂ ಅಲ್ಲ.

ಆಂತರಿಕ ಪ್ರಮಾಣಗಳನ್ನು ಮಾತ್ರ ಆಧರಿಸಿ ಈ ಲೇಖವನ್ನು ಬರೆದಿರುವೆನೆಂದು ನಾನು ಈ ಮುಂಚೆ ಹೇಳಿರುವೆನಷ್ಟೆ; ಆದರೆ ನನ್ನ ಎಲ್ಲೆಯ ಹೊರಗಣ ಇದೊಂದೇ ವಿಷಯವನ್ನು ಇಲ್ಲಿ ಸೂಚಿಸು ವೆನು; ಅದೇನೆಂದರೆ, ಸಂದಳಿಕೆಯವರನ್ನು ಸ್ವತಃ ಬಲ್ಲ * ಶ್ರೀಮಾನ್

---

* "ಈ ಕವಿವರ್ಯರು ಅಂದರೆ ನಂದಳಿಕೆಯವರು ನನಗೂ ಪ್ರಾಣಮಿತ್ರರೇ; ನನಗೂ ಇವರ ವಿಷಯವಾಗಿ ಎಷ್ಟೋ ವಿಷಯಗಳು ತಿಳಿದುಬಂದಿರುವುವು.... ....

ಐ. ಶಿವರಾಮಯ್ಯನವರು ಅವರನ್ನು ಕುರಿತು ಬರೆದ ಲೇಖದಲ್ಲಿ ಹೀಗೆಂದಿರುವರು—

"ಇವರ ಅಂದರೆ ನಂದಳಿಕೆಯವರ ತಂದೆಯ ಹೆಸರು ತಮ್ಮಯ್ಯನೆಂದು; ತಾಯಿಯ ಹೆಸರು ಮಹಾಲಕ್ಷ್ಮಿಯೆಂದು" ಸುವಾಸಿನಿ—III, 3 ೯೪. "ಲಕ್ಷ್ಮೀ ನಾರಣಪ್ಪನ ಅಂದರೆ ನಂದಳಿಕೆಯವರ ತಾಯಿಯ ಹೆಸರೂ ಮಹಾಲಕ್ಷ್ಮಿಯೆಂದು" (ಡಿ—III. 4 ೧೧೮.)

ಕನ್ನಡ ಸಾಹಿತ್ಯದಲ್ಲಿ ಸ್ತ್ರೀಕೃತವಾದ ಪ್ರೌಢಕಾವ್ಯಗಳು ಇರುವುವೋ ಅಥವಾ ಇಲ್ಲವೋ ಎಂಬುದು ನಂದಳಿಕೆಯವರಿಗೆ ಗೊತ್ತಿದ್ದಿತೆಂದು ಹೇಳಲಾಗುವುದಿಲ್ಲ; ಏಕೆಂದರೆ ಹೊನ್ನಮ್ಮನ ಹದಿಬದೆಯ ಧರ್ಮವು 'ಕಾವ್ಯಮಂಜರಿ'ಯಲ್ಲಿ ಪ್ರಕಟವಾದುದನ್ನು ಅವರು ನೋಡಿರಬಹುದೇನೋ, ಆದರೆ 'ಕಂತಿ'ಯ ಹೆಸರಾದರೂ ಅವರಿಗೆ ತಿಳಿದಿರಲೇನೂ ಕಾರಣವಿಲ್ಲ. ನಮ್ಮ ಜಿಲ್ಲೆಯಲ್ಲಿ ಆಗಿಹೋದ 'ವೆಂಕಟಸುಬ್ಬಮ್ಮ' ಎಂಬ ಕವಯಿತ್ರಿಯ ಪದ್ಯಗಳನ್ನು ಅವರು ಓದಿದ್ದಿರಬೇಕೆಂದು ಖಂಡಿತವಾಗಿ ಹೇಳಬಹುದಾದರೂ, ಆಕೆ 'ದಾಸರಪದ'ಗಳ ಮಟ್ಟಿನಲ್ಲಿ ಭಕ್ತಿಪರವಾದ ಹಾಡುಗಳನ್ನು ರಚಿಸಿದಾಕೆಯಲ್ಲದೆ, ಪ್ರೌಢಕವಯಿತ್ರಿ ಎಂದು ಹೇಳಲಾಗುವುದಿಲ್ಲ. ಆದುದರಿಂದ ನಂದಳಿಕೆಯವರು ತಮ್ಮ ಪ್ರೌಢ ಕಾವ್ಯವನ್ನು ತಮ್ಮ ತಾಯ ಹೆಸರಲ್ಲಿ ಬರೆದುದು ಅವರ ಮಾತೃಭಕ್ತಿಗೆ ಚಿರಸ್ಥಾಯಿಯಾದ ದೃಷ್ಟಾಂತಮಾತ್ರವಲ್ಲ. ಕನ್ನಡದಲ್ಲಿ ಪ್ರೌಢ ಕವಯಿತ್ರಿ ಒಬ್ಬಳಾದರೂ ಇದ್ದಳೆಂದು *

ಇವರು ಗ್ರಂಥಗಳನ್ನು ಬರೆಯುವುದನ್ನು ಕಣ್ಣಾರೆ ಕಂಡಿರುವೆನು." ಎಂದು ಈ ಶ್ರೀ ಶಿವರಾಮಯ್ಯನವರು ತಮ್ಮ ಲೇಖದಲ್ಲಿ ಹೇಳಿರುವರು. 'ಸುವಾಸಿನಿ'—(III 3. ೯೩)

* ಶ್ರೀಮಾನ್ ಆರ್. ನರಸಿಂಹಾಚಾರ್ಯರವರು ತಮಿಳು ಭಾಷೆಯಲ್ಲಿಯ ಹಲವು ನೀತಿಪರವಾದ ಕಾವ್ಯಗಳಿಂದ ಆಯ್ದು ಕನ್ನಡಿಸಿದ 'ನೀತಿಮಂಜರಿ' ಎಂಬ ಕಾವ್ಯವು ಮೈಸೂರಿನ 'ಕರ್ಣಾಟಕ ಗ್ರಂಥಮಾಲೆ' ಯಲ್ಲಿ ಕ್ರಮಶಃ ಪ್ರಕಟವಾಗುತ್ತ

ನಂಬಿಸಲೆಂದೇನೋ ಅವರು ಹೂಡಿದ ಈ ಬಗೆಯ ಆಭಾಸವಾದರೂ ಸಾಮಾನ್ಯ ಕಲ್ಪನೆಯಿಂದ ಮಾಡತಕ್ಕ ವಿಷಯವಲ್ಲ.

ಗೋವಿಂದ ಪೈ.

ಬಂದು, 'ಶ್ರೀರಾಮಪಟ್ಟಾಭಿಷೇಕ'ವು 'ಕಾವ್ಯಮಂಜರಿ'ಯಲ್ಲಿ ಪ್ರಕಟವಾಗುವಬಗ್ಗೆ ಕಳುಹಿಸಲ್ಪಡುವ ಮುಂಚೆ (ಅಥವಾ ಅದರ ಸರಿಗಾಲದಲ್ಲಿ), ಪುಸ್ತಕರೂಪದಿಂದ ಪ್ರಕಟವಾಯಿತು. ಅದರ ಮುನ್ನುಡಿಯಲ್ಲಿ ತಮಿಳುಭಾಷೆಯ ಶ್ರೇಷ್ಠ ಕವಿಯಿತ್ರಿಯಾದ 'ಅವ್ವೆಯಾರ್' ಎಂಬಾಕೆಯನ್ನು ಕೊಂಡಾಡಿದೆ. ನಂದಳಿಕೆಯವರು ಅದನ್ನು ಓದಿರಬೇಕೆಂದು ನನಗೆ ತೋರುತ್ತದೆ ; ಹಾಗಾದರೆ, ಕನ್ನಡದಲ್ಲಿ ಪ್ರೌಢ ಕವಿಯಿತ್ರಿ ಇಲ್ಲವೆಂಬ ಕುಂದನ್ನು ಹೋಗಲಾಡಿಸಬೇಕೆಂಬ ಪ್ರತ್ಯಯವು ಅವರಿಗೆ ಅಲ್ಲಿಂದ ಹೊಳೆದಿರಬಹುದೇನೋ.



ಸತ್ಯವಾರ್:— ಪ್ರಿಯತಮೆ, ನೋಡಲ್ಲಿ, ಭಾಸ್ಕರನು ತಸ್ಕರನ ತೆರದಿಂದ ಅಸ್ತಗಿರಿಯ ಶಿಖರದಲ್ಲಿಳಿದಿಳಿದು ಹೋಗುತಿಹನು.

ದೃಶ್ಯ ೫

[ಅರಣ್ಯ. ಸತ್ಯವಾನನು ಸಾವಿತ್ರಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದಾನೆ; ಯಮನು ಮುಂದೆ ನಿಂತಿದ್ದಾನೆ.]

ಸಾವಿತ್ರಿ— ಭೀಕರದ ಆಕೃತಿಯೆ, ನೀನಾರು ? ಯಾರು ?
ಏತಕಾಗಿಲ್ಲಿಗೈತಂದಿರುವೆ ? ಬೇಗ ನುಡಿ !
ತಡವಾದರೆನ್ನ ಶಾಪದ ಬೆಂಕಿ ದಹಿಸುವುದು
ನಿನ್ನ !

ಯಮ— ಎಲೆ ತಾಯೆ, ತಡಮಾಡು, ತಡಮಾಡು !
ಜಗದ ಧರ್ಮಾಧಿಕಾರಿಯು ನಾನು. ಯಮನೆಂಬ
ರೆನ್ನ. ನಿನ್ನಿನಿಯ ಸತ್ಯವಾನಾತ್ಮನಂ
ಕೊಂಡೊಯ್ಯಲೆಂದಿಲ್ಲಿಗೈತಂದಿಹೆನು, ದೇವಿ !
ದೂತನನ್ನಟ್ಟಿದ್ದೆ. ನಿನ್ನೋಜೆಯುರಿಯಲ್ಲಿ
ಬೆಂದು, ಪತಿಯ ಜೀವವನೊಯ್ಯಲಾರದಲೆ,
ಓಡಿ ಬಂದೆನಗೊರೆದನಮ್ಮಾ ! ಅದಕಾಗಿ
ದಿವ್ಯಾತ್ಮನಾದಿವನನೊಯ್ಯೆ ಯಮನಾದ
ನಾನೆ ಬಂದಿಹೆನು. ಜಗದ ಧರ್ಮದ ಮೇಲೆ
ಕಣ್ಣಿಟ್ಟು ಒಪ್ಪಿಸೆನಗಾತನನು. ನಿನ್ನ ಬಳಿ
ಬರಲಾರೆ ತಾಯೆ ; ದಯೆಯಿಂದ ದೂರ ಸರಿ !

ಸಾವಿತ್ರಿ— ನಮಿಸುವೆನು ಜಗದ ಧರ್ಮಾಧಿಕಾರಿಯೆ ನಿನಗೆ !
ಯಮದೇವ, ಎನ್ನಮೇಲಿನ ಕರುಣದಿಂದ
ಎನ್ನೆರೆಯನನ್ನುಳುಹಲಾರೆಯಾ ನೀನು ?

ಯಮ— ಧರ್ಮಚರಿತವಳು ನೀನೆಲೆ ತಾಯೆ, ಸಾವಿತ್ರಿ,
ವಿಶ್ವಧರ್ಮಕೆ ಎರಡು ನಾಲಗೆಗಳಿಲ್ಲ.
ವಿಶ್ವ ನಿಯಮ ಚ್ಯುತಿಯು ವಿಶ್ವನಾಶಕೆ ಹೇತು !
ದೂರ ಸರಿ, ಬಿಡು ತಾಯೆ. ವಿನಯದಿಂದೊರೆಯುವೆನು !

ಸಾವಿತ್ರಿ— ಹೇ ಧರ್ಮ, ಹದಿಬದೆಯತನ, ನನ್ನಿ, ನಿಷ್ಕಾಮ
ಪ್ರೇಮ, ಪರಮೇಶಭಕ್ತಿ ಇವುಗಳಿಗಾಗಿ
ಯಾದರೂ ಋತವು ಹೊರತನು ಒಪ್ಪಲಾರದೇ?

ಯಮ— ಇಲ್ಲ; ದೇವಿಯೆ, ಇಲ್ಲ. ಸರ್ವವೂ ವಿಶ್ವಧ
ರ್ಮದ, ಋತದ ಅಂಗಾಂಗಗಳು ತಾಯೆ. ಧರ್ಮ
ಬದ್ಧವಾಗಿಹುದೀ ಮಹಾವಿಶ್ವ. ಧರ್ಮಾಧಿ
ಕಾರಿಯಾದೀ ನಾನು ಕೂಡ ತರಗೆಲೆಯು
ಋತನಿಯಮದೆದುರು. ತಾಯೆ, ಮೃತ್ಯುವನು
ಜಯಿಸಿದವರುಂಟೆ? ಶ್ರೀರಾಮನಳಿಯನೇ?
ಶ್ರೀಕೃಷ್ಣನಳಿಯನೇ? ಶ್ರೀ ವ್ಯಾಸ ವಾಲ್ಮೀಕಿ
ಮೊದಲಾದರೆಲ್ಲರೂ ಮರುಮಾತನಾಡದಲೆ
ನನ್ನೊಡನೆ ಬಂದಿಹರು. ಹಿಂದೆ ನಚಿಕೇತನೂ
ನನ್ನೊಡನೆ ವಾದಿಸಿದ. ಹುಟ್ಟಿದವರೆಲ್ಲರಿಗು
ಮರಣ ಉಂಟೇ ಉಂಟು. ಜನನ, ಮರಣವನೆಳೆದು
ಕೊಂಡೇ ಬರುವುದೆಲೆ ತಾಯೆ, ಸಾವಿತ್ರಿ.
ನಿನ್ನ ಬಳಿ ಬರಲಾರೆ, ದೂರ ಸರಿ, ದೇವಿ,
ವಿನಯದಿಂದೊರೆಯುವೆನು, ಬೇಡುವೆನು!

ಸಾವಿತ್ರಿ— ಯಮದೇವ,
ನೀನಂತು ಧರ್ಮವಂ ಮಿರಲಾರೆಯದು ದಿಟ!
ಪತಿಯ ಕೂಡೆನ್ನನೂ ಕೊಂಡೊಯ್ಯಲಾರೆಯಾ?
ಪತಿಯಳಿದಮೇಲ್ಸತಿಗೆ ಜೀವವೇ ಸಾವು!
ಹರ್ಷದಿಂದೈತರುವೆ ಪತಿಯೊಡನೆ. ಯಮದೇವ
ಅದೊಂದು ವರವನು ನೀಡು!

ಯಮ— ಇಲ್ಲ; ಆಗುವುದಿಲ್ಲ!
ಕಡೆಯ ಕಾಲವು ಬರದ ನರರ ಬಳಿ ನಾ ಸುಳಿಯೆ.
ಆಯುವಿದ್ದವರನ್ನು ಕೊಂಡೊಯ್ವುದೂ, ದೇವಿ,

ಧರ್ಮಕೆ ವಿರುದ್ಧ. ಚರಮದಿನ ಬಂದೊದಗ
ದೊಂದು ಕೀಟವ ನಾನು ಕೊಂಡೊಯ್ಯಲಾರೆ.

ಸಾವಿತ್ರಿ— ಹೇ ಧರ್ಮ, ನಿನ್ನ ತರ್ಕಕೆ ಸೋತೆ. ಆದರೂ,
ಯಮದೇವ, ಬ್ರಹ್ಮಾಂಡವೆಲ್ಲವೂ ತರ್ಕಾತ್ಮ
ವಾದುದೇ ? ಚೈತನ್ಯಮಯನಾದ ಪರಮೇಶ
ನೀಬರಿಯ ಯಂತ್ರಲೋಕವ ಸೃಜಿಸಿ ಸಂತೃಪ್ತಿ
ಹೊಂದುವನೆ ? ನಿನ್ನ ಬುದ್ಧಿಗೆ ವಿಚಾರಿ, ನನಗೆ
ತೋರದಿಹ, ತರ್ಕವಾದ ವಿವಾದಗಳಿಗೆಲ್ಲ
ವಿಚಾರಿರುವ ಧರ್ಮವೊಂದಿರಬೇಕು, ಯಮರಾಯ,
ನಿಯಮವೊಂದಿರಬೇಕು !

ಯಮ— ಇರಬಹುದು, ದೇವಿ,
ಇರಬಹುದು. ಆದರೆನ್ನೀ ಕಾರ್ಯ ರೇಫರಾ
ಜ್ಯದ ಕಾರ್ಯವಲ್ಲ. 'ಬಹುದು' ರಾಜ್ಯದ ಕಾರ್ಯ
ವಲ್ಲ. ಕರ್ಮರಾಜ್ಯದ ಕಾರ್ಯ. ಸಾವಿತ್ರಿ,
ವಿನಯದಿಂದೊರೆಯುವೆನು; ದೂರ ಸರಿ, ತಾಯೆ !

ಸಾವಿತ್ರಿ— ಧರ್ಮಕೊಲವನು ಶರಣು ಮಾಡುವೆನು, ಯಮದೇವ,
ಆದರಿನ್ನೊಂದನಾ ಕೇಳುವೆನು. ಧರ್ಮವೊಲವಿಗೆ ಶರಣು
ಎಂದು ನೀನರಿತಾಗ ಎನ್ನಿನಿಯನನ್ನೆನಗೆ
ಹಿಂದಕೊಪ್ಪಿಸಬೇಕು. ನಿನ್ನಾಜ್ಞೆಯಂತಿಗೋ
ನಿಲ್ಲುವೆನು ದೂರ ಸರಿದು. [ಸಾವಿತ್ರಿ ದೂರ ಹೋಗಿ ನಿಲ್ಲುವಳು.
ಯಮನು ಹೋಗಿ ಸತ್ಯವಾನನ ಜೀವವನ್ನು ಪಾಶದಿಂದ ಬಿಗಿದು ಕಟ್ಟಿ
ಹೊರಡುವನು.]

ಯಮ— ಮಹಾತ್ಮಳೌ
ಸಾವಿತ್ರಿ, ನೀನು. ನಿನ್ನಂತೆ ಮೃತ್ಯುವನು
ಕ್ಷಣಕಾಲವಾದರೂ ತಡೆಗಟ್ಟಿ ನಿಲ್ಲಿಸಿದ
ಧೀರಾತ್ಮರಪರೂಪ ! ಹೋಗಿಬರುವೆನು, ತಾಯೆ,
ನಮಿಸುವೆನು ನಿನಗೆ ! ಹೋಗುವನು.]

ಸಾವಿತ್ರಿ— [ದುಃಖದಿಂದ] ಮರುಳಾದೆನಲ್ಲಾ !
ಮೃತ್ಯುವಶಮಾಡಿದೆನೆ ನಾನೊಲಿದ ನನ್ನೆದೆಯ ?
ಧರ್ಮಾಧಿಕಾರಿಯನು ಹಿಂಬಾಲಿಸುವೆನೀಗ.
ಪ್ರೇಮಾನುರಾಗವು ಧರ್ಮವನು ಮೀರಿರುವು
ದೆಂಬುದನು ಸಾಧಿಸುವೆ. ಎದೆಯೊಲವು ಋತನಿಯಮ
ಕತೀತವೆಂಬುದನು ತೋರಿಸುವೆ; ಸಾಧಿಸುವೆ !
ಸರ್ವ ಧರ್ಮವ ಮೀರಿದೊಂದು ಧರ್ಮವದುಂಟು
ಎಂಬುದನು ಜಗಕಿಂದು ತೋರಿಸುವೆ. ಎಲೆ ಋತವೆ,
ಪ್ರೇಮದುರ್ಗದ ಮೇಲೆ ಗೆಲವಿಂದ ಹಾರುತಿಹ
ನಿನ್ನ ಕೇತನವ ಹಂಗಿಪಳು ಸಾವಿತ್ರಿ
ಯಿಂದು. ನಾನೆಂದು ವೀರ ಕ್ಷತ್ರಿಯ ಪುತ್ರಿ! [ತೆರಳುವಳು.]

ದೃಶ್ಯ ೬

[ಅರಣ್ಯದ ಮತ್ತೊಂದು ಭಾಗ. ಯಮನು ಹೋಗುತ್ತಿರುವನು.]

ಯಮ— ಪುಣ್ಯವಂತನು ನೀನು, ಸತ್ಯವಾನ್. ಸಾವಿತ್ರಿ
ಯಂಥಾ ಸತಿಶಿರೋಮಣಿಯ ಕೈಹಿಡಿದ ನೀಂ
ಪುಣ್ಯಶೀಲನೆ ಹೌದು. ಸದ್ದೇನು? [ಹಿಂತಿರುಗಿ ನೋಡಿ]
ಸಾವಿತ್ರಿ! [ಪ್ರವೇಶ]

ಏಕೆನ್ನನನುಸರಿಸಿ ಬರುತಿರುವೆ? ತಾಯೆ!
ಹುಟ್ಟಿದವರೆಲ್ಲರೂ ಸಾಯಲೇಬೇಕಷ್ಟೆ!

ಸಾವಿತ್ರಿ— ನಿನ್ನನಾನನುಸರಿಸಿ ಬರುತಿಲ್ಲ, ಯಮದೇವ,
ಪತಿಯನನುಸರಿಸಿ ಬರುತಿಹೆನು. ಹುಟ್ಟಿದವ
ರೆಲ್ಲರೂ ಸಾಯುವುದು ಧರ್ಮವೆಂದೊರೆದೆ.
ಅಂತೆಯೇ ಸತ್ತ ಪತಿಯರ ಹಿಂದೆ ಹೋಗುವುದು
ಪತಿವ್ರತಾ ರಮಣಿಯರ ಧರ್ಮ! ಒಲಿದೆದೆಗ
ಳೆಂದಿಗೂ ಅಗಲಲಾರವು ಎಂಬುದಿದು ವಿಶ್ವ
ನಿಯಮ. ಅದರಿಂದ ಹಿಂಬಾಲಿಸುವೆ ಪತಿಯ.
ನಿನ್ನ ಧರ್ಮವ ನೀನು ಮಾಡು, ಹೇ ಧರ್ಮ,
ನನ್ನ ಧರ್ಮವ ನಾನು ಮಾಡುವೆನು.

ಯಮ— [ಹರ್ಷದಿಂದ] ಸಾವಿತ್ರಿ,
ಮೆಚ್ಚಿದೆನು, ಮೆಚ್ಚಿದೆನು ನೀನಾಡಿದೀ ದಿವ್ಯ
ನುಡಿಗಳಿಗೆ. ನಿನ್ನಿನಿಯನಂ ಹೊರತು ಬೇಕಾದ
ವರಗಳನು ಬೇಡು ನೀಡುವೆನು.

ಸಾವಿತ್ರಿ— ಹೇ ಧರ್ಮ
ಮೂರ್ತಿ, ಮೆಚ್ಚಿ ವರವೀಯುವೊಡೆ, ಬೆಳಕಳಿದ
ಎನ್ನ ಮಾವನ ಕಂಗಳಿಗೆ ಮತ್ತೆ ಬೆಳಕಿಳಿದು

ಕಣ್ಬಂದು ನಿಚ್ಚ ಸೊಗವಾಗುವಂತೀಯೆನಗೆ
ವರವ!

ಯಮ— ತಥಾಸ್ತು! ನಿನ್ನೀ ಭಿಕ್ಷೆ ನೆರವೇರಿ
ನೀನು ಸುಖಿಯಾಗೆಲೌ, ದೇವಿ. ನೀನಿನ್ನು
ಹಿಂತಿರುಗು! ಮರ್ತ್ಯಲೋಕದ ಎಲ್ಲೆಯನು ದಾಟ
ಬೇಡ. [ಯಮನು ಹೋಗುವನು.]

ಸಾವಿತ್ರಿ— ಹಿಂತಿರುಗುವುದು ಸತಿಗೆ ಧರ್ಮವೇ
ಯಮದೇವ. ಧರ್ಮವಂ ಧರ್ಮದಿಂದಟ್ಟುವೆನು.
ಧರ್ಮವಂ ಧರ್ಮದಿಂ ಗೆಲ್ಲುವೆನು. ಸಾವಿತ್ರಿ
ನಾನು. ನಾನೆಂದು ವೀರ ಪಾರ್ಥಿವಪುತ್ರಿ.
[ತೆರಳುವಳು.]

ದೃಶ್ಯ ೭

[ಮರ್ತ್ಯಲೋಕದ ಎಲ್ಲೆಯಾಚೆ. ಯಮನ ಪ್ರವೇಶ.]

ಯಮ— [ಸುತ್ತಲೂ ನೋಡಿ]

ಇದು ಮರ್ತ್ಯಜಗದೆಲ್ಲೆ. ಸತಿಯರನು ನೋಡಿಹೆನು.
ಆದರೀಪರಿಯ ಸತಿಯನಾ ಕಂಡಿಲ್ಲ.
ಅವಳಿನ್ನ ಬಳಿಸಾರಲೇನೊ ಭಯವಾಗುವುದು !
ಸಾವಿತ್ರಿ, ಧನ್ಯಳೆಂದರೆ ನೀನೆ. ಸದ್ದೇನು ?
ಹೆಜ್ಜೆ ಸಪ್ಪಳದಂತೆ ಕೇಳುವುದು. [ಹಿಂತಿರುಗಿ ನೋಡಿ] ಮತ್ತೆ
ಸಾವಿತ್ರಿ ! ಈಗ ಮಾಡುವುದೇನು ? [ಸಾವಿತ್ರಿಯ ಪ್ರವೇಶ]
ಸಾವಿತ್ರಿ
ತಾಯಿ, ಏಕಂತು ಗೋಳಹೊಯ್ಯುವೆ ಎನ್ನ ?
ಮತ್ತೇಕೆ ಬಂದೆ ?

ಸಾವಿತ್ರಿ— ಧರ್ಮವಿದು, ಹೇ ಧರ್ಮ !
ಅಲ್ಲದೇ ಹೋಗಲೆಂದೆಳಸುವೆನು. ಆದರೇಂ ?
ಮನವಿನಿಯನನುಸರಿಸುತಿಹುದು. ಹೋಗಲೊ
ಲ್ಲದು ಹಿಂದೆ. ಮನವನನುಸರಿಸುತಿದೆ ದೇಹ.
ಮನದ ಧರ್ಮವ ಮನವು ಮಾಡುತಿದೆ. ಎನ್ನಾತ್ಮ
ವಾಗಲೇ ನಿನ್ನ ಕೈಯಲ್ಲಿಹುದು. ಪತಿಯಾತ್ಮ
ದರ್ಧ ಸತಿಯೆಂಬುದದು ಖುತಸಿದ್ಧ. ಆತ್ಮವಿಹ
ಕಡೆ ದೇಹ ಮನಸುಗಳು ಹೋಗುವುದು ಧರ್ಮ !

ಯಮ— ನಿನ್ನ ಧರ್ಮಕೆ ಹಿಗ್ಗಿ ಮೆಚ್ಚಿದೆನು, ಸಾವಿತ್ರಿ ;
ಬೇಕಾದ ವರವ ನೀ ಬೇಡು, ಕೈಯಲಿಹ
ಜೀವವೊಂದನು ಬಿಟ್ಟು, ನೀಡುವೆನು.

ಸಾವಿತ್ರಿ— ಹೇ ಧರ್ಮ
ಮೂರ್ತಿ ! ಮೆಚ್ಚಿ ವರವೀಯುವೊಡೆ, ಮಾವನಿಗೆ
ಕಳೆದ ಧರೆಯುಳಿದ ಸಿರಿಗಳು ಬರಲಿ.

ಯಮ— ತಥಾಸ್ತು!
ಹಿಂತಿರುಗು ಸಾವಿತ್ರಿ. ಜೀವವಿಹ ಮಾನವರು
ಬರಬಾರದೆನ್ನೊಡನೆ. ವರವಿತ್ತೆ, ಇನ್ನುನಡೆ,
ಮುದ್ದು ಸುತೆ. [ಹೋಗುವನು.]

ಸಾವಿತ್ರಿ— ಆತ್ಮವಿದ್ದೆಡೆ ಮನಸು ದೇಹ!
ಹಿಂದಿರುಗುವುದು ಎಂತು? ಧರ್ಮದಿಂ ಗೆಲ್ಲುವೆನು
ಧರ್ಮವಂ. ಧರ್ಮದಿಂ ಧರ್ಮವಂ ಸೋಲಿಸುವೆ
ನಿಂದು. ಸತ್ಯವಂತನ ಸತಿಯು ಸಾವಿತ್ರಿ;
ಅಶ್ವಪತಿಸುತೆಯು, ವೀರವೀರರ ಪುತ್ರಿ!
[ತೆರಳುವರು.]



ಯಮ:— ಎಲೆ ತಾಯೆ, ನಿನ್ನೊಲವೆ ಮೃತ್ಯುವನು ಜಯಿಸಿತೆಂದು.

ದೃಶ್ಯ ೮

[ಯಮಲೋಕದಲ್ಲಿ. ಯಮನ ಪ್ರವೇಶ.]

ಯಮ— [ಸುತ್ತ ನೋಡಿ] ಇದು ನನ್ನ ನೆಲದೆಲ್ಲೆ. ನನ್ನ ದೇಶವು ಮುಂದೆ
ಕಂಗೊಳಿಪುದಲ್ಲಿ. ಮತ್ತೆದೇನಿದು ಸದ್ದು? [ಹಿಂದೆ ನೋಡಿ]
ಸಾವಿತ್ರಿ! [ಪ್ರವೇಶ] ನಾನಿನ್ನು ಸಹಿಸಲಾರೆನು ದೇವಿ!
ಎರಡು ವರಗಳನಿತ್ತೆ. ಮತ್ತೆ ಹಿಂಬಾಲಿಸುವೆ.
ಪರರ ಪೀಡಿಪುದಿಂತು ಧರ್ಮವೇ ಘನಶೀಲೆ,
ಸಾವಿತ್ರಿ?

ಸಾವಿತ್ರಿ— ಪತಿಯ ತ್ಯಜಿಪುದು ಸತಿಗೆ ಧರ್ಮವೇ?
ಯಮದೇವ. ನಾ ನಿನ್ನನನುಸರಿಸುತಿಲ್ಲ.
ನೀನೆ ಎಳೆದೊಯ್ಯುತಿಹೆ. ಎನ್ನಪತಿಯಲ್ಲಿಹುದು
ಎನ್ನಾತ್ಮ! ಧರ್ಮಚ್ಯುತಿಯಿನಿತಿಲ್ಲ ಇದರಲ್ಲಿ!

ಯಮ— ಸಾವಿತ್ರಿ, ನಿನ್ನ ಪತಿ ಸಗ್ಗಕಡರುವ ಬದಲು
ನರಕಕಿಳಿದರೆ ನೀನು ಹಿಂದೆ ಹೋಗುವೆಯೇನು?

ಸಾವಿತ್ರಿ— ಸಂತಸದಿ ಹೋಗುವೆನು ಯಮರಾಯ; ಹಿಗ್ಗಿ
ಯಾನಂದದಿಂದವನ ಗತಿಯನಪ್ಪುವೆನೆಂದು.
ಎಲ್ಲಿ ಪತಿಯಿದ್ದರದೆ ಸಗ್ಗ. ಅನುರಾಗ
ವಿದ್ದಲ್ಲಿ ವೈಕುಂಠ. ಪ್ರೇಮವೆಲ್ಲಿರುವುದೋ
ಅಲ್ಲಿ ಕೈಲಾಸ. ಎದೆಯೊಲ್ಮೆ ಎಲ್ಲಿಹುದೊ
ಅಲ್ಲಿಹುದು ಮುಕ್ತಿ. ನಾಕವೆಂದರೆ ಏನು?
ನರಕವೆನಲೇನು? ನಾಕ ನರಕಗಳೆರಡ
ಸೃಜಿಸಬಲ್ಲುದು ಮನಸು.

ಯಮ— ಧನ್ಯಳಾದೌ ದೇವಿ,
ಸಾವಿತ್ರಿ, ನಿನ್ನ ನುಡಿಯೇ ವೇದ. ಮೆಚ್ಚಿದೆನು.
ಮತ್ತೊಂದು ವರವೀಯುವೆನು, ಕೇಳು. ಮರೆಯದಿರು
ಸತ್ತ ಜೀವವು ಮತ್ತೆ ಬರುವುದಿಲ್ಲೆಂದು!

ಸಾವಿತ್ರಿ— ಮೆಚ್ಚಿ ವರವೀಯುವೊಡೆ, ಹೇ ಧರ್ಮದೇವ,
ಎನ್ನ ಮಾವನ ವಂಶ ಹಾಳಾಗದಿರಲಿ.
ಅವನ ನೆಲ ಸತ್ಯವಾನನ ಸುತರ ಕೈಸೇರಲಿ.
ಎಂದು ಬೇಡುವೆನು, ನೀಡೆನಗೆ ವರವ!

ಯಮ—[ನಗುತ್ತ] ತಥಾಸ್ತು! ಎಲೆ ತಾಯೆ, ನಿನ್ನೊಲುಮೆ ಮೃತ್ಯುವನು
ಜಯಿಸಿತಿಂದು! ಧರ್ಮವೊಲವಿಗೆ ಮಣಿದು
ಶರಣಾಯಿತಿಂದು! ನಿಯಮವನುರಾಗಕ್ಕೆ
ಮೈ ಸೋತಿತಿಂದು! ಮೃತ್ಯುವನು ಎದೆಯೊಲವು
ಗೆದ್ದಿತೆಲೆ ತಾಯೆ! ನಿನ್ನಿನಿಯನನ್ನಿಗೋ
ಕೊಟ್ಟಿಹೆನು. ತೆರಳು, ಸುಖಿಯಾಗಿ ಬಾಳು.
ನಿನ್ನ ನಾಮವು ಜಗಕೆ ಶಕ್ತಿದಾಯಕವಾಗಿ
ಮುಂದೆಂದು ರಾಜಿಸಲಿ! ನಿನ್ನಂತೆ ಹಿಂದಾರು
ಒಲಿದಿಲ್ಲ. ಮುಂದಾರು ಒಲಿಯುವುದು ಕಷ್ಟ!
ನಿನ್ನ ಪ್ರೇಮದ ಮುಂದೆ ಎನ್ನ ಶಕ್ತಿಯು ಜಳ್ಳು.
ಹೋಗಿ ಬರುವೆನು ತಾಯೆ, ಸುಖಿಯಾಗಿ ಬಾಳು.
ಯಮನ ಜಯಿಸಿದ ಕತೆಯ ಜಗಕೆಲ್ಲ ಹೇಳು.

[ಹೋಗುವನು.]

ಸಾವಿತ್ರಿ— ನಮಿಸುವೆನು ಹೇ ಧರ್ಮ. ನೀನೀಗ ಧರ್ಮ!
ಧರ್ಮದಿಂ ಧರ್ಮವಂ ಗೆಲ್ಲುವುದೆ ಮರ್ಮ!

[ಪರದೆ ಬೀಳುವುದು.]

ಉಪಸಂಹಾರ ದೃಶ್ಯ

[ಆಕಾಶ ಮಾರ್ಗ. ಯಕ್ಷನು ಬಂದು ಮೇಘದ ಮೇಲೆ ಕುಳಿತಿರುವನು.]

ಯಕ್ಷ— [ಕೆಳಗೆ ನೋಡಿ] ಹೋಗಬೇಡ ನಿಲ್ಲು, ಮೇಘವೇ, ಯಕ್ಷನಿಹ
ನೆಂದರಿಯೆಯಾ? ಅಹಾ! ತೋಯದಾಸನವೆನಿತು
ಸುಖಕರವು! [ಸುತ್ತ ನೋಡಿ] ಯಮದೂತನೇಕಿನ್ನು ಬರಲಿಲ್ಲ?
ಕಾಯುವುದು ಕಾರ್ಯಸಾಧನೆಗಿಂತ ಕಷ್ಟತರ!
ಹೊಳೆಯಲ್ಲಿ ಮುಳುಮುಳುಗಿ ಎದ್ದು, ಒದ್ದಾಡಿ
ದಡವ ಸೇರಲು ಎಳಸುವವಗಿಂತ, ದಡದಲ್ಲಿ
ಕುಳಿತವನ ಹಾರೈಸುವವನುಬ್ಬೆಗವೆ ಮಿಗಿಲು.
ಪಾಪಪುಣ್ಯಕೆ ಸಿಕ್ಕಿ, ಹುಟ್ಟುಸಾವಿನೊಳಲೆದು,
ಸಂಸಾರಚಕ್ರದೊಳು ತಿಗುರಿಯಂದದಿ ತಿರುಗಿ
ಮುಕ್ತನಾಗಲು ಯತ್ನಿಸುವ ಭಕ್ತನಳಲನ್ನು,
ಭಕ್ತನೆಂದಿಗೆ ತನ್ನ ಬಳಿಗೆ ಬರುವನೊ ಎಂದು
ಯುಗಯುಗಗಳಿಂದ ಹಾರೈಸುತಿಹ ಪರಮಾತ್ಮ
ನುಬ್ಬೆಗವು ಮೀರಿಹುದು! ಓಹೋ ಅಲ್ಲಿಯೇ
ಬರುತಿಹನು! [ಯಮದೂತನ ಪ್ರವೇಶ]

ದೂತ— ಸೋಜಿಗವು! ಸೋಜಿಗವು ಯಕ್ಷ.
ಹಿಂದೆಂದು ಕಾಣದಿಹ ಕೌತುಕವ ಕಂಡೆ.
ಪ್ರೇಮ ಧರ್ಮವ ಗೆದ್ದು ಬಾವುಟವ ನಭಕೆತ್ತಿ
ಹಿಡಿದುದನು ಕಂಡೆ. ಯಮನ ಸೋಲನು ಕಂಡೆ!

ಯಕ್ಷ— [ಎದ್ದುಬಂದು] ಏನಾಯ್ತು? ಯಮದೂತ ಏನಾಯ್ತು?

ದೂತ— ಮೊತ್ತಮೊದ
ಲೆನ್ನೀ ಬಾಳಿನಲಿ ಯಮನ ಸೋಲನು ಕಂಡೆ.

ಯಕ್ಷ— ಹಾಗಾದರಾ ನಿನ್ನ ಬಾಳ್ಬಂದು ಬಹುಕಾಲ
ವಾಗಿಲ್ಲ.

ದೂತ— ಅದೇಕೆ?

ಯಕ್ಷ— ಹಿಂದೆ ಇಂತಹುದೆಷ್ಟೊ
ಜರುಗಿಹುದು. ಇರಲಿ ಈಗೇನಾಯ್ತು ಹೇಳು!

ದೂತ— ಈಗಾದುದೇನು! ಮೃತ್ಯುಯೊಲ್ಮೆಗೆ ಸೋತು
ಸತ್ಯವಂತನ ಜೀವವನು ಕಪ್ಪವಾಗಿತ್ತು,
ಅಶ್ವಪತಿಸುತೆಯ ಕೈಯೊಳು, ತನ್ನ ಸೋಲನೊ
ಪ್ಪಿಹುದಿಂದು.

ಯಕ್ಷ— ಯಮನ ಸೋಲಪಮಾನವಲ್ಲ;
ಕೀರ್ತಿಕರ! ಯಮದೂತ ನೀನೇನು ಬಲ್ಲೆ?
ಯಮನ ಪಾಶವು ಮೋಘವಾದುದೇ ಅಲ್ಲ
ವೆಂದೆನಗೆ ಬೋಧಿಸಿದೆ ಆಗ. ನಿಯಮವೇ
ಪರಮಪ್ರಮಾಣವೆಂದೆಂದಿಗೂ ಅಲ್ಲವೆಂ
ಬುದನೀಗ ತಿಳಿದುಕೋ! ಬುದ್ಧಿಯರಿಯದ ಎಷ್ಟೊ
ತತ್ತ್ವಗಳನಾತ್ಮ ಸಿದ್ಧಿಯಿಂದರಿತಿಹುದು.
ನಿಯಮಜಾಲವ ಮೀರಿರುವ ನಿಯಮವೊಂದಿಹುದು
ಯಮದೂತ. ನುಡಿಗೆ ನಿಲುಕದ, ಬುದ್ಧಿಯರಿಯದಿಹ
ಅತ್ಯನಿರ್ವಚನೀಯ ತತ್ತ್ವವೊಂದೀ ಸರ್ವ
ವಿಶ್ವವನು ಸರ್ವತ್ರ ತುಂಬಿ, ಮರೆಯಾಗಿಹುದು.
ಆ ಪರಮ ತತ್ತ್ವ ಸ್ವರೂಪವೇ ಪ್ರೇಮ.
ಧರ್ಮವು ಪ್ರೇಮಕ್ಕೆ ಕಿಂಕರನು. ನಿಯಮಗಳು
ಶುದ್ಧವಹ ದಿವ್ಯಾನುರಾಗಕ್ಕೆ ಸೇವಕರು.
ಪ್ರೇಮದಿಂದಲೆ ಹೊಳೆಯಿತೀ ಮಹಾ ಬ್ರಹ್ಮಾಂಡ!
ಪ್ರೇಮದಾಧಾರದಿಂದಲೆ ಬಾಳುತಿಹುದು!
ಪ್ರೇಮ ವಾರಿಧಿಯಲ್ಲೆ ಕಡೆಗೈಕ್ಯವಾಗುವುದು!
ಪ್ರೇಮ ಮೂರುತಿಯಾದ ಸಾವಿತ್ರಿದೇವಿಗೆ
ಯಮನು ಸೋತುದಚ್ಚರಿಯಲ್ಲ. ಬಾ, ಮಿತ್ರ,

ಸಾವಿಂದು ಜಗವೆಂದು ಕಾಣದಿಹ ಪ್ರೇಮದ ಮ
ಹಾ ವಿಜಯಮಂ ನೋಡಿ ಧನ್ಯರಾಗಿಹೆವು.

ದೂತ— ಸಾವಿತ್ರಿ ಸತ್ಯವಂತರ ಕತೆಯ ಕೇಳಿದವ
ರೆಲ್ಲರಾಗಲಿ ಧನ್ಯ!

ಯಕ್ಷ— ನೋಡಿದವರಿಗೆ ಪುಣ್ಯ!

ದೂತ— ಆಡಿದವರಿಗೆ ಭಕ್ತಿ!

ಯಕ್ಷ— ಮಾಡಿದವರಿಗೆ ಮುಕ್ತಿ!

ರತಿ *

೧

ಪ್ರಣಯದ ಗೀತೆಯೆ ನೀನಾಗಿರುವೆ,
        ನಿನ್ನನು ರಚಿಸಿದ ಕವಿಯಾರು?
ಪುಣ್ಯದ ಮುದ್ದೆಯ ಸಗ್ಗದ ಸೊಬಗಿನ
ಬಣ್ಣದೊಳದ್ದುತ, ನಿತ್ಯತೆಯೊಲುಮೆಯ
ಕಂಪಿನೊಳೂಡುತ, ಭಾವದ ಚಾಣದಿ
ನಿನ್ನನು ಕೆತ್ತಿದ ಶಿಲ್ಪಿಯದಾರು?
ಬಿದಿ ತಾನೊಬ್ಬನೆ ಬೇಸರಕಳೆಯಲು
        ನಿನ್ನನು ಹಾಡಿದನು!
ಕಂಗಳಿಗಂದದ ಮಾದರಿದೋರಲು
        ನಿನ್ನನು ಮಾಡಿದನು!

೨

ವೀಣೆಯ ವಾಣಿಯೆ ನೀನಾಗಿರುವೆ,
        ನಿನ್ನನು ಬಾರಿಸಿದವರಾರು?
ತಳಿತಿಹ ವನದೊಳು ಹೀಲಿಯ ಕಂಗಳ
ಕೆದರಿದ ನವಿಲಿನ ಮುಕ್ತಿಯ ಬೆಡಗಿಗೆ
ಚೈತ್ರದ ಬಣ್ಣದ ಸಿರಿಯನು ಸೇರಿಸಿ
ನಿನ್ನನು ನೆಯ್ದಾ ರಸಋಷಿಯಾರು?
ಕಾಣದ ಊರಿನ ಮಾಯಾವೈಣಿಕ
        ಬಾರಿಸಿದನು ನಿನ್ನ!
ನೆಯ್ದನು ಸೃಷ್ಟಿಯ ರಾಗದ ಜಾಲವ
        ತಾ ನೇಯುವ ಮುನ್ನ!

---

* 'ರತಿ'ಯೆಂದರೆ ಮನ್ಮಥನ ಹೆಂಡತಿಯಲ್ಲ; ಸೃಷ್ಟಿಯನ್ನು ಪ್ರೇರಿಸುವ "ಪ್ರೇಮಸೌಂದರ್ಯ."

೩

ಮುದ್ದಿನ ಮುದ್ದೆಯೆ ನೀನಾಗಿರುವೆ,
ಮುದ್ದನು ಮುದ್ರಿಸಿದವರಾರು?
ಕೂಸಿನ ಕೆನ್ನೆಯು ತಾಯಿಯ ಮುತ್ತನು,
ನಲ್ಲಳ ಕೆನ್ನೆಗಳಿನಿಯನ ಮುತ್ತನು,
ಎಲ್ಲರ ಹೃದಯದ ದೇವರ ಮುತ್ತನು,
ಪೋಣಿಸಿ ನಿನ್ನನು ಮಾಡಿದರಾರು?
ಹೂಗಳ ಮೇಲಿನ ಗಾಳಿಯು ಚುಂಬನ
ಗಳ ಸುಲಿಗೆಯ ಮಾಡಿ,
ಕಲ್ಪನೆ ನಿನ್ನನು ಕಡೆಯಿತು ತರಳೆಯೆ
ನಗೆದಿಂಗಳ ಬೇಡಿ!

೪

ಚೆಲುವಿನ ಗೆಲವೇ ನೀನಾಗಿರುವೆ,
ನಿನ್ನನು ಮೂರ್ತಿಸಿದವರಾರು?
ಉದಯಾಸ್ತಂಗಳ ಪೆಂಪನು ಆಯ್ದು,
ತಿಳಿಬೆಳುದಿಂಗಳ ಸೊಂಪನು ಹೊಯ್ದು,
ರಾತ್ರಿಯ ಕಪ್ಪಿನ ಹೆಪ್ಪನು ಹಾಕಿ
ನಿನ್ನೀ ಚೆಲುವನು ಮಥಿಸಿದರಾರು?
ನೀನವ್ಯಕ್ತದ ಗರ್ಭದೊಳುರಿಯುವ
ಮಂಗಳದಾರತಿಯು!
ಸೃಷ್ಟಿಯ ಮುಂದಕೆ ಪ್ರೇರಿಪ ಪ್ರೇಮದ
ಶಕ್ತಿಯ ಮೂರುತಿಯು!

೫

ಸೃಷ್ಟಿಯ ಮೋಹವೆ ನೀನಾಗಿರುವೆ,
ನಿನಗಾರಿತ್ತರು ಮೋಹವನು?
ಉದಯದ ಮೋಡಗಳಂಚಿನಮೇಲೆ,

ನಲಿಯಲು ನಿನ್ನಯ ನಲ್ಮೆಯ ಲೀಲೆ,
ಕಾಣಿಕೆ ಕೊಡುವುವು ತರುಲತೆಯೆಲ್ಲಾ
ಹೂಗಳ ಫಲಗಳ ಮುಡುಪನು ತಂದು!
ಸ್ವರನೈವೇದ್ಯವ ಸುರಿವುವು ಖಗಗಳು
ಮೋಹಕೆ ಮರುಳಾಗಿ!
ಸೃಷ್ಟಿಯ ಸೌಂದರವೆಲ್ಲಾ ನಿನ್ನೀ
ಚೆಲುವಿಗೆ ಶರಣಾಗಿ!

೬

ಜೀವಕೆ ಜೀವವೆ ನೀನಾಗಿರುವೆ,
ನಿನಗಾರಿತ್ತರು ಜೀವವನು?
ಶೂನ್ಯಸಮಾಧಿಯೊಳಿದ್ದಾ ಬ್ರಹ್ಮನ
ಚುಂಬಿಸಿ ಎಚ್ಚರಗೊಳಿಸಲು ನೀನು,
ನಿನ್ನಾ ಪ್ರೀತಿಯ ಮುತ್ತಿನ ಲೀಲೆಯೊ
ಳುದಿಸಿತು ವಿಶ್ವದ ಸಕಲೈಶ್ವರ್ಯ!
ಸೃಷ್ಟಿಯ ಬಾಳನು ರಕ್ಷಿಸುತಿರುವುದು
ನಿನ್ನೊಲುಮೆಯ ಪಾಶ!
ನಿನ್ನಾ ಪ್ರೇಮವಿಲಾಸದ ನಾಶದೊ
ಳಿದೆ ಜಗದ ವಿನಾಶ!

ಕೆ. ವಿ. ಪುಟ್ಟಪ್ಪ

1532–28. ಬೆಂಗಳೂರು ಪ್ರೆಸ್, ಮೈಸೂರು ರೋಡು, ಬೆಂಗಳೂರು ಸಿಟಿ.

ಆರಾಣೆ ಮೂರು ಕಾಸು

೧

ಗೋಪಾಲಯ್ಯ, ಮಾಧವರಾಯರು, ನಾನು, ಮೂವರೂ ಮನೆಯ ಚಾಪಡಿಯಲ್ಲಿ ಕೂತುಕೊಂಡು ಮಾತಾಡುತ್ತಿದ್ದೆವು. ಕ್ಯಾಲಿಫೋರ್ನಿಯದ ವಿದ್ಯಾಭ್ಯಾಸದ ಪದ್ಧತಿ, ಅಮೇರಿಕದ ಐಶ್ವರ್ಯ, ಭಾರತೀಯರ ಗೋಳು, ಆಧುನಿಕರ ನಾಗರಿಕತೆ ಇವೇ ಮೊದಲಾದ ವಿಚಾರಗಳು ಒಂದನ್ನೊಂದು ಹಿಂಬಾಲಿಸಿ ಕ್ರಮವಾಗಿ ಅಳಿಸಿಹೋದುವು, ನೀರಿನಮೇಲೆ ಬರೆದ ಚಿತ್ರಗಳಂತೆ.

ಇದ್ದಕ್ಕಿದ್ದಹಾಗೆ "ಎಲ್ಲಿ, ಆ ಕತೆ ಹೇಳಿ," ಎಂದರು ಗೋಪಾಲಯ್ಯ ಮಾಧವರಾಯರನ್ನು ಕುರಿತು.

"ಯಾವ ಕತೆ?" ಎಂದರು ಮಾಧವರಾಯರು.

"ಅದೇ, ಆ ಆರಾಣೆ ಮೂರುಕಾಸಿನ ಕತೆ; ಅಂದು ನೀವು ಹೇಳಿದ್ದಿರಲ್ಲ ನನಗೆ." ನನ್ನ ಕಡೆಗೆ ಕೈತೋರಿಸಿ "ಇವರು ನಿಮ್ಮ ಬಾಯಿಂದಲೇ ಕೇಳಬೇಕಂತಪ್ಪಾ ಅದನ್ನು. ಹೇಳಿ, ಎಷ್ಟಂದರೂ ಕತೆಗಾರರು. ಒಂದು ಕತೆಗೆ ಸಾಮಗ್ರಿಯಾದರೂ ದೊರಕಬಹುದು" ಎಂದರು ಗೋಪಾಲಯ್ಯ. ನಾನು ನಕ್ಕೆನು, ಅವರೂ ನಕ್ಕರು.

ಮಾಧವರಾಯರು ಅಂದರೆ ನಮಗೆಲ್ಲಾ ತುಂಬಾ ಸಲಿಗೆ. ನಮಗೆ ಮಾತ್ರವೇ ಅಲ್ಲ, ಅವರಲ್ಲಿ ಎಲ್ಲರಿಗೂ ಸಲಿಗೆ. ಅವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಉನ್ನತ ಪದವಿಯಲ್ಲಿರುವವರು. ಆದರೂ ಬಹಳ ಸರಳ ಸ್ವಭಾವ ಅವರದು. ಎಂತಹ ಗಂಭೀರಮುಖದವನಾ

ದರೂ ಅವರೊಡನೆ ಸೇರಿದರೆ ಅಳ್ಳೆಬಿರಿಯುವ ತನಕ ನಗದೆ ಇರಲಾರ. ಈ ಆರಾಣೆ ಮೂರುಕಾಸಿನ ಕತೆಯು ಅವರ ಜೀವಮಾನದಲ್ಲಿ ಜರುಗಿದ್ದು. ಅತ್ಯಾಶ್ಚರ್ಯಕರವಾದ ಆ ಸಂಗತಿ ನಡೆದಮೇಲೆ ನಮ್ಮ ದಲ್ಲದ ದೈವೇಚ್ಛೆಯಲ್ಲಿ ಅವರಿಗೆ ಬಹಳ ನಂಬಿಕೆ ಹುಟ್ಟಿತಂತೆ. ಕತೆ ಹೇಳುತ್ತಾ, ಹೇಳುತ್ತಾ ಎಷ್ಟೋ ವಿಚಾರ ಹೇಳಿದರು. ಎಷ್ಟೋ ನೀತಿಗಳನ್ನೂ, ಮನಸ್ಸಿನ ಗುಟ್ಟುಗಳನ್ನೂ ಹೊರಗೆಡವಿದರು. ಆದರೆ ಅವುಗಳೆಲ್ಲಾ ಬಹು ಬೆಲೆಯುಳ್ಳವುಗಳಾದರೂ, ಅಪ್ರಸ್ತುತವಾದುವು ಗಳೆಂದು ತಿಳಿದು, ಕತೆಯ ನಡುವೆ ಸೇರಿಸದೆ ಬಿಡಬೇಕಾಯಿತು. ಮಾಧವರಾಯರು ಹೇಳಿದರು.

೨

ಈ ಕತೆಗೆ ತಳಹದಿ ಸಿಪಾಯಿದಂಗೆಯ ಕಾಲ. ನನಗೆ ಸರಿಯಾಗಿ ನೆನಪಿಲ್ಲ. ಆದರೂ ಮುಖ್ಯ ವಿಷಯಗಳನ್ನೆಲ್ಲಾ ಬಿಡದೆ ಹೇಳುತ್ತೇನೆ. ನಮ್ಮ ತಾತ ಹೈದರಾಬಾದು ಸಂಸ್ಥಾನದಲ್ಲಿ ಕರ್ನೂಲು ನವಾಬರ ಕೈಕೆಳಗೆ ಅಧಿಕಾರಿಗಳಾಗಿದ್ದರಂತೆ. ನವಾಬರ ಜಹಗಿರಿಯಲ್ಲಿಯೇ ಬಹಳ ಜಮೀನು ಸಂಪಾದನೆ ಮಾಡಿದ್ದರಂತೆ. ನಮ್ಮ ಮನೆತನಕ್ಕೂ ನವಾಬರ ಮನೆತನಕ್ಕೂ ತುಂಬಾ ಕೇವಲ. ನವಾಬರಾದರೂ ಜಾತಿಯಲ್ಲಿ ಸಂಪೂರ್ಣವಾಗಿ ಮುಹಮ್ಮದೀಯರಲ್ಲ. ಹಿಂದೂ ಮುಹಮ್ಮದೀಯ ಮತಗಳಿಗೆ ಮಧ್ಯಮತದವರು. ಅವರಿಗೆ 'ಸಿಂಗ್' ಎಂಬುದು ಮನೆತನದ ಬಿರುದು.

ನವಾಬರ ಮನೆತನಕ್ಕೆ ಕರ್ನೂಲಿನಲ್ಲಿ ಅನೇಕ ಶ್ರೀಮಂತರು ಸಾಲಕೊಟ್ಟಿದ್ದರು. ಹಾಗೆಯೇ ನಮ್ಮ ತಂದೆಯೂ ಸಾಲ ಕೊಟ್ಟಿದ್ದರು. ಎಷ್ಟು ಕೊಟ್ಟಿದ್ದರು ಏನು ಎಂಬುದಕ್ಕೆ ದಾಖಲೆಗಳೇನೂ ಇಲ್ಲ. ಅಂತೂ ಸುಮಾರು ನಾಲ್ವತ್ತು ಸಾವಿರ ರೂಪಾಯಿಗಳಷ್ಟು ಎಂದು ವದಂತಿ.

ನನಗೆ ಹನ್ನೊಂದು ವರ್ಷವಾಗಿತ್ತು. ಆಗ ನಮ್ಮ ತಂದೆ ತೀರಿಕೊಂಡರು. ಅವರು ಹೋದಮೇಲೆ ನಮ್ಮ ಮನೆತನಕ್ಕೆ ತುಂಬಾ ಕಷ್ಟಕಾಲ ಒದಗಿತು. ನಾನು ಹೇಗೆ ವಿದ್ಯಾಭ್ಯಾಸ ಮಾಡಿದೆ, ಹೇಗೆ ಈ ಉನ್ನತ ಪದವಿಗೆ ಬಂದೆ, ಎಂಬ ವಿಚಾರಗಳು ಈಗ ಬೇಡ. ಈ ಕತೆಗೆ ಅವು ಆವಶ್ಯಕವೂ ಅಲ್ಲ.

ಆಗಲೇ ಸರ್ಕಾರದವರ ಬದಲಾವಣೆಯ ಗಲಿಬಿಲಿಯು ಬಂದದ್ದು. ಈಸ್ಟ್ ಇಂಡಿಯಾ ಕಂಪೆನಿಯವರು ಬ್ರಿಟಿಷ್ ಸರ್ಕಾರಕ್ಕೆ ಸರ್ವ ಹಕ್ಕನ್ನೂ ವಹಿಸಿದರು. ಆಗ ಹೈದರಾಬಾದು ಸಂಸ್ಥಾನಕ್ಕೆ ಸೇರಿದ್ದ ಕೆಲವು ಪ್ರಾಂತಗಳು ಬ್ರಿಟಿಷ್ ಸರ್ಕಾರಕ್ಕೆ ಕೊಡಲ್ಪಟ್ಟವು. ದತ್ತ ಮಂಡಲವೆಂದು ಕರೆಯಲ್ಪಡುವ ಆ ಪ್ರಾಂತಗಳಲ್ಲಿ ಕರ್ನೂಲೂ ಒಂದು. ಅಂದರೆ ನವಾಬರ ಜಹಗಿರಿಯೂ ಇಂಗ್ಲೀಷರ ಆಡಳಿತಕ್ಕೆ ಎಳೆಯಲ್ಪಟ್ಟಿತು.

ಹೀಗಿರಲು ಈ ಕತೆಯು ನಡೆಯಲು ಸಹಾಯಮಾಡಿದ ಒಂದು ಸಂಗತಿ ಜರುಗಿತು. ಗೌರ್ನಮೆಂಟಿನವರು ಕರ್ನೂಲಿನಲ್ಲಿ ಯಾವುದೋ ಒಂದು ಆಫೀಸಿಗಾಗಿ ಸ್ವಲ್ಪ ಜಾಗವನ್ನು ನವಾಬನಿಂದ ಕೇಳಿದರು. ಆ ಸ್ಥಳವನ್ನು ಪಡೆಯಬೇಕೆಂದು ಕರ್ನೂಲಿನಲ್ಲಿ ಅನೇಕರಿಗೆ ಕುತೂಹಲವಿತ್ತು. ಸರ್ಕಾರದ ಪರವಾಗಿ ಕೆಲಸಮಾಡುತ್ತಿದ್ದ ಒಬ್ಬ ವಕೀಲನೂ ನವಾಬನಿಂದ ಹಿಂದೆಯೇ ಆ ಸ್ಥಳವನ್ನು ಬೆಲೆಗೆ ಕೇಳಿದ್ದನು. ನವಾಬನು ಬುದ್ಧಿಯಲ್ಲಿ ಸ್ವಲ್ಪ ಚುರುಕಿಲ್ಲದವನೆಂದು ತಿಳಿದ ಆ ವಕೀಲನು ಆ ಭೂಮಿಯನ್ನು ಎರಡು ಮೂರು ಸಾವಿರ ರೂಪಾಯಿಗಳಿಗೆ ಎಗರಿಸಬೇಕೆಂದು ಕಾದಿದ್ದನು ; ಆದರೆ ಸರ್ಕಾರದವರು ಅದೇ ಸ್ಥಳವನ್ನು ಹದಿನೈದು ಸಾವಿರ ರೂಪಾಯಿಗಳಿಗೆ ಕೇಳಿದರು. ನವಾಬನು ಕೊಡಲು ಒಪ್ಪಿದನು. ಆದರೆ ವಕೀಲನಿಗೆ ಅವನಮೇಲೆ ದ್ವೇಷ ಹುಟ್ಟಿತು.

ನವಾಬನ ಭೂಮಿಯನ್ನು ಸರ್ಕಾರದವರು ತೆಗೆದುಕೊಳ್ಳಬೇಕಾದರೆ ಕರಾರು ಆಗಬೇಕಷ್ಟೆ. ಅದಕ್ಕಾಗಿ ನವಾಬನ ಮನೆತನದ

ದಾಖಲೆಪತ್ರಗಳನ್ನು ಸರ್ಕಾರದವರು ತೆಗೆದುಕೊಂಡು, ಕಾನೂನಿಗೆ ಸರಿಯಾದ ಕರಾರನ್ನು ತಯಾರುಮಾಡಲೋಸುಗ, ನವಾಬನ ದ್ವೇಷಿಯಾದ ವಕೀಲನ ಕೈಲಿ ಕೊಟ್ಟರು. ಆ ವಕೀಲನು ದಾಖಲೆಗಳನ್ನು ನೋಡುತ್ತಾ ಇರುವಾಗ, ಆಗಿನ ನವಾಬನು ಹಿಂದಿನ ನವಾಬನ ಧರ್ಮಪತ್ನಿಯ ಮಗನಲ್ಲ ಎಂಬುದನ್ನು ತಿಳಿದನು. ತನಗೆ ಮುಯ್ಯಿ ತೀರಿಸಿಕೊಳ್ಳಲು ತಕ್ಕ ಸಮಯ ದೊರಕಿತೆಂದು ತಿಳಿದು, ಅವನು ಆಗಿನ ನವಾಬನು ಜಹಗಿರಿಗೆ ಬಾಧ್ಯಸ್ಥನಲ್ಲವೆಂದು ಸರ್ಕಾರಕ್ಕೆ ತಿಳಿಸಿದನು. ಕೂಡಲೆ ಸರಕಾರವು ಸಮಸ್ತ ಜಹಗಿರಿಯನ್ನೂ ಅದರ ಐಶ್ವರ್ಯದೊಡನೆ ನವಾಬನಿಂದ ಕಿತ್ತುಕೊಂಡಿತು; ಅಲ್ಲದೆ ಅದಕ್ಕೆ ಬಾಧ್ಯಸ್ಥರಿದ್ದರೆ ಅದನ್ನು ಕೋರ್ಟು ಮುಖಾಂತರ ಸಾಧಿಸಿ ಜಹಗಿರಿಯನ್ನು ಪಡೆಯಬೇಕೆಂದು ತೀರ್ಮಾನಮಾಡಿ ನೋಟೀಸು ಕೊಟ್ಟಿತು. ಲಕ್ಷಾಧಿಕಾರಿಯಾದ ನವಾಬನು ಕಣ್ಣುಮುಚ್ಚಿ ಬಿಡುವುದರಲ್ಲಿಯೇ ಭಿಕ್ಷಾಧಿಕಾರಿಯಾದನು.

ಆತನು ಮೋಟಾರು ಗಾಡಿಗಳಲ್ಲಿಯೂ, ಕುದುರೆ ಸಾರೋಟುಗಳಲ್ಲಿಯೂ ಕುಳಿತುಕೊಂಡು ಹಾರಾಡುತ್ತಿದ್ದ ವೈಭವವನ್ನು ನಾನೇ ಕಣ್ಣಾರೆ ಕಂಡಿದ್ದೆ. ಆತನು ಐಶ್ವರ್ಯದಲ್ಲಿ ಮುಳುಗಿ ತೇಲುವುದನ್ನು ನೋಡಿ ವಿಸ್ಮಯಪಡುತ್ತಿದ್ದೆ. ಅಂಥಾ ಸಿಂಗನಿಗೆ ಈಗ ತನ್ನ ಘೋಷಾ ಹೆಂಡತಿಯೊಡನೆಯೂ ಮಕ್ಕಳೊಡನೆಯೂ ಬೀದಿಗಳಲ್ಲಿ ಬೇಡುವ ಕಾಲ ಬಂತು. ಅವನ ಗೆಳೆಯರೆಲ್ಲರೂ ಸಂಪತ್ತಿನೊಂದಿಗೇ ತೊಲಗಿದರು. ಅವನಿಗೆ, ತಾನೇ ಹಿಂದೆ ಆಳುತ್ತಿದ್ದ ಕರ್ನೂಲಿನಲ್ಲಿ, ಗಂಜಿ ದೊರಕುವುದು ಕೂಡ ಕಠಿನವಾಯಿತು. ಮಲಗುವುದಕ್ಕೆ ತಾವಿಲ್ಲ; ಹೊದೆಯುವುದಕ್ಕೆ ಸರಿಯಾದ ಬಟ್ಟೆಯಿಲ್ಲ. ಬಂದಿತವನಿಗೆ ಈ ದುರವಸ್ಥೆ.

ಜಹಗಿರಿಯಲ್ಲಿ ಜಮೀನುದಾರರಾಗಿದ್ದವರೆಲ್ಲರೂ ಸರಕಾರಕ್ಕೆ ಅರ್ಜಿ ಹಾಕಿಕೊಂಡು ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಂಡರು.

ಆದರೆ ಜಹಗಿರಿದಾರನಾದ ಸವಾಬನಿಗೆಮಾತ್ರ ಅದರ ಹಕ್ಕು ತಪ್ಪಿತು. ಇನ್ನು ನಮ್ಮ ತಂದೆ ಅವನಿಗೆ ಕೊಟ್ಟ ಸಾಲವಾದರೂ ಬರುವುದು ಹೇಗೆ? ನಾನಂತೂ ಹುಡುಗ; ನನಗೇನು ಗೊತ್ತು? ಮನೆಯವರು ಕೊಟ್ಟ ಸಾಲದ ಆಸೆ ಬಿಟ್ಟರು. ಲೆಕ್ಕಪತ್ರ ಸಿಕ್ಕಿದ ಸಾವಿರಡ ಚಿಲ್ಲರೆ ರೂಪಾಯಿಗಳಿಗೆ ಮಾತ್ರ ಸರ್ಕಾರವು ಹೊಣೆಯಾಯಿತು.

ಹೀಗಿರಲು ಸವಾಬನಿಗೆ ಸ್ನೇಹಿತನಾಗಿದ್ದ ಒಬ್ಬ ಪುಣ್ಯಾತ್ಮನಾದ ವಕೀಲನು ಸಹಾಯಮಾಡುವುದಾಗಿ ಒಪ್ಪಿಕೊಂಡು, ಸರ್ಕಾರಕ್ಕೆ ಸವಾಬನ ಪರವಾಗಿ ಅರ್ಜಿ ಹಾಕಿದನು. ಅದು ಕೋರ್ಟಿನಲ್ಲಿ ಸವಾಬನಿಗೆ ವಿರೋಧವಾಗಿ ತೀರ್ಪಾಯಿತು. ಪುನಃ ಮೇಲಿನ ಕೋರ್ಟಿಗೆ ಅಪೀಲು ಮಾಡಿದರು. ಹೀಗೆ ಕೋರ್ಟಿನಿಂದ ಕೋರ್ಟಿಗೆ ಅಲೆಯ ತೊಡಗಿದರು.

೩

ಹತ್ತು ಹನ್ನೆರಡು ವರ್ಷಗಳು ಸಂದು ಹೋದುವು. ನಾನು ಮದರಾಸಿನಲ್ಲಿ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಬೆಂಗಳೂರಿಗೆ ಬಂದೆ. ಅಲ್ಲಿ ವಿದ್ಯಾಭ್ಯಾಸದ ಇಲಾಖೆಯಲ್ಲಿ ತಿಂಗಳಿಗೆ ಒಂದು ನೂರು ರೂಪಾಯಿಗಳ ನೌಕರಿ ಲಭಿಸಿತು. ನಾನು ಭಾರ ವಹಿಸಿದ ಒಬ್ಬ ಸಂಸಾರಿಯಾದೆ.

ಇಲ್ಲಿಂದ ಈ ಕತೆಯ ಹೊಸ ಅಧ್ಯಾಯವು ಪ್ರಾರಂಭವಾಗುವುದು. ನಾನು ಕಾರ್ಯಾರ್ಥವಾಗಿ ಒಂದು ದಿನ ಕರ್ನೂಲಿಗೆ ಹೋದೆ. ಅಲ್ಲಿ ಒಬ್ಬ ಲಾಯರ ಹತ್ತಿರ ಏನೋ ಕೆಲಸವಿತ್ತು. ನಾನು ಅವರ ಆಫೀಸಿನಲ್ಲಿ ಕುಳಿತಿದ್ದೆ. ಅಷ್ಟು ಹೊತ್ತಿಗೆ ಭಿಕ್ಷುಕನೊಬ್ಬನು ಒಳಗೆ ಬಂದ. ಅವನು ಉಟ್ಟಿದ್ದ ಚಿಂದಿ ಬಟ್ಟೆಗಳಿಂದ ಅಲ್ಲದೆ ಬೇರೆ ಯಾವುದರಿಂದಲೂ ಅವನು ಭಿಕ್ಷುಕನೆಂದು ಬಗೆಯಲಾಗುತ್ತಿರಲಿಲ್ಲ. ಮೊದಲು ನಾನು ತಿರುಕನೊಬ್ಬನು ತಿರುಪೆಗಾಗಿ ಬಂದನೆಂದು

ಆಲೋಚಿಸಿದೆ. ಆದರೆ ಅವನು ಅಲ್ಲಿಯೇ ಕುಳಿತುದನ್ನು ಕಂಡು ವಕೀಲರಿಗೂ ಭಿಕ್ಷುಕರಿಗೂ ಮತ್ತೇನು ಸಂಬಂಧವುಂಟು? ಎಂದು ವಿಸ್ಮಿತನಾದೆ. ಮತ್ತೆ, ಭಿಕ್ಷುಕನಾದರೇನು? ಅವನಿಗೂ ಕೋರ್ಟಿನ ಕೆಲಸವಿರಬಾರದೇಕೆ? ಎಂದಂದುಕೊಂಡೆ.

ಶಂಕರರಾಯರು (ಆ ವಕೀಲರ ಹೆಸರು) ಮಾತಾಡುತ್ತಾ ಆ ಭಿಕ್ಷುಕನನ್ನು ತೋರಿಸಿ "ಅವರಾರು? ನಿಮಗೆ ಗೊತ್ತೆ?" ಎಂದರು.

"ಗೊತ್ತಿಲ್ಲ" ಎಂದೆ. ಒಳಗೊಳಗೆ ನನಗೇಕೆ ಭಿಕ್ಷುಕನ ಪರಿಚಯ ಎಂದುಕೊಂಡಿರಬಹುದು.

"ಕರ್ನೂಲ್ ಜಹಗಿರಿಯ ನವಾಬಸಿಂಗರು" ಎಂದರು.

ನಾನು ಭಿಕ್ಷುಕನನ್ನೇ ನೋಡುತ್ತಾ ಮೂಕನಾಗಿ ಕುಳಿತೆನು. ಹಿಂದೆ ನಡೆದುದೆಲ್ಲಾ ಮತ್ತೆ ಮನಸ್ಸಿನಲ್ಲಿ ಮಿಂಚಿತು. ಅವನ ಈ ದುರ್ಗತಿಯ ವೇಷವನ್ನು ನೋಡಲಾರದೆ ಹೋದೆ.

ಶಂಕರರಾಯರು ಪುನಃ "ನೋಡಿ, ಅವರ ಪರವಾಗಿ ಎಷ್ಟೋ ಕೋರ್ಟುಗಳಲ್ಲಿ ಹೊಡೆದಾಡಿದ್ದಾಯ್ತು. ಇನ್ನು ಪ್ರೀವಿಕೌನ್ಸಿಲ್ ಒಂದು ಬಾಕಿಯಿದೆ. ಅಲ್ಲಿಗೂ ಅರ್ಜಿಹಾಕಿ ನೋಡಬೇಕೆಂದು ಅವರ ಆಸೆ. ಆದರೆ ಅದಕ್ಕೆ ಎಂಟುನೂರೈವತ್ತು ರೂಪಾಯಿ ಖರ್ಚು ಬೇಕಾಗಿದೆ. ಎಲ್ಲಾ ಅಚ್ಚು ಹಾಕಿಸಿ ಕಳುಹಿಸಬೇಕು. ಅವರಿಗೆ ಯಾರೂ ಸಹಾಯಕರಿಲ್ಲ. ಏನು ಮಾಡಬೇಕೋ ನನಗೆ ಬೇರೆ ತೋರುವುದಿಲ್ಲ."

ನಾನೇನು ಸ್ವಾಭಾವಿಕವಾಗಿ ಧರ್ಮಿಷ್ಠನಲ್ಲ. ನನ್ನ ಹೃದಯ ಬಹಳ ಮೃದು ಎಂಬ ಹೆಮ್ಮೆಯೂ ನನಗೆ ಸಲ್ಲದು. ಆದ್ದರಿಂದ

ಶಂಕರರಾಯರು ಹೇಳಿದ್ದನ್ನೆಲ್ಲಾ ಕೇಳಿ ''ಅಯ್ಯೋ ಪಾಪ!'' ಎಂದನೇ ಹೊರತು, ಸಹಾಯ ಮಾಡಬೇಕೆಂಬ ಚಿಂತೆಯೇ ಹುಟ್ಟಲಿಲ್ಲ.

ಶಂಕರರಾಯರು ಹೇಳಿ ಮುಗಿಸಲು ಭಿಕ್ಷುಕನಾಗಿದ್ದ ನವಾಬ ಸಿಂಗನು ಬಹಳ ದೈನ್ಯದಿಂದ ಹೇಳತೊಡಗಿದನು: ''ಸ್ವಾಮೀ ನಿಮ್ಮ ಮನೆತನಕ್ಕೂ ನಮ್ಮ ಮನೆತನಕ್ಕೂ ಬಹಳ ಸ್ನೇಹ. ನೀವು ಮಕ್ಕಳಾಗಿದ್ದಾಗ ನನ್ನನ್ನು ದೇವರು ಉತ್ತಮ ಸ್ಥಿತಿಯಲ್ಲಿಟ್ಟಿದ್ದ. ನೀವು ನನ್ನನ್ನು ಮರೆತಿರಬಹುದು. ನಾನು ಕಾಸಿಲ್ಲದವನಾದೆ. ಆದರೂ ನನಗಿನ್ನೂ ನಿಮ್ಮ ನೆನಪಿದೆ. ನನ್ನ ಹೆಂಡತಿ ಮಕ್ಕಳಿಗೆ ಉಡಲು ಬಟ್ಟೆಯಿಲ್ಲ; ಉಣಲು ಅನ್ನವಿಲ್ಲ; ಮಲಗಲು ತಾವಿಲ್ಲ. ಭಿಕ್ಷೆಯಿಂದ ಕಾಲಹರಣ ಮಾಡುತ್ತಿದ್ದೇನೆ. ನೀವು ಇರುವಲ್ಲಿಗಾದರೂ ನನ್ನನ್ನು ಕರೆದುಕೊಂಡುಹೋಗಿ; ನೀವು ಹೇಳಿದ ಕೆಲಸ ಮಾಡುತ್ತೇವೆ. ನಮಗೆ ಹೊಟ್ಟೆಗಿಷ್ಟು ಹಾಕಿದರೆ ಸಾಕು.''

ನನ್ನ ಅವಸ್ಥೆಯನ್ನು ನೀವೇ ಊಹಿಸಿಕೊಳ್ಳಿ. ಯಾರ ಕೈಕೆಳಗೆ ನನ್ನ ತಂದೆ ತಾತಂದಿರು ಇದ್ದು ಅಧಿಕಾರ ನಡೆಸಿದರೋ ಅವನೇ ನನ್ನ ಮುಂದೆ ಹೀಗೆ ಬೇಡಿದರೆ ಮನಸ್ಸಿಗೆ ಹೇಗಾಗಬೇಕು? ಶಂಕರರಾಯರಾಗಲಿ, ನವಾಬಸಿಂಗನಾಗಲಿ ಧನಸಹಾಯ ಕೇಳಲಿಲ್ಲ. ಸ್ವಾಭಾವಿಕವಾಗಿ ನಾನು ಹಾಗೆಲ್ಲಾ ಭಾವಪರವಶನಾಗಿ ಧರ್ಮ ಮಾಡುವವನೂ ಅಲ್ಲ. ನನ್ನ ಜೇಬಿನಿಂದ ಚಕ್ಕುಪುಸ್ತಕ ತೆಗೆದು, ನವಾಬನನ್ನು ಕುರಿತು ''ಪ್ರೀವಿ ಕೌನ್ಸಿಲ್ಲಿಗೆ ಅರ್ಜಿ ಹಾಕುವುದಕ್ಕೆ ಎಷ್ಟು ಹಣ ಬೇಕು?'' ಎಂದೆ.

ಅವನು ''ಸ್ವಾಮಿ, ಎಂಟುನೂರೈವತ್ತು!'' ಎಂದ.

ಕೂಡಲೆ ನಾನು ಮದರಾಸಿನಲ್ಲಿರುವ ಒಂದು ಬ್ಯಾಂಕಿಗೆ ಎಂಟುನೂರೈವತ್ತು ರೂಪಾಯಿಗಳ ಚಕ್ಕು ಒಂದನ್ನು ಬರೆದು ಸಿಂಗನಕೈಲಿ ಕೊಟ್ಟೆನು. ಏತಕ್ಕೆ ಹಾಗೆ ಮಾಡಿದೆನೋ ನನಗೆ ಬೇರೆ ತಿಳಿಯದು.

ನಿಶ್ಚಯವಾಗಿಯೂ ನನ್ನ ಸ್ವಂತ ಪರಾರ್ಥ ಬುದ್ಧಿಯಿಂದ ಮಾತ್ರ ಮಾಡಿದ್ದಲ್ಲ. ಅವನು ಕರ್ನೂಲಿನಲ್ಲಿ ಕಾಸೂ ಹುಟ್ಟದ ತಿರುಕ. ನಾನು ನೂರು ರೂಪಾಯಿ ಸಂಬಳದ ಜುಂಗಡಿ ನೌಕರ. ಮದರಾಸಿನ ಆ ಬ್ಯಾಂಕಿನಲ್ಲಿರುವ ನನ್ನ ಲೆಖ್ಖ ನೂರೈವತ್ತೇ ರೂಪಾಯಿ. ಅಂತು ಕಾರ್ಯ ಮುಗಿದು ಹೋಯಿತು.

ಸಿಂಗನು ಮರುದಿನವೇ ಮದರಾಸಿಗೆ ಹೋಗಿ ಪ್ರೀವೀಕೌನ್ಸಿಲ್ಲಿಗೆ ಅಪೀಲು ಮಾಡುವೆನೆಂದು ಹೇಳಿ ಹೊರಟುಹೋದನು.

ಈ ಸುದ್ದಿ ಊರಿನಲ್ಲೆಲ್ಲಾ ಹಬ್ಬಿತು. ಎಲ್ಲರೂ ನನ್ನನ್ನು ಹುಚ್ಚನೆಂದು ಬಯ್ಯತೊಡಗಿದರು. ಕೆಲವರು "ನಿಮ್ಮತಂದೆ ಅವನಿಗೆ ನಾಲ್ವತ್ತು ಸಾವಿರ ಕೊಟ್ಟು ಕಳೆದುಕೊಂಡಿದ್ದಾರೆ. ಕೈಯಲ್ಲಿ ಕಾಸಿಲ್ಲದ ತಿರುಕರಿಗೆ ಯಾರಾದರೂ ಎಂಟುನೂರೈವತ್ತು ರೂಪಾಯಿ ಏಕಾಏಕಿ ಹಿಂದುಮುಂದು ನೋಡದೆ ಕೊಡುವುದುಂಟೇ? ಅದಾದರೂ ಹಿಂದಕ್ಕೆ ಬರುವ ಗಂಟೇ?" ಎಂದರು. ಹಿರಿಯರಾದ ಕೆಲವರು, ನಾನು ಬರಿಯ ಅನುಭವವಿಲ್ಲದ ಹುಡುಗನೆಂದೂ, ಇಂದು ಸಿಂಗನು ಭಿಕ್ಷುಕನಾಗಿದ್ದಾನೆ, ನಾಳೆ ನಾನು ಭಿಕ್ಷುಕನಾಗುವೆನೆಂದೂ, ಬಾಯಿಗೆ ಬಂದಂತೆ ಅಂದರು. ನನಗೂ ಅವರು ಹೇಳಿದ್ದೆಲ್ಲಾ ಸರಿ ಎಂದು ತೋರಿತು. ಅಯ್ಯೋ, ನಾನೇಕೆ ಚಕ್ಕು ಕೊಟ್ಟೆ? ಎಂಬ ಪಶ್ಚಾತ್ತಾಪವೂ ಉಂಟಾಯಿತು. ನಾನಾದರೂ ದೊಡ್ಡ ಹಣಗಾರನೆ? ಅದಿರಲಿ, ನಾನು ದುಡಿಯುವುದು ನನ್ನ ಸಂಸಾರಕ್ಕೇ ಸಾಲದು. ಮತ್ತು ಕೊಟ್ಟ ದುಡ್ಡನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಬದಲಾಗಿ, ಪತ್ರ್ಯ್ಕರಾರು ಏನೂ ಇಲ್ಲದೆ ತಿರುಕನೊಬ್ಬನಿಗೆ ಹಣ ಕೊಡುವುದುಂಟೆ? ನನ್ನ ಮನಸ್ಸಿನಲ್ಲಿ ಶಾಂತಿ ತೊಲಗಿತು. ನಾನು ಮಾಡಿದ್ದು ಅಕಾರ್ಯವೆಂದು ಚಿಂತಿಸತೊಡಗಿದೆನು. ಒಂದು ಸಾರಿ, ಪುನಃ ಸಿಂಗನ ಹತ್ತಿರ ಹೋಗಿ ಚಕ್ಕನ್ನು ವಾಪಸು ಕೊಡು ಎಂದು ಕೇಳಿಬರಲೇ ಎಂದು ಮನಸ್ಸಾಯಿತು. ಅಷ್ಟರಲ್ಲೇ ಬ್ಯಾಂಕಿ

ನಲ್ಲಿ ನನಗಿದ್ದುದು ನೂರೈವತ್ತೇ ರೂಪಾಯಿಗಳು, ಆದ್ದರಿಂದ ಆ ಚೆಕ್ಕು ನಿಷ್ಪ್ರಯೋಜನ ಎಂದು ಸಮಾಧಾನವಾಯಿತು.

ಮರುದಿನ ನಾನು ಬೆಂಗಳೂರಿಗೆ ಹೊರಟೆ. ಅವನು ಮದರಾಸಿಗೆ ಹೊರಟ. ಇಬ್ಬರೂ ಗುಂಟಕಲ್ಲಿನತನಕ ಒಂದೇ ಗಾಡಿಯಲ್ಲಿ ಬಂದೆವು. ನಿಜಸ್ಥಿತಿಯನ್ನು ಹೇಳಿ ಕೊಟ್ಟ ಚೆಕ್ಕನ್ನು ಹಿಂದಕ್ಕೆ ತೆಗೆದು ಕೊಳ್ಳಲೂ ಇಲ್ಲ. ಅವನು ಮದರಾಸಿಗೂ ನಾನು ಬೆಂಗಳೂರಿಗೂ ಕವಲೊಡೆದೆವು.

ಗಾಡಿಯಲ್ಲಿ ನಾನೊಬ್ಬನೇ ಕುಳಿತಿರಲು ಚಿಂತೆಗೆ ಪ್ರಾರಂಭವಾಯಿತು. ಜೊತೆಗೆ ಮತ್ತೊಂದು ಭೀತಿಯೂ ಬಂತು. ಏನೆಂದರೆ, ಬ್ಯಾಂಕಿನಲ್ಲಿ ಹಣವಿಲ್ಲದೆ ನಾನು ಚೆಕ್ಕು ಕೊಟ್ಟಿದ್ದೇನೆ. ನಾನೆಲ್ಲಿ ಅಪರಾಧಿಯಾಗುವೆನೊ? ಏನು ಶಿಕ್ಷೆಯಾಗುವುದೊ? ನನ್ನ ಸರಕಾರಿ ನೌಕರಿಗೆ ಎಲ್ಲಿ ತೊಂದರೆ ಬರುವುದೊ? ನನಗೆಲ್ಲಿ ಮಾನಭಂಗವಾಗುವುದೊ? ಎಂದು. ಈ ಭೀತಿಯು ಬರಬರುತ್ತಾ ಬಲವಾಯಿತು.

ರೈಲು ಬೆಂಗಳೂರಿಗೆ ಬಂತು. ನಾನು ಮುಂದೆ ಬರಬಹುದಾದ ಕಷ್ಟಗಳನ್ನು ನಿವಾರಿಸುವುದಕ್ಕೆ, ಒಂದು ಸೊಸೈಟಿಯಿಂದ ಏಳುನೂರು ರೂಪಾಯಿ ಸಾಲತೆಗೆದು ಮದರಾಸಿನ ಆ ಬ್ಯಾಂಕಿಗೆ ಕಳುಹಿಸಿದೆನು. ಇದೂ ಕೂಡ ನನ್ನ ಸ್ವಂತ ಮರ್ಯಾದೆಯನ್ನು ಕಾಪಾಡಿಕೊಳ್ಳುವುದಕ್ಕೆ ಮಾಡಿದ ಕೆಲಸ. ನವಾಬಸಿಂಗನ ಶುಭಾಶುಭಗಳ ವಿಚಾರವೇ ನನ್ನ ಮನಸ್ಸಿಗೆ ಹೊಳೆಯಲಿಲ್ಲ. ಇಷ್ಟು ಮಾಡಿದಮೇಲೆ ನನಗೆ ಕೊಟ್ಟ ಹಣದ ಚಿಂತೆ ಹಿಡಿಯಿತು. ಏನು ಮಾಡಿದರೆ ಹಣ ಹಿಂದಕ್ಕೆ ಬರುವುದೆಂದು ಆಲೋಚನೆ ಮಾಡಿದೆ. ಆ ವಕೀಲನೂ ಸಿಂಗನೂ ಇಬ್ಬರೂ ಸೇರಿ ನನ್ನನ್ನು ಬಲಾತ್ಕರಿಸಿ ಎಂಟುನೂರೈವತ್ತು ರೂಪಾಯಿಗಳ ಚೆಕ್ಕು ಬರೆಯಿಸಿ ಕೊಂಡರು ಎಂದು ದಾವಾಹಾಕಲೇ ಎಂದು ಯೋಚಿಸಿದೆ. ಆದರೆ ಸಾಕ್ಷಿಗ

ಳಾರೂ ಇಲ್ಲ. ಆದಕ್ಕೇ ಸುಮ್ಮನಾದೆ. ಅಂತೂ ನನ್ನೊಳಗೆ ನಾನೇ ಏನೇನೋ ವಿಧವಾದ ಸಮಾಧಾನಗಳನ್ನು ಕಲ್ಪಿಸಿಕೊಂಡು ಮನಸ್ಸಿನ ಬಾಧೆಯನ್ನು ನಿಲ್ಲಿಸಿದೆ. ಮನಸ್ಸಿನ ಕಾಟದ ಜೊತೆಗೆ ಮನೆಯವರ ಕರ್ಕಶದ ನುಡಿಗಳ ಕಾಟ ಬೇರೆ. ಅಂತೂ ಕಾಲ ಕಳೆಯಿತು.

೪

ಎರಡು ವರ್ಷಗಳಾದಮೇಲೆ ನನಗೆ ಮೈಸೂರಿಗೆ ವರ್ಗವಾಯಿತು. ನನ್ನ ಸಂಬಳವೂ ಹೆಚ್ಚಿತು. ನಾನೂ ಭಾಗ್ಯವಂತರ ಗುಂಪಿಗೆ ಸೇರುವವನಾದೆ. ಒಂದು ದಿನ, ಯಾವುದೋ ಒಂದು ವಿದ್ಯಾಭ್ಯಾಸದ ಇಲಾಖೆಯ ಕೆಲಸದ ಸಲುವಾಗಿ ನಾನು ಮದರಾಸಿಗೆ ಹೋಗಬೇಕಾಗಿ ಬಂತು. ರೈಲು ಹತ್ತಿ ಹೊರಟೆ. ರೈಲು ಗುಂಟಕಲ್ಲಿನ ಸ್ಟೇಷನ್ನಿನಲ್ಲಿ ನಿಂತಿತ್ತು. ಸೆಕೆಂಡ್ ಕ್ಲಾಸಿನಲ್ಲಿ ಕುಳಿತು, ಬೂಟ್ಸು, ಷರಾಯಿ, ನೆಕ್‌ಟೈ, ಪೇಟ ಇವುಗಳಿಂದ ವಿರಾಜಿಸುತ್ತಿದ್ದ ನನಗೆ ಏನೋ ಒಂದು ಹೆಮ್ಮೆ. ಪ್ಲಾಟ್‌ಫಾರಂನಲ್ಲಿ ತಿರುಗಾಡುತ್ತಿದ್ದೆ. ತಿರುಕನೊಬ್ಬನು ಬಂದು ಸಲಾಂ ಮಾಡಿದನು. ನೋಡುವುದರಲ್ಲಿ ಅವನೇ ನವಾಬಸಿಂಗ!

ನನಗೆ ಹಿಂದೆ ನಡೆದ ಸಂಗತಿಗಳೆಲ್ಲಾ ಎಲ್ಲೋ ದೂರ ಹೋದುವು. ಅವನು ನನ್ನ ಸಾಲಗಾರ ಎಂಬ ಯೋಚನೆಯೇ ಬರಲಿಲ್ಲ. ನನಗೆ ಅವನ ನವಾಬತನವಲ್ಲದೆ ತಿರುಕತನ ನೆನಪಿಗೆ ಬರಲೇ ಇಲ್ಲ. ಆದ್ದರಿಂದ ಬಹಳ ಸಲಿಗೆಯಿಂದ "ಏನೋ ಸಿಂಗ್, ಕೇಸು ಏನಾಯಿತೋ ?" ಅಂದೆ.

ಅವನು ಬಹಳ ದೀನಸ್ವರದಿಂದ "ಅದರ ಆಸೆಯೇ ನನಗಿಲ್ಲ. ಬಹಳ ಹಸಿವಾಗಿದೆ" ಎಂದನು. ನಾನು ಅವನೊಡನೆ ಸರಿಸಮಾನನಂತೆ ನುಡಿದರೆ, ಅವನು ತಿರುಕನಂತೆಯೇ ಮಾತಾಡಿಬಿಟ್ಟ. ನನಗೆ ಬಹಳ ಸಂಕೋಚವಾಯಿತು. ಅವನನ್ನು ಕರೆದುಕೊಂಡು ಹೋಗಿ

ಸ್ಟೇಷನ್ನಿನ ಹೋಟಲಿನಲ್ಲಿ ಆರಾಣೆಕೊಟ್ಟು ಚೆನ್ನಾಗಿ ಊಟ ಹಾಕಿಸಿದೆ. ಅದೂ ಕೂಡ, ನಾನು ದುಡ್ಡಿನವನು ಎಂಬ ಹೆಮ್ಮೆಯಿಂದಲೇ ಊಟ ಹಾಕಿಸಿದೆನೇ ಹೊರತು, ಅವನು ಹೊಟ್ಟೆಗಿಲ್ಲದವನು ಎಂಬ ಮರುಕದಿಂದಲ್ಲ. ನಾವೆಲ್ಲಾ ಪರೋಪಕಾರ ಮಾಡುವುದು ಶೇಕಡ ತೊಂಬತ್ತೊಂಬತ್ತರಷ್ಟು ನಮ್ಮ ಹೆಮ್ಮೆಗಾಗಿಯೇ ಹೊರತು ಪರರ ಉಪಕಾರಕ್ಕಾಗಿ ಅಲ್ಲ.

ಊಟ ಪೂರೈಸಿದ ಮೇಲೆ ಅವನು ತನ್ನ ಗೋಳನ್ನೆಲ್ಲಾ ಹೇಳಿಕೊಂಡನು. ದೂರದಲ್ಲಿ ಅವನ ಐದು ಜನ ಮಕ್ಕಳು, ಘೋಷಾ ಹಾಕಿಕೊಂಡಿದ್ದ ಹೆಂಡತಿ ನಿಂತಿದ್ದರು. ಇದನ್ನೆಲ್ಲಾ ನೋಡಿ ನನಗೊಂದೂ ಬಗೆ ಹರಿಯಲಿಲ್ಲ. ಎಂತಹ ಮನೆತನವು ಎಂತಹ ಗತಿಗೆ ಇಳಿಯಿತು ಎಂದುಕೊಂಡೆ.

ಇನ್ನೇನು ರೈಲು ಹೊರಡಬೇಕು. ನವಾಬಸಿಂಗನು ನಾನು ಕೂತಿದ್ದ ಗಾಡಿಗೆ ಬಂದು "ಸ್ವಾಮಿ, ಒಂದು ಮೂರುಕಾಸು ಕೊಡಿ ಮಕ್ಕಳಿಗೆ ಕಡಲೆ ತೆಗೆದುಕೊಡುತ್ತೇನೆ" ಎಂದು ಮಾರುದ್ದ ದೇಹವನ್ನು ಗೇಣುದ್ದ ಮಾಡಿಕೊಂಡನು.

ನಾನು "ಅಯ್ಯೋ ಅದಕ್ಕೆಲ್ಲಾ ಹೀಗೆ ಕೇಳೋದೇನೋ ? ತೆಗೆದುಕೋ" ಎಂದು ಮೂರು ಕಾಸನ್ನು ಜೇಬಿನಿಂದ ತೆಗೆದುಕೊಟ್ಟೆ. ಅದನ್ನು ಕೂಡ ಭಿಕ್ಷುಕನಿಗೆ ದಾನಿಯು ಕೊಡುವಂತೆ ಕೊಡಲಿಲ್ಲ. ರೈಲು ಗುಂಟಕಲ್ಲನ್ನು ಬಿಟ್ಟು ಮುಂದರಿಯಿತು. ನವಾಬಸಿಂಗನನ್ನು ನೋಡುತ್ತಾ ಇದ್ದೆ. ರೈಲು ದೂರದೂರ ಸರಿದಹಾಗೆಲ್ಲಾ ಸಿಂಗನು ಪುರೆಯಾಗಿ ಆರಾಣೆ ಮೂರುಕಾಸು ಆದನು.

೫

ಕೆಲವು ತಿಂಗಳ ಹಿಂದೆ ಒಂದು ದಿನ ಮನೆಯಲ್ಲಿ ಸಂಸಾರದೊಂದಿಗೆ ಮಾತಾಡುತ್ತಾ ಕುಳಿತಿದ್ದೆ. ರತ್ನ, ಕಿಟ್ಟ ಎಲ್ಲಾ ಅಲ್ಲೇ

ಕುಳಿತು ಆಟ ಆಡುತ್ತಿದ್ದರು. ನಾನು ಕೊಟ್ಟ ಎಂಟುನೂರೈವತ್ತು ರೂಪಾಯಿ ಆರಾಣೆ ಮೂರು ಕಾಸು ನನ್ನನ್ನೇನು ಬಡತನಕ್ಕೆ ತರಲಿಲ್ಲ; ಅದಕ್ಕೆ ಬದಲಾಗಿ ನನ್ನ ಭಾಗ್ಯವು ಹೆಚ್ಚುತ್ತಲೇ ಬಂತು. ಅಷ್ಟು ಹಣವನ್ನು ಕೊಟ್ಟಿದ್ದು ಪರೋಪಕಾರಕ್ಕೆ ಎಂದು ಭಗವಂತನೆದುರು ನಾನು ಹೇಳಲಾರೆ. ಸುಮ್ಮನೆ ಆತ್ಮವಂಚನೆ ಮಾಡಿಕೊಳ್ಳುವುದ ರಿಂದ ದೇವರನ್ನು ವಂಚಿಸುವುದಕ್ಕೆ ಆಗುತ್ತದೆಯೇ ? ನಾನು ಮೊದಲು ಎಂಟುನೂರೈವತ್ತುರೂಪಾಯಿ ಕೊಟ್ಟಿದ್ದು ನಿಜವಾಗಿಯೂ ನನ್ನಿಚ್ಛೆಯಿಂದಲ್ಲ. ಆರಾಣೆ ಊಟ ಹಾಕಿಸಿದ್ದು ಹೆಮ್ಮೆಯಿಂದ. ಮೂರುಕಾಸುಕೊಟ್ಟಿದ್ದು ಅವನನ್ನು ತೊಲಗಿಸುವುದಕ್ಕೆ. ಕೊಟ್ಟದ್ದು ಹಿಂದಕ್ಕೆ ಬರುತ್ತದೆ ಎಂಬ ಆಸೆಯೇ ಇಲ್ಲದಿದ್ದುದರಿಂದ ಆಗಲೇ ಅದು ಮನಸ್ಸಿನಿಂದ ದೂರವಾಗುತ್ತಿತ್ತು.

ಹೊರಗಡೆ ಯಾರೋ ಬಂದಂತಾಯಿತು.

"ಕಿಟ್ಟಾ ಬಾಗಿಲು ತೆರೆಯೋ !" ಎಂದೆ.

ಕಿಟ್ಟ ಎದ್ದು ಬಾಗಿಲು ತೆರೆದ. ಟಪ್ಪಾಲಿನವನು ಒಂದು ತಂತೀ ಸಮಾಚಾರದ ಕವರನ್ನು ಕೈಗೆ ಕೊಟ್ಟನು. ಒಡೆದು ನೋಡಲು ಈರೀತಿ ಇತ್ತು:

"ಜಯ– ಪ್ರೀವಿ ಕೌನ್ಸಿಲ್– ನಿಮ್ಮ ಹಣ ಎಲ್ಲಾ ವಾಪಸು ಬರುತ್ತದೆ– ಸಿಂಗ್"

ಅದೂ ತಿಳಿಯಲಾರದ ಇಂಗ್ಲೀಷು. ಅದನ್ನು ಓದಿದ ನನಗೆ ಜುಗುಪ್ಸೆ ಹುಟ್ಟಿತು. ಎಲ್ಲೋ ಹನ್ನೆರಡಾಣೆ ಸಿಕ್ಕಿತು, ಸುಮ್ಮನೆ ಟೆಲಿಗ್ರಾಂ ಕೊಟ್ಟಿದ್ದಾನೆ ; ಹುಚ್ಚ, ಎಂದುಕೊಂಡೆ. ಆದರೆ ಯಾವುದೋ ಒಂದು ದೂರದಾಸೆ ಮನಸ್ಸಿನಲ್ಲಿ ಇನ್ನೂ, ಕತ್ತಲಲ್ಲಿ ಬಹುದೂರ ಉರಿಯುವ ಹಣತೆಯ ದೀಪದಂತೆ, ಮಿನುಗುತ್ತಿತ್ತು.

ಮರುದಿನ "ಹಿಂದೂ" ಪತ್ರಿಕೆಯಲ್ಲಿ ಸಿಜಾಂಶವು ಗೊತ್ತಾಯಿತು. ಇಪ್ಪತ್ತು ವರ್ಷಗಳಿಂದ ತಿರುಪೆ ಬೇಡುತ್ತಿದ್ದವನು ಪುನಃ ಲಕ್ಷಾಧಿಕಾರಿಯಾದನೆಂದು ನನಗೆ ಸಂತೋಷವಾಯಿತು. ಏತಕ್ಕೋ ನಾನರಿಯೆ. ಸಿಂಗನ ಬಾಳಿಗೆ ಬೆಳಕು ಬಂತಲ್ಲಾ, ಅವನ ಹೆಂಡಿರು ಮಕ್ಕಳ ಉದ್ಧಾರವಾಯಿತಲ್ಲಾ ಎಂದು, ಎಂದು ಮಾತ್ರ ನಾನು ಹೇಳಲಾರೆ. ಬಹುಶಃ ನಾನು ಕೊಟ್ಟ ಹಣ ಹಿಂದಕ್ಕೆ ಬರಬಹುದು ಎಂಬ ದೂರದಾಸೆಯಿಂದ ಇರಬಹುದು.

ಕೂಡಲೆ ನನಗೆ ಕಾಗದಗಳು ಬರತೊಡಗಿದುವು. ಸಿಂಗನ ಮೇಲೆ ದಾವಾ ಹಾಕಬೇಕೆಂದೂ, ಹಿರಿಯರು ಕೊಟ್ಟಿದ್ದ ಹಣವನ್ನೆಲ್ಲಾ ಮರಳಿ ಪಡೆಯಬೇಕೆಂದೂ ಉಪದೇಶ ಮಾಡತೊಡಗಿದರು. ನಾನುಮಾತ್ರ ಅವಸರ ಪಡದೆ ಕಾದೆನು.

ಸರಳ ಹೃದಯನಾದ ನವಾಬಸಿಂಗನು ನನಗೆ ತಂತೀಸಮಾಚಾರ ಕೊಟ್ಟಿದ್ದು ವಕೀಲ ಶಂಕರರಾಯರಿಗೆ ತಿಳಿಯಬಂತು. ಅವರು ಅವನನ್ನು ಬಹಳವಾಗಿ ಬೈದು ಗಾಬರಿ ಪಡಿಸಿದರು: ಅವರನ್ನು ಕೇಳದೇ ವರ್ತಮಾನ ಕೊಟ್ಟಿದ್ದು ತಪ್ಪು ಎಂದು. ಮುಗ್ಧನಾದ ನವಾಬನು ಆಮೇಲೆ ಶಂಕರರಾಯರ ಹೆದರಿಕೆಯಿಂದ ಕಾಗದ ಬರೆಯಲೇ ಇಲ್ಲ. ನನಗೆ, ಬಂದ ದುಡ್ಡು ಬರಿದಾಯಿತೋ ಏನೋ ಎಂದು ಸಂದೇಹ ಉಂಟಾಯಿತು. ಆದರೆ ಏತಕ್ಕೊ ಏನೋ ಮುಂದುವರಿಯದೆ ಸುಮ್ಮನಾದೆ.

ಕೆಲವು ತಿಂಗಳ ಹಿಂದೆ ನವಾಬನಿಂದ ನನಗೊಂದು ಕಾಗದ ಬಂತು. ಅದರಲ್ಲಿ ನನ್ನನ್ನು ಅಲ್ಲಿಗೆ ಬರುವಂತೆ ಬರೆದಿತ್ತು. ನಾನೂ ಹೋದೆ. ನನ್ನನ್ನು ಬಹಳ ಮರ್ಯಾದೆಯಿಂದ ಎದುರುಗೊಂಡು, ನನ್ನ ಊಟ ಉಪಚಾರಗಳಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿದನು. ಎಲ್ಲಾ ಪೂರೈಸಿದಮೇಲೆ, ನವಾಬನು ನನ್ನ ಮುಂದೆ ಎಂಟು ನೂರೈವತ್ತು ರೂಪಾಯಿ ಅರಾಣೆ ಮೂರು ಕಾಸುಗಳನ್ನು ನಗದಾಗಿ

ತಂದಿಟ್ಟು "ತಮ್ಮಿಂದ ನನ್ನ ಮನೆತನ ಉಳಿಯಿತು. ಎಂಟುನೂರೈವತ್ತು ರೂಪಾಯಿಗಳು ತಾವು ಅಪೀಲಿನ ಖರ್ಚಿಗಾಗಿ ಕೊಟ್ಟದ್ದು. ದಯವಿಟ್ಟು ಸ್ವೀಕರಿಸಬೇಕು" ಎಂದನು.

ನನಗೆ ಏನುಮಾಡಬೇಕೋ ಗೊತ್ತಾಗದೆ ಸುಮ್ಮನೆ ನೋಡುತ್ತಾ ಕುಳಿತೆನು. ರೂಪಾಯಿ ನನಗೆ ಬೇಕಾಗಿರಲಿಲ್ಲ ಎಂದಲ್ಲ. ಇನ್ನೂ ಏನೇನೋ ಆಲೋಚನೆಗಳು ಬಂದುವು.

ನನಗೆ ಕೊಡುವ ಹಣವನ್ನೆಲ್ಲಾ ಇಷ್ಟರಲ್ಲಿಯೇ ಮುಗಿಸಿಬಿಡುವನೆ? ಬಾಕಿ ಹಣದ ವಿಚಾರ ಕೇಳಲೇ ಬಿಡಲೇ ? ನಾನು ಇಷ್ಟನ್ನೇ ತೆಗೆದುಕೊಂಡರೆ ನನ್ನ ನೆಂಟರಿಷ್ಟರು ಏನೆಂದಾರು? ಇವೇ ಮೊದಲಾದ ಚಿಂತೆಗಳು ಒಂದಾದಮೇಲೊಂದು ಬಂದುವು. ಆದರೆ ನಾನು ಯಾವ ಮಾತನ್ನೂ ಆಡಲಿಲ್ಲ. ಯಾರೋ ನನ್ನ ನಾಲಗೆಯನ್ನು ಹಿಡಿದಿದ್ದರು. ಕಡೆಗೆ ಎಂಟುನೂರೈವತ್ತು ರೂಪಾಯಿಗಳನ್ನು ಎಣಿಸಿ ತೆಗೆದುಕೊಂಡೆ.

ಉಳಿದ ಆರಾಣೆ ಮೂರು ಕಾಸನ್ನು ನೋಡಿ 'ಇದಾವ ಹಣ ?' ಎಂದೆ.

ಸಿಂಗ್: "ತಾವು ಗುಂಟಕಲ್ ಸ್ಟೇಷನ್ನಿನಲ್ಲಿ ನಾನು ಹೊಟ್ಟೆಗಿಲ್ಲದೆ ಇದ್ದಾಗ ಊಟಹಾಕಿಸಿದರ ಬಾಬತು ಆರಾಣೆ. ಆಮೇಲೆ ನನ್ನ ಮಕ್ಕಳಿಗೆ ತಿಂಡಿಗಾಗಿ ತಾವು ಕೊಟ್ಟಿದ್ದು ಮೂರು ಕಾಸು."

ನಾವು ದಾರಿಯೆಡೆಯಲ್ಲಿ ಭಿಕ್ಷೆ ಹಾಕಿದ ಕಾಸಿನ ಲೆಖ್ಖ ನೆನಪಿಡಲು ಆಗುತ್ತದೆಯೇ ? ನಾನಾ ಭಾವಗಳಿಂದ ನನ್ನ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಮರುಮಾತಾಡದೆ ಆ ಆರಾಣೆ ಮೂರುಕಾಸನ್ನೂ ತೆಗೆದುಕೊಂಡೆ.

ಅಷ್ಟು ಹೊತ್ತಿಗೆ ಶಂಕರರಾಯರೂ ಅಲ್ಲಿಗೆ ಬಂದರು. ನವಾಬನೂ ಅವರೂ ಏನೋ ಗುಟ್ಟು ಮಾತಾಡಲು ಒಳಗೆ ಹೋದರು.

ನನ್ನ ಎದೆ ಮಾತ್ರ ಮಿಡುಕುತ್ತಿದ್ದುದಷ್ಟೇ ನನಗೆ ಗೊತ್ತು. ಇದೆಲ್ಲಾ ಯಾರು ಮಾಡಿಸುವ ಕೆಲಸ ಎಂದುಕೊಂಡೆ. ಮಹತ್ತಾದುದನ್ನೋ, ಅತ್ಯಂತ ಸುಂದರವಾದುದನ್ನೋ, ಪವಿತ್ರವಾದುದನ್ನೋ ನೋಡಿದಾಗ ಅನಿರ್ವಚನೀಯವಾದ ಭಾವದಿಂದ ಪ್ರೇರಿತವಾಗಿ, ನಮ್ಮ ಹೃದಯದ ಅಂತರಾಳದಿಂದ ಉಕ್ಕುವ, ಹೆಸರಿಗೆ ಸಿಕ್ಕದ ಒಂದು ದಿವ್ಯಾನುಭವವು ನನ್ನ ಜೀವಸರ್ವಸ್ವವನ್ನೂ ತುಂಬಿಬಿಟ್ಟಿತು.

ಸ್ವಲ್ಪ ಹೊತ್ತಿನಮೇಲೆ ನವಾಬನು ಹೊರಗೆ ಬಂದು, ಒಂದು ಕರಾರು ಪತ್ರವನ್ನು ನನ್ನ ಕೈಲಿಟ್ಟು "ಸ್ವಾಮಿ ಬಹುಕಾಲದಿಂದಲೂ ನಮ್ಮ ಮನೆತನಕ್ಕೂ ನಿಮ್ಮ ಮನೆತನಕ್ಕೂ ಲೇವಾದೇವಿ ನಡೆದು ಬಂದಿದೆ. ಆದರೆ ಈಗ ಯಾವ ದಾಖಲೆಗಳೂ ಇಲ್ಲ. ತಮಗೆ ನಾನೆಷ್ಟು ಕೊಡಬೇಕೋ ಏನೋ ತಿಳಿಯದು. ಈ ಪತ್ರದಲ್ಲಿ ತಮಗೆ ಹನ್ನೆರಡು ಸಾವಿರ ರೂಪಾಯಿ ಕೊಡುತ್ತೇನೆಂದು ಬರೆದಿದೆ. ಅಲ್ಲದೆ ಶೇಕಡ ನಾಲ್ಕಾಣೆಯಂತೆ ಮೊಬಲಗನ್ನು ಸಲ್ಲಿಸುವ ವರೆಗೂ ಬಡ್ಡಿ ಕೊಡುವೆನೆಂದೂ ಬರೆದಿದೆ. ನನಗಿನ್ನೂ ಕೈಗೆ ಹಣ ಬಂದಿಲ್ಲ. ಬರುವ ತಿಂಗಳು ಕೆಲವು ಬಂಗಲೆಗಳನ್ನು ಮಾರಬೇಕೆಂದಿರುವೆನು. ...." ಎಂದು ಮೊದಲಾಗಿ ಹೇಳಿದನು. ಆತನ ಭಾಷಣವು ಶಂಕರರಾಯರಿಂದ ಸಿದ್ಧಮಾಡಲ್ಪಟ್ಟಿದ್ದು ಎಂಬುದೇನೋ ನನಗೆ ಚೆನ್ನಾಗಿ ಗೊತ್ತಾಯಿತು. ಆದರೆ ನನಗೆ ಏನು ಹೇಳಲೂ ಬಾಯೇ ಬರಲಿಲ್ಲ. ನಡೆದ ಸಂಗತಿಗಳೆಲ್ಲಾ ನನಗೆ ಮಹದಾಶ್ಚರ್ಯಗಳಾಗಿ ಕಂಡುಬಂದುವು. ನಾನು ವಿಸ್ಮಯ ಮೂಕನಾದೆ.

ಈಗ, ತಿಂಗಳು ತಿಂಗಳಿಗೆ ಸರಿಯಾಗಿ ಬಡ್ಡಿ ಬರುತ್ತಿದೆ. ಯಾವ ಇಚ್ಛೆಯು ಮೊದಲು ನನ್ನನ್ನು ಪ್ರೇರೇಪಿಸಿತೋ ಅದರ ಮೇಲೆಯೇ ಭಾರ ಹಾಕಿ ನಿಶ್ಚಿಂತನಾಗಿರುವೆನು. ನನ್ನ ಗೆಳೆಯರೊಬ್ಬರು ಈ ಕತೆ ಕೇಳಿ "ಅಯ್ಯೋ ನೀವು ಮಾಡಿದ ಕೆಲಸ ತಪ್ಪು. ಇನ್ನೂ ಸ್ವಲ್ಪ ಪ್ರಯತ್ನ ಮಾಡಿದ್ದರೆ ಅವನಿಂದ ನಾಲ್ವತ್ತು ಸಾವಿರ ರೂಪಾಯಿಗಳನ್ನು

ನಸೂಲ್ಮಾಡಬಹುದಾಗಿತ್ತು.'' ಎಂದರು. ಮತ್ತೆ ಕೆಲವರು, ನವಾಬನು ಠಕ್ಕನೆಂದೂ, ಮೋಸಗಾರನೆಂದೂ, ಎಂಟುನೂರೈವತ್ತು ರೂಪಾಯಿ ಕೊಟ್ಟು ನನ್ನನ್ನು ಮರುಳು ಮಾಡಿರುವನೆಂದೂ ಹೇಳುತ್ತಿರುವರು. ಅವರೆಲ್ಲಾ ನನ್ನ ಆಪ್ತರೇ ಹೌದು!

೬

ಮಾಧವರಾಯರು ಈ ಕತೆಹೇಳಿ ಮುಗಿಸಿದ ಮೇಲೆ, ನಾವೆಲ್ಲ ನಿಟ್ಟುಸಿರು ಬಿಟ್ಟೆವು. ನಮಗೆ ಮಾಧವರಾಯರನ್ನು ಹೊಗಳಬೇಕೋ ನವಾಬನನ್ನು ಹೊಗಳಬೇಕೋ ಗೊತ್ತಾಗಲಿಲ್ಲ. ಮಾಧವರಾಯರೇನೋ ತಾನು ಮಾಡಿದ ಕಾರ್ಯವೆಲ್ಲಾ ಸ್ವಾರ್ಥಕ್ಕಾಗಿ ಎಂದು ಹೇಳಿಬಿಟ್ಟರು. ನವಾಬನಾದರೋ ಏನೂ ತಿಳಿಯದ ಸರಳಹೃದಯನಾದರೂ, ಶಂಕರರಾಯರಂಥಾ ಜನರು ಯುಕ್ತಿಯನ್ನು ಬೋಧಿಸಿದರೆ ಅಂತೆಯೇ ಎಸಗಲು ಹಿಂಜರಿಯುವವನಲ್ಲ. ಅಂತೂ ಸಮಸ್ಯೆಯನ್ನು ಭೇದಿಸಲು ನಮ್ಮಿಂದಾಗಲಿಲ್ಲ.

''ಕೆಲವು ಕಾರ್ಯಗಳನ್ನು ನಾವೇ ಮಾಡುವೆವಾದರೂ ಮಾಡಿಸುವುದು ನಮ್ಮಿಚ್ಛೆಯಲ್ಲ'' ಎಂದರು ಮಾಧವರಾಯರು.

ಅಷ್ಟು ಹೊತ್ತಿಗೆ ಬಿಸಿಲೇರಿ ಊಟದ ಸಮಯವಾಗಿತ್ತು. ಮಾಧವರಾಯರು ಆಫೀಸಿಗೆ ಹೋಗಲು ಹೊತ್ತಾಗುವುದೆಂದು ಹೇಳಿ ಎದ್ದು ಹೋದರು.

ಕೆ. ವಿ. ಪುಟ್ಟಪ್ಪ.

ಕಾವ್ಯಾವಲೋಕನ

ಸತ್ಯಶೋಧನೆ—(ಮಹಾತ್ಮಾ ಗಾಂಧಿಯವರ ಆತ್ಮಕಥೆ) ೧, ೨, ೩ನೆಯ ಭಾಗಗಳು 'ಕನ್ನಡಿಗರಿಬ್ಬ'ರಿಂದ. ಕ್ರೌನ್ ಅಷ್ಟಪತ್ರ ; ಪುಟಗಳು ೧೮೦, ೧೯೯. ೧೪೦; ಬೆಲೆ ೦–೧೨–೦, ೦_೧೨–೦, ೦–೯–೦.

ಜೀವನ ಚರಿತ್ರೆಗಳೇ ನಮ್ಮ ದೇಶಕ್ಕೆ ಹೊಸವು. 'ಆತ್ಮಕಥೆ' ಗಳಂತೂ ಇರಲೇ ಇಲ್ಲ. 'ಆತ್ಮಕಥೆ' ಎಂಬ ಪದಕ್ಕೆ ಎರಡರ್ಥ ಹೇಳಬಹುದು: ಒಬ್ಬ ಮಹಾ ಪುರುಷರ ಮೂರ್ತಿತ್ವವು ಹೇಗೆ ಬೆಳೆಯಿತು ಅವರ ಆತ್ಮವು ಹೇಗೆ ಪ್ರಬುದ್ಧವಾಯಿತು ಎಂಬ ಕಥೆ ಒಂದು ; ತಾವೇ ಬರೆದ ತಮ್ಮ ಕಥೆ ಎಂಬುದು ಇನ್ನೊಂದು. ಗಾಂಧೀಜೀಯವರ ಗ್ರಂಥಕ್ಕೆ ಈ ಎರಡು ಅರ್ಥಗಳೂ ಒಪ್ಪುತ್ತವೆ. ವ್ಯಕ್ತಿಪರಿಚಯ ಇದ್ದವರೊ ಇಲ್ಲದವರೊ ತಕ್ಕಷ್ಟು ಸಾಮಗ್ರಿಗಳನ್ನು ಸೇರಿಸಿಕೊಂಡು ಹೇಗೆ ಇತರರ ಜೀವನ ಚರಿತ್ರೆಗಳನ್ನು ಬರೆಯುವರೊ ಅದೇ ರೀತಿ ಇವರೂ ತಮ್ಮ ಕಥೆಯನ್ನು ಬರೆದುಕೊಳ್ಳಬಹುದು. ಅಥವಾ, ತಮ್ಮ ಡಯರಿಗಳನ್ನೊ, ಕಾಗದ ಪತ್ರಗಳನ್ನೊ, ನೆನಪುಗಳನ್ನೊ ಕೂಡಿಸಿ ತಮ್ಮ ಬೆಳವಣಿಗೆಯ ಕ್ರಮವನ್ನೂ ಮಾರ್ಗವನ್ನೂ ತಿಳಿಸಿ ತಮ್ಮ ಕುಲ, ವಂಶ, ಆವರಣ, ಹುಟ್ಟುಕಾಲ, ಸಂಬಂಧಿಗಳು, ಬಾಲ್ಯ, ವಿದ್ಯಾಭ್ಯಾಸ, ಮನೆಯಲ್ಲಿನ ಜನರ ಶೀಲಸ್ವಭಾವ ಆಚಾರಗಳು, ತಮ್ಮ ಗುರಿ ಉದ್ದೇಶಗಳು, ತಾವು ಕೆಲಸಮಾಡಿದ ಸಂಸ್ಥೆಗಳು, ಕೂಡಿ ಆಡಿದ ಜನರ ಸ್ವಭಾವ, ಸಹಾಯ, ತಮಗೆ ಪರಿಚಿತರಾದ ದೊಡ್ಡ ಮನುಷ್ಯರ ಪ್ರಭಾವ, ಕಾರ್ಯಕಲಾಪಗಳಿಂದ

ತಮ್ಮ ಸತ್ಯವು ರೂಪುಗೊಂಡ ರೀತಿ, ಒದಗಿದ ಸನ್ನಿವೇಶಗಳೂ ಆವಶ್ಯಕತೆಗಳೂ ತಮ್ಮ ಜೀವನದ ಯಾವ ಗುಣಗಳನ್ನು ಪ್ರಯೋಗಕ್ಕೆ ತಂದವೆಂಬ ವಿಚಾರ, ಮುಖ್ಯವಾಗಿ ತಮ್ಮ ಪೌರುಷವೂ ಚಾರಿತ್ರವೂ ಬೆಳೆದ ರೀತಿ ಇವು ಸ್ಪಷ್ಟವಾಗುವಂತೆ ಬರೆಯಬಹುದು. ಇವರಿಗೆ ಒಂದು ಅನುಕೂಲವಿರುತ್ತದೆ. ಇತರರು ಕಷ್ಟಪಟ್ಟು ತಿಳಿದು ಕೂಡಿಸಬೇಕಾದ ಅನೇಕ ವಿಷಯಗಳು ಇವರ ಸ್ವಂತ ಅನುಭವದಲ್ಲಿಯೇ ಇರುತ್ತವೆ. ಇದರಿಂದ ಪ್ರತಿಕೂಲವೂ ಒಂದುಂಟು : ತಮಗೆ ಸಂಬಂಧಪಟ್ಟ ಅನೇಕ ಸಂಗತಿಗಳಿಗೆ ಸರಿಯಾದ ಬೆಲೆ ಕಟ್ಟಿ ನಿಷ್ಪಕ್ಷಪಾತದಿಂದ ಅವನ್ನು ತೂಗಿ ಕೇವಲ ಸತ್ಯವನ್ನೇ ಬರೆಯುವುದು ಅನೇಕವೇಳೆ ಕಷ್ಟವಾದೀತು. ಅವರ ಕಣ್ಣಿಗೆ ಹಿರಿದಾಗಿಯೊ ಕಿರಿದಾಗಿಯೊ ಕಂಡ ವಿಷಯಗಳ ಗೌರವವು ಕಾಲಕ್ರಮದಲ್ಲಿ ವ್ಯತ್ಯಾಸ ಹೊಂದಿ ನಮಗೆ ಆ ವಿಚಾರವಾಗಿ ಹೊಸ ಬೆಳಕನ್ನು ಹಾಯಿಸಬಹುದು. ತಮ್ಮ ಜೀವಮಾನದಲ್ಲಿ ನಡೆದ ಸಂಗತಿಗಳಿಗೂ ತಮ್ಮ ಜೀವನಕ್ಕೂ, ಅತಿ ಹತ್ತಿರದ ಅತಿ ಮಮತೆಯ ಸಂಬಂಧವಿರುವುದು ಹೀಗೆ ಒಂದು ವಿಧದಲ್ಲಿ ಲಾಭ, ಇನ್ನೊಂದು ವಿಧದಲ್ಲಿ ನಷ್ಟ.

ಈ ತೆರನಾದ 'ಕಥೆ'ಗಳನ್ನು ಬರೆಯುವವರು ಎಷ್ಟು ಶುದ್ಧಸತ್ವರಾದರೆ, ನಿಸ್ಪೃಹರಾದರೆ, ಎಷ್ಟು ಸತ್ಯಶೀಲರಾದರೆ ಅಷ್ಟೂ ಅಷ್ಟುಮೇಲು. ಸಣ್ಣ ಜನರು ತಮ್ಮ ಬದುಕಿಗೆ ಇಲ್ಲದ ಮೆರುಗನ್ನು ಕೊಟ್ಟು, ನಿಜವಾದ ವ್ಯಕ್ತಿತ್ವವನ್ನು ಮರೆಸಿ, ನಡೆದುದನ್ನೆಲ್ಲಾ ಹೇಳದೆ, ನಿಜವಲ್ಲದುದನ್ನು ಸೂಚಿಸಿ ಕೃತ್ರಿಮ ಕಲ್ಪನೆಗಳನ್ನು ಉಂಟುಮಾಡಲು ಆತ್ಮ ಕಥೆಗಳಲ್ಲಿ ಅವಕಾಶ ಹೆಚ್ಚು. ಆದುದರಿಂದ ಇವುಗಳನ್ನು ಬರೆಯುವ ಅಧಿಕಾರ ಎಲ್ಲರಿಗೂ ಇಲ್ಲ. ಬರೆಯುವ ಶಕ್ತಿ ಇರುವವರೆಲ್ಲರೂ ಬರೆಯಕೂಡದು. ಆತ್ಮಕಥೆಯನ್ನು ಅಹಂಕಾರದ ಖನಿಯನ್ನಾಗಿ ಮಾಡಬೇಕೆಂಬುವ ಮನಸ್ಸಿನ ಪ್ರವೃತ್ತಿಯನ್ನು ತಡೆಯುವ ಶಕ್ತಿಯುಳ್ಳ, ಸತ್ಯ ಪ್ರತಿಪಾದನೆಯೇ ಮುಖ್ಯ ಧ್ಯೇಯವಾಗಿರುವವರು ಮಾತ್ರ—ತಮ್ಮ ಜೀವನಚರಿತ್ರೆಯಿಂದ

ಇತರರಿಗೆ ಮಾನವ ಹೃದಯದ ರಹಸ್ಯಗಳಾಗಲಿ ಲೌಕಿಕ ವ್ಯವಹಾರ ಜ್ಞಾನವಾಗಲಿ ಧರ್ಮದ ನಿಜಸ್ವರೂಪವಾಗಲಿ ಗೊತ್ತಾಗುವ ಹಾಗಿದ್ದರೆ ಮಾತ್ರ, ಈ ಸಾಹಸಕ್ಕೆ ಕೈ ಹಾಕಬೇಕು. ಗಾಂಧೀಜೀ ಯವರು ಇಂತಹ ಮಹಾನುಭಾವರೆಂಬುದರಲ್ಲಿ ಯಾರಿಗೂ ಸಂಶಯ ವಿಲ್ಲ. ಇವರು ಧರ್ಮಮೂರ್ತಿಗಳು; ನಮ್ಮ ಜನಾಂಗದ ಆತ್ಮ ಸಾಕ್ಷಿಯಂತಿರುವರು; ನಮ್ಮ ದೇಶದ ನಾಗರಿಕತೆಗೂ ಭಾರತ ಸಂಸ್ಕೃತಿಗೂ ಪ್ರತಿನಿಧಿಗಳಂತಿರುವರು; ಇವರ ಜೀವನದಿಂದ ಎಲ್ಲರ ಜೀವನಕ್ಕೂ ಬೆಳಕು ಬರುವುದು ಖಂಡಿತ. ಇಂತಹವರ ಕಥೆಯು ದೇಶಹಿತಸಾಧಕವಾದುದು. ದೇಶದಲ್ಲಿ ಶುಚಿಜೀವನವು ಸ್ಥಾಪಿತ ವಾಗುವುದಕ್ಕೂ ಕರ್ತವ್ಯಬೋಧೆ ಮಾಡುವುದಕ್ಕೂ ಶ್ರೇಷ್ಠ ಸಹಾ ಯಕಾರಿಯಾದುದು.

ನಮ್ಮ ದೇಶದ್ದು ಈಗ ಬಹು ವಿಷಮಸ್ಥಿತಿ. ಇದು ಎರಡು ಮೂರು ನಾಗರಿಕತೆಗಳು ಸಂಧಿಸಿ ಕೋಟಲೆಯಲ್ಲಿರುವ ಕಾಲ. ಇಂತ ಹವರು ಮುಂದೆ ಬಂದು ತಮ್ಮ ಉಪದೇಶದಿಂದಲೂ, ಬದುಕಿನಿಂ ದಲೂ ಸ್ವಧರ್ಮ ತತ್ವಗಳಿಗೆ ತಕ್ಕ ವ್ಯಾಖ್ಯಾನಗಳನ್ನು ಮಾಡಿ ತೋರಿಸಿ, ಜನರಿಗೆ ಧರ್ಮ ಸೂಕ್ಷ್ಮಗಳನ್ನು ತಿಳಿಸಿಕೊಟ್ಟು ಒಮ್ಮೊ ಗದ ಕಾರ್ಯಕ್ಕೆ ತಿರುಗಿಸಬಲ್ಲವರು ಇಂತಹವರೇ. ಇವರು ಸತ್ಯ ನಿಷ್ಠರು, ಅಹಿಂಸಾಧರ್ಮದೀಕ್ಷಿತರು; ಕರ್ಮಪ್ರವರ್ತಕರು. ಯಾವುದನ್ನೂ ಮುಚ್ಚದೆ, ಯಾವುದನ್ನೂ ಮರೆಸದೆ ಏತಕ್ಕೂ ಹೆದ ರದೆ ನಿಜವನ್ನು ನಿರ್ಧರಿಸಲು ತಾವು ಮಾಡಿದ ಶೋಧನೆಗಳನ್ನು ನಮಗೆ ತಿಳಿಸಿ, ತಮ್ಮ ಅನುಭವದ ಸಾರವನ್ನು ಅವರು ಈರೀತಿ ಒದಗಿಸಿರುವುದು ನಮ್ಮ ಸೌಭಾಗ್ಯ. ಒಂದು ವಿಧದಲ್ಲಿ ನೋಡಿದರೆ ಇವರ ಚರಿತ್ರೆಯು ಈಗಿನ ನಮ್ಮ ದೇಶದ ಸಂಕ್ಷಿಪ್ತ ಚರಿತ್ರೆಯಾಗಿ ರುವುದು. ಈ ಕಾಲದ ಚರಿತ್ರೆಯನ್ನು ಮುಂದೆ ಯಾರೇ ಬರೆಯಲಿ ಇವರ ಬದುಕು ಇವರ ಕೆಲಸಗಳ ಪ್ರಭಾವದಿಂದ ದೇಶದಮೇಲೆ— ದೇಶದ ಎಲ್ಲ ಸಂಸ್ಥೆ, ಚಳವಳಿ, ವ್ಯವಹಾರ ಉದ್ಯೋಗಗಳಮೇಲೆ

ಯಾವ ಪರಿಣಾಮಗಳು ಉಂಟಾಗಿವೆ ಎಂಬುದನ್ನು ತಿಳಿಸದೆ ಮುಂದು ವರಿಯುವುದು ಅಸಾಧ್ಯ.

ಅನೇಕ ಕನ್ನಡಿಗರಿಗೆ ತಿಳಿಯದ ಇಂಗ್ಲಿಷ್, ಹಿಂದೀ, ಗುಜರಾತೀ ಭಾಷೆಗಳಲ್ಲಿ ಇದ್ದುದನ್ನು ಕನ್ನಡಕ್ಕೆ ಪರಿವರ್ತಿಸಿ, ಇಷ್ಟು ಅಂದವಾಗಿ, ಇಷ್ಟು ಸರಳವಾಗಿ ಇಷ್ಟು ಸುಲಭ ಬೆಲೆಗೆ ನಮಗೆ ದೊರಕಿಸಿಕೊಟ್ಟ "ಕನ್ನಡಿಗರಿಬ್ಬರಿ"ಗೆ ನಾವು ಎಷ್ಟು ಋಣಿಗಳಾಗಿದ್ದರೂ ತೀರದು. ಭಾಷಾಂತರವು ಮೂಲದ ಅರ್ಥಸ್ವಾರಸ್ಯಗಳನ್ನೆಲ್ಲಾ ತೋರಿಸುತ್ತದೆ. ಎಲ್ಲ ಅಂಶಗಳಲ್ಲಿಯೂ ಸಮರ್ಪಕವಾಗಿದೆ. ಒಂದನೆಯ ಭಾಗಕ್ಕಿಂತ ಎರಡನೆಯ ಭಾಗದಲ್ಲಿಯೂ ಅದಕ್ಕಿಂತ ಮೂರನೆಯ ಭಾಗದಲ್ಲಿಯೂ ಇವರ ಪರಿವರ್ತನಕೌಶಲವೂ ಸೌಲಭ್ಯವೂ ಹೆಚ್ಚಿವೆ. ಇಂಗ್ಲಿಷಿನಲ್ಲಿರುವ ಕೆಲವು ಭಾಗಗಳನ್ನು ನಮ್ಮ ಭಾಷೆಯ ಮರ್ಯಾದೆಗೆ ಸ್ವಭಾವವಾಗಿ ಹೊಂದುವಂತೆ ಬರೆಯುವುದು ಬಹುಕಷ್ಟವೆಂದು ತಿಳಿದಿರುವವರೂ ಇದನ್ನು ಕೊಂಡಾಡುವಂತಿದೆ.

ಪುಸ್ತಕಗಳ ಮುದ್ರಣ, ಬೈಂಡು ಅಂದವಾಗಿವೆ. ಅವುಗಳ ಕೊನೆಯಲ್ಲಿ ವಿಶೇಷವಿಷಯಗಳಿಗೆ ಸಂಬಂಧಪಟ್ಟ ಟಿಪ್ಪಣಿಗಳಿವೆ. ಇದನ್ನು ಎಲ್ಲಾ ಕನ್ನಡಿಗರೂ ಅಗತ್ಯವಾಗಿ ಕೊಂಡು, ಓದಿ, ಗ್ರಹಿಸಿ ಇಲ್ಲಿನ ತತ್ವಗಳನ್ನು ರಕ್ತಗತ ಮಾಡಿಕೊಂಡು ತಮ್ಮ ಜೀವನವನ್ನು ತಿದ್ದಿಕೊಳ್ಳುವರೆಂದು ನಂಬಿದ್ದೇವೆ.

ವಿ. ಸೀ.

ಆಂಡ್ರೂ ಕಾರ್ನೆಗಿ — ಮ॥ ರಾ॥ ಜಿ. ಆರ್. ಜೋಸ್ಯರ್, ಎಂ. ಎ., ಎಫ್. ಆರ್. ಇ. ಎಸ್. ಅವರಿಂದ; ಕ್ರೌನ್ ಪುಟಗಳು ೬೦. ಬೆಲೆ ೬ ಆಣೆ.

ಒಂದು ದೇಶವು ಅಭ್ಯುದಯಕ್ಕೆ ಬಂದು ಇತರ ದೇಶಗಳಿಂದ ಗಣ್ಯತೆಯನ್ನು ಹೊಂದಿ ಅವುಗಳೊಂದಿಗೆ ಸಮಸ್ಥಾನವನ್ನು ಪಡೆಯಬೇಕಾದರೆ ಬಗೆಬಗೆಯ ಮಹಾಪುರುಷರ ಉಪಕಾರವು ಲಭಿಸಬೇಕು. ದೇಶದ ರಾಜಕೀಯ ಪರಿಸ್ಥಿತಿಗಳನ್ನೂ ವ್ಯವಸ್ಥೆಗಳನ್ನೂ ಪದೇಪದೇ ವಿಚಾರಮಾಡಿ ಅವುಗಳ ನ್ಯೂನಾತಿರೇಕಗಳಿಗೆ ತಮ್ಮ ಬುದ್ಧಿಶಕ್ತಿಯಿಂದ ನಿವಾರಣೋಪಾಯಗಳನ್ನು ಕಂಡುಹಿಡಿದು ಧೈರ್ಯೋತ್ಸಾಹಗಳಿಂದ ಕಾರ್ಯತಃ ಸಫಲಗೊಳಿಸಿ ಜನರ ಅನುಕೂಲ್ಯಗಳನ್ನು ಹೆಚ್ಚಿಸಬಲ್ಲ ರಾಜ್ಯಪರಿಷ್ಕಾರಕರು ಬೇಕು. ದೇಶದ ಆರ್ಥಿಕಸ್ಥಿತಿಯನ್ನು ಪರೀಕ್ಷಿಸಿ ವಿಜ್ಞಾನದ ಹೊಸಹೊಸ ಮಾರ್ಗಗಳನ್ನವಲಂಬಿಸಿ ದೇಶದಲ್ಲಿನ ಸಾಧನಸಂಪತ್ತಿಗಳಿಂದ ಕೈಗಾರಿಕೆ ವಾಣಿಜ್ಯಗಳನ್ನು ಹೆಚ್ಚಿಸಿ ಜನಸಾಮಾನ್ಯದ ಜೀವನ ಮಾರ್ಗಗಳನ್ನು ಉನ್ನತಿಗೊಳಿಸಿ ದೇಶದ ಸಂಪದಭಿವೃದ್ಧಿಯನ್ನು ಹೆಚ್ಚಿಸಬಲ್ಲ ಬುದ್ಧಿವಂತರೂ ಉದ್ಯೋಗಶೀಲರೂ, ಸಾಹಸವಂತರೂ ಬೇಕು. ಹಾಗೆಯೇ, ಜನಾಂಗದ ಆಚಾರ ವ್ಯವಹಾರಗಳಲ್ಲಿನ ಕುಂದು ಕೊರತೆಗಳನ್ನು ಚರ್ಚಿಸಿ ತಮ್ಮ ವಿವೇಚನಾಶಕ್ತಿಯಿಂದ ಅವುಗಳಿಗೆ ಪರಿಹಾರ ಮಾರ್ಗಗಳನ್ನು ಕಲ್ಪಿಸಿ ಅವುಗಳು ಪ್ರಚಾರಕ್ಕೆ ಬರುವಂತೆ ಮಾಡಿ ಜೀವನ ಕ್ರಮವನ್ನು ಸರಿಪಡಿಸಬಲ್ಲ ಸಮಾಜಸಂಸ್ಕಾರಕರೂ ಬೇಕು. ಆದರೂ ಈ ಮೂರು ಬಗೆಯ ದೇಶಸೇವಕರಲ್ಲಿ ಸಾಮಾನ್ಯವಾಗಿ, ರಾಜ್ಯಪರಿಷ್ಕಾರಕನಿಗೆ ಸಲ್ಲುವಷ್ಟು ಪ್ರಶಸ್ತಿಯು ಇತರರಿಗೆ ದೊರೆಯಲಾರದು. ಸಂಪದಭಿವೃದ್ಧಿಯೂ ಸಮಾಜ ಸುಸ್ಥಿತಿಯೂ ರಾಜಕೀಯ ವ್ಯವಸ್ಥೆಯನ್ನನುಸರಿಸಿರುವುದೇ ಇದಕ್ಕೆ ಕಾರಣವೆಂದು ಊಹಿಸಬಹುದು. ಆದರೂ ದೇಶದ ಸಂಪತ್ತನ್ನು ಹೆಚ್ಚಿಸಿ ಇತರ ದೇಶಗಳ ಮಾನ್ಯತೆಗೆ ಪಾತ್ರವಾಗುವಂತೆ ಮಾಡುವ ಮಹನೀಯನನ್ನು ಉಜ್ವಲ ದೇಶಭಕ್ತನೆನ್ನಬಹುದಲ್ಲವೆ ?

ಆಂಡ್ರೂ ಕಾರ್ನೆಗಿಯು ಅಮೆರಿಕದ ಕೋಟ್ಯಧೀಶ್ವರರಲ್ಲಿ ಒಬ್ಬ. ಈತನು ಜನ್ಮತಃ ಶ್ರೀಮಂತನಾಗಿ ಹುಟ್ಟಲಿಲ್ಲ. ಅವನ ತಂದೆಗೆ ಸ್ಕಾಟ್ಲಂಡಿನಲ್ಲಿ ಜೀವನ ಜರುಗದೆ ಅಮೆರಿಕದಲ್ಲಿ ಹೋಗಿ ನೆಲಸಿದನು. ಕಾರ್ನೆಗಿಯು ತನ್ನ ತಂದೆಯು ಕೆಲಸಮಾಡುತ್ತಿದ್ದ ಬಟ್ಟೆಯ ಕಾರ್ಖಾನೆಯಲ್ಲಿ ೩||| ರೂಪಾಯಿಗಳ ಕೂಲಿಗೆ ಸೇರಿದನು. ಒಂದು ವರ್ಷದನಂತರ ತಂತಿಯ ವರ್ತಮಾನಗಳನ್ನು ತಲಪಿಸುವ ಆಳಾಗಿ ೯ ರೂಪಾಯಿಗಳಿಗೆ ಸೇರಿದನು. ಈ ಕೆಲಸದಲ್ಲಿದ್ದಾಗ ಅವನಿಗೆ ಸ್ವಲ್ಪ ವಿರಾಮ ಸಿಕ್ಕುತ್ತಿತ್ತು. ಹೀಗೆ ದೊರೆತ ವಿರಾಮವನ್ನು ವೃಥಾ ಕಳೆಯದೆ ಪುಸ್ತಕಗಳನ್ನು ಎರವಲು ತಂದು ಓದಿ ಜ್ಞಾನಾರ್ಜನೆ ಮಾಡುತ್ತಿದ್ದನು. ಕೆಲವು ದಿನಗಳಲ್ಲಿಯೇ ತಾನೂ ತಂತಿ ಹೊಡೆಯುವುದನ್ನು ಕಲಿತನು. ಇವನು ತನ್ನ ನಡೆನುಡಿ, ಚಟುವಟಿಕೆ, ಕಾರ್ಯತತ್ಪರತೆ ಇವುಗಳಿಂದ ಅಧಿಕಾರಿಯ ಮೆಚ್ಚಿಕೆಯನ್ನು ಸಂಪಾದಿಸಿ ಕೆಲವು ವರ್ಷಗಳಲ್ಲಿಯೇ ೭೦ ರೂಪಾಯಿಗಳ ಸಂಬಳದ ತಂತಿ ಕಛೇರಿಯ ಅಧಿಕಾರಿಯಾದನು. ಸ್ವಲ್ಪದಿನಗಳಲ್ಲಿಯೇ ರೆಯಿಲ್ವೆಗಳ ತಂತಿ ಕಛೇರಿಯಲ್ಲಿ ೧೨೦ ರೂ. ಗಳು ದೊರೆತವು. ಅಲ್ಲಿದ್ದಾಗ ೨೦೦೦ ರೂ. ಗಳನ್ನು ಸಾಲಮಾಡಿ ರೆಯಿಲ್ವೆ ಕಂಪೆನಿಯಲ್ಲಿ ಹತ್ತು ಷೇರುಗಳನ್ನು ಕೊಂಡು ಅದರಲ್ಲಿ ಬಂದ ಬಡ್ಡಿಯಿಂದ ಸಾಲವನ್ನು ತೀರಿಸಿದನು. ಅದರಲ್ಲಿನ ಬಡ್ಡಿಯ ಹಣವು ಶೇಖರವಾದನಂತರ, ಕಾರ್ನೆಗಿಯೂ ಅವನ ಸ್ನೇಹಿತರೂ ಸೇರಿ ಸೀಮೆ ಎಣ್ಣೆಯ ಗಣಿಯನ್ನು ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳಿಗೆ ಕೊಂಡರು. ಇದರಿಂದ ಒಂದು ವರ್ಷದ ಉತ್ಪತ್ತಿಯೇ ೨೮ ಲಕ್ಷ ರೂ. ಗಳು ಬಂದುವು. ಆದರೆ ಕಾರ್ನೆಗಿಯು ಎಣ್ಣೆ ಕಂಪೆನಿಯ ಸರ್ವಾಧಿಕಾರವನ್ನೂ ರಾಕ್ಫೆಲ್ಲರಿಗೆ ಮಾರಿ ತನ್ನ ಕಾರ್ಯಶೀಲತೆಗೆ ಬೇರೆ ಕ್ಷೇತ್ರವನ್ನು ಕಲ್ಪಿಸಿಕೊಂಡನು. ಆಗ ಅಮೆರಿಕದಲ್ಲಿ ರೆಯಿಲುಗಳವರು ನದಿಗಳಮೇಲೆ ಮರದ ಸೇತುವೆಗಳಿಗೆ ಬದಲಾಗಿ ಕಬ್ಬಿಣದ ಸೇತುವೆಗಳನ್ನು ಕಟ್ಟಬೇಕೆಂದು ಯೋಚಿಸುತ್ತಿದ್ದರು. ಕಾರ್ನೆಗಿಯು

ಅದಕ್ಕಾಗಿ ಒಂದು ಕಬ್ಬಿಣದ ಕಾರ್ಖಾನೆಯನ್ನು ಏರ್ಪಡಿಸಿದನು. ಈ ಕಾರ್ಖಾನೆಯು ಅಭಿವೃದ್ಧಿ ಹೊಂದಿ ಸ್ಥಿರವಾಗಿ ನಿಂತಮೇಲೆ ತನ್ನ ರೆಯಿಲ್ವೆಯಲ್ಲಿನ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು ತಾನೇ ಮೇಲ್ವಿಚಾರಣೆಗೆ ನಿಂತನು. ಇದಾದ ಸ್ವಲ್ಪ ಕಾಲಕ್ಕೆ ಉಕ್ಕನ್ನು ತಯಾರುಮಾಡುವುದು ಪ್ರಚಾರಕ್ಕೆ ಬಂದುದರಿಂದ ಕಾರ್ನೆಗಿಯು ತನ್ನ ಕಾರ್ಖಾನೆಯಲ್ಲಿ ಕಬ್ಬಿಣವನ್ನು ಬಿಟ್ಟು ಉಕ್ಕನ್ನು ತಯಾರ್ಮಾಡಲು ಉಪಕ್ರಮಿಸಿದನು. ಈ ವೇಳೆಗೆ ಕಾರ್ನೆಗಿಗೆ ಲಕ್ಷಾಂತರ ರೂಪಾಯಿಗಳು ಉತ್ಪತ್ತಿಯಾಗುತ್ತಿತ್ತು. ಆದರೆ ಅವನು ಅಷ್ಟರಿಂದ ತೃಪ್ತನಾಗದೆ ಸಾಹಸದಿಂದಲೂ ಉತ್ಸಾಹದಿಂದಲೂ ಹೊಸಹೊಸ ಮಾರ್ಗಗಳನ್ನು ಕಂಡು ಹಿಡಿದು ಕೈಗಾರಿಕೆಗಳಿಗೆ ಅಗ್ರಗಣ್ಯನಾಗಬೇಕೆಂದೂ ಸಾವಿರಾರು ಜನರಿಗೆ ಉದ್ಯೋಗಗಳನ್ನು ಕಲ್ಪಿಸಬೇಕೆಂದೂ ಸಂಕಲ್ಪಿಸಿದನು. ವಿಸ್ತಾರವಾದ ಕಬ್ಬಿಣ ಕಲ್ಲಿದ್ದಲು ಗಣಿಗಳನ್ನು ಕೊಂಡುಕೊಂಡನು. ೧೯೦೦ ರ ವೇಳೆಗೆ ಅವನು ಏಳು ದೊಡ್ಡ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿಗೂ ವಿಸ್ತಾರವಾದ ಕಲ್ಲಿದ್ದಲು ಗಣಿಗಳಿಗೂ ಅಧಿಕಾರಿಯಾದನು. ಆಗ ಅವನ ಸಕಲ ಆಸ್ತಿಯಬೆಲೆಯೂ ೩೮ ಕೋಟಿ ರೂಪಾಯಿಗಳು. ಇದರಿಂದ ವರ್ಷಕ್ಕೆ ೧೩–೧೪ ಕೋಟಿ ರೂಪಾಯಿಗಳು ಲಾಭ ಬರುತ್ತಿದ್ದುವು. ಅವನ ಕಾರ್ಖಾನೆಗಳಲ್ಲಿ ೪೦,೦೦೦ ಜನರು ಕೆಲಸಮಾಡುತ್ತಿದ್ದರು. ಇಷ್ಟು ಅದ್ಭುತವಾದ ಕಾರ್ಖಾನೆಗಳನ್ನು ತನ್ನ ಮೇಧಾಶಕ್ತಿ, ಸಾಹಸ, ಉತ್ಸಾಹ, ಸ್ವಪ್ರಯತ್ನಗಳಿಂದ ನೆಲೆಗೊಳಿಸಿ "ಲೋಹದ ಒಡೆಯ" ನೆನಿಸಿಕೊಂಡನು. ಕಡೆಗೆ ಇಷ್ಟನ್ನೂ ೭೫ ಕೋಟಿ ರೂ. ಗಳಿಗೆ ಬೆಲೆಕಟ್ಟಿ ಅದರಿಂದ ವರ್ಷಕ್ಕೆ ೩|||| ಕೋಟಿ ರೂ. ಬಡ್ಡಿ ಬರುವಂತೆ ಒಪ್ಪಂದಮಾಡಿ ಮಾರಿದನು. ಈ ರೀತಿ ಗಳಿಸಿದ ಯಥೇಚ್ಛವಾದ ಹಣದಿಂದ ನಾನಾಬಗೆಯ ಧರ್ಮ ಕಾರ್ಯಗಳನ್ನು ಮಾಡಿ ೧೯೧೯ ರಲ್ಲಿ ಪರಲೋಕವನ್ನೈದಿದನು.

ವ್ಯಾಪಾರದ ಏಳಿಗೆಗೆ ರಹಸ್ಯವೆನಿಸಿದ ಐದು ರೂಪಾಯಿಗಳನ್ನು ಹತ್ತು ರೂಪಾಯಿಗಳನ್ನಾಗಿ ಮಾಡುವ ಗುಣವು ಕಾರ್ನೆಗಿಯಲ್ಲಿದ್ದಂತೆಯೇ ತಾನು ಸಂಪಾದಿಸಿದ ಹಣವನ್ನು ಸದ್ವಿನಿಯೋಗಪಡಿಸುವ ಉದಾರಗುಣವೂ ಇದ್ದಿತು. ದಾನಧರ್ಮಗಳಲ್ಲಿ ನಮ್ಮ ದೇಶದವರ ಮಾರ್ಗಗಳಿಗೂ ಪಾಶ್ಚಾತ್ಯದೇಶಗಳವರಿಗೂ ಸ್ವಲ್ಪ ವ್ಯತ್ಯಾಸವುಂಟು. ಮಠಗಳಿಗೆ ಸಹಾಯ, ಗುಡಿಗೋಪುರಗಳನ್ನು ಕಟ್ಟಿಸುವುದು, ಕೆರೆ ಕಾಲುವೆಗಳನ್ನು ತೋಡಿಸುವುದು, ತೋಪುಗಳನ್ನು ಹಾಕಿಸುವುದು, ಅನ್ನಸತ್ರಗಳನ್ನಿಡಿಸುವುದು ಇವೇ ಪರಮಧರ್ಮ ಕಾರ್ಯಗಳೆಂದು ನಮ್ಮ ದೇಶದಲ್ಲಿನ ಸಾಮಾನ್ಯ ಭಾವನೆ. ಪಾಶ್ಚಾತ್ಯರ ಧರ್ಮಗಳು ಬಹುವಾಗಿ ಈ ರೂಪಗಳನ್ನು ತಾಳದೆ ಪ್ರಜೆಗಳ ಇಹಲೋಕದ ಸುಖ ಸಂಪದಭಿವೃದ್ಧಿಗೂ ದೇಶೋನ್ನತಿಗೂ ಪ್ರಯೋಜನಕಾರಿಗಳಾಗಿ ಪರಿಣಮಿಸುವುವು. ಕೆಲಸಗಾರರು ತಾವು ಮಾಡುವ ಕೆಲಸಕ್ಕೆ ಸಂಬಳಕ್ಕೆ ಮಾತ್ರ ಬಾಧ್ಯರೆಂದೂ ಅವರಿಗೆ ಆದಷ್ಟು ಕಡಿಮೆ ಸಂಬಳವನ್ನು ಕೊಟ್ಟು ಹೆಚ್ಚು ಕೆಲಸ ತೆಗೆದುಕೊಳ್ಳಬೇಕೆಂದು ಭಾವಿಸದೆ ಕೆಲಸಗಾರರಿಗೂ ಅವರ ಕುಟುಂಬಗಳಿಗೂ ಅನುಕೂಲಗಳನ್ನು ಕಲ್ಪಿಸಿ ಅವರ ಮಕ್ಕಳ ವಿದ್ಯಾಭ್ಯಾಸಕ್ಕೂ ರೋಗ ಚಿಕಿತ್ಸೆಗೂ ಏರ್ಪಾಟು ಮಾಡಿ ಅವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಲು ಮಾಡುವ ವೆಚ್ಚವೂ ಧರ್ಮವೆಂದೇ ಗಣಿಸಲ್ಪಡುವುದು. ಕೆಲಸಗಾರರು ಯಂತ್ರಗಳಂತೆ ಆಗುವುದನ್ನು ತಪ್ಪಿಸಿ ಅವರೂ ಇತರ ಮನುಷ್ಯರಂತೆ ವಿನೋದ ಆನಂದಗಳಿಗೆ ಭಾಗಿಗಳೆಂದು ತಿಳಿದು ಅವರಿಗಾಗಿ ವಿಶ್ರಾಂತಿ ಮಂದಿರಗಳನ್ನೂ, ಪುಸ್ತಕಭಂಡಾರಗಳನ್ನೂ, ಸಂಗೀತಶಾಲೆಗಳನ್ನೂ ಏರ್ಪಡಿಸುವುದು ಧರ್ಮಕಾರ್ಯಗಳೆಂದೇ ಭಾವಿಸುವರು. ಕಾರ್ನೆಗಿಯು ಇದಕ್ಕಾಗಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡಿ ಕೆಲಸಗಾರರಲ್ಲಿ ತನಗಿದ್ದ ವಿಶೇಷವಾದ ಅಭಿಮಾನವನ್ನು ಪ್ರಕಾಶಪಡಿಸಿರುವನು. ಹೆನ್ರಿ ಫೋರ್ಡನೂ ಹೀಗೆಯೇ ಎಂದು ಕೇಳಿರುವೆವು. ಇದರಿಂದ ಕೆಲಸಗಾರರು ಮತ್ತಷ್ಟು ಶ್ರದ್ಧೆಯಿಂದ ಕೆಲಸಮಾಡಿ ಕಾರ್ಖಾನೆಗೆ

ಕೀರ್ತಿಯನ್ನೂ ಯಜಮಾನನಿಗೆ ಲಾಭವನ್ನೂ ತರುವರು. ಇಷ್ಟೇ ಅಲ್ಲದೆ, ಆಸ್ಪತ್ರೆಗಳನ್ನು ಕಟ್ಟಿಸುವುದು, ನಗರಾಭಿವೃದ್ಧಿ ಪಾಠಶಾಲೆ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು—ಇವೂ ಕೂಡ ಧರ್ಮಗಳೆಂದೇ ಭಾವನೆ. ಕಾರ್ನೆಗಿಯು ಅಮೆರಿಕದ ಸಂಯುಕ್ತ ಸಂಸ್ಥಾನದ ಜನರಲ್ಲಿ ಜ್ಞಾನಾಧಿಕ್ಯವಾಗುವುದಕ್ಕಾಗಿ ೪೦ ಕೋಟಿ ರೂಪಾಯಿಗಳ ನಿಧಿಯ "ಕಾರ್ನೆಗಿ ಕಾರ್ಪೊರೇಷನ್" ಎಂಬ ಧರ್ಮವನ್ನೂ ಶಾಸ್ತ್ರ ಶೋಧನೆ ಶಾಲೆಗಾಗಿ ಏಳೂವರೆ ಕೋಟಿ ರೂಪಾಯಿನ ಮತ್ತೊಂದು ಧರ್ಮವನ್ನೂ ಮಾಡಿರುವನು. ಹೀಗೆ ಯಥೇಚ್ಛವಾದ ದಾನ ಧರ್ಮಗಳಿಂದ ಕಾರ್ನೆಗಿಯು ಸ್ವಸಾಹಸದಿಂದ ಸಂಪಾದಿಸಿದ ಹಣವನ್ನು ಲೋಕೋಪಕಾರಕ್ಕಾಗಿ ವಿಚಕ್ಷಣೆಯಿಂದ ವಿನಿಯೋಗಪಡಿಸಿದನೆಂಬುದು ವ್ಯಕ್ತವಾಗುವುದು.

ಕಾರ್ನೆಗಿಯು ದೇಶದಲ್ಲಿ ಸಂಪದ್ದಾಯಕವಾದ ಕೈಗಾರಿಕೆಗಳಿಗೆ ಅವಕಾಶ ಕಲ್ಪಿಸಿ ವ್ಯಾಪಾರದಲ್ಲಿ ಅಮೆರಿಕಕ್ಕೆ ಪ್ರಥಮಸ್ಥಾನವನ್ನು ಉಂಟುಮಾಡಿಕೊಡುವುದರಲ್ಲಿಯೇ ವಿಶ್ರಾಂತನಾಗದೆ ರಾಜಕೀಯ ಸ್ಥಿತಿಗತಿಗಳನ್ನು ಪ್ರೇರೇಪಿಸಲೂ ಪ್ರಯತ್ನಪಟ್ಟನು. ಈಗ ಪಾಶ್ಚಾತ್ಯದೇಶಗಳಲ್ಲಿ ಸರಕಾರವು ಸಾಮಾನ್ಯವಾಗಿ ಪ್ರಜಾಯತ್ತವಾದುದು. ಪ್ರಜಾಸಮ್ಮತಿಯು ಪ್ರತಿನಿಧಿಗಳಿಂದ ಸೂಚಿತವಾದರೂ ಸಾಮಾನ್ಯ ಪ್ರಜೆಗಳಿಗೆ ರಾಜಕೀಯ ವಿಷಯಗಳನ್ನು ವಿಚಾರ ಮಾಡಿ ಚರ್ಚಿಸಿ ಯುಕ್ತಾಯುಕ್ತಗಳನ್ನೂ ಸರಿತಪ್ಪುಗಳನ್ನೂ ತಿಳಿಯಪಡಿಸಿ ಒಂದು ಬಗೆಯ ಅಭಿಪ್ರಾಯವನ್ನು ಪ್ರಚಾರಕ್ಕೆ ತರತಕ್ಕವು ದೇಶದ ಮುಖ್ಯವಾದ ದಿನಪತ್ರಿಕೆ, ವಾರಪತ್ರಿಕೆಗಳು. ಆದುದರಿಂದ ಸರಕಾರವು ಬಹುಮಟ್ಟಿಗೆ ಪತ್ರಿಕೆಗಳ ಪ್ರೇರೇಪಣೆಗೆ ಒಳಪಟ್ಟುದೆಂದು ಹೇಳಬಹುದು. ಇದನ್ನು ತಿಳಿದೇ ಕಾರ್ನೆಗಿಯು ಇಂಗ್ಲೆಂಡಿನಲ್ಲಿ ೧೮ ವರ್ತಮಾನಪತ್ರಿಕೆಗಳನ್ನು ಕೊಂಡುಕೊಂಡು ತನ್ನವರ ಮೂಲಕ ನಡೆಸುತ್ತಿದ್ದನು. ಹೆನ್ರಿಫೋರ್ಡನೂ ಇದೇ ರೀತಿ ಒಂದೆರಡು ವರ್ತಮಾನ ಪತ್ರಿಕೆಗಳನ್ನು ತನ್ನ ವಶಪಡಿಸಿಕೊಂಡಿರುವ

ನಂತೆ. ಕಾರ್ನೆಗಿಗೆ ಯುದ್ಧಗಳಲ್ಲಿ ಸರ್ವಥಾ ಅಭಿಮತವಿರಲಿಲ್ಲ. ಎಲ್ಲ ದೇಶದ ಜನರೂ ಪರಸ್ಪರ ಸೌಹಾರ್ದವನ್ನು ಅಭ್ಯಸಿಸಿ ತಮ್ಮ ತಮ್ಮಲ್ಲಿಯೇ ಸಿಕ್ಕತಕ್ಕ ಉಪಪತ್ತಿಗಳನ್ನು ಪುಷ್ಟೀಕರಿಸಿ ಕೈಗಾರಿಕೆ ವ್ಯಾಪಾರಗಳನ್ನು ಹೆಚ್ಚಿಸಿ ಖ್ಯಾತಿ ಪಡೆಯಬೇಕೆಂದು ಭಾವಿಸಿದ್ದನು. ಜನಾಂಗಗಳ ಮೈತ್ರಿಯ ಪ್ರಚಾರಣೆಗಾಗಿ ಒಂದು ಧರ್ಮವನ್ನು ಏರ್ಪಡಿಸಿದನು.

ಈ ಬಗೆಯ ಪುಸ್ತಕಗಳು ನಮ್ಮ ದೇಶದ ಪ್ರಕೃತ ಸ್ಥಿತಿಯಲ್ಲಿ ಆವಶ್ಯಕವಾದುವು. ನಮ್ಮ ರಾಜಕೀಯ ವ್ಯವಸ್ಥೆಗಳು ಹೇಗೆ ಪರದೇಶದವರ ಕೈಯಲ್ಲಿ ಸಿಕ್ಕಿ ನರಳುತ್ತಿವೆಯೋ ಹಾಗೆಯೇ ನಮ್ಮ ಆರ್ಥಿಕ ಸ್ಥಿತಿಯೂ ಅವರ ಹಸ್ತಗತವಾಗಿ ಹಿಂಸೆಪಡುತ್ತಿದೆ. ನಮ್ಮ ದೇಶದಲ್ಲಿ ದೊರೆಯುವ ಕೈಗಾರಿಕೆಗೆ ಅರ್ಹವಾದ ಪದಾರ್ಥಗಳು ವಿದೇಶಗಳಿಗೆ ಸಾಗುವುವು; ನಮ್ಮ ವ್ಯಾಪಾರವು ಪರರಿಂದ ಆಕರ್ಷಿತವಾಗುತ್ತಿದೆ ; ನಮ್ಮಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಿಲ್ಲ; ಇರುವ ಹಲವಕ್ಕೂ ರಾಜಕೀಯ ಸ್ವಾತಂತ್ರ್ಯವಿಲ್ಲದುದರಿಂದ ಉತ್ತೇಜನ ತಪ್ಪಿದೆ. ಹೀಗಿರುವಲ್ಲಿ ಕುಗ್ಗಿರುವ ಜನರ ಜೀವನಮಾರ್ಗವು ಹೇಗೆ ಉತ್ತಮಪಟ್ಟೀತು ; ದೇಶದಲ್ಲಿ ಸಂಪದಭಿವೃದ್ಧಿ ಹೇಗೆ ಆದೀತು ; ನಮಗೆ ಮಾನ್ಯತೆ ಹೇಗೆ ಬಂದೀತು ? ಈ ಸ್ಥಿತಿಯಲ್ಲಿರುವ ನಮಗೆ ಕೈಗಾರಿಕೆ ವಾಣಿಜ್ಯಗಳಲ್ಲಿ ಅಗ್ರಸ್ಥಾನವನ್ನು ಪಡೆದಿರುವ ಪರದೇಶದವರು ತಮ್ಮ ದೇಶದ ಸಂಪತ್ತನ್ನು ರೂಢಿಸಿದ ಆಂತರ್ಯವನ್ನು ತಿಳಿದುಕೊಳ್ಳುವುದು ಮಾರ್ಗದರ್ಶಕವಾಗದೆ ಇರದು. ಇದೂ ಅಲ್ಲದೆ, ನಮ್ಮ ದೇಶದಲ್ಲಿ ಸ್ವತಂತ್ರವಾದ ಹೊಸಹೊಸ ಜೀವನ ಮಾರ್ಗಗಳನ್ನು ಕಲ್ಪಿಸಿಕೊಳ್ಳಬೇಕಾದ ಸಂಭವವು ಹೆಚ್ಚು ಹೆಚ್ಚಾಗಿ ಬರುತ್ತಿದೆ. ಆದುದರಿಂದ ನಮ್ಮ ತರುಣರಲ್ಲಿ ಸ್ವಪ್ರಯತ್ನ, ಉತ್ಸಾಹ, ಸಾಹಸ, ಕಾರ್ಯಶೀಲತೆ ಇವುಗಳು ಹೆಚ್ಚಲು ಸಹಕಾರಿಯಾಗದೆ ಇರದು.

ಗ್ರಂಥಕರ್ತರು "ವ್ಯಾಪಾರ" "ಸಮಾಜೋನ್ನತಿ" ಇವುಗಳನ್ನು ಬರೆದು ಪರಿಚಿತರಾದವರು. ಮ॥ರಾ॥ ಬಿ. ಎಂ. ಶ್ರೀಕಂಠಯ್ಯ

ನವರು ತಮ್ಮ ಪುಟ್ಟ ಮುನ್ನುಡಿಯಲ್ಲಿ "ನವೀನ ಪ್ರಪಂಚದಲ್ಲಿ ಅಭ್ಯುದಯವನ್ನು ಪಡೆದಿರತಕ್ಕ ಜನಾಂಗಗಳ ರಹಸ್ಯವನ್ನು ನಮ್ಮ ಜನಕ್ಕೆ ಸುಲಭವಾದ ಭಾಷೆಯಲ್ಲಿ ಸರ್ವರೂ ತಿಳಿಯುವ ರೀತಿಯಲ್ಲಿ ಬೋಧಿಸುತ್ತಿರುತ್ತಾರೆ. ಪಾರಲೌಕಿಕ ವಿಷಯಗಳಲ್ಲಿ ಹೇಗೆಯೋ ಹಾಗೆ ಐಹಿಕ ವ್ಯಾಪಾರಗಳಲ್ಲಿಯೂ ನಮ್ಮ ಜನರು ಮುಂದಾಳುಗ ಳಾಗಬೇಕೆಂಬುದೇ ಇವರ ಉದ್ದೇಶವಾಗಿರುತ್ತದೆ." ಎಂದು ಬರೆ ದಿರುವರು. ಮ|| ರಾ|| ಜೋಸ್ಯರವರು ಮುಂದೆ ವಾನಮೇಕರ್, ಫೋರ್ಡ್, ರಾಕ್‌ಫೆಲ್ಲರ್, ಲಾರ್ಡ್ ಲಿವರ್ ಹ್ಯೂಂ ಮುಂತಾದವರ ಕಥೆಗಳನ್ನು ಬರೆಯುವುದಾಗಿ ತಿಳಿಸಿರುವರು. ಅವೂ ಇದೇ ರೀತಿಯಲ್ಲಿ ಆದರಣೀಯವಾಗಿರುವುವೆಂಬುದರಲ್ಲಿ ಸಂದೇಹವಿಲ್ಲ.

ಡಿ. ವಿ. ಶೇ.

ನಾಯಾನಿ— (ಪತ್ತೇದಾರಿಯ ಕಾದಂಬರಿ) ಮ|| ಎಂ. ವೆಂಕಟಾದ್ರಿ ಶಾಸ್ತ್ರಿಗಳಿಂದ ಪರಿವರ್ತಿತವಾದದ್ದು: ಕ್ರೌನ್ ಅಷ್ಟಪತ್ರ, ಪುಟಗಳು ೧೦+೩೫೧ ಬೆಲೆ: ರೂ. ೨–೦–೦.

ಇದು "ಮಾಣಿಕ್ಯಮಾಲೆ"ಯ ಐದನೆಯ 'ಮಣಿ'. 'ಸರಳಾ', 'ಸೌದಾಮಿನೀ' ಮುಂತಾದ ಕಾದಂಬರಿಗಳು ಈ ಮಾಲೆಯಲ್ಲಿ ಆಗ ಲೇ ಬಂದಿರುವ ಇತರ 'ಮಣಿ'ಗಳು.

ಈ ಗ್ರಂಥದ ಚರಿತ್ರೆಯನ್ನೂ ಸ್ವರೂಪವನ್ನೂ ಪರಿವರ್ತಕರೇ ತಮ್ಮ 'ವಿಜ್ಞಾಪನೆ' ಯಲ್ಲಿ ಚೆನ್ನಾಗಿ ತಿಳಿಸಿದ್ದಾರೆ. ಅದನ್ನೇ ಇಲ್ಲಿ ಅನುವಾದ ಮಾಡುತ್ತೇವೆ:—

"ಪೋಲೀಸ್ ಇಲಾಖೆಯಲ್ಲಿ ಪತ್ತೇದಾರಿಯ ಶಾಖೆಯೊಂದು ಇರುವಂತೆಯೇ ನವನ್ಯಾಸದಲ್ಲಿ "ಪತ್ತೇದಾರರ ಸಾಹಸ ಕಥೆಗಳು" ಎಂಬ ಸಾಹಿತ್ಯವಿಶೇಷವುಂಟು. ರಹಸ್ಯವಾಗಿ ನಡೆದ ಕೊಲೆ, ಕಳುವು ದರೋಡೆ ಮುಂತಾದುವುಗಳ ಕಾರಣವನ್ನು

ಆಮೂಲಾಗ್ರವಾಗಿ ಶೋಧಿಸಿ, ದೋಷಿಯನ್ನು ದಂಡನೆಗೆ ಗುರಿಪಡಿಸಿದ ಪ್ರಸಿದ್ಧ ಪತ್ತೆದಾರರ ಸಾಹಸಕಾರ್ಯಗಳೂ, ತಾವು ನಿರ್ದೋಷಿಗಳೆಂದು ತೋರ್ಪಡಿಸಿಕೊಳ್ಳುವುದಕ್ಕಾಗಿ ಕೊಲೆಪಾತಕರು ನಡೆಯಿಸುವ ಭಯಂಕರ ಸನ್ನಾಹಗಳೂ ಇಂತಹ ಸಾಹಿತ್ಯದಲ್ಲಿ ಚಿತ್ರಿತವಾಗಿರುತ್ತವೆ. ಇಂತಹ ಪುಸ್ತಕಗಳು ಜನಸಾಮಾನ್ಯರ ವಾಚನಾಭಿರುಚಿಯನ್ನು ವೃದ್ಧಿಗೊಳಿಸುವುದೂ ಅಲ್ಲದೆ ಪ್ರಾಪಂಚಿಕ ವ್ಯವಹಾರದಲ್ಲಿನ ಯುಕ್ತಾಯುಕ್ತ ವಿಚಾರಗಳನ್ನೂ ಸಾಧ್ಯಾಸಾಧ್ಯ ವಿವೇಚನೆಯನ್ನೂ ಅರಿತುಕೊಳ್ಳುವಮಟ್ಟಿಗೆ ಜನರ ಮನಶ್ಶಕ್ತಿಯನ್ನು ವಿಕಸನಗೊಳಿಸತಕ್ಕುವಾಗಿಯೂ ಇರುತ್ತವೆ. ಇಂತಹ ಗ್ರಂಥಗಳು ಪಾಶ್ಚಾತ್ಯ ಸಾಹಿತ್ಯದಲ್ಲಿ ದಿನದಿನವೂ ಪ್ರಕಟವಾಗುತ್ತಿರುವ ಹಾಗೆಯೇ ವಂಗೀಯರು ಕೂಡ ದೇಶೀಯರ ಬುದ್ಧಿಬಲದ ಸುಧಾರಣೆಗಾಗಿ ಇಂತಹ ಪುಸ್ತಕಗಳನ್ನು ಹೇರಳವಾಗಿ ಪ್ರಕಟೀಕರಿಸುತ್ತಿದ್ದಾರೆ.

ಈ ಪುಸ್ತಕದ ಮೂಲಗ್ರಂಥಕಾರರಾದ ಶ್ರೀಯುತ ಬಾಬು ಪಾಂಚಕೊರಿದೇ ಮಹಾಶಯರು ಈ ತೆರದ ವಂಗಭಾಷೆಯ ಗ್ರಂಥಲೇಖನದಲ್ಲಿ ಸಿದ್ಧಹಸ್ತರು! ಇವರಿಂದ ವಿರಚಿತವಾದ ಪರಿಮಳಾ, ಮನೋರಮಾ ಎಂಬ ಪತ್ತೇದಾರಿ ಕಥೆಗಳನ್ನು ದಿವಂಗತ ಬಿ.ವೆಂಕಟಾಚಾರ್ಯರು ಈಮೊದಲೇ ಕನ್ನಡಿಸುವುದರ ಮೂಲಕ ಕನ್ನಡಿಗರಿಗೆ ದೇಮಹಾಶಯರ ರಚನಾಕೌಶಲ ಪರಿಚಯವನ್ನು ಮಾಡಿಕೊಟ್ಟಿರುತ್ತಾರೆ. ಆದರೂ ಈ ಕಥೆಯಲ್ಲಿ ಚಿತ್ರಿತವಾಗಿರುವಂತಹ ಭೀಷಣ ಘಟನಾವಳಿಗಳನ್ನೂ ಅಲೌಕಿಕವ್ಯಾಪಾರಗಳನ್ನೂ ಕನ್ನಡಿಗರು ಓದಿ ಅರಿಯರು. ನಿಷ್ಕರುಣಿಯಾದ ಕೊಲೆಪಾತಕಿಯ ಸಾಹಸಕಾರ್ಯಕೌಶಲಗಳನ್ನೂ, ಕೊಲೆಪಾತಕನನ್ನು ಬಹಿರಂಗಪಡಿಸುವುದಕ್ಕೆ ಪ್ರಸಿದ್ಧಪತ್ತೇದಾರನಾದ ಅರಿಂದಮನು ಅವಲಂಬಿಸಿದ ರೀತಿನೀತಿಗಳನ್ನೂ ದಸ್ಯುದಳದವರ ಹತ್ಯಾರಹಸ್ಯಗಳನ್ನೂ, ಮಾಯಾವಿನಿಯಾದ ಜುಮಲೆಯ ಸಾಹಸಪೂರ್ಣವಾದ ಕಪಟಾಚರಣೆಗಳನ್ನೂ ಈ ಕಾದಂಬರಿಯಲ್ಲಿ ಕೌತುಕಪ್ರದವಾಗಿ ಚಿತ್ರಿಸಿ "ಅಧರ್ಮಕ್ಕೆ ಎಂದಿಗೂ ಜಯವಿಲ್ಲ" ಎಂಬುದನ್ನು ನಿದರ್ಶನಗೊಳಿಸಿದೆ."

ಪತ್ತೆದಾರಿಯ ಕಥೆ ಸಾಹಿತ್ಯವಾಗುತ್ತದೆಯೇ ಎಂದು ಆಗಾಗ್ಗೆ ಪ್ರಶ್ನೆ ಬರುವುದುಂಟು. ಇದಕ್ಕೆ ಉತ್ತರವನ್ನು ಮೇಲಿನ ವಾಕ್ಯಗಳಲ್ಲಿ ಪರಿವರ್ತಕರು ಆಗಲೇ ಕೊಟ್ಟಿರುತ್ತಾರೆ. ಅವರು ಹೇಳಿರುವುದು ಯುಕ್ತವಾಗಿದೆ ಎಂದೇ ನಾವೂ ಭಾವಿಸುತ್ತೇವೆ. ರಸವತ್ತಾದ

ಗ್ರಂಥವನ್ನು ಕಾವ್ಯವೆನ್ನುವುದಾದರೆ ಇದನ್ನೂ ಸಾಹಿತ್ಯವೆಂದು ಏಕೆ ಕರೆಯಬಾರದು? ಅದರಲ್ಲಿ ರಸಪುಷ್ಟಿ ಇದ್ದರೆ ಉತ್ತಮವಾದ ಕಾವ್ಯವೆಂದೇಕೆನ್ನಬಾರದು? ಇಂಥಕಥೆಗಳಲ್ಲಿ ವೀರ ಕರುಣ ಭಯಾನಕ ರೌದ್ರ ಅದ್ಭುತ ರಸಗಳು ಪ್ರಕಾಶವಾಗಿರುತ್ತವೆ. 'ಉತ್ತಮ'ವೆಂದು ಸರ್ವಜನ ಸಮ್ಮತವಾದ ಗ್ರಂಥಗಳಲ್ಲಿರುವಂತೆ ಶೃಂಗಾರ, ವೀರ, ಕರುಣಗಳಲ್ಲಿಯೇ ಯಾವುದಾದರೊಂದು ಇರಬೇಕೆಂಬ ನಿಯಮವೇನು? ಇವುಗಳಿಗೆ ಯಾರೂ ಶಿಲಾಶಾಸನ ಹಾಕಿಕೊಟ್ಟು ಹಕ್ಕನ್ನು ಸ್ಥಾಪಿಸಿಕೊಟ್ಟಿಲ್ಲ; ಅಂಥ ಗ್ರಂಥಗಳ ಘನತೆ ಉಚ್ಚೋದ್ದೇಶ್ಯಗಳು ಇಲ್ಲಿ ಇರುತ್ತವೆಯೇ ಎಂಬದೊಂದು ಪ್ರಶ್ನೆ: 'ಉದ್ದೇಶ್ಯ'ದ ವಿಚಾರ ಬೇರೆ. ಉದ್ದೇಶ್ಯವನ್ನೇ ದೊಡ್ಡದು ಮಾಡಿಕೊಂಡು ಹೋದರೆ ಕಾವ್ಯವು ಕಾವ್ಯವಲ್ಲದೆಯೇ ಹೋಗಬಹುದು. ಇದರಮೇಲೆ ಶೃಂಗಾರ ಕರುಣಶಾಂತ ರಸಗಳಿರುವ ಕಾವ್ಯಗಳನ್ನು ಓದಿಓದಿ ಕೇಳಿಕೇಳಿ ಹೊಗಳಿಹೊಗಳಿ ಜನರೆಲ್ಲ ಹಳೆ ಹಾಸಿಗೆಯ ಹತ್ತಿಯಹಾಗೆ ಮಲಿನರೂ ನಿಸ್ಸತ್ವರೂ ಆಗಿರುವುದು ಸಾಕು. ಬೀಭತ್ಸಭಯಾನಕಗಳಿದ್ದರೂ ಚಿಂತೆ ಇಲ್ಲ, ಇನ್ನು ಸ್ವಲ್ಪ ರಕ್ತ ಚಲಿಸುವಂಥ ಗ್ರಂಥಗಳಿಗೆ ಪ್ರಾಶಸ್ತ್ಯ ಕೊಟ್ಟು ಅವುಗಳನ್ನು ಓದಿ ಓದಿಸೋಣ! ಹೊಡೆದು ಬಯ್ಯುವುದಕ್ಕಲ್ಲದಿದ್ದರೂ ಬರೆಯುವುದಕ್ಕಾದರೂ ತ್ರಾಣ ಉತ್ಸಾಹಗಳು ಬೇಡವೇ? ಉತ್ತಮವಾದ ಪತ್ತೇದಾರಿಯ ಕಥೆಗಳನ್ನು ಸರಿಯಾಗಿ ಓದಿ ಬೋಧಿಸಿದರೆ ಈ ಉದ್ದೇಶ್ಯವು ನೆರವೇರುವುದಕ್ಕೆ ಸಹಾಯವಾಗುತ್ತದೆ.

ಗ್ರಂಥದ ಶೈಲಿಯು ಸುಲಭವಾಗಿಯೂ ಶುದ್ಧವಾಗಿಯೂ ಇದೆ—ರೂಪ ಶುದ್ಧಿಯೇ ಸಾಹಿತ್ಯದ ಸಾರಸರ್ವಸ್ವವೆಂದು ತಿಳಿದುಕೊಂಡಿರುವ ಉಗ್ರ ಪಕ್ಷದವರಿಗೂ ಬೇಸರವಾಗಬಹುದಾದಷ್ಟು ಶುದ್ಧವಾಗಿದೆ. ಮ॥ ಶಾಸ್ತ್ರಿಗಳು ನುರಿತ ಲೇಖಕರು. ಅವರ ಗ್ರಂಥಗಳಿಗೆ ತಕ್ಕ ಪ್ರೋತ್ಸಾಹವು ದೊರೆಯಲೆಂದು ಹಾರೈಸುತ್ತೇವೆ.

'ಮಾಯಾವಿ'ಯು ಮ॥ ಶಾಸ್ತ್ರಿಗಳ "ಪರಮ ಮಿತ್ರರೂ ಮಧುರವಾಣೀ ಪತ್ರ ಸಂಪಾದಕರೂ, ಮಾತೃ ಭಾಷಾ ಸೇವಕರೂ

ಆದ ದಿವಂಗತ ಕೆ. ಹನುಮದಾಸರ ಜ್ಞಾಪಕಾರ್ಥವಾಗಿ" ಬರೆದುದಾಗಿದೆ. ಮ|| ದಾಸರು ಬದುಕಿದ್ದಾಗ ಕನ್ನಡಕ್ಕೆ ಕೈಹಾಕಿ ಬಹಳ ಕಷ್ಟನಷ್ಟಗಳನ್ನು ಪಟ್ಟಿದ್ದರು. ಅವರ ಆ ಕಷ್ಟನಷ್ಟಗಳನ್ನು ಗ್ರಹಿಸಿ ಅವರ ಇಷ್ಟ ಮಿತ್ರರು ಅವರು ಬದುಕಿದ್ದಾಗಲೇ ಪ್ರದರ್ಶಿಸಿದ್ದು ಅದನ್ನು ಅವರು ನೋಡಿದ್ದರೆ ಅವರಿಗೆ ಸಂತೋಷವೂ ಒಂದು ವಿಧವಾದ ಸಮಾಧಾನವೂ ಆಗುತ್ತಿತ್ತೆಂದು ತೋರುತ್ತದೆ. ಆದರೆ ಪ್ರಪಂಚದಲ್ಲಿ ಎಲ್ಲಿ ನೋಡಿದರೂ ಹೀಗೇ ; ಕವಿಗಳು ಬದುಕಿದ್ದಾಗ ಒಂದು ತುತ್ತು ಅನ್ನವನ್ನು ಕೇಳಿದರೆ ಆಗ ಅದನ್ನು ಕೊಡದೆ ಸತ್ತಮೇಲೆ ಅವರಿಗೆ ಒಂದು ಕಲ್ಲನ್ನು ನಿಲ್ಲಿಸುವುದು !

ಎ. ಆರ್. ಕೃ.

ರಾಜಭಕ್ತಿ ಮುಕ್ತಾವಳಿ (ನಮ್ಮ ಸ್ವಾಮಿ, ನಮ್ಮ ಸೀಮೆ)– ಮ|| ಬಿ. ಶ್ರೀಕಂಠಯ್ಯನವರಿಂದ ; ಕ್ರೌನ್ ಅಷ್ಟಪತ್ರ ಪುಟಗಳು viii+೭೨+೨೬; ಬೆಲೆ ?

ಈ ಗ್ರಂಥದಲ್ಲಿ ಮೂರು ಭಾಗಗಳಿವೆ ; ಮೊದಲನೆಯ ಭಾಗದಲ್ಲಿ ಶ್ರೀಮನ್ ಮಹಾರಾಜರವರ ಘನ ಗುಣಗಳನ್ನು ವರ್ಣಿಸುವ ಮುವ್ವತ್ತು ಕಂದ ಪದ್ಯಗಳೂ ಅವುಗಳ ಇಂಗ್ಲಿಷ್ ಭಾಷಾಂತರವೂ, ಎರಡನೆಯ ಭಾಗದಲ್ಲಿ "ನಮ್ಮ ಪ್ರಭುಗಳವರ ಜನನಾರಭ್ಯ ರಜತೋತ್ಸವ ಪರಿಯಂತ ಮೈಸೂರು ಸಂಸ್ಥಾನದ ಸಂಕ್ಷೇಪ ಚರಿತ್ರಾಂಶ", ಶ್ರೀಮನ್ ಮಹಾರಾಜರವರು ರಜತೋತ್ಸವಕಾಲದಲ್ಲಿ ದಯಪಾಲಿಸಿದ ಸಂದೇಶ, ಪದವಿಯಲ್ಲಿದ್ದ ವೈಸ್‌ರಾಯಿಗಳ ಪಟ್ಟಿ, ಸಂಸ್ಥಾನದ "ಪುರೋವೃದ್ಧಿ ಪ್ರಕಾಶಿಕೆ" ಇವುಗಳೂ, ಮೂರನೆಯ ಭಾಗದಲ್ಲಿ "ಪ್ರಭುಗಳ ಜನನಕ್ಕೆ ಪೂರ್ವಕಾಲದ ಚರಿತ್ರಾಂಶವೂ" ಇವೆ. ಅನುಬಂಧದಲ್ಲಿ ಶ್ರೀಮನ್ ಮಹಾರಾಜರ ಘನವಾದ ಆಳಿಕೆಯ ವಿಚಾರದಲ್ಲಿ ಚಕ್ರವರ್ತಿಗಳೇ ಮುಂತಾದವರು ಮಾಡಿರುವ (ಇಂಗ್ಲಿ

ಷಿಸ) ಗುಣ ಕಥನವಿದೆ. ನಮ್ಮ ಪ್ರಭುಗಳ ವಿಚಾರವಾಗಿ ಪ್ರಪಂಚದಲ್ಲೇ ಎರಡು ಅಭಿಪ್ರಾಯಗಳಿಲ್ಲ; ಅವರ ಹೊಗಳಿಕೆಯಲ್ಲಿ "ಅತಿಶಯೋಕ್ತಿ" ಬರುವುದು ಅಸಾಧ್ಯ. ಎಂಥ ಸ್ತುತಿಯಾದರೂ ಅದು "ಸ್ವಭಾವೋಕ್ತಿಯೇ" ಆಗಿ ಪರಿಣಮಿಸುವುದು. ಇಂಥ ಗ್ರಂಥಗಳು ನಮ್ಮ ಸಂಸ್ಥಾನದಲ್ಲಿ ಪ್ರಚುರವಾಗಿರುವ ಎಲ್ಲಾ ಭಾಷೆಗಳಲ್ಲಿಯೂ ಬಂದು ಎಲ್ಲರೂ ಓದಬೇಕಾದವು. ನಮ್ಮನ್ನು ಆಳತಕ್ಕ ಪ್ರಭುಗಳು ಎಂಥವರು, ನಾವು ಅವರ ವಿಚಾರದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದು ಪ್ರತಿಯೊಬ್ಬ ಸತ್ಪ್ರಜೆಯೂ ತಿಳಿದುಕೊಳ್ಳಬೇಕಾದ ಅಂಶವಲ್ಲವೇ?

ಎ. ಆರ್. ಕೃ.

ನಟರಾಜ ಭಕ್ತ ನಾಳಿ ಹೋಗುವ ನಂದ ಮತ್ತು **ಮೀರಾಬಾಯಿ**—ಮ|| ನಂ. ವೆಂಕಟೇಶಯ್ಯಂಗಾರ್ ಬಿ. ಎ. ಅವರಿಂದ: ಕ್ರೌನ್ ಅಷ್ಟಪತ್ರ, ಪುಟಗಳು ೪೬: ಬೆಲೆ ೪ ಆಣೆ.

ಈ ಸಣ್ಣ ಪುಸ್ತಕದಲ್ಲಿ ನಂದನಾರ್ ಮತ್ತು ಮೀರಾಬಾಯಿ ಈ ಇಬ್ಬರು ಪ್ರಸಿದ್ಧ ಭಕ್ತರ ಸಂಕ್ಷೇಪ ಚರಿತ್ರೆ ಇದೆ. ಇವುಗಳಲ್ಲಿ ಮೊದಲನೆಯದು ಮ|| ರಾಜಂ ಅಯ್ಯರವರ ಇಂಗ್ಲಿಷ್ ಮೂಲದಿಂದಲೂ, ಎರಡನೆಯದು ಎಡ್ಮಂಡ್ ರಸಲ್ ಅವರ ಇಂಗ್ಲಿಷ್ ಮೂಲದಿಂದಲೂ ಪರಿವರ್ತನವಾದವು. ಇವು ಕನ್ನಡ ರೂಪದಲ್ಲಿ ಈ ಮೊದಲೇ ಕ್ರಮವಾಗಿ ಬೆಂಗಳೂರು ದೇಶೀಯ ವಿದ್ಯಾಶಾಲಾ ಪತ್ರಿಕೆಯಲ್ಲಿಯೂ ಅರ್ಥಸಾಧಕ ಪತ್ರಿಕೆಯಲ್ಲಿಯೂ ಪ್ರಕಟವಾಗಿದ್ದುವು. ಈಗ ಮ|| ವೆಂಕಟೇಶಯ್ಯಂಗಾರ್ಯರು ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಗೊಳಿಸಿದ್ದಾರೆ. ಕಾಗದ ಮುದ್ರಣಗಳು ಚೆನ್ನಾಗಿವೆ.

ಈ ಗ್ರಂಥವನ್ನು ಓದುತ್ತಿರುವಾಗ ಇದರ ಗದ್ಯ ಶೈಲಿಯು ಏನೋ ವಿಚಿತ್ರವಾಗಿರುವಂತೆ ತೋರಿಬರುತ್ತದೆ. ಇಂಥ ಶೈಲಿಯು

ಈಚೆಗೆ ಅಲ್ಲಲ್ಲೇ ಪತ್ರಿಕೆಗಳಲ್ಲಿಯೂ ಗ್ರಂಥಗಳಲ್ಲಿಯೂ ಕಂಡುಬರುತ್ತದೆ. ಅದಕ್ಕೆ ಮುಖ್ಯ ಕಾರಣ, ವೀರಶೈವರ ವಚನಗಳು ಪ್ರಕಟವಾಗಿ ಅವುಗಳನ್ನು ಓದಿ, ಬುದ್ಧಿಪೂರ್ವಕವಾಗಿಯೋ ಅಲ್ಲದೆಯೋ, ಅವುಗಳ ಶೈಲಿಯನ್ನು ಅನುಕರಣಮಾಡುವುದು ಎಂದು ತೋರುತ್ತದೆ. ಒಂದು ಉದಾಹರಣೆಯನ್ನು ಕೊಟ್ಟರೆ ಇದು ಸ್ಪಷ್ಟಪಡುವುದು:—

"ನಂದನೆಸಗಿದ ಕಾರ್ಯವು ಒಂದರ್ಥದಲ್ಲಿ ಅದ್ಭುತವು. ಮತ್ತೊಂದರ್ಥದಲ್ಲಿ ಅದ್ಭುತವಲ್ಲವು. ಮೂಢರು ಅದ್ಭುತ ಶಬ್ದಕ್ಕೆ ಮಾಡುವ ಅರ್ಥರೀತ್ಯಾ ಅದ್ಭುತವಲ್ಲವು. ಆದರೆ ಆತನ ಕಾರ್ಯವು ನಿಜವಾಗಿಯೂ ಒಂದದ್ಭುತವು. ಏಕೆಂದರೆ ಅದು ಸಾಮಾನ್ಯಶಕ್ತಿಗೂ ಬುದ್ಧಿಗೂ ಮೀರಿದುದು. ನಮ್ಮಲ್ಲನೇಕರಿಗೆ ಪ್ರೇಮವೆಂಬುದರ ಸಾಧನಗಳು ಗೊತ್ತಿಲ್ಲ. ಅವರ ಗಾಢತೆಯೂ ಉತ್ಕರ್ಷವೂ ಅದರ ಆಶ್ಚರ್ಯಕರವಾದ ಉಪಪತ್ತಿಗಳೂ ನಮ್ಮ ಸಾಮಾನ್ಯ ಬುದ್ಧಿಗೆ ಅತೀತವಾದುವು. ಪ್ರೇಮದ ಕಾರ್ಯಗಳು ಕಟ್ಟು ಕಥೆಗಳಂತೆ ತೋರುವುವು ನಮ್ಮ ಮಂದಬುದ್ಧಿಗೆ. ಅಯ್ಯಾ ವಾಚಕನೇ! ಬೆಟ್ಟಗಳನ್ನುರುಳಿಸುವುದು ಪ್ರೇಮ. ಸಮುದ್ರಗಳನ್ನು ದಾಟಿಸುವುದದು. ಪಂಚಭೂತಗಳನ್ನು ನಿರ್ಮೂಲಮಾಡುವುದದು, ವಿಶ್ವವನ್ನೇ ಅಳ್ಳಾಡಿಸುವುದಯ್ಯಾ ಪ್ರೇಮ, ಏನುತಾನೇ ಮಾಡಲಾರದು ಪ್ರೇಮ! ಏನುತಾನೇ ಮಾಡಿಲ್ಲದು! ಪ್ರೇಮವೆಂಬುದೇನಯ್ಯ! ಆತ್ಮಶಕ್ತಿ, ಅಲ್ಲಪ್ಪ! ಆತ್ಮನೇ ಅದು ಯಾವ ಕಾರ್ಯವಾದರೆ ನಂದನ ಮಹತ್ವಾಕಾಂಕ್ಷೆಯ ಸಿದ್ಧಿಗೆ ಮೂಲವಾಗಿತ್ತೋ ಅದನ್ನು ನಂದನು ಸರ್ವಾತ್ಮನಾ ಎಂದರೆ ಪರಮ ಶ್ರದ್ಧೆಯಿಂದ ಮಾಡಿದಾಗ ಅದರ ಫಲವು ಅದ್ಭುತವಾಗಿಯೂ ದಿವ್ಯವಾಗಿಯೂ ಇರದೆ ಮತ್ತಾವ ತೆರನಾಗಿತಾನೇ ಇದ್ದೀತು! ನಂದನ ಅಡಿಗಳಿಗೆರಗಿದ ನಾಬ್ರಾಹ್ಮಣನಾಗ." ಪುಟ ೨೧.

ಜೀವನ ರಹಸ್ಯ— ಶಿವರಾಮ ಕಾರಂತ, ಕೋಟ. ಇವರಿಂದ ರಚಿತವಾದದ್ದು; ಕ್ರೌನ್ ಅಷ್ಟಪತ್ರ, ಪುಟಗಳು ೩೮: ಬೆಲೆ ರೂ. ೦—೧—೬. ಎರಡನೆಯ ಮುದ್ರಣ. ೧೯೨೮.

ಇದರಲ್ಲಿ ಗ್ರಂಥಕರ್ತರು ಬ್ರಹ್ಮಚರ್ಯದ ಪ್ರಾಶಸ್ತ್ಯ, ಅದರ ಅನುಸರಣೆಯಿಂದ ನಮ್ಮ ಪೂರ್ವಜರು ಪಡೆದ ಲಾಭ, ಅದನ್ನು ರಕ್ಷಿಸಿ

ಕೊಳ್ಳುವ ವಿಧಾನ, ಮಿತಸಂತತಿ, ಮುಂತಾದ ಸಂಗತಿಗಳನ್ನು ಕುರಿತು ಸಂಕ್ಷೇಪವಾಗಿ, ಆದರೆ ಬಹು ಶ್ರದ್ಧೆಯಿಂದ, ಬರೆದಿದ್ದಾರೆ. ಈಗ ಸ್ವಲ್ಪದಿವಸಕ್ಕೆ ಹಿಂದೆ ಇಂಥ ವಿಷಯಗಳನ್ನು ಕುರಿತು ಮಾತನಾಡುವುದೂ ಬರೆಯುವುದೂ ಅಶ್ಲೀಲವೆಂಬ ಎಣಿಕೆಯಿತ್ತು; ಈಚೀಚೆಗೆ ಆ ಭಾವವು ಹೋಗುತ್ತಬಂದಿದೆ; ಅಷ್ಟೇ ಅಲ್ಲ; ಈ ವಿಷಯದ ಮೇಲೂ ದಾಂಪತ್ಯವಿಚಾರದಮೇಲೂ ಇಂಗ್ಲಿಷಿನಲ್ಲಿ ಲೆಕ್ಕವಿಲ್ಲದಷ್ಟು ಸಚಿತ್ರವಾದ ದೊಡ್ಡ ದೊಡ್ಡ ಪುಸ್ತಕಗಳು ಬರುತ್ತಿವೆ. ಪುಸ್ತಕಗಳ ಪಟ್ಟಿಗಳಲ್ಲಿಯೂ ಪುಸ್ತಕಭಂಡಾರಗಳಲ್ಲಿಯೂ ಅದೇ ಒಂದು ದೊಡ್ಡ ಭಾಗವಾಗಿರುತ್ತದೆ. ಇಂಥ ವಿಷಯದಲ್ಲಿ ಆವಶ್ಯಕವಾದ ಸಂಗತಿಗಳನ್ನು ತಿಳಿದುಕೊಳ್ಳುವುದು ಲಾಭಕರವಾದರೂ, ಬರೆಯುವವರೂ ಓದುವವರೂ ಚಾಪಲ್ಯದಿಂದ ಇವುಗಳಲ್ಲಿ ಪ್ರವರ್ತಿಸಿದರೆ ಅದೇ ಒಂದು ಹುಚ್ಚು ಹಿಡಿದು ಒಂದುವಿಧವಾದ ಹುಳುಕುರಸಿಕತೆ ಹುಟ್ಟಿ ದೌರ್ಬಲ್ಯಕ್ಕೆ ಕಾರಣವಾಗುತ್ತದೆ. ಆದರೆ ಇವುಗಳಲ್ಲಿ ಎಲ್ಲೆಮೀರಿ ಹೋಗತಕ್ಕ ಗ್ರಂಥಗಳನ್ನು ಓದುವುದರಿಂದ ಎಷ್ಟುನಷ್ಟವೋ ಅದಕ್ಕಿಂತಲೂ ಈ ವಿಷಯವನ್ನು ತಿಳಿಯದೆಯೇ ಇರುವುದರಿಂದ ಹೆಚ್ಚು ನಷ್ಟ; ಬ್ರಹ್ಮಚರ್ಯನಿಯಮಗಳನ್ನೂ, ಸಂಸಾರದಲ್ಲಿ ಮಿತಿಯನ್ನೂ ತಿಳಿದುಕೊಳ್ಳುವುದೇನೋ ಅತ್ಯಾವಶ್ಯಕ. ಹೀಗಿರುವುದರಿಂದ ಇಂಥ ಗ್ರಂಥಗಳನ್ನು ಬರೆಯುವವರ ಮತ್ತು ಪುಸ್ತಕಭಂಡಾರಗಳಿಗೆ ಆರಿಸುವವರ ಮೇಲೆ ಬಹು ದೊಡ್ಡ ಜವಾಬುದಾರಿ ಬಿದ್ದಿದೆಯೆಂದು ಮಾತ್ರ ಹೇಳಬಲ್ಲೆವು.

ಎ. ಆರ್. ಕೃ.

ನೀತಿಮಂಜರಿ— (ದ್ವಿತೀಯ ಭಾಗಂ) ಪ್ರಾಕ್ತನ ವಿಮರ್ಶ ವಿಚಕ್ಷಣರಾವ್ ಬಹಾದುರ್ ರಾ. ನರಸಿಂಹಾಚಾರ್ಯ, ಎಂ. ಎ., ಎಂ. ಆರ್. ಎ. ಎಸ್. ಇವರಿಂದ ವಿರಚಿತವಾದದ್ದು; ರಾಯಲ್ ಷೋಡಶಪತ್ರ ಪುಟಗಳು ೧–೧೨೪. ಬೆಲೆ ೧೨ ಆಣೆ: ದ್ವಿತೀಯ ಮುದ್ರಣ ೧೯೨೮.

ಈ ಗ್ರಂಥವು ಕನ್ನಡಿಗರಿಗೆಲ್ಲಾ ಸುಪರಿಚಿತವಾಗಿದೆಯೆಂದು ನಂಬುತ್ತೇವೆ. ಆದ್ದರಿಂದ ಇದರಮೇಲಣ ವಿಸ್ತಾರವಾದ ಯಾವ

ಹೇಳಿಕೆಯೂ ಆವಶ್ಯಕವಲ್ಲ. ಇದರಲ್ಲಿ ರಾವ್‌ಬಹದ್ದೂರರು, ತಿರುವಳ್ಳುವರಿಂದ ತಮಿಳಿನಲ್ಲಿ ರಚಿತವಾದ ಕುಱಳ್ ಎಂಬ ಪ್ರಸಿದ್ಧ ನೀತಿ ಗ್ರಂಥದಿಂದ ಕೆಲವುಭಾಗಗಳನ್ನು ಕನ್ನಡಕ್ಕೆ ಪದ್ಯರೂಪವಾಗಿ ಪರಿವರ್ತನೆಮಾಡಿದ್ದಾರೆ.

"ತಿರುವಳ್ಳುವ ಕವಿಯ ಜನ್ಮಸ್ಥಳವು ಮದರಾಸಿಗೆ ಸಮೀಪದಲ್ಲಿರುವ ಮಯಿಲಾಪುರವು. ಆತನು ಜಾತಿಯಲ್ಲಿ ಪಂಚಮನೆಂದೂ ವೃತ್ತಿಯಲ್ಲಿ ನೆಯ್ಗೆಯವನೆಂದೂ ಹೇಳುತ್ತಾರೆ. ಅವನ ಕಾಲವು ಕ್ರಿಸ್ತ ಶಕದ ಎರಡನೆಯ ಶತಮಾನವೆಂದು ಕೆಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಕವಿ ದಕ್ಷಿಣ ಹಿಂದೂಸ್ಥಾನದಲ್ಲಿಯ ನೀತಿ ಗ್ರಂಥಕಾರರಲ್ಲಿ ಅಗ್ರಗಣ್ಯನೆಂದು ಭಾವಿಸಲ್ಪಟ್ಟಿದ್ದಾನೆ........ಇದರಲ್ಲಿ ಪ್ರಾಯಿಕವಾಗಿ ಸರ್ವಮತ ಸಾಧಾರಣವಾದ ವಿಷಯಗಳು ಪ್ರತಿಪಾದಿತವಾಗಿರುವುದರಿಂದ ಹಿಂದುಸ್ಥಾನದ ಹಲವು ಮತದವರೂ ಈ ಕವಿ ನಮ್ಮವನು ತಮ್ಮವನು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಕಾರಣದಿಂದಲೇ ಇದಕ್ಕೆ ಸಾಧಾರಣ ವೇದವೆಂದು ಹೆಸರು ಬಂದಂತೆ ತೋರುತ್ತದೆ.

"ಕುಱಳ್ ಎಂಬ ಶಬ್ದಕ್ಕೆ ಕುಳ್ಳು ಎಂದರ್ಥವು. ಕುಱಳ್ ಎಂಬ ತಮಿಳುಛಂದಸ್ಸಿನಲ್ಲಿ ಬರೆದ ಸಣ್ಣ ದ್ವಿಪದಿಗಳುಳ್ಳುದಾದುದರಿಂದ ಈ ಗ್ರಂಥಕ್ಕೆ ಕುಱಳ್ ಎಂಬ ಹೆಸರು ಬಂದಿದೆ........ತಿರುವಳ್ಳುವ ಕವಿಯ ದ್ವಿಪದಿಗಳು ಸಾಸವೆಯ ಕಾಳಿನಲ್ಲಿ ದ್ವಾರವನ್ನು ಮಾಡಿ ಸಪ್ತ ಸಮುದ್ರಗಳನ್ನೂ ಹೊಗಿಸಿದಂತೆ ಇವೆ..... ....ವಾಚಕರ ಸೌಕರ್ಯಕ್ಕಾಗಿ ಕ್ಲಿಷ್ಟ ಪದಗಳಿಗೆ ಅರ್ಥವು ಗ್ರಂಥಾಂತ್ಯದಲ್ಲಿ ಕೊಟ್ಟಿದೆ.

"ಕನ್ನಡ ತಮಿಳು ಈ ಎರಡು ಭಾಷೆಗಳನ್ನೂ ಸ್ವಲ್ಪ ಮಟ್ಟಿಗೆ ತಿಳಿದಿರುವುದಕ್ಕೆ ಇದೊಂದು ಪ್ರಯೋಜನವೆಂದು ಭಾವಿಸಿ ಈ ಗ್ರಂಥವನ್ನು ಬರೆದು ಕನ್ನಡಿಗರಿಗೆ ಕಾಣಿಕೆಯಾಗಿ ಒಪ್ಪಿಸಿದ್ದೇನೆ" ಎಂದು

ರಾ॥ ಆಚಾರ್ಯರು ಈ ಗ್ರಂಥದ ಪೀಠಿಕೆಯಲ್ಲಿ ಅಪ್ಪಣೆಕೊಡಿಸಿದ್ದಾರೆ. ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ಕನ್ನಡ ಕಲಿತವರೆಲ್ಲರೂ ಜೊತೆಗೆ ಮತ್ತೊಂದು ಭಾಷೆಯನ್ನಾದರೂ ಚೆನ್ನಾಗಿ ಕಲಿತು ಅದರ ಸಾಹಿತ್ಯಸಾರವನ್ನು ಕನ್ನಡಿಸಿ ಕೊಡುತ್ತಬಂದರೆ ಕನ್ನಡ ಸಾಹಿತ್ಯವು ಬೇಗ ಪುಷ್ಟಿಹೊಂದಿ ಬೆಳೆಯುವುದೆಂಬುದರಲ್ಲಿ ಸಂದೇಹವಿಲ್ಲ.

ಎ. ಆರ್. ಕೃ.

ಪ್ರಶ್ನೋತ್ತರ ಲೇಖ್ಯಬೋಧಿನಿ —ಮ॥ ಭಾರತಿ ಸಂಪಂಗಿ ರಾಮಯ್ಯನವರಿಂದ ರಚಿತವಾದದ್ದು; ಕ್ರೌನ್ ಅಷ್ಟಪತ್ರ ಪುಟಗಳು ೧೪ + ೫೭೬: ಒಂಬತ್ತನೆಯ ಮುದ್ರಣ; ೧೯೩೭. ಬೆಲೆ ರೂ. ೧-೮-೦.

ಮ॥ ಸಂಪಂಗಿರಾಮಯ್ಯನವರು ಕನ್ನಡ ಲೇಖನಕಾರ್ಯದಲ್ಲಿಯೇ ಕೈ ಸುರಿತು ಮೈ ಸವೆದು ತಲೆ ನರೆತವರು. ಅವರ ಸವಿಸುಡಿಯ ಗ್ರಂಥಮಾಲೆಯು ಕನ್ನಡಿಗರಿಗೆ ಹೊಸದಲ್ಲ: ಇನ್ನೂ ಈ ಶತಮಾನ ಹುಟ್ಟುವುದಕ್ಕಿಂತ ಮುಂಚಿನಿಂದಲೂ ಇವರು ಕನ್ನಡಕ್ಕಾಗಿ ಪರಿಶ್ರಮಿಸುತ್ತಿದ್ದಾರೆ: "ನಮ್ಮ ಸೋದರರಾದ ಸಾಮಾನ್ಯರಿಗೆ ಮಾರ್ಗದರ್ಶಿಯಾಗಿರುವುದೆಂಬ ನಂಬಿಕೆ"ಯಿಂದ ಈಗ್ರಂಥವನ್ನು ಪುನರ್ಮುದ್ರಣಮಾಡಿಸಿದ್ದಾರೆ. "ಎಂಟಾವರ್ತಿಯ ಮುದ್ರಣದ ಹನ್ನೆರಡು ಸಾವಿರ ಪ್ರತಿಗಳು ಜನತೆಯ ಕೈಯಲ್ಲಿಸೇರಿ ಒಂಬತ್ತನೆಯ ಈ ಮುದ್ರಣಕ್ಕೆ ಅವಕಾಶ ದೊರೆತಿರುವುದರಿಂದ" ಈ ಗ್ರಂಥದ ಉಪಯುಕ್ತತೆಯು ಗೊತ್ತಾಗುತ್ತದೆ. ಪಠ್ಯಪುಸ್ತಕವಲ್ಲದ, ಪುಂಡುಕಥೆಯಲ್ಲದ, ಯಾವ ಕನ್ನಡ ಗ್ರಂಥವಾದರೂ ಇಷ್ಟುಸಾರಿ ಮುದ್ರಿತವಾಯಿತೆಂದರೆ, ಅದರ ಕರ್ತರು ಅಭಿನಂದ್ಯರು.

ಇದರಲ್ಲಿ ವಿದ್ಯಾರ್ಥಿಕಾಂಡ, ಶಾಸನಕಾಂಡ, ವ್ಯವಹಾರಕಾಂಡ, ಜ್ಞಾನಕಾಂಡವೆಂಬ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಯೋಗಕ್ಷೇಮಸಮಾಚಾರದ ಮತ್ತು ವ್ಯವಹಾರ

ಕಾಗದ ಪತ್ರಗಳ ಸ್ವರೂಪವಾದರಿಗಳೂ, ಎರಡನೆಯ ಭಾಗದಲ್ಲಿ ಕೋರ್ಟು ಕಚೇರಿ ಸರ್ಕಾರ ಇವುಗಳ ವಿಚಾರವಾಗಿ ಪ್ರತಿಯೊಬ್ಬನೂ ಆವಶ್ಯಕವಾಗಿ ತಿಳಿದಿರಬೇಕಾದ ಸಂಗತಿಗಳೂ, ಮೂರುನಾಲ್ಕನೆಯ ಭಾಗಗಳಲ್ಲಿ ಮಾನವಧರ್ಮ ಪರೋಪಕಾರ ಮುಂತಾದ ಹಲವು ವಿಷಯುಗಳಮೇಲಣ ಪ್ರಬಂಧಗಳೂ ಇವೆ. ಈ ಪ್ರಬಂಧ ಭಾಗದಲ್ಲಿ ಅನೇಕ ಪಾಶ್ಚಾತ್ಯರ ಅಭಿಪ್ರಾಯಗಳೂ ಸಮಯೋಚಿತವಾಗಿ ಅನುವಾದವಾಗಿರುವುದರಿಂದ, ಹಿಂದಿಸದೆಂದರೆ ತುಟಿ ತಿರುಗಿಸಬಹುದಾದ ಆಧುನಿಕರಿಗೂ ಇದು ಗ್ರಾಹ್ಯವಾಗುವಂತಿದೆ.

ಇದರ ಕಾಗದ ಮುದ್ರಣ ಗಾತ್ರ ಇವುಗಳನ್ನು ನೋಡಿದರೆ ಇದಕ್ಕೆ ಇಟ್ಟಿರುವ ಬೆಲೆಯು ಅತ್ಯಲ್ಪವೆಂದು ಹೇಳಬಹುದು.

ಎ. ಆರ್. ಕೃ.

ಬೆಳಗಾಂವ ಸ್ಕೂಲ ಬೋರ್ಡ ಗ್ಯಾಝೆಟ್ — ತ್ರೈಮಾಸಿಕ ಪತ್ರಿಕೆ, ವರ್ಷ ೧, ಸಂಚಿಕೆ ೧. ಜೂನ್ ೧೯೨೮. ವಾರ್ಷಿಕ ಚಂದಾ ರೂ ೧–೮–೦

ಈ ಪತ್ರಿಕೆಯ ಉದ್ದೇಶವನ್ನು ಸಂಪಾದಕರು 'ಸ್ಫುಟ ವಿಚಾರ' ಗಳಲ್ಲಿ ಹೀಗೆ ಹೇಳಿದ್ದಾರೆ:— "....ಜನರ ಬೇಡಿಕೆಗಳೇನು? ಅವು ಬೋರ್ಡಿನಿಂದಲೂ ಸರಕಾರದಿಂದಲೂ ಎಷ್ಟರಮಟ್ಟಿಗೆ ಪೂರೈಸಲ್ಪಡುವುವು? ಈಗಿನ ಶಿಕ್ಷಣ ಕ್ರಮದಲ್ಲಿ ಏನಾದರೂ ಸುಧಾರಣೆ ಮಾಡಬಹುದೇ ಹೇಗೆ? ಅವು ಯಾವುವು? ಶಿಕ್ಷಕರು ತಮ್ಮ ಕೆಲಸವನ್ನು ಸರಿಯಾಗಿ ಸಾಗಿಸುವರೇ ಹೇಗೆ? ಅವರ ಸ್ಥಿತಿಗತಿಗಳನ್ನು ಸುಧಾರಿಸುವುದು ಶಕ್ಯವೇ? ಬೋರ್ಡಿನ ಆಡಳಿತದಲ್ಲಿ ಏನಾದರೂ ಸುಧಾರಣೆ ಮಾಡಬಹುದೇ ಹೇಗೆ? ಈ ಬಗೆಯ ವಿಷಯುಗಳನ್ನು ಚರ್ಚಿಸುವುದೂ ಬೋರ್ಡಿನ ಮಹತ್ವದ ಠರಾವುಗಳನ್ನೂ ಸರ್ಕ್ಯುಲರಗಳನ್ನೂ ಪ್ರಸಿದ್ಧಿಸುವದೂ ಶಿಕ್ಷಕರಿಗೆ ಅವಶ್ಯವಾದ ಸೂಚನೆಗಳನ್ನು ಮಾಡುವದೂ ಇವೇ ಮೊದಲಾದ ಸಂಗತಿಗಳನ್ನು ಪ್ರಕಟಿಸುವದೇ ಈ ಗ್ಯಾಝೆಟಿನ ಉದ್ದೇಶವು"

ಈ ಸಂಚಿಕೆಯಲ್ಲಿ "ಪ್ರಾಥಮಿಕ ಶಿಕ್ಷಣವುಹೇಗೆ ಫಲದಾಯಕ ವಾಗುವುದು?" "ಶಿಕ್ಷಣದಲ್ಲಿ ಸಂಗೀತದ ಆವಶ್ಯಕತೆಯು" "ಗಣಿತ ವಿಷಯದ ಹೊಸ ಅಭ್ಯಾಸ ಪತ್ರಿಕೆಯು" "ಅಸ್ಪೃಶ್ಯರ ಶಿಕ್ಷಣ" ಎಂಬ ಕನ್ನಡ ಲೇಖನಗಳೂ, "ಶಿಕ್ಷೆ" ಎಂಬ ಕನ್ನಡ ಕಥೆಯೂ "ಶಿಕ್ಷಣ" ವೆಂಬ ಮರಾಠಿ ಲೇಖನವೂ ಇವೆ.

ಕಾಗದ ಮುದ್ರಣಗಳು ಚೆನ್ನಾಗಿವೆ. ರಾವ್ ಬಹದ್ದೂರ್ ಎಸ್. ಎನ್. ಅಂಗಡಿ ಬಿ.ಎ., ಎಲ್.ಎಲ್.ಬಿ., ಮತ್ತು ಬಿ. ಬಿ. ಮಮದಾಪುರ ಬಿ.ಎ., ಇವರ ಹಾಫ್‌ಟೋನ್ ಚಿತ್ರಗಳಿವೆ. ಕನ್ನಡದಲ್ಲಿ ಶಿಕ್ಷಣವಿಚಾರ ಪ್ರಕಟನಕ್ಕಾಗಿಯೇ ಹೊರಟಿರುವ ಪತ್ರಿಕೆಗಳು ಬಹಳ ಕಡಿಮೆ. ಏಕೆಂದರೆ ಈ ವಿಷಯವು ಶಾಸ್ತ್ರೀಯವಾಗುತ್ತದೆ. ಶಾಸ್ತ್ರೀಯವೆಂದರೆ ಶುಷ್ಕವೆಂದು ಹಿಂದೆಯೇ ಅರ್ಥವಾಗುತ್ತದೆ. ಅಲ್ಲದೆ ಶಿಕ್ಷಣದಲ್ಲಿ ಆದರ್ಶಕ್ಕೂ ಆಚಾರಕ್ಕೂ ಬಲುದೂರ. ಇವೆರಡೂ ಹೊಂದುವಂತೆಯೂ, ನಿಷ್ಪ್ರಯೋಜಕವಾದ "ಪಾಠದ ಟಿಪ್ಪಣಿಗಳು" "ವೇಳಾಪತ್ರಿಕೆಗಳು" "ಮಾದರಿ ಪಾಠಗಳು" ಇವುಗಳ ಮೇಲಣ ಲೇಖನಗಳಿಂದ ಪತ್ರಿಕೆಯನ್ನು ತುಂಬದೆಯೂ, ಆಧುನಿಕ ಪಾಶ್ಚಾತ್ಯ ಪತ್ರಿಕೆ ಮತ್ತು ಗ್ರಂಥಗಳಲ್ಲಿ ಶಿಕ್ಷಣ ವಿದ್ಯಾಭ್ಯಾಸಾದಿಗಳ ವಿಚಾರವಾಗಿ ಸಂಶೋಧನೆ ನಡಿಸಿ ಬರೆಯುತ್ತಿರುವ ವಿಷಯಗಳನ್ನು ತಿಳಿಸುತ್ತಲೂ, ಸಚಿತ್ರವಾಗಿಯೂ, ರಂಜಕವಾಗಿಯೂ ನಡೆಸುವುದಾದರೆ ಅಂಥ ಪತ್ರಿಕೆಗೆ ಆವಶ್ಯಕತೆ ಇದೆ, ಉಪಯೋಗವಿದೆ.

ಎ. ಆರ್. ಕೃ.

ಜಯ:— "ಸಚಿತ್ರ ಮಾಸಿಕ ಪತ್ರವು" ವರ್ಷ ೧, ಸಂ. ೮ ಡೆಮ್ಮಿ ಅಷ್ಟಪತ್ರ ವಾರ್ಷಿಕ ವರ್ಗಣಿ ರೂ. ೩ : ಮುಖ್ಯ ಸಂಪಾದಕರು ಶ್ರೀರಂಗಭೀಮಾಚಾರ್ಯ ತರ್ಕವಾಚಸ್ಪತಿ, ವಿದ್ಯಾಭೂಷಣ, ಹುಬ್ಬಳ್ಳಿ.

"ಈ ಪತ್ರಿಕೆಯಲ್ಲಿ ಧಾರ್ಮಿಕ ಐತಿಹಾಸಿಕ ಸಾಮಾಜಿಕ ವಿಷಯಗಳು ಸಪ್ರಮಾಣವಾಗಿ ಪ್ರತಿಪಾದಿಸಲ್ಪಡುವುವು. ವಿಶೇಷತಃ

ಮಧ್ವ ಮತಕ್ಕೆ ಅತ್ಯುಪಯುಕ್ತವಾದ ಗ್ರಂಥಗಳು ತಿಳಿಗನ್ನಡದಲ್ಲಿ ಸುಲಭಶೈಲಿಯಿಂದ ಪರಿವರ್ತಿಸಲ್ಪಡುವುವು” ಎಂದು ಇದರ ಪ್ರಕಾಶಕರು ತಿಳಿಸುತ್ತಾರೆ.

ಈ ಸಂಚಿಕೆಯಲ್ಲಿ “ಈಶಸ್ತುತಿ” “ಜಯತೀರ್ಥಸ್ತುತಿ” ರೂಪವಾದ ಕೆಲವು ಸಂಸ್ಕೃತ ಶ್ಲೋಕಗಳೂ, ಭಾರತವಾಸೀಯರ ಹಬ್ಬಗಳು, ವಿವಾಹ, ಹಿಂದೂ ಧರ್ಮ ಸ್ವರೂಪ, ಪಾಕಸಿಯಮದ ಕಲಾಪವು, ಎಂಬ ಲೇಖನಗಳೂ, ಸಭಾಷ್ಯ ಛಾಂದೋಗ್ಯೋಪನಿಷತ್ತಿನ ಭಾಷಾಂತರದ ಸ್ವಲ್ಪಭಾಗವೂ ಪ್ರಕಟವಾಗಿವೆ. ಇದರಲ್ಲಿ ಒಂದು ವಿಶೇಷವೇನೆಂದರೆ ಕೆಲವು ಲೇಖನಗಳ ಭಾಷೆಯು ಕನ್ನಡವಾದರೂ ಲಿಪಿಯು ಬಾಲಬೋಧ (ಸಂಸ್ಕೃತ) ವಾಗಿದೆ. ಕನ್ನಡ ಲಿಪಿಯು ಉತ್ತರ ಕರ್ನಾಟಕ ಮತ್ತು ನಿಜಾಂ ಕರ್ನಾಟಕದ ಅನೇಕ ಕಡೆಗಳಲ್ಲಿ ಪ್ರಚಾರ ಕಡಿಮೆ. ಇದಕ್ಕೆ ಮರಾಠಿಯ ಪ್ರಾಬಲ್ಯವೇ ಕಾರಣ; ಅಲ್ಲಿಯ ಜನರ ಸೌಕರ್ಯಕ್ಕಾಗಿ ಈ ವೈಚಿತ್ರ್ಯ ಸಂಪಾದನೆಯೆಂದು ತೋರುತ್ತದೆ.

ಈಗಿನಕಾಲದಲ್ಲಿ ಧರ್ಮ ಗ್ರಂಥಗಳನ್ನು ರುಚಿಸುವಂತೆ ಮಾಡುವುದು ಕಷ್ಟ; ಅದರಲ್ಲಿಯೂ ಯಾವುದೋ ಒಂದು ಮತದ ಅಥವಾ ಪಂಗಡದ ಗ್ರಂಥಗಳನ್ನೇ ತಿಳಿಸುತ್ತ ಪತ್ರಿಕೆಯನ್ನು ನಡೆಸಿ ಗೆಲ್ಲುವುದು ಇನ್ನೂ ಕಷ್ಟ; ಅದಕ್ಕೆ ಆ ಪಂಗಡದ ಅಥವಾ ಮತಾನುಯಾಯಿಗಳ ಬಲವಾದ ಬೆಂಬಲವು ಬೇಕು. ಅಷ್ಟು ಶ್ರಮಪಟ್ಟು, ಧರ್ಮವಾಗಲಿ ಕರ್ಮವಾಗಲಿ, ಪಂಗಡಗಳನ್ನು ಸ್ಪಷ್ಟಗೊಳಿಸಿ ಬಲಪಡಿಸುತ್ತ ಹೋಗುವುದು ಈಗಿನಕಾಲಕ್ಕೆ ಅಷ್ಟೇನೂ ಶ್ರೇಯಸ್ಕರವಲ್ಲ.

ಎ. ಆರ್. ಕೃ.

ಶ್ರೀ ಯಾಜ್ಞವಲ್ಕ್ಯ ವಿಜಯ—ವಾಯ್. ಜಿ. ಕುಲಕರ್ಣಿಯವರಿಂದ ರಚಿತವಾದದ್ದು. ಡೆಮ್ಮಿ ಅಷ್ಟಪತ್ರ ಪುಟಗಳು ೧೨೭; ಬೆಲೆ ೧೪ ಆಣೆ: ಪ್ರಕಾಶಕರು ಮ್ಯಾನೇಜರು ಸದ್ಬೋಧ ಚಂದ್ರಿಕೆ ಆನಂದವನ ಅಗಡಿ.

“ಪ್ರಸ್ತುತದ ಈ ಚರಿತ್ರದ ವಿಷಯವು ಶ್ರೀ ಮಹಾಭಾರತ,

ಶ್ರೀಮದ್ಭಾಗವತ, ಶ್ರೀವಿಷ್ಣು ಇತ್ಯಾದಿ ಪುರಾಣಗಳಿಂದಲೂ, ಬೃಹದಾರಣ್ಯ, ಹಾಗು ಈಶಾವಾಸ್ಯ ಇತ್ಯಾದಿ ಉಪನಿಷತ್ತುಗಳಿಂದಲೂ ಕೆಲವು ಅರ್ವಾಚೀನ ಶೋಧಕರ ಗ್ರಂಥಗಳಿಂದಲೂ ಸಂಗ್ರಹಿಸಲ್ಪಟ್ಟಿರುತ್ತದೆ. ಶ್ರೀಮದ್ಯಾಜ್ಞವಲ್ಕ್ಯರು ಯೋಗೀಶ್ರೇಷ್ಠರಿದ್ದಂತೆ ಮೇಲಾದ ರಾಜಕಾರಣ ಪಟುಗಳೂ ಇದ್ದದ್ದರಿಂದ, ಅವರ ಈ ದಿವ್ಯ ಚರಿತ್ರವು ಸರ್ವರಿಗೂ ಬೋಧ ಪ್ರದವಾಗಿರುತ್ತದೆಂದು ನಿಸ್ಸಂಶಯದಿಂದ ಹೇಳಲಾಗುವುದು" (ಮುನ್ನುಡಿ.)

ಈ ಗ್ರಂಥದಿಂದ ಪ್ರಾಚೀನ ಭರತಖಂಡದ ಸಾಮಾಜಿಕ ಸ್ಥಿತಿ ಅದರಲ್ಲಿ ಬ್ರಾಹ್ಮಣ ಕ್ಷತ್ರಿಯರ ಸ್ಥಾನ, ಅವರಿಗಿದ್ದ ವ್ಯಕ್ತಿಶಕ್ತಿ, ಅವರ ಶಿಕ್ಷಣ ಪದ್ಧತಿ, ವರ್ಣಾಶ್ರಮಧರ್ಮಗಳು, ಯಾಜ್ಞವಲ್ಕ್ಯರ ಉದಾಹರಣೆ ಇವು ತಕ್ಕಮಟ್ಟಿಗೆ ತಿಳಿದುಬರುತ್ತವೆ. ಉಪನಿಷತ್ತುಗಳಲ್ಲೆಲ್ಲಾ ವಿಸ್ತಾರವೂ ಚರಿತ್ರರೂಪವೂ ಸಾರತರವೂ ಆದ ಬೃಹದಾರಣ್ಯಕೋಪನಿಷತ್ತು ಇದಕ್ಕೆ ಮುಖ್ಯವಾದ ಆಧಾರ; ಅಲ್ಲಲ್ಲೇ ಸ್ವಾರಸ್ಯವಾದ ಉಪಾಖ್ಯಾನಗಳೂ ಅರ್ಥಗೌರವವುಳ್ಳ ವೇದಾಂತ ವಾಕ್ಯಗಳೂ ಇವೆ. ಬ್ರಾಹ್ಮಣರಿಗೆ ಹಿಂದಿನ ಕಾಲದಲ್ಲಿ ಗೌರವವಿದ್ದಿದ್ದರೆ ಅದು ಯಾಜ್ಞವಲ್ಕ್ಯರಂಥವರಿಂದ ಬಂದದ್ದು. ಅಂಥವರಿಂದ ಪ್ರಾಚೀನ ಸಮಾಜಕ್ಕೆ ಯಾವರೀತಿಯಲ್ಲಿ ಉಪಯೋಗವಿತ್ತು, ಅಂಥವರು ಏತರಿಂದ ಗೌರವವನ್ನು ಪಡೆದಿದ್ದರು ಎಂಬ ಅಂಶವನ್ನು ಈಗಿನ ಸಮಾಜದಲ್ಲಿ ಹಗುರವಾಗಿರುವ ಬ್ರಾಹ್ಮಣರು ಯೋಚಿಸತಕ್ಕದ್ದಾಗಿದೆ. ಇದಕ್ಕೆ ಇಂಥ ಗ್ರಂಥಗಳು ಸಾಧನವಾಗಿವೆ.

ಪರಿಶಿಷ್ಟದಲ್ಲಿ ಶುಕ್ಲಯಜುರ್ವೇದದ ಪ್ರಶಸ್ತಿ, ಶಾಖೆಗಳು ಯಾಜ್ಞವಲ್ಕ್ಯರ ಕಾಲ ಮುಂತಾದ ಸಂಗತಿಗಳೂ, 'ಶ್ರೀ ತ್ಯಾಗರಾಜ ಕವಿ ವಿರಚಿತ' (ಸಂಸ್ಕೃತ) ಯಾಜ್ಞವಲ್ಕ್ಯ ಸ್ತೋತ್ರವೂ ಇವೆ.

ಎ. ಆರ್. ಕೃ.

ಬೆಂಗಳೂರು ಪಬ್ಲಿಕ್ ಲೈಬ್ರರಿಯ (ಸಾರ್ವಜನಿಕ ಪುಸ್ತಕ ಭಂಡಾರದ) **ವರದಿ** ೧೯೨೭–೨೮.

ಈ ವರ್ಷಾಂತ್ಯದಲ್ಲಿ ಇದ್ದ ಇದರ ಸದಸ್ಯ ಸಂಖ್ಯೆ ೯೦೪, ಸದಸ್ಯರಿಂದ ಬಂದ ಚಂದಾ ಹಣ ರೂ. ೮೭೦೩; ಹೊಸದಾಗಿ ಈ ವರ್ಷ ಸೇರಿಸಿದ ಪುಸ್ತಕಗಳು ೧೨೪೭; ಅವುಗಳಲ್ಲಿ ಕನ್ನಡ ಗ್ರಂಥಗಳು ೫೪೦; ತರಿಸಿದ ಪತ್ರಿಕೆಗಳು ೧೪೪; ಅವುಗಳಲ್ಲಿ ಇಂಡಿಯಾದೇಶದವು ೧೦೩; ಭಂಡಾರಕ್ಕೆ ಬಂದ ಜನರ ಸಂಖ್ಯೆ ೮೮೫೦೮; ಪಾಠಕರು ಉಪಯೋಗಿಸಿಕೊಂಡ ಪುಸ್ತಕಗಳ ಸಂಖ್ಯೆ ೭೨೦೪೩; ಭಂಡಾರದಲ್ಲಿರುವ ಒಟ್ಟು ಪುಸ್ತಕ ಸಂಖ್ಯೆ ೧೪೯೨೧.

———

ಶ್ರೀಕೃಷ್ಣ—ಸಂಪುಟ ೧೪, ಸಂಚಿಕೆ ೧.

ಇದರ ಸಂಪಾದಕರಾದ ಮ॥ ಬಿ.ಆರ್. ಚಕ್ರವರ್ತಿಗಳು (ಚಲುವಾಂಬಾ ಅಗ್ರಹಾರ, ಮೈಸೂರು) ತಮ್ಮ "ಹಿರಿಯರಾದ ಪ್ರಸಿದ್ಧ ದೇಶಾಭಿಮಾನಿ ಪತ್ರಕರ್ತರಾಗಿದ್ದ ಬಿ. ಸಿ. ಶ್ರೀನಿವಾಸೈಯ್ಯಂಗಾರ್ಯರ ಹೆಜ್ಜೆಯನ್ನೇ ಅನುಸರಿಸಿ 'ಅವಶ್ಯಂ ಪಿತರಾಚಾರಂ' ಎಂಬ ಸೂಕ್ತಿಯಂತೆ "ಶ್ರೀಕೃಷ್ಣ"ನ ಪೋಷಣೆಯಂ ಮರಳಿ ಕೈಗೊಂಡು" ಇರುವಂತೆಯೂ 'ಇದರಲ್ಲಿ ಪರಿಪುಷ್ಟವಾದ ವಿದ್ಯಾನೀತಿ, ಮತ, ಕೃಷಿ, ಕೈಗಾರಿಕೆ, ಸಹಕಾರ, ಅರ್ಥಸಾಧಕ, ಭಗವದ್ವಿಲಾಸ, ವಿವಿಧ ಸ್ತೋತ್ರಗಳು, ಚರಿತಾರ್ಹರಾದ ಸ್ತ್ರೀ ಪುರುಷರ ಜೀವನ ಚರಿತ್ರೆಗಳು, ಸಾಧುಸಂತರ ಜೀವನ ಚರಿತ್ರೆಗಳು, ಕ್ಷೇತ್ರಮಹಿಮೆಗಳು, ಪ್ರಾಪಂಚಿಕ ಪಾರಮಾರ್ಥಿಕ ಸಂಪತ್ತುಗಳು ವೃದ್ಧಿಯಾಗುವುದಕ್ಕೆ ಸಾಧನವಾದ ಸ್ವದೇಶ ಪ್ರೀತಿ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ ಇತ್ಯಾದಿ ಗುಣಗಳು ವೃದ್ಧಿಯಾಗುವಂತೆ ಉಪಯುಕ್ತವಾದ ಲೇಖನಗಳು ಕಾಲೋಚಿತವಾದ ಚಿತ್ರಪಠಗಳೊಡನೆ ವಿವರಿಸಲಾಗುವುವು. ಸರ್ವ ಧರ್ಮಗಳ ಸಾರವಾದ ಭಗವದ್ಗೀತಾಮೃತಸಾರವೂ, ವಿಷ್ಣು

ಸಹಸ್ರನಾಮ ತಾತ್ಪರ್ಯ ಚಂದ್ರಿಕೆಯೂ, ಭಜಗೋವಿಂದ ಸ್ತೋತ್ರ ರಹಸ್ಯಾರ್ಥ ಪ್ರಕಾಶಿಕೆಯೂ, ಕ್ರಮಶಃ ಪ್ರತಿ ಸಂಚಿಕೆಯಲ್ಲಿಯೂ ಪ್ರಕಟವಾಗುತ್ತಿವೆ." ಎಂದೂ ತಿಳಿಸುತ್ತಾರೆ.

ಇದರ ವಾರ್ಷಿಕ ಚಂದಾ – ಪೋಷಕರಿಗೆ ರೂ. ೧೦–೦–೦ ಆಶ್ರಯದಾತರಿಗೆ ರೂ. ೫–೦–೦. ಇತರರಿಗೆ ರೂ ೨–೪–೦. ಅಂಚೆ ಹಾಸಲು ಉಚಿತ.

ನವಜೀವನ:—ಸಂಪಾದಕರು ಮ|| ಸಿ. ಅಶ್ವತ್ಥನಾರಾಯಣರಾವ್: ಪ್ರಕಾಶಕರು– ಕೃಷ್ಣಾ ಕಂಪನಿ, ಬಳೇಪೇಟೆ, ಬೆಂಗಳೂರು. ಕ್ರೌನ್ ಕಾಲುಪುಟ ೨೦, ವಾರ್ಷಿಕ ಚಂದಾ ರೂ ೬.

ಇದು ಈಗ ಕೆಲವು ವರ್ಷಗಳಿಂದ ದಿನಪತ್ರಿಕೆಯಾಗಿದ್ದು ಈ ಅಕ್ಟೋಬರ್ ತಿಂಗಳಿಂದ ವಾರಪತ್ರಿಕೆಯಾಗಿದೆ. ಈ ಹೊಸರೂಪಿನಲ್ಲಿ ಇದು ಸಚಿತ್ರವೂ ಸುಂದರವೂ ಆಗಿದೆ. ಕನ್ನಡದಲ್ಲಿ ಸಚಿತ್ರವಾದ ಪುಸ್ತಕ ರೂಪದ ವಾರಪತ್ರಿಕೆ ಮತ್ತಾವುದೂ ಇಲ್ಲ; ಇಂಗ್ಲಿಷಿನಲ್ಲಿ ಇಂಥವು ಅನೇಕವಾಗಿದ್ದು ಬಹುವಿಷಯ ಗರ್ಭಿತವಾಗಿಯೂ ಬಹುಜನ ರಂಜಕವಾಗಿಯೂ ಇರುತ್ತವೆ. ಇದೂ ಹಾಗೆಯೇ ಕರ್ಣಾಟಕ ಪತ್ರಿಕಾ ಪ್ರಪಂಚಕ್ಕೆ ಒಂದು ಭೂಷಣವಾಗಲೆಂದು ಹಾರೈಸುತ್ತೇವೆ.

ವಸ್ತು ಕೋಶ

ಕರ್ಣಾಟಕ ಸಂಘದಲ್ಲಿ ಈಚೆಗೆ ನಡೆದ ಕಾರ್ಯಗಳು

ಈ ವರ್ಷ ಸಂಘದ ಕಾರ್ಯಗಳು ಮ॥ ಡಿ. ವಿ. ಗುಂಡಪ್ಪನವರ ಸಮಾರಂಭ ಭಾಷಣದಿಂದ ಮೊದಲಾದುವು. ಅವರು ತಮ್ಮ ಬೋಧಪ್ರದವೂ ಉಜ್ಜ್ವಲವೂ ಉತ್ತೇಜಕವೂ ಆದ ಆ ಭಾಷಣದಲ್ಲಿ, ಉತ್ತಮಸಾಹಿತ್ಯದ ಲಕ್ಷಣಗಳೇನು? ಕನ್ನಡ ಸಾಹಿತ್ಯದಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳೇನು? ವಿಜ್ಞಾನಕ್ಕೂ ಸಾಹಿತ್ಯಕ್ಕೂ ಸಂಬಂಧವುಂಟೇ? ಇದುವರೆಗೆ ಒಳ್ಳೆಯ ಗ್ರಂಥಗಳು ಹೆಚ್ಚಾಗಿ ಹುಟ್ಟದಿರಲು ಕಾರಣವೇನು? ಅಂಥವು ಹುಟ್ಟಬೇಕಾದರೆ ಕ್ಷೇತ್ರವೂ ಆವರಣವೂ ಹೇಗಿರಬೇಕು? ಅವುಗಳನ್ನು ನಾವು ಎಷ್ಟರ ಮಟ್ಟಿಗೆ ಕಲ್ಪಿಸಬಹುದು — ಎಂದು ಮುಂತಾಗಿ ವಿಚಾರಮಾಡಿ, ಸಾಹಿತ್ಯದಲ್ಲಿ ಬರೆಯಬೇಕೆಂದಾಗಲಿ ಅದನ್ನು ಓದಬೇಕೆಂದಾಗಲಿ ಅಭಿಮಾನವಿರುವವರಿಗೆಲ್ಲರಿಗೂ ಅತ್ಯಂತ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು. ರಾಜಕೀಯ ವಿಚಾರವಾಗಿ ಬರೆಯುವುದೂ ಮಾತನಾಡುವುದೂ ಮ॥ ಗುಂಡಪ್ಪನವರಿಗೆ ಹೇಗೆ ಹೊಸದಲ್ಲವೋ, ಕಾವ್ಯ ನಾಟಕ ಉಪನ್ಯಾಸಗಳನ್ನು ಬರೆಯುವುದು ಹೇಗೆ ಹೊಸದಲ್ಲವೋ, ಹಾಗೇ ಸಾಹಿತ್ಯದಮೇಲೆ ಬರೆಯುವುದೂ ಮಾತನಾಡುವುದೂ ಹೊಸದಲ್ಲ. ಆದರೂ ಒಂದೇ ವಿಷಯದಮೇಲೇ ಹಲವುಸಾರಿ ಮಾತನಾಡಿದರೂ ಅವರ ಒಂದೊಂದು ಉಪನ್ಯಾಸವೂ 'ನವನವೋನ್ಮೇಷಶಾಲಿನಿ'

ಯಾಗಿರುತ್ತದೆ. ಅವರ ಗ್ರಂಥಗಳನ್ನು ಓದುವಾಗ, ಉಪನ್ಯಾಸಗಳನ್ನು ಕೇಳುವಾಗ, ಸಾರಸ್ವತ ಪ್ರಪಂಚದಲ್ಲಿ ಬೆಳಕನ್ನು ತೋರಿ ಆನಂದವನ್ನು ಬೀರುವುದು ಬಿಟ್ಟು ಇವರು ರಾಜಕೀಯ ಪ್ರಪಂಚದ ಕಲಹ ಕಳವಳಗಳಿಗೇಕೆ ಹೋಗುವರೆನ್ನುವಂತಾಗುತ್ತದೆ. ರಾಜಕೀಯ ವಿಚಾರಗಳಲ್ಲಿ ಕೈಹಾಕಿ ನಿಂತರೆಂದರೆ, ಜನಜನಾಂಗಗಳನ್ನು ಕಟ್ಟಿ ಅವರಲ್ಲಿ ನವಜೀವನವನ್ನು ತುಂಬಿ ಮಾರ್ಗದರ್ಶಕರಾಗುವ ಈ ಕೆಲಸವನ್ನು ಬಿಟ್ಟು, ಅವರು ಹುಚ್ಚುಕವಿಗಳ ನಿಷ್ಫಲ ಸಾಹಿತ್ಯ ಪ್ರಪಂಚಕ್ಕೆ ಏಕೆ ಬಂದರೆಂಬಂತಾಗುತ್ತದೆ. "ಇಬ್ಬರು ಯಜಮಾನರನ್ನು ಸೇವಿಸುವುದಕ್ಕೆ ಯಾರ ಕೈಯಲ್ಲೂ ಆಗದು" ಎಂದು ಕ್ರಿಸ್ತನು ಹೇಳಿದನಂತೆ. ಮ॥ ಗುಂಡಪ್ಪನವರು ಮಹಾ ಪುರುಷನಾದ ಕ್ರಿಸ್ತನ ಮಾತನ್ನು ಸುಳ್ಳುಮಾಡಿದ್ದಾರೆ.

ಅವರ ಈ ಉಪನ್ಯಾಸವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಮೈಸೂರು ಶಾಸನದ ಇಲಾಖೆಯ ಅಧ್ಯಕ್ಷರಾದ ಡಾಕ್ಟರ್ ಎಂ. ಎಚ್. ಕೃಷ್ಣಯ್ಯಂಗಾರ್ಯರ " ಕರ್ಣಾಟಕದ ಶಾಸನಗಳು " ಎಂಬುದು ಎರಡನೆಯ ಉಪನ್ಯಾಸ. ಅದರಲ್ಲಿ ಅವರು ಕರ್ಣಾಟಕದ ಶಾಸನಗಳು ದೊರೆಯುವ ಸ್ಥಳಗಳು, ಅವುಗಳ ವ್ಯಾಪನೆ, ಮುಖ್ಯ ಲಕ್ಷಣಗಳು, ಲಿಪಿಕಾಲ, ಭೇದಗಳು, ಅವುಗಳಿಂದ ಭಾಷಾ ಸಾಹಿತ್ಯ ಚರಿತ್ರೆಗಳಿಗೆ ಆಗತಕ್ಕ ಉಪಯೋಗ ಇವುಗಳನ್ನು ಕುರಿತು, ಕನ್ನಡ ಶಾಸನಗಳನ್ನು ವ್ಯಾಸಂಗಮಾಡುವುದಕ್ಕೆ ಹೊರಡುವವರಿಗೆ ಉಪಯುಕ್ತವಾದ ಹಲವು ಅಂಶಗಳನ್ನು ರಸವತ್ತಾಗಿಯೂ ಸುಲಭವಾಗಿಯೂ ಇರುವಂತೆ ತಿಳಿಯಪಡಿಸಿದರು. ಇಷ್ಟು ದೊಡ್ಡದೂ ಕಷ್ಟವೂ ನೀರಸವೂ ಆದ ವಿಷಯವನ್ನು ಇಷ್ಟು ಸಂಗ್ರಹವಾಗಿ ಸುಲಭವಾಗಿ ರಸವತ್ತಾಗಿ ತಿಳಿಸುವುದು ಸುಲಭಸಾಧ್ಯವಲ್ಲ.

ವಿದ್ಯಾರ್ಥಿಗಳಿಂದ ನಡೆದ ಉಪನ್ಯಾಸಗಳಲ್ಲಿ ಸಂಘದ ಮುಖ್ಯ ಕಾರ್ಯದರ್ಶಿಗಳಾದ ಮ॥ ಕೆ. ಗೋಪಾಲಕೃಷ್ಣರಾಯರ "ಕನ್ನಡ

ಸಣ್ಣ ಕಥೆಗಳು" ಎಂಬುದೇ ಮುಖ್ಯವಾದದ್ದು. ಅದರಲ್ಲಿ ಅವರು ಇದುವರೆಗೆ ಕನ್ನಡದಲ್ಲಿ ಬಂದಿರುವ ಸಣ್ಣ ಕಥೆಗಳನ್ನು ಸಿಂಹಾವಲೋಕನ ಕ್ರಮದಿಂದ ವಿಮರ್ಶಿಸಿ ಅವುಗಳ ಭವಿಷ್ಯವನ್ನು ಕುರಿತು ಪ್ರಸ್ತಾಪಿಸಿ, ಮುಂದೆ ಒಳ್ಳೆಯ ಕಥೆಗಳು ಬರಬೇಕಾದರೆ ಲೇಖಕರು ಭಾವ ಸಂಸ್ಕಾರವನ್ನು ಪಡೆಯಬೇಕೆಂದು ಸೂಚಿಸಿದರು. ಈ ಸೂತ್ರವು "ಸಣ್ಣಕಥೆ"ಗೆ ಮಾತ್ರವೇ ಅಲ್ಲದೆ ಜೀವನದ ಪ್ರತಿಯೊಂದು ಅಂಶಕ್ಕೂ ಅನ್ವಯಿಸುವುದಾಗಿದೆ.

ಮೈಸೂರು ಮತ್ತು ಕನ್ನಡ

ಮೈಸೂರು, ಕರ್ಣಾಟಕದ ತಿರುಳು ; ಇಲ್ಲಿನ ತಾಯಿಮಾತು ಕನ್ನಡ ; ದೇಶಭಾಷೆ ಕನ್ನಡ ; ರಾಜಭಾಷೆ ಕನ್ನಡ ; ಆದ್ದರಿಂದ ಅದಕ್ಕೆ ಮೈಸೂರಿನಲ್ಲಿ ಸರ್ವವ್ಯಾಪಿಯಾದ ಪ್ರಾಶಸ್ತ್ಯವು ಸ್ವಾಭಾವಿಕವಾಗಿಯೂ ಸ್ವತಸ್ಸಿದ್ಧವಾಗಿಯೂ ಇರಬೇಕಾದದ್ದು ; ಹೀಗಿರುವಾಗ ಇಲ್ಲಿಯೇ, ಕನ್ನಡಕ್ಕೆ ಇನ್ನುಮೇಲೆ ಪ್ರಾಶಸ್ತ್ಯಕೊಡಬೇಕು, ಕನ್ನಡದಮೂಲಕ ಶಿಕ್ಷಣವಾಗಬೇಕು, ಎಂದು ಈಗಲೂ ಇನ್ನೂ ಹೋರಾಡುತ್ತ ಅದರಲ್ಲಿ ಭಿನ್ನಾಭಿಪ್ರಾಯಗಳನ್ನು ತೋರಿಸುತ್ತ ಇದ್ದೇವಷ್ಟೆ. ಊಟಮಾಡುವವನು ಹೊಟ್ಟೆಗೆ ಪ್ರಾಶಸ್ತ್ಯ ಕೊಡಬೇಕು ಬಾಯಿ ಮೂಲಕವೇ ಅದಕ್ಕೆ ಆಹಾರವನ್ನು ಅಗಿದು ಕೊಡಬೇಕು ಎಂದು ಯಾರಾದರೂ ಹೊಡೆದಾಡುತ್ತಾರೆಯೇ ? ಹಾಗಿಲ್ಲದ ಸಂದರ್ಭದಲ್ಲಿ—ಎಂದರೆ ಕೃತಕಾಹಾರವನ್ನು ಬೇರೆ ದಾರಿಯಿಂದ ತುಂಬುವಾಗ—ಅದು ಎಂಥ ದೌರ್ಬಲ್ಯದ ಮತ್ತು ಪ್ರಬಲ ವ್ಯಾಧಿಯ ನಿದರ್ಶಕವಾಗಿದೆಯೆಂದು ಹೇಳಬೇಕಾಗಿಲ್ಲ.

ಅಂತೂ ಈಗ ಹಲವು ವರ್ಷಗಳಿಂದ ಕನ್ನಡಕ್ಕೆ ಪ್ರಾಶಸ್ತ್ಯ ಕೊಡಬೇಕು ಎನ್ನುತ್ತ ಆ ಉದ್ದೇಶವೂ ಒಂದಾಗಿ ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿತವಾಯಿತು. ಇಟ್ಟಿಗಲ್ಲದಿದ್ದರೆ ಕ್ರಮಕ್ರಮ

ವಾಗಿ ಅದರ ಆ ಉದ್ದೇಶವೂ ತಕ್ಕಮಟ್ಟಿಗೆ ನೆರವೇರುತ್ತಿದೆ:— ಕನ್ನಡದಲ್ಲಿ ಎಂ. ಎ. ಪರೀಕ್ಷೆಯನ್ನು ಇಟ್ಟಾಯಿತು, ಅದಕ್ಕೆ ತಕ್ಕ ಗೌರವಸ್ಥಾನವುಳ್ಳ ಮಹೋಪಾಧ್ಯಾಯರನ್ನೂ ಅಧ್ಯಾಪಕರನ್ನೂ ಗೊತ್ತುಮಾಡಿಯಾಯಿತು; ಅದಕ್ಕಾಗಿಯೇ ಇಂಥ ಇನ್ನೂ ಬೇರೆ ಬೇರೆ ದೊಡ್ಡ ಪರೀಕ್ಷೆಗಳು ಹುಟ್ಟುವುದರಲ್ಲಿವೆ; ಅದನ್ನು ಇತರ ದೊಡ್ಡ ಪರೀಕ್ಷೆಗಳಲ್ಲಿ ಸೇರಿಸಿ ಮಿಕ್ಕ ವ್ಯಾಸಂಗ ವಿಷಯಗಳೊಡನೆ ಅದಕ್ಕೆ ಸಹಪಙ್ಕ್ತಿ ದೊರೆಯುವಂತೆ ಏರ್ಪಾಡುಗಳು ಆಗಿವೆ, ಆಗುವುದರಲ್ಲಿವೆ. ಆದರೆ ಎಲ್ಲವೂ ಆದ್ಯಂತವಾಗಿ ಕನ್ನಡಕ್ಕೆ ಅನುಕೂಲವಾಗಿದೆಯೆಂದು ಹೇಳುವಂತಿಲ್ಲ; ಉದಾಹರಣೆಗೆ, ಕನ್ನಡವನ್ನು ನಿರ್ಬಂಧಭಾಷೆಯಾಗಿ ಮಾಡಬೇಕೆಂದು ಹೊರಟು, ಒಂದು ವಿಧದಲ್ಲಿ ಅದನ್ನು ಕುಗ್ಗಿಸಿದಂತಾಯಿತು; ಏಕೆಂದರೆ ಅದನ್ನು ಮೊದಲಿಗಿಂತಲೂ ಸ್ವಲ್ಪ ಹೆಚ್ಚುಮಂದಿ ಓದಬಹುದಾದರೂ ಅದನ್ನು ಎಲ್ಲರೂ ಲಕ್ಷ್ಯಕೊಟ್ಟು ವಿಸ್ತಾರವಾಗಿ ವ್ಯಾಸಂಗಮಾಡುವುದು ಇನ್ನುಮುಂದೆ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿಯೇ ನಿಂತುಹೋಗುತ್ತದೆ. ಅಲ್ಲಿಂದಮೇಲೆ ಕನ್ನಡದ ಓದು ಇದೆ ಎಂದುಕೊಂಡರೂ ಅದು ಕೆಲವು ಹೊಸಕನ್ನಡ ಗ್ರಂಥಗಳನ್ನು ಮಾತ್ರ ಮೇಲೆಮೇಲೆ ಓದಿ ಆ ವಿಚಾರವಾಗಿ ಒಂದೋ ಎರಡೋ ಪ್ರಬಂಧಗಳನ್ನು ಬರೆಯಬಲ್ಲ ಸಾಮರ್ಥ್ಯವನ್ನು ಪಡೆಯುವಷ್ಟು ಮಾತ್ರ; ಈಗ ಕೆಲವು ವರ್ಷಗಳ ಕೆಳಗೆ ಕನ್ನಡದಲ್ಲಿ ಬರುತ್ತಿದ್ದ ಪ್ರಶ್ನ ಪತ್ರಿಕೆಗಳನ್ನೂ ಇಂಥ ಪ್ರಬಂಧ ರಚನೆಯನ್ನೂ ಹೋಲಿಸಿ ನೋಡಿದರೆ, ಹೊಲ ಉತ್ತು ಬೆಳೆ ತೆಗೆಯುತ್ತಿದ್ದವನು ರೆಕ್ಕೆ ಪಡೆದು ಆಕಾಶದಲ್ಲಿ ಸ್ವೇಚ್ಛೆಯಾಗಿ ಹಾರುವುದನ್ನು ಕಂಡಂತಾಗುವುದು. ಮತ್ತೆ ಕೆಲವು ಮೇಲಿನ ಪರೀಕ್ಷೆಗಳಿಗೆ ಹೆಸರುಮಟ್ಟಿಗೆ ಕನ್ನಡವಿದ್ದರೂ ಅದು ಪರೀಕ್ಷೆಗೆ ಇಲ್ಲ—ಗೋಕುಲಾಷ್ಟಮಿಯಲ್ಲಿ "ದೇವರ ನೇವೇದ್ಯಕ್ಕೆ" ಎಂದು ಮಾಡಿಟ್ಟ ತಿಂಡಿಯಹಾಗೆ; ಇಲ್ಲದಿದ್ದರೆ ಪ್ರದರ್ಶನಶಾಲೆಯಲ್ಲಿ ನೋಡುವುದಕ್ಕೆಮಾತ್ರ ಇಟ್ಟ ಬೆಲೆಯುಳ್ಳ ವಸ್ತುಗಳಹಾಗೆ. ಕನ್ನಡಕ್ಕೆ ಬೆಂಬಲವಾಗಿದ್ದ ಸಂಸ್ಕೃತವು ಈ ನೆಪದಲ್ಲಿ ಮೂಲೆಗೆಬಿತ್ತು. ಕನ್ನಡವೊಂದೇ ಉಳಿಯಬೇಕು ಎಂದು ಹೊರಟಾಗ ಮಿಕ್ಕವು—

ದೊಡ್ಡದೋ ಚಿಕ್ಕದೋ ಒಳ್ಳೆಯದೋ ಕೆಟ್ಟದ್ದೋ—ಉಳಿಯುವುದು ಹೇಗೆ? ಉಳಿದರೂ ಅವಕ್ಕೆ ಅದೇ ಪ್ರಾಶಸ್ತ್ಯ ಕೊಡುವುದು ಹೇಗೆ? ಆದರೆ ಹೀಗೂ ಆಗಲಿಲ್ಲ.

ಈ ವಿಚಾರವನ್ನು ದೊಡ್ಡದೊಡ್ಡ ಅಧಿಕಾರಿಗಳೂ ವಿದ್ವಾಂಸರೂ ದೀರ್ಘವಾಗಿ ಆಲೋಚನೆಮಾಡಿ ತೀರ್ಮಾನಿಸಿದ್ದಾರೆ. ಅವರನ್ನು ಆಕ್ಷೇಪಿಸುವುದು ನಮ್ಮ ಅಭಿಪ್ರಾಯವಲ್ಲ. ಆದರೆ ಸಂಸ್ಥಾನದ ಭಾಷಾ ಸಾಹಿತ್ಯಗಳ ಏಮುಖವಾದ ಬೆಳವಣಿಗೆ, ಐಕಮತ್ಯ ಶ್ರೇಯಸ್ಸುಗಳ ಮೂಲಕ ದೇಶದ ಪುರೋಭಿವೃದ್ಧಿ, ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇಲ್ಲಿ ಕೆಲವು ಅಂಶಗಳನ್ನು ಸೂಚಿಸಲಪೇಕ್ಷಿಸುತ್ತೇವೆ.

ಈಸಾರಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಕನ್ನಡದ ವಿಚಾರ ವಿಮರ್ಶೆಗೆ ಬಂದಾಗ ಚರ್ಚೆನಡೆದು ಶಿಕ್ಷಣ ಸಚಿವರು "ನಾಡಿನ ಅಭ್ಯುದಯಕ್ಕೆ ಮಾತೃಭಾಷೆಯ ಮೂಲಕ ಕೊಡುವ ಶಿಕ್ಷಣವೇ ಮೂಲ. ಆದರೆ ಮುಸಲ್ಮಾನ ಬಂಧುಗಳನ್ನು ಒತ್ತಾಯ ಪಡಿಸದೆ ಅವರಾಗಿ ಅವರೇ ಕನ್ನಡ ಕಲಿಯುವಂತೆ ಮಾಡಬೇಕು" ಎಂದು ಅಪ್ಪಣೆ ಕೊಡಿಸಿದಂತೆಯೂ, ಮೇಲೆಕಂಡ ವಿಚಾರವನ್ನು ವಿಮರ್ಶೆ ಮಾಡಲು ಒಂದು ಸಮಿತಿಯು ಏರ್ಪಾಡಾಗಬೇಕೆಂದು ಎಲ್ಲರೂ ಒಪ್ಪಿದಂತೆಯೂ ಕೇಳುತ್ತೇವೆ. ಆದ್ದರಿಂದ ಈ ಸಂದರ್ಭದಲ್ಲಿ ನಮಗೆ ತೋರಿದ ಕೆಲವು ಭಾವಗಳನ್ನು ಅಸಂಕುಚಿತವಾದ ಮತ್ತು ದೇಶಾಭ್ಯುದಯ ದೃಷ್ಟಿಯಿಂದ ಮಹಾಜನರ ಮುಂದೆ ಇಟ್ಟಿದ್ದೇವೆ.

ಪ್ರತಿಯೊಬ್ಬನೂ ಅವನವನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದದ್ದು ಅವನ ಕರ್ತವ್ಯ — ಆದರೆ ಅವನ ಕರ್ತವ್ಯವು ಅಷ್ಟಕ್ಕೇ ಮುಗಿಯುವುದಿಲ್ಲ; ತನ್ನ ವಿಷಯದಲ್ಲಿ ತನ್ನ ಕರ್ತವ್ಯವಿದ್ದಂತೆಯೇ ತನ್ನ ಕುಟುಂಬದ ವಿಷಯದಲ್ಲಿಯೂ ತಾನು ಮಾಡಬೇಕಾದ ಕರ್ತವ್ಯವಿರುತ್ತದೆ. ಬೇಕಾಗಿಯೋ ಬೇಡವಾಗಿಯೋ ಕಟ್ಟಿಕೊಂಡ ತನ್ನ ಹೆಂಡತಿ ಮಕ್ಕಳನ್ನು, ಅವರಿಂದ ಸುಖವಿರಲಿ ಇಲ್ಲದಿರಲಿ,

ಕಾಪಾಡಬೇಕು, ಸಂತೋಷ ಪಡಿಸಬೇಕು. ಮನೆಯಲ್ಲಿ ಎಲ್ಲರೂ ಸುಖವಾಗಿದ್ದರೆ ತಾನು ಮನೆಗೆ ಬಂದಾಗ ಎಂದಾದರೂ ಸುಖಉಂಟಾಗುವ ಸಂಭವವೂ ಉಂಟು. ತನ್ನ ಸುಖವಿರಲಿ, ಅಂತೂ ತನ್ನನ್ನು ಸೇರಿದವರ ವಿಷಯದಲ್ಲಿ ತಾನು ಮಾಡಬೇಕಾದ ಕರ್ತವ್ಯವೊಂದಿದೆ; ಅದಕ್ಕೆ ಸ್ವಾರ್ಥವು ಅಡ್ಡಿ ಬರಬಾರದು; ಹಾಗೇ ತನ್ನ ನಾಡಿನ ವಿಷಯದಲ್ಲಿ ಇನ್ನೂ ಉಚ್ಚತರವಾದ ಕರ್ತವ್ಯವೂ ಇದೆ; ಇದಕ್ಕೆ ಸ್ವಸ್ವಾರ್ಥವೂ, ಸ್ವಕುಟುಂಬ ಸ್ವಾರ್ಥವೂ ಅಡ್ಡಿ ಬರಬಾರದು. ತಾನು ತನ್ನ ಕುಟುಂಬಕ್ಕೆ ಹೇಗೋ ತನ್ನ ಕುಟುಂಬವು ನಾಡಿನಲ್ಲಿ ಹಾಗೆ. ಆ ಕುಟುಂಬಗಳನ್ನು, ಅವುಗಳಿಂದ ಸುಖವಿರಲಿ ಇಲ್ಲದಿರಲಿ, ಅವು ಅಜ್ಞವಾಗಿರಲಿ ಅವಿವೇಕಿಯಾಗಿರಲಿ, ಅವುಗಳನ್ನು ಮಕ್ಕಳಂತೆ ಕಾಪಾಡುವುದು ತಂದೆಯಂಥ ರಾಜನ ಧರ್ಮ. ಆದರೆ ಮನೆಯಲ್ಲಿ ಹೆಂಡತಿ ಮಕ್ಕಳು ಗುದ್ದಾಡಿ ಒಬ್ಬರ ಮಾತನ್ನು ಒಬ್ಬರು ಕೇಳದೆ ಯಜಮಾನನ ಮಾತು ನಡೆಯದಂತಾದರೆ ಯಾರಿಗೆ ಸುಖವುಂಟು? ಆದ್ದರಿಂದ, ಮನೆಯ ಸಂಸಾರದಲ್ಲಿ ಎಲ್ಲರೂ ವಿವೇಕಿಗಳಾಗಿ ತಮ್ಮ ಕುಟುಂಬದ ಶ್ರೇಯಃಕಾಂಕ್ಷಿಗಳಾದ ತಾಯಿತಂದೆಗಳೊಡನೆ ಮಧುರ ಭಾವದಲ್ಲಿ ಕಲೆತು ಕುಟುಂಬದ ಶ್ರೇಯಸ್ಸನ್ನೂ ಆ ಮೂಲಕ ತಮ್ಮ ಪ್ರತಿಯೊಬ್ಬರ ಶ್ರೇಯಸ್ಸನ್ನೂ ಪಡೆಯುವಂತೆ, ರಾಜ್ಯ ಸಂಸಾರದಲ್ಲಿ ಪ್ರತಿಯೊಬ್ಬ ಕುಟುಂಬದವರೂ ಜಾತಿಗಳವರೂ ಪಂಗಡಗಳವರೂ ಸರ್ಕಾರದೊಡನೆ ಮಧುರಭಾವದಲ್ಲಿ ಕಲೆತು ಆ ಮೂಲಕ ಒಟ್ಟು ದೇಶದ ಶ್ರೇಯಸ್ಸನ್ನೂ ಅದರಮೂಲಕ ಒಂದೊಂದು ಪಂಗಡದ ಶ್ರೇಯಸ್ಸನ್ನೂ ಕೋರಬೇಕು. ದೇಹಾರೋಗ್ಯ ಚೆನ್ನಾಗಿದ್ದರೆ ತಾನೇ ಕೈಕಾಲುಗಳು ಕೆಲಸಮಾಡುವುದು? ತಲೆಯಲ್ಲಿ ನೋವೋ ಹೊಟ್ಟೆಯಲ್ಲಿ ಛಳುಕೋ ಇದ್ದರೆ ಕೈಕಾಲು ಕೆಲಸಮಾಡುವುದು ಹೇಗೆ? ಅವಕ್ಕೆ ಪ್ರಾಣವಿದ್ದೀತು ಹೇಗೆ?

ಮೈಸೂರಿನ ತಾಯಿಮಾತು ಕನ್ನಡ, ದೇಶಭಾಷೆ ಕನ್ನಡ, ರಾಜಭಾಷೆ ಕನ್ನಡ—ಎಂದೆವು. ಇದನ್ನು ಯಾರೂ ಅಲ್ಲವೆನ್ನುವು

ದಿಲ್ಲ. ಆದ್ದರಿಂದ ಮೈಸೂರಿನ ಪ್ರತಿಯೊಂದು ಪ್ರಜೆಗೂ, ಅವನು ಯಾವ ವರ್ಣಾಶ್ರಮದವನಾಗಲಿ, ಜಾತಿ ಕಸಬಿನವನಾಗಲಿ, ದೇಶಾಭ್ಯುದಯ ದೃಷ್ಟಿಯಿಂದ, ಇದನ್ನು ಉಳಿಸಿಕೊಂಡು ಬಲಪಡಿಸಿಕೊಳ್ಳುವುದು ಕರ್ತವ್ಯ—ತನ್ನ ದೇಶಕ್ಕೆ, ತನ್ನ ರಾಜನಿಗೆ, ತಾನು ಮಾಡಬೇಕಾದ ಶ್ರೇಷ್ಠವಾದ ಕರ್ತವ್ಯ. ಜಾತಿ ಮತಗಳಿಗೂ, ಕಸಬು ಕೈಗಾರಿಕೆಗಳಿಗೂ, ಸಂಸ್ಕೃತಿ ವ್ಯವಹಾರಗಳಿಗೂ ಇದಕ್ಕೂ ಸಂಬಂಧವಿಲ್ಲ. ಹಣೆತುಂಬ ವಿಭೂತಿಯನ್ನೋ ಗಂಧವನ್ನೋ ಬಳಿದುಕೊಳ್ಳಲಿ, ನಾಲ್ಕು ನಾಲ್ಕುಸಲ ಸ್ನಾನಮಾಡಲಿ ಒಂದೊಂದು ಗೂಡೆಯತುಂಬ ಹೂ ತುಲಸಿಗಳನ್ನು ದೇವರಿಗೆ ಪೂಜೆಮಾಡಲಿ, ದಿನಕ್ಕೆ ಹತ್ತು ಹತ್ತುಸಲ ನಮಾಜು ಮಾಡಲಿ ಅದು ಅವರವರ ಸ್ವಂತವಿಚಾರವಾಯಿತು. ಮತ ಧರ್ಮ ಆಚಾರ ಇವೆಲ್ಲ ಅವರವರ ಗೃಹಕೃತ್ಯದ ಹಾಗೆ; ಧರ್ಮಾನುಷ್ಠಾನದಿಂದ ಅವನವನು ಮಾತ್ರ ಉದ್ಧಾರವಾಗಬಹುದೇ ಹೊರತು ಅವನವನ ಹೆಂಡತಿ ಮಕ್ಕಳನ್ನೂ ಸ್ವರ್ಗಕ್ಕೆ ಕರೆದುಕೊಂಡು ಹೋಗುವಂತಿಲ್ಲ. ಇವೆಲ್ಲ ಒಟ್ಟು ನಾಡಿಗೆ ಸಂಬಂಧಪಡತಕ್ಕವಲ್ಲ; ಒಬ್ಬ ನೌಕರನು ಮನೆಯಲ್ಲಿ ಹಿಟ್ಟು ತಿಂದನೇ ಚಿರೋಟಿ ತಿಂದನೇ ಉಪವಾಸ ಮಾಡಿದನೇ ಎಂದು ಸರ್ಕಾರದವರು ವಿಚಾರಮಾಡುವುದಿಲ್ಲ—ಅದು ಅವನವನ ಯೋಗಕ್ಷೇಮ. ಹಾಗೇ ಒಬ್ಬೊಬ್ಬರು ಒಂದೊಂದು ಕಸಬನ್ನು ಅನುಸರಿಸಬಹುದು; ಆದರೆ ಎಲ್ಲರೂ ತಮ್ಮ ದೇಶಕ್ಕೆ ಅದರಿಂದ ಅದಕ್ಕೆ ಲಾಭವೇ ನಷ್ಟವೇ ಎಂದು ನೋಡಬೇಕು. ಇದರಂತೆ ವ್ಯವಹಾರಕ್ಕಾಗಿ—ಬೆಂಗಳೂರಿನಂಥ ಊರಿನಲ್ಲಿ— ತಮಿಳು ತೆಲುಗು ಉರ್ದು ಕನ್ನಡ ಇಂಗ್ಲೀಷು ಮುಂತಾದ ನಾನಾ ಭಾಷೆಗಳು ಬೇಕಾಗಬಹುದು. ದೇವರು ಕೊಟ್ಟ ಒಂದೇ ಬಾಯಲ್ಲಿ ಈ ಹಲವು ಮಾತುಗಳನ್ನಾಡಬೇಕು. ಆದರೂ ಮನೆಯಲ್ಲಿ ತಾಯಿಯೊಡನೆ ನಮ್ಮ ಮಕ್ಕಳೊಡನೆ ಆಡುವುದು ಒಂದೇ ಮಾತು. ತಾನು ಇಂಗ್ಲೀಷು ಕಲಿತ ಮಾತ್ರಕ್ಕೆ ತನ್ನ ತಾಯಿಯೋ ಮಕ್ಕಳೋ ತನ್ನೊಡನೆ ಇಂಗ್ಲೀಷು ಮಾತನಾಡಲಾರರೆಂದು ದೂರುವುದು ಅನ್ಯಾಯ. ಹಾಗೇ ದೇಶಕ್ಕೆಲ್ಲಾ ಒಂದು ಮಾತು ಇರಬೇಡವೆ?

ಇದರಿಂದ ದೇಶವು ಮುಂದಕ್ಕೆ ಬರುವುದಿಲ್ಲವೇ? ಇಂಡಿಯಾದೇಶಕ್ಕೆಲ್ಲಾ ಒಂದು ಭಾಷೆಯಿಲ್ಲದಿರುವುದರಿಂದ ಎಷ್ಟು ಅಡಚಣೆಯಾಗಿದೆ! ಬಂಗಾಳಾ ದೇಶದಲ್ಲಿ ಬಹುಸಂಖ್ಯೆಯ ಜನರು ಮಹಮ್ಮದೀಯರು; ಅವರೆಲ್ಲರೂ ತಮ್ಮ ದೇಶಭಾಷೆಯಾದ ಬಂಗಾಳಿಯನ್ನು ಓದಿ ಬರೆದು ಅದಕ್ಕೆ ಒತ್ತಾಸೆಕೊಟ್ಟದ್ದರಿಂದ ಅದರ ಸಾಹಿತ್ಯವು ಅಷ್ಟು ಪುಷ್ಟವಾಗಿದೆ; ಆ ಕೀರ್ತಿಯು ರವೀಂದ್ರನಾಥರಂಥ ಶ್ರೇಷ್ಠ ವ್ಯಕ್ತಿಗಳಿಗೆ ಎಷ್ಟರಮಟ್ಟಿಗೆ ಹೋಗುತ್ತದೆಯೋ ಅಷ್ಟು ಮಟ್ಟಿಗೆ, ನಾನಾಜಾತಿ ಮತಗಳಿಗೆ ಸೇರಿದ್ದರೂ ದೇಶಭಾಷಾಭಕ್ತರಾದ ಬಂಗಾಳದೇಶೀಯರಿಗೆ ಹೋಗುತ್ತದೆ. ಹೈದರಾಬಾದಿನಲ್ಲಿ ಉರ್ದು ದೇಶಭಾಷೆಯಾಗಿ ರಾಜಭಾಷೆಯಾಗಿ ಶೋಭಿಸುತ್ತಿದೆ; ಅಲ್ಲಿನ ಕನ್ನಡಿಗರು ಕನ್ನಡವನ್ನಾತನಾಡಬಲ್ಲರು, ಆದರೆ ಅನೇಕರಿಗೆ ಅದನ್ನು ಬರೆಯುವುದಕ್ಕೆ ಬರದು, ಓದುವುದಕ್ಕೆ ಬರದು; ಅದನ್ನು ಓದಬೇಕಾದರೆ, ಕುರುಡರಿಗೆ ಗುಳ್ಳೆ ಭಾಷೆಯಲ್ಲಿ ಅಕ್ಷರಗಳನ್ನು ಚುಚ್ಚಿಕೊಟ್ಟಂತೆ, ದೇವನಾಗರಿಯಲ್ಲಿಯೋ ಉರ್ದುವಿನಲ್ಲಿಯೋ ಬರೆದುಕೊಡಬೇಕು; ಇದರಿಂದ ಆ ದೇಶದ ರಾಜ್ಯಾಡಳಿತದಲ್ಲಿ ಭಾಷೆಯ ತೊಡಕುಗಳಿಂದ ಬರತಕ್ಕ ಎಷ್ಟು ತೊಂದರೆಗಳು ನಿವಾರಣೆಯಾಗಿವೆ! ಉರ್ದು ಭಾಷೆಯಲ್ಲಿ ಅಷ್ಟು ಗ್ರಂಥಗಳು ಹುಟ್ಟುವುದಕ್ಕೂ ದೇಶಭಾಷೆಯಲ್ಲಿ ಶಿಕ್ಷಣ ಕೊಡತಕ್ಕ ಉಸ್ಮಾನಿಯಾ ಯೂನಿವರ್ಸಿಟಿಯಂಥ ವಿಶ್ವವಿದ್ಯಾಲಯವು ಸಾಧ್ಯವಾಗುವುದಕ್ಕೂ ಇದು ಎಷ್ಟು ಸಹಾಯಕಾರಿಯಾಗಿದೆ! ಹಾಗೇ ಸಂಸ್ಕೃತವೂ; ನ್ಯಾಯವಾಗಿ ನೋಡಿದರೆ, ಇಂಡಿಯದ ಭಾಷೆ—ಉತ್ತರ ಇಂಡಿಯಕ್ಕಾದರೂ—ಸಂಸ್ಕೃತ; ಅದನ್ನು ರಾಜಕೀಯವಾದ ಇಂಗ್ಲೀಷಿಗೂ ವ್ಯಾವಹಾರಿಕವಾದ ಇತರ ಭಾಷೆಗಳಿಗೂ ಮಾರುಕೊಟ್ಟಿಲ್ಲವೆ? ಸಂಸ್ಕೃತಕ್ಕೆ ಉತ್ತೇಜಕವಾಗಿ ಪಾಠಶಾಲೆಗಳೂ ಪಾಠಶಾಲೆಯಲ್ಲಿ ವೇತನಗಳೂ ಇವೆ ಎನ್ನಬಹುದು; ಕನ್ನಡವು ಸಾರ್ವತ್ರಿಕವಾದಾಗ ಹಾಗೇ ಬೇಕಾದರೆ ಉರ್ದು ಕಾಲೇಜುಗಳನ್ನು ಸ್ಥಾಪಿಸಿ ಅವುಗಳಲ್ಲಿ ಬೇಕಾದಷ್ಟು ವೇತನಗಳನ್ನು ಇಡಬಹುದು. ನಾಳೆ ಹಿಂದಿಯು ಅಖಿಲ ಭಾರತೀಯ ದೇಶಭಾಷೆಯೆಂದು ಏರ್ಪಟ್ಟು ಅದರಿಂದ ದೇಶ

ದಲ್ಲಿ ಒಕ್ಕಟ್ಟು ಬಂದು ಮಂಗಳವುಂಟಾಗುವಂತಿದ್ದರೆ ಇವೆಲ್ಲವನ್ನೂ ಅವವದರ ಸ್ಥಾನದಲ್ಲಿರಿಸಿ ಹಿಂದಿಯನ್ನು ಮುಂದುಮಾಡೋಣ! ಇವೊತ್ತು ಮೈಸೂರಿನ ದೇಶಭಾಷೆ ರಾಜಭಾಷೆಯಾದ ಕನ್ನಡವನ್ನು ಎತ್ತಿ ಹಿಡಿಯುವುದು ಎಲ್ಲಾ ಮೈಸೂರು ಪ್ರಜೆಯ ಕರ್ತವ್ಯವೂ ಅಲ್ಲವೆ?

ಆದರೆ ಈಚೆಗೆ ಇಸ್ಲಾಂ ಸಂಸ್ಕೃತಿಯು ಬೇರೆಯೆಂದೂ ಮಹಮ್ಮದೀಯರಿಗೆ ಕನ್ನಡ ಕಲಿಯುವುದು ಕಷ್ಟವೆಂದೂ ಒಂದು ಭಾವನೆಯುಂಟಾಗಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಉರ್ದು ಇವೆರಡರಲ್ಲಿ ಯಾವುದಾದರೂ ಒಂದು ಒತ್ತಾಯವಾದ ದ್ವಿತೀಯ ಭಾಷೆಯಾಗಿರಬೇಕು ಎಂದು ವಿಧಾಯಕವಾಗಿದೆ. ಅದನ್ನು ಅನುಸರಿಸಿ ಮಿಕ್ಕ ಕಡೆಗಳಲ್ಲಿಯೂ 'ಕನ್ನಡ' ವೆಂದರೆ ಕನ್ನಡ ಒಂದೇ ಅಲ್ಲ, ಕನ್ನಡ ಉರ್ದು (ಈ ಎರಡೂ) ಎಂದು ಅರ್ಥವಾಗುವ ಮಟ್ಟಿಗೆ ಉರ್ದು ಭಾಷೆಯು ಒಡವೆರೆದು ಬರುತ್ತಿದೆ. ಈಗ ಕೆಲವು ದಿನಗಳ ಕೆಳಗೆ ನಡೆದ ಒಂದು ಗಣ್ಯ ಸಭೆಯಲ್ಲಿ ಕನ್ನಡಕ್ಕೆ 'ಹಾಗೆ ಮಾಡಬೇಕು ಹೀಗೆ ಮಾಡಬೇಕು' ಎಂದು ವಿಚಾರ ನಡೆಯುತ್ತ ತೀರ್ಮಾನವಾಗುವ ಕಾಲಕ್ಕೆ ಒಬ್ಬ ಮಹಮ್ಮದೀಯ ದೊಡ್ಡಮನುಷ್ಯರು ಎದ್ದು ನಿಂತುಕೊಂಡು 'ಕನ್ನಡ' ಎಂದರೆ 'ಉರ್ದು'ವೂ ಸೇರುತ್ತದೆ ತಾನೆ?—ಎಂದರು. ಎಲ್ಲರೂ ನಗುತ್ತ 'ಹೌದು' ಎಂದರು.

ಇಸ್ಲಾಂ ಸಂಸ್ಕೃತಿಯು ಭಿನ್ನವಾಗಿರಬಹುದು. ಆದರೆ ಅದನ್ನು ಆ ಭಾಷೆಯ ಮೂಲಕವೇ ತಿಳಿದುಕೊಳ್ಳಬೇಕೆ? ಈಗ ಗ್ರೀಕ್ ಜೈನ ಸಂಸ್ಕೃತ ಮುಂತಾದ ಸಂಸ್ಕೃತಿಗಳನ್ನು ನಾವು ಇಂಗ್ಲೀಷ್‌ಮೂಲಕ ತಿಳಿದುಕೊಳ್ಳುತ್ತಿಲ್ಲವೇ ? ಹಾಗೆಯೇ ಇಸ್ಲಾಂ ಗ್ರಂಥಗಳನ್ನೂ ಉರ್ದುವಿನಲ್ಲಿಯೇ ಎಲ್ಲೋ ಕೆಲವು ಮಹಮ್ಮದೀಯರು ಓದುವುದಕ್ಕಿಂತ ಅವುಗಳನ್ನು ಕನ್ನಡಿಸಿ ಎಲ್ಲರೂ ಓದುವಂತಾದರೆ ಎಷ್ಟು ಲಾಭ! ಆಗಲೂ ಉರ್ದು ತಿಳಿದವರು ಮೂಲ ಓದುವುದಕ್ಕೇನೂ ಅಡ್ಡಿ ಇಲ್ಲ; ತಮಿಳರು ಹೀಗೆ ವೇದವನ್ನು ತರ್ಜುಮೆಮಾಡಿಕೊಂಡರು; ಉಪನಿ

ಷತ್ತು ಗೀತಾದಿಗಳನ್ನು ಸಂಸ್ಕೃತದಲ್ಲಿ ಓದುವುದು ನಿಂತು ಕನ್ನಡ ದಲ್ಲಿ ಓದುವುದು ಮೊದಲಾಗುತ್ತಿದೆ. ಈಗ ಮ॥ ಮುಹಮ್ಮದಾಲಿ ಯವರಿಂದ ಪ್ರಕಾಶಿತವಾದ ಸಟಿಪ್ಪಣವಾದ ಕೊರಾನ್ ಮೂಲಭಾಷಾಂ ತರಗಳಂಥ ಗ್ರಂಥಗಳು ಬಂದರೆ ಅವನ್ನು ಮುಹಮ್ಮದೀಯರಿಗಿಂತ ಹೆಚ್ಚಾಗಿ ಇತರರು ಓದುವರೆಂದು ಹೇಳಬಲ್ಲೆವು; ಆ ಪುಸ್ತಕದ ಕಾಗದ ಮುದ್ರಣ ಬೈಂಡುಗಳ ಸೌಂದರ್ಯವೂ ಆ ಭಾಷಾ ಶೈಲಿಯ ಸೊಗಸೂ ಇವೆರಡೇ ಸಾಕು ವಿದ್ಯಾವಂತರನ್ನು ಆಕರ್ಷಿಸುವುದಕ್ಕೆ. ಆದ್ದರಿಂದ ಮುಹಮ್ಮದೀಯರು ತಮ್ಮ ಸಂಸ್ಕೃತಿ ಗ್ರಂಥಗಳನ್ನು ದೇಶಭಾಷೆಯಾದ ಕನ್ನಡದಲ್ಲೇ ಓದುವಾಗ—ಅವರಿಗೆ ಆಗ ಉರ್ದು ಗೊತ್ತಿರುವುದಿಲ್ಲವೆಂದು ಇಟ್ಟುಕೊಳ್ಳೋಣ — ಉಭಯರಿಗೂ ಅದ ರಿಂದ ಎಷ್ಟು ಉಪಕಾರವಾಗುವುದು! ಮತ ಪ್ರಸಾರಣೆಗಾದರೂ ಧರ್ಮ ಗ್ರಂಥವು ದೇಶಭಾಷೆಗೆ ಬರುವುದು ಪ್ರಥಮ ಸೋಪಾನವೆಂ ಬುದನ್ನು ಕ್ರೈಸ್ತ ಪಾದ್ರಿಗಳು ಹೇಳಿಕೊಟ್ಟಿದ್ದಾರೆ. ಧರ್ಮೋಪ ದೇಶಕರ ಮೂಲತತ್ವಗಳು, ಎಲ್ಲಾ ದೇಶದಲ್ಲಿಯೂ ಎಲ್ಲಾ ಕಾಲದ ಲ್ಲಿಯೂ, ಒಂದೇ ಅರ್ಥ ಕೊಡತಕ್ಕವು, ಒಂದೇ ಉದ್ದೇಶವುಳ್ಳವು! ಆದ್ದರಿಂದ ಕೊರಾನ್ ಮುಂತಾದ ಗ್ರಂಥಗಳನ್ನು ಹಿಂದೂಗಳು ಓದು ವುದರಿಂದ ಪರಸ್ಪರ ಮಧುರ ಭಾವವು ಹೆಚ್ಚಾಗುವುದರಲ್ಲಿ ಏನೇನೂ ಸಂಶಯವಿಲ್ಲ. ಇಂಗ್ಲೀಷು ಓದಿದವರಲ್ಲಿ ಬೈಬಲ್ ಗ್ರಂಥವನ್ನು ಅದರ ಧರ್ಮತತ್ತ್ವಗಳಿಗೂ ಉದಾತ್ತ ಭಾವಗಳಿಗೂ ಗೌರವಿಸದವರಿಲ್ಲ. ಮತ್ತು, ಸಂಸ್ಕೃತಿಯಲ್ಲಿ ನಿಜವಾಗಿಯೂ ಭೇದವಿರುವುದಾದರೆ ಆ ವಿಷ ಯಗಳನ್ನು ಪಠ್ಯ ಪುಸ್ತಕಗಳಲ್ಲಿ ಸೇರಿಸಿ ಎಲ್ಲರೂ ಓದೋಣ! ಮಿಷನ್ ಸ್ಕೂಲಿನಲ್ಲಿ ಪಾದ್ರಿಗಳು ತಮ್ಮ ರೀಡರುಗಳನ್ನು ಇಟ್ಟು ಅದರಲ್ಲಿ ಬೈಬಲ್ ಪಾಠಗಳನ್ನು ಸೇರಿಸಿಲ್ಲವೇ? ಬೈಬಲನ್ನು ಬೇರೆ ಪಾಠ ಹೇಳು ತ್ತಿಲ್ಲವೇ?—ಹಾಗೆ. ಸಾಲದಿದ್ದರೆ, ಧಾರ್ಮಿಕ ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಟ್ಟು ಪ್ರತಿಯೊಬ್ಬರೂ ಹಿಂದು ಮುಹಮ್ಮದೀಯ ಕ್ರೈಸ್ತ ಧರ್ಮ ಗಳನ್ನೆಲ್ಲವನ್ನೂ ತಕ್ಕಮಟ್ಟಿಗೆ ಓದುವಂತೆ ಮಾಡಬಹುದು. ಮ ತ್ತೊಂದು ಧರ್ಮವನ್ನು ಓದುವುದರಿಂದ ಮನುಷ್ಯನು ಪತಿತನಾಗುವ

ನೆಂಬ ಕಾಲವು ಹೋಯಿತು. ಪ್ರತಿಯೊಂದು ವಿಷಯವನ್ನೂ ತುಲನಾತ್ಮಕವಾಗಿ ಸವಿಪುರ್ಶವಾಗಿ ಓದುತ್ತಿರುವಾಗ ಇದಕ್ಕೆ ಯಾರೂ ಹಿಂದೆಗೆಯರು. ಇತರರೊಡನೆ ಹೋಲಿಸಿ ನೋಡಿಕೊಂಡರೆ ನಮ್ಮ ನಿಜ ಸ್ವರೂಪವು ಗೊತ್ತಾಗುವಹಾಗೆ, ನಮ್ಮನ್ನು ನಾವು ಕನ್ನಡಿಯಲ್ಲಿ ಎಷ್ಟು ನೋಡಿಕೊಂಡರೂ ಗೊತ್ತಾಗುವುದಿಲ್ಲ. ಅಷ್ಟೇಕೆ ಶುದ್ಧ ವೈದಿಕರಾದವರೂ ದರ್ಶನಗಳನ್ನು ಓದುವಾಗ ಚಾರ್ವಾಕ ಮುಂತಾದ "ನಾಸ್ತಿಕ" ದರ್ಶನಗಳನ್ನು ವ್ಯಾಸಂಗಮಾಡುತ್ತಿರಲಿಲ್ಲವೇ ?

ಹಿಂದೂ ಮುಸಲ್ಮಾನರು ಜಾತಿಯಲ್ಲಿ ಬೇರೆಯಾದರೂ ದೇಶದಲ್ಲಿ ಒಂದು ; ಭಾರತೀಯ ಮುಸಲ್ಮಾನರಾರೂ ವರ್ಷಕ್ಕೊಂದುಸಾರಿ ತುರ್ಕಿಗೋ ಈಜಿಪ್ಟಿಗೋ ಅರೇಬಿಯಾಕ್ಕೋ ಹೋಗಿ ಬರುವುದಿಲ್ಲ. ಇಲ್ಲಿ ಮುದುಕರಾಗುವವರೆಗೆ ದುಡಿದು ಪೆನ್‌ಷನ್ ಪಡೆದು ಬೇರೆ ಖಂಡಕ್ಕೆ ಹೋಗುವುದಿಲ್ಲ. ಹಿಂದೂ ಮುಸಲ್ಮಾನರಿಬ್ಬರೂ ಭಾರತೀಯರು. ನಮ್ಮನ್ನು ಇಂಡಿಯಾದಿಂದ ಹೊರಗೆ ಜನರು ವ್ಯವಹರಿಸುವುದು ಹಾಗೇ. ಆದ್ದರಿಂದ ನಾವು ಇರಬೇಕಾದದ್ದೂ ಹಾಗೇ ; ಇಂದಲ್ಲದಿದ್ದರೆ ಮುಂದಾದರೂ ನಾವು ಒಂದಾಗಬೇಕು ; ಅದಕ್ಕೆ ಹತ್ತಿರವಾದ, ಸುಖಶಾಂತಿದಾಯಕವಾದ ದಾರಿಯನ್ನು ಹುಡುಕಬೇಕು. ಒಂದು ಮನೆಯಲ್ಲಿ ಒಡಕು ಹುಟ್ಟಿದರೆ ಅದು ನಿಲ್ಲುವುದು ಕಷ್ಟ. ಆದ್ದರಿಂದ ಈಗ ರಾಜಕೀಯ ಸಾಮಾಜಿಕ ಮುಂತಾದ ವಿಚಾರಗಳಲ್ಲಿ ಐಕಮತ್ಯವನ್ನು ಸಾಧಿಸುತ್ತಿರುವಂತೆ ಭಾಷಾ ಸಾಹಿತ್ಯ ವಿಚಾರಗಳಲ್ಲಿಯೂ ಐಕಮತ್ಯವನ್ನು ಸಾಧಿಸಬೇಕಾದದ್ದು ಎಲ್ಲರ ಕರ್ತವ್ಯ.

ಮಹಮ್ಮದೀಯರು ಕನ್ನಡ ಕಲಿಯುವುದು ಕಷ್ಟವೆಂಬುದೂ, ಎರಡುಮೂರು ಭಾಷೆ ಕಲಿಯುವುದು ಇನ್ನೂ ಕಷ್ಟವೆಂಬುದೂ ಮತ್ತೊಂದು ವಾದ. ಕನ್ನಡವೇಕೆ, ಯಾವುದನ್ನು ಕಲಿಯುವುದೂ ಕಷ್ಟ; ಮಹಮ್ಮದೀಯರಿಗೆ ಮಾತ್ರವಲ್ಲ,ಎಲ್ಲರಿಗೂ ಎಲ್ಲವೂ ಕಷ್ಟವೇ! –ಮರಗೆಲಸ ಸುಲಭವೇ, ವ್ಯವಸಾಯ ಸುಲಭವೇ, ಲೆಕ್ಕ ಸುಲಭವೇ?

ಒಂದು ಮಠದಲ್ಲಿ ಒಬ್ಬ ಹಿಂದೂ ಹುಡುಗನಿಗೆ ಮೇಷ್ಟರು 'ಶ್ರೀ'ಕಾರವನ್ನು ಎಷ್ಟುಸಾರಿ ಹೇಳಿಕೊಟ್ಟರೂ ಅವನು ಅದನ್ನು ಉಚ್ಚರಿಸಲಾರದೆ "ಚೀಳೀ" ಎಂದು ಹೇಳುತ್ತಿದ್ದದ್ದನ್ನು ನಾನೇ ಕೇಳಿದ್ದೇನೆ. ಇನ್ನೂ, ಯುರೋಪಿಯನ್ನರು ಕನ್ನಡ ಕಲಿಯಲಾರರು. ಅವರು ಎಷ್ಟುಶ್ರಮಪಡಲಿ ಮಹಮ್ಮದೀಯರಷ್ಟು ಚನ್ನಾಗಿ ಕಲಿಯಲಾರರೆಂಬುದು ಎಲ್ಲರಿಗೂ ತಿಳಿದ ವಿಷಯ. ಎರಡು ಭಾಷೆಗಳೂ ಗೊತ್ತಿರುವಾಗ ಒಂದೇ ವಿಷಯವನ್ನು ಯಾವುದರಲ್ಲಿ ಕಲಿತರೂ ಶ್ರಮ ಒಂದೇ ಆಗುತ್ತದೆ. ಇಷ್ಟರಮೇಲೆ ಗ್ರಾಮಾಂತರಗಳಲ್ಲಿರುವ ಮಹಮ್ಮದೀಯರನ್ನು ಮಹಮ್ಮದೀಯರೆಂದು ತಪ್ಪಿಲ್ಲದೆ ಗುರುತಿಸಬಲ್ಲವರಾರು ? ಅವರಿಗೆ ಕನ್ನಡ ಬರುವುದಿಲ್ಲವೆಂದು ಹೇಳುವರಾರು ? ಅವರು ಹಿಂದೂಗಳೊಡನೆ ಬೆರೆತುಹೋಗಿದ್ದಾರೆ; ಅವರು ಆಡುವ ಕನ್ನಡಕ್ಕೂ ಹಿಂದೂ ರೈತರು ಆಡುವ ಕನ್ನಡಕ್ಕೂ ಸ್ವರ ಉಚ್ಚಾರಣೆ ಮೊದಲಾದವುಗಳಲ್ಲಿ ಯಾವ ಭೇದವೂ ಇಲ್ಲ. ಅಲ್ಲದೆ ನಮ್ಮ ಸಹಪಾಠಿಗಳಲ್ಲಿ, ಸರ್ಕಾರದ ನೌಕರರಲ್ಲಿ, ವಿದ್ಯಾರ್ಥಿ ವರ್ಗದಲ್ಲಿ ಎಷ್ಟೋಜನ ಮಹಮ್ಮದೀಯರು ಸೊಗಸಾದ ಕನ್ನಡ ಬರೆದು ಓದಿ ಆಡಿ ಸನ್ಮಾನಿತರಾಗಿದ್ದಾರೆ. ರನ್ನನ ಗದಾಯುದ್ಧದಂಥ ಹಳಗನ್ನಡವನ್ನು ಸುಲಭವಾಗಿ ಸೊಗಸಾಗಿ ಉಚ್ಚರಿಸಿ ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ಅಭಿನಯಿಸಿದ ಇಬ್ಬರು ಮಹಮ್ಮದೀಯ ವಿದ್ಯಾರ್ಥಿಗಳ ಉದಾಹರಣೆಯೇ ಇದಕ್ಕೆ ನಿದರ್ಶನವಾಗಿಲ್ಲವೇ ?

ಎರಡುಮೂರು ಭಾಷೆಗಳನ್ನು ಕಲಿಯುವುದು ಎಲ್ಲರಿಗೂ ಕಷ್ಟ; ಆದರೆ ವ್ಯವಹಾರಕ್ಕೆ ಆವಶ್ಯಕತೆ ಬಂದರೆ ಈಗ ತಮಿಳು ತೆಲುಗು ಹಿಂದಿ ಇಂಗ್ಲೀಷು ಮುಂತಾದ ಮೂರುನಾಲ್ಕು ಭಾಷೆಗಳನ್ನು ಅವಿದ್ಯಾವಂತರೂ ಕಲಿಯುವುದಿಲ್ಲವೇ? ಕನ್ನಡವು ಶಿಕ್ಷಣ ಭಾಷೆಯಾಗಿ ಗ್ರಂಥಗಳೂ ಶಿಕ್ಷಣವೂ ವ್ಯವಹಾರವೂ ಅದರಲ್ಲಿಯೇ ನಡೆಯುವುದಾದರೆ ಹೆಚ್ಚು ಭಾಷೆಯನ್ನು ಕಲಿಯುವುದರ ಆವಶ್ಯಕತೆಯು ಕಡಮೆಯಾಗಿಯೋ ತಪ್ಪಿಯೋ ಹೋಗುವುದಿಲ್ಲವೇ?

ಮಿಕ್ಕ ಎಲ್ಲಾ ಜನರನ್ನೂ ಅವರ ಮಾತನ್ನೂ ಅಟ್ಟಿಬಿಟ್ಟು ಕನ್ನಡ ವನ್ನು ಏಕನಾದ ತಂಬೂರಿಯ ತಂತಿಯಂತೆ ನಿಲ್ಲಿಸಬೇಕೆಂಬುದು ನಮ್ಮ ಅಭಿಪ್ರಾಯವಲ್ಲ; ಎಲ್ಲವೂ ಬೇಕು, ಎಲ್ಲರೂ ಬೇಕು ; ಆದರೆ ಅವರು ವೀಣೆಯ ತಂತಿಗಳಂತೆ ಸೇರಿ ಮಧುರವಾದ ಗಾನವನ್ನು ಬೀರಿ ದೇಶಕ್ಕೆ ಗೌರವವನ್ನೂ ಸುಖವನ್ನೂ ತರಬೇಕು. ಹಾಗಲ್ಲದೆ ಒಂದು ತಂತಿ ಹೆಚ್ಚು ಕಡಿಮೆಯಾದರೆ—ವೀಣೆಗೆ ಎಷ್ಟು ದಂತದ ಕೆಲಸ ಮಾಡಿದ್ದರೇನು—ಅಪಸ್ವರ ಹೊರಡುತ್ತದೆ. ಎಲ್ಲಾದರೂ ಸ್ವಲ್ಪ ಬಿರುಕು ಬಂದಿತೆಂದರೆ ವೀಣೆ ಹೋಗಿ ಒಡಕು ಸೋರೆ ಬುರುಡೆಯಾಗುತ್ತದೆ. ಆದ್ದರಿಂದ, ಎಲ್ಲಿಯೂ ಭಿನ್ನಭಾವಗಳಿಗೆ ಅವಕಾಶಕೊಡಬಾರದು. ಮೈಸೂರು ಮೈಸೂರೇ ಆಗಿರಬೇಕೆಂದೂ ಅದು ವೀಣೆಯಂತಿರಬೇಕೆಂದೂ ಒಡಕು ಸೋರೆ ಬುರುಡೆಯಾಗಬಾರದೆಂದೂ ಅಭಿಪ್ರಾಯಪಡತಕ್ಕವರೆಲ್ಲರೂ, ಅವರು ಹುಟ್ಟುಕನ್ನಡಿಗರಾಗಿರಲಿ,ಅಲ್ಲದಿರಲಿ, ತಾವು ಮೈಸೂರಿನ ಪ್ರಜೆಗಳು ಎಂಬ ಉಚ್ಚಭಾವದಿಂದ, ಹೆಮ್ಮೆ ಮಮತೆಗಳಿಂದ, ದೇಶದ ಒಟ್ಟು ಶ್ರೇಯೋಭಿವೃದ್ಧಿಯಿಂದಲೇ ತಮ್ಮ ತಮ್ಮ ಶ್ರೇಯೋಭಿವೃದ್ಧಿಯೆಂದು ನಿಶ್ಚಯಮಾಡಿಕೊಂಡು, ಈ ಸಂಗತಿಯನ್ನು ನಿಸ್ಸ್ವಾರ್ಥಬುದ್ಧಿಯಿಂದಲೂ ನಿಷ್ಪಕ್ಷಪಾತವಾಗಿಯೂ ವಿಚಾರಮಾಡಿ ಆಚರಣೆಗೆ ತರುವರೆಂದು ನಂಬುತ್ತೇವೆ.

ಜೈಮಿನಿ ಭಾರತದ ಕರ್ತೃವಾದ ಲಕ್ಷ್ಮೀಶನ ಕಾಲದೇಶಗಳ ವಿಚಾರವಾಗಿ ಭಿನ್ನಾಭಿಪ್ರಾಯಗಳು ಇರುವುದು ಸರಿಯಷ್ಟೆ—ಕಾಲ ವಿಚಾರವಾಗಿ ಅಷ್ಟೇನೂ ಭಿನ್ನಾಭಿಪ್ರಾಯಗಳು ಇರಲಿಲ್ಲ; ರೈಸ್ ಸಾಹೇಬರು ಮೊದಲುಮಾಡಿಕೊಂಡು ರಾ. ನರಸಿಂಹಾಚಾರ್ಯರೇ ಆದಿಯಾಗಿ ಅವನು ಸುಮಾರು ಕ್ರಿ. ಶ. ೧೭೦೦ ರಲ್ಲಿ ಇದ್ದನೆಂದು ಭಾವಿಸಿರುತ್ತಾರೆ ; ಅದಕ್ಕಿಂತ ಈಚೆಗೆ ಇದ್ದಿರಲಾರನೆಂಬುದು ಅವರ ಭಾವ; ಏಕೆಂದರೆ ಅದಕ್ಕಿಂತ ಹಿಂದೆ ಇದ್ದನೆಂಬುದಕ್ಕೆ ಯಾವ ಆಧಾರವೂ

ಲಕ್ಷ್ಮೀಶನ ಕಾಲ ಮತ್ತು ಸ್ಥಳ

ಇದುವರೆಗೆ ಸಿಕ್ಕಿರಲಿಲ್ಲ. ಈಗ ಮ|| ಮಂ. ಗೋವಿಂದ ಪೈಗಳು, ೧೬೭೪ರಲ್ಲಿ ರಚಿತವಾದ ಕನ್ನಡ ಕುವಲಯಾನಂದದೊಳಗೆ ಜೈಮಿನಿ ಭಾರತದಿಂದ ತೆಗೆದ ಉದಾಹರಣೆ ದೊರಕುವುದೇ ಮೊದಲಾದ ಕಾರಣ ಗಳಿಂದ 'ಲಕ್ಷ್ಮೀಶನು ಕ್ರಿ. ಶ. ೧೬೦೦ ರಿಂದ ೧೪೧೫ ರೊಳಗಣ ಕಾಲ ದಲ್ಲಿ ಜೀವಿಸಿರಬೇಕೆಂದು' ಹೇಳುತ್ತಾರೆ.

ಲಕ್ಷ್ಮೀಶನ ಸ್ಥಳವು ಕಡೂರು ಡಿಸ್ಟ್ರಿಕ್ಟಿನಲ್ಲಿರುವ ದೇವನೂರು ಗ್ರಾಮವೇ ಎಂಬುದು ಹಿಂದಿನ ಮತ್ತು ಬಹುಜನರ ಅಭಿಪ್ರಾಯ ವಾಗಿತ್ತು. ಈಚೆಗೆ ಅದು ಹೈದರಾಬಾದು ಸೀಮೆಯಲ್ಲಿರುವ ಸುರ ಪುರವೆಂದು ಕೆಲವರೂ ಸುರಪುರದ ಹತ್ತಿರವಿರುವ ದೇವಪುರವೆಂಬ ಗ್ರಾಮವೆಂದು ಕೆಲವರೂ ಹೇಳ ತೊಡಗಿದರು. ಮ|| ಪೈಯವರು ಈ ನವೀನ ಅಭಿಪ್ರಾಯಗಳು ತಪ್ಪೆಂದೂ, ಜೈಮಿನಿ ಭಾರತದಲ್ಲಿ ಬರುವ ವರ್ಣನಾದಿಗಳು ಬಹುಮಟ್ಟಿಗೆ ಮೈಸೂರು ದೇಶಕ್ಕೆ ಅನ್ವ ಯಿಸುವಂತಿರುವುದೇ ಮೊದಲಾದ ಕಾರಣಗಳಿಂದ ಹಿಂದಿನಿಂದ ಬಂದ ತಿಳಿವಳಿಕೆಯೇ ಸರಿಯೆಂದೂ ಭಾವಿಸುತ್ತಾರೆ. (ಕರ್ಣಾಟಕ ಕೇಸರಿ ಸಂಪುಟ ೨, ಸಂಚಿಕೆ ೨-೫)

ಹೆಚ್ಚು ಸಂಚಿಕೆ:—ಮುಂದಿನ ಸಂಚಿಕೆಯ ಜೊತೆಯಲ್ಲಿ ಡಾ|| ವೆಂಕಟಸುಬ್ಬಯ್ಯನವರ "ಕೆಲವು ಕನ್ನಡ ಕವಿಗಳ ಜೀವನಕಾಲವಿಚಾ ರ"ದ ೧೮೨ ರಿಂದ ೨೭೮ ರ ವರೆಗೆ ಇರುವ ಪುಟಗಳನ್ನು ಈ ವರ್ಷದ "ಹೆಚ್ಚು ಸಂಚಿಕೆ" ಯಾಗಿ ಕಳುಹಿಸುತ್ತೇವೆ. ಈ ಗ್ರಂಥವು ಇಲ್ಲಿಗೆ ಮುಗಿಯುತ್ತದೆ.

ದೇವರಾಜ ಬಹದ್ದೂರವರ ಧರ್ಮನಿಧಿಯಿಂದ ಈ ಗ್ರಂಥಕ್ಕೆ ೫೦೦ ರೂಪಾಯಿನ ಪ್ರಥಮ ಬಹುಮಾನವು ದೊರೆತಿದೆ ಎಂದು ತಿಳಿ ಸಲು ಸಂತೋಷಿಸುವೆವು.

ಇದರಲ್ಲಿ ರಾಜಾದಿತ್ಯ ದುರ್ಗಸಿಂಹ ಮುಂತಾದ ೬೩ ಜನ ಪ್ರಾಚೀನ ಕನ್ನಡ ಗ್ರಂಥಕಾರರ ಕಾಲವು ವಿಚಾರ ಮಾಡಲ್ಪಟ್ಟಿದೆ.

ಆದ್ದರಿಂದ ಇದು ಕನ್ನಡ ಕವಿಚರಿತ್ರೆಯನ್ನು ವ್ಯಾಸಂಗಮಾಡುವವರೆಲ್ಲರೂ ಅತ್ಯವಶ್ಯಕವಾಗಿ ಓದಬೇಕಾದ್ದೆಂಬುದು ಸ್ಪಷ್ಟವಾಗಿದೆ.

ಈ ಸಂದರ್ಭದಲ್ಲಿಯೇ, ಮ॥ ಬಿ. ವೆಂಕೋಬರಾವ್, ಬಿ.ಎ. ಅವರು ಪ್ರಬುದ್ಧಕರ್ಣಾಟಕದಲ್ಲಿ ಬರೆಯುತ್ತಿದ್ದ "ಮೈಸೂರು ದೇಶದ ವಾಸ್ತುಶಿಲ್ಪ"ದ ಹೊಯಿಸಳರೀತಿಯಮೇಲಣ ಲೇಖನಗಳು ಕೆಲವು ಬದಲಾವಣೆಗಳೊಡನೆಯೂ ಹೆಚ್ಚು ಚಿತ್ರಗಳೊಡನೆಯೂ ಪುಸ್ತಕ ರೂಪವಾಗಿ ಪ್ರಕಟಿಸಲ್ಪಟ್ಟಿವೆಯೆಂದೂ, ಇದಕ್ಕೆ ಮೇಲೆ ಕಂಡ ದೇವರಾಜ ಬಹದ್ದೂರರವರ ಧರ್ಮನಿಧಿಯಿಂದ ೨೦೦ ರೂಪಾಯಿನ ಎರಡನೆಯ ಬಹುಮಾನವು ಬಂದಿರುವುದೆಂದೂ ತಿಳಿಸಲು ಸಂತೋಷಿಸುತ್ತೇವೆ. ಇದರ ಪ್ರಕಟನೆಯನ್ನು ಬೇರೆ ಕಡೆಯಲ್ಲಿ ನೋಡಬಹುದು.

ಈ ಗ್ರಂಥಗಳನ್ನು ಬರೆದು ಹೊಸ ಕನ್ನಡಕ್ಕೆ ಪುಷ್ಟಿಯನ್ನೂ, ಮತ್ತು ಕರ್ಣಾಟಕ ಸಂಘ ಪ್ರಬುದ್ಧ ಕರ್ಣಾಟಕಗಳಿಗೆ ಗೌರವವನ್ನೂ ತಂದ ಈ ವಿದ್ವಾಂಸರನ್ನು ಕರ್ಣಾಟಕ ಸಂಘವು ಅಭಿನಂದಿಸಿ, ಅವರು ಕನ್ನಡಿಗರಿಗೆ ಮಾಡಿರುವ ಉಪಕಾರಕ್ಕಾಗಿ ತನ್ನ ಕೃತಜ್ಞತೆಯನ್ನು ಸೂಚಿಸಲು ಅಪೇಕ್ಷಿಸುತ್ತದೆ.

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ.

ವಿಜ್ಞಾಪನೆ

ಈಗ ಕನ್ನಡ ದೇಶದಲ್ಲಿರುವ ಪ್ರೌಢ ಕರ್ಣಾಟಕ ಸಂಘಗಳು ತಮ್ಮ ತಮ್ಮ ಅಧ್ಯಕ್ಷರ ಹೆಸರು ಕಾರ್ಯದರ್ಶಿಗಳ ಹೆಸರು ಕಾರ್ಯ ಸ್ಥಾನ ಇವುಗಳನ್ನೂ, ತಾವು ಆಗಾಗ್ಗೆ ಮಾಡುವ ಕೆಲಸವನ್ನೂ ದಯವಿಟ್ಟು "**ಪ್ರಬುದ್ಧ ಕರ್ಣಾಟಕ**" ದಲ್ಲಿ ಪ್ರಕಟನೆಯ ಬಗ್ಗೆ ತಿಳಿಸಬೇಕೆಂದು ಪ್ರಾರ್ಥನೆ.

ಕನ್ನಡ ಗ್ರಂಥಗಳ ಪ್ರಕಾಶಕರಾಗಲಿ ಕರ್ತೃಗಳಾಗಲಿ ಇನ್ನು ಮೇಲೆ ತಮ್ಮಿಂದ ಹೊಸದಾಗಿ ಪ್ರಕಟವಾಗುವ ಗ್ರಂಥಗಳ ವಿಚಾರವಾಗಿ ಅವುಗಳ (೧) ಹೆಸರು; (೨) ಆಕಾರ, (೩) ಪುಟಸಂಖ್ಯೆ, (೪) ಕರ್ತೃವಿನ ಹೆಸರು, (೫) ಪ್ರಕಾಶಕರು (೬) ಬೆಲೆ (೭) ಕಾವ್ಯ ಜಾತಿ (೮) ವಿಷಯ—ಇಷ್ಟನ್ನೂ ಸಂಕ್ಷೇಪವಾಗಿ ತಿಳಿಸಿದರೆ ಅವುಗಳನ್ನು "ಪ್ರಬುದ್ಧ ಕರ್ಣಾಟಕ"ದಲ್ಲಿ ಒಂದುಸಾರಿ ಉಚಿತವಾಗಿ ಪ್ರಕಟಿಸಲಾಗುವುದು.

ಪ್ರಬುದ್ಧ ಕರ್ಣಾಟಕದ ಹಿಂದಿನ ಸಂಪುಟಗಳು

ನಮ್ಮ ಪಾಠಕರ ಪ್ರಾರ್ಥನೆಯಂತೆ ಪ್ರಭವ ಸಂವತ್ಸರದ "ಪ್ರಬುದ್ಧ ಕರ್ಣಾಟಕ"ದ ಕೆಲವು ಹೆಚ್ಚು ಪ್ರತಿಗಳನ್ನು ತೆಗೆದುಕೊಂಡು ಕ್ಯಾಲಿಕೋ ಬಟ್ಟೆಯಲ್ಲಿ ಸುಂದರವಾಗಿ ಬೈಂಡು ಮಾಡಿಸಿಟ್ಟಿದ್ದೇವೆ. ೭, ೮, ೯ನೆಯ ಸಂಪುಟದ ಕೆಲವು ಪ್ರತಿಗಳೂ ಈವೆ.

ಬೆಲೆ ಒಂದೊಂದಕ್ಕೆ **ರೂ. ೩–೦–೦.**

ಬಹುಮಾನ

ಈ ವರ್ಷ "**ಪ್ರಬುದ್ಧ ಕರ್ಣಾಟಕ**"ಕ್ಕೆ ಚಂದಾದಾರರಾಗತಕ್ಕವರಿಗೆ ಡಾ|| **ಎ. ವೆಂಕಟಸುಬ್ಬಯ್ಯನವರ** "ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ"ದ ಉತ್ತರ ಭಾಗವನ್ನು, ಎಂದರೆ ಪುಟ ೧೮೨ ರಿಂದ ೨೭೮ರ ವರೆಗೆ ಇರುವ ಭಾಗವನ್ನು, ಉಚಿತವಾಗಿ ಕೊಡುತ್ತೇವೆ. ಈ ಭಾಗವನ್ನು ಮಾತ್ರ ಅಪೇಕ್ಷಿಸುವವರಿಗೆ ಬೆಲೆ ರೂ. ೧–೦–೦.

ಮೈಸೂರು ದೇಶದ ವಾಸ್ತುಶಿಲ್ಪ, ಭಾಗ, ೧

ಇದು ಮೈಸೂರು ಸರ್ಕಾರದ ಇಂಜನಿಯರ್ ಇಲಾಖೆಯಲ್ಲಿ ವಾಸ್ತುಶಿಲ್ಪ ಸಹಾಯಕರಾಗಿರುವ ಮ॥ ಬಿ. ವೆಂಕೋಬರಾವ್, ಬಿ.ಎ., ಯವರಿಂದ ರಚಿತವಾಗಿ ಕರ್ಣಾಟಕ ಸಂಘದಿಂದ ಪ್ರಕಾಶಿತವಾಗಿದೆ. ಈ ವಿಷಯದಮೇಲೆ ಇರತಕ್ಕದ್ದು ಇದು ಒಂದೇ ಗ್ರಂಥ. ಇದರಲ್ಲಿ ಒಂದೊಂದು ಪುಟಕ್ಕೂ ಒಂದೊಂದು ಹಾಫ್‌ಟೋನ್ ಚಿತ್ರವಿದೆ. ದೇವತಾ ವಿಗ್ರಹಗಳ ಹಲವು ಸುಂದರವಾದ ಚಿತ್ರಗಳೂ ದೇವಸ್ಥಾನಗಳ ಸ್ವರೂಪವನ್ನು ತಿಳಿಸುವ ಅನೇಕ ವಿನ್ಯಾಸಗಳೂ ದೃಶ್ಯಗಳೂ ಇವೆ. ಹಿಂದೂ ರೀತಿಯ ವಾಸ್ತು ಶಿಲ್ಪ ಸೌಂದರ್ಯವನ್ನು ನೋಡಬೇಕಾದರೆ ಮೈಸೂರು ದೇಶವನ್ನು ಬಿಟ್ಟರೆ ಅಖಿಲ ಭರತಖಂಡದಲ್ಲಿ ಮತ್ತೆಲ್ಲಿಯೂ ಇಷ್ಟರಮಟ್ಟಿಗೆ ಕಂಡುಬರುವುದಿಲ್ಲ. ಈ ಸೌಂದರ್ಯವನ್ನು ತಿಳಿದುಕೊಳ್ಳಬೇಕೆನ್ನುವವರೂ ಕನ್ನಡ ಸಂಸ್ಕೃತಿಯಲ್ಲಿ ಆದರವಿರುವವರೂ ಈ ಗ್ರಂಥವನ್ನು ಅತ್ಯವಶ್ಯವಾಗಿ ಓದಬೇಕು.

ಗ್ರಂಥದ ವಿಷಯಕ್ಕೆ ತಕ್ಕಹಾಗೆ ಪುಸ್ತಕದ ರಟ್ಟು ಅದರಮೇಲಿನ ಕವಚ ಎಲ್ಲವೂ ಬಹು ಸುಂದರವಾಗಿ ಮಾಡಲ್ಪಟ್ಟಿವೆ.

ಬೆಲೆ: ರೂ. ೫–೦–೦.

ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ

ಇದು ಡಾ॥ **ಎ. ವೆಂಕಟಸುಬ್ಬಯ್ಯ,** ಎಂ.ಎ., ಪಿ.ಎಚ್.ಡಿ., ಎಲ್.ಎಲ್.ಬಿ. ಯವರಿಂದ ರಚಿತವಾಗಿ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ರಾಜಾದಿತ್ಯ ದುರ್ಗಸಿಂಹ ಮುಂತಾದ ೬೩ ಜನ ಪ್ರಾಚೀನ ಕನ್ನಡ ಗ್ರಂಥಕಾರರ ಕಾಲವು ವಿಚಾರ ಮಾಡಲ್ಪಟ್ಟಿದೆ. (ಪುಟಗಳು ಡೆಮ್ಮಿ ಅಷ್ಟಪತ್ರ, vii + ೨೭೮) ಇದಕ್ಕೆ ದೇವರಾಜ ಬಹದ್ದೂರರವರ ಧರ್ಮನಿಧಿಯಿಂದ ೫೦೦ ರೂಪಾಯಿನ ಪ್ರಥಮ ಬಹುಮಾನವು ಬಂದಿದೆ. ಕನ್ನಡ ಕವಿಚರಿತ್ರೆಯನ್ನು ವ್ಯಾಸಂಗ ಮಾಡುವವರೆಲ್ಲರೂ ಅತ್ಯವಶ್ಯಕವಾಗಿ ಓದಬೇಕಾದ ಗ್ರಂಥ.

ಬೆಲೆ ರೂ. ೫–೦–೦.

ಸಚಿತ್ರ] **ರಂಗಭೂಮಿ** [ಮಾಸಪತ್ರಿಕೆ.

ವರ್ಷಾರಂಭ ಭಾದ್ರಪದ ಮಾಸ

ಕರ್ಣಾಟಕದಲ್ಲೆಲ್ಲ ಅನೇಕ ಪತ್ರಕರ್ತರು, ವಿದ್ವಾಂಸರು, ಮೈಸೂರು ಮುಂಬೈ ಸರಕಾರಗಳ ಪ್ರಶಂಸೆಗೆ ಪಾತ್ರವಾಗಿ, ಕೇವಲ ನಾಟಕ ವಿಚಾರಗಳಿಂದಲೂ ಮನೋರಂಜಕವೂ ಬೋಧಪ್ರದವೂ ಆದ ಲೇಖನಗಳಿಂದಲೂ ಸಂಗೀತ ರಹಸ್ಯ ವಿಚಾರಗಳಿಂದಲೂ ಪ್ರತಿಯೊಂದು ಸಂಚಿಕೆಯು ಕರ್ಣಾಟಕದ ಸುಪ್ರಸಿದ್ಧ ನಟರ ಅಭಿನಯ ಚಿತ್ರಗಳಿಂದಲೂ ಹಿಂದೂಸ್ಥಾನದ ಪ್ರಸಿದ್ಧ ಚಿತ್ರಕಾರರ ಹಲವು ಬಣ್ಣಗಳ ಚಿತ್ರಗಳಿಂದಲೂ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳಿಂದಲೂ ಕನ್ನಡಿಗರ ಕಣ್ಮನಗಳಿಗೆ ಹಬ್ಬವನ್ನುಂಟುಮಾಡುತ್ತಿರುವ ಪತ್ರಿಕೆಯೆಂದರೆ ಇದೊಂದೇ. ಇದರಲ್ಲಿ ಬರುವ ಬಣ್ಣದ ಚಿತ್ರಗಳನ್ನೇ ಬೇರೆಯಾಗಿ ಕೊಂಡರೆ ಪತ್ರಿಕೆಯ ಚಂದದಷ್ಟು ಹಣ ಕೊಡಬೇಕಾಗುವುದು. ಇಂಥಾದ್ದರಲ್ಲಿ ಪತ್ರಿಕೆಗೆ ಕೇವಲ ರೂ. ೩–೮–೦ ವಾರ್ಷಿಕ ಚಂದ ಇಡಲಾಗಿದೆ. ಎರಡು ಮೂರನೆಯ ವರ್ಷದ ಸಂಪುಟಗಳು ಕೆಲವು ಉಳಿದಿವೆ. ಬೆಲೆ ಬೈಂಡಾದ ಪ್ರತಿ ಸಂಪುಟಕ್ಕೆ ರೂ. ೪–೦–೦ ಮಾತ್ರ. ಅಂಚೆವೆಚ್ಚ ಬೇರೆ. ಈ ಭಾದ್ರಪದ ಮಾಸದಿಂದ ಚಂದಾದಾರರಾಗುವವರಿಗೆ "**ತಪೋಬಲ**" ಎಂಬ ಪ್ರಸಿದ್ಧ ಬಂಗಾಳಿ ನಾಟಕದ ರೂ. ೧–೪–೦ ಬೆಲೆ ಬಾಳುವ ಗದ್ಯಾನುವಾದವು ಪುಕಟೆಯಾಗಿ ಕೇವಲ ಅಂಚೆ ವೆಚ್ಚಕ್ಕೆ ದೊರೆಯುವುದು. ಈ ನಾಟಕವನ್ನು ಎಲ್ಲರೂ ಓದಿ ವಿಶ್ವಾಮಿತ್ರನ ತಪೋಬಲವನ್ನರಿಯಬಹುದು.

ವ್ಯವಸ್ಥಾಪಕ—**ರಂಗಭೂಮಿ,**

ಮನವಾರ್ತೆಪೇಟೆ, ಬೆಂಗಳೂರು ಸಿಟಿ.

619

ದಿವಂಗತರಾದ ಬಿ. ಕೃಷ್ಣಪ್ಪ, ಎಂ.ಎ., ಅವರ ಸ್ಮಾರ

ಮೈಸೂರು ದೇಶದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕನ್ನಡ ಪರಿವರ್ತಕರಾಗಿಯೂ, ಬಳಿಕ ಮೈಸೂರಿನ ಮಹಾರಾಜರವರ ಕಾಲೇಜಿನಲ್ಲಿ ಹತ್ತು ವರ್ಷಗಳಿಗೆ ಹೆಚ್ಚಾಗಿ ಕನ್ನಡದ ಅಸಿಸ್ಟೆಂಟ ಪ್ರೊಫೆಸರಾಗಿಯೂ ಇದ್ದು ಭಾಷಾಸೇವೆಯನ್ನೂ ವಿದ್ಯಾದಾನವನ್ನೂ ಅವಿಚ್ಛಿನ್ನವಾಗಿ ಮಾಡಿದ ಶ್ರೀಮಾನ್ ಬಿ. ಕೃಷ್ಣಪ್ಪ, ಎಂ.ಎ. ಅವರು ಇದೇ ೧೯೨೧ನೆಯ ಫೆಬ್ರುವರಿ ಎರಡನೆಯ ತಾರೀಖಿನಲ್ಲಿ ಪೂರ್ವವಯಸ್ಸಿನಲ್ಲಿಯೇ ದಿವಂಗತರಾಗಿ ಕರ್ಣಾಟಕ ವಾಙ್ಮಯ ಪ್ರಪಂಚವನ್ನೇ ದುಃಖಕ್ಕೆ ಈಡುಮಾಡಿರುವುದು ಸರಿಯಷ್ಟೆ. ಅವರನ್ನೂ ಅವರು ಭಾಷೆಗೆ ಮಾಡಿದ ಸೇವೆಯನ್ನೂ ನೆನಪಿಗೆ ತಂದುಕೊಡುವಂತೆ ಒಂದು ಸ್ಮಾರಕೋತ್ಸವವನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಜರುಗಿಸಿ ಅವರ ಭಾವಚಿತ್ರವನ್ನು ಅವರ ಪ್ರೀತಿಯ ಈ ಕಾಲೇಜಿನಲ್ಲಿ ಪ್ರತಿಷ್ಠಿಸಬೇಕೆಂದೂ, ಸಾಧ್ಯವಾದರೆ ಸಾಹಿತ್ಯ ವಿಷಯಕವಾದ ಸ್ಪರ್ಧೆಯೊಂದನ್ನು ಪ್ರತಿ ವರ್ಷವೂ ಏರ್ಪಡಿಸಿ ಅವರ ಹೆಸರಿನಲ್ಲಿ ಬಹುಮಾನವನ್ನಾಗಲಿ ಪದಕವನ್ನಾಗಲಿ ಕೊಡುತ್ತಾ ಹೋಗಬೇಕೆಂದೂ ಸಂಕಲ್ಪಿಸಿದೆ. ಈ ಉದ್ದೇಶಗಳು ನೆರವೇರುವಂತೆ, ಶ್ರೀಮಾನ್ ಕೃಷ್ಣಪ್ಪನವರ ಮಿತ್ರರೂ ಶಿಷ್ಯರೂ ಅಭಿಮಾನಿಗಳೂ ಉದಾರವಾಗಿ ದ್ರವ್ಯ ಸಹಾಯವನ್ನು ಮಾಡಬೇಕೆಂದು ಪ್ರಾರ್ಥನೆ. ಸಹಾಯ ದ್ರವ್ಯವನ್ನು ಮೈಸೂರಿನ ಮಹಾರಾಜರವರ ಕಾಲೇಜಿನಲ್ಲಿ ಕನ್ನಡದ ಪ್ರೊಫೆಸರಾದ ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯ, ಎಂ.ಎ., ಅವರಿಗೆ ಕಳುಹಿಸಿ ಕೊಡಬೇಕು.

ಪ್ರಬುದ್ಧ

ಕರ್ಣಾಟಕ

ವಿಭವ ಸಂವತ್ಸರ —೩೭— ಸಂಕ್ರಾಂತಿಯ ಸಂಚಿಕೆ

ಸಂಪುಟ ೧೦] ವಿ ಷ ಯ ಸೂ ಚಿ ಕೆ [ಸಂಚಿಕೆ ೩

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೯

All Rights Reserved

ಬೆಂಗಳೂರು-19
619



ುದ ಒಳಾಂಗಳ



ಸುಗ್ಗಿ ಬರುತಿದೆ.

೧

ಅಡಿಯ ಗೆಜ್ಜೆ ಸಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ!
ಸುಗ್ಗಿ ಬರೆ, ಹಿಗ್ಗಿ ತಿರೆ, ಸಗ್ಗಸೊಗವ ತರುತಿದೆ!
ಕಣಿವೆಯಿಳಿದು ತೆಮರನೇರಿ
ತರುಗಳಲ್ಲಿ ತಳಿರ ಹೇರಿ
ಹೊಸತು ಜೀವಕಳೆಯ ಬೀರಿ
ಸುಗ್ಗಿ ಮೂಡುತಿರುವುದು!
ಬನದ ಬಿನದದಿನಿದು ನಿಸದ ಮನದೊಳಾಡುತಿರುವುದು!

೨

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ ;
ಮತ್ತಮಧುಮಾಸವಿದು ಬನ್ನಿರೆಂದು ಸಾರುತ !
ಜಾರುತಿಹುದು ನಾಗಿ ಚಳಿ,
ಕುಸುಮಿಸಿರುವ ಲತೆಗಳಲಿ
ಪೊರೆಯುತಿಹವು ಸೊಕ್ಕಿದಳಿ
ಮುಕ್ತಜೀವರಂದದಿ !
ಉಲಿಯೆ ಪಿಕ, ಗಳಪೆ ಶುಕ, ಸುಗ್ಗಿ ಬಂದಿತಂದದಿ !

೩

ಮಾಮರಂಗಳಲಿ ವಿಹಂಗತತಿಯ ನಿಸ್ವನಂಗಳಿಂ,
ತಳಿರ ಸೊಂಪನಲರ ಜೊಂಪನಾಂತ ಬಸಬಸಂಗಳಿಂ,
ಸಲಿವ ಪಚ್ಚೆಯುಡೆಯನುಟ್ಟು,
ಅರಳಿದರಳುಗಳನು ತೊಟ್ಟು,
ಹಿಮದ ಮಣಿಯ ಮಾಲೆಯಿಟ್ಟು,
ತಣಿದು ಸೋಲೆ ಕಣ್ಮನಂ
ಕರೆವಳೋವಿ ಜನದ ದೇವಿ ತನ್ನ ಸುಗ್ಗಿಯಾಣ್ಮನಂ !

೪

ಹಾರಿ ಪೊರೆವ ಜಾರಿ ಹರಿವ ತೊರೆಯ ತಂಪು ದಡದೊಳು
ಮೇಲೆ ಭಾಸು ತೇಲೆ, ನಾಸು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ ;
ಕುರಿತು ಹಾಡ ಹಾಡುತಿರುವೆ,
ಸೊಬಗಿನೊಡನೆ ಕೂಡುತಿರುವೆ,
ಕರಗಿ ಮುಳುಗಿ ತೇಲುತ !
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ!

೫

ತುರುಗಳೆಲ್ಲ ಮೇಯೆ, ಗೊಲ್ಲ ಬಸಿರಿಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ !
ನಿಂತು, ಮೇವ ಮರೆತು ಬಿಟ್ಟು,
ಕಿವಿಯನೆರಡ ನೆಟ್ಟಗಿಟ್ಟು,
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ
ಗವಿಗಳೆಲ್ಲ ಸವಿಯ ಸೊಲ್ಲನಾಲಿಸಿಹವು ಚಂದದಿ !

೬

ಗಿರಿಗಳಿರಾ ! ತೊರೆಗಳಿರಾ ! ಎಲೆ ವಿಹಂಗಮಗಳಿರಾ !
ತರುಗಳಿರಾ ! ಬನಗಳಿರಾ ! ಮಗಮಗಿಪ ಸುಮಗಳಿರಾ !
ಸೊಬಗೆ ನನ್ನಿ ಎಂದು ಸಾರಿ,
ನನ್ನಿಯೆ ಸೊಬಗೆಂದು ತೋರಿ,
ಸೊಗದ ಸೊದೆಯ ತಿರೆಗೆ ಬೀರಿ,
ಒಲ್ಮೆ, ಸೊಬಗು, ಸೊಗದಲಿ,
ಪರಮಪುರುಷನಮಲಹರುಷವಿಹುದ ಸಾರಿ ಜಗದಲಿ !

೭

ಮಧುವೆ ಬಾರ ! ಮುದವ ತಾರ ! ನೀನೆ ದೇವದೂತನು !
ಪರದ ಚಿಂತೆ ಮರೆಯದಂತೆ ಕಳುಹುವನು ವಿಧಾತನು !
ಬುವಿಯ ಸಿಂಗರಿಸುತ ಬಾರ !
ಪರದ ಬೆಳಕನಿಳೆಗೆ ತಾರ !
ಸೊಬಗೆ ಶಿವನು ಎಂದು ಸಾರ !
ಬಾರ ಶಕ್ತಿದಾಯಕ !
ಹಳಿತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ !

ಕೆ. ವಿ. ಪುಟ್ಟಪ್ಪ.

ಹೇಮಾವತಿ - ಹೇಮಗಿರಿ

ಹೇಮಾವತಿ—

ಹೇಮವಾಹಿನಿ ತಾನು ಹರಿಪೆಡೆಗಳಲ್ಲೆಲ್ಲ
ನಗಿಸಿ ತೋಪುಗಳನ್ನು ನುಡಿಸುತಿಹಳು.
ನಿರುತ ವರ್ಧಿಪ ತನ್ನ ಮಂಜುಳಸ್ವನದಿಂದ
ಖಗಗಳಿಗೆ ರಾಗವನು ಕಲಿಸುತಿಹಳು.
ಹರಳುಗಲ್ಲಿನಮೇಲೆ ಗೆಜ್ಜೆಗಳು ಝಣರೆನಲು
ಬಿಳಿನೊರೆಯು ನಗೆಸೂಸಿ ನಡೆಯುತಿಹಳು.
ಮೆಲ್ಲಮೆಲ್ಲನೆ ಸರಿದು ಮೆಲ್ದನಿಯ ಮಾತಿನಿಂ
ದೆಲ್ಲರನು ಬೆರಗಿನಲಿ ನಿಲ್ಲಿಸುವಳು.

ಹೇಮಗಿರಿ—

ಕಿರುಬಿದಿರು ಗಾಳಿಯಲಿ ಕೊಳಲೂದೆ ರಾಗದಿಂ
ಹೇಮಗಿರಿ ತಲೆಯನ್ನು ತೂಗದಿಹನು.
ಬಣ್ಣಬಣ್ಣದ ಮುಗಿಲು ಗಗನದಲಿ ಸುತ್ತುತಿರೆ
ತನ್ನೆಡೆಗೆ ಬಾರೆಂದು ಕರೆಯದಿಹನು.
ಸಂಜೆಗೆಂಪಿನ ಸಿರಿಯು ಬಣ್ಣದುಡಿಗೆಯ ತೊಡಿಸೆ
ತನ್ನಂದವನೆ ನೋಡಿ ನಲಿಯದಿಹನು.
ಹೆಮ್ಮರವನಲುಗಿಸುತ ಗಾಳಿ ಜೋಗುಳಹಾಡೆ
ಮತ್ತೇರಿ ನಿದ್ದೆಯಲಿ ಮುಳುಗದಿಹನು.

ಹೇಮಾವತಿ—

ಹಸುರುಬಯಲಿನ ರಾಣಿ ಕಿರುಗಾಳಿಗಂಜುತ್ತ
ತರತರನೆ ತೆರೆಗಳಲಿ ನಡುಗುತಿಹಳು.

ಚೇಣಿಹುಲ್ಲಿನ ತನ್ನ ಮುಂಗುರುಳು ಕೆದರಿರಲು
ಭಯಚಕಿತೆ ಭೀತಿಯಲಿ ಬೆದರುತಿಹಳು.
ಮುಂದುಗಾಣದೆ ದಡದಿ ಸಂದಿಗೊಂದಿಯ ಹುಡುಕಿ
ಮರೆಯಾಗಲತಿಚಕಿತೆ ಬಯಸುತಿಹಳು.
ಯಾರೆನಗೆ ಶರಣೆಂದು ಕಾತರೇಕ್ಷಣೆ ನೋಡಿ
ಹೇಮಗಿರಿಯನೆ ಕಡೆಗೆ ನಿಟ್ಟಿಸುವಳು.

ಹೇಮಗಿರಿ—

ಭೀತಿಯಲಿ ಬಗೆ ಬೆದರಿ ಕೆದರಿರುವ ಬನಗಳನು
ಸ್ಥೈರ್ಯದಲೆ ಸಂತವಿಸಿ ನಿಂತಿರುವನು.
ಬಿರುಗಾಳಿ ಹಿಮ್ಮೆಟ್ಟಿ ದೆಸೆದೆಸೆಗೆ ಜಾರುತಿರೆ
ತನ್ನೊಂದು ಬಲುಮೆಯಲಿ ಹಿಗ್ಗಿದಿಹನು.
ಬನದೇವಿ ಮನ್ನಣೆಯೊಳಿವನಡಿಗೆ ಹೂಮಳೆಯ
ಚೆಲ್ಲುತಿರೆ ಹಿರಿತನದ ಬಿಂಕಪಡನು.
ಹೇಮವಾಹಿನಿ ಮಗುಳೆ ಮುದವೇರಿದಾಲಿಯಲಿ
ಭಯಮಿನುಗೆ ನೋಡುತಿರೆ ಸುಮ್ಮನಿಹನು.

ಹೇಮಾವತಿ—

ಸಾರಸಂಗಳ ದನಿಯ ಕಾಲ್ಸರದ ನುಣ್ಚರದ
ಮೆಲ್ನಡೆಯ ಬೆಡಗಿಂದ ಸಾರುತಿಹಳು.
ಹೂವುಗಳ ಚೆಲ್ಲುತ್ತ ದಡದ ಮರಗಳು ಬೀಸೆ
ಗಂಭೀರಗಾಮಿನಿಯು ನಡೆಯುತಿಹಳು.
ಬಿಳಿಮರಳ ಬೆಳ್ಮಡೆಯನೋಸರಿಸುತಲ್ಲಲ್ಲೆ
ವಿಭ್ರಮವ ತೋರುತ್ತ ಗಮಿಸುತಿಹಳು.
ಬೆಳ್ದಿಂಗಳೈತರಲು ಹೆಚ್ಚಿರುವ ಹರುಷದಿಂ
ಮೀನಾಕ್ಷಿ ಮೋಹದಲಿ ನೋಡುತಿಹಳು.

ಹೇಮಗಿರಿ—

ನಗೆಗಣ್ಣ ನೋಟದಲಿ ಚೈತ್ರವಧು ಮಿಂಚುಗಳ
  ಸುಳಿಸುತಿರೆ ಮೋಹದಲಿ ಕರಗದಿಹನು.
ತಿಳಿನೀರ ಕನ್ನಡಿಯು ಸುಷಮೆಯು ಹರುಷದಿ ತೋರೆ
  ಮಿಗಿಲಾದ ಸೊಬಗಿನಲಿ ಮೆರೆಯದಿಹನು.
ಹೊಳೆತೆರೆಗಳರೆದಿರುವ ನೊರೆಯ ಚಂದನವನ್ನು
  ಶಶಿಯೆ ಲೇಪಿಸೆ ಬರಲು ಬಾಗದಿಹನು.
ಒಲಿಸಲಾರದೆ ಬಸವು ಮಾಗಿಯಲಿ ಹಣ್ಣೆಲೆಯ
  ಕಣ್ಣೀರಸುರಿಸುತಿರೆ ಸಂತವಿಸನು.

ಹೇಮಾವತಿ—

ಕರಿಮುಗಿಲು ಕೂಡುತಿರೆ ಗಗನ ಕೋಪವ ತೋರೆ
  ತೆರೆಹುಬ್ಬ ಗಂಟಿಕ್ಕಿ ಮೊರೆಯುತಿಹಳು.
ಕುಡಿಮಿಂಚು ಥಳಿಲೆಂದು ಮುಗಿಲುಗಳ ಸೀಳುತಿರೆ
  ತೆರೆಗಳಲಿ ಥಳಥಳಿಸಿ ಚಿಮ್ಮುತಿಹಳು.
ಫಳಫಳನೆ ಮಳೆ ಸುರಿಯೆ ದಿಕ್ಕುಗಳು ಕಳವಳಿಸೆ
  ಬಂಡೆಗಳನಪ್ಪಳಿಸಿ ಬೊಬ್ಬಿರಿವಳು.
ಶಾಂತನಾದರು ಗಗನ ಚಂಡಕೋಪವ ಬಿಡದೆ
  ಕಸಲುತ್ತ ಕೆನ್ನೀರ ಕಾರುತಿಹಳು.

ಹೇಮಗಿರಿ—

ಮುಗಿಲ ಜಡೆಯನು ಕೆದರಿ ಕನಲಿ ಮಾರುತನೇಳೆ
  ಜಗವೆಲ್ಲ ಘೋ ಎನಲು ಮಿಡುಕದಿಹನು.
ದಿಗುತಟಗಳೊಡೆಯುತಿರೆ ಬಾಂದಳವು ಬಿರಿಯುತಿರೆ
  ಸಿಡಿಲಿಸಬ್ಬರದಲ್ಲಿ ನಡುಗದಿಹನು.
ಹಣೆಗಣ್ಣಸುರಿಯಂತೆ ಕಾಳ್ಕಿಚ್ಚು ಹೊರಳುತಿರೆ
  ಬಾರೆಂದು ಬಾಂದೊರೆಯ ಬೇಡದಿಹನು.

ಜೀವಿಗಳು ಬಲುಸರಳೆ ಬೇಸದಿ ರವಿಯುರುಳೆ
  ಕಾಲಚಕ್ರವು ಹೊರಳೆ ಕಳಲದಿಹಸು.

ಎಂದು ನಿನ್ನಯ ಗಾನವಾರಂಭಿಸಿತು ಹೇಳು
  ನೀನಾರಿಗೇನೊರೆವೆ ಹೇಮಾವತಿ?
ಗಂಭೀರತರಮೌನವಿಂತಿದು ಹೇಮಗಿರಿ
  ನಿನ್ನಾವ ತತ್ವವನು ಸಾರುತಿಹುದು.
ಸುಮ್ಮನಿರೆ ನಸ್ನಿಂತು ನೀವೇಕೆ ಸೆಳೆಯುವಿರಿ
  ಸೊಗವ ತೋರುತಲೇಕೆ ತೊಳಲಿಸುವಿರಿ?
ಆವ ಮಾಯದ ಬಂಧವೆನ್ನ ಜನ್ಮವ ನಿಮಗೆ
  ಬಿಗಿದಿಹುದೊ, ನಾನದನು ಮರೆತಿರುವೆನೇ?

  ಹರಿಯಲೆನ್ನಯ ಕೆಳೆಯು ನಿನ್ನೊಡನೆ ಹೇಮಾವತೀ
ಗಿರಿವರಾ! ನಿನ್ನೊಂದು ನಿಶ್ಚಲತೆಯಿರಲಿ ನನಗೆ
ಹರಿವ ನಿಲ್ಲುವ ನಿಮ್ಮ ಪರಿಪರಿಯ ಚೆಲ್ವಿನಿರವು
ಬೆರೆಯುತಾವಗಮೆನ್ನ ಜೀವನದೊಳೊಂದಾಗಲಿ.

ಎ. ಕೆ. ಪುಟ್ಟರಾಮು.

ಶ್ರೀ ಕವಿರತ್ನ ರನ್ನ

ನಾಡಿನ ಜನದ ಜೀವನದ ಸುಧೆಯ ಸವಿ
ನೋಡಿ ಸಲ್ನುಡಿಯ ಪಾತ್ರೆಯಲಿ ।
ಕೂಡಿಸಿ, ಕವಿಯು ನೀಡುವನೆಂಬ ನುಡಿ ಕಳೆ
ಗೂಡಿತು ರನ್ನ ನಿನ್ನಿಂದ ॥೧॥

ಕಿರುನುಡಿಯೊಂದೊಂದರಿಂದ ಮರೆಯದಂತೆ
ಭರದಿ ಭಾವವನು ಚಿತ್ರಿಸುವೆ ।
ಸುರಿಸುತ ಕಾವ್ಯದ ಸೊಬಗಿನ ಸೋನೆಯ
ಹರುಷದುಬ್ಬರವನೆಬ್ಬಿಸುವೆ ॥೨॥

ಅಳಿಸುವೆ ನಗಿಸುವೆ ಕುಣಿಸುವೆ ದಣಿಸುವೆ
ಮುಳಿಸುವೆ ಮೈಮರೆಯಿಸುವೆ ।
ಒಲಿಸುವೆ ನಲಿಸುವೆ ಬೆಳೆಸಿಯುತ್ಸಾಹವ
ಬಲಿಸುವೆ ರನ್ನ ನೀ ಧನ್ಯ ॥೩॥

ರಸಿಕರೊಳಗೆ ಚಿನ್ನ, ಕವಿಜನದೊಳು ರನ್ನ,
ವಿಶದವಿಜ್ಞಾನಸಂಪನ್ನ ।
ವಸುಧೇಶಸಭೆಯ ಪಂಡಿತರೊಳು ಸನ್ಮಾನ್ಯ,
ಕುಶಲಿ ಕವಿರನ್ನ ನೀ ಧನ್ಯ ॥೪॥

ಕನ್ನಡನುಡಿವೆಣ್ಣು ಮೊಗದ ಶೃಂಗಾರವ
ಚೆನ್ನಾಗಿ ನೋಡುವೆನೆಂದು ।
ತನ್ನ ಕೈಯೊಳಗಾಂತ ರನ್ನಗನ್ನಡಿಯಲ್ತೆ
ರನ್ನ ನಿನ್ನಯ ಕೃತಿರತ್ನ ? ॥೫॥

ಶ್ರೀ ಕವಿರತ್ನ ರನ್ನ

ಕನ್ನಡ ನಾಡಿನ ಕಾವ್ಯಮಂದಿರಕಿಟ್ಟ
ಹೊನ್ನಿನ ಕಳಸವಿದೆಂದು ।
ಮುನ್ನಿನ ಮುಂದಿನಿಂದಿನ ಪಂಡಿತರೆಲ್ಲ
ನಿನ್ನ ಕಾವ್ಯವ ಹೊಗಳುವರು ॥೧॥

ಸಾಹಸಭೀಮನ ಸಾಹಸವರ್ಣನೆ
ಯೂಹಿಸೆ ಕನ್ನಡನಾಡ ।
ಆಹವಮಲ್ಲರ ವಿರಾರಿದ ಸಾಹಸೋ
ತ್ಸಾಹವರ್ಣನೆಯುಲ್ತೆ ರನ್ನ ॥೨॥

ಕನ್ನಡತಾಯಿಯ ಮುದ್ದಿನ ಕಂದ ನೀ
ನಿನ್ನೊಮ್ಮೆ ಭೂಮಿಗೆ ಬಾರೈ ।
ಕನ್ನಡಿಗರ ವೀರ್ಯವಿಮ್ಮಡಿಸುವ ಹಾಗೆ
ಸನ್ನುತ ಕೃತಿಗಳ ರಚಿಸೈ ॥೩॥

ಎಲ್. ಗುಂಡಪ್ಪ.

ಕುಂಬಾರ

ಕುಂಬಾರನೆ ನೀ ಕುಡಿಕೆ ಮಡಿಕೆಗಳ
ತುಂಬುವೆ ಹೊಸಹೊಸರೂಪಿನಲಿ ;
ಬೆಂಬಲವೇನಿದು ನಿನ್ನಯ ಗೊಂಬೆಯ
ಹಂಬಲವೇತಕೆ ಮಾಯೆಯಲಿ !

ಜೇಡಿಯ ಮಣ್ಣಿಗೆ ಬೆರೆಸುತೆ ಜೀವನ
ಮಾಡಿದೆ ಮರಣದ ಗೊಂಬೆಯನು ;
ಬಾಡುವ ದೇಹಕೆ ಬೆಳಗುವ ಜೀವನ
ಕೂಡುತೆ ಮೇಲೆಡೆಯಾಡುತಿಹೆ.

ಮುದ್ದಿನ ಗೊಂಬೆಯ ಮಾಡುವೆ ಲೋಕದಿ
ತಿದ್ದುವೆ ಶಾಂತಿಯ ತಂದಿಡುವೆ ;
ಸದ್ದಿಲ್ಲದೆ ಯಮನೆಂಬುವ ದಂಡದ
ಗದ್ದಲವಾಗಲು ಕೈಬಿಡುವೆ.

ಇರುವನೆ ಯಮನೆಂಬುವ ಬೇರೊಬ್ಬನು ?
ಬರುವನೆ ತರುವನೆ ದಂಡವನು ?
ಪರಮಾಶ್ಚರ್ಯವು ನಿನ್ನನು ವಿಾರಿದ
ಎರಡನೆ ಯಮನಾರೆಲ್ಲಿಹನು ?

ಪುಡಿಪುಡಿಯಾದುವು ಪ್ರೀತಿಸಿ ಮಾಡಿದ
ಕುಡಿಕೆ ಮಡಿಕೆ ಮೊಗೆ ಗಡಿಗೆಗಳು ;
ಸಡಗರದಿಂದವನೆಲ್ಲಿಗೆ ಕಳುಹುವೆ ?
ಬಿಡು, ನಿನ್ನಾಟವು ಹಿತಕರವೇ ?

ಧರ್ಮದ ಸೃಷ್ಟಿಗೆ ಪಿಡಿದಿಹ ದಂಡವ
ಕರ್ಮದ ಶಿಕ್ಷೆಗೆ ತೋರಿಸುವೆ ;
ನಿರ್ಮಲಹೃದಯರಿಗೆಲ್ಲವು ನೀನೇ !
ಮರ್ಮವರಿಯದಗೆ ನೀ ಬೇರೆ !

ಹಾವಿಗೆಯಲ್ಲಿಹ ಕಾವನು ಕೊಡುತಲಿ,
ಹಾವಿಗೆಯಿಟ್ಟಿಹ ಫಲವಿಲ್ಲ ;
ನೋವನು ಕಾಣುವ ಮನವನು ಕೊಡುತಲಿ,
ನೋವನು ತಡೆಯುವ ಬಲವಿಲ್ಲ.

ಮನವೊಂದೇ ನಿರ್ಮಲವಾಗಿರುವೊಡೆ
ಘನತರ ಜೀವಕೆ ಭಯವಿರದು ;
ವಿನುತನೆ ! ಆಸೆಯ ಕಲ್ಮಷವಿರಿಸಿದೆ
ಜನಿಸಿತು ಮರಣವು ಧಾತ್ರಿಯೊಳು !

ಡಿ. ಆರ್. ರಾಮಯ್ಯ.

ಅನಾಥೆ

ಮುಗಿಲೋ ಮುಸುಕಿತು,
ಕತ್ತಲು ಕವಿಯಿತು,
ಗುಡುಗುಗಳಾರ್ಭಟ ಹೃದಯವನೊಡನೆಯೆ
ಭೇದಿಸಿತು.

ಮಿಂಚುಗಳೆಸೆದವು
ಸಿಡಿಲುಗಳಿರಿದವು
ಸುರಿಮಳೆ ಘೋರೆನೆ ದನಿಯೊಂದೊಡನೆಯಿ
ಕೇಳಿಸಿತು.

ಕಾರುವ ಮಳೆಯೊಳು
ಸುಳಿಯುವರಾರು ?
ಪುನವೋ ತಡೆಯದು ಸೆಳೆಯುತಲಿದೆಯೊಂ
ದಾರ್ತದನಿ

ಹಾ ! ಇದು ಏನು
ಸಿಡಿಲಿನ ಹೊಡೆತವು
ಇಂದ್ರಾಯುಧವದು ತಿರೆಯನ್ನೊಡೆಯಿತು
ನಡುಗಿಸಿತು.

ಭೀತಿಯು ನೀಗಿ
ಮಳೆಯೊಳು ಸಾಗಿ
ಮರನಡಿ ನೋಡಲು ಕೊರಗುತಲಾರೋ
ಕುಸಿದಿಹಳು.

ಮೇಗಡೆ ಮಳೆಯು
ನೆಲದೊಳು ನೀರು
ಆದರೆ ಚಲಿಸಳು, ಶಕುತಿಯೆ ಇಲ್ಲದೆ
ದೇಹದೊಳು.

ಕರದಲ್ಲವಳನು
ಪಿಡಿಯುತ ಸರಿಸುತ
ಮನೆಯೊಳು ಕರತರಲೊರಗಿದಳಲ್ಲೇ
ನಿಡುಸುಯ್ದು.

ಮನೆಯವರೆಲ್ಲರು
ಕನಿಕರ ಗೊಂಡರು
ಬೆಳಕನು ತಂದರು ಬಳಸುತ ನಿಂದರು
ನೋಡಿದರು.

ಏನಿದು ಸೊಬಗು !
ಮಡಲಿನೊಳೇನು !
ಹರೆಯದ ಹೆಂಗಸು ಎಳೆಗೂಸಿರುವುದು
ಈ ಗತಿಯೇ !

ಚಿಂದಿಯು ತನ್ನಯ
ದೇಹವ ಮುಚ್ಚಿರೆ
ಮಗುವಿಗೆ ಹೊದಿಕೆಯು ನೀಳ್ಗುರುಳು.
ತನ್ನೊಡಲು

ಎಲ್ಲವು ತೊಯ್ದಿದೆ
ಹನಿ ತೊಟ್ಟಿಡುತಿದೆ
ನಡುಗುತಲಿರುವಳು ಏನೊಂದುಸಿರಳು
ಗಮನಿಸಳು.

ನಿಷ್ಫಲವಾದವು
ನಮ್ಮಯ ನುಡಿಗಳು
ಅವಳನೆ ನೋಡುತೆ ಅಲುಗದೆ ನಿಂತೆವು
ನಾವುಗಳು.

ಚೇತನ ವೊದಗಿತು
ಸುತ್ತಲು ನೋಡಿ
ನಾಚುತ ಸುಲಿಯುತ ಕಂದನ ಬಿಗಿದವ
ಳಪ್ಪಿದಳು.

ಹೊದೆಯಲು ಒಡನೆಯೆ
ಹೊದಿಕೆಯನಿತ್ತೆನು
ಏನನು ನುಡಿಯದೆ ಕಂದನನದರೊಳು
ಕವಿಸಿದಳು.

ಮಾತೆಯ ಮಮತೆಯು
ಮೇರೆಯ ಮೀರಿತು
ನಾಚಿಕೆ ಸರಿಯಿತು ಮಗುವನು ಮುದ್ದಿಸ
ತೊಡಗಿದಳು.

ಅಯ್ಯೋ ಇನ್ನದ
ನೇನೆಂದೊರೆಯಲಿ
ಶವವೆಂದರಿಯಳು ಲಾಲಿಸುತಿರುವಳು
ಎದೆಗೊತ್ತಿ

ಅಂದಿನ ನೋಟವು
ಹೃದಯವನಿರಿಯದೆ
ಜನನಿಯ ಒಡಲಿಂದದ ಕಸಿಕೊಳ್ಳಲು
ಆಗುವುದೆ !

ಕರದಿಂದೆನ್ನಯ
ಮುಖವನು ಬಿಗಿಯಲು
ಬಾಲೆಯು ಮೋದದ ದಿನಗಳು ಸುಳಿದವು
ಕಣ್ಮುಂದೆ.
ಪ್ರಣಯವು ಹುಚ್ಚು
ಪ್ರಣಯಿಯೆ ಹೆಚ್ಚು
ಅರಿಯದೆ ಪಿತ್ರಾ ಪ್ರಣಯದ ಫಲವದು
ಪಸುಳೆಯದು.
ಈಗವನೆಲ್ಲಿ
ಸಗ್ಗವದೆಲ್ಲಿ
ಲೋಗರ ಬಾಯೊಳು ಸಿಲುಕಿದಮೇಲೆ
ಸುಖವೆಲ್ಲಿ?
ಸುಖವೊ ದುಃಖವೊ
ನಾಕವೊ ನರಕವೊ
ಕಂದನಿಗೋಸುಗ ಬಾಳನು ನೀಗದೆ
ಧರಿಸಿಹಳು.
ಇನ್ನೀ ಕಂದನ
ನಿಜಸ್ಥಿತಿಯರಿತೊಡೆ
ಅರಿಯಲೆಬೇಕು ಬರುವುದು ಗಳಿಗೆಯು
ಅರಿತೊಡನೆ.
ಭಾವಿಸಲೆನ್ನಯ
ತನುವದಿರುತಲಿದೆ
ಸಿಡಿಲಿನ ಹೊಡೆತವ ಸಹಿಸುವಳೆಂತೊ
ಈ ಜನನಿ.

ಕೆ. ಗೋಪಾಲಕೃಷ್ಣರಾವ್.

ಹೊಳವು (ಪ್ರತಿಭೆ)

ಎಲೆ ಚೆಲುವೆ, ಚೆಂದುಟಿಯ ಸರೆತೆರೆದು ನಿಂತಿರುವೆ ಏಕೆ ಚುಂಬಿಸದೆ?
ತಳೆದಿರುವೆ ಕೋಗಿಲೆಯ ಮೌನವನು ನುಡಿಯದಲೆ ಇನಿಗೊರಳ
ತೆರೆದು ;

ಎಳಗುವರಿ, ನಸುನಗದೆ, ನೆರೆನಾಣ್ಚಿ, ಹಿಂಜರಿದೆ ಯಾರ ಮುಖ ಕಂಡು
ಅಲ್ಲಲ್ಲಿ ಅವಿತವಿತು ಬಳುಕುತೆಳಚಿಗುರಂತೆ ಕವಿತೆಯಂಚಿನಲಿ?
ಮಲ್ಲಿಗೆಯ ಮೊಗ್ಗರಳಿ ಹೂವಾಗಿ ನಲಿವಂತೆ ಹೊಸಬೆಳಕ ತೋರಿ
ಉಲ್ಲಾಸದರಮನೆಯನೆದೆಯೊಳಗೆ ರಚಿಸುತ್ತ ರಂಜಿಸೆಲೆ ಹೊಳವೆ!
ಯೌವನದ ಹೊಸದರಲಿ ಯುವತಿಯರು ತಲೆಬಾಗಿ ನಡೆವಂತೆ ನಡೆದು
ಕವನಗಳ ಜೀವಹೊಳೆ ಕುಣಿಯಬೇಕೆನ್ನುವೆಯ ಅವರ ಜೊತೆ ನೀನು?
ಕಿರಿಯ ಕವಿಗಳ ಕಂಡು ಸಂತಸದೆ ಹಿಗ್ಗಿ ಕಂಗಳನು ಅಗಲಿಸದೆ
ತೆರೆಯ ಹಿಂದಕೆ ಸರಿದು ಮೆಲ್ಲಮೆಲ್ಲನೆ ಏಕೆ ಮಾಯವಾಗುವೆ, ರಮಣಿ?
ಹಿರಿಯ ಕವಿಗಳು, ನಿನಗೆ ದಿನದಿನವು ಸಿಂಗರದ ಹೊಸವಸನ ಉಡಿಸಿ
ಮಕುಟವನು ಕೆತ್ತುವರು ಎಂದು ಬಲುಮೆಚ್ಚಿ ಮೋಸಹೋದೆಯ,
ಹೇಳು ?

ಅಲ್ಲದಿರೆ ಮನವೊಲಿದು ಕಿರಿಯರಲಿ ಮೂಡಿದರೆ ಬರುವ ಕುಂದೇನು ?
ಬಲ್ಲಿದರು ಮೊದಲೊಳಗೆ ನಾವೆಂದು ಹೆಮ್ಮೆಯಲಿ ಮರೆಯುವರೆ
ಹೊಳವು, ನಿನ್ನ ?

ಎಂ. ಲಕ್ಷ್ಮೀನಾರಾಯಣರಾವ್.

ಕವಿ

೧

ಮೃದು ಮಧುರ ಗಾನದಿಂ
ಹೃದಯವಾಕರ್ಷಿಸುವೆ,
ಕಂಗಳಿಗೆ ಕಾಣದಾ
ಚಿತ್ರದೊಳು ತಣಿಪಿಸುವೆ
ವಿಶ್ವಸೊಬಗನು ತೋರಿ
ಜೀವನವ ಬೆಳಗಿಸುವೆ
ಲಲಿತಕಲೆಗಾರರೊಳು
ಮೆರೆಯುತಿಹನಾರ್ಯೈ?

೨

ವರುಷಗಳು ಕಳಿವುವು
ದೇಶಗಳು ಉಳಿಯುವು
ಪ್ರಾಣಿಗಳು ಅಳಿವುವು
ನೀನೆಂದಿಗೂ ಅಳಿಯದಿರುವೆ
ಎಂದೆಂದಿಗೂ ಕುಂದದಿರುವಿ
ನೀ ಸಗ್ಗದಾ ಪುರುಷನೇನೈ?

೩

ನಿನ್ನ ತಿಳಿಹೃದಯವೇ
ನವರಸವನೊಸರಿಪಾ
ಸುಮಗಳಾರಾಮವೆಂ
ದೆನಿಸುತಿಹುದೈ.
ಆನಂದಲಹರಿಯೊಳು
ಹೊಡೆತಂದ ಮಕರಂದ
ವೇ ಕವಿತೆಗಳು ಎಂದು
ತೋರುತಿಹುದೈ.

ವೈ. ಅಚ್ಯುತರಾವ್.

ತಾಳಿಕೋಟೆ

ಅಳಿಯಿತೇ ಹಾ ರಾಜ್ಯವು !
ನಮ್ಮ ಕನ್ನಡ ಭಾಗ್ಯವು !
ನಮ್ಮ ನಾಡಿನ ಬಾಳು ಕುಂದಿತು,
ಮ್ಲಾನನಾದನು ಚಂದ್ರನು.

ನಮ್ಮ ನಾಡಿನ ಧೀರರು,
ಕಂಡ ಕೆಚ್ಚಿನ ಧೀರರು,
ಎರಡುನೂರೈವತ್ತು ವರುಷವು
ಮೆರೆದು, ಇಲ್ಲಿಗೆ ಮಡಿದರು.

ತಾಯಿನಾಡನು ತಮ್ಮ ತನುವಿನ
ರಕ್ತದಿಂದಲೆ ಪೂಜಿಸಿ,
ಜಯವು ಜಯ ಕರ್ಣಾಟ ಎನ್ನುತ
ಬಿಸಿಯ ನೆತ್ತರ ಸುರಿದರು.

ಹರಿಯತೊಡಗಿತು ನೆತ್ತರು,
ವೀರರಕ್ತದ ಕಾಲುವೆ.
ಭಾನು ಕಿರಣಗಳಿರಚಿ ಕುಡಿದನು
ಪುಣ್ಯ ರಕ್ತದ ತೀರ್ಥವ.

ಚಂದ್ರ ಬೀರಿದ ಹಿಮವನೆಲ್ಲಾ,
ರಕ್ತ ತಣ್ಣಗೆ ಆಗಲಿಲ್ಲ;
ಹದ್ದು ಸರಿ ನಾಯ್ ಹಂದಿ ಬಳಗವು
ಕುಡಿಯಲಾರದೆ ಸೋತಿತು.

ಆಯಿತಾಯಿತು ! ತೀರಿತು !
ಕನ್ನಡದ ಸೌಭಾಗ್ಯವು !
ನಮ್ಮ ಕನ್ನಡ ನಾಡು ಮುಳುಗಿತು
ದುಗುಡಗಂಬನಿಗರೆಯಿತು.

ಕರ್ಣಾಟವಿದು ಸಾಯದು,
ಏಳಬಲ್ಲುದು ಮತ್ತದು.
ಮಡಿದ ಬಂಟರ ಕುಲವ ಕೆಡಿಸದೆ
ಮತ್ತೆ ಗರ್ಜನೆಗೈವುದು.

ದಿನಕರ ದೇಸಾಯಿ.

ಶಾಂತಿ

ರಾಗ—ಆನಂದ ಭೈರವಿ ತಾಳ—ತ್ರಿಪುಟ

ಪರಮ ಪುರುಷಾರ್ಥವನು ।
ದೊರಕಿಸುವ ಶಾಂತಿಯೇ ।
ಮಾನವನ ಮನದೆ ನೀಂ ಬಂದು ನೆಲಸೈ ॥ಪ॥

ಧರೆಯಾದಿಸಕಲಕ್ಕೆ ।
ಆಧಾರ ನೀನಲ್ಲೈ।
ಆನಂದದಿಂ ಕರುಣಿಸು ಎಮ್ಮ ನೀನು ॥ಅ. ಪ.॥

ಮಾಣಿಕ್ಯಮಣಿಖಚಿತ ಹಾರಪದಕಗಳೇಕೆ ।
ತೋರಮುಕ್ತಾಫಲದ ಬಿಂಕವೇಕೆ ।
ನಾರಿ ಸಕಲೈಶ್ವರ್ಯ ಭೂರಿಭೋಗಗಳೇಕೆ ।
ತೋರಿ ಶಾಂತಿಯೆ ಎಮ್ಮ ಕಾಪಿಡಲು ತಡವೇಕೆ॥

ರಾಗ—ಸುರಟಿ ಮಲ್ಲಾರ್ (ಹಿಂದುಸ್ಥಾನಿ) ತಾಳ—ಆದಿ.

ಸಾಯುಜ್ಯವನು ಧೊರೆ ।
ನೀಡೈ, ಕೃಪೆಮಾಡೈ, ದಯತೋರೈ, ಹರಿ ಬಾರೈ ॥ಪ॥

ತನುಮನ ಧನವನು ಅರ್ಪಿಸಿ ನಿನಗೇ ।
ನಿನ್ನನೆ ನಂಬಿಹ ಎಮಗೇ ॥

ಟಿ. ಎಚ್. ನರಹರಿರಾವ್.

ವಿದ್ಯಾರ್ಥಿ ಕವಿಸಮ್ಮೇಳನದ ಸ್ವಾಗತಮಂಡಲಿ

[illegible] ಹಾಲ್, ಸೆಂಟ್ರಲ್ ಕಾಲೇಜು, ಬೆಂಗಳೂರು.

೧೯೨೮.



ವಿದ್ಯಾರ್ಥಿ ಕವಿಸಮ್ಮೇಳನದ

ಸ್ವಾಗತ ಮಂಡಲಿಯ ಅಧ್ಯಕ್ಷರ ಭಾಷಣ

ಆರ್ಯ ಮಹಿಳೆಯರೇ ಮತ್ತು ಆರ್ಯ ಮಹಸೀಯರೇ,

ಕನ್ನಡದ ಅಭಿಮಾನಿಗಳೂ ಕಾವ್ಯ ಕಲಾ ಶಾಸ್ತ್ರ ಕೋವಿದರೂ ಆದ ತಮ್ಮೆಲ್ಲರನ್ನೂ ವಿಶ್ವವಿದ್ಯಾಲಯದ ವಿದ್ಯಾರ್ಥಿಕವಿಗಳ ಈ ಸಮ್ಮೇಳನಕ್ಕೆ ಸ್ವಾಗತವನ್ನು ಬಯಸಿ ಬರಮಾಡಿಕೊಳ್ಳಲು ಅಪ್ಪಣೆಯನ್ನು ಬೇಡುತ್ತೇನೆ.

ಕವಿಗಳ ಸಮ್ಮೇಳನವೆಂಬುದು ಹೊಸದು; ಅದರಲ್ಲಿಯೂ ವಿದ್ಯಾರ್ಥಿ ಕವಿಗಳ ಸಮ್ಮೇಳನವೆಂಬುದು ನವೀನವಾದದ್ದು; ಏಕೆಂದರೆ 'ಕವಿ' ಎಂಬ ಮಾತು, ಅದರಲ್ಲಿಯೂ ವಿಶೇಷವಾಗಿ ನಮ್ಮ ದೇಶದಲ್ಲಿ, ಅನ್ವಯಿಸತಕ್ಕದ್ದು ವಿದ್ವಾಂಸರಾದವರಿಗೆ. ಆದ್ದರಿಂದ ವಿದ್ಯಾರ್ಥಿ ಕವಿಸಮ್ಮೇಳನವೆಂಬುದು ಪರಸ್ಪರ ವಿರುದ್ಧವಾಗಿರುವಂತೆ ಕಾಣಬಹುದು. ವಿದ್ಯಾರ್ಥಿಗಳು ಕವಿಗಳಾಗುವುದೆಂತು? ವಿದ್ವಾಂಸರು ಹಣ್ಣುಗಳಹಾಗೆ; ವಿದ್ಯಾರ್ಥಿಗಳು ಹಸುರು ಕಾಯಿಗಳಹಾಗೆ. ಆದರೂ ಹಣ್ಣಿನ ಗೊನೆಯಲ್ಲಿ ಕಾಯಿ ಇರಬಾರದೇ? ಇವತ್ತು ಕಾಯಾಗಿರುವುದು ನಾಳೆ ಹಣ್ಣಾಗುವುದು. ಅಲ್ಲದೆ ಕಾವ್ಯಕ್ಕೆ ಪರಿಪಾಕವನ್ನು ಕೊಡತಕ್ಕ ವಿದ್ವತ್ತು ಆಮೇಲೆ ಬಂದರೂ ಕವಿ ಜಾತಿಯು ಹಣ್ಣಿನ ಜಾತಿಯಂತೆ ಆರಂಭದೆಸೆಯಲ್ಲಿಯೇ ಗೊತ್ತಾಗಿರುವುದೆಂದು ಹೇಳಬಹುದಲ್ಲವೆ?

ಈಗ ಕೆಲವು ವರ್ಷಗಳ ಕೆಳಗೆ, ವಿದ್ಯಾರ್ಥಿಗಳು ಹುಡುಗರ ಹಾಗೆ ಇದ್ದುಬಿಡಬೇಕೆಂಬ ಭಾವವಿತ್ತು. ದೊಡ್ಡವರು ಹೀಗೆ ವಿಧಿಸಿದ್ದರು; ಹುಡುಗರು ಅದನ್ನು ಒಪ್ಪಿದ್ದರು. ಆದರೆ ಈಗ ಸ್ಥಿತಿಗತಿಗಳು ಬದಲಾಗಿ ವಿದ್ಯಾರ್ಥಿಗಳಲ್ಲಿ ನವಚೈತನ್ಯವೂ, ಕರ್ಮಶೀಲತೆಯೂ

ಕಾಣಬರುತ್ತಿರುವುದನ್ನು ನೋಡಿ ಹಿರಿಯರು ಸಂತೋಷಪಡದೆ ಇರಲಾರರು. ಸಾವಿರಾರು ವರ್ಷಗಳಿಂದ ನಿದ್ದೆಹೋಗುತ್ತಿದ್ದ ದೇಶಗಳೂ ಜನಾಂಗಗಳೂ ಈಗ ಎಚ್ಚರಗೊಳ್ಳುತ್ತಿವೆ. ಹಿಂದಿದ್ದವುಗಳು ಮುಂದೆ ನುಗ್ಗುತ್ತಿವೆ. ಇದು ಈಗಿನ ಕಾಲದ ಒಂದು ಲಕ್ಷಣ. ಪ್ರಪಂಚದ ಚರಿತ್ರೆಯಲ್ಲಿ ಎಷ್ಟೋ ರಾತ್ರಿಗಳೂ ಹಗಲುಗಳೂ ಕಳೆದು ಹೋಗಿವೆ. ಈಗಿನ ಯುಗವು ಅಂಥ ಒಂದು ಹಗಲು ಎಂದು ತೋರುತ್ತದೆ. ಈ ಬೆಳಗಿನಲ್ಲಿಯೂ ಎಚ್ಚರಗೊಳ್ಳದವರು ಹಗಲುಹೊತ್ತು ನಿದ್ದೆಹೋಗುವ ಜಡರು.

ಈ ಲಕ್ಷಣವು ಮುಖ್ಯವಾಗಿ ಕಾಣಿಸಿಕೊಳ್ಳುವುದು ಸ್ವಾತಂತ್ರ್ಯದಲ್ಲಿ; ಸ್ವಾತಂತ್ರ್ಯವಿಲ್ಲದಕಡೆ ಸ್ವಾತಂತ್ರ್ಯ ಪ್ರೀತಿಯಲ್ಲಿ. ರಾಜಕೀಯ, ಧಾರ್ಮಿಕ, ಸಾಮಾಜಿಕ, ಕಲಾ, ಸಾಹಿತ್ಯ, ಈ ಪ್ರಪಂಚ ಒಂದೊಂದರಲ್ಲಿಯೂ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಉತ್ಸಾಹವು ಎಲ್ಲೆಲ್ಲಿಯೂ ಕಂಡುಬರುತ್ತಿದೆ. ಇದಕ್ಕೆ, ನಮ್ಮ ಮಟ್ಟಿಗಾದರೂ, ಪಾಶ್ಚಾತ್ಯರ ಸಂಸರ್ಗವೇ ಕಾರಣ. ಪಾಶ್ಚಾತ್ಯರು ಸ್ವತಂತ್ರರು, ಸ್ವಾತಂತ್ರ್ಯಪ್ರಿಯರು. ಆದ್ದರಿಂದ ಅವರು ಕಟ್ಟಿದ ಬಂಧನವೂ ಸ್ವಾತಂತ್ರ್ಯ ಬೀಜವನ್ನು ಅಡಗಿಸಿಕೊಂಡೇ ಬಂದಿತೆಂದು ಹೇಳಬಹುದು. ಇಂಗ್ಲಿಷಿನ ಮೂಲಕ ತಿಳಿದುಕೊಂಡ ಚರಿತ್ರೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ವಿಜ್ಞಾನ ಮುಂತಾದವುಗಳು ರಾಜಕೀಯ ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಹೇಗೆ ನಮ್ಮ ಕಣ್ಣಿಗೆ ಅಂಜನ ಹಾಕಿ ಪ್ರಪಂಚ ಸ್ಥಿತಿಯನ್ನು ಕಣ್ಣಮುಂದಿಟ್ಟು ನಮ್ಮ ಸ್ವಸ್ವರೂಪವನ್ನು ತೋರಿಸಿ, ಸತ್ಯವನ್ನೂ ಸ್ವಾತಂತ್ರ್ಯವನ್ನೂ ಬಯಸುವಂತೆಯೂ ಪಡೆಯುವಂತೆಯೂ ಮಾಡಿದುವೋ ಹಾಗೆಯೇ ಅದರ ಮೂಲಕ ತಿಳಿದುಕೊಂಡ ಇಂಗ್ಲಿಷ್ ಸಾಹಿತ್ಯವು, ನಮ್ಮ ಸಾಹಿತ್ಯ ಭವನದ ನಿಜಸ್ವರೂಪವನ್ನು ತೋರಿಸಿ ಅದನ್ನು ಅಂದಗೊಳಿಸುವಂತೆಯೂ ಎತ್ತರಿಸುವಂತೆಯೂ ಅದಕ್ಕೆ ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಎಂಬ ಕಲಶಗಳನ್ನು ಹಾಕುವಂತೆಯೂ ಪ್ರೇರೇಪಿಸಿತು. ಸ್ವಾತಂತ್ರ್ಯವೆಂಬುದು

ಹೊಳೆಯು ಪ್ರವಾಹದಹಾಗೆ ; ಅದು ಬರುವವರೆಗೆ ಅದರ ರಭಸವು ಕಾಣುವುದಿಲ್ಲ. ಬರುವುದಕ್ಕೆ ಮೊದಲಾದರೆ ತಡೆಯುವುದು ಕಷ್ಟ ; ತಡೆದು ಸರಿಯಾದ ದಾರಿಗೆ ತಿರುಗಿಸಿದರೆ ಅದರಿಂದ ಆಗದ ಕೆಲಸವಿಲ್ಲ.

ಕನ್ನಡ ಸಾಹಿತ್ಯವು ಸಂಸ್ಕೃತದ ಆಸರೆಯಲ್ಲಿ ಬೆಳೆದುಕೊಂಡು ಬಂತು. ಆದರೆ ಮನೆಯಿಂದ ಹೊರಕ್ಕೆ ಬಿಡದೆ ಮುದ್ದಿನಿಂದ ಮಕ್ಕಳನ್ನು ಸಾಕುವ ತಾಯಿತಂದೆಗಳ ಪ್ರೀತಿಯೇ ಆ ಮಕ್ಕಳಿಗೆ ಒಂದು ದೌರ್ಬಲ್ಯವನ್ನುಂಟುಮಾಡುವಂತೆ ಸಂಸ್ಕೃತದ ರಾಜಾಶ್ರಯವೇ ಒಂದು ಸೆರೆಮನೆಯಾಯಿತು ; ಭಂಗಾರದ ಪಂಜರವಾಯಿತು ; ಅದನ್ನು ಬಿಟ್ಟು ಹೋದರೆ ಗತಿಯೇನು ಎನ್ನುವಹಾಗಾಯಿತು.

ಆಧುನಿಕ ಕಾಲದಲ್ಲಿ ಇಂಗ್ಲಿಷಿನಿಂದ ಕನ್ನಡ ಸಾಹಿತ್ಯಕ್ಕೆ ಸ್ವಾತಂತ್ರ್ಯ ಹೇಗೆ ಬಂತು, ಯಾವ ಯಾವ ರೂಪಗಳಲ್ಲಿ, ಯಾವ ಯಾವಾಗ ಬಂತು ಎಂಬ ವಿಚಾರವು ಪ್ರಕೃತಕ್ಕೆ ಅನಾವಶ್ಯಕ. ಪದ್ಯಕಾವ್ಯದಲ್ಲಿ ಇದು ಪ್ರವೇಶಿಸಿದೊಡನೆ ಅವುಗಳ ರೂಪು, ರಚನೆ, ವಿಷಯ, ಸಾಮಗ್ರಿ, ಶಬ್ದ, ಶೈಲಿ ಮುಂತಾದವುಗಳೆಲ್ಲ ಮಾರ್ಪಡುವುದಕ್ಕೆ ಮೊದಲಾದುವು. ಪ್ರಾಸವಿಲ್ಲದಿದ್ದರೆ ಪದ್ಯವಾಗುವುದಿಲ್ಲವೇ ? ರಾಮಾಯಣ ಭಾರತಗಳ ಉನ್ನತ ವ್ಯಕ್ತಿಗಳೂ ಉದಾತ್ತ ಭಾವಗಳೂ ಮಹಾಸನ್ನಿವೇಶಗಳೂ ಇಲ್ಲದೆ ಕಾವ್ಯ ಬರೆಯಲಾಗದೇ ? ಹಳೆಯ ವೃತ್ತಗಳು ಹೊಸ ಭಾವಗಳಿಗೆ ಸರಿಹೋಗುತ್ತವೆಯೇ?—ಇವೇ ಮುಂತಾದ ಸಂದೇಹಗಳು ಬಂದುವು. ಆದರೆ ಈ ಸಂದೇಹಗಳಿಗೆ ರೂಪು ಕೊಟ್ಟು ಜನರ ಮುಂದಿಡುವುದಕ್ಕೆ ತಕ್ಕ ಧೈರ್ಯವುಳ್ಳ ಧೀರರು ಬೇಕಾಗಿತ್ತು. ಈ ಕೆಲಸವನ್ನು ಮ॥ ಗಳಾದ ಹಳಕಟ್ಟಿ ನಾರಾಯಣರಾಯರು, ಗೋವಿಂದಪೈಯವರು, ಪಂಜೆ ಮಂಗೇಶರಾಯರು, ಬಿ. ಎಂ. ಶ್ರೀಕಂಠಯ್ಯನವರು, ಡಿ. ವಿ. ಗುಂಡಪ್ಪನವರು, ಶ್ರೀನಿವಾಸರು, ಸೀತಾರಾಮಯ್ಯನವರು ಮುಂತಾದ ವಿದ್ವಾಂಸರು ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ಣಾಟಕ, ಮುಂತಾದ ಪತ್ರಿಕೆಗಳ ಮೂಲಕವೂ, ಸ್ವತಂತ್ರ ಗ್ರಂಥಗಳಲ್ಲಿಯೂ ಮಾಡಿದರು. ಇವರು

ಸುರಂಗಹೊಡೆದು ಮಾಡಿದ ರಾಜಮಾರ್ಗದಲ್ಲಿ, ಅಧೈರ್ಯಪಡುತ್ತ ಸಂದೇಹಪಡುತ್ತ ಹಿಂದೆ ಕಾದು ನಿಂತಿದ್ದ ಜನ ಸಂದಣಿಯು ನುಗ್ಗಿತು. ಈಗ ಕನ್ನಡ ಕವಿತೆಯಲ್ಲಿ ಎಷ್ಟು ವಿಧವಾದ ಶೈಲಿಗಳು, ವಿಷಯಗಳು ವೃತ್ತಗಳು ಕಂಡುಬರುತ್ತಿವೆ! ಹಿಂದಿನ ಕಾಲದ ಹಳೆಯ ತೋಟವು ಲಾಲ್‌ಬಾಗ್ ಉದ್ಯಾನವನವಾಗಿ ಪರಿಣಮಿಸುತ್ತಿದೆ! ಸುಮಾರು ಒಂದು ಸಾವಿರ ವರ್ಷದಿಂದ ಆಧಿಪತ್ಯ ಮಾಡುತ್ತಿದ್ದ ಅಲಂಕಾರ, ವ್ಯಾಕರಣ, ಛಂದಸ್ಸುಗಳ ಗ್ರಂಥಗಳಿಗೆ ಈಗ ಅನುಬಂಧಗಳನ್ನು ಬರೆದು ಸೇರಿಸಬೇಕಾದ ಆವಶ್ಯಕತೆ ಬರುತ್ತಿದೆ. ಕಾವ್ಯಗಳು ಚಿಕ್ಕ ವಾದರೂ, ವಿಷಯಗಳು ಅಲ್ಪವಾಗಿ ತೋರಿದರೂ, ಕಸಿ ಮಾಡಿದ ಸಣ್ಣ ಗಿಡಗಳಲ್ಲಿ ದೊಡ್ಡ ಹೂವು ಹಣ್ಣುಗಳು ಬಿಡುವಂತೆ ಈಗಿನ ಲಘು ಕಾವ್ಯಗಳಲ್ಲಿ ಸುಂದರವೂ ಸುರಸವೂ ಆದ ಹೂವು ಹಣ್ಣುಗಳು ಕಾಣುತ್ತಿವೆ ಎಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸ್ವಾತಂತ್ರ್ಯದೊಡನೆ ಸ್ವಾಚ್ಛಂದ್ಯವೂ ರಸಿಕತೆಯೊಡನೆ ವಿರಸತೆಯೂ ಬರುವ ಸಂಭವವುಂಟು. ಇದಕ್ಕೆ ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯಗಳ ಘನವಾದ ಮಾದರಿಗಳೂ, ದಿನೇದಿನೇ ಬೆಳೆಯುತ್ತಿರುವ ಕಾವ್ಯ ವಿಮರ್ಶೆಯೂ, ರಸಿಕ ಮಹಾಜನರ ಮೆಚ್ಚಿಕೆಯೂ, ಗುರು ಹಿರಿಯರ ಉದಾಹರಣೆ ಉಪದೇಶಗಳೂ ದೊಡ್ಡ ತಡೆಗಳಾಗಿವೆಯೆಂದು ನಂಬ ಬಹುದು. ಇಂಥ ಸನ್ನಿವೇಶದಲ್ಲಿ ಎಂಥ ಕಾರ್ಯವಾಗುವುದೆಂಬುದನ್ನು ತಿಳಿಸುವುದಕ್ಕೆ ಮೈಸೂರಿನ ನಮ್ಮ ಸೋದರ ಕರ್ಣಾಟಕ ಸಂಘವು ಪ್ರಕಟಿಸಿರುವ 'ಕಿರಿಯ ಕಾಣಿಕೆ'ಯು ಒಳ್ಳೆಯ ಉದಾಹರಣೆಯಾಗಿದೆ. ಈಗ ನಾಲ್ಕಾರು ವರ್ಷಗಳ ಕೆಳಗೆ ವಿದ್ಯಾರ್ಥಿಗಳು ಇಂಥ ಗ್ರಂಥ ವನ್ನು ಬರೆದು ಪ್ರಕಟಿಸುವುದೆಂಬುದು ಕಲ್ಪನಾತೀತವಾಗಿತ್ತು.

ತರುಣರ ಈ ಉತ್ಸಾಹ ಪ್ರಯತ್ನಗಳು ಗುರುಹಿರಿಯರ ಮೆಚ್ಚಿಕೆಗೆ ಹೇಗೆ ಪಾತ್ರವಾಗಿವೆ ಎಂಬುದಕ್ಕೆ ದೊಡ್ಡ ನಿದರ್ಶನಗಳಾದ ಎರಡು ಅಂಶಗಳನ್ನು ಇಲ್ಲಿ ನಿರ್ದೇಶಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ—ಒಂದು, ಗತಿಸಿದ ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು ಕರ್ಣಾಟಕ ಸಂಘದಲ್ಲಿ ಪದ್ಯಕಾವ್ಯರಚನೆಗಾಗಿ

ಇಟ್ಟಿದ್ದ ಬಹುಮಾನ. ಎರಡನೆಯದು ವಿಶ್ವವಿದ್ಯಾಲಯದ ರಿಜಿಸ್ಟ್ರಾರುವರೂ, ಇಂಗ್ಲಿಷ್ ಗೀತಗಳ ಕರ್ತೃಗಳೂ ಆದ ಮ|| ಬಿ. ಎಂ. ಶ್ರೀಕಂಠಯ್ಯನವರು ಉತ್ತಮವಾದ ಆಧುನಿಕ ಕವಿತೆಗಾಗಿ ಇಟ್ಟಿರುವ “ರಜತಮಹೋತ್ಸವ ಸ್ವರ್ಣಪದಕ”.

ಸೆಂಟ್ರಲ್ ಕಾಲೇಜು ಶಾಸ್ತ್ರಪಾಠಶಾಲೆ ; ಇಲ್ಲಿನವರಿಗೆ ಪ್ರಯೋಗ ಪರೀಕ್ಷೆಗಳನ್ನು ಮಾಡುವುದರಲ್ಲಿ ತುಂಬ ಆಸೆ; ಅದೇ ಅವರಿಗೆ ಅನ್ನ ನೀರು. ಆದ್ದರಿಂದ ಈ ಕಾಲೇಜಿನ ಕರ್ಣಾಟಕ ಸಂಘದವರು ವಿದ್ಯಾರ್ಥಿಕವಿಗಳ ಸಮ್ಮೇಳನವನ್ನು ಒಂದು ಪ್ರಯೋಗವಾಗಿ ಏರ್ಪಡಿಸಿದ್ದಾರೆ. ಇದರಿಂದ ಹೆಚ್ಚು ಪ್ರಯೋಜನವಿದೆಯೆಂಬುದು ಅವರ ನಂಬಿಕೆ: ಮೊದಲನೆಯದು, ಇದೆಲ್ಲವೂ ಪೂರ್ತಿಯಾಗಿ ವಿದ್ಯಾರ್ಥಿಗಳ ಸಹಾಯ ಸಾಹಸಗಳಿಂದಲೇ ನಡೆದಿರುವುದರಿಂದ ಅವರಿಗೆ ಒಂದು ವಿಧವಾದ ಆತ್ಮವಿಶ್ವಾಸ, ಧೈರ್ಯ ಇವುಗಳ ಸಂಪಾದನೆ; ಎರಡನೆಯದು, ಈಗ ವಿದ್ಯಾರ್ಥಿಕವಿಗಳಾಗಿ ನಾಳೆ ವಿದ್ವತ್ಕವಿಗಳಾಗುವವರ ಪರಸ್ಪರ ಪರಿಚಯ, ಅವರಿಗೂ ತಮ್ಮಂಥ ಸಾಹಿತ್ಯಾಭಿಮಾನಿಗಳಾದ ರಸಿಕ ಮಹಾಜನರಿಗೂ ಉಂಟಾಗುವ ಪರಸ್ಪರ ಪರಿಚಯ, ಸಹಕಾರ, ಅದರಿಂದ ಬರುವ ಸತ್ಫಲ.

ಮಹಾಶಯರೇ, ಈ ದಿವಸ ಇಲ್ಲಿ ಈ ಸಮ್ಮೇಳನದಲ್ಲಿ ಭಾಗಿಗಳಾಗಬೇಕೆಂದು ದಯಮಾಡಿಸಿರುವ ತಮ್ಮೆಲ್ಲರಿಗೂ, ಸ್ವಾಗತ ಮಂಡಲಿಯ ಪರವಾಗಿ ಮತ್ತೊಂದುಸಾರಿ ಸ್ವಾಗತವನ್ನು ಬಯಸಿ, ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕವಿಗಳಲ್ಲಿ ಗಣ್ಯರಾದವರೂ, ಮ|| ಬಿ. ಎಂ. ಶ್ರೀಕಂಠಯ್ಯನವರ “ರಜತಮಹೋತ್ಸವ ಸ್ವರ್ಣಪದಕ”ವನ್ನು ಪಡೆದು ಸನ್ಮಾನಿತರೂ ಆದ ಮ|| ಕೆ. ವಿ. ಪುಟ್ಟಪ್ಪನವರು ಈ ದಿನ ಅಗ್ರಾಸನವನ್ನು ಅಲಂಕರಿಸಬೇಕೆಂದು ತಮ್ಮೆಲ್ಲರ ಪರವಾಗಿ ಪ್ರಾರ್ಥಿಸುತ್ತೇನೆ.

ಇತಿ ತಮ್ಮ ವಿಧೇಯ,
ಜಿ. ಕೃಷ್ಣಯ್ಯಂಗಾರ್.

ವಿದ್ಯಾರ್ಥಿ ಕವಿಸಮ್ಮೇಳನದ

ಅಧ್ಯಕ್ಷರ ಭಾಷಣ

ತರುಣ ಕವಿಗಳಲ್ಲಿ ಒಂದು ಬಿನ್ನಹ

ಆರ್ಯರೇ, ಆರ್ಯ ಮಹಿಳೆಯರೇ, ಮಿತ್ರರೇ, ಕವಿಸಹೋದರರೇ,
ಕನ್ನಡಿಗರೇ,

ಪೂಜ್ಯರೂ, ಹಿರಿಯರೂ, ನನಗೆ ಗುರುಗಳೂ ಆಗಿರುವ ಶ್ರೀಯುತ ಎ. ಆರ್. ಕೃಷ್ಣಶಾಸ್ತ್ರಿಗಳ ಮಾತು ಮೀರಲಾರದೆ, ಅವರ ಆಹ್ವಾನವನ್ನು ಆಜ್ಞೆಯೆಂದೇ ಭಾವಿಸಿ, ವಿನಯದಿಂದಲೂ, ನಮ್ರತೆಯಿಂದಲೂ, ದೈನ್ಯದಿಂದಲೂ, ಈ ಅರಳುವ ಮೊಗ್ಗುಗಳ, ಬೆಳೆಯುವ ಗಿಡಗಳ, ತರುಣ ಕವಿಗಳ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿಕೊಂಡೆ. ಇದರಲ್ಲಿ ಗುರುಗಳಿಗೆ ಶಿಷ್ಯನಮೇಲಿರುವ ಪ್ರೀತಿ, ವಿಶ್ವಾಸ, ಅಭಿಮಾನ, ಒಲವುಗಳು ಹೊರಹೊಮ್ಮುವುವೇ ಹೊರತು, ಶಿಷ್ಯನ ಹೆಚ್ಚಿಗೆ ಯಾವುದೂ ತೋರುವುದಿಲ್ಲ. ಪವಿತ್ರಳೂ, ಸನಾತನಳೂ, ಅನಂತಯೌವನಯುಕ್ತಳೂ, ಆಗಿರುವ ಕನ್ನಡ ನುಡಿವೆಣ್ಣಿನ, ಕರ್ಣಾಟಕ ವಾಗ್ದೇವಿಯ ಚರಣಸೇವೆಗೆ ಸೊಂಟಕಟ್ಟಿ ನಿಂತಿರುವ ತರುಣ ಭಕ್ತರ ದರ್ಶನ ಲಭಿಸಿತಲ್ಲಾ, ಪರಿಚಯವಾಯಿತಲ್ಲಾ, ಸಂಗ ದೊರಕಿತಲ್ಲಾ, ಅವರೊಡನೆ ಅಲ್ಪ ಮಹಿಮನಾದ ನಾನೂ ದೇವಿಯ ಸೇವೆ ಮಾಡುವಂತಾಯಿತಲ್ಲಾ ಎಂದೊಮ್ಮೆ ಎದೆಯು ಹಿಗ್ಗುತ್ತಿದೆ. ಮತ್ತೊಮ್ಮೆ ಈ ಮಹಾಕಾರ್ಯದ ಅಗಾಧಮಹಿಮೆಯನ್ನೂ, ನನ್ನ ಅಲ್ಪತ್ವವನ್ನೂ ನೆನೆದುಕೊಂಡು ಹೃದಯವು ಕುಗ್ಗುತ್ತಿದೆ. ಆದರೂ ಗುರುಕೃಪೆಯಮೇಲೆ ಭಾರಹಾಕಿ, ಅವರ ಪಾವನತೆಯಲ್ಲಿ ನೆಚ್ಚಿಗೆಯಿಟ್ಟು, ಅದರ ಶಕ್ತಿಯಲ್ಲಿ ಭರವಸೆಹೊಂದಿ, ಬಾಂದಳವನಪ್ಪಲೆಳಸುವ ಬಾಲನಂತೆ ನನ್ನ ಇಂದಿನ ಕಾರ್ಯಕ್ಕೆ ಕೈ ಹಾಕುವೆನು.

ವಿದ್ಯಾರ್ಥಿ ಕವಿ ಸಮ್ಮೇಳನ



ಕುರ್ಚಿಯ ಮೇಲೆ ಕುಳಿತಿರುವವರು:— ಮ॥ ಗಳಾದ ಕೆ. ಗೋಪಾಲಕೃಷ್ಣರಾವ್, ಎಲ್. ಗುಂಡಪ್ಪ, ಎಂ. ಲಕ್ಷ್ಮೀನಾರಾಯಣರಾವ್,
ಡಿ. ಆರ್. ರಾಮಯ್ಯ, ಕೆ. ವಿ. ಪುಟ್ಟಪ್ಪ (ಅಧ್ಯಕ್ಷರು), ವೈ. ಅಚ್ಯುತರಾವ್, ಕೆ. ಎ. ಪುಟ್ಟರಾಮು, ದಿನಕರ ದೇಸಾಯಿ.
ನೆಲದಮೇಲೆ ಕುಳಿತಿರುವವರು:—೧ ಮ. ಎ. ಎಸ್. ವೆಂಕಟೇಶಯ್ಯ (ಕಾರ್ಯದರ್ಶಿ), ೩ ಜಿ. ಕೃಷ್ಣಯ್ಯಂಗಾರ್ (ಸ್ವಾಗತಮಂಡಲಿಯ ಅಧ್ಯಕ್ಷರು)

"ಈ ತಿಂಗಳ ಕೊನೆಯಲ್ಲಿ ಒಂದು ವಿಧವಾದ ವಿದ್ಯಾರ್ಥಿ ಕವಿಗಳ ಸಮ್ಮೇಳನವನ್ನು ಕೂಡಿಸಬೇಕೆಂದು ನಮ್ಮ ಸಂಘವು ನಿರ್ಧರಿಸಿದೆ. ನೀವು ಅಗ್ರಾಸನವನ್ನು ವಹಿಸಬೇಕು. ನೆವಗಿವ ಒಂದನ್ನೂ ನಾನು ಕೇಳುವನಲ್ಲ. (ಇದು ಆಹ್ವಾನಪತ್ರದ ಧಾಟಿ) ಇಂತಹ ಕವಿಗಳ ಸಮ್ಮೇಳನವು ಸೇರುವುದು ಇದೇ ಮೊದಲು. ಇದರಿಂದ ನಾವು ತರುಣ ಕವಿಗಳ ಪರಿಚಯವನ್ನು ಮಹಾಜನಗಳಿಗೆ ಮಾಡಿಕೊಟ್ಟ ಹಾಗಾಗುವುದು; ಅಲ್ಲದೆ ಕವಿಗಳಲ್ಲಿಯೇ ಪರಸ್ಪರ ಮೈತ್ರಿ ಸಹಕಾರಗಳನ್ನು ಹೆಚ್ಚಿಸಿದಂತಾಗುವುದು. ಹಿರಿಯರಾದ ಮಹಾಜನಗಳಿಗೆ ತಮ್ಮ ಕಿರಿಯರಲ್ಲಿ ಹೆಮ್ಮೆಯೂ, ಕನ್ನಡ ಸಾಹಿತ್ಯದ ಮುಂದಿನ ಅಭಿವೃದ್ಧಿಯಲ್ಲಿ ಭರವಸೆಯೂ ಹುಟ್ಟುವುದು." ಹೀಗೆಂದು ಅವರು ಕಾಗದ ಬರೆದಿದ್ದರು. ಈ ಕಾಗದದಲ್ಲಿ ಅವರು ಈ ಸಮ್ಮೇಳನದ ಧ್ಯೇಯ, ಉಪಯೋಗ, ಮೂಲಾರ್ಥಗಳನ್ನು ಹೊರಗೆಳೆದು ಸೂಚಿಸಿಬಿಟ್ಟಿದ್ದಾರೆ. ಒಂದು ನಾಡಿನ ಕವಿಗಳೂ ಮತ್ತು ಗ್ರಂಥಕರ್ತರೂ ಹೀಗೆ ಆಗಾಗ ಕಲೆತು ತಮ್ಮತಮ್ಮ ಕೃತಿಗಳನ್ನು ಓದುವುದರಿಂದ ಸಾಹಿತ್ಯದಲ್ಲಿ ಒಂದು ವಿಧವಾದ ಏಕೀಭಾವವೂ, ವ್ಯಕ್ತಿಗಳಿಗೆ ಒಂದು ವಿಧವಾದ ಪರಸ್ಪರ ಉತ್ತೇಜನವೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ಸಮ್ಮೇಳನದ ಕರ್ತೃಗಳಿಗೆ ತರುಣಕವಿಗಳ ಅಭಿನಂದನಗಳನ್ನೆಲ್ಲಾ ನನ್ನೊಂದು ವಾಣಿಯಿಂದ ಸೂಚಿಸುತ್ತೇನೆ.

ಆದರೆ ಇಂದು, ಇಲ್ಲಿ, ನನ್ನ ಹೃದಯವನ್ನೆಲ್ಲಾ ಬಿಚ್ಚಿ ಹೇಳುವ ಹಾಗಿಲ್ಲ. ಏಕೆಂದರೆ ಇಲ್ಲಿ ನೆರೆದಿರುವುದು ಹೊಸ ಬಾಳಿನ, ಹೊಸ ದೃಷ್ಟಿಯ, ಹೊಸ ಕಳೆಯ, ಹೊಸ ಸಾಹಸದ, ಹೊಸ ಸಾಹಿತ್ಯದ ಪವಿತ್ರ ದೇವಮಂದಿರವನ್ನು ಕಟ್ಟಲೆಳಸುತ್ತಿರುವ ಹೊಸ ಶಿಲ್ಪಿಗಳ, ಕಿರಿಯ ಕವಿಗಳ ಕೂಟ. ಈ ಸೇತುಬಂಧನದ ದಿವ್ಯ ಸಾಹಸದಲ್ಲಿ ಅಲ್ಪಸ್ವಲ್ಪ ಮಣಲಿನ ಕಣಗಳನ್ನಾದರೂ ತಂದು ಹಾಕಲು ಯತ್ನಿಸುತ್ತಿರುವ ನಾನೂ ಒಂದು ಅಳಿಲು. ಆದ್ದರಿಂದ ಇತರರು ಹೊಗಳ

ಬೇಕಾದ ನಮ್ಮ ಮಂದಿರದ ಅಂದಚಂದವನ್ನು ನಾವೇ ಹೊಗಳಿಕೊಳ್ಳುವುದು ಅಷ್ಟೇನು ಆತ್ಮ ಗೌರವದ ಕಾರ್ಯವಲ್ಲ. ಸುಂದರವಾಗಿರುವ ಮಂದಿರದ ಸೌಂದರ್ಯವನ್ನು ಮತ್ತೂ ಹೆಚ್ಚಿಸುವುದೆಂತು ? ನಮ್ಮ ಮಂದಿರಕ್ಕೆ ಯಾವ ಮಾದರಿ ಇರಬೇಕು ? ಈಗ ಅಲ್ಲಿರುವ ಕುಂದು ಕೊರತೆಗಳೇನು ? ಅವುಗಳನ್ನು ನಿವಾರಿಸುವ ಬಗೆ ಹೇಗೆ ? ನಾವು ಯಾವ ಮಾರ್ಗವನ್ನು ಅವಲಂಬಿಸಬೇಕು ? ಇದರಲ್ಲಿ ನಮ್ಮ ಗುರಿಯೇನು ? ಇವೇ ಮೊದಲಾದ ಕೆಲವು ವಿಷಯಗಳು ಇಂದಿನ ಭಾಷಣದ ಸಾರಾಂಶ.

ಎಲ್ಲಕ್ಕೂ ಮೊದಲು ನಮ್ಮ ಹಿರಿಯರಲ್ಲಿ ಒಂದು ವಿಜ್ಞಾಪನೆ. ಏನೆಂದರೆ, ಅನುಭವ ಸಾಲದ ನಮ್ಮನ್ನು ಅನುಭವಶಾಲಿಗಳಾದ ತಾವು ಚೆನ್ನಾಗಿ ಪರೀಕ್ಷಿಸದೆ ತಿರಸ್ಕರಿಸಿದರೆ ತಮ್ಮ ಅನುಭವದ ಹೆಚ್ಚಿಗೆಯಲ್ಲಿ ನಮಗೆ ನೆಚ್ಚುಗೆಡಬಹುದು. 'ಹಳೆಯದೆಲ್ಲಾ ಹೊನ್ನು ; ಹೊಸತೆಲ್ಲಾ ಮಣ್ಣು' ಎಂಬ ಸೂತ್ರದಿಂದ ಮಾತ್ರ ಹೊರಡಬೇಡಿ. ನಮ್ಮ ಹೊಸ ಸಾಹಸವನ್ನು ಸುಮ್ಮನೆ ತಿರುಳಿಲ್ಲದ ಭ್ರಾಂತಿಯೆಂದು ಹಳಿಯದಿರಿ. ಹೊಸ ಸಾಹಿತ್ಯವನ್ನು ಓದಿನೋಡಿ ; ಪರೀಕ್ಷಿಸಿ. ನಿಮ್ಮ ಸ್ವಂತ ಒರೆಗಲ್ಲಿನಲ್ಲಿಯೇ ಅದನ್ನು ತಿಕ್ಕಿನೋಡಿ. ಮನಸ್ಸು ತೃಪ್ತಿಯಾದರೆ ಹೊಗಳಿ ; ಇಲ್ಲದಿದ್ದರೆ ಖಂಡಿಸಿ, ತಪ್ಪುಗಳನ್ನು ತೋರಿಸಿಕೊಡಿ. ಅದರಿಂದ ನಮಗೂ ಶ್ರೇಯಸ್ಸು ; ನಿಮಗೂ ಕಿರಿಯರನ್ನು ತಿದ್ದಿದೆವಲ್ಲಾ ಎಂಬ ತೃಪ್ತಿ. ನಾವು ತಮ್ಮ ಸೂಚನೆಗಳನ್ನು ಅಲ್ಲಗಳೆಯುವಷ್ಟು ಮೊಂಡರಲ್ಲ ; ಕುರುಡರಲ್ಲ. ತಮ್ಮ ಸಲಹೆಗಳನ್ನೆಲ್ಲಾ ಭಕ್ತಿಯಿಂದ ಸ್ವೀಕರಿಸುವೆವು. ಆದಷ್ಟು ಪ್ರಯತ್ನಪಟ್ಟು ಅವುಗಳನ್ನೆಲ್ಲಾ ಆಚಾರದಲ್ಲಿ ತರಲೆಳಸುವೆವು. ಹಳೆಯ ಬೆಳಕು ಬಲು ಸೊಗಸಾದುದು ; ಜ್ಯೋತಿರ್ಮಯವಾದುದು, ಪವಿತ್ರವಾದುದು ! ಹೌದು ; ಯಾರು ಅಲ್ಲ ಎನ್ನುವರು ? ಆದರೆ ಹೊಸಬೆಳಕಿಗೆ ಕಣ್ಣನ್ನೇಕೆ ಮುಚ್ಚುವುದು ? ಅದನ್ನೂ ನೋಡಿ, ತಮ್ಮ ಘನವಾದ ಅಭಿಪ್ರಾಯಗಳನ್ನು ಸೂಚಿಸಿ.

ಹೊಸತೆಂದರೇನು? ಹಳೆಯದರ ನಿಷೇಧವಲ್ಲ. ಹಳತಿಲ್ಲದ ಸಂಪೂರ್ಣವಾದ ಹೊಸತು ಸೃಷ್ಟಿಯಲ್ಲಿ ಎಲ್ಲಾದರೂ ಉಂಟೆ? ತರುಣರಾದ ನಾವು ಕೂಡ ಎಂದೋ ಎಲ್ಲಿಯೋ ಮುದುಕರಾಗಿ ಮಡಿದು ಮರಳಿ ಬಂದವರೆಂದು ಶಾಸ್ತ್ರಗಳೂ ಹೇಳುವುದಿಲ್ಲವೆ? ಹಳೆಯದರ ತಳಹದಿಯಿಂದ ರೂಪಾಂತರವಾಗಿ ಹೊಸತು ಮೂಡುವುದು. ಇಷ್ಟೇ ಹೊರತು ಹೊಸತಕ್ಕೂ ಹಳೆಯದಕ್ಕೂ ನಿಜವಾಗಿಯೂ ಹೋರಾಟವಿಲ್ಲ. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ. ಹೊಸಛಂದಸ್ಸು ಎಂದರೆ ನಿಯಮವಿರುದ್ಧವಾದ ನುಡಿಗಳ ದಾಂಧಲೆಯಲ್ಲ. ಹೊಸದರ ಮೂಲತತ್ವವೂ ಹಳೆಯದರ ಮೂಲತತ್ವವೂ ಎಲ್ಲಾ ಒಂದೆ. ಅದೇ ಇಟ್ಟಿಗೆ, ಅದೇ ಮಣ್ಣು; ಆಕೃತಿ ಮಾತ್ರ ಬೇರೆ. ಇಷ್ಟು ಮಾತ್ರಕ್ಕೆ ಹೊಸತೆಂದು ನಿಂದಿಸುವುದೇಕೆ?

ಹಳೆಯ ಹಾದಿಯನ್ನು ಬಿಟ್ಟರಲ್ಲಾ ಎಂದಷ್ಟೇ ತಮ್ಮ ಸಿಟ್ಟು? ಕನ್ನಡಿಗರಾದ ತಾವು ಹೀಗೆ ಸಿಟ್ಟುಮಾಡುವುದು ಉಚಿತವಲ್ಲ. ಈ ಹೊಸ ಹಾದಿಯಲ್ಲಿ ಹೋಗುವ ಹುಚ್ಚು, ಕನ್ನಡಿಗರಿಗೇನು ಹೊಸತಲ್ಲ. ಇದು ಪುರಾತನ ಕಾಲದಿಂದಲೂ ನಡೆದು ಬಂದುದು. ಕನ್ನಡನುಡಿಯ ಚರಿತ್ರೆಯನ್ನು ಯಾರಾದರೂ ಅವಲೋಕಿಸಿದರೆ, ಈಗುಟ್ಟು ಗೊತ್ತಾಗುವುದು. ಕರ್ಣಾಟಕ ಸಾಹಿತ್ಯ ಸಾಮ್ರಾಜ್ಯದಲ್ಲಿ ದಂಗೆಗಳಮೇಲೆ ದಂಗೆಗಳು ನಡೆದಿವೆ. ನಮ್ಮ ಸಾಹಿತ್ಯದ ಚರಿತ್ರೆ ಎಂದರೇನು? ಈ ದಂಗೆಗಳ ಚರಿತ್ರೆ! ಆದ್ದರಿಂದಲೇ ನಮ್ಮ ಸಾಹಿತ್ಯವು ಇನ್ನೇನು ಮಹಾಕಾರ್ಯಗಳನ್ನು ಸಾಧಿಸದಿದ್ದರೂ ಈ ವಿಧವಾದ ದಂಗೆಗಳಿಂದ ಜೀವನದ ರಸವನ್ನು ಕಾಪಾಡಿಕೊಂಡು ಬಂದಿದೆ. ಕಾಲಕಾಲಕ್ಕೆ ತಕ್ಕಂತೆ ಜನಗಳ ಭಾವಗಳು ಮಾರ್ಪಾಟಾಗುವುವು. ಸಾಹಿತ್ಯವು ಜನಜೀವನದ ವಾಣಿ ಎಂದ ಮೇಲೆ, ಅದೂ ಕೂಡ ನಾನಾ ರೂಪಗಳನ್ನು ಧರಿಸಿ, ನಾನಾ ಭಾವಗಳನ್ನು ಸುರಿಸಿ, ದೇಶದ ಮನಸ್ಸನ್ನು ವರಿಸಿ, ತನ್ನ ಗದ್ದುಗೆಯಿಂದ ಕೆಳಗಿಳಿದು ಬಂದು ಜನತೆಯನ್ನು ಮೇಲೇರಿಸಿ ದೇಶದ ಜೀವನವನ್ನು ಉತ್ತಮ ಭೂಮಿಕೆಯಲ್ಲಿಡುವುದು ಅದರ ಪರಮ

ಕರ್ತವ್ಯ. ಒಂಬತ್ತು ಹತ್ತನೆಯ ಶತಮಾನಗಳ ವೃತ್ತ ಕಂದಗಳಿಂದ ಕೂಡಿದ ಚಂಪೂಗ್ರಂಥಗಳಮೇಲೆ ಹನ್ನೆರಡನೆಯ ಶತಮಾನದಲ್ಲಿ ಹರಿಹರ ರಾಘವಾಂಕನೇ ಮೊದಲಾದವರು ದಂಗೆಯೆದ್ದು ಷಟ್ಪದೀಕಾವ್ಯಗಳನ್ನು ಬರೆಯಲಿಲ್ಲವೇ? ಅಲ್ಲಿಂದ ಮುಂದೆ ಗಣನೆಯಿಲ್ಲದ ವ್ಯತ್ಯಾಸಗಳು ನಮ್ಮ ಸಾಹಿತ್ಯಕ್ಕೆ ಬರಲಿಲ್ಲವೇ? ತ್ರಿಪದಿ, ಚೌಪದಿ, ರಗಳೆ, ಸಾಂಗತ್ಯ, ಯಕ್ಷಗಾನ, ಇವುಗಳೆಲ್ಲಾ ಹೇಗೆ ಹುಟ್ಟಿದುವು? ದಂಗೆಯ ಫಲರೂಪವಾಗಿಯೇ ಅಲ್ಲವೆ? ಇಂಗ್ಲೀಷು ಮುಂತಾದ ಪಾಶ್ಚಾತ್ಯ ಸಾಹಿತ್ಯಗಳಲ್ಲಿಯೂ ಇಂತಹ ವಿಪ್ಲವಗಳನ್ನು ನಾವು ಎದುರುಗೊಳ್ಳುವುದಿಲ್ಲವೇ? ಹೀಗಿರಲು, ಇದನ್ನೆಲ್ಲಾ ತಿಳಿದೂ ತಿಳಿದೂ ಕನ್ನಡ ನುಡಿಯಲ್ಲಿ ಈಚೀಚೆಗೆ ಬಂದಿರುವ ಮತ್ತು ಬರುತ್ತಿರುವ ಹೊಸ ಸಾಹಿತ್ಯದ ಮಾರ್ಗವನ್ನು ಅಲ್ಲಗಳೆಯುವರಿಗೆ ಒಂದು ಎದೆ ಸಾಲದು; ಎಂಟೆದೆಗಳು ಬೇಕು!

ಇನ್ನು ತರುಣಕವಿಸಹೋದರರಲ್ಲಿ ನನ್ನದೊಂದು ಬಿನ್ನಹ. ಪಂಡಿತವರ್ಗದಲ್ಲಿ ಹೇಗೆ ಹೊಸ ಸಾಹಿತ್ಯವನ್ನು ಕಂಡರೆ ಒಂದು ವಿಧವಾದ ತಿರಸ್ಕಾರ ಉಂಟಾಗಿದೆಯೋ, ಹಾಗೆಯೇ ತರುಣರಲ್ಲಿ ಈಚೀಚೆಗೆ ಹಳೆಯ ಸಾಹಿತ್ಯವೆಂದರೆ ಒಂದು ವಿಧವಾದ ಉಪೇಕ್ಷೆಯು ಮೂಡುತ್ತಿರುವುದು. ಹೊಸ ಸಾಹಿತ್ಯವನ್ನು ಹಳಿದರೂ ಅವರೇನೋ ಬದುಕಬಹುದು; ಆದರೆ ನಾವು ಹಳೆಯುದನ್ನು ಹಳಿದು ಕ್ಷಣಕಾಲವಾದರೂ ಬದುಕಲಾರೆವು. ಹಳೆಯುದೆಂದರೆ ಹೊಸದರ ಬೆನ್ನುಮೂಳೆ. ಅದು ನಮ್ಮ ಬಲವಾದ ತಳಹದಿ. ಅದನ್ನು ಬಿಟ್ಟು ನಿಂತರೆ ನಮಗೆ ನೂರು ಎದೆಗಳಿದ್ದರೂ ಸಾಲದು! ತಮಗೊಂದು ಸೂಚನೆ. ಶ್ರೀಯುತ ಬಿ. ಎಂ. ಶ್ರೀಕಂಠಯ್ಯನವರು ಈ ಸಾರಿ ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ಕಲ್ಬುರ್ಗಿಯಲ್ಲಿ ಮಾಡಿದ ಭಾಷಣವನ್ನು ತಾವೆಲ್ಲರೂ ಚೆನ್ನಾಗಿ ಒಮ್ಮನಸ್ಸಿನಿಂದ ಪಾರಾಯಣ ಮಾಡಬೇಕು; ಅಧ್ಯಯನ ಮಾಡಬೇಕು. ಅವರು ಸಾರಿಸಾರಿ ಹೇಳಿರುವ ಅಮೂಲ್ಯವಾದ ಉಪದೇಶಗಳನ್ನು ತಮ್ಮ ಹೃತ್ಪಂಜರಗಳಲ್ಲಿ ಜಾಗರೂಕತೆಯಿಂದ

ಬಚ್ಚಿಟ್ಟುಕೊಂಡು ಅದರಂತೆ ಆಚರಿಸಲು ಯತ್ನಿಸಬೇಕು. ಹಳೆಯ ಸಾಹಿತ್ಯವನ್ನು ಚೆನ್ನಾಗಿ ಓದಿ, ಕಡೆದು, ನವನೀತವನ್ನು ಸವಿಯದಿದ್ದರೆ ನಮಗೆ ಅಮೃತತ್ವವು ಎಂದಿಗೂ ಲಭಿಸುವುದಿಲ್ಲ. ಭಾಷೆಯ ಬಿಗಿ, ಶಬ್ದಗಳ ಜೋಡಣೆ, ರಚನೆಯ ವೀರಮಾರ್ಗ, ಪದಗಳನ್ನು ಆಯ್ದು, ನೆಯ್ದು, ರಸವನ್ನು ಹೊಯ್ದು, ಮನಮೋಹಿಸುವ ರಸಋಷಿಯ, ಸೌಂದರ್ಯ ಯೋಗಿಯ, ಇಂದ್ರಜಾಲ, ಇವುಗಳೆಲ್ಲಾ ಬರಬೇಕಾದರೆ, ಪ್ರಾಚೀನ ಸಾಹಿತ್ಯದೇವಿಯ ಚರಣತಲದಲ್ಲಿ ನಾವು ಬಹುಕಾಲ ಆಕೆಯ ಶಿಷ್ಯರಾಗಿ, ಆಕೆಯ ಭಕ್ತರಾಗಿ, ಆಕೆಯ ಮಕ್ಕಳಾಗಿ, ಶಿಷ್ಯನಂತೆ ವಿಷಯಗಳನ್ನು ಸಂಗ್ರಹಿಸಿ, ಭಕ್ತನಂತೆ ಕೃಪೆಯನ್ನು ಆರ್ಜಿಸಿ, ಮಕ್ಕಳಂತೆ ಒಲ್ಮೆಯನ್ನು ಪಡೆದು, ಧನ್ಯರಾಗಿ, ದಿವ್ಯರಾಗಿ ಸಿದ್ಧರಾಗಿ ಹೊರಹೊರಡಬೇಕು. ಇಲ್ಲದಿದ್ದರೆ ನಮ್ಮ ಕಬ್ಬಗಳು ತಾತ್ಕಾಲಿಕವಾದ ರೆಕ್ಕೆಗಳನ್ನು ಪಡೆದು, ಅನಂತ ವಿಶ್ವದಲ್ಲಿ ಸಂಚರಿಸಲೆಳಸುವ ಮಳೆಯ ಹುಳುಗಳಂತೆ ಬಹುಬೇಗ ಸತ್ತುಹೋಗುವುವು, ಸುಟ್ಟು ಸೀಯುವುವು, ಹೆಸರಿಲ್ಲದಂತಾಗುವುವು. ಆದ್ದರಿಂದ ತರುಣ ಕವಿಯೆ! ವಿನಯದಿಂದ ಶಿಷ್ಯನಂತೆ ಮುಂದೆ ಹೋಗು ; ಹೆಮ್ಮೆಯಿಂದ ಆಚಾರ್ಯನಂತೆ ನಟಿಸಿ ದುಡುಕದಿರು !

ಕವಿತೆಯೆಂದರೇನು ? ಕವಿಗಳೆಂದರೆ ಯಾರು ? ಕಬ್ಬಿಗನ ಗುರಿಯೇನು ? ಕಬ್ಬಗಳ ಉದ್ದೇಶವೇನು ? ಕವಿತೆಯೆಂದರೆ ಆತ್ಮವು ತನಗೆ ತಾನೇ ಮಾಡಿಕೊಳ್ಳುವ ಒಂದು ಅಲೌಕಿಕ ವಿಚಿತ್ರವಾದ ಸ್ವಾರಾಧನೆ. ಆನಂದವೇ ಅದರ ಶೀಲ. "ಕವಿತೆಯು, ಅತ್ಯುತ್ತಮವೂ ಸುಖತಮವೂ ಆದ ಮನಸ್ಸುಳ್ಳ ಸೌಂದರ್ಯ ಯೋಗಿಗಳು, ತಮ್ಮ ಜೀವನಾನದಲ್ಲಿ ಬರುವ ಸುಖತಮವೂ ಅತ್ಯುತ್ತಮವೂ ಆದ ಸಮಯಗಳಲ್ಲಿ ಹಾಡುವ ಆತ್ಮಗೀತಾಂಜಲಿ" ಎಂದು ಆಂಗ್ಲೇಯ ಕವಿಕೋಗಿಲೆಯಾದ ಷೆಲ್ಲಿಯು ಬರೆದಿರುವನು. ಈ ರಸಭರಿತವಾದ ಸೂತ್ರದಲ್ಲಿ ಸಮಸ್ತಕವಿತಾಪ್ರಪಂಚವೂ ಅಡಕವಾಗಿದೆ. ದುಃಖ ಬಂದರೆ ಕಣ್ಣೀರು ಸುರಿಸುವೆವು. ಸಂತೋಷವಾದರೆ ಚೆನ್ನಾಗಿ ನಗುವೆವು.

ಹಾಗೆಯೇ ಜೀವನದ ಸುಖದುಃಖ ; ಸೃಷ್ಟಿಯ ಸೌಂದರ್ಯ, ರಹಸ್ಯ; ಸಮಸ್ತ ಐಶ್ವದ ಹಿಂದಿರುವ ಒಂದು ಮಹಾ ಪವಿತ್ರ ವ್ಯಕ್ತಿತ್ವದಲ್ಲಿ ನಮಗುಂಟಾಗುವ ವೇದನಾಪೂರ್ವಕವಾದ ಪ್ರೇಮ, ಭಕ್ತಿ ; ಇವೇ ಮೊದಲಾದ ದಿವ್ಯ ಭಾವಗಳು ಪ್ರತಿಭಾ ಸಂಪನ್ನನಾದ ಕವಿಯ ಎದೆಯಲ್ಲಿ ಉದ್ರೇಕವಾದಾಗ, ಹಸುರು ನೆಲದಿಂದ ಉಕ್ಕಿ ನೆಗೆಯುವ ಬುಗ್ಗೆಯಂತೆ ನಿರಂತರವಾಗಿ, ನಿರಾಯಾಸವಾಗಿ ಚಿಮ್ಮಿ ಹೊಮ್ಮುವ ಭಾವಾತ್ಮಕವಾದ ಲಲಿತ ಪದಗಳ ಮನೋಹರವಾದ, ಇಂಪಾದ ವಸಂತ ನೃತ್ಯವೇ, ಸುಗ್ಗಿಯ ಕುಣಿತವೇ ನಿಜವಾದ ಕವಿತೆಯು! ಕವಿತೆಗೆ ಕಲ್ಪನೆಯು ಬೇಕೇಬೇಕು: ಭಾವವೇ ಅದರ ಆತ್ಮ, ಶಬ್ದಗಳೇ ಅದರ ದೇಹ. ಅದು ಆತ್ಮವು ತನಗೆತಾನೇ ಆಡಿಕೊಳ್ಳುವ ಮಾತು. ಅದಕ್ಕೆ ಸದಸ್ಯರು ಬೇಕಿಲ್ಲ. ಅದು ಎಂದಿಗೂ ಉಪದೇಶಕ್ಕೆ ಹೊರಡದು. ಕೇಳುವವರನ್ನು ಮೈಮರೆಸಿ ವಶಮಾಡಿಕೊಳ್ಳುವುದು. ಅದು ಬರಿಯ ಬುದ್ಧಿಯ ಕಾರ್ಯವಲ್ಲ. ಪಾಂಡಿತ್ಯದಿಂದ ಅದು ಲಭಿಸುವುದಿಲ್ಲ. ಪೃಥಕ್ಕರಣವು ಬುದ್ಧಿಯ ಕಾರ್ಯ. ಏಕೀಕರಣವು ಕಲ್ಪನೆಯ ಕಾರ್ಯ. ಕವಿತೆಯು ಏಕಾಂತ ಧ್ಯಾನದಿಂದ ಹೊರಸೂಸುವ ಗಾನ. ಅದು ಹಳೆಯದನ್ನು ಹೊಸತುಮಾಡಿ ನಮ್ಮ ಭಾವಗಳಿಗೆ ನಿತ್ಯಯೌವನವನ್ನು ದಾನಮಾಡುವುದು. ಅದರ ತತ್ವವು ಸರ್ವಕಾಲ ಸರ್ವದೇಶಗತವಾದುದು. "ಕವಿತೆಯಲ್ಲಿ ಏನೋ ದಿವ್ಯಾಂಶವಿದೆ" ಎಂಬುದು ಬೇಕನ್ ಮಹಾಶಯನ ವಚನ. "Poetry is indeed something divine. It is at once the centre and circumference of knowledge. It is that which comprehends all science; and that to which all science must be referred. It is at the same time the root and blossom of all other systems of thought; it is that from which all spring and that which adorns all; and that which if blighted denies the fruit and the seed and withholds from the barren world the

nourishment and the succession of the scions of the tree of life. It is the perfect and consummate surface and bloom of all things; it is the odour and the colour of the rose to the texture of the elements which compose it, as the form and splendour of unfaded beauty to the secrets of anatomy and corruption." ಎಂದು ಷೆಲ್ಲಿಯ ಮತ. ಕವಿತೆಯು ವಿಶ್ವದ ಶಿವ ಸತ್ಯ ಸೌಂದರ್ಯಗಳನ್ನು ಅನುಭವಿಸುವ ರಸಿಕನ ಎದೆಯ ವೀಣೆಯಿಂದ ಮೂಡಿ ಬರುವ ಮಂಜುಳಗಾನ! ಅದು ನಮ್ಮ ಹೃದಯವನ್ನು ವಿಕಸಿತವಾಗುವಂತೆ ಮಾಡಿ ಜಗತ್ತನ್ನು ನಮಗೆ ಒಲಿಸುವುದು. ಅದರ ದಿವ್ಯ ಸ್ಪರ್ಶದಿಂದ ಸರ್ವವೂ ಮನೋಹರವಾಗಿ ಪರಿಣಮಿಸುವುದು; ಮಿಂಚಿ ಮಾಯ ವಾಗುವ ಪರಮಾನಂದವು ಅವಿಚ್ಛಿನ್ನವಾಗುವಂತೆ ಮಾಡುವುದು. ಮೃತ್ಯು, ರೋಗ ಮೊದಲಾದ ಭಯಂಕರ ವ್ಯಾಪಾರಗಳೂ ಕೂಡ ಕವಿತೆಯಮುಂದೆ ಸೌಮ್ಯವಾಗುವುವು. ವಿಶ್ವವೆಂಬ ಮಹಾಸ್ವರ ಮೇಳದಲ್ಲಿ ಅವುಗಳೆಲ್ಲಾ ಹೋರಾಟವಿಲ್ಲದೆ ಸಂಗಮಿಸಿ ಹರಿಯುವುವು. ಹೆಚ್ಚೇನು? ಕವಿತೆಯು ನಮ್ಮ ಬಾಳಿಗೆ ಬಹು ಮುಖ್ಯವಾಗಿರುವ ಆನಂದದ ಆಗರ; ಶಾಂತಿಯ ನೆಲೆಮನೆ.

ಹಾಗಾದರೆ ಛಂದೋಬದ್ಧವಾಗಿರುವ ಭಾಷೆಯೆಲ್ಲವೂ ಕವಿತೆಯೇ ಎಂದು ಯಾರಾದರೂ ಕೇಳಬಹುದು. ಎಂದಿಗೂ ಅಲ್ಲ. ಕವಿಗೂ ಪದ್ಯರಚಕನಿಗೂ ತುಂಬಾ ಅಂತರವುಂಟು. ಭಾವವು ಮೈಗೊಳ್ಳು ವುದಕ್ಕೆ ಪದ್ಯರಚನಾ ಕೌಶಲ್ಯವು ಆವಶ್ಯಕವಾದರೂ, ಅದು ಕವಿತೆ ಯ ಅತ್ಯಂತ ಮುಖ್ಯಾಂಗವಲ್ಲ. ಶಬ್ದ ವೈಚಿತ್ರ್ಯವು ಕಲಾಕೋವಿದ ನನ್ನು ಸೂಚಿಸುವುದೇ ಹೊರತು ಅದು ರಸಋಷಿಯ ಆತ್ಮಕ್ಕೆ ಸಾಕ್ಷಿಯಲ್ಲ. ಪ್ರತಿಯೊಬ್ಬ ಕವಿಯೂ ಪದ್ಯರಚಕನೆ; ಆದರೆ ಪದ್ಯ ರಚಕರೆಲ್ಲಾ ಕವಿಗಳಲ್ಲ! ಯಾವ ಪದ್ಯ ರಚನೆಯಲ್ಲಿ ಮಾಧುರ್ಯ, ಶಕ್ತಿ, ಋಜುಭಾವ, ವೈವಿಧ್ಯ ಮೊದಲಾದವುಗಳು ತುಂಬಿತುಳುಕು

ವುವೋ ಅದನ್ನು ಕವಿತೆಯೆಂದು ಕರೆಯಬಹುದು. ಉತ್ತಮಕವಿತೆಗೂ ಸಾಧಾರಣ ಕವಿತೆಗೂ ಭೇದವೇನೆಂದರೆ: ಒಂದನೆಯದರಲ್ಲಿ ಭಾವನೇ ಪ್ರಧಾನ! ಎರಡನೆಯದರಲ್ಲಿ ಸಿದ್ಧಾಂತ, ಕುಶಲತೆಗಳು ಪ್ರಧಾನ! ಕವಿಯ ಗಮ್ಯಸ್ಥಾನವು ಆನಂದ; ಪದ್ಯರಚಕನದು ಪ್ರಯೋಜನ: ಕವಿತೆಯು ನೃತ್ಯದಂತೆ; ಪದ್ಯ ರಚನೆಯು ಪ್ರಯಾಣದಂತೆ. ನೃತ್ಯಮಾಡುವಾಗ ನಟನು ಬೇಕಾದಷ್ಟು ಶಕ್ತಿಯನ್ನು ಉಪಯೋಗಿಸುವವನಾದರೂ, ಹೆಜ್ಜೆಗಳನ್ನು ಅನೇಕಸಾರಿ ಎತ್ತಿ ಇಡುವನಾದರೂ ಇದ್ದಲ್ಲಿಯೇ ಇರುವನು. ಅವನು ಯಾವುದಾದರೂ ಗೊತ್ತಾದ ಸ್ಥಳವನ್ನು ಸೇರಲೆಳಸುವ ಪ್ರಯಾಣಿಕನಲ್ಲ. ಆನಂದವೇ ನೃತ್ಯದ ಲಕ್ಷ್ಯ. ಪ್ರಯಾಣಿಕನಾದರೋ ತನ್ನ ಪ್ರತಿಯೊಂದು ಹೆಜ್ಜೆಯನ್ನೂ ಲಾಘಕ್ಕಾಗಿಯೇ ಇಡುವನು. ತನ್ನನ್ನು ಗೊತ್ತಾದ ಸ್ಥಳಕ್ಕೆ ಬಳಿಸಾರಿಸದ ಒಂದು ಅಡಿಯನ್ನಾದರೂ ಅವನು ಇಡಲಾರನು. ಪ್ರಯಾಣಿಕನ ಭಾಗಕ್ಕೆ ನೃತ್ಯವು ವ್ಯರ್ಥವಾದ ಕಾರ್ಯ. ಪದ್ಯರಚಕರಿಂದ ಸಾಹಿತ್ಯದೇವಿಯ ದೇಹವು ಕೊಬ್ಬಬಹುದೇ ಹೊರತು, ಅವರಿಂದ ಆಕೆಯ ಆತ್ಮಕಲ್ಯಾಣವಾಗಲಾರದು.

ಕವಿಗಳೆಂದರೆ ಯಾರು? ಯಾವಾತನು ತನ್ನ ಪುಣ್ಯಾವಶದಿಂದ ಅಂತರಾತ್ಮನ ದಿವ್ಯ ವಾಣಿಯ ಮಂಜುಳಗಾನಕ್ಕೆ ಸಿಸುತ್ತಪಾತ್ರವಾದ ಕೊಳಲಾಗುವನೋ ಆತನೇ ಕವಿಯು. ಆ ಮಹಿಮಾನಂದಮಯವಾದ ವಿಶ್ವವಾಣಿಯು ತನ್ನಿಂದ ಎಡೆಬಿಡದೆ ತಡೆಯಿಲ್ಲದೆ ಹೊರಸೂಸುವಂತೆ, ತನ್ನ ಅಂತರಂಗವನ್ನು ಪರಿಶುದ್ಧತೆ ಎಂಬ ಗಂಗೆಯ ಅಮಲತೀರ್ಥಜಲದಲ್ಲಿ ಸದಾ ಮಿಾಯಿಸುವುದೇ ಕಬ್ಬಿಗನ ಸಾಧನೆಯಾಗಿರಬೇಕು! ಕವಿಯನ್ನು ಕುರಿತು ಷೆಲ್ಲಿಯು ಏನು ಹೇಳಿರುವನೋ ಕೇಳಿ: "A poet as he is the author to others of the highest wisdom, pleasure, virtue and glory, so he ought personally to be the happiest, the best, the wisest and the most illustrious of men. ....Poets are

the hierophants of an unapprehended inspiration, the mirros of the gigantic shadows which futurity casts upon the present ; the words which express what they understand not ; the trumpets which sing to battle and feel not what they inspire ; the influence which is moved not, but moves. Poets are the unacknowledged legislators of the world." ಕವಿಯು ಪ್ರತಿಭಾಶಾಲಿಯಾಗಿಯೂ, ಸ್ಫೂರ್ತಿಸಂಪನ್ನನಾಗಿಯೂ, ಸೌಂದರ್ಯ ಯೋಗಿಯಾಗಿಯೂ, ಲಾವಣ್ಯಾತ್ಮನಾಗಿಯೂ ಇರುವ ಋಷಿಯಾಗಿರಬೇಕು. ಅನುಭವವೇ ಆತನಿಗೆ ಪ್ರಮಾಣ. ಬುದ್ಧಿಶಕ್ತಿಯು ಆತನಿಗೆ ಗೌಣವಾದುದು. ಆತನ ದೃಷ್ಟಿಗೆ ವೀಣಾಸದೃಶವಾದ ಸೂಕ್ಷ್ಮತೆಯಿರಬೇಕು. ಮಹಾ ಕವಿಯಾದವನು ತನ್ನಿಂದ ಹೊರ ಸೂಸುವ ದಿವ್ಯ ವಾಣಿಯ ಅಮರ ಸಂಗೀತದಿಂದ ಜಗತ್ತಿನ ಮನಸ್ಸನ್ನು ಮೋಹಿಸಿ ತನ್ನ ಕಡೆಗೆ ಸೆಳೆದುಕೊಂಡು, ಅದನ್ನು ತನ್ನ ಮಟ್ಟಕ್ಕೆ ಏರಿಸಬೇಕೇ ಹೊರತು, ತಾನು ಅದರ ಮಟ್ಟಕ್ಕೆ ಇಳಿಯಬಾರದು. ಕವಿಚಕ್ರವರ್ತಿಯಾದ ರನ್ನನ ಮತವೇನೆಂಬುದನ್ನು ನೋಡಿ.

ಕವಿಮಾರ್ಗದೊಳೊಳಪೊಕ್ಕುಂ
ನವರಸಮಂ ತೆಱೆಯೆನುಡಿದನೆನಿಸಿದ ಕವಿ ಸ।
ತ್ಕವಿಯೆನಿಕುಂ ಗೂಡಾರದ
ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ ॥

....

ದರವುರಮುಮಂಟಸುಂಟೆಯು
ಮರೆವೊರಕನುಮೆನಿಸಿ ತಱಿತಱಿಂ ನುಡಿದು ಸಭಾಂ।
ತರದೊಳ್ ರಂಜಿಪುದೆ ರಸಾಂ
ತರಂಗಳಂ ಮುಟ್ಟೆನುಡಿದು ರಂಜಿಸವೇಡಾ ॥

'ರಸಾಂತರಂಗಳಂ ಮುಟ್ಟಿನುಡಿ'ಯುವ ಶಕ್ತಿಯು ಸ್ವಾಭಾವಿಕವಾಗಿಯೇ ಬರಬೇಕು. ಸುಮ್ಮನೆ ನಾಲ್ಕು ನುಡಿಗಳನ್ನು ಹೊಸೆದ ಮಾತ್ರದಿಂದ ಯಾವನೂ ಕವಿಯಾಗಲಾರನು. ಪ್ರತಿಭೆಯಿಂದ ಹೊರಸೂಸದ ಕವಿತೆಯು ಪದ್ಯವಲ್ಲ; ಹುಚ್ಚುಹಿಡಿದ ಗದ್ಯ! ಇದನ್ನೇ ಕುರಿತು ಕವಿಯೊಬ್ಬನು:

ಮಳೆಯಿಲ್ಲದೆ ಪೊಯ್ನೀರಿಂ
ಬೆಳೆಗುಮೆ ಧರೆ ಮುಱುಗಿ ಕುದಿದು ಶಾಸ್ತ್ರದ ಜಲದಿಂ।
ದಳಿಪಿಂ ಪೇೞ್ದೊಡಮದು ಕೋ
ಮಳಮುಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥

ಎಂದು ಹಾಡಿರುವನು. ಆದ್ದರಿಂದ ಯಾವಾತನಲ್ಲಿ ಆನಂದರೂಢವಾದ ಪ್ರತಿಭೆಯು ಭಾವಾತಿಶಯದಿಂದ ತುಂಬಿ ತುಳುಕಿ ಸರಸವಾದ ಮಾತುಗಳಲ್ಲಿ ಮೈಗೊಳ್ಳುವುದೋ ಆತನೇ ಕವಿ. ಯಾವಾತನು ಸೃಷ್ಟಿಯ ಸೌಂದರ್ಯದಿಂದ ಮೋಹಿತನಾಗಿ ಮೈಮರೆತು ಅದರಲ್ಲಿ ತಲ್ಲೀನನಾಗಿ ಆ ರಹಸ್ಯಲೋಕದ ಸಂದೇಶಗಳನ್ನು ಹೊರಗೆಡಹಲು ಶಕ್ತನಾಗುವನೋ ಆತನೇ ಕವಿ. ಯಾವಾತನು ಪರಮಾತ್ಮನೆಂದು ಕರೆಯಲ್ಪಡುವ ಆ ಮಹಾಜಗದಾದಿ ಚೈತನ್ಯದ ಸಾನ್ನಿಧ್ಯದಲ್ಲಿ ನೆಲೆಸಿ, ಆ ದಿವ್ಯತತ್ತ್ವದ ಶಕ್ತಿಯನ್ನು ಪಡೆದು ಹರಿಯುವ ಜೀವರನ್ನು ಹಾರುವಂತೆಮಾಡಿ ಅವರಿಗೆ ತನ್ನ ಅಮರಗಾನದಿಂದ ಆತ್ಮಾನಂದವನ್ನು ದಾನಮಾಡುವನೋ ಆತನೇ ನಿಜವಾದ ಕವಿಗುರು. ಯಾವಾತನು ತನ್ನ ಭಾವದ ಇಂದ್ರಜಾಲದಿಂದ, ಕವಿತೆಯೆಂಬ ಮಿಂಚಿನ ಮಧುರವಾದ ಕೂರಸಿಯಿಂದ ಜೀವರ ಅಶಕ್ತಿಯನ್ನು ಕತ್ತರಿಸಿ ಬಾಳಿಗೆ ಹೊಸರಸವನ್ನು ನೀಡಿ ಭೂಮಿಯನ್ನುವೈಕುಂಠವನ್ನಾಗಿ ಮಾಡುವನೋ ಆತನೇ ಸಹಜ ರಸಋಷಿ. ಇದೇ ಕವಿಗಳ ಅತ್ಯುನ್ನತ ಆದರ್ಶ. ಕವಿತೆಯು ತರಳೆಯ ಲಾವಣ್ಯದಲ್ಲಿ ಪರಿಸಮಾಪ್ತಿ ಹೊಂದಬಾರದು. ಅದು ಕೆಲವು ಸಂದರ್ಭಗಳಲ್ಲಿ ವೀರನ

ಬಂಡೆಯದಂತೆ ಮೋಹನ ಭೀಷಣವಾಗಿಯೂ, ಕಾಳಿಯ ನೃತ್ಯದಂತೆ ಮಂಗಳ ಭಯಂಕರವಾಗಿಯೂ ಇರಬೇಕಾಗುವುದು. ದೇಶದ ದಾಸ್ಯವನ್ನು ಪರಿಹರಿಸಿ ಸ್ವಾತಂತ್ರ್ಯ ಸಾಮ್ರಾಜ್ಯಸ್ಥಾಪನೆ ಮಾಡುವ ಕಾರ್ಯಭಾರದಲ್ಲಿ ಕವಿಗಳು ತಟಸ್ಥರಾಗಿರುವುದು ಉಚಿತವಲ್ಲ. ಹಾಗೆ ಮಾಡಿದರೆ ರೋಮ್ ನಗರವು ಉರಿಯುತ್ತಿದ್ದಾಗ ನೀರೋ ಎಂಬ ವಸು ಪಿಟೀಲು ಬಾರಿಸಿದಂತಾಗಿ ಹಾಸ್ಯಾಸ್ಪದವಾಗುವುದು.

ಅಂದರೆ, ಕವಿಗಳ ಕಾರ್ಯದ ಮಹತ್ತು ಕಡೆಯದೂ ಅಲ್ಲ; ಕೀಳಾದುದೂ ಅಲ್ಲ. "Poets are the unacknowledged legislators of the world" ಎಂದು ಹೇಳಿದ ಷೆಲ್ಲಿಯ ಮಾತಿನಲ್ಲಿ ಬಹಳ ಅರ್ಥವಿದೆ. ಕವಿಗಳು ತಮ್ಮ ಗಾನದ ಇಂದ್ರಜಾಲದಿಂದ ಜನರ ಮನಸ್ಸನ್ನು ಎತ್ತಕಡೆಗೆ ಬೇಕಾದರೂ ತಿರುಗಿಸಬಹುದು. ಆದ್ದರಿಂದ ಕವಿಗಳ ಮೇಲಿರುವ ಭಾರವು ಅಷ್ಟೇನೂ ಕಿರಿದಲ್ಲ. ಬಹಳ ಪವಿತ್ರತಮವಾದುದು. ಅಂತಹ ಪಾವನವಾದ ಭಾರವನ್ನು ವಹಿಸಲು ನಾವೆಲ್ಲಾ ಅರ್ಹರಾಗಬೇಕು ಎಂಬುದೇ ನನ್ನ ಪ್ರಾರ್ಥನೆ. ಹೃದಯವನ್ನು ವಿಸ್ತಾರವಾಗಿಟ್ಟುಕೊಂಡು, ಹೊರಗಿನ ಬೆಳಕು ಒಳಗೆ ಬರದಂತೆ ಮನಸ್ಸಿನ ಬಾಗಿಲನ್ನು ಕಿರಿದುಮಾಡದೆ, ಮುಚ್ಚದೆ, ಬೆಳಕು ಮೂಡುವ ಕಡೆಗೆಲ್ಲಾ ತಿರುಗಿ ತಲೆಬಾಗಿ, ಶಿಷ್ಯ ಬುದ್ಧಿಯಿಂದ ಕಾಂತಿಯನ್ನು ಸ್ವೀಕರಿಸಿ ಕತ್ತಲೆಯನ್ನು ಹೋಗಲಾಡಿಸಿಕೊಂಡು ಕಡೆಗೆ ನಾವೇ ಬೆಳಕಿನ ಆಗರವಾಗುವಂತೆ ಈಗಿನಿಂದಲೂ ಪ್ರಯತ್ನಿಸಬೇಕು. ನಮ್ಮ ಅದ್ಯತನರಾದ ಹಿರಿಯಕವಿಗಳ ಉತ್ತಮ ಕೃತಿಗಳನ್ನು ಪೂಜ್ಯಬುದ್ಧಿಯಿಂದ ವಿಮರ್ಶಕ ದೃಷ್ಟಿಯಿಂದ ಚೆನ್ನಾಗಿ ಓದಿ, ಅವರ ಮಾರ್ಗದ ಗುಣಾವಗುಣಗಳನ್ನು ತಿಳಿದು, ಅತಿಶಯೋಕ್ತಿಗೆ ಮಣಿಯದೆ ಯೋಗದೃಷ್ಟಿಯಿಂದ ಮುಂದುವರಿಯಬೇಕು.

ಮಹನೀಯರೇ, ಕವಿ ಸಹೋದರರೇ, ತಮ್ಮ ಪ್ರಶಸ್ತವಾದ ಕಾಲವನ್ನು ಇನ್ನು ಹೆಚ್ಚಾಗಿ ಹರಣಮಾಡೆನು. ನನಗೆ ತೋರಿದ

ಅಲ್ಪಸ್ವಲ್ಪ ವಿಷಯಗಳನ್ನು ಬಹಳ ಸಂಕೋಚದಿಂದ, ಸಂಗ್ರಹಮಾಡಿ ತಮ್ಮ ಅವಗಾಹನೆಗೆ ತಂದಿರುವೆನು. ಅಲ್ಪಾನುಭವದಿಂದ, ಆಡಿದ ಮಾತುಗಳಲ್ಲಿ ಏನಾದರೂ ಅತ್ಯುಕ್ತಿಗಳು ಇದ್ದರೆ ಮನ್ನಿಸಬೇಕೆಂದು ಪ್ರಾರ್ಥಿಸಿ, ಮೇಲೇರಿದಂತೆಲ್ಲಾ ನನ್ನ ನಮ್ರತೆಯು ಹೆಚ್ಚಾಗುವಂತೆ ತಮ್ಮಿಂದ ಹರಕೆಯನ್ನು ಕೈಕೊಂಡು, ನನ್ನ ಗುರುವರ್ಯರ ಆಶೀರ್ವಾದವನ್ನು ಹೊಂದಿ ಈ ಸಣ್ಣ ಭಾಷಣವನ್ನು ಮುಗಿಸುವೆನು.

ಕೆ. ವಿ. ಪುಟ್ಟಪ್ಪ.

ಭಕ್ತಿ ಭಾಂಡಾರಿ ಬಸವೇಶ್ವರರು.

೬

ಬಸವೇಶ್ವರರ ಗುಣಮಹತ್ವವನ್ನು ನಿರೂಪಿಸುವುದಕ್ಕೆ ಅವರ ಭಕ್ತಿಭಾವವೂ, ಮತಪ್ರಾಚುರ್ಯದಲ್ಲಿ ಅವರು ತೋರಿಸಿದ ಲೋಕಕಾರುಣ್ಯವೂ ಹೇಗೆ ಸಹಕಾರಿಗಳಾಗಿರುವುವೋ ಹಾಗೆಯೇ ಅವರು ಮಾಡಿದ ಬೋಧೆಯೂ ಸಹಕಾರಿಯಾಗಿದೆ. ಸಾಮಾನ್ಯವಾಗಿ ಮತಸ್ಥಾಪಕರೂ ಮತೋದ್ಧಾರಕರೂ ತಮ್ಮ ತಮ್ಮ ಪಂಗಡಗಳಿಗೆ, ತದ್ವಾರಾ ಪ್ರಪಂಚಕ್ಕೆ ಏನು ಬೋಧೆಗಳನ್ನು ಮಾಡಿರುವರೋ ಅವುಗಳನ್ನೇ ಬಸವೇಶ್ವರರು ಮಾಡಿದ್ದಾರೆ. ಪರಮಾತ್ಮನ ನೈಜಸ್ವರೂಪವನ್ನು ತಿಳಿದು ಆತನ ಮಂಗಳ ವಿಗ್ರಹವನ್ನು ಒಮ್ಮೆ ನೋಡಿ ಪರವಶರಾದವರು, ಆತನ ಕರುಣಾಕಟಾಕ್ಷಕ್ಕೆ ಒಮ್ಮೆ ಪಾತ್ರರಾದವರು, ಯಾವ ದೇಶದಲ್ಲಿದ್ದರೂ, ಯಾವ ಕಾಲದಲ್ಲಿದ್ದರೂ ಮಾಡತಕ್ಕ ಬೋಧೆಗಳು ಒಂದೇ ಆಗಿರುತ್ತವೆ. ಆದುದರಿಂದ ಭಗವಂತನ ಕಾರ್ಯದಲ್ಲಿ ನಿಯೋಜಿತರಾದವರು ಎಲ್ಲಿಯೂ ಇಲ್ಲದ ಅಪೂರ್ವಬೋಧೆಗಳನ್ನು ಮಾಡಲಾಗುವುದಿಲ್ಲ. ಬೋಧೆಗಳು ಒಂದೇ ಆದರೂ ಮಾಡತಕ್ಕ ಕ್ರಮಗಳು ಭಿನ್ನಭಿನ್ನವಾಗಿರಬಹುದು. ಬಸವೇಶ್ವರರು ಮಾಡುವ ಬೋಧೆಗಳಲ್ಲಿ ಅಪೂರ್ವವಾದ ದೀನೋದ್ಧಾರಕಸ್ವರವೂ ಆಪ್ತಜನದ ಹಿತವಚನಗಳೂ ಮರುಕವೂ ಕಂಡುಬರುತ್ತವೆ. ಇವುಗಳಿಂದ ಅವರ ಪ್ರಕೃತಿಯು ಎಂತಹುದೆಂದು ನಿಶ್ಚಯಿಸಲು ಅನುಕೂಲವಿದೆ. ಅವರ ಬೋಧೆಯಲ್ಲಿ ಎಳ್ಳಷ್ಟೂ ಕಾಠಿನ್ಯವಿಲ್ಲ. ಆಧಿಕಾರಿಕಸ್ವರವಿಲ್ಲ. ಕಣ್ಣುಮುಂದೆ ರಾಶಿಯಾಗುತ್ತಿರುವ ಪಾಪಸಮುದಾಯದಿಂದ ಸಂತಪ್ತರಾಗಿ ಅಪ್ಪಾ, ಅಣ್ಣಾ ಎಂಬ ಪ್ರೇಮವಚನಗಳಿಂದ ಕೈಹಿಡಿದು ಬುದ್ಧಿಗಲಿಸುವ ಕೋಮಲಹೃದಯವು ಆ ಬಸವೇಶ್ವರರದು. ಅವರನ್ನು ಆಚೆಗೆ ಹೋಗೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಆ ಮಾತುಗಳಲ್ಲಿ ಅಷ್ಟೊಂದು ಮಾಧುರ್ಯವಿದೆ ಅನುಭವವಿದೆ; ಪ್ರೇಮವಿದೆ ಹಿತವಿದೆ. ಅವುಗಳಿಂದ ಆಕರ್ಷಿತರಾಗಿ ಅವರ ಪಾದದೆಸೆಯಲ್ಲಿ ಕುಳಿತು ಕೇಳೋಣವೆನ್ನಿಸುತ್ತದೆ. ಆ ಬೋಧೆಯ ಮಹತ್ವವು ಇದರಿಂದಲೇ ಶ್ರುತವಾಗುವುದು.

"ನೀರಲ್ಲಿ ಪುಟ್ಟಿದ ಗುಳ್ಳಿಗೆ ಕಬ್ಬುನದ ಕಟ್ಟುಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ ! ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯುವ ನಿಶ್ಚಯಿಸದೇ." *

ಈ ಶರೀರವು ನಶ್ವರವಾದುದು; ಯಾವಗಳಿಗೆಯಲ್ಲಿ ಪ್ರಾಣಹೋದೀತೋ ಎಂಬುದನ್ನರಿಯಿದೆ, ಏನು ಪಾಡುಪಡುತ್ತಿದ್ದಾರೆ. ಅರಿವಿಲ್ಲ ಜನಗಳಿಗೆ ತಿಳಿವಿಲ್ಲ-

* ಪು ೨೪. ಸಂ ೪೮.

ಎಂಬುವ ವ್ಯಸನವಿದ್ದರೂ ಆ ವಿಡಂಬನೆಯಲ್ಲಿ ಕ್ರೌರ್ಯವಿಲ್ಲ. ಕೂಡಲಸಂಗಯ್ಯನು ಮಹಾದಾನಿ—ಆದಾನಿ ಕೊಡದಿದ್ದರೆ ಸುರಕ್ಷಿತವ ಮಾಡುವ ವಸ್ತುವೆಲ್ಲಿಯದು? ಆ ಭರವೆಲ್ಲಿಯದು? ಈ ವಸ್ತುವಿನಲ್ಲಿಯೂ, ಸುರಕ್ಷಿತಮಾಡುವ ಭರದಲ್ಲಿಯೂ ಮುಳುಗಿಹೋಗಿ ಆ ಮಹಾದಾನಿಯನ್ನೇ ಮರೆತೆಯಲ್ಲಾ—ಇದ್ದ ಕಾಲದಲ್ಲಿಯೇ ಪರಲೋಕಸಾಧನೆಗೆ ಮಾರ್ಗವನ್ನು ಮಾಡಿಕೋ—

"ಪಂಜರಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ, ಎಂದೆಂದೂ ಅಳಿಯೆನೆಂದು ಗೂಡ ಕಟ್ಟಿದೆಯಲ್ಲಾ! ನಿನ್ನ ಮನದಲ್ಲಿ ಮಾಯಾಮಂಜರ ಕೊಲುವರೆ, ನಿನ್ನ ಪಂಜರ ಕಾವುದೆ ಕೂಡಲ ಸಂಗಮ ದೇವನಲ್ಲದೆ?" †

ಶತ್ರುಗಳು ಹೊರಗಿಂದ ಬರುವರೆಂದು ತಿಳಿಯಬೇಡ—ಅವರು ನಿನ್ನಲ್ಲಿಯೇ ಇದ್ದಾರೆ. ಮಾಯಾಪಾಶಕ್ಕೆಸಿಗದಂತೆ, ಕಾಮಕ್ರೋಧಾದಿಗಳಿಗೆ ಎಡೆಗುಡದಂತೆ, ಮನಸ್ಸು ಅನ್ಯತ್ರ-ವಿಷಯ ಲೋಲುಪೆಗಳಲ್ಲಿ ಮಗ್ನವಾಗದಂತೆ ಕೂಡಲಸಂಗನಲ್ಲಿ ಸೇರಿಸು-ಒಂದುವೇಳೆ ಈ ಲೋಕದ ಸುಖವೇ ಅತಿಶಯವೆಂದೂ ಶಾಶ್ವತವೆಂದೂ ತಿಳಿದಿದ್ದರೆ ಅದನ್ನು ಬಿಡು. ಏಕೆಂದರೆ,

"ಸಂಸಾರವೆಂಬುದೊಂದು ಗಾಳಿಯಸೊಡರು, ಸಿರಿ ಎಂಬುದೊಂದು ಸಂತೆಯಮಂದಿ ಕಂಡ್ಯಯ್ಯ. ಇದನು ನೆಚ್ಚಿ ಕೆಡಬೇಡ-ಸಿರಿ ಎಂಬುದ ಮರೆದು ಪೂಜಿಸು ನಮ್ಮ ಕೂಡಲಸಂಗಮ ದೇವನ"

"ಎಲೆ ಎಲೆ ಮಾನವ, ಅಳಿಯಾಸೆ ಬೇಡಲೋ, ಕಾಡಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯು ಕೊಡಲು, ಕೂಡಲಸಂಗಮದೇವನ ಮರೆಯದೆ ಪೂಜಿಸು" §

ಶಾಶ್ವತಪದವಿಯನ್ನು ಬಲ್ಲವರಾರು, ಇಹದಲ್ಲಿಯೇ ಸುಖಪಡೋಣವೆಂದು ಮನಸ್ಸು ಹೇಳಬಹುದು. ಒಳ್ಳೆಯದು, ಅದಕ್ಕಾದರೂ ಕೂಡಲಸಂಗನನ್ನು ಪೂಜಿಸು—ಆ ಪೂಜೆಯು ಪರಲೋಕಸಾಧನೆಗೂ ಆವಶ್ಯಕ, ಇಲ್ಲಿನ ಸುಖಸಂಪತ್ತುಗಳಿಗೂ ಆವಶ್ಯಕ. ಕಂಡವರನ್ನು ಹೋಗಿ ಬೇಡಿದರೆ ಈ ಮಾನವರು ಏನು ಕೊಟ್ಟಾರು? ಕೊಡುವ ಪ್ರಭು ಬೇರೆಯಿದ್ದಾನೆ

"ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬಕ್ಕು. ಹರಿದು ಹೆದ್ದೊರೆ ಕೆರೆತುಂಬಿದಂತಯ್ಯ, ನೆರೆಯದ ವಸ್ತು ನೆರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ, ಪರಮ ನಿರಂಜನನು ಮರೆವಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ, ಕೂಡಲಸಂಗಮದೇವಾ" *

ಸಿರಿಯು ಶಾಶ್ವತವಲ್ಲದಿದ್ದರೂ ಅದು ಬರುವುದು ಆತನ ಅನುಗ್ರಹದಿಂದ. ಅದು ಹೋಗುವುದು ಆತನ ಸಂಕಲ್ಪದಿಂದ. ಆತನ ಅನುಗ್ರಹವನ್ನು ಸಂಪಾದಿಸು. ಆತನ ಅನುಗ್ರಹವು ಸುಮ್ಮನೆ ದೊರೆಯುವುದೇ? ಆತನನ್ನು ಮರೆಯದೆ ನೀನು

† ಪು ೨೪. ಸಂ ೪೯. § ಪು ೨೫. ಸಂ ೫೦—೫೧. * ಪು ೨೫. ಸಂ ೫೫.

ಪೂಜಿಸು. ಆತನು ನಿನ್ನನ್ನು ಮರೆಯದೆ ಅನುಗ್ರಹಿಸುವನು. ಉಪೇಕ್ಷೆಮಾಡಿದರೆ ಮಾನವರೇ ಒಲಿಯಲಾರರು—ಇನ್ನು ಆ ಮಹಾದಾನಿ ಕೂಡಲಸಂಗಯ್ಯನು ಒಲಿಯುವನೇ—ಆದುದರಿಂದ ಆ ಜಗದೀಶ್ವರನನ್ನು ಪೂಜಿಸಿ ಆತನೊಲ್ಮೆಯನ್ನು ಸಂಪಾದಿಸು ಎಂದು ಬಸವೇಶ್ವರರು ಹೇಳಿದರು. ನೀವು ಸುಖಪಡಿ-ಇಹಲೋಕದ ಭೋಗಗಳನ್ನು ಅನುಭವಿಸಿ-ಆದರೆ ಒಂದು ಎಚ್ಚರಿಕೆ ಇರಲಿ. ಆತನ ಅನುಗ್ರಹವೆಂಬುದನ್ನು ಮರೆಯಬೇಡಿ.

"ಆನೆಯ ಸೇರಿಕೊಂಡು ಹೋದಿರಿ ನೀವು. ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರಿ ನೀವು. ಕುದುರೆಯ ಸೇರಿಕೊಂಡು ಹೋದಿರಿ ನೀವು. ಸತ್ಯದನಿಲವನರಿಯದೆ ಹೋದಿರಿಲ್ಲ ನೀವು! ಸದ್ಗುಣವೆಂಬ ಫಲವ ಬಿತ್ತದೆ ಹೋದಿರಲ್ಲಾ! ಅಹಂಕಾರವೆಂಬ ಮದಗಜವನೇರಿ ಮಾಯೆದಿಗೆ ಗುರಿಯಾಗಿ ಕೆಟ್ಟು ಹೋದಿರಲ್ಲಾ! ನಮ್ಮ ಕೂಡಲಸಂಗಮದೇವರನರಿಯದೆ ನರಕಕ್ಕೆ ಭಾಜನರಾದಿರಲ್ಲಾ!" ‡

ಈ ಸುಖಾತಿಶಯಗಳೊಂದಿಗೆ ಕೂಡಲಸಂಗನ ಧ್ಯಾನವನ್ನೂ ಇಟ್ಟುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ನಿಮಗೆ ವಸ್ತುವಾಹನಾದಿ ಐಶ್ವರ್ಯವು ಲಭಿಸಿರುವುದು ಈಶ್ವರಾನುಗ್ರಹದಿಂದ ಎಂದು ತಿಳಿಯದೆ ಆ ಐಶ್ವರ್ಯವನ್ನು ಜಂಗಮ ದಾಸೋಹದಲ್ಲಿ ವಿನಿಯೋಗಿಸದೆ, ಮನಸ್ಸನ್ನು ಕ್ಷಣಕಾಲವಾದರೂ ಲಿಂಗತ್ರಯದಲ್ಲಿ ಸೇರಿಸದೆ ಸುಮ್ಮನೆ ಮೆರೆದುಬಿಟ್ಟರಲ್ಲಾ ಎಂದು ಬಸವೇಶ್ವರರಿಗೆ ವ್ಯಸನ. ಸತೀಸುತರನ್ನು ಬಿಟ್ಟುಬಿಡಿ, ಕಾಡಿಗೆ ಹೋಗಿ, ಇಂದ್ರಿಯನಿಗ್ರಹ ತಪಸ್ಸು ಇವುಗಳನ್ನಾಚರಿಸಿ ಎಂದು ಬಸವೇಶ್ವರರು ಹೇಳುವುದಿಲ್ಲ. ಏಕೆಂದರೆ, ಇಂದ್ರಿಯದಮನಾದಿಗಳಿಂದ ಅಷ್ಟೊಂದು ಫಲವಿಲ್ಲವೆಂದು ಅವರ ನಂಬಿಕೆ.

"ಇಂದ್ರಿಯನಿಗ್ರಹಮಾಡಿದರೆ ಹೊಂದುವುವು ದೋಷಂಗಳು. ಮುಂದೆ ಕಾಡುವುವು ಪಂಚೇಂದ್ರಿಯಂಗಳು. ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳಚೆಂಗಳೆಯರು? ಸತಿಪತಿ ರತಿಸುಖಭೋಗೋಪಭೋಗಬಿಟ್ಟರೆ, ಸಿಂಧುಬಲ್ಲಾಳನವರು? ನಿಮ್ಮ ಮುಟ್ಟಿ ಪರಧನ ಪರಸ್ತ್ರೀಯರಿಗೆ ಎಳಸಿದರೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಯ್ಯ" †

ಸ್ವಸ್ತ್ರೀಯರಲ್ಲಿ ಅನುರಕ್ತರಾಗಿ ಇಂದ್ರಿಯೋಪಭೋಗವನ್ನು ಪಡೆಯುವ ಜನರು ವ್ರತಿಗಳೇ ಆಗಿರುತ್ತಾರೆ. ಯಾರು ಈ ಸುಖಾತಿಶಯಗಳಿಂದ ಸುತ್ತುವಡೆದಿದ್ದರೂ ನಿರ್ಲಿಪ್ತರಾಗಿ ಸರ್ವವನ್ನೂ ಶಿವಾರ್ಪಣಮಾಡುತ್ತಿರುವರೋ ಅವರೇ ನಿಜವಾಗಿಯೂ ಇಂದ್ರಿಯನಿಗ್ರಹಮಾಡಿದವರು. ಇಂದ್ರಿಯದಮನಮಾಡಿ ಮನಸ್ಸನ್ನು ಪರಿಶುದ್ಧಪಡಿಸಿಕೊಳ್ಳಬೇಕೆಂಬುದು ಕಡೆಯಲ್ಲಿ ವ್ಯತ್ಯಸ್ತಫಲವನ್ನೇ ದೊರಕಿಸುವುದು. ಆಧುನಿಕ ಕಾಲದಲ್ಲಿ ಮನಶ್ಶಾಸ್ತ್ರಶೋಧಕರು Repression is no Solution

‡ ಪು ೯೩. ಸಂ ೧೦೨. † ಪು ೯೩. ಸಂ ೧೦೩.

ಇಂದ್ರಿಯದಮನವು ಪರಿಹಾರೋಪಾಯವಲ್ಲ-ಎಂದು ಹೇಳುತ್ತಿರುವ ತತ್ವವನ್ನೇ ಬಸವೇಶ್ವರರು ಹಿಂದೆ ಉಪದೇಶಮಾಡಿದ್ದಾರೆ. ಪರಧನ ಪರಸ್ತ್ರೀಯರಿಗೆ ಎಳಸದಂತೆ ಮನಸ್ಸನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿಯೇ ಚಲಿಸುವುದಕ್ಕೆ ಅವಕಾಶವಿದ್ದೇ ಇರುತ್ತದೆ. ಆದುದರಿಂದಲೇ ಬಸವೇಶ್ವರರು,

"ತೊರೆಯಮಿಾವ ಅಣ್ಣಗಳಿರಾ, ತೊರೆಯಮಿಾವಸ್ವಾಮಿಗಳಿರಾ, ತೊರೆಯಿಂಭೋ, ತೊರೆಯಿಂಭೋ, ಪರನಾರಿಯರಸಂಗ ತೊರೆಯಿಂಭೋ. ಪರಧನದಾಸೆಯಾ ಮಿಷವ, ತೊರೆಯಿಂಭೋ. ಇವತೊರೆಯದೆ ಹೋಗಿ, ತೊರೆಯಮಿಂದರೆ, ಬರುಬೊರೆ ಹೋಹುದು ಕೂಡಲಸಂಗಮದೇವ" *

ಎಂದು ಸೆರಗುಹಿಡಿದು ಬೇಡಿಕೊಳ್ಳುತ್ತಿದ್ದರು.

ಬಸವೇಶ್ವರರು ಷಟ್ಸ್ಥಲಸಿದ್ಧಾಂತವನ್ನು ಚೆನ್ನಾಗಿ ಅರಿತವರಾಗಿ ಅದು ಪಂಡಿತಪಾಮರರಿಬ್ಬರಿಗೂ ಸುಲಭವಾದ ಮೋಕ್ಷೋಪಾಯವೆಂದು ನಿರ್ಧರಿಸಿದರು. ಶಾಸ್ತ್ರಾರ್ಥನಿರ್ಣಯಗಳನ್ನುಮಾಡಿ ಜ್ಞಾನಿಗಳೆನ್ನಿಸಿಕೊಳ್ಳುವ ಮಹಾನುಭಾವರಿಗೂ ಷಟ್ಸ್ಥಲ ಮರ್ಮಗಳನ್ನು ಗ್ರಹಿಸಿ ಅದರ ಸ್ಥೂಲ ಸೂಕ್ಷ್ಮಗಳನ್ನಾಚರಿಸುವುದು ಪ್ರಯಾಸಕರವು—ಮತ್ತೊಂದೆಡೆಯಲ್ಲಿ ನೋಡಿದರೆ ಶಾಸ್ತ್ರಾರ್ಥಗಳ ಗಂಧವನ್ನೇ ಅರಿಯದ ಕೇವಲ ಪಾಮರನು ಯಾವುದೊಂದು ಮರ್ಮವನ್ನೂ ಗ್ರಹಿಸದೆ ಕೆಲವು ಆಚರಣೆಗಳಿಂದಲೇ ಮುಕ್ತಿಪದವನ್ನು ಸುಲಭದಲ್ಲಿ ಪಡೆಯಬಹುದು. ಆಯಾ ಜೀವರುಗಳ ಸಂಚಿತ ಕರ್ಮಾನುಸಾರವಾಗಿ ಪರಿಪಕ್ವವಾಗಿರುವ ಮನಸ್ಸು ತನತನಗೆ ಬೇಕಾದುದನ್ನು ಆರಿಸಿಕೊಳ್ಳಬಹುದು. ಆಬಾಲವೃದ್ಧರಿಗೂ ಭಕ್ತಿರಸವನ್ನೇ ಪ್ರಾಧಾನ್ಯವಾಗಿ ಬೋಧಿಸಿ, ಲಿಂಗಜಂಗಮ ಸಾಮರಸ್ಯವನ್ನು ಕಾರ್ಯತಃ ತೋರಿಸುವಂತೆ ತಳಹದಿಯನ್ನು ಬಸವೇಶ್ವರರು ಹಾಕಿದರು. ಇದರ ನಂತರ ಆ ಜೀವಿಗೆ ಯೋಗ್ಯತೆಯಿದ್ದು ಅದ್ವೈತಕ್ಕೆ ಏರಬಹುದಾದರೆ ಅಗತ್ಯವಾಗಿ ಆಗಬಹುದು. ಆದರೆ ಒಮ್ಮಿಂದೊಮ್ಮೆ ಅದ್ವೈತಕ್ಕೆ ಹೋರಾಡುವುದು ಬಸವೇಶ್ವರರ ಮತವಲ್ಲ. ಹಾಗೆ ಹೋರಾಡಿದ ಅಲ್ಲಮಪ್ರಭುವು ತಾನು ಅಹಂಕಾರಿಯಾದನೆಂದೂ ಸೋಹಂ ಭಜನೆಯಿಂದ ತಾನು ಭ್ರಮಿತನಾದೆನೆಂದೂ ಹೇಳಿಕೊಂಡಿದ್ದಾನೆ. ಕಡೆಗೆ ಬಸವೇಶ್ವರರ ಭಕ್ತಿಪಂಥದಿಂದ ತಿಳಿವಳಿಕೆಯನ್ನು ಹೊಂದಿ ಕೃತಜ್ಞತಾಭಾವವನ್ನು ವ್ಯಕ್ತಗೊಳಿಸಿದ್ದಾನೆ.

"ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ
ಬ್ರಹ್ಮವನುಡಿದು ಭ್ರಮಿತನಾದೆನಯ್ಯ ಶೂನ್ಯವ
ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯಾ
ಗುಹೇಶ್ವರಾ, ನಿಮ್ಮ ಶರಣಸಂಗನ ಬಸವಣ್ಣನ ಸಾನ್ನಿಧ್ಯದಿಂದ ನಾನು ಸದ್ಭಕ್ತನಾದೆನಯ್ಯ"

ಇನ್ನು ಸಾಮಾನ್ಯರ ಪಾಡೇನು.

---

* ಪು ೯೪. ಸಂ ೧೦೭.

" ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ, ನಮ್ಮ ಶರಣರಿಗೆ ಉರಿಗೊಡ್ಡಿದರಗಿನಂತೆ ಕರಗದನ್ನಕ್ಕ? ಕೂಡಲಸಂಗಮದೇವಾ ಬರಿಯಮಾತಿನಮಾಲೆಯುಲೇನಹುದು"? *

ಆದುದರಿಂದ ಭಕ್ತಿಯನ್ನುಮಾಡಿ. ಗುರುಲಿಂಗ ಜಂಗಮದ ಪ್ರಾಧಾನ್ಯವನ್ನು ಅಂಗೀಕರಿಸಿ ಸ್ವಾಹಂಕಾರಖಂಡನೆಯನ್ನು ಮಾಡಿಕೊಳ್ಳಿ. ಚರಲಿಂಗಕ್ಕೆ ಪ್ರೀತಿಯಾದರೆ ಸ್ಥಾವರಕ್ಕೂ ಆಗುವುದು. ಸ್ಥಿರವಾದ ಭಕ್ತಿಯಿಲ್ಲದೆ ಸುಮ್ಮನೆ ಕೂಗಿದರೆ ಭಗವಂತನು ಪ್ರತ್ಯಕ್ಷನಾದಾನೇ? ಎಂದಿಗೂ ಇಲ್ಲ.

" ನಂಬರು ನೆಚ್ಚರು ಬರಿದೆ ಕರೆನರು. ನಂಬಲರಿಯರು ಲೋಕದ ಮನುಜರು. ನಂಬಿ ಕರೆದರೆ ' ಓ ' ಎನ್ನನೆ ಶಿವನು. ನಂಬದೆ ನೆಚ್ಚದೆ ಬರಿದೆ ಕರೆವವರ ಕೊಂಬಿಮೆಟ್ಟಿಕೂಗೆಂದ ಕೂಡಲ ಸಂಗಮದೇವ "

ಇನ್ನು ಲೋಕವನ್ನು ಮೆಚ್ಚಿಸುವುದಕ್ಕಾಗಿ ಮಾಡುವ ಡಂಭಾಚಾರಗಳೂ ಕಪಟಭಕ್ತಿಗಳೂ ಬಸವೇಶ್ವರರ ಮನಸ್ಸಿಗೆ ಒಪ್ಪಿಕೆಯಾಗುವುವೇ. ಪರಮಾತ್ಮನ ಸೇವೆ ಮಾಡುವುದಕ್ಕೆ ತಾನು ನಿಜವಾಗಿಯೂ ಕಷ್ಟಪಡಬೇಕು. ಅಂತರಂಗಶುದ್ಧಿಯನ್ನು ಪಡೆಯುವುದಕ್ಕೆ ತಾನು ಸಾಧನೆಮಾಡಬೇಕು. ಇಷ್ಟಲ್ಲದೆ ಮನೆಯಲ್ಲಿ ಶಿವಾರ್ಚನೆ ಮಾಡಿಸುತ್ತಿದೇನೆಂಬ ಭ್ರಾಂತಿಯಿಂದ ಸುಮ್ಮನಿದ್ದರೆ ಕೂಡಲಸಂಗಯ್ಯನು ಒಲಿಯುವನೇ.

" ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು, ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ? ತನ್ನ ಲಿಂಗಕ್ಕೆ ತಾಮಾಡುವ ನೇಮವನು ತಾಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ, ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ !"

ಎಂದು ಬಹಳ ಖಂಡಿತವಾಗಿಯೇ ಹೇಳಿದ್ದಾರೆ. " ತನುಸವೆಯದನ್ನಕ್ಕರ, ಮನಸವೆಯದನ್ನಕ್ಕರ, ಧನಸವೆಯದನ್ನಕ್ಕರ ಅಪ್ಪುದೇಭಕ್ತಿ " ಎಂದಿಗೂ ಇಲ್ಲ. ಬರಿಯ ಮಾತಿನಮಾಲೆಯುಲೇನಹುದು. ಕರಸ್ಥಲದಲ್ಲಿ ಇಷ್ಟಲಿಂಗವನ್ನು ಬಿಜಯಮಾಡಿಸಿ–ಈ ಸ್ಥೂಲರೂಪದ ವಸ್ತುವನ್ನು ಪುಷ್ಪಪತ್ರಾವಳಿಗಳಿಂದ ಪೂಜಿಸಿದರೆ, ಈ ಪೂಜಾಭಾವವು ಮನಸ್ಸಿನಲ್ಲಿ ನೆಟ್ಟು ಈ ಸ್ಥೂಲಲಿಂಗವೇ ಸೂಕ್ಷ್ಮವಾದ ಭಾವಲಿಂಗವಾಗಿ ಪರಿಣಮಿಸಿ ಧ್ಯಾನಪೂಜೆಯನ್ನು ಕೈಗೊಳ್ಳುವುದಿಲ್ಲವೇ! ಈ ಮನೋರಾಜ್ಯದಲ್ಲಿ ನಡೆಯುತ್ತಿರುವ ಈ ಪೂಜೆಯಿಂದ ಪುಳಕಿತಾಂತರಂಗನಾಗುವುದಿಲ್ಲವೇ! ಅಂತರಂಗದಲ್ಲಿ ಮೂರ್ತೀಭವಿಸಿರುವ ಚೈತನ್ಯದಾಯಕನಾದ ಆ ಸರ್ವಚೈತನ್ಯಸ್ವರೂಪನು ತಾನೇ ಆ ಲಿಂಗಮೂರ್ತಿಯೆಂಬ ತಾದಾತ್ಮ್ಯಭಾವವನ್ನು ಕೈಗೊಳ್ಳುವುದಿಲ್ಲವೇ! ಆಗ ಲಿಂಗವೇ ತಾನೋ ತಾನೇ ಲಿಂಗವೋ–ಎಂಬುವು ಲಿಂಗಾಂಗಸಮರಸದಲ್ಲಿ ಮುಳುಗಿ

* ಪು ೨೮. ಸಂ ೭೭.

ಶಿವೈಕ್ಯದ ಮೋಕ್ಷಸುಖವನ್ನೂ ಬ್ರಹ್ಮಾನಂದವನ್ನೂ ಪಡೆಯುವುದಿಲ್ಲವೇ, ಈ ಸುಖವನ್ನೂ ಆನಂದವನ್ನೂ ಅನುಭವಿಸಬೇಕಾದರೆ ಪ್ರತಿಯೊಬ್ಬನೂ ತಾನು ಆ ಸೇವಾಪೂಜೆಗಳನ್ನು ಸಾಕ್ಷಾತ್ತಾಗಿ ಮಾಡಬೇಕಲ್ಲದೆ ಮಾರ್ಗಾಂತರವಿಲ್ಲ. ಬರಿಯಮಾತಿನ ಮಾಲೆಯಲೇನಹುದು ಎಂದು ಬಸವೇಶ್ವರರು ತಿಳಿಯಹೇಳಿದ್ದಾರೆ.

ಹಾಗೆಯೇ ತನ್ನಲ್ಲಿ ಉದಾತ್ತಭಾವನೆಗಳೂ ಉದಾತ್ತವರ್ತನೆಗಳೂ ಜನಿಸಬೇಕಾದರೆ ಹಿಂದಿನ ಪುರಾತನರನ್ನು ಬಾಯಿಮಾತ್ರದಿಂದ ನೆನೆದರೆ ಸಾಲದು ; ಅವರ ನಾಮಸ್ಮರಣೆಯನ್ನು ಜಪದಲ್ಲಿ ಸೇರಿಸಿದರೆ ಸಾಲದು ; ಅವರಂತೆ ನಡೆನುಡಿಯೊಂದಾಗದಿದ್ದರೆ ಆ ನಾಮಸ್ಮರಣೆಯ ಫಲವು ದೊರೆತಂತಾಯಿತೇ ?

“ ಕೆಂಚ ಕರಿಕನ ನೆನೆದರೆ, ಕರಿಕನಾಗಬಲ್ಲನೆ ? ಕರಿಕ ಕೆಂಚನ ನೆನೆದರೆ, ಕೆಂಚನಾಗಬಲ್ಲನೆ ? ದರಿದ್ರನು ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೆ? ಸಿರಿವಂತ ದರಿದ್ರನ ನೆನೆದರೆ, ದರಿದ್ರನಾಗಬಲ್ಲನೆ ? ಮುನ್ನಿನ ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವ ?”

ಆ ಪುರಾತನರ ಜೀವನಚರಿತ್ರೆಯಲ್ಲಿ ಮುಖ್ಯಭಾಗಗಳನ್ನು ಗ್ರಹಿಸಿ ಆಚರಣೆಗೆ ತಂದುಕೊಳ್ಳಿ. ಅವರು ನಿಮಗೆ ಮೇಲ್ಪಂಕ್ತಿಯೆಂದು ಭಾವಿಸುವುದಾದರೆ ಅವರು ಮಾಡಿದಂತೆ ಮಾಡಲು ಪ್ರಯತ್ನಪಡಿ. ಶಾಸ್ತ್ರವನ್ನೂ ಓದಬೇಡಿ ಪುರಾಣವನ್ನೂ ಕೇಳಬೇಡಿ, ಪುರಾತನರು ತೋರಿದ ಶ್ರದ್ಧಾಭಕ್ತಿಗಳನ್ನು ನೀವು ತೋರಿ. ಜಂಗಮರು ಮುಖಲಿಂಗಿಗಳೆಂದು ಚೆನ್ನಾಗಿ ಗ್ರಹಿಸಿ. ಯಾವ ಪುರಾತನರು ಜಂಗಮತಿರಸ್ಕಾರ ಮಾಡಿದ್ದಾರೆ? ಜಂಗಮ ಬಂದು ಬೇಡಲು ಸಿರಿಯಾಳಸಿಂಧು ಬಲ್ಲಾಳಾದಿಗಳು ಎಳ್ಳಷ್ಟಾದರೂ ಹಿಂಜರಿದರೆ? ನೀವಾದರೋ ಉಂಬುವ ಜಂಗಮ ಬಂದರೆ ನಡೆಯೆಂಬಿರಿ, ಉಣ್ಣದ ಲಿಂಗಕ್ಕೆ ಬೋನವಹಿಡಿ ಎಂಬಿರಿ—ಕೂಡಲಸಂಗಯ್ಯನು ಮೆಚ್ಚುವನೇ ? ಅವನು ನಿಮ್ಮಂಥ ಸರ್ವಸಂದೇಹಿಗಳನು ಕೈಹಿಡಿದೆತ್ತುವನೇ ? ಪುರಾತನರ ಹೆಸರನ್ನು ಹೇಳಿದ್ದಕ್ಕೆ ಅವರಂತೆ ನೀವೂ ಆದರೆ ಸಾರ್ಥಕ.

“ ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ ! ಇಲ್ಲಿ ಸಲ್ಲುವರು, ಅಲ್ಲಿಯೂ ಸಲ್ಲುವರಯ್ಯ ! ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ, ಕೂಡಲ ಸಂಗಮದೇವಾ.”

ಆದುದರಿಂದ ಇಹಲೋಕದ ಜೀವನವು ಚೆನ್ನಾಗಿರಬೇಕು. ಇಲ್ಲಿ ಒಳ್ಳೆಯ ನಡತೆ ಆಚಾರಗಳನ್ನು ತಳೆದಿದ್ದರೆ ತಾತ್ಕಾಲಿಕಸುಖವು ದೊರೆಕೊಳ್ಳುವುದೊಂದೇ ಅಲ್ಲ; ಪರಲೋಕದಲ್ಲಿಯೂ ಉತ್ತಮಸ್ಥಾನವು ದೊರೆಯುತ್ತದೆ. ನಿಮ್ಮ ನಡೆವಳಿಗಳಲ್ಲಿ ವ್ಯವಹಾರಗಳಲ್ಲಿ ಅಂತರಂಗ ಶುದ್ಧಿಯಿರಲಿ. ಆ ಅಂತರಂಗ ಶುದ್ಧಿಯನ್ನು ಶಾಸ್ತ್ರಾಧ್ಯಯನದಿಂದಲೇ ಪಡೆಯಬೇಕೆಂದು ತಿಳಿಯಬೇಡಿ. ಅಂತರಂಗಶುದ್ಧಿಯೇನೆಂಬುದು ಎಲ್ಲರಿಗೂ ತಿಳಿದೇ ಇದೆ.

"ಕಳಬೇಡ, ಕೊಲಬೇಡ, ಹುಸೆಯ ನುಡಿಯಲುಬೇಡ, ಮುನಿಯಬೇಡ. ಅನ್ಯರಿಗೆ ಅಸಹ್ಯ ಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ. ಇದೇ ಬಹಿರಂಗಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ."

ಇವುಗಳನ್ನೆಲ್ಲ ನಾವು ಬಾಯಲ್ಲಿ ಹೇಳಿಕೊಳ್ಳುತ್ತೇವೆ. ಆದರೆ ಸ್ವತಃ ಆಚರಿಸುವುದಿಲ್ಲ. ದೇವರೊಬ್ಬನೇ ಇದ್ದಾನೋ ಹಲವರೇ ಇದ್ದಾರೋ ಆ ಜಿಜ್ಞಾಸೆಯೂ ಬೇಡ. ದ್ವೈತವೇ ಸತ್ಯವೋ–ಅದ್ವೈತವೇ ನಿಶ್ಚಯವೋ–ವಿಶಿಷ್ಟಾದ್ವೈತವೇ ಸ್ಥಿರವೋ ನಮಗೆ ಆ ಚರ್ಚೆಯೂ ಬೇಡ. ಗಹನವಾದ ವೇದಾಂತ ತತ್ವವಿಚಾರಗಳ ಸಮಸ್ಯೆಯನ್ನು ಬಿಡಿಸುವುದು ನಮ್ಮ ಮಂದಬುದ್ಧಿಗೆ ಸಾಧ್ಯವಿರಲಾರದು. ಆದರೆ ಮೇಲೆ ಹೇಳಿದ ಆಚರಣೆಗಳನ್ನು ದಿನಚರಿಯಲ್ಲಿ ತಂದುಕೊಳ್ಳುವುದಕ್ಕೆ ಅಭ್ಯಂತರವೇನು? ಇವುಗಳ ಆಚರಣೆಯಿಂದ ಮನಸ್ಸು ಪವಿತ್ರವಾಗುವುದು. ಅಲ್ಲಿ ಪರಮಾತ್ಮನು ತನ್ನ ಚಿಜ್ಜ್ಯೋತಿಯನ್ನು ಬೆಳಗುವನು. ಆ ಬೆಳಕಿನಿಂದ ಒಳಗಿನ ಅಂಧಕಾರವು ಮಾಯವಾಗಿ ಸತ್ಯದ ನಿಲವು ತಿಳಿಯುವುದು. ಹಾಗಲ್ಲದೆ ಅನ್ಯಥಾ ಪರಿಣಾಮವಾದರೆ ಅಂತರಂಗದಲ್ಲಿ ಪರಮಾತ್ಮನು ವಾಸಿಸುವುದೂ ಇಲ್ಲ; ಕಾಂತಿಯನ್ನು ಮೊದಲೇ ಬೀರುವುದೂ ಇಲ್ಲ.

"ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ? ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ? ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನದೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮ ದೇವಾ"

ಸ್ವಾಮಿಾ ಒಳಗಿದ್ದೀರಾ! ಎಂದು ಬಾಗಿಲನ್ನು ತಟ್ಟಿ ವಿಚಾರಿಸಬೇಕಾದ ಕಷ್ಟವೇ ಇಲ್ಲ. ಬಾಹ್ಯರಂಗದ ಲಕ್ಷಣಗಳನ್ನು ನೋಡಿದ ಕ್ಷಣವೇ ಅಂತರಂಗದ ಶೂನ್ಯತೆಯು ಮನಗಾಣುವುದು. ಇನ್ನು ಮನೆಯೊಡೆಯನಿಲ್ಲವೆಂದು ಬಾಯಿಬಿಟ್ಟು ಹೇಳಬೇಕೇ? ಬಾಹ್ಯಪ್ರಪಂಚದಲ್ಲಿ ವರ್ತಿಸುತ್ತಿರುವ ರೀತಿಯನ್ನು ನೋಡಿದರೆ ಸಾಕು. ಮನದೊಳಗೆ ಒಡೆಯನಿಲ್ಲೆಂಬುದು ಸ್ಪಷ್ಟವಾಗುವುದು. ಜಪತಪಾನುಷ್ಠಾನಗಳಿಗೆ ಮೈದೋರದ ಮಹಿಮಾರ್ಣವನು ಕೇವಲ ಸರಳನಡತೆಗೆ ಒಲಿಯುವನೆಂದು ಬಸವೇಶ್ವರರು ಹೇಳಿದ್ದಾರೆ. ಈ ಸರಳನಡತೆಯನ್ನೂ ಸದಾಚಾರಗಳನ್ನೂ ಶಾಸ್ತ್ರಗಳನ್ನು ಓದಿಯೇ ಪ್ರತಿಯೊಬ್ಬರೂ ಗ್ರಹಿಸಬೇಕಾಗಿಲ್ಲ. ಈ ವಿಷಯಗಳು ಎಲ್ಲರ ಕಣ್ಣಿಗೂ ಗೋಚರಿಸುತ್ತಲೇ ಇವೆ. ಆದರೆ ಸಾವಿರದಲ್ಲಿ ಒಬ್ಬರು ಆಚರಣೆಗೆ ತಂದುಕೊಳ್ಳುತ್ತಾರೆ. ಆದುದರಿಂದಲೇ ಜ್ಞಾನಕ್ಕಿಂತಲೂ ಅಧಿಕವಾಗಿ ಕಾರ್ಯಾಚರಣೆಗೆ ಬಸವೇಶ್ವರರು ಪ್ರಾಧಾನ್ಯವನ್ನು ಕೊಟ್ಟಿರುವರು.

"ಕಂಡ ಭಕ್ತಂಗೆ ಕೈಮುಗಿವಾತನೇ ಭಕ್ತ. ಮೃದುವಚನವೇ ಸಕಲ ಜಪಂಗಳಯ್ಯಾ! ಮೃದುವಚನವೇ ಸಕಲ ತಪಂಗಳಯ್ಯ! ಸದುವಿನಯವೇ ಸದಾಶಿವನ ಒಲುಮೆಯಯ್ಯ! ಕೂಡಲ ಸಂಗಮದೇವಯ್ಯನಂತಲ್ಲದೊಲ್ಲನಯ್ಯ"

"ಇತ್ತಬಾರಯ್ಯ, ಇತ್ತಬಾರಯ್ಯ, ಎಂದು ಭಕ್ತರೆಲ್ಲರು ಕೂರ್ತುಕರೆವುತ್ತಿರಲು, ಮತ್ತೆ ಕೆಲಕ್ಕೆಹೋಗಿ ಶರಣೆಂದು ಹಸ್ತಬಾಯನೆ ಮುಚ್ಚಿ, ಕಿರಿದಾಗಿ ಭೃತ್ಯಾಚಾರವ ನುಡಿದು, ವಿನಯ ಧ್ಯಾನವುಳ್ಳರೆ, ಎತ್ತಿಕೊಂಬನಯ್ಯ ಕೂಡಲಸಂಗಮದೇವರು ಪ್ರಮಥರ ಮುಂದೆ" *

ಗುರುಭಕ್ತಿವಿನಯ ಮೃದುವಚನಗಳು ಸದಾಚಾರಗಳು, ಉಳ್ಳ ಮನುಷ್ಯನು ಕೂಡಲಸಂಗಮದೇವರ ಪ್ರೇಮಪುತ್ರನು. ಇಂಥ ಪುತ್ರನನ್ನು ಭಕ್ತಾದಿಗಳು ನೋಡಿ ದರೆ ಅವರಿಗೆಷ್ಟು ಪ್ರೇಮವೋ ಆನಂದವೋ. ಆ ಮೂರ್ತಿಪ್ರಭೆಯಿಂದಲೇ ಭಗವಂತನ ಅನುಗ್ರಹವು ಆತನಲ್ಲಿರುವುದೆಂದು ತಿಳಿದು ಸಂತೋಷದಿಂದ ತುಂಬಿತುಳುಕಾಡುವರು. ಇತ್ತಬಾರಯ್ಯ-ಇತ್ತಬಾರಯ್ಯ ಎಂದು ಪ್ರೇಮಪುರಸ್ಸರವಾಗಿ ಕರೆಯುವಾಗ ಅವರ ಅಂತರಂಗವು ಆಗಲೇ ಕರಗಿ ನೀರಾಗಿರುವುದು. ಈ ಪ್ರೇಮ ಪುತ್ಥಳಿಯು ಕಾರ್ಯತಃ ತೋರಿಸುವ ಗುರುಭಕ್ತಿ ವಿನಯಾದಿಗಳನ್ನು ನೋಡಿ ಆ ಪರಮಾತ್ಮನು ಹಿಗ್ಗಿ ಒಡನೆಯೇ ಎತ್ತಿಕೊಂಡು ಮುದ್ದಾಡುವನು. ನಮ್ಮ ಪ್ರತಿಯೊಂದು ನಡೆಯ ಲ್ಲಿಯೂ, ಪ್ರತಿಯೊಂದು ನುಡಿಯಲ್ಲಿಯೂ ಹಾಗೆ ವಿನಯವಿರಬೇಕು, ಭಕ್ತಿಯಿರ ಬೇಕು. ಧೋರಣೆಯಿಂದ ಹೆಚ್ಚೇನು ಕಡಿಮೆಯೇನು ಎಂದು ತಾತ್ಸಾರಮಾಡಲಾಗದು- ಏಕೆಂದರೆ ಸ್ವಲ್ಪದರಲ್ಲಿಯೇ ಸ್ವರ್ಗ ನರಕಗಳು ದೊರೆಯಬಹುದು. "ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ." ವಿನಯ ವಾಕ್ಕಿನಿಂದ ಪುಣ್ಯವು ಲಭಿಸುವುದು ; ಕಠಿನ ವಾಕ್ಯದಿಂದ ಪಾಪವು ಸಂಘಟಿಸುವುದು. ಹೀಗೆ "ಪುಣ್ಯ ಪಾಪಗಳೆಂಬುವು ತಮ್ಮ ಇಷ್ಟ ಕಂಡಿರಯ್ಯ" ಸ್ವರ್ಗ ನರಕಗಳೂ ತಮ್ಮ ಇಷ್ಟ. "ಆಚಾರವೇ ಸ್ವರ್ಗ ಅನಾಚಾರವೇ ನರಕ." ಇನ್ನು ಹೇಳತಕ್ಕದ್ದೇನು. ಜನಗಳು ಅಡಿಗಡಿಗೂ ಪುಣ್ಯ ವನ್ನು ಶೇಖರಿಸಬಹುದು. ತಪ್ಪಿದರೆ ಪಾಪವನ್ನು ಕೂಡಿಡಬಹುದು. ತಮ್ಮ ದೋಷ ಗಳನ್ನು ತಾವು ತಿಳಿದುಕೊಂಡು ಅವುಗಳನ್ನು ತಿದ್ದಿಕೊಳ್ಳಬೇಕಾದುದು ಕರ್ತವ್ಯ. ಆದರೆ ತಮ್ಮ ತಮ್ಮ ದೋಷಗಳನ್ನು ತಿದ್ದಿಕೊಂಡು ಉತ್ತಮಗತಿಯನ್ನು ಪಡೆಯಲು ಪ್ರಯತ್ನಿಸುವವರು ಅತಿವಿರಳ. ಇತರರ ಅವಗುಣಗಳನ್ನು ಎತ್ತಿ ಆಡುತ್ತ ಅವರಿಗೆ ಉಪದೇಶಮಾಡುವುದು ಲೋಕಸಂಪ್ರದಾಯ. ಈ ರಂಧ್ರಾನ್ವೇಷಣವನ್ನೂ ಪರಹಿತ ಬೋಧೆಯನ್ನೂ ನೋಡಿ,

"ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ, ನೆರೆಮನೆಯವರ ದುಃಖಕ್ಕೆ ಅಳುವರ ಮೆಚ್ಚ ಕೂಡಲಸಂಗಮದೇವ"

* ಪು ೩೭. ಸಂ ೧೨೩-೪.

ಎಂದು ಬಸವೇಶ್ವರರು ಹೇಳಬೇಕಾಯಿತು. ಒಬ್ಬರ ಡೊಂಕನ್ನು ತಿದ್ದುವುದಕ್ಕೆ ಹೋಗತಕ್ಕ ಮನುಷ್ಯನು ಮೊದಲು ತನ್ನ ಡೊಂಕನ್ನೆಲ್ಲ ಸರಿಪಡಿಸಿಕೊಂಡಿರಬೇಡವೆ? ತನ್ನ ಮನೋವಿಕಾರಗಳನ್ನು ಗೆದ್ದು, ಅಹಂಕಾರಖಂಡನೆಯನ್ನು ಮಾಡಿಕೊಂಡಿರಬೇಡವೆ? ದಿನ ಬೆಳಗಾದರೆ ಸಾವಿರ ಪಾಪಗಳನ್ನು ಮಾಡುವ ಮನುಷ್ಯನು ಧರ್ಮಬೋಧೆಯನ್ನು ಮಾಡಲು ಮುಂದುವರಿದಂತಾಯಿತು. ಆ ಬೋಧನಕಾರ್ಯವನ್ನು ಮಹಾತ್ಮರಿಗೆ ಬಿಡಿ. ಯಾರ ಜೀವನವು ಪವಿತ್ರವಾದುದೋ, ಯಾರಧ್ಯೇಯವು ಸಾಧುವಾದುದೋ, ಯಾರ ಅಂತರಂಗವು ಪರಿಶುದ್ಧವಾದುದೋ ಅಂಥವರು ಲೋಕದ ಡೊಂಕನ್ನು ತಿದ್ದಲು ಯೋಗ್ಯರು. ನೀವೆಲ್ಲ ನಿಮ್ಮ ಡೊಂಕನ್ನು ಸರಿಪಡಿಸಿಕೊಳ್ಳುವ ಪ್ರಯತ್ನಮಾಡಿದರೆ ಸಾಕು. ನೆರೆಮನೆಯ ದುಃಖ ನಿಮಗೇಕೆ? ಎಂದು ಬಸವೇಶ್ವರರು ಹೇಳಿದ್ದಾರೆ.

ಬಸವೇಶ್ವರರ ಬೋಧೆಯಲ್ಲಿ ಎಷ್ಟೊಂದು ಸರಳತೆ! ಎಷ್ಟೊಂದು ಅನುಭವ! ಆ ಬೋಧನಮಾರ್ಗವಾದರೂ ಎಂತಹುದು! ಹೇಳುವ ಪ್ರತಿಯೊಂದು ಮಾತೂ ತುದಿನಾಲಿಗೆಯಿಂದ ಬಂದುದಲ್ಲ. ಅದು ಹೃದಯದ ಮೂಲದೇಶದಿಂದಲೇ ಬಂದು ನಮ್ಮ ಹೃದಯದ ಮೂಲದೇಶವನ್ನೇ ಪ್ರವೇಶಿಸುತ್ತದೆ. ಪ್ರತಿಯೊಂದು ವಚನದ ಅರ್ಥವೂ ಸುಲಭಗ್ರಾಹ್ಯವಾಗುವಂತೆ ಕೊಡುವ ಉಪಮಾನಗಳು ಉದಾಹರಣೆಗಳು ಎಷ್ಟು ಸಾಮಾನ್ಯವು ಆದರೆ ಎಷ್ಟು ಪರಿಣಾಮವುಳ್ಳವು! ಹೇಳುವ ವಿಚಾರವು ವೇದಾಂತದಂತೆ ಗಹನವಾದರೂ ಹೇಳುವ ರೀತಿಯು ಸಾಹಿತ್ಯದಂತೆ ರಸವತ್ತಾದುದು. ಬಸವೇಶ್ವರರ ಕಣ್ಣೆದುರಿಗೆ ಇರುವವರು ಪಂಡಿತಜನರಲ್ಲ. ಪಂಡಿತರು ಶಾಸ್ತ್ರಾಧ್ಯಯನದಿಂದ ನಿಜತತ್ವಗಳನ್ನು ಗ್ರಹಿಸಬಲ್ಲರು. ಆ ಗ್ರಹಿಸಿದ ತತ್ವಗಳನ್ನು ಆಚರಣೆಗೆ ತಂದುಕೊಂಡರೆ ಸಾಕು. ಬಸವೇಶ್ವರರ ದೃಷ್ಟಿಪಥದಲ್ಲಿ ಸಾಮಾನ್ಯ ಜನರಿದ್ದಾರೆ.

"ಎಲವೋ ಎಲವೋ ಪಾಪಕರ್ಮ ಮಾಡಿದವನೇ! ಎಲವೋ ಎಲವೋ ಬ್ರಹ್ಮಹತ್ಯೆ ಮಾಡಿದವನೇ! ಒಮ್ಮೆ ಶರಣೆನ್ನೆಲವೋ-ಒಮ್ಮೆ ಶರಣೆಂದರೆ ಪಾಪಕರ್ಮ ತೊಲಗುವುದು. ಸರ್ವಪ್ರಾಯಶ್ಚಿತ್ತಕೆ ಹೊನ್ನಪರ್ವತಂಗಳೇ ಇದ್ದಾವು. ಒರ್ಬಂಗೆ ಶರಣೆನ್ನಿ-ಹಾಳು ಮನುಜರಿರಾ, ಕೂಡಲ ಸಂಗಮದೇವಂಗೆ"*

ಎಂದು ಅಂಗಲಾಚಿಕೊಳ್ಳುತ್ತಿದ್ದುದು ಜನಸಾಮಾನ್ಯಕ್ಕೆ. ಇವರ ಉದ್ಧಾರಕ್ಕಾಗಿಯೇ ಬಸವೇಶ್ವರರು ಬದ್ಧಕಂಕಣರಾದದ್ದು. ಇವರಿಗೆಲ್ಲ ಹೇಗೆ ತಿಳಿಯಬೇಕೋ ಆ ರೀತಿಯಲ್ಲಿ ಬಸವೇಶ್ವರರು ಬೋಧೆ ಮಾಡಿದ್ದಾರೆ. ಆದುದರಿಂದ ಪಂಡಿತಮಂಡಲಿಯವರಿಗೆ ರಂಜನೆಯಾಗುವಂತೆ ಸಂಸ್ಕೃತದಲ್ಲಿ ವ್ಯಾಕ್ಯಾರ್ಥಗಳನ್ನು ಮಾಡಿ ಭಾಷ್ಯ

---

* ಪು ೯೦. ಸಂ ೮೫.

ಗಳನ್ನು ರಚಿಸಿ ಆಚಾರ್ಯಪಂಗಡಕ್ಕೆ ಸೇರಲಿಲ್ಲವೆಂದು ಕೆಲವರು ಆಕ್ಷೇಪಿಸಿದರೆ ಆಕ್ಷೇಪಿಸಲಿ. ಅದರಿಂದ ಬಸವೇಶ್ವರರಿಗೆ ಬಾಧಕವಿಲ್ಲ. ಸಂಪುಟದಲ್ಲಿಯೇ ಮುಚ್ಚಿಟ್ಟಿದ್ದ ಕಸ್ತೂರಿಯನ್ನು ಸರ್ವಜನೋಪಯುಕ್ತವಾಗುವಂತೆ ಹೊರಕ್ಕೆ ತೆಗೆದುಕೊಟ್ಟ ಬಸವೇಶ್ವರರಿಗೆ ಅದರಿಂದ ಏನೂ ಕುಂದಕವಿಲ್ಲ.

“ ಬಸವಬಾರಯ್ಯ ! ಮರ್ತ್ಯಲೋಕದೊಳಗೆ ಭಕ್ತರುಂಟೆ ಹೇಳಯ್ಯ ! ಮತ್ತಾರು ಇಲ್ಲವಯ್ಯಾ, ನಾನೊಬ್ಬನೇ ಭಕ್ತನು. ಮರ್ತ್ಯಲೋಕದೊಳಗೆ ಭಕ್ತರೆಲ್ಲರು ಜಂಗಮಲಿಂಗ ನೀನೇ ಅಯ್ಯಾ ಕೂಡಲಸಂಗಮ ದೇವ ”

ಎಂಬುವ ಪವಿತ್ರಭಾವನೆಯನ್ನು ಕಾರ್ಯರೂಪದಲ್ಲಿಯೇ ತೋರಿಸಿದ ಬಸವೇಶ್ವರರ ಸ್ಥಾನಗೌರವವು ಪಾಂಡಿತ್ಯದಿಂದಲ್ಲದಿದ್ದರೂ ಆತ್ಮೋನ್ನತಿಯಿಂದಲೇ ಅವರಿಗೆ ಲಭಿಸಿರುತ್ತದೆ.

ಕಂಡದ್ದು ನಾಲ್ಕು ಸರ್ತಿ

ಕಮಲೆಯನ್ನು ಕಂಡದ್ದು ನಾಲ್ಕು ಸರ್ತಿ. ಮೊದಲನೆಯ ಸಲ ನಾನವಳನ್ನು ನೋಡಿದ್ದು ಮೋಟರು ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದಾಗ. ತುಮಕೂರಿಗೆ ಹೋಗಬೇಕಾಗಿರಲು ನೆಲಮಂಗಲದಲ್ಲಿ ಬಸ್ಸಿನಲ್ಲಿ ಕುಳಿತೆ. ಎರಡನೆಯ ತರಗತಿಯಲ್ಲಿ ಜನರು ಅನೇಕರಿದ್ದುದರಿಂದ ಮೊದಲನೆಯ ತರಗತಿಯಲ್ಲಿಯೇ ಕೂಡಬೇಕಾಯಿತು. ಅದರಲ್ಲಿ ನಾನು ಆ ಊರ ಪೋಲೀಸು ಇನಸ್ಪೆಕ್ಟರು ಇಬ್ಬರೇ ಇದ್ದದ್ದು. ಅವರು, ಪುಕಸಟ್ಟೆ ಕುಳಿತವರು, ಬಹಳ ದರ್ಪದಿಂದ ಕುಳಿತಿದ್ದರು. ಆದರೆ ನನ್ನೊಡನೆ ಮಾತನಾಡಬೇಕೆಂಬ ಆಸೆ; ನಾನೇ ಮೊದಲು ಮಾತನಾಡಿಸಲಿ ಎಂಬ ಗರ್ವ ಬೇರೆ. ನನಗೆ, ಅವರೊಡನೆ ಏನು ಮಾತು ಎಂಬ ಅಹಂಕಾರ. ಹೀಗೆಯೇ ಮುಂದಕ್ಕೆ ಸಾಗುತ್ತಿರಲು, ಅವರೇ "ಈ ಬಸ್ಸುಗಳನ್ನು ನಂಬುವುದಕ್ಕೆ ಆಗುವುದಿಲ್ಲ. ಅವು ಹೀಗೆ ಇವು ಹಾಗೆ" ಎಂದು ಮೊದಲು ಮಾಡಿದರು. ಅವರದು ಏನು ಬಾಯೋ, ಬಿಡುವುದೇ ತಡ, ಬಿಡುವಿಲ್ಲದೆ ಹೋಗುತಿತ್ತು. ದಾವುಸ್ ಪೇಟೆಗೆ ಬರುವ ಹೊತ್ತಿಗೆ ಟಯರು ಒಡೆದುಹೋಗಿ ಬಸ್ಸು ನಿಂತು ಹೋಯಿತು; ಎಲ್ಲರೂ ಇಳಿಯಬೇಕಾಯಿತು.

ಸಂಧ್ಯಾಕಾಲ. ಆಗತಾನೆ ಮಳೆಯು ಬಂದು ನಿಂತುಹೋಗಿದ್ದಿತು. ತಣ್ಣಗೆ ಗಾಳಿ. ಆ ಕಡೆ ಈ ಕಡೆ ಹಸುರು ರತ್ನ ಕಂಬಳಿ ಹಾಸಿದ್ದಂತಿದ್ದ ಹುಲುಸಾಗಿ ಬೆಳೆದಿರುವ ಗದ್ದೆ; ಹತ್ತಿರದಲ್ಲಿಯೇ ಕೆರೆಯ ಕಟ್ಟೆ. ಅದರ ಉದ್ದಕ್ಕೂ ಸಂಧ್ಯಾರಾಗದಿಂದ ರಂಜಿಸಿ ಹೊಳೆಯುತ್ತಿರುವ ಹೊಂಗೆಯ ಮರಗಳು. ಅಲ್ಲಿ ಎಲ್ಲಿಯೋ ಕೇದಗೆ ಗಿಡಗಳಿದ್ದುವೇನೋ, ಆಗಾಗ ಅದರ ಸುವಾಸನೆ. ನಾವು ಹಾಗೆಯೇ

ತಿರುಗಾಡಿಕೊಂಡು ಬರೋಣವೆಂದು ಹೊರಟೆವು. ಇನಸ್ಪೆಕ್ಟರು ಆ ಊರಿನ ಚರಿತ್ರೆಯನ್ನು ಹೇಳ ತೊಡಗಿದರು. ನನಗೆ ಅದರ ಕಡೆ ಮನಸ್ಸು ಹೋಗಲಿಲ್ಲ. ಮುಂದಕ್ಕೆ ಹೋದರೆ ಶಿವಗಂಗಾ ದರ್ಶನ. ಸೂರ್ಯನು ಆ ಬೆಟ್ಟದ ತುದಿಯಲ್ಲಿ ಕುಳಿತಿದ್ದಾನೆ. ಮೋಡಗಳೆಲ್ಲವೂ ಚೆದರಿಹೋಗಿವೆ. ಅವನ ಕಿರಣಗಳು ಎಲ್ಲಾ ದಿಕ್ಕುಗಳಿಗೂ ಪ್ರಸರಿಸಿವೆ. ಹಾಗೆಯೇ ನೋಡುತ್ತಿರಲು, ಪರಶಿವನ ಪ್ರತ್ಯಕ್ಷ ಲಿಂಗಾಕೃತಿ; ಹಣೆಯಲ್ಲಿ ಸೂರ್ಯನೇ ಫಾಲನೇತ್ರ; ಆದರೆ ಅದು ಉರಿಗಣ್ಣಲ್ಲ, ಪ್ರಜಾ ಪಾಲನೆಯ ನೇತ್ರ ; ಅದು ನಮ್ಮ ಇನಸ್ಪೆಕ್ಟರ ಮನವನ್ನೂ ಆಕರ್ಷಿಸಿ ಬಿಟ್ಟಿತು. ಆಗ ನನಗೆ "ನಾನು ಒಬ್ಬ ಕವಿಯಾಗಿದ್ದಿದ್ದರೆ!" ಎನ್ನಿಸಿತು ; ಹುಚ್ಚು ಆಸೆ!

ಮರಳಿ ಮೋಟರ್ ಬಳಿಗೆ ಬಂದೆವು. ಇನ್ನೂ ಅದು ಸರಿಯಾಗಿರಲಿಲ್ಲ. ಇನಸ್ಪೆಕ್ಟರು ಅದರ 'ಇನಸ್ಪೆಕ್‌ಷನ್ನಿ'ಗೆ ಹೊರಟರು. ಪುನಃ ನಾನು ಹಾಗೆಯೇ ಓಡಾಡಿಕೊಂಡು ಬರೋಣವೆಂದು ಹೊರಟೆ. ಸೂರ್ಯನು ಆಗಲೇ ಮುಳುಗಿದ್ದನು. ಸಂಧ್ಯಾದೇವಿಯು ಇನ್ನೂ ಹೊರಟು ಹೋಗಿರಲಿಲ್ಲ. ಏಷ್ಟಾದರೂ ಹೆಂಗಸು, ಹಂಸಗಮನೆ. ಆಗ ಪಕ್ಕದಲ್ಲಿ ಮರದಡಿ, ಯಾರೋ "ಸಾರ್, ದಯ ಮಾಡಿಸಬೇಕು" ಎಂದು ಕರೆದರು. ಹೋದರೆ ನಮ್ಮ ಇನಸ್ಪೆಕ್ಟರು ಆಗಲೇ ಅಲ್ಲಿಗೂ ಬಂದಿದ್ದಾರೆ. ನನ್ನನ್ನು ಕರೆದವರು ತಮ್ಮ ಬುಟ್ಟಿಯಿಂದ ಹಣ್ಣುಗಳನ್ನೂ ಕೆಲವು ತಿಂಡಿ ಪದಾರ್ಥಗಳನ್ನೂ ತೆಗೆದಿಡುತ್ತಿದ್ದಾರೆ. ನಾನು

"ಏನು ಸ್ವಾಮಿ ಇದು!" ಎಂದೆ.

"ಏನೂ ಇಲ್ಲ. ನಮ್ಮ ಹುಡುಗಿಯೊಂದಿಗೆ ಅವರ ಚಿಕ್ಕಮ್ಮ ಈ ಬುಟ್ಟಿಯತುಂಬ ತಿಂಡಿ ಕಳುಹಿಸಿದ್ದಾರೆ. ಈಗ ನಾವು ಹೊರಟು ಬಹಳ ಹೊತ್ತಾಗಿದೆ. ಇಗೋ ನಮ್ಮ ಇನಸ್ಪೆಕ್ಟರಿಗೆ ಹೊರಡುವಾಗ ಕಾಫಿ ಆಯಿತೋ ಇಲ್ಲವೋ ಅವರೊಡನೆ ತಾವೂ ಸ್ವಲ್ಪ ತೆಗೆದುಕೊಳ್ಳ

ಬೇಕೆಂದು ಪ್ರಾರ್ಥನೆ ಅಷ್ಟೆ’ ಎಂದರು. ಆ ಬುಟ್ಟಿಯ ಬಳಿ ಕಮಲೆ, ಅವರ ಹುಡುಗಿ. ಆಗಲೇ ನಾವು ಕಮಲೆಯನ್ನು ಮೊದಲುಸಾರಿ ನೋಡಿದ್ದು.

ಆಗ ಅವಳಿಗೆ ಏಳೆಂಟು ವರ್ಷಗಳಿರಬಹುದು ; ಮುದ್ದಾದ ಮುಖ ; ತುಂಬಿದ ಹಣೆ. ಸುಳಿಗಾಳಿಗೆ ಅಲುಗಾಡುತ್ತಿದ್ದ ಮುಂಗುರುಳು; ತಿದ್ದಿದ ಹುಬ್ಬು; ಕಮಲದೊಳಗೆ ಸಿಲುಕಿ ಬರಲೋ ಇರಲೋ ಎಂಬಂತಿದ್ದ ದುಂಬಿಯಿಂದೊಡಗೂಡಿದ ಕಣ್ಣುಗಳು ; ಎಳಸಾದ ಮೂಗು; ಮುದ್ದಾದ ಬಾಯಿ ; ರಂಗು ಬಳಿದಂತಿದ್ದ ತುಟಿ; ತುಟಿಯಲುಗಿದರೆ ದಾಳಿಂಬೆಯ ಎಳೆಯ ಬೀಜದ ಸಾಲಿನಂತಿದ್ದ ದಂತಪಂಕ್ತಿ. ಮಾಟವಾದ ಕಿವಿಗಳು; ಕಿವಿಯಲ್ಲಿ ವಜ್ರದ ಓಲೆ. ಕೊರಳಿನಲ್ಲಿ ಹಾರ. ಹಾಕಿಕೊಂಡಿರುವುದು ಫ್ಲಾನಲ್ ಷರಟು ; ಚೀಟಿ ಲಂಗ. ಹಸುರು ಹುಲ್ಲಿನಮೇಲೆ ಮೊಳಕಾಲುಗಳನ್ನು ತನ್ನ ನಳಿತೋಳುಗಳಿಂದ ಬಿಗಿದು ಗಲ್ಲವನ್ನದರಮೇಲಿಟ್ಟುಕೊಂಡು ತಾವರೆಯ ಮೊಗ್ಗಿನಂತಿದ್ದ ಎಳೆಯ ಹುಡುಗಿ. ಬಲು ಚೆಲುವಾಗಿ ಕಂಡಳು.

‘ಈಕೆ ತಮ್ಮ ಮಗಳೋ ?’

‘ಹೌದು ದೇವರು. ನನ್ನ ಹಿರಿಯ ಮಗಳು. ಬೆಂಗಳೂರಿನಲ್ಲಿ ಅವಳ ಚಿಕ್ಕಮ್ಮನ ಬಳಿ ಇದ್ದಳು; ತನ್ನ ತಾಯಿಯನ್ನು ನೋಡಬೇಕೆಂದು ಆಸೆಯಾಯಿತು; ಕರೆದುಕೊಂಡು ಬಂದೆ.’

‘ಓಹೋ, ಬೆಂಗಳೂರಿನಲ್ಲಿ ಓದುತ್ತಿದ್ದಾಳೆಯೋ ?’

‘ಏನೋ ಆಸೆ. ಅದಕ್ಕೆ ಅಲ್ಲಿ ಬಿಟ್ಟಿದ್ದು. ಎರಡನೆಯ ಕ್ಲಾಸಿನಲ್ಲಿ ಓದುತ್ತಿದ್ದಾಳೆ.’

ಕಮಲೆಯ ಮುಖವನ್ನು ನೋಡಿದೆ. ಅಷ್ಟು ಚಿಕ್ಕ ಹುಡುಗಿಗೆ ಎಷ್ಟು ನಾಚಿಕೆ ! ತಲೆಯನ್ನು ತಗ್ಗಿಸಿದಳು. ಮುಖದಲ್ಲಿ ನಗೆಯು ಹರಿದು ಬರುತ್ತಿದ್ದಿತು.

‘ಸಂಗೀತ ಹೇಳಿಸುತ್ತಿದ್ದೀರೋ ? ಎಲ್ಲಿ ಹಾಡು ಬರುತ್ತೆಯೇ ಹೇಳು ನೋಡೋಣ’ ಎಂದೆ. ಅವಳನ್ನು ನೋಡಿ ಮಾತನಾಡಿಸಬೇಕೆಂದು ಆಸೆಯಾಯಿತು. ಹಾಗೆಂದರೆ, ‘ಅಯ್ಯೋ ಪಾಪ, ಅಲ್ಲವೆ!’ ಎಂದು ನನ್ನನ್ನು ಹಾಸ್ಯಮಾಡಬೇಡಿ. ಆ ಹೊತ್ತಿನಲ್ಲಿ ಅವಳನ್ನು ನೋಡಿದವರಾರೂ ಮಾತನಾಡಿಸದೆ ಇರುತ್ತಿರಲಿಲ್ಲ. ಪ್ರಕೃತಿಯೇ ಆ ಎಳಗುವರಿಯನ್ನು ಆದರದಿಂದ ಎತ್ತಿಕೊಳ್ಳಲು ಆತುರದಿಂದಿರುವಂತೆ ತೋರುತ್ತಿತ್ತು. ನಾನು ಅವಳ ನುಡಿಯನ್ನಾಲಿಸಲು ನೀರವವಾಗಿದ್ದೆ. ಆ ಇನಸ್ಪೆಕ್ಟರು ಸುಮ್ಮನಿರಬಾರದೇ !—‘ನೀನು ಹಾಡು ಹೇಳಿದರೆ ಅವರು ನಿನ್ನನ್ನು ಮದುವೆಯಾಗುತ್ತಾರೆ’ ಎಂದರು.

ಅವಳು ತಲೆಯನ್ನು ತಗ್ಗಿಸಿಕೊಂಡು ಓರೆ ನೋಟದಿಂದ “ಊಂ....” ಎನ್ನುತ್ತ ಅವರು ಹಿಡಿದುಕೊಳ್ಳುವುದಕ್ಕೆ ಹೋಗಲು, ಅವರ ಕೈಗೆ ಸಿಕ್ಕದೆ ಓಡಿಹೋದಳು. ಅಷ್ಟರಲ್ಲಿ ಮೋಟರು ಸರಿಯಾಯಿತು. ಮುಂದಕ್ಕೆ ಹೊರಟೆವು. ತುಮಕೂರನ್ನು ಸೇರಿದೆವು. ಅವರು ದಾರಿಯಲ್ಲಿಯೇ ಇಳಿದು ಹೋಗಿದ್ದರು. ಅವರು ಯಾರು ಎಂಬುದನ್ನು ತಿಳಿದುಕೊಳ್ಳಲೇ ಇಲ್ಲವೆಂಬ ವ್ಯಾಕುಲವು ಮಾತ್ರ ನನ್ನ ಮನದಲ್ಲಿ ನಿಂತಿತು.

೨

ಎರಡು ವರ್ಷಗಳಾದವು. ಮಾಘದಲ್ಲಿ ರಾಮು ಮದುವೆ. ಅವನ ಮದುವೆಗೆ ಹೋಗದಿದ್ದರೆ ಆಗುತ್ತದೆಯೇ? ‘ಪರೀಕ್ಷೆ ಹತ್ತಿರ ಬಂತೋ, ಬರುವುದಕ್ಕಾಗುವುದಿಲ್ಲ’ ಎಂದರೆ ಬಿಡುವನೇ ? ‘ಮಹಾ ಮಹಾ ! ನಿನ್ನ ಪರೀಕ್ಷೆ ಹೆಚ್ಚೊ, ಸ್ನೇಹಿತನ ಮದುವೆ ಹೆಚ್ಚೋ ? ನೀವೆಲ್ಲಾ ಸ್ವಾರ್ಥಪರರೋ !’ ಎಂದುಬಿಟ್ಟ. ಮರುಮಾತಾಡದೆ ಹೊರಟುಬಿಟ್ಟೆ. ಅಲ್ಲಿಗೆ ಹೋದರೆ ನಾನು ಅವರ ಅತಿಥಿಯಾಗಲಿಲ್ಲ; ಅವರ ಮನೆಯವನಾಗಿಹೋದೆ. ಇನ್ನೇನು ಮಾಡುವುದು, ಎಂಟು

ದಿನಗಳೂ ಅಲ್ಲಿಯೇ ನಿಂತೆ. ಮೇಲೋಡಾಟಗಳಲ್ಲಿಯೇ ನನ್ನ ಕಾಲ ವೆಲ್ಲಾ ಕಳೆದು ಹೋಯಿತು. ರಾಮುಗೆ ನನ್ನಮೇಲೆ ಬಹಳಸಿಟ್ಟು, ಅವನೊಡನೆ ಮಾತನಾಡುತ ಕುಳಿತುಕೊಳ್ಳುವುದಿಲ್ಲವೆಂದು. ನೀವೇ ಹೇಳಿ, ನಾನು ಅವನೊಡನೆ ಮಾತನಾಡುತ್ತ ಕುಳಿತುಕೊಳ್ಳಲಾಗು ತ್ತದೆಯೆ? ಗಂಡಿಗೆ ಹೆಣ್ಣಿನಾಸೆ, ಹೆಣ್ಣಿಗೆ ಗಂಡಿನಾಸೆ ; ಬಂದವರಿಗೆ ಊಟದಾಸೆ. ಆದರಲ್ಲಿಯೂ ನಮ್ಮ ರಾಮು "ರಂಗಪ್ಪ"ನನ್ನೇ 'ಮೈಲ್ಡ್ ಫೆಲೋ' (mild fellow–ಸಪ್ಪೆ ಹುಡುಗ) ಎಂದವನು.

ಮಧ್ಯಾಹ್ನ. ಊಟದ ಸಮಯ. ಇನ್ನೂ ಅಡಿಗೆ ತಡವಾಗಿ ದ್ದಿತು. ರಾಮು ಹಸೆಯಮೇಲಿನ ಕೆಲಸಗಳನ್ನೆಲ್ಲಾ ತೀರಿಸಿಕೊಂಡು ಕೊಠಡಿಗೆ ಬಂದನು. ನನಗೆ ಸಾಕಾಗಿ ಎಲ್ಲವನ್ನೂ ಬಿಟ್ಟು ಆ ಕೊಠ ಡಿಯಲ್ಲಿ ಒಂದು ಆರಾಮಕುರ್ಚಿಯಮೇಲೆ ಬಿದ್ದಿದ್ದೆ. ಬಂದವನು ಪಕ್ಕದಲ್ಲಿದ್ದ ಸ್ಟೂಲನ್ನು ಎಳೆದುಕೊಂಡು ತನ್ನ ಸಿಟ್ಟಿನ ಸೇಡನ್ನು ತೀರಿಸಿಕೊಳ್ಳಬೇಕೆಂದು ಯತ್ನಿಸಿದನು. ಅಷ್ಟರಲ್ಲಿ ನಾನೇ 'ನಿನ್ನ ಸ್ನೇಹಿತರನ್ನು ಚೆನ್ನಾಗಿ ವಿಚಾರಿಸಿಕೊಳ್ಳುತ್ತಿ!' ಎಂದೆ. ಅವನು 'ನಾನೋ, ನೀನೋ?' ಎಂದ. ಅದಕ್ಕೆ ಸರಿಯಾದ ಉತ್ತರವನ್ನು ಹೇಳಬೇಕೆಂದಿದ್ದೆ. ಅದರೊಳಗೆ, ಅದೇನು ತ್ವರಿತವೋ, ಮಿಂಚು ತೋರಿದಹಾಗೆ ತೋರಿ, ಮಿಂಚಿನೊಂದಿಗೆ ಸಿಡಿಲು ಎರಗಿ, ರಾಮು ವಿನ ವಿಶಾಲವಾದ ಬೆನ್ನಿನಮೇಲೆ 'ಭಡ್' ಎಂದು ಬಿದ್ದಿತು. ಅವನಿಗೆ ದಿಗ್ಭ್ರಮೆಯಾಯಿತು. ಆದರೆ ಬಿಡುವವನೇ ಅವನು ?. ಮಿಂಚನ್ನು ಹಿಡಿದುಕೊಳ್ಳಲು ಹೋದನು. "ಬಿಟ್ಟು ಬಂದಿದ್ದಕ್ಕೆ ವಾಡಂಟು" ಎಂದೆ. ಶತ್ರುಸೇನೆ ಪಲಾಯನವಾಗಿದ್ದಿತು. ಆದರೆ ಒಂದು ಹುಡುಗಿ ಸೀರೆ ತೊಡಕಿಕೊಂಡು ಅವನ ಕೈಗೆ ಸಿಕ್ಕಬೇಕೆ! ಅವಳನ್ನು ಎಳೆತಂದ. ಅವಳ ಕೈಯಲ್ಲಿ ಇನ್ನೂ ಗುಬ್ಬಿ ಹಿಟ್ಟು ಇದ್ದಿತು. ಯಾರವಳು? ಕಮಲೆ! ಇದೇ ಅವಳನ್ನು ಎರಡನೆಯ ಸಲ ಕಂಡದ್ದು.

"ಇವಳು ಬಹಳ ಚೆನ್ನಾಗಿ ಹಾಡುತ್ತಾಳೋ; ಕೇಳಿದ್ದೀಯಾ?"

"ಇಲ್ಲಪ್ಪ."

ಹಿಂದೆ ನಾನು ಅವಳನ್ನು ಕೇಳಿದ್ದು, ಆಗ ಇನಸ್ಪೆಕ್ಟರು ಹಾಡೆಂದುದಕ್ಕೆ ಅವಳು "ಊಂ...." ಎಂದು ಓಡಿಹೋದದ್ದು ಎಲ್ಲಾ ಜ್ಞಾಪಕಕ್ಕೆ ಬಂದಿತು. ನಾನು "ಹೇಳಿಸುತ್ತೀಯಾ?" ಎಂದೆ.

ಅವನು ಅವಳನ್ನು ಕುರಿತು "ಇದೋ, ನನಗೆ ಸೆರೆ ಸಿಕ್ಕಿಬಿಟ್ಟಿರುವಿ. ಬಿಡುಗಡೆಯಾಗಬೇಕಾದರೆ ತೆರ ಕೊಡಬೇಕು. ನೀನು ರಾತ್ರಿ ಹೇಳಿದ ಹಾಡುಗಳನ್ನು ಹೇಳಿದರೇನೇ ಬಿಡುವುದು" ಎಂದನು.

ಅವಳು ಸುಮ್ಮನೆ ಹೇಳಿಬಿಡುವಳೇ ? ಇವನೂ ಸುಮ್ಮನೆ ಬಿಟ್ಟುಬಿಡುವನೇ ! "ಹೇಳುತ್ತೇನೆ ಬಿಡಿ" ಎಂದು ನುಲಿಯುತ್ತ ಬಿಡಿಸಿಕೊಳ್ಳುವುದಕ್ಕೆ ಯತ್ನಿಸಿದಳು. "ಹೇಳಿದರೇ ಬಿಡುವುದು" ಎಂದು ಅವನು ಮತ್ತೂ ಭದ್ರನಾಗಿ ಹಿಡಿದುಕೊಂಡನು.

ಅವಳು "ಅಬ್ಬಬ್ಬ, ಇಂಥವರನೆಲ್ಲಿಯುೂ ಕಾಣೆ – ನಾಕಾಣೆ" ಎಂದು ಹಾಡನ್ನು ಮೊದಲು ಮಾಡಿದಳು. "ಅಯ್ಯೋ ಬಜಾರಿ" ಎಂದವನು ಕೈಬಿಟ್ಟನು. ಒಡನೆಯೆ ಅಲ್ಲಿಂದವಳು ಚಿಮ್ಮಿದಳು.

"ಅವಳೆಷ್ಟು ಚೆನ್ನಾಗಿದ್ದಾಳೆಯೋ ಕಂಠವೂ ಅಷ್ಟು ಮಧುರವಾಗಿದೆ ರಾಮು, ಯಾರ ಮನೆಯವಳು ಇವಳು?" ಎಂದು ನಾನು ಕೇಳಿದೆ.

"ರೂಪು ಸರಿಯೆ, ಕಂಠವೂ ಸರಿಯೆ. ಆದರೆ ಹೃದಯವೆಷ್ಟು ಕಠಿಣವಾಗಿದೆಯೋ, ಕೈಗಳೆಷ್ಟು ಗಟ್ಟಿಯಾಗಿವೆಯೋ, ಒಂದೇ ಸಮನೆ ಗುಬ್ಬಿ ಮಾಡಿಕೊಳುತ್ತಿರುವಳು; ಬೆನ್ನೆಲ್ಲಾ ಬಾತುಹೋಯಿತು."

"ಅದಿರಲಿ ಯಾರು ಈ ಹುಡುಗಿ?"

"ನೀನು ಅವಳನ್ನು ಮದುವೆಯಾಗುವಿಯೇನು ? ಬೆನ್ನು ಗಟ್ಟಿಯಾಗಿರಲಿ ನೋಡಿಕೋ !"

ಅಷ್ಟರಲ್ಲಿ ಮತ್ತೊಂದು ಸಲ ಮುತ್ತಿಗೆಯಾಗಿ ಶತ್ರು ಪಲಾಯನೆಯೂ ಆಯಿತು. ಈಸಲ ಸೆರೆಯಾರೂ ಸಿಗಲಿಲ್ಲ. ಕಮಲೆ ಬಾಗಿಲ ಬಳಿ ನಿಂತು "ಅಬ್ಬಬ್ಬ ಇಂಥವರನೆಲ್ಲಿಯೂ ಕಾಣೆ" ಎಂದು ಅಣಕಿಸುತ್ತಾ ಹಾಡತೊಡಗಿದಳು. ಅವನಿಗೆ ಅವಳನ್ನು ಸೋಲಿಸಿ ಓಡಿಸಲು ಯಾವ ಮಾರ್ಗವೂ ತೋರಲಿಲ್ಲ. ಕೊನೆಗೆ ಅವನು "ಹಾಗೆ ಹೇಳುತಿರು, ನಿನ್ನ ಗಂಡ ಇಲ್ಲಿಯೇ ಕುಳಿತಿದ್ದಾನೆ" ಎಂದನು. ಅವಳು "ಎಲ್ಲಿ ಎಲ್ಲಿ" ಎಂದು ನನ್ನನ್ನು ದೃಷ್ಟಿಸಿ ನೋಡಿದಳು. ಹಿಂದಿನ ಜ್ಞಾಪಕ ಅವಳಿಗೆ ಬಂದಿರಬಹುದೇನೋ ಓಡಿಹೋದಳು.

ನಾಗೋಲಿಯದಿನ ಕಮಲೆಯ ತಂದೆಯವರು ಬಂದರು ; ನಮ್ಮ ಹಿಂದಿನ ಪರಿಚಯವಾಯಿತು. ಅವರು ರಾಮು ಬೀಗರ ಹತ್ತಿರ ಸಂಬಂಧಿಕರಂತೆ. ರಾಮು ನಮ್ಮ ಮನೆಯವರ ವಿಚಾರವನ್ನೆಲ್ಲಾ ಹೇಳಿದ. ಅಲ್ಲಿದ್ದ ಮುದುಕರು ಮೂರು ನಾಲ್ಕು ತಲೆಯ ಹಿಂದಿನ ಸಂಬಂಧಗಳನ್ನೆಲ್ಲಾ ತೆಗೆದು ನನ್ನನ್ನು ಅವರವನನ್ನಾಗಿ ಮಾಡಿಕೊಂಡರು. ರಾಮು ನನ್ನ ನೆಂಟ ಎಂಬುದನ್ನೇ ನಾನು ಅರಿಯೆ. ನನಗೇನು ಅಗತ್ಯ? ಎಲ್ಲಿ ಗೆಳೆತನವೋ ಅಲ್ಲಿ ನೆಂಟಸುತನವಲ್ಲವೆ ?

ಮದುವೆಯಾದಮೇಲೆ ನಾನು ಅವರ ಮನೆಗೆ ಹೋಗಬೇಕಾಯಿತು ; ಅವರು ನನ್ನನ್ನು ಬಿಡಲಿಲ್ಲ. ಅಲ್ಲಿನ ಹೆಂಗಸರೆಲ್ಲ ನನ್ನನ್ನು ಅವಳ ಗಂಡನನ್ನಾಗಿಯೇ ಮಾಡಿಬಿಟ್ಟಿದ್ದರು. ಹುಡುಗಿಯರ ವಿನೋದಕ್ಕೂ ನಾನು ಗುರಿಯಾಗಿಹೋದೆ. ಮುದುಕಿಯರು "ಆಗಲೆ ಆಗಿಹೋಯ್ತೇನ್ರೆ ಸುಮ್ಮನಿರ್ರೆ ಅವರನ್ನು ಯಾಕೆ ಗೋಳು ಹುಯ್ದುಕೊಳ್ತೀರಿ?" ಎಂದು ನನ್ನ ಸಹಾಯಕ್ಕೆ ಬರುವರು. ಗಂಡಸರಿಗೂ ನನ್ನ ವಿಚಾರವೇ. ಕೊನೆಗೆ ಹೊರಡುವಾಗ ನನ್ನೊಡನೆಯೇ ಪ್ರಸ್ತಾಪ

ವನ್ನು ಮಾಡಿದರು. ನಾನು ಅತಿ ಗಾಂಭೀರ್ಯದಿಂದ "ದೊಡ್ಡವರಿದ್ದಾರೆ" ಎಂದು ಹೇಳಿ ಹೊರಟುಬಂದೆ.

೩

ಊರಿಗೆ ಬಂದಮೇಲೆ ಪರೀಕ್ಷೆಯ ಪಾಠಗಳು ಸರಿಯಾಗಿ ನಡೆಯಲಿಲ್ಲ. ಕಮಲೆಯು ಮನದಲ್ಲಿ ನೆಲೆಸಿದಳು. ಪಾಠಗಳನ್ನು ಓದುತ್ತಾ ಕುಳಿತಿದ್ದರೆ ಇದ್ದಕ್ಕಿದ್ದಹಾಗೆ ಅವಳು ಬಾಗಿಲ ಬಳಿ ನಿಂತು "ಅಬ್ಬಬ್ಬ ಇಂಥವರನೆಲ್ಲಿಯೂ ಕಾಣೆ—ನಾ ಕಾಣೆ" ಎಂದು ಹೇಳಿದ್ದು ಜ್ಞಾಪಕಕ್ಕೆ ಬಂದುಬಿಡುವುದು. ತರಗತಿಯಲ್ಲಿಯೂ ಹಾಗೆಯೇ ಆಗತೊಡಗಿತು. ಭೌತಿಕ ಶಾಸ್ತ್ರದಲ್ಲಿ ಪಾಠ ನಡೆಯುತ್ತಿದೆ. ನಮ್ಮ ಪ್ರೊಫೆಸರು ಅತಿ ಗಂಭೀರತೆಯಿಂದ ಷರಾಯಿ ಜೇಬಿನಲ್ಲಿ ಕೈಯಿಟ್ಟುಕೊಂಡು ಆಗಾಗ್ಗೆ ಕಣ್ಣುಗಳನ್ನು ಅರಳಿಸುತ್ತ ಅಲ್ಲಿಂದಿಲ್ಲಿಗೆ ಮೆಲ್ಲಗೆ ಎಣಿಸಿದ ಹೆಜ್ಜೆಗಳನ್ನಿಡುತ್ತ ಒಮ್ಮೊಮ್ಮೆ ಕಟ್ಟಡದ ಮೇಲ್ಭಾಗವನ್ನು ನಿಟ್ಟಿಸುತ್ತಾ ಭಾಷಣ ಮಾಡುತ್ತಿದ್ದರು. ಅವರ ತರಗತಿಯಲ್ಲಿ ಯಾರೂ ತುಟಕುಪಿಟಕೆನ್ನುತ್ತಿರಲಿಲ್ಲ. ಸ್ಥಿರವಾದ ನಿಶ್ಶಬ್ದತೆಯನ್ನು ತಿಳಿಯಬೇಕೆನ್ನುವವರು ಅಲ್ಲಿಗೆ ಬಂದು ನೋಡಬಹುದು. ಆಗ ನಡುವೆ ಎರಡುಮೂರು ಅಂಶಗಳು ತಿಳಿಯದೆ ಹೋಯಿತು. ಮುಂದಕ್ಕೆ ಅನುಸರಿಸುವುದಕ್ಕೆ ಆಗಲಿಲ್ಲ. "ಅದು ಹೇಗೆ ಸಾರ್?" ಎಂದು ಕೇಳಿಬಿಟ್ಟೆ. ಅದು ಹೇಗೆ ಕೇಳಿದೆನೋ! ಧೈರ್ಯವು ಹೇಗೆ ಬಂತೋ! ಹೋಗಲಿ, "ಹೀಗದು" ಎಂದವರು ತಿಳಿಸಬಾರದಾಗಿತ್ತೆ? "ನಿಮ್ಮ ಮನಸ್ಸು ಸ್ವರ್ಗದಲ್ಲೆಲ್ಲೋ ಸುಳಿದಾಡುತ್ತಿದ್ದಿತೇನೋ!" ಎಂದುಬಿಟ್ಟರು. ರಾಮು ಹಿಂದಿನಿಂದ ಬೆನ್ನು ಚುಚ್ಚಿ "ಲೋ! ಕಮಲೆ ಮೇಲೆ ಮನಸ್ಸು ಹೋಗಿತ್ತೋ?" ಎಂದು ಮೆಲ್ಲಗುಸಿರಿದ. ಮೆಲ್ಲಗುಸಿರಿದರೇನು, ಎಲ್ಲರ ಕಿವಿಗೂ ಬಿದ್ದಿತು. ನಾನು ಅಲ್ಲಾದ ಅವಮಾನವನ್ನು ಸಹಿಸದೆಹೋದೆ; ಅವಮಾನವೇ! ಕಮಲೆಯನ್ನು ಮರೆಯಲು ಯತ್ನಿಸಿದೆ. ಪರೀಕ್ಷೆಯು ಹತ್ತಿರಕ್ಕೆ ಬಂತು; ಪಾಠಗಳನ್ನು ಶ್ರದ್ಧೆಯಿಂದ ಓದತೊಡಗಿದೆ.

ಒಂದು ದಿನ ರಾತ್ರಿ ಹನ್ನೊಂದು ಗಂಟೆಯಾಗಿದ್ದಿತು. ನಾನು ಏಳು ಗಂಟೆಗೆ ಕುಳಿತವನು ಏಳಲೇ ಇಲ್ಲ. "ಯುದ್ಧಕಾಲೇ ಶಸ್ತ್ರಾಭ್ಯಾಸಃ" ಒಂದೇ ಸಮನೆ ಓದುತ್ತಾ ಕುಳಿತಿದ್ದೇನೆ. ಭೌತಿಕ ಶಾಸ್ತ್ರದಲ್ಲಿ ಗಣಿತ ಸಂಬಂಧವಾದದ್ದು ಕೆಲವು ಚೆನ್ನಾಗಿ ಅರ್ಥವಾಗಲಿಲ್ಲ. ಯೋಚಿಸಿ ತಲೆ ಕೆರೆದುಕೊಳ್ಳುವಂತಾಯಿತು. ಹಾಗೆಯೆ ನೋಡುತ್ತೇನೆ, ಬಾಗಿಲಲ್ಲಿ ಕಮಲೆ! ಒಂದು ಕೈಯಲ್ಲಿ ತಾಂಬೂಲದ ತಟ್ಟೆ ಮತ್ತೊಂದು ಕೈಯಲ್ಲಿ ಹಾಲಿನ ಲೋಟ. ತನ್ನನ್ನೇ ನೋಡಿದನೆಂದು ತಿಳಿದು ಎಳೆ ನಗೆಯನ್ನು ಬೀರುತ್ತಾ ಬಳುಕುತ್ತಾ ಬಂದು ಬೆನ್ನ ಬಳಿ ನಿಂತಳು. ನಾನು ಕಮಲೆಯ ಕಡೆ ಮನಸ್ಸನ್ನು ಹೋಗಗೊಡಲಿಲ್ಲ. ಪುನಃ ಓದತೊಡಗಿದೆ. ಅದು ಆಗುವುದೇ? ಅವಳು ತನ್ನೊಡನೆ ತಂದುದನ್ನು ಮಂಚದಮೇಲಿರಿಸಿ ಮೆಲುನಡೆಯಲ್ಲಿ ನಡೆತಂದು ಮೇಜನ್ನು ಒರಗಿ ನಿಂತಳು. ಆದರೂ ನಾನು ಅವಳನ್ನು ಲೆಕ್ಕಿಸಲಿಲ್ಲ. ಎಷ್ಟು ಹೊತ್ತು ಹಾಗೆಯೇ ನಿಂತಿದ್ದಾಳು? ಹತ್ತಿರದಲ್ಲಿದ್ದ ಕುರ್ಚಿಯ ಮೇಲೆ ಕುಳಿತು ಬಾಳೆಯ ದಿಂಡಿನಂತಿದ್ದ ದುಂಡಾದ ಕೈಗಳನ್ನು ಮೇಜಿನ ಮೇಲೂರಿ ತನ್ನ ಮುಖ ಕಮಲವನ್ನು ನನ್ನ ಎದುರಿಗಿರಿಸಿದಳು. ಮೆಲ್ಲಮೆಲ್ಲನೆ ಅದನ್ನು ಹತ್ತಿರಕ್ಕೆ ಸರಿಸಿದಳು. ಕೊನೆಗೆ ಬಿಕ್ಕಿ ಬಿಕ್ಕಿ ಅಳ ತೊಡಗಿದಳು; ಕಣ್ಣೀರು ನನ್ನ ಕೈಯನ್ನು ತೋಯಿಸಿತು. ಇನ್ನು ತಡೆಯಲಾರದೆಹೋದೆ. ಅವಳ ತಲೆಯನ್ನೆತ್ತಿ ಗಲ್ಲವನ್ನು ಹಿಡಿದು "ಕಮಲಾ, ಯಾತಕ್ಕೆ ಅಳುತ್ತಿ?" ಎಂದೆ.

"ಮತ್ತೆ........ಯಾಕೋ!"

"ಯಾಕೆ ಹೇಳಬಾರದೆ?"

"ನೀವು ಯಾವಾಗಲೂ ಓದುತ್ತಾ ಇರಿ ನಾನು ...." ಅಗಲಿಸಿದಾ ಪ್ರೇಮ ಪೂರಿತವಾದ ಕಣ್ಣುಗಳಿಂದೆನ್ನ ಹಾಗೆಯೇ ನೋಡಿದಳು. ನನ್ನ ದೇಹವೆಲ್ಲಾ ಪುಳಕಿತವಾದಹಾಗಾಯಿತು.

"ಅಯ್ಯೋ ಪೆದ್ದೆ! ಓದಬೇಡವೇ?" ಎಂದೆ. ಹಾಗೆಯೇ ಅವಳ ಮುಖವನ್ನು ನೋಡಿದೆ. ತಲೆಯನ್ನು ಆ ಕಡೆಗೆ ತಿರುಗಿಸಿದಳು. ಆ ಮೃದುವಾದ ಕೆನ್ನೆಗಳಮೇಲೆ ಕಣ್ಣೀರು ಹರಿದಿರುವುದು ತೋರಿ ಬರುತ್ತಿತ್ತು. ಹೆಂಗಸರು ಕೋಪಿಸಿಕೊಂಡಾಗ ಅಥವಾ ಅಳುವಾಗ ಬಹಳ ಚೆನ್ನಾಗಿ ಕಾಣುತ್ತಾರೆಂದು ಕೆಲವರು ಹೇಳುತ್ತಾರೆ. ಅದು ನಿಶ್ಚಯ. ಹಾಗೆಯೇ ನೋಡುತ್ತಿದ್ದೆ. ಅವಳ ಮುಖವು ಬಹಳ ಮುದ್ದಾಗಿ ತೋರಿತು.

ಆ ಅಳುಮುಖವು ಹಸನ್ಮುಖವಾಗತೊಡಗಿತು, ಹಾಸದಿಂ ದೊಡಗೂಡಿದ್ದಾಯಿತು. ಹಾಗೆಯೆ "ಅಬ್ಬಬ್ಬ ಇಂಥವರನೆಲ್ಲಿಯೂ ಕಾಣೆ" ಎಂದೊಂದು ಕೊಂಕಿನಿಂದ ಹಾಡತೊಡಗಿದಳು. "ಅಯ್ಯೋ ಗಂಡುಬೀರಿ!" ಎಂದು ನೋಡುತ್ತೇನೆ, ಎಲ್ಲಿ ಕಮಲೆ!

ಇದನ್ನು ಓದುವವರು ನಗಬಹುದು; ಆದರೆ ನಗುವವರು ತಮ್ಮ ಎದೆಯಮೇಲೆ ಕೈಯಿಟ್ಟುಕೊಂಡು ಹೇಳಲಿ, ತಮಗೆ ಪ್ರಿಯ ತಮವಾದ ವಸ್ತುವು ದೊರೆಯುವುದು ತಡವಾದಾಗ ಅವರಿಗೂ ಹೀಗೆ ಆಗಲಿಲ್ಲವೆ?

ಶುಭ ದಿನವೊಂದನ್ನು ನೋಡಿಕೊಂಡು ರಾಮು ಮಾವನವರೂ ಕಮಲೆಯ ತಂದೆಯವರೂ ನಮ್ಮ ಮನೆಗೆ ಬಂದರು. ಊಟ ಉಪ ಚಾರಗಳೆಲ್ಲವೂ ಆದವು. ಎಲ್ಲರೂ ಎಲೆ ಅಡಿಕೆಯನ್ನು ಮೆಲ್ಲುತ್ತಾ ಕುಳಿತಿರುವಾಗ ರಾಮು ಮಾವನವರು ಮದುವೆಯ ಪ್ರಸ್ತಾಪವನ್ನು ತೆಗೆದರು. ನಮ್ಮ ತಂದೆಯವರು "ಅವನಿಗೆ ಆಗಲೆ ನಿಷ್ಕರ್ಷೆಯಾಗಿ ಹೋಗಿದೆ, ಈಗೇನು ನಮ್ಮ ಮನೆಯಲ್ಲಿ ಅನೇಕ ಹುಡುಗರೂ ಹುಡು ಗಿಯರೂ ಇದ್ದಾರೆ. ಅವರ ಮನೆಯಲ್ಲಿಯೂ ಇದ್ದಾರೆ. ಮುಖ್ಯ ವಿಶ್ವಾಸ ಬಂದಿದ್ದರೆ ಸಂಬಂಧವು ತಾನಾಗಿ ಬೆಳೆದು ಬಂದೇ ಬರುತ್ತೆ" ಎಂದು ಹೇಳಿ ಬಿಟ್ಟರು. ನನಗೆ ನಡೆದಿದ್ದ ವಿಚಾರಗಳೊಂದೂ ಗೊತ್ತಿ

ರಲಿಲ್ಲ. ನಮ್ಮ ಮನೆಯಲ್ಲಿ ನಮ್ಮನ್ನು ಕೇಳಿ ನಿಷ್ಕರ್ಷಿಸುವ ಪದ್ಧತಿಯೇ ಇಲ್ಲ. ನಾವು ಅವರು ಹೇಳಿದ್ದಕ್ಕೆ ಪ್ರತಿ ಹೇಳುತ್ತಲೂ ಇರಲಿಲ್ಲ. ಆದರೆ ಈ ಸಲ ಮನಸ್ಸಿಗೆ ಅಸಮಾಧಾನವಾಯಿತು. "ನಾನು ಮೆಚ್ಚಿದ ಹುಡುಗಿ ಕಮಲೆ. ಅವರಾಗಿ ಅವರು ಬಂದಿದ್ದಾರೆ. ಅವಳನ್ನು ಬಿಡು ಇನ್ನಾರನ್ನೋ ಮದುವೆಯಾಗುವುದೇ? ಇಲ್ಲಿ ಮದುವೆಯಾಗುವವರು ಯಾರು, ನಾನಲ್ಲವೇ? ಅಪ್ಪ ಹಾಕಿದ ಆಲದ ಮರವೆಂದು ಹಿಂದಿನ ಪದ್ಧತಿಯನ್ನೇ ಅನುಸರಿಸುತ್ತಾ ಹೋಗುವುದೇ? ಅದೆಂದಿಗೂ ಆಗದು" ಎಂದೆನಿಸಿತು. "ನನ್ನ ಅಣ್ಣಂದಿರಿಗೆ ಮದುವೆಯಾಗಿದೆ. ಅವರು ನನ್ನ ಹಾಗೆಯೆ ಇದ್ದರು. ಆದರೆ ಈಗ ಅವರು ಸಂಸಾರಿಗಳಾಗಿ ಸುಖವಾಗಿಲ್ಲವೆ? ದೊಡ್ಡವರು ನಮ್ಮ ಹಿತಕ್ಕಲ್ಲದೆ ಬೇರೆ ಮಾಡುವರೇನು" ಎಂದಾಮೇಲೆ ತೋರಿತು. "ಕಮಲೆ ಆ ಚೆಲುವಾದ ಹುಡುಗಿ ನನ್ನ ಮನಸ್ಸನ್ನು ಪ್ರವೇಶಮಾಡಿದಳು; ಅಲ್ಲದೆ ಓದಿಯೂ ಇದ್ದಾಳೆ. 'ಸಿಹಿ ಇಲ್ಲದ ಹಣ್ಣೇತಕ್ಕೆ ಸಂಗೀತ ಬಾರದ ಹೆಣ್ಣೇತಕ್ಕೆ' ಎಂದು ರಾಮು ಹೇಳುತ್ತಾನೆ. ಹಾಗೆ ಕಮಲೆಗೆ ಮಧುರವಾದ ಕಂಠವಿದೆ; ಇದರಮೇಲೆ ಇನ್ನೇನು ಆಗಬೇಕು?" ಈ ರೀತಿ ವಿಚಾರಗಳು ತಲೆದೋರಿದವು.

ನಮ್ಮ ತಾಯಿಯ ಬಳಿಗೆ ಹೋದೆ. ನಡೆದ ವಿಚಾರಗಳನ್ನೆಲ್ಲಾ ತಿಳಿದೆ. ನಿಷ್ಕರ್ಷೆಯೇ ಅಲ್ಲದೆ ವೈಶಾಖದಲ್ಲಿ ಮದುವೆಯ ನಿಶ್ಚಯವೂ ಆಗಿದೆಯೆಂದು ಹೇಳಿದರು. ತಂದೆಯವರಲ್ಲಿಗೆ ಹೋಗಿ ಆಗುವುದಿಲ್ಲವೆಂದು ಹೇಳಿಬಿಡಲು ಹೊರಟೆ. ತಂದೆಯವರು ಪಡಸಾಲೆಯಲ್ಲಿ ಏನೋ ಓದುತ್ತಾ ಕುಳಿತಿದ್ದರು. ಅಲ್ಲಿಗೆ ಹೋಗಿ ಅವರನ್ನು ನೋಡಿದೆ. ಹೇಳಲು ಬಾಯೇ ಬರಲಿಲ್ಲ. ಎಂದೂ ಅವರೆದುರಿಗೆ ನಿಂತು ಮಾತನಾಡಿದವನಲ್ಲ. ಯೋಚನಾತರಂಗಗಳಲ್ಲಿ ಮುಳುಗಿ ಹೋದೆ. ಕೊನೆಗೆ "ನನ್ನದು ತಪ್ಪು; ಮನಸ್ಸಿಗೆ ಏನೇನೋ ಬೇಕೆನಿಸುತ್ತದೆ. ಅದರ ಹುಚ್ಚಿನಲ್ಲಿರುವಾಗ ನಮ್ಮನ್ನೇ ನಾವು ಮರೆತು ಬಿಡುತ್ತೇವೆ. ಹಿರಿಯರ ಆಜ್ಞೆಯನ್ನು ಉಲ್ಲಂಘಿಸುತ್ತೇವೆ

ಅನಂತರ ಅದರ ಫಲವನ್ನು ಅನುಭವಿಸುತ್ತೇವೆ. ನಮ್ಮ ತಂದೆಯವರು ಪರ್ಯಾಲೋಚಿಸದೆ ಯಾವ ಕಾರ್ಯವನ್ನೂ ಮಾಡುವವರಲ್ಲ.” ಎಂದು ತೋರಿತು. ಆಮೇಲೆ ಕಮಲೆಯ ಪರವಾಗಿ ಮನವು ಬಾಗುವುದು. ಆಮೇಲೆ.......ಹೀಗೆಯೇ ದಿನಗಳು ಕಳೆದವು. ವೈಶಾಖವೂ ಬಂದಿತು. ಮದುವೆಯೂ ಆಯಿತು.

ಇಲ್ಲಿ ನನ್ನ ಮದುವೆಯನ್ನು ನಾನೇ ವರ್ಣಿಸುತ್ತಾ ಕುಳಿತುಕೊಳ್ಳುವುದಿಲ್ಲ. ಮದುವೆಗೆ ರಾಮು ಮನೆಯವರೂ ಅವರ ಬೀಗರೂ ಬಂದಿದ್ದರು. ಅವರ ಜೊತೆಯಲ್ಲಿ ಕಮಲೆಯೂ ಬಂದಿದ್ದಳು. ಮದುವೆಯ ಕಾಲದಲ್ಲಿ ರಾಮು ಕಮಲೆಯವರದೇ ಓಡಾಟ. ರಾಮುಗೆ ಅವನ ಮದುವೆಯಲ್ಲಿ ನಾನು ಓಡಾಡಿದ್ದರ ಮುಯ್ಯಿ ತೀರಿಸಿಕೊಳ್ಳಬೇಕೆಂದು. ಕಮಲೆಗೆ — ಇನ್ನೂ ಹುಡುಗಿ; ಓದಿದವಳಾದರೂ ಅವಳ ಮನಸ್ಸು ನಿಷ್ಕಲ್ಮಷವಾದುದು. ಓದಿದವರೆಲ್ಲರೂ ಬೆಡಗುಗಾತಿಯರೆಂಬ ನಿಯಮವಿಲ್ಲ.— ಇದು ನಮ್ಮ ಮನೆ ಇದು ಅವರ ಮನೆ ಎಂಬ ಭೇದಗಳಿಲ್ಲ. ಎಲ್ಲರೂ ತಮ್ಮ ಮನೆಯವರೆಂದೇ ಭಾವನೆ. ಎಲ್ಲದರಲ್ಲಿಯೂ ಅವಳೇ ಮುಂದು. ಹಾಡುಗಳಲ್ಲಿಯೂ ಅಷ್ಟೆ. “ಅಬ್ಬಬ್ಬ ಇಂಥವರನೆಲ್ಲಿಯೂ ಕಾಣೆ” ಎಂದು ತಾನು ಕಟ್ಟಿದ ಹಾಡನ್ನು ಇಲ್ಲಿಯೂ ಹೇಳದೆ ಬಿಡಲಿಲ್ಲ. ಆದರೆ ನಾನವಳಕಡೆ ನೋಡಿದರೆ ಅದೇಕೋ ನಾಚಿಕೆ ಬಂದು ಬಿಡುವುದು. ಈಸಲ ರಾಮು ಬೆನ್ನು ಬಾತಂತೆ ನನಗೆ ಆಗಲಿಲ್ಲ. ಏಕೆಂದರೆ ನಮ್ಮವಳಿಗೆ ನನ್ನ ಮೇಲೆ ಬಹಳ ಕರುಣ. ಒಂದುಸಲ ಕಮಲೆ ಅವಳಿಗೆ ಗುಬ್ಬಿಮಾಡಿ ಕೊಟ್ಟು “ಹೊಡಿ ಹೊಡಿ” ಎಂದರೂ ಅವಳು–ಮೊದ್ದು!– ಸುಮ್ಮನೆ ಇರಲು, ತಾನೇ ಬಂದು ಹೊಡೆದು ಬಿಟ್ಟಳು. ನಾನು “ಇದೇನೆ ಕಮಲಾ ನನ್ನ ಹೆಂಡತಿಯೇನೆ ನೀನು?” ಎಂದುಬಿಟ್ಟೆ ಹುಡುಗಾಟಕ್ಕೆ. ಹಾಗೆನ್ನಬಾರದಾಗಿದ್ದಿತು. ಆಗಿನಿಂದ ಮದುವೆಯು ಮುಗಿದು ಅವರು ಹೊರಟುಹೋಗುವವರಿಗೂ ಅವಳೆನಗೆ ಕಾಣಿಸಿಕೊಳ್ಳಲೇ ಇಲ್ಲ. ನನ್ನ ಮನಸ್ಸಿಗೆ ಬಹಳ ವ್ಯಥೆಯುಂಟಾಯಿತು. ಮೊದಲೇ ಹೇಳಿದೆ.

ಅವಳ ಮನಸ್ಸು ಅತಿ ಸರಳವಾದುದು ಎಂದು. ಅಂಥವರು ದೊರಕು ವುದೇ ದುರ್ಲಭ.

೪

ಕಾಲವು ಕಳೆಯುತ್ತ ಬಂತು. ಒಂದೆರಡು ವರ್ಷಗಳಲ್ಲಿ ಅನೇಕ ಬದಲಾವಣೆಗಳಾಗಿ ಹೋದವು. ನಮ್ಮ ಪರೀಕ್ಷೆಯ ಫಲಿತಾಂಶ ತಿಳಿದೊಡನೆಯೇ ದಾವಣಗೆರೆಗೆ ಹೋಗಬೇಕಾಯಿತು. ಅಲ್ಲಿಂದ ಹರಿಹರ. ಅನಂತರ ಮೊಳಕಾಲ್ಮುರು. ಬೆಂಗಳೂರೆಲ್ಲಿ ಮೊಳಕಾ ಲ್ಮುರುವೆಲ್ಲಿ? ದಾಸವೃತ್ತಿ. ಇದರಲ್ಲಿ ಕಮಲೆಯ ವಿಚಾರವೇ ತಿಳಿಯ ಲಿಲ್ಲ. ತಿಳಿದು ಕೊಳ್ಳಲೂ ಮನಸ್ಸು ಒಡಂಬಡಲಿಲ್ಲ. ರಾಮು ಒಂದೆರಡು ಕಾಗದಗಳನ್ನು ಬರೆದಿದ್ದ. ಅದರಲ್ಲಿ ಕಮಲೆಗೆ ಮದುವೆ ಯಾಯಿತೆಂದಿದ್ದಿತು. ಇನ್ನು ಕಮಲೆಯ ವಿಚಾರವೆನಗೇತಕ್ಕೆ ? ಅವಳ ಕೈ ಹಿಡಿದವರು ಪುಣ್ಯಾತ್ಮರು ಎಂದು ಕೊಂಡೆ.

ನಮ್ಮವಳನ್ನು ಬೆಂಗಳೂರಿಗೆ ಕರತಂದು ಬಿಡಬೇಕಾಗಿ ಬಂತು. ನಾನು ಬೆಂಗಳೂರಿಗೆ ಬಂದಾಗ ಜಗದ್ಗುರುಗಳ ಸವಾರಿ ದಯಮಾಡಿ ಸಿದ್ದಿತು. ಅವರಲ್ಲಿಗೆ ಬರುವುದೆಂದರೆ ಹತ್ತು ವರ್ಷಕ್ಕೊ ಇಪ್ಪತ್ತು ವರ್ಷಕ್ಕೊ! ನಾನಲ್ಲಿಗೆ ಬರುವೆನೆಂದು ರಾಮುಗೆ ಬರೆದಿದ್ದೆ. ರಾಮು ಸ್ವಾಮಿಗಳ ದರ್ಶನವೂ ಆಗುವುದೆಂದು ತನ್ನ ಕುಟುಂಬದೊಡನೆಯೇ ಬಂದನು.

ಮಾರನೆಯ ದಿನ ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು ನಿತ್ಯಕರ್ಮ ಗಳನ್ನು ತೀರಿಸಿಕೊಂಡು ಮಡಿಗಳನ್ನುಟ್ಟು ಮಠಕ್ಕೆ ಹೊರಟೆವು. ಆ ದಿನ ನಮಗೆ ಕಾಫಿಗೆ ಸೊನ್ನೆ. ನಮ್ಮವಳನ್ನು ಕರೆದು "ಸ್ವಲ್ಪ ಮಾಡಿಬಿಡೇ, ದೊಡ್ಡವರೆಲ್ಲಾ ಹೊರಟುಹೋದಮೇಲೆ ನನಗೂ ರಾಮೂಗೂ ಸ್ವಲ್ಪ ಕೊಡುವಿಯಂತೆ" ಎಂದು ಹೇಳಿದೆ. "ನಿಮಗೇನು ಒಂದು ದಿನವಿಲ್ಲದಿದ್ದರೆ ಆಗುವುದಿಲ್ಲವೇನೋ ! ಮಡಿಯಿಂದಿದ್ದು

ತೀರ್ಥಪ್ರಸಾದ ತಗೊಂಡು ಬರಬಾರದೇ?" ಎಂದಳು. ನಾನು ಸುಮ್ಮನಾಗಿಹೋದೆ.

ಹೆಂಗಸರೊಡನೆ ಪ್ರಯಾಣ ಬೆಳೆಸಬಾರದು. ಅದರಲ್ಲಿಯೂ ಅವರೊಡನೆ ನಡೆದು ಕೊಂಡು ಹೋಗಬೇಕಾದರೆ ನಮ್ಮ ತಾಳ್ಮೆಯೇ ತೀರಿಹೋಗುವುದು. ಸುಖವಾಗಿ ಎಲ್ಲರೂ ಗಾಡಿಯಲ್ಲಿ ಹೋಗೋಣವೆಂದರೆ ಮಡಿ ಬೇರೆ. ದಾರಿಯಲ್ಲಿ ಆ ಮನೆಯವರು ಈ ಮನೆಯವರು ಸೇರಿ ಅವರ ಸಂಗಡ ಹೆಚ್ಚುತ್ತಾ ಬಂದಿತು. ಅಷ್ಟೇ ಸಾಕೆಂದು "ನೀವು ನಿಧಾನವಾಗಿ ಬನ್ನಿ" ಎಂದು ಹೇಳಿ ಹೊರಟು ಬಂದೆವು.

ದೇವಸ್ಥಾನಗಳಲ್ಲಿ ದೇವರು, ಮಠಗಳಲ್ಲಿ ಸ್ವಾಮಿಗಳು, ಇಲ್ಲದಿದ್ದರೆ ಅವು ಜೀವವಿಲ್ಲದ ದೇಹಗಳಂತೆ. ಈಗ ಮಠಕ್ಕೆ ಹೋಗುವವರು ಬರುವವರಿಗೆ ಲೆಕ್ಕವೇ ಇಲ್ಲ. ಮಠದಲ್ಲಿ ಹಗಲೂ ರಾತ್ರಿ ಪೂಜೆ. ಮಧ್ಯಾಹ್ನ ಬ್ರಾಹ್ಮಣರಿಗೆ ಭೋಜನ. ಇನ್ನು ಕೇಳಬೇಕೆ? ತೆಂಗಿನ ಮರದಮೇಲೆ ಸಂತರ್ಪಣೆ ಯೆಂದರೆ ಅಲ್ಲಿಗೂ ಸರಿಯೇ! ಮಠದ ಸುತ್ತು ಮುತ್ತಲಿರುವವರ ಮನೆಗಳಲ್ಲಿ (ಒಂದು ಮೈಲಿ ಫಾಸಲೆಯಲ್ಲಿರುವವರೆಲ್ಲರೂ ಸುತ್ತುಮುತ್ತಲಿರುವವರೆ) ಸ್ವಾಮಿಗಳು ದಯಮಾಡಿಸಿದಂದಿನಿಂದೀಚೆಗೆ ಒಲೆಯು ಬೆಂಕಿಯನ್ನು ಕಾಣದು. ಯಾಕೆ? ಪ್ರತಿನಿತ್ಯವೂ "ದೇವರ ಪ್ರಸಾದವನ್ನು ಬಿಟ್ಟು ಮನೆಯಲ್ಲಿ ಊಟ ಮಾಡುವುದೆ?"

ಮಠದ ಮಂದಿರವು ವಿಶಾಲವಾದುದು. ಸಾವಿರಾರು ಜನರು ಅಲ್ಲಿ ಸೇರಬಹುದು. ಅದರಲ್ಲಿಯೇ ಪೂಜೆ. ಬೆಳ್ಳಿಯ ಮಂಟಪ; ಅದರಲ್ಲಿ ಚಿನ್ನದ ಮಂಟಪ. ಅದರೊಳಗೆ ಚಂದ್ರಮೌಳೀಶ್ವರ, ಶಾರದೆ, ವಿನಾಯಕರು. ನಾವು ಹೋದಾಗ ಪೂಜೆ ನಡೆಯುತ್ತಿದ್ದಿತು. ಹೊರಗೆ ನಗಾರಿಯ ಶಬ್ದ. ಒಳಗೆ ಇನಿದಾದ ತಂಜಾವೂರಿನ ಓಲಗ. ಆ ಗದ್ದ

ಲದ ನಡುವೆ ಆದರ ಇಂಚರವು ಆಗಾಗ ಮುಟ್ಟಿ ಸ್ವರ್ಗ ಸುಖವನ್ನು ತೋರಿಸಿ ಕಸುಕೊಳ್ಳುತ್ತಿದ್ದಿತು. ಪ್ರಪಂಚದಲ್ಲಿ ಎಲ್ಲವೂ ಹಾಗೇ.

"ಬ್ರಾಹ್ಮಣರು ಒಳಗೆ ದಯಮಾಡಿಸಬಹುದು" ಎಂದರು. ಒಳಗೆ ಕೈಸಾಲೆ. ಅಲ್ಲಿ ಎಲ್ಲರೂ ಕೈ ಜೋಡಿಸಿಕೊಂಡು ನಿಂತೆವು. ಗಂಡಸರು ಒಂದುಕಡೆ ಹೆಂಗಸರು ಒಂದುಕಡೆ; ಮಧ್ಯದಲ್ಲಿ ಮಠದವರ ಓಡಾಟ. "ಅತ್ತ ಸರಿಯಿರಿ ಇತ್ತ ಸರಿಯಿರಿ" ಎಂದವರ ಕೂಗಾಟ. ಸ್ವಲ್ಪ ಹೊತ್ತಿನಮೇಲೆ "ಸದ್ದು" ಎಂದು ಮೂರಡಿ ಮುಂದಕ್ಕೆ ಬಂದಿದ್ದ ಹೊಟ್ಟೆಯವರೊಬ್ಬರು ಬಂದರು. ಪರಾಕು ಕೇಳಿಸಿತು. ಸ್ವಾಮಿಗಳು ದಯಮಾಡಿಸಿದರು. ಎಂಥ ದಿವ್ಯ ಮೂರ್ತಿ ಅವರದು !

ಪೀಠವು ಸಿದ್ಧವಾಗಿದ್ದಿತು. ಅದರಲ್ಲವರು ಕುಳಿತರು. "ನಮಸ್ಕರಿಸಬೇಕೆಂದಿರುವವರು. ನಮಸ್ಕರಿಸಬಹುದು" ಎಂದು ಮಠದ ಅಧಿಕಾರಿಗಳು ಉದ್ಘೋಷಿಸಿದರು. ನಾವೆಲ್ಲರೂ ನಮಸ್ಕಾರ ಮಾಡಿದೆವು. ಅನಂತರ ಒಬ್ಬೊಬ್ಬರೇ ಬಂದು ತೀರ್ಥವನ್ನು ಸ್ವೀಕರಿಸಬಹುದು ಎಂದರು. ಗಂಡಸರೆಲ್ಲರೂ ತೀರ್ಥವನ್ನು ತೆಗೆದುಕೊಂಡದ್ದಾಯಿತು. ಎಲ್ಲರೂ ಊಟಕ್ಕೆ ಮೊದಲು ಸರಿಪಡಿಸಿಕೊಳ್ಳಲು ಹೊರಟುಹೋದರು. ನಾವು –ನಮ್ಮವರೆಲ್ಲರಿಗೂ ತೀರ್ಥವಾಯಿತೆ ತಿಳಿದುಕೊಳ್ಳಬೇಕಲ್ಲ—ಒಂದೆಡೆಗೆ ಸರಿದು ನಿಂತೆವು.

ಹೆಂಗಸರದೇ ಯಾವಾಗಲೂ ಗಲಾಟೆ. ಮಠದಲ್ಲಿ ಸ್ವಾಮಿಗಳ ಸನ್ನಿಧಿಯಲ್ಲಿ ತೀರ್ಥವನ್ನು ಪಡೆಯುವಾಗಲೂ ಗದ್ದಲವಿದ್ದೇ ಇರುವುದು; ಸಂಸಾರವೆಲ್ಲಿ ಅವರನ್ನು ಬಿಟ್ಟಿರುವುದು !

ಇದ್ದಕ್ಕಿದ್ದಹಾಗೆ ಗದ್ದಲವು ಹೆಚ್ಚಿತು. ಹೊಗಳಬಟರು "ಸದ್ದು, ಸರಿಯಿರಿ, ಸ್ವಾಮಿಗಳಿಗೆ ಪರಾಕು" ಎನ್ನುತ್ತಾ ಹಾದಿ ಬಿಡಿಸಿಕೊಂಡು ಹೋದರು. ಸ್ವಾಮಿಗಳು ಒಳಕ್ಕೆ ಹೊರಟುಹೋದರು.

“ಏನು ಗದ್ದಲವಿದು, ಎಲ್ಲರಿಗೂ ತೀರ್ಥ ವಿನಿಯೋಗವಾಯಿತೆ? ಏತಕ್ಕೆ ಸ್ವಾಮಿಗಳು ದಯಮಾಡಿಸಿಬಿಟ್ಟರು?” ತಿಳಿದುಕೊಳ್ಳಬೇಕೆಂದು ಆಕಡೆ ಬರುತ್ತಿರಲು ಮೂರು ನಾಲ್ಕು ಹೆಂಗಸರು ಮಾತನಾಡುತ್ತಿದ್ದಿದ್ದು ಕೇಳಿಸಿತು.—

ಮೊದಲನೆಯವರು— ಏನಿರಮ್ಮ ನಾಚಿಕೆಗೇಡು! ಹೇಗೆ ಮೋರೆಯನ್ನಿಟ್ಟುಕೊಂಡು ಬಂದಳು ಅವಳು?

ಎರಡನೆಯವರು— ನೋಡಿ, ನಮ್ಮೆಲ್ಲರಿಗೂ ತೀರ್ಥವಿಲ್ಲದಹಾಗೆ ಮಾಡಿಬಿಟ್ಟಳು.

ಮೊದಲನೆಯವರು— ಸ್ವಾಮಿಗಳಿಗೆ ಹೇಗೆ ತಿಳಿಯಿತೋ! ತಲೆಯನ್ನು ಬಗ್ಗಿಸಿಕೊಂಡೇ ಎಲ್ಲರಿಗೂ ತೀರ್ಥವನ್ನು ಕೊಡುತ್ತಿದ್ದರು. ಒಬ್ಬರ ಮುಖವನ್ನೂ ನೋಡುತ್ತಿರಲೇ ಇಲ್ಲ. ಅವಳು ಕೈ ಹಿಡಿಯುವುದಕ್ಕೆ ಸರಿಯಾಗಿ ಉದ್ಧರಣೆಯನ್ನು ಕೆಳಗೆ ಹಾಕಿ ಎದ್ದುಬಿಟ್ಟರು. ಇನ್ನು ಅವರು ಸಾವಿರ ಸ್ನಾನ ಮಾಡಬೇಕೇನೋ!

ಮೂರನೆಯವರು— ಅಯ್ಯೋ ಪಾಪ! ಹುಡುಗಿಯನ್ನು ನೋಡಿದಿರಾ? ಎಂಥ ಚೆಲುವಾದ ಹುಡುಗಿ! ರತಿಯಹಾಗಿದ್ದಾಳೆ. ಈ ವಯಸ್ಸಿಗೇ........

ಎರಡನೆಯವರು— ನಿಮ್ಮ ಸಂಕಟ ಹಾಗಿರಲಿ. ನಾವಲ್ಲಿಂದ ಬಂದಿದ್ದಕ್ಕೆ ತೀರ್ಥವಿಲ್ಲದ ಹಾಗೆ ಮಾಡಿದಳಲ್ಲಾ! ಮನೆಯಲ್ಲಿಯೇ ಬಿದ್ದಿರುವುದಕ್ಕೆ ಏನು ಕೇಡು ಬಂದಿತ್ತು ಇವಳಿಗೆ!

ಮೂರನೆಯವರು— ಬಿಡಿಯಮ್ಮ, ನಿಮ್ಮ ತೀರ್ಥ ಪ್ರಸಾದ ಹಾಗಿರಲಿ. ಕೇಡು ಬಂದಿದ್ದಕ್ಕೇ ಇಲ್ಲಿಗೆ ಬಂದದ್ದು; ಎಲ್ಲರಿಂದಲೂ ಅನ್ನಿಸಿಕೊಳ್ಳುತ್ತಿರುವುದು; ನಿಮಗೆ ಹೆಣ್ಣು ಮಕ್ಕಳುಗಳಿಲ್ಲವೇ?

ಮೊದಲನೆಯವರು— ಅವಳ ಹಣೆಯಲ್ಲಿ ಹಾಗೆ ಬರೆದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ?

ಮೂರನೆಯವರು— ನೀವೇನು ಮಾಡಲಾಗುತ್ತೆ! ನೀವು ಸರಿಯಾಗಿದ್ದರೆ ಸಾಕು.

ಅಷ್ಟರಲ್ಲಿ ಪೋಲೀಸು ಇನಸ್ಪೆಕ್ಟರು ಬಹಳ ರಭಸದಿಂದ ಆಕಡೆಗೆ ಬಂದರು. ಅವರನ್ನೆಲ್ಲೋ ನೋಡಿದಹಾಗೆ ಜ್ಞಾಪಕ. ಜ್ಞಾಪಿಸಿಕೊಂಡೆ. ನಾನು ಅಂದು ಬಸ್ಸಿನಲ್ಲಿ ಪ್ರಯಾಣಮಾಡುತ್ತಿದ್ದಾಗ, ಮೊದಲನೆಯ ಸಲ ಕಮಲೆಯನ್ನು ಕಂಡೆನಲ್ಲಾ ಆಗ ನಮ್ಮೊಡನೆ ಪ್ರಯಾಣ ಮಾಡಿದ ಇನಸ್ಪೆಕ್ಟರು. ಅವರನ್ನು ನೋಡಿ ಕಮಲೆಯ ಜ್ಞಾಪಕ ಬಂದಿತು. ಇದ್ದಕ್ಕಿದ್ದಹಾಗೆ ಮೈ ಜುಂ ಎನ್ನಿಸಿತು. ಜಿರಳೆಯ ಮೂಗಿನ ಮುಂದಿರುವ ಕೂದಲನ್ನು ಒಂದು ಕಡ್ಡಿಯಿಂದ ಮುಟ್ಟಿದಾಗ ಅದು ಅನುಭವಿಸುವುದಲ್ಲಾ ಅದರಂತೆ ಆಯಿತು.

"ಇನಸ್ಪೆಕ್ಟರೇ, ಏನದು ಸಮಾಚಾರ?" ಎಂದೆ. ಅವರು "ತಾಳಿ ಹೇಳುತ್ತೇನೆ" ಎಂದು ಹೊರಟು ಹೋದರು.

ನಾವು ಮುಂದಕ್ಕೆ ಹೋಗಿ ನೋಡಿದೆವು; ಇನಸ್ಪೆಕ್ಟರು ಒಂದು ಪ್ರಾಣಿಯನ್ನು ಬಯ್ದು ಹೊರಗೆ ಅಟ್ಟುತ್ತಿದ್ದರು.—ಒಳಕ್ಕೆ ನಾಯಿ ಬಂದಾಗ ಅಟ್ಟುವಂತೆ. ಇದು ನಾಯಿಗಿಂತಲೂ ಕಡೆ.

ಅಲ್ಲಿ ನಮ್ಮವರೆಲ್ಲರೂ ಸಿಕ್ಕಿದರು. ನಮ್ಮವಳನ್ನು ಕರೆದು "ಆಕೆ ಯಾರು ವಿಚಾರಿಸು. ನೀನೂ ಆ ಹೆಂಗಸರಹಾಗೆ, ತಮ್ಮ ಮಕ್ಕಳ ಮೇಲೆ ತಮಗೆ ಕರುಣವಿಲ್ಲದ ಪಿಶಾಚಿಗಳ ಹಾಗೆ (ಅವರ ಮಾತನ್ನು ಕೇಳಿ ಹೊಟ್ಟೆ ಉರಿಯುತ್ತಿದ್ದಿತು.) ನಿಂತಿರುವೆಯಲ್ಲಾ" ಎಂದೆ. ಅವಳು ವಿಚಾರಿಸಿಕೊಂಡು ಬಂದಳು.

"ನಿಮಗೇತಕಮ್ಮ ನನ್ನ ಸುದ್ದಿ—ನೀವು ಹೋಗಿ ಎಂದು ಬಿಟ್ಟಳವಳು. ಆಕೆಯನ್ನು ಎಲ್ಲೋ ನೋಡಿದ್ದ ಹಾಗಿದೆ" ಎಂದಳು.

ರಾಮು ಮನೆಯವರು "ಅವಳು ಕಮಲೆಯಂತಿದ್ದಾಳೆ; ಸರಿಯಾಗಿ ಗುರುತು ಸಿಕ್ಕದು" ಎಂದರು. "ಏನು!" ಎಂದು ರಾಮು ಅಲ್ಲಿಗೆ ಹೋದ. ನಾನೂ ಹೋದೆ; ಅವಳು ನಾವು ಬರುವುದನ್ನು ಕಂಡು ಹೊರಟುಹೋಗುತ್ತಿದ್ದಳು. ಅವಳಲ್ಲಿಗೆ ಹೋಗಿ ನೋಡಿದರೆ ಕಮಲೆ! ಇದೇ ನಾಲ್ಕನೆಯ ಸಲ, ಕೊನೆಯ ಸಲ, ಅವಳನ್ನು ನೋಡಿದ್ದು.

ಅವಳ ಮುಖವನ್ನು ನೋಡಿದೆ. ಕಣ್ಣುಗಳು ಮುಚ್ಚಿಹೋದವು. ಭೂಮಿಯು ತಿರುಗುವಂತೆ ತೋರಿತು. ಹಿಂದಿನ ದಿನ ರಾಮು ಹೇಳಿದ್ದ ಕಮಲೆಯ ಮನೆಯ ಸ್ಥಿತಿಯನ್ನು, ಗೋಕುಲದಂತಿದ್ದ ಮನೆ ಗೂಬೆಗಳ ವಾಸಸ್ಥಾನವಾದದ್ದನ್ನು, "ಮನೆಯ ಹೆಸರು ಹೇಳಲು ಕಮಲೆಯೊಬ್ಬಳಿದ್ದಾಳೆ; ತನ್ನ ಗಂಡನೊಂದಿಗೆ ಮೈಸೂರಿನಲ್ಲಿ" ಎಂದು. ಭೂಮಿಯನ್ನು ನಿಟ್ಟಿಸಿಕೊಂಡುನೋಡುತ್ತಾ ನಿಂತಿದ್ದಾಳೆ.—ಅದು ಬಿರಿದರೆ ಒಡನೆ ದುಮುಕಿಬಿಡಬೇಕೆಂದು.

ನಮ್ಮವಳಿಗೆ "ಕಮಲೆಯನ್ನು ಮನೆಗೆ ಕರೆದುಕೊಂಡು ಬಾ" ಎಂದು ಹೇಳಿದೆ.

ಅವಳು ಕರೆದಳು; ಬಲವಂತಪಡಿಸಿದಳು. ಕಮಲೆ "ನನಗೆ ನಮ್ಮವರೆಂಬುವರು ಯಾರೂ ಇಲ್ಲ; ನಾನು ನನ್ನ ಮನೆಗೆ ಹೋಗುತ್ತೇನೆ ಬಿಡಿ" ಎಂದು ಬಿಡಿಸಿಕೊಂಡು ಹೊರಟುಹೋದಳು. ರಾಮು ಅವಳ ಹಿಂದೆಯೆ ಹೋದನು.

ನನಗಲ್ಲಿ ಪ್ರಸಾದ ಬೇಕಾಗಲಿಲ್ಲ. ಇನಸ್ಪೆಕ್ಟರು ಮಾತನಾಡಿಸಿಕೊಂಡು ಬಂದರು. ಅವರೊಡನೆ ಮಾತೇ? ನಮ್ಮ ಮನೆಯವರಿಗೆ ಜತೆಮಾಡಿಕೊಟ್ಟು ಮನೆಗೆ ಬಂದು ಬಿಟ್ಟೆ.

ಕಮಲೆ ನಾನು ಮೊದಲು ನೋಡಿದಾಗ ಎಂಟು ವರ್ಷದ ಹುಡುಗಿ. ರಾಮು ಮದುವೆಯಲ್ಲಿ ಹತ್ತು ವರ್ಷ. ಅದಾದಮೇಲೆ

ನನ್ನ ಮದುವೆ. ಆಗಲೂ ಹುಡುಗಿಯೇ. ಅದಾದಮೇಲೆ ಯಾವಾಗಲೂ ಹುಡುಗಿ. ಆದರೆ ....

ಸಂಜೆಯವರಿಗೂ ಕುಳಿತ ಸ್ಥಳವನ್ನು ಬಿಟ್ಟು ಏಳಲಾಗಲಿಲ್ಲ. ರಾಮು ಬಂದ. ಅವನು ಬಂದೊಡನೆ "ರಾಮು, ಕಮಲೆಯನ್ನು ಕರತಂದೆಯಾ, ಕಮಲೆ ಎಲ್ಲಿ?" ಎಂದೆದ್ದೆ. ಅವನು ನನ್ನನ್ನು ಕೂಡಿಸಿಕೊಂಡು ಎಲ್ಲವನ್ನೂ ಹೇಳಿದ.

ದೈವವಶಾತ್ ದಾರಿಯಲ್ಲಿ ಅವನಿಗೆ ಅವನ ಮಾವನವರು ಸಿಕ್ಕಿದರಂತೆ; ರಾಮು ಅವರು ಸೇರಿ ಕಮಲೆಯನ್ನು ಅವಳ ಚಿಕ್ಕಮ್ಮನ ಮನೆಗೆ ಕರೆತಂದರಂತೆ; ಕಮಲೆಯ ಯಜಮಾನರು ತೀರಿಹೋಗಿ ಆಗಲೇ ಎಂಟು ತಿಂಗಳುಗಳಾಗಿದ್ದಿತಂತೆ. ಅಂದಿನಿಂದ ಅವಳು ಅವರನ್ನು ಹುಡುಕಿ ಹುಡುಕಿ ಸಾಕಾಗಿದ್ದಳಂತೆ. ಅವಳು "ಇನ್ನು ನನಗೆ ಯಾರು ನೆಂಟರು ಇಷ್ಟರು" ಎಂದು ಮೈಸೂರಿನಲ್ಲಿ ಅವಳ ನೆರೆಯವರಾಗಿದ್ದ ಅವಳನ್ನು ಮಗಳಂತೆ ಕಾಣುತ್ತಿದ್ದ ಶಾರದಮ್ಮನವರೊಡನೆ ಊರಿಗೆ ಹೋಗಿ ಅವರ ಮಕ್ಕಳಿಗೆ ಸಂಗೀತ ಹೇಳಿಕೊಡುತ್ತಾ ಹೊಟ್ಟೆ ಹೊರೆಯುತ್ತಿದ್ದಳಂತೆ. ಕೆಲವು ದಿನಗಳ ಹಿಂದೆ ಅವರೊಡನೆ ಬೆಂಗಳೂರಿಗೆ ಬರಬೇಕಾಯಿತಂತೆ. ಬಂದವಳು ತನ್ನ ಕರ್ಮವನ್ನು ಸವೆಸಿಕೊಳ್ಳಲು ತೀರ್ಥ ಪ್ರಸಾದವನ್ನು ಹೊಂದಲು ಮನೆಯವರಿಗಾರಿಗೂ ತಿಳಿಯದಂತೆ ಮಠಕ್ಕೆ ಬಂದಳಂತೆ. ಪಾಪ, ಲೋಕವನ್ನು ಅರಿಯದವಳು! ಇನ್ನೂ ಕಣ್ಣು ತೆರೆಯುವುದಕ್ಕಿಲ್ಲ ಏನು ಬಂತು!

ಆ ದಿನವೆಲ್ಲಾ ಏನೂ ಬೇಕಾಗಲಿಲ್ಲ. ಮನಸ್ಸೋ ನನ್ನ ಹತೋಟಿಗೆ ಬರಲೇ ಇಲ್ಲ.

ಕಾವ್ಯಾವಲೋಕನ

ರನ್ನಕವಿ ಪ್ರಶಸ್ತಿ–ಪ್ರಕಾಶಕರು, ಮೈಸೂರು ವಿಶ್ವವಿದ್ಯಾನಿಲಯ ಸಂಘ ; ಡೆಮ್ಮಿ ಅಷ್ಟಪತ್ರ ಪುಟಗಳು ೧೫+೨೬೯. ಪ್ರಥಮ ಮುದ್ರಣ, ೧೯೩೮, ಬೆಲೆ ರೂ.೧–೪–೦

ಈ ಗ್ರಂಥದಲ್ಲಿ ಒಟ್ಟು ಹದಿನಾಲ್ಕು, ಮುನ್ನುಡಿಯನ್ನು ಸೇರಿಸಿಕೊಂಡರೆ ಹದಿನೈದು, ಉಪನ್ಯಾಸಗಳಿವೆ. ಮೊದಲಿನ ಎರಡು ಉಪನ್ಯಾಸಗಳಲ್ಲಿ (ಕವಿಚಕ್ರವರ್ತಿ ಕವಿರನ್ನನ ಜೀವನಚರಿತ್ರ, ರನ್ನನ ಯುಗ) ರನ್ನನ ಕಾಲ ಜೀವನಚರಿತ್ರೆಗಳಿಗೆ ಸಂಬಂಧಿಸಿದ ಕೆಲವು ವಿಷಯಗಳು ಚರ್ಚಿಸಲ್ಪಟ್ಟಿವೆ. ಮಿಕ್ಕವು ರನ್ನನ ಕಾವ್ಯಗಳ ವಿಮರ್ಶ ರೂಪವಾಗಿವೆ. ಇವುಗಳಲ್ಲಿ ಶಾಂತಿರಾಜಶಾಸ್ತ್ರಿಗಳವರ "ಮಹಾ ಕವಿ ರನ್ನ ಮತ್ತು ಅಜಿತತೀರ್ಥಕರ ಪುರಾಣತಿಲಕ" ಎಂಬ ಉಪನ್ಯಾಸ ವನ್ನು ಬಿಟ್ಟರೆ ಮಿಕ್ಕನೆಲ್ಲವೂ ಮುಖ್ಯವಾಗಿ ಗದಾಯುದ್ಧದ ವಿಮರ್ಶ ಗಳಾಗಿವೆ. ಅಜಿತಪುರಾಣದಲ್ಲಿ ರನ್ನನ ಕವಿತಾಶಕ್ತಿಗೆ ಸರಿಯಾದ ಅವಕಾಶವಿಲ್ಲವೆಂಬುದೇ ಬಹುಜನರ ಮತ. "ರನ್ನನ ಕವಿತಾ ಸಾಮರ್ಥ್ಯ" "ರನ್ನ" ಎಂಬೆರಡು ಉಪನ್ಯಾಸಗಳು ಸಂಸ್ಕೃತ ಲಕ್ಷಣಗ್ರಂಥಗಳ ದೃಷ್ಟಿಯಿಂದ ಬರೆದುವು. ಮಿಕ್ಕವೆಲ್ಲವೂ ಮುಖ್ಯ ವಾಗಿ ಇಂಗ್ಲೀಷ್‌ಸಾಹಿತ್ಯದ ದೃಷ್ಟಿಯಿಂದ ಬರೆದುವು. ಇವುಗಳಲ್ಲಿ ರನ್ನನು ಇತರಕವಿಗಳಿಗೆ ಎಷ್ಟುಮಟ್ಟಿಗೆ ಋಣಿಯಾಗಿದಾನೆ, ಗದಾ ಯುದ್ಧದಲ್ಲಿ ಕಂಡುಬರುವ ವಿಶೇಷ ಲಕ್ಷಣಗಳಾವುವು, ಗದಾ ಯುದ್ಧದ ನಿಜವಾದ ನಾಯಕನು ಭೀಮನೇ ದುರ್ಯೋಧನನೇ, ರನ್ನನ ಪಾತ್ರರಚನಾಕೌಶಲ್ಯವೆಷ್ಟು, ಅವನ ರಸಪ್ರತಿಪಾದನೆಯರೀತಿ, ಶೈಲಿಯ ವೈಲಕ್ಷಣ್ಯ— ಇತ್ಯಾದಿವಿಷಯಗಳು ವಿಮರ್ಶಿಸಲ್ಪಟ್ಟಿವೆ. ಗ್ರಂಥದ ಹೆಸರು ರನ್ನನ ಪ್ರಶಸ್ತಿ ಎಂದಿದ್ದರೂ ಇದರಲ್ಲಿ ಬರಿಯ ಅಭಿ

ಮಾನಯುಕ್ತವಾದ ರನ್ನನ ಹೊಗಳಿಕೆಯೇ ಇಲ್ಲ; ಆತನ ಕವಿತ್ವದ ನಿಜವಾದ ಬೆಲೆಯನ್ನು ಕಟ್ಟುವ ಪ್ರಯತ್ನವು ನಡೆದಿದೆ. ಲೇಖಕರಲ್ಲಿ ಕೆಲವರು ರನ್ನನಲ್ಲಿ ಹೆಚ್ಚು ಮಮತೆಯುಳ್ಳವರು; "ಅಪರಿಮಿತವಾದ ವಿಶ್ವಾಸ"ವುಳ್ಳವರು; ಮತ್ತೆಕೆಲವರು ನಿಷ್ಪಕ್ಷಪಾತವಾದ, ನಿರ್ದಾಕ್ಷಿಣ್ಯವಾದ ದೃಷ್ಟಿಯಿಂದ ರನ್ನನ ಕಾವ್ಯವನ್ನು ವಿಮರ್ಶೆಮಾಡಿರುವವರು; ಒಟ್ಟಿನಲ್ಲಿ ಎಲ್ಲರಿಗೂ ರನ್ನನಲ್ಲಿ ಗೌರವವುಂಟು; ಎಲ್ಲರೂ, ಆವನ ಕಾವ್ಯದ ಯೋಗ್ಯತೆಯನ್ನು ತೂಗಿನೋಡಿಯೇ ಒಪ್ಪಿಕೊಂಡಿರುವರು. ಕೆಲವರು ಅಲಂಕಾರದ ದೃಷ್ಟಿಯಿಂದ, ಕೆಲವರು ರಸದ ದೃಷ್ಟಿಯಿಂದ, ಕೆಲವರು ವಸ್ತುರಚನೆಯ ದೃಷ್ಟಿಯಿಂದ, ಕೆಲವರು ಪಾತ್ರರಚನೆಯ ದೃಷ್ಟಿಯಿಂದ, ಹೀಗೆ ಬೇರೆ ಬೇರೆ ದೃಷ್ಟಿಯಿಂದ, ರನ್ನನ ಕಾವ್ಯವನ್ನು ಪರೀಕ್ಷಿಸಿದ್ದಾರೆ. ರನ್ನನ ಕಾವ್ಯದಲ್ಲಿ ಕುಂದುಕೊರತೆಗಳು ಇರುವುವಾದರೂ ಒಟ್ಟಿನಲ್ಲಿ ರನ್ನನು ಮಹಾಕವಿಯೆಂಬುದನ್ನು ಎಲ್ಲರೂ ಏಕಕಂಠರಾಗಿ ಒಪ್ಪಿಕೊಂಡಿರುತ್ತಾರೆ:

ಲೇಖಕರಲ್ಲಿ ಕೆಲವರು ಸಂಸ್ಕೃತಸಾಹಿತ್ಯದಲ್ಲಿಯೂ, ಕೆಲವರು ಇಂಗ್ಲೀಷ್‌ಸಾಹಿತ್ಯದಲ್ಲಿಯೂ, ವಿಶೇಷ ಪರಿಚಯುವುಳ್ಳವರಾದುದರಿಂದ ಅವರು ಸ್ವಾಭಾವಿಕವಾಗಿಯೇ ರನ್ನನನ್ನು ಸಂಸ್ಕೃತ ಇಂಗ್ಲೀಷ್ ಕವಿಗಳಿಗೆ ಹೋಲಿಸಿರುತ್ತಾರೆ. ಅವರು ರನ್ನನನ್ನು ಯಾವ ಕವಿಗಳಿಗೆ ಹೋಲಿಸುತ್ತಾರೆಂಬುದನ್ನು ನೋಡಿದರೆ ರನ್ನನು ಎಷ್ಟುದೊಡ್ಡಕವಿಯೆಂಬುದು ಗೊತ್ತಾಗುತ್ತದೆ. ರನ್ನನ ಶೈಲಿಯನ್ನು ಕುರಿತು ಬರೆಯುತ್ತಾ ಮ॥ ಎಸ್. ವಿ. ರಂಗಣ್ಣನವರು, "ಮಹಾಶೈಲಿ" (the Grand Style) ಯ ಲಕ್ಷಣವನ್ನು ವಿವರಿಸಿ "ಪಾಶ್ಚಾತ್ಯರಲ್ಲಿ ಪುರಾತನ ಗ್ರೀಕರ ಕವಿ ಹೋಮರ್, ಹದಿಮೂರನೆಯ ಶತಮಾನದವನಾದ ಇಟಾಲಿಯನರ ಡ್ಯಾಂಟೆ, ಹದಿನೇಳನೆಯ ಶತಮಾನದಲ್ಲಿದ್ದ ಇಂಗ್ಲೀಷಿನವರ ಮಿಲ್ಟನ್ ಇವರಲ್ಲಿ ಮಹಾಶೈಲಿಯು ಕಂಡುಬರುತ್ತದೆ. ನಮ್ಮ ರನ್ನನು ಇವರ ಗುಂಪಿಗೆ ಸೇರಲರ್ಹನೆಂದು ಹೇಳಿದರೆ ಅದೇನೂ ಬಡಾಯಿನ ಮಾತಲ್ಲ." ಎಂದು ಹೇಳಿ

ಅನೇಕ ಉದಾಹರಣೆಗಳನ್ನು ಕೊಟ್ಟು ತಮ್ಮ ಅಭಿಪ್ರಾಯವನ್ನು ಸಮರ್ಥಿಸಿರುವರು. "ರನ್ನನ ರಸಪ್ರತಿಪಾದನೆ" ಎಂಬ ಲೇಖದಲ್ಲಿ ಮ|| ರಾ|| ಎ. ಆರ್. ಕೃಷ್ಣಶಾಸ್ತ್ರಿಗಳವರು ರನ್ನನನ್ನು ಭವಭೂತಿಗೆ ಹೋಲಿಸಿ ಹೀಗೆ ಬರೆದಿರುತ್ತಾರೆ. "ಏಕೋ ರಸಃ ಕರುಣ ಏವ-ಎಂದು ಮುಂತಾಗಿ ಭವಭೂತಿಯು ಕರುಣರಸವನ್ನು ಬಹುವಿಸ್ತಾರವಾಗಿ ಪ್ರತಿಪಾದಿಸಿರುವಂತೆ ಅವನದೇ ಆದ ಒಂದು ಅಹಂಕಾರವಿಶೇಷದಿಂದ ಹೇಳಿಕೊಂಡಿದಾನೆ. ಇದನ್ನೇ ಪಂಡಿತರು ಸಮ್ಮತಿಸಿ 'ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೇ' ಎಂದು ಅವನಿಗೆ ಪ್ರಶಸ್ತಿಪತ್ರ ವನ್ನು ಕೊಟ್ಟುಬಿಟ್ಟಿದ್ದಾರೆ................ರನ್ನನ ಕರುಣರಸಪ್ರತಿಪಾದ ನೆಯು ಮೇಲ್ಕಂಡಂತೆ ಸುಪ್ರಸಿದ್ಧವಾಗಿರುವ ಭವಭೂತಿಯ ಪ್ರತಿ ಪಾದನೆಗೆ ಯಾವವಿಧದಲ್ಲಿಯೂ ಕಡಮೆಯಲ್ಲ. ಇನ್ನೂ ಇಲ್ಲಿರುವ ಗಭೀರತೆ ವೈಚಿತ್ರ್ಯ ವೈವಿಧ್ಯಾದಿಗಳು ಅಲ್ಲಿ ಇಲ್ಲವೆಂದು ಹೇಳಬ ಹುದು." ಇಲ್ಲಿ ರನ್ನನು ಭವಭೂತಿಗಿಂತಲೂ ಕರುಣರಸಪ್ರತಿಪಾದನೆ ಯಲ್ಲಿ ಒಂದುಕೈ ಮಿಗಿಲೆಂದು ಹೇಳಿದೆ. ರನ್ನನಮೇಲಿನ ಪಕ್ಷಪಾತ ದಿಂದ ಲೇಖಕರು ಅವನನ್ನು ಮಿತಿಮೀರಿ ಹೊಗಳಿರುವರೆಂದು ಅವರ ಲೇಖವನ್ನು ಓದಿದವರಾರೂ ಹೇಳಲಾರರು. ಏಕೆಂದರೆ ಆ ಲೇಖ ದಂತೆ ನಿಷ್ಪಕ್ಷಪಾತವಾದ, ನಿರ್ದಾಕ್ಷಿಣ್ಯವಾದ, ಲೇಖವು ಈ ಗ್ರಂಥ ದಲ್ಲಿ ಮತ್ತೊಂದಿಲ್ಲ.

ಗದಾಯುದ್ಧದ ರಚನೆಯಲ್ಲಿ ರನ್ನನು ಪಂಪನಿಗೆ ವಿಶೇಷವಾಗಿ ಋಣಿಯಾಗಿದ್ದಾನೆಂಬುದು ಗದಾಯುದ್ಧ ಪಂಪಭಾರತಗಳನ್ನು ಓದಿ ದವರೆಲ್ಲರಿಗೂ ಗೊತ್ತಿರುವ ಸಂಗತಿ. ಅಜಿತನಾಥಪುರಾಣದಲ್ಲಿ ಪಂಪ ನನ್ನು ಸ್ಮರಿಸಿದ ರನ್ನನು ಗದಾಯುದ್ಧದಲ್ಲಿ ಏಕೆ ಸ್ಮರಿಸಲಿಲ್ಲ ವೆಂಬುದು ಕುತೂಹಲಾಸ್ಪದವಾದ ವಿಷಯ. ಗದಾಯುದ್ಧದ ವಿಷಯವಾಗಿ ವಿಮರ್ಶೆಯನ್ನು ಬರೆದಿರುವ ಪ್ರತಿಯೊಬ್ಬ ಲೇಖಕರೂ ಪಂಪನ ಹೆಸರನ್ನು ಎತ್ತಿದ್ದಾರೆ ; ಪಂಪರನ್ನರನ್ನು ಹೋಲಿಸಿದ್ದಾರೆ. ರನ್ನನ ಪ್ರಶಸ್ತಿಯಲ್ಲಿ ಪಂಪನ ಪ್ರಶಸ್ತಿಗೆ ಬೇಕಾದ ಎಷ್ಟೋಸಾಮಗ್ರಿ

ದೊರೆಯುತ್ತದೆ. ಕೆಲವು ವಿಷಯಗಳಲ್ಲಿ ರನ್ನನು ಪಂಪನಿಗಿಂತಲೂ ಶ್ರೇಷ್ಠನಾದರೂ ರನ್ನನ ಕೀರ್ತಿಯಲ್ಲಿ ಪಂಪನಿಗೂ ಒಂದು ಭಾಗವಿದೆ.

ಗದಾಯುದ್ಧದ ವಿಷಯವಾಗಿ ಇಷ್ಟು ವಿಸ್ತಾರವಾದ ವಿಮರ್ಶೆಯಾಗಿದ್ದರೂ ವಿಚಾರಯೋಗ್ಯವಾದ ಒಂದೆರಡಂಶಗಳು ಹಾಗೆಯೇ ಉಳಿದಿವೆ. ಉದಾಹರಣೆಗೆ ದುರ್ಯೋಧನನನ್ನು ಮಹಾವೀರನೆಂದು ತೋರಿಸಿದ ರನ್ನನು, ಆ ಏಕಾಂಗಶೂರನು ವೈಶಂಪಾಯನ ಸರೋವರವನ್ನು ಹಿಂದುಮುಂದಾಗಿ ಪ್ರವೇಶಿಸಿದನೆಂದು ಏಕೆ ಹೇಳಿದ್ದಾನೆ ? ಎಷ್ಟೋ ವಿಷಯಗಳಲ್ಲಿ ಪಂಪನ ಕಥೆಯನ್ನೇ ಅನುಸರಿಸಿದ್ದರೂ ಪಂಪನ ಗ್ರಂಥದಲ್ಲಿ ಇಲ್ಲದಿರುವ ದ್ರೌಪದಿಯ ವಸ್ತ್ರಾಪಹರಣದ ಸುದ್ದಿಯನ್ನು ಏಕೆ ಎತ್ತಿದ್ದಾನೆ? ಭೀಮನನ್ನು ಹೊಗಳಬೇಕೆಂದು ಉದ್ದೇಶಿಸಿ ಫಲಪರ್ಯವಸಾನದಲ್ಲಿ ಭೀಮನಿಗಿಂತಲೂ ದುರ್ಯೋಧನನು ದೊಡ್ಡವನಾಗುವುದು ಅನಿವಾರ್ಯವೆಂದು ತಿಳಿದು ಆದಷ್ಟುಮಟ್ಟಿಗೆ ದುರ್ಯೋಧನನಲ್ಲಿ ತಪ್ಪನ್ನು ಹೆಚ್ಚಿಸಬೇಕೆಂದು ಈ ಸಂಗತಿಗಳನ್ನು ಸೇರಿಸಿರಬಹುದೇ ?

ಈ ಗ್ರಂಥದಲ್ಲಿನ ಉಪನ್ಯಾಸಗಳು ರನ್ನನನ್ನೂ ರನ್ನನ ಕಾವ್ಯಗಳ ಸ್ವಾರಸ್ಯವನ್ನೂ ತಿಳಿದುಕೊಳ್ಳಲು ಸಹಾಯ ಮಾಡುವುದು ಮಾತ್ರವೇ ಅಲ್ಲ; ಅವುಗಳಲ್ಲಿ ಕೆಲವು ಶೈಲಿಯ ಸೊಬಗನ್ನು ತೋರಿಸತಕ್ಕವಾಗಿವೆ. ಗ್ರಂಥಪರಿಚಯಮಾಡಿಕೊಡುವುದೇ ನಮ್ಮ ಉದ್ದೇಶವಾಗಿರುವುದರಿಂದ ಮಾದರಿಗಾಗಿ ಒಂದೆರಡು ಉದಾಹರಣೆಗಳನ್ನು ಕೊಡುವುದು ಅನುಚಿತವಾಗಲಾರದು.—

೧. "ಗದಾಯುದ್ಧವು ಅನಿವಾರ್ಯವೇ ಆಯಿತು. ದೈವ ಸಂಕಲ್ಪವು ಈಡೇರಿತು. ಇಲ್ಲಿನ ಸನ್ನಿವೇಶವೆಲ್ಲ ದುರಂತಚ್ಛಾಯೆಯಿಂದ ಕೃಷ್ಣವರ್ಣವಾಗಿದೆ. ಈ ಕೃಷ್ಣವರ್ಣದ ಛಾಯೆಯಲ್ಲಿ ದುರ್ಯೋಧನನೊಬ್ಬನು ಶೌರ್ಯ ತೇಜಃಪುಂಜನಾಗಿ ಬೆಳಗುತ್ತಿರುವನು. ಈ ತೇಜಃಪುಂಜನನ್ನು ಸುತ್ತಲಿನ ಗಾಢನೀಲಚ್ಛಾಯೆಯು ಪಿಶಾಚಿಯ

ಕೀರಲು ನಗುವನ್ನು ಬೀರಿ ನುಂಗುತ್ತಿದೆ. ಧರ್ಮದೇವತೆಯು ಅಧರ್ಮದ ಕಪ್ಪು ಮುಸುಕನ್ನು ಹಾಕಿಕೊಂಡು ಅಧರ್ಮ ದೇವತೆಯ ಪಕ್ಕದಲ್ಲಿ ಆ ಗುಂಪಿನಲ್ಲೇ ಸೇರಿದ್ದಾಳೆ. ರಾಜ್ಯ ಲಕ್ಷ್ಮಿಯು ದುರ್ಯೋಧನನ ಅಂತಃಪುರದ ಹೊರಬಾಗಿಲಿನ ಹೊಸ್ತಿಲಿನಮೇಲೆ ನಿಂತು ಚಂಚಲದೃಷ್ಟಿಯಿಂದ ಈ ರಣಭೂಮಿಯನ್ನು ನೋಡುತ್ತಿದ್ದಾಳೆ. ಈ ಪರಿಸರಣದಲ್ಲಿ ಸ್ವಲ್ಪವೂ ಅಚ್ಚಳಿಯದೆ ಪರಮೇಶ್ವರನ ಪಂಚಮುಖಗಳಂತೆ ನಿಂತಿರುವ ಪಂಚಪಾಂಡವರು ; ಎದುರಿನಲ್ಲಿ ಅನುಜಶತವನ್ನು ಕಳೆದುಕೊಂಡು ರೌದ್ರಾವೇಶದಿಂದ ತುಂಬಿ 'ಭೀಮಂ ತೊಡರ್ದನಿಬರೊಳಂ ಬರ್ಕೆ ಮೇಣ್ ಬನ್ನಿವೀವೆಂ' ಎಂದು ಎಲ್ಲರನ್ನೂ ಯುದ್ಧಕ್ಕೆ ಕರೆಯುತ್ತಿರುವ ಸಾಹಸಮಲ್ಲ ಏಕಾಂಗವೀರ ದುರ್ಯೋಧನ ; ಆ ಕಾಲಕ್ಕೆ ಜಂಗಮಹಿಮಾಚಲಮೆ ಬರ್ಪಂತೆ ಬಂದ ಬಲರಾಮನು.''

೨. ''ಗದಾಯುದ್ಧವು ಒಂದು 'ರಸಘಟ್ಟಿ'; ಆದರೆ ಅದರಲ್ಲಿ ಚರಿತ್ರೆಯೆಂಬ ಕಸವು ತುಂಬಿಕೊಂಡಿದೆ ; ಅದನ್ನು ಶೋಧಿಸಿ ತೆಗೆದುಹಾಕಿ ಬಿಟ್ಟರೆ ಉಳಿದ ಕಾವ್ಯವು ಎಂಥ ರಸಾಯನವಾಗುವುದೆಂಬುದನ್ನು 'ಗದಾಯುದ್ಧ ನಾಟಕ'ದಲ್ಲಿ ನೋಡಬಹುದು. ಈ ಕಾವ್ಯವನ್ನು ರನ್ನನು ಬರೆದು ರಾಜಾಸ್ಥಾನದಲ್ಲಿ ಓದಿದಾಗ ರಸಕ್ಕಿಂತ ಕಸವೇ ಮೇಲಾಗಿ ಗಣ್ಯವೆನಿಸಿದ್ದಿರಬಹುದು. ಸತ್ಯಾಶ್ರಯನನ್ನು ಸಾಹಸಭೀಮನೆಂದು ಕರೆದು ಅವನಲ್ಲಿ ಅತುಲ ಭುಜ ಪರಾಕ್ರಮಗಳನ್ನು ಆರೋಪಿಸಿ ಅವನಿಂದ ದುರ್ಯೋಧನನನ್ನು ಕೊಲ್ಲಿಸಿದಾಗ ಆ ರಾಜಪೋಷಕನಿಗೆ ಚತುರ್ಭುಜನಾಗಿ ಮೈ ಉಬ್ಬಿಹೋಗಿರಬೇಕು ; ಆದರೆ ಭೀಮನನ್ನು 'ಅಮ್ಮನ ಗಂಧವಾರಣ' 'ಇರಿವಬೆಡಂಗ' ಎಂದು ಕರೆದು ಅವನು—'ಆಹವಮಲ್ಲಂಗಂ ಜಾಕವ್ವೆದೇವಿಗಂ ಪುಟ್ಟಿದುದಂ' ವರ್ಣಿಸುವಾಗ ಭೀಮನ ಮನಸ್ಸಿಗೆ ಹೇಗಾಗಿರಬೇಕು ! ಪುಣ್ಯಕ್ಕೆ ಭೀಮನು ತನ್ನ ಅಣ್ಣನಾದ ಆಂಜನೇಯನಂತೆ ಚಿರಂಜೀವಿಯಾಗಿರದೆ ಹಿಂದೆಯೇ ಸತ್ತಿದ್ದುದರಿಂದ ಕವಿಯೂ ಅವನ ಪೋಷಕನೂ ಬದುಕಿಕೊಂಡರು; ಸತ್ಯಾಶ್ರಯನಿಗೂ 'ದುಶ್ಶಾಸನೋರಸ್ಸ್ಥಳೋಚ್ಚಲದುಷ್ಣಾಂಬು ನಿಮಗ್ನಪೂರ್ಣಜಠರಂ....... ಚಾಳುಕ್ಯ ಕಂಠೀರವಂ' ಎಂದು ಹೇಳಿದಾಗ, ಆ ಶಬ್ದಗಳು ಅರ್ಥವಾಗಿದ್ದರೆ, ಸ್ವಲ್ಪವಾದರೂ ಹೊಟ್ಟೆ ತೊಳಸಿಕೊಂಡುಬರುವಹಾಗಾಗಿರಬೇಕು. ಇದು ಚತುರ್ಭುಜನಾದುದಕ್ಕೆ ಶಿಕ್ಷೆ; ಚಿನ್ನದ ಮಾವಿನಹಣ್ಣಿಗೆ ಬಾಯಿಬಿಟ್ಟರೆ ಬೆನ್ನಿನಮೇಲೆ ಬರೆಹಾಕಿಸಿಕೊಳ್ಳುವುದಕ್ಕೂ ಸಿದ್ಧವಾಗಿರಬೇಕು''

ಈ ಗ್ರಂಥದಲ್ಲಿ ಗದಾಯುದ್ಧ ನಾಟಕದ ಕೆಲವು ದೃಶ್ಯಗಳ ಚಿತ್ರಗಳನ್ನು ಸೇರಿಸಿರುವುದು ಉಚಿತವಾಗಿದೆ. ಏಕೆಂದರೆ, ಈ ಗ್ರಂಥವು ಹುಟ್ಟುವುದಕ್ಕೆ ಆ ನಾಟಕದ ಪ್ರದರ್ಶನವೇ ಒಂದು ಮುಖ್ಯ ಕಾರಣವೆಂಬುದನ್ನೂ, ಗದಾಯುದ್ಧ ಕಾವ್ಯದ ಮುಖ್ಯ ವೈಲಕ್ಷಣ್ಯವು, ಅದರ ಮಹತ್ವವು, ಅದರ ನಾಟಕ ಸಂವಿಧಾನ ಎಂಬುದನ್ನೂ, ಈ ಚಿತ್ರಗಳು ಸೂಚಿಸುತ್ತವೆ. ಇವಲ್ಲದೆ ಶ್ರೀಮನ್ ಮಹಾರಾಜರವರ ಭಾವಚಿತ್ರವೂ ಅಜಿತನಾಥತೀರ್ಥಂಕರರು, ಜನ್ಮಾಭಿಷೇಕ, ಶ್ರವಣಬೆಳಗೊಳದಲ್ಲಿ ಕೆತ್ತಿರುವ ರನ್ನನ ಹೆಸರು, ಇವುಗಳ ಚಿತ್ರಗಳೂ ಇವೆ.

ಈ ಗ್ರಂಥಕ್ಕೆ ಪೂಜ್ಯರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಮುನ್ನುಡಿ ದೊರೆತದ್ದು ಅತ್ಯಂತ ಸಂತೋಷಾಸ್ಪದವಾದ ಸಂಗತಿ. ಈ ಗ್ರಂಥ ಹುಟ್ಟುವುದಕ್ಕೆ ಅವರೇ ಮೂಲಕಾರಣರು. ಇದು ಪೀಠಿಕೆಯಿಂದ ಸ್ಪಷ್ಟಪಡುತ್ತದೆ. ಅಲ್ಲದೆ ಅವರು ಗದಾಯುದ್ಧವನ್ನು ಸಂಗ್ರಹಿಸಿ ನಾಟಕ ರೂಪಕ್ಕೆ ತಿರುಗಿಸಿ (ಕಾವ್ಯವು ನಾಟಕ ರೂಪದಲ್ಲಿ ಪುಟಕ್ಕಿಟ್ಟ ಚಿನ್ನದಂತೆ ಆಗಿದೆ.) ಮೂಲ ಗ್ರಂಥವನ್ನು ಓದಲಾರದ ಅನೇಕರಿಗೆ ಆ ಕಾವ್ಯದ ಪರಿಚಯವನ್ನು ಹೊಂದಲು ಆನುಕೂಲ್ಯವನ್ನೂ ರನ್ನನ ಕೀರ್ತಿಯ ಪ್ರಸಾರಕ್ಕೆ ಒಂದು ಅಪೂರ್ವವಾದ ಅಮೋಘವಾದ ಸಾಧನವನ್ನೂ ಕಲ್ಪಿಸಿಕೊಟ್ಟಿದ್ದಾರೆ. ಈ ಮುನ್ನುಡಿಯಲ್ಲಿ ಕನ್ನಡ ಸಾಹಿತ್ಯದ ಸೇವೆಯನ್ನು ಮಾಡಬಯಸುವವರು ಈಗ ಮಾಡಬೇಕಾಗಿರುವ ಮುಖ್ಯ ಕರ್ತವ್ಯವನ್ನು ಸೂಚಿಸಿದ್ದಾರೆ. ರನ್ನನ ವಿಷಯದಲ್ಲಿಯೂ ಗದಾಯುದ್ಧದ ವಿಷಯದಲ್ಲಿಯೂ ಅವರಿಗೆ ಹೆಚ್ಚಾದ ಗೌರವವಿದೆ.

"ಮೆಚ್ಚಿಸುವುದಕ್ಕೆ ಸುಲಭನಲ್ಲದ ಎಂತಹವನಾದರೂ ಈ ಕಾವ್ಯಕ್ಕೆ ಬೆರಗಾಗಿ, ಇಂತಹ ಕವಿಯನ್ನೂ, ಇಂತಹ ಕಾವ್ಯವನ್ನೂ ಪಡೆದಿರುವ ಕನ್ನಡವು ಧನ್ಯವೆಂದು ಹೇಳದಿರಲಾರನು."

ಎಂದು ರನ್ನನನ್ನು ಬಾಯಿತುಂಬ ಹೊಗಳಿದ್ದಾರೆ. ಆದರೆ,

"ರನ್ನನಲ್ಲಿಕೂಡ ಒಂದುಕಾಲಕ್ಕೆ ಸುಂದರವಾದ ಮತ್ತೊಂದು ಕಾಲಕ್ಕೆ ಅಷ್ಟು ಸುಂದರವಲ್ಲದ ಅಂಶಗಳಿರಬಹುದು. ಪ್ರಪಂಚದ ಮನುಷ್ಯಮಾತ್ರನಾದ ಯಾವ ಕವಿಚಕ್ರವರ್ತಿಯಲ್ಲಾಗಲಿ ಕುಂದುಕೊರತೆಗಳಿಲ್ಲವೆಂದಾಗಲಿ, ಕಲಾ ಸೌಂದರ್ಯದ ವಿಷಯದಲ್ಲಿ ತಪ್ಪು ತಿಳಿವಳಿಕೆಗಳಿಲ್ಲವೆಂದಾಗಲಿ, ಸರಿಯಾಗಿರುವ ಕಡೆಗಳಲ್ಲಿ ಕೂಡ ಕವಿತಾಶಕ್ತಿ ತನ್ನ ಗುರಿಯನ್ನು ನೇರವಾಗಿಹೋಗಿ ಮುಟ್ಟಿರುವುದೆಂದಾಗಲಿ ಸಾಧಿಸುವುದು ಮೂಢಭಕ್ತಿ. ಇದರಿಂದ ಪ್ರಯೋಜನವಿಲ್ಲ. ಕೊನೆಗೆ ನಿಲ್ಲುವುದು ಅಭಿಮಾನವಲ್ಲ ಸತ್ಯ."

ಎಂದು ಸಾರಿ ಹೇಳಿದ್ದಾರೆ. ಮುನ್ನುಡಿಯು ಗ್ರಂಥದ ಗೌರವವನ್ನು ಹೆಚ್ಚಿಸತಕ್ಕುದಾಗಿದೆ.

ಈ ಶ್ರೇಷ್ಠವಾದ ವಿಮರ್ಶ ಗ್ರಂಥವನ್ನು ಪ್ರಕಟಿಸಿ ಮೈಸೂರು ವಿಶ್ವವಿದ್ಯಾನಿಲಯ ಸಂಘದವರು, ಅವರಲ್ಲಿಯೂ ಮುಖ್ಯವಾಗಿ ಮುಂದೆನಿಂತು ಉತ್ಸಾಹದಿಂದ ಕೆಲಸಮಾಡಿದ ಮ॥ ರಾ॥ ಎಸ್. ವಿ. ರಂಗಣ್ಣನವರು, ಕನ್ನಡಿಗರೆಲ್ಲರ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಟಿ. ಎಸ್. ವೆಂ.

ಪ್ರಸವಕಾಲದಲ್ಲಿ ಪ್ರಥಮ ಚಿಕಿತ್ಸೆ:—ಆನರಬಲ್ ಡಾಕ್ಟರ್ ಯು. ರಾಮರಾವ್ ಇವರಿಂದ ಇಂಗ್ಲಿಷಿನಲ್ಲಿ ರಚಿತವಾಗಿ, ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಕನ್ನಡಕ್ಕೆ ಪರಿವರ್ತಿತವಾದದ್ದು : ಡೆಮ್ಮಿ ಷೋಡಶಪತ್ರ, ಪುಟಗಳು viii + ೧೦೩ ; ಪ್ರಥಮ ಮುದ್ರಣ, ೧೯೨೮ ; ಬೆಲೆ ೬ ಆಣೆ.

ಡಾ॥ ಯು. ರಾಮರಾಯರನ್ನರಿಯದ ಕನ್ನಡಿಗರಿಲ್ಲ. ಅವರು ಹಿಂದೂಸ್ಥಾನದಲ್ಲೇ ಪ್ರಸಿದ್ಧರು. ಇವರಿಂದ ನಾನಾಭಾಷೆಗಳಲ್ಲಿ ಪ್ರಕಟವಾಗುತ್ತಿರುವ "ಆರೋಗ್ಯಚಂದ್ರಿಕೆಯು" ನಮ್ಮ ಜನಗಳಿಗೆ ಎಷ್ಟು ಸಹಾಯವನ್ನು ಮಾಡುತ್ತಿರುವುದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಕನ್ನಡದಲ್ಲಿ ವಿಜ್ಞಾನಗ್ರಂಥಗಳನ್ನು ಬರೆಯುವುದು ಕಷ್ಟವೆಂದೂ, ಸರಿಯಾದ ಪಾರಿಭಾಷಿಕ ಶಬ್ದಗಳು ಸಿಕ್ಕುವುದು ದುರ್ಲಭವೆಂದೂ, ಅನೇಕರು ವಾದಿಸುತ್ತಿರುವುದು ಸರಿಯಷ್ಟೆ—ಆದರೆ ಡಾ॥ ರಾಮರಾಯರ ಪುಸ್ತಕಪತ್ರಿಕೆಗಳನ್ನು ಓದಿದಲ್ಲಿ, ಆ ಅಭಿಪ್ರಾಯವು ದೂರವಾಗುವುದರಲ್ಲಿ ಸಂದೇಹವಿಲ್ಲ. ಪ್ರಕೃತ ಪುಸ್ತಕವು ಸಣ್ಣದಾಗಿದ್ದರೂ ಇದರಲ್ಲಡಕವಾಗಿರುವ ವಿಷಯಗಳು ಅತ್ಯಂತ ಉಪಯುಕ್ತವಾದವುಗಳು. ಗರ್ಭಿಣಿಯರೂ ಬಾಣಂತಿಯರೂ ಅನುಸರಿಸಬೇಕಾದ ಕೆಲವು ಸಾಮಾನ್ಯ ನಿಯಮಗಳನ್ನು ಬಿಟ್ಟುಬಿಡುವುದರಿಂದಲೇ ನಮ್ಮಲ್ಲಿ ಇತರದೇಶಗಳಿಗಿಂತಲೂ ಹೆಚ್ಚಾಗಿ, ಬಾಣಂತಿಯರೂ, ಶಿಶುಗಳೂ ಸಾಯುತ್ತಿರುವರು—ನಮ್ಮದೇಶದಲ್ಲಿ ಸುಮಾರು ೧೦೦೦ ಶಿಶುಗಳಲ್ಲಿ (೧ನೇ ವರ್ಷದಲ್ಲಿ) ೨೦೦ ಮಾತ್ರ ಬದುಕುತ್ತವೆ; ಇತರದೇಶದಲ್ಲಿ ೮೦೦ ಬದುಕುತ್ತವೆ.

ಗರ್ಭಿಣಿಯರು ರೋಗಿಗಳಲ್ಲ; ಆ ಅವಸ್ಥೆಯು ಸಹಜವಾದದ್ದು—ಅವರನ್ನು ಕೇವಲ ರೋಗಿಗಳಂತೆ ಉಪಚಾರಮಾಡಿ ದುರ್ಬಲರಾಗುವುದಕ್ಕೆ ಸಹಾಯಮಾಡುವವರು ಕೆಲವರಿರುತ್ತಾರೆ. ಮತ್ತೆಕೆಲವರು, ಅವರನ್ನು ಸಾಮಾನ್ಯಜನರಂತೆ ಭಾವಿಸಿ, ಎಂದಿನಂತೆ ಕೆಲಸಕಾರ್ಯಗಳನ್ನು ಮಾಡಿಸುತ್ತಾರೆ— ಈ ಎರಡು ನಡತೆಗಳೂ ತಪ್ಪು. ಗರ್ಭಿಣಿಸ್ತ್ರೀಯರು ಕೇವಲ ಕೆಲಸಮಾಡದಿರಲು ಸಮರ್ಥರಲ್ಲದೆಯೂ ಇಲ್ಲ. ಕಠಿಣಕಾರ್ಯಗಳನ್ನು ಕೈಕೊಳ್ಳಲು ಶಕ್ತರೂ ಅಲ್ಲ. ಅವರು ಆಹಾರ, ಶುಚಿ, ವ್ಯಾಯಾಮ, ಮನೆಕೆಲಸ, ಈ ವಿಚಾರಗಳಲ್ಲಿ ಬಹು ಜಾಗರೂಕರಾಗಿರಬೇಕು. ವಾಂತಿ, ನಿತ್ರಾಣ, ಊದು, ಇವುಗಳು ಕಂಡರೆ ಅಲಕ್ಷ್ಯಮಾಡಬಾರದು.

ನಮ್ಮಲ್ಲಿ ಬಾಣಂತಿಯರು ಅನುಸರಿಸುತ್ತಿರುವ ಕ್ರಮವೂ ಸರಿಯಾಗಿಲ್ಲ—ಕತ್ತಲುಕೋಣೆ, ಬೆಂಕಿಯ ಉರಿ, ಬೆಳ್ಳುಳ್ಳಿವಾಸನೆ, ಹಳೆಯಜೋಡಿಸ ಕಾವಲು ಇಲ್ಲದ ನಿವಾಸಗೃಹವನ್ನು ನೋಡ

ದವರೇ ಇಲ್ಲ. ಈ ಕಲಾಪಗಳಿಲ್ಲದೆ ಕೇವಲ ಸಾಮಾನ್ಯವಾದ ಕೆಲವು ನಿಯಮಗಳನ್ನನುಸರಿಸಿದಲ್ಲಿ ಬಾಣಂತಿಯರೂ ಮನೆಯಲ್ಲಿ ಇತರಜನಗಳಂತೆಯೇ ಇರಬಹುದು. ಅಲ್ಲದೆ ಸ್ವಲ್ಪಖರ್ಚಿನಲ್ಲಿಯೇ ಅವರ ಬಾಣಂತಿತನವನ್ನು ಮುಗಿಸಬಹುದು; ಅನೇಕರಿಗೆ ಬಾಯಿಲೆಯುಂಟಾಗುವುದು. ಇದಕ್ಕೆ ಬಹುಮಟ್ಟಿಗೆ ಅನುಭವವಿಲ್ಲದ, ಶಿಕ್ಷಣವಿಲ್ಲದ, ಸೂಲಗಿತ್ತಿಯರು, ಕೊಳಕು ಬಟ್ಟೆಗಳು, ನೆರೆಹೊರೆಯವರು–ಇವರೇ ಕಾರಣರು. ಪ್ರಸವಕಾಲದಲ್ಲಿ ಬಹು ಜಾಗರೂಕತೆಯೂ, ತಕ್ಕ ಸಿದ್ಧತೆಯೂ ಇರಬೇಕು.

ಮಕ್ಕಳು ಜನಿಸುವುದಕ್ಕೆ ಮೊದಲು, ಅವುಗಳಿಗಾಗಿ ಕೆಲವು ಸಲಕರಣೆಗಳನ್ನು ಸಿದ್ಧಪಡಿಸಿರಬೇಕು. (ಉದಾ:—ಕತ್ತರಿ, ದಾರ, ಅಂಗಿ, ಹೊದಿಸುವ ಬಟ್ಟೆ, ಮೈ ಒರೆಸುವ ಬಟ್ಟೆ, ಮೊದಲಾದುವು) ಆದರೆ ನಮ್ಮಲ್ಲಿ ನಡೆಯುತ್ತಿರುವ ಕ್ರಮವೇನೆಂದರೆ, ಮಗುಹುಟ್ಟಿ, ಕತ್ತಲದಲ್ಲಿ ಬಿದ್ದು ಒರಲುತ್ತಿರುವಾಗ, ಚಾಕು, ಚಾಕು, ಎಂದು ಕೂಗಿಕೊಳ್ಳುವರು; ಜಗಲಿಗಾಣದಿಂದ, ತುಕ್ಕುಹಿಡಿದುಕೊಂಡ ಚಾಕೋ, ಅಥವಾ ಈಳಿಗೆಯಮಣೆಯೋ ಬರುವುದು– ಇಂಥ ಆಯುಧವನ್ನು ಉಪಯೋಗಿಸುವುದರಿಂದಲೇ ಮಕ್ಕಳಿಗೆ ಹತ್ತುದಿನಗಳಲ್ಲಿಯೇ ಅನೇಕ ವಿಧವಾದ ತೊಂದರೆಗಳುಂಟಾಗಿ ಕೊನೆಗೆ ಸಾಯುವುವು. ಈ ತೊಂದರೆಗಳು ಸಂಭವಿಸದಂತೆ ಮಾಡುವುದು ಎಲ್ಲರಿಂದಲೂ ಸಾಧ್ಯ.

ನಮ್ಮಲ್ಲಿ ಶಿಶುಗಳಿಗೆ ಸ್ತನ್ಯಪಾನವನ್ನು ಮಾಡಿಸುವವರೇ ಹೆಚ್ಚಾಗಿರುವರು; ಆದರೆ ಇವರಲ್ಲಿ ಕಾಲಕ್ರಮವಾಗಲಿ, ನಿಯಮಗಳಾಗಲಿ, ಇಲ್ಲ. ಇದರಿಂದ ತಾಯಿಗೂ ಮಗುವಿಗೂ ಇಬ್ಬರಿಗೂ ತೊಂದರೆಯುಂಟು. ನವನಾಗರಿಕರಾದ ಕೆಲವರು ಅನೇಕಕಾರಣಗಳಿಂದ ಮಕ್ಕಳಿಗೆ ಸ್ತನ್ಯಪಾನವನ್ನು ಮಾಡಿಸುವುದಿಲ್ಲ– (ಈ ಅಂಟುರೋಗವು ಈಗಲೇ ಮೂಲೋತ್ಪಾಟನವಾಗಬೇಕು)– ಅವರು ಬುಡ್ಡಿಗಳಿಂದ ಹಾಲುಹಾಕುವರು. ಅಥವಾ ದಾದಿಯರನ್ನಿಟ್ಟು ಹಾಲು ಕೊಡಿಸುವರು; ಈ ಕ್ರಮವನ್ನನುಸರಿಸುವುದರಿಂದ ಅನೇಕ ತೊಂದರೆ

ಗಳು ಉಂಟಾಗುತ್ತವೆ. ಈ ಮೇಲೆಕಂಡ ಅಂಶಗಳನ್ನೆಲ್ಲಾ ಕುರಿತು ಈ ಗ್ರಂಥವು ಬಹು ಉಪಯುಕ್ತವಾದ ವಿಷಯಗಳನ್ನು ಕೈಲಾದಷ್ಟು ಸುಲಭವಾದ ಭಾಷೆಯಲ್ಲಿ ತಿಳಿಸಿಹೇಳಿದೆ.

ಮೊದಲಭಾಗದಲ್ಲಿ ಗರ್ಭ ಮತ್ತು ಪ್ರಸವಗಳಿಗೆ ಸಂಬಂಧಪಟ್ಟ ಅವಯವಗಳ ಸ್ವರೂಪದ ವರ್ಣನೆಯಿದೆ. ಗ್ರಂಥದ ಉದ್ದಕ್ಕೂ ಅಲ್ಲಲ್ಲೆ ಚಿತ್ರಗಳಿವೆ. ಇವು ಈ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸುವುದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ಈ ಪುಸ್ತಕವು, ಎಲ್ಲರ ಮನೆಯಲ್ಲಿಯೂ, ಹೆಂಗಸರು ಗಂಡಸರು ಎಲ್ಲರ ಕೈಯಲ್ಲಿಯೂ ಇರಬೇಕಾದದ್ದು. ಆದರೆ, ಈ ಗ್ರಂಥದಲ್ಲಿರುವ ವಿಷಯಗಳ ರಚನೆಯ ಸಂಬಂಧವಾಗಿ ಕೆಲವು ಅಂಶಗಳನ್ನು ಇಲ್ಲಿ ಸೂಚಿಸಲು ಅಪೇಕ್ಷಿಸುತ್ತೇವೆ:—

ಇದರಲ್ಲಿರುವ ವಿಷಯಾನುಕ್ರಮವು, ಸಾಮಾನ್ಯವಾಗಿ ಹೆರಿಗೆಯ ವಿಚಾರವನ್ನು ತಿಳಿಸುವ ಪಠ್ಯಗ್ರಂಥಗಳಲ್ಲಿರುವ ಕ್ರಮವನ್ನೇ ಅನುಸರಿಸಿದೆ. ಆದರೆ ಪಠ್ಯಪುಸ್ತಕಗಳಿಗೂ "ಪ್ರಥಮ ಚಿಕಿತ್ಸೆ"ಗೂ ಉದ್ದೇಶ್ಯ ಒಂದೇ ಅಲ್ಲ; ಆದ್ದರಿಂದ ವಿಷಯಪ್ರತಿಪಾದನ ಕ್ರಮದಲ್ಲಿ ಸ್ವಲ್ಪ ಬದಲಾವಣೆಮಾಡಿ, ಕಟೀರಸ್ವರೂಪ ಗರ್ಭ ಹೆರಿಗೆ ಮುಂತಾದ ವಿಷಯಗಳನ್ನು ತಿಳಿಸುವಾಗ ಮೊದಲು ಸಾಧಾರಣವಾದ ಮತ್ತು ಸ್ವಾಭಾವಿಕವಾದ ಸ್ಥಿತಿಗಳನ್ನು ಒಂದುಕಡೆ ವಿವರಿಸಿ ಅನಂತರ ಆಯಾ ಸಂಬಂಧವಾಗಿ ನಡೆಸಬಹುದಾದ ಪ್ರಥಮ ಚಿಕಿತ್ಸೆಯನ್ನು ಹೇಳಿ ಆಮೇಲೆ ಅಸಾಧಾರಣವಾದ ಅಸ್ವಾಭಾವಿಕವಾದ ಸ್ಥಿತಿಗಳನ್ನು ಸ್ವತಂತ್ರವಾಗಿ ವಿವರಿಸಿದರೆ ಪಾಠಕರು ಸುಲಭವಾಗಿ ಗ್ರಹಿಸಬಹುದೆಂದು ತೋರುತ್ತದೆ.

ಪಿ. ಕೃ. ರಾ.

ಮೈಸೂರು ವ್ಯವಸಾಯ ಶೋಧಕ ಸಂಘದ ಪತ್ರಿಕೆ. ಸಂಪುಟ ೫ ಸಂಚಿಕೆ ೧. ವಾರ್ಷಿಕ ಚಂದಾ ೩ ರೂಪಾಯಿ.

ಇದು ಮೈಸೂರು "ವ್ಯಾವಸಾಯಿಕ ಮತ್ತು ಪರೀಕ್ಷಕ ಸಂಘದ ಪತ್ರಿಕೆ" ಎಂದು ೧೯೨೦ ರಿಂದ ತ್ರೈಮಾಸಿಕ ಪತ್ರಿಕೆ

ಯಾಗಿ ನಾಲ್ಕು ವರ್ಷಗಳಕಾಲ ನಡೆದು ನಿಂತಿತ್ತು. ಹಾಗೆ "ನಿಂತಿದ್ದ ಪತ್ರಿಕೆಯು ಪುನಃ ಈಗ ನಡೆಯುವುದು ಮಾತ್ರವಲ್ಲ, ಓಡಹತ್ತಿದೆ. ಕನ್ನಡ ಪತ್ರಿಕೆಯು ತಿಂಗಳಿಗೊಂದಾವರ್ತಿ ಹೊರಡುವುದು. ಇಷ್ಟು ವೇಗವಾದ ಓಟಕ್ಕೆ ಶಕ್ತಿಯೆಲ್ಲಿಂದ ಬಂದಿತೆಂಬುದು ನಮಗೆಲ್ಲರಿಗೂ ಗೊತ್ತು. ಒಬ್ಬರ ಕಾರ್ಯಸಾಧಕಶಕ್ತಿ, ಮತ್ತೊಬ್ಬರ ಪ್ರಜಾ ಸೇವಾಕಾಂಕ್ಷೆ ಮತ್ತು ಔದಾರ್ಯ—ಇವುಗಳೇ ನಮ್ಮ ಉತ್ತೇಜನಕ್ಕೆ ಕಾರಣಗಳು....ಈ ಪತ್ರಿಕೆಯು ಕೃಷಿಜನಸೇವೆಯೊಂದೇ ಧ್ಯೇಯವನ್ನಿಟ್ಟುಕೊಂಡು ದೀರ್ಘಾಯುವಾಗಿ ಬದುಕಲೆಂದು ನಮ್ಮ ಹಾರೈಕೆ." ಎಂದು ಪತ್ರಿಕೆಯ ಸಂಪಾದಕರು ತಿಳಿಸುತ್ತಾರೆ. ವ್ಯವಸಾಯದ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾ॥ ಕೋಲ್ಮನ್ ರವರ ತಿಳಿವಳಿಕೆ ಉತ್ಸಾಹಗಳಲ್ಲಿ ಜನರಿಗೆ ಎರಡು ಅಭಿಪ್ರಾಯವಿಲ್ಲ. ಅವರು ಕೊಡುವ ತಿಳಿವಳಿಕೆಯಿಂದ ರೈತರಿಗೆ ತುಂಬ ಪ್ರಯೋಜನ ಕಂಡುಬಂದಿದೆ. ಆದರೆ ಈ ಇಲಾಖೆಯವರು ಪಟ್ಟಿರುವ ಶ್ರಮಕ್ಕೂ ಮಾಡಿರುವ ಖರ್ಚಿಗೂ ಎಷ್ಟುಮಂದಿ ರೈತರಿಗೆ ಎಷ್ಟು ಪ್ರಯೋಜನವಾಗಬಹುದೆಂದು ನಿರೀಕ್ಷಿಸಬಹುದೋ ಅಷ್ಟು, ಅಥವಾ ಅದರಲ್ಲಿ ಹೆಚ್ಚು ಭಾಗವಾದರೂ, ಆಗಿಲ್ಲವೆಂಬುದು ಅನೇಕರ ಭಾವವಾಗಿರುವಂತೆತೋರುತ್ತದೆ. ಇದಕ್ಕೆ ನಮ್ಮರೈತರ ಸಂಪ್ರದಾಯ ಪ್ರೀತಿಯೂ, ವಿದ್ಯಾವಿಹೀನತೆಯೂ ಕಾರಣವಿರಬಹುದು. ಆದರೂ ಉಪಯೋಗವಿದೆ ಎಂದು ಮಂದಟ್ಟಾದರೆ ಎಂಥ ಮಂಕನಾದರೂ ಬೋಧನೆಗೂ ಬದಲಾವಣೆಗೂ ಮನಸ್ಸುಕೊಟ್ಟಾನು. ಕೆಲವುಕಡೆ ವಿದ್ಯಾವಂತರೂ ನವೀನ ರೀತಿಯ ವ್ಯವಸಾಯಕ್ಕೆ ಕೈ ಹಾಕಿ, ಎಡವಟ್ಟಾಗಿ, ನಷ್ಟಪಟ್ಟಿರುವುದುಂಟು. ಆದ್ದರಿಂದ ವ್ಯವಸಾಯ ಸಂಘದವರ ಕಾರ್ಯಕ್ಕೆ ಇನ್ನೂ ಬೇಕಾದಹಾಗೆ ಆವಶ್ಯಕತೆಯಿದೆ. "ಕೃಷಿ ಜನರ ಸೇವೆಯೊಂದೇ ಧ್ಯೇಯವನ್ನಿಟ್ಟುಕೊಂಡು" ಇರುವ ಪತ್ರಿಕೆಗೆ ವಾರ್ಷಿಕ ಚಂದಾ ಮೂರು ರೂಪಾಯಿ ಹೆಚ್ಚೆಂದು ತೋರುತ್ತದೆ. ಸರ್ಕಾರದ ಸಹಾಯವಿರುವುದರಿಂದಲೂ ಮೈಸೂರು ಪ್ರಾಂತದಲ್ಲಿ ಸರ್ಕಾರಿಯಾಗಿ ಪತ್ರಿಕೆ

ಯನ್ನು ಕಳುಹಿಸಬಹುದಾದ್ದರಿಂದಲೂ ಚಂದಾ ಹಣವನ್ನು ಕಡಿಮೆ ಮಾಡುವುದು ಕಷ್ಟವಾಗಿ ತೋರುವುದಿಲ್ಲ. ಕಾಗದ ಮುದ್ರಣಗಳೇನೋ ಚೆನ್ನಾಗಿವೆ. (ಬೆಂಗಳೂರು ಪ್ರೆಸ್ಸಿನ ಕೆಲಸ, ಕೇಳಬೇಕೆ !) ಅದಕ್ಕೋಸ್ಕರವೇ ಖರ್ಚು ಸ್ವಲ್ಪ ಹೆಚ್ಚಾಗಿರಬಹುದು. ಆದರೂ ಅದನ್ನು ಇಳಿಸಬೇಕೆಂದೂ, ಇಳಿಸಬಹುದೆಂದೂ ತೋರುತ್ತದೆ. ಹಾಗಲ್ಲದಿದ್ದರೆ ಈ ಪತ್ರಿಕೆಯು ಹೆಚ್ಚು ಜನ ರೈತರ ಕೈ ಸೇರುವಹಾಗೂ ಅದರ ವಿಷಯಗಳು ಅವರ ಕಿವಿಗೆ ಬೀಳುವಹಾಗೂ ಈ ಸಂಘದವರು ಮತ್ತಾವ ಏರ್ಪಾಡನ್ನು ಮಾಡಿದ್ದಾರೊ ನಮಗೆ ತಿಳಿಯದು.

ಈ ಸಂಚಿಕೆಯಲ್ಲಿ ಡಾ|| ಕೋಲ್ಮರ್‌ರವರ "ಇಪ್ಪತ್ತುವರ್ಷಗಳ ಅನಂತರ" ಎಂಬ ಒಂದು ಉತ್ತೇಜಕವಾದ ಲೇಖನ(ದ ಭಾಷಾಂತರ) ಇದೆ. ಅದರಿಂದ ಕೆಲವು ವಾಕ್ಯಗಳನ್ನು ಇಲ್ಲಿ ಎತ್ತಿ ಬರೆಯುತ್ತೇವೆ. ಶಿಕ್ಷಣ ಪ್ರಚಾರವು ಇಂಥ ಇಲಾಖೆಗಿಂತ ಮತ್ತಾವುದರಲ್ಲಿ ಕನ್ನಡದ ಮೂಲಕ ಆಗಬಹುದು ! ಆದ್ದರಿಂದ ಯಾರಿಗಾದರೂ ಇದರ ಅಧ್ಯಕ್ಷರಂಥ ದೊಡ್ಡದೊಡ್ಡ ಸಂಸ್ಥಾನಾಧಿಕಾರಿಗಳು ಕನ್ನಡವನ್ನು ಓದಿ ಬರೆದು ಆಡಿ ತಿಳಿದುಕೊಳ್ಳುವವರಾದರೆ ಎಷ್ಟು ಎಳ್ಳೆಯದು ಎನ್ನಿಸದಿರಲಾರದು.

"ಯಾವ ರಾಜ್ಯದಲ್ಲಿಯೇ ಆಗಲಿ ಅಲ್ಲಿನ ಜನಜೀವನದಲ್ಲಿ, ಯುವಕರ ಶಿಕ್ಷಣ, ದೇಶಕ್ಕೆ ಬೇಕಾದ ಆಹಾರವಸ್ತು ಉತ್ಪತ್ತಿ, ಇವೆರಡೂ ಮುಖ್ಯವಾದ ವಿಷಯಗಳು........ಭೂಮಿಯ ಮಾಲೀಕನೇ ಏಕೆ, ಕೃಷಿ ಕೆಲಸದ ಕೂಲಿಗಾರನೂ ಸಹ ಒಂದು ಮೋಟಾರಿಟ್ಟಿರುವನು. ಮೋಟಾರಿನ ಬೆಲೆ ಪೂರ್ತಿ ಇನ್ನೂ ಕೊಟ್ಟಿಲ್ಲದಿರಬಹುದು ; ಬೆಲೆಯ ಸಣ್ಣ ಕಂತು ಒಂದನ್ನಾದರೂ ಕೊಟ್ಟಿರುವನು. ಮನೆಯೊಳಗಿನ ಸೌಲಭ್ಯಗಳನ್ನು ನೋಡಿದರೋ 'ಟೆಲಿಫೋನಿಲ್ಲದ ಮನೆಯೊಂದಿದೆ ಕೆನಡಾ ರಾಜ್ಯದಲ್ಲಿ' ಎಂಬ ಮಾತನ್ನೇ ನಾನು ಕೇಳಲಿಲ್ಲ........ವಿದ್ಯುಚ್ಛಕ್ತಿಯನ್ನು ಉಪಯೋಗಿಸದವನೇ ಇಲ್ಲ. ಮನೆ, ಕೊಟ್ಟಿಗೆ, ಕಟ್ಟಡಗಳು ಇವುಗಳಿಗೆ ವಿದ್ಯುಚ್ಛಕ್ತಿಯ ಬೆಳಕೇ ಬೆಳಕು. ಒಕ್ಕಲುತನದ ಯಂತ್ರಗಳನ್ನು ನಡೆಸುವ ಶಕ್ತಿಯೂ ವಿದ್ಯುಚ್ಛಕ್ತಿಯೇ........ಗ್ರಾಮಾಂತರ ಜನ

ಜೀವನದ ತಿಳಿವಳಿಕೆಯೂ ಅದರಲ್ಲಿ ಉತ್ಸಾಹವೂ ಗ್ರಾಮ ಪಾಠಶಾಲೆಗಳ ಉಪಾಧ್ಯಾಯರಲ್ಲಿಯೂ ಅವರ ಮೂಲಕ ಗ್ರಾಮ ಪಾಠಶಾಲೆಗಳಲ್ಲಿಯೂ ಹುಟ್ಟಿ ಬೆಳೆಯುವುದಕ್ಕೆ ವಿದ್ಯಾ ಶಾಖೆಯಲ್ಲಿ ಒಂದು ಮುಖ್ಯವಾದ ಅಂಗವೇ ಏರ್ಪಟ್ಟಿದೆ.........ಅಲ್ಲಿ ಕಂಡು ಬರುವುದಕ್ಕಿಂತಲೂ ವಿಶೇಷವಾದ ಬದಲಾವಣೆಗಳು ನಮ್ಮ ಮೈಸೂರಿನಲ್ಲಿಯೂ ಏಕಾಗಬಾರದು ?........''

ಎ. ಆರ್. ಕೃ.

ಕರ್ಣಾಟಕ ನವಜೀವನ, ವರ್ಷ ೧, ಸಂಚಿಕೆ ೧. ಪ್ರಕಾಶಕರು, ಬಿ.ಸಿ. ಪುರಾಣಿಕರು, ಬಬಲೇಶ್ವರ. ಡೆಮ್ಮಿ ಅಷ್ಟಪತ್ರ ; ಪುಟಗಳು ೪೮ ; ವಾರ್ಷಿಕ ಚಂದಾ ರೂ. ೨-೧೨-೦.

ಇದೊಂದು ಹೊಸ ಮಾಸಪತ್ರಿಕೆ. ಇದರ ಉದ್ದೇಶವನ್ನು ಸಂಪಾದಕರು ''ನಮ್ಮ ಧ್ಯೇಯವು'' ಎಂಬ ಅಗ್ರಲೇಖನದಲ್ಲಿ ಹೀಗೆ ತಿಳಿಸುತ್ತಾರೆ:—

''ನಮ್ಮ ಯಾವತ್ತು ಮಾಸ ವ ವಾರ ಪತ್ರಿಕೆಗಳು ಒಂದು ತರದ ಹಳೇ ಪದ್ಧತಿಯನ್ನೇ ಅವಲಂಬಿಸಿ, ಒಂದೇ ಒಂದು ತರದ ಹಳೇಪದ್ಧತಿಯನ್ನೇ ಅವಲಂಬಿಸಿ, ಒಂದೇ ಒಂದು ಮಾರ್ಗದಿಂದ ನಡೆಯುತ್ತಿರುವವು. ಅವುಗಳಲ್ಲಿ ಹೊಸ ತರದ ಕಲ್ಪನೆಗಳೇನೂ ಇರುವುದಿಲ್ಲ. ಅವುಗಳಲ್ಲಿ ಶಾಸ್ತ್ರೀಯ ದೃಷ್ಟಿಯಿಂದ ಆರ್ಥಿಕ ವ ರಾಜಕೀಯ ವಿಷಯಗಳ ವಿವೇಚನೆಯಾಗಿರುವದಿಲ್ಲ. ಕಾರಣ ಈ ಕೊರತೆಯನ್ನು ಹೋಗಲಾಡಿಸುವ ಮೂಲಕ ಈ ನಮ್ಮ ಮಾಸಪತ್ರಿಕೆಯು ಉದ್ಭವಿಸಿರುವದು....ಇದಲ್ಲದೆ ಭಾಷಾ ಸೇವೆಯನ್ನು ಮಾಡಬೇಕಾದ ಧ್ಯೇಯವಾದರೂ ನಮ್ಮದಿರುತ್ತದೆ........''

ಮೇಲೆಕಂಡ ಸಂಪಾದಕೀಯ ಲೇಖನವಲ್ಲದೆ ಈ ಸಂಚಿಕೆಯಲ್ಲಿ, ''ನಾಟಕಗಳೂ ಲೋಕಶಿಕ್ಷಣವೂ'', ''ನಮ್ಮ ಹಳ್ಳಿಗಾಡಿನ ಸುಧಾರಣೆ'' ''ಕರ್ಣಾಟಕ ವಿಭೂತಿಗಳು'' ಎಂಬ ಲೇಖನಗಳೂ, ಎರಡು ''ವಗಟ''ಗಳೂ, ''ಕಾಲನೇ ! '' ಎಂಬ ಕವಿತೆಯೂ, ''ಬಿಡಿನುಡಿ''

ಗಳೂ "ಚಂದ್ರಗಿರಿ" ಎಂಬ ಐತಿಹಾಸಿಕ ನಾಟಕದ ಎಂಟು ಪುಟಗಳೂ ಇವೆ. ಇವುಗಳಿಂದ ಈ ಪತ್ರಿಕೆಯ ಸ್ವರೂಪವು ತಿಳಿಯುತ್ತದೆ.

ಉತ್ತರ ಕರ್ಣಾಟಕದ ಅನೇಕ ಮಹನೀಯರು ಇದಕ್ಕೆ ಸಹಾಯಮಾಡುವದಾಗಿ ಒಪ್ಪಿದ್ದಾರೆಂದು ತಿಳಿಯುತ್ತದೆ. "ಈ ಕರ್ನಾಟಕ ನವಜೀವನವೆಂಬ ಮಾಸಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿ ಹೊರಡುವ ಉತ್ತಮ ಮಾಸಪತ್ರಿಕೆಗಳಲ್ಲಿ ಗಣನೆಯಾಗಬೇಕೆಂದು ನಮ್ಮ ಸಾಹಸವು" ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ. ನಮ್ಮ ಹಾರೈಕೆಯೂ ಅದೇಯೆ.

ಎ. ಆರ್. ಕೃ.

ಸತ್ಯಾಗ್ರಹ ಅಥವಾ ನ್ಯಾಯದೇವತೆಯ ಅವತಾರ; ಪ್ರೇಮ ಮಾಲೆ, ಪುಷ್ಪ ೬: ಮ|| ಆ. ಸರ್ವಾಭಟ್ಟರಿಂದ; ಕ್ರೌ ಅಷ್ಟಪತ್ರ; ಪುಟಗಳು ೩೭; ಬೆಲೆ ೩ ಆಣೆ.

ಈ ಸಣ್ಣಗ್ರಂಥವು ಮ|| ಗಾಂಧಿಯವರು ಆರಂಭಿಸಿದ ಸತ್ಯಾಗ್ರಹ ಸ್ವರೂಪವನ್ನು ವಿವರಿಸುವ ಉದ್ದೇಶದಿಂದ ಬರೆದದ್ದಾಗಿದೆ. "ಇಹಜೀವನದ ಮಾರ್ಗದಲ್ಲಿ, ಅದರಲ್ಲೂ ರಾಜಕೀಯ ಪಥದಲ್ಲಿ ಸಾತ್ವಿಕ ಜ್ಯೋತಿಯ ಪ್ರಕಾಶಕ್ಕೆ ಸಾಧಕವಾದ ಎಣ್ಣೆ ಬತ್ತಿಗಳ ಸಂಗ್ರಹವೇ ಸತ್ಯಾಗ್ರಹವು!" ಎಂಬುದು ಅವರ ಅಭಿಪ್ರಾಯದ ಸಾರಾಂಶ.

ಅಖಿಲ ಕರ್ಣಾಟಕ ಪ್ರಥಮ ಹಿಂದೀ ಪ್ರಚಾರ ಸಮ್ಮೇಳನದ ಭಾಷಣಗಳು ಮತ್ತು ಕಾರ್ಯ ವಿವರಣೆ. ಬೆಂಗಳೂರು, ೧೯೨೭.

ಇದರಲ್ಲಿ ಮೇಲೆಕಂಡ ಸಮ್ಮೇಳನದ ಸ್ವಾಗತಾಧ್ಯಕ್ಷರ ಭಾಷಣ, ಪಂಡಿತ ಮಾಲವೀಯರ ಪ್ರಾರಂಭೋತ್ಸವ ಭಾಷಣ, ಮ|| ಗಾಂಧಿಯವರ ಅಧ್ಯಕ್ಷಭಾಷಣ, ಸಮ್ಮೇಳನದಲ್ಲಿ ಸ್ವೀಕೃತವಾದ ಠರಾವುಗಳು ಮುಂತಾದ ವಿಷಯಗಳಿವೆ. ಮ|| ಗಾಂಧೀಯವರ ಈಭಾಷಣ

ದಿಂದ ನಮ್ಮ ಭಾಷೆಗೆ ಸಂಬಂಧಪಡುವ ಕೆಲವು ವಾಕ್ಯಗಳನ್ನು ಇಲ್ಲಿ ತೆಗೆದು ಬರೆದಿದ್ದೇವೆ.—

"ನಾನು ನಿಮ್ಮ ಮಾತೃಭಾಷೆಯನ್ನು ಕೊಲ್ಲಲಿಚ್ಛಿಸುವುದಿಲ್ಲ, ಮತ್ತು ರಾಷ್ಟ್ರಭಾಷೆಯನ್ನು ಅಲಕ್ಷಿಸುವುದೂ ಇಲ್ಲ. ತಂತಮ್ಮ ತಾಯ್ನುಡಿಯನ್ನು ಯಾರೂ ಅಲಕ್ಷಿಸಬಾರದು. ಆದರೆ 'ನಾನು ಭಾರತೀಯನು' ಎಂದು ಹೇಳಿಕೊಳ್ಳುವುದಕ್ಕೆ ಇಷ್ಟಪಡುವ ಪ್ರತಿಯೊಬ್ಬನೂ ರಾಷ್ಟ್ರಭಾಷೆಯನ್ನು ಕಲಿತುಕೊಳ್ಳಬೇಕು. ಹಿಂದೀ ಕಲಿಯುವುದಕ್ಕೆ ಬಹಳ ಶ್ರಮಪಡಬೇಕಾಗಿಲ್ಲ.....ಖಾದಿಯು ಧನಿಕ ನಿರ್ಧನಿಕರನ್ನು ಒಂದುಗೂಡಿಸುವ ಸಾಧನವಾಗಿರುವಂತೆ ನಾಗರಿ ಲಿಪಿಯು ದಕ್ಷಿಣೋತ್ತರ ಭೇದಗಳನ್ನು ಹೋಗಲಾಡಿಸುವ ಸಾಧನವಾಗಿದೆ. ಪ್ರಾಂತೀಯತೆಯ ಕೂಪಮಂಡೂಕತನವನ್ನು ಬಿಟ್ಟು ನಾವು ವಿರಾಟ್–ಭಾರತದ ಮಹಾ ಸಮುದ್ರದಲ್ಲಿ ಐಕ್ಯವಾಗಲು ಇಷ್ಟಪಡುವುದಾದರೆ ನಮ್ಮ ಕರ್ತವ್ಯವನ್ನು ಅರಿತುಕೊಳ್ಳೋಣ."

ಕರ್ಣಾಟಕ ಸಂಕ್ಷೇಪ ರಾಮಾಯಣಂ (ಬಾಲಕಾಂಡ). ಮೈಸೂರಿನ ಶಾರದಾವಿಲಾಸ ಸ್ಕೂಲು ಕನ್ನಡ ಪಂಡಿತರಾದ ಮ॥ ಗೌರೀ ದೇವನೃಸಿಂಹ ಶಾಸ್ತ್ರಿಗಳಿಂದ ರಚಿತವಾದದ್ದು: ೧೯೨೮; ಡೆಮ್ಮಿ ಅಷ್ಟಪತ್ರ ಪುಟಗಳು ೨೫; ಬೆಲೆ?

ಇದು ಭಾಮಿನೀ ಷಟ್ಪದಿಯಲ್ಲಿರುವ ಒಂದು ಪದ್ಯಗ್ರಂಥ. ಈ ಗ್ರಂಥದ "ವಿಜ್ಞಾಪನೆ"ಯಲ್ಲಿ ಮ॥ ಶಾಸ್ತ್ರಿಗಳು "ಶ್ರೀಮದ್ರಾಮಾಯಣ ಪ್ರಾರಂಭದಲ್ಲಿ ನಾರದ ಮಹರ್ಷಿಗಳು ವಾಲ್ಮೀಕಿ ಋಷಿಗಳಿಗೆ ಬೋಧಿಸಿದ ಸಂಕ್ಷೇಪ ರಾಮಾಯಣ ಕಥಾ ಭಾಗವನ್ನೇ ಮುಖ್ಯಾಧಾರವಾಗಿಟ್ಟುಕೊಂಡು.....ಸುಮಾರು ೮೦೦ ಪದ್ಯಗಳಲ್ಲಿಯೆ ಆದ್ಯಂತ ರಾಮಾಯಣವನ್ನು ರಚಿಸಿರು"ವುದಾಗಿ ತಿಳಿಸುತ್ತಾರೆ. ಪ್ರಕೃತದಲ್ಲಿ ೫೭ ಪದ್ಯಗಳೊಳಗೆ ಅಡಕವಾದ ಈ ಬಾಲಕಾಂಡಮಾತ್ರ ಪ್ರಕಟವಾಗಿದೆ. ಗ್ರಂಥಕರ್ತರು ಉತ್ತರೋತ್ತರ ಉಳಿದಕಾಂಡಭಾಗಗಳನ್ನೂ ಅಚ್ಚುಮಾಡಿಸುವವರಾಗಿರುವರು.

ವಸ್ತುಕೋಶ

ಕರ್ಣಾಟಕ ಸಂಘದಲ್ಲಿ ಈಚೆಗೆ ನಡೆದ ಕಾರ್ಯಗಳೊಳಗೆ ದೊಡ್ಡದೂ ಮುಖ್ಯವೂ ಆದದ್ದು "ವಿದ್ಯಾರ್ಥಿಕವಿ ಸಮ್ಮೇಳನ".

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕವಿಗಳ ಸಮ್ಮೇಳನ.

ಇದು ಕಳೆದ ಡಿಸೆಂಬರ್ ತಿಂಗಳು ೧೫ನೇ ತಾರೀಖು ಶನಿವಾರ ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರ ಭವನದಲ್ಲಿ ನಡೆಯಿತು. "ವಿದ್ಯಾರ್ಥಿಕವಿ ಸಮ್ಮೇಳನ" ವೆಂಬ ಹೆಸರಿಗೆ ತಕ್ಕಹಾಗೆ ಆ ಸಮ್ಮೇಳನದಲ್ಲಿ ಭಾಗಿಗಳಾಗಿದ್ದವರೆಲ್ಲರೂ ವಿದ್ಯಾರ್ಥಿಗಳೇ:—ಅದನ್ನು ಏರ್ಪಡಿಸಿದವರು ವಿದ್ಯಾರ್ಥಿಗಳು; ಅದರ ಖರ್ಚನ್ನೂ ಶ್ರಮವನ್ನೂ ವಹಿಸಿದವರು ವಿದ್ಯಾರ್ಥಿಗಳು ; ಸ್ವಾಗತ ಮಂಡಲಿಯ ಸದಸ್ಯರು ವಿದ್ಯಾರ್ಥಿಗಳು ; ಅದರ ಅಧ್ಯಕ್ಷರು ವಿದ್ಯಾರ್ಥಿಗಳು ; ಕವಿತೆಗಳನ್ನು ಬರೆದು ತಂದು ಓದಿದ ಕವಿಗಳು ವಿದ್ಯಾರ್ಥಿಗಳು ; ಅವರಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದವರು ವಿದ್ಯಾರ್ಥಿಗಳು ; ಹೂವಿನ ಮಧ್ಯದ ಮಕರಂದದಂತೆ ಸಮ್ಮೇಳನದ ನಡುವೆ ಇನಿದಾದ ಸಂಗೀತವನ್ನು ತಂದು ಮಧುರವಾದ ವಸ್ತುವನ್ನು ಮಧುರತರವಾಗಿ ಮಾಡಿದವರು ವಿದ್ಯಾರ್ಥಿಗಳು.

ಆ ದಿನ ಅಧ್ಯಕ್ಷರಾಗಿದ್ದವರು ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಎಂ. ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮ॥ ಕೆ. ವಿ. ಪುಟ್ಟಪ್ಪ, ಬಿ. ಎ. ಅವರು; ಸೆಂಟ್ರಲ್ ಕಾಲೇಜು ಸೀನಿಯರ್ ಬಿ. ಎ. ಕ್ಲಾಸಿನಲ್ಲಿ ಓದುತ್ತಿರುವ ಮ॥ ಜಿ. ಕೃಷ್ಣಯ್ಯಂಗಾರ್ಯರು ಸ್ವಾಗತ ಮಂಡಲಿಯ ಅಧ್ಯಕ್ಷರು ; ಮ॥ ಡಿ. ಆರ್. ರಾಮಯ್ಯ ಮತ್ತು ಮ॥ ಎ. ಎನ್. ವೆಂಕಟೇಶಯ್ಯ ಇವರಿಬ್ಬರೂ

ಕಾರ್ಯದರ್ಶಿಗಳು. ಹೀಗೆ ಎಲ್ಲವೂ ವಿದ್ಯಾರ್ಥಿಗಳಿಂದಲೇ ನಡೆದರೂ ಅಂದಿನ ಕಾರ್ಯ ಕಲಾಪಗಳು ವಿಜೃಂಭಣೆಯಲ್ಲಿ ಕಡಿಮೆಯಾಗಿರಲಿಲ್ಲ ವೆಂದು ಅನೇಕರು ಆನಂದಪಟ್ಟರು.

ಆ ದಿವಸ ಸ್ವಾಗತ ಮಂಡಲಿಯ (ಸುಮಾರು ಇಪ್ಪತ್ತೈದು ಜನ) ಸದಸ್ಯರು ಮಧ್ಯಾಹ್ನ ಮೂರು ಘಂಟೆಗೆ ಸೇರಿ ಅಧ್ಯಕ್ಷರು ಮತ್ತು ಅತಿಥಿ ಅಭ್ಯಾಗತರೊಡನೆ ಫಲಾಹಾರ ತಾಂಬೂಲಾದಿಗಳನ್ನು ತೆಗೆದು ಕೊಂಡು, ವಿನೋದವಾಗಿ ಸಂಭಾಷಣೆಗಳನ್ನು ನಡೆಸುತ್ತ, ಭಾವ ಚಿತ್ರದಲ್ಲಿ ಸೇರಿ, ಮಂಗಳವಾದ್ಯಗಳಾಗುತ್ತಿರಲು ತಳಿರುತೋರಣಗ ಳಿಂದ ಶೋಭಿಸುತ್ತಿದ್ದ ಸಭಾ ಭವನಕ್ಕೆ ಅಧ್ಯಕ್ಷರನ್ನೂ ವಿದ್ಯಾರ್ಥಿ ಕವಿಗಳನ್ನೂ ಕರೆದುಕೊಂಡು ಬಂದರು. ಸ್ವಾಗತ ಮಂಡಲಿಯ ಅಧ್ಯಕ್ಷರು ಉಚಿತವೂ ಸಂಕ್ಷಿಪ್ತವೂ ಆದ ಭಾಷಣದಲ್ಲಿ ಮಹಾಜನ ರನ್ನು ಸ್ವಾಗತಕೊಟ್ಟು ಬರಮಾಡಿಕೊಂಡು, ಮೈಸೂರು ವಿಶ್ವವಿದ್ಯಾ ಲಯದ ವಿದ್ಯಾರ್ಥಿಕವಿಗಳಲ್ಲಿ ಗಣ್ಯರಾದವರೂ, ಮ॥ ಬಿ. ಎಂ. ಶ್ರೀಕಂ ಠಯ್ಯನವರ ಮೊಟ್ಟಮೊದಲನೆಯ 'ರಜತಮಹೋತ್ಸವ ಸ್ವರ್ಣಪದಕ' ವನ್ನು ಪಡೆದು ಸನ್ಮಾನಿತರೂ ಆದ ಮ॥ ಕೆ. ವಿ. ಪುಟ್ಟಪ್ಪನವರು ಅಗ್ರಾಸನವನ್ನು ಅಲಂಕರಿಸಬೇಕೆಂದು ಪ್ರಾರ್ಥಿಸಿದರು. ಮಹಾ ರಾಜಾ ಕಾಲೇಜಿನ ವಿದ್ಯಾರ್ಥಿಗಳಾದ ಮ॥ ಚನ್ನಭಟ್ಟರು ಅವರ ಸೂಚನೆಯನ್ನು ಅನುಮೋದಿಸಿದಮೇಲೆ ಮ॥ಪುಟ್ಟಪ್ಪನವರು ಅಗ್ರಾ ಸನವನ್ನು ವಹಿಸಿ ಕಾರ್ಯವನ್ನು ಆರಂಭಿಸಿದರು. ಅನಂತರ ಶ್ರೀಮತೀ ಅನ್ನಪೂರ್ಣಾಬಾಯಿಯವರೂ ಮ॥ ಕೃಷ್ಣಮೂರ್ತಿಯವರೂ ವೀಣಾ ಗಾನದಿಂದ ಸಭಿಕರನ್ನು ಆನಂದಗೊಳಿಸಲು, ಅಧ್ಯಕ್ಷರು ತಮ್ಮ ಸೋದರ ಕವಿಗಳೊಬ್ಬೊಬ್ಬರನ್ನೂ ಕುರಿತು ಪ್ರಸ್ತಾಪಿಸಿ, ಅವರು ಮಾಡಿರುವ ಕೆಲಸ ಅವರ ಕವಿತೆಯ ಲಕ್ಷಣ ಮುಂತಾದವುಗಳನ್ನು ವಿವರಿಸಿ ಅವ ರನ್ನು ಮಹಾಜನರಿಗೆ ಪರಿಚಯಮಾಡಿಕೊಡುತ್ತಾ ಬಂದರು. ಆಗ ಆಯಾ ಕವಿಗಳು ಮುಂದೆ ಬಂದು, ಕೆಲವರು ಸಣ್ಣ ಪೀಠಿಕೆಯೊಡನೆ ಯೂ ಇತರರು ಪೀಠಿಕೆಇಲ್ಲದೆಯೂ, ತಮ್ಮ ಒಂದೊಂದುಕವಿತೆಗಳನ್ನು

ಓದಿದರು. (ಆ ಭಾಷಣಗಳೂ ಕವಿತೆಗಳೂ ಈ ಸಂಚಿಕೆಯಲ್ಲಿ ಬಂದಿವೆ.) ಈ ಮಧ್ಯೆ ಸಭೆಯಲ್ಲಿದ್ದ ಕೆಲವು ರಸಿಕ ಮಹಾಶಯರಲ್ಲಿ ಭೋಜ ಭಾಗವು ಉದ್ಬುದ್ಧವಾಗಿ ಅಂದಿನ ಕವಿತೆಗಳಲ್ಲಿ ಉತ್ತಮವಾದಕೆಲವಕ್ಕೆ ತಾವು ಬಹುಮಾನಗಳನ್ನು ಕೊಡುವುದಾಗಿ ಮುಂದೆ ಬಂದರು. ಆದ್ದರಿಂದ ಆ ಕವಿತೆಗಳನ್ನು ಮ॥ ಗಳಾದ ಡಿ. ವಿ. ಗುಂಡಪ್ಪನವರು, ಎಸ್. ಜಿ. ಶಾಸ್ತ್ರಿಗಳು, ಮತ್ತು ವಿ. ಸೀತಾರಾಮಯ್ಯನವರು ವಿಮರ್ಶೆಮಾಡಿ "ಹೇಮಾವತೀ–ಹೇಮಗಿರಿ"ಗೆ ಮೊದಲನೆಯ ಸ್ಥಾನವನ್ನೂ, "ರಸ್ನ" "ಕುಂಬಾರ"ಗಳಿಗೆ ಎರಡನೆಯ ಸ್ಥಾನವನ್ನೂ "ಅನಾಥೆ"ಗೆ ಮೂರನೆಯ ಸ್ಥಾನವನ್ನೂ ಕೊಟ್ಟು, ಸಾಹಿತ್ಯಾಭಿಮಾನಿಗಳಾದ ಆಶ್ರಯದಾತರು ಇದ್ದರೆ ಮಿಕ್ಕ ಕವನಗಳಿಗೂ ಪ್ರೋತ್ಸಾಹ ಕೊಡಬಹುದೆಂದು ಸೂಚಿಸಿದರು. (ಆದರೆ ಪ್ರೋತ್ಸಾಹದ ಪ್ರವಾಹವು ಅನಾಥೆಯವರೆಗೆ ಬಂದು ನಿಂತು ಹೋಯಿತು; ಇನ್ನೂ ಮುಂದಕ್ಕೆ ಹರಿದಿಲ್ಲ.) ಅನಂತರ ಅಧ್ಯಕ್ಷರ ಪ್ರತಿಭಾಪೂರ್ಣವೂ ಸತ್ವಶಾಲಿಯೂ ಆದ ಭಾಷಣವು ನಡೆಯಿತು. ಕೊನೆಯಲ್ಲಿ ಅವರು "ಸುಗ್ಗಿ ಬರುತಿದೆ!" ಎಂಬ ತಮ್ಮದೊಂದು ಕವಿತೆಯನ್ನು ಓದಿ ಆಧುನಿಕ ಕನ್ನಡಸಾಹಿತ್ಯ ಕ್ಷೇತ್ರದಲ್ಲಿ ಬಂದಿರುವ ಸುಗ್ಗಿಯನ್ನು ಪ್ರದರ್ಶಿಸಿದರು. ಅನಂತರ ಔತನದಊಟದ ಕೊನೆಯಲ್ಲಿ ಹೊಟ್ಟೆ ತುಂಬಿದವರಿಗೆ ಅನ್ನ ಮಜ್ಜಿಗೆ ಕೇಳಿದ ಶಾಸ್ತ್ರಮಾಡುವಂತೆ ವಂದನೆಗಳನ್ನರ್ಪಿಸಿ ಉತ್ಸವವನ್ನು ಮುಗಿಸಬೇಕಾಗಿತ್ತು. ಆದರೆ ಪುಟ್ಟಪ್ಪನವರು ಬಂದು ಎದುರಿಗಿರುವಾಗ ಅವರ "ಕಿಂದರಿಜೋಗಿ"ಯನ್ನು ಅವರ ಬಾಯಿಂದಲೇ ಕೇಳದೆ ಅವರನ್ನು ಹೋಗಗೊಡಿಸುವವರು ಯಾರು? ಗುಸಗುಸನೆ ಗುಲ್ಲಗುಲ್ಲನೆ ಸೂಚನೆಗಳಿಗೆ ಆರಂಭವಾಯಿತು; ಪುಸ್ತಕವಿಲ್ಲ ಎಂಬ ನೆವ ಬಂತು; ನಾನು ತಂದುಕೊಡುತೇನೆ ಎಂಬ ಸ್ವರ ಕೇಳಿಸಿತು; ಭಾಷಣಮಾಡಿ ಗಂಟಲು ಒಣಗಿತ್ತು; ಅದನ್ನು ನೋಡಿ ಯಾರೋ ನೀರು ತಂದುಕೊಟ್ಟರು; ಅಂತೂ "ಕಿಂದರಿಜೋಗಿ" ಹೊರಕ್ಕೆ ಬರಬೇಕಾಯಿತು. ಬಂದೂ ಬಂದ! ಅದೇನು ಮನೋಹರವಾದ ಕಾವ್ಯವಾಚನ!

ಹೊಸಕವಿತೆಗಳನ್ನೂ ಛಂದಸ್ಸನ್ನೂ ಹಳಿಯುವವರು ಆಯಾ ಕವಿಗಳ ಬಾಯಿಂದಲೇ ಅವರವರ ಕವಿತೆಗಳನ್ನು ಕೇಳಿ ಆಮೇಲೆ ತಮ್ಮ ತೀರ್ಮಾನವನ್ನು ಕೊಟ್ಟರೆ ಎರಡುಪಕ್ಷದವರಿಗೂ ಒಳ್ಳೆಯದಾಗುವು ದೆಂಬ ಭಾವವು ಅಂದು ಬೇರೂರಿತು. ಆದರೆ ಕವಿಗಳನ್ನು ಕಟ್ಟಿಹಾಕಿ ಹಾಡಿಸಬಲ್ಲವರಾರು? ಕಟ್ಟಿಹಾಕಿದರೆ ಅವರು ಮನಸ್ಸು ಬಿಟ್ಟು ಹಾಡುವರೆಂಬ ನೆಚ್ಚಿಕೆ ಏನು? ಕೋಗಿಲೆಗಳನ್ನು ಯಾರಾದರೂ ಹಿಡಿದು ಪಂಜರದಲ್ಲಿಟ್ಟದ್ದನ್ನಾಗಲಿ ಮುಂಗೈಮೇಲೆ ಕೂರಿಸಿಕೊಂಡು ಹಾಡಿಸಿದ್ದನ್ನಾಗಲಿ ನೋಡಿದ್ದಾರೆಯೋ? ಕೇಳಿದ್ದಾರೆಯೋ? ಒಂದು ವೇಳೆ ಕೋಗಿಲೆಯು ಕಟ್ಟಿಗೆ ಸಿಕ್ಕಿದರೆ, ಅದು ಆ ಅವಸ್ಥೆಯಲ್ಲಿ 'ಅದಕ್ಕೇನು ಸಂದೇಹ?' ಎನ್ನುವುದೇ ಹೆಚ್ಚು. ಅಂತು ಆ ದಿವಸ ಕೋಗಿಲೆಯು ಸಜಾತಿಗಳ ಮಧ್ಯದಲ್ಲಿದ್ದದ್ದರಿಂದ ಮನೆಯನ್ನು ಮಾವಿನಮರವೆಂದುಕೊಂಡೋ ಏನೋ ಬಹು ಸುಂದರವಾಗಿ ಹಾಡಿತು. ಅದನ್ನು ಕೇಳಿ ಸಭಿಕರು ಆನಂದಪಟ್ಟು "ಸುಗ್ಗಿ ಬಂದಿದೆ, ನಿಜ!" ಎಂದರು.

ಮಾರನೆಯ ದಿನ ಕಾಲೇಜು ಹಾಸ್ಟೆಲಿನ ವಿದ್ಯಾರ್ಥಿಗಳೆಲ್ಲರೂ ಸೇರಿ ಕವಿಗಳಿಗೆ ಒಂದು ದೊಡ್ಡ ಔತನವನ್ನು ನಡೆಸಿದರು; ಮೂರ ನೆಯ ದಿನ ಸ್ವಾಗತಮಂಡಲಿಯ ಅಧ್ಯಕ್ಷರು ತಮ್ಮದೊಂದು ಔತನ ವನ್ನೂ ನಡೆಸಿದರು. ಅಂತೂ ಕವಿಸಮ್ಮೇಳನವು ಮೂರು ದಿನದವರೆಗೂ ಕಣ್ಣು ಕಿವಿ ಹೊಟ್ಟೆಗಳಲ್ಲಿ ಪ್ರತಿಧ್ವನಿತವಾಗುತ್ತಿತ್ತು. "ಹೂವಿ ನಿಂದ ನಾರು ಸ್ವರ್ಗ"ಕ್ಕೆ ಎಂಬಂತೆ ಕವಿಗಳ ನೆವದಲ್ಲಿ, ಕವಿಸಮ್ಮೇಳನ ಕ್ಕಾಗಿ ಕೆಲಸ ಮಾಡಿದವರ ಜೊತೆಯಲ್ಲಿ, ಅವರ ಇಷ್ಟ ಮಿತ್ರರೂ ಆನಂದಪಟ್ಟಾಯಿತು.

ಈ ಸಮ್ಮೇಳನಕ್ಕಿಂತ ಮುಂಚೆ ಸಂಘದಲ್ಲಿ "ಏನ್ಷೆಂಟ್ ಮ್ಯಾರಿ ನರ್", "ಕ್ರಿಸ್ಟಬೆಲ್" ಎಂಬ ಕೋಲ್ರಿಜ್ ಕವಿಯ ಸುಪ್ರಸಿದ್ಧ ಇಂಗ್ಲಿಷ್ ಕಾವ್ಯಗಳಮೇಲೆ ಪ್ರೊ. ಸೆಲ್ ಸಾಹೇಬರ ಸಚಿತ್ರವಾದ

ಇಂಗ್ಲಿಷ್ ಉಪನ್ಯಾಸವೂ, ಪ್ರಸಿದ್ಧ ಪತ್ರಿಕಾಕರ್ತರಾದ ಮುಂದ ವೇಡು ಕೃಷ್ಣರಾಯರ "ಕರ್ಣಾಟಕ ಸಂಸ್ಕೃತಿ" ಎಂಬ ಶ್ಲಾಘ್ಯ ವಾದ ಕನ್ನಡ ಉಪನ್ಯಾಸವೂ, ಮ|| ಟಿ. ಟಿ. ಶರ್ಮರವರ "ಕನ್ನಡ ಶಾಸನಗಳಲ್ಲಿ ಸಾಹಿತ್ಯಾಂಶ" ಎಂಬ ಇನ್ನೊಂದು ಕನ್ನಡ ಉಪನ್ಯಾ ಸವೂ ನಡೆದುವು. ಮ|| ಶರ್ಮರವರು "ವಿಶ್ವಕರ್ಣಾಟಕದ ಮೂಲಕ ದೇಶಭಾಷಾಸೇವೆ ಮಾಡುತ್ತಿರುವುದು ಕನ್ನಡಿಗರಿಗೆ ಚೆನ್ನಾಗಿ ತಿಳಿದಿ ರುವ ವಿಷಯ; ಆದರೆ ಅವರಿಗೆ ರಾಜಕೀಯ ಚಳುವಳಿಯಲ್ಲಿ ಎಷ್ಟು ಪರಿ ಶ್ರಮವಿದೆಯೋ ಪ್ರಾಚೀನ ಶಾಸನಗಳಲ್ಲಿಯೂ ಅಷ್ಟೇ ಪರಿಚಯವಿದೆ ಎಂಬುದು ಅನೇಕರಿಗೆ ತಿಳಿಯದು. ಅವರು

ಇತರ ಕಾರ್ಯಗಳು

ಗತಿಸಿದ ರಾವ್ ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿ ಗಳೊಡನೆ ಶಾಸನದ ಇಲಾಖೆಯಲ್ಲಿ ಕೆಲಸಮಾಡಿ ನುರಿತವರು ; ಅವರು ಶೋಧಿಸಿ ಪರಿಷ್ಕರಿಸಿದ ಕೆಲವು ಕನ್ನಡ ಶಾಸನಗಳನ್ನು ಬ್ರಿಟಿಷ್ ಸರ್ಕಾರದವರು ಒಂದು ಸ್ವತಂತ್ರ ಗ್ರಂಥವಾಗಿ ಪ್ರಕಟಿಸಿರುತ್ತಾರೆ. ಇತರ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಸಾಮರ್ಥ್ಯವನ್ನು ಪಡೆದಿದ್ದು, ಅದನ್ನು ರಾಜ ಕೀಯ ಚಳುವಳಿಯಲ್ಲಿ ಹೋಮ ಮಾಡುತ್ತಿರುವವರು ಇವರಂತೆಯೇ ಹಲವರಿದ್ದಾರೆ. ಇಂಥವರು ರಾಜಕೀಯ ವಿಚಾರವನ್ನು ಹಿರಿಯ ಮಗನಂತೆ ಕಂಡು ಸಾಹಿತ್ಯಕ್ಕೆ ಮಾತ್ರ ಮಾಡಬಹುದಾದ್ದನ್ನು ಪೂರ್ತಿ ಯಾಗಿ ಮಾಡಿಲ್ಲವೆಂದು ಸಾಹಿತ್ಯಾಭಿಮಾನಿಗಳು ಗೊಣಗುಟ್ಟುವುದು, ಸ್ವಾರ್ಥ ಸೂಚಕವಾದರೂ, ಸ್ವಾಭಾವಿಕ !

ಕಳೆದ ತಿಂಗಳು ೨೨ನೆಯ ತಾರೀಖಿನ ದಿವಸ, ಚಿಕ್ಕಬಳ್ಳಾ ಪುರದ ಹೈಸ್ಕೂಲಿನ ಮಹೋತ್ಸವವು ನಡೆಯಿತು. ಅಂದು ಸರ್. ಎಂ. ವಿಶ್ವೇಶ್ವರಯ್ಯನವರು ಅಧ್ಯಕ್ಷರಾಗಿದ್ದು, ಕಿರಿಯರಿಗೂ ಹಿರಿಯರಿಗೂ ಪ್ರಜೆಗಳಿಗೂ ಅಧಿಕಾರಿಗಳಿಗೂ ಉಪದೇಶರೂಪವಾದ ಬಹು ಬೆಲೆ ಯುಳ್ಳ ಒಂದು ಭಾಷಣವನ್ನು (ಕನ್ನಡದಲ್ಲಿ) ಮಾಡಿದರು. ಕೇವಲ

ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ

ಮುಪ್ಪಿನಲ್ಲಿಯೂ ಯೌವನದ ಉತ್ಸಾಹ ತೇಜಸ್ಸುಗಳನ್ನು ದಿನೇ ದಿನೇ ಹೆಚ್ಚಿಸಿಕೊಳ್ಳುತ್ತ ಜನರನ್ನು ಹುರಿದುಂಬಿಸಿ ಅವರಲ್ಲಿ ವಿವೇಕವನ್ನೂ ಸತ್ವವನ್ನೂ ಸಿದ್ಧತೆಯನ್ನೂ ಉಂಟುಮಾಡಲೆಳಸುತ್ತಿರುವ ದೇಶವತ್ಸಲರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಅಗ್ರಗಣ್ಯರು. ಅವರ ಆ ಭಾಷಣದಿಂದ ಇಲ್ಲಿ ಕೆಲವು ಭಾಗಗಳನ್ನು ಎತ್ತಿ ಬರೆದಿದ್ದೇವೆ:—

'ಹುಡುಗರೇ, ನೀವು ಚಟುವಟಿಕೆಯುಳ್ಳವರಾಗಿರಿ' ಇದೇ ನಾನು ಅವರಿಗೆ ಹೇಳುವ ಮೊದಲುಮಾತು. ೮ ಘಂಟೆ ಕೆಲಸ; ೮ ಘಂಟೆ ಹೊತ್ತು ನಿದ್ರೆ; ಇನ್ನು ೮ ಘಂಟೆಗಳ ಕಾಲ ಊಟ, ನೋಟ, ಆಟ ಪಾಟಗಳಿಗೆ ವಿನಿಯೋಗ. ಇದೇ ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರತಿ ನಿತ್ಯದ ಕಾಲವಿಭಾಗ. ಈ ೮ ಘಂಟೆಗಳಲ್ಲಿ ಹುಡುಗರಾಗಲಿ, ದೊಡ್ಡವರಾಗಲಿ, ಮೈಮುರಿಯ ದುಡಿಯುತ್ತಾರೆ. ಆದ್ದರಿಂದಲೇ ಅಮೆರಿಕಾದಲ್ಲಿ ೫ ದಿನಗಳು ಮಾತ್ರ (ವಾರದಲ್ಲಿ) ಕೆಲಸಮಾಡಿ ಸುಖವಾಗಿ ಸಂಸಾರಮಾಡುತ್ತಾರೆ. ನಮ್ಮ ಹುಡುಗರು ಕೆಲಸಮಾಡುವಾಗ ೮ ಘಂಟೆಗಳೂ ಚನ್ನಾಗಿ ದುಡಿಯಬೇಕು. ಎರಡನೆಯದು, ಹುಡುಗರು ಶೀಲವಂತರಾಗಬೇಕು. ಇದು ಬಹು ಮುಖ್ಯವಾದುದು. ಶೀಲವಂತರನ್ನು ಎಲ್ಲರೂ ನಂಬುತ್ತಾರೆ. ಜೀವನ ಸುಲಭವಾದುದಲ್ಲ; ಬಹು ಗಡುಸಾದುದು. ಬಹು ನೋವನ್ನು ಕೊಡತಕ್ಕದ್ದು. ಆದರೇನು, ನಿಮ್ಮ ಅಂತರಂಗವು ನಿರ್ಮಲವಾಗಿದ್ದು, ಆಶಯವು ಘನವಾಗಿದ್ದು, ಚಿತ್ತವು ನಿಶ್ಚಲವೂ ದೃಢವೂ ಆಗಿದ್ದಲ್ಲಿ ನಿಮ್ಮ ಮುಂದಿನ ಜೀವನಕ್ಕೆ ಉತ್ತಮವಾದ ತಳಹದಿಯನ್ನು ನೀವು ಹಾಕಿದಂತೆಯೇ. ನೀವು ಚುರುಕಾಗಿದ್ದು ನಿಮ್ಮ ಕಾಲವನ್ನು ಸದುಪಯೋಗ ಮಾಡಿಬಿಟ್ಟರೆ ಸಾಕು. ನಾನಷ್ಟೇ ಬಯಸುವುದು....

ಇನ್ನು ಶಾಲೆಯಲ್ಲಿ ಸಿಗುವ ಶಿಕ್ಷಣದ ಮಾತು. ಮುಖ್ಯವಾಗಿ ಎರಡು ಕೊರತೆಗಳಿವೆ. ಪಾಶ್ಚಾತ್ಯ ದೇಶಗಳಲ್ಲಿ ನಾನು

ನೋಡಿದ್ದೇನೆ. ಶಾಲೆಗಳಲ್ಲಿ ಹುಡುಗರಿಗೆ ಯಂತ್ರಕಲೆ, ಕೈಗಾರಿಕೆ, ವಾಣಿಜ್ಯ—ಏನಾದರೂ ಒಂದು ಉದ್ಯೋಗವನ್ನು ಕಲಿಸುತ್ತಾರೆ. ನಿರುದ್ಯೋಗ ಸಮಸ್ಯೆಯನ್ನು ಬಿಡಿಸತಕ್ಕ ರಾಷ್ಟ್ರರಚನೆಗೆ ಮೂಲಾಧಾರವಾದ ಈ ಬಗೆಯ ಚಳವಳಿಗಳ ಗಂಧವೇ ನಮ್ಮ ಶಾಲೆಗಳಲ್ಲಿಲ್ಲ. ಎರಡನೆಯದು ಶೀಲಸಂಪಾದನೆಗೆ ಉಚಿತವಾದ ಪೌರಧರ್ಮ ಮತ್ತು ನೀತಿ ಶಿಕ್ಷಣಗಳಿಗೆ ಇಲ್ಲಿ ಸ್ಥಳವಿಲ್ಲ. ಇತರ ದೇಶಗಳಲ್ಲಿ ಈ ವಿಚಾರವಾಗಿ ಎಷ್ಟೋ ಪಠ್ಯಪುಸ್ತಕಗಳಿವೆ. ಸರ್ಕಾರದವರು ಈ ಲೋಪಗಳನ್ನು ಪರಿಹಾರ ಮಾಡುವವರೆಗೆ ಜನರು ಸುಮ್ಮನೆ ಕೂತುಕೊಳ್ಳಬಾರದು. ಸಾಧ್ಯವಾದಮಟ್ಟಿಗೆ ಜನರೇ ಈ ಲೋಪಗಳನ್ನು ತಿದ್ದಿಕೊಳ್ಳಬೇಕು, ಶಾಲೆಗಳಲ್ಲಿ 'ಪೌರಧರ್ಮ' ಮತ್ತು 'ವಿದ್ಯಾರ್ಥಿಕರಭೂಷಣ' ಗಳನ್ನು ಕುರಿತು ಪುಸ್ತಕಗಳು ಬರುವವರೆಗೂ ವಿದ್ಯಾರ್ಥಿಗಳೇ ಈ ವಿಚಾರ ಪುಸ್ತಕಗಳನ್ನು ಹೊರಗಡೆಯಿಂದ ತರಿಸಿ ಸ್ವತಂತ್ರವಾಗಿ ಓದಬೇಕು. ಅಧ್ಯಯನದ ಈ ಎರಡು ಅಂಗಗಳೂ ಜಯಪ್ರದವೆನಿಸುವ ಜೀವನಕ್ಕೆ ಮೂಲಭೂತವಾದುವೆಂಬುದನ್ನು ನಾನಿಲ್ಲಿ ಬೇರೆ ಹೇಳಬೇಕೇನು?....

ಪುರಜನರಿಗೆ ನಾನು ಹೇಳಬೇಕಾದುದು ಸಹ ಇನ್ನೇನು? ಅತ್ಯವಸರವೆನಿಸಿರುವ ಆರ್ಥಿಕ ಅಭಿವೃದ್ಧಿ, ನಿರುದ್ಯೋಗ ಚಿಕಿತ್ಸೆ, ಪಟ್ಟಣ ಮತ್ತು ತಾಲ್ಲೂಕಿನಲ್ಲಿರುವ ಮುಖಂಡರಿಗೆ ವ್ಯವಸಾಯ ಮತ್ತು ಕೈಗಾರಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ವಸ್ತು ಸೃಷ್ಟಿಮಾಡುವುದೇ ಅವರ ಮೊದಲನೇ ಕರ್ತವ್ಯ. ದೇಶದ ಐಶ್ವರ್ಯವನ್ನು ಹೆಚ್ಚಿಸಬೇಕು. ಹೆಚ್ಚು ಹೆಚ್ಚಾದ ಉತ್ಪನ್ನವೇ ಆಸ್ತಿ ಐಶ್ವರ್ಯಗಳ ವೃದ್ಧಿಗೆ ಕಾರಣ............ಸತ್ಪ್ರಜೆಗಳೆಲ್ಲರ ಗಮನಕ್ಕೂ ಬರಬೇಕಾದ ಮತ್ತೊಂದು ವಿಚಾರವೆಂದರೆ ಒತ್ತಾಯದ ಪ್ರಾಥಮಿಕಶಿಕ್ಷಣ. ಅಂದಿಗಲ್ಲವೆ ಪ್ರತಿಯೊಂದು ನಗರ ಮತ್ತು ಹಳ್ಳಿಯಲ್ಲೂ ಶಿಕ್ಷಿತರಾದವರ ಮನೆಗಳಿರುವುದು! ಅಂದಿಗಲ್ಲವೆ ಆ ಮನೆಗಳ ಹೆಂಗಸರು ಗಂಡಸರೆಲ್ಲರೂ ಅಕ್ಷರಜ್ಞರೆನಿಸುವುದು. ೩೦–೩೫ ವಯಸ್ಸಾಗಿರುವವರು

(ಹೆಂಗಸರಾಗಲಿ ಗಂಡಸರಾಗಲಿ) ಕೂಡ ಕಲಿಯಲೇ ಬೇಕು ಎಂಬಂತೆ ಸಾರ್ವಜನಿಕಾಭಿಪ್ರಾಯವು ಅಧಿಕಾರವಾಣಿಯಾಗಬೇಕು. ಆದಷ್ಟು ಬೇಗ ಈ ನಾಡಿನಿಂದ ನಿರಕ್ಷರತೆ (ಅಜ್ಞಾನ) ಯನ್ನು ನಿರ್ನಾಮ ಮಾಡಿಬಿಡಬೇಕು. ಪ್ರತಿಯೊಬ್ಬ ಹುಡುಗಿಗೂ ಹುಡುಗನಿಗೂ, ಗಂಡಸಿಗೂ ಹೆಂಗಸಿಗೂ ಯಾವುದಾದರೊಂದು ವೃತ್ತಿ ಶಿಕ್ಷಣವನ್ನು ಕೊಡಲೇ ಬೇಕು. ಮುಖಂಡರು ಗಮನಿಸಬೇಕಾದ ಮತ್ತೊಂದು ವಿಚಾರವಿದೆ. ಒಟ್ಟುಗೂಡಿ ಕೆಲಸ ಮಾಡುವ ಅಭ್ಯಾಸವನ್ನು ಜನರಿಗೆ ಕಲಿಸಬೇಕು, ಪರಸ್ಪರ ಸಹಾಯ ತತ್ವವು ಮನವರಿಕೆಯಾಗಬೇಕು........ಒಬ್ಬನ ಗೆಲುವನ್ನು ಕಂಡು ಇನ್ನೊಬ್ಬನು ಅಸೂಯೆ ಪಡದೆ, ಅದಕ್ಕೆ ಬದಲಾಗಿ ಆನಂದಿಸುವಂತೆ ಅವನಿಗೆ ಬುದ್ಧಿ ಕಲಿಸಬೇಕು.....

ಪ್ರಕೃತಿಯಲ್ಲಿ ಅನೇಕ ಅಪೂರ್ಣ ವಸ್ತುಗಳಿವೆ. ನಮಗೆ ಅವುಗಳಿಂದ ಪ್ರಯೋಜನವಾಗಬೇಕಾದರೆ ನಾವು ಅವುಗಳನ್ನು ಸಿದ್ಧ ಮಾಡಿಕೊಳ್ಳಬೇಕು. ಮನುಷ್ಯನಿಗೆ ಬೇಕಾದಷ್ಟು ಬುದ್ಧಿ ಶಕ್ತಿಯಿದೆ. ಅದನ್ನು ಅವನು ಸರಿಯಾಗಿ ವೃದ್ಧಿಪಡಿಸಿಕೊಂಡದ್ದೇ ಆದರೆ ಪ್ರಕೃತಿಯೊಳಗಿನ ವಸ್ತುಗಳನ್ನೂ ಶಕ್ತಿಯನ್ನೂ ಸ್ವಾಧೀನಕ್ಕೆ ತಂದುಕೊಂಡು, ತನ್ನ ಸುಖ ಸಂಪತ್ತಿಗಾಗಿ ಅವುಗಳನ್ನು ಉಪಯೋಗಿಸಿಕೊಳ್ಳಲು ತಕ್ಕ ಯೋಗ್ಯತೆಯನ್ನೂ ಚಾತುರ್ಯವನ್ನೂ ಪಡೆಯಬಲ್ಲನು.''....

(**ವಿಶ್ವಕರ್ಣಾಟಕ**)

ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು ಸಿಟಿ.

ರಾಜಾದಿತ್ಯ ದುರ್ಗಸಿಂಹಾದಿ

ಕೆಲವು ಕನ್ನಡಕವಿಗಳ ಜೀವನಕಾಲವಿಚಾರ

ಎ. ವೆಂಕಟಸುಬ್ಬಯ್ಯ, ಎಂ.ಎ., ಪಿಎಚ್.ಡಿ., ಎಲ್‌ಎಲ್.ಬಿ.,

ಇವರಿಂದ ರಚಿಸಲ್ಪಟ್ಟು

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ

೧೯೨೭

(All Rights Reserved)

ಮುನ್ನುಡಿ

ಈ ಲೇಖನವನ್ನು ೧೯೨೩ ರಲ್ಲಿ ನಾನು ಬರೆಯುವುದಕ್ಕೆ ಪ್ರಾರಂಭಿಸಿದಾಗ ಇದು ಸುಮಾರು ೧೦೦—೧೨೦ ಪುಟಗಳ ಪ್ರಮಾಣವುಳ್ಳದ್ದಾಗುವುದೆಂದು ನಾನು ಎಣಿಸಿದ್ದೆನು. ಆದರೆ ಅಲ್ಲಿಂದ ಈಚೆಗೆ ಮೈಸೂರು ಆರ್ಕೆಯಲಾಜಿಕಲ್ ಡಿಪಾರ್ಟ್‌ಮೆಂಟಿನ ೧೯೨೩—೧೯೨೫ ನೇ ವರ್ಷಗಳ ವರದಿಗಳೂ, ಕವಿಚರಿತೆ ೧ ನೆಯ ಸಂಪುಟದ ಎರಡನೆಯ ಮುದ್ರಣವೂ ಪ್ರಕಾಶಿತಗಳಾಗಿ, ಇವುಗಳಿಂದ ಹಲವು ವಿಷಯಗಳನ್ನು ಉದ್ಧರಿಸಿ ನನ್ನ ಲೇಖನದಲ್ಲಿ ಸೇರಿಸಬೇಕಾಗಿ ಬಂದುದರಿಂದಲೂ ಮತ್ತು ಇತರ ಕೆಲವು ಕಾರಣಗಳಿಂದಲೂ ನನ್ನ ಲೇಖನವು ೧೨೦ ಪುಟಗಳನ್ನು ಮೀರಿ ವಸ್ತುತಃ ೨೭೮ ಪುಟಗಳ ಪ್ರಮಾಣವುಳ್ಳದ್ದಾಗಿ ಆಗಿರುವುದು.

ಇದನ್ನು ಬರೆಯುವುದರಲ್ಲಿ ಮ|| ರಾ|| ಗಳಾದ ಆಗರದ ವೆಂಕಟಾದ್ರಿ ಪಂಡಿತರು, ಎಜ್. ಸುಬ್ರಹ್ಮಣ್ಯಯ್ಯನವರು, ಬಿ. ವೆಂಕೋಬರಾಯರು, ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು ನನಗೆ ಹಲವು ವಿಧಗಳಲ್ಲಿ ಸಹಾಯಮಾಡಿರುವರು. ಇಂಥ ಸಹಾಯವಿಲ್ಲದಿದ್ದಲ್ಲಿ ಈ ಲೇಖನವನ್ನು ಈ ರೂಪದಲ್ಲಿ ಪ್ರಕಟಿಸಲಾಗುತ್ತಿರಲಿಲ್ಲವಾದ್ದರಿಂದ ಈ ಸನ್ಮಿತ್ರರು ಮಾಡಿರುವ ಉಪಕಾರವು ಚಿರಸ್ಮರಣೀಯವಾಗಿರುವುದು.

ವಾಚಕರ ಸೌಕರ್ಯಕ್ಕಾಗಿ ಒಂದು ವಿಷಯಸೂಚಿಕೆಯನ್ನೂ ಇಲ್ಲಿ ಕೀರ್ತಿತರಾಗಿರುವ ಕವಿಗಳ ನಾಮಾನುಕ್ರಮಣಿಯೊಂದನ್ನೂ ಸೇರಿಸಿರುವೆನು ; ಹಾಗೆಯೇ ಪ್ರಮಾದದಿಂದ ಮುದ್ರಣದಲ್ಲಿ ಉಂಟಾಗಿರುವ ಅಶುದ್ಧಗಳ ಪಟ್ಟಿಯೊಂದನ್ನೂ ಇಲ್ಲಿ ನಾನು ಸೇರಿಸಿರುವೆನು. ಈ ಅಶುದ್ಧಗಳನ್ನು ಮೊದಲು ತಿದ್ದಿಕೊಂಡು ತದನಂತರ ಲೇಖನವನ್ನು ಓದಬೇಕೆಂದು ನಾನು ವಾಚಕರನ್ನು ಪ್ರಾರ್ಥಿಸುತ್ತೇನೆ.

ಕವಿಚರಿತೆಯ ೧ ನೇ ಸಂಪುಟದಲ್ಲಿ ಪ್ರಸ್ತುತರಾದ ಕೆಲವು ಗ್ರಂಥಕಾರರ ಜೀವನಕಾಲವನ್ನು ಕುರಿತು ವಿಚಾರಮಾಡುವುದೇ ಈ ಲೇಖನದ ಉದ್ದೇಶವಾಗಿದ್ದಾಗ್ಯೂ ಈ ಸಂಪುಟದಲ್ಲಿ ಪ್ರಸ್ತುತರಾದ ಶಿಶುಮಾಯಣ, ಸೋಮರಾಜರು ಕ್ರಿ. ಶ. ೧೫೦೦ ಕ್ಕಿಂತ ಈಚಿನವರೆಂದು ನನಗೆ ತೋರಿದ್ದರಿಂದ, ಇವರ ಜೀವನಕಾಲವಿಚಾರಾವಸರದಲ್ಲಿ ಕವಿಚರಿತೆಯ ೨ ನೇ ಸಂಪುಟದಲ್ಲಿ ಪ್ರಸ್ತುತರಾದ ಕೆಲವು ಗ್ರಂಥಕರ್ತೃಗಳ ಕಾಲವನ್ನು ಕುರಿತೂ ನಾನು ವಿಚಾರಮಾಡಬೇಕಾಗಿ ಬಂದಿತು. ಆದ್ದರಿಂದ ಆ ಗ್ರಂಥದ ಎರಡು ಸಂಪುಟಗಳಲ್ಲಿ ಪ್ರಸ್ತುತರಾದ ಗ್ರಂಥಕಾರ ಮತ್ತು ಶಾಸನಲೇಖಕರಲ್ಲಿ ಒಟ್ಟು ೬೩ ಜನರ ಕಾಲವನ್ನು ಕುರಿತು ಈ ಲೇಖನದಲ್ಲಿ ನಾನು

ವಿಚಾರಮಾಡಿ, ಇವರ ವಿಷಯದಲ್ಲಿ ಕವಿಚರಿತಕಾರರು ಹೇಳಿರುವ ಕಾಲವು ತಪ್ಪೆಂದೂ ಅವರು ಬೇರೆಕಾಲದಲ್ಲಿ ಇದ್ದರೆಂದೂ ಹೇಳಿರುವೆನು. ಈ ಲೇಖನದಲ್ಲಿ ಇರಬಹುದಾದ ತಪ್ಪುಗಳನ್ನೂ ಹೀಗೆಯೇ ಅಭಿಜ್ಞರು ಪ್ರಕಾಶಪಡಿಸಿ ಅವನ್ನು ತಿದ್ದಿದಲ್ಲಿ ಅವರು ಕನ್ನಡ ಗ್ರಂಥಗಳಲ್ಲಿ ಅಭಿಮಾನವಿರುವವರೆಲ್ಲರಿಗೂ ಉಪಕಾರ ಮಾಡಿದಂತಾಗುವುದು.

ಯುಕ್ತಿಯುಕ್ತಮುಪಾದೇಯಂ ವಚನಂ ಬಾಲಕಾದಪಿ |
ಯುಕ್ತಿಹೀನಂ ತು ತತ್ತ್ಯಾಜ್ಯಮಪ್ಯುಕ್ತಂ ಪದ್ಮಜನ್ಮನಾ ||

ಇತಿ

ಅ. ವೆಂಕಟಸುಬ್ಬಯ್ಯ

ವಿಷಯಸೂಚಿಕೆ

ಅಶುದ್ಧಗಳ ಪಟ್ಟಿ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೬	೭೮	ಪಟ್ಟಾಭಿಷೇಕ ಕಾಲದಲ್ಲಿ	ಕಾಲದಲ್ಲಿ
೭	೮	ಬೊಮ್ಮಲೆ	ಬಮ್ಮಲೆ (ಬೊಮ್ಮಲೆ)
,,	೧೦	ಶಾಂತಿ = (ಶಾಂತಿಯಣ)	ಶಾಂತಿ (ಶಾಂತಿಯಣ)
೧೧	೧	ಶುಭಚಂದ್ರಪಂಡಿತ	ಮಾಧವಚಂದ್ರಪಂಡಿತ
,,	೯	ವಿಷ್ಣುವರ್ಧನವೆಂಬ	ವಿಷ್ಣು (ವರ್ಧನ) ಎಂಬ
,,	೧೪	ಈ ಪಂಕ್ತಿಯಲ್ಲಿರುವ ‘ ಭಾನುಕೀರ್ತಿ ’ ಎಂಬ ಪದವನ್ನು ೧೮ ನೆಯ ಪಂಕ್ತಿಯಲ್ಲಿ ಬರೆದುಕೊಳ್ಳಬೇಕು. ಆ ಪಂಕ್ತಿಯಲ್ಲಿ ಪ್ರಸ್ತುತನಾದ ದೇವಕೀರ್ತಿಯಂತೆ ಈ ಭಾನುಕೀರ್ತಿಯೂ ಗಂಡವಿಮುಕ್ತ ಸಿದ್ಧಾಂತದೇವನ ಶಿಷ್ಯರಲ್ಲಿ ಒಬ್ಬನಾಗಿದ್ದನು.	
೧೩	೧೨	ಯುದ್ಧರಂಗದಲ್ಲಿಯೇ ಮರಣ ಹೊಂದಿದನು	ಯುದ್ಧರಂಗವನ್ನು ಬಿಟ್ಟು ಓಡಿಹೋದನು.
೧೪	೫	ಪೂರ್ವನಿರ್ದಿಷ್ಟಗ್ರಂಥದಲ್ಲಿ	‘ ಡೈನಾಸ್ಟೀಸ್ ಆಫ್ ಕ್ಯಾನರೀಸ್ ಡಿಸ್ಟ್ರಿಕ್ಟ್ಸ ’ ಎಂಬ ಗ್ರಂಥದಲ್ಲಿ
೧೫	೨೮	ಈ ೧೫೨ ನೇ	ಈ ೧೨೫ ನೇ
೨೦	೨	‘ ಸಿಂಹಂ ’	‘ ಸಿಂಗಂ ’
೨೨	೧೮	ಈ ಕರ್ಣಾಟಕ	ಕರ್ಣಾಟಕ
೨೮	೨೮	ಹಿಂದೆಯೋ	ಹಿಂದೆಯೇ
೩೩	೨೪	ಬಾಲಚಂದ್ರ *	ಬಾಲಚಂದ್ರ
,,	,,	ಇಬ್ಬರು	ಇಬ್ಬರು *
೪೧	೧೯	ಮಾಡಿಸಿದ	ಪ್ರತಿಷ್ಠೆ ಮಾಡಿದ
೪೩	೧೯	ಹಂಪಕವಿಯ	ಹಂಪಕವಿಯ ಹೆಸರು
೪೮	೮	ಮೇಘಚಂದ್ರನ	ಮೇಘಚಂದ್ರನು
೫೦	೧೯	೪೦	೬೦
೫೪	೨	ಶ್ರುತಿವಿಹಿತಶುದಮಾರ್ಗನುಂ	ಶ್ರುತಿವಿಹಿತವಿಶುದ್ಧಮಾರ್ಗನುಂ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೫೭	೧೧	(1215)	(1275)
೬೨	೧	(† ೧೦೬)	(§ ೧೦೬)
,,	೨	ಶಿಲಾಲೇಖನದಲ್ಲಿ	ಶಿಲಾಲೇಖನದಲ್ಲಿ †
,,	೧೩	ಶುವ್ರತಕ್ಕೆ	ಸುವ್ರತಕ್ಕೆ
೭೦	೨	' ಅಭಿನವ	' ಅಭಿನವಪಂಪರಚಿತ
೮೩	೬	ಸ್ರಗ್ಧರಾ	ಮಹಾಸ್ರಗ್ಧರಾ
೯೦	೧೮	ಪ್ರಣಿತ	ಪ್ರಣುತ
೯೨	೨	ಮುಟ್ಪಿ	ಮುಟ್ಟಿ
,,	೪	ಸೈನ	ಸೈನ್ಯ
೯೬	೧೪	೧೨೫೫	೧೨೫೦
೧೦೦	೨೪	ಉಹಿಸಬೇಕಾಗುವುದು	ಊಹಿಸಬೇಕಾಗುವುದು
೧೦೩	೧೮,೧೯ ನೇ	} ಪಂಕ್ತಿಗಳನ್ನು ಬಿಟ್ಟು ಬಿಡತಕ್ಕದ್ದು	
೧೦೪	೧-೬ ನೇ		
೧೦೮	೨೦	ಮಾಘ-ಸಂ	ಮಾಘ-ಸು
೧೧೧	೧೧	ಧರಿಸಲ್ಪಟ್ಟಿರುವುವು	ಧರಿಸಲ್ಪಟ್ಟಿತ್ತು
೧೧೫	೬	ಹಿಂಹಾಸನ	ಸಿಂಹಾಸನ
೧೪೪	೧೯	ವಿಷ್ಣುಭ್ತ	ವಿಷ್ಣುಭಕ್ತ
೧೫೯	೨೭,೨೮	ಹೀಗೆಯೇ ಹೇಳಲಾಗುವುದಿಲ್ಲ	ಹೇಳಲಾಗುವುದಿಲ್ಲ. ಹೀಗೆಯೇ
೧೭೧	೨೫	ಮಂಡಳಿಕರ	ಮಂಡಳಿಕರ ಮಂತ್ರಿ
೧೭೩	೩	Dewtschen	Deutschen
೧೯೫	೯	ಬೆಳ್ಗೊದ	ಬೆಳ್ಗೊಳದ
೨೦೩	೪	ತ್ರಿಭುವನಗಂಗ	ತ್ರಿಭುವನಮಲ್ಲ
೨೧೬	೨೯	೧೩೪೦	೧೩೪೫
೨೫೭	೧೪	ಶ ೧೩೪೦	ಶ. ಸುಮಾರು ೧೩೪೫
೨೬೫	೨೮ }	ಮೇಲೆ (೨೬೦ ನೇ	(ಮೇಲೆ ೨೬೦ ನೇ
೨೬೭	೧ }		

ಬೆಂಗಳೂರು-19

ಪ್ರಬುದ್ಧ

ಕರ್ಣಾಟಕ

ವಿಭವ ಸಂವತ್ಸರ —೩೭ A— ಹೆಚ್ಚು ಸಂಚಿಕೆ

ಸಂಪುಟ ೧೦] ವಿಷಯ ಸೂಚಿಕೆ [ಸಂಚಿಕೆ ೩ A

ಡಾ॥ ಎ. ವೆಂಕಟಸುಬ್ಬಯ್ಯನವರ

"ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ"ದ

ಪುಟಗಳು ೧೮೨—೨೭೮

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.

೧೯೨೮

All Rights Reserved

ಪ್ರಬುದ್ಧ ಕರ್ಣಾಟಕ

ವಿಭವಸಂವತ್ಸರ—ಹೆಚ್ಚು ಸಂಚಿಕೆ

619

ಡಾ|| ಎ. ವೆಂಕಟಸುಬ್ಬಯ್ಯನವರ

"ಕೆಲವು ಕನ್ನಡಕವಿಗಳ ಜೀವನಕಾಲ ವಿಚಾರ"ದ

ಪುಟಗಳು ೧೮೨-೨೭೮.

ಬೆಂಗಳೂರು

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ

೧೯೨೮

All Rights Reserved.

೧೭. ಮಲ್ಲಿಕಾರ್ಜುನ

ಸೂಕ್ತಿಸುಧಾರ್ಣವವನ್ನು ರಚಿಸಿರುವ ಈ ಮಲ್ಲಿಕಾರ್ಜುನನ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಸೂಕ್ತಿಸುಧಾರ್ಣವವೆಂಬ ಗ್ರಂಥವನ್ನು ಬರೆದಿದ್ದಾನೆ........ಈತನಿಗೆ ಮಲ್ಲಪ, ಮಲ್ಲ, ಚಿದಾನಂದಮಲ್ಲಿಕಾರ್ಜುನ ಎಂಬ ಹೆಸರುಗಳೂ ಉಂಟು. "ಯಾದವಕಟಕಾಚಾರ್ಯ ಸುಕವಿಸುಮನೋಬಾಣ ಜಾಮಾತೃ" ಎಂಬುದರಿಂದ ಈತನು ಶಬ್ದಮಣಿದರ್ಪಣವನ್ನು ಬರೆದ ಕೇಶಿರಾಜನ ತಂದೆಯೆಂದು ತಿಳಿಯುತ್ತದೆ. ಸುಮನೋಬಾಣನ ಮಗನಾದ ಜನ್ನನನ್ನು ಸ್ತುತಿಸಿ ಅವನ ಗ್ರಂಥಗಳಿಂದ ಪದ್ಯಗಳನ್ನು ಅನುವಾದಮಾಡಿರುವುದರಿಂದ ಈತನು ಜನ್ನನ ತಂಗಿಯ ಗಂಡನೆಂದು ತೋರುತ್ತದೆ. ಹೊಯ್ಸಳ ವೀರಸೋಮೇಶ್ವರನ "ವಿನೋದಾಕರ್ಣನ ಕೌತುಕೋತ್ಪಾದಿತಮುಂ" ಎಂಬುದರಿಂದ ಆ ದೊರೆಯ ಕಾಲದಲ್ಲಿ ಈ ಗ್ರಂಥವು ಹುಟ್ಟಿದಂತೆ ತಿಳಿಯುತ್ತದೆ. ವೀರಸೋಮೇಶ್ವರನು 1233 ರಿಂದ 1254 ರ ವರೆಗೆ ರಾಜ ವಾಳಿದಂತೆ ತಿಳಿವುದರಿಂದ ಈ ಕವಿ ಸುಮಾರು 12'5 ರಲ್ಲಿದ್ದಿರಬಹುದು. "ಮುನಿಗಳ ಸಭೆಯೊಳ್ ಪರಮಮುನಿ" ಎಂಬುದರಿಂದಲೂ, ಕೇಶಿರಾಜನು "ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನ" ಎಂಬುದರಿಂದಲೂ ಈತನು ಮುನಿಶ್ರೇಷ್ಠನೆಂದು ತಿಳಿಯುತ್ತದೆ" (ಕವಿಚರಿತೆ I. ೨೯೯).

ಇಲ್ಲಿ ಕವಿಚರಿತಕಾರರು ಹೇಳಿರುವ ಕಾರಣಗಳು ಬಹು ವಿಚಿತ್ರಗಳಾಗಿರುವುವು. ಮಲ್ಲಿಕಾರ್ಜುನನು 'ಯಾದವಕಟಕಾಚಾರ್ಯ ಸುಕವಿಸುಮನೋಬಾಣ ಜಾಮಾತೃ' ಎಂದು ತನ್ನನ್ನು ಹೇಳಿಕೊಂಡ ಮಾತ್ರದಿಂದ, ಈತನು ಶಬ್ದಮಣಿದರ್ಪಣವನ್ನು ಬರೆದ ಕೇಶಿರಾಜನ ತಂದೆಯೆಂದು ಹೇಗೆ ನಿರ್ಧರಿಸಬಹುದೋ ಅದು ನಮಗೆ ತಿಳಿಯದು. ಈ ಕೇಶಿರಾಜನು 'ಕವಿಸುಮನೋಬಾಣನ ಯಾದವಕಟಕಾಚಾರ್ಯನೆಸೆವ ದೌಹಿತ್ರನೆ ನಾಂ' ಎಂದು ತನ್ನನ್ನು ಹೇಳಿಕೊಂಡಿರುವುದಂತೂ ಉಂಟು. ಆದರೆ ಕವಿಚರಿತಕಾರರು ಈ ಅಂಶವನ್ನು ಇಲ್ಲಿ ಪ್ರಸ್ತಾವಮಾಡಿಲ್ಲ. ಒಂದು ಪಕ್ಷ ಹಾಗೆ ಮಾಡಿದ್ದರೂ ಕೂಡ ಕೇಶಿರಾಜನು ಸುಮನೋಬಾಣನ ದೌಹಿತ್ರನು ತಾನು ಎಂದು ಹೇಳಿಕೊಂಡಿರುವುದರಿಂದಲೂ, ಮಲ್ಲಿಕಾರ್ಜುನನು ಈ 'ಸುಮನೋಬಾಣನ ಜಾಮಾತೃವು ನಾನು' ಎಂದು ಹೇಳಿಕೊಂಡಿರುವುದರಿಂದಲೂ ಕೂಡ ಕೇಶಿರಾಜನು ಈ ಮಲ್ಲಿಕಾರ್ಜುನನ ಮಗನೆಂದು ನಿರ್ಧರಿಸುವುದು ನ್ಯಾಯವೇ? ಕೇಶಿರಾಜನು ಸುಮನೋಬಾಣನ ಇನ್ನೊಬ್ಬ ಅಳಿಯನ ಮಗನಾಗಿರಬಾರದೇ? ವಸ್ತುತಃ ಈ ಕೇಶಿರಾಜನು 'ಯೋಗಿಪ್ರವರ ಚಿದಾನಂದಮಲ್ಲಿಕಾರ್ಜುನ ಸುತನೆಂ' ಎಂದು ಹೇಳಿಕೊಂಡಿರುವುದರಿಂದ ಅವನು ಮಲ್ಲಿಕಾರ್ಜುನನ ಮಗನೇ ಹೌದು. ಆದರೆ ಈ ಅಂಶವು ಮೇಲೆ ಹೇಳಿದ ವಾಕ್ಯದಿಂದ ಸಿದ್ಧವಾಗುವುದೇ ಹೊರತು ಕವಿಚರಿತಕಾರರು ಹೇಳಿರುವ ವಾಕ್ಯದಿಂದ ಸಿದ್ಧವಾಗುವುದಿಲ್ಲ.

ಹೀಗೆಯೇ ಮಲ್ಲಿಕಾರ್ಜುನನು—

ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು ಪೊನ್ನನೊಳ್
ಸನ್ನಿದಮಾದ ನಾಣ್ನುಡಿ ಗಜಾಂಕುಶರಾಜನ ಚಿತ್ತವೃತ್ತಿ ತಾ |
ನುನ್ನತಮಾಗಿ ಸಂದ ಗುಣವರ್ಮನ ಜಾತಿ ಸಮಾನುರಕ್ತಿಯಿಂ
ದನ್ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ ||

ಎಂದು ಸಾಮಾನ್ಯವಾಗಿ ಜನ್ನ ಪಂಪ ಗುಣನಂದಿ ಪೊನ್ನ ಮುಂತಾದ ಕವಿಗಳನ್ನು ಸ್ತುತಿಸಿರುವನೇ ಹೊರತು ಜನ್ನನು ಸುಮನೋಬಾಣನ ಮಗನೆಂದು ಹೇಳಿಲ್ಲ. ಹೀಗಿರುವಲ್ಲಿ ಪಂಪ ಪೊನ್ನರಂತೆಯೇ ಜನ್ನನನ್ನೂ ಸಾಮಾನ್ಯವಾಗಿ ಸ್ತುತಿಸಿ ಆ ಕವಿಗಳ ಪದ್ಯಗಳಂತೆಯೇ ಜನ್ನನ ಪದ್ಯಗಳನ್ನೂ ಮಲ್ಲಿಕಾರ್ಜುನನು ತನ್ನ ಗ್ರಂಥದಲ್ಲಿ ಅನುವದಿಸಿರುವಾಗ 'ಮಲ್ಲಿಕಾರ್ಜುನನು ಜನ್ನನ ತಂಗಿಯ ಗಂಡನು' ಎಂದು ಇದರಿಂದ ನಿರ್ಧರಿಸುವುದು ಕೇವಲ ಅಸಂಗತವೆಂದು ನಮಗೆ ತೋರುವುದು. ಈ ವಿಷಯದಲ್ಲಿ ನಾವು ಮೇಲೆ (ಪುಟ ೧೩೪) ಹೇಳಿರುವುದನ್ನು ನೋಡಿ.

ಹೀಗೆಯೇ ಹೊಯ್ಸಲ ವೀರಸೋಮೇಶ್ವರನು ಕ್ರಿ. ಶ. ೧೨೩೩ ರಿಂದ ೧೨೫೪ ರ ವರೆಗೆ ಆಳುತ್ತಿದ್ದನೆಂಬ ಕವಿಚರಿತಕಾರರ (ಮೇಲೆ ಹೇಳಿರುವ) ಅಭಿಪ್ರಾಯವೂ ಸರಿಯಾದುದಲ್ಲ. ಇವನ ತಂದೆಯಾದ ಎರಡನೇ ನರಸಿಂಹನು ರಾಜ್ಯವನ್ನಾಳುತ್ತಿದ್ದಾಗಲೇ ಇವನು ದಕ್ಷಿಣಕ್ಕೆ ಹೋಗಿ ಕಣ್ಣನೂರಿನಲ್ಲಿ (ಈ ಊರು ಶ್ರೀರಂಗಕ್ಕೆ ಐದು ಮೈಲಿ ಉತ್ತರದಲ್ಲಿರುವುದು) ಸ್ಥಾಪಿಸಿಕೊಂಡು ಅಲ್ಲಿಂದ ರಾಜ್ಯವನ್ನಾಳುತ್ತಿದ್ದನೆಂದು ಬದನಾಳಿನಲ್ಲಿರುವ (ಮಂಡ್ಯ ೧೨೧ ನೆಯ) ಒಂದು ಶಾಸನದಿಂದ ಗೊತ್ತಾಗುವುದು. ತದನಂತರ ಇವನು ಪ್ರಾಯಿಕವಾಗಿ ತಮಿಳು ಸೀಮೆಯಲ್ಲಿಯೇ ಇದ್ದು ಕನ್ನಡನಾಡಿಗೆ ವಿಶೇಷವಾಗಿ ಬರಲೇ ಇಲ್ಲ. ಈ ಕನ್ನಡ ಸೀಮೆಯನ್ನು ಇವನ ಮಗನಾದ ಮೂರನೆಯ ನರಸಿಂಹನು ಇವನ 'ಅನುಮತದಿಂದ' ಆಳುತ್ತಿದ್ದನೆಂದು ಬೇಲೂರಿನಲ್ಲಿರುವ ನಾಗಮಂಗಲ ೩೯ ನೆಯ ಶಾಸನದಲ್ಲಿನ—

ಶೈಶವದ ಸುಸ್ಥಿರತೆಯ |
ಬಯ್ಸಿಕೆಯೊಳು ಸೋಮನೃಪತಿಯನುಮತದಿಂದಂ ||
ಹೊಯ್ಸಳರಾಜ್ಯದ ಲಕ್ಷ್ಮಿಯ |
ಮೆಯ್ಸಿರಿವಟ್ಟಮನೆ ತಳೆದ ನೃಪನರಸಿಂಹಂ ||

ಎಂಬ ಪದ್ಯದಿಂದ ತಿಳಿದುಬರುವುದು. ಹೀಗೆ ಸೋಮೇಶ್ವರನು ಕನ್ನಡನಾಡಿಗೆ ವಿಶೇಷವಾಗಿ ಬರದೇ ಇದ್ದುದರಿಂದಲೂ, ಅವನು ಜೀವಿಸಿದ್ದಾಗಲೇ ಮೂರನೇ ನರಸಿಂಹನು ಅವನ ಅನುಮತದಿಂದ ಹೊಯ್ಸಳ ರಾಜ್ಯವನ್ನು ಆಳುತ್ತಿದ್ದುದರಿಂದಲೂ, ಆನಂದ ಸಂವತ್ಸರದ ಚೈತ್ರ-ಶುದ್ಧ ೫ ಆ|| ದಲ್ಲಿ ಹುಟ್ಟಿದ ಬೇಲೂರಿನ

(ಬೇಲೂರು ೭೩) ತಾಮ್ರಶಾಸನದ ನಂತರ ಸೋಮೇಶ್ವರನ ಕಾಲದ ಶಾಸನಗಳು ಮೈಸೂರು ಸೀಮೆಯಲ್ಲಿ ಪ್ರಾಯಿಕವಾಗಿ ದೊರೆತಿಲ್ಲ. ಇದರಿಂದಲೂ ಶಕವರ್ಷ ೧೧೭೭ ನೆಯ ಆನಂದಸಂವತ್ಸರದ ಮಾರ್ಗಶಿರ ಬಹುಳ ೧ ಬೃ|| ಧನುಸ್ಸಂಕ್ರಮಣದ ದಿವಸದಲ್ಲಿ ಎಂದರೆ, ಕ್ರಿ. ಶ. ೧೨೫೪ ನೇ ನವೆಂಬರು ತಿಂಗಳು ೨೬ ನೇ ತಾರೀಖು ಬೃಹಸ್ಪತಿವಾರದಂದು ಹುಟ್ಟಿದ ಬಸ್ತಿಹಳ್ಳಿಯಲ್ಲಿರುವ ಬೇಲೂರು ೧೨೫ ನೇ ಶಾಸನದಲ್ಲಿ 'ಶ್ರೀಮತ್ಪ್ರತಾಪಚಕ್ರವರ್ತಿ ಹೊಯ್ಸಳ ಶ್ರೀವೀರನಾರಸಿಂಗದೇವರಸರು' ಒಂದು ದತ್ತಿಯನ್ನು ಕೊಟ್ಟಂತೆ ಹೇಳಿರುವುದರಿಂದಲೂ ಕೂಡ, ಮ|| ರೈಸ್‌ರವರು ಸೋಮೇಶ್ವರನು ಕ್ರಿ. ಶ. ೧೨೫೪ ರ ವರೆಗೆ ಮಾತ್ರ ಆಳುತ್ತಿದ್ದನೆಂದೂ, ತದನಂತರ ಆವನ ಮಗನಾದ ಮೂರನೇ ನರಸಿಂಹನು ರಾಜ್ಯವನ್ನಾಳುವುದಕ್ಕೆ ಪ್ರಾರಂಭಿಸಿದನೆಂದೂ ನಿರ್ಧರಿಸಿದರು (ಎಪಿಗ್ರಾಫಿಯ ಕರ್ಣಾಟಿಕ ಸಂಪುಟ ೫, ಉಪೋ. ಪುಟ ೨೬). ಈ ಅಭಿಪ್ರಾಯವನ್ನೇ ಕವಿಚರಿತಕಾರರು ಕವಿಚರಿತೆಯಲ್ಲಿ ಅನುವದಿಸಿರುವರು. ಇದು ತಪ್ಪು. ಈ ಮೇಲೆ ಹೇಳಿದ ಬಸ್ತಿಹಳ್ಳಿಯ ಶಾಸನದಲ್ಲಿಯೇ ಶ್ರೀಮತ್ಪ್ರತಾಪಚಕ್ರವರ್ತಿ ಹೊಯ್ಸಳ ಶ್ರೀವೀರನಾರಸಿಂಗದೇವರಸರು 'ಶ್ರೀಮತು ಪ್ರತಾಪಚಕ್ರವರ್ತಿ ಹೊಯ್ಸಳ ಶ್ರೀವೀರಸೋಮೇಶ್ವರದೇವರಸರ ರಾಜ್ಯಾಭ್ಯುದಯವಹಂತಾಗಿ' ದತ್ತಿಯನ್ನು ಕೊಟ್ಟಂತೆ ಹೇಳಿರುವುದರಿಂದ ಆ ಕಾಲದಲ್ಲಿ ಸೋಮೇಶ್ವರನೇ ಆಳುತ್ತಿದ್ದನೆಂದು ಸ್ಪಷ್ಟವಾಗುವುದು. ಅಲ್ಲದೆ ಸೋಮೇಶ್ವರನ ಹೆಸರನ್ನು ಹೇಳುವ ಮೇಲೆ ಹೇಳಿದ ಬೇಲೂರು ತಾಮ್ರಶಾಸನವು ಕ್ರಿ. ಶ. ೧೨೫೫ ನೆಯ ಮಾರ್ಚಿ ೧೪ ನೇ ತಾರೀಖು ಭಾನುವಾರದಲ್ಲಿ ಹುಟ್ಟಿದ್ದರಿಂದ ಆಗಲೂ ಸೋಮೇಶ್ವರನೇ ಆಳುತ್ತಿದ್ದನೆಂದು ಸ್ಪಷ್ಟವಾಗುವುದು. ಹೀಗೆಯೇ 'ಸಕವರುಷ ಸಾಸಿರದನೂಱ ಯೆಪ್ಪತ್ತೆಂಟನೆಯ ರಾಕ್ಷಸಸಂವತ್ಸರದ ಆಷಾಢ ಶುದ್ಧ ಚತುರ್ದಸಿ ಆದಿವಾರ ಮೂಲಾನಕ್ಷತ್ರ ಅಮೃತಯೋಗದ' ದಿನದಲ್ಲಿ ಎಂದರೆ ಕ್ರಿ. ಶ. ೧೨೫೫ ನೇ ಜೂನ್ ೨೦ ನೇ ತಾರೀಖು ಆದಿತ್ಯವಾರದಲ್ಲಿ * ಹುಟ್ಟಿದ ಒಂದು ಶಾಸನದಲ್ಲಿ (ಹೆಗ್ಗಡದೇವನಕೋಟೆ ೧೦ ನೇ ಶಾಸನ) ವೀರಸೋಮೇಶ್ವರದೇವನು ಕಣ್ಣನೂರಿನಲ್ಲಿ ಪೃಥ್ವೀರಾಜ್ಯವನ್ನು ಗೆಯ್ಯುತ್ತಿದ್ದನೆಂದು ಹೇಳಿರುವುದು. ವಸ್ತುತಃ ಈ ಸೋಮೇಶ್ವರನ ೨೯ ನೇ ವರ್ಷ

---

* ಈ ಆದಿತ್ಯವಾರದಂದು ಶಕ ೧೧೭೮ ನೇ ರಾಕ್ಷಸಸಂವತ್ಸರದ ಆಷಾಢಮಾಸದ ಶುದ್ಧ ಚತುರ್ದಶಿಯು ಲಂಕಾಸೂರ್ಯೋದಯಾತ್ಪರ ೨೭ ಘ. ೧೫ ವಿ. (ಸೂರ್ಯಸಿದ್ಧಾಂತ) ವರೆಗೆ ಅಥವಾ ೨೮ ಘ. ೧೯ ವಿ. (ಆರ್ಯಸಿದ್ಧಾಂತ) ವರೆಗೂ ಮೂಲಾನಕ್ಷತ್ರವು ೩೭ ಘ. ೨೩ ವಿ. ವರೆಗೂ ವ್ಯಾಪಿಸಿಕೊಂಡಿತ್ತು. ಭಾನುವಾರ ಮೂಲಾನಕ್ಷತ್ರಗಳ ಯೋಗವು ಸರ್ವಸಿದ್ಧಿಪ್ರದವಾದ ಯೋಗವೆಂದು ಜ್ಯೋತಿಶ್ಶಾಸ್ತ್ರಗ್ರಂಥಗಳಲ್ಲಿ ಹೇಳಲ್ಪಟ್ಟಿರುವುದು.

ದಲ್ಲಿ ಎಂದರೆ, ೧೨೬೨-೧೨೬೩ ರಲ್ಲಿ ಹುಟ್ಟಿದ ಶಾಸನಗಳು ಮದರಾಸುಸೀಮೆಯಲ್ಲಿ ದೊರೆತಿರುವುದರಿಂದ ಇವನು ಅಲ್ಲಿಯವರೆಗೆ ರಾಜ್ಯವನ್ನಾಳುತ್ತಿದ್ದನೆಂಬುದು ವ್ಯಕ್ತ ವಾಗುವುದು. ಇವನು ಪ್ರಾಯಶಃ ೧೨೬೫ ರಲ್ಲಿ ಒಂದನೇ ಜಟಾವರ್ಮ ಸುಂದರ ಪಾಂಡ್ಯನಿಂದ ಕೊಲ್ಲಲ್ಪಟ್ಟನೆಂಬ ಮ|| ಕೃಷ್ಣಶಾಸ್ತ್ರಿಗಳ ಅಭಿಪ್ರಾಯವನ್ನು (ಆರ್ಕೆ ಯಲಾಜಿಕಲ್ ಸರ್ವೆ ಆಫ್ ಇಂಡಿಯ, ೧೯೦೯-೧೯೧೦ನೇ ವರ್ಷದ ರಿಪೋರ್ಟು ಪುಟ ೧೫೦ ಆದಿ) ನಾವು ಒಪ್ಪಿಕೊಂಡರೆ * ಇವನು ೧೨೩೪ ರಿಂದ ೧೨೬೫ ರ ವರೆಗೆ ಆಳಿದನೆಂದು ನಾವು ಹೇಳಬೇಕಾಗುವುದು. ೧೨೩೪ ರಿಂದ ೧೨೬೩ ರ ವರೆಗೆ ಇವನು ರಾಜ್ಯಭಾರ ಮಾಡಿದನೆಂಬುದರಲ್ಲಂತೂ ಯಾವ ವಿಧವಾದ ಸಂದೇಹವೂ ಇಲ್ಲ.

ಮಲ್ಲಿಕಾರ್ಜುನನು ರಚಿಸಿರುವ ಸೂಕ್ತಿಸುಧಾರ್ಣವದ ಮೊದಲನೆಯ ಆಶ್ವಾಸ ದಲ್ಲಿ ಹೊಯ್ಸಲರಾಜರನ್ನು ಸ್ತುತಿಸುವ ಪ್ರಕರಣದಲ್ಲಿರುವ—

ಮುನ್ನಂ ಊಧಿಯ ಕೃಷ್ಣಕಂಧರನುಮಂ ಮಾರ್ಕೊಂಡು ಚೋಳೋರ್ವಿಯಂ |
ನಿನ್ನಂತಾರೊಳಪೊಕ್ಕು ಸಾಧಿಸಿದರಾರ್ ಪಾಂಡ್ಯೇಶನಂ ಶೌರ್ಯದಿಂ |
ಬೆನ್ನಂಪತ್ತಿಸೆ ಸೋವಿದೇವ ಘಟೆಯಂ ಕೈಕೊಂಡರಾರ್ ಚೋಳನಂ |
ತನ್ನಾಮ್ನಾಯದ ರಾಜ್ಯದೊಳ್ ನಿಱಿಸಿದರ್ ಸೋಮಾನ್ವಯೋರ್ವೀಶ್ವರರ್ ||

ಹಣಿದಂ ಬೊಯ್ಯಲ್ ಜವಂ ರಾಯರನೆ ಬಯಸಿ ಬರ್ಪಂತೆ ಸೋಮೇಶ್ವರಂ ತೆಂ |
ಕಣ ರಾಯಂ ಬಂದನಾಶಾಜಯಕೆಲೆಲೆ ಮಹಾದೇವ ವಿದ್ವಿಣ್ನೃಪರ್ಗೆ |
ತ್ತಣ ತೋರ್ಪಿನ್ನೆತ್ತಣಾರ್ಪೆತ್ತಣ ಜಯದೊದವಿನ್ನೆತ್ತಣಾಟೋಪವಿನ್ನೆ |
ತ್ತಣ ಧಾತ್ರೀಚಕ್ರವಿನ್ನೆತ್ತಣ ಗಜಘಟೆಯಿನ್ನೆತ್ತಣಾತ್ಮೀಯಸೈನ್ಯಂ ||

ಎಂಬ ಸೋಮೇಶ್ವರಸ್ತುತಿರೂಪವಾದ ಎರಡು ಪದ್ಯಗಳಲ್ಲಿ ಕೃಷ್ಣಕಂಧರನ ಮತ್ತು ಮಹಾದೇವನ ಹೆಸರುಗಳು ಉಲ್ಲಿಖಿತಗಳಾಗಿರುವುವು. ಈ ಪದ್ಯಗಳಲ್ಲಿ ಮೊದಲನೇ ದಾದ ‘ ಮುನ್ನಂ ಊಧಿಯ ಕೃಷ್ಣಕಂಧರನುಮಂ... ’ ಎಂಬ ಪದ್ಯವು ಬಸರಾಳಿ ನಲ್ಲಿರುವ (ಮಂಡ್ಯ ೧೨೨) ಒಂದು ಶಾಸನದಲ್ಲಿಯೂ ಇರುವುದು. ಈ ಶಾಸನದ ಪ್ರಸ್ತಾವವನ್ನು ಮಾಡುವಾಗ ಡಾ|| ಫ್ಲೀಟ್‌ರವರು (ಪೂರ್ವನಿರ್ದಿಷ್ಟಗ್ರಂಥ, ಪುಟ

---

* ಹೊಸಹೊಳಲಿನಲ್ಲಿರುವ (ಕೃಷ್ಣರಾಜಪೇಟೆ ೯ನೆಯ) ಒಂದು ಶಾಸನದಲ್ಲಾದರೆ ‘ ಸಕವರಿಸದ ಸಾವಿರದನೂಱ ಯೆಪ್ಪತ್ತೊಂಭತ್ತನೆಯ ನಳಸಂವತ್ಸರದ ವೈಶಾಖಶುದ್ಧ ಚಟ್ಟಿ ಶನಿವಾರದಂದು ’ ಸೋಮೇಶ್ವರದೇವನು ಲೋಕಾಂತರವನ್ನೈದಿದಂತೆ ಹೇಳಲ್ಪಟ್ಟಿರುವುದು. ಈ ಸಂವತ್ಸರದನಂತರ ೬, ೭ ವರ್ಷಗಳವರೆಗೂ ಈ ಸೋಮೇಶ್ವರನು ಆಳುತ್ತಿದ್ದನೆಂದು ಮದರಾಸುಸೀಮೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಹೇಳಲ್ಪಟ್ಟಿರುವುದರಿಂದ ಈ ಶಾಸನದಲ್ಲಿ ಹೇಳಿರುವ ತಾರೀಖು ತಪ್ಪಾಗಿರಬೇಕು. ಈ ವಿಷಯದಲ್ಲಿ ೧೯೧೪-೧೫ ನೇ ವರ್ಷದ ಮೈಸೂರು ಆರ್ಕೆಯಾಲಾಜಿಕಲ್ ರಿಪೋರ್ಟಿನ ೫೦ ನೇ ಪುಟದಲ್ಲಿ § ೭೪ ನ್ನು ನೋಡಿ.

೫೦೮) ಇಲ್ಲಿ ಕೀರ್ತಿತನಾಗಿರುವ ' ಊಥಿಯ ಕೃಷ್ಣಕಂಧರನು ' ದೇವಗಿರಿಯಲ್ಲಿ ರಾಜ್ಯವಾಳಿದ ಯಾದವವಂಶದ ಕೃಷ್ಣನೇ ಎಂದು ಹೇಳಿರುವರು.

ಈ ಕೃಷ್ಣನು ಕ್ರಿ. ಶ. ೧೨೪೭ ರಲ್ಲಿ ಸಿಂಹಾಸನವನ್ನೇರಿದನೆಂದು ಡಾ|| ಫ್ಲೀಟ್‌ರವರೇ (ಪುಟ ೫೨೬) ಹೇಳಿರುವರು. ಈ ಮೇಲಿನ ಬಸರಾಳು ಶಾಸನವಾದರೆ ಕ್ರಿ. ಶ. ೧೨೩೭ ರಲ್ಲಿ* (ಅಕ್ಟೋಬರ್ ೨೨ ನೆಯ ಬೃಹಸ್ಪತಿವಾರದಂದು) ಹುಟ್ಟಿದ್ದು. ಆ ಕಾಲದಲ್ಲಿ ಸಿಂಘಣನು ದೇವಗಿರಿಯಲ್ಲಿ ದೊರೆಯಾಗಿದ್ದನು. ಆಗ ಆವನ ಮೊಮ್ಮಗನಾದ ಕೃಷ್ಣಕಂಧರನು ಪ್ರಾಯಶಃ ಯುವರಾಜನಾಗಿದ್ದನೆಂದು ತೋರುವುದು.

ಮೇಲೆ ಅನುವದಿಸಲ್ಪಟ್ಟ ಎರಡನೆಯ ಪದ್ಯದಲ್ಲಿ ಕೀರ್ತಿಸಲ್ಪಟ್ಟಿರುವ ಮಹಾದೇವನು ಈ ಕೃಷ್ಣ-ಕಂಧರನ ಬಳಿಕ ಪಟ್ಟಕ್ಕೆ ಬಂದು ಕ್ರಿ. ಶ. ೧೨೬೧ ರಿಂದ ೧೨೭೧ ರ ವರೆಗೆ ರಾಜ್ಯವಾಳಿದ (ಡಾ|| ಫ್ಲೀಟ್‌ರವರ ಮೇಲೆ ಹೇಳಿದ ಗ್ರಂಥ, ಪುಟ ೫೨೮) ಇವನ ತಮ್ಮನಾದ ಮಹಾದೇವನೇ ಆಗಿರಬೇಕು. ಈ ಮಹಾದೇವನಿಗೂ ಹೊಯ್ಸಲರಾಜನಾದ ಮೂರನೇ ನರಸಿಂಹನಿಗೂ ಯುದ್ಧವು ನಡೆಯಿತೆಂದೂ, ಈ ಯುದ್ಧದಲ್ಲಿ ' ಸೇವುಣಮಹಾಮಹಿಪಂ ಮಹದೇವರಾಣೆಯಂ ಕದನದೊಳಾಂತು ನಿತ್ತರಿಸಲಾಱದೆ ಬಿಟ್ಟು ತುರಂಗಮಂಗಳಂ ಬೆದಱೆ ಪಲಾಯನಂ ಕುಶಲಮೆಂದಿರದೆ ' ಒಂದು ರಾತ್ರಿಯಲ್ಲಿ ಓಡಿದನೆಂದೂ, ಈ ಯುದ್ಧದಲ್ಲಿ ರತ್ನಪಾಲನೆಂಬ ಶತ್ರುವನ್ನು ಕೊಂದು ಆವನ ಜವನಿಕೆಯನ್ನು ಗ್ರಹಿಸಿದುದಕ್ಕಾಗಿ ಹೊಯ್ಸಲ ಚಮೂಪತಿಯಾದ ಪೆರುಮಾಳೆದಂಡನಾಯಕನಿಗೆ ' ಜವನಿಕೆನಾರಾಯಣಂ ' ಎಂಬ ಬಿರುದು ಬಂದಿತೆಂದೂ ಮೇಲೆ ಹೇಳಿದ ಬೆಳ್ಳೂರು ಶಾಸನದಲ್ಲಿ ಹೇಳಲ್ಪಟ್ಟಿರುವುದು. ಈ ಶಾಸನವು ಸುಮಾರು ಕ್ರಿ. ಶ. ೧೨೭೧ ರಲ್ಲಿ ಹುಟ್ಟಿತಾದುದರಿಂದ ಮೇಲೆ ಹೇಳಿದ ಯುದ್ಧವು ೧೨೭೧ ಕ್ಕಿಂತ ಹಿಂದೆಯೇ ನಡೆದಿರಬೇಕು.

" ಹಣಿದಂಬೊಯ್ಕಲ್ ಜವಂ ರಾಯುರನೆ ಬಯಸಿ ಬರ್ಪಂತೆ ಸೋಮೇಶ್ವರಂ ತಾಂ |
ಕಣ ರಾಯಂ ಬಂದನಾಶಾಜಯಕೆಲೆಲೆ ಮಹಾದೇವ ವಿದ್ವಿಣ್ನೃಪರ್ಗೇ ||
ತ್ತಣ ತೋರ್ಪನ್ನೆತ್ತಣಾರ್ಪೆತ್ತಣ ಜಯದೊದವಿನ್ನೆತ್ತಣಾಟೋಪವಿನ್ನೆ |
ತ್ತಣ ಧಾತ್ರೀಚಕ್ರವಿನ್ನೆತ್ತಣ ಗಜಘಟೆಯಿನ್ನೆತ್ತಣಾತ್ಮೀಯಸೈನ್ಯಂ || "

ಎಂಬ ಮೇಲೆ ಹೇಳಿದ ಸೂಕ್ತಿಸುಧಾರ್ಣವದ ಪದ್ಯದಲ್ಲಿ ಮಹಾದೇವನು ರಾಜ್ಯವಾಳುತ್ತಿದ್ದನೆಂದು ಸೂಚಿಸಲ್ಪಟ್ಟಂತಿರುವುದು. ಹೊಯ್ಸಲ ಸೋಮೇಶ್ವರನಾದರೆ ನಾವು

* ಈ ಶಾಸನವು ಕ್ರಿ. ಶ. ೧೨೪೪ ರಲ್ಲಿ ಹುಟ್ಟಿತೆಂಬ ಡಾ|| ಫ್ಲೀಟ್‌ರವರ (ಉಕ್ತಪುಸ್ತಕದ ೫೦೮ ನೇ ಪುಟ) ಅಭಿಪ್ರಾಯವು ತಪ್ಪಾದುದು.

ಮೇಲೆ ಹೇಳಿದಂತೆ ಕನ್ನಡನಾಡಿಗೆ ಬರದೆ ತಮಿಳುಸೀಮೆಯಲ್ಲಿಯೇ ವಾಸಮಾಡುತ್ತಿದ್ದುದರಿಂದ ಈ ಪದ್ಯದಲ್ಲಿ ಹೇಳಿರುವ ಸೋಮೇಶ್ವರನ ದಿಗ್ವಿಜಯವು ಅವನ ಮಗನಾದ ಮೂರನೇ ನರಸಿಂಹನು ಕಳುಹಿಸಿದ ಸೈನ್ಯಗಳಿಂದ ಮಾಡಲ್ಪಟ್ಟಿರಬೇಕು. ಎಂದರೆ, ನರಸಿಂಹ ಮಹಾದೇವರಿಗೆ ನಡೆದ ಮೇಲೆ ಹೇಳಿದ ಯುದ್ಧವು ಈ ಪದ್ಯದಲ್ಲಿ ಹೇಳಿರುವ ದಿಗ್ವಿಜಯದ ಸಮಯದಲ್ಲಿಯೇ ಆಗಿರಬೇಕಲ್ಲದೆ ಈ ಯುದ್ಧದಲ್ಲಿ ನರಸಿಂಹ ಕೃತವಾದ ಮಹಾದೇವನ ಪರಾಜಯವೇ ಮೇಲಿನ ಪದ್ಯದಲ್ಲಿ ಸೋಮೇಶ್ವರಕೃತವೆಂದು ವರ್ಣಿಸಲ್ಪಟ್ಟಿರುವಂತೆ ತೋರುವುದು. ಆದ್ದರಿಂದ ಸೂಕ್ತಿಸುಧಾರ್ಣವವು ಮಹಾದೇವನು ಪಟ್ಟಕ್ಕೆ ಬಂದನಂತರವೂ ಸೋಮೇಶ್ವರನು ಲೋಕಾಂತರವನ್ನೈದುವುದಕ್ಕೆ ಮುಂಚೆಯೂ ಎಂದರೆ ಕ್ರಿ. ಶ. ೧೨೬೦ ಕ್ಕಿಂತ ಈಚೆಗೂ ೧೨೬೫ ಕ್ಕಿಂತ ಹಿಂದೆಯೂ ರಚಿಸಲ್ಪಟ್ಟಿತೆಂದು ಸ್ಪಷ್ಟವಾಗುವುದು. ಅದು ೧೨೬೩ರಲ್ಲಿ ರಚಿಸಲ್ಪಟ್ಟಿತೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿ ವಿರೋಧವೇನೂ ಇರಲಾರದು.

* * *

ಸೂಕ್ತಿಸುಧಾರ್ಣವದಲ್ಲಿರುವ 'ಮುನ್ನಂ ಊಢಿಯ ಕೃಷ್ಣಕಂಧರನುಮಂ...' ಎಂಬ ಪದ್ಯವು ಬಸರಾಳಿನ ಶಾಸನದಲ್ಲಿರುವುದೆಂದು ನಾವು ಮೇಲೆ ಹೇಳಿರುವೆವಷ್ಟೆ. ಹೀಗೆಯೇ ಈ ಶಾಸನದಲ್ಲಿ ಈ ಪದ್ಯದ ಹಿಂದೆ ಇರುವ 'ಸಿರಿವಕ್ಷೋರಂಗದೊಳ್ ನರ್ತಿಸೆ...' ಎಂಬ ಪದ್ಯವು * ಸೂಕ್ತಿಸುಧಾರ್ಣವದ ೫ನೆಯ ಆಶ್ವಾಸದಲ್ಲಿ ಉದಾಹರಿಸಲ್ಪಟ್ಟಿರುವುದೆಂದು ಕವಿಚರಿತಕಾರರು (I. ೨೯೮) ಹೇಳಿರುವರು. ಈ ಶಾಸನವನ್ನು ಪರಮಪ್ರಕಾಶಯೋಗೀಶ್ವರತನಯನೂ, ಬ್ರಹ್ಮವಿದ್ಯೆಗಾಸ್ಪದರೂಪನೂ, ಸತ್ಕವೀಶ್ವರನೂ ಆದ ಚಿದಾನಂದನು ರಚಿಸಿದನೆಂದು ಶಾಸನದ ಕೊನೆಯಲ್ಲಿರುವ—

ಧರೆ ಪೊಗಳೆ ಚಿದಾನಂದಂ | ವಿರಚಿಸಿದಂ ಸತ್ಕವೀಶ್ವರಂ ಶಾಸನವಂ |
ಪರಮಪ್ರಕಾಶಯೋಗೀ | ಶ್ವರತನಯಂ ಬ್ರಹ್ಮವಿದ್ಯೆಗಾಸ್ಪದರೂಪಂ ||

ಎಂಬ ಪದ್ಯದಿಂದ ತಿಳಿದುಬರುವುದು. ಸೂಕ್ತಿಸುಧಾರ್ಣವವನ್ನು ವಿರಚಿಸಿದ ಮಲ್ಲಿಕಾರ್ಜುನನಿಗೆ ಮೇಲೆ ಹೇಳಿರುವಂತೆ ಮಲ್ಲಪ, ಮಲ್ಲ, ಚಿದಾನಂದ—ಮಲ್ಲಿಕಾರ್ಜುನ ಎಂಬ ಹೆಸರುಗಳಲ್ಲದೆ 'ಚಿದಾನಂದ' ಎಂಬ ಹೆಸರೂ ಇತ್ತೆಂದು ಸೂಕ್ತಿಸುಧಾರ್ಣವದಲ್ಲಿರುವ

ಸರಸಕವೀಶ್ವರಸಭೆಯೊಳ್ | ಸರಸಕವೀಶಂ ವಿಶಿಷ್ಟಮುನಿಗಳ ಸಭೆಯೊಳ್ ||
ಪರಮಮುನಿ ಬುಧರ ಸಭೆಯೊಳ್ | ಪರಮಬುಧನೆನಿಪ್ಪನೀ ಚಿದಾನಂದಬುಧಂ ||

---

* ಈ ಶಾಸನದಲ್ಲಾದರೆ ಈ ಪದ್ಯವು ಈ ರೂಪದಲ್ಲಿ ಮುದ್ರಿತವಾಗಿಲ್ಲ. ನಾಗಮಂಗಲದ ೯೮ ನೇ ಶಾಸನದಲ್ಲಿ ಕವಿಚರಿತಕಾರರು ಕೊಟ್ಟಿರುವ ರೂಪದಲ್ಲಿಯೇ ಇರುವುದು.

ಎಂಬ ಪದ್ಯದಿಂದ ಗೊತ್ತಾಗುತ್ತದೆ. ಈ ಪದ್ಯದಲ್ಲಿರುವ ವಿಶೇಷಣಗಳಿಗೆ ಸಮಾನಾರ್ಥಕಗಳಾದ 'ಸತ್ಕವೀಶ್ವರಂ' 'ಬ್ರಹ್ಮವಿದ್ಯೆಗಾಸ್ಪದರೂಪಂ' ಎಂಬ ವಿಶೇಷಣಗಳು ಮೇಲಿನ ಬಸರಾಳು ಶಾಸನದ ಕರ್ತೃವಾದ ಚಿದಾನಂದನ ವಿಷಯದಲ್ಲಿ ಹೇಳಲ್ಪಟ್ಟಿರುವುದನ್ನೂ, ಈ ಶಾಸನದಲ್ಲಿನ 'ಮುನ್ನಂ ಬೂಢಿಯ ಕೃಷ್ಣಕಂಧರನುಮಂ...' 'ಸಿರಿ ವಕ್ಷೋರಂಗದೊಳ್ ನರ್ತಿಸೆ...' ಎಂಬ ಪದ್ಯಗಳು * ಸೂಕ್ತಿಸುಧಾರ್ಣವದಲ್ಲಿ ಉದ್ಧೃತಗಳಾಗಿರುವುದನ್ನೂ ಪರ್ಯಾಲೋಚಿಸಿದರೆ, ಬಸರಾಳುಶಾಸನದ ಕರ್ತೃವೂ ಪರಮ ಪ್ರಕಾಶಯೋಗೀಶ್ವರನ ಮಗನೂ ಆದ ಚಿದಾನಂದನೂ, ಸೂಕ್ತಿಸುಧಾರ್ಣ

---

* ಈ ಎರಡು ಪದ್ಯಗಳಲ್ಲದೆ, ಈ ಬಸರಾಳು ಶಾಸನದ ಉಪಕ್ರಮದಲ್ಲಿ ಈ ಪದ್ಯಗಳ ಹಿಂದೆ ಇರುವ ಎರಡು ಪದ್ಯಗಳೂ ಮುಂದೆ ಇರುವ ಒಂದು ಪದ್ಯವೂ, ಅಂತು ಈ ಬಸರಾಳಿನ ಶಾಸನದ ಉಪಕ್ರಮದಲ್ಲಿರುವ ಎಲ್ಲಾ ಪದ್ಯಗಳೂ ನಾಗಮಂಗಲದ ತಾಲ್ಲೋಕು ಭೀಮನಹಳ್ಳಿಯಲ್ಲಿರುವ ಒಂದು ಶಾಸನ (ನಾಗಮಂಗಲ ೯೮ ನೇ ಶಾಸನ) ದಲ್ಲಿ ದೊರೆಯುವವು. ಈ ಭೀಮನಹಳ್ಳಿಯ ಶಾಸನದಲ್ಲಿ ಮೇಲೆ ಹೇಳಿದ ಬಸರಾಳಿನ ಶಾಸನದ (ಮಂಡ್ಯ ೧೨೨ ನೇ ಶಾಸನದ) ಉಪಕ್ರಮದಲ್ಲಿರುವ ಪದ್ಯಗಳಲ್ಲದೆ, ಬಸರಾಳಿನ ಇನ್ನೊಂದು ಶಾಸನ (ಮಂಡ್ಯ ೧೨೧ ನೇ ಶಾಸನ) ದ ಉಪಕ್ರಮದಲ್ಲಿ 'ಹರಿನಾಭೀಕಮಲಕ್ಕೆ....' ಎಂಬ ಪದ್ಯ ಮೊದಲುಗೊಂಡು "....ತನ್ನ ತೇಜಃಪ್ರತಾಪಂ" ಎಂಬ ಪರ್ಯಂತವಾಗಿರುವ ೧೧ ಪದ್ಯಗಳೂ ದೊರೆಯುವವು. ಹೀಗೆ ಈ ಭೀಮನಹಳ್ಳಿಯ ಶಾಸನದ 'ನಮಸ್ತುಂಗ ಶಿರಶ್ಚುಂಬಿ....' ಎಂಬ ಮಂಗಳಶ್ಲೋಕದನಂತರ 'ಹರಿನಾಭೀಕಮಲಕ್ಕೆ....' ಎಂಬ ಪದ್ಯ ಮೊದಲಾಗಿ ಮಂಡ್ಯದ ೧೨೧ ನೇ ಶಾಸನದ ಉಪಕ್ರಮದಲ್ಲಿರುವ ೧೧ ಪದಗಳೂ, ತದನಂತರ 'ಕಾಳಲೆದೇವಿಗಮುರ್ವೀಪಾಳಕನೆನಿಸಿದ ನಾರಸಿಂಹನೃಪಂಗಂ....' ಎಂಬ ಪದ್ಯ ಮೊದಲಾಗಿ ಮಂಡ್ಯದ ೧೨೨ ನೆಯ ಶಾಸನದ ಉಪಕ್ರಮದಲ್ಲಿರುವ ಸೋಮೇಶ್ವರಸ್ತೋತ್ರರೂಪವಾದ ಈ ಪದ್ಯಗಳೂ, ಅಂತು ಒಟ್ಟು ೧೬ ಪದ್ಯಗಳು ಮಾತ್ರ ಉಪಕ್ರಮದಲ್ಲಿರುವವು.

ಇವುಗಳಲ್ಲಿ ಮಂಡ್ಯದ ೧೨೨ ನೇ ಶಾಸನವು ಚಿದಾನಂದನಿಂದ ಎಂದರೆ ಚಿದಾನಂದ-ಮಲ್ಲಿಕಾರ್ಜುನನಿಂದ ಬರೆಯಲ್ಪಟ್ಟಿತೆಂದು ಅದರ ಅಂತ್ಯದಲ್ಲಿಯೇ ಹೇಳಿರುವುದು. ಮಂಡ್ಯದ ೧೨೧ ನೇ ಶಾಸನವನ್ನೂ (ಇದು ಕ್ರಿ. ಶ. ೧೨೩೦ ನೆಯ ಏಪ್ರಿಲ್ ೧೫ ನೇ ತಾರೀಖು ಸೋಮವಾರದಂದು ಹುಟ್ಟಿದ್ದು. ಆ ದಿವಸದಲ್ಲಿ ಅಡ್ಡಾಯುದದ ಹರಿಹರ ದಂಡನಾಯಕನು ಬಸರಾಳಿನಲ್ಲಿ ಮನೋಹರವಾದ ಗುಡಿಯನ್ನು ಕಟ್ಟಿಸಿ ಲಿಂಗಪ್ರತಿಷ್ಠೆಯನ್ನು ಮಾಡಿದನೆಂದು ಈ ಶಾಸನದಲ್ಲಿ ಹೇಳಿರುವುದು) ನಾಗಮಂಗಲದ ೯೮ ನೇ ಶಾಸನವನ್ನೂ ಯಾವ ಕವಿಯು ರಚಿಸಿದನೆಂದು ಆ ಶಾಸನಗಳಲ್ಲಿ ಹೇಳಿಲ್ಲ. ಆದರೆ, ಈ ನಾಗಮಂಗಲದ ೯೮ ನೇ ಶಾಸನದಲ್ಲಿ ಮಂಡ್ಯದ ೧೨೧, ೧೨೨ ನೇ ಶಾಸನಗಳಲ್ಲಿರುವ ಹೊಯ್ಸಳ ರಾಜಸ್ತೋತ್ರರೂಪವಾದ ಪದ್ಯಗಳೆಲ್ಲವೂ ದೊರೆಯುವುದನ್ನು ನೋಡಿದರೆ, ಮಂಡ್ಯದ ೧೨೨ನೇ ಶಾಸನದಂತೆ ಆದರ ಹಿಂದಿನ ೧೨೧ ನೇ ಶಾಸನವೂ ಈ ಚಿದಾನಂದ ಅಥವಾ ಚಿದಾನಂದ ಮಲ್ಲಿಕಾರ್ಜುನ ಕವಿಯಿಂದ ಬರೆಯಲ್ಪಟ್ಟಿತೆಂದು ತೋರುವುದು. ನಾಗಮಂಗಲದ ೯೮ ನೇ ಶಾಸನದಲ್ಲಿನ ಪದ್ಯಗಳೆಲ್ಲವೂ ಮಂಡ್ಯದ ಈ ಎರಡು ಶಾಸನಗಳಲ್ಲಿರುವುವೆಂದು ನಾವು ಮೇಲೆಯೇ ಹೇಳಿರುವೆವು.

ವದ ಕರ್ತೃವಾದ ಚಿದಾನಂದ, ಚಿದಾನಂದ-ಮಲ್ಲಿಕಾರ್ಜುನ, ಮಲ್ಲಪ ಅಥವಾ ಮಲ್ಲನೂ ಒಬ್ಬನೇ ಮನುಷ್ಯನೆಂದು ನಾವು ಧಾರಾಳವಾಗಿ ಹೇಳಬಹುದು.

ಈ ಚಿದಾನಂದ ಅಥವಾ ಚಿದಾನಂದ-ಮಲ್ಲಿಕಾರ್ಜುನನು ಜೈನನೆಂದು ಹೇಳುವುದಕ್ಕೆ ಯಾವ ಆಧಾರವೂ ಕಾಣುವುದಿಲ್ಲವೆಂಬುದನ್ನು ನಾವು ಹಿಂದೆ (ಪುಟ ೧೮೯) ನಿರೂಪಿಸಿರುವೆವು. ಕವಿಚರಿತಕಾರರು ಬಸರಾಳು ಶಾಸನದ ಕರ್ತೃವಾದ ಚಿದಾನಂದ ಕವಿಯ ಚರಿತಾವಸರದಲ್ಲಿ (I. ೨೯೮) 'ಈತನು ಸ್ಮಾರ್ತಬ್ರಾಹ್ಮಣನಾಗಿರಬಹುದು' ಎಂದು ಬರೆದಿರುವ ಅಭಿಪ್ರಾಯವು ಸಮೀಚೀನವಾಗಿರುವಂತೆ ನಮಗೂ ತೋರುವುದು. ಆದುದರಿಂದ ಈ ಮಲ್ಲಿಕಾರ್ಜುನನ ಮಗನಾದ ಕೇಶಿರಾಜನೂ ಇವನ ಮಾವನಾದ ಸುಮನೋಬಾಣನೂ ಸ್ಮಾರ್ತಬ್ರಾಹ್ಮಣರಾಗಿದ್ದರೂ ಇದ್ದಿರಬಹುದು.

೧೮. ಬಾಲಚಂದ್ರ

ಪ್ರಾಭೃತಕತ್ರಯ, ಪರಮಾತ್ಮಪ್ರಕಾಶಿಕಾ, ಸಮಯಸಾರ, ಮೊದಲಾದ ಗ್ರಂಥಗಳಿಗೆ ಕನ್ನಡ ವ್ಯಾಖ್ಯಾನವನ್ನು ಬರೆದಿರುವ ಈ ಕವಿಯ ವಿಷಯದಲ್ಲಿ ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಜೈನಮತದವನು; ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯಕ್ಕೆ ಸೇರಿದವನು. ಇವನ ಗುರು 1177* ರಲ್ಲಿ ಗತಿಸಿದ ನಯಕೀರ್ತಿ (ಶ್ರ.ಬೆ. ಶಾ|| 42); ಅಣ್ಣ ದಾಮನಂದಿ (ನಾಗಮಂಗಲ ಶಾ|| 70), ಈತನಿಗೆ ಅಧ್ಯಾತ್ಮಿ ಬಾಳಚಂದ್ರನೆಂದು ಹೆಸರು. ಈತನು 1182† ರಲ್ಲಿ ಬದುಕಿದ್ದಂತೆಯೂ (ಶ್ರ. ಬೆ. ಶಾ|| 124) ಸುಜನೋತ್ತಂಸನೆಂಬ ಬಿರುದುಳ್ಳ ಬೊಪ್ಪಣ ಪಂಡಿತನಿಂದ ಗೊಮ್ಮಟ ಸ್ತುತಿಯನ್ನು ಬರೆಯಿಸಿದಂತೆಯೂ (ಶ್ರ. ಬೆ. ಶಾ|| 85) ತಿಳಿಯಬರುತ್ತದೆ....ಬೊಪ್ಪಣಪಂಡಿತನು ಈತನನ್ನು ಈ ರೀತಿಯಾಗಿ ಸ್ತುತಿಸಿದ್ದಾನೆ:—

ವರಸೈದ್ಧಾಂತಿಕಚಕ್ರೇ | ಶ್ವರನಯಕೀರ್ತಿವ್ರತೀಂದ್ರಶಿಷ್ಯಂ ನಿಜಚಿ |
ತ್ತಪರಿಣತನಧ್ಯಾತ್ಮಕಳಾ | ಧರನುಜ್ಜ್ವಳಕೀರ್ತಿ ಬಾಲಚಂದ್ರಮುನೀಂದ್ರಂ ||

ಪ್ರಾಭೃತಕತ್ರಯವ್ಯಾಖ್ಯಾನದ ಕೊನೆಯಲ್ಲಿರುವ—

ಇದು ಸಮಸ್ತ ಸೈದ್ಧಾಂತಿಕಚಕ್ರವರ್ತಿ ಶ್ರೀನಯಕೀರ್ತಿನಂದನ ವಿನಯಜನಾನಂದನ ನಿಜರುಚಿಸಾಗರನಂದಿ ಪರಮಾತ್ಮದೇವಸೇವಾಸಾದಿತಾತ್ಮಸ್ವಭಾವ ನಿತ್ಯಾನಂದ ಬಾಳಚಂದ್ರದೇವರಚಿತ ಸಮಯಸಾರಪ್ರಾಭೃತ ಸೂತ್ರಾನುಗತತಾತ್ಪರ್ಯವೃತ್ತಿ—

ಎಂಬ ಗದ್ಯದಿಂದ ಈತನು ನಯಕೀರ್ತಿಯ ಮಗನಲ್ಲಿ ಓದಿದವನೆಂದು ತಿಳಿಯುತ್ತದೆ." (ಕವಿಚರಿತೆ I. ೧೯೭).

ಈ ಬಾಲಚಂದ್ರನು 'ನಯಕೀರ್ತಿಯ ಮಗನಲ್ಲಿ ಓದಿದವನೆಂದು ತಿಳಿಯುತ್ತದೆ' ಎಂದು ಕವಿಚರಿತಕಾರರು ಇಲ್ಲಿ ಹೇಳಿರುವ ಅಭಿಪ್ರಾಯವು ಭ್ರಮಮೂಲವಾದುದೆಂದು ನಮಗೆ ತೋರುತ್ತದೆ. ಮೇಲೆ ಹೇಳಿದ ಗದ್ಯದಲ್ಲಿ 'ಶ್ರೀನಯಕೀರ್ತಿನಂದನ ವಿನಯಜನಾನಂದನ' ಎಂಬುದೆಲ್ಲವನ್ನೂ ಒಂದು ಸಮಸ್ತಪದವೆಂದು ಕವಿಚರಿತಕಾರರು ಭಾವಿಸಿ ಹಾಗೆ ಹೇಳಿರುವರೋ ಏನೋ. ಹಾಗಿದ್ದಲ್ಲಿ ಅದು ತಪ್ಪೆಂದು ನಮಗೆ ತೋರುವುದು. ಈ ಗದ್ಯದಲ್ಲಿ 'ಶ್ರೀನಯಕೀರ್ತಿನಂದನ' ಎಂಬುದು ಒಂದು ಸಮಸ್ತಪದವೂ 'ವಿನಯಜನಾನಂದನ' ಎಂಬುದು ಮತ್ತೊಂದು ಸಮಸ್ತಪದವೂ ಎಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. 'ನಯಕೀರ್ತಿದೇವನಂದನ' ಎಂದರೆ ನಯಕೀರ್ತಿದೇವನ 'ಮಗ' ಎಂದರೆ ಶಿಷ್ಯನೆಂದು ಅರ್ಥವು. ಈ ಅಂಶವು ಕವಿಚರಿ

* ಎರಡನೇ ಮುದ್ರಣದಲ್ಲಿ '1177' ಎಂಬುದರ ಬದಲು '1176' ಎಂದು ಇದೆ.

† ಎರಡನೇ ಮುದ್ರಣದಲ್ಲಿ '1182' ಎಂಬುದರ ಬದಲು '1181' ಎಂದು ಇದೆ.

ತಕಾರರು ಹೇಳಿರುವಂತೆ ನಾಗಮಂಗಲದ ೭೦ ನೆಯ ಶಾಸನದಿಂದಲೂ ಶ್ರವಣಬೆಳ್ಗೊಳದ ೪೨, ೮೫, ೧೨೪ ನೆಯ ಶಾಸನಗಳಿಂದಲೂ ಮತ್ತು ಇತರ ಶಾಸನಗಳಿಂದಲೂ ವ್ಯಕ್ತವಾಗುವುದು.

ಕವಿಚರಿತಕಾರರು ಹೇಳಿರುವಂತೆ ಮೇಲೆ ಅನುವದಿಸಲ್ಪಟ್ಟಿರುವ ಪ್ರಾಭೃತಕತ್ರಯ ವ್ಯಾಖ್ಯಾನದ ಕೊನೆಯ ಗದ್ಯದಲ್ಲಿ ಹೇಳಲ್ಪಟ್ಟಿರುವ 'ಸಮಸ್ತಸೈದ್ಧಾಂತಿಕಚಕ್ರವರ್ತಿ–ನಯಕೀರ್ತಿ'ಯು ಶ್ರವಣಬೆಳ್ಗೊಳದ ೪೨ ನೆಯ ಶಾಸನದಲ್ಲಿ ಕೀರ್ತಿಸಲ್ಪಟ್ಟಿರುವ ನಯಕೀರ್ತಿಯೇ ಆಗಿದ್ದರೂ ಆಗಿರಬಹುದು.* ಹಾಗಿದ್ದಲ್ಲಿ ಈ ನಯಕೀರ್ತಿಯು ಕ್ರಿ. ಶ. ೧೧೭೬ ರಲ್ಲಿ ಲೋಕಾಂತರವನ್ನೈದಿದನೆಂದು ಆ ಶಾಸನದಲ್ಲಿ ಹೇಳಲ್ಪಟ್ಟಿರುವುದರಿಂದ ಇವನ ಶಿಷ್ಯನಾದ ಬಾಲಚಂದ್ರನು (ಕವಿಚರಿತಕಾರರು ಹೇಳುವಂತೆ) ಕ್ರಿ. ಶ. ೧೧೭೦ ರಲ್ಲಿ ಇದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲವಾದಾಗ್ಯೂ ಆ ಕಾಲದಲ್ಲಿ ಇವನು ಪ್ರಾಭೃತಕತ್ರಯ ವ್ಯಾಖ್ಯಾನವೇ ಮೊದಲಾದ ಗ್ರಂಥಗಳನ್ನು ಬರೆದಿದ್ದನೆಂಬ ವಿಷಯದಲ್ಲಿ ನಮಗೆ ಬಹಳ ಸಂದೇಹವಿರುವುದು. ಶ್ರವಣಬೆಳ್ಗೊಳದ ೮೧ ನೆಯ ಶಾಸನದಲ್ಲಿ ಅಧ್ಯಾತ್ಮಿಬಾಲಚಂದ್ರನ ಗುಡ್ಡನಾದ ಪದುಮಿಸೆಟ್ಟಿಯ ಮಗ ಗೊಮ್ಮಟಸೆಟ್ಟಿಯು ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀಮತ್ಪ್ರತಾಪಚಕ್ರವರ್ತಿ ಹೊಯ್ಸಳ–ಶ್ರೀ–ವೀರನಾರಸಿಂಹದೇವರಸರು ಪೃಥ್ವೀರಾಜ್ಯಂಗೆಯ್ಯುತ್ತಿದ್ದಾಗ ಖರಸಂವತ್ಸರದ ಪುಷ್ಯಶುದ್ಧ ಉತ್ತರಾಯಣಸಂಕ್ರಾಂತಿ ಪಾಡಿ–ದಿವ ಬೃಹವಾರದಂದು (ಎಂದರೆ, ಕ್ರಿ. ಶ. ೧೨೩೧ ನೇ ಡಿಸೆಂಬರ್ ೨೫ ನೇ ತಾರೀಖು ಬೃಹವಾರದಂದು) ಗೊಮ್ಮಟದೇವರ ಅರ್ಚನಾದಿಗಳಿಗಾಗಿ ೧೨ ಗದ್ಯಾಣಗಳನ್ನು ಅಕ್ಷಯಭಂಡಾರವಾಗಿ ಕೊಟ್ಟನೆಂದು ಹೇಳಿರುವುದರಿಂದ ಈ ಅಧ್ಯಾತ್ಮಿ–ಬಾಲಚಂದ್ರನು ಆ ಕಾಲದಲ್ಲಿ—ಎಂದರೆ ಕ್ರಿ. ಶ. ೧೨೩೧ ನೇ ವರ್ಷದ ಅಂತ್ಯದಲ್ಲಿ ಜೀವಿಸಿದ್ದನೆಂದು ಊಹಿಸಬಹುದಾಗಿರುವುದು. ಆದುದರಿಂದ ಇವನು ತನ್ನ ಗ್ರಂಥಗಳನ್ನು ಕ್ರಿ. ಶ. ಸುಮಾರು ೧೨೦೦ ರಲ್ಲಿ ಬರೆದನೆಂದು ತೋರುವುದು. ಕವಿಚರಿತಕಾರರು ಹೇಳುವಂತೆ ಕ್ರಿ. ಶ. ಸುಮಾರು ೧೧೭೦ ರಲ್ಲಂತೂ ಪ್ರಾಯಶಃ ಇವನು ತನ್ನ ಗ್ರಂಥಗಳನ್ನು ಬರೆದಿರಲಾರನು.

* * *

---

* ಈ ನಯಕೀರ್ತಿಯ ಗುರು, ಪರಮಗುರು ಮುಂತಾದವರು ಇಂಥವರೆಂದು ಈ ಗ್ರಂಥಗಳಲ್ಲಿ ಹೇಳಲ್ಪಟ್ಟಿಲ್ಲವಾದುದರಿಂದ ಈ ಶಾಸನೋಕ್ತನಾದ ನಯಕೀರ್ತಿಯೇ ಇಲ್ಲಿಯೂ ಕೀರ್ತಿಸಲ್ಪಟ್ಟಿದ್ದಾನೆಂದು ನಿಸ್ಸಂದೇಹವಾಗಿ ಹೇಳುವುದಕ್ಕಾಗುವುದಿಲ್ಲ.

ಕವಿಚರಿತೆ I. ೩೨೦ ರಲ್ಲಿ —

“ **ಬಾಲಚಂದ್ರ** ? 1283 *—ಉದ್ಯೋಗಸಾರವೆಂಬ ಒಂದು ಕನ್ನಡ ಗ್ರಂಥವು ದೊರೆಯುತ್ತದೆ. ಗ್ರಂಥದಲ್ಲಿ ಕವಿಯ ಹೆಸರು ಹೇಳಿಲ್ಲ. ಆದರೆ ಕವಿ ತಾನು ನೇಮಿಚಂದ್ರನ ಶಿಷ್ಯನೆಂದು ಹೇಳಿ “ ಆತ್ಮಜ್ಞ ” ಎಂದು ತನ್ನನ್ನು ವಿಶೇಷಿಸಿಕೊಂಡಿದ್ದಾನೆ. 1283 * ರಲ್ಲಿ ಬರೆದ ಶ್ರ.ಬೆ. 129 ನೆಯ ಶಾಸನದಲ್ಲಿ “ ಶ್ರೀಮನ್ಮಹಾಮಂಡಲಾಚಾರ್ಯರುಂ ಶ್ರೀ ಮೂಲಸಂಘದ ಇಂಗಳೇಶ್ವರ ದೇಶೀಯಗಣದ ಗಣಾಗ್ರಗಣ್ಯರುಂ ರಾಜಗುರುಗಳುಂ ” ಆದ ಒಬ್ಬ ನೇಮಿಚಂದ್ರಪಂಡಿತದೇವನನ್ನು ಹೇಳಿ ಆತನ ಶಿಷ್ಯನಾದ ಒಬ್ಬ ಬಾಲಚಂದ್ರನನ್ನು ಹೇಳಿದೆ. ಈ ಬಾಲಚಂದ್ರನು ಈ ಉದ್ಯೋಗಸಾರವನ್ನು ಬರೆದಿರಬಹುದೋ ಏನೋ ತಿಳಿಯದು. ಇದು ಪ್ರಾಯಿಕವಾಗಿ ಕಂದರೂಪವಾಗಿಯೇ ಇದೆ........ಗ್ರಂಥಾದಿಯಲ್ಲಿ ಈ ಪದ್ಯವಿದೆ.—

ಆನಮ್ರಭವ್ಯನಿವಹ | ಶ್ರೀನಂದಿಮುನೀಂದ್ರವಂದ್ಯಜಿನಪದಪದ್ಮ ||
ಕ್ಕಾನೆಱಗಿ ಭಕ್ತಿಯಿಂದಮ | ನೂನಮನುದ್ಯೋಗಸಾರಮಂ ಪ್ರಕಟಿಸುವೆಂ ||

ಎಂದು ಕವಿಚರಿತಕಾರರು ಬರೆದಿರುತ್ತಾರೆ.

ಈ ಅಭಿಪ್ರಾಯವು ಬಹು ವಿಚಿತ್ರವೆಂದು ನಮಗೆ ತೋರುವುದು. ನೇಮಿಚಂದ್ರ ಎಂಬ ಹೆಸರುಳ್ಳ ಜೈನಗುರುಗಳು ಅನೇಕರು ಇರುವಾಗ (ಶ್ರವಣಬೆಳ್ಗೊಳದ ಶಾಸನಗಳಲ್ಲಿಯೇ ಈ ಹೆಸರಿನ ೪ ಗುರುಗಳು ಸ್ತುತರಾಗಿರುವರು) ಉದ್ಯೋಗಸಾರದಲ್ಲಿ ಕೀರ್ತಿತನಾಗಿರುವ ಆ ಹೆಸರಿನ ಗುರುವು ಶ್ರ. ಬೆ. ೧೨೯ ನೇ ಶಾಸನದಲ್ಲಿ ಕೀರ್ತಿತನಾದ ನೇಮಿಚಂದ್ರನೇ ಎಂದೂ, ಆದ್ದರಿಂದ ಈ ಉದ್ಯೋಗಸಾರದ ಕರ್ತೃವು ಆ ಶಾಸನದಲ್ಲಿ ನೇಮಿಚಂದ್ರನ ಶಿಷ್ಯನೆಂದು ಹೇಳಲ್ಪಟ್ಟಿರುವ ಬಾಲಚಂದ್ರನೇ ಎಂದೂ ಯಾವ ಆಧಾರವೂ ಇಲ್ಲದೆ ನಿರ್ಧರಿಸುವುದು ಬಹಳ ಅಸಮಂಜಸವೆಂದು ನಮ್ಮ ಅಭಿಪ್ರಾಯ.

ಈ ಗ್ರಂಥವು ಇಂತಹ ಕಾಲದಲ್ಲಿ ಹುಟ್ಟಿತೆಂಬುದನ್ನು ನಿರ್ಧರಿಸುವುದಕ್ಕೆ ಯಾವ ಆಧಾರವೂ ಇರುವಂತೆ ತೋರುವುದಿಲ್ಲ. ಕವಿಚರಿತಕಾರರು ಹೇಳುವಂತೆ ಇದು ವಾಸ್ತವವಾಗಿಯೂ ಕ್ರಿ. ಶ. ೧೪ ನೇ ಶತಮಾನಕ್ಕಿಂತ ಹಿಂದೆಯೇ ರಚಿಸಲ್ಪಟ್ಟದ್ದಾದರೆ, ನಾವು ಇದು ಯಾವಾಗ ಬರೆಯಲ್ಪಟ್ಟಿತೆಂಬ ವಿಷಯವಾಗಿ ಸ್ವಲ್ಪ ವಿಚಾರವನ್ನು ಮಾಡಬಹುದು. ಗ್ರಂಥದ ಆದಿಯಲ್ಲಿರುವ ‘ ಆನಮ್ರಭವ್ಯನಿವಹ ಶ್ರೀ ನಂದಿಮುನೀಂದ್ರವಂದ್ಯ ಜಿನಪದಪದ್ಮ ......’ ಎಂಬ ಪದ್ಯದಲ್ಲಿ ಕವಿಯು ಸ್ತುತಿಸಿರುವ ನಂದಿಮುನೀಂದ್ರನು ಕವಿಯ ಗುರುವೋ ಗುರುಸ್ಥಾನೀಯನೋ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಒಬ್ಬ ನಂದಿಮುನಿಯು ಪಾರ್ಶ್ವರಚಿತವಾದ ಪಾರ್ಶ್ವನಾಥಪುರಾಣದ ಗ್ರಂಥಾವತಾರದಲ್ಲಿಯೂ ಆಚಣ್ಣ ರಚಿತವಾದ ವರ್ಧಮಾನಪುರಾಣ

* ಇದನ್ನು ‘ 1282 ’ ಎಂದು ಕವಿಚರಿತಕಾರರು ೨ ನೇ ಮುದ್ರಣದಲ್ಲಿ ತಿದ್ದಿರುವರು.

ದಲ್ಲಿಯೂ ಸ್ತುತನಾಗಿರುವನೆಂದು ಕವಿಚರಿತೆ I. ೨೩೬ ನೇ ಪುಟದಿಂದಲೂ ಮತ್ತು ೨೫೭ ನೇ ಪುಟದಲ್ಲಿರುವ ಟಿಪ್ಪಣಿಯಿಂದಲೂ ಕಂಡುಬರುವುದು. ಈ ಟಿಪ್ಪಣಿಯಲ್ಲಿ ಕವಿಚರಿತಕಾರರು ಹೇಳಿರುವುದನ್ನನುಸರಿಸಿ ನಾವು ಜೈನಗುರುಗಳ ಪರಂಪರೆಯನ್ನು ಈ ಕೆಳಗಿರುವಂತೆ ಬರೆಯಬಹುದು :—

೧. ಕಟಕೋಪಾಧ್ಯಾಯ ಶ್ರುತಕೀರ್ತಿ   ೨. ನೇಮಿಚಂದ್ರ   [ಶ್ರೀಧರ]

೩. ವಾಸುಪೂಜ

ಶ್ರುತಕೀರ್ತಿ   ಜಾವಳಿಗೆಯ ಮುನಿಚಂದ್ರ   ವೀರಣಂದಿ   ೫. ನೇಮಿಚಂದ್ರ   ೪. ಉದಯಚಂದ್ರ

ಭೂನಾಥಪೂಜ್ಯ-ವಾಸುಪೂಜ್ಯ   ಅಷ್ಟೋಪವಾಸಿ ರಾಮಚಂದ್ರ   ೬. ನಾನಾನೃಪಪೂಜ್ಯ-ನಂದಿಯೋಗಿ   ಶುಭಚಂದ್ರ   ೭. ಕುಮುದಚಂದ್ರ   ಕಮಳಸೇನ   ೮. ಮಾಧವೇಂದು

ತರ್ಕವಿದ್ಯಾನಂದಪ್ರಭು · ಲಲಿತಕೀರ್ತಿ   ವೀರಣಂದಿ

ಈ ಗುರುಗಳೆಲ್ಲರೂ ಬಲಾತ್ಕಾರಗಣಕ್ಕೆ ಸೇರಿದವರು. ಈ ಮೇಲೆ ಹೇಳಿರುವವರಲ್ಲಿ ೧, ೨, ೩, ೪, ೫ ನೆಯವರು ನಾವು ಮೇಲೆ ೬೧, ೬೨ ನೇ ಪುಟಗಳಲ್ಲಿ ಕೊಟ್ಟಿರುವ ಗುರುಪರಂಪರೆಯಲ್ಲಿ ಕೀರ್ತಿತರಾಗಿರುವರು. ೮ ನೆಯವನಾದ ಮಾಧವೇಂದು ಅಥವಾ ಮಾಧವಚಂದ್ರನು ಮೇಲೆ ೬೬ ನೇ ಪುಟದಲ್ಲಿ ಕೀರ್ತಿತನಾಗಿರುವನು. ೩ ನೇ ವಾಸುಪೂಜ್ಯನ ಗುರುವಾದ ಶ್ರೀಧರನ ಹೆಸರು ಪಾರ್ಶ್ವನಾಥಪುರಾಣದಲ್ಲಿ ಕೀರ್ತಿತವಾಗಿಲ್ಲ; ಮತ್ತು ಉದಯಚಂದ್ರನ* ಶಿಷ್ಯನಾದ ಕುಮುದಚಂದ್ರ ಮಾಧವಚಂದ್ರರು ಈ ಪುರಾಣದಲ್ಲಿ ಉದಯಚಂದ್ರನ ಸಧರ್ಮನಾದ ನೇಮಿಚಂದ್ರಭಟ್ಟಾರಕನ ಶಿಷ್ಯರೆಂದು ಹೇಳಲ್ಪಟ್ಟಿರುವರು. ಆದಾಗ್ಯೂ ಮೇಲೆ ೬೧, ೬೨, ಮತ್ತು ೬೬ ನೇ ಪುಟಗಳಲ್ಲಿ ಹೇಳಿರುವ ಬಲಾತ್ಕಾರಗಣದ ಗುರುಗಳೇ ಈ ಪಾರ್ಶ್ವನಾಥಪುರಾಣದಲ್ಲಿಯೂ ಸ್ತುತರಾಗಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಉದ್ಯೋಗಸಾರದಲ್ಲಿ ಕೀರ್ತಿತನಾದ ನಂದಿಮುನೀಂದ್ರನು ಈ ಮೇಲೆ ಹೇಳಿರುವ (೬ ನೇ) ನಾನಾನೃಪಪೂಜ್ಯ ನಂದಿಯೋಗಿಯೇ ಆಗಿದ್ದಲ್ಲಿ, ಆ ಗ್ರಂಥಕರ್ತೃವಿನ

* ಈ ಗುರುವಿನ ಹೆಸರು ಪಾರ್ಶ್ವನಾಥಪುರಾಣದಲ್ಲಿಯೂ 'ಉದಯಚಂದ್ರ' ಎಂದೇ ಇರುವುದು. ಇದೂ ನಾವು ಮೇಲೆ ೬೬ ನೇ ಪುಟದ ಟಿಪ್ಪಣಿಯಲ್ಲಿ ಹೇಳಿರುವ ಅಭಿಪ್ರಾಯವನ್ನೇ ದೃಢಪಡಿಸುವುದು.

ಗುರುವಾದ ನೇಮಿಚಂದ್ರನು ಈ ನಂದಿಯೋಗಿಯ ಗುರುವಾದ ನೇಮಿಚಂದ್ರನೇ ಆಗಿರಬೇಕು. ಆದ್ದರಿಂದ ಈ ಗುರುಗಳನ್ನು ಸ್ತುತಿಸುವ ಉದ್ಯೋಗಸಾರಕರ್ತೃವಾದ ನೇಮಿಚಂದ್ರಶಿಷ್ಯನು ಪಾರ್ಶ್ವನಾಥಪುರಾಣವನ್ನು ಪಾರ್ಶ್ವನು ಬರೆಯುವುದಕ್ಕಿಂತ ಸುಮಾರು ೨೦ ವರ್ಷಗಳ ಮುಂಚೆ, ಎಂದರೆ, ಕ್ರಿ. ಶ. ಸುಮಾರು ೧೨೦೦ ರಲ್ಲಿ ಆ ಗ್ರಂಥವನ್ನು ಬರೆದನೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿ ವಿರೋಧವೇನೂ ಇರಲಾರದು.

೧೯. ಬೊಪ್ಪಣಪಂಡಿತ.

ಗುಮ್ಮಟಸ್ತುತಿಯನ್ನೂ (ಈ ಸ್ತುತಿಯು ಶ್ರವಣಬೆಳ್ಗೊಳದ ೮೫ ನೇ ಶಾಸನದಲ್ಲಿ ಒಳಪಟ್ಟಿರುವುದು) ನಿರ್ವಾಣಲಕ್ಷ್ಮೀಪತಿನಕ್ಷತ್ರಮಾಲಿಕೆಯನ್ನೂ ಬರೆದ 'ಸುಜನೋತ್ತಂಸ' ಎಂಬ ಬಿರುದುಳ್ಳ ಈ ಬೊಪ್ಪಣಪಂಡಿತನನ್ನು ಕುರಿತು

"ಈತನು ಅಧ್ಯಾತ್ಮಿ-ಬಾಲಚಂದ್ರನ ನಿಯೋಗದಿಂದ ಶಾಸನಪದ್ಯಗಳನ್ನು ಬರೆದಂತೆ ತಿಳಿವುದರಿಂದ ಅವನ ಸಮಕಾಲದವನಾಗಿರಬೇಕು. ಈತನ ಪದ್ಯಗಳಿರುವ ಶಾಸನವು ಸುಮಾರು 1180 ರಲ್ಲಿ ಬರೆದುದಾದುದರಿಂದ, ಇವನೂ ಸುಮಾರು ಆ ಕಾಲದವನಾಗಿರಬೇಕು"

ಎಂದು ಕವಿಚರಿತಕಾರರು (ಕವಿಚರಿತೆ I, ೨೧೯) ಬರೆದಿರುವರು.

ಈ ಮೇಲೆಹೇಳಿದ ಶ್ರವಣಬೆಳ್ಗೊಳದ ೮೫ ನೆಯ ಶಾಸನವು ಕ್ರಿ. ಶ. ಸುಮಾರು ೧೧೮೦ ರಲ್ಲಿಯೇ ಹುಟ್ಟಿತೆಂದೂ, ೧೨೦೦ ರಲ್ಲಿ ಹುಟ್ಟಿರಲಾರದೆಂದೂ ಹೇಳುವುದು ಕಷ್ಟ. ಸುಮಾರು ಕ್ರಿ. ಶ. ೧೧೮೦ ರಲ್ಲಿ ಹುಟ್ಟಿದ ಶ್ರವಣಬೆಳ್ಗೊಳದ ೫೫ ನೆಯ ಶಾಸನವು (ಮೇಲೆ ೩೬-೪೨ ನೆಯ ಪುಟಗಳನ್ನು ನೋಡಿ) ಕ್ರಿ. ಶ. ೧೧೦೦ ರಲ್ಲಿ ಹುಟ್ಟಿತೆಂದು ಕವಿಚರಿತಕಾರರು ಹೇಳಿರುವುದರಿಂದಲೇ (ಕವಿಚರಿತೆ ೧ ನೇ ಸಂಪುಟದ ಎರಡನೇ ಮುದ್ರಣ, ಪುಟ ೧೦೨; "ಶ್ರವಣಬೆಳ್ಗೊಳದ ಶಾಸನ" ಗಳ ಎರಡನೇ ಮುದ್ರಣ, ಉಪೋದ್ಘಾತ; ಪುಟ ೭೯ ಆಂಗ್ಲಅನುವಾದ, ಪುಟ ೩೩) ಹೀಗೆ ನಿರ್ಣೀತವಾದ ಕಾಲಕ್ಕೂ ವಾಸ್ತವಕಾಲಕ್ಕೂ ಕೆಲವುವೇಳೆ ೮೦-೧೦೦ ವರ್ಷಗಳ ಪೌರ್ವಾಪರ್ಯವಿರಬಹುದೆಂದೂ, ವಸ್ತುತಃ ಅಕ್ಷರಗಳ ಆಕಾರದ ಬಲದಿಂದಲೇ ಶಾಸನಗಳು ಹುಟ್ಟಿದ ಕಾಲವನ್ನು ನಿಷ್ಕೃಷ್ಟವಾಗಿ ಕಂಡುಹಿಡಿಯುವುದು ಅಸಾಧ್ಯವೆಂದೂ ವ್ಯಕ್ತವಾಗುವುದು.

ಅಧ್ಯಾತ್ಮಿ-ಬಾಲಚಂದ್ರನು ಕ್ರಿ. ಶ. ೧೨೩೧ ನೇ ವರ್ಷದ ಅಂತ್ಯದಲ್ಲಿಯೂ ಜೀವಿಸುತ್ತಿದ್ದನೆಂದೂ, ಅವನು ಸುಮಾರು ಕ್ರಿ. ಶ. ೧೨೦೦ ರಲ್ಲಿ ಪ್ರಾಭೃತತ್ರಯವ್ಯಾಖ್ಯಾನವೇ ಮೊದಲಾದ ತನ್ನ ಗ್ರಂಥಗಳನ್ನು ಬರೆದನೆಂದೂ ನಾವು ಮೇಲೆ (ಪುಟ ೧೯೧) ಹೇಳಿರುವೆವಷ್ಟೆ. ಈ ಬೊಪ್ಪಣಪಂಡಿತನೂ ಕೂಡ ಸುಮಾರು ಇದೇ ಕಾಲದಲ್ಲಿಯೇ ಎಂದರೆ ಕ್ರಿ. ಶ. ೧೧೯೫-೧೨೦೦ ರಲ್ಲಿಯೇ ಗುಮ್ಮಟಸ್ತುತಿಯೇ ಮೊದಲಾದ ತನ್ನ ಗ್ರಂಥಗಳನ್ನು ರಚಿಸಿದನೆಂದು ನಮಗೆ ತೋರುವುದು.

೨೦. ಆಚಣ್ಣ.

ಈ ಕವಿಯ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿರುವರು:—

"ಈತನು ವರ್ಧಮಾನಪುರಾಣವನ್ನೂ ಶ್ರೀಪದಾಶೀತಿಯನ್ನೂ ಬರೆದಿದ್ದಾನೆ.....ವಸುಧೈಕಬಾಂಧವ ಎಂಬ ಬಿರುದುಳ್ಳ ರೇಚಣಚಮೂಪತಿಯೆಂಬವನು ವರ್ಧಮಾನಪುರಾಣವನ್ನು ಬರೆವಂತೆ ಹೇಳಲು ಕವಿಯ ತಂದೆಯಾದ ಕೇಶವರಾಜನೂ ತಿಕ್ಕಣಚಾವಣ ಎಂಬವನೂ ಸೇರಿ ಉಪಕ್ರಮಿಸಿದ್ದು "ದೈವನಿಯೋಗದಿಂದ" ನಿಂತುಹೋದ ಆ ಗ್ರಂಥವನ್ನು ಆ ರೇಚರಸನ ಇಷ್ಟಾನುಸಾರವಾಗಿ ಈತನು ವಿಸ್ತರಿಸಿ ಪೂರೈಸಿದನು.....

ಈತನನ್ನು ಪಾರ್ಶ್ವನು (1205) ತನ್ನ ಪಾರ್ಶ್ವನಾಥಪುರಾಣದಲ್ಲಿ ಸ್ತುತಿಸಿರುವುದರಿಂದ ಈತನು 1205 ಕ್ಕೆ ಹಿಂದೆ ಇದ್ದನೆಂದು ವ್ಯಕ್ತವಾಗುತ್ತದೆ. ಇವನು ಪೂರ್ವಕವಿಸ್ತವಾವಸರದಲ್ಲಿ ಬೊಪ್ಪಣಪಂಡಿತನನ್ನೂ (ಸು. 1180) ಅಗ್ಗಳನನ್ನೂ (1189) ಸ್ತುತಿಸಿರುವುದರಿಂದ ಅವರ ಕಾಲಕ್ಕೆ ಈಚೆಯವನಾಗಿರಬೇಕು. ಅಲ್ಲದೆ ಇವನಿಂದ ಗ್ರಂಥವನ್ನು ಬರೆಯಿಸಿದ ವಸುಧೈಕಬಾಂಧವ ರೇಚಣಚಮೂಪತಿ ಮೊದಲು ಕಲಚುರ್ಯರಾಜರಲ್ಲಿ ಮಂತ್ರಿಯಾಗಿದ್ದು ಆಮೇಲೆ ಹೊಯ್ಸಳ ವೀರಬಲ್ಲಾಳನಲ್ಲಿ (1173—1220) ಮಂತ್ರಿಯಾಗಿದ್ದಂತೆ ಶಾಸನಗಳಿಂದ (Arsikere 77) ತಿಳಿಯುತ್ತದೆ. ಕವಿಯ ಗುರುವಾದ ನಂದಿಯೋಗೀಶ್ವರನು 1189 ರಲ್ಲಿ ಇದ್ದಂತೆ ಮದರಾಸ್ ಪ್ರಾಚ್ಯಕೋಶಾಲಯದಲ್ಲಿರುವ ಒಂದು ಶಾಸನದಿಂದ ತಿಳಿಯುತ್ತದೆ. ಈ ಕಾರಣಗಳಿಂದ ಈತನು ಸುಮಾರು 1195 ರಲ್ಲಿ ಇದ್ದನೆಂದು ಹೇಳಬಹುದು" (ಕವಿಚರಿತೆ, ೧ ನೇ ಸಂಪುಟದ ೨ ನೇ ಮುದ್ರಣ, ೨೯೯—೩೦೦).

ಇಲ್ಲಿ ಕವಿಚರಿತಕಾರರಿಂದ ಪ್ರಸ್ತುತನಾಗಿರುವ ಪಾರ್ಶ್ವನಾಥಪುರಾಣದ ಕರ್ತೃವಾದ ಪಾರ್ಶ್ವನು ಕ್ರಿ. ಶ. ೧೨೦೫ ರಲ್ಲಿ ಒಂದು ಶಾಸನವನ್ನು ಬರೆದನಾದಾಗ್ಯೂ (ಕವಿಚರಿತೆ I, ೨೫೬ ನ್ನು ನೋಡಿ) ಅವನು ಆ ಪುರಾಣವನ್ನು ಬರೆದುದು ಶಕ ೧೧೪೪ ನೆಯ ಚಿತ್ರಭಾನುವಿನಲ್ಲಿ ಎಂದರೆ ಕ್ರಿ. ಶ. ೧೨೨೨ ರಲ್ಲೆಂದು (ಅಥವಾ ಕ್ರಿ. ಶ. ೧೨೧೮ ರಲ್ಲೆಂದು)* ಕವಿಚರಿತಕಾರರು (I, ೨೫೫) ಅನುವದಿಸಿರುವ 'ಶಕವರ್ಷಂ ಚತುರಬ್ಧಿಚಂದ್ರಶಶಿಸಂಖ್ಯಂ ಚಿತ್ರಭಾನು...' ಎಂಬ ಪದ್ಯದಿಂದಲೇ ಸ್ಪಷ್ಟವಾಗುತ್ತದೆ. ಆದುದರಿಂದ ಈ ಗ್ರಂಥದಲ್ಲಿ ಸ್ತುತನಾಗಿರುವ ಆಚಣ್ಣನು ಕ್ರಿ. ಶ. ೧೨೨೨ (ಅಥವಾ ೧೨೧೮) ಕ್ಕಿಂತ ಹಿಂದೆ ತನ್ನ ಗ್ರಂಥವನ್ನು ಬರೆದಿರಬೇಕೆಂದು ನಾವು ಹೇಳಬಹುದೇ ಹೊರತು (ಕವಿಚರಿತಕಾರರು ಹೇಳುವಂತೆ) ಕ್ರಿ. ಶ. ೧೨೦೫ ಕ್ಕಿಂತ ಹಿಂದೆ ಬರೆದಿರಬೇಕೆಂದು† ಹೇಳುವುದಕ್ಕಾಗುವುದಿಲ್ಲ.

---

* ಮೇಲೆ ೮೯ ನೆಯ ಪುಟದಲ್ಲಿನ ಟಿಪ್ಪಣವನ್ನು ನೋಡಿ.

† ಹೀಗೆಯೇ ಶೃಂಗಾರರತ್ನಾಕರದ ಕರ್ತೃವಾದ ಕವಿಕಾಮನೂ (ಕವಿಚರಿತೆ I, ೨೪೦ ಆದಿ), ಸಿಂಹಪ್ರಾಯೋಪಗಮನದ ಕರ್ತೃವಾದ ಕೇಶಿಯಣ್ಣನೂ (ಕವಿಚರಿತೆ I, ೨೫೪), 'ಶ್ರುತಿನೂತ್ನಾರ್ಥೋತ್ಪಾದನ | ಚತುರತೆಯುಂ ವಿವಿಧಕೀರ್ತಿಲಕ್ಷ್ಮೀಶತೆಯುಂ || ಕ್ಷಿತಿತಳದೊಳ್ ಕಾವ್ಯ

ವರ್ಧಮಾನಪುರಾಣದಲ್ಲಿ ಆಚಣ್ಣನು ಸ್ತುತಿಸುವ ಬೊಪ್ಪಣಪಂಡಿತನು ಕ್ರಿ. ಶ. ಸುಮಾರು ೧೧೯೫-೧೨೦೦ ರಲ್ಲಿ ತನ್ನ ಗ್ರಂಥಗಳನ್ನು ಬರೆದಿರಬಹುದೆಂದು ನಾವು ಮೇಲೆ ಹೇಳಿರುವೆವಷ್ಟೆ. ಆದುದರಿಂದ ಈ ಬೊಪ್ಪಣಪಂಡಿತನನ್ನು ಸ್ತುತಿಸುವ ಆಚಣ್ಣನು ವರ್ಧಮಾನಪುರಾಣವನ್ನು ಸುಮಾರು ೮-೧೦ ವರ್ಷಗಳನಂತರ ಎಂದರೆ ಕ್ರಿ. ಶ. ಸುಮಾರು ೧೨೦೬-೧೨೧೦ ರಲ್ಲಿ ಬರೆದಿರಬಹುದೆಂದು ತೋರುತ್ತದೆ.

ಕಳಾ | ಚತುರ್ಮುಖಂಗೆಸೆವ ವಾಸುದೇವಂಗರಿದೇ ||' ಎಂದು ಪಾರ್ಶ್ವನಾಥಪುರಾಣದಲ್ಲಿ ಸ್ತುತನಾಗಿರುವ ವಾಸುದೇವನೂ (ಕವಿಚರಿತೆ I, ೨೫೪) ಕ್ರಿ. ಶ. ೧೨೨೨ (ಅಥವಾ ೧೨೧೮) ಕ್ಕಿಂತ ಹಿಂದಿನವರೆಂದು ಮಾತ್ರ ಹೇಳುವುದಕ್ಕೆ ಸಾಧ್ಯವೇ ಹೊರತು (ಕವಿಚರಿತಕಾರರು ಹೇಳಿರುವಂತೆ) ಕ್ರಿ. ಶ. ೧೨೦೫ ಕ್ಕಿಂತ ಹಿಂದಿನವರೆಂದು ಹೇಳುವುದಕ್ಕಾಗುವುದಿಲ್ಲ. ಆಚಣ್ಣನಂತೆ ಈ ಕವಿಗಳೂ ಕೂಡ ಪ್ರಾಯಶಃ ಕ್ರಿ. ಶ. ೧೨೦೬-೧೨೧೦ ರಲ್ಲಿಯೋ ಅಥವಾ ಕ್ರಿ. ಶ. ೧೨೧೦-೧೨೧೫ ರಲ್ಲಿಯೋ ತಮ್ಮ ಗ್ರಂಥಗಳನ್ನು ಬರೆದು ಪ್ರಸಿದ್ಧರಾಗಿದ್ದರೆಂದು ನಮಗೆ ತೋರುವುದು.

೨೧. ಕೀರ್ತಿವರ್ಮ.

ಗೋವೈದ್ಯವೆಂಬ ವೈದ್ಯಗ್ರಂಥದ ಕರ್ತೃವಾದ ಈ ಕೀರ್ತಿವರ್ಮನನ್ನು ಕುರಿತು ಕವಿಚರಿತಕಾರರು—

"ಈತನು ಗೋವೈದ್ಯವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿರುವ—

ಜಿನನಾಪ್ತಂ ಗುರು ದೇವಚಂದ್ರಮುನಿಪಂ ತ್ರೈಲೋಕ್ಯಮಲ್ಲಾಧಿಪಂ |
ಜನಕಂ ಪಾಲಭವಂದ್ಯ........ಬೆಳಲದೇಂ ತಾಯಿ ಕಲಂ ವಾಕ್ಛ್ರೀವರಂ ವಿಕ್ರಮಾಂ ||
ಕನರೇಂದ್ರಂ ತನಗಗ್ರಜಾತನೆನಲಂತಾರ್ ನೋಂತರೀ ಕೀರ್ತಿವ |
ರ್ಮನರೇಂದ್ರಂ ಬರವೆಂದು ಧಾತ್ರಿ ಪೊಗಳ್ಗುಂ ನಿಚ್ಚಂ ಮಹೋತ್ಸಾಹದಿಂ ||

ಎಂಬ ಪದ್ಯದಿಂದ ಈತನ ತಂದೆ "ಪಾಲಭವಂದ್ಯ" ನಾದ ತ್ರೈಲೋಕ್ಯಮಲ್ಲಾಧಿಪನು, ಅಣ್ಣನು ವಿಕ್ರಮಾಂಕನರೇಂದ್ರನು, ಗುರು ದೇವಚಂದ್ರಮುನಿ, ಇಷ್ಟದೇವತೆ ಜಿನನು ಎಂದು ತಿಳಿಯುತ್ತದೆ. ಈ ಪದ್ಯದ ಎರಡನೆಯ ಪಾದವು ಅಬದ್ಧವಾಗಿರುವುದರಿಂದ ಇವನ ತಾಯ ಹೆಸರು ಇಂಥದೆಂದು ತಿಳಿವುದಿಲ್ಲ. ಸುಮಾರು ಈ ಕವಿಯ ಸಮಕಾಲದವನಾದ ಬ್ರಹ್ಮಶಿವ ಕವಿ ತನ್ನ ಸಮಯಪರೀಕ್ಷೆಯಲ್ಲಿ ಈತನ ವಿಷಯವಾಗಿ ಮೇಲೆ ಹೇಳಿದ ಅಂಶಗಳನ್ನು ಈ ಪದ್ಯಗಳಲ್ಲಿ ಹೇಳಿದ್ದಾನೆ—

ಜನತಾನಂದಂ ಚಳುಕ್ಯಾಭರಣ ನವನಿಪಾಳೋತ್ತಮಂ ಸಾರ್ವಭೌಮಂ |
ಜನಕಂ ತ್ರೈಲೋಕ್ಯಮಲ್ಲಂ ಸಕಳವಸುಮತೀವಲ್ಲಭಂ ವಿಕ್ರಮಾಂಕಾ ||
ವನಿಪಂ ತಾನಗ್ರಜಾತಂ ತ್ರಿಭುವನಪತಿ ದೇವಾದಿದೇವಂ ಜಿನೇಂದ್ರಂ |
ತನಗಾಪ್ತಂ ಮತ್ತೆನಲ್ಕೇಂ ಪಿರಿಯನೊ ಜಗತೀನಾಥರೊಳ್ ಕೀರ್ತಿವರ್ಮಂ ||
ಅರಸುಮಗಂ ಗಡ ಕವಿ ಗಡ | ಪಿರಿದೀವಂ ಗಡ ಬಲಿಕ್ಕೆ ಜೈನಂ ಗಡೆನಲ್ ||
ಧರಣಿಪತಿ ಕೀರ್ತಿವರ್ಮಂ | ನಿರತಂ ಪೊನ್ ಕಮ್ಮಿತಾದುದೆನಿಸಿದನಿಳೆಯೊಳ್ ||

ಇದರಿಂದ ಕೀರ್ತಿವರ್ಮನು ಚಳುಕ್ಯರಾಜರ ವಂಶದಲ್ಲಿ ಹುಟ್ಟಿದವನೆಂದು ವ್ಯಕ್ತವಾಗುತ್ತದೆ. ಆ ರಾಜರಲ್ಲಿ ತ್ರೈಲೋಕ್ಯಮಲ್ಲನು 1044 ರಿಂದ 1068 ರ ವರೆಗೆ ಆಳಿದಂತೆಯೂ ಅವನ ಮಗನಾದ ತ್ರಿಭುವನಮಲ್ಲ ಪೆರ್ಮಾಡಿ ವಿಕ್ರಮಾದಿತ್ಯನು 1076 ರಿಂದ 1126 ರ ವರೆಗೆ ಆಳಿದಂತೆಯೂ ತಿಳಿಯುತ್ತದೆ. ಈ ವಿಕ್ರಮಾದಿತ್ಯನೇ ಕವಿಯ ಅಣ್ಣನಾಗಿರಬೇಕು. ಆದುದರಿಂದ ಕವಿ ಸುಮಾರು 1125 ರಲ್ಲಿ ಇದ್ದಿರಬಹುದು. ಮೇಲೆ ಹೇಳಿದ ವಿಕ್ರಮಾದಿತ್ಯನಿಗೆ ಜಯಸಿಂಹ III, ವಿಷ್ಣುವರ್ಧನ ವಿಜಯಾದಿತ್ಯ, ಎಂಬ ಇಬ್ಬರು ತಮ್ಮಂದಿರಿದ್ದರು. ಇವರಲ್ಲಿ ಕವಿ ಒಬ್ಬನಾಗಿರಬಹುದೋ ಏನೋ ತಿಳಿಯದು. ತ್ರೈಲೋಕ್ಯಮಲ್ಲನಿಗೆ ಕೇತಲದೇವಿಯೆಂಬ ಜೈನಧರ್ಮಾನುಸಾರಿಣಿಯಾದ ಪತ್ನಿಯೊಬ್ಬಳು ಇದ್ದಂತೆಯೂ ಆಕೆ ಕೆಲವು ಜಿನಾಲಯಗಳನ್ನು ಕಟ್ಟಿಸಿದಂತೆಯೂ ತಿಳಿಯಬರುತ್ತದೆ.1 ಕವಿ "ಜಿನನಾಪ್ತಂ" ಎಂದು ಹೇಳಿಕೊಂಡಿರುವುದರಿಂದ ಈಕೆಯ ಮಗನಾಗಿದ್ದಿರಬಹುದು. ಶ್ರ. ಬೆ. 40 ನೆಯ ಶಾಸನದಲ್ಲಿ (1163) ಗುರುಪರಂಪರೆಯನ್ನು ಹೇಳುವಾಗ ರಾಘವಪಾಂಡವೀಯವನ್ನು ಬರೆದ ಶ್ರುತಕೀರ್ತಿ ತ್ರೈವಿದ್ಯರ ಸಮಕಾಲಿಕನಾದ ಒಬ್ಬ ದೇವಚಂದ್ರಮುನಿಯನ್ನು ಸ್ತುತಿಸಿದೆ. ಈತನೇ ಕವಿಯ ಗುರು

---

1 Indian Antiquary Vol. XIX. p. 208 ರಲ್ಲಿ ಕೊಟ್ಟಿರುವ ಹೊನ್ನವಾಡದ ಶಾಸನ.

ವಾಗಿರಬಹುದು. ಈ ಕವಿ—ಕೀರ್ತಿಚಂದ್ರ, ವೈರಿಕರಿಹರಿ, ಕಂದರ್ಪಮೂರ್ತಿ, ಸಮ್ಯಕ್ತ್ವರತ್ನಾಕರ, ಬುಧಭವ್ಯಬಾಂಧವ, ವೈದ್ಯರತ್ನ, ಪಾಲಭವಂದ್ಯ, ಕವಿತಾಬ್ಧಿಚಂದ್ರಮ, ಕೀರ್ತಿವಿಳಾಸ—ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿದ್ದಾನೆ."

ಎಂದು (ಕವಿಚರಿತೆ I.) ೧೦೬, ೧೦೭ ನೆಯ ಪುಟಗಳಲ್ಲಿ ಬರೆದಿರುವರು. ಆದ್ದರಿಂದ ಇವನು ಕ್ರಿ. ಶ. ೧೦೪೪ ರಿಂದ ೧೦೬೮ ರ ವರೆಗೆ ಆಳಿದ ಚಾಲುಕ್ಯರಾಜನಾದ ತ್ರೈಲೋಕ್ಯಮಲ್ಲನ ಮಗನೆಂದೂ, ೧೦೭೬ ರಿಂದ ೧೧೨೬ ರ ವರೆಗೆ ಆಳಿದ ತ್ರಿಭುವನಮಲ್ಲ ವಿಕ್ರಮಾದಿತ್ಯನ ತಮ್ಮನೆಂದೂ, ಕ್ರಿ. ಶ. ೧೧೨೫ ರಲ್ಲಿ ಇದ್ದಿರಬಹುದೆಂದೂ ಅವರ ಅಭಿಪ್ರಾಯ.

ಈ ಅಭಿಪ್ರಾಯವು ಸಾಧುವೆಂದು ನಮಗೆ ಕಾಣುವುದಿಲ್ಲ. 'ತ್ರೈಲೋಕ್ಯಮಲ್ಲಾಧಿಪಂ ಜನಕಂ ಪಾಲಭವಂದ್ಯಂ' ಎಂದು ಕವಿಯು ಹೇಳಿರುವುದನ್ನು ನೋಡಿದರೆ ಈ ತ್ರೈಲೋಕ್ಯಮಲ್ಲನೆಂಬವನು ಪಾಲಭವೆಂಬ ಒಂದು ನಗರಕ್ಕೋ ಅಥವಾ ಸಣ್ಣ ನಾಡಿಗೋ ಅಧಿಪತಿಯಾಗಿದ್ದನೆಂದು ತೋರುವುದೇ ಹೊರತು, ಅವನು 'ಸಮಸ್ತ ಭುವನಾಶ್ರಯ'ನೂ, 'ಶ್ರೀ ಪೃಥ್ವೀವಲ್ಲಭನೂ' ಸಕಲಭುವನ ವಂದ್ಯನೂ ಆದ ಆ ಹೆಸರಿನ ಚಾಲುಕ್ಯಚಕ್ರವರ್ತಿಯಾಗಿದ್ದನೆಂದು ನಮಗೆ ತೋರುವುದಿಲ್ಲ. ಹಾಗೆ ಈ ಕವಿಯ ತಂದೆಯು ನಿಜವಾಗಿಯೂ ಚಾಲುಕ್ಯಚಕ್ರವರ್ತಿಯಾಗಿ ಇದ್ದಿದ್ದ ಪಕ್ಷದಲ್ಲಿ ಕವಿಯು ಆ ವಿಷಯವನ್ನು ಹೇಳದೆ ಸುಮ್ಮನಿರುತ್ತಿದ್ದನೇ? 'ವಿಕ್ರಮಾಂಕ ನರೇಂದ್ರಂ ತನಗಗ್ರಜಾತಂ' ಎಂದು ಹೇಳಿರುವಂತೆಯೇ ಈ ವಿಕ್ರಮಾದಿತ್ಯನಿಗೆ ಅಣ್ಣನಾಗಿ ಕೆಲವು ವರ್ಷಗಳು ರಾಜ್ಯವಾಳುತ್ತಿದ್ದ ಸೋಮೇಶ್ವರನು ತನಗೆ ಅಗ್ರಜಾತನೆಂದು ಹೇಳುತ್ತಿರಲಿಲ್ಲವೇ?

ಈ ವಿಕ್ರಮಾದಿತ್ಯ ತ್ರಿಭುವನಮಲ್ಲನಿಗೆ ಕವಿಚರಿತಕಾರರು ಹೇಳುವಂತೆ ಜಯಸಿಂಹ, ವಿಷ್ಣುವರ್ಧನ-ವಿಜಯಾದಿತ್ಯ ಎಂಬ ಇಬ್ಬರು ತಮ್ಮಂದಿರು ಇದ್ದುದೇನೋ ವಾಸ್ತವ. ಆದರೆ ಇವರಿಬ್ಬರಿಗೂ ಈ ಹೆಸರುಗಳು ಇದ್ದವೇ ಹೊರತು ಕೀರ್ತಿವರ್ಮನೆಂಬ ಹೆಸರು ಇವರಿಬ್ಬರಲ್ಲಿ ಒಬ್ಬನಿಗಾದರೂ ಇತ್ತೆಂದು ಹೇಳುವುದಕ್ಕೆ ನಮಗೆ ತಿಳಿದಂತೆ ಯಾವ ಆಧಾರವೂ ಇಲ್ಲ. ಆದುದರಿಂದ 'ಗೋವೈದ್ಯ'ದ ಕರ್ತೃವಾದ ಕೀರ್ತಿವರ್ಮನು ಈ ಜಯಸಿಂಹ, ವಿಷ್ಣುವರ್ಧನ-ವಿಜಯಾದಿತ್ಯರಲ್ಲಿ ಒಬ್ಬನಾಗಿರಬಹುದೆಂಬ ಕವಿಚರಿತಕಾರರ ಅಭಿಪ್ರಾಯವು ಅಸಂಗತವಾಗಿರುವಂತೆ ನಮಗೆ ಕಾಣಿಸುವುದು.

ತ್ರೈಲೋಕ್ಯಮಲ್ಲನ ಮಗನಾದ ಈ ಜಯಸಿಂಹನು ತನ್ನ ತಂದೆಯು ರಾಜ್ಯವಾಳುತ್ತಿದ್ದಾಗಲೇ ಅವನ ಕೆಳಗೆ ತರ್ದವಾಡಿ ೧೦೦೦ ವೇ ಮೊದಲಾದ ಸೀಮೆ

ಗಳನ್ನು ಆಳುತ್ತಿದ್ದನೆಂದು ನಾವು ಮೇಲೆಯೇ (ಪುಟ ೧೬) ಹೇಳಿರುವೆವಷ್ಟೆ. ಹೀಗೆ ಇವನು ತರ್ದವಾಡಿ ೧೦೦೦ ವನ್ನು ಕ್ರಿ. ಶ. ೧೦೬೫ ರಲ್ಲಿ ಆಳುತ್ತಿದ್ದನೆಂದು ಡಾ|| ಫ್ಲೀಟ್‌ರವರು (ಪೂರ್ವನಿರ್ದಿಷ್ಟಗ್ರಂಥ, ಪು. ೪೫೩) ಬರೆದಿರುವರು. ಹೀಗೆಯೇ ಇವನ ತಮ್ಮನಾದ ವಿಷ್ಣುವರ್ಧನ-ವಿಜಯಾದಿತ್ಯನೂ ಕೂಡ ಆ ವರ್ಷದಲ್ಲಿ ನೊಳಂಬವಾಡಿ ೩೨,೦೦೦ ಸೀಮೆಯನ್ನು ಆಳುತ್ತಿದ್ದನೆಂದು ಮೊಳಕಾಲ್ಮುರುವಿನ ೨೯ ನೇ ಶಾಸನದಿಂದ ತಿಳಿದುಬರುವುದು. ಆ ಕಾಲದಲ್ಲಿ ಈ ರಾಜಕುಮಾರರಿಗೆ ೧೧ ವರ್ಷ ಮಾತ್ರ ವಯಸ್ಸಾಗಿತ್ತೆಂದು ನಾವು ಇಟ್ಟುಕೊಂಡರೂ ಕೂಡ ಕವಿಚರಿತಕಾರರಿಂದ ಹೇಳಲ್ಪಟ್ಟಿರುವ ಕ್ರಿ. ಶ. ೧೧೨೫ ನೇ ವರ್ಷದಲ್ಲಿ ಇವರಿಗೆ ೭೧ ವಯಸ್ಸು ಆಗಿರಬೇಕು. ಕವಿಚರಿತಕಾರರು ಹೇಳುವಂತೆ 'ಗೋವೈದ್ಯ'ದ ಕರ್ತೃವಾದ ಕೀರ್ತಿವರ್ಮನು ಈ ಇಬ್ಬರು ರಾಜಕುಮಾರರಲ್ಲಿ ಒಬ್ಬನಾಗಿದ್ದಲ್ಲಿ, ಅವನು ತನಗೆ ೭೧ ವಯಸ್ಸಿಗಿಂತ ಪೂರ್ವದಲ್ಲಿಯೇ ಆ ಗ್ರಂಥವನ್ನು ಪ್ರಾಯಶಃ ಬರೆಯುತ್ತಿದ್ದನಾದುದರಿಂದ, ಈ ಕೀರ್ತಿವರ್ಮನು 'ಸು. ೧೧೨೫ ರಲ್ಲಿ' ಇದ್ದನೆಂದು ಅವನ ಸುಮಾರು ೭೧ ನೇ ವಯಸ್ಸನ್ನು ಕವಿಚರಿತಕಾರರು ಕೊಟ್ಟಿರುವುದೂ ಅಷ್ಟೇನೂ ಉಚಿತವಾಗಿರುವಂತೆ ಕಾಣುವುದಿಲ್ಲ.

ಇಷ್ಟೇ ಅಲ್ಲ. ಈ ಜಯಸಿಂಹ ವಿಷ್ಣುವರ್ಧನ-ವಿಜಯಾದಿತ್ಯರು ಕ್ರಿ. ಶ. ೧೧೨೫ ರ ವರೆಗೆ ಜೀವಿಸಿಯೇ ಇರಲಿಲ್ಲವೆಂದು ನಮಗೆ ತೋರುವುದು. ಈ ವಿಷ್ಣುವರ್ಧನ-ವಿಜಯಾದಿತ್ಯನಂತೂ ಅವನ ತಂದೆಯಾದ ಸೋಮೇಶ್ವರ ತ್ರೈಲೋಕ್ಯಮಲ್ಲ-ಆಹವಮಲ್ಲನ ಕಾಲದಲ್ಲಿ ಅವನ ಕೆಳಗೆ ಹಲವು ಸೀಮೆಗಳನ್ನು ಆಳುತ್ತಿದ್ದನೆಂದು ಶಾಸನಗಳಲ್ಲಿ ಹೇಳಲ್ಪಟ್ಟಿರುವುದೇ ಹೊರತು, ಈ ತ್ರೈಲೋಕ್ಯಮಲ್ಲ-ಆಹವಮಲ್ಲನ ಕಾಲದನಂತರ ಹುಟ್ಟಿದ ಶಾಸನಗಳಲ್ಲಿ ಇವನ ಪ್ರಸ್ತಾವವೇನೂ ಮಾಡಲ್ಪಟ್ಟಿಲ್ಲ. ಈ ತ್ರೈಲೋಕ್ಯಮಲ್ಲ-ಆಹವಮಲ್ಲನು ಶಕವರ್ಷ ೯೯೦ ನೆಯ ಕೀಲಕಸಂವತ್ಸರದಲ್ಲಿ, ಎಂದರೆ ಕ್ರಿ. ಶ. ೧೦೬೮ ರಲ್ಲಿ ಲೋಕಾಂತರವನ್ನೈದಿದನೆಂದೂ, ತದನಂತರ ಇವನ ಮಗನಾದ ಸೋಮೇಶ್ವರಭುವನೈಕಮಲ್ಲನು ರಾಜ್ಯಭಾರವನ್ನು ವಹಿಸಿದನೆಂದೂ ಹೇಳುವ ಕ್ರಿ. ಶ. ೧೦೬೮ ರಲ್ಲಿಯೇ ಹುಟ್ಟಿದ ಷಿಕಾರಿಪುರದ ೧೩೬ ನೆಯ ಶಾಸನದಲ್ಲಿ ಅವನ ಕೆಳಗೆ ಬನವಾಸೆ ೧೨,೦೦೦ ವನ್ನು ಆಳುತ್ತಿದ್ದ ಮಹಾಮಂಡಲೇಶ್ವರ ಲಕ್ಷ್ಮ ಅಥವಾ ಲಕ್ಷ್ಮಣನ ಪ್ರಶಂಸಾವಸರದಲ್ಲಿ ಉಕ್ತವಾಗಿರುವ—

ಕಿಱಿಯಂ ವಿಕ್ರಮಗಂಗಭೂಪನೆನಗಾ ಪೆರ್ಮ್ಮಾಡಿದೇವಂಗೆ ನೇರ್ |
ಗ್ಗಿಱಿಯಂ ವೀರನೊಳಂಬದೇವನೆನಗಂ ಪೆರ್ಮ್ಮಾಡಿಗಂ ಸಿಂಗಿಗಂ ||

ಕಿಱಿಯೈನೀಂ ನಿನಗೆಲ್ಲರುಂ ಕಿಱಿಯರೆಂದಗ್ಗಯ್ಸಿ ಕಾರುಣ್ಯದಿಂ |
ನೆಱಿ ಕೊಟ್ಟಂ ಪ್ರತಿಪತ್ತಿವೃತ್ತಿಪದಮಂ ಲಕ್ಷ್ಮಂಗೆ ಸೋಮೇಶ್ವರಂ ||

ಎಂಬ ಪದ್ಯದಲ್ಲಿ ಚಾಲುಕ್ಯಚಕ್ರವರ್ತಿಯೂದ ಸೋಮೇಶ್ವರ (ಭುವನೈಕಮಲ್ಲ) ಅವನ ತಮ್ಮ ವಿಕ್ರಮಾದಿತ್ಯ-ಪೆರ್ಮ್ಮಾಡಿ, ಅವನ ತಮ್ಮ ಜಯಸಿಂಹ, ಎಂದು ಸೋಮೇಶ್ವರ ತ್ರೈಲೋಕ್ಯಮಲ್ಲ-ಆಹವಮಲ್ಲನ ಪುತ್ರರಲ್ಲಿ ಮೊದಲು ಮೂರು ಜನರನ್ನು ಮಾತ್ರ ಹೇಳಿ ಈ ಮೂವರನ್ನು ಬಿಟ್ಟರೆ ಮಹಾಮಂಡಲೇಶ್ವರ ಲಕ್ಷ್ಮನೇ ಎಲ್ಲರಿಗಿಂತಲೂ ಶ್ರೇಷ್ಠನೆಂದು ಹೇಳಲ್ಪಟ್ಟಿರುವುದನ್ನು ಪರ್ಯಾಲೋಚಿಸಿದರೆ, ಈ ಮೂರು ಜನರಿಗೂ ತಮ್ಮನಾದ ವಿಷ್ಣುವರ್ಧನ-ವಿಜಯಾದಿತ್ಯನು* ಆಗ ಈ ಲೋಕದಲ್ಲಿ ಇರಲಿಲ್ಲವೆಂದು ನಾವು ಊಹಿಸಬೇಕಾಗಿರುವುದು. ಹೀಗೆಯೇ ವಿಕ್ರಮಾದಿತ್ಯ-ತ್ರಿಭುವನಮಲ್ಲನ ಆಸ್ಥಾನದಲ್ಲಿ ವಿದ್ಯಾಪತಿಯಾಗಿದ್ದ ಬಿಲ್ಹಣನೂ ತನ್ನ ವಿಕ್ರಮಾಂಕಚರಿತದಲ್ಲಿ ಸೋಮೇಶ್ವರ ತ್ರೈಲೋಕ್ಯಮಲ್ಲ-ಆಹವಮಲ್ಲನಿಗೆ ಸೋಮೇಶ್ವರ, ವಿಕ್ರಮಾದಿತ್ಯ, ಜಯಸಿಂಹ ಎಂಬ ಮೂರು ಪುತ್ರರಿದ್ದರೆಂದು ಹೇಳಿರುವುದರಿಂದಲೂ ಕೂಡ ಆ ಕವಿಯು ವಿಕ್ರಮಾದಿತ್ಯನ ಆಸ್ಥಾನಕ್ಕೆ ಬರುವುದಕ್ಕಿಂತ ಬಹುಕಾಲ ಹಿಂದೆಯೇ ಈ ಮೂವರ ತಮ್ಮನಾದ ವಿಷ್ಣುವರ್ಧನ-ವಿಜಯಾದಿತ್ಯನು ಲೋಕಾಂತರವನ್ನೈದಿದ್ದನೆಂದು ವ್ಯಕ್ತವಾಗುವುದು.

ಇವನ ಅಣ್ಣ ಜಯಸಿಂಹನೂ ಹೀಗೆಯೇ ತನ್ನ ಅಣ್ಣನಾದ ವಿಕ್ರಮಾದಿತ್ಯನಿಗಿಂತ ಮೊದಲೇ ಪ್ರಾಯಶಃ ಲೋಕಾಂತರವನ್ನೈದಿರಬಹುದೆಂಬ ಡಾ|| ಫ್ಲೀಟ್‌ರವರ ಅಭಿಪ್ರಾಯವನ್ನು ನಾವು ಮೇಲೆಯೇ (ಪುಟ ೧೬) ಅನುವದಿಸಿರುವೆವು. ಆದುದರಿಂದ ಮೇಲೆ ಹೇಳಲ್ಪಟ್ಟ ಜಯಸಿಂಹ ವಿಷ್ಣುವರ್ಧನ-ವಿಜಯಾದಿತ್ಯರಲ್ಲಿ ಯಾರೂ ಕ್ರಿ.ಶ. ೧೧೨೫ರಲ್ಲಿ ಜೀವಿಸಿರಲಿಲ್ಲವೆಂದು ನಾವು ದೃಢವಾಗಿ ಹೇಳಬಹುದು.

---

*ಈ ವಿಷ್ಣುವರ್ಧನ-ವಿಜಯಾದಿತ್ಯನು ಕ್ರಿ. ಶ. ೧೦೬೪ ರಲ್ಲಿ ಇದ್ದನೆಂದು ಆ ವರ್ಷದಲ್ಲಿ ಹುಟ್ಟಿದ ನೀರಲ್ಗಿಯ ಒಂದು ಶಾಸನದಲ್ಲಿ ಹೇಳಲ್ಪಟ್ಟಿರುವಂತಿರುವುದೆಂಬ ಡಾ|| ಫ್ಲೀಟ್‌ರವರ ಅಭಿಪ್ರಾಯವು (ಅವರ ಪೂರ್ವನಿರ್ದಿಷ್ಟಗ್ರಂಥ; ಪುಟ ೪೫೪) ಭ್ರಮಮೂಲವಾದುದೆಂಬುದರಲ್ಲಿ ಸಂದೇಹವಿಲ್ಲ. ಈ ಶಾಸನದಲ್ಲಿ ಕೀರ್ತಿತನಾಗಿರುವ ಒಬ್ಬ ವಿ........ಜಯಾದಿತ್ಯ (ಇಲ್ಲಿ 'ಷ್ಣು-ವ-ರ್ಧ-ನ-ವಿ' ಎಂಬ ಅಕ್ಷರಗಳು ಗಲಿತಗಳಾಗಿವೆಯೆಂದು ಡಾ|| ಫ್ಲೀಟ್‌ರವರ ಅಭಿಪ್ರಾಯ) ನಿಗೆ 'ಪಲ್ಲವಾನ್ವಯ' 'ಕಾಂಚೀಪುರವರಾಧೀಶ್ವರ' 'ಭುವನೈಕಮಲ್ಲ-ಪಲ್ಲವ-ಪೆರ್ಮಾನಡಿ' ಎಂಬ ಬಿರುದುಗಳು ಹೇಳಲ್ಪಟ್ಟಿರುವುವೆಂದು ಡಾ|| ಫ್ಲೀಟ್‌ರವರೇ (ಪುಟ ೪೪೪, ಟಿಪ್ಪಣಿ ೧) ಹೇಳಿರುವರು. ಈ ವಿಧವಾದ ಬಿರುದುಗಳು ನಮಗೆ ತಿಳಿದಂತೆ ವಿಷ್ಣುವರ್ಧನ-ವಿಜಯಾದಿತ್ಯನ ವಿಷಯದಲ್ಲಿ ಎಲ್ಲಿಯೂ ಪ್ರಯೋಗಿಸಲ್ಪಟ್ಟಿಲ್ಲವಾದುದರಿಂದ ಈ ಶಾಸನದಲ್ಲಿ ಸ್ತುತನಾಗಿರುವ ವಿ........ಜಯಾದಿತ್ಯನು ಬೇರೆ ಯಾವನೋ ಮನುಷ್ಯನಾಗಿರಬೇಕು.

ಹೀಗೆಯೇ ‘ ಶ್ರವಣಬೆಳ್ಗೊಳದ ೪೦ ನೆಯ ಶಾಸನದಲ್ಲಿ ಸ್ತುತಿಸಲ್ಪಟ್ಟಿರುವ ರಾಘವಪಾಂಡವೀಯವನ್ನು ಬರೆದ ಶ್ರುತಕೀರ್ತಿ-ತ್ರೈವಿದ್ಯನ ಸಮಕಾಲಿಕನಾದ ದೇವಚಂದ್ರಮುನಿಯೇ ಈ ಕವಿಯ ಗುರುವಾಗಿರಬಹುದು ’ ಎಂಬ ಕವಿಚರಿತಕಾರರ ಅಭಿಪ್ರಾಯವೂ ತಪ್ಪೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆ ಶಾಸನದಲ್ಲಿ ಸ್ತುತನಾಗಿರುವ ಶ್ರುತಕೀರ್ತಿ-ತ್ರೈವಿದ್ಯನು ರಾಘವಪಾಂಡವೀಯದ ಕರ್ತೃವಲ್ಲವೆಂದೂ, ಅವನು ಕ್ರಿ. ಶ. ೧೧೨೩ ರಲ್ಲಿ ಜೀವಿಸಿದ್ದ, ಕೊಲ್ಲಾಪುರದಲ್ಲಿ ‘ ತೀರ್ಥಕೃತ್ತಾದ ’ ಮಾಘನಂದಿಮುನಿಯ ಶಿಷ್ಯನೆಂದೂ ನಾವು ಮೇಲೆಯೇ (ಪುಟ ೪೭) ಹೇಳಿರುವೆವು. ಶ್ರವಣಬೆಳ್ಗೊಳದ ೪೦ ನೆಯ ಶಾಸನದಲ್ಲಿ ಕೀರ್ತಿತನಾದ ದೇವಚಂದ್ರನು ಕ್ರಿ. ಶ. ೧೧೨೩ ರಲ್ಲಿ ಜೀವಿಸಿದ್ದ ಪೂರ್ವೋಕ್ತ ಈ ಮಾಘನಂದಿಮುನಿಯ ಶಿಷ್ಯನಾದ ಗಂಡವಿಮುಕ್ತಸಿದ್ಧಾಂತದೇವ ಅಥವಾ ಶುಭಚಂದ್ರದೇವನ (ಮೇಲೆ ೬೧ ನೇ ಪುಟವನ್ನು ನೋಡಿ) ಪ್ರಶಿಷ್ಯನಾದುದರಿಂದ (ಮೇಲೆ ೧೧ ನೇ ಪುಟವನ್ನು ನೋಡಿ) ಈ ದೇವಚಂದ್ರನಿಗೆ ಕ್ರಿ. ಶ. ೧೧೨೫ ರಲ್ಲಿ ಗುಡ್ಡರಿದ್ದರೆಂಬ ವಿಷಯದಲ್ಲಿ ನಮಗೆ ಪ್ರಬಲವಾದ ಸಂದೇಹವಿರುವುದು. ಕ್ರಿ. ಶ. ೧೧೨೫ ರಲ್ಲಿ ಶ್ರದ್ಧಾಳುಗಳು ಈ ಮಾಘನಂದಿಯೇ ಜೀವಿಸಿದ್ದ ಪಕ್ಷದಲ್ಲಿ ಇವನಿಗೂ, ಇಲ್ಲದಿದ್ದರೆ, ಗಂಡವಿಮುಕ್ತಸಿದ್ಧಾಂತದೇವ, ಶ್ರುತಕೀರ್ತಿ, ಮೊದಲಾದ ಇವನ ಶಿಷ್ಯರಿಗೂ ಗುಡ್ಡರಾಗುವರೇ ಹೊರತು, ಇವರನ್ನು ಅತಿಕ್ರಮಿಸಿ ಗಂಡವಿಮುಕ್ತಸಿದ್ಧಾಂತದೇವನ ಪ್ರಶಿಷ್ಯನಾದ ದೇವಚಂದ್ರನಿಗೆ ಗುಡ್ಡರಾಗುತ್ತಿದ್ದರೆಂಬುದನ್ನು ನಮಗೆ ನಂಬುವುದಕ್ಕಾಗುವುದಿಲ್ಲ.

ಈ ಮೇಲೆ ಹೇಳಿದ ಚಾಲುಕ್ಯಚಕ್ರವರ್ತಿಯಾದ ತ್ರೈಲೋಕ್ಯಮಲ್ಲನೂ, ಇವನ ಹಿಂದೆ ಆಳಿದ ತೈಲಪನೇ ಮೊದಲಾದವರೂ ಮತ್ತು ಇವನನಂತರ ಆಳಿದ ಸೋಮೇಶ್ವರ ಭುವನೈಕಮಲ್ಲನೇ ಮೊದಲಾದವರೂ ರಾಜ್ಯಭಾರವನ್ನು ಮಾಡುತ್ತಿದ್ದ ಕಾಲದಲ್ಲಿ ಇವರ ಕೆಳಗಿನ ಮಂಡಲೇಶ್ವರರೂ ಮತ್ತು ಇತರ ಅಧಿಕಾರಿಗಳೂ ಈ ಚಕ್ರವರ್ತಿಗಳ ಹೆಸರನ್ನು ತಮ್ಮ ಹೆಸರನ್ನಾಗಿ ಅಥವಾ ಉಪನಾಮವನ್ನಾಗಿ ಮಾಡಿಕೊಳ್ಳುವುದೂ, ಈ ಚಕ್ರವರ್ತಿಗಳ ಕುಮಾರರ ಹೆಸರನ್ನು ತಮ್ಮ ಕುಮಾರರಿಗೆ ಇಡುವದೂ, ಬಹಳ ಬಳಕೆಯಲ್ಲಿತ್ತು. ಇದರ ನಿದರ್ಶನಕ್ಕಾಗಿ ನಾವು ಮೈಸೂರು ಶಾಸನಗಳಿಂದ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುವೆವು :—ನೊಳಂಬವಾಡಿ ೩೨,೦೦೦ ಸೀಮೆಯನ್ನು ಕ್ರಿ. ಶ. ೧೧೦೦ ರಲ್ಲಿಯೂ, ೧೧೪೩ ರಲ್ಲಿಯೂ, ೧೨೦೦ ರಲ್ಲಿಯೂ ಆಳುತ್ತಿದ್ದ ಪಾಂಡ್ಯವಂಶದ ಮಹಾಮಂಡಲೇಶ್ವರರಿಗೆ ತ್ರಿಭುವನಮಲ್ಲ-ರಾಯಪಾಂಡ್ಯ, ಜಗದೇಕಮಲ್ಲ-ವೀರಪಾಂಡ್ಯ, ತ್ರಿಭುವನಮಲ್ಲಪಾಂಡ್ಯ ಎಂಬ ಹೆಸರುಗಳಿದ್ದುವು (ದಾವಣಗೆರೆ ೧೩೯, ೪೧ ನೇ ಶಾಸನಗಳನ್ನೂ, ಚಿತ್ರದುರ್ಗದ

೩೬ ನೇ ಶಾಸನವನ್ನೂ ನೋಡಿ). ಈಗಿನ ಶಿವಮೊಗ್ಗಾ ಜಿಲ್ಲೆಯಲ್ಲಿ ಹರಿಯುವ ತುಂಗಭದ್ರಾನದಿಯ ಬಳಿಯಲ್ಲಿದ್ದ ಎಡೆದೊರೆನಾಡಿನ ಮಂಡಲಿ ೧೦೦೦ ಸೀಮೆಯನ್ನು ಕ್ರಿ. ಶ. ೧೦೭೬-೧೧೨೦ ರಲ್ಲಿ ತ್ರಿಭುವನಮಲ್ಲ-ಭುಜಬಲಗಂಗ ಪೆರ್ಮಾಡಿಯೂ, ೧೧೨೦-೧೧೨೩ ರಲ್ಲಿ ತ್ರಿಭುವನಗಂಗ ನನ್ನಿಯಗಂಗ ಪೆರ್ಮಾಡಿಯೂ, ೧೧೨೩-೧೧೨೯ ರಲ್ಲಿ 'ತ್ರಿಭುವನಮಲ್ಲ' ಎಂಬ ಉಪನಾಮವುಳ್ಳ ವೀರಗಂಗ ಪೆರ್ಮಾಡಿಯೂ, ೧೧೨೯ ರ ನಂತರ 'ಭೂಲೋಕಮಲ್ಲ' ಎಂಬ ಉಪನಾಮವುಳ್ಳ (ಇದೇ ?) ವೀರಗಂಗ ಪೆರ್ಮಾಡಿಯೂ ಆಳುತ್ತಿದ್ದರೆಂದು ಶಿವಮೊಗ್ಗಾ ತಾಲ್ಲೋಕಿನಲ್ಲಿರುವ ಶಾಸನಗಳಿಂದ ತಿಳಿದುಬರುವುದು. ಹೀಗೆಯೇ ಕದಂಬಳಿಗೆ ೧೦೦೦, ಬಲ್ಲಕುಂದೆ ೩೦೦ ಮುಂತಾದ ಸೀಮೆಗಳನ್ನು ಕ್ರಿ. ಶ. ೧೦೨೨ ರಲ್ಲಿ ಜಗದೇಕಮಲ್ಲ-ನೊಣಂಬಪಲ್ಲವ ಪೆರ್ಮಾನಡಿಯೂ, ೧೦೩೭ ರಲ್ಲಿ ಜಗದೇಕಮಲ್ಲ-ಇಮ್ಮಡಿ-ನೊಣಂಬಪಲ್ಲವ ಪೆರ್ಮಾನಡಿಯೂ, ೧೦೪೫ ರಲ್ಲಿ ತ್ರೈಲೋಕ್ಯಮಲ್ಲ-ನನ್ನಿ-ನೊಣಂಬಪಲ್ಲವ ಪೆರ್ಮಾನಡಿಯೂ ಆಳುತ್ತಿದ್ದರೆಂದು ಮೊಳಕಾಲ್ಮೂರು ೧೦ ನೇ ಶಾಸನದಿಂದಲೂ, ದಾವಣಗೆರೆಯ ೧೯, ೨೦ ನೆಯ ಶಾಸನಗಳಿಂದಲೂ ತಿಳಿದುಬರುವುದು. ಹೀಗೆಯೇ ಪಟ್ಟಿ-ಪೊಂಬುಚ್ಚದಲ್ಲಿ ವಿಕ್ರಮ-ಶಾಂತರ (೧೦೨೫), ತ್ರೈಲೋಕ್ಯಮಲ್ಲ-ವೀರಶಾಂತರ, (೧೦೬೨), ತ್ರಿಭುವನಮಲ್ಲ-ಶಾಂತರ (೧೧೦೩), ತ್ರಿಭುವನಮಲ್ಲ-ಶಾಂತರ (೧೧೮೯) ಎಂಬ ಹೆಸರಿನ ಶಾಂತರ ಮಹಾಮಂಡಲೇಶ್ವರರು ಆಳುತ್ತಿದ್ದರೆಂದು ಷಿಕಾರಿಪುರದ ೪೭ ಮತ್ತು ೬೩ ನೆಯ ಶಾಸನಗಳಿಂದಲೂ, ತೀರ್ಥಹಳ್ಳಿ ೧೯೨ ನೆಯ ಶಾಸನದಿಂದಲೂ, ಸಾಗರದ ೩೬ ನೆಯ ಶಾಸನದಿಂದಲೂ ತಿಳಿದುಬರುವುದು. ಗಂಗವಾಡಿ ೯೬೦೦೦ ಸೀಮೆಯನ್ನು ಆಳುತ್ತಿದ್ದ ವಿಷ್ಣುವರ್ಧನ-ಬಿಟ್ಟಿದೇವ ಹೊಯ್ಸಲನಿಗಂತೂ 'ತ್ರಿಭುವನಮಲ್ಲ' ಎಂಬ ಉಪನಾಮವು ನೂರಾರು ಶಾಸನಗಳಲ್ಲಿ * ಹೇಳಲ್ಪಟ್ಟಿರುವುದು. ಇವನ ಮಗನಾದ ನರಸಿಂಹನಿಗೂ ಕೂಡ ಹೀಗೆಯೇ 'ತ್ರಿಭುವನಮಲ್ಲ' ಎಂಬ ಉಪನಾಮವೂ 'ಜಗದೇಕಮಲ್ಲ' ಎಂಬ ಉಪನಾಮವೂ ಅನೇಕ ಶಾಸನಗಳಲ್ಲಿ † ಹೇಳಲ್ಪಟ್ಟಿರುವುದು.

ಮೇಲೆ ಹೇಳಿರುವ ಆಯಾ ಕ್ರಿ. ಶ. ವರ್ಷಗಳಲ್ಲಿ ತ್ರೈಲೋಕ್ಯಮಲ್ಲ, ಜಗದೇಕಮಲ್ಲ, ಮೊದಲಾದ ಆಯಾ ಬಿರುದುಗಳುಳ್ಳ ಚಾಲುಕ್ಯಚಕ್ರವರ್ತಿಗಳು ಆಳುತ್ತಿ

---

* ಕೃಷ್ಣರಾಜಪೇಟೆ ತಾಲ್ಲೂಕಿನ ೩, ೩೧, ೬೨, ೬೮ ನೆಯ ಶಾಸನಗಳನ್ನು ನೋಡಿ.

† ಕೃಷ್ಣರಾಜಪೇಟೆ ತಾಲ್ಲೂಕಿನ ೪, ೧೪, ೫೩ ನೆಯ ಶಾಸನಗಳು, ಹಾಸನದ ೫೭ ನೆಯ ಶಾಸನ, ಚನ್ನರಾಯಪಟ್ಟಣದ ೧೪೫ ನೆಯ ಶಾಸನ, ಕೋಲಾರದ ೧೦೦ ಎ ಮತ್ತು ೧೬೯ ನೆಯ ಶಾಸನಗಳು ಮೊದಲಾದವುಗಳನ್ನು ನೋಡಿ.

ದ್ದರೆಂಬ ಅಂಶವು ಪೂರ್ವನಿರ್ದಿಷ್ಟವಾದ 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯ ೪೮ ನೇ ಸಂಪುಟದಲ್ಲಿರುವ ನನ್ನ ಲೇಖನದಿಂದ ವ್ಯಕ್ತವಾಗುವುದು.

ಕ್ರಿ. ಶ. ೧೦೩೬ ರಲ್ಲಿ ಎಡೆನಾಡು ೭೦ ನ್ನು ಆಳುತ್ತಿದ್ದ ಮಾಟೂರವಂಶದ ಮಹಾಮಂಡಲೇಶ್ವರ ಆಲಯ್ಯನು ತನ್ನ ಮಗನಿಗೆ 'ಜಯಸಿಂಹ' ಎಂಬ ಹೆಸರನ್ನು ಇಟ್ಟಿದ್ದನೆಂದು ಸೊರಬದ ೧೮೪ ನೇ ಶಾಸನದಿಂದ ತಿಳಿಯುವುದು. ಈ ಜಯಸಿಂಹನು ಕ್ರಿ. ಶ. ೧೦೩೭ ರಲ್ಲಿ ಮಹಾಮಂಡಲೇಶ್ವರನಾದುದರಿಂದ ಆ ವರ್ಷಕ್ಕಿಂತ ಬಹಳ ಹಿಂದೆ ಇವನು ಹುಟ್ಟಿರಬೇಕು. ಎಂದರೆ ಚಾಲುಕ್ಯಚಕ್ರವರ್ತಿ ಜಯಸಿಂಹ-ಜಗದೇಕಮಲ್ಲನು ಕುಮಾರನಾಗಿದ್ದಾಗಲೇ ಅವನ ಹೆಸರನ್ನು ಈ ಆಲಯ್ಯನು ತನ್ನ ಮಗನಿಗೆ ಇಟ್ಟನು. ಹೀಗೆಯೇ 'ತ್ರೈಲಪ', 'ತ್ರೈಲಹ' ಎಂಬ ಹೆಸರೂ, 'ವಿಕ್ರಮಾದಿತ್ಯ' (ವಿಕ್ರಮ, ವಿಕ್ರಮಾಂಕ) ಎಂಬ ಹೆಸರೂ 'ಸತ್ಯಾಶ್ರಯ' ಎಂಬ ಹೆಸರೂ ಅನೇಕ ಸಾಮಂತರಿಂದಲೂ, ಮಂಡಲಿಕರಿಂದಲೂ ಧರಿಸಲ್ಪಟ್ಟಿತ್ತೆಂದು ಶಿವಮೊಗ್ಗಾ ಜಿಲ್ಲೆಯಲ್ಲಿರುವ ಶಾಸನಗಳಿಂದಲೂ, ಡಾ|| ಫ್ಲೀಟ್‌ರವರ ಪೂರ್ವನಿರ್ದಿಷ್ಟ ಗ್ರಂಥದಿಂದಲೂ ಸ್ಪಷ್ಟವಾಗುವುದು.*

---

* ಹೀಗೆಯೇ ಹೊಯ್ಸಳ ರಾಜ್ಯದಲ್ಲಿಯೂ ಕೂಡ ವಿಷ್ಣುವರ್ಧನ ಎಂಬ ಹೆಸರು ಎಷ್ಟೋ ಅಧಿಕಾರಿಗಳಿಂದ ತಮ್ಮ ಕುಮಾರರಿಗೆ ಇಡಲ್ಪಟ್ಟಿತ್ತೆಂದು ಶಾಸನಗಳಿಂದ ತಿಳಿಯುವುದು. ವಿಷ್ಣುವರ್ಧನ-ಹೊಯ್ಸಳನ ಬಳಿಯಲ್ಲಿ ಸಂಧಿವಿಗ್ರಹಿಯೂ ಮಂತ್ರಿಯೂ ಆಗಿದ್ದ ಪುಣಿಸದಂಡನಾಯಕನ ತಂದೆಯಾದ ಚಾಮದಂಡನಾಯಕನು ತನ್ನ ಎರಡನೆಯ ಮಗನಿಗೆ ವಿಷ್ಣುವರ್ಧನ ಎಂಬ ಹೆಸರನ್ನು ಇಟ್ಟನೆಂದು ಚಾಮರಾಜನಗರದ ೮೩ ನೇ ಶಾಸನದಿಂದ ತಿಳಿದುಬರುವುದು. ಇದೇ ವಿಷ್ಣುವರ್ಧನ-ಹೊಯ್ಸಳನ ಬಳಿಯಲ್ಲಿ ಸೇನಾಪತಿಯಾಗಿದ್ದ ಮೇಲೆ ಹೇಳಿದ (೧೪೧ ನೆಯ ಪುಟವನ್ನು ನೋಡಿ) ಏಚಣದಂಡನಾಯಕನು ತನ್ನ ಮಗನಿಗೆ ವಿಷ್ಣುವರ್ಧನ ಎಂಬ ಹೆಸರನ್ನು ಇಟ್ಟಿದ್ದನೆಂದು ನಾಗಮಂಗಲದ ೨೮ ನೆಯ ಶಾಸನದಿಂದ ತಿಳಿದುಬರುವುದು. ನಾವು ಮೇಲೆ ೮ ನೆಯ ಪುಟದಲ್ಲಿ ಪ್ರಸ್ತಾವಮಾಡಿರುವ ವಿಷ್ಣುವರ್ಧನ-ಹೊಯ್ಸಳನಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ಮಾಣಿಕ್ಯಭಂಡಾರಿಯಾದ ೧ ನೇ ಭರತದಂಡನಾಯಕನು ತನ್ನ ದೊರೆಯಾದ ವಿಷ್ಣುವರ್ಧನನ ಹೆಸರನ್ನು ಮಗನಿಗೆ ಇಟ್ಟನೆಂದು ನಾಗಮಂಗಲದ ೩೨ ನೆಯ ಶಾಸನದಲ್ಲಿ ಹೇಳಿರುವುದು.

ಹೀಗೆಯೇ ವಿಷ್ಣುವರ್ಧನ-ಹೊಯ್ಸಳನ ಆಶ್ರಿತನಾದ ರಾಯಣ-ದಂಡನಾಯಕನಿಗೂ, (ಚಿಕ್ಕಮಗಳೂರು ೧೩೭ ನೆಯ ಶಾಸನ) ಚಿನ್ನದಂಡನಾಯಕನಿಗೂ (ಬೇಲೂರು ೧೭ ನೆಯ ಶಾಸನ) ಮತ್ತು ಮಲ್ಲಿದೇವದಂಡನಾಯಕನಿಗೂ (ಚನ್ನರಾಯಪಟ್ಟಣದ ೨೪೪ ನೆಯ ಶಾಸನ) ವಿಷ್ಣುವರ್ಧನ ಎಂಬ ಹೆಸರುಳ್ಳ ಪುತ್ರರಿದ್ದರೆಂದು ಆಯಾ ಶಾಸನಗಳಿಂದ ತಿಳಿದುಬರುವುದು. ಈ ಮೂವರು ವಿಷ್ಣುವರ್ಧನರೂ ದಂಡನಾಯಕರಾಗಿದ್ದರು. ಇದಲ್ಲದೆ ವೀರಬಲ್ಲಾಳನ ಸೇನಾಪತಿಯಾಗಿದ್ದ ಕೇಶವದಂಡನಾಯಕನಿಗೂ ಮತ್ತು ಅವನ ತಮ್ಮನಾದ ಮಲ್ಲದೇವದಂಡನಾಯಕನಿಗೂ ವಿಷ್ಣುವರ್ಧನ ದಂಡನಾಯಕರೆಂಬ ಪುತ್ರರಿದ್ದರೆಂದು ಮೇಲೆ ಹೇಳಿದ ಚನ್ನರಾಯಪಟ್ಟಣದ ೨೪೪ ನೆಯ ಶಾಸನ

ಆದುದರಿಂದ ಪ್ರಕೃತ ‘ ಗೋವೈದ್ಯ ’ವನ್ನು ಬರೆದ ಕೀರ್ತಿವರ್ಮನ ತಂದೆಯಾದ ತ್ರೈಲೋಕ್ಯಮಲ್ಲನೆಂಬವನು ಚಾಲುಕ್ಯಚಕ್ರವರ್ತಿಯಾದ ತ್ರೈಲೋಕ್ಯಮಲ್ಲನ ಕಾಲದಲ್ಲಿ ‘ ಪಾಲಭ ’ವೆಂಬ ನಗರವನ್ನೋ ನಾಡನ್ನೋ ಆಳುತ್ತಿದ್ದ ಸಣ್ಣ ಅಧಿಕಾರಿಯೆಂಬುದರಲ್ಲಿ* ಯಾವ ಸಂದೇಹವೂ ಇಲ್ಲ. ಈ ಕೀರ್ತಿವರ್ಮನ ಅಣ್ಣನಾದ ವಿಕ್ರಮಾಂಕನೂ ಕೂಡ ನಾವು ಮೇಲೆ ಹೇಳಿರುವ ರೂಢಿಗನುಸಾರವಾಗಿ

ದಲ್ಲಿ ಹೇಳಿರುವುದು ; ಮತ್ತು ತಿಪ್ಟೂರು ೩೮ ನೆಯ ಶಾಸನದಲ್ಲಿ ೧ ನೆಯ ನರಸಿಂಹ-ಹೊಯ್ಸಳನ ಬಳಿಯಲ್ಲಿ ಅಧಿಕಾರಿಯಾಗಿದ್ದ ಮತ್ತೊಬ್ಬ (ಸುರಿಗೆಯ) ವಿಷ್ಣುವರ್ಧನದಂಡನಾಯಕನ ಹೆಸರು ಹೇಳಲ್ಪಟ್ಟಿರುವುದು. ಈ ಮೇಲೆ ಹೇಳಿದ ದಂಡನಾಯಕರಲ್ಲದೆ, ವಿಷ್ಣುವರ್ಧನ (ಅಥವಾ ವಿಷ್ಣು, ಬಿಟ್ಟಿ, ಬಿಟ್ಟ, ಬಿಟ್ಟಿಮಯ್ಯ, ಬಿಟ್ಟಿಗ) ಎಂಬ ಹೆಸರುಳ್ಳ ಅನೇಕ ಸಾಮಂತರೂ ಮಂಡಲಿಕರೂ ಮತ್ತು ಹೆಗ್ಗಡೆಗಳೂ ಹೊಯ್ಸಳದೇಶದ ಶಾಸನಗಳಲ್ಲಿ ಕೀರ್ತಿತರಾಗಿರುವರು.

ಹೀಗೆಯೇ ಬಲ್ಲಾಳ, ನರಸಿಂಹ, ಉದಯಾದಿತ್ಯ ಎಂಬ ಹೆಸರುಳ್ಳ ಅನೇಕ ಜನರು ಈ ಶಾಸನಗಳಲ್ಲಿ ಹೇಳಲ್ಪಟ್ಟಿರುವರು. ನಾಗಣದಂಡನಾಯಕನ ಮಗನಾದ ಒಬ್ಬ ನರಸಿಂಹದಂಡನಾಯಕನು ಗುಬ್ಬಿಯ ೧೧ ನೇ ಶಾಸನದಲ್ಲಿಯೂ, ಇವನಿಂದ ಭಿನ್ನನಾದ ಒಬ್ಬ ನರಸಿಂಹದಂಡನಾಯಕನು ಚಿಕ್ಕನಾಯಕನಹಳ್ಳಿಯ ೩೬ ನೇ ಶಾಸನದಲ್ಲಿಯೂ, ಮೇಲೆ (ಪುಟ ೧೪೨) ಹೇಳಿದ ಹುಳ್ಳದಂಡನಾಯಕನ ಪುತ್ರನಾದ ಒಬ್ಬ ನರಸಿಂಹದಂಡನಾಯಕನು ಚನ್ನರಾಯಪಟ್ಟಣದ ೧೪೬ ನೆಯ ಶಾಸನದಲ್ಲಿಯೂ, ನರಸಿಂಹ-ಹೊಯ್ಸಳನ ಮತ್ತು ವೀರಬಲ್ಲಾಳನ ಮಹಾಪ್ರಧಾನನಾದ ಶ್ರೀಕರಣದ ಬೂಚಿರಾಜನ ಮಗನಾದ ಒಬ್ಬ ನರಸಿಂಹನು ಹಾಸನದ ೭೧ ನೆಯ ಶಾಸನದಲ್ಲಿಯೂ, ಸಂಧಿವಿಗ್ರಹಿ ಮರಿಯಾನೆಯ ಮಗನಾದ ಒಬ್ಬ ನರಸಿಂಹನು ಚನ್ನರಾಯಪಟ್ಟಣದ ೨೨೧ ನೆಯ ಶಾಸನದಲ್ಲಿಯೂ ಮತ್ತು ಒಬ್ಬ ಮಂಡಲಿಕನರಸಿಂಹನು ಚನ್ನಗಿರಿ ೬೪ ನೆಯ ಶಾಸನದಲ್ಲಿಯೂ ಕೀರ್ತಿತರಾಗಿರುವರು. ಅಮಿತದಂಡನಾಯಕನ ಮಗನಾದ ಒಬ್ಬ ಬಲ್ಲಾಳ ದಂಡನಾಯಕನು ಚನ್ನರಾಯಪಟ್ಟಣದ ೧೯೭ ನೇ ಶಾಸನದಲ್ಲಿಯೂ, ಕೇಶವದಂಡನಾಯಕನ ಮಗನಾದ ಒಬ್ಬ ಬಲ್ಲಾಳ ದಂಡನಾಯಕನು ಅದೇ ತಾಲ್ಲೂಕಿನ ೨೪೪ ನೇ ಶಾಸನದಲ್ಲಿಯೂ, ರಾಮೆಯದಂಡನಾಯಕನ ಮಗನಾದ ಒಬ್ಬ ಬಲ್ಲಾಳದಂಡನಾಯಕನು ಚಿತ್ರದುರ್ಗದ ೪ ನೆಯ ಶಾಸನದಲ್ಲಿಯೂ ಪ್ರಸ್ತುತರಾಗಿರುವರು.

* ಆದುದರಿಂದ ಕವಿಚರಿತಕಾರರು (I. ೧೦೭ ರಲ್ಲಿ) ಅನುವದಿಸಿರುವ—

ಜನತಾನಂದಂ ಚಳುಕ್ಯಾಭರಣನವನಿಪಾಳೋತ್ತಮಂ ಸಾರ್ವಭೌಮಂ |
ಜನಕಂ ತ್ರೈಲೋಕ್ಯಮಲ್ಲಂ ಸಕಳವಸುಮತೀವಲ್ಲಭಂ ವಿಕ್ರಮಾಂಕಾ ||
ವನಿಪಂ ತಾನಗ್ರಜಾತಂ....

ಎಂಬ ಬ್ರಹ್ಮಶಿವಕವಿಯ ಸಮಯಪರೀಕ್ಷೆಯಲ್ಲಿನ ಪದ್ಯದಲ್ಲಿ ‘ ಜನತಾನಂದಂ ಚಳುಕ್ಯಾಭರಣನವನಿಪಾಳೋತ್ತಮಂ ಸಾರ್ವಭೌಮಂ ’ ಎಂಬಲ್ಲಿಗೆ ಒಂದು ವಾಕ್ಯವೆಂದೂ, ‘ ಜನಕಂ ತ್ರೈಲೋಕ್ಯಮಲ್ಲಂ ’ ಎಂಬುದೇ ಒಂದು ವಾಕ್ಯವೆಂದೂ, ನಾವು ತಿಳಿಯಬೇಕಾಗಿರುವುದು. ಮೊದಲನೆಯ ವಾಕ್ಯದಿಂದ ಈ ಕವಿಯು ಚಾಲುಕ್ಯಚಕ್ರವರ್ತಿಗಳ ರಾಷ್ಟ್ರದಲ್ಲಿ ವಾಸಮಾಡುತ್ತಿದ್ದನೆಂಬ (ಈ ಪದ್ಯಾಪೇಕ್ಷೆಯಿಲ್ಲದೆ ‘ ತ್ರೈಲೋಕ್ಯಮಲ್ಲ ’ ‘ ವಿಕ್ರಮಾಂಕ ’ ಎಂಬ ಹೆಸರುಗಳ ಆಧಾರಬಲದಿಂದಲೇ ನಾವು ಮೇಲೆ ನಿರ್ಧರಿಸಿರುವ) ಅಂಶವು ಉಕ್ತವಾಗಿರುವುದು.

ಚಾಲುಕ್ಯಚಕ್ರವರ್ತಿಯ ಕುಮಾರನಾದ ವಿಕ್ರಮಾದಿತ್ಯನ ಹೆಸರಿನಿಂದ ಕರೆಯಲ್ಪಟ್ಟನೆಂಬುದರಲ್ಲಿ ಕೂಡ ಯಾವ ಸಂದೇಹವೂ ಇಲ್ಲ. ತನ್ನ ತಮ್ಮಂದಿರಾದ ಜಯಸಿಂಹ ವಿಷ್ಣುವರ್ಧನ-ವಿಜಯಾದಿತ್ಯರಂತೆಯೂ ಮತ್ತು ತನ್ನ ಅಣ್ಣನಾದ ಸೋಮೇಶ್ವರನಂತೆಯೂ ಈ ಚಾಲುಕ್ಯ-ವಿಕ್ರಮಾದಿತ್ಯನೂ ಬನವಾಸೆ ೧೨೦೦೦ ಸೀಮೆಯನ್ನು ಕ್ರಿ. ಶ. ೧೦೫೫-೧೦೫೬ ರಲ್ಲಿ ಆಳುತ್ತಿದ್ದನೆಂದು ತಿಳಿಯಬರುವುದರಿಂದ (ಡಾ|| ಫ್ಲೀಟ್‌ರವರ ಗ್ರಂಥ; ಪುಟ ೪೪೦) ಆ ಕಾಲದಲ್ಲಿ ಇವನಿಗೆ ಸುಮಾರಾಗಿ ವಯಸ್ಸಾಗಿತ್ತೆಂದು ನಾವು ಊಹಿಸಬಹುದು. ಎಂದರೆ, ಕೀರ್ತಿವರ್ಮನ ತಂದೆಯಾದ ತ್ರೈಲೋಕ್ಯಮಲ್ಲನು ಕ್ರಿ. ಶ. ೧೦೫೫ ಕ್ಕಿಂತ ಕೆಲವು ವರ್ಷಗಳ ಹಿಂದೆಯೇ ತನ್ನ ಮಗನಿಗೆ ವಿಕ್ರಮಾದಿತ್ಯ ಎಂಬ ಹೆಸರನ್ನು ಇಟ್ಟಿರಬೇಕು. ಆದುದರಿಂದ 'ಪಾಲಭವಂದ್ಯ'ನಾದ ಈ ವಿಕ್ರಮಾದಿತ್ಯನೂ ಇವನ ತಮ್ಮನಾದ 'ಗೋವೈದ್ಯ'ವನ್ನು ಬರೆದ ಕೀರ್ತಿವರ್ಮನೂ ಕ್ರಿ. ಶ. ೧೦೫೫ ರಲ್ಲಿ ಇದ್ದಿರಬೇಕು.

ಈ ಕೀರ್ತಿವರ್ಮನು ಕ್ರಿ. ಶ. ಸುಮಾರು ೧೦೪೦ ರಲ್ಲಿ ಹುಟ್ಟಿ, ಸುಮಾರು ೧೧೧೦ ರ ವರೆಗೆ ಜೀವಿಸಿದ್ದನೆಂದು ನಾವು ಊಹಿಸುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವಷ್ಟೇನೂ ಇರಲಾರದು. ಆದುದರಿಂದ ಇವನು 'ಗೋವೈದ್ಯ'ವನ್ನು ಕ್ರಿ. ಶ. ಸುಮಾರು ೧೦೬೦-೧೦೮೫ ರಲ್ಲಿ ಎಂದರೆ ಚಾಲುಕ್ಯಚಕ್ರವರ್ತಿ ಸೋಮೇಶ್ವರ ತ್ರೈಲೋಕ್ಯಮಲ್ಲ-ಆಹವಮಲ್ಲನ ಆಳಿಕೆಯ ಅಂತ್ಯದಲ್ಲಿಯೋ, ಸೋಮೇಶ್ವರ ಭುವನೈಕಮಲ್ಲನ ಆಳಿಕೆಯಲ್ಲಿಯೋ ಅಥವಾ ವಿಕ್ರಮಾದಿತ್ಯ-ತ್ರಿಭುವನಮಲ್ಲನ ಆಳಿಕೆಯ ಪ್ರಥಮ ವರ್ಷಗಳಲ್ಲಿಯೋ ಬರೆದಿರಬೇಕು. ಇವನ ಕಾಲದಲ್ಲಿಯೇ ಜೀವಿಸುತ್ತಿದ್ದ ಬ್ರಹ್ಮಶಿವಕವಿಯು ತನ್ನ ಸಮಯಪರೀಕ್ಷೆಯಲ್ಲಿ ಸ್ತುತಿಸಿರುವ ಆಹವಮಲ್ಲ ಮಹೀಶನು ಚಾಲುಕ್ಯಚಕ್ರವರ್ತಿ ಸೋಮೇಶ್ವರ ತ್ರೈಲೋಕ್ಯಮಲ್ಲ-ಆಹವಮಲ್ಲನೇ ಆಗಿರಬಹುದಾದುದರಿಂದ ಇವನ ಆಳಿಕೆಯಲ್ಲಿಯೇ ಬ್ರಹ್ಮಶಿವನು ತನ್ನ ಗ್ರಂಥವನ್ನು ಬರೆದನೆಂದು ಕಾಣುವುದು. ಈ ಗ್ರಂಥದಲ್ಲಿ 'ಅರಸುಮಗಂ ಗಡ ಕವಿ ಗಡ | ಪಿರಿದೀವಂ ಗಡ ಬಳಿಕ್ಕೆ ಜೈನಂಗಡೆನಲ್ || ಧರಣಿಪತಿ ಕೀರ್ತಿವರ್ಮಂ...' ಎಂದು ಕೀರ್ತಿವರ್ಮನನ್ನು ಸ್ತುತಿಸಿರುವುದರಿಂದ, ಮೇಲೆ ಹೇಳಿದ ಆಹವಮಲ್ಲನ ಆಳಿಕೆಯಲ್ಲಿಯೇ ಇವನೂ ತನ್ನ ಗ್ರಂಥವನ್ನು ಬರೆದು ಕವಿಯೆಂದು ಪ್ರಸಿದ್ಧಿಯನ್ನು ಹೊಂದಿದ್ದಂತೆ ತೋರುವುದು. ಆದುದರಿಂದ ಈ ಕೀರ್ತಿವರ್ಮನು ಕ್ರಿ. ಶ. ಸುಮಾರು ೧೦೬೦-೧೦೬೫ ರಲ್ಲಿ ತನ್ನ ಗ್ರಂಥವನ್ನು ಬರೆದನೆಂದು ನಾವು ಹೇಳಬಹುದು.

೨೨. ಬ್ರಹ್ಮಶಿವ.

ಸಮಯಪರೀಕ್ಷೆಯೆಂಬ ಗ್ರಂಥವನ್ನು ಬರೆದಿರುವ ಈ ಕವಿಯನ್ನು ಕುರಿತು ಕವಿಚರಿತಕಾರರು—

"ಎರಡನೆಯ ಓಲೆಯಲ್ಲಿ 'ದಾನವಿನೋದ'ಯೆಂಬ ಬಿರುದುಳ್ಳ ಒಬ್ಬ ಅತ್ತಿಮಬ್ಬೆಯನ್ನೂ, 'ಜಿನಸಮಯವಾರ್ಧಿವರ್ಧನತಾರಾಪತಿ'ಯಾದ ಒಬ್ಬ ರಾಮುತರಾಯನನ್ನೂ, ಚಾಳುಕ್ಯರಾಜನಾದ ತ್ರೈಲೋಕ್ಯಮಲ್ಲನ ಮಗ ಕವಿಕೀರ್ತಿವರ್ಮನನ್ನೂ, ದೇವನಾಗನ ಮಗನಾದ ಆಹವಮಲ್ಲಮಹೀಶನನ್ನೂ ಸ್ತುತಿಸಿ ಗ್ರಂಥವನ್ನು ಆರಂಭಿಸಿದ್ದಾನೆ. ಇದರಿಂದ ಕವಿಗೆ ಕೀರ್ತಿವರ್ಮ, ಆಹವಮಲ್ಲ ಇವರು ಸಮಕಾಲದವರಾಗಿದ್ದಿರಬೇಕೆಂದು ತೋರುತ್ತದೆ."

ಎಂದು ಬರೆದು (ಕವಿಚರಿತೆ I, ೧೦೯) ತದನಂತರ,

'ಆದುದರಿಂದ ಈ ಕವಿ ಸುಮಾರು 1125 ರಲ್ಲಿದ್ದಿರಬಹುದು. ಇವನ ಗುರುವಾದ ವೀರಣಂದಿ ಮುನಿ 1115 ರಲ್ಲಿ ಗತಿಸಿದ (ಶ್ರ. ಬೆ. ಶಾಸನ 47) ಮೇಘಚಂದ್ರ ತ್ರೈವಿದ್ಯನ ಮಗನಾಗಿರಬಹುದು.'

ಎಂದು ಹೇಳಿದ್ದಾರೆ.

ಇದು ತಪ್ಪು. ಕವಿಯಿಂದ ಸ್ತುತನಾಗಿರುವ ಕವಿ ಕೀರ್ತಿವರ್ಮನು ಚಾಲುಕ್ಯ ಚಕ್ರವರ್ತಿಯಾದ ತ್ರೈಲೋಕ್ಯಮಲ್ಲನ ಮಗನಲ್ಲವೆಂದೂ, ತ್ರೈಲೋಕ್ಯಮಲ್ಲ ಎಂಬ ಹೆಸರಿನ ಯಾವನೋ ಒಬ್ಬ ಮಂಡಲಿಕನ ಮಗನೆಂದೂ ನಾವು ಮೇಲೆ (ಪುಟ ೨೦೫) ಹೇಳಿರುವೆವು. ಈ ಕವಿಯಿಂದ ಕೀರ್ತಿತನಾಗಿರುವ ಆಹವಮಲ್ಲಮಹೀಶನು ಪ್ರಾಯಶಃ ಚಾಲುಕ್ಯಚಕ್ರವರ್ತಿಯಾದ ತ್ರೈಲೋಕ್ಯಮಲ್ಲ-ಆಹವಮಲ್ಲನೇ ಎಂದೂ, ಇವನ ಆಳಿಕೆಯಲ್ಲಿ ಕ್ರಿ. ಶ. ಸುಮಾರು ೧೦೬೦-೧೦೬೫ ರಲ್ಲಿ ಕೀರ್ತಿವರ್ಮನು ತನ್ನ 'ಗೋವೈದ್ಯ' ವನ್ನು ಬರೆದನೆಂದೂ ಕೂಡ ನಾವು ಮೇಲೆಯೇ ಹೇಳಿರುವೆವು. ಆದುದರಿಂದ ಈ ಬ್ರಹ್ಮಶಿವನೂ ಕೂಡ ಕ್ರಿ. ಶ. ೧೦೬೦-೧೦೬೫ ಕ್ಕಿಂತ ಈಚೆಗೆ ಚಾಲುಕ್ಯಚಕ್ರವರ್ತಿ ತ್ರೈಲೋಕ್ಯಮಲ್ಲ-ಆಹವಮಲ್ಲನ ಆಳಿಕೆಯಲ್ಲಿ ಎಂದರೆ ಕ್ರಿ. ಶ. ೧೦೬೫-೧೦೬೮ ರಲ್ಲಿ ತನ್ನ ಗ್ರಂಥವನ್ನು ಬರೆದಿರಬೇಕು.†

---

† ಆದುದರಿಂದ ಈ ಬ್ರಹ್ಮಶಿವನ ಗುರುವಾದ ವೀರಣಂದಿಯು ಕ್ರಿ. ಶ. ೧೧೧೫ ರಲ್ಲಿ ಲೋಕಾಂತರವನ್ನೈದಿದನೆಂದು ಶ್ರ. ಬೆ. ೪೭ ನೇ ಶಾಸನದಲ್ಲಿ ಹೇಳಲ್ಪಟ್ಟಿರುವ ಮೇಘಚಂದ್ರನ ಶಿಷ್ಯನಲ್ಲವೆಂಬುದು ಮೇಲೆ ಹೇಳಿರುವುದರಿಂದ ಸ್ಪಷ್ಟವಾಗುವುದು.

೨೩. ಅಭಿನವಶ್ರುತಮುನಿ.

ಕವಿಚರಿತಕಾರರು ಇವನ ವಿಷಯವಾಗಿ ಹೀಗೆಂದು ಬರೆದಿದ್ದಾರೆ:—

"ಈತನು ಮಲ್ಲಿಷೇಣರಚಿತವಾದ ಸಜ್ಜನಚಿತ್ತವಲ್ಲಭಕ್ಕೆ ಕರ್ಣಾಟಕ ವ್ಯಾಖ್ಯಾನವನ್ನು ಬರೆದಂತೆ ತಿಳಿಯುತ್ತದೆ. ಮದರಾಸಿನಲ್ಲಿರುವ ಈ ಗ್ರಂಥದ ಒಂದು ಪ್ರತಿಯ ಕೊನೆಯಲ್ಲಿ - ಕರ್ಣಾಟಕ ವ್ಯಾಖ್ಯಾ—ಚಂದ್ರಕೀರ್ತಿಯಮಿನಶ್ಶಿಷ್ಯೇಣ ಪುಣ್ಯಾತ್ಮನಾ—ಎಂದು ಒಂದೆಡೆಯಲ್ಲಿಯೂ ಅಭಿನವ ಶ್ರುತಮುನಿನಾ ಕೃತಾ ಎಂದು ಮತ್ತೊಂದೆಡೆಯಲ್ಲಿಯೂ ಹೇಳಿದೆ. ಆ ಪ್ರತಿ ಶಕ 1439 ರಲ್ಲಿ ಬರೆದುದು. ಶ್ರವಣಬೆಳ್ಗೊಳದ 105 ನೆಯ ಶಾಸನದಲ್ಲಿ (1398) ಒಬ್ಬ ಅಭಿನವ ಶ್ರುತಮುನಿಯನ್ನು ವಿಶೇಷವಾಗಿ ಸ್ತುತಿಸಿದೆ. ಈತನೇ ಕವಿಯಾಗಿರಬಹುದು. ಮೇಲಣ ಶಾಸನವು ಹುಟ್ಟಿದ ಕಾಲಕ್ಕೆ ಸುಮಾರು ಒಂದೆರಡು ತಲೆ ಹಿಂದೆ ಈತನು ಇದ್ದಹಾಗೆ ಊಹಿಸುವುದಕ್ಕೆ ಕಾರಣವಿರುವುದರಿಂದ ಈತನು ಸುಮಾರು 1365 ರಲ್ಲಿ ಇದ್ದಿರಬಹುದೆಂದು ತೋರುತ್ತದೆ." (ಕವಿಚರಿತೆ, I. ೩೪೧-೩೪೨)

ಈ ಶ್ರವಣಬೆಳ್ಗೊಳದ ೧೦೫ ನೆಯ ಶಾಸನದ ಉಪಕ್ರಮದಲ್ಲಿ ಕೆಲವು ಗುರುಗಳನ್ನು ಹೊಗಳಿದನಂತರ—ಅಭಯಚಂದ್ರ; ಅವನ ಮಗ ಶ್ರುತಮುನಿ; ಅವನ ಪ್ರಶಿಷ್ಯ ಅಭಿನವಶ್ರುತಮುನಿ; ಅಭಯಚಂದ್ರನ ತಮ್ಮ ಶ್ರುತಕೀರ್ತಿ; ಅವನ ಮಗ ಚಾರುಕೀರ್ತಿ; ಅವನ ಶಿಷ್ಯ ಪಂಡಿತ; ಅವನ ಶಿಷ್ಯ ಅಭಿನವಪಂಡಿತ (೧೩೯೮ ರಲ್ಲಿ ಲೋಕಾಂತರವನ್ನೈದಿದನು) ಎಂದು ಇಷ್ಟು ಜನರು ಇಲ್ಲಿ ಹೊಗಳಲ್ಪಟ್ಟಿರುವರೆಂದು ಮ|| ಆರ್. ನರಸಿಂಹಾಚಾರ್ಯರು ತಾವು ಪ್ರಕಾಶಮಾಡಿರುವ "ಶ್ರವಣಬೆಳ್ಗೊಳದ ಶಾಸನ" ಗಳ ಎರಡನೆಯ ಮುದ್ರಣದ ಉಪೋದ್ಘಾತದಲ್ಲಿ (ಪುಟ ೮೭) ಹೇಳಿರುವರು. ಇದು ನಿಜವಾಗಿದ್ದ ಪಕ್ಷದಲ್ಲಿ, ಅಭಿನವಶ್ರುತಮುನಿಯು ೧೩೯೮ ರಲ್ಲಿ ಲೋಕಾಂತರವನ್ನೈದಿದ ಪಂಡಿತನಿಗಿಂತ ಒಂದು ತಲೆ ಈಚೆಯವನಾಗುವನೇ ಹೊರತು, ಅವನಿಗಿಂತ ಹಿಂದಿನವನಾಗುವುದಿಲ್ಲ. ಎಂದರೆ, ಈ ಅಭಿನವಶ್ರುತಮುನಿಯು ಕ್ರಿ. ಶ. ೧೩೯೮ ನೇ ವರ್ಷದಿಂದ ಈಚೆಗೆ ಜೀವಿಸಿರಬೇಕಾಗುವುದು.

ನಮಗಾದರೆ ಈ ಶಾಸನದಲ್ಲಿ ಕೆಲವು ಗುರುಗಳನ್ನು ಉಪಕ್ರಮದಲ್ಲಿ ಹೊಗಳಿದನಂತರ—ಅಭಯಚಂದ್ರ; ಅವನ ಶಿಷ್ಯ ಅಭಿನವಶ್ರುತಮುನಿ ಅಥವಾ ಶ್ರುತಮುನಿ; ಅವನ ಕಿರಿಯ ಸಧರ್ಮ ಶ್ರುತಕೀರ್ತಿ; ಅವನ ಮಗ ಚಾರುಕೀರ್ತಿ; ಅವನ ಶಿಷ್ಯ ಪಂಡಿತ; ಅವನ ಶಿಷ್ಯ ಅಭಿನವಪಂಡಿತ—ಎಂದು ಇಷ್ಟು ಜನರು ಇಲ್ಲಿ ಹೊಗಳಲ್ಪಟ್ಟಿರುವರೆಂದು ತೋರುವುದು. ಎಂದರೆ ಈ ಶಾಸನದಲ್ಲಿ ಹೊಗಳಲ್ಪಟ್ಟಿರುವ ಅಭಿನವಶ್ರುತಮುನಿಯು ಅಭಯಚಂದ್ರನ ಶಿಷ್ಯನೆಂದೂ ಸಜ್ಜನಚಿತ್ತವಲ್ಲಭ

ವ್ಯಾಖ್ಯಾಕಾರನಾದ ಚಂದ್ರಕೀರ್ತಿಮುನಿಶಿಷ್ಯನಾದ ಅಭಿನವಶ್ರುತಮುನಿಯಿಂದ ಭಿನ್ನನೆಂದೂ ನಮ್ಮ ಅಭಿಪ್ರಾಯ.

ನಂಜನಗೂಡು ತಾಲ್ಲೋಕು ಹುಲ್ಲುಹಳ್ಳಿಯಲ್ಲಿರುವ ಒಂದು ಶಾಸನದಲ್ಲಿ (ನಂಜನಗೂಡು ೬೪ ನೇ ಶಾಸನ)—

ನೂತ್ನಶ್ರುತಮುನಿ........ಬೌದ್ಧೌಘೋ........ ॥೮॥
ಶ್ರುತಮುನಿರಾಜ : ಸಶಿಷ್ಯಸಂಘ ಸ್ತಪಶ್ಚರಣ ವಿಹ........ ।
ತರಣಸಮುಪರ್ಯಂತ........ವಿಕಲೋಕಂ ಪುನಾನೋಸ್ಥಾತ್ ॥೯॥
ಶಾಕೇಬ್ದೇಽಥ ವಿರೋಧಿಕೃತ್ಸಮಭಿಧೇ ಪಾಥೋಧಿನಂದಾಂಶುಮತ್
ಸಂಖ್ಯೇ ಮಾಸಿ ಶುಚೌ ಸಿತಪ್ರತಿಪದಿ ಚಾಭ್ಯಯಾಸುತೇ ಯಾಮಕೇ ।
ಕೃತ್ವಾ ಪೂತವಿಳಾತಳಂ ಶ್ರುತಮುನಿಃ ಸನ್ಯಸ್ಯ ತೃಣ್ಯಾಪುರೇ
ಪ್ರೀತ್ಯಾರ್ಥೀ ಪರಮೇಷ್ಠಿಭಾವನಮನಾಃ ಪ್ರಾಪತ್ಪ್ರಶಸ್ತಾಂ ಗತಿಂ ॥೧೦॥
ದುರ್ಮುಖ್ಯಾಖ್ಯೆ ಶಕಾಬ್ದೇ ವಸುಮುನಿರವಿಸಂಖ್ಯಾಂಕಿತೇ ಮಾಸಿ ಚೈಷೇ
ಪಂಚಮ್ಯಾಂ ಭೌಮುವಾರೇ ನಿಶಿ ಲಸಿತರಮೇ ಪತ್ತನೇ ಕಲ್ಲೆಹಾಖ್ಯೇ ।
ಗ್ರಂಥಿಂ ಸನ್ಯಸ್ಯ ಸರ್ವಂ ಪರಮಗುರುಕುಲಂ ಭಾವಯನ್ನುದ್ಧಭಾವಃ
ಪ್ರಾಪ್ತೋ ದಿವ್ಯಾಂ ಗತಿಂ ಶ್ರೀ ಶ್ರುತಮುನಿತನಯಶ್ಚಂದ್ರಕೀರ್ತಿವ್ರತೀಂದ್ರಃ ॥೧೧॥
ತದ್ಭಕ್ತಿಯುಕ್ತಿಭವಿಕಾ ಜಯಕೀರ್ತಿದೇವಸೂರೀಶ್ವರ ಶ್ರುತಮುನಿಪ್ರಮುಖಾ........
ಸುಶ್ರಾವಣಾಶ್ಚ ಪುರುಷೋತ್ತಮರಾಜ ಕಾಮಶ್ರೇಷ್ಠ್ಯಾದಯೋ ಭುವಿ ಚರಂತು ಚಿರಂ
ಸುಭವ್ಯಾಃ ॥೧೨॥

ಎಂಬ ನೂತ್ನಶ್ರುತಮುನಿಯ ಹೆಸರನ್ನು ಹೇಳುವ ಕೆಲವು ಶ್ಲೋಕಗಳು ದೊರೆಯುವುವು.

ಇಲ್ಲಿ ೮, ೯ ನೇ ಶ್ಲೋಕಗಳಲ್ಲಿ ನೂತ್ನಶ್ರುತಮುನಿ ಅಥವಾ ಶ್ರುತಮುನಿಯನ್ನು ಹೊಗಳಿ, ೧೦ ನೇ ಶ್ಲೋಕದಲ್ಲಿ ಈ ಶ್ರುತಮುನಿಯು ಶಕವರ್ಷ ೧೨೯೪ ನೆಯ ವಿರೋಧಿಕೃತ್ಸಂವತ್ಸರದ ಶುಚಿ (ಎಂದರೆ, ಆಷಾಢ) ಮಾಸದ ಶುದ್ಧ ಪಾಡ್ಯ ಶನಿವಾರ ಪುನರ್ವಸು ನಕ್ಷತ್ರದಲ್ಲಿ, ಎಂದರೆ ಕ್ರಿ. ಶ. ೧೩೭೧ ನೆಯ ವರ್ಷದ ಜೂನ್ ೧೪ ನೇ ಶನಿವಾರದಂದು*, ಸನ್ಯಸನಮಾಡಿ ಹುಲ್ಲುಹಳ್ಳಿಯಲ್ಲಿ ಮುಡಿಪಿದನೆಂದು ಹೇಳಿ, ತದನಂತರ ೧೧ ನೇ ಶ್ಲೋಕದಲ್ಲಿ ಶ್ರುತಮುನಿಯ ಶಿಷ್ಯನಾದ ಚಂದ್ರಕೀರ್ತಿಮುನಿಯು ಶಕವರ್ಷ ೧೨೯೮ ನೆಯ ದುರ್ಮುಖಿಸಂವತ್ಸರದ ಆಶ್ವೀಜಮಾಸದ ಪಂಚಮಿಾ ಕುಜವಾರದಂದು (ಎಂದರೆ, ಪ್ರಾಯಶಃ ಕ್ರಿ. ಶ. ೧೩೭೬ ನೆಯ

* ಈ ಶನಿವಾರದಂದು ಶಕವರ್ಷ ೧೨೯೪ ನೆಯ ವಿರೋಧಿಕೃತ್ಸಂವತ್ಸರದ ಆಷಾಢಮಾಸದ ಶುದ್ಧ ಪಾಡ್ಯವು ಲಂಕೋದಯಾತ್ಪರ ೩೧ ಘಳಿಗೆ ೪ ವಿ. ವರೆಗೆ ವ್ಯಾಪಿಸಿತ್ತು. ಪುನರ್ವಸು ನಕ್ಷತ್ರವೂ ಕೂಡ ಈ ದಿವಸ ಲಂಕೋದಯಾತ್ಪರ ೪೬ ಘಳಿಗೆ ೯ ವಿ. ವರೆಗೆ ವ್ಯಾಪಿಸಿತ್ತು.

ಸೆಪ್ಟೆಂಬರ್ ೧೯ ನೇ ಮಂಗಳವಾರದಂದು*) ಕಲ್ಲೆಹದಲ್ಲಿ ಲೋಕಾಂತರವನ್ನೈದಿದನೆಂದು ಹೇಳಿ, ತದನಂತರ ೧೨ ನೆಯ ಶ್ಲೋಕದಲ್ಲಿ ಈ ಚಂದ್ರಕೀರ್ತಿಮುನಿಯ ಶಿಷ್ಯರಾದ ಜಯಕೀರ್ತಿ, ದೇವಸೂರಿ, ಶ್ರುತಮುನಿಗಳೂ, ಅವನ 'ಶ್ರಾವಣ' (ಎಂದರೆ ಗುಡ್ಡ) ರಾದ ಪುರುಷೋತ್ತಮರಾಜ ಕಾಮಶೆಟ್ಟಿಗಳೂ ಕೀರ್ತಿತರಾಗಿರುವರು.

ಕ್ರಿ. ಶ. ೧೩೫೭ ರಲ್ಲಿ ಲೋಕಾಂತರವನ್ನೈದಿದ ಚಂದ್ರಕೀರ್ತಿಯು ಶ್ರುತಮುನಿಯ ಶಿಷ್ಯನೆಂದು ೧೧ ನೇ ಶ್ಲೋಕದಲ್ಲಿ ಹೇಳಿ, ಈ ಚಂದ್ರಕೀರ್ತಿಯ ಶಿಷ್ಯರಲ್ಲಿ ಶ್ರುತಮುನಿಯೆಂಬ ಹೆಸರಿನವನು ಒಬ್ಬನಿದ್ದನೆಂದು ೧೨ ನೆಯ ಶ್ಲೋಕದಲ್ಲಿ ಹೇಳಲ್ಪಟ್ಟಿರುವುದರಿಂದ ಈ ಎರಡನೇ ಶ್ರುತಮುನಿಗೆ ನೂತ್ನಶ್ರುತಮುನಿ ಎಂಬ ಹೆಸರಿದ್ದಂತೆಯೂ ಇವನೇ ಮೇಲೆ ಹೇಳಿರುವ ೮, ೯ ನೇ ಶ್ಲೋಕಗಳಲ್ಲಿ ಕೀರ್ತಿಸಲ್ಪಟ್ಟಿರುವಂತೆಯೂ ತೋರುವುದು. ಈ ನೂತ್ನ ಶ್ರುತಮುನಿಯು ಕ್ರಿ. ಶ. ೧೩೭೧ ನೇ ವರ್ಷದ ಜೂನ್ ೧೪ ನೇ ಶನಿವಾರದಂದು ಲೋಕಾಂತರವನ್ನೈದಿದನೆಂದು ೧೦ ನೇ ಶ್ಲೋಕದಲ್ಲಿ ಹೇಳಿರುವುದು.

ಮೇಲೆ ಹೇಳಿದ ೧೨ ನೇ ಶ್ಲೋಕದನಂತರ ಈ ಶಾಸನದಲ್ಲಿ "ಶ್ರೀ ಶ್ರುತಮುನೀಶ್ವರರ ಶಿಷ್ಯರು | ಮಾಘನಂದಿಸಿದ್ಧಾಂತದೇವರು |...ಶ್ರುತಕೀರ್ತಿದೇವರು | ಮುನಿಚಂದ್ರದೇವರು | ಬಾಹುಬಲಿದೇವರು |...ಪಾರ್ಶ್ವದೇವರು | ಜಿನಚಂದ್ರದೇವರು | ಸನ್ನಸನಸಮಾಧಿಯಿಂ...ಗತಿಯನ್ನೈಯ್ದಿದರು" ಎಂಬ ಒಂದು ವಾಕ್ಯದಲ್ಲಿ ಹೇಳಲ್ಪಟ್ಟಿರುವ ಮಾಘನಂದಿಸಿದ್ಧಾಂತದೇವನೇ ಮೊದಲಾದವರು ಈ ನೂತ್ನಶ್ರುತಮುನಿಯ ಶಿಷ್ಯರಾಗಿದ್ದರೆಂದು ತೋರುವುದು.

ಈ ಶಾಸನದಲ್ಲಿ ಕೀರ್ತಿಸಲ್ಪಟ್ಟಿರುವ ಶ್ರುತಮುನಿಯ ಶಿಷ್ಯನಾದ ಚಂದ್ರಕೀರ್ತಿಮುನಿಯ ಶಿಷ್ಯನಾದ ಶ್ರುತಮುನಿ ಅಥವಾ ನೂತ್ನಶ್ರುತಮುನಿಯೇ † ಸಜ್ಜನಚಿತ್ತ

---

* ಶಕವರ್ಷ ೧೨೭೮ ನೆಯ ದುರ್ಮುಖಿವರ್ಷವು ಕ್ರಿ. ಶ. ೧೨೫೬-೫೭ ಆಗುವುದು. ಈ ವರ್ಷದ ಆಶ್ವೀಜಮಾಸದ ಶುದ್ಧ ಪಂಚಮಿಯಾಗಲಿ ಬಹುಳ ಪಂಚಮಿಯಾಗಲಿ ಮಂಗಳವಾರದೊಡನೆ ಸಂಬದ್ಧವಾಗಿರಲಿಲ್ಲ. ಇದರ ಮುಂದಿನ ವರ್ಷದಲ್ಲಾದರೆ (ನನ್ನ ಪೂರ್ವನಿರ್ದಿಷ್ಟ ಪುಸ್ತಕದ ೨೭-೩೧ ನೇ ಪುಟಗಳನ್ನು ನೋಡಿ) ಆಶ್ವೀಜ ಶುದ್ಧ ಪಂಚಮಿಯು ಕ್ರಿ. ಶ. ೧೩೫೭ ನೇ ಸೆಪ್ಟೆಂಬರ್ ೧೯ ನೆಯ ಮಂಗಳವಾರ ಲಂಕೋದಯಾತ್ಪರ ೧೨ ಘಳಿಗೆ ೨೨ ವಿ. ವರೆಗೆ ವ್ಯಾಪಿಸಿತ್ತು. ಆದುದರಿಂದ ಶಾಸನದಲ್ಲಿ ನಿರ್ದಿಷ್ಟವಾದ ದಿವಸವು ಈ ಮಂಗಳವಾರವೇ ಆಗಿರಬಹುದು.

† ಈ ಶಾಸನದಲ್ಲಿ ಕೀರ್ತಿತರಾದ ಗುರುಗಳೆಲ್ಲರೂ ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಇಂಗಳೇಶ್ವರದ ಬಳಿಗೆ ಸೇರಿದವರೆಂದು ಶಾಸನದಿಂದ ವ್ಯಕ್ತವಾಗುವುದು. ಶ್ರ. ಬೆ. ೧೦೫ ನೇ ಶಾಸನದಲ್ಲಿ ಕೀರ್ತಿತರಾದ ಗುರುಗಳೂ ಇದೇ ಇಂಗಳೇಶ್ವರ ಬಳಿಯವರೇ.

ವಲ್ಲಭವ್ಯಾಖ್ಯಾಕಾರನೂ ಚಂದ್ರಕೀರ್ತಿಮುನಿಶಿಷ್ಯನೂ ಆದ ಅಭಿನವಶ್ರುತಮುನಿಯೆಂದು ನಮಗೆ ತೋರುವುದು. ಇವನು ಕ್ರಿ. ಶ. ೧೩೭೧ ರಲ್ಲಿ ಲೋಕಾಂತರವನ್ನೈದಿದುದರಿಂದ ಅದಕ್ಕಿಂತ ಪೂರ್ವದಲ್ಲಿಯೇ ಸಜ್ಜನಚಿತ್ತವಲ್ಲಭವ್ಯಾಖ್ಯೆಯನ್ನು ಬರೆದಿರಬೇಕು. ಆ ವ್ಯಾಖ್ಯಾನವನ್ನು ಸುಮಾರು ೨೦-೩೦ ವರ್ಷ ಹಿಂದೆ, ಎಂದರೆ ಕ್ರಿ. ಶ. ೧೩೪೧-೧೩೫೧ ರಲ್ಲಿ ಬರೆದಿರಬಹುದು.

---

೨೪. ವೃತ್ತವಿಲಾಸ.

ಇವನು ಧರ್ಮಪರೀಕ್ಷೆಯನ್ನು ಬರೆದಿದ್ದಾನೆ. ಈ ಕವಿಯ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

" ಈತನು ಜೈನಕವಿ ; ತನ್ನ ವಿಷಯವಾಗಿ ಗ್ರಂಥದಲ್ಲಿ ಏನೂ ಹೇಳಿಕೊಂಡಿಲ್ಲ. ಇವನ ಕಾಲವನ್ನು ನಿರ್ಣಯಿಸುವುದಕ್ಕೆ ಸರಿಯಾದ ಆಧಾರವಿಲ್ಲ ; ಇವನು ಸ್ತುತಿಸಿರುವ ಜೈನಗುರುಗಳಿಂದ ಇವನ ಕಾಲವನ್ನು ಊಹಿಸಬೇಕಾಗಿದೆ. ಶುಭಕೀರ್ತಿವ್ರತಿ, ಸೈದ್ಧಾಂತಿಕ ಮಾಘಣಂದಿಯತಿ, ಭಾನುಕೀರ್ತಿಯತಿ, ಧರ್ಮಭೂಷಣ, ಅವನ ಮಗ ಮತ್ತು ಶಿಷ್ಯ ಅಮರಕೀರ್ತಿ (ಕವಿಯ ಗುರು), ಅಭಯಸೂರಿವಾದೀಶ್ವರ, ಇವರುಗಳನ್ನು ಸ್ತುತಿಸಿದ್ದಾನೆ.

ಒಬ್ಬ ಅಭಯಸೂರಿ, ಹೊಯ್ಸಳರಾಜನಾದ 1 ನೆಯ ಬಲ್ಲಾಳನ (1100-1106) ಆಳಿಕೆಯಲ್ಲಿ ಚಾರುಕೀರ್ತಿಗೆ ಸಮಕಾಲದವನಾಗಿ ಇದ್ದಂತೆ ತಿಳಿಯುತ್ತದೆ (ಶ್ರ. ಬೆ. ಶಾ. 254). 1115 ರಲ್ಲಿ ಗತಿಸಿದ ಮೇಘಚಂದ್ರನ (ಶ್ರ. ಬೆ. ಶಾ. 127) ಸಮಕಾಲದವನಾದ ಒಬ್ಬ ಶುಭಕೀರ್ತಿ ಇದ್ದನು (ಶ್ರ. ಬೆ. ಶಾ. 140). 1176 ರಲ್ಲಿ ಗತಿಸಿದ ನಯಕೀರ್ತಿಗೆ (ಶ್ರ. ಬೆ. ಶಾ. 66) ಮಾಘಣಂದಿ, ಭಾನುಕೀರ್ತಿ ಎಂಬ ಶಿಷ್ಯರುಂಟು (ಶ್ರ. ಬೆ. ಶಾ. 327). ಇವರ ಕಾಲವು ಸುಮಾರು 1150 ಆಗಬಹುದು. ಶ್ರವಣಬೆಳ್ಗೊಳದ 274 ನೆಯ ಶಾಸನದಲ್ಲಿ ಧರ್ಮಭೂಷಣನೆಂಬ ಒಬ್ಬ ಜೈನಗುರುವೂ ಅವನ ಶಿಷ್ಯನಾದ ಒಬ್ಬ ಅಮಲಕೀರ್ತಿಯೂ ಹೇಳಲ್ಪಟ್ಟಿದ್ದಾರೆ. ಈ ಅಮಲಕೀರ್ತಿ ಕವಿಯ ಗುರುವಾಗಿರಬಹುದೆಂಬ ಸಂದೇಹವುಂಟಾಗುತ್ತದೆ. ಆದರೆ ಕವಿಯ ಗುರು ಅಮರಕೀರ್ತಿ ಎಂಬುದರಿಂದ ಈತನು ತದ್ಭಿನ್ನನೆಂದು ತೋರುತ್ತದೆ. ಅಲ್ಲದೆ ಅಮಲಕೀರ್ತಿಯ ಕಾಲವು ಈ ಶಾಸನದ ಪ್ರಕಾರ ಸುಮಾರು 1350 ಆಗುತ್ತದೆ. ಕವಿ ಅಷ್ಟು ಈಚೆಯವನು ಬೇರೆ ಅಲ್ಲ. ಇವನು ಸುಮಾರು 1160 ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ." (ಕವಿಚರಿತೆ, ೧ನೇ ಸಂಪುಟದ ೨ನೇ ಮುದ್ರಣ, ಪುಟ ೧೬೯.)

ಇದರಲ್ಲಿ ಹಲವು ತಪ್ಪುಗಳಿವೆ:—

೧. ಮೇಲೆ ಹೇಳಿರುವ ಶ್ರವಣಬೆಳ್ಗೊಳದ ೨೭೪ ನೆಯ ಶಾಸನದಲ್ಲಿ ಸ್ತುತನಾಗಿರುವ ಧರ್ಮಭೂಷಣನ ಶಿಷ್ಯನ ಹೆಸರು ' ಅಮರಕೀರ್ತಿ 'ಯೆಂದೇ ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರಿಂದ ಪ್ರಕಾಶಿತವಾದ " ಶ್ರವಣಬೆಳ್ಗೊಳದ ಶಾಸನ "ಗಳ ಎರಡನೆಯ ಮುದ್ರಣದಲ್ಲಿ (ರೋಮನ್ ಅಕ್ಷರಗಳಲ್ಲಿ ಮುದ್ರಿತವಾದ ಮತ್ತು ಕನ್ನಡ ಅಕ್ಷರಗಳಲ್ಲಿ ಮುದ್ರಿತವಾದ ಎರಡು ಪಾಠಗಳಲ್ಲಿಯೂ) ಕೊಡಲ್ಪಟ್ಟಿರುವುದು. ಕವಿಚರಿತಕಾರರು ಹೇಳಿರುವಂತೆ ' ಅಮಲಕೀರ್ತಿ ' ಎಂಬ ಹೆಸರು ಈ ಶಾಸನದಲ್ಲಿಲ್ಲ.

೨. ಧರ್ಮಪರೀಕ್ಷೆಯ ಗ್ರಂಥಾವತಾರದಲ್ಲಿರುವ—

ಸಾರತರಸಕಳತತ್ತ್ವವಿ | ಚಾರಪರರ್ ಮೂಲಸಂಘದೊಳ್ ನೆಗಳ್ದ ಬಲಾ ||
ತ್ಕಾರಗಣತಿಲಕರಘಚಯ | ದೂರರ್ ಶುಭಕೀರ್ತಿರಾಉಳವ್ರತಿನಾಥರ್ ||

ಎಂಬ ಶುಭಕೀರ್ತಿವ್ರತಿಯನ್ನು ಸ್ತುತಿಸುವ ಪದ್ಯದಲ್ಲಿ (ಧರ್ಮಪರೀಕ್ಷೆ ೧, ೧೬) ಇವನು ಮೂಲಸಂಘದ ಬಲಾತ್ಕಾರಗಣಕ್ಕೆ ಸೇರಿದವನೆಂದು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರುವುದು. ಆದುದರಿಂದ ಇವನನಂತರ ಸ್ತುತಿಸಲ್ಪಟ್ಟಿರುವ ಮಾಘಣಂದಿ, ಭಾನುಕೀರ್ತಿ, ಧರ್ಮಭೂಷಣ, ಅಮರಕೀರ್ತಿಗಳೂ ಇದೇ ಬಲಾತ್ಕಾರಸಂಘಕ್ಕೆ ಸೇರಿದವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಕವಿಚರಿತಕಾರರು ಹೇಳಿರುವ ಶ್ರ. ಬೆ. ೧೨೬ (ಹಳೇ ನಂಬರು ೪೭) ನೆಯ ಶಾಸನದಲ್ಲಿಯೂ, ೧೪೦ (ಹಳೇ ನಂಬರು ೫೦) ನೆಯ ಶಾಸನಲ್ಲಿಯೂ ಸ್ತುತನಾಗಿರುವ ಮೇಘಚಂದ್ರನು ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛಕ್ಕೆ ಸೇರಿದವನೆಂದು ನಾವು ಮೇಲೆಯೇ (ಪುಟ ೩೫) ನಿರೂಪಿಸಿರುವೆವು. ಆದುದರಿಂದ ಇವನ ಸಧರ್ಮನಾದ (ಶ್ರ. ಬೆ. ೫೦ ಅಥವಾ ೧೪೦) ಶುಭಕೀರ್ತಿಯೂ ದೇಶೀಯಗಣದ ಪುಸ್ತಕಗಚ್ಛದವನೆಂಬುದು ಸ್ಪಷ್ಟವಾಗಿರುವುದು.

ಹೀಗೆಯೇ ಶ್ರ. ಬೆ. ೩೨೭ (ಹಳೇ ನಂಬರು ೧೨೪) ನೆಯ ಶಾಸನದಲ್ಲಿಯೂ, ೬೬ (ಹಳೇ ನಂಬರು ೪೨) ನೆಯ ಶಾಸನದಲ್ಲಿಯೂ ಸ್ತುತರಾಗಿರುವ ನಯಕೀರ್ತಿಯೂ, ಅವನ ಶಿಷ್ಯರು ಮಾಘಣಂದಿ ಭಾನುಕೀರ್ತಿಗಳೂ ದೇಶೀಯಗಣ ಪುಸ್ತಕಗಚ್ಛಕ್ಕೆ ಸೇರಿದವರೆಂದು ಆಯಾ ಶಾಸನಗಳಿಂದಲೇ ಸ್ಪಷ್ಟವಾಗುವುದು (ಮೇಲೆ ೩೭ ನೆಯ ಪುಟವನ್ನು ನೋಡಿ).

ಆದುದರಿಂದ ಕವಿಚರಿತಕಾರರಿಂದ ಹೇಳಲ್ಪಟ್ಟ ದೇಶೀಯಗಣದ ಪುಸ್ತಕಗಚ್ಛಕ್ಕೆ ಸೇರಿದ ಈ ಶುಭಕೀರ್ತಿ, ಮಾಘಣಂದಿ, ಭಾನುಕೀರ್ತಿಗಳು ಧರ್ಮಪರೀಕ್ಷೆಯಲ್ಲಿ ಸ್ತುತರಾಗಿರುವ ಬಲಾತ್ಕಾರಗಣದ ಶುಭಕೀರ್ತಿ, ಮಾಘಣಂದಿ, ಭಾನುಕೀರ್ತಿಗಳಲ್ಲವೆಂಬುದು ಸ್ವತಃ ಸಿದ್ಧವಾಗಿರುವುದು.

ನಾವು ನೋಡಿದ ಧರ್ಮಪರೀಕ್ಷೆಯ ಒಂದು ಪ್ರತಿಯಲ್ಲಿ* ಕೇವಲಿಗಳಿಂದ ಪ್ರಾರಂಭಿಸಿ ಜಿನಸೇನ ವೀರಸೇನರನ್ನು ಸ್ತುತಿಸಿದನಂತರ, ಬಲಾತ್ಕಾರಗಣದ ಶುಭಕೀರ್ತಿ, ಸೈದ್ಧಾಂತಿಕ ಮಾಘಣಂದಿ, ಭಾನುಕೀರ್ತಿ-ಮಲಧಾರಿ, ಧರ್ಮಭೂಷಣ, ಅಮರಕೀರ್ತಿ, ಹೇಮದೇವ, ಅಭಯಸೂರಿವಾದೀಶ್ವರ ಮತ್ತು ಚಿಕ್ಕಹೇಮದೇವ—ಎಂದು ಇಷ್ಟು ಜೈನಗುರುಗಳು ಗ್ರಂಥಾವತಾರದಲ್ಲಿ ಸ್ತುತರಾಗಿರುವರು. ಈ ಪುಸ್ತ

---

* ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ಎ ೪೭ ನೇ ನಂಬರಿನ ಲಿಖಿತಪುಸ್ತಕ. ಕವಿಚರಿತಕಾರರು ನೋಡಿರುವ ಪ್ರತಿಯು ಪ್ರಾಯಶಃ ಇದೇಯೆ. ಇದರಲ್ಲಿ (ಕವಿಚರಿತಕಾರರು ಹೇಳಿರುವಂತೆ) 'ಮುನಿವಲ್ಲಭ' ಎಂಬ ಹೆಸರುಳ್ಳ ಜೈನಗುರುವಿನ ಸ್ತುತಿ ಇಲ್ಲ.

ಕದ ಇನ್ನೊಂದು ಪ್ರತಿಯಲ್ಲಾದರೆ* ಬಲಾತ್ಕಾರಗಣದ ಕೇಶವೇಂದುವ್ರತಿ, ಅವನ ಮಗ ಚಾರುಕೀರ್ತಿ, ಅಭಯಕೀರ್ತಿ, ವಸಂತಕೀರ್ತಿ, ವಿಶಾಲಕೀರ್ತಿ, ಕುಮುದಚಂದ್ರ, ಸೈದ್ಧಾಂತಿಕಮಾಘಣಂದಿ, ಶುಭಕೀರ್ತಿ, ಧರ್ಮಭೂಷಣ, ಅಮರಕೀರ್ತಿ, ಭಾನುಕೀರ್ತಿ-ಮಲಧಾರಿ, ಹೇಮನಂದಿ, ಅಭಯಸೂರಿವಾದೀಶ್ವರ, ಚಿಕ್ಕಹೇಮದೇವ—ಎಂದು ಇಷ್ಟು ಜನ ಜೈನಗುರುಗಳು ಸ್ತುತರಾಗಿರುವರು. ಈ ಗುರುಗಳನ್ನು ಸ್ತುತಿಸುವ ಪದ್ಯಗಳ ಆನುಪೂರ್ವಿಯಲ್ಲಾದರೆ ಕೆಲವು ತಪ್ಪುಗಳಿರುವುವೆಂಬುದು ಸ್ಪಷ್ಟವಾಗಿರುವುದು.†

ಕವಿಚರಿತಕಾರರಿಂದ ಹೇಳಲ್ಪಟ್ಟ ಶ್ರವಣಬೆಳ್ಗೊಳದ ೨೭೪ (ಹಳೇ ನಂಬರು ೧೧೧) ನೇ ಶಾಸನದಲ್ಲಿ ಬಲಾತ್ಕಾರಗಣದ [ವಸಂ]ತಕೀರ್ತಿ ದೇವ, ಅವನ ಶಿಷ್ಯ ವಿಶಾಲಕೀರ್ತಿದೇವ; ಅವನ ಶಿಷ್ಯ ಶುಭಕೀರ್ತಿದೇವ; ಅವನ ಶಿಷ್ಯ ಧರ್ಮಭೂಷಣ; ಅವನ ಶಿಷ್ಯ ಅಮರಕೀರ್ತಿ; ಅವನ ಶಿಷ್ಯ ಧರ್ಮಭೂಷಣ‡—ಎಂದು ಇಷ್ಟು ಜನ ಗುರುಗಳನ್ನು ಕೀರ್ತಿಸಿ, ತದನಂತರ ಕೊನೆಯಲ್ಲಿ ಹೇಳಲ್ಪಟ್ಟ ಧರ್ಮಭೂಷಣ ಭಟ್ಟಾರಕನ (ನಿಷಿದಿಗೆಯನ್ನು ?) ಅವನ ಶಿಷ್ಯನಾದ ವರ್ಧಮಾನಯತಿಯು ಶಕ ವರ್ಷದ ೧೨೯೫ ನೆಯ ಪರಿಧಾವಿಸಂವತ್ಸರದ ವೈಶಾಖ ಶುದ್ಧ ೩ ಬುಧವಾರದಲ್ಲಿ (ಎಂದರೆ, ಕ್ರಿ. ಶ. ೧೩೭೩ ನೇ ವರ್ಷದ ಮೇ ೨೫ ನೆಯ ಬುಧವಾರದಂದು) ಮಾಡಿಸಿದನೆಂದು ಹೇಳಲ್ಪಟ್ಟಿರುವುದು. ಈ ಶಾಸನದಲ್ಲಿರುವ ಬಲಾತ್ಕಾರಗಣದ ಗುರುಪರಂಪರೆಯನ್ನು ಮೇಲೆ ಕೊಟ್ಟಿರುವ ಧರ್ಮಪರೀಕ್ಷೆಯಲ್ಲಿನ ಬಲಾತ್ಕಾರಗಣದ

* ಮಾತೃಕೆ ನಂ. ೨೩. ಈ ಮಾತೃಕೆಯಲ್ಲಿನ ಪಾಠಾಂತರಗಳು ಮೇಲೆ ಹೇಳಲ್ಪಟ್ಟ ೬೪೭ ನೇ ನಂಬರಿನ ಲಿಖಿತಪುಸ್ತಕದಲ್ಲಿ ಸಂಯೋಜಿಸಲ್ಪಟ್ಟಿರುವುವು.

† ಇಲ್ಲಿ ಸ್ತುತರಾಗಿರುವ ಬಲಾತ್ಕಾರಗಣದ ಸೈದ್ಧಾಂತಿಕಮಾಘಣಂದಿ, ಕುಮುದಚಂದ್ರರು ನಾವು ಮೇಲೆ (ಪುಟ ೬೩) ವಿಚಾರಮಾಡಿರುವ ಬಲಾತ್ಕಾರಗಣದ ಮಾಘಣಂದಿ, ಕುಮುದಚಂದ್ರರೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಮಾಘನಂದಿಯ ಗುರುಪರಂಪರೆಯಲ್ಲಾದರೆ ವಸಂತಕೀರ್ತಿ, ವಿಶಾಲಕೀರ್ತಿ, ಇತ್ಯಾದಿ ಹೆಸರುಗಳು ದೊರೆಯುವುದಿಲ್ಲ (ಮೇಲೆ ೫೭ ನೇ ಪುಟವನ್ನು ನೋಡಿ.) ವಾದುದರಿಂದ ಈ ಮಾಘನಂದಿ ಕುಮುದಚಂದ್ರರನ್ನು ಸ್ತುತಿಸುವ ಪದ್ಯಗಳು ಕೇಶವೇಂದು, ವಿಶಾಲಕೀರ್ತಿ ಇತ್ಯಾದಿಗಳನ್ನು ಸ್ತುತಿಸುವ ಪದ್ಯಗಳ ಹಿಂದೆ ಇರಬೇಕೆಂಬುದು ಸ್ಪಷ್ಟ.

‡ ಹೀಗೆಂದು (ಎಂದರೆ ಧರ್ಮಭೂಷಣ ಎಂಬ ಹೆಸರಿನ ಇಬ್ಬರು ಗುರುಗಳು ಈ ಶಾಸನದಲ್ಲಿ ಕೀರ್ತಿತರಾಗಿರುವರೆಂದು) ಮ|| ಆರ್. ನರಸಿಂಹಾಚಾರ್ಯರು ("ಶ್ರವಣಬೆಳ್ಗೊಳದ ಶಾಸನ"ಗಳ ಎರಡನೇ ಮುದ್ರಣದಲ್ಲಿರುವ ಆಂಗ್ಲ ಅನುವಾದದಲ್ಲಿ) ಅರ್ಥಮಾಡಿರುವರು. ಈ ಸ್ಥಳದಲ್ಲಿ ಅನೇಕ ಅಕ್ಷರಗಳು ಗಳಿತಗಳಾಗಿರುವುದರಿಂದ ಅವರು ಮಾಡಿರುವ ಅರ್ಥವು ಸರಿಯೋ ಅಥವಾ ಧರ್ಮಭೂಷಣ ಎಂಬ ಒಬ್ಬ ಗುರುವಿನ ಹೆಸರೇ ಎರಡು ಸಲ ಈ ಶಾಸನದಲ್ಲಿ ಹೇಳಲ್ಪಟ್ಟಿದೆಯೋ ಎಂಬದನ್ನು ಗೊತ್ತುಮಾಡಲು ಆಗುವುದಿಲ್ಲವಾಗಿದೆ.

ಗುರುಪರಂಪರೆಯೊಡನೆ ಹೋಲಿಸಿ ನೋಡಿದಲ್ಲಿ, ಈ ಶಾಸನದಲ್ಲಿ ಕೀರ್ತಿತರಾಗಿರುವ ವಸಂತಕೀರ್ತಿ, ವಿಶಾಲಕೀರ್ತಿ, ಶುಭಕೀರ್ತಿ*, ಧರ್ಮಭೂಷಣ, ಅಮರಕೀರ್ತಿಗಳೇ ಧರ್ಮಪರೀಕ್ಷೆಯಲ್ಲಿಯೂ ಕೀರ್ತಿತರಾಗಿರುವರೆಂಬ ಅಂಶವು ವ್ಯಕ್ತವಾಗಿ ಹೊರಪಡುವುದು. ಆದುದರಿಂದ ವೃತ್ತವಿಲಾಸನು ಸುಮಾರು ಕ್ರಿ. ಶ. ೧೩೭೩ ರಲ್ಲಿ ಲೋಕಾಂತರವನ್ನೈದಿದ ಧರ್ಮಭೂಷಣನ ಗುರುವಾದ ಅಮರಕೀರ್ತಿಯ ಶಿಷ್ಯನಾಗಿದ್ದನೆಂದು ಸ್ಪಷ್ಟವಾಗುವುದು.

ಈ ವೃತ್ತವಿಲಾಸನು—

ವ್ರತಗುರುಗಳಮರಕೀರ್ತಿ | ವ್ರತಿಪತಿಗಳ್ ಚಾರುಕೀರ್ತಿಮುಕ್ತಾಭರಣರ್ |
ಶ್ರುತಗುರುಗಳೆಂಬ ಮಹಿಮೋ | ನ್ನತಿಯಿಂ ಕೃತಕೃತ್ಯನಲ್ತೆ ವೃತ್ತವಿಲಾಸಂ ||

ಎಂದು (ಧರ್ಮಪರೀಕ್ಷೆ ೧, ೩೨) ಸ್ತುತಿಸಿರುವ ಚಾರುಕೀರ್ತಿಯು ಶ್ರವಣಬೆಳ್ಗೊಳದ ೨೫೪ (ಹಳೇನಂಬರು ೧೦೫) ನೆಯ ಶಾಸನದಲ್ಲಿ ಕೀರ್ತಿತನಾಗಿರುವ ಚಾರುಕೀರ್ತಿಯೇ ಎಂಬ ವಿಷಯವು ಮಧುರಕವಿಯಿಂದ ರಚಿತವಾದ ಧರ್ಮನಾಥಪುರಾಣದಿಂದ ಸ್ಪಷ್ಟವಾಗುವುದು. ಈ ಪುರಾಣದ ಗ್ರಂಥಾವತಾರದಲ್ಲಿ ಕವಿಯು ಮೇಲೆ ಹೇಳಿದ ಶ್ರವಣಬೆಳ್ಗೊಳದ ೨೭೪ ನೆಯ ಶಾಸನದಲ್ಲಿ ಕೀರ್ತಿತರಾದ ಬಲಾತ್ಕಾರಗಣದ ಧರ್ಮಭೂಷಣ-ಭಟ್ಟಾರಕ ಮತ್ತು ಅವನ ಶಿಷ್ಯನಾದ ವರ್ಧಮಾನಯತಿಗಳನ್ನು ಸ್ತುತಿಸಿರುವುದಲ್ಲದೆ, ಕೊಂಡಕುಂದಾನ್ವಯದ ಮೂಲಸಂಘದ ದೇಶೀಗಣದ ಬಲ್ಲಾಳರಾಯಜೀವರಕ್ಷಾಪಾಳರೆಂಬ ಬಿರುದುಳ್ಳ ಚಾರುಕೀರ್ತಿಪಂಡಿತರ ಪಟ್ಟಕ್ರಮಾಗತರಾದ ಅಭಿನವ ಚಾರುಕೀರ್ತಿ ಪಂಡಿತಾಚಾರ್ಯರ ಅನಂತರದಲ್ಲಿ ಪಟ್ಟಕ್ಕೆ ಬಂದ ಪಂಡಿತನ ಶಿಷ್ಯನಾದ ಮಲ್ಲಿಕಾರ್ಜುನನು ತನ್ನ ಬಳಿಗೆ ಬಂದು ಪ್ರೀತಿಯಿಂದ ನಾನಾವಸ್ತುಪ್ರತಿಪತ್ತಿಯಂ ಸಲಿಸಿ ಧರ್ಮಭೂಷಣನ ಹಿಂದೆ ಪಟ್ಟಕ್ಕೆ ಬಂದ ಭಟ್ಟಾರಕರಾಜರಾಯಗುರುವೆನಿಸಿದ ವರ್ಧಮಾನಮುನಿಸನ್ನಿಧಿಗೊಯ್ದು ಅವರಿಂದ ಹೇಳಿಸಲು, ತಾನು ಈ ಧರ್ಮನಾಥಪುರಾಣವನ್ನು ರಚಿಸಿದನೆಂದು ಹೇಳಿಕೊಂಡಿರುವನು (ಕವಿಚರಿತೆ I, ೩೪೬ ನ್ನು ನೋಡಿ). ಈ ಪಂಡಿತನು ಶ್ರ ಬೆ. ೨೭೪ ನೆಯ (೧೦೫ನೆಯ) ಶಾಸನದಲ್ಲಿ ಕೀರ್ತಿತನಾಗಿರುವ ಪಂಡಿತನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲವಾದುದರಿಂದ ಇವನ ಗುರುವೆಂದು ಶಾಸನದಲ್ಲಿ ಹೇಳಲ್ಪಟ್ಟಿರುವ ಚಾರುಕೀರ್ತಿಯೂ ಧರ್ಮನಾಥಪುರಾಣದಲ್ಲಿ ಹೇಳಲ್ಪಟ್ಟಿರುವ ಅಭಿನವಚಾರುಕೀರ್ತಿಯೂ ಒಬ್ಬನೇ ಮನುಷ್ಯನಾಗಿರಬೇಕು. ಈ ಪಂಡಿತನು ಶಕವರ್ಷ ೧೩೨೦ ನೇ ಈಶ್ವರಸಂವತ್ಸರದ

* ಈ ವಸಂತಕೀರ್ತಿ, ವಿಶಾಲಕೀರ್ತಿ, ಶುಭಕೀರ್ತಿಗಳು ನಗರದ ೪೬ ನೇ ಶಾಸನದ ೨೫ ನೆಯ ಪಂಕ್ತಿಯಲ್ಲಿಯೂ ಕೀರ್ತಿತರಾಗಿರುವಂತೆ ತೋರುವುದು.

ಮಾಘಮಾಸದಲ್ಲಿ, ಎಂದರೆ ಕ್ರಿ. ಶ. ಸುಮಾರು ೧೩೯೮ ನೇ ವರ್ಷದ ಆದಿಯಲ್ಲಿ ಲೋಕಾಂತರವನ್ನೈದಿದನೆಂದು ಈ ೨೫೪ (೧೦೫) ನೆಯ ಶಾಸನದಲ್ಲಿ ಹೇಳಿರುವುದರಿಂದ ಇವನ ಗುರುವಾದ ಚಾರುಕೀರ್ತಿಯು ಇದಕ್ಕೆ ೬೦ ವರ್ಷಗಳ ಹಿಂದೆ ಎಂದರೆ ಕ್ರಿ. ಶ. ಸುಮಾರು ೧೩೩೮ ರಲ್ಲಿ ಜೀವಿಸಿದ್ದನೆಂದು ಹೇಳಬಹುದು. ಈ ಚಾರುಕೀರ್ತಿಯು ಹೊಯ್ಸಲರಾಜನಾದ ಒಂದನೆಯ ಬಲ್ಲಾಳನ (೧೧೦೦-೧೧೦೬) ಸಮಕಾಲೀನನೆಂಬ ಕವಿಚರಿತಕಾರರ ಅಭಿಪ್ರಾಯವಂತೂ ಸರ್ವಥಾ ತಪ್ಪು.

ಕ್ರಿ. ಶ. ೧೩೫೯ ರಲ್ಲಿ ಗೊಮ್ಮಟಸಾರದ ಕರ್ಣಾಟಕವೃತ್ತಿಯನ್ನು ಧರ್ಮಭೂಷಣ-ಭಟ್ಟಾರಕರ ಆಜ್ಞೆಯಿಂದ ಬರೆದ (ಕವಿಚರಿತೆ I, ೩೩೫ ನ್ನು ನೋಡಿ) ಕೇಶವವರ್ಣಿಯು ತಾನು '. . ಶ್ರೀಮದ್ರಾಜರಾಯಗುರುಮಂಡಲಾಚಾರ್ಯ ಮಹಾವಾದವಾದೀಶ್ವರ ರಾಯವಾದಿಪಿತಾಮಹ ಸಕಲವಿದ್ವಜ್ಜನಚಕ್ರವರ್ತಿ ಶ್ರೀಮದಭಯಸೂರಿ-ಸಿದ್ಧಾಂತಚಕ್ರವರ್ತಿ'ಯ ಶಿಷ್ಯನೆಂದು ಗ್ರಂಥಾಂತ್ಯದಲ್ಲಿ ಹೇಳಿಕೊಂಡಿರುವನು. ಧರ್ಮಪರೀಕ್ಷೆಯಲ್ಲಿ ವೃತ್ತವಿಲಾಸನಿಂದ ಸ್ತುತನಾಗಿರುವ ಅಭಯಸೂರಿವಾದೀಶ್ವರನು ಈ ಕೇಶವವರ್ಣಿಯ ಗುರುವಾದ ಅಭಯಸೂರಿಯೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗೆಯೇ ಮೇಲೆ ಹೇಳಿದ ಶ್ರವಣಬೆಳ್ಗೊಳದ ೨೫೪ (೧೦೫) ನೆಯ ಶಾಸನದಲ್ಲಿ—

ರೇರೇ ಕಾಣಾದ ಕೋಣಂ ಶರಣಮಧಿವಸ ಕ್ಷುದ್ರ ನಿದ್ರಾನಿವಾಸಂ
ಮೈಮಾಂಸೇಚ್ಛಾಮತುಚ್ಛಾಂ ತ್ಯಜ ನಿಜಪಟುವಾದೇಷು ಕೃಚ್ಛ್ರಾಶು ಗಚ್ಛ |
ಬೌದ್ಧಾ ಬುದ್ಧೇರ್ವಿಮುಗ್ಧೋಸ್ಯಪಸರ ಸಹಸಾ ಸಾಂಖ್ಯ ಮಾ ರಂಖ ಸಾಂಖ್ಯೇ
ಶ್ರೀಮಾನ್ಮಥ್ನಾತಿ ವಾದೀಂದ್ರಗಜಮಭಯಸೂರಿಃ ಪರಂ ವಾದಿಸಿಂಹಃ ||

ಎಂದು ಸ್ತುತಿಸಲ್ಪಟ್ಟಿರುವ ಅಭಯಸೂರಿಯೂ ವೃತ್ತವಿಲಾಸ, ಕೇಶವವರ್ಣಿಗಳಿಂದ ಸ್ತುತನಾದ ಅಭಯಸೂರಿಯೇ ಎಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ. ಈ ಶ್ರವಣಬೆಳ್ಗೊಳದ ೨೫೪ (೧೦೫) ನೆಯ ಶಾಸನದ ವಾಕ್ಯಸರಣಿಯನ್ನು ವಿಚಾರ ಮಾಡಿ ನೋಡಿದರೆ, ಈ ಮೇಲೆ ಹೇಳಲ್ಪಟ್ಟ ಅಭಯಸೂರಿಯು ಈ ಶಾಸನದಲ್ಲಿ ಸ್ತುತನಾದ ಚಾರುಕೀರ್ತಿಯಿಂದ ಅಭಿನ್ನನಾಗಿರುವನೆಂದು ತೋರುವುದು.

ವೃತ್ತವಿಲಾಸನು ಕ್ರಿ. ಶ. ಸುಮಾರು ೧೩೬೩ ರಲ್ಲಿ ಲೋಕಾಂತರವನ್ನೈದಿದ ಧರ್ಮಭೂಷಣ-ಭಟ್ಟಾರಕನ ಗುರುವಾದ ಅಮರಕೀರ್ತಿಯ ಶಿಷ್ಯನೆಂದು ನಾವು ಮೇಲೆ ಹೇಳಿರುವೆವಷ್ಟೆ. ಆದುದರಿಂದ ಇವನೂ ಸುಮಾರು ಕ್ರಿ. ಶ. ೧೩೬೩ ರ ವರೆಗೆ ಜೀವಿಸಿದ್ದಿರಬಹುದು. ಇವನು ತನ್ನ ಗ್ರಂಥವನ್ನು ಸುಮಾರು ಕ್ರಿ. ಶ. ೧೩೪೦ ರಲ್ಲಿ ಬರೆದನೆಂದು ತೋರುವುದು.

೨೫. ಒಂದನೆಯ ಮಂಗರಾಜ.

ಇವನು ಖಗೇಂದ್ರಮಣಿದರ್ಪಣವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿ ಇವನು 'ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ' ಎಂದು ಹೇಳಿರುವ ಹರಿಹರಕ್ಷಿತಿಪನು ೧೩೩೬ ರಿಂದ ೧೩೫೦ ವರೆಗೆ ಆಳುತ್ತಿದ್ದ ವಿಜಯನಗರದ ರಾಜನಾದ ಒಂದನೆಯ ಹರಿಹರನೆಂದೂ, ಸಾರತ್ರಯವೇದಿಯಾದ ಕೇಶವವರ್ಯನನ್ನು ಇವನು (೧೩೫೯) ಸ್ಮರಿಸುವುದರಿಂದ ಇವನು ಅವನಿಗೆ ಸಮಕಾಲದಲ್ಲಿಯೋ ಅಥವಾ ಸ್ವಲ್ಪ ಈಚೆಯೋ, ಎಂದರೆ, ಸುಮಾರು ೧೩೬೦ ರಲ್ಲಿ ಇದ್ದಿರಬಹುದೆಂದೂ ಕವಿಚರಿತಕಾರರು (ಕವಿಚರಿತೆ, I, ೩೩೭) ಹೇಳಿರುವರು.

ಇಲ್ಲಿ ಪ್ರಸ್ತುತನಾಗಿರುವ ಕೇಶವವರ್ಯ ಅಥವಾ ಕೇಶವವರ್ಣಿಯು ಗೊಮ್ಮಟಸಾರ ಮತ್ತು ಅಮಿತಗತಿಶ್ರಾವಕಾಚಾರಗಳಿಗೆ ಕರ್ಣಾಟಕವೃತ್ತಿಯನ್ನು ಬರೆದಿರುವನು. ದೇವಚಂದ್ರನು ರಾಜಾವಳೀಕಥೆಯಲ್ಲಿ ಹೇಳಿರುವಂತೆ ಪ್ರಾಯಶಃ ಸಾರತ್ರಯಕ್ಕೂ ಇವನು ಕನ್ನಡ ವ್ಯಾಖ್ಯಾನವನ್ನು ಬರೆದಿರಬಹುದು. ಕ್ರಿ.ಶ. ೧೩೫೯ ರಲ್ಲಿ ಪರಿಸಮಾಪ್ತಿ ಹೊಂದಿದ ಇವನ ಗೊಮ್ಮಟಸಾರ-ಕರ್ಣಾಟಕವೃತ್ತಿಯ ಕೊನೆಯಲ್ಲಿ 'ಇಂತು ಭಗವದರ್ಹತ್ಪರಮೇಶ್ವರ-ಚಾರುಚರಣಾರವಿಂದದ್ವಂದ್ವವಂದನಾನಂದಿತಪುಣ್ಯಪುಂಜಾಯಮಾನ· ..... ಶ್ರೀಮದಭಯಸೂರಿ—ಸಿದ್ಧಾಂತಚಕ್ರವರ್ತಿ—ಶ್ರೀಪಾದಪಂಕಜರಜೋರಂಜಿತಲಲಾಟಪಟ್ಟಂ ಶ್ರೀಕೇಶವವಿರಚಿತ ಗೊಮ್ಮಟಸಾರ ಕರ್ಣಾಟಕವೃತ್ತಿ ಜೀವತತ್ವಪ್ರದೀಪಿಕೆಯೊಳ್' ಎಂಬ ಗದ್ಯವಿರುವುದು. ಅಮಿತಗತಿಶ್ರಾವಕಾಚಾರ ಕರ್ಣಾಟಕವೃತ್ತಿಯ ಕೊನೆಯಲ್ಲಿ ಆದರೆ—'ಇಂತು ಪರಮಜಿನಸಮಯಸಿದ್ಧಾಂತಪೀಯೂಷಾರ್ಣವ ವರ್ಧಿಷ್ಣುಕುಮುದಬಾಂಧವ ಶ್ರೀಮದಭಯಸೂರಿಸಿದ್ಧಾಂತಚಕ್ರವರ್ತಿ ಶ್ರೀಪಾದಪದ್ಮಾರಾಧಕನಪ್ಪ ಸಾರತ್ರಯವೇದಿ ಕೇಶಣ್ಣವಿರಚಿತಾಮಿತಗತಿಶ್ರಾವಕಾಚಾರವೃತ್ತಿಯೊಳ್' ಎಂಬ ಗದ್ಯವಿರುವುದು. ಹೀಗೆ 'ಸಾರತ್ರಯವೇದಿ' ಎಂಬ ಬಿರುದನ್ನು ಇವನು ಮೊದಲನೇ ಗ್ರಂಥದ ಅಂತ್ಯದಲ್ಲಿರುವ ಗದ್ಯದಲ್ಲಿ ಹೇಳಿಕೊಳ್ಳದೆ ಎರಡನೇ ಗ್ರಂಥದ ಅಂತ್ಯದಲ್ಲಿರುವ ಗದ್ಯದಲ್ಲಿ ಹೇಳಿಕೊಂಡಿರುವುದರಿಂದ, ಮೊದಲನೇ ಗ್ರಂಥವನ್ನು ಬರೆದಾಗ, ಎಂದರೆ ಕ್ರಿ. ಶ. ೧೩೫೯ ರಲ್ಲಿ, ಇವನಿಗೆ ಆ ಬಿರುದು ಇರಲಿಲ್ಲವೆಂದೂ ಅದು ಇವನಿಗೆ ತದನಂತರ ಸ್ವಲ್ಪಕಾಲವಾದ ಮೇಲೆ ಬಂದಿರಬೇಕೆಂದೂ ವ್ಯಕ್ತವಾಗುವುದು. ಎಂದರೆ ಕವಿಚರಿತಕಾರರು ಹೇಳಿರುವ ವಿಜಯನಗರದ ಒಂದನೇ ಹರಿಹರನು ರಾಜ್ಯವಾಳುತ್ತಿದ್ದಾಗ ಈ ಕೇಶವವರ್ಯನಿಗೆ

'ಸಾರತ್ರಯವೇದಿ' ಎಂಬ ಬಿರುದು ಇರಲಿಲ್ಲವೆಂದೂ, ಖಗೇಂದ್ರಮಣಿದರ್ಪಣದಲ್ಲಿನ 'ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ' ಎಂಬ ಪದ್ಯದಲ್ಲಿ ಹೇಳಿರುವ ಹರಿಹರನು ವಿಜಯನಗರದ ಒಂದನೇ ಹರಿಹರನಲ್ಲವೆಂದೂ ಮೇಲೆ ಹೇಳಿದುದರಿಂದ ವ್ಯಕ್ತವಾಗುವುದು. ಆದ್ದರಿಂದ ಈ ಗ್ರಂಥವು ಕ್ರಿ. ಶ. ೧೩೭೭ ರಿಂದ ೧೪೦೪ ರ ವರೆಗೆ ರಾಜ್ಯವಾಳಿದ ವಿಜಯನಗರದ ಎರಡನೇ ಹರಿಹರನ ಕಾಲದಲ್ಲಿ ಬರೆಯಲ್ಪಟ್ಟಿತೆಂದು ಸ್ಪಷ್ಟವಾಗುವುದು. ಇದು ಸುಮಾರು ೧೩೮೦ ರಲ್ಲಿ ಬರೆಯಲ್ಪಟ್ಟಿರಬಹುದೆಂದು ಹೇಳುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವೇನೂ ಇರಲಾರದು.

೨೬. ಸೋಮರಾಜ.

ಉದ್ಭಟಕಾವ್ಯ ಅಥವಾ ಶೃಂಗಾರಸಾರಕಾವ್ಯದ ಕರ್ತೃವಾದ ಈ ಸೋಮರಾಜನ ವಿಷಯದಲ್ಲಿ ಕವಿಚರಿತಕಾರರು—

"ಇವನು ಶೃಂಗಾರಸಾರ ಎಂಬ ಗ್ರಂಥವನ್ನು ಬರೆದಿದ್ದಾನೆ. ಇದಕ್ಕೆ ಉದ್ಭಟಕಾವ್ಯ ಎಂಬ ಹೆಸರೂ ಉಂಟು.

ಇವನು ವೀರಶೈವಕವಿ; ರಾಜನಾಗಿದ್ದಂತೆ ತಿಳಿಯಬರುತ್ತದೆ; ಇವನ ಪ್ರಪಿತಾಮಹನು ಚಂದ್ರವಂಶೋತ್ಪನ್ನನಾದ ತಿರುಮಲರಾಜನು, ಪಿತಾಮಹನು ರಾಯಣರಾಜನು, ತಂದೆ ಇಂದುಶೇಖರ ರಾಜನು. ಈ ವಂಶದ ರಾಜರು ಎಲ್ಲಿ ರಾಜ್ಯವಾಳುತ್ತಿದ್ದರೋ ತಿಳಿಯದು. ಆದರೆ ಪಶ್ಚಿಮತೀರದಲ್ಲಿ ಆಳುತ್ತಿದ್ದ ವೀರಶೈವಮತಾವಲಂಬಿಗಳಾದ ಚೌಟರಾಜರಲ್ಲಿ ತಿರುಮಲರಾಯ, ಚಂದ್ರಶೇಖರ ಎಂಬ ಹೆಸರುಗಳು ದೊರೆಯುತ್ತವೆ. ಈ ಕವಿ ಆ ವಂಶದ ದೊರೆಯಾಗಿರಬಹುದೋ ಏನೋ ತಿಳಿಯದು....

ತನ್ನ ಗ್ರಂಥವನ್ನು ರಾಯಸದ ಲಿಂಗರಸನು ಬರೆಯಲು ತಾನು ನಿರ್ಮಿಸಿದಂತೆ ಹೇಳುತ್ತಾನೆ.

ತನ್ನ ಗ್ರಂಥವನ್ನು ಶಕ 1144 ನೆಯ ಚಿತ್ರಭಾನುವಿನಲ್ಲಿ—ಎಂದರೆ 1222 ರಲ್ಲಿ—ಬರೆದುದಾಗಿ ಈ ಪದ್ಯದಲ್ಲಿ ಹೇಳಿದ್ದಾನೆ:—

ಜನನಾಥೋತ್ತಮಸೋಮರಾಜನುಸಿರ್ದೀ ಕಾವ್ಯಂ ವಲಂ ಶಾಲಿವಾ |
ಹನಶಾಕಾಬ್ದಮದೆಯ್ದೆ ಸಾಸಿರದ ನೂಱಿಂ ಸಂದ ನಾಲ್ವತ್ತು ನಾ |
ಲ್ಕನೆಯಾರಂಜಿತಚಿತ್ರಭಾನುವ ವರಾಶ್ವೀಜೋತ್ಸಿತೈಕಾದಶೀ |
ವನಜಾರಾತಿತನೂಜವಾಸರದೊಳಾದತ್ತಲ್ಲಮಂಗರ್ಪಿತಂ ||"

ಎಂದು ಕವಿಚರಿತೆ I, ೨೭೦-೨೭೧ ರಲ್ಲಿ ಬರೆದಿದ್ದಾರೆ.

ಈ ಕವಿಯು ಕ್ರಿ. ಶ. ೧೨೨೨ ರಲ್ಲಿ ಉದ್ಭಟಕಾವ್ಯವನ್ನು ಬರೆದನೆಂಬ ಕವಿಚರಿತಕಾರರ ಮೇಲೆ ಹೇಳಿದ ಅಭಿಪ್ರಾಯವು ಸಾಧುವಾಗಿರುವಂತೆ ನಮಗೆ ತೋರುವುದಿಲ್ಲ. ಅದು ಹೇಗೆಂದರೆ—

೧. ಕವಿಚರಿತಕಾರರು ಮೇಲೆ ಹೇಳಿರುವ ಚೌಟರಾಜರು ೧೫ ನೇ ಶತಮಾನದಲ್ಲಿ ಪಶ್ಚಿಮಸಮುದ್ರತೀರದಲ್ಲಿರುವ ಮೂಡಬಿದರೆಯಲ್ಲಿ ಆಳುತ್ತಿದ್ದರೆಂದೂ, ಮಂಗಳೂರಿನಲ್ಲಿದ್ದ ವಿಜಯನಗರದ ರಾಜರ ಅಧಿಕಾರಿಗೆ ಅಧೀನರಾಗಿದ್ದರೆಂದೂ, ಕ್ರಿ. ಶ. ಸುಮಾರು ೧೬೦೦ ರಲ್ಲಿ ಇವರ ರಾಜ್ಯವು ಕೆಳದಿಯ ರಾಜರಿಗೆ ವಶವಾಯಿತೆಂದೂ, ಇಷ್ಟುಮಾತ್ರ ನಮಗೆ ಇವರ ವಿಷಯವಾಗಿ ತಿಳಿದಿದ್ದು ಅಧಿಕವೇನೂ ತಿಳಿದಿಲ್ಲವಾದಾಗ್ಯೂ, ಕ್ರಿ. ಶ. ೧೨೨೨ ರಲ್ಲಿ ಈ ವಂಶದ ರಾಜರು ಆಳುತ್ತಿದ್ದರೆಂಬುದು ಅಸಂಭವವೆಂದು ನಾವು ಧಾರಾಳವಾಗಿ ಹೇಳಬಹುದು. ಅಲ್ಲದೆ ತಿರುಮಲರಾಜ, ಚಂದ್ರಶೇಖರ ಎಂಬ ಹೆಸರುಗಳು ಕವಿಚರಿತಕಾರರು ಹೇಳುವಂತೆ ಇವರಲ್ಲಿ ದೊರೆತಾಗ್ಯೂ ಸೋಮರಾಜನು ಹೇಳಿರುವ ರಾಯಣರಾಜ, ಇಂದುಶೇಖರರಾಜ ಎಂಬ ಹೆಸರಿನ

ದೊರೆಗಳು ಇವರಲ್ಲಿ ಇರಲಿಲ್ಲವೆಂದು ನಾವು ಅರ್ಥಾಪತ್ತಿಯಿಂದ ಊಹಿಸಬಹುದಾಗಿರುವುದು.

೨. ಮೇಲೆ ಹೇಳಿದ 'ಜನನಾಥೋತ್ತಮ ಸೋಮರಾಜನುಸಿರ್ದೀ ಕಾವ್ಯಂ' ಎಂಬ ಪದ್ಯದ ದ್ವಿತೀಯಚರಣವು 'ಹನಶಾಕಾಬ್ದಮದೆಯ್ದೆ ಸಾಸಿರದ ನೂಱಿಂಸಂದ ನಾಲ್ವತ್ತುನಾ' ಎಂದು ಕವಿಚರಿತೆಯಲ್ಲಿ ಪಠಿಸಲ್ಪಟ್ಟಿರುವುದಷ್ಟೆ. ಮುದ್ರಿತ ಪುಸ್ತಕದಲ್ಲಾದರೆ (ಪುಟ ೩೩೦) ಈ ಚರಣವು—'ಹನಶಾಕಾಬ್ದಮದೆಯ್ದೆ ಸಾಸಿರದ ನೂರ್ಸಂದ ನಾಲ್ವತ್ತುನಾ' ಎಂದು ಮುದ್ರಿಸಲ್ಪಟ್ಟಿರುವುದು. ಈ ಮುದ್ರಿತ ಪುಸ್ತಕಕ್ಕೆ ಆಧಾರಭೂತವಾದ ಕಾಗದದ ಪ್ರತಿಯಲ್ಲಿಯೂ ಇದೇ ಪಾಠವೇ ಇರುವುದು. ಕವಿಚರಿತಕಾರರು ನೋಡಿರುವ ಪ್ರತಿಯು ಪ್ರಾಯಶಃ ಇದೇ ಕಾಗದದ ಪ್ರತಿಯಾದುದರಿಂದ, ಅವರು ಕೊಟ್ಟಿರುವ 'ಹನಶಾಕಾಬ್ದಮದೆಯ್ದೆ ಸಾಸಿರದ ನೂಱಿಂಸಂದ ನಾಲ್ವತ್ತುನಾ' ಎಂಬ ದ್ವಿತೀಯಚರಣಪಾಠವು ಕವಿಯಿಂದ ಬರೆಯಲ್ಪಟ್ಟ ಪಾಠವಲ್ಲವೆಂದು ಸ್ಪಷ್ಟವಾಗುವುದು. ಈ ಕಾಗದದ ಪ್ರತಿಯಲ್ಲಿರುವ ಪಾಠವೂ ಅಶುದ್ಧವೆಂಬುದು ಸ್ಪಷ್ಟವಾಗಿಯೇ ಇರುವುದು. ಇಲ್ಲಿ ದ್ವಿತೀಯಚರಣದಲ್ಲಿ ಮೊದಲು ೧೨ ಅಕ್ಷರಗಳನಂತರ ಎರಡು ಗುರುಗಳು ಇರಬೇಕಾದ ಸ್ಥಾನದಲ್ಲಿ ಒಂದು ಗುರು ಮಾತ್ರ ಇದ್ದು ಒಂದು ಗುರುವು ಗಲಿತವಾಗಿರುವುದರಿಂದ ೨೦ ಅಕ್ಷರಗಳು ಇಲ್ಲದೆ ೧೯ ಮಾತ್ರ ಅಕ್ಷರಗಳು ಇರುವುವು. ಈ ಕಾರಣದಿಂದ 'ನೂರ್ಸಂದ' ಎಂಬುದನ್ನು 'ನೂಱಿಂ ಸಂದ' ಎಂದು ಕವಿಚರಿತಕಾರರು ತಿದ್ದಿರುವಂತೆ ಕಾಣುವುದು.* ಇದು ಯುಕ್ತವಾಗಿರುವಂತೆ ನಮಗೆ ತೋರುವುದಿಲ್ಲ. ೨೦ ಅಕ್ಷರಗಳು ಇರಬೇಕಾದ ಪಾದದಲ್ಲಿ 'ಸಾಸಿರದ ನೂಱಿಂ ಸಂದ' ಎಂದೇ ಕವಿಯು ಬರೆದಿದ್ದ ಪಕ್ಷದಲ್ಲಿ ಈ ಪಾಠವು ಕಾಲಕ್ರಮದಲ್ಲಿ ಎಷ್ಟು ವಿಕೃತಿಯನ್ನು ಹೊಂದಿದಾಗ್ಯೂ 'ಸಾಸಿರದ ನೂರ್ಸಂದ' ಎಂದು ಹೇಗಾದೀತು? ಆದ್ದರಿಂದ 'ನೂರ್ಸಂದ' ಎಂಬ ಅಕ್ಷರಗಳು ಕವಿಯು ಬರೆದ ಪಾಠದಲ್ಲಿಯೇ ಇದ್ದುವೆಂದೂ, ಈ 'ನೂ' ಎಂಬ ಅಕ್ಷರದ ಹಿಂದೆ ಒಂದು ಗುರ್ವಕ್ಷರವು ಗಲಿತವಾಗಿದೆಯೆಂದೂ ನಮಗೆ ತೋರುವುದು. ಎಂದರೆ ಈ 'ನೂ' ಎಂಬ ಅಕ್ಷರದ ಹಿಂದೆ 'ಮೂ' ಎಂಬ ಅಕ್ಷರವನ್ನೋ ಅಥವಾ 'ನಾ'

---

*ಹೀಗೆಯೇ ಕರ್ಣಪಾರ್ಯ ರಚಿತವಾದ ನೇಮಿನಾಥಪುರಾಣದ ಮಾತೃಕೆಯಲ್ಲಿಯೂ ೨೨ ನೇ ಪದ್ಯದಲ್ಲಿ (ಮೇಲೆ ೭೯ ನೆಯ ಪುಟವನ್ನು ನೋಡಿ) 'ಜೀಮೂತವಾಹನವಿದ್ಯಾಧರ ಚಕ್ರಿವಂಶತಿಳಕಂ' ಎಂಬುದರ ಬದಲು '-ಚಕ್ರವಂಶ-' ಎಂಬ ಅಪಪಾಠವಿರುವುದರಿಂದ ಕವಿಚರಿತಕಾರರು ಅದನ್ನು 'ಜೀಮೂತವಾಹನವಿದ್ಯಾಧರಚಕ್ರವರ್ತಿವಂಶತಿಳಕಂ' ಎಂದು ತಿದ್ದಿರುವರು (ಕವಿಚರಿತೆ I, ೧೧೬ ನ್ನು ನೋಡಿ).

ಎಂಬ ಅಕ್ಷರವನ್ನೋ ಕವಿಯು ಬರೆದಿದ್ದನೆಂದೂ, ಮೇಲೆ ಹೇಳಿದ ಕಾಗದಪ್ರತಿಯ ಮಾತೃಕೆಯನ್ನು (ಅಥವಾ ಅದರ ಮಾತೃಕೆಯನ್ನು) ಬರೆದ ಲೇಖಕನು ಈ ಪದ್ಯವನ್ನು ಬರೆಯುತ್ತಿದ್ದಾಗ ಈ ಅಕ್ಷರವನ್ನು ಅವನು ಪ್ರಮಾದದಿಂದ ಬಿಟ್ಟುಬಿಟ್ಟನೆಂದೂ ನಮ್ಮ ಅಭಿಪ್ರಾಯ. ಶಕ ೧೩೪೪ ನೇ ವರ್ಷವು ಶುಭಕೃತ್ಸಂವತ್ಸರವೂ ಶಕ ೧೪೪೪ ನೇ ವರ್ಷವು ಚಿತ್ರಭಾನು ಸಂವತ್ಸರವೂ ಆದ್ದರಿಂದ ಕವಿಯು 'ಸಾಸಿರದ ನಾನೂರ್ಸಂದ' ಎಂದೇ ಬರೆದಿರಬೇಕು.

೩. ಶಕವರ್ಷ ೧೪೯೬ ನೆಯ ಶ್ರೀಮುಖ ಸಂವತ್ಸರದ ಭಾದ್ರಪದ-ಸು ೧೧ ಸೋಮವಾರದಂದು, ಎಂದರೆ ಕ್ರಿ. ಶ. ೧೫೭೩ ನೇ ಸೆಪ್ಟಂಬರ್ ೭ ನೇ ತಾರೀಖು ಸೋಮವಾರದಂದು ಹುಟ್ಟಿದ ಹಾಸನದ ೧೧೭ ನೇ ಶಾಸನದಲ್ಲಿ ಶ್ರೀಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪಪ್ರೌಢದೇವಮಹಾರಾಯರ ಆಳಿಯಂದಿರಾದ· ·ಸೋಮವಂಶದ ತಿರುಮಲರಾಜನ ಕುಮಾರ ನುಗ್ಗೆಹಳ್ಳಿ ರಾಯೊಡೆಯರ ಕುಮಾರ ಇಂದುಶೇಖರ ರಾಜಗಳ ಕುಮಾರ· ·ಬಸವರಾಜಯದೇವ ಮಹಾ ಅರಸುಗಳು ಶಾಂತಿಗ್ರಾಮದ ನವರಂಗದ ಕಲ್ಲುಬಾಗಿಲನು ಕಟ್ಟಿಸಿ ಹುಲಿಮುಖವನಿಕ್ಕಿಸಿದರೆಂದು ಹೇಳಿರುವುದು. ಕ್ರಿ. ಶ. ೧೫೧೬ ನೆಯ ಜೂನ್ ೨೯ ನೇ ತಾರೀಖಿನಲ್ಲಿ ಹುಟ್ಟಿದ ಹಾಸನದ ೧೩ ನೇ ಶಾಸನದಲ್ಲಿ ಮೇಲೆ ಹೇಳಿದ ತಿರುಮಲ-ಅಥವಾ ತಿಮ್ಮ-ರಾಜನ ಮಗನಾದ ರಾಯಒಡೆಯ (೧೦ ನೇ ಪಂಕ್ತಿ) ಅಥವಾ ರಾಯಣ-ಒಡೆಯ (೧೭ ನೇ ಪಂಕ್ತಿ) ನು ವಿಜಯನಗರದ ಕೃಷ್ಣರಾಯಮಹಾರಾಜನ ದಳವಾಯಿಯಾಗಿದ್ದನೆಂದೂ ಈ ರಾಯಣ ಒಡೆಯನ ಕುಮಾರ ಧನಂಜಯರಾಯ ಒಡೆಯನು ಒಂದು ಅಗ್ರಹಾರವನ್ನು ಕೊಟ್ಟನೆಂದೂ ಹೇಳಿರುವುದು.* ಹೀಗೆಯೇ

---

* ಕ್ರಿ. ಶ. ೧೫೫೧ ನೇ ನವೆಂಬರ್ ೨೧ ನೇ ತಾರೀಖು ಬುಧವಾರದಂದು ಹುಟ್ಟಿದ ಅರಸೀಕೆರೆಯ ೨ ನೇ ಶಾಸನದಲ್ಲಿ ಸೋಮವಂಶದ ಒಬ್ಬ ಚನ್ನರಾಜನನ್ನು ಸ್ತುತಿಸಿ ಅವನ ಮಗ ತಿಮ್ಮರಾಜನ ಮಗ ನಂಜರಾಜ ಅಥವಾ ಹದಿಮೂರುರಾಯರಗಂಡ ರಾಯಣರಾಜನ ಮಗನಾದ ಭೈರವರಾಜನು ಜಾವಗಲ್ಲು ಸೀಮೆಯನ್ನು ಆಳುತ್ತಿದ್ದನೆಂದು ಹೇಳಿರುವುದು. ಇಲ್ಲಿ ಸ್ತುತನಾಗಿರುವ ರಾಯಣರಾಜನು ಮೇಲೆ ಹೇಳಿದ ಶಾಸನಗಳಲ್ಲಿ ಕೀರ್ತಿತನಾದ ರಾಯಣರಾಜನೇ ಎಂದು ತೋರುವುದು. ಆದ್ದರಿಂದ ಇವನಿಗೆ ಉದ್ಭಟಕಾವ್ಯಕರ್ತೃವಾದ ಸೋಮರಾಜನ ತಂದೆಯಾದ ಇಂದುಶೇಖರರಾಜನಲ್ಲದೆ ಧನಂಜಯರಾಜನೆಂದೂ ಭೈರವರಾಜನೆಂದೂ ಹೆಸರುಳ್ಳ ಬೇರೆ ಇಬ್ಬರು ಪುತ್ರರಿದ್ದರೆಂದೂ ರಾಯಣರಾಜನು ನುಗ್ಗೆಹಳ್ಳಿ ಸೀಮೆಯಲ್ಲಿ ಆಳುತ್ತಾ ಒಬ್ಬ ಮಗನಾದ ಧನಂಜಯರಾಜನಿಗೆ ಹಾಸನದ ಸೀಮೆಯ ಅಮರ ನಾಯಕತನವನ್ನೂ, ಇನ್ನೊಬ್ಬ ಮಗನಾದ ಭೈರವರಾಜನಿಗೆ ಜಾವಗಲ್ಲು ಸೀಮೆಯ ನಾಯಕತನವನ್ನೂ ವಿಜಯನಗರದ ಮಹಾರಾಜನಿಂದ ಕೊಡಿಸಿದನೆಂದೂ ತೋರುವುದು.

ಕವಿಚರಿತೆ II, ೨೧೫ ರಲ್ಲಿ ಈ ರಾಯಣರಾಜನು ಕ್ರಿ. ಶ. ೧೫೩೦-೧೫೪೨ ರಲ್ಲಿ ರಾಜ್ಯವಾಳಿದ ವಿಜಯನಗರದ ಅಚ್ಯುತರಾಯನಿಗೆ ಸಾಮಂತನಾಗಿದ್ದಂತೆ ಒಂದು ಶಾಸನದಲ್ಲಿ ಹೇಳಿರುವುದೆಂದು ಕವಿಚರಿತಕಾರರು ಬರೆದಿರುವರು.

ಮೇಲೆ ಹೇಳಿದ ಹಾಸನದ ೧೧೭ ನೇ ಶಾಸನದಲ್ಲಿ ಪ್ರಸ್ತುತನಾಗಿರುವ ಇಂದುಶೇಖರ ರಾಜನಲ್ಲದೆ ಸೋಮವಂಶದ ತಿರುಮಲರಾಜನ ಮಗನಾದ ರಾಯಣರಾಜನ ಮಗನಾದ ಇಂದುಶೇಖರರಾಜನೆಂಬ ಹೆಸರುಳ್ಳ ಮತ್ತೊಬ್ಬ ಮನುಷ್ಯನು ಕರ್ಣಾಟಕ ದೇಶದಲ್ಲಿದ್ದನೆಂಬುದು ಪ್ರಾಯಃ ಅಸಂಭವವಾದುದರಿಂದ ಉದ್ಭಟಕಾವ್ಯದಲ್ಲಿ ಸೋಮರಾಜನು ತನ್ನ ತಂದೆಯೆಂದು ಹೇಳಿರುವ ಸೋಮವಂಶದ ತಿರುಮಲರಾಜನ ಮಗನಾದ ರಾಯಣರಾಜನ ಮಗನಾದ ಇಂದುಶೇಖರರಾಜನು ಈ ಹಾಸನದ ೧೧೭ ನೇ ಶಾಸನದಲ್ಲಿ ಕೀರ್ತಿತನಾದ ಇಂದುಶೇಖರರಾಜನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ಈ ಸೋಮರಾಜನು ಕ್ರಿ. ಶ. ೧೬ ನೇ ಶತಮಾನದಲ್ಲಿ ಇದ್ದನೆಂಬುದರಲ್ಲಿಯೂ ಮೇಲೆ ಹೇಳಿದ 'ಜನನಾಥೋತ್ತಮಸೋಮರಾಜನುಸಿರ್ದೀ ಕಾವ್ಯಂ...' ಎಂಬ ಪದ್ಯದ ದ್ವಿತೀಯ ಪಾದದಲ್ಲಿ 'ಸಾಸಿರದ ನಾನೂರ್ಸಂದ' ಎಂದು (ನಾವು ಮೇಲೆ ಊಹಿಸಿ ಹೇಳಿರುವಂತೆ) ಬರೆದಿದ್ದನೆಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ. ಶಕ ೧೪೪೪ ನೇ ವರ್ಷವು ನಾವು ಮೇಲೆ ಹೇಳಿದಂತೆ ಚಿತ್ರಭಾನು ಸಂವತ್ಸರವಾಗಿರುವುದು. ಈ ಸಂವತ್ಸರದಲ್ಲಿ ಆಶ್ವೀಜಮಾಸದ ಬಹುಳ ಏಕಾದಶೀ ಬುಧವಾರದಂದು ಎಂದರೆ ಕ್ರಿ. ಶ. ೧೫೨೨ ನೇ ಅಕ್ಟೋಬರ್ ೧೫ ನೇ ತಾರೀಖು ಬುಧವಾರದಂದು (ಆದಿವಸ ಲಂಕೋದಯಾತ್ಪರ ೩೫ ಘ. ೧೭ ವಿ. ವರೆಗೆ ಬಹುಳ ಏಕಾದಶೀ ತಿಥಿಯ ವ್ಯಾಪ್ತಿಯಿತ್ತು) ಉದ್ಭಟಕಾವ್ಯವು ಸೋಮರಾಜನಿಂದ ಪರಿಸಮಾಪಿತವಾಯಿತು.

ಸೋಮರಾಜನ ಪಿತಾಮಹನಾದ ರಾಯಣರಾಜನು ಕ್ರಿ. ಶ. ೧೫೧೬ ರಲ್ಲಿಯೂ ೧೫೩೦ ರಲ್ಲಿಯೂ ವಿಜಯನಗರದ ಮಹಾರಾಜರಿಗೆ ಅಧೀನನಾದ ಸಾಮಂತನಾಗಿದ್ದುದರಿಂದ ಅವನ ಪೌತ್ರನಾದ ಸೋಮರಾಜನು ಬರೆದ ಕಾವ್ಯವು ಕ್ರಿ. ಶ. ೧೫೨೨ ರಲ್ಲಿ ಬರೆಯಲ್ಪಟ್ಟಿರಲಾರದೆಂದೂ ಅದಕ್ಕಿಂತ ಕೆಲವು ವರ್ಷಗಳು ಈಚೆಗೆ ಬರೆಯಲ್ಪಟ್ಟಿರಬೇಕೆಂದೂ ಕೆಲವರ ಮನಸ್ಸಿನಲ್ಲಿ ಆಕ್ಷೇಪಣೆಯು ತಲೆದೋರಬಹುದು. ಈ ವಿಧವಾದ ಆಕ್ಷೇಪಣೆಯಾದರೆ ಮೇಲೆ ಹೇಳಿದ ಶಾಸನಗಳಿಂದ ನಿರಾಕರಿಸಲ್ಪಡುವುದು. ಈ ರಾಯಣರಾಜನ ತಂದೆಯಾದ ತಿರುಮಲರಾಜನು ಕ್ರಿ. ಶ. ೧೪೧೯ ರಿಂದ ೧೪೪೬ ರ ವರೆಗೆ ಆಳಿದ ವಿಜಯನಗರದ ಪ್ರೌಢದೇವ

ಮಹಾರಾಯನ ಅಳಿಯನಾಗಿದ್ದನೆಂದು ಮೇಲಿನ ಹಾಸನದ ೧೧೭ ನೇ ಶಾಸನದಲ್ಲಿ ಹೇಳಿರುವುದರಿಂದ ಈ ತಿರುಮಲರಾಜನ ಮಗನಾದ ರಾಯಣರಾಜನು ಕ್ರಿ. ಶ. ಸುಮಾರು ೧೫೭೦ ರಲ್ಲಿ ನುಗ್ಗೆಹಳ್ಳಿಯಲ್ಲಿ ಆಳುವುದಕ್ಕೆ ಪ್ರಾರಂಭಿಸಿದನೆಂದು ನಾವು ಹೇಳಬಹುದು. ಆದ್ದರಿಂದ ಇವನಿಗೆ ಉದ್ಭಟಕಾವ್ಯವನ್ನು ಬರೆಯುವಂಥ ಪೌತ್ರನು ೧೫೩೨ ರಲ್ಲಿ ಇದ್ದನೆಂಬುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಉದ್ಭಟಕಾವ್ಯದ ಕರ್ತೃವಾದ ಸೋಮರಾಜನು ಪ್ರಾಯಶಃ ಇಂದುಶೇಖರರಾಜನಿಗೆ ಜ್ಯೇಷ್ಠಪುತ್ರ ನಾಗಿದ್ದುದಲ್ಲದೆ, ಈ ಇಂದುಶೇಖರರಾಜನೂ ರಾಯಣರಾಜನಿಗೆ ಪ್ರಾಯಶಃ ಜ್ಯೇಷ್ಠಪುತ್ರನಾಗಿದ್ದನೆಂದೂ ಮೇಲೆ ಹೇಳಿದ ಧನಂಜಯರಾಜ ಭೈರವರಾಜರು ಈ ಇಂದುಶೇಖರರಾಜನಿಗಿಂತ ಕನಿಷ್ಠರಾಗಿದ್ದರೆಂದೂ ತೋರುವುದು. ರಾಯಣರಾಜನು ವಿಜಯನಗರದ ಅಚ್ಯುತರಾಯನ ಕಾಲದಲ್ಲಿಯೂ ನುಗ್ಗೆಹಳ್ಳಿಯನ್ನು ಆಳುತ್ತಿದ್ದುದ ರಿಂದ ಇವನು ಬಹುಕಾಲ ಜೀವಿಸಿದ್ದನೆಂಬುದು ಸ್ಪಷ್ಟ. ಆದ್ದರಿಂದಲೇ ಕ್ರಿ. ಶ. ೧೫೭೩ ರಲ್ಲಿ ಹುಟ್ಟಿದ ಈ ಶಾಸನದಲ್ಲಿ ಈ ರಾಯಣರಾಜನ ಕುಮಾರ ಇಂದು ಶೇಖರರಾಜನ ಕುಮಾರ ಸೋಮರಾಜನು ಆಳುತ್ತಿದ್ದನೆಂದು ಹೇಳದೆ, ಪ್ರಾಯಶಃ ಇವನ ಅನಂತರ ಹುಟ್ಟಿದ ಬಸವರಾಜನು ನುಗ್ಗೆಹಳ್ಳಿಯನ್ನು ಆಳುತ್ತಿದ್ದನೆಂದು ಹೇಳಿರುವುದು.

ಉದ್ಭಟಕಾವ್ಯವು ಕ್ರಿ. ಶ. ಸುಮಾರು ೧೫೩೦ಕ್ಕಿಂತ ಹಿಂದೆಯೇ ಬರೆಯಲ್ಪ ಟ್ಟಿತೆಂದು ಹೇಳುವುದಕ್ಕೆ ಈ ಕಾವ್ಯದ ಅಂತ್ಯದಲ್ಲಿರುವ 'ಜನನಾಥೋತ್ತಮ ಸೋಮ ರಾಜನುಸಿರ್ದೀ ಕಾವ್ಯಂ...' ಎಂಬ ಮೇಲೆ ಹೇಳಿದ ಪದ್ಯವಲ್ಲದೆ ಬೇರೆ ಒಂದು ಕಾರಣವುಂಟು. ಸಾಳ್ವಭಾರತ, ರಸರತ್ನಾಕರ ಮತ್ತು ವೈದ್ಯಸಾಂಗತ್ಯಗಳೆಂಬ ಗ್ರಂಥಗಳ ಕರ್ತೃವಾದ ಸಾಳ್ವನು ಉದ್ಭಟಕಾವ್ಯದ ೮ ನೇ ಆಶ್ವಾಸದಲ್ಲಿರುವ 'ಈಕೆಯ ಲೋಚನಂ ಕುಸುಮಸಾಯಕಮೀಕೆಯ ಪುರ್ಬು ಕರ್ವುವಿ | ಲ್ಲೀಕೆಯ ಕುಂತಳಂ ಭ್ರಮರಸಂಕುಳಮೀಕೆಯ ವಾಗ್ವಿಲಾಸಮೇ || ಕೋಕಿಲನಾದ ವೀಕೆಯ ಮೊಗಂ ಶಶಿಯೀ ಜಗಮಂ ಗೆಲಲ್ಕೆ ಸಾ | ಕೀಕೆಯ ರೂಪವೆಂದು ಮಕರಧ್ವಜನೀಕೆಯ ನೈದೆ ಪೊರ್ದುಗುಂ ||' ಎಂಬ (೪೩ ನೇ) ಪದ್ಯವನ್ನು ತನ್ನ ರಸರತ್ನಾಕರದಲ್ಲಿ ಉದ್ಧ ರಿಸಿ ಬರೆದಿದ್ದಾನೆ (ಉದ್ಭಟಕಾವ್ಯ ಉಪೋದ್ಘಾತ ಪುಟ ೮). ಈ ಸಾಳ್ವನ ವಿಷಯ ದಲ್ಲಿ ಕವಿಚರಿತಕಾರರು—

"ಇವನು ಜೈನಕವಿ ; ಇವನ ತಂದೆ ಧರ್ಮಚಂದ್ರ, ಗುರು ದೇಶಿಗಣದ ವಿಜಯಕೀರ್ತಿಯ ಮಗ ಶ್ರುತಕೀರ್ತಿ. ಇವನ ಭಾರತದಿಂದ ಇವನ ಪೋಷಕನ ವಿಷಯವಾಗಿ ಈ ಅಂಶಗಳು ತಿಳಿಯುತ್ತವೆ—

ತೌಳವ ಹೈವಕೊಂಕಣ ದೇಶದಧಿನಾಥನೂ ಲಕ್ಷ್ಮಿಯ ಪುತ್ರನೂ ಅಭಿನವನಿಂಬನೂ ಆದ ಮಹಾಮಂಡಲೇಶ್ವರ ಭೈರವರಾಯನು ನಗಿರನಗರದಲ್ಲಿ ಆಳುತ್ತಿದ್ದನು. ಇವನ ಮಹಿಷಿ ನಾಗಲಾಂಬಿಕೆ, ಮಗ ಸಂಗನೃಪ. ಭೈರವರಾಜನ ಕಾಲವಾದ ಮೇಲೆ ಅವನ ತಮ್ಮ ಚಿಕ್ಕಭೈರವರಾಯನು ಆಳಿದನು. ಇವನ ಚಿಕ್ಕಮ್ಮನಾದ ಶಂಕರಾಂಬಿಕೆಗೂ ಚಂದ್ರವಂಶದ ಬೈಯನೃಪನಿಗೂ ಮಲಿದೇವಿ ಎಂಬ ಮಗಳೂ ವಸುದಾನವೇರು ಎಂಬ ಮಗನೂ ಹುಟ್ಟಿದರು. ವಸುದಾನವೇರು ಸಾಳ್ವಮಲ್ಲ ಎಂಬ ಹೆಸರಿನಿಂದ ಆಳಿದನು. ಇವನಿಗೆ ಕವಿಸರೋವರರಾಜಹಂಸ, ಜಿನಧರ್ಮಧ್ವಜ, ತ್ರಿಭುವನ ಕಠಾರಿತ್ರಿಣಯನ, ಸಂಯಕ್ತ್ವಚೂಡಾಮಣಿ, ಜಿನದೇವರಥಯಾತ್ರಾಪ್ರಭಾವಕ ಎಂಬ ಬಿರುದುಗಳಿದ್ದುವು. ಇವನೇ ಕವಿಸಾಳ್ವನ ಪೋಷಕನು. ಇವನಲ್ಲಿ ಸಾಳ್ವನು ಪಟ್ಟದ ಕವಿಯಾಗಿದ್ದನು. ಸಾಳ್ವಮಲ್ಲನ ಸಹೋದರಿಯಾದ ಮಲಿದೇವಿಗೂ ಮುಕ್ಕಣ್ಣ ಕಾದಂಬಕನೆಂಬ ಬಿರುದುಳ್ಳ ಶಾಂತದಂಡಾಧೀಶನಿಗೂ ಹುಟ್ಟಿದ ಸಾಳ್ವದೇವನು ಬಳಿಕ ಪಟ್ಟಕ್ಕೆ ಬಂದನು. ಸಾಳ್ವಮಲ್ಲ, ಸಾಳ್ವದೇವ ಇವರಿಬ್ಬರ ಇಷ್ಟಾನುಸಾರವಾಗಿಯೂ ಕವಿ ಭಾರತವನ್ನು ಭಾಮಿನೀಷಟ್ಪದಿಯನ್ನು ಬರೆದನು.

ಸುಮಾರು 1560 ರಲ್ಲಿ ಹುಟ್ಟಿದ ಸಾಗರದ 55 ನೆಯ ಶಾಸನದಲ್ಲಿ ಮೇಲೆ ಹೇಳಿದ ದೊರೆಗಳ ವಿಷಯವು ಹೇಳಿದೆ.'

ಎಂದು (ಕವಿಚರಿತೆ II. ೨೪೩-೨೪೪ ರಲ್ಲಿ) ಬರೆದು,

"ಆದುದರಿಂದ ಕವಿಯ ಕಾಲವು 16 ನೆಯ ಶತಮಾನದ ಮಧ್ಯಭಾಗವಾಗಿರಬಹುದೆಂದು ತೋರುತ್ತದೆ" ಎಂದು ಹೇಳಿದ್ದಾರೆ. ಇಲ್ಲಿ ಪ್ರಸ್ತುತರಾದ ಸಾಳ್ವಮಲ್ಲ, ಸಾಳ್ವದೇವರು ವಾದಿವಿದ್ಯಾನಂದನನ್ನು ಸ್ತುತಿಸುವ ನಗರದ ೪೬ ನೇ ಶಾಸನದಲ್ಲಿಯೂ ಕೀರ್ತಿತರಾಗಿರುವರು. ಈ ಶಾಸನದಲ್ಲಿ ವಾದಿವಿದ್ಯಾನಂದನು ಸಾಳ್ವಮಲ್ಲ (ಶಾಸನದಲ್ಲಿ ಈ ಹೆಸರು 'ಸಾಳ್ವಮಲ್ಲಿ' ಎಂದು ಮುದ್ರಿತವಾಗಿರುವುದು) ಸಾಳ್ವದೇವರಿಂದಲೂ, ಈ ಸಾಳ್ವದೇವನನಂತರ ಪಟ್ಟಕ್ಕೆ ಬಂದ ಸಾಳ್ವಕೃಷ್ಣರಾಯನಿಂದಲೂ ಮತ್ತು ವಿಜಯನಗರದ ಕೃಷ್ಣರಾಯನಿಂದಲೂ ಪೂಜಿತನಾಗಿದ್ದನೆಂದೂ, ವಾದಿವಿದ್ಯಾನಂದನ ಶಿಷ್ಯನಾದ ದೇವೇಂದ್ರಕೀರ್ತಿಯು ವಿಜಯನಗರದ ಕೃಷ್ಣರಾಯನ ತಮ್ಮನಾದ ಅಚ್ಯುತರಾಯನಿಂದ ಪೂಜಿತನಾಗಿದ್ದನೆಂದೂ ಹೇಳಿರುವುದು. ಆದ್ದರಿಂದ ಸಾಳ್ವಮಲ್ಲ, ಸಾಳ್ವದೇವ, ಸಾಳ್ವಕೃಷ್ಣದೇವರಾಯರು ಕ್ರಿ.ಶ. ೧೫೦೮-೧೫೨೯ ರಲ್ಲಿ ವಿಜಯನಗರದಲ್ಲಿ ಆಳುತ್ತಿದ್ದ ಕೃಷ್ಣರಾಯನ ಸಮಕಾಲೀನರೆಂದೂ ಈ ಮೂವರೂ ಕ್ರಿ. ಶ. ೧೫೦೯-೧೫೨೯ ರಲ್ಲಿ ಸಂಗೀತಪುರದಲ್ಲಿ ಆಳುತ್ತಿದ್ದರೆಂದೂ ಗೊತ್ತಾಗುವುದು. ಸಾಳ್ವಕವಿಯು ತನ್ನ ಭಾರತವನ್ನು ಸಾಳ್ವಮಲ್ಲ, ಸಾಳ್ವದೇವರ ಇಷ್ಟಾನುಸಾರವಾಗಿ ಬರೆದುದರಿಂದ ಈ ಗ್ರಂಥವು ೧೫೨೯ ಕ್ಕಿಂತ ಪೂರ್ವದಲ್ಲಿ ಸಾಳ್ವಕೃಷ್ಣದೇವನು ಪಟ್ಟಕ್ಕೆ ಬರುವುದಕ್ಕೆ ಮುಂಚೆಯೇ ಬರೆಯಲ್ಪಟ್ಟಿತೆಂಬುದು ಸ್ಪಷ್ಟ. ಹೀಗೆಯೇ ರಸರತ್ನಾಕರ, ವೈದ್ಯಸಾಂಗತ್ಯಗಳೂ ಪ್ರಾಯಃ ಕ್ರಿ. ಶ. ೧೫೨೯ ಕ್ಕಿಂತ

ಹಿಂದೆಯೇ ಬರೆಯಲ್ಪಟ್ಟವೆಂದು ತೋರುವುದು.* ಕವಿಚರಿತಕಾರರು ಹೇಳಿರುವ ಕ್ರಿ. ಶ. ೧೫೫೦ ನೇ ವರ್ಷಕ್ಕಿಂತ ಬಹುವರ್ಷಗಳ ಹಿಂದೆ ಇವನು ತನ್ನ ಗ್ರಂಥಗಳನ್ನು ಬರೆದನೆಂಬುದರಲ್ಲಂತೂ ಯಾವ ಸಂದೇಹವೂ ಇಲ್ಲ.

* ಈ ಸಾಳ್ವಕವಿಯು ಇಂತಹ ಕಾಲದಲ್ಲಿ ಜೀವಿಸುತ್ತಿದ್ದನೆಂಬುದನ್ನು ನಿರ್ಧರಿಸುವುದಕ್ಕೆ ಮೇಲಿನ ಶಾಸನವಲ್ಲದೆ ಬೇರೆ ಒಂದು ಸಾಧನವಿರುವುದು. ತನ್ನ ಗುರುವು ದೇಶಿಗಣದ ವಿಜಯಕೀರ್ತಿಯ ಮಗನಾದ ಶ್ರುತಕೀರ್ತಿಯೆಂದು ಇವನು ಹೇಳಿಕೊಂಡಿರುವನಷ್ಟೆ. ಈ ಶ್ರುತಕೀರ್ತಿಯ ಶಿಷ್ಯಪ್ರಶಿಷ್ಯಾದಿಗಳ ವಿಷಯವಾಗಿ ಭಟ್ಟಾಕಳಂಕನು ಬರೆಯಿಸಿದ ಬಿಳಿಗಿಯ ಶಾಸನದಿಂದಲೂ (ಕವಿಚರಿತೆ II, ೩೪೮ ನ್ನು ನೋಡಿ) ಶ್ರುತಕೀರ್ತಿ ವಿರಚಿತವಾದ ವಿಜಯಕುಮಾರಿಯ ಚರಿತ್ರೆಯಿಂದಲೂ, ವಿದ್ಯಾನಂದನು ತಾನು ಸಂಸ್ಕೃತದಲ್ಲಿ ಬರೆದ ಪ್ರಾಯಶ್ಚಿತ್ತವೆಂಬ ಗ್ರಂಥಕ್ಕೆ ವಿರಚಿಸಿದ ಕನ್ನಡ ಟೀಕೆಯಿಂದಲೂ ಸ್ವಲ್ಪ ಅಂಶಗಳು ತಿಳಿದುಬರುವುವು. ಇವುಗಳ ಆಧಾರಬಲದಿಂದ ಈ ಗುರುಶಿಷ್ಯಪರಂಪರೆಯನ್ನು ನಾವು ಕೆಳಗಿರುವಂತೆ ಬರೆಯಬಹುದು :

೧. ಶ್ರುತಕೀರ್ತಿ
|
೨. ವಿಜಯಕೀರ್ತಿ
|
೩. ಶ್ರುತಕೀರ್ತಿ
|
೪. ವಿಜಯಕೀರ್ತಿ
|
೫. ಅಕಳಂಕ　೬. ಚಂದ್ರಪ್ರಭ　೭. ವಿದ್ಯಾನಂದ
|
೮. ವಿಜಯಕೀರ್ತಿ
|
೯. ಅಕಳಂಕ
|
೧೦. ಶ್ರುತಕೀರ್ತಿ　ಕರ್ಣಾಟಕ ಶಬ್ದಾನುಶಾಸನದ ಕರ್ತೃವಾದ ಭಟ್ಟಾಕಳಂಕ

ಇವರಲ್ಲಿ ೧, ೨, ೩, ೪, ೫, ೬, ೮ ಮತ್ತು ೯ ನೇ ಜೈನಗುರುಗಳು ಭಟ್ಟಾಕಳಂಕನಿಂದ ಮೇಲೆಹೇಳಿದ ಬಿಳಿಗಿಯ ಶಾಸನದಲ್ಲಿ ಕೀರ್ತಿತರಾಗಿರುವರು. ೧೦ ನೇ ಶ್ರುತಕೀರ್ತಿಯೇ ಶಕ ೧೪೮೮ ನೇ ಪ್ರಭವದಲ್ಲಿ ವಿಜಯಕುಮಾರಿಯ ಚರಿತೆಯನ್ನು ಆರಂಭಿಸಿ ವಿಭವದಲ್ಲಿ ಎಂದರೆ, ಕ್ರಿ.ಶ. ೧೫೬೮ ರಲ್ಲಿ ಮುಗಿಸಿದನು. ಕವಿಚರಿತಕಾರರು (II. ೨೯೯) ಹೇಳಿರುವ ಇವನ 'ತಂದೆ' ಅಕಳಂಕನೂ, 'ಪಿತಾಮಹ' ವಿಜಯಕೀರ್ತಿಯೂ ಆ ಹೆಸರಿನ ಇವನ ಗುರು, ಪರಮಗುರುಗಳಾದ ೯, ೮ ನೆಯ ಗುರುಗಳೇ ಆಗಿರುವರು. ೭ ನೆಯವನಾದ ವಿದ್ಯಾನಂದನಿಗೂ ೪, ೫, ೬ ನೇ

ವಿಜಯಕೀರ್ತ್ಯಾದಿಗಳಿಗೂ ಯಾವ ಸಂಬಂಧವಿತ್ತೆಂದು ನಿಷ್ಕೃಷ್ಟವಾಗಿ ಹೇಳಲಾಗುವುದಿಲ್ಲ. ಇವನು ಮೇಲೆ ಹೇಳಿದ ವಿಜಯಕುಮಾರಿಯ ಚರಿತೆಯಲ್ಲಿಯೂ, ಮೇಲೆ ಹೇಳಿದ ವಿದ್ಯಾನಂದಕೃತ ಪ್ರಾಯಶ್ಚಿತ್ತಗ್ರಂಥದ ಕನ್ನಡ ಟೀಕೆಯಲ್ಲಿಯೂ ಅಕಳಂಕಚಂದ್ರಪ್ರಭರೊಡನೆ ಸ್ತುತನಾಗಿರುವುದರಿಂದ (ಕವಿಚರಿತೆ II. ೨೯೯ ಟಿಪ್ಪಣಿ ; ೯೬ ; ಈ ಎರಡು ಗ್ರಂಥಗಳಲ್ಲಿ ಕೀರ್ತಿತರಾಗಿರುವ ಅಕಳಂಕಚಂದ್ರಪ್ರಭರು ಬಿಳಿಗಿಯ ಶಾಸನದಲ್ಲಿ ಸ್ತುತರಾದ ಅಕಳಂಕಚಂದ್ರಪ್ರಭರೇ ಎಂಬುದರಲ್ಲಿ ಪ್ರಾಯಶಃ ಯಾವ ಸಂದೇಹವೂ ಇಲ್ಲ) ಇವನು ಅವರ ಸಧರ್ಮನೆಂದು ನಾವು ಊಹಿಸಿ ಹೇಳಿರುವೆವು.

ವಿದ್ಯಾನಂದನು ಈ ಗ್ರಂಥವನ್ನು ಬರೆದ ಯುವ ಸಂವತ್ಸರವು ಕ್ರಿ. ಶ. ೧೪೫೫ ನೇ ವರ್ಷವಾಗಿರಬಹುದೆಂದು ಕವಿಚರಿತಕಾರರು (II. ೯೬) ಹೇಳಿರುವರು. ಈ ಅಭಿಪ್ರಾಯವು ತಪ್ಪಾದುದೆಂದು ನಮಗೆ ತೋರುವುದು. ಈ ಗ್ರಂಥದಲ್ಲಿ ಕವಿಯು ತನ್ನ ವಿದ್ಯಾಗುರು ವ್ರತಗುರುತ್ರಯವೆಂದು ಕೀರ್ತಿಸಿರುವ (ಕವಿಚರಿತೆ II. ೯೬) ಗುರುತ್ರಯದಲ್ಲಿ ಅಕಳಂಕಚಂದ್ರಪ್ರಭರು ಶ್ರುತಕೀರ್ತಿಯ ಮೇಲೆ ಹೇಳಿದ ಗ್ರಂಥದಲ್ಲಿಯೂ ಮತ್ತು ಅಕಳಂಕನ ಶಬ್ದಾನುಶಾಸನದಲ್ಲಿಯೂ ಕೀರ್ತಿತರಾದ ಅಕಳಂಕ ಚಂದ್ರಪ್ರಭರೇ ಎಂದೂ ಮೂರನೆಯವನಾದ ವಿದ್ಯಾನಂದನೂ ಶ್ರುತಕೀರ್ತಿಯ ಗ್ರಂಥದಲ್ಲಿ ಸ್ತುತನಾಗಿರುವ ವಿದ್ಯಾನಂದನೇ ಎಂದೂ ನಾವು ಮೇಲೆ ಹೇಳಿರುವೆವಷ್ಟೆ. ಆದ್ದರಿಂದ ತನಗೆ ಬಾಲ್ಯದಿಂದ ಉಪದೇಶಮಾಡಿ ಪಾಲಿಸಿದನೆಂದು ವಿದ್ಯಾನಂದನು ಸ್ತುತಿಸಿರುವ ವಿಜಯಕೀರ್ತಿಯೂ (ಕವಿಚರಿತೆ II. ೯೬) ಮೇಲ್ಕಂಡ ಅಕಳಂಕಚಂದ್ರಪ್ರಭರ ಗುರುವಾದ ವಿಜಯಕೀರ್ತಿಯೋ ಅಥವಾ ಈ ವಿಜಯಕೀರ್ತಿಯ ಶಿಷ್ಯನಾದ ಅಕಳಂಕನ ಶಿಷ್ಯನೂ, ಶ್ರುತಕೀರ್ತಿಯ 'ಪಿತಾಮಹ' ನೂ ಆದ ವಿಜಯಕೀರ್ತಿಯೋ ಆಗಿರಬೇಕು. ಎಂದರೆ, ಶ್ರುತಕೀರ್ತಿಯು ತನ್ನ ಕಾವ್ಯವನ್ನು ಬರೆದ ಕ್ರಿ. ಶ. ೧೫೬೮ ನೇ ವರ್ಷಕ್ಕಿಂತ ಹಿಂಪೆ ಯುವಸಂವತ್ಸರದಲ್ಲಿ ವಿದ್ಯಾನಂದನು ತನ್ನ ಕಾವ್ಯವನ್ನು ಬರೆದಿರಬೇಕು. ಈ ಯುವ ಸಂವತ್ಸರವು ಕ್ರಿ. ಶ. ೧೫೧೫ ಆಗುವುದರಿಂದ ವಿದ್ಯಾನಂದನು ತನ್ನ ಗ್ರಂಥವನ್ನು ಆ ವರ್ಷದಲ್ಲಿ ಬರೆದನೆಂದೂ ಅಲ್ಲಿ ಕೀರ್ತಿತನಾಗಿರುವ ವಿಜಯಕೀರ್ತಿಯು ಅಕಳಂಕಚಂದ್ರಪ್ರಭರ ಗುರುವಾದ ವಿಜಯಕೀರ್ತಿಯೆಂದೂ ವ್ಯಕ್ತವಾಗುವುದು. ಇವನು ತನ್ನ ಶಿಷ್ಯನಾದ ದೇವರಾಯನಿಗೆ ಎಂದರೆ ಸಾಳ್ವದೇವರಾಯನಿಗೆ ಭಟಕಳ ಪಟ್ಟಣವನ್ನು ಕಟ್ಟಿಸಿದನೆಂದು ಬಿಳಿಗಿಯ ಶಾಸನದಲ್ಲಿ ಹೇಳಿರುವುದರಿಂದ ಈ ಪಟ್ಟಣದ ಕಟ್ಟುವಿಕೆಯೂ ಇದೇ ಕಾಲದಲ್ಲಿಯೇ ಎಂದರೆ ಕ್ರಿ.ಶ. ಸುಮಾರು ೧೫೧೫ ರಲ್ಲಿಯೇ ನಡೆದಿರಬೇಕು.

ಈ ವಿಜಯಕೀರ್ತಿಯೇ ಸಾಳ್ವಭಾರತದಲ್ಲಿ ಕೀರ್ತಿತನಾಗಿರುವ ಸಾಳ್ವಕವಿಯ ಗುರುವಾದ ಶ್ರುತಕೀರ್ತಿಯ ಶಿಷ್ಯನು. ಈ ಶ್ರುತಕೀರ್ತಿಯ ಶಿಷ್ಯನೆಂದೂ (ಸಂಗೀತಪುರದಲ್ಲಿ) ಪ್ರತಿಷ್ಠಿತನಾದನೆಂದೂ ಮೇಲೆ ಹೇಳಿದ ಬಿಳಿಗಿಯ ಶಾಸನದಲ್ಲಿ ಹೇಳಲ್ಪಟ್ಟಿರುವ ಸಂಗಮಭೂಪನ ಅಥವಾ ಸಂಗಿರಾಜನ ಮಗನಾದ (೨ನೇ) ಸಾಳುವೇಂದ್ರ ಅಥವಾ ಇಂದಗರಸನು ಕ್ರಿ. ಶ. ೧೪೮೮ ನೇ ಜನವರಿ ೩ ನೇ ತಾರೀಖಿನಲ್ಲಿ ಆಳುತ್ತಿದ್ದನೆಂದು ಸಾಗರದ ೧೬೩ ನೇ ಶಾಸನದಿಂದ ತಿಳಿದುಬರುವುದರಿಂದ ಇವನ ತಂದೆಯಾದ ಸಂಗಿರಾಜನು ಸುಮಾರು ೧೪೫೮ ಅಥವಾ ೧೪೬೮ ರಲ್ಲಿ ಪಟ್ಟಕ್ಕೆ ಬಂದಿರಬಹುದು. ಎಂದರೆ ಸಾಳ್ವನ ಗುರುವಾದ ಶ್ರುತಕೀರ್ತಿಯು ಕ್ರಿ. ಶ. ೧೪೫೮ ಅಥವಾ ೧೪೬೮ ರಲ್ಲಿ ಇದ್ದನು. ಇವನ ಶಿಷ್ಯನಾದ ಸಾಳ್ವನು ಕ್ರಿ. ಶ. ೧೫೩೦ ಕ್ಕಿಂತ ಈಚೆಗೆ ಒಂದು ವೇಳೆ

*　　*　　*

ಉದ್ಭಟಕಾವ್ಯವನ್ನು ಬರೆದನೆಂದು ಸೋಮರಾಜನು 'ಎನ್ನೆರ್ದೆವಂದ ರಾಯಸದ ಲಿಂಗರಸಂ ಬರೆಯಲ್...' ಎಂಬ ಪದ್ಯದಲ್ಲಿ ಹೇಳಿರುವ ರಾಯಸದ ಲಿಂಗರಸನು 'ಕಬ್ಬಿಗರ ಕೈಪಿಡಿ'ಯ ಕರ್ತೃವಾದ **ಲಿಂಗಮಂತ್ರಿಯೇ** ಎಂಬುದರಲ್ಲಿ ಪ್ರಾಯಃ ಯಾವ ಸಂದೇಹವೂ ಇಲ್ಲ. ಈ ಲಿಂಗಮಂತ್ರಿಯು ತಾನು ನುಗ್ಗೆಹಳ್ಳಿಯ ರಾಯಣರಾಜನ ಎಂದರೆ ಸೋಮರಾಜನ ಪಿತಾಮಹನಾದ ರಾಯಣರಾಜನ ಪ್ರಧಾನನೆಂದೂ ಬಹು ಲಿಪಿಜ್ಞನೆಂದೂ ಮೇಲೆ ಹೇಳಿದ ಗ್ರಂಥದಲ್ಲಿರುವ—

ಧುರಧೀರ ನುಗ್ಗೆಹಳ್ಳಿಯ ರಾಯಭೂವರನ |
ಪರಮಪ್ರಧಾನ ಸುಕಲಾಪ್ರವೀಣಂ ಕೀರ್ತಿ |
ಭರಿತದಿಗ್ವಳಯಂ ವಿರೂಪಾಕ್ಷಪಾದಾರವಿಂದಮಕರಂದಭೃಂಗಂ ||
ಸರಸಸಂಗೀತನಿಪುಣಂ ಬಹುಲಿಪಿಜ್ಞ ಭೂ |
ಸುರವರವಿರೂಪಾಕ್ಷಸುತ ಲಿಂಗಮಂತ್ರಿಪಂ |

ಎಂಬ ಪದ್ಯದಲ್ಲಿ ಹೇಳಿಕೊಂಡಿದ್ದಾನೆ (ಕವಿಚರಿತೆ II, ೨೧೫ನ್ನು ನೋಡಿ). 'ಬಹುಲಿಪಿಜ್ಞ'ನಾದ ಇವನೇ ಸೋಮರಾಜನು ಹೇಳಿದ ಉದ್ಭಟಕಾವ್ಯವನ್ನು ಬರೆದನೆಂದು ನಮಗೆ ತೋರುವುದು.

ಇವನು ಮೇಲೆ ಹೇಳಿದ ಗ್ರಂಥವನ್ನು ಸುಮಾರು ೧೫೩೦ ರಲ್ಲಿ ಬರೆದನೆಂದು ಕವಿಚರಿತಕಾರರು (II, ೨೧೫) ಹೇಳುತ್ತಾರೆ. ಆದರೆ ಇವನ ಸ್ವಾಮಿಯಾದ ರಾಯಣರಾಜನು ಕ್ರಿ. ಶ. ಸುಮಾರು ೧೪೪೦–೧೫೩೦ ರಲ್ಲಿ ನುಗ್ಗೆಹಳ್ಳಿ ಸೀಮೆಯನ್ನು ಆಳುತ್ತಿದ್ದನೆಂದು ನಾವು ಮೇಲೆ ಹೇಳಿರುವುದರಿಂದ ಈ ಲಿಂಗಮಂತ್ರಿಯು ಕ್ರಿ. ಶ. ಸುಮಾರು ೧೫೦೫–೧೫೧೫ ರಲ್ಲಿ ಮೇಲೆ ಹೇಳಿದ ಗ್ರಂಥವನ್ನು ಬರೆದನೆಂದು ಊಹಿಸುವುದರಲ್ಲಿ ಪ್ರಾಯಶಃ ವಸ್ತುಸ್ಥಿತಿವಿರೋಧವೇನೂ ಇರಲಾರದು.

ಜೀವಿಸಿದ್ದಾಗ್ಯೂ ಆ ವರ್ಷಕ್ಕಿಂತ ಹಿಂದೆಯೇ ತನ್ನ ಗ್ರಂಥಗಳೆಲ್ಲವನ್ನೂ ಬರೆದಿರಬೇಕೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಸಾಳ್ವನಿಂದ ಸ್ತುತರಾಗಿರುವ ಶ್ರುತಕೀರ್ತಿವಿಜಯಕೀರ್ತಿಗಳು ಜೀವಂಧರಷಟ್ಪದಿಯ ಕರ್ತೃವಾದ ಕೋಟೇಶ್ವರನಿಂದಲೂ ಸ್ತುತಿಸಲ್ಪಟ್ಟಿದಾರೆ (ಕವಿಚರಿತೆ II. ೧೪೬) ಈ ಕೋಟೀಶ್ವರನು ಕ್ರಿ. ಶ. ಸುಮಾರು ೧೫೦೦ ರಲ್ಲಿ ಇದ್ದನೆಂದು ಕವಿಚರಿತಕಾರರು ಹೇಳಿರುವರು (II. ೧೪೫). ಆದರೆ ಈ ಕವಿಯು ಸಂಗಮನ ಆಜ್ಞಾನುಸಾರವಾಗಿ ಕಾವ್ಯವನ್ನು ರಚಿಸಿದನೆಂದು ಆ ಕಾವ್ಯದಿಂದ ತಿಳಿದುಬರುವುದರಿಂದ ಅದನ್ನು ಇವನು ಕ್ರಿ. ಶ. ೧೪೮೮ ಕ್ಕಿಂತ ಹಿಂದೆಯೇ ಬರೆದಿರಬೇಕೆಂಬುದು ಸ್ಪಷ್ಟ; ಸುಮಾರು ೧೪೮೦ ರಲ್ಲಿ ಅದನ್ನು ಇವನು ಬರೆದಿರಬಹುದು.

೨೭. ಶಿಶುಮಾಯಣ.

ಈ ಕವಿಯ ವಿಷಯವಾಗಿ ಕವಿಚರಿತಕಾರರು—

" ಈತನು ತ್ರಿಪುರದಹನಸಾಂಗತ್ಯ, ಅಂಜನಾಚರಿತ್ರೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನು ಜೈನಕವಿ.

ಇವನ ಗ್ರಂಥಗಳಿಂದ ಇವನ ವಿಷಯವಾಗಿ ಈ ಸಂಗತಿಗಳು ತಿಳಿಯಬರುತ್ತವೆ :—

ಹೊಯ್ಸಳದೇಶದಲ್ಲಿ ಕಾವೇರಿಯ ಕಾಲುವೆಯ ಸಮೀಪದಲ್ಲಿರುವ ನಯನಾಪುರವೆಂಬ ಊರಿನಲ್ಲಿ ದೇವರಾಜನ ಇಷ್ಟಾನುಸಾರವಾಗಿ ರಾಜರಾಜನು ಒಂದು ನೇಮಿಜಿನಾಲಯವನ್ನು ಕಟ್ಟಿಸಿದನು. ಅದೇ ಊರಿನಲ್ಲಿ ಮಾಯಣಸೆಟ್ಟಿಯೆಂಬ ಒಬ್ಬ ' ವಣಿಗ್ವರ ' ನಿದ್ದನು. ಅವನ ಹೆಂಡತಿ ತಾಮರಸಿ, ಮಗ ಬೊಮ್ಮಸೆಟ್ಟಿ. ಈತನು —" ಮಾನವಪತಿಗಳ ಸಭೆಯೊಳು ರತ್ನಸಮಾನದೀವದವೊಲೊಪ್ಪುವನು." ಇವನ ಹೆಂಡತಿ ನೇಮಾಂಬಿಕೆ ; ಮಗ ಕವಿ ಶಿಶುಮಾಯಣ. ಇವನ ಗುರು ಕಾಣೂರ್ಗಣದ ಭಾನುಮುನಿ. ಬೆಳುಕೆರೆಯ ಪುರದರಸಾದ ಗುಮ್ಮಟದೇವನು ಹೇಳಿನಲು ಕವಿ ಅಂಜನಾಚರಿತ್ರೆಯನ್ನು ಬರೆದನು.

ತ್ರಿಪುರದಹನಸಾಂಗತ್ಯವು

ಶಕವರ್ಷದ ಸಾವಿರದನೂಱಱೊಳು | ತ್ಸಕಲವಾದಾರು ವತ್ಸರದ |
ಪ್ರಕಟಿತಪುತ್ರವರ್ಷದ ಮಾಘಶುದ್ಧದಿ | ನಕಳಂಕ ಪಾಡ್ಯದೊಳಾಯ್ತು ||

ಎಂದು ಹೇಳಿದೆ. ಪುತ್ರ ವರ್ಷವೆಂದರೆ ನಂದನ ವರ್ಷವೆಂದು ತೋರುತ್ತದೆ. ಆದರೆ 1106 ನೆಯ ವರ್ಷವು ಕ್ರೋಧಿಯಾಗುತ್ತದೆ. ಉತ್ಸಕಲ ಎಂಬ ಪದಕ್ಕೆ ವಿಶೇಷಾರ್ಥವೇನಾದರೂ ಇರಬಹುದೋ ಏನೋ ತಿಳಿಯದು. ಶಕ 1100 ವರ್ಷಗಳಾದ ಮೇಲೆ ಪ್ರಭವಾದಿವತ್ಸರಗಳಲ್ಲಿ ಮಿಕ್ಕ ಕೊನೆಯ 6 ವರ್ಷಗಳಲ್ಲಿಯ ನಂದನ ಎಂದು ಅರ್ಥಮಾಡಿದರೆ ಶಕ 1154 (1233) ಆಗುತ್ತದೆ. ಕವಿಯ ಆಶಯವು ಇದೇ ಆಗಿರಬಹುದೋ ಏನೋ ತಿಳಿಯದು. ಈತನು ಜನ್ನನನ್ನು (1230) ಸ್ತುತಿಸುವುದರಿಂದ ಸ್ವಲ್ಪ ಹೆಚ್ಚು ಕಡಿಮೆ ಅವನ ಸಮಕಾಲದವನಾಗಿದ್ದಿರಬಹುದು. ಒಬ್ಬ ಬೆಳುಕೆರೆಯಧಿಪನಾದ ಗುಮ್ಮಟ್ಟನು 1313 ರಲ್ಲಿದ್ದಂತೆ ಶ್ರ. ಬೆ. 65 ನೆಯ ಶಾಸನದಿಂದ ತಿಳಿಯುತ್ತದೆ. ಕವಿ ಹೇಳುವ ಗುಮ್ಮಟದೇವನು ಇವನೇ ಆಗಿದ್ದಪಕ್ಷದಲ್ಲಿ ಕವಿಯ ಕಾಲವು ಪದ್ಯದಲ್ಲಿ ಕೊಟ್ಟಿರುವ ಕಾಲಕ್ಕಿಂತ 80 ವರ್ಷ ಈಚೆಯಾಗುತ್ತದೆ. ಆದುದರಿಂದ ಕವಿ ಹೇಳುವ ಗುಮ್ಮಟನು ಶಾಸನೋಕ್ತನಾದ ಗುಮ್ಮಟ್ಟನ ಪಿತಾಮಹನಾಗಿರಬಹುದೆಂದು ತೋರುತ್ತದೆ."

ಎಂದು ಕವಿಚರಿತೆ ೧ ನೇ ಸಂಪುಟದ ೩೪೯-೩೫೦ ನೇ ಪುಟಗಳಲ್ಲಿ ಹೇಳಿ,

ನಮಗೆ ದೊರೆತಿರುವ ಸಾಂಗತ್ಯ ಕವಿಗಳಲ್ಲಿ ಈತನೇ ಮೊದಲನೆಯವನು ; ಸಾಂಗತ್ಯದಲ್ಲಿ ಅನೇಕ ಜೈನ ವೀರಶೈವ ಬ್ರಾಹ್ಮಣ ಗ್ರಂಥಗಳು ಹುಟ್ಟಿವೆ. ಸುಮಾರು 13 ನೆಯ ಶತಮಾನದಲ್ಲಿ ಹಾಡಿನ ರೂಪವಾದ ಈ ಸಾಂಗತ್ಯಗ್ರಂಥಗಳ ರಚನೆ ಆರಂಭವಾದಂತೆ ತೋರುತ್ತದೆ"

ಎಂದು ೩೫೧ ನೇ ಪುಟದಲ್ಲಿ ಬರೆದಿದ್ದಾರೆ.

ಮೇಲಿನ ಪದ್ಯದಲ್ಲಿರುವ 'ಪುತ್ರವರ್ಷ' ಎಂಬ ಪದಕ್ಕೂ 'ಉತ್ಸಕಲ' ಎಂಬ ಪದಕ್ಕೂ ಅರ್ಥವು ಇಂಥದೇ ಎಂದು ನಿರ್ಧರಿಸಲಾಗುವುದಿಲ್ಲವಾದುದರಿಂದ ಆ ಪದ್ಯದ ಆಧಾರಬಲದಿಂದ ಕವಿಯು ಜೀವಿಸಿದ್ದ ಕಾಲವನ್ನು ಗೊತ್ತುಮಾಡುವುದು ಅಸಾಧ್ಯವೆಂದೇ ಹೇಳಬೇಕು. ಅಲ್ಲದೆ ಕವಿಯು ಆ ಪದ್ಯವನ್ನು ಮೇಲೆ ಕೊಟ್ಟಿರುವ ರೂಪದಲ್ಲಿ ಬರೆದನೇ ಎಂಬ ವಿಷಯದಲ್ಲಿಯೂ ನಮಗೆ ಸಂದೇಹವಿರುವುದು. ಏಕೆಂದರೆ ಮೇಲೆಹೇಳಿದ ಈ ಎರಡು ಗ್ರಂಥಗಳನ್ನು ಬಿಟ್ಟರೆ ಸಾಂಗತ್ಯದಲ್ಲಿ ಬರೆದಿರುವ ಬೇರೆ ಯಾವ ಗ್ರಂಥವೂ ಕವಿಚರಿತೆಯ ೧ ನೇ ಸಂಪುಟದಲ್ಲಿ ಹೇಳಲ್ಪಟ್ಟಿಲ್ಲ. ಎರಡನೇ ಸಂಪುಟದಲ್ಲಿ ಹೇಳಲ್ಪಟ್ಟಿರುವ ಸಾಂಗತ್ಯಗ್ರಂಥಗಳಲ್ಲಿ ಕ್ರಿ. ಶ. ಸುಮಾರು ೧೪೧೦ ರಲ್ಲಿ ದೇಪರಾಜನು ಬರೆದ 'ಸೊಬಗಿನ ಸೋನೆ'ಯೇ ಮೊದಲನೆಯದಾಗಿರುವುದು. ಕವಿಚರಿತಕಾರರು ಹೇಳುವಂತೆ ಅಂಜನಾಚರಿತ್ರವು ೧೨೩೩* ಬರೆಯಲ್ಪಟ್ಟಿದ್ದಲ್ಲಿ ೧೪೧೦ ರ ವರೆಗೆ, ಎಂದರೆ ಈ ಅಂಜನಾಚರಿತ್ರವು ಹುಟ್ಟಿದನಂತರ ೧೭೭ ವರ್ಷಗಳ ವರೆಗೆ, ಸಾಂಗತ್ಯಗ್ರಂಥಗಳನ್ನು ಕನ್ನಡಕವಿಗಳಲ್ಲಾವನೂ ಏಕೆ ಬರೆಯಲಿಲ್ಲ? ಆದ್ದರಿಂದ ಇದನ್ನು ಪರ್ಯಾಲೋಚಿಸಿದಲ್ಲಿ, ಅಂಜನಾಚರಿತ್ರವು ಕ್ರಿ. ಶ. ೧೨೩೩ ರಲ್ಲಿ ರಚಿಸಲ್ಪಡಲಿಲ್ಲವೆಂದೂ, ಮೇಲೆ ಹೇಳಿರುವ ಪದ್ಯದಲ್ಲಿ ಏನೋ ಅಪಪಾಠವಿರುವುದೆಂದೂ, ಶಿಶುಮಾಯಣನು ಪ್ರಾಯಶಃ ಕ್ರಿ. ಶ. ೧೪೧೦ ಕ್ಕಿಂತ ಈಚೆಗೆ ಸಾಂಗತ್ಯ ಕಾವ್ಯಗಳನ್ನು ಕವಿಗಳು ವಾಡಿಕೆಯಾಗಿ ಬರೆಯುತ್ತಿದ್ದ ಕಾಲದಲ್ಲಿ ಎಂದರೆ ಕ್ರಿ. ಶ. ೧೫, ೧೬, ೧೭ ನೇ ಶತಮಾನಗಳಲ್ಲಿ ಯಾವಾಗಲೋ ಜೀವಿಸಿದ್ದು ತನ್ನ ಕಾವ್ಯಗಳನ್ನು ಬರೆದನೆಂದೂ ನಮಗೆ ತೋರುವುದು.

ಅಂಜನಾಚರಿತ್ರೆಯಲ್ಲಿ ಶಿಶುಮಾಯಣನು ಸ್ತುತಿಸಿರುವ ಜೈನಗುರುಗಳ ಹೆಸರನ್ನು ನೋಡಿದರೆ ಇವನು ಕ್ರಿ. ಶ. ೧೭ ನೇ ಶತಮಾನದ ಮಧ್ಯಭಾಗದಲ್ಲಿದ್ದನೆಂದು ನಾವು ಊಹಿಸಬೇಕಾಗುವುದು.† ಈ ಗ್ರಂಥದಲ್ಲಿ ಇವನು ಮಾಘಣಂದಿ, ಜಿನಸೇನ,

---

* ಸ್ವಾಮಿಕಣ್ಣು ಪಿಳ್ಳೆಯವರೂ ಮತ್ತು ಸೂಯಲ್‌ರವರೂ ತಮ್ಮ ತಮ್ಮ ಪುಸ್ತಕದಲ್ಲಿ ಕೊಟ್ಟಿರುವ ಕೋಷ್ಠಕಗಳ ಪ್ರಕಾರ ನಂದನವರ್ಷವು (ದಾಕ್ಷಿಣಾತ್ಯ ವ್ಯವಹಾರರೀತ್ಯಾ) ಕ್ರಿ. ಶ. ೧೨೩೨ ಆಗುವುದು. ಕವಿಚರಿತಕಾರರು '೧೨೩೩' ಎಂದು ಏಕೆ ಬರೆದಿರುವರೋ ನಮಗೆ ತಿಳಿಯದು.

† ಕವಿಚರಿತೆಯ ೨ ನೇ ಸಂಪುಟದಲ್ಲಿ ಹೇಳಿರುವ ಗ್ರಂಥಕರ್ತೃಗಳಲ್ಲಿ ೧೫, ೧೬ ಮತ್ತು ೧೭ ನೇ ಶತಮಾನಗಳಲ್ಲಿ ೩೪, ೬೧ ಮತ್ತು ೯೪ ಜನರು ಪದ್ಯಗ್ರಂಥಕರ್ತೃಗಳಾಗಿದ್ದರು. ಇವರಲ್ಲಿ ೧೫ನೇ ಶತಮಾನದಲ್ಲಿ ಇಬ್ಬರು ಮಾತ್ರ ಬರೀ ಸಾಂಗತ್ಯಗ್ರಂಥಗಳನ್ನೂ, ೨೮ ಜನರು ಷಟ್ಪದೀ ಗ್ರಂಥಾದಿಗಳನ್ನೂ, ನಾಲ್ವರು ಸಾಂಗತ್ಯ ಮತ್ತು ಷಟ್ಪದೀ ಗ್ರಂಥಾದಿಗಳನ್ನೂ ಬರೆದರು. ೧೬ ನೇ ಶತಮಾನದಲ್ಲಿದ್ದ ಈ ಮೂರು ವಿಧವಾದ ಪದ್ಯ ಗ್ರಂಥಕಾರರ ಸಂಖ್ಯೆಯು ೧೯, ೩೬ ಮತ್ತು ೬ ಆಗುವುದು ; ೧೭ ನೇ ಶತಮಾನದಲ್ಲಿದ್ದ ಈ ಮೂರು ವಿಧವಾದ ಪದ್ಯಗ್ರಂಥಕಾರರ ಸಂಖ್ಯೆಯು

ಸಮಂತಭದ್ರ, ನೇಮಿಚಂದ್ರ, ರಾಮಚಂದ್ರ, ಪ್ರಭಾಚಂದ್ರ, ಸೋಮಜಿದಕಲಂಕ ಚಂದ್ರ, ಜಿನಚಂದ್ರ, ಭದ್ರಬಾಹು, ಸುಭದ್ರಾರ್ಯೆ, ಪರವಾದಿಧ್ವಂಸಕ ಪಂಡಿತ ಯೋಗಿ, ವಾದಿವಿದ್ಯಾನಂದ, ವರ್ಧಮಾನ, ವೀರಸೇನ, ಕಾಣೂರ್ಗಣದ ದೇವಕೀರ್ತಿ, ಶ್ರುತಕೀರ್ತಿ, ವಿಜಯಸುಕೀರ್ತಿ, ಭಾಭೂಷಣ, ರಾಮಚಂದ್ರ, ಪ್ರಭೇಂದು, ಇಂದು ಕೀರ್ತಿ, ಸಾಸಿರಕೀರ್ತಿ, ದೇಶೀಯಗಣದ ಚಂಗದೇಶದ ಪ್ರಭೇಂದು, ಸಮಂತಭದ್ರ, ಕಾಣೂರ್ಗಣದ ಭಾನುಮುನಿ, ಯತಿವರ್ಧಮಾನ, ನೇಮಿಚಂದ್ರ, ಗುಮ್ಮಟದೇವ ಸೂರಿ, ಪಂಡಿತ ಎಂದು ಇಷ್ಟು ಜೈನಗುರುಗಳನ್ನು ಸ್ತುತಿಸಿರುವನೆಂದು ಕವಿಚರಿತ ಕಾರರು (ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣ; ಪುಟ ೩೫೧ ಟಿಪ್ಪಣಿ) ಹೇಳಿರುವರು ಇಲ್ಲಿ ಸ್ತುತನಾಗಿರುವ ವಾದಿವಿದ್ಯಾನಂದನು ನಗರದ ೪೬ ನೇ ಶಾಸನದಲ್ಲಿ ಕೀರ್ತಿತನಾಗಿರುವ ಬಲಾತ್ಕಾರಗಣದ ಆ ಹೆಸರಿನ ಗುರುವೆಂದು ತೋರುವುದು. ಇವನು ಕ್ರಿ.ಶ. ೧೫೦೯-೧೫೨೯ ರಲ್ಲಿ ಆಳಿದ ವಿಜಯನಗರದ ಕೃಷ್ಣ ರಾಯನ ಸಮಕಾಲೀನನಾಗಿದ್ದನೆಂದು ನಾವು ಮೇಲೆ (ಪುಟ ೨೨೪) ಹೇಳಿರುವೆವು. ಹೀಗೆಯೇ ಶಿಶುಮಾಯಣನಿಂದ ಸ್ತುತನಾಗಿರುವ ಕಾಣೂರ್ಗಣದ ಭಾನುಮುನಿಯು ವಜ್ರಕುಮಾರ ಚರಿತೆಯ ಕರ್ತೃವಾದ ಬ್ರಹ್ಮಕವಿಯಿಂದ ಸ್ತುತನಾದ (ಕವಿಚರಿತೆ II ೩೪೨ ನ್ನು ನೋಡಿ) ಕಾಣೂರ್ಗಣದ ಭಾನುಮುನಿಯೇ ಎಂದು ತೋರುವುದಲ್ಲದೆ ಕಾರ್ಕಳದ ಗೊಮ್ಮಟೇಶ್ವರ ಚರಿತೆಯ ಕರ್ತೃವಾದ ಚಂದ್ರಮನು ಸ್ತುತಿಸಿರುವ (ಕವಿಚರಿತೆ II. ೩೬೨) ಕಾಣೂರ್ಗಣದ ಭಾನುಕೀರ್ತಿಯಿಂದ ಅಭಿನ್ನನೆಂದು ತೋರುವುದು.* ಹೀಗೆಯೇ ಶಿಶುಮಾಯಣನಿಂದ ಸ್ತುತರಾದ ಇಂದುಕೀರ್ತಿ, 'ದೇಶೀಯಗಣದ ಚಂಗದೇಶದ ಪ್ರಭೇಂದು' ಗಳು ಧನ್ಯಕುಮಾರಚರಿತೆಯ ಕರ್ತೃವಾದ ಆದಿಯಪ್ಪನಿಂದ ಸ್ತುತರಾದ (ಕವಿಚರಿತೆ II. ೪೧೫) 'ದೇಸಿಯಗಣದ' ಚಂದ್ರಕೀರ್ತಿ ಮತ್ತು ಅವನ 'ಮಗ' ಪ್ರಭೇಂದು ಮುನಿಗಳೆಂದೇ ತೋರುವುದು. ಶಿಶುಮಾಯಣನು ಸ್ತುತಿಸುವ ಶ್ರುತಕೀರ್ತಿ, ವಿಜಯಸುಕೀರ್ತಿ (ಎಂದರೆ ವಿಜಯ ಕೀರ್ತಿ) ಗಳೂ ಹೀಗೆಯೇ ನಾವು ಮೇಲೆ (೨೨೫ ನೇ ಪುಟದಲ್ಲಿ) ಪ್ರಸ್ತಾವಮಾಡಿರುವ ಶ್ರುತಕೀರ್ತಿ ವಿಜಯಕೀರ್ತಿಗಳೇ ಆಗಿರಬಹುದು.

೩೭, ೫೧, ಮತ್ತು ೬ ಆಗುವುದು. ಎಂದರೆ ೧೫, ೧೬ ನೇ ಶತಮಾನಗಳಿಗಿಂತಲೂ ೧೭ ನೇ ಶತಮಾನದಲ್ಲಿ ಸಾಂಗತ್ಯಗ್ರಂಥಗಳು ಹೆಚ್ಚಾಗಿ ಬರೆಯಲ್ಪಟ್ಟವು.

* ಈ ಗುರುಗಳನ್ನು ಸ್ತುತಿಸುವ ಪದ್ಯಾವಳಿಗಳು ಕವಿಚರಿತೆಯಲ್ಲಿ ಕೊಡಲ್ಪಟ್ಟಿಲ್ಲವಾದುದರಿಂದ ಈ ಮೇಲೆ ಹೇಳಿದ ಕವಿಗಳಿಂದ ಸ್ತುತರಾಗಿರುವ ಭಾನುಮುನಿಯೇ ಮೊದಲಾದ ಗುರುಗಳು ಶಿಶುಮಾಯಣನಿಂದ ಸ್ತುತರಾದ ಆ ಹೆಸರಿನ ಗುರುಗಳಿಂದ ಅಭಿನ್ನರೆಂದು ನಿಷ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಮೇಲೆ ಹೇಳಿದ ವಜ್ರಕುಮಾರಚರಿತೆಯನ್ನು ಬ್ರಹ್ಮಕವಿಯು ಕ್ರಿ. ಶ. ಸುಮಾರು ೧೬೦೦ ರಲ್ಲಿಯೂ, ಕಾರ್ಕಳದ ಗೊಮ್ಮಟೇಶ್ವರ ಚರಿತೆಯನ್ನು ಚಂದ್ರಮನು ೧೬೪೬ ರಲ್ಲಿಯೂ, ಧನ್ಯಕುಮಾರಚರಿತೆಯನ್ನು ಆದಿಯಪ್ಪನು ಸುಮಾರು ೧೬೫೦ ರಲ್ಲಿಯೂ ಬರೆದರೆಂದು ಕವಿಚರಿತಕಾರರು ಹೇಳಿರುವರು. ಆದುದರಿಂದ ಮೇಲೆ ಹೇಳಿದ ಗುರುಗಳನ್ನು ತನ್ನ ಗ್ರಂಥದಲ್ಲಿ ಸ್ತುತಿಸಿ, ತಾನು ಕಾಣೂರ್ಗಣದ ಭಾನುಮುನಿಯ* ಶಿಷ್ಯನೆಂದು ಹೇಳಿಕೊಂಡಿರುವ ಶಿಶುಮಾಯಣನೂ ಕ್ರಿ. ಶ. ಸುಮಾರು ೧೬೬೦ ರಲ್ಲಿ ತನ್ನ ಗ್ರಂಥಗಳನ್ನು ಬರೆದನೆಂದು ನಮಗೆ ತೋರುವುದು.

---

* ಶಿಶುಮಾಯಣನಂತೆ ಕಾಣೂರ್ಗಣದ ಭಾನುಮುನಿಯನ್ನು ಹೊಗಳಿರುವ ಬ್ರಹ್ಮಕವಿಯು ಕ್ರಿ. ಶ. ಸುಮಾರು ೧೬೦೦ ರಲ್ಲಿದ್ದನೆಂದು ಕವಿಚರಿತಕಾರರು ಹೇಳಿರುವರಷ್ಟೆ. ಈ ಬಹ್ಮಕವಿಯು ತನ್ನ ಗುರುವಾದ ಗುಣಭದ್ರನ ಬಳಿಕ ಚಾರುಕೀರ್ತಿಪಂಡಿತ, ವಿದ್ಯಾನಂದ, ಲಕ್ಷ್ಮೀಸೇನಯತಿ, ಕಾಣೂರ್ಗಣದ ಭಾನುಮುನಿ, ಪಾಲ್ಯಕೀರ್ತಿ, ಶಾಂತಕೀರ್ತಿ ಎಂದು ಇಷ್ಟು ಜೈನಗುರುಗಳನ್ನು ಸ್ತುತಿಸಿರುವನು (ಕವಿಚರಿತೆ II, ೩೪೨). ಕ್ರಿ. ಶ. ೧೬೫೯ ರಲ್ಲಿ ಜ್ಞಾನಚಂದ್ರಚರಿತೆಯನ್ನು ಬರೆದ ಪಾಯಣವರ್ಣಿಯೂ ತನ್ನ ಗ್ರಂಥದಲ್ಲಿ 'ಶಿಬಿಕೆಯನು ದೈವಂಗಳಿಂದ ಹೊರಿಸಿದ' ಪಂಡಿತಮುನಿ, ಲಲಿತಕೀರ್ತಿ, ಬಲಾತ್ಕಾರಗಣದ ವಿದ್ಯಾನಂದ, ಕಾಣೂರ್ಗಣದ ದೇವಕೀರ್ತಿ, ಲಕ್ಷ್ಮೀಸೇನ' ಎಂಬ ಗುರುಗಳನ್ನು ಸ್ತುತಿಸಿರುವನು (ಕವಿಚರಿತೆ II, ೫೫೬). ಬಹ್ಮಕವಿಯು ಹೊಗಳಿರುವ ಚಾರುಕೀರ್ತಿಪಂಡಿತ, ವಿದ್ಯಾನಂದ, ಲಕ್ಷ್ಮೀಸೇನರು ಪಾಯಣನಿಂದ ಸ್ತುತಿಸಲ್ಪಟ್ಟ ಮೇಲೆಹೇಳಿದ ಪಂಡಿತಮುನಿ, ಬಲಾತ್ಕಾರಗಣದ ವಿದ್ಯಾನಂದ, ಲಕ್ಷ್ಮೀಸೇನರಿಂದ ಪ್ರಾಯಃ ಅಭಿನ್ನರೆಂದೇ ತೋರುವುದರಿಂದ ಈ ಬ್ರಹ್ಮಕವಿಯೂ ಕ್ರಿ. ಶ. ೧೬೫೦ ರಲ್ಲಿ ತನ್ನ ವಜ್ರಕುಮಾರ ಚರಿತೆಯನ್ನು ಬರೆದನೆಂದು ಕಾಣಿಸುವುದು.

ಪಾಯಣನು ಹೊಗಳಿರುವ ಕಾಣೂರ್ಗಣದ ದೇವಕೀರ್ತಿಯು ಶಿಶುಮಾಯಣನಿಂದ ಸ್ತುತನಾದ ಕಾಣೂರ್ಗಣದ ದೇವಕೀರ್ತಿಯಿಂದ ಭಿನ್ನನಲ್ಲವೆಂದು ತೋರುವುದು.

೨೮. ನಾಗವರ್ಮಾಚಾರ್ಯ.

ಚಂದ್ರಚೂಡಾಮಣಿಶತಕವು ಒಬ್ಬ ನಾಗವರ್ಮಾಚಾರ್ಯನಿಂದ ರಚಿಸಲ್ಪಟ್ಟಿತೆಂದು ಕವಿಚರಿತಕಾರರು ಹೇಳಿ ಈ ನಾಗವರ್ಮಾಚಾರ್ಯನನ್ನು ಕುರಿತು—

" ಈತನು ಚಂದ್ರಚೂಡಾಮಣಿಶತಕವನ್ನು ಬರೆದಿದ್ದಾನೆ. ಈ ಗ್ರಂಥದಲ್ಲಿಯ

ಉದಯಾದಿತ್ಯನ ಸಂಧಿವಿಗ್ರಹಿಲಲಾಮಂ ನಾಗವರ್ಮಂ ಸಮಂ |
ತುದಯಾದಿತ್ಯನ ರಾಯಭಾರಿಯೆನಿಸಿರ್ದಾತ್ಮಾಗ್ರಜಂ ಭಾಸ್ಕರಂ |
ಮೊದಲಾದೀಶ್ವರಭಕ್ತರಪ್ಪಿವರ್ಗೆ ಪೇೞ್ದೀ ಜ್ಞಾನಸಾರಂ ಸುಖಾ |
ಸ್ಪದ ಮೊಲ್ದೋದುಗೆ ಭುಕ್ತಿಮುಕ್ತಿಫಲಮಂ ಶ್ರೀಚಂದ್ರಚೂಡಾಮಣೀ ||

ಎಂಬ ಪದ್ಯದಿಂದ ಈತನು ಉದಯಾದಿತ್ಯರಾಜನಲ್ಲಿ ಸಂಧಿವಿಗ್ರಹಿಯಾಗಿದ್ದಂತೆಯೂ ಉದಯಾದಿತ್ಯನಲ್ಲಿ ರಾಯಭಾರಿಯಾಗಿದ್ದ ತನ್ನ ಅಣ್ಣ ಭಾಸ್ಕರ ಮೊದಲಾದವರಿಗೋಸ್ಕರ ಈ ಗ್ರಂಥವನ್ನು ಹೇಳಿದಂತೆಯೂ ತಿಳಿಯಬರುತ್ತದೆ.

ಶಿಕಾರಿಪುರದ ತಾಲ್ಲೂಕಿನಲ್ಲಿಯ 129 ನೆಯ ಶಾಸನದಿಂದ (1071) ಚಾಳುಕ್ಯರಾಜನಾದ ಭುವನೈಕಮಲ್ಲನಲ್ಲಿ (1069-1076) " ಶ್ರೀಮನ್ಮಹಾಪ್ರಧಾನಂ ಹಿರಿಯ ಸಂಧಿವಿಗ್ರಹಿ ಮನೆವೆರ್ಗಡೆ ದಂಡನಾಯಕಂ ಬ್ರಹ್ಮಕ್ಷತ್ರಶಿಖಾಮಣಿ ರಾಜಾಧಿರಾಜಂ ಕೋಳಾಳಪುರವರೇಶ್ವರಂ ನಂದಗಿರಿನಾಥಂ " ಆದ ಉದಯಾದಿತ್ಯನು " ಬನವಸೆ 12,000, ಸಾಂತಳಿಗೆ 1000, ಮಂಡಳಿ 1000 ಪದಿನೆಂಟಗ್ರಹಾರಂ " ಇವುಗಳನ್ನು ಆಳುತ್ತಿದ್ದಂತೆಯೂ ಅವನ ಕಾಲದಲ್ಲಿ ಬಹಳ ಪ್ರಸಿದ್ಧರಾದ ಅದ್ವೈತಿ ಗುಣಗಳ್ನನಾಗವರ್ಮಾಚಾರ್ಯರೆಂಬವರೊಬ್ಬರು ಇದ್ದಂತೆಯೂ ತಿಳಿಯುತ್ತದೆ. ಈ ಶಾಸನೋಕ್ತನಾದ ನಾಗವರ್ಮನೇ ಈ ಕವಿಯಾಗಿರಬಹುದೆಂದು ಊಹಿಸುತ್ತೇವೆ. ಹಾಗಿದ್ದಪಕ್ಷದಲ್ಲಿ ಇವನು ಸುಮಾರು 1070 ರಲ್ಲಿದ್ದಿರಬೇಕು. ಈ ಕವಿಗೆ ಗುಣಗಳ್ನನೆಂಬ ಬಿರುದಿದ್ದಂತೆಯೂ ಈತನು ಅದ್ವೈತಿಯಾಗಿಯೂ ದೊಡ್ಡ ಪಂಡಿತನಾಗಿಯೂ ಇದ್ದಂತೆಯೂ ಮೇಲಣ ಶಾಸನದ ಈ ಪದ್ಯಗಳಿಂದ ತಿಳಿಯುತ್ತದೆ :—

ಆನಂದಾದ್ವಯಸತ್ಯ | ಜ್ಞಾನಮಯರ್ ನೆಗೞ್ದರಖಿಳದೊಳ್ ನಿಷ್ಕಳನಾ ||
ದಾನಂದರ್ ತನ್ನಾಮಾ | ಧೀನರ್ ಗುಣಗಳ್ನನಾಗವರ್ಮಾಚಾರ್ಯರ್ ||
ಶ್ರೀಮನ್ಮುಕ್ತಿವಧೂಲೀ | ಲಾಮಂಗಳತಿಳಕನೆಸೆದನದ್ವಯಮಹಿಮೋ ||
ದ್ದಾಮಂ ಸಂಪೂರ್ಣಂ ವಿ | ದ್ಯಾಮೂರ್ತಿ ಜಿತಾತ್ಮನಕ್ಷರಂ ಗುಣಗಳ್ನಂ ||

ತ್ರಿ|| ನುಡಿವ ತತ್ವದ ಮಾತಂ ಬಿಡಲಾರದೇನುಮಂ |
ನುಡಿವಳಿಯಂತೆ ನಡೆವಳಿಯೆನಿಸಿದಂ |
ನುಡಿದಂತೆ ಗಂಡಂ ಗುಣಗಳ್ನಂ ||

ಈತನು ಬಲಿಪುರದಲ್ಲಿ ದೇವಾಲಯಗಳನ್ನೂ ಮುತ್ತೂರೆಡೆಯಲ್ಲಿ ಸಿದ್ಧತೀರ್ಥವನ್ನೂ ಮಾಡಿಸಿದಂತೆ ತಿಳಿಯಬರುತ್ತದೆ. "

ಎಂದು ಕವಿಚರಿತೆ I, ೬೮-೬೯ ರಲ್ಲಿ ಬರೆದಿರುತ್ತಾರೆ.

ಇಲ್ಲಿ ಹಲವು ತಪ್ಪುಗಳಿರುವುವು:—

ಮೇಲೆಹೇಳಿದ ಷಿಕಾರಿಪುರದ ೧೨೯ ನೇ ಶಾಸನದಲ್ಲಿ 'ಸಮಧಿಗತಪಂಚ ಮಹಾಶಬ್ದ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕನಾಸ್ಥಾನ ವಸ್ತುನಾಯಕಂ ನಿಯೋಗಯೋಗಂಧರಾಯಣಂ ಚತುರಪಾರಾಯಣಂ ವಿವೇಕ ವಿದ್ಯಾಧರಂ ಸಕಳಕಳಾಧರಂ ಹರಚರಣಸ್ಮರಣಪರಿಣತಾಂತಃಕರಣಂ ಚಾಳುಕ್ಯರಾಜ್ಯ ಸಮುದ್ಧರಣಂ ವಿಕ್ರಮೋತ್ತುಂಗನಸಹಾಯಸಿಂಗ ಶ್ರೀಮದ್ಭುವನೈಕಮಲ್ಲದೇವಪಾ ದಾರವಿಂದಷಟ್ಚರಣಂ ಸಮಸ್ತಗುಣಾಭರಣಂ ಶ್ರೀಮನ್ಮಹಾಪ್ರಧಾನಂಪಿರಿಸಂಧಿವಿಗ್ರಹಿ ಮನೆವೆರ್ಗ್ಗಡೆದಂಡನಾಯಕಂ' ಆದ ಒಬ್ಬ ಉದಯಾದಿತ್ಯನು ಕೀರ್ತಿತನಾಗಿರುವನೇ ಹೊರತು 'ಬ್ರಹ್ಮಕ್ಷತ್ರಶಿಖಾಮಣಿ ರಾಜಾಧಿರಾಜಂ ಕೋಳಾಳಪುರವರೇಶ್ವರಂ ನಂದಗಿರಿನಾಥಂ' ಎಂಬ ಬಿರುದುಗಳುಳ್ಳಂಥ ಉದಯಾದಿತ್ಯನು ಕೀರ್ತಿತನಾಗಿಲ್ಲ. ಇದೇ ತಾಲ್ಲೂಕಿನ ೧೩೦ ನೇ ಶಾಸನದಲ್ಲಾದರೆ 'ಸಮಸ್ತ ಭುವನಸ್ತುತ ಬ್ರಹ್ಮಕ್ಷತ್ರ ವೀರಾನ್ವಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಕೋಳಾಳ ಪುರವರೇಶ್ವರಂ ನಂದಗಿರಿನಾಥಂ ಮದಗಜೇಂದ್ರಲಾಂಛನಂ ಸೋಮೇಶ್ವರಲಬ್ಧವರ ಪ್ರಸಾದ ಗಂಗಕುಸುಮಾಯುಧಂ ನನ್ನಿಯಗಂಗಂ ಜಯದುತ್ತರಂಗಂ ಸಕಳಜನಚಿಂ ತಾಮಣಿ ಮಂಡಲಿಕಮಕುಟಚೂಡಾಮಣಿ ಶ್ರೀಮಚ್ಚಾಳುಕ್ಯಗಂಗಪೆರ್ಮ್ಮಾಡಿ ಭುವನೈಕ ವೀರಂ' ಆದ ಒಬ್ಬ ಉದಯಾದಿತ್ಯದೇವನು ಗಂಗವಾಡಿ ಮೊದಲಾಗಿ ಬನವಸೆ ೧೨,೦೦೦, ಸಾಂತಳಿಗೆ ೧೦೦೦, ಮಂಡಳಿ ೧೦೦೦ ಮತ್ತು ೧೮ ಅಗ್ರಹಾರ ಗಳನ್ನೂ 'ದುಷ್ಟನಿಗ್ರಹ ಶಿಷ್ಟಪ್ರತಿಪಾಲನದಿಂ' ಆಳುತ್ತಾ 'ಸುಖಸಂಕಥಾ ವಿನೋದದಿಂ ರಾಜಧಾನಿ–ಬಳ್ಳಿಗಾವೆಯೊಳಿರ್ದ್ದು ಧರ್ಮಬುದ್ಧಿಯಿಂ ನಿಜಸ್ವಾಮಿ ಶ್ರೀಮದ್ಭುವನೈಕಮಲ್ಲದೇವರ್ಗ್ಗೆ ಬಿನ್ನಪಂಗೈದು. . ಶಕವರ್ಷ ೯೯೭ ನೆಯ ರಾಕ್ಷಸ ಸಂವತ್ಸರದ ಪುಷ್ಯ ಶುದ್ಧ ೧ ಸೋಮವಾರದಂದಿನುತ್ತರಾಯಣ ಸಂಕ್ರಾಂತಿ ಪರ್ಬ್ಬನಿಮಿತ್ತದಿಂ' ಎಂದರೆ ಕ್ರಿ. ಶ. ೧೦೭೬ ನೇ ಜನವರಿ ೨೩ ನೇ ತಾರೀಖು ಸೋಮವಾರದಂದು (ಮೇಲೆ ಹೇಳಿದ ನನ್ನ ಪುಸ್ತಕದ ೯೯ ನೇ ಪುಟದಲ್ಲಿ ನಂ. ೧೨೪ ನ್ನು ನೋಡಿ) ಶ್ರೀಮತ್ಪೂರ್ಣನಂದ ಭಟ್ಟಾರರ ಕಾಲಂ ಕರ್ಚ್ಚಿ ನಾರಸಿಂಹ ದೇವರ ದೇವಾಲಯದಲ್ಲಿ ದೇವಪೂಜೆಗಾಗಿ ಒಂದು ಗ್ರಾಮವನ್ನು ಕೊಟ್ಟನೆಂದು ಹೇಳಿರುವುದು. ಮೇಲೆ ಹೇಳಿದ ೧೨೯ ನೆಯ ಶಾಸನವೂ ಈ ದಿವಸದಲ್ಲಿಯೇ (ಎಂದರೆ ೧೦೭೬ ನೇ ಜನವರಿ ೨೩ ನೇ ಸೋಮವಾರದಂದು) ಹುಟ್ಟಿದ್ದು (ಮೇಲೆ ಹೇಳಿದ ಪುಸ್ತಕದ ೯೯ ನೇ ಪುಟದಲ್ಲಿ ನಂ. ೧೨೩ ನ್ನು ನೋಡಿ). ಇದರಲ್ಲಾದರೆ ಮೇಲೆ

ಹೇಳಿದ 'ಪಿರಿಸಂಧಿವಿಗ್ರಹಿ ಮನೆವೆರ್ಗ್ಗಡೆದಂಡನಾಯಕನುದಯಾದಿತ್ಯನ ಬಿನ್ನಪದಿಂ' ಶ್ರೀಮದ್ಭುವನೈಕಮಲ್ಲದೇವರು ಶ್ರೀಮತ್ಪ್ರಣವನಾದಾನಂದ ಗುಣಗಳ್ಳಯೋಗಿಗಳ 'ಕಾಲಂಕರ್ಚ್ಚಿ' ಹರಿಹರಾದಿತ್ಯದೇವಾಲಯದಲ್ಲಿ ದೇವಪೂಜೆಗಾಗಿ ಒಂದು ಗ್ರಾಮವನ್ನು ಕೊಟ್ಟನೆಂದು ಹೇಳಿರುವುದು.

ಈ ೧೨೯ ನೇ ಶಾಸನದಲ್ಲಿ ಕೀರ್ತಿತನಾಗಿರುವ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಮಹಾಪ್ರಧಾನ ಪಿರಿಸಂಧಿವಿಗ್ರಹಿ ಮನೆವೆರ್ಗಡೆದಂಡನಾಯಕ ಉದಯಾದಿತ್ಯನು ೧೩೦ ನೇ ಶಾಸನದಲ್ಲಿ ಕೀರ್ತಿತನಾಗಿ ಬನವಸೆ ೧೨೦೦೦ ವೇ ಮೊದಲಾದ ಸೀಮೆಗಳನ್ನು ಆಳುತ್ತಿದ್ದ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಕೋಳಾಳಪುರವೇಶ್ವರ ನಂದಗಿರಿನಾಥ ಚಾಳುಕ್ಯಗಂಗ ಪೆರ್ಮಾಡಿ ಭುವನೈಕವೀರ ಉದಯಾದಿತ್ಯನಿಂದ ಭಿನ್ನನಾಗಿದ್ದನೆಂದು ಆಯಾ ಶಾಸನಗಳಲ್ಲಿ ಹೇಳಿರುವ ಬಿರುದಾವಳಿಗಳಿಂದಲೇ ವ್ಯಕ್ತವಾಗುವುದು. ಈ ವಿಷಯದಲ್ಲಿ ಡಾ|| ಫ್ಲೀಟ್‌ರವರ ಪೂರ್ವನಿರ್ದಿಷ್ಟಗ್ರಂಥದ ೪೪೩ ನೇ ಪುಟವನ್ನು ನೋಡಿ.

ಕವಿಚರಿತಕಾರರು ಈ ಎರಡು ಶಾಸನಗಳಲ್ಲಿ ಹೇಳಿರುವ ಬಿರುದುಗಳನ್ನು ಒಂದುಮಾಡಿ ಸೇರಿಸಿ "ಶ್ರೀಮನ್ಮಹಾಪ್ರಧಾನಂ ಹಿರಿಯಸಂಧಿವಿಗ್ರಹಿ ಮನೆವೆರ್ಗಡೆ ದಂಡನಾಯಕಂ ಬ್ರಹ್ಮಕ್ಷತ್ರಶಿಖಾಮಣಿ ರಾಜಾಧಿರಾಜಂ ಕೋಳಾಳಪುರವರೇಶ್ವರಂ ನಂದಗಿರಿನಾಥಂ ಆದ ಉದಯಾದಿತ್ಯನು ಬನವಸೆ ೧೨೦೦೦, ಸಾಂತಳಿಗೆ ೧೦೦೦, ಮಂಡಳಿ ೧೦೦೦ ಪದಿನೆಂಟಗ್ರಹಾರಗಳನ್ನು ಆಳುತ್ತಿದ್ದನು" ಎಂದು ಮೇಲೆ ಹೇಳಿರುವುದನ್ನು ನೋಡಿದರೆ, ಈ ಎರಡು ಶಾಸನಗಳಲ್ಲಿಯೂ ಒಬ್ಬನೇ ಉದಯಾದಿತ್ಯನು ಸ್ತುತನಾಗಿರುವನೆಂದು ಅವರು ಭಾವಿಸಿರುವಂತೆ ಕಾಣುವುದು. * ಈ ಭಾವ

* ಈ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಉದಯಾದಿತ್ಯನು ಮೇಲೆ ಹೇಳಿದ ಷಿಕಾರಿಪುರದ ೧೨೯ ನೇ ಶಾಸನದಲ್ಲಲ್ಲದೆ ಷಿಕಾರಿಪುರದ ೨೯೫ ನೇ ಶಾಸನದಲ್ಲಿಯೂ, ಸೊರಬದ ೨೪೯, ೨೭೬ ಮತ್ತು ೨೯೯ ನೇ ಶಾಸನಗಳಲ್ಲಿಯೂ ಮತ್ತು ನಗರದ ೩೦ ನೇ ಶಾಸನದಲ್ಲಿಯೂ ಸ್ತುತನಾಗಿರುವನು. ಇವನು ಬನವಾಸೆ ೧೨೦೦೦, ಸಾಂತಳಿಗೆ ೧೦೦೦ ಮತ್ತು ೧೮ ಅಗ್ರಹಾರಗಳನ್ನೂ ಮೇಲ್ಪಟ್ಟಿಯ ವಡ್ಡರಾವುಲದ ಸುಂಕವನ್ನೂ ಆಳುತ್ತಿದ್ದನೆಂದು ಕ್ರಿ. ಶ. ೧೦೬೯ ರಲ್ಲಿ ಹುಟ್ಟಿದ ಸೊರಬದ ೨೯೯ ನೇ ಶಾಸನದಲ್ಲಿ ಹೇಳಿರುವುದು. ಹೀಗೆಯೇ ಇವನು ಬನವಾಸೆ ೧೨೦೦೦ ಮತ್ತು ಸಾಂತಳಿಗೆ ೧೦೦೦ ವನ್ನೂ, ಪೆರ್ಜುಂಕವಡ್ಡರಾವುಲಗಳನ್ನೂ ಮತ್ತು ಎರಡು ಬಿಳ್ಕೊಡೆಯನ್ನೂ ಕ್ರಿ. ಶ. ೧೦೭೩ ರಲ್ಲಿ ಆಳುತ್ತಿದ್ದನೆಂದು ನಗರದ ೩೦ ನೇ ಶಾಸನದಿಂದ ತಿಳಿದುಬರುವುದು.

ಮೇಲೆ ಹೇಳಿದ ಮಹಾಮಂಡಲೇಶ್ವರ ಭುವನೈಕವೀರ ಉದಯಾದಿತ್ಯನೂ ಹೀಗೆಯೇ ಷಿಕಾರಿಪುರದ ೧೩೦ ನೇ ಶಾಸನದಲ್ಲಲ್ಲದೆ ಷಿಕಾರಿಪುರದ ೧೦೯, ೧೧೦ ಮತ್ತು ೫೧ ನೇ ಶಾಸನಗಳ

ನೆಯು ಸರಿಯಾದುದೆಂದು ನಮಗೆ ತೋರುವುದಿಲ್ಲ. ಒಂದೇ ದಿವಸದಲ್ಲಿ ಒಂದೇ ಊರಿನಲ್ಲಿ ಹುಟ್ಟಿದ ಈ ಎರಡು ಶಾಸನಗಳಲ್ಲಿ ಒಬ್ಬನೇ ಮನುಷ್ಯನ ವಿಷಯದಲ್ಲಿ ಹೀಗೆ ಬೇರೆ ಬೇರೆಯಾದ ಬಿರುದಾವಳಿಗಳು ಹೇಳಲ್ಪಟ್ಟಿರುವುವೆಂಬುದು ನಮಗೆ ಅತ್ಯಂತ ಅಸಂಭಾವ್ಯವೆಂದು ತೋರುವುದು.

ಅದು ಹೇಗಾದರೂ ಆಗಲಿ. ನಾಗವರ್ಮಾಚಾರ್ಯನು ಭುವನೈಕಮಲ್ಲನ ಹಿರಿಯಸಂಧಿವಿಗ್ರಹಿಯಾದ ಉದಯಾದಿತ್ಯನಿಗೆ ಅಥವಾ ಅವನ ಕೈಕೆಳಗಿನ ಮಂಡಲೇಶ್ವರನಾದ ಉದಯಾದಿತ್ಯನಿಗೆ ಸಂಧಿವಿಗ್ರಹಿಯಾಗಿದ್ದನೆಂದೇ ಒಪ್ಪಿಕೊಳ್ಳೋಣವೆಂದರೆ, ಈ ಮೇಲಿನ ೧೨೯ ನೆಯ ಶಾಸನದಲ್ಲಿ ಹೇಳಿರುವಂತೆ ಭುವನೈಕಮಲ್ಲನಂಥ ಚಾಲುಕ್ಯಚಕ್ರವರ್ತಿಯು ತನ್ನ 'ಪಾದಪದ್ಮೋಪಜೀವಿ' ಯಾದ ಹಿರಿಸಂಧಿವಿಗ್ರಹಿಗೆ ಸಂಧಿವಿಗ್ರಹಿಯಾದ ಒಬ್ಬ ಮನುಷ್ಯನ ಕಾಲನ್ನು ತೊಳೆದು ಅವನಿಗೆ ಮನ್ನಣೆಮಾಡಿದನೆಂಬುದನ್ನು ನಮಗೆ ಸುತರಾಂ ನಂಬುವುದಕ್ಕಾಗುವುದಿಲ್ಲ. ಸಾಲದುದಕ್ಕೆ ಈ ಶಾಸನದಲ್ಲಿಯೂ ಕೂಡ ಗುಣಗಳ್ಳನಾಗವರ್ಮಾಚಾರ್ಯನು ಹರಿಹರಾದಿತ್ಯದೇವಾಲಯದ ಸ್ಥಾನಿಕನಾಗಿದ್ದನೆಂದು ಹೇಲ್ಪಟ್ಟಿರುವುದೇ ಹೊರತು ಅವನು ಉದಯಾದಿತ್ಯನ ಸಂಧಿವಿಗ್ರಹಿಯಾಗಿದ್ದನೆಂದು ಹೇಳಲ್ಪಟ್ಟಿಲ್ಲ. ಆದುದರಿಂದ ಇದನ್ನೆಲ್ಲಾ ಪರ್ಯಾಲೋಚಿಸಿದಲ್ಲಿ ಮೇಲಿನ ಚಂದ್ರಚೂಡಾಮಣಿಶತಕದ ಪದ್ಯದಲ್ಲಿ ಕೀರ್ತಿತರಾಗಿರುವ ಉದಯಾದಿತ್ಯ ನಾಗವರ್ಮರು ಮೇಲಿನ ೧೨೯ ನೆಯ ಶಾಸನದಲ್ಲಿ ಕೀರ್ತಿತರಾಗಿರುವ ಉದಯಾದಿತ್ಯ ಗುಣಗಳ್ಳನಾಗವರ್ಮಾಚಾರ್ಯರಲ್ಲವೆಂಬುದು ಸ್ಪಷ್ಟವಾಗುವುದು.

ಲ್ಲಿಯೂ ಕೀರ್ತಿತನಾಗಿರುವನು. ಇವನು ಬನವಾಸೆ ೧೨೦೦೦, ಸಾಂತಳಿಗೆ ೧೦೦೦, ಮಂಡಳಿ ೧೦೦೦, ಮತ್ತು ೧೮ ಅಗ್ರಹಾರಗಳನ್ನು ಆಳುತ್ತಿದ್ದನೆಂದು ಮೇಲಿನ ಶಿಕಾರಿಪುರದ ೧೩೦ ನೇ ಶಾಸನದಲ್ಲಿ ಹೇಳಿರುವುದಷ್ಟೆ. ಇವನು ಬನವಾಸೆ ೧೨೦೦೦ ಮೊದಲಾದ ಸೀಮೆಗಳನ್ನು ಕ್ರಿ. ಶ. ೧೦೭೫ ರಲ್ಲಿ ಆಳುತ್ತಿದ್ದನೇದು ಶಿಕಾರಿಪುರದ ೫೧ ನೇ ಶಾಸನದಿಂದಲೂ ಕ್ರಿ. ಶ. ೧೧೧೨-೧೩ ರಲ್ಲಿಯೂ ಆಳುತ್ತಿದ್ದನೆಂದು ಡಾ|| ಫ್ಲೀಟ್‌ರವರ ಪೂರ್ವನಿರ್ದಿಷ್ಟಗ್ರಂಥದ ೪೫೨ ನೇ ಪುಟದಿಂದಲೂ ತಿಳಿದುಬರುವುದು.

ಹೀಗೆ ಕ್ರಿ. ಶ. ೧೦೭೭ ರಲ್ಲಿ ಬನವಾಸೆ ೧೨೦೦೦ ವೇ ಮೊದಲಾದ ಸೀಮೆಗಳನ್ನು ಆಳುತ್ತಿದ್ದ ಈ ಇಬ್ಬರು ಉದಯಾದಿತ್ಯರಲ್ಲಿ ಮಹಾಮಂಡಲೇಶ್ವರ ಉದಯಾದಿತ್ಯನು ಆ ಸೀಮೆಗಳನ್ನು 'ಮಂಡಲಿಕವೃತ್ತಿ' ಯಿಂದ ಆಳುತ್ತಿದ್ದನೆಂದೂ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕನಾದ ಉದಯಾದಿತ್ಯನು ಆ ಸೀಮೆಗಳ 'ಮೇಲಾಳ್ಕೆ' ಯನ್ನೂ, ಪೆರ್ಜುಂಕ ಮೊದಲಾದುದನ್ನೂ ಆಳುತ್ತಿದ್ದನೆಂದೂ ನಾವು ತಿಳಿಯಬೇಕು.

ವಸ್ತುತಃ ಈ ಚಂದ್ರಚೂಡಾಮಣಿಶತಕವು ಒಬ್ಬ ನಾಗವರ್ಮನಿಂದ ರಚಿಸಲ್ಪಟ್ಟಿತೆಂಬ ವಿಷಯದಲ್ಲಿಯೇ ನಮಗೆ ಪ್ರಬಲವಾದ ಸಂದೇಹವಿರುವುದು. ಕವಿಚರಿತಕಾರರು ಈ ಮೇಲಿನ ಪದ್ಯದಲ್ಲಿ ಒಂದನೇ ಪಾದದಲ್ಲಿರುವ 'ಉದಯಾದಿತ್ಯನ ಸಂಧಿವಿಗ್ರಹಿಲಲಾಮಂ ನಾಗವರ್ಮಂ' ಎಂಬ ಪದಗಳನ್ನು ಮೂರನೇ ಪಾದದಲ್ಲಿರುವ 'ಪೇೞ್ದ' ಎಂಬ ಪದದೊಡನೆ ಅನ್ವಯಿಸಿ, ಈ ಶತಕವನ್ನು ನಾಗವರ್ಮನು 'ಪೇಳಿದ' ನೆಂದು ಅರ್ಥಮಾಡಿರುವರು. ನಮಗಾದರೆ ಈ ಒಂದನೇ ಪಾದದ ಅಂತ್ಯದಲ್ಲಿರುವ 'ಸಮಂತು' ಎಂಬ ಪದವನ್ನು ಪರ್ಯಾಲೋಚಿಸಿದಲ್ಲಿ 'ಉದಯಾದಿತ್ಯನ ರಾಯಭಾರಿಯೆನಿಸಿದರ್ಾತ್ಮಾಗ್ರಜಂ ಭಾಸ್ಕರ' ನಂತೆಯೇ ಉದಯಾದಿತ್ಯನ ಸಂಧಿವಿಗ್ರಹಿಲಲಾಮನಾದ ನಾಗವರ್ಮನೂ ಮೂರನೇ ಪಾದದಲ್ಲಿ ಹೇಳಿರುವ ಈಶ್ವರ ಭಕ್ತರಲ್ಲಿ ಒಬ್ಬನಾಗಿದ್ದನೆಂದು ಅರ್ಥಮಾಡುವುದೇ ಯುಕ್ತವೆಂದು ತೋರುವುದು.

ಅದು ಹೇಗಾದರೂ ಆಗಲಿ. ಈ ಚಂದ್ರಚೂಡಾಮಣಿಶತಕದಲ್ಲಿ ಕೀರ್ತಿತನಾಗಿರುವ ಉದಯಾದಿತ್ಯನಿಗೆ ಒಬ್ಬ ಸಂಧಿವಿಗ್ರಹಿಲಲಾಮನೂ ಮತ್ತು ಒಬ್ಬ ರಾಯಭಾರಿಯೂ ಇದ್ದುದರಿಂದ ಇವನು ಸ್ವತಂತ್ರನಾಗಿ ರಾಜ್ಯವಾಳುತ್ತಿದ್ದ ದೊರೆಯೋ, ಮಹಾಮಂಡಲೇಶ್ವರನೋ ಅಥವಾ ದೊಡ್ಡ ಅಧಿಕಾರಿಯೋ ಆಗಿರಬೇಕು. ಮೇಲೆ ಪ್ರಸ್ತುತರಾದ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಉದಯಾದಿತ್ಯ ಮತ್ತು ಮಹಾಮಂಡಲೇಶ್ವರ ಉದಯಾದಿತ್ಯರಲ್ಲದೆ ಕರ್ಣಾಟಕ ದೇಶದಲ್ಲಿ ಈ ಹೆಸರಿನ ಇಂಥವರು ನಮಗೆ ತಿಳಿದಂತೆ ಇನ್ನೂ ಮೂರು ಜನರು ಇದ್ದರು. ಇವರಲ್ಲಿ ಮೊದಲನೆಯವನು ಪಲ್ಲವಕುಲತಿಲಕನಾದ ಸಮಧಿಗತಪಂಚ ಮಹಾಶಬ್ದ ಶ್ರೀ ಪೃಥ್ವೀವಲ್ಲಭ ಉದಯಾದಿತ್ಯದೇವನು; ಇವನು ಕದಂಬಳಿಗೆ ೧೦೦೦, ಕೊಗಲಿ ೫೦೦, ಬಲ್ಲುಕುಂದೆ ೩೦೦ ಮೊದಲಾದ ಸೀಮೆಗಳನ್ನು (ಕ್ರಿ.ಶ. ೧೦೩೩) ಆಳುತ್ತಾ ಚಾಲುಕ್ಯಚಕ್ರವರ್ತಿ ಜಯಸಿಂಹ-ಜಗದೇಕಮಲ್ಲನಿಗೆ ಅಧೀನನಾದ ಮಂಡಲಿಕನಾಗಿದ್ದನು (ದಾವಣಗೆರೆ ೭೧ ನೇ ಶಾಸನವನ್ನು ನೋಡಿ). ಎರಡನೆಯವನು ಹೊಯ್ಸಲ ಎರೆಯಂಗದೇವನ ಪುತ್ರನೂ, ೧ ನೇ ಬಲ್ಲಾಳ ಮತ್ತು ವಿಷ್ಣುವರ್ಧನರ ತಮ್ಮನೂ ಆದ ಹೊಯ್ಸಲ-ಉದಯಾದಿತ್ಯನು. ಇವದು ಕ್ರಿ. ಶ. ಸುಮಾರು ೧೧೨೩ ರಲ್ಲಿ ಲೋಕಾಂತರವನ್ನೈದಿದನೆಂದು ಹಾಸನದ ೧೦೨ ನೇ ಶಾಸನದಿಂದ ತಿಳಿದುಬರುವುದು. ಮೂರನೆಯವನು ಉದಯಾದಿತ್ಯಾಲಂಕಾರವೆಂಬ ಅಲಂಕಾರಗ್ರಂಥದ ಕರ್ತೃವಾದ ಉದಯಾದಿತ್ಯನು. ಇವನು ಸುಮಾರು ೧೧೫೦ ರಲ್ಲಿ ಇದ್ದಿರಬಹುದು ಎಂದೂ 'ಈತನು ಪಟ್ಟಾಭಿಷಿಕ್ತನಾಗಿ ಆಳುತ್ತಿದ್ದಂತೆ ತೋರು

ತ್ತದೆ' ಎಂದೂ ಕವಿಚರಿತಕಾರರು (ಕವಿಚರಿತೆ I, ೧೩೩) ಇವನ ವಿಷಯದಲ್ಲಿ ಬರೆದಿರುವರು.

ಚಂದ್ರಚೂಡಾಮಣಿಶತಕದಲ್ಲಿ ಪ್ರಸ್ತುತನಾಗಿರುವ ಉದಯಾದಿತ್ಯನು ಈ ಮೇಲೆ ಹೇಳಿದ ಐವರಲ್ಲಿ ಒಬ್ಬನೋ ಅಥವಾ ಈ ಹೆಸರಿನ ಆರನೇ ಮನುಷ್ಯನೋ ಎಂದು ನಿರ್ಧರಿಸುವುದಕ್ಕೆ ಸಾಧಕವಾದ ಆಧಾರವೇನೂ ಇಲ್ಲದಿರುವುದರಿಂದ ಆ ಗ್ರಂಥವು ಇಂಥ ಕಾಲದಲ್ಲಿ ಹುಟ್ಟಿತೆಂದು ನಿಶ್ಚಯಿಸಲು ಸಾಧ್ಯವಿಲ್ಲ.

೨೯. ಮೌಕ್ತಿಕಕವಿ.

ಈ ಕವಿಯನ್ನು ಕುರಿತು ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

" ಚಂದ್ರನಾಥಾಷ್ಟಕವೆಂಬ ಗ್ರಂಥದ ಅಂತ್ಯದಲ್ಲಿರುವ
ಕೃತಕೃತ್ಯಂ ಮೌಕ್ತಿಕಂ ಸತ್ಕವಿ ವಿರಚಿಸಿದೀಸಾರಮುಪ್ಪಷ್ಟಕಶ್ರೀ |
ಸ್ತುತಿಯಂ ಪೇಳ್ದೋದುವಾಲಿಪ್ಪವರ್ಗೆ ನಿರುಪಮಾನಂದಮಂ ಮಾಳ್ಕೆ ಸೀತಾ |
ಪತಿರಾಮಸ್ಥಾಪಿತೋದ್ಯತ್ತ್ರಿಭುವನತಿಲಕಾಲಂಕೃತಖ್ಯಾತಿನಾಮಂ |
ಕಿತಮಾಗೊಪ್ಪಿರ್ಪ ಪೆಣ್ಣಂಗಡಲ ಪುರವರಾಧೀಶ್ವರಂ ಚಂದ್ರನಾಥಾ ||

ಎಂಬ ಪದ್ಯದಿಂದ ಈ ಅಷ್ಟಕವನ್ನು ಬರೆದವನು ಮೌಕ್ತಿಕಕವಿಯೆಂದು ತೋರುತ್ತದೆ. ಇಲ್ಲಿ ಹೇಳಿರುವ ಪೆಣ್ಣಂಗಡಲು ಅಥವಾ ಹೆಣ್ಣಗಡಲು ಎಂಬ ಸ್ಥಳವು ಜೈನರಾದ ಕೊಂಗಾಳ್ವರ ರಾಜ್ಯಕ್ಕೆ ಸೇರಿದ್ದಿತು. ಇದನ್ನು ವೀರಕೊಂಗಾಳ್ವದೇವನು ಸುಮಾರು 1120 ರಲ್ಲಿ ಮೇಘಚಂದ್ರನ ಶಿಷ್ಯನಾದ ಪ್ರಭಾಚಂದ್ರಸಿದ್ಧಾಂತದೇವನಿಗೆ ದಾನವಾಗಿ ಕೊಟ್ಟಂತೆ ಒಂದು ಶಾಸನದಿಂದ (Mysore Archæological Report for 1913, para 64) ತಿಳಿಯುತ್ತದೆ. ಸುಮಾರು 1189 ರಲ್ಲಿ ಈ ಸ್ಥಳದೊಳಗೆ ಶೈವರು ಪ್ರಬಲರಾಗಿದ್ದಂತೆ ಇತರ ಶಾಸನಗಳಿಂದ (Arkalgud 79 and 81)ತಿಳಿವುದರಿಂದ ಅಲ್ಲಿ ಜೈನರ ಪ್ರಾಬಲ್ಯದ ಕಾಲವು ಸುಮಾರು 1120 ಆಗಿರಬಹುದು. ಆ ಕಾಲವನ್ನೇ ಕವಿಗೆ ಕೊಟ್ಟಿದ್ದೇವೆ " (ಕವಿಚರಿತೆ ೧ ನೇ ಸಂಪುಟದ ಎರಡನೇಮುದ್ರಣ, ಪುಟ ೧೨೮).

ಇಲ್ಲಿ ಕವಿಚರಿತಕಾರರಿಂದ ಹೇಳಲ್ಪಟ್ಟಿರುವ ಅರಕಲಗೂಡು ೭೯ ಮತ್ತು ೮೧ ಶಾಸನಗಳಲ್ಲಿ ಹೆಣ್ಣೆಗಡಲ ಅಂಕಜೀಯ ಎಂಬ ಒಬ್ಬ ಶೈವಮಠಾಧಿಪತಿಯ ಹೆಸರು ಮಾತ್ರ ಹೇಳಲ್ಪಟ್ಟಿದೆಯೇ ಹೊರತು, ಆ ಊರಿನಲ್ಲಿ ಶೈವರು ಪ್ರಬಲರಾಗಿದ್ದರೆಂದಾಗಲಿ ಜೈನರು ಕ್ಷೀಣಸ್ಥಿತಿಗೆ ಬಂದಿದ್ದರೆಂದಾಗಲಿ ಹೇಳಲ್ಪಟ್ಟಿಲ್ಲವಾದುದರಿಂದ ಕ್ರಿ. ಶ. ೧೧೨೦ ರಲ್ಲಿ ಜೈನರು ಅಲ್ಲಿ ಪ್ರಬಲರಾಗಿದ್ದರೆಂದೂ, ತದನಂತರ ಸುಮಾರು ೧೧೮೯ ರ ಸಮಯದಲ್ಲಿ ಕ್ಷೀಣಗತಿಗೆ ಬಂದಿದ್ದರೆಂದೂ ಊಹಿಸುವುದು ಸಾಧುವಲ್ಲವೆಂದು ನಮಗೆ ತೋರುವುದು.

ಅಲ್ಲದೆ, ಮೌಕ್ತಿಕಕವಿಯ ಮೇಲಿನ ಪದ್ಯದಲ್ಲಿ ಹೇಳಲ್ಪಟ್ಟಿರುವ ಪೆಣ್ಣಂಗಡಲಪುರವರವು ಕೊಂಗಾಳ್ವರ ರಾಜ್ಯಕ್ಕೆ ಸೇರಿದ ಹೆಣ್ಣೆಗಡಲೇ ಎಂಬ ವಿಷಯದಲ್ಲಿಯೂ ನಮಗೆ ಪ್ರಬಲವಾದ ಸಂದೇಹವಿರುವುದು. ಪ್ರಥಮತಃ ಇದು ಬಹಳ ಅಪ್ರಸಿದ್ಧವಾದ ಸ್ಥಲವಾಗಿರುವುದು ; ಕವಿಚರಿತಕಾರರು ಹೇಳಿರುವ ಎರಡು ಮೂರು ಶಾಸನಗಳನ್ನು ಬಿಟ್ಟರೆ ಈ ಊರಿನ ಹೆಸರು ಬೇರೆ ಯಾವ ಶಾಸನದಲ್ಲಿ ಆಗಲಿ ಗ್ರಂಥದಲ್ಲಿ ಆಗಲಿ ಹೇಳಲ್ಪಟ್ಟಿರುವಂತೆ ಕಾಣುವುದಿಲ್ಲ. ಈ ಊರಿನಲ್ಲಿ ತ್ರಿಭುವನತಿಲಕ ಎಂಬ ಹೆಸರಿನ ಜಿನಾಲಯವೂ ಅದರಲ್ಲಿ ಸೀತಾಪತಿಯಾದ ರಾಮನಿಂದ ಪ್ರತಿಷ್ಠಿತ

ವಾದ ಚಂದ್ರಪ್ರಭ ಅಥವಾ ಚಂದ್ರನಾಥ ಜಿನನ ಪ್ರತಿಮೆಯೂ ಇದ್ದವೆಂದು ನಮಗೆ ತಿಳಿದಂತೆ ಎಲ್ಲಿಯೂ ಹೇಳಲ್ಪಟ್ಟೂ ಇಲ್ಲ. ಅಲ್ಲದೆ, ಇಂತಹ ಚಂದ್ರನಾಥ ಬಿಂಬವುಳ್ಳ ತ್ರಿಭುವನತಿಲಕ ಜಿನಾಲಯವು ಈ ಊರಲ್ಲಿ ವಾಸ್ತವವಾಗಿಯೂ ಇದ್ದಿದ್ದಲ್ಲಿ ಅದು ಮೇಲೆ ಹೇಳಿರುವಂತೆ ಅಪ್ರಸಿದ್ಧವಾಗಿರದೆ ಸ್ವಲ್ಪವಾದರೂ ಪ್ರಸಿದ್ಧಿಯನ್ನು ಪಡೆದಿರುತ್ತಿತ್ತೆಂದು ನಮಗೆ ತೋರುವುದು.

ಮಹಾಲಕ್ಷ್ಮಿಯ ನಿವಾಸಸ್ಥಾನವೆಂದು ಪ್ರಸಿದ್ಧಿಯನ್ನು ಹೊಂದಿರುವ ಕೊಲ್ಲಾಪುರದಲ್ಲಾದರೆ ತ್ರಿಭುವನತಿಲಕ ಎಂಬ ಜಿನಾಲಯವೂ ಈ ಜಿನಾಲಯದೊಳಗೆ ಚಂದ್ರನಾಥ (ಚಂದ್ರಪ್ರಭ) ನ ಬಿಂಬವೂ ಇತ್ತೆಂದು ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿರುವ (I, 12)—

ಸುರಭೂತ....ಪೂತತ್ರಿಭುವನ ತಿಲಕಾಭಿಖ್ಯವಿಖ್ಯಾತಕೊಲ್ಲಾ |
ಪುರಶೋಭಾರುಂದ್ರಚಂದ್ರಪ್ರಭ ವಿಭುಭುವನಾಧೀಶ್ವರಾ....ಚಂದ್ರೋ |
ದ್ಧುರರಾದ್ಧಾಂತ ಪ್ರಸಿದ್ಧರ್ಮುನಿಪತಿ ಶುಭಚಂದ್ರಾಭಿಧಾನ ಪ್ರಬುದ್ಧರ್ |
ನಿರವದ್ಯರ್ಸಂದರುರ್ವೀ ಪ್ರಥಿತಗುಣಗಣರ್ವಿಶ್ವವಿದ್ಯಾನಿಧಾನರ್ ||

ಎಂಬ ಪದ್ಯದಿಂದಲೂ ಪುಷ್ಪದಂತಪುರಾಣದ ಕರ್ತೃವಾದ ಎರಡನೆಯ ಗುಣವರ್ಮನ ಚಂದ್ರನಾಥಾಷ್ಟಕದಲ್ಲಿರುವ—

ಬಹುವಿದ್ಯಾಮಂಡನಂ ಪಂಡಿತಮುನಿಪತಿ ಚಂದ್ರವ್ರತಿ ಶ್ರೀಪದಾಂಭೋ |
ರುಹಸೇವಾಸಂಗಭೃಂಗಂ ಕ್ಷಿತಿನುತಗುಣವರ್ಮಂ ವಚೋಮಾಲೆಯಿಂದ |
ಸ್ವಹಮಾದಂ ಪೂಜಿಸಲ್ ರಾಜಿಪ ಜಿನನನಘಂ ಮಾಳ್ಕೆ ಭವ್ಯರ್ಗೆ ಸೌಖ್ಯಾ |
ವಹಮುಂ ಕೊಲ್ಲಾಪುರ ಶ್ರೀ ತ್ರಿಭುವನ ತಿಲಕಾಲಂಕೃತಂ ಚಂದ್ರನಾಥಂ ||*

ಎಂಬ ಪದ್ಯದಿಂದಲೂ ತಿಳಿದುಬರುವುದು.

ಈ ಕೊಲ್ಲಾಪುರದ ತ್ರಿಭುವನತಿಲಕಜಿನಾಲಯದ ಚಂದ್ರನಾಥನು † ಪ್ರಸಿದ್ಧನಾಗಿದ್ದನೆಂದೂ, ಅನೇಕ ಕವಿಗಳಿಂದ ಸ್ತುತನಾಗಿರುವನೆಂದೂ, ಮೇಲೆ ಹೇಳಿದುದರಿಂದಲೇ ಸ್ಪಷ್ಟವಾಗುವುದಷ್ಟೆ. ಈ ಮೌಕ್ತಿಕಕವಿಯೂ ಈ ಚಂದ್ರನಾಥನನ್ನೇ ಸ್ತುತಿಸಿರುವನೆಂದು ನಮಗೆ ತೋರುವುದು.

ಅದು ಹೇಗಾದರೂ ಆಗಲಿ; ಈ ಕವಿಯಿಂದ ಹೇಳಲ್ಪಟ್ಟಿರುವ ಪೆಣ್ಣೆಂಗಡಲು ಕವಿಚರಿತಕಾರರು ಹೇಳಿರುವ ಹೆಣ್ಣೆಗಡಲೆಂಬ ಊರಾಗಿದ್ದರೂ ಅಥವಾ ನಮಗೆ

---

* ಈ ಪದ್ಯವು ಕವಿಚರಿತೆ I, ೨೯೦ ರಲ್ಲಿ ಅನುದದಿಸಲ್ಪಟ್ಟಿರುವುದು.

† ಈ ಚಂದ್ರನಾಥಬಿಂಬವು ಸೀತಾಪತಿಯಾದ ರಾಮನಿಂದ ಸ್ಥಾಪಿತವಾಯಿತೆಂದು ಜೈನರಲ್ಲಿ ಪ್ರತೀತಿಯಿರುವಂತೆ ತೋರುವುದು. ಆದರೆ ಈ ಅರ್ಥವನ್ನು ಬೋಧಿಸತಕ್ಕ ವಾಕ್ಯಗಳು ಈವರೆಗೆ ಯಾವುವೂ ನಮ್ಮ ಕಣ್ಣಿಗೆ ಬಿದ್ದಿಲ್ಲ.

ತೋರುವಂತೆ ಕೊಲ್ಲಾಪುರವೇ ಆಗಿದ್ದರೂ (ಕವಿಚರಿತಕಾರರು ಹೇಳಿರುವಂತೆ) ಈ 'ಪೆಣ್ಣೆಂಗಡಲಿನಲ್ಲಿ' ಜೈನರು ಕ್ರಿ.ಶ. ೧೧೨೦ ರಿಂದೀಚೆಗೆ ಕ್ಷೀಣಗತಿಗೆ ಬಂದರೆಂದು ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ಆದುದರಿಂದ ಈ ಚಂದ್ರನಾಥಾಷ್ಟಕವನ್ನು ಕವಿಯು ಕ್ರಿ. ಶ. ೧೧೨೦ ರಲ್ಲಿ ಬರೆದನೆಂದು ಹೇಳುವುದಕ್ಕೂ ಕೂಡ ಯಾವ ಆಧಾರವೂ ಇಲ್ಲವೆಂದು ನಮ್ಮ ಅಭಿಪ್ರಾಯ.

ಚಂದ್ರನಾಥನನ್ನು ಸ್ತುತಿಸುವ ಎಂಟು ಪದ್ಯಗಳನ್ನು ಒಳಗೊಂಡಿರುವ ಈ ಸಣ್ಣ ಗ್ರಂಥದಲ್ಲಿ ಅದು ಬರೆಯಲ್ಪಟ್ಟ ಕಾಲವನ್ನು ನಿರ್ದೇಶಿಸುವಂತಹ ವಿಷಯಗಳು ಯಾವುವೂ ಇಲ್ಲವಾದುದರಿಂದ ಅದು ಇಂಥ ಕಾಲದಲ್ಲಿ ಬರೆಯಲ್ಪಟ್ಟಿತೆಂದು ಹೇಳುವುದು ಸಾಧ್ಯವಲ್ಲ.

೩೦. ಶ್ರೀವರ್ಧದೇವ.

ಇವನನ್ನು ಕುರಿತು ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಜೈನಕವಿ. ದೇವಚಂದ್ರನ ರಾಜಾವಳೀ ಕಥೆಯಲ್ಲಿ—

ಮತ್ತಂ ತುಂಬುಲೂರಲ್ಲಿ ಪುಟ್ಟಿದ ತುಂಬುಲೂರು ನಾಮಾಚಾರ್ಯರ್ ಪ್ರಾಕೃತ ಸಂಸ್ಕೃತ ಕರ್ಣಾಟಾದಿಭಾಷೆಗಳಿಂ ಸಿದ್ಧಾಂತಪ್ರಬಂಧಕರ್ತೃಗಳ್ ಚೂಡಾಮಣಿವ್ಯಾಖ್ಯಾನ ಚತುರಶೀತಿಸಹಸ್ರ ಗ್ರಂಥರಚನೆಯಂ ಮಾಡಿದರ್

ಎಂದು ಒಂದು ಭಾಗದಲ್ಲಿಯೂ,

ತುಂಬುಲೂರು ನಾಮಾಚಾರ್ಯರ್ ಎಂಬತ್ತುನಾಲ್ಕುಸಾಸಿರ ಗ್ರಂಥಕರ್ತೃಗಳಾಗಿ ಕರ್ಣಾಟಕ ಭಾಷೆಯಿಂ ಚೂಡಾಮಣಿವ್ಯಾಖ್ಯಾನಮಂ ಮಾಡಿದರ್

ಎಂದು ಮತ್ತೊಂದು ಭಾಗದಲ್ಲಿಯೂ ಬರೆದಿದೆ.

ಚಾವುಂಡರಾಯನು (978) ತೆಂಬುಳೂರಾಚಾರ್ಯನೆಂಬ ಗುರುವನ್ನು ಸ್ತೋತ್ರಮಾಡಿದ್ದಾನೆ. ಭಟ್ಟಾಕಳಂಕನು (1604) ತನ್ನ ಶಬ್ದಾನುಶಾಸನದಲ್ಲಿ ಕರ್ಣಾಟಕಭಾಷೆಯ ಪ್ರಾಶಸ್ತ್ಯವನ್ನು ಹೇಳುವಾಗ—ಈ ಕರ್ಣಾಟಕಭಾಷೆ ಶಾಸ್ತ್ರಕ್ಕೆ ಅನುಪಯುಕ್ತವಾದುದಲ್ಲ ; ಏಕೆಂದರೆ ಈ ಭಾಷೆಯಲ್ಲಿಯೇ ತೊಂಬತ್ತಾರುಸಾಸಿರ ಗ್ರಂಥಸಂಖ್ಯೆಯುಳ್ಳ ಚೂಡಾಮಣಿ ಎಂಬ ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನವು ದೊರೆಯುತ್ತದೆ [1].—ಎಂದು ಬರೆದಿದ್ದಾನೆ. ದೇವಚಂದ್ರನು 84,000 ಗ್ರಂಥವೆಂದು ಹೇಳುತ್ತಾನೆ; ಭಟ್ಟಾಕಳಂಕನು 96,000 ಗ್ರಂಥವೆಂದು ಹೇಳುತ್ತಾನೆ. ಗ್ರಂಥಪ್ರಮಾಣದಲ್ಲಿ ಅವನ ಹೇಳಿಕೆಗೂ ಇವನ ಹೇಳಿಕೆಗೂ 12,000 ದಷ್ಟು ಹೆಚ್ಚುಕಡಮೆ ಇದೆ. ಈ 12,000 ಗ್ರಂಥವು ಸಂಗ್ರಹರೂಪವಾಗಿಯೋ ಅವತರಣಿಕೆಯ ರೂಪವಾಗಿಯೋ ಇರಬೇಕೆಂದೂ ಗ್ರಂಥಕ್ಕೆ ಸೇರಿದುದಲ್ಲವೆಂದೂ ಜೈನರಲ್ಲಿ ಪ್ರತೀತಿ ಇರುವಂತೆ ತಿಳಿಯುತ್ತದೆ. ಅಲ್ಲದೆ ಇಂದ್ರನಂದಿ ತನ್ನ ಶ್ರುತಾವತಾರದಲ್ಲಿ ತುಂಬಲೂರಾಚಾರ್ಯನು 84,000 ಗ್ರಂಥಸಂಖ್ಯೆಯುಳ್ಳ ಚೂಡಾಮಣಿವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದನೆಂದೂ ಆರನೆಯ ಖಂಡಕ್ಕೆ 7,000 ಗ್ರಂಥಸಂಖ್ಯೆಯುಳ್ಳ ಪಂಚಿಕೆಯನ್ನು ಪುನಃ ಮಾಡಿದನೆಂದೂ ಹೇಳುತ್ತಾನೆ. [2] ಇವನ ಹೇಳಿಕೆಯ ಪ್ರಕಾರ ಗ್ರಂಥಸಂಖ್ಯೆ 91,000 ಆಗುತ್ತದೆ. ಐದುಸಾವಿರ ಗ್ರಂಥಸಂಖ್ಯೆಯುಳ್ಳ ಮತ್ತೊಂದು ಪಂಚಿಕೆಯಿದ್ದರೂ ಇರಬಹುದು. ಆದುದರಿಂದ ಈ ವ್ಯತ್ಯಾಸವನ್ನು ನಾವು ಗಣನೆಗೆ ತರಬೇಕಾದುದಿಲ್ಲ. ಇಂದ್ರನಂದಿ ದೇವಚಂದ್ರರು

---

1. ನಚೈಷಾ (ಕರ್ಣಾಟಭಾಷಾ) ಶಾಸ್ತ್ರಾನುಪಯೋಗಿನೀ. ತತ್ತ್ವಾರ್ಥಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿಸಹಸ್ರಪ್ರಮಿತಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ * * * ಉಪಲಭ್ಯಮಾನತ್ವಾತ್.

2. ಅಥ ತುಂಬಲೂರನಾಮಾಚಾರ್ಯೋಽಭೂತ್ತುಂಬಲೂರಸದ್ಗ್ರಾಮೇ |
ಷಷ್ಠೇನ ವಿನಾ ಖಂಡೇನ ಸೋ (ಪಿ) ಸಿದ್ಧಾನ್ತಯೋರುಭಯೋಃ ||
ಚತುರಧಿಕಾಶೀತಿಸಹಸ್ರ ಗ್ರಂಥ ರಚನಯಾ ಯುಕ್ತಾಂ | (?)
ಕರ್ಣಾಟಭಾಷಯಾಕೃತ ಮಹತೀಂ ಚೂಡಾಮಣಿಂ ವ್ಯಾಖ್ಯಾಂ ||
ಸಪ್ತಸಹಸ್ರಗ್ರಂಥಾಂ ಷಷ್ಠಸ್ಯ ಚ ಪಂಚಿಕಾಂ ಪುನರಕಾರ್ಷೀತ್ ||

ಗ್ರಂಥಕರ್ತನ ಹೆಸರು ತುಂಬುಲೂರಾಚಾರ್ಯನೆಂದು ಕಂಠೋಕ್ತವಾಗಿ ಹೇಳಿದ್ದಾರೆ; ಭಟ್ಟಾಕಳಂಕನು ಹೆಸರು ಹೇಳಿಲ್ಲ. ಆದರೆ ಗ್ರಂಥದ ಹೆಸರು ಚೂಡಾಮಣಿ ಎಂದೂ ಗ್ರಂಥವು ಕನ್ನಡದಲ್ಲಿ ಬರೆದಿದೆ ಎಂದೂ ಮೂವರೂ ಒಪ್ಪಿಕೊಳ್ಳುತ್ತಾರೆ. ಇದೂ ಅಲ್ಲದೆ ಶ್ರವಣಬೆಳ್ಗೊಳದ 67 ನೆಯ ಶಾಸನದಿಂದ (1129) ಚೂಡಾಮಣಿಯೆಂಬ ಹೆಸರುಳ್ಳ ಕಾವ್ಯವನ್ನು ರಚಿಸಿದವನು ಕವಿಚೂಡಾಮಣಿಯಾದ ಶ್ರೀವರ್ಧದೇವನೆಂದೂ [1] ಈತನನ್ನು ದಂಡಿ ಹೊಗಳಿದ್ದಾನೆಂದೂ ತಿಳಿಯಬರುತ್ತದೆ. ಇದರಿಂದ ತುಂಬಲೂರಾಚಾರ್ಯ, ಶ್ರೀವರ್ಧದೇವ, ಎಂಬ ಎರಡು ಹೆಸರುಗಳೂ ಒಬ್ಬನಿಗೇ ಅನ್ವಯಿಸುತ್ತವೆ ಎಂಬುದು ವ್ಯಕ್ತವಾಗುತ್ತದೆ. ಇಂದ್ರನಂದಿ ದೇವಚಂದ್ರರೂ ಭಟ್ಟಾಕಳಂಕನೂ ಹೇಳಿರುವ ಚೂಡಾಮಣಿಯೆಂಬ ಹೆಸರೇ ಇಲ್ಲಿಯೂ ಹೇಳಿದೆ. ಆದರೆ ಇಲ್ಲಿ "ಚೂಡಾಮಣಿಕಾವ್ಯ" ನೆಂದು ಹೇಳಿದೆ. ಆದುದರಿಂದ ಶಾಸನಶ್ಲೋಕದಲ್ಲಿ ಹೇಳಿರುವ ಚೂಡಾಮಣಿಗ್ರಂಥವೂ ಇಂದ್ರನಂದಿ ಭಟ್ಟಾಕಳಂಕ ದೇವಚಂದ್ರರು ಹೇಳುವ ಚೂಡಾಮಣಿಗ್ರಂಥವೂ ಒಂದೇ ಆಗಿರಬಹುದೋ ಇಲ್ಲವೋ ಎಂಬ ಸಂಶಯವು ಸಾಧಾರಣವಾಗಿ ಹುಟ್ಟಬಹುದು. ಆದರೆ ಗ್ರಂಥವು ಕೇವಲ ವ್ಯಾಖ್ಯಾನವಲ್ಲದೆ ಸ್ವತಂತ್ರವಾಗಿದ್ದಲ್ಲಿ ಕಾವ್ಯಶಬ್ದವು ಅನುಚಿತವಲ್ಲ.

ಈ ಗ್ರಂಥಕರ್ತೃವಾದ ಶ್ರೀವರ್ಧದೇವನು ದಂಡಿಯಿಂದ ಸ್ತುತಿಸಲ್ಪಟ್ಟಿದ್ದಾನೆ ಎಂಬುದರಿಂದ ಈತನು ದಂಡಿಗೆ ಹಿಂದೆಯೋ ಅಥವಾ ಸಮಕಾಲದಲ್ಲಿಯೋ ಇದ್ದಿರಬೇಕು. ದಂಡಿಯು ಕಾವ್ಯಾದರ್ಶದಲ್ಲಿ ಉದಾಹೃತವಾದ ಹಲವು ಪದ್ಯಗಳನ್ನು ನೃಪತುಂಗನು (814 877) ತನ್ನ ಕವಿರಾಜಮಾರ್ಗದಲ್ಲಿ ಕನ್ನಡಕ್ಕೆ ಪರಿವರ್ತಿಸಿ ಬರೆದಿರುವುದರಿಂದ [2] ದಂಡಿ ನೃಪತುಂಗನಿಗಿಂತ ಬಹಳ ಹಿಂದೆ ಇದ್ದಿರಬೇಕು. ಈತನು 7 ನೆಯ ಶತಮಾನದ ಅಂತ್ಯಭಾಗದಲ್ಲಿದ್ದನೆಂಬುದಕ್ಕೆ ಆಧಾರಗಳಿವೆ. [3] ಚಾವುಂಡರಾಯನು (978) ತನ್ನ ಗ್ರಂಥದ ಕೊನೆಯಲ್ಲಿ ಹೇಳಿರುವ ಗುರುಪರಂಪರೆಯನ್ನು ನೋಡಿದರೆ ತುಂಬುಲೂರಾಚಾರ್ಯನು ಅಥವಾ ಶ್ರೀವರ್ಧದೇವನು ಜಿನಸೇನನಿಗೆ (783) ಬಹಳ ಹಿಂದೆ ಇದ್ದಂತೆ ತಿಳಿಯುತ್ತದೆ. ಆದುದರಿಂದ ದಂಡಿಯಿಂದ ಸ್ತುತನಾದ ಶ್ರೀವರ್ಧದೇವನು ಸುಮಾರು 650 ರಲ್ಲಿ ಇದ್ದಿರಬಹುದು.

ಈತನ ಗ್ರಂಥವು ಇನ್ನೂ ಎಲ್ಲಿಯೂ ದೊರೆತಿಲ್ಲ. ಭಟ್ಟಾಕಳಂಕನು (1604) "ಸಮುಪಲಭ್ಯಮಾನತ್ವಾತ್" ಎಂದು ಹೇಳುವುದರಿಂದ ಆವನ ಕಾಲದಲ್ಲಿ ಈ ಗ್ರಂಥವು ಇದ್ದಂತೆ ತೋರುತ್ತದೆ. 7 ನೆಯ ಶತಮಾನದಲ್ಲಿಯೇ ಇಂಥ ಅಪಾರವಾದ ಗ್ರಂಥವು ಹುಟ್ಟಿರುವುದರಿಂದ ಆ ಕಾಲಕ್ಕೆ ಹಿಂದೆಯೂ ಅನೇಕ ಕರ್ಣಾಟಕಗ್ರಂಥಗಳು ಇದ್ದಿರಬೇಕು ಎಂಬುದರಲ್ಲಿ ಸಂಶಯವಿಲ್ಲ. ಅವುಗಳಲ್ಲಿ ಒಂದೂ ದೊರೆಯದೆ ಇರುವುದು ಶೋಚನೀಯವಾದ ವಿಷಯವಾಗಿದೆ." (ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣ, ಪುಟ ೭-೧೦)

---

1. ಚೂಡಾಮಣಿಃ ಕವೀನಾಂ ಚೂಡಾಮಣಿನಾಮಸೇವ್ಯಕಾವ್ಯಕವಿಃ |
ಶ್ರೀವರ್ಧದೇವ ಏವ ಹಿ ಕೃತಪುಣ್ಯಃ ಕೀರ್ತಿಮಾಹರ್ತುಂ ||
ಯ ಏವಮುಪಶ್ಲೋಕಿತೋ ದಂಡಿನಾ :—
ಜಹ್ನೋಃ ಕನ್ಯಾಂ ಜಟಾಗ್ರೇಣ ಬಭಾರ ಪರಮೇಶ್ವರಃ |
ಶ್ರೀವರ್ಧದೇವ ಸಂಧತ್ಸೇ ಜಿಹ್ವಾಗ್ರೇಣ ಸರಸ್ವತೀಂ ||
2. ಕವಿರಾಜಮಾರ್ಗದ ಉಪೋದ್ಘಾತ, ಪುಟ 18—20.
3. *Indian Antiquary*, XLI, 92.

ಇದೆಲ್ಲವೂ ಅಸಂಗತವಾಗಿರುವಂತೆ ನಮಗೆ ತೋರುವುದು.

೧. ತುಂಬಲೂರಾಚಾರ್ಯನು ಉಭಯಸಿದ್ಧಾಂತಗಳಮೇಲೆ ಕನ್ನಡ ಭಾಷೆಯಲ್ಲಿ ಬರೆದ ೮೪೦೦೦ ಅಥವಾ ೯೬೦೦೦ ಗ್ರಂಥಪ್ರಮಾಣವುಳ್ಳ ವ್ಯಾಖ್ಯಾನಕ್ಕೂ ಶ್ರೀವರ್ಧದೇವನು ಬರೆದ ಕಾವ್ಯಕ್ಕೂ ಚೂಡಾಮಣಿಯೆಂಬ ಒಂದೇ ಹೆಸರು ಇರುವುದರಿಂದ ಮಾತ್ರವೇ ಈ ಎರಡು ಗ್ರಂಥಗಳೂ ಅಭಿನ್ನವೆಂದೂ, ಆದ್ದರಿಂದ ಈ ಗ್ರಂಥಗಳ ಕರ್ತೃಗಳೂ ಅಭಿನ್ನರೆಂದೂ ನಿರ್ಧರಿಸುವುದು ನ್ಯಾಯ್ಯವಾಗಿರುವಂತೆ ನಮಗೆ ಕಾಣುವುದಿಲ್ಲ. ಕವಿಚರಿತಕಾರರ ಈ ಯುಕ್ತಿವಾದವನ್ನು ಅವಲಂಬಿಸಿದಲ್ಲಿ ಉದಯನಾಚಾರ್ಯನಿಂದ ವಿರಚಿತವಾದ ಒಂದು ನ್ಯಾಯಗ್ರಂಥಭಾಷ್ಯಕ್ಕೂ ಭಾಸಕೃತವಾದ ಒಂದು ಕಾವ್ಯಕ್ಕೂ (ಈ ಎರಡು ಗ್ರಂಥಗಳೂ ೧೧ ನೇ ಶತಮಾನದ ಹಿಂದೆ ಹುಟ್ಟಿದವುಗಳು) ಕಿರಣಾವಲೀ * ಎಂದೇ ಹೆಸರಿರುವುದರಿಂದ, ಈ ಎರಡು ಗ್ರಂಥಗಳೂ ಒಂದೇ ಎಂದೂ ತತ್ಕರ್ತೃಗಳಾದ ಉದಯನಾಚಾರ್ಯ-ಭಾಸರು ಅಭಿನ್ನರೆಂದೂ ನಾವೂ ಹೇಳಬಹುದಷ್ಟೆ ? ಇಂಥ ಅಭಿಪ್ರಾಯವು ಎಷ್ಟು ಅಸಂಗತವಾಗಿರುವುದೆಂಬುದನ್ನು ನಾವು ವಿವರಿಸಿ ಹೇಳಬೇಕಾಗಿಲ್ಲ.

೨. ಮೇಲೆ ಹೇಳಿದ ಶ್ರವಣಬೆಳ್ಗೊಳದ ೬೭ ನೇ ಶಾಸನದಲ್ಲಿ ಈ ಶ್ರೀವರ್ಧದೇವನನ್ನು ಸ್ತುತಿಸುವ ಶ್ಲೋಕಗಳ ಹಿಂದೆ ಚಿಂತಾಮಣಿ ಕೃತವಾದ 'ಧರ್ಮಾರ್ಥಕಾಮಪರಿನಿರ್ವೃತಿಚಾರುಚಿಂತ' ವಾದ ಚಿಂತಾಮಣಿಯೆಂಬ (ಕಾವ್ಯ) ಗ್ರಂಥವು ಕೀರ್ತಿಸಲ್ಪಟ್ಟಿರುವುದು. ಈ ಗ್ರಂಥವೇ ಗದ್ಯಚಿಂತಾಮಣಿಯ ಅಂತ್ಯದಲ್ಲಿರುವ—

ಸ್ಥೇಯಾದೊಡೆಯದೇವೇನ ವಾದೀಭಹರಿಣಾ ಕೃತಃ |
ಗದ್ಯಚಿಂತಾಮಣಿರ್ಲೋಕೇ ಚಿಂತಾಮಣಿರಿವಾಪರಃ ||

ಎಂಬ ಶ್ಲೋಕದಲ್ಲಿ ಸ್ತುತಿಸಲ್ಪಟ್ಟಿರುವುದರಿಂದ ಈ ಚಿಂತಾಮಣಿಯೆಂಬ ಗ್ರಂಥವು ಗದ್ಯಚಿಂತಾಮಣಿಯಂತೆ ಒಂದು ಕಾವ್ಯಗ್ರಂಥವಾಗಿತ್ತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗೆಯೇ ಈ ಗ್ರಂಥವನ್ನು ಸ್ತುತಿಸುವ ಶ್ಲೋಕದ ಮುಂದಿನ ಶ್ಲೋಕದಲ್ಲಿ ಕೀರ್ತಿತವಾಗಿರುವ ಶ್ರೀವರ್ಧಕೃತವಾದ ಚೂಡಾಮಣಿ ಕಾವ್ಯವೂ ಈ ಚಿಂತಾಮಣಿ ಗದ್ಯಚಿಂತಾಮಣಿಗಳಂತೆಯೇ ಕಾವ್ಯಗ್ರಂಥವಾಗಿತ್ತೆಂಬುದರಲ್ಲಿಯೂ ಅದು ಸಿದ್ಧಾಂತ ಶಾಸ್ತ್ರದ ವ್ಯಾಖ್ಯಾನವಾಗಿರಲಿಲ್ಲವೆಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ.

೩. ಈ ಶ್ರವಣಬೆಳ್ಗೊಳದ ಶಾಸನದಲ್ಲಿ ಈ ಚಿಂತಾಮಣಿ ಚೂಡಾಮಣಿಗಳ ಮತ್ತು ನವಸ್ತೋತ್ರ, ಸುಮತಿಶತಕ, ಶ್ರುತಬಿಂದು, ರೂಪಸಿದ್ಧಿಯೆಂಬ ಗ್ರಂಥಗಳ ಹೆಸರುಗಳು ಹೇಳಲ್ಪಟ್ಟಿರುವುವಲ್ಲದೆ ಪ್ರತಿಷ್ಠಾಕಲ್ಪ, ಜ್ವಾಲಿನೀಕಲ್ಪ, ತತ್ವಾರ್ಥ

* ಈ ಹೆಸರಿನ ಜ್ಯೋತಿಷಗ್ರಂಥವೂ ಒಂದುಂಟು.

ಸೂತ್ರವ್ಯಾಖ್ಯಾ, ಗದ್ಯಚಿಂತಾಮಣಿ ಕ್ಷತ್ರಚಿಂತಾಮಣಿ, ಪಾರ್ಶ್ವನಾಥಚರಿತ ಯಶೋಧರಚರಿತಾದಿ ಗ್ರಂಥಗಳ ಕರ್ತೃಗಳಾದ ಇಂದ್ರನಂದ್ಯಾದಿ ಗುರುಗಳು ಕೀರ್ತಿಸಲ್ಪಟ್ಟಿರುವರು. ಈ ಗ್ರಂಥಗಳಲ್ಲಾವುದೂ ಕನ್ನಡದಲ್ಲಿಲ್ಲದೆ ಎಲ್ಲವೂ ಸಂಸ್ಕೃತದಲ್ಲಿಯೇ ಬರೆಯಲ್ಪಟ್ಟಿರುವುವಾದ್ದರಿಂದ ಶ್ರೀವರ್ಧದೇವಕೃತವಾದ ಚೂಡಾಮಣಿಯೂ ಸಂಸ್ಕೃತ ಭಾಷೆಯಲ್ಲಿಯೇ ಗ್ರಥಿತವಾಗಿದ್ದಿತೆಂದೂ ಅದು ಕನ್ನಡ ಗ್ರಂಥವಲ್ಲವೆಂದೂ ನಾವು ಧಾರಾಳವಾಗಿ ಹೇಳಬಹುದು.

೪. ಮೇಲೆ ಹೇಳಿದ ಶ್ರವಣಬೆಳ್ಗೊಳದ ೬೭ ನೇ ಶಾಸನದಲ್ಲಿ ಕೀರ್ತಿತನಾಗಿರುವ ಶ್ರೀವರ್ಧದೇವನ ಶಿಷ್ಯನಾದ ಮಹೇಶ್ವರಮುನಿಯ ಶಿಷ್ಯನಾದ ಅಕಲಂಕದೇವನು ಅಷ್ಟಶತೀ ಎಂಬ (ಸಮಂತಭದ್ರವಿರಚಿತ) ಆಪ್ತಮೀಮಾಂಸಾವ್ಯಾಖ್ಯೆಯನ್ನೂ ಮತ್ತು ಇತರ ಗ್ರಂಥಗಳನ್ನೂ ರಚಿಸಿ ಜೈನರಲ್ಲಿ ಬಹುಪ್ರಸಿದ್ಧನಾಗಿರುವ ಅಕಲಂಕದೇವನೇ ಆಗಿರುವನು. ಇವನು ಕ್ರಿ. ಶ. ೭೫೪ ರಿಂದ ೭೮೨ ರ ವರೆಗೆ ಆಳುತ್ತಿದ್ದ ರಾಷ್ಟ್ರಕೂಟ ಚಕ್ರವರ್ತಿಯಾದ ೧ ನೇ ಕೃಷ್ಣನ ಕಾಲದಲ್ಲಿ ಜೀವಿಸಿದ್ದನೆಂದು ಮ|| ಪಾಠಕರಿಂದ (ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲ್, ಸಂಚಿಕೆ ೧೮, ಪುಟ ೨೧೯ ಆದಿ) ನಿಶ್ಚಯಿಸಲ್ಪಟ್ಟಿರುವುದು.

ಶ್ರವಣಬೆಳ್ಗೊಳದ ೨೫೪ ನೇ ಶಾಸನದಲ್ಲಿಯೂ ಕೂಡ ಈ ಅಕಲಂಕದೇವನು ಗುಣಭದ್ರದೇವನ ಗುರುವಾದ ಜಿನಸೇನನಿಗೆ, ಎಂದರೆ, ಕ್ರಿ. ಶ. ೮೧೪-೮೧೫ ರಲ್ಲಿ ರಾಜ್ಯವಾಳಲು ಪ್ರಾರಂಭಮಾಡಿದ ರಾಷ್ಟ್ರಕೂಟಚಕ್ರವರ್ತಿಯಾದ ೧ ನೇ ಅಮೋಘವರ್ಷನಿಗೆ ಪರಮಗುರುವೂ, ಅವನಿಂದ ಪೂಜಿತನೂ ಆಗಿದ್ದು, ಕ್ರಿ. ಶ. ೭೮೪ ರಲ್ಲಿ ಹರಿವಂಶಪುರಾಣವನ್ನು ಬರೆದ ಜಿನಸೇನನಿಗೆ ಗುರುವಾಗಿದ್ದನೆಂದು ಹೇಳಲ್ಪಟ್ಟಿರುವಂತಿರುವುದರಿಂದ, ಇವನು ಸುಮಾರು ೭೭೦ ರಲ್ಲಿ ಇದ್ದನೆಂದು ನಾವೂ ಊಹಿಸಬಹುದು. ಈ ಅಕಲಂಕದೇವನ ಗುರುವಾದ ಮಹೇಶ್ವರಮುನಿಗೆ ಶ್ರೀವರ್ಧದೇವನು ಗುರುವಾದುದರಿಂದ ಇವನು ಸುಮಾರು ಕ್ರಿ. ಶ. ೭೧೦ ರಲ್ಲಿ ಇದ್ದನೆಂದು ನಾವು ಹೇಳಬಹುದು. ದಶಕುಮಾರಚರಿತದ ಕರ್ತೃವಾದ ದಂಡಿಯೂ ಸುಮಾರಾಗಿ ಇದೇ ಕಾಲದಲ್ಲಿ ಜೀವಿಸುತ್ತಿದ್ದುದರಿಂದ (ಡಾ|| ವಿಂಟರ್ನಿಟ್ಸ್‌ರವರ ಪೂರ್ವನಿರ್ದಿಷ್ಟಗ್ರಂಥ, ಸಂಚಿಕೆ ೩, ಪುಟ ೬೪೧) ಈ ಶ್ರೀವರ್ಧದೇವನನ್ನು ಸ್ತುತಿಸಿದ ದಂಡಿಯು ಇವನೇ ಆಗಿರಬಹುದು.

ಅಂತು ಶ್ರೀವರ್ಧದೇವನು ಕ್ರಿ. ಶ. ಸುಮಾರು ೭೧೦ ರಲ್ಲಿ ಜೀವಿಸಿದ್ದನೆಂದೂ, ಅವನು ರಚಿಸಿದ ಚೂಡಾಮಣಿಯೆಂಬ ಗ್ರಂಥವು ಸಂಸ್ಕೃತಭಾಷೆಯಲ್ಲಿ ನಿಬದ್ಧ

ವಾದ ಒಂದು ಕಾವ್ಯವಾಗಿತ್ತೆಂದೂ ಮೇಲೆ ಹೇಳಿರುವುದರಿಂದ ವ್ಯಕ್ತವಾಗುವುದು. ಆದ್ದರಿಂದ ಇವನು ಸಿದ್ಧಾಂತಗ್ರಂಥಕ್ಕೆ ವ್ಯಾಖ್ಯಾನರೂಪವಾದ ೮೪,೦೦೦ ಅಥವಾ ೯೬,೦೦೦ ಗ್ರಂಥಪ್ರಮಾಣವುಳ್ಳ ಕನ್ನಡ ಗ್ರಂಥವನ್ನು ಬರೆದ ತೆಂ(ತುಂ) ಬಲೂರಾಚಾರ್ಯನಿಂದ ಅಭಿನ್ನನೆಂದೂ, ಇವನು ಕ್ರಿ. ಶ. ಸುಮಾರು ೬೫೦ ರಲ್ಲಿ ಇದ್ದಿರಬಹುದೆಂದೂ ಕವಿಚರಿತಕಾರರು ಮೇಲೆ ಹೇಳಿರುವ ಅಭಿಪ್ರಾಯವು ತಪ್ಪೆಂದು ನಮಗೆ ತೋರುವುದು.

---

೩೧. ಗುಣನಂದಿ.

ಈ ಕವಿಯೆನ್ನು ಕುರಿತು ಕವಿಚರಿತಕಾರರು—

"ಮಲ್ಲಿಕಾರ್ಜುನನು (ಸು. 1245) ತನ್ನ ಸೂಕ್ತಿಸುಧಾರ್ಣವವೆಂಬ ಕರ್ಣಾಟಕಪದ್ಯ ಸಂಗ್ರಹದಲ್ಲಿ ಗುಣನಂದಿಯ ಗ್ರಂಥದಿಂದ ಪದ್ಯಗಳನ್ನು ಉದ್ಧರಿಸಿ ಬರೆದಿರುವಂತೆ ಹೇಳುತ್ತಾನೆ. ಕೇಶಿರಾಜನು (ಸು. 1260) ಪೂರ್ವದ ಕನ್ನಡಕವಿಗಳ ಗೋಷ್ಠಿಯಲ್ಲಿ ಇವನ ಹೆಸರನ್ನೂ ಸೇರಿಸಿ ಹೇಳಿದ್ದಾನೆ. ನಂಜುಂಡನು (ಸು. 1525) ತನ್ನ ಕುಮಾರರಾಮುಕಥೆಯಲ್ಲಿ—

ಇಂಪುವಡೆದ ಕವಿತಾರಸಲಹರಿಯ | ಸೊಂಪಿನಿಂ ವಾದಿಗಳಿರ್ದೆಗೆ ||
ಕಂಪನವನು ಪುಟ್ಟಿಸುವ ಗುಣನಂದಿಯ | ನಾಂ ಪೊಗೞುವೆ ಬಲಗೊಂಬೆ ||

ಎಂದು ಈತನನ್ನು ಹೊಗಳಿದ್ದಾನೆ. ಆದುದರಿಂದ ಈತನು ಕನ್ನಡದಲ್ಲಿ ಗ್ರಂಥಗಳನ್ನು ಬರೆದಿರುವುದರಲ್ಲಿ ಸಂಶಯವಿಲ್ಲ....ಈತನು ಪೂಜ್ಯಪಾದನ ಜೈನೇಂದ್ರವ್ಯಾಕರಣಕ್ಕೆ ವ್ಯಾಖ್ಯಾನರೂಪವಾಗಿ ಪ್ರಕ್ರಿಯಾವತಾರ ಎಂಬ ಸಂಸ್ಕೃತಗ್ರಂಥವನ್ನು ಬರೆದಿದ್ದಾನೆ.

ಇವನು ತರ್ಕವ್ಯಾಕರಣಶಾಸ್ತ್ರಗಳಲ್ಲಿ ಪಂಡಿತನೆಂದೂ, ಸಾಹಿತ್ಯಪತಿಯೆಂದೂ, ಈತನಿಗೆ ಮುನ್ನೂರು ಜನ ಶಿಷ್ಯರಿದ್ದರೆಂದೂ, ಅವರಲ್ಲಿ ದೇವೇಂದ್ರಮುನಿ ಪ್ರಖ್ಯಾತನಾದವನೆಂದೂ ಶ್ರವಣಬೆಳ್ಗೊಳದ 66, 111, 127 ನೆಯ ಶಾಸನಗಳಿಂದ ತಿಳಿಯಬರುತ್ತದೆ.[2] ಈ ಶಾಸನಗಳಲ್ಲಿ 127 ನೆಯದು 1115 ರಲ್ಲಿ ಹುಟ್ಟಿರುವುದರಿಂದಲೂ ದೇವೇಂದ್ರಮುನಿಯಿಂದೀಚೆಗೆ ಈ ಶಾಸನದ ಕಾಲದ ವರೆಗೆ ಗುರುಪರಂಪರೆಯಲ್ಲಿ ಏಳು ಜನವಿದ್ದಂತೆ ತಿಳಿಯಬರುವುದರಿಂದಲೂ ಈ ದೇವೇಂದ್ರಮುನಿ ಆದಿಪಂಪನ (941) ಗುರುವಾದ ದೇವೇಂದ್ರಮುನಿಯೇ ಆಗಿರಬೇಕು. ಈತನ ಗುರುವಾದ ಗುಣನಂದಿ ಬಹುಶಃ 900 ರಲ್ಲಿ ಇದ್ದಿರಬಹುದು."

ಎಂದು (ಕವಿಚರಿತೆ ೧ ನೆಯ ಸಂಪುಟದ ೨ ನೆಯ ಮುದ್ರಣ, ಪುಟ ೨೨-೨೩) ಬರೆದು ಗುಣನಂದಿಕವಿಯು ಶ್ರವಣಬೆಳ್ಗೊಳದ ೬೬, ೧೧೧, ೧೨೭ ನೆಯ ಶಾಸನಗಳಲ್ಲಿ ಕೀರ್ತಿತನಾಗಿರುವ ಗುಣನಂದಿಯೇ ಎಂದೂ, ಆ ಶಾಸನಗಳಲ್ಲಿ ಸ್ತುತನಾಗಿರುವ ಗುಣನಂದಿಶಿಷ್ಯನಾದ ದೇವೇಂದ್ರನು ಆದಿಪಂಪನ ಗುರುವಾದ

---

2 ತಚ್ಛಿಷ್ಯೋ ಗುಣನಂದಿಪಂಡಿತಯತಿಶ್ಚಾರಿತ್ರಚಕ್ರೇಶ್ವರಃ |
ತರ್ಕವ್ಯಾಕರಣಾದಿಶಾಸ್ತ್ರನಿಪುಣಸ್ಸಾಹಿತ್ಯವಿದ್ಯಾಪತಿಃ ||
ಮಿಥ್ಯಾವಾದಿಮದಾಂಧಸಿಂಧುರಘಟಾಸಂಘಟ್ಟಕಂಠೀರವೋ |
ಭವ್ಯಾಂಭೋಜದಿವಾಕರೋ ವಿಜಯತಾಂ ಕಂದರ್ಪದರ್ಪಾಪಹಃ ||
ತಚ್ಛಿಷ್ಯಾಸ್ತ್ರಿಶತಾ ವಿವೇಕನಿಧಯಶ್ಶಾಸ್ತ್ರಾಬ್ಧಿಪಾರಂ ಗತಾಃ |
ತೇಷೂತ್ಕೃಷ್ಟತಮಾ ದ್ವಿಸಪ್ತತಿಮಿತಾಃ ಸಿದ್ಧಾಂತಶಾಸ್ತ್ರಾರ್ಥಕ ||
ವ್ಯಾಖ್ಯಾನೇ ಪಟವೋ ವಿಚಿತ್ರಚರಿತಾಸ್ತೇಷು ಪ್ರಸಿದ್ಧೋ ಮುನಿಃ |
ನಾನಾನೂನನಯಪ್ರಮಾಣನಿಪುಣೋ ದೇವೇಂದ್ರಸೈದ್ಧಾಂತಿಕಃ ||

ದೇವೇಂದ್ರನೇ ಎಂದೂ ನಾಮೈಕ್ಯವೊಂದರ ಆಧಾರ ವಿನಾ ಬೇರೆ ಯಾವ ಆಧಾರವೂ ಇಲ್ಲದೆ ನಿರ್ಧರಿಸಿ ಹೇಳಿದ್ದಾರೆ.

ಈ ಸಿದ್ಧಾಂತವು ಸಾಧುವಾಗಿರುವಂತೆ ಕಾಣಿಸುವುದಿಲ್ಲ. ಮೇಲೆ ಹೇಳಿದ ಶ್ರವಣಬೆಳ್ಗೊಳದ ೧೨೭ ನೆಯ ಶಾಸನವು ಕ್ರಿ. ಶ. ೧೧೧೫ ರಲ್ಲಿ ಹುಟ್ಟಿತೆಂಬುದೇನೋ ವಾಸ್ತವವೇ. ಆದರೆ ಆ ವರ್ಷದಲ್ಲಿ ಲೋಕಾಂತರವನ್ನು ಹೊಂದಿದನೆಂದು ಹೇಳಲ್ಪಟ್ಟಿರುವ ಮೇಘಚಂದ್ರನ ಹಿಂದೆ ಇದ್ದ ದೇವೇಂದ್ರಮುನಿಯು ಏಳನೆಯ ತಲೆಯವನಾಗಿದ್ದನೆಂಬ ಕವಿಚರಿತಕಾರರ ಅಭಿಪ್ರಾಯವು ಭ್ರಮಮೂಲವಾದುದು. ದೇವೇಂದ್ರಮುನಿಯ ಶಿಷ್ಯನಾದ ಕಲಧೌತನಂದಿಯ ಶಿಷ್ಯನಾದ ಮಹೇಂದ್ರಕೀರ್ತಿಯ ಶಿಷ್ಯನಾದ ವೀರಣಂದಿಯ ಅನ್ವಯದಲ್ಲಿ ಗೊಲ್ಲಾಚಾರ್ಯನೆಂಬ ಗುರುವು (ಇವನು ಮೇಘಚಂದ್ರನ ಗುರುವಾದ ಸಕಲಚಂದ್ರನ ಗುರುವಾದ ಅಭಯನಂದಿಗೆ ಗುರುವಾದ ತ್ರೈಕಾಲ್ಯಯೋಗಿಯ ಗುರುವು) ಇದ್ದನೆಂದು ಈ ಶಾಸನದಲ್ಲಿ ಹೇಳಿರುವುದೇ * ಹೊರತು ಗೊಲ್ಲಾಚಾರ್ಯನು ವೀರಣಂದಿಯ ಶಿಷ್ಯನಾಗಿದ್ದನೆಂದು ಈ ಶಾಸನದಲ್ಲಿ ಹೇಳಿಲ್ಲ.

ಈ ಗುಣನಂದಿಯು ಗೃಧ್ರಪಿಂಛನ ಶಿಷ್ಯನಾದ ಬಲಾಕಪಿಂಛನಿಗೆ ಶಿಷ್ಯನಾಗಿದ್ದನೆಂದು ಈ ೧೨೭ ನೆಯ ಶಾಸನದಲ್ಲಿ ಹೇಳಿರುವುದು. ಶ್ರವಣಬೆಳ್ಗೊಳದ ೬೮ (ಹಳೇನಂಬರ್ ೮೦) ನೆಯ ಶಾಸನದಲ್ಲಿ ಗೃಧ್ರಪಿಂಛನ ಶಿಷ್ಯನಾದ ಬಲಾಕಪಿಂಛನ ಅನ್ವಯದಲ್ಲಿ ಸಮಂತಭದ್ರನೂ, ದೇವನಂದಿ ಅಥವಾ ಪೂಜ್ಯಪಾದನೂ, ಅಕಳಂಕನೂ ಇದ್ದರೆಂದು ಹೇಳಿ ಈ ಗುರುಪರಂಪರೆಯಲ್ಲಿ ತ್ರೈಕಾಲ್ಯಯೋಗಿಯೂ ಇದ್ದನೆಂದೂ, ಶ್ರವಣಬೆಳ್ಗೊಳದ ೬೭ (೫೮) ನೆಯ ಶಾಸನದಲ್ಲಿ ಸಮಂತಭದ್ರನ ಬಳಿಕ ಕ್ರಮವಾಗಿ ಸಿಂಹನಂದಿ, ವಕ್ರಗ್ರೀವ, ವಜ್ರನಂದಿ, ಪಾತ್ರಕೇಸರಿ, ಸುಮತಿದೇವ, ಕುಮಾರಸೇನ, ಚಿಂತಾಮಣಿಕಾವ್ಯಕರ್ತೃವಾದ ಚಿಂತಾಮಣಿ, ಶ್ರೀವರ್ಧದೇವ, ಮಹೇಶ್ವರ, ಅಕಳಂಕನೇ ಮೊದಲಾದ ಗುರುಗಳು ಇದ್ದರೆಂದೂ ಹೇಳಲ್ಪಟ್ಟಿರುವುದರಿಂದ ಮೇಲೆಹೇಳಿದ ಗುಣನಂದಿಯೂ ಅವನ ಶಿಷ್ಯನಾದ ದೇವೇಂದ್ರನೂ ಅಕಳಂಕನಿಗಿಂತ ಮೂರುನಾಲ್ಕು ತಲೆಯೊದರೂ ಹಿಂದೆ ಇದ್ದಿರಬೇಕೆಂಬ ಅಂಶವು ಸ್ಪಷ್ಟವಾಗಿ ಹೊರಪಡುವುದು. ಈ ಅಕಳಂಕನು ಕ್ರಿ. ಶ. ಸುಮಾರು ೭೭೦ ರಲ್ಲಿ ಇದ್ದುದರಿಂದ (೨೪೪ನೇ ಪುಟವನ್ನು ನೋಡಿ) ಮೇಲೆ ಹೇಳಿದ ದೇವೇಂದ್ರಮುನಿಯೂ ಅವನ ಗುರು ಗುಣನಂದಿಯೂ ಕ್ರಿ. ಶ. ೭೦೦ ಕ್ಕಿಂತ ಹಿಂದೆ ಇದ್ದಿರಬೇಕೇ ಹೊರತು ಕವಿಚರಿತ

* ಈ ಅಂಶವನ್ನು ಕುರಿತು "ಶ್ರವಣಬೆಳ್ಗೊಳದ ಶಾಸನ" ಗಳ ೨ ನೇ ಮುದ್ರಣದಲ್ಲಿ ಮ|| ಆರ್. ನರಸಿಂಹಾಚಾರ್ಯರು ಬರೆದಿರುವ ಆಂಗ್ಲ ಉಪೋದ್ಘಾತದ ೮೧ ನೆಯ ಪುಟವನ್ನು ನೋಡಿ.

ಕಾರರು ಹೇಳುವಂತೆ ಕ್ರಿ. ಶ. ೯೦೦ ರಲ್ಲಿ ಜೀವಿಸಿರಲಾರರು. ವಸ್ತುತಃ ಆದಿಪುರಾಣದ ಪ್ರಾರಂಭದಲ್ಲಿ ಪಂಪನಿಂದ ಕೀರ್ತಿತವಾದ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಗೃಧ್ರಪಿಂಛಾಚಾರ್ಯ, ಜಟಾಚಾರ್ಯ, ಶ್ರುತಕೀರ್ತ್ಯಾಚಾರ್ಯ, ಮಲಧಾರಿಸಿದ್ಧಾಂತಮುನೀಶ್ವರ, ದೇವೇಂದ್ರಮುನಿ, ಜಯನಂದಿಮುನಿ, ಅಕಳಂಕದೇವ, ಎಂಬ ಗುರುಪರಂಪರೆಯಲ್ಲಿ ಹೇಳಲ್ಪಟ್ಟಿರುವ ಅಕಳಂಕದೇವ ದೇವೇಂದ್ರಮುನಿಗಳು, ಪ್ರಾಯಶಃ ನಾವು ಮೇಲೆ ಹೇಳಿದ ಅಕಳಂಕದೇವ, ಗುಣನಂದಿಶಿಷ್ಯ ದೇವೇಂದ್ರರೇ ಆಗಿರುವುದರಿಂದ, ದೇವೇಂದ್ರನು ಅಕಳಂಕನಿಗಿಂತ ಹಿಂದೆ ಇದ್ದನೆಂದು ಈ ಗ್ರಂಥದಿಂದಲೂ ವ್ಯಕ್ತವಾಗುವುದು.

ಕವಿಚರಿತಕಾರರು ಹೇಳಿರುವಂತೆ ಈ ಗುಣನಂದಿಮುನಿಯು 'ತರ್ಕವ್ಯಾಕರಣಾದಿಶಾಸ್ತ್ರ ನಿಪುಣ' ನೆಂದೂ 'ಸಾಹಿತ್ಯವಿದ್ಯಾಪತಿ' ಯೆಂದೂ ಮೇಲೆ ಹೇಳಿದ ಶ್ರವಣಬೆಳ್ಗೊಳದ ಶಾಸನಗಳಲ್ಲಿ ಸ್ತುತಿಸಲ್ಪಟ್ಟಿರುವನೆಂಬುದೇನೋ ನಿಜವೇ. ಆದರೆ ಈ ವಿಶೇಷಣಗಳು ಅವನು ಅತಿಶಯವಾಗಿ ಪಾಂಡಿತ್ಯವನ್ನು ಹೊಂದಿದ್ದನೆಂಬುದನ್ನು ಬೋಧಿಸುವುವೇ ಹೊರತು ಅವನು ಕವಿಯಾಗಿದ್ದನೆಂಬ ಅರ್ಥವನ್ನು ಬೋಧಿಸುವುದಿಲ್ಲವೆಂದು ನಮ್ಮ ಅಭಿಪ್ರಾಯ; ಈ ವಿಷಯದಲ್ಲಿ ನಾವು ಮೇಲೆ ೨೫-೨೭ ನೇ ಪುಟಗಳಲ್ಲಿ ಬರೆದಿರುವುದನ್ನು ನೋಡಿ. ಅಲ್ಲದೆ ಇವನು ವಾಸ್ತವವಾಗಿಯೂ ಕನ್ನಡ ಕಾವ್ಯಗಳನ್ನು ಬರೆದಿದ್ದಲ್ಲಿ ಕವಿರಾಜಮಾರ್ಗದ ಕರ್ತೃವಿಗಿಂತಲೂ ಇವನು ಪ್ರಾಚೀನನಾದುದರಿಂದ ಆ ಗ್ರಂಥದಲ್ಲಿಯೂ, ನಾಗವರ್ಮನ ಕಾವ್ಯಾವಲೋಕನದಲ್ಲಿಯೂ ಇವನ ಹೆಸರು ತಪ್ಪದೆ ಹೇಳಲ್ಪಡುತ್ತಿತ್ತಾದ ಕಾರಣ, ಈ ಗ್ರಂಥಗಳನ್ನು ಬರೆದ ಕಾಲದಲ್ಲಿ ಗುಣನಂದಿವಿರಚಿತವಾದ ಕನ್ನಡ ಗ್ರಂಥವಾವುದೂ ಇರಲಿಲ್ಲವೆಂದು ನಾವು ದೃಢವಾಗಿ ಹೇಳಬಹುದು. ಕ್ರಿ. ಶ ಸುಮಾರು ೧೨೬೩ ರಲ್ಲಿ ರಚಿಸಲ್ಪಟ್ಟ ಸೂಕ್ತಿಸುಧಾರ್ಣವದಲ್ಲಿಯೂ ಸುಮಾರು ಅದೇ ಕಾಲದಲ್ಲಿ ಬರೆಯಲ್ಪಟ್ಟ ಶಬ್ದಮಣಿದರ್ಪಣದಲ್ಲಿಯೂ ಗುಣನಂದಿಯ ಹೆಸರು ಉಲ್ಲಿಖಿತವಾಗಿರುವುದರಿಂದ, ಇವನು ತನ್ನ ಕಾವ್ಯವನ್ನು ಆ ವರ್ಷಕ್ಕಿಂತ ಹಿಂದೆ ಬರೆದಿದ್ದನೆಂದು ಸ್ಪಷ್ಟವೇ ಆಗಿರುವುದು. ಇವರಿಗೆ ಹಿಂದೆ ೧೩ ನೆಯ ಶತಮಾನದಲ್ಲಿದ್ದ ಆಚಣ್ಣ, ಜನ್ನ, ಪಾರ್ಶ್ವ, ಗುಣವರ್ಮರೇ ಮೊದಲಾದ ಜೈನಕವಿಗಳೂ ಕೂಡ ಗುಣನಂದಿಯ ಹೆಸರನ್ನು ಹೇಳಿಲ್ಲವಾದುದರಿಂದ ಇವನು ಅವರಿಗಿಂತ ಈಚೆ ಇದ್ದನೆಂದು ನಾವು ಊಹಿಸಬೇಕು. ಆದ್ದರಿಂದ ಈ ಕವಿಯು ಕ್ರಿ. ಶ. ಸುಮಾರು ೧೨೫೦ ರಲ್ಲಿದ್ದು ಕನ್ನಡದಲ್ಲಿ ಕಾವ್ಯವನ್ನು ಬರೆದನೆಂದು ತೋರುವುದು.

---

೩೨. ಕಂತಿ.

ಇವಳ ವಿಷಯವಾಗಿ ಕವಿಚರಿತಕಾರರು :—

" ಈಕೆ ಆವ ಗ್ರಂಥಗಳನ್ನು ಬರೆದಿದ್ದಾಳೆಯೋ ತಿಳಿಯದು. ಆದರೆ ಈಕೆ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಅಭಿನವಪಂಪನು ಕೊಟ್ಟ ಸಮಸ್ಯೆಗಳನ್ನು ಪೂರ್ತಿಮಾಡಿದಂತೆ " ಕಂತಿಹಂಪನ ಸಮಸ್ಯೆಗಳು " ಎಂಬ ಪದ್ಯಗಳಿಂದ ಗೊತ್ತಾಗುತ್ತದೆ. ಬಾಹುಬಲಿ (ಸು. 1560) ನಾಗಕುಮಾರ ಚರಿತ್ರೆಯಲ್ಲಿ—

ವಿಬುಧಜನಸ್ತುತಶ್ರೀವೀರದೋರನ | ಸಭೆಗೆ ಮಂಗಳಲಕ್ಷ್ಮಿಯೆನಿಪ |
ಶುಭಗುಣಚರಿತೆ ಕಂತಿಕೆಯರ ಪೊಗಳ್ವೆನಾ | ನಭಿನವವಾಗ್ದೇವಿಯರ ||

ಎಂಬ ಪದ್ಯದಲ್ಲಿ ಈಕೆಯನ್ನು ಸ್ತುತಿಸಿದ್ದಾನೆ. ಇದರಿಂದ ಈಕೆ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದಂತೆ ತಿಳಿಯುತ್ತದೆ. " ಅಭಿನವವಾಗ್ದೇವಿ " ಎಂಬುದು ಈಕೆಗೆ ಬಿರುದಾಗಿದ್ದಿರಬಹುದು. ದೇವಚಂದ್ರನು ಈಕೆಯ ವಿಷಯವಾಗಿ ಹೀಗೆ ಬರೆದಿದ್ದಾನೆ.—

' ದೋರರಾಯಂ ದೋರಸಮುದ್ರಮೆಂಬ ತಟಾಕಮಂ ಕಟ್ಟಿಸಿ ಧರ್ಮಚಂದ್ರನೆಂಬ ದ್ವಿಜನುಂ ಮಂತ್ರಿಯಾಗಲ್ ಆಳುತ್ತಿರೆ ಮಂತ್ರಿಯ ಮಗಂ ಉಪಾಧ್ಯಾಯನಾಗಿ ಛಂದೋಲಂಕಾರ ವ್ಯಾಕರಣ ಕಾವ್ಯಾದಿಗಳಂ ಪೇೞುತ್ತೆ ಮಕ್ಕಳ್ಗೆ ಮತಿಪ್ರಕಾಶಕ್ಕಂ ಜ್ಯೋತಿಷ್ಮತೀ ತೈಲಮಂ ಮಾಡಿ ಕುಡುಕೆಯೊಳಿಟ್ಟು ಮಂದಮತಿಯಾಗಿರ್ದರ್ಗೆರೆಬಿಂದುಮಾತ್ರಮಂ ಕುಡುತ್ತುಮಿರ್ಪುದಂ ಕಂತಿಯೆಂಬ ಕೆಳದಿ ಅಱಿಯದೆ ಆ ತೈಲವೆಲ್ಲಮಂ ಸೇವಿಸಲ್ ಉರಿಹತ್ತಿ ಬಾವಿಯೊಳ್ ಬೀೞ್ದೊಡಂ ಕಂಠಪ್ರಮಾಣದ ನೀರೊಳ್ ನಿಂದು ಜೀವಮುೞಿಯೆ ವಿದ್ಯಾವಿಶಾರದೆಯಾಗಿ ಕವಿತ್ವಮಂ ಪೇೞುತ್ತುಂ ಬಾವಿಯೊಳೆ ಇರ್ಪುದುಂ ದೋರರಾಯನಾಸ್ಥಾನದ ಕನ್ನಡ ಸಂಸ್ಕೃತ ಮಹಾಕವಿಗಧಿಪಂ ಪಂಪಕವಿಯುಂ ಕಳುಹಲ್ ಆತಂ ಬಂದು ವಿದ್ಯೆಯಿಂ ಸಾವಿರ ಪ್ರಶ್ನೆಯಂ ಕೇಳಲ್ ಉತ್ತರಮಂ ಕುಡಲ್ ಆಕೆಯಂ ರಾಜಸಭೆಗೆಯ್ದಿಸೆ ವಿದ್ವತ್ಸಮೂಹದೊಳ್ ಅಧಿಕಕವೀಶ್ವರಿಯಾಗಿರ್ದಳ್.'

ಅಭಿನವಪಂಪನು ಇವಳಿಗೆ ಸಮಸ್ಯೆಗಳನ್ನು ಕೊಟ್ಟಂತೆ ತಿಳಿವುದರಿಂದ ಈಕೆ ಆತನ ಸಮಕಾಲದವಳಾಗಿರಬೇಕು. ಆ ಕಾಲದಲ್ಲಿ ದ್ವಾರಸಮುದ್ರದಲ್ಲಿ 1100 ರಿಂದ 1106 ರ ವರೆಗೆ ಆಳಿದ ಬಲ್ಲಾಳನೇ ರಾಜನಾಗಿದ್ದಿರಬೇಕು. ಈತನ ಸಭೆಯನ್ನು ಪಂಪ ಕಂತಿ, ಮೊದಲಾದ ಕವಿಗಳು ಅಲಂಕರಿಸಿದಂತೆ ತೋರುತ್ತದೆ. ಕನ್ನಡದಲ್ಲಿ ಕವಿತ್ವಮಾಡಿರುವ ಹೆಂಗಸರಲ್ಲಿ ನಮಗೆ ತಿಳಿದಮಟ್ಟಿಗೆ ಈಕೆಯೇ ಮೊದಲನೆಯವಳು. ಇವಳ ಪದ್ಯಗಳಿಂದ ಈಕೆ ಜೈನಸ್ತ್ರೀಯೆಂದು ವ್ಯಕ್ತವಾಗುತ್ತದೆ. ಅಲ್ಲದೆ ಇವಳಿಗೂ ಪಂಪನಿಗೂ ಬಹಳವಾಗಿ ಸಂವಾದವು ನಡೆಯುತ್ತಿದ್ದಂತೆಯೂ, ಒಂದಾನೊಂದು ದಿವಸ ಪಂಪನು ಇವಳಿಂದ ಹೊಗಳಿಸಿಕೊಳ್ಳುವನೆಂದು ಪಂಥಮಾಡಿಕೊಂಡು ಅದಕ್ಕೋಸ್ಕರ ಸತ್ತವನಂತೆ ನಟಿಸಿ ಶವದಂತೆ ಬಿದ್ದಿರಲು ಆಗ ಕಂತಿ ಈತನನ್ನೂ ಈತನ ಕವಿತಾಚಾತುರಿಯನ್ನೂ

ಕವಿರಾಯ ಕವಿಪಿತಾಮಹ | ಕವಿಕಂಠಾಭರಣ ಕವಿಶಿಖಾಮಣಿ ಭಾಪುರೆ |
....ಮ ಪಂಪುಗ | ಕವಿಚಕ್ರೇಶಂಗೆ ಸಾವು ಸಮನಿಸಿತಕಟಾ ||........

ಎಂಬ ಪದ್ಯಗಳಲ್ಲಿ ಹೊಗಳಿ ಶೋಕಿಸಲು, ಪಂಪನು ಎದ್ದು " ನಿನ್ನಿಂದ ಹೊಗಳಿಸಿಕೊಂಡು ಪಂಥವನ್ನು ಗೆದ್ದೆನು " ಎಂದು ಹೇಳಿದಂತೆಯೂ ತಿಳಿಯಬರುತ್ತದೆ."

ಎಂದು (ಕವಿಚರಿತೆ, ೧ ನೇ ಸಂಪುಟದ ಎರಡನೇ ಮುದ್ರಣ, ಪುಟ ೧೧೦-೧೧೨) ಬರೆದು ಇವಳು ಕ್ರಿ. ಶ. ಸುಮಾರು ೧೧೦೦ ರಲ್ಲಿ ಇದ್ದಳೆಂದು ಹೇಳಿದ್ದಾರೆ.

ಈ ಸಿದ್ಧಾಂತವು ಅಷ್ಟೇನೂ ಸುಂದರವಾದುದಲ್ಲ :

೧. ಕವಿಚರಿತಕಾರರು ಮೇಲೆ ಅನುವದಿಸಿರುವ ಬಾಹುಬಲಿ, ದೇವಚಂದ್ರರ ವಾಕ್ಯಗಳಲ್ಲಿ ದೋರಸಮುದ್ರದ ದೋರರಾಯನ ಸಭೆಯಲ್ಲಿ ಕಂತಿ ಇದ್ದಳೆಂದು ಹೇಳಿರುವುದೇ ಹೊರತು ವಿಷ್ಣುವರ್ಧನರಾಯನ ಸಭೆಯಲ್ಲಿ ಅಥವಾ ಬಲ್ಲಾಳರಾಯನ ಸಭೆಯಲ್ಲಿ ಆ ಕಬ್ಬಿಗಿತಿಯು ಇದ್ದಳೆಂದು ಹೇಳಿಲ್ಲ. ಹೀಗಿರುವಲ್ಲಿ, ಈ ವಾಕ್ಯಗಳ ಆಧಾರಬಲದಿಂದ ಈ ಕಂತಿ, ಪಂಪರಿಂದ ಅಲಂಕೃತವಾದ ಸಭೆಯನ್ನುಳ್ಳಂಥ ದೋರ ಸಮುದ್ರದ ದೋರರಾಯನು 'ದ್ವಾರಸಮುದ್ರದಲ್ಲಿ 1104 ರಿಂದ 1141 ರ ವರೆಗೆ ಆಳಿದ ವಿಷ್ಣುವರ್ಧನ ಬಲ್ಲಾಳನೇ' (ಕವಿಚರಿತೆಯ ೧ ನೇ ಸಂಪುಟದ ೯೧ ನೇ ಪುಟದಲ್ಲಿ) ಅಥವಾ 'ದ್ವಾರಸಮುದ್ರದಲ್ಲಿ 1100 ರಿಂದ 1106 ರ ವರೆಗೆ ಆಳಿದ ಬಲ್ಲಾಳನೇ' ಆಗಿರಬೇಕೆಂದು (ಅದೇ ಗ್ರಂಥದ ಎರಡನೇ ಮುದ್ರಣದ ೧೧೧ ನೆಯ ಪುಟದಲ್ಲಿ) ಕವಿಚರಿತಕಾರರು ನಿರ್ಧರಿಸಿ ಹೇಳಿರುವುದು* ಸಂಗತವಾಗಿರುವಂತೆ ಕಾಣುವುದಿಲ್ಲ.

೨. ಕವಿಚರಿತಕಾರರು ಹೇಳಿರುವ ಬಲ್ಲಾಳನಾಗಲಿ, ವಿಷ್ಣುವರ್ಧನನಾಗಲಿ ಕ್ರಿ. ಶ. ೧೧೦೫ ರಲ್ಲಿ ದ್ವಾರಸಮುದ್ರದಲ್ಲಿ ರಾಜ್ಯಭಾರವನ್ನು ಮಾಡುತ್ತಿರಲಿಲ್ಲ. ಆ ಕಾಲದಲ್ಲಿ ಹೊಯ್ಸಲರಾಜರ ರಾಜಧಾನಿಯು ಬೇಲೂರಾಗಿತ್ತೆಂದು ಅನೇಕ ಶಾಸನಗಳಿಂದ ತಿಳಿಯಬರುವುದು. ಡಾ|| ಫ್ಲೀಟ್‌ರವರ ಗ್ರಂಥದ ೪೯೧ ನೆಯ ಪುಟವನ್ನೂ, ಮ|| ರೈಸ್‌ರವರ 'ಮೈಸೂರ್ ಎಂಡ್ ಕೂರ್ಗ್' ಎಂಬ ಗ್ರಂಥದ ೬೨ ನೆಯ ಪುಟವನ್ನೂ ನೋಡಿ.

ಶಕವರ್ಷ ೧೦೩೯ ನೇ ಹೇಮಲಂಬಿಸಂವತ್ಸರದ ಚೈತ್ರಮಾಸದಲ್ಲಿ ಹುಟ್ಟಿದ ಬೇಲೂರು ೫೮ ನೆಯ ಶಾಸನದಲ್ಲಿ ವಿಷ್ಣುವರ್ಧನ-ಬಿಟ್ಟಿದೇವನು ವೇಲಾಪುರದ

---

* ಇಲ್ಲಿ ಇನ್ನು ಒಂದು ವಿಶೇಷವುಂಟು. ಕವಿಚರಿತಕಾರರು ಉಕ್ತಗ್ರಂಥದ ಒಂದನೆಯ ಮುದ್ರಣದಲ್ಲಿ ಅಭಿನವಪಂಪ ಕಂತಿಯರು ಕ್ರಿ. ಶ. ಸುಮಾರು ೧೧೦೫ ರಲ್ಲಿ ಇದ್ದರೆಂದು ಹೇಳಿ, ಎರಡನೆಯ ಮುದ್ರಣದಲ್ಲಾದರೆ ಇವರಿಬ್ಬರೂ ಸುಮಾರು ೧೧೦೦ ರಲ್ಲಿ ಇದ್ದರೆಂದು ಹೇಳಿರುವರಷ್ಟೆ. ಆದರೆ ಹೀಗೆ ಮೊದಲು ಹೇಳಿದ್ದ ೧೧೦೫ ನೇ ವರ್ಷಕ್ಕಿಂತ ಸುಮಾರು ಐದು ವರ್ಷಗಳ ಹಿಂದೆ ಇವರು ಇದ್ದರೆಂದು ಊಹಿಸುವುದಕ್ಕೆ ಸಹಕಾರಿಯಾಗಿರಬಹುದಾದಂಥ ಲೇಶಕಾರಣವನ್ನಾದರೂ ಅವರು ಎರಡನೆಯ ಮುದ್ರಣದಲ್ಲಿ ಹೇಳಿಲ್ಲ. ಕವಿಗಳ ಚರಿತವನ್ನು ನಿರೂಪಿಸುವ 'ಕರ್ಣಾಟಕಕವಿಚರಿತೆ'ಯಂಥ ಗ್ರಂಥದಲ್ಲಿ ಕವಿಯು ಇದ್ದನೆಂದು ಹೇಳಿರುವ ಕಾಲದಲ್ಲಿ ಹೀಗೆ ಯಾವ ಕಾರಣವೂ ಇಲ್ಲದೆ ಐದು ವರ್ಷಗಳ ಪೌರ್ವಾಪರ್ಯವನ್ನು ಆಕಸ್ಮಾತ್ತಾಗಿ ಕಲ್ಪಿಸುವುದು ಸಾಧುವಾಗಿರುವಂತೆ ನಮಗೆ ಕಾಣುವುದಿಲ್ಲ.

ಎಂದರೆ, ಬೇಲೂರಿನ ನೆಲವೀಡಿನಲ್ಲಿ ರಾಜ್ಯಭಾರವನ್ನು ಗೈಯುತ್ತಿದ್ದನೆಂದು ಹೇಳಿರುವುದರಿಂದ, ಆ ಕಾಲದಲ್ಲಿ ಎಂದರೆ, ಕ್ರಿ. ಶ. ೧೧೧೭ ರ ಮಾರ್ಚಿ ತಿಂಗಳಿನಲ್ಲಿ ಬೇಲೂರೇ ರಾಜಧಾನಿಯಾಗಿತ್ತೆಂಬ ವಿಷಯವು ಸ್ಪಷ್ಟವಾಗುವುದು. ಕವಿಚರಿತಕಾರರ ಅಭಿಪ್ರಾಯದಲ್ಲಿಯೂ ಕೂಡ ಪಂಪರಾಮಾಯಣವು ಕ್ರಿ. ಶ. ೧೧೧೫ ಕ್ಕಿಂತ ಹಿಂದೆಯೇ ಬರೆಯಲ್ಪಟ್ಟಿರಬೇಕಾದುದರಿಂದ (ಕವಿಚರಿತೆ I, ೪೨; ಮೇಲೆ ೪೩ ನೇ ಪುಟವನ್ನು ನೋಡಿ) ಆ ಗ್ರಂಥವನ್ನು ಬರೆದ ಕಾಲದಲ್ಲಿ ದ್ವಾರಸಮುದ್ರವು ಯಾವ ದೊರೆಗೂ ರಾಜಧಾನಿಯಾಗಿರಲಿಲ್ಲವೆಂದೂ ಸ್ಪಷ್ಟವಾಗುವುದು. ಆದುದರಿಂದ ಮೇಲೆ ಉದ್ಧೃತವಾದ ಬಾಹುಬಲಿದೇವಚಂದ್ರರ ವಾಕ್ಯಗಳಲ್ಲಿಯೂ 'ಕಂತಿಹಂಪನ ಸಮಸ್ಯೆ' ಗಳಲ್ಲಿಯೂ ಉಪಯೋಗಿಸಲ್ಪಟ್ಟಿರುವ 'ದೋರಸಮುದ್ರ' 'ದೋರರಾಯ' ಎಂಬ ಈ ಪದಗಳು ಯಾವುದೋ ಪಟ್ಟಣವನ್ನೂ ಯಾವನೋ ಒಬ್ಬ ದೊರೆಯನ್ನೂ ನಿರ್ದೇಶಿಸುವುವೇ ಹೊರತು ಹೊಯ್ಸಲರಾಜರ ರಾಜಧಾನಿಯಾದ ದ್ವಾರಸಮುದ್ರವನ್ನೂ ಹೊಯ್ಸಲರಾಜರಲ್ಲಿ ಒಬ್ಬನನ್ನೂ ನಿರ್ದೇಶಿಸಲಾರವೆಂಬುದು ವ್ಯಕ್ತವಾಗಿರುವುದು.

೩. 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳಲ್ಲಿಯೂ ದೇವಚಂದ್ರನ ಮೇಲಿನ ವಾಕ್ಯದಲ್ಲಿಯೂ ಹೇಳಲ್ಪಟ್ಟಿರುವ ಪಂಪಕವಿಯು ಅಭಿನವಪಂಪನೇಯೆ ಎಂದು ಕವಿಚರಿತಕಾರರು ಅಭಿಪ್ರಾಯಪಡುವರಷ್ಟೆ. ಈ ವಿಧವಾದ ಅಭಿಪ್ರಾಯಕ್ಕೆ ಯಾವ ಆಧಾರವೂ ಇಲ್ಲವೆಂದೂ ಅಲ್ಲಿ ಹೇಳಲ್ಪಟ್ಟಿರುವ ಪಂಪಕವಿಯು ಅಭಿನವಪಂಪನೇ ಎಂದೂ ಆದಿಪಂಪನಲ್ಲವೆಂದೂ ಹೇಳುವುದಕ್ಕೆ ಯಾವ ವಿಧವಾದ ವಿನಿಗಮಕವೂ ಇಲ್ಲವೆಂದೂ ನಮಗೆ ತೋರುವುದು. ಅಥವಾ—

ಕವಿರಾಯ ಕವಿಪಿತಾಮಹ | ಕವಿಕಂಠಾಭರಣ ಕವಿಶಿಖಾಮಣಿ ಭಾಪುರೆ |
....ಮ ಪಂಪುಗ | ಕವಿಚಕ್ರೇಶಂಗೆ ಸಾವು ಸಮನಿಸಿತಕಟಾ ||

ಎಂಬ ಮೇಲೆ ಹೇಳಿದ ಪದ್ಯದಲ್ಲಿ ಪಂಪಕವಿಗೆ ಹೇಳಲ್ಪಟ್ಟಿರುವ ವಿಶೇಷಣಗಳನ್ನು ಆದಿಪಂಪನ ಮತ್ತು ಅಭಿನವಪಂಪನ ಬಿರುದುಗಳೊಡನೆ (ಕವಿಚರಿತೆ I. ೨೪ ನೆಯ ಮತ್ತು ೮೧ ನೆಯ ಪುಟಗಳನ್ನು ನೋಡಿ) ಹೋಲಿಸಿನೋಡಿದರೆ. ಇಲ್ಲಿ ಹೇಳಿರುವ 'ಕವಿಪಿತಾಮಹ' ಎಂಬ ವಿಶೇಷಣವು ಆದಿಪಂಪನ ಬಿರುದುಗಳಲ್ಲಿ ಒಂದಾದ 'ಪುರಾಣಕವಿ' ಎಂಬ ಬಿರುದಿಗೆ ಸಮಾನಾರ್ಥಕವಾಗಿರುವಂತೆ ತೋರುವುದರಿಂದ, ಈ ವಾಕ್ಯಗಳಲ್ಲಿ ಹೇಳಲ್ಪಟ್ಟಿರುವ ಪಂಪಕವಿಯು ಆದಿಪಂಪನು ಎಂದು ನಿರ್ಣಯಿಸುವುದೇ ಯುಕ್ತವಾಗಿರುವಂತೆ ಕಾಣುವುದು.

ಅದು ಹೇಗಾದರೂ ಇರಲಿ; ಈ ಇಬ್ಬರು ಪಂಪರಲ್ಲಿ ಅಭಿನವಪಂಪನು ಕ್ರಿ. ಶ. ೧೦ ನೆಯ ಶತಮಾನದ ಅಂತ್ಯದಲ್ಲಿಯೋ ೧೧ ನೆಯ ಶತಮಾನದ ಆದಿ ಭಾಗದಲ್ಲಿಯೋ ಇದ್ದನೆಂದು ನಾವು ಮೇಲೆ ಹೇಳಿರುವೆವಷ್ಟೆ. ಆದಿಪಂಪನು ಕ್ರಿ. ಶ. ೯೪೧ ರಲ್ಲಿ ತನ್ನ ಭಾರತವನ್ನು ಬರೆದನೆಂದು ಕವಿಚರಿತಕಾರರೇ (I. ೨೩) ಹೇಳಿರುವರು. ಆದುದರಿಂದ ನಾವು ಮೇಲೆ ಹೇಳಿದ ಬಾಹುಬಲಿ ದೇವಚಂದ್ರರ ವಾಕ್ಯಗಳನ್ನೂ 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳನ್ನೂ ಪ್ರಮಾಣವೆಂದು ನಂಬಿ ಅಲ್ಲಿ ಹೇಳಲ್ಪಟ್ಟಿರುವ ಪಂಪಕವಿಯು ಅಭಿನವಪಂಪನೇಯೆ ಎಂದು ಅಭಿಪ್ರಾಯಪಟ್ಟರೆ ಈ ಕಂತಿಯು ಕ್ರಿ. ಶ. ೧೦ ನೇ ಶತಮಾನದ ಅಂತ್ಯದಲ್ಲಿಯೋ ೧೧ ನೇ ಶತಮಾನದ ಆದಿಯಲ್ಲಿಯೋ ಇದ್ದಳೆಂದು ನಿಶ್ಚಯಿಸಬೇಕಾಗುವುದು; ಅಲ್ಲಿ ಹೇಳಲ್ಪಟ್ಟಿರುವವನು ಆದಿಪಂಪನೇಯೆ ಎಂದು ಅಭಿಪ್ರಾಯಪಟ್ಟರೆ, ಈ ಕಂತಿಯು ಕ್ರಿ. ಶ. ಸುಮಾರು ೯೪೧ ರಲ್ಲಿ ಇದ್ದಳೆಂದು ನಿಶ್ಚಯಿಸಬೇಕಾಗುವುದು.

ಆದರೆ ಈ ಮೇಲೆ ಹೇಳಿದ 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳನ್ನೂ ಬಾಹುಬಲಿದೇವಚಂದ್ರರ ವಾಕ್ಯಗಳನ್ನೂ ಪ್ರಮಾಣವೆಂದು ನಂಬುವುದು ಯುಕ್ತವೇ ಎಂಬ ವಿಷಯದಲ್ಲಿ ನಮಗೆ ಬಲವತ್ತರವಾದ ಸಂದೇಹವಿರುವುದು.

ಪ್ರಸಿದ್ಧರಾದ ಕವಿಗಳನ್ನೂ ಅಥವಾ ಶಾಸ್ತ್ರಗ್ರಂಥಕರ್ತೃಗಳನ್ನೂ ಕುರಿತು, ಅವರು ಪರಸ್ಪರ ಇಂಥ ಸಂದರ್ಭದಲ್ಲಿ ಸಂಮಿಲಿತರಾದರೆಂದೂ, ಆಗ ಅವರಿಗೆ ಇಂಥಿಂಥ ವಾಗ್ಯುದ್ಧಗಳೂ ಮಾತುಕಥೆಗಳೂ ನಡೆದುವೆಂದೂ, ಇಂಥವರು ಸೋತು ಹೋದರೆಂದೂ, ಇಂಥ ಕೃತಿಗಿಂತ ಇಂಥ ಕೃತಿಯು ಉತ್ತಮವೆಂದು ಪಂಡಿತರು ನಿರ್ಣಯಿಸಿದರೆಂದೂ, ಇದೇ ಮೊದಲಾದ ಕಥೆಗಳನ್ನು ವಿಶೇಷವಾಗಿ ಹೇಳುವುದೂ ಬರೆಯುವುದೂ ನಮ್ಮ ಭರತವರ್ಷದ ಜನರಿಗೆ ಬಹುಪ್ರಿಯವಾದುದು. ಇದಕ್ಕೆ ಬಲ್ಲಾಳಕೃತವಾದ ಭೋಜಪ್ರಬಂಧವೂ ವಿದ್ಯಾರಣ್ಯಕೃತವಾದ ಶಂಕರದಿಗ್ವಿಜಯವೂ ಕಥಾಸರಿತ್ಸಾಗರವೂ ದೇವಚಂದ್ರನ ರಾಜಾವಳೀಕಥೆಯೂ, ಅಲ್ಲದೆ ಇದೇ ಜಾತಿಯ ಅನೇಕ ಗ್ರಂಥಗಳೂ, ಪದ್ಯಸಮೂಹಗಳೂ ಮತ್ತು ಬಾಯಿನಲ್ಲಿ ಹೇಳುವ ಕಥಾದಿಗಳೂ ಸಾಕ್ಷಿ. ಇಂತಹ ಗ್ರಂಥಗಳಲ್ಲಿಯೂ ಪದ್ಯಗಳಲ್ಲಿಯೂ ಪ್ರಸ್ತುತರಾದ ಕವ್ಯಾದಿಗಳು ಜೀವಿಸಿದ್ದ ಬಹುವರ್ಷಗಳೀಚೆಗೆ ಈ ಗ್ರಂಥಾದಿಗಳು ಬರೆಯಲ್ಪಟ್ಟವಾದುದರಿಂದ ಅಲ್ಲಿ ಹೇಳಲ್ಪಟ್ಟಿರುವ ಕಥೆಗಳೆಲ್ಲವೂ ಪ್ರಾಯಃ ಕಲ್ಪಿತಕಥೆಗಳೇ ಆಗಿದ್ದು ಅವುಗಳಲ್ಲಿ ವಾಸ್ತವಾಂಶವು ಸಾಮಾನ್ಯವಾಗಿ ಲೇಶವಾದರೂ ಇರುವುದಿಲ್ಲ. ಅದು ಹೇಗೆಂದರೆ:—

(೧) ಇಲ್ಲಿ ಹೇಳಲ್ಪಟ್ಟ ಭೋಜಪ್ರಬಂಧದಲ್ಲಿ (ಕ್ರಿ. ಶ. ಸುಮಾರು ೧೬೦೦) ಕಾಳಿದಾಸ, ವರರುಚಿ, ಮಾಘ, ಮಯೂರ, ಬಾಣ, ದಂಡಿ, ಭವಭೂತಿ ಮೊದಲಾದ ಕವಿಗಳು ಧಾರಾನಗರದ ಭೋಜರಾಜನ ಸಭೆಯಲ್ಲಿ ಇದ್ದರೆಂದು ಹೇಳಿ ಈ ಕವಿಗಳು ಆಯಾ ಸಂದರ್ಭಗಳಲ್ಲಿ ಹೇಳಿದ ಶ್ಲೋಕಗಳು ಅಥವಾ ಶ್ಲೋಕಚರಣಗಳು ಅನುವದಿಸಲ್ಪಟ್ಟಿರುವುವು. ಧಾರಾನಗರದ ಭೋಜರಾಜನು ಕ್ರಿ. ಶ. ೧೦೧೮ ರಿಂದ ೧೦೬೦ ರ ವರೆಗೆ ಆಳುತ್ತಿದ್ದನೆಂದು ನಾವು ಮೇಲೆಯೇ (ಪುಟ ೧೭೬) ಹೇಳಿರುವೆವು. ಬಾಣನಾದರೆ ಕ್ರಿ. ಶ. ಸುಮಾರು ೬೩೦ ರಲ್ಲಿ ಇದ್ದನೆಂದೂ, ದಂಡಿಯು ಸುಮಾರು ೭೦೦ ರಲ್ಲಿ ಇದ್ದನೆಂದೂ, ಭವಭೂತಿಯು ಸುಮಾರು ೭೩೦ ರಲ್ಲಿ ಇದ್ದನೆಂದೂ, ಮಾಘನು ಸುಮಾರು ೬೭೫ ರಲ್ಲಿ ಇದ್ದನೆಂದೂ, ಕಾಳಿದಾಸನು ಕ್ರಿ. ಶ. ೬೦೦ ಕ್ಕಿಂತ ಬಹುವರ್ಷಗಳ ಹಿಂದೆ ಇದ್ದನೆಂದೂ ಡಾ|| ವಿಂಟರ್ನಿಟ್ಸ್‌ರವರ ಪೂರ್ವೋಕ್ತ ಗ್ರಂಥದಿಂದ ತಿಳಿದುಬರುವುದರಿಂದ ಮೇಲೆ ಹೇಳಿದ ಕವಿಗಳಲ್ಲಿ ಪ್ರಾಯಶಃ ಆವನೊಬ್ಬನೂ ಮತ್ತೊಬ್ಬನ ಸಮಕಾಲೀನನಾಗಿರಲಿಲ್ಲವೆಂದು ಹೇಳಬಹುದು. ಹೀಗಿರುವಲ್ಲಿ, ಈ ಕವಿಗಳೆಲ್ಲರೂ ಕ್ರಿ. ಶ. ೧೧ ನೆಯ ಶತಮಾನದಲ್ಲಿ ಆಳುತ್ತಿದ್ದ ಭೋಜರಾಜನ ಸಭೆಯಲ್ಲಿದ್ದರೆಂಬ ಹೇಳಿಕೆಯಲ್ಲಿ ಲೇಶ ಸತ್ಯವೂ ಇಲ್ಲವೆಂಬುದು ಸುವ್ಯಕ್ತವಾಗಿರುವುದು. (೨) ಮೇಲೆ ಹೇಳಿದ ಶಂಕರದಿಗ್ವಿಜಯದಲ್ಲಿ (ಕ್ರಿ. ಶ. ೧೫ ನೆಯ ಶತಮಾನ ಅಥವಾ ಆದಕ್ಕಿಂತ ಈಚಿನದು) ಅದ್ವೈತಮತಸ್ಥಾಪಕರಾದ ಶಂಕರಾಚಾರ್ಯರು ಭಟ್ಟಕುಮಾರಿಲನನ್ನು ನೋಡಿದ್ದು, ನೈಯಾಯಿಕನಾದ ಉದಯನಾಚಾರ್ಯನನ್ನೂ, ಖಂಡನಖಂಡಖಾದ್ಯದ ಕರ್ತೃವಾದ ಶ್ರೀಹರ್ಷನನ್ನೂ ವಾದದಲ್ಲಿ ಸೋಲಿಸಿದರೆಂದು ಹೇಳಿರುವುದು. ಇವರಲ್ಲಿ ಭಟ್ಟಕುಮಾರಿಲನು ಕ್ರಿ. ಶ. ಸುಮಾರು ೮೦೦ ರಲ್ಲಿ ಇದ್ದನೆಂದೂ, ಉದಯನಾಚಾರ್ಯನು ಸುಮಾರು ೯೮೪ ರಲ್ಲಿ ಇದ್ದನೆಂದೂ, ಖಂಡನಖಂಡಖಾದ್ಯಕರ್ತೃವಾದ ಶ್ರೀಹರ್ಷನು ಸುಮಾರು ೧೧೫೦ ರಲ್ಲಿ ಇದ್ದನೆಂದೂ ಮೇಲೆ ನಿರ್ದಿಷ್ಟವಾದ ಗ್ರಂಥದಲ್ಲಿ ಹೇಳಲ್ಪಟ್ಟಿರುವುದು. ಶಂಕರಾಚಾರ್ಯರು ಕ್ರಿ. ಪೂ. ೧ ನೆಯ ಶತಮಾನದಲ್ಲಿದ್ದರೆಂದು ಶೃಂಗೇರ್ಯಾದಿ ಮಠಗಳ ಪಟ್ಟಾವಳಿಯಲ್ಲಿ ಹೇಳಲ್ಪಟ್ಟಿರುವುದು; ಡಾ|| ವಿಂಟರ್ನಿಟ್ಸ್‌ರವರಾದರೆ ಅವರು ಕ್ರಿ. ಶ. ಸುಮಾರು ೯೦೦ ರಲ್ಲಿ ಇದ್ದರೆಂದು ಹೇಳುವರು. ಅದು ಹೇಗಾದರೂ ಆಗಲಿ; ಈ ಆಚಾರ್ಯರು ೩೨ ವರ್ಷಗಳು ಮಾತ್ರ ಈ ಲೋಕದಲ್ಲಿದ್ದರೆಂದು ಶಂಕರದಿಗ್ವಿಜಯಾದಿ ಗ್ರಂಥಗಳಲ್ಲಿ ಹೇಳಿರುವುದರಿಂದ, ಅವರು ಮೇಲೆ ಹೇಳಿದ ಭಟ್ಟಕುಮಾರಿಲನನ್ನು ನೋಡಿದ್ದು ಉದಯನಾ

ಚಾರ್ಯ, ಶ್ರೀಹರ್ಷರನ್ನು ವಾದದಲ್ಲಿ ಸೋಲಿಸಿದರೆಂಬುದು ಕಲ್ಪಿತಕಥೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. (೩) ವ್ಯಾಕರಣಕರ್ತೃವಾದ ಪಾಣಿನಿಯೂ, ವಾರ್ತಿಕಕರ್ತೃವಾದ ವರರುಚಿ ಅಥವಾ ಕಾತ್ಯಾಯನನೂ ಒಂದೇ ಕಾಲದಲ್ಲಿ ಜೀವಿಸಿದ್ದರೆಂದು ಕಥಾಸರಿತ್ಸಾಗರದಲ್ಲಿ ಹೇಳಿರುವುದು. ಇದು ತಪ್ಪೆಂದೂ, ವಸ್ತುತಃ ವರರುಚಿ ಕಾತ್ಯಾಯನನು ಪಾಣಿನಿಯ ಕಾಲಕ್ಕಿಂತ ಸುಮಾರು ೨೦೦ ವರ್ಷಗಳು ಈಚೆಗೆ ಜೀವಿಸಿದ್ದನೆಂದೂ ಡಾ|| ವಿಂಟರ್ನಿಟ್ಸ್‌ರವರ ಮೇಲೆ ಹೇಳಿದ ಗ್ರಂಥದಿಂದ ಸ್ಪಷ್ಟವಾಗುವುದರಿಂದ, ಕಥಾಸರಿತ್ಸಾಗರದಲ್ಲಿನ ಈ ಹೇಳಿಕೆಯು ವಸ್ತುಸ್ಥಿತಿವಿರುದ್ಧವಾಗಿರುವುದೆಂದು ಸ್ಪಷ್ಟವಾಗುವುದು.

(೪) ಹೀಗೆಯೇ ಮೇರುತುಂಗನ ಪ್ರಬಂಧಚಿಂತಾಮಣಿಯಲ್ಲಿಯೂ * (ಕ್ರಿ. ಶ. ೧೩೦೬) ರಾಜಶೇಖರನ ಪ್ರಬಂಧಕೋಶದಲ್ಲಿಯೂ (ಕ್ರಿ.ಶ. ೧೩೪೯) ದೊರೆಗಳ ಮತ್ತು ಕವಿಗಳ ವಿಷಯವಾಗಿ ಹೇಳಲ್ಪಟ್ಟಿರುವ ಕಥೆಗಳೆಲ್ಲವೂ ಕಲ್ಪಿತಕಥೆಗಳೆಂದೂ, ಅವುಗಳಲ್ಲಿ ವಾಸ್ತವಾಂಶವು ಸ್ವಲ್ಪವೂ ಇಲ್ಲವೆಂದೂ ಡಾ|| ವಿಂಟರ್ನಿಟ್ಸ್‌ರವರು ಮೇಲೆ ಹೇಳಿದ ಅವರ ಗ್ರಂಥದಲ್ಲಿ (ಸಂಪುಟ ೨, ಪುಟ ೩೩೨) ನಿರೂಪಿಸಿರುವರು.

(೫) ಹಂಪೆಯಲ್ಲಿ ರಾಘವ, ಭೀಮಕವಿ, ಲಕ್ಕಣ್ಣಮಂತ್ರಿ ಮೊದಲಾದ ಶಿವಭಕ್ತ ಕವಿಗಳ ಮಧ್ಯದಲ್ಲಿ ಬೆಳಗುತ್ತಿದ್ದ ಹರೀಶ್ವರನ ಬಳಿಗೆ ಕುಮಾರವ್ಯಾಸನ ಪತ್ನಿಗೆ ಅಣ್ಣನಾದ ಚಾಮರಸನು ಬಂದು ಪ್ರಭುಲಿಂಗಲೀಲೆಯನ್ನು ಅಲ್ಲಿ ಹೇಳುತ್ತಿದ್ದನೆಂದು ಕ್ರಿ. ಶ. ೧೭೬೩ ರಲ್ಲಿ ಹುಟ್ಟಿದ ಚೋರಬಸವಚರಿತ್ರೆಯಲ್ಲಿ ಹೇಳಲ್ಪಟ್ಟಿರುವುದು. ಇದೆಲ್ಲವೂ ಸುಳ್ಳೆಂದೂ, ಈ ಮೇಲೆ ಹೇಳಿದ ಕವಿಗಳೆಲ್ಲರೂ ಏಕಕಾಲದಲ್ಲಿ ಜೀವಿಸಿರ

---

* ಈ ಪ್ರಬಂಧಚಿಂತಾಮಣಿಯಲ್ಲಿ ಮೇರುತುಂಗನು ಕಥೆಗಳನ್ನು ಹೇಳುವಾಗ ಅಲ್ಲಿ ಹೇಳಲ್ಪಟ್ಟ ವೃತ್ತಗಳು ಇಂತಹ ದಿವಸದಲ್ಲಿ ನಡೆದುವೆಂದು ಶಕವರ್ಷ, ಬಾರ್ಹಸ್ಪತ್ಯಸಂವತ್ಸರ, ಮಾಸ, ತಿಥಿ, ವಾರಾದಿಗಳನ್ನು ಕೂಡ ನಿರೂಪಿಸಿರುವನು. ಆದರೆ ಹೀಗೆ ಹೇಳಲ್ಪಟ್ಟ ಶಕವರ್ಷ, ಮಾಸ ತಿಥಿ ವಾರಾದಿಗಳು ಪರಸ್ಪರಸಂಗತಗಳಾಗಿಲ್ಲವೆಂಬ ಅಂಶವನ್ನು ಮ|| ಸೂಯಲ್‌ರವರು ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನ ೧೯೨೦ ನೇ ವರ್ಷದ ಸಂಚಿಕೆಯಲ್ಲಿ (ಪುಟ ೩೩೩ ಆದಿ) ವ್ಯಕ್ತಪಡಿಸಿರುವರು. ಹೀಗೆಯೇ ರುದ್ರಭಟ್ಟ, ಷಡಕ್ಷರಿ, ಲಕ್ಷ್ಮೀಶರು ಸಮಕಾಲೀನರಾಗಿದ್ದರೆಂದು ಹೇಳಿ ಅವರ ವಿಷಯವಾದ ಕಥೆಯನ್ನು ಹೇಳುವ ಪದ್ಯಗಳಲ್ಲಿ (ಕವಿಚರಿತೆ I. ೨೧೦ ನ್ನು ನೋಡಿ) ಹೇಳಲ್ಪಟ್ಟಿರುವ ಶಕವರ್ಷ ಮಾಸತಿಥ್ಯಾದಿಗಳೂ ಸಂಗತವಾಗಿಲ್ಲ.

ಈ ಪ್ರಬಂಧಚಿಂತಾಮಣಿ ಬೋಜಪ್ರಬಂಧಾದಿಗಳನ್ನು ಕುರಿತು ಡಾ|| ವಿಂಟರ್ನಿಟ್ಸ್‌ರವರು—
"One should not rely in any way on these works in the writing of history; they are extremely unhistorical and have frequently misled former investigators."
ಎಂದು ಉಕ್ತಗ್ರಂಥದಲ್ಲಿ (೩, ೩೫೨) ಬರೆದಿರುವರು.

ಲಿಲ್ಲವೆಂದೂ ಹೇಳಿ, 'ಕಾಲನಿರ್ಣಯ ವಿಷಯದಲ್ಲಿ' * ಈ ಆಧುನಿಕಗ್ರಂಥವನ್ನು ಸ್ವಲ್ಪವೂ ನಂಬಕೂಡದೆಂದು ಕವಿಚರಿತಕಾರರೇ (ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣ; ಅವತರಣಿಕೆ ಪುಟ ೨೧) ಅಭಿಪ್ರಾಯಪಟ್ಟಿರುವರು. ಆದರೆ ಈ ಚೋರಬಸವಚರಿತ್ರೆಯಲ್ಲಿ ಹೇಳಿರುವಂತೆ, ಕ್ರಿ. ಶ. ಸುಮಾರು ೧೭೫೦ ರಲ್ಲಿ ಹುಟ್ಟಿದ ಗುರುರಾಜಚಾರಿತ್ರದಲ್ಲಿಯೂ ರಾಘವಾಂಕನು 'ಕುಮಾರವ್ಯಾಸನ ಗೆಲಿದು' ಓರ ಗಲ್ಲಿಗೆ ಹೋದನೆಂದು ಹೇಳಲ್ಪಟ್ಟಿರುವುದರಿಂದ (ಕವಿಚರಿತೆ I. ೧೮೨ ನ್ನು ನೋಡಿ) ಕಾಲನಿರ್ಣಯ ವಿಷಯದಲ್ಲಿ ಈ ಗ್ರಂಥವನ್ನೂ ನಂಬಕೂಡದೆಂದು ವ್ಯಕ್ತವಾಗುವುದು.

ದೇವಚಂದ್ರನ ರಾಜಾವಳೀಕಥೆಯಲ್ಲಿ ಕವಿಗಳ ಸಂಬಂಧದಲ್ಲಿ ಹೇಳಲ್ಪಟ್ಟಿರುವ ಕಥೆಗಳು ಮೇಲೆ ಹೇಳಿದ ಕಥೆಗಳ ಜಾತಿಗೇ ಸೇರಿದವುಗಳಾಗಿರುವವು. ಈ ಗ್ರಂಥದಲ್ಲಿ ಪೂಜ್ಯಪಾದನನ್ನು ಕುರಿತು—

"ಶಕವರ್ಷ ೩೦೦ ಸಂದಂದು ಕರ್ಣಾಟಕದೊಳು ಕೊಳ್ಳಾಗಾಲಮೆಂಬ ಪುರದೊಳು ಮಾಧವಭಟ್ಟನೆಂಬ ಬ್ರಾಹ್ಮಣನ ಹೆಂಡತಿ ಶ್ರೀದೇವಿಯೆಂಬವಳ್ಗೆ ಗರ್ಭಂ ಬಳೆದು ನವಮಾಸಂ ನೆಱೆಯೆ ಶ್ರವಣನಕ್ಷತ್ರದೊಳ್ ಪುತ್ರೋತ್ಪತ್ತಿಯಪ್ಪುದುಂ ಜಾತನಾಮಕರ್ಮಾದಿಗಳಂಮಾಡಿ ಪೂಜ್ಯಪಾದನೆಂದು ಪೆಸರಿಟ್ಟು ಸಲಹಿದೊಡೆ ಜೈನಶಾಸ್ತ್ರಂಗಳೊಳ್ ಬಲ್ಲಿದನಾಗಿ ಬಾಲಕಾಲದೊಳೆ ಜಿನದೀಕ್ಷೆಯಂತಾಳಿ ದಕ್ಷಿಣ ದಿಗ್ಭಾಗದ ಶಿಲೋಚ್ಚಯದೊಳ್ ತಪಂಗೆಯ್ಯುತ್ತಿರ್ದಂ. ಮುಡಿಗುಂಡವೆಂಬ ಗ್ರಾಮದೊಳಿದ್ದ ತನ್ನ ಸೋದರದ ಮಾವನಾದ ಪಾಣಿನ್ಯಾಚಾರ್ಯನಿಗೆ ವ್ಯಾಕರಣಮಂ ಪೂರ್ತಿಮಾಡುವುದಱೊಳಗೆ ಅವಸಾನಕಾಲಂಬರೆ ಆತನು ಪೂರ್ತಿಮಾಡೆಂದು ಕೇಳಿಕೊಳಲು ಪೂಜ್ಯಪಾದಂ ಪೂರ್ತಿಮಾಡಿದಂ. ಜೈನೇಂದ್ರವ್ಯಾಕರಣಸೂತ್ರಮಂ ರಚಿಸಿದಂ. ಬೞಿಕಂ ಪಾಣಿನಿಸೂತ್ರವೃತ್ತಿಯಂ ರಚಿಸಿದಂ···ಪೂಜ್ಯಪಾದಯತೀಂದ್ರಂ ಪದಿನಾಡಿನೊಳು ತಪಂಗೆಯ್ಯುತ್ತಿ···ಸೂರ್ಯಕಿರಣೋಷ್ಣದಿಂ ದೃಷ್ಟಿಪೋಗೆ ಬಂಕಾ

* ಇಂಥ ಗ್ರಂಥಗಳನ್ನು 'ಕಾಲನಿರ್ಣಯ ವಿಷಯದಲ್ಲಿ' ನಂಬಲಾಗದೆಂದು ಕವಿಚರಿತಕಾರರು ಹೇಳಿರುವುದನ್ನು ನೋಡಿದರೆ ಇತರ ವಿಷಯಗಳಲ್ಲಿ ಇಂಥ ಗ್ರಂಥಗಳನ್ನು ನಂಬಬಹುದೆಂದು ಅವರು ಅಭಿಪ್ರಾಯಪಡುವಂತೆ ಕಾಣುತ್ತದೆ. ಈ ಅಭಿಪ್ರಾಯವೂ ಸಮಂಜಸವಾಗಿರುವಂತೆ ನಮಗೆ ಕಾಣುವುದಿಲ್ಲ. ಇಂಥ ಗ್ರಂಥಗಳ ಆಧಾರದಮೇಲೆ 'ಕುಮಾರವ್ಯಾಸನು ಚಾಮರಸನ ತಂಗಿಯ ಗಂಡನಾಗಿದ್ದನು....ಚಾಮರಸನು ತಾನು ಬರೆದಿದ್ದ ಭಾರತಪುಸ್ತಕದ ಪತ್ರವನ್ನು ಬೆರಳುಗಳ ಮಧ್ಯದಲ್ಲಿ ಹಿಡಿದು ಹಿಂಡಲಾಗಿ, ರಕ್ತದ ತೊಟ್ಟುಗಳು ಬಿದ್ದವು....ಈ ಗ್ರಂಥವನ್ನು ಅವನ ತಂಗಿಯು ತೆಗೆದುಕೊಂಡು ಹೋಗಿ ಸುಟ್ಟು ತನ್ನ ಗಂಡನಿಗೆ ಬೊಟ್ಟಿಟ್ಟಳು' ಎಂದು ಮೊದಲಾಗಿ (ಚೋರಬಸವಚರಿತ್ರೆ, ಗುರುರಾಜಚಾರಿತ್ರಗಳಲ್ಲಿ ಹೇಳಿರುವುದನ್ನು) ನಂಬುವುದೂ ಅಯುಕ್ತವೆಂದು ನಮಗೆ ತೋರುವುದು.

ಪುರವೆಂಬುದರೊಳ್ ಶಾಂತೀಶ್ವರರಂ ವಂದಿಸಿ ಶಾಂತ್ಯಷ್ಟಕಮಂ ಪೇೞೆ ದೃಷ್ಟಿಯಂ ಪಡೆದು...ಸದ್ಗತಿಪ್ರಾಪ್ತರಾದರ್"

ಎಂದೂ, ನಾಗಾರ್ಜುನನನ್ನು ಕುರಿತು—ಅವನು ಪೂಜ್ಯಪಾದನ ಸೋದರದಳಿಯನೆಂದೂ, ಪೂಜ್ಯಪಾದನ ಉಪದೇಶಮಹಿಮೆಯಿಂದ ಇವನು ಬಂಗಾರಮಾಡುವುದನ್ನು ತಿಳಿದುಕೊಂಡು ದೇಶಾಟನಮಾಡುತ್ತ ಯಂತ್ರಮಂತ್ರತಂತ್ರಾದಿಗಳಂ ಕಲ್ಪಿಸಿ ಸಿದ್ಧನಾಗಾರ್ಜುನನೆಂಬ ಕೀರ್ತಿ ದಿಗಂತವ್ಯಾಪಿಯಾಗಿರಲು ಶ್ರೀಶೈಲವನ್ನೈದಿ ಮಲ್ಲಿಕಾರ್ಜುನಪ್ರತಿಷ್ಠೆಗೈದು ಉತ್ತರದೇಶಕ್ಕೆ ಹೋಗಿ ಒಂದೆರಡು ಬೆಟ್ಟಮಂ ಚಿನ್ನಮಂ ಮಾಡಲು ಯತ್ನಿಸಿ ಮುಂದಕ್ಕೆ ಹೋದಾಗ ಇಬ್ಬರು ಸ್ತ್ರೀಯರು ವಂಚಿಸಿ ಇವನನ್ನು ಕೊಂದರೆಂದೂ ;

ಧರ್ಮಪರೀಕ್ಷೆಯ ಕರ್ತೃವಾದ ವೃತ್ತವಿಲಾಸನನನ್ನು ಕುರಿತು—

"ಬಲ್ಲಾಳರ ಕಾಲದಲ್ಲಿ ಅಮರಕೀರ್ತಿರಾವುಳಯತಿಯರ ಶಿಷ್ಯಂ ವೃತ್ತವಿಳಾಸನೆಂಬಂ ಸಂಸ್ಕೃತಧರ್ಮಪರೀಕ್ಷೆಯಂ ವಸ್ತುಕಮಾಗಿ ಮಾಡಿದಂ"

ಎಂದೂ, ನೇಮಿಚಂದ್ರನ ಲೀಲಾವತಿಯನ್ನು ಕುರಿತು—

"ಕಾದಂಬರಿಯೆಂಬ ಶೃಂಗಾರಕಾವ್ಯವಂ ಮಾಡಿ ದೊರೆಯಂ ಮೆಚ್ಚಿಸಿ ಆನೆಯಮೇಲೇಱಿಸಿ ಬರ್ಪಲ್ಲಿ ನೇಮಿಚಂದ್ರಕವಿ ತಡೆದು ಶೃಂಗಾರಮಪ್ಪ ಲೀಲಾವತಿಯ ರಚಿಸಿ ಸಭೆಯೊಳೋದಿಸೆ...ಮೆಚ್ಚಿ ಕಾದಂಬರೀಕಾವ್ಯಪುಸ್ತಕಮಂ ಸುಟ್ಟು ಲೀಲಾವತಿಗೆ ಕಪ್ಪನಿಡುವಲ್ಲಿ, ಕೇಳಿಕೊಂಡು ಮೊದಲೊಂದು ಓಲೆಯಂ ಸುಡಿಸಿ ಲೀಲಾವತಿಗೆ ಕಪ್ಪನಿಡಿಸಿದರ್"

ಎಂದೂ ಹೇಳಲ್ಪಟ್ಟಿರುವುದರಲ್ಲಿ (ಕವಿಚರಿತೆ I. ೬,೭,೧೧,೧೩೮ ಮತ್ತು ೨೦೩ನೆಯ ಪುಟಗಳನ್ನು ನೋಡಿ) ಸುಮಾರಾಗಿ ಎಲ್ಲವೂ ಅಸಂಭಾವನೀಯವೂ ವಸ್ತುಸ್ಥಿತಿವಿರುದ್ಧವೂ ಆಗಿರುವುದು. (೧) ವ್ಯಾಕರಣಸೂತ್ರಗಳ ಕರ್ತೃವಾದ ಪಾಣಿನಿಯು ಕ್ರಿ. ಪೂರ್ವ ೩೦೦ ಕ್ಕೆ ಹಿಂದೆ ಇದ್ದನೆಂದೇ ಸರ್ವರೂ ಒಪ್ಪಿಕೊಂಡಿರುವುದರಿಂದ ಅವನು ಕ್ರಿ. ಶ. ೪೦೦ ರಲ್ಲಿ ಜೀವಿಸಿದ್ದನೆಂಬುದು ಸುತರಾಂ ಅಸಂಭವವಾಗಿರುವುದು. (೨) ಸಿದ್ಧನಾಗಾರ್ಜುನನೂ ಹೀಗೆಯೇ ಕ್ರಿ. ಶ. ಸುಮಾರು ೨ ನೇ ಶತಮಾನದಲ್ಲಿ ಇದ್ದುದರಿಂದ (ಡಾ|| ವಿಂಟರ್ನಿಟ್ಸ್‌ರವರ ಗ್ರಂಥದ ೨ ನೇ ಸಂಪುಟವನ್ನು ನೋಡಿ) ಅವನು ಕ್ರಿ. ಶ. ಸುಮಾರು ೩೭೮-೪೦೦ ಇದ್ದನೆಂಬ ದೇವಚಂದ್ರನ ಹೇಳಿಕೆಯು ವಾಸ್ತವವಲ್ಲ. (೩) ಕೊಳ್ಳೇಗಾಲ ಮತ್ತು ಮುಡಿಗೊಂಡವೆಂಬ ಊರುಗಳಿಗೆ ಈ ಹೆಸರುಗಳು ಪೂರ್ವಕಾಲದಲ್ಲಿ ಇರಲಿಲ್ಲ. ಕೊಳ್ಳೇಗಾಲಕ್ಕೆ ಪೂರ್ವಕಾಲದಲ್ಲಿ

(ಎಂದರೆ ಕ್ರಿ. ಶ. ಸುಮಾರು ೧೦ ನೆಯ ಶತಮಾನದಲ್ಲಿ) ಕೊಳ್ಳಪುರ ಎಂಬ ಹೆಸರಿತ್ತೆಂದೂ ತದನಂತರ (೧೧-೧೩ ನೆಯ ಶತಮಾನಗಳಲ್ಲಿ) ಕೊಳ್ಳಗರ್ ಅಥವಾ ತ್ರಿಭುವನ-ಮಹಾದೇವಿ-ಚತುರ್ವೇದಿಮಂಗಲವೆಂಬ ಹೆಸರಿತ್ತೆಂದೂ, ಮುಡಿಗೊಂಡಕ್ಕೆ ದೇಶಿ-ಉಯ್ಯಕ್ಕೊಂಡಪಟ್ಟಣ ಅಥವಾ ಮುಡಿಗೊಂಡ-ಶೋಲಿಪುರವೆಂಬ ಹೆಸರಿತ್ತೆಂದೂ, ಆ ಊರು ಕ್ರಿ. ಶ. ಸುಮಾರು ೧೦೧೨-೧೦೩೬ ರಲ್ಲಿ ಆಳುತ್ತಿದ್ದ ಚೋಳರಾಜನಾದ ೧ ನೆಯ ರಾಜೇಂದ್ರಚೋಳನಿಂದ ನಿರ್ಮಿಸಲ್ಪಟ್ಟಿತೆಂದೂ ಆ ಊರುಗಳಲ್ಲಿರುವ ಶಾಸನಗಳಿಂದ ತಿಳಿದುಬರುವುದು (ಮದ್ರಾಸ್ ಎಪಿಗ್ರಾಫಿಸ್ಟ್‌ರವರ ೧೯೧೦ ನೇ ವರ್ಷದ ರಿಪೋರ್ಟಿನಲ್ಲಿ ಪುಟ ೧೧೧, ೩೫೧ ನ್ನು ನೋಡಿ). ಹೀಗೆಯೇ ಬಂಕಾಪುರವೂ ಕೂಡ ರಾಷ್ಟ್ರಕೂಟರಾಜನಾದ ೧ ನೆಯ ಅಮೋಘವರ್ಷನ (ಕ್ರಿ.ಶ. ೮೧೪-೮೭೮) ಕೆಳಗೆ ಸಾಮಂತನಾಗಿದ್ದ ಬಂಕೆಯರಸನಿಂದ ಸ್ಥಾಪಿಸಲ್ಪಟ್ಟಿತೆಂದು ಗುಣಭದ್ರನ ಉತ್ತರಪುರಾಣದಿಂದ ತಿಳಿದುಬರುವುದು. ಆದ್ದರಿಂದ ಪೂಜ್ಯಪಾದನು ಕೊಳ್ಳಾಗಾಲ, ಮುಡಿಗೊಂಡ ಬಂಕಾಪುರಗಳಿಗೆ ಹೋಗಿದ್ದನೆಂಬ ದೇವಚಂದ್ರನ ಹೇಳಿಕೆಯು ಅಸಂಭಾವನೀಯವಾಗಿರುವುದು. (೪) ವೃತ್ತವಿಲಾಸನು ಧರ್ಮಪರೀಕ್ಷೆಯನ್ನು ಬರೆದ ಕಾಲದಲ್ಲಿ ಎಂದರೆ ಕ್ರಿ. ಶ ೧೩೪೦ ರಲ್ಲಿ ಬಲ್ಲಾಳರ ಆಧಿಪತ್ಯವು ಸ್ಮೃತಿಮಾತ್ರಾವಶೇಷವಾಗಿದ್ದುದರಿಂದ ಅವರ ಕಾಲದಲ್ಲಿ ಈ ಗ್ರಂಥವು ಬರೆಯಲ್ಪಟ್ಟಿತೆಂಬ ಮೇಲೆ ಹೇಳಿದ ದೇವಚಂದ್ರನ ಹೇಳಿಕೆಯೂ ಸುಳ್ಳಾದುದು. (೫) ಹೀಗೆಯೇ ನೇಮಿಚಂದ್ರನ ಲೀಲಾವತಿಯು ಬಾಣನು ಕಾದಂಬರಿಯನ್ನು ಬರೆದ ಸಮಯದಲ್ಲಿ ರಚಿತವಾಯಿತೆಂಬ ದೇವಚಂದ್ರನ ಹೇಳಿಕೆಯೂ ವಸ್ತುಸ್ಥಿತಿ ವಿರುದ್ಧವಾದುದು. ಬಾಣನು ತನ್ನ ಕಾದಂಬರಿಯನ್ನು ಕ್ರಿ. ಶ. ಸುಮಾರು ೬೩೦ ರಲ್ಲಿ ಬರೆದನು; ನೇಮಿಚಂದ್ರನಾದರೆ ಲೀಲಾವತಿಯನ್ನು ಕ್ರಿ. ಶ. ಸುಮಾರು ೧೧೮೫-೧೧೯೫ ರಲ್ಲಿ ಬರೆದನೆಂದು ನಾವು ಮೇಲೆ (ಪುಟ ೯೧) ಹೇಳಿರುವೆವು.

ಪ್ರಕೃತದಲ್ಲಿ ಕಂತಿಯೆಂಬ ಕಬ್ಬಿಗಿತಿಯೂ ಹಂಪಕವಿಯೂ ದೋರಸಮುದ್ರದ ದೋರರಾಯನ ಸಭೆಯಲ್ಲಿದ್ದರೆಂಬ ಕವಿಚರಿತಕಾರರ ಹೇಳಿಕೆಗೆ ಮೇಲೆ ಹೇಳಿದ 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳೂ, ದೇವಚಂದ್ರನ ರಾಜಾವಳೀ ಕಥೆಯೂ, ಬಾಹುಬಲಿಯ ನಾಗಕುಮಾರಚರಿತೆಯೂ ಆಧಾರಗಳಾಗಿರುವುವೇ ಹೊರತು ಈ ಕಬ್ಬಿಗಿತಿಯ ಹೆಸರು ಬೇರೆ ಯಾವ ಕಡೆಯಲ್ಲಿಯೂ ಉಲ್ಲಿಖಿತವಾಗಿಲ್ಲ. ಇವುಗಳಲ್ಲಿ 'ಕಂತಿ ಹಂಪನ ಸಮಸ್ಯೆಗಳು' ಎಂಬ ಪದ್ಯಗಳು ಅಜ್ಞಾತಕಾಲ ಕರ್ತೃಕಗಳಾಗಿರುವುದರಿಂದ ಅವನ್ನು ನಾವು ಹೇಗೂ ನಂಬಲಾಗುವುದಿಲ್ಲ. ದೇವ

ಚಂದ್ರನ ರಾಜಾವಳೀಕಥೆಯಲ್ಲಿ ಪೂಜ್ಯಪಾದ, ವೃತ್ತವಿಲಾಸ, ನೇಮಿಚಂದ್ರಾದಿ ಕವಿಗಳ* ಸಂಬಂಧವಾಗಿ ಹೇಳಲ್ಪಟ್ಟಿರುವ ವಿಷಯಗಳು ಹೀಗೆಯೇ ನಂಬಿಕೆಗೆ ಅನರ್ಹಗಳಾಗಿರುವುವೆಂದು ನಾವು ವ್ಯಕ್ತಪಡಿಸಿರುವೆವು. ಪ್ರಕೃತ, ಕಂತಿಯ ವಿಷಯದಲ್ಲಿ ಅವನು ಹೇಳಿರುವ ಜ್ಯೋತಿಷ್ಮತೀತೈಲದ ಕಥೆಯನ್ನೂ, ಕಂತಿಯು ಬಾವಿಯೊಳಗೆ ಇದ್ದುಕೊಂಡೇ ಸಾವಿರ ಪ್ರಶ್ನೆಗಳಿಗೆ ಉತ್ತರ ಕೊಟ್ಟಳೆಂಬ ಇದೇ ಮೊದಲಾದ ಕಥೆಯನ್ನೂ ಹೀಗೆಯೇ ನಾವು ಸ್ವಲ್ಪವೂ ನಂಬಲಾರೆವು. ಈ ವಿಷಯದಲ್ಲಿ ದೋರರಾಯ, 'ದೋರಸಮುದ್ರ' ಗಳನ್ನು ಕುರಿತು ನಾವು ಮೇಲೆ (ಪುಟ ೨೫೧) ಹೇಳಿರುವದನ್ನು ನೋಡಿ. ಇನ್ನು ಉಳಿದಿರುವ ಪ್ರಮಾಣವು ಬಾಹುಬಲಿಯ ನಾಗಕುಮಾರಚರಿತವೊಂದೇಯೆ. ಈ ಗ್ರಂಥದಲ್ಲಾದರೆ ಈತನು—

> ಸುಡಿಸಿ ಕಾದಂಬರಿಯನು ಲೀಲಾವತಿ | ಗಿಡಿಸಿ ಕಪ್ಪನು ಕೀರ್ತಿ ಜಗವ ||
> ಎಡೆಗೊಂಡ ನೇಮಿಚಂದ್ರನ ಚಮತ್ಕೃತಿ ಬಂ | ದೆಡೆಗೊಳ್ಳುವೆನ್ನ ಚಿತ್ತದೊಳು||

ಎಂಬ ಪದ್ಯಗಳಲ್ಲಿ ಬಾಣನ ಕಾದಂಬರಿಯನ್ನು ಸುಡಿಸಿ ಲೀಲಾವತಿಗೆ ಕಪ್ಪನಿಕ್ಕಿಸಿದರೆಂಬ ಮೇಲೆ (ಪುಟ ೨೫೬) ಹೇಳಲ್ಪಟ್ಟ ಅಸಂಭಾವನೀಯವಾದ ಕಥೆಯನ್ನು ಹೇಳಿರುವದರಿಂದ ಇವನ ಮಾತುಗಳನ್ನೂ ನಂಬಲಾಗದೆಂದು ಸ್ಪಷ್ಟವಾಗುವುದು.

ಆದ್ದರಿಂದ 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳನ್ನೂ, ಮೇಲೆ ಹೇಳಿದ ದೇವಚಂದ್ರ, ಬಾಹುಬಲಿಗಳ ವಾಕ್ಯಗಳನ್ನೂ ಪ್ರಮಾಣವೆಂದು ನಂಬಿ, ಕಂತಿಯೆಂಬ ಕಬ್ಬಿಗಿತಿಯೂ ಪಂಪಕವಿಯೂ ಸಮಾನಕಾಲೀನರಾಗಿದ್ದರೆಂದು ನಿರ್ಧರಿಸಿ ಹೇಳುವುದು ನ್ಯಾಯ್ಯವಲ್ಲವೆಂದು ಮೇಲೆ ಹೇಳಿದುದರಿಂದ ವ್ಯಕ್ತವಾಗುವುದು.

ವಸ್ತುತಃ ಕಂತಿಯೆಂಬ ಕಬ್ಬಿಗಿತಿಯು ವಾಸ್ತವವಾಗಿ ಜೀವಿಸಿದ್ದಳೇ ಎಂಬ ವಿಷಯದಲ್ಲಿಯೂ ನಮಗೆ ಬಹುವಾಗಿ ಸಂದೇಹವಿರುವುದು. ಪ್ರಥಮತಃ ಕಂತಿಯೆಂದರೆ 'ಶಿಷ್ಯಳು' ಎಂದು ಅರ್ಥವು; † ಇದು ಒಂದು ಸಂಜ್ಞಾಪದವೇ ಅಲ್ಲ. ಎರಡನೆಯದೇನೆಂದರೆ, ಈ ಹೆಸರಿನ ಕಬ್ಬಿಗಿತಿಯೊಬ್ಬಳು ಇದ್ದಳೆಂಬುದಕ್ಕೆ ಮೇಲೆ ಹೇಳಿದ 'ಕಂತಿಹಂಪನ ಸಮಸ್ಯೆಗಳು' ಎಂಬ ಪದ್ಯಗಳು ಮತ್ತು ದೇವಚಂದ್ರ ಬಾಹುಬಲಿಗಳ ವಾಕ್ಯಗಳಲ್ಲದೆ ಬೇರೆ ಯಾವ ಆಧಾರವೂ ಇಲ್ಲ. ಇವುಗಳಾದರೆ ನಂಬಿಕೆಗೆ ಅನರ್ಹಗಳೆಂದು ನಾವು ಈಗತಾನೆ ಸ್ಪಷ್ಟಪಡಿಸಿರುವೆವು.

---

* ಈ ಗ್ರಂಥದಲ್ಲಿ ರಾಜರ ವಿಷಯವಾಗಿ ಹೇಳಲ್ಪಟ್ಟಿರುವ ವಿಷಯಗಳೂ ಕೂಡ ಹೀಗೆಯೇ ಅಸಂಭಾವನೀಯಗಳೂ ನಂಬಿಕೆಗೆ ಅನರ್ಹಗಳೂ ಆಗಿರುವುವು.

† ಶ್ರವಣಬೆಳ್ಗೊಳದ ೨೬೮ (೧೧೩), ೩೫೧ (೧೩೧) ನೇ ಶಾಸನಗಳಲ್ಲಿ ಗೌರಶ್ರೀ-ಕಂತಿಯರು, ಸೋಮಶ್ರೀ-ಕಂತಿಯರು, ದೇವಶ್ರೀ-ಕಂತಿಯರು, ಕನಕಶ್ರೀ-ಕಂತಿಯರು, ಶ್ರೀಮತಿ-ಗಂತಿಯರು, ಮಾಂಕಬ್ಬೆ-ಗಂತಿಯರು ಎಂದು ಅನೇಕ 'ಕಂತಿ' ಯರು ಪ್ರಸ್ತುತರಾಗಿರುವರು.

ಮೇಲೆ ಹೇಳಿದ ಭೋಜಪ್ರಬಂಧಾದಿ ಗ್ರಂಥಗಳಲ್ಲಿ ದಂಡಿ, ಬಾಣ, ಮಯೂರ, ಮಾಘ, ಭವಭೂತಿ, ಕಾಳಿದಾಸ ಮೊದಲಾದ ಕವಿಗಳ ವಿಷಯದಲ್ಲಿ ಹೇಳಲ್ಪಟ್ಟಿರುವ ಕಥೆಗಳು ಸುಳ್ಳಾದಾಗ್ಯೂ ಆ ಹೆಸರಿನ ಕವಿಗಳು ವಾಸ್ತವವಾಗಿ ಜೀವಿಸಿದ್ದರೆಂಬುದು ಸುಳ್ಳಲ್ಲವಾದುದರಿಂದ, ಪ್ರಕೃತದಲ್ಲಿಯೂ ಕಂತಿಹಂಪರ ವಿಷಯವಾಗಿ ಹೇಳಿರುವ ಕಥೆಗಳು ಸುಳ್ಳಾದಾಗ್ಯೂ ಆ ಹೆಸರಿನ ಕವಿಯೂ ಕಬ್ಬಿಗಿತಿಯೂ ವಾಸ್ತವವಾಗಿ ಜೀವಿಸಿದ್ದರೆಂಬ ವಿಷಯದಲ್ಲಿ ಸಂದೇಹಪಡುವುದು ನ್ಯಾಯ್ಯವಲ್ಲವೆಂದು ಇಲ್ಲಿ ಕೆಲವರು ಆಕ್ಷೇಪಿಸಬಹುದು. ಆದರೆ ದಂಡಿ, ಬಾಣ, ಮಯೂರ ಮೊದಲಾದ ಹೆಸರಿನ ಕವಿಗಳು ನಿಜವಾಗಿಯೂ ಇದ್ದರೆಂಬುದಕ್ಕೆ ಆ ಕವಿಗಳು ರಚಿಸಿರುವ ಗ್ರಂಥಗಳೇ ಪ್ರಮಾಣವಾಗಿರುವುವೇ ಹೊರತು ಭೋಜಪ್ರಬಂಧವೇ ಮೊದಲಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಸುಳ್ಳು ಕಥೆಗಳು ಈ ವಿಷಯದಲ್ಲಿ ಪ್ರಮಾಣವಾಗಿಲ್ಲ. ಕಂತಿಯೆಂಬ ಹೆಸರಿನ ಕಬ್ಬಿಗಿತಿಯು ನಿಜವಾಗಿಯೂ ಇದ್ದಳೆಂಬುದಕ್ಕೆ ನಂಬಿಕೆಗನರ್ಹವಾದ ಮೇಲೆ ಹೇಳಿದ ಮೂರು ಗ್ರಂಥಗಳೇ ಪ್ರಮಾಣವೇ ಹೊರತು ಬೇರೆ ಯಾವ ವಿಧವಾದ ಪ್ರಮಾಣವೂ ಇಲ್ಲ. ಈ ವಿಧವಾದ ಸುಳ್ಳು ಕಥೆಗಳನ್ನು ಹೇಳುವಂಥವರು ನಿಜವಾಗಿಯೂ ಜೀವಿಸಿದ್ದ ಕವಿಗಳ ವಿಷಯವಾಗಿಯೇ ಸುಳ್ಳು ಕಥೆಗಳನ್ನು ಹೇಳಬೇಕೆಂದೂ, ಕಲ್ಪಿತ ಕವಿಗಳ ವಿಷಯಗಳನ್ನು ಇಂಥ ಕಥೆಗಳಲ್ಲಿ ಹೇಳಕೂಡದೆಂದೂ ಯಾವ ವಿಧವಾದ ನಿಯಮವೂ ಇಲ್ಲವಾದುದರಿಂದ ಇಂಥ ಕಥೆಗಳಲ್ಲಿ ಪ್ರಸ್ತುತರಾದ ಕವಿಗಳೆಲ್ಲರೂ ನಿಜವಾಗಿ ಜೀವಿಸಿದ್ದರೆಂದು ದೋಷರಹಿತವಾದ ಬೇರೆ ಆಧಾರವಿಲ್ಲದೆ ನಿರ್ಧರಿಸುವುದು ಸಂಗತವಾಗಿಲ್ಲ. ಪ್ರಕೃತದಲ್ಲಿ ಕಂತಿಯೆಂಬ ಕಬ್ಬಿಗಿತಿಯು ಇದ್ದಳೆಂಬುದಕ್ಕೆ ಈ ವಿಧವಾದ ಬೇರೆ ಆಧಾರವಾವುದೂ ನಮಗೆ ದೊರೆತಿಲ್ಲವಾಗಿ ಆ ಹೆಸರಿನ ಯಾವ ಕಬ್ಬಿಗಿತಿಯೂ ಇರಲಿಲ್ಲವೆಂದು ನಾವು ತಿಳಿದುಕೊಳ್ಳುವುದೇ ಸದ್ಯಸ್ಕಾಲದಲ್ಲಿ ಉತ್ತಮಪಕ್ಷವೆಂದು ನಮಗೆ ತೋರುವುದು.

೩೩. ಹರಿಹರ, ರಾಘವಾಂಕ, ಕೆರೆಯ ಪದ್ಮರಸ.

ಈ ಮೂರು ಕವಿಗಳ ವಿಷಯವಾಗಿ ಕವಿಚರಿತಕಾರರು—

“ಹರಿಹರಾದಿಗಳ ಚರಿತವನ್ನು ಬರೆವುದಕ್ಕೆ ಮುಂಚೆ ಇವರ ಕಾಲವನ್ನು ನಿರ್ಧರಿಸುವುದಕ್ಕಾಗಿ ಸ್ವಲ್ಪ ವಿಚಾರವು ಆವಶ್ಯಕವಾಗಿದೆ.

ಹರೀಶ್ವರನು—1283 (?) ರಲ್ಲಿ ಆಳುವುದಕ್ಕೆ ಆರಂಭಿಸಿದ ವೀರನರಸಿಂಹ ಬಲ್ಲಾಳನ ಕಾಲದಲ್ಲಿ ಇದ್ದಿರಬೇಕೆಂದು ಮೆ|| ಕಿಟಲ್ ಈರೀತಿಯಾಗಿ ನಿರ್ಣಯಿಸಿದ್ದಾರೆ. [1]—ಹರೀಶ್ವರನ ಸೋದರದಳಿಯನಾದ ರಾಘವನು ಪಂಪಾಪುರದ ರಾಜನಾದ ದೇವರಾಜನ (1286—1328) ಸಭೆಯಲ್ಲಿ ಹರಿಶ್ಚಂದ್ರಕಾವ್ಯವನ್ನು ಓದಿದಂತೆಯೂ ಓರಗಲ್ಲಿಗೆ ಹೋಗಿ ಕಾಕತೀಯರುದ್ರನ (1292-1335) ಸಭೆಯಲ್ಲಿ ವೀರೇಶ್ವರಚರಿತವನ್ನು ನಿರ್ಮಿಸಿ ಓದಿ ಅಲ್ಲಿದ್ದ ಕುಕವಿಗಳನ್ನು ಸೋಲಿಸಿದಂತೆಯೂ ನರಸಿಂಹಬಲ್ಲಾಳನ ಮಂತ್ರಿಯಾದ ಕೆರೆಯಪದ್ಮರಸನನ್ನು ನೋಡುವುದಕ್ಕೆ ಬೇಲೂರಿಗೆ ಹೋದಂತೆಯೂ ರಾಘವಾಂಕಚರಿತದಿಂದ ತಿಳಿಯಬರುತ್ತದೆ. ಈ ನರಸಿಂಹಬಲ್ಲಾಳನು ದೇವರಾಜ, ಕಾಕತೀಯರುದ್ರ ಇವರ ಸಮಕಾಲದವನಾಗಿರಬೇಕಾದುದರಿಂದ ಇವನು 1283 ರಿಂದ ರಾಜ್ಯಭಾರಮಾಡಿದ ವೀರನರಸಿಂಹಬಲ್ಲಾಳನೇ ಆಗಿರಬೇಕು. ಇವನನ್ನೇ ಚೆನ್ನಬಸವಪುರಾಣದಲ್ಲಿ ಬಿಟ್ಟಿಬಲ್ಲಾಳ ಎಂದು ಕರೆದಿದೆ. ಆದುದರಿಂದ ಹರೀಶ್ವರನು ಸು. 1290 ರಲ್ಲಿ ಇದ್ದಿರಬೇಕು.

ಆದರೆ ಹರೀಶ್ವರ, ರಾಘವ, ಕೆರೆಯಪದ್ಮರಸ ಇವರು ಸು. 1165 ರಲ್ಲಿ ಇದ್ದರು ಎಂಬುದಕ್ಕೆ ಪ್ರಬಲವಾದ ಕಾರಣಗಳಿವೆ :—

(1) ಮಲ್ಲಿಕಾರ್ಜುನನು (ಸು. 1245) ತನ್ನ ಸೂಕ್ತಿಸುಧಾರ್ಣವದಲ್ಲಿ ಹರೀಶ್ವರನ ಗಿರಿಜಾಕಲ್ಯಾಣದಿಂದ ಅನೇಕ ಪದ್ಯಗಳನ್ನು ಉದ್ಧರಿಸಿ ಬರೆದಿದ್ದಾನೆ. ಇದರಿಂದ ಹರೀಶ್ವರನು 1245 ಕ್ಕೆ ಹಿಂದೆ ಇದ್ದನೆಂಬುದು ವ್ಯಕ್ತವಾಗುತ್ತದೆ.

(2) ಸೋಮರಾಜನು (1222) ತನ್ನ ಉದ್ಭಟಕಾವ್ಯದಲ್ಲಿ—“ಪ್ರಮಥಾನೀಕಕಥಾರ್ಣವೇಂದು ಹರಿದೇವಾಚಾರ್ಯನಂ....ವಿಮಲಜ್ಞಾನಸುದೀಪಿಕಾಸ್ಫುರಿತಚೇತಸ್ಸದ್ಮನಂ ಪದ್ಮನಂ ಬಲಗೊಂಡು ಪೇಳ್ವೆನೀಕಾವ್ಯಮಂ” ಎಂದು ಹರೀಶ್ವರನನ್ನೂ ಕೆರೆಯಪದ್ಮರಸನನ್ನೂ ಸ್ತುತಿಸುವುದರಿಂದ ಇವರಿಬ್ಬರೂ 1222 ಕ್ಕಿಂತ ಹಿಂದಣವರಾಗಿರಬೇಕು.

(3) ಬಿಟ್ಟಿಬಲ್ಲಾಳನು 1283 ರಲ್ಲಿ ರಾಜ್ಯವಾಳಿದ ವೀರನರಸಿಂಹಬಲ್ಲಾಳನೇ ಆಗಿರಬೇಕೆಂದು ಮೆ|| ಕಿಟಲ್ ಹೇಳಿದ್ದಾರೆ. ಆದರೆ ಪದ್ಮಣಾಂಕನ (ಸು. 1385) ಕೆರೆಯಪದ್ಮರಸಚರಿತ್ರರೂಪವಾದ ಪದ್ಮರಾಜಪುಣದಲ್ಲಿಯ—

ಶ್ರೀವಿಪುಳನರಸಿಂಹಬಲ್ಲಾಳಭೂಮಿಪಂ |
ಕೋವಿದಂ ಯುವರಾಜಪಟ್ಟಾನ್ವಿತಂ ಬಿಟ್ಟಿ |
ದೇವರಾಯನೆನಿಪ್ಪ ಪುತ್ರಸಹಿತಂ ಯಾದವಾನ್ವಯೋದ್ಧರಣನಾದಂ ||

1. ಛಂದೋಂಬುಧಿಯ ಉಪೋದ್ಘಾತ. ಪುಟ. 53.

ನೃಸಿಂಹಬಲ್ಲಾಳಂ ಕುಮಾರಕುಲಚಿಂತಾಮಣಿಯೆನಿಪ್ಪ ಬಿಟ್ಟಿಭೂಪಂ ಬೆರಸು ಸಿಂಹಾಸನಸ್ಥನಾಗಿರ್ದಂ—ಎಂಬ ಪದ್ಯಭಾಗಗಳಿಂದ ಕೆರೆಯಪದ್ಮರಸನ ಕಾಲದಲ್ಲಿ ಶ್ರೀ ನೃಸಿಂಹಬಲ್ಲಾಳನು ರಾಜನಾಗಿದ್ದಂತೆಯೂ ಅವನ ಮಗನಾದ ಬಿಟ್ಟಿದೇವನು ಯುವರಾಜನಾಗಿದ್ದಂತೆಯೂ ತಿಳಿಯುತ್ತದೆ. ಸೋಮರಾಜನು (1222) ಕೆರೆಯಪದ್ಮರಸನನ್ನು ಸ್ತುತಿಸುವುದರಿಂದ 1222 ಕ್ಕಿಂತ ಹಿಂದೆ ಪದ್ಮರಸನೂ ನರಸಿಂಹನೂ ಅವನ ಮಗ ಯುವರಾಜ ಬಿಟ್ಟಿದೇವನೂ ಇದ್ದಿರಬೇಕು. ಹೊಯ್ಸಳರಾಜರ ಪರಂಪರೆಯಲ್ಲಿ ವಿಷ್ಣುವರ್ಧನನಿಗೆ (1104—1141) ಬಿಟ್ಟಿದೇವ ಎಂಬ ಹೆಸರುಂಟೆಂದು ಶಾಸನಗಳಿಂದ ತಿಳಿಯುತ್ತದೆ. ಈ ಬಿಟ್ಟಿದೇವನ ತಂದೆಗೆ ಎರೆಯಂಗ ಅಥವಾ ವೀರಗಂಗ ಎಂಬ ಹೆಸರಿದೆ. ಇವನಿಗೆ ನರಸಿಂಹ ಎಂಬ ಹೆಸರು ಬೇರೆ ಇಲ್ಲ. 1222 ಕ್ಕೆ ಹಿಂದೆ ವಿಷ್ಣುವರ್ಧನನ ಮಗ ನರಸಿಂಹಬಲ್ಲಾಳನು ಹೊರತು ಬೇರೆ ನರಸಿಂಹಬಲ್ಲಾಳನು ಯಾರೂ ಇಲ್ಲ. ಈ ನರಸಿಂಹಬಲ್ಲಾಳನು 1136 ರಿಂದ 1171 ರ ವರೆಗೆ ಆಳಿದನು. ಇವನ ಮಗ ವೀರಬಲ್ಲಾಳ. ಪದ್ಮಣಾಂಕನು ಈ ವೀರಬಲ್ಲಾಳನಿಗೆ ಅವನ ತಾತನಾದ ವಿಷ್ಣುವರ್ಧನನ ಹೆಸರನ್ನೇ ಇಟ್ಟು ಬಿಟ್ಟಿದೇವ ಎಂದು ಕರೆದಿರಬೇಕು. [1] ಈ ನರಸಿಂಹಬಲ್ಲಾಳನ ಕಾಲದಲ್ಲಿಯೇ (1136—1171) ಕೆರೆಯಪದ್ಮರಸನು ಇದ್ದಿರಬೇಕು.

(4) 1292 ರಿಂದ 1335 ರ ವರೆಗೆ ಆಳಿದ ರುದ್ರಪ್ರತಾಪಗಣಪತಿಯ ಕಾಲದಲ್ಲಿ ರಾಘವಾಂಕನು ಓರಗಲ್ಲಿಗೆ ಹೋಗಿದ್ದಂತೆ ಮೆ|| ಕಿಟಲ್ ಹೇಳಿದ್ದಾರೆ. ಆದರೆ ರಾಘವಾಂಕನು 1222 ಕ್ಕೆ ಹಿಂದೆ ಇದ್ದ ಹರೀಶ್ವರನ ಸೋದರದ ಅಳಿಯನಾದುದರಿಂದ ಆತನು 1292 ರಿಂದ 1335 ರ ವರೆಗೆ ಆಳಿದ ರುದ್ರಪ್ರತಾಪಗಣಪತಿಯ ಸಭೆಗೆ ಹೋದನೆಂಬುದು ಅಸಂಭಾವ್ಯವಾಗಿದೆ. ಇಂಡಿಯನ್ ಆಂಟಿಕ್ವೆರಿ ಸಂಪುಟ 9 ಪುಟ 9 ರಲ್ಲಿ ಒಬ್ಬ ಕಾಕತೀಯ ರುದ್ರದೇವನ ಶಾಸನವಿದೆ. ಇದು ಶಕ 1084 ನೆಯ ಚಿತ್ರಭಾನು ಸಂವತ್ಸರದಲ್ಲಿ—ಎಂದರೆ ಕ್ರಿ. ಶ. 1162 ರಲ್ಲಿ—ಬರೆದುದು, ಈ ದೊರೆಯ ಕಾಲದಲ್ಲಿ ರಾಘವಾಂಕನು ಓರಗಲ್ಲಿಗೆ ಹೋಗಿರಬೇಕು. ಚೆನ್ನಬಸವಪುರಾಣದಲ್ಲಿ ರಾಘವನು ಓರಗಲ್ಲಿಗೆ ಹೋದುದಾಗಿ ಹೇಳಿದೆಯೇ ಹೊರತು ಆಗಿನ ದೊರೆಯ ಹೆಸರು ಹೇಳಿಲ್ಲ.

(5) ಪಂಪಾಪುರದ ದೇವರಾಜನು ಹರಿಹರರಾಜನಿಗೆ ಹಿಂದೆ 1286 ರಿಂದ 1328 ರ ವರೆಗೆ ರಾಜ್ಯಭಾರಮಾಡಿದುದಾಗಿ ಮೆ|| ಬ್ರೌನ್ ಹೇಳುತ್ತಾರೆಂದು ಮೆ|| ಕಿಟಲ್ ಬರೆದಿದ್ದಾರೆ. ಆದರೆ ಮೇಲೆ ಹೇಳಿರುವ ಕಾರಣಗಳಿಂದ ಈ ದೇವರಾಜನು ರಾಘವನ ಕಾಲಕ್ಕಿಂತ ಸುಮಾರು 100 ವರ್ಷ ಈಚೆ ಇದ್ದವನಾಗಬೇಕು. ರಾಘವನ ಕಾಲದಲ್ಲಿ ದೇವರಾಜನೆಂಬ ಒಬ್ಬ ದೊರೆ ಇದ್ದಿದ್ದ ಪಕ್ಷದಲ್ಲಿ ಅವನು ಬೇರೆ ಒಬ್ಬ ರಾಜನಾಗಿದ್ದಿರಬೇಕು. ಈತನ ವಿಷಯವಾಗಿ ನಮಗೆ ಏನೂ ತಿಳಿಯದು. ಪದ್ಮರಾಜಪುರಾಣದಲ್ಲಿ—ಕೆರೆಯಪದ್ಮರಸನ ಪಿತಾಮಹನಾದ ಸಕಳೇಶಮಾದರಸನು ತನ್ನ ತಂದೆಯಾದ ಕಲ್ಲಕುರಿಕೆಮಲ್ಲರಸನೊಡನೆ ತಾನು ಸಂಸಾರವನ್ನು ಬಿಟ್ಟು ವಿರಕ್ತನಾಗುವೆನೆಂದಾಗ ಮಲ್ಲರಸನು "ಎಮ್ಮ ಬಸವಾದಿಗಳ್ ಭಕ್ತಿಯಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರ್; ಅವರೊಡನೆ ಕೆಲವು ಕಾಲಮಂ ಕಳೆ" ಎಂದು ಹೇಳಿದುದಾಗಿ ತಿಳಿವುದರಿಂದ ಸಕಳೇಶಮಾದರಸನ ಕಾಲದಲ್ಲಿ ಬಸವನು ಹುಟ್ಟಿರಬಹುದು. ಕೆರೆಯಪದ್ಮರಸನ ತಂದೆ ಮಾಯಿದೇವನೂ ಬಸವನೂ ಸಮಕಾಲದವ

1. ಹಾಸನದ 42 ನೆಯ ಮತ್ತು 43 ನೆಯ ಶಾಸನಗಳಲ್ಲಿ ವೀರಬಲ್ಲಾಳನಿಗೆ 'ವಿಷ್ಣುವರ್ಧನ ಶ್ರೀಪ್ರತಾಪ ಹೊಯ್ಸಳ ಭುಜಬಳ ವೀರಬಲ್ಲಾಳ' ಎಂಬ ವಿಶೇಷವಾದ ಹೆಸರು ಹೇಳಿದೆ.

ರಾಗಿರಬಹುದು. ಕೆರೆಯಪದ್ಮರಸನು ಸುಮಾರು 1165 ರಲ್ಲಿ ನರಸಿಂಹಬಲ್ಲಾಳನ ಆಳಿಕೆಯಲ್ಲಿ ಇದ್ದಿರಬೇಕು.

ಅಲ್ಲದೆ ಪದ್ಮರಾಜಪುರಾಣದಿಂದ—ರಾಘವನು ಗತಿಸಿದ ಎಂಟು ದಿನಕ್ಕೆ ಹರೀಶ್ವರನು 'ಪಂಪಾವಿರೂಪಾಕ್ಷಲಿಂಗದೊಳಡಂಗಿದಂ' ಎಂದೂ ಕೆರೆಯಪದ್ಮರಸನು ಕಾಶಿಗೆ ಹೋಗುವಾಗ ಹರೀಶ್ವರನನ್ನು ನೋಡಿ 'ಉಮಾವರಂ ನಿಮ್ಮನಿಂದಿಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ' ಎಂದು ಹೇಳಿದಹಾಗೂ ಮತ್ತು ಹರೀಶ್ವರನು ನರಸಿಂಹಬಲ್ಲಾಳನಲ್ಲಿ ಕರಣಿಕನಾಗಿದ್ದಂತೆಯೂ ಇದೇ ರಾಜನ ಸಭೆಯಲ್ಲಿ ಕೆರೆಯಪದ್ಮರಸನಿಗೂ ತ್ರಿಭುವನತಾತನಿಗೂ ವಾದವು ನಡೆದಾಗ ರಾಘವನೂ ಅಲ್ಲಿ ಇದ್ದಂತೆಯೂ ತಿಳಿವುದರಿಂದ ಈ ಮೂವರೂ ಸಮಕಾಲದವರು ಎಂಬುದು ವ್ಯಕ್ತವಾಗುತ್ತದೆ."

ಎಂದು ಹೇಳಿ (I, ೧೬೬-೧೬೮), ತದನಂತರ

"ಇವರೆಲ್ಲರೂ ಸುಮಾರು 1165 ರಲ್ಲಿ ಇದ್ದಿರಬೇಕೆಂದು ಊಹಿಸುತ್ತೇವೆ"

ಎಂದು (I, ೧೬೮) ಬರೆದಿರುವರು.

ಈ ಅಭಿಪ್ರಾಯವು ಸಾಧುವಾದುದೆಂದು ನಮಗೆ ತೋರುವುದಿಲ್ಲ.

೧. ಉದ್ಭಟಕಾವ್ಯವನ್ನು ಸೋಮರಾಜನು ಕ್ರಿ. ಶ. ೧೫೨೨ ರಲ್ಲಿ ಬರೆದನೆಂದು ನಾವು ಮೇಲೆ (ಪುಟ ೨೨೨) ವ್ಯಕ್ತಮಾಡಿರುವುದರಿಂದ ಆದರಲ್ಲಿ ಸ್ತುತರಾದ ಹರಿಹರ ಕೆರೆಯ ಪದ್ಮರಸರು ೧೫೨೨ ಕ್ಕಿಂತ ಹಿಂದೆ ಇದ್ದರೆಂದು ಸಿದ್ಧವಾಗುವುದೇ ಹೊರತು, ೧೨೨೨ ಕ್ಕಿಂತ ಹಿಂದೆ ಅವರು ಇದ್ದರೆಂದು ಸಿದ್ಧವಾಗುವುದಿಲ್ಲ.

೨. ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವವನ್ನು ಕ್ರಿ. ಶ. ಸುಮಾರು ೧೨೬೩ ರಲ್ಲಿ ಬರೆದನೆಂದು ನಾವು ಮೇಲೆ (ಪುಟ ೧೮೭) ಹೇಳಿರುವೆವು. ಈ ಗ್ರಂಥದಲ್ಲಿ ಹರಿಹರನ ಗಿರಿಜಾಕಲ್ಯಾಣದಿಂದ ಅನೇಕ ಪದ್ಯಗಳು ಉದಾಹೃತಗಳಾಗಿರುವುದರಿಂದ ಈ ಗಿರಿಜಾಕಲ್ಯಾಣವು ಕ್ರಿ. ಶ. ೧೨೬೩ ಕ್ಕಿಂತ ಹಿಂದೆ ಬರೆಯಲ್ಪಟ್ಟಿತೆಂದು ಸಿದ್ಧವಾಗುವುದೇ ಹೊರತು ರಾಘವಾಂಕನಾಗಲಿ ಕೆರೆಯ ಪದ್ಮರಸನಾಗಲಿ ಆ ವರ್ಷಕ್ಕಿಂತ ಹಿಂದೆ ಇದ್ದನೆಂದು ಸಿದ್ಧವಾಗುವುದಿಲ್ಲ.

೩. ಪದ್ಮರಾಜಪುರಾಣದಲ್ಲಿನ ಮೇಲಿನ ವಾಕ್ಯಗಳಲ್ಲಿ ಉಪಯೋಗಿಸಲ್ಪಟ್ಟಿರುವ 'ನರಸಿಂಹ ಬಲ್ಲಾಳ' ಎಂಬ ಪದಕ್ಕೆ ೧ ನೇ ನರಸಿಂಹ ಹೊಯ್ಸಲನೆಂದು ಕವಿಚರಿತಕಾರರು ಅರ್ಥಮಾಡಿರುವುದು ಅಷ್ಟೇನೂ ಸಂಗತವಾಗಿಲ್ಲ. ನರಸಿಂಹ ಬಲ್ಲಾಳನೆಂದರೆ ನರಸಿಂಹನ ಮಗನಾದ ಬಲ್ಲಾಳನೆಂದು ಅರ್ಥವು. ಹೊಯ್ಸಲ ಚಕ್ರವರ್ತಿಗಳಲ್ಲಿ ನರಸಿಂಹಪುತ್ರರಾದ ಇಬ್ಬರು ಬಲ್ಲಾಳರು ರಾಜ್ಯವಾಳಿದರು. ಇವರಲ್ಲಿ ಮೊದಲನೆಯವನು ೧ ನೇ ಹೊಯ್ಸಲ ನರಸಿಂಹನ ಮಗನಾದ ೨ ನೇ ಬಲ್ಲಾಳ ಅಥವಾ ವೀರಬಲ್ಲಾಳನು. ಇವನು ಕ್ರಿ. ಶ. ೧೧೭೩-೧೨೨೦ ರಲ್ಲಿ ರಾಜ್ಯವಾಳಿ

ದನು. ಎರಡನೆಯವನು ೩ ನೇ ನರಸಿಂಹ ಹೊಯ್ಸಳನ ಮಗನಾದ ೩ ನೇ ಬಲ್ಲಾಳನು. ಇವನು ಕ್ರಿ. ಶ. ೧೨೯೧-೧೩೪೨ ರಲ್ಲಿ ರಾಜ್ಯವಾಳುತ್ತಿದ್ದು, ಓರಗಲ್ಲಿನ ಪ್ರತಾಪರುದ್ರನ ಸಮಕಾಲೀನನಾಗಿದ್ದನು. ಆದ್ದರಿಂದ ಪದ್ಮರಾಜಪುರಾಣದ ಮೇಲಿನ ವಾಕ್ಯಗಳಲ್ಲಿ ಹೇಳಲ್ಪಟ್ಟಿರುವ ನರಸಿಂಹಬಲ್ಲಾಳನು ಈ ಮೂರನೇ ಬಲ್ಲಾಳನೇ ಎಂದು ತೋರುವುದು. ಅಲ್ಲಿ ಹೇಳಿರುವ ಯುವರಾಜ ಬಿಟ್ಟಿದೇವರಾಯನು ಇವನ ಮಗನಾದ ನಾಲ್ಕನೇ ಬಲ್ಲಾಳನೆಂದು ತೋರುವುದು. ಬಿಟ್ಟಿ ಅಥವಾ ವಿಷ್ಣುವರ್ಧನ ಎಂಬ ಹೆಸರು ಹೊಯ್ಸಳ ವಿನಯಾದಿತ್ಯನು ಮೊದಲುಗೊಂಡು ವೀರಬಲ್ಲಾಳನವರೆಗೆ ಆಳಿದ ಆ ವಂಶದ ರಾಜರಿಗೆಲ್ಲಾ ಇದ್ದಿತೆಂಬುದನ್ನು ನಾವು ಮೇಲೆಯೇ (ಪುಟ ೨೩) ವ್ಯಕ್ತಮಾಡಿರುವೆವು. ಈ ವೀರಬಲ್ಲಾಳನ ಮಗನಾದ ೨ ನೇ ನರಸಿಂಹನಿಗೂ ವಿಷ್ಣುವರ್ಧನ ಎಂಬ ಹೆಸರು ಶಾಸನಗಳಲ್ಲಿ ಹೇಳಿರುವುದು (ಮದರಾಸ್ ಎಪಿಗ್ರಾಫಿಸ್ಟರವರು ಬರೆದ ೧೯೨೦ ನೇ ವರ್ಷದ ರಿಪೋರ್ಟಿನಲ್ಲಿ ಹೇಳಲ್ಪಟ್ಟಿರುವ ೪೦೮ ನೇ ಶಾಸನವನ್ನು ನೋಡಿ. ಈ ಶಾಸನವು ಕಂಚಿಯಲ್ಲಿರುವುದು). ಆದ್ದರಿಂದ ವಿಷ್ಣುವರ್ಧನ ಎಂಬುದು ಈ ವಂಶದ ರಾಜರಿಗೆ (ಮತ್ತು ಯುವರಾಜರಿಗೆ) ಕುಲಕ್ರಮಾಗತವಾದ ಹೆಸರಾಗಿದ್ದಂತೆ ತೋರುವುದರಿಂದ ೩ ನೇ ಬಲ್ಲಾಳನ ಕಾಲದಲ್ಲಿಯೂ ಯುವರಾಜನಿಗೆ ಈ ಹೆಸರು ಇತ್ತೆಂಬುದು ಅಸಂಭಾವ್ಯವಾಗಿಲ್ಲ.

೪. ಕವಿಚರಿತಕಾರರು ಹೇಳಿರುವಂತೆ ಒಬ್ಬ ಕಾಕತೀಯ ರುದ್ರದೇವನು ಕ್ರಿ. ಶ. ೧೧೬೨ ರಲ್ಲಿ ರಾಜ್ಯವಾಳುತ್ತಿದ್ದನೆಂಬುದೇನೋ ವಾಸ್ತವವೇ. ಆದರೆ ಇವನ ರಾಜಧಾನಿಯು ಓರಗಲ್ಲಾಗಿರಲಿಲ್ಲ. ಅದು ಅನುಮಕೊಂಡ ಎಂಬ ಊರಾಗಿತ್ತೆಂದು ಈ ರುದ್ರದೇವನ ಕಾಲದಲ್ಲಿ ಹುಟ್ಟಿದ ಅನುಮಕೊಂಡ (ಅಥವಾ ಅನಮಕೊಂಡ) ದ ಒಂದು ಶಾಸನದಲ್ಲಿರುವ *

ತಸ್ಯಾಸ್ತೇನುಮಕೊಂಡನಾಮನಗರೀ ಶ್ರೀರಾಜಧಾನೀವ ಯಾ
ಯತ್ರೋದ್ವೃತ್ತದಖಂಡಖಂಡಪರಶುವ್ಯಾಜೃಂಭಣೋಜ್ಜೃಂಭಿತಾ |
ಕಂದರ್ಪಸ್ಯ ಪುರೀವ ಸಾ ರತಿಮತೀ ಶೃಂಗಾರಭಾರಾನ್ವಿತಾ
ಮಾಹೇಂದ್ರೀವ ಚ ಜಿಷ್ಣುವಿಷ್ಣುಸಹಿತಾ ರಂಭಾವಿಲಾಸೋರ್ಜಿತಾ ||

ಎಂಬ ಶ್ಲೋಕದಿಂದ ವ್ಯಕ್ತವಾಗುವುದು. ವಸ್ತುತಃ ಓರಗಲ್ಲು ನಗರವು ಪ್ರತಾಪರುದ್ರನ ಕಾಲದಲ್ಲಿ ಅವನಿಂದ ರಾಜಧಾನಿಯಾಗಿ ಮಾಡಲ್ಪಟ್ಟಿತೆಂದು ಕಾಕತೀಯರಾಜರ ಇತಿಹಾಸದಿಂದ ತಿಳಿಯುವುದರಿಂದ ಚೆನ್ನಬಸವ ಪುರಾಣದಲ್ಲಿ ಪ್ರತಾಪರುದ್ರನ ಹೆಸ

* ಈ ಶಾಸನವು ಬಾಂಬೆ ಬ್ರಾಂಚ್ ರಾಯಲ್ ಏಷ್ಯಾಟಿಕ್ ಸೊಸೈಟಿ ಜರ್ನಲಿನ ೧೦ ನೇ ಸಂಪುಟದ ೫೪ ನೇ ಪುಟದಲ್ಲಿ ಮುದ್ರಿತವಾಗಿರುವುದು.

ರನ್ನು ಹೇಳದೆ ರಾಘವಾಂಕನು ಓರಗಲ್ಲಿಗೆ ಹೋದನೆಂದು ಹೇಳಿದ್ದಾಗ್ಯೂ ಆಗ ಪ್ರತಾಪರುದ್ರದೇವನೇ ಆಳುತ್ತಿದ್ದನೆಂದು ನಾವೇ ಊಹಿಸಿಕೊಳ್ಳಬಹುದು. ರಾಘವಾಂಕಚಾರಿತ್ರ ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರಗಳಲ್ಲಂತೂ ಪ್ರತಾಪರುದ್ರನ ಹೆಸರೂ ಓರುಗಲ್ಲಿನ ಹೆಸರೂ ಎರಡೂ ಹೇಳಲ್ಪಟ್ಟಿರುವುವು. ಕ್ರಿ. ಶ. ೧೧೬೨ ರಲ್ಲಿ ಅನುಮಕೊಂಡದಲ್ಲಿ ಆಳುತ್ತಿದ್ದ ದೊರೆಗೆ ರುದ್ರದೇವ ಎಂಬ ಹೆಸರಿತ್ತೇ ಹೊರತು ಪ್ರತಾಪರುದ್ರ ಎಂಬ ಹೆಸರಿರಲಿಲ್ಲ.

೫. ರಾಘವನ ಕಾಲದಲ್ಲಿ ಪಂಪಾಪುರದಲ್ಲಿ ದೇವರಾಜನೆಂಬ ಒಬ್ಬ ಸಣ್ಣ ರಾಜನು ಆಳುತ್ತಿದ್ದನೆಂಬುದು ಅಸಂಭಾವನೀಯವಲ್ಲ. ವಸ್ತುತಃ ಕ್ರಿ. ಶ. ೧೨೮೬-೧೩೨೮ ರಲ್ಲಿ ಪಂಪಾಪುರದಲ್ಲಿ ಒಬ್ಬ ದೇವರಾಯನು ಆಳುತ್ತಿದ್ದನೆಂದು ಮೆ|| ಬ್ರೌನ್ ರವರು ಹೇಳಿರುವುದರಿಂದ, ರಾಘವಾಂಕಚಾರಿತ್ರದಲ್ಲಿ ಕೀರ್ತಿತನಾದ ದೇವರಾಯನು ಇವನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೬. ಪದ್ಮರಾಜಪುರಾಣದಲ್ಲಿ ಹೇಳಿರುವಂತೆ ಕೆರೆಯ ಪದ್ಮರಸನ ಪಿತಾಮಹನಾದ ಸಕಳೇಶಮಾದರಸನ ಕಾಲದಲ್ಲಿ (ಕವಿಚರಿತಕಾರರು ಹೇಳುವಂತೆ) ಬಸವನು ಹುಟ್ಟಿದ್ದು, ಕೆರೆಯ ಪದ್ಮರಸನ ತಂದೆಯಾದ ಮಾಯಿದೇವನೂ ಬಸವನೂ ಸಮಕಾಲದವರಾಗಿದ್ದಿದ್ದಲ್ಲಿ ಕ್ರಿ ಶ. ೧೧೫೬-೧೧೬೭ ರಲ್ಲಿ ಆಳುತ್ತಿದ್ದ ಬಿಜ್ಜಳರಾಜನಲ್ಲಿ ಬಸವನು ಪ್ರಧಾನನಾಗಿದ್ದು, ಸುಮಾರು ೧೧೬೭ ರಲ್ಲಿಯೇ ಲೋಕಾಂತರಗತನಾದುದರಿಂದ, ಮಾಯಿದೇವನ ಮಗನಾದ ಕೆರೆಯ ಪದ್ಮರಸನು ೧೧೬೫ ರಲ್ಲಿ ಬಾಲನಾಗಿದ್ದಿರಬಹುದೇ ಹೊರತು ಯೌವನಪ್ರಾಪ್ತನಾಗಿ ಬುದ್ಧಿತಿಳಿದವನಾಗಿರಲಾರನು. ಮೇಲೆ ಹೇಳಿದ ೧೧೬೭ ನೇ ವರ್ಷದಿಂದ ಈಚೆಗೆ ೬ ವರ್ಷದಲ್ಲಿ (೧೧೭೩ ರಲ್ಲಿ) ವೀರ ಬಲ್ಲಾಳನು ರಾಜ್ಯವಾಳುವುದಕ್ಕೆ ಪ್ರಾರಂಭಿಸಿದ್ದರಿಂದ, 'ಕೆರೆಯ ಪದ್ಮರಸನು ಸುಮಾರು 1165ರಲ್ಲಿ ನರಸಿಂಹಬಲ್ಲಾಳನ [ಎಂದರೆ, ಹೊಯ್ಸಳ ೧ನೇ ನರಸಿಂಹನ]*

---

* ಕವಿಚರಿತಕಾರರು (I, ೧೯೦, ಟಿಪ್ಪಣಿ ೪) ಹೇಳಿರುವಂತೆ ಈ ಹೊಯ್ಸಳ ನರಸಿಂಹನು 'ಮಾಹೇಶ್ವರ ಸಮಯಪ್ರತಿಪಾಳಕ' ಎಂದು ತರೀಕೆರೆಯ ೧೭ ನೇ ಶಾಸನದಲ್ಲಿ ಸ್ತುತಿಸಲ್ಪಟ್ಟಿರುವನೆಂಬುದೇನೋ ವಾಸ್ತವವೇ. ಆದರೆ ಇದರಿಂದ ಇವನು ವಿಷ್ಣುದೇವರಿಗೆ ಮನ್ನಣೆಮಾಡುತ್ತಿರಲಿಲ್ಲವೆಂದಾಗಲಿ ವಿಷ್ಣುದ್ವೇಷಿಯೆಂದಾಗಲಿ ನಿರ್ಧರಿಸುವುದು ಅಯುಕ್ತವು. ಅರಸೀಕೆರೆಯ ೧೧೭ ನೇ ಶಾಸನದಲ್ಲಿ—

ವಿಷ್ಣುನೃಪಾಲಕಾಗ್ರಸುತನೀನರಸಿಂಹನೃಪಾಲಕಂ ಕರಂ |
ವಿಷ್ಣುಪದಾಂಬುಜಾದ್ವಯಮಧೂವ್ರತನ್

ಎಂದು ಈ ನರಸಿಂಹನು ವಿಷ್ಣುಭಕ್ತನೆಂದೇ ಹೇಳಲ್ಪಟ್ಟಿರುವುದು.

ಆಳಿಕೆಯಲ್ಲಿ ಇದ್ದಿರಬೇಕು' ಎಂಬ ಕವಿಚರಿತಕಾರರ ಅಭಿಪ್ರಾಯವು ಸಂಗತವಾಗಿರುವಂತೆ ಕಾಣಿಸುವುದಿಲ್ಲ.

ಹರೀಶ್ವರನು ಹಳೆಯಬೀಡಿನಲ್ಲಿ ನರಸಿಂಹಬಲ್ಲಾಳನ ಬಳಿಯಲ್ಲಿ ಕರಣಿಕನಾಗಿದ್ದು ಆ ರಾಜನು ಒಂದುದಿನ ಲೆಕ್ಕವನ್ನು ಕೇಳಿದಾಗ, ಕಡಿತವನ್ನು ಬಿಟ್ಟು ಕೈಗಳನ್ನು ಒರಸಿದನೆಂದೂ, ದೊರೆ ಅದೇನೆಂದು ಕೇಳಲಾಗಿ, 'ಪಂಪಾವಿರೂಪಾಕ್ಷನಾಲಯದಲ್ಲಿ ಆರತಿಯನ್ನು ಎತ್ತಿದಾಗ ಅದರ ಸೆಕೆ ಹತ್ತಿ ಮೇಲ್ಕಟ್ಟಿನ ಬಟ್ಟೆ ಭುಗಿಲೆಂದು ಉರಿವುದನ್ನು ಕಂಡು ಕೈಯಿಂದ ಒರಸಿ ಆರಿಸಿದೆನು' ಎಂದು ಹೇಳಿದನೆಂದೂ, ದೊರೆಯು ಆ ಮಾತನ್ನು ನಂಬದೆ ಪಂಪಾವಿರೂಪಾಕ್ಷನಾಲಯಕ್ಕೆ ದೂತನನ್ನು ಕಳುಹಿ ಹರೀಶ್ವರನು ಹೇಳಿದುದು ನಿಜವೆಂದು ತಿಳಿದು ಆಶ್ಚರ್ಯಪಟ್ಟು ವಿರೂಪಾಕ್ಷಾಲಯದಲ್ಲಿಯೇ ನೀನು ಲೆಕ್ಕವನ್ನು ಬರೆದುಕೊಂಡು ಇರುವುದೆಂದು ಹೇಳಿ ಹರೀಶ್ವರನನ್ನು ಅಲ್ಲಿಗೆ ಕಳುಹಿಸಿದನೆಂದೂ ಚೆನ್ನಬಸವಪುರಾಣ ಪದ್ಮರಾಜಪುರಾಣಗಳಲ್ಲಿ ಹೇಳಲ್ಪಟ್ಟಿರುವುದರಿಂದ (ಕವಿಚರಿತೆ I, ೧೭೦-೧೭೧ನ್ನು ನೋಡಿ) ಈ ನರಸಿಂಹಬಲ್ಲಾಳನ ಕಾಲದಲ್ಲಿ ಪಂಪಾಪಟ್ಟಣವು ಹೊಯ್ಸಳರ ಆಳಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟವಾಗುವುದು. ಹಳೇಬೀಡಿನಿಂದ ಪಂಪಾಪಟ್ಟಣಕ್ಕೆ ಹೋಗಬೇಕಾದರೆ ನಡುವೆ ನೊಳಂಬವಾಡಿ ೩೨,೦೦೦ ಮೊದಲಾದ ಸೀಮೆಗಳನ್ನು ದಾಟಿಹೋಗಬೇಕು. ಹೊಯ್ಸಳ ೧ ನೇ ನರಸಿಂಹನ ಕಾಲದಲ್ಲಿ ಈ ಸೀಮೆಗಳು ಹೊಯ್ಸಳರ ಅಧೀನದಲ್ಲಿಲ್ಲದೆ ಚಾಲುಕ್ಯ ಚಕ್ರವರ್ತಿಗಳ ಕೆಳಗೆ ಮಹಾಮಂಡಲೇಶ್ವರರಾದ ಉಚ್ಚಂಗಿಯ ಪಾಂಡ್ಯರಾಜರ ವಶದಲ್ಲಿ ಇದ್ದುವು. ಈ ಸೀಮೆಗಳೂ ಪಂಪಾಪಟ್ಟಣವಿರುವ ಸಿಂದವಾಡಿಸೀಮೆಯೂ ಹೊಯ್ಸಳ ವೀರಬಲ್ಲಾಳನಿಂದ ಜಯಿಸಲ್ಪಟ್ಟು ತದನಂತರ ಅವನ ಮತ್ತು ಅವನ ವಂಶಿಕರ ವಶದಲ್ಲಿದ್ದುವು. ಆದ್ದರಿಂದ ಪದ್ಮರಾಜಪುರಾಣದಲ್ಲಿ ಸ್ತುತನಾಗಿರುವ ನರಸಿಂಹಬಲ್ಲಾಳರಾಯನು ಹೊಯ್ಸಳ ೧ ನೇ ನರಸಿಂಹನಾಗಿರಲಾರನೆಂದು ಇದರಿಂದಲೂ ಸ್ಪಷ್ಟವಾಗುವುದು.

ಹೀಗೆ ನಾವು ಮೇಲೆ ಹೇಳಿರುವುದರಿಂದ 'ಹರೀಶ್ವರಾದಿಗಳು ಕ್ರಿ. ಶ. ಸುಮಾರು ೧೧೬೫ ರಲ್ಲಿ ಹೊಯ್ಸಳ ೧ ನೇ ನರಸಿಂಹನ ಸಭೆಯಲ್ಲಿದ್ದರು' ಎಂಬ ಕವಿಚರಿತಕಾರರ ಅಭಿಪ್ರಾಯವು ಸಂಗತವಾದುದಲ್ಲವೆಂದು ಸ್ಪಷ್ಟವಾಗುವುದಷ್ಟೆ. ಅಲ್ಲದೆ ಮೇಲೆ ಹೇಳಿದ ಚೆನ್ನಬಸವಪುರಾಣ ರಾಘವಾಂಕಚಾರಿತ್ರ ಪದ್ಮರಾಜಪುರಾಣ ಮತ್ತು ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರವೇ ಮೊದಲಾದ ವೀರಶೈವ ಗ್ರಂಥಗಳನ್ನು ನಾವು ನಂಬಿದರೆ ಮ|| ಕಿಟ್ಟೆಲ್‌ರವರು ಹೇಳಿರುವಂತೆಯೇ ಮೇಲೆ

(೨೬೦ನೇ ಪುಟವನ್ನು ನೋಡಿ) ರಾಘವಾಂಕನು ಓರಗಲ್ಲಿನಲ್ಲಿ ಪ್ರತಾಪರುದ್ರದೇವನೂ ದೋರಸಮುದ್ರದಲ್ಲಿ ಹೊಯ್ಸಲಚಕ್ರವರ್ತಿ ೩ ನೇ ನರಸಿಂಹನ ಮಗ ೩ ನೇ ಬಲ್ಲಾಳನೂ ಆಳುತ್ತಿದ್ದಾಗ ಎಂದರೆ ಕ್ರಿ. ಶ. ಸುಮಾರು ೧೨೯೦-೧೩೦೦ ರಲ್ಲಿ ತನ್ನ ಕಾವ್ಯಗಳನ್ನು ಬರೆದನೆಂದೂ, ಕೆರೆಯ ಪದ್ಮರಸ ಹರೀಶ್ವರರು ಈ ೩ ನೇ ಬಲ್ಲಾಳನ ಸಭೆಯಲ್ಲಿದ್ದರೆಂದೂ ಈ ಮೂರು ಕವಿಗಳೂ ಕ್ರಿ. ಶ. ಸುಮಾರು ೧೩೦೦ ರಲ್ಲಿ ಲೋಕಾಂತರವನ್ನೈದಿದರೆಂದೂ ನಾವೂ ಹೇಳಬಹುದು.

ಆದರೆ ಇಂಥ ವಿಷಯಗಳಲ್ಲಿ ಮೇಲೆ ಹೇಳಿದ ವೀರಶೈವ ಗ್ರಂಥಗಳಲ್ಲಿ ಹೇಳಿರುವುದನ್ನು ನಂಬುವುದು ಯುಕ್ತವೇ ಎಂಬುದನ್ನು ಕುರಿತು ಸ್ವಲ್ಪ ವಿಚಾರಮಾಡುವುದು ಆವಶ್ಯಕವೆಂದು ನಮಗೆ ತೋರುವುದು. ಕವಿಚರಿತಕಾರರ ಮನಸ್ಸಿಗಾದರೆ ಈ ವಿಧವಾದ ವಿಚಾರವು ಆವಶ್ಯಕವೆಂದು ಸ್ವಲ್ಪವೂ ತೋಚಿರುವಂತಿಲ್ಲ. ಕ್ರಿ. ಶ. ಸುಮಾರು ೧೬೫೦ ರಲ್ಲಿ ಬರೆಯಲ್ಪಟ್ಟ ಸಿದ್ಧನಂಜೇಶನ ಗುರುರಾಜಚಾರಿತ್ರವನ್ನು ಕುರಿತು ಕವಿಚರಿತಕಾರರು "ಈ ಗ್ರಂಥವು ಅನೇಕ ವೀರಶೈವಗುರುಗಳ ಮತ್ತು ಕವಿಗಳ ಚರಿತ್ರವನ್ನು ಒಳಕೊಂಡಿರುವುದರಿಂದ ನಮಗೆ ಬಹಳಮಟ್ಟಿಗೆ ಸಹಕಾರಿಯಾಯಿತು. ಇದರಿಂದ ಅನೇಕ ಸ್ಥಳಗಳಲ್ಲಿ ಅನುವಾದಮಾಡಿ ಕವಿಚರಿತೆಯಲ್ಲಿ ಸೇರಿಸಿದ್ದೇವೆ. ಕೆಲವು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೂ ಈ ಗ್ರಂಥವು ಪ್ರಯೋಜನಕಾರಿಯಾಯಿತು.'' ಎಂದೂ (II, ೩೮೫), ಕ್ರಿ. ಶ. ೧೫೮೪ ರಲ್ಲಿ ಬರೆಯಲ್ಪಟ್ಟ ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣವನ್ನು ಕುರಿತು—ಈ ಗ್ರಂಥವು ಕವಿಯಕಾಲಕ್ಕೆ ಹಿಂದೆ ಇದ್ದ ವೀರಶೈವ ಪುರಾತನರ ಮತ್ತು ಕವಿಗಳ ಕಾಲವನ್ನು ನಿರ್ಣಯಿಸುವುದಕ್ಕೆ ಬಹಳಮಟ್ಟಿಗೆ ಉಪಕಾರವಾಗಿದೆ. ಅಲ್ಲದೆ ಚರಿತ್ರೆಗೆ ಸಂಬಂಧಪಟ್ಟ ಕೆಲವಂಶಗಳೂ ಇದರಲ್ಲಿ ಹೇಳಿವೆ :—‘ ಶಕ 800 ನೆಯ ವಿಳಂಬಿಯಲ್ಲಿ ಹೊಯ್ಸಳನಿಗೆ ಪಟ್ಟವಾಯಿತು. . .ಶಕ 1258 ನೆಯ ಧಾತುವಿನಲ್ಲಿ (1336) ಹರಿಹರನಿಗೆ ಪಟ್ಟವಾಯಿತು.'' ಎಂದೂ (II. ೩೦೮) ಮತ್ತು ಕ್ರಿ. ಶ. ೧೬೭೨ ರಲ್ಲಿ ಶಾಂತಲಿಂಗದೇಶಿಕನಿಂದ ಬರೆಯಲ್ಪಟ್ಟ ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರದ ವಿಷಯವಾಗಿ—"ಈ ಗ್ರಂಥವು ಯದ್ಯಪಿ ಮುಖ್ಯವಾಗಿ ಭೈರವೇಶ್ವರ ಕಾವ್ಯಕ್ಕೆ ವಿವರಣರೂಪವಾಗಿದ್ದರೂ ಅನೇಕ ವೀರಶೈವ ಕವಿಗಳ ಮತ್ತು ಅವರ ಗ್ರಂಥಗಳ ವಿಷಯವಾದ ಇತಿಹಾಸಗಳನ್ನು ಒಳಕೊಂಡಿರುವುದರಿಂದ ಬಹಳ ಪ್ರಯೋಜನಕಾರಿಯಾಗಿದೆ ; ಇವನ ಕಾಲವು ತಿಳಿದಿರುವುದರಿಂದ ಇದರಲ್ಲಿ ಹೇಳಿರುವ ಕವಿಗಳ ಮತ್ತು ಗ್ರಂಥಗಳ ಕಾಲವು ಇದಕ್ಕಿಂತ ಹಿಂದಣದು ಎಂದು ಸ್ಥೂಲವಾಗಿ

ನಿಶ್ಚಯಿಸಲು ಸಹಕಾರಿಯಾಗಿದೆ. ಕರ್ಣಾಟಕ ಕವಿಚರಿತೆಯ ಪ್ರಥಮಸಂಪುಟದಲ್ಲಿ ವೀರಶೈವ ಕವಿಗಳ ಚರಿತವನ್ನು ಬರೆವಾಗ ಹಲವು ಕಡೆ ಈ ಗ್ರಂಥದಿಂದ ಕೆಲವು ಭಾಗಗಳನ್ನು ಉದ್ಧರಿಸಿ ಬರೆದಿದ್ದೇವೆ. ಈ ಸಂಪುಟದಲ್ಲಿಯೂ ಹಾಗೆಯೇ ಮಾಡಿದ್ದೇವೆ'' ಎಂದೂ (II. ೪೫೫) ಬರೆದಿರುವರಲ್ಲದೆ, ಈ ಗ್ರಂಥಗಳ ಆಧಾರದಿಂದಲೇ ಹಾವಿನಹಾಳ-ಕಲ್ಲಯ್ಯ ಬಾಹೂರ-ಬೊಮ್ಮಣ್ಣನೇ ಮೊದಲಾದ ಅನೇಕ ವಚನಕಾರರು ಕ್ರಿ.ಶ. ಸುಮಾರು ೧೧೬೦ ರಲ್ಲಿ ಇದ್ದರೆಂದು ಹೇಳಿ ಅವರ ಚರಿತ್ರವನ್ನು ಕವಿಚರಿತೆಯಲ್ಲಿ ನಿರೂಪಿಸಿರುವರು. ಇಂಥ ಚರಿತ್ರಗಳಲ್ಲಿ ಕೆಲವನ್ನು ನಾವು ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣದಿಂದ ನಿದರ್ಶನಕ್ಕಾಗಿ ಇಲ್ಲಿ ಉದಾಹರಿಸುವೆವು:-

"ಮಡಿವಳಮಾಚಯ್ಯ. ಸು. 1160—ಈತನು ವಚನಗಳನ್ನು ಬರೆದಿದ್ದಾನೆ. ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತೋರುತ್ತದೆ. ಇವನು ವೀರಶೈವಕವಿ; ಇವನಿಗೆ ಮಡಿವಾಳಯ್ಯ ಎಂಬ ಹೆಸರೂ ಉಂಟು. ಈತನ ವಿಷಯವಾಗಿ ಬಸವಪುರಾಣದಿಂದ ಈಯಂಶಗಳು ತಿಳಿಯುತ್ತವೆ:—'ಇವನು ಹಿಪ್ಪಲಿಗೆಯಲ್ಲಿ ಹುಟ್ಟಿದವನು. ಕಲ್ಯಾಣದಲ್ಲಿ ಜಂಗಮರ ಬಟ್ಟೆಯನ್ನು ಒಗೆಯುತ್ತ ಮಡಿವಳಕಾಯಕವನ್ನು ಮಾಡುತ್ತಿದ್ದನು. ಒಂದುದಿವಸ ಇವನು ಮಡಿಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಇದಿರಲ್ಲಿ ಬರುತ್ತಿದ್ದ ಒಬ್ಬ ಭವಿ ಅವುಗಳನ್ನು ಸೋಕಲು ಅವನನ್ನು ಕೊಂದುಹಾಕಿದನು. ಪಟ್ಟಣದ ಜನರು ಬಿಜ್ಜಳರಾಯನಲ್ಲಿ ದೂರನ್ನು ಹೇಳಿಕೊಳ್ಳಲು ದೊರೆ ಮಾಚಯ್ಯನನ್ನು ಕೊಲ್ಲುವಂತೆ ಭಟರಿಗೆ ಆಜ್ಞಾಪಿಸಿದನು. ಆಗ ಸಭೆಯಲ್ಲಿದ್ದ ಬಸವನು—ಶಿವಶರಣರ ಮಹಿಮೆ ತಿಳಿಯದೆ? ಏತಕ್ಕೆ ದುಡಿಯುತ್ತೀಯೇ—ಎನಲು, ರಾಜನು ಸಿಟ್ಟುಗೊಂಡು ಮಾವಂತರನ್ನು ಕರೆಯಿಸಿ ಮಾಚಯ್ಯನನ್ನು ಆನೆಯಿಂದ ಮೆಟ್ಟಿಸಿ ಕೊಲ್ಲುವಂತೆ ಆಜ್ಞಾಪಿಸಿದನು. ಮಾಚಯ್ಯನು ಆ ಆನೆಯೊಡನೆ ಕಾದಿ ಅದನ್ನು ಸಂಹರಿಸಿದನು'...ಇವನ ವಚನಗಳ ಸಂಖ್ಯೆ 100. ಇವುಗಳಲ್ಲಿ ಅರ್ಕೇಶ್ವರಲಿಂಗ ಎಂಬ ಅಂಕಿತವಿದೆ'' (ಪುಟ ೧೮೨)

"ಪ್ರಭುದೇವ, ಸು. 1160—ಈತನು ಷಟ್ಸ್ಥಲಜ್ಞಾನಚಾರಿತ್ರ, ಶೂನ್ಯಸಂಪಾದನೆ, ಮಂತ್ರಗೋಪ್ಯ...ಎಂಬ ಗ್ರಂಥಗಳನ್ನು ಬರೆದಿದ್ದಾನೆ ಇವನಿಗೆ ಅಲ್ಲಮ ಎಂಬ ಹೆಸರೂ ಉಂಟು...ಈತನ ವಿಷಯವಾಗಿ ಚೆನ್ನಬಸವಪುರಾಣ ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳಿಂದ ಈ ಯಂಶಗಳು ತಿಳಿಯಬರುತ್ತವೆ:— 'ಇವನು ವೀರಶೈವಕವಿ; ಈತನ ತಂದೆ ನಿರಹಂಕಾರ; ತಾಯಿ ಸುಜ್ಞಾನಿ... ಇವನು...ಕಲ್ಯಾಣಕ್ಕೆ ಹೋಗಿ ಬಸವನಿಂದ ಸತ್ಕೃತನಾಗಿ ಶೂನ್ಯಪೀಠವನ್ನು ಹತ್ತಿ

ದನು...'—ಈತನ ವಚನಗಳಲ್ಲಿ ಗುಹೇಶ್ವರ ಎಂಬ ಅಂಕಿತವು ದೊರೆಯುತ್ತದೆ'' (ಪುಟ ೧೮೦) ;

" ಕೊಂಡಗೂಳಿ ಕೇಶಿರಾಜ. ಸು. 1160–ಈತನು ಷಡಕ್ಷರಕಂದವನ್ನು ಬರೆದಿದ್ದಾನೆ; ವಚನಗಳನ್ನೂ ಬರೆದಿರುವಂತೆ ತಿಳಿಯುತ್ತದೆ. ಇವನು ವೀರಶೈವಕವಿ; ಈತನ ವಿಷಯವಾಗಿ ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರದಲ್ಲಿ ಹೀಗೆ ಹೇಳಿದೆ :—ಕೊಂಡಗೂಳಿಯೆಂಬ ಪುರದಲ್ಲಿ ಕೇಶಿರಾಜಯ್ಯನು ವಸ್ತುಕವರ್ಣಕದಿಂದ ಷಡಕ್ಷರಮಂತ್ರಮಹತ್ವವನ್ನು ನವರಸಾರ್ಥಯುಕ್ತಮಾಗಿ ಸ್ತುತಿಗೆಯ್ಯುತ್ತಿದ್ದನು. ಕಲ್ಯಾಣದಿಂದ ಪೆರ್ಮಾಡಿರಾಜನು ನಿಯೋಗಿಗಳ ಕಳುಹಿ ಕರೆಯತರಿಸಿ ಪ್ರಧಾನ ಪಟ್ಟವಂ ಕಟ್ಟಿ ಕೇಶಿರಾಜದಣಾಯಕನೆಂದು ಹೆಸರಿಟ್ಟನು. ಹೀಗಿರಲು ಪರವಾದಿಗಳ ಕೃತಕದಿಂದ ದಣಾಯಕನ ನಂದಿಮುದ್ರೆಯುಂಗುರವಂ ಅರಸು ತೆಗೆದುಕೊಳಲು ಕೇಶಿ ಕೈಮುಗಿಯದೆ ಮನೆಗೆ ಹೋದನು. ಇತರ ಗ್ರಂಥಗಳಿಂದ—ಈತನು ಶಿವ ಪುರಕ್ಕೆ ಬಂದು ಜಂಗಮಾರ್ಜನೆಯನ್ನು ಮಾಡುತ್ತ ಪ್ರತಿದಿನವೂ ಶಿವನನ್ನು ಎಂಟು ಶ್ಲೋಕಗಳಿಂದ ಸ್ತುತಿಸುತ್ತಿದ್ದಂತೆಯೂ ಬಸವೇಶ್ವರನೊಡನೆ ಸಂಗಮೇಶ್ವರಕ್ಕೆ ಹೋದಂತೆಯೂ ತಿಳಿಯುತ್ತದೆ. ಷಿಕಾರಿಪುರದ 119 ನೆಯ ಮತ್ತು 123 ನೆಯ ಶಾಸನಗಳಿಂದ ಈತನ ವಿಷಯವಾಗಿ ಈ ಯಂಶಗಳು ತಿಳಿಯುತ್ತವೆ :—ಈತನು ಭಾರದ್ವಾಜಗೋತ್ರದವನು. ಇವನ ತಂದೆ ಹೊಳಲಮರಸ; ತಾಯಿ ದುರ್ಗಾ ದೇವಿ. ಈತನು ಬಿಜ್ಜಳರಾಜನ (1156–1167) ಕೈಯಕೆಳಗೆ ದಂಡನಾಯಕನಾಗಿ ಬನವಸೆ ಪನ್ನಿರ್ಛಾಸಿರವನ್ನು ಆಳುತ್ತ ಬಲಿಪುರದಲ್ಲಿ ಇದ್ದನು. ಬಿಜ್ಜಳನ ಕಾಲವಾದ ಮೇಲೆ ಅವನ ಮಗ ರಾಯಮುರಾರಿ ಸೋಯಿದೇವನ ಕಾಲದಲ್ಲಿಯೂ ಇದ್ದನು. ಇವನು ಬಹಳ ಪರಾಕ್ರಮಶಾಲಿ '' (ಪುಟ ೧೮೫–೧೮೬).

" ಹಾವಿನಹಾಳ ಕಲ್ಲಯ್ಯ. ಸು. 1150—ಈತನು ತನ್ನನ್ನು ಕಚ್ಚಿ ಸತ್ತ ಹಾವನ್ನು ಬದುಕಿಸಿದನು ; ನಾಯಿಂದ ವೇದವನ್ನು ಹೇಳಿಸಿದನು (ಬಸವಪುರಾಣ ಸಂಧಿ 55) ಇವನ ವಚನಗಳ ಸಂಖ್ಯೆ 58, ಇವುಗಳಲ್ಲಿ ಮಹಾಲಿಂಗ ಕಲ್ಲೇಶ್ವರ ಎಂಬ ಅಂಕಿತವಿದೆ '' (ಪುಟ ೨೦೪) ;

" ಬಾಹೂರ ಬೊಮ್ಮಣ್ಣ. ಸು. 1160—ಇವನು ಕಲ್ಲುನಂದಿಯನ್ನು ಹುಲ್ಲು ಮೇಯಿಸಿದನು ; ಮದಕರಿಯನ್ನು ಭಂಗಿಸಿದನು. ಈತನ ವಚನಗಳ ಸಂಖ್ಯೆ 45, ಇವುಗಳಲ್ಲಿ ಸಂಗನಬಸವಣ್ಣ ಬ್ರಹ್ಮೇಶ್ವರಲಿಂಗ ಎಂಬ ಅಂಕಿತವಿದೆ'' (ಪುಟ ೨೦೫) ;

" ಏಲೇಶ್ವರದ ಕೇತಯ್ಯ. ಸು. 1150—ಈತನು ಭವಿಸಂಪರ್ಕವೇ ಇಲ್ಲದೆ ಇರಲು ದ್ವೇಷಿಗಳು ಇವನ ಕಣಜಕ್ಕೆ ಬೆಂಕಿಯನ್ನು ಹಾಕಿ ಉರಿಸಿಬಿಟ್ಟಾಗ ಬೆಂದ

ಬೀಜವನ್ನು ಬಿತ್ತಿ ಬೆಳೆದನು. ಇವನ ವಚನಗಳ ಸಂಖ್ಯೆ 200. ಇವುಗಳಲ್ಲಿ ರಾಮೇಶ್ವರಲಿಂಗ ಅಥವಾ ಏಲೇಶ್ವರಲಿಂಗ ಎಂಬ ಅಂಕಿತವಿದೆ'' (ಪುಟ ೨೦೩) ;

" ಬಿಜ್ಜಳದೇವಿ. ಸು. 1160—ತಾಯಿಲ್ಲದ ತಬ್ಬಲಿಯೊದುದರಿಂದ ಶಿವನಿಗೆ ತಲೆಯೆಲ್ಲಾ ಜಡೆಗಟ್ಟಿಕೊಂಡು ಮೈಯೆಲ್ಲಾ ಬೂದಿಯಾಗಿದೆಯೆಂದು ಈಕೆ ಹಲುಬಿ, ಆತನಿಗೆ ನಾನಾದರೂ ತಾಯಾಗಿ ಸಲಹುವೆನು ಎಂದು ನಿಜಲಿಂಗವನ್ನು ನೋಡಲು ಅದು ಶಿಶುರೂಪವನ್ನು ತಾಳಿತು. ಅದನ್ನು ಪ್ರೀತಿಯಿಂದ ಸಲಹಿ ಅದರ ಬಾಲಲೀಲೆಯನ್ನು ನೋಡಿ ಆನಂದಿಸಿದಳು'' (ಪುಟ ೧೯೭) ;

" ಕಾಳವ್ವೆ. ಸು. 1160—ಈಕೆ ಕಗ್ಗಲ್ಲಿನಿಂದ ಹಾಲನ್ನು ಕರೆದು ಈಶ್ವರನಿಗೆ ಉಣಿಸಿದಳು'' (ಪುಟ ೧೯೭) ;

" ಸೊಡ್ಡಳ ಬಾಚರಸ. ಸು. 1160—ಈತನು ವಚನಗಳನ್ನು ಬರೆದಿದ್ದಾನೆ ; ಒಂದು ಕಾಲಜ್ಞಾನವನ್ನೂ ಬರೆದಿರುವಂತೆ ತೋರುತ್ತದೆ.

ಇವನು ವೀರಶೈವ ಕವಿ ; ಬಿಜ್ಜಳರಾಜನಲ್ಲಿ (1156-1167) ಕರಣಿಕನಾಗಿದ್ದನು. ಈತನು ಸುಳ್ಳು ಲೆಕ್ಕವನ್ನು ಬರೆದನೆಂದು ಕೊಂಡೆಯರು ದೊರೆಯಲ್ಲಿ ದೂರಲು, ಬಸವನು ಸೂರ್ಯಗತಿಯನ್ನು ಹನ್ನೊಂದು ದಿವಸ ನಿಲ್ಲಿಸಿ ಲೆಕ್ಕವನ್ನು ಪೂರ್ತಿಮಾಡಿ ತೋರಿಸಿದಂತೆಯೂ ಬಿಜ್ಜಳನು ಇಬ್ಬರನ್ನೂ ಮನ್ನಿಸಿದಂತೆಯೂ ಇತಿಹಾಸವಿದೆ. ಇವನ ವಚನಗಳಲ್ಲಿ ಸೊಡ್ಡಳ ಎಂಬ ಅಂಕಿತವಿದೆ'' (ಪುಟ ೧೮೭)

ಇವು ಎಂತಹ ಚರಿತ್ರಗಳು ! ಇವೆಲ್ಲವೂ ವಾಸ್ತವವೆಂದೂ ಮೇಲೆ ಹೇಳಿದ ಈ ಕವಿಗಳು ಕ್ರಿ. ಶ. ಸುಮಾರು ೧೧೬೦ ರಲ್ಲಿ ಇದ್ದು ಮೇಲೆ ಹೇಳಿದ ಕೆಲಸಗಳನ್ನು ಮಾಡಿದರೆಂದೂ ಭಾವಿಸಿ ಕವಿಚರಿತಕಾರರು ಇಂಥ ಚರಿತ್ರಗಳನ್ನು ತಮ್ಮ ಗ್ರಂಥದಲ್ಲಿ ಸೇರಿಸಿರುವುದನ್ನು ನೋಡಿದರೆ ನಾವು ಆಶ್ಚರ್ಯಪಡಬೇಕೋ ಖೇದಪಡಬೇಕೋ ಅಥವಾ ಕವಿಚರಿತಕಾರರ ಹೃದಯದ ಸರಳಭಾವವನ್ನು ಸ್ತುತಿಸಬೇಕೋ ಎಂದು ಏನೂ ನಮಗೆ ತೋಚುವುದಿಲ್ಲ. ಕನ್ನಡಕವಿಗಳ ಚರಿತ್ರೆಗೆ ಸಂಬಂಧಪಟ್ಟ ವಿಷಯಗಳನ್ನು ಯಥಾವತ್ತಾಗಿ ಗೊತ್ತುಮಾಡುವುದಕ್ಕೆ ಕವಿಚರಿತಕಾರರು ಬಹುವಾಗಿ ಶ್ರಮಪಟ್ಟು ಸಂಶೋಧನೆಮಾಡಿರುವರೆಂಬುದನ್ನು ನಾವು ಬಲ್ಲೆವು. (ಕವಿಚರಿತೆ I. ಅವತರಣಿಕೆ, ೧೭-೧೮ ನೇ ಪುಟಗಳನ್ನೂ ಆಂಗ್ಲ ಉಪೋದ್ಘಾತದ ೭ ನೇ ಪುಟವನ್ನೂ ನೋಡಿ). ಹೀಗೆಯೇ ಈ ಗ್ರಂಥವನ್ನು ಅವರು ಕನ್ನಡ ಭಾಷಾಭಿಮಾನದಿಂದಲೂ ಕನ್ನಡಿಗರಿಗೆ ಈ ಭಾಷೆಯ ಉತ್ಕೃಷ್ಟತೆಯನ್ನೂ ಗ್ರಂಥಸಮೃದ್ಧಿಯನ್ನೂ ತಿಳಿಯಪಡಿಸಿ ತನ್ಮೂಲಕ ಇದರಲ್ಲಿ ಆದರಾತಿಶಯವನ್ನು ಉಂಟುಮಾಡಬೇಕೆಂಬ

ತಾತ್ಪರ್ಯದಿಂದಲೂ ಭಾಷಾಸೇವೆಯನ್ನು ಮಾಡಬೇಕೆಂಬ ಅಪೇಕ್ಷೆಯಿಂದಲೂ ಬರೆದಿರುವರೆಂದೂ ಮೇಲೆ ಹೇಳಿದ ಅವತರಣಿಕೆಯಿಂದ ವ್ಯಕ್ತವಾಗುವುದು. ಹೀಗೆ ಇಂಥ ಉದ್ದೇಶದಿಂದ ಇಷ್ಟು ಶ್ರಮಪಟ್ಟು ಕವಿಚರಿತಕಾರರು ತಮ್ಮ ಗ್ರಂಥವನ್ನು ಬರೆದಿರುವುದರಿಂದ ಬಸವಪುರಾಣ, ರಾಘವಾಂಕಚಾರಿತ್ರ ಮೊದಲಾದ ಮೇಲೆ ಹೇಳಿದ ವೀರಶೈವ ಗ್ರಂಥಗಳ ಕರ್ತೃಗಳೂ ತಮ್ಮ ತಮ್ಮ ಗ್ರಂಥಗಳಲ್ಲಿ ಕೀರ್ತಿತರಾಗಿರುವ ನೂತನ ಮತ್ತು ಪುರಾತನರೇ ಮೊದಲಾದವರ ಚರಿತ್ರಗಳನ್ನು ತಮ್ಮಂತೆಯೇ ಬಹುಶ್ರಮಪಟ್ಟು ಸಂಶೋಧನೆಮಾಡಿ ಯಥಾವತ್ತಾಗಿ ಗೊತ್ತುಮಾಡಿ ವರ್ಣಿಸಿರುವರೆಂದು ಭಾವಿಸಿ ಅವರು ಆ ಚರಿತ್ರೆಗಳನ್ನು ಕವಿಚರಿತೆಯಲ್ಲಿ ಸೇರಿಸಿದಂತೆ ತೋರುವುದು. ಇಂತಹ ಭಾವನೆಯು ನ್ಯಾಯವಾದುದೆಂದು ನಮಗೆ ತೋರುವುದಿಲ್ಲ. ರಾಘವಾಂಕಚರಿತ್ರವನ್ನು ಬರೆಯುವಾಗ ಸಿದ್ಧನಂಜೇಶನು—

ಇದುವೆ ರಸಿಕರ ರಸಾಯನ ಕಬ್ಬಿಗರ ಹಬ್ಬ |
ವಿದು ಪ್ರೇಮುದಿಂ ಕೇಳ್ವ ಜನದ ಕರ್ಣಾಭರಣ |
ವಿದುವೆ ಸೊಬಗರ ಸೊಬಗು ಕೋವಿದರ ಕೊರಲಹಾರಂ ಗಮಕಿಗಳ ಗಮಕವು ||
ಇದುವೆ ಭಾವದ ಪಕ್ಕೆ ಯಿದುವೆ ನವರಸದಿಕ್ಕೆ
ಯಿದು ಸದಾಚಾರಸುಖಸದನ ಮೋಹನದ ಧನ
ವಿದನೋದಿ ಕೇಳಿ ಲಾಲಿಸದರಾರ್ ಧರೆಯೊಳಗೆ ದಿವ್ಯಕಾವ್ಯಾಮೃತವನು ||

ಎಂದು ತನ್ನ ಕೃತಿಯನ್ನು ಹೊಗಳಿಕೊಂಡಿರುತ್ತಾನೆ. ಹೀಗೆಯೇ ಬಸವಪುರಾಣವನ್ನು ಹೇಳುವಾಗ ಭೀಮಕವಿಯೂ—

ಸರಸಮೃದುತರಯಮಕಗಮಕವಿ
ಸರಸನೂಸಪ್ರಾಸದೇಶೀ
ಸರಣಿ ಶಬ್ದಾರ್ಥೋಪಮಾಚಾತುರ್ಯಮಾಧುರ್ಯಂ |
ಸರಳಪದಶಯ್ಯಾದೃಢವ್ಯಾ
ಕರಣಯುತಲಾಲಿತ್ಯನಿಯಮಾ
ಕ್ಷರಸಲಕ್ಷಣಭಾವನಾಗಿರೆ ರಚಿಸುವೆಂ ಕೃತಿಯಾ ||

ಎಂದು ಹೇಳಿಕೊಂಡಿದ್ದಾನೆ. ಹೀಗೆ ಕನ್ನಡದಲ್ಲಿ ಇಂಥ ಕಾವ್ಯಗಳನ್ನು ಬರೆದಿರುವ ವೀರಶೈವ ಕವಿಗಳೆಲ್ಲರಿಗೂ ಪುರಾತನರು, ನೂತನರು, ಅಥವಾ ಕವಿಗಳೇ ಮೊದಲಾದ ಶಿವಭಕ್ತರ ಕಥೆಗಳನ್ನು ಮನೋರಂಜಕವಾಗಿರುವ ರೀತಿಯಲ್ಲಿ ಹೇಳಿ ಅವರ ಮಹತ್ತ್ವವನ್ನು ಪ್ರಕಟಿಸುವುದೇ ಉದ್ದೇಶವಾಗಿರುವುದೇ ಹೊರತು ಅಂಥವರ ಚರಿತೆಯನ್ನು ಐತಿಹಾಸಿಕದೃಷ್ಟಿಯಿಂದ ಯಥಾವತ್ತಾಗಿ ನಿರೂಪಿಸಬೇಕೆಂಬ ಉದ್ದೇಶವಿಲ್ಲ. ಆದ್ದರಿಂದ ಇಂತಹ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಚರಿತಗಳು ಯಥಾವತ್ತಾದ ಇತಿ

ವೃತ್ತಗಳೆಂದು ಭಾವಿಸಿ ಅವನ್ನು ಕರ್ಣಾಟಕ ಕವಿಚರಿತೆಯಲ್ಲಿ ಸೇರಿಸುವುದು ಅಯುಕ್ತವೆಂದು ನಮಗೆ ತೋರುವುದು.

ಎಂದರೆ ಒಬ್ಬ ಮನುಷ್ಯನ ಮಹತ್ತ್ವವನ್ನು ಹೊಗಳುವ ಉದ್ದೇಶದಿಂದಲೂ, ಲಲಿತವಾಗಿ ಮನೋರಂಜಕವಾದ ರೀತಿಯಲ್ಲಿಯೂ, ಅವನ ಚರಿತವನ್ನು ಬರೆದ ಮಾತ್ರಕ್ಕೆ ಅದನ್ನು ನಂಬಕೂಡದೆಂದೂ ಅದು ಕಲ್ಪಿತಕಥೆಯೇ ಆಗಿರುವುದೆಂದು ಹೇಳಬೇಕೆಂದೂ ನಮ್ಮ ಅಭಿಪ್ರಾಯವಲ್ಲ. ಚಾಲುಕ್ಯಚಕ್ರವರ್ತಿಯಾದ ತ್ರಿಭುವನ ಮಲ್ಲ ವಿಕ್ರಮಾದಿತ್ಯನ ಸಭೆಯಲ್ಲಿದ್ದ ವಿದ್ಯಾಪತಿ ಬಿಲ್ಹಣನು ತನ್ನ ಪೋಷಕನ ಮಹತ್ತ್ವವನ್ನು ವರ್ಣಿಸುವ ಉದ್ದೇಶದಿಂದ ವಿಕ್ರಮಾಂಕದೇವಚರಿತವೆಂಬ ಕಾವ್ಯ ವನ್ನು ಲಲಿತವಾದ ರೀತಿಯಲ್ಲಿ ಬರೆದಿರುವನು. ಈ ಕಾವ್ಯದಲ್ಲಿ ಅತಿಶಯೋಕ್ತಿಗಳು ಅಲ್ಲಲ್ಲಿ ಇದ್ದರೂ ವಿಕ್ರಮಾದಿತ್ಯದೇವನ ಚರಿತವು ಇಲ್ಲಿ ಸುಮಾರಾಗಿ ಯಥಾ ವತ್ತಾಗಿಯೇ ವರ್ಣಿತವಾಗಿದೆಯೆಂದು ನಾವು ಹೇಳಬಹುದು.

ಹೀಗೆಯೇ ವಿಜಯನಗರದ ರಾಜನಾದ ಬುಕ್ಕರಾಜನ ಸೊಸೆಯಾದ ಗಂಗಾ ದೇವಿಯು ತನ್ನ ಗಂಡನಾದ ಕಂಪಣರಾಯನ ಮಹತ್ತ್ವವನ್ನು ವರ್ಣಿಸುವದಕ್ಕೋ ಸ್ಕರ ಬರೆದಿರುವ ವೀರಕಂಪಣರಾಯ ಚರಿತವೆಂಬ ಕಾವ್ಯದಲ್ಲಿಯೂ ಈ ಕಂಪಣನ ಚರಿತವು ಸುಮಾರಾಗಿ ಯಥಾವತ್ತಾಗಿಯೇ ವರ್ಣಿತವಾಗಿದೆಯೆಂದು ನಾವು ಹೇಳ ಬಹುದು. ಈ ಎರಡು ಕಾವ್ಯಗಳ ಕರ್ತೃಗಳು ತಮ್ಮ ತಮ್ಮ ಕಾವ್ಯದ ಕಥಾನಾಯ ಕನ ಕಾಲದಲ್ಲಿಯೇ ಜೀವಿಸಿದ್ದವರು; ಆದ್ದರಿಂದ ಕಥಾನಾಯಕನ ಚರಿತವು ಇವ ರಿಗೆ ಪ್ರತ್ಯಕ್ಷವಾಗಿದ್ದುದರಿಂದ ಅದನ್ನು ಯಥಾವತ್ತಾಗಿ ವರ್ಣಿಸಿರುವರು. ಮೇಲೆ ಹೇಳಿದ ಚೆನ್ನಬಸವಪುರಾಣಾದಿ ಗ್ರಂಥಗಳ ಕರ್ತೃಗಳಾದರೆ ಹೀಗೆ ತಾವು ವರ್ಣಿಸಿ ರುವ ಚನ್ನಬಸವಾದಿಗಳ ಕಾಲದಲ್ಲಿ ಜೀವಿಸಿದವರಲ್ಲ; ಅವರಿಗಿಂತ ನೂರಾರು ವರ್ಷ ಗಳ ಈಚೆಗೆ ಜೀವಿಸಿದವರು. ಆದ್ದರಿಂದ ಇಂಥ ಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಚರಿ ತ್ರಗಳು ಯಥಾವತ್ತಾಗಿ ಇರುವುವೆಂಬ ವಿಷಯದಲ್ಲಿ ನಮಗೆ ಸ್ವಲ್ಪ ನಂಬಿಕೆಯೂ ಇಲ್ಲ.

ಸಾಲದುದಕ್ಕೆ ಈ ಗ್ರಂಥಗಳಲ್ಲಿ ತಪ್ಪುಗಳೂ ಪರಸ್ಪರ ವಿರೋಧಗಳೂ ಬಹು ವಾಗಿ ದೃಷ್ಟಿಗೆ ಬೀಳುವುವು. (೧) ಬಸವನು ಶಾಲಿವಾಹನಶಕ ೭೦೭ ನೆಯ ರಕ್ತಾಕ್ಷಿ ಸಂವತ್ಸರದಲ್ಲಿ ಗತಿಸಿದನೆಂದು ಚೆನ್ನಬಸವಪುರಾಣದಲ್ಲಿ ಹೇಳಿರುವುದು. ಚೆನ್ನಬಸವಣ್ಣ ಕಾಲಜ್ಞಾನವೆಂಬ ಪುಸ್ತಕದಲ್ಲಾದರೆ ಬಸವನು ಶಕ ೬೯೭ ರಲ್ಲಿ ಮರಣಹೊಂದಿದನೆಂದು ಹೇಳಿರುವುದು (ಡಾ|| ಫ್ಲೀಟ್‌ರವರ ಮೇಲೆ ಹೇಳಿದ ಗ್ರಂಥ

ಪುಟ ೪೮೧). ಈ ಎರಡು ಹೇಳಿಕೆಗಳಲ್ಲಿ ಯಾವುದೂ ಸರಿಯಲ್ಲವೆಂಬುದನ್ನು ನಾವು ಕಂಠತಃ ಹೇಳಬೇಕಾಗಿಲ್ಲ. (೨) ಪ್ರಭುದೇವನು ಶ್ರೀಶೈಲದಲ್ಲಿ ಇಹಲೋಕವನ್ನು ಬಿಟ್ಟನೆಂದು ಕೇಳಿದುದರಿಂದ ಬಸವನು ವಿರಕ್ತನಾಗಿ ಸಂಗಮೇಶ್ವರದ ಲಿಂಗದೊಡನೆ ಐಕ್ಯವನ್ನು ಹೊಂದಿದನೆಂದು ಚೆನ್ನಬಸವಪುರಾಣದಲ್ಲಿ ಹೇಳಿರುವುದು. ಬಸವಪುರಾಣ ದಲ್ಲಾದರೆ ಹಲ್ಲೆಯಗ ಮಧುವೈಯರೆಂಬ ಇಬ್ಬರು ಶಿವಭಕ್ತರ ಕಣ್ಣುಗಳನ್ನು ಬಿಜ್ಜಲರಾಯನು ಯಾವ ದೋಷವೂ ಇಲ್ಲದೆ ಕೀಳಿಸಿದುದಕ್ಕಾಗಿ ಬಸವನು ಬಿಜ್ಜಳ ರಾಯನನ್ನು ಕೊಲ್ಲಬೇಕೆಂದು ಜಗದ್ದೇವನೆಂಬವನಿಗೆ ಆಜ್ಞಾಪಿಸಿ ತಾನು ಕೂಡಲಿಸಂಗಮೇಶ್ವರಕ್ಕೆ ಹೋಗಿ ಅಲ್ಲಿ ಲಿಂಗದೊಡನೆ ಐಕ್ಯವನ್ನು ಹೊಂದಿದನೆಂದು ಹೇಳಿರುವುದು. (೩) ಶಿವನ ಆಜ್ಞೆಯಂತೆ ಪೀತಾಂಬರನೆಂಬವನು ತುರುಕರಲ್ಲಿ ಹುಟ್ಟಿ ಅವರ ಸೈನ್ಯವನ್ನು ಕರೆದುಕೊಂಡುಬಂದು ಬಿಜ್ಜಳರಾಯನನ್ನು ಸೋಲಿಸಿ ಕಲ್ಯಾಣ ಪಟ್ಟಣವನ್ನು ಧ್ವಂಸಮಾಡಿ ಶಿವಾಲಯದಲ್ಲಿ ಗೋವುಗಳನ್ನು ಕೊಲ್ಲುವರೆಂದು ಚೆನ್ನ ಬಸವಪುರಾಣದಲ್ಲಿ ಹೇಳಿರುವುದು. ಕಲಚುರ್ಯಬಿಜ್ಜಲರಾಯನೂ ಅವನ ಮಕ್ಕಳೂ ಕ್ರಿ. ಶ. ಸುಮಾರು ೧೧೮೩ ರ ವರೆಗೆ ಎಂದರೆ ತುರುಕರು ದಕ್ಷಿಣದೇಶಕ್ಕೆ ಬರು ವುದಕ್ಕಿಂತ ಸುಮಾರು ೧೦೦ ವರ್ಷಗಳ ಹಿಂದೆ ಆಳುತ್ತಿದ್ದು, ಕ್ರಿ. ಶ. ೧೧೮೩ ರಲ್ಲಿ ಬ್ರಹ್ಮದಂಡನಾಯಕನು ಕಲ್ಯಾಣದಲ್ಲಿ ಚಾಲುಕ್ಯರಾಜನನ್ನೇ ಪುನಃ ಸ್ಥಾಪಿಸಿದನು. ಈ ಚಾಲುಕ್ಯರಾಜನೂ ಕ್ರಿ. ಶ. ಸುಮಾರು ೧೨೦೦ ರ ವರೆಗೇ ಆಳುತ್ತಿದ್ದು ತದ ನಂತರ ಚಾಲುಕ್ಯರಾಜ್ಯವು ದೇವಗಿರಿ ಯಾದವರ ಮತ್ತು ಹೊಯ್ಸಳರ ಕೈಗೆ ಸೇರಿ ದುದರಿಂದ (ಮೇಲೆ ೧೩ ನೇ ಪುಟವನ್ನು ನೋಡಿ) ಕ್ರಿ. ಶ. ೧೨೦೦ ನೇ ವರ್ಷದ ನಂತರ ಕಲ್ಯಾಣಪಟ್ಟಣವು ಕ್ಷೀಣಗತಿಗೆ ಬಂದು ತುರುಕರು ದಕ್ಷಿಣದೇಶಕ್ಕೆ ಬಂದಾಗ ಪ್ರಧಾನವಾದ ಪಟ್ಟಣವೇ ಆಗಿರಲಿಲ್ಲ. (೪) ಶಕ ೮೦೦ ನೆಯ ವಿಳಂಬಿ ಯಲ್ಲಿ ಹೊಯ್ಸಳನಿಗೆ ಪಟ್ಟವಾಯಿತೆಂದು ಇದೇ ಚೆನ್ನಬಸವಪುರಾಣದಲ್ಲಿ ಹೇಳಿರು ವುದು. ನಮಗೆ ತಿಳಿದಿರುವಂತೆ ಶಕ ೮೦೦ ರಲ್ಲಿ ಯಾವ ಹೊಯ್ಸಳನಿಗೂ ಪಟ್ಟ ವಾಗಲಿಲ್ಲ. ಶಕ ೯೦೦ ರಲ್ಲಿ ಕೂಡ ಗಂಗಮಂಡಲವನ್ನು ಗಂಗರಾಜರೇ ಆಳುತ್ತಿ ದ್ದರೇ ಹೊರತು ಹೊಯ್ಸಳರು ಆಳುತ್ತಿರಲಿಲ್ಲ. ಹೊಯ್ಸಳರು ಕ್ರಿ. ಶ. ೧೧ ನೇ ಶತಮಾನದ ಆದಿಭಾಗದಲ್ಲಿ ತಲೆಯೆತ್ತುವುದಕ್ಕೆ ಪ್ರಾರಂಭಮಾಡಿದರೆಂದು ನಾವು ಹೇಳಬಹುದು. (೫) ಸಿದ್ಧರಾಮನು ಪ್ರಭುದೇವನೊಡನೆ ಕಲ್ಯಾಣಕ್ಕೆ ಹೋದನೆಂದು ಚೆನ್ನಬಸವಪುರಾಣದಲ್ಲಿ ಹೇಳಿರುವುದು. ರಾಘವಾಂಕನ ಸಿದ್ಧರಾಮಪುರಾಣದಲ್ಲಾ ದರೆ ಈ ವಿಷಯದ ಪ್ರಸ್ತಾಪವೇ ಇಲ್ಲ. ಸಿದ್ಧರಾಮನು ಚೆನ್ನಬಸವನಿಂದ ದೀಕ್ಷೆ ಯನ್ನು ಪಡೆದನೆಂಬ ವಿಷಯವೂ (ಕವಿಚರಿತೆ ೧ ನೇ ಸಂಪುಟದ ೨ ನೇ ಮುದ್ರಣ

ದಲ್ಲಿ ೧೮೩ ನೇ ಪುಟವನ್ನು ನೋಡಿ) ಈ ಸಿದ್ಧರಾಮ ಪುರಾಣದಲ್ಲಿ ಹೇಳಲ್ಪಟ್ಟಿಲ್ಲ. (೬) ಹೀಗೆಯೇ ಕೊಂಡಗೂಳಿ ಕೇಶಿರಾಜನ ವಿಷಯವಾಗಿ ವೀರಶೈವ ಗ್ರಂಥಗಳಲ್ಲಿ ಹೇಳಿರುವುದು ತಪ್ಪೆಂಬ ಅಂಶವು ಕವಿಚರಿತಕಾರರು ಮೇಲೆ ಹೇಳಿರುವ ಶಿಕಾರಿಪುರದ ಶಾಸನಗಳಿಂದಲೇ ವ್ಯಕ್ತವಾಗುವುದು. ಕೇಶಿರಾಜ ದಂಡನಾಯಕನು ಬಿಜ್ಜಳನ ಬಳಿಯಲ್ಲಿಯೂ ಅವನ ಮಗನಾದ ರಾಯಮುರಾರಿ ಸೋವಿದೇವನ ಬಳಿಯಲ್ಲಿಯೂ ದಂಡನಾಯಕನಾಗಿದ್ದನೆಂದು ಈ ಶಾಸನಗಳಲ್ಲಿ ಹೇಳಿರುವುದು. ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರದಲ್ಲಾದರೆ ಕೇಶಿರಾಜನು ಕಲ್ಯಾಣಪುರದ ಪೆರ್ಮಡಿ ರಾಜನ ಬಳಿಯಲ್ಲಿ ದಂಡನಾಯಕನಾಗಿದ್ದನೆಂದೂ, ಆ ಅಧಿಕಾರವನ್ನು ಅರಸು ಇವನಿಂದ ಕಿತ್ತುಕೊಳ್ಳಲಾಗಿ ಅವನಿಗೆ ಕೈಮುಗಿಯದೆ ಮನೆಗೆ ಹೋದನೆಂದೂ ಹೇಳಿರುವುದು. ಇಲ್ಲಿ ಹೇಳಿರುವ ಪೆರ್ಮಡಿರಾಜನು ಬಿಜ್ಜಳನ ತಂದೆಯಾದ ಪೆರ್ಮಾಡಿರಾಯನೆಂದು ತೋರುವುದು. ಇವನು ಕಲ್ಯಾಣಪಟ್ಟಣದಲ್ಲಿ ಯಾವಾಗಲೂ ರಾಜ್ಯಭಾರವನ್ನು ಮಾಡಲೇ ಇಲ್ಲ.

ವೀರಶೈವಕವಿಗಳೆಲ್ಲರೂ ಹರೀಶ್ವರರಾಘವಾಂಕರನ್ನು ಹೊಗಳುವುದರಿಂದಲೂ ಪದ್ಮರಾಜಪುರಾಣ ರಾಘವಾಂಕ ಚರಿತ್ರಗಳಲ್ಲಿ ಇವನ ಮಾವನಾದ ಹರೀಶ್ವರನು ಹರಿಶ್ಚಂದ್ರ ಕಾವ್ಯವನ್ನು ಬರೆದು ನರಸ್ತುತಿ ಮಾಡಿದುದಕ್ಕೆ ರಾಘವಾಂಕನ ಐದು ಹಲ್ಲುಗಳನ್ನು ಮುರಿದು ಅವನು ಸೋಮನಾಥ ಚರಿತವೇ ಮೊದಲಾದ ಐದು ಗ್ರಂಥಗಳನ್ನು ಬರೆದ ಬಳಿಕ ಆ ಹಲ್ಲುಗಳನ್ನು ಅವನಿಗೆ ಕೊಟ್ಟನೆಂಬ ಇದೇ ಮೊದಲಾದ ಕಥೆಯು ಹೇಳಲ್ಪಟ್ಟಿರುವುದರಿಂದಲೂ ಕೂಡ, ಈ ಇಬ್ಬರು ಕವಿಗಳು ವೀರಶೈವರಾಗಿದ್ದರೆಂದು ಕವಿಚರಿತಕಾರರು ಹೇಳಿ, ಹರೀಶ್ವರನೇ ವೀರಶೈವರಲ್ಲಿ 'ಪ್ರಬಲನಾದ ಪೂರ್ವಕವಿಯೆನ್ನಬಹುದು' ಎಂದೂ ಹೇಳಿದ್ದಾರೆ. ಹರೀಶ್ವರ ರಾಘವಾಂಕರು ಶಿವಭಕ್ತರಾಗಿದ್ದರೆಂಬುದೇನೋ ವಾಸ್ತವವೇ; ಈ ಅಂಶವು ಅವರು ಮಾಡಿದ ಗ್ರಂಥಗಳಿಂದ ವ್ಯಕ್ತವಾಗುವುದು. ಆದರೆ ಇವರು ವೀರಶೈವರಾಗಿದ್ದರೇ ಎಂಬ ವಿಷಯದಲ್ಲಿ ನಮಗೆ ಬಹುವಾಗಿ ಸಂಶಯವಿರುವುದು. ಇವರ ಗ್ರಂಥಗಳಲ್ಲಿ ಬಸವ ಚೆನ್ನಬಸವಾದಿಗಳ ನಾಮೋಲ್ಲೇಖನವೇ ಇಲ್ಲದಿರುವುದನ್ನು ನೋಡಿದರೆ ಇವರು ವೀರಶೈವರಾಗಿ ಎಂದರೆ ಬಸವನ ಮತಾನುಯಾಯಿಗಳಾಗಿ ಇರಲಿಲ್ಲವೆಂದೇ ಹೇಳಬೇಕಾಗಿರುವುದು

ಈ ವೀರಶೈವಮತದ ಸ್ಥಾಪಕರೆಂದು ಪ್ರಸಿದ್ಧರಾದ ಬಸವ ಚೆನ್ನಬಸವಾದಿಗಳು ಕ್ರಿ. ಶ. ೧೧೫೬–೧೧೬೭ ರಲ್ಲಿ ಆಳುತ್ತಿದ್ದ ಬಿಜ್ಜಳನ ಕಾಲದಲ್ಲಿದ್ದರೆಂದು ಸರ್ವತ್ರ ಪ್ರತೀತಿಯಿದ್ದು ಭರತಖಂಡದ ಮತ್ತು ಕರ್ಣಾಟಕದೇಶದ 'ಚರಿತ್ರ'

ಗ್ರಂಥಗಳಲ್ಲಿಯೂ ಹೀಗೆಯೇ ಉಲ್ಲೇಖಿಸಲ್ಪಟ್ಟಿರುವುದು. ಇಂತಹ ಪ್ರತೀತಿಗೆ ಮೇಲೆ ಹೇಳಿದ ಬಸವಪುರಾಣ, ಚೆನ್ನಬಸವಪುರಾಣಾದಿ ಗ್ರಂಥಗಳೇ ಆಧಾರಭೂತಗಳಾಗಿರುವುವೇ ಹೊರತು ಕರ್ಣಾಟಕದೇಶದ ಶಾಸನಗಳಲ್ಲಿ ಇದಕ್ಕೆ ಯಾವ ವಿಧವಾದ ಆಧಾರವೂ ದೊರೆಯುವುದಿಲ್ಲ.* ಹರೀಶ್ವರ ರಾಘವಾಂಕರ ಗ್ರಂಥಗಳಲ್ಲಿ ಇವರ

* ಕ್ರಿ. ಶ. ೧೭ ನೆಯ ಶತಮಾನದಲ್ಲಿ ಬರೆಯಲ್ಪಟ್ಟ ಬಿಜ್ಜಳರಾಯಚರಿತವೇ ಮೊದಲಾದ ಜೈನ ಗ್ರಂಥಗಳಲ್ಲಿಯೂ ಬಸವ ಚೆನ್ನಬಸವಾದಿಗಳು ಬಿಜ್ಜಳರಾಯನ ಕಾಲದಲ್ಲಿ ಇದ್ದರೆಂದೂ ಬಸವನು ಈ ಬಿಜ್ಜಳನ ಸಭೆಯಲ್ಲಿದ್ದನೆಂದೂ ಈ ಬಿಜ್ಜಳನು ಜೈನನಾಗಿದ್ದನೆಂದೂ, ಇದೇ ಮೊದಲಾದ ವಿಷಯಗಳು ಸುಮಾರಾಗಿ ಮೇಲೆ ಹೇಳಿದ ವೀರಶೈವ ಗ್ರಂಥಗಳಲ್ಲಿ ಹೇಳಿರುವಂತೆಯೇ ಹೇಳಲ್ಪಟ್ಟಿದ್ದು ಬಸವಾದಿಗಳು ನಿಕೃಷ್ಟರೆಂದೂ ಜೈನರು ಉತ್ಕೃಷ್ಟರೆಂದೂ ವರ್ಣಿಸಲ್ಪಟ್ಟಿರುವುದು. ವಿವಾದವನ್ನು ಮಾಡುವ ಎರಡು ಪಕ್ಷದವರೂ ಒಪ್ಪಿಕೊಳ್ಳುವ ವಿಷಯವು ವಾಸ್ತವವೇ ಆಗಿರಬೇಕೆಂದು ಮನಸ್ಸಿಗೆ ತೋಚುವುದು ಸಹಜವೇ ಆದಾಗ್ಯೂ ಪ್ರಕೃತ ಸಂದರ್ಭದಲ್ಲಿ ಹಾಗೆ ಭಾವಿಸುವುದು ತಪ್ಪೆಂದು ನಮಗೆ ತೋರುವುದು. ಮೇಲೆ ಹೇಳಿದ ಜೈನಗ್ರಂಥಗಳು ಕ್ರಿ. ಶ. ೧೭ ನೆಯ ಶತಮಾನದಲ್ಲಿ ಬರೆಯಲ್ಪಟ್ಟವೆಂಬುದನ್ನು ನಾವು ಮೇಲೆಯೇ ಹೇಳಿರುವೆವು. ಈ ಗ್ರಂಥಗಳಿಗಿಂತ ಹಿಂದೆ ಹುಟ್ಟಿದ ಜೈನ ಗ್ರಂಥಗಳಾವುದರಲ್ಲೂ ಈ ವಿಷಯಗಳ ಪ್ರಸ್ತಾವವೇ ಇಲ್ಲ. ಆದುದರಿಂದ ಮೇಲೆ ಹೇಳಿದ ಜೈನ ಗ್ರಂಥಗಳ ಕರ್ತೃಗಳು ಈ ಕಥೆಯನ್ನು ಬಸವಪುರಾಣವೇ ಮೊದಲಾದ ವೀರಶೈವ ಗ್ರಂಥಗಳಿಂದ ಉದ್ಧರಿಸಿ ತೆಗೆದುಕೊಂಡು ವೀರಶೈವರು ಸೋತರೆಂದೂ ತಮ್ಮ ಪಕ್ಷದವರು ಗೆದ್ದರೆಂದೂ ವ್ಯಕ್ತವಾಗುವಂತೆ ಅಲ್ಲಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿ ಆ ಕಥೆಯನ್ನು ತಿದ್ದಿ ಹೀಗೆ ತಿದ್ದಿದಂಥ ಈ ಕಥೆಯನ್ನು ಕಾವ್ಯರೂಪವಾಗಿ ಗ್ರಥಿಸಿರುವರೆಂದೇ ನಾವು ಹೇಳಬೇಕಾಗಿರುವುದು.

ನಮಗೆ ತಿಳಿದಂತೆ ಇನ್ನೊಂದು ಸಂದರ್ಭದಲ್ಲಿಯೂ ಜೈನರು ಹೀಗೆಯೇ ತಮ್ಮ ಪ್ರತಿಕಕ್ಷಿಗಳು ಬರೆದ ಕಥೆಯನ್ನು ತೆಗೆದುಕೊಂಡು ಪ್ರತಿಪಕ್ಷಿಗಳು ಸೋತಂತೆಯೂ ಸ್ವಪಕ್ಷೀಯರು ಗೆದ್ದಂತೆಯೂ ಆ ಕಥೆಯನ್ನು ಸ್ವಲ್ಪ ಮಾರ್ಪಡಿಸಿರುವರು. ವಿಶಿಷ್ಟಾದ್ವೈತಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರು ಚೋಳಮಂಡಲದಲ್ಲಿ ಶ್ರೀರಂಗದಲ್ಲಿದ್ದು ಶೈವಮತ ಪಕ್ಷಪಾತಿಯಾದ ಚೋಳರಾಜನು ವೈಷ್ಣವರೆಲ್ಲರನ್ನೂ ಹಿಂಸಿಸಲು ಉಪಕ್ರಮಿಸಿದಾಗ ಆತನಿಂದ ತಪ್ಪಿಸಿಕೊಂಡು ಚೋಳರಾಜ್ಯವನ್ನು ಬಿಟ್ಟು ಕ್ರಿ. ಶ. ೧೦೯೮ ರಲ್ಲಿ ಸಾಲಿಗ್ರಾಮಕ್ಕೂ ಯಡತೊರೆಗೂ ಬಂದು ಅಲ್ಲಿಂದ ಹೊಯ್ಸಲರಾಜನಾದ ಬಿಟ್ಟಿದೇವನ ರಾಜಧಾನಿಯಾಗಿದ್ದ ತೊಣ್ಣೂರಿಗೆ ಹೋಗಿ ಜೈನನಾಗಿದ್ದ ಆತನನ್ನು ವೈಷ್ಣವನನ್ನಾಗಿ ಮಾಡಿ ಆತನಿಗೆ ವಿಷ್ಣುವರ್ಧನ ಎಂಬ ಹೆಸರನ್ನು ಕೊಟ್ಟು, ಆತನಿಂದ ಜೈನರನ್ನು ಕಲ್ಲುಗಾಣದಲ್ಲಿ ಅರೆಯಿಸಿ, ಜೈನಬಸದಿಗಳನ್ನು ನಾಶಮಾಡಿಸಿ ಅವಕ್ಕೆ ಸೇರಿದ ಭೂಮ್ಯಾದಿ ಸ್ವತ್ತುಗಳನ್ನು ಅಪಹಾರಮಾಡಿಸಿ ಮೇಲುಕೋಟೆಯಲ್ಲಿ ನಾರಾಯಣದೇವರನ್ನು ಪ್ರತಿಷ್ಠೆಮಾಡಿ, ದಿಲ್ಲಿಪಟ್ಟಣದಲ್ಲಿ ಸುಲ್ತಾನನ ಅರಮನೆಯಲ್ಲಿದ್ದ ಸಂಪತ್ಕುಮಾರದೇವರನ್ನು ಅಲ್ಲಿಂದ ತಂದು, ಕ್ರಿ. ಶ. ೧೧೧೦ ರಲ್ಲಿ ಚೋಳರಾಜನು ಮೃತನಾದ ಸಮಾಚಾರವನ್ನು ಕೇಳಿ ಶ್ರೀರಂಗಕ್ಕೆ ಪುನಃ ಹೋದರೆಂದು ತೆಂಗಲೆ ಶ್ರೀವೈಷ್ಣವರ ಗುರುಪರಂಪರಾಪ್ರಭಾವದಲ್ಲಿ (ಈ ಗ್ರಂಥವು ಸುಮಾರು ಕ್ರಿ. ಶ. ೧೬ ನೇ ಶತಮಾನದಲ್ಲಿ ಹುಟ್ಟಿತು) ಹೇಳಿರುವುದು. ಕ್ರಿ. ಶ. ೧೦೯೮ ರಲ್ಲಿ ಬಿಟ್ಟಿದೇವನು ಹೊಯ್ಸಲರಾಜನಾಗಿರಲಿಲ್ಲವಾದುದರಿಂದಲೂ, ಯಡತೊರೆ ಸಾಲಿಗ್ರಾಮ ತೊಣ್ಣೂರೇ ಮೊದಲಾದ ಊರುಗಳು ಆ ಕಾಲದಲ್ಲಿ ಚೋಳ

ಹೆಸರು ಹೇಳಲ್ಪಟ್ಟಿಲ್ಲವೆಂಬುದನ್ನು ನಾವು ಮೇಲೆಯೇ ಹೇಳಿರುವೆವು. ಇವರ ಹೆಸರುಗಳನ್ನು ಕೀರ್ತಿಸುವಂಥ ಗ್ರಂಥಗಳಲ್ಲಿ ಪಾಲ್ಕುರಿಕೆ ಸೋಮನಾಥನ ಸಹಸ್ರಗಣನಾಮ ಮತ್ತು ಭೀಮಕವಿಯ ಬಸವಪುರಾಣವೇ ಅತ್ಯಂತ ಪ್ರಾಚೀನವಾದವುಗಳು. ಇವುಗಳಲ್ಲಿ ಭೀಮಕವಿಯ ಬಸವಪುರಾಣವು ಕ್ರಿ. ಶ. ೧೩೬೯ ರಲ್ಲಿ ಬರೆಯಲ್ಪಟ್ಟಿತು. ಸಹಸ್ರಗಣನಾಮವನ್ನು ರಚಿಸಿದ ಪಾಲ್ಕುರಿಕೆ ಸೋಮನಾಥನು ಕ್ರಿ. ಶ. ೧೨೨೨ ರಲ್ಲಿ ಬರೆಯಲ್ಪಟ್ಟ ಉದ್ಭಟ ಕಾವ್ಯದಲ್ಲಿ ಕೀರ್ತಿಸಲ್ಪಟ್ಟಿರುವುದರಿಂದ ಕ್ರಿ. ಶ. ೧೨೨೨ ಕ್ಕಿಂತ ಹಿಂದೆ ಇದ್ದಿರಬೇಕೆಂದೂ, ಅವನು ಕ್ರಿ. ಶ. ಸುಮಾರು ೧೧೯೫ ರಲ್ಲಿ ಇದ್ದಿರಬಹುದೆಂದೂ ಕವಿಚರಿತಕಾರರು (ಕವಿಚರಿತೆ I,[2] ೨೯೨) ಹೇಳುತ್ತಾರೆ. ಈ ಉದ್ಭಟಕಾವ್ಯವಾದರೆ ಕ್ರಿ. ಶ. ೧೫೨೨ ರಲ್ಲಿ ರಚಿಸಲ್ಪಟ್ಟಿತು. ಸಹಸ್ರಗಣನಾಮದಲ್ಲಿ ಅಮರಗಣದಲ್ಲಿ ಬಸವ ಚೆನ್ನಬಸವಾದಿಗಳಲ್ಲದೆ ಭಿಲ್ಲಮರಾಯನ ಮತ್ತು ವೀರಬಲ್ಲಾಳನ ಹೆಸರುಗಳೂ ಹೇಳಲ್ಪಟ್ಟಿರುವುದರಿಂದ, ಈ ಗ್ರಂಥವು ವೀರಬಲ್ಲಾಳನ

ರಾಜ್ಯಕ್ಕೇ ಸೇರಿದ್ದುವಾದುದರಿಂದಲೂ, ಕ್ರಿ. ಶ. ೧೧, ೧೨ ನೇ ಶತಮಾನಗಳಲ್ಲಿ ತುರುಕರು ದಕ್ಷಿಣ ದೇಶಕ್ಕೆ ಬಂದು ಅಲ್ಲಿಯ ದೇವಾಲಯಗಳನ್ನು ಲೂಟಿಮಾಡಿರಲಿಲ್ಲವಾದುದರಿಂದಲೂ ಮತ್ತು ಇನ್ನೂ ಇತರ ಕಾರಣಗಳಿಂದಲೂ ಮೇಲೆ ಶ್ರೀ ರಾಮಾನುಜಾಚಾರ್ಯ ವಿಷ್ಣುವರ್ಧನರ ವಿಷಯವಾಗಿ ಹೇಳಿರುವ ಕಥೆಯಲ್ಲಿ ವಾಸ್ತವಾಂಶವು ಲೇಶವಾದರೂ ಇಲ್ಲವೆಂಬುದೂ, ಅದೆಲ್ಲವೂ ಆಮೂಲಾಗ್ರವಾಗಿ ಕಲ್ಪಿತವಾದ ಕಥೆಯೆಂಬುದೂ ವಿಮರ್ಶಕರಿಗೆ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು. ಈ ಗುರುಪರಂಪರಾ ಪ್ರಭಾವಕ್ಕಿಂತ ಈಚೆಗೆ ಜೈನರಿಂದ ಬರೆಯಲ್ಪಟ್ಟ ಶ್ರವಣಬೆಳ್ಗೊಳದ ಸ್ಥಳಪುರಾಣದಲ್ಲಾದರೆ ಶ್ರೀ ರಾಮಾನುಜಾಚಾರ್ಯರು ಜೈನನಾಗಿದ್ದ ಬಿಟ್ಟಿದೇವನನ್ನು ವೈಷ್ಣವನನ್ನಾಗಿ ಮಾಡಿ ಅವನಿಂದ ಜೈನರನ್ನು ಕಲ್ಲುಗಾಣದಲ್ಲಿ ಅರೆಯಿಸಿ ಜಿನಾಲಯಗಳನ್ನು ನಾಶಮಾಡಿಸಿ ಅವುಗಳ ಸ್ವತ್ತುಗಳನ್ನು ಅಪಹಾರಮಾಡಿಸಲಾಗಿ ಹೊಯ್ಸಳದೇಶದಲ್ಲಿ ರಾಜಧಾನಿಗೆ ಸಮೀಪದಲ್ಲಿಯೇ ಭೂಮಿಯು ಬಿರುಕುಬಿಟ್ಟು ಗಂಭೀರವಾದ ಮಹತ್ತಾದ ಒಂದು ಬಿಲವಾಯಿತೆಂದೂ ವೈಷ್ಣವರಾದ ಆಚಾರ್ಯರು ಏನನ್ನು ಮಾಡಿದರೂ ಆ ಬಿಲವು ಹೋಗದಿದ್ದುದರಿಂದ ದೊರೆಯಾದ ಬಿಟ್ಟಿದೇವನೂ ಅವನ ಗುರುವಾದ ರಾಮಾನುಜಾಚಾರ್ಯರೂ ಜೈನ ಗುರುಗಳನ್ನೇ ಶರಣು ಹೊಕ್ಕರೆಂದೂ, ಆಗ ಆ ಗುರುಗಳು ಒಂದು ಕುಂಬಳಕಾಯಿಯನ್ನು ಮಂತ್ರಿಸಿ ಆ ಬಿಲದೊಳಗೆ ಹಾಕಲಾಗಿ ಬಿಲವು ಮುಚ್ಚಿಕೊಂಡು ಭೂಮಿಯು ಪೂರ್ವದಲ್ಲಿದ್ದಂತೆ ಆಯಿತೆಂದೂ ಹೇಳಲ್ಪಟ್ಟಿರುವುದು !

ಅದಂತಿರಲಿ. ಪ್ರಕೃತದಲ್ಲಿ ಬಸವಾದಿಗಳ 'ಚರಿತ' ವನ್ನು ಹೇಳುವ ಬಸವಪುರಾಣಾದಿ ಗ್ರಂಥಗಳೇ ಆ ಬಸವಾದಿಗಳಿಗಿಂತ ಬಹು ವರ್ಷಗಳಕಾಲ ಈಚೆಗೆ ಹುಟ್ಟಿದವುಗಳಾದುದರಿಂದ ಆ ಗ್ರಂಥಗಳಲ್ಲಿರುವುದನ್ನು ನಂಬಕೂಡದೆಂದು ನಾವು ಮೇಲೆ ಹೇಳಿರುವ ವಾಕ್ಯದಿಂದಲೇ ಆ ಗ್ರಂಥಗಳ ಅವಲಂಬನದಿಂದ ಹುಟ್ಟಿರುವ ಬಿಜ್ಜಳರಾಯಚರಿತವೇ ಮೊದಲಾದ ಗ್ರಂಥಗಳನ್ನೂ ನಂಬಕೂಡದೆಂದು ಹೇಳಿದಂತಾಯಿತು. ಆದ್ದರಿಂದ ಮೇಲೆ ಹೇಳಿದ ವೀರಶೈವ ಮತ್ತು ಜೈನ ಗ್ರಂಥಗಳನ್ನು ಆಧಾರವನ್ನಾಗಿ ಮಾಡಿಕೊಂಡು 'ಬಸವ ಚೆನ್ನಬಸವರು ಕ್ರಿ. ಶ. ೧೧೫೬-೧೧೬೭ ರಲ್ಲಿ ಕಲ್ಯಾಣದಲ್ಲಿ ಆಳುತ್ತಿದ್ದ ಜೈನನಾದ ಬಿಜ್ಜಳರಾಯನ ಸಭೆಯಲ್ಲಿದ್ದರು' ಎಂದು ಹೇಳುವುದು ತಪ್ಪೆಂದು

ಮರಣಾನಂತರ ಎಂದರೆ, ಕ್ರಿ. ಶ. ೧೨೨೦ ಕ್ಕಿಂತ ಈಚೆಗೆ ರಚಿಸಲ್ಪಟ್ಟಿರಬೇಕೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕವಿಯು ಪ್ರಾಯಶಃ ಕ್ರಿ. ಶ. ೧೪ನೆಯ ಶತಮಾನದ ಆದಿಭಾಗದಲ್ಲಿ ಇದ್ದನೆಂದು ತೋರುತ್ತದೆ. ಹೀಗೆಯೇ ಬಸವ, ಚೆನ್ನಬಸವಾದಿಗಳೂ ಕೂಡ ಕ್ರಿ. ಶ. ಸುಮಾರು ೧೨೦೦ ಕ್ಕಿಂತ ಹಿಂದೆ ಇದ್ದಂತೆ

ನಮ್ಮ ಅಭಿಪ್ರಾಯ. ಈ ಬಿಜ್ಜಳನು ಜೈನನಾಗಿದ್ದನೆಂದು ಹೇಳುವುದಕ್ಕಂತೂ ನಮಗೆ ತಿಳಿದಂತೆ ಕರ್ಣಾಟಕದೇಶದ ಶಾಸನಗಳಲ್ಲಿ ಯಾವ ಆಧಾರವೂ ಇಲ್ಲ. ಇವನು ತನ್ನ ಮಕ್ಕಳಲ್ಲಿ ಒಬ್ಬನಿಗೆ 'ಸೋಮೇಶ್ವರ' ಎಂದೂ, ಮತ್ತೊಬ್ಬನಿಗೆ 'ಶಂಕರ' ಎಂದೂ (ಸಂಕ ಸಂಕಮ ಎಂಬವು 'ಶಂಕರ' ಎಂಬ ಪದದ ಪ್ರಾಕೃತರೂಪಗಳು) ಹೆಸರಿಟ್ಟುದನ್ನು ನೋಡಿದರೆ, ಇವನು ವಸ್ತುತಃ ಶಿವಪೂಜಕನಾಗಿದ್ದನೆಂದೇ ನಾವು ಊಹಿಸಬೇಕಾಗಿರುವುದು.

ಬಸವಪುರಾಣ, ಚೆನ್ನಬಸವಪುರಾಣ ಬಿಜ್ಜಳರಾಯಚರಿತೆ ಮೊದಲಾದ ಗ್ರಂಥಗಳನ್ನು ಕುರಿತು ಡಾ॥ ಫ್ಲೀಟ್‌ರವರು ಪೂರ್ವನಿರ್ದಿಷ್ಟವಾದ ಅವರ ಪುಸ್ತಕದ ೪೮೧ ನೇ ಪುಟದಲ್ಲಿ —

"There are however, no apparent reasons for attributing either to the Lingâyat Purânas or to the Jain poem, any greater historical accuracy than other Hindû works of the same class have been found to possess. And on the contrary there are fair grounds for questioning the correctness of the narratives given by them. The Lingâyat and Jain accounts differ very markedly : to a far greater extent than can be accounted for on simply the supposition of a representation of true facts from different sectarian points of view. In respect of the circumstances immediately attending the deaths of Bijjala and Basava, even the Lingâyat Purânas are not all in accordance with each other. The Channabasava Purâna allots to these events the absurd date of A D. 785, which is too early by close upon four centuries. Even the Jain poem appears to place them, not only twelve years before the time, in A D. 1167, when Bijjala, still alive, abdicated in favour of his eldest son, but also even before the time, in A.D. 1156, when Bijjala established himself as king. No epigraphic mention of Basava and Channabasava has been obtained ; which is peculiar, if they really held the high office that is allotted to them by tradition."

ಎಂದು ಬರೆದು, ಶೈವಮತವನ್ನು ಉದ್ಧರಿಸಿದವನು ಬಸವನೂ ಚೆನ್ನಬಸವನೂ ಅಲ್ಲವೆಂದೂ, ಅಬ್ಬಲೂರಿನಲ್ಲಿರುವ ಒಂದು ಶಾಸನದ ಪ್ರಕಾರ ಏಕಾಂತದ ರಾಮಯ್ಯನೆಂಬ ಬ್ರಾಹ್ಮಣನು ಶೈವ ಮತವನ್ನು ಉದ್ಧರಿಸಿದಂತೆ ತೋರುತ್ತದೆಯೆಂದೂ ಹೇಳಿ ಆ ಶಾಸನದಲ್ಲಿ ಹೇಳಿರುವುದನ್ನು ೪೮೨. ೪೮೩ ನೇ ಪುಟಗಳಲ್ಲಿ ಸಂಕ್ಷೇಪವಾಗಿ ನಿರೂಪಿಸಿರುವರು.

ತೋರುವುದಿಲ್ಲ. ಅವರು ಕ್ರಿ. ಶ. ೧೧೫೬-೧೧೬೭ ರಲ್ಲಿ ಇರಲಿಲ್ಲವೆಂದಂತೂ ಸುಮಾರಾಗಿ ದೃಢವಾಗಿಯೇ ಹೇಳಬಹುದು.

ಅಂತು ಮೇಲೆ ಹೇಳಿರುವುದರಿಂದ ಕವಿಗಳ ಚರಿತಾದಿಗಳನ್ನು ಕುರಿತು ಚೆನ್ನಬಸವಪುರಾಣವೇ ಮೊದಲಾದ ವೀರಶೈವಗ್ರಂಥಗಳಲ್ಲಿ ಹೇಳಿರುವುದನ್ನು ನಂಬಲಾಗದೆಂದು ಸ್ಪಷ್ಟವಾಗುವುದಷ್ಟೆ. ಆದುದರಿಂದ ಇಂಥ ಗ್ರಂಥಗಳಲ್ಲಿ ಹೇಳಿರುವುದನ್ನು ಉಪೇಕ್ಷಿಸಿಯೇ ನಾವು ಹರೀಶ್ವರ ರಾಘವಾಂಕಾದಿಗಳ ಕಾಲವನ್ನು ನಿರ್ಣಯಿಸಬೇಕು.

ರಾಘವಾಂಕನು ತನ್ನ ಗುರುಪರಂಪರೆಯಲ್ಲಿ ಹಂಪೆಯ ಹರೀಶ್ವರನ ಹೆಸರನ್ನು ಹೇಳುವುದರಿಂದಲೂ, 'ಹರೀಶ್ವರನ ವರಸುತಂ' ಎಂದು ತನ್ನನ್ನು ಹೊಗಳಿಕೊಂಡಿರುವುದರಿಂದಲೂ (ಕವಿಚರಿತೆ I, ೧೮೨) ಹರೀಶ್ವರನು ಇವನ ಗುರುವೆಂದು ವ್ಯಕ್ತವಾಗುವುದು. ಈ ಹರೀಶ್ವರನ ಗಿರಿಜಾಕಲ್ಯಾಣದಿಂದ ಅನೇಕ ಪದ್ಯಗಳನ್ನು ಮಲ್ಲಿಕಾರ್ಜುನನು ತಾನು ಕ್ರಿ.ಶ. ಸುಮಾರು ೧೨೬೩ ರಲ್ಲಿ ಸಂಕಲಿಸಿದ (ಮೇಲೆ ೧೮೭ ನೇ ಪುಟವನ್ನು ನೋಡಿ) ಸೂಕ್ತಿಸುಧಾರ್ಣವದಲ್ಲಿ ಸೇರಿಸಿ ರಾಘವಾಂಕನು ಬರೆದ ಪ್ರೌಢವಾದ ಹರಿಶ್ಚಂದ್ರಕಾವ್ಯದಿಂದ ಯಾವ ಪದ್ಯವನ್ನೂ ಸೇರಿಸದಿರುವುದನ್ನು ಪರ್ಯಾಲೋಚಿಸಿದರೆ, ಆ ಕಾಲದಲ್ಲಿ ಹರಿಶ್ಚಂದ್ರಕಾವ್ಯವು ಬರೆಯಲ್ಪಟ್ಟಿರಲಿಲ್ಲವೆಂದು ನಾವು ಊಹಿಸಬೇಕಾಗಿರುವುದು. ಆದ್ದರಿಂದ ಹರೀಶ್ವರನ ಗಿರಿಜಾಕಲ್ಯಾಣವು ಕ್ರಿ. ಶ. ೧೨೬೩ ಕ್ಕಿಂತ ಸ್ವಲ್ಪಕಾಲ ಹಿಂದೆ, ಎಂದರೆ, ಸುಮಾರು ೧೨೬೦ ರಲ್ಲಿ ಬರೆಯಲ್ಪಟ್ಟಿತೆಂದು ನಾವು ಹೇಳಬಹುದು. ಅವನ ಇತರ ಗ್ರಂಥಗಳು ಪ್ರಾಯಶಃ ಕ್ರಿ. ಶ. ೧೨೬೦—೧೨೭೦ ರಲ್ಲಿ ಬರೆಯಲ್ಪಟ್ಟವೆಂದು ತೋರುವುದು. ರಾಘವಾಂಕನ ಗ್ರಂಥಗಳೂ ಹೀಗೆಯೇ ಕ್ರಿ. ಶ. ೧೨೮೦—೧೨೯೦ ರಲ್ಲಿ ಬರೆಯಲ್ಪಟ್ಟವೆಂದು ನಾವು ಹೇಳಬಹುದು.

ಕೆರೆಯಪದ್ಮರಸನು ಕ್ರಿ. ಶ. ೧೫೦೦ ಕ್ಕಿಂತ ಹಿಂದೆ ಯಾವಾಗ ಜೀವಿಸಿದ್ದನೆಂಬುದನ್ನು ನಿರ್ಧರಿಸುವುದಕ್ಕೆ ನಮಗೆ ಯಾವ ಆಧಾರವೂ ಇಲ್ಲ. ಇವನು (ಕವಿಚರಿತಕಾರರು ಹೇಳುವಂತೆ) ಕ್ರಿ. ಶ. ೧೧೬೫ ರಲ್ಲಿ ಜೀವಿಸಿರಲಾರನೆಂದು ನಾವು ದೃಢವಾಗಿ ಹೇಳಬಹುದು ; ಹೀಗೆಯೇ ಕ್ರಿ. ಶ. ೧೨೬೦ ಕ್ಕಿಂತ ಹಿಂದೆ ಇದ್ದಿರಲಾರನೆಂದೂ ಸುಮಾರಾಗಿ ದೃಢವಾಗಿ ಹೇಳಬಹುದು.

ಹರೀಶ್ವರ ರಾಘವಾಂಕರನ್ನು ಸ್ತುತಿಸುವ ಭೀಮಕವಿಯು ಇವನ ಹೆಸರನ್ನು ಹೇಳದೆ ಇರುವುದನ್ನೂ ವೀರಶೈವ ಕವಿಗಳಲ್ಲಿ ಕ್ರಿ. ಶ. ೧೬ ನೇ ಶತಮಾನದ

ಮೊದಲ ನೆಯ ಪಾದದಲ್ಲಿದ್ದ ವಿರುಪರಾಜ, ಚತುರ್ಮುಖ, ಬೊಮ್ಮರಸ, ಗುಬ್ಬಿಯ ಮಲ್ಲಣಾರ್ಯ, ಸೋಮರಾಜರೇ ಇವನನ್ನು ಸ್ತುತಿಸುವ ಮೊದಲು ಕವಿಗಳಾಗಿರುವುದನ್ನೂ ನೋಡಿದರೆ, ಈ ಕವಿಯು ಕ್ರಿ. ಶ. ೧೪ ನೇ ಶತಮಾನದಲ್ಲಿ ಇರಲಿಲ್ಲವೆಂದು ನಾವು ಊಹಿಸಬೇಕಾಗಿರುವುದು. ಇವನು * ಪ್ರಾಯಶಃ ಕ್ರಿ. ಶ. ೧೫ ನೇ ಶತಮಾನದಲ್ಲಿ ಇದ್ದನೆಂದು ತೋರುತ್ತದೆ.

619

* ಇವನು ಕಾಶಿಗೆ ಹೋಗುವಾಗ ಪಂಪಾಪಟ್ಟಣದಲ್ಲಿ ಹರೀಶ್ವರನನ್ನು ನೋಡಿ ಅವನೊಡನೆ ಸಂಭಾಷಿಸಿದನೆಂದೂ, ಇವನು ಬೇಲೂರಿಂದ ದೋರಸಮುದ್ರಕ್ಕೆ ಹೊರಟಾಗ ರಾಘವಾಂಕನು ಇವನೊಡನೆ ಹೊರಟನೆಂದೂ ಇದೇ ಮೊದಲಾಗಿ ಪದ್ಮರಾಜಪುರಾಣದಲ್ಲಿ ಹೇಳಲ್ಪಟ್ಟಿರುವ ಕಥೆಗಳು ನಾವು ಮೇಲೆ (ಪುಟ ೨೬೭-೨೬೯) ಹೇಳಿರುವ ಕಥೆಗಳ ಜಾತಿಗೇ ಸೇರಿದ್ದು ಕಲ್ಪಿತ ಕಥೆಗಳಾಗಿರುವುವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಹೀಗೆಯೇ ಈ ಪದ್ಮರಸನು ಬಿಟ್ಟಿ ಸಮುದ್ರವೆಂಬ ಕೆರೆಯನ್ನು 'ಅಸಮಾಕ್ಷನಿಂದ ಬಿಟ್ಟಿಗೆ ಕಟ್ಟಿಸಿದ' ಕಥೆಯೂ ಕಲ್ಪಿತ ಕಥೆಯೇ ಆಗಿರುವುದು. ಬಿಟ್ಟಿಸಮುದ್ರವೆಂದರೆ ವಿಷ್ಣು ಅಥವಾ ವಿಷ್ಣುವರ್ಧನನು ಕಟ್ಟಿಸಿದ ಕೆರೆಯೇ ಹೊರತು 'ಬಿಟ್ಟಿಗೆ ಕಟ್ಟಿಸಿದ' ಕೆರೆಯಲ್ಲವೆಂಬುದು ಕರ್ಣಾಟಕದೇಶದ ಶಾಸನಗಳನ್ನು ಓದಿರುವವರೆಲ್ಲರಿಗೂ ತಿಳಿದ ವಿಷಯವಾಗಿರುವುದು.

ಹೀಗೆಯೇ ಹರೀಶ್ವರನು ರಾಘವಾಂಕನ ಐದು ಹಲ್ಲುಗಳನ್ನು ಮುರಿದು ಅವನ್ನು ಪುನಃ ಅವನಿಗೆ ಕೊಟ್ಟುದೂ, ಅವನ ಕಾಲದಲ್ಲಿ ಓರುಗಲ್ಲಿನಲ್ಲಿದ್ದ ಏಕಸಂಧಿಗ್ರಾಹಿ, ದ್ವಿಸಂಧಿಗ್ರಾಹಿ, ತ್ರಿಸಂಧಿಗ್ರಾಹಿಗಳ ಕಥೆಯೂ, ಪಾಲ್ಕುರಿಕೆ ಸೋಮನು ಮೊಸರುಕುರಿಕೆಯ ಶಾಸ್ತ್ರಿ, ಆಜ್ಯಕುರಿಕೆಯ ಶಾಸ್ತ್ರಿಗಳನ್ನು (ಗುರುರಾಜನು ಬೆಣ್ಣೆಕುರಿಕೆಯ ಶಾಸ್ತ್ರಿಯನ್ನು ಏತಕ್ಕೆ ಇಲ್ಲಿ ಮರೆತುಬಿಟ್ಟನೋ!) ಸೋಲಿಸಿದ ಕಥೆಯೂ ಇವೆಲ್ಲವೂ ಕಲ್ಪಿತ ಕಥೆಗಳಾಗಿರುವುವೆಂದೇ ನಮಗೆ ತೋರುವುದು.

ಕರ್ಣಾಟಕ ಕವಿಚರಿತೆಯಂತಹ ಗ್ರಂಥದಲ್ಲಿ ಈ ಪೊಳ್ಳುಕಥೆಗಳನ್ನು ಉದ್ಧರಿಸಿ ಬರೆಯದೆ ಈ ವಿಧವಾದ ಕಥೆಗಳನ್ನು ತೂಷ್ಣೀಂಭಾವದಿಂದ ಉಪೇಕ್ಷಿಸಿ ಅದನ್ನು ಕವಿಚರಿತಕಾರರು ಬರೆದಿದ್ದರೆ ಆ ಗ್ರಂಥವು ಈಗ ಇರುವುದಕ್ಕಿಂತಲೂ ಅತಿಶಯವಾಗಿ ಗುಣೋಜ್ವಲವಾಗಿಯೂ ಶ್ಲಾಘನೀಯವಾಗಿಯೂ ಇರುತ್ತಿತ್ತೆಂದು ನಮ್ಮ ಅಭಿಪ್ರಾಯ.

ಅಕಾರಾದಿ ನಾಮಾನುಕ್ರಮಣಿ.

* ಈ ಗುರುತು ಇರುವ ಲೇಖಕರ ವಿಷಯವಾಗಿ ಕವಿಚರಿತಕಾರರು ಏನನ್ನೂ ಬರೆದಿಲ್ಲ.

ಬಿ. ಎಂ. ಶ್ರೀ
ಗ್ರಂಥಾಲಯ
619
ಬೆಂಗಳೂರು-19

ಮೈಸೂರು
ಕ್ರೌನ್ ಎಲೆಕ್ಟ್ರಿಕ್ ಪ್ರೆಸ್
೧೯೨೭

ಪ್ರಬುದ್ಧ ಕರ್ಣಾಟಕ

ವಿಭವ ಸಂವತ್ಸರ —೩೮— ಫಾಲ್ಗುನ ಸಂಚಿಕೆ

ಸಂಪುಟ ೧೦] [ಸಂಚಿಕೆ ೪

ವಿಷಯ ಸೂಚಿಕೆ

ಬೆಂಗಳೂರು
ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದಿಂದ ಪ್ರಕಟಿಸಲ್ಪಟ್ಟಿದೆ.
೧೯೨೯

All Rights Reserved



ಮ ಥ ನ

ಮುತ್ತು ಹವಳಗಳಂತೆ
  ಅಲ್ಲ ಅಹುದುಗಳು
ಸುತ್ತಿಹುವು ಸರವಾಗಿ
  ಎಲ್ಲ ಬಾಳ್ಕೆಯನು.

ಮತಿ ಬೇಡವೆಂಬುದನು
  ಮನವು ಬೇಡುವುದು ;
ಮತಿ ಮಾಳ್ಪುದೆಂಬುದನು
  ಮನವೊಲಿಯದಿಹುದು.

ಹಿಂದೆ ಬೇಕೆನಿಸಿದುದು
ಇಂದು ಸಾಕಾಯ್ತು ;
ಅಂದಿನಾಟಗಳೆಲ್ಲ
ಇಂದು ದಣಿವಾಯ್ತು.

ಗಗನದೆಡೆ ತಿರುಗುವುವು
ನಯನಂಗಳೊಮ್ಮೆ ;
ಜಗವಿದುವೆ ಲೇಸೆಂದು
ನಲಿವುವಿನ್ನೊಮ್ಮೆ.

ನಗೆ ಕಣ್ಣೊಳಿರಲೆದೆಯು
ಸುಡುವುದೊಂದುರಿಯು ;
ಹೊಗೆಯುತ್ತಣಿಂದೊಗೆಯೆ
ತಡೆವುದದ ತುಟಿಯು.

ಭೋಗಿಯಂತೊಮ್ಮೊಮ್ಮೆ,
ಮರುಮರುಗುತೊಮ್ಮೆ,
ಜೋಗಿಯಂತೊಮ್ಮೊಮ್ಮೆ,
ಹರುಷಪಡುತೊಮ್ಮೆ,

ಹಿಗ್ಗಿ ಹಿರಿದಾಗುತ್ತೆ,
ಕುಗ್ಗಿ ಕಂದುತ್ತೆ,
ಸರಸದಿಂ ನಲಿಯುತ್ತೆ,
ವಿರತಿಯಾನುತ್ತೆ,

ಬಿಸಿಲಿನಲಿ ಮುಡಿಯುತ್ತೆ,
ನೆರಳನೆಳಸುತ್ತೆ,
ಬಯಲಿನಲಿ ಕುಣಿಯುತ್ತೆ,
ಮರೆಯನರಸುತ್ತೆ,

ಮಥನ

ಒಂದರಲಿ ಸಿಲಲೊಲದೆ
    ದ್ವಂದ್ವಗಳ ನಡುವೆ
ಹಿಂದುಮುಂದಲೆದಾಡಿ
    ನೊಂದಿಹೆನು ಬರಿದೆ.

ಸಾಕುಬೇಕುಗಳೆಂಬ,
    ಇಂತು ಅಂತೆಂಬ,
ಲೋಕದಾಸೆಗಳೆಂಬ,
    ಸಂದೆಯುಗಳೆಂಬ,

ದೇವದಾನವರುಬ್ಬು
    ತೊಡಲ ಕಡಲಿನಲಿ
ಜೀವ ಮಂದರಗಿರಿಯು
    ಕಡೆಯೆ ಬಿರುಬಿನಲಿ,

ದೊರೆಕೊಳ್ವ ಪುರುಳೇನೊ
    ಬಿಸವೊ ಪೀಯೂಷ ಸೊದೆಯೋ !
ದೊರೆವನ್ನೆಗಂ ಸೈಸಿ
    ಬಸವಳಿಯುರಾರೋ !

ಡಿ. ವಿ. ಜಿ.

ಕನ್ನಡ ನುಡಿವೆಣ್ಣಿನ ಜಾಣ್ನುಡಿ

ಭರತಮಾತೆಯ ಪುಣ್ಯಗರ್ಭದೊಳು ಪುಟ್ಟಿ ನಾ
ನಿರದೆ ಕರುನಾಡೆಂಬ ದೇಶದೊಳು ಬಳೆದು,
ಸರಳಋಜುಕೋಮಲದ ಗುಣಕೆ ಕನ್ನಡಿಯಂತೆ
ಮೆರೆವೆನ್ನ ಕಂಡು 'ಕನ್ನಡ'ವೆಂದರಾಗ.

....

ಗಂಗರಸರಲ್ಲಿ ನಾಂ ಸೇರಿ ಜಿನಸಾರಮಂ
ಪೀರಿ ಜಗಕೆಲ್ಲದನು ಸಾರಿ ಬೀರುತ್ತೆ
ನಾಗಗುಣವರ್ಮರಾ ರಸನಾಗ್ರರಂಗದೊಳ್
ಸೇರಿ ಎನ್ನಯ ಲೀಲೆಯಂ ತೋರ್ದೆನೀ ಜಗಕೆ.
ಚಾಳುಕ್ಯರಾಷ್ಟ್ರದೊಳ್ ಪೊಗಲಲ್ಲಿ ವಾ
ಚಾಳತ್ವವಾಂತು ಲೋಕದಲಿ ಮೆರೆಯುತ್ತೆ
ಬಾಳ್ದರಾ ಪಂಪಪೊನ್ನರನ್ನಕವಿಗಳು.

....

ವೀರಶೈವರ ಮತದ ಸಿದ್ಧಾಂತಮಂ ಜಗದೆ
ಸರಳಮೃದುವಚನರೂಪದೆ ಸಾರುತಾಗ
ವರಬಸವ ಜಿಹ್ವಾಗ್ರದೊಳ್ ನೆಲಸುತೆನ್ನ
ಸರಸತೆಯ ಸರ್ವಜನಸುಲಭತೆಯನರುಹಿ
ಕರುಣಾಬ್ಧಿಯೊಳ್ ಜನಮನೆಲ್ಲನದ್ದಿದೆನು.
ಪರಭಾಷೆಗಳ ಗೊಂದಲದೆ ಸೋಲದೆಯೆ ನಾನು
ತಿರೆಯೊಳಗೆ ಮುಖವೆತ್ತಿ ಬಾಳುವುದಕೀಗ
ವೀರಶೈವರ ಮೈತ್ರಿಯಿಂದಾಗಳಾದ
ವೀರತ್ವವೇ ಹೇತುವೆಂದೊರೆವೆನೀಗ.

....

ವೈಷ್ಣವರ ಕೃತಿಯಿಂದೆ ಪರಮರಾಮಾಯಣದ
ಭಾರತದ ತಿರುಳನ್ನು ಸರ್ವರಿಗೆ ಸವಿಸಿ
ವಿಷ್ಣುಪರಮಾತ್ಮನೊಳು ಮನಮುಟ್ಟಿ ತನುಬಾಗಿ
ಧರೆಯ ಜನರೆಲ್ಲರಂ ಸೇವಿಪಂತೆಸಗಿ
ಸರ್ವರೊಳು ಸೌಹಾರ್ದವಂ ಕಲ್ಪಿಸಿದೆನು.

....

ಎನ್ನ ಸಹಜಾತೆಯರ ಮಧ್ಯದೊಳಗಾವಗಂ
ಇನ್ನು ತಲೆ ತಗ್ಗಿಸುವ ಭಯವಿಲ್ಲವೆಂದಿಗುಂ
ಚೆನ್ನಾಗಿ ಮುಸ್ಸಿನಂತೊಸಗೆಯಿಂ ನಲಿಯುತ್ತೆ
ಸನ್ನುತನ ಕೃಷ್ಣನಾಶ್ರಯದಲ್ಲಿ ಬಾಳ್ವೆ ನಾಂ.

ಅಲ್ಲದೆ ನೋಡಿದರೆಲ್ಲಿಯು ಈಗ
ಸಲ್ಲುವುದೆನಗಗ್ಗಳ ಮನ್ನಣೆಯು
ಭಾಷಾವತ್ಸಲರೆಲ್ಲರು ಸೇರಿ
ತೋಷದೆ ನಿರ್ಮಿಸಿ ಪರಿಷತ್ತುಗಳ
ಭೂಷಿಸಿ ಎನ್ನನು ಪರಿಪರಿವಿಧದಿಂ
ಪಾಲಿಸಿ, ಲಾಲಿಸಿ, ಮೆರೆವರು ಎನ್ನ
ಪೊರೆವರು ಎನ್ನ.

ಮೂಡುವ ಹರುಷದೆ ಬಾಲರು ಎನಗೆ
ತೊಡಿಸುತೆ ತರತರತೊಡವುಗಳ,
ಉಡಿಸುತೆ ಒಪ್ಪುವ ವಸ್ತ್ರಗಳ,
ಮುಡಿಸುತೆ ಕಂಪಿನ ಕುಸುಮಗಳ,
ಉಲಿವರು, ನಲಿವರು, ಒಲಿಸುವರು,
ಬಿಡದೆನ್ನನು ಹರಸುವರು,
ಮೆರೆಸುವರು.

ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್.

ಹಳ್ಳಿಯ ಹುಡುಗಿ

೧

ಹುಲ್ಲಿನ ಹೊರೆಯನು ತಲೆಯೊಳು ಹೊತ್ತು
ಹುಡುಗಿ ಬಂದಳು ದಾರಿಯಲಿ ;
ಮಲೆನಾಡಿನ ಗಿರಿಗಳ ತುದಿ ಹೊತ್ತು
ಮುಳುಗುತಲಿದ್ದಿತು ಬೈಗಿನಲಿ !
ಹುಡುಗಿಯ ಕಂಗಳಲೆಸೆದುದು ಸಂಜೆ ;
ಮೇಣವಳೆದೆಯೊಳು ಹಕ್ಕಿಗಳೆಲ್ಲಾ
ಬೈಗಿನ ಹಾಡನು ಹಾಡಿದುವು ;
ಕಬ್ಬದ ಹಬ್ಬವ ಮಾಡಿದುವು !

೨

ತಂಗಿಯು, ಬಡತನದುಡೆಯನು ಉಟ್ಟು
ರತಿಯಂತೆಸೆದಳು ಕಂಗಳಿಗೆ !
ತಾಯಿಯು, ಬಡತನದೊಡವೆಯ ತೊಟ್ಟು
ಮಂಗಳವಾದಳು ಎನ್ನೆದೆಗೆ :
ಯಾವುದೊ ಹಳ್ಳಿಯ ಲಾವಣಿ ಹಾಡುತ
ಬಂದಳು ಬಾಲೆಯು ನನ್ನೆದುರಾಡುತ !
ಯಾಕೆಂದರೆ ನಾನವಳಲ್ಲಿ
ಕರ್ಮವ ಕಂಡೆನು ಲೀಲೆಯಲಿ !

೩

ನೋಡಿದಳೆನ್ನನು ತಲೆಯನು ಎತ್ತಿ,
ನುಡಿದಳು ನಾಚಿಗೆಯಿಲ್ಲದಲೆ ;

ದನಿಯಲಿ ಮುಗುದತೆ ಪ್ರೈದೋರಿತ್ತು,
ಮಿಂಚಿತು ಮೊಗವಾನಂದದಲಿ
ಅರಳಿದ ಹೂವುಗಳಿದ್ದುವು ಸುತ್ತ ;
ಆದರು ಹಳ್ಳಿಯ ಹುಡುಗಿಯ ಚಿತ್ತ
ಹೂವುಗಳೆಲ್ಲಪಸೇಳಿಸಿತು !
ಮೇಣವರಿಂಪಸು ಚಾಳಿಸಿತು !

೪

ಹಳ್ಳಿಯ ಹುಡುಗಿಯು ಹೊರಟಳು ಮುಂದೆ
ಹಸುರಿಂದೆಸೆದಾ ಹಾದಿಯಲಿ.
ದೇವಿಯ ಭಕ್ತನು, ಕುರಿಮರಿ, ಹಿಂದೆ
ಮೆಲ್ಲನೆ ನಡೆದುದು ಮೌನದಲಿ !
ನೋಡಿದೆನವರನು ಹಿಂದಕೆ ತಿರುಗಿ,
ತನು, ಮನ, ಎದೆ, ಬಾಳೆಲ್ಲಾ ಕರಗಿ ;
ವರವನು ಸಲ್ಲಿಸಿದೀಶನನು
ಎಂದಿಗು ನಾನಂತೀಕ್ಷಿಸೆನು !

ಕೆ. ವಿ. ಪುಟ್ಟಪ್ಪ.

ಸೋಮನಾಥಪುರದ ದೇವಾಲಯ

ಬಾಗಿಲೊಳು ಕೈಮುಗಿದು ಒಳಗೆ ಬಾ, ಯಾತ್ರಿಕನೆ,
ಶಿಲೆಯಲ್ಲವೀಗುಡಿಯು, ಕಲೆಯ ಬಲೆಯು !
ಕಂಬನಿಯ ಮಾಲೆಯಸು ಎಲೆಯ ಬಟ್ಟಲೊಳಿಟ್ಟು
ಧನ್ಯತೆಯ ಕುಸುಮಗಳನರ್ಪಿಸಿಲ್ಲಿ.

ಗಂಟೆಗಳ ದನಿಯಿಲ್ಲ, ಜಾಗಟೆಗಳಿಲ್ಲಿಲ್ಲ ;
ಕರ್ಪೂರದಾರತಿಯ ಜ್ಯೋತಿಯಿಲ್ಲ ;
ಭಗವಂತನಾನಂದ ರೂಪುಗೊಂಡಿಹುದಿಲ್ಲಿ !
ರಸಿಕತೆಯ ಕಡಲುಕ್ಕಿ ಹರಿವುದಿಲ್ಲಿ !

ಸರಸದಿಂದುಲಿಯುತಿದೆ ಶಿಲೆಯು ರಾಮಾಯಣವನಿಲ್ಲಿ !
ಬಾದರಾಯಣನಂತೆ ಭಾರತವ ಹಾಡುತಿಹುದಿಲ್ಲಿ !
ಕುಶಲತೆಗೆ ಬೆರಗಾಗಿ ಮೂಕವಾಗಿದೆ ಕಾಲವಿಲ್ಲಿ !
ಮೂರ್ಛೆಯಲಿ ಮೈಮರೆತು ತೇಲುವುದು ಭೂಭಾರವಿಲ್ಲಿ !

ಕೆ. ವಿ. ಪುಟ್ಟಪ್ಪ.



ಸೋಮನಾಥಪುರದ ಕೇಶವ ದೇವಾಲಯ

ಬಿಜ್ಜಳನು ಜೈನನೆ ?

ಬಿಜ್ಜಳನು ಜೈನನೆಂಬುದು ಬಹುಜನ ಸಮ್ಮತವಾದ ಅಭಿಪ್ರಾಯ. ಬಿಜ್ಜಳರಾಯ ಚರಿತೆ ಮುಂತಾದ ಜೈನ ಗ್ರಂಥಗಳಲ್ಲಿಯೂ ಕೆಲವು ವೀರಶೈವ ಗ್ರಂಥಗಳಲ್ಲಿಯೂ ಬಿಜ್ಜಳನು ಜೈನನೆಂದು ಹೇಳಿದೆ. ಡಾಕ್ಟರ್ ಫ್ಲೀಟ್, ಲೂಯಿ ರೈಸ್ ಮೊದಲಾದ ಕೆಲವರು ಇತಿಹಾಸ ಸಂಶೋಧಕರು ಇದನ್ನು ಒಪ್ಪಿಕೊಂಡಿದ್ದಾರೆ. ಹೀಗೆ ಈ ಮತವು ವಿಶ್ವಾಸಾರ್ಹವಾಗಿ ತೋರಿದರೂ ಅದನ್ನು ಸಂಬದಿರುವುದಕ್ಕೆ ಅವಕಾಶವನ್ನು ಕೊಡುವ ಕೆಲವು ಆಧಾರಗಳಿವೆ. ಡಾಕ್ಟರ್ ವೆಂಕಟಸುಬ್ಬಯ್ಯನವರೂ ಬ್ರಂ॥ ಶ್ರೀ ವೇಟೂರು ಪ್ರಭಾಕರಶಾಸ್ತ್ರಿಗಳವರೂ ಬಿಜ್ಜಳನು ಜೈನನಲ್ಲವೆಂದೂ ಶೈವಮತಾವಲಂಬಿಯೆಂದೂ ಅಭಿಪ್ರಾಯಪಡುತ್ತಾರೆ. ಅವರ ಅಭಿಪ್ರಾಯಗಳನ್ನೂ ಅವರು ಕೊಡುವ ಕಾರಣಗಳನ್ನೂ ತಿಳಿಸಿ ಆ ಅಭಿಪ್ರಾಯವನ್ನು ಸಮರ್ಥಿಸುವ ಮತ್ತೆ ಕೆಲವು ಆಧಾರಗಳನ್ನು ವಾಚಕರ ಗಮನಕ್ಕೆ ತರುವುದೇ ಈ ಲೇಖನದ ಉದ್ದೇಶ.

"ಕೆಲವು ಕನ್ನಡ ಕವಿಗಳ ಜೀವನಕಾಲ ವಿಚಾರ" ಎಂಬ ಗ್ರಂಥದಲ್ಲಿ ಡಾ॥ ವೆಂಕಟಸುಬ್ಬಯ್ಯನವರು

"ಈ ಬಿಜ್ಜಳನು ಜೈನನಾಗಿದ್ದನೆಂದು ಹೇಳುವುದಕ್ಕಂತೂ ನಮಗೆ ತಿಳಿದಂತೆ ಕರ್ಣಾಟಕ ದೇಶದ ಶಾಸನಗಳಲ್ಲಿ ಯಾವ ಆಧಾರವೂ ಇಲ್ಲ. ಇವನು ತನ್ನ ಮಕ್ಕಳಲ್ಲಿ ಒಬ್ಬನಿಗೆ 'ಸೋಮೇಶ್ವರ' ಎಂದೂ ಮತ್ತೊಬ್ಬನಿಗೆ 'ಶಂಕರ' ಎಂದೂ (ಸಂಕ, ಸಂಕನು ಎಂಬುವು ಶಂಕರ ಎಂಬ ಪದದ ಪ್ರಾಕೃತರೂಪಗಳು) ಹೆಸರಿಟ್ಟುದನ್ನು ನೋಡಿದರೆ ಇವನು ವಸ್ತುತಃ ಶಿವಪೂಜಕನಾಗಿದ್ದನೆಂದೇ ನಾವು ಊಹಿಸಬೇಕಾಗುವುದು."

ಎಂದು ಬರೆದಿರುತ್ತಾರೆ. ಆಂಧ್ರ ಬಸವಪುರಾಣದ ಪೀಠಿಕೆಯಲ್ಲಿ ಬ್ರಂ॥ ಶ್ರೀ ವೇಟೂರು ಪ್ರಭಾಕರಶಾಸ್ತ್ರಿಗಳು ಈ ವಿಷಯವಾಗಿ ಹೀಗೆ ಬರೆದಿರುತ್ತಾರೆ:—

“ಬಸವಪುರಾಣದಲ್ಲಿ ಎಲ್ಲಿಯೂ ಬಿಜ್ಜಳನು ಜೈನನೆಂಬುದಕ್ಕೆ ಆಧಾರವು ಕಂಡುಬರುವುದಿಲ್ಲ. ಆತನು ಜೈನನೆಂಬುದು ಕೂಡ ಅವಿಶ್ವಾಸ್ಯವೆಂದೇ ನನ್ನ ಭಾವನೆ. ಬಿಜ್ಜಳನ ಮತ್ತು ಅವನ ಮಕ್ಕಳ ಶಿಲಾ ತಾಮ್ರ ಶಾಸನಗಳು ಅನೇಕವಾಗಿ ಈಗ ದೊರೆತಿವೆ. ಅವುಗಳಲ್ಲಿಯೂ ಅವರು ಜೈನರೆಂಬುದಕ್ಕೆ ಆಧಾರಗಳು ಕಂಡು ಬಾರದಿರುವುದು ಮಾತ್ರವೇ ಅಲ್ಲದೆ ಶಿವಭಕ್ತರೆಂಬುದಕ್ಕೆ ಆಧಾರಗಳು ದೊರೆಯುತ್ತವೆ. ಅವರು ಶಾಸನಗಳಲ್ಲಿ ಸುವರ್ಣ ವೃಷಭಧ್ವಜರೆಂಬುದಾಗಿ ಕರೆಯಲ್ಪಟ್ಟಿದ್ದಾರೆ. ಇದು ಅವರ ಶಿವಭಕ್ತತೆಯನ್ನು ಸೂಚಿಸುತ್ತದೆ. ಬಸವಣ್ಣನು ಸ್ಥಾಪಿಸಿದ ವೀರಶೈವದಲ್ಲಿ ಬಿಜ್ಜಳನು ಅಭಿನಿವಿಷ್ಟನಾಗದಿರಬಹುದು. ಆದರೆ ಆತನು ಶಿವದ್ವೇಷವುಳ್ಳವನು ಮಾತ್ರ ಅಲ್ಲ. ಬಸವಪುರಾಣದಲ್ಲಿ ಹಾಗೆಂದು ಎಲ್ಲಿಯೂ ಇಲ್ಲ. ಅಲ್ಲದೆ, ಕ್ರಿ. ಶ. ೧೧೯೫ ರಲ್ಲಿ ಹುಟ್ಟಿದ ಅಬ್ಲೂರು ಶಾಸನವನ್ನು ನೋಡಿದರೂ ಬಿಜ್ಜಳನು ಜೈನನಲ್ಲವೆಂದೇ ಏರ್ಪಡುತ್ತದೆ....................(ಈ ಶಾಸನದಲ್ಲಿ) ಬಿಜ್ಜಳನು ಜೈನರನ್ನು ಗರ್ಹಿಸಿದನೆಂದೂ ಶಿವನಿಗೆ ಅಗ್ರಹಾರವನ್ನು ಕೊಟ್ಟನೆಂದೂ ಇರುವುದರಿಂದ ಶಾಸನಕಾರನ ಅಭಿಪ್ರಾಯದಲ್ಲಿ ಅವನು ಜೈನನಲ್ಲವೆಂದೇ ಏರ್ಪಡುತ್ತದೆ.”

ಬಿಜ್ಜಳನು ಜೈನನಲ್ಲ, ಶೈವನು ಎಂದು ಹೇಳುವುದಕ್ಕೆ ಮೇಲೆ ಹೇಳಿರುವ ಕಾರಣಗಳು ನಾಲ್ಕು—೧. ಅವನು ತನ್ನ ಇಬ್ಬರು ಮಕ್ಕಳಿಗೆ ಕೊಟ್ಟಿರುವ ಶೈವ ಹೆಸರು. ೨. ಬಸವ ಪುರಾಣದಲ್ಲಿ ಎಲ್ಲಿಯೂ ಅವನು ಜೈನನೆಂಬುದಕ್ಕೆ ಯಾವ ಆಧಾರವೂ ದೊರೆಯದಿರುವುದು. ೩. ಅವನೂ ಅವನ ಮಕ್ಕಳೂ ಸುವರ್ಣವೃಷಭಧ್ವಜವುಳ್ಳವರಾಗಿರುವುದು. ೪. ಅಬ್ಲೂರು ಶಾಸನದ ಪ್ರಕಾರ ಬಿಜ್ಜಳನು ಶೈವಮತದ ವಿಷಯದಲ್ಲಿ ತೋರಿರುವ ಆದರ.

ಬಸವೇಶ್ವರನ ವಚನಗಳಲ್ಲಿಯೂ ಬಿಜ್ಜಳನು ಜೈನನೆಂಬುದಕ್ಕೆ ಆಧಾರವಾವುದೂ ದೊರೆಯುವುದಿಲ್ಲ. ಮೂರು ನಾಲ್ಕು ಕಡೆಗಳಲ್ಲಿ

ಅವನ ಹೆಸರು ಬಂದಿದೆ, ಆದರೆ ಎಲ್ಲಿಯೂ ಅವನು ಜೈನನೆಂದು ಉಕ್ತವಾಗಿಲ್ಲ. ಒಂದು ವಚನದಲ್ಲಿ

"ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ—ಕೊಡಲಮ್ಮೆನು. ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ ಕುದಿದೆನಾದರೆ, ತಲೆದಂಡ ತಲೆದಂಡ ಕೂಡಲಸಂಗಮದೇವಯ್ಯ" ಎಂದಿದೆ.

ಇಲ್ಲಿ "ಭವಿ" ಎಂದರೆ ಜೈನನೆಂದೇ ಅರ್ಥಮಾಡಲಾಗುವುದಿಲ್ಲ; ವೀರಶೈವವಲ್ಲದ ಮತ್ತಾವ ಮತದವನಾದರೂ ಆಗಬಹುದು. ಬಸವೇಶ್ವರನ ವಚನಗಳನ್ನು ನೋಡಿದರೆ ಆತನು ತನ್ನ ಮುಖ್ಯ ಪ್ರತಿಕಕ್ಷಿಗಳೆಂದು ಭಾವಿಸಿದ್ದುದು ಜೈನರನ್ನಲ್ಲವೆಂದೂ ವರ್ಣಾಶ್ರಮಾಚಾರಬದ್ಧರಾದ ವೈದಿಕ ಮತಾವಲಂಬಿಗಳನ್ನು (ಬ್ರಾಹ್ಮಣರನ್ನು) ಎಂದೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದುದರಿಂದ ಬಿಜ್ಜಳನು ಜೈನನಲ್ಲದಿದ್ದರೂ, ಮೇಲೆ ಹೇಳಿದ ವೈದಿಕ ಮತಾನುಯಾಯಿಯಾಗಿದ್ದರೂ ಬಸವೇಶ್ವರನು ಅವನನ್ನು ತನ್ನ ಪ್ರತಿಕಕ್ಷಿಯೆಂದೇ ಭಾವಿಸುತ್ತಿದ್ದನು. ಆದರೆ ಬಸವೇಶ್ವರನಿಗೂ ಬಿಜ್ಜಳನಿಗೂ ಇದ್ದ ಮನಸ್ತಾಪಕ್ಕೆ ಕಾರಣವು ಮತ ಸಂಬಂಧವಾದುದಲ್ಲವೆಂದೂ ಬಿಜ್ಜಳನ ಭಂಡಾರದ ಹಣವನ್ನು ಬಸವೇಶ್ವರನು ಅಪಹರಿಸಿದನೆಂಬ ತಪ್ಪು ತಿಳಿವಳಿಕೆಯೇ ಎಂದೂ ಈ ವಚನಗಳಿಂದ ಗೊತ್ತಾಗುತ್ತದೆ.—

"ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು ಆವಿನ ಬೆನ್ನಲಿ ಹರಿಯಲದೇಕಯ್ಯ? ....ಕೂಡಲ ಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಂಡಾರ ಎನಗೇಕಯ್ಯ"

"ಆನೆ ಅಂಕುಶಕ್ಕಲ್ಲದೆ ಅಂಜುವುದೆ ಅಯ್ಯ, ಮಾಣದೆ, ಸಿಂಹದ ನಖವೆಂದಂಜುವುದಲ್ಲದೆ? ಆನೀ ಬಿಜ್ಜಳಂಗಂಜುವೆನೆ ಅಯ್ಯ, ಕೂಡಲ ಸಂಗಮದೇವ, ನೀನು ಸರ್ವಜೀವ ದಯಾಪಾರಿಯಾದಕಾರಣ ನಿಮಗಂಜುವೆನಲ್ಲದೆ?"

ಆದಕಾರಣ ಬಿಜ್ಜಳನು ಜೈನನೆಂಬುದಕ್ಕೆ ಬಸವೇಶ್ವರನ ವಚನಗಳಲ್ಲಿ ಯಾವ ಆಧಾರವೂ ಇಲ್ಲ.

ಕಾಲಚೂರ್ಯರ ಪ್ರಶಸ್ತಿಯಲ್ಲಿ "ಸುವರ್ಣವೃಷಭಧ್ವಜ"ದ ಉಲ್ಲೇಖವಿರುವಂತೆಯೇ "ಡಮರುಗ ತೂರ್ಯನಿರ್ಘೋಷಣ"ದ ಉಲ್ಲೇಖವೂ ಇದೆ. ಇದೂ ಕಾಲಚೂರ್ಯರು ಶೈವರಾಗಿರಬಹುದೆಂಬ ಊಹೆಗೆ ಉಪಷ್ಟಂಭಕವಾಗಿದೆ.

ಬಿಜ್ಜಳನ ಪೂರ್ವಜರಲ್ಲಿ ಒಬ್ಬನಾದ (ಈತನೇ ಆ ವಂಶಕ್ಕೆ ಮೂಲಪುರುಷನಿರಬಹುದು) ಕೃಷ್ಣರಾಜನು ಶಿವನ ಅನುಗ್ರಹದಿಂದ ಒಬ್ಬ ಬ್ರಾಹ್ಮಣ ಸ್ತ್ರೀಯ ಹೊಟ್ಟೆಯಲ್ಲಿ ಹುಟ್ಟಿದನೆಂದು ದಾವಣಗೆರೆಯ ೪೨ನೆಯ ಶಾಸನದ ಈ ಪದ್ಯಗಳಿಂದ ಗೊತ್ತಾಗುತ್ತದೆ:—

ಶ್ರೀಗಿರಿಜಾವರಂ ಹರನದೊರ್ವಳಿಳಾಮರಪುತ್ರಿ ತನ್ನನಿಂ।
ತಾಗಳುವೊಲ್ದುಪಾಸ್ತಿಗೆಯೆ ತದ್ಧೃದಯೇಷ್ಟಫಳಾರ್ಪನಾರ್ಥದಿಂ।
ರಾಗದಲಾಕೆಯಂ ಕನಸಿನೊಳ್ ನೆರೆಯಲ್ ಸಮಸಂದ ತತ್ಸಮಾ।
ಯೋಗದಿನೀಶ್ವರಾಂಶಮೆನೆ ನಿಂದುದು ಗರ್ಭವದಭ್ರವಿಭ್ರಮಂ॥
ಅಂತು ಗರ್ಭಂ ನೆಲಸಿ ನವಮಾಸಂತೀವಲೊಡನೆ

ಅತಿಶಯತರ ರೂಪಾನ್ವಿತ
ನತರ್ಕ್ಯ ವಿಕ್ರಮನನೂನ ಶುಭಲಕ್ಷಣಸಂ।
ಯುತನಖಿಳ ಸತ್ಕಳಾ ವಿ
ಶ್ರುತನುದಯಿಸಿದಂ ರಿಪುವ್ರಜೋಷ್ಣಂ ಕೃಷ್ಣಂ॥

ಉದಯಿಸಿ ನಾಪಿತಕರ್ಮದಿ
ನದೊರ್ವ ನರಮಾಂಸಭಕ್ಷಿಯಂ ನೃಪನಂ ದು।
ರ್ಮದನಂ ಸಂಹರಿಸಿ ಜಗ
ನ್ಮುದಮಂ ಮುಂ ಪಡೆದನಲ್ತೆ ಕಾಳಂ ಜರದೊಳ್॥

ಅಂತಾತನಂ ಕೃತಾಂತ ದಂತಾಂತರ್ವರ್ತಿಮಾಡಿ ತದೀಯ ಪ್ರಾಜ್ಯ ಸಾಮ್ರಾಜ್ಯ ಲಕ್ಷ್ಮಿ ಯಂ ಬಾಹಾವಳೇಪದಿನಿಱಿದುಕೊಂಡು ನವಲಕ್ಷ ದಹಳಾಮುಂಡಲಮನುಂಡಿಗೆ ಸಾಧ್ಯಂ ಮಾಡಿ ಕಳಚುರಿಕುಳತಿಳಕಂ ಕೃಷ್ಣಭೂಪಾಳಂ ಸುಖದಿನರಸುಗೆಯ್ದು........"

ಹಾಗೆಯೇ, ಬಿಜ್ಜಳನ ಪೂರ್ವಜರಲ್ಲಿ ಮತ್ತೊಬ್ಬನಾದ ಸೋಮ ನೆಂಬವನು ಶಿವಭಕ್ತನಾಗಿದ್ದನೆಂದು ಶಿಕಾರಿಪುರದ ೨೩೬ನೆಯ ಶಾಸ ನದ ಈ ಪದ್ಯಗಳಿಂದ ಗೊತ್ತಾಗುತ್ತದೆ:—

ಸೋಮಾನ್ವಯನೃಪನಶ್ವ
ತ್ಥಾಮನೊಳೊಲವಿಂದೆ ಶಸ್ತ್ರಪರಿಣತಿಯಂ ಕ।
ಲ್ತಾಮಹಿಪಂ ಸೋಮಂ ವಿ
ದ್ಯಾಮಹಿಮೆಯಿನಾಳ್ದನಖಿಳಭೂಮಿತಳಮಂ ॥

ಗುರುವಶ್ವತ್ಥಾಮನಾ ಸೋಮನಿನತಿಮುದದಿಂ ಸ್ಮಶ್ರುಕೂರ್ಚಂಕಳಾಪೋ
ತ್ಕರ ರೇಖಾವ್ಯಾಪ್ತಿಯಂ ಮಾಡಿಸುತೆ ಪರಶುರಾಮಪ್ರಕೋಪಾಗ್ನಿ ಭೂಪಾ।
ಳರನಿಂಬಿಂ ತಳ್ತುವಂದಾತನನತಿಮುದದಿಂ ಕಾದು ತನ್ನೊಂದು ಚಿಹ್ನಂ
ಬೆರಸಿತ್ತಂ ರಾಗಿಸುತ್ತಂ ಕಳಚುರಿವೆಸರಂ ತತ್ಕುಳಕ್ಕೀಶ್ವರಾಂಕಂ ॥
ಅಂತಿಂತೊಂದು ದಿನಂ ಮನೋಮುದದಿನಶ್ವತ್ಥಾಮನುಂ ಸೋಮಭೂ
ಕಾಂತಾಧೀಶನುಮರ್ಥಿಯಿಂದೆಸೆವ ಕೈಳಾಸಾದ್ರಿಗಾಪಾರ್ವತೀ ।
ಕಾಂತಾರಾಧನೆಗೆಂದು ಪೋಗೆ............"

ಈ ಶಾಸನಗಳಲ್ಲಿ ಹೇಳಿರುವ ಕಥೆಗಳು ವಿಶ್ವಾಸಾರ್ಹವಾಗಲಿ, ಅಲ್ಲದಿರಲಿ, ಬಿಜ್ಜಳನು ಜೈನನಾಗಿರಲಾರನು, ಶೈವನಾಗಿರಬಹುದು ಎಂಬ ಊಹೆಗೆ ಸಹಾಯಕಾರಿಗಳಾಗಿವೆ. ಏಕೆಂದರೆ ಬಿಜ್ಜಳನೂ ಅವನ ಮಕ್ಕಳೂ ಜೈನರೇ ಆಗಿದ್ದಪಕ್ಷದಲ್ಲಿ ತಮ್ಮ ಕಾಲದಲ್ಲಿಯೇ ಹುಟ್ಟಿದ ಈ ಶಾಸನಗಳಲ್ಲಿ ತಮ್ಮ ಪೂರ್ವಜರು ಶೈವರಾಗಿದ್ದರೆಂದು ಬರೆಯಲು ಅವಕಾಶ ಕೊಡುತ್ತಿದ್ದರೆ ? ಇವುಗಳಲ್ಲಿ ಒಂದು ಬಿಜ್ಜಳನ ಕಾಲದಲ್ಲಿ ಹುಟ್ಟಿದ್ದು; ಇನ್ನೊಂದು ಅವನ ಮಗನಾದ ರಾಯ

ಮುರಾರಿ ಸೋಮಿದೇವ (ಸೋಮೇಶ್ವರ)ನ ಕಾಲದಲ್ಲಿ ಹುಟ್ಟಿದ್ದು. ಬಿಜ್ಜಳ ಸೋಮಿದೇವರೂ ಅವರ ಕಾಲದ ಜನರೂ ಕಾಲಚುರ್ಯರು ಶೈವಮತದವರೆಂದೇ ಭಾವಿಸಿದ್ದರೆಂದು ಈ ಶಾಸನಗಳಿಂದ ತೋರುವು ದಲ್ಲವೆ ?

ಬಿಜ್ಜಳನ ಮತ್ತು ಅವನ ಮಕ್ಕಳ ಕಾಲದಲ್ಲಿ ಹುಟ್ಟಿದ ಅನೇಕ ಶಿಲಾ ಶಾಸನಗಳು ನಮ್ಮ ದೇಶದಲ್ಲಿ ದೊರೆತಿವೆ. ಅವುಗಳಲ್ಲಿ ಕೆಲವು ವೀರಗಲ್ಲುಗಳು, ಕೆಲವು ದಾನಶಾಸನಗಳು. ಬಿಜ್ಜಳನೂ ಅವನ ಮಕ್ಕಳೂ ಅವರ ಕೈಕೆಳಗಿನ ಅಧಿಕಾರಿಗಳೂ ದಾನ ಮಾಡಿರುವುದು ಬಹುಶಃ ಶೈವ ವೈಷ್ಣವ ದೇವಾಲಯಗಳಿಗೆ, ಅದರಲ್ಲಿಯೂ ಮುಖ್ಯ ವಾಗಿ ಶಿವದೇವಾಲಯಗಳಿಗೆ ಮತ್ತು ಶೈವ ಮಠಗಳಿಗೆ. ಬಿಜ್ಜಳನಾ ಗಲಿ ಅವನ ಮಕ್ಕಳಾಗಲಿ ಜೈನ ಗುರುಗಳಿಗೆ ಅಥವಾ ಜೈನ ಬಸ್ತಿಗ ಳಿಗೆ ಒಂದು ದಾನವನ್ನೂ ಮಾಡಿದಂತೆ ತೋರುವುದಿಲ್ಲ. ಬಿಜ್ಜಳನೂ ಅವನ ಮಗ ಸಂಕಮನೂ ಕೋಡಿಯ ಮಠದ (ಇದು ಕಾಲಾಮುಖ ರೆಂಬ ಶೈವಗುರುಗಳ ಮಠ) ವಾಮಶಕ್ತಿ ದೇವರ ''ಕಾಲಂ ಕರ್ಚಿ'' ಅವರಿಗೆ ಭೂ ದಾನವನ್ನು ಮಾಡಿದಂತೆ ಶಿಕಾರಿಪುರದ ೯೬ನೆಯ ಮತ್ತು ೧೦೨ನೆಯ ಶಾಸನಗಳಲ್ಲಿ ಹೇಳಿದೆ. ಆ ವಿಷಯವನ್ನು ತಿಳಿ ಸುವ ಆ ಶಾಸನಗಳ ಸ್ವಲ್ಪ ಭಾಗವನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಕೊಟ್ಟಿದೆ :

''............ಬಿಜ್ಜಳ ಮಹೀಪಾಳಂ ದಕ್ಷಿಣ ಕೇದಾರೇಶ್ವರದೇವ ರಂಗಭೋ ಗಕ್ಕಂ ತಪೋಧನರಾಹಾರದಾನಕ್ಕಂ ವಿದ್ಯಾದಾನಕ್ಕಂ ಖಂಡಸ್ಫುಟಿತ ಜೀರ್ಣೋಧಾರ ಕ್ಕಂ ಶಿಷ್ಟೇಷ್ಟ ಸಂತರ್ಪಣಕ್ಕಮೆಂದು ೬ನೆಯ ವಿಷು ಸಂವತ್ಸರದ ಪುಷ್ಯಮಾಸದಮಾ ವಾಸ್ಯೆ ಸೂರ್ಯಗ್ರಹಣದಂದು ಗೌತಮಾಚಾರ್ಯ ಶಿಷ್ಯರಪ್ಪ ವಾಮಶಕ್ತಿಪಂಡಿತದೇವರ ಕಾಲಂ ಕರ್ಚಿ ನೂಱುಂಬಾಡದೊಳಗಣ ಕಿಱುಗೇರಿಯಂ ತ್ರಿಭೋಗಾಭ್ಯಂತರಂ ಧಾರಾ ಪೂರ್ವಕಂ ಮಾಡಿಕೊಟ್ಟಂ.''—ಶಿಕಾರಿಪುರ ೧೦೨.

"ಸ್ವಸ್ತಿ ಶ್ರೀಮತ್ ಸಂಕಮದೇವ ವರ್ಷದ ೫ನೆಯ ವಿಕಾರಿ ಸಂವತ್ಸರದ ವೈಶಾಖ ಮಾಸದಮಾವಾಸ್ಯೆ ಸೋಮವಾರ ವೃಷಭ ಸಂಕ್ರಮಣ ವ್ಯತೀಪಾತ ದಂದು ಶ್ರೀಮತ್ ಕೇದಾರೇಶ್ವರ ದೇವರ ಅಂಗಭೋಗ ರಂಗಭೋಗ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಂ ತಪೋಧನ ಬ್ರಾಹ್ಮಣರಾಹಾರದಾನಕ್ಕಂ ಜಡ್ಡುಳಿಗೆಯ ಕಂಪಣದ ಬಲ್ಲಿಯಬಾಡಂ ಕಿಱುಬಳ್ಳಿಗಾವೆಯುಂ ಶ್ರೀಮತ್ ಸಂಕಮದೇವ ಚಕ್ರವರ್ತಿ ತದೀಯ ಸ್ಥಾನಾಚಾರ್ಯರಪ್ಪ ಶ್ರೀಮದ್ರಾಜಗುರು ವಾಮಶಕ್ತಿದೇವರ ಕಾಲಂಕರ್ಚಿ ಧಾರಾಪೂರ್ವಕಂ ಮಾಡಿ ಯಾಚಂದ್ರಾರ್ಕ ತಾರಂ ಬರಂ ಸರ್ವಂ ನಮಸ್ಯಂ ಸಲ್ವಂತಾಗಿ ಕೊಟ್ಟಂ."—ಷಿಕಾರಿಪುರ ೯೬.

ಬಿಜ್ಜಳನಾಗಲಿ ಸಂಕಮನಾಗಲಿ ಜೈನರಾಗಿದ್ದರೆ ವಾಮಶಕ್ತಿ ದೇವರ ಕಾಲನ್ನು ತೊಳೆಯುತ್ತಿದ್ದರೆ? ಕೇದಾರೇಶ್ವರ ದೇವರಿಗಾಗಿ ವಾಮಶಕ್ತಿ ಪಂಡಿತರಿಗೆ ಭೂದಾನ ಮಾಡಿದವರು ಒಂದು ಜೈನ ಬಸ್ತಿಗಾಗಲಿ ಒಬ್ಬ ಜೈನ ಗುರುವಿಗಾಗಲಿ ಏಕೆ ಯಾವದೊಂದು ದಾನವನ್ನೂ ಮಾಡಲಿಲ್ಲ? ಇವರು ಜೈನರಲ್ಲದೆ ಶೈವರೇಕೆ ಆಗಿರಬಾರದು?

ಇನ್ನೊಂದು ವಿಚಾರ. ಬಿಜ್ಜಳನಿಗೆ ಸೋವಿದೇವನೆಂಬ ಒಬ್ಬ ಮಗನಿದ್ದನಷ್ಟೆ. ಬಿಜ್ಜಳನು ಆ ಮಗನನ್ನು ಪುರಿಕರನಿಳಯನಾದ ಸೋಮನಾಥದೇವರ ಅನುಗ್ರಹದಿಂದ ಪಡೆದನೆಂದು ಸೋವಿದೇವನ ಕಾಲದಲ್ಲೇ ಹಟ್ಟಿದ ಷಿಕಾರಿಪುರದ ೨೩೬ನೆಯ ಶಾಸನದ ಈ ಪದ್ಯದಿಂದ ಗೊತ್ತಾಗುತ್ತದೆ:—

ನಿಜಶೌರ್ಯೋದ್ರೇಕದಿಂ ನೂರ್ಮಡಿಪಿ ಮಗನನಾ ಬಿಜ್ಜಣಕ್ಷೋಣಿಪಾಳಂ
ತ್ರಿಜಗನ್ನಾಥಂ ನಿಜಾಜ್ಞಾರಚಿತ ಭುವನಯೂಥಂ ವೃಷೋದ್ಯದ್ವರೂಥಂ
ವಿಜಿತಾಂಗೋದ್ಭೂತಯೂಥಂ ಪುರಿಕರನಿಳಯಂ ಸೋಮನಾಥಂ ಕುಡಲ್ ಪೆ
ತ್ತು ಜಯಶ್ರೀಧಾಮನಂ ಸೋಮನನಮಳಗುಣಸ್ತೋಮನಂ ರಾಜಿಸಿರ್ದಂ ||

ಇದರಿಂದ ಬಿಜ್ಜಳನು ಶಿವಭಕ್ತನೆಂದು ವ್ಯಕ್ತವಾಗುವುದಲ್ಲವೆ? ಸೋವಿದೇವನು ಜೈನನಾಗಿದ್ದರೆ ಇಂತಹ ಪದ್ಯವನ್ನು ಶಾಸನದಲ್ಲಿ ಬರೆಯುತ್ತಿದ್ದರೆ? ಬಿಜ್ಜಳನೂ ಅವನ ಮಕ್ಕಳೂ ಜೈನರಲ್ಲವೆಂದೂ ಶಿವಭಕ್ತರೆಂದೂ ಆ ಕಾಲದಲ್ಲಿ ಪ್ರತೀತಿ ಇತ್ತೆಂದು ಈ ಪದ್ಯದಿಂದ ಸ್ಪಷ್ಟಪಡುವುದಿಲ್ಲವೆ?

ಮೇಲೆ ಹೇಳಿದ ಈ ದೇಶದ ಶಾಸನಗಳಲ್ಲದೆ ಸುಮಾರು ಕ್ರಿ. ಶ. ೧೨೮೨ರಲ್ಲಿ ಹುಟ್ಟಿದ ಆಂಧ್ರ ದೇಶದಲ್ಲಿರುವ ಮಲ್ಕಾಪುರ ಶಾಸನದಿಂದ ಗೋಳಕೀಮಠದ ಶೈವಗುರುಗಳಿಗೂ ಕಾಲಚುರ್ಯರಾಜರಿಗೂ ವಂಶಪಾರಂಪರ್ಯವಾಗಿ ಗುರುಶಿಷ್ಯ ಸಂಬಂಧವಿತ್ತೆಂದು ತಿಳಿದು ಬರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದ ಆ ಶಾಸನದ ಕೆಲವು ಭಾಗಗಳನ್ನು ವಾಚಕರ ಅವಗಾಹನೆಗಾಗಿ ಇಲ್ಲಿ ಉದ್ಧರಿಸಿದೆ.

ಅಸ್ತಿ ವಿಶ್ವಂಭರಾಸಾರಃ ಕಮಲಾಕುಲಮಂದಿರಂ |
ಭಾಗೀರಥೀನರ್ಮದಯೋರ್ಮಧ್ಯಂ ದಹಲ ಮಂಡಲಂ ||

ಉಗ್ರಂ ತತ್ರ ತಪಶ್ಚರನ್ನಿಯಮಯನ್ ಬಾಹ್ಯೇಂದ್ರಿಯಕ್ರೀಡನಂ
ಸಾಂದ್ರಾನಂದಮಯೇ ಸಮಾಧಿಸಮಯೇ ಚಿತ್ತೇನ ಲೀನಃ ಶಿವೇ
ನೀತ್ವಾ ಕಾಲಮನಂತಮಂತಕಜಯೀ ಸದ್ಭಾವಶಂಭುರ್ಗುರುಃ
ದುರ್ವಾಸಾನ್ವಯ ಸಂಭವಃ ಸುಚರಿತಃ ಪ್ರಾಬುದ್ಧಪುಣ್ಯೈರ್ನೃಣಾಂ ||

ಶೈವಾನಾಂ ಪ್ರಥಮಾಯ ಶಂಕರಪದಧ್ಯಾನಾಮೃತಾಂಭೋನಿಧಿ
ಕ್ರೀಡಾಂಬ್ರೇಡಿತ ಕರ್ಮನಿರ್ಮಲತರ ಸ್ವಾಂತಾಯ ಶಾಂತಾತ್ಮನೇ
ತಸ್ಮೈ ನಿಸ್ಪೃಹಚೇತಸೇ **ಕಲಚುರಿಕ್ಷ್ಮಾಪಾಲ ಚೂಡಾಮಣಿ**
ರ್ಗ್ರಾಮಾಣಾಂ ಯುವರಾಜ ದೇವನೃಪತಿರ್ಭಿಕ್ಷಾಂ ತ್ರಿಲಕ್ಷಂ ದಧೌ ||

. . . .

ಅಥ ನೃಪಶೇಖರಮಾಲಾ ಲಾಲಿತಪಾದಾತ್ರ ವಾಮಶಂಭುರಭೂತ್ ।
ಅದ್ಯಾಪಿ **ಕಲಚುರೀಶಾಯ ಚರಣಾರಾಧಕಾಃ** ಪ್ರಶಸ್ಯಂತೇ ॥

. . . .

ಪ್ರಣಾಮವ್ಯಾಲೋಲತ್ **ಕಲಚುರಿ ಮಹೀಪಾಲ** ಪರಿಷತ್
ಕಿರೀಟಪ್ರಕ್ರೀಡತ್ ಕಿರಣಕಲಿಕಾ ಲಾಲಿತಪದಾಃ ।
ಯಶಃ ಪೂರಸ್ವೇರಸ್ತಬಕಿತದಿಶಃ ಕೇರಲಭವಾಃ
ತತಃ ಪದ್ಮಾವಾಸಾ ವಿಮಲ ಶಿವಪಾದಾಸ್ಸಮಭವನ್ ॥

. . . .

ಶ್ರೀ ಚೋಳೇಶ್ವರ ಮಾಳವ ಕ್ಷಿತಿಪತೀ ರಾಜನ್ಯಚೂಡಾಮಣೀ
ಯಚ್ಛಿಷ್ಯೋ ಕಿಮುತಃಪರಂ ಗಣಪತಿ ಕ್ಷೋಣೀಪತಿರ್ಯತ್ಸುತಃ ।
ನಸ್ಯತ್ತಸ್ಯ ಮುದೇ ಸದೇಶಿಕವರಶ್ಶೈವಾಗಮಾಂಭೋನಿಧಿಃ
ಶ್ರೀ ವಿಶ್ವೇಶ್ವರದೇಶಿಕಃ **ಕಲಚುರಿಕ್ಷ್ಮಾಪಾಲ ದೀಕ್ಷಾಗುರುಃ** ॥

ಬಿಜ್ಜಳನ ವಂಶಕ್ಕೆ ಮೂಲ ಪುರುಷನಾದ ಕೃಷ್ಣರಾಜನು ದಹಳ ಮಂಡಳದಲ್ಲಿ ರಾಜ್ಯಭಾರ ಮಾಡಿದನೆಂದು ಹಿಂದೆ ಹೇಳಿದ ದಾವಣಗೆರೆಯ ೪೨ನೆಯ ಶಾಸನದಿಂದ ಗೊತ್ತಾಗುತ್ತದೆ. ಭಾವ ಶಂಭು ಗುರುವಿಗೆ ಗ್ರಾಮಗಳನ್ನು ದಾನ ಮಾಡಿದ ಕಾಲಚುರ್ಯ ರಾಜನೂ ದಹಲಮಂಡಲದವನೆಂದು ಮಲ್ಕಾಪುರ ಶಾಸನದಿಂದ ಗೊತ್ತಾಗುತ್ತದೆ. ಆದಕಾರಣ ಬಿಜ್ಜಳನ ಪೂರ್ವಜರು ಶೈವರೆಂದೂ ಬಿಜ್ಜಳನೂ ಅವನ ಮಕ್ಕಳೂ ಶೈವರೇ ಆಗಿದ್ದಿರಬೇಕೆಂದೂ ಊಹಿಸಲು ಬೇಕಾದಷ್ಟು ಅವಕಾಶವಿದೆ.

ಡಾಕ್ಟರ್ ಫ್ಲೀಟ್‌ರವರಿಗೂ ಲೂಯಿ ರೈಸರವರಿಗೂ ಮೇಲೆ ಹೇಳಿದ ಕಲಚುರ್ಯ ಶಾಸನಗಳು ಗೊತ್ತಿದ್ದವು. ಅವರು ಜೈನ

ವೀರಶೈವ ಗ್ರಂಥಗಳ ಹೇಳಿಕೆಗೆ ಶಾಸನಗಳ ಹೇಳಿಕೆಗಿಂತಲೂ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಂತೆ ಕಾಣುತ್ತದೆ. ಬಿಜ್ಜಳನ ಮತದ ವಿಚಾರವು ಡಾಕ್ಟರ್ ವೆಂಕಟಸುಬ್ಬಯ್ಯನವರಿಗೆ ಮುಖ್ಯ ವಿಷಯವಾಗಿರದೆ ಪ್ರಾಸಂಗಿಕವಾಗಿದ್ದುದರಿಂದ ಅವರು ಇದಕ್ಕೆ ಸಂಬಂಧಿಸಿದ ಅಂಶಗಳನ್ನು ವಿಸ್ತಾರವಾಗಿ ಪ್ರತಿಪಾದಿಸಲಿಲ್ಲವೆಂದು ತೋರುತ್ತದೆ. ಮಲ್ಕಾಪುರ ಶಾಸನದ ಒಂದು ನಕಲನ್ನು ದಯೆಯಿಟ್ಟು ಕಳುಹಿದ್ದಕ್ಕಾಗಿ ಬ್ರಹ್ಮಶ್ರೀ ವೇಟೂರು ಪ್ರಭಾಕರ ಶಾಸ್ತ್ರಿಗಳವರಿಗೆ ನಾನು ಋಣಿಯಾಗಿದ್ದೇನೆ.

ಟಿ. ಎಸ್. ವೆಂ.

ಸಾಹಿತ್ಯ ಮತ್ತು ವಿಜ್ಞಾನ

(೧೯೨೮ನೆಯ ಸೆಪ್ಟಂಬರ್ ೩ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಲ್ಲಿ ಕೊಟ್ಟ ಸಂವತ್ಸರಾರಂಭ ಭಾಷಣ)

ಮಹಾಶಯರೆ,

ನಮಗೆಲ್ಲರಿಗೂ ಪೂಜ್ಯರಾಗಿರುವ ಮ॥ ವೆಂಕಟನಾರಣಪ್ಪನವರು ನನ್ನ ಪರಿಚಯವನ್ನು ತಮಗೆ ಉಂಟುಮಾಡಿಕೊಡುವ ನೆವದಿಂದ ನನ್ನ ವಿಚಾರವಾಗಿ ಒಂದೆರಡು ವಿಶ್ವಾಸದ ಮಾತುಗಳನ್ನು ಹೇಳಿದರು. ಅವರ ವಿಶ್ವಾಸವೇನೋ ಸ್ವಾಭಾವಿಕವಾದದ್ದು. ಆದರೆ ಅದರಿಂದ ನನ್ನ ಕೆಲಸವೇನೂ ಸುಲಭವಾಗಿಲ್ಲ. ನಾನು ಬುದ್ಧಿವಾದ ಹೇಳಲು ಅರ್ಹನೆಂದೂ ಅದನ್ನು ಹೇಳುವೆನೆಂದೂ ಅವರು ಅಪ್ಪಣೆಕೊಡಿಸಿದರು. ಬುದ್ಧಿ ಹೇಳಬೇಕು ಎಂದು ಕೇಳುವುದು ಅವರ ವಿನಯ ಸೌಜನ್ಯಗಳನ್ನು ತೋರಿಸುತ್ತದೆ. ಆದರೆ ಬುದ್ಧಿ ಹೇಳುವುದಕ್ಕೆ ತಾನು ಅರ್ಹನೆಂದು ನನ್ನಂಥವನು ಒಪ್ಪಿಕೊಂಡರೆ,—ಅದನ್ನು ಮನಸ್ಸಿನಲ್ಲಾದರೂ ಇಟ್ಟುಕೊಂಡಿದ್ದರೆ,—ಅದು ಯೋಗ್ಯತೆಗೆ ಮೀರಿದ ಸ್ವಾಭಿಮಾನವೆಂದೂ, ಹಾಗೆ ಮಾಡಹೊರಡುವುದು ಔದ್ಧತ್ಯವೆಂದೂ ನಾನು ತಿಳಿದುಕೊಂಡಿದ್ದೇನೆ.

ಈ ದಿವಸದ ಆಹ್ವಾನಪತ್ರಿಕೆಯಲ್ಲಿ ನನ್ನ ಕರ್ತವ್ಯವು "ಆರಂಭ ಭಾಷಣ" ಎಂದು ಹೇಳಿದೆ; "ಉಪನ್ಯಾಸ" ಎಂದು ಹೇಳಿಲ್ಲ. ಇದು ನನಗೆ ಒಂದು ಉಪಕಾರವೇ. "ಉಪನ್ಯಾಸ"ವೆಂದರೆ, ಅದರಲ್ಲೊಂದು ಶಾಸ್ತ್ರ ಕ್ರಮವಿರಬೇಕು, ಗಹನ ವಿಚಾರವಿರಬೇಕು, ಪ್ರೌಢ ಶೈಲಿಯಿರಬೇಕು. ಆದರೆ ಸಾಮಾನ್ಯ ಭಾಷಣಕ್ಕೆ ಆ ಕಟ್ಟಿಲ್ಲ. ಇಂಗ್ಲಿಷಿನಲ್ಲಿ "talk" ಎಂಬ ಹಾಗೆ, ಪ್ರಾಸ್ತಾವಿಕ ರೀತಿಯಲ್ಲಿ ಒಂದೆರಡು ವಿಷಯಗಳನ್ನು ಅರಿಕೆಮಾಡಿ, ಆ ವಿಷಯಗಳಲ್ಲಿ ತಾವು

ಅಪ್ಪಣೆಕೊಡಿಸಬಹುದಾದ ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬುದೇ ನನ್ನ ಈಗಿನ ಉದ್ದೇಶ.

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕು; ಅದರಲ್ಲಿ ಒಳ್ಳೊಳ್ಳೆಯ ಗ್ರಂಥಗಳು ಹುಟ್ಟುವಂತೆ ಮಾಡಬೇಕು—ಎಂಬುದು ನಮ್ಮೆಲ್ಲರ ಉದ್ದೇಶವಾಗಿದೆ. ಆ ಉದ್ದೇಶದಿಂದಲೇ ಈ ಸಂಘವು ಕೆಲವು ವರ್ಷಗಳಿಂದ ಬಹು ಶ್ರದ್ಧೆ ವಹಿಸಿ ಕೆಲಸಮಾಡುತ್ತಿದೆ. ಇದರಂತೆಯೇ ಮೈಸೂರು, ತುಮಕೂರು, ಶಿವಮೊಗ್ಗ ಮುಂತಾದ ಇತರ ಕಡೆಗಳಲ್ಲಿಯೂ ತಕ್ಕಮಟ್ಟಿಗೆ ಪ್ರಯತ್ನ ನಡೆಯುತ್ತಿದೆ. ಇದು ಸಂತೋಷದ ಸಂಗತಿ. ಆದರೆ ಉತ್ತಮ ಸಾಹಿತ್ಯೋತ್ಪತ್ತಿಗೆ ಬೇಕಾದುದು ಸಂಘ ಪರಿಷತ್ತುಗಳ ಉತ್ಸಾಹ ಪರಿಶ್ರಮಗಳು ಮಾತ್ರವೇ ಅಲ್ಲ. ಅವಕ್ಕಿಂತ ಬಹು ಮುಖ್ಯವಾಗಿ ಇರಬೇಕಾದ ಒಂದು ಸಂದರ್ಭಾನುಕೂಲವು ನಮ್ಮಲ್ಲಿ ಇನ್ನೂ ತಕ್ಕಮಟ್ಟಿಗೆ ಉಂಟಾಗಿಲ್ಲ. ಜೀವಕಳೆಯಿಂದ ಕಳಕಳಿಸುವ ಮಹಾ ಕಾವ್ಯಗಳು ಹುಟ್ಟಲಿಕ್ಕೆ ಯಾವ ಆವರಣ ಸನ್ನಿವೇಶ (atmosphere)ವಿರಬೇಕೋ—ಯಾವ ಮಳೆ ಗಾಳಿ ಬಿಸಿಲುಗಳ ಸೇರಿಕೆಯಿರಬೇಕೋ—ಅದು ನಮ್ಮಲ್ಲಿ ಇನ್ನೂ ಬೇಕಾದಷ್ಟು ಆಗಿಲ್ಲ. ಇದನ್ನು ಕುರಿತು ತಮ್ಮಲ್ಲಿ ಪ್ರಸ್ತಾಪಮಾಡಬೇಕೆಂಬುದು ನನ್ನ ಯೋಚನೆ.

ಸಾಹಿತ್ಯದ ಧರ್ಮ

ಸಾಹಿತ್ಯವೆಂಬುದು ಎಂಥಾದ್ದು? ಅದರ ಸ್ವಭಾವವೇನು?—ಎಂದು ಬಹುಕಾಲದಿಂದ ಚರ್ಚೆ ನಡೆಯುತ್ತಿದೆ. ನಮ್ಮ ದೇಶದಲ್ಲಿ ಸಂಸ್ಕೃತ ಲಾಕ್ಷಣಿಕರು ಆ ವಿಚಾರವಾಗಿ ಗ್ರಂಥಗಳನ್ನು ಬರೆದಿದ್ದಾರೆ; ಪಾಶ್ಚಾತ್ಯರಲ್ಲಿಯೂ ಪಂಡಿತರೂ ಕವಿಗಳೂ ಪ್ರಬಂಧಗಳನ್ನು ಬರೆದಿದ್ದಾರೆ. ಈ ನಮ್ಮ ಮತ್ತು ಹೊರಗಿನ ಕಾವ್ಯ ಮೀಮಾಂಸಕರಲ್ಲಿ ಸ್ಥೂಲವಾಗಿ ಎರಡು ಪಕ್ಷಗಳಿವೆ. ಒಂದು ಪಕ್ಷದವರು—ಮನಸ್ಸಿಗೆ ತಾತ್ಕಾಲಿಕ ಸಂತೋಷವನ್ನು ಉಂಟುಮಾಡತಕ್ಕುದೇ ಕಾವ್ಯ; ಯೋಚನೆ ಚಿಂತೆಗಳನ್ನು ಬಿಡಿಸಿ ಮನಸ್ಸಿಗೆ ಹರ್ಷವನ್ನುಂಟುಮಾಡುವುದೇ ಅದರ ಕರ್ತವ್ಯ; "ರಮಣೀಯಾರ್ಥಪ್ರತಿ

ಪಾದಕಶ್ಶಬ್ದಃ ಕಾವ್ಯಂ'' (ಜಗನ್ನಾಥಪಂಡಿತ) ಎಂದು ಹೇಳುವರು. ಇನ್ನೊಂದು ಪಕ್ಷದವರು ಕಾವ್ಯವು ಕೇವಲ ವಿನೋದ ಮಾತ್ರ ಪರ್ಯವಸಾಯಿಯಲ್ಲ; ವಿನೋದಕ್ಕಿಂತ ಹೆಚ್ಚಾದ ಉದ್ದೇಶವೂ ಅದಕ್ಕುಂಟು ಎಂದು ಹೇಳುತ್ತಾರೆ. ಹೀಗೆ ಎರಡು ಮತಗಳು ಸ್ವದೇಶ ಪರದೇಶಗಳೆರಡರಲ್ಲಿಯೂ ಇರುತ್ತವೆ. ಕಾವ್ಯವನ್ನೋದಿದರೆ ಸಂತೋಷವೇನೋ ಉಂಟಾಗಲೇ ಬೇಕು. ಅದಿಲ್ಲದಿದ್ದರೆ ಆ ಗ್ರಂಥ ವನ್ನು ಜನರು ಮುಟ್ಟುವುದೇ ಇಲ್ಲ. ಆದರೆ ಅದರಿಂದ ಮನಸ್ಸಿಗೆ ಒಂದು ಪರಿಪಾಕವೂ ಆಗಬೇಕು; ಹಾಗೆ ಆದ ಸಂಸ್ಕಾರದ ಮೂಲಕ ವಾಚಕನಿಗೆ ಆತ್ಮಶೋಧನೆಯುಂಟಾಗಿ, ಅವನ ಜೀವನ ರೀತಿಯು ಉತ್ತಮಪಡಬೇಕು. ಕಾವ್ಯದಿಂದ ವಾಚಕನ ಜೀವಿತದಲ್ಲಿ ವಿನೋದ ಕಾಲಕ್ಷೇಪ ಮಾತ್ರವಲ್ಲದೆ ಬೇರೊಂದು ಉದ್ಧಾರ ಕಾರ್ಯವೂ ನಡೆಯಬೇಕು. ಉತ್ಕೃಷ್ಟ ಭಾವನಾ ವಿಕಾಸವೇ ಆ ಕಾರ್ಯ. ಕಾವ್ಯ ರಸಾನುಭವದಿಂದ ಹೃದಯದಲ್ಲುತ್ಪನ್ನವಾಗುವ ಕರುಣ ವೀರ ಪ್ರೇಮಾದಿ ಯಾವ ಉದಾತ್ತಭಾವಗಳುಂಟೋ, ಅವೇ ಮನುಷ್ಯ ಜೀವನದ ಮೂಲ ಸಾಮಗ್ರಿ. ಅವೇ ನಮ್ಮ ಬಾಳಿಕೆಯ ಸಾರಾಂಶ. ಆದುದರಿಂದ ಕಾವ್ಯದ ಪ್ರತಿಫಲವೇ ಜೀವಿತದ ಸ್ವಾರಸ್ಯ ಭಾಗವೆಂದು ಹೇಳಬಹುದು. ನಾನು ಈ ಮತಕ್ಕೆ ಸೇರಿದವನು.

ಈ ಸಾಹಿತ್ಯ ವಿಚಾರ ಬಂದಾಗಲೆಲ್ಲಾ ನಾನು ಬೇಸರವಿಲ್ಲದೆ ಹೇಳುವ ಕಥೆಯೊಂದುಂಟು. ಹೆಯಿನ್ (Heine) ಎಂಬ ಒಬ್ಬ ಪ್ರಸಿದ್ಧ ಜರ್ಮನ್ ಕವಿಯಿದ್ದನಲ್ಲವೆ? ಆತನಿಗೆ ಅವಸಾನಕಾಲ ಬಂದಾಗ ಆತನು ತನ್ನ ಇಷ್ಟ ಮಿತ್ರರನ್ನು ಕರೆದು—''ನೀವು ತುಂಬಾ ಅಭಿಮಾನಶಾಲಿಗಳು; ನನ್ನ ಮರಣಾನಂತರ ನನಗೆ ಒಂದು ಸಮಾಧಿ ಕಟ್ಟಿಸಿ, ಅದರಮೇಲೆ ಹೂವಿನ ಮಾಲೆಯನ್ನೇನೋ ಹಾಕುವಿರಿ. ಆದರೆ ಅದರ ಜೊತೆಗೆ ನೀವು ಒಂದು ಕತ್ತಿಯನ್ನೂ ಇರಿಸಬೇಕು; ಇದು ನನ್ನ ಆಶೆ''—ಎಂದು ಕೇಳಿಕೊಂಡನಂತೆ. ಇದರ ಅಭಿಪ್ರಾಯವೇನು? ತಾನು ಬರೆದ ಕಾವ್ಯವು ಕೇವಲ ವಿನೋದಪ್ರಧಾನವಾದುದಲ್ಲ; ತನ್ನ ಜನರು ಲೋಕದಲ್ಲಿ ಶ್ರೇಯ

ಸ್ಕಾರವಾದ ರೀತಿಯಲ್ಲಿ ಬಾಳಬೇಕಾದರೆ ಅವರ ಮನೋವೃತ್ತಿ ಜೀವನ ಕ್ರಮಗಳು ಉತ್ತಮವಾಗಬೇಕು; ಹೀಗೆ ಅವರಿಗೆ ಆಗಬೇಕಾಗಿರುವ ಸಂಸ್ಕಾರಕ್ಕೆ ಸತ್ಕಾವ್ಯವೇ ಸಾಧನೆ; ಕಾವ್ಯವು ದೇಶದಲ್ಲಿರತಕ್ಕ ಪಾಪ, ದೋಷ, ದುಃಖ, ಅಜ್ಞಾನ—ಇವುಗಳ ನಾಶಕ್ಕೆ ಸಹಾಯವಾಗತಕ್ಕ ಕತ್ತಿ; ಅದು ಬರಿಯ ಹೂವಮಾಲೆಯಲ್ಲ. ಅದು ಹೆಂಗಸಿನಂತೆ ವಿಲಾಸೈಕಪರವಾದುದಲ್ಲ; ಗಂಡಸಿನ ವೀರಚರ್ಯೆಯೂ ಅದಕ್ಕೆ ಸೇರಿದೆ—ಹೀಗೆಂಬುದೇ ಹೆಯಿನ್ ಕವಿಯ ತಾತ್ಪರ್ಯ.

ಇದೇ ಅರ್ಥವನ್ನು ಕೊಡುವ ಇತರ ಮಹಾಪುರುಷರ ಕಥೆಗಳೂ ಇವೆ. ಅಲೆಗ್ಸಾಂಡರ್ ಮಹಾವೀರನು ದಿಗ್ವಿಜಯಾರ್ಥವಾಗಿ ಸಂಚಾರಮಾಡುತ್ತಿದ್ದಾಗ ತನ್ನ ಹಾಸಿಗೆಯ ತಲೆದಿಂಬಿನ ಕೆಳಗೆ ಯಾವಾಗಲೂ ರತ್ನಖಚಿತವಾದ ಪೇಟಿಕೆಯಲ್ಲಿ ಹೋಮರ್ ಕವಿಯ ''ಇಲಿಯಡ್'' ಮಹಾಕಾವ್ಯವನ್ನೂ ಒಂದು ಕತ್ತಿಯನ್ನೂ ಇಟ್ಟುಕೊಂಡಿರುತ್ತಿದ್ದನಂತೆ. ಆತನು ರಣರಂಗದಲ್ಲಿ ಪರಿಶ್ರಮಿಸಿ ರಾತ್ರಿ ಎಷ್ಟು ಹೊತ್ತಿಗೆ ತನ್ನ ಬಿಡಾರಕ್ಕೆ ಬಂದರೂ ವಿಶ್ರಾಂತಿಗೆ ಹೋಗುವುದಕ್ಕೆ ಮೊದಲು ''ಇಲಿಯಡ್'' ಗ್ರಂಥವನ್ನೂ ತನ್ನ ಪಟ್ಟದ ಕತ್ತಿಯನ್ನೂ ಕಣ್ಣಾರ ನೋಡಿ ಸಂತೋಷಿಸಿ, ಅವುಗಳನ್ನು ತಲೆಕೆಳಗಿಟ್ಟುಕೊಂಡು ನಿದ್ದೆಹೋಗುತ್ತಿದ್ದನಂತೆ.

ಎಂದರೆ, ಕಾವ್ಯಪಾಠವು ದೊಂಬರ ಆಟದಂತಲ್ಲ; ಇಸ್ಪೀಟು ಚಮತ್ಕಾರದಂತಲ್ಲ. ಅದು ಉತ್ತಮವಾದ ಜೀವನ ಮಾರ್ಗದ ಬೆಳಕು; ಅಷ್ಟೇ ಅಲ್ಲ, ಅದೇ ನಮ್ಮ ಉತ್ತಮ ಜೀವನದ ಒಂದು ಭಾಗ, ಅಥವಾ ನಮ್ಮ ಜೀವನದ ಒಂದು ಅತ್ಯುತ್ತಮ ಭಾಗ. ಈ ಸಿದ್ಧಾಂತವೇ ಸಾಧುವಾದುದೆಂದು ನಾನು ನಂಬಿದ್ದೇನೆ. ಅದಕ್ಕೆ ತಕ್ಕಂಥ ಗ್ರಂಥಗಳು ನಮ್ಮ ಭಾಷೆಯಲ್ಲಿ ಇನ್ನೂ ಹುಟ್ಟಬೇಕು.

ಇದೇ ಕರ್ಣಾಟಕ ಸಂಘದಲ್ಲಿ ನಾನು ಹಿಂದೆ ಒಂದು ಸಲ ಮಾತನಾಡುತ್ತ, ಸಾಹಿತ್ಯವು ಜನಜೀವನಕ್ಕೆ ಕನ್ನಡಿಯಹಾಗಿರುವುದು—ಎಂದು ಹೇಳಿದೆ. ಇದರಲ್ಲಿ ನನ್ನ ತಾತ್ಪರ್ಯವೇನೆಂದರೆ, ಕಾವ್ಯವು ಜನಜೀವನದ ಮುಖ್ಯ ಲಕ್ಷಣಗಳನ್ನೂ ಲೋಪಗಳನ್ನೂ—ಎಂದರೆ,

ಜನರಿಗಿರುವ ಭಯ, ಕಳವಳ, ಸಂದೇಹ, ಆಶೆ, ಆವೇಶ, ಉತ್ಸಾಹ ಇವುಗಳನ್ನೆಲ್ಲಾ—ಪ್ರತಿಬಿಂಬಿಸತಕ್ಕುದಾಗಿರುತ್ತದೆ ಎಂಬುದು. ಈ ಮಾತು ಸಾಮಾನ್ಯವಾಗಿ ಎಲ್ಲ ಪುಸ್ತಕಗಳಿಗೂ ಅನ್ವಯಿಸುತ್ತದೆ; ವೃತ್ತಪತ್ರಿಕೆಗಳಿಗೂ ಸಹ ಅನ್ವಯಿಸಬಹುದು. ಆದರೆ ಸಾಮಾನ್ಯ ಪುಸ್ತಕ ಪತ್ರಿಕೆಗಳು ನಮ್ಮ ದಿನಚರಿಯ ಸಂಗತಿಗಳನ್ನು—ಎಂದರೆ ಮಳೆ, ಬೆಳೆ, ವ್ಯಾಪಾರ, ಆರೋಗ್ಯ, ಮೋಟಾರು ಹಾವಳಿ, ರೈಲಿನ ಅನಾಹುತ, ಹೆಂಡಕುಡುಕರ ಜಗಳ, ಪೊಲೀಸಿನವರ ತಾತ್ಸಾರ, ಊರಿನ ಕಕ್ಷಿಗಳು—ಇವೇ ಮುಂತಾದ ತಾತ್ಕಾಲಿಕ ಸಂಗತಿಗಳನ್ನು ಮಾತ್ರ ತಿಳಿಸುತ್ತವೆ. ಆದರೆ ಕಾವ್ಯಗಳು—ಗದ್ಯವಾಗಲಿ, ಪದ್ಯವಾಗಲಿ—ಇವುಗಳಿಗಿಂತ ಗಹನವಾದ, ಆಳವಾದ, ವಿಸ್ತಾರವಾದ, ಬಹಳ ಕಾಲ ಉಳಿಯತಕ್ಕ ಧರ್ಮಸಂಕಟ, ಆಧ್ಯಾತ್ಮಿಕ ಸಂದೇಹ, ಸಾಮಾಜಿಕ ವ್ಯಥೆ, ಬಹುಜನ ಮನೋರಥ—ಇವುಗಳನ್ನೆಲ್ಲಾ ಬಣ್ಣಿಸುತ್ತವೆ. ಇವು ನಮ್ಮ ದೇಶದ ಬಹು ಹಿಂದಿನ ಗ್ರಂಥಗಳಲ್ಲಿ ವ್ಯಕ್ತವಾಗುತ್ತವೆ. ರಾಮಾಯಣ, ಭಾರತ, ಇವುಗಳಿಗಿಂತ ಹಿಂದಿನ ವೇದ—ವೇದವು ಕೂಡ ಒಂದು ದೃಷ್ಟಿಯಿಂದ ಸಾಹಿತ್ಯವೆಂದೇ ನನ್ನ ಅಭಿಪ್ರಾಯ—ಇವುಗಳಿಂದ ಆಗಿನ ಜನರ ಜೀವನ ರೀತಿ ಹೇಗಿತ್ತು, ಮನೋಭಾವಗಳು ಹೇಗಿದ್ದುವು, ಅವರ ಬುದ್ಧಿ ಯಾವ ಯಾವ ವಿಷಯಗಳನ್ನು ಚರ್ಚೆ ಮಾಡುತ್ತಿತ್ತು—ಎಂಬುದು ತಿಳಿದುಬರುತ್ತದೆ. ಅಲ್ಲಿಂದ ಈಚಿನ ಕಾವ್ಯಗಳಲ್ಲಿ ಈ ವಿಚಾರಗಳು ಅಷ್ಟಾಗಿ ಕಂಡುಬರುವುದಿಲ್ಲ. ಕಾಳಿದಾಸನಲ್ಲಿ ಅಲ್ಪ ಸ್ವಲ್ಪ ಕಾಣಬಹುದು. ಅಲ್ಲಿಂದ ಮುಂದೆ ಆಯಾ ಕಾಲದ ಜನಜೀವನವು ಕಾವ್ಯಗಳಲ್ಲಿ ಅಷ್ಟು ಪ್ರಧಾನವಾಗಿ ಗೋಚರವಾಗುವುದಿಲ್ಲ. ಅವು ಹೇಳುವುದೆಲ್ಲಾ ಹಿಂದಿನ ಕಥೆ—ರಾಮಾಯಣ ಭಾರತಗಳ ಕಥೆ. ಇವುಗಳನ್ನು ಚಮತ್ಕಾರದ ರೀತಿಯಲ್ಲಿ, ಸ್ವಲ್ಪ ಹರ್ಷವಾಗುವಹಾಗೆ, ಚಿತ್ರವಿಚಿತ್ರವಾಗಿ ವರ್ಣಿಸಿದ್ದಾರೆ. ಆದರೆ ಈ ಈಚಿನ ಕವಿಗಳು ಮಾನವ ಜೀವನದ ಮೂಲ ಪ್ರಸಂಗಗಳಿಗೆ ಕೈಹಾಕಿಲ್ಲ. ಅವರ ಕಾವ್ಯಗಳು ನಮ್ಮಗಳನ್ನು ಮೈಮರೆಯುವಂತೆ ಮಾಡಲಾರವು.

ಸಂಸ್ಕೃತ ಕವಿಗಳೇ ಹೀಗಾದಮೇಲೆ ಇನ್ನು ಕನ್ನಡ ಕವಿಗಳ ವಿಚಾರವನ್ನು ಹೇಳಬೇಕಾಗಿಯೇ ಇಲ್ಲ. ಪಂಪ, ರನ್ನ, ನಾರಣಪ್ಪ, ಲಕ್ಷ್ಮೀಶ ಮುಂತಾದ ಐದಾರು ಮಂದಿಯನ್ನು ಬಿಟ್ಟರೆ ಉಳಿದವರೆಲ್ಲ ಬರಿಯ ಕಥೆ ಹೇಳತಕ್ಕವರು; ರಾಜಾಸ್ಥಾನದಲ್ಲಿದ್ದುಕೊಂಡು, ರಾಜನಿಗೆ ನಿದ್ರೆ ಬಾರದೆ ಇದ್ದರೆ, ಅಥವಾ ಬೇಸರವಾದರೆ, ಕಾಲಕಳೆಯುವ ಉಪಾಯವನ್ನು ಒದಗಿಸತಕ್ಕವರು. ಅವರ ಕಾವ್ಯಗಳಲ್ಲಿ ತಕ್ಕಮಟ್ಟಿಗೆ ರಸವಿದೆ, ಮಾತಿನ ಆಡಂಬರ ಹೆಚ್ಚಾಗಿದೆ, ವರ್ಣನೆಯ ಚಮತ್ಕಾರ ವಿಶೇಷವಾಗಿದೆ. ಇವುಗಳಿಂದ ಅಷ್ಟಿಷ್ಟು ಸಂತೋಷವೂ ಆಗುತ್ತದೆ. ಆದರೆ ಇವುಗಳನ್ನು ಯಾವಾಗಲೋ ಸ್ವಲ್ಪ ಹೊತ್ತು, ವಾರಕ್ಕೆ ಒಂದು ದಿನ ಎರಡು ದಿನ, ಓದಬಹುದು; ಅಷ್ಟೇ. ಮನಸ್ಸಿಗೆ ಧರ್ಮಸಂಕಟ ಒದಗಿದಾಗ, ಕಳವಳ ಉಂಟಾದಾಗ, ಜೀವನದಲ್ಲಿ ಜುಗುಪ್ಸೆ ಬಂದಾಗ ಇವುಗಳನ್ನು ನೋಡಿ ಸಮಾಧಾನ ಧೈರ್ಯಗಳನ್ನು ತಂದುಕೊಳ್ಳುವುದಕ್ಕೆ ಅವುಗಳಲ್ಲಿ ತಕ್ಕಷ್ಟು ಭಾವ ಜೀವಾಳವಿಲ್ಲ. ಸಂಸ್ಕೃತ ರಾಮಾಯಣ ಭಾರತಗಳನ್ನು ಎಲ್ಲಿ ತೆಗೆದು ಓದಲಿ, ಅಲ್ಲಿ ಭಾವಗಳು ಅಲೆ ಅಲೆಯಾಗಿ ಉಕ್ಕಿಬರುತ್ತವೆ; ಅವು ಪಾಠಕನ ಎದೆಯನ್ನು ಜಾಲಿಸುತ್ತವೆ; ಮೈಮರೆಯಿಸುತ್ತವೆ. ಈಚಿನ ಕಾವ್ಯಗಳಲ್ಲಿ ಈ ಶಕ್ತಿಯಿಲ್ಲ. ಬಾಹ್ಯಾಂಗ ಪರಿಪುಷ್ಟಿಯಿದೆ; ಆದರೆ ಅಂತಶ್ಚೈತನ್ಯವಿಲ್ಲ; ಚೈತನ್ಯವಿಲ್ಲದ ಶರೀರದಲ್ಲಿ ನಿಜವಾದ ಸೌಂದರ್ಯವಿರದು. ಹಿಂದೆ ಕಾವ್ಯವು ಅಷ್ಟೊಂದು ವೀರ್ಯವತ್ತಾಗಿ—ರಸಭರಿತ ಮಾತ್ರವಲ್ಲ; ರಸಕ್ಕೆ ಹೆಚ್ಚಿನದು ತೇಜಸ್ಸು, ಓಜಸ್ಸು—ಅಷ್ಟೊಂದು ವೀರ್ಯವತ್ತಾಗಿ, ತೇಜೋಮಯವಾಗಿ, ಓಜಸ್ವಿಯಾಗಿ, ಜೀವಕಳಾಸಂಪನ್ನವಾಗಿ ಹುಟ್ಟಿದ್ದುದೇನು, ಈಚೆಗೆ ಹಾಗೆ ಹುಟ್ಟದೆ ಇರುವುದೇನು? ಇದಕ್ಕೆ ನಾನು ನನ್ನ ಮನಸ್ಸಿನಲ್ಲಿಯೇ ಒಂದೆರಡು ಉತ್ತರಗಳನ್ನು ಕಲ್ಪಿಸಿಕೊಂಡಿದ್ದೇನೆ.

ಒಳ್ಳೆಯ ಸಜೀವ ಕಾವ್ಯಗಳು ಹುಟ್ಟಬೇಕಾದರೆ ಅವುಗಳನ್ನು ಬರೆಯುವವರ ಸುತ್ತಮುತ್ತ ಹೊಸ ಹೊಸ ಭಾವನೆಗಳ ಪರಸ್ಪರ ಸಂಘರ್ಷಣೆ ಇರಬೇಕು; ಜೀವಿತ ಧರ್ಮವನ್ನು ಹೊಸ ಹೊಸ ದೃಷ್ಟಿ

ಗಳಿಂದ ನೋಡಲು ಅವಕಾಶವಿರಬೇಕು; ಸಮಾಜ ಜೀವನದ ರಹಸ್ಯ ವೇನು, ಅದು ಎಲ್ಲಿ ಹೋಗುತ್ತಿದೆ, ಅದನ್ನು ಪರಿಷ್ಕಾರಗೊಳಿಸುವುದು ಹೇಗೆ—ಎಂಬ ಪ್ರಶ್ನೆಗಳಿರಬೇಕು; ಇದು ಒಳ್ಳೆಯದೆ, ಅದು ಒಳ್ಳೆಯದೆ, ಈ ದಾರಿ ಸರಿಯೆ, ಆ ದಾರಿ ತಪ್ಪೆ—ಎಂಬ ಸಂದೇಹಗಳಿರಬೇಕು. ಎದುವರೆಗೆ ಈ ಬಗೆಯ ಪ್ರಶ್ನೆಗಳೂ, ಸಂದೇಹಗಳೂ, ಸಮಸ್ಯೆಗಳೂ ಜನಜೀವನಕ್ಕೆ ಒದಗಿರುವುದಿಲ್ಲವೋ ಅದುವರೆಗೆ ದೊಡ್ಡ ಕವಿ ಹುಟ್ಟುವ ಸಂಭವವಿಲ್ಲ; ದೊಡ್ಡ ಕವಿ ಹುಟ್ಟದಿದ್ದರೆ ದೊಡ್ಡ ಕಾವ್ಯವಿಲ್ಲ.

ನಮ್ಮ ಸಂಘದ ಅಧ್ಯಕ್ಷರು (ಮ॥ ವೆಂಕಟನಾರಣಪ್ಪನವರು) "ಹಿಂದೆ ಇದ್ದ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಈಗ ಇಲ್ಲ" ಎಂದು ಅಪ್ಪಣೆಕೊಡಿಸಿದರು. ಇದು ಸಂತೋಷಕರವಾದ ಸಂಗತಿ. ಈ ಬದಲಾವಣೆ ಅವಶ್ಯವಾಗಿ ಆಗಬೇಕಾಗಿದ್ದುದು. ಈಗ ನಮ್ಮ ದೇಶದಲ್ಲಿ ಎರಡು ನಾಗರಿಕತೆಗಳ ಹೋರಾಟ ನಡೆಯುತ್ತಿದೆ. ಪಾಶ್ಚಾತ್ಯ ದೇಶಗಳಿಂದ ಬಗೆ ಬಗೆಯ ವಿಜ್ಞಾನಶಾಸ್ತ್ರಗಳೂ, ಯಂತ್ರಸಾಧನಗಳೂ, ಸಂಸ್ಥೆ ಸಂಪ್ರದಾಯಗಳೂ ನಮ್ಮಲ್ಲಿಗೆ ಬಂದು, ಅವುಗಳ ವ್ಯಾಪನೆಯಿಂದ ನಮ್ಮ ಜನರ ನಡೆವಳಿಕೆಗಳೂ ಅಭಿಪ್ರಾಯಗಳೂ ಬದಲಾಯಿಸುತ್ತಿವೆ. ಇದನ್ನು ನೋಡಿದರೆ ಕೆಲವರಿಗೆ ಏನೋ ಗಾಬರಿ, ಹೇಳಲಾಗದ ಭಯ. ಹಳೆಯ ದಾರಿಯನ್ನು ಬಿಟ್ಟು ಹೊಸ ದಾರಿಗೆ ಹೋಗುವಾಗ ಜನರಿಗೆ ಯಾವಾಗಲೂ ಹೀಗೆಯೇ. ಅದು ಸದ್ಯಕ್ಕೆ ವಿಕಾರವಾಗಿ ತೋರುತ್ತದೆ. ಹೊಸದಾಗಿ ರುಮಾಲು ಇಟ್ಟುಕೊಂಡ ಹುಡುಗನಿಗೆ ಬೀದಿಗೆ ಬರಲು ಬಹು ಸಂಕೋಚವಾಗುತ್ತದೆ. ಆದರೆ ಅಭ್ಯಾಸವಾದ ಮೇಲೆ ರುಮಾಲು ಚೆನ್ನಾಗಿಲ್ಲದಿದ್ದರೂ, ಮಾಸಿದ್ದರೂ ಅದನ್ನು ಅವನು ಯೋಚನೆ ಮಾಡದೆ ಧರಿಸಿ ಹೊರಡುತ್ತಾನೆ. ಹಾಗೆಯೇ, ಹೊಸ ಅಭಿಪ್ರಾಯಗಳೂ ಹೊಸ ನಡತೆಗಳೂ ಮೊದಮೊದಲು ವಕ್ರವಾಗಿ ತೋರಬಹುದು. ಕಾಲಕ್ರಮದಲ್ಲಿ ಅವು ತಪ್ಪೆಂದು ತೋರುವುದಕ್ಕೆ ಪ್ರತಿಯಾಗಿ ಆ ನಡೆ ನುಡಿಗಳೇ ಸರಿಯೆನ್ನಿಸುವುವು. ಮಗುವಿಗೆ ಮೊದಲಿನ ಹಲ್ಲು ಹುಟ್ಟುವಾಗ ಅದು ನೋವನ್ನುಂಟುಮಾಡುತ್ತದೆ;

ಆದರೆ ಪರ್ಯವಸಾನದಲ್ಲಿ ಅದು ಒಳ್ಳೆಯುದಕ್ಕೆ ದಾರಿಯೆಂದು ತಿಳಿದು ಬರುವುದು. ಈಗ ನಮ್ಮ ಜನರ ಬುದ್ಧಿಯು ಮೆಲ್ಲಮೆಲ್ಲನೆ ಹೊಸ ಮಾರ್ಗಕ್ಕೆ ತಿರುಗುತ್ತಿದೆ. ನಮ್ಮ ಆಚಾರ ವ್ಯವಹಾರಗಳಲ್ಲಿ ಹೊಸ ಹೊಸ ಭಾವನೆಗಳು ಮೂರ್ತೀಭವಿಸುತ್ತಿವೆ. ಇದರ ರೀತಿಗಳು ಒಂದೊಂದುವೇಳೆ ಪುರಾತನ ವಿಶ್ವಾಸಿಗಳಿಗೆ ವಿಪರೀತವಾಗಿ ಕಂಡರೂ, ಅದು ಕಾವ್ಯ ಪ್ರಪಂಚಕ್ಕೆ ಸಂತೋಷಾಸ್ಪದವಾದ ಸಂಗತಿ.

ಮತತ್ರಯ

ಕಾವ್ಯವು ಜನಜೀವನವನ್ನು ಪ್ರತಿಬಿಂಬಿಸಬೇಕೆಂದು ಹೇಳಿದೆ ನಲ್ಲವೆ? ಕವಿಯು ಜನಜೀವನದ ರಹಸ್ಯವನ್ನು ಉಳಿದವರಿಗಿಂತ ಮುಂಚೆಯೇ ಜಿಡಿಸಿ ನೋಡಿ ಅರಿತಿರುವವನಾಗಬೇಕು. ಆಗ ಅವನ ಕಾವ್ಯವು ಜನಜೀವನವನ್ನು ಪ್ರತಿಬಿಂಬಿಸಿ ಹೊಸ ಹೊಸ ಕಾಂತಿಗಳನ್ನು ಬೀರಲಾಗುತ್ತದೆ. ಮಹಾಕಾವ್ಯವು ಎರಡು ಕೆಲಸಗಳನ್ನು ಮಾಡಬೇಕು. ಮಹಾಭಾರತವನ್ನು ಓದಿದರೆ ಆಗಿಗೆ ಹಿಂದೆ ಜನರು ಹೇಗೆ ಬದುಕು ತ್ತಿದ್ದರು, ಅವರ ಸಮಾಜ ಹೇಗಿತ್ತು—ಎಂಬುದು ವ್ಯಕ್ತಪಡುತ್ತದೆ. ಅದಲ್ಲದೆ ಅಲ್ಲಿಂದ ಈಚೆಗೆ ಯಾವ ಬದಲಾವಣೆಗಳಾಗಬಹುದೆಂದು ಆಗಿನ ಪ್ರಮುಖ ಜನರು—ಭೀಷ್ಮ ವ್ಯಾಸ ವಿದುರರು—ತಿಳಿದಿದ್ದರು ಎಂಬುದೂ ಗೊತ್ತಾಗುತ್ತದೆ. ಹೀಗೆ ಭೂತಭವಿಷ್ಯತ್ತುಗಳೆರಡನ್ನೂ ವರ್ತಮಾನ ಪ್ರಸಂಗದಲ್ಲಿ ಸೇರಿಸಿ ತೋರಿಸುವವನು ಮಹಾಕವಿ. ಇಂಥಾ ಕಾರ್ಯವನ್ನು ಮಾಡಬೇಕಾದರೆ ಕವಿಯು ಜನಜೀವನದ ಮರ್ಮವನ್ನು ಹುಡುಕಿ ಯೋಚನೆಮಾಡಿರಬೇಕು.

ಲೋಕದ ಜೀವನವು ಕಷ್ಟದಿಂದ ಕೂಡಿದ್ದು; ನಮ್ಮ ಸಮಾಜದಲ್ಲಿ ಅನ್ಯಾಯಗಳಿವೆ; ಮನುಷ್ಯನ ಪ್ರಯತ್ನಕ್ಕೆ ಎಲ್ಲೆ ಇದೆ; ಆಯುಸ್ಸಿಗೆ ಮಿತಿ ಇದೆ; ಆಶೆಗೆ ಮೇರೆಯಿಲ್ಲ; ದುಃಖಕ್ಕೆ ಪಾರವಿಲ್ಲ—ಎಂಬುದನ್ನು ಎಲ್ಲಾ ದೇಶಗಳ ತತ್ತ್ವಜ್ಞರೂ ಅನುಭವಿಸಿ ತಿಳಿದಿದ್ದಾರೆ. ಆದರೆ ಮನುಷ್ಯನು ಅನುಸರಿಸಬೇಕಾದ ನೀತಿಯ ವಿಚಾರವಾಗಿ ಮಾತ್ರ ಅಭಿಪ್ರಾಯಗಳು ಬೇರೆ ಬೇರೆಯಾಗಿವೆ. ಇವನ್ನು ಸಾಮಾನ್ಯವಾಗಿ

ಮೂರು ಜಾತಿಯಾಗಿ ವಿಂಗಡಿಸಬಹುದು. ಈ ಮೂರು ಬಗೆಯ ಅಭಿಪ್ರಾಯಗಳ ಪ್ರಚಾರಕರೂ ಕವಿಗಳಲ್ಲಿದ್ದಾರೆ.

ಮೊದಲು "ಉಮ್ಮಾರ್ ಖಯ್ಯಾಂ" ಎಂಬ ಪಾರಸೀಕ ಕವಿಯ ಮತವನ್ನು ತೆಗೆದುಕೊಳ್ಳೋಣ. ಈ ಪ್ರಪಂಚ ಅನಿತ್ಯ; ನಮ್ಮ ದೇಹ ಶಾಶ್ವತವಲ್ಲ; ಇಲ್ಲಿಯ ಸುಖ ಸ್ಥಾಯಿಯಲ್ಲ; ಲೋಕದಲ್ಲಿ ದುಃಖವೇ ಹೆಚ್ಚು; ಸೃಷ್ಟಿಯಲ್ಲಿ ಸತ್ಯವೆಲ್ಲಿದೆಯೆಂದು ಎಷ್ಟು ಹುಡುಕಿದರೂ ಅದು ಸಿಕ್ಕುವುದಿಲ್ಲ—ಎಂದು ಮುಂತಾಗಿ ಜೀವನ ವಿಚಾರದಲ್ಲಿ ಎಲ್ಲರೂ ಹೇಳುವ ನಿರಾಶೆಯ ಮಾತನ್ನೇ ಉಮ್ಮಾರ್ ಕವಿಯೂ ಒಪ್ಪಿಕೊಂಡಿದ್ದಾನೆ. ಆದರೆ ಆತನ ಸಿದ್ಧಾಂತವೇನು? ಮನುಷ್ಯನಿಗೆ ಕೊರಗಿ ನರಳುತ್ತಿರುವುದೇ ಗತಿಯೆ? ಮನುಷ್ಯನು ಏನು ಮಾಡಬೇಕು—ಎಂಬ ಪ್ರಶ್ನೆಗೆ ಉಮ್ಮಾರನು ಹೀಗೆ ಉತ್ತರ ಹೇಳಿದ್ದಾನೆ:—

Ah, my Beloved, fill the Cup that clears
To-day of past Regrets and future Fears—
 To-morrow?—Why, To-morrow I may be
Myself with Yesterday's Sev'n Thousand Years.

Ah, make the most of what we yet may spend,
Before we too into the Dust descend.
 Dust into Dust, and under Dust, to lie,
Sans Wine, sans Song, sans Singer, and—
sans End!

ಹಾ! ಪ್ರಿಯಳೆ ಬಾ; ಇಂದಿನಿಂ ಹಿಂದಿನಳಲುಗಳ
 ಮುಂದಿನಳುಕುಗಳ ತೊಲಗಿಸುವ ಬಟ್ಟಲನು
ತುಂಬಿ ನೀಡೆನಗೀಗ; "ನಾಳೆ"ಯೆಂಬೆಯೊ?—ನಾಳೆ
 ಸೇರುವೆನು ಸೂರ್ಕೋಟಿ "ನಿನ್ನೆ"ಗಳ ಜೊತೆಗೆ.

ಮಣ್ಣಿನೊಳಗಕಟ ನಾವಿಳಿಯುವಂದಿನ ಮುನ್ನ
 ಇನ್ನುಮುಳಿದಿಹ ದಿನವ ಬರಿದೆ ನೀಗುವುದೇಂ?

ಮಣ್ಣೊಳಗೆ ಮಣ್ಣಾಗಿ ಮಣ್ಣೊಡನೆ ಬೆರೆವುದೇಂ
ಮಧುಗೀತ ಸತಿ ಗತಿಗಳೊಂದನರಿಯದೆಯೆ?

ಪ್ರಪಂಚ ನಶ್ವರವೇನೋ ನಿಜ; ಆದರೆ ಅದರಲ್ಲಿ ಇರುವಷ್ಟು ದಿವಸ ಎಷ್ಟು ಸುಖಪಡಬಹುದೋ ಅಷ್ಟನ್ನೂ ಪಟ್ಟುಬಿಡೋಣ! ಹಿಂದಿನವರು ಹುಡುಕಿ ಪಡೆಯದೆ ಹೋದ ತತ್ತ್ವವನ್ನು ಮರಳಿ ನಾವೂ ಏಕೆ ಹುಡುಕಿ ಘಾಸಿಪಡಬೇಕು? ಆ ಜೀವನ ರಹಸ್ಯವೇನಾದರೂ ಇರಲಿ. ನಮಗೆ ಇಲ್ಲಿ ಎಷ್ಟು ಸೌಖ್ಯ ಸಂಪಾದನೆ ಸಾಧ್ಯವೋ ಅಷ್ಟನ್ನೂ ಒಂದೇ ಮನಸ್ಸಿನಿಂದ ಅನುಭವಿಸೋಣ. ಹಿಂದೆ ಹಾಗಾಯಿತಲ್ಲಾ ಎಂಬ ಚಿಂತೆಗೂ, ಮುಂದೆ ಏನಾಗುವುದೋ ಎಂಬ ಕೊರಗಾಟಕ್ಕೂ ಏಕೆ ಮನಸ್ಸು ಕೊಡಬೇಕು? ಎಂಬುದು ಇದರ ಅಭಿಪ್ರಾಯ. ನಮ್ಮಲ್ಲಿಯೂ ಹಿಂದೆ ಹೀಗೆ ಹೇಳುವವರು ಇದ್ದರು:—

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ।
ತಸ್ಮಾತ್ ಸರ್ವಪ್ರಯತ್ನೇನ ಋಣಂ ಕೃತ್ವಾ ಘೃತಂ ಪಿಬ ॥

ಈ ದೇಹ ಬೂದಿಯಾದಮೇಲೆ, ಇಂಥ ಒಳ್ಳೇದೇಹ ಪುನಃ ಎಲ್ಲಿಂದ ಬಂದೀತು? ಸಾಲವನ್ನಾದರೂ ಮಾಡಿ ಈಗಲೇ ತುಪ್ಪ ತಿಂದು ಸುಖಪಡು—ಎಂಬುದು ಇದರ ತಾತ್ಪರ್ಯ. ಹೀಗೆ ಹೇಳುತ್ತಿದ್ದವರಿಗೆ ನಮ್ಮ ದೇಶದಲ್ಲಿ ಚಾರ್ವಾಕರೆಂದೂ ನಾಸ್ತಿಕರೆಂದೂ ಕೆಟ್ಟ ಹೆಸರು ಬಂತು. ಕೆಟ್ಟ ಹೆಸರನ್ನೇನೋ ಸುಲಭವಾಗಿ ಕೊಡಬಹುದು; ಆದರೆ ಮನಸ್ಸಿನಲ್ಲಿ ಹುಟ್ಟುವ ಅಭಿಪ್ರಾಯವನ್ನು ಅಳಿಸುವುದು ಸುಲಭವಲ್ಲ. ಅಭಿಪ್ರಾಯಗಳು ಮನುಷ್ಯನ ಸ್ವಾನುಭವದಿಂದ ಹುಟ್ಟುತ್ತವೆ. ತತ್ತ್ವಬೋಧನೆಯು ಸ್ವಾನುಭವಕ್ಕೆ ವಿರೋಧವಾಗಿದ್ದರೆ, ಆ ತತ್ತ್ವವು ಮನಸ್ಸಿಗೆ ಹಿಡಿಯುವುದು ಕಷ್ಟ. ನಮ್ಮ ದೇಶದಲ್ಲಿ ದೇವರ ಸ್ವರೂಪವನ್ನು ಕುರಿತು ಬಹು ಯುಗಗಳಿಂದ ವಾದ ವಿವಾದಗಳು ನಡೆದಿವೆಯಲ್ಲವೆ? ಅದರಿಂದ ಒಂದು ಸರ್ವಸಮ್ಮತ ಸಿದ್ಧಾಂತವೇನಾದರೂ ಫಲಿಸಿದೆಯೋ? ಇಲ್ಲ. ಇನ್ನೂ ವಾದಗಳೂ ಭಿನ್ನಾಭಿಪ್ರಾಯಗಳೂ ಇದ್ದೇ ಇವೆ. ಈ ವ್ಯರ್ಥವಾದ ಕಂಠಕ್ಷೋಭೆಯನ್ನು ನೋಡಿಯೇ ಉಮ್ಮಾರ್ ಕವಿಯು

ತನ್ನ ಪ್ರಿಯೆಯನ್ನು ಪರಿ ಪರಿಯಾಗಿ ಬೋಧಿಸುತ್ತಾ ಹೀಗೆಂದು ಕೇಳಿಕೊಳ್ಳುತ್ತಾನೆ:—

Ah, fill the Cup:—what boots it to repeat
How time is slipping underneath our feet:
  Unborn *To-morrow* and dead *Yesterday*,
Why fret about them if *To-day* be sweet !

One Moment in Annihilation's Waste,
One Moment, of the Well of Life to taste,
  The Stars are setting and the Caravan
Starts for the Dawn of Nothing—Oh, make haste!

How long, how long, in infinite Pursuit
Of This and That endeavour and dispute?
  Better be merry with the fruitful Grape
Than sadden after none, or bitter, Fruit.

ಹಾ! ತುಂಬು ಬಟ್ಟಲನು. ಕಾಲವದು ತಾಂ ನುಣ್ಚಿ
  ಕೈಗೆ ದೊರೆಯದೆ ಪರಿವ ಪರಿಯು ವಿವರಿಸಲೇಂ?
ನಿನ್ನೆ ಸತ್ತಿಹುದಿನ್ನು; ನಾಳೆ ಹುಟ್ಟದೆಯಿಹುದು;
  ಇಂದು ಸೊಗವಿರಲವನು ನೆನೆದಳುವುದೇಕೆ?

ಜೀವನದ ಸೊದೆಯ ನಾವೀ ನಿಮಿಷ ಸವಿಯದಿರೆ
  ಕರೆವುದಿನ್ನೊಂದು ನಿಮಿಷದಲಿ ಸುಡುಗಾಡು;
ಇನ ಶಶಿಗಳೋಡುತಿಹರೆಲ್ಲ ಶೂನ್ಯೋದಯಕೆ
  ಸಾಗುತಿಹರಹಹ! ಬಾ, ಸೊಗವಡುವ ಬೇಗ.

ಏಸುದಿನ, ಹಾ! ಏಸುದಿನ ಕೊನೆಯ ಕಾಣದಿಹ
  ಈ ಘಾಸಿ ಆ ತರ್ಕಗಳ ಬವಣೆ ನಮಗೆ?
ದೊರೆಯದಿಹ, ಕಹಿಯೆನಿಪ, ಫಲವನರಸುವುದೇಕೆ;
  ಮುದವ ಕಣ್ಗಿಂಬಾದ ದ್ರಾಕ್ಷಿ ಬೀರುತಿರೆ?

ನಾಳೆಯ ಯೋಚನೆ ಬೇಡ; ನಿನ್ನೆಯ ಯೋಚನೆ ಬೇಡ; ಈ ಹೊತ್ತು ಸಿಕ್ಕಿದ ಸುಖವನ್ನು ಅನುಭವಿಸಿ ಆನಂದಪಟ್ಟುಬಿಡೋಣ! ಇದು ಒಂದು ಮತ. ಇದನ್ನು ಸದ್ಯಸ್ಸುಖಾರ್ಜನೆಯ ಮತ, ಅಥವಾ ತಾತ್ಕಾಲಿಕ ಭೋಗ ವಾದ—ಎಂದು ಕರೆಯಬಹುದು.

ಎರಡನೆಯ ಮತ ನಮ್ಮ ದೇಶದಲ್ಲಿ ಈಗ ಬಹಳ ಸಾಮಾನ್ಯವಾಗಿರತಕ್ಕದ್ದು. ಇದು ನಮ್ಮಲ್ಲಿ ಬಹಳ ಹಿಂದೆ ಇರಲಿಲ್ಲ. ಈಚೆಗೆ,—ಎಂದರೆ ಸುಮಾರು ೨೦೦—೩೦೦ ವರ್ಷಗಳಿಂದ, ಕನ್ನಡಿಗರ ಪುರಂದರದಾಸರ ಕಾಲದಿಂದ ಈಚೆಗೆ,—ಬಂದ ತತ್ತ್ವ ಇದು. "ಆರೇನ ಮಾಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮ ವಿಧಿ ಬೆನ್ನಬಿಡದು" ಎಂಬುದು ಇದರ ಪಲ್ಲವಿ !

"ಜನ್ಮಾಂತರ ಕರ್ಮವೇ ಪ್ರಬಲವಾದದ್ದು. ಅದರಿಂದ ಬರುವುದು ಹೇಗಾದರೂ ಬರಲೇ ಬರುತ್ತದೆ; ಯಾವ ಯಾವುದು ಹೇಗೆ ಹೇಗೆ ನಡೆಯಬೇಕೋ ಅದನ್ನು ವಿಧಿ ಹಿಂದೆಯೇ ಗೊತ್ತುಮಾಡಿದೆ. ನಾವು ತಿದ್ದುತ್ತೇವೆಂದು ಹೊರಟರೆ ಫಲವಿಲ್ಲ. ಅದೃಷ್ಟದ ಮುಂದೆ ನಮ್ಮ ಪ್ರಯತ್ನವೆ? ಆದ್ದರಿಂದ, ಎಲೋ ಮನುಷ್ಯಪ್ರಾಣಿ, ಸುಮ್ಮನೆ ಇದ್ದುಬಿಡು! ದುಡಿದು ಪೇಚಾಡಬೇಡ! "ದೈವೀ ವಿಚಿತ್ರಾ ಗತಿಃ," "ಕಾಲಾಯ ತಸ್ಮೈ ನಮಃ," "ತಸ್ಮೈ ನಮಃ ಕರ್ಮಣೇ"—ಎಂದು ಮಂತ್ರ ಹೇಳಿ ಕೈಮುಗಿದು ಸುಮ್ಮನೆ ಕುಳಿತುಬಿಡು. ಏಕೆಂದರೆ, "ಸರ್ವಂ ನಿಷ್ಫಲಮೇತದೇವ ನಿಯತಂ ದೈವಂ ಪರಂ ದುರ್ಜಯಂ," ದೈವದ ಮುಂದೆ ಏನು ಮಾಡಿ ಏನು ಪ್ರಯೋಜನ? ಅದೃಷ್ಟದ ಮೇಲೆ ಭಾರಹಾಕಿ ತಣ್ಣಗಿರು"—ಎಂಬುದು ಈ ಮತದ ಉಪದೇಶ. ಇಂಗ್ಲಿಷಿನಲ್ಲಿ ಇದನ್ನು Fatalism (ಅದೃಷ್ಟಪಾರವಶ್ಯ ವಾದ) ಎನ್ನುತ್ತಾರೆ. ಇದರ ಮುಖ್ಯ ಲಕ್ಷಣವು ಪೌರುಷ ನಿರಸನ, ಅಥವಾ ಪುರುಷಪ್ರಯತ್ನವು ನಿಷ್ಫಲವೆಂಬ ವಾದ.

ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರೈರಪಿ।
ಲಲಾಟ ಲಿಖಿತಾ ರೇಖಾ ಪರಿಮಾರ್ಷ್ಟುಂ ನಶಕ್ಯತೇ ॥

ಎಂಬುದು ಇದರ ಮೂಲ ಮಂತ್ರ. ಹೀಗೆ ಹೀಗೆಯೇ ಆಗಬೇಕೆಂದು ವಿಧಿ ಹಣೆಯಲ್ಲಿ ಬರೆದುಬಿಟ್ಟಿದ್ದಾನೆ. ನಡೆಯುವುದು ನಡೆದೇ ಹೋಗುತ್ತದೆ. ಏನಾದರೂ ಕಳವಳವಿದ್ದರೆ ಜ್ಯೋತಿಷ್ಕರ ಹತ್ತಿರ ಹೋಗಿ! ಇಲ್ಲದಿದ್ದರೆ ಮಂತ್ರ ಹಾಕಿಸಿಕೊಳ್ಳಿ! ಅದೂ ಹೆಚ್ಚೇ! ಜ್ಯೋತಿಷ್ಕರು ಮಾಂತ್ರಿಕರು ತಾನೆ ಗ್ರಹ ಗತಿಯನ್ನು ತಿದ್ದಲಾಗುವುದೆ?—ಹೀಗೆಂಬುದು ನಮ್ಮ ಈಗಿನ ಮತ.

ಮೂರನೆಯದು ಪಾಶ್ಚಾತ್ಯರಲ್ಲಿ ಈಗ ಪ್ರಬಲಿಸಿರುವ ಮತ. ಈ ಮತವು ನಮ್ಮ ದೇಶದಲ್ಲಿ ಎಂದೂ ಇರದುದು ಎಂದಲ್ಲ. ಅದು ಹಿಂದೆ ಇರಲೇ ಇತ್ತು. ಗೀತಾಶಾಸ್ತ್ರವನ್ನು ಓದಿದಾಗಲೆಲ್ಲಾ ಅದು ಇತ್ತು ಎಂದೇ ಗೋಚರವಾಗುತ್ತದೆ. ಪ್ರಾಚೀನರು ಬರೆದ ಶಾಸ್ತ್ರ ಪುರಾಣ ಇತಿಹಾಸಗಳಲ್ಲೆಲ್ಲಾ ಅದು ಕಾಣಬರುತ್ತದೆ. ಆದರೆ ಈಚೆಗೆ,—"ಆರೇಸ ಮಾಡುವರು" ಬಂದಮೇಲೆ,—ಅದೃಷ್ಟದಲ್ಲಿ ನಮಗೆ ವಿಶ್ವಾಸ ಹೆಚ್ಚಿ, ದೃಷ್ಟದಲ್ಲಿ ನಂಬಿಕೆ ಕಡಮೆಯಾಗಿದೆ. ಯೂರೋಪಿನ ಆಧುನಿಕ ಕವಿಗಳಲ್ಲಿ ಇಂಗ್ಲೆಂಡಿನ ಷೆಲ್ಲೀ (Shelley) ಕವಿಯು ಈ ಮೂರನೆಯ ಮತವನ್ನು ಚೆನ್ನಾಗಿ ತೋರಿಸಿದ್ದಾನೆ. ಆದರೆ ಅಲ್ಲಿಯೂ ಇದೇನು ಹೊಸ ಮತವಲ್ಲ. ಇದು ಸೂರಾರು ವರ್ಷಗಳ ಹಿಂದೆ ಗ್ರೀಸ್ ದೇಶದಲ್ಲಿದ್ದುದೇ. ಗ್ರೀಸ್ ದೇಶವು ಇಂಗ್ಲೆಂಡಿನ—ಸಮಸ್ತ ಯೂರೋಪಿನ—ವಿದ್ಯಾ ವೈದುಷ್ಯಗಳಿಗೂ ಮಾತೃಸ್ಥಾನ. ಆ ಗ್ರೀಸಿನ ಪ್ರಸಿದ್ಧ ಕವಿಗಳು ಈ ಮೂರನೆಯ ಮತವನ್ನು ಪ್ರತಿಪಾದಿಸಿರುವರು. ಇದನ್ನು "ಪೌರುಷ ವಾದ" ಅಥವಾ "ಮಾನುಷ ಪ್ರಯತ್ನ ವಾದ" ಎಂದು ಕರೆಯಬಹುದು. ಕ್ರಿಸ್ತ ಶಕಕ್ಕೆ ೫೦೦ ವರ್ಷಗಳ ಹಿಂದೆ—ಎಂದರೆ ಈಗಿಗೆ ೨೪೦೦ ವರ್ಷಗಳ ಹಿಂದೆ—ಇದ್ದ ಅಯ್‌ಸ್ಕಲಸ್(Aeschylus)ಎಂಬ ಗ್ರೀಕ್ ಕವಿಯು "ಪ್ರೊಮಿತಿಯಸ್ ಬೌಂಡ್," (*Prometheus Bound*) "ಪ್ರೊಮಿತಿಯಸ್ ಅನ್-ಬೌಂಡ್" (*Prometheus Unbound*) ಎಂಬ ನಾಟಕಗಳನ್ನು ಬರೆದನು. ಇವುಗಳಲ್ಲಿ "ಪ್ರೊಮಿತಿಯಸ್" ಎಂಬ ಧೀರನು ಮನುಷ್ಯನಿಗೆ ಪ್ರತಿನಿಧಿ; ಮಾನವ ಜಾತಿಗೆ ಉಪಲಕ್ಷಣ. ಅವನಿಗೆ ದೈವ ವೈಪ

ರೀತ್ಯದಿಂದ ಸಂಕೋಲೆ ಬಿದ್ದು ಸ್ವಾತಂತ್ರ್ಯ ತಪ್ಪಿದ ರೀತಿ, ಆಮೇಲೆ ಸ್ವಸಾಹಸದಿಂದ ಅವನಿಗೆ ಬಂಧವಿಮೋಚನೆಯಾಗಿ ಅವನು ಪುನಃ ಸ್ವತಂತ್ರನಾದ ರೀತಿ—ಇವುಗಳನ್ನು ಕವಿಯು ಚಿತ್ರಿಸಿದ್ದಾನೆ. ಆದರೆ ಇವುಗಳಲ್ಲಿ ಮೊದಲನೆಯ ನಾಟಕವು ಲೋಕಕ್ಕೆ ಸಿಕ್ಕಿದೆ; ಎರಡನೆಯದು ಸಿಕ್ಕಿಲ್ಲ. ಅಯ್‌ಸ್ಕಲಸ್ಸನ ಕಾಲಕ್ಕೆ ಸಮೀಪ ಸಮಯದಲ್ಲಿಯೇ ಬದುಕಿದ ಸೋಫೋಕ್ಲೀಸ್ (Sophocles) ಕವಿಯು "ಆ್ಯಂಟಿಗೋನಿ" (*Antigone*) ಎಂಬ ನಾಟಕದಲ್ಲಿ ಮನುಷ್ಯನ ಸಾಹಸ ಎಂತಹುದು; ಅವನು ನಿಜ ಪೌರುಷದಿಂದ ಏನೇನು ಸಾಧಿಸಿದ್ದಾನೆ; ಪಂಚಭೂತಗಳನ್ನೂ ಇತರ ಜೀವರಾಶಿಗಳನ್ನೂ ಅವನು ಹೇಗೆ ವಶಮಾಡಿಕೊಂಡಿದ್ದಾನೆ; ಆದ್ದರಿಂದ ಅವನ ಶಕ್ತಿ ಎಷ್ಟು ದೊಡ್ಡದು—ಎಂಬ ಮಾನವ ಮಹಿಮಾ ಪ್ರಶಂಸೆಯಿದೆ. ಸರಿ ಸುಮಾರು ಅದೇ ಕಾಲದ ಯೂರಿಪಿಡೀಸ್ (Euripides) ಕವಿಯು, ಗ್ರೀಸ್ ದೇಶದ ದೇವತೆಗಳ ಕಾರ್ಯಗಳಲ್ಲಿಯೂ ಗುಣಗಳಲ್ಲಿಯೂ ತೋರಿಬರುತ್ತಿದ್ದ ಅಸಾಮಂಜಸ್ಯಗಳನ್ನು ಎತ್ತಿಹಾಕಿ, ಅವರನ್ನು ಅವಹೇಳನಮಾಡಿದ್ದಾನೆ. ದೇವತೆಗಳ ಕಾರ್ಯದ ಅದ್ಭುತವಂತಿರಲಿ, ಮನುಷ್ಯನ ಪ್ರಯತ್ನದಿಂದ ಅದಕ್ಕಿಂತ ಹೆಚ್ಚಿನ ಕಾರ್ಯ ನಡೆದಿದೆ ಎಂದು ಈ ಕವಿಯು ಸೂಚಿಸಿದ್ದಾನೆ. ಈ ಪುರುಷಪ್ರಯತ್ನವಾದವು ಯೂರೋಪಿನಲ್ಲಿ ಕ್ರಿಸ್ತ ಶಕಕ್ಕೆ ಬಹು ಹಿಂದಿನಿಂದ ಬೆಳೆದುಕೊಂಡುಬಂದಿದೆ. ಇಂಗ್ಲೆಂಡಿನ ಷೆಲ್ಲೀ (Shelley) ಕವಿಯು ಗ್ರೀಸಿನ ಅಯ್‌ಸ್ಕಲಸ್ಸಿನ (Aeschylus) ನಷ್ಟ ಗ್ರಂಥಕ್ಕೆ ಪ್ರತಿಯಾಗಿ ತಾನು ಒಂದು "ಪ್ರೊಮಿತಿಯಸ್ ಅನ್-ಬೌಂಡ್" (*Prometheus Unbound*) ಎಂಬ ನಾಟಕವನ್ನು ಬರೆದಿದ್ದಾನೆ. ಅದರಲ್ಲಿ ಡೆಮೊಗಾರ್ಗನ್ (Demogorgon) ಎಂಬ ದಿವ್ಯ ಚೈತನ್ಯವು ಆಡುವ ಮಾತು ಸಿದ್ಧಾಂತ ಭಾಗವಾಗಿದೆ. ಅದರಲ್ಲಿ ಮನುಷ್ಯನಿಗೆ ಉಪದೇಶರೂಪವಾದ ಭರತವಾಕ್ಯವಿದೆ; ಅದು ಹೀಗೆ:—

"To defy Power, which seems omnipotent;
To love, and bear; to hope till hope creates
From its own wreck the thing it contemplates;

Neither to change, nor falter, nor repent;
This, like thy glory, Titan, is to be
Good, great and joyous, beautiful and free;
This alone is Life, Joy, Empire and Victory."

"ಎದುರಿಸುತೆ ಸರ್ವ ವಿಭುವೆನಿಪಾದಿ ಶಕ್ತಿಯನು,
ನಲುಮೆದೋರುತೆ, ಸೈಸುತಾಶೆಯದು ಮುರಿದೊಡಂ
ಬಯಸಿದರ್ಥವ ತನ್ನ ಮುರುಕುಗಳಿನೇ ಕಟ್ಟಿ
ನಿಲಿಸುವನ್ನೆವರಂ ನಿರಾಶೆಯಾನದೆ, ಪಟ್ಟು
ಬಿಡದೆ, ಪಶ್ಚಾತ್ತಾಪಕೆಡೆಗುಡದೆ, ಕಂಪಿಸದೆ
ಬಾಳ್ವುದೈ, ಪುರುಷಸಿಂಹನೆ; ನಿನ್ನ ಕೀರ್ತಿಯವೊ
ಲದುವೆ ಶುಭವದುವೆ ಮಹಿಮೋನ್ನತಿಯದಾನಂದ
ವದುವೆ ಸೌಂದರ್ಯ ಸ್ವತಂತ್ರತೆಗಳದು ತಾನೆ
ಜೀವನಂ ಸಂಮೋದಮೈಶ್ವರ್ಯಮತುಲ ವಿಜಯಂ."

ಎಂತಹ ವೀರ ರಸಜನಕಗಳಾದ ವಾಕ್ಯಗಳಿವು! "ಆರೇನ ಮಾಡು ವರು, ಆರಿಂದಲೇನಹುದು" ಎಂಬ ಗೋಳಾಟವೆಲ್ಲಿ; ಈ ಧೀರ ಪ್ರತಿಜ್ಞೆಯೆಲ್ಲಿ? ಯಾವ ಅಚಿಂತ್ಯವೂ ಅದ್ಭುತವೂ ಆದ ಮಹಾ ಚೈತನ್ಯವು ಜಗತ್ತಿನ ಸಕಲ ವ್ಯಾಪಾರಗಳಿಗೂ ಮೂಲಕಾರಣವೂ ಪರಮ ನಿಯಾಮಕವೂ ಆಗಿರುವುದೋ ಅದೇ ಇಲ್ಲಿ Power "ಆದಿಶಕ್ತಿ" ಎಂಬ ಮಾತಿನಿಂದ ನಿರ್ದಿಷ್ಟವಾಗಿರತಕ್ಕ ವಸ್ತು. ಅದನ್ನು ದೈವವೆಂದಾದರೂ ಕರೆಯಿರಿ, ಮಾಯೆಯೆಂದಾದರೂ ಕರೆ ಯಿರಿ, ಪ್ರಕೃತಿಯೆಂದಾದರೂ ಕರೆಯಿರಿ, ಪ್ರಾಚೀನವೆಂದಾದರೂ ಕರೆ ಯಿರಿ, ವಿಧಿಯೆಂದಾದರೂ ಕರೆಯಿರಿ, ಪ್ರಧಾನವೆಂದಾದರೂ ಕರೆ ಯಿರಿ. ಯಾವ ಹೆಸರನ್ನಿಟ್ಟರೂ ಅದರ ಸ್ವರೂಪವನ್ನು ವಿಮರ್ಶಿಸಿ ನಿಷ್ಕರ್ಷೆ ಮಾಡಿದಂತೆ ಮಾತ್ರ ಆಗುವುದಿಲ್ಲ. ಈ ಅಪರಿಮೇಯವೂ ಅನಿರ್ವಚನೀಯವೂ ಅಶೇಷ ಜಗದ್ವಿಧಾಯಕವೂ ಆದ ಮಹಾ ಶಕ್ತಿಯನ್ನು ಮನುಷ್ಯನಾದವನು ಪ್ರತಿಭಟಿಸಬೇಕು. ಏಕೆಂದರೆ, ಅವನು ಉತ್ತಮೋತ್ತಮ ಪದವಿಗೆ ಹತ್ತಲಾಗದಂತೆ ತಡೆಯುಂಟಾಗು

ತ್ತಿರುವುದು ಆ ಮಹಾ ಶಕ್ತಿಯ ಲೀಲಾ ಕಾರ್ಯಗಳಿಂದಲೇ. ಆ ಶಕ್ತಿಯು ತನ್ನ ನಿಜ ಸ್ವರೂಪವನ್ನು ಸೃಷ್ಟಿಯ ಚಿತ್ರ ವಿಚಿತ್ರಗಳ ಹಿಂದೆ ಬಚ್ಚಿಟ್ಟುಕೊಳ್ಳದೆ ಇದ್ದಿದ್ದರೆ; ತನ್ನ ಕಾರ್ಯದ ರೀತಿ ಮರ್ಮಗಳು ನಮಗೆ ಸ್ಪಷ್ಟವಾಗುವಂತೆ ಅದು ಮಾಡಿದ್ದಿದ್ದರೆ; ಅದು ಮನುಷ್ಯರ ಮನೋಬುದ್ಧಿಗಳಿಗೆ ನಾನಾವಿಕಾರಗಳನ್ನು ಕಲ್ಪಿಸದೆ, ಅವುಗಳನ್ನು ಅಡ್ಡದಾರಿಗಳಲ್ಲಿ ಚದರಿಸದೆ ಇದ್ದಿದ್ದರೆ,—ಆಗ ಈ ಲೋಕದಲ್ಲಿ ಈಗಿರು ವಷ್ಟು ದುಃಖವಿರುತ್ತಿರಲಿಲ್ಲ; ಈಗಿನಷ್ಟು ಕ್ರೂರತನಗಳೂ ಅನ್ಯಾಯ ಗಳೂ ನಡೆಯುತ್ತಿರಲಿಲ್ಲ. ಮನುಷ್ಯನು ಸ್ವತಃ ಎಷ್ಟು ಉತ್ತಮ ನಾಗಿಯೂ ಎಷ್ಟು ಸುಖದಿಂದಲೂ ಬಾಳಬಹುದೋ ಅಷ್ಟುಮಟ್ಟಿನ ಉತ್ತಮತೆಯನ್ನೂ ಸುಖವನ್ನೂ ಅವನು ಪಡೆಯಲಾಗದಂತೆ ತಡೆ ಹಾಕಿಸುತ್ತಿರುವುದು ಅದೃಷ್ಟವೆನಿಸಿದ—ದೈವವೆನಿಸಿದ—ಸೃಷ್ಟಿ ಶಕ್ತಿ. ಆದುದರಿಂದ ಅದನ್ನೆದುರಿಸಬೇಕು. ಯಾವ ಒಂದು ಸುಸ್ಥಿತಿಯು ಮನುಷ್ಯನ ಪರಮ ಪುರುಷಾರ್ಥವೆಂದು ನಾವು ಎಣಿಸಿರುತ್ತೇವೆಯೋ ಅದು ಕೈಗೂಡದಂತಾಗಿರುವುದಕ್ಕೆ ಈ ಸೃಷ್ಟಿ ಶಕ್ತಿಯು ಎಷ್ಟೋ ಬಗೆಯ ವಿಘ್ನಗಳನ್ನು ತಂದೊಡ್ಡುತ್ತದೆ. ಅದು ಅವನ ಜನ್ಮಾಂತರ ಕರ್ಮಕ್ಕೆ ತಕ್ಕ ಪ್ರತಿಫಲವನ್ನೊದಗಿಸಬೇಕೆಂದೇ ಹಾಗೆ ಮಾಡು ತ್ತದೆಯೋ, ಅಥವಾ ತನ್ನೊಂದು ವಿನೋದ ಲೀಲೆಗಾಗಿಯೇ ಹಾಗೆ ಮಾಡುತ್ತದೆಯೋ—ನಾವರಿಯಲಾರೆವು. ಅದು ಹೇಗಾದರಿರಲಿ; ಆ ಮಹಾ ಶಕ್ತಿಯು ನಮ್ಮ ಉತ್ತಮ ದಶಾ ಸಾಧನೆಗೆ ಪಾಂಚಭೌತಿಕ ರೂಪಗಳಲ್ಲಿಯೂ ಜನರ ದುರಭಿಪ್ರಾಯ ದುಸ್ಸಂಪ್ರದಾಯ ರೂಪ ಗಳಲ್ಲಿಯೂ ಆತಂಕಗಳನ್ನು ಕಲ್ಪಿಸುತ್ತಿದ್ದರೆ ನಾವು ಕೈಕಟ್ಟಿ ಕುಳಿತಿರ ಬೇಕೆ? ಅಥವಾ ಆ ಮಹಾ ಶಕ್ತಿಯು ನಮ್ಮ ಸಾಮರ್ಥ್ಯವನ್ನು ಪರೀಕ್ಷಿಸುತ್ತಿರುವುದೆಂದು ಭಾವಿಸಿ, ಧೈರ್ಯವನ್ನು ತಾಳಿ, ಸಾಧ್ಯ ವಾದ ಯುಕ್ತಿ ಸಾಹಸಗಳಿಂದ ಅದನ್ನು ಎದುರಿಸಬೇಕೆ? ಎದುರಿಸ ಬೇಕೆನ್ನುತ್ತಾನೆ ಷೆಲ್ಲೀ. ಎದುರಿಸಬೇಕೆಂದರು ಗ್ರೀಸಿನ ಪುರಾತನ ಕವಿಗಳು. ಎದುರಿಸಬೇಕೆಂದು ಪ್ರಯತ್ನಿಸುತ್ತಿರುವವರು ಯೂರೋ ಪಿನ ವೈಜ್ಞಾನಿಕರು.

ವಿಜ್ಞಾನದ ಧರ್ಮ

ವಿಜ್ಞಾನ—"ಸೈನ್ಸ್"—ಎಂಬುದೇನು? ಅದು ಪ್ರಕೃತಿ ಪರೀಕ್ಷೆ, ಪ್ರಕೃತಿ ಪರಿಶೋಧನೆ, ಪ್ರಕೃತಿ ಪ್ರತಿಭಟನೆ. ಈ ಪ್ರಕೃತಿ ಯೆಂಬುದೇನು? ಅದು ಮನುಷ್ಯ ಸಂಬಂಧವಿಲ್ಲದ ಬಾಹ್ಯ ಜಗತ್ತು ಮಾತ್ರವೇ ಅಲ್ಲ. ಅದು ಚೇತನಾಚೇತನಾತ್ಮಕವಾದ ಸಮಸ್ತ ಪ್ರಪಂಚದಲ್ಲಿಯೂ ರೂಪುಗೊಂಡಿದೆ. ಮಾನುಷ ಸಮಾಜವೂ ವಿಶ್ವ ಪ್ರಕೃತಿಯ ಒಂದು ಅಂಶ ಮಾತ್ರವೇ. ಈ ವಿಶ್ವಪ್ರಪಂಚದ ನಾನಾ ಭಾಗಗಳನ್ನೆಲ್ಲ ಚೆನ್ನಾಗಿ ಪರೀಕ್ಷಿಸಿ, ಸೃಷ್ಟಿ ರಹಸ್ಯಗಳನ್ನರಿತು ಕೊಂಡು, ಜೀವನ ವಿಧಾನವನ್ನು ಉತ್ತಮಗೊಳಿಸಬೇಕೆಂಬುದು ವಿಜ್ಞಾನದ ಪ್ರಯತ್ನ. ಸೃಷ್ಟಿಯ ಒಳಮರ್ಮವೇನು? ಜೀವನ ಶಕ್ತಿಯ ಅಧಿಷ್ಠಾನವೆಲ್ಲಿರಬಹುದು? ಭೂಮಿಯ ಒಳಗೂ ಹೊರಗೂ ಮೇಲೂ ಸುತ್ತುಮುತ್ತಲೂ ಇರುವ ಕೋಟ್ಯನುಕೋಟಿ ದೊಡ್ಡ ಚಿಕ್ಕ ಪದಾರ್ಥಗಳ ಗುಣಧರ್ಮಗಳೆಂತಹುವು? ಅವುಗಳಿಂದ ಹುಟ್ಟುವ ನಾನಾವಿಧದ ಶಕ್ತಿ ಪ್ರಭಾವಗಳನ್ನು ಹೇಗೆ ಹೇಗೆ ವಿಂಗಡಿಸಿ, ಹೇಗೆ ಹೇಗೆ ಜೋಡಿಸಿ, ಹೇಗೆ ಹೇಗೆ ರೂಪಾಂತರಕ್ಕೆ ತಿರುಗಿಸಿ, ಅವುಗಳನ್ನು ಮನುಷ್ಯನಿಗೆ ಅನುಕೂಲಕಾರಿಗಳನ್ನಾಗಿ ಮಾಡಬಹುದು?—ಹೀಗೆಂಬ ಪ್ರಶ್ನೆಗಳೇ ವಿಜ್ಞಾನಶಾಸ್ತ್ರದ ಬೀಜಾಕ್ಷರಗಳು. ಲೋಕದಲ್ಲಿ ಈಗ ಇರುವ ಸ್ಥಿತಿಯಿಂದ ತೃಪ್ತನಾಗದೆ, ಅದು ಇನ್ನು ಮೇಲ್ಪಡಲಾರದೆಂಬ ನಿರಾಶೆಗೆ ಮನಸ್ಸಿನಲ್ಲೆಡೆಗುಡದೆ, ಮನುಷ್ಯನು ಇಹದಲ್ಲಿಯೂ ಸಹ ಪಡೆಯಲಿಕ್ಕಾಗುವ ಮೇಲ್ಮೆಗೆ ಮಿತಿಯಿಲ್ಲವೆಂದೂ; ಪ್ರಯತ್ನ ಪಟ್ಟರೆ ಮಾನವ ಜೀವನವನ್ನು ಈಗಿಗಿಂತ ಉತ್ಕೃಷ್ಟವಾದ ಸ್ಥಿತಿಗೆ ತರುವುದು ಸಾಧ್ಯವೆಂದೂ; ಅದಕ್ಕೆ ಮಾರ್ಗವು ಸಂತತವಾದ ಪ್ರಕೃತಿ ಪರಿಶೋಧನೆಯಿಂದಲೂ, ತತ್ಫಲವಾಗಿ ಒಂದು ಪಕ್ಕದಲ್ಲಿ ಹುಟ್ಟುವ ಭೌತಿಕ ರಾಸಾಯನಿಕಾದಿ ಸಂಧಾನಗಳಿಂದಲೂ, ಇನ್ನೊಂದು ಪಕ್ಕ ದಲ್ಲಿ ಹುಟ್ಟುವ ರಾಜಕೀಯ ಸಾಮಾಜಿಕ ಸಂಸ್ಕಾರಗಳಿಂದಲೂ ಉಂಟಾಗುವುದೆಂದೂ ವಿಜ್ಞಾನಿಯು ನಂಬಿರುತ್ತಾನೆ. ನಮ್ಮ ವೇದಾಂತಿ ಗಳು ಮನುಷ್ಯನ ಆಧ್ಯಾತ್ಮಿಕ ಸುಖಕ್ಕೆ ಪಾರವೇನೂ ಇಲ್ಲವೆಂದೂ,

ಬ್ರಹ್ಮಾನಂದದ ಬೀಜವು ಪ್ರತಿಯೊಬ್ಬ ಪ್ರಾಣಿಯಲ್ಲೂ ಅಡಗಿರುತ್ತದೆಯೆಂದೂ, ಅವನವನ ಸತ್ಕರ್ಮಾಚರಣೆ ಆತ್ಮಪರಿಶೋಧನೆಗಳಿಗೆ ತಕ್ಕಂತೆ ಪ್ರತಿಯೊಬ್ಬನೂ ಅನಂತ ಸುಖದ ಕಡೆಗೆ ಮುಂಬರಿಯುತ್ತಾ, ಕಡೆಗೆ ಅದರ ಪರಿಪೂರ್ಣ ದಶೆಯನ್ನು ಕಾಣಬಹುದೆಂದೂ ಹೇಳುತ್ತಾರಲ್ಲವೆ? ಅದೇ ರೀತಿಯಲ್ಲಿಯೇ, ಮಾನವನು ಈ ಭೂಲೋಕದಲ್ಲಿಯೂ ಪಡೆದುಕೊಳ್ಳಬಹುದಾದ ಸುಖ ಸಂತೋಷಗಳಿಗೂ ಎಲ್ಲೆಯಿರದೆಂದೂ, ಇರುವ ಕಷ್ಟಗಳನ್ನು ನೀಗುವುದಕ್ಕೂ ಹೊಸ ಸಂಪತ್ತುಗಳನ್ನು ಸಂಪಾದಿಸುವುದಕ್ಕೂ ಅವನು ಪ್ರಯತ್ನಪಡಲು ಪ್ರಕೃತಿಯ ರಚನೆಯಲ್ಲಿ ಅನಂತ ಮಾರ್ಗಗಳುಂಟೆಂದೂ, ಆ ಮಾರ್ಗಗಳನ್ನು ಕಂಡು ಹಿಡಿದು ಅವುಗಳನ್ನು ಅನುಸರಿಸುವುದಕ್ಕೆ ಅನುದಿನವೂ ಶ್ರಮಪಡುತ್ತಿರುವುದು ಅವನ ಕರ್ತವ್ಯವೆಂದೂ ವಿಜ್ಞಾನಿಗಳು ವಾದಿಸುತ್ತಾರೆ. ಇದನ್ನು Faith in Progress, Faith in Perfectibility "ಉತ್ಕರ್ಷ ಸಾಧ್ಯತಾ ವಿಶ್ವಾಸ," "ಪರಿಪೂರ್ಣ ಸ್ಥಿತಿಯನ್ನಡರುವುದು ಸಾಧ್ಯವೆಂಬ ನಂಬುಗೆ" ಎಂದು ಕರೆಯುತ್ತಾರೆ. ಕಾಲದೇಶಾದ್ಯುಪಾಧಿಗಳಿಗೆ ಸಿಕ್ಕದೆ, ಜರಾಮರಣಾದಿ ಷಡೂರ್ಮಿಗಳಿಗೆ ದೊರಕದೆ ಇರುವ ಆಧ್ಯಾತ್ಮಿಕ ಪ್ರಪಂಚದಲ್ಲಿ ಶಾಶ್ವತವೂ ಅಪಾರವೂ ಅಚ್ಯುತವೂ ಆದ ಶಾಂತಿ ಸುಖಗಳು ಹೇಗೆ ಲಭ್ಯಗಳೋ, ಹಾಗೆಯೇ ಅಂಥಾ ಶಾಂತಿ ಸುಖಗಳು ಈ ನಾನಾ ಉಪಾಧಿಗಳಿಗೆ ವಶವಾಗಿ ಸರ್ವದಾ ಪರಿವರ್ತನ ಹೊಂದುತ್ತಿರುವ ಆಧಿಭೌತಿಕ ಪ್ರಪಂಚದಲ್ಲಿಯೂ ಮೇರೆಯಿಲ್ಲದಂತೆ, ಹಾನಿಯಿಲ್ಲದಂತೆ, ಲಭ್ಯವಾಗುವುವೆಂದು ಹೇಳುವುದು ಅನೇಕರಿಗೆ ಸಮ್ಮತವಾಗದೆ ಹೋಗಬಹುದು. ಆದರೆ, ಈ ಆಧ್ಯಾತ್ಮಿಕ ಮತ್ತು ಆಧಿಭೌತಿಕ ಅನುಭವಗಳ ಹೋಲಿಕೆ ಈಗ ನಮ್ಮ ಪ್ರಸಂಗದ ಮುಖ್ಯಾಂಶವಲ್ಲ. ಮಾನವನ ಐಹಿಕ ಸ್ಥಿತಿ ನಮ್ಮ ಕಾಲದಲ್ಲಿರುವುದೇ ಉತ್ತಮೋತ್ತಮವಾದುದೆ, ಅಥವಾ ತನ್ನ ಬುದ್ಧಿ ಸಾಹಸಗಳಿಂದ ಅದನ್ನು ಅವನು ಇನ್ನೂ ಉತ್ತಮಪಡಿಸಲಾದೀತೆ? ಇದೇ ಸದ್ಯಃ ನಮ್ಮ ಮುಖ್ಯ ಪ್ರಶ್ನೆ. ಈ ಪ್ರಶ್ನೆಗೆ ಪಾಶ್ಚಾತ್ಯ ವೈಜ್ಞಾನಿಕರು —"ನಮ್ಮ ಐಹಿಕ ಸ್ಥಿತಿಯಲ್ಲಿ ಇನ್ನೂ ಉತ್ತಮತೆ ಸಾಧ್ಯವಾಗಿದೆ"

ಎಂದು ಹೇಳುತ್ತಾರೆ. ಬಾಹ್ಯ ಪ್ರಕೃತಿಯಲ್ಲಿರುವ ಶಕ್ತಿ ಪ್ರಭಾವಗಳನ್ನು ಕಂಡುಹಿಡಿದು ಅವುಗಳನ್ನು ಮನುಷ್ಯಾನುಕೂಲಕ್ಕೆ ಬಗ್ಗಿಸುವುದರಿಂದಲೂ, ಮನುಷ್ಯರ ಆಚಾರ ವ್ಯವಹಾರಗಳನ್ನು ಆಗಾಗ ಪರೀಕ್ಷಿಸಿ ಪರಿಷ್ಕಾರಗೊಳಿಸುವುದರಿಂದಲೂ, ಈಗ ಲೋಕದಲ್ಲಿ ಜನರಿಗಿರುವ ಅನೇಕ ಕಷ್ಟಕೊರತೆಗಳು ತೊಲಗಿ, ಅನೇಕ ಹೊಸ ಸಂಪತ್ತುಗಳೂ ಸೌಖ್ಯಗಳೂ ಅವರಿಗೆ ದೊರೆಯಬಹುದು ಎಂಬುದು ವಿಜ್ಞಾನದ ಮತ. ವಿಜ್ಞಾನವು ಕೊಡುವ ಉಪದೇಶವನ್ನು "ಪೌರುಷ ಪ್ರಕಾಶ ವಾದ", "ಬುದ್ಧಿ ಪರಿಶ್ರಮ ವಾದ", "ಮಾನವ ಪ್ರಯತ್ನ ವಾದ"—ಎಂಬ ಹೆಸರುಗಳಿಂದ ಕರೆಯಬಹುದು. ಅದನ್ನು "ಪುರುಷಕಾರ ಯೋಗ", "ಆತ್ಮಶಕ್ತಿಯೋಗ" ಎಂದಾದರೂ ಕರೆಯಬಹುದು. ಈಗಿರುವುದು ಸಾಲದು; ಇನ್ನೂ ಒಳ್ಳೆಯದನ್ನರಸಬೇಕು; ಇದಕ್ಕೆ ಸ್ವತಂತ್ರವೂ ನಿರ್ಭಯವೂ ಆದ ಪರೀಕ್ಷೆ ವಿಚಾರಣೆಗಳೇ ಸಾಧನ—ಹೀಗೆಂಬುದು ಪಾಶ್ಚಾತ್ಯರ ವಿಜ್ಞಾನ ತತ್ತ್ವ. ಇದು ಅವರಿಂದಾಗಿರುವ ನಾನಾ ಯಂತ್ರ ಸಂಧಾನ ಕಲ್ಪನೆಗಳಲ್ಲಿಯೂ, ರಾಜ್ಯ ಸಮಾಜ ಪರಿಷ್ಕರಣ ಕ್ರಮಗಳಲ್ಲಿಯೂ ದೃಷ್ಟಾಂತಕ್ಕೆ ಬಂದಿದೆ.

(ಸೈನ್ಸ್) "ವಿಜ್ಞಾನ"ವೆಂದರೆ ನೀವು ಕಾಲೇಜಿನಲ್ಲಿ ಮಾಡುವ ಬರಿಯ "ಪರೀಕ್ಷಾ ಪ್ರಯೋಗಗಳು" (Experiments) ಮಾತ್ರವೇ ಅಲ್ಲ. ಒಂದು ಪ್ರಾಣಿಯ ಶರೀರವನ್ನೋ ಗಿಡವನ್ನೋ ಕುಯ್ದು, ಅದರಲ್ಲಿರುವ ನರ, ನಾಳ, ಮೂಳೆ, ಮಾಂಸಗಳ ವಿವರಗಳನ್ನು ತಿಳಿಯುವ ಕ್ರಮವೊಂದೇ ವಿಜ್ಞಾನವಲ್ಲ. ಅಥವಾ ಒಂದು ವಸ್ತುವಿನ ತೂಕ, ಗಾತ್ರ, ಆಕಾರ, ಬಣ್ಣ—ಇವುಗಳನ್ನು ನಿಷ್ಕರ್ಷಿಸುವುದು ಮಾತ್ರವೇ ವಿಜ್ಞಾನವಲ್ಲ. ರೆಯಿಲ್, ಮೋಟಾರು, ಏರೊಪ್ಲೇನ್, ರೇಡಿಯೊಗ್ರಾಫ್—ಇಂಥಾ ಯಂತ್ರ ಸಂಧಾನಗಳ ನಿರ್ಮಾಣ ಮಾತ್ರವೇ ವಿಜ್ಞಾನದ ಸರ್ವಸ್ವವಲ್ಲ. ಇವೆಲ್ಲಾ ವಿಜ್ಞಾನದ ಕ್ರಿಯೆಗಳು, ಅಥವಾ ಮಾರ್ಗಗಳು, ಅಥವಾ ವಿಧಾನಗಳು. ವಿಜ್ಞಾನದ ಜೀವಾಳವೋ ಎಂದರೆ, ಅದು ಪರೀಕ್ಷೆ, ಸಂಶೋಧನೆ, ಸ್ವತಂತ್ರ ಬುದ್ಧಿ ಪರಿಶ್ರಮ. ಇದಕ್ಕೇ "ರ್ಯಾಷನಲಿಸಮ್" (Rationalism) ಸ್ವತಂತ್ರ

ವಿವೇಚನೆ, ವಿಮರ್ಶಾಪರತೆ ಎಂದೂ, "ಸ್ಪಿರಿಟ್ ಆಫ್ ಎನ್‌ಕ್ವಯರಿ" (Spirit of Enquiry) ವಿಚಾರ ಬುದ್ಧಿ, ಶೋಧನ ಬುದ್ಧಿ ಎಂದೂ ಹೆಸರು. ಹಿಂದೆ ನಮ್ಮ ಸಾಂಖ್ಯ, ನ್ಯಾಯ ಮುಂತಾದ ದರ್ಶನಗಳು ಹುಟ್ಟಿದುದು ಈ ಸ್ವತಂತ್ರ ವಿಚಾರ ಬುದ್ಧಿಯಿಂದಲೇ; ಈ ಸ್ವತಂತ್ರ ಬುದ್ಧಿಯೇ ಈಗ ಯೂರೋಪಿನಲ್ಲಿ ವಿಜ್ಞಾನ (ಸೈನ್ಸ್) ಆಗಿ ಪರಿಣಮಿಸಿದೆ. ಇದು ಈಗಿಗೆ ಮನುಷ್ಯ ಪ್ರಯತ್ನದ ಮುಖ್ಯ ರೂಪ.

(ಸೈನ್ಸ್) ವಿಜ್ಞಾನಕ್ಕೆ ಬೀಜಭೂತವಾದ ಈ ಸ್ವತಂತ್ರ ವಿಚಾರ ಬುದ್ಧಿಯು ಈಗ ನಮ್ಮಲ್ಲಿ ಬಹಳ ಕುಗ್ಗಿರತಕ್ಕ ಅಂಶ. ಈ ಸ್ವತಂತ್ರ ವಿಚಾರಪರತೆಯು ನಮ್ಮಲ್ಲಿ ತಕ್ಕಷ್ಟು ಬೆಳೆದರೆ ಕಾವ್ಯಕ್ಕೆ—ಎಂದರೆ ಪದ್ಯ ಪ್ರಬಂಧಕ್ಕೆ ಮಾತ್ರವಲ್ಲದೆ ನಾನಾ ವಿಧದ ಗದ್ಯ ಪ್ರಬಂಧಗಳಿಗೂ ಸಹ—ಬೇಕಾದ ಸಾಮಗ್ರಿಯು ಹೆಚ್ಚು ಹೆಚ್ಚಾಗಿ ದೊರೆಯುವು ದೆಂದು ನಾನು ನಂಬಿದ್ದೇನೆ. ಹಿಂದೆ ನಮ್ಮ ಕಾವ್ಯಗಳಲ್ಲಿ ರಾಜ ಕುಮಾರನ ವಿರಹ, ಸೇನಾಪತಿಯ ಜಯಾಪಜಯಗಳು, ಅಲ್ಲಲ್ಲಿ ಪುರ ಗೋಪುರ ವರ್ಣನೆಗಳು, ನಡುನಡುವೆ ಧರ್ಮೋಪದೇಶ, ಪ್ರಾಸಂಗಿಕ ವಾಗಿ ಏಕಾದಶೀ ವ್ರತ ಕಥೆ, ಕಾಶೀ ಮಾಹಾತ್ಮ್ಯ—ಇಂಥವುಗಳ ನ್ನೆಲ್ಲಾ ಒದಗಿಸಿಡುತ್ತಿದ್ದರು. ಈಗಿನ ಜನಜೀವನಕ್ಕೂ ಇವಕ್ಕೂ ಏನೇನೂ ಸಂಬಂಧವಿಲ್ಲ. ಈಗ ವಿಜ್ಞಾನ ಪ್ರವಾಹ ಬಂದು ನಮ್ಮ ಜೀವನ ರೀತಿಯಲ್ಲಿ ಅಪಾರವಾಗಿ ಮಾರ್ಪಾಟುಗಳನ್ನುಂಟುಮಾಡಿ ಬಿಟ್ಟಿದೆ.

ಮನುಷ್ಯನ ಯುಕ್ತಿ ಸಾಹಸಗಳು ಬಹು ದೂರ ಸಾಗದೆ ಹೋಗಬಹುದು. ಅವನು ಕಂಡುಹಿಡಿಯುವ ಯಂತ್ರ ಸಂಧಾನ ಗಳೂ, ಅವನು ಮಾಡುವ ಸಮಾಜ ಸಂಸ್ಕಾರಗಳೂ ಸಫಲವಾಗದೆ ಹೋಗಬಹುದು. ಆದರೆ ಹೀಗೆ ಮಾಡಿದ ಪ್ರಯತ್ನವು ವ್ಯರ್ಥವಾಯಿ ತೆಂದು ಅವನು ನಿರಾಶನಾಗಬಾರದು. ಏಕೆಂದರೆ ಅವನು ಮತ್ತೆ ಬೇರೆ ಉಪಾಯಗಳನ್ನೂ ಬೇರೆ ಸಾಧನಗಳನ್ನೂ ಕಂಡುಹಿಡಿಯಬೇಕು. ಹಿಂದೆ ಮಾಡಿದ ಪ್ರಯತ್ನದ ಅಸಾರ್ಥಕತೆಯಿಂದಲೇ ಮುಂದಿನ ಪ್ರಯತ್ನವು ಇನ್ನೆಂತಹುದಾಗಬೇಕೆಂಬುದು ಸೂಚಿತವಾಗುತ್ತದೆ.

ಹೀಗೆ ಆಶಾಭಂಗದ ಅನುಭವವೇ ಆಶಾ ಪರಿಪೂರಣೆಯ ಮಾರ್ಗವನ್ನು ತೋರಿಸುವುದು. ಒಂದು ಸಾರಿ ಕಟ್ಟಿದ ಮನೆ ಬಿದ್ದುಹೋಯಿತೆಂದು ಎದೆಗುಂದಿ ಗೋಳಿಡದೆ, ಮತ್ತೊಂದು ಬಾರಿ ಕಟ್ಟಬೇಕೆಂದು ನಿಂತು ಹಿಂದಿನ ಅನುಭವದಿಂದ ತನ್ನ ವಿಧಾನವನ್ನು ತಿದ್ದಿ ನಡೆದುಕೊಂಡರೆ ಈ ಎರಡನೆಯ ಸಾರಿ ಕಟ್ಟಿದ ಮನೆ ಗಟ್ಟಿಯಾಗಿ ನಿಲ್ಲುವುದು. ಈ ವಿಧದ ಅನುಭವ ಸಂಪಾದನೆಯೇ ಉತ್ತಮ ಸ್ಥಿತಿ ಸಾಧನೆಗೆ ಮಾರ್ಗ. ಈ ಪ್ರಯತ್ನ ಪೌನಃಪುನ್ಯದಿಂದಲೇ ಮನುಷ್ಯನ ಆತ್ಮಶಕ್ತಿಯು ಸಮೃದ್ಧವಾಗುವುದು. ಇದೇ ಜೀವಸಂಸ್ಕಾರ. ಈ ಬಗೆಯ ಸಂಸ್ಕಾರವೇ ಭೂಲೋಕದಲ್ಲಿ ಮನುಷ್ಯನಿಗೆ ದೊರೆಯಬಹುದಾದ ಪರಮೋತ್ತಮ ಲಾಭ. (Keats) ಕೀಟ್ಸ್ ಕವಿಯು ಈ ಪ್ರಪಂಚವನ್ನು Vale of tears "ಕಣ್ಣೀರಿನ ಕಣಿವೆ" ಎಂದು ಕರೆಯಲಾಗದೆಂದೂ, ಇದನ್ನು Vale of Soul-making "ಆತ್ಮಸಂಸ್ಕಾರ ಕಂದರ" ಎಂದು ಕರೆಯಬೇಕೆಂದೂ ಹೇಳಿರುವುದರ ತಾತ್ಪರ್ಯವು ಇದೇ ಎಂದು ನನಗೆ ತೋರುತ್ತದೆ. ಈ ಬಗೆಯ ಪ್ರಯತ್ನ ಸಾಂತತ್ಯದಿಂದ—ಆಶಾಭಂಗ ಪೂರ್ವಕವಾಗಿ, ತದನುಭವಜನಿತ ಜ್ಞಾನ ಪರಿಪಾಕದ ಮೂಲಕ —ಆಗುವ ಇಷ್ಟಸಿದ್ಧಿಯನ್ನೇ ಷೆಲ್ಲೀ ಕವಿಯು ಮೇಲಿನ "To hope till hope creates from its own wreck the thing it contemplates" ಎಂಬ ವಾಕ್ಯದಿಂದ ಸೂಚಿಸಿದ್ದಾನೆ.

ಈ ಪುರುಷಪ್ರಯತ್ನ ವಾದವು ನಮ್ಮ ದೇಶಕ್ಕೆ ಹೊಸದೆಂದು ಯಾರೂ ಹೇಳಲಾರರು. ಹಿಂದೆ ಮಹರ್ಷಿಗಳು ಬೆಳೆಸಿದ ತತ್ತ್ವ ವಿಚಾರವೇ, ಅವರು ಮಾಡಿದ ಬುದ್ಧಿಪ್ರಯತ್ನವೇ, ಅವರ (Scientific spirit) ವೈಜ್ಞಾನಿಕ ಮನೋವೃತ್ತಿಯೇ ವೇದಾವತಾರಕ್ಕೂ ಶಾಸ್ತ್ರೋತ್ಪತ್ತಿಗೂ ಕಾರಣ. ಭೃಗುಗಳೂ, ಶೌನಕರೂ, ಭರದ್ವಾಜರೂ, ಯಾಜ್ಞವಲ್ಕ್ಯರೂ ನಡೆಸಿದ ಪ್ರಸಂಗಗಳಿಂದಲೇ ಅಲ್ಲವೆ ವೇದಾಂತ ಸಿದ್ಧಾಂತಗಳು ಹುಟ್ಟಿರುವುದು? ನಾರದರೂ, ವಿಶ್ವಾಮಿತ್ರರೂ, ವ್ಯಾಸರೂ, ಅಗಸ್ತ್ಯರೂ ನಡೆಸಿದ ತರ್ಕಗಳಿಂದಲೇ ಅಲ್ಲವೆ ನಮ್ಮ ಆಚಾರ ವ್ಯವಹಾರ ಕ್ರಮಗಳು ಒಂದು ವ್ಯವಸ್ಥೆಗೆ

ಬಂದಿರುವುದು? ಸಾಂಖ್ಯ ವೈಶೇಷಿಕಾದಿ ದರ್ಶನಗಳೂ ದ್ವೈತಾದ್ವೈತಾದಿ ಮತಗಳೂ ಸಹ ಜಿಜ್ಞಾಸಾಭ್ಯಾಸದಿಂದಲೇ ಅಲ್ಲವೆ ಉತ್ಪನ್ನವಾದುದು? ಈ ತೆರದ ಜಿಜ್ಞಾಸೆಯೇ—ಈ ಸ್ವತಂತ್ರ ರೀತಿಯಲ್ಲಾಗುವ ತತ್ತ್ವವಿಮರ್ಶೆಯೇ—ಈ ಮಾನವ ಬುದ್ಧಿ ಪ್ರಯೋಗವೇ—ವಿಜ್ಞಾನದ ಮಾರ್ಗ. ಷೆಲ್ಲೀ ಕವಿಯು ಉಪದೇಶಿಸಿರುವ ಆತ್ಮಶಕ್ತಿ ಪ್ರಕಾಶವನ್ನೇ ನಮ್ಮವರೂ ಉಪದೇಶಿಸುತ್ತಿದ್ದರು. ಶ್ರೀರಾಮಚಂದ್ರನು ಸೀತಾಪಹರಣವಾದ ಬಳಿಕ ಧೈರ್ಯೋದ್ಯಮಗಳನ್ನು ಬಿಟ್ಟು ನಿರ್ವಿಣ್ಣನಾಗಿದ್ದಾಗ ಲಕ್ಷ್ಮಣನು ಬಿನ್ನಯಿಸಿದ ಮಾತೇನು?

ಉತ್ಸಾಹೋ ಬಲವಾನಾರ್ಯ ನಾಸ್ತ್ಯುತ್ಸಾಹಾತ್ ಪರಂ ಬಲಂ।
ಸೋತ್ಸಾಹಸ್ಯಾಸ್ತಿ ಲೋಕೇಽಸ್ಮಿನ್ ನ ಕಿಂಚಿದಪಿ ದುರ್ಲಭಂ ॥
ಉತ್ಸಾಹವಂತಃ ಪುರುಷಾಃ ನಾವಸೀದಂತಿ ಕರ್ಮಸು।
ಉತ್ಸಾಹಮಾತ್ರಮಾಶ್ರಿತ್ಯ ಸೀತಾಂ ಪ್ರತಿಲಭೇಮಹಿ ॥

ವಸಿಷ್ಠರು ರಾಮಚಂದ್ರನಿಗೆ ಕೊಟ್ಟ ಉಪದೇಶವೇನು?

ಪೌರುಷಂ ಸರ್ವ ಕಾರ್ಯಾಣಾಂ ಕರ್ತೃ ರಾಘವ ನೇತರಮ್।
ಫಲಭೋಕ್ತೃ ಚ ಸರ್ವತ್ರ ನ ದೈವಂ ತತ್ರ ಕಾರಣಮ್ ॥
ಅತ ಏವ ಹಿ ರಾಮ ತ್ವಂ ಶ್ರೇಯಃ ಪ್ರಾಪ್ನೋಷಿ ಶಾಶ್ವತಮ್।
ಸ್ವಪ್ರಯತ್ನೋಪನೀತೇನ ಪೌರುಷೇಣೈವ ನಾನ್ಯಥಾ ॥

ಭೀಷ್ಮರು ಧರ್ಮರಾಜನಿಗೆ ಉಪದೇಶಿಸಿದುದಾದರೂ ಏನು?

ಸಾಧಾರಣಂ ದ್ವಯಂ ಹ್ಯೇತದ್ದೈವಮುತ್ಥಾನಮೇವ ಚ।
ಪೌರುಷಂ ಹಿ ಪರಂ ಮನ್ಯೇ ದೈವಂ ನಿಶ್ಚಿತ್ಯ ಮುಚ್ಯತೇ ॥
ಉತ್ಥಾನೇನ ಸದಾ ಪುತ್ರ ಪ್ರಯತೇತ ಯುಧಿಷ್ಠಿರ!
ನಹ್ಯುತ್ಥಾನಮೃತೇ ದೈವಂ ರಾಜ್ಞಾಮರ್ಥಂ ಪ್ರಸಾಧಯೇತ್ ॥

ಹೀಗೆ ವೇದ ಶಾಸ್ತ್ರಗಳನ್ನು ನೋಡಿದರೂ, ಪುರಾಣೋಪದೇಶಗಳನ್ನು ನೋಡಿದರೂ, ಕಾವ್ಯ ಸಂಗೀತಾದಿ ಕಲಾ ಪ್ರವೃದ್ಧಿಯ ಚರಿತ್ರೆಯನ್ನು ನೋಡಿದರೂ, ದೇಶದಲ್ಲೆತ್ತೆತ್ತಲೂ ಇರುವ ದುರ್ಗ

ದೇವಾಲಯ ತಟಾಕಾದಿ ಪುರಾತನ ಶಿಲ್ಪ ನಿರ್ಮಿತಿಗಳನ್ನು ನೋಡಿದರೂ, ನಮ್ಮ ಪ್ರಾಚೀನರಲ್ಲಿ ಪುರುಷಕಾರವೆಂಬುದು ಎಷ್ಟು ವಿಶಾಲವಾಗಿ, ಎಷ್ಟು ವೇಗವಾಗಿ, ಎಷ್ಟು ನಿರ್ಭರವಾಗಿ ಇದ್ದಿತೆಂಬುದು ತೋರಿಬರುವುದು. ಆದರೆ ಇದೆಲ್ಲವೂ ಈಗ ನಮಗೆ ಪೂರ್ವಜನ್ಮ ಸ್ಮರಣೆಯಂತೆ ಕಾಣುತ್ತದೆ. ಈಚೆಗೆ—ನಮ್ಮ ಕಾಲದಲ್ಲಿ—ನಮ್ಮಲ್ಲಿ ಶಾಸ್ತ್ರ ವಿಸ್ತರಣೆಯೇನೂ ಆಗಿಲ್ಲ, ಕಲಾಭಿವೃದ್ಧಿಯೂ ಆಗಿಲ್ಲ, (ಸರಕಾರದ ಕೆಲಸಗಳನ್ನು ಬಿಟ್ಟರೆ)ಪ್ರಶಂಸಾರ್ಹವಾದ ಶಿಲ್ಪ ಸಂಧಾನಗಳೂ ಏನೂ ಆಗಿಲ್ಲ. ದೇಹವಿರುವ ದೆಸೆಯಿಂದ ಎಷ್ಟುಮಟ್ಟಿನ ಪ್ರಯತ್ನವು ನಮಗೆ ಅನಿವಾರ್ಯವೋ ಅಷ್ಟನ್ನು ಮಾತ್ರವೇ ಮಾಡತಕ್ಕವರಾಗಿ ಈಗ ನಾವಿದ್ದೇವೆ. "ತರೋಣ ತೆರೋಣ ತಿಂಬೋಣ, ಮಲಗೋಣ ಮತ್ತೇಳೋಣ"—ಎಂದು ಪುರಂದರದಾಸರು ಬಣ್ಣಿಸಿರುವ ಕೇವಲ ಶಾರೀರಕ ಜೀವನಕ್ಕೆ ಎಷ್ಟು ಬುದ್ಧಿ ಶ್ರಮವು ಆವಶ್ಯಕವೋ ಅಷ್ಟಕ್ಕಿಂತ ಒಂದು ಎಳ್ಳಷ್ಟಾದರೂ ಹೆಚ್ಚಾಗಿ ನಾವು ಪ್ರಯತ್ನಮಾಡುತ್ತಿಲ್ಲ. ಈಗ ನಮಗಿರತಕ್ಕ ದುಃಖಗಳಿಗೆ ಮೂಲವೆಲ್ಲಿ? ಅವುಗಳನ್ನು ಹೇಗೆ ಪರಿಹಾರಮಾಡಬಹುದು? ನಮ್ಮ ಜೀವನ ವಿಧಾನದಲ್ಲಿ ಯಾವ ಯಾವ ತಿದ್ದುಪಾಟುಗಳಾಗಬೇಕು? ನಮ್ಮ ನಾನಾ ಸಂಸ್ಥೆ ಸಂಪ್ರದಾಯಗಳನ್ನು ಹೇಗೆ ಹೇಗೆ ಸಮೀಕರಿಸಬೇಕು? ಈ ವಿಧವಾದ ಪ್ರಶ್ನೆಗಳೂ ಪ್ರಯತ್ನಗಳೂ ನಮ್ಮಗಳ ಮನಸ್ಸಿಗೆ ಎಷ್ಟು ತೀವ್ರವಾಗಿ ತೋರಬೇಕೋ ಅಷ್ಟು ತೀವ್ರವಾಗಿ ತೋರುತ್ತಿಲ್ಲ. ಎಂದರೆ ಪಾಶ್ಚಾತ್ಯ ಜನರಲ್ಲಿ ವಿಶೇಷವಾಗಿರುವ ಪ್ರಕೃತ ಸ್ಥಿತಿ ಪರಿಶೋಧನೆ, ಉತ್ಕರ್ಷ ಮಾರ್ಗಾನ್ವೇಷಣೆ, ಸ್ವತಂತ್ರ ವಿಚಾರಣೆ—ಎಂಬೀ ಪುರುಷಕಾರ ಸ್ವರೂಪವಾದ ವೈಜ್ಞಾನಿಕ ಚಿತ್ತವೃತ್ತಿಯು ನಮ್ಮಲ್ಲಿ ಅಭಾವವಾಗಿದೆ. ನಾವು ಭಗವದ್ಗೀತೆಯನ್ನು ಪಾರಾಯಣ ಮಾಡಿ, ಅದರ ಮುಖ್ಯೋಪದೇಶವಾದ—

"ತಸ್ಮಾದ್ಯುಧ್ಯಸ್ವ ಭಾರತ"

"ಆದಕಾರಣ ಯುದ್ಧಮಾಡು" ಎಂಬ ವಚನವನ್ನು ಮಾತ್ರ ಮರೆಯುತ್ತೇವೆ.

ಯದ್ಯದ್ವಿಭೂತಿಮತ್ಸತ್ವಂ ಶ್ರೀಮದೂರ್ಜಿತಮೇವ ವಾ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಂ ॥

ಎಂಬ ವಾಕ್ಯವನ್ನೋದಿದ್ದರೂ, ನಾವು ಪಾಶ್ಚಾತ್ಯರ ಅದ್ಭುತ ವ್ಯಾಪಾರ ರಚನೆಗಳನ್ನು ನೋಡಿ, ಅವು (Materialistic) ಕೇವಲ ಪಾರ್ಥಿವ, ಭೌತಿಕ, ಆಸುರ, ಅಶುದ್ಧ ಎಂದು ಅವುಗಳನ್ನು ಹಳಿಯುತ್ತೇವೆ. ವಿಜ್ಞಾನದಿಂದ ಲೋಕಕ್ಕೆ ಉಪಕಾರವೇನಾದರೂ ಆಗಿದೆಯೆ? ಆದರ ಪದ್ಧತಿಗಳಿಂದ ನಮ್ಮ ಸದ್ಯಃಸ್ಥಿತಿಯನ್ನು ಉತ್ತಮಗೊಳಿಸಲು ಸಾಧ್ಯವಾದೀತೆ? ಎಂದು ನಾವು ಕೇಳುವುದು ಅಪರೂಪ.

ನಾಲ್ಕು ದೃಷ್ಟಾಂತಗಳು

ನಮ್ಮ ಕಾಲದಲ್ಲಿ ಪುರುಷಪ್ರಯತ್ನದ ಮುಖ್ಯ ಫಲವಾಗಿರುವ ವಿಜ್ಞಾನದಿಂದ ನಡೆದಿರುವ ದೊಡ್ಡ ಕೆಲಸಗಳಾವುವು? ಪಾಶ್ಚಾತ್ಯ ಜನರು ಬುದ್ಧಿ ಸಾಹಸಗಳ ತಪಸ್ಸಿನಿಂದ ಸಂಪಾದಿಸಿರುವ ಈ ವಿಜ್ಞಾನ ವೆಂಬ ಮಹಾ ಸಿದ್ಧಿಯಿಂದ ಆಗಿರುವ ಪ್ರಯೋಜನಗಳಾವುವು? ಅವು ಗಳಲ್ಲಿ ಉದಾಹರಣೆಗಾಗಿ—ಉಪಲಕ್ಷಣವಾಗಿ—ನಾಲ್ಕು ಸಂಗತಿ ಗಳನ್ನು ಇಲ್ಲಿ ಸೂಚಿಸಬಹುದು :—

ಮೊದಲನೆಯದು—ದೇಹಬಲದ ವೆಚ್ಚವನ್ನು ಕಡಮೆಮಾಡಿ, ಹೊತ್ತನ್ನು ಮಿಗಿಸಿಕೊಡುವುದು. ಮನುಷ್ಯ ಜೀವನಕ್ಕೆ ಅವಶ್ಯ ವಾದ ನಾನಾ ಕೆಲಸಗಳನ್ನು ಮಾಡಲು ತಕ್ಕ ಯಂತ್ರ ಸಾಧನಗಳು ಹುಟ್ಟುತ್ತಿರುವುದರಿಂದ, ನಮ್ಮ ಶರೀರ ಶಕ್ತಿಯೂ ಕಾಲವೂ ನಮಗೇ ಉಳಿದು, ಅವುಗಳನ್ನು ಆತ್ಮ ಸಂಸ್ಕಾರಕ್ಕೆ ಸಾಧಕಗಳಾದ ಕಾವ್ಯ ಕಲಾ ವ್ಯಾಸಂಗಕ್ಕೂ, ಜ್ಞಾನಾರ್ಜನೆಗೂ, ತತ್ತ್ವ ವಿಚಾರಕ್ಕೂ, ಬಂಧು ಮಿತ್ರ ಸಲ್ಲಾಪ ಮೊದಲಾದ ನಿರ್ದುಷ್ಟ ಸುಖಾನುಭವಕ್ಕೂ, ಲೋಕಸೇವಾ ಕಾರ್ಯಗಳಿಗೂ ವಿನಿಯೋಗಪಡಿಸಿಕೊಳ್ಳುವುದು ಈಗ ದಿನೇ ದಿನೇ ಹೆಚ್ಚು ಸಾಧ್ಯವಾಗುತ್ತಿದೆ. ಈ ಯಂತ್ರ ಸಾಧನಗಳನ್ನು ಇಂಗ್ಲಿಷಿನಲ್ಲಿ Labour-saving and Time-saving appliances ಎಂದು ಹೇಳುತ್ತಾರೆ. ರೆಯಿಲು, ಮೋಟಾರು, ಏರೊಪ್ಲೇನ್,

ಟೆಲೆಗ್ರಾಫ್ ಮೊದಲಾದ ನಾನಾ ತೆರದ ವೈಜ್ಞಾನಿಕ ರಚನೆಗಳು ಈ ಕಷ್ಟವನ್ನೂ ಕಾಲವನ್ನೂ ಮಿಗಿಸಿಕೊಡುವ ಜಾತಿಯುವು.

ಎರಡನೆಯದು—ಪ್ರಜಾಜನ ಪ್ರಾಬಲ್ಯ. ರಾಜ್ಯ ಜನಾಂಗ ಗಳಿಗೆ ಸಂಬಂಧಪಟ್ಟ ಕಟ್ಟುಪಾಡುಗಳಲ್ಲಿಯೂ ಸಂಸ್ಥೆಗಳಲ್ಲಿಯೂ ಅಧಿಕಾರ ನಡೆಸುವವರು ಅಧಿಕಾರಕ್ಕೊಳಪಟ್ಟಿರುವವರ ಅಭಿಪ್ರಾಯ ವನ್ನು ತಿಳಿದುಕೊಂಡು ಅದಕ್ಕೆ ವಿಧೇಯರಾಗಿ ನಡೆಯಬೇಕೆಂಬುದು ಪಾಶ್ಚಾತ್ಯರ ರಾಷ್ಟ್ರ ತತ್ತ್ವ ವಿಚಾರದ ಫಲಿತಾಂಶ. ಇದನ್ನೇ Government by Public Opinion—"ಪ್ರಜಾಭಿಮತಾನುಸಾರ ವಾದ ಸರಕಾರ" ಎಂದು ಹೇಳುವುದು. ದೇಶದ ಕೆಲಸವನ್ನು ಎಲ್ಲರೂ ಸೇರಿ ಚರ್ಚೆಮಾಡಿ ಮಾಡೋಣ; ಅದು ಎಲ್ಲರ ಕೆಲಸ; ಅದನ್ನು ಕುರಿತು ಎಲ್ಲರೂ ಕಲೆತು ಆಲೋಚಿಸಿ, ಅಧಿಕ ಸಂಖ್ಯಾ ಸಮ್ಮತವಾದಂತೆ ನಡೆಸೋಣ—ಎಂಬುದು ಈಗಿನವರ ನಿಶ್ಚಯ. ಇದು ಇತರ ದೇಶಗಳ ಲ್ಲಿರುವಂತೆ ನಮ್ಮಲ್ಲಿಯೂ ಈಗೀಗ ಪ್ರಚಾರಕ್ಕೆ ಬರುತ್ತಿದೆ. ಪೂರ್ವದಲ್ಲಿ ರಾಜ್ಯಾಧಿಪತ್ಯವನ್ನು ಒಬ್ಬ ರಾಜನೋ ಅಥವಾ ನಾಲ್ಕು ಮಂದಿ ಮಂತ್ರಿಗಳು ಮಾತ್ರವೋ ಇತರರ ಹಂಗಿಲ್ಲದೆ ನಡೆಸುತ್ತಿದ್ದರು. ಆದರೆ ಈಗ ಹಾಗೆ ನಡೆಯಲಾರದು. ಇದು ವಿಜ್ಞಾನದ ಪ್ರಭಾವ; ಎಂದರೆ, ವಿಜ್ಞಾನದ ಮೂಲಕ ಜನರಲ್ಲಿ ಉತ್ಪನ್ನವಾದ ಸ್ವತಂತ್ರ ವಿಚಾರ ಬುದ್ಧಿಯ ಫಲ. ಯೂರೋಪಿನ ದೇಶಗಳ ರಾಜ್ಯ ವ್ಯವಸ್ಥೆ ಗಳು ವಿಜ್ಞಾನದ ಮಹಿಮೆಯಿಂದ ಬಹು ಮಟ್ಟಿಗೆ ಮಾರ್ಪಟ್ಟಿವೆ. ಫ್ರಾನ್ಸಿನ ಮಹಾ ವಿಪ್ಲವಕ್ಕೆ ವೈಜ್ಞಾನಿಕರು ಮುಖ್ಯ ಕಾರಣರಾದ ರೆಂಬುದು ಎಲ್ಲರಿಗೂ ತಿಳಿದಿರುವ ವಿಷಯ.

ಮೂರನೆಯ ವಿಜ್ಞಾನ ಫಲವು ನಮ್ಮಲ್ಲಿಗೆ ಇನ್ನೂ ಹೆಚ್ಚಾಗಿ ಬಂದಿಲ್ಲ. ಇದು ಧರ್ಮ ತತ್ತ್ವ ಪರಿಶೋಧನೆ, ಅಥವಾ ಮತ ಪ್ರಕ್ರಿಯಾಶೋಧನೆ. ನಮ್ಮ ಹಿಂದೂ ಮತದಲ್ಲಿ ಎಷ್ಟೋ ಪ್ರಭೇದ ಗಳಿವೆ. ಒಂದೊಂದು ಪ್ರಭೇದದಲ್ಲಿಯೂ ಎಷ್ಟೋ ವಿಭೇದಗಳಿವೆ. ಇವು ಗಳನ್ನೆಲ್ಲಾ ಹೊಸ ದೃಷ್ಟಿಯಿಂದ ವಿಚಾರಮಾಡಿ ಅವುಗಳಲ್ಲಿ ಜಳ್ಳೆಷ್ಟು ಭಾಗ, ಗಟ್ಟಿಯೆಷ್ಟು ಭಾಗ ಎಂದು ನೋಡಬೇಕು. ಇಂಥಾ ವಿವೇಚನೆ

ಯನ್ನು ನಿಸ್ಸಂಕೋಚವಾಗಿಯೂ ನಿರ್ಭಯವಾಗಿಯೂ ಮಾಡಬೇಕು. ಪಾಶ್ಚಾತ್ಯರು ತಮ್ಮ ಧಾರ್ಮಿಕ ವಿಚಾರಗಳನ್ನು ಹೀಗೆ ಶೋಧನೆಮಾಡುತ್ತಾರೆ. ಬೈಬಲ್ ಕಥೆಗಳು ಸುಳ್ಳೆ, ನಿಜವೆ? ಅದರಲ್ಲಿರುವ ಸೃಷ್ಟಿಕ್ರಮ ವರ್ಣನೆ ವಾಸ್ತವಿಕವೆ, ಕಾಲ್ಪನಿಕವೆ? ಈ ಪ್ರಶ್ನೆಗಳನ್ನು ಅವರು ನಿರ್ಭಯವಾಗಿ ಕೇಳಿ ಚರ್ಚಿಸುತ್ತಾರೆ. ಸರ್ವಜ್ಞನೂ ಸರ್ವಶಕ್ತನೂ ದಯಾಮಯನೂ ಆದ ಜಗದೀಶ್ವರನೊಬ್ಬನು ನಿಜವಾಗಿಯೂ ಇದ್ದಾನೆಯೆ? ಇದ್ದರೆ ಈ ಜಗತ್ತಿನಲ್ಲಿ ಇಷ್ಟು ದುಃಖವೂ ದಾರಿದ್ರ್ಯವೂ ದೋಷವೂ ಇರುವುದೇತಕ್ಕೆ? ಎಂದು ಸಹ ಪಾಶ್ಚಾತ್ಯ ಕವಿಗಳೂ ವೈಜ್ಞಾನಿಕರೂ ಕೇಳಿದ್ದಾರೆ. ನಮಗೆ ಮತ ವಿಚಾರವೆಂದರೆ ದೊಡ್ಡ ಪರ್ವತವೊಂದು ಎದ್ದುಬಂದು ಎದುರಿಗೆ ಅಡ್ಡ ನಿಂತಹಾಗೆ ಆಗುತ್ತದೆ. ಅವರಿಗೆ ಹಾಗಾಗುವುದಿಲ್ಲ. ಅವರ ಮತ ಗ್ರಂಥಗಳಲ್ಲಿ ಅವರಿಗಿರುವುದು ಅವಿಚಾರದ ವಿಶ್ವಾಸವಲ್ಲ. ಆದುದರಿಂದಲೇ ಅವರು ತಮ್ಮ ಲೌಕಿಕ ಗ್ರಂಥಗಳನ್ನು ಹೇಗೆಯೋ ತಮ್ಮ ಧರ್ಮ ಗ್ರಂಥಗಳನ್ನೂ ಹಾಗೆಯೇ ವಿಮರ್ಶೆಗೊಳಪಡಿಸುತ್ತಾರೆ. ವೇದವು ಅಪೌರುಷೇಯವೆಂದು ಕೈಮುಗಿದು ಕುಳಿತುಕೊಳ್ಳದೆ ಅದರ ಕಾಲವನ್ನು ನಿಷ್ಕರ್ಷೆ ಮಾಡಲು ಪ್ರಯತ್ನಪಡುತ್ತಾರೆ; ಅದು ವಿಜ್ಞಾನದ ಪ್ರೇರಣೆ.

ನಾಲ್ಕನೆಯದು—ಸಮಾಜ ಸಂಸ್ಕಾರ ನಿರತತೆ. ನಮ್ಮ ಸಮಾಜದಲ್ಲಿ ಬೇಕಾದಷ್ಟು ಲೋಪಗಳಿವೆ, ಅನ್ಯಾಯಗಳಿವೆ, ದುಗುಡ ದುಃಖಗಳಿವೆ. ಇವುಗಳನ್ನು ಹೋಗಲಾಡಿಸುವುದು ಹೇಗೆ? ಈ ಸಮಾಜಸ್ಥಿತಿ ಹೀಗೆಯೇ ಇರಬೇಕೇ? ಇದನ್ನು ಪರಿಷ್ಕರಿಸೋಣವೆ?—ಎಂದು ಪಾಶ್ಚಾತ್ಯರು ನಿಷ್ಪಕ್ಷಪಾತವಾಗಿ, ನಿರ್ದಾಕ್ಷಿಣ್ಯವಾಗಿ ವಿಚಾರ ಮಾಡುತ್ತಾರೆ. ಆದರೆ ನಮ್ಮಲ್ಲಿ ಸಾಮಾಜಿಕ ದುಃಖವು ಎಷ್ಟು ಪ್ರಬಲವಾಗಿದ್ದರೂ ನಿವಾರಣೋಪಾಯ ಮಾತ್ರ ನಡೆಯುವುದಿಲ್ಲ. ಈಗ ಹೆಣ್ಣುಮಕ್ಕಳಿಗೆ ಹತ್ತು ವರ್ಷವಾಗುತ್ತಲೆ ಮದುವೆಮಾಡುತ್ತೇವೆ; ಅದನ್ನು ಹದಿನಾಲ್ಕು ವರ್ಷಕ್ಕೆ ಮಾಡಿದರೆ ದೋಷವೇನು? ಹತ್ತು ವರ್ಷದ ಹುಡುಗಿಯೊಬ್ಬಳು ಮದುವೆಯಾದ ಕೂಡಲೆ ವಿಧವೆ

ಯಾದರೆ ಆಕೆಗೆ ವಪನವಮಾಡಿಸಬೇಕೆಂಬುದು ನಿಜವಾದ ಧರ್ಮವೆ, ಅಥವಾ ಬರಿಯ ಲೋಕರೂಢಿಯೆ? ಇದೊಂದನ್ನೂ ನಾವು ಚರ್ಚಿಸುವುದಿಲ್ಲ. ವಿಚಾರಕ್ಕೆ ಹೊರಟರೆ ನಮ್ಮ ಶಾಸ್ತ್ರ ಏನಾಗಿಬಿಡುತ್ತದೆಯೋ ಎಂದು ನಮಗೆ ಹೆದರಿಕೆ. ನಮ್ಮ ವಿಚಾರವೆಲ್ಲಾ ಯಾವ ಪ್ರಬಲ ಮನುಷ್ಯನನ್ನು ಹೇಗೆ ಆಶ್ರಯಮಾಡಿದರೆ ಅವನು ಪ್ರಸನ್ನನಾದಾನು? ನಮಗೆ ಯಾರ ಅನುಗ್ರಹದಿಂದ ಇಷ್ಟಾರ್ಥ ದೊರೆತೀತು? ಎಂಬುದರಲ್ಲಿ ನಿಂತುಹೋಗಿದೆ. ದೊಡ್ಡ ಉದ್ಯೋಗವಾಗಿ ವೇತನ ಹೆಚ್ಚುವಹಾಗೆ ತೋರಿದರೆ ಸಮುದ್ರಯಾನಮಾಡಲು ನಮ್ಮಲ್ಲಿ ಅನೇಕರು ಸಿದ್ಧರಾಗಿರುವರು. ಆಗ ಅವರಿಗೆ ತಂದೆಯ ಭಯವೂ ಇರದು, ಮಠದ ಭಯವೂ ಇರದು. ಆದರೆ, ಅದೇ ದೊಡ್ಡಮನುಷ್ಯರು ಮಗಳ ಮದುವೆಯನ್ನು ಒಂದೆರಡು ವರ್ಷ ತಡೆಯಬೇಕೆಂದರೆ, ಅಥವಾ ಮದುವೆಯಲ್ಲಿ ಬಾಗಿನದ ಉಂಡೆಗಳನ್ನೂ ಬ್ಯಾಂಡಿನ ಗದ್ದಲವನ್ನೂ ಕಡಮೆಮಾಡಿಸಬೇಕೆಂದರೆ, ಅಜ್ಜಿಯ ಭಯವೂ ಅತ್ತೆಯ ಭಯವೂ ಬೆನ್ನುಹತ್ತಿ ಬರುತ್ತವೆ. ಒಂದು ವಿಭೂತಿಯ ಉಂಡೆಯೋ ಒಂದು ತುಲಸೀಮಣಿಯ ಸರವೋ ಎದುರಿಗೆ ಬಂದಿತೆಂದರೆ ನಮ್ಮಲ್ಲನೇಕರ ಸ್ವತಂತ್ರ ವಿಚಾರ ಬುದ್ಧಿಯು ಸ್ತಬ್ಧವಾಗುತ್ತದೆ. ಪಾಶ್ಚಾತ್ಯರು ಈ ಸ್ವತಂತ್ರ ವಿಚಾರ ಬುದ್ಧಿಯನ್ನು ಸಮಾಜದ ಆಚಾರ ವ್ಯವಹಾರ ರೀತಿಗಳಿಗೂ ಅನ್ವಯಿಸುತ್ತಾರೆ. ನಮ್ಮವರಾದರೋ "ನಾವೂ ಹಾಗೆ ವಿಚಾರಕ್ಕೆ ಹೊರಟು ಅವರಹಾಗೆ ಏಕಾಗಬೇಕು? ವಿಚಾರ ಮಾಡಿ ಅವರ ಪದ್ಧತಿಗಳನ್ನು ತಂದುಕೊಳ್ಳುವುದಕ್ಕಿಂತ ವಿಚಾರ ಮಾಡದೆ ನಮ್ಮ ಪದ್ಧತಿಗಳನ್ನೇ ಇಟ್ಟುಕೊಂಡಿರೋಣ"—ಎಂದು ಹೇಳುತ್ತಾರೆ. ಪಾಶ್ಚಾತ್ಯರ ಸಮಾಜದಲ್ಲಿ ದೋಷಗಳಿವೆ; ಅದನ್ನು ಅವರೇ ಒಪ್ಪಿಕೊಳ್ಳುತ್ತಾರೆ. ಆದರೆ ನಮಗೂ ಅವರಿಗೂ ಇರುವ ಮುಖ್ಯ ವ್ಯತ್ಯಾಸವೇನೆಂದರೆ, ಅವರು ಆ ದೋಷಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆ; ನಾವು "ಹಾಗೆಯೇ ಇರಲಿ, ಉಪಾಯವಿಲ್ಲ" ಎನ್ನುತ್ತೇವೆ. ಈ ವ್ಯತ್ಯಾಸವು ಕಡಮೆಯಾಗಬೇಕು. ಇದು ವಿಜ್ಞಾನ (ಸೈನ್ಸ್)ದಿಂದ ಆಗಬೇಕಾದ ಮುಖ್ಯ

ಕೆಲಸ. ನಮ್ಮ ಸ್ವತಂತ್ರ ವಿಚಾರದಿಂದ ಸಾಮಾಜಿಕ ಸ್ಥಿತಿ ಗತಿಗಳನ್ನೂ ಧರ್ಮಪ್ರಕಾರಗಳನ್ನೂ ಪರಿಶೀಲಿಸಿ ನೋಡಿ, ಅವು ಅನುಕೂಲಗಳಾಗುವಂತೆ ಪರಿಷ್ಕರಿಸಿಕೊಳ್ಳುವುದಕ್ಕೆ ಪ್ರಯತ್ನಪಡಬೇಕು. ಧರ್ಮಕ್ಕೆ ನಾಲ್ಕು ಮೂಲಸ್ಥಾನಗಳೆಂದು ನಮ್ಮ ಮನ್ವಾಚಾರ್ಯರೇ ಅಪ್ಪಣೆ ಕೊಟ್ಟಿದ್ದಾರೆ: ಮೊದಲನೆಯದು ವೇದ; ಎರಡನೆಯದು ಮಹರ್ಷಿಗಳು ಅನುಗ್ರಹಿಸಿರುವ ಸ್ಮೃತಿಗಳು; ಮೂರನೆಯದು ಸಾಧುಸಜ್ಜನರ ನಡತೆ ಅಥವಾ ಸದಾಚಾರ; ನಾಲ್ಕನೆಯದು ಆತ್ಮ ಮನಸ್ತೃಪ್ತಿ.

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ।
ಏತಚ್ಚತುರ್ವಿಧಂ ಪ್ರಾಹುಸ್ಸಾಕ್ಷಾದ್ಧರ್ಮಸ್ಯ ಲಕ್ಷಣಂ ॥

ಇವಿಷ್ಟನ್ನೂ ದೃಷ್ಟಿಯಲ್ಲಿ ಇಟ್ಟುಕೊಂಡೇ ಧರ್ಮವನ್ನು ನಿಷ್ಕರ್ಷೆಮಾಡಬೇಕೆಂದು ನಮ್ಮವರು ಹೇಳಿದ್ದಾರೆ. ಆದರೆ ಈಗ ನಮಗೆ ವೇದಕ್ಕಿಂತ ಸ್ಮೃತಿಯೇ ಹೆಚ್ಚು. "ಕುರ್ವೀತ ಬುಧ ನೋಮಯೋಃ" ಎಂಬಂಥಾ ವಾಕ್ಯಗಳೇ ನಮ್ಮಲ್ಲಿ ಪ್ರಬಲ. ನಾವು ಎಲ್ಲಕ್ಕಿಂತ ಹೆಚ್ಚಾಗಿ ಮರೆತಿರುವ ಲಕ್ಷಣವು ನಾಲ್ಕನೆಯದಾದ—"ಆತ್ಮನಸ್ತುಷ್ಟಿರೇವಚ" ಎಂಬುದು. ಒಂದು ಕೆಲಸದಿಂದ ಅಥವಾ ನಡೆನಳಿಕೆಯಿಂದ ನಮಗೆ ಆತ್ಮ ಸಂತುಷ್ಟಿಯಾಗದೆಹೋದರೆ, ಅದು ಸಂಪೂರ್ಣವಾದ ಧರ್ಮವಾಗುವುದಿಲ್ಲ. ಇದು ಮನುಗಳು ಹೇಳಿದ ಮಾತು. ಹಾಗಿದ್ದರೂ ನಾವು ಆತ್ಮತೃಪ್ತಿಯೆಂಬ ಧರ್ಮಲಕ್ಷಣವನ್ನು ಬೇಡವೆಂದು ಬಿಟ್ಟಿದ್ದೇವೆ. ಯಾವುದಾದರೂ ಒಂದು ಸಾಮಾಜಿಕ ಪ್ರಶ್ನೆ ಬಂದಾಗ, ನಮಗೆ ಮನಸ್ಸು ಒಪ್ಪದೆ ಇದ್ದರೂ, "ಅಯ್ಯೋ, ಹೆಂಗಸರು ಬಿಡುವುದಿಲ್ಲ ; ಅವರೇನಾದರೂ ಮಾಡಿಕೊಳ್ಳಲಿ!" ಎಂದೋ, "ಪೂರ್ವಾಚಾರ ಬಂದಿದೆ; ನಡೆದುಕೊಂಡುಹೋಗಲಿ" ಎಂದೋ ಹೇಳಿ ತಟಸ್ಥರಾಗುತ್ತೇವೆ. ಇದು ಹೇಡಿತನ, ಬುದ್ಧಿ ಭೀರುತನ (Intellectual Cowardice). ಇದನ್ನು ನಾವು ಹೋಗಲಾಡಿಸಿಕೊಳ್ಳಬೇಕು. ಗುರುಹಿರಿಯರ ವಾಕ್ಯದಲ್ಲಿ ಶ್ರದ್ಧೆ ವಿಶ್ವಾಸಗಳು ಪೂರ್ಣವಾಗಿರಲಿ; ಆದರೆ ಎಲ್ಲಿ ಮನಸ್ಸಿಗೆ ನಿಜವಾದ ಸಂದೇಹ ಬರುವುದೋ ಅಲ್ಲಿ ನಿರ್ಭಯವಾಗಿ ಜಿಜ್ಞಾಸೆ ನಡೆಯಬೇಕು.

"ವಾದೇ ವಾದೇ ಜಾಯತೇ ತತ್ತ್ವಬೋಧಃ"

ಎಂದು ಪೂರ್ವಿಕರೇ ಹೇಳಿದ್ದಾರೆ. ಗೀತೋಪದೇಶಕಾಲದಲ್ಲಿ ಅರ್ಜುನನು ಬಾಯಿಗೆ ಬೀಗಹಾಕಿಕೊಂಡಿರಲಿಲ್ಲ; ಅನೇಕ ಪ್ರಶ್ನೆಗಳನ್ನು ಕೇಳಿ ಶಂಕೆಗಳನ್ನು ಸೂಚಿಸಿದನು. ಶ್ರೀ ಭಗವಂತನೇ—

"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ"

ಎಂದು ಹೇಳಿ, ಪರಿಪ್ರಶ್ನೆಯ—ಎಂದರೆ ಮೀಮಾಂಸೆಯ, ಅಥವಾ ಚರ್ಚಾ ಪ್ರಸಂಗದ, ಆವಶ್ಯಕತೆಯನ್ನು ತೋರಿಸಿದ್ದಾನೆ. ನಮ್ಮ ಆಚಾರ ಸಂಪ್ರದಾಯಗಳನ್ನು ನಾವು ಸ್ವತಂತ್ರ ವಿಚಾರಕ್ಕೆ ಒಳಗಾಗಿಸಬೇಕು. ಹೊಸ ಹೊಸ ಸಂದೇಹಗಳು, ದ್ವಂದ್ವಗಳು, ಧರ್ಮಸಂಕಟಗಳು—ಇವು ಕಾಲಕ್ರಮದಲ್ಲಿ ಇನ್ನೂ ಹೆಚ್ಚುತ್ತವೆ; ಒಂದಕ್ಕೆ ನಾಲ್ಕರಷ್ಟಾಗುತ್ತವೆ. ಸಾಹಿತ್ಯಕರ್ತರು ಅವರವರ ಪ್ರತಿಭಾಸಂಪತ್ತಿಗನುಸಾರವಾಗಿ ಇವುಗಳನ್ನೆಲ್ಲಾ ತಮ್ಮ ಗ್ರಂಥಗಳಲ್ಲಿ ಪ್ರತಿಫಲಿಸುವಂತೆ ಮಾಡಬೇಕು. ಹಾಗೆ ಹೊಸ ಸಂಶಯಗಳೂ ಆಶಯಗಳೂ ಭಾವನೆಗಳೂ ಸಮಸ್ಯೆಗಳೂ ಸಾಹಿತ್ಯದಲ್ಲಿ ಪ್ರತಿಫಲಿಸಬೇಕಾದರೆ ದೇಶದಲ್ಲಿ ಸ್ವತಂತ್ರ ವಿಚಾರಬುದ್ಧಿ ಹೆಚ್ಚಬೇಕು. ಈ (Scientific Spirit) ವೈಜ್ಞಾನಿಕ ಮನೋವೃತ್ತಿಯನ್ನು ಅಥವಾ (Rationalism) ಸ್ವತಂತ್ರ ವಿಚಾರಬುದ್ಧಿಯನ್ನು ಸಂಪಾದಿಸಲು ಈ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾದ ನೀವುಗಳು ಅರ್ಹರಾಗಿದ್ದೀರಿ. ಇಲ್ಲಿ ಪಡೆಯುವ ಶಾಸ್ತ್ರಾನುಭವ ಬಲದಿಂದ ನೀವು ಅದನ್ನು ಸಂಪಾದಿಸಬಲ್ಲಿರಿ. ಈ ಸ್ವತಂತ್ರ ವಿಚಾರಬುದ್ಧಿಯಿಲ್ಲದೆ ಕಾವ್ಯವನ್ನು ಬರೆದರೆ, ಅದು ಹಳಸಲಾಗುತ್ತದೆ; ಬೆಳಗಾಗ ಮಾಡಿಟ್ಟ ಕಾಫಿಯನ್ನು ಸಂಜೆಯಲ್ಲಿ ಬಿಸಿಮಾಡಿ ಕೊಟ್ಟ ಹಾಗಾಗುತ್ತದೆ; ಹಿಂದಿನ ರಾಮನ ವಿರಹ, ಹಿಂದಿನ ನಳನ ಪಶ್ಚಾತ್ತಾಪ, ಹಿಂದಿನ ಚಂದ್ರಮತಿಯ ಗೋಳು—ಇವನ್ನೇ ನಾವು ಬೇರೆ ಮಾತುಗಳಲ್ಲಿ ಬರೆದಂತೆ ಆಗುತ್ತದೆ.

ಸಂಕ್ಷೋಭೆಯ ಸಾಹಿತ್ಯ

ಇಂಗ್ಲಿಷ್ ಕಾವ್ಯ ಪ್ರಪಂಚದಲ್ಲಿ—Literature of Revolt—ಪ್ರತಿಭಟನೆಯ ಸಾಹಿತ್ಯ, ಅಥವಾ ಸಂಕ್ಷೋಭೆಯ ಸಾಹಿತ್ಯ—

ಎಂಬ ಹೊಸ ಜಾತಿಯ ಕಾವ್ಯ ಸಂತತಿಯೂ ಪ್ರಶಸ್ತವಾಗಿದೆ. ಅದರಲ್ಲಿ ವರ್ಡ್ಸ್‌ವರ್ತ್, ಷೆಲ್ಲಿ, ಕೀಟ್ಸ್, ಬೈರನ್ ಮುಂತಾದವರ ಕೃತಿಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿರುವುದು ಹೊಸ ಹೊಸ ಶೈಲಿ, ಹೊಸ ಹೊಸ ಛಂದಸ್ಸು, ಹೊಸ ಹೊಸ ವಾಕ್ಯ ಚಮತ್ಕಾರ—ಇಷ್ಟು ಮಾತ್ರವೇ ಅಲ್ಲ. ಅವುಗಳ ವಿಷಯಗಳೂ ಭಾವಗಳೂ ಕೂಡ ಹೊಸವು. ಈಚಿನ ಕಾಲದ ವಿಜ್ಞಾನಶಾಸ್ತ್ರ ಪ್ರಭಾವದಿಂದ—ಎಂದರೆ ನಾನಾ ಯಂತ್ರೋಪಕರಣಗಳ ಉಪಯೋಗದ ಮೂಲಕವೂ, ವಿವಿಧ ಜ್ಞಾನವು ಬೆಳೆದು ದೇಶದಲ್ಲಿ ಹರಡುವುದರ ಮೂಲಕವೂ—ಜನರ ಜೀವನ ಕ್ರಮದಲ್ಲಿ ಆಗಿರುವ ವ್ಯತ್ಯಾಸಗಳು, ಅವರ ನವನವೀನಗಳಾದ ಅಭಿಪ್ರಾಯಗಳು, ಅನುಮಾನಗಳು, ಆಶಯಗಳು, ಆಶಂಕೆಗಳು—ಇವನ್ನೆಲ್ಲಾ ಈ ಸಂಕ್ಷೋಭೆಯ ಕಾವ್ಯಗಳು ಪ್ರತಿಫಲಿಸುತ್ತವೆ. ಟೆನ್ನಿಸನ್, ಬ್ರೌನಿಂಗ್ ಮೊದಲಾದ ಕವಿಗಳು ವಿಜ್ಞಾನಶಾಸ್ತ್ರದ ಕಡೆಯಿಂದ ಪರತತ್ತ್ವ ವಿಚಾರಕ್ಕೆ ಸಮನ್ವಯವಾಗತಕ್ಕ ಅಂಶಗಳನ್ನು ಸಹ ಸೂಚಿಸಿದ್ದಾರೆ. ಆಧುನಿಕ ನಾಗರಿಕತೆಯ ಆವೇಶಗಳೂ ಆಕಾಂಕ್ಷೆಗಳೂ ಸಂದೇಹಗಳೂ ಸಂಕಟಗಳೂ ಇಂಗ್ಲಿಷರ ಆಧುನಿಕ ಕಾವ್ಯಪುಂಜದಲ್ಲಿ ಪ್ರತಿಬಿಂಬಿತವಾಗಿವೆ. ಹೀಗೆ ಮಾನವ ಕುಲದ ದಿನಚರಿಯ ಗೋಳಾಟ ಗೊಣಗಾಟ ಬಡಿದಾಟ ಕುಣಿದಾಟಗಳಿಗೆ ಪ್ರತಿಧ್ವನಿ ಕೊಡುವುದೇ ಸಜೀವ ಸಾಹಿತ್ಯ. (ಪರಿಶಿಷ್ಟವನ್ನು ನೋಡಿ.)

ನಮ್ಮಲ್ಲೇನೂ ಗೋಳಾಟ ಗೊಣಗಾಟಗಳಿಗೆ ಕಡಿಮೆಯಿಲ್ಲ. ಆದರೆ "ಎಲ್ಲವೂ ಕಾಲಹೇಪಿತ, ಕಲಿಮಹಿಮೆ, ಪ್ರಾಚೀನ ಫಲ; ಅದನ್ನು ತಪ್ಪಿಸುವರಾರು, ತಿದ್ದುವವರಾರು; ಅವಶ್ಯಮನುಭೋಕ್ತವ್ಯಂ"—ಎಂಬೀ ಮಂತ್ರ ಪಾಶಗಳು ನಮ್ಮ ಮನಸ್ಸು ಬುದ್ಧಿಗಳನ್ನು ಬಿಗಿದಿರುತ್ತವೆ. ಕಷ್ಟ ವಿಮೋಚನೆಗೆ ಉಪಾಯವೇನೆಂಬ ಚಿಂತೆಯ ಕಡೆ ನಮ್ಮ ಗಮನ ಹೋಗುವುದೇ ಇಲ್ಲ. ಬಂದುದನ್ನು ಬಾಯಿ ಮುಚ್ಚಿಕೊಂಡು ಅನುಭವಿಸುವುದೇ ಅಭ್ಯಾಸವಾಗಿ, ಮೈ ಜಡ್ಡುಕಟ್ಟಿ ಹೋಗಿದೆ. ಒಂದು ವೇಳೆ ಕಷ್ಟ ನಿವಾರಣೆಯ ಕಡೆ ಮನಸ್ಸೇನಾದರೂ ತಿರುಗಿದರೆ ಆಗ ಪೂರ್ವಾಚಾರ, ಶಾಸ್ತ್ರವಚನ, ಶಿಷ್ಟ

ಸಂಪ್ರದಾಯ—ಇವೆಲ್ಲ ಬಂದು ದಾರಿಗೆ ಅಡ್ಡಕಟ್ಟಿ, ಮನಸ್ಸನ್ನು ಮುಂದಕ್ಕೆ ಹೋಗಗೊಡಿಸುವುದಿಲ್ಲ. ನಮ್ಮ ಈಗಿನ ಕೆಲವು ಸಾಮಾಜಿಕ ವ್ಯವಸ್ಥೆಗಳನ್ನೂ ಪದ್ಧತಿಗಳನ್ನೂ ತಿದ್ದಿದ ಹೊರತು ಕಷ್ಟ ತಪ್ಪುವ ಹಾಗಿಲ್ಲ. ಅವುಗಳನ್ನು ತಿದ್ದೋಣವೆಂದರೆ, ನಮ್ಮ ವೈದಿಕರ ಪಾಂಡಿತ್ಯದ ಪರ್ವತಾಕಾರವು ನಮ್ಮನ್ನು ಸ್ತಬ್ಧರನ್ನಾಗಿ ಮಾಡುತ್ತದೆ; ಅಥವಾ ಪಾಶ್ಚಾತ್ಯ ಪದ್ಧತಿಯ ದೋಷಗಳ ವರ್ಣನೆಯು ನಮ್ಮನ್ನು ಮೂಕರನ್ನಾಗಿ ಮಾಡುತ್ತದೆ. "ನಾವು ಪಾಶ್ಚಾತ್ಯರಂತೆ ಆಗಬೇಕೋ? ಅವರಲ್ಲಿ ಕಷ್ಟ ಕಾರ್ಪಣ್ಯಗಳಿಲ್ಲವೋ? ಯೂರೋಪು ಏನು ಭೂತಲ ಸ್ವರ್ಗವೋ? ಒಂದು ಹಳೆಯ ನ್ಯೂನತೆಯನ್ನು ತಿದ್ದಿದರೆ ಮತ್ತೊಂದು ಹೊಸ ನ್ಯೂನತೆ ಹುಟ್ಟಲಾರದೋ? ನಿಮ್ಮ ಸಂಸ್ಕರಣೆ ಸುಧಾರಣೆಗಳಿಂದ ಏನೇನೂ ಪ್ರಯೋಜನವಿಲ್ಲ. ದೋಷವನ್ನೂ ದುಃಖವನ್ನೂ ತೊಡೆದುಹಾಕುವುದು ಮನುಷ್ಯನಾದವನಿಗೆ ಸಾಧ್ಯವಿಲ್ಲ. ವಿಧಿಯ ಮುಂದೆ ಸಮಾಕರಣದ ಹುಚ್ಚು ಹಾರಾಟವೇಕೆ? ಇರುವುದು ಹೀಗೆಯೇ ಇರಲಿ; ಬರುವುದನ್ನು ಅನುಭವಿಸಿಬಿಡೋಣ"—ಹೀಗೆಂದು ವಾದಿಸುವರು ನಮ್ಮ ಈಗಿನ ವೇದಾಂತಿಗಳು. ದೇಶದಲ್ಲಿ ಈ ವಿಧವಾದ ಮನೋವೃತ್ತಿ ಪ್ರಬಲಿಸಿರುವಾಗ ಉನ್ನತವೂ ತೀವ್ರವೂ ಆದ ಭಾವನೆಗಳೂ ಸಂಕಲ್ಪಗಳೂ ತಲೆದೋರುವುದು ಅಸಂಭವ. ಯಾವಾಗ ವಿವಿಧಗಳಾದ ನೂತನ ಭಾವನೆಗಳೂ ನೂತನ ಸಂಕಲ್ಪಗಳೂ ಇಲ್ಲವೋ, ಯಾವಾಗ ಬಗೆಬಗೆಯ ಆಶಯ ಸಂಶಯಗಳ ಪರಸ್ಪರ ಸಂಘರ್ಷಣೆ ಇಲ್ಲವೋ, ಯಾವಾಗ ಮನೋಬುದ್ಧಿಗಳು ಪೂರ್ವಾಭ್ಯಾಸ ಪರವಶಗಳಾಗಿ, ನವೀನ ಲೋಕವಿಮುಖಗಳಾಗಿ ನಡೆಯುತ್ತಿರುವುವೋ, ಆಗ ನಮ್ಮಗಳ ಅಂತರಂಗಗಳಲ್ಲಿ ಕಾವ್ಯಾಂಕುರಕ್ಕೆ ಕಾರಣವಾದ ಶಾಖವು ಹುಟ್ಟಲಾರದು. ಅಭಿನವಾಭಿಪ್ರಾಯವೆಂಬ,—ತತ್ಸಂಬಂಧವಾದ ಸಂದೇಹವೆಂಬ—ಹುಳಿಯ ತೊಟ್ಟೊಂದು ನಮ್ಮ ಹೃದಯ ರಸದಲ್ಲಿ ಬಿದ್ದಲ್ಲದೆ ಅಲ್ಲಿ ನವನೀತವು ಉದಿಸಲಾರದು. ಲೋಕ ಪರಿಸ್ಥಿತಿಯ ಗಾಢ ಚಿಂತನೆಯಿಂದ ನಮ್ಮಗಳ ಮನಸ್ಸುಗಳಲ್ಲಿ ನಾನಾ ವಿಚಾರ

ಗಳೂ ಸಂತಾಪಗಳೂ ಉತ್ಸಾಹಗಳೂ ಪ್ರತಿಜ್ಞೆಗಳೂ ಉತ್ಪನ್ನವಾಗುತ್ತವೆ. ಅವುಗಳಿಗೆ—ಪ್ರಾಚೀನಕರ್ಮ ವಾದ, ದೈವತಂತ್ರ ವಾದ, ಅದೃಷ್ಟ ವಾದ, ಪೂರ್ವಾಚಾರ ವಾದ, ಪಾಶ್ಚಾತ್ಯ ನಿರಸನ ವಾದ— ಈ ನಾನಾ ವಾದಗಳ ಆತಂಕವನ್ನು ತಪ್ಪಿಸಿ, ಅವುಗಳನ್ನು ಸ್ವತಂತ್ರವಾಗಿ ಬಿಟ್ಟರೆ, ಆಗ ಅವುಗಳ ಆವೇಗ ಸಂಘರ್ಷಣೆಗಳಿಂದ ಒಂದು ಕಾವು ಹುಟ್ಟುತ್ತದೆ. ಆ ಕಾವಿನ ಕೆಲಸವೇ ಕಾವ್ಯ.

ಶ್ರೀ ಭಗವದ್ಗೀತೆಯೇ ಇದಕ್ಕೆ ಉದಾಹರಣೆ. ಅದು ಅರ್ಜುನನ ಮನಸ್ಸಿನ ಕಾವಿನಿಂದ ಹುಟ್ಟಿದ ಕಾವ್ಯ. ಆ ಮಹಾನುಭಾವನಿಗೆ ಧರ್ಮಸಂಕಟವೊದಗಿತು; ಜಗತ್ತಿಗೆ ಮಹೋಪಕಾರವಾಯಿತು. ಒಂದು ಕಡೆ ದುರ್ಯೋಧನನ ದ್ರೋಹ ಪ್ರಯತ್ನದಮೇಲೆ ರೋಷ, ಇನ್ನೊಂದು ಕಡೆ ದ್ರೋಣ ಭೀಷ್ಮರಮೇಲೆ ಗುರು ಪ್ರೀತಿ; ಒಂದು ಕಡೆ ದುಷ್ಟರಿಂದಾದ ಅಪಮಾನದ ವಿಷಯದಲ್ಲಿ ಅಸಹನೆ, ಮತ್ತೊಂದು ಕಡೆ ಬಂಧು ಮಿತ್ರರ ವಿಷಯದಲ್ಲಿ ಮಮತೆ; ಒಂದು ಕಡೆ ವೀರ, ಇನ್ನೊಂದು ಕಡೆ ಕರುಣ; ಕರದಲ್ಲಿ ಗಾಂಡೀವ, ಕಂಠದಲ್ಲಿ ಗದ್ಗದ —ಈ ದ್ವಂದ್ವ ಪ್ರಸಂಗದಲ್ಲಿ ಸರಿ ಯಾವುದು, ತಪ್ಪಾವುದು? ಈ ಜೊತೆ ಜೊತೆಗಳನ್ನು ಬೇರೆ ಬೇರೆ ಬಿಡಿಸಿ ನೋಡಿದರೆ ಒಂದೊಂದೂ ಒಪ್ಪತಕ್ಕುದಾಗಿಯೇ ಕಾಣುತ್ತದೆ. ಆದರೆ ಎರಡು ಸರ್ವ ಸಮ್ಮತಗಳಾದ ಬೇರೆ ಬೇರೆ ನೀತಿಗಳು ಪರಸ್ಪರ ವಿರುದ್ಧಗಳಾಗಿ ಎದುರು ನಿಂತಿರುವ ವಿಷಮ ಸಂದರ್ಭದಲ್ಲಿ ತ್ಯಾಜ್ಯವಾವುದು, ಗ್ರಾಹ್ಯವಾವುದು? ಇದು ಅರ್ಜುನನಿಗೊದಗಿದ್ದ ಸಮಸ್ಯೆ. ಈ ಸಮಸ್ಯೆಯಿಂದ ಗೀತೆಗೆ ಅವಕಾಶವಾದುದು. ಆತನ ಯಾವ ಒಂದು ಸಂಶಯವನ್ನು, ಯಾವ ಒಂದು ಆಂದೋಳನಾವಸ್ಥೆಯನ್ನು, ಭಗವಂತನು—

"ಕುತಸ್ತ್ವಾ ಕಶ್ಮಲಮಿದಂ"

ಎಂದು ಬಣ್ಣಿಸಿದನೋ, ಯಾವುದನ್ನು ಸರ್ವಜ್ಞರಾದವರು ಮಾತ್ರವೇ ಕನಿಕರದಿಂದ ಹಾಗೆ ಬಣ್ಣಿಸಬಹುದೋ, ಯಾವ ಸ್ಥಿತಿಯು ಉಳಿದವರ ಪಾಲಿಗೆ ಕಶ್ಮಲವೆನಿಸದೆ ಜ್ಞಾನದ್ವಾರವೇ ಆದೀತೋ, ಅಂಥಾ

ಪರಮಾನುಗ್ರಹ ಸಂಪಾದಕವಾದ ವಿಚಾರಾತುರತೆಯನ್ನು, ಆ ತತ್ತ್ವ ಚಿಂತಾವ್ಯಸನವನ್ನು, ನಾವರಿಯೆವು. ಅಂಥಾ ಆತುರದ ಸ್ಥಿತಿಯೇ ವಿಜ್ಞಾನಿಯದು. ಅದೇ ಎಲ್ಲ ಮಹಾಪುರುಷ ಪ್ರಯತ್ನಕ್ಕೂ ಮೂಲ ವಾದುದು.

ಕವಿಯ ವಾಕ್ಚಾತುರ್ಯವು ಎಂತಹುದೇ ಆಗಿರಲಿ, ಅವನ ಪ್ರತಿಭಾ ಸಂಪತ್ತು ಎಂತಹುದೇ ಆಗಿರಲಿ, ಅವನ ಕಾವ್ಯಕ್ಕೆ ಮಹತ್ತ್ವ ಬರುವುದು ಅವನ ಲೋಕಾನುಭವದ ಮಹತ್ತ್ವದಿಂದ. ಇಂತಹ ಅನುಭವ ವಿಶೇಷವನ್ನೊದಗಿಸಿಕೊಡುವುದು ಸಮಾಜದ ಕೆಲಸ. ಅವನಲ್ಲಿ ಚಿಂತೆಯನ್ನೂ ಸಂತಾಪವನ್ನೂ ಉತ್ಸಾಹವನ್ನೂ ಶೌರ್ಯ ವನ್ನೂ ಉದ್ರೇಕಗೊಳಿಸುವಂಥ ಸಂದರ್ಭಗಳು ಅವನ ಸುತ್ತಮುತ್ತ ಕಾಣಬರಬೇಕು. ಇಂಥಾ ಸಂದರ್ಭಗಳ ಅನುಭವಗಳು ಅವನಿಗೆ ಎಷ್ಟೆಷ್ಟು ವಿಶಾಲವಾಗಿ, ಎಷ್ಟೆಷ್ಟು ಆಳವಾಗಿ, ಎಷ್ಟೆಷ್ಟು ಗಾಢ ವಾಗಿ ಆಗುವುವೋ, ಅವನ ಪ್ರತಿಭೆಯು ಅಷ್ಟಷ್ಟು ಪರಿಪುಷ್ಟವಾಗಿ, ತೇಜಸ್ವಿಯಾಗಿ ಬೆಳಗುವುದು; ಅವನ ವಾಗ್ಧಾರೆಯು ಅಷ್ಟಷ್ಟು ರಸವತ್ತಾಗಿ ಹರಿಯುವುದು. ಮಹಾ ಅನುಭವವಿಲ್ಲದೆ ಮಹಾ ಕಾವ್ಯವು ಆಗದು.

ಈಗ ಈ ದೇಶದಲ್ಲಿ ನಾವು ಒಂದು ಸಂಧಿ ಸಮಯದಲ್ಲಿದ್ದೇವೆ. ಇದು ಹೊಸ ಯುಗವೊಂದು ಹುಟ್ಟುವ ಕಾಲ. ಈಗ ನಮ್ಮ ಪುರಾತನ ಪ್ರಪಂಚವೂ ಪಾಶ್ಚಾತ್ಯರು ಇಲ್ಲಿಗೆ ತಂದಿರುವ ನೂತನ ಪ್ರಪಂಚವೂ ಈ ಭರತಭೂಮಿಯಲ್ಲಿ ದ್ವಂದ್ವ ಯುದ್ಧಕ್ಕೆ ತೊಡಗಿವೆ. ನಾವು ಯಾವ ಪಕ್ಷವನ್ನು ಹಿಡಿಯೋಣ? ಅವೆರಡೂ ಯುದ್ಧ ಮಾಡಲೇ ಬೇಕೆ? ಸಂಧಿಮಾಡಿಸಲಾಗದೆ? ಅವು ಏಕೆ ಶತ್ರು ಪ್ರತಿಶತ್ರುಗಳಾಗ ಬೇಕು? ಮಿತ್ರರಂತೆ ಏಕೆ ಬಾಳಬಾರದು? ಇವು ಸಾಹಿತ್ಯಾಭಿಮಾನಿ ಗಳು ಸಹ ಕೇಳಬೇಕಾದ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ನಾವು ಮನಸ್ಸು ಕೊಟ್ಟು, ಪಾಶ್ಚಾತ್ಯರ ಜೀವನ ಪ್ರಕಾರದ ವಿಷಯದಲ್ಲಿ, ಅವರ ವಿಜ್ಞಾನ ವಿದ್ಯೆಯ ವಿಷಯದಲ್ಲಿ, ಅವರ ಸಮಾಜ ಪರಿಷ್ಕರಣೆಗಳ ವಿಷಯದಲ್ಲಿ, ನಮ್ಮ ಸಿದ್ಧಾಂತ ಆಚರಣೆಗಳೇನಾಗಿರಬೇಕೆಂಬುದನ್ನು

ಈಗ ನಿಷ್ಕರ್ಷೆಮಾಡಬೇಕು. ನಾವು ಅವರಿಂದ ಯಾವುದನ್ನಾದರೂ ಕಲಿಯಬಹುದೆ, ಕೂಡದೆ? ಅವರ ವೈಜ್ಞಾನಿಕ ಸಂಧಾನಗಳೂ ವಿಜ್ಞಾನ ಪದ್ಧತಿಗಳೂ ನಮಗೆ ಬೇಕೆ, ಬೇಡವೆ? ಅವರಂತೆ ನಾವೂ ಆಗಾಗ ನಮ್ಮ ಸಂಸ್ಥೆ ಸಂಪ್ರದಾಯಗಳನ್ನು ವಿಚಾರದಿಂದ ಶೋಧಿಸಿ ಸಂಸ್ಕರಿಸತಕ್ಕುದೆ, ಅಲ್ಲವೆ? ಅವರು ತೋರಿಸುವ ಪುರುಷಕಾರ ಮತವು ನಮಗೆ ಯೋಗ್ಯವೆ, ಅಯೋಗ್ಯವೆ? ಈ ಪ್ರಶ್ನೆಗಳಿಗೆ ಉತ್ತರಗಳನ್ನು ಗೊತ್ತುಮಾಡಿದಲ್ಲದೆ ನಮ್ಮ ಜನಪದಾಭಿವೃದ್ಧಿಯು ಸುಸೂತ್ರವಾಗಿ ಸಾಗದು. ಇದು ನಿರ್ಧಾರವಾಗಬೇಕಾದರೆ ಯಾವ ಧರ್ಮ ಸೂಕ್ಷ್ಮಚಿಂತನೆಯೂ, ಯಾವ ಗುಣ ದೋಷ ವಿಮರ್ಶೆಯೂ, ಯಾವ ನೀತಿ ವಿವೇಚನೆಯೂ ಆವಶ್ಯಕಗಳೋ ಆ ನಾನಾ ವಿಧದ ಮನೋವ್ಯಾಪಾರವೇ ಸಜೀವ ಸಾಹಿತ್ಯಕ್ಕೆ ಮಾತೃಕೆಯಾಗುವುದು.

ಪಾಶ್ಚಾತ್ಯರ ಜೀವನ ಪ್ರಕಾರವೂ ಅವರ ವಿಜ್ಞಾನ ವೈಭವವೂ ಆಸುರೀ ಸಂಪತ್ತೆಂದೂ, ದೈವೀ ಸಂಪತ್ತೆಲ್ಲಕ್ಕೂ ಭಾರತೀಯರೇ ಸರ್ವಾಧಿಕಾರಿಗಳೆಂದೂ ನಂಬುವುದು ನನಗೆ ಅಸಾಧ್ಯವಾಗಿದೆ. ಅವರೆಲ್ಲರೂ ಭೋಗಾಸಕ್ತರು, ನಾವು ಮಾತ್ರ ತ್ಯಾಗ ವೀರರು; ಅವರೆಲ್ಲರೂ ವಿಷಯಲಂಪಟರು, ನಾವು ಮಾತ್ರ ಜಿತೇಂದ್ರಿಯರು; ಅವರೆಲ್ಲರೂ ಇಹಲೋಕ ಪರಿತುಷ್ಟರು, ನಾವು ಮಾತ್ರ ಪರ ಲೋಕೈಕದೃಷ್ಟಿಗಳು—ಎಂದು ನಾನು ಭಾವಿಸಲಾರೆ. ಸಾಧುಗಳೂ, ಸ್ವಾರ್ಥತ್ಯಾಗಿಗಳೂ, ಧರ್ಮಜಿಜ್ಞಾಸುಗಳೂ, ಜಗದ್ಧಿತ ದೀಕ್ಷಿತರೂ ಪಾಶ್ಚಾತ್ಯ ದೇಶಗಳಲ್ಲಿ ಎಷ್ಟೋಮಂದಿ ಇದ್ದರು, ಈಗಲೂ ಇದ್ದಾರೆ. ಪರಮಾತ್ಮನಿಷ್ಠೆ, ಲೋಕಕಾರುಣ್ಯ—ಇವು ನಮಗಿರುವಂತೆಯೇ ಅವರಿಗೂ ಇವೆ. ಬಾಹ್ಯಾಚರಣೆಗಳೂ ಪದ್ಧತಿಗಳೂ ಅವರವು ನಮ್ಮವುಗಳಿಂದ ಬಹುಮಟ್ಟಿಗೆ ಬೇರೆಯಾಗಿರುವುದು ನಿಜ; ಆದರೆ ಮೂಲ ಭಾವನೆಗಳು ಅವರವೂ ನಮ್ಮವೂ ಒಂದೇ ಎಂದು ವಿಚಾರ ದಿಂದ ಗೊತ್ತಾಗುತ್ತದೆ. ಅವರನ್ನು ಅಲ್ಲಗಳೆಯಲು ನಮಗಿರುವ ಅಧಿಕಾರವಾದರೂ ಏನು? ನಮ್ಮ ಭಟ್ಟಾಕಲಂಕದೇವನ—

"ಭಗವದ್ಭಾಷಾಪಿ, ಸ್ವೋತ್ಪತ್ತಿ ಸಮಯೇ, ಸಮುದ್ರ ಘೋಷವತ್, ಅವ್ಯಕ್ತೈಕ ಭಾಷಾ ರೂಪಾಪಿ, ತತ್ರಚೈತ್ಯೈಕ ಶ್ರೋತ್ರದೇಶಂ ಪ್ರಾಪ್ತಾ ಸತೀ, ತತ್ತದ್ಭಾಷಾತ್ಮನಾ ಪರಿಣಮತಿ, ವಿಚಿತ್ರ ಶಕ್ತಿತ್ವಾತ್॥ ತದುಕ್ತಂ—

ದೇವಾ ದೈವೀಂ ನರಾ ನಾರೀಂ ಶಬರಾಶ್ಚಾಪಿ ಶಾಬರೀಂ।
ತಿರ್ಯಂಚೋಪಿ ಚ ತೈರಶ್ಚೀಂ ಮೇನಿರೇ ಭಗವದ್ಗಿರಂ॥"

ಎಂಬ ವಚನಕ್ಕನುಸಾರವಾಗಿ, ಕರ್ಣಾಟಕಾಂಧ್ರ ಭಾಷೆಗಳು ಒಂದೇ ಭಗವದ್ವಾಣಿಯ ರೂಪಾಂತರಗಳೇ ಎಂದು ನಾವು ಒಪ್ಪುವುದಾದರೆ, ಇಂಗ್ಲಿಷ್ ಜರ್ಮನ್ ಭಾಷೆಗಳೂ ಕೂಡ ಅದೇ ಆದಿವಾಕ್ಕಿನ ಅವತಾರಗಳೇ ಎಂದೂ ನಾವು ಒಪ್ಪಬೇಕಾಗುವುದು. ಅದೇ ನ್ಯಾಯವನ್ನನುಸರಿಸಿ, ನಮ್ಮ ಕಪಿಲ ಪತಂಜಲಿಗಳ ಸಾಂಖ್ಯಶಾಸ್ತ್ರ ಯೋಗಶಾಸ್ತ್ರಗಳಂತೆಯೇ, ನಮ್ಮ ಚರಕ ಸುಶ್ರುತಾದಿಗಳ ಪ್ರಾಣಿಶಾಸ್ತ್ರ ಶರೀರಶಾಸ್ತ್ರಗಳಂತೆಯೇ, ನಮ್ಮ ಶುಕ್ರ ಕಾಮಂದಕ ಮೊದಲಾದವರುಗಳ ನೀತಿಶಾಸ್ತ್ರ ಅರ್ಥಶಾಸ್ತ್ರಗಳಂತೆಯೇ, ಪಾಶ್ಚಾತ್ಯರ ಆರ್ಕಿಮಿಡೀಸ್, ನ್ಯೂಟನ್, ಡಾರ್ವಿನ್, ಹರ್ಬರ್ಟ್ ಸ್ಪೆನ್ಸರ್, ಲಿಸ್ಟರ್, ಎಡಿಸನ್, ಆಸ್ಟಿನ್, ಆ್ಯಡಂ ಸ್ಮಿತ್, ಬೆನ್‌ಥಂ, ಮಿಲ್ ಮೊದಲಾದ ವೈಜ್ಞಾನಿಕರು ವ್ಯವಸಾಯಮಾಡಿರುವ ನಾನಾವಿಧದ ಭೌತಿಕ ರಾಸಾಯನಿಕ ಶಾಸ್ತ್ರಗಳೂ, ಭೂಗರ್ಭಶಾಸ್ತ್ರ ಜೀವಶಾಸ್ತ್ರಗಳೂ, ಅರ್ಥಶಾಸ್ತ್ರ ವ್ಯವಹಾರಶಾಸ್ತ್ರಗಳೂ ಸಹ ಸೃಷ್ಟಿಕರ್ತನ ಒಂದು ಚಿತ್ಕಲೆಯ ಅಂಶದಿಂದಲೇ ಬಂದುವೆಂದು ನಾವು ಒಪ್ಪಿಕೊಳ್ಳಬೇಕಾಗುವುದು. ಭಾರತೀಯರ ಆತ್ಮ ತತ್ತ್ವಜ್ಞಾನವು ಹೇಗೆಯೋ ಪಾಶ್ಚಾತ್ಯರ ಪ್ರಕೃತಿ ತತ್ತ್ವ ವಿಜ್ಞಾನವೂ ಹಾಗೆಯೇ ಜಗಜ್ಜನಕನ ಚಿಚ್ಛಕ್ತಿಯ ಒಂದು ಮಹಾ ವಿಭೂತಿಯೆಂದೇ ನಾವು ಅಂಗೀಕರಿಸಬೇಕು. ಇಲ್ಲಿ ಪುನಃ ಗೀತಾ ವಾಕ್ಯವನ್ನು ಸ್ಮರಿಸೋಣ:—

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ।
ತತ್ತದೇವಾವಗಚ್ಛ ತ್ವಂ ಮಮ ತೇಜೋಂಶ ಸಂಭವಂ॥

ಭಾರತೀಯರು ಮಾತ್ರ ವಿಶ್ವಕರ್ತನ ಔರಸಪುತ್ರರೆಂದೂ, ಉಳಿದವರೆಲ್ಲ ಇನ್ನೆಲ್ಲಿಂದಲೋ ಬಂದವರೆಂದೂ ಯಾರೂ ಹೇಳಲಾರರು. ಈ ಜಗತ್ತಿನಲ್ಲಿ ದೊಡ್ಡ ದೊಡ್ಡ ಪದಾರ್ಥಗಳು ಯಾವ ದೇಶದಲ್ಲಿ ಹುಟ್ಟಿದ್ದರೂ ಅವುಗಳ ಪ್ರಯೋಜನವು ಎಲ್ಲ ದೇಶಗಳಿಗೂ ಸೇರ ಬೇಕಾದುದಾಗಿದೆ. ಸೂರ್ಯನು ಪೂರ್ವದಿಕ್ಕಿನಲ್ಲಿ ಹುಟ್ಟಿದರೂ ಪಶ್ಚಿಮಕ್ಕೆ ಪ್ರಯಾಣಮಾಡುತ್ತಾನೆ; ಪಶ್ಚಿಮದಿಕ್ಕಿನಲ್ಲಿ ಮುಳುಗಿ ದರೂ ಪುನಃ ಪೂರ್ವದಲ್ಲಿ ಕಾಣಿಸಿಕೊಳ್ಳುತ್ತಾನೆ. ಸೂರ್ಯ ಪ್ರಭೆ ತನಗೊಂದಕ್ಕೆ ಮಾತ್ರವೇ ಸೇರಿದುದೆಂದು ಯಾವ ಒಂದು ದಿಕ್ಕೂ ಹೇಳಿಕೊಳ್ಳಲಾಗುವುದಿಲ್ಲ. ಸೂರ್ಯನ ಯಾತ್ರೆ ತನ್ನಿಂದ ಮೊದ ಲಾಯಿತೆಂದು ಯಾವ ಊರೂ ಹೇಳಿಕೊಳ್ಳಲಾಗುವುದಿಲ್ಲ. ಹಾಗೆಯೇ ಜಗದ್ವ್ಯಾಪಿಯಾದ ದಿವ್ಯ ಚೈತನ್ಯವು ಒಂದೊಂದು ಭೂಭಾಗದಲ್ಲಿ ಒಂದೊಂದು ತೆರನಾಗಿ ರೂಪುಗೊಂಡಿರುತ್ತದೆ; ಆದರೆ ಆ ಬೇರೆ ಬೇರೆ ರೂಪಗಳ ತೇಜಸ್ಸುಗಳನ್ನು ಎಲ್ಲ ದೇಶಗಳವರೂ ವಿಶ್ವಾಸದಿಂದ ಸ್ವೀಕರಿಸಬೇಕು. ಹೀಗೆ ಪಾಶ್ಚಾತ್ಯರ ವಿಜ್ಞಾನವೆಂಬುದು, ನಮ್ಮ ದೇಶದ ಆತ್ಮಜ್ಞಾನದಂತೆಯೇ, ಸಕಲ ಮಾನವಲೋಕ ಸಂಸ್ಕೃತಿಯ, —ಮನುಷ್ಯ ಜಾತಿಯ ಯಾವ ಸತ್ತ್ವ ವಿಕಾಸವನ್ನು Civilisation, ಸಭ್ಯತೆ, ನಾಗರಿಕತೆ ಎಂದು ಕರೆಯುತ್ತೇವೆಯೋ ಅದರ—ಒಂದು ಮುಖ್ಯ ಭಾಗವೆಂದು ನಾವು ತಿಳಿಯಬೇಕು. ಆ ವಿಜ್ಞಾನವು ನಮಗೆ ಬೇಕೆ, ಬೇಡವೆ?—ಈ ಪ್ರಶ್ನೆಗೆ ನಾವು ಇನ್ನೂ ಖಂಡಿತವಾದ ಉತ್ತರ ವನ್ನು ಕೊಟ್ಟಿಲ್ಲ. ಒಂದು ಸಲ ಅದು ಬೇಕೆನ್ನುತ್ತೇವೆ; ಇನ್ನೊಂದು ಸಲ ಬೇಡವೆನ್ನುತ್ತೇವೆ. ಈ ಅವ್ಯವಸ್ಥೆ ಶ್ರೇಯಸ್ಸಿಗೆ ಸಾಧಕವಲ್ಲ. ನಮ್ಮ ಭವಿಷ್ಯತ್ತು ಹೇಗಿರಬೇಕು; ಅದಕ್ಕೆ ವಿಜ್ಞಾನದ ಸಹಾಯವು ಅವಶ್ಯವೆ, ಅಲ್ಲವೆ—ಎಂಬೀ ವಿಚಾರಗಳನ್ನು ನಾವು ಈಗ ಸಿದ್ಧಾಂತಕ್ಕೆ ತರಬೇಕಾದ ಕಾಲ. ನಮ್ಮ ಸಾಹಿತ್ಯಾಭಿವೃದ್ಧಿಗೆ ಈ ವಿಚಾರವು ಗಾಢವಾಗಿ ಸಂಬಂಧಪಟ್ಟಿದೆ. ಪ್ರಪಂಚ ವಿಜ್ಞಾನಕ್ಕೂ (ಸೈನ್ಸಿಗೂ) ಅಂತರಾತ್ಮಜ್ಞಾನಕ್ಕೂ (ವೇದಾಂತಕ್ಕೂ) ನಿಸರ್ಗವಾದ ಪರಸ್ಪರ ವಿರೋಧವೇನೂ ಇಲ್ಲ. ಅವೆರಡನ್ನೂ ಸಮನ್ವಯಮಾಡುವುದು

ಅಸಾಧ್ಯವೇನೂ ಅಲ್ಲ. ಈ ನಿಶ್ಚಯವನ್ನು ನಾವು ಚೆನ್ನಾಗಿ ಗ್ರಹಿಸಿ, ಅದರ ಆಧಾರದ ಮೇಲೆ ಉಳಿದೆಲ್ಲ ತರ್ಕಗಳನ್ನೂ ನಡೆಸಿದರೆ ಅವು ಹಿತಪ್ರದವಾದ ಸಿದ್ಧಾಂತಕ್ಕೆ ದಾರಿ ಮಾಡುವುವು.

ಇಹಲೋಕದ ಯೋಗಕ್ಷೇಮಗಳೂ ಪರಮಮೋಕ್ಷ ಸಾಧನೆಯೂ ಅನ್ಯೋನ್ಯ ಸಂಬದ್ಧಗಳಾಗಿರುತ್ತವೆ. ನಮ್ಮ ಬಹಿರಂಗ ಜೀವನದಲ್ಲಿ ಶಾಂತಿ ಸಮಾಧಾನಗಳು ಇದ್ದಲ್ಲದೆ ನಮ್ಮ ಅಂತರಂಗ ಜೀವನವು ನಿರುಪಾಧಿಕವಾಗಿ ನಡೆಯದು. ಹೊರಗಡೆ ದುಃಖ ದುರಿತಗಳ ಅಲೆಗಳು ಒಂದರಮೇಲೊಂದು ಬಂದು ಹೊಡೆಯುತ್ತಿದ್ದರೆ, ಒಳಗಡೆ ಆತ್ಮನನ್ನು ನಿಶ್ಚಲ ಸಮಾಧಿಯಲ್ಲಿರಿಸುವುದು ಸಾಮಾನ್ಯ ಜನರಿಗೆ ಸಾಧ್ಯವಲ್ಲ. ಹೊರಗಿನ ಕಷ್ಟಗಳು ಕಡಮೆಯಾಗಬೇಕಾದರೆ, ವಿಜ್ಞಾನವು ನಮಗೆ ಸಹಾಯವಾಗಬೇಕು. ಅದು ಒದಗಿಸುವ ಯಂತ್ರ ಸಂಧಾನಗಳಿಂದಲೂ, ಅದರ ಪ್ರೇರಣೆಯಿಂದ ಆಗುವ ಸಾಮಾಜಿಕ ರಾಜಕೀಯ ಪರಿಷ್ಕಾರಗಳಿಂದಲೂ ನಮ್ಮ ಬಾಹ್ಯ ಸ್ಥಿತಿಗಳು ಸಾಧ್ಯವಾದಷ್ಟುಮಟ್ಟಿಗೆ ಅನುಕೂಲಗಳಾಗಬೇಕು. ಆಗ ಆತ್ಮ ವಿದ್ಯಾಭ್ಯಾಸಕ್ಕೆ ಉತ್ತಮವಾದ ಅವಕಾಶವುಂಟಾಗುವುದು. ಆತ್ಮ ಜಿಜ್ಞಾಸೆಗೆ ಬೇಕಾದ ಪೂರ್ವ ಸೌಕರ್ಯಗಳನ್ನು ವಿಜ್ಞಾನವು ಸಿದ್ಧ ಪಡಿಸುವುದು; ವಿಜ್ಞಾನದ ಶ್ರಮೆಯನ್ನು ಆತ್ಮಜ್ಞಾನವು ಸಫಲ ಗೊಳಿಸುವುದು. ಹೀಗೆ ಅವು ಪರಸ್ಪರೋಪಕಾರಿಗಳು. ಅವೆರಡೂ ಮಾನವಕುಲಕ್ಕೆ ಬಲಗಣ್ಣು ಎಡಗಣ್ಣುಗಳಂತೆ ಎಂದು ಹೇಳ ಬಹುದು. ಅವೆರಡೂ ಕೂಡಿ ಸಹಕರಿಸಲು ಆಗಲಾರದೆ?

ಈಗಿನ ಲೋಕಸ್ಥಿತಿಯಲ್ಲಿ ಪಾಶ್ಚಾತ್ಯರಿಗೆ ನಮ್ಮ ಆತ್ಮತತ್ತ್ವ ಜ್ಞಾನದ ಆವಶ್ಯಕತೆ ಹೆಚ್ಚಾಗಿದೆ; ನಮಗೆ ಅವರ ಪ್ರಕೃತಿ ವಿಜ್ಞಾನದ ಆವಶ್ಯಕತೆ ಹೆಚ್ಚಾಗಿದೆ. ವಿಜ್ಞಾನ ವಿದ್ಯಾಭ್ಯಾಸದಿಂದ ನಮಗೆ ಅಜ್ಜ ಮುತ್ತಜ್ಜಂದಿರ ಕಾಲದಿಂದ ಬಂದಿರುವ ಮನೋಭಾವಗಳಲ್ಲಿ ಸ್ವಲ್ಪ ರಾಸಾಯನಿಕ ವ್ಯತ್ಯಾಸ ನಡೆಯಬೇಕು. ವಿಜ್ಞಾನದ ವಿದ್ಯುಚ್ಛಕ್ತಿ ಯಿಂದ ನಮ್ಮ ಮನೋಬುದ್ಧಿಗಳಲ್ಲಿ ಸ್ವಲ್ಪ ಶಾಖ ಹುಟ್ಟಬೇಕು. ಪರ ದೇಶೀಯರು ಮಾಡುತ್ತಿರುವಂಥ ಗಹನ ವಿಚಾರಗಳೂ ಅವರ ಆಚರಣೆ

ಗಳೂ ನಮ್ಮ ಆಲೋಚನೆಗಳಿಗೆ ವಿಷಯಗಳಾಗಬೇಕು. ಅವುಗಳನ್ನು ನಾವು ಎಷ್ಟೆಷ್ಟು ನಿಷ್ಪಕ್ಷಪಾತವಾಗಿ ಪರಾಮರ್ಶಿಸಿ, ಅವುಗಳ ಗುಣಗಳನ್ನು ಗ್ರಹಿಸುತ್ತ ಹೋಗುವೆವೋ, ಅಷ್ಟಷ್ಟುಮಟ್ಟಿಗೆ ಹೊಸ ಹೊಸ ಭಾವಗಳೂ, ಉನ್ನತವಾದ ಆಶಯಗಳೂ, ದೊಡ್ಡ ಸಮಾರಂಭಗಳೂ ನಮ್ಮಲ್ಲಿ ಹುಟ್ಟುತ್ತವೆ. ಆಗ ನಮ್ಮ ಸಾಹಿತ್ಯವು ಅನೇಕ ಮುಖವಾಗಿ ಬೆಳೆಯುತ್ತದೆ. ಆಗ ಅದಕ್ಕೆ ಒಂದು ಬಿಸಿ ಬರುತ್ತದೆ, ಒಂದು ವೇಗ ಬರುತ್ತದೆ, ಒಂದು ಜೀವಕಳೆ ಬರುತ್ತದೆ. ಇಂಥಾ ಜೀವಶಕ್ತಿಯಿಂದ ತುಂಬಿದ ಕಾವ್ಯಗಳು ನಮ್ಮ ಜನಸಾಮಾನ್ಯದ ಉದ್ಧಾರಕ್ಕೆ ಕಾರಣವಾಗುತ್ತವೆ. ಸಚೇತನವಾದ ಕಾವ್ಯದ ಪ್ರಭಾವದಿಂದ ಸಚೇತನವಾದ ಜನ; ಸಚೇತನ ಜನದ ಪ್ರತಿಧ್ವನಿಯೇ ಸಚೇತನ ಸಾಹಿತ್ಯ. ಹೀಗೆ ಅವೆರಡೂ ಅನ್ಯೋನ್ಯಾಶ್ರಯಗಳು.

ವಿಜ್ಞಾನವು ಬುದ್ಧಿ ಪ್ರಧಾನವಾದ ವ್ಯಾಪಾರ; ಸಾಹಿತ್ಯವು ಮಾನವ ಜೀವನದಲ್ಲಿ ಸೇರಿರುವ ಬುದ್ಧಿಶಕ್ತಿ ಮನಶ್ಶಕ್ತಿಗಳೇ ಮೊದಲಾದ ಸಮಸ್ತ ಶಕ್ತಿಗಳ ಅನ್ಯೋನ್ಯ ಸಂಘಾತ ಪರಿಣಾಮಗಳ ಪ್ರತಿಬಿಂಬ ರೂಪವಾದ ವ್ಯಾಪಾರ. ಆದುದರಿಂದ ವಿಜ್ಞಾನ ಸಾಹಿತ್ಯಗಳಿಗೆ ಪರಸ್ಪರ ದ್ವೇಷವಿಲ್ಲ; ಬಾಂಧವ್ಯವೇ ಇದೆ. ಸಾಹಿತ್ಯದ ಮಹಾಸಾಮ್ರಾಜ್ಯದಲ್ಲಿ ವಿಜ್ಞಾನವು ಒಂದು ಪ್ರಾಂತ. ಆದರೆ ಅದು ಅಮೂಲ್ಯವಾದ ಪ್ರಾಂತ; ಮೈಸೂರು ರಾಜ್ಯಕ್ಕೆ ಕೃಷ್ಣರಾಜಸಾಗರದ ಪ್ರಾಂತವೂ, ಕೋಲಾರದ ಚಿನ್ನದ ಗಣಿಯ ಪ್ರಾಂತವೂ, ಭದ್ರಾವತಿಯ ಪ್ರಾಂತವೂ ಇರುವ ಹಾಗೆ. ಈ ಪ್ರಾಂತದಿಂದ ಬರುವ ಲಾಭವು ಸಾಮ್ರಾಜ್ಯಕ್ಕೆಲ್ಲ ಸೇರಿದ ಒಂದು ದೊಡ್ಡ ಸಂಪತ್ತು.

ವಿಜ್ಞಾನದ ಬೀಜವೆನಿಸುವ ಪುರುಷಪ್ರಯತ್ನಮತಕ್ಕೆ ಮಹಾಕಾವ್ಯವು ತಂದೆಯಂತಲ್ಲದಿದ್ದರೆ ತಾತನಂತೆ ಇರುವುದು. ಮಹಾಕವಿಯು ದೊಡ್ಡ ಗಂಟಲಿನ 'ಮೇಸ್ತ್ರಿ'ಯಲ್ಲ, ಬೆತ್ತ ಹಿಡಿದ ಉಪಾಧ್ಯಾಯನಲ್ಲ; ಅವನು ಮೆಲ್ಲನೆ ಕಿವಿಯಲ್ಲುಸುರುವ ಆಪ್ತ ಸ್ನೇಹಿತ, ಕಣ್ಣುಸನ್ನೆ ಮಾಡುವ ಒಡನಾಡಿ. "ಹೀಗೆ ಮಾಡು, ಹಾಗೆ ನಡೆ"

ಎಂದು ಅವನು ಪ್ರತ್ಯಕ್ಷವಾಗಿ ಕೂಗಿ ಹೇಳುವುದಿಲ್ಲ. ಆದರೆ ಅವನ ಹಾಡಿನ ಮಹಿಮೆಯಿಂದ "ಹೀಗೆ ಮಾಡುವುದು ಉತ್ತಮವಲ್ಲವೆ? ಹಾಗೆ ನಡೆಯುವುದು ಚೆನ್ನವಲ್ಲವೆ?" ಎಂಬ ಭಾವನೆಗಳು ತಾವಾಗಿಯೇ ನಮ್ಮ ಮನಸ್ಸಿನಲ್ಲುದಿಸದೆ ಬಿಡುವುದಿಲ್ಲ. ನಮ್ಮ ಹೃದಯ ಗುಹೆಗಳಲ್ಲಿ ಅಡಗಿ ನಿದ್ರಿಸುತ್ತಿರುವ ಸೂಕ್ಷ್ಮಗಳಾದ ಅಭಿಲಾಷೆಗಳನ್ನೂ ಶ್ರೇಷ್ಠಗಳಾದ ಆಶಯಗಳನ್ನೂ ಕಾವ್ಯವು ಎಚ್ಚರಗೊಳಿಸಿ ಉದ್ರೇಕಪಡಿಸುವುದು. ಅಂತರಂಗವನ್ನು ಅದು ತೊಳೆದು ಒಂದು ಉನ್ನತದಶೆಗೆ ತಂದಿರಿಸುವುದು. ಹೀಗೆ ಮಾಡಿ ಅದು ಜೀವನೋತ್ಕರ್ಷಕ್ಕೆ ದಾರಿ ಬಿಡಿಸುವುದು. ಸೋಮರಸದಂತೆ ಕಾವ್ಯರಸವು ಮಹಾನಂದವನ್ನಲ್ಲದೆ ಮಹಾ ಬಲವನ್ನೂ ಕೊಟ್ಟು ಆತ್ಮಕ್ಕೊಂದು ದಿವ್ಯ ಸಂಸ್ಕಾರವನ್ನು ಕೊಡುವುದು. ಮಹಾ ಕಾವ್ಯವು ಕನ್ನಡಿಯಂತೆ ಜಗಜ್ಜೀವನ ಲಕ್ಷಣಗಳನ್ನು ಪ್ರತಿಬಿಂಬಿಸುವುದು ಮಾತ್ರವೇ ಅಲ್ಲದೆ, ಅಣಿಮಾದಿ ಯೋಗಸಿದ್ಧಿಗಳಂತೆ ಜೀವನದ ವೈಭವವನ್ನು ಸಮೃದ್ಧಿಗೊಳಿಸಿ, ಕ್ರಿಯಾಶಕ್ತಿ (Creative Force) ಎಂದೆನಿಸುವುದು.

ಮಹಾಶಯರೆ, ಈ ಭಾಷಣವನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ಇಷ್ಟು ಹೇಳಿದ್ದರೂ, ಸಾಹಿತ್ಯವನ್ನು ಕುರಿತಾಗಲಿ, ವಿಜ್ಞಾನವನ್ನು ಕುರಿತಾಗಲಿ, ಅವೆರಡರ ಪರಸ್ಪರ ಸಂಬಂಧವನ್ನು ಕುರಿತಾಗಲಿ ಹೇಳಬೇಕಾದ್ದನ್ನು ತಕ್ಕಮಟ್ಟಿಗೆ ಹೇಳಿದಂತೆ ಆಯಿತೆಂದು ನಾನು ನಂಬಲಾರೆ. ಎಷ್ಟೋ ವಾದಗ್ರಸ್ತಗಳಾದ ಸಂಗತಿಗಳನ್ನು ನಾನು ಹೇಳಿರಬಹುದು. ತಾವು ಅವುಗಳನ್ನು ತಿಳಿಸಿ ತಿದ್ದಿದರೆ ಆ ಉಪಕಾರವನ್ನು ಶಿರಸಾ ಗ್ರಹಿಸುವೆನು. ಮತ್ತು ಅನೇಕ ವಿಧದ ವಿಷಯಗಳನ್ನು ಕುರಿತು ಒಂದು ಕ್ರಮವಿಲ್ಲದೆಯೂ ಅಸಮಗ್ರವಾಗಿಯೂ ಪ್ರಸ್ತಾವ ಮಾಡಿದ್ದೇನೆ. ಅಷ್ಟೇನೂ ಸುಸಂಬದ್ಧವೆಂದು ತೋರದೆ ಇರಬಹುದಾದ ಈ ಭಾಷಣವನ್ನು ಇಷ್ಟು ಸಾವಧಾನವಾಗಿಯೂ ಶಾಂತವಾಗಿಯೂ ಕೇಳಿದ್ದಕ್ಕಾಗಿ ತಮ್ಮೆಲ್ಲರನ್ನೂ ಅಭಿವಂದಿಸುತ್ತೇನೆ.

ಪರಿಶಿಷ್ಟ

(೩೦ ನೆಯ ಪುಟಕ್ಕೆ ಸೇರಿದ್ದು)

ವಿಜ್ಞಾನವು ಕವಿಯ ಪ್ರತಿಭಾ ವಿಕಸನಕ್ಕೆ ಸಹಕಾರಿಯಾಗಿರುವುದನ್ನು ಗೆಯ್‌ಟೆ (Goethe) ಎಂಬ ಜರ್ಮನ್ ಮಹಾಕವಿಯ ಚರಿತ್ರೆಯು ದೃಷ್ಟಾಂತಪಡಿಸುತ್ತದೆ. ಆತನು ಯೂರೋಪು ಖಂಡದಲ್ಲೆಲ್ಲಾ ಅತ್ಯಂತ ಪ್ರಸಿದ್ಧರಾದ ಕವಿಗಳಲ್ಲಿ ಪ್ರಥಮ ಪಂಕ್ತಿಗೆ ಸೇರಿದಂಥವನು. ಆತನು ವಿಜ್ಞಾನಶಾಸ್ತ್ರ ವ್ಯವಸಾಯಕ್ಕೂ ಹೆಚ್ಚಾಗಿ ಮನಸ್ಸನ್ನು ತೆತ್ತು, ಜಗಜ್ಜೀವನ ರಹಸ್ಯ ಜ್ಞಾನವನ್ನು ಆ ಮೂಲಕ ಸಂಪಾದಿಸಿಕೊಂಡಿದ್ದನು.

ವೈಜ್ಞಾನಿಕರ ಸತ್ಯಾನ್ವೇಷಣೆಯ ಉತ್ಸಾಹ ಸಾಹಸಗಳೇ ಒಂದು ಬಗೆಯ ಧೀರ ಗುಣವನ್ನು ತೋರುವುವಾದುದರಿಂದ, ಅವರ ಚರಿತ್ರೆಗಳೇ ಅದ್ಭುತ ವೀರರಸ ಪ್ರಧಾನಗಳಾದ ಕಾವ್ಯಗಳಿಗೆ ತಕ್ಕ ವಸ್ತುಗಳಾಗಿವೆ. ಆಲ್‌ಫ್ರೆಡ್ ನಾಯ್ಸ್ (Alfred Noyes) ಎಂಬ ಇಂಗ್ಲಿಷ್ ಕವಿಯು "ದಿ ಟಾರ್ಚ್ ಬೇರರ್ಸ್" *The Torch-bearers* (ಪಂಜು ಹಿಡಿದವರು) ಎಂಬ ಕಾವ್ಯದಲ್ಲಿ ಕೋಪರ್ನಿಕಸ್, ಕೆಪ್ಲರ್, ಗೆಲಿಲಿಯೊ, ನ್ಯೂಟನ್—ಮೊದಲಾದ ವೈಜ್ಞಾನಿಕರ ಕಥೆಗಳನ್ನು ಚಿತ್ರಿಸಿದ್ದಾನೆ.

ಈ ವೈಜ್ಞಾನಿಕ ಯುಗಕ್ಕೆ ಸಹಜವಾದ ಪ್ರಶ್ನೆ ವಿಚಾರಣೆಗಳ ಬುದ್ಧಿಯು ನಮ್ಮ ಯುವಕರಲ್ಲಿ ತಲೆದೋರಲು ಈಗ ಮೊದಲಾಗಿದೆ ಎಂದು "ಪ್ರಬುದ್ಧ ಕರ್ಣಾಟಕ"ದಲ್ಲಿ ಈಚೆಗೆ ಬಂದಿರುವ ಕೆಲವು ಸಣ್ಣ ಸಾಮಾಜಿಕ ಕಥೆಗಳಿಂದ ತೋರಿಬರುತ್ತದೆ.

619
ಬೆಂಗಳೂರು-10

246—29. ಬೆಂಗಳೂರು ಪ್ರೆಸ್

619



ಹೇಮಾವತೀ — ಹೇಮಗಿರಿ

ಇನ್ನೊಂದು ಹಳೆಯ ಕತೆ

ಪರಾಶರಭಟ್ಟರ ತಂದೆಯವರು ಕಾಂಚೀಪುರದ ಭಾಗವತಮಂಡಲಿಯಲ್ಲಿ ಪ್ರಸಿದ್ಧರಾಗಿದ್ದರು. ಕೆಲವುಕಾಲದಮೇಲೆ ಶ್ರೀರಂಗಕ್ಕೆ ಬಂದು ನಿಂತರು. ತಂದೆಯವರು ಶ್ರೀರಂಗಕ್ಕೆ ಬಂದ ಸ್ವಲ್ಪಕಾಲದ ಮೇಲೆ ಭಟ್ಟರು ಜನಿಸಿದರು. ತಂದೆ ಯಾವಾಗಲೂ ಆಚಾರ್ಯರ ಸೇವೆಯಲ್ಲಿದ್ದುದರಿಂದ ಮನೆಯಲ್ಲಿ ದೇವರ ಸೇವೆಯನ್ನು ನಡೆಸುವುದು ಭಾಗವತ ಸೇವೆಯನ್ನು ಮಾಡುವುದು, ಮಗನನ್ನು ಸಾಕುವುದು ಮೊದಲಾದ ಕೆಲಸವೆಲ್ಲ ಭಟ್ಟರ ತಾಯಿಯಮೇಲೆ ಇತ್ತು. ಈ ತಾಯಿ ಶಿಕ್ಷೆಯಲ್ಲಿ ಬೆಳೆದು ಭಟ್ಟರು ವಯಸ್ಸಿಗೆ ತಕ್ಕ ವ್ಯಾಸಂಗವನ್ನು ಶ್ರೇಷ್ಠರಾದ ಗುರುಗಳ ಸಾನ್ನಿಧ್ಯದಲ್ಲಿ ಮಾಡಿ ಗುಣದಲ್ಲಿಯೂ ಆಚಾರದಲ್ಲಿಯೂ ದೈವಭಕ್ತಿಯಲ್ಲಿಯೂ ತಂದೆಗೆ ಸರಿಮಿಗಿಲು ಎನ್ನುವಂತೆ ದೊಡ್ಡವರಾದರು. ಅವರ ತಾಯಿ ಅವರಿಗೆ ದಿನದಿನವೂ ಸಂಸಾರದ ಒಂದೊಂದು ವಿಷಯದಲ್ಲೂ ತೋರಿಸಿಕೊಡುತ್ತಿದ್ದ ಸನ್ಮಾರ್ಗವೇ ಇದಕ್ಕೆ ಸಾಧನವಾಗಿತ್ತು. ಯಾವುದೊಂದು ಮಾತು ಬಂದರೂ ಆಕೆ ದೇವರನ್ನು ನಂಬಿರಬೇಕೆಂಬ ಮುಖ್ಯ ವಿಷಯವನ್ನು ಹೇಳುತ್ತಲೇ ಇರುವರು. ನೋಡಹೋದರೆ ಇದಕ್ಕಿಂತ ಹೆಚ್ಚಾದ ತತ್ವವಿಲ್ಲ. ಆದರೆ ಇದು ಬಾಯಲ್ಲಿ ಬರುವುದೇ ನೂರರಲ್ಲಿ ಒಬ್ಬರಿಗೆ ; ಮನಸ್ಸಿನಲ್ಲಿ ನೆಟ್ಟಿರುವುದು ಎಷ್ಟರಲ್ಲಿ ಒಬ್ಬರಿಗೆ? ಸೇವೆಗೆ ಹೂ ಹೆಚ್ಚಾಗಿ ಸಿಕ್ಕಲಿಲ್ಲ ಎಂದರೆ ಆಕೆ ಭಗವಂತನಿಗೆ ಎಷ್ಟುಬೇಕು? ಏನುಬೇಕು? ಹೂವು ತುಂಬ ಇದ್ದರೆ ತುಂಬ ಕೊಡು, ಕೊಂಚ ಇದ್ದರೆ ಕೊಂಚ ಕೊಡು, ಹೂ ಇಲ್ಲದಿದ್ದರೆ ಎಲೆಯನ್ನು ಸಮರ್ಪಿಸು ಎನ್ನುವರು. ಯಾರಾದರೂ ಈ ದಿನ ದೇವಸ್ಥಾನಕ್ಕೆ ಹೋಗಲಾಗಲಿಲ್ಲ, ಅನ್ಯಾಯವಾಯಿತು ಎಂದರೆ, ಮನಸ್ಸಿನಲ್ಲಿ ಆ ಬೇಸರಿಯಿರಲಿ, ನೀನು ದೇವಸ್ಥಾ

ನಕ್ಕೆ ಹೋಗದಿದ್ದರೆ ದೇವರು ನೀನಿರುವಲ್ಲಿಗೆ ಬರುವರು, ಎನ್ನುವರು. ಮನೆಗೆ ಬಂದ ಭಾಗವತರ ವಿಷಯದಲ್ಲಿ ಆಕೆಯ ಆದರ ಅಷ್ಟಿಷ್ಟಲ್ಲ. ದೇವರಪೂಜೆಯಲ್ಲಿ ಅವರ ಶ್ರದ್ಧೆಗೆ ಮಿತಿಯೇ ಇಲ್ಲ. ಇಂಥ ತಾಯ ಪೋಷಣೆಯಲ್ಲಿ ಭಟ್ಟರವರು ಚಿಕ್ಕಂದಿನಲ್ಲೇ ಭಕ್ತಶಿರೋಮಣಿಗಳಾದರು. ಗುರುಗಳು ಯಾವುದನ್ನಾದರೂ ಹೇಳಿದಾಗ ಭಟ್ಟರು ನಮ್ಮ ತಾಯಿ ಹೀಗೆಯೇ ಹೇಳಿದರು ಎನ್ನುವರು. ಈ ಮಾತನ್ನು ಬಹಳ ಸಲ ಕೇಳಿ ಗುರುಗಳು ಸ್ವಲ್ಪ ಆಶ್ಚರ್ಯಪಟ್ಟರು. ಒಂದು ಸಲ ಭಟ್ಟರ ತಾಯನ್ನು ಕಂಡಾಗ "ನಿಮ್ಮ ಹುಡುಗ ಬಹಳ ಸುಟಿ. ಅವನಿಗೆ ನಾನು ಅಷ್ಟೇನನ್ನೂ ಹೇಳಿಕೊಡಬೇಕಾದದ್ದಿಲ್ಲ, ಅನೇಕ ವಿಷಯಗಳನ್ನು ನಿಮ್ಮಿಂದ ತಿಳಿದುಕೊಂಡಿದಾನೆ ಎಂಬಂತೆ ಕಾಣುತ್ತದೆ" ಎಂದರು. ಆಕೆ "ಹಿರಿಯರನ್ನು ಕಂಡರೆ ಭಕ್ತಿಯಿಂದ ನಡೆದುಕೊ ಎನ್ನುವಷ್ಟನ್ನು ನಾನು ಹೇಳಿಕೊಟ್ಟಿದ್ದೇನೆ. ಮಿಕ್ಕ ಎಲ್ಲವನ್ನೂ ಅವನು ನಿಮ್ಮಂಥವರಿಂದ ಕಲಿಯುವನು ಎಂದರು. ಗುರುಗಳು "ನಾನು ಗೀತೆಯನ್ನು ಹೇಳುವಾಗ ಅದರ ಮಾತುಗಳನ್ನು ತಮ್ಮಿಂದ ಹಿಂದೆ ಕೇಳಿದ್ದಾಗಿ ಹೇಳಿದನು. ತಮಗೆ ಗೀತೆ ಅಷ್ಟು ಚೆನ್ನಾಗಿ ತಿಳಿದದ್ದು ಹೇಗೆ? ಎಂದರು. ಆಕೆ "ನಮ್ಮ ತಂದೆಯವರು ಶಾಸ್ತ್ರವನ್ನು ವಿಶೇಷವಾಗಿ ನೋಡಿದ್ದರು; ಅವರು ಅವರ ಶಿಷ್ಯರಿಗೆ ಪಾಠ ಹೇಳುವಾಗ ನಾನು ಹುಡುಗಿ, ಹತ್ತಿರ ಕುಳಿತು ಸುಮ್ಮನೆ ಕೇಳುತ್ತಿರುತ್ತಿದ್ದೆನು. ಆಗ ಕೇಳಿದ್ದು ನನಗೆ ಸ್ವಲ್ಪಸ್ವಲ್ಪ ಜ್ಞಾಪಕವಿದೆ" ಎಂದರು. ವಿಷಯವೂ ಅಷ್ಟೇ; ಆಕೆಗೆ ಓದುಬರಹ ಬಾರದು. ಆದರೇನು? ಓದು ಜ್ಞಾನಸಂಪಾದನೆಗೆ ಒಂದು ಸಾಧನವಲ್ಲದೆ ತಾನೇ ಜ್ಞಾನವಲ್ಲ. ಓದಿ ಕಲಿಯಲಾಗದ ಜ್ಞಾನವು ಸತ್ಸಂಗದಿಂದ ಪ್ರಯತ್ನವಿಲ್ಲದೆ ಬಂದುಬಿಡುವುದು. ತನ್ನ ಯಜಮಾನರ ವಿಷಯವಾದ ಕತೆಗಳನ್ನು ಹೇಳಹೇಳುತ್ತಲೂ ಈಕೆ ಮಗನ ಬುದ್ಧಿಯನ್ನು ತಿದ್ದಿದರು.

ಶ್ರೀರಂಗಕ್ಕೆ ಬರುವಾಗ ಭಟ್ಟರ ತಂದೆಯವರು ಅಲ್ಲಿ ಇದ್ದ ಆಸ್ತಿಯನ್ನೆಲ್ಲಾ ತ್ಯಾಗಮಾಡಿ ಬರಿಯಕೈಯಲ್ಲಿ ಹೊರಟುಬಿಟ್ಟರು.

ಅವರ ಪತ್ನಿ ಎಲ್ಲವನ್ನೂ ಬಿಟ್ಟು ಹೋಗಬೇಕಲ್ಲಾ ಎಂದು ಸ್ವಲ್ಪ ವ್ಯಥೆ ಪಟ್ಟರಾದರೂ ವಿಶೇಷ ಅದಕ್ಕಾಗಿ ಚಿಂತೆಮಾಡಲಿಲ್ಲ. ಆದರೆ ದಾರಿಯಲ್ಲಿ ಯಜಮಾನರಿಗೆ ದಾಹವಾದರೆ ಅಥವಾ ಶ್ರೀರಂಗಕ್ಕೆ ಹೋದ ಮೇಲೆ ಅವರಿಗೆ ದಿನದ ಉಪಯೋಗಕ್ಕಾಗಿ ಇರಲೆಂದು ಮಡಲಲ್ಲಿ ಒಂದು ಬೆಳ್ಳಿಯ ಬಟ್ಟಲನ್ನು ಇರಿಸಿಕೊಂಡರಂತೆ. ಅರ್ಧ ದಾರಿಯಲ್ಲಿ ಒಂದು ಕಾಡು; ಯಜಮಾನರು ಮುಂದೆ, ಹಿಂದೆ ಈಕೆ, ನಡೆದು ಹೋಗುತ್ತಿದ್ದಾರೆ. ಕಾಡಿನಲ್ಲಿ ಒಂದುಕಡೆ ಈಕೆ ಯಜಮಾನರನ್ನು ಕುರಿತು ನನಗೆ ಸ್ವಲ್ಪ ಹೆದರಿಕೆಯಾಗುತ್ತದೆ ಎಂದರಂತೆ. ಅದಕ್ಕೆ ಅವರು ನಮಗೇನು ಹೆದರಿಕೆ ಬಾ ಎಂದರು; ಸ್ವಲ್ಪ ದೂರ ಹೋದ ಮೇಲೆ ಇವರು ಮತ್ತೆ ಭಯವಾಗುತ್ತದೆ ಎಂದರಂತೆ. ಯಜಮಾನರು "ಭಯಕ್ಕೇನು ಕಾರಣ. ಏನನ್ನಾದರೂ ತಂದಿದೀಯಾ?" ಎಂದು ಕೇಳಿದರು. ಈಕೆ ಬಟ್ಟಲನ್ನು ತಂದಿರುವ ವಿಷಯವನ್ನು ಬಹಳ ಸಂಕೋಚದಿಂದ ಹೇಳಿದರು. ಅದನ್ನು ಕೇಳಿ ಅವರು "ಕಾಂಚೀಪುರದಲ್ಲಿ ಕೊಟ್ಟ ದೇವರು ಶ್ರೀರಂಗದಲ್ಲಿ ಕೊಡುವುದಿಲ್ಲವೆ? ನಿನಗೆ ಈ ಭ್ರಾಂತಿಯುಂಟೆ? ಅದನ್ನು ಎಸೆ" ಎಂದರಂತೆ. ಯಜಮಾನಿ ಒಂದುಮಾತನ್ನೂ ಆಡದೆ ಕಾಂಚೀಪುರದಿಂದ ತಂದಿದ್ದ ಬಟ್ಟಲನ್ನು ಕಾಡಿನಲ್ಲಿ ಎಸೆದರು. ಸ್ವಲ್ಪದೂರ ನಡೆದಮೇಲೆ ಕಾಡು ಇನ್ನೂ ದಟ್ಟವಾಯಿತು. ಯಜಮಾನರು ಪತ್ನಿಯನ್ನು ಈಗ ಭಯವಿಲ್ಲ ವಲ್ಲವೆ? ಎಂದು ಕೇಳಿದರಂತೆ. ಆಕೆ "ಇಲ್ಲ" ಎಂದರು. ಯಜಮಾನರು "ಮಡಲಲ್ಲಿದ್ದರೆ ಗಿಡವಲ್ಲಿ ಭಯ. ನೋಡಿದೆಯಾ?" ಎಂದರು. ಹೀಗೆ ಇವರು ಬಂದು ಶ್ರೀರಂಗದಲ್ಲಿ ನಿಂತರು. ಯಜಮಾನರು ಹೇಳಿದ್ದಂತೆ ಅಲ್ಲಿಯೂ ಅವರಿಗೆ ಸನ್ಮಾನ ದೊರೆಯಿತು; ಭಾಗವತರ ಸೇವೆಗೆ ಬೇಕಾದ ಉಪಪತ್ತಿ ಒದಗಿತು. ಕೊಂಚಕಾಲದಲ್ಲಿ ಶ್ರೀರಂಗದಲ್ಲಿ ಇವರ ಗೃಹವು ಭಾಗವತಗೋಷ್ಠಿಯ ಮುಖ್ಯವಾದ ಆಶ್ರಯಗಳಲ್ಲಿ ಒಂದಾಗಿ ಪರಿಣಮಿಸಿತು. ಈ ಕತೆಯನ್ನು ಈಕೆ ಮಗನಿಗೆ ಹತ್ತಾರುಸಲ ಹೇಳಿದ್ದರು. ಮಗನು ಅದನ್ನು ಬಹು ಆತುರದಿಂದ ಕೇಳುವನು. ಹೀಗೆ ತಾಯ ಶಿಕ್ಷೆಯಿಂದಲೂ ಗುರುಗಳ ಆಶ್ರಯ

ದಿಂದಲೂ ಭಟ್ಟರು ಉದಾತ್ತ ನೀತಿಯನ್ನು ಕಲಿತು ಹಿರಿಯರು ನಡೆದ ಉತ್ತಮ ಪಥದಲ್ಲಿ ಬಹುದೂರವನ್ನು ಚಿಕ್ಕಂದಿನಲ್ಲಿಯೇ ನಡೆದು ಮುಗಿಸಿದರು.

ಭಟ್ಟರಿಗೆ ಸುಮಾರು ಇಪ್ಪತ್ತನಾಲ್ಕು ವರುಷ ವಯಸ್ಸು ಇರಬಹುದು. ಆ ವೇಳೆಗೆ ಅವರಿಗೆ ದೇವಾಲಯದ ಭಾಗವತ ಗೋಷ್ಠಿಯಲ್ಲಿ ಗಣ್ಯವಾದ ಸ್ಥಾನ ದೊರೆತಿತ್ತು. ಮನೆಯಲ್ಲಿ ಆಗಾಗ ಭಾಗವತರ ಸಮಾರಾಧನೆಗಳು ನಡೆಯುತ್ತಿದ್ದುವು. ಮನೆಯಲ್ಲಿ ಅಡಿಗೆಗೆ ಮತ್ತು ದೇವರ ಸೇವೆಗೆ ಸಹಾಯವಾಗಿ ಬ್ರಾಹ್ಮಣನು ಒಬ್ಬನಿದ್ದನು. ಭಟ್ಟರು ಒಂದೊಂದು ದಿನ ತಾವು ದೇವರ ಪೂಜೆಯನ್ನು ಮಾಡುವರು, ಒಂದೊಂದು ದಿನ ಪರಿಚಾರಕನನ್ನು ನೀನೇ ಮಾಡಿ ಎಂದು ಹೇಳುವರು. ಭಟ್ಟರು ಮಾಡುತ್ತಿದ್ದ ಪೂಜೆ ಒಂದೊಂದು ಸಮಯದಲ್ಲಿ ಬಹಳಹೊತ್ತು ತೆಗೆದುಕೊಳ್ಳುವುದು ; ಒಂದೊಂದು ಸಮಯದಲ್ಲಿ ಜಾಗ್ರತೆಯಲ್ಲಿಯೇ ಮುಗಿದುಹೋಗುವುದು. ಪರಿಚಾರಕನ ಪೂಜೆ ಒಂದು ಮೇಲುಪಂಕ್ತಿಯನ್ನು ಅನುಸರಿಸಿ ಮಾಡುತ್ತಿದ್ದದ್ದು. ಇಷ್ಟು ಸ್ತೋತ್ರ, ಇಷ್ಟು ಉಪಚಾರ, ಇಷ್ಟು ವಿನ್ಯಾಸ, ಇಷ್ಟು ವೇದ, ಇಷ್ಟು ಪುರಾಣ, ಇಷ್ಟು ಪ್ರಬಂಧ, ಎಂದು ಅದರಲ್ಲಿ ನಿಯಮವಿತ್ತು. ಅವಸರವಾದ ದಿನ ಕೆಲವು ಭಾಗವನ್ನು ಬಿಡುವುದಕ್ಕೂ ಹೊತ್ತು ಇದ್ದಲ್ಲಿ ಇನ್ನಷ್ಟು ಭಾಗವನ್ನು ಸೇರಿಸಿಕೊಳ್ಳುವುದಕ್ಕೂ ಅದರಲ್ಲಿ ಅವಕಾಶವುಂಟು. ಪರಿಚಾರಕನು ಪೂಜೆಮಾಡಿದಾಗ ಯಾವಾಗಲಾದರೂ ಭಟ್ಟರು ಪೂಜೆ ಇಷ್ಟುಬೇಗ ಮುಗಿಯಿತೆ ಎನ್ನುವರು. ಪರಿಚಾರಕನು ಈ ಮಾತನ್ನು ಕೇಳಿದಾಗ ಯಾಕೆ ಹೀಗೆ ಕೇಳುವರು ಎಂದುಕೊಳ್ಳುತ್ತಿದ್ದನು. ಆಮೇಲೆ "ಇದೇನು ಇವರು ಪೂಜೆ ಮಾಡಿದರೆ ಅರ್ಧಗಳಿಗೆಯಲ್ಲಿ ಮುಗಿಸುತ್ತಾರೆ. ನನ್ನ ಪೂಜೆ ಎರಡು ಗಳಿಗೆ ಹೊತ್ತಾದರೂ ಇಷ್ಟುಬೇಗ ಮುಗಿಯಿತೆ ಎನ್ನುತ್ತಾರೆ" ಎಂದು ಯೋಚಿಸಿದನು. ಅನೇಕಸಲ ಭಟ್ಟರು ಎಲ್ಲಿಯಾದರೂ ಹೋಗಿದ್ದು ಮನೆಗೆ ಬರುವುದು ಸಾವಕಾಶವಾದರೆ ತಾಯಿ ಬಂದು ಬಹಳ

ಹೊತ್ತಾಯಿತಲ್ಲಾ ಎಂದು ಹೇಳುವರು. "ದೇವರ ಪೂಜೆ ಆಯಿತೆ" "ಇಲ್ಲ. ಬ್ರಾಹ್ಮಣ ಇನ್ನೂ ಒಳಗೆ ಕೆಲಸದಲ್ಲೇ ಇದ್ದಾರೆ. ಅವರು ಆ ಕೆಲಸ ಮುಗಿಸಿ ದೇವರಪೂಜೆ ಮಾಡುವುದೆಂದರೆ ಇನ್ನೂ ಹೊತ್ತಾಗುತ್ತೆ." ಎಂದಾಗ ಭಟ್ಟರು ಪೂಜೆ ನಾನೇ ಬೇಗಮಾಡಿಬಿಡುತ್ತೇನೆ, ಅವರು ಅಡಿಗೆ ಮುಗಿಸಿ ಎಲೆ ಹಾಕಲಿ, ಭಾಗವತರನ್ನು ಕಾಯಿಸಬಾರದು ಎನ್ನುವರು. ಪರಿಚಾರಕನು ಇಂಥ ಸಂದರ್ಭಗಳಲ್ಲಿ ಭಟ್ಟರು ಮಾಡುವ ಪೂಜೆ ಎಷ್ಟು ಸೂಕ್ಷ್ಮವಾಗುತ್ತಿತ್ತೆಂಬುದನ್ನು ಬಲ್ಲನು. ಅವರು ತನ್ನ ಪೂಜೆ ಜಾಗ್ರತೆ ಮುಗಿಯಿತೆಂದು ಹೇಳಿದಾಗ ಇವನು ನಾನು ಮಾಡುವ ಪೂಜೆ ಇದಕ್ಕಿಂತ ಕಡಿಮೆ ಆಯಿತೆ, ಇವರು ಏಕೆ ಹೀಗೆ ಆಕ್ಷೇಪಣೆ ಮಾಡುವರು ಎಂದುಕೊಳ್ಳುವನು. ಹೀಗೆ ಅವನಿಗೆ ಭಟ್ಟರ ವಿಷಯದಲ್ಲಿ ಒಂದು ಅಸೂಯೆ ತಲೆದೋರಿತು.

ಹೀಗೆ ಇರುತ್ತಿರುವಲ್ಲಿ ಒಂದು ಸಲ ಎಂದಿಗಿಂತ ಸ್ವಲ್ಪ ದೊಡ್ಡದಾದ ಸಮಾರಾಧನೆಯು ಬಂದು ಒದಗಿತು. ಆದಿನ ಭಟ್ಟರು ಅಂಗಳದಲ್ಲಿ ಕುಳಿತು ದೊನ್ನೆಗಳನ್ನು ಹಚ್ಚುತ್ತಾ ಪರಿಚಾರಕನನ್ನು ಈದಿನ ನೀನೇ ಪೂಜೆಯನ್ನು ಮಾಡಿಬಿಡು ಎಂದರು. ಬಹಳ ಜನ ಅತಿಥಿಗಳು ನೆರದಿರಬೇಕಾದರೆ ಪರಿಚಾರಕನು ಗುಡುಗಿನಂತೆ ಮೊಳಗುವ ಧ್ವನಿಯಿಂದ ಮಂತ್ರಗಳನ್ನು ಹೇಳುತ್ತಾ ದೇವರ ಪೂಜೆಯನ್ನು ಮಾಡಿದನು. ಹೊರಗೆ ಬಂದಾಗ ಭಟ್ಟರು ಪ್ರಬಂಧ ಸೂಕ್ಷ್ಮಮಾಡಿಬಿಟ್ಟಿರಲ್ಲಾ ಎಂದರು. ಎಲ್ಲರೆದುರಿಗೆ ಹೀಗೆ ಹೇಳಿದ್ದರಿಂದ ಬ್ರಾಹ್ಮಣನಿಗೆ ಬಹಳ ಅವಮಾನವಾಯಿತು. ಅವನು ಯಜಮಾನಿಯ ಬಳಿಗೆ ಹೋಗಿ "ಅಮ್ಮ, ನಿಮ್ಮ ಮಕ್ಕಳು ನನಗೆ ಸಣ್ಣ ಮಾತನ್ನು ಹೇಳುತ್ತಾರೆ. ಎಲ್ಲರೆದುರಿಗೆ ಪೂಜೆ ಬೇಗ ಮುಗಿಸಿಬಿಟ್ಟೆ, ಸ್ತೋತ್ರ ಬಿಟ್ಟೆ, ಪ್ರಬಂಧ ಬಿಟ್ಟೆ, ಎನ್ನುತ್ತಾರೆ. ನನಗೆ ತಲೆ ತಗ್ಗಿಸುವಹಾಗೆ ಆಗುತ್ತೆ" ಎಂದನು. ಯಜಮಾನಿ "ನೀನು ಸ್ತೋತ್ರ ಪ್ರಬಂಧ ಬಿಟ್ಟೆಯೋ ಏನೋ ಅದಕ್ಕೆ ಅವನು ಹಾಗೆ ಹೇಳುತ್ತಾನೆ" ಎಂದರು. ಪರಿಚಾರಕನು "ನಾನು ಒಂದು ಸ್ತೋತ್ರ ಬಿಟ್ಟರೆ, ಒಂದು ಸ್ತೋತ್ರವನ್ನಾ

ದರೂ ಹೇಳುತ್ತೇನೆ. ಇವರು ಒಂದೊಂದುಸಲ ಒಂದು ಸ್ತೋತ್ರವನ್ನೂ ಹೇಳದೆ ಪೂಜೆ ಮುಗಿಸುತ್ತಾರಲ್ಲ. ನಾನು ಮಾಡಿದ ಪೂಜೆ ಅದಕ್ಕಿಂತ ಸೂಕ್ಷ್ಮವಾಯಿತೆ" ಎಂದನು. ಯಜಮಾನಿ "ಹೋಗಲಿ ಬಿಡು ಅವನಿಗೆ ಇನ್ನೂ ಚಿಕ್ಕ ವಯಸ್ಸು; ಒಂದೆರಡುಮಾತು ಹೆಚ್ಚು ಕಡಿಮೆಯಾದರೂ ನೀನು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು" ಎಂದರು. ಆದಿನ ಸಾಯಂಕಾಲ ಮಗನನ್ನು ಕರೆದು "ಅಪ್ಪಾ, ಮನೆಯ ಬ್ರಾಹ್ಮಣನಿಗೆ ಅಷ್ಟುಜನರೆದುರಿಗೆ ದೇವರ ಪೂಜೆಯಲ್ಲಿ ಅದನ್ನು ಬಿಟ್ಟೆ ಇದನ್ನು ಬಟ್ಟೆ ಎಂದರೆ ಅವಮಾನವಾಗುತ್ತದೆ" ಎಂದರು. ಭಟ್ಟರು "ಹೌದಮ್ಮ, ಹೇಳಿದೆ. ಆದರೆ ಅವರು ಅಪಮಾನವೆಂದು ಎಣಿಸಿಕೊಳ್ಳುವರೆಂದು ತೋರಲಿಲ್ಲ. ಪಾಪ, ಅವರಿಗೇಕೆ ಅವಮಾನವಾಗಬೇಕು. ಇನ್ನುಮೇಲೆ ಹಾಗೆ ಹೇಳದಿದ್ದರೆ ಸರಿ" ಎಂದರು. ಬ್ರಾಹ್ಮಣನು ಒಳಗಿನಿಂದ ಇದನ್ನು ಕೇಳುತ್ತಲಿದ್ದನು. ಅವನಿಗೆ ಬಹಳ ಸಂತೋಷವಾಯಿತು.

ಇದಾದಮೇಲೆ ಕೊಂಚದಿನಕ್ಕೆ ನವರಾತ್ರಿಯ ತದೀಯಾರಾಧನೆಗಳು ಬಂದುವು. ಒಂದುದಿನ ಭಟ್ಟರೇ ಪೂಜೆಮಾಡಿದರು. ಐದು ನಿಮಿಷ ಕೂಡ ತೆಗೆದುಕೊಳ್ಳಲಿಲ್ಲ. ಮಾರನೆಯದಿನ ಪರಿಚಾರಕನನ್ನು ಪೂಜೆಮಾಡಹೇಳಿದರು. ಪೂಜೆ ಮುಗಿದಮೇಲೆ ಬಾಯಿತಪ್ಪಿ ಬಹಳ ಬೇಗ ಮುಗಿಸಿದಿರಿ ಎಂದರು. ಪರಿಚಾರಕನು ಯಜಮಾನಿಯಬಳಿಗೆ ಹೋಗಿ "ತಿರುಗಿ ಆರಂಭವಾಯಿತು ತಾಯಿ. ನಿನ್ನೆ ಇವರು ಐದು ನಿಮಿಷದಲ್ಲಿ ಪೂಜೆ ಮುಗಿಸಿದರು. ಈ ದಿವಸ ನಾನು ಅರ್ಧಗಂಟೆಯ ಹೊತ್ತು ಮಾಡಿದ ಪೂಜೆ ಸಾಲದು ಎನ್ನುತ್ತಾರೆ" ಎಂದನು. ಯಜಮಾನಿ ತಿರುಗಿ ಹೇಳುತ್ತೇನೆ ಬಿಡು ಎಂದು ಸಮಾಧಾನಹೇಳಿ "ಇವನಿಗೆ ಇದರ ಮರ್ಮ ತಿಳಿಯಬೇಕು. ಇಲ್ಲದಿದ್ದರೆ ಇವನು ಉದ್ಧಾರವಾಗುವುದಿಲ್ಲ" ಎಂದುಕೊಂಡು ಇವನಿಗೆ ಇದು ತಿಳಿಯುವಂತೆ ಮಾಡಬೇಕೆಂದು ನಿಶ್ಚಯಿಸಿದರು. ಆದಿನ ಗೋಷ್ಠಿಯೆಲ್ಲಾ ಕುಳಿತಮೇಲೆ ಒಂದುಕಡೆ ಭಟ್ಟರು ಊಟಕ್ಕೆ ಕುಳಿತರು. ಅವರ ಪಕ್ಕದಲ್ಲಿ ಒಂದು

ಎಲೆಯನ್ನು ಹಾಕಿ ಯಜಮಾನಿ ಬ್ರಾಹ್ಮಣನನ್ನು ಕರೆದು "ಅಪ್ಪಾ ಇಂದು ಅಷ್ಟೇನೂ ಜನವಿಲ್ಲ ನೀನೂ ಕುಳಿತುಕೊಳ್ಳಿ ಮನೆಯವರು ಬಡಿಸುತ್ತೇವೆ ಎಂದರು. ಪರಿಚಾರಕನು ಕುಳಿತುಕೊಂಡನು. ಯಜಮಾನಿ ಪಂಕ್ತಿಗೆ ತುಪ್ಪ ಬಡಿಸುತ್ತಾಬಂದು ಪರಿಚಾರಕನ ಮತ್ತು ಮಗನ ಎಲೆಗೆ ಬಡಿಸುವ ಮುಂದು ಅದು ಮುಗಿದುಹೋದಂತೆ ಮಾಡಿ ಪರಿಚಾರಕನನ್ನು ಕುರಿತು "ತುಪ್ಪ ನೀನು ಸಾಕಾದಷ್ಟು ತೆಗೆದಿಡಲಿಲ್ಲ ಆಗಿಹೋಯಿತು ತರುತ್ತೇನೆ" ಎಂದು ಹೇಳಿ ಒಳಗೆ ಹೋದರು. ಒಂದುಕ್ಷಣ ಬಿಟ್ಟುಕೊಂಡುಬಂದು ಅವನಿಗೂ ಮಗನಿಗೂ ಒಂದೇ ಪಾತ್ರೆಯಿಂದ ಬಡಿಸಿದರು. ಪರಿಚಾರಕನಿಗೆ ಕೊಂಚ ಬಿತ್ತು, ಮಗನ ಎಲೆಯಲ್ಲಿ ಹೆಚ್ಚಾಗಿಬಿತ್ತು. ಮುದುಕಿ ಪರಿಚಾರಕನು ಕೇಳುವಂತೆ "ಹೆಚ್ಚಾಯಿತು" ಎಂದು ಹೇಳಿಕೊಂಡು ಒಳಕ್ಕೆ ಹೋದರು. ಪರಿಚಾರಕನು "ಮುದುಕಮ್ಮನಿಗೆ ಮಗನೆಂದರೆ ಪ್ರೀತಿ. ನನಗಿಂತ ಅವನಿಗೆ ಹೆಚ್ಚು ತುಪ್ಪ ಹಾಕಿದರು, ನ್ಯಾಯವೇ ಸರಿ ನಮ್ಮಮ್ಮ ಇದ್ದರೆ ನನಗೆ ಹೆಚ್ಚಾಗಿ ಹಾಕುತ್ತಿದ್ದರು." ಎಂದುಕೊಂಡನು. ಪರಿಷೇಚನ, ತೀರ್ಥ ಆದಮೇಲೆ ಎಲ್ಲರೂ ಊಟಕ್ಕೆ ಕುಳಿತರು.

ಪರಿಚಾರಕನು ಅನ್ನವನ್ನು ಕಲಸಿ ಆಹುತಿಯ ನಾಲ್ಕು ಅಗುಳನ್ನು ಬಾಯಿಗೆ ಇಟ್ಟುಕೊಂಡನು. ಅದನ್ನು ಉಗಿಯಬೇಕೆನ್ನಿಸಿತು. ಆ ನಾಲ್ಕು ಅಗುಳು ವಿಷದಂತೆ ಕಹಿ; ಒಂದು ಕ್ಷಣ ತಡೆದನು; ಎರಡುಕಡೆಯೂ ಇತರರು ಏನುಮಾಡುತ್ತಿರುವರೋ ಎಂದು ನೋಡಿದನು. ಅತಿಥಿಗಳೆಲ್ಲಾ ಸುಖವಾಗಿ ಊಟಮಾಡುತ್ತಿದಾರೆ. ಪಕ್ಕದಲ್ಲಿ ಭಟ್ಟರು ಆಹುತಿಗಳನ್ನೆಲ್ಲ ಮುಗಿಸಿ ಅನ್ನವನ್ನು ಕಲಸಿ ಕೈಗೆ ಒಂದು ತುತ್ತು ತೆಗೆದುಕೊಂಡು ಇದ್ದಾರೆ. ಏಕೆ ಕಹಿ ಆಯಿತು ಎಂದು ಪರಿಚಾರಕನು ಇನ್ನೂ ನಾಲ್ಕುಅಗುಳನ್ನು ಬಾಯಿಗೆ ಇಟ್ಟುಕೊಂಡನು, ಅದೂ ಕಹಿ. ಇನ್ನು ಯಾರಿಗೂ ಕಹಿ ಇಲ್ಲದೆ ನನಗೇಕೆ ಕಹಿ ಆಯಿತು ಎಂದು ಇವನು ಯೋಚಿಸಿದನು. ಒಳಗೆ ಮಂಚಿಗೆಯ

ಮೇಲೆ ತುಪ್ಪದ ಪಾತ್ರೆಯ ಪಕ್ಕದಲ್ಲಿ ಬೇವಿನ ಎಣ್ಣೆಯ ಪಾತ್ರೆ ಇದ್ದದ್ದು ಜ್ಞಾಪಕಕ್ಕೆ ಬಂತು. ಮುದುಕಮ್ಮ ಮರೆತು ನನಗೆ ಬೇವಿನ ಎಣ್ಣೆಯನ್ನು ಬಡಿಸಿದಳೋ ಎಂದುಕೊಂಡನು. ಆದರೆ ತನಗೆ ಬಡಿಸಿದ್ದನ್ನೇ ಮಗನಿಗೂ ಬಡಿಸಿದಳು. ಆತ ಈಗಾಗಲೇ ಎರಡು ತುತ್ತು ತಿಂದಿದಾನೆ. ಕಹಿಯೆನ್ನಲಿಲ್ಲ ಎಂದುಕೊಂಡು ಯಜಮಾನಿ ಯನ್ನು ಕರೆದು ಕೇಳಬೇಕೆಂದು ಯೋಚಿಸಿಕೊಂಡನು. ಅಷ್ಟುಹೊತ್ತಿಗೆ ಆಕೆ ಇನ್ನೇನನ್ನೋ ಬಡಿಸುವುದಕ್ಕೆ ಪಾತ್ರೆಯನ್ನು ತೆಗೆದು ಕೊಂಡು ಬಂದರು. ಪರಿಚಾರಕನು ಅವರನ್ನು ಕರೆದು "ತಾಯಿ ತಾವು ಎರಡನೆಯ ಸಲ ಬಡಿಸಿದುದು ತುಪ್ಪವೋ ಇನ್ನೇನಾದ ರೂವೋ" ಎಂದನು. ಆಕೆ ತುಪ್ಪ ಎಂದರು. ಅವನು ಇದೇಕೋ ಕಹಿಯಾಗಿದೆ, ತುಪ್ಪದ ಪಾತ್ರೆಯ ಪಕ್ಕದಲ್ಲಿ ಬೇವಿನ ಎಣ್ಣೆಯ ಪಾತ್ರೆ ಇತ್ತು, ಕೈ ತಪ್ಪಿ ಅದನ್ನೇನಾದರೂ ತಂದು ಬಡಿಸಿದರೋ ಎಂದನು. ಅವರು "ಅಯ್ಯೋ, ಹಾಗುಂಟೆ? ನೋಡುತ್ತೇನೆ" ಎಂದು ಹೇಳಿ ಒಳಗೆಹೋಗಿ ಪಾತ್ರೆಯನ್ನು ತಂದು "ಹೌದು ಅರುವತ್ತು ವರು ಷಕ್ಕೆ ಬರುವ ಅರುಳುಮರುಳು ನನಗೆ ಈಗಲೇ ಬಂದಿದೆಯೆಂದು ಕಾಣುತ್ತದೆ" ಎಂದು ಹೇಳಿ ಮಗನನ್ನು ಕುರಿತು "ಅಪ್ಪಾ ನಿನಗೂ ಇದನ್ನೇ ಬಡಿಸಿದೆನಲ್ಲಾ ಕಹಿಯಿಲ್ಲವೇ" ಎಂದು ಕೇಳಿದರು. ಭಟ್ಟರು ಆಗ ಬಾಯಿಗೆ ಇಟ್ಟುಕೊಂಡ ತುತ್ತನ್ನು ಚಪ್ಪರಿಸಿ ನೋಡಿ "ಹೌದಮ್ಮ, ಕಹಿಯಾಗಿದೆಯಲ್ಲ, ಇದೇಕೆ? ಏನು ಬಡಿಸಿದೆ?" ಎಂದು ಅನ್ನವನ್ನು ಒಂದುಕಡೆ ಇಟ್ಟರು. ಯಜಮಾನಿ ತನ್ನನ್ನು ತಾನು ಬಹುವಿಧವಾಗಿ ಆಡಿಕೊಂಡಂತೆ ತೋರ್ಪಡಿಸಿ ಇವರಿಬ್ಬರಿಗೂ ಬೇರೆ ಅನ್ನವನ್ನೂ ತುಪ್ಪವನ್ನೂ ಬಡಿಸುತ್ತಾ ಮಗನನ್ನು "ಬೇವಿನ ಎಣ್ಣೆಯ ಕಹಿ ನಿನಗೆ ತಿಳಿಯಬೇಡವೇನಪ್ಪ, ನಾಲ್ಕು ತುತ್ತು ತಿಂದೆ ಯಲ್ಲ" ಎಂದರು. ಅವರು "ಕಹಿ ತಿಳಿಯದೇ ಏನಮ್ಮ ಆಗ ಏನೋ ಯೋಚನೆ ಮಾಡುತ್ತಿದ್ದೆ ಅಷ್ಟೆ" ಎಂದರು.

"ಯೋಚನೆ ಯಾವುದಪ್ಪಾ ಅದು, ಎಲೆಯಲ್ಲಿ ಬಡಿಸಿದ ಕಹಿ ಸಹಿತ ತಿಳಿಯದೆ?"

"ಈದಿನ" ಪರಿಚಾರಕನಕಡೆ ತೋರಿಸಿ, "ಇವರು ದೇವರಪೂಜೆಯಲ್ಲಿ ನೀವಾರಶೂಕದ ಶ್ರುತಿಯನ್ನು ಹೇಳಿದರು. ಅದನ್ನು ಕುರಿತು ಯೋಚನೆಮಾಡುತ್ತಿದ್ದೆ."

"ಒಳ್ಳೆ ಯೋಚನೆಯಪ್ಪ" ಎಂದು ತಾಯಿ ಹೇಳಿದರು.

ಭಟ್ಟರು "ಪರಮಾತ್ಮ ಸ್ವರೂಪ ವಿಚಿತ್ರವಾದದ್ದು ನಿಜ. ಆದರೆ ವೇದದಲ್ಲಿ ಅದನ್ನು ಹೇಳಿರುವ ರೀತಿ ಅಷ್ಟೂ ವಿಚಿತ್ರವಾಗಿದೆ. ನವಣೆಯ ಊಗಿನ ಕೊನೆಯಲ್ಲಿ ಕುಳಿತು ಓಲಾಡುತ್ತಿರುವನು ಆ ಪರಮಾತ್ಮನು. ಹಾಗೆ ಓಲಾಡುತ್ತಾ ಅವನು ತನ್ನ ಹೊಟ್ಟೆಯಲ್ಲಿ ಬ್ರಹ್ಮ, ರುದ್ರ, ಇಂದ್ರಾದಿ ಸಮಸ್ತ ದೇವತೆಗಳನ್ನೂ ಅಖಿಲ ಬ್ರಹ್ಮಾಂಡವನ್ನೂ ಧರಿಸಿ ಇದ್ದಾನಂತೆ. ಇದು ಎಷ್ಟು ವಿಚಿತ್ರ ಎಂದು ಯೋಚನೆ ಮಾಡುತ್ತಾಇದ್ದೆ. ಆಗ ತುತ್ತಿನ ರುಚಿ ತಿಳಿಯಲಿಲ್ಲ." ಎಂದು ಹೇಳಿದರು. ಊಟ ಮುಗಿಯಿತು.

ಎಲ್ಲಾ ಆದಮೇಲೆ ತಾಯಿ ಪರಿಚಾರಕನನ್ನು ಕರೆದು "ಅಪ್ಪಾ ನಿನ್ನ ಪೂಜೆಗೂ ಅವನ ಪೂಜೆಗೂ ವ್ಯತ್ಯಾಸ ತಿಳಿಯಿತೆ?" ಎಂದರು. ಅದಕ್ಕೆ ಮೊದಲೇ ಪರಿಚಾರಕನು ಈಕೆ ಬೇವಿನ ಎಣ್ಣೆಯನ್ನು ಬೇಕೆಂದೇ ಬಡಿಸಿದ್ದರೆಂದು ಊಹಿಸಿದನು. ತನಗೆ ಬುದ್ಧಿ ಬರಲೆಂಬ ಉದ್ದೇಶದಿಂದ ಹಾಗೆ ಮಾಡಿದ್ದರೆಂದು ಅವನಿಗೆ ತೋರಿತು. ತಾನು ನಾಲ್ಕು ಅಗುಳು ಬಾಯಿಗೆ ಇಟ್ಟುಕೊಂಡು ಸಹಿಸಲಾರದೆಹೋದ ಎಣ್ಣೆಯಲ್ಲಿ ಕಲಸಿದ ಅನ್ನವನ್ನು ಭಟ್ಟರು ಭಗವದ್ಧ್ಯಾನ ಮಗ್ನರಾಗಿ ರುಚಿ ತಿಳಿಯದೆ ತುತ್ತು ತುತ್ತನ್ನೇ ತಿಂದದ್ದನ್ನು ನೆನೆದು ಅವನಿಗೆ ಆಶ್ಚರ್ಯವಾಗಿತ್ತು. ಯಜಮಾನಿ ಹೀಗೆ ಕೇಳಿದೊಡನೆ ಅವನು "ಹೌದು ತಾಯಿ ಅವರು ಮನಸ್ಸಿಟ್ಟು ಪೂಜೆಮಾಡುತ್ತಾರೆ. ನನಗೆ ಆ ಮನೋದಾರ್ಢ್ಯವಿಲ್ಲ." ಎಂದನು. ಆಕೆ "ಅವನು ಪೂಜೆಮಾಡುವುದು ದೇವರ ಜಗಲಿಯಮೇಲೆ ಕುಳಿತಾಗ ಮಾತ್ರವಲ್ಲ. ಎಲೆಯ

ಮುಂದೆ ಕುಳಿತಾಗ, ಸ್ನಾನಕ್ಕೆ ಮೊದಲು, ದೊನ್ನೆ ಹಚ್ಚುವಾಗ, ಬೀದಿಯಲ್ಲಿ ಹೋಗುವಾಗ, ಇನ್ನೂ ಯಾವ ಕೆಲಸವನ್ನೇ ಆಗಲಿ ಮಾಡುವಾಗ ಯಾವಾಗಲೂ ಅವನು ದೇವರ ಧ್ಯಾನವನ್ನು ಮಾಡುತ್ತಲೇ ಇರುವನು'' ಎಂದರು.

ಪರಿಚಾರಕನು ''ನಾನು ತಿಳಿಯದೇ ಹೇಳಿದ ಮಾತನ್ನು ನೀವು ತಪ್ಪಾಗಿ ಎಣಿಸಬಾರದು'' ಎಂದನು. ಆಕೆ ''ನಮ್ಮ ಹುಡುಗನ ಭಾವ ತಿಳಿದು ಅವನು ಏನಾದರೂ ಎಂದರೆ ನೀನು ಕೋಪಿಸಿಕೊಳ್ಳದೇ ಇರು. ನಿನಗೆ ಅವನ ಸಹವಾಸದಿಂದ ಒಳ್ಳೆಯದಾಗಲೆಂದು ನಾನು ಹೀಗೆ ಮಾಡಿದೆ. ನಿನ್ನ ಮಾತನ್ನು ನಾನು ತಪ್ಪಾಗಿ ಎಣಿಸುವುದು ಹಾಗಿರಲಿ ಹಸಿದಿರುವಾಗ ನಿನ್ನನ್ನು ಎಲೆಯ ಮುಂದೆ ಕೂರಿಸಿ ಈ ಪಾಪಿಕ್ಕೈಯಲ್ಲಿ ಬೇವಿನ ಎಣ್ಣೆಯನ್ನು ಬಡಿಸಿದೆನು. ಆ ತಪ್ಪನ್ನು ನೀನು ಮನ್ನಿಸಬೇಕು'' ಎಂದರು. ಪರಿಚಾರಕನು ಅವರಿಗೆ ನಮಸ್ಕರಿಸಿ ''ನನ್ನನ್ನು ಇನ್ನೊಬ್ಬ ಮಗನೆಂದೆಣಿಸಿ ನನಗೆ ಬುದ್ಧಿ ಬರುವುದಕ್ಕಾಗಿ ಹೀಗೆ ಮಾಡಿದಿರಿ. ಇದೇ ರೀತಿಯ ಕೃಪೆಯಿಂದ ಮುಂದಕ್ಕೂ ಉದ್ಧಾರ ಮಾಡಬೇಕು'' ಎಂದು ಬೇಡಿಕೊಂಡನು.

ಬಿ. ಎಂ ಶ್ರೀ ಪ್ರತಿಷ್ಠಾನ
ಗ್ರಂಥಾಲಯ
ಬೆಂಗಳೂರು-19

ಕಾವ್ಯಾವಲೋಕನ

ರಾಣೀಮೃಣಾಲಿನಿ— ಶ್ರೀ ಗಳಗನಾಥರಿಂದ. ಕ್ರೌನ್ ಅಷ್ಟಪತ್ರ.
ಬೆಲೆ ರೂ. ೧—೮—೦.

ಓದು ತಿಳಿದ ಕನ್ನಡಿಗರಲ್ಲಿ ಗಳಗನಾಥರವರ ಹಲವು ಕಾದಂಬರಿಗಳನ್ನಾದರೂ ಓದದಿರುವವರು ಅಪರೂಪ. ಅವರು ಕನ್ನಡ ಸಾಹಿತ್ಯಕ್ಕೆ ಮಾಡಿರುವ ಸೇವೆಯು ಅಮೋಘವಾದುದು. ರಾಣೀಮೃಣಾಲಿನಿಯು ಅವರು ಸ್ವತಂತ್ರವಾಗಿ ಬರೆದ ಗ್ರಂಥ. ಯಾವ ಲೇಖನ ಗುಣಗಳಿಗಾಗಿ ಅವರಿಗೆ ಪ್ರಶಸ್ತಿ ಬಂದಿದೆಯೋ ಆ ಗುಣಗಳಲ್ಲಿ ಅನೇಕವನ್ನು ನಾವು ಇಲ್ಲಿ ನೋಡಬಹುದು. ಅವರ ಶೈಲಿ ಗಾಡು ಶೈಲಿ: ಅವರ ಬರವಣಿಗೆಯಲ್ಲಿ ಹೆಚ್ಚು ನಯವಿಲ್ಲದಿರಬಹುದು ; ಸೂಕ್ಷ್ಮವಾದ ಚಿತ್ರಲೇಖನ ಅಥವಾ ಸೂಚನಾಶಕ್ತಿ ಇಲ್ಲದಿರಬಹುದು ; ಕಲೆಯ ವಿಲಾಸ ನಯಗೆಲಸಗಳು ಕಡಿಮೆಯಾಗಿರಬಹುದು; ಅವರ ಕಥಾ ಪ್ರಪಂಚದಲ್ಲಿ ಹೆಚ್ಚಿನ ಆಳ ಗಭೀರತೆಗಳಿಲ್ಲದಿರಬಹುದು. ಆದರೆ ಅದರಲ್ಲಿ ಚಂಡಸತ್ವವಿದೆ, ಓಜಸ್ಸಿದೆ. ಒಳ್ಳೆಯ ಕಥೆಯನ್ನು ಕಟ್ಟಿ, ಮೊದಲು ಪಙ್ಕ್ತಿಯಿಂದ ಹಿಡಿದು ಕೊನೆಯವರೆಗೂ ಇವರು ನಮ್ಮ ಮನಸ್ಸನ್ನು ಸೆರೆಹಿಡಿದಿರಬಲ್ಲರು ; ಕಥೆಯ ವ್ಯಕ್ತಿಗಳಿಗೆ ಜೀವವೆರೆದು, ಅವರನ್ನು ಮಾತನಾಡಿಸಿ ಅವರಿಂದ ತಮಗೆ ಬೇಕಾದ ಕೆಲಸವನ್ನು ಮಾಡಿಸಬಲ್ಲರು ; ಅವರ ಸ್ವಭಾವವು ವ್ಯಕ್ತವಾಗುವಂತೆಯೂ ಅವರ ಶೀಲ ಚಾರಿತ್ರಗಳು ಕಳೆಗೊಳ್ಳುವಂತೆಯೂ ಜನರ ನಡೆ ನುಡಿ ವ್ಯವಹಾರಗಳನ್ನು ತೋರಿಸಬಲ್ಲರು ; ಕಥೆಯ ಆವರಣಕ್ಕೂ ಕಟ್ಟಡಕ್ಕೂ ಹೊಂದಿಕೊಳ್ಳುವ—ಅದರ ಓಟವನ್ನು ಬಹುವಾಗಿ ತಡೆಯದ—

ಓದುವವರ ಆಸಕ್ತಿ ಕುತೂಹಲಗಳನ್ನು ಸಡಿಲಿಸದ ಸನ್ನಿವೇಶಗಳನ್ನು ಕಲ್ಪಿಸಬಲ್ಲರು ; ಕಲ್ಪಿತ ವ್ಯಕ್ತಿಗಳ ಸಂಭಾಷಣೆಗೆ ಪ್ರಾಣ ತುಂಬಿ ಕಥೆಯ ನಡೆಯನ್ನು ಮುಂದರಿಸಬಲ್ಲರು ; ಮನುಷ್ಯರ ಅಂತರಂಗ ದಲ್ಲಿದ್ದುಕೊಂಡು, ಬಲಿತು, ಅವರಿಂದ ಆರೀತಿ ಈರೀತಿ ಕೆಲಸಮಾಡಿ ಸುವ ಉದ್ದೇಶಗಳನ್ನೂ ಮರ್ಮಗಳನ್ನೂ ಹೊರಗೆಡಹಬಲ್ಲರು ; ಬೇರೆ ಬೇರೆ ಜನರ ಆಶೆ ಆಶಯಗಳು ಬೆಳೆದು ಅವರಲ್ಲಿ ಮಿತ್ರತ್ವ ಶತ್ರುತ್ವಗಳನ್ನು ಉಂಟುಮಾಡಿ ಪರಸ್ಪರ ಸಂಬಂಧಗಳನ್ನು ಯಾವ ರೀತಿ ಹೂಡಿ ಕಥೆಯ ಪರಿಣಾಮಕ್ಕೆ ಸಾಧನವಾಗುವುವೆಂಬುದನ್ನು ತೋರಿಸಿ, ತಮಗೆ ತೋರಿದ ನೀತಿಗಳನ್ನು ಅಲ್ಲಲ್ಲಿಯೆ ತಿಳಿಸುವರು. ಕಾಲದೇಶಗಳ ಚಿತ್ರವನ್ನು ಬರೆದು ಕಥೆಗೆ ಆವರಣವನ್ನು ಕಲ್ಪಿಸಿ ಆಗಿನ ಪರಿಸ್ಥಿತಿಯು ನಮ್ಮ ಕಣ್ಣೆದುರಿಗೆ ಬಂದು ನಿಲ್ಲುವಂತೆ ಮಾಡ ಬಲ್ಲರು. ಇದು ಅವರು ಬರೆದಿರುವ ಗ್ರಂಥಗಳಲ್ಲೆಲ್ಲ ಶ್ರೇಷ್ಠವೆಂದು ನಾವು ಹೇಳಲಾರೆವಾದರೂ ಸ್ವಾರಸ್ಯವಾದ ಕಾದಂಬರಿಗಳಲ್ಲಿ ಕಂಡು ಬರುವ ಅನೇಕ ಗುಣಗಳು ಇಲ್ಲಿಯೂ ಕಂಡುಬರುತ್ತವೆಯೆಂದೂ ನಮ್ಮಲ್ಲಿರುವ ಇತರ ಕೆಲವು ಐತಿಹಾಸಿಕ ಕಾದಂಬರಿಗಳಿಗಿಂತಲೂ ಇದೇನೂ ಕೀಳಲ್ಲವೆಂದೂ ಹೇಳಬಲ್ಲೆವು.

ಮೃಣಾಲಿನಿ ಎಂಬ ಸುಂದರಿಯಲ್ಲಿ ಮೋಹಗೊಂಡ ಮಗಧ ರಾಜಪುತ್ರನು, ತಂದೆಗೆ ಸಮಯದಲ್ಲಿ ಸಹಾಯಮಾಡಲಾರದೆ ರಾಜ್ಯ ವನ್ನು ಕಳೆದುಕೊಂಡು ಗುರುವಾದ ಮಾಧವಾಚಾರ್ಯರ ಸಂದೇಶ ಸಹಾಯಗಳಿಂದ ಶತ್ರುಗಳಾದ ಮುಸಲ್ಮಾನರಿಗೆ ಪ್ರತಿಭಟಿಸಿ ನಿಂತು ಅವರನ್ನು ಯುದ್ಧದಲ್ಲಿ ಸೋಲಿಸಿ, ಕೊನೆಗೆ ಸ್ವತಂತ್ರವಾಗಿ ಬಂಗಾಳ ದಲ್ಲಿ ಹೊಸರಾಜ್ಯ ಒಂದನ್ನು ಸ್ಥಾಪಿಸಿ, ಮೃಣಾಲಿನಿಯನ್ನು ಹೊಂದಿ ಸುಖವಾಗಿದ್ದ ಕಥೆಯು ಈ ಕಾದಂಬರಿಯ ವಸ್ತು. ನಾಯಕ (?) ನಾದ ಹೇಮಚಂದ್ರ, ಆತನ ಪ್ರಿಯಳಾದ ಮೃಣಾಲಿನಿ, ಗುರುವಾದ ಆಚಾರ್ಯರು, ಹೇಮಚಂದ್ರನಿಗೆ ಬಹುವಾಗಿ ಸಹಾಯಮಾಡಿದ ಮನೋರಮೆ, ಆಕೆಯ ಗಂಡ ಪಶುಪತಿ ಎಂಬವರು ಇಲ್ಲಿ ಮುಖ್ಯ

ಪಾತ್ರಗಳು. ಸ್ವತಃ ಶೂರನಾಗಿದ್ದರೂ ಸ್ತ್ರೀಮೋಹದ ಕಾರಣ ಕಾರ್ಯ ಸಮಯದಲ್ಲಿ ಜಡನಾಗಿ, ಕರ್ತವ್ಯ ಪರಾಙ್ಮುಖನಾಗಿ, ನಾಯಕನು ಕಥಾಕಾರ್ಯ ನಿರ್ವಾಹದಲ್ಲಿ ಗುರು ಮನೋರಮೆಯರ ಸಹಾಯಕ್ಕೆ ಅಧೀನನಾಗುತ್ತಾನೆ. ಮೃಣಾಲಿನಿ ಮೃದು ಸ್ವಭಾವದವಳು; ಸಾಧ್ವಿ; ಪತಿಪ್ರಾಣೆ; ನಿಜವಾದ ಪ್ರೇಮಕ್ಕೆ ಎಲ್ಲೆಲ್ಲಿಯೂ ಬರುವ ಅಡ್ಡಿಗಳೆಲ್ಲವೂ ಈ ಕಥೆಯಲ್ಲಿಯೂ ಬಂದು ಪ್ರಿಯರ ಸಂಯೋಗಕ್ಕೆ ಅನೇಕ ಪ್ರತಿಬಂಧಕಗಳನ್ನು ತರುತ್ತವೆ. ಕೊನೆಗೆ ಶುಭವಾಗಿ ಅವರು ಸುಖದಲ್ಲಿ ಸೇರುವರು; ಆಕೆಯಲ್ಲಿ ಮತ್ತಾವ ವ್ಯಕ್ತಿ ವಿಶೇಷವೂ ಇಲ್ಲ. ಮಾಧವಾಚಾರ್ಯರೇ ಕಥೆಯ ಸೂತ್ರಧಾರರು. ಹೇಮಚಂದ್ರನ ಭಾಗ್ಯವನ್ನು ನಡೆಯಿಸುವ ಅಧಿದೇವತೆ. ಅವರ ಉಪದೇಶ, ಕಾರ್ಯದಕ್ಷತೆ, ಸಂಧಾನ ಕೌಶಲ, ಸಮಯ ಸಹಾಯ ಇವುಗಳಿಲ್ಲದಿದ್ದರೆ ಕಥೆ ನಡೆಯುತ್ತಲೇ ಇರಲಿಲ್ಲ; ಗಿರಿಜೆ ಎಂಬ ಭಿಕ್ಷುಕಿಯು ಮೃಣಾಲಿನಿ ಹೇಮಚಂದ್ರರಿಗೆ, ದಾಸಿಯಾಗಿ–ಸಖಿಯಾಗಿ–ಉಲ್ಲಾಸಪೂರ್ಣವಾದ ತನ್ನ ಜೀವನದಿಂದಲೂ, ತನ್ನ ಪ್ರೀತಿ, ಕರುಣೆ ಸೌಹಾರ್ದ ಹಾಸ್ಯಗಳಿಂದಲೂ ಬಹುಮಟ್ಟಿಗೆ ಕಥೆಯನ್ನು ಸರಸವಾಗಿ ಮಾಡಿದ್ದಾಳೆ. ಪಶುಪತಿಯ 'ಹೆಂಡತಿ' ಯಾದ ಮನೋರಮೆ ವೀರಳು; ಆಕೆಯ ಬುದ್ಧಿ, ಚಿತ್ತ ಸ್ವಾಸ್ಥ್ಯ, ದೃಢ, ನಿರ್ಭೀಕತೆ, ಸಮಯಸ್ಫೂರ್ತಿ, ದೂರದರ್ಶಿತೆ, ಚಟುವಟಿಕೆಗಳು ಪ್ರಚಂಡವಾದುವು. ಆಕೆ ಕಾದಂಬರೀಪ್ರಪಂಚದಲ್ಲಿನ ಶ್ರೀ, ಜಯಂತಿ, ಶಾಂತಿ, ಪ್ರಫುಲ್ಲೆ ಇವರ ಗುಂಪಿಗೂ ಐತಿಹಾಸಿಕ ರಮಣಿಯರಲ್ಲಿ ಸಂಯುಕ್ತೆ ಚಾಂಡ್ ಬೀಬಿ, ಲಕ್ಷ್ಮೀರಾಣಿ ಇವರ ಗುಂಪಿಗೂ ಸೇರಿದವಳು. ಪಶುಪತಿಯೋ? ದ್ರೋಹಿ. ನಮ್ಮ ದೇಶದ ಚರಿತ್ರೆಯನ್ನು ದ್ರೋಹಗಳ ಚರಿತ್ರೆಯನ್ನಾಗಿ ಮಾಡಿ, ಕ್ರೋಧ ಮತ್ಸರಗಳಿಂದ ಭರತವರ್ಷವನ್ನು ಪರದೇಶೀಯರಿಗೆ ಮಾರಿದ ಜಯಚಂದ್ರನ ಜಾತಿಯವನು. ಇವನನ್ನು ಹಿಡಿದು ಹಾಳುಮಾಡಿದ ಪಿಶಾಚವು ಆತ್ಮೋನ್ನತಿಯ ಅಭಿಲಾಷೆ. ಇಂತಹವರಿಂದಲೇ ಈ ದೇಶಕ್ಕೆ ಅಪಕೀರ್ತಿ ಬಂದುದು; ಇನ್ನೂ ಬರುತ್ತಿರುವುದು. ೨೫೩ನೆಯ ಪುಟದಲ್ಲಿ ವರ್ಣಿತವಾಗಿರುವ

ಬಂಗಾಳಾದ "ಭೀಷಣ ಸ್ಮಶಾನ" ಸ್ಥಿತಿಯು, ಹಿಂದೂ ಜನದ ದೌರ್ಭಾಗ್ಯ ಅಧೋಗತಿಗಳು ಎಂತಹ ಪಾಪಕರ್ಮಗಳ ಫಲವೆಂಬುದನ್ನು ತಿಳಿಸಿ ಕಣ್ಣಿಗೆ ನೀರು ತರುವುದು.

ಇದು ಗ್ರಂಥಕ್ಕೆ ಎರಡನೆಯ ಆವೃತ್ತಿ. ಪುಸ್ತಕವು ಚೆನ್ನಾಗಿ ಪರಿಷ್ಕೃತವಾಗಿದೆ. ಕನ್ನಡಿಗರೆಲ್ಲರೂ ಕೊಂಡು ಓದಬೇಕಾದುದು.

ವಿ. ಸೀ.

ಅಳಿಲಸೇವೆ—ಮಂಗಳೂರು 'ಮಿತ್ರಮಂಡಲಿ'ಯಿಂದ. ಬೆಲೆ ೦—೨—೦

ಈ ಸಣ್ಣ ಪುಸ್ತಕದಲ್ಲಿ ೧೨ ಕನ್ನಡ ಕವನಗಳೂ, ೨ ಸಂಸ್ಕೃತದವೂ ಇವೆ. ಶ್ರೀಯುತರಾದ ಕಣ್ಣಂದೂರು ರಾಘವಾಚಾರ್, ಬಾಳ ರಾಘವೇಂದ್ರರಾವ್, ಕೆ. ಟಿ. ಆಚಾರ್, ಸೀತಾರಾಮ, ಎಂಬವರಿಂದ ಇವು ರಚಿತವಾದುವು. 'ಅಂದು' 'ನನೆಗೆ' ಎಂಬುವು ಕಿರಿಯ ಕಾಣಿಕೆಯಲ್ಲಿನ ಒಂದೆರಡು ಪದ್ಯಗಳ ಧಾಟಿಯ ಮೇಲೂ 'ಹುಟ್ಟೂರು' 'ಮೈಸೂರು ಮಕ್ಕಳ' ಮಾದರಿಯಲ್ಲಿಯೂ, 'ತೊರೆ'ಯು ನಿಡಿದಾದ ಒಂದು ಸ್ವತಂತ್ರ ಛಂದಸ್ಸಿನಲ್ಲಿಯೂ ಇವೆ. 'ಅತಿಥಿ'ಯು ಲಲಿತವಾಗಿ ಚೆನ್ನಾಗಿದೆ; 'ಅಮ್ಮ' ಎಂಬುದರಲ್ಲಿಯೂ 'ತಂದೆಯ ಚಿತ್ರ'ದಲ್ಲಿಯೂ ಭಾವದ ಭರವಿದೆ; 'ಸುದಿನ'ದ ಮೊದಲೆರಡು ಚರಣಗಳು ಚೆನ್ನಾಗಿವೆ. "ವಸಂತ"ದಲ್ಲಿ ಷಟ್ಪದಿಯ ಬಂಧವು ಮೃದುವಾಗಿದೆ.

ಈ ಕವಿಗಳು ದಿನದಿನಕ್ಕೆ ತಮ್ಮ ಪ್ರತಿಭಾಶಕ್ತಿಯನ್ನೂ ರಚನಾ ಕೌಶಲವನ್ನೂ ಹೆಚ್ಚಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಮೇಲುಮೇಲಾಗಿ ಸೇವೆಮಾಡಲಿ ಎಂದು ಹಾರೈಸುತ್ತೇವೆ.

ವಿ. ಸೀ.

ರಾಜಭಕ್ತಿ ಅಥವಾ ಮೈಸೂರು ಮಾಣಿಕ್ಯ—ಗ್ರಂಥಕರ್ತರು ಮ|| ಚಿ|| ಸದಾಶಿವಯ್ಯ. ಡೆಮ್ಮಿ ಅಷ್ಟಪತ್ರ ೨೫ ಪುಟಗಳು ; ಬೆಲೆ ೦—೨—೬

ಶ್ರೀಮತ್ಕಂಠೀರವ ನರಸಿಂಹರಾಜವೊಡೆಯರವರ ಆಳ್ವಿಕೆಯಲ್ಲಿ ರಣದುಲ್ಲಾಖಾನನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆಹಾಕಿ, ಸೋತು ಓಡಿಹೋದ ಕಥಾಭಾಗವು ಇದರಲ್ಲಿ ಕಥಾವಸ್ತು. ರಾಜಭಕ್ತಿ ಯೆಂಬುದು ಯಾವುದೊಂದು ಪಂಗಡದ ಸರ್ವಸಾಮ್ಯವಲ್ಲವೆಂದೂ ಬ್ರಾಹ್ಮಣರು ಕೂಡ ರಾಜಕಾರ್ಯದಲ್ಲಿ ಮತ್ತು ದೇಶಸೇವೆಯಲ್ಲಿ ಪ್ರಾಣಾರ್ಪಣ ಮಾಡಬಲ್ಲರೆಂದೂ ಪ್ರಭಾಕರನೆಂಬ ಬ್ರಾಹ್ಮಣ ಯುವಕನ ಮೂಲಕ ಪರ್ಯಾಯವಾಗಿ ತಿಳಿಸಿರುತ್ತಾರೆ. ಹುಡುಗರು ಅಭಿನಯಿಸುವುದಕ್ಕೆ ಯೋಗ್ಯವಾಗಿದೆ.

ಎಂ. ಆರ್. ಶ್ರೀ.

ರಾಮಚಂದ್ರ—(ಸಾಮಾಜಿಕ ಕಾದಂಬರಿ) ಗ್ರಂಥಕರ್ತರು ಮ|| ಜಂಗಮಕೋಟೆ ಕೃಷ್ಣಶಾಸ್ತ್ರಿಗಳು. ಕ್ರೌನ್ ಅಷ್ಟಪತ್ರ ಪುಟಗಳು ೫೭. ಬೆಲೆ ೫ ಆಣೆ.

ಮದುವೆ ಮುಂಜಿ ಮುಂತಾದ ಶುಭ ಕಾರ್ಯಗಳನ್ನು ಕೈಗೊಳ್ಳುವಾಗ ಅನಾವಶ್ಯಕವಾಗಿ ಆಗುತ್ತಿರುವ ದುಂದು ವೆಚ್ಚವನ್ನು ನಿಲ್ಲಿಸಬೇಕೆಂಬುದೇ ಈ ಕಾದಂಬರಿಯ ಧ್ಯೇಯ. ಶಾಸ್ತ್ರವಿಧಿಯಿಲ್ಲದಿದ್ದರೂ ಸಂಪ್ರದಾಯ ಬದ್ಧರಾಗಿಯೋ ತಮ್ಮ ದೊಡ್ಡಸ್ತಿಕೆಯನ್ನು ಪ್ರಕಟಿಸುವುದಕ್ಕೋ ಯೋಗ್ಯತೆ ಮೀರಿ ವೆಚ್ಚಮಾಡಿ ಸಾಲಸೋಲಗಳನ್ನು ಹೊತ್ತು ಪೇಚಾಡುವುದಕ್ಕಿಂತ ಶಾಸ್ತ್ರಕ್ಕೆ ಲೋಪವಿಲ್ಲದಂತೆ ಯೋಗ್ಯತೆಗೆ ಮೀರದಂತೆ ನಡೆಸುವುದು ವಿವೇಕವೆಂದು ಗ್ರಂಥಕರ್ತರು ತಿಳಿಸುತ್ತಾರೆ. ಸಾಮಾನ್ಯವಾಗಿ ಒದಗಿಬರುವ ಹೆಂಗಸರ ಆಸೆ ಆಕ್ಷೇಪಣೆಗಳೂ, ನೆರೆಹೊರೆಯವರ ಅಸಮಾಧಾನ ಕುಚೋದ್ಯಗಳೂ, ಮಠಮಂದಿರಾದಿ ವೈದಿಕ ಗುಂಪಿನ ತಿರಸ್ಕಾರ ಬಹಿಷ್ಕಾರ

ಬೆದರಿಕೆಗಳೂ ಈ ಕಾದಂಬರಿಯಲ್ಲಿ ಚೆನ್ನಾಗಿ ವರ್ಣಿತವಾಗಿವೆ. ಪಟುಏನ ತಂದೆ ಸೀತಾಕಾಂತನು ಮಾಡಿದುದು ಯುಕ್ತವೆಂದೂ, ಗಂಗಾರಾಮನ ಪೌರೋಹಿತ್ಯವು ಶಾಸ್ತ್ರಸಮ್ಮತವೆಂದೂ, ಇತರರ ಆಕ್ಷೇಪಣೆಗಳು ನ್ಯಾಯ ವಿರುದ್ಧವೆಂದೂ ಗುರುವರ್ಯರು ತೀರ್ಮಾನಿಸಿ ಗ್ರಾಮಸ್ಥರಿಗೆ ತಿಳಿವಳಿಕೆಯನ್ನೂ ಗಂಗಾರಾಮನಿಗೆ ಎರಡು ಜತೆ ಶಾಲುಗಳನ್ನೂ ಕೊಡುವಂತೆ ಮಠದ ಸರ್ವಾಧಿಕಾರಿಗಳನ್ನು ಕಳುಹಿಸುತ್ತಾರೆ. ಕಾಲವು ಸೂಕ್ಷ್ಮವಾಗುತ್ತ ಜನರಿಗೆ ಬುದ್ಧಿ ಬರುತ್ತಿದೆಯೆಂದು ಹೇಳಬಹುದಾದರೂ ಇಂತಹ ಕಾದಂಬರಿಗಳಿಗೆ ಇನ್ನೂ ಎಡೆಯಿರುವುದೆಂದು ಒಪ್ಪಿಕೊಳ್ಳಬೇಕು.

ಎಂ. ಆರ್. ಶ್ರೀ.

ಸುಖಲತಾ— ಗ್ರಂಥಕರ್ತ್ರಿಯವರು ಶ್ರೀ|| ಆರ್. ಕಲ್ಯಾಣಮ್ಮ, ಬೆಂಗಳೂರು. ಡೆಮ್ಮಿ ಅಷ್ಟಪತ್ರ ಪುಟಗಳು ೧೦೦. ಬೆಲೆ ೦-೧೦-೦.

ಶ್ರೀಮತಿ ಆರ್. ಕಲ್ಯಾಣಮ್ಮನವರ ಪರಿಚಯವನ್ನು ಕನ್ನಡಿಗರಿಗೆ ನಾವು ಹೊಸದಾಗಿ ಮಾಡಿಕೊಡಬೇಕಾಗಿಲ್ಲ. ಇವರು "ಸ್ತ್ರೀಯರಿಗಾಗಿ" "ಮಹಿಳೆಯರ ಉನ್ನತಿಗಾಗಿ" 'ಸರಸ್ವತಿ' ಎಂಬ ಮಾಸಪತ್ರಿಕೆಯನ್ನು ಕೆಲವು ವರ್ಷಗಳಿಂದ ಹೊರಡಿಸುತ್ತಿದಾರೆ; ಹಲವು ಕಾದಂಬರಿಗಳನ್ನು ಬರೆದಿದ್ದಾರೆ. ಪ್ರಕೃತ ಗ್ರಂಥವು ಶಾರದಾ ಗ್ರಂಥಮಾಲೆಯಲ್ಲಿ ಸೇರಿದ್ದರೂ ಸಾಹಿತ್ಯ ದೃಷ್ಟಿಯಿಂದ "ಸತೀಹಿತೈಷಿಣೀ" ಗುಂಪಿಗೆ ಸೇರುವುದಾಗಿ ಕಾಣುತ್ತದೆ.

ಎಂ. ಆರ್. ಶ್ರೀ.

ಕಾಳಿದಾಸ ಮಹಾ ಕವಿಯು ಶೃಂಗಾರ ರಸವನ್ನು ಚಿತ್ರಿಸಿರುವ ಬಗೆ:— ಲೇಖಕರು : ಮ|| ಸಿ. ಕೆ. ವೆಂಕಟರಾಮಯ್ಯನವರು, ಎಂ. ಎ., ಎಲ್‌ಎಲ್.ಬಿ; ಕ್ರೌ ೯ ಅಷ್ಟಪತ್ರ, ಪುಟಗಳು ೮೬; ಬೆಂಗಳೂರು, ೧೯೨೯. ಬೆಲೆ ?

ಬೆಂಗಳೂರು ಅಮೆಚೂರು ನಾಟಕ ಸಂಘದವರು ೧೯೨೭ನೆಯ ಇಸವಿಯ ಫೆಬ್ರವರಿ ತಿಂಗಳಲ್ಲಿ ಕಾಳಿದಾಸ ಮಹೋತ್ಸವವನ್ನು ನೆರವೇರಿಸಿದಾಗ ಮ|| ವೆಂಕಟರಾಮಯ್ಯನವರು ಕಾಳಿದಾಸ ಮಹಾಕವಿಯ ವಿಷಯವಾಗಿ ಮಾಡಿದ ಉಪನ್ಯಾಸವು ಈ ಗ್ರಂಥ ರೂಪವಾಗಿ ಪ್ರಕಟಿಸಲ್ಪಟ್ಟಿದೆ. ಕಾಳಿದಾಸ ಮಹಾ ಕವಿಯ ಕಾವ್ಯನಾಟಕಗಳೆಲ್ಲವನ್ನೂ ಉಪನ್ಯಾಸಕರು (ಗ್ರಂಥ ಕರ್ತರು) ಪರಿಶೀಲಿಸಿ ಕವಿಯು ಶೃಂಗಾರರಸವನ್ನು ಹೇಗೆ ಚಿತ್ರಿಸಿದ್ದಾನೆಂಬುದನ್ನು ಈ ಪುಸ್ತಕದಲ್ಲಿ ವಿವರಿಸಿದ್ದಾರೆ. ಗ್ರಂಥದ ಮುಖ್ಯ ವಿಷಯಕ್ಕೆ ಬರುವ ಮೊದಲು, "ಪಾಂಡಿತ್ಯದಲ್ಲಾಗಲಿ ಪ್ರತಿಭೆಯಲ್ಲಾಗಲಿ, ಕಲ್ಪನಾ ಸಾಮರ್ಥ್ಯದಲ್ಲಾಗಲಿ ನಮ್ಮ ಕವಿ ಪುಂಗವನಿಗೆ ಸರಿದೂಗಬಲ್ಲವರು ಜಗತ್ತಿನಲ್ಲೇ ಹಲವು ಕವಿಗಳಿಲ್ಲ"ವೆಂದು ಹೇಳಿ ಕಾಳಿದಾಸನ ಪರಿಶೀಲನಾ ಸಾಮರ್ಥ್ಯ, ಪಾಂಡಿತ್ಯ, ಪ್ರತಿಭಾ ಶಕ್ತಿ, ಅವನ ದೇಶಾಟನದ ಫಲ, ಇವುಗಳನ್ನು ವಿವರಿಸಿ ಗ್ರಂಥಕರ್ತರು ಇವುಗಳಲ್ಲೊಂದೊಂದಕ್ಕೂ ಸಾಕಾದಷ್ಟು ನಿದರ್ಶನಗಳನ್ನು ಕೊಟ್ಟಿದ್ದಾರೆ. ಆಮೇಲೆ ಕವಿಯು ತನ್ನ ಗ್ರಂಥಗಳಲ್ಲಿ ಶೃಂಗಾರರಸವನ್ನು ಚಿತ್ರಿಸಿರುವ ವಿಷಯವನ್ನು ವಿಮರ್ಶೆ ಮಾಡಲು ಹೊರಟು "ಮೋಹಾಂಧತೆಯಿಂದ ಪ್ರೇಮದ ಹೆಸರಿನಲ್ಲಿ ನಡೆಯುವ ಪಾಶವವೃತ್ತಿಯು ಮೊದಲುಗೊಂಡು ಶೃಂಗಾರ ರಸವು ಮೆಟ್ಟಲು ಮೆಟ್ಟಲಾಗಿ ಮೇಲಕ್ಕೇರಿ ಕೊನೆಗೆ ಸಾತ್ವಿಕ ಪ್ರೇಮದ ಚರಮ ಸೀಮೆಯನ್ನು ಸೇರುವಂತೆ ಚಿತ್ರಿಸಿದ್ದಾನೆ." ಎಂದು ಹೇಳಿ ಒಂದೊಂದು ಬಗೆಯ ಪ್ರೇಮಕ್ಕೂ ಕಾಳಿದಾಸನ ಕಾವ್ಯ ನಾಟಕಗಳಿಂದ ನಿದರ್ಶನಗಳನ್ನು ಕೊಟ್ಟು ವಿವರಿಸಿದ್ದಾರೆ. "ಕಾಳಿದಾಸನು ಮನಃಪೂರ್ವಕವಾಗಿ ಅಭಿಮಾನವನ್ನಿಟ್ಟು ಅಭಿನಂದಿಸುತ್ತಿದ್ದುದು ಪ್ರೇಮದ ಹೆಸರಿನಲ್ಲಿ ನಡೆಯುವ ಜಘನ್ಯವೃತ್ತಿಯ

ಮೋಹ ವಿಕಾರವನ್ನಲ್ಲ. ಸಾತ್ವಿಕವಾದ ದೈವಿಕ ಪ್ರೇಮವನ್ನು" ಎಂಬುದು ಅವರ ಅಭಿಪ್ರಾಯ. ಕಾಳಿದಾಸನ ಪ್ರತಿಯೊಂದು ಗ್ರಂಥವೂ ವಿಮರ್ಶೆಗೆ ಬಂದಿದ್ದರೂ ಕುಮಾರ ಸಂಭವದಮೇಲೆ ಬಹಳ ದೀರ್ಘವಾದ ಸಮಾಲೋಚನೆ ನಡೆದಿದೆ. "ತಥಾ ಸಮಕ್ಷಂ ದಹತಾ ಮನೋಭವಂ............" ಎಂಬ ಶ್ಲೋಕದ ಸ್ವಾರಸ್ಯ ವರ್ಣನೆಗೇ ಎಂಟು ಹತ್ತು ಪುಟಗಳು ದೊರೆತಿವೆ. ಆದರೂ "ತಥಾ ಸಮಕ್ಷಂ" ಎಂಬ ಎರಡು ಪದಗಳಿಂದ "ಸಪ್ತವರ್ಣಗಳಿಂದ ಬೆಳಗುವ ಕಾಮನ ಬಿಲ್ಲಿನ ಮಯೂಖ ಮಾಲೆಗಳೇ .... ಸಾಲಿಟ್ಟು ನಿಲ್ಲುವು"ದು ಹೇಗೆಂಬುದು ಸ್ಪಷ್ಟವಾಗುವಂತಿಲ್ಲ. ವಿಷಯಸ್ವಾರಸ್ಯವೂ ಕವಿತೆಯ ಪ್ರೌಢಿಮೆಯೂ ಅಂತಹದು. ಎಷ್ಟು ವಿವರಿಸಿದರೂ ಸಹೃದಯ ರಿಂದ ಸ್ವತಃ ಗ್ರಾಹ್ಯವೇ ಹೊರತು ವರ್ಣಿಸಿ ತಿಳಿಸಲು ಸಾಧ್ಯವಾದ ದ್ದಲ್ಲ. ಗ್ರಂಥದ ತುಂಬ ಸಂಸ್ಕೃತ ಶ್ಲೋಕಗಳಿವೆ. ಕೆಲವು ಕಡೆ ಅವುಗಳ ಕನ್ನಡ ತಾತ್ಪರ್ಯವೂ ಇದೆ. ಇಲ್ಲದ ಕಡೆಗಳಲ್ಲಿ ಶುದ್ಧ ಕನ್ನಡಿಗರಿಗೆ ಸ್ವಾರಸ್ಯ ಗ್ರಹಣ ಮಾಡುವುದು ಕಷ್ಟವಾಗುತ್ತದೆ. ಎಲ್ಲಾ ಕಡೆಯಲ್ಲಿಯೂ ಅರ್ಥ ಕೊಡುತ್ತಾಹೋದರೆ ಹಾಲಿಗೆ ನೀರು ಸೇರಿಸಿದಂತಾಗಿ ಗ್ರಂಥವು ಸಪ್ಪೆಯಾಗಬಹುದು. ಹೇಗೂ ಕಷ್ಟ; ಕಷ್ಟವೆಂದು ಕೈಕಟ್ಟಿಕೊಂಡು ಕೂರದೆ ಈ ಕಷ್ಟಸಾಧ್ಯವಾದ ಕೆಲಸ ವನ್ನು ಕೈಕೊಂಡು ಮಾಡಿರುವುದಕ್ಕಾಗಿ ಮ|| ವೆಂಕಟರಾಮಯ್ಯ ನವರು ಅಭಿನಂದ್ಯರು.

ಭಾಷೆಯು ಸುಲಭವಾಗಿದ್ದು, ಗ್ರಂಥವು ದೀರ್ಘವಾದ ವಿವರಣೆ ಗಳಿಂದಲೂ ವಿಧವಿಧವಾದ ಹಾಸ್ಯಗಳಿಂದಲೂ ಬೆಳಗುತ್ತಿದೆ. "ಪ್ರಾಧಾನ್ಯತೆ" ಎಂಬ ರೂಪವು ಒಂದೇ ಪುಟದಲ್ಲಿ ನಾಲ್ಕು ಸಲ ಬರುತ್ತದೆ. ಈ ರೂಪಕ್ಕೆ ಎರಡು ಭಾವ ಪ್ರತ್ಯಯಗಳಿಂದ "ತಲೆ ಶಿರೋಭಾರ" ವಾಗಿದೆ.

ಎ. ಎನ್. ನ.

ತತ್ತ್ವಶುದ್ಧಿ— ಒಂದನೆಯ ಭಾಗ–ಅಚಿತ್ತತ್ತ್ವ ಪರಿಚ್ಛೇದ. ಯಾದವಾದ್ರಿನಿವಾಸಿ ಪೂರ್ವೋತ್ತರ ಮೀಮಾಂಸಾಭೂಷಣ ದೇವಶಿಖಾಮಣಿ ವೇ|| ಬ್ರ|| ರಾಮಾನುಜಾಚಾರ್ಯರಿಂದ ರಚಿತವಾಗಿ, ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಪವರ್ ಪ್ರಿಂಟಿಂಗು ವರ್ಕ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟದ್ದು. ಡೆಮ್ಮಿ ಅಷ್ಟಪತ್ರ ಪುಟಗಳು–xi–೧೩೭, ೧೯೨೭.

"ಜೇನು ಹುಳುಗಳು ನಾನಾ ಪುಷ್ಪಗಳಲ್ಲಿ ತಾವೇ ಸಂಚರಿಸಿ ಅವುಗಳ ರಸನ್ನು ಏಕತ್ರ ಕೂಡಿಸಿ ಮಧುವೆಂಬ ಹೆಸರನ್ನು ಪಡೆದಿರುವ ರಸವನ್ನು ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಲೋಕಕ್ಕೆ ಉಪಕರಿಸುವಂತೆ" ಶ್ರೀಮಾನ್ ರಾಮಾನುಜಾಚಾರ್ಯರವರು ಅನೇಕ ಶಾಸ್ತ್ರ ಗ್ರಂಥಗಳಲ್ಲಿ ಸಂಚರಿಸಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ತತ್ತ್ವಶುದ್ಧಿಯೆಂಬ ಗ್ರಂಥಮಾಲೆಯನ್ನು ರಚಿಸುತ್ತಿರುವರು. ಇದರಲ್ಲಿ ಮೊದಲನೆಯದಾದ ಅಚಿತ್ತತ್ತ್ವ ಪರಿಚ್ಛೇದದಲ್ಲಿ. ವಿಶಿಷ್ಟಾದ್ವೈತಮತಾನುಸಾರವಾಗಿ ಅಚಿತ್ತಿನ ಸ್ವರೂಪ ಪರಿಣಾಮಗಳನ್ನು ತಿಳಿಸುತ್ತಾರೆ. ಸಾಂಖ್ಯಮತದಂತೆಯೇ ಅಚಿತ್ತು ಪ್ರಕೃತಿಯೆಂಬ ಹೆಸರಿನಿಂದ ಭೂತ ಭೌತಿಕ ಮಾತ್ರಕ್ಕೆ ಕಾರಣವಾಗಿರುವುದು. ಆದರೆ ಈ ಪ್ರಕೃತಿಯು ಸತ್ತ್ವ, ರಜಸ್ಸು, ತಮಸ್ಸು—ಈ ಗುಣಗಳಿಗೆ ಆಶ್ರಯವಾಗಿರುವುದೇ ಅಲ್ಲದೆ ಸಾಂಖ್ಯರು ಹೇಳುವಂತೆ ಅವುಗಳ ಸಾಮ್ಯಾವಸ್ಥೆಯಲ್ಲ. ಪ್ರಕೃತಿಯು ಈಶ್ವರಾಧೀನವಾಗಿಯೂ ಜೀವೇಶ್ವರರಿಗೆ ಭೋಗಾಯತನವಾಗಿಯೂ ಇರುವುದು. ಈಶ್ವರಾಧೀನವಾದುದರಿಂದ ಅವನಿಗೆ ವಿಶೇಷಣವಾಗಿಯೂ, ವಿಶೇಷ್ಯವು ಒಂದೇ ಆಗಿಯೂ ಇರುವುದರಿಂದ, ಈ ಮತಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಈ ಪ್ರಕೃತಿಯೇ ಮಿಶ್ರಸತ್ತ್ವವೆಂಬ ಹೆಸರಿನಿಂದ ಜ್ಞಾನಕ್ಕೂ ಕೈಂಕರ್ಯಕ್ಕೂ ತೆರೆಯಾಗಿರುವುದು. ಹೀಗೆ ಪ್ರತಿಬಂಧಕ ವರ್ಗದಲ್ಲಿ ಸೇರಿರುವುದರಿಂದ ಮೊದಲು ವಿರೋಧಿಸ್ವರೂಪವನ್ನರಿತು ಅನಂತರ ತತ್ತ್ಯಾಗಪ್ರಕಾರವನ್ನು ತಿಳಿಯಬಹುದೆಂದು ಮೊದಲು ಅಚಿತ್ತತ್ತ್ವ ಪರಿಚ್ಛೇದವನ್ನು ಪ್ರಕಟಿಸಿರುತ್ತಾರೆ. ಉಳಿದ ಗ್ರಂಥಗಳನ್ನೂ ಪ್ರಕಟಿಸಿ ಇದೇ ಮೇರೆ ಸುಲಭವಾಗಿ

ದೇಶಭಾಷೆಯಲ್ಲಿ ವೇದಾಂತದ ಅರ್ಥವನ್ನು ಬೋಧಿಸಿದರೆ ಪಾಮರ ರಾದ ಜಿಜ್ಞಾಸುಗಳಿಗೆ ಉಪಕಾರವಾಗುತ್ತದೆ. ವಿ. ಟಿ. ತಿ.

ಶ್ರೀ ಶಾಂಕರಭಾಷ್ಯಸಹಿತ ಮುಂಡಕೋಪನಿಷತ್ತು—ಸಂಸ್ಕೃತಮೂಲ ಟಿಪ್ಪಣಿ, ಸಾರಾಂಶ, ಅಕ್ಷರಾನುಕ್ರಮಣಿಕೆ, ಇವುಗಳಿಂದ ಕೂಡಿದ ಅನುವಾದ, ಲೇಖಕರು:-ಮ॥ ರಾ॥ ವೈ. ಸುಬ್ಬರಾವ್. ಪುಟಗಳು ೧೦೮ ; ಗ್ರಂಥ ಸಿಕ್ಕುವ ಸ್ಥಳ ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ೨ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು ಸಿಟಿ. ಬೆಲೆ ರೂ. ೦—೧೨—೦

ಮ॥ ಸುಬ್ಬರಾಯರು ವೇದಾಂತ ಗ್ರಂಥಗಳನ್ನು ಕನ್ನಡ ಭಾಷೆ ಯಲ್ಲಿ ಎಲ್ಲರಿಗೂ ತಿಳಿಯುವಂತೆ ಅತಿ ಸುಲಭ ಶೈಲಿಯಲ್ಲಿ ಬರೆ ಯುತ್ತ ಶ್ರೀ ಶಂಕರಾಚಾರ್ಯರ ಭಾಷ್ಯಾನುವಾದದೊಡನೆ ಉಪ ನಿಷತ್ತುಗಳನ್ನು ರಚಿಸಿರುವರು. ಮುಂಡಕೋಪನಿಷತ್ತು ಅವುಗಳಲ್ಲಿ ಒಂದು. ಇದು ಅಥರ್ವವೇದಕ್ಕೆ ಸಂಬಂಧಪಟ್ಟು, ಮೊದಲು ಬ್ರಹ್ಮ ನಿಂದ ಅಂಗಿರನಿಗೆ ಉಪದಿಷ್ಟವಾಗಿ ಬಂದಿದೆ. ಮುಖ್ಯವಾಗಿ ಇದರಲ್ಲಿ ಪರಾಪರ ವಿದ್ಯೆಗಳ ವಿಚಾರವು ಮಾಡಲ್ಪಟ್ಟಿದೆ. ಅಪರವಿದ್ಯೆ ಯೆಂಬುದೇ ವೇದೋಕ್ತ ವಿಧಿನಿಷೇಧರೂಪವಾದ ಯಾಗಾದಿ ಕರ್ಮಗಳ ಆಚರಣೆ. ಇದರಿಂದ ಸ್ವರ್ಗಾದಿ ಸುಖವುಂಟಾದರೂ ಆ ಸುಖವು ಅನಿತ್ಯವಾದು ದರಿಂದ ಪುರುಷಾರ್ಥವಾಗಲಾರದು. ಪಶುವೃತ್ತಿಗಿಂತ ಮೇಲಾದರೂ ಅಲ್ಪಾಸ್ಥಿರಸುಖವನ್ನುಂಟುಮಾಡುವುದರಿಂದ ಈ ವಿದ್ಯೆಯು ಅಷ್ಟು ಉತ್ಕೃಷ್ಟವಾಗಿ ತೋರುವುದಿಲ್ಲ. ಆದ್ದರಿಂದಲೇ ಇದಕ್ಕೆ ಅಪರವಿದ್ಯೆ ಯೆಂದು ಹೆಸರು. ಇದಕ್ಕಿಂತ ಉತ್ತಮವಾದ ವಿದ್ಯೆಯೇ ಪರವಿದ್ಯೆ; ಪರಮಾತ್ಮನ ವಿಷಯವಾದ ವಿದ್ಯೆ. ಇದರಿಂದ ಅನಂತವಾದ ಮತ್ತು ಸ್ಥಿರವಾದ ಸುಖವುಂಟಾಗುವುದು. ಈ ಸುಖವೇ ಮೋಕ್ಷ ; ಆತ್ಮಾ ನುಭವ. ಇದರ ವಿಷಯವೇ ಜೀವನಿಂದ ಬೇರೆಯಲ್ಲದ ನಿತ್ಯ ನಿರ್ವಿ ಕಾರ ನಿರವದ್ಯ ನಿರಪಾಯ ಬ್ರಹ್ಮ. ಈ ಬ್ರಹ್ಮಾನುಭವವೇ ಮೋಕ್ಷ ; ಇದೇ ಅರ್ಥವನ್ನು ಶ್ರೀ ಶಂಕರಾಚಾರ್ಯರು ತಮ್ಮ ಭಾಷ್ಯಾನುವಾದದಲ್ಲಿ ಅನುಭವದಿಂದಲೂ ದೃಢಪಡಿಸಿದಾರೆ.

ಮ॥ರಾ॥ ಸುಬ್ಬರಾಯರು ಇದೇ ರೀತಿಯಲ್ಲಿ, ಶ್ರಮವಿಲ್ಲದೆ ತತ್ವ ಬೋಧೆಯಾಗುವಂತೆ ಸಹಾಯಮಾಡುತ್ತ ಇರಲೆಂದು ಕೋರುತ್ತೇವೆ.
ವಿ. ಟಿ. ತಿ.

ಶುಕ್ಲ ಯಜುರ್ವೇದದ ಸಂಹಿತ ಅಥವಾ ಈಶಾವಾಸ್ಯೋಪನಿಷತ್ತು:—ಶ್ರೀ ಶಾಂಕರಭಾಷ್ಯ ಸಮೇತ, ಅಧ್ಯಾತ್ಮ ಗ್ರಂಥಾವಳಿ. ಲೇಖಕರು:—ಮ॥ ರಾ॥ ವೈ. ಸುಬ್ಬರಾವ್, ಮುದ್ರಣಾಲಯ ಕ್ಯಾಕ್ಸ್ಟನ್ ಪ್ರೆಸ್, ಹೊಸತರಗುಪೇಟೆ, ಬೆಂಗಳೂರು ಸಿಟಿ. ಪುಟಗಳು VIII 40 ಬೆಲೆ ರೂ. ೦—೫—೦.

ಈ ಉಪನಿಷತ್ತು ದಶೋಪನಿಷತ್ತುಗಳಲ್ಲಿ ಮೊದಲನೆಯದು. ಇದರಲ್ಲಿ ೧೮ ಋುಕ್ಕುಗಳಿವೆ. ಇದನ್ನು ಕರ್ಮಭಾಗವೆಂದೂ, ಬ್ರಹ್ಮಭಾಗವೆಂದೂ ಎರಡಾಗಿ ವಿಂಗಡಿಸಬಹುದು. ಮೊದಲನೆಯದಾದ ಕರ್ಮಭಾಗದಲ್ಲಿ ನಮ್ಮ ಆಯುಸ್ಸಿರುವವರೆಗೂ ವೇದದಲ್ಲಿ ಹೇಳಿರುವಂತೆ ಕರ್ಮಾನುಷ್ಠಾನ ಮಾಡಬೇಕೆಂದು ವಿಧಿಸಿದೆ. ಪರಮಪುರುಷಾರ್ಥಕ್ಕೆ ಕಾರಣವಾದ ಬ್ರಹ್ಮಜ್ಞಾನವನ್ನು ಪಡೆಯಲು ಶಕ್ತಿಯಿಲ್ಲದವನು ಕರ್ಮಾನುಷ್ಠಾನಕ್ಕೆ ಅಧಿಕಾರಿಯಾಗುತ್ತಾನೆ. ಈ ಉಪನಿಷತ್ತಿನ ಉತ್ತರಭಾಗದಲ್ಲಿ ಬ್ರಹ್ಮಸ್ವರೂಪವನ್ನು ವರ್ಣಿಸಿ ಆ ಬ್ರಹ್ಮಜ್ಞಾನವೇ ಮೋಕ್ಷಸಾಧನವೆಂದೂ, ಪರಮಪುರುಷಾರ್ಥವೆಂದೂ, ವ್ಯಕ್ತಪಡಿಸುತ್ತದೆ. ಸ್ಥೂಲದೃಷ್ಟಿಯಿಂದ ನೋಡಿದರೆ ಮೊದಲು ಕರ್ಮಾನುಷ್ಠಾನವನ್ನು ಮಾಡೆಂದು ಹೇಳಿ, ಅನಂತರ ಕರ್ಮವನ್ನು ಬಿಟ್ಟು ಬ್ರಹ್ಮಜ್ಞಾನವನ್ನು ಪಡೆಯೆಂದು ಹೇಳಿರುವುದರಿಂದ ಪರಸ್ಪರ ವಿರುದ್ಧವಾದ ಉಪದೇಶವು ಮಾಡಲ್ಪಟ್ಟಿದೆಯೆಂದು ತೋರುತ್ತದೆ. ವಸ್ತುತಃ ಅಧಿಕಾರಿ ಭೇದದಿಂದ ಈ ವಿರೋಧವು ತೋರುವುದಿಲ್ಲ. ಇದೇ ಈ ಉಪನಿಷತ್ತಿನ ತಾತ್ಪರ್ಯವು.
ವಿ. ಟಿ. ತಿ.

ವಾಗ್ದೇವೀಸ್ತೋತ್ರ:— ಲೇಖಕರು ಮ॥ ರಾ॥ ವೈ. ಸುಬ್ಬರಾವ್, ಮುದ್ರಣಸ್ಥಳ, ಬಿ.ಬಿ.ಡಿ. ಪವರ್ ಪ್ರೆಸ್, ಬೆಂಗಳೂರು ಸಿಟಿ. ಪುಟಗಳು: ೧೫ ಬೆಲೆ ೦—೦—೬.

ಹರಿಶರಣಾಷ್ಟಕ:—ಪ್ರತಿಪದಾರ್ಥ ಕನ್ನಡಾನುವಾದದೊಡನೆ ಕೂಡಿರುವುದು. ಲೇಖಕರು ಮ|| ರಾ|| ವೈ. ಸುಬ್ಬರಾವ್, ಮುದ್ರಣಸ್ಥಳ ಬಿ. ಬಿ. ಡಿ. ಪವರ್ ಪ್ರೆಸ್ ಬೆಂಗಳೂರು ಸಿಟಿ. ಪುಟಗಳು : ii 34. ಕ್ರಯ ರೂ. ೦-೨-೦.

ಶ್ರೀ ಬ್ರಹ್ಮಾನಂದ ಪರಮಹಂಸ ಸ್ವಾಮಿಗಳು ಅನುಗ್ರಹಿಸಿರುವ ಮುಕ್ತಿ ಸಾಧನವಾದ ಬೋಧೆಯನ್ನು, ತಮ್ಮ ಸುಲಭವಾದ ಕನ್ನಡ ಅನುವಾದದಿಂದ ಮ||ರಾ|| ವೈ. ಸುಬ್ಬರಾಯರು ಮತ್ತಷ್ಟು ಪ್ರಕಾಶಪಡಿಸಿರುತ್ತಾರೆ. ಯಾವ ಪರಮಾತ್ಮನು ಸಕಲ ವಿಭೂತಿ ರೂಪದಲ್ಲಿಯೂ ತೋರುವನೋ ಅವನೇ ಶರಣನು. ಚಕ್ರದಂತೆ ತಿರುಗುವ ಸಂಸಾರದ ದುಃಖವನ್ನು ಕಳೆದುಕೊಳ್ಳಲು, ಆ ಪರಮಾತ್ಮನಲ್ಲಿ ಭಕ್ತಿ ತೋರಿಸಬೇಕು. ಭಕ್ತಿಗೆ ತಡೆಯಾದ ಮಮಕಾರವನ್ನು ಸತ್ಸಂಗದಿಂದ ಹೋಗಲಾಡಿಸಬಹುದು. ಇಂತಹ ಹರಿಭಕ್ತಿಯನ್ನು ಸಂಪಾದಿಸಿಕೊಂಡು ತನ್ನಿಷ್ಠೆಯೆಂಬ ಬ್ರಹ್ಮಾನಂದವನ್ನು ಕಂಡುಕೊಳ್ಳುವುದೇ ಪರಮಪುರುಷಾರ್ಥವೆಂಬುದು ಈ ಪ್ರಕರಣದ ಮುಖ್ಯ ತಾತ್ಪರ್ಯ.

ವಿ. ಟಿ. ತಿ.

ಅಧ್ಯಾತ್ಮಗೀತಾವಳಿ:— ಲೇಖಕರು: ಮ|| ರಾ|| ವೈ. ಸುಬ್ಬರಾವ್, ಮುದ್ರಣ ಸ್ಥಳ ಬಿ. ಬಿ. ಡಿ. ಪವರ್ ಪ್ರೆಸ್. ಪುಟಗಳು ೩೮. ಕ್ರಯ ೦-೪-೦.

ಅಧ್ಯಾತ್ಮ ಗ್ರಂಥಾವಳಿಯಲ್ಲಿ ಗೀತಾವಳಿಯೊಂದನ್ನು ಎಲ್ಲರೂ ಹಾಡಿ ಸುಖಪಡುವುದಕ್ಕಾಗಿ ೬೦ ಕೃತಿಗಳಿಂದ ಮ|| ರಾ|| ಸುಬ್ಬರಾಯರು ಇದನ್ನು ರಚಿಸಿರುತ್ತಾರೆ. ಈ ಗೀತಗಳಲ್ಲಿಯೂ ಮೋಕ್ಷಮಾರ್ಗವನ್ನೇ ತೋರಿದ್ದಾರೆ. ವಿಘ್ನ ನಿವಾರಕನಾದ ಗಣೇಶನನ್ನೂ, ವಿದ್ಯೆಗೆ ಅಧಿಕಾರ ಸಾಮರ್ಥ್ಯಗಳನ್ನು ಕೊಡುವ ಸರಸ್ವತಿಯನ್ನೂ, ಪರವಿದ್ಯೆಯನ್ನು ಬೋಧನೆಮಾಡಿ ಮೋಕ್ಷ ಮಾರ್ಗವನ್ನು ತೋರಿಸಿದ ಶ್ರೀ ಶಂಕರಾಚಾರ್ಯರನ್ನೂ ಸ್ತುತಿಸಿ, ಅನಂತರ ಹೇಯವಾದ ಪ್ರಪಂಚ, ಜ್ಞಾನಸಾಧಕವಾದ ಶಮದಮಾದಿ ಸಾಧನಗಳು, ಆತ್ಮ ಜಿಜ್ಞಾಸೆ, ಇವುಗಳ ವರ್ಣನೆಮಾಡಿ ಕೊನೆಯಲ್ಲಿ ಉಪಾಸನವನ್ನು ಬೋಧಿಸುತ್ತ ವಿದ್ಯಾಶಂಕರರ ಮಂಗಳದಿಂದ ಗ್ರಂಥ ಸಮಾಪ್ತಿಮಾಡಿರುತ್ತಾರೆ.

ವಿ. ಟಿ. ತಿ.

…ಲಧವಾದ

…ು ಮತ ಸು…